ಡಾ. ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೩೪

ಲೇಖನ ಸಾಹಿತ್ಯ : ಭಾಗ-೨



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

V imp

— Basavanna's full name sā

— Selected.

[illegible]

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೩೪ : ಲೇಖನ ಸಾಹಿತ್ಯ : ಭಾಗ-೨

❖

- ಶಾಸ್ತ್ರ ಸಾಹಿತ್ಯ

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಕೆ. ರವೀಂದ್ರನಾಥ

ಹಂಪಿ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೨೦

COMPLETE WORK OF DR. M.M.KALBURGI

VOLUME - 34 : LEKHANA SAHITY : BHAGA-2

Edited by : Dr. K. Ravindaranatha, Hampi

Published by : Dr. P.G. Halakatti Research Centre
B.L.D.E. Association, Vijayapur, Karnatak

First Edition : 2020
Pages : xlii + 538 = 580

Copies: 1000
Price Rs: 270/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : The PrintPoint, No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೩೪–ಲೇಖನ ಸಾಹಿತ್ಯ: ಭಾಗ–೨

ಸಂಪಾದಕರು : ಡಾ. ಕೆ. ರವೀಂದ್ರನಾಥ, ಹಂಪಿ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೨೦
ಪುಟಗಳು: xlii + ೫೩೮ = ೫೮೦

ಪ್ರತಿಗಳು: ೧೦೦೦
ಬೆಲೆ ರೂ: ೨೭೦/–

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟಿಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟಿಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ-ನಡುಗನ್ನಡ-ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು-ನುಡಿ-ಸಂಸ್ಕೃತಿ-ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ-ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ-ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ-ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ

ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ

ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ–೧, ೧೮. ಶಾಸನ ವ್ಯಾಸಂಗ–೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ–ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜಾನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ–೧, ೩೧. ಮಾರ್ಗ–೨, ೩೨. ಮಾರ್ಗ–೩, ೩೩. ಮಾರ್ಗ–೪, ೩೪. ಮಾರ್ಗ–೫, ೩೫. ಮಾರ್ಗ–೬, ೩೬. ಮಾರ್ಗ–೭, ೩೭. ಮಾರ್ಗ–೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ–೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ–೨, ೫೦. ವಚನ ಸಂಕಲನ ಸಂಪುಟ–೪, ೫೧. ವಚನ ಸಂಕಲನ ಸಂಪುಟ–೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ–೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಚೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ

ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ– ಕರ್ನಾಟಕ ಸರ್ಕಾರದ ಧನ ಸಹಾಯದಿಂದ–ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪–೭–೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ–ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩–೯–೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ–ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **-ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **-ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **-ಸಂ. ಶಶಿಧರ ತೋಡಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡಕರ**

೧. ಉತ್ತರಕ ರ್ನಾಟಕದ ಜನಪದ ಪದ್ಯಸಾಹಿತ್ಯ

೨. ಜಾನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)

೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)

೩. ಕೆಟ್ಟಿತ್ತು ಕಲ್ಯಾಣ (ನಾಟಕ)

೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)

೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ

೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ

೪. ಧಾರವಾಡ ತಾಲೂಕಿನ ಶಾಸನಗಳು

೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ

೨. ವಚನ ಸಾಹಿತ್ಯ ಆಕರ ಕೋಶ

೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು

೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ

೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ **–ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ **–ಸಂ. ಡಾ. ವೀರಣ್ಣ ರಾಜೂರ**

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ **–ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ **–ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ

೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ **–ಸಂ. ಶಶಿಧರ ತೋಡಕರ**

೧. ವಚನ ಸಂಕಲನ–೪

೨. ವಚನ ಸಂಕಲನ–೬

೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ **–ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ
೨. ಶಬ್ದಮಣಿದರ್ಪಣ ಸಂಗ್ರಹ
೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ
೪. ಆದಯ್ಯನ ಲಘುಕೃತಿಗಳು
೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ
೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ
೨. ಬಾಲರಾಮನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ
೨. ಸಿರುಮನ ಚರಿತೆ
೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ –ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ –ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬರೆಹ–ಬದುಕು

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ –ಸಂ. ಡಾ. ವಿ.ಎಸ್. ಮಾಳಿ

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ –ಸಂ. ಡಾ. ಕೆ. ರವೀಂದ್ರನಾಥ

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ –ಸಂ. ಡಾ. ಕೆ. ರವೀಂದ್ರನಾಥ

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ **–ಸಂ. ಡಾ. ಕೆ. ರವೀಂದ್ರನಾಥ**
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ **–ಸಂ. ಡಾ. ಕೆ. ರವೀಂದ್ರನಾಥ**
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ **–ಸಂ. ಡಾ. ಕೆ. ರವೀಂದ್ರನಾಥ**
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಚಿತ್ರ **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಪತ್ರ–ವರದಿಗಳು **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಆಡಿಯೋ–ವಿಡಿಯೋ **–ಡಾ. ವಿ.ಡಿ. ಐಹೊಳ್ಳಿ**

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ–ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ

ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು–ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ–ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು–ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು–ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ–ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ–ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು

ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ–ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು–ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ–ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ–ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ

ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬುರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ–ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಕೆ. ರವೀಂದ್ರನಾಥ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಕೆ. ರವೀಂದ್ರನಾಥ

ಡಾ. ಎಂ. ಎಂ. ಕಲಬುರ್ಗಿ ಅವರು ಬದುಕಿನುದ್ದಕ್ಕೂ ಬೋಧನೆ-ಶೋಧನೆ-ಪ್ರಕಟಣೆ ಎಂಬ ನೆಲೆಗಳಲ್ಲಿ ದಣಿವರಿಯದೇ ದುಡಿದ ವಿದ್ವಾಂಸರು. ಆ ಮೂಲಕ ಕನ್ನಡ ಸಂಶೋಧನ ಮಹಾಮಾರ್ಗವನ್ನು ರೂಪಿಸಿದವರು. ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ, ಶಾಸನ, ಹಸ್ತಪ್ರತಿ, ಗ್ರಂಥಸಂಪಾದನೆ, ಇತಿಹಾಸ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಹಳಗನ್ನಡ, ವಚನ ಹಾಗೂ ಲಿಂಗಾಯತ ಸಾಹಿತ್ಯ ಹೀಗೆ ಏಕಕಾಲಕ್ಕೆ ಹತ್ತಾರು ಕ್ಷೇತ್ರಗಳನ್ನು ತಮ್ಮ ಅಧ್ಯಯನದ ತೆಕ್ಕೆಗೆ ತೆಗೆದುಕೊಂಡು "ಸಮಗ್ರ ಸಂಶೋಧಕ" ಎಂಬ ಗೌರವಕ್ಕೆ ಪಾತ್ರರಾದರು. ಅದಮ್ಯ ಉತ್ಸಾಹ, ಕ್ರಿಯಾಶೀಲತೆ, ಸಮಯಪ್ರಜ್ಞೆಗೆ ಹೆಸರಾಗಿದ್ದ ಡಾ. ಎಂ. ಎಂ. ಕಲಬುರ್ಗಿ ಅವರು ತಾವೂ ದುಡಿದರು; ತಮ್ಮ ಸುತ್ತಲಿನ ಪರಿಸರವನ್ನೂ ದುಡಿಯುವಂತೆ ನೋಡಿಕೊಂಡರು. ಕೆಲಸ ಮಾಡುವುದನ್ನು ಬಿಟ್ಟರೆ ನನಗೆ ಬೇರೆ ಕೆಲಸವೇ ಇಲ್ಲ ಎಂದು ಹೇಳುವುದರ ಮೂಲಕ ಕೆಲಸ ಕಾಯಕವಾಗುವ ಬಗೆಯನ್ನು ತಮ್ಮದೇ ಆದ ಹೊಸ ವ್ಯಾಖ್ಯಾನದ ಮೂಲಕ ಮನವರಿಕೆ ಮಾಡಿಕೊಟ್ಟರು. ಇಂಥ ಅಪ್ರತಿಮ ಸಂಶೋಧಕನ ಸಮಗ್ರ ಸಾಹಿತ್ಯವನ್ನು ಪ್ರಕಟಿಸಬೇಕೆಂಬ ಯೋಜನೆಯನ್ನು ನಮ್ಮ ನಾಡಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ವಿಜಯಪುರದ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ ರೂಪಿಸಿರುವುದು ಪ್ರಾತಃಸ್ಮರಣೀಯರಾದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ ಎಂದು ನಾನು ಭಾವಿಸಿದ್ದೇನೆ.

ಡಾ. ಎಂ. ಎಂ. ಕಲಬುರ್ಗಿ ಅವರ ಸಮಗ್ರ ಸಾಹಿತ್ಯವನ್ನು ೧. ಸ್ವತಂತ್ರ ಕೃತಿಗಳು ೨. ಸಂಪಾದಿತ ಕೃತಿಗಳು ೩. ಲೇಖನಗಳು ಎಂದು ವರ್ಗೀಕರಿಸಿಕೊಳ್ಳಲಾಗಿದೆ. ಈ ಮೂರರಲ್ಲಿ ಲೇಖನ ಸಂಪುಟಗಳ ಸಂಪೂರ್ಣ ಒಂದು ಪಾಲನ್ನು ನನಗೆ ನೀಡಿ ಸಂಪಾದಿಸಿಕೊಡುವ ಜವಾಬ್ದಾರಿಯನ್ನು ಯೋಜನೆಯ ನಿರ್ದೇಶಕರು, ಪ್ರಧಾನಸಂಪಾದಕರು, ಸಲಹಾ ಸಮಿತಿ ಸದಸ್ಯರು ವಹಿಸಿದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು.

೧. ಲೇಖನ ಸಂಪುಟಗಳ ಸ್ವರೂಪ ಮತ್ತು ಸಂಯೋಜನ ವಿಧಾನ

ಡಾ. ಎಂ. ಎಂ. ಕಲಬುರ್ಗಿ ಅವರ ಮಾರ್ಗ ಹೆಸರಿನ ೮ ಸಂಪುಟಗಳಲ್ಲಿ ಒಟ್ಟು ೮೬೮ ಲೇಖನಗಳಿವೆ. ಸಂಪುಟ ೧ರಲ್ಲಿ ಸಾಹಿತ್ಯಮಾರ್ಗ-೭೨, ಸಂಪಾದನಮಾರ್ಗ-೦೪, ವಿಮರ್ಶಾಮಾರ್ಗ-೨೪ ಸೇರಿ ಒಟ್ಟು ೧೦೦ ಲೇಖನಗಳು. ಸಂಪುಟ ೨ರಲ್ಲಿ ಶಾಸನಮಾರ್ಗ-೫೦, ಜಾನಪದಮಾರ್ಗ-೨೭, ಶಾಸ್ತ್ರಮಾರ್ಗ-೨೩ ಸೇರಿ ಒಟ್ಟು ೧೦೦ ಲೇಖನಗಳು. ಸಂಪುಟ ೩ರಲ್ಲಿ ಪ್ರಬಂಧ-೫೫, ಚಿಂತನ-೩೦, ನಿರ್ವಚನ-೧೫ ಸೇರಿ ಒಟ್ಟು ೧೦೦ ಲೇಖನಗಳು, ಸಂಪುಟ ೪ರಲ್ಲಿ ಸಂಪ್ರಬಂಧ-೧೦೦ ಲೇಖನಗಳು. ಸಂಪುಟ ೫ರಲ್ಲಿ ಪ್ರಸ್ತಾವನೆ-೨೯, ಅರಿಕೆ-೩೩, ಸಂಪಾದಕೀಯ-೨೩, ಸೇರಿ ಒಟ್ಟು ೮೫ ಲೇಖನಗಳು. ಸಂಪುಟ ೬ರಲ್ಲಿ ಭಾಷಣಗಳು-೩೪, ಮುನ್ನುಡಿಗಳು-೬೧, ಬೆನ್ನುಡಿಗಳು ೩೯, ವ್ಯಕ್ತಿಚಿತ್ರಣ-೩೫ ಸೇರಿ ಒಟ್ಟು ೧೬೯ ಲೇಖನಗಳು. ಸಂಪುಟ ೭ರಲ್ಲಿ ಪ್ರಬಂಧಗಳು -೪೩, ಪ್ರತಿಕ್ರಿಯೆಗಳು-೧೦, ಪ್ರಸ್ತಾವನೆಗಳು-೭, ಪುಸ್ತಕಾವಲೋಕನ-೧೧, ಭಾಷಣಗಳು-೧೯, ಸಂಪಾದಕರ ನುಡಿ-೧೦ ಸೇರಿ ಒಟ್ಟು ೧೦೦ ಲೇಖನಗಳು. ಸಂಪುಟ ೮ರಲ್ಲಿ ಆತ್ಮಕಥೆ-೧, ಪ್ರಬಂಧ-೨೦, ಭಾಷಣ-೧೪, ವ್ಯಕ್ತಿಚಿತ್ರಣ-೨೨, ಮುನ್ನುಡಿ-೨೦, ಬೆನ್ನುಡಿ ೨೧, ಅರಿಕೆ-೯ ಸೇರಿ ಒಟ್ಟು ೧೦೭ ಲೇಖನಗಳು. ಹೀಗೆ ೮ ಮಾರ್ಗಸಂಪುಟಗಳಲ್ಲಿ ಒಟ್ಟು ೮೬೮ ಲೇಖನಗಳು ಅಡಕಗೊಂಡಿವೆ.

ಈ ೮೬೮ ಲೇಖನಗಳು ಕಾವ್ಯ, ವಚನ, ಶಾಸ್ತ್ರ, ಶಾಸನ, ಭಾಷಣ, ಪ್ರಸ್ತಾವನೆ, ಮುನ್ನುಡಿ, ಬೆನ್ನುಡಿ, ಅರಿಕೆ, ವ್ಯಕ್ತಿಚಿತ್ರಣ, ಪುಸ್ತಕಾವಲೋಕನ ಇತ್ಯಾದಿ ಪ್ರಕಾರಗಳಲ್ಲಿ ಎಂಟೂ ಸಂಪುಟಗಳಲ್ಲಿ ಹಂಚಿಹೋಗಿವೆ. ಹೀಗೆ ಹಂಚಿಹೋಗಿರುವ ಲೇಖನಗಳನ್ನು ವಿಷಯಾನುಕ್ರಮದಲ್ಲಿ ವರ್ಗೀಕರಿಸಿಕೊಂಡು ೫ ಭಾಗಗಳಲ್ಲಿ (ಸಂಪುಟಗಳಲ್ಲಿ) ಈ ಕೆಳಗಿನಂತೆ ಸಂಯೋಜಿಸಲಾಗಿದೆ. ಪ್ರತಿಯೊಂದು ಸಂಪುಟಕ್ಕೂ ಪ್ರವೇಶಿಕೆಯ ರೂಪದ ಪ್ರಸ್ತಾವನೆಯನ್ನು ಬರೆಯಲಾಗಿದೆ.

I. ಲೇಖನ ಸಾಹಿತ್ಯ : ಭಾಗ-೧ ಶಾಸನಸಾಹಿತ್ಯ

II. ಲೇಖನ ಸಾಹಿತ್ಯ : ಭಾಗ-೨ ಶಾಸ್ತ್ರಸಾಹಿತ್ಯ

III. ಲೇಖನ ಸಾಹಿತ್ಯ : ಭಾಗ-೩ ವಚನಸಾಹಿತ್ಯ

IV. ಲೇಖನ ಸಾಹಿತ್ಯ : ಭಾಗ-೪ ಕಾವ್ಯಸಾಹಿತ್ಯ

V. ಲೇಖನ ಸಾಹಿತ್ಯ : ಭಾಗ-೫ ಭಾಷಣ-ವ್ಯಕ್ತಿಚಿತ್ರಣ-ಮುನ್ನುಡಿ-ಬೆನ್ನುಡಿ
ಸಂದರ್ಶನ-ಅರಿಕೆ-ಸಂಪಾದಕೀಯ

ಈ ಮೇಲಿನ ೫ ಸಂಪುಟಗಳಲ್ಲಿ ಡಾ. ಎಂ. ಎಂ. ಕಲಬುರ್ಗಿ ಅವರು ಬರೆದ ಸ್ವತಂತ್ರ ಕೃತಿಗಳಲ್ಲಿಯ ಅರಿಕೆಗಳನ್ನು, ಸಂಪಾದಿತಕೃತಿಗಳಲ್ಲಿಯ ಪ್ರಸ್ತಾವನೆಗಳನ್ನು ಕೈಬಿಡಲಾಗಿದೆ. ಯಾಕೆಂದರೆ ಈ ಅರಿಕೆ-ಪ್ರಸ್ತಾವನೆಗಳು ಆಯಾ ಕೃತಿಗಳಲ್ಲಿ ಬಂದಿರುವುದರಿಂದ ಮತ್ತೆ ಇಲ್ಲಿಯೂ ಉಳಿಸಿಕೊಳ್ಳುವುದು ಸರಿಯಲ್ಲವೆಂಬುದು ನಮ್ಮ ಉದ್ದೇಶ. ಆದರೆ ಡಾ. ಎಂ. ಎಂ. ಕಲಬುರ್ಗಿಯವರು ಬೇರೆ ಬೇರೆ ವಿದ್ವಾಂಸರಿಂದ ಯಾವುದೋ ವಿಷಯಕ್ಕೆ ಲೇಖನಗಳನ್ನು ಬರೆಸಿ ಸಂಪಾದಿಸಿರುವ

ಕೃತಿಗಳ ಸಂಪಾದಕೀಯ ಮತ್ತು ಪ್ರಧಾನ ಸಂಪಾದಕೀಯ ಮಾತುಗಳನ್ನು ಸೇರಿಸಿಕೊಂಡಿದ್ದೇವೆ. ಅದೇ ರೀತಿ ಮಾರ್ಗಸಂಪುಟ-೨ರಲ್ಲಿ ಪ್ರಕಟವಾಗಿರುವ ಜಾನಪದ ಸಂಬಂಧಿ ೨೭ ಲೇಖನಗಳು 'ಜಾನಪದಮಾರ್ಗ' ಹೆಸರಿನಲ್ಲಿ ಸ್ವತಂತ್ರ ಕೃತಿಯಾಗಿ ರೂಪ ತಾಳಿದ್ದರಿಂದ ಆ ಲೇಖನಗಳನ್ನೂ ಇಲ್ಲಿ ಕೈಬಿಡಲಾಗಿದೆ. ವಿಶೇಷವಾಗಿ ಡಾ. ಎಂ. ಎಂ. ಕಲಬುರ್ಗಿ ಅವರನ್ನು ಕೆಲವು ವ್ಯಕ್ತಿಗಳು, ಪತ್ರಿಕೆಗಳು ಸಂದರ್ಶನ ಮಾಡಿವೆ. ಈಗಾಗಲೇ ಸಂದರ್ಶನಗಳ ಸಂಗ್ರಹ ಕೃತಿಯೂ ಪ್ರಕಟವಾಗಿದೆ. ಆ ೨೫ ಸಂದರ್ಶನಗಳು ಲೇಖನಸಾಹಿತ್ಯ : ಭಾಗ-೫ ರಲ್ಲಿ ಅಳವಡುವುದು ಸೂಕ್ತವೆಂದು ಭಾವಿಸಿ ಅವುಗಳನ್ನು ಸೇರಿಸಿಕೊಂಡಿದ್ದೇವೆ. ಇದಿಷ್ಟು ನಾನು ಸಂಪಾದಿಸಿದ ಡಾ. ಎಂ.ಎಂ. ಕಲಬುರ್ಗಿ ಅವರ ಲೇಖನ ಸಾಹಿತ್ಯ ೫ ಸಂಪುಟಗಳ ಶಿಲ್ಪವಾಗಿದೆ.

೨. ಲೇಖನ ಸಾಹಿತ್ಯ : ಭಾಗ-೨ : ಶಾಸ್ತ್ರಸಾಹಿತ್ಯ

ಈ ಸಂಪುಟದ ಲೇಖನಗಳನ್ನು ೧. ಹಸ್ತಪ್ರತಿಶಾಸ್ತ್ರ, ೨. ಗ್ರಂಥಸಂಪಾದನ ಶಾಸ್ತ್ರ ೩. ಸಂಶೋಧನ ಶಾಸ್ತ್ರ ೪. ನಾಮವಿಜ್ಞಾನ ೫. ಭಾಷಾಶಾಸ್ತ್ರ ೬. ವ್ಯಾಕರಣಶಾಸ್ತ್ರ ೭. ಛಂದಶ್ಶಾಸ್ತ್ರ ಮತ್ತು ಕೆಲವು ಕಾವ್ಯ-ಕೃತಿಗಳ ಕುರಿತಂತೆ ಡಾ. ಎಂ. ಎಂ. ಕಲಬುರ್ಗಿ ಅವರು ಬಿತ್ತರಿಸಿದ ಶಾಸ್ತ್ರ ಸಂಬಂಧಿ ಆಲೋಚನೆಗಳನ್ನು ಸಮಾವೇಶಗೊಳಿಸಿ ಸಂಪಾದಿಸಿಕೊಡಲಾಗಿದೆ.

ಹಸ್ತಪ್ರತಿಶಾಸ್ತ್ರ ಇಂದು ಪ್ರತ್ಯೇಕ ಅಧ್ಯಯನದ ಶಿಸ್ತಾಗಿ ಬೆಳೆಯುವುದಕ್ಕಿಂತ ಪೂರ್ವದಲ್ಲಿಯೇ ಅಂದರೆ ೧೯೭೨ ರ ಹಿಂದೆಯೇ ಗ್ರಂಥಸಂಪಾದನ ಶಾಸ್ತ್ರದ ಒಡಲಲ್ಲಿ ಹಸ್ತಪ್ರತಿಶಾಸ್ತ್ರದ ಬೀಜ ಬಿತ್ತಲಾಗಿದೆ ಎಂದು ಡಾ. ಎಂ. ಎಂ. ಕಲಬುರ್ಗಿ ಅವರು ಹೇಳಿದ್ದಾರೆ. ಪ್ರಾಯಶಃ ಗ್ರಂಥಸಂಪಾದನ ಶಾಸ್ತ್ರವನ್ನು ಬೋಧಿಸುವ ದಿನಮಾನಗಳಲ್ಲಿ ನೂರಾರು ಕಾವ್ಯ, ಕಾವ್ಯಗಳ ಅಡಿಟಿಪ್ಪಣೆ, ಹಸ್ತಪ್ರತಿಸೂಚಿ ಸಂಪುಟಗಳನ್ನು ಅಧ್ಯಯನ ಮಾಡಿದ ಅವರಿಗೆ ಇವೆರಡೂ ಒಂದೇ ಭೂಮಿಕೆಯಲ್ಲಿ ಕವಲೊಡೆದ ಎರಡು ಜ್ಞಾನಶಾಖೆಗಳು ಎಂಬುದು ಸ್ಪಷ್ಟವಾಗಿತ್ತು. ಹಸ್ತಪ್ರತಿಶಾಸ್ತ್ರದ ಪರಿಕಲ್ಪನೆ ೧೯೮೧ ರ ಸರಿಸುಮಾರಿನಲ್ಲಿ ಕಾಣಿಸಿಕೊಂಡಿದ್ದರೂ ಮುಂದಿನ ದಶಕಗಳವರೆಗೆ ಈ ಶಾಸ್ತ್ರ ಕುರಿತಾದ ಅಧ್ಯಯನಗಳು, ಚಿಂತನೆಗಳು ನಡೆದಿರಲಿಲ್ಲ. ಹಸ್ತಪ್ರತಿಶಾಸ್ತ್ರ ಕುರಿತು ಬಿ.ಎಂ.ಶ್ರೀ ಪ್ರತಿಷ್ಠಾನದಿಂದ ವಿಚಾರ ಸಂಕಿರಣವೊಂದು ನಡೆದು ಈ ಶಾಸ್ತ್ರದ ಪ್ರತ್ಯೇಕ ಅಧ್ಯಯನದ ಅಗತ್ಯವನ್ನು ಸೂಚಿಸಲಾಗಿತ್ತು. ಆದರೆ ೧೯೯೩ ರಲ್ಲಿ 'ಕನ್ನಡ ಹಸ್ತಪ್ರತಿಶಾಸ್ತ್ರ' ಹೆಸರಿನ ಕೃತಿಯೊಂದನ್ನು ಡಾ. ಎಂ.ಎಂ. ಕಲಬುರ್ಗಿ ಅವರು ರಚಿಸಿ ಈ ಶಾಸ್ತ್ರಕ್ಕೆ ಕಾಯಕಲ್ಪವನ್ನು ನೀಡಿದರು. ಅವರ ಪ್ರಕಾರ ಹಸ್ತಪ್ರತಿಶಾಸ್ತ್ರ 'ಪ್ರತಿನಿಷ್ಠ ಅಧ್ಯಯನ' ಇಲ್ಲಿ ಹಸ್ತಪ್ರತಿಯ ಉತ್ಪಾದನೆ, ಪ್ರಕಾರ, ಪ್ರಸರಣ, ಸಂಗ್ರಹ, ಸಂರಕ್ಷಣೆ, ವ್ಯವಸ್ಥಾಪನ, ಪ್ರಯೋಜನ ಮತ್ತು ಸೂಚೀಕರಣ ಚರ್ಚೆಗಳು ಮಾತ್ರ ಒಳಗೊಳ್ಳುತ್ತವೆ. ಅಂದರೆ ಹಸ್ತಪ್ರತಿಗಳ 'ರೂಪಾತ್ಮಕ' ಶೋಧ ಇಲ್ಲಿ ನಡೆಯುತ್ತದೆ. ಹಸ್ತಪ್ರತಿಗಳ ಅಭ್ಯಾಸವೆಂದರೆ ಪ್ರಾಚೀನ ಲಿಪಿಕಾರನ ಮನೋಧರ್ಮದ ಅಭ್ಯಾಸವಾಗುತ್ತದೆಯೇ ಹೊರತು; ಕವಿಯ ಮತ್ತು ಕೃತಿಯ ಅಭ್ಯಾಸವಾಗುವುದಿಲ್ಲ; ಆಗಬಾರದೆಂದು ನಿಖರವಾಗಿ ತಿಳಿಸಿ ಹೇಳಿದ ಕರ್ನಾಟಕದ ಮೊದಲ ವಿದ್ವಾಂಸರು.

ಈ ಜ್ಞಾನಶಾಖೆಗೆ ಸಂಬಂಧಿಸಿದಂತೆ ಹಸ್ತಪ್ರತಿಶಾಸ್ತ್ರ ಅದರ ವಿವಿಧ ಮುಖಗಳು, ಕನ್ನಡ ಹಸ್ತಪ್ರತಿ ಸೂಚಿಗಳು, ಪ್ರಭುಗೀತೆಯ ಹಸ್ತಪ್ರತಿ, ಹಸ್ತಪ್ರತಿ ಕ್ಷೇತ್ರಕಾರ್ಯ, ಇಂಗ್ಲೆಂಡಿನಲ್ಲಿರುವ

ಕನ್ನಡ ಹಸ್ತಪ್ರತಿಗಳು, ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರ ಇತ್ಯಾದಿ ಹತ್ತಾರು ಲೇಖನಗಳನ್ನು ಡಾ. ಎಂ.ಎಂ. ಕಲಬುರ್ಗಿ ಅವರು ಬರೆದಿದ್ದಾರೆ. ಪತ್ರಿಕಾ ಸಂಪಾದನೆ, ಪ್ರಾಚೀನ ಕಾಗದಪತ್ರ, ಅಚ್ಚಿಗಾಗಿ ಸಿದ್ಧಪಡಿಸಿದ ಆಧುನಿಕ ಹಸ್ತಪ್ರತಿ (ಕರಡುಪ್ರತಿ) ಇತ್ಯಾದಿಗಳನ್ನು ಹೊರತುಪಡಿಸಿ ಪ್ರಾಚೀನ ಹಸ್ತಪ್ರತಿಗಳಿಗೆ ಮಾತ್ರ ಈ ಶಾಸ್ತ್ರವನ್ನು ಸೀಮಿತಗೊಳಿಸಿಕೊಳ್ಳಬೇಕು. ಹಸ್ತಪ್ರತಿಯ ಉಗಮ–ವಿಕಾಸ, ಹಸ್ತಪ್ರತಿಯ ಲೇಖನ ಸಾಮಗ್ರಿ–ಲಿಪಿಕಾರ, ಹಸ್ತಪ್ರತಿಯ ಭಾಷೆ–ಲಿಪಿ–ಚಿತ್ರ, ಹಸ್ತಪ್ರತಿ ಸ್ಖಾಲಿತ್ಯದ ಕಾರಣಗಳನ್ನು ಕುರಿತಾದ ಹಸ್ತಪ್ರತಿಗಳ ಸಂಯೋಜನಮುಖ ಒಂದಾದರೆ, ಹಸ್ತಪ್ರತಿ ಸರ್ವೇಕ್ಷಣೆ, ಸಂರಕ್ಷಣೆ, ಸದುಪಯೋಗ ಕುರಿತಾದ ಹಸ್ತಪ್ರತಿಗಳ ಪ್ರಯೋಜನಮುಖ ಇನ್ನೊಂದು ಎಂದು ಹಸ್ತಪ್ರತಿಶಾಸ್ತ್ರ : ವಿವಿಧ ಮುಖಗಳು ಲೇಖನದಲ್ಲಿ ಹೇಳಿದ್ದಾರೆ. ಕನ್ನಡ ಹಸ್ತಪ್ರತಿಸೂಚಿಗಳು ಎಂಬ ಲೇಖನದಲ್ಲಿ ಆಧುನಿಕ ಗ್ರಂಥಾಲಯವಿಜ್ಞಾನದಂತೆ ಪ್ರಾಚೀನ ಹಸ್ತಪ್ರತಿಭಂಡಾರಗಳು ಬೆಳೆಯಬೇಕು. ಇದಕ್ಕೆ ಸಂಗ್ರಹಗೊಂಡ ಹಸ್ತಪ್ರತಿಗಳ ವರ್ಗೀಕರಣ ಮತ್ತು ಸೂಚೀಕರಣ ನಡೆಯಬೇಕಾದದ್ದು ಅಗತ್ಯ. ನಾಡಿನ ಹಾಗೂ ಹೊರನಾಡಿನಲ್ಲಿ ರಚನೆಗೊಂಡ ಹಸ್ತಪ್ರತಿಸೂಚಿಗಳ ಪಟ್ಟಿಯನ್ನು ನೀಡಿ ವಿವರಿಸಿದ್ದಾರೆ. ಮಗ್ಗೆಯ ಮಾಯಿದೇವನ ಸಂಸ್ಕೃತ ಕೃತಿ ಪ್ರಭುಗೀತೆ. ಇದರಲ್ಲಿ ಅಲ್ಲಮಪ್ರಭುದೇವರ ವಚನಗಳನ್ನು ಸಂಸ್ಕೃತಕ್ಕೆ ಭಾಷಾಂತರಿಸಲಾಗಿದೆ. ಮದ್ರಾಸ್ ಹಸ್ತಪ್ರತಿ ಸೂಚಿಯಲ್ಲಿ ಈ ಪ್ರತಿಯನ್ನು ಶೋಧಿಸಿದ ಡಾ. ಕಲಬುರ್ಗಿಯವರು ೫೫೦ ವರ್ಷಗಳ ಹಿಂದೆಯೇ ವಚನಸಾಹಿತ್ಯ ಕನ್ನಡೇತರ ಭಾಷೆಯಲ್ಲಿ ಪ್ರಸಾರ ಮಾಡಿದ ಹೆಗ್ಗಳಿಕೆಗೆ ಈ ಪ್ರತಿಸಾಕ್ಷಿಯಾಗಿದೆ ಎನ್ನುತ್ತಾರೆ. ಹಸ್ತಪ್ರತಿ ಕ್ಷೇತ್ರಕಾರ್ಯ ಎಂಬ ಲೇಖನದಲ್ಲಿ ಕ್ಷೇತ್ರಕಾರ್ಯದ ವಿಧಾನ ಹಾಗೂ ಸಾಧಿಸಿದ ಕೆಲಸವನ್ನು ದಾಖಲಿಸಿದ್ದಾರೆ. ಮುಖ್ಯವಾಗಿ ಹಸ್ತಪ್ರತಿಗಳ ಶೋಧ ಮತ್ತು ಸಂಗ್ರಹ ಕ್ರಿಯೆಗಳು ಕ್ಷೇತ್ರಕಾರ್ಯದಲ್ಲಿ ನಡೆಯುತ್ತವೆ. ಕ್ಷೇತ್ರಕರ್ತನಿಗೆ ಹಸ್ತಪ್ರತಿಶಾಸ್ತ್ರದ 'ಸೈದ್ಧಾಂತಿಕ ಜ್ಞಾನ', ಕ್ಷೇತ್ರಕ್ಕೆ ಹೋಗುವ 'ಪ್ರಾಯೋಗಿಕ ಜ್ಞಾನ', ಆಧುನಿಕ ಉಪಕರಣಗಳ ಬಳಕೆಯ 'ತಾಂತ್ರಿಕ ಜ್ಞಾನ' ಇರಬೇಕಾಗುತ್ತದೆಂದು ಅಭಿಪ್ರಾಯಪಟ್ಟಿದ್ದಾರೆ. ೧೯೮೨ ರಲ್ಲಿ ಹಸ್ತಪ್ರತಿ ಅಧ್ಯಯನಕ್ಕಾಗಿ ಇಂಗ್ಲೆಂಡಿಗೆ ಭೇಟಿ ನೀಡಿದ ಡಾ. ಕಲಬುರ್ಗಿ ಅವರು ಲಂಡನ್, ಆಕ್ಸಫರ್ಡ್ ಮತ್ತು ಕೇಂಬ್ರಿಜ್ ನಗರಗಳಲ್ಲಿನ ಕನ್ನಡಹಸ್ತಪ್ರತಿಗಳನ್ನು ಶೋಧಿಸಿದ ವಿವರವನ್ನು ಇಂಗ್ಲೆಂಡಿನಲ್ಲಿರುವ ಕನ್ನಡಹಸ್ತಪ್ರತಿಗಳು ಲೇಖನದಲ್ಲಿ ಪರಿಚಯಿಸಿದ್ದಾರೆ. ಕನ್ನಡ ಅಧ್ಯಯನ ಪೀಠ ಧಾರವಾಡದ ಹಸ್ತಪ್ರತಿಭಂಡಾರದ ಬೆಳವಣಿಗೆಯಲ್ಲಿ ಡಾ. ಎಂ. ಎಂ. ಕಲಬುರ್ಗಿ ಅವರದು ಸಿಂಹಪಾಲು. ಒಂದು ನಾಡಿನ ಖನಿಜಸಂಪತ್ತು, ಅರಣ್ಯಸಂಪತ್ತು, ಪ್ರಜಾಸಂಪತ್ತುಗಳಂತೆ ಹಸ್ತಪ್ರತಿಗಳೂ ಕೂಡ ರಾಷ್ಟ್ರದ ಸಂಪತ್ತು ಎಂದು ಪ್ರತಿಪಾದಿಸಿ ಪೀಠದ ಹಸ್ತಪ್ರತಿಗಳ ಸಂಗ್ರಹ, ಬೆಳವಣಿಗೆ ಹಾಗೂ ವಿಶೇಷತೆ ಕುರಿತು ಪರಿಚಯಿಸುತ್ತಾರೆ. ಹೀಗೆ ಹಸ್ತಪ್ರತಿಶಾಸ್ತ್ರ ಸಂಬಂಧಿ ಅನೇಕ ಲೇಖನಗಳು ಅವರ ಈ ಕ್ಷೇತ್ರದ ತಿಳುವಳಿಕೆಯ ಆಳವನ್ನು ಪ್ರತಿನಿಧಿಸುತ್ತವೆ.

ಕನ್ನಡ ಗ್ರಂಥಸಂಪಾದನ ಶಾಸ್ತ್ರ ಕೃತಿಯನ್ನು ರಚಿಸಿದ ಡಾ. ಎಂ. ಎಂ. ಕಲಬುರ್ಗಿ ಅವರು ಗ್ರಂಥಸಂಪಾದನ ಶಾಸ್ತ್ರಕ್ಕೆ ಲೇಖನಗಳ ಮೂಲಕ ಹಲವು ಹೊಸ ಸಿದ್ಧಾಂತಗಳನ್ನು ಕೊಟ್ಟಿದ್ದಾರೆ. ಅವರ ಪ್ರಕಾರ ಗ್ರಂಥಸಂಪಾದನೆ 'ಕೃತಿನಿಷ್ಠ' ಅಧ್ಯಯನ. ಕಾರಣ ಒಂದು ಕೃತಿಯ ಭಿನ್ನಪಾಠಸ್ವರೂಪ, ನಿಜಪಾಠನಿರ್ಣಯ, ಪಾಠಸಂಕಲನ, ಉನ್ನತ ವಿಮರ್ಶೆ ಕುರಿತು ಚರ್ಚಿಸುವ ಶಾಸ್ತ್ರವಾಗಿದೆ. ಇಲ್ಲಿ ಹಸ್ತಪ್ರತಿಗಳ 'ಗುಣಾತ್ಮಕ' ಶೋಧ ನಡೆಯುತ್ತದೆ. ಅಂದರೆ ಒಂದು ಪ್ರತಿಯ ಮೂಲಪ್ರತಿ, ಸಂರಕ್ಷಿತಪ್ರತಿ, ಶುದ್ಧಪ್ರತಿ, ಅಶುದ್ಧಪ್ರತಿ, ಮಾತೃಕಾಪ್ರತಿ ಇತ್ಯಾದಿ ಕುರಿತಾದ ನಿರ್ಣಯಗಳಿಗೆ

ಇಲ್ಲಿ ಅವಕಾಶವಿದೆ. ಗ್ರಂಥಸಂಪಾದನೆಯ ಸಾಧನೆ ಎಂಬ ಲೇಖನದಲ್ಲಿ ಈ ಕ್ಷೇತ್ರದ ಇದುವರೆಗಿನ ಸಾಧನೆಯನ್ನು ಎಳೆ ಎಳೆಯಾಗಿ ಅವಲೋಕಿಸಿದ್ದಾರೆ. ಕೇವಲ ಪ್ರಾಚೀನ ಸಾಹಿತ್ಯಸಂಪಾದನೆಗೆ ಈ ಶಾಸ್ತ್ರ ಮಿತಿಗೊಳ್ಳದೆ ಶಾಸನ ಹಾಗೂ ಜಾನಪದ ಸಂಪಾದನೆಗಳಿಗೂ ಅನ್ವಯವಾಗುತ್ತದೆ. ಕಾವ್ಯವಿರಲಿ, ಶಾಸನವಿರಲಿ, ಜಾನಪದವಿರಲಿ ಆ ಪಠದಲ್ಲಿ ಸೇರಿಕೊಂಡಿರುವ ಸತ್ಯ ಮತ್ತು ಅಸತ್ಯ ಪಾಠಗಳನ್ನು ವ್ಯವಸ್ಥಿತ ವಿಧಾನಗಳ ಮೂಲಕ ಬಿಡಿಸಿ ನೋಡುವ ವೈಜ್ಞಾನಿಕ ಕೆಲಸ ಗ್ರಂಥಸಂಪಾದನೆ ಎನ್ನುತ್ತಾರೆ. ಗ್ರಂಥಸಂಪಾದನೆ ಕರ್ನಾಟಕದಲ್ಲಿ ಬೆಳೆದು ಬಂದ ಘಟ್ಟಗಳು, ಹಾಗೂ ಈ ಕಾರ್ಯದಲ್ಲಿ ಅನ್ವಯಿಸಿಕೊಂಡ ಶಿಸ್ತು ಮತ್ತು ಏಕರೂಪತೆಯ ಕೊರತೆಯನ್ನು ಚರ್ಚಿಸಿದ್ದಾರೆ. ಪರಿಷ್ಕರಣ: ಪರಿಷ್ಕರಣದ ಪರಿಷ್ಕರಣ ಎಂಬ ಲೇಖನದ ಮೂಲಕ ಕನ್ನಡ ಗ್ರಂಥಸಂಪಾದನೆಗೆ ಡಾ. ಎಂ. ಎಂ. ಕಲಬುರ್ಗಿ ಅವರು ಹೊಸ ವಿಧಾನವನ್ನು(ಸೂತ್ರವನ್ನು) ನೀಡಿದ್ದಾರೆ. ಹಲವು ಹಸ್ತಪ್ರತಿಗಳ ಸಹಾಯದಿಂದ ಒಂದು ಕೃತಿಯನ್ನು ಸಂಪಾದಿಸಿದ ನಾವು ಮುಂದೊಂದು ದಿನ ಅದೇ ಕೃತಿಯನ್ನು ಉತ್ತಮಪಡಿಸುವ ಅಗತ್ಯ ಬಂದರೆ ಹೊಸ ಹಸ್ತಪ್ರತಿಗಳನ್ನೇ ಹುಡುಕಬೇಕು. ಸಿಗದಿದ್ದಾಗ ಮುದ್ರಿತ ಕೃತಿಯ ಹಲವು ಆವೃತ್ತಿಗಳನ್ನೇ ಭಿನ್ನ ಹಸ್ತಪ್ರತಿಗಳೆಂದು ಭಾವಿಸಿ, ಅಲ್ಲಿರುವ ಭಿನ್ನಪಾಠಗಳನ್ನು ಪರಿಶೀಲಿಸಿ ಪಾಠಾಂತರಗಳನ್ನು ನಿರ್ಣಯಿಸಿಬೇಕಾಗುತ್ತದೆ. ಈ ವಿಧಾನವೇ ಡಾ. ಕಲಬುರ್ಗಿ ಅವರು ಹೇಳುವ 'ಪರಿಷ್ಕರಣದ ಪರಿಷ್ಕರಣ'. ಇದು ಹಸ್ತಾಕ್ಷರ ಪಾಠಪರಿಷ್ಕರವಲ್ಲ ಬದಲಾಗಿ ಮುದ್ರಾಕ್ಷರ ಪಾಠಪರಿಷ್ಕರಣವಾಗುತ್ತದೆ. ಒಂದೇ ಹಸ್ತಪ್ರತಿ ಸಹಾಯದಿಂದ ಸಂಪಾದನೆಗೊಂಡಿದ್ದು ರಣೆ ಎನಿಸಿದರೆ, ಹಲವು ಪ್ರತಿಗಳನ್ನು ಆಧರಿಸಿ ಮಾಡಿದ ಸಂಪಾದನೆ ಪರಿಷ್ಕರಣವೆನಿಸಿಕೊಳ್ಳುತ್ತದೆ. ಏರೀತಿ ಮಾರ್ಗಸಾಹಿತ್ಯ ಸಂಪಾದನೆಗೆ ಅನುಸರಿಸುವ ವಿಧಾನವನ್ನೇ ದೇಶಿಸಾಹಿತ್ಯ ಸಂಪಾದನೆಗೂ ಸುವುದು ಸರಿಯಲ್ಲ ಎನ್ನುತ್ತಾರೆ. ಮುಂದುವರಿದು ಮಾರ್ಗಸಾಹಿತ್ಯ ಸಂಪಾದನೆಯಲ್ಲಿ ಚ್ಚು ಹಸ್ತಪ್ರತಿ ಬಳಸಿಕೊಂಡಷ್ಟು ಸಂಪಾದನೆ ಶುದ್ಧವಾಗುತ್ತದೆ. ದೇಶಿಸಾಹಿತ್ಯ ಸಂಪಾದನೆಗೆ ಹೆಚ್ಚು ಹಸ್ತಪ್ರತಿ ಬಳಸಿಕೊಂಡಷ್ಟು ಸಂಪಾದನೆ ಅಶುದ್ಧವಾಗುತ್ತದೆ. ಈ ಸಿದ್ಧಾಂತಕ್ಕೆ ನಿದರ್ಶನವಾಗಿ ವಚನ ಪರಿಷ್ಕರಣ : ಎರಡು ತಪ್ಪು ವಿಧಾನಗಳು ಎಂಬ ಲೇಖನವನ್ನು ನೋಡಬಹುದು. ಸಂಗ್ರಹ–ಸಂಕಲನ–ಸಂಪಾದನ ಕಟ್ಟುಗಳನ್ನು ಬಿಚ್ಚಿ ಹಲವು ನೆಲೆಯಲ್ಲಿ ಸಂಪಾದಿಸಿದ ಡಾ. ಫ.ಗು.ಹಳಕಟ್ಟಿ ಅವರಿಂದ ವಚನಗಳು ಮಿಶ್ರಣವಾದರೆ; ಡಾ. ಆರ್. ಸಿ. ಹಿರೇಮಠರಿಂದ ವಚನಪಾಠಗಳು ಮಿಶ್ರಣವಾಗಿರುವುದನ್ನು ಸಾಧಾರಪೂರ್ವಕವಾಗಿ ಚರ್ಚಿಸುತ್ತಾರೆ. ವಚನಸಾಹಿತ್ಯದ ಪಾಠಾಂತರಕ್ಕೆ ಹಲವು ಕಾರಣಗಳಿವೆ ಎಂದು ತಿಳಿಸುವ ಡಾ. ಎಂ. ಎಂ. ಕಲಬುರ್ಗಿ ಅವರು ಸಂಗ್ರಹಪಾಠ, ಕಲನಪಾಠ, ಸಂಪಾದನಪಾಠ ಎಂದು ವಚನಪಾಠಗಳ ಸ್ವರೂಪವನ್ನೂ; ಮುಂದುವರಿದು ಕಾರರಪಾಠ, ಸಹೃದಯರಪಾಠ, ಗೇಯಕಾರರಪಾಠ, ಅವೀರಶೈವರಪಾಠ ಎಂದು ವಿವರಿಸುತ್ತಾರೆ. ನಲ್ಲಿ ದೇಶಿಸಾಹಿತ್ಯ ಸಂಪಾದನೆಯಲ್ಲಿ ಒಂದು ಕೃತಿಯ ಎಲ್ಲಾ ಕುಟುಂಬದ ಒಂದೊಂದು ತಿಯನ್ನು ಆಯ್ದುಕೊಳ್ಳುವುದಕ್ಕಿಂತ ಒಂದೇ ಕುಟುಂಬದ ಕೆಲವು ಉತ್ತಮ ಪ್ರತಿಗಳನ್ನು ಯ್ದುಕೊಳ್ಳುವುದು ಲೇಸು ಎಂಬುದು ಇವರ ವಾದವಾಗಿದೆ. ಗ್ರಂಥಸಂಪಾದನೆ ಕೇವಲ ಶಾಬ್ದಿಕ ಸಂಪಾದನೆಯಾಗಬಾರದು, ಒಂದು ಕೃತಿಯನ್ನು ಸಾಂಸ್ಕೃತಿಕ ಪರಿಸರದ ಹಿನ್ನೆಲೆಯಲ್ಲಿ ಸಂಪಾದಿಸುವ ಂಸ್ಕೃತಿಕ ಗ್ರಂಥಸಂಪಾದನ ಮಾದರಿಯನ್ನು ತಿಳಿಸುತ್ತಾರೆ. ಇದಕ್ಕೆ ಸಂಪಾದಕನಿಗೆ ಇರಬೇಕಾದ ವಿಮರ್ಶೆಯನ್ನೊಳಗೊಂಡ ಉನ್ನತ ವಿಮರ್ಶಾ ಜ್ಞಾನದ ಅಗತ್ಯವನ್ನು ಕುರಿತು ಒತ್ತಿ ಹೇಳುತ್ತಾರೆ.

ಹಲವು ಹಸ್ತಪ್ರತಿಗಳ ಸಹಾಯದಿಂದ ಕಾವ್ಯಸಂಪಾದನೆ ಮಾಡುವುದಕ್ಕಿಂತ ಒಂದೇ ಪ್ರತಿ ಇರುವ ಶಾಸನದ ಮೂಲಪಾಠವನ್ನು ಸರಿಯಾಗಿ ಓದುವುದು, ನಷ್ಟವಾದ ಭಾಗವನ್ನು ಸರಿಯಾಗಿ ಊಹಿಸುವುದು ಶಾಸನ ಸಂಪಾದಕನಿಗಿರುವ ವಿದ್ವತ್ತಿನ ಆಹ್ವಾನವಾಗಿರುತ್ತದೆಂದು ಹೇಳುತ್ತಾರೆ. ಹೀಗೆ ಈ ಕ್ಷೇತ್ರಕ್ಕೆ ಸಂಬಂಧಿಸಿದ ಇಲ್ಲಿಯ ಲೇಖನಗಳು ಹಲವು ಹೊಸ ಹೊಸ ಸಿದ್ಧಾಂತಗಳನ್ನು ನಿರೂಪಿಸುತ್ತವೆ.

ಕನ್ನಡ ಸಂಶೋಧನಶಾಸ್ತ್ರ ಕೃತಿಯನ್ನು ೧೯೭೨ ರಲ್ಲಿ ರಚಿಸಿದ ಡಾ.ಕಲಬುರ್ಗಿ ಅವರು ಮೂಲತಃ ಸಂಶೋಧಕರು. ಪ್ರಾಯಶಃ ಮಾರ್ಗಸಂಪುಟದ ಬಹುತೇಕ ಲೇಖನಗಳೆಲ್ಲ ಸಂಶೋಧನ ಸಂಪ್ರಬಂಧಗಳೇ ಆಗಿವೆ. ತಮ್ಮ ಅನುಭವಗಳೇ ನಿಯಮಗಳೆಂದು ಹೇಳುವ ಡಾ.ಕಲಬುರ್ಗಿ ಅವರು ಈ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಸಂಶೋಧನ ಸ್ವರೂಪ ಎಂಬ ಲೇಖನ ಅವರ ಕನ್ನಡ ಸಂಶೋಧನಶಾಸ್ತ್ರ ಕೃತಿಯ ಸಂಕ್ಷಿಪ್ತ ಮಾಹಿತಿಯಾಗಿದೆ. ಸಂಶೋಧನೆ, ಅನ್ವೇಷಣೆ, ಆವಿಷ್ಕರಣ ಎಂಬ ಪದಗಳನ್ನು ಕಟ್ಟುನಿಟ್ಟಾಗಿ ಬಳಸುವುದು, ವಸ್ತು, ಭಾಷೆ, ಕ್ರಿಯಾ ಹಾಗೂ ಜ್ಞಾನ ಎಂಬ ನಾಲ್ಕು ನೆಲೆಗಳಲ್ಲಿ ಆಕರಗಳನ್ನು ಪರಿಭಾವಿಸುವುದು, ಕನ್ನಡದಲ್ಲಿ ಸಂಶೋಧನೆ ಮೊದಮೊದಲು ಪ್ರಾಚ್ಯಸಂಶೋಧನೆ (ಔಡುಜಟಣಚಿಟ ಖಣಣಾಜುಜ) ಹೆಸರಿನಲ್ಲಿ ಆರಂಭವಾಗಿ ಆಕರಶೋಧ, ಆಕರ ವಿಶ್ಲೇಷಣಾತ್ಮಕ ಶೋಧ, ಆಕರ ವ್ಯಾಖ್ಯಾನಾತ್ಮಕ ಶೋಧ ಎಂಬ ಮೂರು ಸ್ವರೂಪದಲ್ಲಿ ಸಾಗಿ ಬಂದಿದೆ. ಸಂಶೋಧನೆಯ ಹಾದಿಗಳು ಹಲವು. ವಿಷಯನಿಷ್ಠ, ಉದ್ದೇಶನಿಷ್ಠ, ವಿಧಾನನಿಷ್ಠ, ಸ್ವರೂಪನಿಷ್ಠ, ಸಂಸ್ಕೃತಿನಿಷ್ಠ, ಅನ್ವಯಿಕ, ಬಹುಶಿಸ್ತೀಯ, ಸಂಖ್ಯಾನಿಷ್ಠ, ಮಾದರಿನಿಷ್ಠ, ಘಟಕನಿಷ್ಠ, ಹೀಗೆ ಅನೇಕ ಪ್ರಕಾರದ ಹಾದಿಗಳು ತೆರೆದುಕೊಂಡಿದ್ದರೂ ಅವುಗಳೆಲ್ಲದರ ಗುರಿ ಒಂದೇ ಆಗಿರುತ್ತದೆ; ಅದು ಸತ್ಯಶೋಧನೆ. ಇತ್ತೀಚಿನ ದಿನಮಾನಗಳಲ್ಲಿ ಪಿಎಚ್.ಡಿ. ಪ್ರಬಂಧಗಳ ಸಂಖ್ಯೆ ವಿಪುಲವಾಗಿವೆ. ಸತ್ವ ಮಾತ್ರ ಸಮಾಧಾನಕರವಾಗಿಲ್ಲ ಎನ್ನುವ ಡಾ. ಕಲಬುರ್ಗಿ ಅವರು ಇದಕ್ಕೆ ಕಾರಣವನ್ನು ಕುರಿತಂತೆ ವಿಷಯದ ಆಯ್ಕೆಯಲ್ಲಿ ಹೊಸತನ ಇಲ್ಲದಿರುವುದು, ಮಾರ್ಗದರ್ಶಕ ಮತ್ತು ವಿದ್ಯಾರ್ಥಿಗಳು ಅಧ್ಯಯನವನ್ನು ಗಂಭೀರವಾಗಿ ಪರಿಗಣಿಸದಿರುವುದು, ಸಂಶೋಧನೆಗೆ ಸೃಜನ ಮತ್ತು ವಿಮರ್ಶಾ ಪ್ರಕಾರಗಳಿಗೆ ಇರುವಂಥ ಸ್ಥಾನಗೌರವ ಸಿಗದಿರುವುದು, ಸಾಮಾಜಿಕವಾಗಿ ಸಂಶೋಧನೆ ಅನಾಕರ್ಷಕ ಮತ್ತು ಅಪ್ರಯೋಜಕ ಎಂಬ ಮನಸ್ಥಿತಿ ಬೇರೂರಿರುವುದು. ಈ ಕೆಲವು ಕಾರಣಗಳಿಂದಲೂ ಸಂಶೋಧನ ಕ್ಷೇತ್ರ ಬಡವಾಗಿದೆಯೆಂದು ಹೇಳುತ್ತಾರೆ. ಆದರೆ ಸಂಶೋಧನೆಗೆ ಎಲ್ಲಕ್ಕಿಂತ ಹೆಚ್ಚು ಸಾಮಾಜಿಕ ಹೊಣೆಗಾರಿಕೆ ಇದೆ. ಗತಕಾಲದ ಶೋಧದ ಮೂಲಕ ವರ್ತಮಾನವನ್ನು ತಿದ್ದುವ, ಪರಂಪರೆಯನ್ನು ಜಾಗೃತಗೊಳಿಸುವ ಕೆಲಸ ಆಗಬೇಕಾಗಿದೆ ಎನ್ನುತ್ತಾರೆ.

ಸಂಶೋಧನೆಯಲ್ಲಿ ದೇಶಿವಾದ ಎಂಬ ಲೇಖನದಲ್ಲಿ ದೇಶಿ ಪ್ರಾದೇಶಿಕ ಹೊಟ್ಟೆಯಿಂದ ಹೊರ ಬಂದ ಜೀವನ ಪದ್ಧತಿ. ಅಂದರೆ ಒಂದು ಜನಸಮುದಾಯದ ಭೌಗೋಳಿಕ ಪರಿಸರದ ಕ್ರಿಯೆ ಮತ್ತು ಜ್ಞಾನಗಳು ಭಾಷೆಯನ್ನು ರೂಪಿಸುತ್ತವೆ. ಈ ಮೂರು ಬಂಧಗಳ ಕೂಡುವಿಕೆಯೇ ದೇಶಿ. ಕರ್ನಾಟಕದ ವಿಷಯದಲ್ಲಿ ದೇಶಿ ಶೋಧದ ಅಗತ್ಯವಿದೆ. ಯಾಕೆಂದರೆ ಮೂಲದ್ರಾವಿಡ ನೆಲೆಯಾದ ಇದು ಆರ್ಯ, ಇಸ್ಲಾಂ, ಆಂಗ್ಲರ ವಲಸೆ ಕೇಂದ್ರವಾಗಿ ಪರಿಣಮಿಸಿದೆ. ಇವುಗಳಲ್ಲಿ ನಮ್ಮ ಭಾಷೆಯನ್ನೆ ಆರ್ಯೀಕರಣ ಮಾಡಿದ್ದು ಆರ್ಯ ಸಂಸ್ಕೃತಿ. ಇದರಲ್ಲಿ ನಮ್ಮ ದೇಶಿಸಂಸ್ಕೃತಿ

ಮುಚ್ಚಿ ಹೋಯಿತು. ಅಥವಾ ಕೊಚ್ಚಿ ಹೋಯಿತು. ಕೊಚ್ಚಿ ಹೋದುದನ್ನು ಶೋಧಿಸುವುದೇ ಸಂಶೋಧನೆಯಲ್ಲಿ ದೇಶಿವಾದ. ಆಂಗ್ಲ ವಿದ್ವಾಂಸರಿಗೆ ಆಕರ ಒದಗಿಸಿದವರು ಅವರ ಕೈಕೆಳಗೆ ಕೆಲಸ ಮಾಡುತ್ತಿದ್ದ ಅಕ್ಷರಸ್ಥ ವೈದಿಕರು. ಹೀಗಾಗಿ ಇಲ್ಲಿಯೂ ದೇಶಿ ಸಂಸ್ಕೃತಿ ಪ್ರಕಟವಾಗಲಿಲ್ಲ. ಹೀಗೆ ಕಾಲದಿಂದ ಕಾಲಕ್ಕೆ ನಮ್ಮ ಸಂಸ್ಕೃತಿಯ ಮೇಲೆ ಆದ ಪಲ್ಲಟಗಳನ್ನು ಸರಿಯಾಗಿ ಗುರುತಿಸಿ ಸಮುದ್ರದ ಆಳಕ್ಕೆ ತಲುಪಿದ್ದ ದೇಶಿಮುತ್ತನ್ನು ಎತ್ತಿಕೊಳ್ಳಬೇಕೆಂಬ ಆಶಯ ಇಲ್ಲಿದೆ. ಇತ್ತೀಚಿನ ವಿದ್ವಾಂಸರಾದ ಗೋವಿಂದ ಪೈ, ಟಿ. ಎಸ್. ವೆಂಕಟಣ್ಣಯ್ಯವರುಗಳ ಸಂಶೋಧನ ಪದ್ಧತಿ ಕುರಿತು ಇಲ್ಲಿಯ ಕೆಲವು ಲೇಖನಗಳು ಚರ್ಚಿಸುತ್ತವೆ.

ನಾಮವಿಜ್ಞಾನಕ್ಕೆ ಸಂಬಂಧಿಸಿದಂತೆ ಡಾ. ಶಂಬಾ ಜೋಶಿಯವರದು ಪ್ರಸಿದ್ಧ ಹೆಸರು. ಈ ಪರಂಪರೆಯನ್ನು ಮುಂದುವರಿಸಿದ ವಿದ್ವಾಂಸರಲ್ಲಿ ಡಾ. ಎಂ. ಎಂ. ಕಲಬುರ್ಗಿ ಅವರು ಪ್ರಮುಖರು. ಕನ್ನಡ ನಾಮವಿಜ್ಞಾನ ಎಂಬ ಕೃತಿಯನ್ನು ರಚಿಸಿದ್ದಾರೆ. ಸಂಶೋಧನೆ, ಗ್ರಂಥಸಂಪಾದನೆ, ಹಸ್ತಪ್ರತಿಗಳಂಥ ಶಾಸ್ತ್ರಕೃತಿಗಳಲ್ಲಿ ಡಾ. ಕಲಬುರ್ಗಿ ಅವರ ಒಂದುತುದಿ ಕನ್ನಡ ಇನ್ನೊಂದುತುದಿ ಶಾಸ್ತ್ರ. ಅಂದರೆ ಕನ್ನಡದ್ದೇ ಆದ, ದೇಶಿಯತೆಯನ್ನು ಕುರಿತಾದ ಶಾಸ್ತ್ರ ನಿರ್ಮಾಣವಾಗಬೇಕೆಂಬುದು ಇವರ ಬಲವಾದ ತುಡಿತವಾಗಿತ್ತು. ಅದೇನೇ ಇರಲಿ, ನಾಮಯೆಂಬುದು ವ್ಯಾಕರಣ-ಕೋಶಗಳನ್ನು ಮೀರಿದ ಒಂದು ಜನಾಂಗದ ಸಾಂಸ್ಕೃತಿಕ ಅಧ್ಯಯನವಾಗಿದೆಂದು ಹೇಳುತ್ತಾರೆ. ಸಾಮಾನ್ಯವಾಗಿ ಸ್ಥಳನಾಮದ ಹೆಸರಿನಲ್ಲಿ ಗ್ರಾಮನಾಮಗಳನ್ನು ಅಧ್ಯಯನ ಮಾಡುವ ಪರಿಪಾಠವನ್ನು ನೋಡುತ್ತೇವೆ. ಆದರೆ ಡಾ.ಕಲಬುರ್ಗಿ ಅವರ ನಾಮವಿಜ್ಞಾನದ ಪರಿಕಲ್ಪನೆಯೇ ಬೇರೆ. ವಸತಿ ಇರುವ ಪ್ರದೇಶಗಳು ಗ್ರಾಮನಾಮಗಳು ಉದಾಹರಣೆಗೆ ಬೆಳಗಾವಿ, ಧಾರವಾಡ ಇತ್ಯಾದಿ. ನಿರ್ವಸತಿ ಇರುವ ಪ್ರದೇಶಗಳು ಸ್ಥಳನಾಮಗಳು ಉದಾಹರಣೆಗೆ ಹೇಮಕೂಟ, ಕಿಷ್ಕಿಂದ ಇತ್ಯಾದಿ. ಇವರ ನಾಮವಿಜ್ಞಾನ ಕುರಿತ ಲೇಖನಗಳು ವ್ಯಕ್ತಿನಾಮ, ಸ್ಥಳನಾಮ, ಕುಟುಂಬನಾಮ, ಇನ್ನೂ ಮುಂದುವರಿದು ಸಮುದಾಯ ನಾಮಗಳನ್ನು ಚರ್ಚಿಸುತ್ತವೆ. ಉದಾಹರಣೆಗೆ ಅಡ್ಡ ಹೆಸರು, ಪುಣೆ : ಸ್ಥಳನಾಮ ವಿವೇಚನೆ, ಬನವಾಸಿ : ಸ್ಥಳನಾಮ ವಿವೇಚನೆ, ಧಾರವಾಡ : ಗ್ರಾಮನಾಮ ವಿವೇಚನೆ, ಕುಂತಳ-ಕರ್ನಾಟಕ ನಿಷ್ಪತ್ತಿ, ವೀರಶೈವ ವರ್ತಕರ ಅಡ್ಡ ಹೆಸರು, ಹರಿಹರ ಹೆಸರಿನ ನಿಜರೂಪ, ಅರಿಕೇಸರಿ ಹೆಸರಿನ ನಿಜರೂಪ, ಪಂಚಮಸಾಲಿ ಹಾಗೆಂದರೇನು? ಪಟ್ಟಣಶೆಟ್ಟಿ, ಮೇಣಬಸದಿ ಇತ್ಯಾದಿ ಲೇಖನಗಳು ನಿದರ್ಶನವಾಗಿವೆ. ಡಾ. ಎಂ. ಎಂ. ಕಲಬುರ್ಗಿ ಅವರು ದೈವಸಂಬಂಧಿ ಹೆಸರುಗಳಲ್ಲಿ ಕನ್ನಡ ಚರಿತ್ರೆಯನ್ನು ಕಟ್ಟಲು ಪ್ರಯತ್ನಿಸುತ್ತಾರೆ. ಭೈರವ, ಮೈಲಾರ, ಮಲ್ಲಿಕಾರ್ಜುನ, ಬಾದುಬ್ಬೆ, ಬಳರಿ, ಮುದಿಮಲ್ಲಯ್ಯ, ಮುದಿವೀರಣ್ಣ, ಮುದಿಸಂಗಯ್ಯ ಮುಂತಾದ ದೈವಗಳ ಪ್ರಾಚೀನ ಉಲ್ಲೇಖ, ನಂತರದ ಜೀವನಕ್ರಮದಿಂದ ಪರಿವರ್ತನೆಯಾದ ರೀತಿಯನ್ನು ಅಲೆಮಾರಿ, ಬೇಟೆ, ಪಶುಪಾಲನ, ಕೃಷಿಸಂಸ್ಕೃತಿಯ ಮೂಲಕ ಮಾನವಶಾಸ್ತ್ರದ ವಿಕಾಸಕ್ರಮದಲ್ಲಿ ಗುರುತಿಸುತ್ತಾರೆ. ಭಾಷಿಕವಾಗಿ ಪದಗಳ ರಾಚನಿಕ ಅರ್ಥದ ಮೂಲದಿಂದ ನಾಮಗಳನ್ನು ವಿವರಿಸುತ್ತಾರೆ. ಉದಾಹರಣೆಗೆ ಮಲೆಯ+ಅಯ್ಯ=ಮಲ್ಲಯ್ಯ, ಅದ್ರಿ+ಈಶ=ಅದ್ರೀಶ (ಪರ್ವತದ ಮಲ್ಲಿಕಾರ್ಜುನ) ಕೆಲವು ಸಲ ಧ್ವನಿ ವ್ಯತ್ಯಾಸ ಮತ್ತು ರೂಪಪಲ್ಲಟಗಳ ಸಾಧ್ಯತೆಯನ್ನು ನಿರೂಪಿಸುತ್ತಾರೆ. ಉದಾಹರಣೆಗೆ ಹರಿಯಲದೇವ>ಹರಿಹರದೇವ. ಇದು ಶಾಸನೋಕ್ತ ಹರಿಗ, ಹರಿಯಮ್ಮ ಹೆಸರುಗಳು ವಿಷ್ಣು ಎಂಬರ್ಥದಲ್ಲಿ ಬಂದಿಲ್ಲ. 'ಪರಿ' ಎಂಬ ಹಳೆಯ ರೂಪ 'ಹರಿ' ಎಂಬುದು ದೇಶಿರೂಪ ಎನ್ನುತ್ತಾರೆ.

ಮಿಂಡಗುದ್ದಲಿ> ಮೇಟಿಗುದ್ದಲಿ> ಮೆಟಗೊಡ್ಲಿ ಹೀಗೆ ಕೃಷಿಮೂಲದಿಂದ ಬದುಕಿದ ಪಂಚಮಸಾಲಿ ಸಮುದಾಯದ ಮೂಲ ರೂಪ ಎಂಬುದಾಗಿ ತಿಳಿಸುತ್ತಾರೆ. ಒಟ್ಟಿನಲ್ಲಿ ನಾಮಗಳು ಇದೇ ಮೂಲದಿಂದ ರೂಪುಗೊಂಡಿವೆ ಎಂದು ಹೇಳುವುದಲ್ಲ. ಒಂದು ಪ್ರದೇಶದ ಭೌಗೋಳಿಕ, ಆಚರಣೆ, ನಂಬಿಕೆ, ಕ್ರಿಯೆ ಏನೆಲ್ಲ ಸೇರಿಕೊಂಡಿರುತ್ತವೆ. ಹೀಗಾಗಿ ನಾಮವಿಜ್ಞಾನ ಪರಿಸರದ ಚರಿತ್ರೆಯನ್ನು ಕಟ್ಟಿಕೊಡುವ ಶಾಸ್ತ್ರವಾಗಿದೆಂಬುದನ್ನು ಇಲ್ಲಿಯ ಹಲವಾರು ಲೇಖನಗಳಲ್ಲಿ ಗುರುತಿಸಲು ಪ್ರಯತ್ನ ಮಾಡಿದ್ದಾರೆ.

ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ಲೇಖನಗಳು ಈ ಸಂಪುಟದಲ್ಲಿವೆ. ಭಾಷೆಯ ವ್ಯತ್ಯಾಸಕ್ಕೆ ಪ್ರಾದೇಶಿಕತೆಯೂ ಒಂದು ಕಾರಣ. ಆಯಾ ಭಾಗಗಳಲ್ಲಿ ಪ್ರಚಲಿತವಿರುವ ಭಾಷಾರಚನೆ, ಬಳಕೆಯಲ್ಲಿ ಆಗುವ ವ್ಯತ್ಯಾಸ ಕುರಿತಾಗಿ ಇಲ್ಲಿಯ ಕೆಲವು ಲೇಖನಗಳು ವಿವರಿಸುತ್ತವೆ. ಕೇಸಿ–ಕೇರಿ, ಹುಡುಗ–ಹುಡಿಗಿ ಇತ್ಯಾದಿ ಲೇಖನಗಳನ್ನು ನೋಡಬಹುದು. ದಕ್ಷಿಣಕರ್ನಾಟಕದ 'ಹೋಗಿಬಿಟ್ಟ ಬಂದೆ' ಎಂಬ ಉಚ್ಚಾರ ಉತ್ತರಕರ್ನಾಟಕದಲ್ಲಿ 'ಹೋಗಿಕೇಸಿ ಬಂದೆ' 'ಹೋಗಿಕೇರಿ ಬಂದೆ' ಎಂದಾಗುತ್ತದೆ. ಮಾಡು ಎಂಬರ್ಥದ ಕೆಯ್ ಸಾಧಿಕರೂಪ ಕೆಯ್ಯಿ ಎಂಬುದನ್ನು ಹಳಗನ್ನಡದಲ್ಲಿ ಹುಡುಕಿದ್ದಾರೆ. ಸ್ವಚ್ಛಂದ ಪರಿವರ್ತನೆಯ ತತ್ವದಂತೆ ಭಾಷಿಕ ಪರಿಸರದಲ್ಲಿ ಇವು ಬಳಕೆಯಾಗುತ್ತವೆ ಎಂಬುದು ಡಾ. ಕಲಬುರ್ಗಿ ಅವರ ಅಭಿಪ್ರಾಯ. ಅದೇರೀತಿ 'ಪುಡಿ' ಎಂಬ ಕಿರಿದು ಎಂಬರ್ಥದ ಪ್ರಕೃತಿಗೆ 'ಇಗ' ಎಂಬ ತದ್ಧಿತಪ್ರತ್ಯಯ ಸೇರಿ ಪುಡಿ>ಹುಡಿ + ಇಗ= ಹುಡಿಗ>ಹುಡುಗ ಎಂದಾಗಿದೆ. ಇದರ ಸ್ತ್ರೀವಾಚಿರೂಪ ಹುಡುಗಿ>ಹುಡಿಗಿ ಎನ್ನುತ್ತಾರೆ. ಕನ್ನಡದ ದೇಶಿರೂಪಗಳ ಉಚ್ಚಾರದ ಸ್ವರೂಪವನ್ನು ಅಂಶಲಯದ ನೆಲೆಯಲ್ಲಿ ಗುರುತಿಸುವ ಪ್ರಯತ್ನವನ್ನು 'ಪ್ರಾಚೀನಕನ್ನಡದ ಒಂ‍ದು ಉಚ್ಚಾರ' ಎಂಬ ಲೇಖನ ವಿವರಿಸಿದರೆ; ಮೆಕೆಂಜೆ ಸಂಗ್ರಹಿಸಿದ ಕಾಗದಪ್ರತಿಯಲ್ಲಿ ಬಳಕೆಯಾದ ಪದಗಳಿಗೆ ಅರ್ಥವಿವರಣೆಯನ್ನು ನೀಡುವ 'ಯಾದಾಸ್ತು ಘಟ್ಟದ ಕೆಳಗಿನ ಭಾಷೆಗಳು' ಎಂಬ ಲೇಖನವು ಈಗ ಮರೆಯಾಗಿರುವ ೫೧ ಪದಗಳ ಅರ್ಥ ವಿವರಣೆಗೆ ಮೀಸಲಾಗಿದೆ. ಉದಾಹರಣೆ ಬೆಂಗೆರೆಯೆಂದರೆ ಸಮುದ್ರ, ಕೀಳುಕಿರುಕಟ್ಟಿ ಅಂದರೆ ಸಣ್ಣ ಹುಡುಗರು ಇತ್ಯಾದಿ ಪದಾರ್ಥಗಳನ್ನು ನೋಡಬಹುದು. ಯಾವುದೇ ಭಾಷೆಯ ಸಾರ್ಥಕತೆ ಇರುವುದು ಅದರ ಸಂವಹನ ಕ್ರಿಯೆಯಲ್ಲಿ ಹಾಗೂ ವ್ಯವಹಾರದ ನೆಲೆಯಲ್ಲಿ. ಆದರೆ, ನಮ್ಮ ಭಾಷಾನೀತಿ ವೈಜ್ಞಾನಿಕವಾಗಿಲ್ಲದ ಕಾರಣ ಪ್ರಾದೇಶಿಕಭಾಷೆ ಕುಂಠಿತವಾಗಿರುವುದನ್ನು ಆಡಳಿತದಲ್ಲಿ ಅನುವಾದಭಾಷೆ–ಪ್ರಾದೇಶಿಕಭಾಷೆ, ಕನ್ನಡಿಗರ ಮಾತೃಭಾಷಾ ಪ್ರಜ್ಞೆಯ ಇತಿಹಾಸ, ಮಾತೃಭಾಷೆ: ಮರುವ್ಯಾಖ್ಯಾನ, ಸಂಕ್ರಮಣದ ಸಂದರ್ಭದಲ್ಲಿ ಕನ್ನಡದ ಪಠ್ಯಕ್ರಮ ಮುಂತಾದ ಲೇಖನಗಳು ಕನ್ನಡದ ಬೋಧನೆ, ಶಿಕ್ಷಣ, ಪಠ್ಯರಚನೆ, ಅಭಿವೃದ್ಧಿ ಕುರಿತು ವಾಗ್ವಾದಗಳನ್ನು ಹುಟ್ಟುಹಾಕುತ್ತವೆ. ವಚನಕಾರರ ಸಾಮಾಜಿಕ ಚಳುವಳಿಗೆ, ಸಾಹಿತ್ಯಿಕ ಮೀಮಾಂಸೆಗೆ, ತಾತ್ವಿಕತೆಯ ಅಭಿವ್ಯಕ್ತಿಗೆ ಅವರು ಬಳಸಿದ ಭಾಷೆಯೇ ಪ್ರಮುಖವಾಗಿದೆಂಬುದನ್ನು ವಚನಕಾರರು: ಭಾಷೆ– ಕನ್ನಡಭಾಷೆ– ವಚನಭಾಷೆ, ಸೂಳ್ನುಡಿ ಇತ್ಯಾದಿ ಲೇಖನಗಳ ಮೂಲಕ ಸಮರ್ಥಿಸಿಕೊಂಡಿದ್ದಾರೆ.

ವ್ಯಾಕರಣಶಾಸ್ತ್ರಕ್ಕೆ ಸಂಬಂಧಿಸಿದ ಲೇಖನಗಳನ್ನೂ ಡಾ. ಕಲಬುರ್ಗಿ ಅವರು ಬರೆದಿದ್ದಾರೆ. ಅವುಗಳಲ್ಲಿ ಶಬ್ದಮಣಿದರ್ಪಣ ಕುರಿತಾದ ಲೇಖನಗಳೇ ಹೆಚ್ಚು. ಡಾ. ಕಲಬುರ್ಗಿ ಅವರ ದೃಷ್ಟಿಯಲ್ಲಿ ಶಬ್ದಮಣಿದರ್ಪಣ ಒಂದು ಮಹಾಕಾವ್ಯ. ಈ ವ್ಯಾಕರಣ ಕೃತಿಗೆ ಬರೆದ ವೃತ್ತಿಗಳ ಕುರಿತು

'ಶಬ್ದಮಣಿದರ್ಪಣದ ಅರ್ಥವೃತ್ತಿ ಮತ್ತು ಅನ್ವಯವೃತ್ತಿ' ಎಂಬ ಲೇಖನ ವಿವರಿಸುತ್ತದೆ. 'ಸೂತ್ರಕರ್ಥವೃತ್ತಿವರ್ತಿಸೆ ಪೇಳ್ವೆಂ' ಎಂದು ಕೇಶಿರಾಜನೇ ಹೇಳಿರುವುದರಿಂದ ಈತ ಬರೆದದ್ದು ಅರ್ಥವೃತ್ತಿ ಎಂದೂ, 'ಲಿಂಗಣಾರಾಧ್ಯ ವಿರಚಿತಮಪ್ಪ ಸೂತ್ರಾನ್ವಯ ರತ್ನಮಾಲೆ' ಎಂಬ ಉಲ್ಲೇಖದಿಂದ ಲಿಂಗಣಾರಾಧ್ಯನದು ಅನ್ವಯವೃತ್ತಿಯೆಂದೂ ಶೋಧಿಸುತ್ತಾರೆ. ಶಬ್ದಮಣಿದರ್ಪಣದ ಸಮುಚ್ಚಯಗಳು ಎಂಬ ಲೇಖನದಲ್ಲಿ ಕೇಶಿರಾಜನ ೮೦ ಸಮುಚ್ಚಯಗಳನ್ನು ದಾಖಲಿಸಿರುವ ಏಕೈಕಹಸ್ತಪ್ರತಿಯನ್ನು ಶೋಧಿಸಿ ಸಮುಚ್ಚಯಗಳ ಅರ್ಥವಿಶೇಷತೆಯನ್ನು ಪರಿಚಯಿಸಿದ್ದಾರೆ. ೨೬ ಪುರುಷರಿಗೆ ಸಂಬಂಧಿಸಿದ ಪ್ರತ್ಯಯಗಳು ಮತ್ತು ೩ ಸ್ತ್ರೀಸಂಬಂಧಿ ಪ್ರತ್ಯೇಯಗಳು ಸೇರಿಸಿಕೊಂಡಿರುವುದನ್ನು ಅಭ್ಯಾಸಪೂರ್ಣವಾಗಿ ಪ್ರತ್ಯೇಕಿಸಿ ಬರೆದ ಲೇಖನ ಶಬ್ದಮಣಿ ದರ್ಪಣದ ತದ್ದಿತ ಪ್ರಕರಣ. ಕ್ಷಳಸೂತ್ರ ಎಂಬ ಲೇಖನ ಎಸ್. ತಿಪ್ಪಣ್ಣಭಟ್ಟ ಅವರ ಅಭಿಪ್ರಾಯಕ್ಕೆ ಬರೆದ ಪ್ರತಿಕ್ರಿಯೆಯಾಗಿದೆ. ಕೇಶಿರಾಜ ಸೂತ್ರ–ವೃತ್ತಿ–ಅರ್ಥ ವಿವರಣೆಯಲ್ಲಿ ಕ್ರಮ ತಪ್ಪಿಲ್ಲವೆಂಬುದು ಇಲ್ಲಿಯ ಒಟ್ಟು ಆಶಯವಾಗಿದೆ. ಡಿ.ಎಲ್. ನರಸಿಂಹಾಚಾರ್ ಸಂಪಾದಿಸಿದ ಶಬ್ದಮಣಿದರ್ಪಣದಲ್ಲಿಯ ದೋಷಗಳನ್ನು ಪಟ್ಟಿಮಾಡಿ ಬರೆದ ಎರಡು ಲೇಖನಗಳು 'ದರ್ಪಣಾವಲೋಕನ'. ೧೯೬೪ ರಲ್ಲಿಯೇ ಡಿ. ಎಲ್. ನರಸಿಂಹಾಚಾರ್ ಅಂಥವರಿಗೆ ಪತ್ರಬರೆದು ಅವರ ದೋಷಗಳನ್ನು ಎತ್ತಿಹೇಳಿದ ಡಾ. ಎಂ. ಎಂ. ಕಲಬುರ್ಗಿ ಅವರ ವಿದ್ವತ್ತಿಗೆ ಈ ಲೇಖನಗಳು ಸಾಕ್ಷಿಯಾಗಿವೆ.

ಛಂದಸ್ಸು ಕಾವ್ಯದ ಹೊದಿಕೆ. ಕನ್ನಡ ಕಾವ್ಯ, ಶಾಸನ ಹಾಗೂ ಆಧುನಿಕ ವಿದ್ವಾಂಸರಾದ ತಿ.ನಂ.ಶ್ರೀ ಅವರು ವಿವೇಚಿಸಿದ ಛಂದೋಪ್ರಯೋಗಗಳ ಸಮಸ್ಯೆಗಳನ್ನು ವಿಶ್ಲೇಷಿಸುವ ಹಲವು ಲೇಖನಗಳನ್ನು ಡಾ. ಕಲಬುರ್ಗಿ ಅವರು ಬರೆದಿದ್ದಾರೆ. ಹಸ್ತಪ್ರತಿ, ಗ್ರಂಥಸಂಪಾದನೆ, ಸಂಶೋಧನೆ ಕುರಿತು ಶಾಸ್ತ್ರಕೃತಿಗಳನ್ನು ರಚಿಸಿದ ಡಾ. ಕಲಬುರ್ಗಿ ಅವರು ಕನ್ನಡ ಛಂದಶ್ಶಾಸ್ತ್ರ ಹೆಸರಿನ ಕೃತಿ ರಚಿಸಲು ಕರಡುಪ್ರತಿ ಸಿದ್ಧಪಡಿಸಿದ್ದರಂತೆ ಕಾರಣಾಂತರಗಳಿಂದ ಪ್ರಯಾಣದಲ್ಲಿ ಕರಡುಪ್ರತಿ ಕಳೆದುಹೋದ ಬಗ್ಗೆ ಮಾಹಿತಿ ಇದೆ. ಪ್ರಾಚೀನ ಹಾಗೂ ಆಧುನಿಕ ಕಾಲದಲ್ಲಿ ಛಂದಸ್ಸಿಗೆ ಸಂಬಂಧಿಸಿದ ಗ್ರಂಥಗಳು ಹುಟ್ಟಿದ್ದರೂ ಕನ್ನಡಛಂದಸ್ಸಿನ ಸಮಗ್ರಸ್ವರೂಪವನ್ನು ವಿವೇಚಿಸಲು ಸಾಧ್ಯವಾಗಿಲ್ಲ. ಈ ಸಾಧ್ಯತೆಯ ಕಡೆಗೆ ಕನ್ನಡ ಛಂದಸ್ಸಿನ ಸ್ವರೂಪ ಎಂಬ ಲೇಖನ ಗಮನಸೆಳೆಯುತ್ತದೆ. ಛಂದೋಲಂಕಾರ, ಛಂದಶ್ಶಾಸ್ತ್ರ–ಸಂಗೀತಶಾಸ್ತ್ರ–ಶೈಲಿಶಾಸ್ತ್ರ, ಲಯ–ಅಂಶ, ಅಂಶ–ಲಯಗಳ ಪ್ರಮಾಣ–ಸ್ವರೂಪ ಕುರಿತು ಈ ಲೇಖನದಲ್ಲಿ ವಿವರಿಸುತ್ತಾರೆ. ಷಟ್ಪದಿಯ ಬೆಳವಣಿಗೆಯ ವಿವಿಧ ಕಾಲಘಟ್ಟವನ್ನು ಷಟ್ಪದಿಯ ಉಗಮ ಮತ್ತು ವಿಕಾಸ ಲೇಖನ ಪರಿಚಯಿಸುತ್ತದೆ. ಮಾನಸೋಲ್ಲಾಸದಲ್ಲಿ ಕನ್ನಡ ಪದ್ಯಗಳು ಎಂಬ ಲೇಖನದಲ್ಲಿ ವಿದ್ವಾಂಸರು ಗಮನಿಸದೇ ಇರುವ ಚತುಷ್ಪದಿ ಮತ್ತು ವಿಚಿತ್ರಾವೃತ್ತಗಳೆಂಬ ಎರಡು ಪದ್ಯಗಳನ್ನು ಶೋಧಿಸಲಾಗಿದೆ. ಪುಲಿಗೆರೆಯ ಶಂಖಜಿನೋದ್ಭವ ಕಾವ್ಯದ ಅಂಶಲಯ ಧಾಟಿಯನ್ನು ಗುರುತಿಸುತ್ತಾರೆ. ಈ ಹಿಂದೆ ಈ ಕುರಿತು ಡಾ. ಚಿದಾನಂದಮೂರ್ತಿ ಮತ್ತು ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ ಅವರ ಅಭಿಪ್ರಾಯಗಳನ್ನು ಪರಿಶೀಲಿಸಿ ಬರೆದ ಲೇಖನ ಉಯ್ಯಲಗಣ ಯಾವುದು? ತರಂಗಗಣ ಸೂಕ್ತ ಹೆಸರು. ಅದೇರೀತಿ ತೀ.ನಂ. ಶ್ರೀ. ಮತ್ತು ಕುವೆಂಪು ಅವರುಗಳ ಛಂದೋವಿಚಾರಗಳನ್ನು ಕುರಿತು ಕೆಲವು ಲೇಖನಗಳಲ್ಲಿ ಚರ್ಚಿಸಿದ್ದಾರೆ.

ಶಾಸ್ತ್ರಕಾವ್ಯ-ಶ್ಲೇಷಕಾವ್ಯ-ಸಮಸ್ತಕಾವ್ಯ, ಪೊನ್ನನ ಭುವನೈಕರಾಮಾಭ್ಯುದಯ: ಅಲಂಕಾರಶಾಸ್ತ್ರ? ವಾಙ್ಮಯ -ಕಾವ್ಯ-ಸಾಹಿತ್ಯ, ಚಂಪೂ-ಪ್ರಬಂಧ-ಪ್ರಸಂಗ, ರನ್ನನಿಘಂಟು ಮುಂತಾದ ಚರ್ಚೆಗಳಲ್ಲಿ ಶಾಸ್ತ್ರೀಯ ಆಲೋಚನೆಗಳು ಇರುವುದರಿಂದ ಇಂಥ ಲೇಖನಗಳನ್ನು ಈ ಸಂಪುಟದಲ್ಲಿಯೇ ಸೇರಿಸಲಾಗಿದೆ.

ಕೃತಜ್ಞತೆಗಳು

ಡಾ. ಎಂ. ಎಂ. ಕಲಬುರ್ಗಿ ಸಮಗ್ರಸಾಹಿತ್ಯ ಪ್ರಕಟನೆ ಯೋಜನೆಯಲ್ಲಿ ಅವರ ಮಾರ್ಗಸಂಪುಟಗಳ ಲೇಖನಗಳ ಸಂಪಾದನೆಗೆ ಅವಕಾಶ ದೊರೆತದ್ದು ನನ್ನ ಭಾಗ್ಯ. ದುರ್ದೈವದ ಸಂಗತಿಯೆಂದರೆ ಶ್ರೀಯುತರ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆಯನ್ನು ಇಷ್ಟುಬೇಗ ಕೈಗೆತ್ತಿಕೊಳ್ಳುತ್ತೇವೆಂದು ನಾವು ಊಹಿಸಿರಲಿಲ್ಲ. ಅನಿರೀಕ್ಷಿತ ಬೆಳವಣಿಗೆಗಳು ನಮ್ಮಿಂದ ಡಾ. ಎಂ.ಎಂ.ಕಲಬುರ್ಗಿ ಅವರನ್ನು ದೂರ ಮಾಡಿದವು. ನಮ್ಮ ಬರವಣಿಗೆಗೆ ಸಾಕ್ಷಿಪ್ರಜ್ಞೆಯಾಗಿದ್ದ ಅವರಿಗೆ ಭಕ್ತಿಪೂರ್ವಕ ಪ್ರಣಾಮಗಳು. ಡಾ. ಎಂ.ಎಂ.ಕಲಬುರ್ಗಿ ಅವರ ಉತ್ತರಾಧಿಕಾರಿಗಳಾದ ಡಾ. ವೀರಣ್ಣ ರಾಜೂರ ಅವರು ಈ ಯೋಜನೆಯ ಪ್ರಧಾನ ಸಂಪಾದಕರು. ಅವರ ಮಾರ್ಗದರ್ಶನ ನನ್ನ ಕೆಲಸಕ್ಕೆ ಶ್ರೀರಕ್ಷೆ. ಅದೇರೀತಿ ಮಾತೃ ಸ್ವರೂಪಿಗಳಾದ ಶ್ರೀಮತಿ ಉಮಾದೇವಿ ಕಲಬುರ್ಗಿಯವರು. ಇವರೀರ್ವರಿಗೂ ನನ್ನ ಅನಂತ ವಂದನೆಗಳು. ಯೋಜನೆಯನ್ನು ರೂಪಿಸಿದ ವಿಜಯಪುರದ ಬಿ.ಎಲ್.ಡಿ.ಈ ಸಂಸ್ಥೆಯ ಅಧ್ಯಕ್ಷರಿಗೂ, ಪದಾಧಿಕಾರಿಗಳಿಗೂ, ಸಂಪಾದನ ಕಾರ್ಯದಲ್ಲಿ ನೆರವಾದ ಗೆಳೆಯ ಡಾ.ಪಿ.ಕೆ.ರಾಠೋಡ ಹಾಗೂ ವಿದ್ಯಾರ್ಥಿ ಮಿತ್ರರಾದ ಡಾ. ಕಾಂತೇಶರಡ್ಡಿ ಗೋಡಿಹಾಳ, ಶ್ರೀ ಟಿ. ಎಸ್. ಮಠದ, ಮತ್ತು ಡಾ.ಕೆ.ಆರ್.ಕೇಶವಮೂರ್ತಿ ಅವರಿಗೂ ಅಕ್ಷರ ಜೋಡಣೆ ಮಾಡಿದ ಗೆಳೆಯರಾದ ಡಾ. ಹನುಮಂತ ಮೇಲಿನಮನಿ ಹಾಗೂ ಡಾ. ಸರಸ್ವತಿದೇವಿ ಭಗವತಿ ಅವರಿಗೆ ಕೃತಜ್ಞತೆಗಳು.

ಹತ್ತೂ ಕಡೆ ಹಂಚಿಹೋಗಿದ್ದ ಲೇಖನಗಳನ್ನು ವಿಷಯಾನುಕ್ರಮದಲ್ಲಿ ಜೋಡಿಸುವುದು ದುಸ್ತರವಾದ ಕಾರ್ಯ. ಬಹುಶಿಸ್ತೀಯ ಅಧ್ಯಯನಕಾರರಾದ ಡಾ. ಎಂ.ಎಂ.ಕಲಬುರ್ಗಿ ಅವರು ಒಂದು ಲೇಖನದಲ್ಲಿ ಹತ್ತಾರು ವಿಷಯಗಳನ್ನು ಚರ್ಚಿಸಿದ್ದಾರೆ. ಹೀಗಾಗಿ ವರ್ಗೀಕರಣದಲ್ಲಿ ಸಮಸ್ಯೆಗಳು ಎದುರಾಗಿರುವುದು ಸಹಜ. ಈ ಕಾರ್ಯ ಆಧುನಿಕ ಗ್ರಂಥಸಂಪಾದನ ಶಾಸ್ತ್ರದ ವೈಧಾನಿಕತೆಯಾಗಿ ನನಗೆ ಅನುಭವ ತಂದುಕೊಟ್ಟಿತು. ಇಲ್ಲಿಯ ದೋಷಗಳನ್ನು ಮಿತಿಗಳೆಂದು ಪರಿಭಾವಿಸಿ ಈ ಸಂಪುಟವನ್ನು ವಿದ್ವಜ್ಜನತೆ ಪ್ರೀತಿಯಿಂದ ಸ್ವೀಕರಿಸುತ್ತೀರೆಂಬ ಭಾವನೆ ನನ್ನದು.

❖❖

*

ಪರಿವಿಡಿ

೧.	ನೃಪತುಂಗಾಭ್ಯುದಯ	೧
೨.	ಧವಲ–ಜಯಧವಲ–ಮಹಾಧವಲ	೩
೩.	ಪಂಪನ ಧರ್ಮಪುರ : ಕ್ಷೇತ್ರಕಾರ್ಯ	೧೦
೪.	ಪಂಪಭಾರತದ ಮಂಗಲ ಪದ್ಯ	೧೬
೫.	ಪೊನ್ನನ ಭುವನೈಕ ರಾಮಾಭ್ಯುದಯ : ಅಲಂಕಾರಶಾಸ್ತ್ರ?	೨೦
೬.	ಗದಾಯುದ್ಧದ ಒಂದು ಪದ್ಯ	೨೨
೭	ರನ್ನನ ಒಂದು ಪದ್ಯದ ಅರ್ಥಸಮಸ್ಯೆ	೨೫
೮.	ಶಾಸ್ತ್ರಕಾವ್ಯ–ಶ್ಲೇಷಕಾವ್ಯ–ಸಮಸ್ತಕಾವ್ಯ	೨೮
೯.	ವಾಙ್ಮಯ–ಕಾವ್ಯ–ಸಾಹಿತ್ಯ	೩೪
೧೦.	ಉಪೇಕ್ಷಿತ ಪ್ರಾಚೀನ ಕನ್ನಡಸಾಹಿತ್ಯ	೩೯
೧೧.	ರನ್ನನಿಘಂಟು	೪೪
೧೨.	ಮಾನಸೋಲ್ಲಾಸದಲ್ಲಿ ಕನ್ನಡ ಪದ್ಯಗಳು	೫೫
೧೩.	ಪಾಂಡುರಂಗವಿಠ್ಠಲ–ಪುರಂದರವಿಠ್ಠಲ	೬೦
೧೪.	ಮಹಾಪುರಾಣ : ಶಾಂತಿರಾಜ ಶಾಸ್ತ್ರಿಗಳ ಆವೃತ್ತಿ	೬೩
೧೫.	ಶಬರಶಂಕರ ವಿಳಾಸ ಸಂಗ್ರಹ	೬೭
೧೬.	ಚಂಪೂ–ಪ್ರಬಂಧ–ಪ್ರಸಂಗ	೭೦
೧೭.	ಶಿವಮಾರಮತ–ನೃಪತುಂಗದೇವಮತ–ರಟ್ಟಮತ	೭೩
೧೮.	ಶಬ್ದಮಣಿದರ್ಪಣ : ಅರ್ಥವೃತ್ತಿ ಮತ್ತು ಅನ್ವಯವೃತ್ತಿ	೭೬
೧೯.	ಶಬ್ದಮಣಿದರ್ಪಣದ ಸಮುಚ್ಚಯಗಳು	೮೩
೨೦.	ಶಬ್ದಮಣಿ ದರ್ಪಣದ ತದ್ಧಿತ ಪ್ರಕರಣ	೯೦
೨೧.	ದರ್ಪಣಾವಲೋಕನ – ೧	೯೩
೨೨.	ದರ್ಪಣಾವಲೋಕನ – ೨	೧೧೯

೨೩. ಕ್ಷಳಸೂತ್ರ ೧೩೨
೨೪. ಕನ್ನಡ ಹಸ್ತಪ್ರತಿಸೂಚಿಗಳು ೧೪೫
೨೫. ಪ್ರಭುಗೀತೆಯ ಹಸ್ತಪ್ರತಿ ೧೫೫
೨೬. ಹಸ್ತಪ್ರತಿಶಾಸ್ತ್ರ : ಅದರ ವಿವಿಧ ಮುಖಗಳು ೧೫೭
೨೭. ಹಸ್ತಪ್ರತಿ ಕ್ಷೇತ್ರಕಾರ್ಯ : ವಿಧಾನ-ಸಾಧನೆ ೧೬೭
೨೮. ಇಂಗ್ಲೆಂಡಿನಲ್ಲಿ ಕನ್ನಡ ಹಸ್ತಪ್ರತಿಗಳು ೧೭೬
೨೯. ಕನ್ನಡ ಅಧ್ಯಯನಪೀಠದ ಹಸ್ತಪ್ರತಿಭಂಡಾರ ೧೮೯
೩೦. ವಚನಸಾಹಿತ್ಯ : ಸಂಪಾದನೆಯ ವಿಧಾನ-ಇತಿಹಾಸ ೧೯೩
೩೧. ವಚನಪರಿಷ್ಕರಣ ೨೦೨
೩೨. ವಚನಪರಿಷ್ಕರಣ : ಈವರೆಗಿನ ಎರಡು ತಪ್ಪು ವಿಧಾನಗಳು ೨೦೮
೩೩. ಕೆಲವು ವಚನಕಾರರು-ವಚನ ಮುದ್ರಿಕೆಗಳು ೨೧೩
೩೪. ಪರಿಷ್ಕರಣ-ಪರಿಷ್ಕರಣದ ಪರಿಷ್ಕರಣ ೨೧೮
೩೫. ಕನ್ನಡದಲ್ಲಿ ಗ್ರಂಥಸಂಪಾದನೆಯ ಸಾಧನೆ ೨೨೧
೩೬. ಶಾಸನ ಪಾಠಪರಿಷ್ಕರಣ ೨೨೯
೩೭. ಪ್ರಾಚೀನ ಕನ್ನಡದ ಒಂದು ಉಚ್ಚಾರ ೨೩೯
೩೮. ಕನ್ನಡ ಉಚ್ಚಾರ ಪದ್ಧತಿ ಮತ್ತು ಸಂಸ್ಕೃತ ಪ್ರಭಾವ ೨೪೨
೩೯. ವಚನಕಾರರು : ಭಾಷೆ, ಕನ್ನಡಭಾಷೆ ಮತ್ತು ವಚನಭಾಷೆ ೨೪೫
೪೦. ಮಾತೃಭಾಷೆ : ಮರುವ್ಯಾಖ್ಯಾನ ೨೬೨
೪೧. ಕನ್ನಡಿಗರ ಮಾತೃಭಾಷಾ ಪ್ರಜ್ಞೆಯ ಇತಿಹಾಸ ೨೬೬
೪೨. ಆಡಳಿತದಲ್ಲಿ ಅನುವಾದಿತ ಭಾಷೆ-ಪ್ರಾದೇಶಿಕ ಭಾಷೆ ೨೭೪
೪೩. ಪ್ರದರ್ಶನ-ಸಂದರ್ಭ-ಪ್ರಯೋಗ ೨೮೦
೪೪. ಯಾದಸ್ತು ಘಟ್ಟದ ಕೆಳಗಿನ ಭಾಷೆಗಳು ೨೮೩
೪೫. ಸಂಶೋಧನೆಯ ಸ್ವರೂಪ ೨೮೬
೪೬. ಸಂಶೋಧನೆಯಲ್ಲಿ ದೇಸೀವಾದ ೨೯೧
೪೭. ಸೂಳ್ನುಡಿ ಎಂದರೇನು? ೨೯೪
೪೮. ಅಡ್ಡಹೆಸರು ೨೯೬
೪೯. ಪುಣೆ : ಸ್ಥಳನಾಮ ವಿವೇಚನೆ ೩೦೨
೫೦. ಬನವಾಸಿ : ಸ್ಥಳನಾಮ ವಿವೇಚನೆ ೩೦೬
೫೧. ಧಾರವಾಡ : ಗ್ರಾಮನಾಮ ವಿವೇಚನೆ ೩೦೯

೫೨.	ಕುಂತಳ–ಕರ್ನಾಟಕ : ನಿಷ್ಪತ್ತಿ	೩೧೩
೫೩.	ಕುಂತಳದ ಮೂಲ ರೂಪ ಕುಂತಳಹಳ್ಳಿಯೇ?	೩೧೭
೫೪.	ವೀರಶೈವ ವರ್ತಕ ವರ್ಗದ ಅಡ್ಡಹೆಸರುಗಳು	೩೧೯
೫೫.	ಕೆಲವು ಪ್ರಾಚೀನ ವ್ಯಕ್ತಿನಾಮ–ಗ್ರಾಮನಾಮಗಳು	೩೨೬
೫೬.	ಊರ ಹೆಸರುಗಳ ಕೊನೆಯ–ವರ, ವಾರ	೩೩೩
೫೭.	ಹರಿಹರ ಹೆಸರಿನ ನಿಜರೂಪ	೩೩೬
೫೮.	ಹರಿಹರದೇವನ ಹೆಸರು : ಮರುಸಮರ್ಥನೆ	೩೪೦
೫೯.	ಅರಿಕೇಸರಿ ಹೆಸರಿನ ನಿಜರೂಪ	೩೬೭
೬೦.	ಪ್ರೌಢದೇವರಾಯ : ಹೆಸರಿನ ನಿಜರೂಪ	೩೪೨
೬೧.	ಬಸವಣ್ಣನವರ ಅಡ್ಡಹೆಸರು	೩೪೪
೬೨.	ಸ್ತ್ರೀನಾಮಗಳ ಕೊನೆಯಲ್ಲಿ ಕಂಡುಬರುವ 'ಬಾಯಿ'	೩೪೬
೬೩.	–ಕೇಸಿ,–ಕೇರಿ	೩೪೯
೬೪.	–ಕೆ–ಗೆ,–ಕಿ–ಗಿ	೩೫೨
೬೫.	ವಿರೂಪಾಕ್ಷ	೩೫೪
೬೬.	ಹುಕ್ಕಬುಕ್ಕ	೩೫೭
೬೭.	ಕುಮಾರರಾಮ	೩೫೯
೬೮.	ಕೊಂಡೆಯ ಮಂಚಣ್ಣ	೩೬೨
೬೯.	ಪಟ್ಟಣಶೆಟ್ಟಿ	೩೬೭
೭೦.	ಪಂಚಮಸಾಲಿ : ಹಾಗೆಂದರೇನು?	೩೬೯
೭೧.	ಮಿಂಡಗುದ್ದಲಿ–ಮೆಂಡೆಗಾರ–ಮಟಗೊಡ್ಲಿ	೩೭೬
೭೨.	ಕಮ್ಮೆ ಬ್ರಾಹ್ಮಣರು	೩೮೦
೭೩.	ಹುಡುಗ–ಹುಡುಗಿ	೩೮೨
೭೪.	ವಾಕ್ಪಲ್ಲವಿ	೩೮೫
೭೫.	ಮೇಣಬಸದಿ	೩೯೦
೭೬.	ಮಲ್ಲೇಶ=ಅದ್ರೀಶ>ಅದೃಶ್ಯ	೩೯೨
೭೭.	ಭೈರವ, ಜುಂಜಪ್ಪ ಮತ್ತು ಮೈಲಾರ	೩೯೫
೭೮.	ಮುದಿಮಲ್ಲಯ್ಯ–ಮುದಿವೀರಣ್ಣ–ಮುದಿಸಂಗಯ್ಯ	೩೯೯
೭೯.	ಹನ್ನಿಬ್ಬರು–ಬೋಳುಕರು	೪೦೩
೮೦.	ತೊಲಗದ ಕಂಬ–ಬಾವನ್ನವೀರ	೪೦೭

೮೧. ನೊಳಂಬದೊಡ್ಡ–ನೊಳಂಬವಟ್ಟ ೪೧೧
೮೨. ಗುಡ್ಡಧ್ವಜ–ಸೆಟ್ಟಿವಟ್ಟ–ಬಣಂಜುವಟ್ಟ ೪೧೩
೮೩. ಲಾಳಸಂಧಿ ವಿಗ್ರಹಿ ೪೧೭
೮೪. ಮಲ್ಲಿಗೆಮುಡಿಯೆಂದ ೪೨೦
೮೫. ಕನ್ನಡ ಛಂದಸ್ಸಿನ ಸ್ವರೂಪ ೪೨೩
೮೬. ಅಂಶಗಣದ ಇತಿಹಾಸ ೪೩೦
೮೭. ಉಯ್ಯಲಗಣ ಯಾವುದು? ತರಂಗಗಣ ಸೂಕ್ತಹೆಸರು ೪೩೭
೮೮. ಷಟ್ಪದಿಯ ಉಗಮ ಮತ್ತು ವಿಕಾಸ ೪೪೧
೮೯. ಗೋವಿಂದ ಪೈಗಳ ಸಂಶೋಧನೆಯ ಪದ್ಧತಿಸಾಧನೆ ೪೫೫
೯೦. ಗೋವಿಂದ ಪೈ : ಹಳಗನ್ನಡ–ನಡುಗನ್ನಡ ಸಾಹಿತ್ಯ ಸಂಶೋಧನೆ ೪೬೨
೯೧. ಕುವೆಂಪು ಛಂದಸ್ಸು ೪೮೦
೯೨. ವೆಂಕಣ್ಣಯ್ಯನವರ ವಿಮರ್ಶೆ–ಸಂಶೋಧನೆ–ಸಂಪಾದನೆ ೪೮೭
೯೩. ತೀ.ನಂ.ಶ್ರೀ. ಛಂದೋವಿಚಾರ: ಪರಿಶೀಲನೆ ೪೯೫
೯೪. ಪು.ತಿ.ನ ಅವರ ಕಾವ್ಯ ಭಾಷೆ ೫೦೩
೯೫. ಕರ್ನಾಟಕ ದೇಶದ ಕಥೆ ೫೦೯
೯೬. ಕನ್ನಡಸಾಹಿತ್ಯ ಮತ್ತು ಓದುಗ ೫೧೫
೯೭ ಕನ್ನಡ ಪಠ್ಯಕ್ರಮ : ಸಂಕ್ರಮಣದ ಸಂದರ್ಭದಲ್ಲಿ ೫೧೭
೯೮. ಸ್ನಾತಕೋತ್ತರ ಕನ್ನಡ ಪಠ್ಯಕ್ರಮ : ನವೀಕರಣ ೫೨೪
೯೯. ನನ್ನ ಕರ್ನಾಟಕ ೫೨೭
೧೦೦. ಎಲ್ಲಾದರೂ ಇರು ಎಂತಾದರೂ ಇರು ೫೨೯
೧೦೧. ವಿದೇಶಗಳಲ್ಲಿ ಕನ್ನಡ ಪುಸ್ತಕ ಸಂಸ್ಕೃತಿಯ ಸಂವರ್ಧನೆ ೫೩೩
೧೦೨. ಹಿಂದಿ ಹಾವಳಿ ೫೩೮

■■

೧

ನೃಪತುಂಗಾಭ್ಯುದಯ

ಈವರೆಗೆ ನಮಗೆ ಲಭಿಸಿದ ಕವಿರಾಜಮಾರ್ಗದ ಹಸ್ತಪ್ರತಿಗಳು ನಾಲ್ಕು : ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಾಂಡಾರದಲ್ಲಿರುವ ಇವುಗಳಲ್ಲಿ ೨ ತಾಳೆಗರಿ ಪ್ರತಿಗಳು, ೨ ಕಾಗದ ಪ್ರತಿಗಳು. ತಾಳೆಗರಿ ಪ್ರತಿಗಳ ನಕಲು ಕಾಗದ ಪ್ರತಿಗಳಾದುದರಿಂದ ಈವರೆಗೆ ಲಭ್ಯವಾದುದು ವಸ್ತುತಃ ಎರಡೇ ಪ್ರತಿಗಳೆಂದು ಹೇಳಬೇಕಾಗುತ್ತದೆ.[೧]

'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ವಿಷಯವನ್ನು ಕುರಿತು ಪಿಎಚ್.ಡಿ. ಅಧ್ಯಯನ ಮಾಡುತ್ತಲಿದ್ದ ಸಂದರ್ಭದಲ್ಲಿ ಕವಿರಾಜಮಾರ್ಗದ ಬೇರೆ ಹಸ್ತಪ್ರತಿಗಳನ್ನು ಶೋಧಿಸಲು ತೊಡಗಿ ರಾಷ್ಟ್ರಕೂಟರ ರಾಜಧಾನಿಯಾದ ಮಳಖೇಡ, ಲಕ್ಷ್ಮೀಸೇನಮಠದ ಹಸ್ತಪ್ರತಿಭಾಂಡಾರವನ್ನೊಳಗೊಂಡ ಕೊಲ್ಲಾಪುರ ಮೊದಲಾದ ಗ್ರಾಮ, ಪಟ್ಟಣಗಳನ್ನು ಸುತ್ತಾಡುತ್ತಲಿದ್ದೆ. ಸುತ್ತಾಟ ಸುದೀರ್ಘವಾಯಿತು, ಹಸ್ತಪ್ರತಿ ಮಾತ್ರ ಒಂದೂ ಲಭಿಸಲಿಲ್ಲ. ನನ್ನ ಪರಿದಾಟ, ಪ್ರಯತ್ನಗಳನ್ನು ಗಮನಿಸಿದ ದಿವಂಗತ ಡಿ.ಕೆ.ಭೀಮಸೇನರಾಯರು "ಗುಲ್ಬರ್ಗಾಜಿಲ್ಲೆಯ ಐನಾಪುರ ಅಥವಾ ಐನೂಲಿ ಗ್ರಾಮದಲ್ಲಿ ಕವಿರಾಜಮಾರ್ಗದ ಒಂದು ಹಸ್ತಪ್ರತಿಯಿದೆ ಪ್ರಯತ್ನಿಸಿರಿ" ಎಂದು ತಿಳಿಸಿದರು. ಈ ಸೂಚನೆಯ ಮೇರೆಗೆ ಐನಾಪುರದಲ್ಲಿ ಶೋಧಿಸಲಾಗಿ ಬೇರೆ ಹಸ್ತಪ್ರತಿಗಳು ಸಿಕ್ಕವೇ ಹೊರತು, ಕವಿರಾಜಮಾರ್ಗ ಕಣ್ಣಿಗೆ ಬೀಳಲಿಲ್ಲ. ಇದರಿಂದ ಬೇಸತ್ತು ನಾನು ಐನೂಲಿಗೆ ಹೋಗುವ ವಿಚಾರವನ್ನು ಬಿಟ್ಟುಕೊಟ್ಟೆನು. ಆದರೆ ಆ ಪ್ರದೇಶದ ಸ್ನೇಹಿತರಿಗೆ, ವಿದ್ಯಾರ್ಥಿಗಳಿಗೆ ಕವಿರಾಜಮಾರ್ಗ ಹಸ್ತಪ್ರತಿಗಾಗಿ ಐನೂಲಿನಲ್ಲಿ ಶೋಧಿಸಲು ಹೇಳುತ್ತಲೇ ಇದ್ದೆನು. ಒಬ್ಬಿಬ್ಬರು (ಪ್ರೊ. ಮಾಣಿಕರಾವ ಧನಾಶ್ರೀ-ಬಸವಕಲ್ಯಾಣ, ಪ್ರೊ. ಭೈರೊಡಗಿ-ಭಾಲ್ಕಿ ಇತ್ಯಾದಿ) ನನ್ನ ಮಾತಿನಂತೆ ಪ್ರಯತ್ನಿಸಿದರು. ಕವಿರಾಜಮಾರ್ಗದ ಸುಳುಹು ಹತ್ತಲಿಲ್ಲ. ಈ ಮಧ್ಯೆ ಐನೂಲಿ ಗ್ರಾಮದ ಒಬ್ಬ ಜಂಗಮವ್ಯಕ್ತಿಗಳು "ಕಳೆದ ಶತಮಾನದಲ್ಲಿ ತಮ್ಮ ಹಿರಿಯರು ರಚಿಸಿದ ಪುರಾಣ ಗ್ರಂಥಗಳಿವೆ. ಅವುಗಳನ್ನು ಅಚ್ಚುಹಾಕಿಸಲು ಸಾಧ್ಯವೇ?" ಎಂದು ಕೋರಿ ನನಗೆ

---

೧. Mackenze Collection, A DEscriptive catalogue of the oriental manuscripts, By H. H. Wilson Vol. II, page 62 (1828) ರಲ್ಲಿ ಕವಿರಾಜಮಾರ್ಗದ ಹಸ್ತಪ್ರತಿಯ ಸೂಚನೆ ಇದೆ. 1959 ರಲ್ಲಿ ಮೆಕೆಂಝಿ ಸಂಗ್ರಹವನ್ನು ಹೊರತುಪಡಿಸಿ ಮಿಕ್ಕ ಹಸ್ತಪ್ರತಿಗಳನ್ನು ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳಿಗೆ ಕಳಿಸಿ ಕೊಡಲಾಯಿತು. ಹೀಗಾಗಿ ಮೆಕೆಂಝಿ ಸಂಗ್ರಹಿಸಿರುವ ಹಸ್ತಪ್ರತಿ ಮದ್ರಾಸದಲ್ಲಿಯೇ ಉಳಿದಿದೆಯೆಂದು 21-1-78 ರಂದು ಮೆಕೆಂಝಿ ಗ್ರಂಥಭಂಡಾರಕ್ಕೆ ನೀಡಿದ ಪ್ರತ್ಯಕ್ಷ ಸಂದರ್ಶನದಿಂದ ಮನದಟ್ಟಾಯಿತು.

ಪತ್ರವನ್ನು ಬರೆದರು. ನನ್ನ ಕವಿರಾಜಮಾರ್ಗ ಹಸ್ತಪ್ರತಿಯ ದಾಹ ಈ ಪತ್ರವನ್ನು ಅಲಕ್ಷಿಸಿತು. ಹೀಗಿದ್ದೂ ಐನೂಲಿ ಗ್ರಾಮದ ಹಸ್ತಪ್ರತಿ ವಿಷಯವಾಗಿ ನನ್ನ ಪ್ರಯತ್ನ ನಡೆದೇ ಇದ್ದಿತು.

ಇತ್ತೀಚೆಗೆ ಪ್ರೊ. ಮಾಣಿಕರಾವ ಧನಾಶ್ರೀ ಅವರು ಐನೂಲಿಗೆ ಹೋದ ಸಂದರ್ಭ: ಹಸ್ತಪ್ರತಿಗಳನ್ನೆಲ್ಲ ಬಿಚ್ಚಿನೋಡಿ ಆ ರಾಶಿಯಲ್ಲಿ ಬಿಡಿಯಾಗಿ ಸಿಕ್ಕ ಒಂದು ಕಾಗದ ಪುಟವನ್ನು ನನಗೆ ತಂದುಕೊಟ್ಟರು. ಅದು ಹೀಗಿದೆ:

ಶ್ರೀ ಗುರುಪ್ರಸನ್ನ, ಇದರಲ್ಲಿ

೭.	ನೃಪತುಂಗಾಭ್ಯುದಯ	೮.	ವಿಷ್ಣುಕೃತ ಮಹಿಮ್ನ
೧.	ಮಣ್ಣೇಶ್ವರ ನಾಂದ್ಯಪದ	೨.	ನಾನಾರ್ಥರತ್ನಾಕರ ನಿಘಂಟು
೩.	ರಾಜಶೇಖರ ವಿಳಾಸ	೪.	ಭತೃಹರಿ ನೀತಿಶತಕದ ಟೀಕಾ
೫.	ಶಿವಾಧಿಕ್ಯ ರತ್ನಾವಳಿ	೯.	ಸಾರಸ್ವತೀ ವ್ಯಾಕರಣ
೬.	ಭಕ್ತಾಧಿಕ್ಯ ರತ್ನಾವಳಿ		

ಒಂದು ಕಾಗದ ಪುಸ್ತಕ (ಅಥವಾ ತಾಳೆ ಪುಸ್ತಕ)ದಲ್ಲಿ ಬರೆಯಲಾದ ಕೃತಿಗಳ ವಿವರಣೆಯನ್ನೊಳಗೊಂಡಿದೆ, ಈ ಬಿಡಿ ಕಾಗದ. ಆ ಪುಸ್ತಕದಲ್ಲಿ ಅಡಕವಾಗಿರುವ ಒಂಭತ್ತು ಕೃತಿಗಳಲ್ಲಿ 'ನೃಪತುಂಗಾಭ್ಯುದಯ'ವೂ ಒಂದು. ಈ ಶೀರ್ಷಿಕೆ ತುಂಬ ಆಕರ್ಷಕವಾದುದು. 'ನೃಪತುಂಗಾನುಮತಮಪ್ಪ ಕವಿರಾಜಮಾರ್ಗ' ಯಾವ ಊರಿನಲ್ಲಿದೆಯೆಂಬ ಪ್ರತೀತಿ ಇದೆಯೋ ಅದೇ ಊರಿನಲ್ಲಿ ದೊರೆತ 'ನೃಪತುಂಗಾಭ್ಯುದಯ' ಎಂಬ ಕೃತಿನಾಮವನ್ನೊಳಗೊಂಡ ಈ ತುಂಡು ಕಾಗದ ಇನ್ನೂ ಹೆಚ್ಚಿನ ಕುತೂಹಲವನ್ನು ಹುಟ್ಟಿಸುತ್ತದೆ. ಐನೂಲಿ, ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಳಖೇಡಕ್ಕೆ ಸಮೀಪದ ಗ್ರಾಮವೆಂಬುದನ್ನು ಇಲ್ಲಿ ಅವಶ್ಯ ಗಮನಿಸಬೇಕು. ಇದು ಅರಸು ನೃಪತುಂಗನನ್ನು ಕುರಿತ ಕೃತಿಯಾಗಿರುವ ಸಾಧ್ಯತೆಯಿದೆ. ಪೊನ್ನನ 'ಭುವನೈಕರಾಮಾಭ್ಯುದಯ'ವನ್ನು ನೆನೆದರೆ ಈ 'ನೃಪತುಂಗಾಭ್ಯುದಯ' ಅಂದಿನ ಕಾಲದ ಕೃತಿನಾಮಪದ್ಧತಿಯ ಜಾಡಿನಲ್ಲಿಯೇ ಹುಟ್ಟಿಕೊಂಡುದು ಸ್ಪಷ್ಟವಾಗುತ್ತದೆ.

ಈಗ ಆ ಗ್ರಾಮಕ್ಕೆ ಹೋಗಿ, ವಿದ್ವಾಂಸರು ಕಣ್ಣಲ್ಲಿ ಕಣ್ಣಿಟ್ಟು ಹಸ್ತಪ್ರತಿಗಳನ್ನು ಓದಬೇಕು. ಅಲ್ಲದೆ ಈ ಮೊದಲು ಕೆಲವು ವಿದ್ವಾಂಸರು ಅಲ್ಲಿಯ ಕೆಲವು ಹಸ್ತಪ್ರತಿಗಳನ್ನು ತೆಗೆದುಕೊಂಡು ಹೋಗಿರುವರೆಂದು (ಡಾ. ಸಿದ್ಧಯ್ಯ ಪುರಾಣಿಕ ಮೊದಲಾದವರು) ತಿಳಿದುಬಂದಿದೆ. ಅವರು ಒಯ್ದ ಪ್ರತಿಗಳಲ್ಲಿ 'ನೃಪತುಂಗಾಭ್ಯುದಯ' ಸೇರಿಕೊಂಡಿರುವ ಸಾಧ್ಯತೆಯಿದೆ.[೨]

■■

ಆಕರ : ಮಾರ್ಗ ಸಂಪುಟ–೧

---

೨. (ಅ) ಈ ಲೇಖನವನ್ನು ಪ್ರಕಟಿಸಿದ ಬಳಿಕ ನೃಪತುಂಗಾಭ್ಯುದಯ ಕೃತಿಯ ಕಾಗದ ಪ್ರತಿಯನ್ನು ಐನೂಲಿನಿಂದ ಸಂಗ್ರಹಿಸಲಾಯಿತು. ಈ ಪ್ರತಿಯಲ್ಲಿ ಪ್ರಾರಂಭದ ವಿಷ್ಣುಸ್ತುತಿಗೆ ಮೊದಲು ಶಿವಸ್ತುತಿಯ ಕಂದ ಪದ್ಯ ಕಂಡುಬರುತ್ತದೆ. ಮಿಕ್ಕಂತೆ ಅಂಥ ಹೇಳಿಕೊಳ್ಳುವ ಪಾಠಾಂತರಗಳಿಲ್ಲ. ಪ್ರತಿ ಮಾತ್ರ ಪೂರ್ಣವಾಗಿದೆ.

(ಆ) ೧೯೪೧ ರಷ್ಟು ಪೂರ್ವದಲ್ಲಿಯೇ ಐನೂಲಿಯ ಈ ಪ್ರತಿಯನ್ನು ಶ್ರೀ.ಕಪಟ್ರಾಳ ಕೃಷ್ಣರಾಯರು ನೋಡಿದ್ದರೆಂದು ತಿಳಿದು ಬರುತ್ತದೆ. ನೋಡಿ. ವೀರಶೈವ ಸಂಶೋಧನೆ, ಶ-ಸಾ. ೪-೭.

(ಇ) ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಪ್ರತಿಷ್ಠಾನದಲ್ಲಿಯೂ ಕವಿರಾಜಮಾರ್ಗದ ಅಪೂರ್ಣ ಕಾಗದ ಪ್ರತಿಯಿದೆ.

೨

ಧವಲ-ಜಯಧವಲ-ಮಹಾಧವಲ

ಧವಲ, ಜಯಧವಲ ಮತ್ತು ಮಹಾಧವಲ-ಈ ಸಿದ್ಧಾಂತ ಗ್ರಂಥಗಳನ್ನು ಜೈನರು ಅಧಿಕ ಶ್ರದ್ಧೆ ಮತ್ತು ಗೌರವದಿಂದ ಸ್ಮರಿಸುತ್ತಾರೆ. ಸಮಸ್ತ ಭಾರತದಲ್ಲಿ ಬೇರೆಡೆಗೆ ಸಿಗದ ಇವುಗಳ ಏಕೈಕ ಹಸ್ತಪ್ರತಿಗಳಿದ್ದುದು, ದಕ್ಷಿಣಕನ್ನಡ ಜಿಲ್ಲೆಯ ಮೂಡಬಿದಿರೆಯ ಸಿದ್ಧಾಂತ ಬಸದಿಯ ಶಾಸ್ತ್ರಭಾಂಡಾರದಲ್ಲಿ ಮಾತ್ರ.

ಮೂಲತಃ ಶ್ರವಣಬೆಳಗೊಳದ ಜೈನಮಠಕ್ಕೆ ಸಂಬಂಧಿಸಿರಬಹುದಾದ ಇವು, ಒಂದು ಕಾಲಕ್ಕೆ ಗೊಮ್ಮಟನೇ ಸಾಗಿಬರುವಂತೆ ಮೂಡಬಿದಿರಿಗೆ ಬಂದವು. ಅಂದಿನಿಂದ ಮೂಡಬಿದಿರೆಗೆ ಇನ್ನೂ ವಿಶೇಷತೆ ಪ್ರಾಪ್ತವಾಗಿ, ಈ ಗ್ರಂಥಗಳು ಜನತೆಯ ಭಕ್ತಿಕಾಣಿಕೆಗಳನ್ನು ಸ್ವೀಕರಿಸುತ್ತ, ಗದ್ದುಗೆಯ ಮೇಲೆ ಪೂಜೆಗೊಳ್ಳತೊಡಗಿದವು. ಗೌರವ ಭಕ್ತಿಗಳು ಬೆಳೆದಂತೆ ಇವುಗಳ ಅಭ್ಯಾಸ ಕಡಿಮೆಯಾಗುತ್ತಾ ನಡೆದು, ಕೊನೆಗೆ ಬಿಚ್ಚಿ ನೋಡುವುದೂ ನಿಂತುಹೋಯಿತು. ಆಧುನಿಕ ಸಂಶೋಧನೆಗಳಾದ ವಿಮಾನ, ಹಡಗು, ರೇಡಿಯೋ ಇತ್ಯಾದಿಗಳ ರಚನಾರೀತಿ, ಬಂಗಾರ ಮಾಡುವ ವಿಧಾನ, ಇತ್ಯಾದಿ ವಿಷಯವಿದರಲ್ಲಿದೆಯೆಂದು ಮುಗ್ಧಭಕ್ತರು ಮುಕ್ತಕಂಠದಿಂದ ಪ್ರಶಂಸಿಸಹತ್ತಿದರು.

ಯಾತ್ರಿಕರ ಭಯ-ಭಕ್ತಿ, ಆದರ-ಆಕರ್ಷಣೆ ಉತ್ತರೋತ್ತರಗೊಂಡಂತೆ ಅರ್ಚಕರು ಇವುಗಳನ್ನು ರತ್ನಭಾಂಡಾರ, ಹೇಮಭಾಂಡಾರಗಳಂತೆ ಎಚ್ಚರಿಕೆಯಿಂದ ರಕ್ಷಿಸಿದರು, ಬೀಗಮುದ್ರೆಯಲ್ಲಿ ಭದ್ರಗೊಳಿಸಿದರು. ಆರ್ದ್ರಭಕ್ತಿಯ ಲಕ್ಷೋಪಲಕ್ಷ ಸಂದರ್ಶಕರು ಬಂದು ನೀಡುವ ಕಾಣಿಕೆಗಳಿಗೆ ಹಕ್ಕುದಾರರಾದರು.

ಈ ಗ್ರಂಥತ್ರಯದ ಲಿಪಿ ಹಳಗನ್ನಡ, ಭಾಷೆ ಪ್ರಾಕೃತ. ಈ ಗ್ರಂಥಗಳನ್ನು ಓದುವ ವ್ಯಕ್ತಿಗಳು ಸಿಗದೆ, ಸಿಕ್ಕರೂ ಅರ್ಚಕರಿಂದ ಅವರಿಗೆ ಓದಲು ಅನುಮತಿ ಸಿಗದೆ ಹೋದ ಕಾರಣ, ಹಣಪಡೆದು ಗ್ರಂಥದರ್ಶನ ಮಾಡಿಸುವುದು ಮತ್ತು ಅವುಗಳನ್ನು ಗ್ರಂಥಚೋರರಿಂದ ರಕ್ಷಿಸುವುದು ಮಾತ್ರ ಅವರ ಕೆಲಸವಾಗಿಬಿಟ್ಟಿತು. ಇದರ ಪರಿಣಾಮವಾಗಿ ಪತ್ರಗಳು ಜೀರ್ಣಗೊಂಡು ಮಹಾಧವಲ (ಮಹಾಬಂಧ)ದ ಸುಮಾರು 3-4 ಸಾವಿರ ಶ್ಲೋಕಗಳು ನಾಶವಾದವು.

ಕ್ರಿ.ಶ. ೧೮೮೩ ರ ಸಮಯ. ಸೇಠ ಜೆ.ಪಿ. ಮಾಣಿಕಚಂದರು ಮುಂಬಯಿಯಿಂದ ಮೂಡಬಿದಿರೆಗೆ ಬಂದರು. ಗ್ರಂಥಗಳ ದರ್ಶನ ಪಡೆಯುತ್ತಿದ್ದಂತೆಯೇ ಇವುಗಳನ್ನು ಪಂಡಿತರಿಂದ ಓದಿಸಬೇಕೆಂಬ ವಿಚಾರ ಅವರಲ್ಲಿ ಸ್ಫುರಿಸಿತು. ಓದುವ ಯೋಗ್ಯವ್ಯಕ್ತಿ ದೊರೆಯಲಿಲ್ಲ. ಆದರೆ ಯಾವುದೇ ರೀತಿಯಿಂದ ಇವನ್ನು ಓದಿಸಿ

ಜಗತ್ತಿನ ಎದುರಿಗೆ ಇಡಬೇಕು ಎನ್ನುವ ವಿಚಾರ ಮಾತ್ರ ಅವರ ಚಿತ್ತದಲ್ಲುಳಿಯಿತು. ತೀರ್ಥಯಾತ್ರೆಯಿಂದ ಮರಳುವಾಗ ತಮ್ಮ ಈ ಉತ್ಕಟ ಅಭೀಪ್ಸೆಯನ್ನು ಸ್ನೇಹಿತರಾದ ಸೇಠ ಹೀರಾಚಂದ ನೇಮಿಚಂದ (ಸೊಲ್ಲಾಪುರ) ಅವರಿಗೆ ತಿಳಿಸಿದರು.

ಕನ್ನಡ ಪ್ರತಿಗಳು

ಮರುವರುಷ ದಕ್ಷಿಣಭಾರತದ ಯಾತ್ರೆಯನ್ನು ಕೈಕೊಂಡ ಸೇಠ ಹೀರಾಚಂದರು ಈ ಶಾಸ್ತ್ರಗ್ರಂಥಗಳನ್ನು ಓದಬಲ್ಲ ಜೈನಭದ್ರಿಯ ಬ್ರಹ್ಮಸೂರಿ ಶಾಸ್ತ್ರಿಗಳೊಂದಿಗೆ ಮೂಡಬಿದರಿಗೆ ಆಗಮಿಸಿದರು. ಮಂಗಲಪದ್ಯವನ್ನು ಓದಿಸಿ ಹರ್ಷಪುಲಕಗೊಂಡು, ಪ್ರಕಟನೆಗಾಗಿ ನಕಲುಮಾಡಿಸಬೇಕೆಂದು ನಿರ್ಧರಿಸಿದರು. ಪ್ರವಾಸದಿಂದ ಮರಳಿದ ಮೇಲೆ ಅವರ ಆ ಬಲವಾದ ಆಸೆ, ಕಾರ್ಯಬಾಹುಲ್ಯದ ಮೂಲಕ ತೀವ್ರ ಕೈಗೂಡಲಿಲ್ಲ.

ಕೆಲವು ದಿನಗಳ ತರುವಾಯ ಸೇಠ ನೇಮಿಚಂದ ಸೋನಿಯವರು ಅಜಮಿರ ಪಂಡಿತರಾದ ಗೋಪಾಲದಾಸರ ಜೊತೆಗೆ ಮೂಡಬಿದರಿಗೆ ಬಂದರು. ಅವರ ಪ್ರಭಾವ ಹಾಗೂ ಪ್ರಯತ್ನಗಳ ಫಲವಾಗಿ ವ್ಯವಸ್ಥಾಪಕ ಮಂಡಳಿಯವರು ಬ್ರಹ್ಮಸೂರಿ ಶಾಸ್ತ್ರಿಗಳ ಮುಖಾಂತರ ದೇವನಾಗರಿ ಲಿಪಿಯಲ್ಲಿ ನಕಲು ಮಾಡಿಸಿಕೊಳ್ಳಲು ಅನುಮತಿ ಕೊಟ್ಟರು. ಆದರೆ ಅನೇಕ ವಿಘ್ನಗಳು ಎದುರಾಗಿ, ಕಾರ್ಯಮಂದಗತಿಯಿಂದ ನಡೆದು ಕೊನೆಗೆ ನಿಂತೇಬಿಟ್ಟಿತು.

ಈಗ ಸೇಠ ಹೀರಾಚಂದ ಅವರು ಸಮಾಜದ ಮುಖಾಂತರ ಸುಮಾರು ೧೪ ಸಾವಿರ ರೂಪಾಯಿಗಳನ್ನು ಸಂಗ್ರಹಿಸಿ, ನಕಲು ಕಾರ್ಯಕ್ಕೆ ಹೊಸ ಚೈತನ್ಯ ನೀಡಿದರು. ಬ್ರಹ್ಮಸೂರಿ ಶಾಸ್ತ್ರಿಗಳೊಂದಿಗೆ ಮಿರಜದ ಗಜಪತಿ ಉಪಾಧ್ಯಾಯರೂ ಕೂಡಿ, ನಿಂತುಹೋಗಿದ್ದ ನಕಲು ಮಾಡುವ ಕಾರ್ಯವನ್ನು ಪುನಃ ಪ್ರಾರಂಭಿಸಿದರು. ಕೆಲವು ಕಾಲ ಕಳೆಯುವಲ್ಲಿ ದುರ್ದೈವದಿಂದ ಬ್ರಹ್ಮಸೂರಿ ಶಾಸ್ತ್ರಿಗಳು ನಿಧನರಾದರು. ಪಂಡಿತ ಗಜಪತಿ ಅವರೇ ನಕಲುಕಾರ್ಯವನ್ನು ಮುಂದುವರಿಸಿ ಮುಗಿಸಿದರು. ಹೀಗೆ ಧವಲ ಮತ್ತು ಜಯಧವಲಗಳ ನಕಲುಕಾರ್ಯ, ಸುಮಾರು ಹದಿನಾರು ವರ್ಷಗಳಲ್ಲಿ ಪೂರ್ಣಗೊಂಡಿತು. ಈ ಮಧ್ಯೆ ಶ್ರೀ ದೇವರಾಜ ಶೆಟ್ಟಿ, ಉಪಾಧ್ಯಾಯ ಶಾಂತಪ್ಪ ಮತ್ತು ಬ್ರಹ್ಮರಾಜ ಇಂದ್ರರು ಕನ್ನಡ ಲಿಪಿಯಲ್ಲಿ ಇವುಗಳ ಇನ್ನೊಂದು ಪ್ರತಿಯನ್ನು ಮಾಡಿಕೊಂಡರು. ಇತ್ತ ಗಜಪತಿ ಉಪಾಧ್ಯಾಯರು ಮೂಡಬಿದಿರೆಯ ಸಿದ್ಧಾಂತ ಮಂದಿರಕ್ಕೋಸುಗ ದೇವನಾಗರಿಯಲ್ಲಿ ಇನ್ನೂ ಒಂದು ಪ್ರತಿಯನ್ನು ಬರೆಯುತ್ತ, ತಮ್ಮ ಧರ್ಮಪತ್ನಿ ಲಕ್ಷ್ಮೀಬಾಯಿಯವರ ಸಹಾಯದಿಂದ ಕನ್ನಡದಲ್ಲಿಯೂ ರಹಸ್ಯವಾಗಿ ಬೇರೊಂದು ಪ್ರತಿಯನ್ನು ಸಿದ್ಧಪಡಿಸಿಕೊಂಡರು. ಈ ಕನ್ನಡ ಪ್ರತಿಯನ್ನು ಯೋಗ್ಯ ಗೌರವಧನ ಪಡೆದು, ಸಹರಾನಾಪುರದ ಶ್ರೀ ಲಾಲಾ ಜಂಬುಪ್ರಸಾದರವರಿಗೆ ಇತ್ತರು.

ಗ್ರಂಥಪ್ರಚಾರ

ಜಂಬೂಪ್ರಸಾದಜೀಯವರು, ಪಂಡಿತರಾದ ವಿಜಯಚಂದ್ರಯ್ಯ ಮತ್ತು ಸೀತಾರಾಮಶಾಸ್ತ್ರಿಗಳ ಮುಖಾಂತರ ಕನ್ನಡ ನಕಲಿನಿಂದ ದೇವನಾಗರಿ ಪ್ರತಿನಕಲನ್ನು ಮಾಡಿಸಿದರು. ಕಾರ್ಯತೀವ್ರತೆಗಾಗಿ ಸೀತಾರಾಮ ಶಾಸ್ತ್ರಿಯವರು ಸಾಧಾರಣ ಕಾಗದದ ಮೇಲೆ ಮೊದಲು ಬರೆದುಕೊಳ್ಳುತ್ತಿದ್ದರು. ತರುವಾಯ ಜಂಬೂಪ್ರಸಾದರವರ ಗ್ರಂಥ ಭಾಂಡಾರಕ್ಕಾಗಿ ಉತ್ತಮ ನಕಲನ್ನು ತಯಾರಿಸುತ್ತಿದ್ದರು. ಈ ಕಾರ್ಯಕ್ಕೆ ೭ ವರ್ಷಗಳು ಹಿಡಿದವು.

ಮುಂದೆ ಸೀತಾರಾಮಶಾಸ್ತ್ರಿಯವರು ತಮ್ಮ ಹತ್ತಿರವಿದ್ದ ಸಾಧಾರಣ ಹಾಳೆಯ ಮೇಲಿನ ನಕಲಿನಿಂದ ಬೇರೊಂದು ನಕಲನ್ನು ಸಿದ್ಧಪಡಿಸಿ, ಅದರ ಆಧಾರದಿಂದ ಹಲವಾರು ನಕಲುಗಳನ್ನು ಬರೆಯಿಸಿ ಆರಾ, ಸಾಗರ, ಶಿವನಿ, ದಿಲ್ಲಿ, ಮುಂಬಯಿ, ಕಾರಂಜಾ, ಇಂದೂರ, ವ್ಯಾವರ, ಅಜಮಿರ, ಝಾಲರಾ, ಪಾಟನಾ ಮೊದಲಾದ ಪ್ರಮುಖ ಪಟ್ಟಣಗಳಿಗೆ ವಿತರಣಗೊಳಿಸಿದರು. ಈ ಕಾರ್ಯದಿಂದಾಗಿ ಧವಲ, ಜಯಧವಲ ಶಾಸ್ತ್ರಗ್ರಂಥಗಳ ದರ್ಶನಭಾಗ್ಯ ಮತ್ತು ಅಧ್ಯಯನ ಸೌಭಾಗ್ಯ ಅನೇಕ ವ್ಯಕ್ತಿಗಳಿಗೆ ಲಭ್ಯವಾಗತೊಡಗಿತು.

ಹೀಗೆ ಮೂಡಬಿದಿರೆಯ ಜನರ ಕಣ್ಣು ತಪ್ಪಿಸಿ ಈ ಎರಡು ಸಿದ್ಧಾಂತ ಗ್ರಂಥಗಳು ಹೊರಗೆ ಹೋದುವಲ್ಲದೆ ನಕಲು, ಪ್ರತಿನಕಲು, ಬಳಿನಕಲು, ಮರುನಕಲುಗೊಂಡು ಅವುಗಳ ಪ್ರಚಾರವೂ ಆಯಿತು. ಇದು ಮೂಡಬಿದಿರೆಯ ಮಹಾಜನರ ಹೃದಯಕ್ಕೆ ಆಘಾತವನ್ನುಂಟು ಮಾಡಿತು. ಮೂಡಬಿದಿರೆಯ ಪುಣ್ಯರಾಶಿ ಬೇರೆ ಕಡೆಗೆ ಹೋಗುವುದರಿಂದ ಈ ಸ್ಥಾನದ ಘನತೆ, ಗೌರವ ಕಡಿಮೆಯಾಗುವುದಲ್ಲದೆ, ಜನರ ಆಕರ್ಷಣೆಯೂ ನಿಂತು ಹೋಗುವುದು ಎಂಬ ಭೀತಿ ಅವರನ್ನು ಬಲವಾಗಿ ಬಾಧಿಸಿತು. ಹೀಗಾಗಿ ನಕಲುಗೊಳ್ಳದೆ ಉಳಿದ ಮಹಾಧವಲ (ಮಹಾಬಂಧ)ದ ವಿಷಯವಾಗಿ ಅವರು ಬಹಳ ಎಚ್ಚರವಹಿಸಿದರು. ಈ ಪವಿತ್ರ ಗ್ರಂಥದ ದರ್ಶನಕ್ಕೆ ಬಂದವರು ಮಹಾಧವಲ (ಮಹಾಬಂಧ)ದ ಸ್ಥಾನದಲ್ಲಿ ಅರ್ಚಕರು ಇಟ್ಟ ಬೇರೊಂದು ಶಾಸ್ತ್ರಗ್ರಂಥವನ್ನು ಸಂದರ್ಶಿಸಿ, ಧನ್ಯತೆಯ ಭ್ರಾಂತಿ ಹೊಂದುವಂತಾಯಿತು. ಹೀಗೆ ಮಹಾಧವಲ (ಮಹಾಬಂಧ) ಗ್ರಂಥದ ದರ್ಶನ ಭಾಗ್ಯವೇ ಅಲಭ್ಯವಾದಾಗ ಅದರ ಪ್ರತಿಲಿಪಿಯನ್ನು ಪಡೆಯುವುದು ಕಲ್ಪನೆಗೂ ಮೀರಿದ ಮಾತಾಯಿತು.

ಅರ್ಚಕರ ಈ ಧೋರಣೆಯಿಂದ ಮಹಾಧವಲ (ಮಹಾಬಂಧ)ದ ಇದ್ದೊಂದು ಹಸ್ತಪ್ರತಿಯೂ ನಾಶವಾಗಬಹುದೆಂಬ ಭೀತಿಯುಂಟಾಯಿತು, ಸೇಠ ಹೀರಾಚಂದರಿಗೆ. ಈ ದೃಷ್ಟಿಯಿಂದಲಾದರೂ ಇದರ ನಕಲುಪ್ರತಿ ಅವಶ್ಯವೆಂದು ತಿಳಿಹೇಳಿ, ಮೂಡಬಿದಿರೆಯ ಗ್ರಂಥಭಾಂಡಾರಕ್ಕಾಗಿಯೇ ಪಂಡಿತ ಲೋಕನಾಥಶಾಸ್ತ್ರಿಗಳ ಮೂಲಕ ಮಹಾಧವಲ (ಮಹಾಬಂಧ)ವನ್ನು ನಕಲು ಮಾಡಿಸತೊಡಗಿದರು. ಈ ದೇವನಾಗರಿ ನಕಲು ಕಾರ್ಯ ಕ್ರಿ.ಶ. ೧೯೨೨ ರ ವರೆಗೆ ನಡೆಯಿತು. ಈ ಮಧ್ಯ ಪಂಡಿತ ನೇಮಿರಾಜರು ಇದರ ಕನ್ನಡ ಪ್ರತಿಯನ್ನು ಸಹ ಮಾಡಿದರು.

ಪ್ರಕಾಶನಕ್ಕೆ ಪ್ರಯತ್ನ

ಹೀಗೆ ಈ ಮೂರು ಸಿದ್ಧಾಂತಗ್ರಂಥಗಳನ್ನು ಪ್ರತಿಲಿಪಿ ಮಾಡಿಸಲು ಸುಮಾರು ೨೦ ಸಾವಿರ ರೂಪಾಯಿಗಳ ವೆಚ್ಚಗೊಂಡು, ೨೬ ವರ್ಷಗಳು ಉರುಳಿದುವು. ಕೊನೆಗೊಮ್ಮೆ ಪ್ರತಿಲಿಪಿಕಾರ್ಯ ಕೈಗೂಡಿ, ಇವುಗಳ ರಕ್ಷಣೆಯ ಚಿಂತೆ ದೂರವಾಯಿತಾದರೂ ಈ ಮಹಾಧವಲ (ಮಹಾಬಂಧ)ವನ್ನು ಅರ್ಚಕರ ಸೆರೆಯಿಂದ ಮುಕ್ತಮಾಡಿ ಜನತೆಯ ಮುಂದಿಡುವ ಸಮಸ್ಯೆ ಜೈನಸಮಾಜದೆದುರು ನಿಂತಿತು. ಈ ಕಾರ್ಯ ಕೈಗೂಡುವ ಪೂರ್ವದಲ್ಲಿಯೇ ಮುಂಬಯಿ ಸೇಠ ಮಾಣಿಕಚಂದ ಮತ್ತು ಸೊಲ್ಲಾಪುರದ ಸೇಠ ಹೀರಾಚಂದ ಸ್ವರ್ಗವಾಸಿಗಳಾದರು. ಈ ಗ್ರಂಥಗಳ ಪ್ರಕಟನೆಗೆ ಉತ್ಸುಕರಾಗಿದ್ದ ಇವರ ಮರಣ, ಈ ದಿಸೆಯಲ್ಲಿ ದೊಡ್ಡ ಆಘಾತವಾಗಿ ಪರಿಣಮಿಸಿತು.

೧೯೩೬, ಸರ್ ಸೇಠ ಹುಕುಮಚಂದರ ವರ್ಧಂತಿ ಉತ್ಸವದ ಅಂಗವಾಗಿ ಇಂದೂರಿನಲ್ಲಿ ಜೈನ ಮಹಾಸಭೆ ಜರುಗಿತು. ಸುಮೇರಚಂದ ದಿವಾಕರ ಮೊದಲಾದವರು ಈ ಮಹಾಸಭೆಯಲ್ಲಿ ಮಹಾಧವಲ

(ಮಹಾಬಂಧ)ದ ಪ್ರಕಟನೆ ವಿಷಯವಾಗಿ ಗೊತ್ತುವಳಿಯೊಂದನ್ನು ಮಂಡಿಸಿದರು. ಇದು ಕನಸಿನ ಕಾರ್ಯವೆಂದು ಅನೇಕ ಅನುಭವಿ ವ್ಯಕ್ತಿಗಳು ವಿರೋಧಿಸಿದರೂ ಸುದೈವದಿಂದ ಈ ಗೊತ್ತುವಳಿ ಪಾಸಾಯಿತು. ಅದರನ್ವಯ ಒಂದು ಉಪಸಮಿತಿ ರೂಪಗೊಂಡಿತು. ಈ ಸಮಿತಿಯ ಸಂಯೋಜಕರು ಸೇಠ ರಾವಜಿ ಸಖರಾಮ ದೋಸಿಯವರು. ಸುಮೇರಚಂದ ದಿವಾಕರರು ಸದಸ್ಯರಲ್ಲಿ ಒಬ್ಬರು. ಶ್ರೀ ದೋಸಿಯವರು ಮೂಡಬಿದಿರೆಗೆ ಎರಡು ಸಲ ಹೋಗಿ, ಸಾವಿರಾರು ರೂಪಾಯಿಗಳ ಕಾಣಿಕೆ ಕೊಡುವುದಾಗಿ ಪ್ರಯತ್ನಿಸಿದರೂ ದುರ್ದೈವದಿಂದ ಅವರ ಮನೋರಥ ಈಡೇರಲಿಲ್ಲ. ಮಧುರ ಬಾಂಧವ್ಯದ ಬದಲು, ಬಿಸಿಮಾತು ನಡೆದು ಬಾಂಧವ್ಯ ಮತ್ತೂ ಬಿರುಕು ಬಿಟ್ಟಿತು. ಈಗ ವಿನಯಮಾರ್ಗ ಬಿಟ್ಟು ನ್ಯಾಯಾಲಯದ ದಾರಿ ತುಳಿಯಲು ಕೆಲವು ಸದಸ್ಯರು ಸೂಚಿಸಿದರು. ಗ್ರಂಥವನ್ನು ಬಂಧನದಿಂದ ಬಿಡಿಸುವುದು ಯೋಗ್ಯ ವಿಚಾರವಾದರೂ ನ್ಯಾಯಾಲಯದ ಮುಖಾಂತರ ಅದರ ಒಡೆಯರನ್ನು ಪೀಡಿಸಲು ಕೆಲವು ಸದಸ್ಯರ ಅಂತರಂಗ ಒಪ್ಪಲಿಲ್ಲ. "ಇವರ ಪೂರ್ವಜರ ಪುಣ್ಯದಿಂದ ಈ ಗ್ರಂಥರಾಜ ಇಲ್ಲಿಯವರೆಗೆ ಬದುಕಿ ಬಂದಿದೆ. ಈಗಲೂ ಅದರ ಯೋಗ್ಯ ಸೇವೆ (ರಕ್ಷಣೆ) ನಡೆಯುತ್ತಲಿದೆ. ಈ ದೃಷ್ಟಿಯಿಂದ ಅವರಿಗೆ ನಮ್ಮ ಮಸ್ತಕ ಮಣಿಯುತ್ತದೆ, ಕೃತಜ್ಞತೆ ಸಲ್ಲುತ್ತದೆ. ಅದಕ್ಕಾಗಿ ಪುನಃ ನಮ್ರರಾಗಿ ವರ್ತಿಸೋಣ. ಅವರು ನಮ್ಮ ಹೃದಯ ಧ್ವನಿಯನ್ನು ತಿಳಿದುಕೊಳ್ಳಬಲ್ಲರು. ಪ್ರೇಮದಲ್ಲಿ ಗೆಲುವಿದೆ"ಯೆಂದು ನಿರ್ಧರಿಸಿದರು.

ಇಷ್ಟರಲ್ಲಿ ಸಮಿತಿಯ ಸಂಯೋಜಕರಾದ ರಾವಜೀಭಾಯಿ ದೋಸಿಯವರು ನಿಧನರಾದರು, ಸದಸ್ಯರ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಂತಾಯಿತು. ಮಹಾಧವಲ (ಮಹಾಬಂಧ)ವನ್ನು ಪಡೆಯುವ ಭಾಗ್ಯಕ್ಕಾಗಿ ದೇವರಲ್ಲಿ ಮೊರೆಯಿಟ್ಟರು.

ವಿಶ್ವಪ್ರಶಸ್ತ ಶಾಸ್ತ್ರಗ್ರಂಥ

ಕ್ರಿ.ಶ. ೧೯೪೦ರಲ್ಲಿ ನಡೆದ ಸಂಗತಿ: ಶ್ರವಣಬೆಳಗೊಳದ ಬಾಹುಬಲಿಸ್ವಾಮಿಯ ಮಹಾಮಸ್ತಕಾಭಿಷೇಕದ ಪವಿತ್ರ ಪ್ರಸಂಗ. ಈ ಸಮಾರಂಭದಲ್ಲಿ ಧರ್ಮಸ್ಥಳದ ಮಂಜಯ್ಯ ಹೆಗ್ಗಡೆ, ಮಂಗಳೂರಿನ ರಘುಚಂದ್ರ ಬಲ್ಲಾಳರು ಎದ್ದು ಕಾಣುವ ಪಾತ್ರವಹಿಸಿದ್ದರು. ಮೂಡಬಿದರೆಯ ಶಾಸ್ತ್ರಭಾಂಡಾರದ ವ್ಯವಸ್ಥಾಪಕರ ಮೇಲೆ ಇವರ ಪ್ರಭಾವವಿದೆಯೆಂದು ಮಹಾಧವಲ (ಮಹಾಬಂಧ)ದ ಬಗ್ಗೆ ಆಸ್ಥೆ ತಾಳಿದ್ದ ಸುಮೇರಚಂದರಿಗೆ ಬೆಳಗೊಳದಲ್ಲಿ ತಿಳಿದುಬಂದಿತು. ಮಹಾಭಿಷೇಕ ಮಹೋತ್ಸವ ಮುಗಿದ ತರುವಾಯ ಸುಮೇರಚಂದ ಕುಟುಂಬದವರು ಮೂಡಬಿದರೆ, ಕಾರ್ಕಳ ಮೊದಲಾದವುಗಳ ದರ್ಶನಾರ್ಥ ಮಂಗಳೂರಿಗೆ ಹೋದರು. ಅಲ್ಲಿ ಶ್ರೀ ರಘುಚಂದ್ರ ಬಲ್ಲಾಳರ ಆಕಸ್ಮಿಕ ಭೆಟ್ಟಿಯಾಯಿತು. "ನೀವು ಬಲ್ಲಾಳ ವಂಶದ ಅರಸರು. ರಾಜವಂಶಕ್ಕೆ ತಕ್ಕಂತೆ ಒಂದು ಕೆಲಸ ಮಾಡಿಕೊಡಬೇಕು, ಮೂಡಬಿದಿರೆಯ ಶಾಸ್ತ್ರಗ್ರಂಥ ಭಾಂಡಾರದಲ್ಲಿ ಮಹಾಧವಲ (ಮಹಾಬಂಧ) ಹೆಸರಿನ ಒಂದು ವಿಶ್ವಪ್ರಶಸ್ತ ಶಾಸ್ತ್ರಗ್ರಂಥವಿದೆ. ಅದರ ಉದ್ಧಾರಕಾರ್ಯ ತಮ್ಮಿಂದ ಆಗಬೇಕಾಗಿದೆ. ಇದರಿಂದ ವಿಶ್ವವೇ ತಮ್ಮನ್ನು ಹೊಗಳುತ್ತದೆ"ಯೆಂದು ಕಳಕಳಿಯಿಂದ ಕೇಳಿಕೊಂಡರು. ಆಗ ಬಲ್ಲಾಳರು "ಮೂಡಬಿದಿರೆಯಲ್ಲಿ ನೀವು ಉಪನ್ಯಾಸವನ್ನು ನೀಡಬಲ್ಲಿರಾ?" ಎಂದು ಕೇಳಿದರು. "ಅದಕ್ಕೆ ಪ್ರತಿಯಾಗಿ, ಮಹಾಧವಲ (ಮಹಾಬಂಧ) ಶಾಸ್ತ್ರವನ್ನು ನಮಗೆ ಕೊಡಿಸುತ್ತಿದ್ದರೆ ಈಗಲೇ ಸಿದ್ಧ" ಎಂದರು, ಸುಮೇರಚಂದರು. ವಿಷಯ ನಗುವಿನೊಂದಿಗೆ ಮುಗಿದುಹೋಯಿತು.

ಸುಮೇರಚಂದ ಕುಟುಂಬದವರ ಪ್ರವಾಸ ಮುಂದುವರೆಯಿತು. ಮೂಡಬಿದಿರೆಗೆ ಬಂದರು. ಅಲ್ಲಿಯ ತ್ರಿಲೋಕ ಚೂಡಾಮಣಿ ಚೈತ್ಯಾಲಯ (ಚಂದ್ರನಾಥ ಬಸದಿ)ವನ್ನು ಸಂದರ್ಶಿಸಿ, ವಯೋವೃದ್ಧರಾದ ನಾಗರಾಜ

ಶ್ರೇಷ್ಠಿಯವರ ದರ್ಶನ ಪಡೆದರು. "ಈ ಸಲ ಮಹಾಭಿಷೇಕದ ನೆನಪಿಗಾಗಿ ಮಹಾಧವಲ (ಮಹಾಬಂಧ)ವನ್ನು ನಕಲುಗೊಳಿಸಲು ಅನುಜ್ಞೆ ನೀಡಿದರೆ ತುಂಬ ಉಪಕಾರವಾಗುತ್ತದೆ" ಎಂದು ವಿನಮ್ರವಾಗಿ ಕೇಳಿಕೊಂಡರು. "ಪ್ರಯತ್ನಿಸಿರಿ, ಮಂಜಯ್ಯ ಹೆಗ್ಗಡೆ ಮತ್ತು ರಘುಚಂದ್ರ ಬಲ್ಲಾಳರನ್ನು ಇಲ್ಲಿಗೆ ಕರೆತಂದರೆ ನಿಮ್ಮ ಇಚ್ಛೆ ಈಡೇರಬಹುದು" ಎಂದು ಹೇಳಿದರು.

ಮರುದಿನ ಮುಂಜಾನೆ ಸುಮೇರಚಂದ ದಿವಾಕರ, ಅವರ ಸೋದರ ಸುಶೀಲಕುಮಾರ ದಿವಾಕರ ಹಾಗೂ ನಾಗಪುರದ ಫತೇಚಂದ್ರ ಪವಾರ ಭೂಷಣರು ಧರ್ಮಸ್ಥಳಕ್ಕೆ ಹೋಗಿ ಹೆಗ್ಗಡೆಯವರನ್ನು ಮೂಡಬಿದಿರೆಗೆ ಹೊರಡಲು ವಿನಂತಿಸಿಕೊಂಡರು. ಬಹಳ ಒತ್ತಾಯದ ತರುವಾಯ ಹೆಗ್ಗಡೆಯವರು ಒಪ್ಪಿಕೊಂಡರು.

ಧರ್ಮಸ್ಥಳದಿಂದ ಹೊರಟ ಕಾಲದಲ್ಲಿ ವೇಣೂರಿನ ಬಾಹುಬಲಿ ಸ್ವಾಮಿಯದರ್ಶನಕ್ಕೆ ಹೋದರೆ ಭಾಗ್ಯವಶದಿಂದ ಸಂದರ್ಶನಾರ್ಥ ಬಂದಿದ್ದ ಸರ್ ಸೇಠ ಹುಕುಮಚಂದರ ಭೆಟ್ಟಿಯಾಯಿತು. ಸಿದ್ಧಾಂತಶಾಸ್ತ್ರ ಸಂಬಂಧ ಜರುಗಿದ ವಿಷಯವನ್ನೆಲ್ಲ ವಿವರಿಸಿ ಅವರನ್ನೂ ಮೂಡಬಿದಿರೆಗೆ ಬರಲು ವಿನಂತಿಸಿಕೊಂಡು ಮಂಗಳೂರಿಗೆ ಹೋಗಿ ಬಲ್ಲಾಳರನ್ನು ಭೆಟ್ಟಿಯಾದರು. "ಮೂಡಬಿದಿರೆಯಲ್ಲಿ ನಮ್ಮ ವ್ಯಾಖ್ಯಾನವನ್ನು ಕೇಳಲು ತಾವು ಆಶಿಸಿದ್ದೀರಿ. ಇಂದೇ ಸಾಯಂಕಾಲ ನಮ್ಮ ಭಾಷಣವಿದೆ, ತಮ್ಮನ್ನು ಕರೆಯಲು ಬಂದಿದ್ದೇವೆ" ಎಂಬ ವಿನೋದವನ್ನು ಬಲ್ಲಾಳರೊಂದಿಗೆ ಪ್ರಾರಂಭಿಸಿ, ನಡೆದ ಸಂಗತಿಯನ್ನೆಲ್ಲ ವಿವರಿಸಿ, ಅವರ ಮೋಟಾರದಲ್ಲಿಯೇ ಹೊರಟು ಮೂಡಬಿದರೆಯನ್ನು ತಲುಪಿದರು.

ಲೋಕೋತ್ತರ ಪ್ರತಿಫಲ

ಅಂದು ಸಾಯಂಕಾಲ ತ್ರಿಲೋಕ ಚೂಡಾಮಣಿ ಚೈತ್ಯಾಲಯ (ಚಂದ್ರವಾಥ ಬಸದಿ)ದ ಪ್ರಾಂಗಣದಲ್ಲಿ ಸರ್ ಸೇಠ ಹುಕುಮ ಚಂದರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಅನೇಕ ಪ್ರತಿಷ್ಠಿತ ವ್ಯಕ್ತಿಗಳು ಆಗಮಿಸಿದ್ದರು. ಮೂಡಬಿದಿರೆ ಮಠದ ಅಧಿಪತಿಗಳಾದ ಚಾರುಕೀರ್ತಿ ಪಂಡಿತಾಚಾರ್ಯ ಸ್ವಾಮಿಯವರೂ ದಯಮಾಡಿಸಿದ್ದರು. ಮೂಡಬಿದಿರೆಯ ಸಿದ್ಧಾಂತಶಾಸ್ತ್ರ ಮಂದಿರದ ಕಮೀಟಿಯವರು ಮಹಾಧವಲ (ಮಹಾಬಂಧ)ವನ್ನು ಕೊಡದೆ ಇರುವುದರಲ್ಲಿ ಸ್ವಾರ್ಥ ಲಾಲಸೆ ಅಡಗಿದೆ. ಅವರು ಶಾಸ್ತ್ರವನ್ನು ವಿಕ್ರಯ ಮಾಡಿ ಲಾಭ ಗಳಿಸಬೇಕೆಂದಿದ್ದಾರೆ ಎಂಬ ಜೈನಪತ್ರಿಕೆಯೊಂದರ ಪ್ರಕಟನೆಯಿಂದ ವ್ಯವಸ್ಥಾಪಕ ಮಂಡಲಿಯವರು ರೊಚ್ಚಿಗೆದ್ದಿದ್ದಾರೆ. ನೊಂದುಕೊಂಡಿದ್ದಾರೆ - ಎಂಬುದನ್ನು ಅರ್ಥಮಾಡಿಕೊಂಡು, ಸುಮೇರಚಂದ ದಿವಾಕರರು ಭಾಷಣವನ್ನು ಪ್ರಾರಂಭಿಸಿದರು.

ಇಂತಹ ಪತ್ರಿಕೆಯ ಹೇಳಿಕೆಯು ತಳಬುಡವಿಲ್ಲದುದು. ಭವ್ಯಚೈತ್ಯಾಲಯವನ್ನು ಕಟ್ಟಿಸಿದ, ಧರ್ಮಸೇವೆಯ ಉಜ್ವಲಕಾರ್ಯದಲ್ಲಿ ತೊಡಗಿದ ನಿಸ್ವಾರ್ಥ ಜನರ ಬಗ್ಗೆ ಬರೆದ ಈ ಮಾತುಗಳು ಬೆಲೆಯಿಲ್ಲದವು. ಮೂಡಬಿದಿರೆಯ ಪೂರ್ವಜರು ಮತ್ತು ಈಗಿನ ಮಹನೀಯರು ಧನ್ಯರು. ಧರ್ಮದಲ್ಲಿ ಅತ್ಯಾಚಾರ ತಲೆದೋರಿದ ಪರಿಸ್ಥಿತಿಯಲ್ಲಿ ಈ ಶಾಸ್ತ್ರಗ್ರಂಥಗಳನ್ನು ರಕ್ಷಿಸಿಕೊಂಡು ಬಂದ ನಿಮಗೆ ಜೈನಜಗತ್ತು ಋಣಿಯಾಗಿದೆ.

ಆದರೆ ಈಗ ಜಗತ್ತು ಬದಲಾಗಿದೆ. ಭೂತಬಲಿಸ್ವಾಮಿಗಳು ವಿಶ್ವಕಲ್ಯಾಣ ನಿಮಿತ್ತ ಕಷ್ಟಪಟ್ಟು ರಚಿಸಿದ ಈ ಗ್ರಂಥದ ಪ್ರಕಟನೆಯಿಂದ ಅವರ ಹೆಸರು, ಕೀರ್ತಿ "ಸೂರ್ಯೇಂದು ಮೇರು ವಾರಿಧಿ ಪರ್ಯಂತ" ಹಬ್ಬಿ ನಿಲ್ಲುತ್ತದೆ. ಪ್ರಾಣವಧೆಗಿಂತಲೂ ಕೀರ್ತಿವಧೆ ಪಾಪಕರವಾದುದು. ಅದಕ್ಕಾಗಿ ಭೂತಬಲಿಸ್ವಾಮಿಗಳ

ಕೃತಿಯನ್ನು ಮುಚ್ಚಿ ಇಟ್ಟುಕೊಳ್ಳುವುದು ಅವರ ಪ್ರಾಣವಧೆಯ ಸಮಾನ, ಯಶೋವಧೆಯ ಸಮಾನ. ವೇದಗಳ ರಕ್ಷಣೆ, ಪಠಣ ಮತ್ತು ಪ್ರಸಾರ ಇವು ಭಕ್ತಿ ಗುರಿ. ಇದಕ್ಕೆ ವ್ಯತಿರಿಕ್ತವಾದ ವೇದಗಳ ಬಂಧನ, ಖಿಲನ ಇವು ಭಕ್ತಿಯ ವೈರಿ ಎಂದು ಮುಂತಾಗಿ ಭಾಷಣ ಹಂತ ಹಂತವಾಗಿ ಬಿಸಿಯೇರತೊಡಗಿತು.

ಅಷ್ಟರಲ್ಲಿ ಒಬ್ಬ ಎದ್ದುನಿಂತು "ಈ ಕಡೆಯ ಜೈನಪ್ರಜೆಗಳು ಬಡವರಿದ್ದೇವೆ. ನಮಗೆ ಧನಸಹಾಯ ಬೇಕು" ಎಂದು ನುಡಿದ. ಇದನ್ನು ಕೇಳುತ್ತಲೇ ಸುಮೇರಚಂದರು "ದಕ್ಷಿಣದ ನಮ್ಮ ಬಾಂಧವರು ತಮ್ಮನ್ನು ಬಡವರೆಂದು ಕರೆದುಕೊಳ್ಳುವುದನ್ನು ಕೇಳಿ ನಮಗೆ ದುಃಖವಾಗುತ್ತಿದೆ. ಯಾವ ನಾಡಿನಲ್ಲಿ ಗೊಮ್ಮಟೇಶ್ವರನಂತಹ ಲೋಕೋತ್ತರ ಭವ್ಯಮೂರ್ತಿ ಇದೆಯೋ, ಯಾರ ನಾಡಿನಲ್ಲಿ ಧವಲ, ಜಯಧವಲ, ಮಹಾಧವಲಗಳಂತಹ ಲೋಕವಂದ್ಯ ಗ್ರಂಥರತ್ನಗಳಿವೆಯೋ ಅವರು ಬಡವರೇ? ಒಂದು ವೇಳೆ ಇದಕ್ಕೆ ಬಡತನವೆನ್ನುವುದಾದರೆ ಇಂತಹ ಬಡತನಕ್ಕೆ ನಾವು ಅಭಿನಂದಿಸುತ್ತೇವೆ. ನಮ್ಮ ಭೌತಿಕಸಂಪತ್ತನ್ನು ತೆಗೆದುಕೊಂಡು ಪ್ರತಿಯಾಗಿ ನಿಮ್ಮ ಈ ಬಡತನವನ್ನೇ ಕೊಡಿರಿ. ಹೇಳಿರಿ, ಈ ಗ್ರಂಥಗಳ ಬೆಲೆಯೇನು? ಕೇವಲ ಧನವೇಕೆ. ನಮ್ಮ ಜೀವನಿಧಿಯನ್ನು ಅರ್ಪಿಸಿ ಈ ಆಗಮನಿಧಿಯನ್ನು ಒಯ್ಯಲು ಸಿದ್ಧರಿದ್ದೇವೆ. ಮಹಾಧವಲ (ಮಹಾಬಂಧ) ಶಾಸ್ತ್ರದ ರಕ್ಷಣೆಗೆ ನಮ್ಮಂತಹ ಸಾವಿರಾರು ಜನರ ಜೀವನದ ಬೆಲೆ ಅತ್ಯಲ್ಪ. ಜನರು ಮಾತೃಭೂಮಿಗಾಗಿ ಪ್ರಾಣಾರ್ಪಣ ಮಾಡುತ್ತಾರೆ. ಆದರೆ ಈ ಕೈವಲ್ಯ ಭೂಮಿಯ ರಕ್ಷಣೆಗೆ ಪ್ರಾಣಾರ್ಪಣ ಮಾಡುವಲ್ಲಿ ಭೀತಿ ಏಕೆ? ಈ ಗ್ರಂಥಗಳಿಗಾಗಿ ತಾವು ಮತ್ತೇನನ್ನು ಇಚ್ಛಿಸುತ್ತೀರಿ ಹೇಳಿರಿ, ಹೇಳಿರಿ."

ಈ ಉದ್ವೇಗಪೂರ್ಣ ಮಾತಿನ ಮಧ್ಯೆ "You have given us more than we wanted" ಎಂದು ಶ್ರೀ ಹೆಗ್ಗಡೆಯವರು ಹೃದಯ ತುಂಬಿ ನುಡಿದರು. ಭಟ್ಟಾರಕ ಮಹಾರಾಜರೂ, ಬಲ್ಲಾಳರೂ ಗ್ರಂಥ ನೀಡಲು ಒಪ್ಪಿಕೊಂಡರು. ಎಲ್ಲರೂ "ಅಸ್ತು" ಎಂದರು. ಸುಮೇರಚಂದರ ನಿಖರ ಭಾಷಣ ಒಂದು ಲೋಕೋತ್ತರ ಪ್ರತಿಫಲವನ್ನು ಗಳಿಸಿತು.

ಈ ಒಪ್ಪಿಗೆಯನ್ನು ಲಿಖಿತರೂಪದಲ್ಲಿ ಪಡೆಯುವುದು ಲೇಸು ಎನಿಸಿತು, ಸುಮೇರಚಂದರಿಗೆ. "ವೃತ್ತಪತ್ರಿಕೆಗಳಲ್ಲಿ ನಿಮ್ಮ ಔದಾರ್ಯವನ್ನು ಪ್ರಕಟಿಸುವುದು ಅತ್ಯವಶ್ಯ. ಇದಕ್ಕೆ ತಮ್ಮ ಲಿಖಿತ ಅನುಮತಿಯನ್ನು ಕೊಡಿರಿ" ಎಂದು ನಂಬಿಗೆ ಹುಟ್ಟಿಸಿದರು. ಭಕ್ತಿಯ ಆವೇಶಕ್ಕೆ ಸಿಕ್ಕಿದ್ದ ಆ ಪ್ರಮುಖರು 'ಸೈ' ಅಂದರು. ಸಹಿ ಹಾಕಿದ ಅನುಮತಿ ಪತ್ರವನ್ನು ದಯಪಾಲಿಸಿದರು.

ಚಿರಸ್ಮರಣೀಯ

ಮೂಡಬಿದಿರೆಯ ಪಂಚಮಹಾಜನರ ಈ ಔದಾರ್ಯವನ್ನು ಬಣ್ಣಿಸುವ ಸುದ್ದಿ ಪತ್ರಿಕೆಯಲ್ಲಿ ಪ್ರಕಟವಾಯಿತು. ಜೈನಸಮಾಜದವರು ಹರ್ಷಪುಲಕಿತರಾದರು. ಇಷ್ಟರಲ್ಲಿ ದಕ್ಷಿಣದ ಪ್ರಮುಖ ಜೈನವ್ಯಕ್ತಿಗಳೊಬ್ಬರು ಮೂಡಬಿದಿರೆಯ ಪಂಚರಿಗೂ ಸುಮೇರಚಂದರಿಗೂ ನಕಲು ಕಾರ್ಯಕ್ಕೆ ಅಡ್ಡಿ ಮಾಡುವುದಾಗಿ ಬಹಿರಂಗ ಹೇಳಿಕೆಯನ್ನು ಪ್ರಕಟಿಸಿದರು. ಇದರಿಂದ ಮತ್ತೆ ವಿಘ್ನಗಳು ತಲೆ ಎತ್ತಿದವು. ಈ ಸಂಗತಿ ನ್ಯಾಯಾಲಯದ ವಿಷಯವಾಗುವ ಪರಿಸ್ಥಿತಿ ಉಂಟಾಯಿತು. ಆಗ ಶ್ರೀ ಜೀವರಾಜ ಗೌತಮಚಂದ ದೋಸಿ ಮತ್ತು ಶ್ರೀ ಕ್ಷುಲ್ಲಕ ಸಮಂತಭದ್ರರವರ ಪ್ರಯತ್ನದಿಂದ ಈ ವಿರೋಧ ಶಾಂತವಾಗಲು ಸಾಕುಬೇಕಾಯಿತು.

ಒಂದುವರ್ಷ ಕಳೆದರೂ ಪ್ರತಿಲಿಪಿಕಾರ್ಯ ಪ್ರಾರಂಭವಾಗಲಿಲ್ಲ. ೧೯೪೧ರ ಡಿಸೆಂಬರಿನಲ್ಲಿ ಗೊಮ್ಮಟೇಶ್ವರ ಮಹಾಮಸ್ತಕಾಭಿಷೇಕ ನಿಧಿಸಮಿತಿಯ ಸಭೆಗೆ ಸುಮೇರಚಂದರು ಬೆಂಗಳೂರಿಗೆ ಬಂದರು. ಸಭೆ ಮುಗಿದ ತರುವಾಯ ಗ್ರಂಥಪ್ರಾಪ್ತಿ ನಿಮಿತ್ತ ಶ್ರೀ ಮಂಜಯ್ಯಹೆಗ್ಗಡೆ, ಶ್ರೀ ರಘುಚಂದ್ರ ಬಲ್ಲಾಳ, ಶ್ರೀ ಜಿನರಾಜ ಹೆಗ್ಗಡೆ, ಶ್ರೀ ಶಾಂತಿರಾಜ ಶಾಸ್ತ್ರಿಗಳ ಜೊತೆ ಮೂಡಬಿದಿರೆಗೆ ಪ್ರಯಾಣ ಬೆಳೆಸಬೇಕೆಂಬ ಬಯಕೆ ಕೈಗೂಡದಿರಲು, ಅನಿವಾರ್ಯವಾಗಿ ಸುಮೆರಚಂದರೊಬ್ಬರೇ ಮೂಡಬಿದಿರೆಗೆ ಬಂದರು. ಎರಡು ಮೂರು ದಿವಸ ಪ್ರಯತ್ನಿಸಿದರೂ ಪ್ರತಿಲಿಪಿ ಕೆಲಸ ಪ್ರಾರಂಭವಾಗಲಿಲ್ಲ. ಈ ನಿರೀಕ್ಷೆಗೆ ಕೊನೆಯೆಂದು? ಎಂಬ ಅಂಶ ಬಾಧಿಸತೊಡಗಿತು. ಮತ್ತೆ ಎರಡು ಮೂರು ದಿವಸಗಳ ಪ್ರಬಲ ಪ್ರಯತ್ನದ ಫಲವಾಗಿ ವ್ಯವಸ್ಥಾಪಕ ಮಹಾಶಯರಾದ ಶ್ರೀ ಧರ್ಮಪಾಲ ಶ್ರೇಷ್ಠಿಯವರ ಅನುಗ್ರಹವಾಯಿತು. ಶಾಸ್ತ್ರಭಾಂಡಾರವನ್ನು ತೆರೆದು ಮಹಾಧವಲ(ಮಹಾಬಂಧ)ಶಾಸ್ತ್ರವನ್ನು ಸುಮೇರಚಂದರ ಎದುರಿಗೆ ವಿರಾಜಮಾನಗೊಳಿಸಿದರು. ಜಿನದೇವ ಮತ್ತು ಜಿನವಾಣಿಯ ಪೂಜೆಯೊಂದಿಗೆ ಸ್ವತಃ ಸುಮೇರಚಂದರೇ ಪ್ರತಿಲಿಪಿ ಕಾರ್ಯವನ್ನು ಪ್ರಾರಂಭಿಸಿದರು. ಈ ದಿನ ಎಂದರೆ ೧೯೪೧ನೆಯ ಡಿಸೆಂಬರ ೩೦, ಜೈನ ಸಾಹಿತ್ಯೇತಿಹಾಸದಲ್ಲಿ ಚಿರಸ್ಮರಣೀಯವಾದುದು.

ಪ್ರತಿಲಿಪಿಕಾರ್ಯ ಪಂಡಿತ ಲೋಕನಾಥ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ಮುಂದುವರಿದು, ೧೯೪೨ ಡಿಸೆಂಬರ ೩೦ ಕ್ಕೆ ಪೂರ್ಣಗೊಂಡಿತು (ಈ ಮಧ್ಯೆ ಉತ್ತರ ಭಾರತದ ಕೆಲವು ಜೈನ ಮಹಾಶಯರು ಪ್ರತಿಲಿಪಿ ಮಾಡಿಕೊಳ್ಳಲು ಶಾಸ್ತ್ರಗ್ರಂಥವನ್ನು ಸುಮೇರಚಂದರಿಗೆ ಕೊಡಬಾರದಾಗಿ ಶ್ರೀ ಮಂಜಯ್ಯ ಹೆಗ್ಗಡೆಯವರಿಗೆ ಪತ್ರ ಬರೆದಿದ್ದರು ಎಂಬುದನ್ನು ಇಲ್ಲಿ ಗಮನಿಸಬೇಕು).

ಹೀಗೆ ಸಾವಿರ ಸಂಕಟಗಳನ್ನು ಎದುರಿಸಿ ನಕಲುಗೊಳಿಸಿಕೊಳ್ಳಲಾದ ಈ ಮಹಾಧವಲ (ಮಹಾಬಂಧ)ವನ್ನು ಕಾಶಿಯ ಭಾರತೀಯ ಜ್ಞಾನಪೀಠ, ೧೯೪೭ರಲ್ಲಿ ಪ್ರಕಟಿಸಿ ಪುಣ್ಯ ಕಟ್ಟಿಕೊಂಡಿತು.[೧]

■■

ಆಕರ : ಮಾರ್ಗ ಸಂಪುಟ–೧

೧. ಆಧಾರ : "ಮಹಾಬಂಧೋ" ಗ್ರಂಥಕ್ಕೆ ಶ್ರೀ ಸುಮೇರಚಂದ ದಿವಾಕರ ಬರೆದ ಮುನ್ನುಡಿ.

೩

ಪಂಪನ ಧರ್ಮಪುರ : ಕ್ಷೇತ್ರಕಾರ್ಯ

ಡಾ. ಆರ್. ಸಿ. ಹಿರೇಮಠರು ಮತ್ತು ನಾನು ಕುರ್ಕಿಯಾಲ್ ಮುಟ್ಟಿದಾಗ ಮುಂಜಾವಿನ ಸಮಯ ೮ ಗಂಟೆ. ಜಿಲ್ಲೆಯ ಸ್ಥಳವಾದ ಕರೀಂನಗರದ ಪಶ್ಚಿಮಕ್ಕೆ ೧೩ ಮೈಲು, ತಾಲೂಕು ಸ್ಥಳವಾದ ಗಂಗಾಧರಂ ಗ್ರಾಮದ ದಕ್ಷಿಣಕ್ಕೆ ೧೨ ಮೈಲು ಅಂತರದಲ್ಲಿರುವ ಕುರ್ಕಿಯಾಲ್ ಸಾವಿರ ಜನವಸತಿಯ ಒಂದು ಸಣ್ಣ ಹಳ್ಳಿ. ೩೫೦ ಮೈಲು ದೂರದ ಧಾರವಾಡದಿಂದ ಈ ಕಾಡುಹಳ್ಳಿಗೆ ನಮ್ಮನ್ನು ಆಕರ್ಷಿದುದು, ಪಂಪನ ತಮ್ಮ ಜಿನವಲ್ಲಭನು ಕೆತ್ತಿಸಿದ ಒಂದು ಅಪೂರ್ವ ಶಿಲಾಶಾಸನ. ಈ ಶಾಸನವಿದ್ದುದು ಕುರ್ಕಿಯಾಲದ ಉತ್ತರಕ್ಕೆ ಒಂದು ಮೈಲು ಅಂತರದಲ್ಲಿರುವ ಬೊಮ್ಮಲಗುಟ್ಟ ಎಂಬ ಹೆಸರಿನ ಗುಡ್ಡದಲ್ಲಿ. ಅದು ದುರ್ಗಮ ಬೆಟ್ಟವಾದುದರಿಂದ ಎರಡು ಆಳುಗಳನ್ನೂ ಕರೆದುಕೊಂಡೆವು. ನಮಗೆ ಜೊತೆಯಿದ್ದವರು ನಮ್ಮ ವಿಶ್ವವಿದ್ಯಾಲಯದ ಫೋಟೋಗ್ರಾಫರ ಪ್ರಭಾಕರ ನಾಯಕ ಮತ್ತು ಆಂಧ್ರಪ್ರದೇಶ ಪುರಾತತ್ವ ಇಲಾಖೆಯ ಸಿಬ್ಬಂದಿ ರಾಮಚಂದ್ರಮೂರ್ತಿ ಹಾಗೂ ಕೊಮರಯ್ಯ. ಶಾಸನ ಮುದ್ರಿಸುವ ಉಪಕರಣಗಳೊಂದಿಗೆ ನಾವೆಲ್ಲ ಗುಡ್ಡದತ್ತ ಕಾಲುನಡಿಗೆಯಿಂದ ಸಾಗಿದೆವು.

ಪಾತಾಳ ಬಿಲಕ್ಕೆ ಬಾಗಿಲ್

ಎಳೆ ಬಿಸಿಲು ಕಾಲೂರಲು ಪ್ರಾರಂಭಮಾಡಿತ್ತು. ದಾರಿಯ ಬಲದಲ್ಲಿ ವಿಶಾಲವಾದ ಬತ್ತದ ಗದ್ದೆಗಳು. ಎಡದಲ್ಲಿ ಒಂದು ಮೈಲು ವಿಸ್ತಾರವಾದ ಕೆರೆ. ಗದ್ದೆಯಲ್ಲಿ ಬತ್ತದ ಸಸಿ ಬಂಗಾರ ಬಣ್ಣಕ್ಕೆ ತಿರುಗಿತ್ತು. ಕೆರೆಯಲ್ಲಿ ನೀರತೆರೆ ನಿರಿಗೆ ಮುರಿಯುತ್ತಿತ್ತು. ಆ ಊರ ಜನತೆ ಇದನ್ನು ಪಾತಚೆರು ಎಂದು ಕರೆಯುತ್ತಾರೆ. ಈ ತೆಲುಗು ಶಬ್ದಕ್ಕೆ ಪುರಾತನ ಕೆರೆ ಎಂದು ಅರ್ಥ. ಶಾಸನದಲ್ಲಿ ಈ ಕೆರೆಯನ್ನು ಕವಿತಾಗುಣಾರ್ಣವ ಎಂದು ಕರೆಯಲಾಗಿದೆ. ಇದು ಪಂಪನ ಬಿರುದು. ಅಣ್ಣನ ಬಿರುದಿನ ಈ ಕೆರೆ ಕಟ್ಟಿಸಿದವನು, ತಮ್ಮ ಜಿನವಲ್ಲಭ. ಕೆರೆಯನ್ನು ನೋಡುತ್ತಲೇ ನನ್ನ ನಾಲಗೆ "ಇದು ಪಾತಾಳ ಬಿಲಕ್ಕೆ ಬಾಗಿಲ್...." ಎಂಬ ಪಂಪಭಾರತದ ವಾಕ್ಯವನ್ನು ಗುಣಗುಣಿಸಿತು. ಕೆರೆ ಸಮೀಪಿಸಿದಂತೆ ನನ್ನ ಭಾವತರಂಗ ಉಕ್ಕೇರಿತು, ಭಕ್ತಿ ತೆರೆ ಎದ್ದಿತು. ಕುಡಿಯಲು ಅಷ್ಟು ಯೋಗ್ಯವಲ್ಲದಿದ್ದರೂ ಭಾವಪರವಶವಾದ ನನ್ನ ಮನಸ್ಸು, ಆ ಪುಣ್ಯಜಲವನ್ನು ಸೇವಿಸಲು ಹಂಬಲಿಸಿತು. ಹರಿದು ಹೋಗಿ ಜಲಸ್ಪರ್ಶ ಮಾಡಿದೆ. ಒಂದು ಗುಟುಕು ಕುಡಿದೆ. ಗಂಗಾಪಾನದಷ್ಟು ಸುಖವೆನಿಸಿತು. ನೀರಿನ ಮೂಲಕ ಪಂಪನನ್ನೇ ಅಂತರಂಗದಲ್ಲಿ ತುಂಬಿಕೊಳ್ಳುತ್ತಿರುವ ಅನುಭವವುಂಟಾಯಿತು.

ಶಾಸನದಲ್ಲಿ ಹೇಳಲಾದ 'ಮದನವಿಳಾಸ' ಎಂಬ ಬನ, ಈ ಕೆರೆಯ ನೆರೆಯಲ್ಲಿರುವ ಸಂಭವವಿದೆ. ಅದರ ಅವಶೇಷ ಈಗ ಒಂದೂ ಇಲ್ಲ.

ಕೆರೆಯ ಫೋಟೋ ತೆಗೆದುಕೊಂಡು ಮುಂದೆ ನಡೆದೆವು. ಶಾಸನವನ್ನು ಹೊತ್ತ ಬೊಮ್ಮಲಗುಟ್ಟವಿದ್ದದು, ಈ ಕೆರೆಯ ನೆರೆಯಲ್ಲಿ. ಶಾಸನದ ಪ್ರಕಾರ ಇದರ ಪುರಾತನ ಹೆಸರು ವೃಷಭಪರ್ವತ. ಜಿನವಲ್ಲಭನು ಕೊರೆಯಿಸಿದ ಜಿನಪ್ರತಿಮೆಗಳಿಂದಾಗಿ ಜನತೆ ಅದನ್ನು ಈಗ ಬೊಮ್ಮಲಗುಟ್ಟ (ಗೊಂಬೆಗಳ ಗುಡ್ಡ) ಎಂದು ಕರೆಯುತ್ತಾರೆ. ಗುಡ್ಡದ ವ್ಯಾಪ್ತಿ ಸುಮಾರು ಮೂರು ಮೈಲು, ಎತ್ತರ ಸುಮಾರು ೪೦೦ ಅಡಿ. ಅದೊಂದು ಬಂಡೆಗಳ ಬೆಟ್ಟ. ಗಜಗಾತ್ರದ ಶಿಲೆಗಳಿಂದಾಗಿ ಅದು ಆನೆಗಳ ಒಟ್ಟಿಲು ಎಂಬ ಅನುಭವ ಮೂಡಿಸುತ್ತದೆ.

ದೂರದಿಂದ ಕಮನೀಯವಾಗಿದ್ದ ಬೆಟ್ಟ, ಸಮೀಪ ಹೋದಂತೆ ಕರ್ಕಶವಾಗಿ ಕಂಡಿತು. ತಲೆ ಎತ್ತಿನೋಡುವಷ್ಟರಲ್ಲಿ ಬೆಟ್ಟದ ಹೊಕ್ಕಳು ಪ್ರದೇಶದಲ್ಲಿ ಜಿನಪ್ರತಿಮೆಗಳು ಗೋಚರಿಸಿದವು. ಶಾಸನವಿದ್ದುದು ಆ ಸ್ಥಳದಲ್ಲಿ ಎಂದು ರಾಮಚಂದ್ರಮೂರ್ತಿ ಹೇಳಿದ. ಅದನ್ನೇ ಗುರಿಯಿಟ್ಟು ಮುಂದುವರಿದೆವು.

ಜೊತೆಯಿದ್ದ ಮಾರ್ಗದರ್ಶಿ, ಬಂಡೆಗಳನ್ನು ತುಳಿಯುತ್ತ ಇಳಿಯುತ್ತ ಏರುತ್ತ ನಡೆದ. ಕಲ್ಲುಗಳ ಬದಿಯಲ್ಲಿ, ಕಂಟಿಗಳ ಪೊದೆಯಲ್ಲಿ ಪಾರಾಗುತ್ತ ನಾವು ಹಿಂಬಾಲಿಸಿದೆವು. ಜನಸಂಪರ್ಕವಿಲ್ಲದ ಆ ಬೆಟ್ಟದಲ್ಲಿ ನಾವು ತುಳಿದುದೇ ದಾರಿ. ಹೀಗಾಗಿ ಎಷ್ಟೋ ಸಲ ತಪ್ಪುದಾರಿ ತುಳಿದು, ಇಳಿದು ಬಂದು, ಹೊಸಹಾದಿ ಹುಡುಕಬೇಕಾಯಿತು. ಆ ಕಡೆ ಈ ಕಡೆ ನಡೆದು, ಹಲವು ತಿರುವು ಪಡೆದು, ನೂರು ಅಡಿ ಎತ್ತರ ಹೋದೆವು. ಅಲ್ಲಿ ಕಲ್ಲುಪಡಿಗಳಿಂದ ನೀರು ಬಸಿದು ಒಂದು ಸಣ್ಣ ಒರತೆ ನಿರ್ಮಾಣವಾಗಿದೆ. ಅದರಲ್ಲಿ ಬಹಳವೆಂದರೆ ನಾಲ್ಕೈದು ಕೊಡ ನೀರು. ನಾವು ತಂದ ಉಪಾಹಾರಗಳನ್ನು ಅಲ್ಲಿಟ್ಟು, ಕೊಂಚ ವಿಶ್ರಾಂತಿ ಪಡೆದೆವು. ಆಳು ಶಾಸನ ಪಡಿಯಚ್ಚಿಗೆ ಬೇಕಾಗುವಷ್ಟು ನೀರು ತುಂಬಿಕೊಂಡು ಮುಂದೆ ನಡೆದ, ನಾವು ಅವನನ್ನು ಹಿಂಬಾಲಿಸಿದೆವು.

ಸಿದ್ಧಶಿಲೆ

ಕಲ್ಲು ಸಣ್ಣಗೆ ಸುಡುತ್ತಿತ್ತು. ಮತ್ತೆ ನೂರು ಅಡಿ ಎತ್ತರ ಹೋಗಿ, ಶಾಸನವಿದ್ದ ಸ್ಥಳವನ್ನು ತಲುಪಿದೆವು. ಈಗ ನಾವು ವೃಷಭಾದ್ರಿಯ ಒಟ್ಟು ಎತ್ತರದ ಮಧ್ಯಭಾಗಕ್ಕೆ ಬಂದಿದ್ದೆವು. ಕೆಳಗೆ ಎರಡು ನೂರು ಅಡಿ ಬಂಡೆಗಳ ಸಮೂಹವಿದ್ದರೆ, ಮೇಲೆ ಎರಡು ನೂರು ಅಡಿ ಎತ್ತರದ ಒಂದೇ ಬಂಡೆ. ತಲೆಯೆತ್ತಿದರೆ ಆ ಬೃಹತ್ ಶಿಲೆ ಎದೆಯ ಮೇಲೆ ಎದ್ದು ಬರುವ ಭಯ. ಈ ವೃಷಭಾದ್ರಿಯ ದಕ್ಷಿಣ ತಟದಲ್ಲಿರುವ ಇದನ್ನೇ ಶಾಸನದಲ್ಲಿ 'ಸಿದ್ಧಶಿಲೆ'ಎಂದು ಕರೆಯಲಾಗಿದೆ. ಈ ಶಿಲೆಯ ಮೇಲೆ ಶಾಸನ, ಶಾಸನದ ಮೇಲ್ಭಾಗದಲ್ಲಿ ಜಿನಪ್ರತಿಮೆಗಳು ಕೆತ್ತಲ್ಪಟ್ಟಿವೆ. ಈ ದೃಶ್ಯ ಪಂಪನ ಆದಿಪುರಾಣದ ಭರತಚಕ್ರವರ್ತಿಯು, ವಿಜಯಾರ್ಧ ಪರ್ವತದಲ್ಲಿ ಬರೆಯಿಸಿದ 'ನಿಜವಿಜಯಪ್ರಶಸ್ತಿ'ಯನ್ನು ನೆನಪಿಗೆ ತಂದಿತು. ನಾವು ನಿಂತ ಕಲ್ಲು ಮತ್ತು ಈ ಸಿದ್ಧಶಿಲೆಯ ಮಧ್ಯ ಆರು ಅಡಿ ಅಗಲ, ಎಂಟು ಅಡಿ ಆಳವಾಗಿರುವ ಒಂದು ಕೊರಕಲು ಇದ್ದು, ಇದು ಸಿದ್ಧಶಿಲೆಯಲ್ಲಿ ಕೆತ್ತಿದ ಶಾಸನ ಮತ್ತು ನಾವು ನಿಂತ ಕಲ್ಲುಬಂಡೆಯ ಮಧ್ಯ ಅಂತರವನ್ನು ಕಲ್ಪಿಸಿದೆ. ಕೊರಕಲಿನ ತಟದಲ್ಲಿ ನಿಂತು ಕೈ ಮುಂದೆ ಚಾಚಿದರೆ ಶಾಸನ ನಿಲುಕುವುದಿಲ್ಲ. ತಳದಲ್ಲಿ ನಿಂತು ಮೇಲೆ ಚಾಚಿದ ಕೈ ಶಾಸನದ ಕೆಳಬದಿಯನ್ನು ಮಾತ್ರ ಮುಟ್ಟುತ್ತದೆ. ಹೀಗಾಗಿ ಜನತೆಯಿಂದ ಹಾಳಾಗಲು ಶಕ್ಯವಿಲ್ಲದ ಸುರಕ್ಷಿತ ಸ್ಥಳದಲ್ಲಿ ಈ ಶಾಸನ ಕೆತ್ತಲ್ಪಟ್ಟಿದೆ.

ಶಾಸನದ ಎತ್ತರ ೨. ೧/೨ ಅಡಿ, ಉದ್ದ ೧೪. ೧/೨ ಅಡಿ. ಅದೊಂದು ಅಡ್ಡಪಟ್ಟಿಕೆ. ಶಾಸನದ ಮೇಲ್ಭಾಗಕ್ಕೆ ಹೊಂದಿ ಎಡದಲ್ಲಿ ಮೂರು, ಬಲದಲ್ಲಿ ಮೂರು ಜಿನಪ್ರತಿಮೆಗಳು. ಮಧ್ಯ ಚಕ್ರೇಶ್ವರಿಯ ಪ್ರತಿಮೆ. ಚಕ್ರೇಶ್ವರಿಯ ಮೇಲ್ಭಾಗದಲ್ಲಿ ಮತ್ತೆ ಮನುಷ್ಯ ಎತ್ತರದ ಎರಡು ಜಿನಪ್ರತಿಮೆಗಳು. ಈ ಬರಹ ಮತ್ತು ಪ್ರತಿಮೆಗಳೆಲ್ಲವನ್ನು ಕೊರೆದುದು ಆ ಅಖಂಡಶಿಲೆಯ ಕೆಳಗಣ ಕಾಲು ಭಾಗದಲ್ಲಿ. ಮೇಲೆ ಮೂರು ಕಾಲುಭಾಗ ಶಿಲೆ ಎದೆಯುಬ್ಬಿಸಿ ನಿಂತಿದೆ.

ಒಂಬತ್ತುವರೆ ಗಂಟೆಗೆ ಕೊಮರಯ್ಯ ಶಾಸನದ ಪಡಿಯಚ್ಚು ತೆಗೆಯಲು ಆರಂಭಿಸಿದ. ನಾಯಕ ಫೋಟೋ ತೆಗೆಯಲು ತೊಡಗಿದ. ಡಾ. ಹಿರೇಮಠರು ಮತ್ತು ನಾನು ಶಾಸನ ಓದಲು ನಿರತರಾದೆವು. ಹೀಗೆ ನಮ್ಮ ತ್ರಿವಿಧಕಾರ್ಯ ಮುನ್ನಡೆಯಿತು.

ನಿಚ್ಚಣಿಕೆಯನ್ನು ಹತ್ತಿನಿಂದ ಕೊಮರಯ್ಯನ ಪಡಿಯಚ್ಚು ಮೂಡಿಸಿಕೊಳ್ಳುವ ಕಾರ್ಯ ಮುಂದುವರಿಯಿತು. ಅನುಕೂಲವಿಲ್ಲದಲ್ಲಿ ಅನುಕೂಲ ಕಲ್ಪಿಸಿಕೊಂಡು ಅಕ್ಷರ ಮುದ್ರಿಸಹತ್ತಿದ. ಅದು ಕಲ್ಲಿನೊಂದಿಗೆ ನಡೆಸಿದ ಒಂದು ಹೋರಾಟವೆನಿಸಿತು. ಆತನ ಹಸ್ತವೇಗ, ಹಸ್ತಕೌಶಲ್ಯ ನಮ್ಮನ್ನು ಮುಗ್ಧಗೊಳಿಸಿದವು. ಫೋಟೋ ತೆಗೆಯಲು ಬೇಕಾಗುವ ಯೋಗ್ಯ ಅಂತರದ ಸ್ಥಳ ಹುಡುಕಲು ನಾಯಕ ಸುತ್ತಾಡಿದ. ಸಮೀಪ ನಿಂತರೆ ಇಡೀಚಿತ್ರ ಬಾರದು. ಹಿಂದೆ ಸರಿದರೆ ಸಾಯುವ ಆಟ. ಇಂಥ ಪ್ರತಿಕೂಲ ಪರಿಸರವನ್ನೇ ಅನುಕೂಲ ಮಾಡಿಕೊಂಡು ೬-೮ ಫೋಟೋ ತೆಗೆದುಕೊಂಡ. ಡಾ. ಹಿರೇಮಠರು ಮತ್ತು ನಾನು ಸಂಪೂರ್ಣ ಶಾಸನವನ್ನು ಒಮ್ಮೆ ತ್ವರಿತವಾಗಿ ಕಲ್ಲು ಮೇಲೆಯೇ ಓದಿಕೊಂಡೆವು. ಆಮೇಲೆ ವಿದ್ವಾಂಸರ ಚರ್ಚೆಗೆ ಗುರಿಯಾದ ಮತ್ತು ಅರ್ಥಸಂದೇಹವನ್ನುಂಟು ಮಾಡುವ ಹತ್ತಾರು ಅಕ್ಷರಗಳನ್ನು ಕೈಯಾಡಿಸಿ, ಕಣ್ಣಾಡಿಸಿ ಪರೀಕ್ಷಿಸಿದೆವು. ಹಲವು ಪಾಠಾಂತರಗಳನ್ನು ಗುರುತಿಸಿಕೊಂಡೆವು. ಮರ್ಮಳಬ್ಬಣಬ್ಬೆ, ಪಂಪನನಾ, ಜಯಣನ್ದಿ ಮೊದಲಾದ ಶುದ್ಧಪಾಠಗಳನ್ನು ಒಪ್ಪಿಕೊಂಡೆವು.

ಇನ್ನೊಂದು ಶಾಸನದ ಅನ್ವೇಷಣೆ

ಫೋಟೋ ತೆಗೆಯುವುದು, ಶಾಸನ ಓದುವುದು ಮುಗಿಯಿತು. ಕೊಮರಯ್ಯನ ಪಡಿಯಚ್ಚು ಪ್ರಯತ್ನ ನಡೆದೇ ಇತ್ತು. ಈ ವೃಷಭಪರ್ವತದ 'ಉನ್ನತ ಶಿಲಾತಳದೊಳ್' ಇನ್ನೊಂದು ಶಾಸನವಿರುವುದಾಗಿ ಈಗ ಲಭಿಸಿದ ಶಾಸನ ಸೂಚನೆ ನೀಡುವುದರಿಂದ, ನಮಗೆ ಅದನ್ನು ಹುಡುಕುವ ಚಾಪಲ್ಯವುಂಟಾಯಿತು. ಪಡಿಯಚ್ಚಿನ ಮೇಲ್ವಿಚಾರಣೆಗೆ ಡಾ. ಹಿರೇಮಠರು ಸುಡುಬಿಸಿಲಿನಲ್ಲಿ ನಿಂತರು. ನಾನು ಮತ್ತು ನಾಯಕ ಇನ್ನೊಂದು ಶಾಸನದ ಅನ್ವೇಷಣೆಗಾಗಿ ಬೆಟ್ಟ ಹತ್ತಲು ಪ್ರಾರಂಭಿಸಿದೆವು.

ನನ್ನ ಕೈಯಲ್ಲಿ ಚಾಕ್‌ಪೀಸ್, ನಾಯಕನ ಬಗಲಲ್ಲಿ ಕ್ಯಾಮರಾ. ಹೊಸ ಶಾಸನ ಹುಡುಕುವ ಭರದಲ್ಲಿ ಬೇರೆ ಯಾವುದೇ ವ್ಯವಸ್ಥೆ ಮಾಡಿಕೊಳ್ಳದೆ ಹೆಜ್ಜೆ ಹಾಕಿದೆವು. ಉತ್ಸಾಹದ ಉನ್ಮಾದದಲ್ಲಿ ಓಡಿದಂತೆಯೇ ನಡೆದೆವು. ಹತ್ತು ಅಡಿ ಹೋಗುವಷ್ಟರಲ್ಲಿ, ಊದಿದರೆ ಉರುಳಿ ಬೀಳುವುದೆಂಬ ಭಾವನೆ ಹುಟ್ಟಿಸುತ್ತ ಸಿದ್ಧಶಿಲೆಯ ಹೆಗಲ ಮೇಲೆ ಗಜಗಾತ್ರದ ಬಂಡೆಯಿದ್ದುದು ಕಂಡು ಬಂದಿತು. ಮೇಲೆ ಬಿದ್ದರೆ ನಮ್ಮ ಗತಿ! ಎನ್ನುತ್ತ ಉಸಿರು ಬಿಗಿಹಿಡಿದು, 'ಸರ್ಪನ ನೆರಳಲ್ಲಿಪ್ಪ ಕಪ್ಪೆಯಂತೆ' ಮೆಲ್ಲನೆ ಪಾರಾದೆವು.

ನಾವು ನಡೆದುದೇ ಮಾರ್ಗ. ಬಂಡೆ ಹತ್ತಿ, ಬಂಡೆ ಇಳಿದು, ದಾರಿ ಕಾಣದೆ ಹಿಂದೆ ಸರಿದು, ನೂರಾರು ತಿರುವು ಮುರುವು ಪಡೆದು, ಕಾಲು ಮುಂದೆ ಸಾಗಿದವು. ತಿರುಗಿ ಇಳಿಯಲು ಅನುಕೂಲವಾಗುವಂತೆ ಚಾಕ್‌ಪೀಸ್‌ನಿಂದ

ಗುರುತು ಹಾಕುತ್ತ ನಡೆದೆವು. ಸಮಯ ೧೧. ೧/೨ ಗಂಟೆ, ಕಲ್ಲು ಕಾವೇರತೊಡಗಿತ್ತು, ನಡಿಗೆಯನ್ನು ಚುರುಕುಗೊಳಿಸಿ ಸರಿಯಾಗಿ ೧೨ ಗಂಟೆಗೆ ಸಿದ್ಧಶಿಲೆಯ ತಲೆಯಲ್ಲಿ ನಿಂತೆವು. ಸುತ್ತಲೂ ಕಣ್ಣಾಡಿಸಿದಾಗ ಪರಸ್ಪರ ಕಿರು ಅಂತರದಲ್ಲಿ ೩-೪ ಶಿಲಾ ಶಿಖರಗಳು, ಶಿಖರಗಳ ಮಗ್ಗಲು ಕಿರು ವಿಸ್ತಾರದ ಬಯಲುಗಳು, ಬಯಲುಗಳಲ್ಲಿ ಮರಡಿ ಮಣ್ಣು, ಒಣಹುಲ್ಲು, ಸಂದರ್ಶಕರ ಅಡಿಗೆಯ ಅನುಕೂಲಕ್ಕಾಗಿ ಮಾಡಿರಬಹುದಾದ ೩-೪ ಒರಳುಗಳು ಕಂಡುಬಂದವು. ಶಾಸನದಲ್ಲಿ ಹೇಳಲಾದ ತ್ರಿಭುವನತಿಲಕ ಬಸದಿಯಾಗಲಿ, ಜಿನಮೂರ್ತಿಯಾಗಲಿ, ಅವುಗಳ ಅವಶೇಷಗಳಾಗಲಿ ಒಂದೂ ಕಣ್ಣಿಗೆ ಬೀಳಲಿಲ್ಲ. ಈ ಕಲ್ಲುಗುಡ್ಡದ ಮೇಲೆ ಬಸದಿ ಕಟ್ಟಿರುವುದೂ ಸಾಧ್ಯವಿಲ್ಲವೆನಿಸಿದ ಕಾರಣ, ಗುಡ್ಡದ ಕೆಳಗೆ ಕಟ್ಟಿರಬಹುದಾದ ಅದು ಈಗ ನಾಮಶೇಷವಾಗಿರಬಹುದು ಎನಿಸಿತು.

ಅಜ್ಞಾತ ಶಾಸನ ಶೋಧಕ್ಕಾಗಿ ನಾವು ನಿಂತ ಸಿದ್ಧಶಿಲೆಯ ಶಿಖರವನ್ನೆಲ್ಲ ಸುತ್ತಾಡಿದೆ. ಈ ಸಿದ್ಧಶಿಲಾ ಬಂಡೆಯ ಹೆಗಲ ಮೇಲೆ ಇನ್ನೊಂದು ಬಂಡೆಯಿದೆ. ಎರಡರ ಮಧ್ಯೆ ೪ ಅಡಿ ಅಗಲು, ೧೦-೧೫ ಅಡಿ ಆಳವಾದ ಕೊರಕಲು. ಆ ಹೆಗಲ ಬಂಡೆಗೆ ಹೋದರೆ ಶಾಸನ ಸಿಕ್ಕೀತು ಎಂಬ ಆಶೆ ಹುಟ್ಟಿತು. ಈ ಬಂಡೆಯಿಂದ ಆ ಬಂಡೆಗೆ ನೆಗೆದೆ. ಸುತ್ತಲೂ ಕಣ್ಣಾಡಿಸಿದೆ; ಶಾಸನವಿರಲಿಲ್ಲ. ಈಗ ನಾನು ನಿಂತುದು ಊದಿದರೆ ಉರುಳಿ ಬೀಳುವುದೆಂದು ಈ ಮೊದಲು ಭಾವಿಸಿದ ಬಂಡೆಯ ಮೇಲೆಂದು ತಿಳಿದುಬಂದಾಗ, ಕೈಕಾಲು ನಡುಕ ಹುಟ್ಟಿತು. ಅವಸರದಿಂದ ತಿರುಗಿ ಸಿದ್ಧಶಿಲಾ ಬಂಡೆಗೆ ನೆಗೆದೆ. ಕೊರಕಲಿನ ತಳಕ್ಕೆ ಬೀಳುವದರಲ್ಲಿದ್ದ ನಾನು, ಮಧ್ಯೆ ಇದ್ದ ಅಡ್ಡ ಕಲ್ಲೊಂದಕ್ಕೆ ಕಾಲೂರಿ, ಮಗ್ಗಲು ಬಂಡೆಗೆ ಕೈಹಚ್ಚಿ ನಿಂತೆ. ನಾಯಕ ಹೌಹಾರಿ 'ಸರ್' ಎಂದು ಕೂಗಿದ. ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ. ಮರಣಭಯ ಆವರಿಸಿತು. ಎದೆ ಡವ ಡವ ಹೊಡೆಯುತ್ತಿತ್ತು. ಮೈ ಕೈ ಮುಟ್ಟಿ ನೋಡಿ, ಬದುಕಿದ್ದೇನೆ ಎಂದು ನಿಶ್ಚಯಮಾಡಿಕೊಂಡೆ. ನಾಯಕನ ಸಹಾಯದಿಂದ ಕೊರಕಲಿನ ಹೊರ ಬಂದರೂ ಒಡೆದ ಧೈರ್ಯ ಒಂದಾಗಲು ಕೆಲಸಮಯ ಬೇಕಾಯಿತು.

ಶಿಖರದಿಂದ ಶಿಖರಕ್ಕೆ

ಈ ಶಿಖರ ಬಿಟ್ಟು ಇನ್ನೊಂದು ಶಿಖರ ಹತ್ತಿದೆವು, ಶಾಸನ ಸಿಗಲಿಲ್ಲ. ಮತ್ತೊಂದನ್ನು ಏರಿದೆವು. ಶಾಸನ ಸಿಗಲಿಲ್ಲ. ಸುತ್ತೆಲ್ಲ ತಿರುಗಾಡಿದೆವು, ಇಚ್ಛೆ ಈಡೇರಲಿಲ್ಲ. ಕೊನೆಗೆ ಭಗ್ನಮನೋರಥರಾಗಿ ನಿಂತುಕೊಂಡೆವು. ಅಜ್ಞಾತ ಶಾಸನವನ್ನು ಒಳಗೊಂಡ ಆ ಶಿಲೆ ಮಳೆಗಾಳಿಯ ಹೊಡೆತಕ್ಕೆ ಬಹುಶಃ ಉರುಳಿಹೋಗಿರಬಹುದು. ಇಲ್ಲವೇ ನಮ್ಮ ಕಣ್ಣಿಗೆ ಬೀಳದಂತೆ ಇನ್ನೊಂದು ಕಡೆ ಇರಬಹುದು ಎನಿಸಿತು.

ಸಮಯ ಮಧ್ಯಾಹ್ನ ಒಂದು ಗಂಟೆ. ಕಲ್ಲುಗಳಿಗೆ ಬೆಂಕಿಯ ಬಿಸಿ ಏರಿತ್ತು. ಇಟ್ಟರೆ ಕಾಲು ಮುಟ್ಟಿದರೆ ಕೈ ಸುಡುತ್ತಿತ್ತು. ಈಗ ಶಾಸನ ಹುಡುಕುವುದಕ್ಕಿಂತ ಬೆಟ್ಟ ಇಳಿಯುವುದು ಲೇಸು ಎನಿಸಿತು. ಮುಂಭಾಗದಿಂದ ಏರಿದ ನಾವು ಈಗ ಇದ್ದುದು ಗುಡ್ಡದ ತೀರ ಹಿಂಭಾಗದ ಶಿಖರದಲ್ಲಿ. ಚಾಕ್‌ಪೀಸ್ ಗುರುತು ಹಿಡಿದು ಇಳಿಯಬೇಕೆಂದರೆ, ಗುಡ್ಡದ ಮೇಲೆ ಒಂದು ಮೈಲು ಹಿಂದಕ್ಕೆ ಹೋಗಿ ಆಮೇಲೆ ಇಳಿಯಬೇಕು. ಆ ವಿಚಾರವನ್ನು ಬಿಟ್ಟು, ನಿಂತ ಸ್ಥಳದಲ್ಲಿಯೇ ನೇರವಾಗಿ ಇಳಿಯಲು ಪ್ರಾರಂಭ ಮಾಡಿದೆವು. ಮತ್ತೆ ನಮ್ಮ ಪಥಾನ್ವೇಷಣೆ ಪ್ರಾರಂಭವಾಯಿತು. ಅರ್ಧ ಇಳಿದೆವು, ದಾರಿ ಕಾಣದಾಯಿತು. ಅನಿವಾರ್ಯವಾಗಿ ಮತ್ತೆ ಮೊದಲಿನ ಸ್ಥಳಕ್ಕೆ ಏರಿಹೋದೆವು. ಮತ್ತೊಂದು ಕಡೆ ನಡೆದೆವು. ದಾರಿ ಮತ್ತೂ ಕಳೆದುಹೋಯಿತು. ಹತ್ತೂ ಕಡೆಗೆ ಸುತ್ತು ಹೊಡೆದು, ನೂರು ಅಡಿ ಕೆಳಗೆ ಬಂದು, ಮತ್ತೆ ನಿರಾಶೆಯಲ್ಲಿ ನಿಂತೆವು. ಮೇಲೆ ಬಿಸಿಲ ಬಿಸಿ, ಕೆಳಗೆ ನೆಲದ ಬಿಸಿ, ಮೇಲಾಗಿ ಹಸಿವು ನೀರಡಿಕೆ.

ಅಸಹಾಯಕ ಸ್ಥಿತಿಯಲ್ಲಿ ನಿಂತು ಸುತ್ತೂ ದೃಷ್ಟಿ ಬೀರಿದೆವು. ಬಂಡೆಯೊಂದರ ಬದಿಯಲ್ಲಿ ಒಬ್ಬ ಹುಡುಗ ಪೇರಲ ಹಣ್ಣು ಸಂಗ್ರಹಿಸುತ್ತಿದುದು ಕಾಣಿಸಿತು. ಅವನನ್ನು ಕೂಗಿದೆವು. ದಾರಿ ತೋರಿಸಲು ಬೇಡಿಕೊಂಡೆವು. ಅವನಿಗೆ ನಮ್ಮ ಮೊರೆಗಿಂತ ಪೇರಲ ಹಣ್ಣಿನ ಸಂಗ್ರಹ ಮುಖ್ಯವೆನಿಸಿತ್ತು. ದಾರಿ ತೋರಲು ಅಲ್ಲಿಂದಲೇ ನಿರಾಕರಿಸಿದ. ಹಸಿವು ದಣಿವುಗಳಿಂದ ಸತ್ತು ಹೋದ ನಾಯಕ ಬಿನ್ನಹದ ಬದಲು ಬೈಗುಳ ಪ್ರಾರಂಭಿಸಿದ. ಯಾವುದಕ್ಕೂ ಆತ ಬಗ್ಗಲಿಲ್ಲ. ೪೦ ಮಾರು ದೂರ ನಡೆದು ಅವನ ಹತ್ತಿರ ಹೋದೆ. ಹಣದ ಆಸೆ ತೋರಿಸಿ ನಮ್ಮನ್ನು ಕೆಳಗಿಳಿಸಲು ಒಡಂಬಡಿಸಿದೆ. ಹಸಿದ ಹೊಟ್ಟೆಗೆ ಕಸಕು ಪೇರಲು ಆಹಾರವಾಯಿತು. ಕಾಯಿಯನ್ನು ಕಡಿಯುತ್ತ ಆತನನ್ನು ಹಿಂಬಾಲಿಸಿ, ಗುಡ್ಡದ ಕೆಳಗೆ ಇಳಿದಾಗ ಸಮಯ ೨. ೧/೨ ಗಂಟೆ. ಈಗ ನಾವು ಇಳಿದುದು ಗುಡ್ಡದ ಹಿಂಬದಿಯಲ್ಲಿ. ಅಲ್ಲಿಂದ ಅರ್ಧ ವರ್ತುಳಾಕಾರ ನಡೆದು, ಡಾ. ಹಿರೇಮಠರು ಮೊದಲಾದವರಿದ್ದ ಸ್ಥಳದ ಅಡಿಯಲ್ಲಿ ಬರಲು ಅರ್ಧತಾಸು ಹಿಡಿಯಿತು.

ಕೋಲಂಬಸ್ ಅನುಭವ

ಡಾ. ಹಿರೇಮಠರನ್ನು ಕೂಗಿ ಕರೆದವು. ಸಿಳ್ಳು ಹಾಕಿದೆವು. ಚಪ್ಪಾಳೆ ಬಡಿದೆವು. ಅವರು ನಮಗೆ ಕಾಣಿಸಲಿಲ್ಲ. ನಾವು ಅವರಿಗೆ ಕಾಣಿಸಲಿಲ್ಲ. ಕೆಲವು ನಿಮಿಷಗಳ ತರುವಾಯ ಎಲ್ಲಿಂದಲೋ ಅವರ ಉತ್ತರ ಧ್ವನಿ ಕೇಳಿಸಿತು. ಆ ಸ್ಥಿತಿಯಲ್ಲಿಯೇ ಪರಸ್ಪರ ಮಾತನಾಡಿದೆವು. ಪ್ರಯತ್ನಪಟ್ಟು ಗುಡ್ಡದ ಮೈತುಂಬ ದೃಷ್ಟಿಯಾಡಿಸಿದಾಗ ಅವರು ದೂರದಲ್ಲಿ ಕೈಬೀಸಿ ಕರೆಯುತ್ತಿದ್ದುದು ಕಾಣಿಸಿತು. ಕಳೆದುಕೊಂಡ ನಮ್ಮನ್ನು ಹುಡುಕುತ್ತ ಅವರು ಹೋಗಿಲ್ಲವಲ್ಲ- ಎಂಬ ಸಮಾಧಾನವುಂಟಾಯಿತು. ಮೇಲೆ ಹತ್ತಿ ಅವರನ್ನು ಕೂಡಿಕೊಳ್ಳದಷ್ಟು ನಮ್ಮ ಶರೀರ ದಣಿದಿತ್ತು. ಕಾಲು ಸೋತಿದ್ದವು. ಅಂಗಾಲು ಕಾಯ್ದಿದ್ದವು. ಹಸಿವು ತಾಳಹಾಕುತ್ತಿತ್ತು. ಮೇಲಾಗಿ ಏರಬೇಕೆಂದರೆ ದಾರಿ ಸಿಗದು. ಅದಕ್ಕಾಗಿ ದೂರದಿಂದಲೇ ಪರಸ್ಪರ ಒಡಂಬಡಿಕೆ ಮಾಡಿಕೊಂಡು, ಅವರು ಇಳಿದು, ನಾವು ಏರಿ ಉಪಾಹಾರವಿಟ್ಟಿದ್ದ ಮಧ್ಯ ಸ್ಥಳದಲ್ಲಿ ನಾವೆಲ್ಲ ಕೂಡಿದೆವು. ಎಲ್ಲರೂ ನಮ್ಮ ಕೋಲಂಬಸ್ ಅನುಭವವನ್ನು ಕುತೂಹಲದಿಂದ ಕೇಳಿದರು. ನಮ್ಮ ಹುಚ್ಚು ಹವ್ಯಾಸ, ಪರಿಶ್ರಮಕ್ಕಾಗಿ ಮರುಗಿದರು. ಉಪಾಹಾರ ಮುಗಿಸಿ, ಶಾಸನವಿದ್ದ ಸ್ಥಳಕ್ಕೆ ಹೋಗಿ, ಇನ್ನೂ ಕೆಲವು ಫೋಟೋ ತೆಗೆದುಕೊಂಡು ಗುಡ್ಡ ಇಳಿದಾಗ ಸಮಯ ಸಾಯಂಕಾಲ ೪ ಗಂಟೆ.

ದೈಹಿಕವಾಗಿ ತೀರ ಸೋತುಹೋಗಿದ್ದರೂ ಪಂಪನು ದತ್ತಿಯಾಗಿ ಪಡೆದ ಧರ್ಮಪುರವನ್ನು ಗೊತ್ತುಹಚ್ಚಲು ನಮ್ಮ ಮನಸ್ಸು ಹಂಬಲಿಸಿತು. ಶಾಸನದಲ್ಲಿ 'ಈ ವೃಷಭಪರ್ವತ ನೋಡಲು ಧರ್ಮಪುರಕ್ಕೆ ಹೋಗೋಣ' ಎಂದೂ, 'ಧರ್ಮಪುರದ ಉತ್ತರ ದಿಗ್ಭಾಗದ ವೃಷಭಪರ್ವತ' ಎಂದೂ ಹೇಳಿರುವುದರಿಂದ ಗುಡ್ಡದ ದಕ್ಷಿಣಕ್ಕೆ ಕೂಗಳತೆಯ ಸಮೀಪದಲ್ಲಿ ಧರ್ಮಪುರವಿದೆಯೆಂದು ಖಚಿತಪಡಿಸಿಕೊಂಡೆವು. ಡಾ. ಪಿ.ಬಿ. ದೇಸಾಯಿಯವರೇನೋ ಈಗಿನ ಗಂಗಾಧರಂ ಗ್ರಾಮವೇ ಧರ್ಮಪುರವಾಗಿರಬಹುದೆನ್ನುತ್ತಾರೆ. ಆದರೆ ಗಂಗಾಧರಂ ಗ್ರಾಮ ಗುಡ್ಡದಿಂದ ದಕ್ಷಿಣಕ್ಕಿರದೇ ಪಶ್ಚಿಮಕ್ಕಿದೆ. ಅದಕ್ಕಾಗಿ ಅವರ ಅಭಿಪ್ರಾಯವನ್ನು ಕೈಬಿಟ್ಟೆವು. ಗುಡ್ಡದ ದಕ್ಷಿಣಕ್ಕೆ ಒಂದು ಮೈಲು ಅಂತರದಲ್ಲಿ ಕುರ್ಕಿಯಾಲ್ ಎಂಬ ಹಳ್ಳಿಯಿದೆ. ಇದೇ ಪ್ರಾಚೀನ ಧರ್ಮಪುರವಾಗಿರಬಹುದೇ? ಎಂದು ಹಳ್ಳಿಯನ್ನೆಲ್ಲ ಸುತ್ತಾಡಿದೆವು. ಅಲ್ಲಿ ಪ್ರಾಚೀನ ಅವಶೇಷಗಳ ಒಂದು ತುಣುಕೂ ಕಂಡುಬರದ ಕಾರಣ, ಅದು ಇತ್ತೀಚೆ ಹುಟ್ಟಿದ ಹಳ್ಳಿಯೆಂದು ಖಚಿತವಾಯಿತು. ಊರ ಜನರನ್ನು

ವಿಚಾರಿಸಲಾಗಿ, ಗುಡ್ಡದ ಮಗ್ಗುಲಲ್ಲಿ ದಕ್ಷಿಣಕ್ಕೆ ಅಗಿದರೆ ಈಗಲು ಒಂದು ಗ್ರಾಮವಿದ್ದ ಅವಶೇಷಗಳು ದೊರೆಯುವವೆಂದು ತಿಳಿದುಬಂದಿತು. ಗುಡ್ಡದ ಸಮೀಪ ಕೆರೆಯಿದೆ. ಕೆರೆಯ ನೆರೆಯಲ್ಲಿ ಗ್ರಾಮವಿರುವುದೂ ಸ್ವಾಭಾವಿಕ. ಹೀಗಾಗಿ ಗುಡ್ಡದ ದಕ್ಷಿಣಕ್ಕೆ ಹೊಂದಿಯಿದ್ದ ಧರ್ಮಪುರವು ಈಗ ಭೂಗತವಾಗಿರಬೇಕೆನಿಸಿತು. ಅಲ್ಲಿ ಭೂಶೋಧನ ಕಾರ್ಯ ನಡೆದರೆ ಧರ್ಮಪುರ ಕಂಡು ಬಂದೀತು ಎಂದು ಬಗೆಯುತ್ತಿದ್ದಂತೆ ಐದು ಗಂಟೆಗೆ ಕಾರು ವೇಮುಲವಾಡದತ್ತ ಮುನ್ನಡೆಯಿತು.

■■

ಆಕರ : ಮಾರ್ಗ ಸಂಪುಟ–೧

೪

ಪಂಪಭಾರತದ ಮಂಗಲ ಪದ್ಯ

ಶ್ರೀಯನರಾತಿಸಾಧನಪಯೋನಿಧಿಯೊಳ್ ಪಡೆದುಂ, ಧರಿತ್ರಿಯಂ ।
ಜೀಯೆನೆ ಬೇಡಿಕೊಳ್ಳದೆ ವಿರೋಧಿ ನರೇಂದ್ರರನೊತ್ತಿಕೊಂಡುಂ, + ಆ।
ತ್ಮೀಯ ^೧^ಸುಪುಷ್ಪವೃಷ್ಟಿ^೧^ಯನೊಡಂಬಡೆ ತಾಳ್ದಿಯುಂ, + ಇಂತುದಾತ್ತನಾ ।
ರಾಯಣನಾದ ದೇವನೆಮಗೀಗರಿಕೇಸರಿ ಸೌಖ್ಯಕೋಟಿಯಂ ॥[1]
[ಪಾಠಾಂತರ ೧-೧ ಸುಪುಷ್ಪದೃಷ್ಟಿ (ಪ)]

ಇಲ್ಲಿ ಅರಿಕೇಸರಿಯು ನಾರಾಯಣನಿಗಿಂತ ಶ್ರೇಷ್ಠ ಅಂದರೆ 'ಉದಾತ್ತನಾರಾಯಣ'ನೆಂದು ವರ್ಣಿಸಬೇಕಾಗಿದೆ, ಕವಿಗೆ. ಹಾಗೆ ವರ್ಣಿಸುವಲ್ಲಿ ನಾರಾಯಣನಿಗೆ ಸಂಬಂಧಿಸಿದ ಮೂರು ಸಂಗತಿಗಳು ಅವನಿಗಿಂತ ಅರಿಕೇಸರಿಯಲ್ಲಿ ಉದಾತ್ತವಾಗಿವೆಯೆಂದು ಶ್ಲೇಷದ ಮೂಲಕ ಸಾಧಿಸುತ್ತಾನೆ. ಈ ಮೂರು ಸಂಗತಿಗಳು ಹೀಗಿವೆ:

೧. ಶ್ರೀಯನರಾತಿಸಾಧನಪಯೋನಿಧಿಯೊಳ್ ಪಡೆದುಂ ....
ಇಂತುದಾತ್ತನಾರಾಯಣನಾದ .... ಅರಿಕೇಸರಿ.

೨. ಧರಿತ್ರಿಯಂ ಜೀಯೆನೆ ಬೇಡಿಕೊಳ್ಳದೆ ವಿರೋಧಿನರೇಂದ್ರರನೊತ್ತಿಕೊಂಡುಂ ......
ಇಂತುದಾತ್ತನಾರಾಯಣನಾದ .... ಅರಿಕೇಸರಿ.

೩. ಆತ್ಮೀಯ ಸುಪುಷ್ಪವೃಷ್ಟಿಯನೊಡಂಬಡೆ ತಾಳ್ದಿಯುಂ ....
ಇಂತುದಾತ್ತನಾರಾಯಣನಾದ .... ಅರಿಕೇಸರಿ.

ಈ ಮೂರು ಸಂಗತಿಗಳನ್ನು ಅರ್ಥಮಾಡಿಕೊಳ್ಳುವಲ್ಲಿ ತಲೆಯೆತ್ತುವ ಎರಡು ಸಂದೇಹಗಳನ್ನು ಇಲ್ಲಿ ಚರ್ಚಿಸಬಹುದು.

(I) ಒಂದು ಮತ್ತು ಮೂರನೆಯ ವಾಕ್ಯಗಳಲ್ಲಿ ಅರಿಕೇಸರಿಯ ಸಂಗತಿಗಳನ್ನು ವ್ಯಕ್ತವಾಗಿಯೂ ನಾರಾಯಣನ ಸಂಗತಿಗಳನ್ನು ಅವ್ಯಕ್ತವಾಗಿಯೂ ಹೇಳಿದ್ದರೆ, ಎರಡನೆಯ ವಾಕ್ಯದಲ್ಲಿ ಮಾತ್ರ "ಭೂಮಿಯನ್ನು (ನಾರಾಯಣನಂತೆ) ಭಿಕ್ಷೆ ಬೇಡಿ ಗಳಿಸದೆ" ಎನ್ನುತ್ತ ನಾರಾಯಣನ ಸಂಗತಿಯನ್ನೂ ವ್ಯಕ್ತವಾಗಿ ಹೇಳಿರುವನು.

---

೧. ಪಂಪಭಾರತ, ೧-೧.

ಇಲ್ಲಿ 'ಜೀಯನೆ ಬೇಡಿಕೊಳ್ಳದೆ' ಎಂಬ ಮಾತನ್ನು ಬಿಟ್ಟಿದ್ದರೆ ನಾರಾಯಣನ ಸಂಗತಿಗೆ ಗೌಪ್ಯ ಉಂಟಾಗಿ ಮೂರು ವಾಕ್ಯಗಳಲ್ಲಿ ಅಭಿವ್ಯಕ್ತಿ ಸಮಾನತೆ ಸಾಧ್ಯವಾಗುತ್ತಿತ್ತು. ಹಾಗೆ ಮಾಡಿಲ್ಲವಾದುದರಿಂದ ಒಂದು ಮೂರನೆಯ ವಾಕ್ಯಗಳ ಅಭಿವ್ಯಕ್ತಿ ಧ್ವನಿಪೂರ್ಣವಾಗಿ, ಎರಡನೆಯ ವಾಕ್ಯದ ಅಭಿವ್ಯಕ್ತಿ ವಾಚ್ಯವಾಗಿ ಬಿಟ್ಟಿದೆ. ಇದು ಈ ಪದ್ಯದ ಒಂದು ಸಣ್ಣ ದೋಷ.

(II) ಇಲ್ಲಿಯ 'ಸುಪುಷ್ಪವೃಷ್ಟಿ' ಎಂಬುದಕ್ಕೆ 'ಪ' ಪ್ರತಿಯಲ್ಲಿ 'ಸುಪುಷ್ಪದೃಷ್ಟಿ' ಎಂಬ ಭಿನ್ನಪಾಠವಿದೆ. ಈಗ ನಾರಾಯಣ ಮತ್ತು ಅರಿಕೇಸರಿ ಇಬ್ಬರಿಗೂ "ಸುಪುಷ್ಪವೃಷ್ಟಿ" (ಸುಪುಷ್ಪಗಳ ಮಳೆ) ಯಾಯಿತೆಂದಾಗಲೀ, ಇಬ್ಬರಿಗೂ "ಸುಪುಷ್ಪದೃಷ್ಟಿ" (ಚೆನ್ನಾಗಿ ಬಲಿತ ಕಣ್ಣು)ಗಳಿವೆಯೆಂದಾಗಲೀ ಹೇಳಿದರೆ ನಾರಾಯಣನಿಗಿಂತ ಅರಿಕೇಸರಿ 'ಉದಾತ್ತ'ನೆಂದು ಹೇಳಿದ ಹಾಗಾಗಲಿಲ್ಲ. ಆದುದರಿಂದ ಈ ಎರಡೂ ಪಾಠಗಳು ಅಪ್ರಯೋಜಕವೆಂದು ಹೇಳುತ್ತ ಡಾ. ಡಿ. ಎಲ್. ನರಸಿಂಹಾಚಾರ್ ಅವರು ಇನ್ನೆರಡು ಪಾಠಗಳನ್ನು ಊಹಿಸುತ್ತಾರೆ. ಅವು ಸುಪುಷ್ಪಪಟ್ಟ ಮತ್ತು ಸುಪುಷ್ಪದೃಷ್ಟಿ.

ಇವುಗಳಲ್ಲಿ 'ಸುಪುಷ್ಪಪಟ್ಟ' ಎಂಬ ಪಾಠವನ್ನು ಕುರಿತು ನೀಡಿದ ವಿವರಣೆ ಹೀಗಿದೆ: "ರಾಜರೂ ದೇವತೆಗಳೂ ಧರಿಸಬಹುದಾದ ಶಿರೋವೇಷ್ಟನಗಳಲ್ಲಿ ಜಟಾ, ಮೌಳಿ, ಕಿರೀಟ, ಕರಂಡ, ಶಿರಸ್ತ್ರಕ, ಕುಂಡಲ (ಕುಂತಲ?), ಕೇಶಬಂಧ, ಧಮ್ಮಿಲ್ಲ, ಅಲಕ, ಚೂಡ, ಮಕುಟ ಮತ್ತು ಪಟ್ಟ ಎಂಬ ಹನ್ನೆರಡು ವಿಧಾನಗಳಿವೆ. ಇವುಗಳಲ್ಲಿ ಕೊನೆಯದಾದ ಪಟ್ಟ ಎಂಬುದರಲ್ಲಿ ಪತ್ರಪಟ್ಟ, ರತ್ನಪಟ್ಟ, ಪುಷ್ಪಪಟ್ಟ ಎಂಬ ಮೂರು ಬಗೆಗಳಿವೆ. ಇಲ್ಲಿ ಹೇಳಿರುವ ಪುಷ್ಪಪಟ್ಟ ಎಂಬುದು ತಲೆಗೆ ಹಾಕಿಕೊಳ್ಳುವ ಒಂದು ತೆರನಾದ ಕಿರೀಟವೆಂದು ಹೇಳಬಹುದು. ಇದನ್ನು ಪಟ್ಟಭಾಜ್ ದೊರೆಗಳೂ ಸಾಮಂತರೂ ಧರಿಸುತ್ತಿದ್ದರು. ಪಂಪನು ಈ ಶಬ್ದವನ್ನು ತನ್ನ ಪದ್ಯದಲ್ಲಿ ಬಳಸಿರಬೇಕು. ದೇವತಾಮೂರ್ತಿಗಳಿಗೆ ಬಗೆಬಗೆಯಾದ ಕಿರೀಟಗಳನ್ನು ಶಿಲ್ಪಿಗಳು ಕೆತ್ತುತ್ತಾರೆ. ಅವುಗಳಲ್ಲಿ ಪುಷ್ಪಪಟ್ಟ ಒಂದು. ಪ್ರಕೃತ ನಾರಾಯಣನು ಧರಿಸಿಕೊಂಡಿರುವುದು ಪುಷ್ಪಪಟ್ಟ. ಅರಿಕೇಸರಿ ಹಾಕಿಕೊಂಡಿರುವುದು ಸುಪುಷ್ಪಪಟ್ಟ. ಆದ್ದರಿಂದ ಅವನು ನಾರಾಯಣನಿಗಿಂತ ಮೇಲು ಎಂಬ ಸಮಂಜಸ ಅರ್ಥವಾಗುತ್ತದೆ"[೨] ಎಂದು ವಿವರಣೆ ನೀಡಿ, 'ಸುಪುಷ್ಪಪಟ್ಟ' ಎಂಬ ಊಹಿತಪಾಠವನ್ನು ಒಪ್ಪಿಕೊಂಡಿರುವರು. ಈ ಅಭಿಪ್ರಾಯಕ್ಕೆ ಕೆಲವು ಆಕ್ಷೇಪಣೆಗಳಿವೆ.

(1) ಮೇಲಣ ಪದ್ಯದ ಮೂರು ಸಂಗತಿಗಳಲ್ಲಿ ಮೊದಲಿನ ಎರಡು: ಸಮುದ್ರಮಂಥನ. ವಾಮನಾವತಾರಗಳು ನಾರಾಯಣನಿಗೆ ಮಾತ್ರ ಸಂಬಂಧಿಸಿದ ವಿಶಿಷ್ಟ ಸಂಗತಿಗಳು. ಡಿ.ಎಲ್.ಎನ್. ಊಹಿಸಿರುವ ಈ 'ಪುಷ್ಪಪಟ್ಟ' ನಾರಾಯಣನಿಗೆ ಮಾತ್ರ ವಿಶಿಷ್ಟವಾದ ಕಿರೀಟವಲ್ಲ. ಎಲ್ಲ ದೇವತೆಗಳಿಗೂ ಚಕ್ರವರ್ತಿಗಳಿಗೂ, ಸಾಮಂತರಿಗೂ ಸಾಮಾನ್ಯವಾಗಿರುವ ಕಿರೀಟ.

(2) ಈ ಮೂರು ಸಂಗತಿಗಳಲ್ಲಿ ಮೊದಲಿನ ಎರಡಕ್ಕೆ ಪೌರಾಣಿಕ ಅಂಶಗಳನ್ನು ಬಳಸಿದ ಕವಿಯು ಮೂರನೆಯದಕ್ಕೆ 'ಸುಪುಷ್ಪಪಟ್ಟ' ಎಂಬ ಕಾಲ್ಪನಿಕ ಅಂಶವನ್ನು ಬಳಸಿರಲಾರ.

---

೨. ಕನ್ನಡ ಗ್ರಂಥಸಂಪಾದನೆ, ಪು. ೧೬೭.

(3) ನಾರಾಯಣನದು 'ಪುಷ್ಪಪಟ್ಟ' ಅರಿಕೇಸರಿಯದು 'ಸುಪುಷ್ಪಪಟ್ಟ' ಎಂದು ಡಾ. ಡಿ.ಎಲ್. ಎನ್. ಅವರು 'ಸು' ಪ್ರತ್ಯಯದ ಮೇಲೆ ಅವಧಾರಣೆ ಕೊಡುತ್ತಾರೆ. ಆದರೆ 'ಸು' ಪ್ರತ್ಯಯದ ಮೂಲಕ 'ಉದಾತ್ತ' ಅರ್ಥ ಕಲ್ಪಿಸಲು ಹೊರಟಿರಲಾರ, ಪಂಪ.

ಈ ಕಾರಣಗಳಿಂದಾಗಿ ಶ್ರೀಯುತರ ಈ ಊಹಿತಪಾಠ ಸ್ವೀಕಾರಯೋಗ್ಯ ಎನಿಸಿದು.

ಅವರು ಊಹಿಸಿದ (ಎಲ್ಲರೂ ಮೊದಲಿನಿಂದ ಊಹಿಸುತ್ತಿದ್ದ) ಇನ್ನೊಂದು ಪಾಠ 'ಸುಪುಷ್ಪದೃಷ್ಟಿ' ಇದನ್ನು ಕುರಿತು "ಇಲ್ಲಿ ಹೂವಿನಂತಿರುವ ಕಣ್ಣುಳ್ಳವನು" ಎಂದರೆ ಇಬ್ಬರಿಗೂ ಅನ್ವಯಿಸುತ್ತದೆ. ಇಲ್ಲವೆ ಹೂವು ಬಂದಿರುವ ಕಣ್ಣುಳ್ಳವನು ಎಂದರೆ ಇಬ್ಬರಿಗೂ ನಿಂದೆಯಾಗುತ್ತದೆ. ಈ ಸಂದರ್ಭದಲ್ಲಿ 'ಕಮಲಗಣ್ಣಿನ ದೇವನೇ ಸಾಕೆಮಗೆ ಮಾಡುವುದೇನು' ಎಂದು ಕುಮಾರವ್ಯಾಸನ ದುರ್ಯೋಧನನು ಕೃಷ್ಣನನ್ನು ತಿರಸ್ಕರಿಸುವುದನ್ನು (5-8-63) ನೆನೆಯಬಹುದು. ಆದ್ದರಿಂದ ಇಲ್ಲಿ ಸ್ವೀಕೃತ ಪಾಠವಾಗಲೀ, ಸೂಚಿತ ಪಾಠವಾಗಲೀ, ನಿಯೋಜಿಸಬಹುದಾದ ಪಾಠವಾಗಲೀ ಸಮರ್ಪಕವಾದ ಅರ್ಥವನ್ನು ಕೊಡುವಂತಿಲ್ಲ"[೩] ಎಂದು ಈ ಪಾಠವನ್ನು ನಿರಾಕರಿಸಿರುವರು. ಅವರ ಈ ಅಭಿಪ್ರಾಯವನ್ನು ಇಲ್ಲಿ ವಿವೇಚಿಸಬಹುದು.

(1) ಪುಷ್ಪವೆಂದರೆ ಹೂವು, ಇಲ್ಲಿ ಪಂಪನು 'ಸುಪುಷ್ಪ' ಪದವನ್ನು ಒಳ್ಳೆಯ ಹೂವು ಎಂಬ ಅರ್ಥದಲ್ಲಿ ಬಳಸದೆ, ಹೂವುಗಳಲ್ಲಿ ಒಳ್ಳೆಯದು ಎಂಬ ಅರ್ಥದಲ್ಲಿ 'ಕಮಲ'ಕ್ಕೆ ಪರ್ಯಾಯವಾಗಿ ಬಳಸಿರುವನು. ಹೀಗಾಗಿ 'ಹೂವಿನಂತಿರುವ ಕಣ್ಣುಳ್ಳವನು' ಎಂದಾಗಲೀ 'ಹೂವು ಬಂದಿರುವ ಕಣ್ಣುಳ್ಳವನು' ಎಂದಾಗಲೀ ಸಣ್ಣ ಅರ್ಥಹಚ್ಚಲು ಇಲ್ಲಿ ಅವಕಾಶವಿಲ್ಲ.

(2) ದೂತನಾಗಿ ಬಂದ ಕೃಷ್ಣನನ್ನು ಕುಮಾರವ್ಯಾಸನ ದುರ್ಯೋಧನನು ನಿಂದಿಸುವನೇನೋ ನಿಜ. ಆದರೆ ಈ ದೌತ್ಯ ಪ್ರಸಂಗದಲ್ಲಿ 'ಕಮಲಗಣ್ಣಿನ ದೇವನೇ' ಎಂಬ ಪದ ಬಳಸುವುದರ ಮೂಲಕ ಪರ್ಯಾಯವಾಗಿ ನಿಂದೆಯನ್ನೂ ಸಾಧಿಸಬೇಕೆಂದು ಕುಮಾರವ್ಯಾಸನ ಮನಸ್ಸಿನಲ್ಲಿರಲಿಕ್ಕಿಲ್ಲ. ಬಹುಶಃ 'ಹೂಗಣ್ಣು' ಪದ ನಿಂದೆಯ ಶ್ಲೇಷಾರ್ಥ ಪಡೆದು ಬಳಕೆಯಾದುದು ತೀರ ಇತ್ತೀಚಿನವನಾದ ಮುದ್ದಣ್ಣನಿಂದ. ಅದಕ್ಕಾಗಿ 'ಹೂಗಣ್ಣು' ಪದಕ್ಕಿಂತ ಲೇಸಾದ 'ಕಮಲಗಣ್ಣು' ಎಂಬ ಪದದಲ್ಲಿ ನಿಂದೆ ಇದೆಯೆಂದು ಭಾವಿಸುವುದು ಸಂಗತವೆನಿಸದು. ಹಾಗಾದರೆ ನಮ್ಮ ಕವಿಗಳು ಬಳಸಿದ ಕಮಲಾಕ್ಷಿ, ಕಮಲನೇತ್ರೆಗಳಲ್ಲಿಯೂ ಇಂಥ ನಿಂದೆಯ ಅರ್ಥವನ್ನೇ ಆರೋಪಿಸಬೇಕಾದೀತು.

(3) ಮೇಲಣ ಪದ್ಯದ ಮೂರು ಸಂಗತಿಗಳಲ್ಲಿಯ ಒಂದು ಸಮುದ್ರಮಂಥನ, ಇನ್ನೊಂದು ವಾಮನಾವತಾರಗಳೆಂಬ ಪುರಾಣ ಘಟನೆಗಳಾಗಿರುವುದರಿಂದ, ಮೂರನೆಯ ಸಂಗತಿಯೂ ಪುರಾಣ ಘಟನೆಯೇ ಇದ್ದಿರಬೇಕು. ಅಂದರೆ ವಿಷ್ಣುವು ಶಿವನ ಪಾದಕ್ಕೆ ಹೂವಿನ ಬದಲು ನೇತ್ರವನ್ನರ್ಪಿಸಿ 'ಸುಪುಷ್ಪ (+ಕಮಲ) ನೇತ್ರ' ನಾದ ಪೌರಾಣಿಕ ಘಟನೆ ಇದಾಗಿರಬೇಕು. ಹೀಗೆ ಭಾವಿಸದಿದ್ದರೆ ಎರಡಕ್ಕೆ ಪುರಾಣ ಘಟನೆ ಹೇಳಿ, ಮೂರನೆಯದಕ್ಕೆ ಪುರಾಣ ಸಂಬಂಧಿಯಲ್ಲದ ಘಟನೆಯನ್ನು ಹೇಳಿದಂತಾಗುತ್ತದೆ.

---

೩. ಕನ್ನಡ ಗ್ರಂಥಸಂಪಾದನೆ, ೧೬೭.

(4) ವಿಷ್ಣುವಿಗೆ 'ಸುಪುಷ್ಪ (ಕಮಲ)ದೃಷ್ಟಿ' ಮೂಲತಃ ಇದ್ದುದಲ್ಲ, ಕಮಲದ ಬದಲು ಶಿವನ ಪಾದಕ್ಕೆ ಕಣ್ಣು ಅರ್ಪಿಸಿದ ಕಾರಣ ಅದು ಅವನ ಕಣ್ಣಿಗೆ ಅಲಂಕಾರಿಕವಾಗಿ ಬಳಕೆಯಾದ ಪದ. ಅರಿಕೇಸರಿಯದು ಹೀಗಲ್ಲ. ಆತನು 'ಸುಪುಷ್ಪ (=ಕಮಲ)ದೃಷ್ಟಿ'ಯನ್ನು ಜನ್ಮತಃ ಜೊತೆಗೆ (=ಒಡಂಬಡೆ) ತಾಳಿರುವನು ಎಂದು ಹೇಳುವ ಉದ್ದೇಶವಿದ್ದಂತಿದೆ, ಕವಿಗೆ. ಹೀಗಾಗಿ ಕವಿಯು ಉದಾತ್ತೀಕರಣ ಸೂಚನೆಗಾಗಿ ಇಲ್ಲಿ ಬಳಸಿದ ಪದ 'ಸು' ಅಲ್ಲ, 'ಒಡಂಬಡೆ' (=ಜನ್ಮತಃ ಜೊತೆಗೆ) ಎಂದು ಭಾವಿಸಬೇಕಾಗುತ್ತದೆ. ಇದರಿಂದ 'ಸುಪುಷ್ಪದೃಷ್ಟಿ' ಎಂಬುದೇ ಯೋಗ್ಯಪಾಠವೆನಿಸುತ್ತದೆ.

ಈ ವರೆಗಣ ವಿವೇಚನೆಯಿಂದ ನಮ್ಮ ಕಣ್ಣೆದುರಿಗಿರುವ 'ಸುಪುಷ್ಪವೃಷ್ಟಿ', 'ಸುಪುಷ್ಪದೃಷ್ಟಿ' ಎಂಬ ಪಾಠಗಳಿಗಿಂತಲೂ ಊಹಿತಪಾಠವಾದ 'ಸುಪುಷ್ಪದೃಷ್ಟಿ' ಎಂಬುದೇ ಕವಿಯ ಪಾಠವೆಂದು, ಕೊನೆಯ ಪಕ್ಷ ಅರ್ಥದೃಷ್ಟಿಯಿಂದ ಹೆಚ್ಚು ಯೋಗ್ಯವಾದ ಪಾಠವೆಂದು ಹೇಳಬಹುದು.

■■

ಆಕರ : ಮಾರ್ಗ ಸಂಪುಟ–೧

೫

ಪೊನ್ನನ ಭುವನೈಕರಾಮಾಭ್ಯುದಯ : ಅಲಂಕಾರಶಾಸ್ತ್ರ?

ಕಳೆದುಹೋದ ಕನ್ನಡ ಸಾಹಿತ್ಯ ಶ್ರೇಣಿಯಲ್ಲಿ ಪೊನ್ನನ ಭುವನೈಕರಾಮಾಭ್ಯುದಯ ಒಂದು ಪ್ರಮುಖ ಗ್ರಂಥವೆನಿಸಿದೆ. ಆದುದರಿಂದಲೇ ಅದರ ವಿಷಯವಾಗಿ ಅನೇಕ ವಿದ್ವಾಂಸರು ಚರ್ಚೆ-ಪ್ರತಿಚರ್ಚೆಗಳನ್ನು ಮಂಡಿಸುತ್ತ ಬಂದಿದ್ದಾರೆ. ಇವುಗಳಲ್ಲಿ ಈ ಕೃತಿಯ ನಾಯಕ ರಾಷ್ಟ್ರಕೂಟ ವಂಶದ ಕೃಷ್ಣ III ನೋ, ಶಂಕರಗಂಡನೋ ಎಂಬುದು ಮುಖ್ಯ ಚರ್ಚೆಯಾಗಿದೆ. ಇದು ಇತಿಹಾಸವೋ, ಕಾವ್ಯವೋ, ಇವೆರಡನ್ನೂ 'ತಗುಳ್ಚಿ ಪೇಟಿದ' ಕೃತಿಯೋ ಎಂಬುದು ಇನ್ನೊಂದು ಚರ್ಚೆಯಾಗಿದೆ. ಡಾ. ದ. ರಾ. ಬೇಂದ್ರೆಯವರು ಇದು ಶುದ್ಧ ಇತಿಹಾಸಕೃತಿಯಾಗಿದೆಯೆಂದರೆ, ಮಿಕ್ಕವರು ಪಂಪಭಾರತ, ಗದಾಯುದ್ಧಗಳಂತೆ 'ತಗುಳ್ಚಿ ಪೇಟಿದ' ಕೃತಿಯಾಗಿದೆ ಎನ್ನುತ್ತಾರೆ.

ಈ ತಗುಳ್ಚಿ ಪೇಟುವ ಕ್ರಿಯೆ ಕನ್ನಡದಲ್ಲಿ ಎರಡು ತೆರನಾಗಿದೆ. ಒಂದು: ತಗುಳ್ಚಿ ಪೇಟಿದ ಕಾವ್ಯ. ಇದಕ್ಕೆ ಪಂಪಭಾರತ, ಗದಾಯುದ್ಧ ಉದಾಹರಣೆಗಳು. ಇನ್ನೊಂದು : ತಗುಳ್ಚಿ ಪೇಟಿದ ಶಾಸ್ತ್ರ. ಇದಕ್ಕೆ ಕವಿರಾಜಮಾರ್ಗ, ಮದನತಿಲಕ, ಅಪ್ರತಿಮವೀರಚರಿತೆ ಉದಾಹರಣೆಗಳು. ಇವುಗಳಲ್ಲಿ ಭುವನೈಕ್ಯರಾಮಾಭ್ಯುದಯ 'ತಗುಳ್ಚಿ ಪೇಟಿದ ಶಾಸ್ತ್ರ'ವರ್ಗಕ್ಕೆ ಸೇರಬಹುದೇ? ಎಂಬುದು ನನ್ನ ಸಂದೇಹ. ಇದಕ್ಕೆ ಊಹಾತ್ಮಕ ಆಧಾರಗಳು ಮೂರು:

೧. ಕನ್ನಡದಲ್ಲಿ ತಗುಳ್ಚಿ ಪೇಟುದ ಶಾಸ್ತ್ರಪರಂಪರೆಯೊಂದು ಕಂಡುಬರುತ್ತದೆ. ಉದಾ: ಮೇಲೆ ಹೇಳಿದ ಕವಿರಾಜಮಾರ್ಗ, ಮದನತಿಲಕ, ಅಪ್ರತಿಮ ವೀರಚರಿತೆ. ಈ ಪರಂಪರೆಯ ಇನ್ನೊಂದು ಕೃತಿಯಾಗಿರಬಹುದು, ಭುವನೈಕರಾಮಾಭ್ಯುದಯ. ೨. ಕವಿರಾಜಮಾರ್ಗಕ್ಕೆ ನೃಪತುಂಗಾಭ್ಯುದಯ ಎಂಬ ದ್ವಿತೀಯ ನಾಮವಿರುವ ಸಂಗತಿ, ಇತ್ತೀಚೆ ನಾನು ಶೋಧಿಸಿದ ಅದರ ಹಸ್ತಪ್ರತಿಯಿಂದ ಬೆಳಕಿಗೆ ಬಂದಿದೆ. ಹೀಗಾಗಿ 'ನೃಪತುಂಗಾಭ್ಯುದಯ' ಒಂದು ಶಾಸ್ತ್ರವಾಗಿರುವಂತೆ 'ಭುವನೈಕ್ಯರಾಮಾಭ್ಯುದಯ'ವೂ ಒಂದು ಶಾಸ್ತ್ರವಾಗಿರಬಹುದೇ? (ಎರಡೂ ಹೆಸರುಗಳಲ್ಲಿಯ 'ಅಭ್ಯುದಯ'ಪದಗಳನ್ನು ಗಮನಿಸಿರಿ). ರಾಷ್ಟ್ರಕೂಟ ವಂಶದ ನೃಪತುಂಗನನ್ನು ಕುರಿತು ಒಂದು ಶಾಸ್ತ್ರಕೃತಿ 'ನೃಪತುಂಗಾಭ್ಯುದಯ'ವಾದರೆ, ಅದೇ ರಾಷ್ಟ್ರಕೂಟ ವಂಶದ ಕೃಷ್ಣIIIನನ್ನು ಕುರಿತು 'ಭುವನೈಕರಾಮಾಭ್ಯುದಯ' ಇನ್ನೊಂದು ಶಾಸ್ತ್ರಕೃತಿಯಾಗಿರಬಹುದು. ೩. ಇನ್ನೊಂದು ಆಶ್ಚರ್ಯದ ಸಂಗತಿಯೆಂದರೆ "ಇವನು ಒಂದು ಅಲಂಕಾರಗ್ರಂಥವನ್ನು ಬರೆದಿರುವುದಾಗಿ ಕೆಲವರು ಹೇಳುತ್ತಾರೆ"[೧]

---

೧. ಕ.ಕ.ಚ. (೧೯೬೧), ಪುಟ ೪೧.

ಎಂದು ಕವಿಚರಿತೆಕಾರರು ಪೊನ್ನನನ್ನು ಕುರಿತು ಬರೆದಿದ್ದಾರೆ. ಇವರಿಗೆ ಏನು ಆಧಾರವಾಗಿದ್ದಿತೋ ಗೊತ್ತಿಲ್ಲ. ಆದರೆ ಈ ಮಾತು ನಮ್ಮ ಊಹೆಗೆ ಒಂದು ಆಧಾರವಾಗಿ ನಿಲ್ಲುತ್ತದೆ ಎಂಬುದು ಗಮನಿಸಬೇಕಾದ ವಿಷಯ (ಕಾವ್ಯಾವಲೋಕನ, ದರ್ಪಣಗಳಂಥ ಶಾಸ್ತ್ರಗ್ರಂಥಗಳಲ್ಲಿ ಭುವನೈಕರಾಮಾಭ್ಯುದಯದ ಅವಶೇಷಗಳು ಲಕ್ಷ್ಯಪದ್ಯಗಳಾಗಿ ಬಂದುದನ್ನು ಇಲ್ಲಿ ನೆನೆಯಬಹುದು).

ಇಷ್ಟು ಹಿನ್ನೆಲೆಯಲ್ಲಿ 'ಭುವನೈಕರಾಮಾಭ್ಯುದಯ'ವು ರಾಷ್ಟ್ರಕೂಟ ಕೃಷ್ಣನನ್ನು ಕುರಿತ ಒಂದು ತಗುಳ್ಚಿ ಪೇಟಿದ ಶಾಸ್ತ್ರಕೃತಿ. ಅದರಲ್ಲಿಯೂ ತಗುಳ್ಚಿ ಪೇಟಿದ ಒಂದು ಅಲಂಕಾರಶಾಸ್ತ್ರಕೃತಿಯಾಗಿದೆ - ಎಂದು ಊಹಿಸಬಹುದು.[೨]

■■

ಆಕರ : ಮಾರ್ಗ ಸಂಪುಟ–೧

---

೨. (ಅ) ಭುವನೈಕರಾಮಾಭ್ಯುದಯ ೧೪ ಆಶ್ವಾಸಗಳ ಗ್ರಂಥವೆಂದು ಪೊನ್ನ ಹೇಳುತ್ತಾನೆ. 'ಆಶ್ವಾಸ' ಎಂಬ ಪದ ಕಾವ್ಯದಂತೆ ಲಕ್ಷಣಗ್ರಂಥವನ್ನು ಸೂಚಿಸಬಹುದೇ? ವಿಚಾರಿಸಬೇಕು.
(ಆ) ಮೇಲೆ ಅಲಂಕಾರ ಸೂತ್ರ, ಕೆಳಗೆ ರಾಜನ ಚರಿತ್ರೆಯೋ, ವರ್ಣನೆಯೋ ಇರುವ ಪದ್ಯಗಳ ಗ್ರಂಥವಾಗಿರಬಹುದು. "ಶಾಸ್ತ್ರಕಾವ್ಯ, ಶ್ಲೇಷಕಾವ್ಯ, ಸಮಸ್ತಕಾವ್ಯ" ಹೆಸರಿನ ಮುಂದಿನ ಲೇಖನ ನೋಡಿರಿ.

೬

ಗದಾಯುದ್ಧದ ಒಂದು ಪದ್ಯ

ಉತ್ತಮೋತ್ತಮ ಪ್ರಾಚೀನ ಪದ್ಯಗಳ ಸಂಕಲನವಾದ ಸೂಕ್ತಿ ಸುಧಾರ್ಣವದಲ್ಲಿ ರನ್ನನ ಅಜಿತಪುರಾಣದ ಪದ್ಯಗಳಿದ್ದು, ಗದಾಯುದ್ಧದ ಪದ್ಯಗಳಿಲ್ಲದುದಕ್ಕೆ ಬಹುಶಃ ಆ ಕೃತಿ ಕವಿ ಮಲ್ಲಿಕಾರ್ಜುನನಿಗೆ ಲಭ್ಯವಿಲ್ಲದುದೇ ಕಾರಣವಾಗಿರಬೇಕು. ಹೀಗೆ ಅಷ್ಟು ಪೂರ್ವದಲ್ಲಿ ಕೆಲವೇ ಹಸ್ತಪ್ರತಿಗಳಾಗಿ ಮಾತ್ರ ಪ್ರಚಾರದಲ್ಲಿರಬಹುದಾದ ಗದಾಯುದ್ಧದ ಹಸ್ತಪ್ರತಿಗಳು ಇಂದು ನಮ್ಮ ಕೈಗೆ ಇಳಿದುಬಂದವು, ಕೇವಲ ನಾಲ್ಕು ಇಲ್ಲವೆ ಐದು.

೧೮೮೫, ೧೮೯೯ ಮತ್ತು ೧೯೨೫ರಲ್ಲಿ ಶ್ರೀ. ಎಂ. ಎ. ರಾಮಾನುಜೈಯ್ಯಂಗಾರ್, ೧೮೪೮, ೧೯೭೨ರಲ್ಲಿ ಶ್ರೀ ಕೆ.ವಿ. ಕೃಷ್ಣಭಟ್ : ೧೮೪೮, ೧೯೩೫, ೧೯೬೩, ೧೯೬೭, ೧೯೭೨ರಲ್ಲಿ 'ಗದಾಯುದ್ಧ ಸಂಗ್ರಹ' ಹೆಸರಿನಿಂದ ಪ್ರೊ. ತೀ. ನಂ. ಶ್ರೀಕಂಠಯ್ಯ; ೧೯೭೫ರಲ್ಲಿ 'ಗದಾಯುದ್ಧ ದರ್ಪಣಂ' ಹೆಸರಿನಿಂದ ಪ್ರೊ. ಪಿ. ಸುಬ್ರಾಯಭಟ್ ಅವರು ಈ ಕೃತಿಯನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಹೀಗಿದ್ದೂ ಒಂದೆರಡು ಪದ್ಯಗಳ ಛಂದೋರೂಪ, ಪಂಪಭಾರತದ ಪದ್ಯಗಳಿಂದ ಪೂರ್ಣಗೊಳಿಸಲ್ಪಟ್ಟ ಕೊನೆಯ ಭಾಗಗಳು ವಿದ್ವಾಂಸರಿಗೆ ಸಮಸ್ಯೆಯಾಗಿ ಇಂದಿಗೂ ಕಾಡುತ್ತಲಿವೆ. ಸಾಲದುದಕ್ಕೆ ಕಾವ್ಯದುದ್ದಕ್ಕೂ ಪಾಠದೋಷ ಮತ್ತು ಗ್ರಂಥಪಾತಗಳು ಹಲವು ಸಂಖ್ಯೆಯಲ್ಲಿ ಸಿಗುತ್ತವೆ. ಈ ಸಮುದಾಯದಿಂದ ಒಂದು ಪದ್ಯವನ್ನು ಪರಿಷ್ಕರಿಸಿ ಕೊಡುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ರಣರಂಗದಲ್ಲಿ ಮುನ್ನಡೆದ ದುರ್ಯೋಧನನು ದ್ರೋಣರ ಶವದ ತರುವಾಯ ಅಭಿಮನ್ಯುವಿನ ಶವವನ್ನು ಕಂಡು, ಆತನ ಶೌರ್ಯವನ್ನು ಹೊಗಳುವ ಪ್ರಸಂಗದ ಕೊನೆಯ ಪದ್ಯವೊಂದು ಹೀಗಿದೆ:

ಪಸಿವಿನೊಳನ್ನಮಂ ೧ಪಸಿದು ಬಂದವರ್ಗಿಕ್ಕುವ ಯುದ್ಧರಂಗದೊಳ್ ।
ಕುಸಿಯದೆ ಸೂಱೆಗೊಳ್ಳದೆ ರಣಕ್ಕೆ ಶುಚಿತ್ವಮನಪ್ಪುಕೆಯ್ವು೧ (?) ಮಾ।
ನಸಿಕೆಯ ನಾಲ್ವರುಂ ೨ನಿಮಗೆ ವಂದ್ಯರವಂದಿರೊಳೀ೨ ತನಲ್ತೆ ಸಾ ।
ಹಸಧನನೆಂದು ಕೆಯ್ಮುಗಿದನಂದಭಿಮನ್ಯುಗೆ ಕೌರವೇಶ್ವರಂ॥

(ಪಾಠಾಂತರ : ೧-೧ ಸುಫಲದಲ್ಲಿ ಸುವರ್ಣಮನೀವ ಯುದ್ಧದೊಳ್.... ಪಮ ಚಿತ್ತದೊಳಪ್ಪುಗೈದು. ೨-೨ ಟವರೆ ವಂದ್ಯರವರ್ಗಳೊಳೀ)

ಇದು ಎಂ. ಎ. ರಾಮಾನುಜೈಯ್ಯಂಗಾರ್ ಆವೃತ್ತಿಯ* (೧೯೨೫) ಪದ್ಯ. ತೀ. ನಂ. ಶ್ರೀ ಸಂಗ್ರಹದಲ್ಲಿ ಈ ಪದ್ಯವಿಲ್ಲ. ಕೆ. ವಿ. ಕೃಷ್ಣಭಟ್ ಆವೃತ್ತಿಯಲ್ಲಿ ಮೇಲಿನ ಪಾಠವೇ ಇದೆ. ಈ ಪದ್ಯದ ಅರ್ಥ ಅಸ್ಪಷ್ಟವೆಂದೂ ಇಲ್ಲಿ ಪುರಾಣಪ್ರಸಿದ್ಧ ನಾಲ್ಕು ಜನರ ಹೆಸರನ್ನು ಕವಿ ಅಧ್ಯಾಹೃತಮಾಡಿದ್ದು, ಅವರು ಯಾರೆಂಬುದನ್ನು ಪತ್ತೆ ಹಚ್ಚಬೇಕೆಂದೂ ನನ್ನ ಪ್ರಾಧ್ಯಾಪಕರು ವಿದ್ಯಾರ್ಥಿಯಾಗಿದ್ದ ನನಗೆ ಹೇಳಿದ ನೆನಪಿದೆ. ಆದರೂ ಈ ಪದ್ಯದ ವಿಷಯವಾಗಿ ನನಗೆ ಸಂದೇಹ ಉಳಿದುಕೊಂಡಿದ್ದಿತು. ಇಲ್ಲಿ ನಾಲ್ಕು ಜನ ಪುರಾಣಪ್ರಸಿದ್ಧ ವ್ಯಕ್ತಿಗಳಲ್ಲ; ನಾಲ್ಕು ಲೋಕಮಾನ್ಯಕ್ರಿಯೆಗಳು ಸೂಚಿತವಾಗಿರಬೇಕೆಂಬ ಅಸ್ಪಷ್ಟ ಅಭಿಪ್ರಾಯ ನನ್ನನ್ನು ಕಾಡುತ್ತಲಿದ್ದಿತು. ಹೀಗಾಗಿ ಇತ್ತೀಚೆಗೆ ಪ್ರೊ. ಪಿ. ಸುಬ್ರಾಯಭಟ್ ಅವರು ಪ್ರಕಟಿಸಿದ 'ಗದಾಯುದ್ಧ ದರ್ಪಣಂ'ದಲ್ಲಿ ಈ ಪದ್ಯಕ್ಕೆ ಹೇಳಿರುವ ಅರ್ಥವನ್ನು ನೋಡುವ ಕುತೂಹಲವುಂಟಾಯಿತು. ಅಲ್ಲಿ "('ಕುಸಿಯದೆ', 'ಸುಱಿಗೊಳ್ಳದೆ' ಎಂಬುದು ಬಹುಶಃ 'ಕುಸಿಯದ', 'ಸೂಱಿಗೊಳ್ಳದ' ಎಂದಿದ್ದಿರಬಹುದೇ? ೧.ಪಸಿದು ಬಂದವರ್ಗಿಕ್ಕುವ, ೨.ಯುದ್ಧದೊಳ್ ಕುಸಿಯದ, ೩.ಸೂಱಿಗೊಳ್ಳದ, ೪.ರಣಕ್ಕೆ ಶುಚಿತ್ವಮನಪ್ಪುಕೆಯ್ವ - ಈ ನಾಲ್ಕು ಬಗೆಯ ಉದಾತ್ತವ್ಯಕ್ತಿಗಳು ಅಭಿವಂದ್ಯರು)" ಎಂದು ಕಂಸಿನಲ್ಲಿ ಭಿನ್ನ ಪಾಠವನ್ನು ಊಹಿಸಿ ಅರ್ಥ ಬರೆದಿರುವರು. ನನ್ನ ಊಹೆ ಇವರಲ್ಲಿ ಕೆಲಮಟ್ಟಿಗೆ ಆಕಾರ ಪಡೆದುದು ನನಗೆ ಸಂತೋಷವನ್ನುಂಟುಮಾಡಿದರೂ ಇವರ ಪಾಠದಲ್ಲಿ ಹೀಗೆ ಕೆಲವು ಸಂದೇಹಗಳಿವೆ:

೧."ಪಸಿವಿನೊಳನ್ನಮಂ ಪಸಿದು ಬಂದವರ್ಗಿಕ್ಕುವ" ಎಂಬಲ್ಲಿ ಒಂದು ಬಗೆಯ ಪುನರುಕ್ತಿದೋಷ ಕಾಣುತ್ತದೆ.

೨."ಯುದ್ಧರಂಗದೊಳ್ ಕುಸಿಯ(ದ) ಸೂಱಿಗೊಳ್ಳ(ದ) ರಣಕ್ಕೆ ಶುಚಿತ್ವಮನಪ್ಪುಕೆಯ್ವ" ಎಂಬಲ್ಲಿಯ ಕುಸಿಯದ ಸೂಱಿಗೊಳ್ಳದ ಕ್ರಿಯೆಗಳು ರಣಕ್ಕೆ ಶುಚಿತ್ವವನ್ನು ತರುವ ಕಾರ್ಯಗಳೇ ಆಗಿರುವುದರಿಂದ ಮತ್ತೆ 'ರಣಕ್ಕೆ ಶುಚಿತ್ವನಪ್ಪುಕೆಯ್ವ' ಎಂದು ಹೇಳಿದುದು ಪುನರುಕ್ತಿಯೆನಿಸುತ್ತದೆ.

೩.ಇಕ್ಕುವ, ಕುಸಿಯ(ದ), ಸೂಱಿಗೊಳ್ಳ(ದ), ಅಪ್ಪುಕೆಯ್ವ ಎಂಬ ನಾಲ್ಕು ಕ್ರಿಯೆಗಳಲ್ಲಿ ಮಧ್ಯದ ಎರಡು ನಿಷೇಧರೂಪವು, ಮಿಕ್ಕವು ಸಾಮಾನ್ಯರೂಪದವು. ಪದ್ಯದ ಶಯ್ಯೆಯಲ್ಲಿ ಈ ಬಗೆಯ ವಿನ್ಯಾಸ ಅಷ್ಟು ಸಮಂಜಸವಾಗುವುದಿಲ್ಲ.

ಈ ಮೂರು ಕಾರಣಗಳಿಂದಾಗಿ ಈ ಪದ್ಯದ ಮೂಲಪಾಠ ಬೇರೆಯಿದೆಯೆಂದೂ ಇದನ್ನು ಇನ್ನೊಮ್ಮೆ ಪರಿಷ್ಕರಣಕ್ಕೆ ಒಡ್ಡುವ ಅವಶ್ಯಕತೆಯಿದೆಯೆಂದೂ ಒಪ್ಪಿಕೊಳ್ಳಬೇಕಾಗುತ್ತದೆ. ಹೀಗಾಗಿ ರಾಮಾನುಜೈಯ್ಯಂಗಾರ್ ಆವೃತ್ತಿಯ ಅಡಿಪಾಠದ ಬಲದಿಂದ ಈ ಪದ್ಯವನ್ನು ಹೀಗೆ ರೂಪಿಸಬಹುದು:

ಪಸಿವಿನೊಳನ್ನಮಂ ಸುಫಲದಲ್ಲಿ ಸುವರ್ಣಮನೀವ ಯುದ್ಧದೊಳ್ ।
ಕುಸಿಯದೆ ಸೂಱಿಗೊಳ್ಳದೆ ರಣಕ್ಕೆ ಸುಚಿತ್ವಮನಪ್ಪುಕೆಯ್ವ ಮಾ ।
ನಸಿಕೆಯ ನಾಲ್ವರುಂ ನಮಗೆ ವಂದ್ಯರವಂದಿರೊಳೀತನಲ್ತೆ ಸಾ ।
ಹಸಧನನೆಂದು ಕೆಮ್ಮಗಿದನಂದಭಿಮನ್ಯುಗೆ ಕೌರವೇಶ್ವರಂ ॥

ಈ ಪದ್ಯದ ಪೂರ್ವಾರ್ಧವನ್ನು "(೧) ಪಸಿವಿನೊಳನ್ನಮಂ (ಈವ), ಸುಫಲದಲ್ಲಿ ಸುವರ್ಣಮಂ+ಈವ, (೨) ಯುದ್ಧದೊಳ್ ಕುಸಿಯದೆ (ರಣಕ್ಕೆ ಶುಚಿತ್ವಮನಪ್ಪುಕೆಯ್ವ), (ಯುದ್ಧದೊಳ್)

ಸೂಜಿಗೊಳ್ಳದೆ ರಣಕ್ಕೆ ಶುಚಿತ್ವಮನಪ್ಪುಕೆಯ್ವ" - ಎಂದು ಬಿಡಿಸಿ ಓದಬೇಕು. ಇಲ್ಲಿ 'ದಾನ'ಕ್ಕೆ ಸಂಬಂಧಪಟ್ಟ ಎರಡು ಕ್ರಿಯೆಗಳ, 'ಯುದ್ಧ'ಕ್ಕೆ ಸಂಬಂಧಪಟ್ಟ ಎರಡು ಕ್ರಿಯೆಗಳ ಸೂಚನೆಯಿದೆ. ತನ್ನ ಹಸಿವೆಯಲ್ಲಿ ಅನ್ನದಾನವನ್ನು,[೧] ತನ್ನ ಅಭ್ಯುದಯದಲ್ಲಿ ಸುವರ್ಣದಾನವನ್ನು ಮಾಡಬೇಕು. ತಾನು ಯುದ್ಧದಲ್ಲಿ ಕುಸಿಯದೆ, ಸೂರೆಯಂಥ ಹೀನಕ್ರಿಯೆಗೆಳಸದೆ 'ರಣಶುಚಿತ್ವ'ವನ್ನು ಕಾಪಾಡಬೇಕು - ಎಂದು ಈ ಪದ್ಯ ಸಾರುತ್ತದೆ. ಇಲ್ಲಿ ಹಸಿವು, ಕುಸಿವುಗಳು ಕೊರತೆಯನ್ನೂ, ಸುಫಲ, ಸೂರೆಗಳು ಸಂಪತ್ತನ್ನೂ ಸೂಚಿಸುತ್ತವೆ. ಎರಡು ಕ್ರಿಯೆಗಳ ಮೊದಲಿನ ವಾಕ್ಯರಚನೆ ಸಾಮಾನ್ಯ ರೂಪದ್ದಾಗಿದ್ದರೆ, ಮತ್ತೆರಡು ಕ್ರಿಯೆಗಳ ಆಮೇಲಿನ ವಾಕ್ಯ ರಚನೆ ನಿಷೇಧಯುಕ್ತ ಸಾಮಾನ್ಯರೂಪದ್ದಾಗಿದೆ.

ನಮ್ಮ ಕಾವ್ಯಮೀಮಾಂಸೆಯಲ್ಲಿ ವೀರರನ್ನು ಧರ್ಮವೀರ, ದಯಾವೀರ, ದಾನವೀರ, ಯುದ್ಧವೀರ ಎಂದು ವಿಭಾಗಿಸಿದ್ದರೂ ೧೦ನೆಯ ಶತಮಾನದ ಕನ್ನಡ ಲೌಕಿಕ ಕೃತಿಗಳಲ್ಲಿ ಪ್ರಧಾನವಾಗಿ ಪ್ರಕಟಗೊಂಡವರು ದಾನವೀರ ಮತ್ತು ಯುದ್ಧವೀರರು. ಇವು ಈ ಕಾಲದ ಜೀವನಮೌಲ್ಯಗಳೇ ಆಗಿದ್ದವು. ಕವಿ ರನ್ನ ಈ ಮೌಲ್ಯಗಳನ್ನು ಬಾಳಿದವರ ಸಾಲಿನಲ್ಲಿ ಅಭಿಮನ್ಯುವನ್ನು ಪರಿಗಣಿಸಿದ್ದಾನೆ. ಇಲ್ಲಿ ದುರ್ಯೋಧನ ಕೈಮುಗಿದುದು ಆತನ ಮಹಾನುಭಾವತೆಯ ದ್ಯೋತಕವಾಗಿದ್ದರೂ ಯುದ್ಧದಲ್ಲಿ ಮರಣ ಹೊಂದಿದವನಿಗೆ ನಮಸ್ಕರಿಸುವುದು (ಆತನ ರಕ್ತವನ್ನು ಹಣೆಗೆ ಹಚ್ಚಿಕೊಳ್ಳುವುದು) ಆ ಕಾಲದ ಆಚರಣೆಯಾಗಿದ್ದಿತೆಂಬುದನ್ನು ಮರೆಯಬಾರದು.[೨] ಈ ಪದ್ಯದ ಒಟ್ಟು ಅರ್ಥ ಹೀಗಿದೆ:

(ತನ್ನ) ಹಸಿವೆಯಲ್ಲಿ ಅನ್ನವನ್ನು, (ತನ್ನ) ಅಭ್ಯುದಯದಲ್ಲಿ[೩] ಸುವರ್ಣವನ್ನು ದಾನಮಾಡುವ ಮತ್ತು ಯುದ್ಧದಲ್ಲಿ ಹಿಂಜರಿಯದೆ, ಸೂರೆಮಾಡದೆ 'ರಣಶುಚಿತ್ವ'ವನ್ನು ಪಾಲಿಸುವ ಮನೋಧರ್ಮದ ಈ ನಾಲ್ಕು ಬಗೆಯ ಜನರು ವಂದ್ಯರು. ಅಂಥವರಲ್ಲಿ ಸಾಹಸಧನನಾದ ಈತನೂ ಒಬ್ಬನಲ್ಲವೇ? ಎಂದು ಅಭಿಮನ್ಯುವಿಗೆ ದುರ್ಯೋಧನನು ಕೈಮುಗಿದನು.[೪]

■■

ಆಕರ : ಮಾರ್ಗ ಸಂಪುಟ–೧

---

೧. 'ಇನ್ನೊಬ್ಬರು ಹಸಿದಿರುವಾಗ' ಎಂದು ಅರ್ಥ ಮಾಡಬಹುದಾದರೂ 'ತಾನು ಹಸಿದಿರುವಾಗ' ಎಂದು ಅರ್ಥ ಮಾಡುವುದು ಹೆಚ್ಚು ಯೋಗ್ಯವಾದುದು. ಪಿ. ಸುಬ್ರಾಯ ಭಟ್ ಅವರು ಹೀಗೆಯೇ ಅರ್ಥಮಾಡಿದ್ದಾರೆ.

೨. ಆತ್ಮಬಲಿದಾನ : ಬ್ರಹ್ಮಶಿವನ ವಿಚಾರಗಳು (ಪ್ರಬುದ್ಧ ಕರ್ನಾಟಕ ೫೬-೧) ನೋಡಿರಿ.

೩. 'ಸುಫಲ' ಪದಕ್ಕೆ ಇಲ್ಲಿ 'ಅಭ್ಯುದಯ' ಎಂದು ಅರ್ಥಮಾಡಿದ್ದರೂ ಬೇರೆ ಅರ್ಥಕ್ಕೆ ಅವಕಾಶವಿರಬಹುದು.

೪. ಈ ಲೇಖನವನ್ನು ಬರೆಯುವಲ್ಲಿ ಚರ್ಚೆಯ ಮೂಲಕ ನೆರವಾದ ಡಾ. ಕೆ. ಕೃಷ್ಣಮೂರ್ತಿ ಅವರಿಗೆ ಕೃತಜ್ಞತೆಗಳು.

೭

ರನ್ನನ ಒಂದು ಪದ್ಯದ ಅರ್ಥಸಮಸ್ಯೆ

ಗದಾಯುದ್ಧಕ್ಕೆ ಸಂಬಂಧಪಟ್ಟ ಒಂದು ಪದ್ಯದ ಪಾಠಸಮಸ್ಯೆಯನ್ನು ಕುರಿತು ನಾನು ಬರೆದ ಲೇಖನಕ್ಕೆ ಶ್ರೀ. ಸು.ಕೃಷ್ಣ ಮತ್ತು ಡಾ. ಎಂ. ಚಿದಾನಂದಮೂರ್ತಿ ಪ್ರತಿಕ್ರಿಯೆ ರೂಪದ ಲೇಖನ ಬರೆದಿದ್ದಾರೆ. ಡಾ. ಮೂರ್ತಿ ಅವರು ಸಣ್ಣ ಪಾಠಸಮಸ್ಯೆಯನ್ನು ಬಿಡಿಸುತ್ತಲೇ ಸೃಷ್ಟಿಸಿರುವ ದೊಡ್ಡ ಅರ್ಥಸಮಸ್ಯೆಯನ್ನು ಇಲ್ಲಿ ವಿವೇಚಿಸುತ್ತೇನೆ.

ಡಾ. ಎಂ. ಎಂ. ಕಲಬುರ್ಗಿ ಅವರ ಪರಿಷ್ಕರಣ:

ಪಸಿವಿನೊಳನ್ನಮಂ ಸುಫಲದಲ್ಲಿ ಸುವರ್ಣಮನೀವ ಯುದ್ಧದೊಳ್
ಕುಸಿಯದೆ ಸೂರೆಗೊಳ್ಳದೆ ರಣಕ್ಕೆ ಶುಚಿತ್ವಮನಪ್ಪುಕೆಯ್ವ ಮಾ
ನಸಿಕೆಯ ನಾಲ್ವರುಂ ನಮಗೆ ವಂದ್ಯರವಂದಿರೊಳೀತನಲ್ತೆ ಸಾ
ಹಸಧನನೆಂದು ಕೆಯ್ಮುಗಿದನಂದಭಿಮನ್ಯುಗೆ ಕೌರವೇಶ್ವರಂ॥

ಅರ್ಥ: (ತನ್ನ) ಹಸಿವೆಯಲ್ಲಿ ಅನ್ನವನ್ನು, (ತನ್ನ) ಅಭ್ಯುದಯದಲ್ಲಿ ಸುವರ್ಣವನ್ನು ದಾನಮಾಡುವ ಮತ್ತು ಯುದ್ಧದಲ್ಲಿ ಹಿಂಜರಿಯದೆ, ಸೂರೆಮಾಡದೆ 'ರಣಶುಚಿತ್ವ'ವನ್ನು ಪಾಲಿಸುವ ಮನೋಧರ್ಮದ ಈ ನಾಲ್ಕು ಬಗೆಯ ಜನರು ನಮಗೆ ವಂದ್ಯರು. ಅಂಥವರಲ್ಲಿ ಸಾಹಸಧನನಾದ ಈತನೂ ಒಬ್ಬನಲ್ಲವೆ? ಎಂದು ಅಭಿಮನ್ಯುವಿಗೆ ದುರ್ಯೋಧನನು ಕೈಮುಗಿದನು.

ಡಾ. ಎಂ. ಚಿದಾನಂದಮೂರ್ತಿ ಅವರ ಪರಿಷ್ಕರಣ:

ಪಸವಿನೊಳನ್ನಮಂ ಸುಫಲದಲ್ಲಿ ಸುವರ್ಣಮನೀವ ಯುದ್ಧದೊಳ್
ಕುಸಿಯದೆ ಸೊರೆಗೊಳ್ಳದೆ ರಣಕ್ಕೆ ಶುಚಿತ್ವಮನಪ್ಪುಕೆಯ್ವ ಮಾ
ನಸಿಕೆಯ ನಾಲ್ವರುಂಟವರೆ ವಂದ್ಯರವಂದಿರೊಳೀತನಲ್ತೆ ಸಾ
ಹಸಧನನೆಂದು ಕೆಮ್ಮುಗಿದನಂದಭಿಮನ್ಯುಗೆ ಕೌರವೇಶ್ವರಂ॥

ಡಾ. ಎಂ. ಎಂ. ಕಲಬುರ್ಗಿ : ಗದಾಯುದ್ಧದ ಒಂದು ಪದ್ಯ (ಕ.ಸಾ.ಪ. ೬೫-೧ ಮತ್ತು ೨)
ಶ್ರೀ ಸು. ಕೃಷ್ಣ : ಗದಾಯುದ್ಧದ ಒಂದು ಪದ್ಯ.... ಒಂದು ಪ್ರತಿಕ್ರಿಯೆ (ಕ.ಸಾ. ಪ. ೬೬-೧).
ಡಾ. ಎಂ. ಚಿದಾನಂದಮೂರ್ತಿ : ಆಸ್ವಾದ (ಪು. ೩೭೨. ಪ್ರೊ. ಎಂ. ವಿ. ಸೀತಾರಾಮಯ್ಯ ಅಭಿನಂದನ ಗ್ರಂಥ).

ಅರ್ಥ: ಕ್ಷಾಮದಲ್ಲಿ ಅನ್ನವನ್ನೂ ಸುಫಲದ ಕಾಲದಲ್ಲಿ ಚಿನ್ನವನ್ನೂ ದಾನಮಾಡುವ, (ಯುದ್ಧದಲ್ಲಿ) ಕುಸಿಯದೆ (ಇರುವ), (ಯುದ್ಧದಲ್ಲಿ)ಸೂರೆಮಾಡದೆ (ಇರುವ), ಯುದ್ಧಕ್ಕೆ ಸಂಬಂಧಿಸಿದಂತೆ ಶೌಚಗುಣವನ್ನು (ಇಂದ್ರಿಯ ಸಂಯಮವನ್ನು) ಪರಿಪಾಲಿಸುವ -ಉದಾತ್ತತೆಯ ನಾಲ್ಕು ಜನರೂ ವಂದ್ಯರು. ಅವರಲ್ಲಿ ಈತನೇ ಅಲ್ಲವೆ ಸಾಹಸಧನನು - ಎಂದು ಕೌರವೇಶ್ವರನಾದ ದುರ್ಯೋಧನನು ಅಂದು ಅಭಿಮನ್ಯುವಿಗೆ ಕೈಮುಗಿದನು.

* * *

ಇಲ್ಲಿ ಡಾ. ಮೂರ್ತಿಯವರು ಸ್ವೀಕರಿಸಿದ 'ನಾಲ್ವರುಂಟವರೆ' ಎಂಬ ಪಾಠ ಗಮನಾರ್ಹವಾದುದೇನಲ್ಲ. ಅದರ ಚರ್ಚೆಯನ್ನು ಕೈಬಿಡಬಹುದು. ಆದರೆ ಬೇರೆ ಪಾಠಗಳೇ ಇಲ್ಲದ ಕಾರಣ ನಾನು ಗ್ರಹಿಸಿದ್ದ ಏಕೈಕ ಪಾಠವಾದ 'ಪಸಿವು' ಅರ್ಥ ಕೊಡುತ್ತಿದ್ದರೂ, ಡಾ. ಮೂರ್ತಿ ಊಹಿಸಿದ 'ಪಸವು' ಇನ್ನೂ ಒಳ್ಳೆಯ ಪಾಠ, ಬಹುಶಃ ಮೂಲಪಾಠವೆಂದು ಒಪ್ಪಿಕೊಳ್ಳುತ್ತೇನೆ. ಆದರೆ ಈ ಪದ್ಯದಲ್ಲಿಯ 'ಶುಚಿತ್ವ' ಪದಪ್ರಯೋಗಕ್ಕೆ ಆಕರ್ಷಿತರಾಗಿ (ಹಳಗನ್ನಡ ಕಾವ್ಯಗಳನ್ನು ಸಂಸ್ಕೃತಿ ದೃಷ್ಟಿಯಿಂದ ಓದಿದವರನ್ನು ಆ ಪದ ಆಕರ್ಷಿಸುವುದು ಸಹಜ), ಅದಕ್ಕೂ ೂಲ್ಕು ಕ್ರಿಯೆಗಳಲ್ಲಿ ಒಂದು ಸ್ವತಂತ್ರ ಸ್ಥಾನಕೊಡಲು ತವಕಿಸಿದ ಕಾರಣ ಡಾ. ಮೂರ್ತಿ ಅವರು ಈ ಪದ್ಯಕ್ಕೆ ಹೇಳಿದ ಅನ್ವಯ, ಅರ್ಥಗಳು ಅಸ್ತವ್ಯಸ್ತದಲ್ಲಿ ಪರ್ಯವಸಾನಗೊಂಡಿವೆ. ಡಾ. ಮೂರ್ತಿ ಹೇಳುವಂತೆ "ಕ್ಷಾಮಕಾಲದಲ್ಲಿ ಅನ್ನವನ್ನೂ ಸುಫಲದ ಕಾಲದಲ್ಲಿ ಚಿನ್ನವನ್ನೂ ದಾನಮಾಡುವ" ಎಂಬ ಅರ್ಥ ಹೊರಡಬೇಕಾದರೆ ಸಮುಚ್ಚಯವಿಧಿಯನ್ವಯ "ಪಸವಿನೊಳನ್ನಮುಮಂ ಸುಫಲದಲ್ಲಿ ಸುವರ್ಣಮುಮನೀವ" ಎಂಬ ಪಾಠವಿರಬೇಕಾಗುತ್ತದೆ. ಇಲ್ಲಿ ಅಂಥ ಪಾಠವಿಲ್ಲ. ಆದುದರಿಂದ ಡಾ. ಮೂರ್ತಿ ಅವರಂತೆ ಇಲ್ಲಿಯ ಎರಡೂ ಕ್ರಿಯೆಗಳನ್ನು ಒಂದಾಗಿ ಭಾವಿಸದೆ ನಾನು ಹೇಳಿದಂತೆ ಎರಡಾಗಿ ಭಾವಿಸುವುದೇ ಯೋಗ್ಯವೆನಿಸುತ್ತದೆ.

ಈ ಪದ್ಯದಲ್ಲಿ ಒಟ್ಟು ನಾಲ್ಕು ಕ್ರಿಯೆಗಳಿವೆ. ಡಾ. ಮೂರ್ತಿ ಅವರು ಪ್ರಾರಂಭದ ಎರಡು ಕ್ರಿಯೆಗಳನ್ನು ಒಂದನ್ನಾಗಿ ಭಾವಿಸಿದುದರಿಂದ ಮುಂದೆ ಮೂರು ಕ್ರಿಯೆಗಳನ್ನು ಹುಡುಕುವುದು ಅವರಿಗೆ ಅನಿವಾರ್ಯವಾಗಿದೆ. ಮೇಲಾಗಿ 'ಶುಚಿ' ಎಂಬುದೂ ಅವರನ್ನು ಬಲವಾಗಿ ಆಕರ್ಷಿಸಿದೆ. ಆಗ "ಯುದ್ಧದೊಳ್ ಕುಸಿಯದೆ ಸೂಱೆಗೊಳ್ಳದೆ ರಣಕ್ಕೆ ಶುಚಿತ್ವಮನಪ್ಪುಕೆಯ್ವ" ಎಂಬ ಪಾಠದಿಂದ "ಯುದ್ಧದಲ್ಲಿ ಕುಸಿಯದೆ (ಇರುವ), (ಯುದ್ಧದಲ್ಲಿ) ಸೂರೆಮಾಡದೆ (ಇರುವ), ಯುದ್ಧಕ್ಕೆ ಸಂಬಂಧಿಸಿದಂತೆ ಶೌಚಗುಣವನ್ನು...... ಪರಿಪಾಲಿಸುವ" ಎಂಬ ಮೂರು ಕ್ರಿಯೆಗಳ ಅರ್ಥ ಹೊರಡಿಸಿಕೊಂಡಿದ್ದಾರೆ. ತಮ್ಮ ನೇರಕ್ಕೇ ಅರ್ಥಮಾಡಲು ಹೋದ ಕಾರಣ ಮೂಲದಲ್ಲಿ ಕಾಣದ 'ಇರುವ' ಎಂಬ ಕ್ರಿಯಾಪದಗಳನ್ನು ಅವರು ಹೊಸದಾಗಿ ಸೇರಿಸಬೇಕಾಯಿತು. ಇಲ್ಲಿ ಅವರ ಅರ್ಥಾನುಸರಣೆ ವ್ಯಾಕರಣಕ್ಕೆ ಮಾನ್ಯವೆನಿಸುವುದಿಲ್ಲ. ಒಂದು ವೇಳೆ ಮಾನ್ಯವೆನಿಸಬೇಕಿದ್ದರೆ "ಯುದ್ಧದೊಳ್ ಕುಸಿಯದ, ಸೂಱೆಗೊಳ್ಳದ, ರಣಕ್ಕೆ ಶುಚಿತ್ವಮನಪ್ಪುಕೆಯ್ವ" ಎಂಬ ಪಾಠ ಇರಬೇಕಾಗುತ್ತದೆ. (ಹೀಗೆ ಇದ್ದರೂ ಮೊದಲಿನ ಎರಡು ನಿಷೇಧಾತ್ಮಕ ಕ್ರಿಯಾಪದ, ಕೊನೆಯದು ಸಾಮಾನ್ಯ ಕ್ರಿಯಾಪದ ಎಂಬ ದೋಷ ಉಳಿಯುತ್ತಿತ್ತು; ಆ ಮಾತು ಬೇರೆ). ತಮ್ಮ ಈ ಅರ್ಥಹಚ್ಚುವಿಕೆಯಲ್ಲಿ ಒಂದು ಬಗೆಯ ದೋಷ ಉಳಿದುಕೊಳ್ಳುತ್ತದೆ ಎಂಬ ಅಂಶ ಡಾ. ಮೂರ್ತಿ ಅವರನ್ನು ಕಾಡಿದೆ. ಹೀಗಾಗಿ ಅಡಿಟಿಪ್ಪಣಿಯಲ್ಲಿ "ಈ ತಿದ್ದುಪಾಟವನ್ನು ಪ್ರೊ. ಎಂ. ವಿ. ಸೀತಾರಾಮಯ್ಯನವರೂ ಅನುಮೋದಿಸುತ್ತಾರೆ (ಅವರೊಡನೆ ಈ ಪದ್ಯದ ಬಗ್ಗೆ ಒಮ್ಮೆ ನಾನು ನಡೆಸಿದ ಚರ್ಚೆಯಲ್ಲಿ)" ಎಂದು ಪ್ರೊ. ಸೀತಾರಾಮಯ್ಯನವರ ನೆರವು ಪಡೆಯಲು ಹೋದುದೇ ಈ ಅನ್ವಯದ ಬಗೆಗಿರುವ ಅವರ ಅಧೀರ ಮನಸ್ಸನ್ನು ಸೂಚಿಸುತ್ತದೆ. ಆದುದರಿಂದ 'ಪಸಿವು'

ಪದಕ್ಕೆ ಬದಲು ಸೂಚಿಸಿದ 'ಪಸವು' ಬಿಟ್ಟರೆ ಡಾ.ಮೂರ್ತಿ ಅವರು ಹೊಸದನ್ನೇನೂ ತಮ್ಮ ಲೇಖನದಲ್ಲಿ ಹೇಳಿಲ್ಲ; ತಪ್ಪು ಅನ್ವಯ ಮಾಡಿ ಇಡೀ ಅರ್ಥವನ್ನೇ ತಪ್ಪು ದಾರಿಗೆ ಎಳೆದಿದ್ದಾರೆ. ಹೀಗಾಗಿ ಅವರ ಲೇಖನದ ಬಹುಭಾಗವನ್ನು ಕೈಬಿಟ್ಟು 'ಪಸವು' ಎಂಬ ಪಾಠವನ್ನು ಮಾತ್ರ ಒಪ್ಪಿಕೊಂಡು,ನನ್ನ ಮೊದಲಿನ ಅರ್ಥವನ್ನೇ ಮತ್ತೆ ಹೀಗೆ ಸ್ಪಷ್ಟಪಡಿಸುತ್ತೇನೆ.

"೧. ದುರ್ಭಿಕ್ಷದಲ್ಲಿ ಅನ್ನವನ್ನು, ೨. ಸುಭಿಕ್ಷದಲ್ಲಿ ಸುವರ್ಣವನ್ನು 'ದಾನ' ಮಾಡುವ, ೩. ಯುದ್ಧದಲ್ಲಿ ಹಿಂಜರಿಯದೆ, ೪. ಸೂರೆಮಾಡದೆ ರಣ 'ಶುಚಿತ್ವ'ವನ್ನು ಪಾಲಿಸುವ ಮನೋಧರ್ಮದ ಈ ನಾಲ್ಕು ಬಗೆಯ ಜನರು ನಮಗೆ ವಂದ್ಯರು. ಅಂಥವರಲ್ಲಿ ಸಾಹಸಧನನಾದ ಈತನೂ ಒಬ್ಬನಲ್ಲವೆ? ಎಂದು ಅಭಿಮನ್ಯುವಿಗೆ ದುರ್ಯೋಧನನು ಕೈಮುಗಿದನು.

■■

ಆಕರ : ಮಾರ್ಗ ಸಂಪುಟ–೧

೮

ಶಾಸ್ತ್ರಕಾವ್ಯ-ಶ್ಲೇಷಕಾವ್ಯ-ಸಮಸ್ತಕಾವ್ಯ

ವಾಙ್ಮಯವನ್ನು ಶಾಸ್ತ್ರ ಮತ್ತು ಕಾವ್ಯವೆಂದು, ಕಾವ್ಯವನ್ನು ಪುರಾಣಕಾವ್ಯ ಮತ್ತು ಚರಿತ್ರಕಾವ್ಯವೆಂದು ವರ್ಗೀಕರಿಸಬಹುದಾಗಿದ್ದು, ಈ ಮೂರು (ಶಾಸ್ತ್ರ, ಪುರಾಣ, ಚರಿತ್ರೆ) ಸ್ವತಂತ್ರ ಸಾಹಿತ್ಯ ಪ್ರಕಾರಗಳಾಗಿ ಭರತಖಂಡದಲ್ಲಿ ಬೆಳೆದುಬಂದಿವೆ. ಜೊತೆಗೆ ಈ ಮೂರರಲ್ಲಿ ಯಾವುದೇ ಎರಡನ್ನು ಸಮನ್ವಯಗೊಳಿಸಿದ ಮಿಶ್ರಕಾವ್ಯ ಪ್ರಯೋಗಗಳೂ ಹೀಗೆ ಬೆಳೆದು ಬಂದಿವೆ: ಶಾಸ್ತ್ರ+ಪುರಾಣ, ಶಾಸ್ತ್ರ+ಚರಿತ್ರೆ, ಪುರಾಣ+ಪುರಾಣ, ಪುರಾಣ+ ಚರಿತ್ರೆ. ಈ ಮಿಶ್ರಣದಿಂದಾಗಿ ಬೆಳೆದುಬಂದ ಮಿಶ್ರಕಾವ್ಯ ಪ್ರಕಾರಗಳ್ನು ತಂತ್ರದೃಷ್ಟಿಯಿಂದ ೧. ಶಾಸ್ತ್ರಕಾವ್ಯ (ಶಾಸ್ತ್ರ+ಪುರಾಣ, ಶಾಸ್ತ್ರ+ಚರಿತ್ರೆ), ೨. ಶ್ಲೇಷಕಾವ್ಯ (ಪುರಾಣ+ಪುರಾಣ, ಪುರಾಣ+ಚರಿತ್ರೆ), ೩. ಸಮಸ್ತಕಾವ್ಯ (ಪುರಾಣ+ಚರಿತ್ರೆ)ವೆಂದು ವರ್ಗೀಕರಿಸಬಹುದು. ಇವುಗಳಲ್ಲಿ ಪುರಾಣ ಮತ್ತು ಚರಿತ್ರೆಗಳನ್ನು ಸಮನ್ವಯಗೊಳಿಸಿಕೊಂಡ ಪಂಪಭಾರತ ಸಮಸ್ತಕಾವ್ಯ ವರ್ಗಕ್ಕೆ ಸೇರುತ್ತದೆ. ಇದಕ್ಕೂ ಪೂರ್ವದಲ್ಲಿ ಶಾಸ್ತ್ರಕಾವ್ಯ, ಶ್ಲೇಷಕಾವ್ಯಗಳ ಪ್ರಬುದ್ಧ ಪ್ರಯೋಗಗಳು ನಡೆದುದು ಪಂಪನಿಗೆ ಗೊತ್ತಿದೆ. ಬಹುಶಃ ಗಂಗ ಅರಸು ಎರೆಯಪ್ಪನನ್ನು ಶೂದ್ರಕ ಮಹಾರಾಜನೊಂದಿಗೆ ಸಮೀಕರಿಸಿ ಬರೆದಿರಬಹುದಾದ ಗುಣವರ್ಮನ 'ಶೂದ್ರಕ'ಹೆಸರಿನ ಸಮಸ್ತ ಕಾವ್ಯವೂ ಪಂಪನ ಕಣ್ಣು ಮುಂದಿದೆ. ಈ ಎಲ್ಲ ಪ್ರಯೋಗಗಳನ್ನು ವಿವೇಚಿಸುತ್ತ, ಇವುಗಳ ಹಿನ್ನೆಲೆಯಲ್ಲಿ ಮಾಡಿದ ಪಂಪನ 'ಸಮಸ್ತಕಾವ್ಯ' ರಚನಾ ಪ್ರಯತ್ನವನ್ನು ಪರೀಕ್ಷಿಸಿ ಬೆಲೆ ಕಟ್ಟುವುದು, ಈ ಲೇಖನದ ಉದ್ದೇಶ.

ಶಾಸ್ತ್ರಕಾವ್ಯ :

ಶಾಸ್ತ್ರವನ್ನು ಬರೆಯುವ ಸಂದರ್ಭದಲ್ಲಿ ಮೇಲೆ ಸೂತ್ರಗಳನ್ನು ಹೇಳಿ, ಪ್ರಯೋಗಗಳಿಗಾಗಿ ಪೌರಾಣಿಕ ವ್ಯಕ್ತಿ ಇಲ್ಲವೆ ಚಾರಿತ್ರಿಕ ವ್ಯಕ್ತಿಗಳಿಗೆ ಸಂಬಂಧಿಸಿದ ಪದ್ಯಗಳನ್ನು ರಚಿಸುವುದು ಈ ಕಾವ್ಯದ ಉದ್ದೇಶ. ಇದರಿಂದಾಗಿ ಏಕಕಾಲಕ್ಕೆ ಶಾಸ್ತ್ರವನ್ನೂ, ಕಾವ್ಯವನ್ನೂ ರಚಿಸಿದ ಲಾಭ ಪ್ರಾಪ್ತವಾಗುತ್ತದೆ. ಒಂದು ಪರಂಪರೆಯಾಗಿ ಬೆಳೆದುಬಂದ ಈ ಬಗೆಯ ಸಾಹಿತ್ಯದಲ್ಲಿ ಎರಡು ಪ್ರಭೇದಗಳನ್ನು ಗುರುತಿಸಬಹುದು. ವ್ಯಾಕರಣ ಅಲಂಕಾರಗಳಂಥ ಯಾವುದೇ ಶಾಸ್ತ್ರವನ್ನು ನಿರೂಪಿಸುತ್ತ, ಪ್ರಯೋಗಗಳಿಗಾಗಿ 'ಪುರಾಣಕಥೆ'ಗೆ ಸಂಬಂಧಿಸಿದ ಪದ್ಯಗಳನ್ನೇ ರಚಿಸುತ್ತ ಹೋಗುವುದು ಒಂದು ಪ್ರಭೇದವಾದರೆ, ಪ್ರಯೋಗಗಳಿಗಾಗಿ ಆಶ್ರಯ ನೀಡಿದ ಅರಸನ ಚರಿತ್ರೆಗೆ ಸಂಬಂಧಿಸಿದ ಪದ್ಯಗಳನ್ನೇ ರಚಿಸುತ್ತ ಹೋಗುವುದು ಇನ್ನೊಂದು ಪ್ರಭೇದವಾಗಿದೆ. ಈ ಎರಡೂ ವಿಧಗಳಲ್ಲಿ ಸಮಗ್ರಕಥೆಯನ್ನು ಸೂತ್ರ ಕಡಿದುಹೋಗದಂತೆ ಹೆಣೆಯಬಹುದು. ಇಲ್ಲವೆ ಕಥಾಸಮಗ್ರತೆಯ ಕಡೆಗೆ ಗಮನ ಕೊಡದೆ ಕೇವಲ ಬಿಡಿಪದ್ಯಗಳನ್ನು ರಚಿಸಬಹುದು.

ಭಟ್ಟಿಯ ರಾವಣವಧ ಕೃತಿಯು ರಾಮಾಯಣಕಥೆಯಾದರೂ ಅಲಂಕಾರ ವ್ಯಾಕರಣ ನಿರೂಪಣೆ ಇದರ ವಸ್ತು. ಭಟ್ಟ ಭೀಮನ ರಾವಣಾರ್ಜುನೀಯವು ರಾವಣ ಮತ್ತು ಕಾರ್ತವೀರಾರ್ಜುನರ ಕಥೆಯನ್ನು ಹೇಳುತ್ತಿದ್ದರೂ ಇದು ಪಾಣಿನಿಯ ಅಷ್ಟಾಧ್ಯಾಯಿಯನ್ನು ಕುರಿತುದಾಗಿದೆ. ಪುರಾಣಕಥೆಯನ್ನಾಧರಿಸಿದ ಇಂಥ ಅನೇಕ ಶಾಸ್ತ್ರಗ್ರಂಥಗಳು ಸಂಸ್ಕೃತದಲ್ಲಿ ಹುಟ್ಟಿಕೊಂಡು ಬಂದಿವೆ. ಇವೆಲ್ಲ ಪುರಾಣಕಥೆಯನ್ನಾಧರಿಸಿ ಬರೆದ ಶಾಸ್ತ್ರಕಾವ್ಯಗಳು.

ಬರುಬರುತ್ತ ಪುರಾಣಕಥೆಗಳಿಗೆ ಬದಲು ರಾಜಚರಿತ್ರೆಗಳನ್ನು ವಸ್ತುವಾಗಿಟ್ಟುಕೊಂಡು ಇಂಥ ಶಾಸ್ತ್ರಕೃತಿಗಳನ್ನು ಬರೆಯುವ ಪದ್ಧತಿ ನಮ್ಮ ದೇಶದಲ್ಲಿ ತಲೆಯೆತ್ತಿತು. ಏಕಕಾಲಕ್ಕೆ ಶಾಸ್ತ್ರವನ್ನೂ ರಾಜನ ಚರಿತ್ರೆಯನ್ನೂ ಪ್ರತಿಪಾದಿಸುವ ಸಾಹಿತ್ಯ ಪ್ರಕಾರವಿದು. ಇಂಥ ಕೃತಿಗಳಲ್ಲಿ ಹಲಾಯುಧನ 'ಕವಿರಹಸ್ಯ' ಮುಖ್ಯವಾದುದು. ಕ್ರಿಯಾಪದ ರೂಪಗಳನ್ನು ಪ್ರತಿಪಾದಿಸುವ ವ್ಯಾಕರಣವಾಗಿರುವ ಇದು, ರಾಷ್ಟ್ರಕೂಟ ಮೂರನೆಯ ಕೃಷ್ಣನ (೯೪೦-೫೬) ಪ್ರಶಂಸಾಪರ ಪದ್ಯಗಳನ್ನು ಉದಾಹರಣೆಗಾಗಿ ಬಳಸಿದೆ. ಹೇಮಚಂದ್ರನ 'ಕುಮಾರಪಾಲಚರಿತ'ವು ಹೆಸರೇ ಸೂಚಿಸಿದಂತೆ ಅಣಹಿಲವಾಡ ದೇಶದ ಕುಮಾರಪಾಲನ ಚರಿತ್ರೆಯೇ ಆಗಿದ್ದು, ಇದು ಸಂಸ್ಕೃತ ವ್ಯಾಕರಣ, ಪ್ರಾಕೃತ ವ್ಯಾಕರಣ ಪ್ರಕ್ರಿಯೆಗಳನ್ನು ವಿವರಿಸುವ ಕೃತಿಯಾಗಿದೆ. ಕನ್ನಡದಲ್ಲಿ ಕವಿರಾಜಮಾರ್ಗ (ಇದಕ್ಕೆ ನೃಪತುಂಗಾಭ್ಯುದಯ ಎಂಬ ಇನ್ನೊಂದು ಹೆಸರೂ ಇರುವುದನ್ನು ನಾನು ಬೇರೆಡೆ ತೋರಿಸಿಕೊಟ್ಟಿದ್ದೇನೆ)[೧] ಈ ಸಂಪ್ರದಾಯದ ಕೃತಿಯೆಂದು ಹೇಳಬಹುದು. ಅಲಂಕಾರ ಗ್ರಂಥವಾದ ಇದರಲ್ಲಿ ಉದಾಹರಣೆಗಾಗಿ ನೃಪತುಂಗನ ಪ್ರಶಂಸಾಪದ್ಯಗಳಿರುವುದನ್ನು ಗಮನಿಸಬೇಕು. ಪೊನ್ನನು ಅಲಂಕಾರ ಗ್ರಂಥ ಬರೆದಿರುವನೆಂದು ಕವಿಚರಿತೆಕಾರರು ಹೇಳುವುದರಿಂದಲೂ, ನೃಪತುಂಗಾಭ್ಯುದಯ ಮಾದರಿಯಲ್ಲಿ ಇವನ ಕೃತಿಗೆ ಭುವನೈಕರಾಮಾಭ್ಯುದಯ ಎಂಬ ಹೆಸರಿರುವುದರಿಂದಲೂ ಈತನ ಅನುಪಲಬ್ಧ ಭುವನೈಕರಾಮಾಭ್ಯುದಯವೂ ಒಂದು ಶಾಸ್ತ್ರಕಾವ್ಯವಾಗಿರಬಹುದೇ? ಇದಕ್ಕೆ ರಾಷ್ಟ್ರಕೂಟ ಮೂರನೆಯ ಕೃಷ್ಣನ ವರ್ಣನಪರ ಉದಾಹರಣೆಗಳನ್ನು ಬಳಸಿರಬಹುದೆ? ಎನಿಸುತ್ತದೆ. ಕನ್ನಡದಲ್ಲಿ ಅಪ್ರತಿಮವೀರಚರಿತೆ, ನರಪತಿಚರಿತೆಗಳು ಈ ಮಾದರಿಯ ಇತರ ಶಾಸ್ತ್ರಕೃತಿಗಳಾಗಿವೆ.

ಒಂದು ವೇಳೆ ಈ ಪ್ರಯೋಗವು ಬಿಡಿಪದ್ಯರಚನಾ ಪದ್ಧತಿಯದಾಗಿದ್ದರೆ, ಇಲ್ಲಿ ಕವಿಗೆ ಅರಸನ ಉದಾತ್ತ ಘಟನೆಗಳನ್ನು ಚಿತ್ರಿಸುವ ಸ್ವಾತಂತ್ರ್ಯವಿರುತ್ತದೆ. ಅದೇ ರೀತಿ ಸಮಗ್ರ ಕಥಾಪದ್ಧತಿಯಾಗಿದ್ದರೆ ಇಲ್ಲಿ ಉದಾತ್ತ ಚಾರಿತ್ರಿಕ ಅಂಶಗಳನ್ನು ಮಾತ್ರ ಹೆಣೆದುಕೊಂಡು ಹೋಗುವ ಸ್ವಾತಂತ್ರ್ಯವಿರುತ್ತದೆ. ಅದೇನೇ ಇದ್ದರೂ ಶಾಸ್ತ್ರಕೃತಿಯಲ್ಲಿ ಅರಸನನ್ನು ತಳುಕುಹಾಕಿಕೊಂಡು ಹೋಗುವ ಸ್ಪಷ್ಟ ಪ್ರಯತ್ನವನ್ನು ಪ್ರಾಚೀನಕಾಲದಲ್ಲಿ ಕಾಣಬಹುದಾಗಿದೆ.

ಶ್ಲೇಷಕಾವ್ಯ:

ಇದು ಶ್ಲೇಷೆಯ ಮೂಲಕ ಏಕಕಾಲಕ್ಕೆ ಒಂದಕ್ಕಿಂತ ಹೆಚ್ಚು ಕಥೆಗಳನ್ನು ಮೇಳವಿಸಿಕೊಂಡು ಮುನ್ನಡೆವ ಕಾವ್ಯಪ್ರಯೋಗ. ಶಾಸ್ತ್ರಕಾವ್ಯದಂತೆ ಒಂದು ಪ್ರಯೋಗವಾಗಿರುವ ಇದು ಪ್ರತಿಭೆಯ ಜೊತೆ ಪಾಂಡಿತ್ಯವನ್ನೂ ಬಯಸುತ್ತದೆ. ರಾಮಾಯಣಕಥೆ ಮತ್ತು ಮಹಾಭಾರತ ಕಥೆಗಳನ್ನೊಳಗೊಂಡ ಧನಂಜಯನ (೧೧೨೩-೪೦) ರಾಘವಪಾಂಡವೀಯ, ರಾಮಕಥಾ ಮತ್ತು ನಳಕಥಾನಕಗಳನ್ನೊಳಗೊಂಡ ಹರಿದತ್ತಸೂರಿಯ ರಾಘವನೈಷಧೀಯ,

---

೧. ನೃಪತುಂಗಾಭ್ಯುದಯ (ಕರ್ನಾಟಕ ಭಾರತಿ ೧೦-೩)

ಪಾರ್ವತೀಪರಮೇಶ್ವರನ ಮತ್ತು ರುಕ್ಮಿಣೀಕೃಷ್ಣರ ವಿವಾಹಗಳನ್ನು ವರ್ಣಿಸುವ ಚಾಲುಕ್ಯ ಸೋಮದೇವನ ಪಾರ್ವತೀರುಕ್ಮಿಣೀಯ, ಭಾಗವತ ಮತ್ತು ರಾಮಾಯಣಗಳನ್ನೊಳಗೊಂಡ ವೆಂಕಟಾಧ್ವರಿಯ ಯಾದವರಾಘವೀಯಗಳು ಸುಪ್ರಸಿದ್ಧ ಶ್ಲೇಷಕಾವ್ಯ ಅಥವಾ ದ್ವಿಸಂಧಾನಕಾವ್ಯಗಳಾಗಿವೆ. ಈ ಪ್ರಯೋಗದ ಬೆಳವಣಿಗೆಯೆಂಬಂತೆ ರಾಮಾಯಣ, ಭಾರತ, ಭಾಗವತಗಳ ಮುಪ್ಪುರಿಯಾಗಿ ಹುಟ್ಟಿದ "ರಾಘವ-ಪಾಂಡವ-ಯಾದವೀಯ" (ಕಥಾತ್ರಯೀ)ವು ತ್ರಿಸಂಧಾನ ಕಾವ್ಯವಾಗಿದೆ. ಪುರಾಣವಸ್ತುವನ್ನೊಳಗೊಂಡ ಈ ಸಂಸ್ಕೃತ ಸಂಧಾನಕಾವ್ಯಗಳನ್ನು ಬರೆದವರು ಸಾಮಾನ್ಯವಾಗಿ ಕನ್ನಡಿಗರಾಗಿದ್ದರೂ, ಕನ್ನಡ ಭಾಷೆಯಲ್ಲಿ ಇಂಥ ಒಂದೂ ಶ್ಲೇಷಕಾವ್ಯ ಹುಟ್ಟದಿರುವುದು ಸೋಜಿಗದ ವಿಷಯವೆನಿಸಿದೆ.

ಇವೆಲ್ಲ ಪುರಾಣಕಥೆಯನ್ನಾಧರಿಸಿ ಬರೆದ ಸಂಸ್ಕೃತ ಸಂಧಾನಕಾವ್ಯಗಳು. ಇದೇ ರೀತಿ ಸಂಸ್ಕೃತದಲ್ಲಿ ರಾಜಚರಿತ್ರೆಯನ್ನಾಧರಿಸಿ ಹುಟ್ಟಿದ ದ್ವಿಸಂಧಾನ ಕಾವ್ಯವೆಂದರೆ ಸಂಧ್ಯಾಕರನಂದಿಯ (೧೧ ನೆಯ ಶತಮಾನ) ರಾಮಚರಿತೆ. ಇದು ಶ್ಲೇಷೆಯ ಮೂಲಕ ರಾಮಾಯಣದ ಶ್ರೀರಾಮನ ಕಥೆ ಮತ್ತು ಬಂಗಾಲದ ರಾಮಪಾಲ ಅರಸನ ಚರಿತ್ರೆಗಳನ್ನು ವಿವರಿಸುತ್ತದೆ. ರಾಮನಿಗೆ ಸಂಬಂಧಿಸಿದ ಉದಾತ್ತ ಘಟನೆಗಳನ್ನು ತನ್ನ ಅರಸು ರಾಮಪಾಲನಿಗೆ ಈತ ಶ್ಲೇಷೆಯಿಂದ ಹೊಂದಿಸಿರಬಹುದು. ರಾಮನ ಹೆಂಡತಿಯಾದ ಸೀತೆಯನ್ನು ರಾವಣ ಅಪಹರಿಸಿದಂಥ ಅನುದಾತ್ತ ಘಟನೆಗಳನ್ನು ಶ್ಲೇಷೆಯ ಮೂಲಕ ಪರಿಹರಿಸಿಕೊಂಡಿರಲಿಕ್ಕಿಲ್ಲ. ಅದೇನೇ ಇದ್ದರೂ ಪುರಾಣಕಥೆಗಳೊಂದಿಗೆ ಆಶ್ರಯದಾತ ಅರಸನ ಕಥೆಯನ್ನು ಹೊಂದಿಸಿಕೊಂಡು ಹೋಗುವ ಉಪಕ್ರಮ ಶ್ಲೇಷಕಾವ್ಯಗಳಲ್ಲಿ ಬೆಳೆದುಬರುತ್ತಿದ್ದುದರ ದ್ಯೋತಕವಿದು.

ಸಮಸ್ತ ಕಾವ್ಯ:

ಹೀಗೆ ಶಾಸ್ತ್ರಕಾವ್ಯ, ಶ್ಲೇಷಕಾವ್ಯಗಳು ತಮ್ಮ ಜೊತೆಗೆ ಪುರಾಣಕಥೆಗಳನ್ನೋ ಆಶ್ರಯ ನೀಡಿದ ಅರಸರ ಕಥೆಗಳನ್ನೋ ಪ್ರತಿಪಾದಿಸುತ್ತ ಬೆಳೆದು ಬಂದವು. ಅರಸರ ವಿಷಯವನ್ನು ಹೊಂದಿಸಿಕೊಳ್ಳುವ ಈ ಕಾವ್ಯಪರಂಪರೆಯೇ ಪಂಪಾದಿಗಳಿಗೆ 'ಸಮಸ್ತಕಾವ್ಯ' ಎಂಬ ಹೊಸ ಪ್ರಯೋಗವನ್ನು ಆವಿಷ್ಕರಿಸಲು ಪ್ರೇರಣೆ ನೀಡಿರಬಹುದು. ಇದರ ಫಲವಾಗಿ ಗುಣವರ್ಮನ ಶೂದ್ರಕ, ಪಂಪನ ಭಾರತ, ರನ್ನನ ಗದಾಯುದ್ಧಗಳೆಂಬ ಸಮಸ್ತ ಕಾವ್ಯಗಳು ಕನ್ನಡದಲ್ಲಿ ಹುಟ್ಟಿಬಂದವು. ಬಹುಶಃ ಇದು ಕನ್ನಡಿಗರು ಮಾತ್ರ ಮಾಡಿದ, ಕನ್ನಡ ಭಾಷೆಯಲ್ಲಿ ಮಾತ್ರ ನಡೆದ ಪ್ರಯೋಗವೆಂದು ತೋರುತ್ತದೆ. ಇದರ ಒಂದು ಪರಿಮಿತಿಯೆಂದರೆ ಶಾಸ್ತ್ರಕಾವ್ಯಗಳು ಶಾಸ್ತ್ರ-ಪುರಾಣ, ಶಾಸ್ತ್ರ-ಚರಿತ್ರೆಗಳನ್ನೂ, ಶ್ಲೇಷಕಾವ್ಯಗಳು ಪುರಾಣ-ಪುರಾಣ, ಪುರಾಣ-ಚರಿತ್ರೆಗಳನ್ನೂ ಮೇಳವಿಸಿಕೊಂಡರೆ, ಈ ಸಮಸ್ತಕಾವ್ಯವು ಪುರಾಣ-ಇತಿಹಾಸಗಳನ್ನು ಮಾತ್ರ ಮೇಳವಿಸಿಕೊಳ್ಳುತ್ತದೆ. ಇಷ್ಟು ಹಿನ್ನೆಲೆಯಲ್ಲಿ 'ಸಮಸ್ತಕಾವ್ಯ' ಹೆಸರಿನ ಕನ್ನಡಿಗರ ಹೊಸ ಕಾವ್ಯಪ್ರಯೋಗವನ್ನು ವಿಮರ್ಶಿಸಬಹುದು.

ಶಾಸ್ತ್ರಕಾವ್ಯ, ಶ್ಲೇಷಕಾವ್ಯಗಳ ಸುಳುಹು ಹಿಡಿದು ಹುಟ್ಟಿದ ಈ ಕಾವ್ಯಪ್ರಯೋಗ ಬಹುಶಃ ಕನ್ನಡದಲ್ಲಿ ಮೊದಲನೆಯ ಗುಣವರ್ಮನ ಶೂದ್ರಕದಲ್ಲಿ ಕಂಡುಬರುತ್ತಿದ್ದರೂ ಅದು ಉಪಲಬ್ಧವಿಲ್ಲ. ಈಗಿನ ಮಟ್ಟಿಗೆ ಈ ಕಾವ್ಯಪ್ರಯೋಗದ ಲಭ್ಯ ಪ್ರಥಮಕೃತಿ ಪಂಪಭಾರತ. ಪಂಪನೂ "ವರ್ಣಕಂ ಕತೆಯೊಳೊಡಂಬಡಂ ಪಡೆಯೆ ಪೇಳ್ವೊಡೆ ಪಂಪನೆ ಪೇಳ್ಗುಂ", "ಈ ಕಥೆಯೊಳ್ತಗುಳ್ಚಿ ಪೋಲಿಪೊಡೆನಗಳ್ತಿಯಾದುದು ಗುಣಾರ್ಣವಭೂಭುಜನಂ ಕಿರೀಟಿಯೊಳ್", "ಆರೂಢಸರ್ವಜ್ಞನಂ... ನಾಯಕಂ ಮಾಡಿ ಸಂದರ್ಜುನನೊಳ್ಪೋಲ್ವೀ ಕಥಾಭಿತ್ತಿಯನನುನಯದಿಂ ಪೇಳಲೆಂದೆತ್ತಿಕೊಂಡೆಂ" ಎಂದು ತಾನು ಏನೋ ಒಂದು ದೊಡ್ಡ ಪ್ರಯೋಗ ಮಾಡಹೊರಟಿದ್ದೇನೆ ಎಂಬಂತೆ ಪದೇ ಪದೇ ಹೇಳಿಕೊಳ್ಳುತ್ತಾನೆ. ಇಂದಿನ ವಿದ್ವಾಂಸರೂ ಈ ಮಾತಿನ ಸಾರ್ಥಕತೆಯನ್ನು ಆಳವಾಗಿ ವಿಮರ್ಶಿಸದೆ ಹೊಗಳುತ್ತ ನಡೆದಿದ್ದಾರೆ. ಸಾಮಾನ್ಯವಾಗಿ ಹಿರಿಯ ತಲೆಮಾರಿನ

ವಿಮರ್ಶಕರು ವ್ಯಕ್ತಪಡಿಸಿದ ಸಿದ್ಧ ಹೇಳಿಕೆಗಳು ವೇದವಾಕ್ಯಗಳಾಗಿ ತೇಲುತ್ತ ಬರುವುದು ಸಹಜ. ಯಾವುದೋ ಕಾಲದಲ್ಲಿ, ಆ ಕಾಲದ ಪರಿಮಿತ ತಿಳುವಳಿಕೆಯ ಹಿನ್ನೆಲೆಯಲ್ಲಿ ಅವರು ಆಡಿದ ಇಂಥ ಮಾತುಗಳು ತಲೆಮಾರಿನಿಂದ ತಲೆಮಾರಿಗೆ ಧ್ವನಿಸಿ, ಆ ಬಗ್ಗೆ ಹೊಸವಿಚಾರ ಮಾಡಲೂ ಅವಕಾಶ ಕೊಡುವುದಿಲ್ಲ. ಈಗ ಅಂಥ ಹೇಳಿಕೆಗಳ ಮರುಪರಿಶೀಲನೆ ಕನ್ನಡದಲ್ಲಿ ಅವಶ್ಯ ನಡೆಯಬೇಕಾಗಿದೆ. ಹೀಗೆ ಪರಿಶೀಲಿಸಬೇಕಾದವುಗಳಲ್ಲಿ ಪಂಪನ 'ತಗುಳ್ಚಿ ಪೇಳುವ' ಉಪಕ್ರಮ ಅಂದರೆ 'ಸಮಸ್ತಕಾವ್ಯ' ಪದ್ಧತಿಯೂ ಒಂದು.

ಪಂಪಭಾರತದ ಪ್ರಥಮಾಶ್ವಾಸದಲ್ಲಿ ಆಶ್ರಿತರಾಜನ ವಂಶಾವಳಿಯನ್ನು ವರ್ಣಿಸಲಾಗಿದೆ. ಇದು ಇತಿಹಾಸ, ಸಾಹಿತ್ಯ ಈ ಎರಡೂ ದೃಷ್ಟಿಯಿಂದಲೂ ನಿಸ್ಸಂದೇಹವಾಗಿ ಉತ್ತಮಭಾಗ. ಆದರೆ ಇದಕ್ಕೂ ತಗುಳ್ಚಿ ಪೇಳುವಿಕೆಗೂ ಏನೂ ಸಂಬಂಧವಿಲ್ಲ. ತಗುಳ್ಚಿ ಪೇಳುವ ಪ್ರಯೋಗ ನಡೆದುದು ಪಂಪಭಾರತದ ಮುಂದಿನ ಭಾಗದಲ್ಲಿ. ಅದೂ ಮಹಾಭಾರತದ ಎಲ್ಲ ಪಾತ್ರ ಎಲ್ಲ ಘಟನೆಗಳನ್ನು ಅರಿಕೇಸರಿ ಪರಿಸರದ ಎಲ್ಲ ಪಾತ್ರ ಎಲ್ಲ ಘಟನೆಗಳೊಂದಿಗೆ ತಗುಳ್ಚುವುದಲ್ಲ, ಮಹಾಭಾರತದ ಒಂದು ಪಾತ್ರವಾದ ಅರ್ಜುನನ ಪ್ರಸಂಗದಲ್ಲಿ, ಅಂದರೆ ಆತನ ಘಟನೆಗಳ ಪ್ರಸಂಗದಲ್ಲಿ 'ಅರ್ಜುನ' ಪದಕ್ಕೆ ಬದಲು ಆಗಾಗ 'ಅರಿಕೇಸರಿ' ಪದವನ್ನು ಇಡುತ್ತ ಹೋಗುವುದಾಗಿದೆ.

ಇದು ಮೇಲೆ ಹೇಳಿದ ಶಾಸ್ತ್ರಕಾವ್ಯ ಮತ್ತು ಶ್ಲೇಷಕಾವ್ಯಗಳ ರೀತಿಗಿಂತ ಭಿನ್ನವಾಗಿದೆ. ಶಾಸ್ತ್ರಕಾವ್ಯವು ಹೇಳಿಕೊಳ್ಳುವಂಥ ಪ್ರಯೋಗವೇನಲ್ಲ; ಅಲ್ಲಿ ಉದಾಹರಣೆಗಳಿಗಾಗಿ ರಾಜನ ಪರವಾದ ಪದ್ಯಗಳನ್ನು ರಚಿಸಲಾಗುತ್ತದೆ. ಶ್ಲೇಷಕಾವ್ಯ ಮಾತ್ರ ಖಂಡಿತವಾಗಿಯೂ ಒಂದು ಕಾವ್ಯಪ್ರಯೋಗ. ವಿದ್ವತ್ತಿನ ಭೂಮಿಕೆಯ ಮೇಲೆ ಏಳಬೇಕಾದ ಈ ಸೌಧ ಕೇವಲ ಒಂದು ಪ್ರಕಾರವಲ್ಲ, ಒಂದು ಪ್ರಯತ್ನ. ಏಕಕಾಲಕ್ಕೆ ಶ್ಲೇಷೆಯ ಮೂಲಕ ಎರಡೂ ಕಥೆಗಳನ್ನು ಬೆಳೆಸಿಕೊಂಡು ಹೋಗಿ, ಎರಡು ಪ್ರತ್ಯೇಕ ಗುರಿಗಳನ್ನು ಸಾಧಿಸುವ ಸಾಹಸ. ಆದರೆ 'ಸಮಸ್ತಕಾವ್ಯ' ಪದ್ಧತಿಯ ಮೂಲಕ ಪೌರಾಣಿಕ ಮತ್ತು ಚಾರಿತ್ರಿಕ ಪಾತ್ರಗಳನ್ನು ಸಮನ್ವಯೀಕರಿಸುವೆನೆಂಬ ಪಂಪನ ಮಾತು ಬರಿಯ ಮಾತಿನ ಸ್ತರದಲ್ಲಿ ನಿಲ್ಲುತ್ತದೆಯೇ ಹೊರತು, ಸಾರ್ಥಕತೆಯ ಮಟ್ಟಕ್ಕೆ ಏರುವುದೇ ಇಲ್ಲ. ಅಲ್ಲೊಮ್ಮೆ ಇಲ್ಲೊಮ್ಮೆ 'ಅರ್ಜುನ' ಪದಕ್ಕೆ ಪ್ರತಿಯಾಗಿ 'ಅರಿಕೇಸರಿ'ಪದವನ್ನೋ ಅವನ ಬಿರುದನ್ನೋ ಬಳಸಿದರೆ ಏನು ಮಾಡಿದಂತಾಯಿತು? ಇದರಿಂದ ಈ ಕಡೆ ಅರಿಕೇಸರಿಗೂ ನ್ಯಾಯ ಒದಗಿಸಲಿಲ್ಲ, ಆ ಕಡೆ ಅರ್ಜುನನಿಗೂ ನ್ಯಾಯ ಒದಗಿಸಲಿಲ್ಲ. ಹೀಗಾಗಿ 'ತಗುಳ್ಚಿ ಪೇಳುವೆ'ನೆಂಬ ಆತನ ಮಾತು ಕೇವಲ ತೋರಿಕೆಯಾಗಿ ಉಳಿಯುತ್ತದೆ. (೧) ಅರ್ಜುನನ ಪ್ರಶಸ್ತ ಘಟನೆಗಳು, (೨) ಅರ್ಜುನನ ಅಪ್ರಶಸ್ತಘಟನೆಗಳು, (೩) ಅರಿಕೇಸರಿಗೆ ಮಾತ್ರ ಸಂಬಂಧಿಸಿದ ಘಟನೆಗಳು, (೪) ಅರ್ಜುನನಿಗೆ ಮಾತ್ರ ಸಂಬಂಧಿಸಿದ ಘಟನೆಗಳು - ಹೀಗೆ ನಾಲ್ಕು ಬಗೆಯ ಘಟನೆಗಳಲ್ಲಿ ಪಂಪನ ಈ ಪ್ರತಿಜ್ಞೆ ತುಳಿದ ದಾರಿಯನ್ನು ಇಲ್ಲಿ ನೋಡಬಹುದು.

೧. ಅರ್ಜುನನ ಪ್ರಶಸ್ತ ಘಟನೆಗಳು : ಅರ್ಜುನನ ಬದುಕಿನ ಪ್ರಶಸ್ತ ಘಟನೆಗಳನ್ನು ಅರಿಕೇಸರಿಗೆ ತಗುಳ್ಚಿ ವರ್ಣಿಸುವಾಗ ನಮ್ಮ ಮನಸ್ಸನ್ನು ಆವರಿಸುವವನು ಅರ್ಜುನನೇ ಹೊರತು. ಅರಿಕೇಸರಿ ಅಲ್ಲ. ಉದಾ: "ದೇವೇಂದ್ರನೊಳರ್ಧಾಸನಮೇರಿದ ಗುಣಾರ್ಣವನ ಮಹಿಮೆಯಂ" ಎನ್ನುತ್ತ, ಗುಣಾರ್ಣವ ಎಂಬ ಅರಿಕೇಸರಿಯ ಬಿರುದನ್ನು ಎತ್ತಿ ಹೇಳಿದ್ದರೂ ಇಲ್ಲಿ ನಮಗೆ ತಟ್ಟನೇ ನೆನಪಾಗಿ, ಮನದಲ್ಲಿ ನಿಲ್ಲುವವ ಅರ್ಜುನನೇ ಹೊರತು, ಅರಿಕೇಸರಿಯಲ್ಲ. ಇಂಥ ಅನೇಕ ಘಟನೆಗಳು ಪಂಪಭಾರತದಲ್ಲಿ ಸಿಗುತ್ತವೆ.

ಕೆಲವೊಮ್ಮೆ ಘಟನೆ ಪ್ರಶಸ್ತವಾಗಿದ್ದರೂ ತಗುಳ್ಚಿ ಹೇಳಲು ಮಾಡಿದ ಪ್ರಯತ್ನ ಕಾರಣವಾಗಿ ಇಡಿ ಹೇಳಿಕೆ ಅಸಂಬದ್ಧವಾಗುವುದಕ್ಕೆ ಅರ್ಜುನ ವ್ಯಕ್ತಪಡಿಸುವ ಈ ಕೆಳಗಿನ ಪದ್ಯವನ್ನು ನೋಡಬಹುದು.

ನರಸಿಂಗಂಗಂ ಜಾಕ।
ಬ್ಬರಸಿಗಮಳವೊದವೆ ಪುಟ್ಟೆ ಪುಟ್ಟಿಯುಮರಿಕೇ ।
ಸರಿಯೆನೆ ನೆಗಳ್ದುಮರಾತಿಯ ।
ಸರಿದೊರೆಗಂ ಬಂದೆನಪ್ಪೊಡಾಗಳ್ ನಗಿರೇ ।

ಅರ್ಜುನ ಹೇಳುವ ಈ ಮಾತು ತೀರ ಅಸಂಬದ್ಧತೆಯನ್ನೇ ಸೃಷ್ಟಿಸುತ್ತದೆ.

೨. ಅರ್ಜುನನ ಅಪ್ರಶಸ್ತ ಘಟನೆಗಳು: ಅರ್ಜುನನ ಜೀವನದಲ್ಲಿ ಪ್ರಶಸ್ತದಂತೆ ಕೆಲವು ಅಪ್ರಶಸ್ತ ಘಟನೆಗಳೂ ಆಗಾಗ ಜರುಗಿವೆ. ಇಂಥ ಪ್ರಸಂಗಗಳಲ್ಲಿ ಅರ್ಜುನನ ಜೊತೆ ಅರಿಕೇಸರಿಗೂ ಅವಮಾನ ಅಂಟಿಕೊಂಡು ಬಿಡುತ್ತದೆ. ವಿರಾಟನಲ್ಲಿ ಅರ್ಜುನ ಬಳೆತೊಟ್ಟು, ಸೀರೆಯುಟ್ಟು ಬೃಹನ್ನಳೆಯಾದುದೂ. ಗೋಗ್ರಹಣಪ್ರಸಂಗದಲ್ಲಿ "ಬಿಡೆ ಪಿಣಿಲಂ ಕುರುಧ್ವಜಿನಿ ತೊಟ್ಟನೆ ಬಾಯನೆ ಬಿಟ್ಟುದು ರಥಮನೇರಲೊಡಂ ಪಡೆಮೆಚ್ಚೆಗಂಡನಾ" ಎನ್ನುತ್ತ, ಪಡೆಮೆಚ್ಚೆಗಂಡ ಬಿರುದಿನ ಅರಿಕೇಸರಿ ಹೆರಳನ್ನು ಬಿಚ್ಚಿಕೊಂಡನೆಂದು ಸೂಚಿಸುವುದೂ ಅರಿಕೇಸರಿಯ ವಿಷಯವಾಗಿ ಅಪ್ರಶಸ್ತ ಘಟನೆಗಳೇ ಆಗುತ್ತವೆ. ಯುದ್ಧದಲ್ಲಿ ಕರ್ಣನ ಬಾಣಹತಿಗೆ ಅರ್ಜುನನ ಕಿರೀಟ ಭೂಮಿಗೆ ಬಿದ್ದು, ಜಡೆಯ ಗಂಟು ಚೆಲ್ಲಾಪಿಲ್ಲೆಯಾದುದು ಅರಿಕೇಸರಿಗೆ ಅವಮಾನಕಾರಕವೇ ಆಗಿದೆ. ಇಂಥ ಘಟನೆಗಳು ತಗಳ್ಚುವುದಕ್ಕೆ ವಸ್ತುವಾಗುವಲ್ಲಿ ಅರ್ಜುನನೊಂದಿಗೆ ಅರಿಕೇಸರಿಗೂ ಅಪ್ರಸಿದ್ಧಿಯನ್ನುಂಟು ಮಾಡುತ್ತವೆ.

೩. ಅರಿಕೇಸರಿಗೆ ಮಾತ್ರ ಸಂಬಂಧಿಸಿದ ಘಟನೆಗಳು : ಕೆಲವೊಮ್ಮೆ ಅರಿಕೇಸರಿಗೆ ಮಾತ್ರ ಸಂಬಂಧಿಸಿದ ನೇರ ಘಟನೆಗಳು ಸೇರಿಕೊಂಡು ಒಟ್ಟು ಮಹಾಭಾರತದ ಕಥಾ ಓಟದಲ್ಲಿ ಸಾಮರಸ್ಯಗೊಳ್ಳದೆ ಪ್ರತ್ಯೇಕವಾಗಿ ನಿಲ್ಲುತ್ತವೆ. ಅಂದರೆ ಅರ್ಜುನನ ಘಟನೆಗಳನ್ನು ಹೇಳುತ್ತ ನಡೆದು, ಅದನ್ನು ತಟ್ಟನೆ ನಿಲ್ಲಿಸಿ, ಅರಿಕೇಸರಿಗೆ ಮಾತ್ರ ಸಂಬಂಧಿಸಿದ ಘಟನೆಗಳನ್ನು ಹೇಳತೊಡಗುವಲ್ಲಿ ಎರಡಕ್ಕೂ ಸಂಬಂಧ ತಪ್ಪಿ, ಅರಿಕೇಸರಿಯ ಆ ಘಟನೆಗಳು ಮಹಾಭಾರತಕ್ಕೆ ಅನವಶ್ಯ ತೇಪೆ ಹಚ್ಚಿದಂತೆ ಕಾಣುತ್ತವೆ:

"ತ್ರಿಣೇತ್ರನೊಳ್ಕಾದಿ ಪಾಶುಪತಾಸ್ತ್ರಮಂ ಪಡೆದ ಕದನತ್ರಿಣೇತ್ರನ ಗಂಡಗರ್ವಮುಮನಿಂದ್ರಲೋಕಕ್ಕೆ ಪೋಗಿ ದೇವೇಂದ್ರನ ಪಗೆವರಪ್ಪ ನಿವಾತಕವಚ ಕಾಳಕೇಯ ಪೌಳೋಮ ತಳತಾಳುಕರೆಂಬ ದೈತ್ಯರಂ ಪಡಲ್ವಡಿಸಿದ ಪಡೆಮೆಚ್ಚೆ ಗಂಡನ ಗಂಡುಮಂ, ದೇವೇಂದ್ರನೊಳರ್ಧಾಸನಮನೇರಿದ ಗುಣಾರ್ಣವನ ಮಹಿಮೆಯುಮಂ, ಚಳುಕ್ಯಕುಳತಿಳಕನಪ್ಪ ವಿಜಯಾದಿತ್ಯಂಗೆ ಗೋವಿಂದರಾಜಂ ಮುಳಿಯೆ ತಳರದೆ ಪೆರಗಿಕ್ಕಿ ಕಾದ ಶರಣಾಗತಜಳನಿಧಿಯ ಪೆಂಪುಮಂ, ಗೊಜ್ಜಿಗನೆಂಬ ಸಕಳ ಚಕ್ರವರ್ತಿ ಬೆಸಸೆ ದಂಡುವಂದ ಮಹಾಸಾಮಂತರಂ ಮರಲಿರಿದು ಗೆಲ್ದ ಸಾಮಂತಚೂಡಾಮಣಿಯ ವೀರಮುಮಂ...." ಇಲ್ಲಿಯ ಪೂರ್ವಾರ್ಧ, ಉತ್ತರಾರ್ಧ ವಿವರಗಳು ಹೊಂದಿಕೊಳ್ಳದೆ ಪ್ರತ್ಯೇಕ ನಿಲ್ಲುತ್ತವೆ.

೪. ಅರ್ಜುನನಿಗೆ ಮಾತ್ರ ಸಂಬಂಧಿಸಿದ ಘಟನೆಗಳು: ಕೆಲವು ಸಲ ಅರಿಕೇಸರಿಯನ್ನು ಕೈಬಿಟ್ಟು, ನೇರವಾಗಿ ಅರ್ಜುನನನ್ನೇ ವರ್ಣಿಸುತ್ತ ಹೋಗುತ್ತಾನೆ, ಪಂಪ. ಆಗ ನಮಗೆ ಅರಿಕೇಸರಿ ನೆನಪಿಗೇ ಬರುವುದಿಲ್ಲ. ಉದಾ: "ವಿಜಯಂ ನೆಲಕಿಕ್ಕಿ ಗಂಟಲಂ ಮೆಟ್ಟದೆ ಕೊಂಡನೇ ಹರನ ಪಾಶುಪತಾಸ್ತ್ರಮನಿಂದ್ರಕೀಲದೊಳ್... " "ಗಂಧರ್ವರುಯ್ವಂದು ನಿನ್ನಂ, ಕರುವಿಟ್ಟಂತಿರ್ದುದಿಲ್ಲಾ?

ನೆರೆದ ಕುರುಬಲಂ, ತಂದವಂ ಪಾರ್ಥನಲ್ಲಾ?" ಇಂಥ ಹೇಳಿಕೆಗಳಲ್ಲಿ ಅರ್ಜುನನೇ ವಿಜೃಂಭಿಸಿ, ಅರಿಕೇಸರಿ ನೆನಪಿಗೂ ಬರದೆ ಹೋಗುತ್ತಾನೆ. ಇದು 'ತಗುಳ್ಚಿ ಪೇಳಿದ' ಕಾವ್ಯವೆಂಬ ಅಂಶ ನಮ್ಮ ಮನದಲ್ಲಿ ಸುಳಿಯುವುದೇ ಇಲ್ಲ.

ಈ ನಾಲ್ಕು ಬಗೆಗಳಲ್ಲದೆ ಆಗಾಗ ಅರ್ಜುನ ಅರಿಕೇಸರಿಗಳ ಸಮೀಕರಣದ ಜೊತೆ "ಸಹಜಮನೋಜ್ಞನಂ ನಾಡೋಜನಂ" ಎಂದು ತನ್ನನ್ನೂ ಸಮೀಕರಿಸಿಕೊಂಡಿದ್ದಾನೆ, ಪಂಪ. ಇದೆಲ್ಲವನ್ನು ನೋಡಿದರೆ ಈ ಬಗೆಯ ತಗುಳ್ಚಿ ಪೇಳುವಲ್ಲಿ ಅಂಥ ವಿಶೇಷತೆ ಇಲ್ಲ; ಇದು ಒಂದು 'ಕಾವ್ಯಪ್ರಯೋಗ'ವೂ ಅಲ್ಲ, ಸ್ವತಃ ಕವಿಯೇ ಈ ಪ್ರಯತ್ನವನ್ನು ಗಂಭೀರವಾಗಿ ಪರಿಗಣಿಸಿದಂತಿಲ್ಲ ಎನಿಸುತ್ತದೆ. ಆದುದರಿಂದ ಅಲ್ಲಲ್ಲಿ ತನ್ನ ಅರಸನ ಹೆಸರನ್ನು ಸೇರಿಸಿದ ಒಂದು 'ಸರಳಕ್ರಿಯೆ'ಯಿದು ಎನ್ನಬಹುದು. ಈ ಕ್ರಿಯೆಯನ್ನು ಪದೇ ಪದೇ ಮಾಡಿದ್ದರೆ ಕಾವ್ಯವಾಚನ ಪ್ರಸಂಗದಲ್ಲಿ ಅರಿಕೇಸರಿ ಮೇಲಿಂದ ಮೇಲೆ ಕಣ್ಣಿಗೆ ಬೀಳುತ್ತಿದ್ದ. ಅದೆಲ್ಲವನ್ನು ಬಿಟ್ಟು ಹುಣ್ಣಿಮೆಗೊಮ್ಮೆ, ಅಮಾವಾಸ್ಯೆಗೊಮ್ಮೆ ಎಂಬಂತೆ ಅರಿಕೇಸರಿಯನ್ನು ಪ್ರಸ್ತಾಪ ಮಾಡುವುದರಿಂದ, ಒಮ್ಮೊಮ್ಮೆ ಆತನ ಅಪ್ರಸಿದ್ಧ ಬಿರುದುಗಳನ್ನೂ ಬಳಸುವುದರಿಂದ ಪಂಪಭಾರತವನ್ನು ಓದುವಾಗ ಅರಿಕೇಸರಿ ನಿರಂತರವಾಗಿ ಕಾವ್ಯದಲ್ಲಿ ನಿಂತಿರುವ ಅನುಭವವೇ ಆಗುವುದಿಲ್ಲ; ವಾಚಕನಿಗೆ ಇದು ಅರಿಕೇಸರಿ ಪರವಾದುದೆಂಬ ಕಾವ್ಯಾನುಭವವೂ ಉಂಟಾಗುವುದಿಲ್ಲ.

ಗುಣವರ್ಮನ ಶೂದ್ರಕವು ಈಗ ಲಭ್ಯವಿಲ್ಲದ ಕಾರಣ, ಪಂಪಭಾರತವನ್ನು ಬಿಟ್ಟರೆ ನಮ್ಮ ಕೈಗೆ ಉಳಿದು ಬಂದಿರುವ ಇನ್ನೊಂದು ಏಕೈಕ ತಗುಳ್ಚಿ ಪೇಳಿದ ಕಾವ್ಯವೆಂದರೆ ಗದಾಯುದ್ಧ*. ಇದೂ ಪಂಪಭಾರತದ ದಾರಿಯಲ್ಲಿಯೇ ನಡೆದಿರುವುದರಿಂದ ಆ ಕಾವ್ಯಕ್ಕೆ ಹೇಳಿದ ಮಾತುಗಳು ಇದಕ್ಕೂ ಅನ್ವಯಿಸುತ್ತವೆ. ನಾಗವರ್ಮನ ಕರ್ಣಾಟ ಕಾದಂಬರಿ, ಆಂಡಯ್ಯನ ಕಬ್ಬಿಗರ ಕಾವಗಳೂ ತಗುಳ್ಚಿ ಪೇಳಿದ ಕಾವ್ಯಗಳೆಂದು ಕೆಲವರು ಭಾವಿಸುವರಾದರೂ ಅವು ಪಂಪಭಾರತ, ಗದಾಯುದ್ಧಗಳಿಂದ ಪ್ರತ್ಯೇಕ ನಿಲ್ಲುತ್ತವೆ.

ಪಂಪ ತನ್ನ ಯುಗವನ್ನು ಮಹಾಭಾರತದ ಕಥೆಯೊಂದಿಗೆ ಸಮನ್ವಯಮಾಡಿರುವುದು ನಿಜ. ಆದರೆ ಇದು ಯಾವುದೇ ಉತ್ತಮ ಕವಿ ಮಾಡಬೇಕಾದ ಕೆಲಸ. ಕೈಗೆತ್ತಿಕೊಂಡಿರುವ ಪ್ರಾಚೀನ ಕಥಾಮಾಧ್ಯಮದ ಮೂಲಕ ತನ್ನ ಯುಗದ ಮೌಲ್ಯಗಳನ್ನು ಪ್ರಕಟಿಸುವದು ಆತನ ಹೊಣೆಯಾಗಿರುತ್ತದೆ. ಹೀಗಾಗಿ ದ್ವಾಪರಯುಗದ ಕಥೆ ಮತ್ತು ೧೦ನೆಯ ಶತಮಾನದ ಕನ್ನಡಿಗರ (ವೀರ) ಮೌಲ್ಯಗಳನ್ನು ಸಮೀಕರಿಸುವುದೇ 'ಪಂಪನ ತಗುಳ್ಚಿ ಪೇಳಿದ' ರೀತಿ ಎಂದು ವಾದಿಸಿದರೆ, ಅದು ಪಂಪನನ್ನು ರಕ್ಷಿಸಲು ಹೇಳಿದ ಮಾತಾಗುತ್ತದೆ. ಏಕೆಂದರೆ ತಗುಳ್ಚಿಪೇಳುವೆನೆಂಬ ಪಂಪನ ಪ್ರತಿಜ್ಞೆ, ಅರಿಕೇಸರಿ ಅರ್ಜುನರ ಜೀವನಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಆದುದರಿಂದ ಪಂಪಭಾರತ ನಿಸ್ಸಂದೇಹವಾಗಿ ಮಹಾಕಾವ್ಯವಾಗಿದ್ದರೂ ಅದಕ್ಕೆ ಕವಿ ಬಳಸಿದ 'ತಗುಳ್ಚಿ ಪೇಳಿದ' ತಂತ್ರ ಮಾತ್ರ ಒಂದು ವಿಫಲ ಕಾವ್ಯಪ್ರಯೋಗವೆಂದೇ ಹೇಳಬೇಕು.

ಹೀಗೆ ಅರಿಕೇಸರಿಯನ್ನು ಅರ್ಜುನನೊಂದಿಗೆ ತಗುಳ್ಚಿ ಪೇಳುವಲ್ಲಿ ವಿಫಲನಾದ ಕವಿ, ಅರ್ಜುನನ್ನು ಕಥಾನಾಯಕನ್ನಾಗಿ ಮಾಡಿಕೊಳ್ಳುವುದಕ್ಕಾಗಿ ವ್ಯಾಸಭಾರತದಲ್ಲಿ ಮಾಡಿಕೊಂಡ ಮಾರ್ಪಾಟು, ಅದರಿಂದುಂಟಾದ ಫಲ-ವಿಫಲಗಳ ಅಧ್ಯಯನ ಬೇರೊಂದು ಲೇಖನದ ವಿಷಯವಾಗಿದೆ.

■■

ಆಕರ : ಮಾರ್ಗ ಸಂಪುಟ–೧

---

* ಭುವನೈಕರಾಮಾಭ್ಯುದಯ : ಒಂದು ಅಲಂಕಾರ ಗ್ರಂಥ, (ಸಾ.ಪ. ೬೭-೨) ಈ ಲೇಖನವನ್ನು ನೋಡಬಹುದು.

೬

ವಾಙ್ಮಯ-ಕಾವ್ಯ-ಸಾಹಿತ್ಯ

Literature ಪದಕ್ಕೆ ಸಂವಾದಿಯಾಗಿ ಭಾರತೀಯರು ವಾಙ್ಮಯ, ಕಾವ್ಯ ಮತ್ತು ಸಾಹಿತ್ಯ ಪದಗಳನ್ನು ಬಳಸುತ್ತ ಬಂದಿದ್ದಾರೆ. ಇವು ಮೂಲತಃ ಸಮಾನ ಅರ್ಥದ ಪದಗಳೇ? ಭಿನ್ನ ಅರ್ಥದ ಪದಗಳೇ? ಇವು ಹುಟ್ಟಿದುದು ಏಕಕಾಲಕ್ಕೆ? ಅಥವಾ ಕಾಲಕಾಲಕ್ಕೆ? ಕಾಲಕಾಲಕ್ಕೆ ಹುಟ್ಟಿದ್ದರೆ, ಈ ಹುಟ್ಟುವಿಕೆಗೆ ಐತಿಹಾಸಿಕ ಅಗತ್ಯವೇನಿದ್ದಿತು? ಇತ್ಯಾದಿ ಪ್ರಶ್ನೆಗಳಿಗೆ ಹುಡುಕ ಹೊರಟ ಉತ್ತರದಲ್ಲಿ ಭಾರತೀಯ ಸಾಹಿತ್ಯ ಸಾಗಿಬಂದ ಹಾದಿಯ ಹೊಳಹುಗಳನ್ನು ಕಾಣಬಹುದಾಗಿದೆ.

ಈ ಮೂರರಲ್ಲಿ, "ವಾಙ್ಮಯ"ವನ್ನು ಕುರಿತು ಪ್ರಾಚೀನ ಆಲಂಕಾರಿಕರು "ಶಬ್ದಪ್ರಧಾನವಾದುದು ವೇದ, ಅರ್ಥಪ್ರಧಾನವಾದುದು ಶಾಸ್ತ್ರ, ಧ್ವನಿಪ್ರಧಾನವಾದುದು ಕಾವ್ಯ-ಇವೆಲ್ಲವುಗಳ ಮೊತ್ತ"ವೆಂದೂ, ಆಧುನಿಕ ವಿಮರ್ಶಕರು "ಒಂದು ಭಾಷೆಯಲ್ಲಿ ಬೆಳೆದು ಬಂದ ಲಿಖಿತ, ಅಲಿಖಿತ ಅಭಿವ್ಯಕ್ತಿಯ ರಾಶಿ"ಯೆಂದೂ ಅರ್ಥ ವಿವರಣೆ ನೀಡಿದ್ದಾರೆ.[೧] ಮಿಕ್ಕವುಗಳಲ್ಲಿ "ಕಾವ್ಯ"ದ ಬಗ್ಗೆ ಪ್ರಾಚೀನರೂ "ಸಾಹಿತ್ಯ"ದ ಬಗ್ಗೆ ಆಧುನಿಕರೂ ನಡೆಸಿದ ಚರ್ಚೆ ವಿಪುಲವಾಗಿದೆ. ಹೀಗಿದ್ದೂ ಈ ಮೂರೂ ಪರಿಭಾಷೆಗಳಿಗೆ ಭಿನ್ನ ಅರ್ಥಛಾಯೆಗಳಿರುವ ಸಾಧ್ಯತೆಯಿದೆ. ಅದು: ಭಾಷಾಪ್ರಯೋಗದ ಎರಡು ಭಿನ್ನರೀತಿಗಳನ್ನು "ವಾಙ್ಮಯ" ಮತ್ತು "ಕಾವ್ಯ" ಪದಗಳು ಸೂಚಿಸುತ್ತಿದ್ದರೆ, ಜೀವನಮೌಲ್ಯದ ಮೇಲೆ ಒತ್ತು ಕೊಡುವುದನ್ನು "ಸಾಹಿತ್ಯ" ಪದ ಸೂಚಿಸುತ್ತದೆ. ಈ ಪದಗಳ ನಿಷ್ಪತ್ತಿ ಮತ್ತು ನಮ್ಮ Literatureದ ಐತಿಹಾಸಿಕ ಬೆಳವಣಿಗೆಗಳನ್ನು ಗಮನಿಸಿ, ಆ ಭಿನ್ನ ಅರ್ಥಗಳನ್ನು ಕುರಿತು ಹೀಗೆ ಚರ್ಚಿಸಬಹುದಾಗಿದೆ:

೧

ಸಾಹಿತ್ಯವೆನ್ನುವುದು ಭಾಷೆಯಲ್ಲಿ ಸಂಭವಿಸುವ ಕಲಾವಿಶೇಷವಾಗಿದೆ. ಈ ಕಟ್ಟಡಕ್ಕೆ ಬುನಾದಿಯಿಂದ ಶಿಖರದ ವರೆಗೆ ಏನೆಲ್ಲ ಸಾಧನ ಭಾಷೆಯೇ ಆಗಿರುವುದರಿಂದ, ಭಾಷೆಯೆಂಬ ಏಕಸಾಮಗ್ರಿಯಲ್ಲಿ ಇದು ಮೈಪಡೆಯುವುದಾಗಿದೆ. ಈ ಮೈಪಡೆಯುವಿಕೆಗೆ ಸೃಷ್ಟಿ, ಸಂಸೃಷ್ಟಿ ಎಂಬ ಎರಡು ನೆಲೆಗಳಿವೆ. ಇವುಗಳನ್ನೇ ಕ್ರಮವಾಗಿ ವಾಙ್ಮಯ, ಕಾವ್ಯವೆಂದು ಕರೆಯಬಹುದು. ಈ ಬಗ್ಗೆ ಇನ್ನಷ್ಟು ಸ್ಪಷ್ಟನೆ ಹೀಗಿದೆ:

ಭಾಷೆಯೆನ್ನುವುದು ಶಾಬ್ದಿಕ ಸಂರಚನೆ. ಅದು ತನ್ನ ಸಮಾಜದ ಭೌತಿಕ ಸಂರಚನೆ, ಅಭೌತಿಕ ಸಂವೇದನೆಗಳ ಪ್ರತಿಬಿಂಬವಾಗಿದೆ. ಹೀಗೆ ಸಮಾಜಬಿಂಬವನ್ನು ಕಾಣಿಸಿಕೊಡುವ ಭಾಷಾಪ್ರತಿಬಿಂಬವು "ದೇಶಭಾಷೆ" ಎನಿಸಿಕೊಳ್ಳುತ್ತದೆ. ಈ ದೇಶಭಾಷೆಯನ್ನೇ ಪ್ರಧಾನವಾಗಿ ಬಳಸಿಕೊಂಡು ಸಾಹಿತ್ಯಸೃಷ್ಟಿಸುವ ಸಂದರ್ಭವು ಎಲ್ಲ ಭಾಷೆಗಳ ಬದುಕಿನಲ್ಲಿ ಬಂದು ಹೋಗುತ್ತದೆ. ಆಗ ಜನಭಾಷೆ-ಕಾವ್ಯಭಾಷೆಗಳಲ್ಲಿ ಅಂಥ ವ್ಯತ್ಯಾಸವಿರುವುದಿಲ್ಲ. ಪದ ವಾಕ್ಯಗಳ ಅಂಗರಚನೆಗೂ, ಉಚ್ಚಾರದ ರೀತಿಗೂ ಅಷ್ಟಾಗಿ ಭಂಗ ತರದೆ, ಕಾವ್ಯಭಾಷೆಯನ್ನು ಅಲ್ಲಿ ಸಹಜವೆಂಬಂತೆ ಬಳಸಲಾಗುತ್ತದೆ. ಸಂಸ್ಕೃತಭಾಷೆಯ ಇಂಥ ಒಂದು ಸಂದರ್ಭದಲ್ಲಿ ರಾಮಾಯಣ, ಮಹಾಭಾರತಗಳು ಸೃಷ್ಟಿಯಾಗಿದ್ದು, ಇವುಗಳ ಭಾಷಾನಿರ್ವಹಣೆ ಸಹಜರೀತಿಯದ್ದಾಗಿದೆ. ಇಲ್ಲಿ ಮಾತು ಕೃತಿಯಾಗುತ್ತದೆ. ಹೀಗೆ ಸಹಜ "ವಾಕ್"ನಲ್ಲಿ ಸೃಷ್ಟಿಯಾಗುವ Literatureನ್ನು "ವಾಙ್ಮಯ"ವೆಂದು ಕರೆದಂತೆ ಕಾಣುತ್ತದೆ. ಕವಿಯ ಆಶಯ ಅವನ ಆಡುಮಾತಿನಲ್ಲಿ ಬಹುಮಟ್ಟಿಗೆ ಆಕೃತಿಗೊಳ್ಳುತ್ತಲಿದ್ದ ಕಾಲವಿದು. ಭಾಷೆಯನ್ನು ಆಳವಾಗಿ ಪರಿಷ್ಕರಿಸಬೇಕೆಂಬ, ಶಬ್ದ (Sound) ಮತ್ತು ಅರ್ಥ (Meaning) ನೆಲೆಗಳಲ್ಲಿ ಅದನ್ನು ಅಲಂಕರಿಸಬೇಕೆಂಬ ಭಾವನೆ ಅಂಕುರಿಸದ ಕಾಲೀನ ಈ ಸಾಹಿತ್ಯವು ಸ್ವಭಾವೋಕ್ತಿ ಅಲಂಕಾರದ ನೆಲೆಯಲ್ಲಿ ಜೀವಪಡೆಯುತ್ತಿದ್ದಿತು. ಹೇಗೆ ಹೇಳಬೇಕೆಂಬುದಕ್ಕಿಂತ ಏನು ಹೇಳಬೇಕೆಂಬ ಸರಳ ಅಭಿವ್ಯಕ್ತಿಕ್ರಮವೇ ಮುಖ್ಯವಾಗಿದ್ದ ಈ ಪದ್ಧತಿಯು, ಜನಪದ ಸಾಹಿತ್ಯದ ಭಾಷಾನಿರ್ವಹಣೆಗೆ ಹತ್ತಿರವಾಗಿದ್ದಿತು. ಈ ರೀತಿ ಸರಳವೆಂದರೂ ವಾಚ್ಯವಲ್ಲದ "ವಾಕ್" ಪ್ರಧಾನವಾಗುಳ್ಳ Literatureನ್ನು ಅವರು "ವಾಙ್ಮಯ"ವೆಂದು ಕರೆದರೆಂದು ತೋರುತ್ತದೆ.

ಆಂಗ್ಲ ಸಾಹಿತ್ಯದಲ್ಲಿ ಮಹಾಕಾವ್ಯವನ್ನು Epic of growth ಮತ್ತು Epic of art ಎಂದು ವರ್ಗೀಕರಿಸುತ್ತಿದ್ದು, ಮೇಲೆ ಹೇಳಿದುದು Epic of growth ಜಾತಿಗೆ ಸೇರುತ್ತದೆ. Epic of growth ಮೇಲೆ ಒಬ್ಬ ಕವಿಯ ಹೆಸರಿದ್ದರೂ ಅದು ಅವನೇ "ಕಟ್ಟಿಮುಗಿಸಿದ ಕೃತಿ"ಯಾಗಿರುವುದಿಲ್ಲ, ಮುಂದಿನವರೂ ಕೈಕೂಡಿಸುತ್ತ ಬರುವಲ್ಲಿ ಅದು "ಕಟ್ಟುತ್ತಬಂದ ಕೃತಿ"ಯಾಗಿರುತ್ತದೆ. ದಂತಕಥೆ, ಜನಪದಕಥೆ ಇತ್ಯಾದಿಗಳು ಪ್ರವೇಶ ಪಡೆಯುವ ಮೂಲಕ, "ಬಹುಜನಪ್ರಜ್ಞೆ, ಬಹುಜನಪ್ರಯತ್ನ" ಇದರಲ್ಲಿ ಸೇರಿಕೊಂಡಿರುತ್ತವೆ. ಇದು ಕತ್ತರಿಸಿ, ಒಪ್ಪ-ಓರಣಗೊಳಿಸಿದ ಉದ್ಯಾನಮಾದರಿಯದಲ್ಲ, ನೈಸರ್ಗಿಕವಾಗಿ ಹಬ್ಬಿದ ಅರಣ್ಯ ಮಾದರಿಯದು. ಇಲ್ಲಿರುವುದು ಉದ್ಯಾನಸೌಂದರ್ಯವಲ್ಲ, ಅರಣ್ಯಸೌಂದರ್ಯ. ಒಂದಿಷ್ಟು ಕಲಾತ್ಮಕತೆ ಕಡಿಮೆ ಇರುವ ಬೇಂದ್ರೆ Literatureನ್ನು ಈ "ವಾಙ್ಮಯ" ವಿಭಾಗದಲ್ಲಿ ಪರಿಗಣಿಸಬಹುದು. ಇಲ್ಲಿ ವ್ಯಷ್ಟಿಪ್ರಧಾನ "ಶೈಲಿ"ಗಿಂತ, ಸಮಷ್ಟಿಪ್ರಧಾನ "ರೀತಿ"ಯೇ ಎದ್ದು ಕಾಣುತ್ತದೆ. ಓದುವಾಗ ಇದು ಒಬ್ಬನು ಬರೆದ ಕೃತಿಗಿಂತ ಎಲ್ಲರೂ ಸೇರಿ ಬರೆದ ಕೃತಿಯೆಂಬ ಭಾವನೆ ಮೂಡುತ್ತದೆ. ಒಬ್ಬ ಕವಿಯ ಭಾಷೆಗಿಂತ ಒಂದು ದೊಡ್ಡ ಸಂಪ್ರದಾಯದ ಭಾಷೆಯೇ ಅಲ್ಲಿ ಪ್ರಧಾನವಾಗಿರುವುದರಿಂದ ಅಂತಹದನ್ನು ವಾಙ್ಮಯವೆಂದು ಕರೆಯಬಹುದಾಗಿದೆ.

೨

ಕಾಲಗತಿಸಿದಂತೆ ಅನ್ಯಭಾಷೆಯ ಸಂಪರ್ಕ ಅಥವಾ ಸ್ವಭಾಷೆಯ ಗತಾನುಗತಿಕ ಬಳಕೆಯಿಂದಾಗಿ, ಜನಭಾಷೆಯು Literatureದಲ್ಲಿ ಸುಂದರವಾಗಿ ಪ್ರಯೋಗವಾಗುವುದು ತಪ್ಪುತ್ತ

ನಡೆಯಿತೆಂದು ತೋರುತ್ತದೆ. ಹೀಗೆ "ಅಪ್ರಜ್ಞಾಪೂರ್ವಕ"ವಾಗಿ ಅದರ ಅಂದ ತಪ್ಪುತ್ತ ನಡೆಯುವಲ್ಲಿ, "ಪ್ರಜ್ಞಾಪೂರ್ವಕ"ವಾಗಿ ಅದನ್ನು ಅಂದಗೊಳಿಸುವ ಪ್ರಯತ್ನ ಜಾಗೃತವಾದ ಕಾರಣ, ಸರಳ ಅಭಿವ್ಯಕ್ತಿಯ "ದೇಶಿಪದ್ಧತಿ"ಯನ್ನು ಸಂಕೀರ್ಣ ಅಭಿವ್ಯಕ್ತಿಯ "ಮಾರ್ಗಪದ್ಧತಿ"ಯನ್ನಾಗಿ ಬೆಳೆಸುವ ಒಲವು Literatureದಲ್ಲಿ ಬೆಳೆಯಿತು. ಇದನ್ನು ಅನುಷ್ಠಾನಗೊಳಿಸಲು ಅಂದರೆ "ಸೌಂದರ್ಯ"ದ ಮೇಲೆ ಒತ್ತು ಕೊಡಲು ಅಂದಿನ ಬರಹಗಾರರಿಗೆ ಸೂಚಿಸುವ ಸಲುವಾಗಿ, ವಾಙ್ಮಯಕ್ಕೆ ಬದಲು ಕಾವ್ಯ ಪದವನ್ನು ಬಳಸುವುದು ಆರಂಭವಾಗಿರಬಹುದು. ಕಾವ್ಯ ಪದದ ಮೂಲಪ್ರಕೃತಿ "ಕವೃ". ಇದರ ಅರ್ಥ ವರ್ಣಿಸು, ಅಂದಗೊಳಿಸು ಎಂಬುದನ್ನು ಇಲ್ಲಿ ನೆನೆಯಬಹುದು. ಈಗ ವಾಲ್ಮೀಕಿಯಿಂದ ಕಾಳಿದಾಸನ ಕಡೆಗೆ (ರಾಮಾಯಣದಿಂದ ರಘುವಂಶದ ಕಡೆಗೆ) Literature ಹೊರಳಿತು. ಅಂದರೆ ಅದು ವಾಙ್ಮಯ, ಇದು ಕಾವ್ಯ. ಅದು ಸೃಷ್ಟಿ, ಇದು ಸಂಸ್ಕೃಷ್ಟಿ. ಅಪ್ರಯತ್ನಪೂರ್ವಕವಾಗಿ ಬೆಳೆಯುತ್ತಲಿದ್ದ ಅರಣ್ಯವನ್ನು ಪ್ರಯತ್ನಪೂರ್ವಕ ಉದ್ಯಾನ ಮಾಡುವಂತೆ, ಅಪ್ರಯತ್ನಪೂರ್ವಕವಾಗಿ ಭಾಷೆಯಲ್ಲಿ ಆಕಾರ ಪಡೆಯುತ್ತಲಿದ್ದ Epic of growthನ್ನು ಪ್ರಯತ್ನಪೂರ್ವಕವಾಗಿ Epic of art ಮಾಡುವ ಕೆಲಸ ಇಲ್ಲಿ ನಡೆಯಿತು. ಸಾಮಾನ್ಯರೂ(Mass) ಆಸ್ವಾದಿಸಬಹುದಿದ್ದ Literatureವು ಈಗ ಅಸಾಮಾನ್ಯರು (class) ಮಾತ್ರ ಆಸ್ವಾದಿಸುವಂತಾಯಿತು. ಅಂದರೆ classical ಸ್ಪರ್ಶ ನೀಡುವಲ್ಲಿ ಅದು classic (ಪರಿಣತಕೃತಿ ಅಥವಾ ಪರಿಷ್ಕೃತಕೃತಿ)ಯೆನಿಸಿಕೊಂಡಿತು. ಒಟ್ಟಾರೆ, ಕಲಾಪ್ರಜ್ಞೆಯ ಎಚ್ಚರದಿಂದ ಬರೆದುದು "ಕಾವ್ಯ"ವೆಂಬ ಅರ್ಥ ಈ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ವಿವರಣೆಯ ಬೆಳಕಿನಲ್ಲಿ ಹೇಳುವುದಾದರೆ ಕನ್ನಡದ ಪಂಪನ "ಕಥಾಪರಂಪರೆ" ವ್ಯಾಸರದಾದರೂ "ಕಾವ್ಯಪರಂಪರೆ" ಕಾಳಿದಾಸನದಾಗಿದೆ. ಪರಿಷ್ಕೃತ ಶೈಲಿಯ ಕುವೆಂಪು ಅವರೂ ಈ ಪರಂಪರೆಯ ಭಾಗವೆನಿಸುತ್ತಾರೆ. ಕನ್ನಡದಲ್ಲಿ ಪಂಪನೇ ಮೊದಲನೆಯ ಕವಿಯಾಗಿರುವದರಿಂದ ಇಲ್ಲಿ ಮುಂದೆಯೂ ರಘುವಂಶದಂಥ "ಕಾವ್ಯಪರಂಪರೆ"ಯ ಕೃತಿಗಳು ಹುಟ್ಟಿದುವೇ ಹೊರತು, ವ್ಯಾಸಭಾರತದಂಥ "ವಾಙ್ಮಯಪರಂಪರೆ"ಯ ಕೃತಿಗಳು ಹುಟ್ಟಲಿಲ್ಲ.

ಒಟ್ಟಾರೆ "ವಾಙ್ಮಯ"ವೆನ್ನುವುದು ಪ್ರಾಕೃತಿಕ ಸೌಂದರ್ಯಕ್ಕೆ ಒತ್ತುಕೊಡುವ, "ಕಾವ್ಯ"ವೆನ್ನುವುದು ಪರಿಷ್ಕೃತ ಸೌಂದರ್ಯಕ್ಕೆ ಒತ್ತುಕೊಡುವ ಶಾಬ್ದಿಕ ಕಲೆಗಳಾಗಿವೆ. ಅದು ಕಾವ್ಯ ಹುಟ್ಟುವುದು, ಇದು ಕಾವ್ಯ ಕಟ್ಟುವುದು.

೩

ಈ "ಕಾವ್ಯ"ಘಟ್ಟ ಸಂದರ್ಭದಲ್ಲಿ ಸೌಂದರ್ಯಕ್ಕೆ ಒತ್ತುಕೊಡುತ್ತ ನಡೆಯಲು, ಕವಿತೆಯನ್ನು ಸಿಂಗರಿಸುವ ಒಲವು ಜಾಸ್ತಿಯಾಗತೊಡಗುವಲ್ಲಿ, Literatureವು ಜನಹಿತವನ್ನು ಅಲಕ್ಷಿಸಿ, ಅಹಿತಕಾರಿ ರೀತಿಯಲ್ಲಿ ಬೆಳೆದು ಬರಹತ್ತಿತೆಂದು ಕಾಣುತ್ತದೆ. ಆಗ "ಪಾಪಮಿದು–ಪುಣ್ಯಮಿದು, ಹಿತಮಿದು–ಅಹಿತಪ್ರಕಾರಮಿದು, ಸುಖಮಿದು–ದುಃಖೋಪಾತ್ತಮಿದು" ಎಂದು ಪರ್ಯಾಯವಾಗಿ ಸೂಚಿಸುವ ಮೂಲಕ, ಬದುಕನ್ನು ಉದಾತ್ತಗೊಳಿಸುವುದನ್ನು ಬಿಟ್ಟು "ಅಭಿವ್ಯಕ್ತಿ ಸ್ವಾತಂತ್ರ್ಯ" ಹೆಸರಿನಲ್ಲಿ ಸಾಹಿತ್ಯವನ್ನು ಅನುದಾತ್ತ ನೆಲೆಗೆ ಒಯ್ಯುವ ಕೃತಿಗಳು ಹುಟ್ಟತೊಡಗಿದವು. ಆಗ ಚೆನ್ನಾಗಿ ಬರೆಯುತ್ತಾರೆ, ಸರಿಯಾಗಿ ಬರೆಯುವುದಿಲ್ಲ ಎಂಬಂಥ ಪರಿಸ್ಥಿತಿ ನಿರ್ಮಾಣವಾಗುತ್ತಿರಲು ಸುಂದರಕೃತಿ

ಅರ್ಥದ "ಕಾವ್ಯ" ಪರಿಭಾಷೆಯ ಸ್ಥಾನದಲ್ಲಿ ಜನಹಿತನಿಷ್ಠ ಕೃತಿ ಅರ್ಥದ "ಸಾಹಿತ್ಯ" ಪರಿಭಾಷೆ ಪ್ರಚಾರಕ್ಕೆ ಬಂದಿತೆಂದು ತೋರುತ್ತದೆ.

ಅಂದರೆ ಆತ್ಮಪಾತಳಿ ಮತ್ತು ಮನೋಪಾತಳಿಯ ಸಂಯುಕ್ತ ಬರವಣಿಗೆಯು, "ಕಾವ್ಯ" ಕಾಲಘಟ್ಟದಲ್ಲಿ ಕೇವಲ ಮನೋಪಾತಳಿಗೆ ಸರಿಯತೊಡಗಿತೆಂದು ಕಾಣುತ್ತದೆ. ಈಗ ಆಗಮಿಕವು ಉಪೇಕ್ಷಿತವಾಗಿ ಲೌಕಿಕವು ಪ್ರಧಾನವೆನಿಸಿತು. ಈ ಸಂದರ್ಭದಲ್ಲಿ ಪಂಪನ "ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ" ಎಂಬ ವಾಕ್ಯ ನೆನಪಾಗುತ್ತದೆ. ಲೌಕಿಕ ಕಾವ್ಯ ಅಥವಾ ಮನೋಪಾತಳಿಯ ಕಾವ್ಯವೆಂದರೆ ಎಂಟು ರಸಗಳಿಗೆ ಅವಕಾಶ ಮಾಡಿಕೊಡುವ ಬರೆವಣಿಗೆ. ಆಗಮಿಕಕಾವ್ಯ ಅಥವಾ ಆತ್ಮಪಾತಳಿಯ ಕಾವ್ಯವೆಂದರೆ ಎಂಟು ರಸಗಳನ್ನು ಉದ್ರೇಕಿಸಿ, ಅಂತಿಮವಾಗಿ ಅವುಗಳನ್ನು ಶಾಂತವೆಂಬ ಒಂಬತ್ತನೆಯ ರಸದಿಂದ ಉಪಶಮನಗೊಳಿಸುವ ಬರೆವಣಿಗೆ. ಆದುದರಿಂದ ಎಂಟು ರಸಗಳನ್ನು ಲೋಹಗಳೆಂದೂ ಅವುಗಳನ್ನು ಸುವರ್ಣಗೊಳಿಸುವ ಶಾಂತರಸವನ್ನು ಸಿದ್ಧರಸವೆಂದೂ ನಾಗಚಂದ್ರ ಕರೆದಿದ್ದಾನೆ. ಇವುಗಳಲ್ಲಿ ಒಂದು ಸಂತೋಷವನ್ನು ಇನ್ನೊಂದು ಆನಂದವನ್ನುಂಟು ಮಾಡುತ್ತವೆ. ಉದ್ರೇಕಸಂಸ್ಕಾರದ ಕವಿಮನಸ್ಸು ಸಮಾಜಕ್ಕೆ ಅಹಿತವನ್ನು, ಉಪಶಮನ ಸಂಸ್ಕಾರದ ಕವಿಮನಸ್ಸು ಸಮಾಜಕ್ಕೆ ಹಿತವನ್ನುಂಟುಮಾಡುತ್ತವೆ. ಕನ್ನಡದಲ್ಲಿ ಪಂಪ ಈ ಎರಡೂ ಬಗೆಯ ಕಾವ್ಯ ಬರೆದು, ಒಂದು ಹೊಸ ಕವಲನ್ನೇ ನಿರ್ಮಿಸಿದ. ಆದರೆ ೫೦ ವರ್ಷ ಕಳೆಯುವಷ್ಟರಲ್ಲಿ ನಾಗಚಂದ್ರ ಹುಟ್ಟಿ ಬಂದು, ಇವುಗಳಲ್ಲಿ ಒಂದು ಬಗೆಯ ಕಾವ್ಯವನ್ನೇ ಅಂದರೆ "ಆಗಮಿಕ" ಕಾವ್ಯವನ್ನೇ ಕವಿಯು ಲೋಕಕ್ಕೆ ನೀಡಬೇಕೆಂದು ಹೀಗೆ ಸಾರಿದ:

> ರಾಗದ್ವೇಷ ನಿಬದ್ಧಮಪ್ಪ ಕೃತಿಯಂ ನಿರ್ಬಂಧದಿಂ ಬಂಧ ಮಿಂ
> ಬಾಗರ್ಥಂ ಪೊಸತಾಗೆ ಪೇಳ್ದಖಿಳಮಂ ರಾಗಾವಿಳಂ ಮಾಳ್ಪ ವಿ
> ದ್ಯಾಗರ್ವಗ್ರಹ ಪೀಡಿತರ್ ಸ್ವಪರಬಾಧಾ ಹೇತುವಂ ದುಸ್ತರೋ
> ದ್ಯೋಗ ಕ್ಲೇಶಿತರಾಗಿ ಬಿತ್ತಿಬೆಳೆವಂತಕ್ಕುಂ ವಿಷೋದ್ಯಾನಮಂ॥

ಎಂದು ಪಂಪನ ಲೌಕಿಕಕಾವ್ಯ ಪರಂಪರೆಯನ್ನೇ ಪ್ರತಿಭಟಿಸಿದ. ಇದಲ್ಲದೆ ಅರಿಕೇಸರಿಯಂಥ ಸಾಮಾನ್ಯನನ್ನು ವಸ್ತುಮಾಡಿಕೊಳ್ಳುವುದೆಂದರೆ ಭಾಷೆಯ ದುರ್ಬಳಕೆಯೇ ಆಗಿದೆಯೆಂಬ ಅರ್ಥದಲ್ಲಿ "ನಾಯಕನನ್ಯನಾಗೆ ಕೃತಿ ವಿಶ್ರುತಮಾಗದು" ಎಂದು ಕಥಾನಾಯಕ ತತ್ವದಲ್ಲಿಯೂ ಪಂಪನನ್ನು ಪ್ರತಿಭಟಿಸಿದ. ಅವನು ಒಂದು ಬಗೆಯ ಮಾರ್ಗ ಸ್ಥಾಪಿಸಿ "ಆದಿಪಂಪ"ನೆನಿಸಿದರೆ, ಇವನು ಇನ್ನೊಂದು ಬಗೆಯ ಮಾರ್ಗ ಸ್ಥಾಪಿಸಿ "ಅಭಿನವ ಪಂಪ"ನೆಂದು ಕರೆದುಕೊಂಡ. ಇಂಥ ಮನೋಧರ್ಮ ಜಾಗೃತವಾದ ಯಾವುದೋ ಪ್ರಾಚೀನತಮ ಸಂದರ್ಭದಲ್ಲಿ "ಕಾವ್ಯ" ಪರಿಭಾಷೆಗೆ ಬದಲು ಸಾಮಾಜಿಕ ಹಿತ ಅರ್ಥದ "ಸಾಹಿತ್ಯ" ಪರಿಭಾಷೆ ಹುಟ್ಟಿಕೊಂಡಿರಬಹುದು. ಸೌಂದರ್ಯದ ತೀವ್ರ ಆಸಕ್ತಿಯು ಸಾಮಾಜಿಕ ಜವಾಬ್ದಾರಿಯನ್ನು ಮರೆಯುವಂತೆ ಮಾಡಿದಾಗ, ರಸೋದ್ರೇಕದ ಮೇಲೆ ಹೆಚ್ಚು ಒತ್ತು ಕೊಟ್ಟು– ತಾನು ಏನು ಬರೆಯುತ್ತಿದ್ದೇನೆಂಬ ಹೊಣೆಯನ್ನು ಬರಹಗಾರ ಮರೆತಾಗ, "ಸಾಹಿತ್ಯ"ವೆಂಬ ಪರಿಭಾಷೆ ಎಚ್ಚರಿಕೆ ರೂಪದಲ್ಲಿ ಬಳಕೆಗೆ ಬಂದಂತಿದೆ. ಬಸವಣ್ಣನವರು "ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ" ಎನ್ನುವುದೂ ಇದೇ ಅರ್ಥದಲ್ಲಿಯೇ. ನಿನಗೆ ಕೇಡಿಲ್ಲವಾಗಿ ಅಂದರೆ ಸಾಮಾಜಿಕ ನ್ಯಾಯಕ್ಕೆ ಕೇಡಿಲ್ಲದಂತೆಯೂ, ಅದೇ ವೇಳೆಗೆ ನಾನು ಒಲಿದಂತೆ ಅಂದರೆ ನನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆಯೂ ಬರೆವಣಿಗೆ ಮಾಡಬೇಕೆನ್ನುವ ಅವರ ಈ

ಮಾತು, ಸ್ವಾತಂತ್ರ್ಯದ ಹೆಸರಿನಲ್ಲಿ ಏನೇನನ್ನೊ ಬರೆದು ಸಮಾಜವನ್ನು ವಿಕಾರಗೊಳಿಸುವವರಿಗೆ ನೀಡಿದ ಎಚ್ಚರವಾಗಿದೆ. ಅಂದರೆ ಬರಹಗಾರ ವೈಯಕ್ತಿಕ ಸ್ವಾತಂತ್ರ್ಯ ಉಳಿಸಿಕೊಂಡು ಸಾಮಾಜಿಕ ನ್ಯಾಯವನ್ನು ಕಾಪಾಡಬೇಕೆಂಬ ಈ ಹೇಳಿಕೆ, ಜಾಗತಿಕ ಮನ್ನಣೆ ಪಡೆಯುವಂತಹದ್ದಾಗಿದೆ.

ಕನ್ನಡದಲ್ಲಿ ಈ "ಆಗಮಿಕ ಪ್ರಜ್ಞೆ"ಯ ಕವಿಗಳು ಕ್ರಮೇಣ ಮತಭ್ರಾಂತರಾಗುವಲ್ಲಿ ಆ ಪರಂಪರೆ ತನ್ನ ಅರ್ಥಕಳೆದುಕೊಂಡರೂ, ಆತ್ಮದ ಪಿಸುಮಾತು ನಮ್ಮಲ್ಲಿ ನವೋದಯದ ವರೆಗೆ ಉಳಿದುಕೊಂಡು ಬಂದಿತು. ಬೇಂದ್ರೆ, ಕುವೆಂಪು, ಮಾಸ್ತಿ ಅವರ ಬರೆವಣಿಗೆಯಲ್ಲಿ ಈ ಆಗಮಿಕ ಪ್ರಜ್ಞೆ (ಆತ್ಮಪ್ರಜ್ಞೆ) ಸಶಬ್ದವಾಗಿ, ನಿಶ್ಯಬ್ದವಾಗಿ ಆಗಾಗ ಕೇಳಿಸುವುದನ್ನು ಇಲ್ಲಿ ನೆನೆಪಿಸಿಕೊಳ್ಳಬೇಕು.

ಬಳಿಕ "ಪ್ರಗತಿಶೀಲ"ಸಾಹಿತಿಗಳು ಬರುತ್ತಲೇ ಸಾಹಿತ್ಯದಲ್ಲಿ ಆತ್ಮಪ್ರಜ್ಞೆಯ "ಅಭೌತಿಕ" ಅಂಶ ಕಳೆದುಹೋಗಿ, ಮನೋಪ್ರಜ್ಞೆಯ "ಭೌತಿಕ" ಅಂಶ ಪ್ರಧಾನವಾಯಿತು. ಆತ್ಮದ ಪಿಸುಮಾತು ನಿಶ್ಯಬ್ದವಾಯಿತು.

ಇದೂ ಸಾಲದೆಂಬಂತೆ ಅವಿಭಕ್ತ ಕುಟುಂಬಗಳು ಒಡೆದು ಹೋಗಿ "ಸದಸ್ಯ"ರು "ವ್ಯಕ್ತಿ"ಯಾಗುವಲ್ಲಿ, ವ್ಯಕ್ತಿಕೇಂದ್ರಿತಪ್ರಜ್ಞೆ, ಅನಾಥಪ್ರಜ್ಞೆ ಬೆಳೆಯುತ್ತಲೇ ಸಾಹಿತ್ಯದಲ್ಲಿ ಸಾಮಾಜಿಕ ಹಿತವೂ ಮಾಯವಾಗಿ, ನವ್ಯಸಾಹಿತ್ಯ ನಿರ್ಮಾಣವಾಯಿತು.

ದಲಿತ ಬಂಡಾಯದವರು ಬರುತ್ತಲೇ "ಕಾವ್ಯ"ದ ಕಲಾತ್ಮಕತೆಯೂ ಕಡಿಮೆಯಾಯಿತು. "ಕಾವ್ಯವಾಗಲಿ ಖಡ್ಗ, ಜನರ ನೋವಿಗೆ ಮಿಡಿವ ಪ್ರಾಣಮಿತ್ರ" ಎಂಬ ಧ್ಯೇಯವಾಕ್ಯ ಹುಟ್ಟಿಕೊಂಡಿತು. ಖಡ್ಗ ಕೈಗೆ ಬಂದಾಗ ಸಂಯಮ ಕಡಿಮೆಯಾಗುವುದು, ಸಂಯಮ ಕಡಿಮೆಯಾದಾಗ ಕಲಾತ್ಮಕತೆ ಕಡಿಮೆಯಾಗುವುದು ಸಹಜ. ಆದುದರಿಂದ "ಕಾವ್ಯವಾಗಲಿ ಖಡ್ಗ"ದ ಜೊತೆ "ಕಾವ್ಯವಾಗಲಿ ಕಲೆ" ಎಂಬ ಕಿವಿಮಾತನ್ನು ಇಂದು ದಲಿತ-ಬಂಡಾಯದವರಿಗೆ ಹೇಳಬೇಕಾಗಿದೆ.

ಕೊನೆಯದಾಗಿ, ಸಾಹಿತ್ಯವು ಆತ್ಮಮುಖಿಯಾದರೆ ಶಾಂತಿ-ನೆಮ್ಮದಿ, ಸಮಾಜಮುಖಿಯಾದರೆ ಸಿಟ್ಟು-ಹಿಂಸೆ ಕಾಣಿಸಿಕೊಳ್ಳುತ್ತದೆ. ಆಶ್ಚರ್ಯದ ಸಂಗತಿಯೆಂದರೆ ಬಸವಣ್ಣ ಸಮಾಜಮುಖಿಸಾಹಿತ್ಯ ಬರೆದರೂ; "ವೇದಕ್ಕೆ ಒರೆಯ ಕಟ್ಟುವೆ........" ಎಂದು ಮುಂತಾಗಿ ಸಿಟ್ಟಿಗೆದ್ದರೂ ತನ್ನ ವಚನರಚನೆಯಲ್ಲಿ ಕಲೆಗಾರಿಕೆ ಉಳಿಸಿಕೊಂಡನು. ಏಕೆಂದರೆ ಅವನ ಸಿಟ್ಟಿನಲ್ಲಿ ಗಾಂಧೀಜಿಯವರ ಸಿಟ್ಟಿನಂತೆ ಸಂಯಮವಿದೆ, ಸತ್ವವಿದೆ. ಇಂದಿನ ದಲಿತ-ಬಂಡಾಯದವರು ಬಸವಣ್ಣ-ಗಾಂಧೀಜಿಯವರಂತೆ ಸಿಟ್ಟಿಗೇಳುವುದು, ಸಮಾಜಹಿತಕ್ಕಾಗಿ ಸಾಹಿತ್ಯ ಬರೆಯುವುದು ಅಗತ್ಯವಿದೆ. ಆಗ ಕಾವ್ಯ, ಸಾಮಾಜಿಕ ಹಿತದ "ಖಡ್ಗ"ವಾಗುವ ಜೊತೆಗೆ, ಸಾಹಿತ್ಯಿಕ ಸೌಂದರ್ಯದ "ಕಲೆ"ಯೂ ಆಗುತ್ತದೆ.

■■

ಆಕರ : ಮಾರ್ಗ ಸಂಪುಟ-೪

೧೦

ಉಪೇಕ್ಷಿತ ಪ್ರಾಚೀನ ಕನ್ನಡ ಸಾಹಿತ್ಯ

Every reader is his or her book , every book its reader –ಎಂದು ಹೇಳುತ್ತಾರೆ, ಗ್ರಂಥಾಲಯ ವಿಜ್ಞಾನಿಗಳು. ಪ್ರತಿಯೊಬ್ಬ ವಾಚಕನಿಗೂ ಅವನದೇ ಆದ ಗ್ರಂಥವಿರುತ್ತದೆ; ಪ್ರತಿಯೊಂದು ಗ್ರಂಥಕ್ಕೂ ಆದರದೇ ಆದ ವಾಚಕನಿರುತ್ತಾನೆ–ಎಂಬ ಈ ಹೇಳಿಕೆಯು ಪ್ರತಿಯೊಂದು ಗ್ರಂಥದ ಸಾರ್ಥಕತೆಯನ್ನು ಎತ್ತಿ ಹಿಡಿಯುತ್ತದೆ.

ಈ ದೃಷ್ಟಿಯಿಂದ ನೋಡಿದರೆ, ಒಂದು ಭಾಷೆಯ ಎಲ್ಲ ಗ್ರಂಥಗಳು ತಮ್ಮತಮ್ಮ ವಾಚಕರ ಅಭೀಪ್ಸೆಗಳನ್ನು ಈಡೇರಿಸಲು ಹುಟ್ಟಿದ ಮಹತ್ವಪೂರ್ಣ ಸಾಂಸ್ಕೃತಿಕ ಆಸ್ತಿಗಳೆನಿಸುತ್ತವೆ.

ಕನ್ನಡದ ಇಂಥ ಸಾಂಸ್ಕೃತಿಕ ಸಂಪತ್ತಿಗೆ ಸಾವಿರವರ್ಷ ಮೇಲ್ಪಟ್ಟ ಇತಿಹಾಸವಿದೆ. ಈ ಅವಧಿಯಲ್ಲಿ ಹುಟ್ಟಿದ ಸಾವಿರ ಸಾವಿರ ಕೃತಿಗಳಲ್ಲಿ ಕೇವಲ "ಸಾಹಿತ್ಯಿಕ ಮೌಲ್ಯ"ದ ಅಂದರೆ ಭಾವನಿಷ್ಠ ಸಾಹಿತ್ಯದ ಸೃಷ್ಟಿ, ವಾಚನ, ಪ್ರಕಟನೆಗಳಿಗೆ ನಾವು ವಿಶೇಷ ಒತ್ತು ಕೊಡುತ್ತ ಬಂದಿದ್ದೇವೆ. ಪ್ರಾಚೀನಕಾಲದಲ್ಲಿ ಸಾಹಿತ್ಯಿಕ ಒಲವು, ಪುರಾಣ ಮತ್ತು ಚರಿತಪುರಾಣಗಳ ರಚನೆಗೆ ಮಹತ್ವ ನೀಡುವುದಾಗಿದ್ದಿತು–ಇಂದು ಕಥೆ ಕಾದಂಬರಿ ಇತ್ಯಾದಿಗಳ ರಚನೆಗೆ ಮಹತ್ವ ನೀಡುತ್ತಲಿರುವಂತೆ. ಇಂಥ ಸಂದರ್ಭದಲ್ಲಿ ಇತರ ಪ್ರಕಾರಗಳ ಮಹತ್ವವನ್ನು ಅರ್ಥಮಾಡಿಕೊಂಡು, ಅವುಗಳ ಸೃಷ್ಟಿಗೆ ಅವಕಾಶ ತೆರೆದುಕೊಟ್ಟವ, ಕಲ್ಯಾಣಚಾಲುಕ್ಯ ಚಕ್ರವರ್ತಿ ಇಮ್ಮಡಿ ಜಯಸಿಂಹ(೧೦೧೫–೪೨). ಅವನ ತರುವಾಯ ನಮ್ಮಲ್ಲಿ ಉದ್ದಕ್ಕೂ ತಕ್ಕಮಟ್ಟಿಗೆ ಸಾಹಿತ್ಯಶಾಸ್ತ್ರಕ್ಷೇತ್ರದಲ್ಲಿ ವ್ಯಾಕರಣ ಅಲಂಕಾರ ಛಂದಸ್ಸು ನಿಘಂಟು ಶಾಸ್ತ್ರಗಳು ಹುಟ್ಟಿದ್ದು, ಇವುಗಳ ಪ್ರಕಟನೆ ಅಧ್ಯಯನಗಳತ್ತ ಒಂದಿಷ್ಟು ಗಮನ ಕೊಟ್ಟಿದ್ದೇವೆ. ಆದರೆ ಗಣಿತ, ಜ್ಯೋತಿಷ್ಯ, ವೈದ್ಯ, ಸೂಪ, ಸಂಗೀತ, ಶಿಲ್ಪ, ನೃತ್ಯ, ಚಿತ್ರ ಇತ್ಯಾದಿ ಸಾಹಿತ್ಯೇತರಶಾಸ್ತ್ರ ಗ್ರಂಥಗಳು ತಕ್ಕ ಪ್ರಮಾಣದಲ್ಲಿ ಹುಟ್ಟಿದ್ದರೂ, ಅವು ನಮ್ಮ ಉಪೇಕ್ಷೆಗೆ ಗುರಿಯಾಗುತ್ತ ಬಂದಿವೆ. ವೈದ್ಯಶಾಸ್ತ್ರವೊಂದನ್ನೇ ತೆಗೆದುಕೊಂಡರೆ, ನರವೈದ್ಯದಲ್ಲಿಯೇ ಸ್ತ್ರೀವೈದ್ಯ, ಬಾಲವೈದ್ಯ ಇತ್ಯಾದಿ ಗ್ರಂಥಗಳೂ ಪಶುವೈದ್ಯದಲ್ಲಿಯೇ ಗೋವೈದ್ಯ, ಅಶ್ವವೈದ್ಯ, ಗಜವೈದ್ಯ ಇತ್ಯಾದಿ ಗ್ರಂಥಗಳೂ ನಮ್ಮಲ್ಲಿ ಸೃಷ್ಟಿಯಾಗಿವೆ. ಬೇರೆ ಬೇರೆ ಹಸ್ತಪ್ರತಿ ಭಾಂಡಾರಗಳಲ್ಲಿ, ವ್ಯಕ್ತಿವಶದಲ್ಲಿ ಉಳಿದುಕೊಂಡಿರುವ ಇವುಗಳ ಪ್ರಕಟನೆಗೆ ನಾವು ಆಸಕ್ತಿ ವಹಿಸಿಲ್ಲ, ಒಂದಿಷ್ಟು

ಪ್ರಕಟವಾದರೂ ಅಭ್ಯಾಸಕ್ಕೆ ಗಮನಕೊಡುತ್ತಿಲ್ಲ. ಪ್ರತಿವರ್ಷ ಹತ್ತಾರು ವಿದ್ಯಾರ್ಥಿಗಳು ಪಿಎಚ್.ಡಿ ಅಧ್ಯಯನ ಮಾಡುತ್ತಿದ್ದರೂ ಅವರಲ್ಲಿ ಒಬ್ಬರೂ ಈ ಸಾಹಿತ್ಯದ ಕಡೆಗೆ ಹೊರಳಿ ನೋಡುತ್ತಿಲ್ಲ. ರಾಜಾದಿತ್ಯನನ್ನೇ ತೆಗೆದುಕೊಂಡರೆ, ವ್ಯವಹಾರಗಣಿತ, ಕ್ಷೇತ್ರಗಣಿತ, ವ್ಯವಹಾರರತ್ನ, ಲೀಲಾವತಿ, ಚಿತ್ರಹಸುಗೆ, ಜೈನಗಣಿತಸೂತ್ರಟೀಕೋದಾಹರಣ ಮೊದಲಾದ ಗ್ರಂಥಗಳನ್ನು ಬರೆದಿದ್ದು, ಇಲ್ಲಿ ಅನೇಕ ಸ್ಥಳಜನ್ಯ(Indigenous) ವಿಚಾರಗಳು ಅಡಗಿರಬಹುದಾಗಿದೆ. ಇದಲ್ಲದೆ ಆ ಕಾಲದ-ಆ ಪ್ರದೇಶದ ಕಾಗಿಣಿ ವೀಸ ಪಾಗ ಪಣ ಗದ್ಯಾಣದಂಥ ನಾಣ್ಯಶಾಸ್ತ್ರದ, ಕಂಬ ಗಳೆ ಮತ್ತರಗಳಂಥ ಭೂಮಾಪನಶಾಸ್ತ್ರದ ಪರಿಭಾಷೆಗಳು ಮತ್ತು ಸ್ಥಳೀಯ ಲೆಕ್ಕಪದ್ಧತಿಗಳು ಸಿಗುತ್ತಿದ್ದು, ಇದನ್ನು "ಕುಂತಣಬಾಗೆಯ ಪರಿಭಾಷೆ'' ಅಂದರೆ ಪೂವಿನಬಾಗೆ(ಇಂದಿನ ರಾಯಬಾಗ)ಯ ಪರಿಭಾಷೆ ಎಂದು ಕರೆದಿದ್ದಾನೆ. ಹೀಗೆ ಸಾಹಿತ್ಯೇತರಶಾಸ್ತ್ರಗಳು ಕರ್ನಾಟಕಜ್ಞಾನವನ್ನು, ಅದರ ವಿವರಗಳನ್ನು ತೆರೆದು ತೋರಿಸುತ್ತಿದ್ದು, ಈ ಗ್ರಂಥಗಳ ಪ್ರಕಟನೆ-ಅಭ್ಯಾಸ ತಕ್ಷಣ ನಡೆಯಬೇಕಾಗಿದೆ.

ಇಂಥಹದೇ ಇನ್ನೊಂದು ಕ್ಷೇತ್ರ, ಟೀಕೆ ವ್ಯಾಖ್ಯಾನಸಾಹಿತ್ಯ. ಇದು ಸಂಸ್ಕೃತ-ಪ್ರಾಕೃತ ಕೃತಿಗಳಿಗೆ ಬರೆದ ಟೀಕೆ, ಕನ್ನಡ ಕೃತಿಗಳಿಗೆ ಬರೆದ ಟೀಕೆ ಎಂದು ಸಾಮಾನ್ಯವಾಗಿ ಎರಡು ಬಗೆಯಾಗಿದೆ. ಕನ್ನಡ ಸಾಹಿತ್ಯ ಕಣ್ಣು ತೆರೆದದ್ದೇ ಸಂಸ್ಕೃತ-ಪ್ರಾಕೃತ ಸಾಹಿತ್ಯಗಳ ಸಂಪರ್ಕದಲ್ಲಿ. ಒಂದು ಭಾಷೆಯ ಸಾಹಿತ್ಯವು ಟೀಕೆ-ವ್ಯಾಖ್ಯಾನ-ಅನುವಾದಗಳ ಮೂಲಕ ಇನ್ನೊಂದು ಭಾಷೆಯನ್ನು ಪ್ರವೇಶಿಸುವ ನಿಯಮದಂತೆ, ಸಂಸ್ಕೃತ-ಪ್ರಾಕೃತಸಾಹಿತ್ಯ ಕನ್ನಡದಲ್ಲಿ ಕಾಲಿಟ್ಟಿತು. ಮತ್ತು ಆಡುಭಾಷೆಯಾಗಿದ್ದ ಕನ್ನಡವನ್ನು ಗ್ರಾಂಥಿಕಗೊಳಿಸುವ ಕಾರ್ಯವನ್ನೂ ಪೂರೈಸಿತು. ಈ ಕಾರಣದಿಂದಾಗಿ ಶ್ಯಾಮಕುಂದಾಚಾರ್ಯ, ತೆಂಬಳೂರಾಚಾರ್ಯ ಮೊದಲುಗೊಂಡು ಅನೇಕ ಜೈನ ಟೀಕಾಕಾರರು ಸಂಸ್ಕೃತ-ಪ್ರಾಕೃತ ಕೃತಿಗಳಿಗೆ ಟೀಕೆ ಬರೆಯುವ ಮೂಲಕ ಅಲ್ಲಿಯ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಆಮೇಲೆ ಲಿಂಗಾಯತರು, ಬಳಿಕ ಬ್ರಾಹ್ಮಣರು ತಮ್ಮ ತಮ್ಮ ಧಾರ್ಮಿಕ ಸಾಹಿತ್ಯಗಳಿಗೆ ಟೀಕೆ ವ್ಯಾಖ್ಯಾನ ಬರೆಯುತ್ತ ಬಂದಿದ್ದಾರೆ. ಈವರೆಗೆ ಈ ಸಾಹಿತ್ಯ ಪ್ರಕಟವಾದದ್ದು ಸ್ವಲ್ಪ. ಅನೇಕ ಅಪರಿಚಿತ ಶಬ್ದಗಳಿಗೆ ಅರ್ಥ ಒದಗಿಸುವ ಇವು ತುಂಬ ಮಹತ್ವದ ಗ್ರಂಥಗಳೆನಿಸಿವೆ. ಹತ್ತನೆಯ ಶತಮಾನದ ಪ್ರಸಿದ್ಧಕವಿ ಸೋಮದೇವಸೂರಿಯ ಸಂಸ್ಕೃತ ನೀತಿವಾಕ್ಯಾಮೃತಕ್ಕೆ ೧೨ನೆಯ ಶತಮಾನದ ನೇಮಿನಾಥನು ಕನ್ನಡ ಟೀಕೆ ಬರೆದಿದ್ದು, ಇಲ್ಲಿಯ ಕ್ರಿಯಾ=ಮಾಟ(೩೫), ಸ್ಪರ್ಶ=ತೀಟ (೪೮), ಸಚಿವ=ಪೆರ್ಗಡೆ(೮೩), ಅಮಾತ್ಯ= ಪೆರ್ಗಡೆ(೧೯೦), ನಿಯೋಗಿ=ಪೆರ್ಗಡೆ (೧೯೩), ಸ್ನಾನವಸ್ತ್ರ=ಒಲ್ಲಣಿಗೆ(೨೦೪), ಸಿದ್ಧಾಯ= ತೆರಿಗೆ(೨೧೩), ಮೌಲ=ಪಳೆಯ (೨೩೦), ಪರಮಾನ್ನ=ತುಯ್ಯಲ(೨೫೯), ವ್ಯಾಯಾಮ= ಎಡೆಯಾಟ(೨೭೦), ಖಡ್ಗ= ಅಮ್ಮಾವು(೩೯೯), ಕೋಶಪಾನ=ಬಳಿನೀರು(೪೧೧), ಪಕ್ವಾನ್ನ =ಅಟ್ಟಕೂಳು (೪೪೩) ಎಂಬ ಶಬ್ದಾರ್ಥಗಳು ಅಪೂರ್ವವೆನಿಸಿವೆ. ಸಾಲದುದಕ್ಕೆ ಅಲ್ಲಲ್ಲಿ ಹೇಳಿದ ವಿವರಣೆಗಳು ಸಂಶೋಧನೆಗೆ ನೆರವಾಗುತ್ತವೆ. ಉದಾ: "ಕರಹಾಟರಾಜನಾದ ಕೈಟಭನು ವಿಷಲೇಪಿತ ಬಟ್ಟೆಯನ್ನು ಕಾಣಿಕೆಯಾಗಿ ಕೊಟ್ಟು ವಸುವೆಂಬ ರಾಜನನ್ನು ಕೊಂದನು"(೧೪೮), "ಹರಿಗೆ ಅಡ್ಡಾಯುಧಗಳನ್ನು ಹಿಡಿದ ಭದ್ರನೆಂಬವನು ಕಾಂಚೀಪತಿಯನ್ನು ಸೆರೆಹಿಡಿದನು"(೨೧೬), "ಕುಂತಲಾಧಿಪತಿ ಕಳಿಸಿದ ಸ್ತ್ರೀವೇಷಧಾರಿ ಗೂಢಪುರುಷನು ಕಿವಿಯ ಬಳಿ ಇಟ್ಟುಕೊಂಡಿದ್ದ ಕತ್ತಿಯಿಂದ ಪಲ್ಲವ ನರೇಂದ್ರನನ್ನು ಕೊಂದನು"(೨೯೫)-ಇತ್ಯಾದಿ ವಾಕ್ಯಗಳು ಇತಿಹಾಸದ ಮುಚ್ಚಿದ ಬಾಗಿಲಿನತ್ತ ಬೆರಳು ನೀಡುತ್ತವೆ.

ವೀರಶೈವಕ್ಕೆ ಬಂದರೆ ಇಲ್ಲಿ ವಾತುಲತಂತ್ರಟೀಕೆ, ವೀರಮಾಹೇಶ್ವರಾಚಾರ ಸಾರೋದ್ಧಾರಟೀಕೆ, ಸಿದ್ಧಾಂತಶಿಖಾಮಣಿಟೀಕೆ, ಯಜುರ್ವೇದಭಾಷ್ಯಟೀಕೆ, ವೀರಮಾಹೇಶ್ವರಾಚಾರ ಸಾರಸಂಗ್ರಹ ಟೀಕೆ ಇತ್ಯಾದಿ ಧಾರ್ಮಿಕ ಕೃತಿಗಳು ಹುಟ್ಟಿವೆ. ಕನ್ನಡ ಕೃತಿಗಳಿಗೂ ಬರೆದ ಕರಣಹಸಿಗೆ ಟೀಕೆ, ಮನೋವಿಜಯ ವ್ಯಾಖ್ಯಾನ, ಭಾವಚಿಂತಾರತ್ನಟೀಕೆ ಇತ್ಯಾದಿಗಳು ಸಿಗುತ್ತಿದ್ದು, ಸಾಮಾನ್ಯ ಮತ್ತು ವಿಶೇಷ ತಿಳಿವಳಿಕೆಗೆ ಇವು ತಪ್ಪದೇ ನೆರವಾಗುತ್ತವೆ.

ಇಂಥ ಟೀಕೆ ವ್ಯಾಖ್ಯಾನ ಗ್ರಂಥಗಳಲ್ಲದೆ ಲಘುಸಾಹಿತ್ಯಕೃತಿಗಳ ಸಂಪಾದನೆ, ಪ್ರಕಟನೆಯತ್ತ ನಾವು ಗಮನ ಕೊಡಬೇಕಾಗಿದೆ. ಗದುಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನಸಂಸ್ಥೆ "ವಚನಸಂಕಲನ ಸಂಪುಟ" ಹೆಸರಿನಡಿ ಈವರೆಗೆ ಆರು ವಚನ ಸಂಪುಟಗಳನ್ನು ಪ್ರಕಟಿಸಿದೆ. ಇದರಿಂದಾಗಿ ೨೭ ಬಿಡಿ ವಚನ ಸಂಕಲನಗಳು ಬೆಳಕು ಕಂಡು ಹೊಸ ಹೊಸ ವಚನಗಳು ಲಭ್ಯವಾಗಿವೆ. ಇದೇ ರೀತಿ ಈ ಸಂಸ್ಥೆ "ವೀರಶೈವ ತಾರಾವಳಿ ಸಂಪುಟ" (೬೩ ತಾರಾವಳಿಗಳು), "ವೀರಶೈವ ಅಷ್ಟಕಸಂಪುಟ" (೧೦೩ ಅಷ್ಟಕಗಳು), ೧೮ ಸ್ವರವಚನ ಸಂಪುಟಗಳನ್ನು ಪ್ರಕಟಿಸಿದೆ. ಮೈಸೂರಿನ ಸುತ್ತೂರು ಮಠ ೧೦ ಸ್ವರವಚನ ಸಂಪುಟಗಳನ್ನು ಹೊರತಂದಿದೆ. ಈ ಸಮಗ್ರ ಸಂಪುಟಗಳು ತುಂಬ ಮಹತ್ವದವುಗಳೆಂದೇ ಹೇಳಬೇಕು. ಉದಾ: ತಾರಾವಳಿ ಸಂಪುಟದ ದಂಡಿನ ತಾರಾವಳಿ, ಮದಕರಿರಾಜೇಂದ್ರನ ತಾರಾವಳಿ, ಮೈಸೂರು ದೊರೆಗಳ ತಾರಾವಳಿಗಳು ಅಪೂರ್ವ ಚಾರಿತ್ರಿಕ ಅಂಶಗಳನ್ನು ಹೊರಹಾಕಿವೆ. ಮುರಿಗೆ ತಾರಾವಳಿಯು ಚಿತ್ರದುರ್ಗಮಠದ ಮುರುಗಾಶಾಂತವೀರರ ಪರ್ಯಟನ, ಶಿವಾಜಿಯ ಭೆಟ್ಟಿ ಇತ್ಯಾದಿ ಹೊಸ ವಿಷಯಗಳನ್ನು ತಿಳಿಸುತ್ತದೆ. ಸುತ್ತೂರು ಮಠದ ಸ್ವರವಚನ ಸಂಪುಟಗಳಲ್ಲಿ ಇಡಿಕಿರಿದಿರುವ ಹೊಸ ಮಾಹಿತಿಗಾಗಿ ಶ್ರೀ ಎಸ್. ಶಿವಣ್ಣ ಸಂಪಾದಿಸಿರುವ ಸಂಪುಟ ೧, ಸಂಪುಟ ೨ ನೋಡಬಹುದು. ಇವುಗಳಲ್ಲಿ ಕೆಳದಿ, ಚಿತ್ರದುರ್ಗ, ಬಾಗಳಿ, ಸೋದೆ, ಕುಮ್ಮಟದುರ್ಗ, ಪುಂಗನೂರು ಇತ್ಯಾದಿ ರಾಜಮನೆತನಗಳ ಇತಿಹಾಸವಿದೆ. ಶ್ರೀಮತಿ ಭಾನುಮತಿ ಅವರ ೪ ಮತ್ತು ೧೦ನೆಯ ಸಂಪುಟಗಳು ಬಿಡಿಗರಿಗಳಲ್ಲಿ ಅಡಗಿಕುಳಿತಿದ್ದ ೨೪೮ ಮತ್ತು ೧೧೦ ಹಾಡುಗಳನ್ನು ಬೆಳಕಿಗೆ ತಂದಿವೆ. ಇವುಗಳ ಅನುಬಂಧದಲ್ಲಿರುವ "ಅಂಕಿತ ಸೂಚಿ" ಈ ಪ್ರಕಾರದ ಕರ್ತೃವೈವಿಧ್ಯವನ್ನು ಕಣ್ಣಿಗೆ ಕಟ್ಟುತ್ತದೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯ ಈ ದಿಸೆಯಲ್ಲಿ ಗಮನ ಹರಿಸಿ, ಬಸವಯುಗದ ವಚನೇತರಸಾಹಿತ್ಯ, ಕರಸ್ಥಲಸಾಹಿತ್ಯ, ನೋಂಪಿಯ ಕಥೆಗಳು, ಜೈನ ಹಾಡುಗಳು, ಹಳೆಯ ಲಾವಣಿಗಳು ಇತ್ಯಾದಿ ಸಂಪುಟಗಳನ್ನು ಪ್ರಕಟಿಸಿದೆ. ಇವು ಸಾಹಿತ್ಯೇತರ ಕಾರಣಗಳಿಗಾಗಿ ಮುಖ್ಯವೆನಿಸಿವೆ. "ನಾಗಸ್ತ್ರೀ ನೋಂಪಿಯ ಕಥೆ"ಯು "...... ಕರ್ಣಾಟಕ ದೇಶದೊಳು ತೇರುದಾಳವೆಂಬ ಪುರಮದನಾಳುವರಸು ವಂಕಭೂಪಾಲಂ. ಆತನ ಸ್ತ್ರೀ ಲಕ್ಷ್ಮೀಮತಿ" ಎಂದು ಆರಂಭವಾಗುತ್ತಿದ್ದು, ಇಲ್ಲಿಯ ವಂಕನೆಂಬವನು ಶಾಸನೋಕ್ತ ಗೊಂಕನೇ ಆಗಿದ್ದಾನೆ.

ನನ್ನ ಕೃಷಿಯನ್ನೇ ಕುರಿತು ಹೇಳುವುದಾದರೆ, ಇಂದು ಸಾಮಾನ್ಯವಾಗಿ ಸಂಶೋಧಕರಾದವರು ಇನ್ನೊಬ್ಬರು ಪ್ರಕಟಿಸಿದ ಆಕರಗಳನ್ನು ಅವಲಂಬಿಸಿ ಸಂಶೋಧನಕಾರ್ಯವನ್ನು ಪೂರೈಸುತ್ತಾರೆ.

ನಾನು ಮಾತ್ರ ಅಪ್ರಕಟಿತ ಕೃತಿಗಳನ್ನು, ಅದರಲ್ಲಿಯೂ ಚಾರಿತ್ರಿಕ ಕಾವ್ಯಗಳನ್ನು ಶೋಧಿಸಿ ಪ್ರಕಟಿಸಿದೆ. ಇದರಿಂದಾಗಿ ಈ ವರೆಗೂ ಉಪೇಕ್ಷೆಗೆ ಗುರಿಯಾಗಿದ್ದ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ನಿಂಬಸಾಮಂತ ಚರಿತೆಗಳಲ್ಲದೆ ಸಿರುಮಭೂಪಾಲನನ್ನು ಕುರಿತ ಮೂರು ಕೃತಿಗಳು ಬಯಲಿಗೆ ಬಂದವು. ಕುಮಾರರಾಮನನ್ನು ಕುರಿತು ಎರಡು ಕೃತಿಗಳು ಪ್ರಕಟವಾಗಿ, ಇನ್ನೆರಡು ಕೃತಿಗಳು ಪ್ರಕಟನೆಯ ದಾರಿ ಕಾಯುತ್ತಲಿವೆ. ಇವುಗಳ ಪ್ರಕಟನೆಯಿಂದಾಗಿ ಸಣ್ಣ ಅರಸು ಮನೆತನಗಳ ಮೇಲೆ ದೊಡ್ಡ ಬೆಳಕು ಚೆಲ್ಲಿದೆಯೆಂದೇ ಹೇಳಬೇಕು.

ಈ ದಿಸೆಯಲ್ಲಿ ಸಣ್ಣ ಸಣ್ಣ ರಚನೆಗಳಾದ ವಣಿಜೋತ್ಪತ್ತಿ, ಪಂಚಾಚಾರ್ಯ ನಿರ್ಣಯ, ಮಠಸ್ಥಲ, ಸಮಾಧಿಕ್ರಿಯಾ ಹೆಸರಿನ ಒಂದಕ್ಕಿಂತ ಹೆಚ್ಚು ಕೃತಿಗಳು ಸಿಗುತ್ತವೆ. ಇವುಗಳಲ್ಲಿ ವಣಿಜೋತ್ಪತ್ತಿಯು ವಣಿಜರ ೫ ವರ್ಗಗಳನ್ನು ಹೆಸರಿಸಿದೆ. ಇವರಲ್ಲಿ ಐದನೆಯವನೇ ಮಿಂಡಗುದ್ದಲಿಸೆಟ್ಟಿ. ಇಂದಿಗೂ ಮಿಂಡಗುದ್ದಲಿ ಅಡ್ಡಹೆಸರಿನ ಮನೆತನಗಳು ಉತ್ತರ ಕರ್ನಾಟಕದಲ್ಲಿವೆ. ಈ ಗುಂಪಿನಲ್ಲಿ ಐದನೆಯವರಾಗಿರುವ ಕಾರಣ, ಇವರನ್ನು ಪಂಚಮಸಾಲು ಎಂದೂ ಪರ್ಯಾಯನಾಮದಿಂದ ಕರೆಯುತ್ತಿದ್ದರು. ಇವರೇ ಇಂದಿನ ಲಿಂಗಾಯತ ಪಂಚಮಸಾಲಿಗಳು. "ಸಮಾಧಿಕ್ರಿಯಾ" ಕೃತಿಯು ಲಿಂಗಾಯತನ ಶವವನ್ನು ಸಮಾಧಿಮಾಡುವ ವಿವರಗಳನ್ನು ನೀಡುತ್ತಿದ್ದು, ಪ್ರಾಚೀನಕಾಲದಲ್ಲಿ ಜೀವಂತ ಸಮಾಧಿ ಹೋದ ಈ ಧರ್ಮೀಯರನ್ನು ಹೀಗೆ ಸೂಚಿಸುತ್ತದೆ.

ಪಾಲ್ಕುರಿಕೆ ಸೋಮ ಮೊಗ್ಗೆಯ ಮಾಯಿದೇವಗಳು
ಶ್ರೀಕರದ ಚಿಕ್ಕಮಾದನು ಕದಿರ ರೇಮನು ಕೃ
ಪಾಕರ ಸಮಾಧಿಯಾ ಸೋಮಯ್ಯನಜಗಣ್ಣ ನಿಲನೂರ ನಿಂಬವ್ವೆಯು।
ಈ ಕಲಿಯುಗದಿ ಶಂಭು ಕರೆದರೊಲ್ಲದೆ ಸಮಾ
ಧಿ ಕರವಧಿಕವೆನುತೋಂ ನಮ:ಶಿವಾಯ ಶಿಷ್ಯ
ನಾಕಲಿತ ಹಿಮಗಿರೀಶ್ವರ ಹಾಳಪಯ್ಯಗಳು ಮೆರೆದರೀ ಧರಣಿಯೊಳಗೆ॥

ಇಂಥ ದೊಡ್ಡ ಮಾಹಿತಿಗಳನ್ನು (ಕೆಲವು ಪ್ರತಿಗಳಲ್ಲಿ ರಾಘವಾಂಕನ ಹೆಸರೂ ಇದೆ) ಕ್ರಿಯಾಸಮಾಧಿ ಹೆಸರಿನ ಸಣ್ಣಗ್ರಂಥ ಒದಗಿಸುತ್ತದೆ.

ಇದೇ ರೀತಿ ಸ್ಥಳಪುರಾಣ, ಮಹಾತ್ಮೆಗಳು ಕನ್ನಡದಲ್ಲಿ ವಿಪುಲಸಂಖ್ಯೆಯಲ್ಲಿ ಸಿಗುತ್ತಿದ್ದು, ಇವುಗಳನ್ನು ತೀರ ಉಪೇಕ್ಷೆಗೆ ಗುರಿಪಡಿಸಲಾಗಿದೆ. ಮೈಸೂರು ಅರಸರ ಕಾಲದಲ್ಲಂತೂ ಕಮಲಾಚಲ ಮಹಾತ್ಮೆ, ಕಕುದ್ಗಿರಿ ಮಹಾತ್ಮೆ ಮೊದಲಾದುವು ಹುಟ್ಟಿವೆ. ಮೇಲುನೋಟಕ್ಕೆ ನಿಷ್ಪ್ರಯೋಜಕವೆನಿಸುವ ಇವುಗಳ ಮಹತ್ವದ ಬಗ್ಗೆ ಡಾ॥ ರಾ. ಚಿಂ. ಢೇರೆ ಅವರು ತಮ್ಮ ಚಕ್ರಪಾಣಿ ಕೃತಿಯಲ್ಲಿ (ಪು. ೨೮೭-೯೦) ಹೀಗೆ ಹೇಳುತ್ತಾರೆ: "ಸ್ಥಳಮಹಾತ್ಮೆ ಅಥವಾ ಸ್ಥಳಪುರಾಣಗಳು ಪುರಾಣಗಳ ಪರಿವೇಷದಲ್ಲಿ ರಚನೆಯಾಗಿದ್ದರೂ, ಅದರಲ್ಲಿ ಆಯಾ ಸ್ಥಳಗಳ ಸಾಂಸ್ಕೃತಿಕ ಇತಿಹಾಸ-ಭೂಗೋಲದ ಬಳಕೆಯನ್ನು ಕೌಶಲ್ಯದಿಂದ ಮಾಡಲಾಗಿರುತ್ತದೆ. ವಾಸ್ತವಿಕ ಸಾಮಗ್ರಿಯ ಮೇಲೆ ಪುರಾಣ ಪರಿವೇಷ

ತೊಡಿಸುವ ಈ ಮಹಾತ್ಮ್ಯಕ್ಕೆ ರಚನೆಕಾರರ ಪದ್ಧತಿಯು ಒಮ್ಮೆ ಅರ್ಥವಾಯಿತೆಂದರೆ, ಅಭ್ಯಾಸಕನಿಗೆ ಎಷ್ಟೋ ಲುಪ್ತ ಇತಿಹಾಸದ ಕ್ಷಣಗಳನ್ನು ಸ್ಥಳಪುರಾಣದಲ್ಲಿ ಹಿಡಿದಿಡಲು ಮತ್ತು ನಮ್ಮ ಸಾಂಸ್ಕೃತಿಕ ಪರಂಪರೆಯ ಹಲವು ಅಜ್ಞಾತಪರ್ವಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಎಲ್ಲಿ ಅಸಲೀ ಸಾಮಗ್ರಿಗಳ ಕೊರತೆಯಿಂದ ಅಡಚಣೆ ನಿರ್ಮಾಣವಾಗಿರುತ್ತದೋ, ಅಂಥಲ್ಲಿ ಸ್ಥಳಪುರಾಣದ ಸಹಾಯ ಪಡೆದರೆ, ನಮ್ಮ ಸಾಂಸ್ಕೃತಿಕ ಇತಿಹಾಸದ ಅಧ್ಯಯನ ಗತಿಶೀಲಗೊಳ್ಳುವುದರಲ್ಲಿ ಸಂಶಯವಿಲ್ಲ, ಎಂದು ನನ್ನ ಅನುಭವ ಹೇಳುತ್ತದೆ."

ಈವರೆಗಿನ ವಿವರಗಳನ್ನು ನೋಡಿದರೆ, ಕಳೆದುಹೋಗಿರುವ ನಮ್ಮ ಸಾಮಾಜಿಕ, ರಾಜಕೀಯ, ಧಾರ್ಮಿಕ ಇತ್ಯಾದಿ ಕ್ಷೇತ್ರಗಳ ಕೆಲವು ಕೊಂಡಿಗಳನ್ನಾದರೂ ಇಂಥ ಸಾಹಿತ್ಯದಿಂದ ಹುಡಿಕಿಕೊಂಡು, ಅವುಗಳ ನೆರವಿನಿಂದ ಆಯಾ ಕ್ಷೇತ್ರಗಳನ್ನು ಒಂದಿಷ್ಟು ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ. ಹೀಗಾಗಿ ಈ ಮತ್ತು ಇಂಥ ಉಪೇಕ್ಷಿತ ಸಾಹಿತ್ಯವನ್ನು ಶೋಧಿಸುವ, ಪ್ರಕಟಿಸುವ, ಅಭ್ಯಸಿಸುವ ಕೆಲಸವನ್ನು ನಾವು ಆದಷ್ಟು ಬೇಗ ಕೈಗೆತ್ತಿಕೊಳ್ಳುವುದು ಅವಶ್ಯವಿದೆ.

■■

ಆಕರ : ಮಾರ್ಗ ಸಂಪುಟ–೪

೧೧

ರನ್ನ ನಿಘಂಟು

ಕನ್ನಡ 'ನಿಘಂಟು ಸಾಹಿತ್ಯ'ದಲ್ಲಿ ಎತ್ತಿಹೇಳಬಹುದಾದ ಕೃತಿಗಳೆಂದರೆ ರನ್ನ ನಿಘಂಟು, ವಸ್ತುಕೋಶ, ಚತುರಾಸ್ಯ ನಿಘಂಟು, ಶಬ್ದಸಾರ, ಕರ್ನಾಟಕ ನಿಘಂಟು, ಕವಿಕಂಠಹಾರ, ಕಬ್ಬಿಗರ ಕೈಪಿಡಿ, ಕರ್ನಾಟಕ ಶಬ್ದಮಂಜರಿ ಇತ್ಯಾದಿಗಳು. ಇವುಗಳಲ್ಲಿ 'ರನ್ನನಿಘಂಟು'ವಿನ ಕರ್ತೃ ಕವಿರನ್ನನೆಂದು ಕವಿಚರಿತೆಕಾರರು ಮೊದಲಾದವರ ಅಭಿಪ್ರಾಯ. ಇವರಿಗಿರುವ ಒಂದೇ ಒಂದು ಆಧಾರವೆಂದರೆ ಪ್ರತಿಯೊಂದು ಪದ್ಯ 'ಕವಿರತ್ನಾ' ಅಥವಾ 'ಕವಿ ರನ್ನಾ' ಎಂದು ಮುಗಿಯುವುದು.

ಇದರ ಆದಿ ಮತ್ತು ಅಂತ್ಯಗಳಲ್ಲಿ ರನ್ನ ಕರ್ತೃತ್ವವನ್ನು ಪೋಷಿಸುವ ವಿವರಗಳಿಲ್ಲ. ಸ್ವತಃ ರನ್ನನಾಗಲೀ ಅನ್ಯಕವಿಗಳಾಗಲೀ ಇದು 'ರನ್ನ ಕೃತಿ'ಯೆಂದು ಹೇಳಿಲ್ಲವಾದುದರಿಂದ ಕೆಲವರು ಇದರ ಕರ್ತೃತ್ವದ ಬಗ್ಗೆ ಸಂದೇಹ ತಳೆದಿದ್ದಾರೆ. ಆದರೆ ಈಗ ಉಪಲಬ್ಧವಿರುವ ಕನ್ನಡ ನಿಘಂಟುಗಳಲ್ಲಿ ಇದು ಕಾಲದೃಷ್ಟಿಯಿಂದ ಪ್ರಾಚೀನತಮವಾಗಿ ತೋರುವುದೂ, 'ರನ್ನಂ ವೈಯಾಕರಣಂ' ಮೊದಲಾದ ಹೇಳಿಕೆಗಳಿಂದ ವ್ಯಕ್ತವಾಗುವ ಶಾಸ್ತ್ರಸಂಧಾನಮತಿಯೂ ಈ ಕೃತಿ, ರನ್ನರದಾಗಿರಬೇಕೆಂದು ನಂಬಿಸುತ್ತವೆ.

ಕವಿ ರನ್ನನ ಕೃತಿಗಳಲ್ಲಿ ಉಳಿದುಬಂದುವು ಗದಾಯುದ್ಧ, ಅಜಿತಪುರಾಣ, ಕಳೆದುಹೋದುವು ಚಕ್ರೇಶ್ವರಚರಿತೆ, ಪರಶುರಾಮಚರಿತೆ. ಇವುಗಳನ್ನು ಬಿಟ್ಟರೆ ಮೊದಲಿನ ಹನ್ನೆರಡು ಪದ್ಯಗಳಷ್ಟು ಸಿಕ್ಕ 'ರನ್ನ ನಿಘಂಟು' ಮಾತ್ರ ಅಳಿದುಳಿದ ಸ್ಥಿತಿಯಲ್ಲಿ ನಿಂತುಕೊಂಡಿದೆ. ಕವಿಚರಿತೆಕಾರರು ಈ ಕೃತಿಯ ಬಗ್ಗೆ "ನಮಗೆ ದೊರೆತ ಈ ನಿಘಂಟುವಿನ ಒಂದು ಅಸಮಗ್ರ ಪ್ರತಿಯಲ್ಲಿ ೧೨ ಕಂದಗಳಿವೆ. ಇವು ಪ್ರಾಯಿಕವಾಗಿ 'ಕವಿರತ್ನ' ಎಂದು ಮುಗಿಯುತ್ತವೆ. ಇವುಗಳಲ್ಲಿ ಎರಡನ್ನು ಉದಾಹರಿಸುತ್ತೇವೆ.

ಸಣ್ಣದೆನಲ್ ಕಿಱಿದಕ್ಕುಂ ।
ಪಣ್ಣೆನೆ ಮಾಡೆಂಬವಾಚಿ ಬಳಿಯೆನೆ ವಂಶಂ ॥
ಎಣ್ಣೆನೆ ಲೆಕ್ಕಿಪುದುಂ ಬಿಸು ।
ಗಣ್ಣೆನೆಲ್ ಗೊರವನಪ್ಪುದೆಲೆ ಕವಿರತ್ನಾ ॥

ಕೋಸಿತೆನಲ್ ಪೋಣಿಸುದುದು ।
ಸೂಸಿದುದೆನಲ್ಕೆ ತುಳ್ಕಿತೆಂಬುದುಂ ಪರಿಮಳಮಂ॥
ವಾಸಿತಮೆನೆ ಕಂಪುಂ ಮಿಗೆ ।
ಸೌಸವಮೆನೆ ಸಮ್ಮದಾರ್ಥಮೆಲೆ ಕವಿರತ್ನಾ ॥

ಎಂದು ೧೯೦೭ರಲ್ಲಿ ಹೇಳಿದ್ದಾರೆ. ಅಲ್ಲಿಂದ ೩೯ ವರ್ಷಗಳ ತರುವಾಯ ಅಂದರೆ ೧೯೪೬ರಲ್ಲಿ ಈ ಕೃತಿಯ ಬಗ್ಗೆ ಗಮನ ನೀಡಿದವರು, ತ.ಸು. ಶಾಮರಾಯರು. ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ದೊರೆತ ತ್ರುಟಿತವೂ ಸ್ಖಾಲಿತ್ಯಯುಕ್ತವೂ ಆಗಿರುವ ಅಪೂರ್ಣರೂಪದ ಒಂದೇ ಒಂದು ತಾಳೆಗರಿ ಹಸ್ತಪ್ರತಿಯನ್ನಾಧರಿಸಿ ಈ ನಿಘಂಟನ್ನು 'ರನ್ನಕಂದ' ಹೆಸರಿನಿಂದ ಸಾಹಿತ್ಯ ಪರಿಷತ್ಪತ್ರಿಕೆ (೩೧-೩ ಮತ್ತು ೪)ಯ ಮೂಲಕ ಪ್ರಕಟಿಸಿದರು. ಈ ಅಪೂರ್ಣ ಪ್ರತಿಯಲ್ಲಿದ್ದವು ಕೇವಲ ಹನ್ನೊಂದುವರೆ ಪದ್ಯಗಳು. ಬಹುಶಃ ಇದು ಕವಿಚರಿತೆಕಾರರು ನೋಡಿದ ಹಸ್ತಪ್ರತಿಯೇ ಆಗಿರಬಹುದು. ಇತ್ತೀಚೆ ಕೊಲ್ಲಾಪುರದಲ್ಲಿ ನನಗೆ ಸಿಕ್ಕ ೨ ಹಸ್ತಪ್ರತಿಗಳ ಮೂಲಕ ಈ ಕೃತಿ ಪ್ರಥಮಬಾರಿ ಇಡಿಯಾಗಿ (?) ಕನ್ನಡ ಪ್ರಪಂಚಕ್ಕೆ ಕಾಣಿಸಿಕೊಳ್ಳುತ್ತದೆ.

ಇಂದು ಮಹಾರಾಷ್ಟ್ರದ ಪ್ರಮುಖ ಪಟ್ಟಣವಾಗಿರುವ ಕೊಲ್ಲಾಪುರ, ಪ್ರಾಚೀನ ಕಾಲದಲ್ಲಿ ಕನ್ನಡ ಅರಸರ ರಾಜಧಾನಿಯಾಗಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಆಡುಂಬೊಲವೆನಿಸಿದ್ದಿತು. ಈ ಮಾತನ್ನು ಇಂದಿಗೂ ಸ್ಪಷ್ಟಪಡಿಸುವ ಹಲವು ಪ್ರಮಾಣಗಳಲ್ಲಿ ಅಲ್ಲಿಯ ಶ್ರೀ ಲಕ್ಷ್ಮೀಸೇನ ಜೈನಮಠವೂ ಒಂದು. ಈಗ ಇಡೀ ಪಟ್ಟಣವೆಲ್ಲ ಮಹಾರಾಷ್ಟ್ರಮಯವಾಗಿದ್ದರೂ ಶ್ರೀಮಠದ ಒಳಗೆ ಕನ್ನಡದ ಕಂಪು ತುಂಬಿನಿಂತಿದೆ. ನೋಡಲಿಕ್ಕೆ ಭವ್ಯವಾಗಿರುವ ಈ ಮಠದ ಇತಿಹಾಸವೂ ಭವ್ಯವಾಗಿದ್ದು, ಈ ಇತಿಹಾಸದ ಅಂಗವಾಗಿ ಅಲ್ಲಿ ಒಂದು ಹಸ್ತಪ್ರತಿಭಾಂಡಾರವೂ ಬೆಳೆದುಬಂದಿದೆ. ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳಿಗೆ ಸಂಬಂಧಪಟ್ಟ ಒಟ್ಟು ೬೪೬ ಕಟ್ಟುಗಳಲ್ಲಿ ೩೫೭ ತಾಳೆಗರಿ ಪ್ರತಿ, ೨೮೯ ಕಾಗದ ಪ್ರತಿಗಳಿವೆ. ಇವುಗಳಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದ ತಾಳೆಗರಿ ಪ್ರತಿಗಳು ೧೬೧, ಕಾಗದ ಪ್ರತಿಗಳು ೧೦೪. ಹೀಗೆ ಒಟ್ಟು ೨೬೫ ಕನ್ನಡ ಕಟ್ಟುಗಳಲ್ಲಿ ಸೇರಿಕೊಂಡಿರುವ ಕನ್ನಡ ಕೃತಿಗಳ ಸಂಖ್ಯೆ ಸುಮಾರು ಎರಡು ಸಾವಿರ.

ಈ ಶ್ರೀಮಂತ ಭಾಂಡಾರದಲ್ಲಿ 'ರನ್ನಕಂದ'ಕ್ಕೆ ಸಂಬಂಧಿಸಿದ ಎರಡು ಅಪೂರ್ವತಾಳೆಗರಿ ಹಸ್ತಪ್ರತಿಗಳಿವೆ. ೬೭ ಮತ್ತು ೧೧೯ ಇವುಗಳ ಕ್ರಮಸಂಖ್ಯೆಯಾಗಿದೆ.

೬೭ನೆಯ ಪ್ರತಿಯಲ್ಲಿ ವೈದ್ಯವಿಷಯ, ವಿಭಕ್ತ್ಯಾರ್ಥ, ರನ್ನನಿಘಂಟು, ಕರ್ನಾಟಕ ಸಂಜೀವಿನಿ, ಕವಿಜಿಹ್ವಾಬಂಧನಗಳಿವೆ. ಇದು ತುಂಬ ಹಳೆಯ ಪ್ರತಿಯಾಗಿದ್ದು ಅನೇಕ ದೋಷಪಾಠಗಳಿಂದ ತುಂಬಿದೆ. ಪ್ರತಿ ಜೀರ್ಣವಾಗಿದ್ದರೂ ಮಧ್ಯದ ರನ್ನನಿಘಂಟು ಭಾಗ ಮಾತ್ರ ಮುಕ್ಕಾಗದೆ ಉಳಿದುಕೊಂಡಿದೆ.

೧೧೯ನೆಯ ಪ್ರತಿಯು ೬೭ನೆಯ ಪ್ರತಿಗಿಂತ ಈಚಿನದು. ಈ ಕಟ್ಟಿನಲ್ಲಿ ಶಬ್ದಮಣಿದರ್ಪಣ, ಕರ್ನಾಟಕ ನಿಘಂಟು, ಚತುರಾಸ್ಯ ನಿಘಂಟು, ಕರ್ನಾಟಕ ಶಬ್ದಸಾರ, ರನ್ನನಿಘಂಟು, ಕರ್ನಾಟಕ ಸಂಜೀವಿನಿ ಕೃತಿಗಳಿವೆ. ಈ ಉಭಯ ಪ್ರತಿಗಳ ಸಹಾಯದಿಂದ 'ರನ್ನನಿಘಂಟು' ಪ್ರಕಟಿಸಬಹುದಾಗಿದೆ.

ಎರಡು ಪ್ರತಿಗಳು ಸಿಕ್ಕರೂ ಈ ಕೃತಿಯ ಶುದ್ಧಪಾಠವನ್ನು ಪ್ರಕಟಿಸುವುದು ಸಾಧ್ಯವಾಗುವುದಿಲ್ಲ. ಇದಕ್ಕೆ ಕಾರಣ, ಇಲ್ಲಿ ಹತ್ತನೆಯ ಶತಮಾನದ ಹೊತ್ತಿಗೆ ಬಳಕೆತಪ್ಪಿರಬಹುದಾದ ಮತ್ತು ಕನ್ನಡ ಕಾವ್ಯಗಳಲ್ಲಿ ಅಷ್ಟಾಗಿ ಬಳಕೆಯಾಗದ ಅಪರೂಪ ಪದಗಳಿರುವುದು ಮತ್ತು ಬಳಕೆ ತಪ್ಪಿದ ಪದಗಳನ್ನು ಲಿಪಿಕಾರರು ತಪ್ಪುತಪ್ಪಾಗಿ

ನಕಲಿಸುವಲ್ಲಿ ಅಪಪಾಠ ನಿರ್ಮಾಣವಾದುದು. ಹೀಗಾಗಿ ಇಲ್ಲಿ ಎರಡೂ ಹಸ್ತಪ್ರತಿಗಳ ಸರ್ವಪಾಠಗಳನ್ನು ಕೊಡಲಾಗಿದೆಯೇ ಹೊರತು ಪರಿಷ್ಕರಣ ಸಾಹಸಕ್ಕೆ ಕೈಹಾಕಿಲ್ಲ. ತಮಿಳು ಮತ್ತು ಹಳಗನ್ನಡಗಳ ವಿಶೇಷ ಹಿನ್ನೆಲೆಯಿರುವ ವಿದ್ವಾಂಸರು ಈ ಭಿನ್ನಪಾಠಗಳ ಬಲದಿಂದ ಶುದ್ಧಪಾಠವನ್ನು ನಿರ್ಣಯಿಸುವ ಕಾರ್ಯವನ್ನು ಮಾಡುವರೆಂದು ನಂಬುತ್ತೇನೆ.

ಈ ಕೃತಿಯ ಛಂದಸ್ಸಿನ ಬಗ್ಗೆ ಒಂದು ಮಾತು ಅವಶ್ಯ ಹೇಳಬೇಕು. ರನ್ನ ನಿಘಂಟು ೪೫ ಪದ್ಯಗಳ ಚಿಕ್ಕಕೃತಿ. ಇಲ್ಲಿಯ ಎರಡು ಚಂಪಕಮಾಲೆಗಳು (ನಂ. ೧೬, ೨೯), ಒಂದು ಪಂಚಪಾದದ ಚಂಪಕಮಾಲೆ (ನಂ. ೪೨), ಒಂದು ಅಪೂರ್ಣ ಚಂಪಕಮಾಲೆ (ನಂ. ೪೫) ಗಳನ್ನು ಬಿಟ್ಟರೆ ಮಿಕ್ಕ ೪೧ ಕಂದಪದ್ಯಗಳಾಗಿವೆ. ಕನ್ನಡ ಕಾವ್ಯಶಾಸನಗಳಲ್ಲಿ ಆಗಾಗ ಕಂಡುಬರುತ್ತಿದ್ದರೂ ಇಲ್ಲಿರುವ ಪಂಚಪಾದವೃತ್ತವೇ ಈಗಿನ ಮಟ್ಟಿಗೆ ಪ್ರಾಚೀನತಮವಾದುದು.

ಎರಡೂ ಹಸ್ತಪ್ರತಿಗಳಲ್ಲಿ ಈ ಕೃತಿ ೧ನೆಯ ಪದ್ಯದಿಂದ ಪ್ರಾರಂಭವಾಗಿ ೪೫ನೆಯ ಪದ್ಯಕ್ಕೆ "ರನ್ನ ನಿಘಂಟು ಸಮಾಪ್ತ ಮಂಗಳಮಹಾಶ್ರೀ" ಎಂದು ಮುಗಿಯುತ್ತದೆ. ಈ ಮಾತು ಪ್ರಸ್ತುತ ಕೃತಿಯ ಪೂರ್ಣರೂಪವನ್ನು ಸೂಚಿಸುತ್ತದೆ. ಆದರೆ ಕೊನೆಯ ಅಪೂರ್ಣರೂಪದ ಚಂಪಕಮಾಲೆ, ಈ ಕೃತಿ ಇನ್ನೂ ಇದೆಯೆಂಬ ಭಾವನೆಯನ್ನು ಹುಟ್ಟಿಸುತ್ತದೆ. ಇದಕ್ಕೆ ಪರಿಹಾರ, ಭವಿಷತ್ತಿನಲ್ಲಿ ಸಿಗುವ ಹಸ್ತಪ್ರತಿಗಳ ಸ್ವರೂಪವನ್ನು ಅವಲಂಬಿಸಿದೆ.

ಇಲ್ಲಿ ಹಸ್ತಪ್ರತಿ ೬೭ ಮತ್ತು ೧೯೯ಗಳಿಗೆ ಕ್ರಮವಾಗಿ, ಅ, ಆ ಎಂದು ಸಂಕೇತಕೊಟ್ಟು ಈ ನಿಘಂಟನ್ನು ಹೀಗೆ ಸಂಪಾದಿಸಲಾಗಿದೆ.

ರನ್ನ ನಿಘಂಟು

ಕುಳಿರೆನೆ [೧]ಶೈ[೧]ತ್ಯಂ ಮಿಳಿರೆನೆ ।
ಪೊಳೆದುದು ಬಿಲ್ಲಂ[೨]ದೆನ[೨]ಲ್ಕೆ ಮಾ[೩]ರ[೩]ಂಬರ್ಥಂ ॥
ಬಳೆದು*[ದೆ]*ನಲ್ಕೆಜಿಗಿದುದುಂ।
ಕಿಳಿರೆನೆ ವಾಜಿ[೪]ಯ[೪] ನಿನಾದಮೆಲೆ ಕವಿರತ್ನಾ ॥೧॥

ಬರೆಯೆನಲತ್ಯರ್ಥಂ [೧][ಮುಂ
ಮು][೧] ರಿಯನೆನೆ ಕಾಸಿದ ಮಳ[೨]ಲ್ಕಿಳಂ[೨]ಗೆನೆ ಗೆಳ[೩]ಸಂ[೩] ॥
ಮು[೪]ರಿ[೪]ಪೆನೆ ಮರಳಿದಭಾವಂ।
ಸಿರಿವಂತಿಕೆಯೆಂದೆನಲ್ಕೆ ಹುರಿಯೋಡಕ್ಕುಂ ॥೨॥

---

೧. ೧-೧ಸ್ಯೈ (ಅ, ಆ); ೨-೨ ದೆಸ (ಅ),ದಿನ (ಆ);
೩-೩ ರ್ಗೆ (ಆ); *-*ನೆ (ಅ, ಆ). ೪-೪ x (ಆ).

೨. ೧-೧ ಪಂಮ (ಅ, ಆ); ೨-೨ ಲ್ಕಿಳಿಂ (ಅ); ಲ್ಕೆಳಂ (ಆ);
೩-೩ ಸುಂ (ಅ); ೪-೪ ಳಿ (ಅ).

ಹಕ್ಕಿಯೆನ[೧]ಲ್ವಿಹಗಂ ನೆಜೆ[೧] ।
ಪಕ್ಕೆಯೆನಲ್ವಾಸು [೨]ವುಂ[೨]ಡೆಯೆಂದೆನೆ ಮೊಳಕಾ ॥
[೩]ಲ್ಕು[೩]ಕ್ಕೆನೆ ಬೆ[೪]ಳ್ಳ[೪]ಕ್ಕಿಯೆ [೫]ತಾ[೫]ನೆ ।
[೬]ಕ್ಕೆ[೬]ಕ್ಕೆನೆ ದಿಂಡುವಿಡಿದು ಬಪ್ಪು[೭]ದು[೭]ದಕ್ಕುಂ ॥ ೩ ॥

ಬಱಗೆನೆ ಬಿಸುಡೆಂಬರ್ಥಂ ।
[೧]ಬಲ[೧]ಮರ್ದನೆ ಅಂಕದೌಷಧಂ ತಾನಕ್ಕುಂ ॥
ಪೊಲಿಗೆನೆ ಬಿ[೨]ರ್ಚು[೨]ಗೆಯ ತೆ[೩]ಱಂ[೩] ।
ಕೆಲಕ[೪]ನೆನ[೪]ಲ್ಕಿಕ್ಕುಮಲ್ಲ[೫]ನೆ[೫]ಲೆ ಕವಿರತ್ನಾ ॥ ೪ ॥

ಅಂ[೧]ಚೆ[೧]ಮೆನಲ್ಕಂಜಿ[೨]ಕೆ[೨]ಯತಿ ।
ಬಂಚನೆಯನೆ ಮರಸಿಡಕ್ಕು ಬೆಳಕೆನೆ ದೀಪಂ॥
ಪೊಂಚೆನೆ ಪೊರ್ದಿದಬಗೆವಾ ।
ನೆಂಚಲೆನಲ್ಕೆಂಜಕಲುಪ್ಪುದೆಲೆ ಕವಿರತ್ನಾ[೩] ॥ ೫ ॥

[ಸ]ಣ್ಣದೆನದಲ್ಕಿಱಿದಕ್ಕುಂ ।
ಪಣ್ಣೆನೆ ಮಾಡೆಂಬ ವಾಚಿ ಬಳಿಯನೆ ವಂಶಂ॥
ಎಣ್ಣೆನೆ ಲೆಕ್ಕಿಪುದುಂ ಬಿಸು ।
ಗ*[ಣ್ಣ]*ನೆನಲ್ಗೊರವನಪ್ಪನೆಲೆ ಕವಿರತ್ನಾ ॥ ೬ ॥

ಕೋ[೧]ಸಿ[೧]ತೆನಲ್ಬೋಣಿಸಿದುದು ।
ಸೂಸಿದುದೆನೆ [೨]ತು[೨]ಳ್ಕಿತೆಂಬುದುಂ ಪರಿಮಳಮುಂ ।
ಬಾಸತ[೩]ಮೆ[೩]ನೆ ಕಂಪುಂ ಮಿಗೆ।
*[ಸೌ]*ಸಾಸವಮೆನೆ ಸಮ್ಮದರ್ಥಮೆಲೆ ಕವಿರತ್ನಾ ॥ ೭ ॥

ಸುಗಿಪವುಮೆನೆ ಸುಲಿಹಂ ತಾಂ।
ತೆಗಳೆನೆ ಪೆಳಗು [೧]ಳ್ಕಿ[೧]ತೆಂದೆನಲ್ಪುದು[೨]ಮಂ ತಾಂ[೨] ॥
[೩]ಬಗ[೩] ಸೆನೆ ಮನ[೪]ವಿ[೪]ಟ್ಟುದು ಮುಂ ।
ನೆಗ[೫]ಮ[೫]ದೆನಲ್ ದೊಡ್ಡಿತಪ್ಪು[೬]ದೆ[೬]ಲೆ ಕವಿರತ್ನಾ ॥ ೮ ॥

---

೩. ೧-೧ ಲ್ವಿಹಂಗಂ ನೆಜೆ (ಅ), ಗಂಡಿಲೆಲ್(ಆ); ೨-೨ ಕುಂಕು (ಅ); ೩-೩ ಕು (ಆ); ೪-೪ ಳ್ವೆ (ಆ); ೫-೫ ತತಾ (ಆ); ೬-೬ ಕ್ಕೆ (ಆ); ೭-೭ ದ (ಆ).

೪. ೧-೧ ಬಲಮದ (ಆ); ೨-೨ ಚ್ಚು (ಅ); ೩-೩ ಠಂ(ಆ); ೪-೪ ನಕ್ಕೆ (ಆ); ೫-೫ ಮೆ (ಅ).

೫. ೧-೧ ಕ (ಅ); ೨-೨ ಗೆ (ಅ);
೩-೩ ವಂಶಂ ಎಣ್ಣೆಲೆ ಲೆಕ್ಕಿಪುದುಂ ಬಿಸುಗಣ್ಣೆನಲ್ಗೊರವನಪ್ಪನೆಲೆ ಕವಿರತ್ನಾ(ಆ). (ಮುಂದಿನ ಪದ್ಯ ಪಾಠವಿದು).

೬. ಸೊ (ಅ, ಆ). *-* ಣ್ಣೆ (ಅ. ಆ).

೭. ೧-೧ ಪಿಸಿ (ಆ); ೨-೨ ತ (ಅ); ೩-೩ಯೆ (ಆ). *-* ಸಾ (ಅ. ಆ.)

೮. ೧-೧ ಣಿಸಿ (ಆ); ೨-೨ ದುಂತಾ (ಆ); ೩-೩ ಗೆ (ಆ); ೪-೪ ಮಿ (ಆ); ೫-೫ ದು (ಅ); ೬-೬ ವೆ (ಆ)

ಅಱಿಲೆನೆ ತಾರಗೆ [೧]ತಿಟ್ಟೆಂ[೧] ।
ದು [೨][ಱಿ ಬಲ್‌ಬೈಗುಳಿನಿಸುನನಸೆಂ][೨] ದೆನೆ ದಿಟಮುಂ ॥
ಗಱಿವೂ[೩]ವೆ[೩]ನೆ [೪]ಕೇ[೪]ದಗೆ [೫]ಪಡಿ[೫] ।
ಯಱಿವಕ್ಕಿಯೆ[೬]ನೆಯ[೬] ನಲ್ಕೆ ಕೋಕಿಲನಕ್ಕುಂ ॥ ೯ ॥

ಕೈವಟ್ಟ[೧]ಲ್ ಸ[೧]ಟ್ಟುಗೆಮುಡಿ ।
ಪೊಯಿವೆಕ್ಕಲ್ ಪೊಯಿಗಿಲಂ ಮಡಂತ[೨]ಳ[೨] ಜೋಳಂ॥
ಕೈವಲೆ ಕಣ್ಬಲೆ [೩]ಜ[೩]ಱಿಸುಳಿ ।
ಕೈಪಿಡಿಯೆಂಬುದನೆ ತಿಳಿಯೆ ಕಬ್ಬಿಗರರಸಾ ॥ ೧೦ ॥

ಬಲಯ [೧]ರಮೆ[೧]ನೆ ತ[೨]ಲೆವಾಗಿ[೨]ಲು ।
ಕ[೩] ಲ[೩]ಗಲಮೆನೆ ಕೂ[೪]ಡಿ[೪]ಬೆರಸಿದಕ್ಕುಂ ನೈಲಂ।
ಗಲಮೆನೆ ಚೆಲ್ವಿಕೆ ಸ[೫]ಲೆ[೫]ಸ್ಸೈ ।
ಗೆಲಮೆನೆ ತಾಂ ಪುಣ್ಯಶಕ್ತಿಯಲೆ ಕವಿರತ್ನಾ ॥ ೧೧ ॥

ತೋರ್ಪೆ[೧]ನೆ[೧] ಕಾಣ್ಕೆ ಮುಸುರ್ಪೆನೆ ।
ವಾರ್ಪೆನೆ ಕೈವಿಡಿದುದಕ್ಕುಮಿಳಿಪೆ[೨]ನೆ ಸೋಲಂ[೨] ॥
ಕೂರ್ಪೆನೆ ನಿಲುವೆರಗೆನೆ ಮೋ।
ಲಾರ್ಪೆನೆ ಸು[೩]ಸ್ನಪ[೩] ಮಪ್ಪುದೆಲೇ ಕವಿರತ್ನಾ ॥ ೧೨ ॥

ಊರ್ಪೆನೆ ಕೀಲಿಸಿದು [೧]ದು[೧] ಕ ।
[೨]ಣ್ಣಾರ್ಪೆ[೨]ನೆ ನೋಮ್ಪಿಜ್ಜುಗಂ ಮಿಳಿರ್ಪೆನೆ ಮುರಿಪಂ॥
ಕಾ [೩]ಪೊ್ರಱ[೩]ಯೆನೆ ಮಳೆಗಾಲಂ।
[೪]ನೇರ್ಪೊ್ರ[೪]ಱೆಯೆನೆ ಅಱಿಮೆ[೫]ಯೆಳೇ[೫]ಯಲೆ ಕವಿರತ್ನಾ ॥ ೧೩ ॥

ಭಂಡಣಮೆ[೧]ನೆ[೧]ಪುಯ್ಯಲ್ಪಲ ।
ಬಂಡೆನೆ ಜೇನ್ ಪೆರಬಳಿಯನೆಂದೆನೆ ಪಾಣ್ಬಂ[೨] ॥
ಗುಂಡೆನೆ ನೆರವಿ ತುಳಿಲ್ಪ[೩]ಱಿ[೩] ।
ಗೊಂಡೆನೆ ನ[೪]ಲ್ವೀ[೪]ರರಸನೆಲೇ ಕವಿರತ್ನಾ ॥ ೧೪ ॥

---

೯. ೧-೧ ವಿಟ್ಟಂ (ಅ); ೨-೨ ರೆರೆ ಬಿಲ್ಗಳ್ಳಿನಸುವಿಯಮೆಂ (ಅ); ಕ್ಷ ಬೆಲ್ಗಳೆನ ಸುಧೆಯಮೆಂ (ಆ); ೩-೩ ವೆಂದೆ (ಅ); ಯೆಂದೆ (ಆ); ೪-೪ ಗೇ (ಅ, ಆ); ೫-೫ ಗೆಪ್ಪಪಡಿ (ಅ); ೬-೬ ನೆಯ (ಅ); ಯೆ (ಆ).

೧೦. ೧-೧ ಲೆ (ಅ); ೨-೨ ಲೆ (ಆ); ೩-೩ ಬ (ಆ).

೧೧. ೧-೧ ಂಮೆ (ಆ); ೨-೨ ಲೆ (ಆ); ೩-೩ ಲೆ (ಅ); ೪-೪ ಡೆ (ಆ); ೫-೫ ಲ (ಅ).

೧೨. ೧-೧ x (ಆ); ೨-೨ ಸೋಲ (ಆ); ೩-೩ ಸ್ನಿಹ (ಆ).

೧೩. ೧-೧ ದ (ಅ); ೨-೨ ಣ್ಗೊಪ್ಪೆ (ಅ); ೩-೨ ಪೊ್ವಜೆ (ಅ); ೪-೪ ಪೊ್ವ (ಅ); ೫-೫ x (ಆ).

೧೪. ೧-೧ ನಲ್ (ಆ); ೨ ಈ ಚರಣದಲ್ಲಿ ಛಂದೋದೋಷವಿದೆ. ೩-೩ ಜೆ (ಅ); ೪-೪ ಲ್ವೀ (ಆ).

ಎಜೆಯ ೧ಜೆ೧ಯಂ ತೊಳ।
೨ರ್ಪಜಿವಜಿವಂ೨ ಸಗ್ಗಿಗರ ಪಿರಿಯನುರು ಬಳಿಗಂ ಪಾ।
ಲೆಜಿಕಿ೩ಲುಣಿ೩ವಕ್ಕಿದೆ೪ಜಿಂ೪।
ನಿಜಿಬಜಿಗಂ ಪೊನ್ನಬಸುಜಿನೆಲೆ ಬಿದಿ ರತ್ನಾ || ೧೫ ||

೧ವೃ||೧ ಮುಗಿಲಲ೨ರೇ೨ಜಿದಂ ಸಿರಿಮಗಂ ನೆಲೆವೆಣ್ಣರ ೩ಸಂ೩ ನೆಲಕ್ಕರಂ।
ಬಗೆದಿಳಿಗಂ ಮರ್ದುಂ ೪ಬಲಿಗ೪ನ೫ಚ್ಚರಮೊರ್ಮೊದಲೋ೬ದಿ೬ಗಂ ಸುಳುಂ।
ಬೆಗಡಜಿಗಂ ಸೊಗಂಬೋಜಿಗನೆಚ್ಚರವಾಳಿಗ ವಾಳವಾಳಿಗಂ।
ತೆಗ೭ಲು೭ಡೆಗಂ ಪೊಗ೮ಳ್ಛ೮ಡಿಗನೆಂದೆನೆ ನೀಂ ತಿಳಿ ಬೊಮ್ಮನೆಂಬುದಂ || ೧೬ ||

ಸೊಂಪುವ೧ಜಿ೨ಯಿಂಪುಗ೩ಳಿ೩ವ೪ಲಿ೪।
ಗಂಪುಳಿಲಿಗೆ ೫ಯುಣಿಸು೫ ಸಾಸದಡಿ ೬ಕಿಂ೬।
ಲ್ಗೆಂ ಪಿಡಿಕೆ ಬೆವೆತುಳಿರ್ವಡಿ।
ಗುಂಪೆ೭ನೆ೭ ತಿಳಿ ಕೈಪೆವರನೆನಿಪ್ಪುದು ರತ್ನಾ || ೧೭ ||

ಅಜಿಯಮೆಯ೧ದೆ೧ಯ ಸೊಂಪುಸೆ೨ದೆ೨ಯ।
ಪೊಜಿಗೆಳೆಯಳ ಬೇಟ೩ದಾಣದೊಜಿ ಕಣ್ಣೆ೪ತು೪ಪ।
ಲ್ಗು೫ಜಿ೫ ಪಸಡಿಕೊ೬ಲ್ಗೆ೬ ಬನವೆ।
ಣ್ಗುಜಿಪೆನಾಂ ನೆಲ್ಲಿ೭ಮ೭ರನೆನಿಪ್ಪುದು ರತ್ನಾ || ೧೮ ||

ತಳಿರ್ಗಣೆನ ಬಲ್ಬಸದಿಯ।
ಬ೧ಳಿ೧ಗವ೨ಜಿ೨ಗೆ ಬಳಸಿ ನಜಿಕೆ ಇಂಗೋಲಿ೩ರ್ಪಿಂ೩।
೪ಗೆಳೆ೪ಮುಗಿ೫ಲೆ೫ಳ್ದೊಜೆಯೆಂದೆನೆ।
ತಿಳಕಬ್ಬೆಂದೆಯ್ದೆ ಬೆಳ್ಳಿವೆಸರಾಂತ೬ವ೬ನೇ || ೧೯ ||

ಸಾಸವದೊಟ್ಟಿಲ್ಮೆಲ್ಲಡಿ।
ಬಾನರ್ಪೆ೧ಣೆ೧ ವಕ್ಕಿವಾಡಮಗಲಿದರೆಡೆ ಕಂ।
ಣ್ಬಾಸ೨ಣಿ೩ಕೆ೩ನೆ೪ಲನಮ೪ಬೆ೫ಟ್ಟೊ।
ಳ್ವಾಸ೫ಟಿ೫ ಕಣ್ಬುಳಿಲೆನಿಪುದೆಲೇ ಕವಿರತ್ನಾ || ೨೦ ||

---

೧೫. ೧-೧ ಜೆಜೆ (ಅ); ೨-೨ ಪಿರಿವರಿವಂ (ಅ); ೩-೩ ಣ (ಅ); ೪-೪ ರಂ (ಅ).
೧೫. ೧-೧ x (ಅ); ೨-೨ ಜೇ (ಅ); ೩-೩ ಸು (ಅ); ೪-೪ ಬಿಲಿಗಿ (ಅ).
೧೬. ೧-೧ x (ಅ); ೨-೨ ಜೇ (ಅ); ೩-೩ ಸು (ಅ); ೪-೪ ಬಿಲಿಗಿ (ಅ);
೫-೫ ನಮ (ಅ); ೬-೬ ಡಿ (ಅ); ೭-೭ ಳು (ಅ); ೮-೮ ಳ್ವ (ಅ).
೧೭. ೧-೧ ರೆ (ಅ); ೨-೨ ರೆ (ಅ); ೩-೩ ರಿ (ಅ); ೪+ ಕಾಗೆ (ಅ);
೫ + ಸಾಸು (ಅ); ೬-೬ ಕಿ (ಅ); ೭-೭ x (ಅ).
೧೮. ೧-೧ ಮೆ (ಅ); ೨-೨ ದಿ (ಅ); ೩+ ವಾ (ಅ); ೪-೪ ರು (ಅ);
೫-೫ ರಿ (ಅ); ೬-೬ ಲ್ಕೆ (ಅ); ೭-೭ ವ (ಅ).
೧೯. ೧-೧ ಳೆ (ಅ); ೨-೨ ತಿ (ಅ); ೩-೩ ರ್ಪಂ(ಅ); ೪-೪ ಗಿಳಿ(ಅ);
೫-೫ (ಅ); ೬-೬ x (ಅ).
೨೦. ೧-೧ ಣ (ಅ); ೨-೨ ಲಿ (ಅ); ೩-೩ ನೆನೆ (ಅ); ೪-೪ ಬ (ಅ);
೫-೫ x (ಅ).

ಮ^ಱುನೆಲೆ^ ಸಾಸವದಾಣಂ ।
ನಿಱುಬೆಳಗೆನೆ ಬಾಯಕೆಂಪು ಮೊಗಸಿರಿ ಪೊರ್ದಿಂ ।
ಗರಕೆಯ^ರಲಂ^ಬ ನೆರವಿಗೆ ।
ತುಱುಗಿಪ್ಪೆನೆ ತಿಳಿಗೆ ವೀ^ಳ^ಯಂ ಕವಿರತ್ನಾ ॥ ೨೧ ॥

ತೊಳ್ಗಿದನೆನೆ ಪೊಡವಟ್ಟಂ ।
ಗಿಳ್ಗಿದನೆನೆ ಗಿಡ್ಡನವಿಳನೆಂದೆನೆ ಕುಱುಬಂ ।
^ಪುಳ್ಗಿದನೆನೆ^ಕುರುಬಂ ತಳ ।
ವ^ಳ್ಗಿ^ ದನೆನೆ ಬೆಗಡುದೊಂಡವಂ ಕವಿರತ್ನಾ ॥ ೨೨ ॥

ದೋಷವಿನಿತೆಳಸದಿರು ನೀಂ ।
ಲೇಸಾಗಿರೆ ಪೇಳ್ದ ಕನ್ನಡಂಗಳ ತಿಳಿಯ^ಲ್^ ।
ಕಾಮರಮ ^ಪಿಡಿ^ ದೊಡಾವಂ ।
ಮಾಸಱಸುಳಿನಿಟ್ಟಿಸದೊಡೆನೇಸರ್ಗಿಳಿದೆ ॥ ೨೩ ॥

ಬ^ಳಾಯ^ಲ್ಕುಡು ಬೆಳ^ಗ^ ।
ಲ್ತೆಳಾ^ಱವು^ ಬೆಳಸು ಮೊದಲನೋಟಮೆನಲ್ಲಿಂ ।
ಚುಳಾ ಬಲ್^ಬ^ಸದಿಯ ಬಗೆ ।
ಗುಳ್ಳಾಗಲ್ ನೈ^ದ್^ಲಱಿಗೆ ನೀಂ ಕವಿರತ್ನಾ ॥ ೨೪ ॥

ಮುಗಿಲರಲೊಗೆಗೈಗೂಟಂ ।
ಬಗೆದೊಱೆ ಪಾಲೊ ^ಱ^ಗೆ ತಕ್ಕ^ಗೆ^ನೆಯೊಳ್ದಾವರೆ ॥
ಮುಗು^ಳೆಂ^ದಱಿ ನೆಗಳ್ದವೆನೆ ।
ಮಿ ಗೆ ಜಾಜಿಯ ಬೆಳ್ಳಿ^ಗೂ^ರ್ತವೆಸರಾಂತ^ವ^ನೇ ॥ ೨೫ ॥

ಗೊ^ರ್ಬೆ^ನೆ ಗಂಭೀರಂ ಪ^ಱ^।
ಪರ್ಬಿದುದೆನೆ ಬಳ್ಳಿವರಿದುದಕ್ಕುಂ ದೈ^ತ್ಯಂ^ ॥
ಮರ್ಬುಸುಳಿಕಾ^ರ^ರೆನೆ ಪೊ^ಳ^।
ದುರ್ಬೆನೆ ಸಿಡಿಲಪ್ಪುದಮಲ ನಿಜಕವಿರತ್ನಾ ॥ ೨೬ ॥

---

೨೧. ೧-೧ ರುಲೆನೆ (ಅ); ೨-೨ ಲರಂ (ಆ); ೩-೩ ಳಿ (ಆ).
೨೨. ೧-೧ ಪುಳ್ಗಿದನೆಂದೆನೆ (ಅ), ಪುಪುಳ್ಗಿನೆನೆ (ಆ); ೨-೨ ಳಿ (ಆ).
೨೩. ೧-೧ ಲು (ಆ); ೨-೨ ಪಳಿ (ಆ).
೨೪. ೧-೧ ಳ್ಳಾ (ಆ); ೨-೨ x (ಆ); ೩-೩ ಱ್ಗಲ್ (ಆ); ೪-೪ ಪ (ಆ); ೫-೫ ದಿ (ಆ).
೨೫. ೧-೧ ಱ (ಆ); ೨-೨ ದೆ(ಆ); ೩-೩ ಳಿ (ಆ); ೪-೪ ಸೂ (ಆ) ೫-೫ x (ಆ).
೨೬. ೧-೧ ರ್ಪೆ (ಅ); ೨-೨ ರೆ (ಆ); ೩-೩ ತ್ಯ (ಆ); ೪-೪ ಱ (ಆ); ೫-೫ ಗೆ (ಆ).

ಝುಳಮೆಂದೆನ[೧]ಲು[೧]ಷ್ಣಂ ಬಾ।
ಗುಳಮೆಂದೆನೆ [೨]ದುಃಖ[೨]ಮಲ್ಲಣಿಕೆಯೆನೆ ಮೇಳಂ।
ಪ[೩]ಳ[೩]ಗೆಂದೆನೆ ಒಣಗಿದಯೆಲೆ।
ಮಳಗೆನೆ [೪]ಬಿಟ್ಟಿಯ[೪] ಬಟ್ಟ[೫]ಗಸಿಲೆನೆ[೫] ಶಂಖಂ ॥ ೨೭ ॥

ಬದ್ದರನೆನೆ ಬ[೧]ದು[೧]ಕಿದ[೨]ಪಂ[೨]।
ಕದ್ದರನೆನೆ [೩]ಕಳ್ಳನೆದ್ದ[೩]ರೆನಲೋಡಿದಳಪಂಳ।
ಬಿದ್ದಿಗನೆನೆ ನಂಟಂ ಕೈ।
ಗುದ್ದಿಗರೆನೆ ಮಲ್ಲರೆಂಬುದೆಲೆ ಕವಿರತ್ನಾ ॥ ೨೮ ॥

ಬೆಳವರವಿಂಪು ಜಾಗಿಲ ಗಿಳಿರ್ಪೊಡೆ [೧]ಇಂ[೧]ಗೆಲೆಯೂ [೨]ನ್ಮ[೨]ದಾವ[೩] ಳಿ।
ಗ[೩] ಯಗ[೪]ಲ್ದಿ[೪]ರಾಳ್ದವನೆ ಪೂ [೫]ಚ[೫] ರ ಬಲ್ಲಿಸಾಜೆನ್ನೈಲವೆರ್ಚ್ಚು।
ಗಳೊಗೆದಾ[೬]ರೊ[೬] ಮಾಂಪನನೆ ಗೊಲ್ಗೊನೆವೇಟದ ನೀಱಿಮೆಂದೆನ।
[೭]ಲ್ಕ[೭]ಳೆಯದ ಕಾಣ್ಕೆ ಮಲ್ಲಿಗೆಯನಿಪ್ಪುದ ಬೆಳ್ಳಿವಸರ್ಗೆ [೮]ತ[ಕ್ಕ[೮]]ನೇ ॥ ೨೯ ॥

ಚಲ್ಲದ ನೆಲೆ ಇಲ್ಲದ ಮುಳಿ।
ಸೊಲ್ಲದ ಬಗೆಯಱಿಕೆ ಬೆಲ್ಲ ಬಳಿ ಬಲ್ಲರ ಸೋಂ।
ಕೆಲ್ಲರ ಗೆ[೧]ಲ[೧]ವಲ್ಲದ ನುಡಿ।
[೨]ಸೊ[೨]ಲ್ಲದು ಪೂವಿ[೩]ಲ್ಲಡಿ[೩]ರೆನಿಪ್ಪುದು ರನ್ನಾ ॥ ೩೦ ॥

ಸಿರಿಯೊಗೆದಾಣಂ ನೈಲಂ।
ಬರೆ ಬಣ್ಗೊಡಿ ಪುಟ್ಟು ಬಾನ್ವರುಣಿ [೧]ಸಿಂಗಡಲ[೧]
ಚ್ಚಱಿ ಬಗೆಯರಮೊಗಸಚ್ಚರ।
ದಿರಿಯೆನೆ [೨]ಪಯ[೨]ಸಾಬ್ಧಿ ಬೆಳ್ಳೆವೆಸರಾಂತವನೇ ॥ ೩೧ ॥

ಕಾಯಿ [೧]ಪ[೧] ಣ್ಣುದಾಣಮಿಳಿಪಿನ।
ತಾಯಿ ಪೊಳೆನಿರೊಟ್ಟೆನಿಲ್ಗೆ ಬಿಸುಡಿ ಬೆಕ್ಕಂ।
ಜಾಯಿಪು ಸೊಡಮ್ಮೆಂ [೨]ಗಾಣ್ಕೆ[೨]।
ಲಾಯಿಪು[೩]ದೆ[೩] ಝುಳವಾಳ್ಕೆ ಪೆರಳುರ್ವಿದಿ ರನ್ನಾ ॥ ೩೨ ॥

---

೨೭. ೧-೧ ಲೂ (ಆ); ೨-೨ ದುಃಖಂ (ಆ); ೩-೩ ಣ (ಅ); ೪-೪ ವಿಗಿಯ (ಅ);
೫-೫ ಗಲ್ತೆನೆ (ಆ).
೨೮. ೧-೧ ದಿ (ಆ); ೨-೨ ಪಿಂ (ಅ); ೩-೩ ಕಳನೆಂದರನೆದ(ಅ); ೪-೪ ವಂ (ಆ).
೨೯. ೧-೧ ಯ (ಆ); ೨-೨ ನ್ನ (ಆ); ೩-೩ ಳ್ಮಿಗೆ (ಆ); ೪-೪ ಲ್ದ (ಆ);
೫-೫ ಬ (ಆ); ೬-೬ x (ಆ); ೭-೭ ಲ್ಚ (ಆ); ೮-೮ ತತಕ (ಅ), ತಕ (ಆ).
೩೦. ೧-೧ ಲ್ದ (ಅ); ೨-೨ ಸ (ಆ); ೩-೩ ಡಿ (ಅ).
೩೧. ೧-೧ ಸಿಗಂಡರೆ (ಆ); ೨-೨ ಪಸಾಯ (ಆ).
೩೨. ೧-೧ ಪು (ಆ); ೨-೨ ಗಾಣ್ಕೆಗಾಣ್ಕೆ (ಆ); ೩-೩ ಡೆ (ಅ).

ನವಿಲಗಾರ್ತಿಯ [೧]ನಡೆ[೧]ದೊ[೨]ಳ್[೨] ।
ಸವಿಯುಳಿ[೩]ಮೈಗೊ[೩]ಡುವಕ್ಕಿ ಮೆಲ್ಲ[೪]ದಿ[೪] ಬೆ[೫]ಳ್ಗಂ[೫]ಚ ।
ವಲು[೬]ವೆ[೬]ಸು ಸ[೭]ರೆ[೭]ನ ಇಲ್ಪಳಸುವ ।
[೮]ಗಿಳಿ[೮] ಎನ್ ಲಂಚೆ ಬೆಳ್ಳಿವೆಸರಾಂತವನೇ ॥ ೩೩ ॥

ಸಬಬಾಸನೆಯಿರ್ಪೊಡೆ ಸೆ ।
ಸಬೆಯ[೧]ದ[೧] ಪೂನೆಲಬಗ್ಗು[೨]ಬಿಳಿಗ್ಗಿನ[೨]ಬೆಳಗಿಂ ।
ಪುಬಸನೆ ಬಾ [೩]ನ್ವ[೩]ಳಿಯರಕಂ ।
ಣ್ಗಬ[೪]ಲೆ ತಿಳಿ[೪]ಎನೆ ದೇವಭೂರುಹಂ ಕವಿರತ್ನಾ ॥ ೩೪ ॥

ಸೊಗಬಳಿಗಿ [೧]ಸುಪು[೧]ವ[೨]ರರ್ಗೆ[೨] ।
ಬಗಸೊಲಪಿಗೆ ನೈಲಸಿರಿಗೆ ಮೆಲ್ಲಡಿ ಬೊರೆ ।
[೩]ಇ[೩]ಗೆ ತಗದಶ ಸೆಜಿವಿಗೆ ಕಣ್ಬೆರ ।
ಲೊಗೆ ಬಸ[೪]ನಿ[೪]ಯೆನಲ್ಕೆ ಲಲನೆಯರ್ ಕವಿರತ್ನಾ ॥ ೩೫ ॥

ಬಳಿಗೆಲಯಂ ಬದಗಂ ನಾ ।
ಳ್ಗಿಳಿವಾಡಂ ನನ್ನಿಡಿಗಳನುಳಿಗಂತಳೆಗಂ ।
ಸಳಿಬೊಳೆಗಿಳಿಯಂ ಸಾಜುಳಿ ।
ಗೆಳೆಯನೆನಲ್ಸಗ್ಗನುಳಿದನೆಲೆ ಕವಿರತ್ನಾ ॥ ೩೬ ॥

ನೆಲಬಲಲಂ ನಿಜೆ ಬೆಳಲಂ ।
ಬಲಸೊಲಹಂ ಬಚ್ಚಬಣಿಸೆ ಬಲ್ಪಣಿವಾ[೧]ದಂ[೧] ।
ಪೊಲಗೆ ಸುಸಿಲ್ಪೈಳಗಿಲಿ ಬಾ
ಳ್ತೊ[೨]ಲೆ[೨]ಗೆಲೆಯುಣಿಸಾರ್ಕೆ[೩]ಯ[೩] ಸೊಕೆಯೆಲೆ ಕವಿರತ್ನಾ ॥ ೩೭ ॥

ಕೊನರ್ವಿಡಿ ಸುಳಿದಾಳ್ಕೈಲಂ ।
ಗೊನೆ ನುಣ್ಬೆ[೧]ಸು[೧] ಗಾಣ್ಕೆ ಬಗಸುನಿಲೆ ಬಂಬಲ್ಪಾ।
ಲ್ಪನೆ ನೈಲಸರಿಗೆ ಪಾರ್ದೆಂ ।
ದೆನೆ ತಿಳಿ[೨]ನಿಂ[೨]ಪ[೩]ಚ್ಚ[೩]ದೆನೆಯೆನಿಪ್ಪುದು ರತ್ನಾ ॥ ೩೮ ॥

---

೩೩. ೧-೧ ನಂನನಡೆ (ಅ); ೨-೨ ರೆ (ಅ); ೩-೩ ಮೆಯಿಕೊ (ಅ); ೪-೪ ಡಿ (ಅ);
೫-೫ ಳ್ಗಂ (ಅ); ೬-೬ ರೆ (ಅ); ೭-೭ ರಿ (ಅ); ೮-೮ ಯ(ಅ);
೯-೯ ಲ್ಗಂ (ಅ).
೩೪. ೧-೧ x (ಅ); ೨-೨ ಬಗ್ಗಿನ ಬೆಳಗಿನ (ಅ); ೩-೩ ನ್ವ (ಅ); ೪-೪ ತ್ರಿಗೆ (ಅ).
೩೫. ೧-೧ ಸೂಸು(ಅ); ೨-೨ ರಂಗೆ (ಅ); ೩-೩ ಯಿ (ಅ); ೪-೪ ವಿ (ಅ).
೩೭. ೧-೧ ಡಂ (ಅ); ೨-೨ ಲ (ಅ); ೩-೩ x (ಅ).
೩೮. ೧-೧ ಸ (ಅ); ೨-೨ ಗಿಂ (ಅ); ೩-೩ ಚಿ (ಅ).

ಎಂದು ಕವಿಚರಿತೆಕಾರರು ಪೊನ್ನನನ್ನು ಕುರಿತು ಬರೆದಿದ್ದಾರೆ. ಇವರಿಗೆ ಏನು ಆಧಾರವಾಗಿದ್ದಿತೋ ಗೊತ್ತಿಲ್ಲ. ಆದರೆ ಈ ಮಾತು ನಮ್ಮ ಊಹೆಗೆ ಒಂದು ಆಧಾರವಾಗಿ ನಿಲ್ಲುತ್ತದೆ ಎಂಬುದು ಗಮನಿಸಬೇಕಾದ ವಿಷಯ (ಕಾವ್ಯಾವಲೋಕನ, ದರ್ಪಣಗಳಂಥ ಶಾಸ್ತ್ರಗ್ರಂಥಗಳಲ್ಲಿ ಭುವನೈಕರಾಮಾಭ್ಯುದಯದ ಅವಶೇಷಗಳು ಲಕ್ಷ್ಯಪದ್ಯಗಳಾಗಿ ಬಂದುದನ್ನು ಇಲ್ಲಿ ನೆನೆಯಬಹುದು).

ಇಷ್ಟು ಹಿನ್ನೆಲೆಯಲ್ಲಿ 'ಭುವನೈಕರಾಮಾಭ್ಯುದಯ'ವು ರಾಷ್ಟ್ರಕೂಟ ಕೃಷ್ಣನನ್ನು ಕುರಿತ ಒಂದು ತಗುಳ್ಚಿ ಪೇಟಿದ ಶಾಸ್ತ್ರಕೃತಿ. ಅದರಲ್ಲಿಯೂ ತಗುಳ್ಚಿ ಪೇಟಿದ ಒಂದು ಅಲಂಕಾರಶಾಸ್ತ್ರಕೃತಿಯಾಗಿದೆ - ಎಂದು ಊಹಿಸಬಹುದು.[೨]

■■

ಆಕರ : ಮಾರ್ಗ ಸಂಪುಟ–೧

೨. (ಅ) ಭುವನೈಕರಾಮಾಭ್ಯುದಯ ೧೪ ಆಶ್ವಾಸಗಳ ಗ್ರಂಥವೆಂದು ಪೊನ್ನ ಹೇಳುತ್ತಾನೆ. 'ಆಶ್ವಾಸ' ಎಂಬ ಪದ ಕಾವ್ಯದಂತೆ ಲಕ್ಷಣಗ್ರಂಥವನ್ನು ಸೂಚಿಸಬಹುದೇ? ವಿಚಾರಿಸಬೇಕು.
(ಆ) ಮೇಲೆ ಅಲಂಕಾರ ಸೂತ್ರ, ಕೆಳಗೆ ರಾಜನ ಚರಿತ್ರೆಯೋ, ವರ್ಣನೆಯೋ ಇರುವ ಪದ್ಯಗಳ ಗ್ರಂಥವಾಗಿರಬಹುದು. "ಶಾಸ್ತ್ರಕಾವ್ಯ, ಶ್ಲೇಷಕಾವ್ಯ, ಸಮಸ್ತಕಾವ್ಯ" ಹೆಸರಿನ ಮುಂದಿನ ಲೇಖನ ನೋಡಿರಿ.

೬

ಗದಾಯುದ್ಧದ ಒಂದು ಪದ್ಯ

ಉತ್ತಮೋತ್ತಮ ಪ್ರಾಚೀನ ಪದ್ಯಗಳ ಸಂಕಲನವಾದ ಸೂಕ್ತಿ ಸುಧಾರ್ಣವದಲ್ಲಿ ರನ್ನನ ಅಜಿತಪುರಾಣದ ಪದ್ಯಗಳಿದ್ದು, ಗದಾಯುದ್ಧದ ಪದ್ಯಗಳಿಲ್ಲದುದಕ್ಕೆ ಬಹುಶಃ ಆ ಕೃತಿ ಕವಿ ಮಲ್ಲಿಕಾರ್ಜುನನಿಗೆ ಲಭ್ಯವಿಲ್ಲದುದೇ ಕಾರಣವಾಗಿರಬೇಕು. ಹೀಗೆ ಅಷ್ಟು ಪೂರ್ವದಲ್ಲಿ ಕೆಲವೇ ಹಸ್ತಪ್ರತಿಗಳಾಗಿ ಮಾತ್ರ ಪ್ರಚಾರದಲ್ಲಿರಬಹುದಾದ ಗದಾಯುದ್ಧದ ಹಸ್ತಪ್ರತಿಗಳು ಇಂದು ನಮ್ಮ ಕೈಗೆ ಇಳಿದುಬಂದವು, ಕೇವಲ ನಾಲ್ಕು ಇಲ್ಲವೆ ಐದು.

೧೮೯೫, ೧೯೧೯ ಮತ್ತು ೧೯೨೫ರಲ್ಲಿ ಶ್ರೀ. ಎಂ. ಎ. ರಾಮಾನುಜೈಯ್ಯಂಗಾರ್, ೧೮೯೮, ೧೯೭೨ರಲ್ಲಿ ಶ್ರೀ ಕೆ.ವಿ. ಕೃಷ್ಣಭಟ್ : ೧೮೯೮, ೧೯೫೫, ೧೯೬೩, ೧೯೬೭, ೧೯೭೨ರಲ್ಲಿ 'ಗದಾಯುದ್ಧ ಸಂಗ್ರಹ' ಹೆಸರಿನಿಂದ ಪ್ರೋ. ತೀ. ನಂ. ಶ್ರೀಕಂಠಯ್ಯ; ೧೯೭೫ರಲ್ಲಿ 'ಗದಾಯುದ್ಧ ದರ್ಪಣಂ' ಹೆಸರಿನಿಂದ ಪ್ರೊ. ಪಿ. ಸುಬ್ರಾಯಭಟ್ ಅವರು ಈ ಕೃತಿಯನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಹೀಗಿದ್ದೂ ಒಂದೆರಡು ಪದ್ಯಗಳ ಛಂದೋರೂಪ, ಪಂಪಭಾರತದ ಪದ್ಯಗಳಿಂದ ಪೂರ್ಣಗೊಳಿಸಲ್ಪಟ್ಟ ಕೊನೆಯ ಭಾಗಗಳು ವಿದ್ವಾಂಸರಿಗೆ ಸಮಸ್ಯೆಯಾಗಿ ಇಂದಿಗೂ ಕಾಡುತ್ತಲಿವೆ. ಸಾಲದುದಕ್ಕೆ ಕಾವ್ಯದುದ್ದಕ್ಕೂ ಪಾಠದೋಷ ಮತ್ತು ಗ್ರಂಥಪಾತಗಳು ಹಲವು ಸಂಖ್ಯೆಯಲ್ಲಿ ಸಿಗುತ್ತವೆ. ಈ ಸಮುದಾಯದಿಂದ ಒಂದು ಪದ್ಯವನ್ನು ಪರಿಷ್ಕರಿಸಿ ಕೊಡುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ರಣರಂಗದಲ್ಲಿ ಮುನ್ನಡೆದ ದುರ್ಯೋಧನನು ದ್ರೋಣರ ಶವದ ತರುವಾಯ ಅಭಿಮನ್ಯುವಿನ ಶವವನ್ನು ಕಂಡು, ಆತನ ಶೌರ್ಯವನ್ನು ಹೊಗಳುವ ಪ್ರಸಂಗದ ಕೊನೆಯ ಪದ್ಯವೊಂದು ಹೀಗಿದೆ:

ಪಸಿವಿನೊಳನ್ನಮಂ [1]ಪಸಿದು ಬಂದವರ್ಗಿಕ್ಕುವ ಯುದ್ಧರಂಗದೊಳ್ ।
ಕುಸಿಯದೆ ಸೂಜಿಗೊಳ್ಳದೆ ರಣಕ್ಕೆ ಶುಚಿತ್ವಮನಪ್ಪುಕೆಯ್ದು[1] (?) ಮಾ।
ನಸಿಕೆಯ ನಾಲ್ವರುಂ [2]ನಿಮಗೆ ವಂದ್ಯರವಂದಿರೊಳೀ[2] ತನಲ್ತೆ ಸಾ ।
ಹಸಧನನೆಂದು ಕೆಯ್ಮುಗಿದನಂದಭಿಮನ್ಯುಗೆ ಕೌರವೇಶ್ವರಂ॥

(ಪಾಠಾಂತರ : ೧-೧ ಸುಫಲದಲ್ಲಿ ಸುವರ್ಣಮನೀವ ಯುದ್ಧದೊಳ್.... ಪಮ ಚಿತ್ತದೊಳಪ್ಪುಗೈದು. ೨-೨ ಟವರೆ ವಂದ್ಯರವರ್ಗಳೊಳೀ)

ಇದು ಎಂ. ಎ. ರಾಮಾನುಜೈಯ್ಯಂಗಾರ್ ಆವೃತ್ತಿಯ* (೧೯೨೫) ಪದ್ಯ. ತೀ. ನಂ. ಶ್ರೀ ಸಂಗ್ರಹದಲ್ಲಿ ಈ ಪದ್ಯವಿಲ್ಲ. ಕೆ. ವಿ. ಕೃಷ್ಣಭಟ್ ಆವೃತ್ತಿಯಲ್ಲಿ ಮೇಲಿನ ಪಾಠವೇ ಇದೆ. ಈ ಪದ್ಯದ ಅರ್ಥ ಅಸ್ಪಷ್ಟವೆಂದೂ ಇಲ್ಲಿ ಪುರಾಣಪ್ರಸಿದ್ಧ ನಾಲ್ಕು ಜನರ ಹೆಸರನ್ನು ಕವಿ ಅಧ್ಯಾಹೃತಮಾಡಿದ್ದು, ಅವರು ಯಾರೆಂಬುದನ್ನು ಪತ್ತೆ ಹಚ್ಚಬೇಕೆಂದೂ ನನ್ನ ಪ್ರಾಧ್ಯಾಪಕರು ವಿದ್ಯಾರ್ಥಿಯಾಗಿದ್ದ ನನಗೆ ಹೇಳಿದ ನೆನಪಿದೆ. ಆದರೂ ಈ ಪದ್ಯದ ವಿಷಯವಾಗಿ ನನಗೆ ಸಂದೇಹ ಉಳಿದುಕೊಂಡಿದ್ದಿತು. ಇಲ್ಲಿ ನಾಲ್ಕು ಜನ ಪುರಾಣಪ್ರಸಿದ್ಧ ವ್ಯಕ್ತಿಗಳಲ್ಲ; ನಾಲ್ಕು ಲೋಕಮಾನ್ಯಕ್ರಿಯೆಗಳು ಸೂಚಿತವಾಗಿರಬೇಕೆಂಬ ಅಸ್ಪಷ್ಟ ಅಭಿಪ್ರಾಯ ನನ್ನನ್ನು ಕಾಡುತ್ತಲಿದ್ದಿತು. ಹೀಗಾಗಿ ಇತ್ತೀಚೆಗೆ ಪ್ರೊ. ಪಿ. ಸುಬ್ರಾಯಭಟ್ ಅವರು ಪ್ರಕಟಿಸಿದ 'ಗದಾಯುದ್ಧ ದರ್ಪಣಂ'ದಲ್ಲಿ ಈ ಪದ್ಯಕ್ಕೆ ಹೇಳಿರುವ ಅರ್ಥವನ್ನು ನೋಡುವ ಕುತೂಹಲವುಂಟಾಯಿತು. ಅಲ್ಲಿ "('ಕುಸಿಯದೆ', 'ಸುಚಿಗೊಳ್ಳದೆ' ಎಂಬುದು ಬಹುಶಃ 'ಕುಸಿಯದ', 'ಸೂಜಿಗೊಳ್ಳದ' ಎಂದಿದ್ದಿರಬಹುದೇ? ೧.ಪಸಿದು ಬಂದವರ್ಗಿಕ್ಕುವ, ೨.ಯುದ್ಧದೊಳ್ ಕುಸಿಯದ, ೩.ಸೂಜಿಗೊಳ್ಳದ, ೪.ರಣಕ್ಕೆ ಶುಚಿತ್ವಮನಪ್ಪುಕೆಯ್ವ - ಈ ನಾಲ್ಕು ಬಗೆಯ ಉದಾತ್ತವ್ಯಕ್ತಿಗಳು ಅಭಿವಂದ್ಯರು)" ಎಂದು ಕಂಸಿನಲ್ಲಿ ಭಿನ್ನ ಪಾಠವನ್ನು ಊಹಿಸಿ ಅರ್ಥ ಬರೆದಿರುವರು. ನನ್ನ ಊಹೆ ಇವರಲ್ಲಿ ಕೆಲಮಟ್ಟಿಗೆ ಆಕಾರ ಪಡೆದುದು ನನಗೆ ಸಂತೋಷವನ್ನುಂಟುಮಾಡಿದರೂ ಇವರ ಪಾಠದಲ್ಲಿ ಹೀಗೆ ಕೆಲವು ಸಂದೇಹಗಳಿವೆ:

೧."ಪಸಿವಿನೊಳನ್ನಮಂ ಪಸಿದು ಬಂದವರ್ಗಿಕ್ಕುವ" ಎಂಬಲ್ಲಿ ಒಂದು ಬಗೆಯ ಪುನರುಕ್ತಿದೋಷ ಕಾಣುತ್ತದೆ.

೨."ಯುದ್ಧರಂಗದೊಳ್ ಕುಸಿಯ(ದ) ಸೂಜಿಗೊಳ್ಳ(ದ) ರಣಕ್ಕೆ ಶುಚಿತ್ವಮನಪ್ಪುಕೆಯ್ವ" ಎಂಬಲ್ಲಿಯ ಕುಸಿಯದ ಸೂಜಿಗೊಳ್ಳದ ಕ್ರಿಯೆಗಳು ರಣಕ್ಕೆ ಶುಚಿತ್ವವನ್ನು ತರುವ ಕಾರ್ಯಗಳೇ ಆಗಿರುವುದರಿಂದ ಮತ್ತೆ 'ರಣಕ್ಕೆ ಶುಚಿತ್ವನಪ್ಪುಕೆಯ್ವ' ಎಂದು ಹೇಳಿದುದು ಪುನರುಕ್ತಿಯೆನಿಸುತ್ತದೆ.

೩.ಇಕ್ಕುವ, ಕುಸಿಯ(ದ), ಸೂಜಿಗೊಳ್ಳ(ದ), ಅಪ್ಪುಕೆಯ್ವ ಎಂಬ ನಾಲ್ಕು ಕ್ರಿಯೆಗಳಲ್ಲಿ ಮಧ್ಯದ ಎರಡು ನಿಷೇಧರೂಪವು, ಮಿಕ್ಕವು ಸಾಮಾನ್ಯರೂಪದವು. ಪದ್ಯದ ಶಯ್ಯೆಯಲ್ಲಿ ಈ ಬಗೆಯ ವಿನ್ಯಾಸ ಅಷ್ಟು ಸಮಂಜಸವಾಗುವುದಿಲ್ಲ.

ಈ ಮೂರು ಕಾರಣಗಳಿಂದಾಗಿ ಈ ಪದ್ಯದ ಮೂಲಪಾಠ ಬೇರೆಯಿದೆಯೆಂದೂ ಇದನ್ನು ಇನ್ನೊಮ್ಮೆ ಪರಿಷ್ಕರಣಕ್ಕೆ ಒಡ್ಡುವ ಅವಶ್ಯಕತೆಯಿದೆಯೆಂದೂ ಒಪ್ಪಿಕೊಳ್ಳಬೇಕಾಗುತ್ತದೆ. ಹೀಗಾಗಿ ರಾಮಾನುಜೈಯ್ಯಂಗಾರ್ ಆವೃತ್ತಿಯ ಅಡಿಪಾಠದ ಬಲದಿಂದ ಈ ಪದ್ಯವನ್ನು ಹೀಗೆ ರೂಪಿಸಬಹುದು:

ಪಸಿವಿನೊಳನ್ನಮಂ ಸುಫಲದಲ್ಲಿ ಸುವರ್ಣಮನೀವ ಯುದ್ಧದೊಳ್ ।
ಕುಸಿಯದೆ ಸೂಜಿಗೊಳ್ಳದೆ ರಣಕ್ಕೆ ಸುಚಿತ್ವಮನಪ್ಪುಕೆಯ್ವ ಮಾ ।
ನಸಿಕೆಯ ನಾಲ್ವರುಂ ನಮಗೆ ವಂದ್ಯರವಂದಿರೊಳೀತನಲ್ತೆ ಸಾ ।
ಹಸಧನನೆಂದು ಕೆಮ್ಮುಗಿದನಂದಭಿಮನ್ಯುಗೆ ಕೌರವೇಶ್ವರಂ ॥

ಈ ಪದ್ಯದ ಪೂರ್ವಾರ್ಧವನ್ನು "(೧) ಪಸಿವಿನೊಳನ್ನಮಂ (ಈವ), ಸುಫಲದಲ್ಲಿ ಸುವರ್ಣಮಂ+ಈವ, (೨) ಯುದ್ಧದೊಳ್ ಕುಸಿಯದೆ (ರಣಕ್ಕೆ ಶುಚಿತ್ವಮನಪ್ಪುಕೆಯ್ವ), (ಯುದ್ಧದೊಳ್)

ಸೂಜಿಗೊಳ್ಳದೆ ರಣಕ್ಕೆ ಶುಚಿತ್ವಮನಪ್ಪುಕೆಯ್ವ" - ಎಂದು ಬಿಡಿಸಿ ಓದಬೇಕು. ಇಲ್ಲಿ 'ದಾನ'ಕ್ಕೆ ಸಂಬಂಧಪಟ್ಟ ಎರಡು ಕ್ರಿಯೆಗಳ, 'ಯುದ್ಧ'ಕ್ಕೆ ಸಂಬಂಧಪಟ್ಟ ಎರಡು ಕ್ರಿಯೆಗಳ ಸೂಚನೆಯಿದೆ. ತನ್ನ ಹಸಿವೆಯಲ್ಲಿ ಅನ್ನದಾನವನ್ನು,[೧] ತನ್ನ ಅಭ್ಯುದಯದಲ್ಲಿ ಸುವರ್ಣದಾನವನ್ನು ಮಾಡಬೇಕು. ತಾನು ಯುದ್ಧದಲ್ಲಿ ಕುಸಿಯದೆ, ಸೂರೆಯಂಥ ಹೀನಕ್ರಿಯೆಗೆಳೆಸದೆ 'ರಣಶುಚಿತ್ವ'ವನ್ನು ಕಾಪಾಡಬೇಕು - ಎಂದು ಈ ಪದ್ಯ ಸಾರುತ್ತದೆ. ಇಲ್ಲಿ ಹಸಿವು, ಕುಸಿವುಗಳು ಕೊರತೆಯನ್ನೂ, ಸುಫಲ, ಸೂರೆಗಳು ಸಂಪತ್ತನ್ನೂ ಸೂಚಿಸುತ್ತವೆ. ಎರಡು ಕ್ರಿಯೆಗಳ ಮೊದಲಿನ ವಾಕ್ಯರಚನೆ ಸಾಮಾನ್ಯ ರೂಪದ್ದಾಗಿದ್ದರೆ, ಮತ್ತೆರಡು ಕ್ರಿಯೆಗಳ ಆಮೇಲಿನ ವಾಕ್ಯ ರಚನೆ ನಿಷೇಧಯುಕ್ತ ಸಾಮಾನ್ಯರೂಪದ್ದಾಗಿದೆ.

ನಮ್ಮ ಕಾವ್ಯಮೀಮಾಂಸೆಯಲ್ಲಿ ವೀರರನ್ನು ಧರ್ಮವೀರ, ದಯಾವೀರ, ದಾನವೀರ, ಯುದ್ಧವೀರ ಎಂದು ವಿಭಾಗಿಸಿದ್ದರೂ ೧೦ನೆಯ ಶತಮಾನದ ಕನ್ನಡ ಲೌಕಿಕ ಕೃತಿಗಳಲ್ಲಿ ಪ್ರಧಾನವಾಗಿ ಪ್ರಕಟಗೊಂಡವರು ದಾನವೀರ ಮತ್ತು ಯುದ್ಧವೀರರು. ಇವು ಈ ಕಾಲದ ಜೀವನಮೌಲ್ಯಗಳೇ ಆಗಿದ್ದವು. ಕವಿ ರನ್ನ ಈ ಮೌಲ್ಯಗಳನ್ನು ಬಾಳಿದವರ ಸಾಲಿನಲ್ಲಿ ಅಭಿಮನ್ಯುವನ್ನು ಪರಿಗಣಿಸಿದ್ದಾನೆ. ಇಲ್ಲಿ ದುರ್ಯೋಧನ ಕೈಮುಗಿದುದು ಆತನ ಮಹಾನುಭಾವತೆಯ ದ್ಯೋತಕವಾಗಿದ್ದರೂ ಯುದ್ಧದಲ್ಲಿ ಮರಣ ಹೊಂದಿದವನಿಗೆ ನಮಸ್ಕರಿಸುವುದು (ಆತನ ರಕ್ತವನ್ನು ಹಣೆಗೆ ಹಚ್ಚಿಕೊಳ್ಳುವುದು) ಆ ಕಾಲದ ಆಚರಣೆಯಾಗಿದ್ದಿತೆಂಬುದನ್ನು ಮರೆಯಬಾರದು.[೨] ಈ ಪದ್ಯದ ಒಟ್ಟು ಅರ್ಥ ಹೀಗಿದೆ:

(ತನ್ನ) ಹಸಿವೆಯಲ್ಲಿ ಅನ್ನವನ್ನು, (ತನ್ನ) ಅಭ್ಯುದಯದಲ್ಲಿ[೩] ಸುವರ್ಣವನ್ನು ದಾನಮಾಡುವ ಮತ್ತು ಯುದ್ಧದಲ್ಲಿ ಹಿಂಜರಿಯದೆ, ಸೂರೆಮಾಡದೆ 'ರಣಶುಚಿತ್ವ'ವನ್ನು ಪಾಲಿಸುವ ಮನೋಧರ್ಮದ ಈ ನಾಲ್ಕು ಬಗೆಯ ಜನರು ವಂದ್ಯರು. ಅಂಥವರಲ್ಲಿ ಸಾಹಸಧನನಾದ ಈತನೂ ಒಬ್ಬನಲ್ಲವೇ? ಎಂದು ಅಭಿಮನ್ಯುವಿಗೆ ದುರ್ಯೋಧನನು ಕೈಮುಗಿದನು.[೪]

■■

ಆಕರ : ಮಾರ್ಗ ಸಂಪುಟ–೧

---

೧. 'ಇನ್ನೊಬ್ಬರು ಹಸಿದಿರುವಾಗ' ಎಂದು ಅರ್ಥ ಮಾಡಬಹುದಾದರೂ 'ತಾನು ಹಸಿದಿರುವಾಗ' ಎಂದು ಅರ್ಥ ಮಾಡುವುದು ಹೆಚ್ಚು ಯೋಗ್ಯವಾದುದು. ಪಿ. ಸುಬ್ರಾಯ ಭಟ್ ಅವರು ಹೀಗೆಯೇ ಅರ್ಥಮಾಡಿದ್ದಾರೆ.

೨. ಆತ್ಮಬಲಿದಾನ : ಬ್ರಹ್ಮಶಿವನ ವಿಚಾರಗಳು (ಪ್ರಬುದ್ಧ ಕರ್ನಾಟಕ ೫೬-೧) ನೋಡಿರಿ.

೩. 'ಸುಫಲ' ಪದಕ್ಕೆ ಇಲ್ಲಿ 'ಅಭ್ಯುದಯ' ಎಂದು ಅರ್ಥಮಾಡಿದ್ದರೂ ಬೇರೆ ಅರ್ಥಕ್ಕೆ ಅವಕಾಶವಿರಬಹುದು.

೪. ಈ ಲೇಖನವನ್ನು ಬರೆಯುವಲ್ಲಿ ಚರ್ಚೆಯ ಮೂಲಕ ನೆರವಾದ ಡಾ. ಕೆ. ಕೃಷ್ಣಮೂರ್ತಿ ಅವರಿಗೆ ಕೃತಜ್ಞತೆಗಳು.

೭

ರನ್ನನ ಒಂದು ಪದ್ಯದ ಅರ್ಥಸಮಸ್ಯೆ

ಗದಾಯುದ್ಧಕ್ಕೆ ಸಂಬಂಧಪಟ್ಟ ಒಂದು ಪದ್ಯದ ಪಾಠಸಮಸ್ಯೆಯನ್ನು ಕುರಿತು ನಾನು ಬರೆದ ಲೇಖನಕ್ಕೆ ಶ್ರೀ. ಸು.ಕೃಷ್ಣ ಮತ್ತು ಡಾ. ಎಂ. ಚಿದಾನಂದಮೂರ್ತಿ ಪ್ರತಿಕ್ರಿಯೆ ರೂಪದ ಲೇಖನ ಬರೆದಿದ್ದಾರೆ. ಡಾ. ಮೂರ್ತಿ ಅವರು ಸಣ್ಣ ಪಾಠಸಮಸ್ಯೆಯನ್ನು ಬಿಡಿಸುತ್ತಲೇ ಸೃಷ್ಟಿಸಿರುವ ದೊಡ್ಡ ಅರ್ಥಸಮಸ್ಯೆಯನ್ನು ಇಲ್ಲಿ ವಿವೇಚಿಸುತ್ತೇನೆ.

ಡಾ. ಎಂ. ಎಂ. ಕಲಬುರ್ಗಿ ಅವರ ಪರಿಷ್ಕರಣ:

ಪಸಿವಿನೊಳನ್ನಮಂ ಸುಫಲದಲ್ಲಿ ಸುವರ್ಣಮನೀವ ಯುದ್ಧದೊಳ್
ಕುಸಿಯದೆ ಸೂರೆಗೊಳ್ಳದೆ ರಣಕ್ಕೆ ಶುಚಿತ್ವಮನಪ್ಪುಕೆಯ್ವ ಮಾ
ನಸಿಕೆಯ ನಾಲ್ವರುಂ ನಮಗೆ ವಂದ್ಯರವಂದಿರೊಳೀತನಲ್ತೆ ಸಾ
ಹಸಧನನೆಂದು ಕೆಯ್ಮುಗಿದನಂದಭಿಮನ್ಯುಗೆ ಕೌರವೇಶ್ವರಂ॥

ಅರ್ಥ: (ತನ್ನ) ಹಸಿವೆಯಲ್ಲಿ ಅನ್ನವನ್ನು, (ತನ್ನ) ಅಭ್ಯುದಯದಲ್ಲಿ ಸುವರ್ಣವನ್ನು ದಾನಮಾಡುವ ಮತ್ತು ಯುದ್ಧದಲ್ಲಿ ಹಿಂಜರಿಯದೆ, ಸೂರೆಮಾಡದೆ 'ರಣಶುಚಿತ್ವ'ವನ್ನು ಪಾಲಿಸುವ ಮನೋಧರ್ಮದ ಈ ನಾಲ್ಕು ಬಗೆಯ ಜನರು ನಮಗೆ ವಂದ್ಯರು. ಅಂಥವರಲ್ಲಿ ಸಾಹಸಧನನಾದ ಈತನೂ ಒಬ್ಬನಲ್ಲವೆ? ಎಂದು ಅಭಿಮನ್ಯುವಿಗೆ ದುರ್ಯೋಧನನು ಕೈಮುಗಿದನು.

ಡಾ. ಎಂ. ಚಿದಾನಂದಮೂರ್ತಿ ಅವರ ಪರಿಷ್ಕರಣ:

ಪಸವಿನೊಳನ್ನಮಂ ಸುಫಲದಲ್ಲಿ ಸುವರ್ಣಮನೀವ ಯುದ್ಧದೊಳ್
ಕುಸಿಯದೆ ಸೊರೆಗೊಳ್ಳದೆ ರಣಕ್ಕೆ ಶುಚಿತ್ವಮನಪ್ಪುಕೆಯ್ವ ಮಾ
ನಸಿಕೆಯ ನಾಲ್ವರುಂಟವರೆ ವಂದ್ಯರವಂದಿರೋಳಿತನಲ್ತೆ ಸಾ
ಹಸಧನನೆಂದು ಕೆಮ್ಮುಗಿದನಂದಭಿಮನ್ಯುಗೆ ಕೌರವೇಶ್ವರಂ॥

ಡಾ. ಎಂ. ಎಂ. ಕಲಬುರ್ಗಿ : ಗದಾಯುದ್ಧದ ಒಂದು ಪದ್ಯ (ಕ.ಸಾ.ಪ. ೬೫-೧ ಮತ್ತು ೨)
ಶ್ರೀ ಸು. ಕೃಷ್ಣ : ಗದಾಯುದ್ಧದ ಒಂದು ಪದ್ಯ.... ಒಂದು ಪ್ರತಿಕ್ರಿಯೆ (ಕ.ಸಾ. ಪ. ೬೬-೧).
ಡಾ. ಎಂ. ಚಿದಾನಂದಮೂರ್ತಿ : ಆಸ್ವಾದ (ಪು. ೩೭೨. ಪ್ರೊ. ಎಂ. ವಿ. ಸೀತಾರಾಮಯ್ಯ ಅಭಿನಂದನ ಗ್ರಂಥ).

ಅರ್ಥ: ಕ್ಷಾಮದಲ್ಲಿ ಅನ್ನವನ್ನೂ ಸುಫಲದ ಕಾಲದಲ್ಲಿ ಚಿನ್ನವನ್ನೂ ದಾನಮಾಡುವ, (ಯುದ್ಧದಲ್ಲಿ) ಕುಸಿಯದೆ (ಇರುವ), (ಯುದ್ಧದಲ್ಲಿ)ಸೂರೆಮಾಡದೆ (ಇರುವ), ಯುದ್ಧಕ್ಕೆ ಸಂಬಂಧಿಸಿದಂತೆ ಶೌಚಗುಣವನ್ನು (ಇಂದ್ರಿಯ ಸಂಯಮವನ್ನು) ಪರಿಪಾಲಿಸುವ -ಉದಾತ್ತತೆಯ ನಾಲ್ಕು ಜನರೂ ವಂದ್ಯರು. ಅವರಲ್ಲಿ ಈತನೇ ಅಲ್ಲವೆ ಸಾಹಸಧನನು - ಎಂದು ಕೌರವೇಶ್ವರನಾದ ದುರ್ಯೋಧನನು ಅಂದು ಅಭಿಮನ್ಯುವಿಗೆ ಕೈಮುಗಿದನು.

* * *

ಇಲ್ಲಿ ಡಾ. ಮೂರ್ತಿಯವರು ಸ್ವೀಕರಿಸಿದ 'ನಾಲ್ವರುಂಟವರೆ' ಎಂಬ ಪಾಠ ಗಮನಾರ್ಹವಾದುದೇನಲ್ಲ. ಅದರ ಚರ್ಚೆಯನ್ನು ಕೈಬಿಡಬಹುದು. ಆದರೆ ಬೇರೆ ಪಾಠಗಳೇ ಇಲ್ಲದ ಕಾರಣ ನಾನು ಗ್ರಹಿಸಿದ್ದ ಏಕೈಕ ಪಾಠವಾದ 'ಪಸಿವು' ಅರ್ಥ ಕೊಡುತ್ತಿದ್ದರೂ, ಡಾ. ಮೂರ್ತಿ ಊಹಿಸಿದ 'ಪಸವು' ಇನ್ನೂ ಒಳ್ಳೆಯ ಪಾಠ, ಬಹುಶಃ ಮೂಲಪಾಠವೆಂದು ಒಪ್ಪಿಕೊಳ್ಳುತ್ತೇನೆ. ಆದರೆ ಈ ಪದ್ಯದಲ್ಲಿಯ 'ಶುಚಿತ್ವ' ಪದಪ್ರಯೋಗಕ್ಕೆ ಆಕರ್ಷಿತರಾಗಿ (ಹಳಗನ್ನಡ ಕಾವ್ಯಗಳನ್ನು ಸಂಸ್ಕೃತಿ ದೃಷ್ಟಿಯಿಂದ ಓದಿದವರನ್ನು ಆ ಪದ ಆಕರ್ಷಿಸುವುದು ಸಹಜ), ಅದಕ್ಕೂ ನಾಲ್ಕು ಕ್ರಿಯೆಗಳಲ್ಲಿ ಒಂದು ಸ್ವತಂತ್ರ ಸ್ಥಾನಕೊಡಲು ತವಕಿಸಿದ ಕಾರಣ ಡಾ. ಮೂರ್ತಿ ಅವರು ಈ ಪದ್ಯಕ್ಕೆ ಹೇಳಿದ ಅನ್ವಯ, ಅರ್ಥಗಳು ಅಸ್ತವ್ಯಸ್ತದಲ್ಲಿ ಪರ್ಯವಸಾನಗೊಂಡಿವೆ. ಡಾ. ಮೂರ್ತಿ ಹೇಳುವಂತೆ "ಕ್ಷಾಮಕಾಲದಲ್ಲಿ ಅನ್ನವನ್ನೂ ಸುಫಲದ ಕಾಲದಲ್ಲಿ ಚಿನ್ನವನ್ನೂ ದಾನಮಾಡುವ" ಎಂಬ ಅರ್ಥ ಹೊರಡಬೇಕಾದರೆ ಸಮುಚ್ಚಯವಿಧಿಯನ್ವಯ "ಪಸವಿನೊಳನ್ನಮುಮಂ ಸುಫಲದಲ್ಲಿ ಸುವರ್ಣಮುಮನೀವ" ಎಂಬ ಪಾಠವಿರಬೇಕಾಗುತ್ತದೆ. ಇಲ್ಲಿ ಅಂಥ ಪಾಠವಿಲ್ಲ. ಆದುದರಿಂದ ಡಾ. ಮೂರ್ತಿ ಅವರಂತೆ ಇಲ್ಲಿಯ ಎರಡೂ ಕ್ರಿಯೆಗಳನ್ನು ಒಂದಾಗಿ ಭಾವಿಸದೆ ನಾನು ಹೇಳಿದಂತೆ ಎರಡಾಗಿ ಭಾವಿಸುವುದೇ ಯೋಗ್ಯವೆನಿಸುತ್ತದೆ.

ಈ ಪದ್ಯದಲ್ಲಿ ಒಟ್ಟು ನಾಲ್ಕು ಕ್ರಿಯೆಗಳಿವೆ. ಡಾ. ಮೂರ್ತಿ ಅವರು ಪ್ರಾರಂಭದ ಎರಡು ಕ್ರಿಯೆಗಳನ್ನು ಒಂದನ್ನಾಗಿ ಭಾವಿಸಿದುದರಿಂದ ಮುಂದೆ ಮೂರು ಕ್ರಿಯೆಗಳನ್ನು ಹುಡುಕುವುದು ಅವರಿಗೆ ಅನಿವಾರ್ಯವಾಗಿದೆ. ಮೇಲಾಗಿ 'ಶುಚಿ' ಎಂಬುದೂ ಅವರನ್ನು ಬಲವಾಗಿ ಆಕರ್ಷಿಸಿದೆ. ಆಗ "ಯುದ್ಧದೊಳ್ ಕುಸಿಯದೆ ಸೂಱೆಗೊಳ್ಳದೆ ರಣಕ್ಕೆ ಶುಚಿತ್ವಮನಪ್ಪುಕೆಯ್ವ" ಎಂಬ ಪಾಠದಿಂದ "ಯುದ್ಧದಲ್ಲಿ ಕುಸಿಯದೆ (ಇರುವ), (ಯುದ್ಧದಲ್ಲಿ) ಸೂರೆಮಾಡದೆ (ಇರುವ), ಯುದ್ಧಕ್ಕೆ ಸಂಬಂಧಿಸಿದಂತೆ ಶೌಚಗುಣವನ್ನು...... ಪರಿಪಾಲಿಸುವ" ಎಂಬ ಮೂರು ಕ್ರಿಯೆಗಳ ಅರ್ಥ ಹೊರಡಿಸಿಕೊಂಡಿದ್ದಾರೆ. ತಮ್ಮ ನೇರಕ್ಕೇ ಅರ್ಥಮಾಡಲು ಹೋದ ಕಾರಣ ಮೂಲದಲ್ಲಿ ಕಾಣದ 'ಇರುವ' ಎಂಬ ಕ್ರಿಯಾಪದಗಳನ್ನು ಅವರು ಹೊಸದಾಗಿ ಸೇರಿಸಬೇಕಾಯಿತು. ಇಲ್ಲಿ ಅವರ ಅರ್ಥಾನುಸರಣೆ ವ್ಯಾಕರಣಕ್ಕೆ ಮಾನ್ಯವೆನಿಸುವುದಿಲ್ಲ. ಒಂದು ವೇಳೆ ಮಾನ್ಯವೆನಿಸಬೇಕಿದ್ದರೆ "ಯುದ್ಧದೊಳ್ ಕುಸಿಯದ, ಸೂಱೆಗೊಳ್ಳದ, ರಣಕ್ಕೆ ಶುಚಿತ್ವಮನಪ್ಪುಕೆಯ್ವ" ಎಂಬ ಪಾಠ ಇರಬೇಕಾಗುತ್ತದೆ. (ಹೀಗೆ ಇದ್ದರೂ ಮೊದಲಿನ ಎರಡು ನಿಷೇಧಾತ್ಮಕ ಕ್ರಿಯಾಪದ, ಕೊನೆಯದು ಸಾಮಾನ್ಯ ಕ್ರಿಯಾಪದ ಎಂಬ ದೋಷ ಉಳಿಯುತ್ತಿತ್ತು; ಆ ಮಾತು ಬೇರೆ). ತಮ್ಮ ಈ ಅರ್ಥಹಚ್ಚುವಿಕೆಯಲ್ಲಿ ಒಂದು ಬಗೆಯ ದೋಷ ಉಳಿದುಕೊಳ್ಳುತ್ತದೆ ಎಂಬ ಅಂಶ ಡಾ. ಮೂರ್ತಿ ಅವರನ್ನು ಕಾಡಿದೆ. ಹೀಗಾಗಿ ಅಡಿಟಿಪ್ಪಣಿಯಲ್ಲಿ "ಈ ತಿದ್ದುಪಾಟವನ್ನು ಪ್ರೊ. ಎಂ. ವಿ. ಸೀತಾರಾಮಯ್ಯನವರೂ ಅನುಮೋದಿಸುತ್ತಾರೆ (ಅವರೊಡನೆ ಈ ಪದ್ಯದ ಬಗ್ಗೆ ಒಮ್ಮೆ ನಾನು ನಡೆಸಿದ ಚರ್ಚೆಯಲ್ಲಿ)" ಎಂದು ಪ್ರೊ. ಸೀತಾರಾಮಯ್ಯನವರ ನೆರವು ಪಡೆಯಲು ಹೋದುದೇ ಈ ಅನ್ವಯದ ಬಗೆಗಿರುವ ಅವರ ಅಧೀರ ಮನಸ್ಸನ್ನು ಸೂಚಿಸುತ್ತದೆ. ಆದುದರಿಂದ 'ಪಸಿವು'

ಪದಕ್ಕೆ ಬದಲು ಸೂಚಿಸಿದ 'ಪಸವು' ಬಿಟ್ಟರೆ ಡಾ.ಮೂರ್ತಿ ಅವರು ಹೊಸದನ್ನೇನೂ ತಮ್ಮ ಲೇಖನದಲ್ಲಿ ಹೇಳಿಲ್ಲ; ತಪ್ಪು ಅನ್ವಯ ಮಾಡಿ ಇಡೀ ಅರ್ಥವನ್ನೇ ತಪ್ಪು ದಾರಿಗೆ ಎಳೆದಿದ್ದಾರೆ. ಹೀಗಾಗಿ ಅವರ ಲೇಖನದ ಬಹುಭಾಗವನ್ನು ಕೈಬಿಟ್ಟು 'ಪಸವು' ಎಂಬ ಪಾಠವನ್ನು ಮಾತ್ರ ಒಪ್ಪಿಕೊಂಡು,ನನ್ನ ಮೊದಲಿನ ಅರ್ಥವನ್ನೇ ಮತ್ತೆ ಹೀಗೆ ಸ್ಪಷ್ಟಪಡಿಸುತ್ತೇನೆ.

"೧. ದುರ್ಭಿಕ್ಷದಲ್ಲಿ ಅನ್ನವನ್ನು, ೨. ಸುಭಿಕ್ಷದಲ್ಲಿ ಸುವರ್ಣವನ್ನು 'ದಾನ' ಮಾಡುವ, ೩. ಯುದ್ಧದಲ್ಲಿ ಹಿಂಜರಿಯದೆ, ೪. ಸೂರೆಮಾಡದೆ ರಣ 'ಶುಚಿತ್ವ'ವನ್ನು ಪಾಲಿಸುವ ಮನೋಧರ್ಮದ ಈ ನಾಲ್ಕು ಬಗೆಯ ಜನರು ನಮಗೆ ವಂದ್ಯರು. ಅಂಥವರಲ್ಲಿ ಸಾಹಸಧನನಾದ ಈತನೂ ಒಬ್ಬನಲ್ಲವೆ? ಎಂದು ಅಭಿಮನ್ಯುವಿಗೆ ದುರ್ಯೋಧನನು ಕೈಮುಗಿದನು.

■■

ಆಕರ : ಮಾರ್ಗ ಸಂಪುಟ–೧

೮

ಶಾಸ್ತ್ರಕಾವ್ಯ-ಶ್ಲೇಷಕಾವ್ಯ-ಸಮಸ್ತಕಾವ್ಯ

ವಾಙ್ಮಯವನ್ನು ಶಾಸ್ತ್ರ ಮತ್ತು ಕಾವ್ಯವೆಂದು, ಕಾವ್ಯವನ್ನು ಪುರಾಣಕಾವ್ಯ ಮತ್ತು ಚರಿತ್ರಕಾವ್ಯವೆಂದು ವರ್ಗೀಕರಿಸಬಹುದಾಗಿದ್ದು, ಈ ಮೂರು (ಶಾಸ್ತ್ರ, ಪುರಾಣ, ಚರಿತ್ರೆ) ಸ್ವತಂತ್ರ ಸಾಹಿತ್ಯ ಪ್ರಕಾರಗಳಾಗಿ ಭರತಖಂಡದಲ್ಲಿ ಬೆಳೆದುಬಂದಿವೆ. ಜೊತೆಗೆ ಈ ಮೂರರಲ್ಲಿ ಯಾವುದೇ ಎರಡನ್ನು ಸಮನ್ವಯಗೊಳಿಸಿದ ಮಿಶ್ರಕಾವ್ಯ ಪ್ರಯೋಗಗಳೂ ಹೀಗೆ ಬೆಳೆದು ಬಂದಿವೆ: ಶಾಸ್ತ್ರ+ಪುರಾಣ, ಶಾಸ್ತ್ರ+ಚರಿತ್ರೆ, ಪುರಾಣ+ಪುರಾಣ, ಪುರಾಣ+ ಚರಿತ್ರೆ. ಈ ಮಿಶ್ರಣದಿಂದಾಗಿ ಬೆಳೆದುಬಂದ ಮಿಶ್ರಕಾವ್ಯ ಪ್ರಕಾರಗಳ್ನು ತಂತ್ರದೃಷ್ಟಿಯಿಂದ ೧. ಶಾಸ್ತ್ರಕಾವ್ಯ (ಶಾಸ್ತ್ರ+ಪುರಾಣ, ಶಾಸ್ತ್ರ+ಚರಿತ್ರೆ), ೨. ಶ್ಲೇಷಕಾವ್ಯ (ಪುರಾಣ+ಪುರಾಣ, ಪುರಾಣ+ಚರಿತ್ರೆ), ೩. ಸಮಸ್ತಕಾವ್ಯ (ಪುರಾಣ+ಚರಿತ್ರೆ)ವೆಂದು ವರ್ಗೀಕರಿಸಬಹುದು. ಇವುಗಳಲ್ಲಿ ಪುರಾಣ ಮತ್ತು ಚರಿತ್ರೆಗಳನ್ನು ಸಮನ್ವಯಗೊಳಿಸಿಕೊಂಡ ಪಂಪಭಾರತ ಸಮಸ್ತಕಾವ್ಯ ವರ್ಗಕ್ಕೆ ಸೇರುತ್ತದೆ. ಇದಕ್ಕೂ ಪೂರ್ವದಲ್ಲಿ ಶಾಸ್ತ್ರಕಾವ್ಯ, ಶ್ಲೇಷಕಾವ್ಯಗಳ ಪ್ರಬುದ್ಧ ಪ್ರಯೋಗಗಳು ನಡೆದುದು ಪಂಪನಿಗೆ ಗೊತ್ತಿದೆ. ಬಹುಶಃ ಗಂಗ ಅರಸು ಎರೆಯಪ್ಪನನ್ನು ಶೂದ್ರಕ ಮಹಾರಾಜನೊಂದಿಗೆ ಸಮೀಕರಿಸಿ ಬರೆದಿರಬಹುದಾದ ಗುಣವರ್ಮನ 'ಶೂದ್ರಕ'ಹೆಸರಿನ ಸಮಸ್ತ ಕಾವ್ಯವೂ ಪಂಪನ ಕಣ್ಣು ಮುಂದಿದೆ. ಈ ಎಲ್ಲ ಪ್ರಯೋಗಗಳನ್ನು ವಿವೇಚಿಸುತ್ತ, ಇವುಗಳ ಹಿನ್ನೆಲೆಯಲ್ಲಿ ಮಾಡಿದ ಪಂಪನ 'ಸಮಸ್ತಕಾವ್ಯ' ರಚನಾ ಪ್ರಯತ್ನವನ್ನು ಪರೀಕ್ಷಿಸಿ ಬೆಲೆ ಕಟ್ಟುವುದು, ಈ ಲೇಖನದ ಉದ್ದೇಶ.

ಶಾಸ್ತ್ರಕಾವ್ಯ :

ಶಾಸ್ತ್ರವನ್ನು ಬರೆಯುವ ಸಂದರ್ಭದಲ್ಲಿ ಮೇಲೆ ಸೂತ್ರಗಳನ್ನು ಹೇಳಿ, ಪ್ರಯೋಗಗಳಿಗಾಗಿ ಪೌರಾಣಿಕ ವ್ಯಕ್ತಿ ಇಲ್ಲವೆ ಚಾರಿತ್ರಿಕ ವ್ಯಕ್ತಿಗಳಿಗೆ ಸಂಬಂಧಿಸಿದ ಪದ್ಯಗಳನ್ನು ರಚಿಸುವುದು ಈ ಕಾವ್ಯದ ಉದ್ದೇಶ. ಇದರಿಂದಾಗಿ ಏಕಕಾಲಕ್ಕೆ ಶಾಸ್ತ್ರವನ್ನೂ, ಕಾವ್ಯವನ್ನೂ ರಚಿಸಿದ ಲಾಭ ಪ್ರಾಪ್ತವಾಗುತ್ತದೆ. ಒಂದು ಪರಂಪರೆಯಾಗಿ ಬೆಳೆದುಬಂದ ಈ ಬಗೆಯ ಸಾಹಿತ್ಯದಲ್ಲಿ ಎರಡು ಪ್ರಭೇದಗಳನ್ನು ಗುರುತಿಸಬಹುದು. ವ್ಯಾಕರಣ ಅಲಂಕಾರಗಳಂಥ ಯಾವುದೇ ಶಾಸ್ತ್ರವನ್ನು ನಿರೂಪಿಸುತ್ತ, ಪ್ರಯೋಗಗಳಿಗಾಗಿ 'ಪುರಾಣಕಥೆ'ಗೆ ಸಂಬಂಧಿಸಿದ ಪದ್ಯಗಳನ್ನೇ ರಚಿಸುತ್ತ ಹೋಗುವುದು ಒಂದು ಪ್ರಭೇದವಾದರೆ, ಪ್ರಯೋಗಗಳಿಗಾಗಿ ಆಶ್ರಯ ನೀಡಿದ ಅರಸನ ಚರಿತ್ರೆಗೆ ಸಂಬಂಧಿಸಿದ ಪದ್ಯಗಳನ್ನೇ ರಚಿಸುತ್ತ ಹೋಗುವುದು ಇನ್ನೊಂದು ಪ್ರಭೇದವಾಗಿದೆ. ಈ ಎರಡೂ ವಿಧಗಳಲ್ಲಿ ಸಮಗ್ರಕಥೆಯನ್ನು ಸೂತ್ರ ಕಡಿದುಹೋಗದಂತೆ ಹೆಣೆಯಬಹುದು. ಇಲ್ಲವೆ ಕಥಾಸಮಗ್ರತೆಯ ಕಡೆಗೆ ಗಮನ ಕೊಡದೆ ಕೇವಲ ಬಿಡಿಪದ್ಯಗಳನ್ನು ರಚಿಸಬಹುದು.

ಭಟ್ಟಿಯ ರಾವಣವಧ ಕೃತಿಯು ರಾಮಾಯಣಕಥೆಯಾದರೂ ಅಲಂಕಾರ ವ್ಯಾಕರಣ ನಿರೂಪಣೆ ಇದರ ವಸ್ತು. ಭಟ್ಟ ಭೀಮನ ರಾವಣಾರ್ಜುನೀಯವು ರಾವಣ ಮತ್ತು ಕಾರ್ತವೀರಾರ್ಜುನರ ಕಥೆಯನ್ನು ಹೇಳುತ್ತಿದ್ದರೂ ಇದು ಪಾಣಿನಿಯ ಅಷ್ಟಾಧ್ಯಾಯಿಯನ್ನು ಕುರಿತುದಾಗಿದೆ. ಪುರಾಣಕಥೆಯನ್ನಾಧರಿಸಿದ ಇಂಥ ಅನೇಕ ಶಾಸ್ತ್ರಗ್ರಂಥಗಳು ಸಂಸ್ಕೃತದಲ್ಲಿ ಹುಟ್ಟಿಕೊಂಡು ಬಂದಿವೆ. ಇವೆಲ್ಲ ಪುರಾಣಕಥೆಯನ್ನಾಧರಿಸಿ ಬರೆದ ಶಾಸ್ತ್ರಕಾವ್ಯಗಳು.

ಬರುಬರುತ್ತ ಪುರಾಣಕಥೆಗಳಿಗೆ ಬದಲು ರಾಜಚರಿತ್ರೆಗಳನ್ನು ವಸ್ತುವಾಗಿಟ್ಟುಕೊಂಡು ಇಂಥ ಶಾಸ್ತ್ರಕೃತಿಗಳನ್ನು ಬರೆಯುವ ಪದ್ಧತಿ ನಮ್ಮ ದೇಶದಲ್ಲಿ ತಲೆಯೆತ್ತಿತು. ಏಕಕಾಲಕ್ಕೆ ಶಾಸ್ತ್ರವನ್ನೂ ರಾಜನ ಚರಿತ್ರೆಯನ್ನೂ ಪ್ರತಿಪಾದಿಸುವ ಸಾಹಿತ್ಯ ಪ್ರಕಾರವಿದು. ಇಂಥ ಕೃತಿಗಳಲ್ಲಿ ಹಲಾಯುಧನ 'ಕವಿರಹಸ್ಯ' ಮುಖ್ಯವಾದುದು. ಕ್ರಿಯಾಪದ ರೂಪಗಳನ್ನು ಪ್ರತಿಪಾದಿಸುವ ವ್ಯಾಕರಣವಾಗಿರುವ ಇದು, ರಾಷ್ಟ್ರಕೂಟ ಮೂರನೆಯ ಕೃಷ್ಣನ (೯೪೦-೫೬) ಪ್ರಶಂಸಾಪರ ಪದ್ಯಗಳನ್ನು ಉದಾಹರಣೆಗಾಗಿ ಬಳಸಿದೆ. ಹೇಮಚಂದ್ರನ 'ಕುಮಾರಪಾಲಚರಿತ'ವು ಹೆಸರೇ ಸೂಚಿಸಿದಂತೆ ಅಣಹಿಲವಾಡ ದೇಶದ ಕುಮಾರಪಾಲನ ಚರಿತ್ರೆಯೇ ಆಗಿದ್ದು, ಇದು ಸಂಸ್ಕೃತ ವ್ಯಾಕರಣ, ಪ್ರಾಕೃತ ವ್ಯಾಕರಣ ಪ್ರಕ್ರಿಯೆಗಳನ್ನು ವಿವರಿಸುವ ಕೃತಿಯಾಗಿದೆ. ಕನ್ನಡದಲ್ಲಿ ಕವಿರಾಜಮಾರ್ಗ (ಇದಕ್ಕೆ ನೃಪತುಂಗಾಭ್ಯುದಯ ಎಂಬ ಇನ್ನೊಂದು ಹೆಸರೂ ಇರುವುದನ್ನು ನಾನು ಬೇರೆಡೆ ತೋರಿಸಿಕೊಟ್ಟಿದ್ದೇನೆ)[೧] ಈ ಸಂಪ್ರದಾಯದ ಕೃತಿಯೆಂದು ಹೇಳಬಹುದು. ಅಲಂಕಾರ ಗ್ರಂಥವಾದ ಇದರಲ್ಲಿ ಉದಾಹರಣೆಗಾಗಿ ನೃಪತುಂಗನ ಪ್ರಶಂಸಾಪದ್ಯಗಳಿರುವುದನ್ನು ಗಮನಿಸಬೇಕು. ಪೊನ್ನನು ಅಲಂಕಾರ ಗ್ರಂಥ ಬರೆದಿರುವನೆಂದು ಕವಿಚರಿತೆಕಾರರು ಹೇಳುವುದರಿಂದಲೂ, ನೃಪತುಂಗಾಭ್ಯುದಯ ಮಾದರಿಯಲ್ಲಿ ಇವನ ಕೃತಿಗೆ ಭುವನೈಕರಾಮಾಭ್ಯುದಯ ಎಂಬ ಹೆಸರಿರುವುದರಿಂದಲೂ ಈತನ ಅನುಪಲಬ್ಧ ಭುವನೈಕರಾಮಾಭ್ಯುದಯವೂ ಒಂದು ಶಾಸ್ತ್ರಕಾವ್ಯವಾಗಿರಬಹುದೇ? ಇದಕ್ಕೆ ರಾಷ್ಟ್ರಕೂಟ ಮೂರನೆಯ ಕೃಷ್ಣನ ವರ್ಣನಪರ ಉದಾಹರಣೆಗಳನ್ನು ಬಳಸಿರಬಹುದೆ? ಎನಿಸುತ್ತದೆ. ಕನ್ನಡದಲ್ಲಿ ಅಪ್ರತಿಮವೀರಚರಿತೆ, ನರಪತಿಚರಿತೆಗಳು ಈ ಮಾದರಿಯ ಇತರ ಶಾಸ್ತ್ರಕೃತಿಗಳಾಗಿವೆ.

ಒಂದು ವೇಳೆ ಈ ಪ್ರಯೋಗವು ಬಿಡಿಪದ್ಯರಚನಾ ಪದ್ಧತಿಯದಾಗಿದ್ದರೆ, ಇಲ್ಲಿ ಕವಿಗೆ ಅರಸನ ಉದಾತ್ತ ಘಟನೆಗಳನ್ನು ಚಿತ್ರಿಸುವ ಸ್ವಾತಂತ್ರ್ಯವಿರುತ್ತದೆ. ಅದೇ ರೀತಿ ಸಮಗ್ರ ಕಥಾಪದ್ಧತಿಯಾಗಿದ್ದರೆ ಇಲ್ಲಿ ಉದಾತ್ತ ಚಾರಿತ್ರಿಕ ಅಂಶಗಳನ್ನು ಮಾತ್ರ ಹೆಣೆದುಕೊಂಡು ಹೋಗುವ ಸ್ವಾತಂತ್ರ್ಯವಿರುತ್ತದೆ. ಅದೇನೇ ಇದ್ದರೂ ಶಾಸ್ತ್ರಕೃತಿಯಲ್ಲಿ ಅರಸನನ್ನು ತಳುಕುಹಾಕಿಕೊಂಡು ಹೋಗುವ ಸ್ಪಷ್ಟ ಪ್ರಯತ್ನವನ್ನು ಪ್ರಾಚೀನಕಾಲದಲ್ಲಿ ಕಾಣಬಹುದಾಗಿದೆ.

ಶ್ಲೇಷಕಾವ್ಯ:

ಇದು ಶ್ಲೇಷೆಯ ಮೂಲಕ ಏಕಕಾಲಕ್ಕೆ ಒಂದಕ್ಕಿಂತ ಹೆಚ್ಚು ಕಥೆಗಳನ್ನು ಮೇಳವಿಸಿಕೊಂಡು ಮುನ್ನಡೆವ ಕಾವ್ಯಪ್ರಯೋಗ. ಶಾಸ್ತ್ರಕಾವ್ಯದಂತೆ ಒಂದು ಪ್ರಯೋಗವಾಗಿರುವ ಇದು ಪ್ರತಿಭೆಯ ಜೊತೆ ಪಾಂಡಿತ್ಯವನ್ನೂ ಬಯಸುತ್ತದೆ. ರಾಮಾಯಣಕಥೆ ಮತ್ತು ಮಹಾಭಾರತ ಕಥೆಗಳನ್ನೊಳಗೊಂಡ ಧನಂಜಯನ (೧೧೨೩-೪೦) ರಾಘವಪಾಂಡವೀಯ, ರಾಮಕಥಾ ಮತ್ತು ನಳಕಥಾನಕಗಳನ್ನೊಳಗೊಂಡ ಹರಿದತ್ತಸೂರಿಯ ರಾಘವನೈಷಧೀಯ,

---

೧. ನೃಪತುಂಗಾಭ್ಯುದಯ (ಕರ್ನಾಟಕ ಭಾರತಿ ೧೦-೩)

ಪಾರ್ವತೀಪರಮೇಶ್ವರನ ಮತ್ತು ರುಕ್ಮಿಣೀಕೃಷ್ಣರ ವಿವಾಹಗಳನ್ನು ವರ್ಣಿಸುವ ಚಾಲುಕ್ಯ ಸೋಮದೇವನ ಪಾರ್ವತೀರುಕ್ಮಿಣೀಯ, ಭಾಗವತ ಮತ್ತು ರಾಮಾಯಣಗಳನ್ನೊಳಗೊಂಡ ವೆಂಕಟಾಧ್ವರಿಯ ಯಾದವರಾಘವೀಯಗಳು ಸುಪ್ರಸಿದ್ಧ ಶ್ಲೇಷಕಾವ್ಯ ಅಥವಾ ದ್ವಿಸಂಧಾನಕಾವ್ಯಗಳಾಗಿವೆ. ಈ ಪ್ರಯೋಗದ ಬೆಳವಣಿಗೆಯೆಂಬಂತೆ ರಾಮಾಯಣ, ಭಾರತ, ಭಾಗವತಗಳ ಮುಪ್ಪರಿಯಾಗಿ ಹುಟ್ಟಿದ "ರಾಘವ-ಪಾಂಡವ-ಯಾದವೀಯ" (ಕಥಾತ್ರಯೀ)ವು ತ್ರಿಸಂಧಾನ ಕಾವ್ಯವಾಗಿದೆ. ಪುರಾಣವಸ್ತುವನ್ನೊಳಗೊಂಡ ಈ ಸಂಸ್ಕೃತ ಸಂಧಾನಕಾವ್ಯಗಳನ್ನು ಬರೆದವರು ಸಾಮಾನ್ಯವಾಗಿ ಕನ್ನಡಿಗರಾಗಿದ್ದರೂ, ಕನ್ನಡ ಭಾಷೆಯಲ್ಲಿ ಇಂಥ ಒಂದೂ ಶ್ಲೇಷಕಾವ್ಯ ಹುಟ್ಟದಿರುವುದು ಸೋಜಿಗದ ವಿಷಯವೆನಿಸಿದೆ.

ಇವೆಲ್ಲ ಪುರಾಣಕಥೆಯನ್ನಾಧರಿಸಿ ಬರೆದ ಸಂಸ್ಕೃತ ಸಂಧಾನಕಾವ್ಯಗಳು. ಇದೇ ರೀತಿ ಸಂಸ್ಕೃತದಲ್ಲಿ ರಾಜಚರಿತ್ರೆಯನ್ನಾಧರಿಸಿ ಹುಟ್ಟಿದ ದ್ವಿಸಂಧಾನ ಕಾವ್ಯವೆಂದರೆ ಸಂಧ್ಯಾಕರನಂದಿಯ (೧೧ ನೆಯ ಶತಮಾನ) ರಾಮಚರಿತೆ. ಇದು ಶ್ಲೇಷೆಯ ಮೂಲಕ ರಾಮಾಯಣದ ಶ್ರೀರಾಮನ ಕಥೆ ಮತ್ತು ಬಂಗಾಲದ ರಾಮಪಾಲ ಅರಸನ ಚರಿತ್ರೆಗಳನ್ನು ವಿವರಿಸುತ್ತದೆ. ರಾಮನಿಗೆ ಸಂಬಂಧಿಸಿದ ಉದಾತ್ತ ಘಟನೆಗಳನ್ನು ತನ್ನ ಅರಸು ರಾಮಪಾಲನಿಗೆ ಈತ ಶ್ಲೇಷೆಯಿಂದ ಹೊಂದಿಸಿರಬಹುದು. ರಾಮನ ಹೆಂಡತಿಯಾದ ಸೀತೆಯನ್ನು ರಾವಣ ಅಪಹರಿಸಿದಂಥ ಅನುದಾತ್ತ ಘಟನೆಗಳನ್ನು ಶ್ಲೇಷೆಯ ಮೂಲಕ ಪರಿಹರಿಸಿಕೊಂಡಿರಲಿಕ್ಕಿಲ್ಲ. ಅದೇನೇ ಇದ್ದರೂ ಪುರಾಣಕಥೆಗಳೊಂದಿಗೆ ಆಶ್ರಯದಾತ ಅರಸನ ಕಥೆಯನ್ನು ಹೊಂದಿಸಿಕೊಂಡು ಹೋಗುವ ಉಪಕ್ರಮ ಶ್ಲೇಷಕಾವ್ಯಗಳಲ್ಲಿ ಬೆಳೆದುಬರುತ್ತಿದ್ದುದರ ದ್ಯೋತಕವಿದು.

ಸಮಸ್ತ ಕಾವ್ಯ:

ಹೀಗೆ ಶಾಸ್ತ್ರಕಾವ್ಯ, ಶ್ಲೇಷಕಾವ್ಯಗಳು ತಮ್ಮ ಜೊತೆಗೆ ಪುರಾಣಕಥೆಗಳನ್ನೋ ಆಶ್ರಯ ನೀಡಿದ ಅರಸರ ಕಥೆಗಳನ್ನೋ ಪ್ರತಿಪಾದಿಸುತ್ತ ಬೆಳೆದು ಬಂದವು. ಅರಸರ ವಿಷಯವನ್ನು ಹೊಂದಿಸಿಕೊಳ್ಳುವ ಈ ಕಾವ್ಯಪರಂಪರೆಯೇ ಪಂಪಾದಿಗಳಿಗೆ 'ಸಮಸ್ತಕಾವ್ಯ' ಎಂಬ ಹೊಸ ಪ್ರಯೋಗವನ್ನು ಆವಿಷ್ಕರಿಸಲು ಪ್ರೇರಣೆ ನೀಡಿರಬಹುದು. ಇದರ ಫಲವಾಗಿ ಗುಣವರ್ಮನ ಶೂದ್ರಕ, ಪಂಪನ ಭಾರತ, ರನ್ನನ ಗದಾಯುದ್ಧಗಳೆಂಬ ಸಮಸ್ತ ಕಾವ್ಯಗಳು ಕನ್ನಡದಲ್ಲಿ ಹುಟ್ಟಿಬಂದವು. ಬಹುಶಃ ಇದು ಕನ್ನಡಿಗರು ಮಾತ್ರ ಮಾಡಿದ, ಕನ್ನಡ ಭಾಷೆಯಲ್ಲಿ ಮಾತ್ರ ನಡೆದ ಪ್ರಯೋಗವೆಂದು ತೋರುತ್ತದೆ. ಇದರ ಒಂದು ಪರಿಮಿತಿಯೆಂದರೆ ಶಾಸ್ತ್ರಕಾವ್ಯಗಳು ಶಾಸ್ತ್ರ-ಪುರಾಣ, ಶಾಸ್ತ್ರ-ಚರಿತ್ರೆಗಳನ್ನೂ, ಶ್ಲೇಷಕಾವ್ಯಗಳು ಪುರಾಣ-ಪುರಾಣ, ಪುರಾಣ-ಚರಿತ್ರೆಗಳನ್ನೂ ಮೇಳವಿಸಿಕೊಂಡರೆ, ಈ ಸಮಸ್ತಕಾವ್ಯವು ಪುರಾಣ-ಇತಿಹಾಸಗಳನ್ನು ಮಾತ್ರ ಮೇಳವಿಸಿಕೊಳ್ಳುತ್ತದೆ. ಇಷ್ಟು ಹಿನ್ನೆಲೆಯಲ್ಲಿ 'ಸಮಸ್ತಕಾವ್ಯ' ಹೆಸರಿನ ಕನ್ನಡಿಗರ ಹೊಸ ಕಾವ್ಯಪ್ರಯೋಗವನ್ನು ವಿಮರ್ಶಿಸಬಹುದು.

ಶಾಸ್ತ್ರಕಾವ್ಯ, ಶ್ಲೇಷಕಾವ್ಯಗಳ ಸುಳುಹು ಹಿಡಿದು ಹುಟ್ಟಿದ ಈ ಕಾವ್ಯಪ್ರಯೋಗ ಬಹುಶಃ ಕನ್ನಡದಲ್ಲಿ ಮೊದಲನೆಯ ಗುಣವರ್ಮನ ಶೂದ್ರಕದಲ್ಲಿ ಕಂಡುಬರುತ್ತಿದ್ದರೂ ಅದು ಉಪಲಬ್ಧವಿಲ್ಲ. ಈಗಿನ ಮಟ್ಟಿಗೆ ಈ ಕಾವ್ಯಪ್ರಯೋಗದ ಲಭ್ಯ ಪ್ರಥಮಕೃತಿ ಪಂಪಭಾರತ. ಪಂಪನೂ "ವರ್ಣಕಂ ಕತೆಯೊಳೊಡಂಬಡಂ ಪಡೆಯೆ ಪೇಳ್ವೊಡೆ ಪಂಪನೆ ಪೇಳ್ಗುಂ", "ಈ ಕಥೆಯೊಳ್ತಗುಳ್ಚಿ ಪೋಲಿಪೊಡೆನಗಳ್ತಿಯಾದುದು ಗುಣಾರ್ಣವಭೂಭುಜನಂ ಕಿರೀಟಿಯೊಳ್", "ಆರೂಢಸರ್ವಜ್ಞನಂ... ನಾಯಕಂ ಮಾಡಿ ಸಂದರ್ಜುನನೊಳ್ಪೋಲ್ವೀ ಕಥಾಭಿತ್ತಿಯನನುನಯದಿಂ ಪೇಳಲೆಂದೆತ್ತಿಕೊಂಡೆಂ" ಎಂದು ತಾನು ಏನೋ ಒಂದು ದೊಡ್ಡ ಪ್ರಯೋಗ ಮಾಡಹೊರಟಿದ್ದೇನೆ ಎಂಬಂತೆ ಪದೇ ಪದೇ ಹೇಳಿಕೊಳ್ಳುತ್ತಾನೆ. ಇಂದಿನ ವಿದ್ವಾಂಸರೂ ಈ ಮಾತಿನ ಸಾರ್ಥಕತೆಯನ್ನು ಆಳವಾಗಿ ವಿಮರ್ಶಿಸದೆ ಹೊಗಳುತ್ತ ನಡೆದಿದ್ದಾರೆ. ಸಾಮಾನ್ಯವಾಗಿ ಹಿರಿಯ ತಲೆಮಾರಿನ

ವಿಮರ್ಶಕರು ವ್ಯಕ್ತಪಡಿಸಿದ ಸಿದ್ಧ ಹೇಳಿಕೆಗಳು ವೇದವಾಕ್ಯಗಳಾಗಿ ತೇಲುತ್ತ ಬರುವುದು ಸಹಜ. ಯಾವುದೋ ಕಾಲದಲ್ಲಿ, ಆ ಕಾಲದ ಪರಿಮಿತ ತಿಳುವಳಿಕೆಯ ಹಿನ್ನೆಲೆಯಲ್ಲಿ ಅವರು ಆಡಿದ ಇಂಥ ಮಾತುಗಳು ತಲೆಮಾರಿನಿಂದ ತಲೆಮಾರಿಗೆ ಧ್ವನಿಸಿ, ಆ ಬಗ್ಗೆ ಹೊಸವಿಚಾರ ಮಾಡಲೂ ಅವಕಾಶ ಕೊಡುವುದಿಲ್ಲ. ಈಗ ಅಂಥ ಹೇಳಿಕೆಗಳ ಮರುಪರಿಶೀಲನೆ ಕನ್ನಡದಲ್ಲಿ ಅವಶ್ಯ ನಡೆಯಬೇಕಾಗಿದೆ. ಹೀಗೆ ಪರಿಶೀಲಿಸಬೇಕಾದವುಗಳಲ್ಲಿ ಪಂಪನ 'ತಗುಳ್ಚಿ ಪೇಳುವ' ಉಪಕ್ರಮ ಅಂದರೆ 'ಸಮಸ್ತಕಾವ್ಯ' ಪದ್ಧತಿಯೂ ಒಂದು.

ಪಂಪಭಾರತದ ಪ್ರಥಮಾಶ್ವಾಸದಲ್ಲಿ ಆಶ್ರಿತರಾಜನ ವಂಶಾವಳಿಯನ್ನು ವರ್ಣಿಸಲಾಗಿದೆ. ಇದು ಇತಿಹಾಸ, ಸಾಹಿತ್ಯ ಈ ಎರಡೂ ದೃಷ್ಟಿಯಿಂದಲೂ ನಿಸ್ಸಂದೇಹವಾಗಿ ಉತ್ತಮಭಾಗ. ಆದರೆ ಇದಕ್ಕೂ ತಗುಳ್ಚಿ ಪೇಳುವಿಕೆಗೂ ಏನೂ ಸಂಬಂಧವಿಲ್ಲ. ತಗುಳ್ಚಿ ಪೇಳುವ ಪ್ರಯೋಗ ನಡೆದುದು ಪಂಪಭಾರತದ ಮುಂದಿನ ಭಾಗದಲ್ಲಿ. ಅದೂ ಮಹಾಭಾರತದ ಎಲ್ಲ ಪಾತ್ರ ಎಲ್ಲ ಘಟನೆಗಳನ್ನು ಅರಿಕೇಸರಿ ಪರಿಸರದ ಎಲ್ಲ ಪಾತ್ರ ಎಲ್ಲ ಘಟನೆಗಳೊಂದಿಗೆ ತಗುಳ್ಚುವುದಲ್ಲ, ಮಹಾಭಾರತದ ಒಂದು ಪಾತ್ರವಾದ ಅರ್ಜುನನ ಪ್ರಸಂಗದಲ್ಲಿ, ಅಂದರೆ ಆತನ ಘಟನೆಗಳ ಪ್ರಸಂಗದಲ್ಲಿ 'ಅರ್ಜುನ' ಪದಕ್ಕೆ ಬದಲು ಆಗಾಗ 'ಅರಿಕೇಸರಿ' ಪದವನ್ನು ಇಡುತ್ತ ಹೋಗುವುದಾಗಿದೆ.

ಇದು ಮೇಲೆ ಹೇಳಿದ ಶಾಸ್ತ್ರಕಾವ್ಯ ಮತ್ತು ಶ್ಲೇಷಕಾವ್ಯಗಳ ರೀತಿಗಿಂತ ಭಿನ್ನವಾಗಿದೆ. ಶಾಸ್ತ್ರಕಾವ್ಯವು ಹೇಳಿಕೊಳ್ಳುವಂಥ ಪ್ರಯೋಗವೇನಲ್ಲ; ಅಲ್ಲಿ ಉದಾಹರಣೆಗಳಿಗಾಗಿ ರಾಜನ ಪರವಾದ ಪದ್ಯಗಳನ್ನು ರಚಿಸಲಾಗುತ್ತದೆ. ಶ್ಲೇಷಕಾವ್ಯ ಮಾತ್ರ ಖಂಡಿತವಾಗಿಯೂ ಒಂದು ಕಾವ್ಯಪ್ರಯೋಗ. ವಿದ್ವತ್ತಿನ ಭೂಮಿಕೆಯ ಮೇಲೆ ಏಳಬೇಕಾದ ಈ ಸೌಧ ಕೇವಲ ಒಂದು ಪ್ರಕಾರವಲ್ಲ, ಒಂದು ಪ್ರಯತ್ನ. ಏಕಕಾಲಕ್ಕೆ ಶ್ಲೇಷೆಯ ಮೂಲಕ ಎರಡೂ ಕಥೆಗಳನ್ನು ಬೆಳೆಸಿಕೊಂಡು ಹೋಗಿ, ಎರಡು ಪ್ರತ್ಯೇಕ ಗುರಿಗಳನ್ನು ಸಾಧಿಸುವ ಸಾಹಸ. ಆದರೆ 'ಸಮಸ್ತಕಾವ್ಯ' ಪದ್ಧತಿಯ ಮೂಲಕ ಪೌರಾಣಿಕ ಮತ್ತು ಚಾರಿತ್ರಿಕ ಪಾತ್ರಗಳನ್ನು ಸಮನ್ವಯೀಕರಿಸುವೆನೆಂಬ ಪಂಪನ ಮಾತು ಬರಿಯ ಮಾತಿನ ಸ್ತರದಲ್ಲಿ ನಿಲ್ಲುತ್ತದೆಯೇ ಹೊರತು, ಸಾರ್ಥಕತೆಯ ಮಟ್ಟಕ್ಕೆ ಏರುವುದೇ ಇಲ್ಲ. ಅಲ್ಲೊಮ್ಮೆ ಇಲ್ಲೊಮ್ಮೆ 'ಅರ್ಜುನ' ಪದಕ್ಕೆ ಪ್ರತಿಯಾಗಿ 'ಅರಿಕೇಸರಿ'ಪದವನ್ನೋ ಅವನ ಬಿರುದನ್ನೋ ಬಳಸಿದರೆ ಏನು ಮಾಡಿದಂತಾಯಿತು? ಇದರಿಂದ ಈ ಕಡೆ ಅರಿಕೇಸರಿಗೂ ನ್ಯಾಯ ಒದಗಿಸಲಿಲ್ಲ, ಆ ಕಡೆ ಅರ್ಜುನನಿಗೂ ನ್ಯಾಯ ಒದಗಿಸಲಿಲ್ಲ. ಹೀಗಾಗಿ 'ತಗುಳ್ಚಿ ಪೇಳುವೆ'ನೆಂಬ ಆತನ ಮಾತು ಕೇವಲ ತೋರಿಕೆಯಾಗಿ ಉಳಿಯುತ್ತದೆ. (೧) ಅರ್ಜುನನ ಪ್ರಶಸ್ತ ಘಟನೆಗಳು, (೨) ಅರ್ಜುನನ ಅಪ್ರಶಸ್ತಘಟನೆಗಳು, (೩) ಅರಿಕೇಸರಿಗೆ ಮಾತ್ರ ಸಂಬಂಧಿಸಿದ ಘಟನೆಗಳು, (೪) ಅರ್ಜುನನಿಗೆ ಮಾತ್ರ ಸಂಬಂಧಿಸಿದ ಘಟನೆಗಳು - ಹೀಗೆ ನಾಲ್ಕು ಬಗೆಯ ಘಟನೆಗಳಲ್ಲಿ ಪಂಪನ ಈ ಪ್ರತಿಜ್ಞೆ ತುಳಿದ ದಾರಿಯನ್ನು ಇಲ್ಲಿ ನೋಡಬಹುದು.

೧. ಅರ್ಜುನನ ಪ್ರಶಸ್ತ ಘಟನೆಗಳು : ಅರ್ಜುನನ ಬದುಕಿನ ಪ್ರಶಸ್ತ ಘಟನೆಗಳನ್ನು ಅರಿಕೇಸರಿಗೆ ತಗುಳ್ಚಿ ವರ್ಣಿಸುವಾಗ ನಮ್ಮ ಮನಸ್ಸನ್ನು ಆವರಿಸುವವನು ಅರ್ಜುನನೇ ಹೊರತು. ಅರಿಕೇಸರಿ ಅಲ್ಲ. ಉದಾ: "ದೇವೇಂದ್ರನೊಳರ್ಧಾಸನಮೇರಿದ ಗುಣಾರ್ಣವನ ಮಹಿಮೆಯಂ" ಎನ್ನುತ್ತ, ಗುಣಾರ್ಣವ ಎಂಬ ಅರಿಕೇಸರಿಯ ಬಿರುದನ್ನು ಎತ್ತಿ ಹೇಳಿದ್ದರೂ ಇಲ್ಲಿ ನಮಗೆ ತಟ್ಟನೇ ನೆನಪಾಗಿ, ಮನದಲ್ಲಿ ನಿಲ್ಲುವವ ಅರ್ಜುನನೇ ಹೊರತು, ಅರಿಕೇಸರಿಯಲ್ಲ. ಇಂಥ ಅನೇಕ ಘಟನೆಗಳು ಪಂಪಭಾರತದಲ್ಲಿ ಸಿಗುತ್ತವೆ.

ಕೆಲವೊಮ್ಮೆ ಘಟನೆ ಪ್ರಶಸ್ತವಾಗಿದ್ದರೂ ತಗುಳ್ಚಿ ಹೇಳಲು ಮಾಡಿದ ಪ್ರಯತ್ನ ಕಾರಣವಾಗಿ ಇಡಿ ಹೇಳಿಕೆ ಅಸಂಬದ್ಧವಾಗುವುದಕ್ಕೆ ಅರ್ಜುನ ವ್ಯಕ್ತಪಡಿಸುವ ಈ ಕೆಳಗಿನ ಪದ್ಯವನ್ನು ನೋಡಬಹುದು.

ನರಸಿಂಗಂಗಂ ಜಾಕ।
ಬ್ಬರಸಿಗಮಳವೊದವೆ ಪುಟ್ಟೆ ಪುಟ್ಟಿಯುಮರಿಕೇ ।
ಸರಿಯೆನೆ ನೆಗಳ್ದುಮರಾತಿಯ ।
ಸರಿದೊರೆಗಂ ಬಂದೆನಪ್ಪೊಡಾಗಳ್ ನಗಿರೇ ।

ಅರ್ಜುನ ಹೇಳುವ ಈ ಮಾತು ತೀರ ಅಸಂಬದ್ಧತೆಯನ್ನೇ ಸೃಷ್ಟಿಸುತ್ತದೆ.

೨. ಅರ್ಜುನನ ಅಪ್ರಶಸ್ತ ಘಟನೆಗಳು: ಅರ್ಜುನನ ಜೀವನದಲ್ಲಿ ಪ್ರಶಸ್ತದಂತೆ ಕೆಲವು ಅಪ್ರಶಸ್ತ ಘಟನೆಗಳೂ ಆಗಾಗ ಜರುಗಿವೆ. ಇಂಥ ಪ್ರಸಂಗಗಳಲ್ಲಿ ಅರ್ಜುನನ ಜೊತೆ ಅರಿಕೇಸರಿಗೂ ಅವಮಾನ ಅಂಟಿಕೊಂಡು ಬಿಡುತ್ತದೆ. ವಿರಾಟನಲ್ಲಿ ಅರ್ಜುನ ಬಳೆತೊಟ್ಟು, ಸೀರೆಯುಟ್ಟು ಬೃಹನ್ನಳೆಯಾದುದೂ. ಗೋಗ್ರಹಣಪ್ರಸಂಗದಲ್ಲಿ "ಬಿಡೆ ಪಿಣಿಲಂ ಕುರುಧ್ವಜಿನಿ ತೊಟ್ಟನೆ ಬಾಯನೆ ಬಿಟ್ಟುದು ರಥಮನೇರಲೊಡಂ ಪಡೆಮೆಚ್ಚೆಗಂಡನಾ" ಎನ್ನುತ್ತ, ಪಡೆಮೆಚ್ಚೆಗಂಡ ಬಿರುದಿನ ಅರಿಕೇಸರಿ ಹೆರಳನ್ನು ಬಿಚ್ಚಿಕೊಂಡನೆಂದು ಸೂಚಿಸುವುದೂ ಅರಿಕೇಸರಿಯ ವಿಷಯವಾಗಿ ಅಪ್ರಶಸ್ತ ಘಟನೆಗಳೇ ಆಗುತ್ತವೆ. ಯುದ್ಧದಲ್ಲಿ ಕರ್ಣನ ಬಾಣಹತಿಗೆ ಅರ್ಜುನನ ಕಿರೀಟ ಭೂಮಿಗೆ ಬಿದ್ದು, ಜಡೆಯ ಗಂಟು ಚಲ್ಲಾಪಿಲ್ಲೆಯಾದುದು ಅರಿಕೇಸರಿಗೆ ಅವಮಾನಕಾರಕವೇ ಆಗಿದೆ. ಇಂಥ ಘಟನೆಗಳು ತಗಳ್ಚುವುದಕ್ಕೆ ವಸ್ತುವಾಗುವಲ್ಲಿ ಅರ್ಜುನನೊಂದಿಗೆ ಅರಿಕೇಸರಿಗೂ ಅಪ್ರಸಿದ್ಧಿಯನ್ನುಂಟು ಮಾಡುತ್ತವೆ.

೩. ಅರಿಕೇಸರಿಗೆ ಮಾತ್ರ ಸಂಬಂಧಿಸಿದ ಘಟನೆಗಳು : ಕೆಲವೊಮ್ಮೆ ಅರಿಕೇಸರಿಗೆ ಮಾತ್ರ ಸಂಬಂಧಿಸಿದ ನೇರ ಘಟನೆಗಳು ಸೇರಿಕೊಂಡು ಒಟ್ಟು ಮಹಾಭಾರತದ ಕಥಾ ಓಟದಲ್ಲಿ ಸಾಮರಸ್ಯಗೊಳ್ಳದೆ ಪ್ರತ್ಯೇಕವಾಗಿ ನಿಲ್ಲುತ್ತವೆ. ಅಂದರೆ ಅರ್ಜುನನ ಘಟನೆಗಳನ್ನು ಹೇಳುತ್ತ ನಡೆದು, ಅದನ್ನು ತಟ್ಟನೆ ನಿಲ್ಲಿಸಿ, ಅರಿಕೇಸರಿಗೆ ಮಾತ್ರ ಸಂಬಂಧಿಸಿದ ಘಟನೆಗಳನ್ನು ಹೇಳತೊಡಗುವಲ್ಲಿ ಎರಡಕ್ಕೂ ಸಂಬಂಧ ತಪ್ಪಿ, ಅರಿಕೇಸರಿಯ ಆ ಘಟನೆಗಳು ಮಹಾಭಾರತಕ್ಕೆ ಅನವಶ್ಯ ತೇಪೆ ಹಚ್ಚಿದಂತೆ ಕಾಣುತ್ತವೆ:

"ತ್ರಿನೇತ್ರನೊಳ್ಕಾದಿ ಪಾಶುಪತಾಸ್ತ್ರಮಂ ಪಡೆದ ಕದನತ್ರಿಣೇತ್ರನ ಗಂಡಗರ್ವಮುಮನಿಂದ್ರಲೋಕಕ್ಕೆ ಪೋಗಿ ದೇವೇಂದ್ರನ ಪಗೆವರಪ್ಪ ನಿವಾತಕವಚ ಕಾಳಕೇಯ ಪೌಳೋಮ ತಳತಾಳುಕರೆಂಬ ದೈತ್ಯರಂ ಪಡಲ್ವಡಿಸಿದ ಪಡೆಮೆಚ್ಚೆ ಗಂಡನ ಗಂಡುಮಂ, ದೇವೇಂದ್ರನೊಳರ್ಧಾಸನಮನೇರಿದ ಗುಣಾರ್ಣವನ ಮಹಿಮೆಯುಮಂ, ಚಳುಕ್ಯಕುಳತಿಳಕನಪ್ಪ ವಿಜಯಾದಿತ್ಯಂಗೆ ಗೋವಿಂದರಾಜಂ ಮುಳಿಯೆ ತಳರದೆ ಪೆರಗಿಕ್ಕಿ ಕಾದ ಶರಣಾಗತಜಳನಿಧಿಯ ಪೆಂಪುಮಂ, ಗೊಜ್ಜಿಗನೆಂಬ ಸಕಳ ಚಕ್ರವರ್ತಿ ಬೆಸಸೆ ದಂಡುವಂದ ಮಹಾಸಾಮಂತರಂ ಮರಲಿರಿದು ಗೆಲ್ದ ಸಾಮಂತಚೂಡಾಮಣಿಯ ವೀರಮುಮಂ...." ಇಲ್ಲಿಯ ಪೂರ್ವಾರ್ಧ, ಉತ್ತರಾರ್ಧ ವಿವರಗಳು ಹೊಂದಿಕೊಳ್ಳದೆ ಪ್ರತ್ಯೇಕ ನಿಲ್ಲುತ್ತವೆ.

೪. ಅರ್ಜುನನಿಗೆ ಮಾತ್ರ ಸಂಬಂಧಿಸಿದ ಘಟನೆಗಳು: ಕೆಲವು ಸಲ ಅರಿಕೇಸರಿಯನ್ನು ಕೈಬಿಟ್ಟು, ನೇರವಾಗಿ ಅರ್ಜುನನನ್ನೇ ವರ್ಣಿಸುತ್ತ ಹೋಗುತ್ತಾನೆ, ಪಂಪ. ಆಗ ನಮಗೆ ಅರಿಕೇಸರಿ ನೆನಪಿಗೇ ಬರುವುದಿಲ್ಲ. ಉದಾ: "ವಿಜಯಂ ನೆಲಕಿಕ್ಕಿ ಗಂಟಲಂ ಮೆಟ್ಟದೆ ಕೊಂಡನೇ ಹರನ ಪಾಶುಪತಾಸ್ತ್ರಮನಿಂದ್ರಕೀಲದೊಳ್... " "ಗಂಧರ್ವರುಯ್ವಂದು ನಿನ್ನಂ, ಕರುವಿಟ್ಟಂತಿರ್ದುದಿಲ್ಲಾ?

ನೆರೆದ ಕುರುಬಲಂ, ತಂದವಂ ಪಾರ್ಥನಲ್ಲಾ?" ಇಂಥ ಹೇಳಿಕೆಗಳಲ್ಲಿ ಅರ್ಜುನನೇ ವಿಜೃಂಭಿಸಿ, ಅರಿಕೇಸರಿ ನೆನಪಿಗೂ ಬರದೆ ಹೋಗುತ್ತಾನೆ. ಇದು 'ತಗುಳ್ಚಿ ಪೇಳಿದ' ಕಾವ್ಯವೆಂಬ ಅಂಶ ನಮ್ಮ ಮನದಲ್ಲಿ ಸುಳಿಯುವುದೇ ಇಲ್ಲ.

ಈ ನಾಲ್ಕು ಬಗೆಗಳಲ್ಲದೆ ಆಗಾಗ ಅರ್ಜುನ ಅರಿಕೇಸರಿಗಳ ಸಮೀಕರಣದ ಜೊತೆ "ಸಹಜಮನೋಜನಂ ನಾಡೋಜನಂ" ಎಂದು ತನ್ನನ್ನೂ ಸಮೀಕರಿಸಿಕೊಂಡಿದ್ದಾನೆ, ಪಂಪ. ಇದೆಲ್ಲವನ್ನು ನೋಡಿದರೆ ಈ ಬಗೆಯ ತಗುಳ್ಚಿ ಪೇಳುವಲ್ಲಿ ಅಂಥ ವಿಶೇಷತೆ ಇಲ್ಲ; ಇದು ಒಂದು 'ಕಾವ್ಯಪ್ರಯೋಗ'ವೂ ಅಲ್ಲ, ಸ್ವತಃ ಕವಿಯೇ ಈ ಪ್ರಯತ್ನವನ್ನು ಗಂಭೀರವಾಗಿ ಪರಿಗಣಿಸಿದಂತಿಲ್ಲ ಎನಿಸುತ್ತದೆ. ಆದುದರಿಂದ ಅಲ್ಲಲ್ಲಿ ತನ್ನ ಅರಸನ ಹೆಸರನ್ನು ಸೇರಿಸಿದ ಒಂದು 'ಸರಳಕ್ರಿಯೆ'ಯಿದು ಎನ್ನಬಹುದು. ಈ ಕ್ರಿಯೆಯನ್ನು ಪದೇ ಪದೇ ಮಾಡಿದ್ದರೆ ಕಾವ್ಯವಾಚನ ಪ್ರಸಂಗದಲ್ಲಿ ಅರಿಕೇಸರಿ ಮೇಲಿಂದ ಮೇಲೆ ಕಣ್ಣಿಗೆ ಬೀಳುತ್ತಿದ್ದ. ಅದೆಲ್ಲವನ್ನು ಬಿಟ್ಟು ಹುಣ್ಣಿಮೆಗೊಮ್ಮೆ, ಅಮಾವಾಸ್ಯೆಗೊಮ್ಮೆ ಎಂಬಂತೆ ಅರಿಕೇಸರಿಯನ್ನು ಪ್ರಸ್ತಾಪ ಮಾಡುವುದರಿಂದ, ಒಮ್ಮೊಮ್ಮೆ ಆತನ ಅಪ್ರಸಿದ್ಧ ಬಿರುದುಗಳನ್ನೂ ಬಳಸುವುದರಿಂದ ಪಂಪಭಾರತವನ್ನು ಓದುವಾಗ ಅರಿಕೇಸರಿ ನಿರಂತರವಾಗಿ ಕಾವ್ಯದಲ್ಲಿ ನಿಂತಿರುವ ಅನುಭವವೇ ಆಗುವುದಿಲ್ಲ; ವಾಚಕನಿಗೆ ಇದು ಅರಿಕೇಸರಿ ಪರವಾದುದೆಂಬ ಕಾವ್ಯಾನುಭವವೂ ಉಂಟಾಗುವುದಿಲ್ಲ.

ಗುಣವರ್ಮನ ಶೂದ್ರಕವು ಈಗ ಲಭ್ಯವಿಲ್ಲದ ಕಾರಣ, ಪಂಪಭಾರತವನ್ನು ಬಿಟ್ಟರೆ ನಮ್ಮ ಕೈಗೆ ಉಳಿದು ಬಂದಿರುವ ಇನ್ನೊಂದು ಏಕೈಕ ತಗುಳ್ಚಿ ಪೇಳಿದ ಕಾವ್ಯವೆಂದರೆ ಗದಾಯುದ್ಧ*. ಇದೂ ಪಂಪಭಾರತದ ದಾರಿಯಲ್ಲಿಯೇ ನಡೆದಿರುವುದರಿಂದ ಆ ಕಾವ್ಯಕ್ಕೆ ಹೇಳಿದ ಮಾತುಗಳು ಇದಕ್ಕೂ ಅನ್ವಯಿಸುತ್ತವೆ. ನಾಗವರ್ಮನ ಕರ್ಣಾಟ ಕಾದಂಬರಿ, ಆಂಡಯ್ಯನ ಕಬ್ಬಿಗರ ಕಾವಗಳೂ ತಗುಳ್ಚಿ ಪೇಳಿದ ಕಾವ್ಯಗಳೆಂದು ಕೆಲವರು ಭಾವಿಸುವರಾದರೂ ಅವು ಪಂಪಭಾರತ, ಗದಾಯುದ್ಧಗಳಿಂದ ಪ್ರತ್ಯೇಕ ನಿಲ್ಲುತ್ತವೆ.

ಪಂಪ ತನ್ನ ಯುಗವನ್ನು ಮಹಾಭಾರತದ ಕಥೆಯೊಂದಿಗೆ ಸಮನ್ವಯಮಾಡಿರುವುದು ನಿಜ. ಆದರೆ ಇದು ಯಾವುದೇ ಉತ್ತಮ ಕವಿ ಮಾಡಬೇಕಾದ ಕೆಲಸ. ಕೈಗೆತ್ತಿಕೊಂಡಿರುವ ಪ್ರಾಚೀನ ಕಥಾಮಾಧ್ಯಮದ ಮೂಲಕ ತನ್ನ ಯುಗದ ಮೌಲ್ಯಗಳನ್ನು ಪ್ರಕಟಿಸುವದು ಆತನ ಹೊಣೆಯಾಗಿರುತ್ತದೆ. ಹೀಗಾಗಿ ದ್ವಾಪರಯುಗದ ಕಥೆ ಮತ್ತು ೧೦ನೆಯ ಶತಮಾನದ ಕನ್ನಡಿಗರ (ವೀರ) ಮೌಲ್ಯಗಳನ್ನು ಸಮೀಕರಿಸುವುದೇ 'ಪಂಪನ ತಗುಳ್ಚಿ ಪೇಳಿದ' ರೀತಿ ಎಂದು ವಾದಿಸಿದರೆ, ಅದು ಪಂಪನನ್ನು ರಕ್ಷಿಸಲು ಹೇಳಿದ ಮಾತಾಗುತ್ತದೆ. ಏಕೆಂದರೆ ತಗುಳ್ಚಿಪೇಳುವೆನೆಂಬ ಪಂಪನ ಪ್ರತಿಜ್ಞೆ, ಅರಿಕೇಸರಿ ಅರ್ಜುನರ ಜೀವನಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಆದುದರಿಂದ ಪಂಪಭಾರತ ನಿಸ್ಸಂದೇಹವಾಗಿ ಮಹಾಕಾವ್ಯವಾಗಿದ್ದರೂ ಅದಕ್ಕೆ ಕವಿ ಬಳಸಿದ 'ತಗುಳ್ಚಿ ಪೇಳಿದ' ತಂತ್ರ ಮಾತ್ರ ಒಂದು ವಿಫಲ ಕಾವ್ಯಪ್ರಯೋಗವೆಂದೇ ಹೇಳಬೇಕು.

ಹೀಗೆ ಅರಿಕೇಸರಿಯನ್ನು ಅರ್ಜುನನೊಂದಿಗೆ ತಗುಳ್ಚಿ ಪೇಳುವಲ್ಲಿ ವಿಫಲನಾದ ಕವಿ, ಅರ್ಜುನನ್ನು ಕಥಾನಾಯಕನ್ನಾಗಿ ಮಾಡಿಕೊಳ್ಳುವುದಕ್ಕಾಗಿ ವ್ಯಾಸಭಾರತದಲ್ಲಿ ಮಾಡಿಕೊಂಡ ಮಾರ್ಪಾಟು, ಅದರಿಂದುಂಟಾದ ಫಲ-ವಿಫಲಗಳ ಅಧ್ಯಯನ ಬೇರೊಂದು ಲೇಖನದ ವಿಷಯವಾಗಿದೆ.

■■

ಆಕರ : ಮಾರ್ಗ ಸಂಪುಟ–೧

---

* ಭುವನೈಕರಾಮಾಭ್ಯುದಯ : ಒಂದು ಅಲಂಕಾರ ಗ್ರಂಥ, (ಸಾ.ಪ. ೬೭-೨) ಈ ಲೇಖನವನ್ನು ನೋಡಬಹುದು.

೯

ವಾಙ್ಮಯ-ಕಾವ್ಯ-ಸಾಹಿತ್ಯ

Literature ಪದಕ್ಕೆ ಸಂವಾದಿಯಾಗಿ ಭಾರತೀಯರು ವಾಙ್ಮಯ, ಕಾವ್ಯ ಮತ್ತು ಸಾಹಿತ್ಯ ಪದಗಳನ್ನು ಬಳಸುತ್ತ ಬಂದಿದ್ದಾರೆ. ಇವು ಮೂಲತಃ ಸಮಾನ ಅರ್ಥದ ಪದಗಳೇ? ಭಿನ್ನ ಅರ್ಥದ ಪದಗಳೇ? ಇವು ಹುಟ್ಟಿದುದು ಏಕಕಾಲಕ್ಕೆ? ಅಥವಾ ಕಾಲಕಾಲಕ್ಕೆ? ಕಾಲಕಾಲಕ್ಕೆ ಹುಟ್ಟಿದ್ದರೆ, ಈ ಹುಟ್ಟುವಿಕೆಗೆ ಐತಿಹಾಸಿಕ ಅಗತ್ಯವೇನಿದ್ದಿತು? ಇತ್ಯಾದಿ ಪ್ರಶ್ನೆಗಳಿಗೆ ಹುಡುಕ ಹೊರಟ ಉತ್ತರದಲ್ಲಿ ಭಾರತೀಯ ಸಾಹಿತ್ಯ ಸಾಗಿಬಂದ ಹಾದಿಯ ಹೊಳಹುಗಳನ್ನು ಕಾಣಬಹುದಾಗಿದೆ.

ಈ ಮೂರರಲ್ಲಿ, "ವಾಙ್ಮಯ"ವನ್ನು ಕುರಿತು ಪ್ರಾಚೀನ ಆಲಂಕಾರಿಕರು "ಶಬ್ದಪ್ರಧಾನವಾದುದು ವೇದ, ಅರ್ಥಪ್ರಧಾನವಾದುದು ಶಾಸ್ತ್ರ, ಧ್ವನಿಪ್ರಧಾನವಾದುದು ಕಾವ್ಯ-ಇವೆಲ್ಲವುಗಳ ಮೊತ್ತ"ವೆಂದೂ, ಆಧುನಿಕ ವಿಮರ್ಶಕರು "ಒಂದು ಭಾಷೆಯಲ್ಲಿ ಬೆಳೆದು ಬಂದ ಲಿಖಿತ, ಅಲಿಖಿತ ಅಭಿವ್ಯಕ್ತಿಯ ರಾಶಿ"ಯೆಂದೂ ಅರ್ಥ ವಿವರಣೆ ನೀಡಿದ್ದಾರೆ.[೧] ಮಿಕ್ಕವುಗಳಲ್ಲಿ "ಕಾವ್ಯ"ದ ಬಗ್ಗೆ ಪ್ರಾಚೀನರೂ "ಸಾಹಿತ್ಯ"ದ ಬಗ್ಗೆ ಆಧುನಿಕರೂ ನಡೆಸಿದ ಚರ್ಚೆ ವಿಪುಲವಾಗಿದೆ. ಹೀಗಿದ್ದೂ ಈ ಮೂರೂ ಪರಿಭಾಷೆಗಳಿಗೆ ಭಿನ್ನ ಅರ್ಥಛಾಯೆಗಳಿರುವ ಸಾಧ್ಯತೆಯಿದೆ. ಅದು: ಭಾಷಾಪ್ರಯೋಗದ ಎರಡು ಭಿನ್ನರೀತಿಗಳನ್ನು "ವಾಙ್ಮಯ" ಮತ್ತು "ಕಾವ್ಯ" ಪದಗಳು ಸೂಚಿಸುತ್ತಿದ್ದರೆ, ಜೀವನಮೌಲ್ಯದ ಮೇಲೆ ಒತ್ತು ಕೊಡುವುದನ್ನು "ಸಾಹಿತ್ಯ" ಪದ ಸೂಚಿಸುತ್ತದೆ. ಈ ಪದಗಳ ನಿಷ್ಪತ್ತಿ ಮತ್ತು ನಮ್ಮ Literatureದ ಐತಿಹಾಸಿಕ ಬೆಳವಣಿಗೆಗಳನ್ನು ಗಮನಿಸಿ, ಆ ಭಿನ್ನ ಅರ್ಥಗಳನ್ನು ಕುರಿತು ಹೀಗೆ ಚರ್ಚಿಸಬಹುದಾಗಿದೆ:

೧

ಸಾಹಿತ್ಯವೆನ್ನುವುದು ಭಾಷೆಯಲ್ಲಿ ಸಂಭವಿಸುವ ಕಲಾವಿಶೇಷವಾಗಿದೆ. ಈ ಕಟ್ಟಡಕ್ಕೆ ಬುನಾದಿಯಿಂದ ಶಿಖರದ ವರೆಗೆ ಏನೆಲ್ಲ ಸಾಧನ ಭಾಷೆಯೇ ಆಗಿರುವುದರಿಂದ, ಭಾಷೆಯೆಂಬ ಏಕಸಾಮಗ್ರಿಯಲ್ಲಿ ಇದು ಮೈಪಡೆಯುವುದಾಗಿದೆ. ಈ ಮೈಪಡೆಯುವಿಕೆಗೆ ಸೃಷ್ಟಿ, ಸಂಸೃಷ್ಟಿ ಎಂಬ ಎರಡು ನೆಲೆಗಳಿವೆ. ಇವುಗಳನ್ನೇ ಕ್ರಮವಾಗಿ ವಾಙ್ಮಯ, ಕಾವ್ಯವೆಂದು ಕರೆಯಬಹುದು. ಈ ಬಗ್ಗೆ ಇನ್ನಷ್ಟು ಸ್ಪಷ್ಟನೆ ಹೀಗಿದೆ:

ಭಾಷೆಯೆನ್ನುವುದು ಶಾಬ್ದಿಕ ಸಂರಚನೆ. ಅದು ತನ್ನ ಸಮಾಜದ ಭೌತಿಕ ಸಂರಚನೆ, ಅಭೌತಿಕ ಸಂವೇದನೆಗಳ ಪ್ರತಿಬಿಂಬವಾಗಿದೆ. ಹೀಗೆ ಸಮಾಜಬಿಂಬವನ್ನು ಕಾಣಿಸಿಕೊಡುವ ಭಾಷಾಪ್ರತಿಬಿಂಬವು "ದೇಶಭಾಷೆ" ಎನಿಸಿಕೊಳ್ಳುತ್ತದೆ. ಈ ದೇಶಭಾಷೆಯನ್ನೇ ಪ್ರಧಾನವಾಗಿ ಬಳಸಿಕೊಂಡು ಸಾಹಿತ್ಯಸೃಷ್ಟಿಸುವ ಸಂದರ್ಭವು ಎಲ್ಲ ಭಾಷೆಗಳ ಬದುಕಿನಲ್ಲಿ ಬಂದು ಹೋಗುತ್ತದೆ. ಆಗ ಜನಭಾಷೆ-ಕಾವ್ಯಭಾಷೆಗಳಲ್ಲಿ ಅಂಥ ವ್ಯತ್ಯಾಸವಿರುವುದಿಲ್ಲ. ಪದ ವಾಕ್ಯಗಳ ಅಂಗರಚನೆಗೂ, ಉಚ್ಚಾರದ ರೀತಿಗೂ ಅಷ್ಟಾಗಿ ಭಂಗ ತರದೆ, ಕಾವ್ಯಭಾಷೆಯನ್ನು ಅಲ್ಲಿ ಸಹಜವೆಂಬಂತೆ ಬಳಸಲಾಗುತ್ತದೆ. ಸಂಸ್ಕೃತಭಾಷೆಯ ಇಂಥ ಒಂದು ಸಂದರ್ಭದಲ್ಲಿ ರಾಮಾಯಣ, ಮಹಾಭಾರತಗಳು ಸೃಷ್ಟಿಯಾಗಿದ್ದು, ಇವುಗಳ ಭಾಷಾನಿರ್ವಹಣೆ ಸಹಜರೀತಿಯದ್ದಾಗಿದೆ. ಇಲ್ಲಿ ಮಾತು ಕೃತಿಯಾಗುತ್ತದೆ. ಹೀಗೆ ಸಹಜ "ವಾಕ್"ನಲ್ಲಿ ಸೃಷ್ಟಿಯಾಗುವ Literatureನ್ನು "ವಾಙ್ಮಯ"ವೆಂದು ಕರೆದಂತೆ ಕಾಣುತ್ತದೆ. ಕವಿಯ ಆಶಯ ಅವನ ಆಡುಮಾತಿನಲ್ಲಿ ಬಹುಮಟ್ಟಿಗೆ ಆಕೃತಿಗೊಳ್ಳುತ್ತಲಿದ್ದ ಕಾಲವಿದು. ಭಾಷೆಯನ್ನು ಆಳವಾಗಿ ಪರಿಷ್ಕರಿಸಬೇಕೆಂಬ, ಶಬ್ದ (Sound) ಮತ್ತು ಅರ್ಥ (Meaning) ನೆಲೆಗಳಲ್ಲಿ ಅದನ್ನು ಅಲಂಕರಿಸಬೇಕೆಂಬ ಭಾವನೆ ಅಂಕುರಿಸದ ಕಾಲೀನ ಈ ಸಾಹಿತ್ಯವು ಸ್ವಭಾವೋಕ್ತಿ ಅಲಂಕಾರದ ನೆಲೆಯಲ್ಲಿ ಜೀವಪಡೆಯುತ್ತಿದ್ದಿತು. ಹೇಗೆ ಹೇಳಬೇಕೆಂಬುದಕ್ಕಿಂತ ಏನು ಹೇಳಬೇಕೆಂಬ ಸರಳ ಅಭಿವ್ಯಕ್ತಿಕ್ರಮವೇ ಮುಖ್ಯವಾಗಿದ್ದ ಈ ಪದ್ಧತಿಯು, ಜನಪದ ಸಾಹಿತ್ಯದ ಭಾಷಾನಿರ್ವಹಣೆಗೆ ಹತ್ತಿರವಾಗಿದ್ದಿತು. ಈ ರೀತಿ ಸರಳವೆಂದರೂ ವಾಚ್ಯವಲ್ಲದ "ವಾಕ್" ಪ್ರಧಾನವಾಗುಳ್ಳ Literatureನ್ನು ಅವರು "ವಾಙ್ಮಯ"ವೆಂದು ಕರೆದರೆಂದು ತೋರುತ್ತದೆ.

ಆಂಗ್ಲ ಸಾಹಿತ್ಯದಲ್ಲಿ ಮಹಾಕಾವ್ಯವನ್ನು Epic of growth ಮತ್ತು Epic of art ಎಂದು ವರ್ಗೀಕರಿಸುತ್ತಿದ್ದು, ಮೇಲೆ ಹೇಳಿದುದು Epic of growth ಜಾತಿಗೆ ಸೇರುತ್ತದೆ. Epic of growth ಮೇಲೆ ಒಬ್ಬ ಕವಿಯ ಹೆಸರಿದ್ದರೂ ಅದು ಅವನೇ "ಕಟ್ಟಿಮುಗಿಸಿದ ಕೃತಿ"ಯಾಗಿರುವುದಿಲ್ಲ, ಮುಂದಿನವರೂ ಕೈಕೂಡಿಸುತ್ತ ಬರುವಲ್ಲಿ ಅದು "ಕಟ್ಟುತ್ತಬಂದ ಕೃತಿ"ಯಾಗಿರುತ್ತದೆ. ದಂತಕಥೆ, ಜನಪದಕಥೆ ಇತ್ಯಾದಿಗಳು ಪ್ರವೇಶ ಪಡೆಯುವ ಮೂಲಕ, "ಬಹುಜನಪ್ರಜ್ಞೆ, ಬಹುಜನಪ್ರಯತ್ನ" ಇದರಲ್ಲಿ ಸೇರಿಕೊಂಡಿರುತ್ತವೆ. ಇದು ಕತ್ತರಿಸಿ, ಒಪ್ಪ-ಓರಣಗೊಳಿಸಿದ ಉದ್ಯಾನಮಾದರಿಯದಲ್ಲ, ನೈಸರ್ಗಿಕವಾಗಿ ಹಬ್ಬಿದ ಅರಣ್ಯ ಮಾದರಿಯದು. ಇಲ್ಲಿರುವುದು ಉದ್ಯಾನಸೌಂದರ್ಯವಲ್ಲ, ಅರಣ್ಯಸೌಂದರ್ಯ. ಒಂದಿಷ್ಟು ಕಲಾತ್ಮಕತೆ ಕಡಿಮೆ ಇರುವ ಬೇಂದ್ರೆ Literatureನ್ನು ಈ "ವಾಙ್ಮಯ" ವಿಭಾಗದಲ್ಲಿ ಪರಿಗಣಿಸಬಹುದು. ಇಲ್ಲಿ ವ್ಯಷ್ಟಿಪ್ರಧಾನ "ಶೈಲಿ"ಗಿಂತ, ಸಮಷ್ಟಿಪ್ರಧಾನ "ರೀತಿ"ಯೇ ಎದ್ದು ಕಾಣುತ್ತದೆ. ಓದುವಾಗ ಇದು ಒಬ್ಬನು ಬರೆದ ಕೃತಿಗಿಂತ ಎಲ್ಲರೂ ಸೇರಿ ಬರೆದ ಕೃತಿಯೆಂಬ ಭಾವನೆ ಮೂಡುತ್ತದೆ. ಒಬ್ಬ ಕವಿಯ ಭಾಷೆಗಿಂತ ಒಂದು ದೊಡ್ಡ ಸಂಪ್ರದಾಯದ ಭಾಷೆಯೇ ಅಲ್ಲಿ ಪ್ರಧಾನವಾಗಿರುವುದರಿಂದ ಅಂತಹದನ್ನು ವಾಙ್ಮಯವೆಂದು ಕರೆಯಬಹುದಾಗಿದೆ.

೨

ಕಾಲಗತಿಸಿದಂತೆ ಅನ್ಯಭಾಷೆಯ ಸಂಪರ್ಕ ಅಥವಾ ಸ್ವಭಾಷೆಯ ಗತಾನುಗತಿಕ ಬಳಕೆಯಿಂದಾಗಿ, ಜನಭಾಷೆಯು Literatureದಲ್ಲಿ ಸುಂದರವಾಗಿ ಪ್ರಯೋಗವಾಗುವುದು ತಪ್ಪುತ್ತ

ನಡೆಯಿತೆಂದು ತೋರುತ್ತದೆ. ಹೀಗೆ "ಅಪ್ರಜ್ಞಾಪೂರ್ವಕ"ವಾಗಿ ಅದರ ಅಂದ ತಪ್ಪುತ್ತ ನಡೆಯುವಲ್ಲಿ, "ಪ್ರಜ್ಞಾಪೂರ್ವಕ"ವಾಗಿ ಅದನ್ನು ಅಂದಗೊಳಿಸುವ ಪ್ರಯತ್ನ ಜಾಗೃತವಾದ ಕಾರಣ, ಸರಳ ಅಭಿವ್ಯಕ್ತಿಯ "ದೇಶಿಪದ್ಧತಿ"ಯನ್ನು ಸಂಕೀರ್ಣ ಅಭಿವ್ಯಕ್ತಿಯ "ಮಾರ್ಗಪದ್ಧತಿ"ಯನ್ನಾಗಿ ಬೆಳೆಸುವ ಒಲವು Literatureದಲ್ಲಿ ಬೆಳೆಯಿತು. ಇದನ್ನು ಅನುಷ್ಠಾನಗೊಳಿಸಲು ಅಂದರೆ "ಸೌಂದರ್ಯ"ದ ಮೇಲೆ ಒತ್ತು ಕೊಡಲು ಅಂದಿನ ಬರಹಗಾರರಿಗೆ ಸೂಚಿಸುವ ಸಲುವಾಗಿ, ವಾಙ್ಮಯಕ್ಕೆ ಬದಲು ಕಾವ್ಯ ಪದವನ್ನು ಬಳಸುವುದು ಆರಂಭವಾಗಿರಬಹುದು. ಕಾವ್ಯ ಪದದ ಮೂಲಪ್ರಕೃತಿ "ಕವೃ". ಇದರ ಅರ್ಥ ವರ್ಣಿಸು, ಅಂದಗೊಳಿಸು ಎಂಬುದನ್ನು ಇಲ್ಲಿ ನೆನೆಯಬಹುದು. ಈಗ ವಾಲ್ಮೀಕಿಯಿಂದ ಕಾಳಿದಾಸನ ಕಡೆಗೆ (ರಾಮಾಯಣದಿಂದ ರಘುವಂಶದ ಕಡೆಗೆ) Literature ಹೊರಳಿತು. ಅಂದರೆ ಅದು ವಾಙ್ಮಯ, ಇದು ಕಾವ್ಯ. ಅದು ಸೃಷ್ಟಿ, ಇದು ಸಂಸ್ಕೃಷ್ಟಿ. ಅಪ್ರಯತ್ನಪೂರ್ವಕವಾಗಿ ಬೆಳೆಯುತ್ತಲಿದ್ದ ಅರಣ್ಯವನ್ನು ಪ್ರಯತ್ನಪೂರ್ವಕ ಉದ್ಯಾನ ಮಾಡುವಂತೆ, ಅಪ್ರಯತ್ನಪೂರ್ವಕವಾಗಿ ಭಾಷೆಯಲ್ಲಿ ಆಕಾರ ಪಡೆಯುತ್ತಲಿದ್ದ Epic of growthನ್ನು ಪ್ರಯತ್ನಪೂರ್ವಕವಾಗಿ Epic of art ಮಾಡುವ ಕೆಲಸ ಇಲ್ಲಿ ನಡೆಯಿತು. ಸಾಮಾನ್ಯರೂ(Mass) ಆಸ್ವಾದಿಸಬಹುದಿದ್ದ Literatureವು ಈಗ ಅಸಾಮಾನ್ಯರು (class) ಮಾತ್ರ ಆಸ್ವಾದಿಸುವಂತಾಯಿತು. ಅಂದರೆ classical ಸ್ಪರ್ಶ ನೀಡುವಲ್ಲಿ ಅದು classic (ಪರಿಣತಕೃತಿ ಅಥವಾ ಪರಿಷ್ಕೃತಕೃತಿ)ಯೆನಿಸಿಕೊಂಡಿತು. ಒಟ್ಟಾರೆ, ಕಲಾಪ್ರಜ್ಞೆಯ ಎಚ್ಚರದಿಂದ ಬರೆದುದು "ಕಾವ್ಯ"ವೆಂಬ ಅರ್ಥ ಈ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ವಿವರಣೆಯ ಬೆಳಕಿನಲ್ಲಿ ಹೇಳುವುದಾದರೆ ಕನ್ನಡದ ಪಂಪನ "ಕಥಾಪರಂಪರೆ" ವ್ಯಾಸರದಾದರೂ "ಕಾವ್ಯಪರಂಪರೆ" ಕಾಳಿದಾಸನದಾಗಿದೆ. ಪರಿಷ್ಕೃತ ಶೈಲಿಯ ಕುವೆಂಪು ಅವರೂ ಈ ಪರಂಪರೆಯ ಭಾಗವೆನಿಸುತ್ತಾರೆ. ಕನ್ನಡದಲ್ಲಿ ಪಂಪನೇ ಮೊದಲನೆಯ ಕವಿಯಾಗಿರುವದರಿಂದ ಇಲ್ಲಿ ಮುಂದೆಯೂ ರಘುವಂಶದಂಥ "ಕಾವ್ಯಪರಂಪರೆ"ಯ ಕೃತಿಗಳು ಹುಟ್ಟಿದುವೇ ಹೊರತು, ವ್ಯಾಸಭಾರತದಂಥ "ವಾಙ್ಮಯಪರಂಪರೆ"ಯ ಕೃತಿಗಳು ಹುಟ್ಟಲಿಲ್ಲ.

ಒಟ್ಟಾರೆ "ವಾಙ್ಮಯ"ವೆನ್ನುವುದು ಪ್ರಾಕೃತಿಕ ಸೌಂದರ್ಯಕ್ಕೆ ಒತ್ತುಕೊಡುವ, "ಕಾವ್ಯ"ವೆನ್ನುವುದು ಪರಿಷ್ಕೃತ ಸೌಂದರ್ಯಕ್ಕೆ ಒತ್ತುಕೊಡುವ ಶಾಬ್ದಿಕ ಕಲೆಗಳಾಗಿವೆ. ಅದು ಕಾವ್ಯ ಹುಟ್ಟುವುದು, ಇದು ಕಾವ್ಯ ಕಟ್ಟುವುದು.

೩

ಈ "ಕಾವ್ಯ"ಘಟ್ಟ ಸಂದರ್ಭದಲ್ಲಿ ಸೌಂದರ್ಯಕ್ಕೆ ಒತ್ತುಕೊಡುತ್ತ ನಡೆಯಲು, ಕವಿತೆಯನ್ನು ಸಿಂಗರಿಸುವ ಒಲವು ಜಾಸ್ತಿಯಾಗತೊಡಗುವಲ್ಲಿ, Literatureವು ಜನಹಿತವನ್ನು ಅಲಕ್ಷಿಸಿ, ಅಹಿತಕಾರಿ ರೀತಿಯಲ್ಲಿ ಬೆಳೆದು ಬರಹತ್ತಿತೆಂದು ಕಾಣುತ್ತದೆ. ಆಗ "ಪಾಪಮಿದು–ಪುಣ್ಯಮಿದು, ಹಿತಮಿದು–ಅಹಿತಪ್ರಕಾರಮಿದು, ಸುಖಮಿದು–ದುಃಖೋಪಾತ್ತಮಿದು" ಎಂದು ಪರ್ಯಾಯವಾಗಿ ಸೂಚಿಸುವ ಮೂಲಕ, ಬದುಕನ್ನು ಉದಾತ್ತಗೊಳಿಸುವುದನ್ನು ಬಿಟ್ಟು "ಅಭಿವ್ಯಕ್ತಿ ಸ್ವಾತಂತ್ರ್ಯ" ಹೆಸರಿನಲ್ಲಿ ಸಾಹಿತ್ಯವನ್ನು ಅನುದಾತ್ತ ನೆಲೆಗೆ ಒಯ್ಯುವ ಕೃತಿಗಳು ಹುಟ್ಟತೊಡಗಿದವು. ಆಗ ಚೆನ್ನಾಗಿ ಬರೆಯುತ್ತಾರೆ, ಸರಿಯಾಗಿ ಬರೆಯುವುದಿಲ್ಲ ಎಂಬಂಥ ಪರಿಸ್ಥಿತಿ ನಿರ್ಮಾಣವಾಗುತ್ತಿರಲು ಸುಂದರಕೃತಿ

ಅರ್ಥದ "ಕಾವ್ಯ" ಪರಿಭಾಷೆಯ ಸ್ಥಾನದಲ್ಲಿ ಜನಹಿತನಿಷ್ಠ ಕೃತಿ ಅರ್ಥದ "ಸಾಹಿತ್ಯ" ಪರಿಭಾಷೆ ಪ್ರಚಾರಕ್ಕೆ ಬಂದಿತೆಂದು ತೋರುತ್ತದೆ.

ಅಂದರೆ ಆತ್ಮಪಾತಳಿ ಮತ್ತು ಮನೋಪಾತಳಿಯ ಸಂಯುಕ್ತ ಬರವಣಿಗೆಯು, "ಕಾವ್ಯ" ಕಾಲಘಟ್ಟದಲ್ಲಿ ಕೇವಲ ಮನೋಪಾತಳಿಗೆ ಸರಿಯತೊಡಗಿತೆಂದು ಕಾಣುತ್ತದೆ. ಈಗ ಆಗಮಿಕವು ಉಪೇಕ್ಷಿತವಾಗಿ ಲೌಕಿಕವು ಪ್ರಧಾನವೆನಿಸಿತು. ಈ ಸಂದರ್ಭದಲ್ಲಿ ಪಂಪನ "ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ" ಎಂಬ ವಾಕ್ಯ ನೆನಪಾಗುತ್ತದೆ. ಲೌಕಿಕ ಕಾವ್ಯ ಅಥವಾ ಮನೋಪಾತಳಿಯ ಕಾವ್ಯವೆಂದರೆ ಎಂಟು ರಸಗಳಿಗೆ ಅವಕಾಶ ಮಾಡಿಕೊಡುವ ಬರೆವಣಿಗೆ. ಆಗಮಿಕಕಾವ್ಯ ಅಥವಾ ಆತ್ಮಪಾತಳಿಯ ಕಾವ್ಯವೆಂದರೆ ಎಂಟು ರಸಗಳನ್ನು ಉದ್ರೇಕಿಸಿ, ಅಂತಿಮವಾಗಿ ಅವುಗಳನ್ನು ಶಾಂತವೆಂಬ ಒಂಬತ್ತನೆಯ ರಸದಿಂದ ಉಪಶಮನಗೊಳಿಸುವ ಬರೆವಣಿಗೆ. ಆದುದರಿಂದ ಎಂಟು ರಸಗಳನ್ನು ಲೋಹಗಳೆಂದೂ ಅವುಗಳನ್ನು ಸುವರ್ಣಗೊಳಿಸುವ ಶಾಂತರಸವನ್ನು ಸಿದ್ಧರಸವೆಂದೂ ನಾಗಚಂದ್ರ ಕರೆದಿದ್ದಾನೆ. ಇವುಗಳಲ್ಲಿ ಒಂದು ಸಂತೋಷವನ್ನು ಇನ್ನೊಂದು ಆನಂದವನ್ನುಂಟು ಮಾಡುತ್ತವೆ. ಉದ್ರೇಕಸಂಸ್ಕಾರದ ಕವಿಮನಸ್ಸು ಸಮಾಜಕ್ಕೆ ಅಹಿತವನ್ನು, ಉಪಶಮನ ಸಂಸ್ಕಾರದ ಕವಿಮನಸ್ಸು ಸಮಾಜಕ್ಕೆ ಹಿತವನ್ನುಂಟುಮಾಡುತ್ತವೆ. ಕನ್ನಡದಲ್ಲಿ ಪಂಪ ಈ ಎರಡೂ ಬಗೆಯ ಕಾವ್ಯ ಬರೆದು, ಒಂದು ಹೊಸ ಕವಲನ್ನೇ ನಿರ್ಮಿಸಿದ. ಆದರೆ ೫೦ ವರ್ಷ ಕಳೆಯುವಷ್ಟರಲ್ಲಿ ನಾಗಚಂದ್ರ ಹುಟ್ಟಿ ಬಂದು, ಇವುಗಳಲ್ಲಿ ಒಂದು ಬಗೆಯ ಕಾವ್ಯವನ್ನೇ ಅಂದರೆ "ಆಗಮಿಕ" ಕಾವ್ಯವನ್ನೇ ಕವಿಯು ಲೋಕಕ್ಕೆ ನೀಡಬೇಕೆಂದು ಹೀಗೆ ಸಾರಿದ:

> ರಾಗದ್ವೇಷ ನಿಬದ್ಧಮಪ್ಪ ಕೃತಿಯಂ ನಿರ್ಬಂಧದಿಂ ಬಂಧ ಮಿಂ
> ಬಾಗರ್ಥಂ ಪೊಸತಾಗೆ ಪೇಳ್ದಖಿಳಮಂ ರಾಗಾವಿಳಂ ಮಾಳ್ಪ ವಿ
> ದ್ಯಾಗರ್ವಗ್ರಹ ಪೀಡಿತರ್ ಸ್ವಪರಬಾಧಾ ಹೇತುವಂ ದುಸ್ತರೋ
> ದ್ಯೋಗ ಕ್ಲೇಶಿತರಾಗಿ ಬಿತ್ತಿಬೆಳೆವಂತಕ್ಕುಂ ವಿಷೋದ್ಯಾನಮಂ॥

ಎಂದು ಪಂಪನ ಲೌಕಿಕಕಾವ್ಯ ಪರಂಪರೆಯನ್ನೇ ಪ್ರತಿಭಟಿಸಿದ. ಇದಲ್ಲದೆ ಅರಿಕೇಸರಿಯಂಥ ಸಾಮಾನ್ಯನನ್ನು ವಸ್ತುಮಾಡಿಕೊಳ್ಳುವುದೆಂದರೆ ಭಾಷೆಯ ದುರ್ಬಳಕೆಯೇ ಆಗಿದೆಯೆಂಬ ಅರ್ಥದಲ್ಲಿ "ನಾಯಕನನ್ಯನಾಗೆ ಕೃತಿ ವಿಶ್ರುತಮಾಗದು" ಎಂದು ಕಥಾನಾಯಕ ತತ್ವದಲ್ಲಿಯೂ ಪಂಪನನ್ನು ಪ್ರತಿಭಟಿಸಿದ. ಅವನು ಒಂದು ಬಗೆಯ ಮಾರ್ಗ ಸ್ಥಾಪಿಸಿ "ಆದಿಪಂಪ"ನೆನಿಸಿದರೆ, ಇವನು ಇನ್ನೊಂದು ಬಗೆಯ ಮಾರ್ಗ ಸ್ಥಾಪಿಸಿ "ಅಭಿನವ ಪಂಪ"ನೆಂದು ಕರೆದುಕೊಂಡ. ಇಂಥ ಮನೋಧರ್ಮ ಜಾಗೃತವಾದ ಯಾವುದೋ ಪ್ರಾಚೀನತಮ ಸಂದರ್ಭದಲ್ಲಿ "ಕಾವ್ಯ" ಪರಿಭಾಷೆಗೆ ಬದಲು ಸಾಮಾಜಿಕ ಹಿತ ಅರ್ಥದ "ಸಾಹಿತ್ಯ" ಪರಿಭಾಷೆ ಹುಟ್ಟಿಕೊಂಡಿರಬಹುದು. ಸೌಂದರ್ಯದ ತೀವ್ರ ಆಸಕ್ತಿಯು ಸಾಮಾಜಿಕ ಜವಾಬ್ದಾರಿಯನ್ನು ಮರೆಯುವಂತೆ ಮಾಡಿದಾಗ, ರಸೋದ್ರೇಕದ ಮೇಲೆ ಹೆಚ್ಚು ಒತ್ತು ಕೊಟ್ಟು– ತಾನು ಏನು ಬರೆಯುತ್ತಿದ್ದೇನೆಂಬ ಹೊಣೆಯನ್ನು ಬರಹಗಾರ ಮರೆತಾಗ, "ಸಾಹಿತ್ಯ"ವೆಂಬ ಪರಿಭಾಷೆ ಎಚ್ಚರಿಕೆ ರೂಪದಲ್ಲಿ ಬಳಕೆಗೆ ಬಂದಂತಿದೆ. ಬಸವಣ್ಣನವರು "ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ" ಎನ್ನುವುದೂ ಇದೇ ಅರ್ಥದಲ್ಲಿಯೇ. ನಿನಗೆ ಕೇಡಿಲ್ಲವಾಗಿ ಅಂದರೆ ಸಾಮಾಜಿಕ ನ್ಯಾಯಕ್ಕೆ ಕೇಡಿಲ್ಲದಂತೆಯೂ, ಅದೇ ವೇಳೆಗೆ ನಾನು ಒಲಿದಂತೆ ಅಂದರೆ ನನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆಯೂ ಬರೆವಣಿಗೆ ಮಾಡಬೇಕೆನ್ನುವ ಅವರ ಈ

ಮಾತು, ಸ್ವಾತಂತ್ರ್ಯದ ಹೆಸರಿನಲ್ಲಿ ಏನೇನನ್ನೊ ಬರೆದು ಸಮಾಜವನ್ನು ವಿಕಾರಗೊಳಿಸುವವರಿಗೆ ನೀಡಿದ ಎಚ್ಚರವಾಗಿದೆ. ಅಂದರೆ ಬರಹಗಾರ ವೈಯಕ್ತಿಕ ಸ್ವಾತಂತ್ರ್ಯ ಉಳಿಸಿಕೊಂಡು ಸಾಮಾಜಿಕ ನ್ಯಾಯವನ್ನು ಕಾಪಾಡಬೇಕೆಂಬ ಈ ಹೇಳಿಕೆ, ಜಾಗತಿಕ ಮನ್ನಣೆ ಪಡೆಯುವಂತಹದ್ದಾಗಿದೆ.

ಕನ್ನಡದಲ್ಲಿ ಈ "ಆಗಮಿಕ ಪ್ರಜ್ಞೆ"ಯ ಕವಿಗಳು ಕ್ರಮೇಣ ಮತಭ್ರಾಂತರಾಗುವಲ್ಲಿ ಆ ಪರಂಪರೆ ತನ್ನ ಅರ್ಥಕಳೆದುಕೊಂಡರೂ, ಆತ್ಮದ ಪಿಸುಮಾತು ನಮ್ಮಲ್ಲಿ ನವೋದಯದ ವರೆಗೆ ಉಳಿದುಕೊಂಡು ಬಂದಿತು. ಬೇಂದ್ರೆ, ಕುವೆಂಪು, ಮಾಸ್ತಿ ಅವರ ಬರೆವಣಿಗೆಯಲ್ಲಿ ಈ ಆಗಮಿಕ ಪ್ರಜ್ಞೆ (ಆತ್ಮಪ್ರಜ್ಞೆ) ಸಶಬ್ದವಾಗಿ, ನಿಶ್ಯಬ್ದವಾಗಿ ಆಗಾಗ ಕೇಳಿಸುವುದನ್ನು ಇಲ್ಲಿ ನೆನೆಪಿಸಿಕೊಳ್ಳಬೇಕು.

ಬಳಿಕ "ಪ್ರಗತಿಶೀಲ"ಸಾಹಿತಿಗಳು ಬರುತ್ತಲೇ ಸಾಹಿತ್ಯದಲ್ಲಿ ಆತ್ಮಪ್ರಜ್ಞೆಯ "ಅಭೌತಿಕ" ಅಂಶ ಕಳೆದುಹೋಗಿ, ಮನೋಪ್ರಜ್ಞೆಯ "ಭೌತಿಕ" ಅಂಶ ಪ್ರಧಾನವಾಯಿತು. ಆತ್ಮದ ಪಿಸುಮಾತು ನಿಶ್ಯಬ್ದವಾಯಿತು.

ಇದೂ ಸಾಲದೆಂಬಂತೆ ಅವಿಭಕ್ತ ಕುಟುಂಬಗಳು ಒಡೆದು ಹೋಗಿ "ಸದಸ್ಯ"ರು "ವ್ಯಕ್ತಿ"ಯಾಗುವಲ್ಲಿ, ವ್ಯಕ್ತಿಕೇಂದ್ರಿತಪ್ರಜ್ಞೆ, ಅನಾಥಪ್ರಜ್ಞೆ ಬೆಳೆಯುತ್ತಲೇ ಸಾಹಿತ್ಯದಲ್ಲಿ ಸಾಮಾಜಿಕ ಹಿತವೂ ಮಾಯವಾಗಿ, ನವ್ಯಸಾಹಿತ್ಯ ನಿರ್ಮಾಣವಾಯಿತು.

ದಲಿತ ಬಂಡಾಯದವರು ಬರುತ್ತಲೇ "ಕಾವ್ಯ"ದ ಕಲಾತ್ಮಕತೆಯೂ ಕಡಿಮೆಯಾಯಿತು. "ಕಾವ್ಯವಾಗಲಿ ಖಡ್ಗ, ಜನರ ನೋವಿಗೆ ಮಿಡಿವ ಪ್ರಾಣಮಿತ್ರ" ಎಂಬ ಧ್ಯೇಯವಾಕ್ಯ ಹುಟ್ಟಿಕೊಂಡಿತು. ಖಡ್ಗ ಕೈಗೆ ಬಂದಾಗ ಸಂಯಮ ಕಡಿಮೆಯಾಗುವುದು, ಸಂಯಮ ಕಡಿಮೆಯಾದಾಗ ಕಲಾತ್ಮಕತೆ ಕಡಿಮೆಯಾಗುವುದು ಸಹಜ. ಆದುದರಿಂದ "ಕಾವ್ಯವಾಗಲಿ ಖಡ್ಗ"ದ ಜೊತೆ "ಕಾವ್ಯವಾಗಲಿ ಕಲೆ" ಎಂಬ ಕಿವಿಮಾತನ್ನು ಇಂದು ದಲಿತ-ಬಂಡಾಯದವರಿಗೆ ಹೇಳಬೇಕಾಗಿದೆ.

ಕೊನೆಯದಾಗಿ, ಸಾಹಿತ್ಯವು ಆತ್ಮಮುಖಿಯಾದರೆ ಶಾಂತಿ-ನೆಮ್ಮದಿ, ಸಮಾಜಮುಖಿಯಾದರೆ ಸಿಟ್ಟು-ಹಿಂಸೆ ಕಾಣಿಸಿಕೊಳ್ಳುತ್ತದೆ. ಆಶ್ಚರ್ಯದ ಸಂಗತಿಯೆಂದರೆ ಬಸವಣ್ಣ ಸಮಾಜಮುಖಿಸಾಹಿತ್ಯ ಬರೆದರೂ; "ವೇದಕ್ಕೆ ಒರೆಯ ಕಟ್ಟುವೆ........" ಎಂದು ಮುಂತಾಗಿ ಸಿಟ್ಟಿಗೆದ್ದರೂ ತನ್ನ ವಚನರಚನೆಯಲ್ಲಿ ಕಲೆಗಾರಿಕೆ ಉಳಿಸಿಕೊಂಡನು. ಏಕೆಂದರೆ ಅವನ ಸಿಟ್ಟಿನಲ್ಲಿ ಗಾಂಧೀಜಿಯವರ ಸಿಟ್ಟಿನಂತೆ ಸಂಯಮವಿದೆ, ಸತ್ವವಿದೆ. ಇಂದಿನ ದಲಿತ-ಬಂಡಾಯದವರು ಬಸವಣ್ಣ-ಗಾಂಧೀಜಿಯವರಂತೆ ಸಿಟ್ಟಿಗೇಳುವುದು, ಸಮಾಜಹಿತಕ್ಕಾಗಿ ಸಾಹಿತ್ಯ ಬರೆಯುವುದು ಅಗತ್ಯವಿದೆ. ಆಗ ಕಾವ್ಯ, ಸಾಮಾಜಿಕ ಹಿತದ "ಖಡ್ಗ"ವಾಗುವ ಜೊತೆಗೆ, ಸಾಹಿತ್ಯಿಕ ಸೌಂದರ್ಯದ "ಕಲೆ"ಯೂ ಆಗುತ್ತದೆ.

■■

ಆಕರ : ಮಾರ್ಗ ಸಂಪುಟ-೪

೧೦

ಉಪೇಕ್ಷಿತ ಪ್ರಾಚೀನ ಕನ್ನಡ ಸಾಹಿತ್ಯ

Every reader is his or her book , every book its reader –ಎಂದು ಹೇಳುತ್ತಾರೆ, ಗ್ರಂಥಾಲಯ ವಿಜ್ಞಾನಿಗಳು. ಪ್ರತಿಯೊಬ್ಬ ವಾಚಕನಿಗೂ ಅವನದೇ ಆದ ಗ್ರಂಥವಿರುತ್ತದೆ; ಪ್ರತಿಯೊಂದು ಗ್ರಂಥಕ್ಕೂ ಅದರದೇ ಆದ ವಾಚಕನಿರುತ್ತಾನೆ–ಎಂಬ ಈ ಹೇಳಿಕೆಯು ಪ್ರತಿಯೊಂದು ಗ್ರಂಥದ ಸಾರ್ಥಕತೆಯನ್ನು ಎತ್ತಿ ಹಿಡಿಯುತ್ತದೆ.

ಈ ದೃಷ್ಟಿಯಿಂದ ನೋಡಿದರೆ, ಒಂದು ಭಾಷೆಯ ಎಲ್ಲ ಗ್ರಂಥಗಳು ತಮ್ಮತಮ್ಮ ವಾಚಕರ ಅಭೀಪ್ಸೆಗಳನ್ನು ಈಡೇರಿಸಲು ಹುಟ್ಟಿದ ಮಹತ್ವಪೂರ್ಣ ಸಾಂಸ್ಕೃತಿಕ ಆಸ್ತಿಗಳೆನಿಸುತ್ತವೆ.

ಕನ್ನಡದ ಇಂಥ ಸಾಂಸ್ಕೃತಿಕ ಸಂಪತ್ತಿಗೆ ಸಾವಿರವರ್ಷ ಮೇಲ್ಪಟ್ಟ ಇತಿಹಾಸವಿದೆ. ಈ ಅವಧಿಯಲ್ಲಿ ಹುಟ್ಟಿದ ಸಾವಿರ ಸಾವಿರ ಕೃತಿಗಳಲ್ಲಿ ಕೇವಲ "ಸಾಹಿತ್ಯಿಕ ಮೌಲ್ಯ"ದ ಅಂದರೆ ಭಾವನಿಷ್ಠ ಸಾಹಿತ್ಯದ ಸೃಷ್ಟಿ, ವಾಚನ, ಪ್ರಕಟನೆಗಳಿಗೆ ನಾವು ವಿಶೇಷ ಒತ್ತು ಕೊಡುತ್ತ ಬಂದಿದ್ದೇವೆ. ಪ್ರಾಚೀನಕಾಲದಲ್ಲಿ ಸಾಹಿತ್ಯಿಕ ಒಲವು, ಪುರಾಣ ಮತ್ತು ಚರಿತಪುರಾಣಗಳ ರಚನೆಗೆ ಮಹತ್ವ ನೀಡುವುದಾಗಿದ್ದಿತು–ಇಂದು ಕಥೆ ಕಾದಂಬರಿ ಇತ್ಯಾದಿಗಳ ರಚನೆಗೆ ಮಹತ್ವ ನೀಡುತ್ತಲಿರುವಂತೆ. ಇಂಥ ಸಂದರ್ಭದಲ್ಲಿ ಇತರ ಪ್ರಕಾರಗಳ ಮಹತ್ವವನ್ನು ಅರ್ಥಮಾಡಿಕೊಂಡು, ಅವುಗಳ ಸೃಷ್ಟಿಗೆ ಅವಕಾಶ ತೆರೆದುಕೊಟ್ಟವ, ಕಲ್ಯಾಣಚಾಲುಕ್ಯ ಚಕ್ರವರ್ತಿ ಇಮ್ಮಡಿ ಜಯಸಿಂಹ(೧೦೧೫–೪೨). ಅವನ ತರುವಾಯ ನಮ್ಮಲ್ಲಿ ಉದ್ದಕ್ಕೂ ತಕ್ಕಮಟ್ಟಿಗೆ ಸಾಹಿತ್ಯಶಾಸ್ತ್ರಕ್ಷೇತ್ರದಲ್ಲಿ ವ್ಯಾಕರಣ ಅಲಂಕಾರ ಛಂದಸ್ಸು ನಿಘಂಟು ಶಾಸ್ತ್ರಗಳು ಹುಟ್ಟಿದ್ದು, ಇವುಗಳ ಪ್ರಕಟನೆ ಅಧ್ಯಯನಗಳತ್ತ ಒಂದಿಷ್ಟು ಗಮನ ಕೊಟ್ಟಿದ್ದೇವೆ. ಆದರೆ ಗಣಿತ, ಜ್ಯೋತಿಷ್ಯ, ವೈದ್ಯ, ಸೂಪ, ಸಂಗೀತ, ಶಿಲ್ಪ, ನೃತ್ಯ, ಚಿತ್ರ ಇತ್ಯಾದಿ ಸಾಹಿತ್ಯೇತರಶಾಸ್ತ್ರ ಗ್ರಂಥಗಳು ತಕ್ಕ ಪ್ರಮಾಣದಲ್ಲಿ ಹುಟ್ಟಿದ್ದರೂ, ಅವು ನಮ್ಮ ಉಪೇಕ್ಷೆಗೆ ಗುರಿಯಾಗುತ್ತ ಬಂದಿವೆ. ವೈದ್ಯಶಾಸ್ತ್ರವೊಂದನ್ನೇ ತೆಗೆದುಕೊಂಡರೆ, ನರವೈದ್ಯದಲ್ಲಿಯೇ ಸ್ತ್ರೀವೈದ್ಯ, ಬಾಲವೈದ್ಯ ಇತ್ಯಾದಿ ಗ್ರಂಥಗಳೂ ಪಶುವೈದ್ಯದಲ್ಲಿಯೇ ಗೋವೈದ್ಯ, ಅಶ್ವವೈದ್ಯ, ಗಜವೈದ್ಯ ಇತ್ಯಾದಿ ಗ್ರಂಥಗಳೂ ನಮ್ಮಲ್ಲಿ ಸೃಷ್ಟಿಯಾಗಿವೆ. ಬೇರೆ ಬೇರೆ ಹಸ್ತಪ್ರತಿ ಭಾಂಡಾರಗಳಲ್ಲಿ, ವ್ಯಕ್ತಿವಶದಲ್ಲಿ ಉಳಿದುಕೊಂಡಿರುವ ಇವುಗಳ ಪ್ರಕಟನೆಗೆ ನಾವು ಆಸಕ್ತಿ ವಹಿಸಿಲ್ಲ, ಒಂದಿಷ್ಟು

ಪ್ರಕಟವಾದರೂ ಅಭ್ಯಾಸಕ್ಕೆ ಗಮನಕೊಡುತ್ತಿಲ್ಲ. ಪ್ರತಿವರ್ಷ ಹತ್ತಾರು ವಿದ್ಯಾರ್ಥಿಗಳು ಪಿಎಚ್.ಡಿ ಅಧ್ಯಯನ ಮಾಡುತ್ತಿದ್ದರೂ ಅವರಲ್ಲಿ ಒಬ್ಬರೂ ಈ ಸಾಹಿತ್ಯದ ಕಡೆಗೆ ಹೊರಳಿ ನೋಡುತ್ತಿಲ್ಲ. ರಾಜಾದಿತ್ಯನನ್ನೇ ತೆಗೆದುಕೊಂಡರೆ, ವ್ಯವಹಾರಗಣಿತ, ಕ್ಷೇತ್ರಗಣಿತ, ವ್ಯವಹಾರರತ್ನ, ಲೀಲಾವತಿ, ಚಿತ್ರಹಸುಗೆ, ಜೈನಗಣಿತಸೂತ್ರಟೀಕೋದಾಹರಣ ಮೊದಲಾದ ಗ್ರಂಥಗಳನ್ನು ಬರೆದಿದ್ದು, ಇಲ್ಲಿ ಅನೇಕ ಸ್ಥಳಜನ್ಯ(Indigenous) ವಿಚಾರಗಳು ಅಡಗಿರಬಹುದಾಗಿದೆ. ಇದಲ್ಲದೆ ಆ ಕಾಲದ-ಆ ಪ್ರದೇಶದ ಕಾಗಿಣಿ ವೀಸ ಪಾಗ ಪಣ ಗದ್ಯಾಣದಂಥ ನಾಣ್ಯಶಾಸ್ತ್ರದ, ಕಂಬ ಗಳೆ ಮತ್ತರಗಳಂಥ ಭೂಮಾಪನಶಾಸ್ತ್ರದ ಪರಿಭಾಷೆಗಳು ಮತ್ತು ಸ್ಥಳೀಯ ಲೆಕ್ಕಪದ್ಧತಿಗಳು ಸಿಗುತ್ತಿದ್ದು, ಇದನ್ನು "ಕುಂತಣಬಾಗೆಯ ಪರಿಭಾಷೆ'' ಅಂದರೆ ಪೂವಿನಬಾಗೆ(ಇಂದಿನ ರಾಯಬಾಗ)ಯ ಪರಿಭಾಷೆ ಎಂದು ಕರೆದಿದ್ದಾನೆ. ಹೀಗೆ ಸಾಹಿತ್ಯೇತರಶಾಸ್ತ್ರಗಳು ಕರ್ನಾಟಕಜ್ಞಾನವನ್ನು, ಅದರ ವಿವರಗಳನ್ನು ತೆರೆದು ತೋರಿಸುತ್ತಿದ್ದು, ಈ ಗ್ರಂಥಗಳ ಪ್ರಕಟನೆ-ಅಭ್ಯಾಸ ತಕ್ಷಣ ನಡೆಯಬೇಕಾಗಿದೆ.

ಇಂಥಹದೇ ಇನ್ನೊಂದು ಕ್ಷೇತ್ರ, ಟೀಕೆ ವ್ಯಾಖ್ಯಾನಸಾಹಿತ್ಯ. ಇದು ಸಂಸ್ಕೃತ-ಪ್ರಾಕೃತ ಕೃತಿಗಳಿಗೆ ಬರೆದ ಟೀಕೆ, ಕನ್ನಡ ಕೃತಿಗಳಿಗೆ ಬರೆದ ಟೀಕೆ ಎಂದು ಸಾಮಾನ್ಯವಾಗಿ ಎರಡು ಬಗೆಯಾಗಿದೆ. ಕನ್ನಡ ಸಾಹಿತ್ಯ ಕಣ್ಣು ತೆರೆದದ್ದೇ ಸಂಸ್ಕೃತ-ಪ್ರಾಕೃತ ಸಾಹಿತ್ಯಗಳ ಸಂಪರ್ಕದಲ್ಲಿ. ಒಂದು ಭಾಷೆಯ ಸಾಹಿತ್ಯವು ಟೀಕೆ-ವ್ಯಾಖ್ಯಾನ-ಅನುವಾದಗಳ ಮೂಲಕ ಇನ್ನೊಂದು ಭಾಷೆಯನ್ನು ಪ್ರವೇಶಿಸುವ ನಿಯಮದಂತೆ, ಸಂಸ್ಕೃತ-ಪ್ರಾಕೃತಸಾಹಿತ್ಯ ಕನ್ನಡದಲ್ಲಿ ಕಾಲಿಟ್ಟಿತು. ಮತ್ತು ಆಡುಭಾಷೆಯಾಗಿದ್ದ ಕನ್ನಡವನ್ನು ಗ್ರಾಂಥಿಕಗೊಳಿಸುವ ಕಾರ್ಯವನ್ನೂ ಪೂರೈಸಿತು. ಈ ಕಾರಣದಿಂದಾಗಿ ಶ್ಯಾಮಕುಂದಾಚಾರ್ಯ, ತೆಂಬಳೂರಾಚಾರ್ಯ ಮೊದಲುಗೊಂಡು ಅನೇಕ ಜೈನ ಟೀಕಾಕಾರರು ಸಂಸ್ಕೃತ-ಪ್ರಾಕೃತ ಕೃತಿಗಳಿಗೆ ಟೀಕೆ ಬರೆಯುವ ಮೂಲಕ ಅಲ್ಲಿಯ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಆಮೇಲೆ ಲಿಂಗಾಯತರು, ಬಳಿಕ ಬ್ರಾಹ್ಮಣರು ತಮ್ಮ ತಮ್ಮ ಧಾರ್ಮಿಕ ಸಾಹಿತ್ಯಗಳಿಗೆ ಟೀಕೆ ವ್ಯಾಖ್ಯಾನ ಬರೆಯುತ್ತ ಬಂದಿದ್ದಾರೆ. ಈವರೆಗೆ ಈ ಸಾಹಿತ್ಯ ಪ್ರಕಟವಾದದ್ದು ಸ್ವಲ್ಪ. ಅನೇಕ ಅಪರಿಚಿತ ಶಬ್ದಗಳಿಗೆ ಅರ್ಥ ಒದಗಿಸುವ ಇವು ತುಂಬ ಮಹತ್ವದ ಗ್ರಂಥಗಳೆನಿಸಿವೆ. ಹತ್ತನೆಯ ಶತಮಾನದ ಪ್ರಸಿದ್ಧಕವಿ ಸೋಮದೇವಸೂರಿಯ ಸಂಸ್ಕೃತ ನೀತಿವಾಕ್ಯಾಮೃತಕ್ಕೆ ೧೨ನೆಯ ಶತಮಾನದ ನೇಮಿನಾಥನು ಕನ್ನಡ ಟೀಕೆ ಬರೆದಿದ್ದು, ಇಲ್ಲಿಯ ಕ್ರಿಯಾ=ಮಾಟ(೩೫), ಸ್ಪರ್ಶ=ತೀಟ (೪೮), ಸಚಿವ=ಪೆರ್ಗಡೆ(೮೩), ಅಮಾತ್ಯ= ಪೆರ್ಗಡೆ(೧೯೦), ನಿಯೋಗಿ=ಪೆರ್ಗಡೆ (೧೯೩), ಸ್ನಾನವಸ್ತ್ರ=ಒಲ್ಲಣಿಗೆ(೨೦೪), ಸಿದ್ಧಾಯ= ತೆರಿಗೆ(೨೧೩), ಮೌಲ=ಪಳೆಯ (೨೩೦), ಪರಮಾನ್ನ=ತುಯ್ಯಲ(೨೫೯), ವ್ಯಾಯಾಮ= ಎಡೆಯಾಟ(೨೭೦), ಖಡ್ಗ= ಅಮ್ಮಾವು(೩೯೯), ಕೋಶಪಾನ=ಬಳಿನೀರು(೪೧೧), ಪಕ್ವಾನ್ನ =ಅಟ್ಟಕೂಳು (೪೪೩) ಎಂಬ ಶಬ್ದಾರ್ಥಗಳು ಅಪೂರ್ವವೆನಿಸಿವೆ. ಸಾಲದುದಕ್ಕೆ ಅಲ್ಲಲ್ಲಿ ಹೇಳಿದ ವಿವರಣೆಗಳು ಸಂಶೋಧನೆಗೆ ನೆರವಾಗುತ್ತವೆ. ಉದಾ: "ಕರಹಾಟರಾಜನಾದ ಕೈಟಭನು ವಿಷಲೇಪಿತ ಬಟ್ಟೆಯನ್ನು ಕಾಣಿಕೆಯಾಗಿ ಕೊಟ್ಟು ವಸುವೆಂಬ ರಾಜನನ್ನು ಕೊಂದನು"(೧೪೮), "ಹರಿಗೆ ಅಡ್ಡಾಯುಧಗಳನ್ನು ಹಿಡಿದ ಭದ್ರನೆಂಬವನು ಕಾಂಚೀಪತಿಯನ್ನು ಸೆರೆಹಿಡಿದನು"(೨೧೬), "ಕುಂತಲಾಧಿಪತಿ ಕಳಿಸಿದ ಸ್ತ್ರೀವೇಷಧಾರಿ ಗೂಢಪುರುಷನು ಕಿವಿಯ ಬಳಿ ಇಟ್ಟುಕೊಂಡಿದ್ದ ಕತ್ತಿಯಿಂದ ಪಲ್ಲವ ನರೇಂದ್ರನನ್ನು ಕೊಂದನು"(೨೯೫)-ಇತ್ಯಾದಿ ವಾಕ್ಯಗಳು ಇತಿಹಾಸದ ಮುಚ್ಚಿದ ಬಾಗಿಲಿನತ್ತ ಬೆರಳು ನೀಡುತ್ತವೆ.

ವೀರಶೈವಕ್ಕೆ ಬಂದರೆ ಇಲ್ಲಿ ವಾತುಲತಂತ್ರಟೀಕೆ, ವೀರಮಾಹೇಶ್ವರಾಚಾರ ಸಾರೋದ್ಧಾರಟೀಕೆ, ಸಿದ್ಧಾಂತಶಿಖಾಮಣಿಟೀಕೆ, ಯಜುರ್ವೇದಭಾಷ್ಯಟೀಕೆ, ವೀರಮಾಹೇಶ್ವರಾಚಾರ ಸಾರಸಂಗ್ರಹ ಟೀಕೆ ಇತ್ಯಾದಿ ಧಾರ್ಮಿಕ ಕೃತಿಗಳು ಹುಟ್ಟಿವೆ. ಕನ್ನಡ ಕೃತಿಗಳಿಗೂ ಬರೆದ ಕರಣಹಸಿಗೆ ಟೀಕೆ, ಮನೋವಿಜಯ ವ್ಯಾಖ್ಯಾನ, ಭಾವಚಿಂತಾರತ್ನಟೀಕೆ ಇತ್ಯಾದಿಗಳು ಸಿಗುತ್ತಿದ್ದು, ಸಾಮಾನ್ಯ ಮತ್ತು ವಿಶೇಷ ತಿಳಿವಳಿಕೆಗೆ ಇವು ತಪ್ಪದೇ ನೆರವಾಗುತ್ತವೆ.

ಇಂಥ ಟೀಕೆ ವ್ಯಾಖ್ಯಾನ ಗ್ರಂಥಗಳಲ್ಲದೆ ಲಘುಸಾಹಿತ್ಯಕೃತಿಗಳ ಸಂಪಾದನೆ, ಪ್ರಕಟನೆಯತ್ತ ನಾವು ಗಮನ ಕೊಡಬೇಕಾಗಿದೆ. ಗದುಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನಸಂಸ್ಥೆ "ವಚನಸಂಕಲನ ಸಂಪುಟ" ಹೆಸರಿನಡಿ ಈವರೆಗೆ ಆರು ವಚನ ಸಂಪುಟಗಳನ್ನು ಪ್ರಕಟಿಸಿದೆ. ಇದರಿಂದಾಗಿ ೨೭ ಬಿಡಿ ವಚನ ಸಂಕಲನಗಳು ಬೆಳಕು ಕಂಡು ಹೊಸ ಹೊಸ ವಚನಗಳು ಲಭ್ಯವಾಗಿವೆ. ಇದೇ ರೀತಿ ಈ ಸಂಸ್ಥೆ "ವೀರಶೈವ ತಾರಾವಳಿ ಸಂಪುಟ" (೬೩ ತಾರಾವಳಿಗಳು), "ವೀರಶೈವ ಅಷ್ಟಕಸಂಪುಟ" (೧೦೩ ಅಷ್ಟಕಗಳು), ೧೮ ಸ್ವರವಚನ ಸಂಪುಟಗಳನ್ನು ಪ್ರಕಟಿಸಿದೆ. ಮೈಸೂರಿನ ಸುತ್ತೂರು ಮಠ ೧೦ ಸ್ವರವಚನ ಸಂಪುಟಗಳನ್ನು ಹೊರತಂದಿದೆ. ಈ ಸಮಗ್ರ ಸಂಪುಟಗಳು ತುಂಬ ಮಹತ್ವದವುಗಳೆಂದೇ ಹೇಳಬೇಕು. ಉದಾ: ತಾರಾವಳಿ ಸಂಪುಟದ ದಂಡಿನ ತಾರಾವಳಿ, ಮದಕರಿರಾಜೇಂದ್ರನ ತಾರಾವಳಿ, ಮೈಸೂರು ದೊರೆಗಳ ತಾರಾವಳಿಗಳು ಅಪೂರ್ವ ಚಾರಿತ್ರಿಕ ಅಂಶಗಳನ್ನು ಹೊರಹಾಕಿವೆ. ಮುರಿಗೆ ತಾರಾವಳಿಯು ಚಿತ್ರದುರ್ಗಮಠದ ಮುರುಗಾಶಾಂತವೀರರ ಪರ್ಯಟನ, ಶಿವಾಜಿಯ ಭೆಟ್ಟಿ ಇತ್ಯಾದಿ ಹೊಸ ವಿಷಯಗಳನ್ನು ತಿಳಿಸುತ್ತದೆ. ಸುತ್ತೂರು ಮಠದ ಸ್ವರವಚನ ಸಂಪುಟಗಳಲ್ಲಿ ಇಡಿಕಿರಿದಿರುವ ಹೊಸ ಮಾಹಿತಿಗಾಗಿ ಶ್ರೀ ಎಸ್. ಶಿವಣ್ಣ ಸಂಪಾದಿಸಿರುವ ಸಂಪುಟ ೧, ಸಂಪುಟ ೨ ನೋಡಬಹುದು. ಇವುಗಳಲ್ಲಿ ಕೆಳದಿ, ಚಿತ್ರದುರ್ಗ, ಬಾಗಳಿ, ಸೋದೆ, ಕುಮ್ಮಟದುರ್ಗ, ಪುಂಗನೂರು ಇತ್ಯಾದಿ ರಾಜಮನೆತನಗಳ ಇತಿಹಾಸವಿದೆ. ಶ್ರೀಮತಿ ಭಾನುಮತಿ ಅವರ ೪ ಮತ್ತು ೧೦ನೆಯ ಸಂಪುಟಗಳು ಬಿಡಿಗರಿಗಳಲ್ಲಿ ಅಡಗಿಕುಳಿತಿದ್ದ ೨೪೮ ಮತ್ತು ೧೧೦ ಹಾಡುಗಳನ್ನು ಬೆಳಕಿಗೆ ತಂದಿವೆ. ಇವುಗಳ ಅನುಬಂಧದಲ್ಲಿರುವ "ಅಂಕಿತ ಸೂಚಿ" ಈ ಪ್ರಕಾರದ ಕರ್ತೃವೈವಿಧ್ಯವನ್ನು ಕಣ್ಣಿಗೆ ಕಟ್ಟುತ್ತದೆ.

ಹಂಪಿಯ ಕನ್ನಡ ವಿಶ್ವವಿದ್ಯಾಲಯ ಈ ದಿಸೆಯಲ್ಲಿ ಗಮನ ಹರಿಸಿ, ಬಸವಯುಗದ ವಚನೇತರಸಾಹಿತ್ಯ, ಕರಸ್ಥಲಸಾಹಿತ್ಯ, ನೋಂಪಿಯ ಕಥೆಗಳು, ಜೈನ ಹಾಡುಗಳು, ಹಳೆಯ ಲಾವಣಿಗಳು ಇತ್ಯಾದಿ ಸಂಪುಟಗಳನ್ನು ಪ್ರಕಟಿಸಿದೆ. ಇವು ಸಾಹಿತ್ಯೇತರ ಕಾರಣಗಳಿಗಾಗಿ ಮುಖ್ಯವೆನಿಸಿವೆ. "ನಾಗಸ್ತ್ರೀ ನೋಂಪಿಯ ಕಥೆ"ಯು "...... ಕರ್ಣಾಟಕ ದೇಶದೊಳು ತೇರುದಾಳವೆಂಬ ಪುರಮದನಾಳುವರಸು ವಂಕಭೂಪಾಲಂ. ಆತನ ಸ್ತ್ರೀ ಲಕ್ಷ್ಮೀಮತಿ" ಎಂದು ಆರಂಭವಾಗುತ್ತಿದ್ದು, ಇಲ್ಲಿಯ ವಂಕನೆಂಬವನು ಶಾಸನೋಕ್ತ ಗೊಂಕನೇ ಆಗಿದ್ದಾನೆ.

ನನ್ನ ಕೃಷಿಯನ್ನೇ ಕುರಿತು ಹೇಳುವುದಾದರೆ, ಇಂದು ಸಾಮಾನ್ಯವಾಗಿ ಸಂಶೋಧಕರಾದವರು ಇನ್ನೊಬ್ಬರು ಪ್ರಕಟಿಸಿದ ಆಕರಗಳನ್ನು ಅವಲಂಬಿಸಿ ಸಂಶೋಧನಕಾರ್ಯವನ್ನು ಪೂರೈಸುತ್ತಾರೆ.

ನಾನು ಮಾತ್ರ ಅಪ್ರಕಟಿತ ಕೃತಿಗಳನ್ನು, ಅದರಲ್ಲಿಯೂ ಚಾರಿತ್ರಿಕ ಕಾವ್ಯಗಳನ್ನು ಶೋಧಿಸಿ ಪ್ರಕಟಿಸಿದೆ. ಇದರಿಂದಾಗಿ ಈ ವರೆಗೂ ಉಪೇಕ್ಷೆಗೆ ಗುರಿಯಾಗಿದ್ದ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ನಿಂಬಸಾಮಂತ ಚರಿತೆಗಳಲ್ಲದೆ ಸಿರುಮಭೂಪಾಲನನ್ನು ಕುರಿತ ಮೂರು ಕೃತಿಗಳು ಬಯಲಿಗೆ ಬಂದವು. ಕುಮಾರರಾಮನನ್ನು ಕುರಿತು ಎರಡು ಕೃತಿಗಳು ಪ್ರಕಟವಾಗಿ, ಇನ್ನೆರಡು ಕೃತಿಗಳು ಪ್ರಕಟನೆಯ ದಾರಿ ಕಾಯುತ್ತಲಿವೆ. ಇವುಗಳ ಪ್ರಕಟನೆಯಿಂದಾಗಿ ಸಣ್ಣ ಅರಸು ಮನೆತನಗಳ ಮೇಲೆ ದೊಡ್ಡ ಬೆಳಕು ಚೆಲ್ಲಿದೆಯೆಂದೇ ಹೇಳಬೇಕು.

ಈ ದಿಸೆಯಲ್ಲಿ ಸಣ್ಣ ಸಣ್ಣ ರಚನೆಗಳಾದ ವಣಿಜೋತ್ಪತ್ತಿ, ಪಂಚಾಚಾರ್ಯ ನಿರ್ಣಯ, ಮಠಸ್ಥಲ, ಸಮಾಧಿಕ್ರಿಯಾ ಹೆಸರಿನ ಒಂದಕ್ಕಿಂತ ಹೆಚ್ಚು ಕೃತಿಗಳು ಸಿಗುತ್ತವೆ. ಇವುಗಳಲ್ಲಿ ವಣಿಜೋತ್ಪತ್ತಿಯು ವಣಿಜರ ೫ ವರ್ಗಗಳನ್ನು ಹೆಸರಿಸಿದೆ. ಇವರಲ್ಲಿ ಐದನೆಯವನೇ ಮಿಂಡಗುದ್ದಲಿಸೆಟ್ಟಿ. ಇಂದಿಗೂ ಮಿಂಡಗುದ್ದಲಿ ಅಡ್ಡಹೆಸರಿನ ಮನೆತನಗಳು ಉತ್ತರ ಕರ್ನಾಟಕದಲ್ಲಿವೆ. ಈ ಗುಂಪಿನಲ್ಲಿ ಐದನೆಯವರಾಗಿರುವ ಕಾರಣ, ಇವರನ್ನು ಪಂಚಮಸಾಲು ಎಂದೂ ಪರ್ಯಾಯನಾಮದಿಂದ ಕರೆಯುತ್ತಿದ್ದರು. ಇವರೇ ಇಂದಿನ ಲಿಂಗಾಯತ ಪಂಚಮಸಾಲಿಗಳು. "ಸಮಾಧಿಕ್ರಿಯಾ" ಕೃತಿಯು ಲಿಂಗಾಯತನ ಶವವನ್ನು ಸಮಾಧಿಮಾಡುವ ವಿವರಗಳನ್ನು ನೀಡುತ್ತಿದ್ದು, ಪ್ರಾಚೀನಕಾಲದಲ್ಲಿ ಜೀವಂತ ಸಮಾಧಿ ಹೋದ ಈ ಧರ್ಮೀಯರನ್ನು ಹೀಗೆ ಸೂಚಿಸುತ್ತದೆ.

ಪಾಲ್ಕುರಿಕೆ ಸೋಮ ಮೊಗ್ಗೆಯ ಮಾಯಿದೇವಗಳು
ಶ್ರೀಕರದ ಚಿಕ್ಕಮಾದನು ಕದಿರ ರೇಮನು ಕೃ
ಪಾಕರ ಸಮಾಧಿಯಾ ಸೋಮಯ್ಯನಜಗಣ್ಣ ನಿಲನೂರ ನಿಂಬವ್ವೆಯು।
ಈ ಕಲಿಯುಗದಿ ಶಂಭು ಕರೆದರೊಲ್ಲದೆ ಸಮಾ
ಧಿ ಕರವಧಿಕವೆನುತೋಂ ನಮಃಶಿವಾಯ ಶಿಷ್ಯ
ನಾಕಲಿತ ಹಿಮಗಿರೀಶ್ವರ ಹಾಳಪಯ್ಯಗಳು ಮೆರೆದರೀ ಧರಣಿಯೊಳಗೆ॥

ಇಂಥ ದೊಡ್ಡ ಮಾಹಿತಿಗಳನ್ನು (ಕೆಲವು ಪ್ರತಿಗಳಲ್ಲಿ ರಾಘವಾಂಕನ ಹೆಸರೂ ಇದೆ) ಕ್ರಿಯಾಸಮಾಧಿ ಹೆಸರಿನ ಸಣ್ಣಗ್ರಂಥ ಒದಗಿಸುತ್ತದೆ.

ಇದೇ ರೀತಿ ಸ್ಥಳಪುರಾಣ, ಮಹಾತ್ಮೆಗಳು ಕನ್ನಡದಲ್ಲಿ ವಿಪುಲಸಂಖ್ಯೆಯಲ್ಲಿ ಸಿಗುತ್ತಿದ್ದು, ಇವುಗಳನ್ನು ತೀರ ಉಪೇಕ್ಷೆಗೆ ಗುರಿಪಡಿಸಲಾಗಿದೆ. ಮೈಸೂರು ಅರಸರ ಕಾಲದಲ್ಲಂತೂ ಕಮಲಾಚಲ ಮಹಾತ್ಮೆ, ಕಕುದ್ಗಿರಿ ಮಹಾತ್ಮೆ ಮೊದಲಾದುವು ಹುಟ್ಟಿವೆ. ಮೇಲುನೋಟಕ್ಕೆ ನಿಷ್ಪ್ರಯೋಜಕವೆನಿಸುವ ಇವುಗಳ ಮಹತ್ವದ ಬಗ್ಗೆ ಡಾ॥ ರಾ. ಚಿಂ. ಢೇರೆ ಅವರು ತಮ್ಮ ಚಕ್ರಪಾಣಿ ಕೃತಿಯಲ್ಲಿ (ಪು. ೨೮೭-೯೦) ಹೀಗೆ ಹೇಳುತ್ತಾರೆ: "ಸ್ಥಳಮಹಾತ್ಮೆ ಅಥವಾ ಸ್ಥಳಪುರಾಣಗಳು ಪುರಾಣಗಳ ಪರಿವೇಷದಲ್ಲಿ ರಚನೆಯಾಗಿದ್ದರೂ, ಅದರಲ್ಲಿ ಆಯಾ ಸ್ಥಳಗಳ ಸಾಂಸ್ಕೃತಿಕ ಇತಿಹಾಸ-ಭೂಗೋಲದ ಬಳಕೆಯನ್ನು ಕೌಶಲ್ಯದಿಂದ ಮಾಡಲಾಗಿರುತ್ತದೆ. ವಾಸ್ತವಿಕ ಸಾಮಗ್ರಿಯ ಮೇಲೆ ಪುರಾಣ ಪರಿವೇಷ

ತೊಡಿಸುವ ಈ ಮಹಾತ್ಮ್ಯಕ್ಕೆ ರಚನೆಕಾರರ ಪದ್ಧತಿಯು ಒಮ್ಮೆ ಅರ್ಥವಾಯಿತೆಂದರೆ, ಅಭ್ಯಾಸಕನಿಗೆ ಎಷ್ಟೋ ಲುಪ್ತ ಇತಿಹಾಸದ ಕ್ಷಣಗಳನ್ನು ಸ್ಥಳಪುರಾಣದಲ್ಲಿ ಹಿಡಿದಿಡಲು ಮತ್ತು ನಮ್ಮ ಸಾಂಸ್ಕೃತಿಕ ಪರಂಪರೆಯ ಹಲವು ಅಜ್ಞಾತಪರ್ವಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಎಲ್ಲಿ ಅಸಲೀ ಸಾಮಗ್ರಿಗಳ ಕೊರತೆಯಿಂದ ಅಡಚಣೆ ನಿರ್ಮಾಣವಾಗಿರುತ್ತದೋ, ಅಂಥಲ್ಲಿ ಸ್ಥಳಪುರಾಣದ ಸಹಾಯ ಪಡೆದರೆ, ನಮ್ಮ ಸಾಂಸ್ಕೃತಿಕ ಇತಿಹಾಸದ ಅಧ್ಯಯನ ಗತಿಶೀಲಗೊಳ್ಳುವುದರಲ್ಲಿ ಸಂಶಯವಿಲ್ಲ, ಎಂದು ನನ್ನ ಅನುಭವ ಹೇಳುತ್ತದೆ.”

ಈವರೆಗಿನ ವಿವರಗಳನ್ನು ನೋಡಿದರೆ, ಕಳೆದುಹೋಗಿರುವ ನಮ್ಮ ಸಾಮಾಜಿಕ, ರಾಜಕೀಯ, ಧಾರ್ಮಿಕ ಇತ್ಯಾದಿ ಕ್ಷೇತ್ರಗಳ ಕೆಲವು ಕೊಂಡಿಗಳನ್ನಾದರೂ ಇಂಥ ಸಾಹಿತ್ಯದಿಂದ ಹುಡಿಕಿಕೊಂಡು, ಅವುಗಳ ನೆರವಿನಿಂದ ಆಯಾ ಕ್ಷೇತ್ರಗಳನ್ನು ಒಂದಿಷ್ಟು ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ. ಹೀಗಾಗಿ ಈ ಮತ್ತು ಇಂಥ ಉಪೇಕ್ಷಿತ ಸಾಹಿತ್ಯವನ್ನು ಶೋಧಿಸುವ, ಪ್ರಕಟಿಸುವ, ಅಭ್ಯಸಿಸುವ ಕೆಲಸವನ್ನು ನಾವು ಆದಷ್ಟು ಬೇಗ ಕೈಗೆತ್ತಿಕೊಳ್ಳುವುದು ಅವಶ್ಯವಿದೆ.

■■

ಆಕರ : ಮಾರ್ಗ ಸಂಪುಟ-೪

೧೧

ರನ್ನ ನಿಘಂಟು

ಕನ್ನಡ 'ನಿಘಂಟು ಸಾಹಿತ್ಯ'ದಲ್ಲಿ ಎತ್ತಿಹೇಳಬಹುದಾದ ಕೃತಿಗಳೆಂದರೆ ರನ್ನ ನಿಘಂಟು, ವಸ್ತುಕೋಶ, ಚತುರಾಸ್ಯ ನಿಘಂಟು, ಶಬ್ದಸಾರ, ಕರ್ನಾಟಕ ನಿಘಂಟು, ಕವಿಕಂಠಹಾರ, ಕಬ್ಬಿಗರ ಕೈಪಿಡಿ, ಕರ್ನಾಟಕ ಶಬ್ದಮಂಜರಿ ಇತ್ಯಾದಿಗಳು. ಇವುಗಳಲ್ಲಿ 'ರನ್ನನಿಘಂಟು'ವಿನ ಕರ್ತೃ ಕವಿರನ್ನನೆಂದು ಕವಿಚರಿತೆಕಾರರು ಮೊದಲಾದವರ ಅಭಿಪ್ರಾಯ. ಇವರಿಗಿರುವ ಒಂದೇ ಒಂದು ಆಧಾರವೆಂದರೆ ಪ್ರತಿಯೊಂದು ಪದ್ಯ 'ಕವಿರತ್ನಾ' ಅಥವಾ 'ಕವಿ ರನ್ನಾ' ಎಂದು ಮುಗಿಯುವುದು.

ಇದರ ಆದಿ ಮತ್ತು ಅಂತ್ಯಗಳಲ್ಲಿ ರನ್ನ ಕರ್ತೃತ್ವವನ್ನು ಪೋಷಿಸುವ ವಿವರಗಳಿಲ್ಲ. ಸ್ವತಃ ರನ್ನನಾಗಲೀ ಅನ್ಯಕವಿಗಳಾಗಲೀ ಇದು 'ರನ್ನ ಕೃತಿ'ಯೆಂದು ಹೇಳಿಲ್ಲವಾದುದರಿಂದ ಕೆಲವರು ಇದರ ಕರ್ತೃತ್ವದ ಬಗ್ಗೆ ಸಂದೇಹ ತಳೆದಿದ್ದಾರೆ. ಆದರೆ ಈಗ ಉಪಲಬ್ಧವಿರುವ ಕನ್ನಡ ನಿಘಂಟುಗಳಲ್ಲಿ ಇದು ಕಾಲದೃಷ್ಟಿಯಿಂದ ಪ್ರಾಚೀನತಮವಾಗಿ ತೋರುವುದೂ, 'ರನ್ನಂ ವೈಯಾಕರಣಂ' ಮೊದಲಾದ ಹೇಳಿಕೆಗಳಿಂದ ವ್ಯಕ್ತವಾಗುವ ಶಾಸ್ತ್ರಸಂಧಾನಮತಿಯೂ ಈ ಕೃತಿ, ರನ್ನರದಾಗಿರಬೇಕೆಂದು ನಂಬಿಸುತ್ತವೆ.

ಕವಿ ರನ್ನನ ಕೃತಿಗಳಲ್ಲಿ ಉಳಿದುಬಂದುವು ಗದಾಯುದ್ಧ, ಅಜಿತಪುರಾಣ, ಕಳೆದುಹೋದುವು ಚಕ್ರೇಶ್ವರಚರಿತೆ, ಪರಶುರಾಮಚರಿತೆ. ಇವುಗಳನ್ನು ಬಿಟ್ಟರೆ ಮೊದಲಿನ ಹನ್ನೆರಡು ಪದ್ಯಗಳಷ್ಟು ಸಿಕ್ಕ 'ರನ್ನ ನಿಘಂಟು' ಮಾತ್ರ ಅಳಿದುಳಿದ ಸ್ಥಿತಿಯಲ್ಲಿ ನಿಂತುಕೊಂಡಿದೆ. ಕವಿಚರಿತೆಕಾರರು ಈ ಕೃತಿಯ ಬಗ್ಗೆ "ನಮಗೆ ದೊರೆತ ಈ ನಿಘಂಟುವಿನ ಒಂದು ಅಸಮಗ್ರ ಪ್ರತಿಯಲ್ಲಿ ೧೨ ಕಂದಗಳಿವೆ. ಇವು ಪ್ರಾಯಿಕವಾಗಿ 'ಕವಿರತ್ನ' ಎಂದು ಮುಗಿಯುತ್ತವೆ. ಇವುಗಳಲ್ಲಿ ಎರಡನ್ನು ಉದಾಹರಿಸುತ್ತೇವೆ.

ಸಣ್ಣದೆನಲ್ ಕಿಱಿದಕ್ಕುಂ ।
ಪಣ್ಣೆನೆ ಮಾಡೆಂಬವಾಚಿ ಬಳಿಯೆನೆ ವಂಶಂ ॥
ಎಣ್ಣೆನೆ ಲೆಕ್ಕಿಪುದುಂ ಬಿಸು ।
ಗಣ್ಣನೆನಲ್ ಗೊರವನಪ್ಪುದೆಲೆ ಕವಿರತ್ನಾ ॥

ಕೋಸಿತೆನಲ್ ಪೋಣಿಸುದುದು ।
ಸೂಸಿದುದೆನಲ್ಕೆ ತುಳ್ಕಿತೆಂಬುದುಂ ಪರಿಮಳಮಂ॥
ವಾಸಿತಮೆನೆ ಕಂಪುಂ ಮಿಗೆ ।
ಸೌಸವಮೆನೆ ಸಮ್ಮ ದಾರ್ಥಮೆಲೆ ಕವಿರತ್ನಾ ॥

ಎಂದು ೧೯೦೭ರಲ್ಲಿ ಹೇಳಿದ್ದಾರೆ. ಅಲ್ಲಿಂದ ೩೯ ವರ್ಷಗಳ ತರುವಾಯ ಅಂದರೆ ೧೯೪೬ರಲ್ಲಿ ಈ ಕೃತಿಯ ಬಗ್ಗೆ ಗಮನ ನೀಡಿದವರು, ತ.ಸು. ಶಾಮರಾಯರು. ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ದೊರೆತ ತ್ರುಟಿತವೂ ಸ್ಖಾಲಿತ್ಯಯುಕ್ತವೂ ಆಗಿರುವ ಅಪೂರ್ಣರೂಪದ ಒಂದೇ ಒಂದು ತಾಳೆಗರಿ ಹಸ್ತಪ್ರತಿಯನ್ನಾಧರಿಸಿ ಈ ನಿಘಂಟನ್ನು 'ರನ್ನಕಂದ' ಹೆಸರಿನಿಂದ ಸಾಹಿತ್ಯ ಪರಿಷತ್ಪತ್ರಿಕೆ (೩೧-೩ ಮತ್ತು ೪)ಯ ಮೂಲಕ ಪ್ರಕಟಿಸಿದರು. ಈ ಅಪೂರ್ಣ ಪ್ರತಿಯಲ್ಲಿದ್ದುವು ಕೇವಲ ಹನ್ನೊಂದುವರೆ ಪದ್ಯಗಳು. ಬಹುಶಃ ಇದು ಕವಿಚರಿತೆಕಾರರು ನೋಡಿದ ಹಸ್ತಪ್ರತಿಯೇ ಆಗಿರಬಹುದು. ಇತ್ತೀಚೆ ಕೊಲ್ಹಾಪುರದಲ್ಲಿ ನನಗೆ ಸಿಕ್ಕ ೨ ಹಸ್ತಪ್ರತಿಗಳ ಮೂಲಕ ಈ ಕೃತಿ ಪ್ರಥಮಬಾರಿ ಇಡಿಯಾಗಿ (?) ಕನ್ನಡ ಪ್ರಪಂಚಕ್ಕೆ ಕಾಣಿಸಿಕೊಳ್ಳುತ್ತದೆ.

ಇಂದು ಮಹಾರಾಷ್ಟ್ರದ ಪ್ರಮುಖ ಪಟ್ಟಣವಾಗಿರುವ ಕೊಲ್ಹಾಪುರ, ಪ್ರಾಚೀನ ಕಾಲದಲ್ಲಿ ಕನ್ನಡ ಅರಸರ ರಾಜಧಾನಿಯಾಗಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಆಡುಂಬೊಲವೆನಿಸಿದ್ದಿತು. ಈ ಮಾತನ್ನು ಇಂದಿಗೂ ಸ್ಪಷ್ಟಪಡಿಸುವ ಹಲವು ಪ್ರಮಾಣಗಳಲ್ಲಿ ಅಲ್ಲಿಯ ಶ್ರೀ ಲಕ್ಷ್ಮೀಸೇನ ಜೈನಮಠವೂ ಒಂದು. ಈಗ ಇಡೀ ಪಟ್ಟಣವೆಲ್ಲ ಮಹಾರಾಷ್ಟ್ರಮಯವಾಗಿದ್ದರೂ ಶ್ರೀಮಠದ ಒಳಗೆ ಕನ್ನಡದ ಕಂಪು ತುಂಬಿನಿಂತಿದೆ. ನೋಡಲಿಕ್ಕೆ ಭವ್ಯವಾಗಿರುವ ಈ ಮಠದ ಇತಿಹಾಸವೂ ಭವ್ಯವಾಗಿದ್ದು, ಈ ಇತಿಹಾಸದ ಅಂಗವಾಗಿ ಅಲ್ಲಿ ಒಂದು ಹಸ್ತಪ್ರತಿಭಾಂಡಾರವೂ ಬೆಳೆದುಬಂದಿದೆ. ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳಿಗೆ ಸಂಬಂಧಪಟ್ಟ ಒಟ್ಟು ೬೪೬ ಕಟ್ಟುಗಳಲ್ಲಿ ೩೫೭ ತಾಳೆಗರಿ ಪ್ರತಿ, ೨೮೯ ಕಾಗದ ಪ್ರತಿಗಳಿವೆ. ಇವುಗಳಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದ ತಾಳೆಗರಿ ಪ್ರತಿಗಳು ೧೬೧, ಕಾಗದ ಪ್ರತಿಗಳು ೧೦೪. ಹೀಗೆ ಒಟ್ಟು ೨೬೫ ಕನ್ನಡ ಕಟ್ಟುಗಳಲ್ಲಿ ಸೇರಿಕೊಂಡಿರುವ ಕನ್ನಡ ಕೃತಿಗಳ ಸಂಖ್ಯೆ ಸುಮಾರು ಎರಡು ಸಾವಿರ.

ಈ ಶ್ರೀಮಂತ ಭಾಂಡಾರದಲ್ಲಿ 'ರನ್ನಕಂದ'ಕ್ಕೆ ಸಂಬಂಧಿಸಿದ ಎರಡು ಅಪೂರ್ವತಾಳೆಗರಿ ಹಸ್ತಪ್ರತಿಗಳಿವೆ. ೬೭ ಮತ್ತು ೧೧೯ ಇವುಗಳ ಕ್ರಮಸಂಖ್ಯೆಯಾಗಿದೆ.

೬೭ನೆಯ ಪ್ರತಿಯಲ್ಲಿ ವೈದ್ಯವಿಷಯ, ವಿಭಕ್ತ್ಯಾರ್ಥ, ರನ್ನನಿಘಂಟು, ಕರ್ನಾಟಕ ಸಂಜೀವಿನಿ, ಕವಿಜಿಹ್ವಾಬಂಧನಗಳಿವೆ. ಇದು ತುಂಬ ಹಳೆಯ ಪ್ರತಿಯಾಗಿದ್ದು ಅನೇಕ ದೋಷಪಾಠಗಳಿಂದ ತುಂಬಿದೆ. ಪ್ರತಿ ಜೀರ್ಣವಾಗಿದ್ದರೂ ಮಧ್ಯದ ರನ್ನನಿಘಂಟು ಭಾಗ ಮಾತ್ರ ಮುಕ್ಕಾಗದೆ ಉಳಿದುಕೊಂಡಿದೆ.

೧೧೯ನೆಯ ಪ್ರತಿಯು ೬೭ನೆಯ ಪ್ರತಿಗಿಂತ ಈಚಿನದು. ಈ ಕಟ್ಟಿನಲ್ಲಿ ಶಬ್ದಮಣಿದರ್ಪಣ, ಕರ್ನಾಟಕ ನಿಘಂಟು, ಚತುರಾಸ್ಯ ನಿಘಂಟು, ಕರ್ನಾಟಕ ಶಬ್ದಸಾರ, ರನ್ನನಿಘಂಟು, ಕರ್ನಾಟಕ ಸಂಜೀವಿನಿ ಕೃತಿಗಳಿವೆ. ಈ ಉಭಯ ಪ್ರತಿಗಳ ಸಹಾಯದಿಂದ 'ರನ್ನನಿಘಂಟು' ಪ್ರಕಟಿಸಬಹುದಾಗಿದೆ.

ಎರಡು ಪ್ರತಿಗಳು ಸಿಕ್ಕರೂ ಈ ಕೃತಿಯ ಶುದ್ಧಪಾಠವನ್ನು ಪ್ರಕಟಿಸುವುದು ಸಾಧ್ಯವಾಗುವುದಿಲ್ಲ. ಇದಕ್ಕೆ ಕಾರಣ, ಇಲ್ಲಿ ಹತ್ತನೆಯ ಶತಮಾನದ ಹೊತ್ತಿಗೆ ಬಳಕೆತಪ್ಪಿರಬಹುದಾದ ಮತ್ತು ಕನ್ನಡ ಕಾವ್ಯಗಳಲ್ಲಿ ಅಷ್ಟಾಗಿ ಬಳಕೆಯಾಗದ ಅಪರೂಪ ಪದಗಳಿರುವುದು ಮತ್ತು ಬಳಕೆ ತಪ್ಪಿದ ಪದಗಳನ್ನು ಲಿಪಿಕಾರರು ತಪ್ಪುತಪ್ಪಾಗಿ

ನಕಲಿಸುವಲ್ಲಿ ಅಪಪಾಠ ನಿರ್ಮಾಣವಾದುದು. ಹೀಗಾಗಿ ಇಲ್ಲಿ ಎರಡೂ ಹಸ್ತಪ್ರತಿಗಳ ಸರ್ವಪಾಠಗಳನ್ನು ಕೊಡಲಾಗಿದೆಯೇ ಹೊರತು ಪರಿಷ್ಕರಣ ಸಾಹಸಕ್ಕೆ ಕೈಹಾಕಿಲ್ಲ. ತಮಿಳು ಮತ್ತು ಹಳಗನ್ನಡಗಳ ವಿಶೇಷ ಹಿನ್ನೆಲೆಯಿರುವ ವಿದ್ವಾಂಸರು ಈ ಭಿನ್ನಪಾಠಗಳ ಬಲದಿಂದ ಶುದ್ಧಪಾಠವನ್ನು ನಿರ್ಣಯಿಸುವ ಕಾರ್ಯವನ್ನು ಮಾಡುವರೆಂದು ನಂಬುತ್ತೇನೆ.

ಈ ಕೃತಿಯ ಛಂದಸ್ಸಿನ ಬಗ್ಗೆ ಒಂದು ಮಾತು ಅವಶ್ಯ ಹೇಳಬೇಕು. ರನ್ನ ನಿಘಂಟು ೪೫ ಪದ್ಯಗಳ ಚಿಕ್ಕಕೃತಿ. ಇಲ್ಲಿಯ ಎರಡು ಚಂಪಕಮಾಲೆಗಳು (ನಂ. ೧೬, ೨೮), ಒಂದು ಪಂಚಪಾದದ ಚಂಪಕಮಾಲೆ (ನಂ. ೪೨), ಒಂದು ಅಪೂರ್ಣ ಚಂಪಕಮಾಲೆ (ನಂ. ೪೫) ಗಳನ್ನು ಬಿಟ್ಟರೆ ಮಿಕ್ಕ ೪೧ ಕಂದಪದ್ಯಗಳಾಗಿವೆ. ಕನ್ನಡ ಕಾವ್ಯಶಾಸನಗಳಲ್ಲಿ ಆಗಾಗ ಕಂಡುಬರುತ್ತಿದ್ದರೂ ಇಲ್ಲಿರುವ ಪಂಚಪಾದವೃತ್ತವೇ ಈಗಿನ ಮಟ್ಟಿಗೆ ಪ್ರಾಚೀನತಮವಾದುದು.

ಎರಡೂ ಹಸ್ತಪ್ರತಿಗಳಲ್ಲಿ ಈ ಕೃತಿ ೧ನೆಯ ಪದ್ಯದಿಂದ ಪ್ರಾರಂಭವಾಗಿ ೪೫ನೆಯ ಪದ್ಯಕ್ಕೆ "ರನ್ನ ನಿಘಂಟು ಸಮಾಪ್ತ ಮಂಗಳಮಹಾಶ್ರೀ" ಎಂದು ಮುಗಿಯುತ್ತದೆ. ಈ ಮಾತು ಪ್ರಸ್ತುತ ಕೃತಿಯ ಪೂರ್ಣರೂಪವನ್ನು ಸೂಚಿಸುತ್ತದೆ. ಆದರೆ ಕೊನೆಯ ಅಪೂರ್ಣರೂಪದ ಚಂಪಕಮಾಲೆ, ಈ ಕೃತಿ ಇನ್ನೂ ಇದೆಯೆಂಬ ಭಾವನೆಯನ್ನು ಹುಟ್ಟಿಸುತ್ತದೆ. ಇದಕ್ಕೆ ಪರಿಹಾರ, ಭವಿಷತ್ತಿನಲ್ಲಿ ಸಿಗುವ ಹಸ್ತಪ್ರತಿಗಳ ಸ್ವರೂಪವನ್ನು ಅವಲಂಬಿಸಿದೆ.

ಇಲ್ಲಿ ಹಸ್ತಪ್ರತಿ ೬೭ ಮತ್ತು ೧೯೯ಗಳಿಗೆ ಕ್ರಮವಾಗಿ, ಅ, ಆ ಎಂದು ಸಂಕೇತಕೊಟ್ಟು ಈ ನಿಘಂಟನ್ನು ಹೀಗೆ ಸಂಪಾದಿಸಲಾಗಿದೆ.

ರನ್ನ ನಿಘಂಟು

ಕುಳಿರೆನೆ [೧]ಶ್ಯೆ[೧]ತ್ಯಂ ಮಿಳಿರೆನೆ ।
ಪೊಳೆದುದು ಬಿಲ್ಲಿಂ[೨]ದೆನ[೨]ಲ್ಕೆ ಮಾ[೩]ರ[೩]ಂಬರ್ಥಂ ॥
ಬಳೆದು*[ದೆ]*ನಲ್ಕೆಱಗಿದುದುಂ।
ಕಿಳಿರೆನೆ ವಾಜಿ[೪]ಯ[೪] ನಿನಾದಮೆಲೆ ಕವಿರತ್ನಾ ॥೧॥

ಬರೆಯೆನಲತ್ಯರ್ಥಂ [೧][ಮುಂ
ಮು][೧] ರಿಯನೆನೆ ಕಾಸಿದ ಮಳ[೨]ಲ್ಕಿಳಂ[೨]ಗೆನೆ ಗೆಳ[೩]ಸಂ[೩] ॥
ಮು[೪]ರಿ[೪]ಪೆನೆ ಮರಳಿದಭಾವಂ।
ಸಿರಿವಂತಿಕೆಯೆಂದೆನಲ್ಕೆ ಹುರಿಯೋಡಕ್ಕುಂ ॥೨॥

---

೧. ೧-೧ಸ್ಯೆ (ಅ, ಆ); ೨-೨ ದೆಸ (ಅ),ದಿನ (ಆ);
೩-೩ ರ್ಗ್ಗ (ಆ); *-*ನೆ (ಅ, ಆ). ೪-೪ x (ಆ).

೨. ೧-೧ ಪಂಮ (ಅ, ಆ); ೨-೨ ಲ್ಕಿಳಿಂ (ಅ); ಲ್ಕೆಳಂ (ಆ);
೩-೩ ಸುಂ (ಅ); ೪-೪ ಳಿ (ಅ).

ಹಕ್ಕಿಯೆನಲ್ಪಿಹಗಂ ನೆಱ[೧] ।
ಪಕ್ಕೆಯೆನಲ್ಪಾಸು [೨]ಪುಂ[೨]ಡೆಯೆಂದೆನೆ ಮೊಳಕಾ ॥
[೩]ಲ್ಕು[೩]ಕ್ಕೆನೆ ಬೆ[೪]ಳ್ಳ[೪]ಕ್ಕಿಯೆ [೫]ತಾ[೫]ನೆ ।
[೬]ಕ್ಕೆ[೬]ಕ್ಕೆನೆ ದಿಂಡುವಿಡಿದು ಬಪ್ಪು[೭]ದು[೭]ದಕ್ಕುಂ ॥ ೩ ॥

ಬಲೆಗೆನೆ ಬಿಸುಡೆಂಬರ್ಥಂ ।
[೧]ಬಲ[೧]ಮರ್ದನೆ ಅಂಕದೌಷಧಂ ತಾನಕ್ಕುಂ ॥
ಪೊಲಿಗೆನೆ ಬಿ[೨]ರ್ಚು[೨]ಗೆಯ ತೆ[೩]ಱಂ[೩] ।
ಕೆಲಕ[೪]ನೆನ[೪]ಲ್ಕಿಕ್ಕುಮಲ್ಲ[೫]ನೆ[೫]ಲೆ ಕವಿರತ್ನಾ ॥ ೪ ॥

ಅಂ[೧]ಚ[೧]ಮೆನಲ್ಕಂಜಿ[೨]ಕೆ[೨]ಯತಿ ।
ಬಂಚನೆಯನೆ ಮರಸಿಡಕ್ಕು ಬೆಳಕೆನೆ ದೀಪಂ॥
ಪೊಂಚೆನೆ ಪೊರ್ದಿದಬಗೆವಾ ।
ನೆಂಚಲೆನಲ್ಕೆಂಜಕಲುಪ್ಪುದೆಲೆ ಕವಿರತ್ನಾ[೩] ॥ ೫ ॥

[ಸ]ಣ್ಣದೆನದಲ್ಕಿಱಿದಕ್ಕುಂ ।
ಪಣ್ಣೆನೆ ಮಾಡೆಂಬ ವಾಚಿ ಬಳಿಯನೆ ವಂಶಂ॥
ಎಣ್ಣೆನೆ ಲೆಕ್ಕಿಪುದುಂ ಬಿಸು ।
ಗ*[ಣ್ಣ]*ನೆನಲ್ಗೊರವನಪ್ಪನೆಲೆ ಕವಿರತ್ನಾ ॥ ೬ ॥

ಕೋ[೧]ಸಿ[೧]ತೆನಲ್ಬೋಣೆಸಿದುದು ।
ಸೂಸಿದುದೆನೆ [೨]ತು[೨]ಳ್ಕಿತೆಂಬುದುಂ ಪರಿಮಳಮುಂ ।
ಬಾಸತ[೩]ಮೆ[೩]ನೆ ಕಂಪುಂ ಮಿಗೆ।
*[ಸೌ]*ಸಾಸವಮೆನೆ ಸಮ್ಮದರ್ಥಮೆಲೆ ಕವಿರತ್ನಾ ॥ ೭ ॥

ಸುಗಿಪವುಮೆನೆ ಸುಲಿಹಂ ತಾಂ।
ತೆಗಳೆನೆ ಪೆಳಗು [೧]ಳ್ಮ[೧]ತೆಂದೆನಲ್ಪುದು[೨]ಮಂ ತಾಂ[೨] ॥
[೩]ಬಗ[೩] ಸೆನೆ ಮನ[೪]ವಿ[೪]ಟ್ಟುದು ಮುಂ ।
ನೆಗ[೫]ಮ[೫]ದೆನಲ್ ದೊಡ್ಡಿತಪ್ಪು[೬]ದೆ[೬]ಲೆ ಕವಿರತ್ನಾ ॥ ೮ ॥

---

೩. ೧-೧ ಲ್ಪಿಹಂಗಂ ನೆಱೆ (ಅ), ಗಂಡಿಲೆಲ್(ಆ); ೨-೨ ಕುಂಕು (ಅ); ೩-೩ ಕು (ಆ); ೪-೪ ಳ್ಳಿ (ಆ); ೫-೫ ತತಾ (ಆ); ೬-೬ ಕೈ (ಆ); ೭-೭ ದ (ಆ).
೪. ೧-೧ ಬಲಮದ (ಆ); ೨-೨ ಚ್ಚು (ಅ); ೩-೩ ಠಂ(ಆ); ೪-೪ ನಕ್ಕೆ (ಆ); ೫-೫ ಮೆ (ಅ).
೫. ೧-೧ ಕ (ಅ); ೨-೨ ಗೆ (ಅ);
೩-೩ ವಂಶಂ ಎಣ್ಣೆಲೆ ಲೆಕ್ಕಿಪುದುಂ ಬಿಸುಗಣ್ಣೆನಲ್ಗೊರವನಪ್ಪನೆಲೆ ಕವಿರತ್ನಾ(ಆ). (ಮುಂದಿನ ಪದ್ಯ ಪಾಠವಿದು).
೬. ಸೊ (ಅ, ಆ). *-* ಣ್ಣೆ (ಅ. ಆ).
೭. ೧-೧ ಪಿಸಿ (ಆ); ೨-೨ ತ (ಅ); ೩-೩ಯೆ (ಆ). *-* ಸಾ (ಅ. ಆ.)
೮. ೧-೧ ಣಿಸಿ (ಆ); ೨-೨ ದುಂತಾ (ಆ); ೩-೩ ಗೆ (ಆ); ೪-೪ ಮಿ (ಅ); ೫-೫ ದು (ಅ); ೬-೬ ವೆ (ಆ)

ಅಱಿಲೆನೆ ತಾರಗೆ [೧]ತಿಟ್ಟೆಂ[೧] |
ದು [೨][ಱಿ ಬಲ್‌ಬೈಗುಳಿನಿಸುನನಸೆಂ][೨] ದೆನೆ ದಿಟಮುಂ ||
ಗಱಿವೂ[೩]ವೆ[೩]ನೆ [೪]ಕೇ[೪]ದಗೆ [೫]ಪಡಿ[೫] |
ಯಱವಕ್ಕಿಯೆ[೬]ನೆಯ[೬] ನಲ್ಕೆ ಕೋಕಿಲನಕ್ಕುಂ ||೯||

ಕೈವಟ್ಟೆ[೧]ಲ್ ಸ[೧]ಟ್ಟುಗೆಮುಡಿ |
ಪೊಯಿವೆಕ್ಕಲ್ ಪೊಯಿಗಿಲಂ ಮಡಂತ[೨]ಳೆ[೨] ಜೋಳಂ||
ಕೈವಲೆ ಕಣ್ಬಲೆ [೩]ಜ[೩]ಱಸುಳಿ |
ಕೈಪಿಡಿಯೆಂಬುದನೆ ತಿಳಿಯೆ ಕಬ್ಬಿಗರರಸಾ ||೧೦||

ಬಲಯ [೧]ರಮೆ[೧]ನೆ ತ[೨]ಲೆವಾಗಿ[೨]ಲು |
ಕ[೩] ಲ[೩]ಗಲಮೆನೆ ಕೂ[೪]ಡಿ[೪]ಬೆರಸಿದಕ್ಕುಂ ನೈಲಂ|
ಗಲಮೆನೆ ಚೆಲ್ವಿಕೆ ಸ[೫]ಲೆ[೫]ಸ್ಸೈ |
ಗೆಲಮೆನೆ ತಾಂ ಪೃತ್ಯೈಶಕ್ತಿಯಲೆ ಕವಿರತ್ನಾ ||೧೧||

ತೋರ್ಪೆ[೧]ನೆ[೧] ಕಾಣ್ಕೆ ಮುಸುರ್ಪೆನೆ |
ಪಾರ್ಪೆನೆ ಕೈವಿಡಿದುದಕ್ಕುಮಿಳಿಪೆ[೨]ನೆ ಸೋಲಂ[೨] ||
ಕೂರ್ಪೆನೆ ನಿಲುವೆರಗೆನೆ ಮೋ|
ಲಾರ್ಪೆನೆ ಸು[೩]ಸ್ನಪ[೩] ಮಪ್ಪುದೆಲೇ ಕವಿರತ್ನಾ ||೧೨||

ಊರ್ಪೆನೆ ಕೀಲಿಸಿದು [೧]ದು[೧] ಕ |
[೨]ಣ್ಣಾರ್ಪೆ[೨]ನೆ ನೋಮ್ಪಿಜ್ಜುಗಂ ಮಿಳಿರ್ಪೆನೆ ಮುರಿಪಂ||
ಕಾ [೩]ಪೊರ್ಱಿ[೩]ಯೆನೆ ಮಳೆಗಾಲಂ|
[೪]ನೇಪೊರ್[೪]ಱಿಯೆನೆ ಅಱಿಮೆ[೫]ಯೆಳೇ[೫]ಯಲೆ ಕವಿರತ್ನಾ ||೧೩||

ಭಂಡಣಮೆ[೧]ನೆ[೧]ಪುಯ್ಯಲ್ಪಲ |
ಬಂಡೆನೆ ಜೇನ್ ಪೆರಬಳಿಯನೆಂದೆನೆ ಪಾಣ್ಬಂ[೨] ||
ಗುಂಡೆನೆ ನೆರವಿ ತುಳಿಲ್ಪ[೩]ಱಿ[೩] |
ಗೊಂಡೆನೆ ನ[೪]ಲ್ವೀ[೪]ರರಸನೆಲೇ ಕವಿರತ್ನಾ ||೧೪||

---

೯. ೧-೧ ವಿಟ್ಟೆಂ (ಅ); ೨-೨ ರೆರೆ ಬಿಲ್ಗಳ್ಳಿನಸುವಿಯಮೆಂ (ಅ); ರ್ಕೆ ಬೆಲ್ಗಳೆನ ಸುಧೆಯಮೆಂ (ಆ);
೩-೩ ವೆಂದೆ (ಅ); ಯೆಂದೆ (ಆ); ೪-೪ ಗೇ (ಅ, ಆ);
೫-೫ ಗೆಪ್ಪಪಡಿ (ಅ); ೬-೬ ನೆಯ (ಅ); ಯೆ (ಆ).

೧೦. ೧-೧ ಲೆ (ಅ); ೨-೨ ಲೆ (ಆ); ೩-೩ ಬ (ಆ).

೧೧. ೧-೧ ಂಮೆ (ಆ); ೨-೨ ಲೆ (ಆ); ೩-೩ ಲೆ (ಅ); ೪-೪ ಡೆ (ಆ);
೫-೫ ಲ (ಅ).

೧೨. ೧-೧ x (ಆ); ೨-೨ ಸೋಲ (ಆ); ೩-೩ ಸ್ನಿಹ (ಆ).

೧೩. ೧-೧ ದ (ಅ); ೨-೨ ಣ್ಣೊಪ್ಪೆ (ಅ); ೩-೨ ಪೊ್ವಱೆ (ಅ);
೪-೪ ಪೊ್ವ (ಅ); ೫-೫ x (ಆ).

೧೪. ೧-೧ ನಲ್ (ಆ); ೨ ಈ ಚರಣದಲ್ಲಿ ಛಂದೋದೋಷವಿದೆ.
೩-೩ ಱೆ (ಅ); ೪-೪ ಲ್ವೀ (ಆ).

ಎಜೆಯ [೧]ಜಿ[೧]ಯಂ ತೊಳ।
[೨]ರ್ಪಜಿವಜಿವಂ[೨] ಸಗ್ಗಿಗರ ಪಿರಿಯನುರು ಬಳಿಗಂ ಪಾ ।
ಲೆಜಿಕಿ[೩]ಲುಣಿ[೩]ವಕ್ಕಿದೆ[೪]ಜಿಂ[೪] ।
ನಿಜುಬಜಿಗಂ ಪೊನ್ನಬಸುಜಿನೆಲೆ ಬಿದಿ ರತ್ನಾ ॥ ೧೫ ॥

[೧]ವೃ॥[೧] ಮುಗಿಲಲ[೨]ರೇ[೨]ಜಿದಂ ಸಿರಿಮಗಂ ನೆಲೆವೆಣ್ಣರ [೩]ಸಂ[೩] ನೆಲಕ್ಕರಂ।
ಬಗೆದಿಳಿಗಂ ಮರ್ದುಂ [೪]ಬಲಿಗ[೪]ನ[೫]ಚ್ಚರಮೊರ್ಮೊದಲೋ[೬]ದಿ[೬]ಗಂ ಸುಳುಂ।
ಬೆಗಡಜಿಗಂ ಸೊಗಂಬೊಜಿಗನೆಚ್ಚರವಾಳಿಗ ವಾಳವಾಳಿಗಂ ।
ತೆಗ[೭]ಲು[೭]ಡೆಗಂ ಪೊಗ[೮]ಳ್ಕು[೮]ಡಿಗನೆಂದೆನೆ ನೀಂ ತಿಳಿ ಬೊಮ್ಮನೆಂಬುದಂ ॥ ೧೬ ॥

ಸೊಂಪುವೆ[೧]ಜಿ[೧]ಯಿಂಪುಗ[೨]ಳೆ[೨]ವ[೩]ಲಿ[೩]।
ಗಂಪುಳಿಲಿಗೆ [೪]ಯುಣಿಸು[೫] ಸಾಸದಡಿ [೬]ಕಿಂ[೬] ।
ಲ್ಗಂ ಪಿಡಿಕೆ ಬೆವೆತುಳಿರ್ವಡಿ।
ಗುಂಪೆ[೭]ನೆ[೭] ತಿಳಿ ಕೈಪೆವರನೆನಿಪ್ಪುದು ರತ್ನಾ ॥ ೧೭ ॥

ಅಜಿಯಮೆಯ[೧]ದೆ[೧]ಯ ಸೊಂಪುಸೆ[೨]ದೆ[೨]ಯ ।
ಪೊಜಿಗೆಳೆಯಳ ಬೇಟ[೩]ದಾಣದೊಜಿ ಕಣ್ಣೆ[೪]ತು[೪]ಪ ।
ಲ್ಗು[೫]ಜಿ[೫] ಪಸಡಿಕೊ[೬]ಲ್ಗೆ[೬] ಬನವೆ ।
ಣ್ಗುಜಿಪೆನಾಂ ನೆಲ್ಲಿ[೭]ಮ[೭]ರನೆನಿಪ್ಪುದು ರತ್ನಾ ॥ ೧೮ ॥

ತಳಿರ್ಗಣೆನ ಬಲ್ಪಸದಿಯ ।
ಬ[೧]ಳಿ[೧]ಗವ[೨]ಜಿ[೨]ಗೆ ಬಳಸಿ ನಜಿಕೆ ಇಂಗೋಲಿ[೩]ರ್ಪಿಂ[೩]।
[೪]ಗೆಳೆ[೪]ಮುಗಿ[೫]ಲೆ[೫]ಳ್ದೊಜೆಯೆಂದೆನೆ ।
ತಿಳಕಬ್ಬೆಂದೆಯ್ದೆ ಬೆಳ್ಳಿವೆಸರಾಂತ[೬]ವ[೬]ನೇ ॥ ೧೯ ॥

ಸಾಸವದೊಟ್ಟಿಲ್ಮೆಲ್ಲಡಿ ।
ಬಾನರ್ಪೆ[೧]ಣೆ[೧] ವಕ್ಕಿವಾಡಮಗಲಿದರೆಡೆ ಕಂ ।
ಣ್ಬಾಸ[೨]ಣಿ[೨]ಕೆ[೩]ನೆ[೩]ಲನಮ[೪]ಬೆ[೪]ಟ್ಟೊ ।
ಳ್ಬಾಸ[೫]ಟಿ[೫] ಕಣ್ಬುಳಿಲೆನಿಪುದೆಲೇ ಕವಿರತ್ನಾ ॥ ೨೦ ॥

---

೧೫. ೧-೧ ಜೆಜೆ (ಆ); ೨-೨ ಪಿರಿವರಿವಂ (ಆ); ೩-೩ ಣ (ಆ); ೪-೪ ರಂ (ಆ).
೧೫. ೧-೧ x (ಅ); ೨-೨ ಜೇ (ಅ); ೩-೩ ಸು (ಅ); ೪-೪ ಬಿಲಿಗಿ (ಆ).
೧೬. ೧-೧ x (ಅ); ೨-೨ ಜೇ (ಆ); ೩-೩ ಸು (ಅ); ೪-೪ ಬಿಲಿಗಿ (ಆ);
೫-೫ ನಮ (ಆ); ೬-೬ ಡಿ (ಆ); ೭-೭ ಳು (ಆ); ೮-೮ ಳ್ವ (ಆ).
೧೭. ೧-೧ ರೆ (ಆ); ೨-೨ ರೆ (ಆ); ೩-೩ ರಿ (ಆ); ೪+ ಕಾಗೆ (ಆ);
೫ + ಸಾಸು (ಆ); ೬-೬ ಕಿ (ಆ); ೭-೭ x (ಆ).
೧೮. ೧-೧ ಮೆ (ಆ); ೨-೨ ದಿ (ಆ); ೩+ ವಾ (ಆ); ೪-೪ ರು (ಆ);
೫-೫ ರಿ (ಆ); ೬-೬ ಲ್ಕೆ (ಆ); ೭-೭ ವ (ಆ).
೧೯. ೧-೧ ಳೆ (ಆ); ೨-೨ ತಿ (ಆ); ೩-೩ ರ್ಪಂ(ಆ); ೪-೪ ಗಿಳಿ(ಆ);
೫-೫ (ಆ); ೬-೬ x (ಅ).
೨೦. ೧-೧ ಣ (ಆ); ೨-೨ ಲಿ (ಆ); ೩-೩ ನೆನೆ (ಅ); ೪-೪ ಬ (ಆ);
೫-೫ x (ಅ).

ಮ[೧]ಱುನೆಲ್[೧] ಸಾಸವದಾಣಂ ।
ನಿಱುಬೆಳಗೆನೆ ಬಾಯಕೆಂಪು ಮೊಗಸಿರಿ ಪೊರ್ದಿಂ ।
ಗರಕೆಯು[೨]ರಲಂ[೨]ಬ ನೆರವಿಗೆ ।
ತುಱುಗಿಪ್ಪೆನೆ ತಿಳಿಗೆ ವೀ[೩]ಳ[೩]ಯಂ ಕವಿರತ್ನಾ ॥ ೨೧ ॥

ತೊಳ್ಗಿದನೆನೆ ಪೊಡವಟ್ಟಂ ।
ಗಿಳ್ಗಿದನೆನೆ ಗಿಡ್ಡನವಿಳನೆಂದೆನೆ ಕುಱುಬಂ ।
[೧]ಪುಳ್ಗಿದನೆನೆ[೧]ಕುರುಬಂ ತಳ ।
ವ[೨]ಳ್ಗಿ[೨] ದನೆನೆ ಬೆಗಡುದೊಂಡವಂ ಕವಿರತ್ನಾ ॥ ೨೨ ॥

ದೋಷವಿನಿತೆಳಸದಿರು ನೀಂ ।
ಲೇಸಾಗಿರೆ ಪೇಳ್ದ ಕನ್ನಡಂಗಳ ತಿಳಿಯ[೧]ಲ್[೧] ।
ಕಾಮರಮ [೨]ಪಿಡಿ[೨] ದೊಡಾವಂ ।
ಮಾಸಱಸುಳಿನಿಟ್ಟೆಸದೊಡೆನೇಸರ್ಗಿಳಿದೆ ॥ ೨೩ ॥

ಬ[೧]ಳಾಯ[೧]ಲ್ಕುಡು ಬೆಳ[೨]ಗ[೨] ।
ಲ್ತೆಳಾ[೩]ಱವು[೩] ಬೆಳಸು ಮೊದಲನೋಟಮೆನಲ್ಲಿಂ ।
ಚುಳಾ ಬಲ್[೪]ಬ[೪]ಸದಿಯ ಬಗೆ ।
ಗುಳ್ಳಾಗಲ್ ನೈ[೫]ದ[೫]ಲಱಿಗೆ ನೀಂ ಕವಿರತ್ನಾ ॥ ೨೪ ॥

ಮುಗಿಲರಲೊಗೆಗೈಗೂಟಂ ।
ಬಗೆದೊಱೆ ಪಾಲೊ [೧]ಱ[೧]ಗೆ ತಕ್ಕ[೨]ಗೆ[೨]ನೆಯೊಳ್ದಾವರೆ ॥
ಮುಗು[೩]ಳೆಂ[೩]ದಱ ನೆಗಳ್ದವೆನೆ ।
ಮಿ ಗೆ ಜಾಜಿಯ ಬೆಳ್ಳಿ[೪]ಗೂ[೪]ರ್ತವೆಸರಾಂತ[೫]ವ[೫]ನೇ ॥ ೨೫ ॥

ಗೊ[೧]ರ್ಬೆ[೧]ನೆ ಗಂಭೀರಂ ಪ[೨]ಱ[೨]।
ಪರ್ಬಿದುದೆನೆ ಬಳ್ಳಿವರಿದುದಕ್ಕುಂ ದೈ[೩]ತ್ಯಂ[೩] ॥
ಮರ್ಬುಸುಳಿಕಾ[೪]ರ[೪]ರೆನೆ ಪೊ[೫]ಳ[೫]।
ದುರ್ಬೆನೆ ಸಿಡಿಲಪ್ಪುದಮಲ ನಿಜಕವಿರತ್ನಾ ॥ ೨೬ ॥

---

೨೧. ೧-೧ ರುಲೆನೆ (ಅ); ೨-೨ ಲರಂ (ಆ); ೩-೩ ಳಿ (ಆ).
೨೨. ೧-೧ ಪುಳ್ಗಿದನೆಂದೆನೆ (ಅ), ಪುಪುಳ್ಗಿನೆನೆ (ಆ); ೨-೨ ಳಿ (ಆ).
೨೩. ೧-೧ ಲು (ಆ); ೨-೨ ಪಳಿ (ಆ).
೨೪. ೧-೧ ಳ್ಳಾ (ಆ); ೨-೨ x (ಅ); ೩-೩ ಜ್ಗಲ್ (ಆ); ೪-೪ ಪ (ಆ);
೫-೫ ದಿ (ಆ).
೨೫. ೧-೧ ಱ (ಆ); ೨-೨ ದೆ(ಆ); ೩-೩ ಳಿ (ಆ); ೪-೪ ಸೂ (ಆ)
೫-೫ x (ಆ).
೨೬. ೧-೧ ರ್ಪೆ (ಅ); ೨-೨ ರೆ (ಆ); ೩-೩ ತ್ಯ (ಆ); ೪-೪ ಱ (ಆ);
೫-೫ ಗೆ (ಆ).

ಝುಳಮೆಂದೆನ[1]ಲು[1]ಷ್ಣಂ ಬಾ ।
ಗುಳಮೆಂದೆನೆ [2]ದುಃಖ[2]ಮಲ್ಲಣಿಕೆಯೆನೆ ಮೇಳಂ ।
ಪ[3]ಳ[3]ಗೆಂದೆನೆ ಒಣಗಿದಯೆಲೆ।
ಮಳಗೆನೆ [4]ಬಿಟ್ಟಿಯ[4] ಬಟ್ಟ[5]ಗಸಿಲೆನೆ[5] ಶಂಖಂ ॥ ೨೭ ॥

ಬದ್ದರನೆನೆ ಬ[1]ದು[1]ಕಿದ[2]ಪಂ[2]।
ಕದ್ದರನೆನೆ [3]ಕಳ್ಳನೆದ್ದ[3]ರೆನಲೋಡಿದಳಪಂಳ।
ಬಿದ್ದಿಗನೆನೆ ನಂಟಂ ಕೈ।
ಗುದ್ದಿಗರೆನೆ ಮಲ್ಲರೆಂಬುದೆಲೆ ಕವಿರತ್ನಾ ॥ ೨೮ ॥

ಬೆಳವರವಿಂಪು ಜಾಗಿಲ ಗಿಳಿರ್ಪೊಡೆ [1]ಇಂ[1]ಗೆಲೆಯೂ [2]ನ್ಮ[2]ದಾವ[3] ಳಿ।
ಗ[3] ಯಗ[4]ಲ್ದಿ[4]ರಾಳ್ದವನೆ ಪೂ [5]ಚ[5] ರ ಬಲ್ಲಿಸಾಜೆನ್ನೈಲವೆಚ್ಚುರ್ ।
ಗಳೊಗೆದಾ[6]ರೊ[6] ಮಾಂಪನನೆ ಗೊಲ್ಗೊನೆವೇಟದ ನೀಱಿಮೆಂದೆನ।
[7]ಲ್ಕ[7]ಳೆಯದ ಕಾಣ್ಕೆ ಮಲ್ಲಿಗೆಯನಿಪ್ಪುದ ಬೆಳ್ಳಿವಸರ್ಗೆ [8]ತ[ಕ್ಕ[8]]ನೇ ॥ ೨೯ ॥

ಚಲ್ಲದ ನೆಲೆ ಇಲ್ಲದ ಮುಳಿ ।
ಸೊಲ್ಲದ ಬಗೆಯಱಿಕೆ ಬೆಲ್ಲ ಬಳಿ ಬಲ್ಲರ ಸೋಂ।
ಕೆಲ್ಲರ ಗೆ[1]ಲ[1]ವಲ್ಲದ ನುಡಿ।
[2]ಸೊ[2]ಲ್ಲದು ಪೂವಿ[3]ಲ್ಲಡಿ[3]ರೆನಿಪ್ಪುದು ರನ್ನಾ ॥ ೩೦ ॥

ಸಿರಿಯೊಗೆದಾಣಂ ನೈಲಂ ।
ಬರೆ ಬಣ್ಗೊಡಿ ಪುಟ್ಟು ಬಾನ್ವರುಣಿ [1]ಸಿಂಗಡಲೆ[1]
ಚ್ಚಱಿ ಬಗೆಯರಮೊಗಸಚ್ಚರ ।
ದಿರಿಯೆನೆ [2]ಪಯ[2]ಸಾಬ್ಧಿ ಬೆಳ್ಳಿವೆಸರಾಂತವನೇ ॥ ೩೧ ॥

ಕಾಯಿ [1]ಪ[1] ಣ್ಣುದಾಣಮಿಳಿಪಿನ ।
ತಾಯಿ ಪೊಳೆನಿರೊಟ್ಟನಿಲ್ಗೆ ಬಿಸುಡಿ ಬೆಕ್ಕಂ ।
ಜಾಯಿಪು ಸೊಡಮ್ಮೆಂ [2]ಗಾಣ್ಕೆ[2] ।
ಲಾಯಿಪು[3]ದೆ[3] ಝುಳವಾಳ್ಕೆ ಪೆರಳುರ್ವಿದಿ ರನ್ನಾ ॥ ೩೨ ॥

---

೨೭. ೧-೧ ಲೂ (ಆ); ೨-೨ ದುಃಖಂ (ಆ); ೩-೩ ಣ (ಅ); ೪-೪ ವಿಗಿಯ (ಅ);
೫-೫ ಗಲ್ತೆನೆ (ಆ).
೨೮. ೧-೧ ದಿ (ಆ); ೨-೨ ಪಿಂ (ಅ); ೩-೩ ಕಳನೆಂದರನೆದ(ಅ); ೪-೪ ವಂ (ಆ).
೨೯. ೧-೧ ಯ (ಆ); ೨-೨ ನ್ನ (ಆ); ೩-೩ ಳ್ಮಗೆ (ಆ); ೪-೪ ಲ್ದ (ಆ);
೫-೫ ಬ (ಆ); ೬-೬ x (ಆ); ೭-೭ ಲ್ಚ (ಆ); ೮-೮ ತತಕ (ಅ), ತಕ (ಆ).
೩೦. ೧-೧ ಲ್ದ (ಅ); ೨-೨ ಸ (ಆ); ೩-೩ ಡಿ (ಅ).
೩೧. ೧-೧ ಸಿಗಂಡರೆ (ಆ); ೨-೨ ಪಸಾಯ (ಆ).
೩೨. ೧-೧ ಪು (ಆ); ೨-೨ ಗಾಣ್ಕೆಗಾಣ್ಕೆ (ಆ); ೩-೩ ಡೆ (ಅ).

ನವಿಲಗಾರ್ತಿಯ ೧ನಡೆ೧ದೊ೨ಳ೨ ।
ಸವಿಯುಳಿ೩ಮ್ಮೆಗೊ೩ಡುವಕ್ಕಿ ಮೆಲ್ಲ೪ದಿ೪ ಬೆ೫ಳ್ಗಂ೫ಚ ।
ವಲು೬ವೆ೬ಸು ಸ೭ರೆ೭ನ ಇಲ್ಪಳಸುವ ।
೮ಗಿಳಿ೮ ಎನ್೯ಲಂಚೆ೯ ಬೆಳ್ಳಿವೆಸರಾಂತವನೇ || ೩೩ ||

ಸಬಬಾಸನೆಯಿರ್ಪೊಡೆ ಸೆ ।
ಸಬೆಯ೧ದ೧ ಪೂನೆಲಬಗ್ಗು೨ಬಿಳಿಗ್ಗಿನ೨ಬೆಳಗಿಂ ।
ಪುಬಸನೆ ಬಾ ೩ನ್ನ೩ಳಿಯರಕಂ ।
ಣ್ಣಬ೪ಲೆ ತಿಳಿ೪ಎನೆ ದೇವಭೂರುಹಂ ಕವಿರತ್ನಾ || ೩೪ ||

ಸೊಗಬಳಿಗಿ ೧ಸುಪು೧ವ೨ರ್ರ್ಗೆ೨ ।
ಬಗಸೊಲಪಿಗೆ ನೈಲಸಿರಿಗೆ ಮೆಲ್ಲಡಿ ಬೊರೆ ।
೩ಇ೩ಗೆ ತಗದಶ ಸೆಜಿವಿಗೆ ಕಣ್ಬೆರ ।
ಲೊಗೆ ಬಸ೪ನಿ೪ಯೆನಲ್ಕೆ ಲಲನೆಯರ್ ಕವಿರತ್ನಾ || ೩೫ ||

ಬಳಿಗೆಲಯಂ ಬದಗಂ ನಾ ।
ಳ್ಗಿಳಿವಾಡಂ ನನ್ನಿಡಿಗಳನುಳಿಗಂತಳೆಗಂ ।
ಸಳಿಬೊಳೆಗಿಳಿಯಂ ಸಾಜುಳಿ ।
ಗೆಳೆಯನೆನಲ್ಸಗ್ಗನುಳಿದನೆಲೆ ಕವಿರತ್ನಾ || ೩೬ ||

ನೆಲಬಲಲಂ ನಿಜೆ ಬೆಳಲಂ ।
ಬಲಸೊಲಹಂ ಬಚ್ಚಬಣಿಸೆ ಬಲ್ಪಣಿವಾ೧ದಂ೧ ।
ಪೊಲಗೆ ಸುಸಿಲ್ಪೆಳಗಿಲಿ ಬಾ
ಳ್ತೊ೨ಲೆ೨ಗೆಲೆಯುಣಿಸಾರ್ಕೆ೩ಯ೩ ಸೊಕೆಯೆಲೆ ಕವಿರತ್ನಾ || ೩೭ ||

ಕೊನರ್ವಿಡಿ ಸುಳಿದಾಳ್ಕೈಲಂ ।
ಗೊನೆ ನುಣ್ಬೆ೧ಸು೧ ಗಾಣ್ಕೆ ಬಗಸುನಿಲೆ ಬಂಬಲ್ಪಾ।
ಲ್ಪನೆ ನೈಲಸರಿಗೆ ಪಾರ್ದಂ ।
ದೆನೆ ತಿಳಿ೨ನಿಂ೨ಪ೩ಚ್ಚ೩ದೆನೆಯೆನಿಪ್ಪುದು ರತ್ನಾ || ೩೮ ||

---

೩೩. ೧-೧ ನಂನನಡೆ (ಅ); ೨-೨ ರೆ (ಅ); ೩-೩ ಮೆಯಿಕೊ (ಅ); ೪-೪ ಡಿ (ಅ); ೫-೫ ಳ್ಗಂ (ಅ); ೬-೬ ರೆ (ಅ); ೭-೭ ರಿ (ಅ); ೮-೮ ಯ(ಅ); ೯-೯ ಲ್ಗಂ (ಅ).

೩೪. ೧-೧ x (ಅ); ೨-೨ ಬಗ್ಗಿನ ಬೆಳಗಿನ (ಅ); ೩-೩ ನ್ನ (ಅ); ೪-೪ ತ್ತಿಗೆ (ಅ).

೩೫. ೧-೧ ಸೂಸು(ಅ); ೨-೨ ರಂಗೆ (ಅ); ೩-೩ ಯಿ (ಅ); ೪-೪ ವಿ (ಅ).

೩೭. ೧-೧ ಡಂ (ಅ); ೨-೨ ಲ (ಅ); ೩-೩ x (ಅ).

೩೮. ೧-೧ ಸ (ಅ); ೨-೨ ಗಿಂ (ಅ); ೩-೩ ಚೆ (ಅ).

ಮೀನಾ[೧]ಣ್ಮ[೧] ನದಳೆ[೨]ಯಿಂ[೨]ಗೈ ।
ಬಾನಂ ಬೊಪವರ್ಗಲುಣಿಸು ಕಂ[೩]ಡೆರ್ದೆ[೩] ಬಾಳ್ ನೀ।
[೪]ವುಂ[೪]ನಾಣ್ಕೆಯ [೫]ಕೊಲ್ಲಾ[೫]ಲ್ಪೆಳೆ ।
ತಾನೆನೆ ಬೆಳ್ದಿಂಗಳೆಂಬುದೆಲೆ ಕವಿರತ್ನಾ ॥ ೩೯ ॥

ಆ[೧]ಲೆನ್[೧]ಬಲ್ಸರವಲಗ[೨]ಲ[೨] ।
ವಾ[೩]ಲಿಂಗ[೩]ಳ[೪]ಲೆಂ[೪]ದು ಪಕ್ಕವನೆ ಬಿಲ್ನೆರಂ ॥
ಕೋಲಾಂಕೆ ತಾನೆನಲ್ ಮಱು।
ಗೋಲೆನೆ ಬಿಲ್ಲಾರಿಯೆಂಬು[೫]ದಂ[೫] ತಿಳಿ ರತ್ನಾಂ ॥ ೪೦ ॥

ಸೂಡ[೧]ಗುರೆ[೧] ಸೆ[೨]ಕ್ಕ[೨] ಬೆಂಗೊನೆ ।
ಗೂಡಳ[೩]ಱ[೩]ಲ್ ಸುಳಿಬೆದರ್ಚು ಪೆ[೪]ಱ[೪] [೫]ಬೆಂಗಿ[೫]।
[೬]ಳ್ಕೊಡೆ[೬] ಮುಟ್ಟಱ[೭]ಮೆ[೭] ಕಳಲಡಿ ।
ವಾಡೆನೆ [೮]ಬಿಂ[೮]ಗೆಯೆಂಬುದಂ [೯]ತಿಳಿ[೯] ರತ್ನಾ ॥ ೪೧ ॥

ವೃ ॥ಮಿಳಿರೆಲೆ ಪೋಲ [೧]ರಾ[೧]ಣ್ಮ ನ[೨]ಱ[೨]ವಟ್ಟಿಗರಿಚ್ಛೆಗನೆ[೩]ಣ್ಪ[೩]ವಾಡಿಗಂ ।
ಪೊಳಱಕೆಯಿಲ್ಲದಂ ಸವಲನೆಚ್ಚ[೪]ಱ[೪]ಮೆಯ[೫]ಱ[೫]ನ್ನೈಲವ[೬]ಳ್ಕೆ[೬] ಗಂ।
ಝು[೭]ಳ[೭]ವಿಲಿಗಂ ಮಿಳಿರ್ವಲಲನೆಂದೆ[೮]ನ[೮]ಲಿಂದ್ರನ ರಂಚು ತು[೯]ಳ್ತು[೯]ಗಂ।
[೧೦]ಪಿಳಿ[೧೦] ವಳಿಗೋಲನೆಂದೆನೆ ಖಲಂ ಬಗೆ ಸಾಸವ ಚನ್ನವಾಳವಾಳ್ ।
ಕುಳಿರಲೆ [೧೧]ವಟ್ಟಿ[೧೧]ದೋರ್ಕೆ ಮಗಳೆಂದೆನೆ ಮುನ್ನಱ ಗೌರಿಯೆಂಬುದಂ ॥ ೪೨ ॥

[೧]ಪೆಱ[೧] ಬಳ[೨]ಕ್ಕ[೨]ಯೆಸುರ್ಪಡೆ।
[೩]ಯ[೩]ಱಅ[೪]ಳೆ[೪]ಮ[೫]ಗು[೫]ಳಳತೆ ಕಾಣ್ಬೆ [೬]ಇಂ[೬]ನಡೆ ।
ನೆಱದಾ[೭]ಳಳರಳಿಕೆ[೭] ಪೊಳ್ತುಳದಿಕೆಯೆಂ ।
ದಱಗೊ[೮]ಳ್ಮಲ್ತೆಂ[೮]ದು ಬೆಳ್ಳಿವೆಸರಾಂತವನೇ ॥ ೪೩ ॥

---

೩೯. ೧-೧ ಣ (ಅ); ೨-೨ ಇ (ಅ); ೩-೩ ದೆಲ್‌ದೆರ್ (ಆ); ೪-೪ ಉ (ಅ); ೫-೫ ಕಾಲ್ಪು (ಆ).

೪೦. ೧-೧ ರೆನೆ (ಆ); ೨-೨ x (ಆ); ೩-೩ ರಿಗ (ಆ); ೪-೪ ವೆಂ (ಅ); ೫-೫ ದಲ್ (ಆ).

೪೧. ೧-೧ ಳುಱು (ಅ); ೨-೨ ರ್ಕೆ (ಅ); ೩-೩ ಱು (ಅ); ೪-೪ ಱಲ್ (ಅ); ೫-೫ ನ್ನಿ (ಅ); ೬-೬ ರಾಳ್ಕೊಡು (ಅ); ೭-೭ ಲ್ (ಅ); ೮-೮ ಬೆ (ಅ); ೯-೯ ಕವಿ (ಅ).

೪೨. ೧-೧ ಲಾ (ಅ); ೨-೨ಲೆಲ್ (ಅ); ೩-೩ ಣ್ಬು (ಅ); ೪-೪ ಱ್ (ಅ); ೫-೫ ರ್ (ಅ); ೬-೬ ಳ್ಕಿ (ಅ); ೭-೭ ಳಂ (ಅ); ೮-೮ x (ಅ); ೯-೯ ಳ್ತಿ (ಅ); ೧೦-೧೦ ಬಳ (ಅ); ೧೧-೧೧ ವೆಟ್ಟು (ಅ).

೪೩. ೧-೧ ಪೆಱಪೆಱ (ಅ); ೨-೨ ರ್ಕೆ (ಅ); ೩-೩ ಯೆ (ಅ); ೪-೪ x (ಅ); ೫-೫ ಗು (ಅ); ೬-೬ ಯಿಂ (ಅ); ೭-೭ ಗಿಳಿಳರಳಿಕೆ (ಅ); ೮-೮ ಳತೆ (ಅ).

ಪೊತ್ತಿ[೧]ಕ್ಕೆ[೧]ನೆ ಪೊರೆದಾಳ್ದಿಹ ।
ರುತ್ತಕ್ಕೆನೆ ಕೂಡೆ ಬಾಳ್ದಪ[೨]ರ್[೨] ಪೊಱ[೩]ಪಾ[೩]ಳುಂ ।
ಪತ್ತಿ[೪]ಕ್ಕೆ[೪]ನೆ ಸಾರ್ದಪರೆಂ ।
ಬು[೫]ತ್ತಿ[೫]ಯ ನೀಂ ತಿಳಿ[೬]ಯೊ[೬] ಬೆಳ್ಳಿವೆಸರಾಂತವನೇ ॥ ೪೪ ॥

ಸುಳಿವಳಿಸಾರೆ ಗಾಲ್ಸರ[೧]ನ್[೧] ನಾ[೨]ಳ್ಕೆ[೨]. ಕಣ್ಬಸೆನ್ನೈ[೩]ಲಿ[೩]ದೋ[೪]ಜು[೪] ಪೆ।
[೫]ಚ್ಚ[೫]ಳ[೬]ಗೆ[೬]ಜೆಯೆಂದೆನಲ್ಬುನ[೭]ದಿ[೭] ಕೇಳ್ಕೆನಿರ್ದುಂಬಂ[೮]ಳ[೮] ಸೋ[೯]ಲ್ದೆ[೯]ಬಂಣಣಂ।
ಕು[೧೦]ಳಿರೆ[೧೦] ದೆ ಕ್ಕಲನ [೧೧]ಣ್ಬ[೧೧] ಗರೆ ತಿಂಗಳವಟ್ಟ [೧೨]ರೆ[೧೨] ॥ ೪೫ ॥

ರನ್ನನಿಘುಂಟು ಸಮಾಪ್ತ ಮಂಗಳ ಮಹಾಶ್ರೀ

■■

ಆಕರ : ಮಾರ್ಗ ಸಂಪುಟ–೧

---

೪೪. ೧-೧ ಕೆ (ಅ); ೨-೨ ಂ (ಆ); ೩-೩ ವಾ (ಆ); ೪-೪ ಕೆ (ಅ);
೫-೫ ತಿ (ಆ); ೬-೬ ಯ (ಆ).

೪೫. ೧-೧ ಲ (ಆ); ೨-೨ ಣ್ಕೆ (ಆ); ೩-೩ ಲ (ಆ); ೪-೪ ಜ್ (ಆ);
೫-೫ ಚ್ಛ (ಆ); ೬-೬ ಗ್ಗ (ಅ); ೭-೭ ಡಿ (ಅ); ೮-೮ ಲ (ಆ);
೯-೯ ಲ್ಗೆ (ಆ); ೧೦-೧೦ ಳ್ಪಿರ (ಆ); ೧೧-೧೧ ಣ್ಬ (ಆ); ೧೨-೧೨ ಲೆ (ಆ).

೧೨

ಮಾನಸೋಲ್ಲಾಸದಲ್ಲಿ ಕನ್ನಡಪದ್ಯಗಳು

ಅಭಿಲಷಿತಾರ್ಥ ಚಿಂತಾಮಣಿ ಎಂಬ ಪರ್ಯಾಯನಾಮದ ಮಾನಸೋಲ್ಲಾಸ ಹನ್ನೆರಡನೆಯ ಶತಮಾನದ (ಕ್ರಿ.ಶ. ೧೧೨೯) ಒಂದು ವಿಶ್ವಕೋಶ. ಕರ್ನಾಟಕವನ್ನಾಳಿದ ಕಲ್ಯಾಣ ಚಾಲುಕ್ಯ ಮನೆತನದ ಸೋಮೇಶ್ವರ ಚಕ್ರವರ್ತಿ ಇದರ ಕರ್ತೃ. ಪ್ರಾಚೀನ ಕನ್ನಡಿಗರ ಬದುಕಿನ ವಿವಿಧ ಮುಖಗಳ ದರ್ಶನ ಮಾಡಿಕೊಡುವ ಇದರ 'ವಿನೋದ ವಿಂಶತಿಃ' ಎಂಬ ೪ನೆಯ ಅಧ್ಯಾಯದ 'ಗೀತ ವಿನೋದಃ' ಎಂಬ ೧೬ನೆಯ ಪ್ರಕರಣಗಳಲ್ಲಿ ಹಲವು ಭಾಷೆಯ ಗೀತಗಳ ಲಕ್ಷಣ ಲಕ್ಷ್ಯಗಳು ಎಡೆಪಡೆದಿವೆ. ಇವುಗಳಲ್ಲಿ ಕೆಲವು ಪದ್ಯಗಳು ಕನ್ನಡಕ್ಕೆ ಸಂಬಂಧಪಟ್ಟುವು. ಕಳೆದ ೭೦೦ ವರ್ಷಗಳಿಂದ ದೇವನಾಗರಿಲಿಪಿಯಲ್ಲಿ ಬರೆಯುತ್ತ ಬಂದುದರಿಂದ, ಕನ್ನಡ ಪದ್ಯಗಳೆಂದು ಲಿಪಿಕಾರರಿಗೆ ಹೊಳೆಯದೇ ಹೋದುದರಿಂದ, ಇವುಗಳ ಸ್ವರೂಪ ತೀರ ಹದಗೆಟ್ಟಿದೆ. ಕನ್ನಡ ಪದ್ಯಗಳೆಂದು ಗುರುತು ಹಿಡಿಯಲು ಬಾರದಷ್ಟು ವಿಕಾರಗೊಂಡಿದೆ. ಹೀಗೆ ಕುಲಗೆಟ್ಟ ಈ ಪದ್ಯಗಳನ್ನು ಗುರುತಿಸಲು ಮೊದಲು ಪ್ರಯತ್ನಿಸಿದವರು ಡಾ. ಡಿ.ಎಲ್. ನರಸಿಂಹಚಾರ್. ಅವರು ಗುರುತಿಸಿದ ಕನ್ನಡ ಭಾಷೆಯ ತ್ರಿಪದಿ, ಷಟ್ಪದಿ ಮತ್ತು ಕಂದಗಳ ಮೂಲರೂಪ ಮತ್ತು ಪರಿಷ್ಕೃತರೂಪ ಹೀಗಿವೆ:[೧]

ತ್ರಿಪದಿ

ಮೇದನೀ ವರ್ಣೇಸಲ್ಲೂಕಾದಿಯಣು ಮೀನಾಗಿ ವೇದವೋತ್ತಗೇಯ।
ಗಿಪನೇ ಲತದೇತದವನ ಪಾದಂಗಲಿಗೇ ಮಹಿಮೇಯಮ್।

ಪರಿಷ್ಕೃತರೂಪ :

ಮೇದಿನಿ ವರ್ಣಿಸಲ್ಕಾದಿಯೊಳ್ಮೀನಾಗಿ
ವೇದವೊತ್ತಗೆಯವೊತ್ತವನ । ದೇವನ
ಪಾದಂಗಳೀಗೆ ಮಹಿಮೆಯಂ॥

---

೧. ಈ ವಿವರಗಳನ್ನು ಭಾರತೀಯ ಕಾವ್ಯಮೀಮಾಂಸೆ (ತೀ. ನಂ.ಶ್ರೀ. ೧೯೬೧. ಪು ೧೩೭) ಯಿಂದ ಸ್ವೀಕರಿಸಲಾಗಿದೆ.

ಷಟ್ಪದಿ

ಗಡಣದಿ ತುರಗನ ಮೇಡೆ ಚರ್ಣಿಗಲದೀಪ್ತಿಃ
ಗೇಡೆಗೊಂಡ ತಮಗೇಶ್ಚಿಚಾರತಿಯಾ ಸೋದಿರ್ಗಲ ಪೋಲೇ।
ಪಾತುಲಗಡ ತೋ ಲಿಹೀ ವಿಷುಕು ಇತಿಕೇನ ಮಂಗಿಸ್ವಸಂಸಿದ್ಧಿಯ।
(ಪಾಠಾಂತರ: ಗಡಣದಿಂದುರಗಣ ಪೇಡೆವರ್ಣಿಗಲದೀಪ್ತಿ। ಗೇಡೆಗೊಂಡು ತಮಗೇತ್ತುವಾರತಿಥಾ ಸೋಡಿರ್ಗಲ ಪಾಲಿ ಪಾಲುಗಡಲೋಲಿರ್ದ್ವಾ ವಿಷ್ಣುಕು ಇತಿಕ್ಕೆ ನಮಗ್ಗಿಸ್ತ ಸಂಸಿದ್ಧಯ)

ಪರಿಷ್ಕೃತರೂಪ :

ಗಡಣದಿಂದುರಗನ।
ಪೆಡೆಮಣಿಗಳ ದೀಪ್ತಿ।
ಗೆಡೆಗೊಂಡು ತಮಗೆತ್ತುವಾರತಿಯ।
ಸೊಡರ್ಗಳ ಪೋಲೆ ಪಾ।
ಲ್ಗಡಲೊಳಿರ್ದಾ ವಿಷ್ಣು।
ಕುಡುತಿಕ್ಕೆ ನಮಗಿಷ್ಟ ಸಂಸಿದ್ಧಿಯಂ ॥

ಕಂದ

ಕೌಸ್ತುಭರುಚಿಯನ್ತಂನ್ನರದೋಲು ಕೇಃಣುಗಿಲ ಪೋಣೇರಯ ವಿದ್ಯಾಚ
ವಿಯಂ ನಿರೇಪತ ರಂಜಿಯಸುರಗುರು ಪರಿವೃಂದನೆಮಗೀಗೆ ವಿಷ್ಣುರ್ಬಡಿದ ಚರಮೀ।
(ಪಾಠಾಂತರ: ಸಿರಿಕೌಸ್ತುಬರುಚಿಯಂತ ತ್ತೂರದೋಲು ಕೇಸ್ವುಲಿಂಗಯೋರ ಪವಿದ್ಯಾಧವಿಯಂತಿ । ರಪರಿರಂಜಿಷ ಪುರಗಣ ಪರದೃಡನೆಮಗೀಗೆ ವೇಷು ವೇಡಿದ ವರಮಾ)

ಪರಿಷ್ಕೃತರೂಪ:

ಸಿರಿ ಕೌಸ್ತುಭರುಚಿಯಂ ತ।
ಳ್ತುರದೊಳ್ ಕಾರ್ಮುಗಿಲ ಪೊಣರ ವಿದ್ಯುಚ್ಛವಿಯಂ।
ತಿರೆ ಪರಿರಂಜಿಸೆ ಸುರಗಣ ।
ಪರಿವೃಢನೆಮಗೀಗೆ ವಿಷ್ಣು ಬೇಡಿದ ವರಮಂ ॥

ಹೀಗೆ ಮೂರು ಕನ್ನಡ ಪದ್ಯಗಳನ್ನು ಪತ್ತೆ ಹಚ್ಚಿ, ಅವುಗಳನ್ನು ಪರಿಷ್ಕರಿಸಿಕೊಟ್ಟುದು ಡಾ. ಡಿ.ಎಲ್.ಎನ್. ಅವರ ಗ್ರಂಥಸಂಪಾದನ ಪ್ರಜ್ಞೆಗೆ ಪರಮ ನಿದರ್ಶನವೆನಿಸಿದೆ.

ಆ ಸಂದರ್ಭದಲ್ಲಿ ಡಾ.ಡಿ.ಎಲ್. ನರಸಿಂಹಾಚಾರ್ ಅವರ ದೃಷ್ಟಿಗೆ ಬಾರದ ಇನ್ನೆರಡು ಕನ್ನಡ ಪದ್ಯಗಳನ್ನು ಅಂದರೆ ಚೌಪದಿ ಮತ್ತು ವಿಚಿತ್ರಾ ವೃತ್ತಗಳನ್ನು ಹುಡುಕಿ ಅವುಗಳನ್ನು ಪರಿಷ್ಕರಿಸಿ ಕೊಡಲು ಈ ಲೇಖನದಲ್ಲಿ ಪ್ರಯತ್ನಿಸಬಹುದಾಗಿದೆ.

ಷಟ್ಪದಿ ಮತ್ತು ಕಂದಗಳು, ಸ್ಪಷ್ಟ ಲಕ್ಷಣ ಮತ್ತು ನಿರಂತರ ಬಳಕೆಯಿಂದಾಗಿ ನಮಗೆ ಹೆಚ್ಚು ಪರಿಚಿತವಾಗಿವೆ. ಆದರೆ ಈಗ ವಿವೇಚಿಸಲಿರುವ 'ಚತುಷ್ಪದಿ'ಯು ಪ್ರಾಕೃತ ಮತ್ತು ಕನ್ನಡಗಳಲ್ಲಿ, ಕನ್ನಡದಲ್ಲಿಯೇ

ಅಂಶಗಣ ಮತ್ತು ಮಾತ್ರಾಗಣಯುಕ್ತವಾಗಿ, ಮಾತ್ರಗಣದಲ್ಲಿಯೇ ವಿವಿದ ರೂಪಗಳಲ್ಲಿ ಸಿಗುತ್ತದೆ. ಮೇಲಾಗಿ ಅಂಶಗಣದ ಮೇಲೆ ನಡೆವ ಚತುಷ್ಪದಿಯ ಲಕ್ಷಣ ಇನ್ನೂ ಹಿಡಿತಕ್ಕೆ ಸಿಕ್ಕಿಲ್ಲ. ಎರಡನೆಯದಾಗಿ 'ವಿಚಿತ್ರಾ' ಎಂಬ ಹೆಸರಿನಲ್ಲಿ ವಿವಿಧ ಸ್ವರೂಪದ ವೃತ್ತಗಳು ಕನ್ನಡದಲ್ಲಿ ಕಂಡುಬರುತ್ತವೆ. ಹೀಗಾಗಿ ಈ ಚತುಷ್ಪದಿ ಮತ್ತು ವಿಚಿತ್ರಾಗಳನ್ನು ಪರಿಷ್ಕರಿಸುವುದು ಅಷ್ಟು ಸುಲಭವಲ್ಲ. ಇಷ್ಟು ಹಿನ್ನೆಲೆಯಲ್ಲಿ ಈ ಎರಡು ಪದ್ಯಗಳನ್ನು ಎತ್ತಿಕೊಳ್ಳಬಹುದು:

೧. ಮಾನಸೋಲ್ಲಾಸದಲ್ಲಿ ತ್ರಿಪದಿ ಮತ್ತು ಷಟ್ಪದಿಗಳ ಮಧ್ಯ ಚತುಷ್ಪದಿಯ (೪-೧೬-೨೮೩, ೨೮೪, ೨೮೫) ವಿಷಯ ಬಂದಿವೆ. ಇವುಗಳಲ್ಲಿ ಮೊದಲ ಎರಡು ಪದ್ಯ ಹೀಗಿವೆ:

ಮಾತ್ರಾ ಷೋಡಷಪಾತ್ರಂ[1] ಸಾದ(ದೇಸುರ್ಯ) ದಿವಾಪ್ಯೇಕ ವಿಂಶತಿಃ।
ಚತುರ್ವಿಂಶತಿ ಸಂಖ್ಯಾ ವಾ ಚತುಷ್ಪಾದಾ[2] ಚತುಷ್ಪಾದಾ[3] (ತುಷ್ಪದೀ)॥
(ಪಾಠಾಂತರ : ೧ದಃ ಸ್ಯಾ ೨ ತುಪಾಃ ೩ ತುಃ ಪದೀ)

ಸುರಗಿರಗಿರಹೂ ಅಸೂಡ ಇತಲುತಿರ್ದ ಸುರಕುಜದುರ್ಯಲೇರಿ ಮಿಕ್ಕ।
ಸುಲವಿಲಾಸಿನಿ ಪರೋಲಡುದಾಡಿದರು ಹರಿ ಅಂಯಂಕಾಮಾಲೆಗಲಾ॥
(ಪಾಠಾಂತರ : ಸುರಗಿರಿಯ ಅಮೂಡಿ ಈತಲು ತಿದರಿ ಮಕಃ। ಸುರವಿಲಾಸಿ
ಚರೋಲಿಲಿಹುಹಾಡಿದರು ಹರಿ ಅಮಾಲೆಗಲಃ)

ಇವುಗಳಲ್ಲಿ ಮೊದಲನೆಯದು ಲಕ್ಷಣ, ಎರಡನೆಯದು ಲಕ್ಷ್ಯ. ಇಲ್ಲಿಯ ಹೇಳಿಕೆಯ ಪ್ರಕಾರ ಚೌಪದಿಯು ೪ ಪಾದಗಳ ವೃತ್ತವಿದ್ದು, ಪ್ರತಿಪಾದದಲ್ಲಿ ೧೬ ಮಾತ್ರೆ ಇಲ್ಲವೆ ೨೦ ಮಾತ್ರೆ ಇಲ್ಲವೆ ೨೪ ಮಾತ್ರೆಗಳು ಬೇಕು. ಅಂದರೆ ಮಾನಸೋಲ್ಲಾಸಕಾರ ಹೇಳುವ ಮಾತ್ರಾಗಣಬದ್ಧವಾಗಿರುವ ಚೌಪದಿ ಮೂರು ವಿಧವಾಗಿವೆ.

ಕನ್ನಡದಲ್ಲಿ ಚೌಪದಿಯು ಅಂಶಗಣ ಮತ್ತು ಮಾತ್ರಾಗಣ ಹೀಗೆ ಎರಡು ವಿಧಗಳಲ್ಲಿ ಸಿಗುತ್ತದೆ. ಜಯಕೀರ್ತಿ ನಾಗವರ್ಮರ ಪ್ರಕಾರ ಚೌಪದಿ ನಾಲ್ಕು ಪಾದಗಳ ಅಂಶವೃತ್ತವಿದ್ದು ಪ್ರತಿಯೊಂದು ಪಾದದಲ್ಲಿ ಒಂದು ವಿಷ್ಣುಗಣ ಒಂದು ರುದ್ರಗಣ ಇರಬೇಕು. ಇದನ್ನು ಮಾತ್ರಾಗಣಕ್ಕೆ ಪರಿವರ್ತಿಸಿಕೊಂಡರೂ ಪ್ರತಿಯೊಂದು ಪಾದದಲ್ಲಿ ಪರಮಾವಧಿ ಮಾತ್ರೆಗಳು ೧೪ ಹೊರಡುತ್ತವೆ. ಹೀಗಾಗಿ ಮಾನಸೋಲ್ಲಾಸಕಾರನ ಚೌಪದಿಗೂ ಜಯಕೀರ್ತಿ ನಾಗವರ್ಮಾದಿಗಳ ಚೌಪದಿಗೂ ಸಂಬಂಧವಿಲ್ಲವೆನಿಸುತ್ತದೆ.

ಇನ್ನು ಕನ್ನಡ ಕೈಪಿಡಿಯಲ್ಲಿ

(ಅ)	೫ | ೫ | ೫ | ೪	(ಬ)	೩ | ೪ | ೩ | ೪
	೫ | ೫ | ೫ | ೪		೩ | ೪ | ೩ | ೪
	೫ | ೫ | ೫ | ೪		೩ | ೪ | ೩ | ೪
	೫ | ೫ | ೫ | ೪		೩ | ೪ | ೩+ಗು

ಹೀಗೆ ಎರಡು ಬಗೆಯ ಚೌಪದಿಗಳನ್ನು ಹೇಳಲಾಗಿದೆ. ಇವುಗಳಿಗೂ ಮಾನಸೋಲ್ಲಾಸಕಾರ ಹೇಳುವ ಚೌಪದಿಗೂ ಸಂಬಂಧವಿಲ್ಲ. ಹೀಗಾಗಿ ಮಾನಸೋಲ್ಲಾಸದ ಉದಾಹರಣ ಪದ್ಯವನ್ನು

ಅಲ್ಲಿ ಹೇಳಲಾದ ಮೂರು ಲಕ್ಷಣಗಳಲ್ಲಿ ಒಂದಕ್ಕೆ ಹೊಂದಿಸಬೇಕಾಗಿದೆ. ಆದರೆ ಈ ಅಶುದ್ಧ ಪದ್ಯದಿಂದ

ಸುರಗಿಯ ಹೂ ಸೂಡಿ ಇತ್ತಲೈತರುತಿರ್ದು।
ಸುರಕುಜದಲ್ಲೇರಿ ಮಿಕ್ಕ।
ಸುರವಿಲಾಸಿನಿಯರೊಲೋಲಾಡಿ ಪಾಡಿ ।
ದರು ಹರಿಯಂಕಮಾಲೆಗಳಾ ।

ಎಂಬ ಸಾಂಗತ್ಯ ಬಂಧವನ್ನು ಹೋಲುವ ಶುದ್ಧಪದ್ಯವನ್ನು ಹೊರತೆಗೆಯಲು ಸಾಧ್ಯವಿದೆ. ಇದಕ್ಕೂ ಮಾನಸೋಲ್ಲಾಸಕಾರ ಹೇಳುವ ಲಕ್ಷಣಕ್ಕೂ ಹೊಂದಿಕೆಯಾಗದ ಕಾರಣ ವಿದ್ವಾಂಸರು ಈ ಚೌಪದಿಯನ್ನು ಮಾನಸೋಲ್ಲಾಸೋಕ್ತ ಲಕ್ಷಣದಂತೆ ಪರಿಷ್ಕರಿಸುವರೆಂದು ನಂಬಿದ್ದೇನೆ.

(೨) ಮಾನಸೋಲ್ಲಾಸದಲ್ಲಿ 'ವಿಚಿತ್ರ' ಎಂಬ ವೃತ್ತದ ಲಕ್ಷಣ ಮತ್ತು ಲಕ್ಷ್ಯ ಹೀಗೆ ಬಂದಿದೆ:

ಅನೇಕ ದೇಶ ಭಾಷಾಭಿಃ ಸ್ವರೈಃ ಪಾದ್ಯೈಶ್ಚ ತೇತ್ರಕಾಃ (ನ್ನತೈಃ)
ಚಿಂತ್ರಿಕೋ (ಚಿತ್ರಕೋ) ಬಹು ತಾಲೈಶ್ಚ ವಿಚಿತ್ರ(ಃ) ಪರಿಕೀರ್ತಿತಃ॥
ಕೂರ್ಮಿನಾಗಿ ಮಂದರಮೇವಚದೇಮಚೇಶಾಲಾಂ ನು
ಸುರರಿಗಮೃತ ಸಾಧಿಸಿಕೋಟ ದೇವನೇಪಗೀಗೆ ವರಜೋಸುವರೂಪೇ
(ಪಾಠಾಂತರ : ಕೂರ್ಮನಾಭಿಮಂದರ ವೇಂಚವೇಂನ್ನಸಲಾಂತು ಸುರರಿಗಭೃತಮಂ ಸಾಧಿಸಿಕ್ರೊಟ್ಟ ದೇವನೇಗಿಗೆ ಪರವಾಜೋಸುಖರೂವೆಂ)

ಇವುಗಳಲ್ಲಿ ಮೊದಲಿನದು ಲಕ್ಷಣ ಪದ್ಯ, ಎರಡನೆಯದು ಲಕ್ಷ್ಯ ಪದ್ಯ. ಲಕ್ಷಣವನ್ನು ಸಂಗೀತ ಪರಿಭಾಷೆಯಲ್ಲಿ ಹೇಳಿದ ಕಾರಣ ಈ ವಿಚಿತ್ರಾವೃತ್ತದ ಗಣಯೋಜನೆ ಸ್ಪಷ್ಟವಾಗುವುದಿಲ್ಲ. ನಾಗವರ್ಮ ಹೇಳುವ 'ಚಿತ್ರಲತೆ' ತ್ರಿಪದಿಯನ್ನು ಜಯಕೀರ್ತಿಯು "ವಿಚಿತ್ರಾ" ತ್ರಿಪದಿ ಎಂದು ಕರೆದಿದ್ದು, ಇದರ ಲಕ್ಷಣವನ್ನು

ವಿ. ವಿ. ವಿ. ವಿ.
ವಿ. ಬ್ರ. ವಿ. ವಿ.
ವಿ. ಬ್ರ. ರು.

ಎಂದು ಹೇಳಿದ್ದಾನೆ. ಮಾನಸೋಲ್ಲಾಸಕಾರನ ಮನಸ್ಸಿನಲ್ಲಿದ್ದ 'ವಿಚಿತ್ರಾ' ಇದೇ ಆಗಿದ್ದ ಪಕ್ಷದಲ್ಲಿ ಈ ಅಶುದ್ಧ ಪದ್ಯವನ್ನು

ಕೂರ್ಮ ತಾನಾಗಿ ಮಂದರ ಬೆನ್ನಲಾಂತು ಸು।
ರರಿಗಮೃತವ ಸಾಧಿಸಿ। ಕೊಟ್ಟ ದೇ।
ವರೆಮಗೀಗೆ ವರವ ಸುಖರೂಪಂ ॥

ಎಂದು ಶುದ್ಧಗೊಳಿಸಬಹುದಾಗಿದೆ. ಈ ಪದ್ಯ ಆದಿಪ್ರಾಸ ಮತ್ತು ಲಯದೃಷ್ಟಿಯಿಂದ ಇನ್ನೂ ಅಶುದ್ಧವೆನಿಸುವುದರಿಂದ, ಇಲ್ಲಿ ಪರಿಷ್ಕರಣಕ್ಕೆ ಇನ್ನೂ ಅವಕಾಶವಿದೆ.

ಹೀಗೆ ಈ ಚೌಪದಿ ಮತ್ತು ವಿಚಿತ್ರಾವೃತ್ತಗಳು ಕನ್ನಡ ಪದ್ಯಗಳಾಗಿದ್ದು, ನಾನು ಮಾಡಿದ ಪರಿಷ್ಕರಣ ಕಾರ್ಯ ಅಷ್ಟೇನೂ ತೃಪ್ತಿಕರವಾಗಿಲ್ಲವೆಂದು ನನ್ನ ಸ್ಪಷ್ಟ ನಂಬಿಕೆ. ಛಂದೋಜ್ಞಾನಿಗಳು ಪರಿಷ್ಕರಣ ಪರಿಣತರು ಈ ಪದ್ಯಗಳತ್ತ ಗಮನ ಕೊಡಬೇಕಾಗಿದೆ.

ಕ್ವಚಿತ್ತಾಗ್ಗಿ "ಅಸೌ ಪರಮೇಶ್ವರ ವಿರಚಿತಾ ಏಮಾ ನಾದಾವತೀ" ಎಂದು ಮುಂತಾಗಿ ಪದ್ಯಗಳಿಗೆ ಆಕರ ಸೂಚಿಸುವ ಸೋಮೇಶ್ವರನು, ಈ ಕನ್ನಡ ಪದ್ಯಗಳ ಕರ್ತೃವಿಚಾರವಾಗಿ ಮೌನ ತಾಳಿರುವನು. ಬಹುಶಃ ಈತನೇ ಇವುಗಳನ್ನು ರಚಿಸಿರಬಹುದು.

ಹೀಗೆ ಡಾ. ಡಿ.ಎಲ್. ಎನ್. ಹುಡುಕಿದ, ಮೂರು, ನಾನು ಹುಡುಕಿದ ಎರಡು ಪದ್ಯಗಳಲ್ಲದೆ ಈ ಗ್ರಂಥದಲ್ಲಿ ಇನ್ನೂ ಹಲವು ಕನ್ನಡ ಪದ್ಯಗಳಿರಬಹುದೆನಿಸುತ್ತದೆ. ವಿದ್ವಾಂಸರು ಗ್ರಂಥವನ್ನು ಆಮೂಲಾಗ್ರವಾಗಿ ಅಭ್ಯಾಸಕ್ಕೆ ಅಳವಡಿಸಿಕೊಳ್ಳಬೇಕು.

■■

ಆಕರ : ಮಾರ್ಗ ಸಂಪುಟ–೨

೧೩

ಪಾಂಡುರಂಗವಿಠ್ಠಲ - ಪುರಂದರವಿಠ್ಠಲ

ಪಾಂಡುರಂಗವಿಠ್ಠಲ, ಪುರಂದರವಿಠ್ಠಲ - ಇವು ದಾಸಪರಂಪರೆಯಲ್ಲಿ ಕೇಳಿ ಬರುವ ಪದಗಳು. ಇಲ್ಲಿಯ ಪಾಂಡುರಂಗ, ಪುರಂದರ ಮತ್ತು ವಿಠ್ಠಲ ಪದಗಳನ್ನು ಕುರಿತು ಅನೇಕ ಅಭಿಪ್ರಾಯಗಳು ಪ್ರಕಟವಾಗಿದ್ದರೂ ಇವು ಇನ್ನೂ ತೆರೆದ ಪ್ರಶ್ನೆಗಳಾಗಿಯೇ ಉಳಿದಿವೆ.

'ಪಾಂಡುರಂಗವಿಠ್ಠಲ' - ದೇವರ ನಾಮವಾಗಿರುವ ಇದು, ದಾಸರ ಅಂಕಿತವೂ ಆಗಿದೆ. ಸಾಮಾನ್ಯವಾಗಿ ಅಂಕಿತಗಳಲ್ಲಿ ಗ್ರಾಮನಾಮ ಮತ್ತು ದೈವನಾಮಗಳು ಜೊತೆಯಾಗಿ ಸೇರಿಕೊಂಡಿರುತ್ತವೆ. ಉದಾ: ಕಾಗಿನೆಲೆಯಾದಿಕೇಶವ (ಕಾಗಿನೆಲೆ ಗ್ರಾಮದ ಆದಿಕೇಶವ). ಇದೇ ರೀತಿ ಪಾಂಡುರಂಗವಿಠ್ಠಲದಲ್ಲಿ 'ವಿಠ್ಠಲ'ವೆಂಬುದು ದೈವಸೂಚನೆ. ಹೀಗಾಗಿ 'ಪಾಂಡುರಂಗ'ವೆಂಬುದು ಗ್ರಾಮನಾಮವನ್ನು ಸೂಚಿಸುತ್ತಿದೆಯೇ? ವಿಚಾರಿಸಬೇಕು. 'ಪಾಂಡು+ರಂಗ' ಪದಕ್ಕೆ 'ಬಿಳಿಯ ಬಣ್ಣ' ಮತ್ತು 'ಬಿಳಿಯ ಕೃಷ್ಣ' ಎಂದು ನಿಘಂಟುವಿನ ಅರ್ಥವಿದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಕೃಷ್ಣನ ಬಣ್ಣ ಕಪ್ಪು; ಪಂಡರಪುರದ ವಿಠ್ಠಲನ ಬಣ್ಣವೂ ಕಪ್ಪು. ಹೀಗಿದ್ದೂ ಬಿಳಿಯ ರಂಗವಿಠ್ಠಲ ಅಥವಾ ಬಿಳಿಯ ಬಣ್ಣದ ವಿಠ್ಠಲ ಎಂದು ಕರೆಯುವುದು ಅಭಾಸವೇ ಸರಿ. ಆದುದರಿಂದ ಪಾಂಡುರಂಗ ಪದದ ಮೂಲರೂಪ ಮತ್ತು ಅರ್ಥ ಬೇರೆಯಿರಬಹುದೇ? ಎನಿಸುತ್ತದೆ.

ಈಗಿನ ಪಂಡರಪುರವು ವಿಠ್ಠಲ ದೇವತೆಯ ಗ್ರಾಮ. ಇದಕ್ಕೆ ಶಾಸನಗಳಲ್ಲಿ 'ಪಂಡರಗೆ' ಎಂದು ಕರೆಯಲಾಗಿದೆ. ಮುಂಡರಗೆ, ಚಟ್ಟರಗೆ ಎಂಬಂತೆ ಪಂಡರಗೆ ಎಂಬುದು ಆ ಕಾಲದ ಗ್ರಾಮನಾಮ ನಿರ್ದೇಶನ ಪದ್ಧತಿಗೆ ಸರಿಯಾಗಿಯೇ ಇದೆ. ಮುಂಡರು, ಚಟ್ಟರುಗಳ ಹಾಗೆ 'ಪಂಡರು' ಪ್ರಾಚೀನ ಕಾಲದ ಒಂದು ಜನಾಂಗ. ಈ ಪಂಡರು ಹೆಸರಿನ ಜನಾಂಗದ ನೆಲೆಯೇ ಪಂಡರಗೆ, ಇಂದಿನ ಪಂಡರಪುರ. ಪಂಡರ+ಕೆಯ್ >ಗೆಯ್ >ಗೆ (=ನೆಲೆ) ಎಂಬುದೇ ಪಂಡರಗೆ ಎಂದಾಗಿದೆ. ಇಂದಿಗೂ ಪಂಡರಪುರದಲ್ಲಿ ಪಂಡ ಹೆಸರಿನ ಜನಾಂಗವಿದ್ದು (ಕಾಶಿಯಲ್ಲಿಯೂ ಇದ್ದಾರೆ), ಇವರು ದೇವತಾ ಪರಿಸರಕ್ಕೆ ಸಂಬಂಧಿಸಿರುವುದನ್ನು ಇಲ್ಲಿ ನೆನೆಯಬಹುದು.

ಈ ಪಂಡರಗೆ ಗ್ರಾಮದಲ್ಲಿಯ ವಿಠ್ಠಲ ದೇವತೆಯೇ 'ಪಂಡರಗೆ ವಿಠ್ಠಲ'. ಕಾಲಗತಿಸಿದಂತೆ ಈ ಪಂಡರಗೆ ಗ್ರಾಮನಾಮ ಪಂಡರಪುರವೆಂದು ಶಿಷ್ಟರಿಂದ ಬದಲಾವಣೆ ಹೊಂದಿದ ಸಂದರ್ಭದಲ್ಲಿ 'ಪಂಡರಗೆ ವಿಠ್ಠಲ'ವೆಂಬ ಸಮಸ್ತನಾಮ ಅಪರಿಚಿತವೆನಿಸತೊಡಗಿತು. ಆಗ ಇದನ್ನು ಸ್ವಾಭಾವಿಕವಾಗಿಯೇ ಪರಿಚಿತರೂಪಕ್ಕೆ ತಿರುಗಿಸಲು ನಡೆಸಿದ ಪ್ರಯತ್ನದ ಫಲವಾಗಿ ಪಂಡರಗೆ ವಿಠ್ಠಲ > ಪಂಡರಂಗ ವಿಠ್ಠಲ > ಪಾಂಡುರಂಗ ವಿಠ್ಠಲ

ಎಂದೋ, ಪಂಡರಗೆ ವಿಠ್ಠಲ> ಪಂಡರಗೆ ರಂಗವಿಠ್ಠಲ > ಪಾಂಡುರಂಗ ವಿಠ್ಠಲ ಎಂದೋ ವ್ಯತ್ಯಾಸವಾಗಿರಬೇಕು. ಆಗ ವಿಠ್ಠಲಕ್ಕೆ ಪಾಂಡುರಂಗವೆಂಬುದು ಪರ್ಯಾಯ ಅಂಕಿತನಾಮವಾಗಿ ನಿಂತಿತು. ಈ ಕಾರಣದಿಂದಾಗಿಯೇ ಪಾಂಡುರಂಗವೆಂಬುದು ಕಾಲಕ್ರಮದಲ್ಲಿ ಸ್ವತಂತ್ರ ಅಂಕಿತನಾಮವಾಗಿಯೂ ಅನೇಕ ಸಲ ಬಳಕೆಯಾಗಿದೆ.

ಒಟ್ಟಿನಲ್ಲಿ 'ಪಾಂಡುರಂಗ ವಿಠ್ಠಲ'ವೆಂಬುದು 'ಪಂಡರಗೆ ವಿಠ್ಠಲ' ಎಂಬುದರ ಪರಿವರ್ತಿತ ರೂಪ, ಪಂಡಿತರೂಪ. ಆದುದರಿಂದ ಪಾಂಡುರಂಗ ಪದಕ್ಕೆ ಪಾಂಡು=ಬಿಳಿ, ರಂಗ=ಬಣ್ಣ, ಒಟ್ಟಾರೆ ಕೃಷ್ಣ ಎಂದು ಶಬ್ದಾರ್ಥ ಭಾವಿಸುವುದು ತಪ್ಪು. ಇದು ಪಂಡರಿಗೆ ಎಂಬ ಗ್ರಾಮನಾಮದ ಸುಧಾರಿತ ರೂಪ.

'ವಿಠ್ಠಲ' ಎಂಬುದು ದೇವತೆಯ ಹೆಸರು. ವಿಷ್ಣು > ವಿಟ್ಟ ಆಗುವುದೇ ಹೊರತು 'ವಿಠ್ಠಲ' ಆಗುವುದಿಲ್ಲ. ಹೀಗಾಗಿ 'ಲ' ಇಂದಿಗೂ ಸಮಸ್ಯೆಯಾಗಿ ಉಳಿದಿದೆ. ಬಹುಶಃ ಈ ದೇವತೆಯ ನಿಜನಾಮ ವಿಠ್ಠಲೇಶ್ವರ. ಪ್ರಾಚೀನ ಕಾಲದಲ್ಲಿ ದೇವಾಲಯವನ್ನು ಕಟ್ಟಿಸಿ, ಅಲ್ಲಿ ತಾವು ಸ್ಥಾಪಿಸಿದ ದೇವರಿಗೆ ತಮ್ಮ ಹೆಸರನ್ನಿಡುವುದು ಅಂದು ರೂಢಿಯಲ್ಲಿದ್ದಿತು. ಹೀಗೆ ಮಾಡುವುದರಿಂದ ತಾವು ದೇವರೇ ಆಗುತ್ತೇವೆ - ಎಂಬುದು ಅವರ ಭಾವನೆ. ಈ ಮೇರೆಗೆ ಅಂದು ಸ್ತ್ರೀಯರೂ ಪುರುಷರೂ ತಮ್ಮ ಹೆಸರಿನ ಮುಂದೆ ಈಶ್ವರ ಪದ ಸೇರಿಸಿ ಅನೇಕ ದೇವತೆಗಳನ್ನು ಸ್ಥಾಪಿಸಿದ್ದಾರೆ. ಆಹವಮಲ್ಲೇಶ್ವರ, ಮಾಚೇಶ್ವರ ಇವು ಪುರುಷರು ಸ್ಥಾಪಿಸಿದ ದೇವತೆಗಳು; ಶಾಂತಲೇಶ್ವರ, ಬಾಚಲೇಶ್ವರ ಇವು ಸ್ತ್ರೀಯರು ಸ್ಥಾಪಿಸಿದ ದೇವತೆಗಳು. ಇದನ್ನು ನೋಡಿದರೆ ವಿಠ್ಠಲೇಶ್ವರ ಎಂಬುದೂ ವಿಠ್ಠಲಾ ಎಂಬ ಸ್ತ್ರೀ ಸ್ಥಾಪಿಸಿದ ದೇವತೆಯಾಗಿರಬಹುದೆ? ಎನಿಸುತ್ತದೆ. ವಿಷ್ಣು ಪದದ ತದ್ಭವ ವಿಟ್ಟ. ಪುರುಷನಾಮ 'ಏಚ'ವು ಸ್ತ್ರೀನಾಮದಲ್ಲಿ 'ಏಚಲಾ' ಆದಂತೆ ಈ ಪುರುಷನಾಮ 'ವಿಟ್ಟ'ವು ಸ್ತ್ರೀನಾಮದಲ್ಲಿ 'ವಿಟ್ಟಲಾ'ಎಂದಾಗಿ, ಮುಂದೆ ವಿಠ್ಠಲಾ ರೂಪಕ್ಕೆ ತಿರುಗಿರಬೇಕು. ಇವಳು ಸ್ಥಾಪಿಸಿದ ದೇವತೆ ವಿಠ್ಠಲೇಶ್ವರವೆಂದು ಖ್ಯಾತಿ ಪಡೆದಿರಬೇಕು. ಇಲ್ಲವೆ ವಿಷ್ಣು>ವಿಟ್ಟ>ವಿಟ್ಟಣ್ಣ>ವಿಟ್ಟಣ>ವಿಟ್ಟಳ>ವಿಟ್ಟಲ ರೀತಿಯಲ್ಲಿ ಊಹಿಸಿ, ಇದು ಪುರುಷ ಸ್ಥಾಪಿಸಿದ ದೇವತೆಯೆಂದೂ ಹೇಳಬಹುದು.

ಮಾಧ್ವಮತದ ಒಂದು ಕೇಂದ್ರ ಉಡುಪಿ, ಇನ್ನೊಂದು ಕೇಂದ್ರ ಈ ಪಂಡರಗೆ. ಇವು ೩೦೦-೪೦೦ ಮೈಲು ಅಂತರದ ಸ್ಥಳಗಳು. ಹೀಗಾಗಿ ಇವೆರಡೂ ಮೂಲತಃ ಭಿನ್ನ ಲಕ್ಷಣದ ವಿಷ್ಣುಭಕ್ತಿಯ ಪ್ರತ್ಯೇಕ ಪಂಥಗಳೇ ಆಗಿದ್ದು, ೧೫ನೆಯ ಶತಮಾನದಲ್ಲಿ ಹಂಪೆಯಲ್ಲಿ ಒಂದುಗೂಡಿರಬಹುದೇ? ಎನಿಸುತ್ತದೆ. ಇವರಲ್ಲಿ ಉಡುಪಿ ಸಂಪ್ರದಾಯದವರು ಆಚಾರ್ಯರು; ಸಂಸ್ಕೃತದವರು. ಪಂಡರಗೆ ಸಂಪ್ರದಾಯದವರು ದಾಸರು; ಕನ್ನಡದವರು. ಇವರಿಬ್ಬರದು ವೀರಶೈವದಲ್ಲಿ ಗುರುವರ್ಗ, ಜಂಗಮವರ್ಗಗಳಿದ್ದಂತೆ. ಹೀಗಾಗಿ ಮಾಧ್ವಮತವನ್ನು ಮನೆಮನೆಗೆ ಮುಟ್ಟಿಸಿ ಪ್ರಚಾರಗೊಳಿಸಿದ ಕೀರ್ತಿ ಉಡುಪಿಯ ಆಚಾರ್ಯಪಂಥದವರಿಗೆ ಸಲ್ಲುವುದಿಲ್ಲ, ಅದು ಸಲ್ಲುವುದು ಪಂಡರಗೆಯ ದಾಸಪಂಥರಿಗೆ.

ಇನ್ನು 'ಪುರಂದರ ವಿಠ್ಠಲ' ವಿಚಾರ : 'ಪುರಂದರ ವಿಠ್ಠಲ' ಎಂದರೆ ಪುರಂದರ ಹೆಸರಿನ ಗ್ರಾಮದಲ್ಲಿಯ ವಿಠ್ಠಲ ದೇವತೆಯೆಂದು ಅರ್ಥ, ಕಾಗಿನೆಲೆಯಾದಿಕೇಶವನೆಂದರೆ ಕಾಗಿನೆಲೆ ಗ್ರಾಮದ ಆದಿಕೇಶವನೆಂಬಂತೆ. ಪುರಂದರವೆಂಬುದು ಗ್ರಾಮನಾಮವೆಂದಾಗ ಇದರ ಅರ್ಥ ಏನು? ಎಂಬ ಪ್ರಶ್ನೆ ಎದುರಾಗುತ್ತದೆ. ಇಂದ್ರ ಅರ್ಥದ ಪುರಂದರ ಇಲ್ಲಿ ಹೊಂದಿಕೆಯಾಗುವುದಿಲ್ಲ. ಹೀಗಾಗಿ ಇದರ ಸರಿಯಾದ ರೂಪ ಪುರಂದವಾರ, ಪುರಂದವರ ಇಲ್ಲವೆ ಪುರಂದೂರು ಇರಬಹುದು. ಬಹುಶಃ ನಾಗವಾರ, ದಿಂಡವಾರಗಳಂತೆ 'ಪುರಂದವಾರ' ಎಂಬುದೇ ಮೂಲರೂಪವಾಗಿದ್ದು, ಉಚ್ಚಾರದ ಒತ್ತಡಕ್ಕೆ ಸಿಕ್ಕು 'ಪುರಂದರ' ಎಂದಾಗಿರಬಹುದು. ಇಲ್ಲಿಯ

'ವಾ' ಅರ್ಧಸ್ವರವಾಗಿರುವುದರಿಂದ ಮಧ್ಯದಲ್ಲಿ ನಿಲ್ಲುವುದಿಲ್ಲವೆಂಬುದು ತಿಳಿದ ವಿಷಯವೇ ಆಗಿದೆ. ಒಟ್ಟಿನಲ್ಲಿ ಪುರಂದರವೆಂಬುದು ಗ್ರಾಮನಾಮ. ಈ ಗ್ರಾಮಕ್ಕೆ ಕೋಟೆ ಕಟ್ಟಿಸಿದ ಬಳಿಕ ಇದು ಪುರಂದರಗಡ ಎಂದಾಗಿರಬಹುದು ಅಥವಾ ಈ ಪುರಂದರ ಮತ್ತು ಪುರಂದರಗಡ ಎರಡು ಸ್ವತಂತ್ರ ಗ್ರಾಮಗಳೇ ಇರಬಹುದು. ಇವೆರಡರದಲ್ಲಿ ಪುರಂದರದಾಸರಿಗೆ ಸಂಬಂಧಿಸಿದ ಗ್ರಾಮ ಯಾವುದು?

'ಪುರಂದರವಿಠ್ಠಲ' ಎಂಬ ಪುರಂದರದಾಸರ ಮುದ್ರಿಕೆಯು ಪುರಂದರ ಗ್ರಾಮದಲ್ಲಿ ವಿಠ್ಠಲದೇವತೆಯಿದ್ದುದನ್ನು ಸೂಚಿಸುತ್ತದೆ. ಆದರೆ ಈಗಿನ ಸುಪ್ರಸಿದ್ಧ ಪುರಂದರಗಡದಲ್ಲಿ ಪುರಂದರೇಶ್ವರ, ಕೇದಾರೇಶ್ವರ ದೇವಾಲಯಗಳಿವೆಯೇ ಹೊರತು ವಿಠ್ಠಲ ದೇವಸ್ಥಾನವಿಲ್ಲ. ಅದು ಇದ್ದ ಸೂಚನೆಗಳೂ ಇಲ್ಲ. ಆದುದರಿಂದ ವಿಠ್ಠಲನಿಲ್ಲದ ಈಗಿನ ಪುರಂದರಗಡಕ್ಕೂ ಪುರಂದರದಾಸರಿಗೂ ಯಾವುದೇ ಸಂಬಂಧವಿಲ್ಲವೆಂದು ಹೇಳಬೇಕಾಗುತ್ತದೆ. ಹೀಗಾಗಿ ವಿಠ್ಠಲ ದೇವತೆಯಿರುವ ಪುರಂದರ ಹೆಸರಿನ ಬೇರೊಂದು ಗ್ರಾಮವನ್ನು ಹುಡುಕಬೇಕು. ವಿಠ್ಠಲ ಸಂಪ್ರದಾಯದ ಮೂಲ ಮತ್ತು ಮುಖ್ಯ ಕೇಂದ್ರ ಪಂಡರಪುರ. ಈ ಪಂಡರಪುರದ ಶಾಖೆಯೆಂಬಂತೆ ಬೇರೊಂದು ಪುರಂದರ ಗ್ರಾಮದಲ್ಲಿಯೂ ವಿಠ್ಠಲ ಸ್ಥಾಪಿತನಾಗಿರುವ ಸಾಧ್ಯತೆಯಿದೆ. ಸಹಜವಾಗಿಯೇ ಈ ಶಾಖಾಗ್ರಾಮ ಬಹುಶಃ ಪಂಡರಪುರ ಪ್ರದೇಶದಲ್ಲಿಯೇ ಇರಬಹುದು.

ಪುರಂದರದಾಸರ ಮುದ್ರಿಕೆ 'ಪುರಂದರವಿಠ್ಠಲ'. ಈ ಮುದ್ರಿಕೆಯಿಂದ ಪುರಂದರದಾಸರು ಪುರಂದರ ಊರಿನ ವಿಠ್ಠಲ ದೇವತೆಯ ದಾಸರು ಎಂಬ ಅರ್ಥ ಹೊರಡುವುದೇ ಹೊರತು ಇವರ ಊರು ಕಡ್ಡಾಯವಾಗಿ ಪುರಂದರವೆಂಬ ಅರ್ಥಹೊರಡುವುದಿಲ್ಲ ('ಕೂಡಲಸಂಗಮದೇವಾ' ಎಂಬ ಮುದ್ರಿಕೆ ಬಳಸಿದ ಮಾತ್ರಕ್ಕೆ ಬಸವಣ್ಣನವರ ಊರು ಕೂಡಲಸಂಗಮವಲ್ಲ). ಅಂದರೆ ಪುರಂದರವೆಂಬುದು ವಿಠ್ಠಲ ದೇವತೆಯ ಗ್ರಾಮವೆಂಬುದು ನಿಜ; ಪುರುಂದರದಾಸರು ಈ ದೇವತೆಯ ಭಕ್ತರೆಂಬುದೂ ನಿಜ. ಆದರೆ ಅವರು ಈ ಊರಿನವರು ಆಗಿರಬಹುದು, ಆಗಿರಲಿಕ್ಕಿಲ್ಲ.

ಹೀಗೆ ಪುರಂದರದಾಸ ಎಂಬುದಕ್ಕೆ ಪುರಂದರ ಗ್ರಾಮದ (ವಿಠ್ಠಲನ) ದಾಸ ಎಂಬ ಅರ್ಥವಿರುವುದರಿಂದ, ಇವರ ಅಂಕಿತನಾಮ ಬೇರೊಂದು ಇರಬಹುದು. ಶ್ರೀನಿವಾಸ ಅಥವಾ ಕೃಷ್ಣಪ್ಪನಾಯಕ ಎಂದು ಅನೇಕರು ಹೇಳುತ್ತಲಿದ್ದರೂ ಇದಕ್ಕೆ ಗಟ್ಟಿ ಆಧಾರಗಳಿಲ್ಲ.

ಒಟ್ಟಿನಲ್ಲಿ ಪಾಂಡುರಂಗವೆಂಬುದು ಪಂಡರಗೆ ಎಂಬ ಗ್ರಾಮನಾಮದ ಸುಧಾರಿತ ರೂಪವಾಗಿದೆ. ಪುರಂದರದಾಸರ ಊರು, ಹೆಸರುಗಳು ಇನ್ನೂ ಸಂಶೋಧನೆಯ ವಿಷಯಗಳಾಗಿ ಉಳಿದಿವೆ.

■■

ಆಕರ : ಮಾರ್ಗ ಸಂಪುಟ–೧

೧೪

ಮಹಾಪುರಾಣ : ಶಾಂತಿರಾಜಶಾಸ್ತ್ರಿಗಳ ಆವೃತ್ತಿ

ಪುರಾಣಕೃತಿಯಾಗಿದ್ದರೂ ಕಾವ್ಯಕ್ಕೆ ಕಾವ್ಯ, ಶಾಸ್ತ್ರಕ್ಕೆ ಶಾಸ್ತ್ರವಾಗಿರುವ "ಮಹಾಪುರಾಣ" ಹೆಸರಿಗೆ ತಕ್ಕಂತೆ ಕರ್ನಾಟಕ ಪ್ರತಿಭೆಯ ಒಂದು ಮಹಾಕೃತಿ. ಗುರು ಜಿನಸೇನರಿಂದ ಬಹುಶಃ ಮಳಖೇಡದಲ್ಲಿ ಪ್ರಾರಂಭವಾಗಿ, ಶಿಷ್ಯ ಗುಣಭದ್ರನಿಂದ ಬಂಕಾಪುರದಲ್ಲಿ ಪೂರ್ಣಗೊಂಡ ಈ ಸಂಸ್ಕೃತಕೃತಿ ಜೈನಸಂಸ್ಕೃತಿಯ ಬಹುಮುಖ್ಯ ಅಭಿವ್ಯಕ್ತಿಯೆನಿಸಿದೆ. ೨೪ ಜನ ತೀರ್ಥಂಕರರ, ಇವರ ಬದುಕಿನ ಭಾಗವಾಗಿರುವ ಬಲದೇವ-ವಾಸುದೇವಾದಿಗಳ, ಇವರ ಬದುಕಿನ ಭಾಗವಾಗಿರುವ ಸಾವಿರ ಸಾವಿರ ವ್ಯಕ್ತಿಗಳ ಮಹಾಚರಿತ್ರೆಯಿದು. ಪ್ರಾಪಂಚಿತ ಸ್ತರದಿಂದ ಪಾರಮಾರ್ಥಿಕ ಸ್ತರದ ವರೆಗಿನ ಮಾನವಸ್ವಭಾವಗಳನ್ನು, ಜೀವನವಿಧಾನಗಳನ್ನು ವಿವರಿಸುವ ವಿಶ್ವಕೋಶ ಮಾದರಿಯ ಇದು ೭೭ ಪರ್ವ, ೨೦ ಸಾವಿರ ಶ್ಲೋಕಗಳ ಬೃಹತ್ ಕೃತಿಯಾಗಿ ಬೆಳೆದಿದೆ.

ಜಿನಸೇನಾಚಾರ್ಯರ ನಿಧನ ಕಾರಣವಾಗಿ ೪೩ ಪರ್ವಕ್ಕೆ ನಿಂತುಹೋಗಿದ್ದ ಈ ಕೃತಿಗೆ, ಗುಣಭದ್ರಾಚಾರ್ಯರು ೩೪ ಪರ್ವಗಳನ್ನು ಬರೆದು ಜೋಡಿಸಿ, ಪೂರ್ಣಗೊಳಿಸಿದರು. ಇಲ್ಲಿ ಒಬ್ಬರ ರಚನೆಯನ್ನು "ಪೂರ್ವಪುರಾಣ"ವೆಂದೂ, ಇನ್ನೊಬ್ಬರ ರಚನೆಯನ್ನು "ಉತ್ತರ ಪುರಾಣ"ವೆಂದೂ ಇವರಿಬ್ಬರ ಸಂಯುಕ್ತ ಸಂಪುಟವನ್ನು "ಮಹಾಪುರಾಣ"ವೆಂದೂ ಕರೆಯುವುದು ರೂಢಿ.

ಹೀಗೆ ಎರಡು ತಲೆಮಾರುಗಳ ಸೃಷ್ಟಿಯಾಗಿರುವ ಈ ಕೃತಿಯನ್ನು ಒಂದು ತಲೆಮಾರಿನಲ್ಲಿ ಪರಿಷ್ಕರಿಸಿ, ಅನುವಾದಿಸಿ ಪ್ರಕಟಿಸಿದವರು ಶ್ರೀ ಎರ್ತೂರು ಶಾಂತಿರಾಜಶಾಸ್ತ್ರಿಗಳು. ಪೂರ್ವಪುರಾಣವನ್ನು ಭಾಗಶಃ ೧೯೨೫ರಲ್ಲಿ, ಇಡಿಯಾಗಿ ೧೯೩೩ರಲ್ಲಿ, ಉತ್ತರಪುರಾಣವನ್ನು ೧೯೪೦ರಲ್ಲಿ-ಹೀಗೆ ೧೫ ವರ್ಷ ಹಗಲಿರುಳು ದುಡಿದು, ೩, ೨೪೨ ಪುಟಗಳ ಈ ಗಜಗಾತ್ರಕೃತಿಯನ್ನು ಎರಡು ಸಂಪುಟಗಳಲ್ಲಿ ಶ್ರೀ ಶಾಸ್ತ್ರಿಗಳು ಹೊರತಂದುದು ದೊಡ್ಡ ಪವಾಡವೆನಿಸಿದೆ. ಅವರ ಜೀವಮಾನದ ಒಂದು ಐತಿಹಾಸಿಕ ಪ್ರಕಟನೆಯಾಗಿರುವ ಇದು, ಕನ್ನಡ ಪುಸ್ತಕ ಪ್ರಕಟನೆಯ ಇತಿಹಾಸದಲ್ಲಿಯೂ ಒಂದು ಐತಿಹಾಸಿಕ ಘಟನೆಯಾಗಿದೆ.

ಶಾಸ್ತ್ರಿಗಳ ಸಂಪಾದನೆಯಲ್ಲಿ ಪಾಠಪರಿಷ್ಕರಣ, ಗದ್ಯಾನುವಾದ, - ಈ ಎರಡು ವಿದ್ವತ್ತುಗಳ ಸ್ಪರ್ಧೆ ಎದ್ದು ತೋರುತ್ತದೆ. ಗ್ರಂಥಪರಿಷ್ಕರಣಶಾಸ್ತ್ರ, ಅದೇ ಆಗ (೧೯೨೫) ಕಣ್ಣು ತೆರೆಯುತ್ತಿದ್ದ ಕಾಲ. ಇಂಥ ಸಂದರ್ಭದಲ್ಲಿ ಇವರು ಕನ್ನಡ ಕಾವ್ಯಕೃತಿಯನ್ನಲ್ಲ-ಸಂಸ್ಕೃತ ಕೃತಿಯನ್ನು, ಸಣ್ಣ ಕೃತಿಯನ್ನಲ್ಲ-ದೊಡ್ಡ ಕೃತಿಯನ್ನು; ಕಾವ್ಯಕೃತಿಯನ್ನಲ್ಲ-ಪುರಾಣಕಾವ್ಯಕೃತಿಯನ್ನು ಪರಿಷ್ಕರಣಕ್ಕೆ ಎತ್ತಿಕೊಂಡುದು ಸಾಹಸದ ಮಾತಾಗಿದೆ. ಹತ್ತಾರು ಜನ ವಿದ್ವಾಂಸರು ಸೇರಿ ಮಾಡಿಮುಗಿಸಬೇಕಾದ ಬೃಹತ್ ಯೋಜನಾವ್ಯಾಪ್ತಿಯ ಕೆಲಸವನ್ನು ಒಬ್ಬರೇ ಪೂರೈಸಿ, ತಾವು ಒಬ್ಬ ವ್ಯಕ್ತಿಯಲ್ಲ, ಒಂದು ಸಂಸ್ಥೆಯೆಂಬುದನ್ನು ಶಾಸ್ತ್ರಿಗಳು ತೋರಿಸಿಕೊಟ್ಟಿದ್ದಾರೆ.

ಮಹಾಪುರಾಣದ ಪರಿಷ್ಕರಣವು ಸಂಸ್ಕೃತ ಭಾಷೆ-ಛಂದಸ್ಸು-ನಿಘಂಟುಗಳ ಜ್ಞಾನವನ್ನೂ, ಜೈನ ಸಿದ್ಧಾಂತ-ಪುರಾಣ-ಸಾಹಿತ್ಯಗಳ ಜ್ಞಾನವನ್ನೂ ಬಯಸುತ್ತದೆ. ಶ್ರದ್ಧೆ-ಶ್ರಮಗಳನ್ನಂತೂ ಮೊದಲು ಅಪೇಕ್ಷಿಸುತ್ತದೆ. ಇವೆಲ್ಲವುಗಳ ಬಲದಿಂದ ಗ್ರಂಥವನ್ನು ಸಂಸ್ಕರಿಸುವಾಗ ಪ್ರಾಯೋಗಿಕ ಗ್ರಂಥಸಂಪಾದನೆಯ ಶಿಸ್ತು ತೀರ ಅವಶ್ಯವೆನಿಸುತ್ತದೆ. ಇವುಗಳನ್ನು ಸಮಪ್ರಮಾಣದಲ್ಲಿ ಮೇಳವಿಸಿಕೊಂಡಿದ್ದ ಶಾಸ್ತ್ರಿಗಳು ಎರಡು ತಾಳೆಪ್ರತಿ, ಒಂದು ಮುದ್ರಿತ ಮರಾಠಿ ಪ್ರತಿಗಳನ್ನು ಬಳಸಿಕೊಂಡು, ೨೦ ಸಾವಿರ ಶ್ಲೋಕಗಳನ್ನು ಪರಿಷ್ಕರಿಸಿದುದು ಸಣ್ಣ ಕೆಲಸವೇನಲ್ಲ. ಅಕ್ಷರಗಳ ಮಾತ್ರಾಮೌಲ್ಯ ನಿಯತವಾಗಿರುವ ಅಕ್ಷರವೃತ್ತದ ಪರಿಷ್ಕರಣ ಸುಲಭ, ಅನಿಯತವಾಗಿರುವ ಶ್ಲೋಕಗಳ ಪರಿಷ್ಕರಣ ತೀರ ಕಠಿಣ. ಶಾಸ್ತ್ರಿಗಳು ಈ ಕಠಿಣವನ್ನು ಸುಲಭಮಾಡಿ ತೋರಿಸಿದ್ದಾರೆ. ಅವರ ಸಂಸ್ಕೃತ ಭಾಷಾಜ್ಞಾನ, ಜೈನಶಾಸ್ತ್ರಜ್ಞಾನಗಳು ಏಕೀಭವಿಸುವಲ್ಲಿ ಈ ಕೃತಿ ಆಕೃತಿ ಪಡೆದಿದೆ. ಪಾಠಗಳನ್ನು ಸ್ವೀಕರಿಸುವ, ವರ್ಜಿಸುವ, ತಿದ್ದುಪಡಿ ಮಾಡುವ ಇತ್ಯಾದಿ ತಂತ್ರಗಳು ಆಗ ಇನ್ನೂ ಬೆಳೆದುಬಂದಿರಲಿಲ್ಲವಾಗಿ, ಸಹಜವಾಗಿಯೇ ಕೆಲವೊಮ್ಮೆ ಗ್ರಂಥಸಂಪಾದನೆಯ ತಾಂತ್ರಿಕ ಕೊರತೆಗಳು ಕಂಡುಬಂದರೂ ಮುಖ್ಯವೆನಿಸುವ ಪಾಠಪರಿಷ್ಕರಣಕ್ಕೆ ಈ ಮಾತು ಅನ್ವಯಿಸುವುದಿಲ್ಲ. ಅದೇನೇ ಇದ್ದರೂ ಇಷ್ಟು ದೊಡ್ಡ 'ಏಕವ್ಯಕ್ತಿಪರಿಷ್ಕರಣ' ಕಾರ್ಯ ನಮ್ಮ ನಾಡಿನಲ್ಲಿ ಈವರೆಗೆ ನಡೆದಿಲ್ಲವೆಂದೇ ಹೇಳಬೇಕು.

ಶಾಸ್ತ್ರಿಗಳ ಇನ್ನೊಂದು ಸಾಹಸವೆಂದರೆ ಪ್ರತಿಯೊಂದು ಶ್ಲೋಕಕ್ಕೂ "ಕರ್ಣಾಟಕ ಭಾವದೀಪಿಕೆ" ಹೆಸರಿನ ಕನ್ನಡ ಭಾಷಾಂತರವನ್ನು ಪೂರೈಸಿದುದು. ಇದರಿಂದಾಗಿ ಗ್ರಂಥ ಸಂಪಾದನಪ್ರಜ್ಞೆಯಲ್ಲಿ ಭಾಷಾಂತರಪ್ರಜ್ಞೆ ಸಂಗಮಿಸಿ ಈ ಕೃತಿಯ ಮಹತ್ವ ಇನ್ನೂ ವರ್ಧಿಸಿದೆ. ಶಾಸ್ತ್ರಿಗಳ ಅನುವಾದ ಸರಳ ಮತ್ತು ಲಲಿತ. ಎಲ್ಲ ಕಡೆಗೂ ಅದು ಶ್ಲೋಕಕ್ಕೆ ತಕ್ಕಂತೆ ಸಂಕ್ಷಿಪ್ತವಾಗಿದ್ದರೂ ಕೆಲವಡೆ ವಿಷಯಸ್ಪಷ್ಟತೆಗಾಗಿ ವಿವರಣಾತ್ಮಕವೂ ಆಗಿದೆ. ಹಳೆಯ ಕಾವ್ಯಗಳ ಗದ್ಯಾನುವಾದದ ಬಗ್ಗೆ ನಾವು ಇತ್ತೀಚೆ ಮಾತನಾಡುತ್ತಲಿದ್ದೇವೆ. ಅರವತ್ತು ವರ್ಷಗಳಷ್ಟು ಹಿಂದೆಯೇ ಶಾಸ್ತ್ರಿಗಳು ಆ ಕೆಲಸವನ್ನು ಮಾಡಿತೋರಿಸಿದುದು, ದೊಡ್ಡ ಪ್ರಮಾಣದಲ್ಲಿ ಮಾಡಿತೋರಿಸಿದುದು ನಮಗೆ ಒಂದು ಆದರ್ಶವೆನಿಸಿದೆ. ಬಹುಶಃ ಕನ್ನಡದ 'ಏಕವ್ಯಕ್ತಿ ಭಾಷಾಂತರ' ಪ್ರಯತ್ನಗಳಲ್ಲಿ ಇದೇ ದೊಡ್ಡದೆಂದು ತೋರುತ್ತದೆ.

ಹೀಗೆ ಒಂದು ಪ್ರಾಚೀನ ಕವಿಕೃತಿಯನ್ನು ಪರಿಷ್ಕರಿಸುವ, ಅನುವಾದಿಸುವ ವಿದ್ವಾಂಸ ಆ ಕವಿಯ ಮನಸ್ಸನ್ನೇ ಮೈಗೂಡಿಸಿಕೊಳ್ಳಬೇಕಾಗುತ್ತದೆ. ಮಹಾಪುರಾಣಕ್ಕೆ ಅನ್ವಯಿಸಿ ಹೇಳುವುದಾದರೆ ಶಾಸ್ತ್ರಿಗಳು ಮಾನಸಿಕವಾಗಿ "ಜಿನಸೇನ-ಗುಣಭದ್ರ"ರಾಗಿ ಈ ಕೆಲಸವನ್ನು ಪೂರೈಸಿದ್ದಾರೆ. ಹತ್ತನೆಯ

ಶತಮಾನದಲ್ಲಿ ಈ ಮಹಾಪುರಾಣವನ್ನು ಸೃಜನಶೀಲ ಅನುವಾದ ರೂಪದಲ್ಲಿ ಚಾವುಂಡರಾಯ ಕನ್ನಡಿಸಿದ್ದರೂ ಶಾಸ್ತ್ರಿಗಳ ಪ್ರಯತ್ನ ಅದಕ್ಕಿಂತ ವ್ಯಾಪಕವಾದುದು, ಸಫಲವಾದುದೆಂದೇ ಹೇಳಬೇಕು. ಹೀಗೆ ಗ್ರಂಥಸಂಪಾದಕರಾಗಿ, ಅನುವಾದಕರಾಗಿ ಸಮಗ್ರ ಮಹಾಪುರಾಣವನ್ನು ಸಮರ್ಥರೀತಿಯಿಂದ ಬೆಳಕಿಗೆ ತಂದಿದ್ದರೂ ಶಾಸ್ತ್ರಿಗಳಿಗೆ ಆಧುನಿಕ ಗ್ರಂಥಸಂಪಾದನೆಯ ಚರಿತ್ರೆಯಲ್ಲಿ, ಭಾಷಾಂತರ ಚರಿತ್ರೆಯಲ್ಲಿ ಸ್ಥಾನ ಲಭ್ಯವಾಗದಿರುವುದು ಸತ್ಯದ ವಿಪರ್ಯಾಸವೇ ಸರಿ. ಈ ತಪ್ಪನ್ನು ಚರಿತ್ರೆಕಾರರು ಇನ್ನು ಮೇಲಾದರೂ ತಿದ್ದಿಕೊಳ್ಳುವುದು ಅವಶ್ಯವಿದೆ.

ಶಾಂತಿರಾಜಶಾಸ್ತ್ರಿಗಳು ಮಹಾಪುರಾಣವನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿ ೪೦ ವರ್ಷ ಕಳೆಯುವಲ್ಲಿ, ಕನ್ನಡ ಸಾಹಿತ್ಯ ಪರಿಷತ್ತು ೧೯೮೮ರಲ್ಲಿ ಇದರ ದ್ವಿತೀಯ ಆವೃತ್ತಿಯನ್ನು ನಾಲ್ಕು ಸಂಪುಟಗಳಲ್ಲಿ ಹೊರತಂದಿತು. ಇಲ್ಲಿಂದ ೧೦ ವರ್ಷಗಳ ಬಳಿಕ ಇದರ ಮೂರನೆಯ ಆವೃತ್ತಿಯನ್ನು ಈಗ ಹೊರತಂದಿದೆ, ಬೆಂಗಳೂರಿನ "ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್."

ಈ ಟ್ರಸ್ಟಿನ ಸಂಸ್ಥಾಪಕರು ಶಾಂತಿರಾಜಶಾಸ್ತ್ರಿಗಳ ಮಕ್ಕಳು. ದೊಡ್ಡ ವಿದ್ವಾಂಸರಿಗೆ ದೊಡ್ಡ ಸ್ಮಾರಕವೆಂಬಂತೆ ಈ ಟ್ರಸ್ಟ್ ಸ್ಥಾಪಿಸಿ, ತಾವು ದೊಡ್ಡ ತಂದೆಯ ದೊಡ್ಡ ಮಕ್ಕಳೆಂಬುದನ್ನು ಇವರು ನಿಜಮಾಡಿ ತೋರಿದ್ದಾರೆ. ೧೯೮೮ರಿಂದ ಈವರೆಗೆ ತಂದೆ ಶಾಸ್ತ್ರಿಗಳ ೩೩ ಕೃತಿಗಳನ್ನು ಪುನರ್ಮುದ್ರಿಸಿದ ಇವರು, ಈಗ ಎರಡು ಸಂಪುಟಗಳಲ್ಲಿ, ದೊಡ್ಡ ಆಕಾರದ ೧೫೦೦ ಪುಟಗಳಲ್ಲಿ "ಮಹಾಪುರಾಣ"ವನ್ನು ಪ್ರಕಟಿಸಿ ದಾಖಲೆಯನ್ನೇ ಸ್ಥಾಪಿಸಿದ್ದಾರೆ.

ಪುಸ್ತಕ ಮೂಲತಃ 'ಓದುವ ಸರಕು.' ಇಂದು ಅದು "ಮಾರಾಟದ ಸರಕು" ಸ್ಥಿತಿಗಿಳಿಯುತ್ತಲಿದೆ. ಈ ಸಂದರ್ಭದಲ್ಲಿ ಲಾಭ ತರುವ ಪುಸ್ತಕಗಳ ಪ್ರಕಟನೆ ಮಾತ್ರ ಮುಖ್ಯವೆನಿಸಿ, ಪ್ರೌಢ ಪುಸ್ತಕಪ್ರಕಟನೆ ಉಪೇಕ್ಷೆಗೆ ಗುರಿಯಾಗುತ್ತಲಿದೆ. ಇಂಥವುಗಳ ಪ್ರಕಟನೆಯ ಉದ್ದೇಶ ಹೊಂದಿರುವ ವಿಶ್ವವಿದ್ಯಾಲಯಗಳೂ ಇಂದು ದುರ್ಬಲವಾಗಿವೆ. ಇಂಥ ಪರಿಸ್ಥಿತಿಯಲ್ಲಿ ಸಾರ್ವಜನಿಕ ಸಂಸ್ಥೆಯಾದ ಪ್ರಸ್ತುತ ಟ್ರಸ್ಟ್ ಒಂದೂವರೆ ಸಾವಿರ ರೂಪಾಯಿ ಬೆಲೆಯ ದೊಡ್ಡ ಗ್ರಂಥ ಪ್ರಕಟಿಸಿದುದು ವಿಶೇಷವೆಂದೇ ಹೇಳಬೇಕು.

ಪುಸ್ತಕದ ಆಕಾರ, ಬಳಸಿದ ಕಾಗದ, ಅಕ್ಷರಗಳ ಜೋಡಣೆ, ಪುಟಸೌಂದರ್ಯ, ಓದುವ ಪುರಾಣವನ್ನು ನೋಡುವ ಪುರಾಣವನ್ನಾಗಿಸಿ ಬಣ್ಣದ ಚಿತ್ರ ಇತ್ಯಾದಿಗಳಿಂದಾಗಿ ಇದು 'ನ ಭೂತೋ ನ ಭವಿಷ್ಯತಿ.' ಸಾವಿರಾರು ಗ್ರಂಥರಾಶಿಯ ನಡುವೆಯೂ ತಟ್ಟನೆ ಕಣ್ಣು ಸೆಳೆಯುವ ಕೃತಿ.

ಕೆಲವೊಮ್ಮೆ ಪ್ರಕಾಶಕರು ಪುಸ್ತಕದ ಬಾಹ್ಯಸೌಂದರ್ಯಕ್ಕೆ ಒತ್ತುಕೊಟ್ಟು ಪಠ್ಯವನ್ನು ಉಪೇಕ್ಷೆಗೆ ಗುರಿ ಮಾಡುತ್ತಾರೆ. ಇದಕ್ಕೆ ವಿರುದ್ಧವೆನ್ನುವಂತೆ ಈ ಪ್ರಕಾಶಕರು ಪಠ್ಯದ ಗುಣಮಟ್ಟವನ್ನು ಕಾಯ್ದುಕೊಂಡುದು ಮೆಚ್ಚಬೇಕಾದ ವಿಷಯ. "ಪ್ರಸ್ತಾಪನೆ"ಯಲ್ಲಿ ಶಾಂತಿರಾಜಶಾಸ್ತ್ರಿಗಳ ಎಲ್ಲ ಆವೃತ್ತಿಗಳ ಮುನ್ನುಡಿಗಳನ್ನು, ಪ್ರಕಾಶಕರ ವಿಜ್ಞಾಪನೆ, ಟ್ರಸ್ಟ್ ಪರಿಚಯ-ಇಷ್ಟು ಮಾತ್ರ ಇಟ್ಟುಕೊಂಡಿದ್ದರೆ, "ಅನುಬಂಧ"ದಲ್ಲಿ ದಾನಿಗಳ ಹೆಸರನ್ನು ಕೈಬಿಟ್ಟಿದ್ದರೆ, ಮತ್ತು ಅವಶ್ಯ ಚಿತ್ರಗಳನ್ನು ಮಾತ್ರ ಸೇರಿಸಿದ್ದರೆ ಈ ಗ್ರಂಥದ ಘನತೆ ಇನ್ನೂ ವರ್ಧಿಸುತ್ತಿತ್ತು.

ಈ ಆವೃತ್ತಿಯ ವಿಶೇಷತೆಯೆಂದರೆ ೧೩೪ ಪುಟಗಳ ವೈವಿಧ್ಯಪೂರ್ಣ ಅನುಬಂಧಗಳ ಜೋಡಣೆ. ಪುರುಷನಾಮಸೂಚಿ, ಸ್ತ್ರೀನಾಮಸೂಚಿ, ದೇಶನಾಮಸೂಚಿ, ನಗರನಾಮಸೂಚಿ, ಆಭರಣನಾಮಸೂಚಿ,

ಸಾಮಾನ್ಯ ವಿಷಯಸೂಚಿ, ಶ್ಲೋಕಗಳ ಅಕಾರಾದಿ ಸೂಚಿಗಳನ್ನಲ್ಲದೆ ತೀರ್ಥಂಕರರ ಜನ್ಮಸ್ಥಳ-ಇವೇ ಮೊದಲಾದ ಅನುಬಂಧಗಳು ಇಲ್ಲಿ ಸೇರ್ಪಡೆಯಾಗಿದ್ದು, ಮಹಾಪುರಾಣವನ್ನು ಅನೇಕ ದಿಕ್ಕುಗಳಿಂದ ಪ್ರವೇಶಿಸಲು, ಅನೇಕ ನೆಲೆಗಳಲ್ಲಿ ಅಭ್ಯಸಿಸಲು ಇದರಿಂದ ಬಹುದೊಡ್ಡ ಸಹಾಯವಾಗಿದೆ; ಈ ಗ್ರಂಥಕ್ಕೆ "ವಿಸ್ತೃತ ಆವೃತ್ತಿ"ಯ ಹಿರಿಮೆ ಪ್ರಾಪ್ತವಾಗಿದೆ. ಹೀಗೆ "ಮಹಾಪುರಾಣ"ದ ಈ ಮೂರನೆಯ ಕನ್ನಡ ಆವೃತ್ತಿ ಹಲವು ದೃಷ್ಟಿಯಿಂದ ಮಹತ್ವಪೂರ್ಣ ಪ್ರಕಟನೆಯೆನಿಸಿದೆ, "ಶಾಂತಿರಾಜಶಾಸ್ತ್ರಿ ಟ್ರಸ್ಟ್" ಕನ್ನಡಿಗರ ಅಭಿನಂದನೆಗೆ ಪಾತ್ರವಾಗಿದೆ.

■■

ಆಕರ : ಮಾರ್ಗ ಸಂಪುಟ-೩

೧೫

ಶಬರಶಂಕರವಿಳಾಸ ಸಂಗ್ರಹ

ಕಾವ್ಯಗಳನ್ನು ಸಂಗ್ರಸುವುದರ ಪರಮೋದ್ದೇಶವೆಂದರೆ ಕವಿ ಮತ್ತು ಕೃತಿಗಳ ನಿಜ ಸ್ವರೂಪವನ್ನು ಒಂದು ಪರಿಮಿತ ವ್ಯಾಪ್ತಿಯಲ್ಲಿ ತೋರಿಸಿಕೊಡುವುದು. ಅಸಗನ ಸಂಸ್ಕೃತ ಶಾಂತಿಪುರಾಣದ ಸಂಕ್ಷಿಪ್ತ ರೂಪವಾದ 'ಲಘುಶಾಂತಿ ಪುರಾಣ' ಕುಮಾರವ್ಯಾಸ ಭಾರತ, ಕುಮಾರವಾಲ್ಮೀಕಿ ರಾಮಾಯಣಗಳ ಸಂಗ್ರಹಗಳಾದ 'ಸಂಕ್ಷೇಪ ಭಾರತ' 'ಸಂಕ್ಷೇಪ ರಾಮಾಯಣ' ಇತ್ಯಾದಿ ಪ್ರಾಚೀನ ಸಂಗ್ರಹಗಳಿಗಿಂತ ಬಹುಶಃ ಬೇರೆಯಾಗಿವೆ, ಇಂದು ಸಿದ್ಧಗೊಳ್ಳುತ್ತಿರುವ ಸಂಗ್ರಹಗಳು.

ಈ "ಸಂಗ್ರಹ"ಗಳ ಸೃಷ್ಟಿಗೆ ಮುಖ್ಯ ಪ್ರಚೋದನೆಯೆಂದರೆ ವಿದ್ಯಾರ್ಥಿಗಳು. ಮಿತಗಾತ್ರದಲ್ಲಿ ಕೃತಿಯನ್ನೋದಲೆಂಬ ಹಂಬಲ. ತಾಯಿ ಮೈ-ಮನಗಳನ್ನು ಮೇಳವಿಸಿಕೊಂಡು ಅವತರಿಸುವ ಶಿಶುವಿನಂತೆ ಸಂಗ್ರಹವು ಮೂಲ ಕಾವ್ಯದ ಒಡಲಿನಿಂದ 'ಪುನಃಸೃಷ್ಟಿ'ಯಾಗಿ ಹೊರಬರಬೇಕು; ತಪ್ಪಿದರೆ ಕವಿ ಕೃತಿಗಳ ಘನತೆಗೆ ಚ್ಯುತಿ ಬರದಂತೆ ಸಂಗ್ರಹಗೊಳ್ಳಬೇಕು. ಆದರೆ "ಸಂಗ್ರಹಕಲಾಶೀಲ"ರ ಕೈಯಲ್ಲಿ ಉಳಿದು ಕಲೆಯಾಗಿ ಬೆಳೆಯಬೇಕಾಗಿದ್ದ ಈ ಕಾರ್ಯ,"ಪಠ್ಯ ಪುಸ್ತಕ ಪ್ರಲೋಭನ ಲೋಲ"ರ ಕಪಿಮುಷ್ಠಿಯಲ್ಲಿ ಸಿಕ್ಕು ತನ್ನ ಮೂಲೋದ್ದೇಶವನ್ನು ಕಳೆದುಕೊಳ್ಳುತ್ತಿರುವ ಇಂದಿನ ಕಾಲದಲ್ಲಿ ಆದಿಪುರಾಣ, ಪಂಪರಾಮಾಯಣ, ಮಲ್ಲಿನಾಥ ಪುರಾಣ, ಗಿರಿಜಾ ಕಲ್ಯಾಣ, ಹರಿಶ್ಚಂದ್ರಕಾವ್ಯ, ಸಿದ್ಧರಾಮಪುರಾಣ, ಪ್ರಭುಲಿಂಗಲೀಲೆಗಳಿಂದ ಬಿಡಿಸಿದ ಉತ್ತಮೋತ್ತಮ ಸಂಗ್ರಹಗಳೂ ಹುಟ್ಟಿಕೊಂಡಿವೆ. ಒಂದೆರಡು ಕೊರತೆಗಳಿದ್ದರೂ ಈ ಸಂಗ್ರಹಗಳ ಸಾಲಿನಲ್ಲಿ ನಿಲ್ಲುವ ಅರ್ಹತೆಯನ್ನು ಪಡೆದಿದೆ, ಡಾ. ಜಿ. ಎಸ್. ಶಿವರುದ್ರಪ್ಪನವರು ಶ್ರೀ ಬಿ. ಎನ್. ಶಾಸ್ತ್ರಿಗಳೊಂದಿಗೆ ಸಿದ್ಧಪಡಿಸಿದ ಶಬರಶಂಕರವಿಳಾಸ ಸಂಗ್ರಹ. ಆದರೆ ಕುಮಾರವ್ಯಾಸ ಮೊದಲಾದವರ ಸುತ್ತ ಹುಟ್ಟಿದ ಹತ್ತಾರು ಅಸಮರ್ಪಕ ಸಂಗ್ರಹಗಳು ವಿಜೃಂಭಿಸುತ್ತಿರುವ ಇಂದಿನ ಕಾಲದಲ್ಲಿ, ಇಂಥ ಒಂದು ಒಳ್ಳೆಯ ಸಂಗ್ರಹ ೨೦ ವರ್ಷ ಕಳೆದರೂ ಪ್ರಚಾರ ದೃಷ್ಟಿಯಿಂದ ಹಿಂದೆ ಬಿದ್ದುದು ಆಶ್ಚರ್ಯವೇ ಸರಿ.

ಪೀಠಿಕೆ, ಪಠ್ಯ, ಅನುಬಂಧ– ಇವು ಸಂಪಾದಿತ ಕೃತಿಗಳ ಅಂಗತ್ರಯ. ಪೀಠಿಕೆಯಲ್ಲಿ ಸಂಶೋಧನೆ ಮತ್ತು ವಿಮರ್ಶೆಗಳಿಗೆ ಸಮಾನ ಸ್ಥಾನವಿರಬೇಕು. ಇಲ್ಲಿ ಸಂಶೋಧನೆ, ಕವಿಯ ಬಹಿರಂಗವನ್ನು ಪರಿಚಯಿಸಿದರೆ ವಿಮರ್ಶೆ ಕವಿಯ ಅಂತರಂಗವನ್ನೂ ಕಾಣಿಸಿಕೊಡುತ್ತದೆ. ನಮ್ಮ ಸಂಪಾದಕರು

ವಿಮರ್ಶಕರಾಗಿದ್ದ ಕಾರಣ, ಅವರ ಸಂಪಾದನೆಗಳು ಸಾಮಾನ್ಯವಾಗಿ ಸಂಶೋಧನೆಯಿಂದ ತುಂಬಿಕೊಂಡು ವಿಮರ್ಶೆಯಿಂದ ಸೊರಗಿ ಹೋಗಿರುತ್ತದೆ. ಪ್ರಸ್ತುತ ಸಂಗ್ರಹ ಮಾತ್ರ ಇದಕ್ಕೆ ವಿರುದ್ಧವೆಂಬಂತೆ ವಿಮರ್ಶೆಯಿಂದ ತುಂಬಿಕೊಂಡಿದೆ. ಇದಕ್ಕೆ ಮುಖ್ಯ ಕಾರಣ ಡಾ. ಶಿವರುದ್ರಪ್ಪನವರು ಭಾರತೀಯ ಮಟ್ಟದಲ್ಲಿ ಪರಿಗಣಿತವಾಗಬಲ್ಲ ವಿಮರ್ಶಕರಾಗಿರುವುದು.

೫೪ ಪುಟಗಳ ಪಠ್ಯಕ್ಕೆ ಬರೆದ ೪೮ ಪುಟಗಳ ಸುದೀರ್ಘ ಪೀಠಿಕೆ ಈ ಕೃತಿಯ ಘನತೆಯನ್ನು ಹೆಚ್ಚಿಸಿದೆಯಾದರೂ ಸಂಶೋಧನೆಗೆ ಮೀಸಲಾಗಿರುವ "ಕವಿಚರಿತ್ರೆ" ವಿಭಾಗದಲ್ಲಿ ಈವರೆಗೆ ಬೆಳಕಿಗೆ ಬಂದ ಸಂಗತಿಗಳು ಮಾತ್ರ ನೆಲೆನಿಂತಿವೆ. ಕವಿಯ ದೇಶ, ಕಾಲ, ಚರಿತ್ರೆ, ಕಾವ್ಯಧೋರಣೆಗಳನ್ನು ವಿವರಿಸಿದ್ದರೂ ಷಡಕ್ಷರದೇವನ ಪೂರ್ವಾಶ್ರಮದ ಚರಿತ್ರೆ, ಆತನಿಗೆ ಚಿಕ್ಕ ದೇವರಾಯ, ಮುದ್ದು ಭೂಪರೊಡನಿದ್ದ ಸ್ಪಷ್ಟ ಸಂಬಂಧ, ಕೃತಿ ಸಂಖ್ಯಾನಿರ್ಣಯ ಮೊದಲಾದ ಸಂಗತಿಗಳ ಮಥನಕ್ಕೆ ಇಲ್ಲಿ ಅವಕಾಶವಿತ್ತು. ಎರಡನೆಯ ವಿಭಾಗ "ಕಥಾಗರ್ಭ". ಇಲ್ಲಿ ಪದ್ಯರೂಪದ ಶಬರಶಂಕರವಿಳಾಸ, ತನಿಯಾದ ಗದ್ಯರೂಪದಲ್ಲಿ ಮೈದೋರಿದೆ. ಸಂಪಾದಕರ ಶ್ರಮಕ್ಕೆ ಸಾಕ್ಷಿಯಾಗಿದೆ, ಮೂರನೆಯ ವಿಭಾಗವಾದ "ಕಥೆಯ ಮೂಲ" ವ್ಯಾಸಭಾರತ, ಶಿವಪುರಾಣ, ಕಿರಾತಾರ್ಜುನೀಯ, ವಿಕ್ರಮಾರ್ಜುನವಿಜಯ, ಕುಮಾರವ್ಯಾಸಭಾರತ, ಚೆನ್ನಬಸವ ಪುರಾಣಗಳೊಂದಿಗೆ ಶಬರಶಂಕರವಿಳಾಸದ ಘಟನೆ ವರ್ಣನೆಗಳನ್ನು ಇಲ್ಲಿ ಜೊತೆಯಿಟ್ಟು ನೋಡಿ ಮರು ಸಂಪಾದಕರ ಆಳವಾದ ಅಭ್ಯಾಸಕ್ಕೆ ನಿದರ್ಶನವೆನಿಸಿದೆ. ಬಹುಶಃ ಕನ್ನಡದಲ್ಲಿ ಶಬರಶಂಕರವಿಳಾಸವನ್ನು ಕುರಿತು ಇಂಥ ಅಭ್ಯಾಸ ನಡೆದುದು ಇಲ್ಲಿಯೇ ಮೊದಲು. ಇದು ಷಡಕ್ಷರಿಯ ಮೂಲಧನ– ಅನ್ಯ ಋಣಗಳ ಪ್ರಮಾಣವನ್ನು ಸ್ಪಷ್ಟಪಡಿಸುತ್ತದೆ. ನಾಲ್ಕನೆಯ ವಿಭಾಗ "ಪಾತ್ರ ಪರಿಚಯ" ಘಟನಾ ಪ್ರಧಾನವಾದ ಈ ಕೃತಿಯಲ್ಲಿ ಪಾತ್ರ ಪರಿಚಯ ಮಾತ್ರ ಇಲ್ಲಿ ಎಡೆಪಡೆದಿದೆ. "ಕೃತಿ ವಿಮರ್ಶೆ" ಎಂಬುದು ಐದನೆಯ ವಿಭಾಗ. ಕಾವ್ಯೋದ್ದೇಶ ಮತ್ತು ಕಾವ್ಯಶೈಲಿಗಳ ವಿವೇಚನೆಗಳನ್ನೊಳಗೊಂಡ ಈ ವಿಭಾಗ "ಕಥೆಯ ಮೂಲ" ವಿಭಾಗದಷ್ಟೇ ಉತ್ಕೃಷ್ಟವಾಗಿದೆ.

ಒಟ್ಟಿನಲ್ಲಿ ಈ ಪೀಠಿಕೆ ಕೆಲವು ಗಮನಾರ್ಹ ಅಂಶಗಳನ್ನು ಹೊತ್ತು ನಿಂತಿದೆ. ಅವು: "ಷಡಕ್ಷರಿಯು ಕುಮಾರವ್ಯಾಸನನ್ನೇ ಸಂಪೂರ್ಣ ಅನುಸರಿಸಿದ್ದಾನೆ". "ಶಬರಶಂಕರ ವಿಳಾಸ ಘಟನಾಪ್ರಧಾನವಾದ ಕಾವ್ಯವೇ ಹೊರತು ಪಾತ್ರ ಪ್ರಧಾನವಾದುದಲ್ಲ." "ಶಬರಶಂಕರವಿಳಾಸ ಮಹಾಕಾವ್ಯವೂ ಅಲ್ಲ ಖಂಡಕಾವ್ಯವೂ ಅಲ್ಲ, ಅದೊಂದು ಮಧ್ಯಮಕಾವ್ಯ." "ಶಿವನಿಗೂ ಅರ್ಜುನನಿಗೂ ನಡೆಯುವ ಕಾಳಗವೇ ಈ ಕಾವ್ಯದ ಕೇಂದ್ರ." "ಅವನು ಮಹಾಕವಿಯೆನ್ನುವುದಕ್ಕಿಂತ ಮಹಾ ಪಂಡಿತನಾದ ಶ್ರೇಷ್ಠ ಕವಿ ಎನ್ನುವುದು ಹೆಚ್ಚು ಸತ್ಯ"– ಮೊದಲಾದ ಮಾತುಗಳಲ್ಲಿ ಸಂಪಾದಕರ ಸ್ವತಂತ್ರವೂ ನಿಷ್ಪಕ್ಷಪಾತವೂ ನಿರ್ದುಷ್ಟವೂ ಆದ ನಿರ್ಣಯ ಎದ್ದು ತೋರುತ್ತದೆ.

ಪಾಠಭಾಗದಲ್ಲಿ ಅಪೇಕ್ಷಿತವಾದವು ಪಾಠಶುದ್ಧಿ ಮತ್ತು ಸಂಗ್ರಹ ಶಿಲ್ಪ. "ಇದರ ಸಂಗ್ರಹಕಾರ್ಯದಲ್ಲಿ ನಾವು ಬಹುಮಟ್ಟಿಗೆ ಪ್ರೊ. ಶಿ. ಶಿ. ಬಸವನಾಳರ ಪಾಠಾಂತರಗಳನ್ನು ಆಧಾರವಾಗಿರಿಸಿಕೊಂಡು ಸಂದೇಹ ಬಂದ ಕಡೆ ನಮ್ಮದೇ ಒಂದು ಪ್ರತಿಯನ್ನು ಅನುಸರಿಸಿದ್ದೇವೆ" ಎಂಬ ಮಾತು ಪೀಠಿಕೆಯಲ್ಲಿ ಬರುತ್ತದೆ. ಆದರೆ ಸಂದೇಹ ಬಂದ ಕಡೆ ತಾವು ಅನುಸರಿಸಿದ ಪಾಠಗಳನ್ನು ಪ್ರತ್ಯೇಕ ಚಿಹ್ನೆಯಿಂದ ಸೂಚಿಸಬೇಕಿತ್ತು. ಇದರಿಂದ ಶ್ರೀ ಬಸವನಾಳರ ಪಾಠ ಮತ್ತು ಇವರ ಪಾಠಗಳನ್ನು ತೂಗಿ

ನೋಡಲು ಸಾಧ್ಯವಾಗುತ್ತಿತ್ತು. ಅದೇನೇ ಇದ್ದರೂ ಪಾಠದೃಷ್ಟಿಯಿಂದ ಈ ಸಂಗ್ರಹ ಶುದ್ಧವಾಗಿದೆಯೆಂದೇ ಹೇಳಬೇಕು.

"ಸಂಗ್ರಹ ಶಿಲ್ಪ" ಈ ಕೃತಿಯಲ್ಲಿ ಚೆನ್ನಾಗಿ ಕೈಗೂಡಿದೆ. ಶಬರಶಂಕರವಿಳಾಸದ ೪೬೭ ಪದ್ಯ ಮತ್ತು ಅಧಿಕ ಗದ್ಯ ಇಲ್ಲಿ ೨೨೫ ಪದ್ಯ ಮತ್ತು ಗದ್ಯಗಳಲ್ಲಿ ಅಡಕಗೊಂಡಿದೆ. ಇದನ್ನು ಸಾಧಿಸಲೋಸುಗ ಪಾಂಡಿತ್ಯದ ಪ್ರತೀಕವಾದ ಶುಷ್ಕ ವರ್ಣನೆ, ಔಚಿತ್ಯ ಮೀರಿದ ಸುದೀರ್ಘ ಘಟನೆಗಳ ತುಂಬ ಎಚ್ಚರವಹಿಸಿ ಕತ್ತರಿಯಾಡಿಸಿದ್ದಾರೆ. ಹೀಗಾಗಿ ತಗ್ಗು ದಿನ್ನೆಗಳಿಂದ ಕೂಡಿದ ಕಥೆಯ ಕಾಡುದಾರಿ ಸಮತಲಮಾರ್ಗವಾಗಿ ಪರಿಣಮಿಸಿದೆ. ಸಹೃದಯ ಶಬರರಿಗೆ ದುರ್ಗಮಯವಾಗಿದ್ದ ಕಾವ್ಯಾರಣ್ಯ, ವಿಹಾರಯೋಗ್ಯ ಉಪವನವಾಗಿ ಮಾರ್ಪಟ್ಟಿದೆ. ಒಟ್ಟಿನಲ್ಲಿ ಮಧ್ಯ ಮಧ್ಯ ಒಟ್ಟಿನಿಂದ ವರ್ಣನೆಗಳನ್ನು ಮಿತಗೊಳಿಸಿದುದರಿಂದ ಕಥೆಯ ಪ್ರವಹನಕ್ಕೆ ಯೋಗ್ಯ ಅವಕಾಶ ಲಭಿಸಿದ್ದರೆ, ಪಾಂಡಿತ್ಯಪೂರ್ಣ ಶುಷ್ಕ ಭಾಗಗಳನ್ನು ಕೈಬಿಟ್ಟುದರಿಂದ ಕೃತಿಯ ಕಾಠಿನ್ಯ ಮಾರ್ದವಗೊಂಡಿದೆ. ಈ ಎರಡೂ ಕಾರ್ಯಗಳು ಕೃತಿಗೆ ಅನ್ಯಾಯವಾಗದಂತೆ, ಕವಿಗೆ ಅಪಚಾರವಾಗದಂತೆ ಕೈಗೂಡಿದುದು ಈ ಸಂಗ್ರಹದ ದೊಡ್ಡ ಸಾಧನೆಯಾಗಿದೆ. ಹೀಗೆ ಮಾಡುವಲ್ಲಿ "ಅರುಣೋದಯದರುಣದ್ಯುತಿ...."ಯಂತಹ ಒಂದೆರಡು ಒಳ್ಳೆಯ ಪದ್ಯಗಳು ಕೈಬಿಟ್ಟು ಹೋಗದಂತೆ ನೋಡಿಕೊಳ್ಳಬೇಕಿತ್ತು.

ಕೃತಿಯ ಕೊನೆಗೆ 'ಟಿಪ್ಪಣಿ'ಯನ್ನು ಅನುಬಂಧಿಸಲಾಗಿದೆ. ಸಂಪಾದಕರ ಆಲಸ್ಯ, ಅವಸರಗಳ ಪ್ರತೀಕವಾದ 'ಕಠಿಣಪದಕೋಶ'ಗಳು ಇಂದು ಎಲ್ಲೆಡೆ ಕಂಡುಬರುತ್ತವೆ. ವಿದ್ವಾಂಸರು ಹೋಗಲಿ, ವಿದ್ಯಾರ್ಥಿಗಳಿಗೂ ಉಪಯೋಗವಿಲ್ಲದ ಕೋಶಗಳವು. ಅವುಗಳಿಗಿಂತ ಪ್ರಸ್ತುತ ಕೃತಿಯ ಟಿಪ್ಪಣಿ ಬಹುಪಾಲು ಮೇಲು. ಸಮಾಸಗಳನ್ನು ವಿಗ್ರಹಿಸಿ ಅರ್ಥ ಹೇಳಿದುದು, ಅವಶ್ಯವೆನಿಸಿದಲ್ಲಿ ವಿವರಿಸಿ ಅರ್ಥ ಹೇಳಿದುದು ತುಂಬ ಸಮರ್ಪಕವಾಗಿದೆ. 'ಸಂಗ್ರಹ'ಗಳಿಗೆ ಇಷ್ಟು ಸಾಕೆನಿಸಬಹುದಾದರೂ ಆದಿಪುರಾಣ ಸಂಗ್ರಹ, ಗದಾಯುದ್ಧ ಸಂಗ್ರಹಗಳಿಗೆ ಬರೆದಂತಹ ಟಿಪ್ಪಣಿಯನ್ನೊಳಗೊಂಡಿದ್ದರೆ ಈ ಕೃತಿಯ ಗೌರವ ಇನ್ನೂ ಅಧಿಕವಾಗುತ್ತಿತ್ತು.

ಹೀಗೆ ವಿದ್ಯಾರ್ಥಿಗಳಿಂದಲು ವಿದ್ವಾಂಸರಿಂದಲೂ ಮನ್ನಣೆ ಪಡೆವ ರೀತಿಯಲ್ಲಿ ಸಂಗ್ರಹಗೊಂಡಿದೆ, ಈ ಕೃತಿ. ಸಂಪಾದನೆ, ಸಂಗ್ರಹ–ಈ ಉಭಯ ಹೊಣೆಯನ್ನು ತುಂಬ ಎಚ್ಚರಿಕೆಯಿಂದ ನಿರ್ವಹಿಸಿದ್ದಾರೆ, ಈ ಸಂಪಾದಕರು.

■■

ಆಕರ : ಮಾರ್ಗ ಸಂಪುಟ–೭

೧೬

ಚಂಪೂ-ಪ್ರಬಂಧ-ಪ್ರಸಂಗ

'ಚಂಪೂ' ಹೆಸರಿನಿಂದ ಕರೆಯುತ್ತ ಬಂದಿರುವ ಕನ್ನಡದ ವೈಭವಪೂರ್ಣ ಸಾಹಿತ್ಯ ಪ್ರಕಾರದ ಉಗಮ ಮತ್ತು ಹೆಸರಿನ ಅರ್ಥಗಳ ಬಗೆಗೆ ಕನ್ನಡದಲ್ಲಿ ವಿಪುಲ ಚರ್ಚೆನಡೆದಿದ್ದರೂ, ಅದು ಇನ್ನೂ ನಿಜವಾದ ನೆಲೆಯನ್ನು ತಲುಪಿಲ್ಲ. ಇಂಥ ಸಂದರ್ಭದಲ್ಲಿ ಈ ಸಾಹಿತ್ಯ ಪ್ರಕಾರದ ನಿಜವಾದ ಹೆಸರು ಚಂಪುವಲ್ಲ, ಇದರ ಲಕ್ಷಣವೂ ಚಂಪುವಿಗಿಂತ ಭಿನ್ನವೆಂದು ಹೇಳುವ ಮೂಲಕ, ಈ ವಾದಕ್ಕೆ ಇನ್ನೊಂದು ಆಯಾಮ ಜೋಡಿಸುವುದು ಈ ಲೇಖನದ ಉದ್ದೇಶವಾಗಿದೆ.

ಚಂಪೂಸಾಹಿತ್ಯ ಪ್ರಕಾರದ ವ್ಯಾಖ್ಯೆ ಮೊದಲು ಕಂಡುಬರುವುದು ಆರನೆಯ ಶತಮಾನದ ದಂಡಿಯ ಕಾವ್ಯಾದರ್ಶದಲ್ಲಿ. ಸಾಹಿತ್ಯವನ್ನು ಗದ್ಯ ಮತ್ತು ಪದ್ಯವೆಂದು ವಿಂಗಡಿಸಿ, ಈ ಗದ್ಯ ಪದ್ಯಗಳ ಮಿಶ್ರಣವೇ ಚಂಪೂ ಎಂದು ಅಲ್ಲಿ ಹೇಳಲಾಗಿದೆ. ಇದನ್ನು ಅನುಸರಿಸುವ ಕವಿರಾಜಮಾರ್ಗಕಾರ ಕನ್ನಡಸಾಹಿತ್ಯವನ್ನು ಗದ್ಯ (=ಗದ್ಯಕಥಾ), ಪದ್ಯ (ಚತ್ತಾಣ, ಬೆದಂಡೆಗಬ್ಬ)ವೆಂದು ಎರಡು ಭಾಗವಾಗಿ ವಿಂಗಡಿಸುತ್ತ, ಮಿಶ್ರದ ಬಗೆಯಾದ ಚಂಪೂವಿನ ವಿಷಯವಾಗಿ ಮೌನ ತಾಳಿದ್ದಾನೆ. ಆದುದರಿಂದ ಕವಿರಾಜಮಾರ್ಗದಷ್ಟು ಪೂರ್ವದಲ್ಲಿ ಚಂಪುವಿನ ಅಸ್ತಿತ್ವ ಕನ್ನಡದಲ್ಲಿ ಕಂಡುಬರುವುದಿಲ್ಲವೆಂದೇ ಹೇಳಬೇಕು.

ಈ ತರುವಾಯ ಗುಣವರ್ಮ, ಪಂಪ, ರನ್ನ ಮೊದಲಾದವರು ಸೃಷ್ಟಿಸಿದ ಸಾಹಿತ್ಯವನ್ನು ನಾವು "ಚಂಪೂ" ಎಂದು ಕರೆಯುತ್ತಲಿದ್ದೇವೆ. ಇದು ತಪ್ಪು ಉಪಕ್ರಮವೆಂದೇ ತೋರುತ್ತದೆ. ಏಕೆಂದರೆ ಕವಿಗಳು ತಮ್ಮ ಕೃತಿಗಳನ್ನು ಎಲ್ಲಿಯೂ "ಚಂಪೂ" ಎಂದು ಕರೆದಿಲ್ಲ. ಹೀಗಿರುವಾಗ 'ಚಂಪೂ' ಎಂದು ಕರೆಯಲು ನಮಗೆ ಏನು ಅಧಿಕಾರ?

ಚಂಪೂ ಎಂಬ ಪದವನ್ನು ಕನ್ನಡದಲ್ಲಿ ಮೊದಲು ಬಳಸಿದವ ಎರಡನೆಯ ನಾಗವರ್ಮ. ತನ್ನ ಕಾವ್ಯಾವಲೋಕನದಲ್ಲಿ "ಬೆರಸಿ ಬರೆ ಗದ್ಯಪದ್ಯಮವೆರಡುಂ ಕೃತಿ ಚಂಪುವೆಂಬ ಪೆಸರಂ ಪಡೆಗುಂ" ಎಂದು ಈತನು ಹೇಳಿದುದು ದಂಡಿಯ ಅನುವಾದವೇ ಹೊರತು, ಪಂಪಾದಿಗಳ ಸಾಹಿತ್ಯವನ್ನು ಕುರಿತು ಆಡಿದ ಮಾತಲ್ಲ. ಹೀಗಿರುವಾಗ ಆಧುನಿಕರಾದ ನಾವು ಪಂಪಾದಿಗಳ ಸಾಹಿತ್ಯದಲ್ಲಿ ಗದ್ಯ ಮತ್ತು ಪದ್ಯಗಳ ಮಿಶ್ರಣವಿರುವುದನ್ನು ಗಮನಿಸಿ, ಅವರ ಬರವಣಿಗೆಯನ್ನು "ಚಂಪೂ" ಎಂದು ಪ್ರಚಾರ

ಮಾಡಿದ್ದೇವೆ. ಆದರೆ ಇದರ ನಿಜವಾದ ಹೆಸರು "ಪ್ರಬಂಧ" ಎಂದು ಇರಬಹುದಾಗಿದೆ. ಏಕೆಂದರೆ ೧. "ಪೇಳಲೊಡರ್ಚಿದೆನೀ ಪ್ರಬಂಧಮಮಂ" ಎಂದು ಮುಂತಾಗಿ ಹೇಳುತ್ತ ಸ್ವತಃ ಪಂಪ ತನ್ನ ಕೃತಿಯನ್ನು "ಪ್ರಬಂಧ" ಎಂದು ಕರೆದಿದ್ದಾನೆಯೇ ಹೊರತು "ಚಂಪೂ" ಎಂದು ಕರೆದಿಲ್ಲ. ೨. ಕನ್ನಡದಲ್ಲಿ ಈ ಬಗೆಯ ಕೆಲವು ಕಾವ್ಯಗಳನ್ನು ನೇರವಾಗಿ ಗಿರಿಜಾಕಲ್ಯಾಣ ಪ್ರಬಂಧಂ, ಲೀಲಾವತಿ ಪ್ರಬಂಧಂ ಎಂದು ಅವುಗಳ ಕರ್ತೃಗಳೇ ಕರೆದಿದ್ದಾರೆ. 'ಗಿರಿಜಾಕಲ್ಯಾಣ ಚಂಪೂ' ಎಂದು ಮುಂತಾಗಿ ಕರೆದಿಲ್ಲ. ೩. ತೆಲುಗು ನಾಡಿನಲ್ಲಿ ಈ ಬಗೆಯ ಸಾಹಿತ್ಯವನ್ನು ಚಂಪೂವೆನ್ನದೆ 'ಪ್ರಬಂಧ' ಎಂದೇ ಕರೆಯುತ್ತಾರೆ. ನಮ್ಮಲ್ಲಿ 'ಚಂಪೂಯುಗ'ವೆನ್ನುವಂತೆ ಅವರು 'ಪ್ರಬಂಧಯುಗ'ವೆಂದು ನಾಮಕರಣ ಮಾಡಿದ್ದಾರೆ. ಪಂಪನ ಪೂರ್ವಜರು ತೆಲುಗು ನಾಡಿನವರು, ಅವನು ತನ್ನ ಕಾವ್ಯರಚನಾ ದಿನಗಳನ್ನು ಕಳೆದುದೂ ತೆಲುಗುನಾಡಿನಲ್ಲಿ; ಇಂದಿಗೂ 'ಪ್ರಬಂಧ' ಹೆಸರು ಪ್ರಚಲಿತವಿರುವ ಪ್ರದೇಶದಲ್ಲಿ. ಆದುದರಿಂದ ಕನ್ನಡದ ಈ ಸಾಹಿತ್ಯ ಪ್ರಕಾರವನ್ನು ಪ್ರಾಚೀನರು ಪ್ರಬಂಧವೆಂದೇ ಕರೆಯುತ್ತಿದ್ದರೆನಿಸುತ್ತದೆ.

ಗದ್ಯ-ಪದ್ಯ ಮಿಶ್ರಣವೇ ಸಂಸ್ಕೃತ ಚಂಪೂವಿನ ಮುಖ್ಯ ಲಕ್ಷಣ. ಹೆಚ್ಚಿನ ಉದ್ದೇಶ ಅಲ್ಲಿ ಕಾಣುವುದಿಲ್ಲ. ಆದರೆ ಕನ್ನಡದ "ಪ್ರಬಂಧ" ನೋಡಲಿಕ್ಕೆ ಗದ್ಯ-ಪದ್ಯ ಮಿಶ್ರಣವಾಗಿ ಕಂಡರೂ ಇದರ ಉದ್ದೇಶವೇ ಬೇರೆಯಾಗಿದ್ದು, ಅದನ್ನು ಹೀಗೆ ವಿವರಿಸಬಹುದು.

ಸಾಹಿತ್ಯವನ್ನು ನಾವು ದೃಶ್ಯ, ಶ್ರವ್ಯವೆಂದು ವರ್ಗೀಕರಿಸುತ್ತೇವೆ. ಇವುಗಳಲ್ಲಿ ದೃಶ್ಯವು ಉತ್ತಮಪುರುಷ ನಿರೂಪಣಾತ್ಮಕ (First Person narrative), ಶ್ರವ್ಯವು ಪ್ರಥಮಪುರುಷ ನಿರೂಪಣಾತ್ಮಕ (Third Person nerrative) ರೂಪದ್ದಾಗಿದೆ. ಪಾತ್ರಗಳೇ ಮಾತನಾಡಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಉತ್ತಮ ಪುರುಷ ನಿರೂಪಣಾತ್ಮಕ ವಿಧಾನವಾದ ದೃಶ್ಯವು, ಪಾತ್ರಗಳ ಪರವಾಗಿ ಕವಿಯೇ ಮಾತನಾಡುವ ಪ್ರಥಮ ಪುರುಷ ನಿರೂಪಣಾತ್ಮಕ ವಿಧಾನವಾದ ಶ್ರವ್ಯಕ್ಕಿಂತ ಹೆಚ್ಚು ಪರಿಣಾಮಕಾರಿಯಾದುದು. ಇಂಥ ಪರಿಣಾಮವನ್ನು ತಮ್ಮ ರಚನೆಯಲ್ಲಿಯೂ ತರುವ ಉದ್ದೇಶದಿಂದ ನಮ್ಮ ಕವಿಗಳು ದೃಶ್ಯವನ್ನು ಶ್ರವ್ಯೀಕರಿಸಿದ ವಿನೂತನ ಪ್ರಯೋಗವೇ ಪ್ರಬಂಧವಾಗಿದೆ. ಈ ತಂತ್ರವು ಕಾವ್ಯದಲ್ಲಿ ಅವತರಿಸಿಕೊಂಡಾಗ ಸಾಮಾನ್ಯವಾಗಿ ಪಾತ್ರಗಳು ಪದ್ಯರೂಪದಲ್ಲಿ ಮಾತನಾಡುವುದೂ, ಕವಿಯು ದೃಶ್ಯದ ಸೂತ್ರಧಾರನಂತೆ ಗದ್ಯರೂಪದಲ್ಲಿ (ಕೊಂಡಿ ರೂಪದಲ್ಲಿ ಮತ್ತು ವಿವರಣ ರೂಪದಲ್ಲಿ) ಮಾತನಾಡುವುದೂ ಏರ್ಪಟ್ಟು, ಕಿವಿಯಿಂದ ನಾಟಕಸುಖ ಅನುಭವಿಸುವ 'ಪ್ರಬಂಧ' ಹೆಸರಿನ ಈ ಹೊಸ ಶ್ರವ್ಯಪ್ರಕಾರ ಸೃಷ್ಟಿಯಾಗಿರಬೇಕು. ಈ ತಂತ್ರ ಕಾರಣವಾಗಿಯೇ ಪ್ರಾರಂಭದ ಪ್ರಯೋಗಗಳಾದ ಪಂಪಭಾರತ, ಗದಾಯುದ್ಧಗಳು ಹೆಚ್ಚು ನಾಟಕೀಯತೆಯಿಂದ ಶೋಭಿಸುತ್ತವೆ. ಗದಾಯುದ್ಧದಲ್ಲಿ ನಾಟಕದ ಅಂಗವಾದ ಕಂಚುಕಿ, ಮೇಳದ ಕೆಳದಿ, ನರ್ಮಸಚಿವ (ವಿದೂಷಕ) ಪಾತ್ರಗಳು ಬರುವುದನ್ನು ಗಮನಿಸಿದಲ್ಲಿ ಪಂಪ-ರನ್ನಾದಿಗಳ ಕೃತಿಗಳು ನಾಟಕದ ಆದರ್ಶದಲ್ಲಿ ಹುಟ್ಟಿದ ಕಾವ್ಯಗಳಾಗಿವೆಯೆಂದು ಇನ್ನೂ ಸ್ಪಷ್ಟವಾಗುತ್ತದೆ. ಮುಂದೆ ಬಂದ ಕನ್ನಡ ಕವಿಗಳು ಈ ನಾಟಕೀಯ ತತ್ವವನ್ನು ಅರ್ಥಮಾಡಿಕೊಳ್ಳದೆ, ಕೇವಲ ಗದ್ಯ-ಪದ್ಯಗಳ ಮಿಶ್ರಣರೂಪದ ತಂತ್ರವನ್ನು ಮುಂದುವರೆಸಿದರು. ಆದುದರಿಂದ ತರುವಾಯದ ಕನ್ನಡ ಕೃತಿಗಳು ಈ 'ಪ್ರಬಂಧ' ಪರಂಪರೆಯ ಮುಂದುವರಿಕೆಯೆನಿಸಿದರೂ ನಾಟಕತತ್ವವನ್ನು ಮರೆತ ಕಾರಣ, ಅವು ಗದ್ಯ-ಪದ್ಯ ಮಿಶ್ರಣರೂಪದ ಸಂಸ್ಕೃತಚಂಪುವನ್ನು ಹೋಲುವ ಸ್ಥಿತಿಗಿಳಿದವು.

ಕಿವಿಯಿಂದ ಕೇಳುವ ನಾಟಕವೆನಿಸುವ ಈ "ಪ್ರಬಂಧ"ವು ಜಾನಪದ "ಪ್ರಸಂಗ" ಅಥವಾ "ತಾಳಮದ್ದಲೆ"ಯನ್ನು ಹೋಲುತ್ತದೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇಂದಿಗೂ ಪ್ರಸಾರದಲ್ಲಿರುವ "ಪ್ರಸಂಗ"ವೆಂಬುದು ಯಕ್ಷಗಾನ ದೃಶ್ಯದ ಶ್ರವ್ಯರೂಪವೇ ಆಗಿದೆ. ಮನೆಯಲ್ಲಿ ಅಥವಾ ಸಾರ್ವಜನಿಕ ಕಟ್ಟಡದಲ್ಲಿ ಆಸಕ್ತರು ತಮ್ಮ ದೈನಂದಿನ ವೇಷದಲ್ಲಿಯೇ ಸ್ತ್ರೀ ಪುರುಷ ಪಾತ್ರಗಳಾಗಿ ಕುಳಿತು, ಸೂತ್ರಧಾರನ ನಿರ್ದೇಶನದಲ್ಲಿ ಯಕ್ಷಗಾನದೃಶ್ಯವನ್ನು ಶ್ರವ್ಯರೂಪದಲ್ಲಿ ಮುನ್ನಡೆಸುವ ಕಲೆಯಿದು.

ಶೂನ್ಯಸಂಪಾದನೆಯಲ್ಲಿಯೂ ಇದೇ ತಂತ್ರವಿರುವುದರಿಂದ ಅದೂ "ಪ್ರಸಂಗ" ಸಾಹಿತ್ಯ ಪ್ರಕಾರಕ್ಕೇ ಸೇರುವಂತೆ ತೋರುತ್ತದೆ. ಎಲ್ಲ ಶೂನ್ಯಸಂಪಾದನಕಾರರು ತಮ್ಮ ಕೃತಿಗಳನ್ನು "ಮಹಾನುಭಾವ ಪ್ರಸಂಗ" ಎಂದು ಕರೆದುದಲ್ಲದೆ, ಇದನ್ನು "ಪ್ರಸಂಗವಂ ಮಾಡಿ ಸುಖಿಸುವುದು" ಎಂದು ಹಾರೈಸಿದ್ದಾರೆಯೇ ಹೊರತು, ಓದಿ ಇಲ್ಲವೆ ಕೇಳಿ ಸುಖಿಸುವುದು ಎಂದು ಹಾರೈಸಿಲ್ಲ. ಶೂನ್ಯಸಂಪಾದನೆಯನ್ನು "ತಾಳಮದ್ದಲೆ" ಗೋಷ್ಠಿ ಮೂಲಕ ಆಸ್ವಾದಿಸುವುದೇ ಸರಿಯಾದ ಉಪಕ್ರಮವೆಂದು ಇದರಿಂದ ಸ್ಪಷ್ಟವಾಗುತ್ತದೆ. ಆದುದರಿಂದ ಈ ಕೃತಿಯ ನಿಜವಾದ ಹೆಸರು "ಶೂನ್ಯಸಂಪಾದನ ಪ್ರಸಂಗ." ಇದರ ಸರಿಯಾದ ಆಸ್ವಾದನ ವಿಧಾನ "ತಾಳಮದ್ದಲೆ" ಏರ್ಪಡಿಸುವುದು ಎಂದು ಹೇಳಬೇಕಾಗುತ್ತದೆ.

ಹೀಗೆ, ನಮ್ಮ ನಾಡಿನಲ್ಲಿ ಒಂದು ಕಡೆ ಶ್ರವಣಯೋಗ್ಯವಾದ "ಪ್ರಸಂಗ" ಅಸ್ತಿತ್ವದಲ್ಲಿದ್ದಂತೆಯೇ, ಇದರ ಆದರ್ಶದಲ್ಲಿ (Model) ಪ್ರೌಢಕವಿಗಳು ವಾಚನಯೋಗ್ಯವಾದ "ಪ್ರಬಂಧ"ವನ್ನು ರೂಪಿಸಿದರೆಂದು ಕಾಣುತ್ತದೆ. ಆದರೆ ಇಲ್ಲಿಯ ಗದ್ಯ-ಪದ್ಯ ಮಿಶ್ರಣವನ್ನು ಗಮನಿಸಿ, ಗದ್ಯ-ಪದ್ಯ ಮಿಶ್ರಣವಾದ ಸಂಸ್ಕೃತದ "ಚಂಪೂ" ಹೆಸರನ್ನು ಇದಕ್ಕೂ ನಾವು ತಪ್ಪಾಗಿ ಬಳಸುತ್ತಲಿರುವಂತಿದೆ. ಹೀಗಾಗಿ ಚಂಪುವೆಂದು ಕರೆಯುತ್ತಲಿರುವ ಕನ್ನಡದ ಈ ಸಾಹಿತ್ಯ ಪ್ರಕಾರದ ಉಗಮವನ್ನು ಇನ್ನು ಮೇಲೆ ಸಂಸ್ಕೃತದಲ್ಲಿ ಹುಡುಕದೆ, ನಮ್ಮ ಜಾನಪದ ಪ್ರಕಾರವಾದ "ಪ್ರಸಂಗ"ದಲ್ಲಿ ಶೋಧಿಸುವುದು ಸರಿಯೆನಿಸುತ್ತದೆ.

ಆಕರ : ಮಾರ್ಗ ಸಂಪುಟ–೩

೧೭

ಶಿವಮಾರ ಮತ–ನೃಪತುಂಗದೇವ ಮತ–ರಟ್ಟಮತ

ಸಾಹಿತ್ಯವು ತನ್ನ ವಿಕಾಸಮಾರ್ಗದಲ್ಲಿ ಸಾರ್ವಜನಿಕ ಆಸ್ತಿ, ಅರೆಖಾಸಗಿ ಆಸ್ತಿ, ಖಾಸಗಿ ಆಸ್ತಿ–ಈ ಮೂರು ಮಜಲುಗಳಲ್ಲಿ ಸಾಗಿಬಂದಿದೆ. ಇವುಗಳಲ್ಲಿ ಜನಪದಸಾಹಿತ್ಯ ಸಾರ್ವಜನಿಕ ಆಸ್ತಿ. ಇದರ ಸೃಷ್ಟಿ–ಶಿಲ್ಪ–ಪರಿಷ್ಕರಣ–ಮುಂದುವರಿಕೆಗಳು ಸಾರ್ವಜನಿಕ ಜವಾಬ್ದಾರಿ ಅಂದರೆ ಸಾಮೂಹಿಕ ಜವಾಬ್ದಾರಿಯಾಗಿರುತ್ತವೆ. ಇದರಿಂದ ಭಿನ್ನವಾದ ಸರ್ವಜ್ಞನ ವಚನದಂತಹ ಬರವಣಿಗೆ ಅರೆಖಾಸಗಿ ಆಸ್ತಿಯಾಗಿದೆ. ಏಕೆಂದರೆ ಸಾರ್ವಜನಿಕರು ಕಾಲಕಾಲಕ್ಕೆ ಅಗತ್ಯವೆನಿಸಿದ ಹೊಸ ಮೌಲ್ಯನಿಷ್ಠ ತ್ರಿಪದಿಗಳನ್ನು ಸೃಷ್ಟಿ–ಪ್ರಸಾರಮಾಡುತ್ತ ಬಂದರೂ ಅವರು ಸರ್ವಜ್ಞಕವಿಯ ಹೆಸರು ಮತ್ತು ಮುದ್ರಿಕೆಗಳನ್ನೇ ಬಳಸಬೇಕಾಗುತ್ತದೆ. ಇವುಗಳನ್ನು ಹೊರತುಪಡಿಸಿದ ಪಂಪ, ಕುವೆಂಪು ಮೊದಲಾದವರ ಸಾಹಿತ್ಯವು ಖಾಸಗಿ ಆಸ್ತಿ. ಇದು ಯಾರೂ ಬದಲಾವಣೆ ಮಾಡದಂತೆ ಲೇಖಕನ ಸ್ವಾಮಿತ್ವಕ್ಕೆ ಒಳಪಟ್ಟಿರುತ್ತದೆ.

ಈ ಹಿನ್ನೆಲೆಯಲ್ಲಿ ಹೇಳುವುದಾದರೆ, ಪ್ರಾಚೀನಕಾಲದಲ್ಲಿ ವಿದ್ವಾಂಸರ ಸಾಮೂಹಿಕ ಪರಿಷ್ಕರಣೆಗೆ ಒಳಗಾಗಿ, ರಾಜನ ಅನುಮತಿ ಪಡೆದು ಬೆಳಕುಕಾಣುತ್ತಲಿದ್ದ "ಸಾಹಿತ್ಯರಚನಾ" ವ್ಯವಸ್ಥೆಯೊಂದು ಅಸ್ತಿತ್ವದಲ್ಲಿದ್ದಿತೆಂದು ತೋರುತ್ತದೆ. ಈ ಉದ್ದೇಶಕ್ಕಾಗಿಯೇ ರಾಜನ ಅಧ್ಯಕ್ಷತೆಯ ಕೆಳಗೆ ಆಸ್ಥಾನದಲ್ಲಿ ವಿದ್ವಾಂಸರ ಸಮೂಹವಿರುತ್ತಿರಬಹುದು. ಮುಂದಿನ ದಿನಗಳಲ್ಲಿ ಇಂಥ ಸಭೆ ರಾಜನ ಚಿತ್ತರಂಜನೆಯ ದಿಕ್ಕಿನಲ್ಲಿ ಬೆಳೆದಿರಬಹುದಾದರೂ, ಮೂಲತಃ ಇದು ಯೋಗ್ಯ ಸಾಹಿತ್ಯಸೃಷ್ಟಿಯ ನಿರ್ವಹಣೆಗಾಗಿ ಇರುತ್ತಿದ್ದಿತೆಂದು ಕಾಣುತ್ತದೆ, ಗ್ರೀಕ್ ಅಕಾಡೆಮಿಗಳಂತೆ. ಅಭಿವ್ಯಕ್ತಿಸ್ವಾತಂತ್ರ್ಯದ ಹೆಸರಿನಲ್ಲಿ ಕವಿಗಳು ಬರೆದ ಸಾಹಿತ್ಯವು ಸಮಾಜಕ್ಕೆ ಅಹಿತವನ್ನುಂಟುಮಾಡುವ ಸಾಧ್ಯತೆಯಿರುತ್ತದೆ. ಇಂಥದನ್ನು ತಕ್ಕ ಮಟ್ಟಿಗಾದರೂ ನಿಯಂತ್ರಿಸಲು, ಅಂದು ಪ್ರಜಾಸತ್ತಾತ್ಮಕ ಚರ್ಚೆ(ವಿಮರ್ಶೆ)ಗೆ ಗುರಿಪಡಿಸಿದ ಬಳಿಕ, ಒಂದು ಕೃತಿ ಹೊರಬರುತ್ತಿದ್ದಿತು ಮತ್ತು ಅದು ಅರಸನ ಮತ(ಸಮ್ಮತ)ವೆಂಬಂತೆ ಪ್ರಸಾರವಾಗುತ್ತಿದ್ದಿತು. ರಾಜನ ನೇತೃತ್ವದಲ್ಲಿ ವಿದ್ವಾಂಸರು ಸೇರಿ ಸಂಕಲಿಸಿದ ತಮಿಳು ಸಂಘಂ ಸಾಹಿತ್ಯವು ಈ ಶ್ರೇಣಿಗೆ ಸಂಬಂಧಿಸಿದುದಾಗಿದೆ.

ರಾಜನ ಆಡಳಿತದ ಉದ್ದೇಶ ಕೇವಲ ಭೌತಿಕ ರಾಜ್ಯ ಕಟ್ಟುವದಲ್ಲ; ಅದೂ ಒಳಗೊಂಡಂತೆ ಸಾಂಸ್ಕೃತಿಕ ಸಾಮ್ರಾಜ್ಯವನ್ನು ಕಟ್ಟುವುದು. ಹೀಗಿರುವಾಗ ಕವಿಗಳು ತಮ ತಮಗೆ ತಿಳಿದಂತೆ ಸಾಹಿತ್ಯ ರಚಿಸುವುದೆಂದರೆ ಸಮಾಜದ ಮನಸ್ಸನ್ನು ಕಂಡಕಂಡ ಕಡೆಗೆ ಎಳೆದುಕೊಂಡು

ಹೋಗುವುದೆನಿಸುತ್ತದೆ. ಕಾವ್ಯಪ್ರಯೋಜನವನ್ನು ಗಂಭೀರವಾಗಿ ಪರಿಗಣಿಸದ ಬರಹಗಾರರ ಸಂಖ್ಯೆ ಸಣ್ಣದಿರುವುದಿಲ್ಲ. ರಾಗದ್ವೇಷ ನಿಬದ್ಧಮಪ್ಪ ಕೃತಿರಚಿಸಿ ಸಮಾಜದ ಮನಸ್ಸನ್ನು ಅನಾರೋಗ್ಯಗೊಳಿಸುವ ಇಂಥವರಿಂದಾಗಿ, ರಾಜ್ಯಕ್ಕೆ ಸರಿಯಾದ ಸಾಂಸ್ಕೃತಿಕ ವಿವೇಕ ಪ್ರಾಪ್ತವಾಗುವುದಿಲ್ಲ. ಈ ಸಂದರ್ಭದಲ್ಲಿ, ಸ್ಪೆಯಿನ್ ದೇಶದ ನೆಬ್ರಿಜಾ ಎಂಬ ಭಾಷಾಶಾಸ್ತ್ರಜ್ಞ (೧೪೪೨-೧೫೨೨), ಅಂದು ಆಳುತ್ತಲಿದ್ದ ಪ್ರಖ್ಯಾತ ರಾಣಿ ಇಸಾಬೆಲ್ಲಾ ಎಂಬವಳಿಗೆ ಮಾಡಿಕೊಂಡಿದ್ದ ಮನವಿ ನಮ್ಮ ಗಮನ ಸೆಳೆಯುತ್ತದೆ. ರಾಜ್ಯದಲ್ಲಿ "ಸ್ಪೆಯಿನ್‌ನ ಪ್ರಜೆಗಳು ಬಳಸುತ್ತಲಿರುವ ಕಾಸ್ಟಲಿನ್ ಭಾಷೆಯು ಈಗ ಯಾವುದೇ ನಿಯಂತ್ರಣವಿಲ್ಲದೆ ಸ್ಥಳಸ್ಥಳಕ್ಕೂ ಭಿನ್ನವಾಗಿ ಹೋಗಿದೆ. ನೂರಾರು ಗ್ರಾಮಗಳಲ್ಲಿ ಛಿದ್ರವಾಗಿ ಹೋಗಿದೆ ಮತ್ತು ಹಿಡಿತವಿಲ್ಲದೆ ಇದು ದಿನದಿನವು ಬದಲಾಗುತ್ತ ಹೋಗುತ್ತಿದೆ. ಹೀಗೆ ಭಾಷೆಯು ಛಿದ್ರೀಕರಣವಾಗುವುದರಿಂದ ನಮ್ಮ ಸಾಮ್ರಾಜ್ಯವೇ ಛಿದ್ರವಾಗಿದೆ ಮತ್ತು ಇವತ್ತಿನ ಭಾಷೆಯಲ್ಲಿ ಬರೆದಿಟ್ಟ ರಾಣಿಯ ವೈಭವದ ಇತಿಹಾಸವು ಮುಂದಿನ ಜನಕ್ಕೆ ತಲುಪದೆ ವ್ಯರ್ಥವಾಗುವಷ್ಟು ಇದು ತ್ವರೆಯಲ್ಲಿ ಬದಲುಗೊಳ್ಳುತ್ತಿದೆ. ಒಂದು ಸಾಮ್ರಾಜ್ಯವನ್ನು ಮತ್ತು ಇತಿಹಾಸವನ್ನು ನಿರ್ಮಿಸಬೇಕೆಂದರೆ, ಅದಕ್ಕೆ ತಕ್ಕುದಾದ ಒಂದು ಸ್ಥಿರ(ಪ್ರಮಾಣ)ಭಾಷೆಯನ್ನು ನಿರ್ಮಿಸಿಕೊಳ್ಳಬೇಕು. ರಾಣಿಯ ಅಧಿಕೃತ ಮುದ್ರೆಯುಳ್ಳ ಪ್ರಮಾಣ-ರಾಜಭಾಷೆಯೊಂದು ಈಗ ಅತ್ಯಗತ್ಯವಾಗಿದೆ. ನಾನೀಗ ಆ ಛಿದ್ರಭಾಷೆಯನ್ನು ಶುದ್ಧಗೊಳಿಸಿ, ಸಂಕಲಿಸಿ ಅದಕ್ಕೊಂದು ವ್ಯಾಕರಣವನ್ನು ರಚಿಸುತ್ತೇನೆ ಮತ್ತು ಆ ಮೂಲಕ ಪ್ರಮಾಣ ರಾಜಭಾಷೆಯನ್ನು ನಿರ್ಮಿಸುತ್ತೇನೆ. ಅದಕ್ಕೆ ರಾಣಿಯ ಸಮ್ಮತಿ ಮತ್ತು ಸಹಾಯಗಳನ್ನು ಬೇಡುತ್ತೇನೆ".[೧] ಈ ಬಿನ್ನಹ "ಭಾಷೆಯೆನ್ನುವುದು ಯಾವತ್ತೂ ಸಾಮ್ರಾಜ್ಯದ ಸಂಗಾತಿ, ಶಾಶ್ವತ ಸಹಚರಿ"[೨] ಎಂಬುದನ್ನು ಧ್ವನಿಸುತ್ತದೆ.

ಇದೇ ರೀತಿ ಸಾಹಿತ್ಯವೆನ್ನುವುದೂ ಸಾಮ್ರಾಜ್ಯದ ಸಂಗಾತಿ, ಶಾಶ್ವತ ಸಹಚರಿ. ಸಾಮ್ರಾಜ್ಯನಿರ್ಮಾಣಕ್ಕೆ ಸಾಹಿತ್ಯನಿರ್ಮಾಣವೂ ಸಹಕಾರಿ ಎಂದು ಕನ್ನಡಿಗರೂ ಅರ್ಥಮಾಡಿಕೊಂಡಿದ್ದ ಕಾರಣ, ಈ 'ಮತ' ಸಾಹಿತ್ಯನೀತಿಯನ್ನು ರೂಢಿಸಿಕೊಂಡಿದ್ದರೆಂದು ತೋರುತ್ತದೆ. ಅಂದರೆ ರಾಜ್ಯದಲ್ಲಿ ಇಲ್ಲಿಯ ವರೆಗೆ ಬೆಳೆದ ಸಾಹಿತ್ಯದ ಸ್ವರೂಪ ಎಂತಹುದು? ಇನ್ನುಮೇಲೆ ಬೆಳೆಯಬೇಕಾಗಿರುವುದರ ಸ್ವರೂಪವೇನು? ಈ ಬಗ್ಗೆ ವಿವೇಕಶಾಲಿ ವಿಮರ್ಶಕರು ಸಾಮೂಹಿಕವಾಗಿ ಚರ್ಚಿಸಿ, ಅಭಿಪ್ರಾಯಗಳನ್ನು ಪರಿಷ್ಕರಿಸಿ, ತೀರ್ಪುನೀಡಿ, ಅಧಿಕೃತತೆಯೆಂಬಂತೆ ರಾಜನ ಸಮ್ಮತಿಗೆ ಒಳಪಡಿಸುತ್ತಿರುವುದೇ ಮತಸಾಹಿತ್ಯ ಅಥವಾ ಅನುಮತಸಾಹಿತ್ಯ. ಅಂಥ ಪರಂಪರೆಯೊಂದು ಕನ್ನಡದಲ್ಲಿ ಬೆಳೆದುಬಂದಿದ್ದಿತು. ಕೊನೆಯಪಕ್ಷ ಶಾಸ್ತ್ರಸಾಹಿತ್ಯ ವಿಷಯವಾಗಿಯಾದರೂ ಬೆಳೆದು ಬಂದಿದ್ದಿತು.

ಕನ್ನಡದಲ್ಲಿ "ಶಿವಮಾರಮತ"ವೆಂಬ ಗಜಶಾಸ್ತ್ರಕೃತಿ, "ನೃಪತುಂಗದೇವಮತ" (೩-೯೮)ವೆಂಬ ಕವಿರಾಜಮಾರ್ಗ ಪರ್ಯಾಯನಾಮದ ಅಲಂಕಾರಶಾಸ್ತ್ರಕೃತಿ, "ರಟ್ಟಮತ"ವೆಂಬ ಋತುಮಾನಶಾಸ್ತ್ರಕೃತಿ-ಇವು, ಶಿವಮಾರ, ನೃಪತುಂಗ, ರಟ್ಟ(?) ಅರಸರ ಆಸ್ಥಾನದಲ್ಲಿ ಆಯಾ

---

೧. ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು-ಕೆ. ವಿ. ಸುಬ್ಬಣ್ಣ. ಪು-೩೮

೨. ಅದೇ.

ಕ್ಷೇತ್ರದ ವಿದ್ವಾಂಸರಿಂದ ಚರ್ಚೆಗೆ ಒಳಪಟ್ಟು, ಕೊನೆಯಲ್ಲಿ ರಾಜನ ಅಭಿಮತ ಪಡೆದು ಹೊರಬಂದುವಾಗಿವೆ. ಹೀಗಾಗಿ ಈವರೆಗೆ ತಿಳಿದಿರುವಂತೆ ಶಿವಮಾರಮತವೆಂಬುದು ಗಂಗ ಅರಸು ಶಿವಮಾರಕೃತವಲ್ಲ, ರಟ್ಟಮತವು ರಾಷ್ಟ್ರಕೂಟ ಅರಸನಿಂದ ಸೃಷ್ಟಿಯಾದುದಲ್ಲ, ಕವಿರಾಜಮಾರ್ಗವು ಚಕ್ರವರ್ತಿ ನೃಪತುಂಗಕೃತವಲ್ಲ. ಇವರ ಮತ (ಅನುಮತ)ದ ಮುದ್ರೆಪಡೆದಂಥವು. ಪ್ರಾಚೀನ ಈ ಪದ್ಧತಿಯನ್ನು ತಿಳಿದುಕೊಳ್ಳದ ಕಾರಣ ಕವಿರಾಜಮಾರ್ಗದ ಕರ್ತೃವಿಷಯವಾಗಿ ವಿದ್ವಾಂಸರಲ್ಲಿ ವಾದ ಹುಟ್ಟಿದೆಯೆಂದು ಹೇಳಬಹುದು.[೩]

ಕವಿರಾಜಮಾರ್ಗದಲ್ಲಿ ನೃಪತುಂಗದೇವಮತ(೩–೯೮)ದಂತೆ, ನೃಪತುಂಗದೇವ ವಿದಿತಕ್ರಮ (೧–೪೪), ನೃಪತುಂಗದೇವಮಾರ್ಗ (೩–೧೦೭)ಎಂಬ ಪ್ರಯೋಗಗಳೂ ಇರುವುದರಿಂದ ಮತ ಎಂಬುದಕ್ಕೆ ಕ್ರಮ, ಮಾರ್ಗವೆಂಬುವೂ ಪರ್ಯಾಯನಾಮಗಳಂತೆ ಅಂದು ಬಳಕೆಯಾಗುತ್ತಿರಬಹುದು. ಈ (ಸಂ)ಮತ ಕೃತಿಗಳು ಅಂತಿಮದಲ್ಲಿ ಅರಸನ ಅಪ್ಪಣೆಗೆ ಪಡೆದೇ ಹೊರಬರುತ್ತಿದ್ದುದರಿಂದ, ಇದನ್ನು ಜನರಿಗೆ ತಿಳಿಯಪಡಿಸುವುದರ ಸಲುವಾಗಿ "ನೃಪತುಂಗದೇವಾನುಮತಮಪ್ಪ" ಎಂಬಂಥ ವಾಕ್ಯಗಳನ್ನು ಕೆಲವೊಮ್ಮೆ ಈ ಕೃತಿಗಳ ಒಡಲಲ್ಲಿ, ಕಡ್ಡಾಯವಾಗಿ ಪ್ರಕರಣಾಂತ್ಯದಲ್ಲಿ ಮತ್ತು ಗ್ರಂಥಾಂತ್ಯದಲ್ಲಿ ಸೇರಿಸಲಾಗುತ್ತಿರಬಹುದು. ಈ ನಿಯಂತ್ರಣವು ಕಾಲಕ್ರಮೇಣ ನಿರ್ಬಂಧವಾಗಿ ಪರಿಣಮಿಸಲು, ಅದನ್ನು ಸಹಜವಾಗಿಯೇ ಮುರಿದುಹಾಕಲಾಯಿತೆಂದು ತೋರುತ್ತದೆ.

■■

ಆಕರ : ಮಾರ್ಗ ಸಂಪುಟ–೪

---

೩. ಈ ಮೂರು ಕೃತಿಗಳಲ್ಲದೆ ಕಲ್ಯಾಣ ಚಾಲುಕ್ಯಚಕ್ರವರ್ತಿ ಜಯಸಿಂಹನ (೧೦೧೫–೪೨)ಆಸ್ಥಾನದಲ್ಲಿ ಹುಟ್ಟಿದ "ವೀರಾವಳಿ" ಹೆಸರಿನ ಕೋಶವನ್ನು ಕೆಲವೊಮ್ಮೆ "ವೀರಾವಳಿಮತ"ವೆಂದು ಕರೆಯಲಾಗಿದೆ. ಮುಹೂರ್ತಗಳ ಬಗ್ಗೆ ಹೇಳುವ "ಸಹದೇವಮತ" ಹೆಸರಿನ ಹಸ್ತಪ್ರತಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಾಂಡಾರದಲ್ಲಿದೆ. ಇವು ಮಾತ್ರ ಸಾಮಾಜಿಕರು ಒಪ್ಪಿಕೊಂಡ ವ್ಯಕ್ತಿ ಅಭಿಮತವನ್ನು ಸೂಚಿಸಿತ್ತಿರಬಹುದು.

೧೮

ಶಬ್ದಮಣಿದರ್ಪಣ : ಅರ್ಥವೃತ್ತಿ ಮತ್ತು ಅನ್ವಯವೃತ್ತಿ

ಪ್ರಾಚೀನ ಕನ್ನಡಸಾಹಿತ್ಯಕ್ಕೆ ಸಂಬಂಧಪಟ್ಟ ಹಲವಾರು ಪ್ರಶ್ನೆಗಳಲ್ಲಿ ಶಬ್ದಮಣಿದರ್ಪಣದ ವೃತ್ತಿಯೂ ಒಂದು. ಕೆಲವು ದಿನಗಳ ಹಿಂದೆ "ಶಬ್ದಮಣಿದರ್ಪಣದ ವೃತ್ತಿ ಕೇಶಿರಾಜನದಲ್ಲ"[೧] ಎಂಬ ಪ್ರಶ್ನೆಯೊಂದು ಎದ್ದು ವಿದ್ವತ್‌ಪ್ರಪಂಚವನ್ನು ತಲ್ಲಣಗೊಳಿಸಿ; ತನ್ನಷ್ಟಕ್ಕೆ ತಾನೇ ತಣ್ಣಗಾಯಿತು. ಆ ಬೂದಿ ಮುಚ್ಚಿದ ಕೆಂಡವನ್ನು ಈಗ ಮತ್ತೆ ಕೆರಳಿಸದೆ ದರ್ಪಣದ ವೃತ್ತಿಗಳ ಲಕ್ಷಣ ಮತ್ತು ಸ್ವರೂಪಗಳನ್ನು ಮಾತ್ರ ವಿವೇಚಿಸುವುದು ಈ ಲೇಖನದ ಉದ್ದೇಶವಾಗಿದೆ.

ಈಗ ತಿಳಿದಮಟ್ಟಿಗೆ ದರ್ಪಣಕ್ಕೆ ಬರೆಯಲಾದ ವೃತ್ತಿ-ವ್ಯಾಖ್ಯಾನಗಳು ನಾಲ್ಕು. ಅವು :

೧.ಸೂತ್ರಕಾರನಾದ "ಕವಿಕೇಶವಂ ತಾಂ ಮಾಡಿದ ಶಬ್ದಣಿವೃತ್ತಿಯೊಳ್ ಸಂಧಿದೋಷಮಕ್ಕುಮೆಂದು ತಾಂ ಬರೆದಂ" ಎಂಬ ಮದ್ರಾಸ ದರ್ಪಣದ ಆವೃತ್ತಿಯ ಹೇಳಿಕೆ ದರ್ಪಣಕ್ಕೆ ಕೇಶಿರಾಜನೇ ಒಂದು ಮೂಲವೃತ್ತಿಯನ್ನು ಬರೆದಿರುವನೆಂದು ತಿಳಿಸುತ್ತದೆ.

೨."..........ಸರೇಫಮಿದಿರಾಗೆ ದೋಷಂ ಎಂದು ಕಂxಸಪ್ಪಂ ತಾಂ ಮಾಡಿದ ಶಬ್ದಮಣಿದರ್ಪಣ ವ್ಯಾಖ್ಯಾನದೊಳ್ ಬರೆದಂ. ಅದು ಪೊಲ್ಲ." ಮದ್ರಾಸ ದರ್ಪಣದ ಈ ಮಾತಿನಿಂದ ಕಂxಸಪ್ಪನೆಂಬವನು ವ್ಯಾಖ್ಯಾನ ಬರೆದಿರುವನೆಂದು ಸ್ಪಷ್ಟವಾಗುತ್ತದೆ.

೩.ಶ್ರೀ ಡಿ.ಕೆ. ಭೀಮಸೇನರಾಯರಿಗೆ ಲಭಿಸಿದ ದರ್ಪಣಕ್ಕೆ ವಿಶಿಷ್ಟರೂಪದ ವ್ಯಾಖ್ಯಾನವಿದೆ. ಈ ವ್ಯಾಖ್ಯಾನಕಾರನು ಮೇಲಣ ಕಂxಸಪ್ಪನಿಂದ ಭಿನ್ನನೆಂದು ಶ್ರೀಯುತರ ಅಭಿಪ್ರಾಯ.[೨]

೪.ಮದ್ರಾಸ ದರ್ಪಣಕ್ಕೆ ಲಿಂಗಣಾರಾಧ್ಯನೆಂಬುವನು ಬೇರೊಂದು ವೃತ್ತಿ ಬರೆದಿರುವ ವಿಷಯ ಸಾಹಿತ್ಯಲೋಕಕ್ಕೆ ಚಿರಪರಿಚಿತವಿದೆ.

---

೧. ಶಬ್ದಮಣಿದರ್ಪಣದ ವೃತ್ತಿ ಕೇಶಿರಾಜನದಲ್ಲ-ವಿ. ರಾಮಶರ್ಮಾ, ಸಾ.ಪ. ೨೬-೧ (೧೯೪೧)

೨. ಶಬ್ದಮಣಿದರ್ಪಣದ ಪಾಠಾಂತರಗಳು, ಪುಟ -೬೫

ಈ ನಾಲ್ಕರಲ್ಲಿ ಕಂxಸಪ್ಪನ ವ್ಯಾಖ್ಯಾನ ಉಪಲಬ್ಧವಿಲ್ಲ. ಹೈದರಾಬಾದ ದರ್ಪಣ ಇನ್ನೂ ಅಚ್ಚಾಗಿಲ್ಲ. ಅದಕ್ಕಾಗಿ ಕೇಶಿರಾಜನ ವೃತ್ತಿ ಮತ್ತು ಲಿಂಗಣಾರಾಧ್ಯನ ವೃತ್ತಿಗಳನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ.

ಈವರೆಗೆ ಅಚ್ಚಾದ ದರ್ಪಣದ ಆವೃತ್ತಿಗಳು ಹತ್ತು. ಅವುಗಳ ಅವಲೋಕನೆಯಿಂದ (೧)ಜೆ. ಗೆರೆಟ್-೧೮೬೮, (೨) ಕಿಟೆಲ್-೧೮೭೨ (೩)ಕಿಟೆಲ್-೧೮೯೯, (೪) ಪಂಜೆ-೧೯೨೦, (೫)ಪಂಜೆ-೧೯೬೫, (೬) ಸಾಹಿತ್ಯ ಪರಿಷತ್-೧೯೨೦, (೭) ಡಿ.ಎಲ್.ಎನ್.-೧೯೫೯, (೮)ಡಿ.ಎಲ್.ಎನ್. -೧೯೬೪. (೯)ಡಿ.ಎಲ್.ಎನ್. -೧೯೬೮ ಆವೃತ್ತಿಗಳಲ್ಲಿ ಸಾಮಾನ್ಯವಾಗಿ ಕೇಶಿರಾಜನ ವೃತ್ತಿ, (೧೦) ಮದ್ರಾಸ ಯುನಿವ್ಹರ್ಸಿಟಿ-೧೯೩೮ ಆವೃತ್ತಿಯಲ್ಲಿ ಲಿಂಗಣಾರಾಧ್ಯನ ವೃತ್ತಿ ಕಂಡುಬರುತ್ತವೆ.

ವೃತ್ತಿಕಾರರ ಮಾತನ್ನವಲಂಬಿಸಿ ಹೇಳುವುದಾದರೆ ಕೇಶಿರಾಜನದು 'ಅರ್ಥವೃತ್ತಿ', ಲಿಂಗಣಾರಾಧ್ಯನದು 'ಅನ್ವಯವೃತ್ತಿ'ಯೆಂದು ಕೆಳಗಣ ವಿವರಣೆಯಿಂದ ಸ್ಪಷ್ಟವಾಗುತ್ತದೆ.

ಪ್ರಾಸಚ್ಛಂದೋನ್ವಯ ವಿ ।
ನ್ಯಸದಿನಂತಿಂತು ಶಬ್ದಮಿರ್ಕುಂ ವೃತ್ತಿ ।
ವ್ಯಾಸಂ ತದ್ವ್ಯಾಕುಳಮೆಂ ।
ದಾ ಸೂತ್ರಕ್ಕರ್ಥವೃತ್ತಿ ವರ್ತಿಸೆ ಪೇೞ್ದೆಂ ॥

ಇಲ್ಲಿ 'ಸೂತ್ರಕ್ಕರ್ಥವೃತ್ತಿ ವರ್ತಿಸೆ ಪೇೞ್ದೆಂ' ಎಂಬ ಮಾತಿನ ಮೂಲಕ ಕೇಶಿರಾಜ ತನ್ನದು 'ಅರ್ಥವೃತ್ತಿ' ಎಂದು ಸ್ಪಷ್ಟಪಡಿಸಿದ್ದಾನೆ.

ಇನ್ನು "ಸಂಸ್ಕೃತ ಕರ್ನಾಟಕ ಭಾಷಾವಿಶಾರದ ಶ್ರೀ ವೀರಶೈವ ಲಿಂಗಣಾರಾಧ್ಯ ವಿರಚಿತಮಪ್ಪ ಸೂತ್ರಾನ್ವಯ ರತ್ನಮಾಲೆಯೆನಿಪ ಶಬ್ದಮಣಿದರ್ಪಣ [ವೃತ್ತಿಯೊಳ್] ನಾಮಾಧ್ಯಾಯಂ ಸಮಾಪ್ತಂ" ಎಂಬ ಪ್ರಕರಣಾಂತ್ಯ ಗದ್ಯದಲ್ಲಿಯ 'ಸೂತ್ರಾನ್ವಯರತ್ನಮಾಲೆಯೆನಿಪ ಶಬ್ದಮಣಿದರ್ಪಣ [ವೃತ್ತಿ]' ಎಂಬ ಮಾತಿನ ಮೂಲಕ ಲಿಂಗಣಾರಾಧ್ಯ ತನ್ನದು 'ಅನ್ವಯವೃತ್ತಿ' ಎಂದು ಸೂಚಿಸಿದ್ದಾನೆ.

ಸೂತ್ರವೊಂದರ ಆಶಯವನ್ನರಿಯಲು ಅದರ ಪದಗಳನ್ನು ಮೊದಲು ಅನ್ವಯರೂಪದಲ್ಲಿ ಹೊಂದಿಸಿಕೊಳ್ಳಬೇಕಾಗುತ್ತದೆ. ತರುವಾಯ ಆ ಅನ್ವಯಕ್ಕೆ ಅರ್ಥರೂಪ ಕೊಡಬೇಕಾಗುತ್ತದೆ. ಈ ಎರಡರಲ್ಲಿ ಲಿಂಗಣಾರಾಧ್ಯನದು ಅನ್ವಯದೃಷ್ಟಿ; ಕೇಶಿರಾಜನದು ಅರ್ಥದೃಷ್ಟಿ. ಅದಕ್ಕಾಗಿ ಒಬ್ಬನದು 'ಅರ್ಥವೃತ್ತಿ' ಇನ್ನೊಬ್ಬನದು 'ಅನ್ವಯವೃತ್ತಿ'. ಇವು ದರ್ಪಣವೃತ್ತಿಯ ಎರಡು ಲಕ್ಷಣಗಳು. ಸೂತ್ರವೊಂದಕ್ಕೆ ಇವರಿಬ್ಬರಿಂದ ಬರೆಯಲಾದ ಎರಡು ವೃತ್ತಿಗಳ ಉದಾಹರಣೆಯ ಮೂಲಕ ಈ ಭಿನ್ನತೆಯನ್ನು ಸ್ಪಷ್ಟಪಡಿಸಿಕೊಳ್ಳಬಹುದು.

ಎರಡುಂ ರೇಫೆಗಳಂ ತಂ।
ದುರವಣೆಯಿಂ ಕೂಡಿದಂತೆವೋಲ್ ಶ್ರುತಿಕಷ್ಟಂ।
ಬರೆ ಸಂಧಿ ಮಾಡಲಾಗದು ।
ಕರಡೆಯ ಗಿರುಗಟೆಯ ದನಿವೊಲಮರವವೆಂದುಂ ॥

ಕೇಶಿರಾಜನ (ಅರ್ಥವೃತ್ತಿ) :"ಪಂದಗಳೆರಡಱಂತರಾಳ ರೇಫೆಂಗಳಂ ಕೂಡಿದಂತೆ ಶ್ರುತಿಕಷ್ಟವಾಗಿ ಸಂಧಿಯಂ ಮಾಡಲಾಗದು. ಕರಡೆಯ ಗಿರುಗಟೆ ದನಿಯಂತೆ ನೇರ್ಪಡವು"- ಇದು ಅರ್ಥವೃತ್ತಿ. ಇಲ್ಲಿ ಅನ್ವಯ ಮುಖ್ಯವಲ್ಲ. ಅರ್ಥಮುಖ್ಯ.

ಲಿಂಗಣಾರಾಧ್ಯನ (ಅನ್ವಯ)ವೃತ್ತಿ: "ಉರವಣೆಯಿಂ ಎರಡುಂ ರೇಫೆಗಳಂ ಕೂಡಿದಂತೆವೊಲ್ ಶ್ರುತಿಕಷ್ಟಂ ಬರೆ ಸಂಧಿ ಮಾಡಲಾಗದು. ಅವು ಕರಡೆಯ ಗಿರುಗಟೆಯ ದನಿಯವೊಲ್ ಎಂದುಂ ಅಮರವು." - ಇದು ಅನ್ವಯ ವೃತ್ತಿ. ಸೂತ್ರದ ಅನ್ವಯ ಕ್ರಮವೇ ಇಲ್ಲಿ ವೃತ್ತಿಯಾಗಿ ನಿಂತಿದೆ, ಲಿಂಗಣಾರಾಧ್ಯನದಲ್ಲಿ. ಇಂಥ ವೃತ್ತಿಗಳು ೧೦೦ಕ್ಕೆ ೭೫ರಷ್ಟು ಕಂಡುಬರುತ್ತವೆ. ವೃತ್ತಿ ಬರವಣಿಗೆಯಲ್ಲಿ ಆತನು ಇಟ್ಟುಕೊಂಡ ಉದ್ದೇಶವೇ ಇದಕ್ಕೆ ಕಾರಣ.

ಈ ವೈಲಕ್ಷಣ್ಯಗಳನ್ನು ಅಭಿವ್ಯಕ್ತಮಾಡುವ ವೃತ್ತಿಗೆ ಒಂದು ಸ್ವರೂಪ(Form) ಅತ್ಯವಶ್ಯ. ಈ ದೃಷ್ಟಿಯಿಂದ ನೋಡಿದರೆ ಕೇಶಿರಾಜ ಮತ್ತು ಲಿಂಗಣಾರಾಧ್ಯರ ದರ್ಪಣಗಳಲ್ಲಿ ವೃತ್ತಿಗಳು ಹಲವು ಸ್ವರೂಪಗಳಲ್ಲಿ ಕಂಡುಬರುತ್ತವೆ. ಆ ಸ್ವರೂಪಗಳನ್ನು ಇಲ್ಲಿ ವಿವೇಚಿಸಬಹುದು.

ಅರ್ಥವೃತ್ತಿಯ ಸ್ವರೂಪ :

ವಿದಿತ ಸ್ವರದಿನನಾದೇ ।
ಶದ ಸಹಜ ವ್ಯಂಜನಗಳಿಂ ಪರದ ಪವ ।
ರ್ಗದ ನೆಲೆಗಕ್ಕುಂ ವತ್ವಂ।
ಪದವಿಧಿಯೊಳ್ ಬಹುಳವೃತ್ತಿಯಿಂ ವಾಕ್ಯದೊಳಂ॥

ವೃತ್ತಿ : ೧."ಸ್ವರಂಗಳಿರ್ದೊಡಂ ಆದೇಶರಹಿತಮಪ್ಪ ವ್ಯಂಜನಂಗಳಿರ್ದೊಡಂ ಪರದೊಳಿರ್ದ ಪವರ್ಗಕ್ಕೆ ಸಮಾಸವಿಷಯದೊಳ್ ವತ್ವಮಕ್ಕುಂ. ಬಹುಳತೆಯಿಂ ವಾಕ್ಯದೊಳಮಕ್ಕುಂ."

೨."ಸಮಾಸಂಗಳೊಳ್ ಪ್ರಸಿದ್ಧಿಯಿಂ ಪೂರ್ವಪದಾಂತ್ಯದೊಳಿರ್ದ ಸಹಜ ಸ್ವರಂಗಳ್ಗೆಯುಂ, ಆದೇಶಮಂ ಬೇರ್ಕೆಯ್ದು ತೊಲಗಿ ನಿಂದ ಸಹಜ ವ್ಯಂಜನಂಗಳ್ಗೆಯುಂ, ಪರಮಾಗಿ ಪರಪದ ಪೂರ್ವದೊಳ್ ನಿಂದ ಪವರ್ಗ ಸ್ಥಾನಕ್ಕೆ ಬಹುಳತೆಯಿಂ ವತ್ವಮಕ್ಕುಂ ಮತ್ತಂ ಕೆಲವು ವಿಭಕ್ತ್ಯಂತಮಾಗಿ ನಿಂದ ಕಕಾರಕ್ಕೆ ಪರದೊಳಿರ್ದ ಕ್ರಿಯಾವಾಚಕಂಗಳ ಮೊದಲೊಳಿರ್ದ ಪಕಾರಕ್ಕೆ ವತ್ವಾದೇಶಂ ಪ್ರಚುರತೆಯಿಂ ಸವನಿಸುವುದು,:"

ಒಂದೇ ಸೂತ್ರಕ್ಕೆ ಬರೆದ ಈ ಅರ್ಥವೃತ್ತಿಗಳು ಸ್ವರೂಪದಲ್ಲಿ ಎರಡು ಬಗೆಯಾಗಿವೆ. ಒಂದು ಸಂಗ್ರಹ; ಇನ್ನೊಂದು ವಿಸ್ತೃತ. ಈಗ ಇನ್ನೊಂದು ಸೂತ್ರಕ್ಕೆ ಬರೆದ ಎರಡು ವೃತ್ತಿಗಳನ್ನು ನೋಡಬಹುದು.

ಎಳದು ಪಟಿದೆಂಬ ಶಬ್ದಂ ।
ಗಳ ಮಧ್ಯಕ್ಕುಂಟೆಕಾರಮುತ್ವಂ ಬಱಿದೆಂ ।
ದೊಳಱುವ ಱಿಕಾರದೊಳ್ ನೀಂ ।
ತಿಳಿ ಪೊಸತಱ ಕಡೆಗೆ ಬಿಂದುವೆರಸು ಬಕಾರಂ ॥

ವತ್ತಿ : ೧."ಎಳದು, ಪಟಿದು ಶಬ್ದಂಗಳ್ಗೆ ಪುಲ್ಲಿಂಗದಕಾರಂ ಬರೆ ಮಧ್ಯಕ್ಕೆ ಹ್ರಸ್ವಮಪ್ಪೆತ್ವಮಕ್ಕುಂ. ಬಱಿದೆಂಬ ಶಬ್ದದ ಱಿಕಾರಕ್ಕೆ ಉಕಾರಾದೇಶಂ. ಪೊಸತೆಂಬುದಱ ತುಕಾರಕ್ಕೆ ಬಿಂದುವೆರಸು ಬಕಾರಾದೇಶಮಕ್ಕುಂ."

೨. "ಎಳದು ಪೞದಿವೆಂಬುವುದಕ್ಕೆ ಪುಲ್ಲಿಂಗದಕಾರಂ ಬರೆ ಮಧ್ಯಾಕ್ಷರಕ್ಕೆ ಹ್ರಸ್ವೇತ್ವಮಕ್ಕುಂ. ಎಳೆಯಂ।ಪಳೆಯಂ।ಪಳೆಯರೆಂದು ಸ್ತ್ರೀಲಿಂಗದೊಳ್ ಎಂಬುದು ಪರಮಾದೊಡಕ್ಕುಂ ।ಎಳೆಯಳ್। ಎಳೆಯಳಿರುತೆನ್ನ ಪಕ್ಕದೊಳೆಳಸಿ ಮನೋಜಾತರೂಪ ತಾನೆ। ಅದಲ್ಲದೆಯುಂ ಸ್ತ್ರೀಲಿಂಗದಳ್ ಪೞಮಾದೊಡೆ ಗುಣವಚನದುಕಾರದೊಳೆ ತದ್ಧಿತದೊಳ್ ಲೋಪಮುಂಟಾಗಿ ಕಿಱಿಯಳ್।ಪಿರಿಯಳ್। ನಿಡಿಯಳೆಂದುಂಟು। ಬೞಿದುಯೆಂಬ ಶಬ್ದದ ಱಿಕಾರಕ್ಕುಕಾರಾದೇಶಮಾಗಿ ಬಱುವನೆಂದಾಯ್ತು। ಪೊಸತೆಂಬುದಱ ತುಕಾರಕ್ಕೆ ಬಿಂದುವೆರಸು ಬಕಾರಾದೇಶಂ।ಪೊಸಬನೆಂದು ಪ್ರಯೋಗಂ। ವಿಚಾರಿಸದುದಿಂತೆ ಪೊಸಂಬರೊತ್ತೆಯಂ ಕೊಳ್ವುದು ತಕ್ಕುದಲ್ತು । ಬಹುಳಗ್ರಹಣದಿಂ ಪೊಸಬನೆಂದುಂಟು. ಪೊಸಬನಿದಾವನಾದಪನೊ ಕಂಡಱಿದಂತೆ ವೊಲೆಂದು ಕಂಡೆನೀ।"

ಒಂದೇ ಸೂತ್ರಕ್ಕೆ ಬರೆದ ಈ ಅರ್ಥವೃತ್ತಿಗಳೂ ಎರಡು ಬಗೆಯಾಗಿವೆ. ಒಂದು ಸಂಗ್ರಹ; ಇನ್ನೊಂದು (ಪ್ರಯೋಗ)ಮಿಶ್ರಣ. ಇದರಿಂದ ಅರ್ಥವೃತ್ತಿಗಳು ಮೂರು ಭಿನ್ನಸ್ವರೂಪಗಳಲ್ಲಿ ದೊರೆಯುತ್ತವೆ ಎಂದಂತಾಯಿತು. ಅವು:

೧. ಸಂಗ್ರಹವೃತ್ತಿ
೨. ವಿಸ್ತೃತವೃತ್ತಿ
೩. ಮಿಶ್ರಣವೃತ್ತಿ.

ಈ ಒಂದೊಂದು ಬಗೆಯ ವೃತ್ತಿಗಳಲ್ಲಿಯೇ ಸಣ್ಣಪುಟ್ಟ ಪಾಠವ್ಯತ್ಯಾಸಗಳು ಕಂಡುಬರುತ್ತಿದ್ದರೂ ಸ್ಥೂಲವಾಗಿ ಈ ಮೂರು ಸ್ವರೂಪಗಳನ್ನೇ ಇಟ್ಟುಕೊಳ್ಳಬಹುದು. ಇದು ಅರ್ಥವೃತ್ತಿಯ ಸ್ವರೂಪವಿಚಾರ. ಇನ್ನು ಅನ್ವಯವೃತ್ತಿಯ ಸ್ವರೂಪವನ್ನು ನೋಡಬಹುದು.

ಅನ್ವಯವೃತ್ತಿಯ ಸ್ವರೂಪ :

ಲಿಂಗಣಾರಾಧ್ಯನು ಸೂತ್ರಗಳಿಗೆ ಅನ್ವಯರೂಪ ಕೊಡುವ ಉದ್ದೇಶವಿಟ್ಟುಕೊಂಡಿರುವುದರಿಂದ ಆತನ ವೃತ್ತಿಗಳು ಸ್ವರೂಪ(From) ದೃಷ್ಟಿಯಿಂದ ಸಾಮಾನ್ಯವಾಗಿ ಸಂಗ್ರಹವೃತ್ತಿಗಳೇ ಆಗಿವೆ. ಹೀಗಿದ್ದರೂ ಕೆಲವು ಸಲ ಮಿಶ್ರಣವೃತ್ತಿಗಳು ಆತನಲ್ಲಿ ಕೆಳಗಿಂತೆ ಕಂಡುಬರುತ್ತವೆ. ಉದಾ :

ಪುದಿಗುಂ ನಿರ್ಧಾರಣದ ।
ಲ್ಲದೆಯೆಂಬ ದಕಾರದೆಡೆಗೆ ಪಿರಿದುಂ ಲೋಪಂ।
ಪುದಿಯದು ಲೋಪಂ ಪ್ರತಿಷೇ।
ಧದೊಳಲ್ಲದುವೆಂಬ ಪದವನಲ್ತೆನಲಕ್ಕುಂ।।

ವೃತ್ತಿ : ನಿರ್ಧಾರಣಾರ್ಥಮಂ ಪೇೞ್ವ ಅಲ್ಲದೆಯೆಂಬ ದಕಾರದೆಡೆಗೆ ಲೋಪಂ ಪಿರಿದುಂ ಪುದಿಗುಂ.

ಪ್ರಯೋಗಂ : ದೇವರನಲ್ಲದೆ ಪೊಗೞೆಂ ಎಂಬಲ್ಲಿ ದೇವನಲ್ಲ ಪೊಗೞೆಂ ಎಂಬ ಪ್ರಯೋಗಮುಂಟು.

ವೃತ್ತಿ : ಅಲ್ಲದುವೆಂಬ ಪ್ರತಿಷೇಧದ ದಕಾರಕ್ಕೆ ಲೋಪಮಿಲ್ಲಾಗಿ ಅಲ್ಲೆನಲಾಗದು. ಅಲ್ಲದೆಂಬುದನಲ್ತೆಂದು ವಿಕಲ್ಪದಿನೆನಲಕ್ಕುಂ, ಅದರ್ಕೆ ಲಿಂಗವವಚನದಿಂ ವಿಶೇಷಭಾವವಿಲ್ಲ.

[ಅದ]ರ್ಕೆ ಲಕ್ಷ್ಯಂ-ಅವನಲ್ತು, ಅದಲ್ತು.

ಅವರ್ಕೆ ಪ್ರಯೋಗಂ- 1. ಒರ್ವನೆ ಗಂಡನಲ್ತೆ ಜಗತೀತದೊಳ್

2. ಇರ್ಬರೆ ತೋಳ್ಗಳಲ್ತೆ ನೃಪತಿಗೆ ರಣದೊಳ್

3. ಕಂ||ತೇಜೋಧಿಕ ಕವಿ ।
(ನಿ)ಳಯದೊಳೀಷತ್ಪ್ರಭರ್ ಮಹಾಪ್ರಭರಲ್ತೆ ।

ಒಂದಕ್ಕಿಂತ ಹೆಚ್ಚು ವ್ಯಾಕರಣ ವಿಚಾರಗಳನ್ನೊಳಗೊಂಡ ಈ ವೃತ್ತಿಯು ಪ್ರಯೋಗದೊಂದಿಗೆ ಮಿಶ್ರಣವಾಗುತ್ತಹೋಗಿ ಪೂರ್ಣವಾಗಿದೆ. ಆದರೆ ಕಿಟೆಲ್ ಪರಿಷ್ಕರಣದಲ್ಲಿ ಈ ವೃತ್ತಿ ಪ್ರಯೋಗದೊಂದಿಗೆ ಮಿಶ್ರಣಹೊಂದದೆ ತನ್ನ ಸ್ಥಾನದಲ್ಲಿ ಸ್ವತಂತ್ರವಾಗಿ ನಿಂತುಕೊಂಡಿದೆ. ಇಂಥ ಮಿಶ್ರಣವೃತ್ತಿಗಳು ಲಿಂಗಣಾರಾಧ್ಯನಲ್ಲಿ ಹಲವಾರು ದೊರೆಯುತ್ತವೆ. ಉದಾಹರಣೆಗೆಂದು ಸೂ. ೧೪, ೨೬, ೧೦೮, ೨೦೬, ೨೬೮ ಮತ್ತು ೨೬೯ ಇತ್ಯಾದಿ ನೋಡಬಹುದು.

ಹೀಗೆ ಸಂಗ್ರಹ ಮಿಶ್ರಣಸ್ವರೂಪಗಳಲ್ಲಿ ತೋರಿಬರುವ ಅನ್ವಯವೃತ್ತಿ ವಿಸ್ತೃತ ರೂಪದಲ್ಲಿ ಕಂಡುಬರುವುದಿಲ್ಲ. ಆದರೆ ಆಗಾಗ "ಅವಂ ವಿನುತಕ್ರಿಯಾತ್ಮಕಂಗಳೆನಿಸುವ ಸಂಸ್ಕೃತದ ಭಾವವಚನಂಗಳಂ ಆಯ್ದು ಅನಿತರ್ಕಂ ಇಸು ಪ್ರತ್ಯಯಮನೆ ಪತ್ತಿಸಿ ನಿಜಿಸೆ ಅಲ್ಲಿ ಕೃಲ್ಲಿಂಗಂ ಬರ್ಕುಂ" ಎಂದು ಕೇವಲ ಅನ್ವಯವೃತ್ತಿಯವನ್ನು ಬರೆದು, ಪ್ರಯೋಗ ಕೊಟ್ಟ ತರುವಾಯ ಸಂಸ್ಕೃತಭಾವಕ್ಕೆ

ಶ್ಲೋಕ - ಸನ್ಮಾತ್ರಂ ಭಾವಲಿಂಗಂ ಸ್ಯಾದಸ್ಪೃಷ್ಟಂ ಯಚ್ಚಕಾರಕೈಃ ।
ಧಾತ್ವರ್ಥಃ ಕೇವಲ ಶುದ್ಧಭಾವ ಇತ್ಯಭಿದೀಯತೇ ।

ವೃತ್ತಿ-ಯತ್=ಆವುದು. ಕಾರಕೈಃ=ಪಟ್ಕಾರಕಂಗಳಿಂದ, ಅಸ್ಪೃಷ್ಟಂ=ಮುಟ್ಟಲ್ಪಡದುದುಂ, ಸನ್ಮಾತ್ರಂ ಚ=ಉಂಟೆಂಬನಿತುಳ್ಳುದು, (ಅಪ್ಪುದೋ ಅದು)ಭಾವಲಿಂಗಸ್ಯಾತ್ = ಭಾವಲಿಂಗಮಪ್ಪುದು, ಶುದ್ಧಃ =ಶ್ಯಾದ(ಶುದ್ಧ)ವಾದುದು ? ಕೇವಲಃ ಧಾತ್ವರ್ಥಃ=ಏನುಂ ಹೊದ್ದದ ಧಾತ್ವರ್ಥಂ, ಭಾವಃ [ಇತ್ಯಭಿಧೀಯತೇ ಭಾವ ಎಂದು ಹೇಳಲ್ಪಡುತ್ತದೆ]. ಎಂಬ ವ್ಯಾಖ್ಯಾನ ಜೋಡಿಸಲ್ಪಟ್ಟಿದೆ. ಇಂಥ ವ್ಯಾಖ್ಯಾನವೃತ್ತಿಗಳು ಲಿಂಗಣಾರಾಧ್ಯನಲ್ಲಿ ೮-೧೦ ಮಾತ್ರ ಲಭಿಸುತ್ತವೆ. ಉದಾಹರಣೆಗಾಗಿ ಸೂತ್ರ ೧೮, ೩೩, ೮೪, ೮೫, ೧೮೫ ಮತ್ತು ೨೨೮ ನೋಡಬಹುದು.

ಒಟ್ಟಿನಲ್ಲಿ ಲಿಂಗಣಾರಾಧ್ಯನ ಅನ್ವಯವೃತ್ತಿಗಳು ಮೂರು ಭಿನ್ನಸ್ವರೂಪ (Form)ಗಳಲ್ಲಿ ದೊರೆಯುತ್ತವೆಯೆಂದಂತಾಯಿತು. ಅವು :

೧. ಸಂಗ್ರಹವೃತ್ತಿ
೨. ಮಿಶ್ರಣವೃತ್ತಿ
೩. ವ್ಯಾಖ್ಯಾನವೃತ್ತಿ

ಲಿಂಗಣಾರಾಧ್ಯನು ತಾನು ಬರೆಯುತ್ತಿರುವ 'ಅನ್ವಯವೃತ್ತಿ'ಯು ಅರ್ಥಸ್ಪಷ್ಟತೆಗೆ ಅಸಮರ್ಪಕವೆನಿಸುತ್ತಿದ್ದರೆ ಕೆಲವು ಸಲ 'ಅರ್ಥವೃತ್ತಿ'ಯನ್ನು ಬಳಸುತ್ತಾನೆ. ಇಂಥ ಅರ್ಥವೃತ್ತಿಗಳು ಆತನಲ್ಲಿ ಎರಡು ಬಗೆಯಾಗಿವೆ. ಒಂದು ಸ್ವರಚಿತ, ಇನ್ನೊಂದು ಕೇಶಿರಾಜನಿಂದ ಸ್ವೀಕೃತ.


ಸ್ವರಚಿತ ಅರ್ಥವೃತ್ತಿ : "ದೇಶೀಯಮುಮಯ್ದು ನೀಂ ತಿಳಿ. ಱ, ೞ, (ಕು)ಳ, ಎ, ಒ ಇವು ದೇಶೀಯಂಗಳ್. ಇವಂ ಕೂಡಿದಡೆ ೫೭ ಅಕ್ಕರಂಗಳ್ ಋ, ೠ, ವರ್ಣ, ಶ, ಷ, ವಿಸರ್ಗ, ೱ, ೲ, ಕ್ಷಳನಂ ನೀಂ ಕಳೆ. ಅಚ್ಚಗನ್ನಡಕ್ಕೆ ಯೀಕ್ರಮದಿಂ ಶುದ್ಧಗೆ ನಾಲ್ವತ್ತೇೞಾಯ್ತೆಂದಳೆ"-ಇದು ಲಿಂಗಣಾರಾಧ್ಯ ವಿರಚಿತ ಅರ್ಥವೃತ್ತಿ.

"ಕನ್ನಡದೊಳ್ದೇಶೀಯಮೈದು ತೆರಂ ಪಿಂತಣೈವತ್ತೆರಡಕ್ಕರಂಗಳ್ಕೂಡೆ ಐವತ್ತೇಳಕ್ಕರಂಗಳ್. ಅವಱೊಳಗೆ ಋ, ೠ, ಌ, ೡ, ಶ, ಷ, ವಿಸರ್ಗ, ೱ, ೲ, ಕ್ಷಳಂಗಳೆಂಬ ಪತ್ತಂ ಕಳೆಯಲಚ್ಚಗನ್ನಡದೊಳ್ಶುದ್ಧಗೆ ನಾಲ್ವತ್ತೇೞು ವಿಧಂ. ನಿಸರ್ಗಮಾಗಿ ಮಿಸರ್ಗಮಿಲ್ಲ." - ಇದು ಕೇಶಿರಾಜವಿರಚಿತ ಅರ್ಥವೃತ್ತಿ.

ಒಂದೇ ಸೂತ್ರಕ್ಕೆ ಬರದೆ ಈ ಎರಡುವೃತ್ತಿಗಳನ್ನು ನೋಡಿದರೆ ಕೇಶಿರಾಜನ ಅರ್ಥವೃತ್ತಿಯಿಂದ ಲಿಂಗಣಾರಾಧ್ಯನ ಅರ್ಥವೃತ್ತಿ ಭಿನ್ನವಾಗಿರುವ ಕಲ್ಪನೆ ಕಂಡುಬರುತ್ತದೆ. ಇಂಥ ಸ್ವರಚಿತ ಅರ್ಥವೃತ್ತಿಗಳು ಲಿಂಗಣಾರಾಧ್ಯನಲ್ಲಿ ಇನ್ನೂ ಕೆಲವು ಕಂಡುಬರುತ್ತವೆ. ಉದಾಹರಣೆಗಾಗಿ, ಸೂತ್ರ ೩೮, ೫೧ ರ ವೃತ್ತಿಗಳನ್ನು ನೋಡಬಹುದು.

ಕೇಶಿರಾಜನಿಂದ ಸ್ವೀಕೃತ ಅರ್ಥವೃತ್ತಿ : 'ಅನ್ವಯವೃತ್ತಿ' ಬರೆಯುವ ಉದ್ದೇಶದಿಂದ ಹೊರಟಿರುವ ಲಿಂಗಣಾರಾಧ್ಯನು ಮೇಲೆ ಹೇಳಿದಂತೆ ಕೆಲವು ಸಲ 'ಅರ್ಥವೃತ್ತಿ'ಗಳನ್ನು ತಾನೇ ನಿರ್ಮಿಸುವನಲ್ಲದೆ, ಇನ್ನು ಕೆಲವು ಸಲ ನೇರವಾಗಿ ಕೇಶಿರಾಜನಿಂದಲೇ ಸ್ವೀಕರಿಸುತ್ತಾನೆ.

"ಕುಳ ಪ್ರಾಸಮಾಗಿ ಪೇೞ್ದ ಕಬ್ಬಂ ಕ್ಷಳನಂ ಸೇಱಿಗೆಯ್ವುದಾಗಿ ಲಕಾರಮಂ ವಿಕಲ್ಪಂ ಮಾಡಬಾರದು. ಲಕಾರ ಪ್ರಾಸಮಾಗಿ ಪೇೞ್ದ ಕನ್ನಡ ಕಬ್ಬದೊಳ್ ಕ್ಷಳನಂ ವಿಕಲ್ಪದಿಂದಿರಸಲ್ಬಾರ(ದು)ದಾಗಿಯದು(ವು) ವಾಗದು. ಕ್ಷಳನೆಂಬುದಿಲ್ಲದೆ ಸಂಸ್ಕೃತ ಪದದ ಲಕಾರಕ್ಕೆ ವಿಕಲ್ಪಂ ಪೇೞಲ್ಬಾರ(ದು)ದಾಗಿ ಕ್ಷಳನನಿದಿರೊೞ್ ಬೆರಸಿ ಪೇೞ್ವಂ." ಲಿಂಗಣಾರಾಧ್ಯನಲ್ಲಿ ಕಾಣುವ ಈ ವೃತ್ತಿ ಕೊಂಚ ಪಾಠಾಂತರಗಳಿಂದ ಕೂಡಿದ್ದರೂ ಕೇಶಿರಾಜನದೇ ಆಗಿದೆ. ಇದರಂತೆ "ಪಿರಿಯರ್ ಸಲಿಪರ್ ....." ಮುಂತಾದ ಸೂತ್ರಗಳ ಅರ್ಥವೃತ್ತಿಗಳು ಕೇಶಿರಾಜನಿಂದಲೇ ಸ್ವೀಕರಿಸಲ್ಪಟ್ಟಿವೆ. ಇದರಿಂದ ಕೇಶಿರಾಜನ ವೃತ್ತಿಯುಕ್ತದರ್ಪಣ ಲಿಂಗಣಾರಾಧ್ಯನ ಕೈಯಲ್ಲಿದ್ದುದು ಸ್ಪಷ್ಟವಾಗುತ್ತದೆ. ಲಿಂಗಣಾರಾಧ್ಯನಲ್ಲಿ ಈ ಅರ್ಥವೃತ್ತಿ (ಸ್ವರಚಿತ ಮತ್ತು ಕೇಶಿರಾಜನಿಂದ ಸ್ವೀಕೃತ)ಗಳು ಕೆಲವೇ ಇದ್ದ ಕಾರಣ ಅವುಗಳ ಸ್ವರೂಪ ವಿವೇಚನೆಯನ್ನು ಇಲ್ಲಿ ಮಾಡಲಾಗಿಲ್ಲ. ಒಟ್ಟಿನಲ್ಲಿ ಲಿಂಗಣಾರಾಧ್ಯನ ವೃತ್ತಿಗಳನ್ನು ಲಕ್ಷಣ ಮತ್ತು ಸ್ವರೂಪದೃಷ್ಟಿಯಿಂದ ಹೀಗೆ ರೇಖಿಸಬಹುದು :



ಇಲ್ಲಿ ಕೇಶಿರಾಜನಿಂದ ಸ್ವೀಕೃತವಾದ ಅರ್ಥವೃತ್ತಿಗಳನ್ನು ಬಿಟ್ಟರೆ ಮಿಕ್ಕ ಸ್ವರಚಿತ ಅರ್ಥವೃತ್ತಿ ಮತ್ತು ಅನ್ವಯವೃತ್ತಿಗಳಲ್ಲಿ ಲಿಂಗಣಾರಾಧ್ಯನ ಸ್ವಂತಿಕೆಯನ್ನು ಕಾಣಬಹುದಾಗಿದೆ.

ಅರ್ಥವೃತ್ತಿಯು ಸ್ವರೂಪದಲ್ಲಿ ಸಂಗ್ರಹ, ವಿಸ್ತೃತ ಮತ್ತು ಮಿಶ್ರಣವಾಗಿರಬಹುದು ಎಂದು ನೋಡಿದ್ದೇವೆ. ಈ ಮೂರರಲ್ಲಿ ಕೇಶಿರಾಜನಿಗೆ ಸಂಬಂಧಿಸಿದುದು ಯಾವುದು ? ಇದು ಮಾತ್ರ ತೊಡಕಿನ ಪ್ರಶ್ನೆ. ಆದರೆ ಕಿಟೆಲ್ ಅವರು "Another sign of its originality and probably antiquity is that, atleast often the different rules of the grosses, unlike those of the grosses of the other manuscripts (Except M and B) are not compressed into one sentence, but given seperately as heading to the instances" ಎಂದು ಕ್ರಿ.ಶ. ೧೮೭೨ ರ ಪ್ರಕಟನೆಯ ಮುನ್ನುಡಿಯಲ್ಲಿ ಹೇಳಿದುದರಿಂದ ಮಿಶ್ರಣವೃತ್ತಿಯೇ ಪ್ರಾಚೀನತಮವೆಂದೂ ಮೂಲವೆಂದೂ ಅವರ ಅಭಿಪ್ರಾಯವಿದ್ದಂತೆ ತೋರುತ್ತದೆ. ಈ ಮಾತಿಗೆ ಹೇಳಿಕೊಳ್ಳುವಂತಹ ಆಧಾರವಿಲ್ಲ. ಒಂದುವೇಳೆ ಒಂದು ಪ್ರತಿಯಲ್ಲಿ ಕೇವಲ ಸಂಗ್ರಹ, ಇನ್ನೊಂದು ಪ್ರತಿಯಲ್ಲಿ ಕೇವಲ ಮಿಶ್ರಣ, ಮತ್ತೊಂದು ಪ್ರತಿಯಲ್ಲಿ ಕೇವಲ ವಿಸ್ತೃತ ವೃತ್ತಿಗಳೇ ಕಂಡುಬರುತ್ತಿದ್ದರೆ ಮಾತ್ರ ಮೂವರು ಭಿನ್ನವ್ಯಕ್ತಿಗಳಿಂದ ಮೂರು ಭಿನ್ನವೃತ್ತಿಪರಂಪರೆಗಳೇ ಬೆಳೆದುಬಂದಿವೆಯೆಂದೂ ಇವುಗಳಲ್ಲಿ ಒಂದು ಪರಂಪರೆ ಮಾತ್ರ ಕೇಶಿರಾಜನದೆಂದೂ ಹೇಳಬಹುದಿತ್ತು. ವಸ್ತುಸ್ಥಿತಿ ಹಾಗಿರದೆ ಒಂದೇ ಪ್ರತಿಯಲ್ಲಿ ಈ ಮೂರು ಸ್ವರೂಪದ ವೃತ್ತಿಗಳು ತೋರಿಬರುತ್ತವೆ. ಇದಕ್ಕೆ ಹೊಣೆ ಕೇಶಿರಾಜನೋ, ಮುಂದಣ ದರ್ಪಣಾಭ್ಯಾಸಿಗಳೋ ಹೇಳಲು ಬರುವಂತಿಲ್ಲ. ಆದರೂ ಯಾವುದೇ ಹಸ್ತಪ್ರತಿಯನ್ನು ತೆಗೆದುಕೊಂಡರೂ ಅಲ್ಲಿಯ ಬಹುಸಂಖ್ಯಾತ ಸೂತ್ರಗಳಿಗೆ ಸಂಗ್ರಹವೃತ್ತಿಗಳು ಕಂಡುಬರುವುದರಿಂದಲೂ, ಇಂಥ ಹಸ್ತಪ್ರತಿಗಳೇ ಅಧಿಕಸಂಖ್ಯೆಯಲ್ಲಿ ಲಭಿಸುವುದರಿಂದಲೂ ಕೇಶಿರಾಜನ ವೃತ್ತಿಸ್ವರೂಪ ಸಾಮಾನ್ಯವಾಗಿ ಸಂಗ್ರಹವೆನ್ನಬೇಕಾಗುತ್ತದೆ. ಅದಕ್ಕಾಗಿ ಯಾವುದೇ ಒಂದು ಸೂತ್ರಕ್ಕೆ ಸಂಗ್ರಹ, ಮಿಶ್ರಣ, ವಿಸ್ತೃತ ಈ ಮೂರೂ ಬಗೆಯ ವೃತ್ತಿಗಳು ಲಭಿಸುತ್ತಿದ್ದರೆ ಸಂಗ್ರಹವೃತ್ತಿಯೇ ಕೇಶಿರಾಜನದೆಂದು ಸಂಪಾದಕರು ಈಗಿನ ಮಟ್ಟಿಗೆ ಇಟ್ಟುಕೊಳ್ಳಬಹುದು. ಒಂದುವೇಳೆ ಕೆಲವು ಸೂತ್ರಗಳಿಗೆ ಸಂಗ್ರಹವೃತ್ತಿ ಸಿಗದೆ ಕೇವಲ ಮಿಶ್ರಣ ಇಲ್ಲವೆ ವಿಸ್ತೃತವೃತ್ತಿ ಎಲ್ಲ ಹಸ್ತಪ್ರತಿಗಳಲ್ಲಿ ಲಭಿಸುತ್ತಿದ್ದರೆ ಅನಿವಾರ್ಯವಾಗಿ ಅವುಗಳನ್ನೇ ಕೇಶಿರಾಜನ ವೃತ್ತಿ ಎನ್ನಬೇಕಾಗುತ್ತದೆ.

■■

ಆಕರ : ಮಾರ್ಗ ಸಂಪುಟ–೨

೧೯

ಶಬ್ದಮಣಿದರ್ಪಣದ ಸಮುಚ್ಚಯಗಳು

ಕನ್ನಡ ವ್ಯಾಕರಣಸಮುದಾಯದಲ್ಲಿ ಶಬ್ದಮಣಿದರ್ಪಣವೊಂದು ಆಚಾರ್ಯಕೃತಿ. ಶಬ್ದಸ್ಮೃತಿ, ಕರ್ಣಾಟಕಭಾಷಾಭೂಷಣಗಳ ವಿಷಯಸಂಪತ್ತಿಯೊಂದಿಗೆ ಇನ್ನೂ ಹಲವು ಹೊಸವಿಷಯಗಳನ್ನು ಗರ್ಭೀಕರಿಸಿಕೊಂಡು ಇದು ಹಳಗನ್ನಡ ಭಾಷಾ ಅಧ್ಯಯನಕ್ಕೆ ಒಂದು ಪ್ರಮಾಣಗ್ರಂಥವೆನಿಸಿದೆ. ಆದುದರಿಂದ ಕೇಶಿರಾಜನ ತರುವಾಯದ ೭೦೦ ವರುಷಗಳ ಕಾಲಾವಧಿಯಲ್ಲಿ ಕನ್ನಡಿಗರು ಅದನ್ನು ಶ್ರದ್ಧೆಯಿಂದ ಅಭ್ಯಾಸಮಾಡುತ್ತ ಬಂದಿದ್ದಾರೆ. ಅವರಲ್ಲಿ ಕೆಲವರು ಪದಚ್ಛೇದ, ಅನ್ವಯ, ಟೀಕೆ, ವಿಚಾರ, ವೃತ್ತಿ, ವ್ಯಾಖ್ಯಾನಗಳೆಂಬ ಸಹಾಯಕಸಾಹಿತ್ಯವನ್ನು ನಿರ್ಮಿಸಿದರು. ಇಲ್ಲಿ ಸಂಪಾದಿಸಲಾದ "ಶಬ್ದಮಣಿದರ್ಪಣದ ಸಮುಚ್ಚಯಗಳು" ಇಂಥ ಸಹಾಯಕಸಾಹಿತ್ಯವರ್ಗಕ್ಕೆ ಸೇರುತ್ತದೆ.

ಉಂ, ಅಂ, ಆದಂ, ಪೀನಂ, ಪಿರಿದುಂ, ಬಹುಳಂ. ಮೇಣ್ ಎಂಬಿವುಗಳನ್ನು ಸೂತ್ರದ ಶರೀರದಲ್ಲಿ ಬಳಸಿ, ಇವುಗಳ ಆಧಾರದಿಂದ ವೃತ್ತಿಯಲ್ಲಿ ಹೆಚ್ಚಿನ ವಿಚಾರಗಳನ್ನು ಸೇರಿಸುವುದು ಕೇಶಿರಾಜ ಇಟ್ಟುಕೊಂಡ ಪದ್ಧತಿ. ಆದರೆ ಈ ಬಗೆಯ ಕೆಲವು ಪ್ರಸಂಗಗಳಲ್ಲಿ ಆತನು ಏನನ್ನೂ ಹೇಳದೇ ಮೌನದಿಂದ ದಾಟಿಹೋಗಿದ್ದಾನೆ. ಇದನ್ನು ಗಮನಿಸಿದ ಓರ್ವ ದರ್ಪಣಾಭ್ಯಾಸಿ ಸೂತ್ರದಲ್ಲಿ ಉಳಿದುಕೊಂಡಿದ್ದ ಇಂಥ ಸುಮಾರು ೮೦ ಸಮುಚ್ಚಯಗಳಿಗೆ ಇರುವ ಅರ್ಥವಿಶೇಷವನ್ನು ವಿವರಿಸಿದ್ದಾವೆ. ಕರ್ನಾಟಕ ವಿಶ್ವವಿದ್ಯಾನಿಲಯದ ವಚನ ವಾಙ್ಮಯ ಸಂಶೋಧನ ವಿಭಾಗದಲ್ಲಿ ಶಬ್ದಮಣಿದರ್ಪಣದ ಒಂದು ತಾಳೆಯೋಲೆ ಪ್ರತಿ (ನಂ. ೫೭೮)[೧] ಇದೆ. ಅದರ ಕೊನೆಯ ಮೂರು (೯೮, ೯೯, ೧೦೦) ಗರಿಗಳ ಮೇಲೆ ಇದು ಬರೆಯಲ್ಪಟ್ಟಿದೆ. ಕರ್ತೃವಿನ ಹೆಸರು ಮಾತ್ರ ಕಂಡುಬರುವುದಿಲ್ಲ.

ಕರ್ನಾಟಕದಲ್ಲಿ ಶಬ್ದಮಣಿದರ್ಪಣದ ನೂರಾರು ಹಸ್ತಪ್ರತಿಗಳು ಲಭಿಸುತ್ತಿದ್ದರೂ ಅವುಗಳಲ್ಲಿ ಈ 'ಸಮುಚ್ಚಯವಿವರಣೆ'ಯನ್ನು ಕಾಣುವುದು ಅಪರೂಪ. ನನಗೆ ತಿಳಿದ ಮಟ್ಟಿಗೆ ಈ ಭಾಗವನ್ನೊಳಗೊಂಡ ದರ್ಪಣದ ಇನ್ನೊಂದು ಓಲೆಯ ಪ್ರತಿ ಶ್ರೀ ಡಿ. ಎಲ್. ಎನ್ ಅವರಲ್ಲಿದೆ.[೨] ಈ ವರೆಗೆ

---

೧. ವಚನ ವಾಙ್ಮಯ ಸಂಶೋಧನ ಸಂಸ್ಥೆಯವರಿಗೆ ಈ ಪ್ರತಿ ಗುಲ್ಬರ್ಗಾ ಜಿಲ್ಲೆಯ ಗುರುಮಠಕಲ್ಲು ಗ್ರಾಮದಲ್ಲಿ ದೊರೆತಿದೆ.

೨. ಈ ವಿಷಯ ಅವರು ಸಂಪಾದಿಸಿದ ಶಬ್ದಮಣಿದರ್ಪಣದ (೧೯೬೪) ಪ್ರಸ್ತಾವನೆ xiii ಯಿಂದ ತಿಳಿದುಬರುತ್ತದೆ.

ಪವಣೊಳಮೆಂಬ ಸೂತ್ರದ ಸಮುಚ್ಚಯದಿಂ ಅದು ಇದು ಉದುಗೆ ವತ್ವಮುಂಟು. ಬಶ್ರುತಿಯುಮೆಂಬಲ್ಲಿ ಉಪನಾವಾರ್ಥದೊಳಂ ವತ್ವಕ್ಕೆ ಬತ್ವಮುಂಟು. ಇಂದ್ರಂಬೊಲ್ ಚಂದ್ರಂಬೊಲ್ ಎಂಬಂತೆ-ಸೂತ್ರ ೧೧೯.

ವಿಕಲಂ ಪೆಱವಱೊಳೆಂಬ ಸೂತ್ರದ ಸಮುಚ್ಚಯದಿಂ ಇರ್ ಅರ್‌ಗೆ ವಿಕಲ್ಪದಿಂ ಗಳಾಗಮಮುಂಟು. ತೊೞ್ತಿರ್ ತೊೞ್ತಿರ್ ತೊೞ್ತುಗಳ್, ದೇವತೆಯರ್ ದೇವತೆಗಳ್ ಎಂಬಂತೆ -ಸೂತ್ರ ೧೧೧

ಸವನಿಪುದಯತ್ನಕೃತ ಎಂಬ ಸೂತ್ರದ ಸಮುಚ್ಚಯದಿಂ ಅಕ್ಕುಂ ಜಾತಿಯೋಳೆಕತ್ವಕ್ಕೆಯೆಂಬ ಸೂತ್ರಮುಂಟು-ಸೂತ್ರ ೧೧೨.

ಪರದೊಳ್ಸ್ವರಮಿರೆಯೆಂಬ ಸೂತ್ರದ ಸಮುಚ್ಚಯದಿಂ ಸರ್ವನಾಮದ ಅದು ಇದು ಉದುಗಂ ವತ್ವಮುಂಟು -ಸೂತ್ರ ೧೧೪.

ಬಿಂದುವದಂತಕ್ಕುೞಿದೆಡೆಗೆಂದುಂ ಎಂಬ ಸಮುಚ್ಚಯದಿಂ ಸಂಬುದ್ಧಿಯೊಳ್ ಪ್ರಥಮೈಕವಚನಲೋಪಮುಂಟು -ಸೂತ್ರ ೧೧೫.

ವಿದಿತಮುವರ್ಣನೆಂಬ ಸೂತ್ರದ ಸಮುಚ್ಚಯದಿಂ ಮುಂದಣ ಸೂತ್ರಮುಂಟು - ಸೂತ್ರ ೧೧೮.

ಒದವುವುದದಂತ ಪುಲ್ಲಿಂಗದೊಳ್ಗೆಯೆಂದಾದಿಬಿಂದುಮೆಂಬಲ್ಲಿಲ್ಲಂ ಎಂಬ ವಿಕಲ್ಪದಿಂದಿಕಾರಾಂತಕ್ಕೆವುಂಟು, ಗುರುವಿಂಗೆಯೆಂಬಂತೆ -ಸೂತ್ರ ೧೨೩

ಅವರ್ದಿರದು ತೃತೀಯತ್ವವೆಂಬ ಸೂತ್ರದಲ್ಲಿ ಚತುರ್ಥಿಗೆಲ್ಲಂ ಎಂಬುದಱಂ ಎಂತಕ್ಕೆಂದುಂಟು-ಸೂತ್ರ ೧೨೪

ಅವಿಶೇಷದಿನಾ ದೀರ್ಘಮೆಂಬ ಸೂತ್ರದ ಸಮುಚ್ಚಯದಿ ಆಮಂತ್ರಣದಲ್ಲಿ ಉಂಟು. ಸಮಾಸದಲ್ಲಿ ಮಹಾಚ್ಛಬ್ದ ಎಲ್ಲ ಶಬ್ದಕ್ಕುಂಟು - ಸೂತ್ರ ೧೨೮

ಸವನಿಪುದು ಮುಂದು ಪಿಂದೆಂಬ ಸೂತ್ರದ ಸಮುಚ್ಚಯದಿಂ ಸುಪ್ತಮಿಗೆ ಒಳೆಯೆಂದುಂಟು -ಸೂತ್ಕ ೧೩೦

ಮೊದಲೆರಡು ವಿಭಕ್ತಿಯೊಳಂ ಪೊದಳ್ಗುಮಲ್ ಎಂಬಲ್ಲಿ ವಿಭಕ್ತಿ ಕಾಲವಾಚಕಕ್ಕಂ ದಿಗ್ವಾದೇಶಣ್ಗೆ(?)-ಸೂತ್ರ ೧೩೧.

ಅಮುಮೆಂದುಸಿರ್ವ ಸಮುಚ್ಚಯಮೆಂಬ ಸೂತ್ರದ ಸಮುಚ್ಚಯದಿಂ ಷಷ್ಠಿಯಲ್ಲಿಯುಮಿಲ್ಲ. ಸಂಬುದ್ಧಿಯಲ್ಲಿಯುಂ ಧಾತುವಿಭಕ್ತಿಯುಮಿಲ್ಲ -ಸೂತ್ರ ೧೩೩.

ಎಲ್ಲಿಯುಮಾಮಂತ್ರಣವೆಂಬ ಸಮುಚ್ಚಯದಿಂ ಬಿಂದುವದಂಕತಕ್ಕುೞಿದೆಡೆಯೆಂಬ ಸೂತ್ರಮುಂಟು.-ಸೂತ್ರ ೧೩೪.

ಪ್ರವಿದಿತ ತತ್ಕರ್ಮಮೆಂಬ ಸೂತ್ರದ ಸಮುಚ್ಚಯದಿಂ ಮುಂದಣ ಸೂತ್ರಮುಂಟು -ಸೂತ್ರ ೧೩೮

ತೊಡರ್ದಿನಿಷ್ಟಾನಿಷ್ಟದೊಳೆಂಬ ಸೂತ್ರದ ಸಮುಚ್ಚಯದಿಂ ಸಂಯೋಗದೊಳಮುಂಟು. ಸಂಗಡದಿಂ ಬಂದನೆಂಬಂತೆ -ಸೂತ್ರ ೧೪೭.

ಪ್ರವಿದಿತ ಹೇತುವಿನೊಳೆಂಬ ಸೂತ್ರದ ಸಮುಚ್ಚಯದಿಂ ಜನನದೊಳಮುಂಟು ಆತಂಗೆಯೂ ಯೀತಂ ಪುಟ್ಟಿದಂ -ಸೂತ್ರ ೧೪೯.

ಪತಿಕುಲಜಾತ್ಯವಯವ ಎಂಬ ಸೂತ್ರದ ಸಮುಚ್ಚಯದಿಂ ಶೇಷದೊಳಂ ವಸ್ತುವಿಕಾರದೊಳಮುಂಟು, ಬಳ್ಳದಱ, ಅದಱ ಮಱ, ಪೊನ್ನಕೋಲ್ -ಸೂತ್ರ ೧೫೩.

ಇಂತೀ ಪೇಟ್ದ ವಿಭಕ್ತಿಯೆಂಬ ಸೂತ್ರದ ಸಮುಚ್ಚಯದಿಂ ಪ್ರಥಮೆ ದ್ವಿತೀಯೆಯಲ್ಲಿಯುಂ ಷಷ್ಠಿಯುಂಟು, ಷಷ್ಠಿಯಲ್ಲಿಯುಂ ಪ್ರಥಮೆ ದ್ವಿತೀಯೆಯುಂಟು -ಸೂತ್ರ ೧೫೫.

ಸ್ವಾರ್ಥಂ ಪ್ರಥಮಾರ್ಥಮೆಂಬ ಸೂತ್ರದ ಸಮುಚ್ಚಯದಿಂ ಪಂಚಮಿಯೊಳ್ ದ್ವಿತಿಯೆಯುಂಟು, ಮಾಣವಕನತ್ತಣಿಂ ಕಾರ್ಯಮಂ ಬೆಸಗೊಂಡಮೆಂಬಲ್ಲಿ ಮಾಣವಕನಂ ಕಾರ್ಯಮಂ ಬೆಸಗೊಂಡಂ-ಸೂತ್ರ ೧೫೬.

ಕೃತಿಯುಕ್ತ ಷಷ್ಠಿಯೊಳಮೆಂಬ ಸಮುಚ್ಚಯದಿಂ ಒಂದೊಂದಱಲ್ಲಿ ಬೇಱದುಂಟು -ಸೂತ್ರ ೧೫೭.

ಅಕ್ಕುಂ ಜಾತಿಯೊಳೇಕತ್ವಮೆಂಬ ಸೂತ್ರದ ಸಮುಚ್ಚಯದಿಂ ಯುಗಳಾರ್ಥದ ಬಹುವಚನಮೆಂಬ ಸೂತ್ರಮುಂಟು -ಸೂತ್ರ ೧೫೮.

ಕೂಡಿ ನುಡಿವೆಡೆಯೊಳೆಂದುಮೆಂಬ ಸಮುಚ್ಚಯದಿಂ ಆಖ್ಯಾತದೊಳ್ ಪುರುಷತ್ರಯಮುಂ ಸ್ವಾರ್ಥೋಚ್ಚರಿತಂಗಳೆಂಬ ಸೂತ್ರಮುಂಟು -ಸೂತ್ರ ೧೫೨.

ಸಾರಮದಧ್ಯಾರೋಪಮೆಂಬ ಸೂತ್ರದ ಸಮುಚ್ಚಯದಿಂ ವಿಭಕ್ತಿಗಳಲ್ಲಿಯುಮುಂಟು -ಸೂತ್ರ ೧೫೬.

ನಿನತೆನತು ತನತೆಂಬುದಱ ಸಮುಚ್ಚಯದಿಂ ಆವ್ ತಾವ್ ನೀವ್, ನಿಮ್ಮ ಎಮ್ಮ ತಮ್ಮ ಎಂದುಂಟು-ಸೂತ್ರ ೧೫೮.

ಅದುವಿದುವುದುವೆಂಬವಱಂತ್ಯದೊಳೆಂಬ ಸೂತ್ರದ ಸಮುಚ್ಚಯದಿಂ ನಪುಂಸಕದಲ್ಲಿಯು ಆ ದೀರ್ಘಮು ಆಗಳ್ ಈಗಳ್ ಊಗಳ್ ಎಂದು - ಸೂತ್ರ ೧೬೧.

ಕೆಲಕೆಲವು ಸಕ್ಕದದ ಮೂಱುಲಿಂಗಮುಮೆಂಬ ಸಮುಚ್ಚಯದಿಂ ಪ್ರಾಕೃತ ಪೈಶಾಚಿಕದ ಲಿಂಗತ್ರಯವು ಕನ್ನಡದಲ್ಲಿ ನಪ್ಪು. ಸಜ್ಜನ ಶಬ್ದ ಸ್ತ್ರೀವಾಚಕದಲ್ಲಿಯುಂ ಜನಶಬ್ದ ಲೋಕಶಬ್ದ ಪುರುಷವಾಚಕವಾಗಿಯು ನಪುಂಸಕಮೆಯಕ್ಕುಂ -ಸೂತ್ರ ೧೬೬.

ಪದಮಧ್ಯ ವತ್ವಯತ್ವಮೆಂಬ ಸೂತ್ರದ ಸಮುಚ್ಚಯದಿಂ ಅವಿಶೇಷದಿನಾ ದೀರ್ಘವ್ಯವಹೃತಿಯೆಂಬ ಸೂತ್ರಮುಂಟು -ಸೂತ್ರ ೧೬೮.

ಅಸಮಾಸದೊಳಮೆಂಬ ಸೂತ್ರದ ಸಮುಚ್ಚಯದಿಂ ಣಕಾರಕ್ಕೆ ಪರಮಾಗಿ ಟಕಾರ ಡಕಾರಮಿರ್ದೊಡಂ ದುಷ್ಕರಂ-ಸೂತ್ರ ೧೯೯.

ಶ್ರೀ ಶ್ರೀ

ಜನಿಯಿಸುಗುಂ ಸಂಖ್ಯಾಯೆಂಬ ಸೂತ್ರದ ಸಮುಚ್ಚಯದಿಂ ಗಮಕಸಮಾಸವೆ ತತ್ಪುರುಷಮಪ್ಪುದು-ಸೂತ್ರ ೧೭೯.

ಅದುವಿದುವುದುಗಾಯೀಯೂ ಎಂಬ ಸೂತ್ರದ ಸಮುಚ್ಚಯದಿಂ ಉತ್ತರಸ್ವರದೊಳಮುಂಟು. ಆ ಮೞೆ ಬರ್ಪುದು -ಸೂತ್ರ ೧೮೦.

ಸುಡುಗಾಡಿಡುಗಿಚ್ಚುವೆಂಬ ಸೂತ್ರದ ಸಮುಚ್ಚಯದಿಂ ಉದಂತದಲ್ಲಿಯುಂ ಬಿಂದುವಿಲ್ಲ. ಕ್ರಿಯಾಸಮಾಸದಲ್ಲಿಯುಂ ಕೆಲವು ಬಿಂದುವಿಲ್ಲ, ಅದೆ ಬಂದಂ, ಇದೆ ಬಂದಂ, ಆ ಬಂದನೀ ಬಂದ -ಸೂತ್ರ ೧೮೨

ಅಕ್ಕುಂ ಪದಾಂತ್ಯಲೋಪವೆಂಬುಱಿ ಸಮುಚ್ಚಯದಿಂ ನೆಲೆಗೊಳ್ಗುಂ ಪೂರ್ವಪದಾಂತ್ಯಲೋಪಮೆಂಬ ಸೂತ್ರಮುಂಟು - ಸೂತ್ರ ೧೮೮.

ಕಿಱಿದರ್ಕಾದೇಶವೆಂಬುದಱಿ ಸಮುಚ್ಚಯದಿಂ ಅಸಮಾಸ ಸಮಾಸದೊಳ್ ರೇಫೆಗದ್ವಿತ್ವಮುಂಟು-ಸೂತ್ರ ೧೯೫.

ದೊರೆಕೊಳ್ವುದಖಿಳ ವೈಯಾಕರಣರಿನೆಂಬ ಸೂತ್ರದ ಸಮುಚ್ಚಯದಿಂ ಎರಡೆಂಬ ಡಕಾರಕ್ಕಂ ಟಕಾರಾದೇಶಮುಂಟು-ಸೂತ್ರ ೧೯೮.

ಪತ್ತರ್ಕೆ ಪ[ಯಿ]ನ್ನೆನಿಕ್ಕುಮೆಂಬ ಸೂತ್ರದಲ್ಲಿ ಎಲ್ಲಂ ವಿಕಲ್ಪದಿಂ ಪತ್ತೊಂಬತ್ತರ್ಕೆ ನಕಾರ ವಿಧಿಯಿಲ್ಲ -ಸೂತ್ರ ೨೦೨.

ಶ್ರೀ ಶ್ರೀ

ವಿನುತಗುಣವಚನಮೆಂಬುದಱಿ ಸಮುಚ್ಚಯದಿಂ ಕವಿಕೇಶವನೆಂ ಮಲ್ಲಿಕಾರ್ಜುನಸುತನೆಂ -ಸೂತ್ರ ೨೩೦

ದ ದಪ ವಕಾರಂಗಳೆಂಬ ಸಮುಚ್ಚಯದಿಂ ಕೂಡಿನುಡಿವೆಡೆಯೊಳೆಂಬ ಸೂತ್ರಮುಂಟು -ಸೂತ್ರ ೨೩೨.

ಉದುವುವುವೆಂಬಾದೇಶಮೆಂಬುದಱಿ ಸಮುಚ್ಚಯದಿಂ ಸತಿಸಪ್ತಮಿಯೊಳುದುವುಂಟು. ವಿಧ್ಯರ್ಥದೊಳಮುಂಟು. ರಕ್ಷಿಪ್ಪುದು ಅವಧರಿಪುದು ಎಂದು - ಸೂತ್ರ ೨೩೬.

ದಪದ ಪಕ್ಕಾರಕ್ಕಂ ಎಂಬ ಸಮುಚ್ಚಯದಿಂ ಹಿಂದಣ ನೆಗಟ್ದಿರ್ದ ರೇಫಮೆಂಬ ಸೂತ್ರಮುಂಟು. ನೋಗಂ ಎಂಬ ಸಮುಚ್ಚಯದಿಂ ಧಾತುಗಮೀ ತೆಱಂ-ಸೂತ್ರ ೨೪೪.

ಸಂದಿಪುದಲ್ಪಿನ ಪರದೊಳೆಂಬ ಸೂತ್ರದ ಸಮುಚ್ಚಯದಿಂ ಇರಿಯಿಸುವೆ ತಂದೆಮಕ್ಕಳಂ ಎಂದುಂಟು - ಸೂತ್ರ ೨೪೬.

ಱೌಂತದೊಳಂ ಮೃತಿದಾನಾರ್ಥದೊಳಮೆಂಬ ಸಮುಚ್ಚಯದಿಂ ಕಾಣ್ ಎಂಬ ಧಾತುವಿಗೆ ಹೃಸ್ವಮಾಗಿ ಕಂಡೌ ಎಂದಾಯ್ತು -ಸೂತ್ರ ೨೫೧.

ನೆಗಟ್ಗುಂ ಲೋಪಂ ಪೋಗಾಗುಗಳ ಗಕಾರಕ್ಕೆ ದ ದಪಮಿರೆಯುಮೆಂಬ ಸಮುಚ್ಚಯದಿಂ ಭವಿಷ್ಯಂತಿಯ ವಕಾರಮಿರ್ದೊಡಂ ಗಕಾರಲೋಪಮುಂಟು. ಪೋಗಲೀಯದಡಸಿ ತಾಪಂ ಎಂದುಂ ಜೋದರೆಲ್ಲಂ. ಪೋಪಂಗೆ ಬರ್ಪಂಗನಾಕುಳಮೆಂದುಂಟು - ಸೂತ್ರ ೨೫೩.

ವರಜಯತಡ ವರ್ಣಮೆಂಬ ಸೂತ್ರದಲ್ಲಿಯ ಆದಮೆಂಬ ವಿಕಲ್ಪದಿಂ ದಕಾರಕ್ಕೆ ಬತ್ವಮುಂಟು. ದ್ವಿತೀಯೆ =ಬಿದಿಗೆ -ಸೂತ್ರ ೨೮೧.

ಪುದಿದುತ್ವಕ್ಕಿತ್ವಮುಮೆಂಬ ಸಮುಚ್ಚಯದಿಂ ಇತ್ವಕ್ಕುತ್ವಮುಂಟು. ಸ್ಫಟಿಕಂ=ಪಳುಕು - ಸೂತ್ರ ೨೮೭.

ಪದಮಧ್ಯದೇತ್ವದೊಳಮಿತ್ವದೊಳಮೆಂಬ ಸಮುಚ್ಚಯದಿಂ ಇತ್ವಕ್ಕಮತ್ವಮುಂಟು. ಘುಟಿಕಂ =ಗಡಿಗೆ-ಸೂತ್ರ೨೮೮.

ಸವನಿಸುಗುಂ ಗತ್ವಂ ಶಬ್ದಮಧ್ಯ ಮತ್ವಕ್ಕಮಂತೆ ಳತ್ವಕ್ಕಮೆಂಬ ಸಮುಚ್ಚಯದಿಂ ವತ್ವಕ್ಕಂ ಗತ್ವಮುಂಟು. ತುವರಿ=ತೊಗರೆ -ಸೂತ್ರ ೨೮೦.

ಮಹಿಪೋಗಟ್ವೌಶ್ಚರ್ಯಮೆಂಬ ಸೂತ್ರದ ಸಮುಚ್ಚಯದಿಂ ಕೆಲವು ಶಬ್ದಕ್ಕೆ ಶಬ್ದಾದೇಶಮುಂಟು. ಜೋತಿಷಂ=ಜೋಯಿಸಂ. ಸ್ತಂಭಂ=ಕಂಬಂ, ಶಿಲ್ಪಿಕಂ=ಚಿಪ್ಪಿಗಂ, ಅಪ್ಸರಸಿ=ಅಚ್ಚರಸಿ, ದಂಷ್ಟ್ರಂ=ದಾಡೆ, ಸಂಸ್ಕೃತಂ=ಸಕ್ಕದಂ, ಪಾಡಳಂ=ಪಾದರಿ, ವ್ಯಾಹಾಳಿ=ವೈಹಾಳಿ, ಪ್ರಸಾದಕಂ=ಪಸದನಂ, ಜಳೂಕಂ=ಜಿಗಳೆ, ಪುಳಿನಂ =ಪುಱಿಲೆ. ಘೋಟಾರೂಢಂ=ಗೋಳಾಯಿಲಂ, ರಘಂರಘಂ=ಜಂಜು, ವಿದ್ಯಾಧರಂ=ಬಿಜ್ಜೋದರ, ಸವೋಘಂ=ಸವಗಂ. ಆಂದೋಳಂ=ಅಂದಳಂ -ಸೂತ್ರ ೨೯೪.

ರತ್ವಕ್ಕಂ ಲಳಮುಮೆಂಬ ಸಮುಚ್ಚಯದಿಂ ಲತ್ವಕ್ಕಂ ಳತ್ವಕ್ಕಂ, ರತ್ವಂ, ಳತ್ವಕ್ಕಂ ಲತ್ವಂ, ಲತ್ವಕ್ಕಂ ಳತ್ವಮುಂಟು. ಚೇಲಂ=ಸೀರೆ, ಪಾಟಳಂ=ಪಾದರಿ, ವಾಳಂ=ಬಾಲಂ. ಕುದ್ದಾಳಂ=ಗುದ್ದಲಿ, ಅಲೇಖಂ=ಅಳಕಂ ಎಂಬಂತೆ ನೋಡಿಕೊಳ್ವುದು -ಸೂತ್ರ ೨೯೭.

ಸಮುಚ್ಚಯಂ ಸಂಪೂರ್ಣಂ.

■■

ಆಕರ : ಮಾರ್ಗ ಸಂಪುಟ–೨

೨೦

ಶಬ್ದಮಣಿದರ್ಪಣದ ತದ್ಧಿತಪ್ರಕರಣ

ಶಬ್ದಮಣಿದರ್ಪಣದಲ್ಲಿ ೨೦೮ ರಿಂದ ೨೨೬ನೆಯ ಸೂತ್ರದ ವರೆಗೆ ಅಂದರೆ ೧೭ ಸೂತ್ರಗಳಲ್ಲಿ ತದ್ಧಿತಪ್ರಕರಣ ವ್ಯಾಪಿಸಿದೆ. ಇವುಗಳಲ್ಲಿ ೧೧ ಸೂತ್ರಗಳು ಮಾತ್ರ ತದ್ಧಿತಪ್ರತ್ಯಯಗಳನ್ನು ಸೂಚಿಸುತ್ತವೆ. ಮಿಕ್ಕವು ಆಗ ಜರುಗುವ ಪ್ರಕ್ರಿಯೆ ಇತ್ಯಾದಿಗಳನ್ನು ಪ್ರತಿಪಾದಿಸುತ್ತವೆ. ಈ ೧೧ ಸೂತ್ರಗಳಲ್ಲಿ ತದ್ಧಿತನಾಮಗಳನ್ನು ಪ್ರಕೃತಿ, ಪ್ರತ್ಯಯವೆಂದು ಕೇಶಿರಾಜ ಬಿಡಿಸಿ ಹೇಳಿದ್ದಾನೆ. ಆದರೆ ಹೀಗೆ ಬಿಡಿಸಿಕೊಳ್ಳುವಲ್ಲಿ ಮಾಡಿದ ತಪ್ಪಿನಿಂದಾಗಿ ಸಾಮಾನ್ಯವಾಗಿ ಇಡಿ ಪ್ರಕರಣವೇ ಗೊಂದಲಮಯವಾಗಿದೆ. ಕಾರಣ ಅದನ್ನು ಸಮಗ್ರವಾಗಿ ಅಧ್ಯಯನಕ್ಕೆ ಅಳವಡಿಸಿಕೊಂಡು, ಪ್ರತ್ಯಯಗಳ ನಿಜರೂಪವನ್ನು ಸ್ಪಷ್ಟಪಡಿಸಬಹುದಾಗಿದೆ.

ಇಲ್ಲಿ ಪುರುಷರಿಗೆ ಸಂಬಂಧಿಸಿದಂತೆ ೨೬ ಪ್ರತ್ಯಯ, ಸ್ತ್ರೀಗೆ ಸಂಬಂಧಿಸಿದಂತೆ ೩ ಪ್ರತ್ಯಯ (ಇತಿ, ಅಳ್, ಎ: ಸೂತ್ರ ೨೧೯)ಹೆಸರಿಸಿದ್ದಾನೆ. ಇವುಗಳಲ್ಲಿ ಮೊದಲು ಪುರುಷರಿಗೆ ಸಂಬಂಧಪಟ್ಟ ೨೬ ಪ್ರತ್ಯಯಗಳನ್ನು ಕೆಳಗಿನಂತೆ ೫ ಭಾಗಗಳಲ್ಲಿ ಚರ್ಚಿಸಬಹುದು.

೧. (ಅ) –ಕ (ಬಡಕ), –ಗ (ಬೊಂತೆಗ)

(ಆ) –ಇಕ (ಹುಸಿಕ), –ಇಗ (ಕಬ್ಬಿಗ),

–ಕುಟಿಗ, –ಉಳಿಗ, –ಅಟಿಗ, –ಅಡಿಗ, –ವಡಿಗ, – ವಣಿಗ.

(ಇ) –ಉಕ (ಅಂಟುಕ), –ಉಗ(ಬೇರುಗ) ....=೧೨

ಇಲ್ಲಿಯ –ಕುಟಿಗ, –ಉಳಿಗ, –ಅಟಿಗ, –ಅಡಿಗ, –ವಡಿಗ, –ವಣಿಗ ಎಂಬ ೬ ಪ್ರತ್ಯಯಗಳಲ್ಲಿ ಮೇಲೆ ಹೇಳಿದ ಇಗ ಪ್ರಶ್ಯಯವೇ ಇದೆ. ಈ ಪ್ರತ್ಯಯದ ಹಿಂದಿರುವವೆಲ್ಲ ಕುಟ್ಟು, ಊಳು, ಆಡು, ಅಡು ಇತ್ಯಾದಿ ಧಾತುಗಳ ಸವೆದ ರೂಪಗಳೇ ಆಗಿವೆ. ಆದುದರಿಂದ ಈ ಆರನ್ನು ಕೈಬಿಟ್ಟರೆ ಉಳಿಯುವ –ಕ, –ಗ/ –ಇಕ, –ಇಗ/ –ಉಕ, –ಉಗ ಇವು ಆರು ಮಾತ್ರ ಪ್ರತ್ಯಯಗಳೆಂದು ಹೇಳಬಹುದು. ಆದರೆ ಇಲ್ಲಿಯೂ ಸಾಧಿತರೂಪಗಳಾಗಿರುವ –ಗ, –ಇಗ, –

ಉಗ ಇವುಗಳನ್ನು ಕೈಬಿಟ್ಟರೆ ಉಳಿಯುವ-ಕ,-ಇಕ,-ಉಕ ಈ ಮೂರು ಮಾತ್ರ ನಿಜವಾದ ತದ್ಧಿತ ಪ್ರತ್ಯಯಗಳೆಂದು ಹೇಳಬಹುದು.

೨.-ಕಾರ,-ಗಾರ...=೨

ಇವು-ಕ,-ಗ ಏಕವಚನ ಪ್ರತ್ಯಯಗಳ ಮೇಲೆ ಅರ್ ಎಂಬ ಬಹುವಚನ ಪ್ರತ್ಯಯ ಹತ್ತುವುದರಿಂದ ಸಿದ್ಧವಾದ ರೂಪಗಳೇ ಹೊರತು, ಸ್ವತಂತ್ರ ತದ್ಧಿತ ಪ್ರತ್ಯಯಗಳಲ್ಲ. ಉದಾ:

ನಡೆವಳಿ+ಕ+ಅರ್=ನಡೆವಳಿಕರ್>ನಡೆವಳಿಕಾರ

ಬಣ್ಣ+ಕ+ಅರ್=ಬಣ್ಣಕರ್>ಬಣಗಾರ

ಆದುದರಿಂದ ಈ ಎರಡನ್ನೂ ತದ್ಧಿತ ಪ್ರಕರಣದಿಂದ ಕೈಬಿಡಬಹುದು.

೩.-ವಳ (ಮಡಿವಳ),-ವಳ್ಳ (ಮಡಿವಳ್ಳ)...=೨

ಇವು ನೋಡಲಿಕ್ಕೆ ಎರಡಿದ್ದರೂ ಒಂದರ ಸಾಧಿತ ರೂಪ ಇನ್ನೊಂದು ಇರುವ ಸಾಧ್ಯತೆಯಿದೆ. ಆದುದರಿಂದ ಇಲ್ಲಿ-ವಳ ಪ್ರತ್ಯಯವನ್ನು ಒಪ್ಪಿಕೊಳ್ಳಬಹುದು.

೪.-ಆಯ್ತ,-ಉಣಿ,-ಆಳಿ,-ಇಲ,-ಉಳ್ಳ,-ಒಡೆಯ,-ವಂತ,-ಆಯಿಲ....=೮

ಇಲ್ಲಿಯ-ಆಯ್ತ,-ವಂತಗಳಲ್ಲಿ -ತ ಮಾತ್ರ ಪ್ರತ್ಯಯ.-ಇಲ,-ಆಯಿಲಗಳಲ್ಲಿ-ಇಲ ಮಾತ್ರ ಪ್ರತ್ಯಯ.-ಉಣಿ,-ಆಳಿಗಳಲ್ಲಿ ಇ ಮಾತ್ರ ಪ್ರತ್ಯಯ. ಹೀಗಾಗಿ ಇಲ್ಲಿ ಉಳಿಯುವುವೆಂದರೆ-ತ,-ಇಲ,-ಇ,-ಉಳ್ಳ,-ಒಡೆಯಗಳೆಂಬ ಐದು ಪ್ರತ್ಯಯಗಳು ಮಾತ್ರ.

೫.-ಕುಳಿ,-ಗುಳಿ...=೨

ಇವು ನೋಡಲಿಕ್ಕೆ ಎರಡಿದ್ದರೂ ಒಂದರ ಸಾಧಿತರೂಪ ಇನ್ನೊಂದು ಇರುವಂತಿದೆ. ಇಷ್ಟೇ ಏಕೆ ಕುಳಿ ಎನ್ನುವಲ್ಲಿಯೂ ಮೇಲೆ ಹೇಳಿದ ಕ ಪ್ರತ್ಯಯದ ಮೇಲೆ ಉಳಿ ಅಂಟಿದಂತಿದೆ. ಉದಾ: ಓಡು+ಕ+ಉಳಿ=ಓಡುಕುಳಿ. ಆದುದರಿಂದ ಇಲ್ಲಿ -ಕುಳಿ,-ಗುಳಿಗಳಿಗೆ ಬದಲು -ಉಳಿ ಎಂಬುದನ್ನು ಸೃಷ್ಟಿಸಿಕೊಳ್ಳಬಹುದು.

*****

೬. ಸ್ತ್ರೀವಾಚಿ ತದ್ಧಿತ ಪ್ರತ್ಯಯಗಳು-ಇತಿ,-ಅಳ್,-ಎ..............................=೩

ಇವುಗಳಲ್ಲಿ ಮೊದಲಿನ -ಇತಿ (ಗಾಣಗಿತಿ)ಎಂಬುದು ಪ್ರತ್ಯಯವಲ್ಲವೆಂದು ತೋರುತ್ತದೆ. ಏಕೆಂದರೆ ಇಲ್ಲಿ ಗಾಣ+ಇಗ=ಗಾಣಿಗ ಎಂಬ ಪುರುಷವಾಚಿಯ ಮೇಲೆ-ಇತಿ ಎಂಬ ಸ್ತ್ರೀವಾಚಿಪ್ರತ್ಯಯ ಹತ್ತಿದಂತೆ ಕಾಣುತ್ತಿದ್ದರೂ, ಗಾಣಗೆಯ್ತ ಅಂದರೆ ಗಾಣದ ಕೆಲಸಮಾಡುವವ, ಗಾಣಗೆಯ್ತಿ ಅಂದರೆ ಗಾಣದ ಕೆಲಸಮಾಡುವವಳು. ಇವೇ ನಿಜರೂಪವಿರುವಂತೆ ಕಾಣುತ್ತದೆ. ಆಗ ಗಾಣ+ಗೆಯ್+ತ ಎಂಬುದು ಪುಲ್ಲಿಂಗರೂಪ, ಗಾಣ+ಗೆಯ್ +ತಿ ಎಂಬುದು ಸ್ತ್ರೀಲಿಂಗರೂಪವೆಂದು ಭಾವಿಸಿ,-ತ, -ತಿ ಇವು ಮಾತ್ರ ತದ್ಧಿತ ಪ್ರತ್ಯಯವೆಂದು ಹೇಳಬೇಕೆನಿಸುತ್ತದೆ. ಮೇಲೆ-ತ ಪ್ರತ್ಯಯ ಹೇಳಲಾಗಿರುವುದರಿಂದ ಇಲ್ಲಿ ಉಳಿಯುವುದು-ತಿ ಪ್ರತ್ಯಯ ಮಾತ್ರ.

–ಅಳ್ (ಕರಿಯಳ್),–ಎ (ಪಾಣ್ಬ>ಪಾಣ್ಬೆ) ಎಂಬುವುಗಳನ್ನು ತದ್ಧಿತಪ್ರತ್ಯಯಗಳೆಂದು ಒಪ್ಪಿಕೊಳ್ಳಬಹುದು.

*****

ಈ ವರೆಗಿನ ಚರ್ಚೆಯಿಂದ ಈ ಆರೂ ಭಾಗಗಳಲ್ಲಿ ಉಳಿಯುವ ತದ್ಧಿತ ಪ್ರತ್ಯಯಗಳನ್ನು ಹೀಗೆ ಒಪ್ಪಿಕೊಳ್ಳಬಹುದು.

೧. –ಕ,–ಇಕ,–ಉಕ

೨. –

೩. –ವಳ

೪. –ತ,–ಇ[illegible],–ಇ,–ಉಳ್ಳ,–ಒಡೆಯ,

೫. –ಉಳಿ

೬. –ತಿ,–ಅಳ್,–ಎ

ಈ ೧೩ನ್ನು ಮೂಲಪ್ರತ್ಯಯಗಳೆಂದು ಇಟ್ಟುಕೊಂಡು, ಇವುಗಳ ಹಿಂದೆ ಬೇರೆ ಬೇರೆ ಧಾತು ಇಲ್ಲವೆ ಪ್ರಕೃತಿ ಸೇರಿಸಿ, ಹೊಸ ಹೊಸ ಸಾಧಿತ ರೂಪಗಳನ್ನು ಸೃಷ್ಟಿಸಿಕೊಳ್ಳಬಹುದು. ಇನ್ನಷ್ಟು ಪ್ರತ್ಯಯಗಳನ್ನು ಶೋಧಿಸಿ ಈ ಪಟ್ಟಿಯನ್ನು ಪೂರ್ಣಗೊಳಿಸಬೇಕಾಗಿದೆ.

■■

ಆಕರ : ಮಾರ್ಗ ಸಂಪುಟ–೪

೨೧

ದರ್ಪಣಾವಲೋಕನ : ೧

[ಶ್ರೀ ಡಿ. ಎಲ್. ಎನ್. ಸಂಪಾದಿತ]

ಕರ್ತೃಪಾಠ ನಿರ್ಣಯವೇ ಗ್ರಂಥ ಸಂಪಾದನೆಯ ಪರಮೋದ್ದೇಶ. ಈ ದೃಷ್ಟಿಯಿಂದ ಶಬ್ದಮಣಿದರ್ಪಣದಂತಹ ಹಳಗನ್ನಡ ವ್ಯಾಕರಣವನ್ನು ಸಂಪಾದಿಸುವುದು ಗುರುಭಾರದ ಕಾರ್ಯ.

೧. ಈ. ಗೆರೆಟ್	ಕ್ರಿ. ಶ. ೧೮೬೮
೨. ಕಿಟೆಲ್	ಕ್ರಿ. ಶ. ೧೮೭೨
೩. ಕಿಟೆಲ್	ಕ್ರಿ. ಶ. ೧೮೯೯
೪. ಪಂಜೆ	ಕ್ರಿ. ಶ. ೧೯೨೦
೫. ಸಾಹಿತ್ಯ ಪರಿಷತ್ತು	ಕ್ರಿ. ಶ. ೧೯೨೦
೬. ಮದ್ರಾಸ ವಿಶ್ವವಿದ್ಯಾಲಯ	ಕ್ರಿ. ಶ. ೧೯೩೮

ಹೀಗೆ (ಕ್ರಿ. ಶ. ೧೮೬೮–೧೯೩೮) ಸುಮಾರು ೭೦ ವರುಷಗಳ ಅವಧಿಯಲ್ಲಿ ಐದು ಜನ ಸಂಪಾದಕರಿಂದ ಆರು ಸಲ ಪರಿಷ್ಕರಣ ಹೊಂದಿದರೂ ದೋಷ ಉಳಿದುಕೊಂಡಿರುವುದು ದರ್ಪಣ ಸಂಪಾದನೆಯ ಜಟಿಲತೆಗೆ ಸಾಕ್ಷಿಯಾಗಿದೆ. ಹಳಗನ್ನಡ ತಲಸ್ಪರ್ಶಿಗಳೂ, ಭಾಷಾ ವಿಜ್ಞಾನಿಗಳೂ, ಸಮರ್ಥ ಸಂಪಾದಕರೂ, ಸಂಶೋಧಕರೂ ಎನಿಸಿದ ಕೆಲವೇ ಜನ ಕನ್ನಡ ಪಂಡಿತರು ಮಾತ್ರ ಈ ಕಾರ್ಯಭಾರವನ್ನು ಹೊತ್ತು ನಿತ್ತರಿಸಬಲ್ಲರು. ಅಂತೆಯೇ ಈಗ ೨೦ ವರುಷಗಳ ತರುವಾಯ ನುರಿತ ಪ್ರಾಧ್ಯಾಪಕರಾದ ಶ್ರೀ. ಡಿ. ಎಲ್. ನರಸಿಂಹಾಚಾರ್ ಅವರಿಂದ ದರ್ಪಣದ ಪ್ರಥಮ ಮುದ್ರಣ(ಕ್ರಿ.ಶ. ೧೯೫೫) ಹೊರಬಂದಿತು. ಈ ಹೊಸ ಮುದ್ರಣ ಹಿಂದಿನವುಗಳಿಗಿಂತ ಅಚ್ಚುಕಟ್ಟಾಗಿದೆ. ಕೆಲವು ಅಂಶಗಳಲ್ಲಿ ಶುದ್ಧವಾಗಿದೆ. ಇದು ಒಪ್ಪತಕ್ಕ ಮಾತು. ಕೆಲವು ಸಲ ಅವು ಸಾಧಿಸಿದುದನ್ನು ಇದು ಸಾಧಿಸದೆ ಹೋಗಿದೆ. ಇನ್ನು ಕೆಲವು ಸಲ ಅನ್ಯಥಾಜ್ಞಾನದಿಂದಲೋ, ಅನವಧಾನದಿಂದಲೋ ಹಲವಾರು ದೋಷಗಳು ಉಳಿದುಕೊಂಡಿವೆ. ಇದೂ ಒಪ್ಪತಕ್ಕ ಮಾತು.

---

* The Journal of the Karnatak University, Vol. IX, 1965

ನಾಲ್ಕು ವರುಷಗಳ ತರುವಾಯ ೧೯೬೪ ರಲ್ಲಿ ಅವರಿಂದ ದ್ವಿತೀಯ ಮುದ್ರಣ ಹೊರಬಂದಿತು. ಇದು ಪ್ರಥಮ ಮುದ್ರಣದ ಹಲವಾರು ದೋಷಗಳಲ್ಲಿ ಐದಾರನ್ನು ಮಾತ್ರ ಕಳೆದುಕೊಂಡಿದೆ. ಅದರೊಂದಿಗೆ ಮತ್ತೆ ನಾಲ್ಕಾರು ಹೊಸ ದೋಷಗಳನ್ನು ಹೊತ್ತುಕೊಂಡಿದೆ.

ಹೀಗೆ ಎಂಟು ಸಲ ಪರಿಷ್ಕರಣ ಹೊಂದುವಲ್ಲಿ ಒಂದು ಶತಮಾನ (ಕ್ರಿ. ಶ. ೧೮೬೮–೧೯೬೪) ಗತಿಸಿತು. ದರ್ಪಣ ಮಾತ್ರ ದೋಷರಹಿತವಾಗಲಿಲ್ಲ. ಶುದ್ಧವೆನಿಸಲಿಲ್ಲ. ಕೇಶಿರಾಜನ ದೋಷಗಳೇ ತಲೆ ತಿನ್ನುತ್ತಿರುವಾಗ ಈ ಸಂಪಾದಕೀಯ ದೋಷಗಳೂ ಎಡೆವಾಯ್ದು ಬಂದು ಅದನ್ನು ಅಧಿಕಗೊಳಿಸುತ್ತವೆ. ಅದು ಕಾರಣ ಈ ಸಂಪಾದಕರ ದೋಷಗಳನ್ನು ಗುರುತಿಸಿ, ದರ್ಪಣವನ್ನು ಸಾಧ್ಯವಾದಷ್ಟು ಮಟ್ಟಿಗೆ ಹಸಗೊಳಿಸಬೇಕೆಂಬ ಇಚ್ಛೆ ನಾನು ವಿದ್ಯಾರ್ಥಿಯಾಗಿರುವಾಗಲೇ ಕಾಡುತ್ತಿತ್ತು. ಈಗ ಅತಿ ವಿನಯದಿಂದ ಆ ಕಾರ್ಯಕ್ಕೆ ಕೈ ಹಾಕಿದ್ದೇನೆ.

ಪ್ರಸ್ತುತ ಲೇಖನಕ್ಕೆ ಈಗಿನ ಮಟ್ಟಿಗೆ ಕೊನೆಯ ಮುದ್ರಣವೆನಿಸಿದ ಶ್ರೀ ಡಿ. ಎಲ್. ಎನ್. ಪ್ರತಿಯನ್ನು (೧೯೬೪) ಅವಲೋಕಿಸುವುದು ಅನಿವಾರ್ಯವೂ, ನ್ಯಾಯವೂ ಆದುದರಿಂದ ಈ ಲೇಖನ 'ಶ್ರೀ ಡಿ. ಎಲ್. ಎನ್. ದರ್ಪಣಾವಲೋಕನ'ವಾಗಿದೆ. ಈ ತುದಿಯಿಂದ ಆ ತುದಿಯವರೆಗೂ ಅವರ ದರ್ಪಣವನ್ನಲೋಕಿಸುವಲ್ಲಿ ಅಚ್ಚುದೋಷ ಮೊದಲು ಮಾಡಿ ಸಂಪಾದನೆಯ ಕೊರತೆ; ಸಂಪಾದಕೀಯ ದೋಷಗಳನ್ನು ಸಂಕಲಿಸುವೆ. ಸಾಧ್ಯವಾದಲ್ಲಿ ಪರಿಹಾರ ಸೂಚಿಸುವೆ. ಇದರಿಂದ ಮುಂದಿನ ಮುದ್ರಣ ಇನ್ನಷ್ಟು ಶುದ್ಧವಾಗಿ ಓದುಗರ ಕೈಸೇರಿದರೆ ಈ ಲೇಖನ ಸಾರ್ಥಕ. ಲೇಖಕ ಕೃತಾರ್ಥ.

* * *

ಹೇಳಿಕೊಳ್ಳುವಂತಹ ಪ್ರಸ್ತಾವನೆ, ಪರಿಶಿಷ್ಟಗಳಿಲ್ಲದುದು ಶ್ರೀ ಡಿ. ಎಲ್. ಎನ್. ದರ್ಪಣದ ಮೊದಲ ಕೊರತೆ ಎನಿಸಿದೆ. ಇದು ತಾತ್ಕಾಲಿಕ ಪರಿಷ್ಕರಣ (Tentative Edition), ಪುಟ ಅಧಿಕಗೊಂಡರೆ ಓದುಗರಿಗೆ ಬೆಲೆ ಭಾರ, ಎಂಬ ಭಾವನೆಗಳೇ ಇದಕ್ಕೆ ಕಾರಣವಾಗಿರಬಹುದು, ಎಂದು ಸಮಾಧಾನ ಹಚ್ಚಿಕೊಂಡು ಈ ಕೊರತೆಯನ್ನು ಮರೆಯಬೇಕು. ಇದು ವೈಯಕ್ತಿಕ ವಿಷಯ.

ಪ್ರಸ್ತಾವನೆಯಲ್ಲಿ (ಪುಟ–xxv) ಶಂಖವರ್ಮ,[೧] ವ್ಯಾಕರಣದ ನಯಸೇನ[೨] ರ ಹೆಸರುಗಳನ್ನು ಸೂಚಿಸಿ, ಇಮ್ಮಡಿ ನಾಗವರ್ಮನು ಇವರಿಂದ ಪ್ರಯೋಗವನ್ನು ಸ್ವೀಕರಿಸಿದ್ದಾನೆ ಎಂದು ಹೇಳಿದುದಕ್ಕೆ

---

೧. ಕಾವ್ಯಾವಲೋಕನ(ಪದ್ಯ ೧೮೫)ದಲ್ಲಿ "....ನಾಗವರ್ಮನ ಗುಣವರ್ಮನ ಶಂಖವರ್ಮನಧ್ವಾನಂಗಳ್" ಎಂಬ ಪದ್ಯವಿದೆ. ಇದನ್ನವಲಂಬಿಸಿ ಶಂಖವರ್ಮನಿಂದ ಪ್ರಯೋಗಗಳನ್ನು ನಾಗವರ್ಮನು ಸ್ವೀಕರಿಸಿದ್ದಾನೆ ಎಂದು ಶ್ರೀ ಡಿ.ಎಲ್.ಎನ್. ಭಾವಿಸಿದ್ದರೆ ನಿರಾಧಾರವಾದ ಹೇಳಿಕೆ.

೨. ಕರ್ಣಾಟಕ ಭಾಷಾ ಭೂಷಣದಲ್ಲಿ "ದೀರ್ಘೋಕ್ತಿರ್ನಯಸೇನಸ್ಯ"(ಸೂ. ೭೪) ಎಂಬ ಸೂತ್ರದ ಕೆಳಗೆ 'ದೇವ ಬಿನ್ನಪಂ, ದೇವಾ ಬಿನ್ನಪಂ' ಎಂಬ ಪ್ರಯೋಗಗಳಿವೆ. ಇಲ್ಲಿ ಸೂತ್ರಾಭಿಪ್ರಾಯ ಮಾತ್ರ(ವ್ಯಾಕರಣದ) ನಯಸೇನನದೆಂಬುದು ಸ್ಪಷ್ಟ. ಆದರೆ ಪ್ರಯೋಗವೂ ಆತನದೇ ಎಂದು ಭಾವಿಸಲು ಅವಕಾಶವಿಲ್ಲ. ಒಂದು ವೇಳೆ ವ್ಯಾಕರಣದ ನಯಸೇನ ಮತ್ತು ಧರ್ಮಾಮೃತದ ನಯಸೇನ ಇಬ್ಬರೂ ಒಂದೇ ಎಂದು ಇಟ್ಟುಕೊಂಡರೂ ಧರ್ಮಾಮೃತದಲ್ಲಿ "ದೇವ ಬಿನ್ನಪಮೆಮ್ಮಾಗಮದೊಳ್...."(೫–೨೨ ಗದ್ಯ) ಎಂದು ವಾಕ್ಯವಲ್ಲದೆ 'ದೇವಾ ಬಿನ್ನಪಂ' ಎಂಬುದು ಲಭಿಸುವುದಿಲ್ಲ.

ಪ್ರಕಟಿತ ಸಬಲ ಆಧಾರಗಳಿಲ್ಲವೆಂದು ತೋರುತ್ತದೆ. ಒಂದು ವೇಳೆ ಅಪ್ರಕಟಿತ ಆಧಾರಗಳಿದ್ದರೆ ಇಲ್ಲಿ ಸೂಚಿಸಬಹುದಿತ್ತು. ಇದೊಂದಲ್ಲದೆ ಇನ್ನೂ ಕೆಲವು ಸಣ್ಣಪುಟ್ಟ ದೋಷಗಳೊಂದಿಗೆ ಈ ಪುಟ್ಟ ಪ್ರಸ್ತಾವನೆ ಮುಕ್ತಾಯಗೊಂಡಿದೆ.

ಇನ್ನು ಗ್ರಂಥಭಾಗಕ್ಕೆ ಬಂದರೆ ನಮ್ಮ ಕಣ್ಣೆದುರು ಶ್ರೀ. ಡಿ. ಎಲ್. ಎನ್. ಅವರ ಟೀಕೆರಹಿತ (೧೯೫೫) ಟೀಕೆ ಸಹಿತ (೧೯೬೪) ಹೀಗೆ ಎರಡು ಪ್ರಕಟನೆಗಳಿವೆ. ಇವುಗಳಿಗಾಗಿ ಎರಡು ಮುದ್ರಿತ (ಕಿಟೆಲ್ ಮತ್ತು ಸಾಹಿತ್ಯ ಪರಿಷತ್ತು) ಎರಡು ಓಲೆಯ (ಕ.ಖ) ಅವಶ್ಯವೆನಿಸಿದಲ್ಲಿ ಪ್ರಯೋಗ ಪಾಠಕ್ಕಾಗಿ ಮಾತ್ರ ಮದ್ರಾಸ ಪ್ರತಿಯ ನೆರವನ್ನು ಪಡೆದಿದ್ದಾರೆ.[೪] ಅದಕ್ಕಾಗಿ ಈ ಐದು ಪ್ರತಿಗಳ ಪಾಠಗಳನ್ನು ಕಣ್ಣೆದುರಿಗಿಟ್ಟುಕೊಂಡು ಅವರ ದರ್ಪಣ(೧೯೬೪)ವನ್ನು ಅಭ್ಯಾಸ ಮಾಡಬೇಕು. ಈ ಕಾರ್ಯವು ಸೂತ್ರ, ಟೀಕೆ, ವೃತ್ತಿ ಮತ್ತು ಪ್ರಯೋಗ ಈ ನಾಲ್ಕು ಕ್ಷೇತ್ರಗಳಲ್ಲಿ ನಡೆದರೆ ದರ್ಪಣ ವಿವೇಚನೆ ಪರಿಪೂರ್ಣವಾಗುವದು.

ಸೂತ್ರ

ಛಂದೋನಿರ್ಬಂಧನೆಗೆ ಒಳಪಡುವುದರಿಂದ ಸೂತ್ರಗಳಲ್ಲಿ ಅಷ್ಟಾಗಿ ಪಾಠಭೇದಗಳು ಉದ್ಭವಿಸುವುದಿಲ್ಲ. ಉದ್ಭವಿಸಿದ ಪಾಠಭೇದಗಳು ಹಲವಾರು ಇದ್ದರೂ ಇಲ್ಲಿ ಮುಖ್ಯವಾದ ಕೆಲವನ್ನು ಮಾತ್ರ ಗಮನಿಸಲಾಗುವುದು.

ಟೀಕೆ

ಸ್ವಪರಿಷ್ಕೃತ ಸೂತ್ರಗಳಿಗೆ ಅಪರಿಷ್ಕೃತ (ಕಿಟೆಲ್‌ರ ಅಥವಾ ಕಿಟೆಲ್‌ರು ಬಳಸಿದ) ಟೀಕೆಯನ್ನು ಬಳಸಿರುವುದರಿಂದ ಕೆಲವು ಸಲ ಸೂತ್ರ ಒಂದು ದಾರಿ ಹಿಡಿದರೆ ಟೀಕೆ ಇನ್ನೊಂದು ದಾರಿ ಹಿಡಿಯುತ್ತದೆ. ''........ಕೆಲವು ಸೂತ್ರ ಪಾಠಗಳಿಗೂ......ಟೀಕೆಯಲ್ಲಿರುವ ಪಾಠಗಳಿಗೂ......ವ್ಯತ್ಯಾಸ....ಕೆಲವೆಡೆ ಕಾಣುತ್ತದೆ.................. ಟೀಕೆಯಂತೆ ಸೂತ್ರಪಾಠ ತಿದ್ದದೆ.... ಸೂತ್ರಪಾಠಗಳಂತೆ ಟೀಕೆ..ಪಾಠಗಳನ್ನು ತಿದ್ದದೆ ಹಾಗೆಯೇ ಉಳಿಸಿಕೊಂಡು ಬಂದಿದೆ"[೫] ದೋಷಗಳನ್ನು

---

೩. (ಅ) "ಭುವನೈಕರಾಮನನ್ನು ಹೆಸರಿಸಿರುವ ಎರಡು ಪ್ರಯೋಗಗಳು" (೧೩೦-೧, ೧೯೭-೧) ಎಂಬುದಕ್ಕೆ ಪ್ರತಿಯಾಗಿ ಮೂರು ಪ್ರಯೋಗಗಳು (+೧೮೩-೧) ಎಂದು (ಅಡಿಟಿಪ್ಪಣಿ ಸ್ವೀಕರಿಸಿದರೆ ನಾಲ್ಕು ಪ್ರಯೋಗಗಳು ೧೮೩-೨) ಎಂದು ತಿದ್ದಿಕೊಳ್ಳಬೇಕು.

(ಬ) ಪುಟ xxix ರ ಅಡಿಯಲ್ಲಿಯ ೧೧೬-೬, ೧೨೦-೨೨ ಎಂಬಿವುಗಳನ್ನು ೧೧೯-೬, ೧೨೦-೨ ಎಂದೂ, ಪು xxxರ ಅಡಿಯಲ್ಲಿ ೧೩೫-೨ ಎಂಬುದನ್ನು ೧೩೬-೨ ಎಂದೂ ತಿದ್ದಿಕೊಳ್ಳಬೇಕು. ಇಲ್ಲದಿದ್ದರೆ(ಎರಡೂ ಪ್ರತಿಗಳಲ್ಲಿಯ) ಈ ಅಚ್ಚುದೋಷಗಳು ಅಡ್ಡದಾರಿಯನ್ನು ತೋರಿಸುತ್ತವೆ.

(ಕ) "ಶಬ್ದಮಣಿದರ್ಪಣದ ಹಲವು ಪ್ರಯೋಗಗಳಿಗೆ ಮೂಲವಾದ ಇಡಿ ಪದ್ಯಗಳು ಸೂಕ್ತಿಸುಧಾರ್ಣವದಲ್ಲಿ ದೊರೆಯುತ್ತವೆ" ಎಂದು ಹೇಳಿ ಅಡಿಯಲ್ಲಿ ಶ.ಮ.ದ. ೭೭-೧೭=ಸೂಕ್ತಿ ೬೬-೬ ಎಂದು ಸಂವಾದಿ ಸೂಚಿಸಿದ್ದಾರೆ. ಆದರೆ ಸೂಕ್ತಿಸುಧಾರ್ಣವದಲ್ಲಿ ಈ ಪದ್ಯ ಭಿನ್ನವಾಗಿದೆ.

೪. ೧೯೬೪ ರ ಪರಿಷ್ಕರಣಕ್ಕೆ ಹೆಚ್ಚಿನದಾಗಿ ಶ್ರೀ ಜಿ. ವರದರಾಜರಿಂದ ಪೂರೈಸಲ್ಪಟ್ಟ ಪ್ರತಿಯೊಂದನ್ನು ಬಳಸಲಾಗಿದೆ.

೫. ಶ. ಮ.ದ.(೧೯೬೪) ಪ್ರಸ್ತಾವನೆ, ಪುಟ, xxxv

ಹಾಗೆಯೇ ಉಳಿಸಿಕೊಂಡು ಬಂದಿದೆ ಎಂಬ ಧ್ವನಿಯ ಈ ಹೇಳಿಕೆ ಸಂಪಾದನೆಯ ದೃಷ್ಟಿಯಲ್ಲಿ ಅರ್ಥವಿಲ್ಲದ ಮಾತಾಗಿದೆ. ಸೂತ್ರ ಟೀಕೆಗಳ ಹೊಂದಿಕೆಯ[೬] ಮಾತಂತಿರಲಿ, ನಿಟ್ಟೂರ ನಂಜಯ್ಯನ ಕೆಲವು ಪ್ರತಿಗಳನ್ನು ಎದುರಿಗಿಟ್ಟುಕೊಂಡು ಟೀಕೆಯನ್ನಾದರೂ ಪರಿಷ್ಕರಿಸಿದ್ದರೆ ಸಂಪಾದಕೀಯ ಕರ್ತವ್ಯವನ್ನು ಪಾಲಿಸಿದಂತಾಗುತ್ತಿತ್ತು. ಆ ಕಾರ್ಯವೂ ಇಲ್ಲಿ ನಡೆದಂತಿಲ್ಲ. ಅದಕ್ಕಾಗಿ ಇಂಥ ಅಪರಿಷ್ಕೃತ ಟೀಕೆಯನ್ನು ೧೯೬೪ ರ ಪ್ರಕಟನೆಗೆ ಜೋಡಿಸಿದುದು ಓದುಗರ ದೃಷ್ಟಿಯಿಂದ ಅಷ್ಟೇನು ಲಾಭಕಾರಿ ಎನಿಸುವುದಿಲ್ಲ.

ವೃತ್ತಿ

ಸೂತ್ರ, ಟೀಕೆಗಳ ತರುವಾಯ ಅಧಿಕ ಪಾಠಭೇದಕ್ಕೆ ಅವಕಾಶವಿರುವುದು ವೃತ್ತಿಯಲ್ಲಿ. ಮುಂದೆ ಬಂದ ವ್ಯಾಕರಣಾಭ್ಯಾಸಿಗಳ ಕೈವಾಡ ಇದಕ್ಕೆ ಕಾರಣ. ಇದರಿಂದಾಗಿ ವೃತ್ತಿಯಲ್ಲಿ–

೧. ಸಂಗ್ರಹವೃತ್ತಿ[೭] (ವೃತ್ತಿಸ್ಥಾನ ವೃತ್ತಿಗೆ, ಪ್ರಯೋಗಸ್ಥಾನ ಪ್ರಯೋಗಕ್ಕೆ. ಸ್ವರೂಪದಲ್ಲಿ ಸಂಗ್ರಹ).

೨. ಮಿಶ್ರಣವೃತ್ತಿ (ವೃತ್ತಿ ಪ್ರಯೋಗಗಳು ಮಿಶ್ರವಾಗುತ್ತ ಹೋಗಿ ಪೂರ್ಣವಾಗುವಿಕೆ)

೩. ವಿಸ್ತೃತವೃತ್ತಿ (ಸೂತ್ರಾರ್ಥವನ್ನು ವಿಸ್ತಾರವಾಗಿ ಬೆಳೆಸುವಿಕೆ)

ಎಂಬ ಮೂರು ಪ್ರಕಾರಗಳು ಕಂಡುಬರುತ್ತವೆ. ತಮ್ಮ ಪ್ರಕಟನೆಯುದ್ದಕ್ಕೂ ಈ ಮೂರರಲ್ಲಿ ಸಾಮಾನ್ಯವಾಗಿ 'ಸಂಗ್ರಹವೃತ್ತಿ'ಯನ್ನು ಬಳಸಿದ ಶ್ರೀ ಡಿ.ಎಲ್.ಎನ್. ಅವರು ಶಕ್ಯವಿದ್ದ ಮಟ್ಟಿಗೆ ಅದನ್ನೇ ಪಾಲಿಸಬೇಕಿತ್ತು. ಆದರೆ ಕೆಲವು ಸಲ ಸಂಗ್ರಹವೃತ್ತಿ ಕಣ್ಣು ಮುಂದೆ ಇದ್ದರೂ ಮಿಶ್ರಣವೃತ್ತಿಯನ್ನು ಸ್ವೀಕರಿಸಿದ್ದಾರೆ. ಈ ಎರಡು ಬಗೆಯ ಸ್ವೀಕರಣೆಯಿಂದ ವೃತ್ತಿಯ ಅಚ್ಚುಕಟ್ಟುತನಕ್ಕೆ ಭಂಗಬಂದಿದೆ. ಇನ್ನೊಂದು ವಿಚಿತ್ರ. "ಇಲ್ಲಿ (ಮದ್ರಾಸ ಪ್ರತಿಯಲ್ಲಿ) ಕೊಟ್ಟಿರುವ ವೃತ್ತಿಗಳು ಕೇಶಿರಾಜನವಲ್ಲವಾದ್ದರಿಂದ ಪ್ರಕೃತ ಪರಿಷ್ಕರಣಕ್ಕೆ ಹೆಚ್ಚಿನ ಸಹಾಯವಾಗುವಂತಿಲ್ಲ.[೮] ಪ್ರಕೃತ ಮುದ್ರಣದಲ್ಲಿ ಅವಶ್ಯಕವಾದ ಎಡೆಗಳಲ್ಲಿ ಮಾತ್ರ ಇಲ್ಲಿನ ಪ್ರಯೋಗ ಪಾಠಗಳನ್ನು ಗಮನಿಸಿದೆ"[೯] ಎಂದು ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಆದರೆ ಯಾವ ಪ್ರತಿಯನ್ನು ಅವರು ದೂರವಿಡಬೇಕೆಂದಿದ್ದರೋ ಅಲ್ಲಿಯ ವೃತ್ತಿಗಳು ಶ್ರೀ ಡಿ. ಎಲ್. ಎನ್. ಅವರ ಕಣ್ಣು ತಪ್ಪಿಸಿ ೩–೪ ಸಲ ಬಂದು ಸೇರಿಕೊಂಡಿವೆ. ಇದರಿಂದ ವೃತ್ತಿ ಮಿಶ್ರಣ ದೋಷ ಈ ಸಂಪಾದನೆಗೆ ತಟ್ಟುತ್ತದೆ.

---

೬. ಸೂತ್ರಗಳಿಗೆ ಟೀಕೆಯನ್ನು ಹೊಂದಿಸುವ ಹಂಬಲಕ್ಕೆ ತೊಡಗಿದರೆ ಸಂಪಾದಕರು ಕೆಲವು ಸಲ ನಿಟ್ಟೂರ ನಂಜಯ್ಯನ ಪ್ರತಿಯ ದೋಷಗಳನ್ನು ಗುಣಗಳೆಂದೇ ಭಾವಿಸಬೇಕಾಗುತ್ತದೆ. ಆಗ ಇಂಥ ಹೊಂದಿಕೆ ಅರ್ಥರಹಿತವೆನಿಸುತ್ತದೆ. ಅದಕ್ಕಾಗಿ ಈ ವಿಚಾರಗಳನ್ನು ಬಿಟ್ಟು ಕೊನೆಯ ಪಕ್ಷಕ್ಕೆ ಭಿನ್ನ ಪ್ರತಿಗಳನ್ನು ಕಣ್ಣೆದುರಿಗಿಟ್ಟುಕೊಂಡು ಟೀಕೆಯನ್ನಾದರೂ ಶುದ್ಧಗೊಳಿಸುವುದು ಸಂಪಾದಕರ ಕರ್ತವ್ಯ.

೭. ಇದಕ್ಕೆ "ಸ್ವತಂತ್ರವೃತ್ತಿ" ಎಂದೂ ಇಟ್ಟುಕೊಳ್ಳಬಹುದು.

೮. ಮದ್ರಾಸ ಪ್ರತಿಯಲ್ಲಿ ಕೇಶಿರಾಜನ ವೃತ್ತಿಗಳೂ ಕಂಡುಬರುತ್ತವೆ. ಅದಕ್ಕಾಗಿ ದರ್ಪಣವೃತ್ತಿ ಸಂಪಾದನೆಯಲ್ಲಿ ಮದ್ರಾಸ ಪ್ರತಿಯ ಉಪಯೋಗ ನಿಷ್ಪ್ರಯೋಜಕವೆಂದು ಭಾವಿಸುವಂತಿಲ್ಲ.

೯. ಶ. ದರ್ಪಣ(೧೯೬೪) ಪು. x

ಎರಡನೆಯದಾಗಿ ಶ್ರೀ ಡಿ. ಎಲ್. ಎನ್. ವೃತ್ತಿ ಕೆಲವು ಸಲ ಸಂಕ್ಷಿಪ್ತತೆಗಿಳಿದುದರಿಂದ ಸೂತ್ರಾರ್ಥ ತಟ್ಟನೇ ಹೊಳೆಯುವುದಿಲ್ಲ. ಇನ್ನು ಕೆಲವು ಸಲ ವಾಕ್ಯ ದೀರ್ಘವಾಗಿರುವುದರಿಂದ ಸೂತ್ರಾರ್ಥ ಗ್ರಹಣಕ್ಕಾಗಿ ಬಳಸಿ ಬರಬೇಕಾಗುತ್ತದೆ. ಈ ಕಾರಣಗಳಿಂದಾಗಿ ಮೇಲೆ ಹೇಳಿದ ಭಿನ್ನ ಸ್ವರೂಪ (ಸಂಗ್ರಹ ಮತ್ತು ಮಿಶ್ರಣ)ಗಳ ಭಿನ್ನ ಕರ್ತೃ (ಕೇಶಿರಾಜ ಮತ್ತು ಲಿಂಗಣಾರಾಧ್ಯ) ಗಳ ವೃತ್ತಿ ಸಂಕರದಿಂದ್ದಾಗಿ ಶ್ರೀ ಡಿ. ಎಲ್. ಎನ್. ಅವರು ವೃತ್ತಿ ಸಂಪಾದನೆಯಲ್ಲಿ ಹೆಜ್ಜೆ ತಪ್ಪಿದರೇನೋ ಎಂಬ ಸಂದೇಹ ಹುಟ್ಟುತ್ತದೆ. ದರ್ಪಣದ ಮಟ್ಟಿಗೆ ಹೇಳುವುದಾದರೆ ಸಂಪಾದಕರ ಸಾಮರ್ಥ್ಯ ಪರೀಕ್ಷೆಗೆ ವೃತ್ತಿಯೇ ಒರೆಗಲ್ಲು. ಇಲ್ಲಿ ತೂಕ ತಪ್ಪಿದರೆ ದರ್ಪಣ ಸಂಪಾದನೆ ಅಸಮರ್ಪಕವೆಂದೇ ಹೇಳಬೇಕಾಗುತ್ತದೆ.[೧೦]

ಪ್ರಯೋಗ

ಕೆಲವು ಸಲ ಅವಶ್ಯವೆನಿಸಿದಲ್ಲಿ ಪ್ರಯೋಗಗಳಿಗೆ ತಲೆಬರಹವೇ ಇಲ್ಲ. ಇನ್ನು ಕೆಲವು ಸಲ ಕೊಟ್ಟ ತಲೆಬರಹಗಳ ಅರ್ಥ ಸ್ಪಷ್ಟವಾಗದಿರುವ ಕಾರಣ ಕೆಳಗಿನ ಪ್ರಯೋಗಗಳನ್ನು ಓದಿ ಅವುಗಳ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕಿಟೆಲ್ ಮತ್ತು ಪರಿಷತ್ ದರ್ಪಣಗಳು ಈ ವಿಷಯದಲ್ಲಿ ಕೊಂಚ ಲೇಸು ಎನ್ನಬಹುದು.

ಇನ್ನು ಪ್ರಯೋಗಗಳಿಗೆ ಬಂದರೆ ಸೂತ್ರಗಳಲ್ಲಿಯ ಲಕ್ಷಣಗಳಿಗೆ ಕೆಲವು ಸಲ ಲಕ್ಷ್ಯಗಳನ್ನು ಕ್ರಮವಾಗಿ ವಿವರಿಸಿಲ್ಲ. ಮೇಲೆ ಬರಬೇಕಾದ ಲಕ್ಷ್ಯ ಕೆಳಗೆ, ಕೆಳಗೆ ಬರಬೇಕಾದ ಲಕ್ಷ್ಯ ಮೇಲೆ, ನಡುವೆ ಅಥವಾ ಇನ್ನಾವ ಸ್ಥಳದಲ್ಲಿಯೋ ಸೇರಿದೆ. ಕೆಲವು ಸಲ ಲಕ್ಷಣಗಳೇನೋ ಇವೆ, ಲಕ್ಷ್ಯಗಳೇ ಇಲ್ಲ. ಇನ್ನು ಕೆಲವು ಸಲ ತಲೆಬರಹದಲ್ಲಿ ಹೇಳಿದುದೊಂದು, ಕೆಳಗೆ ಉದಾಹರಿಸಿದುದು ಮತ್ತೊಂದು.

ಕೊನೆಯದಾಗಿ, ಉದಾಹೃತ ಪದ್ಯಗಳ ಛಂದೋ ನಿರ್ಣಯಕ್ಕೆ ಶ್ರಮಿಸಿದವರಲ್ಲಿ ಶ್ರೀ ಪಂಜೆ ಅವರು, ಮದ್ರಾಸ ಪ್ರತಿ ಸಂಪಾದಕರು ಮೊದಲಿಗರು. ಶ್ರೀ ಡಿ. ಎಲ್. ಎನ್. ಅವರು ಪಂಜೆ ಅವರ ಮಾರ್ಗದಲ್ಲಿ ನಡೆದಿದ್ದಾರೆ. ಆದರೆ ಈ ಕ್ಷೇತ್ರದಲ್ಲಿ ದುಡಿಯಲು ಅವರಿಗೆ ಇನ್ನೂ ಅವಕಾಶವಿತ್ತು.

ಎರಡು ಸಲ ಪ್ರಕಟವಾದರೂ ಈ ದರ್ಪಣಕ್ಕೆ ಒಪ್ಪೋಲೆ ಇಲ್ಲದುದು ಒಂದು ದೊಡ್ಡ ಕೊರತೆ. ತಮ್ಮ ಪ್ರತಿ ಶುದ್ಧಿಯ ಬಗೆಗೆ ಸಂಪಾದಕರಿಗಿರುವ ಆತ್ಮವಿಶ್ವಾಸ, ಅಥವಾ ಒಪ್ಪೋಲೆ ಜೋಡಿಸಿದರೆ ಸಂಪಾದನೆಗೆ ಕುಂದು; ಎಂಬ ಭಾವನೆಗಳೇ ಇದಕ್ಕೆ ಕಾರಣವಾಗಿರಬಹುದು. ಆದರೆ ಮೂರು ಪುಟಗಳ, ಕೊನೆಯ ಪಕ್ಷಕ್ಕೆ ಎರಡು ಪುಟಗಳ ಶುದ್ಧಿ ಪತ್ರಿಕೆಯಾದರೂ ಇಲ್ಲಿ ಅತ್ಯವಶ್ಯ. ಈ ಕೊರತೆಯಿಂದಾಗಿ ಭಾಷೆಯ ಅತಿ ಸಣ್ಣ ಘಟಕವಾದ ಅಕ್ಷರಕ್ಕೂ ಅತಿ ಮಹತ್ವಕೊಡಬೇಕಾದ ವ್ಯಾಕರಣಾಭ್ಯಾಸದಲ್ಲಿ ಓದುಗರು ದೋಷಗಳನ್ನು ಕಣ್ಣುಮುಚ್ಚಿ ಸ್ವೀಕರಿಸಬೇಕಾಗುತ್ತದೆ.

ಇದು ಶ್ರೀ ಡಿ. ಎಲ್. ಎನ್. ದರ್ಪಣದ ದೋಷ ವಿಮರ್ಶೆಯ ಸಾರರೂಪ. ಇದಕ್ಕೆ ಆಧಾರಗಳನ್ನು ಮುಂದೆ ಕಾಣಬಹುದು. ಇನ್ನು, ಸೂತ್ರ, ವೃತ್ತಿ, ಟೀಕೆ[೧೧] ಪ್ರಯೋಗಗಳನ್ನು ಒಂದೊಂದಾಗಿ ಅವಲೋಕಿಸೋಣ.

* * *

೧೦. ದರ್ಪಣ ವೃತ್ತಿವಿಚಾರವನ್ನು ಕುರಿತು ನನ್ನ ಲೇಖನವೊಂದು 'ಕಭಾ'ದಲ್ಲಿ ಪ್ರಕಟವಾಗಿದೆ.

೧೧. ಟೀಕೆ ಅಪರಿಷ್ಕೃತವಾಗಿರುವುದರಿಂದ ಅಚ್ಚುದೋಷ, ಅನವಧಾನದೋಷಗಳು ಹೇರಳವಾಗಿವೆ. ಇಲ್ಲಿ ಮುಖ್ಯವೆನಿಸಿದವುಗಳನ್ನು ಮಾತ್ರ ಚರ್ಚಿಸುವೆ.

ಸೂತ್ರ ೧೫

ಕುಳದ ನಿಯಾಮದೊಳೆಂದುಂ।
ಕ್ಷಳಕ್ಕೆ ಲಾಕ್ಷರ ವಿಕಲ್ಪಮಿಲ್ಲ ವಿಕಲ್ಪಂ।
ಕ್ಷಳನಲ್ಲದಿಲ್ಲ ಸಂಸ್ಕೃತ।
ದೊಳಾಲಕಾರಕ್ಕೆ ಪೇೞ್ದಿನದಱಿಂ ಕ್ಷಳನಂ।

ಈ ಸೂತ್ರದ ಉತ್ತರಾರ್ಧ ಟೀಕೆ-ನಿಟ್ಟೂರ ನಂಜಯ್ಯ ಕೃತವಾಗಿದ್ದರೂ ಶ್ರೀ ಡಿ. ಎಲ್. ಎನ್ ಮತ್ತು ಪರಿಷತ್ ಪ್ರತಿಗಳಲ್ಲಿ ಕೆಳಗಿನಂತೆ ಭಿನ್ನವಾಗಿದೆ.

ಡಿ. ಎಲ್. ಎನ್.	ಪರಿಷತ್
ವಿಕಲ್ಪಂ = ಕುಳಪ್ರಾಸಿಂಗೆ ವಿಕಲ್ಪಂ	ಕ್ಷಳನಿಲ್ಲದೆ = ಕ್ಷಳಮೆಂಬ ಳಕಾರಮಿಲ್ಲದೆ
ಕ್ಷಳನಲ್ಲದೆ = ಕ್ಷ ಳಕಾರವಲ್ಲದೆ	ವಿಕಲ್ಪಂ = ಲಾಕ್ಷರ ವಿಕಲ್ಪಂ, ಇಲ್ಲ
ಇಲ್ಲ = ಲಕಾರದ ವಿಕಲ್ಪಮಿಲ್ಲ	ಸಂಸ್ಕೃತದೊಳ್ = ಸಂಸ್ಕೃತದಲ್ಲಿ
ಅದಱಿಂ = ಅದು ಕಾರಣದಿಂದೆ	ಆ ಲಕಾರಕ್ಕೆ = ಸಂಸ್ಕೃತದಲ್ಲಿರ್ದ ಲಕಾರಕ್ಕೆ
ಸಂಸ್ಕೃತದೊಳ್ = ಸಂಸ್ಕೃತದಲ್ಲಿರ್ದ ಲಕಾರಕ್ಕೆ	ಅದಱಿಂ = ಅದು ಕಾರಣದಿಂದೆ
ಕ್ಷಳನಂ = ಕ್ಷಳಮೆಂಬ ಳಕಾರಮಂ	ಕ್ಷಳನಂ = ಕ್ಷಳಮೆಂಬ ಳಕಾರಮಂ
ಪೇೞ್ದಿಂ= ಹೇಳ್ದಿಂ	ಪೇೞ್ದಿಂ = ಹೇೞ್ದಿಂ

ವಿದ್ವಾಂಸರನ್ನು ದಿಕ್ಕುಗೆಡಿಸಿದ ಈ ಸೂತ್ರವನ್ನು ಮೇಲಣ ಟೀಕೆಗಳು ಭಿನ್ನವಾಗಿ ಅರ್ಥೈಸುವುದರಿಂದ ಓದುಗರಿಗೆ ಇನ್ನಷ್ಟೂ ಹೊಯ್ದಾಟ ಉಂಟಾಗುತ್ತದೆ. ಇಂಥ ಪ್ರಸಂಗದಲ್ಲಿ ಸಂಪಾದಕರ ನೆರವು ಅತ್ಯಗತ್ಯ ಎಂಬುದನ್ನು ನೆನೆದರೆ ಶ್ರೀ ಡಿ. ಎಲ್. ಎನ್. ಅವರ ಟೀಕಾ ಸಂಪಾದಕತ್ವ ತನ್ನ ಪಾಲಿನ ಕರ್ತವ್ಯವನ್ನು ನೆರವೇರಿಸದೆ ಹೋಗಿದೆ ಎಂದು ಸ್ಪಷ್ಟವಾಗುತ್ತದೆ. ಪ್ರಸ್ತಾವನೆಯಲ್ಲಿ ಟೀಕೆಯನ್ನು ಕುರಿತು "ಈ ಭಿನ್ನಪಾಠಗಳು ತೀರ ಅಮುಖ್ಯವಾಗಿರು"[೧೨] ವವು ಎಂದು ಹೇಳಿದ ಮಾತೂ ಸೋತುಹೋಗುತ್ತದೆ.[೧೩]

ಸೂತ್ರ ೧೬

ಮಹಾಕವಿಗಳ ಏಕಸ್ಥಾನೀಯ ವರ್ಣಗಳ ಪ್ರಾಸವನ್ನು ಸಹ ನಿರ್ದಯವಾಗಿ ಖಂಡಿಸುವ ಕೇಶಿರಾಜನು ಶ್ರೀ ಡಿ. ಎಲ್. ಎನ್. ಅವರ ಸಂಪಾದಕತ್ವದಲ್ಲಿ ವ-ಮ ಪ್ರಾಸ ದೋಷಕ್ಕೊಳಗಾಗಿದ್ದಾನೆ-

---

೧೨. ಶ.ಮ. ದರ್ಪಣ, ಪ್ರಸ್ತಾವನೆ, ಪು, xxxv

೧೩. ಈ ಸೂತ್ರದ ಹೆಚ್ಚಿನ ಅಭ್ಯಾಸಕ್ಕಾಗಿ "ಪ್ರಬುದ್ಧ ಕರ್ನಾಟಕ"(೪೬-೩) ನನ್ನ ಲೇಖನ ನೋಡಬಹುದು.

ಸವನಿಸಿದೆ ಏ ಒ ಓಯೆಂ।
ಬಿವು ಕನ್ನಡದೊಳ್ ಸ್ವಭಾವದಿಂದೊಳವು ಸವ।
ರ್ಣಮುಮಪ್ಪುವು ವರ್ಣಾಂಕಂ।
ಸವರ್ಣ ಸಂಜ್ಞೆಯೊಳಮೊದವುಗುಂ ವ್ಯಾಕೃತಿಯೊಳ್ ॥

ಇಲ್ಲಿ "ಸವರ್ಣವುಮಪುವು" ಎಂದು ಬೇಕಿತ್ತು. ಡಿ. ಎಲ್. ಎನ್. ಅವರ ಎರಡೂ ಪ್ರತಿಗಳಲ್ಲಿ ಈ ಪ್ರಾಸದೋಷ ಕಂಡುಬರುತ್ತಿದೆ. ಕಿಟೆಲ್, ಪರಿಷತ್ ಪ್ರತಿಯಲ್ಲಿ ಈ ದೋಷ ಗೋಚರಿಸುವುದಿಲ್ಲ.

ಸೂತ್ರ ೧೯

"ಏದಿತ ಸಮಾನಂಗಳ ಪೂ॥
ರ್ವದಕ್ಕರಂ ಹ್ರಸ್ವಂ.....।"

ವೃತ್ತಿ–" ಸಮಾನ ಸಂಜ್ಞೆಯಂ ಪಡೆದ ಪತ್ತಕ್ಕರಂಗಳ ಮೊದಲಕ್ಕರಂಗಳ್ ಹ್ರಸ್ವಂ. ಅವಾವುವೆಂದೊಡೆ– ಅಇಉಋ ಎಒ ಎಂಬವುಮಾ ಪ್ರಕಾರದೊಳ್ ವರ್ತಿಸುಗುಂ.."

ಇಲ್ಲಿ "ಸಮಾನ ಸಂಜ್ಞೆಯಂ ಪಡೆದ ಪತ್ತಕ್ಕರಂಗಳ ಮೊದಲಕ್ಕರಂಗಳ್" ಅಂದರೆ ಅ ಇ ಉ ಋ ಎಂಬ ಐದು ಅಕ್ಷರಗಳೂ ಎಂದು ಅರ್ಥ. ಆದರೆ ಶ್ರೀ ಡಿ. ಎಲ್. ಎನ್. ಹೇಳಿದುದು ಏಳು ಅಕ್ಷರಗಳು. ಅದಕ್ಕಾಗಿ ಈ ವೃತ್ತಿ ವಾಕ್ಯವನ್ನು "ಸಮಾನ ಸಂಜ್ಞೆಯಂ ಪಡೆದ ಪತ್ತಕ್ಕರಂಗಳ ಮೊದಲಕ್ಕರಂಗಳ್ ಹ್ರಸ್ವಂ.. ಅವಾವುವೆಂದೊಡೆ–ಅ ಇ ಉ ಋ ಎಂಬಿವು. ಎ ಒ ಎಂಬವುಮಾ ಪ್ರಕಾರದೊಳ್ ವರ್ತಿಸುಗುಂ" ಎಂದು ತಿದ್ದಿಕೊಳ್ಳಬೇಕು. ಈ ಸೂಚನೆಗೆ ಕಿಟಲ್ ದರ್ಪಣ ಆಧಾರ.

ಸೂತ್ರ ೨೨

ಸ್ವರಪರದೊಳಿರ್ಪ ಕತದಿಂ
ದುರು ಮುಖ್ಯೋಚ್ಚಾರಣಕ್ಕೆ ಬಾರದ ಕತದಿಂ।
ಪರಿಕಿಸೆ ಬಿಂದು ವಿಸರ್ಗಂ।
ಸ್ವರಾಂಗಮುಂ ವ್ಯಂಜನಾಂಗಮುಂ ತಾವೆಂಬರ್

ಈಗ 'ಸ್ವರಪರದೊಳಿರ್ಪ ಕತದಿಂ' ಎಂಬಲ್ಲಿಯ 'ಕತದಿಂ' ತ್ಯಜಿಸಿ 'ತೆಱದಿಂ' ಎಂದಿಟ್ಟುಕೊಂಡರೆ ಯಾವ ಹಾನಿಯೂ ಸಂಭವಿಸದೆ 'ಕತದಿಂ' ಎಂಬುದರ ಪುನರಾಗಮನವನ್ನು ತಪ್ಪಿಸಿದ ಲಾಭವೇ ಉಂಟಾಗುತ್ತದೆ. ಇದಲ್ಲದೆ ಸ್ವರದ ಮಗ್ಗುಲಲ್ಲಿ ಇರುವ ರೀತಿ (ತೆಱ) ಮಾತ್ರದಿಂದಲೇ ಬಿಂದು ವಿಸರ್ಗಗಳು ಸ್ವರಾಂಗವೆನ್ನಿಸಿಕೊಳ್ಳುವುದರಿಂದ 'ಸ್ವರಪರದೊಳಿರ್ಪ ತೆಱದಿಂ' ಎಂಬ ಪಾಠವೇ ಹೆಚ್ಚು ಯೋಗ್ಯವೆನಿಸುತ್ತದೆ. ಪರಿಷತ್ ಕಿಟೆಲ್ ಮದ್ರಾಸ ಪ್ರತಿಗಳಲ್ಲಿ ಏಕೆ ತಾವು ಸ್ವೀಕರಿಸಿದ ಟೀಕೆಯಲ್ಲಿಯೇ 'ತೆಱದಿಂ' (= ರೀತಿಯಿಂದೆ) ಎಂಬ ಪಾಠವಿದೆ.

ಸೂತ್ರ ೨೮ ಮತ್ತು ೨೯

ಅತಿ ಪೀಡನದಿಂ ರೇಫಾ।
ಶ್ರಿತಮಾದ ಱಕಾರಮುಂ ಸಮಂತು ಡಕಾರಾ।
ಶ್ರೀತಮಾದ ಱಟಿನುಮಂಗೀ।
ಕೃತಪದ ಲತ್ವಕ್ಕೆ ಸಮನೆ ಸಲ್ಲದ ಕುಳನುಂ।
ಇವು ವರ್ಣಾವೃತ್ತಿಗೆ ಸ।
ಲ್ಲುವು ಸಂದುಂ ಪ್ರಾಸದೆಡೆಗೆ ಸಲ್ಲವು..।

ವೃತ್ತಿ – "ರೇಫೆ ಪುಟ್ಟುವ ತಾಣಮಂ ಬೆಟ್ಟಿತ್ತಾಗುಚ್ಚರಿಸೆ ಱಕಾರಂ ಪುಟ್ಟುಗುಂ, ಡಕಾರಂ ಪುಟ್ಟುವ ತಾಣಮಂ ಬೆಟ್ಟಿತ್ತಾಗುಚ್ಚರಿಸೆ ಱಟಿವೆಸರ ಟಿಕಾರಂ ಪುಟ್ಟುಗುಂ, ಲಕಾರಂ ಪುಟ್ಟುವ ತಾಣಮಂ ಬೆಟ್ಟಿತ್ತಾಗುಚ್ಚರಿಸೆ ಳವೆಸರ ಳಕಾರಂ ಪುಟ್ಟುಗುಂ."

ರ–ಱ, ಡ–ಟಿ, ಲ–ಳ ಈ ಮೂರು ಜೋಡಿಗಳು ಏಕಸ್ಥಾನೀಯ ಭಿನ್ನ ವರ್ಣಗಳು. ಏಕಸ್ಥಾನೀಯತ್ವ ಕಾರಣವಾಗಿ ಅನುಪ್ರಾಸಕ್ಕೆ ಸಲ್ಲುವ ಅವು ಭಿನ್ನ ವರ್ಣತ್ವ ಕಾರಣವಾಗಿ ಆದಿ ಪ್ರಾಸಕ್ಕೆ ಸಲ್ಲವು ಎಂಬುದೇ ಈ ಸೂತ್ರದ ಉದ್ದೇಶ. ಈ ಉದ್ದೇಶ ಸೂತ್ರ ವೃತ್ತಿಗಳಲ್ಲಿ ಎಷ್ಟರ ಮಟ್ಟಿಗೆ ನೆರವೇರಿದೆ ಎಂಬುದನ್ನು ಅವುಗಳ ತುಲನೆಯ ಮೂಲಕ ನೋಡೋಣ.

(ಅ) ಸೂತ್ರ – ಅತಿ ಪೀಡನದಿಂ ರೇಫಾಶ್ರಿತಮಾದ ಱಕಾರ (ಮು)ಂ

ವೃತ್ತಿ – ರೇಫೆ ಪುಟ್ಟುವ ತಾಣಮಂ ಬೆಟ್ಟಿತ್ತಾಗುಚ್ಚರಿಸೆ ಱಕಾರಂ ಪುಟ್ಟುಗುಂ

(ಬ) ಸೂತ್ರ –ಸಮಂತು ಡಕಾರಾಶ್ರಿತಮಾದ ಱಟಿ(ನು)ಂ

ವೃತ್ತಿ – ಡಕಾರಂ ಪುಟ್ಟುವ ತಾಣಮಂ ಬೆಟ್ಟಿತ್ತಾಗುಚ್ಚರಿಸೆ ಱಟಿವೆಸರ ಟಿಕಾರಂ ಪುಟ್ಟುಗುಂ

(ಕ) ಸೂತ್ರ – ಅಂಗೀಕೃತ ಪದ ಲತ್ವಕ್ಕೆ ಸಮನೆ ಸಲ್ಲದ ಕುಳ (ನು)ಂ

ವೃತ್ತಿ – ಲಕಾರಂ ಪುಟ್ಟುವ ತಾಣಮಂ ಬೆಟ್ಟಿತ್ತಾಗುಚ್ಚರಿಸೆ ಕುಳವೆಸರ ಳಕಾರಂ ಪುಟ್ಟುಗುಂ.

ಟೀಕೆ[೧೪] – ಅಂಗೀಕರಿಸಲ್ಪಟ್ಟ ಪದಂಗಳ ಲಕಾರಕ್ಕೆ ಪ್ರಾಸ ಸಲುವಳಿಯಾಗದ ಕುಳವೆಂಬ ಳಕಾರಮುಂ

ಈ ಮೂರರಲ್ಲಿ ಮೊದಲಿನ ಎರಡು ಅಂಶ (ಅ.ಬ)ಗಳ ಸೂತ್ರವಾಕ್ಯ ಮತ್ತು ವೃತ್ತಿ ವಾಕ್ಯಗಳಲ್ಲಿ ಹೊಂದಿಕೆ ಕಂಡು ಬಂದು ಕೇಶಿರಾಜನ 'ಏಕಸ್ಥಾನೀಯ ಭಿನ್ನ ವರ್ಣ ವಿಚಾರ' ನೆರವೇರಿದುದು ಸ್ಪಷ್ಟವಾಗಿಯೇ ಇದೆ. ಆದರೆ ಮೂರನೆಯ ಅಂಶ(ಕ)ಕ್ಕೆ ಬಂದರೆ ಸೂತ್ರ ಒಂದು ದಾರಿ, ವೃತ್ತಿ ಇನ್ನೊಂದು ದಾರಿ, ಟೀಕೆ ಮತ್ತೊಂದು ದಾರಿ ಹಿಡಿದುದು ಸ್ಪಷ್ಟವಾಗುತ್ತದೆ. ಅಂದರೆ ಶ್ರೀ ಡಿ. ಎಲ್. ಎನ್. ಸ್ವೀಕೃತ 'ಅಂಗೀಕೃತ ಪದ ಲತ್ವಕ್ಕೆ ಸಮನೆ ಸಲ್ಲದ ಕುಳನುಂ' ಎಂಬ ಸೂತ್ರಪಾಠವು ಸಂದೇಹಪೂರ್ಣವಾಗಿದ್ದು–

---

೧೪. ಟೀಕೆ – "...ಅಂಗೀಕೃತ ಪದಲತ್ವಕ್ಕೆ=ಅಂಗೀಕರಿಸಲ್ಪಟ್ಟ ಪದಂಗಳ ಲಕಾರಕ್ಕೆ, ಸನೇಮ=ಪ್ರಾಸ. ಸಲ್ಲದ=ಸಲುವಳಿಯಾಗದ. ಕುಳನುಂ=ಕುಳಮೆಂಬ ಳಕಾರಮುಂ...."

(೧) ತನ್ನ ಇನ್ನೆರಡು (ಅ, ಬ) ಸಹ ವಾಕ್ಯಗಳೊಂದಿಗೆ ಸಮಾಂತರವಾಗಿ ಸಾಗುವುದಿಲ್ಲ.

(೨) ತನ್ನ ವೃತ್ತಿ ವಾಕ್ಯದೊಂದಿಗೆ ಸಹ ಹೊಂದಿಕೊಳ್ಳುವುದಿಲ್ಲ.

(೩) ಟೀಕೆಗೂ ಇದಕ್ಕೂ ತಾಳಮೇಳವಿಲ್ಲ.

ಎಂದು ಹೊರನೋಟದಿಂದಲೇ ತಿಳಿದುಬರುತ್ತದೆ. ಇದು ಮೊದಲ ಆಕ್ಷೇಪಣೆ.

ಎರಡನೆಯದಾಗಿ ಕೇಶಿರಾಜ ಕೊಟ್ಟ ಮೊಲೆ–ಮೊಳೆ, ಕಲೆ–ಕಳೆ ಎಂಬಲ್ಲಿಯ ಮೊಲೆ, ಕಲೆ ಎಂಬ ಪದಗಳನ್ನು ನೋಡಿದರೆ ಸಾಕು ಸೂತ್ರದಲ್ಲಿಯ 'ಅಂಗೀಕೃತಪದ' ಎಂದರೆ ಸಂಸ್ಕೃತಪದವಲ್ಲ, ಕನ್ನಡಪದ ಎಂದು ತಿಳಿದುಬರುತ್ತದೆ. ಈ ಅರ್ಥಗ್ರಹಿಕೆಯ ಹಿನ್ನೆಲೆಯಲ್ಲಿ ಶ್ರೀ ಡಿ. ಎಲ್. ಎನ್. ಪಾಠವನ್ನು ಪರೀಕ್ಷಿಸೋಣ.

ಅಂಗೀಕೃತ ಪದ ಲತ್ವಕ್ಕೆ ಸಮನೆ ಸಲ್ಲದ ಕುಳ (ನು)ಂ ಅಂದರೆ ಅಂಗೀಕರಿಸಲ್ಪಟ್ಟ (ಕನ್ನಡ) ಪದದ ಲತ್ವಕ್ಕೆ ಪ್ರತಿಯಾಗಿ ಳತ್ವವನ್ನಿಟ್ಟರೆ ಅರ್ಥವ್ಯತ್ಯಾಸ (ತೊಲಗು–ತೊಳಗು, ಮೊಲೆ–ಮೊಳೆ) ತಲೆದೋರುವುದರಿಂದ ಅವು ಭಿನ್ನವರ್ಣಗಳೆಂದು ಇದರ ಒಟ್ಟು ಅರ್ಥ. ಆದರೆ ಯಾವುದೇ ಎರಡು ವರ್ಣಗಳು ವರ್ಣಾವೃತ್ತಿಗೆ ಸಂದುಂ ಪ್ರಾಸದೆಡೆಗೆ ಸಲ್ಲದಿರಬೇಕಾದರೆ ಅವು ಏಕಸ್ಥಾನೀಯ ಭಿನ್ನವರ್ಣಗಳಿರಲೇಬೇಕು.[೧೫] ಆದರೆ ಶ್ರೀ. ಡಿ. ಎಲ್. ಎನ್. ಪಾಠವು ಲ್–ಳ್ ವರ್ಣಗಳು ಭಿನ್ನವರ್ಣಗಳು ಎಂದು ಬಾಯಿಬಿಟ್ಟು ಹೇಳಿ, ಅವುಗಳ ಏಕಸ್ಥಾನೀಯತ್ವದ ಬಗ್ಗೆ ಮೌನ ತಾಳುವುದರಿಂದ ಅವು ವರ್ಣಾವೃತ್ತಿಗೆ ಸಲ್ಲುವ ಬಗೆಗೆ ಸಂದೇಹ ಹುಟ್ಟಿಕೊಳ್ಳುತ್ತದೆ. ಅದಕ್ಕಾಗಿ ಶ್ರೀ ಡಿ. ಎಲ್. ಎನ್. ಸ್ವೀಕೃತ ಅಂಗೀಕೃತ ಪದ ಲತ್ವಕ್ಕೆ ಸಮನೆ ಸಲ್ಲದ ಕುಳನುಂ ಎಂಬುದು ಉಚಿತ ಪಾಠವಲ್ಲವೆಂದು ಖಚಿತವಾಗುತ್ತದೆ.

ಒಟ್ಟಾಗಿ ಇಲ್ಲಿ ಸೂತ್ರವು ವರ್ಣಭಿನ್ನತ್ವವನ್ನು ನಿರೂಪಿಸಿದರೆ, ವೃತ್ತಿಯು ಅತಿ ಪೀಡನತ್ವ, ಏಕಸ್ಥಾನೀಯತ್ವಗಳನ್ನು ವಿವೇಚಿಸುತ್ತದೆ. ಟೀಕೆ ಪ್ರಾಸವಿಚಾರವನ್ನು ವಿವರಿಸುತ್ತದೆ. ಈ ಅಸಂಗತವನ್ನು ಅಳುಕಿಸಿ–ಟೀಕೆ ಬಿಡಲಿ–ಸೂತ್ರ ವೃತ್ತಿಗಳಲ್ಲಿಯಾದರೂ ಸಮನ್ವಯ ಸಾಧಿಸಿಕೊಡುವ ಪಾಠ ಇಲ್ಲಿ ಅತ್ಯವಶ್ಯವೆನಿಸುತ್ತದೆ. ವೃತ್ತಿ ಟೀಕೆಗಳಿಗಿರದೆ ಸೂತ್ರಕ್ಕೆ ಮಾತ್ರ ಇನ್ನೆರಡು ಪಾಠಗಳಿವೆ–

೧. ಅಂಗೀಕೃತ ಪದ ಲತ್ವಕೆ ಸನೇಮಸಲ್ಲದ ಕುಳನುಂ (ಕಿಟೆಲ್, ನಿಟ್ಟೂರ ನಂಜಯ್ಯ).

೨. ಅಂಗೀಕೃತ ಪದ ಲತ್ವಕ್ಕೆ ಬೆಟ್ಟಿತೆನಿಸಿದ ಕುಳನುಂ (ಪರಿಷತ್ ಪ್ರತಿ).

ಈ ಎರಡರಲ್ಲಿ ಹೆಚ್ಚು ಯೋಗ್ಯಪಾಠ ಯಾವುದೆಂಬುದನ್ನು ನಿರ್ಣಯಿಸೋಣ.

'ಅಂಗೀಕೃತ ಪದಲತ್ವಕೆ ಸನೇಮ ಸಲ್ಲದ ಕುಳ(ನು)ಂ ಅಂದರೆ ಅಂಗೀಕರಿಸಲ್ಪಟ್ಟ (ಕನ್ನಡ)ಪದದಲ್ಲಿಯ ಲಕಾರಕ್ಕೆ ಕುಳವು ಪ್ರಾಸದಲ್ಲಿ ಸಲುವಳಿಯಾಗದು ಎಂದು ಇದರ ಒಟ್ಟು ಅರ್ಥ. ಹಾಗಿದ್ದರೆ ತನಗೆ ಭಿನ್ನವಲ್ಲದ ಮುಂದಿನ ಸೂತ್ರದಲ್ಲಿಯೇ ಇವು–ಪ್ರಾಸದೆಡೆಗೆ ಸಲ್ಲವು

---

೧೫. "...ಮಸ್ತಕದೊಳಂ ದಂತದೊಳಮೀಯೆಂಟಱೊಳಮಕ್ಕರಂ ಪುಟ್ಟುಗುಂ.
ಅವಱೊಳೇಕಸ್ಥಾನಿಗಳನಱಿದು ವರ್ಣಾವೃತ್ತಿಯಂ ಮಾಱ್ಪುದು.(ಶ.ಮ. ದರ್ಪಣ, ಸೂ.೪೦ ವೃತ್ತಿ)

ಎಂದು ಮತ್ತೊಮ್ಮೆ ಹೇಳಿದನೇಕೆ? ಇದು ದ್ವಿರುಕ್ತಿದೋಷ. ಎರಡನೆಯದಾಗಿ ಲಕಾರಕ್ಕೆ ಲಕಾರವನ್ನುಳಿದು ಯಾವ ವರ್ಣಗಳೂ ಪ್ರಾಸಕ್ಕೆ ಸಲ್ಲದಿರುವಾಗ ಕೇವಲ ಳಕಾರವನ್ನಷ್ಟೇ ಗುರಿ ಇಟ್ಟು ಹೇಳಿದುದು ಅರ್ಥವಿಲ್ಲದ ಮಾತು ಎನಿಸುತ್ತದೆ. ಮೂರನೆಯದಾಗಿ ಈ ಸೂತ್ರವಾಕ್ಯವು ಸಹ ತನ್ನ ವೃತ್ತಿ ವಾಕ್ಯದೊಂದಿಗೆ ಹೊಂದಿಕೊಳ್ಳುವುದಿಲ್ಲ. ಈ ಎಲ್ಲ ಕಾರಣಗಳಿಂದಾಗಿ ಈ ಪಾಠವೂ ಸ್ವೀಕಾರ ಯೋಗ್ಯವಾಗಿಲ್ಲ ಎಂದು ಹೇಳಬಹುದು.

ಕೊನೆಯದಾಗಿ 'ಅಂಗೀಕೃತ ಪದ ಲತ್ವಕ್ಕೆ ಬೆಟ್ಟಿತ್ತೆನಿಸಿದ ಕುಳ(ನು)ಂ' ಅಂದರೆ ಅಂಗೀಕರಿಸಲ್ಪಟ್ಟ (ಕನ್ನಡ) ಪದದಲ್ಲಿಯ ಲಕಾರದ ಬೆಟ್ಟಿತುಚ್ಚರಣೆ (ಅತಿಪೀಡನತ್ವ) ಯಿಂದ ಕುಳ ಳಕಾರ ಹುಟ್ಟುತ್ತದೆ ಎಂದು ಇದರ ಒಟ್ಟು ಅರ್ಥ. ಇದು 'ಲಕಾರಂ ಪುಟ್ಟುವ ತಾಣಮಂ ಬೆಟ್ಟಿತ್ತಾಗುಚ್ಚರಿಸೆ ಕುಳವೆಸರ ಳಕಾರಂ ಪುಟ್ಟುಗುಂ' ಎಂಬ ವೃತ್ತಿವಾಕ್ಯಕ್ಕೆ ಹೊಂದಿ ಸೂತ್ರ ವೃತ್ತಿಗಳಲ್ಲಿ ಸಮನ್ವಯವನ್ನು ನೆರವೇರಿಸಿಕೊಡುತ್ತದೆ. ತನ್ಮೂಲಕ ಕೇಶಿರಾಜನ ಏಕಸ್ಥಾನೀಯಗಳಾದ ಇವು ಭಿನ್ನವರ್ಣಗಳು ಎಂಬ ಉದ್ದೇಶವೂ ಸ್ಪಷ್ಟವಾಗಿ ಮೂಡಿ ಬಂದು 'ಇವು ವರ್ಣಾ ವೃತ್ತಿಗೆ ಸಲ್ವುವು ಸಂದುಂ ಪ್ರಾಸದೆಡೆಗೆ ಸಲ್ಲವು' ಎಂಬ ಮಾತು ಪುಷ್ಟಿಗೊಳ್ಳುತ್ತದೆ. ಈಗ

> "ಅತಿ ಪೀಡನದಿಂ ರೇಫಾಶ್ರಿತಮಾದ ಱಕಾರ ಮುಂ
> ಸಮಂತು ಡಕಾರಾಶ್ರಿತಮಾದ ಱಟನುಂ,
> ಅಂಗೀಕೃತ ಪದ ಲತ್ವಕ್ಕೆ ಬೆಟ್ಟಿತೆನಿಸಿದ ಕುಳನುಂ"

ಎಂಬಂತೆ ಸೂತ್ರದ ಮೂರೂ ವಾಕ್ಯಗಳಲ್ಲಿ ಸಮಾಂತರ ಅರ್ಥ ಹೊರಡುತ್ತದೆ. ಅಂದರೆ ರ. ಡ. ಲ ಇವುಗಳಿಗೆ ಬೆಟ್ಟಿತುಚ್ಚರಣೆಯಿಂದ ಱ. ಟ. ಳ ವರ್ಣಗಳು ಹುಟ್ಟುತ್ತವೆ[೧೬] ಎಂಬ ಅಂಶ ಸ್ಪಷ್ಟವಾಗುತ್ತದೆ. ಅದಕ್ಕಾಗಿ ಈ ಪಾಠವೇ ಕೇಶಿರಾಜ ಉದ್ದೇಶಿತವಾದುದೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಹಾಗಿದ್ದರೆ 'ಲತ್ವಕ್ಕೆ ಬೆಟ್ಟಿತೆನಿಸಿದ ಕುಳನುಂ' ಎಂದಿಷ್ಟೇ ಹೇಳದೆ ಅಂಗೀಕೃತ ಪದ ಎಂಬ ಹೆಚ್ಚಿನ ಮಾತನ್ನೇಕೆ ಹೇಳಿದ ಎಂಬ ಪ್ರಶ್ನೆ ಏಳುವುದು ಸಹಜ. ಇದಕ್ಕೆ ಸಮಾಧಾನವೂ ಇಲ್ಲದಿಲ್ಲ, ಅದು ಸಂಸ್ಕೃತ ಶಬ್ದ ನಿಯುಕ್ತ ಲಕಾರದಿಂದಲೂ ಒಂದು ಬಗೆಯ ಳ (ಕ್ಷಳ) ಹುಟ್ಟುತ್ತದೆ. ಈ ಳ (ಕ್ಷಳ)ಕಾರದಿಂದ ಕನ್ನಡ ಲಕಾರವನ್ನಾಧರಿಸಿ ಹುಟ್ಟುವ ಳ(ಕುಳ) ಕಾರವನ್ನು ಭಿನ್ನ ಮಾಡಿ ತೋರಿಸಲು ಕೇಶಿರಾಜನು ಅಂಗೀಕೃತ ಪದ (=ಕನ್ನಡ ಪದ) ಎಂಬ ಹೆಚ್ಚಿನ ಮಾತನ್ನು ಹೇಳಬೇಕಾಯಿತು. ಅದಕ್ಕಾಗಿ ಶ್ರೀ ಡಿ. ಎಲ್. ಎನ್. ಪಾಠಕ್ಕಿಂತ 'ಅಂಗೀಕೃತ ಪದಲತ್ವಕ್ಕೆ ಬೆಟ್ಟಿತೆನಿಸಿದ ಕುಳನುಂ' ಎಂಬ ಪಾಠವೇ ಇಲ್ಲಿ ಅರ್ಥಪೂರ್ಣವಾಗಿದ್ದು ಸ್ವೀಕಾರ ಯೋಗ್ಯವೆನಿಸುತ್ತದೆ.

---

೧೬. ಕೇಶಿರಾಜನ ಈ ಸೂತ್ರಕ್ಕೆ ನಾಗವರ್ಮ-II ನೇ ಪ್ರೇರಕ

ಲ ರ ಡ ಗ್ರಹಣದೆ ಳ ಱ ಟಾ

ಕ್ಷರಮಕ್ಕುಂ ಪೀಡನ ಪ್ರಯತ್ನಾಶ್ರಯದಿಂ। (ಕಾ.ಲೋ.ಸೂ, ೬)

ಎಂಬ ಮಾತನ್ನು ಕೇಶಿರಾಜನ ಈ ಸೂತ್ರಕ್ಕೆ ಹೊಂದಿಸಿ ನೋಡಿದಾಗ ನಾವು ಸ್ವೀಕರಿಸಿದ ಪಾಠಕ್ಕೆ ಇನ್ನಷ್ಟು ಪುಷ್ಟಿ ದೊರೆಯುತ್ತದೆ.

ಸೂತ್ರ ೩೧

ಕೃತಿ ಮಾರ್ಗದೊಳುಂಟು ಟಕಾ।
ರ ತಕಾರ ಠಕಾರ ತಕಾರ ರೇಫದೆಡೆಗಂ ಬಹುಳ

ಇಲ್ಲಿ 'ತಕಾರ' ಎಂಬುದು ಎರಡು ಸಲ ಬಂದು ನಾಲ್ಕು ಮಾತ್ರೆಗಳನ್ನು ಹೆಚ್ಚಿಸಿದೆ.

ಸೂತ್ರ ೩೪

ಪಿರಿಯರ್ ಸಲಿಪರ್ ದಡ್ಡ।
ಕ್ಕರದ ಱಟಿಕ್ಕೆಯ್ದೆ ರೇಫೆವೆರಸಿದ ದಡ್ಡ।
ಕ್ಕರಮಂ....

ವೃತ್ತಿ–ದಡ್ಡಕ್ಕರದ ಱಟಿಕ್ಕೆ ಪ್ರತಿಯಾಗಿ ರೇಫೆವೆರಸಿದ ದಡ್ಡಕ್ಕರಮಂ ಪ್ರಾಸಕ್ಕೆ ಪಿರಿಯರ್ ಪೇೞ್ದ ಪ್ರಯೋಗಮೊಳವು..

ಪ್ರಯೋಗ–ಬೞ್ದುದು ಬಳ್ಳವಾಡಿ ನೆಱೆ ನಂಬಿರ್ದುದಾರುಹತಂ ಜಿನೇಂದ್ರನಂ।

ತಿರ್ದ ಮಹಾನುಭಾವಂ–

ಇಲ್ಲಿ ದಡ್ಡಕ್ಕರದ ಱಟಿ ಮತ್ತು ರೇಫೆವೆರಸಿದ ದಡ್ಡಕ್ಕರ ಇವುಗಳ ಪ್ರಾಸ ಬಳಕೆಗೆ ಕೇಶಿರಾಜನ ಅನುಮತಿ ಇದೆ ಎಂದ ಮಾತ್ರಕ್ಕೆ 'ಬೞ್ದು'[೧೭] ಎಂಬ ಪೂರ್ಣ ದ್ವಿತ್ವ 'ತಿರ್ದ'[೧೮] ಎಂಬ ಶಿಥಿಲದ್ವಿತ್ವ ಇವುಗಳ ಪ್ರಾಸ ಬಳಕೆಗೂ ಅನುಮತಿ ಇದೆಯೆಂದು ಅರ್ಥವಲ್ಲ. ಅದಕ್ಕಾಗಿ 'ಬೞ್ದು' ಎಂಬುದರ ತೂಕ ಕಾಯ್ದುಕೊಳ್ಳಲು ಅಸಮರ್ಥವಾದ 'ತಿರ್ದ' ಎಂಬುದು 'ತಿರ್ದ್ದ'[೧೯] ಎಂದಾಗಬೇಕು. ಆಗ ಈ ಭಿನ್ನಪದಗಳಿಗೆ ಸರಿ ತೂಕ ಬಂದು ಮಾತ್ರಾ ಬೆಲೆ ಸಮನಾಗುವುದು. ಅದಕ್ಕಾಗಿ ಕೇಶಿರಾಜನ ಅಭಿಪ್ರಾಯದಲ್ಲಿ ಹಿರಿಯರು ಸಲಿಸಿದ ಪ್ರಾಸಾಕ್ಷರಗಳು 'ಬೞ್ದು' ಮತ್ತು 'ತಿರ್ದ್ದ'[೨೦] ಎಂಬಿವುಗಳೇ

---

೧೭. ಕೆಲವು ಪದಂಗಳ್ ನಿಯತದಿಂದ ದ್ವಿತ್ವಂಗಳಪ್ಪುವವರ್ಕೆಪ್ರಯೋಗಂ–"ಬೞ್ದಂ"(ಸೂತ್ರ ೪೬ರ ಕೆಳಗಿರುವ ಪದಪಟ್ಟಿ ನಂ. ೩೭)

೧೮. ಶ್ರೀ ಡಿ.ಎಲ್. ಎನ್. ಸ್ವೀಕರಿಸಿದ 'ನೆಱೆ ನಂಬಿರ್ದುದಾರಯಹತಂ' ಎಂಬಲ್ಲಿಯ 'ಇರ್ದು' ಎಂಬ ಪದ ಶಿಥಿಲದ್ವಿತ್ವವಾಗಿದೆ. ಅದೇ ರೀತಿ(ಜಿನೇಂದ್ರನಂತೆ+) 'ಇರ್ದು' ಎಂಬುದೂ ಶಿಥಿಲದ್ವಿತ್ವವಾಗಿದೆ.

೧೯. ಪ್ರಾಚೀನ ಶಾಸನ, ಕಾವ್ಯಗಳಲ್ಲಿ ರೇಫೆ ಸಂಯುಕ್ತ ವರ್ಣ ಸಜಾತೀಯ ದ್ವಿತ್ವವಾಗುತ್ತದೆ.

ಸರ್ವ್ವಜ್ಞಂ ಸರ್ಬ್ಬಗತಂ।
ಸರ್ಬ್ಬಾತ್ಮನೆನಿಪ್ಪುರ್ಬ್ಬಿನದ್ವೈತಧನಂ।
ನಿರ್ಬ್ಬಾಣಯೋಗಿ ಶಾನ್ತಂ।
ಸರ್ಬ್ಬಿಂ ಸರ್ಬ್ಬೇಯ ಕಾರಣಂ ಗುಣವುಳ್ಳಂ॥ (ಶಿಕಾರಿಪುರ ತಾಲೂಕು ಶಾಸನ, ನಂ. ೧೨೯)

೨೦. ಸೂಕ್ಷ್ಮವಾಗಿ ಅವಲೋಕಿಸಿದರೆ ರೇಫೆಸಂಯುಕ್ತಾಕ್ಷರದ ಸಜಾತೀಯ ದ್ವಿತ್ವ ಸೂಚನೆ ಈ ಸೂತ್ರದಲ್ಲಿ ಕಂಡುಬರುವಂತಿದೆ.

I. ದಡ್ಡಕ್ಕರದ ಱಟಿ=ದಡ್ಡಕ್ಕರವನ್ನು ಪಡೆದ ಱಟಿ(ೞ)

II. ರೇಫೆವೆರಸಿದ ದಡ್ಡಕ್ಕರ=ರೇಫೆಯನ್ನು ಬೆರಸಿಕೊಂಡ ದಡ್ಡಕ್ಕರ. ಅಂದರೆ ಒಂದ ರೇಫೆ(ರ್) ಅದು ದಡ್ಡಕ್ಕರ(ದ್ದ)ಕ್ಕೆ ಕೂಡಿ(ರ್+ದ್ದ=ರ್ದ್ದ) ಕೊಂಡಿರಬೇಕು ಎಂಬ ಅರ್ಥವೇ ಇಲ್ಲಿದ್ದಿರಬಹುದು.

ಹೊರತು ಶ್ರೀ ಡಿ. ಎಲ್. ಎನ್. ಜೋಡಿಸಿದ ಬಳಟ್ದು ಮತ್ತು ತಿರ್ದ ಎಂಬಿವುಗಳಲ್ಲ, ಕಿಟೆಲ್, ಹೈದ್ರಾಬಾದ ಪ್ರತಿಗಳಲ್ಲಿ ತಿರ್ದ್ದ ಎಂಬ ರೂಪವೇ ಇದೆ. "ರೇಫೆತಳ್ತ ವರ್ಣಕ್ಕೆಱಗಿರ್ಕುಂ ದ್ವಿತ್ವವೃತ್ತಿಯ ಸಮಾಸತೆಯೊಳಂ" [೨೧] ಎಂಬ ಸೂತ್ರವನ್ನು ಗಮನಿಸಿದರೆ ನಮ್ಮ ಹೇಳಿಕೆ ಇನ್ನಷ್ಟೂ ಗಟ್ಟಿಗೊಳ್ಳುತ್ತದೆ. ಇದೇ ರೀತಿಯಾಗಿ ಮುಂದಿನ 'ಚುರ್ಚಿದ-ಮುಚ್ಚಿದ' ಎಂಬಿವುಗಳನ್ನು 'ಚುರ್ಚ್ಚಿದ-ಮುಚ್ಚಿದ ಎಂದು ತಿದ್ದಿಕೊಳ್ಳಬೇಕು. ಇನ್ನು ಕೊನೆಯ ಪದ್ಯದ ಪ್ರಾಸ 'ಒರ್ಕ್ಕುಡಿತೆ-ಟ್ಟೆರ್ಕ್ಕೆಯ-ವರ್ಕ್ಕಳ್ಗೊಡೆಯ-ನೀಟ್ಕಿರಿಸಿ' ಎಂದು ಗುಣಯುಕ್ತವಾಗಿದ್ದರೆ ಇದೇ ಸೂ. ೨೭೫ ರ ಕೆಳಗೆ 'ಒರ್ಕುಡಿತೆ-ಟ್ಟೆರ್ಕೆಯ-ವರ್ಕಳ್ಗೊಡೆಯ-ನೀಟ್ಕಿರಿಸಿ' ಎಂದು ದೋಷಯುಕ್ತವಾಗಿದೆ. ಇದಲ್ಲದೆ ಇಲ್ಲಿಯ ಬೋಟೆಯರೊಳರೇ ಎಂಬುದು ಅಲ್ಲಿ 'ಬೋಳೆಯರೊಳರೇ' ಎಂದು ಕುಳಯುಕ್ತವಾಗಿದೆ.

ಇನ್ನು ಈ ಪದ್ಯದ ಛಂದಸ್ಸು-

||ಕಂ|| "ಬಟಸ್ದಿದು ಬಳ್ಳವಾಡಿ ನೆಱ ನಂ।
ಬಿರ್ದುದಾರುಹತಂ ಜಿನೇಂದ್ರ ನಂ।
ತಿರ್ದು ಮಹಾನುಭಾವರ್..... (-ಪರಿಷತ್ ಪ್ರತಿ)

[ತ್ರಿವಿದಿ] "ಬಟ್ಟುದು ಬಳ್ಳವಾಡಿ ನೆಱ ನಂ।
ಬಿರ್ದುದಾರ್ಹತಮಂ ಜಿನೇಂದ್ರನಂ।
ತಿರ್ದು ಮಹಾಪುರಾಣ ಕವಿಗಳ್.." (-ಮದ್ರಾಸ ಪ್ರತಿ)

ತಪ್ಪು ಛಂದಸ್ಸಿನಲ್ಲಿ ಪ್ರಕಟವಾದ ಮೇಲಣ ಈ ಪದ್ಯ ಶ್ರೀ ಡಿ. ಎಲ್. ಎನ್. ಅವರಲ್ಲಿ ಛಂದದ ನಿಯತ ರೂಪ (ಉತ್ಪಲಮಾಲೆ)ವನ್ನು ಪಡೆದಿದೆ. ಈ ಸ್ವರೂಪ ನಿರ್ಣಯಕ್ಕೆ ಶ.ಮ. ದರ್ಪಣದ ಪಾಠಾಂತರಗಳು ಎಂಬ ಪುಸ್ತಕದಲ್ಲಿಯ ಕೆಳಗಿನ ಪೂರ್ಣ ಪದ್ಯ ನೆರವಾದಂತಿದೆ-

ಬಟ್ಟುದು ಬಲ್ಲವಾಡಿ ನೆಱನಂಬಿದುದಾರ್ಹತಮಂ ಜಿನೇಂದ್ರ ನಂ।
ತಿರ್ದ್ದ ಮಹಾಪುರಾಣ ಕವಿಗಳ್ ಗುರುಗಳ್ ಗುಣಭದ್ರದೇವರುಂ।
ತಿರ್ದ್ದಿದರೆನ್ನ ಪೇಟ್ದ ಕೃತಿಯಂ ಕೃತಿಬಂಧವನಾವ ದೋಷಮಂ।
ಪೊರ್ದ್ದದು ಪೊರ್ದ್ದದಂತಣಮೆ ಪಾಪದ ಸಂತತಿ ವಾರಣಾಸಿಯಂ||[೨೨]

---

೨೧. ಶ. ಮ.ದ. ಸೂತ್ರ ೧೯೫

೨೨. ಈ ಪದ್ಯದ 'ತಿರ್ದ್ದಿದರ್-ಕೃತಿಯಂ' ಎಂಬ ಮಾತಿನಿಂದ ಜಿನಸೇನಾಚಾರ್ಯರ ಶಿಷ್ಯರೂ ನೃಪತುಂಗನ ಗುರುಗಳೂ ಮಹಾಪುರಾಣ ಕರ್ತೃಗಳೂ ಆದ ಗುಣಭದ್ರಾಚಾರ್ಯರು ಸಮಕಾಲೀನ ಕನ್ನಡಕಾವ್ಯವೊಂದನ್ನು ತಿದ್ದಿ ಒಪ್ಪವಿಟ್ಟರೆಂದು ತಿಳಿದುಬರುತ್ತದೆ. ಈ (ಚಂಪೂ?)ಕೃತಿಯನ್ನು ತಿದ್ದಬೇಕಾದರೆ ಗುಣಭದ್ರಾಚಾರ್ಯರು ಕನ್ನಡ ಸಾಹಿತ್ಯದ ಮೇಲೆಯೂ ಪ್ರಭುತ್ವ ಪಡೆದಿರಲು ಸಾಕು. ಅವರು ತಿದ್ದಿದ ಆ ಕೃತಿ ಉಪಲಬ್ಧವಾಗಿಲ್ಲ.

ಇಲ್ಲಿಯ ಬಲ್ಲವಾಡಿ, ನಂಬಿದುದಾರ್ಹತಮಂ, ತಿರ್ದ್ದ, ಮಹಾಪುರಾಣ ಕವಿಗಳ್ ಎಂಬ ಭಿನ್ನ ಪಾಠಗಳನ್ನು ಲಕ್ಷಿಸಿರಿ, ಇನ್ನು ಉತ್ತರಾರ್ಧದ ಸೂತ್ರಕ್ಕೆ ಬಂದರೆ.

ಸೂತ್ರ–ಱಟನಾಗದನುಚ್ಚರಿಸಲ್ಕಾಗಿರ್ದ ತೆಱದಿನಂತದು ಶುದ್ಧಂ

ಟೀಕೆ– ಱಟನಾಗಿ= ಱಟಪ್ರಾಸವಾಗಿ, ಅದಂ=ಆ ರೇಫೆವೆರಸಿದ ದ್ವಿತ್ವಾಕ್ಷರಮಂ, ಉಚ್ಚರಿಸಲ್ಕೆ= ಓದುವುದರ್ಕೆ, ಆಗಿರ್ದತೆಱದಿಂ=ಸಲುವಳಿಯಾಗಿರ್ದ ರೀತಿಯಿಂದೆ. ಅಂತು=ಹಾಗೆ, ಅದು=ಅದು ತಾಂ, ಶುದ್ಧಂ=ಶುದ್ಧವಪ್ಪುದು.

ವೃತ್ತಿ–"ಆ ದಡ್ಡಕ್ಕರದ ರೇಫೆಯಂ ಱಟನಾಗುಚ್ಚರಿಸಲಾಗದು. ನಿಸರ್ಗದಿನದು ಶುದ್ಧಂ" ಇಲ್ಲಿ ಸೂತ್ರ (ಉಚ್ಚರಿಸಲ್ಕೆ+ಆಗ ಅಂದರೆ ಉಚ್ಚರಿಸಲಾಗದು ಎಂದು ಅರ್ಥ ಮಾಡಿಕೊಂಡರೆ)ವೃತ್ತಿಗಳು ಅರ್ಥದಲ್ಲಿ ಹೊಂದಿಕೊಂಡು ಒಂದು ದಾರಿ ಹಿಡಿದರೆ, ಟೀಕೆ ಇವುಗಳಿಗೆ ವಿರುದ್ಧ ದಾರಿ ಹಿಡಿಯುತ್ತದೆ. ಇಂಥ ಹೊಂದಿಕೆ ಇಲ್ಲದ ಟೀಕೆಗಳು ಇನ್ನೂ ಅನೇಕ ಕಡೆ ಕಂಡುಬರುತ್ತವೆ.

ಸೂತ್ರ ೩೫ ರಲ್ಲಿ 'ಜಾಂಗುಳಿ..ಪೇಳಿ' ಪದಗಳಿದ್ದರೆ, ಟೀಕೆಯಲ್ಲಿ 'ಜೊಂಗುಳಿ.. ಫೇಳಿ' ಎಂಬ ಪದಗಳಿವೆ.

ಸೂತ್ರ ೩೬ ರಲ್ಲಿ 'ಇಳಿದಿಳೆಯಂ... ಮೋಳಿಗೆ...ತಳಿಗೆಯಳಿರ್' ಎಂಬ ಪದಗಳಿದ್ದರೆ, ಟೀಕೆಯಲ್ಲಿ 'ಇಳಿದಳಿಯಂ... ಮಾಳಿಗೆ....ತಳಿಗೆಯೊಳಿರ್' ಪದಗಳಿವೆ.

ಸೂತ್ರ ೩೮ ರಲ್ಲಿಯ 'ಬೆರಲೊರಲೆರಲ್ಕೊರಲ್' ಎಂಬ ಪದಕ್ರಮ ಟೀಕೆಯಲ್ಲಿ 'ಬೆರಲ್, ಎರಲ್, ಒರಲ್, ಕೊರಲ್' ಎಂದು ಅನುಕ್ರಮವಾಗಿದೆ. ವೃತ್ತಿಯಲ್ಲಿ ಎರಲ್ ಎಂಬ ಪದವೇ ಕಾಣದಾಗಿದೆ.

ಸೂತ್ರ ೪೦ ರ "...ಓಷ್ಠಮುಂ ನಾಸಿಕೆಯುಂ ಶಿರಮುಂ" ಎಂಬುದು ವೃತ್ತಿಯಲ್ಲಿ 'ಓಷ್ಠದೊಳಂ ಮಸ್ತಕದೊಳಮೀಯೆಂಟಱೊಳಮಕ್ಕರಂ ಪುಟ್ಟುಗುಂ' ಎಂದು ಉಳಿದು ನಿಂತಾಗ ನಾಸಿಕೆಯೆಂಬ ಪದ ಕಳೆದುಹೋದುದು ಕಲ್ಪನೆಗೆ ಬರುತ್ತದೆ.

ಸೂತ್ರ ಟೀಕೆಗಳಲ್ಲಿ ಹೊಂದಿಕೆ ಕಲ್ಪಿಸಹೋದರೆ ಕೆಲವು ಸಲ ನಮ್ಮ ಪಾಠ ನಿರ್ಣಯ ಸ್ವಾತಂತ್ರ್ಯವನ್ನು ಮಾರಿಕೊಳ್ಳಬೇಕಾಗುತ್ತದೆ ಎಂಬ ಮಾತನ್ನು ನಾನೂ ಒಪ್ಪುತ್ತೇನೆ. ಆದರೆ ಟೀಕೆಯನ್ನು ಸಂಸ್ಕರಣಗೊಳಿಸಿದ್ದರೆ ಈ ವ್ಯತ್ಯಾಸ ಕೆಲ ಮಟ್ಟಿಗಾದರೂ ಮಾಯವಾಗುತ್ತಿತ್ತೇನೋ.

ಸೂತ್ರ ೪೧

೧೪ ರಿಂದ ೩೯ ರ ಮಧ್ಯದ ಸುಮಾರು ೨೫ ಸೂತ್ರಗಳಲ್ಲಿ ಸಂಸ್ಕೃತ ಕನ್ನಡ ವರ್ಣಗಳ ವಿವೇಚನೆಯನ್ನು ಮಾಡಿ, ೪೦ ರಲ್ಲಿ ಅವುಗಳ ಉತ್ಪತ್ತಿ ಸ್ಥಾನವನ್ನು ಸೂಚಿಸಿ, ಕೊನೆಗೆ ಕನ್ನಡ ಬಾಲಶಿಕ್ಷಾ ವರ್ಣಗಳ ಪಂಚವಿಧ ವರ್ಗೀಕರಣ (ಸೂ.೪೧)ದ ಹಿನ್ನೆಲೆಯಲ್ಲಿ ೪೭ ಶುದ್ಧಗೆಗಳನ್ನು ಎಣಿಸಿತೋರಿಸುತ್ತಾನೆ ಕೇಶಿರಾಜ :

ಸೂತ್ರ ೪೧	ಸೂತ್ರ ೪೨–೪೩
ಕವಿಗಳ್ ೧. ಸ್ವರದಿಂ	(ತರದಿಂ) ಪದಿನಾಲ್ಕಕ್ಕುಂ ಸ್ವರಂ
೨. ವರ್ಗದಿಂ	ಇರ್ಪತ್ತೈದುವರ್ಣಮವು ವರ್ಗಂ

೩. ಅವರ್ಗದಿಂ ತತ್ಪರದೊಂಬತ್ತುಮವರ್ಗಂ
೪. ಯೋಗವಾಹದಿಂ (ಪರಿಭಾವಿಸೆ) ಯೋಗವಾಹಮವು ನಾಲ್ಕೆವಲಂ
೫. ದೇಶಿಯೊಳುದ್ಭವಮಪ್ಪ ವರ್ಣದಿಂ ತಿಳಿ ದೇಶೀಯಮವ್ಯೆದಂ
ಪಂಚವಿಧಂ ತಾನೆಂದು ತಿಳಿಪುವರ್ ಕಳೆನೀಂ ೞ ವರ್ಣ ಶಷವಿಸರ್ಗ ೱ ೲ।
ಘಳಿಪುವರ್ ಶುದ್ಧಗೆಯಂ ಕ್ಷಳನಂ ನಾಲ್ವತ್ತೇೞಾಯ್ತಳೆ ಸುದ್ದಗೆ
ಯಚ್ಚಗನ್ನಡಕ್ಕೀ ಕ್ರಮದಿಂ

ಇಲ್ಲಿ ಸೂತ್ರ ೪೨ ಮತ್ತು ೪೩ ಇವೆರಡೂ ಕೂಡಿ ಸೂತ್ರ ೪೧ ಕ್ಕೆ ವಿಷಯವನ್ನು ಪೂರೈಸಿಕೊಡುವುದರಿಂದ ಇವು (೪೨, ೪೩) ಅಭಿನ್ನ ಸೂತ್ರಗಳು. ಅಲ್ಲದೆ ತಿಳಿದೇಶೀಯಮವ್ಯೆದಂ ಅಂದರೆ ಯಾವುದರಲ್ಲಿ ತಿಳಿ? ಎಂದು ಉದ್ಭವಿಸುವ ಪ್ರಶ್ನೆಗೆ ಸೂತ್ರ ೪೨ ರ ವರ್ಣಪಟ್ಟಿಯಲ್ಲಿ ಎಂಬ ಉತ್ತರ ಬರುವುದನ್ನು ನೋಡಿದರೆ ಅವುಗಳ (೪೨-೪೩) ಅಭಿನ್ನತೆ ಇನ್ನಷ್ಟೂ ಸ್ಪಷ್ಟವಾಗುತ್ತದೆ. ಅಂದರೆ ಸೂ ೪೨ ರ ವಿಷಯ ೪೩ಕ್ಕೆ ಇಳಿದುಬಂದಾಗ ಮಾತ್ರ ಪೂರ್ಣವಾಗುತ್ತದೆ.[೨೩] ಇದನ್ನು ಗಮನಿಸಿದರೆ ಸೂ. ೪೨ ರಲ್ಲಿಯ 'ಅಕ್ಕುಂ' ಎಂಬ ಕ್ರಿಯಾಪದ ಅನವಶ್ಯವೆಂದು ತೋರುತ್ತದೆ. ಅದಕ್ಕಾಗಿ ತರದಿಂ ಪದಿನಾಲ್ಕಕ್ಕುಂ ಸ್ವರಂ ಎಂಬುದಕ್ಕೆ ಪ್ರತಿಯಾಗಿ 'ತರದಿಂದಂ ಪದಿನಾಲ್ಕುಂ ಸ್ವರಂ' ಎಂಬ ಪಾಠವನ್ನೇ ಇಟ್ಟುಕೊಳ್ಳಬೇಕು. ಆಗ 'ತರದಿಂದಂ ಪದಿನಾಲ್ಕುಂ ಸ್ವರಂ, ಇರ್ಪತ್ತೈದು ವರ್ಣಮವು ವರ್ಗಂ, ತತ್ಪರದೊಂಬತ್ತುಮವರ್ಗಂ' ಎಂಬಂತೆ ಕೇವಲ ಯಾದಿಸ್ವರೂಪ ಈ ಸೂತ್ರಕ್ಕೆ ಬಂದು ಅದು ಸೂ. ೪೩ಕ್ಕೆ ಇಳಿದು ಬಂದಾಗ ಪೂರ್ಣವಾಗಿ ಸೂ. ೪೧ ರ ಪಂಚವಿಧ ವರ್ಗೀಕರಣಕ್ಕೆ ವಿವರ ಒದಗುತ್ತದೆ. ಅದಕ್ಕಾಗಿ ೪೩ನೆಯ ಸೂತ್ರದ ಸಂಬಂಧ ತಪ್ಪಿಸಿ ಅರ್ಥಕುಂಠಿತಕ್ಕೆ ಕಾರಣವಾಗುವ 'ಅಕ್ಕುಂ' ಎಂಬ ಕ್ರಿಯಾಪದ ಬಿಡಬೇಕು ಕಿಟೆಲ್ ಪರಿಷತ್ ಪ್ರತಿಗಳಲ್ಲಿಲ್ಲ.

ಸೂತ್ರ ೪೩

ತಿಳಿದೇಶೀಯಮವ್ಯೆದಂ।
ಕಳೆ ನಿಂ ೞ ವರ್ಣ ಶಷ ವಿಸರ್ಗ ೱ ೲ।
ಕ್ಷಳನಂ...

ಸೂತ್ರದಲ್ಲಿಯ 'ದೇಶೀಯಮವ್ಯೆದಂ' ಎಂಬ ಪದವನ್ನು 'ದೇಶೀಯಂ+ಅಂ+ಐದು+ಅಂ,' ಎಂದು ಬಿಡಿಸಿದರೆ ದ್ವಿತೀಯಾ ವಿಭಕ್ತಿಯ ದ್ವಿರುಕ್ತಿ ದೋಷ ಬರುತ್ತದೆ. ದೇಶೀಯಂ+ಅವು+ಐದಂ ಎಂದು ಬಿಡಿಸಿದರೆ ದೋಷ ತೊಲಗುತ್ತದೆ. ಅರ್ಥವೂ ಹೊರಡುತ್ತದೆ. ಆದರೆ 'ತರದಿಂದಂ ಪದಿನಾಲ್ಕುಂ

---

೨೩. ಹೈದರಾಬಾದ ಪ್ರತಿಯಲ್ಲಿ ಕನ್ನಡ ಶುದ್ಧಗೆ ಸೂತ್ರದ ವೃತ್ತಿಯ ಕೊನೆಗೆ "...ನಾಲ್ವತ್ತೇಳಕ್ಕರಂಗಳ್ ಇಲ್ಲಿ ವರ್ತಿಸುಗುಂ ...ಇದು ವರ್ಣಸಂಜ್ಞೆ-ಕವಿಗಳ್ ಸ್ವರದಿಂ ವರ್ಗ್ಗದಿನವರ್ಗ್ಗದಿಂ ಎಂಬ ಸೂತ್ರೋದ್ದೇಶ ಸಂಪೂರ್ಣಮಾದುದು" ಎಂದು ಹೇಳಿರುವುದನ್ನು ನೋಡಿದರೆ ೪೧ನೆಯ ಸೂತ್ರದ ಉದ್ದೇಶ ೪೩ನೆಯ ಸೂತ್ರದ ವರೆಗೂ ಇಳಿದುಬಂದಾಗ ಪೂರ್ಣವಾಗುತ್ತದೆ ಎಂದು ಸ್ಪಷ್ಟವಾಗುತ್ತದೆ, ಈ ಮಾತು ನಮ್ಮ ವಿಚಾರಕ್ಕೆ ಇನ್ನಷ್ಟೂ ಆಧಾರ ಒದಗಿಸುತ್ತದೆ.

ಸ್ವರಂ' (ಸೂ. ೪೨) ಮತ್ತು 'ತಿಳಿದೇಶೀಯಮ ವೈದಂ' (ಸೂ ೪೩) ಎಂಬ ಸೂತ್ರಗಳು ಎರಡಲ್ಲ, ಒಂದು ಎಂಬುದನ್ನು (ಹಿಂದೆ ವಿವೇಚಿಸಲಾಗಿದೆ) ಗಮನದಲ್ಲಿಟ್ಟುಕೊಂಡರೆ ಕ್ರಮದಿಂದ ಸ್ವರ ೧೪, ವರ್ಗೀಯ ವ್ಯಂಜನ ೨೫, ಅವರ್ಗೀಯ ವ್ಯಂಜನ ೯, ಯೋಗವಾಹ ೪ (ಇದು ನಿಶ್ಚಿತ) ಇವುಗಳೊಂದಿಗೆ ದೇಶೀಯ(ಗಳೂ)ವೂ ಐದನ್ನು ತಿಳಿ (ಅಜಿ, ಕೂಡಿಸು) ಎಂಬಲ್ಲಿಯ ಸಮುಚ್ಚಯ ಧ್ವನಿಯನ್ನು ಗ್ರಹಿಸಿದರೆ 'ತಿಳಿದೇಶೀಯಮುಮೈದಂ' (ದೇಶೀಯಂ+ಉಂ+ಐದಂ)ಎಂಬ ಪಾಠವೇ ಹೆಚ್ಚು ಶುದ್ಧವೆನಿಸುತ್ತದೆ[೨೪] ಕಿಟೆಲ್, ಪರಿಷತ್, ಮತ್ತು ಹೈದ್ರಾಬಾದ ಪ್ರತಿಗಳಲ್ಲಿ 'ಮುಮೈದಂ' ಎಂಬ ಪಾಠವೇ ಇದೆ. ಇಷ್ಟೇ ಏಕೆ ಶ್ರೀ ಡಿ. ಎಲ್. ಎನ್. ಸ್ವೀಕೃತ ಟೀಕೆಯಲ್ಲಿ ಸಹ 'ಮುಮೈದಂ' ಎಂಬ ಪಾಠವೇ ಇದೆ.[೨೫]

ಸೂತ್ರ ೪೫ ರ ವೃತ್ತಿ

ವ್ಯಾಕರಣದ ಅತ್ಯವಶ್ಯ ಪಾರಿಭಾಷಿಕ ಪದಗಳಾದ ಪ್ರಕೃತಿ, ಲಿಂಗ, ಧಾತು, ಪ್ರತ್ಯಯ, ವಿಭಕ್ತಿ, ನಾಮ, ಆಖ್ಯಾತ, ಮತ್ತು ಪದ ಎಂಬವುಗಳ ಪರಿಚಯಮಾಡಿಕೊಡುವ ಈ ಸೂತ್ರ ಅತಿ ಮುಖ್ಯವಾದುದು. ಶ್ರೀ ಡಿ. ಎಲ್. ಎನ್. ಅವರಲ್ಲಿ ಇದರ ವೃತ್ತಿ–"ಶಬ್ದದೊಳಿರ್ದರ್ಥಮಮಂ ತಂತಮ್ಮನುಗುಣವಾಗಿ ವಿಭಾಗಿಸಿ ಕುಡುವುದಜಿಂದೆ ವಿಭಕ್ತಿಗಳೆನಿಸುಗುಂ. ವಿಭಕ್ತಿಗಳಾವುವೆಂದೊಡೆ ಮ್ ಅಮ್ ಮೊದಲಾದ ನಾಮಾಖ್ಯಾತ ವಿಭಕ್ತಿಗಳುಮಮಂ ಪ್ರತ್ಯಯಮೆನಲಕ್ಕುಂ. ಆ ವಿಭಕ್ತಿಗಳ ಪಿಂದಿರ್ಪ ಪ್ರಕೃತಿಲಿಂಗಮಮಂ ಧಾತುವಂ ಪ್ರಕೃತಿಯೆನಲಕ್ಕುಂ; ಪ್ರಕೃತಿ ಪ್ರತ್ಯಯಂಗಳೆರಡುಂ ಕೂಡೆ ಪದಮಕ್ಕುಂ"

ಈ ವೃತ್ತಿಯಲ್ಲಿ ಎರಡು ವಾಕ್ಯಗಳು ಸಂದೇಹ ಪೂರ್ಣವಾಗಿವೆ. ಅವುಗಳನ್ನು ಕಿಟೆಲ್, ಪರಿಷತ್, ಮದ್ರಾಸ ಪ್ರತಿಗಳ ವೃತ್ತಿಯೊಂದಿಗೆ ತುಲನಿಸೋಣ–

	ಡಿ. ಎಲ್. ಎನ್.	ಕಿಟೆಲ್ ಪರಿಷತ್ತು
೧.	ವಿಭಕ್ತಿಗಳಾವುವೆಂದೊಡೆ ಮ್.	ಆ ವಿಭಕ್ತಿಯಂ
	ಅಮ್. ಮೊದಲಾದ	ಪ್ರತ್ಯಯಮೆನಲಕ್ಕುಂ
	ನಾಮಾಖ್ಯಾತ ವಿಭಕ್ತಿಗಳುಮಮಂ	ಅವಾವುವೆಂದೊಡೆ
	ಪ್ರತ್ಯಯಮೆನಲಕ್ಕುಂ ಮ್, ಅಮ್, ಮೊದಲಾದ	ನಾಮಾಖ್ಯಾತ ವಿಭಕ್ತಿಗಳ್.

---

೨೪. ಕರ್ನಾಟಕ ವಿಶ್ವವಿದ್ಯಾಲಯದ ವಚನವಾಙ್ಮಯ ಸಂಶೋಧನ ಶಾಖೆಯವರ ಸಂಕಲನದಲ್ಲಿ ಶ.ಮ. ದರ್ಪಣದ(ನಂ. ೫೭೮) ತಾಳೆವೋಲೆಯ ಒಂದು ಪ್ರತಿ ಇದೆ. ಅದರ ಕೊನೆಗೆ ದರ್ಪಣಸೂತ್ರಗಳಲ್ಲಿಯ ಸಮುಚ್ಚಯವಿಧಿಗಳನ್ನು ಸಂಗ್ರಹಿಸಿ ಅಲ್ಲಿ ಅಡಗಿಸಿದ ಅರ್ಥವನ್ನು ಬಿಚ್ಚಿ ತೋರಿಸಲಾಗಿದೆ. ಪ್ರಸ್ತುತ ೪೩ನೆಯ ಸೂತ್ರವನ್ನು ಕುರಿತು 'ತಿಳಿ ದೇಶೀಯಮುಮೆಂಬ ಸಮುಚ್ಚಯದಿಂ ಱ, ಙ, ಕುಳ, ಎ, ಒ ಯೆಂಬಲ್ಲಿ ಕ್ಷಳನುಮುಂಟು' ಎಂದು ಹೇಳಲಾಗಿದೆ. ಇದರಿಂದ ಇಲ್ಲಿಯ ಸಮುಚ್ಚಯವಿಧಿಗೆ ನಾವು ಮೇಲೆ ಹೇಳಿದ ಅರ್ಥವಲ್ಲದೆ ಇನ್ನೊಂದು ವಿಶೇಷ ಅರ್ಥವೂ ಇದೆ ಎಂದು ತಿಳಿದುಬರುತ್ತದೆ. ಈ ವಿಶೇಷ ಅರ್ಥವೃತ್ತಿಗಾದರೂ ಇಲ್ಲಿ ಸಮುಚ್ಚಯವಿಧಿಬೇಕು.

೨೫. ಶ್ರೀ ಕಿಟೆಲ್ ಅವರಲ್ಲಿ ಈ ಸೂತ್ರದ ವೃತ್ತಿ ಚಿಕ್ಕ ಚಿಕ್ಕ ವಾಕ್ಯಗಳ ಮೂಲಕ ಅರ್ಥವನ್ನು ಸ್ಫುಟಗೊಳಿಸುತ್ತ ಮುಂದುವರಿಯುತ್ತದೆ. ಆದರೆ ಶ್ರೀ ಡಿ.ಎಲ್. ಎನ್. ಅವರಲ್ಲಿ ಎರಡು ಮೂರು ಸಾಲುಗಳ ವರೆಗೆ ಉಸಿರು ಬಿಡದೆ ಮುಂದೆ ಹೋಗಿ ನಿಲ್ಲುತ್ತದೆ. ಅರ್ಥ ಥಟ್ಟನೆ ಬಿಂಬಿಸುವುದಿಲ್ಲ. ಅಲ್ಲದೆ ".....ಪತ್ತಂ ಕಳೆದುಟಿದಕ್ಕರಂ ನಾಲ್ವತ್ತೇಟು. ಅಂತಚ್ಚಕನ್ನಡದೊಳ್ ನಾಲ್ವತ್ತೇಟಕ್ಕರಂ" ಎಂದು ಪುನರುಕ್ತಿಗೆಯ್ಯುತ್ತದೆ.

ಕನ್ನಡ ವಾಕ್ಯರಚನಾ ಶಾಸ್ತ್ರದನ್ವಯ ಶ್ರೀ. ಡಿ. ಎಲ್. ಎನ್. ಅವರ ಈ ವಾಕ್ಯ ಅಶುದ್ಧವಾಗಿದೆ. ಇಂಥ ಅಶಾಸ್ತ್ರೀಯ ವಾಕ್ಯವನ್ನು, ಅದೂ ವ್ಯಾಕರಣದಲ್ಲಿ ಬಳಸಿದರೆ ಅರ್ಥಕ್ಕೆ ಭಂಗ ಬಂದು ಸಂಪಾದನೆಯ ಬಗ್ಗೆ ಗೌರವ ಕಡಿಮೆಯಾಗುತ್ತದೆ. "ವಿಭಕ್ತಿಗಳಾವುವೆಂದೊಡೆ..ನಾಮಾಖ್ಯಾತ ವಿಭಕ್ತಿಗಳುಮಂ"ಎಂಬುದನ್ನು ನೋಡಿದರೆ ಈ ವಾಕ್ಯದ ದ್ವಿರುಕ್ತಿ ದೋಷ ಕಣ್ಣಿಗೆ ಕಟ್ಟುತ್ತದೆ. ಕಿಟೆಲ್ ಪರಿಷತ್ತಿನವರಲ್ಲಿ ಈ ಒಂದು ವಾಕ್ಯವೇ ಎರಡಾಗಿ ನಿಂತು ದ್ವಿರುಕ್ತಿ ದೋಷವನ್ನು ತಪ್ಪಿಸಿಕೊಂಡಿದೆ. ತನ್ಮೂಲಕ ಅರ್ಥ ಇನ್ನಷ್ಟೂ ಸ್ಪಷ್ಟವಾಗಿದೆ.

ಇನ್ನು 'ನಾಮಾಖ್ಯಾತ ವಿಭಕ್ತಿಗಳು ಮಂ ಪ್ರತ್ಯಯಮೆನಲಕ್ಕುಂ'ಎಂಬ ಈ ವಾಕ್ಯದಲ್ಲಿ ತಲೆಹಾಕಿದ ಸಮುಚ್ಚಯ ವಿಧಿಗೆ ಅರ್ಥವೇನು? ಮದ್ರಾಸ ಪ್ರತಿಯ 'ನಾಮಾಖ್ಯಾತ ವಿಭಕ್ತಿಗಳುಮಂ ವಿಭಕ್ತಿಯಿಂದೊಳಗೆ ಪತ್ತುವುದುಮಂ ಪ್ರತ್ಯಯಮೆನಲಕ್ಕುಂ' ಎಂಬ ವಾಕ್ಯವನ್ನು ನೋಡಿದರೆ ಶ್ರೀ ಡಿ. ಎಲ್. ಎನ್. ಅವರ ಸಮುಚ್ಚಯ ದೋಷ ತಟ್ಟನೇ ಗಮನಕ್ಕೆ ಬರುತ್ತದೆ. ಮದ್ರಾಸ ಪ್ರತಿಯ ಬೆನ್ನುಹತ್ತಿ ಹುರುಳಿಲ್ಲದ ಸಮುಚ್ಚಯ ವಿಧಿಯನ್ನು ಹಿಡಿದುಕೊಂಡು ಮೋಸಹೋದುದು ಸ್ಪಷ್ಟವಾಗುತ್ತದೆ.

	ಡಿ. ಎಲ್. ಎನ್.	ಮದ್ರಾಸ
೨.	ಆ ವಿಭಕ್ತಿಗಳ ಪಿಂದಿರ್ಪ ಪ್ರಕೃತಿ ಲಿಂಗಮಂ ಧಾತುವಂ ಪ್ರಕೃತಿಯೆನಲಕ್ಕುಂ	ಆ ವಿಭಕ್ತಿಗಳ ಪಿಂದಿರ್ದುದು ಪ್ರಕೃತಿ. ಲಿಂಗಮಂ ಧಾತುವಂ ಪ್ರಕೃತಿಯೆನಲಕ್ಕುಂ

ಮೇಲಿನ ಭಿನ್ನ ವಾಕ್ಯಗಳನ್ನು ನೋಡಿದರೆ ಸಾಕು ಶ್ರೀ ಡಿ. ಎಲ್. ಎನ್. ಎಂಥ ದೋಷಮಾಡಿದ್ದಾರೆಂಬುದು ಕಣ್ಣಿಗೆ ಹೊಡೆದು ಕಾಣುತ್ತದೆ. ಇಲ್ಲಿ ಪೂರ್ಣವಿರಾಮ ಚಿಹ್ನವನ್ನು (ಕೊಂಚ ಭಿನ್ನ ಪಾಠವನ್ನು) ಗಮನಿಸದೆ ಹೋದುದು ಗುಡ್ಡದಂತಹ ದೋಷಕ್ಕೆ ಕಾರಣವಾಗಿದೆ. ಇದರಿಂದಾಗಿ ಯಾವ ವ್ಯಾಕರಣದಲ್ಲಿಯೂ ಬಳಸದ ಪ್ರಕೃತಿಲಿಂಗ ಎಂಬ ಹೊಸ ಪದ ಹುಟ್ಟಿಕೊಂಡಿದೆ. ಇದೇ ರೀತಿಯಲ್ಲಿ ಪ್ರಕೃತಿ ಧಾತು ಎಂಬ ಪದವನ್ನು ಹಟ್ಟಿಸಬಹುದೇ? ಸಂಪಾದಕರು ಇಲ್ಲಿಯೂ ಮದ್ರಾಸ ಪ್ರತಿಯನ್ನು ಹಿಂಬಾಲಿಸಿ ನಡೆದು ಹೆಜ್ಜೆ ತಪ್ಪಿದುದು ಎದ್ದು ಕಾಣುತ್ತದೆ.

ಒಟ್ಟಾಗಿ ಸೂತ್ರದ ಅರ್ಥ ಸ್ಪಷ್ಟತೆಗಾಗಿ ಸಣ್ಣ ಸಣ್ಣ ವಾಕ್ಯಗಳನ್ನು ಬಳಸದೆ ದೀರ್ಘವಾಕ್ಯಗಳನ್ನು ಬಳಸುವುದರಿಂದ ಶ್ರೀ ಡಿ. ಎಲ್. ಎನ್. ವೃತ್ತಿ ಆಗಾಗ ಗಂಟುಗಂಟಾಗಿ ತೋರುತ್ತದೆ ಎನ್ನಲಿಕ್ಕೆ, ಆಗಾಗ ಲಿಂಗಣಾರಾಧ್ಯನ ವೃತ್ತಿ ಬಂದು ಸೇರಿದೆ ಎನ್ನಲಿಕ್ಕೆ, ಈ ವೃತ್ತಿಯೊಂದು ಉತ್ತಮ ಉದಾಹರಣೆಯಾಗಿದೆ.

ಸೂತ್ರ ೫೦

ರೇಫೆ ಸಂಯುಕ್ತ ಪದ ಪಟ್ಟಿಯನ್ನು ಮಾಡುತ್ತ ಕೇಶಿರಾಜನು–

ಇರ್ಪುಂ ತೋರ್ಪುಂ ಕರ್ಪುಂ।
ನೇರ್ಪುಂ ಸಿರ್ಪೆಯುಮಡರ್ಪುಮಾರ್ಪುಂ ಕೂರ್ಪುಂ।

ಪರ್ಪರಿಕೆಯುಮೆರ್ಪುಂ ಮೆ।

ಯ್ಗರ್ಪುಂ ಮೊದಲಾಗಿ ರೇಫೆ ಸಂಯೋಗಂಗಳ್।

ಎಂದು ಹೇಳಿದ್ದಾನೆ. ಕರ್ಪು, ಮೆಯ್ಗರ್ಪು (ಮೆಯ್ +ಕರ್ಪು) ಎಂಬಲ್ಲಿ 'ಕರ್ಪು' ಪದ ಎರಡು ಸಲ ಬಳಕೆಯಾದಂತಾಗಿದೆ. ಅದಕ್ಕಾಗಿ 'ಕರ್ಪುಂ' ಎಂಬುದಕ್ಕೆ ಪ್ರತಿಯಾಗಿ 'ಕೆರ್ಪುಂ' ಎಂಬ ಪದವನ್ನಿಟ್ಟುಕೊಳ್ಳಬೇಕು. ಈ ಸೂಚನೆಗೆ ಕಿಟೆಲ್, ಮದ್ರಾಸ, ಪರಿಷತ್ ನಿಟ್ಟೂರ ನಂಜಯ್ಯನ ಪ್ರತಿಗಳು ಆಧಾರವಾಗಿವೆ.

ಸೂತ್ರ ೫೬

ನರವುಂ ನೆರವುಂ ದೇವರ।

ಬರವುಂ ತೆರವುಂ ನೆಗಟ್ತೆಯೆಟ್ತರವುಂ ಸಂ।

ಚರಿಸುವ ನೊಳವುಂ ತಾವರೆ।

ಬರ ಮತದಿಂದಂತ್ಯವರ್ಣಲೋಪಮನಾಳ್ಗುಂ।

ಟೀಕೆ–ನರವುಂ=ನರವು ಎಂಬ ಶಬ್ದಮುಂ, ನೆರವುಂ=ನೆರವು ಎಂಬ ಶಬ್ದಮುಂ. ತಾಂ ಕೆಲಬರ ಮತದಿಂದೆ ಕಡೆಯ ಅಕ್ಷರ ಅದರ್ಶನಮಂ ತಾಳ್ಗುಂ

ವೃತ್ತಿ–ಈ ಪದಂಗಳ ಕಡೆಯ ವಕಾರಕ್ಕೆ ವಿಕಲ್ಪದಿಂ ಲೋಪಮುಂಟು.

ಪ್ರಯೋಗ–ನರಂ–ನರವು, ನೆರಂ–ನೆರವು, ಬರಂ–ಬರವು (ಡಿ. ಎಲ್. ಎನ್) ನರವು–ನರಂ, ನೆರಂ, ಬರಂ..(ಕಿಟೆಲ್, ಪರಿಷತ್)

ಪ್ರಯೋಗವನ್ನು ಮುದ್ರಿಸಿದ ಮೇಲಿನ ರೀತಿಗಳಲ್ಲಿ ಒಂದು ಇನ್ನೊಂದಕ್ಕೆ ವಿರುದ್ಧವಾಗಿದೆ. ಸೂತ್ರ, ವೃತ್ತಿ, ಟೀಕೆಗಳ ಪ್ರಕಾರ 'ನರವು, ನೆರವು, ಬರವು..'ಎಂಬವು ಮೂಲಪದಗಳಾಗಿವೆ.[೨೬] ಇಲ್ಲಿಯ ಕಡೆಯ ಅಕ್ಷರ ಅಂದರೆ ವಕಾರಕ್ಕೆ ಲೋಪ ಒದಗಿ ನರವು–ನರ, ನೆರವು–ನೆರ, ಬರವು–ಬರ ಹೀಗೆ ರೂಪಗಳು ಉಳಿಯುತ್ತವೆ ಎಂಬುದೇ ಸೂತ್ರದ ಅರ್ಥ. ಹೀಗೆ ಉಳಿದ ರೂಪಗಳನ್ನು ಕೇಶಿರಾಜನು ನರಂ ನೆರಂ, ಬರಂ ಎಂಬಂತೆ ಪ್ರಕೃತಿ ರೂಪಕ್ಕೆ ತಿರುಗಿಸಿದಂತೆ ತೋರುತ್ತದೆ. ಅದಕ್ಕಾಗಿ ನರವು–ನರಂ, ನೆರವು–ನೆರಂ, ಬರವು–ಬರಂ ಎಂಬ ಮುದ್ರಣ ಕ್ರಮವೇ ಕೇಶಿರಾಜನ ಉದ್ದೇಶಕ್ಕೆ ಅನುಗುಣವಾಗಿದೆ ಎಂದು ಹೇಳಬಹುದು. ಇದನ್ನವಲೋಕಿಸಿದರೆ ಶ್ರೀ ಡಿ. ಎಲ್. ಎನ್. ಅವರ ಮುದ್ರಣ ರೀತಿಯು ಕೇಶಿರಾಜನ ಅಭಿಪ್ರಾಯಕ್ಕೆ ವಿರುದ್ಧವಾಗಿದೆ ಎಂದು ಸಹಜವಾಗಿ ತಿಳಿದುಬರುತ್ತದೆ.

---

೨೬ ನಮಗೆ ಪ್ರಾಚೀನವೆನಿಸುವ 'ನರಂ' ಎಂಬ ಪದ ಕೇಶಿರಾಜನಿಗೆ 'ನರವು' ಎಂಬ ಪದದ ಇತ್ತೀಚಿನ ರೂಪ ಎನಿಸಿರಬಹುದು. ಅದಕ್ಕಾಗಿ ಹೀಗೆ ಹೇಳಿದನೇನೋ.

ಸೂತ್ರ ೫೯

ಎರಡುಂ ಪಲವುಂ ವರ್ಣಂ।

ಪರಸ್ಪರಂ ಕೂಡುವಂದಮದೆ ಸಂಧಿವಲಂ।

ವೃತ್ತಿ–ಎರಡಕ್ಕರಂ ಮೇಣ್ ಪಲವಕ್ಕರಂ ತಮ್ಮೊಳ್ ಕೂಡುವುದು ಸಂಧಿ (ಶ್ರೀ ಡಿ. ಎಲ್. ಎನ್)

ಎರಡಕ್ಕರಂ ಮೇಣ್ ಪಲವಕ್ಕರಂ 'ತಮ್ಮೊಳನ್ಯೋನ್ಯಮಾಗಿ' ಕೂಡುವುದು ಸಂಧಿ (ಕಿಟೆಲ್, ಪರಿಷತ್).

ಕಿಟೆಲ್ ಪರಿಷತ್ ಪ್ರತಿಗಳ ವೃತ್ತಿಯು ಸೂತ್ರದ ಪರಸ್ಪರಂ ಎಂಬ ಪದದ ಅರ್ಥವನ್ನು ಒಂದು ಎಳೆ ಬಿಡದ ಹಾಗೆ ಬಾಚಿಕೊಂಡು 'ತಮ್ಮೊಳನ್ಯೋನ್ಯಮಾಗಿ' ಎಂಬ ಮಾತಿನಿಂದ ಸಮರ್ಥವಾಗಿ ಹಿಡಿದುಕೊಂಡಿದೆ. ಆದರೆ ಶ್ರೀ ಡಿ. ಎಲ್. ಎನ್. ಅವರಲ್ಲಿ 'ಅನ್ಯೋನ್ಯ' ಪದ ಕಂಡುಬರುವುದಿಲ್ಲ.

ಸೂತ್ರ ೬೦

ಪದಮಧ್ಯಂ ಪದದಂತ್ಯಂ।

ವಿದಗ್ಧರಿಂ ಸಂಧಿ ವಿಷಯಮೆರಡಕ್ಕುಮಿಳಾ।

ವಿದಿತಂ ಪ್ರಕೃತಿ ಪ್ರತ್ಯಯ।

ದೊದವಿದ ಪದಯುಗದ ಬೆರಕೆ ಬೇಡಿರ್ದುದರಿಂ।

ವೃತ್ತಿ–ಪ್ರಕೃತಿ ಪ್ರತ್ಯಯಂಗಳ ಮಧ್ಯಂಗಳುಂ, ಪೂರ್ವ ಪದದ ಕಡೆಯುಂ ಪರಪದದ ಮೊದಲುಂ ಸಂಧಿವಿಷಯಮೆನಿಕುಂ, ಸಂಧಿಯೆರಡು ತೆಱಂ. ಅಲ್ಲಿ ಪದದ ಮಧ್ಯ ಸಂಧಿಗೆ–

ಪ್ರಯೋಗಂ–ಮಾತು+ಅಮ್=ಮಾತಂ. ಮಾತು+ಇಮ್=ಮಾತಿಂ. ಧಾತುವಿಭಕ್ತಿಗಳ್ಗೆ–ನುಡಿದ+ಅಂ=ನುಡಿದಂ. ನುಡಿದ+ಅರ್=ನುಡಿದರ್..

ಪದಾಂತ್ಯ ಸಂಧಿಗೆ–ಅವನ+ಆಳ್ತನಂ=ಅವನಾಳ್ತನಂ, ಕಾಮನ+ಅಂಡಲೆ=ಕಾಮನಂಡಲೆ–ಕ್ರಿಯಾಪದಕ್ಕೆ –ಮಾಡಿದರ್ +ಅವರ್=ಮಾಡಿದರವರ್..

ದರ್ಪಣದ ಯಾವುದೇ ಹಸ್ತಪ್ರತಿಯನ್ನು ನೋಡಿದರೂ ಅಲ್ಲಿ ಸಾಮಾನ್ಯವಾಗಿ 'ಸಂಗ್ರಹ ವೃತ್ತಿ'ಗಳ ಸಂಖ್ಯೆ ಅಧಿಕ ಪ್ರಮಾಣದಲ್ಲಿ ಕಂಡುಬರುವುದರಿಂದಲೂ, ಇಂಥ ಪ್ರತಿಗಳೇ ಅಧಿಕ ಸಂಖ್ಯೆಯಲ್ಲಿ ದೊರೆಯುವುದರಿಂದಲೂ ಸಂಗ್ರಹವೃತ್ತಿಗಳೇ ಕೇಶಿರಾಜ ನಿರ್ಮಿತವೆನ್ನಬಹುದು. ಇದರ ಅರ್ಥ ಕೇಶಿರಾಜ 'ಮಿಶ್ರಣವೃತ್ತಿ'ಗಳನ್ನೇ ಬರೆದಿಲ್ಲವೆಂದು ನನ್ನ ಮತವಲ್ಲ. ಬರೆದಿರಬಹುದು, ಬರೆಯದಿರಲೂಬಹುದು. ಆದರೆ ಎದುರಿಗೆ ಒಂದು ಸೂತ್ರಕ್ಕೆ 'ಸಂಗ್ರಹವೃತ್ತಿ' 'ಮಿಶ್ರಣವೃತ್ತಿ' (ವಿಸ್ತೃತ ವೃತ್ತಿಯೂ ಇರಬಹುದು) ಎರಡೂ ಇರುವಾಗ ಈಗಿನ ಮಟ್ಟಿಗೆ 'ಸಂಗ್ರಹವೃತ್ತಿ'ಯನ್ನೇ ಸಂಪಾದಕರು ಇಟ್ಟುಕೊಳ್ಳುವುದು ಯೋಗ್ಯ. ಈ ಮಾತಿಗೆ ಒಪ್ಪಿಗೆ ಎಂಬಂತೆ 'ಸಂಗ್ರಹ ವೃತ್ತಿ' ಗಳನ್ನೇ ಸಾಮಾನ್ಯವಾಗಿ ಬಳಸಿದ ಶ್ರೀ ಡಿ. ಎಲ್. ಎನ್. ಅವರು, ಕಿಟೆಲ್ ಅವರ ಸಂಗ್ರಹ ವೃತ್ತಿ ಕಣ್ಣು ಮುಂದಿದ್ದರೂ ಮೇಲಣ ಸೂತ್ರ ಸಂದರ್ಭದಲ್ಲಿ ಮಿಶ್ರಣವೃತ್ತಿಯನ್ನು ಬಳಸಿದ್ದಾರೆ. ಮದ್ರಾಸ ಪ್ರತಿಯ ಮೇಲೆ ಕಣ್ಣಾಡಿಸಿದರೆ ಈ ವೃತ್ತಿ ಲಿಂಗಣಾರಾಧ್ಯನದೇನೋ ಎಂಬ ಸಂದೇಹ ಹುಟ್ಟುತ್ತದೆ.

ಇದರಿಂದ ಅಂಥ ಲಾಭವೇನೂ ಉಂಟಾಗದೆ 'ವೃತ್ತಿಮಿಶ್ರಣದೋಷ' ತಲೆದೋರಿದೆ, ಇಂಥ ವೃತ್ತಿ ಮಿಶ್ರಣದೊಷ ಇವರ ಪರಿಷ್ಕರಣದಲ್ಲಿ ಇನ್ನೂ ಕೆಲವು ಸಲ ಕಂಡುಬರುತ್ತದೆ.

ಪ್ರಯೋಗಗಳಿಗೆ ತಲೆಬರಹವಿದ್ದರೆ ವಿಷಯ ಸ್ಪಷ್ಟತೆಗೆ ಅನುಕೂಲ. ಆದರೆ ಇಲ್ಲಿ 'ಪ್ರಯೋಗಂ' ಎಂಬ ಪದ ನಡುವೆ ಬಂದು 'ಪದದ ಮಧ್ಯ ಸಂಧಿಗೆ' ಮತ್ತು 'ಮಾತು+ಅಮ್=ಮಾತಂ' ಎಂಬಿವುಗಳ ಮಧ್ಯ ಗೋಡೆ ಕಟ್ಟಿದೆ. ಇನ್ನು ನಾಮ ವಿಭಕ್ತಿಗಳಿಗೆ ಮತ್ತು ನಾಮಪದಕ್ಕೆ ಎಂಬ; ತಲೆಬರೆಹಗಳು ಕ್ರಮವಾಗಿ 'ಮಾತು+ಅಮ್' ಮತ್ತು 'ಅವನ+ಆಳ್ತನಂ' ಎಂಬಿವುಗಳ ತಲೆಯ ಮೇಲೆ ಹೆಚ್ಚಿನವಾಗಿ ಬೇಕಿತ್ತು. ಈ ಕೊರತೆಯಿಂದಾಗಿ ಅರ್ಥಸ್ಪಷ್ಟತೆಗೆ ಅಡ್ಡಿಯಾಗುತ್ತದೆ. ಈ ವಿಷಯದಲ್ಲಿ ಕಿಟೆಲ್ ಮೊದಲಾದ ಪ್ರತಿಗಳು ಕೊಂಚ ಮೇಲು ಎನಿಸಿವೆ.

ಕೊನೆಯದಾಗಿ ೬೧ ನೆಯ ಸೂತ್ರದಲ್ಲಿ 'ಪೇ[ಟ್ಟು] ವೆನಲ್ಬೇಡ' ಎಂಬ ಯೋಗ್ಯ ಪಾಠವನ್ನೇ ಸ್ವೀಕರಿಸಿದ್ದಾರೆ. ಚೌಕ ಕಂಸಿನಲ್ಲಿ ಅದು ಸಂಪಾದಕರು ನಿಯೋಜಿಸಿದ ಪಾಠವೆಂದು ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಆದರೆ 'ಟ್ಟು' ಎಂಬ ಪಾಠ ಈ ಮೊದಲೇ ಮದ್ರಾಸ ಪ್ರತಿಯಲ್ಲಿ ಕಂಡುಬಂದಿದೆ. ಇನ್ನು ಸೂತ್ರದಲ್ಲಿ 'ಪೇ[ಟ್ಟು] ವೆನಲ್ಬೇಡ' ಎಂದು ಟೀಕೆಯಲ್ಲಿ 'ಪೇಟುವೆನಲ್ಬೇಡ' ಎಂದು ತಲೆದೋರಿದ ಪರಸ್ಪರ ವಿರುದ್ಧ ಪಾಠದೋಷ ಟೀಕೆಯ ಪರಿಷ್ಕರಣದಿಂದ ಮಾಯವಾಗುತ್ತಿತ್ತೇನೋ ಇದು ಸಂಜ್ಞಾ ಪ್ರಕರಣದ ಪಾಠದೋಷ ವಿವೇಚನೆ.

ಇದಲ್ಲದೆ ಈ ಪ್ರಕರಣದಲ್ಲಿ ಕೆಲವು ಅಚ್ಚುದೋಷಗಳೂ ತಲೆಹಾಕಿವೆ.

ತಪ್ಪು	ಒಪ್ಪು	ಪುಟ	ಸಾಲು
ಅದರ	ಅದಱ	೭	೧೯
ಉಪಾಧ್ಮಾನೀಯ	ಉಪಧ್ಮಾನೀಯ	೨೨	೧೭
ಕೆಟ್ಟಪ್ಪುದಾಗಿ	ಕೆಟ್ಟಿಪ್ಪುದಾಗಿ	೨೫	೧
ಸುದ್ದಗೆ	ಸುದ್ದಗೆ	೪೦	೨
ಖು ವರ್ಣ ಶಷಗ ವಿಸರ್ಗ	ಖು ವರ್ಣ ಶಷ ವಿಸರ್ಗ	೪೦	೪
ಅಂತಚ್ಚಕನ್ನಡ	ಅಂತಚ್ಚಗನ್ನಡ	೪೦	೧೩
ನುರ್ಗಿದುನೆನೆ	ನುರ್ಗಿದುದೆನೆ	೪೫	೧೩
ಗೆಯ–ಗೆಕಾರಂ	ಗೆಯೆ–ಗೆಕಾರಂ	೪೬	೨೦
ಒದುವುಗುಂ	ಒದವುಗುಂ	೪೬	೨೨
ನರವು	ನರವುಂ	೫೦	೧೪
ಯರಣನಳಱಟ	ಯರಲಣನಳಱಟ	೫೧	೨೦
ವ್ಯಂಜನಾಕ್ಷರಂ	ವ್ಯಂಜನಂ=ವ್ಯಂಜನಾಕ್ಷರಂ	೫೩	೮
(ಕ ಖ)ಗಳಲ್ಲಿಲ್ಲ	(ಕಖ) ಗಳಲ್ಲಿಲ್ಲ	೧೬ (ಅ ಟಿ)	೨೪

ಇಲ್ಲಿ ಸಂಗ್ರಹಿಸಿದ ಅಚ್ಚುದೋಷಗಳು ಸೂತ್ರ, ಟೀಕೆ, ವೃತ್ತಿ, ಪ್ರಯೋಗ ಇಷ್ಟೇ ಏಕೆ ಅಡಿ ಟಿಪ್ಪಣೆಗಳಿಗೂ ಸಂಬಂಧಪಟ್ಟುವಾಗಿವೆ. ಇದು ಸಂಜ್ಞಾಪ್ರಕರಣದ ಅಚ್ಚು ದೋಷ ವಿವರಣೆ.

ಮೇಲಣ ಪಾಠ ದೋಷ, ಅಚ್ಚುದೋಷಗಳಲ್ಲದೆ ಈ ಪ್ರಕರಣದಲ್ಲಿ ನಾವು ಸಂಪಾದನಾಶಾಸ್ತ್ರ ದೋಷವನ್ನೂ ಕಾಣುತ್ತೇವೆ. 'ಕ್ಷಳನಲ್ಲದಿಲ್ಲ' (ಸೂ.೧೫) 'ಪೇಟಿಲ್ಪಡೆಗುಂ'(ಸೂ ೧೯) ಎಂಬ ಪದಗಳಿಗೆ ತಾವು ಬಳಸಿದ ಪರಿಷತ್ ಪ್ರತಿಯಲ್ಲಿ ಇರುವ 'ಕ್ಷಳನಿಲ್ಲದಿಲ್ಲ', 'ಪೇಟಿಲ್ಪಡುಗುಂ', ಎಂಬ ಭಿನ್ನ ಪಾಠಗಳನ್ನು ಅಡಿಯಲ್ಲಿ ಕೊಟ್ಟಿಲ್ಲ 'ಕತದಿಂ' ಎಂಬುದಕ್ಕೆ ಇರುವ 'ತೆಱದಿಂ' ಎಂಬ ಭಿನ್ನ ಪಾಠವನ್ನು ಅಡಿಯಲ್ಲಿ ಕೊಟ್ಟಿದ್ದರೂ ಅದಕ್ಕೆ ಪರಿಷತ್ಪ್ರತಿಯ ಸೂಚನೆ ಕಂಡುಬರುವುದಿಲ್ಲ. ಇದರಿಂದ ಪರಿಷತ್ ಪ್ರತಿಯ ಬಳಕೆ ಶಾಸ್ತ್ರೀಯವಾಗಿ ನೆರವೇರಿಲ್ಲ ಎಂದು ಹೇಳಬಹುದು. ಇದು ಸಂಜ್ಞಾಪ್ರಕರಣದ ಸೂತ್ರ ಸಂಪಾದನೆಯಲ್ಲಿ ಶ್ರೀ ಡಿ. ಎಲ್. ಎನ್. ಅವರು ತೋರಿದ ಉದಾಸೀನತೆ.

ಈ ಉದಾಸೀನತೆ ವೃತ್ತಿ ವಿಷಯದಲ್ಲಿ ಇನ್ನೂ ಅಧಿಕಗೊಂಡಿದೆ. ೭, ೨೧, ೩೨, ೪೦, ೪೧ ಮುಂತಾದ ಆರೆಂಟು ಸೂತ್ರಗಳ ವೃತ್ತಿಗಳಿಗಿರುವ ಅಲ್ಪ ಪಾಠಭೇದಗಳನ್ನು ಅಡಿಯಲ್ಲಿ ಸೂಚಿಸಿದ್ದಾರೆ. ಆದರೆ ಮಿಕ್ಕ ಸುಮಾರು ೪೦ ಸೂತ್ರಗಳ ವೃತ್ತಿಗಳಿಗೆ ಕಿಟೆಲ್, ಪರಿಷತ್ ಪ್ರತಿಗಳಲ್ಲಿ ಇರುವ ತೀರ ಭಿನ್ನ ಪಾಠಗಳನ್ನೇ ಸೂಚಿಸಿಲ್ಲ ಇದರಿಂದಾಗಿ ಕೆಲವು ಸಲ ತಾವು ಸ್ವೀಕರಿಸಿದ ಸೂ. ೪೩, ೪೫ ಮುಂತಾದವುಗಳ ತೀರ ಭಿನ್ನ ವೃತ್ತಿ ಕ, ಖ, ಕಿ, ಪ ಗಳಲ್ಲಿ ಯಾವ ಪ್ರತಿಗೆ ಸಂಬಂಧಿಸಿವೆ ಎಂಬುದೇ ಗೊತ್ತಾಗುವುದಿಲ್ಲ. ಇದು ವೃತ್ತಿ ಸಂಪಾದನಾ ವಿಚಾರದಲ್ಲಿ ತೋರುವ ದೋಷ. ಇಂತಹ ಅನವಧಾನತೆ ಪ್ರಯೋಗಗಳ ವಿಷಯದಲ್ಲಿಯೂ ತೋರಿಬರುತ್ತದೆ.

ಇದು ಶ್ರೀ ಡಿ. ಎಲ್. ಎನ್. ದರ್ಪಣದ ಸಂಜ್ಞಾ ಪ್ರಕರಣಾವಲೋಕನ. ಈ ಪ್ರಕರಣದಲ್ಲಿ ಇನ್ನೂ ಒಂದೆರಡು ಸಂಪಾದಕೀಯ ಅಮುಖ್ಯ ದೋಷಗಳೂ, ಆರೆಂಟು ಅಚ್ಚುದೋಷಗಳೂ ಕಂಡುಬರುತ್ತವೆ.

ಸಂಧಿ ಪ್ರಕರಣ

ಸಂಜ್ಞಾ ಪ್ರಕರಣದಲ್ಲಿ ತಲೆದೋರಿದ ಸಂಪಾದಕರ ದೋಷಪರಂಪರೆ ಸಂಧಿ ಪ್ರಕರಣಕ್ಕೂ ಇಳಿದು ಬಂದಿದೆ. ಇಲ್ಲಿ ಅನ್ಯಥಾಜ್ಞಾನದೋಷಕ್ಕಿಂತ ಅನವಧಾನ ದೋಷವೇ ಅಧಿಕ ಪ್ರಮಾಣದಲ್ಲಿ ತೋರಿಬರುತ್ತದೆ.

ಸೂತ್ರ ೬೨

ಈ ಸೂತ್ರದ ವೃತ್ತಿ ಮದ್ರಾಸ ಪ್ರತಿಯಲ್ಲಿ ಒಂದು ಬಗೆಯಾಗಿದ್ದರೆ, ಕಿಟೆಲ್ ಪರಿಷತ್ ಪ್ರತಿಗಳಲ್ಲಿ ಇನ್ನೊಂದು ಬಗೆ, ಶ್ರೀ. ಡಿ. ಎಲ್. ಎನ್. ಅವರಲ್ಲಿ ಮತ್ತೊಂದು ಬಗೆಯಾಗಿ ನಿಂತಿದೆ.

ಮದ್ರಾಸ–ಸ್ವರಂ ಪರಮಾಗೆ ಸಂಸ್ಕೃತದ ಕನ್ನಡದ 'ಪ್ರಕೃತಿಗಳ' ವಿಭಕ್ತಿ ಸ್ವರಕ್ಕಂ, ಸಹಜ ಸ್ವರಕ್ಕಂ, ನಾಮ ಪ್ರಸಿದ್ಧಿ ಕೆಡದ ಪಕ್ಷಂ ಲೋಪಮಕ್ಕುಂ

ಕಿಟೆಲ್, ಪರಿಷತ್–ಸ್ವರಂ ಪರಮಾಗೆ ಸಂಸ್ಕೃತದ ಕನ್ನಡದ ವಿಭಕ್ತಿ ಸ್ವರಕ್ಕಂ

'ಪ್ರಕೃತಿಯ' ಸಹಜ ಸ್ವರಕ್ಕಂ ನಾಮ ಪ್ರಸಿದ್ಧಿ ಕೆಡದ ಪಕ್ಷಂ ಲೋಪಮಕ್ಕುಂ, ಶ್ರೀ ಡಿ. ಎಲ್. ಎನ್. ಸ್ವರಂ ಪರಮಾಗೆ ಸಂಸ್ಕೃತದ ಕನ್ನಡದ ವಿಭಕ್ತಿ ಸ್ವರಕ್ಕಂ.

ಸಹಜ ಸ್ವರಕ್ಕಂ, ನಾಮ ಪ್ರಸಿದ್ಧಿ ಕೆಡದ ಪಕ್ಷಂ ಲೋಪಮಕ್ಕುಂ

ಮದ್ರಾಸ ಪ್ರತಿಯಲ್ಲಿ ಸ್ಥಾನೋಚಿತವಾಗಿ, ಕಿಟೆಲ್, ಪರಿಷತ್ ಪ್ರತಿಗಳಲ್ಲಿ ಸ್ಥಾನ ಪಲ್ಲಟಹೊಂದಿ ನಿಂತಿರುವ 'ಪ್ರಕೃತಿಗಳ' ಎಂಬ ಪದ ಶ್ರೀ ಡಿ. ಎಲ್. ಎನ್. ಅವರಲ್ಲಿ ಸ್ಥಾನಭ್ರಷ್ಟವಾಗಿದೆ. ಇದರಿಂದ ಈ ಮೂರೂ ವೃತ್ತಿಗಳಲ್ಲಿ ಅರ್ಥ ಕ್ರಮೇಣ ಕರಗುತ್ತ ಹೋಗಿದೆ. ಅಂದರೆ ಶ್ರೀ ಡಿ. ಎಲ್. ಎನ್. ವೃತ್ತಿಯ 'ಸಂಸ್ಕೃತದ ವಿಭಕ್ತಿ' (=ವಿಭಕ್ತಿ ಸಂಸ್ಕೃತ ಭಾಷೆಗೆ ಸಂಬಂಧಿಸಿರಬೇಕು) ಮತ್ತು ಮದ್ರಾಸ ವೃತ್ತಿಯ 'ಸಂಸ್ಕೃತ ಪ್ರಕೃತಿಗಳ ವಿಭಕ್ತಿ' (=ಪ್ರಕೃತಿಗಳು ಸಂಸ್ಕೃತ ಭಾಷೆಗೆ ಸಂಬಂಧಿಸಿದ್ದು. ಅವುಗಳಿಗೆ ವಿಭಕ್ತಿ ಹತ್ತಿಕೊಂಡಿರಬೇಕು) ಎಂಬಿವುಗಳನ್ನು ಅವಗಾಹನೆಗೆ ತಂದುಕೊಂಡರೆ ಶ್ರೀ ಡಿ. ಎಲ್. ಎನ್. ವೃತ್ತಿಯಲ್ಲಿ ಅರ್ಥದೋಷಕ್ಕೆ ಎಡೆಯಿದೆ ಎಂದು ಕಂಡುಬರುತ್ತದೆ.

ಎರಡನೆಯದಾಗಿ ಈ ಸೂತ್ರಕ್ಕೆ ಸಂಬಂಧಿಸಿದ ಪ್ರಯೋಗಗಳ ಎಲ್ಲ ತಲೆಬರಹಗಳು ಸಾಮಾನ್ಯವಾಗಿ ಅತಿ ಸಂಕ್ಷಿಪ್ತವಾಗಿರುವುದರಿಂದ ಕೆಲವು ಸಲ ಪೂರ್ಣ ಸಂದೇಹ (ಉದಾ- ಸಂಸ್ಕೃತ ವಿಭಕ್ತಿ ಸ್ವರಕ್ಕೆ ಲೋಪಂ), ಇನ್ನು ಕೆಲವು ಸಲ ಕ್ಷಣಸಂದೇಹ (ಉದಾ-ಪ್ರಕೃತಿ ಸ್ವರಲೋಪಕ್ಕೆ) ವನ್ನು ಹುಟ್ಟಿಸುತ್ತವೆ.

ಮೂರನೆಯದಾಗಿ 'ಆಖ್ಯಾತ ವಿಭಕ್ತಿಯ ಪ್ರಕೃತಿಯ ಸ್ವರಕ್ಕಂ ಲೋಪ-ಮುಂಟು' ಎಂಬ ವಾಕ್ಯದಲ್ಲಿಯ ಪ್ರಕೃತಿಯ ಎಂಬ ಪದ ಯಾವ ಉದ್ದೇಶವನ್ನಿಟ್ಟುಕೊಂಡು ಇಲ್ಲಿ ಆಗಮಿಸಿದೆ?

ಕೊನೆಯದಾಗಿ (ಕನ್ನಡ)'ಪ್ರಕೃತಿ ಸ್ವರಲೋಪಕ್ಕೆ' ಎಂಬ ಶಿರೋನಾಮೆಯ ಕೆಳಗಿನ ಅಕಾರಕ್ಕೆ, ಇಕಾರಕ್ಕೆ-, ಎಕಾರಕ್ಕೆ-, ಉಕಾರಕ್ಕೆ-, ಎಂಬ ಅಕ್ರಮ ಮುದ್ರಣ, ಅಕಾರಕ್ಕೆ-ಇಕಾರಕ್ಕೆ-, ಉಕಾರಕ್ಕೆ, ಎಕಾರಕ್ಕೆ ಎಂಬ ಕ್ರಮದಲ್ಲಿ ಇರಬೇಕಿತ್ತು. ಕಿಟೆಲ್ ಅವರಲ್ಲಿ ಕ್ರಮಪರಿಪಾಲನೆ ಕಂಡುಬರುತ್ತದೆ.

ಮೇಲಣ ಈ ನಾಲ್ಕು ದೋಷಗಳು ಅವರ ಎರಡೂ ಪರಿಷ್ಕರಣಗಳಲ್ಲಿ ತೋರಿ ಬರುತ್ತವೆ.

ಸೂತ್ರ ೬೫

ಈ ಸೂತ್ರದ 'ಕುಡುವುದು ಕುರ್ಮೆಯಲ್ಲ ಕಲೆಯಿಲ್ಲದೆ ಮನ್ನಿಪ ಸೂಳೆಯರ್ಗೇನನಾದೊಡಂ' ಎಂಬ ಚಂಪಕಮಾಲಾ ಪದ್ಯ ಛಂದೋದೋಷವನ್ನು ಹೊತ್ತುಕೊಂಡಿದೆ. ಇದೇ ಪದ್ಯ ಅಕಾರಾದಿಯಲ್ಲಿ ಕುಡುವುದು ಕೂರ್ಮೆಯಲ್ಲಿ ಎಂಬ ಭಿನ್ನ ಪಾಠವನ್ನು ತಾಳಿ ವಿರುದ್ಧ ಅರ್ಥವನ್ನು ವ್ಯಕ್ತಮಾಡಿದೆ. ಈ ದೋಷ ಅವರ ಎರಡೂ ಪ್ರತಿಗಳಲ್ಲಿದೆ, ಒಂದು ವೇಳೆ ಈ ಪದ್ಯ ನೇಮಿಚಂದ್ರನ ಲೀಲಾವತಿಗೆ ಸಂಬಂಧಿಸಿದುದೇ ಆಗಿದ್ದರೆ ಕುಡುವುದು ಕೂರ್ಮೆಯಿಂದೊಲಿದು ಕೂಡುವ ಮಾನಿನಿಗೇನನಾದೊಡಂ ಎಂದು ತಿದ್ದಿಕೊಳ್ಳಬೇಕು.

ಇಲ್ಲಿಯ ಆರನೆಯ ಪ್ರಯೋಗ 'ಕರ್ತೃವಾದಂದಿನಿತತಿಶಯಮಮಂ ತಾಳ್ದುದೀ ಕನ್ನೆಯಂದಂ' ಎಂಬುದು ಕಾವ್ಯಾವಲೋಕನಕ್ಕೆ ಸೇರಿದ ಪದ್ಯ. ಇದನ್ನು 'ಕರ್ತೃವಾದಂದಿನಿತತಿಶಯಮಮಂ ತಾಳ್ವುದೇ ಕನ್ನೆಯಂದಂ' ಎಂದು ತಿದ್ದಿಕೊಳ್ಳಬೇಕು.[೨೭] ಇಲ್ಲದಿದ್ದರೆ ಕವಿ ಹೇಳಬೇಕೆಂದಿರುವ ಆಶ್ಚರ್ಯಭಾವ ನಾಶವಾಗಿ ಹೋಗುತ್ತದೆ.

---

೨೭. ಇದೇ ಪದ್ಯ ಸೂತ್ರ ೧೧೪ರ ಕೆಳಗೆ ಪೂರ್ಣವಾಗಿ ಬಂದಿದ್ದು ಅಲ್ಲಿ 'ತಾಳ್ವುದೇ' ಎಂಬ ಪಾಠವನ್ನಿಟ್ಟುಕೊಂಡಿದ್ದಾರೆ.

ಇಲ್ಲಿಯ 'ಕನ್ನಡದೊಳ್ ಯತ್ವವತ್ವಂಗಳ್ಗೆ ಬಹುಲತೆಯಿಂ ಲೋಪಮುಂಟು' ಎಂಬುದರ ಕೆಳಗೆ ವತ್ವಕ್ಕೆ . 'ಸೊವಡೊಂದೊಯ್ಯನೆ' ಎಂಬ ಪ್ರಯೋಗಕೊಟ್ಟಿದ್ದಾರೆ. ಆದರೆ ಇದರ ಬಹುಲ (ವಿಕಲ್ಪ) ರೂಪ ಸೊವಡುವೊಂದು ಎಂಬುದೂ ಬೇಕಿತ್ತು. ಮಿಕ್ಕ ಕಿಟೆಲ್ ಮೊದಲಾದ ಪ್ರತಿಗಳಲ್ಲಿದೆ. ಈ ವಿಕಲ್ಪರೂಪವನ್ನು ಕೊಡದಿದ್ದರೆ 'ಬಹುಲ' ಎಂಬ ಮಾತಿಗೆ ಅರ್ಥವಿಲ್ಲದಾಗುತ್ತದೆ.

ಸೂತ್ರ ೬೭

ಈ ಸೂತ್ರದ ವೃತ್ತಿಯಲ್ಲಿ 'ಖೇದಕ್ಕಂ ಸ್ವರಂ ಪರಮಾಗೆ ಸಂಧಿಯಿಲ್ಲ, ಖೇದದೊಳಮಂತೆ ಸಂಧಿಯಿಲ್ಲ' ಎಂಬ ದ್ವಿರುಕ್ತಿ ದೋಷ ಅವರ ಎರಡೂ ಪ್ರತಿಗಳಲ್ಲಿ ಕಂಡುಬರುತ್ತದೆ. ಕಿಟೆಲ್ ಮೊದಲಾದವರಲ್ಲಿ ಈ ದೋಷವಿಲ್ಲ.

ಇನ್ನು ಪ್ರಯೋಗದ 'ಮೆಚ್ಚಿನೊಳ್ ನೆಲಸಿರ್ದ ಓಕಾರಕ್ಕೆ ಎಂತೆಂತೊ ಕಬ್ಬಮೊಳ್ಳಿತ್ತಾಯ್ತು' ಎಂಬುದನ್ನು ಗಮನಿಸಿದರೆ ತಲೆಬರೆಹದಲ್ಲಿ ಹೇಳಿದುದು ಓಕಾರ, ಪ್ರಯೋಗದಲ್ಲಿ ಕೊಟ್ಟುದು ಒಕಾರ ಎಂದು ತಿಳಿದುಬರುತ್ತದೆ. ಅದಕ್ಕಾಗಿ 'ಎಂತೆಂತೋ ಕಬ್ಬಮೊಳ್ಳಿತ್ತಾಯ್ತು' ಎಂದು ತಿದ್ದಿಕೊಳ್ಳಬೇಕು.

ಸೂತ್ರ ೭೦

ಸೂತ್ರ–'ಬಗೆಯದೆ ಸತ್ಕೃಣಾಭ್ಯವಹಾರಿಗಳುಸಿರ್ವರ್ ಗದ್ಯಕಾವ್ಯದೊಳ್ ನಿರ್ಬಂಧಂ ಪುಗದೆಂದು'

ವೃತ್ತಿ – ಬಗೆಯದೆ ಸತೃಣಾಭ್ಯವಹಾರಿಗಳ್ ಗದ್ಯಪದ್ಯಕಾವ್ಯದೊಳ್ ಛಂದೋ ನಿರ್ಬಂಧವಿಲ್ಲೆಂದು ಉರವಣಿಸಿ ಪೇೞ್ವರ್.'

ಇಲ್ಲಿ ಸೂತ್ರದ 'ಗದ್ಯಕಾವ್ಯ' ಎಂಬುದು ವೃತ್ತಿಗೆ ಬಂದಾಗ 'ಗದ್ಯಪದ್ಯಕಾವ್ಯ' ಎಂದು ರೂಪ ವ್ಯತ್ಯಾಸ ಮಾಡಿಕೊಂಡಿದೆ. ಮೊದಲೇ ಗೊಂದಲಕ್ಕಿಟ್ಟುಕೊಂಡ ಈ ಸೂತ್ರಾಭಿಪ್ರಾಯ ಈಗ ಮತ್ತಷ್ಟು ಗೊಂದಲಮಯವಾಗಿಬಿಟ್ಟಿದೆ. ಗದ್ಯ ಪದ್ಯ ಕಾವ್ಯದೊಳ್ ಛಂದೋ ನಿರ್ಬಂಧವಿಲ್ಲ ಎಂಬ ವೃತ್ತಿವಾಕ್ಯವನ್ನು 'ಗದ್ಯಕಾವ್ಯದೊಳ್ ಛಂದೋ ನಿರ್ಬಂಧವಿಲ್ಲ.' 'ಪದ್ಯ ಕಾವ್ಯದೊಳ್ ಛಂದೋ ನಿರ್ಬಂಧವಿಲ್ಲ' ಎಂದು ಅನ್ವಯ ಮಾಡಿಕೊಂಡರೆ ಪದ್ಯ ಕಾವ್ಯದೊಳ್ ಛಂದೋ ನಿರ್ಬಂಧವಿಲ್ಲ ಎಂಬ ವಿಪರೀತ ಅರ್ಥ ಹುಟ್ಟುತ್ತದೆ. ಗದ್ಯಪದ್ಯ ಕಾವ್ಯದೊಳ್ ಅಂದರೆ ಚಂಪೂಕಾವ್ಯದೊಳ್ ಛಂದೋ ನಿರ್ಬಂಧವಿಲ್ಲ ಎಂದು ಅರ್ಥ ಹೊಂದಿಸಿಕೊಂಡರೂ ಚಂಪುವಿಗೆ ಛಂದೋ ನಿರ್ಬಂಧವಿಲ್ಲ ಎಂಬ ವಿರುದ್ಧಾರ್ಥವೇ ಮತ್ತೆ ಹುಟ್ಟುತ್ತದೆ. ಒಟ್ಟಾಗಿ ಯಾವ ಮಗ್ಗುಲಿನಿಂದ ನೋಡಿದರೂ ಈ ವೃತ್ತಿಪಾಠದಲ್ಲಿ ದೋಷ ನಿಚ್ಚಳವಾಗಿ ಕಂಡುಬರುತ್ತದೆ. ಈ ಮಾತು ಅವರ ಎರಡೂ ಪರಿಷ್ಕರಣಗಳಿಗೆ ಅನ್ವಯಿಸುತ್ತದೆ.

ಸೂತ್ರ ೭೨

ಈ ಸೂತ್ರದ 'ಪದಯುಗದ ಸಂಧಿಯುಂ' ಎಂಬುದನ್ನು 'ಪದಯುಗದ ಸಂಧಿಯಂ' ಎಂದು ತಿದ್ದಿಕೊಳ್ಳಬೇಕು. ಇಲ್ಲಿ ಸಮುಚ್ಚಯ ಅನವಶ್ಯ. ಇನ್ನು ಸೂತ್ರ–"..ಮಾರ್ಗದೊಳುಳ್ಳ ಸಂಧಿಯಂ ಕಿಡಿಪುದುಮಾಗದು.."

ಟೀಕೆ – "..ರೂಢಮಾಗಿ ಉಳ್ಳ ಸಂಧಿಯಂ ಸ್ವರಲೋಪ ಸಂಧಿಯಂ ಮಾಡಿ ಕೆಡಿಸುವುದುಂ ಸಲುವಳಿಯಾಗದು"

ವೃತ್ತಿ–'ರೂಢಮಪ್ಪ ಸಂಧಿಯಂ ಕಿಡಿಸಿ ವಿಸಂಧಿಯಂ ಮಾಡಲಾಗದು.

ಈ ಮೂರೂ ವಾಕ್ಯಗಳನ್ನು ನೋಡಿದರೆ ಸೂತ್ರ ವೃತ್ತಿಗಳು ವಿಸಂಧಿ ದೋಷವನ್ನು ಹೇಳುತ್ತಿದ್ದರೆ ಟೀಕೆಯು ಸ್ವರಲೋಪ ಸಂಧಿ ದೋಷವನ್ನು ಹೇಳುತ್ತದೆ. ಅಂದರೆ ಇವೆರಡೂ ಅರ್ಥ ವ್ಯಕ್ತಿಯಲ್ಲಿ ಭಿನ್ನ ದಾರಿ ತುಳಿದಿವೆ. ಇದಕ್ಕೆ ನಿಟ್ಟೂರ ನಂಜಯ್ಯನ ಅನ್ಯಥಾಜ್ಞಾನ ಕಾರಣವಾಗಿರಬಹುದು. ಅಥವಾ ಟೀಕೆಯ ಅಪರಿಷ್ಕರಣ ಕಾರಣವಾಗಿರಬಹುದು.

ಸೂತ್ರ ೭೪

"ಕಿಱಿದೆಡೆಯಂ ನಿರೂಪಿಸುವ ನಿಪಾತಾರ್ಥದರೆಯೆಂಬ ಶಬ್ದವೊಂದು ವಸ್ತುವಿನ ಭಾಗಮಂ ಪೇೞ್ವಲ್ಲಿ" ಎಂಬ ವೃತ್ತಿ ವಾಕ್ಯದ ವಸ್ತುವಿನ ಭಾಗಮಂ ಎಂಬುದಕ್ಕೆ ಪ್ರತಿಯಾಗಿ ವಸ್ತುವಿನ ಸಮಭಾಗಮಂ ಎಂದು ತಿದ್ದಿಕೊಳ್ಳಬೇಕು. ಇಲ್ಲದಿದ್ದರೆ ನಿಪಾತದ ಅರೆ (ವಸ್ತುವಿನ ಭಾಗ) ಎಂಬ ಅರ್ಥವನ್ನೇ ಮತ್ತೊಮ್ಮೆ ಹೇಳಿದಂತಾಗುತ್ತದೆ. ಈ ಸೂಚನೆಗೆ ಪರಿಷತ್ ಪ್ರತಿ ಆಧಾರವಾಗಿದೆ.

ಸೂತ್ರ ೭೬

ಈ ಸೂತ್ರದ ಅಭಿಪ್ರಾಯ ವೃತ್ತಿಯಲ್ಲಿ ಕೊಂಚ ದೋಷವನ್ನು ಧರಿಸಿಕೊಂಡಿದೆ. ಅವೆರಡರ ಅರ್ಥ ಬಿಚ್ಚಿ ನೋಡಿದಾಗ ಆ ದೋಷ ನಿಚ್ಚಳವಾಗಿ ಕಂಡುಬರುತ್ತದೆ.

ಸೂತ್ರ–ಒಂದೆರಡರ್ಕೆ ಱಕಾರಕ್ಕಂ ಆದ ಆದೇಶ ರೇಫೆಗಂ–ಸಂಧಿಸದು ತೃತೀಯ ವೃತ್ತಿ ಕತಪಕ್ಕೆಂದುಂ"

ಇದರ ಅನ್ವಯ ಹೀಗೆ–

'ಒಂದೆರಡರ್ಕೆ ಅಂದು ಆದ ಆದೇಶ ರೇಫೆಗಂ ಸಂಧಿಸದು ತೃತೀಯ ವೃತ್ತಿ ಕತಪಕ್ಕೆಂದುಂ.'

"ಱಕಾರಕ್ಕೆ ಅಂದು ಆದ ಆದೇಶ ರೇಫೆಗಂ ಸಂಧಿಸದು ತೃತೀಯ ವೃತ್ತಿ ಕತಪಕ್ಕೆಂದುಂ."

ವೃತ್ತಿ–"ಒಂದೆರಡೆಂಬಿವರ್ಕಂ ಱಕಾರಕ್ಕಾದೇಶಮಾದ ರೇಫೆಗಂ......ಪರಮಾದ ಕತಪಂಗಳ್ಗೆಂದುಂ ತೃತೀಯತ್ವಮಿಲ್ಲ."

ಇದರ ಅನ್ವಯ ಹೀಗೆ–

"ಒಂದೆರಡೆಂಬಿವರ್ಕಂ ಪರಮಾದ ಕತಪಂಗಳ್ಗೆಂದು ತೃತೀಯತ್ವಮಿಲ್ಲ."

ಱಕಾರಕ್ಕಾದೇಶಮಾದ ರೇಫೆಗಂ ಪರಮಾದ ಕತಪಂಗಳ್ಗೆಂದುಂ ತೃತೀಯತ್ವಮಿಲ್ಲ

ಈಗ ಎರಡೂ ಅನ್ವಯಗಳನ್ನು ಹೋಲಿಸಿ ನೋಡಿದರೆ ಒಂದೆರಡೆಂಬಿವುಗಳ ಆದೇಶ ರೇಫೆಯ ಸೂಚನೆ ಕೇವಲ ಸೂತ್ರದ ಅನ್ವಯದಲ್ಲಿ ಮಾತ್ರ ತೋರಿ ಬಂದು ವೃತ್ತಿಯ ಅನ್ವಯದಲ್ಲಿ ಮಾಯವಾಗಿಬಿಟ್ಟಿದೆ. ಅಂದರೆ ಸೂತ್ರಾರ್ಥವನ್ನು ವೃತ್ತಿ ಸಮರ್ಥವಾಗಿ, ಸಂಪೂರ್ಣವಾಗಿ ವ್ಯಕ್ತಮಾಡಿಲ್ಲ. ಅದಕ್ಕಾಗಿ ಪರಿಷತ್ ಪ್ರತಿಯ ಆಧಾರದಿಂದ ಒಂದೆರಡೆಂಬಿವರ್ಕಂ, ಱಕಾರಕ್ಕಮಾದೇಶಮಾದ ರೇಫೆಗಂ–ಪರಮಾದ ಕತಪಂಗಳ್ಗೆಂದುಂ ತೃತೀಯತ್ವಮಿಲ್ಲ" ಎಂದು ಶ್ರೀ ಡಿ. ಎಲ್. ಎನ್. ವೃತ್ತಿಯನ್ನು ತಿದ್ದಿಕೊಳ್ಳಬೇಕು.

ಸೂತ್ರ ೭೭

"ಸಹಜ ವ್ಯಂಜನದ ಪರದ ಪವರ್ಗಕ್ಕೆ ವತ್ವ ಪ್ರಯೋಗಂ–" ಎಂಬುದರ ಕೆಳಗೆ ಕಣ್ಮುಚ್ಚಿದೆ (ಪ್ರಯೋಗ ೧೧) ಎಂಬ ಉದಾಹರಣೆ ಬಂದುದು ಅನುಚಿತ. ಇದು 'ಅನಾಮದೇಶದ

ವ್ಯಂಜನಕಂ...ಕಿಜಿದೆಡೆಯೊಳ್ ವತ್ವಮಿಲ್ಲ–"ಎಂಬುದರ ಕೆಳಗಿರುವ 'ಪಾಟ್ಮನೆ, ಬಾಳ್ಮೊನೆ' ಎಂಬಿವುಗಳ ಮುಂದೆ ಬರಬೇಕು. ಇಲ್ಲದಿದ್ದರೆ ತಲೆಯಲ್ಲಿ ಹೇಳಿದುದೊಂದು ಕೆಳಗೆ ಉದಾಹರಿಸಿದುದು ಮತ್ತೊಂದು ಎಂಬ ಅಪವಾದ ಬರುತ್ತದೆ. ಒಂದು ಪುಟದಷ್ಟು ಅಂತರಮಾಡಿಕೊಂಡು ಈ ಪ್ರಯೋಗ(ಕಣ್ಮುಚ್ಚದೆ) ಹಿಂದೆ ಬಂದುದು ಸಂಪಾದನೆಯ ಅನವಧಾನತೆಗೆ ಸಾಕ್ಷಿಯಾಗಿದೆ. ಈ ದೋಷ ಅವರ ಎರಡೂ ಪ್ರತಿಗಳಲ್ಲಿ ಕಂಡುಬರುತ್ತದೆ.

ಎರಡನೆಯದಾಗಿ 'ಅನಾದೇಶದ....ಸ್ವರಕ್ಕಂ ಕಿಜಿದೆಡೆಯೊಳ್ ವತ್ವಮಿಲ್ಲ–" ಎಂಬುದರ ಕೆಳಗೆ,

ಪ......ಪೂಪುಣುಂಬು

ಬ......ಸುಡುಬಾಡು

........ಕತ್ತುರಿಮಿಗಮೆ ಮಿಗಂಗಳ್(೧೮)

ಮ....ಕತ್ತುರಿಮಿಗಂ

ಎಂದು ಕೊಟ್ಟಿರುವ ಪ್ರಯೋಗಗಳನ್ನು ನೋಡಿದರೆ 'ಕತ್ತುರಿಮಿಗಮೆ ಮಿಗಂಗಳ್' ಎಂಬ ೧೮ನೆಯ ಉದಾಹರಣೆ 'ಮ'ದ ಕೆಳಗೆ ಬರಬೇಕೆಂದು ಒಡೆದು ಕಾಣುತ್ತದೆ. ಇಲ್ಲಿಯೂ ಉದಾಹರಣೆ ಸ್ಥಾನೋಚಿತವಾಗಿ ಬಂದಿಲ್ಲವೆಂಬ ದೋಷ ತಟ್ಟುತ್ತದೆ.

ಮೂರನೆಯದಾಗಿ 'ಅನಾದೇಶದ ವ್ಯಂಜನಕ್ಕಂ.........ಕಿಜಿದೆಡೆಯೊಳ್ ವತ್ವಮಿಲ್ಲ' ಎಂಬುದರ ಕೆಳಗೆ ಉದಾಹರಿಸಿದ 'ಕರ್ಬೇಡರ್' ಎಂಬ ಪದದಲ್ಲಿಯ 'ಕರ್' ಎಂಬುದು ಅನಾದೇಶ(ಸಹಜ) ವ್ಯಂಜನವೇ? 'ಕರಿದು' ಎಂಬುದರ ಆದೇಶ 'ಕರ್' ಅಲ್ಲವೇ? ಅದಕ್ಕಾಗಿ ಈ ಉದಾಹರಣೆಯನ್ನು ಬಿಡಬೇಕಿತ್ತು. ಕಿಟೆಲ್ ಅವರಲ್ಲಿಲ್ಲ.

ಒಟ್ಟಾಗಿ ಒಂದೇ ಸೂತ್ರದ ಕೆಳಗಿನ ಈ ಪ್ರಯೋಗಗಳಲ್ಲಿ ಮೂರು ದೋಷಗಳು ಕಂಡುಬಂದುದು ಸಂಪಾದನೆಯ ಅಲಕ್ಷ್ಯಕ್ಕೆ ಉತ್ತಮ ಉದಾಹರಣೆ. ಇದು ಸಂಧಿ ಪ್ರಕರಣದ ಪಾಠದೋಷ ವಿವೇಚನೆ. ಇಲ್ಲಿ ಸಹ ಅಚ್ಚುದೋಷಗಳು ಅಧಿಕ ಸಂಖ್ಯೆಯಲ್ಲಿ ಅಡಿ ಇಟ್ಟಿವೆ.

	ತಪ್ಪು	ಒಪ್ಪು	ಪುಟ	ಸಾಲು
೧.	ಪಟ್ಟು ವೇಕವಾಕ್ಯಂ	ಪಟುವೇಕವಾಕ್ಯಂ	೫೭	೧೬
೨.	ಅನುಕೃತಿ ಸ್ವರಕಂ	ಅನುಕೃತಿ ಸ್ವರಂ	೬೦	೫
೩.	ಎಮ ಶಬ್ದಂ	ಎಮಶಬ್ದ	೬೪	೮
೪.	ಸತ್ಯಣಾಭ್ಯವಹಾರಿ	ಸತೃಣಾಭ್ಯವಹಾರಿ	೬೬(ಅ.ಟಿ)	೨೪
೫.	ಶಬ್ದಮುಮಕ್ಕುಂ	ಶಬ್ದಮವಕ್ಕುಂ	೬೮	೯
೬.	ಸಂಧಿಯಂ ಮಾಡಲ್	ಸಂಧಿಮಾಡಲ್	೭೦	೨೨
೭	(ಕ. ಟಿದ್ಪಣಿ)	(ಕ. ಟಿಪ್ಪಣಿ)	೭೫	೨೬
೮.	ಅರಯ್	ಆರಯ್	೮೩	೮

ಈ ಎಂಟು ಅಚ್ಚುದೋಷಗಳಲ್ಲದೆ, ಪರಿಷ್ಕರಣ ಕಾರ್ಯದಲ್ಲಿ ಕಂಡು ಬಂದ ಭಿನ್ನ ಪಾಠ ಮತ್ತು ಸ್ವೀಕೃತ ಪಾಠ, ಇವುಗಳ ಸಂಬಂಧಗಳನ್ನು ಸೂಚಿಸುವ ಅಂಕಿಗಳಲ್ಲಿಯೂ ಅಚ್ಚುದೋಷ ಆಗಾಗ ಕಂಡುಬರುತ್ತದೆ.

	ತಪ್ಪು	ಒಪ್ಪು	ಪುಟ	ಸಾಲು
೧.	[೨]ಮಿನ್ನಿ[೧]	[೨]ಮಿನ್ನಿ[೨]	೪೯	೨೦
೨.	[೫]ಗೇಣ್ವಾಯೆ[೧]	[೪]ಗೇಣ್ವಾಯ್ಗೆ[೪]	೭೬	೨೦
೩.	ನೇಣ್ವೊಯ್ಗೆ(ವ)	[೪]ನೇಣ್ವೊಯ್ಗೆ(ವ)[೪]	೭೬	೨೭

ಈ ಬಗೆಯ ಸೂಚೀ ಸಂಖ್ಯೆ ವ್ಯತ್ಯಾಸವಾದರೆ ಅಭ್ಯಾಸದ ಅನುಕೂಲತೆಗೆ ಅಡ್ಡಿ ಒದಗುತ್ತದೆ. ಮೇಲುನೋಟ ಮಾತ್ರದಿಂದ ೧೯ ಸೂತ್ರಗಳಲ್ಲಿ ೧೧ ಅಚ್ಚುದೋಷಗಳು ಕಂಡುಬಂದಿವೆ. ಸೂಕ್ಷ್ಮಾವಲೋಕನೆ ಮಾಡಿದರೆ ಈ ದೋಷ ಸಂಖ್ಯೆ ಇನ್ನೂ ಬೆಳೆಯುತ್ತದೆ.

ಇನ್ನು ಕೆಲವು ಸಲ ಯಾವ ರೀತಿಯಿಂದ ಎಷ್ಟು ವಿಚಾರಿಸಿದರೂ ಅಡಿಟಿಪ್ಪಣಿಗಳು ಅರ್ಥವಾಗುವುದಿಲ್ಲ. ಪುಟ ೭೭ರ ಅಡಿಯಲ್ಲಿ "೩ ಗರಟಿಗೆ=ಪಹರಿಯ ವಧು(ಕ ಟಿಪ್ಪಣಿ) ಈ ಉದಾಹರಣೆ (ಕ)ದಲಿ ಸ್ಥಳ ಪಲ್ಲಟ." ಎಂದು ಹೇಳಿರುವಲ್ಲಿ ಯಾವ ಸ್ಥಳದಿಂದ ಯಾವ ಸ್ಥಳಕ್ಕೆ ಪಲ್ಲಟ? ಎಂದು ಹುಟ್ಟುವ ಪ್ರಶ್ನೆಗೆ ಸಮಾಧಾನ ಸಿಗುವುದಿಲ್ಲ.

ಪುಟ ೮೦ರ ಅಡಿಯಲ್ಲಿ "[೧](ಕ, ಖ)ಗಳಲ್ಲಿ ಅಪೂರ್ಣ" ಎಂದು ಹೇಳಿರುವಲ್ಲಿ ಕ, ಖ ಪ್ರತಿಗಳಲ್ಲಿ ಈ ಭಾಗ ಮುರಿದು ಹೋದುದರಿಂದ ಅಪೂರ್ಣವೋ? ಪೂರ್ಣ ಎಲೆ ಇದ್ದರೂ ಯಾವುದೋ ಕಾರಣದಿಂದ ಬರೆಯದುದರ ಮೂಲಕ ಅಪೂರ್ಣವೋ? ಅಥವಾ ಉದ್ದೇಶ ಪೂರ್ವಕವಾಗಿ ಈ ಪದ್ಯ ಅಪೂರ್ಣಗೊಳಿಸಲ್ಪಟ್ಟಿದೆಯೋ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಎರಡನೆಯದಾಗಿ ಅಪೂರ್ಣವೆಂದರೆ ಎಷ್ಟು ಅಪೂರ್ಣ? ಒಂದು ಚರಣವೋ? ಎರಡು ಚರಣಗಳೋ? ಎಂಬ ಸಂದೇಹ ಹುಟ್ಟುತ್ತದೆ.

ಇನ್ನು ಈ ಸಂಪಾದನೆಗಾಗಿ ಕ. ಖ. ಕಿ(ಕಿಟೆಲ್) ಪ. (ಪರಿಷತ್) ಪ್ರತಿಗಳನ್ನು ಬಳಸಿದ್ದಾರಷ್ಟೆ? ಈ ನಾಲ್ಕರಲ್ಲಿ ಯಾವುದೇ ಒಂದರ ಪಾಠವನ್ನು ತಾವು ಸ್ವೀಕರಿಸಿದರೆ ಮಿಕ್ಕ ಭಿನ್ನಪಾಠಗಳನ್ನು ಅಡಿಯಲ್ಲಿ ಕೊಡಬೇಕು. ಇದು ಸಂಪಾದನಾ ಶಾಸ್ತ್ರದ ಮುಖ್ಯ ನಿಯಮಗಳಲ್ಲೊಂದು. ಈಗ ಸೂತ್ರ ೬೬ರ ವೃತ್ತಿಯನ್ನು ನೋಡಬಹುದು.

"ನಿರ್ವಿಕಾರಂಗಳಪ್ಪ ಎ ಏ ಒ ಓ ಎಂಬವು ಕಡೆಯಾದ ನಿಪಾತಮನಧಾರಣೆ ವಿಶಂಕೆಗಳೆಂಬಿವಱಲ್ಲಿ ಸ್ವರಂ ಪರಮಾಗೆ ಸಂಧಿಯಿಲ್ಲ. ಆ ಪ್ಲುತಕ್ಕಮಂತೆ ಸಂಧಿಯಿಲ್ಲ". ಈ ವೃತ್ತಿ ಕ.ಖ. ಕಿ.ಪ. ಪ್ರತಿಗಳಲ್ಲಿ ಯಾವುದಕ್ಕೆ ಸೇರಿದ್ದು ಎಂಬುದರ ಸೂಚನೆಯಿಲ್ಲ. ಕಿಟೆಲ್ ಅವರಲ್ಲಿ ಇದೇ ವೃತ್ತಿ ಅರ್ಥ ವ್ಯತ್ಯಾಸ(ಸಮುಚ್ಚಯದ ಮೂಲಕ) ಮಾಡುವಷ್ಟರ ಮಟ್ಟಿಗೆ ಭಿನ್ನವಾಗಿದ್ದರೂ ಅದನ್ನೇಕೆ ಅಡಿಯಲ್ಲಿ ಕೊಡಲಿಲ್ಲ? ಹಾಗಿದ್ದರೆ ಕಿಟೆಲ್ ಪ್ರತಿಯನ್ನು ಯಾವ ಅರ್ಥದಲ್ಲಿ ಬಳಸಿಕೊಂಡಿದ್ದಾರೆ? ಇಷ್ಟೇ ಏಕೆ "ಈ ಪ್ರತಿಯ ಪಾಠವನ್ನೂ ಕ್ರಮವನ್ನೂ ಪ್ರಕೃತ ಮುದ್ರಣಕ್ಕೆ

ಆಧಾರವಾಗಿ ಸ್ವೀಕರಿಸಿದೆ" ಎಂದು ಕಿಟೆಲ್ ಪ್ರತಿಯನ್ನುದ್ದೇಶಿಸಿ ಪ್ರಸ್ತಾವನೆಯಲ್ಲಿ ಅವಧಾರಣೆ ಕೊಟ್ಟು ಹೇಳಿದ ಮಾತನ್ನು ಎಷ್ಟರ ಮಟ್ಟಿಗೆ ಸತ್ಯವೆಂದು ನಂಬಬೇಕು?

ಇನ್ನು ಸೂ. ೭೬ರ "ಒಂದೆರಡೆಂಬಿವರ್ಕಂ ಋಕಾರಕ್ಕಾದೇಶಮಾದ ರೇಫೆಗಂ-" ಎಂಬ ವೃತ್ತಿಗೆ ಪರಿಷತ್ ಪ್ರತಿಯಲ್ಲಿ "ಒಂದೆರಡೆಂಬಿವರ್ಕಂ ಋಕಾರಮಾದೇಶಮಾದ ರೇಫೆಗಂ-" ಎಂಬ ಭಿನ್ನಪಾಠವಿದೆ. ಇದು ಅರ್ಥ ವ್ಯತ್ಯಾಸಗೊಳಿಸುವಂತಹ ಭಿನ್ನ ಪಾಠವಾಗಿದ್ದರೂ ಅಡಿಯಲ್ಲಿ ಕೊಟ್ಟಿಲ್ಲ. ಇದನ್ನು ನೋಡಿದರೆ ಪರಿಷತ್ ಪ್ರತಿಯನ್ನು ಸಹ ಯಾವ ಅರ್ಥದಲ್ಲಿ ಬಳಸಿದ್ದಾರೆ? ಎಂದು ಕೇಳಬೇಕಾಗುತ್ತದೆ.

ಒಟ್ಟಾಗಿ ಕಿಟೆಲ್ ಪರಿಷತ್ ಪ್ರತಿಗಳನ್ನು ಬಳಸಿದ್ದೇವೆ ಎಂಬ ಹೇಳಿಕೆ ಶಾಸ್ತ್ರೀಯವಾಗಿ ಕೈಗೂಡಿಲ್ಲ ಎಂದು ಸ್ಪಷ್ಟವಾಗಿ ಈ ಸಂಪಾದನೆಯ ಪುಟಪುಟಗಳಲ್ಲಿ ಕಂಡುಬರುತ್ತದೆ(ಕ.ಖ. ಪ್ರತಿಗಳಿಗೂ ಈ ಮಾತು ಅನ್ವಯಿಸಬಹುದು).

ಇದು ಸಂಜ್ಞಾಪ್ರಕರಣ, ಸಂಧಿಪ್ರಕರಣ. ಅವಲೋಕನ, ದರ್ಪಣದ ಪಾಠದೋಷ, ಅಚ್ಚುದೋಷ ಸಂಪಾದನಾಶಾಸ್ತ್ರದೋಷ ಇವುಗಳನ್ನು ಎತ್ತಿತೋರಿಸಿದ ನಮ್ರ ಪ್ರಾಮಾಣಿಕ ಪ್ರಯತ್ನ ಇಲ್ಲಿದೆ. ಉಳಿದ ಪ್ರಕರಣಗಳ ವಿವೇಚನೆಯನ್ನು ಮುಂದಿನ ಲೇಖನದಲ್ಲಿ ಮಾಡಲಾಗುವುದು.

■■

ಆಕರ : ಮಾರ್ಗ ಸಂಪುಟ-೭

೨೨

ದರ್ಪಣಾವಲೋಕನ : ೨

[ಶ್ರೀ ಡಿ. ಎಲ್. ಎನ್. ಸಂಪಾದಿತ]

ನಾಮಪ್ರಕರಣಂ

ಕೇಶಿರಾಜನ ಶಾಸ್ತ್ರ ಸಾಮರ್ಥ್ಯದ ಬಹುಪಾಲನ್ನೊಳಗೊಂಡ ಈ ನಾಮ ಪ್ರಕರಣದಲ್ಲಿ ಶ್ರೀ ಡಿ. ಎಲ್. ಎನ್. ಅವರ ಅಪಸ್ಮಾರದ ಮೂಲಕ ಅಪಪ್ರಯೋಗ, ಅಪಸಿದ್ಧಾಂತಗಳು ಕಂಡುಬಂದು ಕಣ್ಣಿಗೆ ನೋವನ್ನುಂಟುಮಾಡುತ್ತವೆ. ಸೂತ್ರ, ವೃತ್ತಿ, ಪ್ರಯೋಗ ಟೀಕೆ, ಅಡಿಟಿಪ್ಪಣಿ ಎಂಬ ಐದು ವಿಭಾಗಗಳಲ್ಲಿ ತಲೆದೋರಿದ ಆ ದೋಷಗಳನ್ನೂ ಅವುಗಳೊಂದಿಗೆ ಅಲ್ಲಿ ಕಂಡುಬರುವ ಸಂಪಾದನಾಶಾಸ್ತ್ರದೋಷವನ್ನೂ ಸೂಚಿಸುವುದು ಈ ಲೇಖನದ ಉದ್ದೇಶ.

ಸೂತ್ರ

ಸೂತ್ರ ೧೦೬

ಸಂಗಡಿಸಿ ಸರ್ವ ನಾಮದ।
ಲಿಂಗಾಂತ್ಯಾಕ್ಷರಕಮವುವಿನಾದ್ಯಕ್ಷರಕಂ।
ಪಿಂಗದು ಲೋಪಂ...

ಸರ್ವನಾಮದ ಮುಂದೆ 'ಅವು' ಬಂದರೆ ಆ ಸರ್ವನಾಮದ ಕೊನೆಯ ಅಕ್ಷರ, ಅವುವಿನ ಆದ್ಯಕ್ಷರ, ಈ ಎರಡಕ್ಕೂ ಲೋಪ ಉಂಟಾಗುತ್ತದೆ ಎಂದು ಕೇಶಿರಾಜನ ಅಭಿಪ್ರಾಯ. ಆದರೆ 'ಪಿಂಗದು ಲೋಪಂ' ಅಂದರೆ ಲೋಪ ತೊಲಗುವುದಿಲ್ಲ ಎಂಬುದರ ಜೊತೆಗೆ ಲೋಪ ಉಂಟಾಗುವುದಿಲ್ಲ ಎಂಬ ಭ್ರಮೆಗೂ ಇಲ್ಲಿ ಎಡೆ ಸಿಗುವುದರಿಂದ, ಈ ಕ್ಷಣ ಭ್ರಾಂತಿಯನ್ನು ದೂರಮಾಡಲು ಅರ್ಥಭದ್ರತೆಯ

---

* The Journal of the Karnatak University, Vol. X, 1966.

* ಕಳೆದ ಲೇಖನದಲ್ಲಿ ನನ್ನ ಕಣ್ಣತಪ್ಪಿ ಉಳಿದ ಇನ್ನೂ ಒಂದು ದೋಷ–ಸೂತ್ರ ೭೮ರಲ್ಲಿಯ"ಅರೆಯೆಡೆಯೊಳ್ ಜತ್ವಂ ಮೇಣರೆಯೆಡೆಯೊಳ್" ಎಂಬುದು "ಅರೆ ಎಡಯೊಳ್ ಜತ್ವಂ ಮೇಣರೆ ಎಡೆಯೊಳ್" ಎಂದಾಗಬೇಕು. ಈ ಅಂಶವನ್ನು ನನ್ನ ಗಮನಕ್ಕೆ ತಂದವರು ಪ್ರಿನ್ಸಿಪಾಲ್ ಬಿ.ಟಿ. ಸಾಸನೂರ ಅವರು.

ದೃಷ್ಟಿಯಿಂದ 'ಪಿಂಗದೆ ಲೋಪಂ' (ಜರುಗುವುದು) ಎಂಬ ಅವಧಾರಣಾರ್ಥಕ ಭಿನ್ನ ಪಾಠವನ್ನು ಇಟ್ಟುಕೊಂಡಷ್ಟು ಒಳ್ಳೆಯದು. ತಮ್ಮ ಟೀಕೆಯಲ್ಲಿ ಕಿಟೆಲ್ ಮೊದಲಾದ ದರ್ಪಣಗಳಲ್ಲಿ 'ಪಿಂಗದೆ ಲೋಪಂ' ಎಂಬ ಯೋಗ್ಯಪಾಠವೇ ಇದೆ.

ಸೂತ್ರ ೧೧೦

ನವಿಶೇಷದಿನುಸಿರ್ವ ರೂಢಿಯನಿತಿನಿತೆ।

ಲ್ಲವು...

ಕಂದದ ಈ ದೀರ್ಘಚರಣಕ್ಕೆ ಮಾತ್ರೆಯ ಕೊರತೆ ಒದಗಿದೆ. ಮಿಕ್ಕ ಕಿಟೆಲ್ ಮೊದಲಾದ ದರ್ಪಣಗಳ ಸಹಾಯದಿಂದ ಇನ್ನೊಂದು 'ನಿತೆ' ಎಂಬುದನ್ನು ಈ ದೀರ್ಘಪಾದದ ಕೊನೆಗೆ ಹೆಚ್ಚಿನದಾಗಿ ಜೋಡಿಸಿಕೊಳ್ಳಬೇಕು(ಆಗ "ರ್ವ" ಎಂಬುದನ್ನು ಶಿಥಿಲದ್ವಿತ್ವವೆಂದು ಭಾವಿಸಬೇಕು). ಇದರಿಂದ ಮಾತ್ರಾಸಂಖ್ಯೆಯೂ ಸರಿಹೊಂದಿ; ಅನಿತು, ಇನಿತು ಎಂಬಿವುಗಳೊಂದಿಗೆ 'ಎನಿತು' ಎಂಬುದೂ ಸೇರಿ ಇವುಗಳಿಗೆ ಸಾಂಘಿಕ ಅರ್ಥ ಬರುತ್ತದೆ.

ಸೂತ್ರ ೧೧೦

.....................ರೂಢಿಯನಿತಿನಿತೆ[ನಿತೆ]।

ಲ್ಲವು ಕೆಲವು ಪಲವು ತಾಮಂ।

ತ್ಯವರ್ಣಲೋಪಮನೆ ವತ್ವಮೊಡನಿರೆ ಪಡೆಗುಂ॥

ಆರ್ ಹಚ್ಚಿಕೊಂಡು ಬಹುವಚನವಾಗುವಲ್ಲಿ ಅನಿತು ಇನಿತಾದಿಗಳು, ಆಗಮವಾಗಿ ಬರುವ ವತ್ವದೊಂದಿಗೆ(=ಒಡನಿರೆ) ತಮ್ಮ ಅಂತ್ಯಾಕ್ಷರವನ್ನೂ ಲೋಪಿಸಿಕೊಳ್ಳುತ್ತದೆ. ಎಂದು ಇಲ್ಲಿಯ ಅರ್ಥ. ಆದರೆ ವಕಾರವನ್ನು ಉಳಿಸಿಬಿಟ್ಟು ಅನಿತಿನಿತಾದಿಗಳು ತಮ್ಮ ಅಂತ್ಯಾಕ್ಷರವನ್ನು ಮಾತ್ರ ಲೋಪ ಮಾಡಿಕೊಳ್ಳುತ್ತವೆ, ಎಂದು ಕೇಶಿರಾಜನ ಅಭಿಪ್ರಾಯ. ಅದಕ್ಕಾಗಿ 'ಮೊಡನಿರೆ' ಎಂಬುದಕ್ಕೆ ಪ್ರತಿಯಾಗಿ 'ಮೊದವಿರೆ' ಎಂದಿಟ್ಟುಕೊಳ್ಳಬೇಕು. ಈ ಪಾಠ ಕಿಟೆಲ್ ಅವರಲ್ಲಿ ಕಂಡುಬರುತ್ತದೆ.

ಸೂತ್ರ ೧೩೫

ಆವಿಶೇಷದಿಂದದಂತ।

ಕ್ಕೆ ವರ್ಣಮೊದವುವುದು...............

ವೃತ್ತಿ–ಸ್ತ್ರೀ–ಪುನ್ನಪುಂಸಕಮೆನ್ನತೆ ಸಂಬೋಧನೆಯ ಕಡೆಯೊಳ್ ಎ ಏ ಎಂಬಿವಕ್ಕುಂ

ಪ್ರಯೋಗಂ–ಅಳಿಕುಳನೀಳಕುಂತಳೆಯೆ ಕೋಕಿಲನಾದೆಯೆ ಹಂಸಯಾನೆಯೆ

ಮನುವೇ ನಿನ್ನಯ ಮಾರ್ಗಂ..............

ಎಳಮಾವೇ ತಳಿರುಯ್ಯಲೇ........................

ಸೂತ್ರದಲ್ಲಿಯ 'ಅದಂತ' ಎಂಬ ಮಾತು ವೃತ್ತಿಯಲ್ಲಿ ಗೋಚರಿಸುವುದಿಲ್ಲ. ಪ್ರಯೋಗದಲ್ಲಿಯ ಕುಂತಳೆ, ಮನು, ಉಯ್ಯಲ್ ಎಂಬಿವು ಎ, ಉ ಮತ್ತು ವ್ಯಂಜನಾಂತ ಪ್ರಕೃತಿಗಳಾಗಿವೆಯೇ

ಹೊರತು ಅದಂತ ಪ್ರಕೃತಿಗಳಲ್ಲ. ಅದಕ್ಕಾಗಿ ಸೂತ್ರದಲ್ಲಿ ಅಕಾರಾಂತ ಪ್ರಕೃತಿ ಎಂದು ಹೇಳಿದುದು ಸಂಪೂರ್ಣ ಅಸತ್ಯ. ಈ ಪ್ರಸಂಗದಲ್ಲಿ 'ಶಬ್ದಮಣಿ ದರ್ಪಣದ ಪಾಠಾಂತರಗಳು' ಎಂಬ ಪುಸ್ತಕದ

ಅವಿಶೇಷದೆ ಲಿಂಗಾಂತ್ಯ।
ಕ್ಕೆ ವರ್ಣಮೊದವುವುದು....

ಎಂಬ ಪಾಠ ಅರ್ಥ ದೃಷ್ಟಿಯಿಂದ ಯೋಗ್ಯವೆನಿಸಿದೆ. ಇದನ್ನು ಇಟ್ಟುಕೊಳ್ಳಬೇಕು. ಶ್ರೀ ಡಿ. ಎಲ್. ಎನ್. ಅವರಿಗೆ ತಮ್ಮ ಪಾಠದಲ್ಲಿ ದೋಷವಿರುವ, ಈ ದೋಷವನ್ನು ನಿವಾರಿಸುವ ಹೊಸ ಪಾಠ ಹೈದ್ರಾಬಾದ ಪ್ರತಿಯಲ್ಲಿ ಕಂಡುಬರುವ ಅಂಶ ಕಣ್ಣಿಗೆ ಬಿದ್ದಂತಿಲ್ಲ.

ಈ ಸೂತ್ರದ ಎರಡನೆಯ ಚರಣದ ಕೊನೆಯಲ್ಲಿಯ 'ದದಂತ' ಎಂಬುದು ಲಿಪಿಕಾರನ ಕಣ್ಣುತಪ್ಪಿ ಮೊದಲನೆಯ ಚರಣದ ಕೊನೆಗೆ ಬಿದ್ದಂತಿದೆ. ಎಲ್ಲ ಪ್ರತಿಗಳಲ್ಲಿಯೂ (ಹೈದ್ರಾಬಾದ ಪ್ರತಿ ಬಿಟ್ಟು) ಸಾಮಾನ್ಯವಾಗಿ ಈ ದೋಷ ಕಂಡುಬರುವುದರಿಂದ ಕೆಲವು ಶತಮಾನಗಳ ಹಿಂದೆಯೇ ಈ ಲೇಖನಪ್ರಮಾದ ಜರುಗಿದಂತೆ ಊಹಿಸಬಹುದು. (ಈ ಸೂತ್ರದ ವೃತ್ತಿದೋಷ, ಪ್ರಯೋಗದೋಷಗಳನ್ನು ಆ ಆ ವಿಭಾಗಗಳಲ್ಲಿ ವಿವೇಚಿಸುತ್ತೇನೆ.)

ಸೂತ್ರ ೧೭೧

ಅಂತಹನಿಂತಹನುಂತಹ।
ನೆಂತಹನೆಂದಿಂತು ಪದ್ವಿರುಕ್ತಿಗೆ ಹತ್ವಂ।
ಭ್ರಾಂತೇಂ ಗಡಾರ್ಥದೊಳ್ ಮೇ।
ಣಂತವಱೆಡೆಗನ್ನ ನಿನ್ನ ನುನ್ನನುಮೆನ್ನಂ।

ಈ ಸೂತ್ರದಿಂದ ಹೊರಡುವ 'ಅನ್ನಂ, ಇನ್ನಂ, **ಉನ್ನನುಂ,** ಎನ್ನಂ' ಎಂಬಿವುಗಳಲ್ಲಿ 'ಉನ್ನನುಂ' ಎಂಬುದು ಪುಲ್ಲಿಂಗ ಸೂಚಿಯಾಗಿ ತಲೆದೋರಿದೆ. ಆದರೆ ಸೂತ್ರದಲ್ಲಿಯ 'ಅಂತವಱ' ಎಂಬ ನಪುಂಸಕ ಸೂಚಿಯನ್ನು ಗಮನಿಸಿದರೆ 'ಉನ್ನಮುಂ' ಎಂಬ ನಪುಂಸಕ ಪದ ಬೇಕೆನಿಸುತ್ತದೆ. ಅದಕ್ಕಾಗಿ ಕಿಟೆಲ್ ವೊದಲಾದ ದರ್ಪಣಗಳಲ್ಲಿ, ತಮ್ಮ ಟೀಕೆಯಲ್ಲಿ ಕಂಡುಬರುವ "ಮೇಣಂತವಱೆಡೆಗನ್ನನಿನ್ನನುನ್ನಮುಮೆನ್ನಂ" ಎಂಬ ಯೋಗ್ಯ ಪಾಠವನ್ನಿಟ್ಟುಕೊಳ್ಳಬೇಕು.

ಈ ಪ್ರಕರಣದ ಒಟ್ಟು ೯೦ ಸೂತ್ರಗಳಲ್ಲಿ ಮೇಲಣ ಐದು ದೋಷಗಳು ಕಂಡುಬರುತ್ತವೆ. ಹೈದ್ರಾಬಾದ ಪ್ರತಿಯಲ್ಲಿಯ "ಅವಿಶೇಷದೆ ಲಿಂಗಾಂತ್ಯಕ್ಕೆ" ಎಂಬುದನ್ನು ಬಿಟ್ಟರೂ ಮೇಲೆ ನಿರ್ದೇಶಿಸಿದ ಮಿಕ್ಕ ಭಿನ್ನಪಾಠಗಳು ತಾವು ಬಳಸಿದ ಕಿಟೆಲ್, ಪರಿಷತ್ ಪ್ರತಿಗಳಲ್ಲಿ ಕಂಡುಬರುತ್ತಿದ್ದು, ಅವುಗಳನ್ನು ಅಡಿಯಲ್ಲಾದರೂ ಕೊಡದಿರುವುದು ಸಂಪಾದನಾ ಶಾಸ್ತ್ರದೃಷ್ಟಿಯಿಂದ ದೋಷ ಎನಿಸುತ್ತದೆ.

ಇವಲ್ಲದೆ ಸೂತ್ರ ವಿಭಾಗದಲ್ಲಿ ಕೆಲವು ಅಚ್ಚುದೋಷಗಳು ತಲೆ ಹಾಕಿವೆ. ಅವು:

ತಪ್ಪು	**ಒಪ್ಪು**	**ಸೂತ್ರ**
೧. ಮೂದೆಱನಸಮಾಸತಯೊಳ್	ಮೂದೆಱನಸಮಾಸತೆಯೊಳ್	೮೬
೨. ಸಂಧಿಸಿ	ಸಂದಿಸಿ	೧೦೩

೩. ಮತ್ತಕ್ಕುಚ್ಚರಿಪ್ಪರ್ ಮತ್ತಕ್ಕುಚ್ಚರಿಪರ್ ೧೧೪
೪. ಜನಿಯಿಪ್ಪುದು. ಜನಿಯಿಪುದು ೧೭೨

ಒಟ್ಟು (೫+೪)೯ ದೋಷಗಳು ನಾಮಪ್ರಕರಣದ ಸೂತ್ರ ಸಂಬಂಧದಲ್ಲಿ ಲಭಿಸುತ್ತವೆ. ಅಭ್ಯಾಸ ಸೂಕ್ಷ್ಮವಾದಂತೆ ಈ ಸಂಖ್ಯೆ ಇನ್ನೂ ಬೆಳೆಯಲು ಅವಕಾಶವಿದೆ.

ವೃತ್ತಿ

ಪದ್ಯರೂಪದ ಸೂತ್ರಕ್ಕಿಂತ ಗದ್ಯರೂಪದ ವೃತ್ತಿಗಳಲ್ಲಿ ಭಿನ್ನಪಾಠಗಳು ಅಧಿಕ ಸಂಖ್ಯೆಯಲ್ಲಿ ತಲೆದೋರುವುದು ಸಹಜ. ಈ ಪ್ರಕರಣದ ವೃತ್ತಿಗಳಲ್ಲಿ ಅನವಧಾನದೋಷ, ಅನ್ಯಥಾಜ್ಞಾನದೋಷ, ಅಚ್ಚುದೋಷಗಳು ಕೆಲವು ಸಂಖ್ಯೆಯಲ್ಲಿ ಕಂಡುಬರುತ್ತವೆ. ಒಂದು ವೇಳೆ ಈ ದೋಷಗಳು ಕಂಡುಬಾರದಪಕ್ಷದಲ್ಲಿ ಸಂಪಾದನಾಶಾಸ್ತ್ರ ದೋಷವಂತೂ ಹೆಜ್ಜೆ ಹೆಜ್ಜೆಗೆ ಎದ್ದು ಕಾಣುತ್ತದೆ.

ಮೊದಲನೆಯದಾಗಿ ಕೆಲವು ಸಲ ಶ್ರೀ ಡಿ. ಎಲ್. ಎನ್. ಸ್ವೀಕೃತ ವೃತ್ತಿಪಾಠಕ್ಕಿಂತ, ಕಿಟೆಲ್ ಪರಿಷತ್ ಪಾಠ ಅರ್ಥಸ್ಪಷ್ಟತೆಯಲ್ಲಿ ಲೇಸು ಎನಿಸುತ್ತವೆ.

ಶ್ರೀ ಡಿ. ಎಲ್. ಎನ್. ವೃತ್ತಿಪಾಠ	**ಪರಿಷತ್ ವೃತ್ತಿಪಾಠ**
೧. ಕ್ರಿಯಾತ್ಮಕಂಗಳಪ್ಪ[1]	ಕನ್ನಡಕ್ಕೆ ಕ್ರಿಯಾತ್ಮಕಂಗಳಪ್ಪ
೨. ಅಕಾರಾಂತ ನಪುಂಸಕಲಿಂಗಕ್ಕೆ ವಿಕಲ್ಪದಿಂ ದ್ವಿರ್ಭಾವಮಕ್ಕುಂ[2]	ಅಕಾರಾಂತ ನಪುಂಸಕಲಿಂಗದೊಳ್ ಪರಮಾದ ಚತುರ್ಥಿಗೆ ವಿಕಲ್ಪದಿಂ ದ್ವಿತ್ವಮಕ್ಕುಂ.
೩. ಉಕಾರಾಂತಂಗಳ್ಗೆಲ್ಲಮೆತ್ವಮಕ್ಕುಂ[3]	ಉಕಾರಾಂತದಿಗ್ವಾಚಕಂಗಳ್ಗೆತ್ವ-ಮಕ್ಕುಂ.
೪. ಆ ಬಿಂದು ಅಕಾರಾಂತ ನಪುಂಸಕ ಲಿಂಗದೊಳ್ ಬರೆ ವಿಕಲ್ಪಂ,	ಅಕಾರಾಂತ ನಪುಂಸಕದೊಳ್ ಗಳ್ದರೆ ಆ ಬಿಂದು ವಿಕಲ್ಪಂ

ಇಲ್ಲಿ ಪರಿಷತ್ ಪಾಠಗಳ ಅರ್ಥ ಸ್ಪಷ್ಟ. ಶ್ರೀ ಡಿ. ಎಲ್. ಎನ್. ಪಾಠಗಳ ಅರ್ಥ ಕ್ಲಿಷ್ಟ. ಇಂಥ ಸ್ಪಷ್ಟ ವೃತ್ತಿ ಕಣ್ಣೆದುರಿಗಿದ್ದರೂ ಸ್ವೀಕರಿಸದೆ, ಕೊನೆಯ ಪಕ್ಷಕ್ಕೆ ಅಡಿಯಲ್ಲಾದರೂ ಕೊಡದೆ ಇರುವುದು ಸಂಪಾದಕರ ಉದಾಸೀನ ಭಾವವನ್ನು ವ್ಯಕ್ತಗೊಳಿಸುತ್ತದೆ.

ಎರಡನೆಯದಾಗಿ ಶ್ರೀ ಡಿ. ಎಲ್. ಎನ್. ಮತ್ತು ಪರಿಷತ್ ಪ್ರತಿಗಳ ವೃತ್ತಿಗಳು ಕೆಲವು ಸಲ ಭಿನ್ನ ಅರ್ಥವನ್ನು ಕೊಡುವಷ್ಟು ವಿರುದ್ಧಮುಖಿಯಾಗಿವೆ. ಆಗಾಗ ಶ್ರೀ ಡಿ. ಎಲ್. ಎನ್. ಅವರ ಪಾಠದಲ್ಲಿ ಸಂದೇಹ, ದೋಷ ನುಸುಳಿ ಬಂದಿದೆ.

---

೧. ಶಬ್ದಮಣಿದರ್ಪಣಂ, ಸೂತ್ರ. ೮೪

೨. ಶಬ್ದಮಣಿದರ್ಪಣಂ, ಸೂತ್ರ. ೧೨೩

೩. ಶಬ್ದಮಣಿದರ್ಪಣಂ, ಸೂತ್ರ. ೧೨೯

ಶ್ರೀ ಡಿ. ಎಲ್. ಎಸ್.	**ಪರಿಷತ್**
೧. ಅನಿತಿನಿತೆಂದು ಪವಣಂ ಪೇೞ್ವ ಶಬ್ದಂಗಳ್ ನಿರ್ವಿಶೇಷ ಶಬ್ದಂಗಳ್; **ವಿಶೇಷದಿಂ ಸಂಖ್ಯೆಯನುಸಿರ್ವ** ಎಲ್ಲವು ಪಲವು ಕೆಲವು ಶಬ್ದಂಗಳ್ ವತ್ವವಿದಿರಿರ್ದೊಡಂ ಅಂತ್ಯವರ್ಣ ಲೋಪಮಂ ಪಡೆವುವು.[೪]	ಅನಿತು ಇನಿತು ಎನಿತು ಎಂದು ಪವಣಂ ಪೇೞ್ವ, **ನಿರ್ವಿಶೇಷದಿಂ** **ಸಂಖ್ಯೆಯಂ ಪೇೞ್ವ**, ಎಲ್ಲವು, ಕೆಲವು, ಪಲವು ಎಂಬ ಶಬ್ದಂಗಳ್ ವತ್ವಮಿದಿರೊಳ್ ಇರ್ದೊಡಮಂತ್ಯವರ್ಣಂ ಲೋಪಮಂ ಪಡೆವುವು.

[ಇಲ್ಲಿ 'ನಿರ್ವಿಶೇಷ' 'ವಿಶೇಷ' ಎಂಬ ಪದಬಳಕೆಯಲ್ಲಿ ಗದ್ದಲ ಕಂಡುಬರುತ್ತದೆ. ಇವುಗಳಲ್ಲಿ ಯಾವುದನ್ನು ಪ್ರಮಾಣಕ್ಕೆ, ಯಾವುದನ್ನು ಸಂಖ್ಯೆಗೆ ಹೊಂದಿಸಿಕೊಳ್ಳಬೇಕು?]

೨. ಇವಱ ಬಹುವಚನದೊಳ್ ಒಂದೆಂಬುದೇಕವಚನ ಮಾಗದು.[೫]	ಒಂದೆಂಬುದೇಕವಚನಮಾಗೆ ಅದಾಗದು.

[ಇಲ್ಲಿ ಪರಿಷತ್ ಪಾಠಕ್ಕಿಂತ ಡಿ. ಎಲ್. ಎನ್. ಪಾಠ ಹೆಚ್ಚು ತೊಡಕು ತೊಡಕಾಗಿದೆ]

೩. ಪ್ರಕಾರಕಾಲಾರ್ಥದ **ಗಡ** ಶಬ್ದ ಮಪ್ಪಲ್ಲಿಯಂತಪ್ಪ ನಿಂತಪ್ಪನೆಂಬಿವರ್ಕೆ ಹಕಾರಮಕ್ಕುಂ, ಮೇಣೆಂಬ ವಿಕಲ್ಪದಿಂ ಅನ್ನಂ, ಇನ್ನಂ, ಎಂದಾದೇಶಮಕ್ಕುಂ.[೬]	ಪ್ರಕಾರಾರ್ಥದ ಅಂತಪ್ಪ, ಇಂತಪ್ಪ, ಉಂತಪ್ಪ, ಎಂತಪ್ಪ ಎಂಬಿವರ್ಕೆ ಹಕಾರಮಕ್ಕುಂ, ಮೇಣೆಂಬುದಱಿಂದ ವರ್ಕೆ **ಗಡ** ಶಬ್ದಾರ್ಥಮಪ್ಪಲ್ಲಿ ಅಂನಂ ಉಂನಂ, ಇಂನಂ ಎಂದುಮಕ್ಕುಂ

[ಪ್ರಕಾರಕಾಲಾರ್ಥ, ಪ್ರಕಾರಾರ್ಥ, ಈ ಎರಡರಲ್ಲಿ ಯಾವುದು ಸರಿ? ಎರಡನೆಯದಾಗಿ ಅಂತಪ್ಪ, ಇಂತಪ್ಪ ಎಂಬಿವು ಗಡಾರ್ಥ ಶಬ್ದಗಳೋ, ಅನ್ನಂ ಇನ್ನಂ ಎಂಬಿವು ಗಡಾರ್ಥ ಶಬ್ದಗಳೋ?]

೪. ನಿರ್ಧಾರಣಮೆಂಬುದು ಗುಣದಿಂ ಮೇಣ್ ಕ್ರಿಯೆಯಿಂ ಮೇಣ್ ಜಾತಿಯತ್ತಣಿಂ, ವಸ್ತುವಂ ಬೇರ್ಕೆಯ್ಯುವುದು.[೭]	ನಿರ್ಧಾರಣಮೆಂಬುದು ಗುಣಮೆಂಬ, ಕ್ರಿಯೆಯೆಂಬ ಎರಡಱಿಂ, ಜಾತಿ ಯತ್ತಣಿಂ ವಸ್ತುವಂ ಬೇರ್ಕೆಯ್ವುದು.

---

೪. ಶಬ್ದಮಣಿದರ್ಪಣಂ, ಸೂತ್ರ.೧೧೦

೫. ಶಬ್ದಮಣಿದರ್ಪಣಂ, ಸೂತ್ರ.೧೫೯

೬. ಶಬ್ದಮಣಿದರ್ಪಣಂ, ಸೂತ್ರ. ೧೭೧

೭. ಶಬ್ದಮಣಿದರ್ಪಣಂ, ಸೂತ್ರ. ೧೪೪

[ಗುಣ, ಕ್ರಿಯೆ, ಜಾತಿ ಎಂಬ **ಮೂರರ** ಅವಲಂಬನದಿಂದ ವಸ್ತುವನ್ನು ಬೇರೆ ಮಾಡುವುದೇ ನಿರ್ಧಾರಣ ಎಂಬ ಅರ್ಥ ಶ್ರೀ ಡಿ. ಎಲ್. ಎನ್. ಪಾಠದಿಂದ ಹೊರಡುತ್ತಿದ್ದರೆ, ಗುಣ, ಕ್ರಿಯೆ ಎಂಬ **ಎರಡರ** ಅವಲಂಬನದಿಂದ ವಸ್ತುವನ್ನು ಜಾತಿಯಿಂದ ಬೇರೆ ಮಾಡುವುದೇ ನಿರ್ಧಾರಣ. ಎಂಬ ಅರ್ಥ ಪರಿಷತ್ ಪಾಠದಿಂದ ಹೊರಡುತ್ತದೆ.]

೫. "ಆಮಂತ್ರಣದೊಳ್ ಸ್ವರಾಂತ **ವ್ಯಂಜನಾಂತ** ಲಿಂಗಗಳ ಪ್ರಥಮೈಕ ವಚನಕ್ಕೆ ಲೋಪಿಸುವರ್..."[೮]

ಆಮಂತ್ರಣದೊಳ್ ಸ್ವರಾಂತಗಳ ಪ್ರಥಮೈಕ ವಚನಕ್ಕೆಲ್ಲಿಯುಂ ಲೋಪಂ

[ಸ್ವರಾಂತಲಿಂಗ, ವ್ಯಂಜನಾಂತ ಲಿಂಗಗಳು ತಮ್ಮ ಪ್ರಥಮಾ ಏಕವಚನವನ್ನು ಲೋಪಿಸಿಕೊಂಡು ಸಂಬೋಧನೆ ಎನಿಸಿಕೊಳ್ಳುತ್ತವೆ ಎಂದು ಶ್ರೀ ಡಿ. ಎಲ್. ಎನ್. ಪಾಠದ ಅರ್ಥ. ಆದರೆ ಈ ಹಿಂದೆ ಹೇಳಿದ "ಬಿಂದುವದಂತಕ್ಕುಳಿದೆಡೆಗೆಂದುಂ ಪ್ರಥಮೈಕ ವಚನದೊಳ್ ಲೋಪಂ...." ಎಂಬ ಸೂತ್ರ (೧೧೫) ದಿಂದ ಹೊರಡುವ ಪ್ರಥಮಾ ಏಕವಚನದಲ್ಲಿ ಅಕಾರಾಂತ ಪ್ರಕೃತಿಗಳಿಗೆ ಮಾತ್ರ ಬಿಂದು ಬರುತ್ತದೆ. ಮಿಕ್ಕ ಸ್ವರಾಂತ ವ್ಯಂಜನಾಂತಗಳು ಪ್ರಕೃತಿರೂಪದಲ್ಲಿಯೇ ಪ್ರಯೋಗವಾಗುತ್ತವೆ ಎಂಬ ಅರ್ಥವನ್ನು ಗಮನಿಸಿದರೆ ಶ್ರೀ ಡಿ. ಎಲ್. ಎನ್. ಅವರು ಇಲ್ಲಿ "ವ್ಯಂಜನಾಂತ ಲಿಂಗಂಗಳ ಪ್ರಥಮೈಕ ವಚನಕ್ಕೆ ಲೋಪಂ" ಎಂದು ಹೇಳಿದುದು ನಗೆ ತರಿಸುತ್ತದೆ. ವ್ಯಂಜನಾಂತಲಿಂಗ (ಪುಲ್–ಪೊದರ್)ಗಳಿಗೆ ಪ್ರಥಮಾ ಏಕವಚನದಲ್ಲಿ ಪ್ರತ್ಯಯವೇ ಹತ್ತುವುದಿಲ್ಲ ಎಂದ ಮೇಲೆ ಅವು ಪ್ರತ್ಯಯವನ್ನು ಹೇಗೆ ಕಳೆದುಕೊಳ್ಳಬೇಕು? ಅದಿರಲಿ, ವ್ಯಂಜನಾಂತ ಎಂಬ ಪಾಠವನ್ನು ಸ್ವೀಕರಿಸಿದ ಅವರು ಕೆಳಗೆ ಕೊಟ್ಟ "**ದೇವ** ಬಿನ್ನಪಂ, ಬೆಸೆಯದಿರ್ **ಕುಸುಮಾಯುಧ,** ಕೇಳ್ **ಮಾಧವ"** ಎಂಬ ಉದಾಹರಣೆಗಳೆಲ್ಲ ಸ್ವರಾಂತ (ಅದರಲ್ಲಿಯೂ ಅಕಾರಾಂತ)ವಾಗಿವೆ ಎಂಬುದನ್ನು ನೆನೆದಾಗ ಅವರ ವೃತ್ತಿಪಾಠ ದೋಷ ಇನ್ನಷ್ಟೂ ಥಟ್ಟನೇ ಹೊಳೆಯುತ್ತದೆ. ಇದರಿಂದ ಶ್ರೀ ಡಿ. ಎಲ್. ಎನ್. ಅವರು ಕಿಟೆಲ್, ಪರಿಷತ್ ಪ್ರತಿಗಳ "ಸ್ವರಾಂತಲಿಂಗಗಳ" ಎಂಬ ಶುದ್ಧಪಾಠವನ್ನು ತಿರಸ್ಕರಿಸಿ ಅಡಿಯಲ್ಲಿ ಕೊಟ್ಟು, "ಸ್ವರಾಂತ ವ್ಯಂಜನಾಂತ ಲಿಂಗಂಗಳ" ಎಂಬ ಅಶುದ್ಧ ಪಾಠವನ್ನು ಸ್ವೀಕರಿಸಿ ಮೇಲೆ ಇಟ್ಟುಕೊಳ್ಳಬಾರದಿತ್ತು ಎಂದು ಸ್ಪಷ್ಟವಾಗುತ್ತದೆ].

೬. "ಸ್ತ್ರೀಪುನ್ನಪುಂಸಕಮೆನ್ನದೆ ಸಂಬೋಧನೆಯ ಕಡೆಯೊಳ್ ಏ ಏ ಎಂಬಿವಕ್ಕು"[೯]

ಲಿಂಗತ್ರಯಮೆನ್ನದೆ, ವಚನತ್ರಯಮೆನ್ನದೆ ಸ್ವರಾಂತ ವ್ಯಂಜನಾಂತಂಗಳೆನ್ನದೆ, ಸಾಮಾನ್ಯದಿಂ ಸಂಬೋಧನೆಯ ಕಡೆಯೊಳ್ ಏ ಏ ಎಂಬಿವಕ್ಕುಂ

---

೮. ಶಬ್ದಮಣಿದರ್ಪಣಂ, ಸೂತ್ರ. ೧೩೪

೯. ಶಬ್ದಮಣಿದರ್ಪಣಂ, ಸೂತ್ರ. ೧೩೫

[ಮೇಲಣ ಶ್ರೀ ಡಿ.ಎಲ್. ಎನ್. ವೃತ್ತಿ ಮತ್ತು ಪರಿಷತ್ತ್ ವೃತ್ತಿಗಳು ಭಿನ್ನವಾಗಿದ್ದು ಒಂದು ಸಂಕ್ಷಿಪ್ತ, ಇನ್ನೊಂದು ವಿವರ. ಇಲ್ಲಿ ಪರಿಷತ್ತ ಪ್ರತಿಯ 'ವಚನತ್ರಯಮೆನ್ನದೆ, ಸ್ವರಾಂತ ವ್ಯಂಜನಾಂತಂಗಳೆನ್ನದೆ' ಎಂಬ ಹೆಚ್ಚಿನ ಮಾತು ನಿರರ್ಥಕವಲ್ಲ, ಏಕೆಂದರೆ ಎ ಏ ಎಂಬಿವು ವಚನತ್ರಯಕ್ಕೂ, ಸ್ವರಾಂತ ವ್ಯಂಜನಾಂತಲಿಂಗಗಳಿಗೂ ಹತ್ತಿ ಸಂಬೋಧನೆಯನ್ನು ಸಿದ್ಧಿಸುತ್ತವೆ. ಇದೆಲ್ಲವನ್ನು ನೋಡಿದರೆ ಶ್ರೀ ಡಿ.ಎಲ್.ಎನ್. ಅವರು ವಿವರ ಪೂರ್ಣವಾದ ಕಿಟೆಲ್, ಪರಿಷತ್ ಪ್ರತಿಗಳ ಪಾಠವನ್ನು ಅಡಿಯಲ್ಲಿ ಕೊಟ್ಟು ಸಂಕ್ಷಿಪ್ತವಾದ ಪಾಠವನ್ನು ಮೇಲಿಟ್ಟುಕೊಂಡುದು ಅರ್ಥ ಸಂಕುಚಿತಕ್ಕೆ ಕಾರಣವಾಗಿದೆ].

೭. ವಿಶೇಣ ಪದಂಗಳ್ ಪ್ರಥಮಾ ವಿಭ ಕ್ತಿಯಂ ಪಡೆದು, ವಾಕ್ಯಮೊದಲೋ **ಳಿರ್ದುಂ** ತುದಿಯಕಾರಕ ಪದದ **ವಿಭಕ್ತಿಯೆನೆ ಕೈಕೊಳ್ಳವನ್ವಯಿಸು** ವಲ್ಲಿ.[೧೦]	ವಿಶೇಷಣ ಪದಂಗಳ್ ಪ್ರಥಮಾ ವಿಭ- ಕ್ತಿಯಂ ಪಡೆದು, ವಾಕ್ಯದಮೊದಲೊ ಳಿರ್ದು ಅನ್ವಯಿಸುವಲ್ಲಿ ತುದಿಯ ಕಾ ರಕ ಪದದ ವಿಭಕ್ತಿಯನೆ ತಳೆವುದು

[ಈ ವೃತ್ತಿಯಲ್ಲಿ ಮೂರುದೋಷಗಳಿವೆ. ಒಂದು: "ಅನ್ವಯಿಸುವಲ್ಲಿ" ಎಂದುದು ಕೊನೆಗೆ ಬಂದುದು ಪ್ರಾಚೀನ ಕನ್ನಡದ ವಾಕ್ಯರಚನಾಕ್ರಮಕ್ಕೆ ವಿರೋಧಿಯಾಗಿದೆ. ಅಂದರೆ ಆಧುನಿಕ ಕ್ರಮ ಕಂಡುಬಂದಿದೆ. ಎರಡು: "ವಾಕ್ಯದಮೊದಲೊಳಿರ್ದುಂ" ಎಂಬಲ್ಲಿಯ 'ಉಂ' ಅನಾವಶ್ಯಕ. ಮೂರು: 'ವಿಭಕ್ತಿಯನೆ' ಎಂಬುದಕ್ಕೆ ಪ್ರತಿಯಾಗಿ 'ವಿಭಕ್ತಿಯೆನೆ' ಎಂಬ ಅಚ್ಚುದೋಷ ತಲೆದೋರಿದೆ.]

ಇವಗಳಲ್ಲದೆ–

ಸಂವಿಧಾನ(ಪು. ೧೫೨) ಆಕಾಂತ ಪುಲ್ಲಿಂಗಕ್ಕೆ (ಪು. ೧೩೧) ಅನಿತಿನಿತೆಂದು (ಪು. ೧೧೬)ವಿಭಕ್ತಿಯದೆ(ಪು. ೧೪೯) ಎಂಬ ಮುದ್ರಣ ದೋಷಗಳು ಕಂಡುಬರುತ್ತವೆ. ಇವುಗಳನ್ನು ಸನ್ನಿಧಾನ, ಅಕಾರಾಂತ ಪುಲ್ಲಿಂಗಕ್ಕೆ, ಅನಿತಿನಿತೆಂದು, ವಿಭಕ್ತಿಯನೆ ಎಂದು ತಿದ್ದಿಕೊಳ್ಳಬೇಕು.

ಕೊನೆಯದಾಗಿ 'ಸರ್ವನಾಮದ ಲಿಂಗದ ಕಡೆಯಕ್ಕರ"[೧೧] ಎಂಬ ಪಷ್ಠೀಪ್ರತ್ಯಯದ, 'ಕೃಲ್ಲಿಂಗಂ ಮಾಟ್ಟುದು'[೧೨] 'ಲಿಂಗಂ ಮಾಟ್ಟರ್'[೧೩] ಎಂಬ ದ್ವಿತೀಯಾ ಪ್ರತ್ಯಯದ ಪ್ರಯೋಗಗಳು ಅಧಿಕ ಸಂಖ್ಯೆಯಲ್ಲಿ ತಲೆದೋರಿವೆ. ಅವುಗಳನ್ನು ಹೀಗೆ ಸಂಗ್ರಹಿಸಬಹುದು.

ಪ್ರಯೋಗ

ದರ್ಪಣವನ್ನು ಬಿಚ್ಚಿ ನೋಡಿದರೆ ಸೂತ್ರ, ವೃತ್ತಿ, ಪ್ರಯೋಗ–ಈ ಕ್ರಮದಲ್ಲಿ ಮುಂದಣ ಅಭ್ಯಾಸಿಗಳ ಕುಶಲಹಸ್ತದಿಂದ ಪಾಠವ್ಯತ್ಯಾಸ ವರ್ಧಿಸುತ್ತ ಹೋದುದು ನಮ್ಮ ಗಮನಕ್ಕೆ ಬರುತ್ತದೆ. ಪ್ರಸ್ತುತ ಪ್ರಯೋಗ ವಲಯದಲ್ಲಿ ಲೋಪ, ಆಗಮ, ಆದೇಶರೂಪದ ದೋಷಗಳು ಅಧಿಕ ಸಂಖ್ಯೆಯಲ್ಲಿ ತಲೆದೋರಿವೆ. ಅವುಗಳನ್ನು ಹೀಗೆ ಸಂಗ್ರಹಿಸಬಹುದು.

---

೧೦. ಶಬ್ದಮಣಿದರ್ಪಣಂ, ಸೂತ್ರ. ೧೫೧

೧೧. ಶಬ್ದಮಣಿದರ್ಪಣಂ, ಪು. ೧೧೨

೧೨. ಶಬ್ದಮಣಿದರ್ಪಣಂ, ಪು. ೮೯

೧೩. ಶಬ್ದಮಣಿದರ್ಪಣಂ, ಪು. ೯೪

ತಪ್ಪು	ಆಕ್ಷೇಪಣೆ	ಒಪ್ಪು	ಪುಟ-ಸಾಲು
೧. ಧರಿಯಿಪ್ಪವೋಲ್	ಇಸುಪ್ರತ್ಯಯಕ್ಕಾಗಿ ಕೊಟ್ಟ ಈ ಉದಾಹರಣೆಯಲ್ಲಿ ಇಸು ಪ್ರತ್ಯಯವೇ ಇಲ್ಲ	ಧರಿಸುವವೋಲ್	೮೯-೨೪
೨. ಮರದತ್ತಣಿಂ ಮರದೊಳ್	ಸಪ್ತವಿಭಕ್ತಿಗಳನ್ನೆಣಿಸಿ ತೋರಿಸುವಲ್ಲಿ ಮಧ್ಯಷಷ್ಠಿ ಮಾಯವಾಗಿದೆ	ಮರದತ್ತಣಿಂ ಮರದ ಮರದೊಳ್	೧೦೯-೧೨
೩. ದ್ವಿವಚನಕ್ಕೆ..... ಪಣ್ಗಳ್	'ಪಣ್ಗಳ್' ದ್ವಿವಚನವಲ್ಲ. ಬಹುವಚನ	ದ್ವಿವಚನಕ್ಕೆ.... ಕಣ್ಗಳ್	೧೧೦-೨೩
೪. ಪೆಜಿವರ ಧರ್ಮಂಗಳ... ಪಣ್ಗಳ್	ಇಲ್ಲಿ ಪೆಜಿವರ ಎನ್ನುವುದು ಪು, ಸ್ತ್ರೀ, ಸೂಚಿ ನಪುಂಸಕ ಸೂಚಿ ಅಲ್ಲ.	ಪೆಜಿವಜಿಧರ್ಮಂಗಳ	೧೧೨-೫
೫. ಗ್ಲೌವಿನ	ಔಕಾರ, ಓಕಾರಗಳ ಇನಾಗ ಮೋದಾಹರಣೆಗಳಲ್ಲಿ ಔಕಾರಕ್ಕೆ ಮಾತ್ರ ಇದ್ದು ಓಕಾರಕ್ಕೆ ಕಂಡುಬರುವದಿಲ್ಲ	ಗ್ಲೌವಿನ **ಗೋವಿನ**	೧೨೫-೧೧
೬.	'ಆವುದು' ಎಂಬ ಶಬ್ದಕ್ಕೆ 'ಆವಂ' ಎಂಬಾದೇಶವಾಗು ತ್ತದೆ. ಎಂದು ಹೇಳಿ ಪ್ರಯೋಗ ಕೊಟ್ಟಿಲ್ಲ.	ಆವಂ ಮುರನಂ ಕೊಂದನದಾವಂ ಬಕಕಂಸಕೇಶಿ ಗಳದಟಲೆದಂ	೧೬೯-೧೮
೭. ಚಂದ್ರನೇ ಕೊಳನೇ ನಂದನಮೇ	ಸಂಬೋಧನೆಯಲ್ಲಿ ಅಕಾರಾಂ ತಕ್ಕೆ ಎ ಏ ಸೇರುವಾಗ ಬಿಂದು ಬರುತ್ತದೆ ಎಂದು ಹೇಳಿ ಕೇವಲ ಏಕಾರಕ್ಕೆ ಉದಾಹರಣೆ ಕೊಟ್ಟಂತಾಗಿದೆ	ಎಕಾರಾಂತಕ್ಕೆ ಒಂದು ಪ್ರಯೋಗ ಬೇಕು	೧೪೩-೧೩
೮. ಭಟ್ಟರೆ ದೇವರೆ.....	ಸಂಬೋಧನೆಯಲ್ಲಿ ಬಹು ವಚನದ ಅರ್ ಎಂಬುದರ ಮೇಲೆ ಎ, ಏ, ಸೇರುತ್ತವೆ	ಇಲ್ಲಿ 'ದೇವರೆ' ಎಂಬುದನ್ನು ದೀರ್ಘ ಮಾಡಿ	೧೪೩-೧೩

ಎಂದು ಹೇಳಿ ಕೇವಲ ಕೊಳ್ಳಬಹುದು
ಏಕಾರಕ್ಕೆ ಉದಾಹರಣೆ
ಕೊಟ್ಟಿದ್ದಾರೆ.

ಇದೆಲ್ಲವನ್ನು ನೋಡಿದರೆ ಕೆಲವು ಸಲ ಲಕ್ಷಣಗಳಿಗೆ ಲಕ್ಷ್ಯಗಳೇ ಇಲ್ಲ, ಇದ್ದರೂ ಕೆಲವು ದೋಷಯುಕ್ತವಾಗಿವೆ ಎಂಬ ಆರೋಪ ಈ ಸಂಪಾದನೆಗೆ ತಟ್ಟುತ್ತದೆ. ಎರಡನೆಯದಾಗಿ ಅಚ್ಚುದೋಷಗಳೂ ಇಲ್ಲಿ ಹೇರಳವಾಗಿ ಉಳಿದುಕೊಂಡಿವೆ.

ತಪ್ಪು	ಒಪ್ಪು	ಪುಟ. ಸಾಲು
೧.²ತೆಂಗಾಳಿ...ನೆರ್ದೆಯಂ³	³ತೆಂಗಾಳಿ..ನೆರ್ದೆಯಂ³	೮೬-೧೭
೨. ²ಬಾ*ಲವಣಂ	²ಬಾಲವಣಂ	೮೮-೨೪
೩. ಆ ವೇಶ್ಯಾ....ಪೊಯ್ವಂ³	³ಆ ವೇಶ್ಯಾ.....ಪೊಯ್ವಂ³	೮೮-೨೬
೪. ²(ಳ್ಗ)ಲಾನಂ²	³(ಳ್ಗ)ಲಾನಂ³	೯೦-೨೦
೫. ನಗೆಯಿಂದಿರ್ದಂ	ನಗೆಯಿಂದಿರ್ದೆಂ	೯೪-೨೩
೬. ಗುರುನಾಣ್ಭರದಿನೆಱಗಿ	ಗುರುನಾಣಾಭರದಿನೆಱಗಿ	೯೪-೨೪
೭. ಪುರಾತನ ಕಲಿಗಳ್	ಪುರಾತನ ಕವಿಗಳ್	೧೧೫-೪
೮. ಪ್ರೋಲ್ಲಸತಲ್ಲವ	ಪ್ರೋಲ್ಲಸತ್ಪಲ್ಲವ	೧೨೦-೧೭
೯. ನಿರಾಕುಳಮಿರ್ಪಾ	ನಿರಾಕುಳಮಾಗಿರ್ಪಾ	೧೨೨-೨
೧೦. ಪಾಯೋಪ	ಪ್ರಾಯೋಪ	೧೨೨-೪
೧೧. ನಿಲ್ಲಿದನೆಲ್ಲಿದನೀಗಳೆಂಬಿನಂ	ನಿಲ್ಲಿದನೀಗಳೆಂಬಿನಂ	೧೨೯-೧೫
೧೨. ಏನಾಗಿಯುಮೇನೋ	ಏನಾಗಿಯುಮೇನೊ	೧೩೦-೭
೧೩. ಸೋಲ್ಪ	ಸೋಲ್ವ	೧೩೫-೨೩
೧೪. ಎನಿತ್ತೆನಿತ್ತೆಂಬುಜ	ಎನಿತ್ತೆನಿತ್ತಂಬುಜ	೧೩೬-೬
೧೫. ಕಾಮೋರಗ	ಕಾಮಕಾಳೋರಗ	೧೪೪-೨೭
೧೬. ನೀನಿದಾರ	ನೀನದಾರ	೧೪೫-೨
೧೭. ಸವತಿಗೆ ಪುರಡಿಪಳ್	ಸವತಿಗೆ ಸವತಿ ಪುರುಡಿಪಳ್	೧೪೯-೨೫
೧೮. ಕತ್ತಿಗೆಯುಂ ಬೆಸಸಿದಂ	ಕತ್ತಿಗೆಯಂ ಬೆಸಸಿದಂ	೧೫೦-೧೦
೧೯. ಕಳಶದಿ	ಕಳಶದ	೧೫೨-೧೫
೨೦. ಚಲದ್ಭೂಲತಾ	ಚಲದ್ಭ್ರೂಲತಾ	೧೬೧-೧೨
೨೧. ಗತಿಯೆನಿಸಿದಂ	ಸುಗತಿಯೆನಿಸಿದಂ	೧೬೪-೧೬
೨೨. ಕಿಱೆಯುಂ	ಕಿಱೆಯಂ	೧೭೦-೨೪

ಈ ಅಚ್ಚು ದೋಷಗಳು ಆಗಮಿಸಿ ಅರ್ಥದೋಷ, ಛಂದೋದೋಷಗಳು ತಲೆದೋರಲು ಆಸ್ಪದ ನೀಡಿದೆ.

ಮೂರನೆಯದಾಗಿ ತಾವು ಬಳಸಿದ ಕಿಟೆಲ್ ಮೊದಲಾದ ಪ್ರತಿಗಳಲ್ಲಿ ಪ್ರಯೋಗಗಳಿಗೆ ತಲೆಬರಹ ಇದ್ದರೂ ತಮ್ಮ ಸಂಪಾದನೆಯಲ್ಲಿ ಅವುಗಳನ್ನು ಬಳಸಿಲ್ಲ.

ಶ್ರೀ ಡಿ.ಎಲ್. ಎನ್.	**ಕಿಟೆಲ್**
೧. ಪ್ರಯೋಗಂ–ಕೊಳದೊಳ್–	ಪ್ರಯೋಗಂ–ಒಳ್, ಅಲ್ಲಿ ಎಂಬಿವರ್ಕೆ
ಕೊಳದಲ್ಲಿ[೧೪]	ಕೊಳದೊಳ್–ಕೊಳದಲ್ಲಿ.
೨. ಪ್ರಯೋಗಂ–ಮುಂದು–	ಪ್ರಯೋಗಂ–ತುಕಾರಕ್ಕೆ–ಮುಂದು–
ಮುಂತು.[೧೫]	ಮುಂತು.
೩. ಪ್ರಯೋಗಂ....	ಪ್ರಯೋಗಂ–ಪಂಚಮಿಯ ನಿಜರೂಪಕ್ಕೆ
ಆಳ್ದನನಂಟತ್ತಣಿಂ.[೧೬]	ಆಳ್ದನನಂಟರತ್ತಣಿಂ.

ತಲೆಬರಹ ಇದ್ದಷ್ಟು ಪ್ರಯೋಗಗಳ ಅರ್ಥಸ್ಪಷ್ಟತೆಗೆ ಅನುಕೂಲ. ಇಲ್ಲದಿದ್ದರೆ ಸೂತ್ರವನ್ನೋ, ವೃತ್ತಿಯನ್ನೋ ಇನ್ನೊಮ್ಮೆ ಓದಬೇಕಾಗುತ್ತದೆ.

ನಾಲ್ಕನೆಯದಾಗಿ ಸೂತ್ರವೃತ್ತಿಗಳ ತರುವಾಯ ಹೊಸ ವಿಭಾಗವನ್ನು ಸ್ಥಾಪಿಸುವ 'ಪ್ರಯೋಗಂ' ಎಂಬ ಪದ ಕೆಲವು ಸಲ ಕಂಡುಬರುವುದಿಲ್ಲ.

ಶ್ರೀ ಡಿ.ಎಲ್. ಎನ್.	**ಕಿಟೆಲ್**
ವೃತ್ತಿ–ಪಿರಿದುಂ... ಪ್ರಕೃತಿಯಪ್ಪು	ವೃತ್ತಿ–ಪಿರಿದುಂ...........ಪ್ರಕೃತಿಯಪ್ಪುವು.
ದೆಂದಜಿವುದು. ನೀನಾರ್ಗಾನಾರ್ಗೆ	ಪ್ರಯೋಗಂ–ನೀನಾರ್ಗಾನಾರ್ಗೆ.[೧೭]

ಹೀಗೆ ವೃತ್ತಿಗೆ ಹತ್ತಿಕೊಂಡೇ ಉದಾಹರಣೆಗಳು ಪ್ರಾರಂಭವಾದರೆ ವೃತ್ತಿಕ್ಷೇತ್ರ, ಪ್ರಯೋಗಕ್ಷೇತ್ರಗಳಲ್ಲಿ ಮಿಶ್ರಣರೂಪ ತಲೆದೋರುತ್ತದೆ.

ಐದನೆಯದಾಗಿ ಮೂಲರೂಪ, ಪರಿವರ್ತಿತರೂಪಗಳನ್ನು ವಿವರಿಸುವಲ್ಲಿ ಪರಿವರ್ತಿತ ರೂಪಗಳನ್ನೇ ತಲೆಬರಹಗಳಲ್ಲಿ ಇಡಬೇಕು. ಆದರೆ ಶ್ರೀ ಡಿ.ಎಲ್. ಎನ್. ಅವರು ಒಮ್ಮೊಮ್ಮೆ ಮೂಲರೂಪಗಳನ್ನೇ ಇಟ್ಟಿದ್ದಾರೆ.

---

೧೪. ಶಬ್ದಮಣಿದರ್ಪಣಂ, ಸೂತ್ರ. ೧೨೯

೧೫. ಶಬ್ದಮಣಿದರ್ಪಣಂ, ಸೂತ್ರ. ೧೩೦

೧೬. ಶಬ್ದಮಣಿದರ್ಪಣಂ, ಸೂತ್ರ. ೧೨೬

೧೭. ಶಬ್ದಮಣಿದರ್ಪಣಂ, ಸೂತ್ರ. ೧೫೭

ಶ್ರೀ ಡಿ.ಎಲ್. ಎನ್.	ಕಿಟೆಲ್
ಪ್ರಯೋಗಂ–ಪಕಾರಕ್ಕೆ–ಪಲಗೆ ಹಲಗೆ[೧೮]	ಪ್ರಯೋಗಂ–ಹಕಾರಕ್ಕೆ–ಪಲಗೆ–ಹಲಗೆ

ಇಲ್ಲಿ ಕಿಟೆಲ್ ಪ್ರತಿಯ 'ಹಕಾರಕ್ಕೆ' ಎಂಬುದೇ ಯೋಗ್ಯಪಾಠವೆನಿಸಿವೆ. ಅಧಿಕಸಲ ಪರಿವರ್ತಿತ ರೂಪಗಳನ್ನೇ ತಲೆಬರಹ ಸೂಚಿಯಾಗಿ ಬಳಸುವ ಇವರು ಇಲ್ಲಿ ಮೂಲ ರೂಪವನ್ನು ಬಳಸಿರುವುದನ್ನು ಗಮನಿಸಿದರೆ ಅವುಗಳಲ್ಲಿ ಒಂದು ಕ್ರಮಪರಿಪಾಲನೆ ಇಲ್ಲವೆಂದು ಸ್ಪಷ್ಟವಾಗುತ್ತದೆ.ಇದಲ್ಲದೆ–

ಶ್ರೀ ಡಿ.ಎಲ್. ಎನ್.	ಕಿಟೆಲ್
ವಿಕಲ್ಪದಿಂ ಬಿಂದುವಿಕ ಪಂಚ–ಮಕ್ಕೆ–ಅವಂ ಕಡುಗಲಿ, ಅವಜ್ಞ–ಡುಗಲಿ......[೧೯]	ವರ್ಗಪಂಚಮಕ್ಕೆ–ಅವಜ್ಞಡುಗಲಿ

ಮೇಲಣ ಎರಡೂ ಪಾಠಗಳನ್ನು ತುಲನಿಸಿದರೆ ಕಿಟೆಲ್ ಅವರ ತಲೆಬರಹವೇ ಅರ್ಥಪೂರ್ಣವಾದುದು ಎಂದು ತಿಳಿದುಬರುತ್ತದೆ.

ಕೊನೆಯದಾಗಿ ಲಕ್ಷ್ಯಕ್ಷೇತ್ರಕ್ಕೆ ತಲೆಬರಹವನ್ನಿಡುವಲ್ಲಿ 'ಪ್ರಯೋಗಂ' ಎಂಬುದನ್ನು ಸಾಮಾನ್ಯವಾಗಿ ಬಳಸುವ ಇವರು ಕೆಲವು ವೇಳೆ 'ಉದಾಹರಣಂ' ಎಂಬ ಪದವನ್ನೂ ಬಳಸುತ್ತಾರೆ. "..........ಮುಗಿಸುವರದರ್ಕುದಾಹರಣಂ–ಅವತಂಸೋತ್ಪಲ ತಾಡನಂ"[೨೦]

ಇದಲ್ಲದೆ ಒಂದೇ ಸೂತ್ರದ ಕೆಳಗೆ 'ಪ್ರಯೋಗ' ಎಂಬ ಪದ ಅನೇಕ ಸಲ ಮುದ್ರಣಗೊಂಡಿದೆ.

ಪ್ರಯೋಗಂ–ಕೃತ್ತಿಂಗೆ

ವಿಭಕ್ತಿ ಪ್ರಯೋಗಂ

ನಾಮಲಿಂಗಕ್ಕೆ ಪ್ರಯೋಗಂ–

ಪ್ರಯೋಗಂ–ಅರಸಂ ಮೂರ್ಖಂ(ಸೂತ್ರ–೮೨)

ಇದರೊಂದಿಗೆ ಕಿಟೆಲ್ ಪ್ರತಿಯನ್ನು ಹೋಲಿಸಿ ನೋಡಿದರೆ ಅಲ್ಲಿ 'ಪ್ರಯೋಗ' ಎಂಬುದನ್ನು ಒಮ್ಮೆ ಮುದ್ರಿಸಿ ಲಕ್ಷಣವಾಗಿ ಉದಾಹರಣೆಗಳನ್ನು ವಿವರಿಸಿಬಿಡಲಾಗಿದೆ. ಇಂಥ ಅವ್ಯವಸ್ಥಿತ ಮುದ್ರಣದಿಂದ ಸಂಪಾದನೆ ಕಸ–ಮುಸುರೆಯಾಗಿ ಕಾಣುತ್ತದೆ.

---

೧೮. ಶಬ್ದಮಣಿದರ್ಪಣಂ, ಸೂತ್ರ, ೧೭೦

೧೯. ಶಬ್ದಮಣಿದರ್ಪಣಂ, ಸೂತ್ರ, ೧೭೨

೨೦. ಶಬ್ದಮಣಿದರ್ಪಣಂ, ಸೂತ್ರ, ೧೫೩

ಟೀಕೆ

ಟೀಕೆಯನ್ನು ಪರಿಷ್ಕರಿಸುವ ಹವ್ಯಾಸಕ್ಕೆ ಹೋಗಿಲ್ಲವಾದುದರಿಂದ ಪರಿಷ್ಕೃತ ಸೂತ್ರ, ಪಾಠ, ಅಪರಿಷ್ಕೃತ ಟೀಕೆ ಪಾಠಗಳಲ್ಲಿ ಹಲವು ಸಲ ಹೊಂದಿಕೆ ಕಂಡುಬರುವದಿಲ್ಲ. (ಉದಾ: ಸೂತ್ರದಲ್ಲಿ ಆಸಾದಿತ, ಟೀಕೆಯಲ್ಲಿ ಆಪಾದಿತ). ಟೀಕೆ ಪರಿಷ್ಕರಣಗೊಂಡಿದ್ದರೆ ಇಂಥ ವ್ಯತ್ಯಾಸ ಕೆಲಮಟ್ಟಿಗಾದರೂ ಕಡಿಮೆಯಾಗಬಹುದಿತ್ತು.

ಎರಡನೆಯದಾಗಿ ಮುದ್ರಣದೋಷಗಳೂ ಅಧಿಕ ಸಂಖ್ಯೆಯಲ್ಲಿ ಉಳಿದಿವೆ.

ತಪ್ಪು	ಒಪ್ಪು	ಪುಟ. ಸಾಲು
೧. ಬೇಧವಾಗಿರ್ಪುದು	ಭೇದವಾಗಿರ್ಪುದು	೮೫ ೧೧
೨. ಬಸಿದು–ಬಿಸಿದೆಂದು	ಬಿಸಿದು–ಬಿಸಿದೆಂದು	೯೨ ೧೦
೩. ಅರಾ ಎಂಬಾದೇಶತ್ವಂ	ಅರ ಎಂಬಾದೇಶತ್ವಂ	೧೦೦ ೨
೪. ಕೃತಂ	ಕೃತ	೧೦೨ ೪
೫. –ದುಃ ಎಂಬುದುಂ ಸತ್ ಎಂಬುದುಂ,	–ದುಃ ಎಂಬುದುಂ, ಸತ್ ಎಂಬುದುಂ ಸು ಎಂಬುದುಂ	೧೦೮ ೧೧
೬. –ಇರೆ ಸು ಎಂಬುದುಂ	–ಇರೆ	೧೦೮– ೧೨
೭. ಕೆ. ಆತ್	ಕೆ.ಅತ್	೧೦೯ ೩
೮. ಅವು–(ಇವು ಉವು)	ಅವು–ಅವು(ಇವು, ಉವು)	೧೧೦ ೧೮
೯. ಅಕ್ಷರದಭಾವಂ	ಅಕ್ಷರದ ಭಾವಂ	೧೧೨ ೨೦
೧೦. ಅದೆಂತ	ಅದಂತ	೧೨೨ ೨೦
೧೧. ದ್ವಿತಿಯಾ ವಿಭಕ್ತಿಯಲ್ಲಿ	ದ್ವಿತೀಯಾ ವಿಭಕ್ತಿಯಲ್ಲಿ	೧೨೨ ೧೪
೧೨. ಸ್ವರಾಧಿ ವಿಭಕ್ತಿಗೆ	ಸ್ವರಾದಿ ವಿಭಕ್ತಿಗೆ	೧೨೨ ೧೮
೧೩. ಮೂದೆಟಿನಂ	ಮೂದೆಜಿನಂ	೧೩೩ ೨೦
೧೪. ಪ್ರಥಮೈಕ– ವಚನಮಂ	ಪ್ರಥಮೈಕವಚನಮಂ	೧೪೧ ೨೨
೧೫. ಆಭಿವ್ಯಕ್ತವಾದ	ಅಭಿವ್ಯಕ್ತವಾದ	೧೪೫ ೯
೧೬. ಆಂ–ಆಂ ಎಂದು	ಅಂ–ಅಂ ಎಂದು	೧೪೦ ೧೫
೧೭. (ಅ)ತಿ ಇಚ್ಛೆಸಲ್ಪಟ್ಟ	(ಅತಿ) ಇಚ್ಛೈಸಲ್ಪಟ್ಟ	೧೪೭ ೨
೧೮. ಒಕಾರದ ಐಕಾರದ	ಔಕಾರದ ಐಕಾರದ	೧೭೪ ೨೦

ಮೊದಲೇ ಸೂತ್ರಪಾಠಕ್ಕೂ, ಟೀಕೆ ಪಾಠಕ್ಕೂ ಹೊಂದಿಕೆ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಸುಮಾರು ೧೮ ಅಚ್ಚುದೋಷಗಳು ಬಂದು ಆ ವ್ಯತ್ಯಾಸವನ್ನು ಇನ್ನಷ್ಟೂ ಅಧಿಕಗೊಳಿಸುತ್ತವೆ.

ಕೊನೆಯದಾಗಿ ಸೂತ್ರಪಾಠ, ಟೀಕೆಪಾಠಗಳ ವ್ಯತ್ಯಾಸ ತಪ್ಪಿಸಲು ಹೋಗಿ ಟೀಕೆಯನ್ನು ಪ್ರತಿಗಳ ಆಧಾರವಿಲ್ಲದೆ ಅಲ್ಲಲ್ಲಿ ಸ್ವಬುದ್ಧಿಯಿಂದ ತಿದ್ದಿ ನಿಟ್ಟೂರ ನಂಜಯ್ಯನಿಗೆ ಅನ್ಯಾಯ ಮಾಡಿದ್ದಾರೆ. ತಾವು ಬಳಸಿದ ನಾಲ್ಕು ಪ್ರತಿಗಳಲ್ಲಿ ಟೀಕೆ ಇರುವುದು ಕಿಟೆಲ್ ಮತ್ತು ಪರಿಷತ್ ಪ್ರತಿಗಳಲ್ಲಿ ಮಾತ್ರ. ಈ ಕಿಟೆಲ್ ಪರಿಷತ್ ಪ್ರತಿಗಳ ೧೧೦ನೆಯ ಸೂತ್ರದ ಟೀಕೆಯಲ್ಲಿ 'ಒದವಿರೆ–ಪ್ರಾಪ್ತಿಸಿರೆ' ಎಂಬ ಪಾಠವಿದ್ದರೆ, ಡಿ.ಎಲ್.ಎನ್. ಅವರ ಟೀಕೆಯಲ್ಲಿ 'ಒಡನಿರೆ–ಪ್ರಾಪ್ತಿಸಿರೆ' ಎಂಬ ಪಾಠವಿದೆ. ಸಂಪಾದಕರಿಗೆ ಈ ಹೊಸ ಪಾಠ ಎಲ್ಲಿ ದೊರೆಯಿತು? ಬಹುಶಃ ತಾವು ಸೂತ್ರದಲ್ಲಿ ಸ್ವೀಕರಿಸಿದ 'ಒಡನಿರೆ' ಎಂಬುದಕ್ಕೂ, ಟೀಕೆಗೂ ಹೊಂದಿಕೆ ಒದಗಿಸುವ ಉದ್ದೇಶದಿಂದ ಟೀಕೆಯಲ್ಲಿಯ 'ಒದವಿರೆ–ಪ್ರಾಪ್ತಿಸಿರೆ' ಎಂಬುದನ್ನು 'ಒಡನಿರೆ–ಪ್ರಾಪ್ತಿಸಿರೆ' ಎಂದು ತಿದ್ದಿಕೊಂಡಿದ್ದಾರೆಂದು ಸ್ಪಷ್ಟವಾಗುತ್ತದೆ. ಪ್ರಾಚೀನ ಗ್ರಂಥ ಪರಿಷ್ಕರಣದಲ್ಲಿ ಪ್ರಾಮಾಣಿಕತೆ ಎಂಬುದು ಸಂಪಾದಕರು ಪಾಲಿಸಬೇಕಾದ ಮುಖ್ಯ ಕರ್ತವ್ಯ. ಇಂಥ ಸಂದರ್ಭಗಳಲ್ಲಿ ಅದು ಅರ್ಥ ಕಳೆದುಕೊಳ್ಳುತ್ತದೆ.

ಅಡಿಟಿಪ್ಪಣಿ

ಪ್ರಾಚೀನ ಗ್ರಂಥ ಸಂಸ್ಕರಂಣದಲ್ಲಿ ಅಡಿಟಿಪ್ಪಣಿಗೆ ವಿಶೇಷ ಮಹತ್ವವುಂಟು. ಇಲ್ಲಿಯೂ ಶ್ರೀ. ಡಿ.ಎಲ್.ಎನ್. ಅವರ ಉದಾಸೀನತೆ ಕಾಲಿಟ್ಟಿದೆ. ತಮ್ಮಿರ್ವರುಂ?(ಪುಟ–೧೧೪)ಎಂಬಲ್ಲಿಯ ಪ್ರಶ್ನಚಿಹ್ನೆಗೆ ಅರ್ಥ ಗೊತ್ತಾವುದಿಲ್ಲ. ಇದಲ್ಲದೆ 'ಸೂಱಿಂದು'(ಪುಟ–೧೨೫) ಎಂಬುದನ್ನು 'ಸೂಟಿಂದು' ಎಂದೂ 'ಗೇಯಾಂಗಂ'(ಪುಟ–೧೩೫) ಎಂಬುದನ್ನು 'ಗೆಯಾಂಗಂ' ಎಂದೂ ತಿದ್ದಿಕೊಳ್ಳಬೇಕು.

ಇದು ಶ್ರೀ ಡಿ.ಎಲ್.ಎನ್. ಸಂಪಾದಿತ ಶ.ಮ. ದರ್ಪಣದ ನಾಮಪ್ರಕಣದ ಸ್ಥೂಲ ಅವಲೋಕನ. ಮಿಕ್ಕ ಪ್ರಕರಣಗಳನ್ನು ಮುಂದಿನ ಲೇಖನದಲ್ಲಿ ವಿವೇಚಿಸಲಾಗುವುದು.

ಆಕರ : ಮಾರ್ಗ ಸಂಪುಟ–೭

೨೩

ಕ್ಷಳಸೂತ್ರ

'ಪ್ರಬುದ್ಧ ಕರ್ಣಾಟಕ'ದ ಪುಷ್ಯ ಸಂಚಿಕೆಯಲ್ಲಿ ಶ್ರೀ ಎಸ್. ತಿಮ್ಮಣ್ಣಭಟ್ಟ ಅವರು 'ಕುಳ-ಕ್ಷಳ ನಿಯಮ' ಎಂಬ ಲೇಖನವೊಂದವನ್ನು ಬರೆದು ಶಬ್ದಮಣಿದರ್ಪಣದ ವಿವಾದಾತ್ಮಕ ಸೂತ್ರ ೧೫೫ಕ್ಕೆ ಅರ್ಥ ನಿರ್ಣಯಿಸುವಲ್ಲಿ ಹೊಸಹಾದಿ ಹಿಡಿದಿದ್ದಾರೆ. ಇಲ್ಲಿ ಸೂತ್ರ, ವೃತ್ತಿಗಳನ್ನು ವಿಭಜಿಸಿದ ರೀತಿ, ಎತ್ತಿದ ಪ್ರಶ್ನೆ, ಕೊಟ್ಟ ನಿರ್ಣಯಗಳೂ ಕುತೂಹಲಕಾರಿಯಾಗಿವೆ. ಈ ಲೇಖನದಲ್ಲಿ ಕ್ರಮವಾಗಿ

೧. ವೃತ್ತಿದೋಷ
೨. ಸೂತ್ರವೃತ್ತಿಗಳ ವೈಷಮ್ಯದೋಷ
೩. ಪ್ರಯೋಗದೋಷ

ಇವುಗಳನ್ನು ಎಂಟು ಪ್ರಶ್ನೆಗಳ ಮೂಲಕ ಎತ್ತಿತೋರಿಸಿ, ಕೊನೆಗೆ ಸೂತ್ರವನ್ನಷ್ಟೇ ಅವಲಂಬಿಸಿ ತಮ್ಮ ನಿರ್ಣಯ ನೀಡಿದ್ದಾರೆ. ಇವುಗಳನ್ನು ಒಂದೊಂದಾಗಿ ವಿವೇಚಿಸಿ ಗುಣದೋಷಗಳನ್ನು ಗುರುತಿಸಬಹುದು.

ವೃತ್ತಿದೋಷ

"ಯಾವಾಗಲೂ ಒಂದರ ಹಿಂದೆ ಇನ್ನೊಂದರಂತೆ ಕ್ರಮಪ್ರಕಾರವಾಗಿ .... ವಿವರಿಸುತ್ತಾ ಹೋಗುತ್ತಲಿರುವ ಕೇಶಿರಾಜನು ಇಲ್ಲಿ ಮಾತ್ರ .... ಛಂದಸ್ಸಿಗೆ ಸಂಬಂಧಪಟ್ಟ ವಿಷಯವನ್ನು ಹೇಳಲು ಕಾರಣವೇನು?" ಎಂದು ಬರೆಯುತ್ತ, ಕೇಶಿರಾಜನು ಇಲ್ಲಿ ಕ್ರಮತಪ್ಪಿದ್ದಾನೆಂಬ ಆರೋಪಮಾಡಿದ್ದಾರೆ. ಆದರೆ ಬೇರೆಡೆಗಳಲ್ಲಿ ಕ್ರಮ ತಪ್ಪಿರಬಹುದಾದ ಕೇಶಿರಾಜನು[೧] ಇಲ್ಲಿ ಮಾತ್ರ ಕ್ರಮ ಪಾಲಿಸಿದ್ದಾನೆಂದೇ

---

೧. ಕ್ರಮಪ್ರಕಾರವಾಗಿ ವಿಷಯವನ್ನು ವಿವರಿಸುವುದರ ಜೊತೆಗೆ ಕೇಶಿರಾಜನು ಕೆಲವೆಡೆ ಕ್ರಮವಿಪರ್ಯಾಸವನ್ನೂ ಮಾಡಿದ್ದಾನೆ."ಶಬ್ದಮಣಿದರ್ಪಣದಲ್ಲಿ ಸೂತ್ರಾನುಪೂರ್ವಿ ಕೆಲವೆಡೆ ಸಕ್ರಮವಾಗಿಲ್ಲ....ಸಂಧಿ ಪ್ರಕರಣಕ್ಕೆ ಸೇರಬೇಕಾಗಿರುವುದನ್ನು ಸಮಾಸದಲ್ಲಿಯೂ, ಅಕ್ಷರಪ್ರಕರಣಕ್ಕೆ ಸೇರಬೇಕಾಗಿದ್ದುದನ್ನು ಸಂಧಿಯಲ್ಲಿಯೂ ಹೇಳಿರುವ ನಿದರ್ಶನಗಳುಂಟು...... ಇದರಿಂದ ವ್ಯಾಕಾರಣಾಭ್ಯಾಸಿಗಳಿಗೆ ಹಿಂದಿನ ಸೂತ್ರಗಳನ್ನು ಜ್ಞಾಪಿಸಿಕೊಳ್ಳಲು ಹಾಳೆಗಳನ್ನು ತಿರಿವಿಹಾಕಬೇಕಾಗುತ್ತದೆ."

-ಶ.ಮ.ದ. ಪಾಠಾಂತಗಳು ರು. ೩

"ಕೆಲವೆಡೆ ಸೂತ್ರಗಳ ಆನುಪೂರ್ವಿಯಲ್ಲಿ ಸ್ವಲ್ಪ ಹಿಂದುಮುಂದಾಗಿದೆ."

-ಶ.ಮ.ದ.(ಡಿ.ಎಲ್.ಎನ್.೧೯೫೫) ಪ್ರಸ್ತಾವನೆ ಪು. xiv

ನನ್ನ ಭಾವನೆ. ಏಕೆಂದರೆ ಸಂಸ್ಕೃತದಲ್ಲಿ ವರ್ಣಗಳಿರುವುದು ಅಕಾರಾದಿ ಹಕಾರದ ವರೆಗೆ ಮಾತ್ರ. ಎರಡನೆಯ ನಾಗವರ್ಮನೂ

"ಮೂವತ್ತು ಮೂವರಾದರ್ ದೇವರ್"-ಶಬ್ದಸ್ಮೃತಿ

"ಅಕಾರಾದಯೋ ವರ್ಣಾ ಹಕಾರಪರ್ಯವಸಾನಾಃ ಪ್ರಸಿದ್ಧಾ ||" -ಕ.ಭಾ.ಭೂ

ಎನ್ನುವಲ್ಲಿ ಹಕಾರದ ವರೆಗೇ ಬಂದು ನಿಂತುಬಿಟ್ಟಿದ್ದಾನೆ. ಆದರೆ ಕೇಶಿರಾಜನು 'ಅಕಾರಾದ್ಯಾ ಳಕಾರಂಬರೆಗಂ' (ಸೂ. ೧೪) ಎಂದು ಸೂತ್ರ ಹೇಳಿ, 'ಳ್' ಎಂಬ ಹೊಸವರ್ಣವನ್ನು ಆ ಸಂಸ್ಕೃತವರ್ಣಮಾಲೆಗೆ ಜೋಡಿಸಿದನು. ಈ ಹೊಸವವರ್ಣ ಜೋಡಣೆಯಿಂದ ವ್ಯಾಕರಣಾಭ್ಯಾಸಿಗಳಿಗೆ ಸಂಶಯ ಮೂಡುವುದು ಸಹಜ. ಮೂಡುವ ಈ ಸಂಶಯವನ್ನು ಮೊಳಕೆಯಲ್ಲಿಯೇ ಪರಿಹರಿಸಲು "ಪೇೞ್ದಿನದಱಿಂ ಕ್ಷಳನಂ" (ಸೂ.೧೫) ಎಂಬ ಸೂತ್ರ ಇಲ್ಲಿ ಬಂದುದು ಉಚಿತಪ್ರಸಂಗಿಯೇ ಆಗಿದೆ. ಇದರಲ್ಲಿ ಕ್ಷಳದ ಸ್ವರೂಪ, ಅದು ಬಳಕೆಯಾಗುವ ರೀತಿ ಇವುಗಳನ್ನು ಕುರಿತು ಹೇಳಿದುದರಿಂದ ಇದು "ಕ್ಷಳಸೂತ್ರ".

ಮುಂದೆ ವೃತ್ತಿದೋಷವನ್ನು ವಿವೇಚಿಸುವಲ್ಲಿ ಶ್ರೀ ಭಟ್ಟರು ಕಿಟೆಲ್‌ರ ದೋಷಪ್ರಯೋಗವನ್ನು 'ಜಲದ' ಎಂದು ಹೇಳಿದುದು ತಪ್ಪು ಪ್ರಯೋಗವೇ? ಎಂದು ಕೇಳಿದ್ದಾರೆ. ಹೌದು, ಅದು ತಪ್ಪು ಪ್ರಯೋಗ. ಅದಕ್ಕಾಗಿಯೇ ತರುವಾಯ ಅಚ್ಚಾಗಿರುವ ಮದ್ರಾಸ್, ಸಾಹಿತ್ಯಪರಿಷತ್ ಮತ್ತು ಡಿ.ಎಲ್.ಎನ್. ದರ್ಪಣಗಳಲ್ಲಿ ಆ ದೋಷವನ್ನು 'ಜಳದ' ಮೂಲಕ ತಿದ್ದಿಕೊಂಡಿದ್ದಾರೆ. ಹೀಗೆ ಪರಿಹಾರವಾದ ದೋಷವನ್ನೇ ಮತ್ತೆ ಎತ್ತುವುದರಲ್ಲಿ ಯಾವ ಪ್ರಯೋಜನವಿದೆ? ಕಿಟೆಲ್‌ರು ಮಾಡಿದ ತಪ್ಪಿಗೆ ಕೇಶಿರಾಜ ಹೊಣೆಗಾರನೇ?

ಇನ್ನು ಇಲ್ಲಿಯೇ 'ಕುಳಪ್ರಾಸಕ್ಕೆ ಯಾವುದೇ ರೀತಿಯ ಲಕಾರ ಪ್ರಾಸವಾಗಬಾರದೆಂದು ಅರ್ಥವೇ?' ಎಂದು ಪ್ರಶ್ನಿಸಿದ್ದಾರೆ. ಹೌದು, ಕೇಶಿರಾಜನ ಸೂತ್ರದಲ್ಲಿಯೇ ಇದಕ್ಕೆ ನಿಚ್ಚಳವಾದ ಉತ್ತರವಿದೆ. "ಹಾಗಿದ್ದರೆ ಅದಕ್ಕೆ ಪ್ರಯೋಗವನ್ನೇಕೆ ಕೊಡಲಿಲ್ಲ?" ಎಂದು ಇನ್ನೊಂದು ಪ್ರಶ್ನೆ ಕೇಳಿದ್ದಾರೆ. 'ಬಾರದು' ಎಂಬುವುಗಳಿಗೆ ಪ್ರಯೋಗ ಕೋಡುವ ಅವಶ್ಯಕತೆಯಾದರೂ ಏನು? ಒಂದು ವೇಳೆ ದೋಷಗಳಿಗೆ ಪ್ರಯೋಗ ಕೊಡುತ್ತ ಹೋದರೆ ಅದಕ್ಕೆ ಕೊನೆಯೆಲ್ಲಿ? ಶ್ರೀ ಭಟ್ಟರು ದೋಷಪ್ರಯೋಗ ಬೇಕಿದ್ದರೆ 'ಶಬ್ದಮಣಿದರ್ಪಣದ ಪಾಠಾಂತರಗಳು', ಪು. ೧೭ ನೋಡಬಹುದು.

ಎರಡನೆಯದಾಗಿ, ಒಂದೇ ವಾಕ್ಯವನ್ನು ಕತ್ತರಿಸಿ ಎರಡು ತುಂಡುಮಾಡಿ ಅರ್ಥವಿಲ್ಲದ ಪ್ರಶ್ನೆಹಾಕಿದ್ದಾರೆ. ಅದಕ್ಕಾಗಿ ಆ ವಾಕ್ಯತುಂಡುಗಳನ್ನು ಜೋಡಿಸಿ ನೋಡಬೇಕು. ಆಗ "ಕ್ಷಳನೆಂಬುದಿಲ್ಲದೆ+ಸಂಸ್ಕೃತ ಪದದ ಲಕಾರಕ್ಕೆ ವಿಕಲ್ಪಮಂ ಪೇಟಲ್ಬಾರದು" ಎಂಬ ಪೂರ್ಣವಾಕ್ಯ ಸಿದ್ಧವಾಗಿ, "ಸಂಸ್ಕೃತಪದದಲ್ಲಿರುವ ಲಕಾರಕ್ಕೆ ವಿಕಲ್ಪವಾಗಿ ಕ್ಷಳವನ್ನೇ ಹೇಳಬೇಕು" ಎಂಬ ನಿಜ ಅರ್ಥ ಹೊರಡುತ್ತದೆ.

ಕೊನೆಯದಾಗಿ "(ಪೇಟಲ್ಬಾರದು)+ಆಗಿ ಕ್ಷಳನನಿದಱೊಳೆ ಬೆರಸಿ ಪೇೞ್ದಿಂ" ಎಂಬುದನ್ನು ಉದ್ಧರಿಸಿ 'ಆಗಿ' ಎಂದರೆ ಯಾವ ಕಾರಣದಿಂದ? ಎಂದು ಕೇಳಿದುದಕ್ಕೆ "ಕ್ಷಳನೆಂಬುದಿಲ್ಲದೆ ಸಂಸ್ಕೃತಪದದ ಲಕಾರಕ್ಕೆ ವಿಕಲ್ಪಮಂ ಪೇಟಲ್ಬಾರದು (+ಆಗಿ)" ಎಂಬ ಉತ್ತರ ಸ್ಪಷ್ಟವಾಗಿಯೇ ಇದೆ. "ಕ್ಷಳನನಿದಱೊಳೆ ಬೆರಸಿ ಪೇೞ್ದಿಂ" ಎಂದರೆ ಯಾವುದರಲ್ಲಿ? ಎಂದು ಕೇಳಿದುದಕ್ಕೆ "ಮೇಲಿನ ಸಂಸ್ಕೃತವರ್ಣಮಾಲೆಯಲ್ಲಿ" ಎಂಬ ಉತ್ತರ ಸಹಜವಾಗಿ ಮೂಡಿಬರುತ್ತದೆ. ಇದೆಲ್ಲ ನೋಡಿದರೆ ಅವರು ವೃತ್ತಿಯನ್ನು ವಿಕಾರಗೊಳಿಸಿ, ಅಧಿಕ ಪ್ರಶ್ನೆಗಳನ್ನು

ಹುಟ್ಟಿಸಿಕೊಂಡಿರುವರೆಂದು ಹೇಳಬೇಕಾಗುತ್ತದೆ. ಹೀಗಾಗಿ ನಮ್ಮ ಅಭಿಪ್ರಾಯದಂತೆ (ಕೇಶಿರಾಜನ ಅಭಿಪ್ರಾಯ) ವೃತ್ತಿಯನ್ನು ಹೀಗೆ ಬಿಡಿಸಿ ನೋಡಬೇಕು:

೧. (ಅ) ಕುಳಪ್ರಾಸಮಾಗಿ ಪೇೞ್ದ ಕನ್ನಡಗಬ್ಬಂ ಕ್ಷಳನಂ ಸೆಳೆಗೆಯ್ವುದಾಗಿ ಲಕಾರಮಂ ವಿಕಲ್ಪಂ ಮಾಡಬಾರದು.

(ಬ) ಲಕಾರ ಪ್ರಾಸಮಾಗಿ ಪೇೞ್ದ ಕನ್ನಡಗಬ್ಬದೊಳ್ ಕ್ಷಳಂ ವಿಕಲ್ಪ ದಿನಿರಿಸಲ್ಬಾರದುದಾಗಿಯದುವುಮಾಗದು.

೨. ಕ್ಷಳನೆಂಬುದಿಲ್ಲದೆ ಸಂಸ್ಕೃತ ಪದದ ಲಕಾರಕ್ಕೆ ವಿಕಲ್ಪಮಂ ಪೇೞಲ್ಬಾರದು.

೩. ಆಗಿ(ಅದಕ್ಕಾಗಿ)ಕ್ಷಳನನಿದಱೊಳೆ ಬೆರಸಿ ಪೇೞ್ದೆಂ.

ಸೂತ್ರ ಮತ್ತು ವೃತ್ತಿಗಳ ವೈಷಮ್ಯ ದೋಷ

ವೃತ್ತಿದೋಷ ನೋಡಿದ ತುರವಾಯ ಶ್ರೀ ಭಟ್ಟರು ಸೂತ್ರ ಮತ್ತು ವೃತ್ತಿಗಳಲ್ಲಿ ಸಮನ್ವಯ ಕಂಡುಬಾರದೆಂದು ಆಕ್ಷೇಪಣೆಯನ್ನೆತ್ತಿದ್ದಾರೆ. ಇದರಿಂದ ದರ್ಪಣದ ವೃತ್ತಿ ಕೇಶಿರಾಜನದೇ? ಅನ್ಯರದೇ ? ಎಂಬ ಹಳೆಯ ವಾದ ಮತ್ತೆ ಉದ್ಭವಿಸುತ್ತದೆ. ಈ ವಾದನಿರ್ಣಯ ಇಲ್ಲಿ ಅಪ್ರಸ್ತುತ. ಆದರೆ ಇಷ್ಟುಮಾತ್ರ ಹೇಳಬಹುದು. ಈಗ ಪ್ರಕಟಿತವಾದ ಎಲ್ಲ ದರ್ಪಣಗಳನ್ನವಲೋಕಿಸಿದರೂ ಅವುಗಳ ವೃತ್ತಿಗಳಲ್ಲಿ ನೂರಕ್ಕೆ ತೊಂಬತ್ತರಷ್ಟು ಸಾಮ್ಯತೆ ಕಂಡುಬರುತ್ತದೆ. ಈ ತೊಂಬತ್ತರಷ್ಟು ಭಾಗವೇ ಕೇಶಿರಾಜನ ವೃತ್ತಿಯ ಮೂಲಧನ.[೨] ಉಳಿದ ಹತ್ತರಷ್ಟು ಭಾಗವು ಲಿಪಿಕಾರನ ದೋಷ, ವೃತ್ತಿವಿಸ್ತರಣಕಾರನ ಮತ್ತು ಮರುವೃತ್ತಿಕಾರನ ದೋಷ[೩] ಮತ್ತು ಒಂದೆರಡು ಹೊಸ ಮಾತು, ಕೇಶಿರಾಜನೇ ಮರಹಿನ ಮೂಲಕ ಮಾಡಿರಬಹುದಾದ ಕೆಲವು ತಪ್ಪುಗಳ ತಿದ್ದುಪಡಿ - ಈ ಎಲ್ಲ ಅಂಶಗಳಿಂದ ಕೂಡಿದೆ ಎನ್ನಬಹುದು.[೪]

ಪ್ರಸ್ತುತ ೧೫ನೆಯ ಸೂತ್ರದ ವೃತ್ತಿಗಳನ್ನವಲೋಕಿಸಿದರೆ ಹೈದ್ರಾಬಾದ್ ಪ್ರತಿ ಒಂದು ಗುಂಪಿಗೆ ಸೇರಿದರೆ, ಗಣನೀಯವಲ್ಲದ ವ್ಯತ್ಯಾಸಗಳಿಂದ ಕೂಡಿ ಮದ್ರಾಸ್, ಸಾಹಿತ್ಯಪರಿಷತ್ ಕಿಟೆಲ್, ಡಿ.ಎಲ್.ಎನ್ ಪ್ರತಿಗಳು ಇನ್ನೊಂದು ಗುಂಪಿಗೆ ಸೇರುತ್ತವೆ. ಈ ಎರಡೂ ಗುಂಪಿನ ವೃತ್ತಿಗಳು ಪೂರ್ವಾರ್ಧದದಲ್ಲಿ ಸಮಾನವಾಗಿದ್ದರೆ, ಉತ್ತರಾರ್ಧದಲ್ಲಿ ಮಾತ್ರ ಭಿನ್ನದಾರಿಯನ್ನು ಹಿಡಿದಿವೆ.

---

೨. "ಸೂತ್ರಕಾರನಾದ ಕವಿಕೇಶವಂ ತಾಂ ಮಾಡಿದ ಶಬ್ದಮಣಿವೃತ್ತಿಯೊಳ್ ಸಂಧಿದೋಷಮೆಂದು ತಾಂ ಬರೆದಂ"- ಮದ್ರಾಸ ದರ್ಪಣ, ಪು. ೪೫.

೩. ಸಮಯ, ಓಲೆಗಳ ಉಳಿತಾಯಕ್ಕಾಗಿ ಕೆಲವರು ಕೇವಲ ಸೂತ್ರ ಅಥವಾ ಸೂತ್ರ ಮತ್ತು ಪ್ರಯೋಗಗಳನ್ನು ಬರೆದುಕೊಂಡಿರಬೇಕು. ಕೆಲವು ಕೈಬರಹದ ಪ್ರತಿಗಳು ಇದೇ ರೂಪದಲ್ಲಿ ದೊರೆಯುವುದು, ಇದಕ್ಕೆ ಆಧಾರ. ಇಂಥ ಕೇವಲ ಸೂತ್ರಗಳಿಗೆ ದರ್ಪಣವನ್ನು ಆಮೂಲವಾಗಿ ಅಭ್ಯಾಸಮಾಡಿದ ಕೆಲವರು ಮತ್ತೆ ವೃತ್ತಿ ಬರೆದಿರಬಹುದು. ಟೀಕೆ ಬರೆದಿರಬಹುದು.

೪. ಈಗ ಪ್ರಕಟಿತವಾದ ಕೆಲವು ದರ್ಪಣಗಳಲ್ಲಿ ಯಾರೂ ಕೈಹಚ್ಚದೇ ಇರುವ ಕೇಶಿರಾಜನ ಮೂಲವೃತ್ತಿಗಳೂ ಕೆಲವು ಇರಬಹುದು.

ಕಿಟೆಲ್, ಮದ್ರಾಸ್, ಪರಿಷತ್ ಡಿ, ಎಲ್.ಎಸ್. ಪ್ರತಿಗಳು	ಹೈದ್ರಾಬಾದ ಪ್ರತಿ
"ಕ್ಷಳನೆಂಬುದಿಲ್ಲಿದೆ ಸಂಸ್ಕೃತಪದದ ಲಕಾರಕ್ಕೆ ವಿಕಲ್ಪಮಂ ಪೇೞಲ್ಬಾರದಾಗಿ ಕ್ಷಳನನಿದಱೊಳೆ ಬೆರಸಿ ಪೇೞ್ದಿಂ"	"(ಪ್ರಾಸಮಲ್ಲದಲ್ಲಿಯುಂ)ಸಕ್ಕದದ ಲಕಾರಕ್ಕೆ ಕ್ಷಳನಲ್ಲದೆ ವಿಕಲ್ಪಮಂ ಪೇಳ ಸಲ್ಲ. ದೇಶೀಯದಾ ಕುಳನುಂ, ಕ್ಷಳನುಮೇಕಸ್ಥಾನಿಗಳಾದ ಕಾರಣಂ ಕ್ಷಳಮನದಱೊಳೆ ಬೆರಸಿ ಪೇೞ್ದಿಂ."

ಈ ಭಿನ್ನ ವೃತ್ತಿಗಳಲ್ಲಿ ಯಾವುದು ಸರಿ? ಯಾವುದು ತಪ್ಪು? ಎಂಬುದೊಂದು ಪ್ರಶ್ನೆ. ಮೂಲಪಾಠವನ್ನು ಗುರುತಿಸುವಲ್ಲಿ ಸಾಮಾನ್ಯವಾಗಿ ಅನುಸರಿಸುವ (೧) ಪ್ರತಿಗಳ ಬಹುಮತ (೨) ಪ್ರಾಚೀನತೆ (೩) ಮೂಲಾರ್ಥಸ್ಪಷ್ಟತೆ ಮೊದಲಾದ ವಿಧಿಗಳನ್ನಾಧರಿಸಿ ಹೇಳುವುದಾದರೆ, ಸೂತ್ರಗಳ ಆನುಪೂರ್ವಿ, ವಿಸ್ತಾರವಾದ ವಿವರಣೆಗಳಲ್ಲಿ ಹೈದ್ರಾಬಾದ ಪ್ರತಿಯು ತುಂಬ ಪ್ರಶಂಸನೀಯವಾಗಿದ್ದರೂ ಈ ವೃತ್ತಿಸಂದರ್ಭದಲ್ಲಿ ದೋಷಯುಕ್ತವಾದಂತಿದೆ. ಮಿಕ್ಕ ಕಿಟೆಲ್ ಮೊದಲಾದವರ ವೃತ್ತಿ ದೋಷರಹಿತವಾದಂತಿದೆ. ಈ ದೋಷರಹಿತವೃತ್ತಿಯೇ ಕೇಶಿರಾಜನ ಮೂಲವೃತ್ತಿಯೆಂದು ನಾನು ಭಾವಿಸುತ್ತೇನೆ. ಈ ಮೂಲವೃತ್ತಿಯನ್ನು ಎದುರಿಟ್ಟುಕೊಂಡು ಶ್ರೀ ಭಟ್ಟರು ಸೂತ್ರವೃತ್ತಿಗಳಲ್ಲಿ ಸಮನ್ವಯ ಕಂಡುಬಾರದು- ಎಂದು ಹೇಳಿದ್ದಾರೆ. ಇಲ್ಲಿ ಅವರು ಕೇಳುವ ಪ್ರಶ್ನೆಗಳು ಎರಡು.

೧. ನಿಯಾಮಕ್ಕೆ ಪ್ರಾಸವೆಂದೇ ಅರ್ಥವೇ ?

ನಿಯಾಮ ಎನ್ನಲಿಕ್ಕೆ ಅವರೇ ಹೇಳಿದಂತೆ ನಿಯಮ, ವಿಧಿ, ಕ್ರಮ, ರೀತಿ ಎಂಬ ಅರ್ಥಗಳೂ ಇರಬಹುದು. ಆದರೆ ಇಲ್ಲಿ ಮಾತ್ರ ಪ್ರಾಸವೆಂದೇ ಅರ್ಥ. "ಅಕ್ಷರಗಳನ್ನು ನಿಯಮಕ್ಕೊಳಪಡಿಸಿಕೊಳ್ಳುವುದು" ಎಂಬರ್ಥದಲ್ಲಿ ಪ್ರಾಸವನ್ನು ಕೇಶಿರಾಜನು 'ನಿಯಾಮ' ಎಂದೇ ಕರೆದಿದ್ದಾನೆ. ಇದಕ್ಕೆ ಆಧಾರವಾಗಿ ೧೯ನೆಯ ಸೂತ್ರ, ವೃತ್ತಿ, ಪ್ರಯೋಗಗಳನ್ನು ನೋಡಬಹುದು.

ಸೂತ್ರ : "ಇವು ವರ್ಣಾವೃತ್ತಿಗೆ ಸಲ್ಬುವು. ಸಂದುಂ ಪ್ರಾದಸದೆಡೆಗೆ ಸಲ್ಲವು"

ವೃತ್ತಿ : "ಇವು ವರ್ಣಾವೃತ್ತಿಗೆ ಸಲ್ಬುವು. ನಿಯಾಮಕ್ಕಂ ಯಮಕವ್ಯಹೃತಿಗಮಾಗವು."[೫]

"ಇವು ವರ್ಣಾವೃತ್ತಿಗೆ ಸಲ್ಬುವು. ನಿಯಮಕ್ಕಂ ಸಲ್ಲವು"[೬]

ಪ್ರಯೋಗ : ರೇಫೆ ಱಕಾಂರಂಗಳ ನಿಯಮಮಾಗದುದರ್ಕೆ "- ಕಿಟೆಲ್

"ಡಕಾರ ಱಟಂಗಳ್ಗೆ ಪ್ರಾಸಮಾಗದುದರ್ಕೆ"- ಸಾಹಿತ್ಯ ಪರಿಷತ್.

ಈ ಮೇಲಿನ ವಾಕ್ಯಗಳನ್ನು ನೋಡಿದರೆ ನಿಯಮ,[೭] ನಿಯಾಮ ಎಂಬ ಪದಗಳು ಪ್ರಾಸದ ಪರ್ಯಾಯನಾಮಗಳೆಂದು ಸ್ಪಷ್ಟವಾಗುತ್ತದೆ. ಇದಕ್ಕೆ ಆಧಾರವಾಗಿ ನಿಟ್ಟೂರು ನಂಜಯ್ಯನೂ ಟೀಕೆಯಲ್ಲಿ "ಪ್ರಾಸದ

---

೫. ಕಿಟೆಲ್, ಸಾಹಿತ್ಯಪರಿಷತ್ ಆವೃತ್ತಿಗಳು.

೬. ಮದ್ರಾಸ ಆವೃತ್ತಿ.

೭. "..................ಕುಳಕ್ಷಳದ ನಿಯಮಕ್ಕೆ ಱಟನ ಸಂ
ಪಾದಿಸಿದೊಡಶುಭಮಿದು ಪಂಪರಾಜಾದಿ ಕರ್ನಾಟಕವಿರಾಯರ ಮತಂ" - ಕರ್ನಾಟಕ ಸಂಜೀವನಂ, ಶೃಂಗಾರಕವಿ ಪದ್ಯ ೩೪.

=ನಿಯಾಮದ(ನಿಯಮದ)" ಎಂಬ ಅರ್ಥ ಕೊಟ್ಟಿದ್ದಾನೆ.[೮] ಇಷ್ಟೇ ಏಕೆ, ಕೇಶಿರಾಜನು ೧೫೫ನೆಯ ಸೂತ್ರಕ್ಕೆ ಕೊಟ್ಟಿರುವ ಪ್ರಯೋಗಪದ್ಯವೇ ನಿಯಾಮವೆಂದರೆ ಪ್ರಾಸ ಎನ್ನಲಿಕ್ಕೆ ಕನ್ನಡಿಯಂತಿದೆ.

"ಕಿಳಿರೆ ಹಯಂಗಳ್ ಗರ್ಜಿಸೆ
ಜಳದ ನಿಭಂಗಳ್................."

ಇಲ್ಲಿ ಎರಡು ಚರಣಗಳನ್ನು ಸ್ವೀಕರಿಸಿರುವುದನ್ನೂ, ಆದಿಪ್ರಾಸಸ್ಥಾನಲ್ಲಿಯೇ ಸೂತ್ರಾರ್ಥವಿಟ್ಟಿರುವುದನ್ನೂ ಗಮನಿಸಬೇಕು. ಒಂದುವೇಳೆ ನಿಯಾಮಕ್ಕೆ ಶ್ರೀ ಭಟ್ಟರು ಹೇಳುವಂತೆ ವಿಧಿ ಎಂಬರ್ಥವೇ ಇದ್ದರೆ ಪ್ರಯೋಗಕ್ಕೆ ಪದ್ಯದ ಎರಡು ಚರಣಗಳೇ ಏಕೆ ಬೇಕು? ಆದುದರಿಂದ ವೃತ್ತಿ, ಟೀಕೆ, ಪ್ರಯೋಗ, ತಲೆಬರಹ ಮತ್ತು ಪ್ರಯೋಗಪದ್ಯಗಳ ಆಧಾರದಿಂದ ಕೇಶಿರಾಜನು 'ನಿಯಾಮ' ಎಂಬ ಪದವನ್ನು 'ಪ್ರಾಸ' ಎಂಬರ್ಥದಲ್ಲಿಯೇ ಬಳಸಿದ್ದಾನೆಂದು ಸ್ಪಷ್ಟವಾಗಿ ಹೇಳಬಹುದು.[೯]

೨."ಲಕಾರ ಪ್ರಾಸವಾಗಿ ಪೇೞ್ದ ಕನ್ನಡಗಬ್ಬದೊಳ್ ಕ್ಷಳನಂ ವಿಕಲ್ಪದಿ ನಿರಿಸಲ್ಬಾರದಾಗಿಯದುವುಮಾಗದು" ಎಂಬ ವೃತ್ತಿಯ ಅರ್ಥವು ಪ್ರತ್ಯಕ್ಷವಾಗಿಯಾಗಲಿ, ಅಪ್ರತ್ಯಕ್ಷವಾಗಿಯಾಗಲಿ, ಧ್ವನಿರೂಪದಲ್ಲಾಗಲಿ ಸೂತ್ರದ ಯಾವುದೇ ಕಡೆಯಲ್ಲಿ ಕಂಡುಬರುವದೇ ? ಎಂದು ಕೇಳಿದ್ದಾರೆ.

ಸೂತ್ರದ ನಾಲ್ಕು ಚರಣಗಳಲ್ಲಿ ಸಂಗ್ರಹಿಸಿದರೂ ಮಿಕ್ಕುಳಿದ ವಿಷಯವನ್ನು ವೃತ್ತಿಯಲ್ಲಿ ವಿವರಿಸಿ ಸಾಗುವುದು ಕೇಶಿರಾಜನಿಗೇನೂ ಹೊಸದಲ್ಲ. ಈ ಮಾತಿಗೆ

೧.ಪೋಲ್ ಪರಮಾದಲ್ಲಿಯುಂ...... ದೀರ್ಘಮುಂಟು (ಸೂ. ೧೨೮)
೨.ಎತ್ತಾನುಂ ತತ್ಪುರುಷಮಪ್ಪುದು (ಸೂ.೧೭೯)

ಎಂಬ ವೃತ್ತಿವಾಕ್ಯಗಳಿಗೆ ಸೂತ್ರದಲ್ಲಿ ಪ್ರತ್ಯಕ್ಷವಾಗಿಯಾಗಲಿ, ಅಪ್ರತ್ಯಕ್ಷವಾಗಿಯಾಗಲಿ ನಿರ್ದೇಶನವಿಲ್ಲದಿರುವುದೇ ಉದಾಹರಣೆಯಾಗಿದೆ.

ಇದೂ ಅಲ್ಲದೆ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠದ ವಚನವಾಙ್ಮಯ ಸಂಶೋಧನ ಶಾಖೆಯ ತಾಳೆವೋಲೆ ಗ್ರಂಥ ನಂ. ೫೭೮ ಈ ಪ್ರಶ್ನೆಗೆ ಉತ್ತರಕೊಡುತ್ತದೆ. ಈ ಪ್ರತಿಯ

೮. ಸೂತ್ರ ೧೫೫ಕ್ಕೆ ಟೀಕೆಯಲ್ಲಿಯೇ 'ನಿಯಾಮದೊಳ್=ಪ್ರಾಸಿನಲ್ಲಿ' ಎಂದು ಅರ್ಥ ಬರೆದಿದ್ದಾನೆ.

೯. ಕನ್ನಡವು ಸಂಸ್ಕೃತದ ಸಂಪರ್ಕವನ್ನು ಪಡೆದ ತರುವಾಯ ಪ್ರಾಸಸ್ಥಾನದಲ್ಲಿ ಕನ್ನಡ ಪದ ಮತ್ತು ಸಂಸ್ಕೃತ ಪದಗಳನ್ನು ಬೆರಕೆಮಾಡುತ್ತ ಮುನ್ನಡೆಯಿತು. ಆದರೆ ಕುಳ ಪ್ರಾಸದ ವಿಷಯದಲ್ಲಿ ಮಾತ್ರ ಕನ್ನಡಿಗರು ಸಂಸ್ಕೃತದತ್ತ ನಿರಾಶೆ ತಾಳಬೇಕಾಯಿತು. ಏಕೆಂದರೆ ಅಲ್ಲಿ 'ಳ್' ವರ್ಣವೇ ಇರಲಿಲ್ಲ. ಕುಳಾಕ್ಷರಕ್ಕೆ ಪ್ರಾಸಬೇಕಾದರೆ ಕುಳಘಟಿತ ಕನ್ನಡಶಬ್ದ ಹುಡುಕಬೇಕು. ಇಲ್ಲವೆ ಕೈಕಟ್ಟಿಕೊಂಡು ಕೂಡಬೇಕು ಎನ್ನುವ ಪರಿಸ್ಥಿತಿ ಒದಗಿತು. ಆಗ ಅವರು ಕುಳಕ್ಕೆ ಸಮೀಪ ಉಚ್ಚಾರದಲ್ಲಿರುವ ಸಂಸ್ಕೃತದ 'ಲ್' ವರ್ಣದಲ್ಲಿಯೇ ಹೊಸ ಹಾದಿ ಹುಡುಕಿದರು. ಅದರ ಫಲವೇ ಕ್ಷಳ. ಈಗ ಮಾತ್ರ ಕನ್ನಡ ಲಕಾರ ಪ್ರಾಸದಲ್ಲಿದ್ದಾಗ 'ಜಲ' ಎಂಬ ಪದ ಸ್ವೀಕರಿಸಿದರೆ, ಕುಳ ಳಕಾರ ಪ್ರಾಸದಲ್ಲಿದ್ದಾಗ 'ಜಳ ' ಎಂದು ಪರಿವರ್ತಿಸಿಕೊಂಡು ಕುಳ ಪ್ರಾಸಕ್ಕೂ ಶಬ್ದಗಳನ್ನು ಹೆಚ್ಚಿಸಿಕೊಂಡರು. ಅದಕ್ಕಾಗಿ ಮೂಲತಃ ಕ್ಷಳ ಜನಿಸಲಿಕ್ಕೆ ನೆರವಾಯಿತೇನೋ? ಕನ್ನಡಿಗರ ಆದಿಪ್ರಾಸವೇ ಕಾರಣವಾಯಿತೇನೋ? ಅಥವಾ ಸಂಸ್ಕೃತದ ಲಕಾರವು ಉಚ್ಚಾರದಲ್ಲಿ ಳಕಾರವಾಗಿ ಮಾರ್ಪಟ್ಟು ಆಮೇಲೆ ಕುಳ ಪ್ರಾಸಕ್ಕೆ ನೆರವಾಯಿತೇನೋ? ಇಷ್ಟು ಮಾತ್ರ ಹೇಳಬಹುದು; ಈ ಕ್ಷಳ ಮಾತ್ರ ಕನ್ನಡಕ್ಕೆ ಬಹುಕಾಲದ ಹಿಂದೆಯೇ ಬಂದಿದೆ. "ಮೃಗೇಶನಾಗೇನ್ದ್ರಾಭೀಳಭ್ಭಟಹರಪ್ಪೋರ್"- ಹಲ್ಮಿಡಿ ಶಾಸನ.

ಕೊನೆಯಲ್ಲಿ ದರ್ಪಣಸೂತ್ರಗಳಲ್ಲಿಯ ಸಮುಚ್ಚಯ ವಿಧಿಗಳನ್ನು ಸಮಗ್ರವಾಗಿ ಸಂಗ್ರಹಿಸಿ, ಅವುಗಳಲ್ಲಿ ಸೂಚಿತವಾದ ಗುಪ್ತ ಅರ್ಥವನ್ನು ಬಿಚ್ಚಿ ತೋರಿಸಲಾಗಿದೆ. ಪ್ರಸ್ತುತ ೧೫ನೆಯ ಸೂತ್ರವನ್ನು ಕುರಿತು "ಕುಳದ ನಿಯಾಮದೊಳೆಂದುಮೆಂಬ ಸಮುಚ್ಚಯದಿಂ ಲಕಾರಕ್ಕೆ ಕ್ಷಳವಿಕಲ್ಪಮಿಲ್ಲ" ಎಂಬ ವಿವರ ಅಲ್ಲಿದೆ.[೧೦] ಇದರಿಂದ ಈ ಸೂತ್ರದಲ್ಲಿರುವ ಸಮುಚ್ಚಯವೇ "ಲಕಾರ ಪ್ರಾಸಮಾಗಿ ಪೇೞ್ದ ಕನ್ನಡಗಬ್ಬದೊಳ್ ಕ್ಷಳನಂ ವಿಕಲ್ಪದಿನಿರಿಸಲ್ಬಾರದಾಗಿಯದುವುಮಾಗದು" ಎಂಬ ವಿಸ್ತೃತ ವೃತ್ತಿಗೆ ಮೂಲಕಾರಣವಾಗಿದೆಯೆಂದು ತಿಳಿದುಬರುತ್ತದೆ.[೧೧] ಅದಕ್ಕಾಗಿ ಈ ವೃತ್ತಿ ಭಾಗ ಶ್ರೀ ಭಟ್ಟರು ತಿಳಿದಂತೆ ಸೂತ್ರದಿಂದ ಭಿನ್ನವಾಗಿಲ್ಲವೆಂದು ಹೇಳಬಹುದು.

ಪ್ರಯೋಗದೋಷ

ವೃತ್ತಿದೋಷ, ಸೂತ್ರ-ವೃತ್ತಿ ವೈಷಮ್ಯದೋಷಗಳನ್ನು ವಿವರಿಸಿದ ತರುವಾಯ ಶ್ರೀ ಭಟ್ಟರು ಪ್ರಯೋಗದೋಷವನ್ನು ಹುಡುಕಲು ಹೋಗಿ ಎಡವಿದ್ದಾರೆ. "ಲಕಾರಕ್ಕೆ ಕ್ಷಳನನಿರಿಸಲ್ಬಾರದುದರ್ಕೆ ಪ್ರಯೋಗಂ" ಎಂಬಲ್ಲಿಯ ಸೂಚಿತ ಅರ್ಥವನ್ನು ಅವರು ಗಮನಿಸದೇ ಹೋಗಿದ್ದಾರೆ. ಯಾವುದೇ ಒಂದು ನಿಯಮದ ಉದಾಹರಣೆಗಳಿಗೆ ಗುಣ, ದೋಷ ಎಂಬೆರಡು ಮಗ್ಗಲುಗಳಿರುತ್ತವೆ. ಇಲ್ಲಿ "ಡಕಾರಕ್ಕೆ ಕ್ಷಳನನಿರಿಸಲ್ಬಾರದುದರ್ಕೆ ಗುಣಪ್ರಯೋಗಂ" ಎಂಬರ್ಥದಲ್ಲಿ ಓಲಗ-ಪಾಲಕ ಎಂಬಿವುಗಳನ್ನು ಪ್ರಾಸಸ್ಥಾನದಲ್ಲಿ ಹೇಳಿದ್ದಾರೆ. ಒಂದು ವೇಳೆ ದೋಷಪ್ರಯೋಗವನ್ನು ವಿವರಿಸುವುದಿದ್ದರೆ ಓಲಗ-ಪಾಳಕ ಎಂದು ಹೇಳುತ್ತಿದ್ದರು. ಈ ಅರ್ಥವನ್ನು ತಿಳಿದುಕೊಳ್ಳದೆ ಕವಿರಾಜಮಾರ್ಗ, ಪಂಪಭಾರತ, ಗದಾಯುದ್ಧ, ಕಾದಂಬರಿ, ಅರ್ಧನೇಮಿಪುರಾಣಗಳಿಂದ, ಏಕೆ ದರ್ಪಣದಿಂದಲೂ ಪ್ರಯೋಗಗಳನ್ನು ಹುಡುಕಿ ವ್ಯರ್ಥಪರಿಶ್ರಮಪಟ್ಟಿದ್ದಾರೆ.[೧೨]

ಅರ್ಥನಿರ್ಣಯ

ಈಗ ಸೂತ್ರಕ್ಕೆ ಅರ್ಥನಿರ್ಣಯಿಸುವುದಕ್ಕೆ ಪೂರ್ವಭಾವಿಯಾಗಿ ನಾಗವರ್ಮನನ್ನು ಉಲ್ಲೇಖಿಸಿ ಈತನು "ಱಟಿ, ಕುಳ, ಕ್ಷಳ ಕುರಿತು ಹೆಚ್ಚಿನ ವಿವರಗಳನ್ನು ಕೊಟ್ಟಿರಲಿಲ್ಲ" ಎಂದು ಬರೆದಿದ್ದಾರೆ. ಈ ಮಾತು ಱಟಿ, ಕುಳಗಳ ಬಗ್ಗೆ ಒಪ್ಪುತ್ತದೆ. ಆದರೆ ಕ್ಷಳವನ್ನು ಕುರಿತು ಚಕಾರಶಬ್ದವನ್ನೂ ನಾಗವರ್ಮ ಎತ್ತಿಲ್ಲ ಎಂಬುದು ಶ್ರೀ ಭಟ್ಟರ ಗಮನಕ್ಕೆ ಬಂದಂತಿಲ್ಲ.

---

೧೦. ಈ ತಾಳೆವೋಲೆ ಗ್ರಂಥ ಪೂರೈಸಿದ ವಚನ ವಾಙ್ಮಯ ವಿಭಾಗದ ಮುಖ್ಯಾಧಿಕಾರಿಗಳಾದ ಮುಖ್ಯಾಧಿಕಾರಿಗಳಾದ ಡಾ. ಆರ್.ಸಿ. ಹಿರೇಮಠ ಅವರಿಗೆ ಉಪಕೃತನಾಗಿದ್ದೇನೆ.

೧೧. ಕೇಶಿರಾಜನು ಸೂತ್ರಗಳಲ್ಲಿ ಮೇಣ್, ಉಂ ಮೊದಲಾದುವುಗಳ ಆಧಾರದ ಮೇಲೆ ವೃತ್ತಿಯಲ್ಲಿ ಹೆಚ್ಚಿನ ವಿಷಯವನ್ನು ಸೇರಿಸುತ್ತಿರುವುದು ಈಗಿನ ಮುದ್ರಿತ ದರ್ಪಣಗಳಿಂದ ತಿಳಿದುಬರುತ್ತದೆ.

i. ಸಮುಚ್ಚಯದಿಂ ಪಂಚಮ್ಯರ್ಥದೊಟಿಂ ದ್ವಿತೀಯೆಯುಂಟು (ಸೂ. ೧೪೬ ವೃ).

ii. ಸಮುಚ್ಚಯ ವಶದಿಂ ಅಪತ್ಯ ಕಲತ್ರಶಬ್ದಂಗ್-
ಸ್ತ್ರೀ ವಾಚಕಂಗಳಾಗಿಯುಂ ನಪುಂಸಕಮೆ (ಸೂ.೧೬೬ ವೃ)

೧೨. ವಿಶೇಷವಾಗಿ ಎಲ್ಲ ವೈಯಾಕರಣರು ಗುಣಕ್ಕೆ ಪ್ರಯೋಗ ಕೊಡುವರೇ ಹೊರತು ದೋಷಕ್ಕಲ್ಲ. ಏಕೆಂದರೆ ಗುಣಕ್ಕೆ ಉದಾಹರಣೆ ಸಿಗುವುದು ಅಧಿಕ. ದೋಷಕ್ಕೆ ಕ್ವಚಿತ್. ಒಂದು ವೇಳೆ ದೋಷಕ್ಕೆ ಉದಾಹರಣೆ ಕೊಡಬೇಕೆನಿಸಿದರೆ ಕೆಲವು ಸಲ ತಾವೇ ದೋಷಪೂರ್ಣ ಪದ್ಯ ರಚಿಸಿ ಸೇರಿಸಬೇಕಾಗುತ್ತದೆ. ಉದಾ- 'ಇವು ವರ್ಣವೃತ್ತಿಗೆ ಸಲ್ಲುವು' ಎಂಬ ಸೂತ್ರದ ಕೆಲವು ಉದಾಹರಣೆಗಳು.

ಇನ್ನು ಕೊನೆಯದಾಗಿ ತಮಗೆ ಅನುಕೂಲವಾಗುವಂತೆ ಸೂತ್ರಾನ್ವಯ ಹೊಂದಿಸಿಕೊಂಡು ಅರ್ಥನಿರ್ಣಯಿಸಿದ್ದಾರೆ. ಅವರ ಅನ್ವಯ, ಅರ್ಥ ಕೆಳಗಿನಂತಿದೆ.

	ಅನ್ವಯ	ಅರ್ಥ
1.	ಕುಳದ ನಿಯಾಮದೊಳೆಂದುಂ ಲಾಕ್ಷಾರ ವಿಕಲ್ಪಮಿಲ್ಲ	ಕುಳದ ನಿಯಮದಲ್ಲಿ ಯಾವುಗಲೂ 'ಲ'ಎಂಬ ಅಕ್ಷರ ವಿಕಲ್ಪವಿಲ್ಲ.
2.	ವಿಕಲ್ಪಂ ಕ್ಷಳಕ್ಕೆ	ಕ್ಷಳದ ನಿಯಮದಲ್ಲಿ ಯಾವಾಗಲೂ 'ಲ' ಎಂಬ ಅಕ್ಷರ ವಿಕಲ್ಪವಿದೆ
3.	ಅಲ್ಲದೆ	ಅದೂ ಅಲ್ಲದೆ
೪.	ಸಂಸ್ಕೃತದೊಳ್ ಆ ಲಕಾರಕ್ಕೆ ಕ್ಷಳಂ ಇಲ್ಲ.	ಸಂಸ್ಕೃತಭಾಷೆಯಲ್ಲಿ ಲಕಾರಕ್ಕೆ ಕ್ಷಳದ ಪ್ರಯೋಗವಿಲ್ಲ
೫.	ಅದಜೆಂ ಪೇೞ್ದೆಂ ಕ್ಷಳನಂ	ಆದ್ದರಿಂದ ನಾನು ಇಲ್ಲಿ ಕನ್ನಡ ಕ್ಷಳವನ್ನು ಹೇಳಿದೆನು.

ಮೇಲಿನ ಅನ್ವಯವನ್ನವಲೋಕಿಸಿದರೆ ಶ್ರೀ ಭಟ್ಟರು ವೃತ್ತಿಯನ್ನು ಲಕ್ಷಿಸದೆ ಕೇವಲ ಸೂತ್ರದ ತೆಕ್ಕೆಗೆ ಬಿದ್ದು ಅದರೊಂದಿಗೆ ಆಟವಾಡಿದ್ದಾರೆ; ಆಗ ಯೋಗಾಯೋಗದಿಂದ ಕೆಲಮಟ್ಟಿಗೆ ಸರಿಯೆನಿಸಬಹುದಾದ ಬೇರೆ ಅರ್ಥ(ಕೇಶಿರಾಜನ ಉದ್ದೇಶದ ಅರ್ಥವಲ್ಲ) ಹೊಂದಿಕೊಂಡುಬಿಟ್ಟಿದೆ ಎಂಬುದು ತಿಳಿದುಬರುತ್ತದೆ. ಮೊಟ್ಟಮೊದಲಿಗೆ ನಿಯಾಮ ಅಂದರೆ ನಿಯಮ ಎಂದು ಅರ್ಥೈಸಿಕೊಂಡುದರಿಂದ ಈ ಸೂತ್ರಕ್ಕೆ ನಿಯಮಕಟ್ಟಲು ಅವರಿಗೆ ಪ್ರಚೋದನೆ ಸಿಕ್ಕಿದೆ. ಅದರ ಫಲವೇ ಅವರ ಕುಳ-ಕ್ಷಳ ನಿಯಮವಾಗಿದೆ. ಆದರೆ ಈ ಮೊದಲೇ ವಿವೇಚಿಸಿದಂತೆ ನಿಯಾಮ ಅಂದರೆ ಪ್ರಾಸವೇ ಹೊರತು ನಿಯಮವೆಂದರ್ಥವಲ್ಲ ಎಂದು ಹೇಳಿ, ಅವರ ಅರ್ಥವನ್ನು ಕಸಿದುಕೊಂಡುಬಿಟ್ಟರೆ ಅವರ ಕೈನಿಂತುಬಿಡುತ್ತದೆ. ಆಗ ಅವರು ನಿರ್ಣಯಿಸಿದ ನಿಯಮಗಳು (ಕುಳನಿಯಮ ಮತ್ತು ಕ್ಷಳನಿಯಮ) ತಾನಾಗಿಯೇ ಬಿದ್ದುಹೋಗುತ್ತವೆ. ಇನ್ನು ಅವರ ಅನ್ವಯ ವಿಧಾನವನ್ನು ವಿಚಾರಿಸೋಣ.

ಅರ್ಥಸ್ಪಷ್ಟತೆಗಾಗಿ ಅನ್ವಯಮಾಡಿಕೊಳ್ಳುವಲ್ಲಿ ಒಂದು ವಾಕ್ಯವನ್ನು ಪೂರ್ತಿಯಾಗಿ ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಅದರ ಅರ್ಧಗಿರ್ಧ ಭಾಗವನ್ನೆತ್ತಿಕೊಂಡಾಗ ಆಕಸ್ಮಾತ್ ಮೂಡಿದ ಅರ್ಥವೇ ಸರಿಯೆಂದು ನಿರ್ಣಯಿಸಬಾರದು. ಶ್ರೀ ಭಟ್ಟರ ಅರ್ಥನಿರ್ಣಯ ಈ ರೀತಿಯಾಗಿದೆ. "ಕುಳದ ನಿಯಮದೊಳೆಂದುಂ ಲಾಕ್ಷರವಿಕಲ್ಪಮಿಲ್ಲ' ಎಂದು ಅನ್ವಯ ಹೊಂದಿಸಿಕೊಂಡು ಕುಳದ ನಿಯಮವನ್ನು ಸ್ಥಾಪಿಸಿದ್ದಾರೆ. ಉಚ್ಚಾರದಲ್ಲಿ ವ್ಯತ್ಯಾಸ ಹೊಂದುತ್ತಿರುವ, ಮತ್ತು ಮಾಯವಾಗುತ್ತಿರುವ ವರ್ಣಗಳಿಗೆ ಮಾತ್ರ ಕೇಶಿರಾಜ ನಿಯಮ-ನಿರ್ಬಂಧ ಹೇಳುತ್ತಾನೆ, ಹೇಳಿದ್ದಾನೆ. ಆದರೆ ಆತನ ಕಾಲದಲ್ಲಿ ಕುಳೋಚ್ಚಾರಣೆಯಲ್ಲಿ ವ್ಯತ್ಯಾಸವಾಗಲೀ, ಅದರ ಮೇಲೆ ಅನ್ಯವರ್ಣಗಳ ಆಕ್ರಮಣವಾಗಲಿ ಸಂಭವಿಸಿದುದು ಕಂಡುಬರುವುದಿಲ್ಲ. ಹೀಗಿದ್ದೂ ಅಚಲವಾಗಿ ನಿಂತ ಇನ್ನೂ ನಿಂತಿರುವ ಆ ಕುಳವನ್ನು ಕುರಿತು ೭೦೦ ವರುಷಗಳ ಪೂರ್ವದಲ್ಲಿಯೇ ಮುಂಗಡವಾಗಿ "ಕುಳದ ನಿಯಮದಲ್ಲಿ ಯಾವಾಗಲೂ ಲ ಎಂಬ ಅಕ್ಷರವಿಕಲ್ಪಮಿಲ್ಲ" ಎಂಬ ನಿಯಮವನ್ನೇಕೆ ಹೇಳಿದನು? ಆಗಿನ ಕಾಲದಲ್ಲಿ ಕುಳವು

ವಿಕಲ್ಪವಾಗಿ ಲಕಾರದಂತೆ ಉಚ್ಚರಿಸಲ್ಪಡುತ್ತಿತ್ತೇ?[೧೩] ಎಂಬ ಸಂಶಯಗಳು ಉದ್ಭವಿಸುತ್ತವೆ. ಹೀಗೆ ಸಂಶಯ ಉದ್ಭವಿಸಲು ಕೇಶಿರಾಜನ ದೃಷ್ಟಿಯಲ್ಲಿ ಊನವೆನಿಸಬಹುದಾದ "ಕುಳದ ನಿಯಾಮದೊಳೆಂದುಂ ಲಾಕ್ಷರವಿಕಲ್ಪಮಿಲ್ಲ" ಎಂಬ ಭಟ್ಟರ ವಾಕ್ಯವೇ ಕಾರಣವಾಗಿದೆ. ಇದರಲ್ಲಿ 'ಕ್ಷಳಕ್ಕೆ' ಎಂಬುದನ್ನು ಕೂಡಿಸಿದರೆ ಊನತೆ ಮಾಯವಾಗಿ "ಕುಳದ ನಿಯಾಮದೊಳೆಂದುಂ ಕ್ಷಳಕ್ಕೆ ಲಾಕ್ಷರವಿಕಲ್ಪಮಿಲ್ಲ" ಎಂಬ ಪೂರ್ಣವಾಕ್ಯ ಸಿದ್ಧವಾಗಿ, ಅದಕ್ಕೆ "ಕುಳ ಪ್ರಾಸಮಾಗಿ ಪೇೞ್ದ ಕನ್ನಡಗಬ್ಬಂ ಕ್ಷಳನಂ ಸೇರಿಗೆಯ್ವುದಾಗಿ ಲಕಾರಮಂ ವಿಕಲ್ಪಂ ಮಾಡಬಾರದು(+ಲಕಾರ ಪ್ರಾಸವಾಗಿ ಪೇೞ್ದ ಕನ್ನಡಗಬ್ಬದೊಳ್ ಕ್ಷಳನಂ ವಿಕಲ್ಪದಿನಿರಿಸಲ್ಬಾರದಾಗಿಯದುವುಮಾಗದು) ಎಂಬ ವೃತ್ತಿಭಾಗ ಸರಿಯಾಗಿ ಹೊಂದಿಕೊಂಡು, ಸೂತ್ರವೃತ್ತಿಗಳಲ್ಲಿ ಸಮನ್ವಯ ಸಾಧ್ಯವಾಗುತ್ತದೆ. ಇದರ ಅರ್ಥ "ಕುಳ ಪ್ರಾಸಕ್ಕೆ ಕ್ಷಳಾಕ್ಷರವನ್ನಲ್ಲದೆ ವಿಕಲ್ಪವಾಗಿಯಾದರೂ ಲಾಕ್ಷರವನ್ನು ಪ್ರಯೋಗಿಸಕೂಡದು".

ಎರಡನೆಯದಾಗಿ, ಅನ್ವಯಮಾಡುಕೊಳ್ಳುವಲ್ಲಿ ಸಮೀಪವರ್ತಿಗಳಾದ ವಾಕ್ಯಗಳನ್ನು ಹಿಂದು ಮುಂದು ಮಾಡಿಕೊಳ್ಳಬುಹುದು. ಅಥವಾ ಒಂದೇ ವಾಕ್ಯದ ಶಬ್ದಗಳನ್ನು ಹಿಂದು ಮುಂದು ಮಾಡಿಕೊಳ್ಳಬಹುದು. ಆದರೆ ಒಂದು ವಾಕ್ಯದ ಒಂದು ಶಬ್ದವನ್ನು ಇನ್ನೊಂದು ವಾಕ್ಯದ ಇನ್ನೊಂದು ಶಬ್ದದೊಂದಿಗೆ ಜೋಡಿಸಿ ಹೊಸ ವಾಕ್ಯ ಸಿದ್ಧಮಾಡುವದು ಅನ್ವಯದೋಷ. ಕೆಲವು ಸಲ ಕಾಕತಾಳೀಯ ನ್ಯಾಯದಂತೆ ಇಂಥ ದೋಷವೇ ಗುಣವೆನಿಸಬಹುದು. ಹಾಗಾಗಿದೆ, "ವಿಕಲ್ಪ ಕ್ಷಳಕ್ಕೆ" ಎಂಬ ಅನ್ವಯ. ಇಲ್ಲಿ ಮೊದಲನೆಯ ವಾಕ್ಯದ 'ಕ್ಷಳಕ್ಕೆ' ಎರಡನೆಯ ವಾಕ್ಯದ 'ವಿಕಲ್ಪಂ' ಎಂಬ ಪದವನ್ನು ಜಗ್ಗಿತಂದು ಜೋಡಿಸಿ, ಹೊಸವಾಕ್ಯ ನಿರ್ಮಾಣಮಾಡಿಕೊಂಡಿದ್ದಾರೆ. ಆಮೇಲೆ ಅನ್ವಯಕ್ಕಾಗಿ 'ವಿಕಲ್ಪಂ ಕ್ಷಳಕ್ಕೆ' ಎಂದು ಹಿಂದುಮುಂದಾಗಿ ಹೊಂದಿಸಿ, "ಕ್ಷಳದ ನಿಯಮದಲ್ಲಿ ಯಾವಾಗಲೂ 'ಲ' ಎಂಬ ಅಕ್ಷರ ವಿಕಲ್ಪವಿದೆ" ಎಂದು ಅರ್ಥ ಸಾಧಿಸಿದ್ದಾರೆ. ಅವರು ಹೇಳುವ ನಿಯಮಗಳಲ್ಲಿ ಇದೊಂದು ಮಾತ್ರ ಕೇಶಿರಾಜನ ಅರ್ಥದೃಷ್ಟಿಗೆ ಸಮೀಪವಾಗಿದೆ (ಅನ್ವಯದೃಷ್ಟಿಗಲ್ಲ). ಆದರೆ ಇದೇ ಅರ್ಥವನ್ನು ಕೇಶಿರಾಜನು "ವಿಕಲ್ಪಂ ಕ್ಷಳನಲ್ಲದಿಲ್ಲ (ಸಂಸ್ಕೃತದೊಳಾ ಲಕಾರಕ್ಕೆ)"ಎಂದು ಅವಧಾರಣೆಯ ಮೂಲಕ ಹೇಳಿದ್ದಾನೆ. ಇಲ್ಲಿ ಎರಡೂ ಅರ್ಥ ಒಂದೇ ಎನಿಸುತ್ತಿದ್ದರೂ ಒಂದು ದೋಷಾನ್ವಯ, ಇನ್ನೊಂದು ಗುಣಾನ್ವಯ. ಒಂದು ಸಾಮಾನ್ಯವಾಕ್ಯ, ಇನ್ನೊಂದು ಅವಧಾರಣೆಯಿಂದ ಕೂಡಿದ ನಿರ್ಧಾರದ ವಾಕ್ಯಂ. ಅದಕ್ಕಾಗಿ "ವಿಕಲ್ಪಂ ಕ್ಷಳನಲ್ಲದಿಲ್ಲ ಸಂಸ್ಕೃತದೊಳಾಲಕಾರಕ್ಕೆ" ಎಂಬ ಸೂತ್ರವಾಕ್ಯವನ್ನು ನಾವು ಎತ್ತಿಕೊಳ್ಳಬೇಕು. ಆಗ "ಕ್ಷಳನೆಂಬುದಲ್ಲದೆ ಸಂಸ್ಕೃತಪದದ ಲಕಾರಕ್ಕೆ ವಿಕಲ್ಪಮಂ ಪೇೞಲ್ಬಾರದು" ಎಂಬ ವೃತ್ತಿವಾಕ್ಯ ಸರಿಹೊಂದಿ, ಸೂತ್ರ ವೃತ್ತಿಗಳಲ್ಲಿ ಸಮನ್ವಯ ಕಂಡುಬರುತ್ತದೆ. ಇಷ್ಟು ವಿಷಯ ಶ್ರೀ ಭಟ್ಟರ ಮಾತಿನಲ್ಲಿ ಪೂರ್ವಾರ್ಧವಾಗಿದೆ.

ಇನ್ನು ಉತ್ತರಾರ್ಧದ ಅನ್ವಯವನ್ನು ನೋಡಿದರೆ ಇಲ್ಲಿ :"ಕ್ಷಳನೆಂಬುದಿಲ್ಲದೆ" ಎಂಬುದನ್ನು 'ಕ್ಷಳಂ+ಅಲ್ಲದೆ+ಇಲ್ಲ' ಎಂದು ಮೂರು ಪದಗಳಲ್ಲಿ ಬಿಚ್ಚಿ ' ಅಲ್ಲದೆ' ಎಂಬುದನ್ನು ಪೂರ್ವಾರ್ಧ ಉತ್ತರಾರ್ಧಗಳ ಸಂಬಂಧಸೂಚಿಪದ (ಇದೂ ಅಲ್ಲದೆ) ಎಂಬರ್ಥದಲ್ಲಿ ಬಳಸಿದ್ದಾರೆ. ಆದರೆ "ಅವಧಾರಣೆ ಅನಿಯೋಗ

೧೩. ಕೇಶಿರಾಜನ ಕಾಲದಲ್ಲಿ ಕುಳವು ಲಕಾರೋಚ್ಚಾರಣೆ ತಾಳುತ್ತಿರಲಿಲ್ಲ. ಲಕಾರವೇ ಕುಳೋಚ್ಚಾರಣೆಯನ್ನು ತಾಳುತ್ತಿತ್ತು. "ಬೆರಲ್, ಒರಲ್ ..... ಲಾಂತಮಿವಂ ಗ್ರಾಮ್ಯರಱೆಯದುಚ್ಚರಿಸುವರ್ ಕುಳಾಂತಭ್ರಮೆಯಿಂ" (ಸೂ. ೩೮). ಇದನ್ನು ದೃಷ್ಟಿಯಲ್ಲಿಟ್ಟುಕೊಂಡರೆ "ಲಾಕ್ಷರ ನಿಯಮಾವದೊಳೆಂದು ಕುಳವಿಕಲ್ಪಮಿಲ್ಲ" ಎಂಬ ನಿಯಮವನ್ನು ಹೇಳಬೇಕಾಗುತ್ತದೆ. ಇದು ಶ್ರೀ ಭಟ್ಟರ ವಾದಕ್ಕೆ ವಿರುದ್ಧವಾಗುತ್ತದೆ.

ವ್ಯವಹೃತಿಯಿಂದಿರೆ .....ತಗುಳ್ಚುವುದು ಸಂಹಿತೆಯಂ" (ಸೂ. ೭೪)ಎಂಬ ಸೂತ್ರದಂತೆ ಈ ಪದ ವ್ಯವಹರಿಸಿದಂತಿದೆ. ಎಲ್ಲ ವೃತ್ತಿಕಾರರು (ಕೇಶಿರಾಜನು ಸಹ) "ಕ್ಷಳನೆಂಬುದಿಲ್ಲದೆ..... ಇಲ್ಲ" ಎಂದೂ, ಟೀಕಾಕಾರನಾದ ನಿಟ್ಟೂರ ನಂಜಯ್ಯನು "ಕ್ಷಳಮೆಂಬ ಳಕಾರಮಿಲ್ಲದೆ ಇಲ್ಲ" ಎಂದೂ ಅರ್ಥೈಸಿರುವುದೇ ಇದಕ್ಕೆ ಆಧಾರವಾಗಿದೆ.

ಇಷ್ಟೇ ಏಕೆ, ಸೂತ್ರವನ್ನು ಸೂಕ್ಷ್ಮವಾಗಿ ಸೋಸಿ ನೋಡಿದರೆ ಈ ಸ್ಥಳದಲ್ಲಿ ಪಾಠಭೇದವಿದ್ದಂತೆ ತೋರುತ್ತದೆ. ಈ ಪಾಠಭೇದವನ್ನು ಗುರುತಿಸಲು ಈಗ ಪ್ರಕಟವಾದ ಎಲ್ಲ ದರ್ಪಣಗಳನ್ನು ಅವಲೋಕಿಸಿದರೆ ಅವು ಮೂರು ಗುಂಪುಗಳಾಗಿ ನಿಲ್ಲುತ್ತವೆ.

ಮೊದಲನೆಯ ಗುಂಪು

ದರ್ಪಣ	ಸೂತ್ರ	ವೃತ್ತಿ
೧. ಕಿಟೆಲ್ (೧೮೭೧)	ವಿಕಲ್ಪಂ ಕ್ಷಳನಲ್ಲದಿಲ್ಲ	ಕ್ಷಳನೆಂಬುದಿಲ್ಲದೆ...ವಿಕಲ್ಪಮಂ ಪೇಟಿಲ್ಬಾರದು
೨. ಕಿಟೆಲ್ (೧೮೯೯)	ವಿಕಲ್ಪಂ ಕ್ಷಳನಲ್ಲದಿಲ್ಲ	ಕ್ಷಳನೆಂಬುದಿಲ್ಲದೆ...ವಿಕಲ್ಪಮಂ ಪೇಟಿಲ್ಬಾರದು
೩. ಕಿಟೆಲ್ (ಪಂಜೆ) (೧೯೨೦)	ವಿಕಲ್ಪಂ ಕ್ಷಳನಲ್ಲದಿಲ್ಲ	ಕ್ಷಳನೆಂಬುದಲ್ಲದೆ...ವಿಕಲ್ಪಮಂ ಪೇಟಿಲ್ಬಾರದು.
೪. ಮದ್ರಾಸ(೧೯೩೮)	ವಿಕಲ್ಪಂ ಕ್ಷಳನಲ್ಲದಿಲ್ಲ	ಕ್ಷಳನೆಂಬುದಿಲ್ಲದೆ...ವಿಕಲ್ಪಮಂ ಪೇಟಿಲ್ಬಾರದು
೫. ಡಿ.ಎಲ್.ಎನ್.(೧೯೫೯)	ವಿಕಲ್ಪಂ ಕ್ಷಳನಲ್ಲದಿಲ್ಲ	ಕ್ಷಳನೆಂಬುದಲ್ಲದೆ...ವಿಕಲ್ಪಮಂ ಪೇಟಿಲ್ಬಾರದು
೬. ಡಿ.ಎಲ್.ಎನ್.(೧೯೬೪)	ವಿಕಲ್ಪ ಕ್ಷಳನಲ್ಲದಿಲ್ಲ	ಕ್ಷಳನೆಂಬುದಿಲ್ಲದೆ..ವಿಕಲ್ಪಮಂ ಪೇಟಿಲ್ಬಾರದು.

ಎರಡನೆಯ ಗುಂಪು

೭. ಸಾಹಿತ್ಯ ಪರಿಷತ್(೧೯೨೦)	ವಿಕಲ್ಪಂ ಕ್ಷಳನಿಲ್ಲದಿಲ್ಲ	ಕ್ಷಳನೆಂಬುದಿಲ್ಲದೆ...ವಿಕಲ್ಪಮಂ ಪೇಳಲ್ಬಾರದು

ಮೂರನೆಯ ಗುಂಪು

೮. ಹೈದ್ರಾಬಾದ ಪ್ರತಿ	ವಿಕಲ್ಪಂ ಕ್ಷಳನಲ್ಲದಿಲ್ಲ	ಕ್ಷಳನನಲ್ಲದೆ ವಿಕಲ್ಪಮಾಗಿ(ಲಕಾರಮಂ) ಪೇಟಿಸಲ್ಲ

ಈ ಮೂರು ಗುಂಪುಗಳಲ್ಲಿಯ ಪಾಠಭೇದ

ಗುರು	ಸೂತ್ರ	ವೃತ್ತಿ
ಮೊದಲು ಗುಂಪು	ಅಲ್ಲದೆ	ಇಲ್ಲದೆ
ಎರಡನೆಯ ಗುಂಪು	ಇಲ್ಲದೆ	ಇಲ್ಲದೆ
ಮೂರನಯೆ ಗುಂಪು	ಅಲ್ಲದೆ	ಅಲ್ಲದೆ.

ಇಲ್ಲಿ ಇಡೀ ಗುಂಪುಗಳನ್ನೇ ದೃಷ್ಟಿಯಲ್ಲಿಟ್ಟುಕೊಂಡರೆ ಎರಡನೆಯ ಮತ್ತು ಮೂರನೆಯ ಗುಂಪುಗಳ ಸೂತ್ರ ಮತ್ತು ವೃತ್ತಿ ಪಾಠಗಳಲ್ಲಿ ಹೊಂದಿಕೆ ಕಂಡುಬರುತ್ತದೆ. ಆದರೆ ಮೊದಲನೆಯ ಗುಂಪಿನಲ್ಲಿಈ ಹೊಂದಿಕೆ (ಅಲ್ಲದೆ-ಇಲ್ಲದೆ) ಕಂಡುಬಾರದು. ಆದುದರಿಂದ ಮೊದಲನೆಯ ಗುಂಪಿನವರು ಸೂತ್ರಪಾಠವನ್ನಾದರೂ ತಿದ್ದಬೇಕು, ಇಲ್ಲವೆ ವೃತ್ತಿಪಾಠವನ್ನಾದರೂ ತಿದ್ದಬೇಕು. ಸೂತ್ರಪಾಠ ತಿದ್ದಿದರೆ ಇವರು ಎರಡನೆಯ ಗುಂಪಿಗೆ ಸೇರುತ್ತಾರೆ. ವೃತ್ತಿಪಾಠ ತಿದ್ದಿದರೆ ಮೂರನೆಯ ಗುಂಪಿಗೆ ಸೇರುತ್ತಾರೆ. ಆಗ ನಿಚ್ಚಳವಾಗಿ ಪರಿಷತ್‌ಪಾಠ,

ಹೈದ್ರಾಬಾದಪಾಠಗಳೆರಡು ಉಳಿಯುತ್ತವೆ. ಇವೆರಡರಲ್ಲಿ 'ಇಲ್ಲದೆ' ಸರಿಯೋ 'ಅಲ್ಲದೆ' ಸರಿಯೋ ಎಂದು ನಿರ್ಣಯಿಸಬೇಕು. ನಮಗೆ ಮಾತ್ರ ಎರಡೂ ಪಾಠಗಳು ಅರ್ಥದೃಷ್ಟಿಯಿಂದ ವ್ಯತ್ಯಯ ತರುವುದಿಲ್ಲ. ಆದರೆ ಒಂದುವೇಳೆ ಪರಿಷತ್ ದರ್ಪಣದಲ್ಲಿರುವಂತೆ "ಕ್ಷಳನಿಲ್ಲದಿಲ್ಲ" (ಇಲ್ಲದೆ) ಎಂಬ ಪಾಠವನ್ನು ಸ್ವೀಕರಿಸಿದರೆ ಶ್ರೀ ಭಟ್ಟರು "ಅಲ್ಲದೆ" ಎಂಬುದಕ್ಕೆ ಕೊಟ್ಟ ಅರ್ಥ ನಿರುಪಯೋಗಿ ಎನಿಸುತ್ತದೆ. ಇದರಿಂದ ಅವರು ಜೋಡಿಸಿದ ಪೂರ್ವೋತ್ತರ ಭಾಗಗಳ ಸಂಬಂಧವೇ ಕಡಿದು ಹೋಗುತ್ತದೆ. ಒಂದುವೇಳೆ 'ಅಲ್ಲದೆ' ಎಂಬ ಪಾಠ ಸರಿ ಇದ್ದರೂ ಕೇಶಿರಾಜನು ಅದನ್ನು 'ಅದೂ ಅಲ್ಲದೆ' ಎಂಬರ್ಥದಲ್ಲಿ ಬಳಸಿಲ್ಲವೆಂಬುದು ಖಂಡಿತ ಮಾತು.

ಇನ್ನು ಮುಂದೆ "ಸಂಸ್ಕೃತದೊಳ್ ಆ ಲಕಾರಕ್ಕೆ ಕ್ಷಳಂ ಇಲ್ಲ" ಎಂದು ಶ್ರೀಭಟ್ಟರು ಅನ್ವಯಮಾಡಿಕೊಂಡಿದ್ದಾರೆ. ಆದರೆ "ಕ್ಷಳನೆಂಬುದಿಲ್ಲದೆ ಸಂಸ್ಕೃತ ಪದದ ಲಕಾರಕ್ಕೆ ವಿಕಲ್ಪಮಂ ಪೇಟಲ್ಬಾರದು" ಎಂಬ ವೃತ್ತಿವಾಕ್ಯವನ್ನು ನೋಡಿದರೆ, ಅವರು ಎತ್ತಿಕೊಂಡ ಸೂತ್ರಭಾಗವು ಈ ವೃತ್ತಿಭಾಗಕ್ಕೆ ವಿರುದ್ಧವಾಗಿದೆ. ಅವರ ಅನ್ವಯದಲ್ಲಿ ವೃತ್ತಿಯ 'ವಿಕಲ್ಪಂ' ಮತ್ತು 'ಅಲ್ಲದೆ' ಎಂಬ ಪದಗಳು ಗೋಚರಿಸುವುದಿಲ್ಲ. 'ವಿಕಲ್ಪಂ' ಎಂಬುದನ್ನು ಪೂರ್ವಾರ್ಧಕ್ಕೆ ಜೋಡಿಸಿ, 'ಅಲ್ಲದೆ' ಎಂಬುದನ್ನು ಮಧ್ಯದಲ್ಲಿಟ್ಟು, ಉಳಿದ 'ಕ್ಷಳಂ' ಮತ್ತು 'ಇಲ್ಲ' ಎಂಬ ಪದಗಳನ್ನು ಪ್ರಸ್ತುತ ವಾಕ್ಯಾನ್ವಯಕ್ಕೆ ಬಳಸಿಕೊಂಡಿರುವುದನ್ನು ನೋಡಿದರೆ ಈ ಬಿಚ್ಚುಪದಗಳನ್ನು ಅನುಕೂಲಕ್ಕೆ ತಕ್ಕಂತೆ ಹೊಂದಿಸಿಕೊಂಡು ತಮ್ಮ ಅರ್ಥ ಸಾಧಿಸುವ ಪ್ರಯತ್ನಮಾಡಿದುದು ತಿಳಿದುಬರುತ್ತದೆ. ಅದಕ್ಕಾಗಿ "ವಿಕಲ್ಪಂ ಕ್ಷಳನಲ್ಲದಿಲ್ಲ ಸಂಸ್ಕೃತದೊಳಾ ಲಕಾರಕ್ಕೆ" (=ಸಂಸ್ಕತದೊಳ್ ಆ ಲಕಾರಕ್ಕೆ ಕ್ಷಳಂ ವಿಕಲ್ಪಂ ಅಲ್ಲದೆ ಇಲ್ಲ) ಎಂಬ ಸೂತ್ರವಾಕ್ಯವನ್ನೆತ್ತಿಕೊಂಡರೆ "ಕ್ಷಳನೆಂಬುದಲ್ಲದೆ ಸಂಸ್ಕೃತ ಪದದ ಲಕಾರಕ್ಕೆ ವಿಕಲ್ಪಮಂ ಪೇಟಲ್ಬಾರದು" ಎಂಬ ವೃತ್ತಿಗೆ ಅದು ಸರಿಹೊಂದುತ್ತದೆ. ಇದರಿಂದ ಸಂಸ್ಕೃತಪದದ ಲಕಾರಕ್ಕೆ ವಿಕಲ್ಪವಾಗಿ ಕ್ಷಳ ಬಳಕೆಯಾಗುತ್ತದೆ ಎಂಬ ಸಮಂಜಸವಾದ ಅರ್ಥ ಹೊರಡುತ್ತದೆ.[೧೪]

ಈ ವಿಕಲ್ಪ ಕ್ಷಳ (ಪ್ರಾಸವಲ್ಲದಲ್ಲಿ) ಕನ್ನಡಕ್ಕೆ ಸಹಜವಾದುದು. ಇದಕ್ಕೆ ನಮ್ಮ ಸಾಹಿತ್ಯ, ವ್ಯಾಕರಣ, ಮತ್ತು ಆಡುನುಡಿ[೧೫]ಗಳೇ ಆಧಾರ. ಆದರೆ ಸಂಸ್ಕೃತಭಾಷೆಯಲ್ಲಿಯೂ ಕ್ಷಳವಿದೆಯೇ? ಎಂಬ ಪ್ರಶ್ನೆ ನಮ್ಮ

---

೧೪. ಈ ಸೂತ್ರಭಾಗಕ್ಕೆ ಹೈದ್ರಾಬಾದ ವೃತ್ತಿಕಾರನು "ಸಂಸ್ಕೃತದೊಳ್ ಆ ಲಕಾರಕ್ಕೆ ಕ್ಷಳಂ ವಿಕಲ್ಪಂ ಅಲ್ಲದೆ ಇಲ್ಲ" ಎಂದು ಅನ್ವಯಮಾಡಿಕೊಳ್ಳದೆ "ಸಂಸ್ಕೃತದೊಳ್ ಆ ಲಕಾರಕ್ಕೆ ಕ್ಷಳಂ ವಿಕಲ್ಪಂ ಇಲ್ಲ" ಎಂದು ಅನ್ವಯ ಭಾವಿಸಿ "(ಪ್ರಾಸಮಲ್ಲದಲ್ಲಿಯುಂ) ಸಕ್ಕದದ ಲಕಾರಕ್ಕೆ ಕ್ಷಳನಲ್ಲದೆ ವಿಕಲ್ಪಮಾಗಿ ಲಕಾರಮಂ ಪೇಟಿಸಲ್ಲ" ಎಂದು ಅರ್ಥಮಾಡಿದ್ದಾನೆ. 'ಕನ್ನಡದಲ್ಲಿ ಸಂಸ್ಕೃತದ ಲಕಾರಯುಕ್ತ ಪದಗಳು ಕ್ಷಳವಾಗಿ ಹೇರಳವಾದ ಸಂಖ್ಯೆಯಲ್ಲಿ ಬಳಕೆಯಲ್ಲಿರುವುದನ್ನು ನೋಡಿ ಕೇಶಿರಾಜನು ಈ ನಿಯಮ ಮಾಡಿರಬೇಕು" ಎಂದು ಶ್ರೀ ಡಿ.ಕೆ. ಭೀಮಸೇನರಾಯರೂ ಅದಕ್ಕೆ ಅನುಮೋದಿಸಿದಂತಿದೆ. ಆದರೆ ಸಂಸ್ಕೃತದ ಲಕಾರಯುಕ್ತ ಪದಗಳನ್ನು (ಪ್ರಾಸವಲ್ಲದಲ್ಲಿ) ಕಡ್ಡಾಯವಾಗಿ ಕ್ಷಳಮಾಡುವ ಈ ನಿಯಮವನ್ನು ಯಾವ ಕನ್ನಡ ಕವಿಯೂ ಪಾಲಿಸಿಲ್ಲ. ವಿಕಲ್ಪತೆಯನ್ನು ಸಾಧಿಸಿದ್ದಾರೆ. ಸ್ವತಃ ಕೇಶಿರಾಜನೇ ಪ್ರಾಸವಲ್ಲದಲ್ಲಿ.

ಯುಗಲ (ಸೂ. ೨೭, ೨೦೬, ೨೦೮)   ಯುಗಳ (ಸೂ.೧೫೫)

ಬಹುಲ(ಸೂ. ೨೪೯, ೨೬೭). ಬಹುಳ (ಸೂ.೬೫, ೭೫)

ವಿರಲ(ಸೂ. ೨೬೯) ವಿರಳ(ಸೂ. ೨೦೨)

ಎಂದು ವಿಕಲ್ಪ ಕ್ಷಳವನ್ನು ಪಾಲಿಸಿದ್ದಾನೆ. ಅದಕ್ಕಾಗಿ ಹೈದ್ರಾಬಾದ್ ದರ್ಪಣದ ೧೫ನೆಯ ಸೂತ್ರದ ಈ ವೃತ್ತಿ ಭಾಗ ದೋಷಯುಕ್ತವಾದಂತಿದೆ.

೧೫. ನಳಿನಿ, ದಳ, ಇತ್ಯಾದಿ ಪದಗಳು ಇನ್ನೂ ನಾಲಗೆಯ ಮೇಲೆ ಇವೆ.

ಅರ್ಥದಿಂದ ಉದ್ಭವಿಸುತ್ತದೆ. ಸಂಸ್ಕೃತದಲ್ಲಿ ಇರಲೇಬೇಕು. ಇದಕ್ಕೆ ಕೇಶಿರಾಜನೇ ಆಧಾರ. ಬಹುಶಃ ಪೈಶಾಚಿ ಭಾಷೆ[೧೬]ಯ ಪ್ರಭಾವದಿಂದಲೋ, ದ್ರಾವಿಡರ ಆದಿಪ್ರಸಾದ ಪ್ರಭಾವದಿಂದಲೋ, ಇಲ್ಲವೆ ಇನ್ನಾವ ಪ್ರಭಾವದಿಂದಲೋ ಕ್ಷಳದ ಬಳಕೆ ದಾಕ್ಷಿಣಾತ್ಯದಲ್ಲಿ (ಅದರಲ್ಲಿಯೂ ಕನ್ನಡಿಗರಲ್ಲಿ[೧೭]) ಅಧಿಕಗೊಂಡಿರಬೇಕು. ಈ ಅಧಿಕ ಕ್ಷಳ ಬಳಕೆ ಇನ್ನಷ್ಟು ದೀರ್ಘಕ್ಕೆ ಹೋದಾಗ ಸಂಸ್ಕೃತದಲ್ಲಿಯೂ ಅದನ್ನು ಬಳಸಲಿಕ್ಕೆ ಹತ್ತಿರಬಹುದು. ಈ ಮಾತಿಗೆ ಕನ್ನಡ ಕವಿಗಳು ರಚಿಸಿದ ಸಂಸ್ಕೃಪದ್ಯಗಳನ್ನು ಉದಾಹರಿಸಬಹುದು.

"ವಿಕಳತಾಂ ಕರಾಳಾಃ"(ಪು.೧೦), ದಳಿತ(ಪು.೧೧), ಖಳಾಂತಕಂ(ಪು.೬೮), ನೀಲೋತ್ಪಲದಳಶ್ಯಾಮೇ (ಪು.೧೮೧) -ವಡ್ಡಾರಾಧನೆ

"ಧವಳ .....ಶೈಲೇಳಾಕಲ್ಪಕಾಳಂ ಕ್ಷಿತಿವಲಯಮಿದಂ ಪಾತಿ ವಿಕ್ರಾಂತ ತುಂಗಃ

ಪಂಪಭಾರತದ ಪಟ್ಟಾಭಿಷೇಕದ ಮಂತ್ರಪದ್ಯ- (೧೪-೨೭)

ಇಲ್ಲಿ ವಡ್ಡಾರಾಧನೆ, ಪಂಪಭಾರತದ ಸಂಸ್ಕೃತಪದ್ಯಗಳಲ್ಲಿಯ ಕ್ಷಳ ಗಮನಾರ್ಹ.

ಇನ್ನು, ಕನ್ನಡಪದ್ಯಗಳಲ್ಲಿಯ 'ಕಳಹಂಸಾಲಸಯಾನೆ, ಜಳನಿಧಿ ಶಿಳೀಮುಖ' ಎಂಬ ಸಮಸ್ತಪದಗಳನ್ನೂ ಶಾಸನಗಳಲ್ಲಿಯ 'ತ್ರೈಳೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ', ಮಹಾಮಂಡಳೇಶ್ವರ, ತ್ರೈಳೋಕ್ಯಮಲ್ಲ ಎಂಬ ಸಮಸ್ತಪದಗಳನ್ನೂ ನೋಡಿದರೆ ಕಳ, ಜಳ, ಶಿಳೀ, ತ್ರೈಳೋಕ್ಯ, ಮಂಡಳ ಎಂಬಿವು ಕ್ಷಳಯುಕ್ತಪದಗಳಾಗಿದ್ದರೂ ಇಲ್ಲಿ ಸಮಾಸಮಾನ್ಯವಾಗಿವೆ. ಆದುದರಿಂದ ಕ್ಷಳಯುಕ್ತ ಪದವೂ ಶುದ್ಧ ಸಂಸ್ಕೃತವೆನ್ನಬಹುದು. ಇಂಥ ಪ್ರಯೋಗ ಆ ಕಾಲದ ಸಂಸ್ಕೃತಸಾಹಿತಿಗಳಿಗೆ ಮಾನ್ಯವಾಗಿರಬೇಕು. ಇದನ್ನು ಗಮನಿಸಿ, ಯಾವುದೋ ಒಂದು ವ್ಯಾಕರಣ ಪಂಥ[೧೮]ವು (School of grammar) ಕ್ಷಳವನ್ನೂ ಸಂಸ್ಕೃತ ವರ್ಣವೆಂದು ಗ್ರಹಿಸಿರಬೇಕು.ಈ ಗ್ರಹಿಕೆಯೇ ಕೇಶಿರಾಜನಿಗೆ 'ಅಕಾರಾದ್ಯಾಳಕಾರಂಬರೆಗಂ' ಎನ್ನಲಿಕ್ಕೆ ದಾರಿ ತೋರಿಸಿತೇನೋ? ಅದಕ್ಕಾಗಿಯೇ ಆತ ಕ್ಷಳವನ್ನು ಸಂಸ್ಕೃತವೆಂಬಂತೆ ಅಲ್ಲಲ್ಲಿ ಸೂಚಿಸುತ್ತಾನೆ:

೧.'ಸಂಸ್ಕೃತಕ್ಕಂ ಕನ್ನಡಕಂ ಸರಿ' ಎನಿಸುವ ಗಳ, ತಳ - ತತ್ಸಮಪದಗಳಲ್ಲಿಯ ಕ್ಷಳವನ್ನು ಗಮನಿಸಬೇಕು.

೨.**ವ್ಯಾಳ**=ಬಿಯಳ, **ಗೋಪಾಳ**=ಗೋವಳ, **ಖಳ**=ಕಳ ಎಂದು ಅಪಭ್ರಂಶರೂಪ ಹೇಳುವಲ್ಲಿ ದಪ್ಪಕ್ಷರದ ಪದಗಳು ಸಂಸ್ಕೃತ, ಇಲ್ಲಿ ಕ್ಷಳವಿದೆ.

೩.**ಅಳಕೆ**= ಅಳಕೆ, **ವಾಳುಕಾ**=ವಾಳುಕ ಎಂದು ಸಮಸಂಸ್ಕೃತರೂಪ ಹೇಳುವಲ್ಲಿ ದಪ್ಪಕ್ಷರದ ಪದಗಳು ಸಂಸ್ಕೃತ ಇಲ್ಲಿ ಕ್ಷಳವಿದೆ.

ಇದೆಲ್ಲವನ್ನೂ ನೋಡಿದರೆ ಕೇಶಿರಾಜನ ದೃಷ್ಟಿಯಲ್ಲಿ ಜಳ, ಕಮಳ ಪದಗಳು ತದ್ಭವವಲ್ಲ; ಶುದ್ಧ ಸಂಸ್ಕೃತಪದಗಳೇ ಆಗಿವೆ. ಹೀಗೆ ಕ್ಷಳವನ್ನೂ ಸಂಸ್ಕೃತ ವರ್ಣವೆಂದು ಗ್ರಹಿಸಿರುವುದರಿಂದಲೇ ಮುಂದೆ ಸೂತ್ರ ೪೨ರ ವೃತ್ತಿಯಲ್ಲಿ "ಕ್ರಮದಿಂ ಸ್ವರಂ ಪದಿನಾಲ್ಕು, ವರ್ಗಮಿರ್ಪತ್ತೈದಕ್ಕರಂ, ಅವರ್ಗಮೊಂಬತ್ತಕ್ಕರಂ, ಯೋಗವಾಹಂ ನಾಲ್ಕು, ಅಂತು ಶುದ್ಧಗೆ ಸಂಸ್ಕೃತದೊಳೈವತ್ತೆರಡು" ಎಂದು ಹೇಳಿದನು. ಇಲ್ಲಿ 'ಸಂಸ್ಕೃತದೊಳ್'

---

೧೬. "ಲೋಳಃ" -ಪೈಶಾಚ್ಯಾಂ ಲಕಾರಸ್ಯ ಳಕಾರೋ ಭವತಿ।ಶೀಳಂ, ಕುಳಂ, ಜಳಂ, ಸಳಿಳಂ, ಕಮಳಂ- (ಹೇಮಚಂದ್ರನ ಪ್ರಾಕೃತ ವ್ಯಾಕರಣಂ, ಪು. ೧೪೨; ತ್ರಿವಿಕ್ರಮನ ಪ್ರಾಕೃತ ಶಬ್ದಾನುಶಾಸನ, ಪುಟ ೨೨೭)

೧೭. "ಸಕಳಕಳಾಕಳಾಪ" (ಕವಿರಾಜಮಾರ್ಗಕಾರ)
"ಅಳಿಮಾಳಾನೀಳನೀಳೊತ್ಪಳದಳವಿಳಸತ್" (ದುರ್ಗಸಿಂಹ)

ಪದ ಗಮನಾರ್ಹ. ಅದಕ್ಕಾಗಿ ಸೂತ್ರ ೧೪ರಲ್ಲಿ ಹೇಳಿದ 'ಳ್' ವರ್ಣವು ಸಂಸ್ಕೃತದಲ್ಲಿ ಮೂಲತಃ ಒಂದು ಸ್ವತಂತ್ರ 'ಳ್' ವೂ ಅಲ್ಲ. ಡಳಯೋರಭೇದದ 'ಳ' ವೂ ಅಲ್ಲ;[೧೯] ಲಳಯೋರಭೇದದ 'ಕ್ಷಳ'[೨೦] ಎನ್ನಬಹುದು. ಈ ಕ್ಷಳ ಸಂಸ್ಕೃದಲ್ಲಿ ವಿಕಲ್ಪವಾಗಿ ಬಳಕೆಯಾಗುತ್ತಿರುವುದನ್ನು ನೋಡಿ ಕೇಶಿರಾಜನು "ವಿಕಲ್ಪಂ ಕ್ಷಳನಲ್ಲದಿಲ್ಲ ಸಂಸ್ಕೃತದೊಳ್ ಆ ಲಕಾರಕ್ಕೆ" ಎಂದು ಹೇಳಬೇಕಾಯಿತು. ಇದನ್ನು ನೋಡಿದರೆ ಶ್ರೀ ಭಟ್ಟರು ಹೇಳುವ "ಸಂಸ್ಕೃತ ಭಾಷೆಯಲ್ಲಿ: ಲಕಾರಕ್ಕೆ ಕ್ಷಳದ ಪ್ರಯೋಗವಿಲ್ಲ" ಎಂಬ ಮಾತು ಕೇಶಿರಾಜನ ದೃಷ್ಟಿಗೆ ವಿರುದ್ಧವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಕೊನೆಯದಾಗಿ, 'ಪೇೞ್ದನದಱಿಂ ಕ್ಷಳನಂ' ಎಂಬ ಸೂತ್ರವಾಕ್ಯಕ್ಕೆ ಶ್ರೀ ಭಟ್ಟರು "ಸಂಸ್ಕೃತ ಭಾಷೆಯಲ್ಲಿ ಲಕಾರಕ್ಕೆ ಕ್ಷಳವಿಲ್ಲ+ಅದಕ್ಕಾಗಿ ಕನ್ನಡದಲ್ಲಿಯ ಕ್ಷಳವನ್ನು ಹೇಳಿದೆನು" ಎಂದು ಅರ್ಥಮಾಡಿದ್ದಾರೆ. ಆದರೆ ಕನ್ನಡದಲ್ಲಿಯೂ ಕ್ಷಳವಿದೆ, ಸಂಸ್ಕೃತದಲ್ಲಿಯೂ ಕ್ಷಳವಿದೆ ಎಂಬುದನ್ನು ನಾವು ಹಿಂದೆಯೇ ಉಲ್ಲೇಖಿಸಿದ್ದೇವೆ. ಹೀಗಾಗಿ ಅವರ ವಾದ ಸೋತುಬಿಡುತ್ತದೆ. ಇದಲ್ಲದೆ ಎರಡನೆಯದಾಗಿ, ವೃತ್ತಿಯಲ್ಲಿ "ಕ್ಷಳನನಿದಱೊಳೆ ಬೆರಸಿ ಪೇೞ್ದಂ" ಎಂಬ ಮಾತು ಶ್ರೀ ಭಟ್ಟರ ಅರ್ಥದಲ್ಲಿ ಸ್ಥಾನಪಡೆದಿಲ್ಲ. ಅದಕ್ಕಾಗಿ ಅವರ ಅರ್ಥ ಕೇಶಿರಾಜನ ಉದ್ದೇಶಕ್ಕೆ ಭಿನ್ನವಾಗಿದೆ ಎನ್ನಬಹುದು. ಹಾಗಾದರೆ 'ಪೇೞ್ದನದಱಿಂ ಕ್ಷಳನಂ' ಇದರ ಅರ್ಥವೇನು? ಈ ಸೂತ್ರಭಾಗಕ್ಕೆ ಹೈದ್ರಾಬಾದ ಮತ್ತು ಹೈದ್ರಾಬಾದೇತರ ಎರಡು ಭಿನ್ನವೃತ್ತಿಗಳಿವೆ.

೧. ಕ್ಷಳನಂ ಇದಱೊಳೆ ಬೆರಸಿ ಪೇೞ್ದಂ (ಹೈದ್ರಾಬಾದೇತರ ವೃತ್ತಿ)

೨. ದೇಶಿಯದಾ ಕುಳನುಂ, ಕ್ಷಳನುಮೇಕಸ್ಥಾನೀಯಗಳಾದ ಕಾರಣಂ
ಕ್ಷಳಮನದಱೊಳ್ ಬೆರಸಿ ಪೇೞ್ದಂ (ಹೈದ್ರಾಬಾದ ವೃತ್ತಿ)

ಇಲ್ಲಿ ಮೊದಲನೆಯ ವೃತ್ತಿಗೆ ಎರಡನೆಯ ವೃತ್ತಿಯು ಪ್ರತಿವೃತ್ತಿಯಂತಿದೆ ಏನೋ ನಿಜ. ಆದರೆ ಇದರ ಅರ್ಥವೇನು? ಕುಳಪ್ರಾಸದಲ್ಲಿ ಕ್ಷಳಪ್ರಾಸವನ್ನು ಬೆರಸಿ ಹೇಳಿದೆನೆಂದು ಅರ್ಥವೇ? ಹಾಗಾದರೆ "ಕುಳದ ನಿಯಾಮದೊಳೆಂದುಂ ಕ್ಷಳಕ್ಕೆ ಲಾಕ್ಷರ ವಿಕಲ್ಪಮಿಲ್ಲ" ಎಂದು ಹೇಳಿದುದನ್ನೇ ಮತ್ತೊಮ್ಮೆ ಹೇಳಿದಂತಾಯಿತು. ಅಥವಾ ದೇಶೀಯ ಕುಳ ಮತ್ತು ಕ್ಷಳಗಳು ಏಕಸ್ಥಾನೀಯವಾದುದರಿಂದ ಅವು ಎರಡಲ್ಲ, ಒಂದು ಎಂಬ ಅರ್ಥವೇ? ಹಾಗಾದರೆ ಕ್ಷಳಂ ವಿಕಲ್ಪ ಅಲ್ಲದೆ ಇಲ್ಲ ಸಂಸ್ಕೃತದೊಳ್ ಆ ಲಕಾರಕ್ಕೆ, ಅದರಿಂ ದೇಶೀಯದಾ ಕುಳನುಂ ಕ್ಷಳನುಂ ಏಕಸ್ಥಾನೀಯಗಳಾದುದರಿಂದ ಅವು ಎರಡಲ್ಲದೆ ಒಂದು- ಎಂದು ಹೇಳಿದರೆ ಅರ್ಥ ಹೊಂದುವದಿಲ್ಲ. ಹೀಗಾಗಿ ಹೈದ್ರಾಬಾದ ಪ್ರತಿಯ ವೃತ್ತಿವಿವರಣೆ ಇಲ್ಲಿಯೂ ದೋಷಯುಕ್ತವಾದಂತಿದೆ.

---

೧೮. "ಲಳಯೋರಭೇದಃ "ಎಂಬ ಸೂತ್ರವನ್ನು ಕೇಶಿರಾಜನು ಯಾವ ವ್ಯಾಕರಣ ಗ್ರಂಥದಿಂದೆತ್ತಿಕೊಂಡಿದ್ದಾನೆ ? ಬಹುಶಃ ತಾನೇ ನಿರ್ಮಿಸಿದನೋ?

೧೯. ಋಗ್ವೇದದಲ್ಲಿ ಸ್ವರಮಧ್ಯದಲ್ಲಿ ಬಂದ 'ಡ' ವರ್ಣವು 'ಳ' ಎಂದಾಗುತ್ತದೆ ಎಂಬ ನಿಯಮವಿದೆ.

೨೦. "ಕ್ಷಳನೆಂಬುದೊಂದುಂಟು ಸಂಸ್ಕೃತದ ಲಾಕ್ಷರ ।
ಸ್ಥಳಮಂ ಳಕಾರಮಾಗುಚ್ಚರಿಪುದದು ಜಲಕೆ ।
ಜಳ ಬಲಕೆ ಬಳ ಕುಲಕೆ ಕುಳ ಕಮಲ ಶಬ್ದಕೆ ಕಮಳಮಂತು ಸಂಸ್ಕೃತಂ"
-ಕರ್ಣಾಟಕ ಸಂಜೀವನಂ. (ಶೃಂಗಾರಕವಿ), ಪದ್ಯ ೩೧.
ಇಲ್ಲಿ 'ಅಂತು ಸಂಸ್ಕೃತಂ' ಎಂಬ ಪದ ಗಮನಾರ್ಹ. ಇದಲ್ಲದೆ ಸೂತ್ರ ೪೩ರಲ್ಲಿ ಕನ್ನಡ ಸುದ್ದಗೆಯ ನಿರ್ಣಯದಲ್ಲಿ ಕೇಶಿರಾಜನು "ಕಳೆ ನೀಂ....... ಕ್ಷಳನಂ' ಎನ್ನುತ್ತಾನೆ. ನಮಗೆ ಆತ ಹೇಳಿದ ಕ್ಷಳ ಒಂದೇ. ಅದು ಲಳಯೋರಭೇದದ ಕ್ಷಳ. ಅದಕ್ಕಾಗಿ ಸೂತ್ರ ೧೪ರ ವರ್ಣಮಾಲೆಯಲ್ಲಿ ಹೇಳಿದ 'ಳ್' ವರ್ಣವು ಕ್ಷಳವಾಗಿದೆ.

ಆದುದರಿಂದ ಅದನ್ನು ಬಿಟ್ಟು ಅರ್ಥದ ಸುಳಿವನ್ನು ಹುಡುಕಬೇಕು. ಅಂದರೆ "ಸಂಸ್ಕತದೊಳ್ ಆ ಲಕಾರಕ್ಕೆ ಕ್ಷಳಂ ವಿಕಲ್ಪಂ ಅಲ್ಲದೆ ಇಲ್ಲ. ಅದಱಿಂ (ಸಂಸ್ಕೃತ ವರ್ಣಮಾಲೆಯಲ್ಲಿ ಬೆರಸಿ) ಕ್ಷಳನಂ ಪೇೞ್ದಂ" ಎಂದಿಟ್ಟುಕೊಂಡರೆ ಅರ್ಥ ಹೊಂದುತ್ತದೆ. ಈಗ ೧೪ ಮತ್ತು ೧೫ನೆಯ ಸೂತ್ರಗಳಿಗೆ ಸಂಬಂಧವೇರ್ಪಟ್ಟು ಅಪ್ರಾಸಂಗಿಕತೆ ಮಾಯವಾಗುತ್ತದೆ.[೨೧] ಅದಕ್ಕಾಗಿ 'ಕ್ಷಳನಂ ಇದಱೊಳೆ ಬೆರಸಿ ಪೇೞ್ದಂ' ಎಂದರೆ ಮೇಲಿನ ೧೪ನೆಯ ಸೂತ್ರದ ವರ್ಣಮಾಲೆಯಲ್ಲಿ ಕ್ಷಳವನ್ನು ಬರೆಸಿ ಹೇಳಿದೆನು ಎಂದಿಟ್ಟುಕೊಳ್ಳುವುದೇ ಸೂಕ್ತವಾದುದು.

ಒಟ್ಟಾಗಿ ಇನ್ನೊಮ್ಮೆ ಈ ಸೂತ್ರವೃತ್ತಿಗಳೆರಡನ್ನು ಸಮೀಕರಿಸುತ್ತ ಅರ್ಥವನ್ನು ನೋಡೋಣ.

ಕುಳದನಿಯಾಮದೊಳೆಂದು ಕ್ಷಳಕ್ಕೆ ಲಾಕ್ಷರ ವಿಕಲ್ಪಮಿಲ್ಲ.	ಕುಳಪ್ರಾಸಮಾಗಿ ಪೇೞ್ದ ಕನ್ನಡಗಬ್ಬಂ ಕ್ಷಳನಂ ಸೇಱಿಗೆಯ್ವುದಾಗಿ ಲಕಾರಮಂ ವಿಕಲ್ಪ ಮಾಡಬಾರದು (ಲಕಾರ ಪ್ರಾಸಮಾಗಿ ಪೇೞ್ದ ಕನ್ನಡಗಬ್ಬದೊಳ್ ಕ್ಷಳನಂ ವಿಕಲ್ಪದಿನಿರಿಸಲ್ಬಾರದುಮಾಗಿಯದುವುಮಾಗದು.)
ವಿಕಲ್ಪಂ* ಕ್ಷಳನಲ್ಲದಿಲ್ಲ ಸಂಸ್ಕತದೊಳಾ ಲಕಾರಕ್ಕೆ (ಅನ್ವಯ: ಸಂಸ್ಕೃತದೊಳ್ ಆ ಲಕಾರಕ್ಕೆ ಕ್ಷಳಂ ವಿಕಲ್ಪಂ ಅಲ್ಲದೆ ಇಲ್ಲ).	ಕ್ಷಳನೆಂಬುದಿಲ್ಲದೆ ಸಂಸ್ಕೃತ ಪದದ ಲಕಾರಕ್ಕೆ ವಿಕಲ್ಪಮಂ ಪೇಳಲ್ಬಾರದು.
ಪೇೞ್ದನದರಿಂ ಕ್ಷಳನಂ	ಆಗಿ (ಅದಱಿಂ) ಕ್ಷಳನನಿದಱೊಳೆ (ಮೇಲಿನ ವರ್ಣಮಾಲೆಯಲ್ಲಿಯೇ) ಬೆರಸಿ ಪೇೞ್ದಂ

ಅರ್ಥ

ಪ್ರಾಸವಿಷಯದಲ್ಲಿ ಕುಳಕ್ಕೆ ಕ್ಷಳವಲ್ಲದೆ ಲಕಾರದ ವಿಕಲ್ಪವಿಲ್ಲ. ಲಕಾರಕ್ಕೆ ಲಕಾರವಲ್ಲದೆ ಕ್ಷಳದ ವಿಕಲ್ಪವಿಲ್ಲ. ಸಂಸ್ಕೃತ ಪದದ ಲಕಾರಕ್ಕೆ ವಿಕಲ್ಪವಾಗಿ (ಸಂಸ್ಕೃತ ಮತ್ತು ಸಂಸ್ಕೃತೇತರ ಭಾಷೆಗಳಲ್ಲಿ) ಕ್ಷಳ ಬರುತ್ತದೆ. ಆದುದರಿಂದ ಆ ಕ್ಷಳವನ್ನು (ಒಂದು ವರ್ಣವೆಂದು ಗ್ರಹಿಸಿ ಮೇಲಿನ ವರ್ಣಮಾಲೆಯಲ್ಲಿ) ಹೇಳಿದೆನು.

■■

ಆಕರ : ಮಾರ್ಗ ಸಂಪುಟ–೨

---

೨೧. ಸೂತ್ರಗಳ ಸಕ್ರಮತೆಗೆ ಹೆಸರಾದ ಹೈದ್ರಾಬಾದ ಪ್ರತಿಯಲ್ಲೂ "ವರ್ಣಂಗಳ ಪಾಠಕ್ರಮ ......" ಎಂಬ ಸೂತ್ರದ ತರುವಾಯವೇ "ಕುಳದ ನಿಯಾಮದೊಳ್ ...." ಎಂಬ ಸೂತ್ರವಿದೆ. ಒಂದು ವೇಳೆ ಇವೆರಡಕ್ಕೂ ಸಂಬಂಧ ಕೂಡಿಸದೇ ಹೋದರೆ ಹೈದ್ರಾಬಾದ ಪ್ರತಿಯ ಸೂತ್ರಾನುಪೂರ್ವಿಯ ವಿಷಯದಲ್ಲಿಯೂ ಸಂಶಯ ತಾಳಬೇಕಾಗುತ್ತದೆ.
ವಿಕಲ್ಪಂ = ಕುಳಪ್ರಾಸಿಂಗೆ ವಿಕಲ್ಪಂ (ಕಿಟೆಲ್‌ರ ದರ್ಪಣದ ಟೀಕೆ).
ವಿಕಲ್ಪಂ=ಲಾಕ್ಷರ ವಿಕಲ್ಪಂ (ಸಾಹಿತ್ಯ ಪರಿಷತ್ ದರ್ಪಣದ ಟೀಕೆ)
ಹೀಗೆ ಇಲ್ಲಿಯ "ವಿಕಲ್ಪಂ" ಎಂಬ ಪದಕ್ಕೆ ಎರಡು ಅರ್ಥಗಳ ಉಲ್ಲೇಖವಿದೆ.ಇವುಗಳಲ್ಲಿ ಸಾಹಿತ್ಯ ಪರಿಷತ್ ದರ್ಪಣದ ಅರ್ಥವೇ ಸರಿಯಾಗಿದೆ.

೨೪

ಕನ್ನಡ ಹಸ್ತಪ್ರತಿ ಸೂಚಿಗಳು

ಗ್ರಂಥಗಳ ಪ್ರಯೋಜನವನ್ನು ಸಾರ್ಥಕಗೊಳಿಸುವ ಸಲುವಾಗಿ, ವಿದ್ವಾಂಸರು ತಾತ್ವಿಕ ಮತ್ತು ಆನ್ವಯಿಕ ನೆಲೆಗಳಲ್ಲಿ ಅನೇಕ ಶೈಕ್ಷಣಿಕ ಪ್ರಯೋಗ-ಪ್ರಯತ್ನಗಳನ್ನು ಮಾಡುತ್ತ ಬಂದ ಕಾರಣ, 'ಗ್ರಂಥಾಲಯ ವಿಜ್ಞಾನ' ಹೆಸರಿನ ಹೊಸ ಜ್ಞಾನಶಾಖೆ ಅಸ್ತಿತ್ವಕ್ಕೆ ಬಂದು, ಸಾಲದೆಂಬಂತೆ ಅದು ಹೊಸ ಹೊಸ ಆಯಾಮಗಳನ್ನು ಅಳವಡಿಸಿಕೊಂಡು ಬೆಳೆಯುತ್ತಲಿದೆ. ದುರ್ದೈವದ ಸಂಗತಿಯೆಂದರೆ ಯಾವುದೇ ರೂಪದ ಗ್ರಂಥಸಮುದಾಯವನ್ನು ತನ್ನ ತೆಕ್ಕೆಯಲ್ಲಿ ಅಳವಡಿಸಿಕೊಳ್ಳಬೇಕಾದ ಈ ಕ್ಷೇತ್ರ, ಯಂತ್ರಪ್ರತಿ ಗ್ರಂಥಭಂಡಾರದ ಮೇಲೆ ಹೆಚ್ಚು ಒತ್ತು ಕೊಟ್ಟು, ಹಸ್ತಪ್ರತಿ ಗ್ರಂಥಭಂಡಾರವನ್ನು ಕಡೆಗಣಿಸಿದೆ. ಈ ದುರವಸ್ಥೆಯನ್ನು ಆಧುನಿಕ ಗ್ರಂಥಾಲಯ ವಿಜ್ಞಾನವಾಗಲೀ, ಆಧುನಿಕ ಗ್ರಂಥಾಲಯ ವಿಜ್ಞಾನಿಗಳಾಗಲೀ, ನಿವಾರಿಸಿ, ಹಸ್ತಪ್ರತಿ ಗ್ರಂಥಭಂಡಾರಕ್ಕೆ ನ್ಯಾಯ ಒದಗಿಸಲಾರರೆಂದೇ ಕಾಣುತ್ತದೆ. ಏಕೆಂದರೆ ಯಂತ್ರಪ್ರತಿ ಗ್ರಂಥಭಂಡಾರಕ್ಕೆ ಅವಶ್ಯವೆನಿಸಿರುವ ತಜ್ಞತೆ ಹಸ್ತಪ್ರತಿ ಗ್ರಂಥಭಂಡಾರಕ್ಕೆ ಅವಶ್ಯವೆನಿಸುವದಿಲ್ಲವೆಂದೇ ಹೇಳಬೇಕು. ಆದುದರಿಂದ 'ಮ್ಯಾನ್ಯುಸ್ಕ್ರಿಪ್ಟಾಲಜಿ' ಹೆಸರಿನ ಹೊಸದೊಂದು ಶೈಕ್ಷಣಿಕ ಶಿಸ್ತು, ತಾತ್ವಿಕ-ಆನ್ವಯಿಕ ನೆಲೆಗಳಲ್ಲಿ ಬೆಳೆದುಬರಬೇಕಾಗಿದೆ. ಈ ಶಿಸ್ತಿನ ಒಂದು ಭಾಗ "ಹಸ್ತಪ್ರತಿಸೂಚಿ."

ಒಂದು ಗ್ರಂಥದ ಸರ್ವಸಮಗ್ರ ಪರಿಚಯವನ್ನು ವಿವರಿಸುವುದೇ ಸೂಚೀಕರಣ. ಈ ವಿವರಗಳನ್ನೊಳಗೊಂಡುದೇ ಸೂಚಿ. ಯಂತ್ರಪ್ರತಿ ಒಂದು ಕ್ರಮಬದ್ಧ ಗ್ರಂಥ. ಹಸ್ತಪ್ರತಿ ಇಷ್ಟರ ಮಟ್ಟಿಗೆ ಕ್ರಮಬದ್ಧ ಗ್ರಂಥವಾಗಿರುವುದಿಲ್ಲ. ಆದುದರಿಂದ ಯಂತ್ರಪ್ರತಿಯ ಸೂಚೀಕರಣಕ್ಕಿಂತ ಹಸ್ತಪ್ರತಿಯ ಸೂಚೀಕರಣ ಜಟಿಲವೆಂದೇ ಹೇಳಬೇಕು. ಹಸ್ತಪ್ರತಿಗಳಿಗೆ ಸೂಚಿ ರಚಿಸುವ ಕ್ರಿಯೆ ಭಾರತದಲ್ಲಿ ಸರ್ ವಿಲಿಯಂ ಜೋನ್ಸ್ ಅವರಿಂದ ಪ್ರಾರಂಭವಾಯಿತು (೧೮೦೭). ಕನ್ನಡಕ್ಕೆ ಬಂದರೆ ೧೮೨೮ರಲ್ಲಿ ಪ್ರಕಟವಾದ "ಮೆಕೆಂಝಿ ಕಲೆಕ್ಶನ್: ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ದಿ ಮ್ಯಾನ್ಯುಸ್ಕ್ರಿಪ್ಟ್ಸ್" ಎಂಬುದೇ ಪ್ರಥಮ ಸೂಚಿಯಾಗಿದೆ. ಆಮೇಲೆ ಮದ್ರಾಸ, ಮೈಸೂರು, ಧಾರವಾಡಗಳಲ್ಲಿಯ ಸರ್ಕಾರಿ ಸಂಸ್ಥೆಗಳು, ಮೈಸೂರು-ಧಾರವಾಡ-ಬೆಂಗಳೂರು-ಹೈದ್ರಾಬಾದ ವಿಶ್ವವಿದ್ಯಾಲಯಗಳು, ಕರ್ನಾಟಕದ ಒಳ ಹೊರಗಿನ ವೈಯಕ್ತಿಕ ಸಂಸ್ಥೆಗಳು ಹಸ್ತಪ್ರತಿಸೂಚಿಗಳನ್ನು ಪ್ರಕಟಿಸಿವೆ. ಇವುಗಳನ್ನು ವಿವರಣಾತ್ಮಕಸೂಚಿ ಗ್ರಂಥ, ಯಾದಿರೂಪದ ಸೂಚಿ ಗ್ರಂಥ, ಲೇಖನರೂಪದ ಸೂಚಿ-ಎಂದು ವರ್ಗೀಕರಿಸಬಹುದು. ಇವುಗಳಲ್ಲಿ ವಿವರಣಾತ್ಮಕ ಸೂಚಿಗೆ ವಿಶೇಷ ಸ್ಥಾನವಿದೆ.

ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ವಿವರಣಾತ್ಮಕ ಹಸ್ತಪ್ರತಿಸೂಚಿಗಳು ಪ್ರಕಟವಾಗಿದ್ದು, ಹಸ್ತಪ್ರತಿಯನ್ನು ಪರಿಚಯಿಸುವ ವಿವರಗಳ (item) ವಿಷಯದಲ್ಲಿ ಇವು ಒಂದರಿಂದ ಇನ್ನೊಂದು ಭಿನ್ನವಾಗಿವೆ. ಆದುದರಿಂದ ಒಂದು ಸರ್ವಸಮಗ್ರ, ಸರ್ವಸಮ್ಮತ ಸೂಚಿಯ ನಮೂನೆಯಲ್ಲಿ ಇಲ್ಲಿ ಸೂಚಿಸಬಹುದಾಗಿದೆ.

ಯಾವುದೇ ಹಸ್ತಪ್ರತಿಯಲ್ಲಿ ಎರಡು ಘಟಕಗಳಿರುತ್ತವೆ. ಒಂದು : ಕವಿಯ ಕೃತಿ, ಇನ್ನೊಂದು ಲಿಪಿಕಾರನ ಪ್ರತಿ. ಆದುದರಿಂದ ಹಸ್ತಪ್ರತಿಸೂಚಿ ರಚನೆಯ ಸಂದರ್ಭದಲ್ಲಿ ಕೃತಿಪರಿಚಯ, ಪ್ರತಿಪರಿಚಯ ಎಂದು ಎರಡು ಪ್ರತ್ಯೇಕ ಸ್ತರಗಳನ್ನೇ ಮಾಡಿಕೊಳ್ಳುವುದು, ಆಯಾ ಸ್ತರಗಳಿಗೆ ಸಂಬಂಧಿಸಿದ ಪರಿಚಯ ವಿವರ (item)ಗಳನ್ನು ಅಲ್ಲಲ್ಲಿ ಅಳವಡಿಸುವುದು ಸೂಕ್ತವಾಗಿದೆ. ಈ ತಿಳಿವಳಿಕೆಯ ಹಿನ್ನೆಲೆಯಲ್ಲಿ ಹಸ್ತಪ್ರತಿ ವಿವರಣಾತ್ಮಕ ಸೂಚೀ 'ನಮೂನೆ'ಯನ್ನು ಹೀಗೆ ರೂಪಿಸಬಹುದು.

ಕೃತಿ ಪರಿಚಯ

೧. ಕೃತಿನಾಮ ೨. ಕವಿನಾಮ-ಕಾಲ

೩. ಕೃತಿಭಾಷೆ ೪. ಕೃತಿಪ್ರಕಾರ

೫. ಕೃತಿವಿಷಯ : ....

೬. ವಿಶೇಷ : ....

....

ಪ್ರತಿಪರಿಚಯ

೭. ಕ್ರಮಾಂಕ ೮. ವಸ್ತು

೯. ಆಕಾರ ೧೦. ಹಸ್ತಪ್ರತಿಸ್ಥಿತಿ

೧೧. ಗರಿ/ಪುಟ ೧೨. ಲಿಪಿಸ್ವರೂಪ

೧೩. ಮಿತಿ ೧೪. ಭಾಷಾಸ್ವರೂಪ

೭೧೫. ಆದಿ : ....

....

೧೬. ಅಂತ್ಯ : ....

....

೧೭. ವಿಶೇಷ : ....

೧೮. ಈ ಕಟ್ಟಿನಲ್ಲಿರುವ ಕೃತಿಗಳು :

೧. .... ೨. ....

೩. .... ೪. ....

೫. .... ೬.. ....

ಹಸ್ತಪ್ರತಿಯ ವಿವರಣಾತ್ಮಕ ಸೂಚಿ ಸಿದ್ಧಪಡುವಾಗ ಎಲ್ಲಿ? ಯಾವ ವಿವರ? ಬರೆಯಬೇಕು-ಎಂಬುದರ ನಮೂನೆಯಿದು. ಈ ನಮೂನೆಯ ಬಗ್ಗೆ ಕೆಲವು ಸ್ಪಷ್ಟನೆಗಳು ಅವಶ್ಯವೆಂದು ತೋರುತ್ತದೆ.

೧. ಈ ನಮೂನೆಯನ್ನು ಸೂಚಿಗ್ರಂಥದ ಪ್ರಸ್ತಾವನೆಯಲ್ಲಿ ಮುದ್ರಿಸಿದರೆ ಸಾಕು. ಗ್ರಂಥದ ಒಳಗೆ ಪ್ರತಿಯೊಂದು ಪ್ರತಿಯನ್ನು ಪರಿಚಯಿಸುವಾಗ ಈ ನಮೂನೆಯಲ್ಲಿಯ ಶೀರ್ಷಿಕೆಗಳ ಸ್ಥಾನದಲ್ಲಿ ಉತ್ತರರೂಪದ ಸೂಕ್ತ ವಿವರಗಳನ್ನು ಮಾತ್ರ ದಾಖಲಿಸಬೇಕು, ಅಷ್ಟೇ.

೨. ಮೊದಲಿನ ಸ್ತರದಲ್ಲಿ 'ಕೃತಿ ವಿಷಯ' ಎಂಬ ಶೀರ್ಷಿಕೆಯನ್ನು ಮುದ್ರಿಸಿ, ಅದರ ಮುಂದೆ ಆ ಕೃತಿಯ ವಿಷಯುವನ್ನು ಸಾರವತ್ತಾಗಿ ಹೇಳಬೇಕು.

೩. ಎರಡೂ ಸ್ತರಗಳಲ್ಲಿ 'ವಿಶೇಷ' ಎಂಬ ಶೀರ್ಷಿಕೆಯನ್ನು ಮುದ್ರಿಸಿ, ಅದರ ಮುಂದೆ ಪ್ರತಿ ಅಥವಾ ಕೃತಿಯ ವಿಶೇಷತೆಯನ್ನು ನಮೂದಿಸಬೇಕು.

೪. ಎರಡನೆಯ ಸ್ತರದಲ್ಲಿ ಆದಿ, ಅಂತ್ಯ ಎಂಬ ಶೀರ್ಷಿಕೆಗಳನ್ನು ಮುದ್ರಿಸಿ, ಅಲ್ಲಲ್ಲಿ ಪ್ರತಿಯ ಆದಿಪಾಠ, ಅಂತ್ಯಪಾಠಗಳನ್ನು ಉದ್ಧರಿಸಬೇಕು.

೫. ಎರಡನೆಯ ಸ್ತರದಲ್ಲಿ 'ಈ ಕಟ್ಟಿನಲ್ಲಿರುವ ಕೃತಿಗಳು' ಎಂಬ ಶೀರ್ಷಿಕೆಯನ್ನು ಮುದ್ರಿಸಿ, ಆ ಕಟ್ಟಿನಲ್ಲಿರುವ ಮೊದಲನೆಯ ಕೃತಿಯನ್ನು ಪರಿಚಯಿಸುವ ಸಂದರ್ಭದಲ್ಲಿಮಾತ್ರ ಎಲ್ಲ ಕೃತಿಗಳ ಯಾದಿಯನ್ನು ಕೊಡಬೇಕು. ಆ ಕಟ್ಟಿನಲ್ಲಿರುವ ಇತರ ಕೃತಿಗಳನ್ನು ಪರಿಚಯಿಸುವಾಗ 'ಕಟ್ಟಿನಲ್ಲಿರುವ ಕೃತಿಗಳು' ಶೀರ್ಷಿಕೆಯ ಮುಂದೆ ಮೊದಲನೆಯ ಕೃತಿಯ ನಂಬರು, ಹೆಸರುಗಳನ್ನು ಸೂಚಿಸಿ, 'ಈ ಕಟ್ಟಿನಲ್ಲಿರುವ ಕೃತಿಗಳು ಕಾಲಂ ನೋಡಿರಿ' ಎಂದು ಸೂಚಿಸಬೇಕು.

ಕನ್ನಡ ಅಧ್ಯಯನಪೀಠದ ೪೩೭೫ನೆಯ ನಂಬರಿನ ಕಟ್ಟನ್ನು ಉದಾಹರಣೆಯಾಗಿ ಕೊಟ್ಟು, ಈ ವಿಷಯವನ್ನು ಸ್ಪಷ್ಟಪಡಿಸಬಹುದು.

೧

ಶ್ರೀಕೃಷ್ಣ ಪಾರಿಜಾತ	ಅಪರಾಳ ತಮ್ಮಣ್ಣ, ೧೮ನೆಯ ಶತಮಾನ
ಕನ್ನಡ	ಬಯಲಾಟ

ಕೃತಿವಿಷಯ: ಪಾರಿಜಾತಪುಷ್ಪಕ್ಕಾಗಿ ಸತ್ಯಭಾಮೆ-ರುಕ್ಮಿಣಿಯರಲ್ಲಾದ ಮನಸ್ತಾಪವನ್ನು ಶ್ರೀಕೃಷ್ಣ ನಿವಾರಿಸಿದುದು.

ವಿಶೇಷ : ಈ ಕೃತಿಯ ಪೂರ್ವಾರ್ಧವನ್ನು ಅಪರಾಳ ತಮ್ಮಣ್ಣ, ಉತ್ತರಾರ್ಧವನ್ನು ಶಿರಗುಪ್ಪಿ ಸದಾಶಿವಯ್ಯ ರಚಿಸಿರುವರೆಂಬ ಸೂಚನೆ ಇಲ್ಲಿದೆ.

* * *

೪೩೭೫/೧	ವಿದೇಶಿ ಕಾಗದ
೮"x೬"	ಜೀರ್ಣಸ್ಥಿತಿ
೧-೩೫	ಅಕ್ಷರ ಸ್ಪಷ್ಟ
ಶಾಲಿವಾಹನ ಶಕೆ ೧೭೨೯, ಪ್ರಭವ.	ಶುದ್ಧಭಾಷೆ

ಆದಿ: ಶ್ರೀ ವಿರೂಪಾಕ್ಷಲಿಂಗಾಯ ನಮಃ। ಶ್ರೀ ನುಣ್ಗೊರಳ ಸಂಗಮೇಶ್ವರಾಯ ನಮಃ। ಶ್ರೀ ಗಣಾಧಿಪತೇ ನಮಃ। ರಾಯಚೂರ ಅಪರಾಲ ತಂಮಂಣನು ಮಾಡಿದ ಪಾರಿಜಾತ ಬರವುದಕ್ಕೆ ಶುಭಮಸ್ತು। ಶೋಭನಮಸ್ತು। ಆಯುರಾರೋಗ್ಯ ಐಶ್ವರ್ಯಮಸ್ತು। ರಾಗ ನಾಟಿ। ಜಂಪೆ ತಾಳ।

ಅಂತ್ಯ : ಯೀ ಪುಸ್ತಕ ಆರದುಯಂದಡೆ।ತಾಳಿಕೋಟಿ। ಸಜ್ಜನ ಗಾಣಿಗರ ಲಿಂಗಪ್ಪನಾ ಗರ್ಭದಲ್ಲಿ ಹುಟ್ಟಿದ ಮಲ್ಲಪ್ಪನು ಮೋದ್ಯಾಡಿಕೊಳಬೇಕೆಂದು ಮನೋಪ್ರೀತಿಯಿಂದ ಬರಸಿದನು ಶ್ರೀ।ದೀರ್ಘ।ರಸ್ವ।ಬಿಂದು।ವಿಸರ್ಗ।ದ್ವಿತ್ತು।ಯಿಷ್ಟರಲ್ಲಿ।ವಿಶ್ಮೃ ಆದರೂ । ಬಲ್ಲಂತ ಜ್ಞಾನಿಗಳು ತಿದ್ದಿಕೊಂಬುವದು। ಇತಿ ಮಂಗಳ ಮಹಾಶ್ರೀ . . . . . .

ವಿಶೇಷ : ಈವರೆಗೆ ಲಭ್ಯವಾದ ಶ್ರೀಕೃಷ್ಣ ಪಾರಿಜಾತದ ಹಸ್ತಪ್ರತಿಗಳಲ್ಲಿಯೇ ಇದು ಕಾಲದೃಷ್ಟಿಯಿಂದ ಕವಿಪ್ರತಿಗೆ ಹತ್ತಿರವಾಗಿರುವ ಪ್ರತಿಯಾಗಿದೆ.

ಈ ಕಟ್ಟಿನಲ್ಲಿರುವ ಕೃತಿಗಳು: ೧. ಶ್ರೀ ಕೃಷ್ಣಪಾರಿಜಾತ (೧-೩೫ ಬಿ), ೨. ಒಂದು ಶೃಂಗಾರ ಪದ, ೩. ದೇವನಾಗರಿಲಿಪಿಯಲ್ಲಿ ಬರೆದ ಕೆಲವು ಆರ್ಯಾವೃತ್ತಗಳು, ೪. ಒಂದು ಪದ.

ಕೆಲವು ವೇಳೆ ಇಲ್ಲಿ ತುಂಬಲು ವಿಷಯವಿಲ್ಲದಿದ್ದರೆ ಶೀರ್ಷಿಕೆಯ ಮುಂದೆ ಒಂದು ಗೆರೆ (ಡ್ಯಾಶ್) ಹಾಕಬೇಕು. ಎರಡೂ ಸ್ತರಗಳನ್ನು ಪ್ರತ್ಯೇಕಿಸಿ ತೋರಿಸಲು ನಡುವೆ ಸೂಕ್ತ ಚಿಹ್ನೆ ಬಳಸಬೇಕು. ಇಲ್ಲವೆ ಒಂದಿಷ್ಟು ಹೆಚ್ಚು ಸ್ಥಳ ಬಿಡಬೇಕು. ಒಂದು ವೇಳೆ ಒಂದು ಸೂಚಿಗ್ರಂಥ ರಚನೆಯಲ್ಲಿ ಅನೇಕರು ಪಾಲುಗಾರರಾಗಿದ್ದರೆ, ಅವರವರು ಸಿದ್ಧಪಡಿಸಿರುವ ಕೃತಿಸೂಚಿಯ ಕೊನೆಯಲ್ಲಿ ಅವರವರ ಸಂಕ್ಷಿಪ್ತನಾಮವನ್ನು ಸಣ್ಣ ಅಕ್ಷರದಲ್ಲಿ ಮುದ್ರಿಸಬೇಕು. ಪ್ರಸ್ತಾವನೆಯಲ್ಲಿ ಈ ಸಂಕ್ಷಿಪ್ತನಾಮಗಳಿಗೆ ವಿವರ ಒದಗಿಸಬೇಕು.

ಇಷ್ಟು ಹಿನ್ನೆಲೆಯೊಂದಿಗೆ, ಈವರೆಗೆ ಕನ್ನಡ ಹಸ್ತಪ್ರತಿಗಳನ್ನು ಕುರಿತು ಪ್ರಕಟವಾಗಿರುವ ವಿವರಣಾತ್ಮಕ ಸೂಚಿಗ್ರಂಥ, ಯಾದಿರೂಪದ ಸೂಚಿಗ್ರಂಥ ಮತ್ತು ಸೂಚಿಲೇಖನಗಳನ್ನು ಇಲ್ಲಿ ಕೊಡಲಾಗಿದೆ.

ಕನ್ನಡ ಹಸ್ತಪ್ರತಿಸೂಚಿಗಳು

ಮದ್ರಾಸ ಹಸ್ತಪ್ರತಿಸೂಚಿಗಳು:

೧. ಮೆಕೆಂಝಿ ಕಲೆಕ್ಷನ್ : ಎ ಡಿಸ್ಕ್ರಿಪ್ಟಿವ್ ಕೆಟಲಾಗ ಆಫ್ ದಿ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್. ಸಂ. ಎಚ್. ಎಚ್. ವಿಲ್ಸನ್; (೧೮೨೮) ಪ್ರತಿ ೧೫೨.*

೨. ಅಲ್ಫಾಬೆಟಿಕಲ್ ಇಂಡೆಕ್ಸ ಆಫ್ ಮ್ಯಾನ್ಯುಸ್ಕ್ರಿಪ್ಟ ಇನ್ ದಿ ಗವ್ಹರ್ನಮೆಂಟ ಓರಿಯಂಟಲ್ ಮ್ಯಾನುಸ್ಕ್ರಿಪ್ಟ, ಲೈಬ್ರರಿ, ಮದ್ರಾಸ್ (೧೮೮೩).

೩. ಆ್ಯನ್ ಅಲ್ಫಾಬೆಟಿಕಲ್ ಇಂಡೆಕ್ಸ ಆಫ್ ಕೆನರೀಸ್ ಮ್ಯಾನ್ಯುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನ್ಯುಸ್ಕ್ರಿಪ್ಟ್, ಲೈಬ್ರರಿ, ಮದ್ರಾಸ್, ಸಂ. ಎಸ್. ಕುಪ್ಪುಸ್ವಾಮಿಶಾಸ್ತ್ರಿ : (೧೯೨೯), ಪ್ರತಿ ೧೫೪೦.

೪. ಆ್ಯನ್ ಅಲ್ಫಾಬೆಟಿಕಲ್ ಇಂಡೆಕ್ಸ್ ಆಫ್ ಕನ್ನಡ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ, ಲೈಬ್ರರಿ, ಮದ್ರಾಸ್ ಸಂ. ಟಿ. ಚಂದ್ರಶೇಖರನ್, (೧೯೫೨), ಪ್ರತಿ ೧೮೨೯.

---

* ಇದರಲ್ಲಿ ಪು. ೩೦೪-೩೪೬ ವರೆಗಿನ ಭಾಗದಲ್ಲಿ ಕನ್ನಡ ಹಸ್ತಪ್ರತಿಗಳ ವಿವರವಿದೆ.

೫. ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ, ಲೈಬ್ರರಿ, ಮದ್ರಾಸ್-ಸಂಪುಟ-೧, ಸಂ. ಎಸ್. ಕುಪ್ಪುಸ್ವಾಮಿ ಶಾಸ್ತ್ರಿ; (೧೯೩೪), ಪ್ರತಿ ೧೩೮.

೬. ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ್-ಸಂಪುಟ-೨ ಸಂ. ಎಸ್. ಕುಪ್ಪುಸ್ವಾಮಿ ಶಾಸ್ತ್ರಿ ಮತ್ತು ಪಿ. ಪಿ. ಎಸ್. ಶಾಸ್ತ್ರಿ; (೧೯೩೭), ಪ್ರತಿ ೨೭೮.

೭. ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ್-ಸಂಪುಟ-೩, ಸಂ. ಎಸ್. ಕುಪ್ಪುಸ್ವಾಮಿ ಶಾಸ್ತ್ರಿ ಮತ್ತು ಪಿ. ಪಿ. ಎಸ್. ಶಾಸ್ತ್ರಿ; (೧೯೩೯), ಪ್ರತಿ ೧೫೮.

೮. ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ್-ಸಂಪುಟ-೪ ಸಂ. ಎ. ಶಂಕರನ್ (೧೯೪೬), ಪ್ರತಿ ೩೪೮.

೯. ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆಸರೀಸ್ ಮ್ಯಾನುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ್-ಸಂಪುಟ-೫, ಸಂ. ಟಿ. ಚಂದ್ರಶೇಖರನ್; (೧೯೫೧), ಪ್ರತಿ ೨೧೩.

೧೦. ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದ್ರಾಸ್-ಸಂಪುಟ-೬, ಸಂ. ಟಿ. ಚಂದ್ರಶೇಖರನ್ (೧೯೫೨), ಪ್ರತಿ ೨೩೩.

೧೧. ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಸ್ ಮ್ಯಾನುಸ್ಕ್ರಿಪ್ಟ್ಸ ಇನ್ ದಿ ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ, ಲೈಬ್ರರಿ, ಮದ್ರಾಸ್-ಸಂಪುಟ-೭ ಸಂ. ಟಿ. ಚಂದ್ರಶೇಖರನ್ (೧೯೫೮), ಪ್ರತಿ ೧೪೪.

೧೨. Mackenzie manuscripts, summeries of the historical manuscripts in the mackenzie collection Vol. II (Telugu, Kannada, Marathi) T.V. Mahalingam (1976).

ಮೈಸೂರು ಹಸ್ತಪ್ರತಿಸೂಚಿಗಳು:

೧೩. ಮೈಸೂರು ಗೌರ್ನಮೆಂಟ್ ಓರಿಯೆಂಟಲ್ ಲೈಬ್ರರಿಯಲ್ಲಿರುವ ಅಚ್ಚಿನ ಮತ್ತು ಕೈ ಬರಹದ ಪುಸ್ತಕಗಳ ಪಟ್ಟಿ (೧೯೨೧) ಪ್ರತಿ ೧೫೧೧.

೧೪. ಮೈಸೂರು ಗೌರ್ನಮೆಂಟ್ ಓರಿಯೆಂಟಲ್ ಲೈಬ್ರರಿ ೧೯೨೨ ರಿಂದ ೧೯೨೯ರ ವರೆಗಿನ ಅವಧಿಯಲ್ಲಿ ಸಂಗ್ರಹಿಸಿದ ಅಚ್ಚಿನ ಮತ್ತು ಕೈಬರಹದ ಕನ್ನಡ ಪುಸ್ತಕಗಳ ಪಟ್ಟಿ (೧೯೩೦) ಪ್ರತಿ ೧೬೪.

೧೫. ಮೈಸೂರು ಯುನಿವರ್ಸಿಟಿ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟದಲ್ಲಿ ೧೯೪೧ ರಿಂದ ೧೯೫೪ರ ವರೆಗಿನ ಸಂಗ್ರಹಿಸಿರುವ ಕೈಬರಹದ ಪುಸ್ತಕಗಳ ಪಟ್ಟಿ (೧೯೫೫) ಪ್ರತಿ ೧೪೪.

೧೬. ಮೈಸೂರು ಪ್ರಾಚ್ಯವಿದ್ಯಾಸಂಶೋಧನ ಸಂಸ್ಥೆಯಲ್ಲಿರುವ ಕೈಬರಹದ ಕನ್ನಡ ಗ್ರಂಥಗಳ ಅಕಾರಾದಿ ಸೂಚನೀ (೧೮೯೧ ರಿಂದ ೧೯೫೧ ರ ವರೆಗೆ). (೧೯೫೫) ಪ್ರತಿ ೧೮೨೭.

೧೭. ಮೈಸೂರು ಪ್ರಾಚ್ಯವಿದ್ಯಾಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ-ಸಂಪುಟ-೧: ಸಂ. ಬಿ. ಎಸ್. ಸಣ್ಣಯ್ಯ ; (೧೯೬೨), ಪ್ರತಿ ೪೯೭.

೧೮. ಮೈಸೂರು ಪ್ರಾಚ್ಯ ವಿದ್ಯಾಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ-ಸಂಪುಟ-೨ : ಸಂ. ಬಿ. ಎಸ್. ಸಣ್ಣಯ್ಯ; (೧೯೬೨) ಪ್ರತಿ ೫೧೪.

೧೯. ಮೈಸೂರು ಪ್ರಾಚ್ಯವಿದ್ಯಾಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ-ಸಂಪುಟ-೩ : ಸಂ. ಬಿ. ಎಸ್. ಸಣ್ಣಯ್ಯ; (೧೯೬೩) ಪ್ರತಿ ೫೧೪.

೨೦. ಮೈಸೂರು ಪ್ರಾಚ್ಯವಿದ್ಯಾಸಂಶೋಧನಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ-ಸಂಪುಟ-೪ : ಸಂ. ಬಿ. ಎಸ್. ಸಣ್ಣಯ್ಯ ; (೧೯೬೩) ಪ್ರತಿ ೫೪೮.

೨೧. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಕನ್ನಡ ಅಧ್ಯಯನ ಸಂಸ್ಥೆ-ಸಂಪುಟ-೫ : ಸಂ. ಬಿ. ಎಸ್. ಸಣ್ಣಯ್ಯ; (೧೯೮೦), ಪ್ರತಿ ೭೩೫.

೨೨. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಕನ್ನಡ ಅಧ್ಯಯನ ಸಂಸ್ಥೆ-ಸಂಪುಟ-೬ : ಸಂ. ಬಿ.ಎಸ್. ಸಣ್ಣಯ್ಯ ; (೧೯೮೦), ಪ್ರತಿ ೭೪೪.

೨೩. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಕನ್ನಡ ಅಧ್ಯಯನ ಸಂಸ್ಥೆ-ಸಂಪುಟ-೭ : ಸಂ. ಬಿ. ಎಸ್. ಸಣ್ಣಯ್ಯ ; (೧೯೮೦), ಪ್ರತಿ ೮೦೨.

೨೪. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಕನ್ನಡ ಅಧ್ಯಯನ ಸಂಸ್ಥೆ-ಸಂಪುಟ-೮ : ಸಂ. ಬಿ. ಎಸ್. ಸಣ್ಣಯ್ಯ ; (೧೯೮೦) , ಪ್ರತಿ ೬೨೬.

೨೫. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಕನ್ನಡ ಅಧ್ಯಯನ ಸಂಸ್ಥೆ-ಸಂಪುಟ-೯ : ಸಂ. ಬಿ. ಎಸ್. ಸಣ್ಣಯ್ಯ ; (೧೯೮೧), ಪ್ರತಿ ೩೨೮+೧೩೮.

೨೬. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಕನ್ನಡ ಅಧ್ಯಯನ ಸಂಸ್ಥೆ-ಸಂಪುಟ-೧೦ : ಸಂ. ಬಿ. ಎಸ್. ಸಣ್ಣಯ್ಯ ; (೧೯೮೮), ಪ್ರತಿ ೧೩೨೪.

ಧಾರವಾಡ ಹಸ್ತಪ್ರತಿ ಸೂಚಿಗಳು:

೨೭. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ)- ಸಂಪುಟ-೧ : ಆರ್. ಎಸ್. ಪಂಚಮುಖಿ; (೧೯೫೩), ಪ್ರತಿ ೫೭.

೨೮. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ) - ಸಂಪುಟ-೨ : ಎಸ್. ಎಸ್. ಮಾಳವಾಡ ಮತ್ತು ಬಿ. ಎಸ್. ಕುಲಕರ್ಣಿ; (೧೯೫೫), ಪ್ರತಿ ೪೪.

೨೯. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ) - ಸಂಪುಟ-೩ : ಬಿ. ಎಸ್. ಕುಲಕರ್ಣಿ; (೧೯೫೭) ಪ್ರತಿ ೪೮.

೩೦. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ)- ಸಂಪುಟ-೪: ಎಸ್. ಎಂ. ಅಣ್ಣಿಗೇರಿ ಮತ್ತು ಎಸ್. ಬಿ. ಪುರೋಹಿತ ; (೧೯೬೧) , ಪ್ರತಿ ೮೫.

೩೧. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ) - ಸಂಪುಟ-೫: ಬಿ. ಎಸ್. ಕುಲಕರ್ಣಿ; (೧೯೬೪), ಪ್ರತಿ ೮೦.

೩೨. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ) - ಸಂಪುಟ-೬: ಬಿ. ಎಸ್. ಕುಲಕರ್ಣಿ ; (೧೯೬೫), ಪ್ರತಿ ೮೫.

೩೩. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ) - ಸಂಪುಟ-೭: ಬಿ. ಎಸ್. ಕುಲಕರ್ಣಿ ಮತ್ತು ಎಸ್. ಬಿ. ಪುರೋಹಿತ ; (೧೯೬೭), ಪ್ರತಿ ೮೩.

೩೪. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ) - ಸಂಪುಟ-೮: ಬಿ. ಎಸ್. ಕುಲಕರ್ಣಿ ಮತ್ತು ಎಸ್. ಬಿ. ಪುರೋಹಿತ; (೧೯೬೮), ಪ್ರತಿ ೭೮.

೩೫. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ) - ಸಂಪುಟ-೯: ಬಿ. ಎಸ್. ಕುಲಕರ್ಣಿ ಮತ್ತು ಎಸ್. ಬಿ. ಪುರೋಹಿತ; (೧೯೭೦), ಪ್ರತಿ ೭೨.

೩೬. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ) - ಸಂಪುಟ-೧೦: ಬಿ. ಎಸ್. ಕುಲಕರ್ಣಿ; (೧೯೭೬), ಪ್ರತಿ ೫೧.

೩೭. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ) - ಸಂಪುಟ-೧೧: ಬಿ. ಎಸ್. ಕುಲಕರ್ಣಿ; (೧೯೮೨), ಪ್ರತಿ ೬೮.

೩೮. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ) - ಸಂಪುಟ-೧೨: ಬಿ. ಎಸ್. ಕುಲಕರ್ಣಿ; (೧೯೮೩), ಪ್ರತಿ ೬೫.

೩೯. ಪ್ರಾಚೀನ ಹಸ್ತಪ್ರತಿ ವಿವರಣಾತ್ಮಕ ಸೂಚಿ (ಕನ್ನಡ ಸಂಶೋಧನ ಸಂಸ್ಥೆ) - ಸಂಪುಟ-೧೩: ಸಿ. ಬಿ. ಕಡಕೋಳ ಮತ್ತು ಕೆ. ಪಿ. ಈರಣ್ಣ; (೧೯೯೦), ಪ್ರತಿ ೮೨.

೪೦. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ-ಸಂಪುಟ-೧ : ಡಾ. ಬಿ. ಆರ್. ಹಿರೇಮಠ, (೧೯೯೨), ಕಟ್ಟು ೧ ರಿಂದ ೧೦೦. ಪ್ರತಿ ೩೪೫.

೪೧. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ-ಸಂಪುಟ-೨ : ಡಾ. ಬಿ. ಆರ್. ಹಿರೇಮಠ, (ಅಚ್ಚಿನಲ್ಲಿ) ಪ್ರತಿ ೧೦೧-೨೦೦.

೪೨. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ-ಸಂಪುಟ-೩ : ಡಾ. ಬಿ. ಆರ್. ಹಿರೇಮಠ, (ಅಚ್ಚಿನಲ್ಲಿ) ಪ್ರತಿ ೨೦೧-೩೦೦.

೪೩. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ-ಸಂಪುಟ-೪ : ಡಾ. ಬಿ. ಆರ್. ಹಿರೇಮಠ, (ಅಚ್ಚಿನಲ್ಲಿ) ಪ್ರತಿ ೩೦೧-೪೦೦.

೪೪. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ-ಸಂಪುಟ-೫ : ಡಾ. ಬಿ. ಆರ್. ಹಿರೇಮಠ, (ಅಚ್ಚಿನಲ್ಲಿ) ಪ್ರತಿ ೪೦೧-೫೦೦.

೪೫. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ-ಸಂಪುಟ-೬ : ಡಾ. ವಿ. ಬಿ. ರಾಜೂರ, (೧೯೯೨) ಕಟ್ಟು, ೫೦೧-೬೦೦. ಪ್ರತಿ ೩೬೭.

೪೬. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ-ಸಂಪುಟ-೭ : ಡಾ. ವಿ. ಬಿ. ರಾಜೂರ, (೧೯೯೨), ಕಟ್ಟು ೬೦೧-೭೦೦. ಪ್ರತಿ ೨೦೬.

೪೭. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ-ಸಂಪುಟ-೮ : ಡಾ. ವಿ. ಬಿ. ರಾಜೂರ, (೧೯೯೨), ಕಟ್ಟು ೭೦೧-೮೦೦. ಪ್ರತಿ ೨೭೯.

೪೮. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ-ಸಂಪುಟ-೯ : ಡಾ. ವಿ. ಬಿ. ರಾಜೂರ, (೧೯೯೨), ಕಟ್ಟು ೮೦೧-೯೦೦. ಪ್ರತಿ ೩೯೨.

೪೯. ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ-ಸಂಪುಟ-೧೦:ಡಾ. ವಿ. ಬಿ. ರಾಜೂರ (೧೯೯೨), ಕಟ್ಟು ೯೦೧-೧೦೦೦. ಪ್ರತಿ ೨೪೫.

ಬೆಂಗಳೂರು ಮತ್ತು ಹೈದ್ರಾಬಾದ ಹಸ್ತಪ್ರತಿಸೂಚಿಗಳು :

೫೦. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ-ಸಂಪುಟ-೧(ಬೆಂಗಳೂರು ಕನ್ನಡ ಅಧ್ಯಯನ ಕೇಂದ್ರ) : ಎಸ್. ಶಿವಣ್ಣ (೧೯೮೨), ಪ್ರತಿ ೪೪೯.

೫೧. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ (ಬಿ. ಎಂ. ಶ್ರೀ ಪ್ರತಿಷ್ಠಾನ, ಬೆಂಗಳೂರು) ಸಂಪುಟ-೧, ಕೆಳದಿ ಗುಂಡಾಜೋಯಿಸ ಮತ್ತು ನಾ. ಗೀತಾಚಾರ್ಯ (೧೯೮೭) ಪ್ರತಿ ೯೬.

೫೨. ಎ ಡಿಸ್ಕ್ರಿಪ್ಟಿವ್ ಕ್ಯಾಟಲಾಗ್ ಆಫ್ ದಿ ಕನ್ನಡ ಮ್ಯಾನುಸ್ಕ್ರಿಪ್ಟ್ಸ್ ಇನ್ ದಿ ಉಸ್ಮಾನಿಯಾ ಯುನಿವರ್ಸಿಟಿ ಲೈಬ್ರರಿ, ಬಿ. ರಾಮಚಂದ್ರರಾವ್ ಮತ್ತು ಟಿ. ವಿ. ವೆಂಕಟಾಚಲಶಾಸ್ತ್ರಿ ; (೧೯೬೬), ಪ್ರತಿ ೨೯೪.

ಇತರ ಹಸ್ತಪ್ರತಿಸೂಚಿಗಳು :

೫೩. ಕನ್ನಡ ಪ್ರಾಂತೀಯ ತಾಡಪತ್ರೀಯ ಗ್ರಂಥಸೂಚೀ, ಕೆ. ಭುಜಬಲಶಾಸ್ತ್ರಿ; (೧೯೪೮), ಪ್ರತಿ ೩೫೩೮.

೫೪. ಶ್ರವಣಬೆಳಗೊಳ ಶ್ರೀ ಜೈನಮಠದ ತಾಡಪತ್ರೀಯ ಗ್ರಂಥಗಳ ವಿವರ, ದೇವಕುಮಾರ ಶಾಸ್ತ್ರಿ; (೧೯೮೦), ಪ್ರತಿ ೪೪೮+೧೯.

೫೫. ಕೊಲ್ಲಾಪುರ ಲಕ್ಷ್ಮೀಸೇನ ಬಸದಿಯ ಹಸ್ತಪ್ರತಿ ಸೂಚಿ, (೧೯೦೦).

೫೬. ಕೊಲ್ಲಾಪುರ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಜೈನಬಸದಿಯ ಹಸ್ತಪ್ರತಿಸೂಚಿ, ಎಂ. ಎಂ. ಕಲಬುರ್ಗಿ-ಬಿ. ಆರ್. ಹಿರೇಮಠ ಮತ್ತು ಎಸ್. ವ್ಹಿ. ಅಯ್ಯನಗೌಡರ; (೧೯೮೮), ಪ್ರತಿ ೮೫೧.

೫೭. ಗದುಗಿನ ತೋಂಟದಾರ್ಯಮಠದ ಹಸ್ತಪ್ರತಿ ಸೂಚಿ, ಎಸ್. ಶಿವಣ್ಣ ; (೧೯೮೫), ಪ್ರತಿ-ಕನ್ನಡ ೧೧೪೧, ಇತರ ೨೫೬.

೫೮. ವೀರಶೈವ ಅಪ್ರಕಟಿತ ಗ್ರಂಥಸೂಚಿ, ಎಸ್. ಶಿವಣ್ಣ; (೧೯೮೨), ಕೃತಿ ೧೭೧೨.

೫೯. ಎ ಕ್ಲಾಸಿಫೈಡ್ಡ್ ಕ್ಯಾಟಲಾಗ್ ಆಫ್ ಸಂಸ್ಕೃತ ಆ್ಯಂಡ್ ಕನ್ನಡ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಸರಸ್ವತೀ ಭಂಡಾರಮ್ (ಪ್ಯಾಲೇಸ್ ಸಂಸ್ಕೃತ ಲೈಬ್ರರಿ) ಆಫ್. ಎಚ್.ಎಚ್. ಮಹಾರಾಜಾ ಆಫ್ ಮೈಸೂರು, ಕಲೆಕ್ಸನ್ ಆಫ್ (೧೯೦೦-೧೯೦೫), ಪ್ರತಿ ૩೦೦.

೬೦. ದಿ ಲಿಸ್ಟ್ ಆಫ್ ದಿ ಅನ್‌ಪ್ರಿಂಟೆಡ್ ಸಂಸ್ಕೃತ ಆ್ಯಂಡ್ ಕನ್ನಡ ಮ್ಯಾನುಸ್ಕ್ರಿಪ್ಟ್ಸ್ ಇನ್ ದಿ ಪ್ಯಾಲೇಸ್ ಸರಸ್ವತಿ ಭಂಡಾರ (ಮಹಾರಾಜಾ ಸಂಸ್ಕೃತ ಕಾಲೇಜು ಮೈಸೂರು) (೧೯೪೩), ೧೦೩.

೬೧. ಎ ಕ್ಯಾಟಲಾಗ್ ಆಫ್ ಸಂಸ್ಕೃತ, ಪ್ರಾಕೃತ ಆ್ಯಂಡ್ ಹಿಂದಿ ವರ್ಕ್ಸ್ ಇನ್ ದಿ ಜೈನ ಸಿದ್ಧಾಂತ ಭವನ ಆರಾ, ಸುಪಾರ್ಶ್ವದಾಸ ಗುಪ್ತ ಮತ್ತು ಮೂಲಚಂದ್ರ ಜೈನ; (೧೯೧೯), ಪ್ರತಿ ೫೦೦.

೬೨. ಕ್ಯಾಟಲಾಗ್ ಆಫ್ ಸಂಸ್ಕೃತ ಆ್ಯಂಡ್ ಪ್ರಾಕೃತ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಸೆಂಟ್ರಲ್ ಪ್ರಾವಿನ್ಸಿಸ್ ಆ್ಯಂಡ್ ಬೆರಾರ್ (ಅನುಬಂಧ) ರಾವಬಹಾದ್ದೂರ ಹೀರಾಲಾಲ್; (೧೯೨೬), ಪ್ರತಿ ೪೩.

೬೩. ದಿ ಅನ್‌ನೋನ್ ಪೇಜೀಸ್ ಇನ್ ದಿ ಹಿಸ್ಟರಿ ಆಫ್ ಕನ್ನಡ ಲಿಟರೇಚರ್, ಸಿ. ಮಹಾದೇವಪ್ಪ; (೧೯೬೦), ಪ್ರತಿ ೧೩.

೬೪. ಶ್ರೀ ಜಗದ್ಗುರು ಮೂರುಸಾವಿರ ಮಠದ ವರ್ಣನಾತ್ಮಕ ಹಸ್ತಪ್ರತಿ ಸೂಚಿ-ಕೆಳದಿ ಗುಂಡಾಜೋಯಿಸ್ (೧೯೮೯) ಪ್ರತಿ ೩೯೦.

೬೫. ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಹಸ್ತಪ್ರತಿ ಸೂಚಿ-ಎಸ್. ಶಿವಣ್ಣ (೧೯೯೧) ಪ್ರತಿ ೪೬೬೧.

೬೬. ಕೆಳದಿ ಸಂಗ್ರಹಾಲಯ ಮತ್ತು ಐತಿಹಾಸಿಕ ಸಂಶೋಧನ ಕೇಂದ್ರ ವರ್ಣನಾತ್ಮಕ ಹಸ್ತಪ್ರತಿಸೂಚಿ - ಎಸ್. ಆರ್. ರಾವ್ ಮತ್ತು ಕೆಳದಿ ಗುಂಡಾಜೋಯಿಸ.

ಲೇಖನರೂಪದ ಸೂಚಿಗಳು:

೬೭.ಅ. ಸ್ವಾದಿಯ ಜೈನಮಠದೊಳಗಿರುವ ಕನ್ನಡ ಗ್ರಂಥಗಳು, ಪ್ರತಿ ೨೮.

ಆ. ಧರಣೇಂದ್ರಪ್ಪ ಅಣ್ಣಿ ಆಲೂರ-ಸಿರ್ಸಿ, ಇವರಲ್ಲಿಯ ತಾಡಪತ್ರ ಗ್ರಂಥಗಳು ಪ್ರತಿ ೮+೨

ಇ. ಇಸ್ಲೂರ ಮಠದಲ್ಲಿರುವ ವೀರಶೈವ ಗ್ರಂಥಗಳು-ಕೆ. ಜಿ. ಕುಂದಣಗಾರ ಜ. ಕ. ೭+೮ (೧೯೨೯) ಪ್ರತಿ ೨+೭.

೬೮. ಕೈಬರಹದ ಗ್ರಂಥಗಳ ಶೋಧನೆಯು, ಎಸ್. ಸಿ. ನಂದಿಮಠ; ಶಿ. ವಾ. ೭-೧(೧೯೩೨), ಪ್ರತಿ ೨೧೫.

೬೯. ಹೈದರಾಬಾದು ಪ್ರಾಂತದಲ್ಲಿ ಕನ್ನಡ ಗ್ರಂಥಗಳ ಸಂಶೋಧನೆ, ಡಿ. ಕೆ, ಭೀಮಸೇನರಾವ್, ಕ. ಸಾ. ಪ. ೨೧-೩ (೧೯೩೬), ಪ್ರತಿ ೨೦.

೭೦. ಐನೂಲಿ ಗುಂಡಯ್ಯನ ಮನೆಯ ಸಂಗ್ರಹ, ಕಪಟರಾಳ ಕೃಷ್ಣರಾಯ, ಶ. ಸಾ. ೪-೭, (೧೯೪೧) ಪ್ರತಿ ೮೩.

೭೧. ಹೊಂಬುಜ ಮಠದ ಗ್ರಂಥಗಳ ಪಟ್ಟಿ, ಸಂಗ್ರಾಹಕ? ಶ. ಸಾ. ೧೯೪೮, ಪ್ರತಿ ೧೮೦.

೭೨. ಕಂಚಗಲ್ಲ-ಬಿದರೆ ದೊಡ್ಡಮಠದಲ್ಲಿ ತಾಡವೋಲೆ ಗ್ರಂಥಗಳು, ಜಿ. ಎಂ. ಉಮಾಪತಿಶಾಸ್ತ್ರಿ, ಸುಕುಮಾರ ೪-೩, ೪-೯ (೧೯೫೪).

೭೩. ಗದಗ ತೋಂಟದಾರ್ಯಮಠದ ತಾಡವೋಲೆ, ಜಿ. ಎಂ. ಉಮಾಪತಿಶಾಸ್ತ್ರಿ, ಸುಕುಮಾರ ೫-೩, (೧೯೫೪-೫೫).

೭೪. ಹಾವೇರಿ ಹುಕ್ಕೇರಿ ಮಠದ ಓಲೆ ಸಂಗ್ರಹ, ಜಿ. ಎಂ. ಉಮಾಪತಿಶಾಸ್ತ್ರಿ, ಸುಕುಮಾರ ೫-೫ (೧೯೫೫).

೭೫. ಹಾರ್ನಹಳ್ಳಿ ಕೋಡಿಮಠದ ಓಲೆಗಳು, ಜಿ. ಎಂ. ಉಮಾಪತಿಶಾಸ್ತ್ರಿ, ಸುಕುಮಾರ, ೫-೮, ೯ (೧೯೫೫).

೭೬. ಮದರಾಸು ಅಡಿಯಾರು ಪುಸ್ತಕಾಲಯದಲ್ಲಿರುವ ಕನ್ನಡ ಗ್ರಂಥಗಳು, ಶ.ಸಾ. ೨೦-೬, (೧೯೫೭). ಪ್ರತಿ ೫೬.

೭೭. ಬಳ್ಳಾರಿ ಹೊಸಪೇಟೆಯ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದ ಗ್ರಂಥಭಂಡಾರದಲ್ಲಿರುವ ಓಲೆಗರಿ ಹಸ್ತಪ್ರತಿಗ್ರಂಥಗಳ ಸೂಚಿ, ಜಿ. ಎಂ. ಉಮಾಪತಿಶಾಸ್ತ್ರಿ, ಹೇಮಕೂಟ ೧-೨, (೧೯೭೫), ೩೩ ಕಟ್ಟು, ೧೧೬ ಪ್ರತಿ.

■■

---

* ಈ ಯಾದಿಯನ್ನು ಸಿದ್ಧಪಡಿಸುವಲ್ಲಿ ಶ್ರೀ ಎಸ್. ಶಿವಣ್ಣ ಅವರ ಲೇಖನಗಳಿಗೆ ಋಣಿಯಾಗಿದ್ದೇನೆ.

ಆಕರ : ಮಾರ್ಗ ಸಂಪುಟ–೩

೨೫

ಪ್ರಭುಗೀತಿಯ ಹಸ್ತಪ್ರತಿ

ಮಗ್ಗೆಯ ಮಾಯಿದೇವನು ಅನುಭವಸೂತ್ರ, ಶತಕತ್ರಯ ಮೊದಲಾದ ಗ್ರಂಥಗಳ ರಚನೆಯಿಂದ ಕನ್ನಡದಲ್ಲಿ ಸುಪ್ರಸಿದ್ಧ ಕವಿಯೆನಿಸಿದ್ದಾನೆ. ಈತನು 'ಪ್ರಭುಗೀತಿ' ಹೆಸರಿನ ಒಂದು ಕೃತಿ ಬರೆದುದಾಗಿ ವೀರಶೈವಾಮೃತ ಮಹಾಪುರಾಣ, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ ತಿಳಿಸುತ್ತವೆ. ಇದು ಪ್ರಭುದೇವರ ವಚನಗಳ ಸಂಸ್ಕೃತಾನುವಾದವೆಂಬುದು ವಿದ್ವಾಂಸರಿಗೆ ತಿಳಿದ ವಿಷಯವೇ ಆಗಿದೆ. ಇದರ ಒಂದು ಹಸ್ತಪ್ರತಿ ಬೆಂಗಳೂರಿನ ಶ್ರೀ. ಸಿ.ಮಹಾದೇವಪ್ಪ ಅವರ ಹತ್ತಿರವಿದೆ. ಅನೇಕ ದಶಕಗಳ ಹಿಂದೆ ಅವರು ಇದನ್ನು ಪರಿಷ್ಕರಿಸಿದ್ದು, ಮುದ್ರಣವಾಗದೆ ಉಳಿದಿದೆ. ಇದರ ಇನ್ನೊಂದು ಪ್ರತಿ ಮೈಸೂರಿನ ಶ್ರೀ ಪಿ.ಎಂ.ಗಿರಿರಾಜು ಅವರ ಹತ್ತಿರ ಇರುವುದಾಗಿ ಇತ್ತೀಚೆ ತಿಳಿದುಬಂದಿದೆ. ಈ ಎರಡು ಹಸ್ತಪ್ರತಿಗಳನ್ನು ಬಿಟ್ಟರೆ 'ಪ್ರಭುಗೀತಿ'ಯ ಬೇರೊಂದು ಹಸ್ತಪ್ರತಿ ಇರುವ ವಿಷಯ ಈವರೆಗೆ ಗೊತ್ತಾಗಿಲ್ಲ. ಆದರೆ ಮದ್ರಾಸಿನ ಗವರ್ನಮೆಂಟ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ ಲೈಬ್ರರಿಯಲ್ಲಿ ಈ ಕೃತಿಯ ಅಪೂರ್ಣಪ್ರತಿ ಇರುವಂತೆ ತೋರುತ್ತದೆ.

ಈ ಸಂಸ್ಥೆಯ ಹಸ್ತಪ್ರತಿ ಸೂಚಿ III, ನಂ. ೪೬೯ ರಲ್ಲಿ 'ಗೋ[ಗೇ] (ಹೇ)ಶ್ವರ ವಚನಗಳು (ಸಂಸ್ಕೃತಶ್ಲೋಕ ಸಹಿತ)' ಹೆಸರಿನ ಒಂದು ತಾಳೆಪ್ರತಿಯ ಉಲ್ಲೇಖ ಕಂಡುಬರುತ್ತದೆ. ಇದು ಸಂಪಾದಕರು ಇಟ್ಟ ಹೆಸರೇ ಹೊರತು, ನಿಜ ನಾಮವಲ್ಲ. ಆದ್ಯಂತ್ಯ ಇಲ್ಲದ ಕಾರಣ ನಿಜನಾಮ ಅಲಭ್ಯವೆನಿಸಿದೆ. ಈ ಸೂಚಿಯಲ್ಲಿ ನಮೂದಿಸಿದ ಪ್ರಕಾರ ಇದು ತಾಳೆಪ್ರತಿ. ಇದರಲ್ಲಿ ಸ್ವರಶಾಸ್ತ್ರ ಮೊದಲಾದ ಕೃತಿಗಳಿವೆ. ಈ ನಿಟ್ಟಿನ ೧೬ನೆಯ ಗರಿಯಿಂದ ಪ್ರಾರಂಭವಾಗಿ ೮ ಪುಟಗಳ ವರೆಗೆ ಇದು ಹಬ್ಬಿ ನಿಂತುಬಿಟ್ಟಿದೆ. ಇದರ ಬಗ್ಗೆ "Contains Prose Passages in Kanarese, bearing on the Virashaiva Philosophy, together with Sanskrit Verse. The name of the author is not known" ಎಂದು ವಿವರ ನೀಡಿದ್ದಾರೆ. ಇದಲ್ಲದೆ ಇದರಲ್ಲಿ "ಕರ್ನಾಟಕ ವಚನಗಳೂ ತದರ್ಥವುಳ್ಳ ಸಂಸ್ಕೃತ ಶ್ಲೋಕಗಳೂ ಬರೆದಿದೆ. ಪ್ರತಿ ವಚನವೂ "ಗೋಗೇಶ್ವರ" ಎಂದು ಮುಗಿಯುತ್ತದೆ. ಅನುವಾದಕಾರನು ಮೂಲವನ್ನು ಬಹುಮಟ್ಟಿಗೆ ಅನುಸರಿಸಿರುವನು. ಗ್ರಂಥವು ಆದ್ಯಂತರಹಿತಕವಾಗಿರುವುದರಿಂದ ತತ್ವ ವಿಷಯವನ್ನವಲಂಬಿಸಿ ಯಾವ ಅಂಶವನ್ನು ಬರೆಯ ಬರುವಂತಿಲ್ಲ. ಹಿಂದಣ ನಂಬರುಗಳಲ್ಲಿರುವ ಅಂಕಿತವೂ ಇದರಲ್ಲಿರುವ ಅಂಕಿತವೂ ಒಂದೇ ಇರಬಹುದೆಂದು ಊಹಿಸಿ ಇದಕ್ಕೆ ಗೋಹೇಶ್ವರನ ವಚನಗಳು ಎಂದು ಹೆಸರು ಕೊಟ್ಟಿದೆ. ವಿಷಯವು ಷಟ್ಸ್ಥಲ ಸಂಬಂಧವು" ಎಂದು ಹೇಳಿರುವುದನ್ನು ನೋಡಿದರೆ ಇವರಿಗೂ ಈ ಕೃತಿ ಯಾವುದೆಂಬುದು ಗೊತ್ತಾಗಿಲ್ಲವೆಂದು ಸ್ಪಷ್ಟವಾಗುತ್ತದೆ. ೮ ಪುಟಗಳ ಈ ಅಪೂರ್ಣ ಕೃತಿ ಬಹುಶಃ ಮಗ್ಗೆಯ ಮಾಯಿದೇವನು ಸಂಸ್ಕೃತಕ್ಕೆ ಅನುವಾದಿಸಿರುವ 'ಪ್ರಭುಗೀತಿ'ಯ

ಭಾಗವೇ ಆಗಿರಬಹುದು. ಇದರ ಅನುವಾದದ ಸ್ವರೂಪವನ್ನು ಅರಿಯಲು ಈ ಸೂಚಿಯಿಂದ ಮೂರು ವಚನ ಮತ್ತು ಅವುಗಳ ಸಂಸ್ಕೃತಾನುವಾದವನ್ನು ಇಲ್ಲಿ ಉದ್ಧರಿಸಲಾಗಿದೆ.

ವಚನ|| "ಅಣೋರಣೀಯಾನ್ಮಹತೋಮಹೀಯಾನ್" ಎಂಬ ಶ್ರುತಿ ಹುಸಿ. ಲಿಂಗವಿದ್ದ ಠಾವಿಂಗೆ ಪ್ರಲಯವುಂಟೇ? ಭಕ್ತ ಭಾವದಲ್ಲಿಪ್ಪನಲ್ಲದೆ ಮತ್ತೆಲ್ಲಿಯೂ ಇಲ್ಲ ಗೋಗೇಶ್ವರಾ!....... ನು.

ಅಣೋರಣೀಯಾನ್ಮಹತೋ ಮಹೀಯಾನಿತಿಶ್ರುತಿಃ || (?)
ಮೃಷೈವಸಾ ಭವೇದ್ಭಕ್ತ ಭಾವಪೂರ್ಣೇ ಸ್ಥಿತೇ ಶಿವೇ ||೧||

ವಚನ || ಲಿಂಗ ಒಳಗೋ? ಲಿಂಗ ಹೊರಗೋ? ಬಲ್ಲಡೆ ನೀವು ಹೇಳಿರೆ ! ಲಿಂಗವೆಡನೋ? ಲಿಂಗ ಬಲನೋ? ಬಲ್ಲಡೆ ನೀವು ಹೇಳಿರೆ ! ಲಿಂಗ ಹಿಂದೋ? ಲಿಂಗ ಮುಂದೋ? ಬಲ್ಲಡೆ ನೀವು ಹೇಳಿರೇ! ಲಿಂಗ ಸ್ಥೂಲವೋ? ಲಿಂಗ ಸೂಕ್ಷ್ಮವೋ? ಬಲ್ಲಡೆ ನೀವು ಹೇಳಿರೆ! ಲಿಂಗ ಪ್ರಾಣವೋ? ಪ್ರಾಣ ಲಿಂಗವೋ? ಬಲ್ಲಡೆ ನೀವು ಹೇಳಿರೆ ! ಗೋಗೇಶ್ವರನಲ್ಲಿ.

ಲಿಂಗಮುದ್ಯಂತರಂ ಬಾಹ್ಯಂ ಲಿಂಗಂ ಸವ್ಯಾಪಸವ್ಯಗಂ ।
ಅಗ್ರತಃ ಪೃಷ್ಠತೋ ಲಿಂಗಮಧಸ್ತಾದೂರ್ಧ್ವತಃ ಸ್ಥಿತಂ ||
ಸ್ಥೂಲಸೂಕ್ಷ್ಮಂ ಪರಂ ಲಿಂಗ ಪ್ರಾಣಸ್ವರೂಪಕಂ।
ಲಿಂಗಂ ಸರ್ವಾಂಗಂ ಸಂಪೂರ್ಣ ಮಿತಿಜ್ಞಾತ್ವಾ ಸುಖೀಭವ ||

ವಚನ || ಶರಣ ಲಿಂಗಾರ್ಚನೆಯ ಮಾಡಲು ಪುಷ್ಪಕ್ಕೆ ಕೈದುಡುಕಿದಡೆ ಆ ಪುಷ್ಪ ನೋಡ ನೋಡ ಶರಣನೊಳಡಗಿತ್ತು. ಷೋಡಶಕಲೆಯ ಹದಿನಾರು ಎಸಳು... ವಾಯಿತ್ತು । (ತು) ಪುರುಷ ಪುಷ್ಪದ ಮರನು ಅರುಣ ಚಂದ್ರಾದಿಗಳ ತೆರೆಯಲ್ಲಿ ಬೆಳೆಯದು ಲಿಂಗವ.... ಯಾಗಿ ಭೇದ ಪುಷ್ಪವ ನೋಡಾ! ಆ ಪುಷ್ಪವೆಂದೆಂದೂ ನಿರ್ಮಾಲ್ಯವಲ್ಲೆಂದು ಗೋಗೇಶ್ವರಾ! ನಿಮ್ಮ ಶರಣರ ಪ್ರಾಣಲಿಂಗಕ್ಕೆ ಪೂಜೆಯ ಮಾಡಿದೆನಯ್ಯ||

ಆತ್ಮದ್ರುಮಃ ಕುಸುಮಿತಃ ಪರತತ್ವಮೂಲಾ ।
ಲಿಂಗಾರ್ಚನಾಯ ಶರಣಸ್ಯ......
ತತ್ಪುಷ್ಪಮಾತ್ಮನಿ ತಿರೋಹಿತಮೇವ ತಾವತ್ ।
ಹಸ್ತೇನ ಷೋಡಶಕಲಾದಲಮಾ ಗ್ರಹೀತುಂ ।
ನತತ್ರ ಚಂದ್ರಾರ್ಕವಪುಃ ಪ್ರಕಾಶತೇ।
ನವಾತಿವಾತಃ ಕುಸುಮದ್ರುಮೋಹರೇ।]
ತಸ್ಮಾದ ನಿರ್ಮಾಲ್ಯಮಿ.....
ನಿತ್ಯಂ ಯಜಂತ್ಯಾತ್ಮನಿಜಾತ್ಮ ದೇವತಾಂ||

ಇವು ಮಾದರಿ ಅನುವಾದಗಳು. ಇಲ್ಲಿ ಮಾಯಿದೇವನ ಅನುವಾದದ ಸ್ವರೂಪ, ಸಿದ್ಧಿಗಳನ್ನು ಗಮನಿಸಬಹುದಾಗಿದೆ. ಸುಮಾರು ೫೫೦ ವರ್ಷಗಳ ಹಿಂದೆ ವಚನಸಾಹಿತ್ಯವನ್ನು ಕನ್ನಡೇತರ ಭಾಷೆಯಲ್ಲಿ ಪ್ರಸಾರ ಮಾಡಲು ಕೈಕೊಂಡ ಈ ಕೆಲಸ, ಶ್ಲಾಘನೀಯವೂ ಇಂದಿನವರಿಗೆ ಆದರ್ಶವೂ ಆಗಿದೆ.

■■

ಆಕರ : ಮಾರ್ಗ ಸಂಪುಟ–೧

೨೬

ಹಸ್ತಪ್ರತಿಶಾಸ್ತ್ರ : ಅದರ ವಿವಿಧಮುಖಗಳು

"ಹಸ್ತಪ್ರತಿ ಸಂಗ್ರಹ ಅವುಗಳ ಸೂಚೀರಚನೆ ಮೊದಲಾದವುಗಳನ್ನೊಳಗೊಂಡ Manuscriptology ಎಂಬ ಹೊಸಶಾಸ್ತ್ರವೇ ಬೆಳೆದು ಬರಬೇಕಾಗಿದೆ."[೧]

೧೯೭೪ರಂದು ಮಂಡ್ಯದಲ್ಲಿ ಜರುಗಿದ ಕನ್ನಡ ಸಾಹಿತ್ಯಸಮ್ಮೇಳನದ "ಸಾಹಿತ್ಯಶಾಸ್ತ್ರ ಗೋಷ್ಠಿ"ಯ ಅಧ್ಯಕ್ಷಸ್ಥಾನದಿಂದ ಮೇಲಿನ ವಾಕ್ಯವನ್ನು ವ್ಯಕ್ತಪಡಿಸುತ್ತ ಡಾ. ಆರ್.ಸಿ. ಹಿರೇಮಠ ಅವರು ಈ ಶಾಸ್ತ್ರದ ಸೂಚನೆ ನೀಡಿದುದಲ್ಲದೆ, "Manuscriptology" ಎಂಬ ಪದವನ್ನೂ ಪ್ರಥಮ ಬಾರಿಗೆ ಕಮ್ಮಟಿಸಿ ಕೊಟ್ಟರೆಂದು ತೋರುತ್ತದೆ. ಇದಕ್ಕೆ ಮೊದಲು ಮತ್ತು ತರುವಾಯ ಹಸ್ತಪ್ರತಿಗಳನ್ನು ಕುರಿತು ೪-೬ ಲೇಖನಗಳು ಬಂದಿದ್ದರೂ ಡಾ. ಡಿ.ಎಲ್.ಎನ್. ಅವರ "ಕನ್ನಡ ಗ್ರಂಥಸಂಪಾದನೆ" (೧೯೬೮) ಮತ್ತು ನನ್ನ "ಕನ್ನಡ ಗ್ರಂಥ ಸಂಪಾದನಶಾಸ್ತ್ರ" (೧೯೭೨)ಗಳು ಈ ಶಾಸ್ತ್ರದ ಆಳ-ವಿಸ್ತಾರಗಳನ್ನು ಗುರುತಿಸಿಕೊಟ್ಟವು. ಶ್ರೀ ಎಚ್. ದೇವೀರಪ್ಪನವರ "ಕನ್ನಡ ಹಸ್ತಪ್ರತಿಗಳ ಇತಿಹಾಸ" (೧೯೭೭), ಶ್ರೀ ಬಿ.ಎಸ್. ಸಣ್ಣಯ್ಯನವರ "ಗ್ರಂಥರಕ್ಷಣೆ" (೧೯೭೧)ಗಳು ಈ ಶಾಸ್ತ್ರವನ್ನು ಗ್ರಂಥಸಂಪಾದನ ಶಾಸ್ತ್ರದಿಂದ ಬಿಡಿಸಿ ತೋರಿಸುವ ಪ್ರಯತ್ನ ಮಾಡಿದವು. ಹೆಚ್ಚಿನದಾಗಿ ವ್ಹಿ. ರಾಘವನ್,[೨] ಡಾ. ಕೆ.ಟಿ. ಪಾಂಡುರಂಗಿ,[೩] ಶ್ರೀ ಸೀತಾರಾಮ ಜಾಗೀರದಾರ್,[೪] ಶ್ರೀ ಎಚ್.ಎಲ್.ಎನ್, ಭಾರತಿ[೫] ಅವರ ಕೃತಿಗಳೂ ಬೆಳಕು ಕಂಡವು. ಹೀಗಾಗಿ ಇಂದು ಹಸ್ತಪ್ರತಿ ಶಾಸ್ತ್ರವು ಪರೋಕ್ಷವಾಗಿ ರೂಪಗೊಳ್ಳುತ್ತಲಿದೆ; ಪ್ರತ್ಯಕ್ಷ "ಶಾಸ್ತ್ರಸಂಯೋಜನೆ" ಮಾತ್ರ ಆಗಬೇಕಾಗಿದೆ. ಈ ಸಂಯೋಜನೆಯ ನೀಲನಕ್ಷೆ (Blue Print)ಯಾಗಬೇಕಾದ ಪ್ರಸ್ತುತ ಲೇಖನ, ಹಸ್ತಪ್ರತಿಶಾಸ್ತ್ರದ ಸಾರಲೇಖ(Synopsis)ವೂ ಆಗಬೇಕಾಗುತ್ತದೆ.

---

೧. ಕನ್ನಡನುಡಿ ೩೭-೧೪
೨. Manuscripts, Catalogues Editions (1963)
೩. The wealth of Sanskrit manuscripts in India and abroad (1978)
೪. ಗ್ರಂಥಸಂಪಾದನ ಶಾಸ್ತ್ರ ಪರಿಚಯ (೧೯೭೮).
೫. ಪ್ರಾಚೀನ ಹಸ್ತಪ್ರತಿಗಳು (೧೯೭೧)

ಪ್ರಾಚೀನಕಾಲದಿಂದಲೂ ಕೈಯಿಂದ ಪೂರೈಸಲಾಗುತ್ತಿದ್ದ ಗ್ರಂಥರಚನೆ, ಇತ್ತೀಚಿನ ದಿನಗಳಲ್ಲಿ, ಧ್ವನಿಮುದ್ರಣ, ಛಾಯಾಚಿತ್ರಗಳಿಂದ ನೆರವೇರುತ್ತಲಿದ್ದರೂ ಯಂತ್ರಮುದ್ರಣವಾಗಿರುವುದೇ ವಿಶೇಷ. ಹೀಗಾಗಿ ಇಂದು ಇನ್ನೂ ಪ್ರಾಥಮಿಕ ಹಂತದಲ್ಲಿರುವ ಧ್ವನಿಮುದ್ರಣ, ಛಾಯಾಚಿತ್ರ ಗ್ರಂಥಗಳನ್ನು ಬಿಟ್ಟರೆ ಯಾವುದೇ ಭಾಷೆಯ ಗ್ರಂಥರಾಶಿಯನ್ನು ಪ್ರಧಾನವಾಗಿ 'ಪ್ರಾಚೀನ ಲಿಖಿತಗ್ರಂಥ', 'ಆಧುನಿಕ ಮುದ್ರಿತ ಗ್ರಂಥ'ವೆಂದು ವರ್ಗೀಕರಿಸಬೇಕಾಗುತ್ತದೆ. ಈ ಎರಡೂ ಬಗೆಯ ಗ್ರಂಥಗಳ ಉತ್ಪಾದನೆ, ರಕ್ಷಣೆ, ಉಪಯೋಗ ಇತ್ಯಾದಿಗಳನ್ನು ಕುರಿತುದೇ 'ಗ್ರಂಥಾಲಯ ಶಾಸ್ತ್ರ' (Library Science). ಆದರೆ ಇಂದು ಆಧುನಿಕ ಮುದ್ರಿತ ಗ್ರಂಥಗಳಿಗೆ ಮಾತ್ರ ಸೀಮಿತವಾಗಿರುವ ಲೈಬ್ರರಿಸೈನ್ಸ ಎನ್ನುವುದು ಪ್ರಾಚೀನ ಲಿಖಿತ ಗ್ರಂಥಗಳನ್ನು ಒಳಗೊಳ್ಳಬೇಕು; ಇಲ್ಲವೆ ತನ್ನ ಹೆಸರನ್ನು ಪ್ರಿಂಟೆಡ್ ಬುಕ್ಸ್ ಲೈಬ್ರರಿಸೈನ್ಸ ಎಂದು ಸೀಮಿತಗೊಳಿಸಿಕೊಳ್ಳಬೇಕು ಎಂಬ ಸೂಚನೆ ನೀಡುವುದು ಅವಶ್ಯವಿದೆ.

ಇಂದು ಸರ್ವತೋಮುಖವಾಗಿ ಬೆಳೆದಿರುವ ಮುದ್ರಿತಗ್ರಂಥಾಲಯಶಾಸ್ತ್ರ (Libraby Science) ಮಾದರಿಯಲ್ಲಿ ಹಸ್ತಲಿಖಿತಗ್ರಂಥಾಲಯಶಾಸ್ತ್ರ (Manuscriptology) ತನ್ನ ರೂಪ ಕಟ್ಟಿಕೊಳ್ಳಬೇಕಾದುದು ಸಹಜ. ಆದರೆ ಮುದ್ರಿತ ಗ್ರಂಥಾಲಯಶಾಸ್ತ್ರವು ಬಹಳಷ್ಟು ಸಲ "ಆಲಯ"ದ ಮೇಲೆ ಒತ್ತುಕೊಟ್ಟು "ಗ್ರಂಥ"ವನ್ನು ಮರೆಯುತ್ತ ನಡೆದಿದೆ. ಇದರಿಂದಾಗಿ ಈ ಕ್ಷೇತ್ರ 'Academic' ಅಂಶವನ್ನು ಕೈಬಿಡುತ್ತ ಕೇವಲ ಗ್ರಂಥಗಳ ವ್ಯವಸ್ಥೆ, ವಿತರಣೆಗಳೆಂಬ 'Technical' ಅಂಶಗಳ ಅಂಚನ್ನು ತಲುಪುತ್ತಲಿದೆ. ಆದುದರಿಂದ ಹಸ್ತಪ್ರತಿಶಾಸ್ತ್ರಕ್ಕೆ ಇಂದಿನ ಲೈಬ್ರರಿ ಸೈನ್ಸನ್ನು ಮಾದರಿಯಾಗಿಟ್ಟುಕೊಳ್ಳುವಲ್ಲಿ ನಾವು ತುಂಬ ಎಚ್ಚರ ವಹಿಸಬೇಕಾಗಿದೆ.

ಹಸ್ತಪ್ರತಿಶಾಸ್ತ್ರ (Manuscriptology) ಮತ್ತು ಗ್ರಂಥಸಂಪಾದನಾಶಾಸ್ತ್ರ (Textual Criticism)ಗಳು ಒಂದೇ ಭೂಮಿಕೆಯಲ್ಲಿ ಕವಲೊಡೆಯುವ ಜ್ಞಾನಶಾಖೆಗಳು. ಕೆಲವು ಅಂಶಗಳಲ್ಲಿ ಈ ಎರಡೂ ಸಮಾನವಾಗಿವೆ. ಹೀಗಾಗಿ ಈಗಾಗಲೇ ಶಾಸ್ತ್ರರೂಪ ಧರಿಸಿ ನಿಂತಿರುವ ಗ್ರಂಥಸಂಪಾದನಶಾಸ್ತ್ರದಿಂದ, ಇನ್ನುಮೇಲೆ ರೂಪಗೊಳ್ಳಬೇಕಾಗಿರುವ ಹಸ್ತಪ್ರತಿಶಾಸ್ತ್ರಕ್ಕೆ ಕೆಲಮಟ್ಟಿಗೆ ಸಹಾಯವಾಗಬಹುದಾದರೂ ಅದರ ನೆರವು ದಾಳಿಯಾಗದಂತೆ ನೋಡಿಕೊಳ್ಳುವುದೂ ಅವಶ್ಯವಿದೆ.

ಹೀಗೆ ಲೈಬ್ರರಿ ಸೈನ್ಸ, ಟೆಕ್ಸ್ಟುಚುಲ್ ಕ್ರಿಟಿಸಿಝುಮ್ ಎಂಬ ಸಹೋದರ ಶಾಸ್ತ್ರಗಳ ಆದರ್ಶ-ಆಶ್ರಯಗಳಲ್ಲಿ ಮ್ಯಾನ್ಯುಸ್ಕ್ರಿಪ್ಟಾಲಜಿ ಎಚ್ಚರಿಕೆಯಿಂದ ಆಕಾರ ಪಡೆಯಬೇಕಾಗಿದೆ.

* * *

ವಿಜ್ಞಾನದ ಕವಲುಗಳಾದ ಆತ್ಮವಿಜ್ಞಾನ, ಪ್ರಕೃತಿವಿಜ್ಞಾನ, ಸಮಾಜವಿಜ್ಞಾನಗಳಲ್ಲಿ ಹಸ್ತಪ್ರತಿಶಾಸ್ತ್ರ ಸಮಾಜವಿಜ್ಞಾನಶಾಖೆಗೆ ಸೇರುತ್ತಿದ್ದು, ಅದರಲ್ಲಿಯೂ ಬೌದ್ಧಿಕಜ್ಞಾನ-ಬೌದ್ಧಿಕ ಶ್ರಮಗಳಿಗಿಂತ ವ್ಯಾವಹಾರಿಕಜ್ಞಾನ -ದೈಹಿಕಶ್ರಮ ಪ್ರಧಾನವಾದ ಕ್ಷೇತ್ರವಾಗಿರುವುದರಿಂದ, ಒಟ್ಟು ಈ ಶಾಸ್ತ್ರಕ್ಕೆ ಲೈಬ್ರರಿ ಸೈನ್ಸದಂತೆ ಆಳಕ್ಕಿಂತ ಅಗಲ ಜಾಸ್ತಿ.

ಪತ್ರಿಕಾಸಂಪಾದನೆ, ಕಥೆ-ಕವನ ಸಂಪಾದನೆಗಳನ್ನು ಹೊರತುಪಡಿಸಿಕೊಂಡ ಗ್ರಂಥಸಂಪಾದನಶಾಸ್ತ್ರದಂತೆ, ಪ್ರಾಚಿನ ಕಾಗದಪತ್ರ, ಅಚ್ಚಿಗಾಗಿ ಸಿದ್ಧಪಡಿಸುವ ಆಧುನಿಕ

ಹಸ್ತಪ್ರತಿ(Press Copy) ಇತ್ಯಾದಿಗಳನ್ನು ಹೊರತುಪಡಿಸಿಕೊಂಡು ಪ್ರಾಚೀನ (ಮುದ್ರಣಯಂತ್ರಾಗಮನ ಪೂರ್ವಕಾಲೀನ) ಹಸ್ತಪ್ರತಿಗಳಿಗೆ ಮಾತ್ರ ಈ ಶಾಸ್ತ್ರವನ್ನು ನಾವು ಸೀಮಿತಗೊಳಿಸಿಕೊಳ್ಳಬೇಕು.

* * *

ಯಾವುದೇ ವಿಷಯವನ್ನು ಕ್ರಮಬದ್ಧವಾಗಿ ಲಕ್ಷಣಿಸುವುದೇ ಶಾಸ್ತ್ರವೆನಿಸುತ್ತದೆ. ಈ ಕ್ರಮಬದ್ಧತೆಯ ದೃಷ್ಟಿಯಿಂದ ಪ್ರಸ್ತುತ ಶಾಸ್ತ್ರವನ್ನು ೧. ಹಸ್ತಪ್ರತಿ ನಿರ್ಮಾಣಪೂರ್ವದ ಹಂತಗಳು. ೧. ಹಸ್ತಪ್ರತಿ ನಿರ್ಮಾಣೋತ್ತರದ ಹಂತಗಳು ಎಂದು ಬಿಚ್ಚಿಕೊಳ್ಳುವುದು ಲೇಸು. ಇಲ್ಲಿಯ ಕ್ರಿಯೆಗಳನ್ನು ಗಮನಿಸಿ ಈ ಎರಡೂ ಹಂತಗಳನ್ನು ಕ್ರಮವಾಗಿ ಹಸ್ತಪ್ರತಿಗಳ ೧. ಸಂಯೋಜನಮುಖ, ೨. ಪ್ರಯೋಜನಮುಖ ಎಂದು ಹೆಸರಿಟ್ಟು ಕರೆಯಬಹುದು.

ಹಸ್ತಪ್ರತಿ ಸಂಯೋಜನಮುಖ

ಈ ವಿಭಾಗ, ಹಸ್ತಪ್ರತಿಯೆಂದರೇನು? ಎಂಬುದನ್ನು ಮೊದಲುಗೊಂಡು, ಹಸ್ತಪ್ರತಿ ನಿರ್ಮಾಣಾಂತ್ಯದ ಎಲ್ಲ ಕ್ರಿಯಾಕಲಾಪಗಳನ್ನು ಒಳಗೊಳ್ಳುತ್ತದೆ. ಅಂದರೆ ಹಸ್ತಪ್ರತಿಯ ಉಗಮ-ವಿಕಾಸ, ಲೇಖನಸಾಮಗ್ರಿ-ಲಿಪಿಕಾರ, ಭಾಷೆ-ಲಿಪಿ- ಚಿತ್ರ, ಸ್ಖಾಲಿತ್ಯದ ಕಾರಣ-ಸ್ವರೂಪ, ಹಸ್ತಪ್ರತಿಯ ಸ್ವರೂಪ-ಪ್ರಕಾರ ಇತ್ಯಾದಿ ವಿಷಯ ವಿವೇಚನೆಯ ಕ್ಷೇತ್ರವಿದು. ಇವು ಗ್ರಂಥಸಂಪಾದನಶಾಸ್ತ್ರದ ಪೂರ್ವಾರ್ಧದಲ್ಲಿ ಬರುವ ವಿಷಯಗಳೇ ಆಗಿರುವುದರಿಂದ, ಈಗ ವಿವೇಚಿಸಲಿರುವ "ಹಸ್ತಪ್ರತಿ ಸಂಯೋಜನಮುಖ" ಇಡಿಯಾಗಿ ಗ್ರಂಥಸಂಪಾದನಶಾಸ್ತ್ರದ ಒಂದು ಭಾಗವೆಂದೇ ಹೇಳಬೇಕು.

ಹಸ್ತಪ್ರತಿಯ ಉಗಮ-ವಿಕಾಸ : ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದ, ಭೌತಿಕ ಮತ್ತು ಸಾಂಸ್ಕೃತಿಕ ಜ್ಞಾನಸಂಪತ್ತು ಒಂದು ಕಾಲಕ್ಕೆ 'ಶ್ರುತಿಪಾತಳಿ'ಯಿಂದ ಲಿಪಿಮಾಧ್ಯಮದ ಮೂಲಕ 'ಕೃತಿಪಾತಳಿ'ಗೆ ಇಳಿದು ಬಂದಿತು. ಮುಂದೆ ಈ ಕೃತಿಸಾಹಿತ್ಯವು ಅಲ್ಪಕಾಲದಲ್ಲಿ ಅಳಿದುಹೋಗುವ, ಬಹುಕಾಲ ಉಳಿದು ನಿಲ್ಲುವ ಕವಲುಗಳಲ್ಲಿ ಬೆಳೆದು ಬಂದಿದೆ. ಬಹುಕಾಲ ಉಳಿದು ನಿಲ್ಲುವ ಶಿಲೆ, ಸುಟ್ಟ ಮಣ್ಣು, ಲೋಹಪಟಗಳಂಥ ಭಾರವಾದ ವಸ್ತುವಲ್ಲದ ಅಲ್ಪಕಾಲದಲ್ಲಿ ಅಳಿದುಹೋಗುವ ವಸ್ತ್ರಪಟ, ವೃಕ್ಷಪತ್ರ, ಕಾಗದಗಳಂಥ ಹಗುರು ವಸ್ತುಗಳ ಮೇಲಿನ ಕೈಬರಹಗಳು ಮಾತ್ರ ಹಸ್ತಪ್ರತಿವರ್ಗದಲ್ಲಿ ಸೇರುತ್ತವೆ.

ಜ್ಞಾನದ ಆವಶ್ಯಕತೆ ಹವ್ಯಾಸವಾಗಿಯೂ ಬೆಳೆಯುವಲ್ಲಿ ಅದರ ವಾಹಕಗಳಾದ ಹಸ್ತಪ್ರತಿಗಳನ್ನು ಸ್ವ-ಅನ್ಯ ಪ್ರಯೋಜನಾರ್ಥ ಬೆಳೆಸಿಕೊಂಡುಬಂದವರು ಸಮಾಜದ ನೇತಾರರಾದ ರಾಜರು-ಆಚಾರ್ಯರು-ವಿದ್ವಾಂಸರು. ರಾಜನ 'ಸಪ್ತಸಂತಾನ'ಗಳಲ್ಲಿ ಗ್ರಂಥನಿರ್ಮಾಣವೂ ಸೇರಿದ ಅಪೂರ್ವಪ್ರಜ್ಞೆಯಿಂದಾಗಿ ಅರಮನೆಯ ಹಸ್ತಪ್ರತಿಭಾಂಡಾರಗಳೂ, ಆಚಾರ್ಯರ ಸ್ವಾಧ್ಯಾಯ-ಪ್ರವಚನಗಳಿಗಾಗಿ ಮಠಮಂದಿಗಳ ಧಾರ್ಮಿಕ ಹಸ್ತಪ್ರತಿಭಾಂಡಾರಗಳೂ, ಅಧ್ಯಯನಹವ್ಯಾಸ ಕಾರಣವಾಗಿ ವೈಯಕ್ತಿಕ ಗ್ರಂಥಭಾಂಡಾರಗಳೂ ನಮ್ಮ ದೇಶದಲ್ಲಿ ಸಂವರ್ಧಿಸಿದವು. ಗ್ರಂಥದಾನದಂಥ ಪುಣ್ಯಕಾರ್ಯ ನೆವದಿಂದ ಹಸ್ತಪ್ರತಿಗಳು ಪೂಜಾಯೋಗ್ಯವಾದುದು ಅವುಗಳ ಅಲೌಕಿಕ ಮಹತ್ವವನ್ನು, ಕುಮಾರವ್ಯಾಸ ತನ್ನ ಕೈಯಾರೆ ಬರೆದ ಮಹಾಭಾರತ ಪ್ರತಿಯನ್ನು ನೆರೆಹಳ್ಳಿಯ ಶ್ರೀಮಂತರಲ್ಲಿ ಒತ್ತೆಯಿಟ್ಟಿದ್ದವೆಂಬಂತಹ ಹೇಳಿಕೆಗಳು ಅವುಗಳ ಲೌಕಿಕ ಮಹತ್ವವನ್ನು ಸ್ಪಷ್ಟಪಡಿಸುತ್ತವೆ. ಈ ಕಾರಣಗಳಿಂದಾಗಿಯೇ ಅಣ್ಣ-ತಮ್ಮಂದಿರು ಬೇರೆಯಾಗುವಾಗ ಪಿತ್ರಾರ್ಜಿತ ಆಸ್ತಿಯೊಂದಿಗೆ ಹಸ್ತಪ್ರತಿಗಳನ್ನು ಹಂಚಿಕೊಳ್ಳುತ್ತಿದ್ದರೆಂದು ತೋರುತ್ತದೆ. ಇಂಥ ಎಲ್ಲ ವಿಷಯ ಈ ಪ್ರಕರಣದಲ್ಲಿ ಅಡಕಗೊಳ್ಳುತ್ತದೆ.

ಹಸ್ತಪ್ರತಿಯ ಲೇಖನ ಸಾಮಗ್ರಿ -ಲಿಪಿಕಾರ : ಲೇಖನ ಸಾಮಗ್ರಿ ಆಧಾರ ಆಧೇಯ ಮತ್ತು ಬಣ್ಣ ಎಂದು ಮೂರು ವಿಧವಾಗಿದೆ. ಆಧಾರಸಾಮಗ್ರಿಯು ಲೋಹ, ಲೋಹೇತರವೆಂದು ಎರಡು ವಿಧ. ಲೋಹದ ಫಲಕ-ಪತ್ರಗಳ ಮತ್ತು ಲೋಹೇತರ ಕಲ್ಲು, ಮಣ್ಣುಗಳ ಸ್ಥೂಲಪರಿಚಯ ಮಾಡಿಕೊಡುತ್ತ, ಇತರ ತಾಳಪತ್ರ, ಭೂರ್ಜಪತ್ರ, ಕಾಗದ, ಕಡತ ಇತ್ಯಾದಿಗಳನ್ನು ಸಿದ್ಧಗೊಳಿಸುವ ವಿಧಾನ, ಅವುಗಳ ಬಳಕೆಯ ಇತಿಹಾಸ ಇತ್ಯಾದಿಗಳ ಚರ್ಚೆ ಇಲ್ಲಿ ಅವಶ್ಯ. ಆಧೇಯವೆನಿಸಿದ ಲೆಕ್ಕಣಿಕೆಗಳ ಪ್ರಕಾರ - ಸ್ವರೂಪ, ಬಣ್ಣಗಳ ಪ್ರಕಾರ -ಸಿದ್ಧಪಡಿಸುವ ರೀತಿಗಳ ವಿವರಣೆಗಳನ್ನಲ್ಲದೆ ಬರೆಯುವ ವಿಧಾನಗಳನ್ನೂ ಇಲ್ಲಿ ಸ್ಪಷ್ಟಪಡಿಸಬೇಕು.

ಹಸ್ತಪ್ರತಿಗಳ ಸಂತಾನವನ್ನು ಬೆಳೆಸಿದವರು ನಮ್ಮ ಲಿಪಿಕಾರರು. ಇವರಲ್ಲಿ ಹವ್ಯಾಸಿ, ನಿಯುಕ್ತ, ವೃತ್ತಿ ಎಂದು ಮೂರು ವಿಧ. ಇವರ ಮನೋಧರ್ಮ, ಅಭಿರುಚಿ, ಲಿಪಿಜ್ಞಾನ, ಭಾಷಾಪ್ರಜ್ಞೆಗಳ ವಿವೇಚನೆ ಈ ಭಾಗದ ವಸ್ತು. ಅನೇಕರು ಕೂಡಿ ಒಂದು ಹಸ್ತಪ್ರತಿಯನ್ನು ಒಬ್ಬನೇ ಅನೇಕ ಹಸ್ತಪ್ರತಿಗಳನ್ನು ಸಿದ್ಧಗೊಳಿಸಿದ ಸಂಗತಿ, ಈ ಕಾರ್ಯದಲ್ಲಿ ಅವರು ತೆಗೆದುಕೊಂಡ ಕಾಲಾವಧಿ ಮೊದಲಾದ ವಿಷಯಗಳು ನಮಗೆ ಕುತೂಹಲ ಹುಟ್ಟಿಸುತ್ತವೆ. ಇವರನ್ನು ಪ್ರಾಮಾಣಿಕರು, ಹೊಣೆಗೇಡಿಗಳು, ಕಿಡಿಗೇಡಿಗಳು ಎಂದು ಗುರುತಿಸಬಹುದಾಗಿದೆ. ಈ ಸಂದರ್ಭದಲ್ಲಿಯೇ ಹಸ್ತಪ್ರತಿಗಳ ಆದಿ ಮತ್ತು ಅಂತ್ಯಗಳಲ್ಲಿ ಬರುವ ಪ್ರಶಸ್ತಿಗಳ ಮಹತ್ವವನ್ನು ವಿವರಿಸಬೇಕು. ಈ ಲಿಪಿಕಾರರು ಮತ್ತು ಹಸ್ತಪ್ರತಿ ಒಡೆಯರು ಒಂದು ಹಸ್ತಪ್ರತಿಯನ್ನು ಬರೆಯುವಲ್ಲಿ, ಬರೆಯಿಸುವಲ್ಲಿ ಇಟ್ಟುಕೊಂಡ ಅನನ್ಯಭಕ್ತಿ, ವಹಿಸಿದ ಶ್ರಮ, ವ್ಯಯಿಸಿದ ದ್ರವ್ಯ ಇತ್ಯಾದಿಗಳು ಉಲ್ಲೇಖನೀಯವಾಗಿರುತ್ತವೆ. ಇವರು ಕಾರಣವಾಗಿ ಕನ್ನಡದಲ್ಲಿ ೨೫ ಸಾವಿರ ಕಟ್ಟುಗಳು, ಪ್ರತಿಯೊಂದರಲ್ಲಿ ಸರಾಸರಿ ೪ ರಂತೆ ಒಂದು ಲಕ್ಷ ಪ್ರತಿಗಳು ನಮಗೆ ಉಳಿದು ಬಂದಿವೆ. ಭಾರತದಲ್ಲಿ ೫ ಲಕ್ಷ, ಭಾರತದ ಹೊರಗೆ ೧ ಲಕ್ಷ, ಹೀಗೆ ೬ ಲಕ್ಷ ಸಂಸ್ಕೃತ ಹಸ್ತಪ್ರತಿಗಳಿವೆಯೆಂದು ಅಂದಾಜು ಮಾಡಿರುವುದನ್ನು ಇಲ್ಲಿ ನೆನೆಯಬೇಕು.

ಹಸ್ತಪ್ರತಿಯ ಭಾಷೆ-ಲಿಪಿ-ಚಿತ್ರ: ಹಸ್ತಪ್ರತಿಗಳಿಗೆ ಬಳಸುವ ಭಾಷೆ ಲಿಪಿ ಚಿತ್ರಗಳ ವಿವೇಚನೆಯೂ ಈ ಶಾಸ್ತ್ರದ ಒಂದು ಮುಖ್ಯ ಭಾಗ. ಕೆಲವೊಮ್ಮೆ ಯಾವುದೇ ಭಾಷೆಗೆ ಯಾವುದೇ ಲಿಪಿಯನ್ನು ಬಳಸಬಹುದಾದರೂ ಕನ್ನಡಭಾಷೆಗೆ ಕನ್ನಡಲಿಪಿ, ಸಂಸ್ಕೃತಭಾಷೆಗೆ ಕನ್ನಡ ಲಿಪಿ ಬಳಸಿದ ಉದಾಹರಣೆಗಳೂ ಇವೆ. ಹೀಗಿದ್ದೂ ಉತ್ತರ-ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತಿಗಳಾರಿ (ತಮಿಳು - ಆರ‍್ಯಲಿಪಿಗಳ ಸಂಗಮವಾದ) ಲಿಪಿಯ, ಉತ್ತರ ಕರ್ನಾಟಕದಲ್ಲಿ ಮೋಡಿಲಿಪಿಯ ಹಸ್ತಪ್ರತಿಗಳು ಸಿಗುತ್ತವೆ. ಕೊಡೇಕಲ್ಲ ಬಸವಣ್ಣ ಸಂಪ್ರದಾಯದ ಮಠಗಳಲ್ಲಿ ೧೨ ವಿಧದ ವಿಶಿಷ್ಟಲಿಪಿ ಬಳಸಿದ ಹಸ್ತಪ್ರತಿಗಳಿವೆ. ಬಿಜ್ಜಳನ ಆಸ್ಥಾನದಲ್ಲಿ ಬಿದ್ದ ತಾಮ್ರಪಟದ ಲಿಪಿಯಿದೆಂದು ಅಲ್ಲಿಯ ಮಠಾಧಿಪತಿಗಳು ಹೇಳುತ್ತಾರೆ. ಈ ಮತ್ತು ಇಂಥ ಅನೇಕ ಪ್ರಾಚೀನ ಲಿಪಿಗಳ ಶೋಧ ನಡೆಸಿ ವಿವರಿಸಬೇಕಾಗಿದೆ. ಲಿಪಿಯು ಕಾಲ, ದೇಶಗಳಿಗೆ ತಕ್ಕಂತೆ ವ್ಯತ್ಯಾಸವಾಗುತ್ತಿದ್ದು, ಸಾಲದುದಕ್ಕೆ ಒಂದೇ ಕಾಲದ ಒಂದೇ ಪ್ರದೇಶದ ವ್ಯಕ್ತಿಗಳ ಲಿಪಿಯಲ್ಲಿ ಶೈಲಿವೈಶಿಷ್ಟ್ಯವಿರುತ್ತದೆ. "ಬಿಂದುವಿನೊಂದು ಶೋಭೆ ತಲೆಕಟ್ಟಿನ ಪೊರ್ಕುಳ ಚೆಲ್ವು ...." ಎಂದು ಹೇಳಿಕೊಂಡ ನವಿಲ್ಗುಂದದ ಮಾದಿರಾಜನ ಹೇಳಿಕೆ ಸುಪ್ರಸಿದ್ಧ. "ಸಣ್ಣಬರಹದ ಗುರುಪಾದದೇವರು"[೬] ಇತ್ಯಾದಿ ಹೇಳಿಕೆಗಳು ವ್ಯಕ್ತಿವಿಶಿಷ್ಟಶೈಲಿಯ ನಿದರ್ಶನವೆನಿಸಿವೆ. ಇದಕ್ಕೆ ಮಿಗಿಲಾಗಿ

---

೬. Dr. K.T. Pandurangi ; Wealth of Sanskrit manuscripts in India and abroad. p.2

ಬಹುಲಿಪಿಜ್ಞರು, ಶೀಘ್ರುಲಿಪಿಕಾರರು, ಉಭಯಹಸ್ತಲಿಪಿಕಾರರು, ಚಿತ್ರಲಿಪಿಕಾರರು, ಲಿಪಿಕಾರ್ತಿಯರು ನಮಗೆ ಕಂಡುಬರುತ್ತಾರೆ.

ಲಿಪಿಕಾರರ ಕೈಯಲ್ಲಿ ನೂರು ವಿಧಗಳಲ್ಲಿ ರೂಪ ವಿಕಾಸಮಾಡಿಕೊಂಡು ಬರುತ್ತದೆ, ಯಾವುದೇ ಭಾಷೆಯ ಲಿಪಿ. ಹಸ್ತಪ್ರತಿಗಳೆಲ್ಲ ಸಾಮಾನ್ಯವಾಗಿ ಇತ್ತೀಚಿನ ನಕಲುಗಳಾಗಿದ್ದರೂ ಅವುಗಳಲ್ಲಿ ಕಾಣುವ ಲಿಪಿವಿಕಾಸ, ಲಿಪಿವ್ಯತ್ಯಾಸಗಳನ್ನು 'ಲಿಪಿಶಾಸ್ತ್ರ' ದೃಷ್ಟಿಯಿಂದ ಅಭ್ಯಸಿಸಿ ಒಂದು ಕೋಷ್ಟಕವನ್ನು ಸಿದ್ಧಪಡಿಸಬೇಕಾಗಿದೆ.

ಹಸ್ತಪ್ರತಿಗಳ ರಕ್ಷಾಫಲಕದ ಮೇಲೆ, ಕೃತಿ ಮತ್ತು ಸಂಧಿಗಳ ಆರಂಭ-ಅಂತ್ಯಗಳಲ್ಲಿ ಚಿತ್ರಗಳೂ, ಭೂಮಿತಿಯಾಕೃತಿಗಳೂ ಆಗಾಗ ಕಂಡುಬರುತ್ತವೆ. ಕೆಲವೊಮ್ಮೆ ಗ್ರಂಥೋಕ್ತ ಘಟನೆಗಳನ್ನು ಸೂಚಿಸುವ ಚಿತ್ರಗಳನ್ನೂ ಬಿಡಿಸಲಾಗಿರುತ್ತದೆ. ಇಂಥ ಚಿತ್ರಗಳು ಲಿಪಿಕಾರನ ಚಿತ್ರಕಲಾ, ಹವ್ಯಾಸ, ನಮ್ಮ ಚಿತ್ರಗಳನ್ನೂ ಬಿಡಿಸಲಾಗಿರುತ್ತದೆ. ಇಂಥ ಚಿತ್ರಗಳು ಲಿಪಿಕಾರನ ಚಿತ್ರಕಲಾಹವ್ಯಾಸ. ನಮ್ಮ ಚಿತ್ರಕಲೆಯ ಇತಿಹಾಸ, ಗ್ರಂಥೋಕ್ತ ಘಟನೆಯ ಚಾಕ್ಷುಷ ತಿಳಿವಳಿಕೆ ಇತ್ಯಾದಿ ದೃಷ್ಟಿಗಳಿಂದ ತುಂಬ ಉಪಯುಕ್ತವೆನಿಸುತ್ತವೆ. ಅಲ್ಲಲ್ಲಿ ಹಸ್ತಪ್ರತಿಗಳೊಂದಿಗೆ ಚದರಿಹೋಗಿರುವ ಈ ಕಲಾಸಂಪತ್ತನ್ನು ವ್ಯಸ್ಥಿತವಾಗಿ ಅಭ್ಯಾಸಮಾಡಿದರೆ ಒಂದು ಹೊಸ ಕ್ಷೇತ್ರವೇ ನಮ್ಮ ಕಣ್ಣು ಮುಂದೆ ಬರಬಹುದಾಗಿದೆ. ಆದರೆ ಹಸ್ತಪ್ರತಿಗಳನ್ನು ಮಿಸ್‌ಹ್ಯಾಂಡಲ್ ಮಾಡುವುದರಿಂದ, ರಕ್ಷಾಫಲಕಗಳ ಮೇಲೆ ಶೀರ್ಷಿಕೆ-ಕ್ರಮಾಂಕಗಳ ಚೀಟಿ ಅಂಟಿಸುವುದರಿಂದ ಹಾಳಾಗದಂತೆ ಈ ಚಿತ್ರಗಳನ್ನು ಉಳಿಸಿಕೊಳ್ಳುವುದು ಅವಶ್ಯವೆನಿಸಿದೆ.

ಹಸ್ತಪ್ರತಿಯ ಅಕ್ಷರ ಸ್ಖಾಲಿತ್ಯದ ಕಾರಣ-ಸ್ವರೂಪ : ಹಸ್ತಪ್ರತಿಯ ಗುರಿ ಅಕ್ಷರಗಳ ಮೂಲಕ ವಿಷಯಜ್ಞಾನವನ್ನು ಮಾಡಿಕೊಡುವುದೇ ಆಗಿರುವುದರಿಂದ 'ಹಸ್ತಪ್ರತಿಶಾಸ್ತ್ರ'ದಲ್ಲಿ ಅಕ್ಷರಸ್ಖಾಲಿತ್ಯದ ಕಾರಣ-ಸ್ವರೂಪಗಳ ವಿವೇಚನೆ ಅವಶ್ಯವೆನಿಸುತ್ತದೆ. ಈ ಸ್ಖಾಲಿತ್ಯಗಳನ್ನು ಉದ್ದೇಶಿತ, ಅನುದ್ದೇಶಿತ, ಅನವಧಾನಿತವೆಂದೂ ಉದ್ದೇಶಿತಗಳನ್ನು ಕವಿ, ಸಹೃದಯ, ಲಿಪಿಕಾರ ಮಾಡಿದುವು; ಅನುದ್ದೇಶಿತಗಳನ್ನು ಅಕ್ಷರದ ರೂಪಸಾದೃಶ್ಯ, ಧ್ವನಿಸಾದೃಶ್ಯ, ಭಾಷೆಯ ಅವಸ್ಥಾಭೇದ-ಪ್ರಾಂತಭೇದ, ಬರವಣಿಗೆಯ ರೀತಿದೋಷಗಳಿಂದಾದುವು ಎಂದೂ ವರ್ಗೀಕರಿಸಿಕೊಳ್ಳಬೇಕು. ಈ ಕಾರಣಗಳಿಂದಾಗಿ ಲೋಪ, ಆಗಮ, ಪಲ್ಲಟ ಇತ್ಯಾದಿ ರೂಪಗಳಲ್ಲಿ ಸ್ಖಾಲಿತ್ಯಗಳು ತಲೆದೋರುತ್ತಿರುವುದನ್ನು ಉದಾಹರಣೆ ಸಹಿತ ಇಲ್ಲಿ ಸ್ಪಷ್ಟಪಡಿಸಬೇಕು.

ಹಸ್ತಪ್ರತಿಯ ಪ್ರಕಾರ -ಸ್ವರೂಪ : 'ಗ್ರಂಥಸಂಪಾದನಶಾಸ್ತ್ರ' ದೃಷ್ಟಿಯಿಂದ ಹಸ್ತಪ್ರತಿಗಳನ್ನು ಮೂಲಪ್ರತಿ, ಪರಂಪರಾಗತಪ್ರತಿ ಎಂದು ವರ್ಗೀಕರಿಸಬಹುದಾದರೂ 'ಹಸ್ತಪ್ರತಿಶಾಸ್ತ್ರ' ದೃಷ್ಟಿಯಿಂದ ತಾಳೆಪ್ರತಿ, ಕಾಗದಪ್ರತಿಯೆಂದು ಇಲ್ಲವೆ ಸ್ವಭಾಷಾಪ್ರತಿ, ಅನ್ಯಭಾಷಾಪ್ರತಿ ಎಂದು ವರ್ಗೀಕರಿಸಬೇಕಾಗುತ್ತದೆ. ಇಲ್ಲಿ ಹಸ್ತಪ್ರತಿ ಕಟ್ಟುಗಳ, ಗರಿ-ಹಾಳೆಗಳ ಸ್ವರೂಪ-ವಿನ್ಯಾಸ, ಪುಟಸಂಖ್ಯೆಯ ರೀತಿ, ಕಟ್ಟುವಿಕೆಯವಿಧಾನ, ರಕ್ಷಾಫಲಕ, ಅಧಿಕಪುಟ, ಪರಿವಿಡಿ, ಹಂಸಪಾದ, ಶುದ್ಧಿಪತ್ರ ಮತ್ತು ಗದ್ಯವಿರಲಿ ಪದ್ಯವಿರಲಿ ಸಾಲುಗಟ್ಟೆ ಬರೆಯುವ ವಿಧಾನ, ಪದ್ಯಗಳಿಗೆ ಅಂಕಿ, ದಂಡಗಳನ್ನು ಬಳಸುವಲ್ಲಿ ಕಾಣುವ ಅವ್ಯವಸ್ಥೆ ಇತ್ಯಾದಿಗಳನ್ನು ವಿವೇಚಿಸಬೇಕು.

ಹಸ್ತಪ್ರತಿ ಪ್ರಯೋಜನಮುಖ

ಸಂಯೋಜನಮುಖದ ಬಹುಭಾಗವೆಲ್ಲ 'ಗ್ರಂಥಸಂಪಾದನಶಾಸ್ತ್ರ'ದ ವಿಷಯವಾದರೆ ಪ್ರಯೋಜನಮುಖದ ಬಹುಭಾಗ 'ಗ್ರಂಥಾಲಯಶಾಸ್ತ್ರ'ದ ವಿಷಯವಾಗಿದೆ. ಆದರೆ ಗ್ರಂಥಾಲಯಶಾಸ್ತ್ರದಂತೆ

ಹಸ್ತಪ್ರತಿಶಾಸ್ತ್ರ ಇಂದು ತನ್ನ ಹಳೆಯ ಕವಚವನ್ನು ಕಳೆದುಕೊಂಡು ತುಂಬ ವೈಜ್ಞಾನಿಕವಾಗಿ ಬೆಳೆಯುವುದು ಅವಶ್ಯವಿದೆ. ಈ ವಿಭಾಗವನ್ನು ೧. ಸರ್ವೇಕ್ಷಣ (Collection) ೨. ಸಂರಕ್ಷಣ (Preservation) ೩. ಸದುಪಯೋಗ(Utilisation) ಎಂದು ವರ್ಗೀಕರಿಸಬಹುದು.

೧. ಹಸ್ತಪ್ರತಿ ಸರ್ವೇಕ್ಷಣ: ಇದು ಇಡಿಯಾಗಿ ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದ ವಿಷಯ. ಹಸ್ತಪ್ರತಿ ಲಭಿಸುವ ಕ್ಷೇತ್ರ, ಕ್ಷೇತ್ರಕಾರ್ಯಕರ್ತ, ಕ್ಷೇತ್ರಕಾರ್ಯದ ಉಪಕರಣ, ವಿಧಾನ ಇತ್ಯಾದಿಗಳು ಇಲ್ಲಿ ಸಮಾವೇಶವಾಗುತ್ತವೆ. ಸಾಮಾನ್ಯವಾಗಿ ಹಸ್ತಪ್ರತಿಗಳು ರಾಜವಂಶೀಯರ, ಮಠಾಧಿಪತಿಗಳ, ಪ್ರತಿಷ್ಠಿತ ಮತ್ತು ಪಂಡಿತ ಕುಟುಂಬಗಳ ವಶದಲ್ಲಿ ಸಿಗುತ್ತವೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಕನ್ನಡಹಸ್ತಪ್ರತಿಗಳು ಜೈನ ವೀರಶೈವರಲ್ಲಿ ಹೇರಳ, ಬ್ರಾಹ್ಮಣರಲ್ಲಿ ವಿರಳ. ಆಯಾ ಧರ್ಮೀಯರಲ್ಲಿ ಅವರವರ ಧರ್ಮದ ಸಾಹಿತ್ಯಕೃತಿಗಳೇ ವಿಪುಲ. ಕೆಲವು ವೇಳೆ ಇವು ಪ್ರದೇಶ ವಿಶಿಷ್ಟವಾಗಿಯೂ ಸಿಗುತ್ತವೆ. ಉದಾ : ಕರಾವಳಿ ಪ್ರದೇಶದಲ್ಲಿ ಭಾಗವತ, ಯಕ್ಷಗಾನ ಕೃತಿಗಳು; ಉತ್ತರಕರ್ನಾಟಕದಲ್ಲಿ ವಚನ, ಪುರಾಣಗಳೆಂಬ ವೀರಶೈವ ಕೃತಿಗಳು; ರಾಯಚೂರು ಜಿಲ್ಲೆಯಲ್ಲಿ ದಾಸಸಾಹಿತ್ಯದ ಕೃತಿಗಳು; ದಕ್ಷಿಣಭಾಗದಲ್ಲಿ ಶ್ರೀವೈಷ್ಣವ, ರಾಜವಂಶಾವಳಿ ಕೃತಿಗಳು ಪ್ರಧಾನವಾಗಿ ಲಭಿಸುತ್ತವೆ. ಹಸ್ತಪ್ರತಿ ಲಭಿಸುವ ಇಂಥ ಕೇಂದ್ರಗಳ ವಿವರ ಇಲ್ಲಿ ಬೇಕು. ಕ್ಷೇತ್ರಕಾರ್ಯಕರ್ತ ಹಸ್ತಪ್ರತಿಗಳ ಹವ್ಯಾಸಿ ಮತ್ತು ಅಭ್ಯಾಸಿಯಾಗಿರಬೇಕು. ಜೊತೆಗೆ ಮತ ಭಾಷೆಗಳ ಸೂತಕಾತೀತ, ಶ್ರಮಸಹಿಷ್ಣು, ಪ್ರಯತ್ನಶೀಲವಾಗಿರಬೇಕು. ಪಡೆದ ಹಸ್ತಪ್ರತಿಗಳ ವಿವರವನ್ನು ಸರಿಯಾಗಿ ಇಟ್ಟುಕೊಳ್ಳಬೇಕು. ಹಸ್ತಪ್ರತಿಯನ್ನು ಒಡೆಯರಿಂದ ಪಡೆಯುವುದು ಸಾಧ್ಯವಾಗದಿದ್ದರೆ ಯಂತ್ರಪ್ರತಿ ಇಲ್ಲವೆ ನಕಲುಪ್ರತಿ ಮಾಡಿಕೊಳ್ಳುವ ಕ್ರಿಯಾಶೀಲವ್ಯಕ್ತಿಯಾಗಿರಬೇಕು. ಕನ್ನಡದಲ್ಲಿ ಹಸ್ತಪ್ರತಿ ಪರಿವೀಕ್ಷಣಾಕಾರ್ಯ ಅಷ್ಟು ತೃಪ್ತಿದಾಯಕವಾಗಿ ಜರುಗಿಲ್ಲವಾದರೂ ಬಿ.ಎಸ್. ಸಣ್ಣಯ್ಯನವರ ವರ್ಧಮಾನಪುರಾಣ, ನನ್ನ ಕೊಂಡಗುಳಿ ಕೇಶಿರಾಜನ ಕೃತಿಗಳು, ರನ್ನ ನಿಘಂಟು, ಎಸ್. ಶಿವಣ್ಣನವರ ಚಿಕ್ಕ ಅಷ್ಟೇ ಮಹತ್ವಪೂರ್ಣ ಕೃತಿಗಳು ಬೆಲೆಯುಳ್ಳ ಶೋಧಗಳಾಗಿವೆ. ಇದೇ ಪ್ರಕರಣದಲ್ಲಿ ಆ ಭಾಷೆಯಲ್ಲಿ ಹಸ್ತಪ್ರತಿ ಸಂಗ್ರಹಕಾರ್ಯ ನಡೆದುಬಂದ ಇತಿಹಾಸ, ಅದರ ಘಟ್ಟಗಳ ಸ್ವರೂಪ ಸಾಧನೆ ಇತ್ಯಾದಿಗಳನ್ನು ಕ್ರಮವತ್ತಾಗಿ ಹೇಳಬೇಕು.

* * *

ಹಸ್ತಪ್ರತಿಗಳ ಸರ್ವೇಕ್ಷಣೆಗಿಂತ ಸಂರಕ್ಷಣೆ, ಸದುಪಯೋಗ ಮಹತ್ವದ್ದು-ದೇವಾಲಯದ ನಿರ್ಮಾಣಕ್ಕಿಂತ ರಕ್ಷಣೆ ಪ್ರಯೋಜನ ಮಹತ್ವದ್ದೆಂಬಂತೆ. ಈ ಕಾರ್ಯಗಳಿಗೋಸುಗ ತಲೆಯೆತ್ತುತ್ತದೆ, ಹಸ್ತಪ್ರತಿಭಂಡಾರ. ಹಸ್ತಪ್ರತಿಭಾಂಡಾರವನ್ನು ನೆನೆದಾಗ ಪತ್ರಾಗಾರ (Archives) ನಮ್ಮ ಕಣ್ಣಮುಂದೆ ಬರುತ್ತದೆ. ಇವೆರಡರ ವ್ಯತ್ಯಾಸಗಳನ್ನು "The Chief difference is that archives are "received from one's parent body; where as manuscripts are "Collected", whether by gift of deposit purchaser"[೨] ಎಂದು ರಾಬರ್ಟ ಡಬ್ಲೂ ಲೋವೆಟ್ ಹೇಳುವನಾದರೂ ಇತ್ತೀಚಿನ ದಿನಗಳಲ್ಲಿ ಒಂದರಲ್ಲಿ ಇನ್ನೊಂದು ಸೇರಿಕೊಂಡು ಇವು ಬೆಳೆಯುತ್ತಲಿವೆ. ಆದರೆ

೭.Robert.W. Lovett ; of Manuscripts and Archives (Special Libraries. Vol 64. P. 145)

ಸಾಹಿತ್ಯಕೃತಿಗಳ ಹಸ್ತಪ್ರತಿಭಾಂಡಾರ, ಸಾಹಿತ್ಯೇತರ ದಾಖಲೆಗಳ ಪತ್ರಾಗಾರಗಳನ್ನು ಪ್ರತ್ಯೇಕವಾಗಿಯೇ ಬೆಳೆಸಬೇಕು. ಸರ್ಕಾರಿ, ಸಾರ್ವಜನಿಕ ಮತ್ತು ವೈಯಕ್ತಿಕ ಎಂದು ವರ್ಗೀಕರಣಗೊಳ್ಳುವ ಈ ಹಸ್ತಪ್ರಭಾಂಡಾರಗಳ ಕಟ್ಟಡದಲ್ಲಿ ಪ್ರಧಾನವಾಗಿ ಗ್ರಂಥರಕ್ಷಣಾ ವಿಭಾಗ, ತಾಂತ್ರಿಕ ವಿಭಾಗ, ಗ್ರಂಥ ಪರಿಚಲನ ವಿಭಾಗ, ಪೂರಕ ಗ್ರಂಥಭಾಂಡಾರ ಎಂಬ ೪ ಪ್ರಮುಖ ಘಟಕಗಳಿರಬೇಕು. ಗಾಳಿ ಬೆಳಕಿನ ಅನುಕೂಲತೆ, ಪಿಠೋಪಕರಣ ವ್ಯವಸ್ಥೆ, ಅನ್ಯ ಉಪಕರಣಗಳ ನೆರವು ಇಲ್ಲಿ ಅಗತ್ಯವಾದವು.

* * *

೨. ಹಸ್ತಪ್ರತಿ ಸಂರಕ್ಷಣ : ಹಸ್ತಪ್ರತಿಗಳ ಸರ್ವೇಕ್ಷಣದ ಮುಂದಿನ ಘಟ್ಟ ಸಂರಕ್ಷಣ. ನಮ್ಮ ಪ್ರಾಚೀನರು ಈ ಬಗ್ಗೆ ವಿಶೇಷ ಕಾಳಜಿ ವಹಿಸುತ್ತ ಬಂದಿದ್ದಾರೆ.

ತೈಲಾದ್ರಕ್ಷೇತ್ ಜಲಾದ್ರಕ್ಷೇತ್ ರಕ್ಷೇತ್ ಶಿಥಿಲಬಂಧನಾತ್ ।
ಮೂರ್ಖಹಸ್ತೇ ನ ದಾತವ್ಯಮೇವಂ ವದತಿ ಪುಸ್ತಕಂ।

ಎಂದು ಹಸ್ತಪ್ರತಿಗಳು ಮೊದಲಿನಿಂದಲೂ ಕೇಳಿಕೊಳ್ಳುತ್ತಲಿದ್ದು, ಇಂದು ಅವುಗಳನ್ನು ಹವಾನಿಯಂತ್ರಣ ಕೊಠಡಿಯಲ್ಲಿ ರಕ್ಷಿಸಬೇಕಾಗಿದೆ. ಧೂಳು, ಬೂಷ್ಟಗಳನ್ನು ಒರೆಸುವುದು ಕ್ರಿಮಿನಾಶಕ ತೈಲವನ್ನು ಲೇಪಿಸುವುದು, ಋತುಮಾನಕ್ಕೆ ತಕ್ಕಂತೆ ವಿದ್ಯುತ್ ಶಾಖ ಕೊಟ್ಟು ಆರೈಕೆ ಮಾಡುವುದು ಇಲ್ಲಿ ನಿರಂತರ ನಡೆಯಬೇಕು. ಇತ್ತೀಚಿನ ದಿನಗಳಲ್ಲಿ ಹಸ್ತಪ್ರತಿಗಳ ಯಾಂತ್ರಿಕ ನಕಲುಕಾರ್ಯ ಈ ಕ್ಷೇತ್ರದ ಅವಶ್ಯಭಾಗವೆನಿಸಿದೆ. ಪ್ರಾಚೀನಕಾಲದಲ್ಲಿ ಲಿಪಿಕಾರರು ಮಾಡುತ್ತಲಿದ್ದ ಕಾರ್ಯವನ್ನು ಇಂದು ಮೈಕ್ರೋಫಿಲ್ಮ, ಝೆರಾಕ್ಸ್, ಫೋಟೋಸ್ಟ್ಯಾಟ್ ಯಂತ್ರಗಳಿಂದ ಪೂರೈಸಲಾಗುತ್ತದೆ. ಹಾಳಾಗುತ್ತಲಿರುವ ಹಸ್ತಪ್ರತಿಗಳ ಯಂತ್ರಪ್ರತಿ ಮಾಡಿಸುವುದು ಇಲ್ಲಿ ನಡೆಯಬೇಕಾದ ಕೆಲಸ. ಜೀರ್ಣ ಹಸ್ತಪ್ರತಿಗಳನ್ನು ರಿಪೇರಿ ಮಾಡುವುದೂ ಇಂದು ವಿಶಿಷ್ಟ ಕಲೆಯಾಗಿ ಬೆಳೆಯತೊಡಗಿದೆ. ಟೇಪು ಕತ್ತರಿಯಿಂದ ಹಿಡಿದು ಭಾರಿ ಬೆಲೆಯ ಯಂತ್ರಗಳೆಲ್ಲ ಈ ವಿಭಾಗದ ಉಪಕರಣಗಳೆನಿಸಿ ಹಸ್ತಪ್ರತಿಯ ಸಂರಕ್ಷಣೆಯಲ್ಲಿ ಬಹುದೊಡ್ಡ ಪಾತ್ರವಹಿಸುತ್ತಲಿವೆ. ಈ ಎಲ್ಲ ಕಾರ್ಯಗಳಲ್ಲಿ ನಿರತರಾದ ಸಿಬ್ಬಂದಿಗಳು ಕೇವಲ ಹಸ್ತಪ್ರತಿ ರಕ್ಷಣಾ ತರಬೇತುಗಾರರಷ್ಟೇ ಅಲ್ಲ; ಹಸ್ತಪ್ರತಿಗಳ ಮಹತ್ವವಿದರೂ ಆಗಿರಬೇಕು. 'ಮೂರ್ಖಹಸ್ತೇ ನ ದಾತವ್ಯಂ' ಎಂದು ಇವರ ಮಧ್ಯದಲ್ಲಿ ಹಸ್ತಪ್ರತಿ ಪದೇ ಪದೇ ಹಲುಬುವಂತಾಗಬಾರದು. ಈ ಮಾತು ಸಿಬ್ಬಂದಿಗಳಿಗಷ್ಟೇ ಅಲ್ಲ; ಪ್ರಯೋಜನ ಪಡೆಯುವ ಹೊಣೆಗೇಡಿ ವಿಸ್ವಾಂಸರಿಗೂ ಅನ್ವಯಿಸುತ್ತದೆ.

೩. ಹಸ್ತಪ್ರತಿ ಸದುಪಯೋಗ : ಹಸ್ತಪ್ರತಿಯ ಸಾರ್ಥಕತೆಯಿರುವುದು ಅದರ ಉಪಯೋಗದಲ್ಲಿ. ಇದು ತಾಂತ್ರಿಕ ವಿಭಾಗ ಮತ್ತು ಪರಿಚಲನ ವಿಭಾಗ ಎಂದು ಎರಡು ತೆರವಾಗಿದೆ. ಇವುಗಳಲ್ಲಿ ಒಂದು ವಿಭಾಗ ಹಸ್ತಪ್ರತಿ ಸದುಪಯೋಗವಾಗುದಕ್ಕೋಸುಗ ವೈಜ್ಞಾನಿಕ ತಂತ್ರಗಳನ್ನು ಅಳವಡಿಸಲು ತೊಡಗಿದರೆ, ಇನ್ನೊಂದು ವಿಭಾಗ ಹಸ್ತಪ್ರತಿಗಳ ಪರಿಚಲನ ವ್ಯವಸ್ಥೆ ನೋಡಿಕೊಳ್ಳುತ್ತದೆ.

ತಾಂತ್ರಿಕ ವಿಭಾಗದ ಮುಖ್ಯಕೆಲಸ ಹಸ್ತಪ್ರತಿಗಳ ವರ್ಗೀಕರಣ ಮತ್ತು ಸೂಚೀಕರಣ. ವರ್ಗೀಕರಣವೆಂದರೆ ವಿಷಯವರ್ಗೀಕರಣವೆಂದೇ ಅರ್ಥ. ಇದು ಹಸ್ತಪ್ರತಿಗಳನ್ನು ಭಾಂಡಾರಕ್ಕೆ ಪಡೆಯುವುದರಿಂದ ಹಿಡಿದು ಅವುಗಳನ್ನು ವೈಜ್ಞಾನಿಕವಾಗಿ ವಿಂಗಡಿಸಿ ಕಪಾಟಿನಲ್ಲಿ ವ್ಯವಸ್ಥೆಗೊಳಿಸುವ ವರೆಗಿನ ವ್ಯಾಪ್ತಿಯುಳ್ಳ ಕ್ಷೇತ್ರ. ಮುದ್ರಿತ ಗ್ರಂಥಾಲಯದ ಪುಸ್ತಕಗಳು ವಿಷಯದೃಷ್ಟಿಯಿಂದ ನೂರು ನೂರು ತೆರನಾಗಿರುವುದರಿಂದ

ಅಲ್ಲಿ ಕೋಲನ್, ಡೆಸಿಮಲ್ ಪದ್ಧತಿಗಳಲ್ಲಿ ವರ್ಗೀಕರಣ ಅವಶ್ಯ, ಅನಿವಾರ್ಯ. ಆದರೆ ಪ್ರಾಚೀನ ಹಸ್ತಪ್ರತಿಗಳು ಕೆಲವೇ ಜ್ಞಾನಶಾಖೆಗಳನ್ನು ಪ್ರತಿನಿಧಿಸಿರುವದರಿಂದ ಅಲ್ಲಿಯ ಪದ್ಧತಿಗಳು ಇಲ್ಲಿ ತಲೆಭಾರ. ಹೀಗಾಗಿ ಕರ್ನಾಟಕದ ಹಸ್ತಪ್ರತಿಗಳನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಅವುಗಳನ್ನು ವಸ್ತುವನ್ನಾಧರಿಸಿ ತಾಳೆಪ್ರತಿ, ಕಾಗದಪ್ರತಿಯೆಂದು; ಆಮೇಲೆ ಧರ್ಮವನ್ನಾಧರಿಸಿ ಜೈನ, ವೀರಶೈವ, ಬ್ರಾಹ್ಮಣ, ಇತರವೆಂದು; ಮತ್ತೆ ಭಾಷೆಯನ್ನಾಧರಿಸಿ ಕನ್ನಡ, ಸಂಸ್ಕೃತ ಇತರವೆಂದು; ಕೊನೆಗೆ ಪ್ರಕಾರವನ್ನವಲಂಬಿಸಿ ಗದ್ಯ, ಪದ್ಯ, ಮಿಶ್ರವೆಂದು ವರ್ಗೀಕರಿಸಬಹುದು. ಬಹಳೆಂದರೆ ಈ ವರ್ಗಗಳನ್ನು ಸಂಕೇತಾಕ್ಷರಗಳಿಂದ ಸೂಚಿಸುವುದು, ಹಸ್ತಪ್ರತಿಗಳಿಗೆ ಕ್ರಮಾಂಕ ಕೊಡುವದು ಇಲ್ಲಿ ಮಾಡಬೇಕಾದ ಕಾರ್ಯ. ನಿತ್ಯಹುಟ್ಟುವ ಗ್ರಂಥಗಳಲ್ಲವಾದುದರಿಂದ ಇವುಗಳ ಸಂಖ್ಯೆಯೂ ಪರಿಮಿತ. ಹೀಗಾಗಿ ಮುದ್ರಿತ ಗ್ರಂಥಾಲಯ ಶಾಸ್ತ್ರದೊಂದಿಗೆ ಹೋಲಿಸಿದರೆ, ಹಸ್ತಪ್ರತಿಶಾಸ್ತ್ರದಲ್ಲಿ "ವರ್ಗೀಕರಣ" ಪದ್ಧತಿ ತುಂಬ ಸರಳ, ಸುಲಭ. ಇದು ಆಯಾ ಭಂಡಾರಗಳ ಧೋರಣೆ, ಅಲ್ಲಿಯ ಹಸ್ತಪ್ರತಿಗಳ ಸ್ವರೂಪನ್ನವಲಂಬಿಸಿ ಸಲ್ಪ ಬೇರೆ ಬೇರೆಯಾಗಬೇಕಾಗುತ್ತದೆ.

ಸೂಚೀಕರಣವೆನ್ನುವುದು ಮುದ್ರಿತ ಗ್ರಂಥಾಲಯಶಾಸ್ತ್ರದಲ್ಲಿ ಲೇಖಕ(Author), ಶಿರ್ಷೀಕೆ(Title), ವಿಷಯ(Subject) ಗಳಿಗೆ ಅನುಗುಣವಾಗಿ ಆಯಾ ಗ್ರಂಥಭಾಂಡಾರಗಳಲ್ಲಿಯ ಗ್ರಂಥಗಳನ್ನು ಒಂದೊಂದಾಗಿ ಪರಿಚಯಿಸಿ ಅಕಾರಾದಿಯಲ್ಲಿ ಹೊಂದಿಸುವುದಾಗಿದ್ದರೆ, ಹಸ್ತಪ್ರತಿಶಾಸ್ತ್ರದಲ್ಲಿ ಈ ಪರಿಚಯ ತುಂಬ ವಿವರಣಾತ್ಮಕವಾಗಿರಬೇಕಾಗುತ್ತದೆ,. ವರ್ಗೀಕರಣವು ಹಸ್ತಪ್ರತಿಗಳು ಭಾಂಡಾರಕ್ಕೆ ಬಂದ ಹಾಗೆ ಅವುಗಳನ್ನು ವಸ್ತು, ಭಾಷೆ, ವಿಷಯ, ಸಂಕೇತಾಕ್ಷರ, ಕ್ರಮಾಂಕ ಸೂಚಿಸಿ ವ್ಯವಸ್ಥೆಗೊಳಿಸುತ್ತಿದ್ದರೆ, ಸೂಚೀಕರಣವು ಇದನ್ನೂ ಒಳಗೊಂಡಂತೆ ಇನ್ನೂ ಬೇರೆ ಅಂಶಗಳನ್ನೂ ಗಮನಿಸಿ, ವ್ಯಾಪಕ ವಿವರಗಳನ್ನು ಕಟ್ಟಿಕೊಂಡು ಮುನ್ನಡೆಯುತ್ತದೆ, ಹಸ್ತಪ್ರತಿಶಾಸ್ತ್ರದಲ್ಲಿ. ಆದುದರಿಂದ ಮುದ್ರಿತ ಗ್ರಂಥಾಲಯಶಾಸ್ತ್ರದಲ್ಲಿ ವರ್ಗೀಕರಣ ಜಟಿಲ, ಸೂಚೀಕರಣ ಸರಳ. ಹಸ್ತಪ್ರತಿಶಾಸ್ತ್ರದಲ್ಲಿ ವರ್ಗೀಕರಣ ಸರಳ, ಸೂಚೀಕರಣ ಜಟಿಲ.

ಹಸ್ತಪ್ರತಿಸೂಚಿಗಳು ಅಂಗೈಯಲ್ಲಿ ಗ್ರಂಥಸಂಪತ್ತನ್ನು ತೋರಿಸಿಕೊಡುವ ಸಂಕ್ಷಿಪ್ತ ಗ್ರಂಥಾಲಯಗಳು. ವ್ಯವಸ್ಥಿತ ನಿರ್ಮಿತಿಯಿಂದ ಸೂಚಿಸಾಹಿತ್ಯಕ್ಕೆ ಇಂದು ವಿಜ್ಞಾನ ಮರ್ಯಾದೆ ಪ್ರಾಪ್ತವಾಗಿದೆ. ಪ್ರಯೋಜನ, ಮಹತ್ವ ಹೆಚ್ಚುತ್ತ ನಡೆದಂತೆ ತಕ್ಕ ತಂತ್ರಗಳು ಆವಿಷ್ಕಾರಗೊಂಡು ಅದು ವೈವಿಧ್ಯಪೂರ್ಣವಾಗಿ ಬೆಳೆಯತೊಡಗಿದೆ. ೧೯೪೦ರಷ್ಟು ಪೂರ್ವದಲ್ಲಿಯೇ ಥಿಯೋಡೋರ್ ಬೆಸ್ಟರ್‌ಮನ್ ಅವರು ರಚಿಸಿದ "ಗ್ರಂಥಸೂಚಿಗಳ ಗ್ರಂಥಸೂಚಿ" ಈ ಕ್ಷೇತ್ರದ ವಿಕಾಸ, ಮಹತ್ವಗಳನ್ನು ವ್ಯಕ್ತಪಡಿಸುತ್ತದೆ. ಮುದ್ರಿತ ಕೃತಿಗಳಂತೆ ಹಸ್ತಪ್ರತಿಗಳಿಗೆ ಶೀರ್ಷಿಕೆ ಸೂಚಿ (Title Catabouge), ಕರ್ತೃಸೂಚಿ, (Author, Catalogue), ವಿಷಯಸೂಚಿ(Subject Catalogue)ಗಳನ್ನು ಅಳವಡಿಸಬಹುದಾದರೂ ಒಂದು ಹಸ್ತಪ್ರತಿಭಾಂಡಾರದಲ್ಲಿರುವ ಒಂದು ಕೃತಿ ಮತ್ತು ಅದರ ಪ್ರತಿಗಳ ಸಂಖ್ಯೆಗಳೇ ಮಹತ್ವದ ಅಂಶವಾಗಿರುವುದರಿಂದ 'ಶೀರ್ಷಿಕೆಸೂಚಿ'ಗೇ ಇಲ್ಲಿ ಪ್ರಥಮ ಮತ್ತು ಪ್ರಧಾನಸ್ಥಾನ ಸಲ್ಲುತ್ತದೆ. 'ಶೀರ್ಷಿಕೆಸೂಚಿ'ಯು ಮುದ್ರಿತಗ್ರಂಥಗಳಗಿಂತ ಹಸ್ತಪ್ರತಿಗಳ ವಿಷಯದಲ್ಲಿ ತಂತ್ರದೃಷ್ಟಿಯಲ್ಲಿ ವ್ಯಾಪಕವೂ, ಶ್ರಮಯುಕ್ತವೂ ಆದುದು. ಹೀಗಾಗಿ ಅಲ್ಲಿ ಸಂಕ್ಷಿಪ್ತಸೂಚಿ ಸಾಕು; ಇಲ್ಲಿ ವಿವರಣಾತ್ಮಕ ಸೂಚಿ ಬೇಕು. ಸಾಮಾನ್ಯವಾಗಿ ಶೀರ್ಷಿಕೆ, ಕರ್ತೃ, ಕಾಲ, ವಸ್ತು, ಕ್ರಮಾಂಕ, ಸ್ಥಿತಿ, ವಿಷಯ, ಪ್ರಕಾರ, ಆಕಾರ, ಪುಟದ ಸಾಲು, ಸಾಲಿನ ಅಕ್ಷರ, ಕೊಟ್ಟವರು, ತಂದವರು, ಸ್ವೀಕೃತ ದಿನಾಂಕ, ಅಕ್ಷರಸ್ವರೂಪ, ಭಾಷೆ, ಭಾಷಾಸ್ವರೂಪ, ಆದಿ, ಅಂತ್ಯ ಈ ಕಟ್ಟಿನಲ್ಲಿಯ ಇತರ ಕೃತಿಗಳು, ವಿಶೇಷ ಅಂಶಗಳು-ಇಷ್ಟು ವಿವರಗಳನ್ನು ಹಸ್ತಪ್ರತಿಗಳ ವಿವರಣಾತ್ಮಕ ಗ್ರಂಥಸೂಚಿ (Descriptive Catalouge of Manuscripts)

ಒಳಗೊಂಡಿರಬೇಕು. ಇಲ್ಲಿ ಅವಸರ ಎಷ್ಟೂ ಸಾಲದು. ಒಂದು ಸಣ್ಣತಪ್ಪು ಓದುಗನನ್ನು ದೊಡ್ಡ ಶ್ರಮಕ್ಕೆ ಈಡು ಮಾಡುವುದರಿಂದ ತುಂಬ ಎಚ್ಚರಿಕೆಯಿಂದ ಮಾಡಬೇಕಾದ ಕಾರ್ಯವಿದು.

ಹಸ್ತಪ್ರತಿಗಳ "ಸದುಪಯೋಗ"ಕ್ಕೆ ಸಂಬಂಧಪಟ್ಟ ಇನ್ನೊಂದು ಶಾಖೆ, ಪರಿಚಲನ ವಿಭಾಗ. ಓದುಗರಿಗೆ ಹಸ್ತಪ್ರತಿಗಳ ಉಪಯುಕ್ತತೆಯನ್ನು ಹೆಚ್ಚಿಸುವುದು ಈ ವಿಭಾಗದ ಕೆಲಸ. ದೇವ-ಭಕ್ತರ ನಡುವೆ ಕಂದರವಾಗದೆ, ಸೇತುವೆಯಾಗುವ ಅರ್ಚಕನಂತೆ ಈ ವಿಭಾಗದ ಸಿಬ್ಬಂದಿಗಳು ನಡೆದುಕೊಳ್ಳಬೇಕು. ಕೇವಲ 'ನಿಧಾನವ ಕಾಯ್ದಿರ್ದ ಬೆಂತರ'ನಂತೆ ವರ್ತಿಸದೆ ಹಸ್ತಪ್ರತಿಗಳ ವಿಷಯಪರಿಜ್ಞಾನ, ಸೇವಾಭಾವಗಳ ಸಾಕಾರಮೂರ್ತಿಯಾಗಿ ಅಭ್ಯಾಸಿಗಳ ಅಗತ್ಯಕ್ಕೆ ತಕ್ಕಂತೆ ನಡೆದುಕೊಳ್ಳುವುದು, ಇವರ ಕರ್ತವ್ಯ. ಇವರು ಸಾಮಾನ್ಯವಾಗಿ ಹಸ್ತಪ್ರತಿಯನ್ನು ಸಂಸ್ಥೆಯಲ್ಲಿಯೇ ಉಪಯೋಗಿಸಿಕೊಳ್ಳಲು ಕೊಡಬೇಕು. ಒಂದು ಕೃತಿಯ ಒಂದಕ್ಕಿಂತ ಹೆಚ್ಚಿ ಪ್ರತಿಗಳಿದ್ದರೆ ಮಾತ್ರ ಹೊರಗೆ ಕಳಿಸಬಹುದಾದರೂ ಈಗ ನೇರವಾಗಿ ವ್ಯಕ್ತಿಗೆ ಕೊಡದೆ ಸಂಸ್ಥೆಯ ಮುಖಾಂತರ ಕೊಡುವುದು, ಇನ್‌ಶೂರ್ ಮಾಡಿ ರವಾನಿಸುವುದು ಕ್ಷೇಮ. ಒಂದೇ ಹಸ್ತಪ್ರತಿಯಿದ್ದರೆ ಹಸ್ತಪ್ರತಿ ಭಂಡಾರದಿಂದ ಅದು ಹೊರಗೆ ಹೋಗಲೇಬಾರದು. ಬೇಕಿದ್ದರೆ ನಕಲು ಮಾಡಿಸಿ ತಾಳೆ ನೋಡಿ ಕಳಿಸಬಹುದು. ಹೀಗೆ ಕಳಿಸಿದ ಪ್ರತಿಯನ್ನು ಮರಳಿಸಲು ನಿರ್ದಿಷ್ಟ ಅವಧಿಯನ್ನು ಸೂಚಿಸಬೇಕು. ಅವರಿಂದ ಒಂದು ಜವಾಬುದಾರಿ ಪತ್ರ ಪಡೆದಿರಬೇಕು. ಇಲ್ಲಿಯೇ ಹಸ್ತಪ್ರತಿಗಳ ಕ್ಯಾಟಲಾಗ್ ಕ್ಯಾಬಿನೆಟ್ ಇಡುವ ವ್ಯವಸ್ಥೆ ಮಾಡಬೇಕು.

ಪ್ರತಿಯೊಂದು ಹಸ್ತಪ್ರತಿ ಭಾಂಡಾರದಲ್ಲಿ ಅಭ್ಯಾಸಿಗಳ ಅನುಕೂಲಕ್ಕೆ ಒಂದು ಮುದ್ರಿತ ಗ್ರಂಥಭಾಂಡಾರ ಅವಶ್ಯ. ಇದು ಪ್ರಧಾನವಾಗಿ ಹಸ್ತಪ್ರತಿಕ್ಯಾಟಲಾಗ, ಮುದ್ರಿತ ಪ್ರಾಚೀನಗ್ರಂಥ ಮೊದಲಾದವುಗಳ "ವಿಶಿಷ್ಟ ಗ್ರಂಥಾಲಯ"ವಾಗಿ ಬೆಳೆಯಬೇಕು. ಇಲ್ಲಿಯೇ ಹಸ್ತಪ್ರತಿಗಳ ಒಂದು ಚಿಕ್ಕಪ್ರದರ್ಶನವನ್ನು ಯೋಜಿಸುವುದೂ ತುಂಬ ಪ್ರಯೋಜನಕಾರಿ.

ಕೊನೆಯ ಮಾತು : "ಶತಮಾನಗಳನ್ನು ಸೇರಿಸುವ ಜ್ಞಾನಸೇತುವೆ"ಯಾದ ಹಸ್ತಪ್ರತಿಗಳ ಸಂಯೋಜನಮುಖ, ಪ್ರಯೋಜನಮುಖಗಳ ಈವರೆಗಿನ ವಿವರಣೆ, ಅವುಗಳ ಮಹತ್ವವನ್ನು ಸ್ಪಷ್ಟಪಡಿಸುತ್ತದೆ. ಹೀಗಿದ್ದೂ ಅವುಗಳ ರಕ್ಷಣೆಗಾಗಿ, ಪ್ರಕಟನೆಗಾಗಿ ದುಡಿಯುವವರ ಬಗೆಗೆ ಸರ್ಕಾರ ಹೋಗಲಿ, ಸಾಹಿತ್ಯಕ್ಷೇತ್ರದಲ್ಲಿಯೇ ತುಂಬ ಉಪೇಕ್ಷೆ, ಅನಾದರವಿರುವುದು ವ್ಯಸನದ ಸಂಗತಿ. ಈಗ ಈ ಕ್ಷೇತ್ರಕ್ಕೆ ಮತ್ತು ಇಲ್ಲಿ ದುಡಿಯುವವರಿಗೆ ಸರಿಯಾದ ಗೌರವ-ಅಂತಸ್ತು ಸಿಗುವುದರ ಸಲುವಾಗಿ ಪ್ರಯತ್ನಿಸುವುದು, ಹೋರಾಡುವುದು ಅವಶ್ಯವಾಗಿದೆ. ಈ ದಿಸೆಯಲ್ಲಿ "ಮುದ್ರಿತ ಗ್ರಂಥಾಲಯ ಚಳುವಳಿ"ಯನ್ನು ಮಾರ್ಗದರ್ಶಿಯನ್ನಾಗಿ ಇಟ್ಟುಕೊಂಡು ಮಾಡಬೇಕಾದ ಕೆಲಸಗಳು ಹೀಗಿವೆ: ೧)ಶಿಲ್ಪ, ಶಾಸನಗಳಂತೆ ಹಸ್ತಪ್ರತಿಗಳೂ ರಾಜ್ಯದ ಆಸ್ತಿಯೆಂದು ಘೋಷಿಸಿ ಸರ್ಕಾರ ಇವುಗಳ ಸಂರಕ್ಷಣೆ - ಸಂಗ್ರಹಗಳಿಗೆ ತೀವ್ರ ಕಾನೂನು ಕೈಕೊಳ್ಳಬೇಕು; ಹಸ್ತಪ್ರತಿಗಳನ್ನು ಪಡೆದಿರುವವರು ಡಿಕ್ಲರೇಷನ್ ಕೊಡಲು ಕಾನೂನು ರಚಿಸಬೇಕು. ೨) ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ, ಅನ್ಯಸಂಸ್ಥೆಗಳಲ್ಲಿ ಸುಸಜ್ಜಿತ ಹಸ್ತಪ್ರತಿಭಾಂಡಾರಗಳು ಬೆಳೆಯುವಂತೆ ಸರ್ಕಾರ ಧನಸಹಾಯ ನೀಡಬೇಕು. ೩) ಪ್ರತ್ಯೇಕ ವಿವರಣಾತ್ಮಕ ಹಸ್ತಪ್ರತಿ ಸೂಚಿಗಳನ್ನಲ್ಲದೆ ಸಮಗ್ರ ಕನ್ನಡ ಹಸ್ತಪ್ರತಿಗಳ Catalogous Catalogaramನ್ನು ಸಿದ್ಧಪಡಿಸುವ ಕಾರ್ಯ ಪ್ರಾರಂಭವಾಗಬೇಕು. (ಇಂಥ ಒಂದು ಯೋಜನೆ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಮೂಲಕ ೧೦ ವರ್ಷಗಳ ಹಿಂದೆ ಪ್ರಾರಂಭವಾಗಿ, ಉತ್ತಮ ಭವಿಷ್ಯವಿಲ್ಲದೆ ನರಳುತ್ತಲಿರುವುದು ವ್ಯಸನದ ಸಂಗತಿ. ೪) ಒಮ್ಮೆಯೂ ಪ್ರಕಟವಾಗದೆ ಹಸ್ತಪ್ರತಿಗಳ ಸೆರೆಯಲ್ಲಿ ಬಿದ್ದುಕೊಂಡಿರುವ ೩೦೦೦ ಕನ್ನಡ ಕೃತಿಗಳ ಪ್ರಕಟನೆಗಾಗಿ "ಸಮಗ್ರ ಕನ್ನಡ ಪ್ರಾಚೀನ ಅಪ್ರಕಟಿತ ಕೃತಿಗಳ ಪ್ರಕಟನಾ ಯೋಜನೆ"ಯೊಂದು

ತೀವ್ರ ಅಸ್ತಿತ್ವಕ್ಕೆ ಬರಬೇಕು. ೫) ಅರ್ಹ ಕಾರ್ಯಕರ್ತರನ್ನು ರೂಪಿಸುವುದಕ್ಕಾಗಿ ವಿಶ್ವವಿದ್ಯಾಲಯಗಳಲ್ಲಿ Manuscriptology ಡಿಪ್ಲೋಮಾ ಕೋರ್ಸ ಪ್ರಾರಂಭಿಸಬೇಕು. ೬) ಸಂಪಾದಿತ ಗ್ರಂಥಗಳಿಗೆ, ಹಸ್ತಪ್ರತಿಸೂಚಿ ಗ್ರಂಥಗಳಿಗೆ ರಾಜ್ಯಸಾಹಿತ್ಯ ಅಕಾಡೆಮಿ ಸಹಾಯ-ಪುರಸ್ಕಾರ ರೂಪದ ಉತ್ತೇಜನ ನೀಡಬೇಕು. ಈ ಎಲ್ಲ ದಿಕ್ಕುಗಳಿಂದ ಮನಃಪೂರ್ವಕ ಪ್ರಯತ್ನಿಸಿದರೆ, ಹೋರಾಡಿದರೆ ಮಾತ್ರ ಯಾವುದೇ ಸಂಸ್ಥೆಗಳ ಮೂಲೆಯಲ್ಲಿ ಬಿದ್ದುಕೊಂಡಿರುವ ಹಸ್ತಪ್ರತಿಭಾಂಡಾರಗಳು ಎದ್ದು ಬೆಳಕಿಗೆ ಬರುತ್ತವೆ. ಅವುಗಳ ಮೇಸ್ತ್ರಿ ಸ್ಥಿತಿಗೆ ಇಳಿದಿರುವ ಹಸ್ತಪ್ರತಿ ಭಾಂಡಾರಿಗರ, ಕಾವಲುಗಾರ ಸ್ಥಿತಿಗೆ ಇಳಿದಿರುವ ಸಿಬ್ಬಂದಿಗಳ ಸ್ಥಾನ-ಮಾನ ಉತ್ತಮಗೊಂಡು ಈ ಕ್ಷೇತ್ರದ ಪ್ರತಿಷ್ಠೆ - ಪ್ರಯೋಜನಗಳು ವರ್ಧಿಸುತ್ತವೆ.[೮]

■■

ಆಕರ : ಮಾರ್ಗ ಸಂಪುಟ–೨

---

೮. ಈ ಲೇಖನ ಬರೆಯುವಲ್ಲಿ ನನಗೆ ಅಮೂಲ್ಯ ಸಲಹೆ ನೀಡಿದ ಶ್ರೀ ಕೆ.ಎಸ್. ದೇಶಪಾಂಡೆ ಅವರಿಗೆ ಕೃತಜ್ಞನಾಗಿದ್ದೇನೆ.

* ಇತ್ತೀಚೆ ಸಿಕ್ಕಿವೆ. ಇವುಗಳಲ್ಲಿ ಸಿರುಮನ ಸಾಂಗತ್ಯ ಪ್ರಕಟವಾಗಿದೆ.

೨೭

ಹಸ್ತಪ್ರತಿ ಕ್ಷೇತ್ರಕಾರ್ಯ: ವಿಧಾನ - ಸಾಧನೆ


'ಗ್ರಂಥಸಂಪಾದನಶಾಸ್ತ್ರ'ದ ನೆಲೆಯಿಂದ ಮುಕ್ತವಾಗಿ ಸ್ವತಂತ್ರ ಶಾಸ್ತ್ರಮರ್ಯಾದೆ ಪಡೆಯುತ್ತಲಿರುವ ಹಸ್ತಪ್ರತಿಶಾಸ್ತ್ರ'ದ ಹಲವು ಅಂಗಗಳಲ್ಲಿ ಕ್ಷೇತ್ರಕಾರ್ಯ (Field work) ವೂ ಒಂದು. ಈ ಕ್ಷೇತ್ರಕಾರ್ಯ ಇಂದು ಕಲೆ, ವಿಜ್ಞಾನ, ಸಮಾಜವಿಜ್ಞಾನ ವಲಯಗಳಲ್ಲಿ ಒಂದು "ಶೈಕ್ಷಣಿಕ ಶಿಸ್ತು" (Academic discipline) ಆಗಿ ಬೆಳೆದಿದೆ. ಕ್ಷೇತ್ರಕಾರ್ಯಗಳೇ ಆಗಿದ್ದರೂ ಪ್ರಾಣಿಶಾಸ್ತ್ರಜ್ಞ ಜೀವ ಪ್ರಕಾರಗಳನ್ನು ಸಂಗ್ರಹಿಸುವುದಕ್ಕೂ, ಭಾಷಾವಿಜ್ಞಾನಿ ಮಾತಿನ ಘಟಕಗಳನ್ನು ಸಂಗ್ರಹಿಸುವುದಕ್ಕೂ, ಮನೋವಿಜ್ಞಾನಿ ಮಾನವನ ಭಾವಪರಿಗಳನ್ನು ಸಂಗ್ರಹಿಸಿವುದಕ್ಕೂ ಅಂತರವಿದ್ದು, ಈ ಕವಲುಗಳ ಕ್ಷೇತ್ರಕಾರ್ಯವುವಿಧಾನ ಕ್ರಮವಾಗಿ Collection (ಸಂಗ್ರಹ), Interview (ಸಂದರ್ಶನ), Observation (ನಿರೀಕ್ಷಣೆ) ರೂಪದ್ದಾಗಿರುತ್ತದೆ. ಇವುಗಳಲ್ಲಿ ಹಸ್ತಪ್ರತಿ ಕ್ಷೇತ್ರಕಾರ್ಯ ಪ್ರಧಾನವಾಗಿ Collection ವರ್ಗಕ್ಕೆ ಸೇರುತ್ತಿದ್ದು ಗೌಣವಾಗಿ Obeservation, Inverviewಗಳನ್ನೂ ಒಳಗೊಳ್ಳುತ್ತದೆ.

ಸಂಶೋಧನ ಪ್ರಸಂಗದಲ್ಲಿ ಇಂಗ್ಲೀಷ್ ಭಾಷೆ Research, Invension, Discovery ಎಂಬ ಪದಗಳನ್ನು ಬಳಸುತ್ತದೆ. ಮರೆಯಲ್ಲಿ ಉಳಿದುಕೊಂಡಿರುವ ಒಂದು ವಸ್ತುವಿನ ಪ್ರಜ್ಞಾಪೂರ್ವಕ ಅಥವಾ ಆಕಸ್ಮಿಕ ಅನ್ವೇಷಣೆಯೇ Discovery. ಹಸ್ತಪ್ರತಿ ವಿಷಯವಾಗಿ ನಡೆಸುವ ಕ್ಷೇತ್ರಕಾರ್ಯ ಈ Discovery ವರ್ಗಕ್ಕೆ ಸೇರುತ್ತದೆ. ಇದಕ್ಕೆ ಸಮಾನ ಪದ ಶೋಧ. ಆದರೆ ಈ ಮೊದಲು ಸಿಗದ್ದಿದ್ದ ಕೃತಿಯ ಹಸ್ತಪ್ರತಿಗಳ ಹುಡುಕುವಿಕೆಗೆ 'ಶೋಧ' (Discovery) ಪದವನ್ನು, ಈ ಮೊದಲು ಸಿಕ್ಕ ಹಸ್ತಪ್ರತಿಗಳ ಹುಡುಕುವಿಕೆಗೆ 'ಸಂಗ್ರಹ' (Collection) ಪದವನ್ನು ಬಳಸುವುದು ಲೇಸು. ಆದುದರಿಂದ ಹಸ್ತಪ್ರತಿಕ್ಷೇತ್ರಕಾರ್ಯವು ಶೋಧ ಮತ್ತು ಸಂಗ್ರಹಗಳ ಸಂಯುಕ್ತಕ್ರಿಯೆಯಾಗಿದೆ.

'ವಸ್ತು'ವಿನ ಶೋಧ ಮತ್ತು ಸಂಗ್ರಹರೂಪದ ಕಾರ್ಯಕ್ಕೆ ಸರ್ವಸಾಮಾನ್ಯ ಸೂತ್ರಗಳಿರುವುವಾದರೂ ಇವು ಆಯಾ ಜ್ಞಾನಶಾಖೆಗಳಿಗೆ ಅನುಗುಣವಾಗಿ ಕೆಲವೊಮ್ಮೆ ಬೇರೆಬೇರೆಯಾಗುವುದರಿಂದ 'ಹಸ್ತಪ್ರತಿ ಕ್ಷೇತ್ರಕಾರ್ಯ'ಕ್ಕೆ ಸಂಬಂಧಿಸಿದ ವಿಶಿಷ್ಟ ವಿಧಾನ- ವಿಚಾರಗಳನ್ನು ಇಲ್ಲಿ ಮಂಡಿಸಬಹುದು.

ಕ್ಷೇತ್ರಕಾರ್ಯಕರ್ತ, ಹಸ್ತಪ್ರತಿ, ಹಸ್ತಪ್ರತಿಗಳ ಒಡೆಯ-ಈ ಮೂರು ಘಟಕಗಳನ್ನೊಳಗೊಂಡಿದೆ, ಹಸ್ತಪ್ರತಿ ಕ್ಷೇತ್ರಕಾರ್ಯ. ಅದು 'ಒಡೆಯ'ನಿಂದ 'ಹಸ್ತಪ್ರತಿ' ಯನ್ನು 'ಕ್ಷೇತ್ರಕಾರ್ಯಕರ್ತ' ದೊರಕಿಸಿಕೊಳ್ಳುವ

ಕ್ರಿಯೆ. ಈ ತ್ರಿಕೋನದಲ್ಲಿ ಹಸ್ತಪ್ರತಿಯು ಶಿರೋಕೇಂದ್ರವಾಗಿದ್ದು, ಅದನ್ನು ಒಂದು ಕೇಂದ್ರದಿಂದ ಒಡೆಯ ಉಳಿಸಿಕೊಳ್ಳುವ, ಇನ್ನೊಂದು ಕೇಂದ್ರದಿಂದ ಕ್ಷೇತ್ರಕಾರ್ಯಕರ್ತ ವಶಪಡಿಸಿಕೊಳ್ಳುವ ಪ್ರಯತ್ನ ನಡೆಸುತ್ತಾರೆ.



ಒಡೆಯನನ್ನು ಕ್ಷೇತ್ರಕಾರ್ಯಕರ್ತ ಜಯಿಸುವುದೇ ಈ ಸಂದರ್ಭದ ಕ್ರಿಯೆಯಾಗಿರುವುದರಿಂದ ಇಲ್ಲಿಯ ಪ್ರಧಾನಘಟಕ ಕಾರ್ಯಕರ್ತನಾಗಿದ್ದಾನೆ. ಈತನಿಗೆ ಹಸ್ತಪ್ರತಿಸಂಗ್ರಹದ ೧. ಸೈದ್ಧಾಂತಿಕಜ್ಞಾನ ೨. ಪ್ರಾಯೋಗಿಕಜ್ಞಾನ, ೩. ತಾಂತ್ರಿಕ ಜ್ಞಾನಗಳ ಅರ್ಹತೆ ಅವಶ್ಯಬೇಕು.

ಹಸ್ತಪ್ರತಿ ಕ್ಷೇತ್ರಕಾರ್ಯದ 'ಸೈದ್ಧಾಂತಿಕಜ್ಞಾನ' ಎಂಬ ಮಾತು ತುಂಬ ವ್ಯಾಪಕವಾದುದು. ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನಶಾಸ್ತ್ರಗಳ ಸಂಲಗ್ನಪರಿಜ್ಞಾನವಿದು. ಈ ಉಭಯಶಾಸ್ತ್ರಗಳಿಗೆ ಸಂಬಂಧಿಸಿದ ಹಸ್ತಪ್ರತಿಯ ಸ್ವರೂಪ, ಪ್ರಕಾರ, ಭಾಷೆ, ಅಕ್ಷರ, ಬರವಣಿಗೆಯ ರೀತಿ, ವಿಷಯಸಂಪತ್ತು - ಮಹತ್ವ ಇತ್ಯಾದಿಗಳ ತಿಳಿವಳಿಕೆಯಾದ ಇದು, ಕ್ಷೇತ್ರಕಾರ್ಯಕರ್ತನ ಮೂಲಧನ. ಆದುದರಿಂದ ಕ್ಷೇತ್ರಕಾರ್ಯಕರ್ತ ಗ್ರಂಥಸಂಪಾದನಶಾಸ್ತ್ರ, ಹಸ್ತಪ್ರತಿಶಾಸ್ತ್ರಪರಿಜ್ಞಾನಗಳೆಂಬ ಉಭಯ ಅರ್ಹತೆಗಳನ್ನು ಮೈಗೂಡಿಸಿಕೊಂಡಿರಬೇಕಾಗುತ್ತದೆ.

ಈ ಸೈದ್ಧಾಂತಿಕ ಜ್ಞಾನದಷ್ಟೇ ಪ್ರಾಯೋಗಿಕ ಪರಿಜ್ಞಾನವೂ ಕ್ಷೇತ್ರಕಾಯಕರ್ತನಿಗೆ ಬೇಕು. ದೈಹಿಕ ಶ್ರಮ, ಆರ್ಥಿಕ ತೊಂದರೆಗಳನ್ನು ಮೀರಿದ ಅನ್ವಯಿಕ ಪರಿಣಿತಿಯಿದು. ಇಲ್ಲಿ ಸೈದ್ಧಾಂತಿಕ ಮತ್ತು ಪ್ರಾಯೋಗಿಕಗಳದು ಜ್ಞಾನ-ಕ್ರಿಯೆಗಳ ಸಂಬಂಧದಂತಿದೆ. ಸೈದ್ಧಾಂತಿಕವಲ್ಲದ ಪ್ರಾಯೋಗಿಕ ಕುರುಡ, ಪ್ರಾಯೋಗಿಕವಲ್ಲದ ಸೈದ್ಧಾಂತಿಕ ಹೆಳವ. ಆದುದರಿಂದ ಕುರುಡನೂ ಅಲ್ಲದ ಹೆಳವನೂ ಅಲ್ಲದ ವ್ಯಕ್ತಿತ್ವ ಕ್ಷೇತ್ರಕಾರ್ಯಕರ್ತನದಾಗಿದೆ.

ಇತ್ತೀಚಿನ ದಿನಗಳಲ್ಲಿ ಯಾವುದೇ ಕಾರ್ಯಕ್ಷೇತ್ರಕ್ಕೆ ಯಂತ್ರೋಪಕರಣದ ಬಳಕೆ ಅನಿವಾರ್ಯವೆನಿಸಿದೆ. ಹಸ್ತಪ್ರತಿ ಕ್ಷೇತ್ರಕಾರ್ಯಕರ್ತನಿಗೆ ಕ್ಯಾಮರಾ, ಟೇಪರೆಕಾರ್ಡರ್ ಇವುಗಳಿಗಿಂತ ಮೈಕ್ರೋಫಿಲ್ಮ, ಫೋಟೋಸ್ಟ್ಯಾಟ್, ಝಿರಾಕ್ಸಯಂತ್ರ, ಚಲನಚಿತ್ರಯಂತ್ರಗಳನ್ನು ನಿಯಂತ್ರಿಸುವ, ಪ್ರಸಂಗ ಬಂದರೆ ಸಣ್ಣಪುಟ್ಟ ರಿಪೇರಿ ಮಾಡುವ ತಾಂತ್ರಿಕಜ್ಞಾನ ಇಂದು ಅವಶ್ಯವೆಂದು ಹೇಳಬೇಕು.

ಈ ತ್ರಿವಿಧ ಅರ್ಹತೆಗಳ ಬಲದಿಂದ ಈತನು ನಡೆಸುವ ಕ್ಷೇತ್ರಕಾರ್ಯವು ಪರೋಕ್ಷ ಕ್ಷೇತ್ರಕಾರ್ಯ (Non directive field work) ಮತ್ತು ಪ್ರತ್ಯಕ್ಷ ಕ್ಷೇತ್ರಕಾರ್ಯ (Directive field work) ಎಂದು ಎರಡು ತೆರನಾಗಿದೆ. ಸ್ಥಳವನ್ನು ಪ್ರತ್ಯಕ್ಷ ಸಂದರ್ಶಿಸಿ ಹಸ್ತಪ್ರತಿಗಳನ್ನು ಸಂಗ್ರಹಿಸುವುದು ಪ್ರತ್ಯಕ್ಷ ಕ್ಷೇತ್ರಕಾರ್ಯವಾದರೆ, ಹೀಗೆ ಮಾಡದೆ ಅಂಚೆಯ ಮೂಲಕ, ಅನ್ಯವ್ಯಕ್ತಿಗಳ ಮೂಲಕ ಈ ಕಾರ್ಯವನ್ನು ಪೂರೈಸಿಕೊಳ್ಳುವುದು

ಪರೋಕ್ಷಕಾರ್ಯ. ಹಸ್ತಪ್ರತಿ ಒಡೆಯರು ತಿಳಿವಳಿಕೆಯವರಿದ್ದರೆ, ಹಸ್ತಪ್ರತಿಗಳು ಸಾರ್ವಜನಿಕ ಸಂಪತ್ತು ಎಂಬ ಪ್ರಜ್ಞೆಯವರಾಗಿದ್ದರೆ ಅವುಗಳ "ಪರೋಕ್ಷ ಕ್ಷೇತ್ರಕಾರ್ಯ" ಸಾಧ್ಯವಾಗುತ್ತದೆ. ಆದರೆ ಮೇಲೆ ಸೂಚಿಸಿದ ಪ್ರಜ್ಞೆಗಳ ಅಭಾವದ ಭಾರತೀಯ ಪರಿಸರದಲ್ಲಿ ಇದು ಅಸಾಧ್ಯವೇ ಸರಿ. ಅಲ್ಲದೆ "ಪ್ರತ್ಯಕ್ಷ ಕ್ಷೇತ್ರಕಾರ್ಯ"ದಿಂದ 'ಪಠ್ಯಶೋಧ'ದೊಂದಿಗೆ 'ಪರಿಸರಶೋಧ'ವೂ ಸಾಧ್ಯವಾಗುವುದರಿಂದ ಪರೋಕ್ಷ ಕ್ಷೇತ್ರಕಾರ್ಯಕ್ಕಿಂತ ಪ್ರತ್ಯಕ್ಷ ಕ್ಷೇತ್ರಕಾರ್ಯವೇ ಲೇಸು. ಹೀಗಾಗಿ ಹಸ್ತಪ್ರತಿಶಾಸ್ತ್ರ ಕೇವಲ "ಪ್ರಯೋಗಶಾಲೆ" ಅಥವಾ "ಗ್ರಂಥಾಲಯ" ಜ್ಞಾನಶಾಖೆಯಾಗಿರದೆ ಅದು ಪ್ರದೇಶ ಪರ್ಯಟನವನ್ನೂ ಬಯಸುವ ಶಾಖೆಯಾಗಿದೆಯೆಂದು ಸ್ಪಷ್ಟವಾಗುತ್ತದೆ.

ಪ್ರತ್ಯಕ್ಷಕ್ಷೇತ್ರ ಕಾರ್ಯವು ೧. ಪೂರ್ವಸಿದ್ಧತೆ ೨. ಕ್ಷೇತ್ರಕಾರ್ಯ ಎಂಬ ಎರಡು ಹಂತಗಳನ್ನೊಳಗೊಂಡಿದೆ.

ಪೂರ್ವಸಿದ್ಧತೆಗೆ ಮಾನಸಿಕ ಪೂರ್ವಸಿದ್ಧತೆಯೇ ಮುಖ್ಯ. ಇಲ್ಲದಿದ್ದರೆ ಒಲ್ಲದ ಕುದುರೆಗೆ ನೀರು ಕುಡಿಸುವ ವ್ಯರ್ಥಪ್ರಯತ್ನವಾಗಿಬಿಡುತ್ತದೆ. ಮಾನಸಿಕ ಸಿದ್ಧತೆಯ ತರುವಾಯ ತನ್ನ ಕ್ಷೇತ್ರಕಾರ್ಯದ ವಿಷಯ, ಪ್ರದೇಶ ಇವುಗಳಿಗೆ ಸಂಬಂಧಪಟ್ಟ ಪೂರ್ವಸಿದ್ಧತೆ ಮಾಡಿಕೊಳ್ಳಬೇಕು. ತಾನು ಕೈಗೆತ್ತಿಕೊಂಡ ಭಾಷೆ, ವಿಷಯಗಳಲ್ಲಿ ಹುಟ್ಟಿದ ಕೃತಿಗಳ ವಸ್ತು, ಅವುಗಳ ಪ್ರಕಟಿತ ಅಪ್ರಕಟಿತ ಸ್ಥಿತಿ, ಹಸ್ತಪ್ರತಿ ಕ್ಯಾಟಲಾಗಗಳ ಸವಿವರ ಅಭ್ಯಾಸ, ಕ್ಷೇತ್ರಕಾರ್ಯಕ್ಕೆ ಆಯ್ದುಕೊಂಡ ಪ್ರದೇಶದ ಭೌಗೋಲಿಕ ತಿಳುವಳಿಕೆ, ಮಾರ್ಗವ್ಯವಸ್ಥೆ, ವಾಹನ ಸೌಕರ್ಯ, ಅಲ್ಲಿಯ ಸ್ನೇಹಿತರ, ಅಧಿಕಾರಿಗಳ, ಪ್ರತಿಷ್ಠಿತರ, ಹಸ್ತಪ್ರತಿ ಒಡೆಯರ ವಿವರ ಇತ್ಯಾದಿಗಳ ತಿಳಿವಳಿಕೆಯೊಂದಿಗೆ ಪ್ರಯಾಣ ಪ್ರವೃತ್ತನಾಗಬೇಕು. ಇದಲ್ಲದೆ ಹಸ್ತಪ್ರತಿಗಳು ಪ್ರತಿಷ್ಠಿತರ ಮತ್ತು ಪಂಡಿತರ ವಂಶಜರಲ್ಲಿ, ದೇವಾಲಯ ಮಠಗಳಲ್ಲಿ ಸಿಗುವುದೆಂಬುದನ್ನೂ ಆಯಾ ಮತೀಯರಲ್ಲಿ ಸ್ವಮತೀಯ ಗ್ರಂಥಗಳೇ ಸಾಮಾನ್ಯವಾಗಿ ಲಭಿಸುವವೆಂಬುದನ್ನೂ ಅರಿತಿರಬೇಕು. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಜೈನ-ವೀರಶೈವ ವ್ಯಕ್ತಿಗಳಲ್ಲಿ ಕನ್ನಡ ಹಸ್ತಪ್ರತಿ, ಬ್ರಾಹ್ಮಣವ್ಯಕ್ತಿಗಳಲ್ಲಿ ಸಂಸ್ಕೃತ ಹಸ್ತಪ್ರತಿ ಸಿಗುತ್ತವೆ. ಉತ್ತರ ಕರ್ನಾಟಕದಲ್ಲಿ ವೀರಶೈವ ಸಾಹಿತ್ಯ, ರಾಯಚೂರು ಜಿಲ್ಲೆಯಲ್ಲಿ ದಾಸಸಾಹಿತ್ಯ, ಕರಾವಳಿ ಪ್ರದೇಶದಲ್ಲಿ ಭಾಗವತ ಯಕ್ಷಗಾನ, ಹಸ್ತಪ್ರತಿಗಳೇ ವಿಪುಲವಾಗಿ ಸಿಗುತ್ತವೆ. ಇಂಥ ವೈಷಯಿಕ ಮತ್ತು ವ್ಯಾವಹಾರಿಕ ತಿಳಿವಳಿಕೆ ಕ್ಷೇತ್ರಕಾರ್ಯಕರ್ತನಿಗೆ ಇರಬೇಕು. ಒಟ್ಟಿನಲ್ಲಿ ಹಸ್ತಪ್ರತಿಗಳ "ಅಭ್ಯಾಸಿ' ಕ್ಷೇತ್ರಕಾರ್ಯದ "ಹವ್ಯಾಸಿ"ಯಾಗಿರಬೇಕು. ಇದು ಪೂರ್ವಸಿದ್ಧತೆ.

ಗೊತ್ತಾದ ಸ್ಥಳವನ್ನು ತಲುಪಿ ಕಾರ್ಯನಿರತನಾಗುವುದೇ 'ಕ್ಷೇತ್ರಕಾರ್ಯ'. ಇಲ್ಲಿ ಈತನ ಅಗ್ನಿಪರೀಕ್ಷೆ ಆರಂಭವಾಗುತ್ತದೆ. ಕ್ಷೇತ್ರಕಾರ್ಯವೆಂದರೆ ಒಡೆಯನ ವಶದಲ್ಲಿರುವ ಹಸ್ತಪ್ರತಿಯನ್ನು ಪಡೆಯುವದೇ ಆಗಿದೆ. ಸಾಮಾನ್ಯವಾಗಿ ಒಡೆಯ ಮತ್ತು ಕ್ಷೇತ್ರಕಾರ್ಯಕರ್ತರು ಪರಸ್ಪರ ಅಪರಚಿತರು. ಆದುದರಿಂದ ಕಾರ್ಯಕರ್ತ ತಮ್ಮ ಸಮಯೋಚಿತ ಮಾತು-ರೀತಿಗಳಿಂದ ಅವರ ಮನಸ್ಸನ್ನು ಗೆದೆಯಬೇಕು. ಅವರಿಗೆ ತನ್ನ ಬಗೆಗೆ, ತನ್ನ ಕಾರ್ಯದ ಬಗೆಗೆ, ಹಸ್ತಪ್ರತಿಗಳನ್ನು ಭಾಂಡಾರದಲ್ಲಿ ರಕ್ಷಿಸುವ ಬಗೆಗೆ ವಿಶ್ವಾಸ ಹುಟ್ಟುವಂತೆ ವರ್ತಿಸಬೇಕು. ವೈಯಕ್ತಿಕ ಪ್ರಭಾವ, ಸಾರ್ವಜನಿಕ ಪ್ರಚಾರದಿಂದ ತಕ್ಕ ವಾತಾವರಣವನ್ನು ನಿರ್ಮಿಸಬೇಕು. ಈ ವಾತಾವರಣ ನಿರ್ಮಾಣಕ್ಕಾಗಿ ಹಸ್ತಪ್ರತಿಯ ಮಹತ್ವವನ್ನು ಪ್ರತಿಪಾದಿಸುವ ಉಪನ್ಯಾಸಗಳನ್ನು, ಹಸ್ತಪ್ರತಿಯ ಮಹತ್ವ, ಅವುಗಳ ಸಂರಕ್ಷಣೆಯ ಮಹತ್ವಗಳನ್ನು ಬಿಂಬಿಸುವ ಚಲನಚಿತ್ರ ಪ್ರದರ್ಶನ ಇತ್ಯಾದಿಗಳನ್ನು ಏರ್ಪಾಡು ಮಾಡಬಹುದು.

ಯಾವುದೇ ವಸ್ತುವಿಗೂ ಅದರ ಒಡೆಯನಿಗೂ ಭೌತಿಕ ಸಂಬಂಧವು ನಿತ್ಯಸಂಪರ್ಕ ಕಾರಣವಾಗಿ ಭಾವನಾತ್ಮಕ ಸಂಬಂಧವಾಗಿ ಬೆಳೆದಿರುತ್ತದೆ; ದೇವರ ಜೊತೆ ಜಗುಲಿಯ ಮೇಲೆ ಪೂಜಿಸುವ ಹಸ್ತಪ್ರತಿಗಳ

ವಿಷಯವಾಗಿ ದೈವೀಸಂಬಂಧ ಬೆಸೆದುಕೊಂಡಿರುತ್ತದೆ. ಈಗ ಕ್ಷೇತ್ರಕಾರ್ಯಕರ್ತ ಕ್ರಮೇಣ ಒಡೆಯನ ದೈವಿಕ, ಭಾವನಾತ್ಮಕ, ಭೌತಿಕ ಸಂಬಂಧ ಸಂಕೋಲೆಗಳಿಂದ ಹಸ್ತಪತ್ರಿಯನ್ನು ಬಿಡಿಸಿಕೊಳ್ಳಬೇಕಾಗುತ್ತದೆ. ಕೆಲವು ಸಲ ಅವರು ತಮ್ಮ ವಶದಲ್ಲಿರುವುದು ಅಸಾಮಾನ್ಯ ಕೃತಿಯೆಂಬ, ಹಸ್ತಪ್ರತಿಯನ್ನು ಹಸ್ತಾಂತರಿಸುವುದರಿಂದ ತಮಗೆ ಕೇಡೆಂಬ ಭ್ರಮೆಯಲ್ಲಿರುತ್ತಾರೆ. ಕೆಲವರಂತೂ ಹಸ್ತಪ್ರತಿ ಇಟ್ಟುಕೊಳ್ಳುವುದು ಪ್ರತಿಷ್ಠೆಯೆಂದು ಭಾವಿಸಿರುತ್ತಾರೆ. ಕ್ಷೇತ್ರಕಾರ್ಯಕರ್ತ ಮೊದಲು ಒಡೆಯನನ್ನು ಈ ಭ್ರಮೆಗಳಿಂದ ಮುಕ್ತಮಾಡಿ, ದಾನವಾಗಿಯೋ ಹಣಕೊಟ್ಟೋ ಪಡೆಯಬಹುದು. ಹಣಕ್ಕೆ ದೇವರನ್ನೂ ಮಾರುವ ದ್ರವ್ಯಭಕ್ತರ ಇಂದಿನ ಸಮಾಜದಲ್ಲಿ ಹಸ್ತಪ್ರತಿಗಳ ಖರೀದಿಯು ೨೦ನೆಯ ಶತಮಾನದ ಪೂರ್ವಾರ್ಧಕ್ಕಿಂತ ಉತ್ತರಾರ್ಧದಲ್ಲಿ ಸರಳಕಾರ್ಯವಾಗಿದೆ. ಆದುದರಿಂದ ಹಣದ ಆಸೆ ಆಮಿಷಗಳನ್ನು ಒಡ್ಡಿ ಹಸ್ತಪ್ರತಿಗಳನ್ನು ಖರೀದಿ ಮಾಡುವುದೇ ಇಂದು ಯೋಗ್ಯವಾಗಿ ತೋರುತ್ತದೆ. ಆದರೆ ಈ ವಿಧಾನದಿಂದಾಗಿ ಹಸ್ತಪ್ರತಿ ಒಡೆಯರು ಬಾಯಿಗೆ ಬಂದಷ್ಟು ಹಣಕೇಳುವ ಚಟಕ್ಕೆ ಬೀಳದಂತೆ ಎಚ್ಚರವಹಿಸಬೇಕು.

ಯಾವುದೇ ಕೃತಿ ಅಚ್ಚಾಗಿದ್ದರೆ ಅದರ ಹಸ್ತಪ್ರತಿಗೆ ಬದಲು ಅಚ್ಚಿನ ಪ್ರತಿ ಕಳಿಸಿಕೊಡುವ, ಹಸ್ತಾಂತರಿಸಲು ಒಪ್ಪದ ಬೆಲೆಯುಳ್ಳ ಹಸ್ತಪ್ರತಿಯಿದ್ದರೆ ಪ್ರತಿಮಾಡಿಕೊಂಡು ಹಿಂದಿರುಗಿಸುವ ಭರವಸೆ ನೀಡಬೇಕು. ಇಷ್ಟಾಗಿಯೂ ಒಪ್ಪದಿದ್ದರೆ ಸ್ನೇಹಿತರಿಂದ, ಪ್ರತಿಷ್ಠಿತರಿಂದ, ಅಧಿಕಾರಿಗಳಿಂದ ಅವನ ಮೇಲೆ ಒತ್ತಾಯ ತರಬೇಕು. ಒಂದು ರೀತಿ ಸಾಮ, ದಾನ, ಭೇದ, ದಂಡ ಕ್ರಮ ಇಲ್ಲಿ ನಡೆಯಬೇಕು. ಮೂಡಬಿದಿರೆ ಜೈನಮಠದ ಶ್ರುತಭಾಂಡಾರದಿಂದ ಧವಲಾ, ಜಯಧವಲಾ, ಮಹಾಧವಲಾ ಹಸ್ತಪ್ರತಿಗಳನ್ನು ಪಡೆಯಲು ಜೈನವಿದ್ವಾಂಸರು ವಹಿಸಿದ ಶ್ರಮ, ವ್ಯಯಿಸಿದ ಹಣ-ಸಮಯಗಳು ಕ್ಷೇತ್ರಕಾರ್ಯಕರ್ತನಿಗೆ ಆದರ್ಶವಾಗಬೇಕು. ಒಂದುವೇಳೆ ಹಸ್ತಪ್ರತಿ ಕೈವಶವಾಗುವುದೇ ಅಸಾಧ್ಯವೆನಿಸಿದಾಗ ಅದರ ಟಿಪ್ಪಣಿ ಬರೆದುಕೊಳ್ಳುವ, ಇದಕ್ಕಿಂತ ಮೈಕ್ರೋಫಿಲ್ಮ ಪ್ರತಿ ಮಾಡಿಕೊಳ್ಳುವುದರೊಂದಿಗೆ ಅದರ ಆದ್ಯಂತ್ಯ ಗರಿಗಳ ಫೋಟೋ ತೆಗೆದುಕೊಳ್ಳುವ ಕೆಲಸ ಮಾಡಬೇಕು.

ಹಸ್ತಪ್ರತಿ ಕ್ಷೇತ್ರಕಾರ್ಯವೆಂದರೆ ಪಠ್ಯವನ್ನು ಸಂಗ್ರಹಿಸುವುದಾಗಿರುವಂತೆ ಅದರ ಪರಿಸರವನ್ನು ಸಂಗ್ರಹಿಸುವುದೂ ಆಗಿದೆ. ಇವುಗಳನ್ನು 'ಪಠ್ಯಶೋಧ' 'ಪರಿಸರಶೋಧ' ಎಂದು ಕರೆಯಬಹುದು. ಈವರೆಗೆ ಕೇವಲ ಪಠ್ಯಶೋಧ ಮತ್ತು ಒಡೆಯನ ವಿಳಾಸ ದಾಖಲೆಗಳಿಗೆ ಮಾತ್ರ ಮೀಸಲಾಗಿರುವ ಕ್ಷೇತ್ರಕಾರ್ಯ ಇನ್ನು ಮೇಲೆ 'ಪರಿಸರಶೋಧ'ವನ್ನು ಮೈಗೂಡಿಸಿಕೊಂಡು ಮುನ್ನಡೆಯಬೇಕಾಗಿದೆ. ಏಕೆಂದರೆ ಯಾವುದೇ ಹಸ್ತಪ್ರತಿ ತನ್ನ ಪರಿಸರದ ಉಪೇಕ್ಷೆಗೆ ಗುರಿಯಾಗಿರಬಹುದು; ಇಲ್ಲವೆ ತನ್ನ ಪರಿಸರದಲ್ಲಿ ತುಂಬ ಪ್ರಭಾವಶಾಲಿಯಾಗಿ ವ್ಯವಹರಿಸುತ್ತಿರಬಹುದು. ಈ ಆವರಣವನ್ನು ಅಂದರೆ ಅದರ ಉಗಮ- ಆಗಮ, ಅದು ಆ ಮನೆತನ - ಆ ಪರಿಸರದೊಂದಿಗೆ ಹೊಂದಿದ ಸಂಬಂಧ, ಗಳಿಸಿದ ಪ್ರತಿಷ್ಠೆ ಇತ್ಯಾದಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಜೈನ ಹಸ್ತಪ್ರತಿಗಳು ಬೆಳ್ಗೊಳದಿಂದ ಬಿಹಾರದ ಅರಾಪಟ್ಟಣಕ್ಕೆ ಮತ್ತು ಜರ್ಮನಿಯ ಸ್ಟ್ರಾಸ್ಬರ್ಗಕ್ಕೆ ವಲಸೆಹೋದ ಸಂಗತಿಗಳು ನಿಜಕ್ಕೂ ದಾಖಲಾರ್ಹವಾಗಿವೆ. ಹಸ್ತಪ್ರತಿಯನ್ನು ಸ್ನಾನಮಾಡಿಯೇ ಮುಟ್ಟುವ, ವರ್ಷಕ್ಕೊಮ್ಮೆ ಜಾತ್ರೆಯಂಥ ವಿಶೇಷ ಸಂದರ್ಭಗಳಲ್ಲಿ ಮಾತ್ರ ಬಿಚ್ಚಿ ಓದುವ, ಮಳೆ ಬರಲೆಂದು ಐರಾವತನೋಂಪಿ, ವಿರಾಟಪರ್ವ, ರೇವಣಸಾಂಗತ್ಯ ಓದಿಸುವ, ಗ್ರಂಥದಿಂದ ರೋಗನಿವಾರಣೆ ಮಾಡುವ, ಜ್ಞಾನಸಿಂಧುವನ್ನು ವೃದ್ಧರಿಗೆ ಮಾತ್ರ ಓದಲು ಹೇಳುವ, ಹಸ್ತಪ್ರತಿಯನ್ನು ಶಕುನಗ್ರಂಥದಂತೆ ಬಳಸುವ ರೋಮಾಂಚಕ, ಭಾವನಾತ್ಮಕ ಸಂಬಂಧಗಳು ಕೆಲವು ಹಸ್ತಪ್ರತಿಗಳ ಸುತ್ತ ಬೆಳೆದಿರುತ್ತವೆ. ಹಳ್ಳಿಯಿಂದ ದಿಲ್ಲಿಯ ವರೆಗೆ ಪ್ರಚಾರಪಡೆದ ಹಾರನಹಳ್ಳಿ ಕೋಡಿಮಠದ ಗ್ರಂಥ , ಬೀಗ ಬಂಧನದಲ್ಲಿರುವ ಹೊಕ್ಕರಾಣಿಯ ವಚನಗ್ರಂಥ "ಪರಿಸರಶೋಧ"ಕ್ಕೆ

ಒಳ್ಳೆಯ ಉದಾಹರಣೆಯಾಗಿವೆ. ಹೀಗೆ ಕೆಲವು ಹಸ್ತಪ್ರತಿ ಇಲ್ಲವೆ ಹಸ್ತಪ್ರತಿಸಂಗ್ರಹಗಳ ಸುತ್ತ ಇಂಥ ಭಾವಪರಿವೇಷ ಬೆಳೆದಿರುತ್ತದೆ. ಕಾರಣ ಯಾವುದೇ ಹಸ್ತಪ್ರತಿಯನ್ನು ಅದರ ಸುತ್ತ ಹೆಣೆದಿರುವ ಪ್ರಭಾವಕೋಶದೊಂದಿಗೇ ಸಂಗ್ರಹಿಸಬೇಕು.

ಕವಿಯ ಮತ್ತು ಕೃತಿನಾಯಕರ ವಂಶಸ್ಥರಲ್ಲಿ ಸಿಗುವ ಹಸ್ತಪ್ರತಿಗೆ ಮಿಕ್ಕೆಡೆಗಳಲ್ಲಿ ಸಿಗುವ ಹಸ್ತಪ್ರತಿಗಿಂತ ವಿಶೇಷ ಮಹತ್ವವಿರುತ್ತದೆ. ಕವಿಯ ಸ್ವಹಸ್ತಾಕ್ಷರದ ಪ್ರತಿ ಇದಕ್ಕಿಂತ ಬೆಲೆಯುಳ್ಳದು. ಮುದ್ದಣ್ಣ, ಪಂಚಬಾಣರು ಕೈಮುಟ್ಟಿ ಬರೆದ ರಾಮಾಶ್ವಮೇಧ, ಭುಜಬಲಿ ಚರಿತೆಯ ಪ್ರತಿಗಳು ಈ ಸಾಲಿನಲ್ಲಿ ನಿಲ್ಲುತ್ತವೆ. "ಎಲ್ಲಾ ಗ್ರಂಥ ಬಗಲಾಗ, ಪ್ರಭುಲಿಂಗ ಲೀಲೆ ತಲಿಮ್ಯಾಗ" ಎನ್ನುತ್ತಿದ್ದ ಮುಸಲ್ಮಾನ ಶಿಶುನಾಳ ಶರೀಫಸಾಹೇಬರು ಸ್ವಹಸ್ತದಿಂದ ಬರೆದ ಪ್ರಭುಲಿಂಗಲೀಲೆ ಹಸ್ತಪ್ರತಿಗೆ ಇರುವ ಸಾಂಸ್ಕೃತಿಕ ಮಹತ್ವವನ್ನು ಬೇರೆ ಹೇಳಬೇಕಿಲ್ಲ. ಆದುದರಿಂದ ಹಸ್ತಪ್ರತಿಯ ಆತ್ಮಚರಿತ್ರೆ ರೂಪದ ಇಂಥ ಸಂಗತಿಗಳ ಸಂಗ್ರಹದ ಕಡೆಗೂ ಕಾರ್ಯಕರ್ತ ಅವಶ್ಯ ಗಮನ ಕೊಡಬೇಕು. ಕೆಲವೊಮ್ಮೆ ಈ ಹಸ್ತಪ್ರತಿಗಳನ್ನು ಇಟ್ಟಸ್ಥಳ, ಕಟ್ಟಲು ಉಪಯೋಗಿಸಿದ ವಸ್ತ್ರ, ಬಳಸಲಾದ ಕ್ರಿಮಿನಿರೋಧಕ ದ್ರವ್ಯ ಇತ್ಯಾದಿಗಳೂ ವಿಶೇಷ ಮಾಹಿತಿ ಒದಗಿಸುವ ಸಂಭವವಿರುತ್ತದೆ. ಸಾಮಾನ್ಯವಾಗಿ ಹಸ್ತಪ್ರತಿಗಳನ್ನು ಕಟ್ಟಲು ಕೆಂಪು ವಸ್ತ್ರವನ್ನು, ಒಳಗೆ ಹಾವಿನ ಪೊರೆಯನ್ನು ಬಳಸುವುದರ ಔಚಿತ್ಯ ಇತ್ಯಾದಿಗಳನ್ನೂ ಲಕ್ಷಿಸಬೇಕು.

ಕೃತಿಯೊಂದನ್ನು 'ಹಸ್ತಪ್ರತಿ ರೂಪ'ದ ಜೊತೆ, ಪಾರಂಪರಿಕವಾಗಿ 'ವಾಚಿಕರೂಪ'ದಲ್ಲಿಯೂ ಕೆಲವೆಡೆ ಉಳಿಸಿಕೊಂಡು ಬಂದಿರುತ್ತಾರೆ. ಸಾಲೋಟಗಿಯಲ್ಲಿ ಡಂಗುರ ಪದಗಳನ್ನು, ಕೊಡೇಕಲ್ಲದಲ್ಲಿ ಕಾಲಜ್ಞಾನ ವಚನಗಳನ್ನು ವಿಶಿಷ್ಟ ಬಗೆಯಲ್ಲಿ ವಿಶಿಷ್ಟವಾದ್ಯಗಳೊಂದಿಗೆ ಹಾಡುತ್ತಿದ್ದು; ಇಂಥಲ್ಲಿ ಹಸ್ತಪ್ರತಿ ಸಂಗ್ರಹದೊಂದಿಗೆ ಧ್ವನಿಮುದ್ರಣ ಕಾರ್ಯವನ್ನೂ ಪೂರೈಸಿಕೊಳ್ಳಬೇಕು. ಕೆಲವೆಡೆ ಹಸ್ತಪ್ರತಿ ಎಂದೋ ಹಾಳಾಗಿ ಕೇವಲ ಅದರ ಪದ್ಯಗಳನ್ನು ಪರಂಪರಾಗತವಾಗಿ ಹಾಡುತ್ತಿರಬಹುದು. ರಾಘವಾಂಕನ ಅನುಪಲಬ್ಧ ಶರಭಚಾರಿತ್ರ್ಯದ ಬಿಡಿಪದ್ಯಗಳನ್ನು ಬಳ್ಳಾರಿ ಜಿಲ್ಲೆಯಲ್ಲಿ ಹಾಡುವುದಾಗಿ ತಿಳಿದುಬಂದಿದೆ. ಉಳಿದುನಿಂತ ಈ ಮತ್ತು ಇಂಥ ಸಂಪತ್ತನ್ನು ಕಷ್ಟಪಟ್ಟು ರಕ್ಷಿಸಿಕೊಳ್ಳಬೇಕು.

ಅನುಪಲಬ್ಧ ಕೃತಿಗಳ ಹಸ್ತಪ್ರತಿ ಇಲ್ಲವೆ ಅಪರೂಪ ಹಸ್ತಪ್ರತಿಗಳ ಶೋಧಕ್ಕೆ ಕ್ಷೇತ್ರಕಾರ್ಯದಲ್ಲಿ ಬಹುದೊಡ್ಡ ಮಹತ್ವವಿದೆ. ಆದುದರಿಂದ ಕ್ಷೇತ್ರಕಾರ್ಯಕರ್ತ ಅಂಥವುಗಳನ್ನು ನಿರಂತರ ಬೆನ್ನಟ್ಟಿ ನಡೆಯಬೇಕು. ಕವಿರಾಜಮಾರ್ಗ ಹಸ್ತಪ್ರತಿಯ ಸುಳುಹು ಹಿಡಿದು ಬೀದರ ಜಿಲ್ಲೆಯಲ್ಲಿ ಅದನ್ನು ಪತ್ತೆಹಚ್ಚಲು ನಾನು ೧೦ ವರ್ಷ ನಿರಂತರ ಪ್ರಯತ್ನ ಮಾಡಬೇಕಾಯಿತು. ಧಾರವಾಡ ಪ್ರದೇಶದಲ್ಲಿ "ಗಂಧಹಸ್ತಿ ಮಹಾಭಾಷ್ಯ" ಹಸ್ತಪ್ರತಿಯಿದೆಯೆಂಬ ವದಂತಿಯನ್ನು ಹಿಂಬಾಲಿಸುವ ಪ್ರಯತ್ನ ಇಂದು ನಡೆಯಬೇಕಾಗಿದೆ.

ಹಸ್ತಪ್ರತಿ ಸಣ್ಣದಿರಲಿ, ಉಪಯುಕ್ತವಿರಲಿ, ನಿರುಪಯುಕ್ತವಿರಲಿ, 'ಅಲಕ್ಷಿಸದೆ ಅದೆಲ್ಲವನ್ನೂ ಸಂಗ್ರಹಿಸಬೇಕು. ಏಕೆಂದರೆ ಒಂದು ದೃಷ್ಟಿಯಿಂದ ನಿರುಪಯುಕ್ತವೆನಿಸಿದರೂ ಇನ್ನೊಂದು ದೃಷ್ಟಿಯಿಂದ ಅದು ತುಂಬ ಉಪಯುಕ್ತವಾಗಿರುತ್ತದೆ. ಆರಾ ಹಸ್ತಪ್ರತಿಭಾಂಡಾರದಲ್ಲಿಯ ಆಚಣ್ಣನ ವರ್ಧಮಾನಪುರಾಣದ ಮಾರ್ಜಿನ್‌ನಲ್ಲಿಯ ಉಲ್ಲೇಖ ನಾಗವರ್ಮನ ವರ್ಧಮಾನ ಪುರಾಣ ಶೋಧನೆಗೆ ಬೆಲೆಯುಳ್ಳ ಸೂಚನೆ ನೀಡಿತೆಂಬದನ್ನು ಇಲ್ಲಿ ನೆನೆಯಬಹುದು.

ಹಸ್ತಪ್ರತಿಯನ್ನು ಅವಲೋಕಿಸುವಲ್ಲಿ ಅವಸರ ಎಷ್ಟೂ ಸಲ್ಲದು. ಇದರಿಂದಾಗಿ ಕೆಲವು ಕೃತಿಗಳು ಕಣ್ತಪ್ಪಿ ಮರೆಯಲ್ಲುಳಿಯಬಹುದು. ಶ್ರೀ ಭುಜಬಲಿಶಾಸ್ತ್ರಿಗಳ ಕಣ್ತಪ್ಪಿಸಿ ಉಳಿದಿದ್ದ ನಾಗವರ್ಮನ ವರ್ಧಮಾನಪುರಾಣ ಶ್ರೀ ಸಣ್ಣಯ್ಯನವರಿಂದ ಬೆಳಕಿಗೆ ಬಂದುದನ್ನು ಇಲ್ಲಿ ನೆನೆಯಬೇಕು. ಹಳಕಟ್ಟಿಯವರು "ವಿಜಾಪುರ ಜಿಲ್ಲೆಯಲ್ಲಿದ್ದಾಗ ನಾನು ಹೋದ ಗ್ರಾಮಗಳಲ್ಲಿ ಅವುಗಳ (ವಚನಗಳ) ವಿಷಯವಾಗಿ ನಾನು ಶೋಧ ಮಾಡುತ್ತಿದ್ದು, ನನಗೆ ದೊರೆತ ವಚನಗಳಲ್ಲಿ ನನಗೆ ಮಹತ್ವವೆಂದು ಕಂಡ ವಚನಗಳನ್ನಷ್ಟೇ ನಾನು ಬರೆದುಕೊಳ್ಳುತ್ತ ಬಂದೆನು" ಎಂದೂ ಆರ್. ನರಸಿಂಹಾಚಾರ್ ಅವರು "ಹಿಂದೆ ಮದ್ರಾಸ್ ಪ್ರಾಚ್ಯಕೋಶಾಲಯ ಮುಂತಾದ ಸ್ಥಳಗಳಲ್ಲಿ ಪುಸ್ತಕಗಳನ್ನು ಪರಿಶೀಲಿಸಿದಾಗ ಪ್ರಥಮ ಸಂಪುಟಕ್ಕೆ ಬೇಕಾದ ವಿಷಯಗಳನ್ನು ಮಾತ್ರ ವಿಸ್ತಾರವಾಗಿ ಗುರುತು ಹಾಕಿಕೊಂಡು, ಅವಶ್ಯಕತೆಬಿದ್ದಾಗ ಪುನಃ ಹೋಗಿ ನೋಡಬಹುದೆಂಬ ಭಾವನೆಯಿಂದ ಮಿಕ್ಕ ವಿಷಯಗಳನ್ನು ಬಹಳ ಸಂಗ್ರಹವಾಗಿ ಗುರುತು ಹಾಕಿದ್ದೆನು. ಮತ್ತೊಂದಾವೃತ್ತಿ ಹೋಗಿ ನೋಡಿದಾಗ ಹಿಂದೆ ನೋಡಿದ್ದ ಪುಸ್ತಕಗಳಲ್ಲಿ ಹಲವು ನನ್ನ ದುರಾದೃಷ್ಟದಿಂದ ಹುಳುಗಳ ಬಾಯಿಗೆ ತುತ್ತಾಗಿ ನಾಶವಾಗಿ ಹೋಗಿದ್ದವು. ಹೀಗೆ ನಷ್ಟವಾದ ಪುಸ್ತಕಗಳ ಪ್ರತ್ಯಂತರಗಳು ಬೇರೆ ಕಡೆ ಎಷ್ಟು ಹುಡುಕಿದರೂ ದೊರೆಯದೆ" ಹೋದುವೆಂದೂ ಹೇಳಿದ ಮಾತುಗಳಿಂದ ಕ್ಷೇತ್ರಕಾರ್ಯದಲ್ಲಿ ಇವರು ತೋರಿದ ಉದಾಸೀನತೆ ಕಾರಣವಾಗಿ ನಮಗಾದ ನಷ್ಟವನ್ನು ಊಹಿಸಿಕೊಳ್ಳಬಹುದು.

ಸಂಗ್ರಹಿತ ಅಥವಾ ಸಂದರ್ಶಿತ ಹಸ್ತಪ್ರತಿಗಳ ಸರಿಯಾದ ಸವಿವರ ಮಾಹಿತಿ ಬರೆದುಕೊಳ್ಳಲು ಕಾರ್ಯಕರ್ತ ತಪ್ಪಬಾರದು. ಇಲ್ಲದಿದ್ದರೆ ಮುಂದಿನ ಕಾಲದಲ್ಲಿ ಸಂಶೋಧಕ ತುಂಬ ತೊಂದರೆ ಪಡಬೇಕಾಗುತ್ತದೆ. ಶ್ರೀ ಕೆ.ಬಿ. ಪಾಠಕ ಅವರು ನೋಡಿದ್ದ, ಫ್ಲೀಟರೂ ಬಳಸಿದ್ದ "ಉಪಸರ್ಗ ಕೇವಲಿಗಳ ಕಥೆ" ಶೀರ್ಷಿಕೆಯ ವಡ್ಡಾರಾಧನೆಯ ಹಸ್ತಪ್ರತಿ ಕೊಲ್ಲಾಪುರ ಲಕ್ಷ್ಮೀಸೇನ ಭಟ್ಟಾರಕ ಭಂಡಾರಕ್ಕೆ ಸೇರಿದುದೆಂಬುದನ್ನು ಪತ್ತೆಹಚ್ಚಲು ಡಾ. ಎ. ಎನ್. ಉಪಾಧ್ಯೆ ಅವರಿಗೆ ಹಲವು ದಶಕಗಳೇ ಬೇಕಾದವು. ಹುಲ್ಲೂರು ಶ್ರೀನಿವಾಸ ಜೋಯಿಸರು ನೋಡಿದ್ದ ಹಂಪೆಯ ಮಹಾಲಿಂಗನ ಬಾಲರಾಮನ ಸಾಂಗತ್ಯ, ಕೆಂಚಶೆಟ್ಟಿಸುತ ರಾಮಕೃತ ಸಿರುಮನ ಸಾಂಗತ್ಯಗಳ ಏಕೈಕ ಹಸ್ತಪ್ರತಿಗಳು ಸಂಶೋಧಕರು ಜಾಲವೊಡ್ಡಿ ಹುಡುಕಿದರೂ ಇಂದು ಸಿಗಲೊಲ್ಲವು. "ವಚನಶಾಸ್ತ್ರಸಾರ"ದಲ್ಲಿಯ ಎಷ್ಟೋ ವಚನಗಳಿಗೆ ಇದ್ದ ಮೂಲ ಆಕರ ಗ್ರಂಥಗಳು ಇಂದು ನಮಗೆ ಸಿಗುತ್ತಿಲ್ಲ. "ಮೂವರ್ರಾಯರನೆ ಮಾರುವಂತೆಸೆದಿರ್ಕುಂ" ಎಂಬ ಪದ್ಯವನ್ನೊಳಗೊಂಡ ಗಿರಿಜಾಕಲ್ಯಾಣ ಹಸ್ತಪ್ರತಿಯನ್ನು ಕವಿಚರಿತೆಕಾರರು ಎಲ್ಲಿ ನೋಡಿದ್ದರೆಂಬುದು, ಇದಲ್ಲದೆ ಕವಿಚರಿತೆಯನ್ನು ಬರೆಯುವಲ್ಲಿ ಅವರು ಬಳಸಿದ್ದ ಕೆಲವು ಹಸ್ತಪ್ರತಿಗಳು ಎಲ್ಲಿಯವು ? ಎಂಬುದು ಇನ್ನೂ ಸಮಸ್ಯೆಯಾಗಿ ಉಳಿದಿದೆ. ಈ ಎಲ್ಲ ತಿಳುವಳಿಕೆಗಳ ಹಿನ್ನೆಲೆಯೊಂದಿಗೆ ಸಂಗ್ರಹಿಸಿದ ಹಸ್ತಪ್ರತಿಗಳ ಗಂಟುಕಟ್ಟುವ, ಗ್ರಂಥಾಲಯಕ್ಕೆ ರವಾನಿಸುವ ಇತ್ಯಾದಿ ಸಾಮಾನ್ಯವೆನಿಸಬಹುದಾದ ಕೆಲಸಗಳನ್ನೂ ತುಂಬ ಜಾಗರೂಕತೆಯಿಂದ ಮಾಡಬೇಕು. ಒಡೆಯನ ವಶದಿಂದ ಕ್ಷೇತ್ರಕಾರ್ಯಕರ್ತನಿಗೆ ಹಸ್ತಾಂತರವಾಗಿಯೂ "ಮೂರ್ಖಹಸ್ತೇ ನ ದಾತವ್ಯಂ" ಎಂದು ಹಸ್ತಪ್ರತಿ ಹಲುಬುವಂತಾಗಬಾರದು.

ಕರ್ನಾಟಕದಲ್ಲಿ ಹಸ್ತಪ್ರತಿಗಳು ಹಾಳಾಗಿ ಹೋದುದೂ ಹೇರಳ. ಉಳಿದು ಬಂದುದೂ ಹೇರಳ. ನಮ್ಮ ನಾಡಿನಲ್ಲಿ ಇವುಗಳ ಪರಿವೀಕ್ಷಣೆ ನೂರುವರ್ಷಗಳಿಂದ ನಡೆದರೂ ಸರ್ಕಾರವಾಗಲೀ, ವಿಶ್ವವಿದ್ಯಾಲಯದಂಥ ಸಂಸ್ಥೆಗಳಾಗಲೀ ವ್ಯವಸ್ಥಿತವಾಗಿ, ಕ್ರಮವತ್ತಾಗಿ ಈ ಕಾರ್ಯಮಾಡುವ ಗೋಜಿಗೆ ಹೋಗದೆ ಮನಸ್ಸು ಬಂದಾಗ

ಆಗಿಷ್ಟು ಈಗಿಷ್ಟು ಮಾಡಿಮುಗಿಸುತ್ತಲಿವೆ. ಹೀಗಾಗಿ ಹಸ್ತಪ್ರತಿಗಳನ್ನು ಮನೆಯಲ್ಲಿ ಮಡಗಿಕೊಳ್ಳುವ ಸಾಮಾನ್ಯರು, ಭಾಂಡಾರದಲ್ಲಿ ರಕ್ಷಿಸಬೇಕಾದ ಅಧಿಕಾರಿಗಳು - ಈ ಇಬ್ಬರಿಂದಲೂ ಹಸ್ತಪ್ರತಿಗಳಿಗೆ ಅನ್ಯಾಯವಾಗುತ್ತಲಿದೆಯೆನ್ನಬೇಕು.

ಕರ್ನಾಟಕದಲ್ಲಿ ಕನ್ನಡ ಹಸ್ತಪ್ರತಿಗಳು, ಇವುಗಳಿಗೆ ಎರಡನೆಯದಾಗಿ ಸಂಸ್ಕೃತ ಹಸ್ತಪ್ರತಿಗಳು ಹೇರಳ, ಪ್ರಾಕೃತ, ಮರಾಠಿ, ತೆಲುಗು, ತಮಿಳು, ಮಲಯಾಳಿ ಹಸ್ತಪ್ರತಿಗಳು ವಿರಳ. ಧಾರ್ಮಿಕ ಕೇಂದ್ರಗಳಲ್ಲಿ, ಪ್ರತಿಷ್ಠಿತರ - ಸಾಹಿತ್ಯಾಭ್ಯಾಸಿಗಳ ಮನೆತನಗಳಲ್ಲಿ ಚದರಿಹೋದ ಇವುಗಳ ಕ್ಷೇತ್ರಕಾರ್ಯ ಕೈಕೊಂಡ ಪ್ರಥಮ ವ್ಯಕ್ತಿ ಕರ್ನಲ್ ಮೆಕೆಂಝಿ. ಭಾರತೀಯ ಗಣಿತಶಾಸ್ತ್ರದ ಮಾಹಿತಿ ಸಂಗ್ರಹಕ್ಕೆ ಬಂದು, ಈಸ್ಟ ಇಂಡಿಯಾ ಕಂಪನಿಯಲ್ಲಿ ನೌಕರಿ ಹಿಡಿದು, ದಕ್ಷಿಣ ಭಾರತದ ಭೌಗೋಲಿಕ ಮೋಜಣಿಕಾರ್ಯ ಕೈಕೊಂಡ ಈತ ಈ ದೇಶದ ಸಾಂಸ್ಕೃತಿಕ ಮೋಜಣಿದಾರನೂ ಆಗಿ ಬೆಲೆಯುಳ್ಳ ಕೆಲಸಮಾಡಿದನು. ಇದರ ಫಲವಾಗಿ ಕೆಲವು ಹಸ್ತಪ್ರತಿಗಳನ್ನೂ ಸಂಗ್ರಹಿಸಿ "ಕನ್ನಡ ಹಸ್ತಪ್ರತಿ ಕ್ಷೇತ್ರಕಾರ್ಯಕ್ಕೆ" ಶ್ರೀಕಾರ ಬರೆದನು. ಸಿ.ಪಿ. ಬ್ರೌನ್‌ನಿಂದ ಈ ಸಂಖ್ಯೆ ೧೫೪೦ಕ್ಕೆ ವರ್ಧಿಸಿತು. ಮದ್ರಾಸ ಪ್ರಾಚ್ಯಕೋಶಾಲಯದಲ್ಲಿದ್ದ ಈ ಸಂಪತ್ತಿನ ಕೆಲಭಾಗವನ್ನು ೧೯೬೭ರಲ್ಲಿ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆ, ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ, ಮೈಸೂರಿನ ರಾಜ್ಯಪುರಾತತ್ವ ಇಲಾಖೆಗಳಿಗೆ ಹಂಚಿಕೊಡಲಾಯಿತು.

೧೮೮೦ರಲ್ಲಿ ಸ್ಥಾಪಿತವಾದ ಮೈಸೂರಿನ ಪ್ರಾಚ್ಯವಸ್ತು ಸಂಗ್ರಾಹಲಯದ ಮುಖ್ಯಸ್ಥರಾದ ಬಿ.ಎಲ್. ರೈಸ್, ತರುವಾಯ ಈ ಸ್ಥಾನಕ್ಕೆ ಬಂದ ಆರ್. ನರಸಿಂಹಾಚಾರ್ ಹಸ್ತಪ್ರತಿ ಸಂಗ್ರಹ ಕಾರ್ಯವನ್ನು ತೃಪ್ತಿಕರವಾಗಿ ಪೂರೈಸಿದರು. ೧೮೯೧ರಲ್ಲಿ ಇದರಿಂದ ಹಸ್ತಪ್ರತಿ ಭಾಂಡಾರವೇ ಬೇರೆಯಾಗಿ ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ ಹೆಸರು ಹೊತ್ತು ಮುನ್ನಡೆದು, ೧೯೧೭ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಭಾಗವಾಗಿ ನಿಂತಿತು. ೧೯೬೬ರಲ್ಲಿ ಇಲ್ಲಿಯ ಎಲ್ಲ ಕನ್ನಡ ಹಸ್ತಪ್ರತಿಗಳನ್ನು ಕನ್ನಡ ಅಧ್ಯಯನ ಸಂಸ್ಥೆಗೆ ವರ್ಗಾಯಿಸಲಾಯಿತು. ಈಗ ಗೌರ್ನಮೆಂಟ ಓರಿಯಂಟಲ್ ಲೈಬ್ರರಿಯಲ್ಲಿ ೧೨೦೦೦ ಸಂಸ್ಕೃತ ಹಸ್ತಪ್ರತಿಗಳು, ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ೬೦೦೦ ಕನ್ನಡ ಹಸ್ತಪ್ರತಿಗಳಿವೆ. ಈ ಅಂಕಿ-ಸಂಖ್ಯೆಗೆ ಧಾರವಾಡ ಪ್ರದೇಶಕ್ಕಿಂತ ಮೈಸೂರು ಪ್ರದೇಶದ ಸಂಸ್ಕೃತ ಹಸ್ತಪ್ರತಿ ಅಧಿಕವಾಗಿರುವದೇ ಕಾರಣವಾಗಿದೆ. ಮೇಲೆ ಹೇಳಿದಂತೆ ನಾಮಾಂತರಗೊಳ್ಳುತ್ತ ಬಂದ ಈ ಸಂಸ್ಥೆಯ ಇತರ ಮುಖ್ಯಸ್ಥರಾದ ಶ್ರೀ ಆರ್. ಶಾಮಶಾಸ್ತ್ರಿ, ಶ್ರೀ. ಎಂ. ಬಸವಲಿಂಗಯ್ಯ, ಶ್ರೀ ಎಚ್. ಆರ್. ರಂಗಸ್ವಾಮಿ, ಶ್ರೀ ಎಚ್, ದೇವೀರಪ್ಪ, ಶ್ರೀ ಎನ್ ಬಸವಾರಾಧ್ಯರ ಕಾಲದಲ್ಲಿ ಸಹಜವಾಗಿಯೇ ದಕ್ಷಿಣ ಕರ್ನಾಟಕದ ಹಸ್ತಪ್ರತಿ ಸಂಗ್ರಹಕಾರ್ಯ ನಡೆಯಿತು. ಇತ್ತೀಚೆ ತಲೆಯೆತ್ತಿದ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ, ಶ್ರೀ ಎಸ್. ಶಿವಣ್ಣ ಅವರ ಅಗಾಧನಿಷ್ಠೆ ಕಾರಣವಾಗಿ ಅಲ್ಪಾವಧಿಯಲ್ಲಿಯೇ ೧೫೦೦ ಕನ್ನಡ ಹಸ್ತಪ್ರತಿಗಳನ್ನು ಕಲೆಹಾಕಿದೆ. ಇವಲ್ಲದೆ ಬಸವಸಮಿತಿ, ಕನ್ನಡ ಸಾಹಿತ್ಯ ಪರಿಷತ್ತು, ರಾಜ್ಯಪುರಾತತ್ವ ಇಲಾಖೆಗಳಂಥ ಸರ್ಕಾರಿ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ಸಿ. ಮಹಾದೇವಪ್ಪ, ಎಲ್, ಬಸವರಾಜು, ಕೆಳದಿ ಗುಂಡಾಜೋಯಿಸ, ಎಂ.ಎಸ್. ಬಸವರಾಜಯ್ಯನವರಂಥ ವಿದ್ವಾಂಸರ ವಶದಲ್ಲಿ ಹಲವು ಹಸ್ತಪ್ರತಿಗಳಿವೆ. ಇವೆಲ್ಲವುಗಳನ್ನು ಲೆಕ್ಕಹಾಕಿದರೂ ದಕ್ಷಿಣ ಕರ್ನಾಟಕದಲ್ಲಿ ಈ ವರೆಗೆ ಸಂಗ್ರಹಿಸಲ್ಪಟ್ಟ ಹಸ್ತಪ್ರತಿಗಳ ಸಂಖ್ಯೆ ೧೦ ಸಾವಿರವನ್ನು ಮೀರದು. ಉತ್ತರಕರ್ನಾಟಕದಲ್ಲಿ ಈ ಕಾರ್ಯವನ್ನು ನೇರವಾಗಿ ಕೈಗೆತ್ತಿಕೊಂಡ ಪ್ರಥಮ ಶ್ರೇಯಸ್ಸು ೧೯೩೯ರಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ಸಂಶೋಧನ ಸಂಸ್ಥೆಗೆ ಸಲ್ಲುತ್ತದೆ. ೧೯೫೭ರಂದು ಕರ್ನಾಟಕ ವಿಶ್ವವಿದ್ಯಾಲಯದ ವಶಕ್ಕೆ ಬಂದ ಈ ಸಂಸ್ಥೆಯಲ್ಲಿ ಈಗ ಸುಮಾರು ೪೦೦೦ ಕನ್ನಡ

ಹಸ್ತಪ್ರತಿಗಳಿವೆ. ೧೯೬೨ರಲ್ಲಿ ಡಾ. ಆರ್.ಸಿ. ಹಿರೇಮಠ ಅವರ ನೇತೃತ್ವದಲ್ಲಿ ಕನ್ನಡ ಅಧ್ಯಯನಪೀಠ ಕೈಗೆತ್ತಿಕೊಂಡ "ಸಮಗ್ರ ವಚನವಾಙ್ಮಯ ಸಂಗ್ರಹ, ಸಂಸ್ಕರಣ ಮತ್ತು ಪ್ರಕಟನ ಯೋಜನೆ"ಯ ಅಂಗವಾಗಿ ಪ್ರಾರಂಭಿಸಿದ ಹಸ್ತಪ್ರತಿ ಸಂಗ್ರಹ ಕಾರ್ಯದಿಂದಾಗಿ ಈವರೆಗೆ ಸುಮಾರು ೪೦೦೦ ಕನ್ನಡ ಹಸ್ತಪ್ರತಿಗಳು ಶೇಖರಿಸಲ್ಪಟ್ಟಿವೆ. ಇದರಲ್ಲಿ ಡಾ. ಹಳಕಟ್ಟಿಯವರ ೧೦೦೦ ಹಸ್ತಪ್ರತಿಗಳೂ ಸೇರಿವೆಯೆಂಬುದನ್ನು ಗಮನಿಸಬೇಕು. ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಇತ್ತೀಚೆ ೨೦೦೦ ಕಟ್ಟುಗಳನ್ನು ಸಂಗ್ರಹಿಸಿದೆ. ಹೀಗಾಗಿ ಉತ್ತರಕರ್ನಾಟಕದಲ್ಲಿಯೂ ಈವರೆಗೆ ಸಂಗ್ರಹಿಸಲ್ಪಟ್ಟ ಹಸ್ತಪ್ರತಿಗಳ ಸಂಖ್ಯೆ ೧೦ ಸಾವಿರವನ್ನು ಮೀರದು.

ಒಳನಾಡಿನ ಕೆಲವು ಧಾರ್ಮಿಕಕೇಂದ್ರಗಳಾದ ಶ್ರವಣಬೆಳ್ಗೊಳ, ಮೂಡಬಿದಿರೆ, ಹುಮ್ಮಚ, ವರಾಂಗ, ಕಾರ್ಕಳ, ಬಳ್ಳಾರಿಯ ಕೊಟ್ಟೂರ ಸ್ವಾಮಿಮಠ, ಗದುಗಿನ ತೋಂಟದಾರ್ಯಮಠ, ಹುಬ್ಬಳ್ಳಿಯ ಮೂರುಸಾವಿರ ಮಠ, ಶಿವಯೋಗಮಂದಿರ, ಚಿತ್ರದುರ್ಗದ ಮುರುಘಾಮಠ, ಧರ್ಮಸ್ಥಳದ ಮಂಜುನಾಥೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಇತ್ಯಾದಿ ಸಂಸ್ಥೆಗಳಲ್ಲಿಯೂ ಕೆಲವು ಹಸ್ತಪ್ರತಿಗಳಿವೆ. ಇವೆಲ್ಲ ಸೇರಿ ೫ ಸಾವಿರ ಮಿಕ್ಕವು. ಹೊರನಾಡಿನ ಕೊಲ್ಹಾಪುರದ ಲಕ್ಷ್ಮೀಸೇನ ಭಟ್ಟಾರಕ ಜೈನ ಮಠ, ಬಾಹುಬಲಿ ಕ್ಷೇತ್ರ, ಹೈದ್ರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾನಿಲಯ, ಬಿಹಾರದ ಆರಾ ಪಟ್ಟಣ, ಮದ್ರಾಸ ಪ್ರಾಚ್ಯಕೋಶಾಲಯಗಳಲ್ಲಿ ಸೇರಿ ಒಟ್ಟು ೨೦೦೦ ಹಸ್ತಪ್ರತಿಗಳು ಸಿಗುತ್ತವೆ.

ಒಟ್ಟಿನಲ್ಲಿ ಈಗ ಸರ್ಕಾರಿ ಸಂಸ್ಥೆಗಳಲ್ಲಿ, ಧಾರ್ಮಿಕ ಕೇಂದ್ರಗಳಲ್ಲಿ, ವ್ಯಕ್ತಿಗಳ ವಶದಲ್ಲಿ ರಕ್ಷಿತ, ಅರೆರಕ್ಷಿತ ಸ್ಥಿತಿಯಲ್ಲಿ ಸಂಗ್ರಹಿತವಾಗಿರುವ ಒಟ್ಟು ಕಟ್ಟುಗಳು ೨೭ ಸಾವಿರ. ಬಹುಶಃ ನಾಡಿನ ಒಳಹೊರಗೆ ಅರಕ್ಷಿತ ಸ್ಥಿತಿಯಲ್ಲಿ ಬಿಡಿಯಾಗಿ, ಸಂಗ್ರಹ ರೂಪವಾಗಿ ಬಿದ್ದುಕೊಂಡಿರುವ ಹಸ್ತಪ್ರತಿಗಳು ೧೩ ಸಾವಿರ ಎಂದು ಲೆಕ್ಕ ಹಾಕಿದರೂ ಈ ಸಂಖ್ಯೆ ೪೦ ಸಾವಿರವನ್ನು ಮೀರದು. ಇದು ಕನ್ನಡ ಹಸ್ತಪ್ರತಿಗಳ ಒಟ್ಟು ಸಂಪತ್ತು.

ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಪ್ರಾರಂಭದಿಂದಲೂ ಸಂಗ್ರಹಿಸುತ್ತ ಬಂದ ಹಸ್ತಪ್ರತಿಗಳು ಒಂದೂ ಉಳಿಯದಂತೆ ಯಾರ ಯಾರ ವಶಕ್ಕೋ ಹೋಗಿ ಬಿಟ್ಟವು. ವಿದ್ಯಾವರ್ಧಕ ಸಂಘ, ಇತಿಹಾಸ ಸಂಶೋಧನ ಮಂಡಲ ಈ ಕಡೆಗೆ ಕಣ್ಣೆತ್ತಿ ಸಹ ನೋಡಲಿಲ್ಲ. ಅಸ್ತಿತ್ವಕ್ಕೆ ಬಂದು ೭೫ ವರ್ಷಗಳಾದರೂ, ಆಗಾಗ ಯಾವಾವುದೋ ಕೆಲಸಗಳನ್ನು ಮಾಡುತ್ತಲಿರುವ ಕನ್ನಡ ಸಾಹಿತ್ಯ ಪರಿಷತ್ತು ಈ ವಿಷಯವಾಗಿ ಮೊದಲಿನಿಂದಲೂ ಉಪೇಕ್ಷಿತಾಳುತ್ತ, ಇತ್ತೀಚೆ ಒಂದಿಷ್ಟು ಕಟ್ಟುಗಳನ್ನು ಸಂಗ್ರಹಿಸಿದೆ. ಬೆಂಗಳೂರಿನ ಮಿಥಿಕ್ ಸೊಸೈಟಿಗೆ ಕನ್ನಡ ಹಸ್ತಪ್ರತಿ ಬಗೆಗೆ ಬಹುಶಃ ಉಪೇಕ್ಷೆ, ರಾಜ್ಯ ಪುರಾತತ್ವ ಇಲಾಖೆಯ ೧೦ ಮ್ಯೂಜಿಯಂಗಳು ರಾಜ್ಯದಲ್ಲಿದ್ದರೂ ಅವುಗಳಿಗೆ ಹಸ್ತಪ್ರತಿಗಳು ಮಲಮಗ. ಆದುದರಿಂದ ಈ ಕ್ಷೇತ್ರದಲ್ಲಿ ಏನಾದರೂ ಕೆಲಸವಾಗಿದ್ದರೆ ಅದು ವಿಶ್ವವಿದ್ಯಾಲಯಗಳಿಂದ ಮಾತ್ರ, ಅದೂ ಕೆಲಮಟ್ಟಿಗೆ. ಈಗ ರಾಜ್ಯದಲ್ಲಿ ೬ ವಿಶ್ವವಿದ್ಯಾಲಯಗಳಿವೆ. ಹಳ್ಳಿಯಿಂದ ಹಳ್ಳಿಗೆ ಸಂಚರಿಸಿ ಯೋಜನಾಬದ್ಧವಾಗಿ ಸಮಗ್ರ ಕ್ಷೇತ್ರಕಾರ್ಯವನ್ನು ಇವು ಕೈಗೆತ್ತಿಕೊಳ್ಳಬೇಕು; ತಮತಮಗೆ ಹೊಂದಿಕೊಂಡಿರುವ ಹೊರನಾಡುಗಳಿಗೂ ಕೈಚಾಚಬೇಕು. ಹೊಸದಾಗಿ ತಲೆಯೆತ್ತಿರುವ ಮಂಗಳೂರು, ಗುಲ್ಬರ್ಗಾ ವಿಶ್ವವಿದ್ಯಾಲಯಗಳು ಈ ದಿಸೆಯಲ್ಲಿ ಹೆಚ್ಚು ದುಡಿಯಬೇಕು. ಆಮೆಗತಿಯ ಕೆಲಸಕ್ಕೆ ಹೆಸರಾಗಿರುವ ಸರ್ಕಾರಿ ಸಂಸ್ಥೆಗಳಿಂದ ಈ ಕೆಲಸ ಖಂಡಿತ ಆಗದು. ವಿಶ್ವವಿದ್ಯಾಲಯಗಳೇ ಒಂದು ನಿರ್ದಿಷ್ಟ ಅವಧಿಯ ಯೋಜನೆ ಹಾಕಿಕೊಂಡು ಈ ಕೆಲಸವನ್ನು ಮಾಡಿ ಮುಗಿಸಬೇಕು.

ಸಂಗ್ರಹಿತ ಹಸ್ತಪ್ರತಿ ಗಳನ್ನು ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆ ಶಾಸ್ತ್ರೀಯವಾಗಿ ಕಾಪಾಡುತ್ತಲಿದೆ. ಜೀರ್ಣ, ಅಲಭ್ಯ ಹಸ್ತಪ್ರತಿಗಳನ್ನು ಮೈಕ್ರೋಫಿಲ್ಮ ಮಾಡಿ ರಕ್ಷಿಸುತ್ತಲಿದೆ. ಸೂಚಿಗಳನ್ನು ಪ್ರಕಟಿಸುತ್ತಲಿದೆ.

(ಈ ಸೂಚಿಗಳು ಕೆಲಮಟ್ಟಿಗೆ ಅಸಮರ್ಪಕವಾಗಿವೆಯೆಂಬುದು ಬೇರೆ ಮಾತು). ಆದರೆ ಕರ್ನಾಟಕ, ಬೆಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಹಸ್ತಪ್ರತಿಗಳು ಅರೆರಕ್ಷಿತ ಸ್ಥಿತಿಯಲ್ಲಿವೆ; ಸೂಚೀಕಾರ್ಯ ಅಲಕ್ಷಿತವಾಗಿದೆ. ಇಂದಿನ ಅನಾಸಕ್ತ ಪರಿಸರವನ್ನು ನೋಡಿದರೆ "ಕ್ಯಾಟ್‌ಲಾಗಸ್ ಕ್ಯಾಟಲಾಗರಮ್ ಆಫ್ ಕನ್ನಡ ಮಾನುಸ್ಕ್ರಿಪ್ಟ್ಸ್" ಸಿದ್ಧಪಡಿಸುವುದು ಕನ್ನಡಿಗರಿಗೆ ಕನಸಿನ ಮಾತೇ ಸರಿ. ಕನ್ನಡ ಅಧ್ಯಯನ ಪೀಠ ೧೦ ವರುಷದ ಹಿಂದೆ ಕೈಗೆತ್ತಿಕೊಂಡ ಇಂಥ ಒಂದು ಯೋಜನೆ ಒಳ್ಳೆಯ ಭವಿಷ್ಯವಿಲ್ಲದೆ ಕೊನೆಯುಸಿರೆಳೆಯಿತು. ಈ ಎಲ್ಲ ಕೊರತೆಗಳನ್ನು ತುಂಬಿಕೊಳ್ಳುವುದರತ್ತ ನಮ್ಮ ನಾಡಿನಲ್ಲಿ ಹಸ್ತಪ್ರತಿ ಕ್ಷೇತ್ರಕಾರ್ಯ ಇಂದು ಮುನ್ನಡೆಯಬೇಕಾಗಿದೆ.

■■

ಆಕರ : ಮಾರ್ಗ ಸಂಪುಟ–೨

೨೮

ಇಂಗ್ಲಂಡದಲ್ಲಿ ಕನ್ನಡ ಹಸ್ತಪ್ರತಿಗಳು

ವಿಶ್ವವಿದ್ಯಾಲಯ ಧನಸಹಾಯ ಆಯೋಗದ ನೆರವಿನಿಂದ ೧೯೮೨ರ ಅಕ್ಟೋಬರ್ ೧೪ರಿಂದ ನವೆಂಬರ್ ೨೬ರ ವರೆಗೆ, ಆರು ವಾರಗಳ ಕಾಲ ಕನ್ನಡ ಹಸ್ತಪ್ರತಿಗಳ ಅನ್ವೇಷಣೆ - ಅಧ್ಯಯನಕ್ಕೋಸುಗ ಇಂಗ್ಲಂಡಕ್ಕೆ ಹೋಗುವ ಅವಕಾಶ ನನಗೆ ಪ್ರಾಪ್ತವಾಗಿದ್ದಿತು. ಈ ಅವಧಿಯಲ್ಲಿ ನಾನು ಲಂಡನ್, ಆಕ್ಸಫರ್ಡ ಮತ್ತು ಕೇಂಬ್ರಿಜ್‌ಗಳಲ್ಲಿ ಶೋಧಿಸಿದ ಕನ್ನಡ ಹಸ್ತಪ್ರತಿಗಳ ವಿವರ ಹೀಗಿದೆ:

ಲಂಡನ್

ಇಂಗ್ಲಂಡ ದೇಶದ ರಾಜಧಾನಿಯಾದ ಲಂಡನ್ ಒಂದು ಸಾಂಸ್ಕೃತಿಕ ಪಟ್ಟಣ. ಕನ್ನಡಹಸ್ತಪ್ರತಿಗಳಿಗಾಗಿ ನಾನು ಇಲ್ಲಿಯ ೧. ಇಂಡಿಯಾ ಆಫೀಸ ಲೈಬ್ರರಿ ೨. ಬ್ರಿಟಿಷ್ ಲೈಬ್ರರಿ ೩. ಬ್ರಿಟಿಷ್ ಮ್ಯೂಜಿಯಂ ೪. ಸ್ಕೂಲ್ ಆಫ್ ಓರಿಯಂಟಲ್ ಆ್ಯಂಡ್ ಆಫ್ರಿಕನ್ ಸ್ಟಡೀಜ್ ೫. ವೆಲ್‌ಕಮ್ ಇನ್‌ಸ್ಟಿಟ್ಯೂಟ್ ಆಫ್ ಹಿಸ್ಟರಿ ಆಫ್ ಮೆಡಿಶನ್ ೬. ರಾಯಲ್ ಏಸಿಯಾಟಿಕ್ ಸೊಸೈಟಿ ೭. ಬೈಬಲ್ ಸೊಸೈಟಿ- ಹೀಗೆ ಏಳು ಸಂಸ್ಥೆಗಳನ್ನು ಸಂದರ್ಶಿಸಿದೆನು.

ಇಂಡಿಯಾ ಆಫೀಸ್ ಲೈಬ್ರರಿ :

ಲಂಡನ್‌ದಲ್ಲಿ ವಾಟರ್‌ಲೂ ಟ್ಯೂಬ್ ಸ್ಟೇಶನ್ ಸಮೀಪದಲ್ಲಿ ಬ್ಲಾಕ್ ಫ್ರೇಯರ್ ಮಾರ್ಗದ ಮೇಲೆ ಈ ಗ್ರಂಥಾಲಯವಿದೆ. ಭಾರತೀಯ ಎಲ್ಲ ಪ್ರಾಂತಗಳಿಗೆ ಸಂಬಂಧಿಸಿದ ಪ್ರಾಚೀನ ಗ್ರಂಥ, ದಾಖಲೆಗಳನ್ನೊಳಗೊಂಡ ಅಪೂರ್ವ ಭಾಂಡಾರವಿದು. ಆಯಾ ಪ್ರಾಂತಗಳ ಆಧುನಿಕ ಗ್ರಂಥಗಳೂ ಇಲ್ಲಿ ಕೆಲವು ಸಂಖ್ಯೆಯಲ್ಲಿವೆ.

ಇಲ್ಲಿಯ ಕನ್ನಡ ಭಾಷೆಯ ಸಂಪತ್ತನ್ನು ಮುದ್ರಿತಗ್ರಂಥಗಳು, ಹಸ್ತಪ್ರತಿಗಳು, ದಾಖಲೆಗಳು ಎಂದು ವರ್ಗೀಕರಿಸಬಹುದು. ದ್ರಾವಿಡ ಭಾಷೆಗಳಾದ ತಮಿಳು, ತೆಲುಗು, ಹಸ್ತಪ್ರತಿಗಳ ಯಾದಿಯನ್ನು ರೋಮನ್‌ಲಿಪಿಯಲ್ಲಿ ಟೈಪ್‌ಮಾಡಿ ಇಡಲಾಗಿದೆ. ಆದರೆ ಇದೇ ಫೈಲಿನಲ್ಲಿರುವ ಸುಮಾರು ೧೪ ಕನ್ನಡ ಹಸ್ತಪ್ರತಿಗಳ ಯಾದಿ ಮಾತ್ರ ಕೈಬರಹದ್ದಿದೆ. ಕನ್ನಡ ಬಲ್ಲ, ಆದರೆ ಪ್ರಾಚೀನ ಹಸ್ತಪ್ರತಿ ಓದಲು ಬಾರದ ಕನ್ನಡಿಗನ ನೆರವಿನಿಂದ ರೋಮನ್‌ಲಿಪಿಯಲ್ಲಿ ಇದನ್ನು ಬರೆಯಿಸಲಾಗಿದೆ. ಹೀಗಾಗಿ ಈ ಯಾದಿ ದೋಷಪೂರ್ಣವಾಗಿದೆ.

ಇಂಗ್ಲೀಷ್ ವ್ಯಕ್ತಿಯನ್ನು ಮದುವೆಯಾದ, ತಮಿಳು ಮಾತೃಭಾಷೆಯ ಶ್ರೀಮತಿ ಮೀರಾ ಡಾಸನ್ ಇಲ್ಲಿಯ ದ್ರಾವಿಡಭಾಷಾವರ್ಗದ ಗ್ರಂಥಗಳನ್ನು ನೋಡಿಕೊಳ್ಳುತ್ತಾಳೆ. ಇವಳಿಗೆ ಕನ್ನಡ ಲಿಪಿ ಪರಿಚಯ ಅಲ್ಪ, ಭಾಷಾ ಪರಿಚಯ ಇನ್ನೂ ಅಲ್ಪ. ಹೀಗಾಗಿ ಇವಳಿಗೆ ಆಸಕ್ತಿಯಿದ್ದರೂ ಇಲ್ಲಿಯ ಕನ್ನಡ ಹಸ್ತಪ್ರತಿಗಳ ಸಮಗ್ರ ಯಾದಿ ಇನ್ನೂ ಸಿದ್ಧವಾಗಿಲ್ಲ. ಕನ್ನಡ ಹಸ್ತಪ್ರತಿಗಳನ್ನು ಇಲ್ಲಿ ಒಂದೇ ಕಡೆಗೆ ಇಟ್ಟಿಲ್ಲ. ಅಲ್ಲೊಂದು ಇಲ್ಲೊಂದು ಸೇರಿ ಹೋಗಿವೆ. ಸಂಸ್ಕೃತಕೃತಿಗಳಿಗಿರುವ ಕನ್ನಡ ಟೀಕಾಗ್ರಂಥಗಳು ಸಂಸ್ಕೃತವಿಭಾಗದಲ್ಲಿ ಸೇರಿಕೊಂಡಿವೆ. ಲಿಪಿಸಾಮ್ಯ ಕಾರಣವಾಗಿ ಕೆಲವು ಕನ್ನಡ ಗ್ರಂಥಗಳು ತೆಲುಗು ವಿಭಾಗದಲ್ಲಿ ಸೇರಿಕೊಂಡಿವೆ. ಕನ್ನಡ ಲಿಪಿಯಲ್ಲಿ ಬರೆದ ಸಂಸ್ಕೃತ ಗ್ರಂಥಗಳು ಕನ್ನಡ ವಿಭಾಗದಲ್ಲಿ ಸೇರಿಬಿಟ್ಟಿವೆ. ಹೀಗೆ ಅಸ್ತವ್ಯಸ್ತವಿರುವ ಈ ರಾಶಿಯನ್ನು ನಾನು ಶೋಧಿಸಲಾಗಿ ಬೆಳಕಿಗೆ ಬಂದಿರುವ ಇಲ್ಲಿಯ ತಾಳೆಗರಿ, ಕೋರಿ ಕಾಗದ, ಕಡತ, ಆಧುನಿಕ ಕಾಗದಗಳ ಮೇಲೆ ಬರೆದ ಹಸ್ತಪ್ರತಿಗಳು ಹೀಗಿವೆ:

I.ತಾಳೆಗರಿ ಹಸ್ತಪ್ರತಿಗಳು :

೧. ನಂಜರಾಜವಾಣೀವಿಲಾಸ ಅಥವಾ ಹರಿವಂಶ-ಕಳಲೆ ನಂಜರಾಜ
Mss, Kan PL-i ; ಆಕಾರ: 49"x2 1/2"; ಗರಿ: ೧-೩೮೦; ಗದ್ಯ

೨. ಬಸವಪುರಾಣ-ಭೀಮಕವಿ.

Mss. Kan, PL-5; ಅಕಾರ: ೧೭"x೨"; ಗರಿ;೧-೧೭೫; ಭಾಮಿನಿ ಷಟ್ಪದಿ.

೩. i. ತೊರವೆಯ ರಾಮಾಯಣ-ಕುಮಾರ ವಾಲ್ಮೀಕಿ.

Mss. Kan. PL-೩; ಆಕಾರ: ೧೩"x೨"; ಗರಿ: ೧-೨೩೫; ಭಾಮಿನಿ ಷಟ್ಪದಿ.
ii. ಉತ್ತರ ರಾಮಾಯಣ -ತಿರುಮಲೆ ವೈದ್ಯ.
Mss. Kan. PL-೩; ಆಕಾರ: ೧೩"x೨"; ಗರಿ: ೧x೧೪; ಭಾಮಿನಿ ಷಟ್ಪದಿ

೪. ಭಗವದ್ಗೀತಾರ್ಥದ ವಿವರಣ - ಕರ್ತೃ ?
Mss. Kan PL-೪; ಆಕಾರ:೮ ೧/೨x೧/೨"; ಗರಿ : ೧-೨೮;
(ಅಪೂರ್ಣ) ಸಂಸ್ಕೃತ ಶ್ಲೋಕ+ಕನ್ನಡ ವಿವರಣೆ.

೫. ಶಬ್ದಾನುಶಾಸನವೃತ್ತಿ -ಭಟ್ಟಾಕಳಂಕ,
Mss. T.O. ೩೫೪೧; ಆಕಾರ : "೧೪"x೧ ೧/೪"; ಗರಿ: ೧-೨೨೦;
(ಅಪೂರ್ಣ, ದೇವನಾಗರಿ ಲಿಪಿ) ಸಂಸ್ಕೃತ ಸೂತ್ರ+ವ್ಯಾಖ್ಯಾನ.

೬. ಗೀತೆಗೆ ಟೀಕು-ರಾಮಚಂದ್ರಾರ್ಯ.
Mss. T.O. ೩೭೧೦; ಆಕಾರ:೧೨"x೧ ೧/೪"; ಗರಿ: ೧-೧೬೦;
ಸಂಸ್ಕೃತಶ್ಲೋಕ+ಕನ್ನಡ ಟೀಕೆ.

೭. ಪಾಠ್ಯಾ ಗಣಿತಸಾರ-ಶ್ರೀಧರಾಚಾರ್ಯ
Mss. mack II 35a; ಆಕಾರ: ೧೬"x ೧ ೧/೨"; ಗರಿ: ೧-೬೩;
(ದೇವನಾಗರಿ ಲಿಪಿ) ಸಂಸ್ಕೃತ ಶ್ಲೋಕ+ಕನ್ನಡ ವ್ಯಾಖ್ಯಾನ

೮. ಗೀತಾ ಸಾರಸಂಗ್ರಹ-ಕರ್ತೃ?
Mss. Mack II 10a; ಆಕಾರ : ೨೧"x೨ ೧/೪"; ಗರಿ: ೧-೧೩;
ಸಂಸ್ಕೃತಶ್ಲೋಕ+ಕನ್ನಡ ಟೀಕೆ.

೯. ಕೌಶಿಕ ಪುರಾಣೇ ವರಾಹಾವತಾರ ಮಹಾತ್ಮೆ -ಕರ್ತೃ?
Mss. Mack V. 10c. ೬೯೬೭; ಆಕಾರ: ೨೧"x ೨ ೧/೪"; ಗರಿ :೧-೬

೧೦. ಭಗವದ್ಗೀತೆಯ ವ್ಯಾಖ್ಯಾನ-ಕರ್ತೃ?
Mss. Mack V 12a; ಆಕಾರ : ೧೫"x೧ ೧/೨"; ಗರಿ: ೧-೧೫
(ಅಪೂರ್ಣ) ಸಂಸ್ಕೃತ ಶ್ಲೋಕ+ಭಾಮಿನಿ ಷಟ್ಪದಿ.

೧೧. ವ್ಯಾಕರಣ-ಕರ್ತೃ?
Mss. Mack V 15. 6908; ಆಕಾರ: ೧೫"x೧ ೧/೮"; ಗರಿ: ೧-೬೪
(ಜೈನ ಜ್ಯೋತಿಷ್ಯಗ್ರಂಥ) ಸಂಸ್ಕೃತಶ್ಲೋಕ+ಕನ್ನಡಟೀಕೆ.

೧೨. ಜ್ಯೋತಿಷ್ಯ-ಕರ್ತೃ?
Mss. Mack V 18. 6386; ಆಕಾರ: ೧೦"x೧"೩/೮; ಗರಿ: ೧-೧೨೬;
(ಜೈನ ಕೃತಿ) ಸಂಸ್ಕೃತಶ್ಲೋಕ+ಕನ್ನಡಟೀಕೆ. ಫಲಕದ ಮೇಲೆ 'ಜೋತಿಷ್ಯ ಸಂಗ್ರಹ' ಎಂದಿದೆ.

೧೩. ಗಣಿತಸಾರಸಂಗ್ರಹ-ಮಹಾವೀರಾಚಾರ್ಯ
Mss. mack V 19; ಆಕಾರ : ೧೦"x೧"; ಗರಿ ೧-೭೬.
ಸಂಸ್ಕೃತಶ್ಲೋಕ+ಕನ್ನಡ ಟೀಕೆ.

೧೪. ಮಾನಸಾರ ಟೀಕೆ-ಕರ್ತೃ?
Mss. Mack V. 26a. ೬೪೭೪; ಆಕಾರ ೧೯ ೧/೪"x೧ ೫/೮"; ಗರಿ: ೧-೮೫
(ಸಂಸ್ಕೃತಶ್ಲೋಕ+ಕನ್ನಡ)ಫಲಕದ ಮೇಲೆ 'ಶಿಲ್ಪಶಾಸ್ತ್ರ ಸಂಗ್ರಹ' ಎಂದು ಬರೆಯಲಾಗಿದೆ.

೧೫. ದ್ವಾದಶಾನುಪ್ರೇಕ್ಷೆ-ವಿಜಯಣ್ಣ.
Mss. Mack V. 29; ಆಕಾರ: ೧೧ ೧/೨"x೧ ೧/೨"; ೧-೧೦೩;
ಸಾಂಗತ್ಯ

೧೬. ಆಯುರ್ವೇದೋಕ್ತಸಾರ? -ಕರ್ತೃ?
Mss. Mack XII 7; ೭೨೫೪; ಆಕಾರ ೧೯x೨"', ಗರಿ ೩-೩೩;
ಸಂಸ್ಕೃತ ಪದ್ಯ+ಕನ್ನಡ ಟೀಕೆ. ಫಲಕದ ಮೇಲೆ 'ಆಯುರ್ವೇದ' ಎಂದಿದೆ.

೧೭. ಗಣಿತಸಾರ-ಮಹಾವೀರಾಚಾರ್ಯ
Mss. Mack XII 9a; ಆಕಾರ: ೧೨ ೧/೨"x೧;"ಗರಿ:೧-೮೯;

೧೮. ಪರಂಜ್ಯೋತಿ ಮಂತ್ರ-ಕರ್ತೃ?
Mss. 3682g; ಆಕಾರ: ೮ ೭/೮"x೧ ೩/೮"; ಗರಿ: ೧-೩;
ಸಂಸ್ಕೃತ +ಕನ್ನಡ

II. ಕೋರಿಕಾಗದ ಹಸ್ತಪ್ರತಿಗಳು :

೧೯. ಸಿಬಿರಾಯನ ಚರಿತ್ರೆ - ಪಂಚಯ್ಯ
Mss B2; ಆಕಾರ: ೯"x೭"; ಹಾಳೆ ೧-೨೮; ತ್ರಿಪದಿ.

೨೦. ಕರಿಯಬಂಟನ ಕಾಳಗ-ಶಂಕೈಯ್ಯ.
Mss. B3; ಆಕಾರ: ೯"x೭"; ಹಾಳೆ-೨೩;ಯಕ್ಷಗಾನ.

೨೧. ವಡೇರಪಟ್ಟು-ಕರ್ತೃ?
Mss.B4; ಆಕಾರ: ೬ ೭/೮"x೪ ೩/೮; ಪು, ೧-೧೪೫; ಗದ್ಯ, ಮೈಸೂರ ಒಡೆಯರ ಚರಿತ್ರೆ.

೨೨. ವಿವೇಕ ಚಿಂತಾಮಣಿ-ನಿಜಗುಣ ಶಿವಯೋಗಿ.
Mss. Cl; ಆಕಾರ: ೬"x೧೦"; ಹಾಳೆ ೧-೧೪೨;ಗದ್ಯ.

೨೩. ಬಸವಪುರಾಣ -ಭೀಮ ಕವಿ .
Mss. C3; ಆಕಾರ: ೧೩"x೧೦"; ಹಾಳೆ ೧-೧೧೦ & ೧-೨೨೭; ಭಾಮಿನಿ ಷಟ್ಪದಿ.

೨೪. ಜೈಮಿನಿ ಭಾರತ -ಲಕ್ಷ್ಮೀಶ .
Mss. D1; ಆಕಾರ: ೧೨"x೮ ೧/೨"; ಹಾಳೆ ೮೧. ವಾರ್ಧಕ ಷಟ್ಪದಿ.

೨೫. ಪಂಚತಂತ್ರ -ಕರ್ತೃ?
Mss. D2; ಆಕಾರ: ೧೨"x೮"; ಹಾಳೆ ೧-೯೬, ಗದ್ಯ

೨೬. ಭಾಗವತ -ನಿತ್ಯಾತ್ಮಶುಕಯೋಗಿ.
Mss. D3; ಆಕಾರ: ೯"x೧೨"; ಹಾಳೆ ೧-೧೫೪, ಭಾಮಿನಿ ಷಟ್ಪದಿ.

೨೭. ಜೈಮಿನಿ ಭಾರತ -I- ಲಕ್ಷ್ಮೀಶ .
Mss. D4; ಆಕಾರ: ೧೨"x೧೨"; ಹಾಳೆ ೧-೧೦೪, ವಾರ್ಧಕ ಷಟ್ಪದಿ.

೨೮. ಜೈಮಿನಿ ಭಾರತ -II- ಲಕ್ಷ್ಮೀಶ .
Mss. D5; ಆಕಾರ: ೧೨"x೮"; ಹಾಳೆ ೧-೭೨, ವಾರ್ಧಕ ಷಟ್ಪದಿ.

೨೯. ಹಮ್ಮೀರ ಕಾವ್ಯ - ಮುರಿಗೆದೇಶಿಕೇಂದ್ರ.
Mss. D6; ಆಕಾರ: ೮"x೧೧" ೧/೨; ಹಾಳೆ ೧-೩೮, ಚಂಪೂ

೩೦. ವಿವೇಕ ಚಿಂತಾಮಣಿ -ನಿಜಗುಣ ಶಿವಯೋಗಿ
Mss. D7; ಆಕಾರ: ೧೨"x೧೮"; ಹಾಳೆ ೧-೩೨೪ ಗದ್ಯ

೩೧. ಅನುಭವ ಶಿಖಾಮಣಿ -ನಾರಸಿಂಹ

Mss. D8 ; ಆಕಾರ: ೮"x೧೨"; ಹಾಳೆ ೧-೯೯, ಭಾಮಿನಿ- ವಾರ್ಧಕ -ಶರಷಟ್ಪದಿ

೩೨. ಮಹಿಶೂರ ದೊರೆಗಳ ಪೂರ್ವಾಭ್ಯುದಯ - ಕರ್ತೃ?

Mss.I.O 2914 ; ಆಕಾರ: ೭ ೧/೨"x೪"; ಪುಟ-೧-೩೭

೩೩. ರತ್ನಕರಂಡಕದ ವ್ಯಾಖ್ಯಾನ -ಕರ್ತೃ

Mss B. 433a ; ಆಕಾರ: ೮ ೧/೨"x೧೧"; ಪುಟ ೧-೧೭

ಸಂಸ್ಕೃತ + ಕನ್ನಡ ವ್ಯಾಖ್ಯಾನ

೩೪. ಸಿದ್ಧಾಂತ ಸಾರ -ಕರ್ತೃ?

Mss.B. 430B ; ಆಕಾರ: ೮"x೬ ೧/೨"; ಹಾಳೆ ೧-೪೬

ಪ್ರಾಕೃತ + ಕನ್ನಡ ಟೀಕೆ

೩೫. ಪ್ರಕೃತಿಸತ್ಯ -ಕರ್ತೃ

(Mss.B 430 C) ; ಆಕಾರ: ೮"x೬ ೧/೨"; ಹಾಳೆ ೪೭-೮೦

ಪ್ರಾಕೃತ + ಕನ್ನಡ ಟೀಕೆ

III, ಕಡತಗಳು :

೩೬. ಕಡತ -ಕರ್ತೃ?

Mss.B.I.; ; ಆಕಾರ: ೭"x೮"; ಮಡಿಕೆ ೫೭

ಗದ್ಯ. ಬಡಿಗತನದ ಖರ್ಚಿನ ವಿವರ.

೩೭. ಕುಂಬಟೆ ಮಾಗಣಿ ವಕಲು ವರ್ಗದ ಕಡತ -ಧಾರೇಶ್ವರದ ಹಾಲಯ್ಯ

Mss.C2.; ; ಆಕಾರ: ೧೦"x೯ ೧/೨"; ಮಡಿಕೆ ೭೭ ಗದ್ಯ

IV ಆಧುನಿಕ ಕಾಗದ ಹಸ್ತಪ್ರತಿ :

೩೮. ಕನ್ನಡ ಹಸ್ತಪ್ರತಿಗಳ ಪಟ್ಟಿ -ಕರ್ತೃ

Mss.lo 2907 ; ಆಕಾರ: ೯"x೧ ೧/೨"; ಪುಟ ೧-೩೨

ಗದ್ಯ, ಸುಮಾರು ೫೦೦ ರಷ್ಟು ಸಂಸ್ಕೃತ ಕನ್ನಡ ತೆಲುಗು ಹಸ್ತಪ್ರತಿಗಳ ಯಾದಿ.

೩೯. i. ನಳ ಚಕ್ರವರ್ತಿ ಕಥೆii. ಹಿತೋಪದೇಶ

iii. ನಳಚಕ್ರವರ್ತಿಯ ಕಥೆ iv. ಹರಿಶ್ಚಂದ್ರ ಕಥೆ.

Mss.lo 3140 ; ಆಕಾರ: ೮" ೧/೨x ೬";

ಪುಟ ೧-೩೩, ೩೩-೧೫೧, ೧೫೩-೨೪೨, ೨೪೩-೩೮೮ ಗದ್ಯ

೪೦. ಹುಕುಂ ನಾಮಾ - ಕರ್ತೃ

Mss.10. ಆಕಾರ: ೪೫೩೭; ೧೨"x೮ ೧/೨"; ಹಾಳೆ ೧-೯, ಗದ್ಯ, ರೆವಿನ್ಯೂ ವಿಷಯ

೪೧. ಆನೆಗೊಂದಿ ಅರಸು ತಿಮ್ಮಪ್ಪನವರ ಪೂರ್ವದ ಕೈಫಿಯತ್ತು -ಬೋರಯ್ಯ
Mss.mack General X; ; ಆಕಾರ: ೬"x೧೪"; ಪುಟ ೬೧-೬೩ ಗದ್ಯ.

V ಇಂಗ್ಲೀಷ್ ಕನ್ನಡ ಭಾಷೆಯ ಆಧುನಿಕ ಕಾಗದ ಹಸ್ತಪ್ರತಿಗಳು :

೪೨. Kanerese Revenue terms -ಕರ್ತೃ?
Mss.Eng. D-138; ಆಕಾರ: ೧೩"x೯"; ಹಾಳೆ ೫೨೦-೫೩೮
ಕನ್ನಡ ರೆವಿನ್ಯೂ ಶಬ್ದಗಳಿಗೆ ಇಂಗ್ಲೀಷಿನಲ್ಲಿ ಅರ್ಥ, ರೋಮನ್ ಲಿಪಿ

೪೩. Glossary of South Indian terms -ಕರ್ತೃ?
Mss.Eur. D-270 ; ಆಕಾರ: ೧೧"x೧೦"; ಪುಟ ೧೮೧-೧೯೬ & ೧೯೭-೨೩೦
ಕನ್ನಡ ರೆವಿನ್ಯೂ ಶಬ್ದಗಳಿಗೆ ಇಂಗ್ಲೀಷಿನಲ್ಲಿ ಅರ್ಥ

೪೪. Tables of Karnataka Cronology - C.P. Brown
Mss.Eur. D-297 ; ಆಕಾರ: ೮"x೧೨ ೧/೨"; ಹಾಳೆ ೩-೧೬
ಕ್ರಿ.ಶ. ೯೬೭ರಿಂದ ೧೮೪೭ರ ವರೆಗಿನ ಸಂವತ್ಸರಗಳನ್ನು ಆ ಕಾಲದಲ್ಲಿ ಆಗಿಹೋದ ಅರಸರುಗಳ ಹೆಸರುಗಳನ್ನು ಬರೆಯಲಾಗಿದೆ.

೪೫. Index to the manuscripts in Telagu, Kannada, Tamil, Malayam and Odhara - C.P. Brown
Mss.Tel. D-10 ; ಆಕಾರ: ೮ ೧/೨"x೧೩"; ಪುಟ ೭೫-೮೮
ಹಸ್ತಪ್ರತಿಗಳ ಯಾದಿ, ಸುಮಾರು ೮೦೦ ಕನ್ನಡ ಕೃತಿಗಳ ಉಲ್ಲೇಖ.

೪೬. Polyglotal of Vocabulary Volume -I -ಕೋಲಬ್ರುಕ್
Mss.10. 156 ; ಆಕಾರ: ೧೩"x೯ ೧/೨ "; ಹಾಳೆ ೧-೧೮೯
ಅಮರಕೋಶಕ್ಕೆ ಸಂಸ್ಕೃತ ಮರಾಠಿ, ಗುಜರಾಥಿ, ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಬರೆದ ಸಮಾನಾರ್ಥ ಪದಕೋಶ

೪೭. Polyglotal of Vocabulary Volume -II -ಕೋಲಬ್ರುಕ್
Mss.10. 157 ; ಆಕಾರ: ೧೩"x೯ ೧/೨ "; ಹಾಳೆ ೧-೧೮೫
ನಂ. ೪೬ರ ಮುಂದುವರಿಕೆ.

ಜೆ.ಬಿ. ಪಿಯರ್‌ಸನ್ ಅವರು ತಮ್ಮ "Oriental Manuscripts in Eupore and North America" ಎಂಬ ಗ್ರಂಥದಲ್ಲಿ ಇಂಡಿಯಾ ಆಫೀಸ್ ಲೈಬ್ರರಿಯ ಹಸ್ತಪ್ರತಿಗಳನ್ನು ಕುರಿತು 'The remaining Dravidin Mass. Include kanearase 14, Tamil 34, Telagu ೧೩ ಎಂದು ಹೇಳಿದ್ದಾರೆ. (ಪುಟ ೩೮೭) ಬಹುಶಃ ಈ ೧೪ ಹಸ್ತಪ್ರತಿಗಳು ಮೇಲೆ ವಿವರಿಸಿದ ೪೭ ಹಸ್ತಪ್ರತಿಗಳಲ್ಲಿ ಸೇರ್ಪಡೆಯಾಗಿವೆ.

೧೮೭೮ರಲ್ಲಿ ಡಾ. ಫ್ಲೀಟ್ ಸಿದ್ಧಪಡಿಸಿದ Pali Sansktrit and old Canarese Inscriptions form the Bombay presiedency and part of madras Presidency and maisur" ಎಂಬ ಗ್ರಂಥವು ಶಾಸನಗಳ ಪಾಠ(Text)ವನ್ನೊಳಗೊಂಡಿದೆಯೆಂದು ಈವರೆಗೆ ನನ್ನ ಮತ್ತು ಅನೇಕರ ಭಾವನೆಯಾಗಿತ್ತು.

ಆದರೆ ಇದು ೨೮೬ ಶಾಸನಗಳ ಫೋಟೋ ಮತ್ತು ಇಂಗ್ಲೀಷ್ ಸಾರವಾಗಿದೆ. ಈ ಗ್ರಂಥದ ಎರಡು ಪ್ರತಿಗಳು (W. 4826, W. 4827) ಇಲ್ಲಿವೆ.

ಬ್ರಿಟಿಷ್ ಲೈಬ್ರರಿ :

ಇದು ಸ್ಟೋರ್ ಸ್ಟ್ರೀಟ್ ಮೇಲಿರುವ ಗ್ರಂಥಭಾಂಡಾರ. ಇಲ್ಲಿ ೯೩ ಭಾಷೆಗಳ ಮುದ್ರಿತ ಮತ್ತು ಹಸ್ತಲಿಖಿತ ಗ್ರಂಥಗಳಿವೆ. ಇಲ್ಲಿಯ ಕನ್ನಡ ವಿಭಾಗ ನೋಡಿಕೊಳ್ಳುವವರು ಭಾರತೀಯನನ್ನು ಮದುವೆಯಾದ ಇಂಗ್ಲೀಷ್ ಮಹಿಳೆ ಶ್ರೀಮತಿ. ಅಲ್ಬರ್ಟಿನ್ ಗೌರ್.

ಈ ಮೊದಲು ಎಲ್.ಡಿ.ಬಾರ್ನೆಟ್ ಅವರು "A catalouge of the Kannada, Badaga and kurg Books in the library of British Musium" (೧೯೧೦) ಹೆಸರಿನಿಂದ ಕನ್ನಡದ ಮುದ್ರಿತ ಗ್ರಂಥಗಳ ಸೂಚಿಯನ್ನು ಪ್ರಕಟಿಸಿದುದು ತಿಳಿದ ವಿಷಯವೇ ಆಗಿದೆ. ಆಮೇಲೆ ಸಂಗ್ರಹಗೊಂಡ ೧೯೧೦ರಿಂದ ೧೯೭೦ರ ಅವಧಿಯ ಮುದ್ರಿತ ಕನ್ನಡ ಗ್ರಂಥಗಳ ಸೂಚಿಯನ್ನು ಶ್ರೀಮತಿ ಗೌರ್ ಸಿದ್ಧಪಡಿಸಿದ್ದಾರೆ. ಇಂಡಿಯಾ ಆಫೀಸ್ ಲೈಬ್ರರಿಯಲ್ಲಿರುವ ೧೯೦೦ರ ಹಿಂದಿನ ಮುದ್ರಿತ ಕನ್ನಡ ಗ್ರಂಥಗಳ ಸೂಚಿಯನ್ನು ಶ್ರೀ ಶ್ರೀನಿವಾಸ ಹಾವನೂರ ಸಿದ್ಧಪಡಿಸಿದ್ದು, ಇವೆರಡನ್ನೂ ಸೇರಿಸಿ ಸಿದ್ಧಪಡಿಸುವ "Supplementary catalouge of Kannada Books in the British Library" ಹೆಸರಿನ ಗ್ರಂಥ ಸೂಚಿ ೧೯೮೫ರಲ್ಲಿ ಪ್ರಕಟವಾಗಿದೆ. ಇದರ ಸಂಪಾದಕರು ಶ್ರೀಮತಿ ಅಲ್ಬರ್ಟಿನ್ ಗೌರ್. ಸಹಾಯಕರು ಶ್ರೀನಿವಾಸ ಹಾವನೂರ.

ಇಲ್ಲಿರುವ ಕನ್ನಡ ಹಸ್ತಪ್ರತಿಗಳ ಒಂದು ಯಾದಿಯನ್ನು ರೋಮನ್ ಲಿಪಿಯಲ್ಲಿ ಬೆರಳಚ್ಚುಗೊಳಿಸಿದ್ದಾರೆ. ಹಸ್ತಪ್ರತಿ ಓದುವಲ್ಲಿ ಪರಿಣತನಲ್ಲದ ಕನ್ನಡಿಗನ ಸಹಾಯದಿಂದ ಸಿದ್ಧಪಡಿಸಿರುವ ಈ ಯಾದಿ ದೋಷಪೂರ್ಣವಾಗಿದೆ. ನನ್ನ ಪ್ರಯತ್ನದಿಂದ ಇಲ್ಲಿ ಲಭ್ಯವಾದ ಹಸ್ತಪ್ರತಿಗಳ ವಿವರ ಹೀಗಿದೆ:

I. ತಾಳೆಗರಿ ಹಸ್ತಪ್ರತಿಗಳು :

೧. ಅಶ್ವಮೇಧ-ಕರ್ತೃ?
Add. ೧೨೦೮೮; ಆಕಾರ: ೧೧"x೧"; ಗರಿ ೮. ಯಕ್ಷಗಾನ

೨. ಇಂದ್ರಕೀಲ ಪ್ರಸಂಗ-ಕರ್ತೃ ?
Add. ೧೪೩೭೦; ಆಕಾರ : ೧೬ ೧/೨" ೧/೨; ಗರಿ: ೧-೩೪. ಯಕ್ಷಗಾನ.

೩. ಅತಿಕಾಯನ ಕಾಳಗ -ಕರ್ತೃ ?
Add. ೧೪೩೭೧; ಆಕಾರ : ೧೬ ೧/೨x೧ ೧/೨ "; ಗರಿ: ೭-೩೧. ಯಕ್ಷಗಾನ.

೪. i) ಮಂತ್ರಗೋಪ್ಯ-ಮೂಲ: ಅಲ್ಲಮಪ್ರಭು, ವ್ಯಾಖ್ಯಾನ: ಕಲ್ಲುಮಠದ ಪ್ರಭುದೇವ. or ೯೬೫೬. ಆಕಾರ : ೧೦"x೧ ೩/೪"; ಗರಿ: ೧-೩೨ ವೀರಶೈವ ಧಾರ್ಮಿಕ ಕೃತಿ. ಇಲ್ಲಿ ತನ್ನನ್ನು ಕಲ್ಲುಮಂಟಪದ ಪ್ರಭುದೇವ ಎಂದು ಕರೆದುಕೊಂಡಿದ್ದಾನೆ.

ii) ಕರಣಹಸಿಗೆ -ಚನ್ನಬಸವಣ್ಣ.
or ೯೬೫೬; ಆಕಾರ: ೧೦"x೧ ೩/೪"; ಗರಿ: ೩೩-೪೨ ವೀರಶೈವ ಕೃತಿ.

iii) ಮಿಶ್ರಾರ್ಪಣ-ಕರ್ತೃ?

or ೯೬೫೬; ಆಕಾರ: ೧೦"x೧ ೩/೪" ಗರಿ ೪೩-೪೮. ವೀರಶೈವ ಕೃತಿ.

iv) ಪಂಚೀಕರಣದ ವ್ಯಾಖ್ಯಾನ-ಕರ್ತೃ?

or ೯೬೫೬; ಆಕಾರ : ೧೦"x೧ ೩/೪; ಗರಿ : ೪೮-೫೭. ವೀರಶೈವ ಕೃತಿ.

v) ಷಡುಸ್ಥಲ ಕೋವೆ -ಕರ್ತೃ?

or ೯೬೫೬; ಆಕಾರ : ೧೦"x೧ ೩/೪; ಗರಿ : ೫೭- ೫೮ ವೀರಶೈವ ಕೃತಿ.

೫. ಅಶ್ವಮೇಧ ಪರ್ವ(ಜೈಮಿನಿ ಭಾರತ)-ಲಕ್ಷ್ಮೀಶ.
or ೬೩೧೨; ಆಕಾರ: ೧೫ ೧/೨"x೨"; ಗರಿ: ೧-೧೬೩. ವಾರ್ಧಕ.

೬. ಮಹಾಭಾರತ ತಾತ್ಪರ್ಯ-ಕಳಲೆ ನಂಜರಾಜ.
or ೧೦೦೬; ಆಕಾರ:೨೫ ೧/೨x೨"; ಗರಿ: ೧-೨೨೭ಗದ್ಯ,

೭. ಬಾಣಾಸುರ ಪ್ರಸಂಗ -ಕರ್ತೃ?
or. ೬೮೧೩; ಆಕಾರ: ೧೧"x೨"; ಗರಿ; ೧-೩೧ ಯಕ್ಷಗಾನ

೮. ತುಂಡು ಗರಿಗಳು-ಕರ್ತೃ?
Add. ೧೨೮೯೨. ಯಾವುದೋ ಪತ್ರವಿರುವಂತಿದೆ.

II. ಕಡತ :

೯. ರಾಮಾಯಣ ಪದ್ಯ, ದಾಸರ ಹಾಡು, ಸಂವತ್ಸರದ ಯಾದಿ ಇತ್ಯಾದಿ
or ೧೩೩೪೩ ಆಕಾರ- ೧೧"x೬"; ಹಾಳೆ ೧-೧೮.

III. ಆಧುನಿಕ ಕಾಗದ ಹಸ್ತಪ್ರತಿ :

೧೦. Canarese and Marathi Ballads - ಜೆ.ಎಫ್.ಫ್ಲೀಟ್.
or : ೮೧೭೯; ಆಕಾರ: ೧೩"x೯"; ಹಾಳೆ ೧-೨೪೨

ಇದರ ಫೋಟೋಸ್ಟ್ಯಾಟ್ ಪ್ರತಿ ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿದೆ. ಮೈಕ್ರೋಫಿಲ್ಮ ಪ್ರತಿ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿದೆ. ಶ್ರೀನಿವಾಸ ಹಾವನೂರ ಅವರು ಈ ಹಸ್ತಪ್ರತಿಯನ್ನು ಕುರಿತು 'ಬೆಳವಲ' (ಬೆಟಗೇರಿ ಕೃಷ್ಣಶರ್ಮರ ಅಭಿನಂದನ ಗ್ರಂಥ)ದಲ್ಲಿ ಲೇಖನ ಬರೆದಿದ್ದಾರೆ.

೧೧. A letter of Haider Ali.
Add. ೫೩೫೮.
ಇದರಲ್ಲಿ ೬ ಸಾಲಿನ ಒಂದು ಕನ್ನಡ ಪತ್ರವಿದೆ.

೧೨. ಬೆಳಗಾವಿಯ ಎರಡು ಶಾಸನಗಳು:
Add. ೧೪೩೮೭-iiic.
ಬೆಳಗಾಂವಿಗೆ ಸಂಬಂಧಪಟ್ಟ ೨ ಜೈನ ಶಾಸನಗಳ ಪಠ್ಯ.

೧೩. M.S.H. Thompson ಅವರ ನೋಟಬುಕ್
or ೧೩೦೮೦ (೧೫)
ಅಭ್ಯಾಸಕ್ಕೆ ಬರೆದುಕೊಂಡ ಕನ್ನಡ -ಇಂಗ್ಲೀಷ್ ಬರವಣಿಗೆ.

೧೪. M.S.H. Thompson ಅವರ ನೋಟಬುಕ್.
or. ೧೩೦೮೦ (೧೫)
ಅಭ್ಯಾಸಕ್ಕೆ ಬರೆದುಕೊಂಡ ಕನ್ನಡ ಇಂಗ್ಲೀಷ ಬರವಣಿಗೆ.

ಬ್ರಿಟಿಷ್ ಮ್ಯೂಜಿಯಂ :

ಇದು ಒಂದು ಭವ್ಯ ಸಂಗ್ರಹಾಲಯ ಮತ್ತು ಗ್ರಂಥಾಲಯ. ಜೆ.ಬಿ. ಪಿಯರಲ್ ಅವರ "Oriental manuscripts in Europe and North America" ಎಂಬ ಗ್ರಂಥದಲ್ಲಿ "The British Museum has not yet produced any catalouge of its Mss. in Dravidian Languages, which it possesses in some quantity: Brahui 1, Kannada (Canarese)14 ......" ಎಂದು ಮುಂತಾಗಿ ಹೇಳಲಾಗಿದೆ. (ಪು.೩೮೪). ಈಗ ಬ್ರಿಟಿಷ ಮ್ಯೂಜಿಯಂದಲ್ಲಿ ಯುರೋಪಿಯನ್ ಭಾಷೆ ಹೊರತಾಗಿ ಬೇರೆ ಭಾಷೆಯ ಹಸ್ತಪ್ರತಿಗಳಿಲ್ಲ. ಬಹುಶಃ ಇಲ್ಲಿ ಮೊದಲು ಇದ್ದ ೧೪ ಹಸ್ತಪ್ರತಿಗಳನ್ನು ಮೇಲೆ ಸೂಚಿಸಿದ ಬ್ರಿಟಿಷ್ ಲೈಬ್ರರಿಗೆ ಸ್ಥಳಾಂತರಿಸಿದ್ದಾರೆ. ಅವುಗಳನ್ನೇ ಪೀಯರ್‌ಸನ್ ಸೂಚಿಸಿದಂತಿದೆ.

ರಾಯಲ್ ಏಶಿಯಾಟಿಕ್ ಸೊಸೈಟಿ :

ಇದು ಕ್ವೀನ್ ಆ್ಯನ್ ರಸ್ತೆಯ ಮೇಲಿರುವ ಒಂದು ಸುಪ್ರಸಿದ್ಧ ಹಳೆಯ ಸಂಶೋಧನ ಸಂಸ್ಥೆ. ಆದರೆ ಇದು ಈಗ ತೀರ ಶೋಚನೀಯ ಸ್ಥಿತಿಯಲ್ಲಿದೆ. ಸರ್ ವಾಲ್ಟರ್ ಇಲಿಯಟ್ ಸಿದ್ಧಪಡಿಸಿದ "Karnatak Desh Inscription" ಸಂಪುಟದ ಒಂದು ಪ್ರತಿ ಈ ಸಂಸ್ಥೆಯಲ್ಲಿದೆಯೆಂದು ಡಾ. ಫ್ಲೀಟ್ ಒಂದೆಡೆ ಸೂಚಿಸಿದ್ದಾರೆ. ಡಾ. ನಂದಿಮಠ ಅವರು ಲಂಡನ್‌ನಲ್ಲಿದ್ದಾಗ ಇದನ್ನು ಅಭ್ಯಾಸ ಮಾಡಿ ಕೆಲವು ಶಾಸನಗಳನ್ನು "ಶಿವಾನುಭವ" ಪತ್ರಿಕೆಯ ಮೂಲಕ ಪ್ರಕಟಿಸಿದ್ದರು. ೫೯೫ ಕನ್ನಡ ಶಾಸನಗಳ ಈ ಸಂಪುಟವನ್ನು ಅಭ್ಯಸಿಸಲು, ಸಾಧ್ಯವಾದರೆ ಇಡೀ ಸಂಪುಟವನ್ನು ಝಿರಾಕ್ಸ ಮಾಡಿಸಿಕೊಂಡು ಬರಲು ಈ ಸಂಸ್ಥೆಗೆ ಹೋದೆನು. ಆದರೆ ಇಲ್ಲಿಯ ಗ್ರಂಥಪಾಲಕ ಈ ಬಗ್ಗೆ ಆಸಕ್ತಿ ತೋರಿಸಲಿಲ್ಲ. ನಾನೇ ಕ್ಯಾಟಲಾಗ್ ನೋಡಿ, ಕಪಾಟು ತೆರೆದು ಹುಡುಕಿದೆ, ಸಿಗಲಿಲ್ಲ. ಕನಕದಾಸರ ಮೋಹನ ತರಂಗಿಣಿಯ ಒಂದು ತಾಳೆಪ್ರತಿ ಮಾತ್ರ ಸಿಕ್ಕಿತು. ವಿಂಟರ್‌ನಿಝ್ ಅವರು ತಮ್ಮ "A Catalouge of South Indian Manuscripts" (೧೯೦೨)ದಲ್ಲಿ ಒಂದು ಕನ್ನಡ ಹಸ್ತಪ್ರತಿ ಈ ಸಂಸ್ಥೆಯಲ್ಲಿರುವುದಾಗಿ ಸೂಚಿಸಿರುವರೆಂದು ಜೆ. ಬಿ. ಪೀಯರ್‌ಸನ್ ತಮ್ಮ "Oriental Manuscripts in Europe and North America" ಗ್ರಂಥದಲ್ಲಿ ಹೇಳಿದ್ದಾರೆ. (ಪುಟ ೩೮೭). ಈ ಹಸ್ತಪ್ರತಿ ಮೇಲೆ ಸೂಚಿಸಿದ ಮೋಹನ ತರಂಗಿಣಿಯೇ ಆಗಿರಬೇಕು. ಇದಕ್ಕೆ ನಂಬರ್ ಹಾಕಿಲ್ಲ; ಆಕಾರ: ೮ ೧/೨"x೨"; ಗರಿ: ೧-೧೫೭

ಸ್ಕೂಲ್ ಆಫ್ ಓರಿಯಂಟಲ್ ಆಂಡ್ ಆಫ್ರಿಕನ್ ಸ್ಟಡೀಜ್:

ಇದು ಲಂಡನ್ ವಿಶ್ವವಿದ್ಯಾಲಯದ ಒಂದು ಶಾಖೆ. ದ್ರಾವಿಡ ಭಾಷೆಗಳಲ್ಲಿ ತಮಿಳು ಅಧ್ಯಯನಕ್ಕೆ ಮಾತ್ರ ಅವಕಾಶವಿದೆ. ಪ್ರೊ. ಮಾರ್ ಅವರು ಇಲ್ಲಿ ತಮಿಳು ಪ್ರಾಧ್ಯಾಪಕರು. ಈ ಶಾಖೆಯ ಅಸಿಸ್ಟಂಟ ಗ್ರಂಥಪಾಲಕ ಶ್ರೀ ಆರ್. ಸಿ. ಡೋಗ್ರಾ ಭಾರತೀಯ (ಕಾಶ್ಮೀರಿ). ಈ ಗ್ರಂಥಾಲಯದ ಕ್ಯಾಟಲಾಗ್‌ದಲ್ಲಿ ೪

ಕನ್ನಡ ಹಸ್ತಪ್ರತಿಗಳ ಸೂಚನೆಯಿದೆ. ನನಗೆ ಮಾತ್ರ ೩ ಲಭ್ಯವಾದವು.

I. ತಾಳೆಗರಿ ಹಸ್ತಪ್ರತಿ :

೧. ಲೀಲಾವತಿ-ನೇಮಿಚಂದ್ರ
ಳ೧೯೦೮;ಆಕಾರ : ೧೭"x೧೬ ೧/೬"; ಗರಿ; ೧-೨೦೭. ಚಂಪೂಕೃತಿ

II. ಆಧುನಿಕ ಕಾಗದ ಹಸ್ತಪ್ರತಿಗಳು :

೨. Religious writings in Canarese.
೭೦೭೮; ಆಕಾರ: ೧೩"x೭"; ಹಾಳೆ ೧+೧೩೭+೧
ಕ್ರೈಸ್ತ ಧರ್ಮದ ಗದ್ಯಗ್ರಂಥ.

೩. Catholic Tracts in Canarese.
೨೯೦೯; ಆಕಾರ:೭"x೧೦";ಹಾಳೆ ೮೦.
ಕ್ರೈಸ್ತಧರ್ಮದ ಗದ್ಯ ಗ್ರಂಥ.

ಈ ಎರಡು ಕೃತಿಗಳ ಬಗ್ಗೆ ಡಾ. ಶ್ರೀನಿವಾಸ ಹಾವನೂರ ಅವರು "೧೮ನೆಯ ಶತಮಾನದ ಕೆಥೊಲಿಕರ ಅಪೂರ್ವ ಕನ್ನಡ ಕೃತಿಗಳು" ಎಂಬ ಲೇಖನ ಬರೆದಿರುವರು(ಸಾಧನೆ ೨-೮)

ಬೈಬಲ್ ಸೊಸೈಟಿ :

ಕ್ವೀನ್ ವಿಕ್ಟೋರಿಯಾ ರಸ್ತೆಯ ಮೇಲಿರುವ ಇದು ಬೈಬಲ್ ಸಾಹಿತ್ಯವನ್ನು ಪ್ರಕಟಿಸುವ, ಪ್ರಸಾರಮಾಡುವ ಸಂಸ್ಥೆ. ಇಲ್ಲಿ ಆಧುನಿಕ ಕಾಗದದ ಮೇಲೆ ಬರೆದ ಕೆಲವು ಹಸ್ತಪ್ರತಿಗಳಿವೆ.

೧. Browns Kannada Bible
೨. Browns Kannada Bible
೩. Browns kannada Bible

ನಂಬರ್ ಕೊಟ್ಟಿಲ್ಲ; ಆಕಾರ : ೮ ೧/೨"x೧೩"' ಪಾನು ಕ್ರಮವಾಗಿ ೧-೧೧೭; ೧-೯೫, ೧-೨೦೨

ಗದ್ಯ. ಈ ಮೂರು ಚೋಪಡಿಗಳು "Reference library of thee Madras Auxiliry boble Society"ಯಿಂದ ಇಲ್ಲಿಗೆ ಬಂದಿವೆ.

೪. A Cannodi translation of the Gospel according to St. Mark
ನಂಬರ ಕೊಟ್ಟಿಲ್ಲ;ಆಕಾರ:೮ ೧/೨"x೧೩"; ಹಾಳೆ ೧-೭೨
ಕ್ರೈಸ್ತಧರ್ಮದ ಗದ್ಯಗ್ರಂಥ

೫. The Gospal According to St. Luke.
ನಂಬರ್ ಕೊಟ್ಟಿಲ್ಲ.; ಆಕರ : ೮ ೧/೨"x೧೩"; ಹಾಳೆ ೧-೧೦೮
ಕ್ರೈಸ್ತ ಧರ್ಮದ ಗದ್ಯಗ್ರಂಥ

೬. ? ?

BFBS. Mss. ೫೦೮. ಆಕಾರ: ೧೨ ೧/೨"x೯ ೧/೨"; ಹಾಳೆ ೧-೪

ಇದರ ಕೆಂಪು ಕವ್ಹರ್ ಮೇಲೆ " Part of the new testament in the Karnataka Language, Spoken by Seven millions of people" ಎಂದು ಬರೆಯಲಾಗಿದೆ. ಇದು ಬೈಬಲ್ ಸಾಹಿತ್ಯಕೃತಿ.

ವೆಲ್‌ಕಮ್ ಇನ್‌ಸ್ಟಿಟ್ಯೂಟ್ ಆಫ್ ದಿ ಹಿಸ್ಟರಿ ಆಫ್ ಮೆಡಿಶನ್ :

ಊಸ್ಟನ್ ರಸ್ತೆಯ ಮೇಲಿರುವ ಈ ಸಂಸ್ಥೆಯಲ್ಲಿ ಔಷಧ ಶಾಸ್ತ್ರಕ್ಕೆ ಸಂಬಂಧಪಟ್ಟ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹವಿದೆ. ಹಿಬ್ರು ಭಾಷೆಯ ವಿದ್ವಾಂಸ ಆ್ಯಲನ್ ಇಲ್ಲಿಯ ಅಧಿಕಾರಿಗಳಲ್ಲಿ ಒಬ್ಬ. ಈತನ ಸಹಾಯದಿಂದ ಈ ಸಂಸ್ಥೆಯಲ್ಲಿ ಎರಡು ಕನ್ನಡ ಕೈಬರಹದ ಪ್ರತಿಗಳನ್ನು ಶೋಧಿಸಲಾಯಿತು.

೧. ಅಷ್ಟಾವರಣ ಸ್ತೋತ್ರ-ಸಂಪಾದನೆಯ ಸಣ್ಣ ಬರಹದ ಗುರುಬಸವರಾಜದೇವರು
Well Kan-೧. ಆಕಾರ : ೧೦'x೨"; ಗರಿ : ೧-೩೭
ವೀರಶೈವ ಕೃತಿ. ಸಂಸ್ಕೃತಶ್ಲೋಕ+ಕನ್ನಡ ಟೀಕೆ.

ಇದನ್ನು 'Steven's Dictioneers London ಅವರಿಂದ ೧೨ ಶಿಲಿಂಗ್‌ಗಳಿಗೆ ಖರೀದಿಸಿದೆ.

೨. ಪತ್ರ?
Well Kan-೨. ಆಕಾರ: ೧೩"x೧೭". ಹಾಳೆ೧.

ಇದು ಬಿದಿರಿನ ಕೊಳವೆ (ಹಿತ್ತಾಳೆ ಕಟ್ಟು)ಯಲ್ಲಿದೆ. ಸಕಲೇಶಪುರದ 'ದಕ್ಷಿಣ ಮಹಿಸೂರ ನೇಟಿವ್ಹ ಪ್ಲ್ಯಾಂಟರ್ಸ್ ಅಸೋಸಿಯೇಶನ್'ದವರು ಮೈಸೂರು ಸೀಮೆಯ ಬ್ರಿಟಿಷ್ ರೆಸಿಟೆಂಡ್ ಮ್ಯಾಕ್ವರ್ಥ ಯಂಗ ಎಸ್ಕ್ವೈರ್ಸ್ ಅವರಿಗೆ ಬರೆದ ಪತ್ರ.

* * * *

ಲಂಡನ್ ಪಟ್ಟಣವನ್ನು ಬಿಟ್ಟರೆ ಇಂಗ್ಲಂಡ್ ದೇಶದ ಇತರೆಡೆಗಳಲ್ಲಿಯೂ ಕನ್ನಡ ಹಸ್ತಪ್ರತಿಗಳಿವೆ. ಅವುಗಳಲ್ಲಿ ನಾನು ನೋಡಿದ ಕೆಂಬ್ರಿಜ್ ಮತ್ತು ಆಕ್ಸಫರ್ಡ್‌ಗಳಲ್ಲಿಯ ಹಸ್ತಪ್ರತಿಯ ವಿವರ ಹೀಗಿದೆ:

ಕೇಂಬ್ರಿಜ್ ವಿಶ್ವವಿದ್ಯಾಲಯ

ಇಲ್ಲಿ ೩ ತೆಲುಗು, ೧ ತೆಲುಗು-ಕನ್ನಡ ಮಿಶ್ರಿತ ಹಸ್ತಪ್ರತಿಗಳಿವೆ. ಈ ತೆಲುಗು-ಕನ್ನಡ ಮಿಶ್ರಿತ ಹಸ್ತಪ್ರತಿಯನ್ನೇ ಗಮನಿಸಿ ಜೆ. ಬಿ. ಪಿಯರ್‌ಸನ್ ಅವರು ತಮ್ಮ "Oriental manuscripts in Europe and North America" ಗ್ರಂಥದಲ್ಲಿ "Mss. in the Drvidian Languages number 69 (Tamil-40, Telagu-2, malayam-17, Canarese-1......."ಎಂದು ಹೇಳಿದಂತಿದೆ(ಪುಟ೩೮೫).

ಆಕ್ಸಫರ್ಡ ವಿಶ್ವವಿದ್ಯಾಲಯ

ಈ ವಿಶ್ವವಿದ್ಯಾಲಯದ ಬಾಡ್ಲಿಯನ್ ಲೈಬ್ರರಿಯ ಇಂಡಿಯನ್ ಇನ್‌ಸ್ಟಿಟ್ಯೂಟದ ಅಧಿಕಾರಿ ಜೋನಾಥನ್ ಕ್ಯಾತ್. ಈತನ ಹೆಂಡತಿ ಕನ್ನಡಿತಿ; ವಿಜಾಪುರದವಳು. ಈ ಇನ್‌ಸ್ಟಿಟ್ಯೂಟದಲ್ಲಿರುವ ಕನ್ನಡ

ಹಸ್ತಪ್ರತಿಗಳ ವಿವರ ಹೀಗಿದೆ:

I ತಾಳೆಗರಿ ಹಸ್ತಪ್ರತಿ :

೧. ರಾಜಶೇಖರ ವಿಳಾಸ-ಷಡಕ್ಷರದೇವ.
Ms. Ind. Misc. d5 (R); ಆಕಾರ: ೧೯"x೨"; ಗರಿ:೧-೧೨೪
ವೀರಶೈವ ಚಂಪೂಕೃತಿ.

೨. ? ?
Ms. Ind. Misc. d2; ಆಕಾರ: ೧೦"x೧ ೧/೪"; ಗರಿ ೧
ಯಂತ್ರ, ಔಷಧ, ಮಂತ್ರಗಳ ಗದ್ಯಗ್ರಂಥ.

೩. ಯಂತ್ರದ ಪುಸ್ತಕ-ಕರ್ತೃ ?
Ms. Ind. Misc. e3 (R) ಆಕಾರ: ೮"x೧/೨"; ೧-೨೭

II. ಕಡತ :

೪. ? ?
Ms. Ks. Kennicott. 18; ಆಕಾರ: ೮"x೭ ೧/೨"
ಒಟ್ಟು ೯೪ ಮಡಿಕೆ, ಜಮಾ ಖರ್ಚು ಇದೆ.

೫. ? ?
Mr. Ind. Misc; ಆಕಾರ: ೭"x೭ ೧/೨";ಒಟ್ಟು ೪೬ ಮಡಿಕೆ. ಜಮಾಖರ್ಚು ಇದೆ.

ಜೆ.ಬಿ. ಪಿಯರ್‌ಸನ್ ಅವರು "Oriental Manuscripts in Europe and North America" ಎಂಬ ಗ್ರಂಥದಲ್ಲಿ ಈ ಬಾಡ್ಲಿಯನ್ ಲೈಬ್ರರಿಯನ್ನು ಕುರಿತು ಬರೆಯುತ್ತ ಡಾ. ಜಿ.ಯು. ಪೋಪ ಅವರ ಸೂಚಿಯನ್ನು ಆಧರಿಸಿ "The catalouge contains inscriptions of 130 Tamil Misc. 20 Telugu (Including Sanskrit Mss. written in the Telagu characters), 3 Canarese" ....ಎಂದೂ (ಪುಟ ೩೮೪), "Mss. Ind. Misc. reffered too above enumerates 1 Malto, 4 Canarises......." ಎಂದೂ (ಪುಟ ೩೮೫) ಹೇಳುತ್ತಾರೆ. ಈ ಎರಡೂ ಉಲ್ಲೇಖಗಳಲ್ಲಿ ಬಂದಿರುವ ಒಟ್ಟು ೭ ಕನ್ನಡ ಹಸ್ತಪ್ರತಿಗಳೂ ಮೇಲೆ ವಿವರಿಸಿದ ಹಸ್ತಪ್ರತಿಗಳೂ ಒಂದೇ ಆಗಿರಬಹುದು.

ಇಂಗ್ಲಂಡ್, ಕೆಂಬ್ರಿಜ್, ಆಕ್ಸಫರ್ಡಗಳಲ್ಲಿ ನಾನು ಶೋಧಿಸಿದ, ಅಭ್ಯಸಿಸಿದ ಹಸ್ತಪ್ರತಿ ಸಾಮಗ್ರಿಯಿದು. ಇದನ್ನು ಬಿಟ್ಟರೆ ಅಬರ್ಡೀನ್ ವಿಶ್ವವಿದ್ಯಾಲಯದಲ್ಲಿ ೧. ಮೆಂಚಿಸ್ಟರದ ದಿ. ಜಾನ್ ರೇಲ್ಯಾಂಡ್ಸ ಲೈಬ್ರರಿಯಲ್ಲಿ ೩ ಕನ್ನಡ ಹಸ್ತಪ್ರತಿಗಳಿವೆ ಎಂದು ಜೆ.ಬಿ. ಪಿಯರ್‌ಸನ್ ಅವರ "Oriental manuscripts in Europe and North America" (ಪುಟ ೩೮೮) ಎಂಬ ಗ್ರಂಥದಿಂದ ತಿಳಿದುಬರುತ್ತದೆ.

ಎಡಿನ್ ಬರ್ಗ್ ವಿಶ್ವವಿದ್ಯಾಲಯದಲ್ಲಿರುವ ಸರ್ ವಾಲ್ಟರ್ ಇಲಿಯಟ್ ಸಂಕಲಿಸಿದ "Karnataka desh inscription" ಗ್ರಂಥವನ್ನು ತಾವು ಅಭ್ಯಾಸಕ್ಕೆ ಬಳಸಿಕೊಂಡಿರುವುದಾಗಿ ಡಾ. ಫ್ಲೀಟ್ ಹೇಳುತ್ತಾರೆ.

* * *

ಒಟ್ಟಾರೆ ೧. ಕರ್ನಾಟಕಕ್ಕೆ ಸಂಬಂಧಿಸಿದ ಕೈಬರಹದ ಸಂಪತ್ತನ್ನು ಸಾಹಿತ್ಯಕೃತಿ ಮತ್ತು ಚರಿತ್ರೆಯ ದಾಖಲೆಯೆಂದು ವರ್ಗೀಕರಿಸಿದರೆ ಇಂಗ್ಲಂಡ ದೇಶದಲ್ಲಿ ಚರಿತ್ರೆಯ ದಾಖಲೆಗಳೇ ಅಧಿಕ. ೨. ಎಲ್ಲಾ ಸಂಸ್ಥೆಗಳಿಗಿಂತ ಇಂಡಿಯಾ ಆಫೀಸ್ ಲೈಬ್ರರಿಯಲ್ಲಿಯೇ ಈ ಎರಡೂ ಬಗೆಯ ಸಾಮಗ್ರಿ ಹೆಚ್ಚು. ೩. ಹಳೆಯ ಮುದ್ರಿತ ಕನ್ನಡ ಗ್ರಂಥಗಳು ಎಲ್ಲ ಸಂಸ್ಥೆಗಳಲ್ಲಿದ್ದರೂ ಬ್ರಿಟಿಷ್ ಲೈಬ್ರರಿಯಲ್ಲಿ ಈ ಸಂಖ್ಯೆ ಅಧಿಕವಾಗಿದೆ. ಆದುದರಿಂದ ಇಲ್ಲಿಯ ಚರಿತ್ರೆಯ ದಾಖಲೆಗಳನ್ನೂ (ಕನ್ನಡ, ಇಂಗ್ಲೀಷ್), ಹಳೆಯ ಮುದ್ರಿತ ಗ್ರಂಥಗಳನ್ನೂ ಅಭ್ಯಸಿಸುವುದು ಅವಶ್ಯವಿದೆ.

■■

ಆಕರ : ಮಾರ್ಗ ಸಂಪುಟ-೨

೨೯

ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರ

೧೯೬೨, ಕನ್ನಡ ವಿಭಾಗದ ಇತಿಹಾಸದಲ್ಲಿ ಒಂದು ಅಪೂರ್ವ ಸಂದರ್ಭ. ಕುಲಪತಿಗಲಾಗಿದ್ದ ಡಾ. ಡಿ.ಸಿ. ಪಾವಟೆ ಅವರ ಅದಮ್ಯ ಪ್ರೇರಣೆ, ವಿಭಾಗದ ಮುಖ್ಯಸ್ಥರಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಗಾಢವಾದ ವಿದ್ಯಾವ್ಯಾಂಸಗಗಳ ಬಲದಿಂದ ಈ ವಿಭಾಗ ಕೆಲವು ಹೊಸಮುಖಗಳನ್ನು ಮೂಡಿಸಿಕೊಳ್ಳುವ ವಿನೂತನ ಕನಸುಗಳನ್ನು ಕಟ್ಟಿಕೊಂಡಿದ್ದ ಕಾಲವದು. ಈ ಕನಸುಗಳ ಒಂದು ಸಾಕಾರರೂಪ "ಸಮಗ್ರ ವಚನವಾಙ್ಮಯ ಸಂಶೋಧನ, ಸಂಸ್ಕರಣ ಮತ್ತು ಪ್ರಕಟಣ ಯೋಜನೆ."

ಪುಣೆಯ "ಭಂಡಾರಕರ ಸಂಶೋಧವೆ ಸಂಸ್ಥೆ" ಕೈಕೊಂಡಿದ್ದ "ಮಹಾಭಾರತ ಸಂಸ್ಕರಣ-ಪ್ರಕಟಣ ಯೋಜನೆ"ಯ ಮಾದರಿಯಲ್ಲಿ ಅಸ್ತಿತ್ವಕ್ಕೆ ಬಂದ ಈ ಮಹಾಯೋಜನೆ ಇಬ್ಬರು ಸಹಾಯಕ ಸಂಶೋಧಕರಿಂದ ಪ್ರಾರಂಭವಾಗಿ, ಹಸ್ತಪ್ರತಿ ಸಂಗ್ರಹ, ಹಸ್ತಪ್ರತಿ ಸೂಚಿ ರಚನೆ, ವಚನಸಾಹಿತ್ಯ ಸಂಪಾದನೆ- ಎಂಬ ಮೂರು ಮುಖಗಳಲ್ಲಿ ಬೆಳೆಯಿತು.

೧೯೬೬ಕ್ಕೆ ವೀರಶೈವ ಮತ್ತು ಜೈನ ಶಾಖೆಗಳೂ, ೧೯೬೭ಕ್ಕೆ ಬ್ರಾಹ್ಮಣ ಶಾಖೆಯೂ ಕನ್ನಡ ವಿಭಾಗದಲ್ಲಿ ಅಸ್ತಿತ್ವಕ್ಕೆ ಬಂದು, ಈ ಹಸ್ತಪ್ರತಿ ಸಂಗ್ರಹ ಮತ್ತು ಸೂಚೀನಿರ್ಮಾಣಕಾರ್ಯಗಳು ಇನ್ನೂ ವ್ಯಾಪಕತೆಯನ್ನು ಪಡೆದವು. ಈ ಶಾಖೆಗಳ ಪ್ರಾಧ್ಯಾಪಕರಾದ ಡಾ. ಎಂ. ಎಸ್. ಸುಂಕಾಪುರ, ಡಾ. ಬಿ.ಎಸ್. ಕುಲಕರ್ಣಿ, ಡಾ. ಕೆ. ಜಿ. ಶಾಸ್ತ್ರೀ ಅವರ ಮಾರ್ಗದರ್ಶನದಲ್ಲಿ ಸಹಾಯಕ ಸಂಶೋಧಕರು ನಾಡಿನಲ್ಲಿರುವ ವೀರಶೈವ, ಜೈನ, ಬ್ರಾಹ್ಮಣ ಹಸ್ತಪ್ರತಿನೆಲೆಗಳಿಂದ ಹಸ್ತಪ್ರತಿಗಳನ್ನು ಕೈವಶಮಾಡಿಕೊಂಡು ಬರುವಲ್ಲಿ ಈ ಭಾಂಡಾರ ಇನ್ನೂ ವಿಸ್ತಾರ ಪಡೆಯಿತು. ೧೯೭೫ರಲ್ಲಿ ಕನ್ನಡ ವಿಭಾಗವು ಕನ್ನಡ ಅಧ್ಯಯನಪೀಠವಾಗಿ ಮಾರ್ಪಟ್ಟು ಈ ಹಸ್ತಪ್ರತಿ ಭಾಂಡಾರದ ಕಾರ್ಯಚಟುವಟಿಕೆಗಳಿಗೆ ಯಂತ್ರವೇಗ ಪ್ರಾಪ್ತವಾಯಿತು.

ಖನಿಜಸಂಪತ್ತು, ಅರಣ್ಯಸಂಪತ್ತು, ಪ್ರಜಾಸಂಪತ್ತು, ಇತ್ಯಾದಿಗಳಂತೆ ಹಸ್ತಪ್ರತಿಗಳು ಯಾವುದೇ ರಾಷ್ಟ್ರದ ಸಂಪತ್ತಿನ ಒಂದು ಭಾಗ. ಪ್ರಾಚೀನ ಕನ್ನಡಿಗರು ಇದನ್ನು ಅರ್ಥಮಾಡಿಕೊಂಡಿದ್ದ ಕಾರಣ ಇಲ್ಲಿಯ ಪ್ರಭುವರ್ಗ ಮತ್ತು ಪ್ರಜಾವರ್ಗಗಳಲ್ಲಿ ಅಂದು ಹಸ್ತಪ್ರತಿ ಲೇಖನ, ವಾಚನ ಮತ್ತು ರಕ್ಷಣೆಯ ಕಾರ್ಯ ವಿಪುಲವಾಗಿ ನಡೆಯಿತು. ಅಣ್ಣ-ತಮ್ಮಂದಿರು ಬೇರೆಯಾಗುವಾಗ ಆಸ್ತಿಯ ಜೊತೆ ಹಸ್ತಪ್ರತಿಗಳನ್ನೂ ಪಾಲು ಮಾಡಿಕೊಳ್ಳುವಷ್ಟರ ಮಟ್ಟಿಗೆ ಹಸ್ತಪ್ರತಿಗಳು ಸಾಮಾನ್ಯರಿಗೂ ಆಸ್ತಿಯ ಒಂದು ಭಾಗವೆನಿಸಿದ್ದವು. ಹೀಗಾಗಿ

ಅರಮನೆ ಗುರುಮನೆಗಳಲ್ಲಿ ಮತ್ತು ಅಭ್ಯಾಸಪ್ರಿಯ ವ್ಯಕ್ತಿಗಳ ವಶದಲ್ಲಿ ಹಸ್ತಪ್ರತಿಸಂಗ್ರಹಗಳು ಬೆಳೆದು ಬಂದವು. ಆದರೆ ಇತ್ತೀಚೆ ಮುದ್ರಿತ ಪುಸ್ತಕಗಳು ಅಭ್ಯಾಸಕ್ಕೆ ಲಭ್ಯವಾದಂತೆ ಕ್ರಮೇಣ ಇವುಗಳ ವಾಚನ ಕಡಿಮೆಯಾಗಿ, ಅಕ್ಷರಗಳ ಪರಿಚಯ ತಪ್ಪಿಹೋಗಿ, ಇವು ಅಲಕ್ಷ್ಯಕ್ಕೆ ಗುರಿಯಾಗತೊಡಗಿದವು. ಹೀಗಾಗಿ ಇಂದು ಸಂಪತ್ತಿನ ಒಂದು ಭಾಗವೆಂಬ ಭಾವನೆ ತಪ್ಪಿ, ಅವು ಇಟ್ಟುಕೊಳ್ಳಲೂ ಮನಸ್ಸಿಲ್ಲದ, ಒಗೆಯಲೂ ಮನಸ್ಸಿನಲ್ಲದ ನಿರುಪಯುಕ್ತ ವಸ್ತುಗಳಾಗಿ ಮನೆ-ಮಠಗಳಲ್ಲಿ ಬಿದ್ದುಕೊಂಡು ದಿನೇ ದಿನೇ ಜೀರ್ಣವಾಗುತ್ತ ನಡೆದಿವೆ. ಕೆಲವು ಜನ ಮತಮುಗ್ಧರು ಅವುಗಳನ್ನು ಗಂಧ-ವಿಭೂತಿಗಳ ಪೂಜೆಯಿಂದ ಕೋಳೆಯಿಸಿ ಕೈಮುಗಿಯುತ್ತಿದ್ದರೆ, ಇನ್ನು ಕೆಲವರು ನದಿ-ಭಾವಿಗಳಲ್ಲಿ ಜಲಸಮಾಧಿಗೊಳಿಸಿ ಧನ್ಯರಾಗುತ್ತಲಿದ್ದಾರೆ. ಕೆಲವೆಡೆ ತಿಪ್ಪಿಗೆ ಗೊಬ್ಬರವಾಗಿ, ಹುಳುಗಳಿಗೆ ಆಹಾರವಾಗಿ, ಮಳೆಗಾಳಿಗಳಿಗೆ ಗುರಿಯಾಗಿ ಮಣ್ಣುಪಾಲಾಗುತ್ತಲಿವೆ. ಹೀಗೆ ಇಂದು ಅಪಾಯದ ಅಂಚಿನಲ್ಲಿರುವ ಈ ಅಪೂರ್ವ ಸಂಪತ್ತನ್ನು ಸಂರಕ್ಷಿಸುವುದು ತುಂಬಾ ಅವಶ್ಯವೆನಿಸಿದೆ. ಇದನ್ನು ಅರ್ಥಮಾಡಿಕೊಂಡಿರುವ ಅಧ್ಯಯನಪೀಠ, ಆತುರದಿಂದ ಸಂಗ್ರಹಕಾರ್ಯವನ್ನು ಕೈಕೊಂಡಿತು; ಅವುಗಳನ್ನು ಮೃತ್ಯುಗಂಡಾಂತರಗಳಿಂದ ಬದುಕಿಸಲು ಪ್ರಯತ್ನಿಸಿತು. ಇದರ ಫಲವೇ ೪ ಸಾವಿರ ಹಸ್ತಪ್ರತಿಗಳ ಅಪೂರ್ವ ಸಂಗ್ರಹವೆನಿಸಿದ 'ಹಸ್ತಪ್ರತಿ ಭಾಂಡಾರ".

ಮುಖ್ಯವಾಗಿ ಕ್ಷೇತ್ರಕಾರ್ಯಕರ್ತರು ಆಗಾಗ ಹಳ್ಳಿ ಪಟ್ಟಣಗಳನ್ನು ಅಲೆದು, ಹಸ್ತಪ್ರತಿಗಳನ್ನು ಸಂಗ್ರಹಿಸುವ ಕೆಲಸವನ್ನು ಕೈಕೊಂಡರು. ಈ ಕಾರ್ಯ ಭಾವಿಸಿದಷ್ಟು ಸುಲಭವಲ್ಲ. ಕೆಲವರು, ಕೇಳಿದ ತಕ್ಷಣ ಇವುಗಳನ್ನು ಕೊಟ್ಟರೆ, ಇನ್ನು ಕೆಲವರನ್ನು ಮನವೊಲಿಸಿಯೋ ಬೇರೊಬ್ಬರ ವರ್ಚಸ್ಸಿಗೆ ಒಳಗುಮಾಡಿಯೋ ಪಡೆಯಬೇಕಾಗುತ್ತದೆ. ಇವೆಲ್ಲವುಗಳಿಗೂ ಅತೀತರಾದ ಕೆಲವರು, ಏನು ಮಾಡಿದರೂ ಅವುಗಳನ್ನು ಮುಟ್ಟಗೊಡುವುದಿಲ್ಲ. ಮುಟ್ಟಬೇಕಿದ್ದರೆ ಮಡಿಬಟ್ಟೆನ್ನುಟ್ಟುಕೊಳ್ಳಬೇಕು; ಇಲ್ಲ ಒದ್ದೆ ಬಟ್ಟೆಯನ್ನು ಸುತ್ತಿಕೊಳ್ಳಬೇಕು. ಕೆಲವರಂತೂ ತೋರಿಸುವುದಿರಲಿ, ಮನೆಯ ಸಮೀಪಕ್ಕೆ ಬರಗೊಡುವದಿಲ್ಲ. ಇಂಥವರಿಂದ ಹಸ್ತಪ್ರತಿ ಪಡೆಯುವದಕ್ಕಿಂತ ಹಾವಿನ ಹೆಡೆಯಿಂದ ರತ್ನವನ್ನು ಪಡೆಯುವುದು ಸುಲಭ. ಇಂಥ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುತ್ತ ಬಿಸಿಲು ಮಳೆ ಎನ್ನದೆ, ಊಟ-ನಿದ್ರೆಗಳ ಸೌಕರ್ಯವನ್ನು ಲೆಕ್ಕಿಸದೆ ಕ್ಷೇತ್ರಕಾರ್ಯಕರ್ತರು ಇವುಗಳ ಸಂಗ್ರಕಾರ್ಯವನ್ನು ಪೂರೈಸಿದರು.

ಜೈನ, ವೀರಶೈವ, ಬ್ರಾಹ್ಮಣ ಮಠಗಳಲ್ಲಿ ಈ ಸಂಪತ್ತು ವಿಪುಲಸಂಖ್ಯೆಯಲ್ಲಿರುತ್ತದೆ, ವಿದ್ವಾಂಸ ವ್ಯಕ್ತಿಗಳಲ್ಲಿಯೂ ಈ ನಿಧಿ ನಿಕ್ಷೇಪವಾಗಿರುತ್ತದೆ. ಈವರೆಗೆ ಚಿತ್ರದುರ್ಗ, ಉರವಕೊಂಡ, ಹುಕ್ಕೇರಿ, ಬಸವತೀರ್ಥ, ಮುಳಗುಂದ, ಲಕ್ಕುಂಡಿ, ಕೊಪ್ಪಳ ಮೊದಲಾದ ಊರುಗಳ ಜೈನ ಮತ್ತು ವೀರಶೈವ ಮಠಗಳಿಂದ ಸಂಗ್ರಹಿಸಿದಂತೆ ಬೇರೆ ಬೇರೆ ಹಳ್ಳಿಪಟ್ಟಣಗಳಿಂದಲೂ ಪ್ರತಿಗಳನ್ನು ಪಡೆಯಲಾಗಿದೆ. ಕೆಲವರಂತೂ ತಮ್ಮಲ್ಲಿರುವ ಇನ್ನೂರು ಮುನ್ನೂರಷ್ಟು ಪ್ರತಿಗಳನ್ನು ನೀಡಿರುವುದುಂಟು. ಡಾ. ಫ.ಗು. ಹಳಕಟ್ಟಿಯವರ ಗ್ರಂಥಭಂಡಾರವನ್ನು ಒಳಗುಮಾಡಿಕೊಳ್ಳುವಲ್ಲಿ ಮತ್ತೆ ಒಂದು ಸಾವಿರ ಹಸ್ತಪ್ರತಿಗಳು ಈ ಭಾಂಡಾರವನ್ನು ಸೇರಿದವು. ಅಧ್ಯಯನ ಪೀಠದ ಇನ್ನಂದು ಶಾಖೆಯಾದ "ಶ್ರೀ ಬಸವೇಶ್ವರ ಪೀಠದ" ಮುಖ್ಯಸ್ಥರಾದ ಡಾ. ಎಂ.ಎಂ. ಕಲಬುರ್ಗಿಯವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದ 'ಹಸ್ತಪ್ರತಿ ಸಂಗ್ರಹ ಯೋಜನೆ'ಯ ಮೂಲಕವೂ ದೇವರ ಹಿಪ್ಪರಗಿ, ತಾಳಿಕೋಟೆ, ಯಡ್ರಾಮಿ, ಮುದನೂರ, ಕೆಂಭಾವಿ, ನಿಡಸೋಸಿ, ಮೊದಲಾದ ಗ್ರಾಮಗಳಿಂದ ಒಂದು ಸಾವಿರ ಹಸ್ತಪ್ರತಿಗಳನ್ನು ಸಂಗ್ರಹಿಸಲಾಯಿತು. ಹೀಗೆ ನಾಡಿನ ಮೂಲೆ ಮೂಲೆಗಳಿಂದ ತಂದ ಈ ಹಸ್ತಪ್ರತಿಗಳನ್ನು ಗರಿಬಿಚ್ಚಿ ಓದಿ, ಪುಟ ತೆಗೆದು ಜೋಡಿಸಿ, ಪ್ರತಿಯೊಂದು ಕಟ್ಟನ್ನೂ ಕ್ರಮಗೊಳಿಸಿ, ಇಲ್ಲಿ ಓರಣವಾಗಿ ಇಡಲಾಗುವುದು. ಆಮೇಲೆ

ನಡೆಯುವುದು ಸೂಚಿರಚನಾ ಸಿಬ್ಬಂದಿಯವರ ಕಾರ್ಯ. ಇವರು ಸಿದ್ಧಪಡಿಸುತ್ತಿರುವುದು ಹಸ್ತಪ್ರತಿಯ ಅಂತರಂಗ ಬಹಿರಂಗಗಳ ಸಂಕ್ಷಿಪ್ತ ಪರಿಚಯ. ಕ್ರಮಾಂಕ, ಪುಟ, ಕೃತಿಕರ್ತೃ, ಲಿಖಿತ ವಸ್ತು, ಲಿಪಿಸಿದ ಕಾಲ, ಅಳತೆ, ಸಾಲು, ಸ್ಥಿತಿ, ಅಕ್ಷರ ಸ್ವರೂಪ, ಕೊಟ್ಟವರು, ತಂದವರು, ಆದಿ, ಅಂತ್ಯ, ವಿಷಯ- ಹೀಗೆ ಹಸ್ತಪ್ರತಿಯ ಬಗ್ಗೆ ಪ್ರತಿಯೊಂದು ವಿವರಗಳನ್ನು ಇಲ್ಲಿ ಬರೆಯಲಾಗುವುದು. ೧೦೦ ಕಟ್ಟುಗಳಿಗೆ ೧ ಸಂಪುಟದಂತೆ ಸೂಚಿಗಳನ್ನು ಸಿದ್ಧಗೊಳಿಸುವ ಕಾರ್ಯವನ್ನು ಇಲ್ಲಿ ಕೈಕೊಳ್ಳಲಾಗಿದೆ. ಇವುಗಳ ಪ್ರಕಟನೆಯಿಂದ ಇಲ್ಲಿ ಯಾವ ಹೆಸರಿನ ಎಷ್ಟು ಪ್ರತಿಗಳಿವೆ? ಅವುಗಳ ಸ್ವರೂಪವೇನು / ಹೊಸ ಕೃತಿಗಳು ಯಾವುವು? ಇತ್ಯಾದಿ ಸಂಗತಿಗಳು ತಟ್ಟನೇ ಅಭ್ಯಾಸಿಗಳ ಗಮನಕ್ಕೆ ಬರುತ್ತದೆ.

ಜೈನ, ವೀರಶೈವ ಮತ್ತು ಬ್ರಾಹ್ಮಣ ಮತಗಳಿಗೆ ಸಂಬಂಧಿಸಿದ ಕಾವ್ಯ, ಶಾಸ್ತ್ರ ಮೊದಲಾದ ಹಸ್ತಪ್ರತಿಗಳನ್ನೊಳಗೊಂಡ ಭಾಂಡಾರವಿದು. ವೀರಶೈವ ಸಾಹಿತ್ಯದ, ಅದರಲ್ಲಿಯೂ ವಚನಸಾಹಿತ್ಯದ ಮಟ್ಟಿಗಂತೂ ಅಖಂಡಕರ್ನಾಟಕದಲ್ಲಿಯೇ ಇಂಥ ಶ್ರೀಮಂತ ಭಾಂಡಾರ ಮತ್ತೊಂದಿಲ್ಲ. ಬಹುಶಃ ೧೨ನೆಯ ಶತಮಾನದಲ್ಲಿ ಕಲ್ಯಾಣದಲ್ಲಿ, ೧೫ನೆಯ ಶತಮಾನದಲ್ಲಿ ಹಂಪೆಯಲ್ಲಿ ಅಸ್ತಿತ್ವಕ್ಕೆ ಬಂದಿರಬಹುದಾದ ವಚನ ಭಂಡಾರವನ್ನು ಬಿಟ್ಟರೆ, ಈ ೮೦೦ ವರ್ಷಗಳ ಇತಿಹಾಸದಲ್ಲಿ ಕನ್ನಡ ಅಧ್ಯಯನಪೀಠದ್ದೇ ಬಹುದೊಡ್ಡ ವಚನಭಂಡಾರ. ಕ್ಷೇತ್ರಕಾರ್ಯದ ಫಲವಾಗಿ, ಈವರೆಗೆ ಗೊತ್ತೇ ಇರದಿದ್ದ ವೀರಶೈವ ಚಿಂತಾಮಣಿ, ಬ್ರಹ್ಮಾದ್ವೈತ ಸಿದ್ಧಾಂತ ಷಟ್ಸ್ಥಲಾಭರಣ, ವಿಶೇಷಾನುಭವಷಟ್ಸ್ಥಲ, ಪರಮಮೂಲಜ್ಞಾನ ಷಟ್ಸ್ಥಲದ ವಚನಗಳು ಮೊದಲಾದ ವಚನಗ್ರಂಥಗಳು ಲಭಿಸಿ ಈಗ ಪ್ರಕಟವಾಗಿವೆ. ಇವಲ್ಲದೆ ಕೊಂಡಗುಳಿ ಕೇಳಿರಾಜನ ಲಿಂಗಮಹತ್ವದ ಕಂದ, ನವರತ್ನಮಾಲಿಕಾಗಳು, ಮಹಲಿಂಗದೇವರ ಅಭವಕಂದ, ಜಕ್ಕಣಾರ್ಯನ 'ಝೇಂಕಾರ ನಿರಾಳ ನಿಜಲಿಂಗ ಪ್ರಭುವೆ' ಮುದ್ರಿಕೆಯ ವಚನ, ಸಿದ್ಧನಂಜೇಶನ ತೋಂಟದ ಸಿದ್ಧೇಶ್ವರನ ಭಾವರತ್ನಾಭರಣಗಳು ಹೊಸದಾಗಿ ಗೊತ್ತುಹಚ್ಚಲ್ಪಟ್ಟ ಕೃತಿಗಳು. ಇಲ್ಲಿ ಏಕೋತ್ತರ ಶತಸ್ಥಲದಂಥ ವಚನ ಸಂಕಲನ ಕೃತಿಗಳ ಹಸ್ತಪ್ರತಿಗಳು ಸುಮಾರು ೧೦೦, ಕುಮಾರವ್ಯಾಸ ಭಾರತ, ಭರತೇಶ ವೈಭವ, ಹರಿಹರನ ರಗಳೆಗಳ ಹಸ್ತಪ್ರತಿಗಳೂ ಹಲವು. ಹೀಗಾಗಿ ಈ ಭಾಂಡಾರದ ಲಾಭವನ್ನು ಅಧ್ಯಯನ ಪೀಠದವರಲ್ಲದೆ ರಾಜ್ಯದ ಅನೇಕ ವಿದ್ಯಾಸಂಸ್ಥೆಗಳೂ ಗಣ್ಯವಿದ್ವಾಂಸರೂ ಪಡೆಯುತ್ತಲಿದ್ದಾರೆ.

ಈ ನಾಲ್ಕು ಸಾವಿರ ಹಸ್ತಪ್ರತಿಗಳಲ್ಲಿ ತಾಳೆವೋಲೆ ಮತ್ತು ಕಾಗದ ಪ್ರತಿಗಳ ಪ್ರಮಾಣ ಪ್ರತಿಶತ ೩೦ ಮತ್ತು ೭೦. ಅರ್ಧ ಇಂಚು ಅಗಲದಿಂದ ೪ ಅಡಿ ಉದ್ದನೆಯ, ಒಂದೆರಡು ಪುಟಗಳಿಂದ ಹಿಡಿದು ಒಂದು ಸಾವಿರ ಪುಟಗಾತ್ರದ ಕೃತಿಗಳು ಇಲ್ಲಿ ಸಮಾವೇಶವಾಗಿವೆ. ಶಿಗ್ಗಾವಿಯ ಚೆನ್ನಗೌಡರ ಸೊಸೆ ಭೈರಾಜಿಯಂಥ ಹೆಣ್ಣುಮಕ್ಕಳು ಬರೆದ ಹಸ್ತಪ್ರತಿಗಳೂ ಇಲ್ಲಿವೆ. ಮುದ್ದಾದ ಅಕ್ಷರಗಳ, ಸೂಕ್ಷ್ಮಾತಿಸೂಕ್ಷ್ಮ ಅಕ್ಷರಗಳ ಹಸ್ತಪ್ರತಿಗಳಲ್ಲದೆ, ಕಾವ್ಯದಲ್ಲಿ ನಿರೂಪಿತವಾದ ಘಟನೆಗಳನ್ನು ಚಾಕ್ಷುಷಗೊಳಿಸುವ ಬಣ್ಣಬಣ್ಣದ ಚಿತ್ರವನ್ನೊಳಗೊಂಡ ಹಸ್ತಪ್ರತಿಗಳೂ ನೂರುಸಂಖ್ಯೆಯಲ್ಲಿ ಸಿಗುತ್ತವೆ. ಹಸ್ತಪ್ರತಿಗಳ ರಕ್ಷಾಫಲಕ, ಒಳಗಿನ ಪುಟ ಮತ್ತು ಮುಖಪುಟಗಳ ಮೇಲೆ ಬರೆದ ಚಿತ್ರಗಳೂ ಸುಳುವು ನಕ್ಷೆಗಳೂ ಯೋಗದ ಪ್ರಕಾರ ವಿಧಾನಗಳನ್ನು ಬಿಂಬಿಸುವ ಉದ್ಧರಣೆಗಳೂ ಬರವಣಿಗೆಯ ಸಾಧನಗಳೂ ಈ ಭಂಡಾರಕ್ಕೆ ಇನ್ನೂ ಹೆಚ್ಚಿನ ಆಕರ್ಷಣೆಯನ್ನು ಒದಗಿಸಿವೆ. ಇದರಿಂದಾಗಿ ಇದು ಅಪೂರ್ವ ವಸ್ತುಸಂಗ್ರಹಶಾಲೆಯಾಗಿ ಪರಿಣಮಿಸಿ, ವಿಶ್ವವಿದ್ಯಾಲಯಕ್ಕೆ ಆಗಮಿಸುವ ಸಂದರ್ಶಕರಿಗೆ ಪ್ರಮುಖ ಆಕರ್ಷಕ ಕೇಂದ್ರವೆನಿಸಿದೆ. ಇವುಗಳಲ್ಲದೆ ಶರಣರ ಚಿತ್ರ, ವಿಗ್ರಹಗಳು, ಕವಿಗಳ ಶಾಸನಗಳು ಇಲ್ಲಿರುರುವುದರಿಂದ ಈ ಭಂಡಾರಕ್ಕೆ ಇನ್ನೂ ವೈಶಿಷ್ಟ್ಯ ಪ್ರಾಪ್ತವಾಗಿದೆ.

ಕಷ್ಟಪಟ್ಟು ತಂದ ಈ ಅಮೂಲ್ಯನಿಧಿಯನ್ನು ಇನ್ನೂ ಕಷ್ಟಪಟ್ಟು ಸಂರಕ್ಷಿಸಬೇಕಾಗಿದೆ. ಗಾಳಿ, ಬಿಸಿಲು, ಮಳೆಗಳಿಂದ ರಕ್ಷಿಸುವಷ್ಟೇ ಇವುಗಳನ್ನು ಹುಳುಗಳಿಂದ ರಕ್ಷಿಸುವುದೂ ಅವಶ್ಯವಿದೆ. ಕಾರಣ ಆಧುನಿಕ ರಸಾಯನವನ್ನು ಲೇಪಿಸಿ, ಮಳೆಗಾಲದಲ್ಲಿ ವಿದ್ಯುತ್‌ಶಾಖವನ್ನೊದಗಿಸಿ, ವರ್ಷಕ್ಕೊಮ್ಮೆ ಸ್ವಚ್ಛಗೊಳಿಸಿ ಜೋಪಾನ ಮಾಡಲಾಗುತ್ತದೆ.

ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಪರಿಶೀಲನೆ, ಪರಿಷ್ಕರಣ, ಇತ್ಯಾದಿ ಅನುಭವಗಳ ಬಲದಿಂದ 'ಹಸ್ತಪ್ರತಿಶಾಸ್ತ್ರ' (Manuscriptology) ಹೆಸರಿನ ಒಂದು ಬೋಧನಶಾಖೆಯನ್ನೇ ಪ್ರಾರಂಭಿಸುವುದು ಇಂದಿನ ಅಗತ್ಯವಾಗಿದೆ. ಹೀಗಾಗಿ ಈ ಭಂಡಾರವನ್ನು ಇನ್ನೂ ಶ್ರೀಮಂತಗೊಳಿಸುವುದು, ಅಧ್ಯಯನಯೋಗ್ಯ ಕೇಂದ್ರವಾಗಿಸುವುದು ಅವಶ್ಯವಿದೆ. ಈ ಹಂಬಲವನ್ನು ಅನುಷ್ಠಾನಗೊಳಿಸಬೇಕೆಂಬ ಉದ್ದೇಶದಿಂದ ಈ ವಿಭಾಗ ಇನ್ನೂ ವೇಗವಾಗಿ, ವ್ಯಾಪಕವಾಗಿ, ವ್ಯವಸ್ಥಿತವಾಗಿ ಕಾರ್ಯಮಾಡಬೇಕಾಗಿದೆ. ಕ್ಷೇತ್ರಕಾರ್ಯಕರ್ತರು ಊರೂರು ಸಂಚರಿಸಿ ಹಸ್ತಪ್ರತಿಗಳನ್ನು ಸಂಗ್ರಹಿಸಬೇಕಾಗಿದೆ. ಈ ಕ್ಷೇತ್ರಕಾರ್ಯದ ಫಲವಾಗಿ ಇನ್ನೂ ಸಾವಿರಾರು ಹಸ್ತಪ್ರತಿಗಳು ಸಂಗ್ರಹಿಸಲ್ಪಟ್ಟು, ಅನೇಕ ಅಮೂಲ್ಯ ಗ್ರಂಥಗಳು ಕೈವಶವಾಗಬಹುದೆಂಬ ಬಹುದೊಡ್ಡ ನಿರೀಕ್ಷೆಯನ್ನಿಟ್ಟುಕೊಂಡಿದೆ, ಅಧ್ಯಯನಪೀಠ.

■■

ಆಕರ : ಮಾರ್ಗ ಸಂಪುಟ–೨

೩೦

ವಚನ ಸಾಹಿತ್ಯ : ಸಂಪಾದನೆಯ ವಿಧಾನ-ಇತಿಹಾಸ

ಬರಹವುಳ್ಳ ಯಾವುದೇ ಭಾಷೆಯಲ್ಲಿ ಶಿಷ್ಟಪದ ಮತ್ತು ಜನಪದ ಎಂಬ ಎರಡು ಸಾಹಿತ್ಯ ಪ್ರವಾಹಗಳು ಕಂಡುಬರುತ್ತವೆ. ಇವುಗಳಲ್ಲಿ ಒಂದರ ಲಕ್ಷಣ ಸ್ಥಿರಪಾಠ, ಇನ್ನೊಂದರ ಲಕ್ಷಣ ಚರಪಾಠ. ಇವುಗಳ ಮಧ್ಯೆ ಜನಪ್ರಿಯ ಸಾಹಿತ್ಯವೆಂಬ ಇನ್ನೊಂದು ಸಾಹಿತ್ಯ ಪ್ರವಾಹ ಅಸ್ತಿತ್ವದಲ್ಲಿರುತ್ತದೆ. ಇದರ ಪಾಠ ಶಿಷ್ಟಪದದಷ್ಟು ಸ್ಥಿರವೂ ಅಲ್ಲ, ಜನಪದದಷ್ಟು ಚರವೂ ಅಲ್ಲ. ಕನ್ನಡದ ವಚನ, ಈ ವರ್ಗಕ್ಕೆ ಸಂಬಂಧಪಟ್ಟ ಸಾಹಿತ್ಯ ಪ್ರಕಾರವಾಗಿದೆ.

ಗ್ರಂಥಸಂಪಾದನೆಯೆನ್ನುವುದು ಯಾವುದೇ ಕೃತಿಯ ಪಾಠಾಂತರ ಮತ್ತು ಆಶಯಗಳನ್ನು ಅವಲಂಬಿಸಿ, ನಿಜಪಾಠವನ್ನು ನಿರ್ಣಯಿಸುವ ಹೊಣೆಯಾಗಿದೆ. ಆದುದರಿಂದ ವಚನಸಂಪಾದನೆಯಲ್ಲಿ ಅದರ "ಪಾಠಾಂತರ ಸ್ವರೂಪ" ಮತ್ತು ಅದರ "ಆಶಯ ಸ್ವರೂಪ"ಗಳ ಸ್ಪಷ್ಟ ಕಲ್ಪನೆ ಸಂಪಾದಕನಿಗಿರಬೇಕಾಗಿದ್ದು, ಆ ವಿವರ ಹೀಗಿದೆ:

ಪಾಠಾಂತರ ಸ್ವರೂಪ :

ಯಾವುದೇ ಸಾಹಿತ್ಯದ ವಾಚಕಲೋಕ ವಿಸ್ತಾರವಾದಷ್ಟೂ ಅದಕ್ಕೆ ಪಾಠಾಂತರ ಅಧಿಕ. ನಮ್ಮ ನಾಡಿನ ಬಹುದೊಡ್ಡ ಜನಾಂಗವಾದ ವೀರಶೈವಸಮಾಜ ಧಾರ್ಮಿಕ ಭಕ್ತಿ ಮತ್ತು ಸಾಹಿತ್ಯಿಕ ಆಸಕ್ತಿಗಳಿಂದ ನಡೆಸಿದ ಅಧ್ಯಯನ ಕಾರಣವಾಗಿ, ವಚನಸಾಹಿತ್ಯಕ್ಕೆ ತೆರೆತೆರೆಯಾಗಿ ಹುಟ್ಟಿಕೊಂಡಿರುವ ಪಾಠಾಂತರಗಳ ಸ್ವರೂಪ ಹೀಗಿದೆ:

ಪ್ರಾಚೀನ ಲಿಪಿಕಾರರ ಪಾಠಾಂತರಗಳು : ಅಕ್ಷರದ ರೂಪಸಾದೃಶ್ಯ, ಧ್ವನಿಸಾದೃಶ್ಯ, ಬರವಣಿಗೆಯ ರೀತಿದೋಷ ಮತ್ತು ಲಿಪಿಕಾರರ ಅಜ್ಞಾನ, ಅನವಧಾನ, ಅನ್ಯಥಾಜ್ಞಾನ ಕಾರಣವಾಗಿ ಹಸ್ತಪ್ರತಿಗಳಲ್ಲಿ ಪಾಠಾಂತರಗಳು ಹುಟ್ಟಿಕೊಳ್ಳುವುದು ಸಹಜ. ಇದಕ್ಕೆ ಹೆಚ್ಚಿನದಾಗಿ ಲಿಪಿಕಾರರು ಪದ್ಯಕೃತಿ ಲಿಪಿಸುವಾಗ ತೋರುವ ಎಚ್ಚರವನ್ನು ಗದ್ಯಕೃತಿ ಲಿಪಿಸುವಾಗ ತೋರುವುದಿಲ್ಲವಾದುದರಿಂದ ಗದ್ಯಗಂಧಿಯಾದ ಅದರಲ್ಲಿಯೂ ಜನಪದ ಗದ್ಯಗಂಧಿಯಾದ ವಚನಗಳಿಗೆ ಪಾಠಾಂತರ ಇನ್ನೂ ಅಧಿಕ. ಇದಲ್ಲದೆ ಇದು ಧಾರ್ಮಿಕ ಸಾಹಿತ್ಯವಾಗಿರುವುದರಿಂದ ವೀರಶೈವರು ಮಾತ್ರ ಇದನ್ನು ಪ್ರತಿಲಿಪಿಗೊಳಿಸುತ್ತ ಬಂದರು. ಈ ಕಾಲದ ವೀರಶೈವರ ಅಕ್ಷರ ಮತ್ತು

ಭಾಷಾಜ್ಞಾನಗಳೂ ಸಾಮಾನ್ಯವಾಗಿ ಮಧ್ಯಮ ಮಟ್ಟದವು. ಹೀಗಾಗಿ ಮಿಕ್ಕ ಬ್ರಾಹ್ಮಣ, ಜೈನ ಹಸ್ತಪ್ರತಿಗಳಿಗಿಂತ, ವೀರಶೈವಹಸ್ತಪ್ರತಿಗಳಲ್ಲಿ, ಅದರಲ್ಲಿಯೂ ವಚನಹಸ್ತಪ್ರತಿಗಳಲ್ಲಿ ದೋಷಾಪಾಠಗಳು ಹೇರಳ ಸಂಖ್ಯೆಯಲ್ಲಿ ಹುಟ್ಟಿಕೊಂಡವು. ಇಲ್ಲಿ ಬರುವ ಸಂಸ್ಕೃತ ಶ್ಲೋಕಗಳ ಗತಿ ದೇವರೇ ಬಲ್ಲ.

ಪ್ರಾಚೀನ ಸಂಪಾದನಕಾರರ ಪಾಠಾಂತರಗಳು: ಶರಣರ ವಚನಗಳನ್ನು ಮುಂದಿನವರು ವೈವಿಧ್ಯಮಯವಾಗಿ ಸಂಯೋಜಿಸಿದ ಫಲವಾಗಿ ವೀರಶೈವದಲ್ಲಿ 'ಸಂಪಾದನಾಸಾಹಿತ್ಯ'ವೆಂಬ ವಿಶಿಷ್ಟ ಪ್ರಕಾರವೊಂದು ವಿಪುಲಪ್ರಮಾಣದಲ್ಲಿ ಬೆಳೆದು ಬಂದಿತು. ಸಕಲಪುರಾತನರ ವಚನಗಳಂಥ 'ಸಂಗ್ರಹ'ದಿಂದ ಪ್ರಾರಂಭವಾಗಿ, ಏಕೋತ್ತರಶತಸ್ಥಲಗಳಂಥ 'ಸಂಕಲನ'ಗಳಲ್ಲಿ ವೈವಿಧ್ಯಪೂರ್ಣವಾಗಿ ಬೆಳೆದು, ಶೂನ್ಯಸಂಪಾದನೆಗಳಂತ 'ಸಂಪಾದನ' ಗ್ರಂಥಗಳಲ್ಲಿ ಅದು ಸಿದ್ಧಿಯನ್ನು ಮುಟ್ಟಿದೆ. ಆದರೆ 'ಸಂಗ್ರಹ'ಗಳಲ್ಲಿ ಅನುದ್ದೇಶಿತ ಪಾಠಾಂತರಗಳಾಗಿರಬಹುದು, 'ಸಂಕಲನ'ಗಳಲ್ಲಿ ಅನುದ್ದೇಶಿತ ಪಾಠಾಂತರದ ಜೊತೆಗೆ ಕೂಟವಚನಗಳೂ ಸೇರಿಕೊಂಡವು. ಉದಾ: ಗಣಭಾಷಿತ ರತ್ನಮಾಲೆ. 'ಸಂಪಾದನೆ'ಯಲ್ಲಿ ಸಂವಾದಕ್ಕೆ ಯೋಗ್ಯವಾಗುವಂತೆ ಮೂಲವಚನಗಳಿಗೆ ಉದ್ದೇಶಿತ ಪಾಠಾಂತರವನ್ನು ಸೃಷ್ಟಿಸುವ ಮತ್ತು ಹೊಸಕೂಟವಚನಗಳನ್ನು ಸೇರಿಸುವ ಕಾರ್ಯ ನಡೆಯಿತು. ಹೀಗಾಗಿ 'ಸಂಗ್ರಹ'ಗಳ ಪಾಠ ವಿಶ್ವಾಸಾರ್ಹವೆಂದೂ, 'ಸಂಕಲನ'ಗಳ ಪಾಠ ಅಷ್ಟು ವಿಶ್ವಾಸಾರ್ಹವಲ್ಲವೆಂದೂ, 'ಸಂಪಾದನೆ'ಗಳ ಪಾಠ ಇನ್ನೂ ವಿಶ್ವಾಸಾರ್ಹವಲ್ಲವೆಂದೂ ಹೇಳಬೇಕಾಗುತ್ತದೆ. ಈ "ಪಾಠಾಂತರ ಸ್ವರೂಪ"ದ ಬಗ್ಗೆ ಸ್ಪಷ್ಟ ತಿಳಿವಳಿಕೆಯಿದ್ದರೆ ಮಾತ್ರ ವಚನಸಂಪಾದನೆ ನಿರ್ದಿಷ್ಟವಾಗುತ್ತದೆ.

ಆಶಯ ಸ್ವರೂಪ :

ಎರಡನೆಯದಾಗಿ ತಾನು ಸಂಪಾದಿಸುತ್ತಿರುವ ಕೃತಿಯ "ಆಶಯ ಸ್ವರೂಪ"ವನ್ನು ಸಂಪಾದಕ ಅರ್ಥಮಾಡಿಕೊಳ್ಳಬೇಕಾಗುತ್ತದೆ. ವಚನ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಈ 'ಆಶಯ'ವೆಂಬುದು ವೀರಶೈವ ತತ್ವವೇ ಆಗಿದೆ. ಹೀಗಾಗಿ, ಇಲ್ಲಿ ಸಂಪಾದನೆಯ ಅಂತಿಮ ಒರೆಗಲ್ಲು 'ವೀರಶೈವ ಸಿದ್ಧಾಂತ'ವೇ ಆಗಿದ್ದು, ಅದನ್ನು ತಿಳಿದವರು ಮಾತ್ರ ಈ ಕಾರ್ಯಕ್ಕೆ ಕೈಹಾಕಬೇಕು. ಹೆಚ್ಚಿನದಾಗಿ ಅಂದಿನ ಪರಿಸರ ಮತ್ತು ವಚನಭಾಷಾ ಸ್ವರೂಪದ ತಿಳಿವಳಿಕೆಯೂ ಅವಶ್ಯಬೇಕು.

ಈ ಎರಡು ಮುಖ್ಯ ತಿಳುವಳಿಕೆಗಳ ಹಿನ್ನೆಲೆಯಲ್ಲಿ ಸಂಪಾದಕ ವಚನಪರಿಷ್ಕರಣ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಆದರೆ ಈಗ ನಮ್ಮಲ್ಲಿ ರೂಢಿಯಲ್ಲಿರುವ ಒಂದು ದೊಡ್ಡ ದೋಷವೆಂದರೆ ಗದ್ಯಕ್ಕೆ ಅನ್ವಯಿಸುವ ವಿಮರ್ಶಾಮಾನದಂಡಗಳನ್ನೇ ಪದ್ಯಕ್ಕೆ, ಅದಕ್ಕಿಂತ ದೃಶ್ಯಕ್ಕೆ ಅನ್ವಯಿಸುವ ತಪ್ಪು ವಿಧಾನದಂತೆ, ಶಿಷ್ಟಪದಸಾಹಿತ್ಯ ಪರಿಷ್ಕರಣಕ್ಕೆ ಅನ್ವಯಿಸುವ ಸಂಪಾದನಸೂತ್ರಗಳನ್ನೇ ಈ ಜನಪ್ರಿಯ ಸಾಹಿತ್ಯ ಪರಿಷ್ಕರಣಕ್ಕೂ ಕೆಲವೊಮ್ಮೆ ಜನಪದ ಸಾಹಿತ್ಯ ಪರಿಷ್ಕರಣಕ್ಕೂ ಅನ್ವಯಿಸುತ್ತಿರುವುದು.

ಪಾಠಾಂತರಗಳು ಪರಿಮಿತಸಂಖ್ಯೆಯಲ್ಲಿರುವ, ಕ್ರಮಬದ್ಧವಾಗಿ ಬೆಳೆದು ಬಂದಿರುವ ಶಿಷ್ಟಪದ ಸಾಹಿತ್ಯದಲ್ಲಿ ಒಂದು ಕೃತಿಯ ಎಲ್ಲ ಹಸ್ತಪ್ರತಿಗಳನ್ನು ಸಂಗ್ರಹಿಸಿ ಪಾಠನಿರ್ಣಯ ಮಾಡುವುದು ಸೂಕ್ತವಾಗಿದ್ದು, ಅದು ನಿಜಪಾಠದ ನೆಲೆಯನ್ನು ಬಹುಮಟ್ಟಿಗೆ ಮುಟ್ಟಿಸುತ್ತದೆ. ವಚನಗಳು ಜನಪ್ರಿಯಸಾಹಿತ್ಯವರ್ಗಕ್ಕೆ ಸಂಬಂಧಪಟ್ಟಿರುವ ಕಾರಣ ಅವುಗಳ ಪಾಠಾಂತರಗಳು ಕ್ರಮಬದ್ಧ ರೀತಿಯಲ್ಲಿ ಬೆಳೆದು ಬಂದಿರುವುದಿಲ್ಲ. ಮೇಲಾಗಿ ಈ ಪಾಠಾಂತರಗಳೂ ಅಪಾರ ಸಂಖ್ಯೆಯಲ್ಲಿ ಬೆಳೆದು, ಒಂದು ಬಗೆಯ ದೊಡ್ಡ ಗೊಂದಲವೇ ಅಲ್ಲಿ ಏರ್ಪಟ್ಟಿರುತ್ತದೆ. ಇಂಥ ಸಂದರ್ಭದಲ್ಲಿ ಹೆಚ್ಚು ಹಸ್ತಪ್ರತಿಗಳನ್ನು ಸಂಗ್ರಹಿಸಿ ಪಾಠನಿರ್ಣಯಿಸುವುದೆಂದರೆ

ಹೆಚ್ಚು ಅಶಾಸ್ತ್ರೀಯವಾಗಿ ಸಂಪಾದನೆ ಮಾಡಿದಂತಯೇ ಸರಿ. ವಚನಗಳ 'ಸಂಗ್ರಹ' ಪರಂಪರೆಯಲ್ಲಿ ಒಂದು ಬಗೆಯ, 'ಸಂಕಲನ' ಪರಂಪರೆಯಲ್ಲಿ ಇನ್ನೊಂದು ಬಗೆಯ, 'ಸಂಪಾದನ' ಪರಂಪರೆಯಲ್ಲಿ ಮತ್ತೊ ಒಂದು ಬಗೆಯ ಪಾಠಗಳು ಬೆಳೆದುಬಂದಿರುತ್ತವೆ. ಇವೆಲ್ಲವುಗಳಿಂದ ಪಾಠತುಂಡುಗಳನ್ನು ಎತ್ತಿಕೊಂಡು ನಮ್ಮ ಮೂಗಿನ ನೇರದ ಅರ್ಥಕ್ಕೆ ಇವುಗಳನ್ನು ಹೊಂದಿಸಿದರೆ, ಸಂಪಾದನೆ ಅನೇಕ ತೇಪೆಗಳ ಬೇರೊಂದು ಸುಂದರ ವಸ್ತ್ರವಾದೀತೇ ಹೊರತು, ಮೂಲದ ವಸ್ತ್ರವಾಗುವುದಿಲ್ಲ. ಉದಾ: 'ಸಕಲಪುರಾತನರ ವಚನಗಳು' ಕೃತಿಯ ಪರಿಷ್ಕರಣಕ್ಕೆ ಸಕಲಪುರಾತನರ ವಚನಕಟ್ಟುಗಳನ್ನೇ ಬಳಸಿಕೊಳ್ಳಬೇಕು. ಇದನ್ನು ಬಿಟ್ಟು ಸಂಕಲನವರ್ಗದ ಗಣಭಾಷಿತ ರತ್ನಮಾಲೆ, ಸಂಪಾದನವರ್ಗದ ಶೂನ್ಯಸಂಪಾದನೆಯ ಪಾಠಾಂತರಗಳನ್ನು ನೇರವಾಗಿ ಉಪಯೋಗಿಸಿಕೊಳ್ಳಬಾರದು. ಎರಡನೆಯದಾಗಿ ಒಂದು ಕೃತಿಗೆ ಸಂಬಂಧಪಟ್ಟ ಹಸ್ತಪ್ರತಿಗಳ ಒಂದೊಂದು ಕುಟುಂಬದಿಂದ ಒಂದೊಂದು ಪ್ರತಿನಿಧಿಕಟ್ಟುಗಳನ್ನು ಆಯ್ದುಕೊಳ್ಳುವುದಕ್ಕಿಂತ, ಕೇವಲ ಒಂದು ಕುಟುಂಬದ ಎಲ್ಲ ಕಟ್ಟುಗಳನ್ನು ಅದರಲ್ಲಿಯೂ ಎರಡು ಇಲ್ಲವೆ ಮೂರು ಉತ್ತಮ ಕಟ್ಟುಗಳನ್ನು ಆಯ್ದುಕೊಂಡು, ಒಂದನ್ನು ಆಧಾರಪ್ರತಿಯೆಂದು ಮಿಕ್ಕ ಒಂದನ್ನು ಇಲ್ಲವೆ ಎರಡನ್ನು ಪಾಠಾಂತರ ಪ್ರತಿಗಳೆಂದು ಇಟ್ಟುಕೊಳ್ಳುವುದು ವಚನಸಾಹಿತ್ಯ ಸಂಪಾದನೆಯಲ್ಲಿ ಸೂಕ್ತಕ್ರಮವೆಂದು ತೋರುತ್ತದೆ. "ವಚನವಾಙ್ಮಯದಂತಹ ಜನಪ್ರಿಯ ವಾಙ್ಮಯವನ್ನು ಸಂಪಾದಿಸುವಲ್ಲಿ ಹಸ್ತಪ್ರತಿಗಳ ಆಯ್ಕೆ ತುಂಬ ಜಾಗರೂಕತೆಯಿಂದ ನಡೆಯಬೇಕಾಗುತ್ತದೆ. ಅಂದರೆ ಒಂದು ಕೃತಿಯ ಎಲ್ಲ ಕುಟುಂಬಗಳ ಒಂದೊಂದು ಉತ್ತಮ ಪ್ರತಿಗಳನ್ನು ಆಯ್ದುಕೊಳ್ಳುವುದಕ್ಕಿಂತ ಒಂದೇ ಕುಟುಂಬದ ಕೆಲವು ಉತ್ತಮ ಪ್ರತಿಗಳನ್ನು ಆಯ್ದುಕೊಳ್ಳುವುದು ಲೇಸು"[೧] ಎಂದು ನಾನು ೧೯೭೬ರಲ್ಲಿ ಹೇಳಿದ ಮಾತನ್ನು ಇಲ್ಲಿ ಮತ್ತೆ ನೆನಪಿಸುತ್ತೇನೆ. ಅಂದರೆ ಒಂದು ಕುಟುಂಬದ ಮಾತೃಕೆಯನ್ನು ನಿರ್ಣಯಿಸುವಲ್ಲಿಯೇ ತೃಪ್ತಿಪಡುವುದು ಲೇಸು. ವಸ್ತುಸ್ಥಿತಿ ಹೀಗಿರುವಾಗ ಶ್ರೀ ಬಸವನಾಳ ಅವರು ಬಸವಣ್ಣನವರ ಕೃತಿ ಪರಿಷ್ಕರಣಕ್ಕೆ ಅನೇಕ ಹಸ್ತಪ್ರತಿಗಳನ್ನು, ಡಾ. ಹಿರೇಮಠರು ಚೆನ್ನಬಸವಣ್ಣನವರ ವಚನಗಳಿಗೆ ೧೭೪ ಹಸ್ತಪ್ರತಿಗಳನ್ನು ಬಳಸಿರುವುದು ಸಾಹಸದ ಮಾತಾಗಿದ್ದರೂ ಹಸ್ತಪ್ರತಿಗಳನ್ನು ಹೆಚ್ಚು ಬಳಸಿದಷ್ಟೂ ಮೂಲಪಾಠನಿರ್ಣಯದ ಸಂಭಾವ್ಯತೆ ಕಡಿಮೆಯಾಗುತ್ತ ಹೋಗುತ್ತದೆಂದೇ ಹೇಳಬಹುದು. ಈ ವಿಧಾನವನ್ನೇ ಅನುಸರಿಸಿರುವ, ಅನುಸರಿಸುತ್ತಿರುವ ಡಾ. ಬಸವರಾಜು ಮೊದಲು ಮಾಡಿ ಎಲ್ಲ ವಿದ್ವಾಂಸರ ಆವೃತ್ತಿಗಳಿಗೂ ಈ ಮಾತು ಅನ್ವಯಿಸುತ್ತದೆ. ಇವರೆಲ್ಲ ಶಿಷ್ಟಪದ ಸಾಹಿತ್ಯ ಸಂಪಾದನಸೂತ್ರಗಳನ್ನೇ ಜನಪ್ರಿಯ ಸಾಹಿತ್ಯ ಸಂಪಾದನೆಗೂ ಅನ್ವಯಿಸಿದರೆಂಬುದು ನನ್ನ ಆಕ್ಷೇಪ. ಇದರಿಂದಾಗಿ ಇವರೆಲ್ಲರ ಸಂಪಾದನೆಗಳು 'ಮಿಶ್ರಪ್ರತಿ'ಗಳಾಗಿರುವುದೇ ಹೆಚ್ಚು.

ಒಟ್ಟಿನಲ್ಲಿ ಜನಪದಸಾಹಿತ್ಯದಲ್ಲಿ ಒಂದು ಪ್ರತಿ (=ಒಬ್ಬ ನಿವೇದಕ)ಯೇ ಮೂಲಕೃತಿ, ಜನಪ್ರಿಯಸಾಹಿತ್ಯದಲ್ಲಿ ಒಂದು ಕುಟುಂಬದ ಹಲವು ಹಸ್ತಪ್ರತಿಗಳಿಂದ ಕಟ್ಟಿಕೊಡುವ ಆ ಕುಟುಂಬದ ಮಾತೃಕತೆಯೇ ಮೂಲಕೃತಿ. ಶಿಷ್ಟಪದ ಸಾಹಿತ್ಯದಲ್ಲಿ ಹಲವು ಕುಟುಂಬಗಳ ಮಾತೃಕೆಗಳಿಂದ ಕಟ್ಟಿಕೊಡುವ ಒಂದು ಮೂಲಮಾತೃಕೆಯೇ ಮೂಲಕೃತಿಯೆಂದು ಹೇಳಬಹುದಾಗಿದೆ.

* * * * *

ನಮ್ಮ ದೇಶದ ಇತಿಹಾಸದಲ್ಲಿ ಬರವಣಿಗೆ ತಾಳೆಗರಿಯಿಂದ ಕಾಗದಕ್ಕೆ ವರ್ಗಾವಣೆ ಹೊಂದಿದುದು ಒಂದು ಮಹತ್ತರ ಸಾಧನೆಯಾದರೆ, ಕೈಯ ಬರವಣಿಗೆ ಯಂತ್ರಮುದ್ರಣಕ್ಕೆ ವರ್ಗಾವಣೆ ಹೊಂದಿದುದು ಇನ್ನೊಂದು ಮಹತ್ತರ ಸಾಧನೆಯಾಗಿದೆ. ಇದರಿಂದಾಗಿ ಹಸ್ತಪ್ರತಿ ಉತ್ಪಾದನಾಕಾರ್ಯ ನಿಂತುಹೋಗಿ ಯಂತ್ರಪ್ರತಿ ಉತ್ಪಾದನಾಕಾರ್ಯ ನಮ್ಮಲ್ಲಿ ಪ್ರಾರಂಭವಾಯಿತು. ಈವರೆಗೆ ನಕಲು, ಮರುನಕಲು, ಬಳಿನಕಲು ರೂಪದಲ್ಲಿ

ಮುಂದುವರಿಯುತ್ತಲಿದ್ದ ಪ್ರಾಚೀನ ಕೃತಿಗಳು ಈಗ ಆವೃತ್ತಿ, ಮರು ಆವೃತ್ತಿ, ಬಳಿ ಆವೃತ್ತಿ ರೂಪದಲ್ಲಿ ಬೆಳಕು ಕಾಣತೊಡಗಿದವು. ಈ ಬಗೆಯ ಗ್ರಂಥಸಂಪಾದನ ಕೆಲಸವನ್ನು ನಮ್ಮಲ್ಲಿ ಮೊದಲು ಪ್ರಾರಂಭಿಸಿದವರು ಕ್ರೈಸ್ತಪಾದ್ರಿಗಳು. ಒಂದು ಆಶ್ಚರ್ಯದ ಸಂಗತಿಯೆಂದರೆ ಪಂಪಭಾರತ, ಆದಿಪುರಾಣಗಳಂಥ ಜೈನಕೃತಿಗಳನ್ನು, ಕುಮಾರವ್ಯಾಸಭಾರತದಂಥ ಬ್ರಾಹ್ಮಣಕೃತಿಗಳನ್ನು, ಬಸವಪುರಾಣ, ಚೆನ್ನಬಸವಪುರಾಣಗಳಂಥ ವೀರಶೈವ ಕೃತಿಗಳನ್ನು ಪ್ರಕಟಿಸಿದ, ದಾಸರಕೀರ್ತನೆಗಳನ್ನೂ ಪ್ರಕಟಿಸಿದ ಈ ಪಾದ್ರಿಗಳು ವಚನಸಾಹಿತ್ಯವನ್ನು ಪ್ರಕಟಿಸದಿರುವುದು. ಈ ಕಾಲದ ವೀರಶೈವರು ಸಂಸ್ಕೃತ ಕೃತಿಗಳತ್ತ ವಾಲಿದ್ದ ಕಾರಣ ವಚನಗಳ ಬಗ್ಗೆ ಪೂಜ್ಯಭಾವನೆ ಮಾಯವಾಗಿದ್ದಿತು. ಮತ್ತು ವಿದೇಶಿ ವಿದ್ವಾಂಸನಿಗೆ ವಚನಗಳ ಅಸ್ತಿತ್ವವೇ ತಿಳಿದಿರಲಿಲ್ಲವಾದುದರಿಂದ ಇವರು ವಚನಕೃತಿಗಳನ್ನು ಪ್ರಕಟಿಸಲಿಲ್ಲವೆಂದು ಡಾ. ಎಲ್. ಬಸವರಾಜು ಊಹಿಸುತ್ತಾರೆ. ಇದರಲ್ಲಿ ಕೆಲಮಟ್ಟಿಗೆ ಸತ್ಯಾಂಶವಿರಬಹುದಾದರೂ ೧೯ನೆಯ ಶತಮಾನದಲ್ಲಿ ನಕಲು ಮಾಡಿದ ಸಾವಿರಾರು ವಚನ ಕಟ್ಟುಗಳು ವೀರಶೈವ ಮನೆ-ಮಠಗಳಲ್ಲಿ ಸಿಗುವುದರಿಂದಲೂ ಮೆಕೆಂಝಿ, ಕಿಟೆಲ್‌ರಿಗೆ ವಚನಕಟ್ಟುಗಳು ಲಭ್ಯವಾಗಿದ್ದ ಬಗ್ಗೆ ಆಧಾರಗಳಿರುವುದರಿಂದಲೂ ಪಾದ್ರಿಗಳು ವಚನಗಳನ್ನು ಪ್ರಕಟಿಸದಿರುವುದಕ್ಕೆ ಬೇರೆ ಕಾರಣವನ್ನು ಹುಡುಕಬೇಕಾಗುತ್ತದೆ. ಈ ಸಂದರ್ಭದಲ್ಲಿ ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್ಸಿನವರು ತಮ್ಮ "ವಚನಶಾಸ್ತ್ರಸಾರ" ಹಸ್ತಪ್ರತಿಯನ್ನು ಮುದ್ರಿಸದೆ ಹಿಂದಿರುಗಿಸಿದುದರ ಬಗ್ಗೆ ಶ್ರೀ ಹಳಕಟ್ಟಿಯವರು ಹೇಳುವ ಈ ಕೆಳಗಿನ ಮಾತುಗಳು ನಮ್ಮ ಗಮನ ಸೆಳೆಯುತ್ತವೆ. "ಇದನ್ನು (ವಚನ ಶಾಸ್ತ್ರಸಾರ - ೧) ಸುಂದರವಾಗಿ ಅಚ್ಚುಹಾಕಿಸಬೇಕೆಂದು ಮಂಗಳೂರು ಬಾಸೆಲ್‌ಮಿಶನ್ ಪ್ರೆಸ್ಸಿಗೆ ಕಳುಹಿಸಿಕೊಟ್ಟಿದ್ದಲ್ಲದೆ, ಅವರು ತಿಳಿಸಿದಂತೆ ಈ ಕಾರ್ಯಕ್ಕೆ ಸುಮಾರು ೫೦೦ ರೂ. ಸಹ ಮುಂಗಡವಾಗಿ ಅವರಿಗೆ ಕಳಿಸಿಕೊಟ್ಟೆನು. ಆದರೆ ಆಶ್ಚರ್ಯದ ಸಂಗತಿಯೇನೆಂದರೆ ಮಿಶನ್ ಪ್ರೆಸ್ಸಿನವರು ಪರಧರ್ಮದವರ ಗ್ರಂಥಗಳನ್ನು ನಾವು ಅಚ್ಚುಹಾಕುವುದಿಲ್ಲ ಮತ್ತು ನಿಮ್ಮ ಗ್ರಂಥದಲ್ಲಿ ಪರಮಾತ್ಮನ ಸಂಬಂಧವಾಗಿ ಇರುವ ವಿಚಾರಗಳನ್ನು ಪ್ರಕಟಪಡಿಸಲು ನಾವು ಇಷ್ಟಪಡುವುದಿಲ್ಲ. ಅವು ನಮ್ಮ ಕ್ರಿಶ್ಚಿಯನ್ ಧರ್ಮತತ್ವಗಳನ್ನು ಹೋಲುತ್ತವೆ. ಇಂಥ ಧಾರ್ಮಿಕ ಗ್ರಂಥಗಳನ್ನು ಅಚ್ಚುಹಾಕುವುದರಿಂದ ನಮ್ಮ ಮಿಶನ್ನಿನ ಉದ್ದೇಶಕ್ಕೆ ಭಂಗಬರುತ್ತದೆ ಎಂಬ ಕಾರಣ ತೋರಿಸಿ ನಾನು ಕಳಿಸಿದ ಹಸ್ತಲಿಖಿತಗ್ರಂಥವನ್ನು ೫೦೦ ರೂ, ಮುಂಗಡ ಹಣವನ್ನು ನನಗೆ ತಿರುಗಿ ಕಳಿಸಿದರು."ಈ ಮಾತುಗಳು ವಚನಸಾಹಿತ್ಯವನ್ನು ಪಾದ್ರಿಗಳು ಏಕೆ ಪ್ರಕಟಿಸಲಿಲ್ಲವೆಂಬ ರಹಸ್ಯದತ್ತ ಬೆರಳು ನೀಡುತ್ತವೆ. ಇದು ವಚನಸಾಹಿತ್ಯ ಪ್ರಕಟಣೆಯ ಬಾಲಗ್ರಹಕಥೆ. ಇಲ್ಲಿಂದ ಮುಂದೆ ಪ್ರಾರಂಭವಾದ ವಚನಸಂಪಾದನೆಯ ಇತಿಹಾಸವನ್ನು ಪರಿಷ್ಕರಣವಿಧಾನದ ಹಿನ್ನೆಲೆಯಲ್ಲಿ (೧)ಹಳಕಟ್ಟಿಪೂರ್ವಯುಗ, (೨) ಹಳಕಟ್ಟಿಯುಗ (೩) ಬಸವನಾಳಯುಗವೆಂದು ವಿಭಾಗಿಸಬಹುದಾಗಿದೆ.

ಹಳಕಟ್ಟಿಪೂರ್ವಯುಗ :

'ಅಪ್ರಮಾಣ ಕೂಡಲಸಂಗಮದೇವಾ' ಮುದ್ರಿಕೆಯ 'ಶಿವರತ್ನ ಪ್ರಕಾಶವು'ಹೆಸರಿನದೇ ಮೊದಲು ಪ್ರಕಟವಾದ (೧೮೮೩) ವಚನಗ್ರಂಥ. ಆಮೇಲೆ ನಿಃಕಲರ ವಚನ (೧೮೮೫), ತೋಂಟದಸಿದ್ಧೇಶ್ವರ ವಚನ (೧೮೮೫), ಅಖಂಡೇಶ್ವರ ವಚನ (೧೮೮೭), ಮೌನೇಶ್ವರ ವಚನಶಾಸ್ತ್ರವು (೧೮೮೭), ಬಸವಣ್ಣನವರ ವಚನಗಳು (೧೮೮೯), ಅಂಬಿಗರ ಚೌಡಯ್ಯನ ವಚನಶಾಸ್ತ್ರವು (೧೯೨೫ ದ್ವಿ. ಆ), ಘನಲಿಂಗಿದೇವರು ನಿರೂಪಿಸಿದ ಕನ್ನಡ ವೀರಶೈವಸಿದ್ಧಾಂತ ವಚನವು (೧೯೦೭) ಪ್ರಕಟವಾದವು. ಪ್ರಧಾನವಾಗಿ ಬಳ್ಳಾರಿಯಲ್ಲಿ ಪ್ರಕಟವಾದ ಇವೆಲ್ಲ ಬೆರಳೆಣಿಕೆಯ ಪ್ರಯತ್ನಗಳು. ಆದರೆ ಈ ದಿಕ್ಕಿನಲ್ಲಿ ದುಡಿದು, ೧೯೦೭ರಲ್ಲಿ ಕವಿಚರಿತೆಯನ್ನು

ಪ್ರಕಟಿಸುವುದರ ಮೂಲಕ ಈ ಸಾಹಿತ್ಯದ ವಿಸ್ತಾರವನ್ನು ಮೊಟ್ಟಮೊದಲು ಎತ್ತಿ ತೋರಿಸಿದ ಕೀರ್ತಿ, ಆರ್. ನರಸಿಂಹಾಚಾರ್ಯರಿಗೆ ಸಲ್ಲುತ್ತದೆ. ೧೮೮೪ರ ಸುಮಾರಿಗೆ ಪ್ರಾರಂಭಿಸಿ ೧೯೦೭ರಲ್ಲಿ ಪ್ರಕಟಿಸಿದ ಕವಿಚರಿತೆ ಭಾಗ-೧ರ ಪಠ್ಯ ಮತ್ತು ಪರಿಶಿಷ್ಟ ಭಾಗಗಳಲ್ಲಿ ಇವರು ಅನೇಕ ವಚನಕಾರರನ್ನು ಉಲ್ಲೇಖಿಸಿದ್ದಾರೆ. ೧೯೧೯ರಲ್ಲಿ ಪ್ರಕಟಿಸಿದ ಕವಿಚರಿತೆ ಭಾಗ-೨ರಲ್ಲಿ ಈ ಸಂಖ್ಯೆ ಮತ್ತು ವಿಷಯಗಳು ಒಂದು ವ್ಯವಸ್ಥೆಗೆ ಒಳಪಟ್ಟು, ಶರಣರ ಅಲ್ಪಚರಿತ್ರೆಯೊಂದಿಗೆ ಉತ್ತಮೋತ್ತಮ ವಚನಗಳು ಇಲ್ಲಿ ಉದ್ಧರಿಸಲ್ಪಟ್ಟಿವೆ. ಇದರಿಂದಾಗಿ ಎರಡೂ ಸಂಪುಟಗಳು ಸೇರಿ ೧೯೧೯ರ ಹೊತ್ತಿಗೆ ಸುಮಾರು ೬೦ ಜನ ವಚನಕಾರರು ಬೆಳಕಿಗೆ ಬಂದಿದ್ದಾರೆ.

ಈ ಎರಡೂ ಸಂಪುಟಗಳನ್ನು ಹಳಕಟ್ಟಿಯವರು ಬಳಸಿಕೊಂಡಿದ್ದಾರೆಂದು ೧೯೨೩ರಲ್ಲಿ ಅವರು ಪ್ರಕಟಿಸಿದ ವಚನಶಾಸ್ತ್ರಸಾರ ಭಾಗ-೧ಕ್ಕೆ ಬರೆದ ಮುನ್ನುಡಿಯಲ್ಲಿಯ "ಕವಿ ಚರಿತೆಕಾರರು ತಮ್ಮ ಗ್ರಂಥದಲ್ಲಿ ನನಗೆ ಸಿಗದೆ ಇದ್ದಂಥ ಕೆಲವು ವಚನಗಳನ್ನು ಕೊಟ್ಟಿದ್ದಾರೆ" ಎಂಬ ಮಾತಿನಿಂದ ತಿಳಿದುಬರುತ್ತದೆ (ಮುಂದೆ ಹಳಕಟ್ಟಿಯವರ ಈ ಕೃತಿಯನ್ನು ನರಸಿಂಹಾಚಾರ್ಯರು ಬಳಸಿಕೊಂಡು,೧೯೨೯ರಲ್ಲಿ ಪ್ರಕಟಿಸಿದ ಕವಿಚರಿತೆಯ ೩ನೆಯ ಸಂಪುಟದಲ್ಲಿ ಒಟ್ಟು ೨೪೩ ವಚನಕಾರರನ್ನು ಸೂಚಿಸಿದ್ದಾರೆ.) ಒಟ್ಟಿನಲ್ಲಿ ೧೯೨೩ರಲ್ಲಿ ಹಳಕಟ್ಟಿಯವರು ವಚನಶಾಸ್ತ್ರಸಾರ ಭಾಗ-೧ನ್ನು ಪ್ರಕಟಿಸುವ ಹೊತ್ತಿಗೆ ಹತ್ತೆಂಟು ವಚನಕೃತಿಗಳನ್ನು ಬಳ್ಳಾರಿ ಮುಂತಾದ ಪಟ್ಟಣಗಳ ಶೆಟ್ಟರು ಪ್ರಕಟಿಸಿದ್ದಾರೆ, ೬೦ ವಚನಕಾರರನ್ನು ಆರ್. ನರಸಿಂಹಾಚಾರ್ಯರು ಬೆಳಕಿಗೆ ತಂದಿದ್ದಾರೆ. ಇದು ವಚನ ಸಾಹಿತ್ಯ ಪ್ರಕಟಣೆಯ ಅರುಣೋದಯ ಕಾಲ. ಇಲ್ಲಿ ನಡೆದುದು ಆಧುನಿಕ ಅರ್ಥದ ಸಂಪಾದನ ಕಾರ್ಯವಲ್ಲ. ಕೇವಲ ಪ್ರಕಟಣೆಯ ಕಾರ್ಯ ಮತ್ತು ಹಸ್ತಪ್ರತಿ ಶೋಧನಕಾರ್ಯ.

ಹಳಕಟ್ಟಿಯುಗ :

ವಚನಸಾಹಿತ್ಯ ಎಂದಾಕ್ಷಣ ನೆನಪಾಗುವ ಹೆಸರು ಬಸವಣ್ಣನವವರದು, ವಚನ ಸಾಹಿತ್ಯ ಪ್ರಕಟನೆ ಎಂದಾಕ್ಷಣ ನೆನಪಾಗುವ ಹೆಸರು ಹಳಕಟ್ಟಿಯವರದು. ಇಷ್ಟರ ಮಟ್ಟಿಗೆ ಈ ಸಾಹಿತ್ಯ ಪ್ರಕಟಣೆಗಾಗಿ ದುಡಿದು 'ವಚನಪಿತಾಮಹ' ಎಂಬ ಕೀರ್ತಿಗೆ ಪಾತ್ರರಾದ ಇವರು, ಈ ಹಿಂದೆ ನಡೆದಿದ್ದ ವಚನಗಳ ಪ್ರಕಟನ ಮತ್ತು ಸಂಶೋಧನಗಳಿಂದ ಪ್ರೇರೇಪಿತರಾಗದೆ. ಸ್ವಯಂಪ್ರೇರಣೆಯಿಂದ ಈ ಕೆಲಸಕ್ಕೆ ಕೈಹಾಕಿದರೆಂಬುದು ಅವಶ್ಯ ಗಮನಿಸಬೇಕಾದ ಸಂಗತಿ. "೧೯೦೫ನೇ ಇಸ್ವಿಯಲ್ಲಿ ಗುಬ್ಬಿ ಮಲುಹಣರು ಮಾಡಿದ ಗಣಭಾಷ್ಯ ರತ್ನಮಾಲೆಯ ಒಂದು ಕೈಬರಹದ ಗ್ರಂಥವು ನನ್ನ ದೃಷ್ಟಿಗೆ ಬಿತ್ತು.... ಅಂದಿನಿಂದ ನನಗೆ ಈ ವಚನಗಳ ವಿಷಯವಾಗಿ ಶೋಧಮಾಡುವ ಕುತೂಹಲ ಹುಟ್ಟಿತು" ಎಂದು ಹಳಕಟ್ಟಿಯವರು ಹೇಳಿದ ಮಾತು ಇದಕ್ಕೆ ಸಾಕ್ಷಿಯಾಗಿದೆ.

ಹಳಕಟ್ಟಿಯವರ ಪ್ರಕಟನೆಗಳನ್ನು ವಚನಶಾಸ್ತ್ರಸಾರದ ೩ ಸಂಪುಟಗಳು, ವಚನಗಳ ಬಿಡಿಸಂಪುಟಗಳು ಎಂದು ವಿಂಗಡಿಸಬಹುದು. ತಮ್ಮ ಸ್ಥಾನಮಾನವನ್ನು ಒಮ್ಮೆಲೇ ಎತ್ತರಿಸಿದ ವಚನಶಾಸ್ತ್ರಸಾರ ಸಂಪುಟಗಳನ್ನು ಹಳಕಟ್ಟಿಯವರು ಪ್ರಕಟಿಸದೆ ಹೋಗಿದ್ದರೆ ಅವರಿಗೆ 'ವಚನಪಿತಾಮಹ' ಕೀರ್ತಿ ಬರುತ್ತಿದ್ದ ಬಗ್ಗೆ ಸಂದೇಹ. ಅದರಲ್ಲಿಯೂ ಬಿಡಿ ಸಂಪುಟಗಳಿಗಿಂತ ಮೊದಲು ಪ್ರಕಟವಾಗಿ, ಅವರ ಕೀರ್ತಿಗೆ ದಾರಿ ತೆರೆದುಕೊಟ್ಟ ಈ ಸಂಪುಟಗಳ ಪ್ರಕಟನ ವಿವರ ಹೀಗಿದೆ :

೧.	ವಚನಶಾಸ್ತ್ರಸಾರ ಭಾಗ-೧	(ಪ್ರ. ಆ. ೧೯೨೩)
	ವಚನಶಾಸ್ತ್ರಸಾರ ಭಾಗ-೧	ಪೂರ್ವಾರ್ಧ (೧೯೩೧)
	(ದ್ವಿತೀಯ ಆವೃತ್ತಿ)	ಉತ್ತರಾರ್ಧ (೧೯೩೩)

೨. ವಚನಶಾಸ್ತ್ರಸಾರ ಭಾಗ-೨ (೧೯೩೮)

೩. ವಚನಶಾಸ್ತ್ರಸಾರ ಭಾಗ-೩ ಪೂರ್ವಾರ್ಧ (೧೯೫೪)
ಉತ್ತರಾರ್ಧ (೧೯೫೩)

ಇವು ಪ್ರಾಚೀನ ವಚನ ಸಂಕಲನಗಳಲ್ಲ; ಹಳಕಟ್ಟಿಯವರೇ ಸಂಗ್ರಹಿಸಿದ ವಚನಗಳ ಸಂಕಲನಗಳು. ಆದರೂ ಇಲ್ಲಿ ಪ್ರತಿಯೊಂದು ವಚನದ ಶುದ್ಧಿಯತ್ತ ಗಮನಕೊಟ್ಟಿರುವುದರಿಂದ, ಇವುಗಳನ್ನು ಪರ್ಯಾಯವಾಗಿ ಸಂಪಾದಿತ ಕೃತಿಗಳೆಂದೇ ಕರೆಯಬಹುದು. ಈ ಮಾತು ಭಾಗ ೩ಕ್ಕಿಂತ ೨ಕ್ಕೆ, ೨ಕ್ಕಿಂತ ೧ಕ್ಕೆ ಅನ್ವಯಿಸುತ್ತದೆ.

ಹಳಕಟ್ಟಿಯವರು ನೇರವಾಗಿ ಸಂಪಾದಿಸಿದ ಪ್ರಾಚೀನ ವಚನಕೃತಿ ಸಂಖ್ಯೆಯೂ ವಿಪುಲವಾಗಿದೆ. ಇವರು ಬಸವಣ್ಣ, ಚೆನ್ನಬಸವಣ್ಣ, ಮಹಾದೇವಿಯಕ್ಕ, ಗಣದಾಸಿ ವೀರಣ್ಣ, ಘನಲಿಂಗಿದೇವ, ಸಕಲೇಶಮಾದರಸ ಮೊದಲಾದವರ ವಚನಗಳನ್ನು, ಏಕೋತ್ತರಶತಸ್ಥಲ, ಶೂನ್ಯಸಂಪಾದನೆ (ಭಾಗಶಃ)ಗಳನ್ನೂ ಪ್ರಕಟಿಸಿದ್ದಾರೆ. ಇವುಗಳನ್ನು ಆಧುನಿಕ ಅರ್ಥದ 'ಸಂಪಾದನೆ'ಗಳೆಂದು ಕರೆಯುವುದು ಕಷ್ಟವಾಗುತ್ತದೆ. ವಚನಗಳಿಗೆ ಭಿನ್ನಪಾಠಗಳು ಸಿಗುತ್ತವೆಯೆಂದು ಗೊತ್ತಿದ್ದೂ ಹಸ್ತಪ್ರತಿಗಳು ಹತ್ತಿರ ಇದ್ದೂ ಇವರು ಪಾಠಾಂತರಗಳನ್ನು ಸಂಗ್ರಹಿಸುವ, ಯೋಗ್ಯಪಾಠ ಸ್ವೀಕರಿಸಿ ಅಯೋಗ್ಯಪಾಠಗಳನ್ನು ಅಡಿಯಲ್ಲಿ ಕೊಡುವ ಪ್ರಯತ್ನ ಮಾಡಿಲ್ಲ. ಬಹುಶಃ ತಮ್ಮಲ್ಲಿದ್ದ ಲಿಪಿಕಾರರಿಂದ ಹಸ್ತಪ್ರತಿಯನ್ನು ನಕಲುಮಾಡಿಸಿ, ತಾವು ಭಾಷಿಕವಾಗಿ ಅಲ್ಲಲ್ಲಿ ತಿದ್ದಿ ನೇರವಾಗಿ ಅಚ್ಚಿಗೆ ಕಳಿಸುತ್ತಿದ್ದರೆಂದು ತೋರುತ್ತದೆ. ಹೀಗಿದ್ದೂ ಪಾಠಗಳ ವಿಷಯವಾಗಿ ಅವರು ತುಂಬ ಪ್ರಾಮಾಣಿಕರಾಗಿದ್ದರೆಂದು "ನಮಗೆ ಬೇರೆ ಯಾವ ಗ್ರಂಥಗಳೂ ಉಪಲಬ್ಧವಿಲ್ಲ. ಆದುದರಿಂದ ನಮಗೆ ದೊರೆತ ಗ್ರಂಥಗಳಂತೆಯೇ ನಾವು ಅಚ್ಚುಹಾಕಿದ್ದೇವೆ. ಅನಿವಾರ್ಯವಾದ ಈ ಸ್ಥಿತಿಗೋಸ್ಕರ ವಾಚಕರು ನಮ್ಮನ್ನು ಕ್ಷಮಿಸಬೇಕೆಂದು ವಿನಂತಿ" ಎಂಬ ಮಾತಿನಿಂದ ವ್ಯಕ್ತವಾಗುತ್ತದೆ. ಈ ಪ್ರಾಮಾಣಿಕತೆಯನ್ನು ಮೀರಿಯೂ ಇವರ ಪ್ರಕಟನೆಗಳಲ್ಲಿ ದೋಷಪಾಠಗಳು ಪದೇ ಪದೇ ತೋರಿಬರುತ್ತವೆ. ಇಷ್ಟಾಗಿಯೂ ಇವರಿಂದ ವಚನಸಾಹಿತ್ಯಕ್ಕೆ ಸಂದ ಸೇವೆ ಬೆಲೆಯುಳ್ಳುದೆಂಬ ಮಾತಿಗೆ ಎರಡಿಲ್ಲ.

ವಚನಶಾಸ್ತ್ರಸಾರ ಭಾಗ-೨ ಪ್ರಕಟಣೆಯ ಅವಧಿಯಲ್ಲಿ (೧೯೩೮) ಶ್ರೀ ಶಿವಲಿಂಗಯ್ಯ ಚಿಕ್ಕೋಡಿ ಅವರು ಹಾವಿನಹಾಳ ಕಲ್ಲಯ್ಯ ಮತ್ತು ವೀರಶಂಕರದಾಸರ ವಚನಗಳು (೧೯೩೧), ಮರುಳಶಂಕರದೇವ ಮತ್ತು ಉಪ್ಪರಗುಡಿಯ ಸೋಮಯ್ಯನ ವಚನಗಳು (೧೯೩೮), ವೈದ್ಯ ಸಂಗಣ್ಣ ಮತ್ತು ಇತರರ ವಚನಗಳು (೧೯೩೮), ಸಕಲೇಶ ಮಾದರಸ ಮತ್ತು ಇತರರ ವಚನಗಳು (೧೯೩೮) ಎಂಬ ಸಂಕಲನಗಳನ್ನು ಹೊರತಂದರು. ಆದರೆ ಅವರ ಹೆಸರು ಹಳಕಟ್ಟಿಯವರ ಕೀರ್ತಿಯಲ್ಲಿ ಮರೆಯಾಗಿ ಹೋಯಿತೆಂದು ಕಾಣುತ್ತದೆ. ಇದೇ ಕಾಲಕ್ಕೆ ಆಗಿಹೋದ ಹಳಕಟ್ಟಿ ಮನೋಧರ್ಮದ ಇನ್ನಿತರ ವ್ಯಕ್ತಿಗಳಾದ ಹರ್ಡೇಕರ ಮಂಜಪ್ಪ ಮತ್ತು ಹಾವೇರಿಯ ಚೆನ್ನಮಲ್ಲಿಕಾರ್ಜುನರಿಂದ ವಚನಸಾಹಿತ್ಯಕ್ಕೆ ಸಂದ ಸೇವೆಯನ್ನು ಮರೆಯುವಂತಿಲ್ಲ. ಮಂಜಪ್ಪನವರು ರಾಷ್ಟ್ರಸೇವೆಯ ಮಧ್ಯ ಬಸವಬೋಧಾಮೃತ (೧೯೩೬) ಮೊದಲಾದ ಗ್ರಂಥಗಳನ್ನು ಪ್ರಕಟಿಸಿದರೆ, ವೀರಶೈವ ಸೇವೆಯನ್ನೇ ಗುರಿ ಗುಮ್ಮವಾಗಿ ಹೊಂದಿದ ಶ್ರೀ ಚೆನ್ನಮಲ್ಲಿಕಾರ್ಜುನರು ತಮ್ಮ ಸದ್ಧರ್ಮದೀಪಿಕೆಯ ಮೂಲಕವಲ್ಲದೆ ಸ್ವತಂತ್ರವಾಗಿಯೂ ತೋಂಟದಸಿದ್ಧೇಶ್ವರ ವಚನ (೧೯೩೩), ಪ್ರಸಾದಿ ಭೋಗಣ್ಣ ಮತ್ತು ಶಿವಲೆಂಕಮಂಚಣ್ಣನ ವಚನಗಳು (೧೯೫೮), ಸರ್ವಪುರಾತನರ ವಚನ (೪೯೪೯) ಮೊದಲಾದವುಗಳನ್ನು ಪ್ರಕಟಿಸಿದ್ದಾರೆ. ಈ ಸಂದರ್ಭದಲ್ಲಿ ಹೆಸರಿಸಲೇಬೇಕಾದ ಇನ್ನೆರಡು ಗ್ರಂಥಗಳೆಂದರೆ ಆರ್. ಆರ್. ದಿವಾಕರ ಅವರ ವಚನಶಾಸ್ತ್ರರಹಸ್ಯ (೧೯೫೪) ಮತ್ತು ಎಂ. ಆರ್. ಶ್ರೀ. ಅವರ ವಚನಧರ್ಮಸಾರ (೧೯೫೫). ಇವು ಸಂಪಾದಿತ ಕೃತಿಗಳಲ್ಲದಿದ್ದರೂ

ಇಲ್ಲಿ ವಚನಗಳ ವರ್ಗೀಕರಣ, ವಿಷಯ ವಿವೇಚನೆ ವಿನೂತನವಾಗಿದೆಯೆಂಬುದು ಒಪ್ಪತಕ್ಕ ಮಾತು. ಈ ಯುಗದಲ್ಲಿಯೂ ಹೊರಬಂದವು ಪ್ರಕಟನೆಗಳೇ ಹೊರತು ಪರಿಷ್ಕರಣಗಳಲ್ಲ.

ಬಸವನಾಳಯುಗ :

ವಚನ ಸಾಹಿತ್ಯದ 'ಸಂಗ್ರಹಮೌಲ್ಯ'ವನ್ನು 'ಸಂಪಾದನಮೌಲ್ಯ'ಕ್ಕೆ ಎತ್ತರಿಸಿದ ಪ್ರಥಮಕೀರ್ತಿ ಶಿ. ಶಿ. ಬಸವನಾಳ ಅವರಿಗೆ ಸಲ್ಲುತ್ತದೆ. ವೀರಶೈವ ತತ್ವ, ಸಾಹಿತ್ಯ, ಇತಿಹಾಸಗಳ ಆಳವಾದ ಅಧ್ಯಯನ, ಸಂಯಮಶೀಲ ಮನಸ್ಸು, ತೂಗಿನೀಡಿದ ನಿರ್ಣಯಗಳ ಸಂಗಮವ್ಯಕ್ತಿತ್ವ ಇವರದು. ಹೀಗಾಗಿ ಹಳಕಟ್ಟಿ ಅವರು ಈ ಮೊದಲು ಪ್ರಕಟಿಸಿದ ವಚನಗಳೇ ಇವು? ಎಂದು ಆಶ್ಚರ್ಯಹುಟ್ಟುವಂತೆ ಪಾಠನಿರ್ಣಯ, ವಿನೂತನ ಪಾದವಿನ್ಯಾಸಗಳಿಂದ 'ಬಸವಣ್ಣನವರ ಷಟ್‌ಸ್ಥಲ ವಚನಗಳು' ಕೃತಿಯನ್ನು ಇವರು ಸಂಪಾದಿಸಿದ್ದಾರೆ. ಇವರ ತರುವಾಯ ಅನೇಕರು ಈ ಕೃತಿಯನ್ನು ಸಂಪಾದಿಸಿದ್ದರೂ ಬಸವನಾಳರ ಈ ಆವೃತ್ತಿಗೆ ಇನ್ನೂ ಚ್ಯುತಿ ಬರದಿರುವುದು ಅದರ ಶಾಸ್ತ್ರಶುದ್ಧಿಗೆ ಸಾಕ್ಷಿಯಾಗಿದೆ. ಅಭ್ಯಾಸಪೂರ್ಣ ಪ್ರಸ್ತಾವನೆ, ಹಸ್ತಪ್ರತಿಗಳ ಸುದೀರ್ಘ ಪರಿಚಯ, ಪ್ರಾಮಾಣಿಕ ಪಾಠನಿರ್ಣಯ, ಅನುಬಂಧಗಳಿಂದಾಗಿ ಬಸವನಾಳರ ಸಂಪಾದನೆಗೆ ಆಧುನಿಕ 'ಉನ್ನತ ವಿಮರ್ಶೆ'ಯ ಮರ್ಯಾದೆ ಪ್ರಾಪ್ತವಾಗಿದೆ. ಒಟ್ಟಿನಲ್ಲಿ ವಚನಸಾಹಿತ್ಯ ಪರಿಷ್ಕರಣಪಥದಲ್ಲಿ ಹಳಕಟ್ಟಿಯವರಿಗಿಂತ ಬಸವನಾಳರು ಬಹುದೂರ ನಡೆದು ಬಂದಿದ್ದಾರೆ. ಆದರೆ ಬಸವನಾಳರಿಗಿಂತ ಮುಂದಿನವರು ಅಷ್ಟುದೂರ ನಡೆದುಬಂದಿಲ್ಲವೆಂದೇ ಹೇಳಬೇಕು. ಈ ಅವಧಿಯಲ್ಲಿ ಉತ್ತಂಗಿ ಚೆನ್ನಪ್ಪ, ವೀ. ರು. ಕೊಪ್ಪಳ, ಹೊಸಹಳ್ಳಿ ಪ್ರಭುಸ್ವಾಮಿಗಳು ಕೆಲವು ಕೃತಿಗಳನ್ನು ಅಚ್ಚುಕಟ್ಟಾಗಿ ಪ್ರಕಟಿಸಿದ್ದಾರೆ. ಶ್ರೀ ಎಸ್. ಎಸ್. ಭೂಸನೂರಮಠ ಅವರು ಲಿಂಗಲೀಲಾವಿಲಾಸಚಾರಿತ್ರ, ಶೂನ್ಯಸಂಪಾದನೆ, ಏಕೋತ್ತರ ಶತಸ್ಥಲ ಎಂಬ ಮೂರು ವಿಶಿಷ್ಟ ಸಂಕಲನಗ್ರಂಥಗಳನ್ನು ಸಂಪಾದಿಸಿದುದು ವಿಶೇಷ ಅಂಶವೆನಿಸಿದೆ.

ಈ ಪರಂಪರೆಯಲ್ಲಿ ಎತ್ತಿ ಹೇಳಬೇಕಾದ ಎರಡು ದೊಡ್ಡ ಹೆಸರುಗಳೆಂದರೆ ಡಾ. ಆರ್. ಸಿ. ಹಿರೇಮಠ, ಡಾ. ಎಲ್. ಬಸವರಾಜು. ಕನ್ನಡ ಅಧ್ಯಯನ ಪೀಠದ ಅಂಗವಾಗಿ ಡಾ. ಹಿರೇಮಠರ ನೇತೃತ್ವದಲ್ಲಿ ೧೯೬೨ರಲ್ಲಿ ಅಸ್ತಿತ್ವಕ್ಕೆ ಬಂದ ಸಮಗ್ರ ವಚನವಾಙ್ಮಯ ಸಂಗ್ರಹ, ಸಂಸ್ಕರಣ, ಪ್ರಕಟನೆ ಯೋಜನೆಯ ಹೆಸರಿನಲ್ಲಿ ಅಪೂರ್ವ ಕೆಲಸವೊಂದು ನಡೆಯಿತು. ಈ ಯೋಜನೆಯನ್ನು ರೂಪಿಸುವಲ್ಲಿ ಇವರಿಗೆ ಆದರ್ಶವಾಗಿದ್ದುದು ಪುಣೆಯ ಭಂಡಾರಕರ ಪ್ರಾಚ್ಯ ಸಂಶೋಧನಸಂಸ್ಥೆ ಕೈಗೆತ್ತಿಕೊಂಡಿದ್ದ 'ಮಹಾಭಾರತ'ಪರಿಷ್ಕರಣ ಯೋಜನೆ. ಡಾ. ಹಿರೇಮಠರ ಆಳವಾದ ವಿದ್ವತ್ತು, ಪರಿಷ್ಕರಣ ಪಾಂಡಿತ್ಯ, ಪರಿಶ್ರಮ ಪ್ರವೃತ್ತಿಗಳ ಫಲವಾಗಿ ಅಲ್ಪಾವಧಿಯಲ್ಲಿಯೇ ಒಂದರ ಮೇಲೊಂದರಂತೆ ಚೆನ್ನಬಸವಣ್ಣನವರ ವಚನಗಳು (೧೯೬೫), ಬಸವಣ್ಣನವರ ವಚನಗಳು (೧೯೬೮), ಸಿದ್ಧರಾಮೇಶ್ವರ ವಚನಗಳು (೧೯೬೮), ಶಿವಶರಣೆಯರ ವಚನಗಳು (೧೯೬೮), ಅಲ್ಲಮಪ್ರಭುದೇವರ ವಚನಗಳು (೧೯೭೬) ಎಂಬ ತಾವೇ ಸಂಯೋಜಿಸಿದ ಸ್ವತಂತ್ರ ಕೃತಿಗಳೂ, ಪ್ರಸಾದಿ ಮಹಾದೇವಯ್ಯಗಳ ಶೂನ್ಯಸಂಪಾದನೆ (೧೯೭೧), ಬ್ರಹ್ಮಾದ್ವೈತ ಸಿದ್ಧಾಂತ ಷಟ್ಸ್ಥಲಾಭರಣ (೧೯೭೩) ಎಂಬ ಪ್ರಾಚೀನ ಸಂಕಲನಕೃತಿಗಳೂ ಬೆಳಕಿಗೆ ಬಂದವು. ಸ್ವತಂತ್ರ ಕೃತಿಗಳು ನೂರಾರು ಹೊಸ ವಚನಗಳನ್ನು ಹೊತ್ತು ಹೊರಬಂದರೆ, ಹೆಸರು ಸಹ ಗೊತ್ತಿಲ್ಲದ ಅನೇಕ ಪ್ರಾಚೀನಸಂಕಲನಕೃತಿಗಳು ಹೊಸದಾಗಿ ಬೆಳಕು ಕಂಡು 'ವಚನ ಸಂಪಾದನ ಸುಗ್ಗಿ'ಯೇ ಇಲ್ಲಿ ಅವತರಿಸಿತು. ಚೆನ್ನಬಸವಣ್ಣನವರ ಎಲ್ಲ ೧೭೦೪ ವಚನಗಳಿಗೆ ಅಡಿಯಲ್ಲಿ ಪಾಠವನ್ನೂ ಮುನ್ನುಡಿಯಲ್ಲಿ ಆಕರಗಳನ್ನೂ ಕೊಟ್ಟು, ಆಮೇಲೆ ಪ್ರಕಟಿಸಿದ ಬಸವಣ್ಣ ಸಿದ್ಧರಾಮಾದಿಗಳ ವಚನಗಳಿಗೆ ಅಡಿಯಲ್ಲಿಯೇ ಈ ಎರಡೂ ಉಪಕ್ರಮಗಳನ್ನು ಸಮೀಕರಿಸಿದ ಹೊಸ ತಂತ್ರ ಗಮನಾರ್ಹವೆನಿಸಿದೆ. ಒಟ್ಟಿನಲ್ಲಿ ಡಾ. ಹಿರೇಮಠರ ಪರಿಶ್ರಮದಿಂದಾಗಿ ಅನೇಕ ಪ್ರಮುಖ ಅಪ್ರಮುಖ ಶರಣರ ವಚನಗಳು ಏಕಕಾಲಕ್ಕೆ

ಬಹುಮಟ್ಟಿಗೆ ಶುದ್ಧರೂಪದಲ್ಲಿ ನಮ್ಮ ಕೈಗೆ ದೊರೆತವು. ಈಗ ಕರ್ನಾಟಕದ ತುಂಬ ಓದಲು ತಕ್ಷಣ ಲಭ್ಯವಿರುವ ಶುದ್ಧರೂಪದ ವಚನಸಂಪುಟಗಳಿವು. ಬಸವನಾಳರ ಯೋಗ್ಯ ಉತ್ತರಾಧಿಕಾರಿಯಾಗಿ ಡಾ. ಹಿರೇಮಠರು ಮಾಡಿದ ವಚನ ಸಂಪಾದನೆಯ ಕಾರ್ಯ ಐತಿಹಾಸಿಕ ಮಹತ್ವದ್ದಾಗಿದ್ದು, ಇವರ ದಾರಿಯಲ್ಲಿಯೇ ಡಾ. ಎಂ.ಎಸ್. ಸುಂಕಾಪುರ ಅವರು ಸಕಲಪುರಾತನರ ವಚನ-೨, ೩ (೧೯೭೬, ೧೯೭೮), ಸಕಲಪುರಾತನರ ಬೆಡಗಿನ ವಚನಗಳು (೧೯೭೮), ಬಾಲಸಂಗಯ್ಯನ ವಚನಗಳು (೧೯೭೬), ಲಿಂಗಚಿದಮೃತ ಬೋಧೆ (೧೯೭೫), ಪರಮಮೂಲಜ್ಞಾನ ಷಟ್ಸ್ಥಲ (೧೯೭೭), ಪ್ರಸಾದಿಸ್ಥಲದ ವಚನಗಳು (೧೯೭೭) ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ಈ ಪರಿಸರದಲ್ಲಿ ಡಾ. ಎಂ.ಎಂ. ಕಲಬುರ್ಗಿಯವರು 'ಬಸವ ಸ್ತೋತ್ರದ ವಚನಗಳು' ಎಂಬ ಕೃತಿಯನ್ನು, ನಾಲ್ಕು ಟೀಕೆಗಳ ಸಂಯುಕ್ತಸಂಪುಟವಾದ 'ಬಸವಣ್ಣನವರ ಟೀಕಿನ ವಚನಗಳು' ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಇತ್ತೀಚೆ ಕನ್ನಡ ಅಧ್ಯಯನ ಪೀಠದಲ್ಲಿ 'ವಚನಸಾಹಿತ್ಯ ಸಂಪಾದನ ಕಾರ್ಯ' ನಿಂತು ಹೋದುದು ವಿಷಾದದ ಸಂಗತಿಯಾಗಿದೆ.

ಈ ಸಂದರ್ಭದಲ್ಲಿ ಹೇಳಲೇಬೇಕಾದ ಇನ್ನೊಬ್ಬ ವಿದ್ವಾಂಸನೆಂದರೆ ಡಾ. ಎಲ್. ಬಸವರಾಜು, ೧೯೫೨ರಷ್ಟು ಹಿಂದೆಯೇ ಬಸವಣ್ಣನವರ ವಚನಗಳನ್ನು ಪ್ರಕಟಿಸಿದ್ದರೂ ಅಲ್ಲಮನ ವಚನಚಂದ್ರಿಕೆ (೧೯೬೦)ಯ ಮೂಲಕ ಇವರು ಸಂಪಾದನ ವೇದಿಕೆಯನ್ನು ಸ್ಪಷ್ಟವಾಗಿ ವ್ಯಾಪಿಸಿನಿಂತರು. ಆಮೇಲೆ ಪ್ರಕಟವಾದ ಶಿವದಾಸ ಗೀತಾಂಜಲಿ (೧೯೬೩), ಅಕ್ಕನ ವಚನಗಳು (೧೯೬೬), ಅಲ್ಲಮನ ವಚನಗಳು (೧೯೬೯), ಮಹಾದೇವಯ್ಯಗಳ ಶೂನ್ಯ ಸಂಪಾದನೆ (೧೯೬೯), ದೇವರದಾಸಿಮಯ್ಯನ ವಚನಗಳು (೧೯೭೦) - ಈ ಕೃತಿಗಳಲ್ಲಿ ಇವರ ಪಾಂಡಿತ್ಯ, ಪರಿಶ್ರಮಗಳು ಮಡುಗಟ್ಟಿನಿಂತಿವೆ. ಅಭ್ಯಾಸಪೂರ್ಣ ಪ್ರಸ್ತಾವನೆ, ವೈವಿಧ್ಯಪೂರ್ಣ ಅನುಬಂಧಗಳು ಇವರ ಸಂಪಾದನೆಯ ವೈಶಿಷ್ಟ್ಯವೆನಿಸಿವೆ. ಸಾಂಸ್ಥಿಕವಾದ ಯಾವ ನೆರವೂ ಇಲ್ಲದೆ ಹಸ್ತಪ್ರತಿ ನಕಲು ಮಾಡುವ, ಪಾಠಾಂತರ ಗುರುತಿಸಿಕೊಳ್ಳುವ, ಶುದ್ಧಪಾಠ ನಿರ್ಣಯಿಸುವ, ಪಾಂಡಿತ್ಯ ಪೂರ್ಣ ಪ್ರಸ್ತಾವನೆ ಬರೆಯುವ, ಕ್ಲೇಶಕರವಾದ ಅನುಬಂಧಗಳನ್ನು ರಚಿಸುವ, ಶುದ್ಧಪ್ರತಿ ಸಿದ್ಧಪಡಿಸುವ, ಕೊನೆಗೆ ಅಚ್ಚಿನ ಕರಡುಗಳನ್ನು ತಾವೇ ನೋಡುವ ವರೆಗಿನ ಎಲ್ಲ ಕೆಲಸಗಳನ್ನು ಒಬ್ಬರೇ ಮಾಡಿದುದು ಆಶ್ಚರ್ಯಹುಟ್ಟಿಸುತ್ತದೆ; ಹಠಯೋಗಿಯಂತೆ ಕುಳಿತು ಮಾಡಿದ ಈ ದೇಹದಂಡನಕಾರ್ಯ ಮರುಕ ಹುಟ್ಟಿಸುತ್ತದೆ. ಬಸವರಾಜದೇವರ ರಗಳೆ, ನಂಬಿಯಣ್ಣನ ರಗಳೆ, ಸಿದ್ಧರಾಮಪುರಾಣ, ಹರಿಶ್ಚಂದ್ರ ಕಾವ್ಯಗಳಂಥ ವೀರಶೈವಕಾವ್ಯಗಳನ್ನು ಪೂರ್ಣ ಇಲ್ಲವೆ ಸಂಗ್ರಹರೂಪದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರು ಸಂಪಾದಿಸಿದ ಪ್ರಕಟಿಸುತ್ತಲಿದ್ದ ಸಂದರ್ಭದಲ್ಲಿ, ಅದೇ ವಿಭಾಗದಲ್ಲಿ ವಚನ ಸಂಪಾದಕರಾಗಿ ಒಡೆದು ಮೂಡಿನಿಂತವರು ಡಾ. ಎಲ್. ಬಸವರಾಜು. ಹೀಗಾಗಿ ಈ ಕನ್ನಡ ವಿಭಾಗದಲ್ಲಿ ಏಕೆ, ಮೈಸೂರು ಭಾಗದಲ್ಲಿಯೇ ಇವರಿಗೆ ವಚನವಾಙ್ಮಯ ಸಂಪಾದನೆಯ 'ಆದ್ಯ'ರೆಂಬ ಗೌರವ ಸಲ್ಲುತ್ತದೆ. ಇಲ್ಲಿ ಒಂದು ಮಾತು : ಡಾ. ಆರ್. ಸಿ. ಹಿರೇಮಠರದು ಸಾಂಸ್ಥಿಕ ಪ್ರಯತ್ನ. ಡಾ. ಬಸವರಾಜು ಅವರದು ವೈಯಕ್ತಿಕ ಪ್ರಯತ್ನ. ಒಂದು ಕೆಲಸವನ್ನು ಹಲವರು ಮಾಡುವುದರಿಂದಾಗುವ ನ್ಯೂನತೆಗಳು ಅಲ್ಲಿ ತೋರಿದರೆ, ಒಬ್ಬರೇ ಹಲವು ಕೆಲಸಗಳನ್ನು ಮಾಡುವುದರಿಂದಾಗುವ ನ್ಯೂನತೆಗಳು ಇಲ್ಲಿ ತೋರಿಬರುತ್ತವೆ. ಇದಲ್ಲದೆ ಡಾ. ಎಲ್. ಬಸವರಾಜು ಅವರು ಒಂದು ಕೃತಿಯ ಏನೆಲ್ಲ ಭಿನ್ನಪಾಠಗಳನ್ನು ಕೊಡುವ ಸಾಹಸ ಮಾಡುವರಾದರೂ ಇವುಗಳಿಗೆ ಬಳಸುವ ಅಂಕಿ, ನಕ್ಷತ್ರ, ಬಾಣ, ತ್ರಿಕೋನ, ಕತ್ತರಿ, ಕಠಾರಿ, ಹಲವು ರೀತಿಯ ಕಂಸ, ಪ್ರಶ್ನೆಚಿಹ್ನೆ ಇವುಗಳ ಮಿಶ್ರಣದಿಂದಾಗಿ ಸಂಕೇತಗಳ ಬಳಕೆಯಲ್ಲಿ ಒಂದು ಬಗೆಯ ವಿಚಿತ್ರಗೊಂದಲ ಎದ್ದು ಕಾಣುತ್ತದೆ. ಈ ತಲೆಮಾರಿನಲ್ಲಿ ಎಚ್. ದೇವಿರಪ್ಪ, ಎಸ್.ಎಂ. ಹುಣಶ್ಯಾಳ, ಪರಶುರಾಮ ಸಿ. ಕೆ., ಎಚ್.ಪಿ. ಮಲ್ಲೇದೇವರು, ಬಿ. ಸಿ. ಜವಳಿ ಮೊದಲಾದವರು ಒಂದೋ ಎರಡೋ ವಚನ ಕೃತಿಗಳನ್ನು, ಶ್ರೀ. ಬಿ.ಎಸ್. ಸಣ್ಣಯ್ಯನವರು ೪ ಕೃತಿಗಳನ್ನು ಸಂಪಾದಿಸಿದ್ದಾರೆ. ಹೊಸತಲೆಮಾರಿನಲ್ಲಿ ಎಂ.ಎಂ. ಕಲಬುರ್ಗಿ, ವಿ. ಶಿವಾನಂದ, ಎಸ್. ವಿದ್ಯಾಶಂಕರ, ಬಿ.ವಿ. ಶಿರೂರ, ವಿ.ಬಿ. ರಾಜೂರ, ಬಿ.ಆರ್. ಹಿರೇಮಠ, ಹ.ನಂ.

ವಿಜಯಕುಮಾರ, ಸಿದ್ಧಾಶ್ರಮ, ಎಸ್. ಉಮಾಪತಿ, ಪಿ.ಎಂ. ಗಿರಿರಾಜು, ಎಸ್. ಶಿವಣ್ಣ ಮೊದಲಾದವರು ಈ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಲಿದ್ದಾರೆ. ಇವರಲ್ಲಿ ಎಂ. ಎಂ. ಕಲಬುರ್ಗಿ, ಡಾ. ವಿ. ಬಿ. ರಾಜೂರ, ಎಸ್. ಶಿವಣ್ಣ, ಪಿ. ಎಂ. ಗಿರಿರಾಜು ಅವರಿಂದ ಈ ಕ್ಷೇತ್ರಕ್ಕೆ ಇನ್ನೂ ವಿಶೇಷ ಕಾಣಿಕೆ ಸಲ್ಲುವ ಸಾಧ್ಯತೆಯಿದೆ.

ಕರ್ನಾಟಕ ವಿಶ್ವವಿದ್ಯಾನಿಲಯವನ್ನು ಬಿಟ್ಟರೆ ವ್ಯಾಪಾರಿ ಪ್ರಕಾಶಕರಿಗಿಂತ ಧಾರ್ಮಿಕ ಸಂಸ್ಥೆಗಳೇ ವಚನಸಾಹಿತ್ಯ ಪ್ರಕಟನೆಯ ವಿಷಯವಾಗಿ ಹೆಚ್ಚು ಆಸ್ಥೆವಹಿಸಿವೆ. ಚಿತ್ರದುರ್ಗದ ಮುರುಘಾಮಠ, ಮೈಸೂರಿನ ಶಿವರಾತ್ರೀಶ್ವರ ಮಠ ಮೊದಲಾದವುಗಳಿಂದ ಈ ಕ್ಷೇತ್ರಕ್ಕೆ ಸಂದ ಕಾಣಿಕೆ ಏನೂ ಸಾಲದು. ಧಾರವಾಡದ ಮುರುಘಾಮಠ ಒಂದು ಕಾಲಕ್ಕೆ ವಚನಸಾಹಿತ್ಯಕ್ಕಿಂತ ಇತರ ವೀರಶೈವ ಕಾವ್ಯಸಾಹಿತ್ಯದ ಬಗ್ಗೆ ವಿಶೇಷ ಕೆಲಸಮಾಡಿದ್ದು, ಈಗ ಅದರ ಗತಿಯೂ ಮಂದವಾಗಿದೆ; ಮೊದಲಿನ ಗುಣಮಟ್ಟವೂ ಕಡಿಮೆಯಾಗಿದೆ. ಸಧ್ಯದ ಪರಿಸ್ಥಿತಿಯಲ್ಲಿ ವಚನಸಾಹಿತ್ಯ ಪ್ರಕಟನೆಯ ವಿಷಯವಾಗಿ ಗದುಗಿನ ತೋಂಟದಾರ್ಯ ಮಠದ 'ವೀರಶೈವ ಅಧ್ಯಯನ ಸಂಸ್ಥೆ' ಅದ್ಭುತ ಸೇವೆ ಸಲ್ಲಿಸುತ್ತಲಿದೆ. ಹಳಕಟ್ಟಿ, ಹಿರೇಮಠರ ತರುವಾಯದ ೩ನೆಯ ವ್ಯಾಪಕ ಪ್ರಯತ್ನ ಇಲ್ಲಿ ಕಣ್ಣು ತೆರೆದಿದೆ. ಅಪ್ರಕಟಿತ ವಚನ, ಸ್ವರವಚನಗಳ ಪ್ರಕಟನೆಗೆ ಇಲ್ಲಿ ವಿಶೇಷ ಮಹತ್ವ ನೀಡಲಾಗಿದೆ.

ಒಟ್ಟಿನಲ್ಲಿ ಇಂದು ಬಸವನಾಳ ಮಾದರಿಯಲ್ಲಿ ವಚನ ಸಂಪಾದನಕಾರ್ಯ ಮುಂದುವರಿಯುತ್ತಲಿದ್ದು, ಈ ದಿಕ್ಕಿನಲ್ಲಿ ಇನ್ನು ಮುಂದೆ ಮಾಡಬೇಕಾದ ಕೆಲಸಗಳು ಹೀಗಿವೆ: ೧) ಶಿಷ್ಟಪದಸಾಹಿತ್ಯ ಸಂಪಾದನಸೂತ್ರಗಳನ್ನು ಅನ್ವಯಿಸಿ ವಚನಸಾಹಿತ್ಯವನ್ನು ಸಂಪಾದಿಸುವುದನ್ನು ಕೈಬಿಟ್ಟು ಸೂಕ್ತ ಹೊಸ ಸೂತ್ರಗಳನ್ನು ರೂಪಿಸಿಕೊಳ್ಳಬೇಕು. ೨) ಪ್ರತಿಯೊಬ್ಬ ಶರಣನ ಹೆಸರಿನಲ್ಲಿ ಸಿಗುವ ಎಲ್ಲ ವಚನಗಳ ಸಮಗ್ರ ಸಂಪುಟಗಳು ಪ್ರಕಟವಾಗಬೇಕು. ೩) ಕಷ್ಟಕರವಾದರೂ ಪ್ರಕ್ಷಿಪ್ತ ವಚನಗಳನ್ನು ಕಂಡುಹಿಡಿಯುವ ಕೆಲಸ ನಡೆಯಬೇಕು. ಆದರೆ ಕಸವನ್ನು ಕಿತ್ತುವಾಗ ಸಸಿಯನ್ನು ಕಿತ್ತಿಹಾಕಿದ ಪ್ರಮಾದ ಘಟಿಸದಂತೆ ನೋಡಿಕೊಳ್ಳಬೇಕು. ೪) ಪ್ರಕಟಿತ ಎಲ್ಲ ವಚನಗಳ ಮತ್ತು ವಚನಕೃತಿಗಳ ಸಮಗ್ರಪಟ್ಟಿ ಸಿದ್ಧವಾಗಬೇಕು. ೫) ಎಲ್ಲ ವಚನ ಹಸ್ತಪ್ರತಿಗಳ ಸರ್ವೇ ಕೆಲಸ ನಡೆದು 'ಸಮಗ್ರ ವಚನವಾಙ್ಮಯ ಹಸ್ತಪ್ರತಿ ಸೂಚಿ' (Catalogus Catalogurum of Vachana Manuscripts) ರೂಪಗೊಳ್ಳಬೇಕು. ೬) ಈ ಎಲ್ಲ ಕಾರ್ಯಗಳ ಅನುಷ್ಠಾನಕ್ಕಾಗಿ 'ವಚನವಾಙ್ಮಯ ವಿಭಾಗ' (Department of Vachana Literature) ಹೆಸರಿನ ಸ್ವತಂತ್ರ ಇಲಾಖೆ ಅಸ್ತಿತ್ವಕ್ಕೆ ಬರಬೇಕು.

ಈ ಕನಸುಗಳು ನನಸಾದಾಗ ಮಾತ್ರ ವಚನಸಾಹಿತ್ಯದ ಸಂಪಾದನಕಾರ್ಯಕ್ಕೆ ಅರ್ಥವಂತಿಕೆ ಪ್ರಾಪ್ತವಾಗುತ್ತದೆ.

■■

ಆಕರ : ಮಾರ್ಗ ಸಂಪುಟ–೧

೩೧

ವಚನ ಪರಿಷ್ಕರಣ

ಕರ್ನಾಟಕದಲ್ಲಿ ಜೈನ, ಬ್ರಾಹ್ಮಣ ಸಾಹಿತ್ಯಗಳನ್ನು ಹೊರತುಪಡಿಸಿ ಕೇವಲ ವೀರಶೈವಸಾಹಿತ್ಯ, ಅದರಲ್ಲಿಯೂ ವಚನಸಾಹಿತ್ಯ ಪರಿಷ್ಕರಣ ವಿಷಯವಾಗಿ ಆಗಾಗ ವಿವಾದ ಕೇಳಿಬರುತ್ತಲಿದೆ. ಸಾಮಾನ್ಯವಾಗಿ ಇಂದು ಈ ಸಾಹಿತ್ಯವನ್ನು ಸಂಪಾದಿಸುವವರು ವೀರಶೈವರಾಗಿರುವಂತೆ, ಈ ಸಂಪಾದನೆಗಳನ್ನು ಪ್ರಶ್ನಿಸುವವರೂ ವೀರಶೈವರೇ ಆಗಿದ್ದಾರೆ. ಪ್ರಕಟನೆಯ ಸವಲತ್ತುವೊಂದೇ ಸಂಪಾದಿಸುವವರಿಗೆ ಅರ್ಹತೆಯಾಗಬಾರದು; ವೀರಶೈವನಾಗಿ ಹುಟ್ಟಿರುವುದೊಂದೇ ಪ್ರಶ್ನಿಸುವವರಿಗೆ ಅರ್ಹತೆಯಾಗಬಾರದು - ಎಂಬ ಎಚ್ಚರಿಕೆಯ ಹಿನ್ನೆಲೆಯಲ್ಲಿ ಹೇಳುವುದಾದರೆ ವಚನಸಾಹಿತ್ಯ ಪರಿಷ್ಕರಣಕಾರ್ಯದಲ್ಲಿ ಸಂಪಾದಕನಿಗೆ ಎದುರಾಗುವ ತೊಡಕುಗಳು ಮೂರು: ವಚನಸಾಹಿತ್ಯದ ಪಾಠ ತೊಡಕು, ವೀರಶೈವತತ್ವದ ತೊಡಕು, ಒಮ್ಮೊಮ್ಮೆ ವೀರಶೈವ ಸಮಾಜದ ತೊಡಕು. ಈ ತ್ರಿಶೂಲದಿಂದ ತಲೆ ತಪ್ಪಿಸಿಕೊಳ್ಳುವ ರೀತಿಯಲ್ಲಿ ವ್ಯವಹರಿಸದೆ, ಅದನ್ನು ಪ್ರಾಮಾಣಿಕವಾಗಿ, ಧೈರ್ಯದಿಂದ ಎದುರಿಸುವುದು ವಚನಸಂಪಾದಕನ ಧರ್ಮವಾಗಿದೆ.

ಯಾವುದೇ ಸಾಹಿತ್ಯಕೃತಿಗೆ ಸಹೃದಯ ಮತ್ತು ಲಿಪಿಕಾರರಿಂದ ಅಕ್ಷರದ ರೂಪ ಸಾದೃಶ್ಯ-ಧ್ವನಿಸಾದೃಶ್ಯ, ಬರೆವಣಿಗೆಯ ರೀತಿದೋಷ, ಅವಸ್ಥಾ ಭೇದ-ಪ್ರಾಂತಭೇದ, ಸಾಲದುದಕ್ಕೆ ಅನವಧಾನ, ಅಜ್ಞಾನ, ಅನ್ಯಥಾಜ್ಞಾನ ಕಾರಣವಾಗಿ ಅನುದ್ದೇಶಿತ ಮತ್ತು ಉದ್ದೇಶಿತ ಪಾಠಾಂತರಗಳು ಹುಟ್ಟಿಕೊಳ್ಳುತ್ತವೆ. ಮಿಕ್ಕ ಸಾಹಿತ್ಯ ಪ್ರಕಾರಗಳಿಗಿಂತ ವಚನಗಳಲ್ಲಿ ಈ ಪಾಠಾಂತರಕ್ರಿಯೆ ಅತಿಶಯವಾಗಿರುವುದಕ್ಕೆ ಕಾರಣ ಇದು:

ಶರಣರು ಕಟ್ಟಬಯಸಿದುದು ಸ್ಥಾವರ ಸಮಾಜಕ್ಕೆ ಬದಲು ಜಂಗಮಸಮಾಜವನ್ನು; ಕಟ್ಟಿಕೊಂಡದ್ದು ಸ್ಥಾವರವ್ಯಕ್ತಿತ್ವಕ್ಕೆ ಬದಲು ಜಂಗಮವ್ಯಕ್ತಿತ್ವವನ್ನು. ಹೀಗಾಗಿ ಇಂಥ ಸಮಾಜದ, ಇಂಥ ವ್ಯಕ್ತಿತ್ವದ ಭಾಷಿಕ ಅಭಿವ್ಯಕ್ತಿಯಾದ ವಚನಸಾಹಿತ್ಯ, ವಸ್ತು(Content), ರೂಪ (Form)ಗಳಲ್ಲಿಯೂ "ಜಂಗಮತ್ವ"ವನ್ನು ಆಹ್ವಾನಿಸಿಕೊಳ್ಳುತ್ತ ಮುಕ್ತಛಂದ, ಸರಳರಚನೆ, ಜನಪದಭಾಷೆ- ಈ ಲಕ್ಷಣಗಳನ್ನು ಕಟ್ಟಿಕೊಂಡೇ ಕಣ್ಣುತೆರೆಯಿತು. ಇದರಿಂದಾಗಿ ವಿದ್ವಜ್ಜನತೆ ಮತ್ತು ಜನತೆಯ ಮಧ್ಯ ನಿಂತ ಇದರ ಪಾಠ(Text), ಶಿಷ್ಟಪದ ಸಾಹಿತ್ಯದಷ್ಟು ಸ್ಥಿರವೂ ಅಲ್ಲ, ಜನಪದ ಸಾಹಿತ್ಯದಷ್ಟು ಅಸ್ಥಿರವೂ ಅಲ್ಲವೆಂಬಂತಹ ರೂಪಧಾರಣ ಮಾಡಿತು. ಶಿಷ್ಟಪದ ಸಾಹಿತ್ಯಪಾಠದ ಮೇಲೆ ಕವಿಯ ಅಧಿಕಾರವಿದ್ದರೆ, ಜನಪದಸಾಹಿತ್ಯ ಪಾಠದ ಮೇಲೆ ಜನತೆಯ ಅಧಿಕಾರವಿರುತ್ತದೆ. ಇವುಗಳ ಮಧ್ಯದ ವಚನಸಾಹಿತ್ಯದಲ್ಲಿ ಇಬ್ಬರ ಅಧಿಕಾರವಿರುವುದರಿಂದ "ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ

ಹಾಡುವೆ" ಎಂಬಂತೆ ಸಾಮಾನ್ಯವಾಗಿ ಸ್ಥಿರಪಾಠಕ್ಕೆ ಕೇಡಿಲ್ಲದಂತೆ ಚರಪಾಠಗಳ ಪರಿಚಲನೆ ಇಲ್ಲಿ ನಡೆದೇ ಇರುತ್ತದೆ. ಜನಪದ ಹಾಡುಗಳಲ್ಲಿ ಶಬ್ದಗಳು, ವ್ಯಕ್ತಿನಾಮ-ಸ್ಥಳನಾಮ-ದೇವನಾಮಗಳು ಚರಪಾಠಗಳಾಗಿರುವಂತೆ ಕೆಲವೊಮ್ಮೆ ವಚನಗಳಲ್ಲಿಯೂ ಶಬ್ದ ಮತ್ತು ಅಂಕಿತಗಳು ಚರಪಾಠಗಳಾಗಿ ವ್ಯವಹರಿಸುತ್ತಿರುತ್ತವೆ.

ಲಿಪಿಕಾರ ಮತ್ತು ಸಹೃದಯರಿಗೆ, ಛಂದೋನಿಬದ್ಧ-ಹಳಗನ್ನಡ ಭಾಷಾನಿಬದ್ಧ ಕೃತಿಯನ್ನು ಲಿಪಿಸುವಾಗ, ವಾಚಿಸುವಾಗ ಇರುವಷ್ಟು ಜವಾಬ್ದಾರಿ, ಮುಕ್ತಛಂದೋನಿಬದ್ಧ - ನಡುಗನ್ನಡ ಭಾಷಾನಿಬದ್ಧ ವಚನಗಳನ್ನು ಲಿಪಿಸುವಾಗ ವಾಚಿಸುವಾಗ ಇರುವುದಿಲ್ಲವೆಂದೇ ಹೇಳಬೇಕು. ಆದುದರಿಂದಲೇ ಲೇಖನ ಪ್ರಮಾದಗಳು ವಚನ ಹಸ್ತಪ್ರತಿಯಲ್ಲಿ ಅಧಿಕ. "ಕೊಳದ ತಡಿಯಲೊಂದು ಹೊಱಸು (>ಹೊಲಸು) ಕುಳ್ಳಿರ್ದಡೇನು" ಎಂಬಂಥ ಅಕ್ಷರದ ರೂಪಸಾದೃಶ್ಯದ, "ಸಸಿ (>ಶಶಿ)ಯೊಳಗಣ ರಸದ ರುಚಿಯಂತೆ" ಎಂಬಂಥ ಅಕ್ಷರದ ಧ್ವನಿಸಾದೃಶ್ಯದ, "ಸಾವಿರವರುಷ ಸಾಧನೆಯ ಮಾಡಿ ಹಾದರ (>ಆದರ)ದಲ್ಲಿ ಅಳಿದಂತಾಯಿತ್ತು" ಎಂಬಂಥ ಪ್ರಾಂತಭೇದದ, "ಸುಮತಿಯೆಂಬ ಹತ್ತಿ (>ಹಂತಿ)ಯ ಕೊಂಡು" ಎಂಬಂಥ ಬರವಣಿಗೆಯ ರೀತಿದೋಷದ, "ಬಡಪಶು ಪಂಕ (>ಪಂಕಜ)ದಲ್ಲಿ ಬಿದ್ದರೆ" ಎಂಬಂಥ ಅಜ್ಞಾನದ, "ಶರಣರ ಅನುಭಾವ ಗಜವೈದ್ಯ (>ಜಗವೈದ್ಯ)ವಯ್ಯಾ" ಎಂಬಂಥ ಅನವಧಾನದ, "ಓದಿತ್ತು ಕಾಣಿರೋ ಶುಕ(>ಶುನಕ)ನು" ಎಂಬಂಥ ಅನ್ಯಥಾಜ್ಞಾನದ ಪಾಠಾಂತರಗಳು ಲಿಪಿಕಾರರಿಂದ ಹೇರಳವಾಗಿಯೇ ಹುಟ್ಟಿಕೊಂಡವು. ಸುಮಾರು ೧೫೫ ವಚನಗಳು ಕೂಡಲಸಂಗಮದೇವಾ ಮತ್ತು ಕೂಡಲಚೆನ್ನಸಂಗಮದೇವಾ ಎಂಬ ಮುದ್ರಿಕೆಗಳಲ್ಲಿ, 'ಅರೆವನಯ್ಯಾ ಸಣ್ಣವಹನಕ್ಕ ....' ವಚನವು ಬಸವಣ್ಣ ಮತ್ತು ಜೇಡರ ದಾಸಿಮಯ್ಯಗಳ ಮುದ್ರಿಕೆಗಳಲ್ಲಿ, 'ದೇವನೊಳ್ಳಿದನೆಂದು ಮುಯ್ಯಾನಲು ಬೇಡ......' ವಚನವು ಬಸವಣ್ಣ ಮತ್ತು ಸತ್ಯಕ್ಕಗಳ ಮುದ್ರಿಕೆಗಳಲ್ಲಿ ಲಭಿಸುವುದನ್ನು ಇಲ್ಲಿ ಉದಾಹರಿಸಬಹುದು.

ಗದ್ಯಮಾಧ್ಯಮದಲ್ಲಿ ಹುಟ್ಟಿದ ವಚನಸಾಹಿತ್ಯವನ್ನು ಪದ್ಯಮಾಧ್ಯಮದಲ್ಲಿ ಹಾಡುತ್ತಲೂ ಬರಲಾಗಿದೆ. ಹೀಗೆ ಮಾಧ್ಯಮವು ಪಾತ್ರ ಬದಲಿಸಿಕೊಳ್ಳುವಲ್ಲಿ ಪಾಠಗಳು ಉದುರುವುದು, ಚಿಗಿಯುವುದು, ವಿರೂಪಗೊಳ್ಳುವುದು ಸಹಜ. ಉದಾ: ಮೊಲೆ ಮುಡಿ ಬಂದರೆ ಹೆಣ್ಣೆಂಬರು (ಮೂಡಿ), ಉಳ್ಳವರು ಶಿವಾಲಯ ಮಾಡುವರು (ಶಿವಾ+ಲಯ), ಮೇರು ಗುಣವನಱಸುವುದೆ ಕಾಗೆಯಲ್ಲಿ (ಮೇರುಗುಣ), "..... ಕೂಡಲಸಂಗಮದೇವಾ+ ದೇವಾ" ಇತ್ಯಾದಿ. ಹೀಗಾಗಿ ಓದುವ ವಚನದ ಪಾಠಗಳೇ ಬೇರೆ, ಹಾಡುವ ವಚನದ ಪಾಠಗಳೇ ಬೇರೆಯಾಗಿ ಬೆಳೆದುಬಂದಿವೆ. ಇವುಗಳನ್ನು ಲಿಪಿಕಾರಪಾಠ, ಗೇಯಕಾರಪಾಠವೆಂದು ಕರೆಯಬಹುದು. ಒಟ್ಟಿನಲ್ಲಿ ಲಿಪಿಕಾರರಿಗೆ, ಅವರಿಗಿಂತ ಪ್ರವಚನಕಾರರಿಗೆ, ಗಾಯಕರಿಗೆ "ಕೂಡಲಸಂಗಮದೇವಾ"ವೂ ಅಷ್ಟೇ, "ಗುಹೇಶ್ವರಾ"ವೂ ಅಷ್ಟೇ. "ಕಳಬೇಡ, ಕೊಲಬೇಡ...." ಎಂಬ ವಚನವಾಕ್ಯಗಳು ಹಿಂದುಮುಂದಾದರೂ ಅಷ್ಟೇ. ಅವರಿಗೆ ವಚನದ ತತ್ತ್ವವನ್ನೊಳಗೊಂಡ ಪಾಠ ಮುಖ್ಯ. ಈ ವರೆಗೆ ವಿವೇಚಿಸಿದುವು ವಚನವಿಶಿಷ್ಟವಾಗಿ ಹುಟ್ಟುವ ಅನುದ್ದೇಶಿತ ಪಾಠಾಂತರಗಳು.

ವಚನಗಳಲ್ಲಿ ಮಾಡಲಾಗುವ ಉದ್ದೇಶಿತ ಪಾಠಾಂತರಗಳಿಗೆ ಕಾರಣಗಳು ಅನೇಕ. ಅವುಗಳಲ್ಲಿ ಮುಖ್ಯವಾದುದು ಏಕೋತ್ತರ ಶತಸ್ಥಲದಂಥ ಸಂಕಲನಕೃತಿ, ಶೂನ್ಯಸಂಪಾದನೆಯಂಥ ಸಂಪಾದನ ಕೃತಿಗಳ ರಚನೆ. ವಚನಗಳನ್ನು ಬಳಸಿ, ಹೊಸದೊಂದು ಕೃತಿಯನ್ನು ರೂಪಿಸುವಾಗ ಶರಣರ ಮಾತುಗಳಿಗೆ ಪ್ರಾಮಾಣ್ಯ ಒದಗಿಸುವ ಸದುದ್ದೇಶದಿಂದ ಸಂಸ್ಕೃತ ಅವತರಣಿಕೆಗಳನ್ನು ಸೇರಿಸಿದರು. ಗಣಭಾಷಿತರತ್ನಮಾಲೆಯಲ್ಲಿ ಈ

ಕ್ರಿಯೆ ಎದ್ದು ಕಾಣುತ್ತದೆ. ಇದಲ್ಲದೆ ಇವರು ವಚನಗಳ ತುದಿ-ಮೊದಲುಗಳನ್ನು ಅನಿವಾರ್ಯವಾಗಿ ಮುರಿಯುವ, ಬೆಳೆಸುವ ಕಾರ್ಯವನ್ನು ಮಾಡಿದರೆಂದು ತೋರುತ್ತದೆ. ಸಂಭಾಷಣೆಗೆ ಹೊಂದುವಂತೆ ವಚನ ಪ್ರಾರಂಭದಲ್ಲಿ ಅಯ್ಯಾ, ಎಲೆ, ಹೋ ಎಂಬ ಸಂಬೋಧನವಾಚಕಗಳನ್ನೂ, ವಿಷಯ ಮುಂದುವರಿಸಲು ಇನ್ನು, ಮತ್ತಂ ಎಂಬ ಪದಗಳನ್ನೂ, ಮುಕ್ತಾಯದಲ್ಲಿ ನೋಡಾ ಬಸವಣ್ಣ, ಹೇಳಾ ಬಸವಣ್ಣ, ಕೇಳಾ ಬಸವಣ್ಣ ಎಂಬಂಥ ನಿರ್ದೇಶಕಪಾಠಗಳನ್ನೂ ವಚನಗಳಿಗೆ ಹೇರಳವಾಗಿ ಜೋಡಿಸಿರುವರು. ಕೆಲವು ಸಲ ವಚನವನ್ನು ಸಂದರ್ಭಕ್ಕೆ ತಕ್ಕಂತೆ ಅನುಕೂಲಿಸಿಕೊಂಡಿರುವರು. ಉದಾ:

ಆಚಾರ, ತನುಸಂಬಂಧವಾದಲ್ಲಿ ಶ್ರೀಗುರು ಸನ್ನಹಿತನು.
ಅಱಿವು, ಮನಸಂಬಂಧವಾದಲ್ಲಿ ಶಿವಲಿಂಗ ಸನ್ನಹಿತನು.
ಈ ಉಭಯವು ಸಂಬಂಧವಾದಲ್ಲಿ ಜಂಗಮಲಿಂಗ ಸನ್ನಹಿತನು.
ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ತ್ರಿವಿಧಸಂಪನ್ನ ಶರಣನು.

ಮೂಲತಃ ಈ ವಚನ 'ಶರಣ'ನಿಗೆ ಸಂಬಂಧಿಸಿದೆ. ಇದು ಬಸವಣ್ಣನಿಗೆ ಹೊಂದುವಂತೆ

ಆಚಾರ, ತನುಸಂಬಂಧವಾದಲ್ಲಿ ಗುರು ಸನ್ನಹಿತ ಬಸವಣ್ಣನು.
ಅಱಿವು, ಮನಸಂಬಂಧವಾದಲ್ಲಿ ಶಿವಲಿಂಗ ಸನ್ನಹಿತ ಬಸಣ್ಣನು.
ಈ ಉಭಯವು, ಸಂಬಂಧವಾದಲ್ಲಿ ಜಂಗಮಲಿಂಗ ಸನ್ನಹಿತ ಬಸವಣ್ಣನು.
ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ ತ್ರಿವಿಧಸಂಪನ್ನ ಶರಣ ಬಸವಣ್ಣನು.

ಎಂದು ತಿರುಗಿಸಿಕೊಂಡುದು ಗಮನಾರ್ಹವಾಗಿದೆ.

ಇದಕ್ಕೂ ಮುಂದು ಹೋಗಿ ತಾವು ಯೋಜಿಸಿಕೊಂಡಿರುವ ಕೃತಿಶಿಲ್ಪಕ್ಕೆ ಕೊರತೆ ಬಿದ್ದಲ್ಲಿ, ಕೆಲವು ಹೊಸ ವಚನಗಳನ್ನು ಸೃಷ್ಟಿಸಿರುವ ಸಾಧ್ಯತೆಯೂ ಇದೆ.

ಇದಕ್ಕಿಂತ ಹೆಚ್ಚು ಅಪಾಯದ, ಪಾಪದ ಕಾರ್ಯವೆಂದರೆ ಸ್ವಾರ್ಥಮೂಲವಾದ, ತತ್ತ್ವವಿರುದ್ಧವಾದ ಪಾಠಗಳನ್ನು ಬುದ್ಧಿಪೂರ್ವಕ ಸೃಷ್ಟಿಸುವುದು. ಇದಕ್ಕೆ ಉದಾಹರಣೆ ಹೇಳುವುದು ಕಷ್ಟ. ಪ್ರಭುದೇವನನ್ನು ವೈಭವೀಕರಿಸುವಲ್ಲಿ, ಸಿದ್ಧರಾಮನನ್ನು ಶೈವನೆಂದೇ ಸಾಧಿಸುವಲ್ಲಿ ಈ ಕ್ರಿಯೆ ಜರುಗಿರುವ ಸಾಧ್ಯತೆಯಿದೆ. "ಪ್ರಭುದೇವ-ಸಿದ್ಧರಾಮರ ವಾದದ ವಚನಗಳು" ಎಂಬ ಸಂಕಲನವನ್ನು ಇಲ್ಲಿ ನೆನೆಯಬಹುದು. (ಶರಣರ ವಚನಗಳಿಗಿಂತ ಸಿದ್ಧರಾಮನ ವಚನಗಳ ಶೈಲಿ ಭಿನ್ನವಾಗಿರುವುದು ಚಿಂತನೀಯ).

ಈ ವರೆಗಿನ ವಿವೇಚನೆಯ ಬಲದಿಂದ ಒಟ್ಟು ವಚನ ಪಾಠಾಂತರಗಳನ್ನು

೧. ಲಿಪಿಕಾರರ ಪಾಠಾಂತರಗಳು
೨. ಸಹೃದಯರ ಪಾಠಾಂತರಗಳು
೩. ಗೇಯಕಾರರ ಪಾಠಾಂತರಗಳು
೪. ಪ್ರಾಚೀನ ಸಂಪಾದನಕಾರರ ಪಾಠಾಂತರಗಳು
೫. ಅವೀರಶೈವಪರ ಪಾಠಾಂತರಗಳು

ಎಂದು ವರ್ಗೀಕರಿಸಬಹುದು. ಸಂಪಾದನಶಾಸ್ತ್ರ ದೃಷ್ಟಿಯಿಂದ ಇವೆಲ್ಲ ದೋಷಗಳೇ ಆಗಿದ್ದರೂ ಮೊದಲಿನ ನಾಲ್ಕು ಕ್ಷಮ್ಯ, ಐದನೆಯದು ಅಕ್ಷಮ್ಯವಾಗಿದ್ದು, ಈ ಪಾಠಾಂತರಗಳು ಒಂದು ಅಕ್ಷರದಿಂದ ಹಿಡಿದು ಇಡೀ ವಚನದ ವರೆಗೆ ತೋರಿಬರುವ ಸಾಧ್ಯತೆಯಿದೆ.

* * *

ಯಾವುದೇ 'ರಚನೆ'ಯ ಮೈ-ಮನಗಳೆಂದರೆ ಆಶಯ (Content) ಮತ್ತು ಆಕೃತಿ (Form). ಸಂಪಾದನೆ ಎನ್ನುವುದು ದುಷ್ಪಪಾಠಗಳನ್ನು ದೂರ ಸರಿಸಿ, ಮೂಲ ಆಕೃತಿಯನ್ನು ಸರಿಮಾಡಿಕೊಡುವ ಮೂಲಕ, ಮೂಲ ಆಶಯವನ್ನು ಸರಿಮಾಡಿಕೊಡುವುದೇ ಆಗಿದೆ. ಅಂದರೆ ಆಕೃತಿ ಸಂಪಾದನೆಯೆಂಬುದು ಆಶಯಸಂಪಾದನೆಯೇ ಸರಿ. ಒಂದೊಂದು ವಚನ ವೀರಶೈವದ ಒಂದೊಂದು ಆಶಯಕೋಶ. ಆದುದರಿಂದ ವೀರಶೈವ ಆಶಯಕ್ಕೆ, ತತ್ವಕ್ಕೆ ಧಕ್ಕೆ ಬರದಂತೆ ವರ್ತಿಸುವುದೇ ವಚನಪರಿಷ್ಕರಣ ಪ್ರಥಮ ಮತ್ತು ಪರಮ ಒರೆಗಲ್ಲಾಗಿದೆ. ಅಂದರೆ ಸಂಪಾದಕ, ತತ್ವಶುದ್ಧಿಯತ್ತ ತೆರೆದ ಕಣ್ಣಿನಿಂದ ನೋಡುತ್ತ ಪರಿಷ್ಕರಣಕ್ಕೆ ತೊಡಗಬೇಕಾಗುತ್ತದೆ. ಉದಾ:

ಎಂತಕ್ಕೆ ಎಂತಕ್ಕೆ
ಹಡೆಯ ಕಾಯ ಬೀಯವಾಗದ ಮುನ್ನ ಅಟ್ಟುಣ್ಣು,, ಓ!
ಬೆರಣಿಯುಳ್ಳಲ್ಲಿ ಹೊತ್ತು ಹೋಗದ ಮುನ್ನ ಅಟ್ಟುಣ್ಣು, ಓ!
ಮರಳಿ ಭವಕ್ಕೆ ೧ಬಹೆ೧ - ೨ಬಾರದಿಹೆ೨ :
ಕರ್ತೃ ಕೂಡಲಸಂಗಮದೇವಂಗೆ ಶರಣೆನ್ನು, ಓ!

ಪಾಠಾಂತರ : ೧-೧ ಬಾಹೆ, ೨-೨ ಬರದಿಹೆ.

"ಮರಳಿ ನೀನು ಭವಕ್ಕೆ ಬರಬಹುದು, ಬರಲಿಕ್ಕಿಲ್ಲ. ಕಾರಣ ಈಗಲೇ ಕೂಡಲಸಂಗಮನನ್ನು ಪೂಜಿಸು" -ಎಂಬುದು ಮೇಲಿನ ಪಾಠದ ಆಶಯ. ಆದರೆ "ಮರಳಿ ನೀನು ಭವಕ್ಕೆ ಬಾರದಿದ್ದರೆ ಈಗಲೇ ಕೂಡಲಸಂಗನನ್ನು ಪೂಜಿಸು" ಎಂಬುದು ವೀರಶೈವತತ್ವಕ್ಕೆ ಸಮ್ಮತವಾಗಿರುವುದರಿಂದ, ಈ ವಚನಪಾಠವನ್ನು "ಮರಳಿ ಭವಕ್ಕೆ ಬಾಹೆ-ಬರದಿಹೆ" ಎಂದು ಪರಿಷ್ಕರಿಸಿಕೊಳ್ಳಬೇಕು. ಆಗ "ಕೂಡಲಸಂಗನನ್ನು ಈಗಲೇ ಪೂಜಿಸಿದರೆ ನೀನು ಮರಳಿ ಭವಕ್ಕೆ ಬರಲಾರೆ (=ಬಾಹೆ), ಬರುವುದಿಲ್ಲ (= ಬರದಿಹೆ)" ಎಂಬ ಯೋಗ್ಯ ಅರ್ಥ ಹೊರಡುತ್ತದೆ. ಹೀಗೆ ವೀರಶೈವ ತತ್ವಗಳನ್ನು ಒರೆಗಲ್ಲಾಗಿಟ್ಟುಕೊಳ್ಳುವುದೆ ವಚನಗಳ ನಿಜವಾದ ಪರಿಷ್ಕರಣವೆನಿಸುತ್ತದೆ. ಆದರೆ ವೀರಶೈವತತ್ವ ನಮ್ಮ ಕೈಗೆ ಶುದ್ಧರೂಪದಲ್ಲಿ ಇಳಿದುಬಂದಿರುವುದು ಸಂದೇಹ. ವಚನಗಳಲ್ಲಿ ಎಷ್ಟೋ ಅಭಾಸಗಳು, ವಿರೋಧಾಭಾಸಗಳು ಸಿಗುತ್ತವೆ. ಎಷ್ಟೋ ವಿಷಯಗಳು ಸತ್ಯದ ಒರೆಗಲ್ಲಿಗೆ ನಿಲ್ಲುವುದಿಲ್ಲ. ವಿದ್ವಾಂಸರಾದವರು ತತ್ವವನ್ನು ತಮತಮಗೆ ಸರಿಕಂಡಂತೆ ಪ್ರತಿಪಾದಿಸುತ್ತಲಿದ್ದಾರೆ. ಇದಕ್ಕೆ ಕಾರಣ, ವೀರಶೈವದಲ್ಲಿ ಶೈವ ಬೆರೆತು ಹೋಗುವಲ್ಲಿ ತದನುಗುಣವಾಗಿ ಮೂಲವಚನಗಳನ್ನು ವ್ಯತ್ಯಸ್ತಗೊಳಿಸಿದ, ಹೊಸವಚನಗಳನ್ನು ಕಟ್ಟಿ ಸೇರಿಸಿದ ಉಪಕ್ರಮ. ಈ ರಾಶಿಯಿಂದ ಕೂಟವಚನಗಳನ್ನು ಬೇರ್ಪಡಿಸಲು, ನಿಜವಚನಗಳನ್ನು ಸೇರ್ಪಡಿಸಲು ಆಕೃತಿಗಿಂತ ಆಶಯವೇ ಒರೆಗಲ್ಲಾಗಬೇಕು. ಆದರೆ ಯಾವುದು ನಿಜವಾದ ವೀರಶೈವತತ್ವ? ಅಂದರೆ ಬಸವಪ್ರಣೀತ ವೀರಶೈವತತ್ವ? ಎಂದು ಹೇಳುವುದೇ ಕಷ್ಟದ ಕೆಲಸ. ಇಂಥ ಸಂದರ್ಭದಲ್ಲಿ ಕಸವನ್ನು ಕಿತ್ತುವ ಆವೇಶದಲ್ಲಿ ಸಸಿಯನ್ನೂ ಕಿತ್ತಿದ ಪ್ರಮಾದ ಘಟಿಸಬಾರದು.

ಸಂಪಾದನೆಯ ಶುದ್ಧಿಯನ್ನು ಸಹೃದಯರು ವಿಮರ್ಶಿಸಬೇಕಾದುದು ನ್ಯಾಯಸಮ್ಮತ. ಇದು ಒಮ್ಮೊಮ್ಮೆ ವಿಮರ್ಶೆಯ ಮಟ್ಟವನ್ನು ಮೀರಿ ವಿವಾದಕ್ಕೆ ಇಳಿಯುತ್ತಲಿದೆ. ವೀರಶೈವದಲ್ಲಿ ಗುರುವರ್ಗದವರು-ಅವರ ಅನುಯಾಯಿಗಳು, ವಿರಕ್ತವರ್ಗದವರು - ಅವರ ಅನುಯಾಯಿಗಳು, ಈ ಎರಡೂ ಶಾಖೆಗಳನ್ನು ಒಪ್ಪದವರು ಎಂಬ ಮೂರು ವರ್ಗಗಳಿವೆ. ಇವರಿಗೆ ತಮ್ಮದೇ ಆದ ಗಟ್ಟಿಯಾದ ನಂಬಿಕೆಗಳಿವೆ. ಈ ಮೂರು ವರ್ಗಗಳಲ್ಲಿ ಇದ್ದೂ ಇಲ್ಲದಂತಿರುವ ಅವಕಾಶವಾದಿಗಳ ಇನ್ನೊಂದು ವರ್ಗವೂ ಇದೆ. ಈ ನಾಲ್ಕು ಮನಸ್ಸುಗಳಿಗೊಪ್ಪುವಂತೆ ಸಂಪಾದನೆ ಮಾಡುವುದು ಕಷ್ಟದ ಕೆಲಸ.

೧. ಯಾವುದೇ ಪ್ರಾಚೀನ ಕೃತಿಯನ್ನು ಪ್ರಕಟಿಸುವ ಅಧಿಕಾರ ಸಂಪಾದಕನಿಗೆ ಇರುತ್ತದೆ. ಆ ಕೃತಿಯ ವಿಶ್ವಾಸಾರ್ಹತೆ, ಪರಿಷ್ಕರಣದ ಗುಣಮಟ್ಟಗಳನ್ನು ಸಹೃದಯನಾದವನು ವಿಮರ್ಶಿಸಬಹುದೇ ಹೊರತು; ಪ್ರಕಟಿಸಲೇಬಾರದೆಂದು ಹೇಳುವುದು ತಪ್ಪಾಗುತ್ತದೆ.

೨. ವಚನಗಳಲ್ಲಿ ತತ್ವಪೂರಕ ಪ್ರಕ್ಷಿಪ್ತಗಳು, ತತ್ವಮಾರಕ ಪ್ರಕ್ಷಿಪ್ತಗಳು ಸೇರಿಕೊಂಡಿವೆ. ತತ್ವಪೂರಕ ಪ್ರಕ್ಷಿಪ್ತಗಳನ್ನು ಗುರುತಿಸುವುದು ಕಷ್ಟಸಾಧ್ಯ. ತತ್ವಮಾರಕ ಪ್ರಕ್ಷಿಪ್ತಗಳನ್ನು ಗುರುತಿಸಬಹುದಾದರೂ ತತ್ವವನ್ನು ತಪ್ಪಾಗಿ ಅರ್ಥಮಾಡಿಕೊಂಡ ಕೆಲವರು, ವಚನವೊಂದರ ಒಂದೆರಡು ಪದಗಳಿಗೆ ಬೆಚ್ಚಿ, ಅದು ಪ್ರಕ್ಷಿಪ್ತ ವಚನವೆಂದು ವಾದಿಸುತ್ತಾರೆ. ಬಸವಣ್ಣನವರ ಹೆಚ್ಚಿನ ವಚನ ಹೋಗಲಿ, ಷಟ್ಸ್ಥಲ ವಚನ ಕಟ್ಟಿನಲ್ಲಿಯ "ಚೆನ್ನಯ್ಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು ಹೊಲಕ್ಕೆ ಬೆರಣಿಗೆ ಹೋಗಿ ಸಂಗವ ಮಾಡಿದರು....." ಎಂಬಂತಹ ವಚನಗಳು ಪ್ರಕ್ಷಿಪ್ತಗಳೆಂದು ಕೆಲವರು ವಾದಿಸುತ್ತಿರುವುದು ವ್ಯಸನದ ಸಂಗತಿ. ಇವರಿಗೆ ಎಕಾಡೆಮಿಸಿಯನ್ ಎನಿಸಿಕೊಳ್ಳವವರು ಅನುಮೋದಿಸುತ್ತಿರುವುದು ಇನ್ನೂ ವ್ಯಸನದ ಸಂಗತಿ. ಇಂಥ ವಚನಗಳು ಒಬ್ಬನ ಆವೃತ್ತಿಯಲ್ಲಿ ಪ್ರಕಟವಾಗಿದ್ದರೆ ಮೌನವಾಗಿರುವ, ಇನ್ನೊಬ್ಬರ ಆವೃತ್ತಿಯಲ್ಲಿ ಪ್ರಕಟವಾದರೆ ಟೀಕಿಸುವ ಪಕ್ಷಪಾತ ಪ್ರತಿಕ್ರಿಯೆಗಳೂ ಕೆಲವೊಮ್ಮೆ ತೋರಿಬರುತ್ತಲಿವೆ.

* * *

ಹೀಗಾಗಿ ಮುಂದೆ ಎದುರಾಗಬಹುದಾದ ತೊಂದರೆಯನ್ನು ನೆನೆದು ಇಂದು ವೀರಶೈವ ಸಂಪಾದಕರೇ ವಚನ ಸಂಪಾದನ ಕಾರ್ಯವನ್ನು ಉಪೇಕ್ಷಿಸುತ್ತಲಿದ್ದಾರೆ. ಹೀಗಿರುವಾಗ ಟಿ. ಎಸ್. ವೆಂಕಣ್ಣಯ್ಯ, ಡಿ. ಎಲ್. ನರಸಿಂಹಾಚಾರ್, ತೀ. ನಂ. ಶ್ರೀಕಂಠಯ್ಯ, ಎಂ. ಆರ್. ಶ್ರೀನಿವಾಸಮೂರ್ತಿ, ಆರ್. ಆರ್. ದಿವಾಕರ ಮೊದಲಾದವರಂತೆ ಅನ್ಯಮತೀಯ ವಿದ್ವಾಂಸರು ವೀರಶೈವಸಾಹಿತ್ಯದ ಸಂಪಾದನ, ಸಮಾಲೋಚನ ಕಾರ್ಯಗಳನ್ನು ಕೈಬಿಟ್ಟಿರುವುದು ಸಹಜವೇ ಆಗಿದೆ. ಇಂಥ ವಾತಾವರಣ ನಿರ್ಮಾಣವಾಗಿರುವುದಕ್ಕೆ ವೀರಶೈವ ಸಮಾಜ ಈಗ ಗಂಭೀರವಾಗಿ ವಿಚಾರಿಸಬೇಕಾಗಿದೆ.

* * *

ಸಂಪಾದಕನಿಗೆ ೧. ಸಂಗ್ರಹ, ೨. ಸಂಕಲನ, ೩. ಸಂಪಾದನ ಎಂಬ ಮೂರು ವರ್ಗಗಳಿಂದ ವಚನಗಳು ಲಭಿಸುತ್ತವೆ. ಸರ್ವಪುರಾತನರ ವಚನಕಟ್ಟುಗಳು ಸಂಗ್ರಹ, ತಾತ್ವಿಕಶ್ರೇಣಿಯ ಷಟ್ಸ್ಥಲ, ಏಕೋತ್ತರ ಶತಸ್ಥಲ ಇತ್ಯಾದಿಗಳು ಸಂಕಲನ, ಸಂಪಾದನಕಾರರ ಹಸ್ತಪ್ರವೇಶಕ್ಕೆ ಗುರಿಯಾದ ಶೂನ್ಯಸಂಪಾದನೆ ಇತ್ಯಾದಿಗಳು ಸಂಪಾದನೆ. ಇವುಗಳಲ್ಲಿ ಪಾಠದೃಷ್ಟಿಯಿಂದ ಮೊದಲಿನದು ಶುದ್ಧವಾಗಿದೆ. ಎರಡನೆಯದರಲ್ಲಿ, ಒಂದು ತತ್ವಕ್ಕೆ ಬದ್ಧವಾಗಿ

ವಚನಗಳನ್ನು ಶ್ರೇಣಿಗೊಳಿಸಬೇಕಾಗಿರುವುದರಿಂದ 'ಅನ್ಯತೆ' ಸೇರಿರುವ ಸಂಭವವಿದೆ. ಮೂರನೆಯದರಲ್ಲಿ ತತ್ವನಿರೂಪಣೆಯೊಂದಿಗೆ ಸಂಪಾದನಕಾರನೂ ತೊಡಗಿಸಿಕೊಳ್ಳುವುದರಿಂದ ಈ 'ಅನ್ಯತೆ' ಇನ್ನೂ ವರ್ಧಿಸಿರುವ ಸಾಧ್ಯತೆಯಿದೆ. ಆದುದರಿಂದ ಪಾಠಶುದ್ಧಿ ದೃಷ್ಟಿಯಿಂದ ಸರ್ವಪುರಾತನರ ವಚನಕಟ್ಟುಗಳಿಗೆ ಪ್ರಥಮಸ್ಥಾನ, ಷಟ್ಸ್ಥಲ-ಏಕೋತ್ತರಶತಸ್ಥಲಾದಿಗಳಿಗೆ ದ್ವಿತೀಯಸ್ಥಾನ, ಶೂನ್ಯಸಂಪಾದನೆ ಇತ್ಯಾದಿಗಳಿಗೆ ತೃತೀಯಸ್ಥಾನ ಸಲ್ಲುತ್ತದೆ.

ಇಂದು ಯಾವುದೇ ವಚನಕ್ಕೆ ಈ ಮೂರೂ ವರ್ಗಗಳಿಂದ ಪಾಠಾಂತರಗಳನ್ನು ಸಂಪಾದಕರು ಗುರುತಿಸಿಕೊಳ್ಳುವುದು ರೂಢಿಯಲ್ಲಿದೆ. ಇದರಿಂದ ಪರಿಷ್ಕರಣ ಊರ್ಜಿತವಾಗದೆ ಕಲಸುಮೇಲೋಗರವಾಗುವ ಸಂಭವವೇ ಹೆಚ್ಚು. ಆದುದರಿಂದ ತಾನು ಪರಿಷ್ಕರಣಕ್ಕೆ ಬಳಸಿಕೊಳ್ಳುವ ವಚನವು ಇವುಗಳಲ್ಲಿ ಯಾವ ವರ್ಗಕ್ಕೆ ಸಂಬಂಧಿಸಿದೆಯೆಂಬುದನ್ನು ಸಂಪಾದಕ ತಪ್ಪದೇ ಗಮನಿಸಬೇಕು; ಆಯಾ ವಚನಕ್ಕೆ ಆಯಾ ವರ್ಗದ ಪಾಠಾಂತರಗಳನ್ನೇ ಗುರುತಿಸಿಕೊಳ್ಳಬೇಕು.

ಈ ಮೂರರಲ್ಲಿ ಒಂದೊಂದೂ ವರ್ಗ ಅನೇಕ ಕುಟುಂಬಗಳನ್ನು ಬೆಳೆಸಿಕೊಂಡು ಬಂದಿವೆ. ಇಂಥ ಪ್ರಸಂಗದಲ್ಲಿ ಒಂದು ಕುಟುಂಬಕ್ಕೆ ಸಂಬಂಧಪಟ್ಟ ಹಸ್ತಪ್ರತಿಗಳನ್ನು ಮಾತ್ರ ಬಳಸಿ, ಆ ಕುಟುಂಬದ ಮೂಲಸ್ವರೂಪವನ್ನು ಪುನರ್ರಚನೆ ಮಾಡುವುದೇ ವಚನ ಸಾಹಿತ್ಯದ ಮಟ್ಟಿಗೆ ಶುದ್ಧಪರಿಷ್ಕರಣವೆಂದು ನನ್ನ ನಂಬುಗೆ. ಅಸ್ತವ್ಯಸ್ತ, ಹೇರಳ ಪಾಠಾಂತರಗಳ ಮಧ್ಯ ಒಂದು ಕುಟುಂಬವನ್ನು ರೂಪಿಸಿಕೊಡುವುದೇ ಕಷ್ಟಸಾಧ್ಯವಾಗಿರುವಾಗ, ಇಂಥ ಕುಟುಂಬಗಳ ಬಲದಿಂದ ಒಂದು ವರ್ಗವನ್ನೂ, ಇಂಥ ವರ್ಗಗಳ ಬಲದಿಂದ ಶರಣರ ಸ್ವಹಸ್ತಪಾಠವನ್ನೂ ಪುನರ್ರಚಿಸಿಕೊಡಲು ಪ್ರಯತ್ನಿಸುವುದು ವ್ಯರ್ಥಶ್ರಮವೆಂದೇ ಹೇಳಬೇಕು. ಒಂದುವೇಳೆ ಹಾಗೆ ಮಾಡಲು ತೊಡಗಿದರೆ ಅನೇಕ ಜನ ನಿವೇದಕರಿಂದ ಪಾಠಾಂತರಗಳನ್ನು ಸಂಗ್ರಹಿಸಿ, ಜನಪದಕೃತಿಯ ಮೂಲಪಾಠವನ್ನು ರಚಿಸಲು ಮಾಡಿದ ಪ್ರಮಾದದಂತಾಗುವ ಸಂಭವವಿದೆ.

ಸ್ಥಳಾಭಾವ ಕಾರಣವಾಗಿ ವಚನಗಳನ್ನು ಹಸ್ತಪ್ರತಿಗಳಲ್ಲಿ ಗದ್ಯದಂತೆ ಬರೆಯುವುದುಂಟು. ೧೮೮೬ರಲ್ಲಿ ಪ್ರಕಟವಾದ ಪ್ರಥಮ ವಚನಗ್ರಂಥ "ಶಿಖಾರತ್ನ ಪ್ರಕಾಶವು" ಎಂಬುದು ಮೊದಲು ಮಾಡಿ, ಹಳಕಟ್ಟಿಯವರ ಪ್ರಕಟನೆಗಳನ್ನೊಳಗೊಂಡು ಎಲ್ಲ ಆವೃತ್ತಿಗಳಲ್ಲಿ ವಚನಗಳನ್ನು ಹಸ್ತಪ್ರತಿಗಳಲ್ಲಿರುವಂತೆ ಸಾಲುಗಟ್ಟಿ ಮುದ್ರಿಸಲಾಗುತ್ತಿದ್ದಿತು. ಆದರೆ ಪ್ರಥಮ ಬಾರಿಗೆ ಚರಣಗಳನ್ನು ಲಯಾತ್ಮಕವಾಗಿ, ಅರ್ಥವತ್ತಾಗಿ ಮುರಿದು, ವಿರಾಮಚಿಹ್ನೆಗಳನ್ನು ಬಳಸಿ ಶ್ರೀ ಎಸ್. ಎಸ್. ಬಸವನಾಳರು ಅವುಗಳಿಗೆ ಅರ್ಥಪೂರ್ಣ ಮುದ್ರಣವಿನ್ಯಾಸವನ್ನು ಒದಗಿಸಿದರು. ಒಬ್ಬಿಬ್ಬರು ವಿರೋಧಿಸುವರಾದರೂ ಬಹುಜನಮಾನ್ಯವಾದ ಈ ಧೋರಣೆ ಮುಂದುವರಿಯುತ್ತಿರುವುದು ಸೂಕ್ತ ಉಪಕ್ರಮವಾಗಿದೆ.

■■

ಆಕರ : ಮಾರ್ಗ ಸಂಪುಟ–೧

೩೨

ವಚನ ಪರಿಷ್ಕರಣ: ಈವರೆಗಿನ ಎರಡು ತಪ್ಪು ವಿಧಾನಗಳು

ವಚನಸಾಹಿತ್ಯ ಸಂಪಾದನೆಗೆ ನೂರು ವರ್ಷಕ್ಕೆ ಮೇಲ್ಪಟ್ಟ ಇತಿಹಾಸವಿದೆ. ಬಹುಶ: ಪ್ರಾಚೀನ ಸಾಹಿತ್ಯ ಪ್ರಕಾರಗಳಲ್ಲಿಯೇ ಇದು ಹೆಚ್ಚು ಆವೃತ್ತಿಗಳಲ್ಲಿ ಹೊರಬಂದಿದೆ, ಹೆಚ್ಚು ವಿಮರ್ಶೆಗೆ ಒಳಗಾಗಿದೆ. ಇನ್ನೂ ಹೆಚ್ಚು ಪ್ರಮಾಣದಲ್ಲಿ ಜನರನ್ನು ತಲುಪಿದೆ. ಸಾಲದುದಕ್ಕೆ ಈಗಲೂ ಹುಟ್ಟುತ್ತಲಿರುವ ಏಕೈಕ ಪ್ರಾಚೀನ ಸಾಹಿತ್ಯಪ್ರಕಾರವೆಂಬ ಕೀರ್ತಿಗೂ ಪಾತ್ರವಾಗಿದೆ.

ವಚನಸಾಹಿತ್ಯದ ಪರಿಷ್ಕರಣ ಮತ್ತು ಪ್ರಕಟನೆಯ ಇತಿಹಾಸದಲ್ಲಿ ಇತ್ತೀಚಿನ ಕರ್ನಾಟಕ ಸರಕಾರದ ಪ್ರಕಟನೆ, ತೋಂಟದಾರ್ಯಮಠದ ಪ್ರಕಟನೆಗಳನ್ನು ಬಿಟ್ಟರೆ, ಇವುಗಳಿಗೆ ಮೊದಲಿನ ಎರಡು ದೊಡ್ಡ ಪ್ರಯತ್ನಗಳು:

೧. ವಿಜಾಪುರದ ಶಿವಾನುಭವ ಗ್ರಂಥಮಾಲೆಯ ಪ್ರಯತ್ನ-ಫ. ಗು. ಹಳಕಟ್ಟಿ

೨. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಪ್ರಯತ್ನ-ಆರ್. ಸಿ. ಹಿರೇಮಠ

ವಚನಸಾಹಿತ್ಯ ಪ್ರಕಟವಾಗಬೇಕು, ಪೂರ್ಣಪ್ರಮಾಣದಲ್ಲಿ ಪ್ರಕಟವಾಗಬೇಕೆಂಬ ಪ್ರಾಮಾಣಿಕ ಪ್ರಯತ್ನಗಳಿವು. ವೈಯಕ್ತಿಕ ನೆಲೆಯಲ್ಲಿ ಡಾ|| ಹಳಕಟ್ಟಿಯವರು ಅನುಭವಿಸಿದ ಕಷ್ಟ-ನಷ್ಟ, ಸಾಂಸ್ಥಿಕ ನೆಲೆಯಲ್ಲಿ ಡಾ|| ಆರ್. ಸಿ. ಹಿರೇಮಠ ಅವರು ವಹಿಸಿದ ಶ್ರಮ ಐತಿಹಾಸಿಕ ಘಟನೆಗಳೆನಿಸಿವೆ. ಆದರೆ ಈ ಸಾಹಿತ್ಯಪ್ರಕಟನೆಯ ವಿಷಯವಾಗಿ ತಮಗರಿಯದೆಯೇ ತುಳಿದ ತಪ್ಪು ದಾರಿಗಳಿಂದಾಗಿ ಡಾ|| ಹಳಕಟ್ಟಿಯವರಿಂದ ವಚನಮಿಶ್ರಣ, ಡಾ|| ಹಿರೇಮಠರಿಂದ ವಚನಪಾಠಮಿಶ್ರಣ-ಎಂಬ ದೋಷಗಳು ಘಟಿಸಿದವು.

ವಚನ ಮಿಶ್ರಣ:

೧. ವಚನ ಬಿಡಿ ರೂಪದ ಮುಕ್ತಕಸಾಹಿತ್ಯ. ಇದನ್ನು ಆಮೇಲಿನವರು ಸಂಗ್ರಹ (ಸಕಲ ಪುರಾತನರ ವಚನ ಕಟ್ಟು ಇತ್ಯಾದಿ), ಸಂಕಲನ (ಏಕೋತ್ತರ ಶತಸ್ಥಲ ಕಟ್ಟು ಇತ್ಯಾದಿ), ಸಂಪಾದನೆ (ಶೂನ್ಯಸಂಪಾದನೆ ಕಟ್ಟು ಇತ್ಯಾದಿ) ರೀತಿಗಳಲ್ಲಿ ಸಂಯೋಜಿಸಿದರು.

೨. ಇನ್ನೊಂದು ಪ್ರಯತ್ನವೆಂದರೆ ಶರಣರ ಹೆಸರಿನಲ್ಲಿ ಪ್ರಾಚೀನರು ಕೃತಕ ವಚನಗಳನ್ನು ಸೃಷ್ಟಿಸಿದರು. ಕೆಲವೊಮ್ಮೆ ಕೃತಕ ಶರಣರನ್ನೇ ಸೃಷ್ಟಿಸಿ, ಅವರ ಹೆಸರಿನಲ್ಲಿ ಕೃತಕ ವಚನಗಳನ್ನು ಬರೆದರು. ಈ ಕೂಟವಚನಗಳನ್ನೊಳಗೊಂಡ ಸಂಗ್ರಹ, ಸಂಕಲನ, ಸಂಪಾದನ ಕಟ್ಟುಗಳನ್ನು ರೂಪಿಸಿದರು.

ಹಿಂದಿನವರಿಂದ ಬಳುವಳಿಯಾಗಿ ಬಂದ ಇಂಥ ಕಟ್ಟುಗಳಲ್ಲಿ ಕೃತಕ ವಚನಗಳನ್ನು-ಕೃತಕ ವಚನಕಟ್ಟುಗಳನ್ನು ದೂರವಿಟ್ಟು, ನಿಜವಚನಗಳನ್ನು-ನಿಜವಚನ ಕಟ್ಟುಗಳನ್ನು ಮೂಲರೂಪದಲ್ಲಿಯೇ ಸಕಲ ಪುರಾತನರ ವಚನಗಳು, ಏಕೋತ್ತರ ಶತಸ್ಥಲ ವಚನಗಳು, ಶೂನ್ಯಸಂಪಾದನೆ-ಎಂದು ಮುಂತಾಗಿ ಸ್ವತಂತ್ರವಾಗಿಯೇ ಪರಿಷ್ಕರಿಸಿ ಪ್ರಕಟಿಸಬೇಕಾಗುತ್ತದೆ.

ಡಾ|| ಹಳಕಟ್ಟಿಯವರು ಹೀಗೆ ಮಾಡದೆ ನಿಜವಚನ, ಕೂಟವಚನಗಳನ್ನೂ ಬೆರೆಸಿ (೧) ವಿಷಯನಿಷ್ಠವಾಗಿ ವರ್ಗೀಕರಿಸಿ ವಚನಶಾಸ್ತ್ರ ಭಾಗ ೧, ೨, ೩ ಪ್ರಕಟಿಸಿದರು. (೨) ವ್ಯಕ್ತಿನಿಷ್ಠವಾಗಿ ಏಕೀಕರಿಸಿ ಮಡಿವಾಳ ಮಾಚಯ್ಯನ ವಚನಗಳು, ಅಂಬಿಗರ ಚೌಡಯ್ಯನ ವಚನಗಳು ಇತ್ಯಾದಿಗಳನ್ನು ಪ್ರಕಟಿಸಿದರು. ಹೀಗಾಗಿ ವಚನಸಾಹಿತ್ಯ ಪ್ರಕಟನೆಯ ಪ್ರಥಮ ಘಟ್ಟದಲ್ಲಿಯೇ, ಅವರಿಗೆ ಅರಿಯದಂತೆಯೇ ನಿಜವಚನಗಳೊಂದಿಗೆ ಕೂಟವಚನಗಳೂ ದೊಡ್ಡ ಪ್ರಮಾಣದಲ್ಲಿ ಬೆರೆತುಹೋದವು.

ಡಾ|| ಹಳಕಟ್ಟಿಯವರು "ವಚನಶಾಸ್ತ್ರಸಾರ ಭಾಗ-೧" ಗ್ರಂಥದ ಪ್ರಸ್ತಾವನೆಯಲ್ಲಿ ತಾವು ಈ ಸಂಗ್ರಹಕ್ಕಾಗಿ ಬಳಸಿದ ವಚನ ಕಟ್ಟುಗಳ ಯಾದಿಯನ್ನು ಹೀಗೆ ಕೊಟ್ಟಿದ್ದಾರೆ. (೧) ಸರ್ವಪುರಾತನರ ವಚನಗಳು (೨)ವಚನಗಳ ಸಂಗ್ರಹವು (೩)ಬೆಡಗಿನ ವಚನಗಳು (೪) ವಚನಗಳ ಸಂಗ್ರಹ (೫) ವಚನ ಸಂಗ್ರಹ (೬)ವಚನ ಸಂಗ್ರಹ-ಅಂಬಿಗರ ಚೌಡಯ್ಯ (೭)ಲಿಂಗಚಿದಮೃತ ಬೋಧೆ (೮) ನಿಜಾಚರಣೆಯ ವಚನಗಳು (೯) ವಚನಗಳ ಸಂಗ್ರಹ-ಏಕೋತ್ತರ ಶತಸ್ಥಲ (೧೦) ಏಕೋತ್ತರ ಶತಸ್ಥಲ (೧೧) ಗಣಭಾಷ್ಯರತ್ನಮಾಲಾ (೧೨) ಲಿಂಗಲೀಲಾ ವಿಲಾಸ [ಚಾರಿತ್ರ] (೧೩) ಸಂಬಂಧದ ವಚನಗಳು (೧೪) ಆಚರಣೆಯ ವಚನಗಳು (೧೫) ಅಷ್ಟಾವರಣದ ವಚನಗಳು (೧೬)ಸಿದ್ಧರಾಮೇಶ್ವರ ವಾದದ ವಚನ (೧೭) ಸಿದ್ಧರಾಮೇಶ್ವರನು ಕಲ್ಯಾಣದಿಂದ ಬಂದ ಬಳಿಕ ವಾದಮಾಡಿದ ವಚನಗಳು (೧೮) ಶೂನ್ಯ ಸಂಪಾದನೆ (೧೯) ಬಸವಣ್ಣನವರ ವಚನಗಳು (೨೦) ಚೆನ್ನಬಸವೇಶ್ವರ ವಚನಗಳು (೨೧) ಸಿದ್ಧೇಶ್ವರ ವಚನಗಳು-ತೋಂಟದಾರ್ಯ (೨೨) ಅಖಂಡೇಶ್ವರ ವಚನಗಳು (೨೩)ವೇದಸಂಜೀವಿನಿ (೨೪) ಪ್ರಭುದೇವರ ವಚನಗಳು (೨೫) ಶಿಖಾಚಕ್ರವಚನ (೨೬) ಗಣದಾಸಿ ವೀರಣ್ಣೊಡೆಯರ ವಚನ (೨೭) ಘನಲಿಂಗನ ವಚನ (೨೮) ಕಾಡಸಿದ್ಧೇಶ್ವರನ ವಚನ (೨೯) ಸ್ವತಂತ್ರ ಸಿದ್ಧಲಿಂಗೇಶ್ವರನ ವಚನ (೩೦) ಅಂಬಿಗರ ಚೌಡಯ್ಯನ ವಚನ.

ಈ ಪಟ್ಟಿಯಲ್ಲಿ ಸಂಗ್ರಹ, ಸಂಕಲನ, ಸಂಪಾದನೆ ಈ ಮೂರೂ ರೀತಿಯ ಕಟ್ಟುಗಳಿವೆ. ೧೨ನೆಯ ಶತಮಾನದಿಂದ ೧೭ನೆಯ ಶತಮಾನ ವರೆಗಿನ ವಚನಕಾರರ ವಚನ ಕಟ್ಟುಗಳಿವೆ. ಈ ಕಟ್ಟುಗಳ ಸಿವುಡು ಬಿಚ್ಚಿ, ಬೆರೆಸಿ ಅನೇಕ ಮುಖ್ಯ ಗೌಣ-ಶೀರ್ಷಿಕೆಗಳ ಕೆಳಗೆ ಜೋಡಿಸಿ, ವಚನಶಾಸ್ತ್ರಸಾರ, ಅಂಬಿಗರ ಚೌಡಯ್ಯನ ವಚನಗಳು ಇತ್ಯಾದಿ ಗ್ರಂಥಗಳನ್ನು ಪ್ರಕಟಿಸಿದರು. ಹೀಗೆ ಮಾಡದೆ ಆಯಾ ಕಟ್ಟುಗಳನ್ನು (ಏಕೋತ್ತರ ಶತಸ್ಥಲ ಇತ್ಯಾದಿ) ಸ್ವತಂತ್ರವಾಗಿ ಪ್ರಕಟಿಸಬೇಕಾಗಿತ್ತು. ಹಾಗೆ ಮಾಡಿದ್ದರೆ ಆರಂಭದ ಆ ಕಾಲಘಟ್ಟದಲ್ಲಿಯೇ ವಚನಕೃತಿಗಳ ನಿಜಸ್ವರೂಪ ತಿಳಿದುಕೊಳ್ಳಲು, ಸಾಚಾ-ಖೋಟಾತನಗಳನ್ನು ಅರ್ಥಮಾಡಿಕೊಳ್ಳಲು

ಅನುಕೂಲವಾಗುತ್ತಿತ್ತು. ಹೀಗೆ ಮಾಡದ ಕಾರಣ ಆರಂಭದ ಪ್ರಯತ್ನದಲ್ಲಿಯೇ ಸಾಚಾವಚನ ರಾಶಿಯೊಂದಿಗೆ ಖೋಟಾವಚನರಾಶಿ ಬೆರೆತು ಹೋಯಿತು. ಮೇಲಿನ ಯಾದಿಯಲ್ಲಿ (೧) ಲಿಂಗಚಿದಮೃತಬೋಧೆ (೨) ನಿಜಾಚರಣೆಯ ವಚನಗಳು (೩) ಸಿದ್ಧರಾಮೇಶ್ವರ ವಾದದ ವಚನ (೪) ಸಿದ್ಧರಾಮೇಶ್ವರನು ಕಲ್ಯಾಣದಿಂದ ಬಂದ ಬಳಿಕ ವಾದಮಾಡಿದ ವಚನಗಳು–ಈ ಕೃತಿಗಳು ಖಂಡಿತವಾಗಿಯೂ ಇಡಿಯಾಗಿ, ಇಲ್ಲವೆ ಭಾಗಶ: ಖೋಟಾವಚನ ಕಟ್ಟುಗಳು. ಇವು ಡಾ|| ಹಳಕಟ್ಟಿಯರ ವಚನಶಾಸ್ತ್ರಸಾರ ಹೆಸರಿನ ಮಹತ್ವದ ಕೃತಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸೇರಿಹೋದವು.

ಆರ್. ನರಸಿಂಹಾಚಾರ್ಯರು ಇವುಗಳನ್ನು, ಇವುಗಳ ಕರ್ತೃಗಳನ್ನು ನೈಜವೆಂದು ಭಾವಿಸಿ ಕರ್ನಾಟಕ ಕವಿಚರಿತೆಯಲ್ಲಿ ಸ್ವೀಕರಿಸಿದರು. ಕವಿಚರಿತೆಯಂಥ ಪ್ರಮಾಣಭೂತ ಗ್ರಂಥದಲ್ಲಿರುವ ಕಾರಣ ಕರ್ನಾಟಕದ ಎಲ್ಲ ವಿದ್ವಾಂಸರು ನಂಬಿ ಬಳಸಿದರು, ಪ್ರಚಾರಕ್ಕೆ ತಂದರು. ಸಾಲದುದಕ್ಕೆ ಅನುವಾದವನ್ನೂ ಮಾಡಿದರು.

ಹೀಗೆ ನಿಜವಚನ–ಕೂಟವಚನಗಳು ನಿರಾಯಾಸವಾಗಿ ಆಧುನಿಕರಿಂದ ಸ್ವತಂತ್ರಕೃತಿರೂಪದಲ್ಲಿ, ಸಂಗ್ರಹಕೃತಿರೂಪದಲ್ಲಿ ಪ್ರಕಟವಾಗುತ್ತ ನಡೆದಿರುವಾಗ, ಮುಕ್ತಿಕಂಠಾಭರಣ, ಲಿಂಗಚಿದಮೃತಬೋಧೆ ಕೃತಿಪ್ರಕಟನೆಗಳು ಎಲ್ಲರ ಕಣ್ಣು ತೆರೆಸಿದವು. ಹೀಗಾಗಿ ಕರ್ನಾಟಕ ಸರಕಾರ ಪ್ರಕಟಿಸಿದ ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನೆಯ ಪ್ರಸಂಗದಲ್ಲಿ ಮಾಡಿದ ಮುಖ್ಯಕಾರ್ಯವೆಂದರೆ, ಮುಕ್ತಿಕಂಠಾಭರಣ ಕೃತಿಯನ್ನು ಕೈಬಿಟ್ಟುದು, ಮತ್ತು ಹಳಕಟ್ಟಿಯವರು ಬಳಸಿಕೊಂಡಿದ್ದ ಕೃತಿಗಳಲ್ಲಿ ಲಿಂಗಚಿದಮೃತಬೋಧೆ, ಸಿದ್ಧರಾಮೇಶ್ವರ ವಾದದ ವಚನ, ಸಿದ್ಧರಾಮೇಶ್ವರನು ಕಲ್ಯಾಣದಿಂದ ಬಂದ ಬಳಿಕ ವಾದ ಮಾಡಿದ ವಚನ–ಈ ಕೂಟ ಕೃತಿಗಳನ್ನು ದೂರವಿಟ್ಟುದು. ಮತ್ತು ಕರ್ನಾಟಕ ವಿಶ್ವವಿದ್ಯಾಲಯ ಮಿಶ್ರಣಮಾಡಿದ್ದ ಸಿದ್ಧರಾಮನ ವಚನಗಳನ್ನು ಕಾಂಡ ೧, ಕಾಂಡ ೨ ಎಂದು ವಿಂಗಡಿಸಿ ಮುದ್ರಿಸಿದುದು. ಬಹುಶ: ಸರಕಾರದ ಮುಂದಿನ ಆವೃತ್ತಿಯ(೩)ಲ್ಲಿ "ನಿಜಾಚರಣೆಯ ವಚನಗಳು" ಕೃತಿಯಿಂದ ತೆಗೆದುಕೊಂಡ ವಚನಗಳನ್ನು ತೆಗೆದುಹಾಕಬೇಕಾಗುತ್ತದೆ. ಗಂಗಾದೇವಿಯ ವಚನಗಳು ಮುಕ್ತಿಕಂಠಾಭರಣದಲ್ಲಿ ಮಾತ್ರ ಕಂಡುಬರುವುದರಿಂದ ಇವುಗಳನ್ನೂ ಕೈಬಿಡಲು ನಿರ್ಧರಿಸಲಾಗಿದ್ದಿತು. ಆದರೆ ಶರಣಸಮೂಹದ ಗಣ್ಯವ್ಯಕ್ತಿಯಾಗಿರುವುದರಿಂದ ಇಟ್ಟುಕೊಳ್ಳಬಹುದೆಂಬ "ಸಂಪಾದಕ ಮಂಡಳಿ"ಯ ನಿರ್ಣಯದ ಮೇರೆಗೆ ಇವಳ ವಚನಗಳಿಗೂ ಸರಕಾರದ ಆವೃತ್ತಿಗಳಲ್ಲಿ ಪ್ರವೇಶ ನೀಡಲಾಯಿತು. ಆದರೆ ಮುಂದಿನ ಆವೃತ್ತಿ(೩)ಯಲ್ಲಿ ಇವಳ ವಚನಗಳನ್ನೂ ಇಡಿಯಾಗಿ ಕೈಬಿಡುವುದು ಲೇಸು. ಅದೇನೇ ಇದ್ದರೂ ಸರಕಾರದ ಆವೃತ್ತಿಯ ಬಹುದೊಡ್ಡ ಸಾಧನೆಯೆಂದರೆ ಡಾ|| ಹಳಕಟ್ಟಿಯವರ ಕಣ್ಣುತಪ್ಪಿಸಿ ಸೇರಿಕೊಂಡಿದ್ದ ಕೂಟಕೃತಿಗಳನ್ನು ಕೈಬಿಟ್ಟುದು. ಅಂದರೆ ಕೂಟವಚನಗಳ ಮಿಶ್ರಣವನ್ನು ತಕ್ಕ ಪ್ರಮಾಣದಲ್ಲಿ ತಡೆಗಟ್ಟಿದುದು.

ವಚನ ಪಾಠಮಿಶ್ರಣ:

ಡಾ|| ಆರ್. ಸಿ. ಹಿರೇಮಠರು ಯು.ಜಿ.ಸಿ. ನೆರವಿನಿಂದ "ಸಮಗ್ರ ವಚನಸಾಹಿತ್ಯ ಪರಿಷ್ಕರಣ–ಪ್ರಕಟನ ಯೋಜನೆ"ಯನ್ನು ಕೈಗೆತ್ತಿಕೊಂಡರು. ವ್ಯಾಸಭಾರತದ ಪರಿಷ್ಕರಣಕ್ಕೆ ಡಾ|| ಸುಕ್ತನಕರ್ ಅವರು ೭೦ ಹಸ್ತಪ್ರತಿ ಬಳಸಿದುದನ್ನು ಮಾದರಿಯಾಗಿಟ್ಟುಕೊಂಡು, ಹೆಚ್ಚು ಹಸ್ತಪ್ರತಿಗಳನ್ನು ಬಳಸಿದರೆ ಗ್ರಂಥಸಂಪಾದನೆ ಹೆಚ್ಚು ಶುದ್ಧವಾಗುವುದೆಂಬ ಸಾಮಾನ್ಯಸೂತ್ರವನ್ನು ಅವರು ನಂಬಿದರು.

ಆದರೆ ಮಾರ್ಗಸಾಹಿತ್ಯದ ಸಂಪಾದನೆಯಲ್ಲಿ ಹೆಚ್ಚು ಹಸ್ತಪ್ರತಿ ಬಳಸಿದರೆ ಪರಿಷ್ಕರಣ ಹೆಚ್ಚು ಶುದ್ಧವಾಗಬಹುದಿದ್ದು, ದೇಶೀಸಾಹಿತ್ಯ ಸಂಪಾದನೆಯಲ್ಲಿ ಹಸ್ತಪ್ರತಿ ಹೆಚ್ಚು ಬಳಸಿದಷ್ಟೂ ಪರಿಷ್ಕರಣ ಹೆಚ್ಚು ಅಶುದ್ಧವಾಗುತ್ತದೆ. ಅಂದರೆ ಎಲ್ಲ ಹಸ್ತಪ್ರತಿಗಳಿಂದ ತಮಗೆ ಸರಿಯೆನಿಸುವ ಒಂದೊಂದು ಶಬ್ದ, ವಾಕ್ಯ ಆರಿಸಿಕೊಂಡು ರೂಪಿಸಿದ ಪಠ್ಯ ಮಿಶ್ರಪಾಠವೆನಿಸುವ ಸಾಧ್ಯತೆಯೇ ಅಧಿಕ. ಆದುದರಿಂದ ಇವರ ವಚನಸಂಪಾಧನೆ ಇವರಿಗೆ ತಿಳಿಯದೆಯೇ ಮಿಶ್ರಪಾಠಕ್ಕೆ ಗುರಿಯಾಯಿತು. ಚೆನ್ನಬಸವಣ್ಣನವರ ವಚನಕೃತಿಯನ್ನೇ ಗಮನಿಸಿ ಹೇಳುವುದಾದರೆ, ಈ ಕೃತಿಪರಿಷ್ಕರಣಕ್ಕೆ ಇವರು ಚೆನ್ನಬಸವಣ್ಣನವರ ಷಟ್ಸ್ಥಲಕಟ್ಟು ೧೫, ಸಂಕಲಿತ ವಚನಕಟ್ಟು ೫೧, ಮುದ್ರಿತ ಗ್ರಂಥ ೧೪ ಹೀಗೆ ಒಟ್ಟು ೭೦ ಆಕರಗಳನ್ನು ಬಳಸಿದರು. ಮೊದಲನೆಯದಾಗಿ ೭೦ರಷ್ಟು ಆಕರ ಬಳಸಿದುದು ತಪ್ಪು. ಎರಡನೆಯದಾಗಿ ಷಟ್ಸ್ಥಲಕಟ್ಟು, ಸಂಕಲಿತಕಟ್ಟು, ಮುದ್ರಿತಪ್ರತಿಯೆಂಬ ಮೂರು ಬಗೆಯ ಆಕರ ಬಳಸಿದುದು ಇನ್ನೊಂದು ತಪ್ಪು. ಈ ವಿಧಾನದಿಂದಾಗಿ ಮೂಲಪಾಠ ಮರೆಯಾಗಿ ಇವರ ಎಲ್ಲ ವಚನಕೃತಿ ಸಂಪಾದನೆಗಳು ಮಿಶ್ರಪಾಠದೋಷಕ್ಕೆ ಗುರಿಯಾದವು. ಉದಾ:

ಹರ ತನ್ನ ರೂಪವ ತೋರಬೇಕೆಂದು
ಶ್ರೀಗುರುರೂಪಾಗಿ ಮರ್ತ್ಯಕ್ಕೆ ಬಂದು,
ಮನಸ್ಥಲಕ್ಕೆ ಮಂತ್ರವಾದ, ತನುಸ್ಥಲಕ್ಕೆ ಪ್ರಸಾದವಾದ,
ಕರಸ್ಥಲಕ್ಕೆ ಲಿಂಗವಾದ, ಪ್ರಾಣಸ್ಥಲಕ್ಕೆ ಜಂಗಮವಾದ;
ಇಂತೀ ಚತುರ್ವಿಧ ಸ್ಥಲದಲ್ಲಿ ಸಾಹಿತ್ಯವಾದನಯ್ಯಾ,
ಕೂಡಲಚನ್ನಸಂಗಯ್ಯನಲ್ಲಿ ಬಸವಣ್ಣನು.

ಪಾಠಾಂತರ: ೧-೩ × (ಟ). ೨-೩ × (ವಸಾ ೨, S, ಚೆಸಾ, ಕ್ಷ, ಅಂ). ೪-೫ ಲಿಕ್ಕೆ (ಚೆಸಾ, ಕ್ಷ, ಅಂ). ೬-೯ ವಾದ (ಚೆಸಾ, ಕ್ಷ, ಅಂ). ೭-೮ ಪವಾ (ಉ); ಪನಾ (ಟ). ೯-೧೦ × (ಉ, ಚೆಸಾ, ವಸಾ ೨ ಟ). ೧೦-೧೧ ಆ ಗುರುವೇ (ಚೆಸಾ). ೧೨-೧೩ × (ಕ್ಷ, ಅಂ). ೧೪-೧೮ × (ಕ್ಷ, ಅಂ, ಚೆಸಾ). ೧೪-೧೫ ತ್ರಿವಿಧ (ಉ) , ೧೫-೧೬ × (ವಸಾ ೨, S ಚೆಸಾ, ಟ, M, ಕ್ಷ, ಅಂ). ೧೬-೧೭ ಸ್ವಾಯತ (S, M), ೧೮-೧೯ × (ವಸಾ, ೨, S, ಚೆಸಾ, ಟ, M, ಕ್ಷ, ಅಂ). ೧೯+ನಮ್ಮ (ಕ್ಷ, ಅಂ). ೨೦-೨೧ ನೊಬ್ಬನೇ (ಚೆಸಾ, ಟ); ಸಮಯೋಗಿ ಸಿದ್ಧರಾಮಯ್ಯ ದೇವರು ಒಬ್ಬರೇ ತಾವಾದರು (ಚೆಸಾ, ಕ್ಷ, ಅಂ).

ಆರು ಚರಣಗಳ ಒಂದು ಸಣ್ಣ ವಚನದ ಮೈತುಂಬ ೨೧ ಪಾಠಾಂತರಗಳು ಇಲ್ಲಿ ಮೇಳವಿಸಿದುದು, ಹಲವು ತುಂಡುಗಳನ್ನು ಜೋಡಿಸಿದ ವಸ್ತ್ರದಂತೆ ಕಾಣುತ್ತದೆ. ಟ, ವಸಾ೨, S, ಚೆಸಾ, ಕ್ಷ, ಅಂ, ಉ, M –ಇಷ್ಟು ಪ್ರತಿಗಳ ಒತ್ತಡದಲ್ಲಿ ಈ ವಚನ ತುಂಬ ನಲುಗಿಹೋಗಿದೆ. ಇದೇ ಮಾದರಿಯನ್ನೇ ಡಾ॥ ಎಲ್. ಬಸವರಾಜು ಮೊದಲಾದವರು ಅನುಸರಿಸಿ ತಮ್ಮ ಸಂಪಾದನೆಗಳನ್ನು ಮಿಶ್ರಪಾಠಕ್ಕೆ ಗುರಿಪಡಿಸಿದರು.

ಸರಕಾರದ ಆವೃತ್ತಿಗಳು ಜನಪ್ರಿಯವೆಂಬ ಕಾರಣದಿಂದಾಗಿ ಬಹಳಷ್ಟು ಸಲ ಇವರ ಮತ್ತು ಇತರರ ಮುದ್ರಿತ ಪ್ರತಿ ಬಳಸಿಕೊಂಡ ಕಾರಣ, ಮಿಶ್ರಪಾಠ ಇವುಗಳಲ್ಲಿಯೂ ಇಳಿದು ಬಂದಿತು. ಹಳಕಟ್ಟಿಯವರಿಂದ ಘಟಿಸಿದ "ವಚನಮಿಶ್ರಣ" ದೋಷವನ್ನು ಬಹುಮಟ್ಟಿಗೆ ನಿವಾರಿಸಿಕೊಂಡ ಸರಕಾರದ ಆವೃತ್ತಿಗಳಿಗೆ, ಡಾ॥ ಆರ್. ಸಿ. ಹಿರೇಮಠ, ಎಲ್. ಬಸವರಾಜು ಮೊದಲಾದವರಿಂದ ಘಟಿಸಿದ "ಮಿಶ್ರಪಾಠದೋಷ" ನಿವಾರಣೆ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲವೆಂದೇ ಹೇಳಬೇಕು. ಇದು ಸಾಧ್ಯವಾಗಬೇಕಾದರೆ ಮುಂದೆ ಈ ರೀತಿ ಬೃಹತ್ ಯೋಜನೆ ಹಮ್ಮಿಕೊಳ್ಳಬೇಕಾಗುತ್ತದೆ.

೧. ಅಗತ್ಯವಿರುವಷ್ಟು ಹಸ್ತಪ್ರತಿಗಳನ್ನು ಸಂಗ್ರಹಿಸಬೇಕು.

೨. ಈ ಸಂಗ್ರಹವನ್ನು ಭಾಗ-೧ ಷಟ್ಸ್ಥಲವಚನ ಕಟ್ಟು, ಭಾಗ-೨ ಸಂಕಲಿತವಚನ ಕಟ್ಟು, ಭಾಗ- ೩ ಇತರ ಎಂದು ಒಟ್ಟು ಸಾಹಿತ್ಯವನ್ನು ೩ ಭಾಗಗಳಾಗಿ ವಿಂಗಡಿಸಬೇಕು.

೩. ಷಟ್ಸ್ಥಲವಚನಗಳ ಸಂಪಾದನೆಗೆ ಷಟ್ಸ್ಥಲವಚನ ಹಸ್ತಪ್ರತಿಗಳನ್ನು, ಸಂಕಲಿತ ವಚನಸಂಪಾದನೆಗೆ ಸಂಕಲಿತ ಹಸ್ತಪ್ರತಿಗಳನ್ನು ಬಳಸಬೇಕು. ಅಂದರೆ ಏಕೋತ್ತರ ಶತಸ್ಥಲಕೃತಿಗಳಿಗೆ ಏಕೋತ್ತರ ಶತಸ್ಥಲ ಕಟ್ಟು, ಶೂನ್ಯಸಂಪಾದನೆ ಕೃತಿಗಳಿಗೆ ಶೂನ್ಯ ಸಂಪಾದನೆ ಕಟ್ಟು ಬಳಸಬೇಕು.

೪. ಕಾಲದೃಷ್ಟಿಯಿಂದ ಪ್ರಾಚೀನ, ಪಾಠದೃಷ್ಟಿಯಿಂದ ಪ್ರಾಮಾಣಿಕ, ರೂಪದೃಷ್ಟಿ ಯಿಂದ ಪರಿಪೂರ್ಣವಾಗಿರುವ ಒಂದು ಪ್ರತಿಯನ್ನು ಆಧಾರವಾಗಿಟ್ಟುಕೊಂಡು, ಭಾಷಾದೋಷಗಳನ್ನು ಸ್ವತಂತ್ರವಾಗಿಯೇ ಸರಿಪಡಿಸಿ, ಅನಿವಾರ್ಯವೆನಿಸಿದಲ್ಲಿ ಬೇರೆ ಒಂದೋ ಎರಡೋ ಉತ್ತಮ ಹಸ್ತಪ್ರತಿಗಳ ನೆರವನ್ನು ಪಡೆಯಬೇಕು.

ಇದು ವಚನಸಾಹಿತ್ಯ ಸಂಪಾದನೆಯ ಸರಿಯಾದ ವಿಧಾನವೆಂದು ೧೯೭೮ರಷ್ಟು ಪೂರ್ವದಲ್ಲಿಯೇ ನಾನು "ಬಸವಣ್ಣನವರ ಟೀಕಿನ ವಚನಗಳು" ಕೃತಿಯ ಪ್ರಸ್ತಾವನೆಯಲ್ಲಿ ಹೇಳಿದ್ದೇನೆ. ಈ ಕ್ರಮವನ್ನು ಅನುಸರಿಸಿ ಸಮಗ್ರ ವಚನಸಾಹಿತ್ಯವನ್ನು ತಕ್ಕ ಮಟ್ಟಿಗಾದರೂ ಮೂಲ(ಶುದ್ಧ)ರೂಪದಲ್ಲಿ ಪ್ರಕಟಿಸುವ ಕೆಲಸ ನಡೆಯಬೇಕಾಗಿದೆ. ಇದು ಹಲವಾರು ಜನ ಸಹಾಯಕ ಸಂಶೋಧಕರ, ಸಂಪಾದನ ವಿದ್ವಾಂಸರ, ವಚನಸಾಹಿತ್ಯಾಭ್ಯಾಸಿಗಳ ಸಾಮೂಹಿಕ ಪ್ರಯತ್ನದಿಂದ ಮಾತ್ರ ಸಾಧ್ಯ. ಇಂಥ ಒಂದು ದೊಡ್ಡಯೋಜನೆಯನ್ನು ಆರಂಭಿಸಿ "ಜನಪ್ರಿಯ ಆವೃತ್ತಿ"ಗೆ ಬದಲು "ವಿದ್ವಜ್ಜನಪ್ರಿಯ" ಆವೃತ್ತಿಗಳನ್ನು ಪ್ರಕಟಿಸುವುದು ಅವಶ್ಯವಿದೆ. ಆಗ ಪ್ರತಿಯೊಂದು ವಚನದ ಅಡಿಯಲ್ಲಿ ಅದರ ಪಾಠಾಂತರಗಳನ್ನಲ್ಲದೆ, ಬಳಸಿದ ಪ್ರತಿಗಳ ಹೆಸರನ್ನು ಸೂಚಿಸಿದಲ್ಲಿ, ಆ ವಚನದ ಪ್ರಾಮಾಣಿಕತೆ-ಅಪ್ರಾಮಾಣಿಕತೆ ಗಮನಿಸಲು ಅನುಕೂಲವಾಗುತ್ತದೆ.

■■

ಆಕರ : ಮಾರ್ಗ ಸಂಪುಟ-೪

೩೩

ಕೆಲವು ವಚನಕಾರರು-ವಚನ ಮುದ್ರಿಕೆಗಳು

ಶರಣರ ವಚನಗಳ ಶೋಧ-ವಿಮರ್ಶೆ ವಿಷಯವಾಗಿ ನಡೆದಿರುವಷ್ಟು ಅಭ್ಯಾಸ, ಚರಿತ್ರೆಯ ವಿಷಯವಾಗಿ ನಡೆದಿಲ್ಲ. ಪುರಾಣಾದಿಗಳಲ್ಲಿ ಬರುವ ವಿಷಯ ಬಹಳಷ್ಟು ಸಲ ಅತ್ಯುಕ್ತಿ, ಕಲ್ಪನೆಗಳಿಂದ ಕೂಡಿದೆ. ಶಾಸನಾದಿಗಳಲ್ಲಿ ಅವರ ಉಲ್ಲೇಖ ಕಡಿಮೆ. ಬಹುಮುಖ್ಯ ವಿಷಯವೆಂದರೆ ಅನೇಕ ಸಲ ಶರಣರ ಹೆಸರಿನ ಹಿಂದೆ ಅವರ ಗ್ರಾಮದ ಹೆಸರೂ ಸೇರಿಕೊಂಡಿದ್ದು (ಉದಾ: ಕೆಂಭಾವಿ ಭೋಗಣ್ಣ), ಈ ಗ್ರಾಮಗಳ ವ್ಯವಸ್ಥಿತ ಕ್ಷೇತ್ರಕಾರ್ಯ ನಡೆದಿಲ್ಲ. ಒಂದು ವೇಳೆ ನಡೆದುದೇ ಆದರೆ ಕೊನೆಯ ಪಕ್ಷ ಶರಣರ ಹೆಸರು-ಮುದ್ರಿಕೆ ಇತ್ಯಾದಿ ಸಮಸ್ಯೆಗಳಿಗೆ ಪರಿಹಾರ ಸಿಗಬಹುದಾಗಿದೆ. ಇಂಥ ಸಂದರ್ಭದಲ್ಲಿ ಕೆಲವರ ಹೆಸರು ಮುದ್ರಿಕೆ ವಿಚಾರವಾಗಿ ಇಲ್ಲಿ ಚರ್ಚಿಸಬಹುದು.

ಸಂಗಮೇಶ್ವರದ ಅಪ್ಪಣ್ಣ:

ವಚನಕಾರರಲ್ಲಿ ಸಂಗಮೇಶ್ವರ ಅಪ್ಪಣ್ಣ ಮತ್ತು ಹಡಪದ ಅಪ್ಪಣ್ಣ ಎಂಬ ಎರಡು ಹೆಸರುಗಳು ಸಿಗುತ್ತವೆ. ಕೆಲವೊಮ್ಮೆ ಇಬ್ಬರ ಹೆಸರುಗಳಲ್ಲಿಯೂ "ಬಸವಪ್ರಿಯ ಕೂಡಲ ಸಂಗಮದೇವಾ" ಮುದ್ರಿಕೆಯ ವಚನ ಸಿಗುವುದರಿಂದ ಇದು ಇಬ್ಬರೂ ಒಬ್ಬನೇ ಇರಬಹುದೇ? ಎಂಬ ಸಂದೇಹವನ್ನು ಹುಟ್ಟಿಸುತ್ತದೆ. ಇದು ನಿಜವಿದ್ದುದೇ ಆದರೆ "ಹಡಪ"ವೆಂಬುದು ಇವನ ವೃತ್ತಿಯಾಗಿದೆ, ಸಂಗಮೇಶ್ವರವೆಂಬುದು ಇವನ ಗ್ರಾಮವಾಗಿದೆ-ಎಂದು ಹೇಳಲು ಮನಸ್ಸಾಗುತ್ತದೆ. ಬಸವಣ್ಣನು ಲಿಂಗೈಕ್ಯಪ್ರಸಂಗದಲ್ಲಿ ನೀಲಾಂಬಿಕೆಯನ್ನು ಕೂಡಲ ಸಂಗಮಕ್ಕೆ ಕರೆದುಕೊಂಡು ಬರಲು ಹಡಪದ ಅಪ್ಪಣ್ಣನಿಗೆ ತಿಳಿಸಿದುದು ಸರ್ವಶ್ರುತ. ಹಡಪದ ಅಪ್ಪಣ್ಣನಿಗೇ ಹೇಳಲು ಕಾರಣ, ಇವನು ಮೂಲತಃ ಕೂಡಲಸಂಗಮ ಗ್ರಾಮದವನಾಗಿರಬಹುದೇ? ಎಂಬ ಅನುಮಾನವೂ ಬರುತ್ತದೆ. ಈ ಕೂಡಲ ಸಂಗಮಕ್ಕೆ ಸಂಗಮೇಶ್ವರ ಎಂಬುದು ಪರ್ಯಾಯನಾಮವಾಗಿದ್ದರೆ, ಇಬ್ಬರೂ ಒಬ್ಬನೇ ಎಂಬುದು ಇನ್ನೂ ಗಟ್ಟಿಯಾಗುತ್ತದೆ. ಆದರೆ ಒಬ್ಬನ ವಚನ ಸಂಸ್ಕೃತ ಉದ್ಧರಣೆಗಳಿಂದ ತುಂಬಿವೆ, ಇನ್ನೊಬ್ಬನ ವಚನ ಹೆಚ್ಚು ತಾತ್ವಿಕತೆಯಿಂದ ಕೂಡಿವೆ. ಹೀಗಾಗಿ ಇವರಿಬ್ಬರೂ ಭಿನ್ನವೆಂದೇ ಖಚಿತವಾಗಿ ಹೇಳಬಹುದು. ಬಹುಶಃ ಇಬ್ಬರೂ ಒಂದೇ ಊರಿನವರಿದ್ದು ಒಬ್ಬನು ತನ್ನ ಗ್ರಾಮವಾದ ಸಂಗಮೇಶ್ವರ (ಕೂಡಲ ಸಂಗಮ)ದ ಹೆಸರಿನಿಂದ, ಇನ್ನೊಬ್ಬನು ತನ್ನ ಹಡಪ ವೃತ್ತಿ ಹೆಸರಿನಿಂದ ಕರೆದುಕೊಳ್ಳುತ್ತಿರಬಹುದು. ಹಾಗಾದರೆ ಇಂದಿನ ಕೂಡಲ ಸಂಗಮಕ್ಕೆ ಸಂಗಮೇಶ್ವರ ಎಂಬುದು

ಪರ್ಯಾಯ ನಾಮವಾಗಿದ್ದಿತೇ? ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಸಮಾಧಾನ ಕನ್ನಡ ಕಾವ್ಯಗಳಲ್ಲಿ ಹೀಗಿದೆ.

ಈ ಗ್ರಾಮದ ಒಂದು ಹೆಸರು ಕಪ್ಪಡಿ. "ಕಪ್ಪಡಿ ಸಂಗಮೇಶ್ವರದಲ್ಲಿ ಮದ್ದುಗುರು ಸಂಗಮೇಶ್ವರವಿದ್ದಹನು" (ಬ. ಪು. ೪-೪೮), "ಧರೆಗೆ ಕಪ್ಪಡಿ ಸಂಗಮೇಶ್ವರ ಪುರವೆಸೆವುದು" (ಬ. ಪು. ೪-೫೬) "ಇಹೆನು ಕಪ್ಪಡಿ ಸಂಗಮೇಶ್ವರದಲ್ಲಿ" (ಬ. ಪು. ೩-೨೮). -ಡಿ ಕೊನೆಯುಳ್ಳ ಊರುಗಳು ಕರ್ನಾಟಕದಲ್ಲಿ ಅನೇಕ ಸಂಖ್ಯೆಯಲ್ಲಿವೆ. ಕಪ್ಪಡಿ ನೆರೆಯಲ್ಲಿಯೇ ಕರಡಿ ಹೆಸರಿನ ಗ್ರಾಮವಿರುವುದನ್ನು ನೆನೆಯಬಹುದು. -ಡಿ ಯಾವುದರ ಸವೆದ ರೂಪ ಎಂಬುದು ಈಗ ಹೇಳಲು ಸಾಧ್ಯವಿಲ್ಲ. ಪೂರ್ವದ ಶಬ್ದಕ್ಕೆ ಅರ್ಥ ಸ್ಪಷ್ಟವಿಲ್ಲ. ಕಪ್ಪೆ ಎಂಬ ಸನ್ಯಾಸಿವರ್ಗವಿರುವ ಸಾಧ್ಯತೆಯಿದೆಯೆಂದು ನಾನು "ಕಪ್ಪೆ ಅರಭಟ್ಟ" ಲೇಖನದಲ್ಲಿ ಚರ್ಚಿಸಿದ್ದೇನೆ. ಅದೆಲ್ಲ ಇಲ್ಲಿ ಅಪ್ರಸ್ತುತ.

ಕಪ್ಪಡಿಯಲ್ಲದೆ ಇದಕ್ಕೆ "ಕೂಡಲ" ಎಂಬ ಹೆಸರೂ ಬಳಕೆಯಲ್ಲಿದ್ದಿತು. ಇಲ್ಲಿ ಎರಡು ನದಿಗಳು ಕೂಡಿರುವುದರಿಂದ ಈ ಹೆಸರು. "ಕೂಡಲಿಗೆ ಸಸಿನೆ ತಾನೆಯ್ದಿದನು"(ಬ. ಪು. ೬೦-೮).

ಹೀಗೆ ಕಪ್ಪಡಿ, ಕೂಡಲಿ(ಲ)ಗಳಲ್ಲದೆ ಸಂಗಮೇಶ್ವರ ಹೆಸರೂ ಈ ಗ್ರಾಮಕ್ಕೆ ರೂಢಿಯಲ್ಲಿದ್ದಿತು. ಉದಾ: "ಸಂಗಮೇಶ್ವದಿಂದೆ ಬಸವನು ಬಂದು ಹೊಕ್ಕನು ಬಿಜ್ಜಳನ ಪುರವ" (೫-ಸೂಚನಾ ಪದ್ಯ), "ಸಂಗಮೇಶ್ವರಪುರಕೆ ಬಸವಂ ನಡೆವುತಿರಲಾಗಿ" (ಬ. ಪು. ೬೦-೧೦). "ಬಳಿಕ ಬಸವಂ ಸಂಗಮೇಶ್ವರದೊಳಿರುತಿರಲು" (ಶಿ. ಚಿಂ. ೩೦-೫೫), "ಹರಿದು ಸಂಗಮೇಶ್ವರಕೆ ಬರುತಿರ್ಪ ಬಸವಂಗೆ" (ಶಿ. ಚಿಂ. ೩೦-೫೨).

ಕೆಲವೊಮ್ಮೆ ಕೂಡಲ ಮತ್ತು ಸಂಗಮೇಶ್ವರ ಎರಡೂ ಸೇರಿದ ಪ್ರಯೋಗಗಳೂ ಕಂಡುಬರುತ್ತವೆ. ಉದಾ: "ಕೂಡಲ ಸಂಗಮೇಶ್ವರದಿಂದವಾ ಶ್ರೀಗಿರಿಗೆ ಗಮನಿಸಿದ" (ಬ. ಪು. ೬೦-೭೩).

ಹೀಗೆ ಕೂಡಲಸಂಗಮಕ್ಕೆ ಸಂಗಮೇಶ್ವರ ಎಂಬ ಪರ್ಯಾಯನಾಮವಿರುವುದನ್ನು ಗಮನಿಸಿದರೆ, ಸಂಗಮೇಶ್ವರದ ಅಪ್ಪಣ್ಣನು ಇದೇ ಗ್ರಾಮದವನಾಗಿರಬಹುದೆನಿಸುತ್ತದೆ. ಈ ಕಾರಣದಿಂದಾಗಿ ತನ್ನ ಮುದ್ರಿಕೆಯಲ್ಲಿ ಬಸವಣ್ಣನ ಹೆಸರನ್ನೂ ಕೂಡಲಸಂಗಮ ಹೆಸರನ್ನೂ ಇವನು ಬಳಸಿಕೊಂಡಂತಿದೆ.

ತೆಲುಗೇಶ ಮಸಣಯ್ಯ:

೧೨ನೆಯ ಶತಮಾನದ ಶರಣರಲ್ಲಿ ತೆಲುಗು ಜೊಮ್ಮಯ್ಯ, ತೆಲುಗೇಶ ಮಸಣಯ್ಯ ಎಂಬ ಎರಡು ಹೆಸರುಗಳು ಕಂಡುಬರುತ್ತವೆ. ತೆಲುಗು ಜೊಮ್ಮಯ್ಯ ಹೆಸರಿನ ಆರಂಭದ "ತೆಲುಗು" ಎಂಬುದು ಇವನು ಮೂಲತ: ತೆಲುಗುನಾಡಿನವನೆಂಬುದನ್ನು ಸೂಚಿಸುತ್ತಿರಬಹುದು. ಇವನು ವಚನ ಬರೆದಂತಿಲ್ಲ. ಬರೆದಿದ್ದರೆ ಇವನ ಮುದ್ರಿಕೆ "ಭೀಮನಾಥ" ಇರಬಹುದು, ಅದಿರಲಿ.

ತೆಲುಗೇಶ ಮಸಣಯ್ಯನ ಹೆಸರಿನಲ್ಲಿ ತೆಲುಗೇಶ ಶಂಭು, ತೆಲುಗೇಶ-ಮುದ್ರಿಕೆಗಳಲ್ಲಿ ೭ ವಚನಗಳು ಸಿಗುತ್ತವೆ. ಮೇಲು ನೋಟಕ್ಕೆ ಶಂಭು ಎಂಬ ವಿಶೇಷಣದಿಂದಲೇ ತೆಲುಗೇಶವೆಂಬುದು ದೇವತೆಯ ಹೆಸರೆಂದು ಸ್ಪಷ್ಟವಾಗುತ್ತದೆ. ಹಾಗಿದ್ದರೆ ತೆಲುಗೇಶಕ್ಕೆ ಅರ್ಥವೇನು? ಬಹುಶಃ ಈ

ವರೆಗೆ ಈ ಹೆಸರನ್ನು ತೆಲುಗುನಾಡಿನೊಂದಿಗೆ ಪರಿಭಾವಿಸುತ್ತ ಬಂದಂತಿದೆ. ಆದರೆ ಒಂದು ನಾಡಿನ ಹೆಸರಿನಲ್ಲಿ ದೇವತೆ ಇರುವುದು ಒಂದಿಷ್ಟು ಅಸಂಭವ. ಆದುದರಿಂದ ಬೇರೆ ಅರ್ಥ ಹೇಳಲು ಮನಸ್ಸಾಗುತ್ತದೆ.

ಪ್ರಾಚೀನ ಕರ್ನಾಟಕದಲ್ಲಿ ಗವರೆ ಐನೂರ್ವರು, ಉಗುರು ಮುನ್ನೂರ್ವರು ಇತ್ಯಾದಿ ವೃತ್ತಿಸಂಘಗಳು ಅಸ್ತಿತ್ವದಲ್ಲಿದ್ದವು. ಇವುಗಳ ಸಾಲಿನಲ್ಲಿ ತೆಲ್ಲಿಗರ್ಯೆವತ್ತು ವೃತ್ತಿಸಂಘ ಮುಖ್ಯವಾಗಿತ್ತು. ಎಣ್ಣೆ ಉತ್ಪಾದಕರ ಸಂಘವಿದು. ವೃತ್ತಿಸಂಘದವರು ತಮ್ಮ ಸಂಘದ ಹೆಸರಿನಲ್ಲಿ ಗವರೇಶ್ವರ, ಉಗುರೇಶ್ವರ ಇತ್ಯಾದಿ ದೇವರನ್ನು ಸ್ಥಾಪಿಸಿ, ದೇಗುಲ ಕಟ್ಟಿಸುತ್ತಿದ್ದರು. ಈ ರೀತಿ ತೆಲ್ಲಿಗರು ಸ್ಥಾಪಿಸಿದ ದೈವತ ತೆಲ್ಲಿಗೇಶ್ವರ. ಕರ್ನಾಟಕದ ನೂರಾರು ಊರುಗಳ ಶಾಸನಗಳಲ್ಲಿ ಇಂಥ ದೇವರ ಉಲ್ಲೇಖ ಕಂಡುಬರುತ್ತದೆ. ಯಾವುದೋ ಊರಿನ ಇಂಥ ದೇವತೆಯ ಹೆಸರನ್ನು ಮುದ್ರಿಕೆಯಾಗಿಟ್ಟುಕೊಂಡು ಬರೆದ ವಚನಗಳಿವು. ತೆಲುಗೇಶ ಮಸಣಯ್ಯ ಎಂಬ ಹೆಸರೇ ಈ ಮಸಣಯ್ಯನು ಈ ತೆಲುಗೇಶ ದೇವರ ಭಕ್ತನೆಂದು ಸ್ಪಷ್ಟಪಡಿಸುತ್ತದೆ. ಆದರೆ ಇವನು ತೆಲ್ಲಿಗ (ಗಾಣಿಗ)ನೇ ಆಗಿರಬೇಕೆಂದೇನಿಲ್ಲ; ಒಬ್ಬ ಭಕ್ತನಾಗಿರಬಹುದು. ಈ ಮಸಣಯ್ಯನ ತೆಲ್ಲಿಗೇಶ್ವರ ದೈವತದ ಊರು ಯಾವುದು? ಶೋಧಿಸಬೇಕಾಗಿದೆ.

ಒಕ್ಕಲು ಮುದ್ದಯ್ಯ-ಜೋಳದಹಾಳು:

ವ್ಯಕ್ತಿನಾಮಗಳಿಗೆ ಅಂಟಿಕೊಳ್ಳುವ ವಾರ್ಗಿಕಗಳಲ್ಲಿ "-ಮುದ್ದ" ಎಂಬುದೂ ಒಂದು. ಶಾಸನ ಕಾವ್ಯಗಳಲ್ಲಿ ಕುಲಮುದ್ದ, ಶಿವಮುದ್ದ ಇತ್ಯಾದಿ ರೂಪಗಳು ಸಿಗುತ್ತವೆ. ಕೆಲವೊಮ್ಮೆ "ಮುದ್ದ" ಎನ್ನುವುದು ವ್ಯಕ್ತಿನಾಮದಲ್ಲಿ ನಿರ್ದಿಷ್ಟವಾಗಿಯೂ ಬಳಕೆಯಾಗುತ್ತಿರುವುದಕ್ಕೆ ವಚನಕಾರ "ಒಕ್ಕಲು ಮುದ್ದಯ್ಯ" ಹೆಸರು ಉದಾಹರಣೆಯಾಗಿದೆ. ಈ ಹೆಸರು ತರುವಾಯದ ಕಾಲದಲ್ಲಿ ಎಷ್ಟು ಪ್ರಸಿದ್ಧವಾಗಿದೆಯೆಂದರೆ, ಯಾವುದೇ ಒಕ್ಕಲಿಗ ಕಲ್ಪಿತ ವ್ಯಕ್ತಿಯನ್ನು ಸೂಚಿಸುವ ಪ್ರಸಂಗದಲ್ಲಿ "ಒಕ್ಕಲಿಗ ಮುದ್ದಣ್ಣ" ಎಂಬ ಪದ ಬಳಸಿದ ಹಲವು ಉದಾಹರಣೆಗಳು ಸಿಗುತ್ತವೆ.

ವಚನಕಾರ ಒಕ್ಕಲಿಗ ಮುದ್ದಯ್ಯನ ಮುದ್ರಿಕೆ "ಕಾಮಭೀಮ ಜೀವಧನದೊಡೆಯ". ಜೀವಧನವೆಂದರೆ ಆಕಳು. ಇಲ್ಲಿ ಮುದ್ರಿಕೆಯ ಅರ್ಥಸ್ಪಷ್ಟವಿದ್ದರೂ ಇದು "ಕಾ[ವ]ಭೀಮ ಜೀವಧನದೊಡೆಯ" ಇರಬಹುದೇ ಎನಿಸುತ್ತದೆ.

ಈತನ ಗ್ರಾಮ ಜೋಳದಹಾಳು. ಇದು ಜೋಳ ಬೆಳೆಯುವ ಪ್ರದೇಶದ ಗ್ರಾಮವಾಗಿರಬಹುದು. ಆದರೆ ಇಂದು ಜೋಳಬೆಳೆಯುವ ಪ್ರದೇಶದಲ್ಲಿ ಈ ಹೆಸರಿನ ಊರು ಸಿಗುವುದಿಲ್ಲ. ಜೋಳಬೆಳೆಯದ ಚಿಕ್ಕಮಗಳೂರು ಸಮೀಪ ಈ ಹೆಸರಿನ ಹಳ್ಳಿ ಇರುವುದು ಆಶ್ಚರ್ಯದ ಸಂಗತಿ. ಬಹುಶ: ಇದು ಯಾವನೋ ಒಬ್ಬ ಜೋಳವಾಳಿಯ ಸ್ಮಾರಕವಾಗಿರಬಹುದು. ಇಲ್ಲಿ ಒಂದು ವೀರಗಲ್ಲೂ ಇರುವುದು ಈ ಊಹೆಯನ್ನು ಸಮರ್ಥಿಸುತ್ತದೆ. ಪ್ರಾಚೀನಕಾಲದಲ್ಲಿ "ಉಪ್ಪಿನಋಣ" ಅರ್ಥದ ಜೋಳವಾಳಿ ಪದವನ್ನು ಸೈನಿಕರಿಗೆ ಬಳಸುತ್ತಿದ್ದರು. ಬಹುಶ: ಈ ನುಡಿಗಟ್ಟು ಜೋಳಬೆಳೆಯುವ ಉತ್ತರ ಕರ್ನಾಟಕದ ಸೃಷ್ಟಿ. ಮುಂದೆ ಜೋಳ ಬೆಳೆಯದ ಪ್ರದೇಶದಲ್ಲಿಯೂ ಈ ನುಡಿಗಟ್ಟು ಒಂದು ಪಾರಿಭಾಷಿಕದಂತೆ ಬಳಕೆಯಾದುದಕ್ಕೆ ದಕ್ಷಿಣ ಕರ್ನಾಟಕದ ಶಾಸನಗಳು ಸಾಕ್ಷಿಯಾಗಿವೆ. ಈ ರೀತಿ ಚಿಕ್ಕಮಗಳುರು ನೆರೆಯ ಗ್ರಾಮಕ್ಕೆ ಯುದ್ಧದಲ್ಲಿ ಮಡಿದ ಯೋಧನ (ಜೋಳವಾಳಿಯ) ಸ್ಮಾರಕವಾಗಿ

"ಜೋಳವಾಳಿ ಹಾಳು" ಎಂಬ ಹೆಸರು ಇಟ್ಟಿದ್ದು, ಮುಂದೆ ಅದು "ಜೋಳದ ಹಾಳು" ಎಂಬ ರೂಪಕ್ಕೆ ತಿರುಗಿರಬಹುದು.

ಈ ಊರಿನಲ್ಲಿ ಒಕ್ಕಲಿಗರು (ಗೌಡರು)ಅಧಿಕ ಸಂಖ್ಯೆಯಲ್ಲಿದ್ದಾರೆ. ಒಕ್ಕಲಿಗ ಮುದ್ದಣ್ಣ ಶರಣ ಈ ಗ್ರಾಮದವನಾಗಿರಬಹುದೇ? ಎಂಬ ಪ್ರಶ್ನೆ ಮನಸ್ಸಿನಲ್ಲಿ ಸುಳಿಯುತ್ತದೆ. ಇದು ನಿಜವಿದ್ದರೆ ಕಲ್ಯಾಣವೆಲ್ಲಿ? ಈ ಜೋಳದಹಾಳು ಎಲ್ಲಿ? ಎಂಬ ಪ್ರಶ್ನೆ ಅಡ್ಡಬರುತ್ತದೆ. ವಿದ್ವಾಂಸರು ಈ ಬಗ್ಗೆ ವಿಚಾರಿಸಬೇಕು.

ಕುಂಭೇಶ್ವರಲಿಂಗ:

ಹೊಡೆಹುಲ್ಲ ಬಂಕಣ್ಣನ ಮುದ್ರಿಕೆ "ಕುಂಭೇಶ್ವರಲಿಂಗದಲ್ಲಿ ಜಗನ್ನಾಥ ಸಾಕ್ಷಿಯಾಗಿ", ಕಾಟಕೂಟಯ್ಯಗಳ ಹೆಂಡತಿ ರೇಚವ್ವೆಯ ಮುದ್ರಿಕೆ "ಕುಂಭೇಶ್ವರ". ಮೇಲೆ ಹೇಳಿದ ವೃತ್ತಿಸಂಘಗಳಲ್ಲಿ ಕುಂಬಾರರದೂ ಒಂದು. ಇವರು ತಮ್ಮ ವೃತ್ತಿಸಂಘದ ಹೆಸರಿನಲ್ಲಿ "ಕುಂಭೇಶ್ವರ" ಲಿಂಗಸ್ಥಾಪಿಸಿದುದಕ್ಕೆ ಅನೇಕ ಉದಾಹರಣೆಗಳಿವೆ. ಇಲ್ಲಿ ಹೊಡೆಹುಲ್ಲ ಬಂಕಣ್ಣ ಮತ್ತು ರೇಚವ್ವೆ ಯಾವುದೋ ಊರಿನ ಇಂಥ ದೇವರ ಹೆಸರನ್ನು ಮುದ್ರಿಕೆಯಾಗಿಟ್ಟುಕೊಂಡಿದ್ದಾರೆ. ಇವರು ಬಹುಶಃ ಕುಂಬಾರ ವೃತ್ತಿಯವರಲ್ಲ. ತಮ್ಮ ಊರಿನಲ್ಲಿಯ ಈ ದೇವತೆಯ ಭಕ್ತರು– ಎಂದು ಮಾತ್ರ ಹೇಳಬಹುದು. ಈ ಕುಂಬಾರಸಂಘ, ಕುಂಭೇಶ್ವರ ದೇವರನ್ನು ಶಾಸನಗಳಲ್ಲಿ ಹುಡುಕಿ ಈ ಊರನ್ನು ಕಂಡುಹಿಡಿಯಬೇಕಾಗಿದೆ.

ಗವರೇಶ್ವರಲಿಂಗ:

ಗವರೇಶ್ವರ ಹೆಸರಿನ ದೇವಾಲಯಗಳು ಎರಡು ವೃತ್ತಿಗಳ ಹೆಸರಿನಲ್ಲಿ ಕಂಡುಬರುತ್ತವೆ. (೧)ಪ್ರಾಚೀನ ಕಾಲದಲ್ಲಿ ಗವರೆಗಳು, ಗಾತ್ರಿಗರು ಎಂಬ ವ್ಯಾಪಾರಿ ವೃತ್ತಿ ಸಂಘಗಳಿದ್ದವು. ಪ್ರಾಚೀನ ಈ ಗವರೆಗಳೆಂದರೆ ಇಂದು ಅಲ್ಲಲ್ಲಿ ಇರುವ ಲಿಂಗಾಯತ ಬಣಜಿಗ ಗೌರಿ, ಗೌರಿಶೆಟ್ಟಿ, ಕೋರಿ, ಕೋರಿಶೆಟ್ಟಿ ಮನೆತನಗಳು. ಇವರು ಎತ್ತಿನ (ಕವಲೆತ್ತು, ಗವಲೆತ್ತು>ಗವರೆಗಳ ಎತ್ತು)ಮೂಲಕ ವಸ್ತುಗಳನ್ನು ಸಾಗಾಣಿಕೆ ಮಾಡುವ ವ್ಯಾಪಾರಿಗಳು. ಈ ಸಂಘದವರು ಸ್ಥಾಪಿಸಿದುವೇ ಗವರೇಶ್ವರ ದೇವಾಲಯಗಳು. ಇಂಥ ನೂರಾರು ಗವರೇಶ್ವರ ದೇವಾಲಯಗಳು ಶಾಸನಗಳಲ್ಲಿ ದಾಖಲಾಗಿವೆ. ಕೆಲವು ಗ್ರಾಮಗಳಲ್ಲಿ ಇವು ಇಂದಿಗೂ ಸುಸ್ಥಿತಿಯಲ್ಲಿವೆ. ಇಂಥ ನೂರಾರು ಗವರೇಶ್ವರ ದೇವಾಲಯಗಳು ಶಾಸನಗಳಲ್ಲಿ ದಾಖಲಾಗಿವೆ. ಕೆಲವು ಗ್ರಾಮಗಳಲ್ಲಿ ಇವು ಇಂದಿಗೂ ಸುಸ್ಥಿತಿಯಲ್ಲಿವೆ. ಕೆಲವೆಡೆ ಇವುಗಳನ್ನು ಗೌರಿಗುಡಿಯೆಂದು ಕರೆದು ಶಿವನ ಮಡದಿ ಪಾರ್ವತಿಗೂ ಇದಕ್ಕೂ ಸಂಬಂಧ ಭ್ರಮಿಸಿದ್ದಾರೆ. ಉದಾ: ನಿಡಗುಂದಿ (ಬಾಗೇವಾಡಿ ತಾಲೂಕು).

೨. ಗವರೆ ಎಂದರೆ ಬಿದಿರಿನ ಕೆಲಸ ಮಾಡುವ ಮೇದ. ಈ ವೃತ್ತಿಸಂಘದವರು ಸ್ಥಾಪಿಸಿದ ದೇವರೇ ಗವರೇಶ್ವರ. ಕರ್ನಾಟಕದಲ್ಲಿ ಗವರೇಶ್ವರ ಹೆಸರಿನಿಂದ ಈ ಎರಡು ಬಗೆಯ ದೇವರು ಬೆಳೆದುಬಂದಿದ್ದರೂ, ಈ ಮುದ್ರಿಕೆ ಮಾತ್ರ ಬಿದಿರು ಕಾಯಕದ ಮೇದಾರ ಕೇತಯ್ಯನದಾಗಿದೆ. ಈ ಮೇದರ ಸಂಘ ಮತ್ತು ಗವರೇಶ್ವರ ಸೂಚನೆ ಹಿಡಿದು ಈ ಶರಣನ ದೇವರನ್ನು, ಈ ದೇವರನ್ನೊಳಗೊಂಡ ಗ್ರಾಮವನ್ನು ಶೋಧಿಸಬೇಕಾಗಿದೆ.

ಅರಿ ನಿಜಾತ್ಮ ರಾಮರಾಮನ:

ಮಾದರ ಚೆನ್ನಯ್ಯನ ಮುದ್ರಿಕೆ "ಕೈಯ್ಯುಳಿಗೂಂಟಕ್ಕೆಡೆಯಾಗಬೇಡ ಅರಿ ನಿಜಾತ್ಮ ರಾಮರಾಮನ". ಕೈಯ್ಯುಳಿ, ಗೂಂಟ–ಇವು ಮಾದಿಗರು ಬಳಸುವ ವಸ್ತುಗಳು. ಕೇವಲ ಈ ವಸ್ತುಗಳಿಗೆ ದಾಸನಾಗಬೇಡ, ನಿಜಾತ್ಮ ರಾಮ ರಾಮನನ್ನು ತಿಳಿದುಕೊಳ್ಳು–ಎಂದು ಇದರ ಅರ್ಥ. ಇಲ್ಲಿ ಅರಿನಿಜಾತ್ಮರಾಮ ಎಂದು ಹೇಳಿದ್ದರೆ ಸಾಕಾಗಿತ್ತು. ಹೀಗಾಗಿ ಇಲ್ಲಿಯ ರಾಮ ಶಬ್ದದ ದ್ವಿರುಕ್ತಿ ಸಂದೇಹ ಹುಟ್ಟಿಸುತ್ತದೆ. ಆದರೆ ನಿಜಸ್ಥಿತಿ ಇದಲ್ಲ. ಲಿಪಿಕಾರನ ಸ್ಖಾಲಿತ್ಯದಿಂದ ಇಲ್ಲಿ ಅಪಪಾಠ ಸಂಭವಿಸಿದೆ. ಮೂಲತ: ಇದರ ರೂಪ "ಅರಿ ನಿಜಾತ್ಮಾರಾಮ ರಾಮನ". ಆತ್ಮಾರಾಮದಲ್ಲಿರುವ ಅಂದರೆ ಆತ್ಮವೆಂಬ ಉದ್ಯಾನದಲ್ಲಿರುವ (ಆರಾಮ=ಉದ್ಯಾನ) ರಾಮನನ್ನು ಅರಿತುಕೊಳ್ಳು–ಎಂದು ಇದರ ಅರ್ಥ.

ಪುಣ್ಯಾರಣ್ಯದಹನ ಭೀಮೇಶ್ವರಲಿಂಗ:

ಇದು ಅರ್ಥವಾಗದ ಕಗ್ಗಂಟು. ವಿರೋಧಾಭಾಸದ ಬೆಡಗಿನ ಅರ್ಥವಿದೆಯೇ? ಬೇರೊಂದು ಅರ್ಥವಿದೆಯೇ? ಸ್ಪಷ್ಟವಾಗುವುದಿಲ್ಲ. ಪಾಠಾಂತರಗಳೂ ಇಲ್ಲ. ಡಾ॥ ಎಲ್. ಬಸವರಾಜು ಅವರು ಊಹಿಸಿರುವ ಪುಣ್ಯಾರಣ್ಯದ [ಘ]ನ ಭೀಮೇಶ್ವರಲಿಂಗ ಎಂಬುದು ಸರಿಯಾದ ಪಾಠವೆಂದು ತೋರುತ್ತದೆ.

ಹೀಗೆ ಅನೇಕ ಹೆಸರು ಮತ್ತು ಮುದ್ರಿಕೆಗಳ ಬಗ್ಗೆ ನಾವು ಅಭ್ಯಾಸ ಕೈಕೊಳ್ಳಬಹುದಾಗಿದೆ. ಅದು ಚಾರಿತ್ರಿಕ ತಿಳಿವಳಿಕೆಯನ್ನು ವಿಸ್ತರಿಸುತ್ತದೆ.

■■

ಆಕರ : ಮಾರ್ಗ ಸಂಪುಟ–೪

೩೪

ಪರಿಷ್ಕರಣ–ಪರಿಷ್ಕರಣದ ಪರಿಷ್ಕರಣ

ಪುಸ್ತಕಗಳು ನಡೆದು ಬಂದ ಇತಿಹಾಸದಲ್ಲಿ ಮುದ್ರಣಯಂತ್ರದ ಪ್ರವೇಶ ತುಂಬ ಮಹತ್ವದ ಘಟನೆ ಮತ್ತು ಘಟ್ಟ ಎನಿಸಿದೆ. ಇದರಿಂದಾಗಿ ಈ ಮೊದಲಿನಂತೆ ಹಸ್ತಪ್ರತಿಗಳ ಬದಲು ಯಂತ್ರಪ್ರತಿಗಳು ಹುಟ್ಟತೊಡಗಿ, ಪ್ರತಿಗಳ ಸಂಖ್ಯಾಪ್ರಮಾಣ ಮತ್ತು ಉತ್ಪಾದನೆಯ ವೇಗದೃಷ್ಟಿಯಿಂದ ಪುಸ್ತಕಲೋಕದ ಇತಿಹಾಸದಲ್ಲಿ ಬಹಳ ದೊಡ್ಡ ಬದಲಾವಣೆ ಸಂಭವಿಸಿತು.

ಮುದ್ರಣಯಂತ್ರದ ಆರಂಭಕಾಲದಲ್ಲಿ ಪ್ರಾಚೀನಕೃತಿಗಳನ್ನು ಸಾಮಾನ್ಯವಾಗಿ ಒಂದು ಹಸ್ತಪ್ರತಿಯನ್ನಾಧರಿಸಿ ಪರಿಶೋಧಿಸಿ ಪ್ರಕಟಿಸುವ ಕೆಲಸ ಅಸ್ತಿತ್ವಕ್ಕೆ ಬಂದಿತು. ಇದನ್ನು "ಪ್ರಕಟನ ಯುಗ"ವೆನ್ನಬಹುದು. ಬಳಿಕ ಅನೇಕ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಅವುಗಳಿಂದ ಒಂದು ಉತ್ತಮಪಾಠವನ್ನು ಸ್ವೀಕರಿಸಿ, ಮಿಕ್ಕ ಭಿನ್ನಪಾಠಗಳನ್ನು ಅಡಿಯಲ್ಲಿ ಕೊಡುವ ಪದ್ಧತಿ ರೂಢಿಗೆ ಬಂದಿತು. ಈ ಹೊತ್ತಿಗಾಗಲೇ ಕರ್ನಾಟಕದ ಬೇರೆ ಬೇರೆ ಕೇಂದ್ರಗಳಲ್ಲಿ ಒಂದು ಕೃತಿಯ ಎಲ್ಲ ಹಸ್ತಪ್ರತಿಗಳು ಸಂಗ್ರಹಿಸಲ್ಪಟ್ಟಿದ್ದ ಕಾರಣ, ಇವರೆಲ್ಲ ಈ ಅನುಕೂಲತೆಗಳನ್ನು ಬಳಸಿಕೊಂಡರು. ಇದನ್ನು "ಪರಿಷ್ಕರಣ ಯುಗ"ವೆನ್ನಬಹುದು.

ದುರ್ದೈವದ ಸಂಗತಿಯೆಂದರೆ, ಮಾರ್ಗಸಾಹಿತ್ಯ ಸಂಪಾದನೆಯ ವಿಧಿ ವಿಧಾನಗಳನ್ನು ದೇಶೀಸಾಹಿತ್ಯಕ್ಕೂ ಅನ್ವಯಿಸಿದ ಕಾರಣ, ಈ ಎರಡನೆಯ ಯುಗದವರು ಪೂರೈಸಿದ ದೇಶೀಕಾವ್ಯಗಳ ಸಂಪಾದನೆಯಲ್ಲಿ ದೊಡ್ಡ ದೋಷ ಸಂಭವಿಸಿತು. ಕರ್ನಾಟಕ ವಿಶ್ವವಿದ್ಯಾಲಯದ ವಚನಸಾಹಿತ್ಯ ಪ್ರಕಟನೆ, ಮೈಸೂರು ವಿಶ್ವವಿದ್ಯಾಲಯದ ದಾಸಸಾಹಿತ್ಯ ಪರಿಷ್ಕರಣ ಇದಕ್ಕೆ ದೊಡ್ಡ ನಿದರ್ಶನವೆನಿಸಿವೆ. ಮಾರ್ಗಸಾಹಿತ್ಯ ಸಂಪಾದನೆಗೆ ಹೆಚ್ಚು ಹಸ್ತಪ್ರತಿ ಬಳಸಿದಷ್ಟೂ ಸಂಪಾದನೆ ಹೆಚ್ಚು ಶುದ್ಧವಾಗುತ್ತದೆ. ದೇಶೀಸಾಹಿತ್ಯ ಸಂಪಾದನೆಗೆ ಹೆಚ್ಚು ಹಸ್ತಪ್ರತಿ ಬಳಸಿದಷ್ಟು ಸಂಪಾದನೆ ಹೆಚ್ಚು ಅಶುದ್ಧವಾಗುತ್ತದೆ. ಇದಕ್ಕೆ ಕಾರಣ ದೇಶೀ ಕಾವ್ಯಗಳಲ್ಲಿ ಪಾಠಾಂತರಗಳು ವಿಪರೀತ. ಈಗ ಒಂದೊಂದು ಹಸ್ತಪ್ರತಿಯಿಂದ ತಮತಮಗೆ ಸರಿ ಕಂಡ ಒಂದೊಂದು ಪಾಠವನ್ನು ಆಯ್ದುಕೊಂಡು, ಅಂತಿಮ ಪಠ್ಯನಿರ್ಣಯಿಸಿದರೆ ೧೦ ಪ್ರತಿಗಳನ್ನು ಬಳಸಿ, ತಮಗೆ ಸರಿಕಂಡ ೧೧ನೆಯ ಪ್ರತಿಯನ್ನು ಸಿದ್ಧಪಡಿಸಿದಂತಾಗುತ್ತದೆಯೇ ಹೊರತು, ನಿಜಕೃತಿಯನ್ನು ಪುನರ್‌ರಚಿಸಿದಂತಾಗುವುದಿಲ್ಲ. ಆದುದರಿಂದ ಇಲ್ಲಿ ಕಾಲದೃಷ್ಟಿಯಿಂದ ಪ್ರಾಚೀನ, ಪ್ರತಿದೃಷ್ಟಿಯಿಂದ ಪರಿಪೂರ್ಣ, ಭಾಷಾದೃಷ್ಟಿಯಿಂದ ಶುದ್ಧವಾಗಿರುವ ಒಂದೇ ಒಂದು ಹಸ್ತಪ್ರತಿಯನ್ನು

ಆಧಾರವಾಗಿಟ್ಟುಕೊಂಡು, ಅಲ್ಲಿ ಕಂಡುಬರುವ ಲಿಪಿಕಾರನ ದೋಷಗಳನ್ನು ನಿವಾರಿಸಿ, ಅಗತ್ಯವೆನಿಸಿದಲ್ಲಿ ಮಾತ್ರ ಒಂದೆರಡು ಬೇರೆ ಹಸ್ತಪ್ರತಿಗಳಿಂದ ಸೂಕ್ತ ಭಿನ್ನಪಾಠ ಸ್ವೀಕರಿಸಬೇಕು. ಇದರಿಂದ ಮಿಶ್ರಪಾಠವಾಗುವುದು ತಪ್ಪಿ, ಒಂದು ಪ್ರಾಚೀನ ಪ್ರತಿಯನ್ನಾದರೂ ಶುದ್ಧರೂಪದಲ್ಲಿ ಉಳಿಸಿಕೊಟ್ಟಂತಾಗುತ್ತದೆ. ಅಂದರೆ ಎಲ್ಲ ಪ್ರತಿಗಳಿಗೆ ಅಷ್ಟೇ ಮಹತ್ವಕೊಟ್ಟು "ಪಾಠ ಬೆರೆಸುವುದು" ಬೇರೆ, ಒಂದು ಉತ್ತಮ ಪ್ರತಿಗೆ ಮಹತ್ವಕೊಟ್ಟು ಅವಶ್ಯವೆನಿಸಿದಲ್ಲಿ ಮಾತ್ರ ಅವುಗಳಿಂದ "ನೆರವು ಪಡೆಯುವುದು" ಬೇರೆ. ಇನ್ನು ಮುಂದೆ ದೇಶೀ ಕೃತಿಗಳ ಸಂಪಾದನೆಗೆ ನಾವು ಈವರೆಗೆ ಹೇಳಿದ ಹೊಸ ವಿಧಾನವನ್ನು ಅನ್ವಯಿಸಬೇಕಾಗಿದೆ.

ಎರಡನೆಯದಾಗಿ ಇತ್ತೀಚೆ ಕನ್ನಡಭಾಷೆ, ಸಾಹಿತ್ಯ, ಸಂಸ್ಕೃತಿಗಳ ಅಭ್ಯಾಸ ವ್ಯಾಪಕವಾಗಿ ಜರುಗಿ, ಸಾಹಿತ್ಯಿಕ ಆಕರದೊಂದಿಗೆ ಪುರಾತತ್ವ ಆಕರ, ಜಾನಪದ ಆಕರಗಳು ಬೆಳಕಿಗೆ ಬಂದು, ಸಂಸ್ಕೃತಿಯ ಇನ್ನೊಂದು ಮಗ್ಗಲು ತೆರೆದುಕೊಂಡಿದೆ. ಇವೆಲ್ಲವುಗಳನ್ನಾಧರಿಸಿ ಬಹುಶಿಸ್ತೀಯ ಅಧ್ಯಯನ ಮುನ್ನಡೆದಿದೆ. ಇದರ ಬೆಳಕಿನಲ್ಲಿ ನೋಡುವವರಿಗೆ ಈ ವರೆಗಿನ ಸಂಪಾದನೆಗಳಲ್ಲಿ ಉಳಿದುಕೊಂಡಿರುವ ದೋಷಗಳು ಎದ್ದು ಕಾಣುತ್ತಲಿವೆ. ಇವುಗಳನ್ನು ನಿವಾರಿಸಬೇಕಾದರೆ ಸಂಪಾದಕ "ಶಾಬ್ದಿಕ ಸಂಪಾದನೆ"ಯ ನೆಲೆಯಿಂದ "ಸಾಂಸ್ಕೃತಿಕ ಸಂಪಾದನೆ"ಯ ನೆಲೆಗೆ ಸಾಗಬೇಕಾಗುತ್ತದೆ. ಶಾಬ್ದಿಕವಾಗಿ ಒಂದು ಪಾಠ, ಸಾಂಸ್ಕೃತಿಕವಾಗಿ ಒಂದು ಪಾಠ, ಎರಡೂ ಸರಿಯಿದ್ದರೆ ಶಾಬ್ದಿಕ ಪಾಠದಿಂದ ತೃಪ್ತನಾಗದೆ, ಸಾಂಸ್ಕೃತಿಕಪಾಠವನ್ನು ಒಪ್ಪಿಕೊಳ್ಳಬೇಕಾದ ಕ್ರಮವಿದು. ಸಾಂಸ್ಕೃತಿಕ ಅಭ್ಯಾಸಿ ಮಾತ್ರ ಈ ಕಾರ್ಯ ಮಾಡಬಲ್ಲ.

*****

ಪ್ರಾಚೀನಸಾಹಿತ್ಯದಲ್ಲಿ ಅಖಂಡಕೃತಿಗಳಂತೆ ರಗಳೆಯಂಥ ಖಂಡಕೃತಿಗಳೂ, ವಚನ-ಕೀರ್ತನೆಗಳಂತೆ ಬಿಡಿರಚನೆಗಳೂ ಹುಟ್ಟಿಕೊಂಡಿವೆ. ಪರಿಷ್ಕರಿಸಲ್ಪಟ್ಟ ಇವು ಸಣ್ಣ ಪುಟ್ಟ ಗಾತ್ರದ ಸಂಪುಟಗಳಾಗಿ ಬೆಳಕು ಕಂಡಿವೆ. ಇಂದು "ಸಮಗ್ರ ಸಂಪುಟ" ಪ್ರಕಟನೆಯ ಬಗೆಗೆ ವಿದ್ವಾಂಸರು ಹೆಚ್ಚು ಆಸಕ್ತಿ ತೋರುತ್ತಲಿದ್ದಾರೆ. ಇದರಿಂದ ಒಬ್ಬ ಕವಿಯ ಅಥವಾ ಒಂದು ವಿಷಯದ ಎಲ್ಲ ರಚನೆಗಳು ಒಂದೇ ಕಡೆಗೆ ಓದುಗರಿಗೆ ಲಭ್ಯವಾಗುತ್ತವೆ. ಆದುದರಿಂದ ಸಂಪಾದಕನಾದವನು ಮೇಲೆ ಹೇಳಿದ ಪರಿಷ್ಕರಣದ ಹೊಸವಿಧಾನ, ಜ್ಞಾನದ ಹೊಸ ಹೊಸ ಕ್ಷೇತ್ರಗಳ ತಿಳಿವಳಿಕೆ ಮತ್ತು ಸಮಗ್ರ ಕೃತಿಗಳ ಸಂಕಲನ-ಎಂಬ ಮೂರು ಹೊಣೆಗಳನ್ನು ಹೊರುವುದು ಇಂದಿನ ಅಗತ್ಯವಾಗಿದೆ. ಈ ಮೊದಲಿನ ಆವೃತ್ತಿಗಳು ಪೇಟೆಯಲ್ಲಿ ಲಭ್ಯವಿಲ್ಲದಿದ್ದರೆ ಈ ಕಾರ್ಯ ಇನ್ನೂ ಅಗತ್ಯವೆನಿಸುತ್ತದೆ.

ಇಂಥ ಸಂದರ್ಭದಲ್ಲಿ ಈ ಮೊದಲಿನ ಆವೃತ್ತಿಗಳನ್ನು ಕಣ್ಣುಮುಚ್ಚಿ ಮರುಮುದ್ರಣ ಮಾಡಿದರೆ ತಿಳಿದೂ ತಿಳಿದು ದೋಷಪೂರ್ಣಪಾಠಗಳನ್ನು ಓದುಗರಿಗೆ ಪೂರೈಸಿದಂತಾಗಿತ್ತದೆ. ಈಗ ಸಂಪಾದಕ ಎರಡು ದಾರಿಗಳನ್ನವಲಂಬಿಸಬೇಕಾಗುತ್ತದೆ. ಒಂದು: ಈ ಮೊದಲಿನವರು ಬಳಸಿದ ಹಸ್ತಪ್ರತಿಗಳನ್ನು ಬಿಟ್ಟು ಹೊಸಹಸ್ತಪ್ರತಿಗಳನ್ನು ದೊರಕಿಸಿಕೊಂಡು, ಹೊಸ ಯೋಗ್ಯಪಾಠಗಳನ್ನು ಯೋಜಿಸುವುದು. ಎರಡು: ಹೊಸ ಹಸ್ತಪ್ರತಿಗಳು ಸಿಗದ ಪಕ್ಷದಲ್ಲಿ ಈ ಮೊದಲಿನವರು ಬಳಸಿದ ಹಸ್ತಪ್ರತಿಗಳನ್ನೇ ಮತ್ತೆ ಬಳಸಿದರೆ, ಅದು ತೋರಿಕೆಯ ಪಾಂಡಿತ್ಯ,

ವ್ಯರ್ಥ ಪರಿಶ್ರಮವೆನಿಸುತ್ತದೆ. ಆದುದರಿಂದ ಇಂಥ ಸಂದರ್ಭದಲ್ಲಿ ಯಂತ್ರಪ್ರತಿಯನ್ನೇ ಒಂದು ಹಸ್ತಪ್ರತಿಯೆಂದು ಪರಿಗಣಿಸಿ, ಅದರ ಅಡಿಯಲ್ಲಿ ಸಂಗ್ರಹಗೊಂಡಿರುವ ಭಿನ್ನಪಾಠಗಳನ್ನೇ ಭಿನ್ನಹಸ್ತಪ್ರತಿಗಳೆಂದು ಭಾವಿಸಿ, ಸೂಕ್ತಪಾಠ ನಿರ್ಣಯ ಮಾಡುವುದನ್ನೇ "ಪರಿಷ್ಕರಣದ ಪರಿಷ್ಕರಣ"ವೆಂದು ಕರೆಯಬಹುದು. ಇದು ಹಸ್ತಾಕ್ಷರಪಠ್ಯದ ಪರಿಷ್ಕರಣವಲ್ಲ, ಮುದ್ರಾಕ್ಷರಪಠ್ಯದ ಪರಿಷ್ಕರಣ. ಈ ಪ್ರಸಂಗದಲ್ಲಿ ಅಡಿಯಲ್ಲಿಯ ಯೋಗ್ಯಪಾಠವನ್ನು ಮೇಲೆ ಸ್ವೀಕರಿಸಿ, ಮೇಲಿನ ಅಯೋಗ್ಯಪಾಠಗಳನ್ನು ಅಡಿಗೆ ತಳ್ಳುತ್ತ ಹೋಗಬೇಕಾಗುತ್ತದೆ. ಸಂಸ್ಥೆಗಳಲ್ಲಿ ಸಂಶೋಧನ ಸಹಾಯಕರು ಭಿನ್ನಪಾಠಗಳನ್ನು ಸಂಗ್ರಹಿಸುತ್ತಾರೆ. ಹೀಗೆ ಯಾರೋ ಸಂಗ್ರಹಿಸಿದ ಭಿನ್ನಪಾಠಗಳನ್ನವಲಂಬಿಸಿ ಸಂಪಾದಕರು ಪರಿಷ್ಕರಣಕಾರ್ಯವನ್ನು ಪೂರೈಸುತ್ತಾರೆ. ಇದೇ ರೀತಿ ಪರಿಷ್ಕರಣದ ಪರಿಷ್ಕರಣದಲ್ಲಿ ಇನ್ನೊಬ್ಬರು ಮುದ್ರಿಸಿದ ಭಿನ್ನಪಾಠಗಳನ್ನು ಅವಲಂಬಿಸಬೇಕಾಗುತ್ತದೆ.

ಮುಂದಿನ ದಿನಗಳಲ್ಲಿ ಸಂದರ್ಭವೊಂದು ಸೃಷ್ಟಿಯಾಗುತ್ತದೆ. ಅದು: ಒಂದು ಕೃತಿಗೆ ಸಂಬಂಧಿಸಿದ ಲಭ್ಯಹಸ್ತಪ್ರತಿಗಳು ಕಳೆದು ಹೋಗಬಹುದು. ಇಲ್ಲವೆ ಸಂಪೂರ್ಣ ನಾಶವಾಗಬಹುದು. ಉದಾ: ಪುಣೆಯ ಭಂಡಾರಕರ ಓರಿಯಂಟಲ್ ರೀಸರ್ಚ ಇನ್‌ಸ್ಟಿಟ್ಯೂಟ್‌ಕ್ಕೆ ಸಂಬಂಧಿಸಿದ ಪಂಪಭಾರತದ ಒಂದು ಅಪೂರ್ಣ ಹಸ್ತಪ್ರತಿ ಈಗ ಆ ಸಂಸ್ಥೆಯಲ್ಲಿ ಇಲ್ಲ. ""ರೂಪಕ್ಕೆ ನಾಶವುಂಟು" ಎಂಬ ತತ್ವದಂತೆ ಈ ಕಾವ್ಯದ ಮಿಕ್ಕ ಎರಡು ಹಸ್ತಪ್ರತಿಗಳೂ ಮುಂದೆ ಒಂದು ಕಾಲಕ್ಕೆ ಖಂಡಿತ ನಾಶವಾಗುತ್ತವೆ. ಆಗ ಪಂಪಭಾರತದ ಈಗಿನ ಆವೃತ್ತಿಯನ್ನು ಗಣನೀಯ ರೀತಿಯಲ್ಲಿ ಪರಿಷ್ಕರಿಸುವುದು ಅಗತ್ಯವಿದೆಯೆಂದು ವಿದ್ವಾಂಸರಿಗೆ ಅನ್ನಿಸಿದ ಪಕ್ಷದಲ್ಲಿ, ಈಗಾಗಲೇ ಅಡಿಯಲ್ಲಿ ಸಂಗ್ರಹವಾಗಿರುವ ಪಾಠಗಳಿಗೇ ಮೊರೆ ಹೊಗುವುದು ಅನಿವಾರ್ಯವಾಗುತ್ತದೆ. ಇದೆಲ್ಲವನ್ನು ಗಮನಿಸಿದರೆ, ತಾನೇ ಹಸ್ತಪ್ರತಿ ಸಂಗ್ರಹಿಸಿ, ತಾನೇ ಭಿನ್ನಪಾಠ ಸಂಗ್ರಹಿಸಿ, ಪರಿಷ್ಕರಣ ಮಾಡುವಂತೆ, ಈಗಾಗಲೇ ಮುದ್ರಿತ ಪ್ರತಿಯ ಅಡಿಯಲ್ಲಿ ಸಂಗ್ರಹಿಸಿದ ಪಾಠಗಳನ್ನು ಆಧರಿಸಿ, ಕೃತಜ್ಞತಾಭಾವದಿಂದ ಪರಿಷ್ಕರಣ ಮಾಡುವುದೂ ಸಾಹಿತ್ಯಿಕನ್ಯಾಯವಾಗಿ ಪರಿಣಮಿಸುತ್ತದೆ. ಇಲ್ಲಿ ಹೊಸಪಾಠ ನಿರ್ಣಯದ ಪ್ರಮಾಣ ವರ್ಧಿಸಿದಷ್ಟೂ ಅವನ "ಪರಿಷ್ಕರಣದ ಪರಿಷ್ಕರಣ"ಕ್ಕೆ ಸ್ವಂತಿಕೆ ಸಂವರ್ಧಿಸುತ್ತ ಹೋಗುತ್ತದೆ.

■■

ಆಕರ : ಮಾರ್ಗ ಸಂಪುಟ–೪

೩೫

ಕನ್ನಡದಲ್ಲಿ ಗ್ರಂಥಸಂಪಾದನೆಯ ಸಾಧನೆ

Textual Criticism ಅರ್ಥದ ಗ್ರಂಥಸಂಪಾದನೆಯು ಪತ್ರಿಕಾ ಸಂಪಾದನೆ, ಕವನ-ಲೇಖನ ಸಂಪಾದನೆಗಳನ್ನು ಹೊರತುಪಡಿಸಿ ಪ್ರಾಚೀನಕೃತಿ ಸಂಪಾದನೆ, ಶಾಸನ ಸಂಪಾದನೆ, ಜಾನಪದ ಸಾಹಿತ್ಯ ಸಂಪಾದನೆಗಳಿಗೆ ಮಾತ್ರ ಅನ್ವಯಿಸುತ್ತದೆ.

ಪ್ರಾಚೀನಕೃತಿ ಸಂಪಾದನೆಯೆಂದರೆ 'ಹಸ್ತಪ್ರತಿಯನ್ನು ಅಚ್ಚು ಮಾಡುವುದು' ಎಂಬ ಬೆಂಗಳೂರು ಮತ್ತು ಬಳ್ಳಾರಿ ಶೆಟ್ಟರ ಕಾಲದ ಅಭಿಪ್ರಾಯ ಇಂದು ಬಿದ್ದು ಹೋಗಿ, ಒಂದು ಕೃತಿಯಲ್ಲಿ ಸೇರಿಕೊಂಡ ಸತ್ಯ ಮತ್ತು ಅಸತ್ಯ ಪಾಠಗಳನ್ನು ವ್ಯವಸ್ಥಿತ ವಿಧಾನಗಳ ಮೂಲಕ ಬಿಡಿಸಿನೋಡುವ ವೈಜ್ಞಾನಿಕಕಾರ್ಯವೆಂಬ ಭಾವನೆ ಮೂಡಿದೆ. ಹೀಗೆ ಅವೈಜ್ಞಾನಿಕದಿಂದ ವೈಜ್ಞಾನಿಕ ಪಾತಳಿಯ ಮೇಲೆ ಬರುತ್ತಲಿದ್ದರೂ ಹತ್ತು ಹಸ್ತಪ್ರತಿಗಳ ಸಹಾಯದಿಂದ ಹನ್ನೊಂದನೆಯ ಹಸ್ತಪ್ರತಿಯನ್ನು ಸಿದ್ಧಗೊಳಿಸುವ ಸುಲಭಕಾರ್ಯವೆಂಬ ಆರೋಪದಿಂದ, ಅದು ಇನ್ನೂ ಮುಕ್ತವಾಗಿಲ್ಲ.

ಗ್ರಂಥಸಂಪಾದನೆಗೆ ಮೂಲಸಾಮಗ್ರಿಯೆಂದರೆ ಹಸ್ತಪ್ರತಿಗಳು. ಮದ್ರಾಸ್ ಗವರ್ನಮೆಂಟ್ ಓರಿಯಂಟಲ್‌ಮ್ಯಾನ್ಯುಸ್ಕ್ರಿಪ್ಟ್ ಲೈಬ್ರರಿ, ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆ, ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ ಮತ್ತು ಕನ್ನಡ ಅಧ್ಯಯನ ಪೀಠ, ಹೈದ್ರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಗ್ರಂಥಾಲಯ, ಬಿಹಾರ ರಾಜ್ಯದ ಆರಾಪಟ್ಟಣದ ದೇವಕುಮಾರ ಜೈನ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ಗಳಲ್ಲಿ ಇವುಗಳ ಸಂಗ್ರಹ, ಸಂರಕ್ಷಣೆ ನೂರು ವರ್ಷಗಳಿಂದ ನಡೆದು ಬರುತ್ತಲಿದೆ. ದಿ. ಗೊರೆಬಾಳ ಹಣಮಂತರಾಯ, ಪ್ರೊ. ಜಿ.ಎಂ. ಉಮಾಪತಿಶಾಸ್ತ್ರಿ ಮೊದಲಾದ ವ್ಯಕ್ತಿಗಳ ವಶದಲ್ಲಿ, ಶ್ರವಣಬೆಳ್ಗೊಳ, ಹುಮ್ಮಚ, ಕಾರ್ಕಳ, ಮೂಡಬಿದರೆ, ವರಾಂಗ, ಕೊಲ್ಲಾಪುರ ಇತ್ಯಾದಿ ಜೈನಮಠಗಳಲ್ಲಿ, ಶಿವಯೋಗಮಂದಿರ, ಚಿತ್ರದುರ್ಗ, ಬಸವತೀರ್ಥ, ಕವಲೇದುರ್ಗ, ಗುಬ್ಬಿ ಮೊದಲಾದ ವೀರಶೈವ ಮಠಗಳಲ್ಲಿ ಇವು ಅರ್ಧ ರಕ್ಷಣೆಯಿಂದ ಬಳಲುತ್ತಿವೆ. ದೇಶದ ಸಾವಿರ ಸಾವಿರ ಮನೆಮಠಗಳಲ್ಲಿಯೂ ಬೂಸ್ಟಕ್ಕೆ ಬಲಿಯಾಗಿ, ಹುಳುಗಳಿಗೆ ಆಹಾರವಾಗಿ, ಒಲೆಗೆ ಉರುವಲಾಗಿ, ತಿಪ್ಪೆಗೆ ಗೊಬ್ಬರವಾಗಿ ಹಾಳಾಗತೊಡಗಿವೆ. ಇವುಗಳ ಸಂಗ್ರಹಕಾರ್ಯ ಕರ್ನಾಟಕದ ಯಾವ ಭಾಗದಲ್ಲಿಯೂ ವ್ಯವಸ್ಥಿತವಾಗಿ, ವ್ಯಾಪಕವಾಗಿ ನಡೆದಿಲ್ಲ.

ಪ್ರಜಾಸಂಪತ್ತು, ಖನಿಜ ಸಂಪತ್ತುಗಳಂತೆ ಹಸ್ತಪ್ರತಿಗಳೂ ರಾಜ್ಯದ ಸಂಪತ್ತು ಎಂದು ನಮ್ಮ ರಾಜ್ಯಸರ್ಕಾರಕ್ಕೆ ಇನ್ನೂ ಹೊಳೆಯದಿರುವುದು, ಬೆಂಗಳೂರಿನ ಸಾಹಿತ್ಯ ಪರಿಷತ್ತಿಗೆ ಹೋದ ವರ್ಷದ ವರೆಗೂ

ಹೊಳೆಯಲಿಲ್ಲವೆಂಬುದು ದುರ್ದೈವದ ಸಂಗತಿ. ನಮ್ಮ ಸರ್ಕಾರ ಇದು 'ರಾಜ್ಯದ ಆಸ್ತಿ' ಎಂದು ಘೋಷಿಸಿ ಸಂಗ್ರಹಿಸಿದಲ್ಲಿ ಸುಮಾರು 25,000 ಹಸ್ತಪ್ರತಿಗಳನ್ನು ಒಂದರಲ್ಲಿ ನಾಲ್ಕರಂತೆ ಒಟ್ಟು ಒಂದು ಲಕ್ಷ ಕೃತಿಗಳನ್ನು ಬದುಕಿಸಿದ ಪುಣ್ಯ ಬರುತ್ತದೆ. ಇಲ್ಲದಿದ್ದರೆ ಒಂದು ಕೃತಿಯ ಹಿಂದೆ ಒಬ್ಬ ಕವಿಯನ್ನು ಕೊಂದ ಪಾಪಕ್ಕೆ ಗುರಿಯಾಗುತ್ತೇವೆ.

ಹಸ್ತಪ್ರತಿ ಸಂಗ್ರಹದಷ್ಟೇ ಮುಖ್ಯವಾದುದು, ದೇಶ ವಿದೇಶಗಳಲ್ಲಿ ಚೆಲ್ಲಾಪಿಲ್ಲಿಯಾಗಿರುವ ಹಸ್ತಪ್ರತಿ ಸಂಪತ್ತನ್ನೆಲ್ಲಾ ಸಂಪಾದಕನ ಅಂಗೈಯಲ್ಲಿ ಕಾಣಿಕೊಡುವ 'ಸೂಚಿ'ಗಳನ್ನು ಸಿದ್ಧಪಡಿಸುವುದು. ಮದ್ರಾಸ್ ಗೌರ್‍ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ಸ್ ಲೈಬ್ರರಿ ಮತ್ತು ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಗಳ ಸೂಚಿಗಳು ತುಂಬ ಸಮರ್ಪಕವಾಗಿವೆ. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಸೊರಗಿದ ಸೂಚಿಗಳು ಮೈತುಂಬಿಕೊಳ್ಳಬೇಕು. ಪ್ರಕಟನೆಯ ಗಜಗಮನ ಶೋಭೆಯೋ, ಅಶಕ್ತತೆಯೋ, ಗೊತ್ತಾಗುವುದಿಲ್ಲ. ರಾಜ್ಯದಲ್ಲಿಯೇ ಬಹುದೊಡ್ಡ ಹಸ್ತಪ್ರತಿ ಭಂಡಾರವನ್ನು ಹೊಂದಿದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ಏನು ಕಾರಣವೋ ಇನ್ನೂ ಸೂಚಿಯನ್ನು ಸಿದ್ಧಪಡಿಸಿಲ್ಲ. ಸಂಸ್ಥೆಗಳ ಈ ಬಿಡಿ ಸೂಚಿಗಳೊಂದಿಗೆ ಡಾ. ಎಚ್.ಡಿ. ವೇಲಂಕರ ಅವರ 'ಜಿನರತ್ನಕೋಶ' ಅಥವಾ ಡಾ. ವಿ. ರಾಘವನ್ ಅವರ 'Catalogus catalogarum' ಮಾದರಿಯಲ್ಲಿ ಜಗತ್ತಿನ ಯಾವುದೇ ಮೂಲೆಯಲ್ಲಿರುವ 'ಕನ್ನಡ ಹಸ್ತಪ್ರತಿಗಳ ಸಮಗ್ರಸೂಚಿ'ಯೊಂದು ಹುಟ್ಟಿ ಬರಬೇಕಾಗಿದೆ. ರಾಜ್ಯದ ಕುರಿ, ಕೋಳಿಗಳ ಅಂಕಿಸಂಖ್ಯೆಯನ್ನಿಡುವ ನಮ್ಮ ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ಹಸ್ತಪ್ರತಿಗಳ ಅಂಕಿಸಂಖ್ಯೆಗಳನ್ನೊಳಗೊಂಡ ಇಂಥ ಯೋಜನೆಯನ್ನು ಕೈಗೆತ್ತಿಕೊಳ್ಳದಿರುವುದು ವಿಷಾದದ ಸಂಗತಿ.

ಈ ಮೂಲಭೂತ ಕಾರ್ಯಗಳ ಉಪೇಕ್ಷೆಯಿಂದುಂಟಾದ ಅಡಚಣಿ ಪರಿಸ್ಥಿತಿಯಲ್ಲಿಯೂ ಸಂಪಾದನಕ್ಷೇತ್ರವನ್ನು ಪೋಷಿಸಿಕೊಂಡು ಬಂದ ನಮ್ಮ ಸಂಪಾದಕರು ಅಭಿನಂದನಾರ್ಹರೇ ಸರಿ.

ಕನಾಟಕದಲ್ಲಿ ಅಚ್ಚಿನ ಕಾರ್ಯ ೧೮೧೭ರಷ್ಟು ಪೂರ್ವದಲ್ಲಿ ಪ್ರಾರಂಭವಾದರೂ ಪ್ರಾಚೀನಕೃತಿಗಳ ಪ್ರಕಟನಕಾರ್ಯ ಪ್ರಾರಂಭವಾದುದು ೧೮೪೮ರ ತರುವಾಯ. ಬಸವಪುರಾಣ, ಜೈಮಿನಿಭಾರತಗಳ ಮೂಲಕ ಈ ಕಾರ್ಯಕ್ಕೆ ಶ್ರೀಕಾರ ಹಾಕಿದವ ಮೊಗ್ಲಿಂಗ. ಇವರ ಮಾದರಿಯಲ್ಲಿ ಪೂರ್ವ-ಪಶ್ಚಿಮಗಳ ವಿದ್ವಾಂಸರು ಸಂಪಾದಿಸಿದ ಕಲ್ಲಚ್ಚಿನ ಪ್ರಕಟನೆಗಳು, ಬೆಂಗಳೂರು ಶೆಟ್ಟರ ಆಶ್ರಯದ ಸಂಪಾದಕರು ಪ್ರಕಟಿಸಿದ ಮುದ್ರಿತ ಕೃತಿಗಳು ನಮ್ಮ ಗ್ರಂಥಸಂಪಾದನೆಯ ಪ್ರಾಥಮಿಕ ಘಟ್ಟವನ್ನು ರೂಪಿಸಿದವು. ಇವುಗಳನ್ನು ಸಂಪಾದನೆಗಳೆನ್ನುವುದಕ್ಕಿಂತ ಮುದ್ರಣಗಳೆನ್ನುವುದು ಹೆಚ್ಚು ಯೋಗ್ಯ.

ಕಲ್ಲಚ್ಚಿನ ಬಾಯಿಯಿಂದ ಮುದ್ರಣಯಂತ್ರದ ಬಾಯಿಗೆ, ಶೆಟ್ಟರ ಕೈಯಿಂದ ವಿದ್ವಾಂಸರ ಕೈಗೆ ಇಳಿದು ಬರುವಲ್ಲಿ ಗ್ರಂಥಸಂಪಾದನೆಯ ಎರಡನೆಯ ಘಟ್ಟ ಪ್ರಾರಂಭವಾಗುತ್ತದೆ. ತಕ್ಕಮಟ್ಟಿನ ಶಾಸ್ತ್ರೀಯ ಹಿನ್ನೆಲೆಯಲ್ಲಿ ದರ್ಪಣ(೧೮೭೨), ಛಂದೋಂಬುಧಿ (1874) ಗಳನ್ನು ಪ್ರಕಟಿಸಿದ ಡಾ. ಕಿಟೆಲ್ ಅವರಿಗೆ ಕನ್ನಡ ಗ್ರಂಥಗಳ ಶಾಸ್ತ್ರೀಯ ಪರಿಷ್ಕರಣದ ಪ್ರಥಮವ್ಯಕ್ತಿ ಎಂಬ ಕೀರ್ತಿ ಸಲ್ಲುತ್ತದೆ. ಜೆ. ಗೆರೆಟ್, ಬಿ.ಎಲ್. ರೈಸ್, ಕೆ.ಬಿ. ಪಾಠಕ್, ಬಿ. ಮಲ್ಲಪ್ಪ, ಬೆಳ್ಳಾವೆ ವೆಂಕಟನಾರಣಪ್ಪ, ಚೆನ್ನಕೇಶವ ಅಯ್ಯಂಗಾರ್, ಆರ್. ನರಸಿಂಹಾಚಾರ್ ಮೊದಲಾದವರು ಈ ಘಟ್ಟದಲ್ಲಿ ದುಡಿದರು. ಇವರಲ್ಲಿ ಎಂ.ಎ. ರಾಮಾನುಜಯ್ಯಂಗಾರ್ ಎಸ್.ಜಿ. ನರಸಿಂಹಾಚಾರ್ ಅವರು 'ಕರ್ನಾಟಕ ಕಾವ್ಯಮಂಜರಿ' ಮೂಲಕ ಪ್ರಕಟಿಸಿದ ಕೃತಿಸಂಖ್ಯೆ ಕನ್ನಡಕ್ಕೆ ಬಹುದೊಡ್ಡ

ಕಾಣಿಕೆ. ೧೯ನೆಯ ಶತಮಾನದಿಂದ ಸ್ಫೂರ್ತಿ ಪಡೆದು, ೨೦ನೆಯ ಶತಮಾನಕ್ಕೆ ಮಾರ್ಗದರ್ಶನ ಮಾಡಿದ ಈ ಅವಧಿಯ ಪ್ರಕಟನೆಗಳಲ್ಲಿ ಶಾಸ್ತ್ರಪದ್ಧತಿಯ ಅರುಣೋದಯ ಸ್ಪಷ್ಟವಾಗಿ ಕಾಣುತ್ತದೆ.

ಮೂರನೆಯ ಘಟ್ಟ ಪ್ರಾರಂಭವಾದುದು ಹೊಸಗನ್ನಡದ 'ಅಶ್ವಿನಿದೇವತೆ'ಗಳೆನಿಸಿದ ಟಿ. ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ ಮತ್ತು ಎಸ್. ಎಸ್. ಬಸವನಾಳ ಅವರಿಂದ. ಉಪಲಬ್ಧ ಇತಿಮಿತಿಯಲ್ಲಿ ಗ್ರಂಥಗಳನ್ನು ಅಚ್ಚುಕಟ್ಟಾಗಿ ಸಂಪಾದಿಸುವ ದಾರಿತೋರಿದವರು ಇವರು. ಇವರ ಆದರ್ಶವನ್ನು ಮುಂದುವರಿಸಿಕೊಂಡು ಹೋದವರು ಡಿ.ಎಲ್.ಎನ್., ತೀ.ನಂ. ಶ್ರೀ; ಎಚ್. ದೇವೀರಪ್ಪ, ಎನ್. ಅನಂತರಂಗಾಚಾರ್, ಎಲ್. ಬಸವರಾಜು, ಎನ್ ಬಸವಾರಾಧ್ಯ, ಬಿ.ಎಸ್. ಸಣ್ಣಯ್ಯ ಮೊದಲಾದವರು. ಉತ್ತರಕರ್ನಾಟಕ ಸಂಪಾದನ ವ್ಯವಸಾಯ ಪ್ರಾರಂಭ ಮಾಡಿದುದು, ಈ ಮೂರನೆಯ ಘಟ್ಟದಲ್ಲಿ. ಈಗ ೬೦ ಕೃತಿಗಳನ್ನು ಸಂಪಾದಿಸಿದ ಮಹಾಪವಾಡವನ್ನೆಸಗಿದ್ದರೂ ಡಾ. ಹಳಕಟ್ಟಿಯವರ ಸಂಪಾದನೆಗಳಲ್ಲಿ ಶಾಸ್ತ್ರೀಯ ದೃಷ್ಟಿ ಕಡಿಮೆ; ಅದು ಅವರ ಉದ್ದೇಶವೂ ಆಗಿರಲಿಲ್ಲ. ಆದರೆ ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿಗಳಂತೆ ಉತ್ತರಕರ್ನಾಟಕದಲ್ಲಿ ಶಾಸ್ತ್ರಶುದ್ಧವಾಗಿ ಗ್ರಂಥಗಳನ್ನು ಸಂಪಾದಿಸಿದ ಪ್ರಥಮ ವ್ಯಕ್ತಿ ಪ್ರೊ. ಎಸ್.ಎಸ್. ಬಸವನಾಳ. ಇವರ ಮಾದರಿಯಲ್ಲಿ ಪ್ರೊ. ಕುಂದಣಗಾರ, ನಂದಿಮಠ, ಭೂಸನೂರಮಠ, ಆರ್.ಸಿ. ಹಿರೇಮಠ, ಸುಂಕಾಪುರ ಮೊದಲಾದವರು ಈ ಪರಂಪರೆಯನ್ನು ಮುಂದುವರೆಸಿಕೊಂಡು ಬಂದರು.

ಹೀಗೆ ಮೈಸೂರು ಪ್ರದೇಶದಲ್ಲಿ ಬಿಟ್ಟೂ ಬಿಡದೆ, ಧಾರವಾಡ ಪ್ರದೇಶದಲ್ಲಿ ಬಿಟ್ಟು ಬಿಟ್ಟು ನಡೆದುಬರುತ್ತಲಿದ್ದು ಈ ಸಂಪಾದನಕಾರ್ಯ ಒಂದು ಕಡೆ ವೆಂಕಣ್ಣಯ್ಯ, ಇನ್ನೊಂದು ಕಡೆ ಬಸವನಾಳರ ಮಟ್ಟದಲ್ಲಿಯೇ ವ್ಯವಹರಿಸುತ್ತಿರುವಾಗ ಉತ್ತರದಲ್ಲಿ ಆರ್.ಸಿ. ಹಿರೇಮಠ, ದಕ್ಷಿಣದಲ್ಲಿ ಎಲ್. ಬಸವರಾಜು ಅದಕ್ಕೆ ಹೊಸ ಶಕ್ತಿ, ಹೊಸ ವೇಗಗಳನ್ನು ತುಂಬಿದರು. ಡಾ. ಹಿರೇಮಠರಂತೂ ಕರ್ನಾಟಕಕ್ಕೆ ಕನ್ನಡ ಅಧ್ಯಯನಪೀಠದ ಕಾಣಿಕೆಯೆಂಬಂತೆ ೩೦ ಕೃತಿಗಳನ್ನು ಸಂಪಾದಿಸಿ ಉತ್ತರ ಕರ್ನಾಟಕದಲ್ಲಿ ಬಸವನಾಳರ ಸಂಪಾದನ ಕ್ಷೇತ್ರವನ್ನು ಹಚ್ಚಹಸಿರುಗೊಳಿಸಿದರು.

ಈ ಪ್ರಸಂಗದಲ್ಲಿ ರಾಜ್ಯದ ಹೊರಗೆ ಮದ್ರಾಸಿನಲ್ಲಿ ನಡೆದ ಸಂಪಾದನಕಾರ್ಯ ಬೆರಗುಗೊಳಿಸುತ್ತದೆ. 'ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಸೀರೀಜ' ಮತ್ತು 'ಮದ್ರಾಸ್ ಯುನಿವರ್ಸಿಟಿ ಕನ್ನಡ ಸೀರೀಜ' ಹೆಸರಿನಲ್ಲಿ ಹೊರಬಂದ ಗ್ರಂಥಗಳು ವಿಸ್ತಾರವಾದ ಮುನ್ನುಡಿ, ಉಪಯುಕ್ತ ಅನುಬಂಧ, ಆಕರ್ಷಕ ಅಂಗವಿನ್ಯಾಸಗಳ ಮೂಲಕ ತೂಕದಿಂದ ತೂಗುತ್ತವೆ.

ನಮ್ಮ ಕೆಲವು ಪ್ರಕಾಶನಸಂಸ್ಥೆಗಳು ಸಂಪಾದನಕ್ಷೇತ್ರದಲ್ಲಿ ವಿಶ್ವವಿದ್ಯಾಲಯಗಳೂ ಮಾಡದಂಥ ಕಾರ್ಯಮಾಡಿವೆ. ಶಾರದಾ ಮಂದಿರ, ಕಾವ್ಯಾಲಯ ಇವುಗಳಲ್ಲಿ ಹೇಳಬೇಕಾದ ಹೆಸರುಗಳು.

ಹೀಗೆ ಸಾಗಿಬಂದ ನಮ್ಮ ಸಂಪಾದನಕ್ಷೆತ್ರದಲ್ಲಿ ಟಿ.ಎಸ್.ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ಡಿ.ಎಲ್.ಎನ್., ತೀ.ನಂ.ಶ್ರೀ., ಶ್ರೀ ಎಚ್. ದೇವೀರಪ್ಪ, ಆರ್.ಸಿ. ಹಿರೇಮಠ, ಎಲ್.ಬಸವರಾಜು ವಿಮರ್ಶಾತ್ಮಕ ಪರಿಷ್ಕರಣ (Critical editions) ಗಳಿಗೆ ಹೆಸರಾಗಿದ್ದಾರೆ.

'ಆದಿ ಪುರಾಣಸಂಗ್ರಹ'ವನ್ನು ಸರಿಗಟ್ಟುವ ಸಂಗ್ರಹಗಳು ಈವರೆಗೆ ಬರದಿದ್ದರೂ ಹರಿಶ್ಚಂದ್ರಕಾವ್ಯ, ಪ್ರಭುಲಿಂಗಲೀಲೆ, ಸಿದ್ಧರಾಮಪುರಾಣ, ಗದಾಯುದ್ಧ, ಪಂಪರಾಮಾಯಣಗಳಿಂದ ಸಿದ್ಧಪಡಿಸಿದ ಸಂಗ್ರಹಗಳು ಪ್ರಥಮದರ್ಜೆಯ ಸಂಪಾದನೆಗಳಾಗಿವೆ. ಮಿಕ್ಕ ಸಂಗ್ರಹಗಳು ಪಠ್ಯಪುಸ್ತಕ ಪ್ರಲೋಭನೆಯ ಕೂಸುಗಳು. ಇದು ನಮ್ಮಲ್ಲಿ ಬೆಳೆದುಬಂದ ಪ್ರಾಚೀನಕೃತಿ ಸಂಪಾದನ ಸಂಪತ್ತು.

'ಗ್ರಂಥಸಂಪಾದನೆ' ಕೇವಲ ಗ್ರಂಥದ ಪಾಠನಿರ್ಣಯವಲ್ಲ; ಪ್ರಸ್ತಾವನೆ ಮತ್ತು ಅನುಬಂಧಗಳೂ ಅದರ ಆವಶ್ಯಕ ಅಂಗಗಳು. ಇವುಗಳನ್ನು ಪೂರೈಸಬೇಕಾದ ನಮ್ಮ ಸಂಪಾದಕರು ಪಾಠರಕ್ಷಣಾಪ್ರಜ್ಞೆಯ ಕೊರತೆಯಲ್ಲಿ ಹುಟ್ಟಿದ ಕರ್ನಾಟಕದ ಅಶುದ್ಧ ಹಸ್ತಪ್ರತಿಗಳ ಎದುರು ದೊಡ್ಡ ಆಹ್ವಾನವನ್ನು ಸ್ವೀಕರಿಸುತ್ತ ಬಂದಿದ್ದಾರೆ; ಘಟ್ಟದಿಂದ ಘಟ್ಟಕ್ಕೆ ಬೆಳವಣಿಗೆ ತೋರಿಸಿದ್ದಾರೆ. ಆದರೆ ಒಬ್ಬೊಬ್ಬರೂ ಒಂದೊಂದು ಬಗೆಯ ಸಂಕೇತಗಳನ್ನು, ಒಂದೊಂದು ಬಗೆಯಲ್ಲಿ ಅಡಿಪಾಠಗಳನ್ನು ಸೂಚಿಸುತ್ತಿರುವುದನ್ನು ನೋಡಿದರೆ ಸಂಪಾದನೆ ನಮ್ಮಲ್ಲಿ ಇನ್ನೂ ಶಾಸ್ತ್ರಮಗ್ಗದ ಮೇಲೆ ಸರಿಯಾಗಿ ಕುಳಿತಿಲ್ಲವೆಂದೇ ಹೇಳಬೇಕು. ನಮ್ಮ ಸಂಪಾದಕರು ಅಂಕಿ, ನಕ್ಷತ್ರ, ಬಾಣ, ತ್ರಿಕೋಣ, ಖಡ್ಗ, ಕತ್ತರಿ, ಕಠಾರಿ ಹಲವು ಬಗೆಯ ಕಂಸ, ಪ್ರಶ್ನೆಚಿಹ್ನೆಗಳನ್ನು ಆತ್ಮಸಾಕ್ಷಿಯಾಗಿ ಬಳಸುವವರೇ ಹೊರತು ಶಾಸ್ತ್ರಸಾಕ್ಷಿಯಾಗಿ ಬಳಸುವುದಿಲ್ಲ. ಇದರಿಂದ ವೈಜ್ಞಾನಿಕ ವ್ಯವಸ್ಥೆ (Scientific discipline) ಸಾಧ್ಯವಾಗದೇ ಹೋಗಿದೆ. ಈಗ ಎಲ್ಲರೂ ಕೂಡಿ ಸರ್ವಸಾಮಾನ್ಯವಾದ ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ವಿಶ್ವವಿದ್ಯಾಲಯಗಳಾಗಲೀ ಪರಿಷತ್ತು ಮೊದಲಾದ ಸಂಸ್ಥೆಗಳಾಗಲೀ ಇದಕ್ಕೆ ಮುಂದಾಗುವುವೆಂದು ಭಾವಿಸುತ್ತೇನೆ.

ಹೀಗೆ ವೈಜ್ಞಾನಿಕ ವ್ಯವಸ್ಥೆಯ (Scientific discipline) ಕೊರತೆಯಲ್ಲಿ ಸಾಗಿಬರುತ್ತಲಿರುವ ವೆಂಕಣ್ಣಯ್ಯ, ಬಸವನಾಳರು ಹಾಕಿಕೊಟ್ಟ ಸಂಪಾದನಾಮಾರ್ಗ ಈಗ ಸವಕಲಾಗಿದೆ. ಯೋಗ್ಯಪಾಠವನ್ನು ಸ್ವೀಕರಿಸುವ ಮಿಕ್ಕಪಾಠಗಳನ್ನು ಅಡಿಯಲ್ಲಿ ಕೊಡುವ, ಒಂದೆರಡು ಚಿಹ್ನೆ ಬಳಸುವ ಅ.ಬ. ಕ. ಎಂದು ಹಸ್ತಪ್ರತಿ ಹೆಸರು ಹೇಳಿ ಕೈತೊಳೆದುಕೊಳ್ಳುವ, ಕೊಂಚ ಭಾರವೂ ಯಾಂತ್ರಿಕವೂ ಆದ ಈ ಪದ್ಧತಿ ಬೇಜಾರವನ್ನುಂಟುಮಾಡಿದೆ. ಹೀಗಾಗಿ ಇವತ್ತಿನ ಪಾಠಪರಿಷ್ಕರಣ ರೀತಿ ಒಂದು ಹಂತಕ್ಕೆ ಬಂದು ನಿಂತು, ಹೊಸ ದಾರಿ ಕಾಣದೆ ತೊಳಲುತ್ತಿದೆ. ಈಗ ಆ ದಾರಿ ತೋರಿಸುವವನ ದಾರಿ ನೋಡುತ್ತ ನಿಂತಿದೆ, ಸಂಪಾದನ ಕ್ಷೇತ್ರ.

ಪಾಠಪರಿಷ್ಕರಣದಷ್ಟೇ ಮಹತ್ವದ ಅಂಗ. ಪ್ರಸ್ತಾವನೆ ಬರವಣಿಗೆ. ನಮ್ಮಲ್ಲಿ ಈ ಭಾಗ ಸಂಶೋಧನೆಯ ಭಾರದಿಂದ, ವಿಮರ್ಶೆಯ ಕೊರತೆಯಿಂದ ಬಳಲುತ್ತಿದೆ. ಇದಕ್ಕೆ ಕಾರಣ ಸಾಮಾನ್ಯವಾಗಿ ನಮ್ಮ ಸಂಪಾದಕರು ವಿಮರ್ಶಕರಲ್ಲದುದು; ನಮ್ಮ ವಿಮರ್ಶಕರು ಸಂಪಾದರಕಲ್ಲದುದು. ಇನ್ನು ಸಂಶೋಧನೆಯಲ್ಲಿ ಗೋವಿಂದ ಪೈ ಮಾದರಿಯ heavy scholarship ನಿಂತು ಹೋಗಿ Creative Scholorship ನಡೆದುಬರಬೇಕು. ವಿಮರ್ಶೆಯಲ್ಲಿ ಬಿ.ಎಂ.ಶ್ರೀ ಮಾದರಿಯ ರಮ್ಯಸಂಪ್ರದಾಯಕ್ಕೆ ಬದಲು ನವ್ಯದೃಷ್ಟಿ ಕಣ್ಣು ತೆರೆಯಬೇಕು. ಭಾಷಾಬಳಕೆ, ವಿಷಯ ನಿರೂಪಣೆಗಳಲ್ಲಿ ಕಾಣುವ ಒಂದೇ ಧಾಟಿಯ ಹಳೆಯ ಬರವಣಿಗೆ ಹೊಸಯುಗಕ್ಕೆ ತಕ್ಕಂತೆ ನವೀನಗೊಳ್ಳಬೇಕು.

ಗ್ರಂಥಸಂಪಾದನೆಯ ಇನ್ನೊಂದು ಅಂಗ Index, appedixಗಳ ರಚನೆ. ಕಠಿಣಪದಕೋಶಕ್ಕೆ ಮಾತ್ರ ಸೀಮಿತವಾಗಿದ್ದ ಈ ಭಾಗ ಇತ್ತೀಚೆ ವೈವಿಧ್ಯಪೂರ್ಣವಾಗಿ ಬೆಳೆಯುತ್ತಲಿದ್ದರೂ ಅಲ್ಲಿ ಒಂದು ತತ್ವ, ಒಂದು ವ್ಯವಸ್ಥೆ ಇಲ್ಲ. ಇದಕ್ಕೆ ನನ್ನ ಕವಿರಾಜಮಾರ್ಗ ಪರಿಸರದ ಕನ್ನಡಸಾಹಿತ್ಯ ಮೊದಲಾದ ಪಿಎಚ್.ಡಿ. ಪ್ರಬಂಧಗಳೂ ಕನ್ನಡದ ಉತ್ತಮೋತ್ತಮ ಗ್ರಂಥಗಳೂ ಉದಾಹರಣೆಯಾಗಿವೆ. ಈ ಅವ್ಯವಸ್ಥೆ ನಿಲ್ಲಬೇಕಾದರೆ ಇದರ ಮಹತ್ವ, ಸ್ವರೂಪ ಮತ್ತು ರಚನಾ ರೀತಿಗಳನ್ನು ತಿಳಿಸಿಕೊಡುವ ಪುಸ್ತಕಗಳ, ತರಬೇತಿ ನೀಡುವ ಬೇಸಗೆ ಶಿಬಿರಗಳ ಅವಶ್ಯಕತೆ ಇಂದು ಬಹಳವಿದೆ. ಇದೇ ರೀತಿ ಸರಳಪದಗಳನ್ನೊಳಗೊಂಡ "ಕಠಿಣ ಪದಕೋಶ" ರಚನೆ ನಿಂತು ಡಿ.ಎಲ್.ಎನ್., ಬಸವನಾಳ, ಎಂ.ವಿ. ಸೀತಾರಾಮಯ್ಯ ಅವರಂತೆ ಟಿಪ್ಪಣಿ ಬರೆಯುವುದು ರೂಢಿಗೊಳ್ಳಬೇಕಾಗಿದೆ. ದುರ್ದೈವದ ಸಂಗತಿಯೆಂದರೆ ಒಪ್ಪೋಲೆ ನಮ್ಮ ಅನುಬಂಧದ ಒಂದು ಅನಿವಾರ್ಯ ಅಂಗವಾಗಿ ಇನ್ನೂ

ವಿರಾಜಿಸುತ್ತಿರುವುದು. ಗ್ರಂಥಸಂಪಾದನೆಯೆಂಬುದು ಹಸ್ತಪ್ರತಿಗಳಲ್ಲಿಯ ದೋಷಗಳನ್ನು ವರ್ಜಿಸುವುದಾಗಿರುವಾಗ ಸಂಪಾದಕರ ಅನವಧಾನದಿಂದ ಹೊಸ ಹೊಸ ದೋಷಗಳು ಅವತರಿಸಿ, ಕೆಲವು ಸಂಪಾದನೆಗಳು ಹೊಸ ಹಸ್ತಪ್ರತಿಯ ಮಟ್ಟಕ್ಕಿಳಿದಿವೆ. ಶ್ರೀ ಪಂಚಮುಖಿ, ಬಿ.ಎಸ್.ಕುಲಕರ್ಣಿ ಮೊದಲಾದವರ ಸಂಪಾದನೆಗಳು ಇದಕ್ಕೆ ಉದಾಹರಣೆ. ಪಶ್ಚಿಮದೇಶದಲ್ಲಿ ಒಪ್ಪೋಲೆಯಿಲ್ಲದೆ ಸಾವಿರ ಪುಟದ ಕೃತಿ ಹೊರಬರುವಾಗ, ನಮ್ಮಲ್ಲಿ ೧೦೦ ಪುಟದ ಪುಸ್ತಕಕ್ಕೂ ೩ ಪುಟದ ಒಪ್ಪೋಲೆಯ ಕಾಟ ತಪ್ಪಿಲ್ಲ.

ಹೀಗೆ ನಮ್ಮ ಸಂಪಾದನೆ ಒಂದು ಘಟ್ಟಕ್ಕೆ ಬಂದು ನಿಂತುಬಿಟ್ಟಿದ್ದರೂ ಒಳ್ಳೆಯ ಕಾಗದ, ಸುಂದರ ಮುದ್ರಣ, ಆಕರ್ಷಕ ಹೊದಿಕೆ- ಈ ಶರೀರಸೌಂದರ್ಯ ಮಾತ್ರ ನಮ್ಮಲ್ಲಿ ಖಂಡಿತ ಬೆಳೆಯುತ್ತ ನಡೆದಿದೆ. ಆದರೆ ಸುಂದರ ಪ್ರಕಟನೆಗಳಿಗೆ ಹೆಸರಾದ ಮೈಸೂರು ವಿಶ್ವವಿದ್ಯಾಲಯ ಸಂಪಾದಿತ ಕೃತಿಗಳ ಅಂಗಸೌಂದರ್ಯವನ್ನು ಅಲಕ್ಷಿಸಿದುದು ವಿಷಾದದ ಸಂಗತಿ.

ಪರಿಶ್ರಮಪ್ರವೃತ್ತಿ, ಪ್ರಾಮಾಣಿಕತೆ, ಸಾವಧಾನಶೀಲತೆ - ಗ್ರಂಥಸಂಪಾದಕನಿಗಿರಬೇಕಾದ ಈ ಮೂಲಗುಣಗಳು ನಮ್ಮ ಜೀವನದಲ್ಲಿಯೇ ಮಾಯವಾಗುತ್ತ ನಡೆದ ದಿನಗಳಲ್ಲಿ ಸಂಪಾದನಕಾರ್ಯ ತನ್ನ ಗುಣಮಟ್ಟವುಳಿಸಿಕೊಳ್ಳದೇನೋ ಎಂಬ ಭಯ ಹುಟ್ಟತೊಡಗಿದೆ. ಪ್ರಯೋಗಶಾಲೆಗಳಾಗಬೇಕಿದ್ದ ನಮ್ಮ ವಿಶ್ವವಿದ್ಯಾಲಯಗಳು ಇತ್ತೀಚೆ ಫ್ಯಾಕ್ಟರಿಗಳಾಗತೊಡಗಿ, ಗುಣಕ್ಕಿಂತ ಗಾತ್ರ, ಸತ್ವಕ್ಕಿಂತ ಸಂಖ್ಯೆ ಹೆಚ್ಚಿಸುವ ಹವ್ಯಾಸ ಬೆಳೆಸಿಕೊಂಡಿವೆ. ಇದು ಗ್ರಂಥಸಂಪಾದನೆಯ ಭವಿಷ್ಯದ ಬಗ್ಗೆಯೂ ಭಯ ಹುಟ್ಟಿಸಿದೆ. ಕೆಲವು ಕೃತಿಗಳು ಪುನರ್ಮುದ್ರಣ ಪ್ರಸಂಗದಲ್ಲಿ ಪ್ರಥಮ ಮುದ್ರಣದ ಗುಣಮಟ್ಟವನ್ನು ಕಳೆದುಕೊಳ್ಳುತ್ತ ನಡೆದಿವೆ. ಉದಾ: ಬಸವನಾಳರ ಬಸವಣ್ಣನವರ ವಚನಗಳು, ವೆಂಕಣ್ಣಯ್ಯನವರ ಬಸವರಾಜದೇವರ ರಗಳೆ, ಸರ್ಕಾರ ಪ್ರಕಟಿಸಿದ ಸರ್ವಜ್ಞನ ವಚನಗಳು. ಕೆಲವು ಸಂಸ್ಥೆಗಳು ಮುಂದಿನ ಆವೃತ್ತಿಗಳಲ್ಲಿ ಪ್ರಥಮ ಆವೃತ್ತಿಯ ಸಂಪಾದಕರ ಹೆಸರನ್ನು ಬಿಡುವ ಇಲ್ಲವೆ ಕಂಡೂ ಕಾಣದ ಹಾಗೆ ಮುದ್ರಿಸುವ ಪಾಪಕಾರ್ಯ ಮಾಡುತ್ತಲಿವೆ.

ಇಂದು ಈ ಕ್ಷೇತ್ರ ಕೈಗೆತ್ತಿಕೊಳ್ಳಬೇಕಾದ ಕಾರ್ಯಗಳು ಅನೇಕ. ತಮಗೆ ಲಭ್ಯವಿದ್ದ ಸಾಧನಸಂಪತ್ತಿಯ ಹಿನ್ನೆಲೆಯಲ್ಲಿ ಬಹುಕಾಲದ ಹಿಂದೆ ಸಂಪಾದಿಸಿರುವ ಚಂದ್ರಪ್ರಭ ಪುರಾಣ, ಜಗನ್ನಾಥ ವಿಜಯ, ಲೋಕೋಪಕಾರ ಮೊದಲಾದ ಕೃತಿಗಳ ಪುನರ್ಮುದ್ರಣವಾದರೂ ಕೊನೆಯಪಕ್ಷ ನಡೆಯಬೇಕು. ಸುಪ್ರಸಿದ್ಧ ಸಂಪಾದನೆಗಳಾದ ವಡ್ಡಾರಾಧನೆ, ಪ್ರಭುಲಿಂಗಲೀಲೆಗಳ ಮರುಪರಿಷ್ಕರಣ ಈಗ ಅವಶ್ಯವಿದೆ. ನಮ್ಮಲ್ಲಿ ಮೂರು ವಿಶ್ವವಿದ್ಯಾಲಯಗಳಿದ್ದರೂ ಚಾವುಂಡರಾಯಪುರಾಣ, ವೀರಶೈವಾಮೃತ ಮಹಾಪುರಾಣ, ಭಾಗವತ ಮೊದಲಾದ ಗ್ರಂಥಗಳು ಒಮ್ಮೆಯೂ ಶುದ್ಧವಾಗಿ ಇಲ್ಲವೆ ಸಮಗ್ರವಾಗಿ ಪ್ರಕಟಗೊಳ್ಳಲಿಲ್ಲ. ಒಂದೊಂದು ಗ್ರಂಥ ೮-೧೦ ಸಲ ಮುದ್ರಣ ಕಂಡರೂ ಸುಮಾರು ೩,೦೦೦ ಗ್ರಂಥಗಳು ಒಮ್ಮೆಯೂ ಪ್ರಕಟವಾಗದೆ ಅಜ್ಞಾನವಾಸವನ್ನನುಭವಿಸುತ್ತಲಿವೆ. ಸರ್ಕಾರ, ಸ್ಥಿರಯೋಜನೆಯ ಮೂಲಕ ಇವುಗಳನ್ನು ಒಂದು ಸಲವಾದರೂ ಪ್ರಕಟಿಸಬೇಕು. ಇವುಗಳಿಗೆ ಸಾಹಿತ್ಯ ದೃಷ್ಟಿಯಿಂದ ಬೆಲೆ ಇಲ್ಲದಿರಬಹುದು; ಸಾಹಿತ್ಯಚರಿತ್ರೆಯ ದೃಷ್ಟಿಯಿಂದ ಖಂಡಿತ ಬೆಲೆಯಿದೆ. ಇದರ ಜೊತೆ ಭಂಡಾರಕರ್ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಸಂಪಾದಿಸುತ್ತಿರುವ ವ್ಯಾಸಭಾರತದ ಮಾದರಿಯಲ್ಲಿ ಪಂಪ ಭಾರತ, ಕುಮಾರವ್ಯಾಸ ಭಾರತ, ಕುಮಾರರಾಮನ ಸಾಂಗತ್ಯ ಮೊದಲಾದ ಮಹಾಕೃತಿಗಳ ಸರ್ವಪಾಠಭೇದಗಳನ್ನೊಳಗೊಂಡ ಸಶಾಸ್ತ್ರೀಯ ಸವಿಮರ್ಶ ಪರಿಷ್ಕರಣಕಾರ್ಯ ನಡೆಯಬೇಕಾಗಿದೆ.

ಹೀಗೆ ನಮ್ಮ ಗ್ರಂಥಸಂಪಾದನೆ ಬೆಳೆದು ಬರುತ್ತಿದ್ದಂತೆ ಈ ಕ್ಷೇತ್ರವನ್ನು ಕುರಿತು ಎರಡೇ ಎರಡು ಲೇಖನಗಳು, ಎರಡೇ ಎರಡು ಶಾಸ್ತ್ರಗ್ರಂಥಗಳು ಹುಟ್ಟಿಬಂದಿವೆ. ಇದು ಈ ಕ್ಷೇತ್ರದ ಶಾಸ್ತ್ರಸಾಹಿತ್ಯದ

ಬಡತನವನ್ನು ತೋರಿಸುತ್ತದೆ. ಡಿ.ಎಲ್.ಎನ್. ಅವರ "ಕನ್ನಡ ಗ್ರಂಥಸಂಪಾದನೆ" ಮತ್ತು ನನ್ನ "ಕನ್ನಡ ಗ್ರಂಥಸಂಪಾದನ ಶಾಸ್ತ್ರ" ಈ ಉಭಯಕೃತಿಗಳಲ್ಲಿ ಹೋಲಿಕೆಗಿಂತ ವ್ಯತ್ಯಾಸವೇ ಅಧಿಕವಾಗಿದೆ. ಕಾರಣ ಶಾಸ್ತ್ರೀಯತೆ, ಉಪಯುಕ್ತತೆ ದೃಷ್ಟಿಯಿಂದ ಈ ಎರಡರ ಗುಣದೋಷಗಳನ್ನು ನಿಕಷವಿಟ್ಟು ನೋಡಿ ವಿದ್ವಾಂಸರು ಕನ್ನಡಕ್ಕೆ ಯೋಗ್ಯವೆನಿಸುವ ಒಂದನ್ನು ಒಪ್ಪಿಕೊಳ್ಳಬೇಕು; ಇಲ್ಲವೆ ಎರಡರ ಬಲದಿಂದ ಮೂರನೆಯದನ್ನು ರೂಪಿಸಿಕೊಳ್ಳಬೇಕು. ಇದರಿಂದ ಇನ್ನು ಮೇಲೆ ಹುಟ್ಟಿ ಬರಬೇಕಾದ ಕನ್ನಡ ಗ್ರಂಥಸಂಪಾದನ ಶಾಸ್ತ್ರಗಳಿಗೆ ಮತ್ತು ಕನ್ನಡ ಗ್ರಂಥಸಂಪಾದನಕಾರ್ಯಕ್ಕೆ ಶಾಸ್ತ್ರಮಾರ್ಗ ಸಿದ್ಧವಾಗುತ್ತದೆ.

ಕನ್ನಡ ಸಾಹಿತ್ಯಕ್ಕೆ ಅನ್ವಯಿಸುವ ಸರ್ವಸಾಮಾನ್ಯ ಸಂಪಾದನ ಸೂತ್ರಗಳನ್ನೊಳಗೊಂಡ ಇಂಥ "ತಾತ್ವಿಕ ಗ್ರಂಥಸಂಪಾದನಶಾಸ್ತ್ರ" (Theoritical textual criticism) ದ ಜೊತೆ ಗದ್ಯ, ಪದ್ಯ, ಚಂಪೂ, ವಚನ, ರಗಳೆ, ಷಟ್ಪದಿ ಪ್ರಕಾರಗಳ ಸಂಪಾದನೆಗೆ ಬೇಕಾಗುವ ವಿಶಿಷ್ಟ ಸೂತ್ರಗಳನ್ನೊಳಗೊಂಡ "ಪ್ರಾಯೋಗಿಕ ಗ್ರಂಥಸಂಪಾದನ ಶಾಸ್ತ್ರ" (Applied textual criticism)ವೊಂದು ಕನ್ನಡದಲ್ಲಿ ಹುಟ್ಟಿ ಬರಬೇಕಾಗಿದೆ.

II

ಕವಿಕೃತಿ ಸಂಪಾದನಕಾರ್ಯಕ್ಕಿಂತ, ಮೊದಲು ನಮ್ಮಲ್ಲಿ ಪ್ರಾರಂಭವಾಗಿದೆ, ಶಾಸನಸಂಪಾದನ ಕಾರ್ಯ. ಹಲವು ಹಸ್ತಪ್ರತಿಗಳ ಬಲದಿಂದ ಕಳೆದುಹೋದ ಮೂಲಪಾಠವನ್ನು ರೂಪಿಸುವುದು ಕವಿಕೃತಿ ಸಂಪಾದನೆಯಾಗಿದ್ದರೆ, ಶಾಸನಸ್ಥ ಮೂಲಪಾಠವನ್ನು ಸರಿಯಾಗಿ ಓದುವುದು, ಅಶುದ್ಧ ಮತ್ತು ನಷ್ಟಭಾಗದಲ್ಲಿ ಶುದ್ಧಪಾಠವನ್ನು ಊಹಿಸುವುದು ಶಾಸನಸಂಪಾದನೆಯಾಗಿದೆ. ೧೦೦ ವರ್ಷಗಳ ಹಿಂದೆ ಪಾಶ್ಚಿಮಾತ್ಯರು ರೂಪಿಸಿದ ವಿಧಾನಗಳನ್ನವಲಂಬಿಸಿ ನಡೆದು ಬಂದ ಈ ಶಾಸನ ಸಂಪಾದನೆಯ ಇತಿಹಾಸದಲ್ಲಿ

ಕರ್ನಲ್ ಮೆಕೆಂಝಿ ಯುಗ ೧೭೯೧-೧೮೩೭
ವಾಲ್ಟರ್ ಇಲಿಯಟ್ ಯುಗ ೧೮೩೭-೧೮೭೦
ಫ್ಲೀಟ್ -ರೈಸ್ ಯುಗ ೧೮೭೦ರ ತರುವಾಯ

ಎಂಬ ಮೂರು ಘಟ್ಟಗಳು ತಲೆದೋರಿವೆ. ಮೆಕೆಂಝಿ ಯುಗದಲ್ಲಿ ಬ್ರಾಹ್ಮೀ ವರ್ಣಮಾಲೆಯನ್ನು ಅಸಮರ್ಪಕವಾಗಿ ಅರ್ಥನಮಾಡಿಕೊಂಡಿದ್ದು ಕಾರಣ, ಶಾಸನಗಳು ಅಶುದ್ಧವಾಗಿ ಓದಲ್ಪಟ್ಟು ಬಿಡಿಯಾಗಿ ಪ್ರಕಟವಾದವು. ಇಲಿಯಟ್ ಯುಗದಲ್ಲಿ ಬ್ರಾಹ್ಮಿಲೀಪಿಯನ್ನು ಸಮರ್ಪಕವಾಗಿ ಅರ್ಥೈಸಿದ ಕಾರಣ, ಶಾಸನಗಳು ತಕ್ಕಮಟ್ಟಿಗೆ ಶುದ್ಧವಾಗಿ ಓದಲ್ಪಟ್ಟು ಸಂಪುಟರೂಪದಲ್ಲಿ ಪ್ರಕಟವಾದವು. ಫ್ಲೀಟ್ ಮತ್ತು ರೈಸ್ ಯುಗವು ಶಾಸನ ಸಂಪಾದನೆಯ ವಸಂತಕಾಲ. ಕರ್ನಾಟಕ ಶಾಸನಾಧ್ಯಾಯನವನ್ನು ಶಾಸ್ತ್ರದ ನೆಲಗಟ್ಟಿನ ಮೇಲೆ ನಿಲ್ಲಿಸಿ, ಶ್ರೀಮಂತಗೊಳಿಸಿದ ಅಶ್ವಿನಿದೇವತೆಗಳಿವರು.

ಆರ್. ನರಸಿಂಹಾಚಾರ್, ಎಂ. ಎಚ್. ಕೃಷ್ಣ, ಎ. ಶೇಷಾದ್ರಿ ಅವರು ರೈಸ್ ಇವರ ಸಂಪುಟಗಳ ಸಂಪಾದನೆಯನ್ನು ಮುಂದುವರಿಸಿದರು. ಭಾರತೀಯ ಪುರಾತತ್ವ ಇಲಾಖೆಯ ಮೂಲಕ ಕನ್ನಡದ SII ಸಂಪುಟಗಳನ್ನು ಆರ್. ಶಾಮಾಶಾಸ್ತ್ರಿ, ಪಂಚಮುಖಿ, ಲಕ್ಷ್ಮೀನಾರಾಯಣರಾಯ, ಪಿ.ಬಿ. ದೇಸಾಯಿ, ಗಾಯಿ ಮೊದಲಾದವರು ಸಂಪಾದಿಸಿದ್ದಾರೆ. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆ ಪಂಚಮುಖಿ, ಪಿ.ಆರ್. ಗೋಪಾಲರ ಮೂಲಕ 'Karantaka Inscription' ಹೆಸರಿನ ಕೆಳಗೆ ೩೫ ವರ್ಷಗಳಲ್ಲಿ ಸುಮಾರು ೩೫೦ ಶಾಸನಗಳನ್ನು ಸಂಪಾದಿಸಿದೆ. ಕುಂದಣಗಾರ, ರಿತ್ತಿ ಮೊದಲಾದವರ ವ್ಯಕ್ತಿಗತ ಸೇವೆಯನ್ನೂ ಇಲ್ಲಿ ಮರೆಯುವಂತಿಲ್ಲ. ಹೀಗೆ ಅನೇಕರು

ದುಡಿದರೂ ರೈಸ್-ಫ್ಲೀಟ್‌ರನ್ನು ಮೀರಿಸುವ ಶಾಸನ ಸಂಪಾದಕರು ಕರ್ನಾಟಕದಲ್ಲಿ ಇನ್ನೂ ಹುಟ್ಟಿಲ್ಲವೆಂದೇ ನನ್ನ ಸ್ಪಷ್ಟ ತಿಳುವಳಿಕೆ.

ಇಂದಿಗೂ ಶಾಸನಸಂಪಾದನೆ ರೈಸ್- ಫ್ಲೀಟರ್ ಹಳೆಯ ದಾರಿಯಲ್ಲಿ ಜಾರುತ್ತಲಿದೆ; ಅವಸರ ಕಾರಣವಾಗಿ ಅದರ ಗುಣಮಟ್ಟವೂ ಕಡಿಮೆಯಾಗತೊಡಗಿದೆ. ಎಷ್ಟೋ ಪಾಠಗಳನ್ನು ಓದದೆ ಚುಕ್ಕೆ ಇಡುತ್ತ ಹೋದ ಇಲ್ಲವೆ ತಪ್ಪಾಗಿ ಓದಿದ ಸಂದರ್ಭಗಳು ಈಗ ಮುದ್ರಿವಾದ ಪ್ರತಿಯೊಂದು ಶಾಸನದಲ್ಲಿ ತೋರಿಬರುತ್ತಿವೆ. E.C. ಸಂಪುಟಗಳ ಪುನರ್ಮುದ್ರಣದ ಉತ್ತಮಕಾರ್ಯವನ್ನು ಕೈಕೊಂಡ ಕನ್ನಡ ಅಧ್ಯಯನ ಸಂಸ್ಥೆ ಈ ಅಂಶವನ್ನು ಗಮನಿಸುವುದೆಂದು ಭಾವಿಸುತ್ತೇನೆ.

ಶಾಸನವು ಇತಿಹಾಸ, ಸಾಹಿತ್ಯ, ಭಾಷೆ, ಸಂಸ್ಕೃತಿಗಳನ್ನೊಳಗೊಂಡ ಕ್ಷೇತ್ರ. ಆದರೆ, ಈವರೆಗೆ ಇವುಗಳನ್ನು ಓದಿದವರು. ಅರ್ಥೈಸಿದವರು ಕೇವಲ ಇತಿಹಾಸ ಪ್ರಾಧಾಪಕರು. ಇಲ್ಲವೆ ಇತಿಹಾಸದತ್ತ ಒಲವು ಉಳ್ಳವರು. ಇದರಿಂದಾಗಿ ಈವರೆಗಿನ ಶಾಸನಸಂಪಾದನೆಯಲ್ಲಿ ಒಂದು ಬಗೆಯ ಕೊರತೆ ಕಾಣುತ್ತದೆ. ಇದನ್ನು ತುಂಬಿ ಕೊಡುವ ರೀತಿಯಲ್ಲಿ ಸಾಹಿತ್ಯ, ಭಾಷೆ, ಸಂಸ್ಕೃತಿಗಳ ಪ್ರಾಧ್ಯಾಪಕರು, ಅಭ್ಯಾಸಿಗಳು ಶಾಸನಸಂಪಾದನಕ್ಷೇತ್ರದತ್ತ ಧಾವಿಸುವುದು ಅವಶ್ಯವಿದೆ.

ಹಳೆಯ ಮೈಸೂರು ಪ್ರದೇಶದಲ್ಲಿ ಶಾಸನಗಳ ಮೊದಲ ಸುತ್ತಿನ ಅನ್ವೇಷಣೆ ನಡೆದು E.C. ಮೂಲಕ ಪ್ರಕಟವಾಗಿ, ಎರಡನೆಯ ಸುತ್ತಿನ ಅನ್ವೇಷಣೆ ನಡೆದು Supplements ಮೂಲಕ ಪ್ರಕಟವಾಗಿ, ಮೂರನೆಯ ಸುತ್ತಿನಲ್ಲಿ ಅವು ಪುನರ್ಮುದ್ರಣಗೊಳ್ಳುತ್ತಿದ್ದರೂ ಉತ್ತರಕರ್ನಾಟಕದಲ್ಲಿ ಮೊದಲ ಸುತ್ತಿನ ಅನ್ವೇಷಣೆ ಸಹ ಪೂರ್ಣಗೊಳ್ಳದೆ, ಈ ಕಾರ್ಯ ಕಾಲಿಗೆ ಕಲ್ಲುಕಟ್ಟಿಕೊಂಡು ಸಾಗಿದೆ. ಹೊರನಾಡಿನಲ್ಲಿಯಂತೂ ಅದು ಪರದೇಶಿಯಾಗಿ ಬಿದ್ದಿದೆ. ಸರ್ಕಾರವಾಗಲೀ, ಕರ್ನಾಟಕದ ವಿಶ್ವವಿದ್ಯಾಲಯಗಳಾಗಲೀ, ಇವು ಮಣ್ಣುಗೂಡುವ ಮುನ್ನ ಕಣ್ಣು ತೆರೆದರೆ, ೧೦ ಸಾವಿರ ಹೊಸಶಾಸನಗಳನ್ನು ಸಂಪಾದಿಸಬಹುದಾಗಿದೆ.

ಕವಿಕೃತಿ ಸಂಪಾದನೆ, ಶಾಸನಸಂಪಾದನೆಗಳಿಗಿಂತ ಜಟಿಲವಾದುದು ಜಾನಪದ ಸಾಹಿತ್ಯ ಸಂಪಾದನೆ. ಇದನ್ನು ಸಂಗ್ರಹಿಸುವುದು ಸುಲಭ; ಸಂಪಾದಿಸುವುದು ಕಷ್ಟ. ಪ್ರದೇಶದಿಂದ ಪ್ರದೇಶಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಪಾಠಾಂತರಗೊಳ್ಳುವ ಈ ಪ್ರಕಾರವನ್ನು ಪರಿಷ್ಕರಿಸುವ ವಿಧಾನದ ಬಗ್ಗೆ ಯಾರೂ ಚಿಂತಿಸಿಲ್ಲ. ಈ ಸಾಹಿತ್ಯ ನಿವೇದಕನ ಊರು, ಹೆಸರು, ವಯಸ್ಸು, ಜಾತಿ ಇಷ್ಟು ಬರೆದುಕೊಂಡರೆ ಸಂಪಾದನೆ ಶಾಸ್ತ್ರೀಯವಾಯಿತೆಂಬಂತೆ ವರ್ತಿಸುತ್ತಿರುವುದು ತೀರ ಸಾಮಾನ್ಯವಾಗಿ ಕಾಣುತ್ತದೆ. ಕೆ. ಶಿವರಾಮ ಐತಾಳ, ಗುಂಡ್ಮಿ ಚಂದ್ರಶೇಖರ ಐತಾಳರ "ದಕ್ಷಿಣ ಕನ್ನಡದ ಜನಪದ ಸಾಹಿತ್ಯ" "ಮದ್ದುಂಟೆ ಜನನ ಮರಣಕ್ಕೆ"ಗ್ರಂಥಗಳ ಮುನ್ನುಡಿಯಲ್ಲಿ ಮಾತ್ರ ಜಾನಪದ ಪದ್ಯಸಾಹಿತ್ಯಸಂಪಾದನೆಯ ವಿಧಾನಗಳ ಬಗ್ಗೆ ಮಾಡಿದ ಸ್ವತಂತ್ರ ಚಿಂತನೆಯಿದೆ.

ಜಾನಪದಸಾಹಿತ್ಯ ಸಂಪಾದನೆಯು ಪದ್ಯದಿಂದ ಗದ್ಯ, ದೃಶ್ಯ ಮೊದಲಾದ ಕ್ಷೇತ್ರಗಳಿಗೆ ಸರಿಯುತ್ತಲಿರುವ ಇಂದಿನ ಸಮಯದಲ್ಲಿ ಅದರ ಸಂಪಾದನ ಸೂತ್ರಗಳನ್ನು ರೂಪಿಸುವುದು ತೀರ ಅವಶ್ಯವಿದೆ. ಎಲ್ಲ ಪ್ರದೇಶಗಳ ಸಾಹಿತ್ಯವನ್ನು ಒಬ್ಬನೇ ಸಂಪಾದಿಸುವುದರಿಂದ ಪ್ರದೇಶನಿಷ್ಠವಾಗಿ ಬೆಳೆದ ಜಾನಪದದ ಸ್ವರೂಪ ಕೆಡುವ ಕಾರಣ, ಆ ಆ ಪ್ರದೇಶದ ಜಾನಪದ ವಿದ್ವಾಂಸರೇ ಅದನ್ನು ಸಂಪಾದಿಸಬೇಕು.

ಜಾನಪದ ಸಂವೇದನೆ ಜಾಗತಿಕವಾಗಿದ್ದರೂ ಜನಾಂಗಕ್ಕೆ ತಕ್ಕಂತೆ ಅದರಲ್ಲಿ ಭಿನ್ನತೆ, ವೈಶಿಷ್ಟ್ಯಗಳಿರುವುದರಿಂದ ನಮ್ಮ ಜಾನಪದ ಸಾಹಿತ್ಯವನ್ನು ಪಶ್ಚಿಮದೃಷ್ಟಿಯಿಂದ ಮೊಳಹಾಕಿ ಅಳೆವ

ಪ್ರಸ್ತಾವನೆಗಳಿಂದಾಗಿ ಅಪಾಯವುಂಟಾಗುವ ಸಾಧ್ಯತೆಯಿದೆ; ಪ್ರಸ್ತಾವನೆಗೂ ಪಠ್ಯಕ್ಕೂ ಸಂಬಂಧ ತಪ್ಪುವ ಸಂಭವವಿದೆ. ಕಾರಣ ಪಶ್ಚಿಮದಿಂದ ಪಡೆಯಬೇಕಾದ ಅನುಭವ ಅಂಧಾನುಕರಣವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮ ಜಾನಪದ ಸಂಪಾದಕರ ಮೇಲಿದೆ.

ಜಾನಪದ ಸಂಪಾದನೆಗಳಿಗೆ ಅನುಬಂಧ ಜೋಡಿಸುವ ರೂಢಿ ನಮ್ಮಲ್ಲಿ ಬೆಳೆದು ಬಂದಿಲ್ಲ. ಹೀಗಿದ್ದರೂ ೩೦ ವರ್ಷಗಳ ಹಿಂದಿನ ಎಲ್.ಗುಂಡಪ್ಪನವರ 'ನಾಡಪದಗಳು', ಇಂದಿನ ಎಚ್.ಎಲ್.ನಾಗೇಗೌಡರ 'ಸೋಬಾನೆ ಚಿಕ್ಕಮ್ಮನ ಪದಗಳು' ಉಪಯುಕ್ತ ಅನುಬಂಧಗಳಿಂದ ಕೂಡಿವೆ.

ಕರ್ನಾಟಕದ ತುಂಬ ಎಂದಿನಿಂದಲೂ ಕೇಳಿಬರುತ್ತಲಿರುವ ಗ್ರಾಮೀಣ ಪರಿಸರದ ಅನುಭಾವಪದಗಳ ಧ್ವನಿ ಇಂದು ದೂರವಾಗುತ್ತ ನಡೆದಿದೆ. ಇವುಗಳನ್ನು ಸಂಗ್ರಹಿಸಿ, ಸಂಪಾದಿಸುವುದರ ಮೂಲಕ ನಮ್ಮ ಜನಪದಸಾಹಿತ್ಯಲೋಕದ ಹೊಸದೊಂದು ಜಗತ್ತನ್ನು ಬೆಳಕಿಗೆ ತರಬೇಕಾಗಿದೆ.

ಜಾನಪದವೆಂಬುದು ಕರ್ನಾಟಕದಲ್ಲಿ ಗೌಡ ಒಕ್ಕಲಿಗ, ಲಿಂಗವಂತ ಒಕ್ಕಲಿಗ, ಹಾಲಕ್ಕಿ ಒಕ್ಕಲಿಗ, ಕುರುಬ ಒಕ್ಕಲಿಗ, ಬೇಡ, ಹರಿಜನ ಮೊದಲಾದ ಬ್ರಾಹ್ಮಣೇತರರ ಸೃಷ್ಟಿ. ಇದಕ್ಕೆ ಹೊರತಾಗಿ ಬ್ರಾಹ್ಮಣರಲ್ಲಿ ಸಂಸ್ಕೃತ ಮಿಶ್ರಿತ ಜನಪ್ರಿಯಸಾಹಿತ್ಯವೊಂದಿದೆ. ಇದು "ಜಾಣಪದ ಸಾಹಿತ್ಯ"ವೇ ಹೊರತು "ಜಾನಪದ ಸಾಹಿತ್ಯ"ವಲ್ಲ. ಈ ಎರಡನ್ನೂ ಪ್ರತ್ಯೇಕವಾಗಿ ಸಂಪಾದಿಸಬೇಕಲ್ಲದೆ ಕೂಡಿಸಿ ಕುಲಗೆಡಿಸಬಾರದು.

ಬೆಂಗಳೂರಿನ ಅಧ್ಯಯನಕೇಂದ್ರ ವಿಚಾರ-ವಿಮರ್ಶೆಗಳತ್ತ, ಧಾರವಾಡದ ಅಧ್ಯಯನಪೀಠ ಸಂಶೋಧನೆ-ಸಂಪಾದನೆಗಳತ್ತ ತಮ್ಮ ಶಕ್ತಿಯನ್ನು ಕೇಂದ್ರೀಕರಿಸಿದರೆ, ಮೈಸೂರಿನ ಅಧ್ಯಯನ ಸಂಸ್ಥೆ ಜಾನಪದ ಸಂಪಾದನೆ-ಸಮಾಲೋಚನೆಗಳಿಗೆ ವೈಜ್ಞಾನಿಕ ತಳಹದಿಯನ್ನು ಒದಗಿಸಿ, ಅದಕ್ಕೆ ಪೋಷಣೆಯನ್ನು ನೀಡುತ್ತಲಿದೆ. ಇಲ್ಲಿ ಜೀವ ಪಡೆದ ಜಾನಪದವಿದ್ವಾಂಸರಿಂದಾಗಿ ಸಂಗ್ರಹ ಸಂಪಾದನೆಗಳಿಗೆ ಒಂದು ಹೊಸ ವೇಗ ಪ್ರಾಪ್ತವಾಗಿದೆ.

* * *

ಹೀಗೆ ಪ್ರಾಚೀನಕೃತಿ ಸಂಪಾದನೆ, ಶಾಸನಸಂಪಾದನೆ, ಜಾನಪದಸಾಹಿತ್ಯ ಸಂಪಾದನೆ ನಮ್ಮಲ್ಲಿ ಬೆಳೆದುಬಂದಿದೆ; ಬರುತ್ತಲಿದೆ. ಸಂಪಾದಕ ತಾನು ಸಂಪಾದಿಸುತ್ತಿರುವ ಕೃತಿ ಮತ್ತು ಪಾಠಗಳ ಅಂತರಂಗದಲ್ಲಿ ಇಳಿಯದ ಹೊರತು, ಸತ್ಯಪಾಠದ ಸಾಕ್ಷಾತ್ಕಾರ ಸಾಧ್ಯವೇ ಇಲ್ಲ. "To know a word is to know the truth" ಎಂಬ ಪ್ರಜ್ಞೆಯಿಂದ ಅವನು ಕಾರ್ಯತತ್ಪರವಾಗಬೇಕು. "ಒಂದು ಮಾತಿನ ಸೋಲ ಗೆಲ್ಲಕ್ಕೆ ಹೋರುವೆ" ಎಂಬ ಛಲ ಅವನಲ್ಲಿ ಬೇಕು. ಇಲ್ಲದಿದ್ದರೆ ಕಣ್ಣುತೆರೆದು ಮಾಡುವ 'ಕ್ರಿಯೆ'ಯಾದ ಅದು, ಕಣ್ಣುಮುಚ್ಚಿ ಮಾಡುವ 'ಕರ್ಮ'ವಾಗಿ ಪರಿಣಿಸುತ್ತದೆ.

■■

ಆಕರ : ಮಾರ್ಗ ಸಂಪುಟ–೨

೩೬

ಶಾಸನ ಪಾಠಪರಿಷ್ಕರಣ

ಅಸತ್ಯಪಾಠಗಳನ್ನು ವರ್ಜಿಸಿ ಸತ್ಯಪಾಠವನ್ನು ನಿರ್ಣಯಿಸುವುದು ಪಾಠಪರಿಷ್ಕರಣದ ಪರಮೋದ್ದೇಶ. ಈ ಪರಿಷ್ಕರಣ ವಿಧಾನಗಳು ಭಾಷೆಯಿಂದ ಭಾಷೆಗೆ ಕೆಲಮಟ್ಟಿಗೆ ಭಿನ್ನವಾಗಿರುವಂತೆ, ಗ್ರಂಥಪಾಠಪರಿಷ್ಕರಣ ವಿಧಾನಕ್ಕಿಂತ ಶಾಸನಪಾಠಪರಿಷ್ಕರಣ ವಿಧಾನವೂ ಕೆಲಮಟ್ಟಿಗೆ ಭಿನ್ನವಾಗಿದೆ. ಅಂದರೆ ಹಲವು ಹಸ್ತಪ್ರತಿಗಳ ಬಲದಿಂದ ಕಳೆದು ಹೋದ ಮೂಲಪಾಠವನ್ನು ರೂಪಿಸುವುದು ಗ್ರಂಥಸಂಪಾದನೆಯಾಗಿದ್ದರೆ, ಶಾಸನಸ್ಥ ಮೂಲಪಾಠವನ್ನು ಸರಿಯಾಗಿ ಓದುವುದು, ಅಶುದ್ಧ ಮತ್ತು ನಷ್ಟಭಾಗಗಳಲ್ಲಿ ಶುದ್ಧಪಾಠವನ್ನು ಊಹಿಸಿವುದು ಶಾಸನ ಸಂಪಾದನೆಯಾಗಿದೆ.

ಕವಿ, ಲಿಪಿಕಾರ, ರೂವಾರಿಗಳ ಬುದ್ಧಿಮಟ್ಟವನ್ನವಲಂಬಿಸಿ ಪ್ರತಿಯೊಂದು ಶಾಸನ ನಿರ್ಮಾಣಪ್ರಸಂಗದಲ್ಲಿ ಶುದ್ಧವೋ, ಅಶುದ್ಧವೋ ಆದ ಒಂದು ಪಾಠವನ್ನು ಧರಿಸಿರುತ್ತದೆ. ನಿರ್ಮಾಣೋತ್ತರ ಕಾಲದಲ್ಲಿ ಅದು ಹಲವು ಆಘಾತಗಳಿಗೆ ಗುರಿಯಾಗುತ್ತ ಬಂದು ಪರಿಷ್ಕರಣದ ಹೊತ್ತಿಗೆ ಇನ್ನೊಂದು ಪಾಠಧರಿಸಿ ನಿಂತಿರುತ್ತವೆ. ಈ ಉಭಯ ಪ್ರಸಂಗಗಳಲ್ಲಿ ತಲೆಯೆತ್ತುವ ಪ್ರಮಾದಗಳ ಕಾರಣ, ಸ್ವರೂಪಗಳನ್ನು ಮೊದಲು ಅವಲೋಕಿಸಬಹುದು.

೧. ಶಾಸನ ನಿರ್ಮಾಣ ಪ್ರಸಂಗ : ಒಂದು ಶಾಸನನಿರ್ಮಿತಿಯ ಹಿಂದೆ ಕವಿ, ಲಿಪಿಕಾರ ಮತ್ತು ರೂವಾರಿ ಹೀಗೆ ಮೂವರ ಪರಿಶ್ರಮವಿರುತ್ತದೆ. ಈ ಮೂರೂ ಕಾರ್ಯ ಒಬ್ಬನಿಂದಲೇ ಇಲ್ಲವೆ ಕವಿಯ ನೇತೃತ್ವದಲ್ಲಿಯೇ ಶಾಸನ ನಿರ್ಮಾಣ ನಡೆದಿದ್ದರೆ ಆ ಶಾಸನಕ್ಕೆ ಮೂಲಪ್ರತಿಯೆಂಬ ಬೆಲೆ ಸಲ್ಲುತ್ತದೆ. ಆದರೆ "ಮಾರಮರಸಂ ಹೇಳ್ದು ತಾನೆ ಬರೆದ ಶಾಸನಂ"[೧] ಎಂಬಂತೆ ಕವಿಯೇ ಲಿಪಿಕಾರನ ಕಾರ್ಯವನ್ನು, "ಹುಲಿಗೆರೆಯ ಬಮ್ಮೋಜ ತಾನೆ ಬರೆದು ತಾನೆ ಕಂಡರಿಸಿದಂ"[೨] ಎಂಬಂತೆ ರೂವಾರಿಯೇ ಲಿಪಿಕಾರನ ಕಾರ್ಯವನ್ನು ಮಾಡಿದ್ದರೆ ಅದಕ್ಕೆ ಎರಡನೆಯ ನಕಲು ಪ್ರತಿಯೆಂಬ ಬೆಲೆ ಸಲ್ಲುತ್ತದೆ. "ಜನ್ನಯ್ಯನ ಕವಿತೆ, ದಾವಣ್ಣನ ಬರೆಪ, ಮಲ್ಲೋಜನ

೧. ಕಕಚ ೫೨೮. ಹಂಪೆಯ ಶಾಸನ (೧೧೯೯)

೨. SII XX ಪು. ೯೫ ಬಾಳಂಬೀಡ -ಧಾರವಾಡ ಜಿಲ್ಲೆ (೧೧೧೮)

ಕಂಡರಣೆ"[೩] ಎಂಬಂತೆ ಮೂರೂ ಕಾರ್ಯ ಒಬ್ಬೊಬ್ಬರಿಂದ ನಡೆದಿದ್ದರೆ (ಹೀಗೆ ನಡೆಯುವುದು ಸರ್ವಸಾಮಾನ್ಯ) ಅದು ಮೂರನೆಯ ನಕಲು ಪ್ರತಿಯೆನಿಸಿಕೊಳ್ಳುತ್ತದೆ. ಹೀಗಾಗಿ ಶಾಸನಗಳಲ್ಲಿ ಈ ಮೂವರಿಂದ ಕೆಳಗಣ ರೀತಿಯ ದೋಷಗಳು ಬೆಳೆದುಬರುತ್ತವೆ.

೧.ಕೆಲವು ಶಾಸನಗಳನ್ನು ಬಿಟ್ಟರೆ, ಆ ಆ ಊರಿನ ಶಾಸನಕ್ಕೆ ಸಾಹಿತ್ಯ ಒದಗಿಸಿದವರು ಉತ್ಕೃಷ್ಟ ಕವಿಗಳಲ್ಲ, ಸಾಮಾನ್ಯ ಪದ್ಯರಚಕರು. ಶುದ್ಧಭಾಷಾ ಬಲ್ಲಿದರಲ್ಲ, ಸಾಮಾನ್ಯ ಬರಹಗಾರರು. ಇವರಿಂದ ಮೂಲಪಾಠವೇ ಛಂದಸ್ಸು ಭಾಷೆಗಳ ದೃಷ್ಟಿಯಿಂದ ದೋಷಪೂರ್ಣವಾಗಿರಲು ಸಾಧ್ಯವಿದೆ.

೨.ಕವಿಯಿಂದ ಪಡೆದ ಪಾಠವನ್ನು ಲಿಪಿಕಾರ, ಅದು ತನಗೆ ಕಂಡ ರೀತಿಯಲ್ಲಿ ಕಲ್ಲ ಮೇಲೆ ತೀಡುವುದರಿಂದ ಪಾಠ ವ್ಯತ್ಯಾಸಗೊಳ್ಳಬಹುದು. ಕೆಲವು ಸಲ ಮರೆತುಬಿಟ್ಟ ಅಕ್ಷರ ಇಲ್ಲವೆ ಪದಗಳನ್ನು ಈತನು ಸಾಲುಗಳ ಮೇಲೆ ಇಲ್ಲವೆ ಶಾಸನದ ಮಗ್ಗಲು ಬರೆದಿರಬಹುದು. ಒಮ್ಮೊಮ್ಮೆ ಅರಿತೋ ಅರಿಯದೆಯೋ ಲೋಪ, ಆಗಮ ಆದೇಶಗಳನ್ನೂ ಮಾಡುವ ಸಂಭವವುಂಟು.

೩.ಅಕ್ಷರಗಳನ್ನು ಕಂಡರಿಸುವ ರೂವಾರಿ ತೀರ ನಿರಕ್ಷರಿ. ಅಕ್ಷರಗಳ ಅಂಗಾಂಗಗಳ ಅಂಧಾನುಕರಣೆಯಿಂದ ಮತ್ತು ಕೈತಪ್ಪಿ ಬಿದ್ದ ಉಳಿಯ ಹೊಡೆತದಿಂದ ಅಕ್ಷರ ರೂಪ ವಿಕಾರಗೊಳ್ಳುತ್ತದೆ. ಇಲ್ಲವೆ ಒಂದು ಅಕ್ಷರ ಬೇರೊಂದು ಅಕ್ಷರದ ರೂಪ ಪಡೆಯುತ್ತದೆ.

ಹೀಗೆ ಕವಿ, ಲಿಪಿಕಾರ, ರೂವಾರಿಗಳಿಂದ ಶಾಸನ ನಿರ್ಮಾಣಪ್ರಸಗಂದಲ್ಲಿ ಸ್ಖಾಲಿತ್ಯಗಳುಂಟಾಗುತ್ತವೆ. ಈ ಮೂವರಲ್ಲಿ ಇವು ಯಾರಿಂದ ಘಟಿಸಿರಬಹುದೆಂದು ನಿರ್ಣಯಾತ್ಮಕವಾಗಿ ಹೇಳುವುದು ದುಸ್ತರವೆನಿಸಿದರೂ ಅಂತಹ ಕೆಲವು ಉದಾಹರಣೆಗಳನ್ನು ಇಲ್ಲಿ ನೋಡಬಹುದು.

ನಡೆದು ಪಸಾಯ್ತಂ ಪತಿಗೆ ದಟ್ಟಡಿಯೊಳ್ ತೊದಳಿಲ್ಲೆನಲ್ ತೊದಲ್।
ನುಡಿದು ಪಸಾಯ್ತಂ ಪತಿಗೆ ಬಾಲ್ಯದೊಳನ್ಯ ನೃಪಂಗೆ ಭಂಗಮಂ।
ಪಡೆದು ಪಸಾಯ್ತಂ ಪತಿಗೆ ಜೌವನದೇಳ್ಗೆಯೊಳೆಂದೊಡೆಲ್ಲಿಯುಂ।
ಬಿಡದೆ ಪಸಾಯ್ತಂ ಸಲೆ ಪಸಾಯ್ತಂ ಲಕ್ಕಣದಂಡನಾಯಕಂ॥[೪]

ಇಲ್ಲಿ 'ಪಸಾಯಿತಂ' ಪದಕ್ಕೆ ಬದಲು 'ಪಸಾಯ್ತಂ' ಬಳಕೆಯಾಗಿ ಭಾಷೆ, ಛಂದಸ್ಸುಗಳ ಶುದ್ಧಿಗೆ ಚ್ಯುತಿ ಬಂದಿದೆ. ಕವಿ ಇಲ್ಲವೆ ಲಿಪಿಕಾರನಿಂದ ಸಂಭವಿಸಿರಬಹುದಾದ ದೋಷವಿದು.

ಎನೆ ಕೇಳ್ದದ್ರಿಜೆ ಬಿನ್ನಪಂ ಶಿವ ಜಗಕ್ಕೀ ಮಾರ್ಗಮಂ ತೋರಬೇ।
ಕ್ಕೆನಲಂದಾ ಪ್ರಭು ನಂದಿನಾಥನ ಮೊಗನ್ನೋಡಲ್ಕೆ ಶ್ರೀ ಸಂಗಮೇ
ಶನಪುತ್ರಂ ಬಸವಯ್ಯ ಬಂಕನದರಿಂ ಶಿವಮುದ್ದುದೇವಂ ಜಗ।
ಕ್ಕನಿಮಿತ್ತಂ ಶಿವದೇವನಾಗಿಯು ಗಣ ಶ್ರೀಪಾದಮಂ ತೋರುವೆ ॥[೫]

---

೩. EC V-ii ಚನ್ನರಾಯಪಟ್ಟಣ ೧೭೯ -ಆನೇಕೆರೆ (೧೧೯೦)

೪. EI XVI ಪು. ೩೨೦ ನರೇಂದ್ರ-ಧಾರವಾಡ ಜಿಲ್ಲೆ (೧೧೨೩-೨೬)

೫. ಶಾಸನಗಳಲ್ಲಿ ಶಿವಶರಣರು ಪು. ೬೨ ಚೌಡದಾನಪುರ-ಧಾರವಾಡ ಜಿಲ್ಲೆ (೧೨೬೦)

ಇಲ್ಲಿಯ 'ಬಸವಯ್ಯ ಬಂಕ' ಎಂಬುದು ಅರ್ಥವಾಗದ ದೋಷಪಾಠ. ಕವಿ ನೀಡಿದ ಶುದ್ಧಪಾಠ ಲಿಪಿಕಾರನಿಂದಲೋ ರೂವಾರಿಯಿಂದಲೋ ಹೀಗೆ ದೋಷರೂಪಕ್ಕೆ ತಿರುಗಿರಲು ಸಾಧ್ಯವಿದೆ.

ಸುರಚಾಂಬೋಲೆ ವಿದ್ಯುಲ್ಲತೆಗಳ ತೆಜಿವೋಲ್ಮಂಜುವೋಲ್ಪೋಜ್ ಬೇಗಂ।
ಪಿರಿಗುಂ ಶ್ರೀರೂಪಲೀಲಾಧನವಿಭವ ಮಹಾರಾಶಿಗಳ್ನಿಲ್ಲವಾರ್ಗಂ।
ಪರಮಾರ್ತ್ಥಂ ಮೆಚ್ಚೆ ನಾನೀ ಧರಣಿಯುಳಿರವಾನೆನ್ದು ಸನ್ಯಸನಂ ಗೆ।
ಯ್ದುರು ಸತ್ವನ್ನನ್ದಿಸೇನ ಪ್ರವರ ಮುನಿವರನ್ದೇವಲೋಕಕ್ಕೆ ಸಂದಾನ್ ॥[೬]

ಈ ಪದ್ಯದ ಎರಡನೆಯ ಚರಣದ 'ಶಿ' ಎಂಬ ಅಕ್ಷರ ಮರೆತು ಹೋದ ಕಾರಣ ಶಾಸನದ ಮಗ್ಗುಲಲ್ಲಿ ಬರೆಯಲಾಗಿದೆ. ಇದು ಲಿಪಿಕಾರನ ಅನವಧಾನದಿಂದುಂಟಾದ ಸ್ಖಾಲಿತ್ಯ. ಕೆಲವು ಸಲ ಈ ಅನವಧಾನ, ಬರೆದ ಶಬ್ದ - ಚರಣಗಳನ್ನು ಮತ್ತೆ ಬರೆಸುತ್ತದೆ. ಸಿದ್ಧರಾಮನನ್ನು ಕುರಿತ ಬಹಳಷ್ಟು ಶಾಸನಗಳಲ್ಲಿ ಕಂಡುಬರುವ "ಮಾತಾಮಾತಾ ಪಿತೃಗಳೆಲ್ಲವಂ"[೭] ಎಂಬಲ್ಲಿಯ ಪದ ಪುನರ್ಲೇಖದೋಷ ಇದಕ್ಕೆ ಉದಾಹರಣೆ.

ಆ ಸಾಗರಮಂ ದಾಂಡಿ ಮ।
ಹೀಸುತೆಯಂ ಕಣ್ದು ಲಂಕೆಯಂ ಸುಟ್ಟ..........॥[೮]

ಇಲ್ಲಿ 'ದಾಂಟಿ'ಗೆ ಬದಲು 'ದಾಂಡಿ' ಎಂಬ ದೋಷಪಾಠವಿದೆ. ಇದು ಅಕ್ಷರಜ್ಞನಾದ ಲಿಪಿಕಾರನಿಂದ ಘಟಿಸದೆ ನಿರಕ್ಷರಿಯಾದ ರೂವಾರಿಯ ಅಜ್ಞಾನ ಇಲ್ಲವೆ ಅವನ ಕಂಡರಣೆಯ ದೋಷದಿಂದ ಉಂಟಾಗಿರಬಹುದು. ಹೀಗೆ ಈ ಮೂವರು ಕಾರಣವಾಗಿ ಶಾಸನಗಳು ಹುಟ್ಟುತ್ತಲೇ ದೋಷಪಾಠವನ್ನು ಧರಿಸಿಕೊಳ್ಳಬಹುದು.

೨. ಶಾಸನ ನಿರ್ಮಾಣೋತ್ತರ ಪ್ರಸಂಗ : ವೀರಗಲ್ಲು, ಸತಿಗಲ್ಲು ಮತ್ತು ನಿಷಧಿಗಲ್ಲುಗಳನ್ನು ಸಮಾಧಿಯ ಮೇಲೆ ಬಯಲಲ್ಲಿ ನಿಲ್ಲಿಸಿದರೆ, ದೇವ-ದ್ವಿಜರಿಗೆ ನೀಡಿದ ದಾನದಾಖಲೆಗಳಾದ ದತ್ತಿ ಶಾಸನಗಳನ್ನು ದೇವಾಲಯದ ಒಳಗೆ ಇಲ್ಲವೆ ಹೊರಗೆ ಸುರಕ್ಷಿತ ಸ್ಥಳದಲ್ಲಿ ನಿಲ್ಲಿಸಿರುತ್ತಾರೆ. ಹೀಗಾಗಿ ಮಳೆ-ಗಾಳಿ-ಬಿಸಿಲುಗಳೆಂಬ ನೈಸರ್ಗಿಕ ಆಘಾತಗಳಿಂದ ವೀರ, ಸತಿ ಮತ್ತು ನಿಷಧಿಗಲ್ಲುಗಳು ಹೆಚ್ಚು, ದಾನಶಾಸನಗಳು ಕಡಿಮೆ ಸವಕಳಿಹೊಂದಿವೆ. ಸಾಲದುದಕ್ಕೆ ಜನತೆಯ ಅಲಕ್ಷ್ಯ ಮತ್ತು ಮೂಢನಂಬಿಕೆ ಮೂಲದ ತಿಳಿಗೇಡಿತನ, ಉದ್ದೇಶಪೂರ್ವಕ ಕಿಡಿಗೇಡಿತನ, ಮಕ್ಕಳ ಉದ್ದೇಶರಹಿತ ಕಿಡಿಗೇಡಿತನ ಕಾರಣವಾಗಿ ಶಾಸನಪಾಠ ಕಚ್ಚುಗೊಳ್ಳುತ್ತವೆ, ನಾಶವಾಗುತ್ತವೆ.

ನಿಧಿಯಾಸೆಗಾಗಿ ಶಾಸನಗಳನ್ನು ಕಿತ್ತಾಡುವ, ಭೂಮಿ ಬೆಳೆಯದೆಂದು ಹೊಲದಲ್ಲಿಯ ಶಾಸನಗಳನ್ನು ಒಡೆದುಹಾಕುವ ಪ್ರವೃತ್ತಿ ಜನರಲ್ಲಿ ಸರ್ವೇಸಾಮಾನ್ಯವಾಗಿದೆ. ಹೊಲಮನೆ ಕಟ್ಟಡಕ್ಕೆ, ಕೊಡಲಿ ಕುಡಗೋಲು ಮಸೆಯಲಿಕ್ಕೆ, ಮಕ್ಕಳ ಜಾರುಬಂಡೆಯಾಟಕ್ಕೆ ಎಷ್ಟೋ ಶಾಸನಗಳು ತುತ್ತಾಗಿವೆ; ಮತಮುಗ್ಧರ ಎಣ್ಣೆಗಿಣ್ಣಿಗಳ ಅಭಿಷೇಕಕ್ಕೆ ಬಲಿಯಾಗಿವೆ. ಇದರಿಂದ ಬಹುಪಾಲು ಶಾಸನಗಳು ಪಾಠ ಹಾಳುಮಾಡಿಕೊಂಡಿವೆ; ಇಲ್ಲವೆ ಸಂಪೂರ್ಣ ನಾಶವಾಗಿವೆ. ಕೆಳಗಣ ಕೆಲವು ಉದಾಹರಣೆಗಳಿಂದ ಈ ಹೇಳಿಕೆಗಳನ್ನು ಸ್ಪಷ್ಟಪಡಿಸಿಕೊಳ್ಳಬಹುದು.

---

೬. EC II ಶ್ರವಣಬೆಳ್ಗೊಳ ೮೮ (೭ನೆಯ ಶತಮಾನ)

೭. EI XXXVI ಪು. ೧೬೫ ಬುಡರಸಿಂಗಿ -ಧಾರವಾಡ ಜಿಲ್ಲೆ(೧೨೫೭)

೮. SII XI-ii P. ೧೫೪ ಕುರ್ತಕೋಟಿ-ಧಾರವಾಡ ಜಿಲ್ಲೆ (೧೦೮೭)

ಸಂಗನ ಬಸವನ ಅಗ್ರ x।
x ಂಗೈಕಂ ದೇವರಾಜಮುನಿಪನ ತನಯಂ।
ಜಂಗಮ ಪರುಸಂxxರ।
ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ॥[೯]

ಬಸವಣ್ಣನವರಿಗೆ ಸಂಬಂಧಪಟ್ಟ ಅಪರೂಪ ವಿಷಯಗಳನ್ನು ಒದಗಿಸುವ ಅರ್ಜುನವಾಡ ಶಾಸನದ ಕಂದಪದ್ಯವಿದು. ಈ ಶಾಸನದ ಎರಡು ಮುಖ್ಯ ಸ್ಥಳಗಳಲ್ಲಿ ಅಕ್ಷರ ನಷ್ಟವಾಗಿದೆ. ಇದಕ್ಕೆ ಕಾರಣ ಪ್ರಕೃತಿಯ ಆಘಾತ ಇಲ್ಲವೆ ಜನತೆಯ ಅಜ್ಞಾನ. ಈ ಕ್ರಿಯೆ ಇನ್ನೂ ಬೆಳೆದು ಎಷ್ಟೋ ಶಾಸನಗಳು ಸಂಪೂರ್ಣ ಸವಕಳಿಗೊಂಡಿವೆ, ಒಡೆದು ಹೋಗಿವೆ, ನಾಮಶೇಷವಾಗಿವೆ.

ಕೆಲವು ಅಸೂಯಾಪರರು, ಶಾಸನವನ್ನು ಒಡೆದು ನುಚ್ಚುನೂರು ಮಾಡುತ್ತಾರೆ. ಬನವಾಸಿ ಮಧುಕೇಶ್ವರ ದೇವಾಲಯದಲ್ಲಿರುವ ಶಿಲಾಸ್ತಂಭದ ಮೇಲಣ ಇಡಿ ಶಾಸನಬರಹವನ್ನು ಉಳಿಯಿಂದ ಹೊಡೆದು ಉದ್ದೇಶಪೂರ್ವಕವಾಗಿ ಕೆತ್ತಿಹಾಕಿದ್ದಾರೆ. ಕಲ್ಲೇದೇವಪುರ ಶಾಸನದ (೧೨೭೯) ಮುಖ್ಯವ್ಯಕ್ತಿಯಾದ 'ಪ್ರಸಾದಿದೇವ'ನ ಹೆಸರನ್ನು ಎರಡು ಕಡೆಗಳಲ್ಲಿ ಅಳಿಸಲು ಮಾಡಿದ ಪ್ರಯತ್ನವನ್ನು ಇಲ್ಲಿ ನೆನೆಯಬಹುದು.[೧೦]

ಹೀಗೆ ಕವಿ, ಲಿಪಿಕಾರ, ರೂವಾರಿಗಳ ಮೂಲಕ ದೋಷಮುಕ್ತವೋ ದೋಷಯುಕ್ತವೋ ಆದ ಪಾಠವನ್ನು ಧರಿಸಿಕೊಂಡ ಶಾಸನಗಳು, ಕಾಲಕ್ರಮದಲ್ಲಿ ನಿಸರ್ಗದ ಆಘಾತ, ವ್ಯಕ್ತಿಗಳ ಅಜ್ಞಾನ ಮತ್ತು ಅಸೂಯೆಗಳಿಂದಾಗಿ ಇನ್ನೂ ದೋಷಗೊಂಡಿರುತ್ತವೆ. ಇಂಥ ಶಾಸನಗಳನ್ನು ಸಂಪಾದಕರು ಪರಿಷ್ಕರಿಸಬೇಕಾಗುತ್ತದೆ.

* * * * *

ಪರಿಷ್ಕರಣಕ್ಕೆ ಪೂರ್ವಭಾವಿಯಾಗಿ ಸಂಪಾದಕನು ಅಕ್ಷರದ ಒಂದು ಸಣ್ಣ ಅಂಗವೂ ಹೊರಗುಳಿಯದಂತೆ ಎಚ್ಚರ ವಹಿಸಿ ಶಾಸನದ ಪಡಿಯಚ್ಚನ್ನು ತೆಗೆದುಕೊಳ್ಳಬೇಕು. ಹೀಗೆ ಮೂಡಿಸಿಕೊಂಡ ಅಚ್ಚಿನಲ್ಲಿಯ ಅಕ್ಷರಗಳನ್ನು, ತರುವಾಯ ಉಂಟಾದ ಗೆರೆ-ಕಟ್ಟುಗಳಿಂದ ಬೇರ್ಪಡಿಸಿಕೊಳ್ಳಬೇಕು. ಆಮೇಲೆ ಕಾಲ, ದೇಶ, ವ್ಯಕ್ತಿವಿಶಿಷ್ಟ, ಶೈಲಿಗಳ ಹಿನ್ನೆಲೆಯಲ್ಲಿ ಆ ಲಿಪಿಯನ್ನು ಅರ್ಥಮಾಡಿಕೊಳ್ಳಬೇಕು. ಜೊತೆಗೆ ಆ ಸಮಯದ ಭಾಷೆ, ಛಂದಸ್ಸು, ಸಾಹಿತ್ಯಗಳ ಪರಿಜ್ಞಾನ, ಲೇಖನಪದ್ಧತಿಯ ಸೂಕ್ಷ್ಮ ಪರಿಚಯ, ಹಲವಾರು ಶಾಸನಗಳನ್ನು ಸಂಪಾದಿಸಿ ಪಡೆದ ಪರಿಜ್ಞಾನ, ಲೇಖನ ಪದ್ಧತಿಯ ಪರಿಣತಿ ಅತ್ಯವಶ್ಯ. ಇವುಗಳಿಗೆಗೆ ಮಿಗಿಲಾಗಿ ಅನವಧಾನ, ಅನ್ಯಥಾಜ್ಞಾನಗಳಿಂದ ವಿದೂರನಾಗಿ ನಿಂತು, ತನ್ನ ಕಾರ್ಯದಲ್ಲಿ ಶ್ರದ್ಧೆವಹಿಸಬೇಕು. ಇಂಥ ಎಚ್ಚರಗಳಿಗೆ ವಿಮುಖನಾದರೆ ಅಪಪಾಠಗಳು ತಲೆದೋರುತ್ತವೆ. ಉದಾ.

ಏಳು ವರ್ಷಗಳ ಹಿಂದೆ ಪ್ರಕಟವಾದ ಪಂಪನ ಗಂಗಾಧರಂ ಶಾಸನದ ಕೆಲ ಭಾಗ ಹೀಗಿದೆ. "ಗುಂಡಿಕಜ್ಜಿ ನಿಡುಂಗೊಣ್ಡೆಯಭಿಮಾನಚನ್ದ್ರನ ಮರ್ಮಂ ಭೀಮಪಯ್ಯನ, ಬೆಳ್ವೊಲ ದಣ್ಣಿಗೆಜೆಯ ಜೋಯಿಸ ಸಿಂಘನ ಮರ್ಮ[ಂ] ವಬ್ಬಣಬ್ಬೆ ಮಗಂ................. ಜಿನವಲ್ಲಭಂ."[೧೧] ಇಲ್ಲಿ ಸಂಪಾದಕರು ಊಹಿಸಿರುವ ಚೌಕ

---

೯. ಶಾಸನ ಸಂಪದ ಪು. ೧೦೨

೧೦. EC XI ಜಗಳೂರ ೩೦ ಕಲ್ಲೇದೇವರಪುರ (೧೨೭೯)

೧೧. ಭಾರತಿ (ತೆಲುಗು ಪತ್ರಿಕೆ)೧೯೬೭ ಮಾರ್ಚ

ಕಂಸಿನೊಳಗಣ ಬಿಂದುವನ್ನು ಬಿಟ್ಟರೆ 'ಮರ್ಮವಬ್ಬಣಬ್ಬೆ' ಎಂಬ ಪಾಠವುಳಿಯುತ್ತದೆ. ಆದರೆ ಇಲ್ಲಿಯ ಕವಿಪಾಠವಾದ 'ಮರ್ಮಳವಬ್ಬಣಬ್ಬೆ'ಯ ಳಕಾರದ ಮೇಲೆ ಕಚ್ಚುಬಿದ್ದು, ಅದು ವಕಾರಭ್ರಾಂತಿಯನ್ನು ಹುಟ್ಟಿಸಿದೆ. ಈ ಕಚ್ಚನ್ನು ಮೂಲ ಅಕ್ಷರದಿಂದ ಬೇರ್ಪಡಿಸಿ ನೋಡದ ಕಾರಣ ದೋಷಪಾಠ ಸ್ವೀಕೃತವಾಗಿ ವಿದ್ವಾಂಸರನೇಕರ ಚರ್ಚೆಯ ವಿಷಯವಾಗಿ ನಿಂತಿತು.[೧೨] ಇಂತಹ ಕಚ್ಚು ಮತ್ತು ಅಕ್ಷರಗಳನ್ನು ಪರಸ್ಪರ ಬೇರ್ಪಡಿಸಿಕೊಳ್ಳುವುದು ಸಂಪಾದಕನ ಪ್ರಥಮ ಕರ್ತವ್ಯ.

ಲಿಪಿಯನ್ನು ಸತ್ಯರೂಪದಲ್ಲಿ ಅರ್ಥೈಸಿಕೊಳ್ಳುವದು ಸಂಪಾದಕ ಮಾಡಬೇಕಾದ ಮುಂದಿನ ಕಾರ್ಯ. ಆದರೆ ಲಿಪಿಯ ಅಪೂರ್ಣ ಪರಿಚಯ, ಅವಸರ ವಾಚನ ಪ್ರವೃತ್ತಿ, ಇಲ್ಲವೆ ಅನವಧಾನ, ಅನ್ಯಥಾಜ್ಞಾನ ಕಾರಣವಾಗಿ ಸಂಪಾದಕರು ಶಾಸನಪಾಠವನ್ನು ತಪ್ಪುತಪ್ಪಾಗಿ ಓದುವ ಸಂಭವವಿರುತ್ತದೆ. ಎಪಿಗ್ರಫಿಯಾ ಇಂಡಿಕ, ಇಂಡಿಯನ್ ಎಂಟಿಕ್ವರಿಗಳಲ್ಲಿ ಶಾಸನಗಳನ್ನು ಪ್ರಕಟಿಸುತ್ತ ಅಡಿಯಲ್ಲಿ ಕೊಟ್ಟಿರುವ ಪಾಠಾಂತರಗಳಿಂದ ಈ ಸಂಗತಿ ಸ್ಪಷ್ಟವಾಗುತ್ತದೆ. ಇಲ್ಲಿ ಒಂದು ಉದಾಹರಣೆಯನ್ನು ನೋಡಬಹುದು.

"ಶಬ್ದಾವತಾರಕಾರ ದೇವಭಾರತಿ ನಿವದ್ಧ ಬೃಹತ್ಪಥಃ ಕಿರಾತಾರ್ಜುನೀಯ ಪಞ್ಚದಶಸರ್ಗ ಟೀಕಾಕಾರ ದುರ್ವಿನೀತನಾಮಮಯಃ": ಡಾ. ಬಿ.ಎಲ್. ರೈಸ್ ಅವರು ಕ್ರಿ.ಶ. ೧೮೯೦ ರಲ್ಲಿ ಓದಿದ ಹೆಬ್ಬೂರು ಶಾಸನದ ಪಾಠವಿದು. ದುರ್ವಿನೀತವನ್ನು ವರ್ಣಿಸುವ ಈ ವಾಕ್ಯದಲ್ಲಿಯ 'ಶಬ್ದಾವತಾರಕಾರ ದೇವಭಾರತಿ ನಿವದ್ಧ ಬೃಹತ್ಪಥಃ ಎಂಬುದಕ್ಕೆ " Sabdavatarakara Devabharati nivaddha brihatpatha-Restricting himself to the path of greatness through the instruction of the devine who was the author of the Sadbavatar" ಎಂದು ಅರ್ಥ ಬರೆದು, ಶಬ್ದಾವತಾರದ ಕರ್ತೃ ಪೂಜ್ಯಪಾದನು ದುರ್ವಿನೀತನ ಗುರುವೆಂದು ಸಾರಿದರು. ೨೨ ವರ್ಷಗಳ ತರುವಾಯ ಅಂದರೆ ೧೯೧೨ರಲ್ಲಿ ಡಾ. ಆರ್. ನರಸಿಂಹಾಚಾರ್ ಅವರು ತಾವು ಶೋಧಿಸಿದ ಗುಮ್ಮರೆಡ್ಡಿಪುರ ಶಾಸನದಲ್ಲಿ ಬರುವ "ಶಬ್ದಾವತಾರ ಕಾರೇಣ ದೇವಭಾರತೀ ನಿಬದ್ಧ ವಡ್ಡಕಥೇನ" ಎಂಬ ವಾಕ್ಯದ ಬಲದಿಂದ ಮೇಲಣ ಹೆಬ್ಬೂರಶಾಸನ ಪಾಠವನ್ನು "ದೇವಭಾರತಿ ನಿವದ್ಧ ಬೃಹತ್ಕಥಃ" ಎಂದು ಸರಿಯಾಗಿ ಓದಿ, ದುರ್ವಿನೀತನು ಪೂಜ್ಯಪಾದನ ಶಿಷ್ಯನಲ್ಲವೆಂದೂ, ಈತನು ಶಬ್ದಾವತಾರ ಮತ್ತು ಬೃಹತ್ಕಥೆಗಳ ಕರ್ತೃವೆಂದೂ ಸರಿಯಾಗಿ ಹೇಳಿದರು.[೧೩] ಲಿಪಿಗಳ ಸೂಕ್ಷ್ಮ ಅಭ್ಯಾಸವಿಲ್ಲದಿದ್ದರೆ ಇಂತಹ ದೋಷಗಳು ಎದ್ದು ಬರುತ್ತವೆ.

ಅನವಧಾನದಿಂದ ಒಂದು ಅಕ್ಷರ, ಪದ ಇಲ್ಲವೆ ಚರಣವೇ ಮರೆತು ಹೋಗಬಹುದು. ಕೋಗಳಿಯ ಒಂದು ಶಾಸನದಲ್ಲಿ ಬರುವ 'ತೋಮರರಗಳೆ'ಯ "ದೇಸೀಯಗಣ ಕುಮುದವನ ಸರಚ್ಚಂದ್ರನಂ" ಪಾದದ ತರುವಾಯದ "ಭಾಸುರಗುಣಾಢ್ಯನಂ ಕೋಕಳಿಪುರೀನ್ದ್ರನಂ" ಎಂಬ ಪಾದ ಸಂಪಾದಕರ ಕಣ್ತಪ್ಪಿ ಹೋದುದು ಇದಕ್ಕೆ ನಿದರ್ಶನ.[೧೪]

---

೧೨. ಕನ್ನಡ ನುಡಿ ೧೯೭೮ ಮೇ, ೧೯೭೮ ಅಗಷ್ಟ, ೧೯೭೯ ಫೆಬ್ರುವರಿ, ೧೯೭೯ ಏಪ್ರೀಲ್-ಮೇ, ೧೯೭೯ ಜೂನ್-ಜುಲೈ,೧೯೭೯ ಅಗಷ್ಟ, ೧೯೭೯ ಸಪ್ಟಂಬರ್, ೧೯೭೯ ನವೆಂಬರ್, ಪ್ರ. ಕ ೫೦-೪, ಪ್ರಜಾವಾಣಿ ೮-೧೨-೧೯೭೮.

೧೩. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ ಪು. ೭೯ ನೋಡಿರಿ.

೧೪. ಕ. ಭಾರತಿ ೩-೪ ಪು. ೫೪

ಶಾಸನಕ್ಷೇತ್ರ ಒಂದು ಸ್ವತಂತ್ರ ಜ್ಞಾನವಲಯ. ಅದಕ್ಕೆ ತನ್ನದೇ ಆದ ಬರವಣಿಗೆಯ ರೀತಿ, ಪರಿಭಾಷೆಗಳಿವೆ. ಈ ವೈಶಿಷ್ಟ್ಯಗಳನ್ನು ಅರಿತಷ್ಟು ಶಾಸನವಾಚನ ಅರ್ಥದಷ್ಟು ಸಫಲ. ಇಲ್ಲವಾದರೆ ಓದು ದೋಷಗೊಳ್ಳಬಹುದು. "ಬಾಳ್ಗ(ಟ್ಗಿ?)ಳ್ಚು(ಚ್ಚು)"[೧೫] ಎನ್ನುವುದು ಶಾಸನಗಳಲ್ಲಿ ಮಾತ್ರ ಕಂಡುಬರುವ ಪರಿಭಾಷೆ. ಈ ಪರಿಭಾಷೆಯ ಪರಿಚಯವಿಲ್ಲದ ಕಾರಣ ಸುಪ್ರಸಿದ್ಧ ಆತಕೂರ ಶಾಸನದ ಪಾಠವನ್ನು "ಬಾಲ್ಗ[೦][ಮೆ]ಚ್ಚುಗೊಟ್ಟಂ"[೧೬] ಎಂದು ಸಂಪಾದಕರು ದೋಷಪೂರ್ಣ ಊಹಾತ್ಮಕ ಪರಿಷ್ಕರಣ ಮಾಡಿದರು. ಇಂತಹ ಹಲವಾರು ಉದಾಹರಣೆಗಳು ಪ್ರಕಟಿತ ಶಾಸನಸಂಪುಟಗಳಲ್ಲಿ ಕಂಡುಬರುತ್ತವೆ.

ಶಾಸನಕ್ಕೆ ಬಳಸಿದ ಶಿಷ್ಟಭಾಷೆ ಇಲ್ಲವೆ ಗ್ರಾಮ್ಯಭಾಷೆಗಳಲ್ಲಿ ಅಜ್ಞಾನಮೂಲ ಲೇಖನ ದೋಷಗಳು ಎಡೆಪಡೆದಿರುತ್ತವೆ. ಇವೆಲ್ಲ ಕೂಡಿ ಶಾಸನಪಾಠವೆನಿಸಿವುದರಿಂದ ಸಂಪಾದಕನು ಕನಿಷ್ಠಪಕ್ಷ ಈ ಅಜ್ಞಾನ ಮೂಲ ಲೇಖನದೋಷಗಳನ್ನು ಹಾಗೆಯೇ ಇಟ್ಟು ಪಾಠವನ್ನು ಸಿದ್ಧಪಡಿಸಬೇಕು. ಅವಶ್ಯವೆನಿಸಿದಲ್ಲಿ ಮಾತ್ರ ಇಂಥ ದೋಷಗಳನ್ನು ಸರಿಪಡಿಸಬೇಕು. ಉದಾ:

ಅಲ್ಲಿಯ ನಿರ್ಝ್ಝರೋದಕದಿನೊಪ್ಪುವ ತೀರ್ತ್ಥಮಿದೀ ಜಗಕ್ಕೆ ಪೆಂ।
ಪೆಲ್ಲಮನಾನ್ತ ಶಂಕರ ಶಯಂಭು ಸುವರ್ಣ್ನ ಮಹಾಕ್ಷಿದೇವ.....।[೧೭]

ಇಲ್ಲಿ 'ಶಯಂಭು'ವಿಗೆ ಪ್ರತಿಯಾಗಿ 'ಸ್ವಂಯಭು' ಇರಬೇಕು. "ಗೋತ್ರರತ್ನನೆಂಬುದು ಸಖಿಳಾವನಿತದೊಳ್"[೧೮] ಎಂಬಲ್ಲಿಯ 'ಸಖಿಳಾ' ಎಂಬುದಕ್ಕೆ ಪ್ರತಿಯಾಗಿ 'ಸಕಳಾ' ಇರಬೇಕು. ಶಾಸನೋಕ್ತ ಇಂತಹ ಭಾಷಾದೋಷಗಳನ್ನು ತಿದ್ದಬಹುದೇ ಹೊರತು ಗ್ರಾಮ್ಯವನ್ನು ತಿದ್ದಿ ಶಿಷ್ಟಗೊಳಿಸಬಾರದು. ಅದರ ಭಾಷಾವೈಶಿಷ್ಟ್ಯವನ್ನು ಬದಲಿಸಬಾರದು.

ಶಾಸನಪಾಠವನ್ನು ನಿರ್ಣಯಿಸುವಲ್ಲಿ ಪ್ರಾಸ, ಛಂದಸ್ಸುಗಳ ಕಡೆಗೆ ಗಮನವಿರುವುದು ಅವಶ್ಯವೂ ಪ್ರಯೋಜಕವೂ ಆಗಿದೆ.

ಆ ಕಮನೀಯವಪ್ಪ ವಿಷಯಕ್ಕೆ ವಿಭೂಷಣವಾಗಿ ತೋರ್ಪ ಕುಂ।
ದೂರನದೊಂದು ನಾಲಗೆಯ ಮಾನವನೇವೊಗಳ್ದಪ್ಪನೆಯ್ದೆ ಕೈ।
ವಾರದೊಳಾ ನೆಗರ್ತ್ತೆಯಮರಾವತಿ ಮಿಕ್ಕಳಕಾಪುರಂ ಜಗ ।
ತ್ಸಾರಮೆನಿಪ್ಪ ಭೋಗವತಿ ತಾನೆನಿಕುಂ ವಸುಧಾಂತರಾಳದೊಳ್ ॥[೧೯]

ಧಾರವಾಡ ತಾಲೂಕಿನ ನರೇಂದ್ರದ ಶಾಸನಪದ್ಯವಿದು. ಪ್ರಾಸಸ್ಥಾನದಲ್ಲಿ 'ಕ', 'ರ' ಅಕ್ಷರಗಳು ಬಂದು ಕನ್ನಡದ ಪ್ರಾಸತತ್ವ ಇಲ್ಲಿ ಚ್ಯುತಗೊಂಡಿದೆ. ಅದಕ್ಕಾಗಿ 'ಆ ಕಮನೀಯವಪ್ಪ' ಎಂಬುದಕ್ಕೆ 'ಆ ರಮಣೀಯವಪ್ಪ' ಎಂಬ ಬದಲಾವಣೆಯನ್ನು ಸೂಚಿಸಬಹುದು.

---

೧೫. ಹಲ್ಮಿಡಿ ಶಾಸನ ನೋಡಿರಿ.

೧೬. EI II P. ೧೭೧ ಆತಕೂರ ಶಾಸನ ೯೫೦

೧೭. EI XVI ಪು. ೩ ಸೊಗಲ (ಬೆಳಗಾವಿ ಜಿಲ್ಲೆ)೯೮೦

೧೮. EI XVI ಪು. ೭೭ ಹೊಟ್ಟೂರ (ಧಾರವಾಡ ಜಿಲ್ಲೆ) ೧೦೩೭

೧೯. EI XIV ಪು. ೩೦೧ ನರೇಂದ್ರ (ನರೇಂದ್ರ ಧಾರವಾಡ ಜಿಲ್ಲೆ) ೧೧೨೫

"ಪರಿಣತಿಯೊಳ್ ಜನಂ ಪೊಗಳ್ವ ಸಮೃದ್ಧಿಯೊಳತ್ಯುದಾರದೊಳ್:"[೨೦] ಚಂಪಕಮಾಲೆಯ ಈ ಚರಣದಲ್ಲಿ 'ಪೊಗಳ್ವ'ದ ತರುವಾಯ '-U' ಗಳ ಕೊರತೆಯಿದೆ.

ಬಿರುದಿನ ಅಂಕಮಾಲೆ ತೊಡರಿಕ್ಕಿದ ಕಾಲಲು ಗಂಡಪೆಂಡರಂ
ಕರಗಸ ಗಾಳ ನಿಚ್ಚಣಿಗೆ ದಬ್ಬುಕಮೆಂಬಿವನಿಕ್ಕಿ ಕಾದಿ ನಿ
ತ್ತರಿಸದೆಯೋಡಿಹೋದ ಬೆ
ಳ್ಪೆರಲೆಯ ಬೇಂಟೆಯಲ್ ಕೊಲಲುವೊಲ್ಲದೆ ಕಾವನು ವಿಕ್ರಭೂಭುಜಂ||[೨೦ಅ]

ಈ ಚಂಪಕಮಾಲೆಯ ಮೂರನೆಯ ಸಾಲಿನ 'ಹೋದ' ಮತ್ತು 'ಬೆ' ಮಧ್ಯೆ ಇರಬೇಕಾದ ೧೨ ಅಕ್ಷರಗಳು ಇಲ್ಲ. ಲಿಪಿಕಾರನ ಮರವೆಯಿಂದ ಮರೆಯಾದ ಈ ಅಕ್ಷರಗಳನ್ನು ತುಂಬಿಕೊಳ್ಳಲು ಬೇರೆ ಆಧಾರಗಳಿಲ್ಲ.

'ಸ್ಮರರಾಜಧಾನಿಯೊ'[೨೧]
'ಸದಮಳ ಗುಣನಿಳಯಂ'[೨೨]

ಕಂದದ ಈ ಕಿರಿಯ ಚರಣಗಳಲ್ಲಿ ಮಾತ್ರೆಯ ಕೊರತೆಯಿದ್ದು ಇವುಗಳನ್ನು "ಸ್ಮರರಾಜ ರಾಜಧಾನಿಯೊ" "ಸದಮಳಗುಣಗಣನಿಳಯಂ" ಎಂದು ತಿದ್ದಲು ಸಾಧ್ಯವಿದೆ.

ತ್ತುಂಗಾದ್ರಿಯ ಮೇಗೆ ಸಿಂಹನಂದ್ಯಾಚಾರ್ಯಂ ಬಂ||
ದಿಂಗಿಣಿ ಮರಣಂಗೊಯ್ದೊಡೆ।[೨೩]

ಈ ಎರಡರಲ್ಲಿ ಮೊದಲಿನದು ಕಂದದ ದೀರ್ಘಚರಣವಾಗಿದೆ. ಎರಡು ಅಧಿಕ ಮಾತ್ರೆಗಳನ್ನೊಳಗೊಂಡ ಇದನ್ನು

ತ್ತುಂಗಾದ್ರಿಯ ಮೇಗೆ ಸಿಂಹನಂದ್ಯಾಚಾರ್ಯಂ||
ಇಂಗಿಣಿಮರಣಂಗೆಯ್ದೊಡೆ। .

ಎಂದು ತಿದ್ದಬಹುದು. ಹೀಗೆ ಪ್ರಾಸ, ಛಂದಸ್ಸುಗಳು ಶಾಸನಪಾಠವನ್ನು ನಿರ್ಧರಿಸುವಲ್ಲಿ ನೆರವಾಗುತ್ತವೆ.

ಕವಿ ಸಾಹಿತ್ಯ ಮತ್ತು ಶಾಸನಸಾಹಿತ್ಯಗಳ ತೌಲನಿಕ ಅಭ್ಯಾಸ ಶಾಸನಪಾಠ ನಿರ್ಣಯದಲ್ಲಿ ಕೆಲವೊಮ್ಮೆ ಸಹಾಯನೀಡುತ್ತದೆ. ಉದಾಹರಣೆಗೆ ಕವಿಚಕ್ರವರ್ತಿ ಜನ್ನನಿರ್ಮಿತ ಅಮೃತಾಪುರ ಶಾಸನದ ಒಂದು ಪದ್ಯವನ್ನು ನೋಡಬಹುದು.

---

೨೦. EI IV ಹಿರೇಹಳ್ಳಿ (ಧಾರವಾಡ ಜಿಲ್ಲೆ) ೧೧೨೧
೨೦ಅ. SII IX-i ಪು. ೨೯೬ ಮನ್ನೇರಮಸಲವಾಡ (ಬಳ್ಳಾರಿ ಜಿಲ್ಲೆ)೧೧೮೩
೨೧. SII IX-i ಪು. ೩೨೨ ಕುರಗೋಡ (ಬಳ್ಳಾರಿ ಜಿಲ್ಲೆ)೧೧೭೭
೨೨. KI-i ಪು. ೯೩ ಕೈಕಿಣಿ (೧೪೧೯)
೨೩. ಹೈ. ಅರ್ಕಿ. ಸಿರೀಜ ನಂ. ೧೨ ಪು. ೯

ಕಳದೊಳ್, ಕಟ್ಟಂಕದೊಳ್, ಬಂದಡಸಿದ ಬಯಲೊಳ್, ಭಾಷೆಯೊಳ್, ಕೋಟೆಯೊಳ್, ದೋ।
ರ್ವಳದೊಳ್, ತಳ್ತಾಂಕೆಯೊಳ್, ಕೈದೆಗೆಯದ ಭರದೊಳ್,ಪೂಣ್ಕೆಯೊಳ್, ನಚ್ಚಿನಾಳ್, ಮಾ।
ರ್ಬ್ಬಳದೊಳ್, ಕಣ್ಣುಳ್ಳುವಾಳ್, ಹೊಯ್ಸಳನ ಕಟಕದೊಳ್ತಾನೆ ಸಂದಗ್ಗದಾಳ
ಗ್ಗಳದಾಳ್ ಬಲ್ಲಾಳದೇವಂಗಮಿತನ ಬಸವಂ ದಂಡನಾಥತ್ರಿಣೇತ್ರಂ॥

ಈ ಪದ್ಯವನ್ನು

ಕಳದೊಳ್ ಕಟ್ಟಂಕ[ದಾ]ಳ್, ಬಂದಡಸಿದ ಬಯಲೊಳ್ ಭಾಷೆ[ಯಾ]ಳ್, ಕೊಟೆಯೊಳ್ ದೋ ।
ರ್ವಳ[ದಾ]ಳ್, ತಳ್ತಾಂಕೆಯೊಳ್ ಕೈದೆಯದ ಭರ[ದಾ]ಳ್.........॥

ಎಂದು ಮುಂತಾಗಿ ತಿದ್ದಬೇಕೆಂದು ತೋರುತ್ತದೆ. ಈ ತಿದ್ದುಪಡಿಗೆ ಆಧಾರ

ಗುರು ದೀಕ್ಷಾವಿಧಿಗಳ್ಗೆ, ಮಂತ್ರಿ ಹಿತಕಾರ್ಯಾಳೋಚನಕ್ಕಾಳ್ದನು।
ರ್ವರೆಯಂ ಕಾವ ಗುಣಕ್ಕೆ ನರ್ಮಸಚಿವಂ ಕ್ರೀಡಾರಸಕ್ಕಾನೆಯಾಳ್।
ಗುರುಭಾರಕ್ಕಿರಿವಾಳ್ ರಣಕ್ಕೆ ತುಳಿಲಾಳ್ ಕಟ್ಟಾಯದೊಳ್ ಮೇಳದಾಳ್॥
ಪರಿಹಾಸಕ್ಕೆನಿಸಿರ್ದನೆಂತು ಮರೆವಂ ದುರ್ಯೋಧನಂ ಕರ್ಣನಂ॥

ಎಂಬ ಗದಾಯುದ್ಧದ ಪದ್ಯ.[೨೪] ಇಂತಹ ಇನ್ನೊಂದು ಉದಾಹರಣೆಗೆ ಶ್ರವಣಬೆಳ್ಗೊಳ ಶಾಸನ:

೨೪	x x ವೆತ್ತ	೩೦	ಪಲರುಂ ತೊ
೨೫	x x ಯಬ್ಬೆ	೩೧	ಲಗದರಾಯ
೨೬	ಸಾಯಲೆನ್ದು	೩೨	ದ ಚಲಮು
೨೭	ಪೆಂಡತಿಯೆ	೩೩	ಸಲಬಳಗಿ
೨೮	x x ವೊತ್ತ	೩೪	ಗನ್ದಿನಿಪ್ಪ
೨೯	ಣ್ಣಳೊಗಳೆ	೩೫	ಪೆಣ್ಡತಿಯಿನ್

ಇದು ಸಾವಿಯಬ್ಬೆಯ ಯುದ್ಧಮರಣವನ್ನು ಸಾರುವ ವೀರಗಲ್ಲು. ಸಂದರ್ಭ ಬಲದಿಂದ ೨೫ನೆಯ ಚರಣದ ಎರಡು ಅಕ್ಷರಗಳನ್ನು ತುಂಬಿಕೊಂಡು '[ಸಾವಿ?]ಯಬ್ಬೆ' ಎಂಬ ಪಾಠವನ್ನು ಸಿದ್ಧಗೊಳಿಸಬಹುದು. ಆದರೆ ಮಿಕ್ಕ ಎರಡು ಪ್ರಕಟಿತಭಾಗ (ಚರಣ ೨೪, ೨೮)ಗಳನ್ನು ತುಂಬಲು ಅಜಿತಪುರಾಣದ

ಕಲಿಯೆನೆ ನೆಗಟ್ದಳ್ ಕಸವರ ।
ಗಲಿಯೆನೆ ಗುಣದಂಕಕಾರ್ತಿ ಮೊನೆಯೊಳ್ ಮನೆಯೊಳ್ ।
ಮೊಲೆವೆತ್ತ ತೈಲಜನನಿಯ ।
ಕೆಲದೊಳ್ ರಂಜಿಪರೆ ಮೀಸೆವೊತ್ತಣ್ಣಂಗಳ್॥

---

೨೪. ಕನ್ನಡ ಗ್ರಂಥಸಂಪಾದನಶಾಸ್ತ್ರ ಪು. ೧೮೪-೮೫

ಎಂಬ ಪದ್ಯವನ್ನು ನೆನೆಸಿಕೊಂಡರೆ ಸಾಕು "[ಮೊಲೆ?]ವೆತ್ತ [ಸಾವಿ?]ಯಬ್ಬೆ ಸಾಯಲೆನ್ನು ಪೆಂಡತಿಯೆ [ಮೀಸೆ?] ವೊತ್ತಣ್ಣಳೊಗಳೆ" ಎಂದು ಮುಂತಾಗಿ ಪಾಠ ಸಿದ್ಧವಾಗುತ್ತದೆ.[೨೫] ಹೀಗೆ ಕವಿಸಾಹಿತ್ಯದ ಅಭ್ಯಾಸಬಲದದಿಂದ ಶಾಸನಪಾಠಗಳನ್ನು ನಿರ್ಣಯಿಸಲು ಸಾಧ್ಯವಾಗುತ್ತದೆ.

ಒಬ್ಬ ವ್ಯಕ್ತಿ ಇಲ್ಲವೆ ಒಂದು ಸಂಗತಿಯನ್ನು ವರ್ಣಿಸುವ ಗದ್ಯ ಇಲ್ಲವೆ ಪದ್ಯಗಳು ಹಲವಾರು ಶಾಸನಗಳಲ್ಲಿ ಪುನರುಕ್ತಗೊಂಡಿರುತ್ತವೆ. ಇವುಗಳ ವ್ಯಾಸಂಗದಿಂದ ಶುದ್ಧಪಾಠ ನಿರ್ಣಯಿಸಲು ಸಾಧ್ಯವಾಗಬಹುದು. ಉದಾ:

೧. ಅಂಬುಧಿ ಮೇರೆದಪ್ಪಿ ಕವಿದೀ ಧರೆಯಂ ಕೊಳುವಂದು ವಿಷ್ಣುವೀ।
ಶಂ ಬೆರಸೀ ಜಗತ್ರಯಮುಮಂ ಬಸಿರೊಳ್ನಿಲಿಸಿಟ್ಟು ಕಾವವೋ ।
ಲಿಂ ಬಳಿದಿಟ್ಟ ನಾಲ್ದೆಸೆಯ ನಾಡುಗಳಂ ಪೆಱಗಿಕ್ಕಿ ಕಾವ ಸೇ ।
ಡಿಂಬದ ವಿಪ್ರರೊಂದಳವನೇವೊಗಳ್ವೆಂ ಚಲದಂಕರಾಮರಂ ॥[೨೬]
(ಪಾಠಾಂತರ : ಕೊಳುವಲ್ಲಿ, ಬಱಿದಿರ್ದ್ದ, ಕದನಪ್ರಚಂಡರಂ)

೨. ಕ್ರ್ಕಲಬಬ್ಬ್ಯಾಕರಣಜ್ಞರಿಂತಿನಿತುಮಂ ಬಲ್ಲನ್ನರಿಲ್ಲೆಲ್ಲಮಂ ।
ಸಲೆ ಸೋಮೇಶ್ವರ ಸೂರಿ ಬಲ್ಲನನಘಂ ನಯ್ಯಾಯಿಕಾಗ್ರೇಶ್ವರಂ ॥[೨೭]
(ಪಾಠಾಂತರ:ಬಾಪ್ಪಿಂತು ವಿಶ್ವಂಭರಾ।ತಳದೊಳ್ ಬಲ್ಲವರಾರೆನಲ್ಕೆ ನೆಗೆಟ್ದಂ ವಿದ್ಯಾಬ್ಧಿ ಸೋಮೇಶ್ವರಂ)

ಹೀಗೆ ಬೇರೆ ಶಾಸನಗಳಲ್ಲಿ ಭಿನ್ನಪಾಠಗಳು ಗೋಚರಿಸುತ್ತವೆ, ಸಮಾನವಾದ ಇಲ್ಲವೆ ಅಲ್ಪಸಮಾನವಾದ ಇಂಥ ಭಿನ್ನಪಾಠಗಳು ಯಾವ ಶಾಸನದಲ್ಲಿ? ಯಾವ ಕಾಲದ ಶಾಸನದಲ್ಲಿ? ಯಾವ ವರ್ಣನಾಪ್ರಸಂಗದಲ್ಲಿ? ಸಿಗುವುದೆಂಬುದು ಸಂಪಾದಕನ ನೆನಪಿನಲ್ಲಿ ನೆಲೆಯೂರಿರಬೇಕು. ಇದರಿಂದ ದೋಷಪಾಠಗಳನ್ನು ದೂರಗೊಳಿಸಲು, ನಷ್ಟಪಾಠಗಳನ್ನು ತುಂಬಲು ಅನುಕೂಲವಾಗುತ್ತದೆ.

ಶಾಸನ ಸಂಪಾದನ ಪ್ರಸಂಗದಲ್ಲಿ ಅಡ್ಡಬರುವ ಈ ಎಲ್ಲ ಎಡರುಗಳನ್ನು, ಇವುಗಳ ನಿವಾರಣೋಪಾಯಗಳನ್ನು ಅರ್ಥಮಾಡಿಕೊಂಡು ಸಂಪಾದಕನು ಪರಿಷ್ಕರಣ ಕಾರ್ಯದಲ್ಲಿ ತೊಡಗಬೇಕಾಗುತ್ತದೆ. ಈ ಕಾರ್ಯದಲ್ಲಿ ಅವನಿಗೆ ಹಲವು ಸಂಕೇತಗಳ ಬಳಕೆ ಅನಿವಾರ್ಯ. ಸಾಮಾನ್ಯವಾಗಿ ಶಾಸನಸಂಪಾದಕರು

ನಷ್ಟಭಾಗದ ಸೂಚನೆಗೆ ....[೨೮]
ಮೂಲದಲ್ಲಿಲ್ಲದ ಪಾಠ ಸೂಚನೆಗೆ [*]
ಮೂಲದಲ್ಲಿ ಸಂದೇಹವಾಗಿರುವ ಪಾಠ ಸೂಚನೆಗೆ [ ]
ತಿದ್ದುಪಡಿಮಾಡಿದ ಪಾಠ ಸೂಚನೆಗೆ ( )

---

೨೫. ಕನ್ನಡ ಗ್ರಂಥಸಂಪಾದನಶಾಸ್ತ್ರ ಪು. ೧೬೧
೨೬. ಜೈ.ಸೌ.ಇಂ.ಪು. ೨೬೯ ಸೇಡಂ (ಕಲಬುರ್ಗಿ ಜಿಲ್ಲೆ) ೧೦೯೪
೨೭. EI XVI ಪು. ೩೨ ಅಬ್ಬಲೂರು (ಧಾರವಾಡ ಜಿಲ್ಲೆ)೧೧೦೧
೨೮. ಗದ್ಯದ ನಷ್ಟಭಾಗ ಸೂಚನೆಗೆ ಒಂದು ಅಕ್ಷರಕ್ಕೆ ಒಂದು ಚುಕ್ಕೆ ಉಪಯೋಗಿಸಬೇಕು. ಪದ್ಯದ ನಷ್ಟಭಾಗ ಸೂಚನೆಗೆ ಚುಕ್ಕೆಯ ಬದಲು ಚೌಕ ಕಂಸಿನಲ್ಲಿ ಗುರು ಲಘುಗಳನ್ನು ಯೋಜಿಸಿಕೊಳ್ಳಬೇಕು.

ಈ ಚಿಹ್ನೆಗಳನ್ನು ಬಳಸುತ್ತಿದ್ದರೂ ಅವರಲ್ಲಿ ಕಟ್ಟುನಿಟ್ಟು ಇಲ್ಲ. ಒಬ್ಬೊಬ್ಬರು ಒಂದೊಂದು ಚಿಹ್ನೆ ಬಳಸಿದ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಈ ಅನೈಕ್ಯತೆ ನಿಲ್ಲಬೇಕು. ಮೇಲಾಗಿ ಸಮರ್ಪಕ ಸಂಪಾದನೆಗೆ ಇಷ್ಟು ಚಿಹ್ನೆಗಳು ಸಾಲವೆಂದು ತೋರುತ್ತದೆ, ಅದಕ್ಕಾಗಿ ಎಲ್ಲ ಪ್ರಸಂಗಗಳಿಗೂ ಉಪಯೋಗಬೀಳುವ, ಎಲ್ಲರಿಗೂ ಮಾನ್ಯವೆನಿಸುವ ಇನ್ನಷ್ಟು ಚಿಹ್ನೆಗಳನ್ನು ರೂಢಗೊಳಿಸುವುದು, ಶಾಸನಪ್ರಪಂಚದಲ್ಲಿ ಅತ್ಯವಶ್ಯವಿದೆ.

■■

ಆಕರ : ಮಾರ್ಗ ಸಂಪುಟ-೨

೩೭

ಪ್ರಾಚೀನ ಕನ್ನಡದ ಒಂದು ಉಚ್ಚಾರ

ಉಚ್ಚಾರ- ಬರಹಗಳೆಂಬ ಎರಡು ಮಾಧ್ಯಮಗಳಲ್ಲಿ ಭಾಷೆ ವ್ಯವಹರಿಸುತ್ತದೆ. ಇದನ್ನೇ ಕೇಶಿರಾಜ "ವ್ಯವಹರಿಪುವೆರಡು ರೂಪಿಂದವಕ್ಕರಂ" ಎಂದು ಹೇಳುತ್ತಾನೆ. ಇವುಗಳಲ್ಲಿ ಬರಹಸೌಲಭ್ಯದ ಮೂಲಕ ಪ್ರಾಚೀನಭಾಷೆಯ "ಲಿಖಿತರೂಪ"ವನ್ನು ಹಿಡಿದಿಟ್ಟ ನಮ್ಮ ಪ್ರಾಚೀನರು, ಧ್ವನಿಮುದ್ರಿಕೆಯ ಅಭಾವದಿಂದಾಗಿ ಅದರ 'ಧ್ವನಿರೂಪ'ವನ್ನು ಹಿಡಿದಿಡಲಿಲ್ಲ. ಆದರೂ ಪ್ರಾಚೀನ ಸಾಹಿತ್ಯದಲ್ಲಿ ಕಂಡುಬರುವ ಒಂದು ಪದದ ಎರಡು ರೂಪ, ಕೆಲವು ಪದಗಳ ಇಂದಿನ ಉಚ್ಚಾರ ಮತ್ತು ಅಂಶಲಯದ ಲಕ್ಷಣ - ಇವುಗಳ ಆಧಾರದಿಂದ ಪ್ರಾಚೀನ ಕನ್ನಡಭಾಷೆಯ ಒಂದು ಮಹತ್ವದ ಉಚ್ಚಾರಸ್ವರೂಪವನ್ನು ಗುರುತಿಸಬಹುದಾಗಿದೆ. ಹೀಗೆ ಗುರುತಿಸುವುದಕ್ಕೆ ಪ್ರಮಾಣಭಾಷೆಯಲ್ಲಿ ಬರೆದ ಮಾರ್ಗಸಾಹಿತ್ಯಕ್ಕಿಂತ ಜನಭಾಷೆಯಲ್ಲಿ ಬರೆದ ದೇಶಿಸಾಹಿತ್ಯ ಹೆಚ್ಚು ನೆರವಾಗುತ್ತದೆ.

ಭಾಷೆಯಲ್ಲಿ ಪೂರಕದೀರ್ಘೀಕರಣತತ್ವಕ್ಕನುಗುಣವಾಗಿ ಅಕ್ಷರಲೋಪವನ್ನು ದೀರ್ಘಗಳು ತುಂಬಿಕೊಳ್ಳುತ್ತವೆ. ಉದಾ: ಹಿರಿಯಮಠ>ಹಿರೇಮಠ, ಜವರಯ್ಯಗೌಡ>ಜವರೇಗೌಡ. ಆದರೆ ಈ ತತ್ವಕ್ಕೆ ಹೊರತಾಗಿ ವಚನಸಾಹಿತ್ಯದಲ್ಲಿ ಮಾದರ ಚೆನ್ನಯ್ಯ>ಮಾದಾರಚೆನ್ನಯ್ಯ, ಡೋಹರ ಕಕ್ಕಯ್ಯ>ಡೋಹಾರ ಕಕ್ಕಯ್ಯ, ಮೇದರ ಕೇತಯ್ಯ>ಮೇದಾರ ಕೇತಯ್ಯ, ಮಡಿವಳ ಮಾಚಯ್ಯ,>ಮಡಿವಾಳ ಮಾಚಯ್ಯ ಎಂಬಂಥ ಹ್ರಸ್ವ-ದೀರ್ಘರೂಪದ ಜೋಡು ಉಚ್ಚಾರಗಳು ಸಿಗುತ್ತವೆ.ಇವು ಪೂರಕಗದೀರ್ಘೀಕರಣಗಳಲ್ಲ. ಹಾಗಾದರೆ ಇದಕ್ಕೆ ಅನ್ವಯಿಸಬೇಕಾದ ತತ್ವ ಯಾವುದು? ಡಾ. ಎಂ. ಚಿದಾನಂದಮೂರ್ತಿಯವರು ".........ಪದದ ಎರಡನೆಯ ಹ್ರಸ್ವವನ್ನು ದೀರ್ಘ ಮಾಡುತ್ತಾರೆ. ಉದಾ : ಅಣ್ಣಾರಾವ್, ಅಪ್ಪಾರಾವ್, ಅಯ್ಯಾಶಾಸ್ತ್ರಿ. ಈ ಪ್ರವೃತ್ತಿ ತೆಲುಗಿನಿಂದ ದತ್ತವಾಗಿ ಬಂದಂತೆ ತೋರುತ್ತದೆ"[೧] ಎಂದು ಹೇಳುವ ಮಾತನ್ನು ಮಾದರ>ಮಾದಾರ ರೂಪಗಳಿಗೂ ಅನ್ವಯಿಸಬೇಕೆನಿಸುತ್ತದೆ. ಆದರೆ ಈ ಪ್ರಕ್ರಿಯೆ ತೆಲುಗಿನ ಪ್ರಭಾವವಾಗಿರಲಿಕ್ಕಿಲ್ಲ. ಅಂಶಗಣದ ದ್ವಿತೀಯ ಅಂಶವು ಹ್ರಸ್ವವಿದ್ದರೂ ದೀರ್ಘವಾಗುವುದೆಂಬ ತತ್ವ ಇಲ್ಲಿ ಪ್ರಭಾವ ಬೀರಿದೆ. ಇದಕ್ಕನುಗುಣವಾಗಿ ಮೇಲೆ ಹೇಳಿದ ಪದಗಳು ಮಾದಽರ, ಡೋಹಽರ, ಮಡಿವಽಳ, ಮೇದಽರ ಎಂದು ಆ ಕಾಲದಲ್ಲಿ ತರಂಗಯುಕ್ತವಾಗಿ

೧. ವಾಗರ್ಥ ಪು. ೫೩

ಉಚ್ಚರಿಸ್ಪಡುತ್ತಿರಬಹುದು. ಇಂದಿನ ಬರವಣಿಗೆಯಲ್ಲಿ ಇಂಥ ತರಂಗ ಸೂಚಿಸಲು ಇರುವ ಅವಗ್ರಹ ಚಿಹ್ನೆ(ಽ)ಯ ಸೌಕರ್ಯ ಅಂದು ಇರದ ಕಾರಣ ಹ್ರಸ್ವಾಕ್ಷರಗಳನ್ನೇ ದೀರ್ಘಮಾಡಿಕೊಳ್ಳುತ್ತಿದ್ದಿರಬಹುದು. ಉದಾ : ಹಲ್ಮಿಡಿ ಶಾಸನದ ವೀರಾಪುರುಷ (<ವೀರಽಪುರುಷ<ವೀರಪುರುಷ), ಬಾದಾಮಿ ಶಾಸನದ ಸಾಧೂಗೆ ಸಾಧು ಮಾಧೂರ್ಯಂಗೆ ಮಾಧುರ್ಯ (<ಸಾಧುಽಗೆ ಸಾಧು ಮಾಧುಽರ್ಯಂಗೆ ಮಾಧುರ್ಯ<ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯ), ಇತ್ತೋದು (<ಇತ್ತೊಽದು<ಇತ್ತೊದು). ಆಡುಮಾತಿಗೆ ಸಂಬಂಧಿಸಿದ ಗ್ರಾಮನಾಮಗಳಲ್ಲಿ ಈ ಪ್ರಕ್ರಿಯೆ ಈಗಲೂ ಕಂಡುಬರುತ್ತದೆ. ಉದಾ : ರಾಜಾಪುರ (<ರಾಜಽಪುರ <ರಾಜಪುರ), ಮಲ್ಲಾಪುರ (<ಮಲ್ಲಽಪುರ<ಮಲ್ಲಪುರ) ಇತ್ಯಾದಿ.

ಇಂಥ ಜೋಡುರೂಪಗಳನ್ನು ಗಮನಿಸಿಯೇ ಕೇಶಿರಾಜ ತನ್ನ ಶಬ್ದಮಣಿ ದರ್ಪಣದಲ್ಲಿ ಹೀಗೆ ಹೇಳುತ್ತಾನೆ:

ಅವಿಶೇಷದಿನಾ ದೀರ್ಘ
ವ್ಯವಹೃತಿ ಶಬ್ದಾಂತರಾದೊಳ್ ಪಕ್ಷದಿನು
ದ್ಭವಿಕುಂ ದ್ವಿತೀಯೆಗಂ ಮುಂ
ದವತರಿಸಲೊಡಂ ಸ್ವರಪ್ರಪೂರ್ವಪದಂಗಳ್ ||೧೨೮||

ಪ್ರಯೋಗಂ -ಶಬ್ದಾಂತರಾಳ ದೀರ್ಘಕ್ಕೆ : ಇಂದೊಳಂ-ಇಂದೋಳಂ, ಆರೊಗಿಸಿದಂ-ಆರೋಗಿಸಿದಂ, ಎಣಗೊಣಂ-ಎಣಗೋಣಂ, ಗೆಯ್ಯೊಗಂ-ಗೆಯ್ಯೋಗಂ, ಮೆಯ್ಯೊಗಕೆ-ಮೊಯ್ಯೋಗಕೆ.

ದ್ವಿತೀಯಾ ದೀರ್ಘಕ್ಕೆ : ಕಲ್ಲನೇಱಿದಂ-ಕಲ್ಲಾನೇಱಿದಂ, ಬಿಲ್ಲನದಂ-ಬಿಲ್ಲಾನದಂ. ಇಲ್ಲಿ ದೀರ್ಘವಾದುವು ೨ನೆಯ ಅಂಶಗಳೆಂಬುದನ್ನು ಗಮನಿಸಬೇಕು. ಮೂಲತಃ ಹ್ರಸ್ವವಾಗಿದ್ದ ಇವು ಇಂದೊಽಳಂ, ಕಲ್ಲಽನೇಱಿದಂ ಎಂದೇ ಉಚ್ಚರಿಸಲ್ಪಡುತ್ತಿರಬೇಕು. ಇದೇ ರೀತಿ ಕಾಲುರಿಚ>ಕಾಲೂರಿಚ, ಕುಂಬರ>ಕುಂಬಾರ, ಪಚ್ಚಯಿಲ>ಪಚ್ಚಾಯಿಲ ಇತ್ಯಾದಿ ಜೋಡುರೂಪಗಳು ದೊರೆಯುವುದಕ್ಕೆ ಛಂದಸ್ಸಿನ "ದ್ವಿತೀಯ ಅಂಶ ದೀರ್ಘ" ತತ್ವವೇ ಕಾರಣವೆಂದು ಹೇಳಬೇಕಾಗುತ್ತದೆ.

ಹ್ರಸ್ವಗಳಲ್ಲಿ ಇ, ಉ, ಎ, ಒ ಗಳನ್ನು ಸ್ವಲ್ಪ ಎಳೆದು ಉಚ್ಚರಿಸಿದರೆ ಕ್ರಮವಾಗಿ ಇಽ(ಈ), ಉಽ(ಊ), ಎಽ(ಏ), ಒಽ(ಓ) ಎಂದು ದೀರ್ಘವಾಗುತ್ತದೆ. ಅಕಾರದೀರ್ಘ ಮಾತ್ರ ಅಂದು ಸಣ್ಣ ಸಮಸ್ಯೆಯಾಗಿ ಕಾಡಿರಬಹುದು. ಏಕೆಂದರೆ ಒಂದು ಕಾಲಘಟ್ಟದಲ್ಲಿ ಅಕಾರವನ್ನು ದೀರ್ಘಮಾಡಿದಾಗ ಉಚ್ಚಾರದಲ್ಲಿ ಅಽ ಎಂದೂ ಬರೆವಣಿಗೆಯಲ್ಲಿ ಆ ಎಂದೂ ವ್ಯವಹರಿಸುತ್ತಿತ್ತು. ಅಂದರೆ ಮೊದಲ ಘಟ್ಟದಲ್ಲಿ ಮಾದಽರ ಎಂದು ಉಚ್ಚರಿಸುತ್ತಿದ್ದರು, ಮಾದಾರ ಎಂದು ಬರೆಯುತ್ತಿದ್ದರು. ಮುಂದೆ ಎರಡನೆಯ ಘಟ್ಟದಲ್ಲಿ ಮಾದಾರ ಬರೆದುದನ್ನು ಮಾದಾರ ಎಂದೇ ಉಚ್ಚರಿಸುವುದು ರೂಢವಾಯಿತು.

ಈವರೆಗಿನ ಚರ್ಚೆಯನ್ನು ಒಂದು ಕಾಲ್ಪನಿಕ ಉದಾಹರಣೆಯಿಂದ ಹೀಗೆ ಸ್ಪಷ್ಟಪಡಿಸಬಹುದು. ಒಂದು ಕಾಲದಲ್ಲಿ ಕನ್ನಡಿಗರು ಮಾಸ್ತರ ಎಂಬುದನ್ನು ಮಾಸ್ತಽರ ಎಂದು, ಕಾಗದ ಎಂಬುದನ್ನು ಕಾಗಽದ ಎಂದು ಇಂದಿನ ಮರಾಠಿ ಭಾಷಿಕರಂತೆ ಎಳೆದು ಉಚ್ಚರಿಸುತ್ತಿದ್ದರು. ಈ ದೀರ್ಘಕ್ರಿಯೆ ಮಾತಿಗಿಂತ ಗೀತಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಉದಾ:

ಹೆಸರಿsಗಿ I ರಬಕsವಿ

ಮೊಸರಿsಗಿ।ನೀರಿಲ್ಲ.

ಹೀಗೆ ಗೀತಗಳಲ್ಲಿದ್ದ ತರಂಗಮಯ ಉಚ್ಚಾರದ ರೀತಿ, ಹೊರಗಿನಿಂದ ಬಂದ ಪ್ರಾಕೃತದ ಮಾತ್ರಾಛಂದಸ್ಸಿನ ಪ್ರಭಾವದಿಂದ ನಿಸ್ತರಂಗವಾಯಿತು. ಅಂಶಛಂದಸ್ಸಿನಂತೆ ಮಾತ್ರಾ ಛಂದಸ್ಸಿನಲ್ಲಿ ಮಾತ್ರಾಮೌಲ್ಯ ಹೆಚ್ಚುಕಡಿಮೆಯಾಗುವುದಿಲ್ಲ; ಸ್ಥಿರವಾಗಿರುತ್ತದೆ. ಹೀಗಾಗಿ ಬೇರೆಬೇರೆ ಅಕ್ಷರಗಳನ್ನು ತುಂಬುವುದರ ಮೂಲಕ ಮಾತ್ರಾಛಂದಸ್ಸು ನಮ್ಮ ಗೀತಗಳಲ್ಲಿದ್ದ ತರಂಗಗಳನ್ನು ಅಳಿಸಿಹಾಕಿತು. ಉದಾ :

ಅನ್ನsವ। ನೀಡುsದು। ನನ್ನಿsಯ। ನುಡಿವುsದು।

ಅನ್ನವನು। ನೀಡುವುದು। ನನ್ನಿಯನು। ನುಡಿಯುವುದು

ತರಂಗ ಅಳಿಸಿಹಾಕುವ ಉಪಕ್ರಮ ಗೀತಗಳಲ್ಲಿಯಂತೆ ನಮ್ಮ ಮಾತಿನ ಉಚ್ಚಾರದಲ್ಲಿಯೂ ಇಳಿದುಬಂದಿತು. ಆಗ 'ಸಂಗsಮ' ಎಂಬುದು 'ಸಂಗಮ' ಎಂದೂ 'ಕಾಗsದ' ಎಂಬುದು 'ಕಾಗದ' ಎಂದೂ ಉಚ್ಚಾರಗೊಳ್ಳತೊಡಗಿದವು. (ಕೆಲಮೊಮ್ಮೆ ತರಂಗಸ್ಥಾನದಲ್ಲಿ ಹೊಸವರ್ಣ ಸೇರತೊಡಗಿತು). ಆದುದರಿಂದ ಮಧ್ಯದೀರ್ಘದ ಕನ್ನಡಪದಗಳನ್ನು ಅಭ್ಯಸಿಸುವ ವಿದ್ವಾಂಸರು ಅವು ಮೂಲತಃ ಹ್ರಸ್ವವಾಗಿರಬಹುದೇ? ಎಂದು ಒಂದು ಕ್ಷಣ ಆಲೋಚಿಸಬೇಕಾಗುತ್ತದೆ. ಉದಾ : ಮೈಲಾರ ಇದರ ಪ್ರಾಚೀನ ರೂಪ ಮೈಲರ. ಬಾಣಾವರ ಇದರ ಪ್ರಾಚೀನರೂಪ ಬಾಣವರ. ಹೀಗೆ ಗ್ರಹಿಸಿಕೊಂಡರೆ ಮಾತ್ರ ಅವರ ಅಭ್ಯಾಸ ನಿರ್ದಿಷ್ಟ ನೆಲೆ ತಲುಪುತ್ತದೆ.

■■

ಆಕರ : ಮಾರ್ಗ ಸಂಪುಟ-೨

೩೮

ಕನ್ನಡ ಉಚ್ಚಾರ ಪದ್ಧತಿ ಮತ್ತು ಸಂಸ್ಕೃತ ಪ್ರಭಾವ

ಸಂಸ್ಕೃತ ಭಾಷೆಯಿಂದ ದ್ರಾವಿಡ ಭಾಷೆ ಭಿನ್ನವಾದುದು. ಬಹುಕಾಲದಿಂದಲೂ ಸ್ವತಂತ್ರವಾಗಿ ಬೆಳೆದು ಬಂದ ದ್ರಾವಿಡ ಭಾಷೆಗೆ ಯಾವುದೋ ಕಾಲ ಘಟ್ಟದಲ್ಲಿ ಸಂಸ್ಕೃತ ಭಾಷೆಯ ಸಂಪರ್ಕ ಒದಗಿಬಂದಿತು. ಇದರಿಂದಾಗಿ ದ್ರಾವಿಡ ನಾಮಪದಗಳು ಲೋಪ, ಆಗಮ, ಆದೇಶಗಳಿಗೆ ಗುರಿಯಾದವು. ಇದು ಯಾವುದೇ ಭಾಷೆಯಲ್ಲಿ ನಡೆಯಬಹುದಾದ ಸಹಜಕ್ರಿಯೆ. ಆದರೆ ಸಂಸ್ಕೃತ ಇನ್ನೂ ಆಳವಾಗಿ ಪ್ರಭಾವಿಸಿ ದ್ರಾವಿಡ 'ಉಚ್ಚಾರ ಪದ್ಧತಿ'ಯಲ್ಲಿ ದೊಡ್ಡ ಬದಲಾವಣೆ ಸಂಭವಿಸಲು ಕಾರಣವಾಯಿತು. ಈ ಪ್ರಕ್ರಿಯೆ ಉಚ್ಚಾರದ ಧ್ವನಿಮೌಲ್ಯ ಮತ್ತು ಮಾತ್ರಾಮೌಲ್ಯಗಳಲ್ಲಿ ಕಾಣಿಸಿಕೊಂಡಿತು. ಇದು ಎಷ್ಟರಮಟ್ಟಿಗೆ ಮುಂದುವರಿಯಿತೆಂದರೆ ಮೂಲ ದ್ರಾವಿಡದಿಂದ ಕನ್ನಡ ಸ್ವತಂತ್ರವಾಗಲು ಒದಗಿ ಬಂದ ಕಾರಣಗಳಲ್ಲಿ ಇದೂ ಬಹುಮುಖ್ಯ ಪಾತ್ರವಹಿಸಿತು. ಆದುದರಿಂದ ಮೂಲ ದ್ರಾವಿಡ ಮತ್ತು ಸಂಸ್ಕೃತಗಳು ಯಾವ ಪ್ರದೇಶದಲ್ಲಿ ಮೊದಲು ಸಂಧಿಸಿದವೋ ಆ ಪ್ರದೇಶದಲ್ಲಿ ದ್ರಾವಿಡ ಅಂಶಗಳು ಕಡಿಮೆಯಾಗುತ್ತ ನಡೆದು ಕನ್ನಡ ಆಕಾರ ಪಡೆಯಲು ಆರಂಭಿಸಿತೆಂದು ತೋರುತ್ತದೆ.

ಭಾರತವನ್ನು ಉತ್ತರಾಪಥ, ದಕ್ಷಿಣಾಪಥವೆಂದು ಪ್ರಾಚೀನ ಕಾಲದಲ್ಲಿ ಬಿಡಿಸಿ ನೋಡಲಾಗುತ್ತಿದ್ದಿತು. ಇವು ಮೂಲತಃ ಎರಡು ವಿಭಿನ್ನ ಸಾಂಸ್ಕೃತಿಕ ಪ್ರದೇಶಗಳು. ಬಹುಶಃ ಒಂದು ಆರ್ಯ ಸಮಾಜದ್ದು, ಇನ್ನೊಂದು ದ್ರಾವಿಡ ಸಮಾಜದ್ದು. ಈ ಪ್ರದೇಶಗಳ ನಡುವಿನ ಸೀಮಾರೇಖೆ ನರ್ಮದಾನದಿ. ಉತ್ತರದ ವಿಕ್ರಮಾದಿತ್ಯ, ದಕ್ಷಿಣದ ಶಾತವಾಹನರು ನರ್ಮದೆಯ ತೀರದಲ್ಲಿ ಯುದ್ಧ ಮಾಡಿ, ಆ ನದಿಯನ್ನು ತಮ್ಮ ಗಡಿ ರೇಖೆಯೆಂದು ಪರಸ್ಪರ ಒಪ್ಪಿಕೊಂಡರೆಂಬುದನ್ನು ಪುಲಿಕೇಶಿ ಇದೇ ತೀರದಲ್ಲಿ ಹೋರಾಡಿ ಉತ್ತರಾಧೀಶ್ವರ ಹರ್ಷವರ್ಧನನು ದಕ್ಷಿಣಕ್ಕೆ ಬರುವುದನ್ನು ತಡೆದು 'ದಕ್ಷಿಣಾಪಥೇಶ್ವರ' ನೆಂದು ಖ್ಯಾತನಾದನೆಂಬುದನ್ನು ನೆನಪಿಸಿಕೊಂಡರೆ ದ್ರಾವಿಡ ಭಾಷೆ ಸಂಸ್ಕೃತ ಭಾಷೆಗಳು ಮೊದಲು ಸಂಧಿಸಿದುದು ನರ್ಮದಾ ತೀರದಲ್ಲಿ ಎಂದು ಸ್ಪಷ್ಟವಾಗುತ್ತದೆ. ಆದುದರಿಂದ ಮೂಲ ದ್ರಾವಿಡ ಭಾಷೆ ಮೊದಲು ಕನ್ನಡವಾಗಿ ಪರಿವರ್ತನೆಗೊಳ್ಳಲು ಆರಂಭಮಾಡಿದುದು ಈ

ನರ್ಮದೆಯ ಕೆಳಗಿನ ತೀರದಲ್ಲಿ ಎಂದು ಹೇಳಬಹುದು. ಆಮೇಲೆ ಈ ಬದಲಾವಣೆ ಇನ್ನೂ ಕೆಳಗೆ ಸರಿದು ಕನ್ನಡ ಭಾಷೆ ನರ್ಮದೆಯಿಂದ ಗೋದಾವರೆವರೆಗೂ ಆಕಾರ ಪಡೆಯಿತು. ಜೊತೆಗೆ ಸಂಸ್ಕೃತ ಜನ್ಯ ಭಾಷೆಗಳಾದ ಮರಾಠಿ ಇತ್ಯಾದಿಗಳ ಆಕ್ರಮಣವೂ ನಡೆದು ಕನ್ನಡ ಕಾವೇರೀ ತೀರದಲ್ಲಿಯೂ ಆಕಾರ ಪಡೆಯಿತು.

ಹೀಗೆ ಕೇವಲ ಮೂಲ ದ್ರಾವಿಡದ ಪ್ರಾಂತ ಭಾಷೆಯಾಗಿ ಆಕಾರ ಪಡೆಯಬಹುದಾಗಿದ್ದ ಕನ್ನಡ –ಸಂಸ್ಕೃತ ಮಿಶ್ರ ಸ್ವತಂತ್ರ ಭಾಷೆಯಾಗಿಸುವಲ್ಲಿ ಸಂಸ್ಕೃತದ ಪ್ರಭಾವ ಬಹುಮುಖ್ಯವೆಂದು ಹೇಳಬಹುದು.

ಹೀಗೆ ಮೂಲ ದ್ರಾವಿಡವು ಕನ್ನಡವಾಗಿ ಪರಿವರ್ತನೆಗೊಳ್ಳುವಲ್ಲಿ ನಡೆದ ಸಂಸ್ಕೃತ ಪ್ರಭಾವದ ಬಹುಮುಖ್ಯ ಪ್ರಕ್ರಿಯೆಯೆಂದರೆ ಶಬ್ದಗಳ ಉಚ್ಚಾರ. ಶಬ್ದಗಳು ರೂಪಗೊಳ್ಳುವುದು ವರ್ಣಗಳಿಂದ. ದ್ರಾವಿಡ ಭಾಷೆಯ ಪರುಷ ವರ್ಣಗಳಾದ ಕಚಟತಪಗಳು ಶಬ್ದಗಳ ಪ್ರಥಮ ಸ್ಥಾನದಲ್ಲಿ ಇದ್ದ ರೂಪದಿಂದ, ಪ್ರಥಮೇತರ ಸ್ಥಾನದಲ್ಲಿ ಗಜಡದಬ ರೂಪದಿಂದ ಉಚ್ಚಾರಗೊಳ್ಳುತ್ತವೆ. ಅಂದರೆ ಒಂದೇ ವರ್ಣ ಎರಡು ಬಗೆಯ ಉಚ್ಚಾರದಲ್ಲಿ ವ್ಯವಹರಿಸುತ್ತದೆ. ಇದಕ್ಕೆ ವಿರುದ್ಧವೆನ್ನುವಂತೆ ಸಂಸ್ಕೃತದಲ್ಲಿ ಕಚಟತಪಗಳೂ, ಗಜಡದಬಗಳೂ ವ್ಯತ್ಯಾಸಗೊಳ್ಳದೇ ಇದ್ದ ರೂಪದಲ್ಲಿ ಉಚ್ಚಾರಗೊಳ್ಳುತ್ತವೆ. ಸಂಸ್ಕೃತದ ಈ ಪ್ರಭಾವದಿಂದ ದ್ರಾವಿಡ ಪದ್ಧತಿ ನಾಶವಾಗತೊಡಗಿ ಸಂಸ್ಕೃತ ಪದ್ಧತಿ ಅಲ್ಲಿ ಕಾಲೂರತೊಡಗುವಲ್ಲಿ ಅದರಲ್ಲಿ ಭಿನ್ನ ರೂಪವೊಂದು ಕಾಣಿಸಿಕೊಳ್ಳತೊಡಗಿತು. ಉದಾ: ಬರೆಹದಲ್ಲಿ 'ಕರುನಾಟ'ವೆಂದೂ ಉಚ್ಚಾರದಲ್ಲಿ 'ಕರುನಾಡ' ಎಂದೂ ಕೇಳಿಸುತ್ತಿದ್ದುದು, ಸಂಸ್ಕೃತದಲ್ಲಿ ಬರೆಹಗಳಲ್ಲಿಯೂ 'ಕರುನಾಟ'ವೆಂದು, ಉಚ್ಚಾರದಲ್ಲಿಯೂ 'ಕರುನಾಟ'ವೆಂದು ವ್ಯವಹರಿಸತೊಡಗಿತು. ಉಚ್ಚಾರದಲ್ಲಿ 'ಕರುನಾಡ' ಎಂದು ಕೇಳಿಸಿದುದು ಬರಹದಲ್ಲಿಯೂ 'ಕರುನಾಡ' ಎಂದು ಕಾಣಿಸತೊಡಗಿತು. ಇದರಿಂದ ಕರುನಾಟ, ಕರುನಾಡ ಎಂಬ ಎರಡು ಶಬ್ದಗಳು ಬರೆಹದಲ್ಲಿಯೂ, ಉಚ್ಚಾರದಲ್ಲಿಯೂ ಅಸ್ತಿತ್ವಕ್ಕೆ ಬಂದವು. ಕಾಲಕ್ರಮದಲ್ಲಿ ಕರುನಾಟ (ಕರ್ನಾಟ) ಇದು ಸಂಸ್ಕೃತ, ಕರುನಾಡು ಕನ್ನಡ ಎಂಬ ಭ್ರಮೆ ಮೂಡತೊಡಗಿತು.

ಹೀಗೆ ಕೆಳತಿ>ಕೆಳದಿ ಎಂಬ ಎರಡು ಬರೆಹ ರೂಪಗಳು, ಎರಡು ಉಚ್ಚಾರ ರೂಪಗಳೂ ಅಸ್ತಿತ್ವಕ್ಕೆ ಬಂದು ಮುಂದೆ ಗೆಳತಿ, ಗೆಳದಿ ಎಂಬಂಥ ವಿವಿಧ ರೂಪಗಳೂ ಕಾಣಿಸಿಕೊಂಡವು. ಇದಲ್ಲದೆ ಗೆಣತಿ ಎಂಬಂಥ ರೂಪಗಳೂ ಕಾಣಿಸಿಕೊಂಡವು. ಮೂಲ ದ್ರಾವಿಡದ ಇಂಥ ಎಲ್ಲ ಶಬ್ದಗಳು ಕನಿಷ್ಠ ಎರಡು ಸ್ವತಂತ್ರ ರೂಪ (ಕರುನಾಟ, ಕರುನಾಡ) ಪಡೆದು ಇಲ್ಲಿ ನಮ್ಮ ಶಬ್ದ ಭಂಡಾರ ದ್ವಿಗುಣಿತವಾಯಿತು.

ಸಂಸ್ಕೃತ ಪ್ರಭಾವದಿಂದ ನಮ್ಮ ವರ್ಣಗಳ ಮಾತ್ರಾ ಮೌಲ್ಯದಲ್ಲಿಯೂ ವ್ಯತ್ಯಾಸ ಸಂಭವಿಸಿದುದು ಇನ್ನೊಂದು ಗಮನಾರ್ಹ ಅಂಶವೆನಿಸಿದೆ. ಮೂಲತಃ ದ್ರಾವಿಡ ಭಾಷೆಯಲ್ಲಿ ಹ್ರಸ್ವ ದೀರ್ಘ ವ್ಯವಸ್ಥೆ ಬೇರೆಯಾಗಿದ್ದಿತು. ಶಬ್ದದಲ್ಲಿಯ ದೀರ್ಘವನ್ನು ದೀರ್ಘವಾಗಿಯಲ್ಲದೇ ಹ್ರಸ್ವವನ್ನು ದೀರ್ಘವಾಗಿಯೇ ಉಚ್ಚಾರಮಾಡುತ್ತಿದ್ದರು. ಉದಾ: ಮಾದರ ಚೆನ್ನಯ್ಯ>ಮಾದಾರ ಚೆನ್ನಯ್ಯ, ಕೆಲವೊಮ್ಮೆ ಈ

ದೀರ್ಘವನ್ನೂ ಬಿಂದುವಿನಿಂದ ತುಂಬಿಕೊಳ್ಳುತ್ತಿದ್ದರು. ಉದಾ: ಉನ್ನಽತ>ಉನ್ನಂತ, ಪನ್ನಽಗ>ಪನ್ನಂಗ. ಸಂಸ್ಕೃತದ ಪ್ರಭಾವ ಪ್ರವೇಶಿಸುತ್ತಲೇ ಹ್ರಸ್ವವನ್ನು ಹ್ರಸ್ವವಾಗಿ, ದೀರ್ಘವನ್ನು ದೀರ್ಘವಾಗಿ ಉಚ್ಚರಿಸುವ ಸಂಪ್ರದಾಯ ಆರಂಭವಾಯಿತು. ಅಂದರೆ 'ಮಾದರ' ಎಂದು ಬರೆದು 'ಮಾದರ' ಎಂದು ಉಚ್ಚರಿಸುವುದೂ, 'ಮಾದಾರ' ಎಂದು ಬರೆದು 'ಮಾದಾರ' ಎಂದು ಉಚ್ಚರಿಸುವುದೂ ಕಾಣಿಸಿಕೊಂಡಿತು.

■■

ಆಕರ : ಮಾರ್ಗ ಸಂಪುಟ-೭

೩೯

ವಚನಕಾರರು:ಭಾಷೆ, ಕನ್ನಡಭಾಷೆ ಮತ್ತು ವಚನಭಾಷೆ

ವಚನಕಾರರದು ಸಮಗ್ರ ಚಳುವಳಿ. ಈ ಚಳುವಳಿಯಿಂದ ಸಂಭವಿಸಿದುದು ಸಮಗ್ರ ಪರಿವರ್ತನೆ. ಈ ಪರಿವರ್ತನಕ್ರಿಯೆಗೆ ಸಮಾಜದಂತೆ, ಸಮಾಜದಲ್ಲಿ ಹುಟ್ಟುವ ಭಾಷೆಯೂ ಗುರಿಯಾದುದು ಸಹಜ. ಹೀಗಾಗಿ "ಭಾಷೆ"ಯ ಬಗ್ಗೆ, "ಕನ್ನಡಭಾಷೆ"ಯ ಬಗ್ಗೆ ಮತ್ತು "ವಚನಭಾಷೆಯ"ಬಗ್ಗೆ ಶರಣರು ತಳೆದ ನಿಲುವು, ಮಾಡಿದ ಪ್ರಯೋಗ-ಇವುಗಳ ಅಭ್ಯಾಸ ತುಂಬ ಮಹತ್ವದ್ದಾಗಿದೆ.

ಭಾಷೆ:

"ಭಾಷೆ"ಯಲ್ಲಿ ಸತ್ಯವೂ ಹುಟ್ಟುತ್ತದೆ. ಸುಳ್ಳೂ ಹುಟ್ಟುತ್ತದೆ. ಮನೋಗತವನ್ನು "ಸತ್ಯ" ತೆರೆಯುತ್ತಿದ್ದರೆ, "ಸುಳ್ಳು" ಮುಚ್ಚುತ್ತದೆ. ಇಂಥ ಸುಳ್ಳನ್ನು ಸೃಷ್ಟಿಸಬಾರದೆಂದು ಸಾಮಾನ್ಯವಾಗಿ ಎಲ್ಲ ಮಹಾತ್ಮರಂತೆ ವಚನಕಾರರೂ ಹೇಳಿದುದು ತೀರ ಸ್ವಾಭಾವಿಕ. ಇವರು ಹೀಗೆ ಹೇಳಿದುದಕ್ಕೆ ಬಸವಣ್ಣನ "ಹುಸಿಯ ನುಡಿಯಲು ಬೇಡ" ಎಂಬುದನ್ನು ಪ್ರಾತಿನಿಧಿಕವಾಗಿ ಇಟ್ಟುಕೊಳ್ಳಬಹುದು.

ಸರಳ ರೇಖೆ ಒಂದು, ಅದರ ಎಡಬಲ ಚಲಿಸುವ ವಕ್ರರೇಖೆಗಳು ಅನೇಕವೆಂಬಂತೆ, ಸತ್ಯ ಒಂದು, ಅದರ ಸುತ್ತಲಿನ ಸುಳ್ಳುಗಳು ಅನೇಕ. ಸಾಮಾಜಿಕರಲ್ಲಿ ಬಳಕೆಯಾಗುವ ಈ ಸುಳ್ಳಿನ ಪ್ರಮಾಣದ ಬಗ್ಗೆ ಚೆನ್ನಬಸವಣ್ಣ (೧೭೭೫) ಹೇಳುವುದು ಹೀಗೆ:

ಹುಸಿ ಅಂಕುರಿಸಿತ್ತು ಹೊಲೆಯನಲ್ಲಿ,
ಹುಸಿ ಎರಡೆಲೆಯಾಯಿತ್ತು ಮಾದಿಗನಲ್ಲಿ,
ಹುಸಿ ನಾಲ್ಕೆಲೆಯಾಯಿತ್ತು ಸಮ್ಮಗಾರನಲ್ಲಿ,
ಹುಸಿ ಆರೆಲೆಯಾಯಿತ್ತು ಅಗಸನಲ್ಲಿ,
ಹುಸಿ ಎಂಟೆಲೆಯಾಯಿತ್ತು ವ್ಯವಹಾರಿಯಲ್ಲಿ,
ಹುಸಿ ಸಸಿಯಾಯಿತ್ತು ಹಾದರಿಗನಲ್ಲಿ,
ಹುಸಿ ಮರನಾಯಿತ್ತು ಜೂಜುಗಾರನಲ್ಲಿ,
ಹುಸಿ ಹೂವಾಯಿತ್ತು ಡಂಬನಲ್ಲಿ,
ಹುಸಿ ಕಾಯಾಯಿತ್ತು ಅಕ್ಕಸಾಲಿಯಲ್ಲಿ,

ಹುಸಿ ಹಣ್ಣಾಯಿತ್ತು ಸೂಳೆಯಲ್ಲಿ.

ಹುಸಿ ಹಣ್ಣಾಗಿ ತೊಟ್ಟುಬಿಟ್ಟಿತ್ತು ಅರಸನಲ್ಲಿ.

೧೧ ವಾಕ್ಯಗಳ ಈ ವಚನದಲ್ಲಿ "ಹುಸಿ"ಯ ಆರಂಭ ಮತ್ತು ಅಂತ್ಯ ಬಿಂದುಗಳನ್ನು ಬೆರಳು ಮಾಡಿ ತೋರಿಸಲಾಗಿದೆ. ಇಲ್ಲಿ ಹುಸಿಯ ಪ್ರಮಾಣವು "ಹುಸಿ ಅಂಕುರಿಸಿತ್ತು ಹೊಲೆಯನಲ್ಲಿ"ಎಂಬ ೧ನೆಯ ವಾಕ್ಯದಿಂದ ಆರಂಭವಾಗಿ "ಹುಸಿ ಹಣ್ಣಾಯಿತ್ತು ಸೂಳೆಯಲ್ಲಿ"ಎಂಬ ೧೦ನೆಯ ವಾಕ್ಯಕ್ಕೆ ಪೂರ್ಣಗೊಳ್ಳುತ್ತದೆ. ಅಂದರೆ ಹೊಲೆಯನಲ್ಲಿ ಹುಟ್ಟುವ ಹುಸಿ ೧೦ರಲ್ಲಿ ೧ರಷ್ಟು. ಸೂಳೆಯಲ್ಲಿ ಹುಟ್ಟುವ ಹುಸಿ ೧೦ಕ್ಕೆ ೧೦ರಷ್ಟು. ಆದರೆ ೧೧ನೆಯ ವಾಕ್ಯದಲ್ಲಿ ಅರಸನ ಹೆಸರನ್ನು ಅಡಕಗೊಳಿಸುವ ಮೂಲಕ ಅವನ ಹುಸಿ ೧೦ಕ್ಕೆ ೧೧ರಷ್ಟು ಎಂದು ಸೂಚಿಸಿದುದು ತುಂಬ ಮಹತ್ವದ್ದು. ಸಮಾಜದಲ್ಲಿ ತೀರ ನಿಕೃಷ್ಟವ್ಯಕ್ತಿ ಹೊಲೆಯ, ಉತ್ಕೃಷ್ಟವ್ಯಕ್ತಿ ಅರಸ. ಈ ಎರಡೂ ತುದಿಗಳನ್ನು ಗಮನಿಸಿ, ಹುಸಿಯೆಂಬ ಬೀಜ ನಿಕೃಷ್ಟವೆನಿಸುವ ಸಾಮಾಜಿಕದಲ್ಲಿ ಅಂಕುರಿಸಿ, ಹಣ್ಣಾಗಿ ಕೊನೆಗೆ ಉತ್ಕೃಷ್ಟವೆನಿಸುವ ರಾಜಕೀಯದಲ್ಲಿ ತೊಟ್ಟುಬಿಚ್ಚುತ್ತದೆ, ಎನ್ನುವ ಮೂಲಕ ಉತ್ಕೃಷ್ಟದ ಮುಖವಾಡವನ್ನು ಬಿಚ್ಚಿತೋರಿಸಿದ್ದಾನೆ.

ಭಾಷೆಗೆ ಅಂಟಿಕೊಂಡಿರುವ ಈ ಹುಸಿಯೆಂಬ ಸೂತಕಕ್ಕೆ ಶರಣರ ಪ್ರಕಾರ ಎರಡು ಮಗ್ಗಲುಗಳಿವೆ. ಅವು "ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ". ಭಾಷೆಯನ್ನು ಪವಿತ್ರವಾಗಿ ಬಳಸಬೇಕೇ ಹೊರತು "ಬಣ್ಣಿಸುವ" ಸೂತಕವನ್ನಾಗಲೀ, "ಹಳಿಯುವ'' ಸೂತಕವನ್ನಾಗಲೀ ಅದಕ್ಕೆ ಅಂಟಿಸಬಾರದು. ಇವೆರಡನ್ನೂ ದೂರವಿಟ್ಟು ಭಾಷೆಯ ಶುದ್ಧಿಯನ್ನು ಉಳಿಸಬೇಕೆಂದು ಶರಣರು ವಾದಿಸುತ್ತಾರೆ.

"ತನ್ನ ಬಣ್ಣಿಸಬೇಡ" ಎಂದರೆ ತನ್ನನ್ನು ಬಣ್ಣಿಸಿಕೊಳ್ಳಬಾರದು, ತನ್ನವರನ್ನು ಬಣ್ಣಿಸಬಾರದು– ಎಂದು ಅರ್ಥ. ೧೨ನೆಯ ಶತಮಾನದ ವೇಳೆಗೆ ಕವಿಗಳು ಆತ್ಮಸ್ತುತಿ ರೂಪದಲ್ಲಿ "ಪರೀಕ್ಷಿಪಂಗೆಂಟೆರ್ದೆಯೇ?" ಎಂದು ಮುಂತಾಗಿ ತಮ್ಮನ್ನು ಬಣ್ಣಿಸಿಕೊಳ್ಳುವುದು ಹೋಗಲಿ, ಪೂಜೆ, ನೆಗಳ್ತೆ, ಲಾಭಗಳಿಗಾಗಿ ತನ್ನವರನ್ನು ಅಂದರೆ ತನಗೆ ಆಶ್ರಯನೀಡಿದ ರಾಜರನ್ನು ಕಥಾನಾಯಕರನ್ನಾಗಿ ಬಣ್ಣಿಸುವ ಪರಂಪರೆಯನ್ನು ಬೆಳೆಸಿದ್ದರು.

ಖ್ಯಾತಿಗೆ ಜೋತು, ಲಾಭಕ್ಕೆ ಲೋಭಿಸಿ......

ರಾಜದ್ವಾರದಲ್ಲಿ ಸುಳಿದು ಬಳಲುವ

ಹಿರಿಯರೆಲ್ಲರೂ ಇತ್ತಿತ್ತಲಲ್ಲದೆ ಅತ್ತಲೆಲ್ಲಿಯದೊ?

ರಾಜರನ್ನು ಸ್ತುತಿಸಲು ಭಾಷೆಯನ್ನು ಉಪಕರಣ ಮಾಡಿಕೊಂಡಿದ್ದ ಹಿರಿಯರನ್ನು ಶರಣ ಆದಯ್ಯ ಛೇಡಿಸಿದ ವಚನವಿದು. ಕರ್ನಾಟಕದಲ್ಲಿ ಆಸ್ಥಾನಕವಿಗಳು ರಾಜನ ಆಶ್ರಯದ ಕೃತಜ್ಞತೆಯನ್ನು ಕಾವ್ಯದಲ್ಲಿ ಸ್ಮರಿಸುವುದು ಹೋಗಲಿ, ಅವನನ್ನು ಕಥಾನಾಯಕನನ್ನಾಗಿ ಮಾಡಿಕೊಳ್ಳುವುದು ಹೋಗಲಿ, ರಾಮ, ಭೀಮ, ಅರ್ಜುನರೊಂದಿಗೆ ಹೋಲಿಸಿ ಬರೆಯುವ, ಇನ್ನೂ ಮುಂದು ಹೋಗಿ ಉದಾತ್ತನಾರಾಯಣ, ಉದಾರಮಹೇಶ್ವರ ಇತ್ಯಾದಿಯಾಗಿ ವರ್ಣಿಸುವ ಮೂಲಕ, ಅವನು ನಾರಾಯಣನಿಗಿಂತ ಉದಾತ್ತ, ಮಹೇಶ್ವರನಿಗಿಂತ ಉದಾರವೆಂದು ಹೊಗಳುವ ಸಾಹಿತ್ಯಸಂಪ್ರದಾಯವನ್ನು ಹುಟ್ಟುಹಾಕಿದ್ದರು. ಹೀಗೆ ಬರೆಯುವುದೇ ನಿಜವಾದ ಸಾಹಿತ್ಯವೆಂಬ

ವಾತಾವರಣ ಸೃಷ್ಟಿಮಾಡಿದ್ದರು. "ಇದಾವ ದೋಷವೋ?" ಎಂದು ಸಮರ್ಥಿಸಿಕೊಳ್ಳುತ್ತಿದ್ದರು. ಈ ರೀತಿ ವ್ಯಕ್ತಿಪ್ರಶಂಸೆಯಲ್ಲಿ ಮಾತು ಮಲಿನವಾಗಿದ್ದ ಸಂದರ್ಭದಲ್ಲಿ ತಲೆಯೆತ್ತಿದ ಶರಣರು, ಮೇಲೆ ಹೇಳಿದ ಆದಯ್ಯನ ವಚನಗಳಂಥ ಹೇಳಿಕೆಯ ಮೂಲಕ ಅಂಥದನ್ನು ಪ್ರಶ್ನಿಸಿದರು.

"ಇದಿರ ಹಳಿಯಲು ಬೇಡ"ಯೆಂದರೆ ನಿಂದಿಸಿದವರಿಗೆ ಪ್ರತಿಯಾಗಿ ನಿಂದಿಸಬೇಡ ಎಂದು ಅರ್ಥ. ಇಷ್ಟೇ ಏಕೆ "ಕಾಣದ ಠಾವಿನಲ್ಲಿ ಜರೆದರೆಂದೆಡೆ ಕೇಳಿ ಪರಿಣಾಮಿಸಬೇಕು" ಎಂದು ಹೇಳಿ, ಬೆನ್ನು ಹಿಂದೆ ಆಡಿಕೊಳ್ಳುವವರಿಗಾಗಿ ತಲೆಕೆಡಿಸಿಕೊಳ್ಳಕೂಡದೆಂದು ಸೂಚಿಸುತ್ತಾರೆ. ಇನ್ನೂ ಮುಂದುವರಿದು ವಿತಂಡವಾದಕ್ಕೆ ಪ್ರತಿವಾದ ಮಾಡಬಾರದೆನ್ನುತ್ತ,

ಒಂದಕ್ಕೊಂಬತ್ತು ನುಡಿದು, ಕಣ್ಣು ಕೆಂಚನೆ ಮಾಡಿ,
ಗಂಡುಗೆದರಿ, ಮುಡುಹಿಕ್ಕಿ ಕೆಲೆವರ ಕಂಡಡಂಜುವೆ, ಓಸರಿಸುವೆ!
ಓಡಿದೆನೆಂಬ ಭಂಗವಾದಡಾಗಲಿ:
ಕೂಡಲ ಸಂಗನ ಶರಣರ ಅನುಭಾವವಿಲ್ಲದವರ
ಹೊಲಮೇರೆಯ ಹೊಂದೆ, ಹೊಲನ ಬಿಟ್ಟೋಡುವೆ!

ಎಂದು ಹೇಳಿದುದು ಗಮನಾರ್ಹವೆನಿಸಿದೆ.

ಹೊಗಳಿಕೆಯಾಗಲಿ, ತೆಗಳಿಕೆಯಾಗಲೀ ಒಂದು ಚಟ, ಒಂದು ಭ್ರಮೆ. ಒಮ್ಮೆ ಇದಕ್ಕೆ ವಶವಾದರೆ ಮನುಷ್ಯ ವಿವೇಕ ಕಳೆದುಕೊಳ್ಳುತ್ತಾನೆ.

ಶಬ್ದಸಂಭ್ರಮದಲ್ಲಿ ಹಿಂದುಗಾಣರು, ಮುಂದುಗಾಣರು
ತಮ್ಮ ತಾವರಿಯರು......

ಎಂಬ ವಚನದಲ್ಲಿ ಅಲ್ಲಮನು ಶಬ್ದಭ್ರಮೆಯಲ್ಲಿ ಮುಳುಗಿದವರ ಸ್ಥಿತಿಯನ್ನು ಎತ್ತಿ ನುಡಿದಿದ್ದಾನೆ. ಮಾತನ್ನೇ ಮಾಧ್ಯಮ ಮಾಡಿಕೊಂಡು ಬದುಕುವ ಅಕ್ಷರಜೀವಿಗಳ ಬಗ್ಗೆ ಶರಣರಿಗೆ ಎಲ್ಲಿಲ್ಲದ ತಿರಸ್ಕಾರ. "ಮನವೇ ಸೂಳೆಯಾಗಿ ಮಾತಿನ ಮಾಲೆಯ ಪಸರವನಿಕ್ಕಿಕೊಂಡು ವಾಚಾಳಿಗತನದಿಂದ ಒಡಲ ಹೊರೆವವರೆಲ್ಲರು ಶರಣಪ್ಪರೆ?" ಎಂದು ಕೇಳುತ್ತಾನೆ, ಭೋಗಣ್ಣ.

ಈ ಎಲ್ಲ ಭ್ರಮೆಗಳಿಂದ ಇವರನ್ನು ಮುಕ್ತಮಾಡಿ, ಭಾಷೆಯ ಪಾವಿತ್ರ್ಯವನ್ನು ಪುನಃ ಸ್ಥಾಪಿಸಬಯಸಿದ ಶರಣರು

ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ಜ್ಯೋತಿಯಂತಿರಬೇಕು,
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು,
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು,
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಯ್ಯನೆಂತು ಒಲಿವನಯ್ಯಾ.

ಎಂದು ಮಾತಿನ ನಿಜಲಕ್ಷಣವನ್ನು ಸ್ಪಷ್ಟಪಡಿಸುತ್ತಾರೆ. ಆದರೆ ಈ ಪವಿತ್ರಲಕ್ಷಣದ ಮಾತು ಸೃಷ್ಟಿಯಾಗಬೇಕಾದರೆ ಇದನ್ನು ಸೃಷ್ಟಿಸುವ ಮನುಷ್ಯ ಮೊದಲು ಪವಿತ್ರನಾಗಬೇಕು.

ಮಾತು ಮನುಷ್ಯನ ಸೃಷ್ಟಿ. ಮನುಷ್ಯನೆಂದರೆ ಮನಸ್ಸು. ಮನಸ್ಸು ಮಲಿನವಾದರೆ ಅದರ ಸೃಷ್ಟಿಯಾಗಿರುವ ಮಾತೂ ಮಲಿನವಾಗುತ್ತದೆ. ಇಂಥ ಮಾತು ಮಾಲಿನ್ಯದಿಂದ ಮುಕ್ತಗೊಳ್ಳಬೇಕಾದರೆ ಅದಕ್ಕೆ ಭೂಮಿಕೆಯಾಗಿರುವ ಮನಸ್ಸು ಮಾಲಿನ್ಯದಿಂದ ಮೊದಲು ಮುಕ್ತವಾಗಬೇಕು. ಆಗ ಅವನ ಮಾತು ತಾನಾಗಿಯೇ ಸೂತಕರಹಿತವಾಗುತ್ತದೆ–ಎಂಬ ಮೂಲಸತ್ಯವನ್ನು ಶರಣರು ಪ್ರತಿವಾದಿಸುತ್ತಾರೆ. ಅಂಗಪಾತಳಿ ಅಂದರೆ ಭೌತಿಕಪಾತಳಿಯ ಮೇಲೆ ನಿಂತು ಆಡುವ ಭಾಷಾವ್ಯಾಪಾರವನ್ನು ಲಿಂಗಪಾತಳಿ ಅಂದರೆ ಅಭೌತಿಕಪಾತಳಿಗೆ ಎತ್ತಬೇಕೆಂಬುದು ಶರಣರ ನಿಲವು. ಅಂಗವು ಲಿಂಗವಾದರೆ ಅವನು ಆಡುವ ಮಾತು "ಲಿಂಗವಶದಿಂದ ಬಂದ ನುಡಿ"ಯಾಗುತ್ತದೆ. "ಕೂಡಲ ಸಂಗನ ಶರಣರು ಮನದೆರೆದು ಮಾತನಾಡಿದರೆ ಲಿಂಗವೇ ಕಾಣಬಹುದು" ಎಂಬ ಬಸವಣ್ಣನ ಹೇಳಿಕೆ ಇದೇ ಅರ್ಥವನ್ನು ಪ್ರತಿಪಾದಿಸುತ್ತದೆ. ಶರಣರ "ಮಾತೆಂಬುದು ಜ್ಯೋತಿರ್ಲಿಂಗ'' ಎಂಬ ಅಲ್ಲಮನ ಹೇಳಿಕೆಯೂ ಇದೇ ಆಗಿದೆ. ಹೀಗಿಲ್ಲದಿದ್ದರೆ

> "ಲಿಂಗವಿಲ್ಲದ ಅಂಗ ಭವಿ, ಮುಟ್ಟಲಾಗದು.
> ಲಿಂಗವಿಲ್ಲದ ಶಬ್ದ ಸೂತಕ, ಕೇಳಲಾಗದು".

ಎಂದು ಹೇಳುವ ಶರಣರ ದೃಷ್ಟಿಯಲ್ಲಿ ಆ ವ್ಯಕ್ತಿಯೂ ಭವಿ, ಅವನು ಆಡುವ ಮಾತೂ ಭವಿ. ಇದರಿಂದ ಮುಕ್ತನಾದರೆ ಅವನು ಭಕ್ತ, ಅವನು ಆಡುವ ಮಾತೂ ಭಕ್ತ. ಆ ವ್ಯಕ್ತಿಯದು ಚಲನಶೀಲ ಮೌಲ್ಯ, ಅವನು ಆಡುವ ಮಾತಿನದೂ ಚಲನಶೀಲ ಮೌಲ್ಯ. ಇಂಥ ಭಾಷೆಯನ್ನು ಶರಣರು ಬಯಸಿದರು.

ಹೀಗೆ ಮಾತು ಜ್ಯೋತಿರ್ಲಿಂಗವಾದರೆ ಮುಗಿಯಲಿಲ್ಲ. ಅದರ ಕಾರ್ಯ ಪೂರ್ಣವಾಗುವುದು "ನಡೆಯಲ್ಲಿ ನುಡಿಯ ಪೂರೈಸುವೆ" ಎಂಬ ಪ್ರಜ್ಞೆಯಿಂದ. "ನುಡಿಯೊಳಗಾಗಿ ನಡೆಯದಿದ್ದರೆ ಕೂಡಲ ಸಂಗಯ್ಯನೆಂತೊಲಿವನಯ್ಯ" ಎಂಬುದು ಅವರ ಧೋರಣೆಯಾಗಿದೆ. ಮನಸಾ ಎಂಬುದು ಸತ್ಯಸ್ವರೂಪದಲ್ಲಿ ವಾಚಾಕ್ಕೆ ಬಂದು, ಅದು ಕಾಯಾದಲ್ಲಿ (ಕ್ರಿಯಾದಲ್ಲಿ) ಅನುಷ್ಠಾನಗೊಳ್ಳಬೇಕು. ಹೀಗೆ ಮನಸ್ಸನ್ನು ಮಾತಿನಲ್ಲಿ, ಮಾತನ್ನು ಕೃತಿಯಲ್ಲಿ ಅನುಷ್ಠಾನಗೊಳಿಸುವಲ್ಲಿ ಒಂದು ಜವಾಬ್ದಾರಿಯಿದೆ. ಅದನ್ನೂ ಕುರಿತು ಅಂದರೆ ಸಮಾಜದಲ್ಲಿ ಅದು ವಹಿಸುವ ಪಾತ್ರವನ್ನೂ ಕುರಿತು ಶರಣರು ಚಿಂತಿಸಿದರು. ಈ ವಿಷಯವಾಗಿ "ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ" ಎಂದು ಹೇಳುತ್ತ ಬಸವಣ್ಣ ಭಾಷಾನಿರ್ವಹಣೆಯ ಸೂತ್ರವನ್ನು ನಮ್ಮ ಮುಂದಿಡುತ್ತಾನೆ. ಇಲ್ಲಿ "ನಿನಗೆ ಕೇಡಿಲ್ಲ"ವಾಗಿ ಎಂಬುದು ಸಾಮಾಜಿಕ ನ್ಯಾಯಕ್ಕೆ ಚ್ಯುತಿಬರದಂತೆ, "ಆನು ಒಲಿದಂತೆ" ಎಂಬುದು ನನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆ–ಹೀಗೆ ಭಾಷಾ ನಿರ್ವಹಣೆಯಿರಬೇಕೆನ್ನುತ್ತಾನೆ. ಇದು ಲಿಂಗನುಡಿ ವ್ಯವಹರಿಸಬೇಕಾದ ರೀತಿ. ಸಾಮಾಜಿಕ ನ್ಯಾಯ ಮಾತಿನ ಗುರಿಯಾಗಿರಬೇಕೆಂದು ಬಸವಣ್ಣ ಇಲ್ಲಿ ಹೇಳುತ್ತಾನೆ. ಒಟ್ಟಾರೆ ಶರಣರ "ಭಾಷಾನೀತಿ"ಯೆಂಬುದು, ಮಾಲಿನ್ಯದಿಂದ ಮಾತನ್ನು ಮುಕ್ತಗೊಳಿಸುವುದು ಮತ್ತು ಅದನ್ನು ಸಾಮಾಜಿಕ ನ್ಯಾಯಕ್ಕಾಗಿ ಬಳಸುವುದಾಗಿದೆ.

ಕನ್ನಡ ಭಾಷೆ:

ಹೀಗೆ "ಭಾಷೆ"ಯನ್ನು ಕುರಿತು ನಿರ್ವಚಿಸಿದ ಶರಣರು, ಕನ್ನಡ ಭಾಷೆಯನ್ನು ಕುರಿತು ಆಡಿದ ಮಾತು, ಮಾಡಿದ ಕಾರ್ಯ, ಅಷ್ಟೇ ಮಹತ್ವದ್ದು. "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ"

ಎಂಬ ಸಿದ್ಧಾಂತವನ್ನು ನಂಬಿದ ಇವರು, ಬದುಕಿನ ಎಲ್ಲ ಕ್ಷೇತ್ರಗಳಂತೆ ಕನ್ನಡಭಾಷಾಕ್ಷೇತ್ರವನ್ನೂ ಸ್ಥಗಿತತೆಯಿಂದ ಮುಕ್ತವಾಗಿಸುವ ಹೋರಾಟವನ್ನು ಕೈಗೆತ್ತಿಕೊಂಡರು. ಈ ಹೊತ್ತಿಗೆ ವೈದಿಕರು ಕನ್ನಡವನ್ನು ಅಸ್ಪೃಶ್ಯ ನೆಲೆಗೆ ತಳ್ಳಿದ್ದರು. ಜೈನರಲ್ಲಿ ಪಂಪನಂಥ "ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು" ಎಂಬ ಧೋರಣೆಯವರನ್ನು ಬಿಟ್ಟರೆ, ಕೆಲವರು ಸಂಸ್ಕೃತದ ಸಂಬಂಧವನ್ನು ಜಟಿಲಗೊಳಿಸುವ ಅತಿರೇಕತೆಯತ್ತ, ಇನ್ನು ಕೆಲವರು ಈ ಸಂಬಂಧವನ್ನು ನಿರಾಕರಿಸಿ ಅಚ್ಚಗನ್ನಡದಲ್ಲಿಯೇ ಬರೆಯುವ ಇನ್ನೊಂದು ಅತಿರೇಕತೆಯತ್ತ ಸಾಗಿದ್ದರು. ಜೈನರ ಇವೆರಡೂ ಧೋರಣೆಗಳು ಕನ್ನಡ ಭಾಷೆಗೆ ಅಂಟಿಕೊಂಡಿದ್ದ ಮಾಲಿನ್ಯಗಳು. ಈ ಸಮಸ್ಯೆ ಕವಿರಾಜಮಾರ್ಗಕಾರನಿಂದ ಮುದ್ದಣನ ವರೆಗೆ ಒಂದು ಬಗೆಯ ಗುದ್ದಾಟವಾಗಿಯೇ ಮತ್ತೆ ಮತ್ತೆ ಮುಂದುವರಿಯಿತು. ಪಂಪ, ಮುದ್ದಣನಂಥವರನ್ನು ಬಿಟ್ಟರೆ ಮಿಕ್ಕವರಿಂದಾಗಿ ಒಂದು ಸಮಸ್ಯೆಯಾಗಿಯೇ ಬೆಳೆದಿದ್ದ ಈ ವಿಷಯದ ಬಗ್ಗೆ, ಶರಣರು ಹೊಸ ಧೋರಣೆಯ ಮಾತುಗಳನ್ನಾಡಿದ್ದಾರೆ. ಬಹಳಷ್ಟು ಸಲ ಆಡದೆ ನ್ಯಾಯಯುತವಾದುದನ್ನು ಮಾಡಿದ್ದಾರೆ.

ಭಕ್ತಿ, ಜ್ಞಾನ, ಕ್ರಿಯೆ–ಇವು ಶರಣರ ಮೌಲ್ಯಗಳು. ಬದುಕಿನ ಯಾವುದೇ ವಿಷಯದ ಬಗ್ಗೆ ಈ ಮೂರನ್ನು ಅನ್ವಯಿಸುವಲ್ಲಿ ಅವರು, ಮೊದಲು ಭಕ್ತಿಯನ್ನು ಬಯಸುತ್ತಾರೆ. ಭಕ್ತಿಯೆಂದರೆ ಪ್ರೀತಿ, ಶ್ರದ್ಧೆ. ಭಾಷಾಪ್ರಶ್ನೆಯ ವಿಷಯವಾಗಿಯೂ ಅವರು ಮೊದಲು ಭಕ್ತಿ–ಪ್ರೀತಿಗಳನ್ನೇ ಮುಂದುಮಾಡಿದರು.

ನೋಡಿರೆ ಕನ್ನಡವ ನುಡಿಸಿರೆ ಕನ್ನಡವ
ತಲೆಯೊಲೆಯುತ ಬಂದು ಕುಣಿಯುವ ಕನ್ನಡವ॥

ಎಂಬ ಸ್ವರವಚನದಲ್ಲಿ ಶರಣ ನಿಜಗುಣಯೋಗಿ ಕನ್ನಡದ ಬಗ್ಗೆ ತೋರಿದ ಪ್ರೀತಿ ೧೨ನೆಯ ಶತಮಾನದ ಎಲ್ಲ ಶರಣರ ಪ್ರಾತಿನಿಧಿಕ ಧ್ವನಿಯಾಗಿದೆ. ನವೋದಯ ಕವಿಗಳ ಕನ್ನಡಪರ ಕವನಗಳನ್ನು ನೆನಪಿಗೆ ತರುವ ಇಂಥ ರಚನೆ ಮತ್ತು ಇಲ್ಲಿಯ ಅಚ್ಚಪ್ರೀತಿ ಕಾರಣವಾಗಿಯೇ ಇವರು ಕನ್ನಡಪರ ಶೈಲಿಯನ್ನು ವಚನಗಳ ಮೂಲಕ ರೂಪಿಸಿದರು. ಇದಕ್ಕೆ ಸಾಮಾನ್ಯವಾಗಿ ಎಲ್ಲ ವಚನಗಳು ನಿದರ್ಶನವೆನಿಸಿವೆ. ಇದನ್ನು ಬಿಟ್ಟರೆ ಸಂಸ್ಕೃತ ಬಳಕೆಯ ಬಗ್ಗೆಯೂ ಒಂದಿಷ್ಟು ವ್ಯಕ್ತವಾಗಿ ಹೀಗೆ ಮಾತನಾಡಿದ್ದರೆ.

ಕಲ್ಲಿಯ ಹಾಕಿ, ನೆಲ್ಲವ ತಳೆದು
ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ
ವಾಗದ್ವೈತವ ಕಲಿತು
ಸಂಸ್ಕೃತದ ಮಾತಿನ ಪಸರವ ಮುಂದಿಟ್ಟುಕೊಂಡು
ಮತ್ಸ್ಯನ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ
ಅದೇತರ ನುಡಿ? ಮಾತಿನ ಮರೆ, ಆತುರವೈರಿ ಮಾರೇಶ್ವರಾ.

ನಗೆಯ ಮಾರಿತಂದೆಯ ಈ ವಚನ, ಸಂವಹನದ ತೊಡಕಿನ ನೆಲೆಯಲ್ಲಿ, ಶೋಷಣೆಯ ಮಾಧ್ಯಮ ನೆಲೆಯಲ್ಲಿ ಸಂಸ್ಕೃತವನ್ನು ನಿರಾಕರಿಸುತ್ತದೆ. ತುಂಬ ವ್ಯಕ್ತವಾಗಿ, ವೈಜ್ಞಾನಿಕವಾಗಿ ಸಂಸ್ಕೃತದ ದಾಳಿಯನ್ನು ನಿರಾಕರಿಸುವ ಅಪರೂಪದ ವಚನವಿದು. ಇಲ್ಲಿ ಕಲ್ಲಿ, ನೆಲ್ಲು, ಗುಬ್ಬಿ ಮೂರು

ಪದಗಳಿವೆ. "ಕಲ್ಲಿ" (ಬಲೆ) ಶೋಷಣೆಯ ಸಂಕೇತವಾಗಿ, "ನೆಲ್ಲು" ಸಂಸ್ಕೃತವೆಂಬ ಶೋಷಣೆಯ ಮಾಧ್ಯಮದ ಸಂಕೇತವಾಗಿ, "ಗುಬ್ಬಿ" ಶೋಷಿತ ಸಾಮಾಜಿಕನ ಸಂಕೇತವಾಗಿ ಇಲ್ಲಿ ಬಳಕೆಗೊಂಡಿವೆ. ಗುಬ್ಬಿ ಒಂದು ಮುಗ್ಧಪಕ್ಷಿ, ಪುಟ್ಟಜೀವ. ಮುಗ್ಧ ಸಾಮಾಜಿಕರನ್ನು ಸಂಸ್ಕೃತದ ಹೆಸರಿನಲ್ಲಿ ವಂಚಿಸುತ್ತಿದ್ದುದನ್ನು ಇಲ್ಲಿ ಸ್ಪಷ್ಟಪಡಿಸಲಾಗಿದೆ. ಇಂಥ ಸಂಸ್ಕೃತವೆಂಬುದು "ಮಾತಿನ ಪಸರ" ಅಂದರೆ "ಮಾತಿನ ಅಂಗಡಿ" ಎಂದು ಹೇಳುವ ಮೂಲಕ, ಲಾಭಕ್ಕಾಗಿ ಮಾತು "ಮಾರುವ"ಕ್ರಿಯೆಯನ್ನು, ಭಾಷೆಯ ವ್ಯಾಪಾರೀಕರಣವನ್ನು "ಅದೇತರ ನುಡಿ?" ಎಂದು ಉಪೇಕ್ಷಿಸಲಾಗಿದೆ. "ಮಾತಿನ ಮರೆ" ಅಂದರೆ ಸತ್ಯವನ್ನು ಮಾತೆಂಬ ಮರೆಯಿಂದ ಮುಚ್ಚಿಹಾಕುವಿಕೆಯೆಂದು ಸೂಚಿಸಲಾಗಿದೆ. ಆಂಡಯ್ಯನ ಅವಾಸ್ತವ ಕನ್ನಡ ಪ್ರೀತಿಯಂತೆ, ಚಂಪುವಿನ ಅವೈಜ್ಞಾನಿಕ ಸಂಸ್ಕೃತ ಪ್ರೀತಿಯೂ ಕನ್ನಡವನ್ನು ಬೆಳೆಸುವುದಿಲ್ಲವೆಂಬುದು ಶರಣರ ವಾದ. ಅವರು ಸಾಮಾಜಿಕರಿಗೆ ಅರ್ಥವಾಗುವಂಥ ಸಂಸ್ಕೃತ ಪದ, ಏಕೆ? ವಾಕ್ಯವೇ ಇರಲಿ, ಬಳಸಬೇಕೆನ್ನುತ್ತಾರೆ. ಸರಳ ಕನ್ನಡದಲ್ಲಿ ಬರೆಯುತ್ತ ಮಧ್ಯದಲ್ಲಿ "ವರ್ಣಾನಾಂ ಕಿಂ ಪ್ರಯೋಜನಂ?" "ಯದ್ಭಾವಂ ತದ್ಭವತಿ" ಎಂಬಂಥ ಸಂಸ್ಕೃತ ವಾಕ್ಯಗಳನ್ನು ಸಹಜವೆಂಬಂತೆ ಬಳಸುತ್ತಾರೆ. ಇದರಿಂದ ಸಂಸ್ಕೃತವನ್ನಲ್ಲ, ಶೋಷಣೆರೂಪದ ಸಂಸ್ಕೃತವನ್ನು ಅವರು ಅಲ್ಲಗಳೆಯುವರೆಂದು ಸ್ಪಷ್ಟವಾಗುತ್ತದೆ.

ಹೀಗೆ ಸಂಸ್ಕೃತದ ಬಳಕೆಯಂತೆ, ಈ ಮೊದಲು ಇಲ್ಲದ ಅನೇಕ ಹೊಸ ತದ್ಭವಗಳನ್ನು ಅವರು ಸೃಷ್ಟಿಸಿಕೊಂಡರು. ಶ್ರಮ>ಶ್ರವ ಇತ್ಯಾದಿ. ಇನ್ನೂ ಮುಂದೆ ಹೋಗಿ ಅವುಟುಕೋಟಿ, ಬಾಷ್ಕಳ, ಬತ್ತೀಸ ಎಂಬಂಥ ಮರಾಠಿ ಪದಗಳನ್ನು ಹಿಂದು ಮುಂದು ನೋಡದೆ ಎತ್ತಿಕೊಂಡರು. ಭಾಷೆಯೆನ್ನುವುದು ಬೆಂಕಿಯಿದ್ದಂತೆ. ಬಾಯಿಗೆ ಸಿಕ್ಕ ಜೀರ್ಣಸಾಧ್ಯ ಹುಲ್ಲು, ಮರ ಇತ್ಯಾದಿಗಳನ್ನು ಅದು ತಿಂದು ಹಾಕುತ್ತದೆ. ಈ ನಿಜವನ್ನು ಅರ್ಥಮಾಡಿಕೊಂಡ ಶರಣರು, ಕನ್ನಡ ಜೀರ್ಣಿಸಿಕೊಳ್ಳುವ ಯಾವುದೇ ಶಬ್ದವನ್ನು ಭೇದರಹಿತವಾಗಿ ಬಳಸಿಕೊಂಡರು.

ಶರಣರ ಅಂತಿಮ ಗುರಿಗಳಲ್ಲಿ ವ್ಯಕ್ತಿಸಿದ್ಧಿ, ಸಮಾಜಶುದ್ಧಿ, ಸಮಾಜಸಮೃದ್ಧಿ ಮುಖ್ಯವಾದುವು. ಇವುಗಳ ಪ್ರತಿಪಾದನೆಗೆ, ಪ್ರಸಾರಕ್ಕೆ ಭಾಷೆ ಮಾಧ್ಯಮವಾಗಬೇಕೇ ಹೊರತು ಬಂಧನವಾಗಬಾರದು. ಅನ್ವಯಿಕವಾಗದ ವಿದ್ಯೆಯನ್ನು ಅರ್ಥವಾಗದ ಭಾಷೆಯಲ್ಲಿ ಹೇಳುವುದರಿಂದ ಪ್ರಯೋಜನವೇನು? ಎಂದು ಕೇಳುತ್ತ, ವ್ಯಕ್ತಿಸಿದ್ಧಿ, ಸಮಾಜಶುದ್ಧಿ, ಸಮಾಜ ಸಮೃದ್ಧಿಗಳಿಗೆ ಅನ್ವಯವಾಗುವ ವಿದ್ಯೆಗಾಗಿ ಅರ್ಥವಾಗುವ ಕನ್ನಡ ಭಾಷೆಯನ್ನು ಮರುಹುಟ್ಟಿಸಿದರು, ಅರ್ಥವತ್ತಾಗಿ ಬಳಸಿದರು.

ವಚನಭಾಷೆ:

ಭಾಷೆ ಸಮಾಜದಲ್ಲಿ ಹುಟ್ಟುತ್ತದೆ, ಸಾಹಿತ್ಯದಲ್ಲಿ ಬೆಳೆಯುತ್ತದೆ. ಕನ್ನಡಿಗರು ಹುಟ್ಟಿಸಿದ ಭಾಷೆಯನ್ನು ಸೃಜನಶೀಲ ಲೇಖಕರಾದ ವಚನಕಾರರು ಸಾಹಿತ್ಯ ಭಾಷೆಯನ್ನಾಗಿ ಹೇಗೆ ಬೆಳೆಸಿದ್ದಾರೆ, ಬಳಸಿದ್ದಾರೆ–ಎನ್ನುವುದು ಇಲ್ಲಿಯ ಉದ್ದೇಶ.

ವಚನಗಳ ಆನ್ವಯಿಕ ವಿಮರ್ಶೆಯ ಪ್ರಸಂಗದಲ್ಲಿ ಕೆಲವರು ಅವುಗಳ ರಾಚನಿಕ ಅಧ್ಯಯನವನ್ನು ಪೂರೈಸಿದ್ದಾರೆ. ಇವರ ವಿಚಾರಗಳೊಂದಿಗೆ ಇನ್ನಷ್ಟನ್ನೂ ಸೇರಿಸಿ ವಚನಗಳ ಭಾಷಿಕ ಲಕ್ಷಣಗಳನ್ನು ಹೀಗೆ ಸಂಗ್ರಹಿಸಬಹುದು.

೧. ವಾಕ್ಯಪ್ರಧಾನವಾಗಿವೆ.
೨. ವಾಕ್ಯದ ಬಹು ಬಗೆಗಳು ಬಳಕೆಯಾಗಿವೆ.
೩. ವಾಕ್ಯದ ಒಂದೊಂದು ಬಗೆಯಲ್ಲಿ ವಿನ್ಯಾಸದ ಅನೇಕ ಸಾಧ್ಯತೆಗಳಿವೆ.
೪. ವಾಕ್ಯದಲ್ಲಿ ಮಾತಿನ ಎಲ್ಲ ಕಾಕುಗಳನ್ನು ಉಳಿಸಿಕೊಳ್ಳಲಾಗಿದೆ.
೫. ವಾಕ್ಯಭಾಗಗಳಾಗಲಿ-ವಾಕ್ಯಗಳಾಗಲಿ ಸಮಪ್ರಮಾಣದಲ್ಲಿವೆ.
೬. ವಾಕ್ಯಭಾಗಗಳಾಗಲಿ-ವಾಕ್ಯಗಳಾಗಲಿ ಪುನರುಕ್ತವಾಗಿವೆ.
೭. ವಾಕ್ಯಭಾಗಗಳಾಗಲಿ-ವಾಕ್ಯಗಳಾಗಲಿ ಲಯಾತ್ಮಕವಾಗಿವೆ.
೮. ವಾಕ್ಯಗಳಲ್ಲಿ ಹಿತ ಮಿತ ಪ್ರಾಸವಿದೆ.

ಇವು ವಚನಗಳ ಪ್ರಮುಖ ಎಂಟು ಲಕ್ಷಣಗಳು. ಬೇರೆ ಉಪಲಕ್ಷಣಗಳಿದ್ದರೂ ಅವು ಇವುಗಳಲ್ಲಿಯೇ ಅಂತರ್ಗತವಾಗುತ್ತಿದ್ದು, ಈ ಎಂಟೂ ಲಕ್ಷಣಗಳ ವಿವರ ಹೀಗಿದೆ:

೧. ವಾಕ್ಯಪ್ರಧಾನವಾಗಿವೆ:

ಭಾಷೆಯಲ್ಲಿ ಅರ್ಥನಿಷ್ಠ ಅತಿಸಣ್ಣ ಘಟಕ ಪದ; ಕ್ರಿಯಾನಿಷ್ಠ ಅತಿಸಣ್ಣ ಘಟಕ ವಾಕ್ಯ. ಭಾಷೆ ಪೂರ್ಣಸಂವಹನವಾಗುವುದು ವಾಕ್ಯಗಳ ಮೂಲಕ. ನಿಯತ ಸ್ಥಾನಗಳಲ್ಲಿ ಪದಗಳನ್ನೊಳಗೊಂಡ ಸರಳ ವಾಕ್ಯಗಳಂತೆ, ಅನಿಯತ ಸ್ಥಾನಗಳಲ್ಲಿ ಪದಗಳನ್ನೊಳಗೊಂಡರೂ ಅರ್ಥ ಸಂವಹನವಾಗುವ ಸಂಕೀರ್ಣವಾಕ್ಯಗಳು ಭಾಷೆಯಲ್ಲಿರುತ್ತವೆ. ಪದ್ಯದಲ್ಲಿ ಗಣ ಮತ್ತು ಪ್ರಾಸಗಳು ಪದಗಳನ್ನು ನಿಯಂತ್ರಿಸುವುದರಿಂದ, ಕೆಲವೊಮ್ಮೆ ಇದ್ದ ರೂಪದದಲ್ಲಿಯೇ ಅರ್ಥವಾಗುವುದಿಲ್ಲವಾಗಿ ಸಂವಹನಕ್ಕೋಸುಗ ಪದ್ಯದ ಪದಗಳನ್ನು ಅನ್ವಯ ಮಾಡಿಕೊಳ್ಳಬೇಕಾಗುತ್ತದೆ. ಶರಣಪೂರ್ವಯುಗದಲ್ಲಿ ಪದ್ಯಸಾಹಿತ್ಯವೇ ಪ್ರಧಾನವಾಗಿದ್ದು, ಅರ್ಥಸ್ಪಷ್ಟನೆಗಾಗಿ ಅನ್ವಯಮಾಡಿಕೊಳ್ಳಬೇಕಾದ ಅಂಥ ಒಂದು ಪದ್ಯವನ್ನು ಪಂಪನಿಂದ ನೋಡಬಹುದು.

(ಅ) ಕಟ್ಟಿದ ಪಟ್ಟಮೆ ಸರವಿಗೆ
ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟಿಂಗೆಣೆ ಕ।
ಣ್ಗೆಟ್ಟ ಮುದುಪಂಗೆ ಪಗೆವರ
ನಿಟ್ಟೆಲ್ವಂ ಮುರಿವೊಡೆನಗೆ ಪಟ್ಟಂಗಟ್ಟಾ॥

ಪಂಪಭಾರತದ ಭೀಷ್ಮರ ಪಟ್ಟಾಭಿಷೇಕ ಸಂದರ್ಭದಲ್ಲಿ ಕರ್ಣ ಹೇಳುವ ಈ ಪದ್ಯದಲ್ಲಿ ಎರಡು ವಾಕ್ಯಗಳಿವೆ. ಮೊದಲನೆಯ ವಾಕ್ಯದಲ್ಲಿ "ಕಣ್ಗೆಟ್ಟ ಮುದುಪಂಗೆ" ಎಂಬ ಪದ ಅನಿಯತ ಸ್ಥಳದಲ್ಲಿ ಬಳಕೆಯಾಗಿರುವುದರಿಂದ, ಅದನ್ನು ನಿಯತ ಸ್ಥಳದಲ್ಲಿಟ್ಟು ಅಂದರೆ ಅನ್ವಯಗೊಳಿಸಿ, ವಾಕ್ಯರಚನೆ ಮಾಡಿಕೊಳ್ಳಬೇಕಾಗುತ್ತದೆ. ಆಗ ಹೊರಡುವ ಎರಡೂ ವಾಕ್ಯಗಳು ಹೀಗೆ:

೧. ಕಣ್ಗೆಟ್ಟ ಮುದುಪಂಗೆ ಕಟ್ಟಿದ ಪಟ್ಟಮೆ ಸರವಿಗೆ ದೊರೆ, ಪಿಡಿದ ಬಿಲ್ಲೆ ದಂಟಿಂಗೆಣೆ.

೨. ಪಗೆವರ ನಿಟ್ಟೆಲ್ವಂ ಮುರಿವೊಡೆನಗೆ ಪಟ್ಟಂಗಟ್ಟಾ.

ಪದ್ಯದಲ್ಲಿ ಹಿಂದುಮುಂದಾಗಿದ್ದ ಪದಗಳನ್ನು ಹೀಗೆ ವಾಕ್ಯರೂಪದಲ್ಲಿ ಅನ್ವಯಗೊಳಿಸಿದಾಗ ಮಾತ್ರ ಅರ್ಥ ಸ್ಪಷ್ಟವಾಗುತ್ತದೆ. ವಚನದಲ್ಲಿ ಈ ರೀತಿ ಪದಗಳನ್ನು ಅನ್ವಯಗೊಳಿಸಿಕೊಳ್ಳುವ

ಆವಶ್ಯಕತೆ ಇಲ್ಲವೆಂಬಂತೆ ನಿಯತಸ್ಥಳದಲ್ಲಿ ಅವು ನಿಹಿತವಾಗಿರುತ್ತವೆ. ಸರಳ ವಾಕ್ಯಗಳೇಕೆ? ಸಂಕೀರ್ಣ ವಾಕ್ಯಗಳ ಪ್ರಸಂಗದಲ್ಲಿಯೂ ಈ ಅನ್ವಯದ ಆವಶ್ಯಕತೆ ಸಂಭವಿಸುವುದಿಲ್ಲ.

(ಆ) ಬಸವಪೂರ್ವದಲ್ಲಿ ಅಕ್ಷರವೃತ್ತಗಳದೇ ಸಾಮ್ರಾಜ್ಯ. ಕೆಲವೊಮ್ಮೆ ಅನ್ವಯಮಾಡುವ ಆವಶ್ಯಕತೆ ಇಲ್ಲದಿದ್ದರೂ ಅಲ್ಲಿ ಪದ್ಯದ ಚರಣ ಮುಗಿಯುತ್ತಲೇ ವಾಕ್ಯವೂ ಮುಗಿಯಬೇಕೆಂದೇನಿಲ್ಲ. ಅದು ಚರಣದ ಮಧ್ಯ, ಇಲ್ಲವೆ ಚರಣವನ್ನು/ಗಳನ್ನು ದಾಟಿ ಮುಗಿಯಬಹುದು. ಇಂಥ ಪ್ರಸಂಗದಲ್ಲಿ ಛಂದಸ್ಸಿನ ಯತಿ ಚರಣದ ಅಂತ್ಯಕ್ಕೆ ಬಂದರೆ, ವಾಕ್ಯದ ಯತಿ(ಅರ್ಥಯತಿ) ಮಾತ್ರ ವಾಕ್ಯದ ಅಂತ್ಯದಲ್ಲಿ ಸಂಭವಿಸುತ್ತದೆ. ಉದಾ:

ನೆತ್ತಮನಾಡಿ ಭಾನುಮತಿ ಸೋಲ್ತಡೆ ಸೋಲಮನೀವುದೆಂದು ಕಾ*।
ಡುತ್ತಿರೆ ಲಂಬಣಂ ಪರಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬ*।
ಳ್ಕುತ್ತಿರೆ ಏವಮಿಲ್ಲದಿವನಾಯ್ತುವುದೊ ತಪ್ಪದೆ ಪೇಳಿಮೆಂಬ ಭೂ*।
ಪೋತ್ತಮನಂ ಬಿಸುಟ್ಟಿರದೆ ನಿಮ್ಮೊಳು ಪೊಕ್ಕಡೆ ಬೇಡನಲ್ಲನೇ*॥

ಇದು ಒಂದು ವಾಕ್ಯದ ಪದ್ಯ. ಇಲ್ಲಿ ಪದ್ಯದ ಛಂದೋಯತಿ ನಾಲ್ಕೂ ಚರಣಗಳ ಕೊನೆಯಲ್ಲಿ (ನಕ್ಷತ್ರಸ್ಥಾನ) ಇದೆ. ವಾಕ್ಯಯತಿ ಅಥವಾ ಅರ್ಥಯತಿ ಅನೇಕ ಅಲ್ಪ ನಿಲುಗಡೆಗಳೊಂದಿಗೆ, ಕೊನೆಯ ಚರಣದ ಕೊನೆಯಲ್ಲಿ ಹೀಗೆ ಕಾಣಿಸಿಕೊಂಡಿದೆ.

ನೆತ್ತಮನಾಡಿ ಭಾನುಮತಿ ಸೋಲ್ತಡೆ,
ಸೋಲಮನೀವುದೆಂದು ಕಾಡುತ್ತಿರೆ,
ಲಂಬಣಂ ಪರಿಯೆ,
ಮುತ್ತಿನ ಕೇಡನೆ ನೋಡಿ ನೋಡಿ ಬಳ್ಕುತ್ತಿರೆ,
ಏವಮಿಲ್ಲದಿವನಾಯ್ತುವುದೊ ತಪ್ಪದೆ ಪೇಳಿಂ–
ಎಂಬ ಭೂಪೋತ್ತಮನಂ ಬಿಸುಟ್ಟಿರದೆ ನಿಮ್ಮೊಳು ಪೊಕ್ಕಡೆ ಬೇಡನಲ್ಲನೇ.

ಇಲ್ಲಿ ೪ ಚರಣಗಳ ಪದ್ಯ, ೬ ಲಯಬದ್ಧ ವಾಕ್ಯಗಳಾಗಿ ನಿಂತಿದೆ. ಶರಣರು ಈ ಮಾದರಿಯಲ್ಲಿ ವಚನಗಳನ್ನು ರೂಪಿಸಿದರು. ಅವರಲ್ಲಿ ಇಂಥ ಅನೇಕ ಅಲ್ಪ ನಿಲುಗಡೆಗಳನ್ನೊಳಗೊಂಡ ಏಕವಾಕ್ಯದ ವಚನಗಳು ಹಲವು ಸಂಖ್ಯೆಯಲ್ಲಿವೆ. ಉದಾ:

ಹಾಲತೊರೆಗೆ ಬೆಲ್ಲದ ಕೆಸರು,
ಸಕ್ಕರೆಯ ಮಳಲು,
ತವರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲು,
ಬೇರೆ ಬಾವಿಯ ತೋಡಿ,
ಉಪ್ಪ ನೀರನುಂಬುವನ ವಿಧಿಯಂತಾಯಿತ್ತೆನ್ನ ಮತಿ,
ಕೂಡಲ ಸಂಗಮದೇವಾ.

ರಚನೆಯಲ್ಲಿ ಪಂಪನ ಈ ಪದ್ಯ ಮತ್ತು ಬಸವನ ಈ ವಚನಗಳ ರೀತಿ ಒಂದೇ ಬಗೆಯವೆಂಬುದನ್ನು ಇಲ್ಲಿ ಗಮನಿಸಬೇಕು. ಇದಲ್ಲದೆ ಅನೇಕ ಬಿಡಿ ವಾಕ್ಯಗಳನ್ನೊಳಗೊಂಡ ಅಕ್ಷರವೃತ್ತಗಳಂತೆ, ಅನೇಕ ಬಿಡಿ ವಾಕ್ಯಗಳನ್ನೊಳಗೊಂಡ ವಚನಗಳೂ ಇವೆ. ಚಂಪೂಪದ್ಯಗಳನ್ನೇ

ಮಾದರಿಯಿಟ್ಟುಕೊಂಡು ಇವರು ವಚನ ರಚಿಸಿದರೆಂದು ಇದರ ಅರ್ಥವಲ್ಲ. ಜನರ ಬಾಯಿ ಮಾತಿನ ವಾಕ್ಯಗಳನ್ನೇ ಒಂದಿಷ್ಟು ಲಯಬದ್ಧಗೊಳಿಸಿ ವಚನ ರಚಿಸಿದರು.

೨. ವಾಕ್ಯದ ಬಹು ಬಗೆಗಳು ಬಳಕೆಯಾಗಿವೆ:

ವಾಕ್ಯಗಳು ಎಷ್ಟು ವಿಧ? ಈ ಬಗ್ಗೆ ಆಧುನಿಕ ಭಾಷಾವಿಜ್ಞಾನಿಗಳಲ್ಲಿ ಅಭಿಪ್ರಾಯ ಭೇದವಿದೆ. ಸಾಂಪ್ರದಾಯಿಕವಾಗಿ ಸಾಮಾನ್ಯ, ಸಂಕೀರ್ಣ, ಸಂಯುಕ್ತ, ಪ್ರಶ್ನಾರ್ಥಕ, ಉದ್ಗಾರಾರ್ಥಕ, ಆಜ್ಞಾರ್ಥಕ ಮೊದಲಾದ ವಾಕ್ಯಪ್ರಬೇಧಗಳನ್ನು ಗುರುತಿಸಲಾಗಿದೆ. ವಚನಕಾರರು ಈ ಎಲ್ಲ ಬಗೆಯ ವಾಕ್ಯಗಳನ್ನು ಬಳಸಿದ್ದಾರೆ. ಸಾಲದುದಕ್ಕೆ ಒಂದೊಂದರಲ್ಲಿಯೇ ಅನೇಕ ಬಗೆಗಳನ್ನು ಯೋಜಿಸಿಕೊಂಡಿದ್ದಾರೆ. ಹೀಗಾಗಿ ವಚನಗಳನ್ನು ಓದಿದಾಗ ನಮ್ಮ ಸುತ್ತಲೂ ಅನುಭಾವಿಗಳ ದೊಡ್ಡ ಸಮಾಜವೇ ಮಾತನಾಡುತ್ತಿರುವ ಅನುಭವವಾಗುತ್ತದೆ. ಉದಾಹರಣೆಗಾಗಿ ಕೇವಲ ವೇದವನ್ನು ಕುರಿತು ಬಸವಣ್ಣನವರ ಕೆಲವು ವಾಕ್ಯಪ್ರಭೇದಗಳನ್ನು ಇಲ್ಲಿ ನೋಡಬಹುದು.

೧. ವೇದಕ್ಕೆ ಒರೆಯ ಕಟ್ಟುವೆ–ಸಾಮಾನ್ಯವಾಕ್ಯ
೨. ವೇದ ಸ್ವಯಂಭುವಲ್ಲ, ನಿಲ್ಲು–ಆಜ್ಞಾರ್ಥವಾಕ್ಯ
೩. ವೇದವನೋದಿದವರ ಮುಂದೆ ಅಳು, ಕಂಡೆಯಾ ಹೋತೇ–ವಿಧ್ಯರ್ಥವಾಕ್ಯ
೪. ವೇದ ವೇದಾಂತವನೋದಿದಡೇನು?–ಪ್ರಶ್ನಾರ್ಥಕವಾಕ್ಯ
೫. ವೇದ ಘನನೆಂಬೆನೆ? ಪ್ರಾಣಿವಧೆಯ ಹೇಳುತ್ತದೆ–ಪ್ರಶ್ನೆ ಮತ್ತು ಉತ್ತರವಾಕ್ಯ
೬. ವೇದಂಗಳು ನಿಮ್ಮ ಭೇದಿಸಲರಿಯವು ನೋಡಾ!–ಉದ್ಗಾರಾರ್ಥಕವಾಕ್ಯ
೭. ವೇದಂಗಳ ಹಿಂದೆ ಹರಿಯದಿರು, ಹರಿಯದಿರು–ಅವಧಾರಣಾರ್ಥಕವಾಕ್ಯ
೮. ವೇದವನೋದಿದವರೆಲ್ಲ ನಮ್ಮ ಶರಣರು ಹೋದ ಹಾದಿಯನರಿಯದೆ, ಸೋಹಂ ಎಂದು ಅಹಂಕರಿಸಿ, ಅನಿತ್ಯದೇಹಿಗಳಾಗಿ, ಅನಾಮಿಕರಾಗಿ ಹೋದರು–ಸಂಕೀರ್ಣವಾಕ್ಯ.

ಇಲ್ಲಿ ಒಂದು ವಾಕ್ಯದಂತೆ ಇನ್ನೊಂದಿಲ್ಲ. ಈ ಸಂಖ್ಯೆ ಇನ್ನೂ ಬೆಳೆಯಬಹುದಾಗಿದೆ. ಒಟ್ಟಾರೆ ವಚನಸಾಹಿತ್ಯವೆಂದರೆ ವಾಕ್ಯರಾಶಿ.

೩. ವಾಕ್ಯಗಳ ವಿನ್ಯಾಸದ ಅನೇಕ ಸಾಧ್ಯತೆಗಳಿವೆ:

ಮೇಲೆ ಹೇಳಿದಂತೆ ವಾಕ್ಯ ಅನೇಕ ಬಗೆಯಾಗಿವೆ. ಇವುಗಳ ವಿನ್ಯಾಸದ ಅನೇಕ ಸಾಧ್ಯತೆಗಳಿಂದ ವಚನಗಳು ರೂಪಗೊಂಡವು. ಬಸವನಾಳ, ಪರಮೇಶ್ವರಭಟ್, ಪ್ರಭುಸ್ವಾಮಿಮಠ, ಗಿರಡ್ಡಿ ಮೊದಲಾದವರು ಇವುಗಳ ಕೆಲವು ಸಾಧ್ಯತೆಗಳನ್ನು, ಅವುಗಳಿಂದ ವ್ಯಕ್ತವಾಗುವ ಭಿನ್ನ ಅರ್ಥಛಾಯೆಗಳನ್ನು ತೋರಿಸಿಕೊಟ್ಟಿದ್ದಾರೆ. ವಚನಕಾರರಲ್ಲಿ ಅದ್ಭುತಲೋಕವೆಂಬಂತೆ ಈ ಕ್ರಿಯೆ ಬಹುರೂಪಿಯಾಗಿ ಹಬ್ಬಿದೆ. ಉದಾ:

ಕರಿಯಂಜುವುದಂಕುಶಕ್ಕಯ್ಯಾ,
ಗಿರಿಯಂಜುವುದು ಕುಲಿಶಕ್ಕಯ್ಯಾ,
ತಮಂಧವಂಜುವುದು ಜ್ಯೋತಿಗಯ್ಯಾ,
ಕಾನನವಂಜುವುದು ಬೇಗೆಗಯ್ಯಾ,
ಪಂಚಮಹಾಪಾತಕವಂಜುವುದು ಕೂಡಲಸಂಗನ ನಾಮಕ್ಕಯ್ಯಾ.

ಇದು ಸರಳ ವಾಕ್ಯರಚನೆ. ಇಲ್ಲಿಯ ಪದ–ವಾಕ್ಯ–ವಾಕ್ಯಕ್ರಮ ಸಾಮಗ್ರಿಯನ್ನೇ ಬಸವಣ್ಣ ಇನ್ನೊಂದು ರೀತಿಯಲ್ಲಿ ವಿನ್ಯಾಸಗೊಳಿಸಿದ್ದಾನೆ.

ಕರಿ ಘನ, ಅಂಕುಶ ಕಿರಿದೆನ್ನಬಹುದೇ? ಬಾರದಯ್ಯಾ,
ಗಿರಿ ಘನ, ವಜ್ರ ಕಿರಿದೆನ್ನಬಹುದೇ? ಬಾರದಯ್ಯಾ,
ತಮಂಧ ಘನ, ಜ್ಯೋತಿ ಕಿರಿದೆನ್ನಬಹುದೇ? ಬಾರದಯ್ಯಾ,
[ಕಾನನ ಘನ, ಬೇಗೆ ಕಿರಿದೆನ್ನಬಹುದೇ? ಬಾರದಯ್ಯಾ],
ಮರಹು ಘನ, ನಿಮ್ಮ ನೆನೆವ ಮನ ಕಿರಿದೆನ್ನಬಹುದೇ?
ಬಾರದಯ್ಯಾ ಕೂಡಲ ಸಂಗಮದೇವಾ.

ಇಲ್ಲಿ ಮೊದಲಿನ ವಚನವನ್ನೇ ಪ್ರಶ್ನೋತ್ತರ ರೂಪದಲ್ಲಿ ಯೋಜಿಸಲಾಗಿದೆ. ಈ ಪ್ರಶ್ನೋತ್ತರವು ಸ್ವಗತರೂಪದಲ್ಲಿರುವುದು ಈ ವಿನ್ಯಾಸದ ಇನ್ನೊಂದು ವಿಶೇಷತೆಯಾಗಿದೆ. ಈ ಪ್ರಶ್ನೋತ್ತರಕ್ಕೆ ಪರಮಾವಧಿ ಮಾದರಿಯೆನಿಸುವ ಹೆಂಡದ ಮಾರಯ್ಯ ಮತ್ತು ಲಿಂಗಗಳ ಸಂವಾದದ ಇನ್ನೊಂದು ವಚನ (೧೧೯೪)ಹೀಗಿದೆ.

ನುಲಿಯೊಡೆಯರೇ ನಿಮ್ಮಾಳ್ದನ ಕೊಳ್ಳಿರೆ.
ಆಳ್ದರೆಂದರಾರು?
ಅವರು ನಿಮ್ಮ ಕೈಯ್ಯಲ್ಲಿದ್ದಂಥವರು.
ಅವರಾಳ್ದರಲ್ಲ.
ಅವರೇನು? ಅವರು ನಿಮ್ಮ ಇಷ್ಟರುದ್ರರಾಗರೆ?
ಜಂಗಮವಾಗಿದ್ದಹರು.
ಇವರು ಬೇಡವೇ?
ಇಹರೆ ಬೇಡೆನ್ನೆ, ಹೋಹರೆ ನಿಲಿಸ ಶಕ್ತನಲ್ಲ.
ನಾವು ಇರಲುಬಲ್ಲಲ್ಲಿ ಇರಿ.
ಕೈಯ್ಯಲ್ಲಿ ಕೊಳ್ಳಿರೆ.
ಮುನ್ನವೆ ಕೊಂಡಿದ್ದೆನು.
ಎನ್ನನೇಕೆ ಒಲ್ಲೆಯಯ್ಯಾ.
ನೀನು ಮುನಿದಿದ್ದೆಯಾಗಿ.
ಇನ್ನು ಮುನಿಯುವುದಿಲ್ಲ, ನಾನು.
ನಿಮ್ಮ ನಂಬುವುದಿಲ್ಲ.
ಹೊಣೆಯ ಕೊಟ್ಟಿಹೆನು.
ಅವರಾರು?
ಮಾಚಿದೇವ ಪ್ರಸಾದಿ ಹೊಣೆಯಾಗಯ್ಯಾ.
ನಂಬೆನು, ಜೀಯಾ ನಿಮ್ಮಾಣೆ.

ಇರಲಿಕೆ ಠಾವೆಲ್ಲಿ? ಕರದಲ್ಲಿಯೇ?
ಅಲ್ಲ.
ಉರದಲ್ಲಿಯೆ?
ಅಹುದು.
ನಂಬಿದೆನು; ಸುಖದಲ್ಲಿರು ಧರ್ಮೇಶ್ವರಾ.

ಇವನದೇ ಇಂಥ ಇನ್ನೊಂದು ವಚನ(೧೧೯೫)ವಿದೆ. ಇವೆಲ್ಲ ವಚನಶಿಲ್ಪದಲ್ಲಿ ನಡೆಸಿದ ಹೊಸಹೊಸ ಪ್ರಯೋಗಗಳಿಗೆ ನಿದರ್ಶನವೆನಿಸಿವೆ. ಸೊಡ್ಡಳ ಬಾಚರಸನ ಇನ್ನೊಂದು ವಚನ:

ಮುರಿಸಬೇಕು ಹೊಲೆಯರ ಕೈಯಿಂದವರ ಮನೆಯನು,
ಕೆರಿಸಬೇಕು ಮಂಡೆಯನೇಳು ಪಟ್ಟಿಯ ಮಾಡಿ,
ಹುಟ್ಟಿಗೆಯನುಡಿಸಬೇಕು, ಕುಳ್ಳಿರಿಸಬೇಕು ಕತ್ತೆಯ ನಡುಬೆನ್ನ ಮೇಲೆ,
ಹಳೆಮೊರನ ಸತ್ತಿಗೆಯ ಹಿಡಿಯಬೇಕವಗೆ,
ನಿಟ್ಟೊರಸಬೇಕು ನೊಸಲಕ್ಷರವ,
ನಾಲಗೆಯ ಸರ‍್ರಸರ‍್ರನೆ ಸೀಳಬೇಕು,
ಎನ್ನೊಡೆಯ ಮಹಾಮಹಿಮ ಸೊಡ್ಡಳಂಗೆ
ಅನ್ಯದೈವ ಸರಿಯೆಂಬ ಕುನ್ನಿಮಾನವನ.

ಹೀಗೆ ಮುರಿಸಬೇಕು, ಕೆರಿಸಬೇಕು, ಉರಿಸಬೇಕು, ಕುಳ್ಳಿರಿಸಬೇಕು, ಹಿಡಿಯಬೇಕು, ಒರೆಸಬೇಕು, ಸೀಳಬೇಕು–ಅವಧಾರಣಾತ್ಮಕ ಕ್ರಿಯಾಪದಗಳ ಪುನರುಕ್ತಿಯಿಂದಾಗುವ ಪರಿಣಾಮ ಅನನ್ಯವಾದುದು.

೪. ವಾಕ್ಯದಲ್ಲಿ ಮಾತಿನ ಎಲ್ಲ ಕಾಕುಗಳನ್ನು ಉಳಿಸಿಕೊಳ್ಳಲಾಗಿದೆ:

ಬಾಯಿಮಾತು ಬರಹಕ್ಕೆ ಬರುವಲ್ಲಿ ಅದು ತನ್ನ ಸೂಕ್ಷ್ಮಗುಣಗಳನ್ನು ಕಳೆದುಕೊಳ್ಳುವುದೇ ಹೆಚ್ಚು. ವಚನಗಳ ಇನ್ನೊಂದು ಮಹತ್ವಪೂರ್ಣ ಲಕ್ಷಣವೆಂದರೆ, ಬಾಯಿಮಾತಿನ ಎಲ್ಲ ಗುಣಗಳನ್ನು ಅಂದರೆ ಕಾಕುಗಳನ್ನು ಉಳಿಸಿಕೊಂಡುದು. ಸಂದರ್ಭನಿಷ್ಠವಾಗಿ, ಸ್ತ್ರೀ–ಪುರುಷಧ್ವನಿನಿಷ್ಠವಾಗಿ, ವಯೋನಿಷ್ಠವಾಗಿ ಈ ಮಾತುಗಳ ಧಾಟಿಗಳು ಭಿನ್ನವಾಗುತ್ತ ಹೋಗುತ್ತವೆ.

ವೇದವನೋದಿದವರ ಮುಂದೆ ಅಳು ಕಂಡೆಯಾ ಹೋತೆ.
ವೇದವನೋದಿದವರ ಮುಂದೆ ಅಳು, ಕಂಡೆಯಾ ಹೋತೇ.

ಇಲ್ಲಿ ಮೊದಲಿನ ವಾಕ್ಯವನ್ನು ಓದಿದಾಗ ಉಂಟಾಗುವ ಅರ್ಥ ಪ್ರತೀತಿಯೇ ಬೇರೆ, ''ಅಳು'' ಎಂಬುದನ್ನು ಒತ್ತಿ ಉಚ್ಚರಿಸಿ, ಅಲ್ಪವಿರಾಮವಿಟ್ಟು, ಹೋತೇ ಎಂಬುದನ್ನು ಕನಿಕರದಿಂದ ಎಳೆದು ಎರಡನೆಯ ವಾಕ್ಯವನ್ನು ಓದುವುದರಿಂದ ಉಂಟಾಗುವ ಅರ್ಥಪ್ರತೀತಿಯೇ ಬೇರೆ. ಎರಡನೆಯ ರೀತಿಯ ಓದು ಈ ವಚನದ ನಿಜವಾದ ಅರ್ಥವನ್ನು ಪ್ರಕಟಿಸುತ್ತದೆ.

ಪ್ರಾಚೀನಕಾಲದಲ್ಲಿ ವಿರಾಮಚಿಹ್ನೆಗಳ ಬಳಕೆ ಇರಲಿಲ್ಲವಾಗಿ, ಎಷ್ಟೋ ಸಲ ವಚನವಾಕ್ಯದ ನಿಜವಾದ ಉದ್ದೇಶ ಅರ್ಥವಾಗುವುದಿಲ್ಲ. ಉದಾ:

ಲಿಂಗ ಜಂಗಮ ಒಂದೇ ಎಂದು ನಂಬಿದ ಬಳಿಕ
ಅವರಂಗನೆಯರು ಲಿಂಗದ ರಾಣಿವಾಸ.

ಅಲ್ಲಿಯೂ ಮೇಳ, ಇಲ್ಲಿಯೂ ಮೇಳ, ಚೌಡೇಶ್ವರಿಯಲ್ಲಿಯೂ ಮೇಳ.

ಈ ವಚನದಿಂದ ಶರಣಸತಿಯರು ಸಾಕ್ಷಾತ್ ಲಿಂಗದ ಪತ್ನಿಯರು. ಅವಳಲ್ಲಿಯೂ ಸರಸ, ಇವಳಲ್ಲಿಯೂ ಸರಸ, ಉಗ್ರದೇವತೆ ಚೌಡೇಶ್ವರಿಯಲ್ಲೂ ಸರಸ–ನಷ್ಟವೇ ಇಲ್ಲವೆಂಬ ವಿಪರೀತ ಅರ್ಥ ಹೊರಡುತ್ತದೆ. ಈಗ "ಚೌಡೇಶ್ವರಿಯಲ್ಲಿಯೂ ಮೇಳ?" ಎಂಬ ಪ್ರಶ್ನೆ ಚಿಹ್ನೆ ಇಟ್ಟರೆ ಸಾಕು, "ಮೇಳವಿಲ್ಲ" ಎಂಬ ಸರಿಯಾದ ಅರ್ಥ ಹೊರಡುತ್ತದೆ.

ಇನ್ನು ಕೆಲವು ಸಲ ಒಂದೇ ವಚನ ಪ್ರಶ್ನೆ ಇಟ್ಟರೆ ಒಂದು ಅರ್ಥ, ಉದ್ಗಾರವಿಟ್ಟರೆ ಇನ್ನೊಂದು ಅರ್ಥ ಹೊರಡುತ್ತದೆ.

ಎತ್ತಣ ಮಾಮರ ಎತ್ತಣ ಕೋಗಿಲೆ
ಎತ್ತಣಿಂದೆತ್ತ ಸಂಬಂಧವಯ್ಯಾ?

ಇದು ಒಂದು ಸಂದರ್ಭದಲ್ಲಿ ಹುಟ್ಟಿದ ವಚನ. ಸಂದರ್ಭಬಾಹಿರವಾದಾಗ ಇದು ಮೇಲಿನಂತೆ ಪ್ರಶ್ನೆ ಚಿಹ್ನೆಯನ್ನು ಅಪೇಕ್ಷಿಸುತ್ತದೆ. ಆದರೆ ಅನಿಮಿಷಯ್ಯನ ಕೈಯಿಂದ ಅಲ್ಲಮನು ಇಷ್ಟಲಿಂಗ ಎತ್ತಿಕೊಳ್ಳುತ್ತಲೇ, ಅವನ ಅಸ್ಥಿಪಂಜರ ಪುಡಿಪುಡಿಯಾಗುವುದು, ಇವನಲ್ಲಿ ಅರಿವಿನ ವಿದ್ಯುತ್ತ ಸಂಚಾರವಾಗುವುದು, ಇಂಥ ಸಂದರ್ಭದಲ್ಲಿ ಆಡಿದ ಈ ವಚನ ಹೀಗೆ ಉದ್ಗಾರಚಿಹ್ನೆಯನ್ನೇ ಬಯಸುತ್ತದೆ :

ಎತ್ತಣ ಮಾಮರ ಎತ್ತಣ ಕೋಗಿಲೆ
ಎತ್ತಣಿಂದೆತ್ತ ಸಂಬಂಧವಯ್ಯಾ!

ಇನ್ನು ಬೇರೆ ರೀತಿಯ ಆಡು ಮಾತಿನ ಧಾಟಿಗಳನ್ನು ವಚನಗಳಲ್ಲಿ ಹೀಗೆ ಕಾಣಬಹುದು.

ನಿಮಿಷದ ನಿಮಿಷಂ ಭೋ
ಕ್ಷಣದೊಳಗರ್ಧಂ ಭೋ
ಕಣ್ಣು ಮುಚ್ಚಿ ಬಿಚ್ಚುವ್ನೈಸಂ ಭೋ
ಸಂಸಾರದಾಗುಂ ಭೋ! ಸಂಸಾರದ ಹೋಗುಂ ಭೋ!
ಸಂಸಾರದೊಪ್ಪಂ ಭೋ!
ಕೂಡಲಸಂಗಮ ದೇವಾ
ನೀ ಮಾಡಿದ ಮಾಯಂ ಭೋ! ಅಭ್ರಚ್ಛಾಯಂ ಭೋ!

ಏಳು ವಾಕ್ಯಗಳ ಈ ರಚನೆಯಲ್ಲಿ ಎಂಟು ಸಲ ಎಚ್ಚರ ಸೂಚಿಯಾದ "ಭೋ" ಪ್ರಯೋಗವಾಗಿದೆ. ವೇಳೆಯ ಮಹತ್ವವನ್ನು ಹೇಳುವ ಇಲ್ಲಿ "ಭೋ" ಗಂಟೆ ಬಾರಿಸಿದ ಅನುಭವ ನೀಡುತ್ತದೆ.

ಅಶ್ವಮೇಧಯಾಗವಂತಿರಲಿ [ಹೋ]!
ಅಜಪೆಯುಪದೇಶ ಸಮಾಧಿಯಂತಿರಲಿ ಹೋ!
ಹೋಮ ನೇಮ ಗಾಯತ್ರಿ ಜಪವಂತಿರಲಿ ಹೋ!
ಕೂಡಲ ಸಂಗನ ಶರಣರ ನುಡಿಗಡಣ
ಎಲ್ಲಕ್ಕೂ ಅಧಿಕ ನೋಡಾ.

ಇಲ್ಲಿ "ಹೋ" ಎಂಬ ಜರೆಯುವಿಕೆಯನ್ನು ಪದೇ ಪದೇ ಬಳಸಿ ವಚನಕ್ಕೆ ಆಡು ಮಾತಿನ ಗುಣವನ್ನು ತುಂಬಲಾಗಿದೆ.

ಅರಸರ ಮನೆಯಲ್ಲಿ ಅರಸಿಯಾಗುವುದರಿಂದ
ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರ ಲೇಸಯ್ಯಾ!
"ತಾರೌ ಅಗ್ಘವಣಿಯ, ನೀಡೌ ಪತ್ರೆಯ
ಲಿಂಗಕ್ಕೆ ಬೋನವ ಹಿಡಿಯೌ" ಎಂಬರು.
ಕೂಡಲ ಸಂಗನ ಮಹಾಮನೆಯಲ್ಲಿ
"ಒಕ್ಕುದನುಣ್ಣೌ ತೊತ್ತೇ" ಎಂಬರು.

ಇಲ್ಲಿ ಸ್ತ್ರೀಧ್ವನಿಯ ಮಾತುಗಳು, ಅದರಲ್ಲಿಯೂ ಮನೆಗೆಲಸ ಮಧ್ಯದ ಮಾತುಗಳು, ಅಲ್ಲಿಯ ಕಾಕುಗಳನ್ನು ಹೊತ್ತುಕೊಂಡೇ ಪ್ರಕಟವಾಗಿವೆ. ಇವು ಮನೆಯ ಒಳಗಿನ ಸಂದರ್ಭದ ಮಾತುಗಳಾದರೆ, "ಏನಿ? ಬಂದಿರೇ. ಹದುಳವಿದ್ದಿರೇ?" ಎಂಬ ವಚನದಲ್ಲಿಯವು ಮನೆಯ ಹೊಸ್ತಿಲ ಹತ್ತಿರ ಅತಿಥಿಯನ್ನು ಬರಮಾಡಿಕೊಳ್ಳುವ ಸಂದರ್ಭದ ಪುರುಷಧ್ವನಿಯ ಮಾತುಗಳು. ಆಡುಮಾತಿನ ಧ್ವನಿಗಳನ್ನು ಉದ್ದಕ್ಕೂ ತುಂಬಿಕೊಂಡಿರುವ ವಚನವೊಂದು ಹೀಗಿದೆ.

ಹೊನ್ನ ಹಾವುಗೆ ಮೆಟ್ಟಿದವನ!
ಮಿಡಿ ಮುಟ್ಟಿದ ಕೆಂಜೆಡೆಯವನ!
ಮೈಯಲ್ಲಿ ವಿಭೂತಿ ಧರಿಸಿದವನ!
ಕರದಲ್ಲಿ ಕಪಾಲವ ಹಿಡಿದವನ!
ಅರ್ಧನಾರಿಯಾದವನ!
ಬಾಣನ ಬಾಗಿಲ ಕಾಯ್ದವನ!
ನಂಬಿಗೆ ಕುಂಟಣಿಯಾದವನ!
ಚೋಳಂಗೆ ಹೊನ್ನಮಳೆಯ ಕರೆದವನ!
ಎನ್ನ ಮನಕ್ಕೆ ಬಂದವನ!
ಸದ್ಭಕ್ತರ ಹೃದಯದಲ್ಲಿಪ್ಪವನ!
ಮಾಡಿದ ಪೂಜೆಯಲೊಪ್ಪುವನ!
ಕೂಡಲ ಸಂಗಯ್ಯನೆಂಬವನ!

ಇಲ್ಲಿ "ಕ್ರಿಯಾಪದ"ವೇ ಇಲ್ಲವಾಗಿ ಅಪೂರ್ಣವಚನವೆಂಬ ಭಾವನೆ ಮೂಡುತ್ತದೆ. ಆದರೆ ಇಲ್ಲಿ ಹೆಣ್ಣೊಬ್ಬಳು ಗೆಳತಿಗೆ ಹೇಳುವ "ಕೂಡಲಸಂಗಯ್ಯನೆಂಬವನ!" ಅಂದರೆ "ಕೂಡಲ ಸಂಗಯ್ಯನೆಂಬವನು ಇದ್ದಾನಲ್ಲಾ, ಅವನS" ಎಂಬ ಅರ್ಥದ ಕಾಕು, ಪಿಸುಮಾತಿನ ಹೆಣ್ಣುದನಿಯಲ್ಲಿ ಮತ್ತೆ ಮತ್ತೆ ಕೇಳಿಸುತ್ತದೆ. ಸತಿಪತಿ ಭಾವದ ವಚನಗಳಲ್ಲಿಯಂತೂ ಹೆಣ್ಣುದನಿಗಳು ವಿರಹ, ಸಲ್ಲಾಪ, ಸಂಭ್ರಮ, ವಿಪ್ರಲಂಭನಿಷ್ಠವಾಗಿ ಮೇಳೈಸಿವೆ. ಒಟ್ಟಾರೆ ಜನಪದ ಸಾಹಿತ್ಯದ "ಸಂದರ್ಭಸಿದ್ಧಾಂತ" ಇಲ್ಲಿ ನೆನಪಾಗುತ್ತಿದ್ದು, ಆಯಾ ವಚನಗಳನ್ನು ಆಯಾ ಸಂದರ್ಭದ ದನಿಯಲ್ಲಿಯೇ ವೀರ, ಕ್ರೋಧ, ಶೃಂಗಾರ, ಹಾಸ್ಯ, ಕರುಣೆ, ಅನುಕಂಪ, ಪಶ್ಚಾತ್ತಾಪ ಇತ್ಯಾದಿ ಶೈಲಿಯಲ್ಲಿ ಶ್ರವಣೀಯವಾಗುವಂತೆ ಓದಿದರೆ ಮಾತ್ರ ಅವುಗಳಿಗೆ ನ್ಯಾಯಸಿಗುವುದೆನಿಸುತ್ತದೆ. ಒಟ್ಟಾರೆ, ಏಕಕಾಲಕ್ಕೆ ಸಾರ್ವತ್ರಿಕವೂ, ಸಕಾಲಿಕವೂ, ಸಾಂದರ್ಭಿಕವೂ ಆಗುವಂತೆ ಸಾಧಿಸಿದ "ಸಮನ್ವಯಶೈಲಿ"ಗೆ ವಚನಸಾಹಿತ್ಯ ಉತ್ತಮ ಉದಾಹರಣೆಯಾಗಿದೆ.

೫. ವಾಕ್ಯಭಾಗಗಳಾಗಲಿ–ವಾಕ್ಯಗಳಾಗಲಿ ಸಮಪ್ರಮಾಣದಲ್ಲಿವೆ:

ವಚನಗಳ ಈ ಲಕ್ಷಣವನ್ನು ಇ.ಪಿ.ರೈಸ್ ೧೯೧೫ರಷ್ಟು ಹಿಂದೆ ತನ್ನ Kanarese Literature ಕೃತಿಯಲ್ಲಿ "Parallalistic" ಶಬ್ದದ ಮೂಲಕ, ರಂಗರಾವ್ ದಿವಾಕರ ೧೯೩೬ರಷ್ಟು ಪೂರ್ವದಲ್ಲಿ ತಮ್ಮ ವಚನಶಾಸ್ತ್ರರಹಸ್ಯದಲ್ಲಿ "ಸಮ ಪದಗಳು ಅಥವಾ ಸಮ ಅಕ್ಷರಗಳು" ಮಾತಿನ ಮೂಲಕ ಸೂಚಿಸಿದ್ದಾರೆ. ದಿವಾಕರ ಅವರು ಮುಂದುವರಿದು "ನೀನೊಲಿದರೆ ಕೊರಡು ಕೊನರುವುದಯ್ಯ। ನೀನೊಲಿದರೆ ಬರಡು ಹಯನಹುದಯ್ಯ। ನೀನೊಲಿದರೆ ವಿಷವೆಲ್ಲ ಅಮೃತವಹುದಯ್ಯ। ನೀನೊಲಿದರೆ ಸಕಲ ಪದಾರ್ಥ ಇದಿರಲ್ಲಿಪ್ಪವು ಕೂಡಲ ಸಂಗಮದೇವಾ॥" ಎಂದು ಮಧ್ಯ ಮಧ್ಯ ಗೆರೆಯೆಳೆದು ಈ ವಚನದ ಪ್ರತಿಯೊಂದು ಚರಣದಲ್ಲಿ ಸಮಪದಗಳು (ಸಮವಾಕ್ಯ) ಇರುವುದನ್ನು ಎತ್ತಿ ತೋರಿಸಿದ್ದಾರೆ. ಒಂದು ವಾಕ್ಯದ ಒಂದು ಪದ ಇನ್ನೊಂದು ವಾಕ್ಯದ ಇನ್ನೊಂದು ಪದಕ್ಕೆ ಸಮಾನವಾಗಿ ಕೇಳಿಸುವುದನ್ನೂ ಅವರು ಗಮನಿಸಿದ್ದಾರೆ. ಉದಾ: ಕೊರಡು:ಬರಡು, ಕೊನರುವುದಯ್ಯ:ಹಯನಹುದಯ್ಯ ಇತ್ಯಾದಿ.

ಈ ವಿಚಾರವನ್ನು ಬಸವನಾಳರು ತುಂಬ ಆಳವಾಗಿ ಚರ್ಚಿಸಿದುದನ್ನು ಅವಶ್ಯ ನೆನೆಯಬೇಕು. ಇಷ್ಟೇ ಏಕೆ ಬಸವಣ್ಣನ ವಚನಗಳ ಸಮಗ್ರಪಠ್ಯಕ್ಕೆ ಈ ತತ್ವವನ್ನು ಅನ್ವಯಿಸಿ "ಇದು ಈ ಮೊದಲು ಹಳಕಟ್ಟಿಯವರು ಪ್ರಕಟಿಸಿದ್ದ ಕೃತಿಯೇ?" ಎಂದು ಕೇಳುವಷ್ಟು ಅದ್ಭುತವಾಗಿ ಅದನ್ನು ಪರಿಷ್ಕರಿಸಿ, ವಚನಸಾಹಿತ್ಯ ಪ್ರಕಟನೆಯ ಇತಿಹಾಸದಲ್ಲಿ ಪ್ರಥಮ ಮೈಲುಗಲ್ಲು–ಎಂಬಂತೆ ಅದನ್ನು ಹೊರತಂದಿದ್ದಾರೆ.

೬. ವಾಕ್ಯಭಾಗಗಳಾಗಲಿ–ವಾಕ್ಯಗಳಾಗಲಿ ಪುನರುಕ್ತವಾಗುತ್ತವೆ.

ವಾಕ್ಯಭಾಗ–ವಾಕ್ಯಗಳು ಪುನರುಕ್ತವಾಗುವ ಲಕ್ಷಣವನ್ನು ದಿವಾಕರ ಅವರು ಎತ್ತಿಹೇಳಿದ್ದು, ಬಸವನಾಳ, ಗಿರಡ್ಡಿ ಮೊದಲಾದವರು ಅವುಗಳ ಪರಿಗಳನ್ನು ಬಿಚ್ಚಿ ತೋರಿಸಿದ್ದಾರೆ. ಈ ಪ್ರಕ್ರಿಯೆ ಒಂದೇ ವಾಕ್ಯದಲ್ಲಿ ಪುನರುಕ್ತಿ, ಹಲವು ವಾಕ್ಯಗಳಲ್ಲಿ ಪುನರುಕ್ತಿಯೆಂದು ಎರಡು ಬಗೆಯಾಗಿದೆ.

೧. ಎಸೆಯದಿರು ಎಸೆಯದಿರು ಕಾಮಾ
ನಿನ್ನ ಬಾಣ ಹುಸಿಯಲೇಕೊ?
....

೨. ವೇದಂಗಳ ಹಿಂದೆ ಹರಿಯದಿರು ಹರಿಯದಿರು.
ಶಾಸ್ತ್ರಂಗಳ ಹಿಂದೆ ಸುಳಿಯದಿರು ಸುಳಿಯದಿರು.
ಪುರಾಣಂಗಳ ಹಿಂದೆ ಬಳಸದಿರು ಬಳಸದಿರು.
ಆಗಮಂಗಳ ಹಿಂದೆ ತೊಳಲದಿರು ತೊಳಲದಿರು.
ಸೌರಾಷ್ಟ್ರ ಸೋಮೇಶ್ವರನ ಕೈಹಿಡಿದು,
ಶಬ್ದಜಾಲಂಗಳಿಗೆ ಬಳಲದಿರು ಬಳಲದಿರು.

ಇವು ಒಂದೇ ವಾಕ್ಯದಲ್ಲಿಯ ಪುನರುಕ್ತಿಗೆ ಉದಾಹರಣೆಗಳು. ಇಂಥ ರಚನೆಯಿಂದ ಅಭಿವ್ಯಕ್ತಿಗೆ ಅವಧಾರಣೆ ಪ್ರಾಪ್ತವಾಗಿ ಪರಿಣಾಮ ಆಳವಾಗಿ ನಾಟುತ್ತದೆ. ಹಲವು ವಾಕ್ಯಗಳಲ್ಲಿ ಪುನರುಕ್ತಿಗೆ

ಛಲಬೇಕು ಶರಣಂಗೆ, ಪರಧನವನೊಲ್ಲೆನೆಂಬ.
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ.
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ.
ಛಲಬೇಕು ಶರಣಂಗೆ ಲಿಂಗಜಂಗವೊಂದೆಯೆಂಬ.
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ.
ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ.

ಎಂಬುದು ಉದಾಹರಣೆಯಾಗಿದೆ. ಇಲ್ಲಿ ಮೊದಲ ಚರಣದ ಮೂರು ಪದಗಳು ಎರಡನೆಯ ಹಾಗೂ ಮುಂದಿನ ಚರಣಗಳಲ್ಲಿ ಪುನರುಕ್ತವಾಗುತ್ತ ಹೋಗಿವೆ. ಇಲ್ಲಿಯೂ ಅವಧಾರಣೆ ತತ್ವ ಅಡಗಿದೆ. ಸಾಲದುದಕ್ಕೆ ಒಂದೇ ವಾಕ್ಯ ಮತ್ತೆ ಮತ್ತೆ ಮುಂದುವರಿದ ಕ್ವಚಿತ್ ಉದಾಹರಣೆಗಳೂ ಇವೆ.

ಬಸವ ಹರಿಯಿತ್ತು
ಬಸವ ಹರಿಯಿತ್ತು
ಬಸವ ಹರಿಯಿತ್ತು.
ತೊತ್ತಳದುಳಿಯಿತ್ತು
ತೊತ್ತಳದುಳಿಯಿತ್ತು
ತೊತ್ತಳದುಳಿಯಿತ್ತು.
ಮೀಮಾಂಸಕರ ಮಿತ್ತುವ ಮುರಿಯಿತ್ತು
ಬೌದ್ಧ ಜೈನರ ಕೋಡಲ್ಲಿರಿಯಿತ್ತು
ಕೊಳಗಿನಲ್ಲರೆಯಿತ್ತು, ನೋಡಾ, ಸೊಡ್ಡಳಾ ಸಂಗನಬಸವ.

೭. ವಾಕ್ಯಭಾಗಗಳಾಗಲಿ–ವಾಕ್ಯಗಳಾಗಲಿ ಲಯಾತ್ಮಕವಾಗಿವೆ.

ಸಾಹಿತ್ಯದಲ್ಲಿ ಬಳಕೆಯಾಗುವ ಭಾಷೆಗೆ ಗದ್ಯಲಯ, ಪದ್ಯಲಯ, ಮತ್ತು ಗದ್ಯಪದ್ಯಗಳ ಮಧ್ಯಲಯ–ಹೀಗೆ ಮೂರು ಸಾಧ್ಯತೆಗಳಿರುತ್ತವೆ. ವಚನಕಾರರಿಗಿಂತ ಮುಂಚೆ ಸಾಹಿತ್ಯದಲ್ಲಿ ಗದ್ಯಲಯ, ಪದ್ಯಲಯಗಳನ್ನು ದುಡಿಸಿಕೊಳ್ಳಲಾಗುತ್ತಿದ್ದಿತು. ಸಾಲದುದಕ್ಕೆ ಚಂಪೂಕಾವ್ಯಗಳಲ್ಲಿ ಗದ್ಯಪದ್ಯಗಳ ಮಧ್ಯಲಯನಿಷ್ಠ "ವಚನ"ವನ್ನೂ ಬಳಸಲಾಗುತ್ತಿತ್ತು. ಈ ಕಡೆ ಪದ್ಯಕ್ಕೆ ಹೊರಳದ ಆ ಕಡೆ ಗದ್ಯಕ್ಕೆ ಉರುಳದ ಇದನ್ನು "ವೃತ್ತಗಂಧಿ"ಯೆಂದೂ ನಮ್ಮ ಆಲಂಕಾರಿಕರು ಕರೆದಿದ್ದಾರೆ. ಚಂಪೂಕೃತಿಗಳಲ್ಲಿ ಪದ್ಯವನ್ನು ಓದಿ ಗದ್ಯಕ್ಕೆ ಬಂದಾಗ, ಲಯದ ಅಂತರದ ಆಭಾಸವಾಗಬಾರದೆಂದು, ಆ ಗದ್ಯವನ್ನು ಒಂದಿಷ್ಟು ಪದ್ಯದ ಹತ್ತಿರ ತಂದು ಲಯಾತ್ಮಕಗೊಳಿಸಿದರು. ಉದಾ: "ಕಯ್ಯಂ ಪಿಡಿದು ಒಡಗೊಂಡು ಪೋಗಿ, ಕನಕಪೀಠದ ಮೇಲೆ ಕುಳ್ಳಿರಿಸಿ, ಕನಕ ಕಳಶದೊಳ್ ತೀವಿದ ಅಗಣ್ಯಪುಣ್ಯ ತೀರ್ಥೋದಕಂಗಳಿಂ, ಚತುರ್ವೇದ ಪಾರಗರಿಂದೆ ಅಭಿಷೇಕಂ ಗೆಯ್ಸಿ". ಪಂಪಭಾರತದ ಇದನ್ನು ಅರ್ಥಲಯಕ್ಕೆ ಒಳಪಡುವಂತೆ

ಕಯ್ಯಂ ಪಿಡಿದು,
ಒಡಗೊಂಡು ಪೋಗಿ,
ಕನಕಪೀಠದ ಮೇಲೆ ಕುಳ್ಳಿರಿಸಿ,
ಕನಕ ಕಳಶದೊಳ್ ತೀವಿದ ಅಗಣ್ಯಪುಣ್ಯ ತೀರ್ಥೋದಕಂಗಳಿಂ,
ಚತುರ್ವೇದ ಪಾರಗರಿಂದೆ ಅಭಿಷೇಕಂಗೆಯ್ಸಿ.

ಹೀಗೆ ಬಿಡಿಸಿ ಇಡಬಹುದು. ಶರಣರು ಇಂಥ ಲಯಾತ್ಮಕ ಗದ್ಯವನ್ನೇ ವಿಶಿಷ್ಟ ರೀತಿಯಲ್ಲಿ ಪರಿಷ್ಕರಿಸಿ, ವಾಕ್ಯರೀತಿಯಲ್ಲಿ ವಿನ್ಯಾಸಗೊಳಿಸಿ, ಮುಕ್ತಕ ಮಿತಿಯಲ್ಲಿ ಸೀಮಿತಗೊಳಿಸಿದರು. ಆದ್ಯ ವಚನಕಾರನಾದ ಜೇಡರದಾಸಿಮಯ್ಯನಲ್ಲಿ ಪದ್ಯ ಸಮೀಪದ ಗದ್ಯಲಯವಿದ್ದರೆ, ಬಸವಾದಿ ವಚನಕಾರರಲ್ಲಿ ಗದ್ಯ ಸಮೀಪದ ಪದ್ಯಲಯವಿದೆ. ಇದರಿಂದಾಗಿ ಗದ್ಯಾತ್ಮಕ ಮಾತಿನ ಗತಿಯಲ್ಲಿಯೇ ಒಂದಿಷ್ಟು ಅಧಿಕಲಯ ಸೇರಿ, ಲಯಪ್ರತೀತಿ ಕಿವಿ ತುಂಬುತ್ತ ಹೋಗುತ್ತದೆ. ಇದಕ್ಕೆ "ನಾನೊಂದು ಸುರಗಿಯನು ಏನೆಂದು ಹಿಡಿಯುವೆನು" ಎಂಬ ಜೇಡರ ದಾಸಿಮಯ್ಯನ, "ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ" ಎಂಬ ಬಸವಣ್ಣನ ವಚನಗಳನ್ನು ನೋಡಬಹುದು. ವಚನ ರಚನೆಯಲ್ಲಿ ತೋರುವ ಒಂದು ವಿಧದ ಲಯಬದ್ಧತೆ (Rhythm) ಇವುಗಳನ್ನು ಹಾಡುಗಳಂತೆ ಸರಾಗವಾಗಿ ಅಭಿವ್ಯಕ್ತಿಸಲು ಅನುಕೂಲಕಲ್ಪಿಸಿದೆ-ಎಂಬ ಬಸವನಾಳರ ಅಭಿಪ್ರಾಯವನ್ನು ಇಲ್ಲಿ ನೆನೆಯಬಹುದು.

೮. ವಾಕ್ಯದಲ್ಲಿ ಹಿತ ಮಿತ ಪ್ರಾಸವಿದೆ:

ಒಂದೇ ಬಗೆಯ ಶಬ್ದ(Sound) ಕಿವಿಗೆ ಮತ್ತೆ ಮತ್ತೆ ತಟ್ಟುತ್ತ ಹೋದರೆ ಆ "ಶ್ರವಣಸಾಹಿತ್ಯ" ತುಂಬ ಹಿತಕರವೆನಿಸುತ್ತದೆ. ಬಹುಶ: ಕನ್ನಡ ಭಾಷೆಯಲ್ಲಿಯೇ ಮೂಲತ: ಈ ವ್ಯವಸ್ಥೆಯಿದೆಯೆಂದು ಕಾಣುತ್ತದೆ. "ಕನ್ನಡಕ್ಕೆ ಸತತಂ ಪ್ರಾಸಂ" ಎಂಬ ಪ್ರಸಿದ್ಧ ಹೇಳಿಕೆ ಇದನ್ನು ಬೆಂಬಲಿಸುವಂತಿದೆ. ಇಂಥ ಪ್ರಾಸನಿಷ್ಠ ಭಾಷೆಯನ್ನು ಕಾವ್ಯರಚನಾ ಪ್ರಜ್ಞೆಯಿಂದ ಬಳಸಿದ ಶರಣರಲ್ಲಿ, ಇದು ಇನ್ನಷ್ಟು ದಟ್ಟಗೊಂಡಿತು.

ನಡೆಯಲ್ಲಿ ಎಚ್ಚತ್ತು,
ನುಡಿಯಲ್ಲಿ ತಪ್ಪಿದರೆ
ಹಿಡಿದಿರ್ದ ಲಿಂಗ ಘಟಸರ್ಪವಯ್ಯಾ.

ಒಂದೇ ಅಳತೆಯ ವಾಕ್ಯಗಳ ಆದಿಯಲ್ಲಿ ಬಂದ ಡಕಾರ ಪ್ರಾಸವಿಲ್ಲಿದೆ.

ಕಳಬೇಡ
ಕೊಲಬೇಡ
ಹುಸಿಯ ನುಡಿಯಲು ಬೇಡ

ಒಂದೇ ಅಳತೆಯ ವಾಕ್ಯಗಳ ಅಂತ್ಯದಲ್ಲಿ ಡಕಾರ ಪ್ರಾಸವಿದೆ.

ಕಡೆಗೀಲಿಲ್ಲದ ಬಂಡಿ ಹೊಡೆಗೆಡುವುದು ಮಾಬುದೆ?
ಕಡೆಗೀಲು ಬಂಡಿಗಾಧಾರ,
ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಡಶರಣರ ನುಡಿಗಡಣವೆ ಕಡೆಗೀಲು ಕಾಣಾ ರಾಮನಾಥ.

ಇಲ್ಲಿ ಡಕಾರ ಪ್ರಾಸ ವಾಕ್ಯದ ಆದಿ ಅಂತ್ಯ ಮತ್ತು ಮಧ್ಯ ಹೀಗೆ ವಚನದ ಮೈತುಂಬ ಬಂದಿರುವುದು ಒಂದಿಷ್ಟು ಅಧಿಕವೆನಿಸಿದರೂ, ಕಡೆಗೀಲಿಲ್ಲದ ಬಂಡಿಯ ಚಲನೆಯ ಗಡಗಡ ಸಪ್ಪಳದ ಪ್ರತೀತಿಯಾಗುವ ಮೂಲಕ, ಸಾರ್ಥಕವೇ ಎನಿಸಿದೆ. ಈ ರೀತಿ ವಚನಗಳಲ್ಲಿ ಅನುಪ್ರಾಸ ಕರ್ಣಮಧುರವೆಂಬಂತೆ ಆವರ್ತನಗೊಳ್ಳುವುದನ್ನು ಗಮನಿಸಬೇಕು.

ಇಲ್ಲಿ ಲಯ ಮತ್ತು ಪ್ರಾಸ ಹೊಂದಿಕೊಳ್ಳುತ್ತ ಹೋಗುವುದರಿಂದ ಲಯಪ್ರತೀತಿ ಪ್ರಾಸದಿಂದ ಇನ್ನೂ ಸ್ಫುಟವಾಗುತ್ತದೆ:

ಉಂಬಾಗಳಿಲ್ಲೆಂಬ
ಉಡುವಾಗಳಿಲ್ಲೆಂಬ
ಬಂಧುಗಳು ಬಂದಾಗ ಇಲ್ಲೆಂಬ
ಲಿಂಗಕ್ಕೆ ಇಲ್ಲೆಂಬ
ಜಂಗಮಕ್ಕೆ ಇಲ್ಲೆಂಬ
ಬಂದ ಪುರಾತರಿಗೆ ಇಲ್ಲೆಂಬ
ದೇವರಿಗೆ ಹೆಣಬಿಟ್ಟ ಹೇಳಿತ್ತೆ, ಕೂಡಲಸಂಗಮದೇವಾ!

ಇಲ್ಲಿ ಒಂದು ಮತ್ತು ಮೂರನೆಯ ಚರಣಗಳಲ್ಲಿ "ಇಲ್ಲೆಂಬ" ಎಂಬುದು ಎರಡುಸಲ ಎರಡನೆಯ ಗಣವಾಗಿ ಬಂದಿದೆ. ಅದೇ ರೀತಿ ಎರಡು ಮತ್ತು ನಾಲ್ಕನೆಯ ಚರಣಗಳ ಅಂತ್ಯಕ್ಕೆ ಒಂದು ಸಲ ಬಂದಿದೆ. ಈ ರೀತಿಯ ಲಯಬದ್ಧವೂ, ಕ್ರಮಬದ್ಧವೂ ಆಗಿರುವ ಆವರ್ತನದಿಂದಾಗಿ ಪ್ರಾಸದ ಕಳೆ ಉಕ್ಕೇರುತ್ತದೆ. ಇದಲ್ಲದೆ "ಎತ್ತನೇರಿ, ಎತ್ತನರಸುವರು, ಎತ್ತ ಹೋದರೈ ಗುಹೇಶ್ವರಾ" ಎಂಬಂಥ ರಚನೆಗಳಂತೂ ಶಬ್ದ ಅರ್ಥ ದೃಷ್ಟಿಯಿಂದಲೂ ಕಲಾತ್ಮಕವೆನಿಸುತ್ತವೆ.

ಈ ಎಂಟು ಲಕ್ಷಣಗಳಲ್ಲಿ ಮೊದಲಿನ ಆರು ಭಾಷೆಗೆ, ಆಮೇಲಿನ ಎರಡು ಛಂದಸ್ಸಿಗೆ ಸಂಬಂಧಪಟ್ಟಿವೆ. ಈ ಪ್ರಮಾಣವು ವಚನಭಾಷೆಯ ಸ್ವರೂಪವನ್ನೂ ಸೂಚಿಸುವ ಅಂಶವಾಗಿದೆ. ಕೊನೆಯ ಎರಡು ಲಕ್ಷಣದ ರಚನೆಗಳು ಓದಿದಾಗ ಒಂದು ಪರಿಣಾಮ, ಕೇಳಿದಾಗ ಇನ್ನೊಂದು ಪರಿಣಾಮ ಬೀರುತ್ತವೆ. ಒಟ್ಟಾರೆ ವಚನಗಳು ಭಾಷೆ ಸಮಾಜದಲ್ಲಿ ಹುಟ್ಟುತ್ತದೆ, ಸಾಹಿತ್ಯದಲ್ಲಿ ಬೆಳೆಯುತ್ತದೆ-ಎಂಬುದನ್ನು ಸ್ಪಷ್ಟಪಡಿಸುತ್ತವೆ. ಭಾಷೆಯು ಸಾಹಿತ್ಯದ ಮೂಲಕ ಯಾವುದನ್ನೇ ಅಭಿವ್ಯಕ್ತಿಸುವುದನ್ನಲ್ಲ, ಸ್ಥಾಪಿಸುವುದನ್ನು ಮಾಡುತ್ತದೆಯೆಂಬಂತೆ ವಚನಗಳಲ್ಲಿ ಅದು ದುಡಿದಿದೆ.

■■

ಆಕರ : ಮಾರ್ಗ ಸಂಪುಟ–೪

೪೦

ಮಾತೃಭಾಷೆ : ಮರುವ್ಯಾಖ್ಯಾನ

'Mother tongue'–ಈ ಇಂಗ್ಲಿಷ್ ಪದಕ್ಕೆ ಪರ್ಯಾಯವಾಗಿ ನಾವು ಮಾತೃಭಾಷೆ ಪದವನ್ನು ಇತ್ತೀಚೆ ಬಳಸುತ್ತ ಬಂದಿದ್ದೇವೆ. ಇದರಿಂದಾಗಿ ಭಾಷೆಯ ಬಗೆಗೆ ನಮ್ಮಲ್ಲಿ ಹೊಸ ಬಗೆಯ ಒಳ ಎಚ್ಚರ ಮೂಡಿದೆ ಮತ್ತು ಸಾಮಾಜಿಕ–ರಾಜಕೀಯ ಅಸ್ತ್ರವಾಗಿಯೂ ಭಾಷೆಯನ್ನು ಬಳಸುವುದು ಆರಂಭವಾಗಿದೆ. ಹೀಗಾಗಿ ಮಾತೃಭಾಷೆಯ ಬಗೆಗಿನ ನಮ್ಮ ಧೋರಣೆಯನ್ನು ಬ್ರಿಟಿಶ್ ಪೂರ್ವ ಕಾಲೀನ ಮತ್ತು ಉತ್ತರಕಾಲೀನವೆಂದು ಬಿಡಿಸಿ ನೋಡಬೇಕಾಗುತ್ತದೆ.

ಯಾವುದೇ ಪ್ರಬುದ್ಧ ಭಾಷೆಯಲ್ಲಿ ಸಾಮಾನ್ಯವಾಗಿ ನಿರಕ್ಷರಿಗಳ ಆಡುಭಾಷೆ, ಸಾಕ್ಷರಿಗಳ ಬರಹದ ಭಾಷೆ, ಸಾಹಿತ್ಯ ಭಾಷೆಯೆಂಬ ಪ್ರಭೇದಗಳು ಕಂಡುಬರುತ್ತವೆ. ಇವರಲ್ಲಿ ನಿರಕ್ಷರಿಗಳು ಮಾತೃಭಾಷೆ ಅನ್ಯಭಾಷೆಗಳೆಂಬ ಭೇದ ಕಲ್ಪಿಸದೆ ಸಂದರ್ಭಕ್ಕೆ ತಕ್ಕಂತೆ ಪ್ರಜ್ಞಾಪೂರ್ವಕವಾಗಿ ತಮಗೆ ಗೊತ್ತಿರುವ ಭಾಷೆಯನ್ನು ಇಲ್ಲವೆ ತಮ್ಮ ಭಾಷೆಯಲ್ಲಿ ಯಾವುದೇ ಭಾಷೆಯ ಶಬ್ದವನ್ನು ಬಳಸುತ್ತ ಹೋಗುತ್ತಾರೆ. ಹೀಗಾಗಿ ಪ್ರಾಚೀನ ಕಾಲದಲ್ಲಿ ರಾಜಕೀಯ–ಧರ್ಮೀಯ ಘರ್ಷಣೆ ಜರುಗಿದವೇ ಹೊರತು ಭಾಷಾ ಘರ್ಷಣೆ ಜರುಗಿದಂತಿಲ್ಲ. ಬಹಳೆಂದರೆ ಆಳುವವರ ಭಾಷೆ, ಸಂಸ್ಕೃತದಂಥ ಪ್ರತಿಷ್ಠಿತ ಭಾಷೆಗಳ ಬಗ್ಗೆ ತೋರಿದ ಪ್ರತಿಕ್ರಿಯೆ ಕಾರಣಗಳಿಂದಾಗಿ ಸಾಕ್ಷರಿಗಳಲ್ಲಿ ಮಾತೃಭಾಷೆ, ಅನ್ಯಭಾಷೆಗಳೆಂಬ ಭೇದ ಪ್ರಜ್ಞೆ ಒಂದಿಷ್ಟು ಜಾಗ್ರತವಾಗಿದ್ದಿತು. ಸಾಕ್ಷರಿಗಳಲ್ಲಿಯೇ ಸಾಹಿತಿಗಳಾದವರು ಸಾಹಿತ್ಯ ನಿರ್ಮಿತಿ ಕಾರ್ಯದಲ್ಲಿ ಅನ್ಯ ಭಾಷೆಯನ್ನು ಬಳಸುವ ಬಗ್ಗೆ ಪ್ರಜ್ಞಾಪೂರ್ವಕವಾಗಿ ತಮ್ಮ ನಿಲವು ವ್ಯಕ್ತಪಡಿಸುತ್ತ ಬಂದಿದ್ದಾರೆ.

ಕನ್ನಡವನ್ನು ಗಮನಿಸಿ ಹೇಳುವುದಾದರೆ ಪ್ರಾಚೀನ ಕಾಲದಿಂದಲೂ ನಮ್ಮ ಸಾಹಿತಿಗಳು ದ್ವಿಭಾಷಾ ಸಂದರ್ಭದಲ್ಲಿ ಬರವಣಿಗೆ ಮಾಡಿದವರಾಗಿದ್ದು, ಕಾವ್ಯ ಭಾಷೆಯ ವಿಷಯದಲ್ಲಿ ಇವರು ಒಂದಿಷ್ಟು ಭಿನ್ನಮತ ತಾಳಿದ್ದಾರೆ. ಮುಖ್ಯವಾಗಿ ನಮ್ಮನ್ನು ಪ್ರಾಚೀನ ಕಾಲದಲ್ಲಿ ಕಾಡಿದುದು ಪ್ರಾಕೃತ, ಇದಕ್ಕಿಂತ ಹೆಚ್ಚು ಸಂಸ್ಕೃತ. ಕವಿರಾಜಮಾರ್ಗಕಾರ ಅನಿವಾರ್ಯವಾಗಿದ್ದ ಸಂಸ್ಕೃತವನ್ನು ವಿವೇಕದಿಂದ ಬಳಸಲು ಹೇಳುತ್ತಾನೆ. ಪಂಪನೂ 'ದೇಸಿ–ಮಾರ್ಗ' ಸಮನ್ವಯದ ಆದರ್ಶದಲ್ಲಿ ಇದನ್ನು ಬೆಂಬಲಿಸುತ್ತಾನೆ. ಇವರನ್ನು ನಯಸೇನನಂಥವರು ವಿರೋಧ ವ್ಯಕ್ತಪಡಿಸಿದರೆ,

ಆಂಡಯ್ಯನಂಥವರು ಅತಿರೇಕದ ವಿರೋಧವನ್ನು ಮೆರೆಯುತ್ತಾರೆ. ಕೇಶಿರಾಜ ಪ್ರಾಚೀನ ಭಾಷಾರೂಪ ಉಳಿಸಲು ಪ್ರಯತ್ನಿಸಿದರೆ, ಹರಿಹರನಂಥ ಸಂತ ಕವಿಗಳು 'ನೋಡುವೊಡೊಂದಕ್ಕರಮದು....' ಎಂಬ ಪದ್ಯದಲ್ಲಿ ಅವನನ್ನು ವಿರೋಧಿಸುತ್ತಾನೆ. ಸಂಸ್ಕೃತದಿಂದಾಗುತ್ತಲಿದ್ದ ಮೋಸವನ್ನು ಶರಣ ನಗೆಯ ಮಾರಿತಂದೆ ಎತ್ತಿ ಹೇಳಿದರೆ, ಭೀಮಕವಿ, ಮಹಾಲಿಂಗರಂಗ, ಅಚಲಾನಂದ ದಾಸರು ಮೊದಲಾದವರು ಸಂಸ್ಕೃತವನ್ನು ನಿರಾಕರಿಸಿ ಕನ್ನಡದ ಪರ ನಿಲ್ಲುತ್ತಾರೆ. ಇದೆಲ್ಲವನ್ನು ನೋಡಿದರೆ ಮಾರ್ಗೀಯ ಸಾಹಿತಿಗಳು ಅನ್ಯಭಾಷಾ ಪರ-ವಿರೋಧ ನಿಂತರೆ, ಸಂತ-ದೇಶೀ ಕವಿಗಳು ಅನ್ಯಭಾಷೆಯನ್ನು ವಿರೋಧಿಸಿ ಮಾತೃಭಾಷಾ ಪರ ನಿಂತಿದ್ದಾರೆ. ಇದಕ್ಕೆ ಕಾರಣ ಮಾರ್ಗೀಯ ಕವಿಗಳು ವಿದ್ವಾಂಸರನ್ನು ಮೆಚ್ಚಿಸುವುದಕ್ಕಾಗಿ, ದೇಶೀ ಕವಿಗಳು ಜನ ಸಾಮಾನ್ಯರನ್ನು ಬದುಕಿಸುವುದಕ್ಕಾಗಿ ಸಾಹಿತ್ಯ ರಚಿಸಬೇಕೆಂಬ ಧೋರಣೆ ತಾಳಿದುದು. ಮಹಾರಾಷ್ಟ್ರದಲ್ಲಿ ಮರಾಠಿ ಭಾಷೆ ಬೆಳಸಿದವರು ಸಂತ ಕವಿಗಳೆಂಬುದನ್ನು ಇಲ್ಲಿ ನೆನೆಯಬಹುದು.

'Mother tongue' ಪರಿಕಲ್ಪನೆ ನಮ್ಮಲ್ಲಿ ಪ್ರವೇಶಿಸುತ್ತಲೇ, ಪ್ರದೇಶ ಮತ್ತು ಧರ್ಮಗಳಂತೆ ಭಾಷೆಯ ರಕ್ಷಣೆಯೂ ತಮ್ಮ ಹೊಣೆಯೆಂದು ಜನತೆ ಭಾವಿಸುತ್ತ ಬಂದರು. ಭಾಷೆಯನ್ನು ಮುಂದು ಮಾಡಿಕೊಂಡು ಏನೆಲ್ಲ ಸಾಧಿಸಬಹುದೆಂಬ ದಾರಿ ಕಂಡುಕೊಂಡರು. ಹೀಗಾಗಿ ಭಾರತ ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೇ ಮಾತೃಭಾಷಾ ಸ್ವಾತಂತ್ರ್ಯದ ಸಣ್ಣ ಹೋರಾಟ ನಮ್ಮಲ್ಲಿ ಕಣ್ಣು ತೆರೆಯಿತು. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ಕೇರಳಪ್ರಾಂತ, ನಿಜಾಮ ರಾಜ್ಯಗಳಲ್ಲಿ ಹಂಚಿ ಹೋಗಿದ್ದ ಕನ್ನಡ ಭಾಷಾ ಪ್ರದೇಶಗಳ ಏಕೀಕರಣಕ್ಕಾಗಿ ನಮ್ಮ ಹಿರಿಯರು ನಡೆಸಿದ ಹೋರಾಟ ಇತಿಹಾಸ ಪ್ರಸಿದ್ಧವೆನಿಸಿದೆ. ಏಕೀಕರಣದ ಬಳಿಕವೂ ಬೆಳಗಾವಿ ಭಾಗದಲ್ಲಿ ಮರಾಠರು ಭಾಷಾ ಚಳುವಳಿ ಜೀವಂತವಾಗಿಟ್ಟಿದ್ದಾರೆ. ಮಹಾರಾಷ್ಟ್ರದ ಸೊಲ್ಲಾಪುರ, ಕೇರಳದ ಕಾಸರಗೋಡು ಪ್ರದೇಶ ಕರ್ನಾಟಕಕ್ಕೆ ಸೇರಬೇಕೆಂಬ ಕೂಗು ಈಗಲೂ ಕೇಳಿ ಬರುತ್ತಲಿದೆ. ಕರ್ನಾಟಕದ ಘಟಕವಾಗಿರುವ ತುಳು, ಕೊಡಗು ಪ್ರತ್ಯೇಕ ರಾಜ್ಯವಾಗಬೇಕೆಂದೂ ವಾದಿಸುತ್ತಲಿದ್ದಾರೆ. ಒಳ ನಾಡಿನಲ್ಲಿ ಉರ್ದು, ಮರಾಠಿ, ತೆಲುಗು, ತಮಿಳು ಇತ್ಯಾದಿ ಭಾಷಾ ದ್ವೀಪಗಳು ಕರ್ನಾಟಕದ ಆಯಾ ಪ್ರದೇಶಗಳ ಮೇಲೆ ತಮ್ಮ ಹಿಡಿತ ಬಿಗಿ ಮಾಡುತ್ತಲೇ ಇವೆ. ಇವೆಲ್ಲ ಮಾತೃ ಭಾಷಾ ವ್ಯಾಮೋಹದ ನಿದರ್ಶನಗಳು. ಈ ಸ್ವಭಾಷಾ ಮೋಹ ಕಾರಣವಾಗಿಯೇ ಕರ್ನಾಟಕದಲ್ಲಿ ಕನ್ನಡದ ಜೊತೆ ಇಂದು ಉರ್ದು, ಮರಾಠಿ ಶಿಕ್ಷಣ ಮಾಧ್ಯಮಗಳಾಗಿ ವಿಜೃಂಭಿಸುತ್ತಲಿವೆ. ಹೆಚ್ಚಿನದಾಗಿ ಜ್ಞಾನ-ವೃತ್ತಿ ಗಳಿಸಿಕೊಡುವ ದೃಷ್ಟಿಯಿಂದ ಇಂಗ್ಲಿಷ್ ಮಾಧ್ಯಮ ಶಿಕ್ಷಣ ಭೂತಾಕಾರವಾಗಿ ಬೆಳೆದಿದೆ, ಬೆಳೆಯುತ್ತಲಿದೆ. ರಾಷ್ಟ್ರ ಭಾಷಾ ನೆವದಲ್ಲಿ ಹಿಂದಿ ಕಾಡುತ್ತಲಿದೆ. ಪ್ರಾಚೀನ ಭಾಷೆಯಾಗಿ ಸಂಸ್ಕೃತ ತನ್ನ ಶ್ರೇಷ್ಠತೆಯನ್ನು ಸಾರುತ್ತಲಿದೆ. ಇಷ್ಟು ಸಾಲದೆಂಬಂತೆ ವ್ಯಾಪಾರೋದ್ದಿಮೆ ನೆವದಲ್ಲಿ ಗುಜರಾಥಿ, ಮಾರವಾಡಿಗಳು ತಮ್ಮ ಸಂಖ್ಯೆ ಬೆಳೆಸಿಕೊಂಡು ತಮ್ಮ ಭಾಷೆಗೂ ಇಲ್ಲಿ ಅವಕಾಶ ಕೇಳುವ ಕಾಲ ಸಮೀಪಿಸುತ್ತಲಿದೆ. ಇವಲ್ಲದೆ ಇತರ ಭಾಷೆ-ಉಪ ಭಾಷೆಗಳೂ ಸೇರಿ ಕರ್ನಾಟಕದಲ್ಲಿ ೧೩೬ ಭಾಷೆಗಳಿವೆ. ಸಾಲದುದಕ್ಕೆ ಕನ್ನಡದಲ್ಲಿಯೇ ೧೮ ಭಾಷೆಗಳ ಮಿಶ್ರಣ ಕಂಡುಬರುತ್ತಿದೆ. ಹೀಗಾಗಿ ಕರ್ನಾಟಕದಲ್ಲಿ ಭಾಷಾ ಸಮಸ್ಯೆ ತುಂಬ ಸಂಕೀರ್ಣಗೊಳ್ಳುತ್ತಲಿದೆ. ಈ ಎಲ್ಲ ಭಾಷೆಗಳನ್ನು ಮಾತೃಭಾಷೆಗಳು, ರಾಜ್ಯಭಾಷೆ, ರಾಷ್ಟ್ರಭಾಷೆ,

ಪ್ರಾಚೀನಭಾಷೆ, ಅಂತಾರಾಷ್ಟ್ರೀಯ ಭಾಷೆಯೆಂದು ೫ ರೀತಿಗಳಲ್ಲಿ ವರ್ಗೀಕರಿಸಬಹುದು. ಇಂದು ಈ ಐದು ರೀತಿಯ ಜನರಿಗೆ ಸಮ್ಮತವಾಗುವಂತೆ ಶಿಕ್ಷಣದ ಭಾಷಾಮಾಧ್ಯಮ ಸಮಸ್ಯೆಯನ್ನು ಬಿಡಿಸಬೇಕಾಗಿದೆ. ಒಂದು ಕಡೆ ಬಿಡಿಸಿದರೆ ಇನ್ನೊಂದು ಕಡೆ ತೊಡಕು ಎದುರಾಗುತ್ತಲಿದೆ.

ಇವುಗಳಲ್ಲಿ ಶಿಕ್ಷಣ ಮಾಧ್ಯಮ ದೃಷ್ಟಿಯಿಂದ ಸಮಸ್ಯೆಗಳಲ್ಲದ ಪ್ರಾಚೀನ ಭಾಷೆ, ರಾಷ್ಟ್ರಭಾಷೆಗಳನ್ನು ಎಷ್ಟೇ ಅವಶ್ಯವಾಗಿದ್ದರೂ ಅಂತಾರಾಷ್ಟ್ರೀಯ ಭಾಷೆಯನ್ನು ಮಗ್ಗುಲಿಗೆ ಸರಿಸಿದರೂ ಕರುಳಿಗೆ ಸಂಬಂಧಪಟ್ಟವುಗಳಾಗಿ ಎರಡು ಬಗೆಯ ಮಾತೃಭಾಷೆಗಳು ನಮ್ಮನ್ನು ಕಾಡುತ್ತಲಿವೆ. ೧. ರಾಜ್ಯ ಭಾಷೆಯಾಗಿರುವ ಮಾತೃಭಾಷೆ ಉದಾ: ಕನ್ನಡ ೨. ರಾಜ್ಯ ಭಾಷೆಯಲ್ಲದ ಮಾತೃಭಾಷೆಗಳು ಉದಾ: ಉರ್ದು, ಮರಾಠಿ ಇತ್ಯಾದಿ. ಹೀಗಾಗಿ ಇಂದಿನ ಸಂದರ್ಭದಲ್ಲಿ ಮಾತೃಭಾಷೆಯೆಂದರೇನು? ಎಂಬ ಪ್ರಶ್ನೆಯನ್ನು ಸರ್ವೋಚ್ಚ ನ್ಯಾಯಾಲಯ ಎತ್ತಿದುದು ಸಮಂಜಸವೆನಿಸಿದೆ ಇಷ್ಟು ವಿವರಗಳ ಹಿನ್ನೆಲೆಯಲ್ಲಿ ಈ ಪ್ರಶ್ನೆಯನ್ನು ಚರ್ಚಿಸಬಹುದಾಗಿದೆ.

ಇಲ್ಲಿ ಎರಡು ಪ್ರಶ್ನೆಗಳನ್ನು ಸ್ಪಷ್ಟಪಡಿಸಬಹುದು:

೧. ಏಕಭಾಷಾ ಸಮಾಜದಲ್ಲಿ ಮಾತೃಭಾಷೆಯ ಪ್ರಶ್ನೆ ಉದ್ಭವಿಸುವುದಿಲ್ಲ. ಇವರಿಗೂ ಭಾಷೆಗೂ ಮೀನು-ನೀರ ಸಂಬಂಧ. ಬೇರೆ ಭಾಷೆ ವಲಸೆ ಬಂದರೆ ಸ್ವ-ಪರವೆಂಬ ಪ್ರಶ್ನೆ ಆರಂಭವಾಗುತ್ತದೆ. ಸಂಖ್ಯಾ ಪ್ರಮಾಣ ಅಧಿಕವಾಗಿದ್ದರೆ ವಲಸಿಗರು ತಮ್ಮ ಭಾಷಾ ಅಸ್ತಿತ್ವ ಉಳಿಸಿಕೊಳ್ಳುತ್ತಾರೆ. ಸಂಖ್ಯಾ ಪ್ರಮಾಣ ಕಡಿಮೆಯಿದ್ದರೆ ಸ್ವಭಾಷೆ ಮರೆತು ಪ್ರಾದೇಶಿಕ ಭಾಷೆಯನ್ನೇ ಬಳಸುತ್ತಾರೆ. ಹಳ್ಳಿಗಳಲ್ಲಿರುವ ಮುಸಲ್ಮಾನ, ಮರಾಠಾ ಜನರಿಗೆ ಉರ್ದು, ಮರಾಠಿ ಬರುವುದಿಲ್ಲವೆಂಬುದೇ ಇದಕ್ಕೆ ಉದಾಹರಣೆಯಾಗಿದೆ.

೨. ಪ್ರದೇಶ, ಜಾತಿಗಳೊಂದಿಗೆ ಭಾಷೆ ತೊಡಗಿಕೊಂಡಿದೆ. ಉದಾ: ಮುಸಲ್ಮಾನರಿಗೆ ಉರ್ದು, ಮರಾಠರಿಗೆ ಮರಾಠಿ, ಬ್ರಾಹ್ಮಣರಿಗೆ ಸಂಸ್ಕೃತ ಜಾತಿ ಭಾಷೆಗಳೆನಿಸಿವೆ. ಕನ್ನಡ ಹಿಂದಿ ಪ್ರಶ್ನೆ ಬಂದಾಗ ಇವರೆಲ್ಲ ಕನ್ನಡಿಗರೆಂಬ (ಕನ್ನಡ ಪ್ರದೇಶದವರೆಂಬ) ಭಾವನೆಯಿಂದ ಒಂದುಗೂಡಿ ಹೋರಾಡುತ್ತಾರೆ. ಆದರೆ ಕನ್ನಡ-ಉರ್ದು, ಕನ್ನಡ-ಮರಾಠಿ, ಕನ್ನಡ-ಸಂಸ್ಕೃತ ಪ್ರಶ್ನೆ ಉದ್ಭವವಾದರೆ ಕನ್ನಡದ ಪರ ನಿಲ್ಲುವುದಿಲ್ಲ.

ಅನ್ಯ ರಾಜ್ಯ, ಅನ್ಯ ರಾಷ್ಟ್ರಗಳಿಗೆ ವಲಸೆ ಹೋದ ಕರ್ನಾಟಕದ ಯಾವುದೇ ಪ್ರದೇಶ, ಯಾವುದೇ ಜಾತಿಯವರು ಅಲ್ಲಿ ಪ್ರದೇಶ ಭೇದ-ಜಾತಿಭೇದ-ಭಾಷಾ ಭೇದ ಮರೆತು ಒಂದುಗೂಡುತ್ತಾರೆ. ಪ್ರಸಂಗ ಬಂದರೆ ಈ ಭೇದಗಳನ್ನಾಧರಿಸಿಯೇ ಭಿನ್ನವಾಗುತ್ತಾರೆ.

ಆಂಗ್ಲ ಪೂರ್ವ ಕಾಲೀನ ಭಾರತೀಯರದು ಸಣ್ಣ ಗ್ರಾಮ ಸಮಾಜ-ಜನನದಿಂದ ಮರಣದವರೆಗೂ ಒಂದೇ ಗ್ರಾಮದಲ್ಲಿ ಬದುಕು ನಡೆಸುವ ಸ್ಥಿರ ಸಮಾಜ ಅಲ್ಲಿ ಬೇರೆ ಬೇರೆ ಜಾತಿಯ ಬೇರೆ ಬೇರೆ ಭಾಷೆಯ ಕುಟುಂಬಗಳಿದ್ದರೂ ಪರಸ್ಪರ ಅವಲಂಬನೆಯ ಅನಿವಾರ್ಯತೆಯಿಂದಾಗಿ ಎಲ್ಲರೂ ಒಂದೇ ಕುಟುಂಬದಂತೆ ಬಾಳುತ್ತಿದ್ದರು. ಸಹಜವಾಗಿಯೇ ದೊಡ್ಡ ಸಂಖ್ಯೆಯ ಕನ್ನಡ ಭಾಷಿಕರೊಂದಿಗೆ ಇತರ ಸಣ್ಣ ಭಾಷಿಕರು ಸಹಬಾಳ್ವೆ ನಡೆಸುತ್ತ ಅವರ ಭಾಷೆಯನ್ನು ಒಪ್ಪಿಕೊಂಡಿದ್ದರು. ಎರಡನೆಯದಾಗಿ ಸ್ಥಿರ ಸಮಾಜ ಕಾರಣವಾಗಿ ಮನೆಯೊಳಗಿನ ಮತ್ತು ಸಮಾಜದೊಳಗಿನ ಭಾಷೆ

ಒಂದೇ ಆಗಿ ಮಗುವಿಗೆ ಏಕ ಭಾಷಾ ಸಂದರ್ಭ ಸೃಷ್ಟಿಯಾಗುತ್ತಿದ್ದಿತು. ಮಗು ಇದನ್ನು ಅದಕೂ ಇದಕೂ ಎದಕೂ ಬಳಸುತ್ತಿತ್ತು. ಇದನ್ನು ಇಂದಿನ ಪರಿಭಾಷೆಯಲ್ಲಿ 'ಮಾತೃಭಾಷೆ' ಯೆಂದು ಕರೆಯುವದು ನ್ಯಾಯಸಮ್ಮತವೆನಿಸಿದೆ.

ಇಂಥ ಸಾಮಾಜಿಕ ಸಂರಚನೆಯನ್ನು ಗಮನಿಸಿ ಮಹಾತ್ಮಾಗಾಂಧಿ ಮೊದಲಾದ ಮುಖ್ಯರು 'ಮಗುವಿನ ಪ್ರಾಥಮಿಕ ಶಿಕ್ಷಣಕ್ಕೆ ಮಾತೃಭಾಷೆಯೇ ಸ್ವತ್ತು' ಎಂದು ಹೇಳಿದರು. ಇಂದು ಬದಲಾದ ಯಾಂತ್ರಿಕ ಸಾಮಾಜಿಕ ವ್ಯವಸ್ಥೆಯಲ್ಲಿಯೂ ಈ ಮಾತನ್ನು ನಾವು ಒಪ್ಪಿಕೊಂಡು ನಡೆದಿದ್ದೇವೆ. ಹೀಗಾಗಿ ಇಂದು ಮಾತೃಭಾಷೆ ಎಂದರೇನು? ಎಂದು ಮರುವ್ಯಾಖ್ಯಾನಿಸುವುದು ಅಗತ್ಯವೆನಿಸಿದ್ದು, ಈ ಬಗ್ಗೆ ಕೆಳಗಿನಂತೆ ಚರ್ಚಿಸಬಹುದು:

೧. ಸಂಪರ್ಕ ಸಾಧನಗಳ ಬಾಹುಳ್ಯ, ಉದ್ಯೋಗಗಳ ಸಂಖ್ಯಾಪ್ರಮಾಣದ ಆಧಿಕ್ಯ, ನೌಕರಿಗಳ ವೈವಿಧ್ಯ, ಜ್ಞಾನ ಸಂಪಾದನೆಯ ಅತಿ ಆಸಕ್ತಿ–ಇತ್ಯಾದಿಗಳಿಂದಾಗಿ ಇಂದು ಸ್ಥಿರ ಸಮಾಜಕ್ಕೆ ಬದಲು ಚರ ಸಮಾಜ ಅಸ್ತಿತ್ವಕ್ಕೆ ಬಂದಿದೆ.

೨. ಮೇಲೆ ಹೇಳಿದ ಚರಸಮಾಜ ಕಾರಣವಾಗಿ ಮಿಶ್ರಭಾಷಾಸಮಾಜ ಆಕಾರ ಪಡೆದಿದೆ. ಒಂದು ಭಾಷೆಯ ಗಂಡ, ಇನ್ನೊಂದು ಭಾಷೆಯ ಹೆಂಡತಿ ಮತ್ತೊಂದು ಭಾಷೆಯ ಸೊಸೆ– ಈ ಬಗೆಯ ಮಿಶ್ರ ಭಾಷಾ ಕುಟುಂಬಗಳೂ ಅಸ್ತಿತ್ವಕ್ಕೆ ಬರತೊಡಗಿವೆ. ಇದಕ್ಕೆ ಹೆಚ್ಚಿನದಾಗಿ ರಾಷ್ಟ್ರಭಾಷಾ ನೆವದಲ್ಲಿ ಹಿಂದಿ ಕೆಲಮಟ್ಟಿಗೆ, ಅಂತಾರಾಷ್ಟ್ರೀಯ ಸಂಪರ್ಕ ಭಾಷೆಯ ಹೆಸರಿನಲ್ಲಿ ಇಂಗ್ಲಿಷ್ ಬಹುಮಟ್ಟಿಗೆ, ನಮ್ಮ ಬದುಕಿನಲ್ಲಿ ಕಾಲು ಚಾಚಿವೆ. ಇದರಿಂದಾಗಿ ಗಾಂಧೀಜಿ ಕಾಲೀನ ಸರಳ ಸಮಾಜ ಸಂಕೀರ್ಣ ಸಮಾಜವಾಗಿ ಮಾರ್ಪಟ್ಟಿದೆ. ಹೀಗಾಗಿ ಸ್ಥಿರ ಸಮಾಜ, ಸರಳ ಸಮಾಜಗಳ ಕಾಲದ 'ಮಾತೃಭಾಷೆ'ಯ ಪರಿಕಲ್ಪನೆ ಈ ಕಾಲೀನ ಚರಸಮಾಜ, ಸಂಕೀರ್ಣ ಸಮಾಜಗಳಿಗೆ ಅನ್ವಯಿಸಲು ಬರುವುದಿಲ್ಲ. ಬಹುಶಃ ಗಾಂಧೀಜಿ ಬದುಕಿದ್ದರೆ ತಮ್ಮ ಹೇಳಿಕೆಯನ್ನು ತಿದ್ದಿಕೊಳ್ಳುತ್ತಿದ್ದರು. ಇಷ್ಟು ಹಿನ್ನೆಲೆಯಲ್ಲಿ ಈ ಚರ್ಚೆಯನ್ನು ಬೆಳೆಸಬಹುದು.

■■

ಆಕರ : ಮಾರ್ಗ ಸಂಪುಟ–೮

೪೧

ಕನ್ನಡಿಗರ ಮಾತೃಭಾಷಾಪ್ರಜ್ಞೆಯ ಇತಿಹಾಸ

"ಮಾತೃದೇವೋಭವ......" ಇತ್ಯಾದಿ ಉಪನಿಷದ್ವಾಕ್ಯಗಳ ಸಾಲಿನಲ್ಲಿ ಇಂದು "ಮಾತೃಭೂಮಿ ದೇವೋಭವ"[೧] "ಮಾತೃಭಾಷಾ ದೇವೋಭವ" ಎಂಬ ಹೇಳಿಕೆಗಳು ಬೆಲೆ ಪಡೆದಿವೆ. ಇವುಗಳಲ್ಲಿ ನಮ್ಮ ಪ್ರಾಚೀನರಿಗೆ ಮೂರ್ತರೂಪದ 'ಮಾತೃಭೂಮಿ' ಆಸ್ತಿ ಎನಿಸಿದಂತೆ ಅಮೂರ್ತರೂಪದ 'ಮಾತೃಭಾಷೆ' ಆಸ್ತಿ ಎನಿಸಿದ್ದಿತೇ? ಒಂದು ವೇಳೆ ಎನಿಸಿದ್ದರೆ ಮಾತೃಭೂಮಿ ರಕ್ಷಣೆ, ವಿಸ್ತರಣೆಗಾಗಿ ಇತಿಹಾಸದುದ್ದಕ್ಕೂ ಯುದ್ಧರೂಪದ ಚಟುವಟಿಕೆಗಳಲ್ಲಿ ತೊಡಗಿದ ಇವರು, ಮಾತೃಭಾಷೆಯ ರಕ್ಷಣೆ, ವಿಸ್ತರಣೆಗಳ ಬಗ್ಗೆ ತಳೆದ ನಿಲುವುಗಳೇನು? ಈ ಪ್ರಶ್ನೆಗಳನ್ನು ಎತ್ತಿ, ಉತ್ತರ ಹುಡುಕುವ ಪ್ರಯತ್ನವನ್ನು ಈ ವರೆಗೆ ಯಾರೂ ಮಾಡಿದಂತಿಲ್ಲ.

ಕವಿರಾಜಮಾರ್ಗಕಾರ, ಪಂಪ, ಆಂಡಯ್ಯ ಮೊದಲಾದವರ ಕಾವ್ಯಗಳಲ್ಲಿ, ನಾಡಿನ ತುಂಬ ಹರಡಿರುವ ಶಾಸನಗಳಲ್ಲಿ ಆಗಾಗ ಮಿಂಚುವ ವಾಕ್ಯಗಳನ್ನು ಆಯ್ದುಕೊಂಡು, 'ಮಾತೃಭೂಮಿ'ಯ ಬಗ್ಗೆ ಪ್ರಾಚೀನರ ಒಲುಮೆ ಎಂತಹದು? ಅದನ್ನು ಅನುಷ್ಠಾನಗೊಳಿಸುವಲ್ಲಿ ಅವರು ತಳೆದ ನಿಲವುಗಳೇನು? ಎಂಬುದನ್ನು ಗುರುತಿಸುವಂತೆ, 'ಮಾತೃಭಾಷೆ'ಯ ಬಗ್ಗೆ ಅವರ ಒಲುಮೆ ಎಂತಹದು? 'ಮಾತೃಭಾಷೆ'ಯ ಮಾಧ್ಯಮದ ಬಗ್ಗೆ ಅವರ ನಿಲುಮೆಯೇನು? ಎಂಬುದನ್ನು ಗುರುತಿಸಬಹುದಾಗಿದೆ. ಇದರಿಂದ ಮಾತೃಭಾಷಾಪ್ರೇಮ ಮತ್ತು ಮಾತೃಭಾಷಾಮಾಧ್ಯಮ ಸಮಸ್ಯೆಗಳನ್ನು ಅಂದು ಅವರು ಪರಿಹರಿಸಿಕೊಂಡ ರೀತಿಗಳು, ಭಾಷಾಸಮಸ್ಯೆಯ ಸುಳಿಯಲ್ಲಿ ಸಿಕ್ಕ ಇಂದಿನ ನಮಗೆ ಮಾರ್ಗದರ್ಶಿಯಾಗುವ ಸಾಧ್ಯತೆ ಇದೆ.

ಭಾವನೆಗಳ ವಿನಿಮಯಕ್ಕೋಸುಗ ಒಂದು ಜನಾಂಗದ ಪ್ರಜೆಗಳು ಪರಸ್ಪರ ಒಪ್ಪಿಕೊಂಡ ಮೌಖಿಕ ಧ್ವನಿವ್ಯವಸ್ಥೆಯೇ ಭಾಷೆ. ಸಂಪರ್ಕ ಪ್ರಯೋಜನವೇ ಮೂಲತಃ ಅದರ ಉದ್ದೇಶವಾದುದರಿಂದ ಭಾಷೆಯೆಂದರೆ 'ಸಂಪರ್ಕಭಾಷೆ' ಎಂದೇ ಅರ್ಥ. ಯಾವುದೇ ಇಂಥ ಭಾಷೆ ತಲೆಮಾರಿನಿಂದ ತಲೆಮಾರಿಗೆ ನಡೆದುಬಂದು, ಪ್ರಯೋಜನಾತ್ಮಕ ಸಂಬಂಧವನ್ನೂ ಮೀರಿ, ಭಾವನಾತ್ಮಕ ಸಂಬಂಧವನ್ನು ಪಡೆಯುವಲ್ಲಿ ಅದಕ್ಕೆ 'ಸಂಪರ್ಕಭಾಷೆ'ಯ ಸ್ಥಾನತಪ್ಪಿ 'ಮಾತೃಭಾಷಾ' ಪಟ್ಟ ಪ್ರಾಪ್ತವಾಗುತ್ತದೆ.

---

೧. 'ಮಾತೃಭೂಮಿ'ಗಾಗಿ ಪ್ರಾಚೀನ ಕಾಲದ ವೀರರು ಹೋರಾಡಿ ಮಡಿದಿರುವರಾದರೂ ಅಲ್ಲಿ ಮಾತೃಭೂಮಿಗಿಂತ ಒಡೆಯನ 'ಜೋಳದ ಪಾಟಿ'ಯೇ ಪ್ರಧಾನವಾಗಿದ್ದಿತು.

ಯಾವುದೇ ಜನಾಂಗದಲ್ಲಿ 'ಭಾಷೆಯ ಬಗ್ಗೆ ಅಜ್ಞರಾದ ಜಾನಪದರು', 'ಭಾಷೆಯ ಬಗ್ಗೆ ಪ್ರಾಜ್ಞರಾದ ನಾಗರಿಕರು' ಎಂದು ಎರಡು ವರ್ಗಗಳು ಕಂಡುಬರುತ್ತವೆ. ಜಾನಪದರಿಗೆ ತಾವು ಆಡುವ ಭಾಷೆಯ ಬಗ್ಗೆ ಆದರವೂ ಇರುವುದಿಲ್ಲ; ಅನಾದರವೂ ಇರುವುದಿಲ್ಲ. ಅಗತ್ಯಕ್ಕೆ ತಕ್ಕಂತೆ ಬಳಸುತ್ತ ಹೋಗುವ ಇವರದು ಭಾಷೆಯ ಬಗ್ಗೆ ದಿವ್ಯನಿರ್ಲಕ್ಷ್ಯ.

ನಾಗರಿಕರು ಹೀಗಲ್ಲ. ಇವರು 'ಅನ್ಯಭಾಷೆ'ಯೊಂದಿಗೆ ಪ್ರಯೋಜನಾತ್ಮಕ ಸಂಬಂಧವನ್ನಿಟ್ಟುಕೊಳ್ಳಬಲ್ಲರು; ತಮ್ಮ ಭಾಷೆಯೊಂದಿಗೆ ಭಾವನಾತ್ಮಕ ಸಂಬಂಧವನ್ನಿಟ್ಟುಕೊಂಡು ಮಾತೃಸ್ಥಾನದಲ್ಲಿ ಗೌರವಿಸಬಲ್ಲರು. ಎರಡಕ್ಕೂ ವೈಚಾರಿಕ, ಸಾಹಿತ್ಯಿಕ ಸ್ತರಗಳಲ್ಲಿ ದುಡಿಯುವ ಸಾಮರ್ಥ್ಯವಿರುವುದೆಂದು ಕಂಡುಕೊಂಡ ಇವರು, ಇವುಗಳ ಶಕ್ತಿಕೋಶಗಳನ್ನು ಶೋಧಿಸುತ್ತ, ಬಲಪಡಿಸುತ್ತ, ವಿಸ್ತರಿಸುತ್ತ ನಡೆಯುತ್ತಾರೆ. ಇವರಿಂದ ಭಾಷೆಗೆ 'ಮಾತೃಮರ್ಯಾದೆ' ಮತ್ತು ಯಾವುದೇ ಸಂದರ್ಭಕ್ಕೆ ಮಣಿಯುವ 'ಮಾಧ್ಯಮಶಕ್ತಿ' ಪ್ರಾಪ್ತವಾಗುತ್ತದೆ. ಪ್ರಾಚೀನ ಕರ್ನಾಟಕದ ಇಂಥ ನಾಗರಿಕ ಜನಾಂಗಗಳೆಂದರೆ ಉನ್ನತವರ್ಗಕ್ಕೆ ಸೇರಿದ ಬ್ರಾಹ್ಮಣ, ಜೈನ, ವೀರಶೈವಗಳೇ ಆಗಿರುವುದರಿಂದ ಪ್ರಾಚೀನರ ಮಾತೃಭಾಷಾ ಒಲುಮೆ, ಮಾತೃಭಾಷಾ ಮಾಧ್ಯಮದ ನಿಲುಮೆಗಳೆಂದರೆ ಈ ಮೂರು ಜನಾಂಗಗಳ ಒಲುಮೆ ನಿಲುಮೆಗಳೇ ಆಗಿವೆ.

* * *

ಧಾರ್ಮಿಕ ಮಾನದಂಡದಿಂದಲೇ ಬದುಕಿನ ಸರ್ವಕ್ರಿಯೆಗಳಿಗೆ ಬೆಲೆಕಟ್ಟುತ್ತಿದ್ದ ಕಾಲವದು. ಈ ಧೋರಣೆಯಿಂದ ಭಾಷೆಯೂ ಮುಕ್ತವಾಗಿರಲಿಲ್ಲ. ಸಮಾಜದಲ್ಲಿ ಮೂಲತಃ ಒಳ್ಳೆಯ ಉದ್ದೇಶದಿಂದ ಕಲ್ಪಿಸಿರಬಹುದಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವರ್ಗಗಳಲ್ಲಿ ಕ್ರಮೇಣ ತಾರತಮ್ಯವನ್ನು ಆರೋಪಿಸಿ, ಅದನ್ನು ಪ್ರತಿಷ್ಠೆ-ಶೋಷಣೆಗಳ ಸಾಧನವಾಗಿ ಪರಿವರ್ತಿಸಿಕೊಂಡಂತೆ, ಮೂಲತಃ ಒಳ್ಳೆಯ ಉದ್ದೇಶದಿಂದ ಕಲ್ಪಿಸಿರಬಹುದಾದ ದೇವವಾಣಿ, ಜನವಾಣಿಗಳೆಂಬ ವರ್ಗೀಕರಣದಲ್ಲಿ[೧] ತಾರತಮ್ಯದ ಕಂದರವನ್ನು ರೂಢಿಸಿ, ಅಲ್ಲಿಯೂ ಪ್ರತಿಷ್ಠೆ-ಶೋಷಣೆಗಳ ದಾರಿಯನ್ನು ಹುಡುಕಿಕೊಂಡಿತು, ಬ್ರಾಹ್ಮಣ ಸಮಾಜ. ಇದರಿಂದಾಗಿ ಬ್ರಾಹ್ಮಣರ ಕೈಯಲ್ಲಿ ಜನವಾಣಿಯಾದ ಕನ್ನಡವು ಬರಹಕ್ಕೆ ಎರವಾಗಿ ಆಡುಮಾತಿನ ಅವಸ್ಥೆಗಿಳಿದರೆ, ಸಂಸ್ಕೃತವು ಬರವಣಿಗೆಗೆ ಮಾನ್ಯವಾಗಿ ಧರ್ಮಭಾಷೆಯ ಅಂತಸ್ತಿಗೇರಿತು.

ಮೂಲತಃ ಆರ್ಯರಾದ ಬ್ರಾಹ್ಮಣರಿಗೆ ದ್ರಾವಿಡರ ಬದುಕಿನ ಸರ್ವಚಟುವಟಿಕೆಗಳೆಲ್ಲ ಶೂದ್ರಸಮಾನ. ದ್ರಾವಿಡರ ಭಾಷೆಗಳಲ್ಲೊಂದಾದ ಕನ್ನಡದ ವಿಷಯವಾಗಿಯೂ ಅವರು ಕೀಳುಭಾವನೆ ತಾಳಿದುದು ಸ್ವಾಭಾವಿಕವೇ ಆಗಿದೆ. ಇದರಿಂದಾಗಿ ಅನಿವಾರ್ಯ ಪ್ರಸಂಗದ ಶೂದ್ರನ ಉಪಯೋಗದಂತೆ ಕನ್ನಡವನ್ನು ಅವರು ಸೀಮಿತವಾಗಿ ಬಳಸತೊಡಗಿದರು. ಮೇಲಾಗಿ ಸಂಸ್ಕೃತವೆಂದರೆ ಪಾಂಡಿತ್ಯ-ಪಾವಿತ್ರ್ಯಗಳ ದ್ಯೋತಕವೆಂಬ ಭ್ರಮೆ, ಇವರು ಕನ್ನಡವನ್ನು ಇನ್ನೂ ಕೀಳಾಗಿ ಕಾಣುವಂತೆ ಮಾಡಿತು. ಇವುಗಳಿಗಿಂತ ಮುಖ್ಯವಾದ ಇನ್ನೊಂದು ವಿಷಯವಿದೆ. ಅದು:ಪ್ರತಿಷ್ಠಿತ ಜನಾಂಗಕ್ಕೆ ಸಮಾಜದಲ್ಲಿ ಯಾವುದರ ಬಗ್ಗೆಯೂ ಗಾಢವಾದ ಸಂಬಂಧ ಇರುವುದಿಲ್ಲ. ಹೊತ್ತು ಬಂದಂತೆ ಹೊರಳಬಲ್ಲ ಅವಕಾಶವಾದಿಗಳವರು. ಈ ಮನೋಭಾವ ಅವರಿಗೆ ಯಾವುದೇ ಭಾಷೆಯನ್ನು

---

೧. ಪಾಮರ ಪರಿಸರವನ್ನು ಸೇರಿದಂತೆ ಯಾವುದೇ ಕೃತಿಗೆ ಭಿನ್ನಪಾಠಗಳು ಬೆಳೆಯುತ್ತ ಹೋಗುವುದು ಸ್ವಾಭಾವಿಕ. ತತ್ವಗ್ರಂಥಗಳನ್ನು ಈ ಅಪಾಯದಿಂದ ರಕ್ಷಿಸುವ ಸಲುವಾಗಿ ಒಂದು ಮೀಸಲು ಭಾಷೆ (ಸಂಸ್ಕೃತ)ಯನ್ನು ಬಳಸಿದರೆಂದು ತೋರುತ್ತದೆ.

ಗಟ್ಟಿಯಾಗಿ ಅಪ್ಪಿಕೊಳ್ಳಲು ಆಸ್ಪದ ನೀಡುವುದಿಲ್ಲ. ಯಾವುದೇ ಭಾಷೆ 'ಮಾತೃಭಾಷೆ'ಯಾಗಿರುವುದು ಭಾವನಾಪ್ರಧಾನ ಜನಾಂಗದಲ್ಲಿ. ಇದಕ್ಕೆ ವಿರುದ್ಧವೆನ್ನುವಂತೆ ಬುದ್ಧಿಪ್ರಧಾನವಾಗಿರುವ ಬ್ರಾಹ್ಮಣಜನಾಂಗಕ್ಕೆ ಯಾವುದೇ ಭಾಷೆ ಮಾತೃಭಾಷೆಯಾಗದುದು ತೀರ ಸ್ವಾಭಾವಿಕವಾಗಿದೆ. ಹೀಗಾಗಿ ಬ್ರಾಹ್ಮಣರ ಮನದಲ್ಲಿ ಕನ್ನಡದ ಬಗ್ಗೆ ಮಾತೃಭಾಷಾವ್ಯಾಮೋಹವಾಗಲೀ, ಮಾಧ್ಯಮಕ್ಕೆ ಹದಗೊಳಿಸಬೇಕೆಂಬ ಆಸಕ್ತಿಯಾಗಲೀ ಸುಳಿಯಲಿಲ್ಲ. ಬಹುಶಃ ೧೫ನೆಯ ಶತಮಾನದ ವರೆಗೂ ಕನ್ನಡದ ಬಗ್ಗೆ ಸ್ವಲ್ಪ ಹೆಚ್ಚು ಕಡಿಮೆ ಇದೇ ಮನೋಭಾವ ಅವರಲ್ಲಿ ಗಟ್ಟಿಯಾಗಿ ಬೇರೂರಿದ್ದಿತು. ಆದರೆ ಸಹ ಜನಾಂಗಗಳಾದ ಜೈನ, ಅದಕ್ಕಿಂತ ವೀರಶೈವಗಳು ಮಾತೃಭಾಷೆಯ ಮೂಲಕ ಸಾಧಿಸಿದ ಸಾಧನೆ, ಈಗ ಬ್ರಾಹ್ಮಣರ ಕಣ್ಣುತೆರೆಯಿಸಿತು. ಕನ್ನಡ ಭಾಷೆಯ ವಿಷಯವಾಗಿ ಈವರೆಗೆ ಪಾಲಿಸಿಕೊಂಡು ಬಂದಿದ್ದ ಧೋರಣೆಯ ಬಗ್ಗೆ ಅವರಲ್ಲಿಯೇ ಮತಭೇದ ತಲೆದೋರಿ ವ್ಯಾಸಕೂಟ, ದಾಸಕೂಟ ಎಂಬ ಎರಡು ಪಕ್ಷಗಳೇ ಅಸ್ತಿತ್ವದಲ್ಲಿ ಬಂದವು. ಭಾಷೆ ಕಾರಣವಾಗಿ ಮಾಧ್ವಮತ ಹೀಗೆ ಎರಡು ಹೋಳಾದುದು, ಮಡಿವಂತರಿಗೂ ಪ್ರಾಂತಭಾಷಾಮಾಧ್ಯಮ ಅಂದು ಎಷ್ಟು ಅನಿವಾರ್ಯವಾಗಿದ್ದಿತೆಂಬುದನ್ನು ಧ್ವನಿಸುತ್ತದೆ. ಜೊತೆಗೆ ಆ ಕಡೆ ವ್ಯಾಸಕೂಟವಾಗಿ ಕೆಲವರು ಉಳಿದುಕೊಂಡದು, ಇನ್ನೂ ಉಳಿದಿದ್ದ ಬ್ರಾಹ್ಮಣರ ಭಾಷಾ ಮಡಿವಂತಿಕೆಯ ಗೀಳನ್ನು ಧ್ವನಿಸುತ್ತದೆ. ಹೀಗೆ ೧೫ನೆಯ ಶತಮಾನದ ಸಮಯಕ್ಕೆ ಬ್ರಾಹ್ಮಣರು ಪ್ರಾಂತಭಾಷಾಭಿಮುಖಿಗಳಾಗಿ ನಡೆದರೂ ಕನಕದಾಸನಂತಹ ಶೂದ್ರನಷ್ಟು ಗಟ್ಟಿಯಾದ ಕನ್ನಡವನ್ನು ಪುರಂದರದಾಸ ಮೊದಲುಮಾಡಿ ಯಾವುದೇ ದಾಸರು ಬಳಸಿಲ್ಲವೆಂಬುದು ಇಲ್ಲಿ ಗಮನಿಸತಕ್ಕ ಅಂಶವಾಗಿದೆ. ಈ ತರುವಾಯ ಕನ್ನಡ ಭಾಷೆಯ ಬಗ್ಗೆ ಇದ್ದ ಮೀನಮೇಷವನ್ನು ಹರಿದೊಗೆದುದರ ಫಲವಾಗಿ

೧. ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು ॥

೨. ಕೃತಿಪತಿಕಥಾನ್ವಿತವೆನಿಪ ಪ್ರಾ
ಕೃತವೆ ತಾ ಸಂಸ್ಕೃತವೆನಿಸಿ ಸ
ದ್ಗತಿಯನೀವುದು ಭಕ್ತಿಪೂರ್ವಕ ಕೇಳಿ ಪೇಳ್ವರಿಗೆ ॥

೩. ಪ್ರಾಕೃತೋಕ್ತಿಗಳೆಂದು ಬರಿದೆ ಮ ।
ಹಾಕೃತಘ್ನರು ಜರೆವರಲ್ಲದೆ ।
ಸ್ವೀಕೃತವ ಮಾಡದಲೆ ಬಿಡುವರೆ ಸುಜನರಾದವರು ॥
ಶ್ರೀಕೃತೀಪತಿಯಮಲ ಗುಣಗಳು ।
ಈ ಕೃತಿಯೊಳುಂಟಾದ ಬಳಿಕ ।
ಪ್ರಾಕೃತವೆ ಸಂಸ್ಕೃತದ ಸಡಗರವೇನು ಸುಗುಣರಿಗೆ ॥

ಎಂಬ ಘೋಷಣೆಗಳು ಮಹಾಲಿಂಗರಂಗ (೧೭೦೦), ಜಗನ್ನಾಥದಾಸ (೧೭೭೫), ಕರ್ಜಗಿದಾಸ (೧೭೮೦)ರ ಬಾಯಿಯಿಂದ ಕೇಳಿಬರಹತ್ತಿದವು.

ಇದೇ ರೀತಿ ಬ್ರಾಹ್ಮಣರೇ ಆದ ಶ್ರೀವೈಷ್ಣವರು ೧೧ನೆಯ ಶತಮಾನದಷ್ಟು ಪೂರ್ವದಲ್ಲಿ ಈ ನಾಡನ್ನು ಪ್ರವೇಶಿಸಿದರೂ ೧೭ನೆಯ ಶತಮಾನದ ವರೆಗೆ ಕನ್ನಡದಿಂದ ದೂರ ಉಳಿದರು. ಶೂದ್ರರ ಬಗ್ಗೆ

ಒಂದಿಷ್ಟು ಉದಾರಧೋರಣೆಯುಳ್ಳ ಈ ಮತಾನುಯಾಯಿಗಳು ಕನ್ನಡವನ್ನು ಐದು ಶತಮಾನಗಳ ಕಾಲ ಶೂದ್ರವಾಗಿ ಕಂಡುದು ಇತಿಹಾಸದ ಒಂದು ವೈಪರೀತ್ಯವೇ ಸರಿ.

ಮಾಧ್ವರು ೧೫ನೆಯ ಶತಮಾನದ ಸುಮಾರಿಗೆ ಕನ್ನಡಕ್ಕೆ ಸ್ಪೃಶ್ಯ ಮರ್ಯಾದೆಯನ್ನು ತೋರಿದುದರ ಫಲವಾಗಿ ಬ್ರಾಹ್ಮಣರಿಂದ ಕುಮಾರವ್ಯಾಸಭಾರತ, ಜೈಮಿನಿಭಾರತಗಳಂಥ ಮಹಾಕೃತಿಗಳು ಹುಟ್ಟಿಬಂದವು. ಆದರೆ ೧೮ನೆಯ ಶತಮಾನದಲ್ಲಿ ಪೇಶ್ವೆಯರು ಕರ್ನಾಟಕದ ಆಡಳಿತ ಸೂತ್ರವನ್ನು ಕೈವಶ ಮಾಡಿಕೊಳ್ಳುವದೇ ತಡ, ನಿಂತಕಾಲ ಮೇಲೆಯೇ ಕನ್ನಡವನ್ನು ಕೈಬಿಟ್ಟು, ಮರಾಠಿಯನ್ನು ಕೈಗೆತ್ತಿಕೊಂಡರು. ಪ್ರತಿಷ್ಠಿತ ಬ್ರಾಹ್ಮಣ ಕುಟುಂಬಗಳಲ್ಲಿ ಮರಾಠಿ ಮನೆಮಗನಂತೆ, ಕನ್ನಡ ಮಲಮಗನಂತೆ ಬದುಕುವುದನ್ನು ಈಗಲೂ ಗಮನಿಸಬಹುದು. ಮುಂದೆ ೧೯ನೆಯ ಶತಮಾನದಲ್ಲಿ ಆಡಳಿತ ಸೂತ್ರ ಇಂಗ್ಲೀಷರ ಹಸ್ತಗತವಾದ ಕೂಡಲೇ ಮನೆತುಂಬಿದ ಮರಾಠಿಯನ್ನು ಉಪೇಕ್ಷಿಸಿ ಇಂಗ್ಲೀಷವನ್ನು ಮನತುಂಬಿಸಿಕೊಂಡರು.* ಹೀಗೆ ಕನ್ನಡವನ್ನು ಕೈಬಿಟ್ಟು ಮರಾಠಿಯನ್ನು, ಮರಾಠಿಯನ್ನು ಕೈಬಿಟ್ಟು ಇಂಗ್ಲೀಷ್‌ನ್ನು ಸ್ವಾಗತಿಸಿದ ಬ್ರಾಹ್ಮಣರು ಅವೆರಡರ ಪುಣ್ಯ ತೀರಿ 'ಕನ್ನಡ ಚಳುವಳಿ' ಪ್ರಾರಂಭವಾಗುವಲ್ಲಿ ಧಾವಿಸಿ ಬಂದು ಮತ್ತೆ ಮುಂಚೂಣಿಯಲ್ಲಿ ನಿಂತುಕೊಂಡರು. ಭಾಷೆಯ ಬಗ್ಗೆ ತೋರುವ ಈ ಸಮಯಾನುವರ್ತನ ಭಾವವನ್ನು ನೋಡಿದರೆ ಪ್ರಾಚೀನ ಕರ್ನಾಟಕದ ಬ್ರಾಹ್ಮಣ ಜನಾಂಗ, ಸಂಸ್ಕೃತವನ್ನು ಬಿಟ್ಟರೆ ಮಿಕ್ಕಭಾಷೆಗಳ ಕೂಡ ದುರ್ಬಲವಾದ (ಪ್ರಯೋಜನಾತ್ಮಕವಾದ) ಸಂಬಂಧವನಿಟ್ಟುಕೊಂಡುದು ಇತಿಹಾಸದುದ್ದಕ್ಕೂ ಸ್ಪಷ್ಟವಾಗುತ್ತದೆ.

* * *

ಬ್ರಾಹ್ಮಣರಂತೆ ಜೈನರೂ ಕನ್ನಡಕ್ಕೆ ಪರಕೀಯರು. ಆದರೆ ತಾವು ನೆಲೆನಿಂತ ಕನ್ನಡ ಪ್ರಾಂತದ ಭಾಷೆಯನ್ನು ಬ್ರಾಹ್ಮಣರಂತೆ ಕೇವಲ ಸಂಪರ್ಕಭಾಷೆಯಾಗಿ ಪರಿಗಣಿಸದೆ ಮಾತೃಭಾಷೆಯನ್ನಾಗಿ ಸ್ವೀಕರಿಸಿದರು. ಜೊತೆಗೆ ಧಾರ್ಮಿಕ ವಿಚಾರಗಳ ಅಭಿವ್ಯಕ್ತಿಗಾಗಿ ಪ್ರಾಕೃತದಂತೆ ಕನ್ನಡವನ್ನೂ ಬಳಸುವ ಮೂಲಕ, ತತ್ವಚಿಂತನೆಗೆ ಭಾಷಾಮಾಧ್ಯಮ ಅಡ್ಡಿಯಾಗದೆಂಬುದನ್ನು ತೋರಿಸಿಕೊಟ್ಟರು. ಅಂದರೆ ಯಾವುದೇ ಭಾಷೆ ಸಂಪರ್ಕಭಾಷೆಯೂ ಆಗಬಲ್ಲದು, ಮಾತೃಭಾಷೆಯೂ ಆಗಬಲ್ಲದು, ಧರ್ಮಭಾಷೆಯೂ ಆಗಬಲ್ಲದು ಎಂಬ ಸತ್ಯವನ್ನು ನಡೆದು ತೋರಿಸಿದರು. ಈಗ ಜೈನ ಧಾರ್ಮಿಕ ಸಾಹಿತ್ಯವನ್ನು ಪ್ರಾಕೃತಮಾಧ್ಯಮದಿಂದ ಕನ್ನಡ ಮಾಧ್ಯಮಕ್ಕೆ ವರ್ಗಾಯಿಸುವುದರ ಜೊತೆಗೆ ಕನ್ನಡದಲ್ಲಿಯೂ ಸ್ವತಂತ್ರವಾಗಿ ಸಾಹಿತ್ಯವನ್ನು ನಿರ್ಮಿಸಿದರು. ಆದರೆ ಈ ಕಾರ್ಯದಲ್ಲಿ ಇವರನ್ನು ಕಾಡಿನ ದೊಡ್ಡ ಪ್ರಶ್ನೆಯೆಂದರೆ, ಒತ್ತಿಬರುತ್ತಿದ್ದ ಅನ್ಯಭಾಷೆಯಾದ ಸಂಸ್ಕೃತವನ್ನು ಕನ್ನಡದಲ್ಲಿ ಹೇಗೆ ಬಳಸಬೇಕೆಂಬುದು. ಇದರ ಪರಿಹಾರಕ್ಕೋಸುಗ ಇವರು ಸಂಸ್ಕೃತದೊಂದಿಗೆ ಹೋರಾಟ-ಒಪ್ಪಂದಗಳ ರೂಪದ ಒಂದು ಬಗೆಯ ಗುದುಮುರಿಗೆಯನ್ನು ನಡೆಸುತ್ತಲೇ ಬಂದುದು ಎದ್ದುಕಾಣುತ್ತದೆ. ಕವಿರಾಜಮಾರ್ಗಪೂರ್ವದ ಶಾಸನಗಳಲ್ಲಿ ಕ್ವಚಿತ್ತಾಗಿಯಾದರೂ ಕಂಡುಬರುವ ಪ್ರತ್ಯಯಾಂತ ಸಂಸ್ಕೃತಪದಮಿಶ್ರಿತ 'ಮಣಿಪ್ರವಾಳಶೈಲಿ' ಈ ನೆಲದ ಮೇಲೆ ಜೈನರು ನಡೆಸಿದ ಒಂದು ವಿಫಲ ಪ್ರಯೋಗವಾಗಿರಲು ಸಾಧ್ಯವಿದೆ. ಆಮೇಲೆ ಸಂಸ್ಕೃತವನ್ನು ಸಮಸಂಸ್ಕೃತ ಮತ್ತು ತದ್ಭವ ರೂಪಗಳಲ್ಲಿ ಕನ್ನಡಕ್ಕೆ ಒಗ್ಗಿಸಿಕೊಳ್ಳುವ ಒಪ್ಪಂದಧೋರಣೆ,

---

* ದ್ವೀಪಾಂತರ ಭಾಷೆಯಾದುದರಿಂದ ಇಂಗ್ಲೀಷಭಾಷೆ ಬ್ರಾಹ್ಮಣರಲ್ಲಿ ಮರಾಠಿಯಂತೆ ಮನೆಮಾತಿನ ಮರ್ಯಾದೆ ಪಡೆಯಲಿಲ್ಲ; ಒಂದು ವೇಳೆ ನೆರೆಯ ಪ್ರಾಂತದ ಭಾಷೆಯಾಗಿದ್ದರೆ ಖಂಡಿತವಾಗಿಯೂ ಮನೆಮಾತಿನ ಮರ್ಯಾದೆ ಪಡೆಯುತ್ತಿದ್ದಿತು.

ಸಂಸ್ಕೃತ ಮತ್ತು ಸಮಸಂಸ್ಕೃತಗಳನ್ನು ಕನ್ನಡದಲ್ಲಿ ಸಮಾಸವಾಗಿಸದ ವಿರೋಧಧೋರಣೆಗಳಲ್ಲಿ ಜೈನರ ವೇದನೆ-ಸಂವೇದನೆಗಳು ಎದ್ದು ಕೇಳಿಸುತ್ತವೆ. ಒಟ್ಟಿನಲ್ಲಿ ತಮ್ಮ ರಕ್ತವೆಂದು ಭಾವಿಸಿದ್ದ ಕನ್ನಡದ 'ರಕ್ತಶುದ್ಧಿ' ಸಂಸ್ಕೃತದ ಬಳಕೆಯಿಂದ ಹಾಳಾಗುವುದೆಂಬ ಭೀತಿ ಇವರಿಗೆ.

ಪಟಗನ್ನಡಂ ಪುದುಂಗೊಳೆ ।
ಕೋಟಿ ಸಕ್ಕದಮಂ ತಗುಳ್ಚಿ ಜಾಣ್ಕೆಡೆ ಮುತ್ತುಂ ।
ಮೆಱಸುಂ ಕೋದಂತಿರೆ ಪೇ ।
ಟ್ವಿಱಿಗವಿಗಳ ಕವಿತೆ ಬುಧನರನೆರ್ದೆಗೊಳಿಸುಗುಮೇ।

(ನಾಗವರ್ಮನ ಕಾವ್ಯಾವಲೋಕನ)

ಸಕ್ಕದಮಂ ಪೇೞ್ವೊಡೆ ನೆರೆ ।
ಸಕ್ಕದಮಂ ಪೇೞ್ಗೆ ಸುದ್ಧಗನ್ನಡದೊಳ್ ತಂ ।
ದಿಕ್ಕುವುದೆ ಸಕ್ಕದಮಂ ।
ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ ॥

(ನಯಸೇನನ ಧರ್ಮಾಮೃತ)

ಎಂಬ ನಯಸೇನಾದಿಗಳ ಈ ಹೇಳಿಕೆಗಳು ಕರ್ನಾಟಕದ ಜೈನಜನಾಂಗದ ಒಟ್ಟು ಅಭಿಪ್ರಾಯವನ್ನು ಧ್ವನಿಸುತ್ತವೆ. ಈ ಧೋರಣೆಯ ಪರಮಾವಧಿ ನಿದರ್ಶನವೆಂದರೆ ಆಂಡಯ್ಯನ ಕಬ್ಬಿಗರ ಕಾವ. ಮಾತೃಭಾಷೆಯ ಅಭಿಮಾನ ದುರಭಿಮಾನಕ್ಕೆ ತಿರುಗಿದ ಇವನ ರೀತಿ, ಪ್ರೀತಿಸುವ ಭರದಲ್ಲಿ ಪ್ರಾಣವನ್ನೇ ಕಮರಿಸುವ ಪ್ರಯತ್ನವೆನಿಸಿದೆ. ಅನ್ಯಭಾಷೆಯ ಸಂಪರ್ಕದಿಂದ ಭಾಷೆ ಕುಲಗೆಡುತ್ತದೆಯೆಂಬ ಜೈನರ ಈ ಭಾವನೆ ಅನೈಸರ್ಗಿಕವಾದುದು. ಓಣಿಯ ಕೂಸಾಗಿ ಬೆಳೆಯಬೇಕಾದ ಭಾಷೆಯನ್ನು ಕೋಣೆಯ ಕೂಸಾಗಿ ಬೆಳೆಯಿಸುವ ಧೋರಣೆಯಿದು. ಆ ಕಡೆ ಬ್ರಾಹ್ಮಣರು ಕನ್ನಡವನ್ನು ಅಸ್ಪೃಶ್ಯವೆಂದು ಮುಟ್ಟದುದು ಎಷ್ಟು ಅತಿಯಾಯಿತೋ, ಈ ಕಡೆ ಜೈನರು ಸ್ಪೃಶ್ಯವೆಂದು ಮುಟ್ಟಿಗೆಯಲ್ಲಿ ಮುಚ್ಚಿ ಹಿಡಿದುದು ಅಷ್ಟೇ ಅತಿಯಾಯಿತು. ಸ್ಥೂಲವಾಗಿ ಒಂದು ಅರ್ಥದಲ್ಲಿ ಬ್ರಾಹ್ಮಣರು ಸಂಸ್ಕೃತದ ಮಡಿವಂತರು; ಜೈನರು ಕನ್ನಡದ ಮಡಿವಂತರು ಎನ್ನಬಹುದು. ಜೈನಮನಸ್ಸು ಸ್ಥಿತಿಸ್ಥಾಪಕವಲ್ಲವಾದುದರಿಂದ ಅವರ ತತ್ವಾಚರಣೆಯಲ್ಲಿರುವ ರಿಜಿಡಿಟಿ, ಭಾಷೆಯ ವಿಷಯದಲ್ಲಿಯೂ ಕಂಡು ಬಂದುದು ತೀರ ಸಹಜ, ಸ್ವಾಭಾವಿಕ.

* * *

ಜೈನರಂತೆ ವೀರಶೈವರೂ ಕನ್ನಡ ಮಾತೃಭಾಷಾ ವ್ಯಾಮೋಹಿಗಳು. ಇದಕ್ಕೆ ಕಾರಣ ಈ ಜನಾಂಗದ ಬಹುಸಂಖ್ಯೆ ಪ್ರಜೆಗಳು ಮೂಲತಃ ಆರ್ಯರಲ್ಲದವರು, ಈ ನಾಡಿನ ಮಣ್ಣಿಗೆ ಸಂಬಂಧಿಸಿದವರು. ಕನ್ನಡದ ಬಗ್ಗೆ ಇವರು ಇಟ್ಟುಕೊಂಡ ಮಾತೃಭಾಷಾ ಪ್ರೀತಿಯನ್ನು ವ್ಯಕ್ತಪಡಿಸುವ

ನೋಡಿರೆ ಕನ್ನಡವ, ನುಡಿಸಿರೆ ಕನ್ನಡವ ।
ತಲೆಯೊಲೆವುತ ಬಂದು ಕುಣಿಯುವ ಕನ್ನಡವ ॥ಪಲ್ಲ॥
ಒಂದೆ ಕಾಲವಳು ಕೆದಜೆದ ಮಂಡೆಯವಳು ।

ಒಂದು ಮೊಲೆಗೆ ಒಕ್ಕಳದ ಹಾಲ ಕರೆವವಳು ॥
ಅಂದೆ ಹುಟ್ಟಿತೊಂದು ರತ್ನವರ್ಣದ ಬಳ್ಳಿ ! ಎತ್ತೇ
ನೆಂದಡೆ ಏಳದು । ಕಿತ್ತೇನೆಂದಡೆ ಕೀಳದು ॥
ನಿಜಗುಣ ಗುರುಸಿದ್ಧರಾಮ ಕನ್ನಡವ ।
ನಿಜಲಿಂಗಲೀಲೆಯೊಳು ಕುಣಿವ ಕನ್ನಡವ ॥

ಎಂಬ ಶರಣನೊಬ್ಬನ ಸ್ವರವಚನ ಅಖಂಡ ವೀರಶೈವಸಮಾಜದ ಪ್ರಾತಿನಿಧಿಕ ಅಭಿಪ್ರಾಯವಾಗಿದೆ. ೧೨ನೆಯ ಶತಮಾನದಷ್ಟು ಪೂರ್ವದಲ್ಲಿಯೇ ಮಾತೃಭಾಷೆಯನ್ನು ಕುರಿತು ಕಟ್ಟಿದ ಈ ಹಾಡು, ಒಂದು ಐತಿಹಾಸಿಕ ದಾಖಲೆಯಾಗಿದೆ. ಈ ಪ್ರೇಮ ಪರಂಪರೆ ವೀರಶೈವಕವಿಗಳಲ್ಲಿ ತುಂಬಿ ತುಳುಕುತ್ತ ಬಂದುದಕ್ಕೆ ಭೀಮಕವಿಯ "ಬರಿಯ ಕನ್ನಡ ಭಾಷೆಯೆಂದೆನಲಾಗದಿಳೆಗಿದು ಲೇಸೆನಿಪ ವೇದಪ್ರಮಾಣವೆನಿಪ್ಪುದು" ಎಂಬಂತಹ ಹೇಳಿಕೆಗಳ ಹಿಂದಿರುವ ಉತ್ಕಟ ಭಾಷಾಭಕ್ತಿಯು ನಿದರ್ಶನವೆನಿಸಿದೆ.

ಹೀಗೆ ಪ್ರಾಂತಭಾಷೆಯ ಬಗೆಗಿನ ಪ್ರೀತಿ, ಪ್ರಸಾರಗಳ ವಿಷಯವಾಗಿ ಜೈನ-ವೀರಶೈವ ಸಮಾಜಗಳ ಒಲವು ಒಂದೇ ಬಗೆಯಾಗಿದ್ದರೂ 'ಮಾತೃಭಾಷಾ ಮಾಧ್ಯಮ'ದ ವಿಷಯವಾಗಿ ಮಾತ್ರ ತೀರ ಭಿನ್ನವಾದುದು. ಅದು : ಜೈನರು ಕನ್ನಡವನ್ನು ಕೋಣೆಯ ಕೂಸಾಗಿ ಬೆಳೆಸುವ ಧೋರಣೆಯಿಟ್ಟುಕೊಂಡರೆ, ವೀರಶೈವರು ಓಣಿಯ ಕೂಸಾಗಿ ಬೆಳೆಸುವ ಧೋರಣೆಯನ್ನಿಟ್ಟುಕೊಂಡರು.

ಪೊಸಗನ್ನಡದಿಂ ವ್ಯಾವ ।
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ।
ತಿಸಿ ಕೊಡಲಾರದಕ್ಕಟ।
ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ॥

(ನಯಸೇನ)

ನೋಡುವೊಡೊಂದಕ್ಕರಮದು।
ಮಾಡುವೊಡುಚ್ಚರಣೆಗರಿದು ಮೂಱುಂ ತೆಱನಂ ॥
ಕೂಡೆ ಕವಿತತಿ ವಿಚಾರಿಸ
ಬೇಡದೞಿಂ ಱಳಕುಳಕ್ಷಳಂಗಳನಿದಱೊಳ್ ॥

(ಹರಿಹರ)

ಕನ್ನಡದಲ್ಲಿ ಸಂಸ್ಕೃತವನ್ನು ಬಳಸಬಾರದೆಂಬ ನಯಸೇನನ ನಿಷ್ಠುರ ಧೋರಣೆಯೆತ್ತ? ಕನ್ನಡವನ್ನು ಕಾಲಧರ್ಮಕ್ಕೆ ತಕ್ಕಂತೆ ವ್ಯತ್ಯಾಸಮಾಡಿಕೊಳ್ಳಬೇಕೆಂಬ ಹರಿಹರನ ಉದಾರ ಧೋರಣೆಯೆತ್ತ? ಈ ಪದ್ಯಗಳು ಎರಡು ಜನಾಂಗಗಳ ಪರಸ್ಪರ ವಿರುದ್ಧ ಭಾವನೆಗಳನ್ನು ಪ್ರತಿನಿಧಿಸುತ್ತವೆ. ಈ ಧೋರಣೆಯನ್ನು ಕಾರ್ಯಗತಗೊಳಿಸುವಲ್ಲಿ ವೀರಶೈವರು ಅನುಸರಿಸಿದ ದಾರಿ, ಬೆಳೆಯಬೇಕೆನ್ನುವ ಭಾಷೆಗೆ ಯಾವ ಕಾಲಕ್ಕೂ ಆದರ್ಶಪ್ರಾಯವೆನಿಸಿದೆ. ವಚನಸಾಹಿತ್ಯವನ್ನು ಗಮನಿಸಿದಲ್ಲಿ ಈ ಅಂಶಗಳು ಹೀಗೆ ಸ್ಪಷ್ಟವಾಗುತ್ತವೆ.

೧.ಬಳಕೆ ತಪ್ಪಿದ ಹಳೆಯ ಪದಗಳನ್ನು ಮತ್ತೆ ಬಳಕೆಗೆ ತರುವುದು :

ಭಾಷೆ, ಭೂತದಿಂದ ಭವಿಷ್ಯಕ್ಕೆ ಮುನ್ನುಗ್ಗುವಲ್ಲಿ ತನ್ನ ಹಳೆಯ ಪದಗಳನ್ನು ಕಳೆದುಕೊಳ್ಳುತ್ತ ಹೊಸ ಪದಗಳನ್ನು ಪಡೆಯುತ್ತ ಹೋಗುತ್ತದೆ. ಈಗ ಕೆಲವು ಸಲ ಹಳೆಯ ಪದ ಸ್ಪಷ್ಟವಾಗಿ ಕಳೆದುಹೋಗಿ, ಹೊಸ ಪದ ಅಸ್ಪಷ್ಟವಾಗಿ ಮೂಡುತ್ತಿರುವ ಪರಿಸ್ಥಿತಿಯೂ ತಲೆದೋರುತ್ತದೆ. ೧೨ನೆಯ ಶತಮಾನದಲ್ಲಿ ಗೋಚರಿಸಿದ ಇಂಥ ಕೊರತೆಯನ್ನು ಮತ್ತೆ ಆ ಹಳೆಯ ಪದಗಳ ಬಳಕೆಯಿಂದ ತುಂಬಿಕೊಂಡರು, ಶರಣರು. ಇದಲ್ಲದೆ ಅವರಲ್ಲಿ ಬಹುಜನರು ತೀರ ಸಾಮಾನ್ಯ ಮಟ್ಟದಿಂದ ಮತ್ತು ಅನೇಕ ಕಾಯಕಗಳ ಮೂಲದಿಂದ ಬಂದ ಕಾರಣ, ಅವರ ವಚನಗಳಲ್ಲಿ ತಮ್ಮ ಜಾತಿ, ಪ್ರದೇಶ, ಕಾಯಕಗಳಿಗೆ ಸಂಬಂಧಿಸಿದ ಅನೇಕ ಶಬ್ದಗಳು ಸಾಹಿತ್ಯ ಗದ್ದುಗೆಯನ್ನು ಏರಿದವು. ಇದರ ಫಲವಾಗಿ ಕಮ್ಮಟ, ಉಂಡಿಗೆ, ಚೆಂಗಳ್, ಜಲಗ, ತಗರ, ಜೂಬು, ಅಣಚಿ, ಅಡುಗಬ್ಬು, ಹಿದಿರೆ, ಬಜಾವಣೆ, ಕಂದಲು, ಕೆಸರುಗಲ್ಲು, ಚೇಗೆ, ಪಾಕುಳ, ಪಿಂಡಿಗೆ, ಬಗ್ಗುರಿ, ಬಗದಳ, ಜಾಯಿಗ, ಮಿಟ್ಟಿ ಎಂಬ ಸೊಗಸಾದ ಪದಗಳು ಮತ್ತೆ ಸಾಹಿತ್ಯದಲ್ಲಿ ಕಾಣಿಸಿಕೊಂಡವು. ನಾಲಗೆಯ ಮೇಲಿಂದ ಉರುಳುತ್ತಲಿದ್ದ ಈ ಶಬ್ದಗಳನ್ನು ಎತ್ತಿಹಿಡಿದು ಪ್ರಯೋಗಿಸಿದ ಕಾರಣ, ಶರಣರ ಬರವಣಿಗೆ ಜನತೆಯ ಸಮೀಪಕ್ಕೆ ಬಂದಿತು; ಓದುವಿಕೆಯಲ್ಲಿ ಒಂದು ಆತ್ಮೀಯ ಸಂಬಂಧ ಸಾಧ್ಯವಾಯಿತು.

೨. ಹಳೆಯ ಪದಗಳಿಗೆ ಹೊಸ ಅರ್ಥ ತುಂಬುವುದು :

ಹೊಸಯುಗವನ್ನು ತೆರೆಯಲಿರುವ ಶರಣರು ಹೊಸ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಯಿತು. ಧರ್ಮಕ್ಕೆ ಸಂಬಂಧಿಸಿದ ಪಾರಿಭಾಷಿಕ ಪದಗಳ ಸಂವರ್ಧನೆಗೆ ಈ ಪ್ರಯತ್ನ ತೀರ ಅವಶ್ಯಕ. ವೀರಶೈವವನ್ನು ಕನ್ನಡ ಭಾಷಾಮಾಧ್ಯಮದಿಂದ ಪ್ರಕಟಪಡಿಸಬೇಕಾದ ಶರಣರಿಗೆ ಈ ಅವಶ್ಯಕತೆ ಎದುರಾಯಿತು. ಆಗ ಹಳೆಯ ಪದಗಳನ್ನು ಬಳಸುವುದರೊಂದಿಗೆ, ಹಳೆಯ ಪದಗಳಿಗೆ ಹೊಸ ಅರ್ಥವನ್ನೂ ತುಂಬಿದರು. ಇದರಿಂದಾಗಿ ಬಯಲು, ಕುರುಹು, ಸುರಾಳ, ನಿರಾಳ, ಸ್ಥಲ, ಪ್ರಸಾದ, ಕಾಯಕ, ಜಂಗಮ ಇತ್ಯಾದಿ ಪದಗಳು ಹೊಸ ಅರ್ಥ ತೇಜಸ್ಸಿನಿಂದ ವಚನಕ್ಷೇತ್ರಕ್ಕೆ ಕಾಲಿರಿಸಿದವು.

೩. ಹೊಸಪದಗಳನ್ನು ಸೃಷ್ಟಿಸುವುದು :

ಮೇಲೆ ಹೇಳಿದ ಎರಡು ವಿಧಾನಗಳಿಂದ ಸಮೃದ್ಧಗೊಂಡ ಭಾಷಾನಿಧಿ ಸಾಲದಾಗಲು, ಶರಣರು ಕೈಕೊಂಡ ಇನ್ನೊಂದು ಉಪಕ್ರಮವೆಂದರೆ ಹೊಸ ಪದಗಳ ಸೃಷ್ಟಿ. ಅಕ್ಕವೆ, ಇಲ್ಲವೆ, ಬಿಲಿ, ಈನು, ಸನ್ನಿ ಮೊದಲಾದ ಹೊಸ ಶಬ್ದಗಳು ತಕ್ಕ ಪ್ರಮಾಣದಲ್ಲಿ ಗೋಚರಿಸಿದವು. ಹೆಣನುಂಡು ಹೋಗು =ಹಾಳಾಗು, ಹುಂಡನೆಮಾಡು=ವೇಷಾಡಂಬರ ಮಾಡು, ಹರಿನುಡಿ=ಸಂಭ್ರಮದ ಮಾತು, ಕೊಂಡ ಮಾರಿಂಗೆ ಹೋಗು = ಲಾಭವಿಲ್ಲದೆ ಹೋಗು, ಮಾರಗೋಲು ಬಿಡು=ಕೆಲಸಕ್ಕೆ ಬರದ ಮಾತನಾಡು, ಬೀದಿಗರುವಾಗು=ಪರದೇಶಿಯಾಗು, ಗಿಳಿವಿಂಡುಗೆಡೆ=ಸ್ವಾನುಭವಿಲ್ಲದೆ ಮಾತನಾಡು. ಈ ಬಗೆಯ ಹೊಸ ದೃಷ್ಟಿ ನಮಗೆ ಅಚ್ಚರಿಯನ್ನುಂಟು ಮಾಡುತ್ತದೆ.

೪. ಅನ್ಯಭಾಷೆಯನ್ನು ಮುಕ್ತವಾಗಿ ಬಳಸಿಕೊಳ್ಳುವುದು :

'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಎಲ್ಲರನ್ನೂ ಒಂದೇ ಎಂಬೆ' ಎಂಬ ತತ್ವವನ್ನು ಬದುಕಿದ ಇವರಿಗೆ ಭಾಷೆಗಳ ಬಗ್ಗೆಯೂ ಸ್ಪೃಶ್ಯ - ಅಸ್ಪೃಶ್ಯ ಭಾವನೆ ಮೂಡಲಿಲ್ಲ. ಈ ಭ್ರಮೆಯಿಂದ ಪಾರಾದುದು ವೀರಶೈವದ ಒಂದು ಮುಖ್ಯ ಗೆಲುವು. ಆಗ ಶರಣರು ತಮ್ಮ ಭಾಷೆಗೆ ಅಪಾಯವಾಗದಂತೆ ಅನ್ಯಭಾಷೆಯನ್ನು

ಸಲೀಸಾಗಿ ಬಳಸಿದರು. ಉದಾ: "ಬತ್ತೀಸರಾಗವ ಹಾಡಯ್ಯ", "ಅವುಟುಕೋಟಿ ರೋಮಂಗಳು ಕಂಗಳಾಗಿ ನೋಡುತ್ತಿದ್ದೇನೆ." ಇಲ್ಲಿ ಪದಗಳು ಎಡಬಲಕ್ಕೆ ಅಪ್ಪಿಗೆಯಿಲ್ಲದಂತೆ ಹೊಂದಿಕೊಂಡಿವೆ. ಕೆಲವು ಸಲ ಅನ್ಯತೆ ಓದುಗನ ಗಮನಕ್ಕೂ ಬರದಂತೆ ಸಂಸ್ಕೃತ ಉದ್ಧರಣೆಯನ್ನು ವಚನದ ಒಡಲಲ್ಲಿ ಬಳಸುವ ಬಗೆ ತುಂಬ ಮನೋಜ್ಞವಾಗಿದೆ. ಉದಾ:

ನಾಳೆ ಬಪ್ಪುದು ನಮಗಿಂದೇ ಬರಲಿ
ಇಂದು ಬಪ್ಪುದು ನಮಗೀಗಲೆ ಬರಲಿ
ಇದಕಾರಂಜುವರು ಇದಕಾರಳಕುವರು?
ಜಾತಸ್ಯಂ ಮರಣಂ ಧ್ರುವಂ ಎಂದುದಾಗಿ
ನಮ್ಮ ಕೂಡಲಸಂಗಮದೇವರು ಬರೆದ ಬರೆಹವ ತಪ್ಪಿಸುವರೆ
ಹರಿಬ್ರಹ್ಮಾದಿಗಳಿಗಳವಲ್ಲ.

ಕನ್ನಡದ ನೆಯ್ಗೆಯಲ್ಲಿ ಹೊಂದಿಕೊಳ್ಳುವ ಹಾಗೆ ಸಂಸ್ಕೃತ ಉದ್ಧರಣೆಯನ್ನು ಬಳಸುವ ಈ ರೀತಿ, ಇಂದು ನವ್ಯಕಾವ್ಯಗಳ ಒಡಲಲ್ಲಿ ಇಂಗ್ಲೀಷ್ ಉದ್ಧರಣೆ ಬಳಸುವುದನ್ನು ನೆನಪಿಸುತ್ತದೆ. ಒಂದು ವೇಳೆ ೨೦ನೆಯ ಶತಮಾನದಲ್ಲಿ ಬಾಳಿದ್ದರೆ ಶರಣರು ಖಂಡಿತವಾಗಿಯೂ ಅಗತ್ಯವೆನಿಸಿದ ಇಂಗ್ಲೀಷ್ ಪದ, ವಾಕ್ಯಗಳನ್ನು ತಮ್ಮ ವಚನಗಳಲ್ಲಿ ಮುಕ್ತವಾಗಿ ಬಳಸುತ್ತಿದ್ದರು.

ಈ ವಿಧಾನಗಳು ಕಾರಣವಾಗಿ 'ವೀರಶೈವಕನ್ನಡ' ಹೊಸ ರಕ್ತ-ಮಾಂಸಗಳಿಂದ ಬೆಳೆಯಿತು; ಕನ್ನಡದ 'ಭಾಷಾಸಾಮರ್ಥ್ಯ' ನೂರುಪಟ್ಟು ಅಧಿಕವಾಯಿತು. ಇಂದು 'ವಿಜ್ಞಾನ'ವನ್ನು ಇಂಗ್ಲೀಷ್ ಮಾಧ್ಯಮದಿಂದಲೇ ಅಭಿವ್ಯಕ್ತಿಸಲು ಮಾತ್ರ ಸಾಧ್ಯವೆನ್ನುವಂತೆ, ಹಿಂದೆ 'ತತ್ವಜ್ಞಾನ'ವನ್ನು ಸಂಸ್ಕೃತಮಾಧ್ಯಮದಿಂದಲೇ ಅಭಿವ್ಯಕ್ತಿಸಲು ಮಾತ್ರ ಸಾಧ್ಯವೆಂಬ ಭಾವನೆ ಸಮಾಜದಲ್ಲಿ ಗಟ್ಟಿಯಾಗಿ ಬೇರೂರಿದ್ದಿತು. ಅದಕ್ಕೆ ಆಹ್ವಾನವೆಂಬಂತೆ ಸಂಸ್ಕೃತದಷ್ಟೇ ಸಮರ್ಥವಾಗಿ ಕನ್ನಡದಲ್ಲಿ ತತ್ವಜ್ಞಾನವನ್ನು ಅಭಿವ್ಯಕ್ತಿಗೊಳಿಸಿದುದು, ಭಾಷೆಯೆಂದರೆಯೇನೆಂಬುದನ್ನು ಸರಿಯಾಗಿ ಅರ್ಥಮಾಡಿಕೊಂಡ, ಸರಿಯಾಗಿ ಅರ್ಥಮಾಡಿಕೊಟ್ಟ ಅಪೂರ್ವ ದಾಖಲೆಯೆನಿಸಿದೆ; ತೀರ ಆಧುನಿಕ ವಿಚಾರವಾಗಿದೆ. "ದೇವವಾಣಿಗೆ ಜನವಾಣಿಯಾಗುವುದು ಅಸಾಧ್ಯವಾದಾಗ, ಜನವಾಣಿಯನ್ನೆ ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ ವೀರಶೈವ ವಚನಕಾರರದು" ಎಂಬ ಎಸ್. ಎಸ್. ಬಸವನಾಳರ ಮಾತನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಒಟ್ಟಿನಲ್ಲಿ :

೧.ಕನ್ನಡವು ಸಂಪರ್ಕಭಾಷೆ, ಸಂಸ್ಕೃತವು ಧರ್ಮಭಾಷೆಯಾಗಿದ್ದ ಕರ್ನಾಟಕದ ಪ್ರಾಚೀನ ಬ್ರಾಹ್ಮಣರಿಗೆ ಮಾತೃಭಾಷೆಯೆಂಬುದು ಇರಲಿಲ್ಲ.

೨.ಜೈನರಿಗೆ ಕನ್ನಡ ಮಾತೃಭಾಷೆಯಾಗಿದ್ದಿತು. ಮಾಧ್ಯಮವಾಗಿಸಿಕೊಂಡ ರೀತಿ ಕೆಲಮಟ್ಟಿಗೆ ಸಂಕುಚಿತವಾಗಿದ್ದಿತು; ಅಸ್ವಾಭಾವಿಕವಾಗಿದ್ದಿತು.

೩.ವೀರಶೈವರಿಗೆ ಕನ್ನಡ ಮಾತೃಭಾಷೆಯಾಗಿದ್ದಿತು. ಮಾಧ್ಯಮವಾಗಿಸಿಕೊಂಡು ರೀತಿ ಉದಾರವಾಗಿದ್ದಿತು; ಸ್ವಾಭಾವಿಕವಾಗಿದ್ದಿತು.

■■

ಆಕರ : ಮಾರ್ಗ ಸಂಪುಟ–೧

೪೨

ಆಡಳಿತದಲ್ಲಿ ಅನುವಾದಿತ ಭಾಷೆ - ಪ್ರಾದೇಶಿಕ ಭಾಷೆ

ಜಗತ್ತಿನಲ್ಲಿ ಈವರೆಗೆ ಒಂದೊಂದಾಗಿ ದೇಶಗಳು ಸ್ವತಂತ್ರವಾಗುತ್ತ ಬಂದವು. ಈಗ ಭಾಷೆಗಳು ಸ್ವತಂತ್ರವಾಗುವ ಕಾಲ ಸನ್ನಿಹಿತವಾಗಿದೆ. ಯಾವುದೇ ದೇಶವನ್ನು ಸ್ವತಂತ್ರಗೊಳಿಸಿ, ಅದರ ಭಾಷೆಯನ್ನು ಪರತಂತ್ರದಲ್ಲಿಟ್ಟರೆ ಆ ಜನಾಂಗವನ್ನು ಭೌತಿಕವಾಗಿ ಬದುಕಿಸಿ, ಸಾಂಸ್ಕೃತಿಕವಾಗಿ ಸಂಹರಿಸಿದಂತಾಗುತ್ತದೆ.* ಈ ಭಯ ಇಂದು ಎಲ್ಲ ಜನಾಂಗಗಳಲ್ಲಿ ಜಾಗೃತವಾಗುತ್ತಲಿರುವ ಕಾರಣ "ಭೌತಿಕವಾಗಿ ಉಪಜೀವಿಸಲು" ಅಂತರಾಷ್ಟ್ರೀಯ ಭಾಷೆಯನ್ನು ಆಧರಿಸಿದರೂ "ಸಾಂಸ್ಕೃತಿಕವಾಗಿ ಜೀವಿಸಲು" ರಾಜ್ಯಭಾಷೆ ಅವಶ್ಯವೆಂದು ಅವರಿಗೆ ಮನವರಿಕೆಯಾಗಿದೆ. ಆದುದರಿಂದ ಇಂದು ಜಗತ್ತಿನ ಬೇರೆ ಬೇರೆ ಭಾಗಗಳಂತೆ ಕರ್ನಾಟಕದಲ್ಲಿಯೂ ರಾಜ್ಯಭಾಷಾಪ್ರಜ್ಞೆ ಒಂದು ಆಂದೋಲನ ಸ್ವರೂಪದಲ್ಲಿ ಬಿಚ್ಚಿಕೊಳ್ಳುತ್ತಲಿದೆ.

ನಮ್ಮ 'ಭಾಷಾನೀತಿ' ವೈಜ್ಞಾನಿಕ ನೆಲೆಗಟ್ಟಿನ ಮೇಲೆ ನಿಂತಿಲ್ಲ, ರಾಜಕೀಯ ಲಾಭವ್ಯವಸ್ಥೆಯ ಮೇಲೆ ತಲೆಯೆತ್ತಿದೆ. ಹೀಗಾಗಿ ಮಾತೃಭಾಷೆ, ರಾಷ್ಟ್ರಭಾಷೆ, ಪ್ರಾಚೀನಭಾಷೆಗಳೆಂಬ ಭಾವನಾತ್ಮಕ ನೆವಗಳನ್ನು ದಟ್ಟವಾಗಿ ಒಡ್ಡಿ, 'ರಾಜಭಾಷೆ'ಯ ವಾಸ್ತವವನ್ನು ಹತ್ತಿಕ್ಕಲಾಗುತ್ತಿದೆ.

ಪ್ರಾಚೀನ ಕಾಲದಲ್ಲಿ ಕೃಷಿಪ್ರಧಾನ ಜೀವನ ಕಾರಣವಾಗಿ ಕುಟುಂಬಗಳು ಒಂದು ಪ್ರದೇಶದಲ್ಲಿ ಶಾಶ್ವತ ನೆಲೆಯೂರಿತ್ತಿದ್ದುದರಿಂದ ಅಲ್ಲಿ ಏಕರೂಪದ 'ವಿಶಿಷ್ಟಸಮಾಜ' ರೂಪುಗೊಳ್ಳುತ್ತಿದ್ದಿತು. ಆಗ ಎಲ್ಲರ ಮನೆಯ 'ಮಾತೃಭಾಷೆ'ಯೇ 'ಸಮಾಜಭಾಷೆ'ಯಾಗಿರುತ್ತಿತ್ತು. ಇಂದು ನೌಕರಿ, ವಾಣಿಜ್ಯ ಇತ್ಯಾದಿ ಸಂಚಾರಿ ಬದುಕಿನ ಅನಿವಾರ್ಯತೆಯಿಂದಾಗಿ ಅನೇಕ ರೂಪಗಳ 'ಮಿಶ್ರಸಮಾಜ' ಅಸ್ತಿತ್ವಕ್ಕೆ ಬಂದಿದೆ. ಇದರಿಂದಾಗಿ ಮನೆಯಲ್ಲಿಯ 'ಮಾತೃಭಾಷೆ' ಮತ್ತು ಮನೆಯ ಹೊರಗಿನ 'ಸಮಾಜಭಾಷೆ'ಗಳಲ್ಲಿ ಈಗ ಪ್ರತ್ಯೇಕತೆ ತಲೆದೋರುತ್ತಲಿದೆ. ಅಂದರೆ ಮಾತೃಭಾಷೆಯನ್ನು ಮನೆಗೆ ಸೀಮಿತಿಗೊಳಿಸಿ, ಸಮಾಜದಲ್ಲಿ ರಾಜ್ಯಭಾಷೆಯನ್ನು ಬಳಸುವುದು ಅನಿವಾರ್ಯವಾಗಿದೆ. ಆದುದರಿಂದ ಮನೆಗೆ ಮಾತ್ರಸೀಮಿತವಾಗುತ್ತಲಿರುವ ಮಾತೃಭಾಷೆಯನ್ನು ಐಚ್ಛಿಕಗೊಳಿಸಿ, ರಾಜ್ಯದ ತುಂಬ ಬಳಕೆಯಾಗುವ ರಾಜ್ಯಭಾಷೆಯನ್ನು 'ಕಡ್ಡಾಯ ಭಾಷೆ -೧' ಎಂಬ, ರಾಜ್ಯವೂ

* "If you want to kill the Culture, you kill their language" ಎಂಬ ಜಾನ್ ಮೆಕಾಲೆ ಮಾತನ್ನು ಇಲ್ಲಿ ಗಮನಿಸಬಹುದು.

ಒಳಕೊಂಡಂತೆ ಲೋಕದ ಅಂಚಿನ ವರೆಗೆ ಬಳಕೆಯಾಗುವ ಅಂತರಾಷ್ಟ್ರೀಯ ಭಾಷೆಯನ್ನು 'ಕಡ್ಡಾಯಭಾಷೆ-೨' ಎಂಬ "ಭಾಷಾನೀತಿ" ಭಾರತದ ಯಾವುದೇ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರಬೇಕಾಗಿವೆ. ಈ ಸತ್ಯದ ಒಂದು ಭಾಗವೆಂಬಂತೆ ನಮ್ಮಲ್ಲಿ ಕನ್ನಡವು ಕಡ್ಡಾಯ ಆಡಳಿತ ಭಾಷೆಯಾಗುವುದು ಅವಶ್ಯವಿದೆ.

ಸೂರ್ಯನನ್ನು ಕೆಲವು ನಿಮಿಷ ತುಂಡುಮೋಡ ಮುಸುಕುವಂತೆ ಸತ್ಯವನ್ನು ಕೆಲವು ದಿನ ಅಸತ್ಯ ಹತ್ತಿಕ್ಕಬಹುದೇ ಹೊರತು ಶಾಶ್ವತ ಹತ್ತಿಕ್ಕಲು ಸಾಧ್ಯವಿಲ್ಲ. ಭಾರತ ಸ್ವಾತಂತ್ರ್ಯವನ್ನು ವಿರೋಧಿಸಿದರು; ಅವರನ್ನು ತುಳಿದು ನಮ್ಮ ದೇಶ ಸ್ವತಂತ್ರವಾಯಿತು. ಕನ್ನಡ ಏಕೀಕರಣವನ್ನು ವಿರೋಧಿಸಿದರು; ಅವರನ್ನು ಬದಿಗೊತ್ತಿ ನಮ್ಮ ನಾಡು ಒಂದುಗೂಡಿತು; ಇಂದು ಕನ್ನಡ ಆಡಳಿತ ಭಾಷೆಯಾಗಬಾರದೆಂದು ಕೆಲವರು ಅಡ್ಡಗಾಲು ನೀಡುತ್ತಲಿದ್ದಾರೆ. ಆದರೆ ಅವರನ್ನು ಹಿಂದೆ ಸರಿಸಿ ಕನ್ನಡ ಆಡಳಿತ ಭಾಷೆ ಆಗಿಯೇ ತೀರುತ್ತದೆ.

ಆಡಳಿತವೆನ್ನುವುದು ಸಾಮಾಜಿಕ ಬದುಕಿನ ಅನಿವಾರ್ಯ ಕ್ರಿಯೆ. ಈ ಆಡಳಿತ ನಮ್ಮೊಳಗಿನಿಂದಲೇ ರೂಪಗೊಂಡರೆ, ಅದರೊಂದಿಗೆ ನಮ್ಮದೇ ಆದ ಆಡಳಿತ ಭಾಷೆಯೂ ರೂಪಗಳ್ಳುತ್ತದೆ. ಅಲ್ಲಿ ಆಡಳಿತ ಭಾಷಾಸಮಸ್ಯೆಯೇ ಉದ್ಭವಿಸುವುದಿಲ್ಲ. ಆಡಳಿತಪದ್ಧತಿ ಹೊರಗಿನಿಂದ ಬಂದರೆ ಮಾತ್ರ ಹೊರಗಿನ ಆ ಪದ್ಧತಿ, ಒಳಗಿನ ಈ ಭಾಷೆಗಳಲ್ಲಿ ಹೊಂದಿಕೆ ತಪ್ಪಿಹೋಗಿ ತಟ್ಟನೆ ಸಮಸ್ಯೆ ಉದ್ಭವಿಸುತ್ತದೆ. ನಮ್ಮ ಪ್ರಾಚೀನ ಆಡಳಿತಭಾಷೆಯಲ್ಲಿ ಬಹಳಷ್ಟು ಕನ್ನಡಪದಗಳು ಎಂದೋ ನಷ್ಟವಾಗಿ ಉರ್ದು, ಮರಾಠಿ ಪದಗಳು ದಟ್ಟವಾಗಿ ಸೇರಿಕೊಂಡರೂ ೧೮ನೆಯ ಶತಮಾನದ ವರೆಗೆ ನಮ್ಮ ಆಡಳಿತದಲ್ಲಿ ನಮ್ಮ ಭಾಷೆ - ನಮ್ಮ ಆಡಳಿತ ಪದ್ಧತಿಗಳು ಅಸ್ತಿತ್ವದಲ್ಲಿದ್ದವು. ಆದರೆ ೧೯ನೆಯ ಶತಮಾನದಲ್ಲಿ ಆ ಆಡಳಿತಪದ್ಧತಿ ಮತ್ತು ಆಡಳಿತ ಭಾಷೆಗಳನ್ನು ಬದಿಗೊತ್ತಿ ಇಂಗ್ಲೀಷ್ ಆಡಳಿತಪದ್ಧತಿ, ಇಂಗ್ಲೀಷ್ ಆಡಳಿತಭಾಷೆಗಳು ಅಸ್ತಿತ್ವಕ್ಕೆ ಬಂದವು. ಈಗ ಕಳೆದುಕೊಂಡ ನಮ್ಮ ಆಡಳಿತ ಪದ್ಧತಿಯನ್ನಾಗಲೀ, ನಮ್ಮ ಆಡಳಿತ ಭಾಷೆಯನ್ನಾಗಲೀ ಮರಳಿ ರೂಢಿಸುವುದು ಅಸಾಧ್ಯ. ಇಂತಹ ಪರಿಸ್ಥಿತಿಯಲ್ಲಿ ಇಂದು ನಮ್ಮದೇ ಆಗಿಬಿಟ್ಟಿರುವ ಇಂಗ್ಲೀಷರ ಆಡಳಿತ ಪದ್ಧತಿಗೆ ನಮ್ಮ ಭಾಷೆಯನ್ನು ಅಳವಡಿಸಬೇಕಾಗಿದೆ. ಇದರಿಂದ ಉದ್ಭವಿಸುವ ಸಮಸ್ಯೆಗಳ ಶೋಧ ಮತ್ತು ಪರಿಹಾರಗಳ ಅಧ್ಯಯನ ತುಂಬ ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ.

ಭಾಷೆಯೆನ್ನುವುದು ಒಂದು ಜನಾಂಗದ ಭೌತಿಕ ಮತ್ತು ಸಾಂಸ್ಕೃತಿಕ ಬದುಕಿನ ಸೃಷ್ಟಿ. ಇದರಿಂದಾಗಿ ಯಾವುದೇ ಭಾಷೆಯಲ್ಲಿ Intimate Vocabularly (ಸಂಪರ್ಕ ಪದಸಂಪತ್ತು) ಮತ್ತು Cultural Vocabularly (ಸಾಂಸ್ಕೃತಿಕ ಪದಸಂಪತ್ತು) ಬೆಳೆದುಬಂದಿರುತ್ತದೆ. ಇವುಗಳಲ್ಲಿ Intimate Vocabularlyಯನ್ನು ಬಳಸುವುದು ಮತ್ತು ಭಾಷಾಂತರಿಸುವುದು ಕಠಿಣ ಕೆಲಸವೇನಲ್ಲ. ಆದುದರಿಂದ Intimate Vocabulary ವರ್ಗಕ್ಕೆ ಸೇರುವ ಆಡಳಿತಭಾಷಾ ಬಳಕೆ ಮತ್ತು ಆಡಳಿತ ಭಾಷಾ ಅನುವಾದ ಕ್ರಿಯೆಗಳು ಕಠಿಣ ಸಮಸ್ಯೆಗಳಲ್ಲವೆಂದೇ ಹೇಳಬೇಕು.

ಭಾಷೆಯ ಸಾರ್ಥಕತೆ ಒಂದು ಅಭಿಪ್ರಾಯವನ್ನು ಪೂರ್ಣಪ್ರಮಾಣದಲ್ಲಿ ಇನ್ನೊಬ್ಬರಿಗೆ ಮುಟ್ಟಿಸುವದೇ ಆಗಿದೆ. ಈ ಪ್ರಮಾಣ ಎಷ್ಟು ಕಡಿಮೆಯಾಗುತ್ತ ಹೋಗುವುದೋ ಆ ಭಾಷೆ ಅಷ್ಟು ಅನ್ಯವಾಗುತ್ತ ಹೋಗುತ್ತದೆ. ಕೊನೆಗೆ ಅನ್ಯಭಾಷೆಯಂತೆ ಶೋಷಣೆಯ ಮಾಧ್ಯಮವೂ ಆಗುತ್ತದೆ. ಹೀಗಾಗಿ ಆಡಳಿತದಲ್ಲಿ ತಿಳಿಯದ ಅನ್ಯಭಾಷೆ ಬಳಸುವಷ್ಟೇ ತಿಳಿಯದ ಸ್ವಭಾಷೆ ಬಳಸುವುದೂ ಅಪ್ರಯೋಜಕ ಮತ್ತು ಅಪಾಯಕಾರಿ. ಈ ಸ್ಪಷ್ಟ ತಿಳುವಳಿಕೆಯಿಂದ ಆಡಳಿತದಲ್ಲಿ ಅನುವಾದಿತ ಮತ್ತು ಪ್ರಾದೇಶಿಕ ಕನ್ನಡವನ್ನು ರೂಢಿಸಬೇಕಾಗಿದೆ.

ಅನುವಾದಿತ ಭಾಷೆ :

ಅನ್ಯಭಾಷೆಯ ಕಾವ್ಯಸಾಹಿತ್ಯ ಅಥವಾ ಶಾಸ್ತ್ರಸಾಹಿತ್ಯವನ್ನು ಇನ್ನೊಂದು ಜನಾಂಗ ಸ್ವೀಕರಿಸುವಲ್ಲಿ ನೇರ ಸ್ವೀಕರಣ, ಅನುವಾದಕ್ರಿಯೆಯೆಂಬ ಎರಡು ಘಟ್ಟಗಳು ಮುಗಿದ ಬಳಿಕ ಅಲ್ಲಿ ಸ್ವತಂತ್ರ ಸೃಷ್ಟಿ ಪ್ರಾರಂಭವಾಗುತ್ತದೆ. ಈ ಮಾತು ಕನ್ನಡದಲ್ಲಿ ಆಡಳಿತಭಾಷೆ ನಡೆದುಬಂದ ಇತಿಹಾಸಕ್ಕೂ ಅನ್ವಯಿಸುತ್ತದೆ. ಏಕೀಕರಣ ಪೂರ್ವದ ಆಡಳಿದಲ್ಲಿ ನೇರವಾಗಿ ಇಂಗ್ಲೀಷ್ ಭಾಷೆಯನ್ನು ಬಳಸುತ್ತಿದ್ದೆವು. ಇದು ಒಂದು ಘಟ್ಟ. ಆಮೇಲೆ ಕನ್ನಡ ಜಾಗೃತಿಯ ಪರಿಣಾಮದಿಂದಾಗಿ ಭಾಷಾಂತರ ಕ್ರಿಯೆ ನಮ್ಮಲ್ಲಿ ಪ್ರಾರಂಭವಾಯಿತು. ಆಗ ಪದ-ವಾಕ್ಯಗಳ ಮಕ್ಕಿಕಾ-ಮಕ್ಕಿ ಅನುವಾದವೇ ಪ್ರಧಾನಪಾತ್ರವಹಿಸಿತು. ಇದರಿಂದ ಕೃತಕಪದಗಳೂ ಕೃತಕವಾಕ್ಯಗಳೂ ಆಡಳಿತ ಮತ್ತು ಆಡಳಿತೇತರ ಕ್ಷೇತ್ರಗಳಲ್ಲಿ ನುಗ್ಗಿ ಬಂದವು. ಇದಕ್ಕೆ ಕಾರಣ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಬಳಸಬೇಕೆಂದು ಸಾರುತ್ತಿರುವ ರಾಜಕಾರಣಿಗಳಾಗಲೀ, ಇದರ ಉಸ್ತುವಾರಿ ನೋಡಿಕೊಳ್ಳುತ್ತಲಿರುವ ಅಧಿಕಾರಗಳಾಗಲೀ, ಅನುವಾದಿಸುತ್ತಿರುವ ವಿಷಯ ಪರಿಣಿತರಾಗಲೀ ಭಾಷೆಯೆಂದರೆ ಏನು? ಎಂಬ ವೈಜ್ಞಾನಿಕ ದೃಷ್ಟಿಯಿಲ್ಲದುದು. ಅವರಿಗೆ ತಮ್ಮ ಬರವಣಿಗೆಯನ್ನು ಓದುವ ಜನತೆ ಅಮುಖ್ಯ; ತಾವು ಅನುವಾದ ಮಾಡುವ ಪದ, ವಾಕ್ಯಗಳೇ ಮುಖ್ಯ. ಹೀಗಾಗಿ ಇವರು ಒಂದು ಇಂಗ್ಲಿಷ್ ಪದಕ್ಕೆ ರೂಢಿಯಲ್ಲಿರುವ ಒಂದು ಉರ್ದು, ಮರಾಠಿ ಪದ ಇಲ್ಲವೆ ಅಪರಿಚಿತ - ಪರಿಚಿತ ಸಂಸ್ಕೃತಪದ ಬಳಸಿದರೆ ತಮ್ಮ ಕೆಲಸ ಮುಗಿಯಿತೆಂದು ಭ್ರಮಿಸಿದರು. ಇದರಿಂದಾಗಿ ಬೆಂಗಳೂರು ಪ್ರದೇಶದ ಆಡಳಿತದಲ್ಲಿ ಪ್ರಚಲಿತವಿರುವ ಉರ್ದು, ಮರಾಠಿ, ಪದಗಳೂ, ಅನುವಾದಜನ್ಯ ಆರಕ್ಷಕ, ಅಭಿಯಂತ, ಅಧೀಕ್ಷಕ ಎಂಬಂಥ ಭಯಂಕರ ಸಂಸ್ಕೃತಪದಗಳೂ ನಮ್ಮ ಆಡಳಿತದಲ್ಲಿ ತಲೆಹಾಕಿದವು. ಇಂಥ ಪದಗಳನ್ನೊಳಗೊಂಡ "ಆಡಳಿತ ಪದಕೋಶ", "ಕಾನೂನು ಪದಕೋಶ" ಇತ್ಯಾದಿ ಕೃತಿಗಳು ಭಯ ಹುಟ್ಟಿಸುವ ವಿಕೃತಶಿಶುಗಳಂತೆ ರಚನೆಗೊಂಡವು. 'ತಿಲಕಾಷ್ಠಮಹಿಷಬಂಧ'ಗಳಾಗಿ ಕಚೇರಿಗಳಲ್ಲಿ, ಸಂಸ್ಥೆಗಳಲ್ಲಿ ಧೂಳು ತಿನ್ನುತ್ತ ಮಲಗಿದವು.

ಈ ಬಗೆಯ ಅನುವಾದಿತ ಪದಬಳಕೆಯಿಂದಾಗಿ ಆಡಳಿತದಲ್ಲಿ ಇತ್ತೀಚೆ ಕೃತಕ ಕನ್ನಡವೇ ಅವತರಿಸಿತು. ಧಾರವಾಡ ಸಮೀಪದ ಮನ್ಸೂರ ಗ್ರಾಮದ ಹೆಣ್ಣುಮಗಳಿಗೆ ಸರ್ಕಾರದಿಂದ ಬಂದ ಒಂದು ಪತ್ರ ಇದಕ್ಕೆ ಉದಾಹರಣೆಯಾಗಿದೆ:

"ಶ್ರೀಮತಿ ಮಲ್ಲವ್ವಾ ಕೋಂ. ನಿಂಗಪ್ಪ ಯರಿಹಕ್ಕಲ, ಸಾ।। ಮನಸೂರ ಇವರು, ಕೆಳಗೆ ನಿರ್ದಿಷ್ಟಪಡಿಸಿದ ಭೂಮಿಗಳಿಗೆ ಸಂಬಂಧಿಸಿ ಈ ಅಧಿನಿಯಮದ ೪೫ನೇ ಪ್ರಕರಣದ ಮೇರೆಗೆ ಸದರಿ ಭೂಮಿಯ ಅಧಿಭೋಗದಾರಳಾಗಿ ತನ್ನನ್ನು ನೋಂದಣಿ ಮಾಡುವಂತೆ ೪೮ಆ ಪ್ರಕರಣ ಮೇರೆಗೆ ಆವೇದನ ಮಾಡಿಕೊಂಡಿರುವುದರಿಂದ: ಈಗ ಗಿರೀಶ ರಂಗರಾವ ದೇಶಪಾಂಡೆ ೨) ಭೀಮಾಬಾಯಿ ದೇಶಪಾಂಡೆ ವಗೈರೆ ನಾಲ್ಕು ಜನರು ಸಾ।। ಧಾರವಾಡ ಇವರಿಗೆ ಲಿಖಿತ ಸಾಕ್ಷ್ಯ ಅಥವಾ ಇತರ ಸಾಕ್ಷ್ಯ ಏನಾದರೂ ಇದ್ದರೆ ಅವುಗಳನ್ನು ತೆಗೆದುಕೊಂಡು ೨೯-೧೧-೯೧, ೧೦-೩ಂಕ್ಕೆ ಬಂದು ನ್ಯಾಯಾಧಿಕರಣದ ಮುಂದೆ ಹಾಜರಾಗಬೇಕೆಂದು ಈ ಮೂಲಕ ನೋಟೀಸು ಕೊಡಲಾಗಿದೆ". ಅಧಿಕಾರಿಗಳು ಬಳಸುವ ಇದು ಯಾರ ಕನ್ನಡ? ಕನ್ನಡಿಗರ ಕನ್ನಡವಂತೂ ಅಲ್ಲ. ಹಳ್ಳಿಗರಿಗೆ ಇಂಥ ಕನ್ನಡ ಪತ್ರ ಕಳಿಸುವುದೂ ಒಂದೇ, ಇಂಗ್ಲೀಷ್ ಪತ್ರ ಕಳಿಸುವುದೂ ಒಂದೇ. ಇಂಗ್ಲೀಷ್ ಪತ್ರ ಇಂಗ್ಲೀಷ್ ಬಲ್ಲವರಿಗಾದರೂ ತಿಳಿಯುತ್ತದೆ. ಈ ಕನ್ನಡ ಪತ್ರ ಇಂಗ್ಲಿಷ್ ಬಲ್ಲವರಿಗೂ ತಿಳಿಯುವುದಿಲ್ಲ, ಕನ್ನಡ ಬಲ್ಲವರಿಗೂ ತಿಳಿಯುವುದಿಲ್ಲ. ಆದುದರಿಂದ ಇಂಥ ಕೃತಕ ಕನ್ನಡವನ್ನು ಬಳಸಬಾರದೆಂದು ಅಧಿಕಾರಿಗಳಿಗೆ ಎಚ್ಚರ ನೀಡಬೇಕು; ಇವರಿಗೆ ಸರಳ ಕನ್ನಡ ಬಳಕೆಯ ತರಬೇತಿ ನೀಡಬೇಕು.

ಇಂಥ ಅನುವಾದ ಒಂದು ಘಟ್ಟದಲ್ಲಿ ಅನಿವಾರ್ಯವೆಂದೇ ಹೇಳಬೇಕು. ನಾವು ಈಗ ಈ ಘಟ್ಟದಲ್ಲಿದ್ದೇವೆ. ಇನ್ನು ಮೇಲೆ ಈ ಘಟ್ಟವನ್ನು ದಾಟಿ ಸ್ವತಂತ್ರ ಸೃಷ್ಟಿಕ್ರಿಯೆಯ ಘಟ್ಟವನ್ನು ಏರಬೇಕಾಗಿದೆ. ಪದಕೋಶ ನೋಡದೆ, ಪ್ರಯೋಜಕತೆಯನ್ನು ನೋಡಿ, ನಾವು ಯಾರಿಗಾಗಿ ಈ ಕಾರ್ಯ ಮಾಡುತ್ತಲಿದ್ದೇವೆ ಎಂಬ ಎಚ್ಚರದಿಂದ ಭಾಷೆಯನ್ನು ರೂಢಿಸಬೇಕಾಗಿದೆ. ಆಗ ಆ ಬರವಣಿಗೆ ನಮ್ಮದಾಗುತ್ತದೆ, ನಮ್ಮ ನಾಡಿನದಾಗುತ್ತದೆ.

ಪ್ರಾದೇಶಿಕಭಾಷೆ :

ಆಡಳಿತ ಸಂದರ್ಭದಲ್ಲಿ ಎದುರಾಗುವ ಭಾಷಾ ಸಮಸ್ಯೆಗಳನ್ನು ಕೃತಕ ಮತ್ತು ನೈಸರ್ಗಿಕವೆಂದು ವರ್ಗೀಕರಿಸಿದಲ್ಲಿ, 'ಪ್ರಾದೇಶಿಕಭಾಷೆ'ಯೆನ್ನುವುದು ನೈಸರ್ಗಿಕ ಸಮಸ್ಯೆಯ ವರ್ಗಕ್ಕೆ ಸೇರುತ್ತದೆ. ಭಾಷೆಯಲ್ಲಿ ಪ್ರಾದೇಶಿಕತೆಯು ಒಂದು ಶಕ್ತಿಯೂ ಹೌದು. ಒಂದು ಮಿತಿಯೂ ಹೌದು. ಯಾವುದೇ ದೇಶದ ಭಾಷೆ ತನ್ನ ಪ್ರದೇಶದ ಭೌತಿಕ ಮತ್ತು ಸಾಂಸ್ಕೃತಿಕ ಬದುಕಿಗನುಗುಣವಾಗಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನರೂಪ ತಾಳುತ್ತದೆ. ಆಗ ಆ ನಾಡಿನಲ್ಲಿ ಏಕರೂಪದ ಆಡಳಿತ ನಡೆಸಬೇಕೆಂದಾಗ ಈ ಭಿನ್ನರೂಪಗಳು ಕಿರಿಕಿರಿಕೊಡುತ್ತವೆ.

ಕರ್ನಾಟಕದಲ್ಲಿ ತುಂಗಭದ್ರಾನದಿ ಮತ್ತು ಪಶ್ಚಿಮಘಟ್ಟಗಳಿಂದಾಗಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಮತ್ತು ಕರಾವಳಿಕರ್ನಾಟಕಗಳೆಂಬ ಮೂರು ನೈಸರ್ಗಿಕ ವಲಯಗಳು ರೂಪಗೊಂಡಿವೆ. ಮರಾಠಾ ಆಡಳಿತ, ನಿಜಾಂ ಆಡಳಿತಗಳಿಂದಾಗಿ ಉತ್ತರ ಕರ್ನಾಟಕವು ಮುಂಬೈ ಕರ್ನಾಟಕ ಮತ್ತು ಹೈದ್ರಾಬಾದ ಕರ್ನಾಟಕಗಳೆಂಬ ಎರಡು ಉಪವಲಯಗಳನ್ನು ಹೊಂದಿದೆ. ಇದರಿಂದಾಗಿ ದಕ್ಷಿಣ ಕರ್ನಾಟಕ, ಕರಾವಳಿ ಕರ್ನಾಟಕ, ಮುಂಬೈ ಕರ್ನಾಟಕ, ಹೈದ್ರಾಬಾದ್ ಕರ್ನಾಟಕಗಳೆಂಬ ನಾಲ್ಕು ರಾಜಕೀಯ ವಲಯಗಳು ಕಳೆದ ಶತಮಾನದಲ್ಲಿ ನಿರ್ಮಾಣಗೊಂಡವು. ಈ ನೈಸರ್ಗಿಕ ಮತ್ತು ರಾಜಕೀಯವಲಯಗಳಿಂದಾಗಿ ಇಲ್ಲಿಯ ಸಾಮಾಜಿಕ ಭಾಷೆಯಂತೆ ಆಡಳಿತಭಾಷೆಯಲ್ಲಿಯೂ ಭಿನ್ನತೆ ಬೆಳೆದುಬಂದಿತು. ಆಡಳಿತವೆನ್ನುವುದು ರಾಜಕೀಯದ ಒಂದು ಭಾಗವಾಗಿರುವುದರಿಂದ ಮುಸಲ್ಮಾನ ಮತ್ತು ಮರಾಠಾ ರಾಜರ ಭಾಷೆಯ ಪ್ರಭಾವವೇ ಆಯಾ ಪ್ರದೇಶಗಳ ಆಡಳಿದಲ್ಲಿ ಇಳಿದುಬಂದಿತು; ಆಡಳಿತದ ಮೂಲಕ ಜನಜೀವನವನ್ನೂ ಪ್ರವೇಶಿಸಿತು. ಇಂಥ ಭಿನ್ನಭಾಷಾವಲಯಗಳನ್ನುಳ್ಳ ಕರ್ನಾಟಕ ರಾಜ್ಯದಲ್ಲಿ ಏಕರೂಪದ ಭಾಷಾ ಆಡಳಿತ ತರುವುದು ಸಾಧ್ಯವೇ? ಆಗ ಉದ್ಭವಿಸುವ ತೊಂದರೆಗಳೇನು? ಅವುಗಳಿಗೆ ಪರಿಹಾರವೇನು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಾಗಿದೆ.

ದೇಶ ದೊಡ್ಡದಾದಷ್ಟೂ, ಭೌಗೋಲಿಕ ಆತಂಕಗಳು ಅಧಿಕವಾದಷ್ಟೂ, ಆಡಳಿತ ವ್ಯವಸ್ಥೆ ಅನೇಕವಿದ್ದಷ್ಟೂ, ಸಂಪರ್ಕಸಾಧನ (ಸಾರಿಗೆ, ಸಮೂಹಮಾಧ್ಯಮ) ವಿರಳವಿದ್ದಷ್ಟೂ ಭಾಷಾಪ್ರಭೇದಗಳ ಸಂಖ್ಯೆ ವರ್ಧಿಸುತ್ತದೆ. ಕರ್ನಾಟಕ ಅಂಥ ದೊಡ್ಡ ಪ್ರಾಂತವಲ್ಲ. ಭೌಗೋಲಿಕ ಆತಂಕಗಳೂ ಅಧಿಕವಾಗಿಲ್ಲ. ಆದರೆ ಅನೇಕ ಅರಸರ ಆಡಳಿತ, ಸಂಪರ್ಕ ಸಾಧನಗಳ ಕೊರತೆಗಳಿಂದಾಗಿ ಈ ಹಿಂದೆ ಆಡಳಿತ ಭಾಷೆಯಲ್ಲಿ ಕೆಲವು ಪ್ರಭೇದಗಳು ಬೆಳೆದುಬಂದಿದ್ದವು. ಆದರೆ ಈ ೩೦ ವರ್ಷಗಳಲ್ಲಿ ಆಡಳಿತದ ಏಕತೆ, ಸಂಪರ್ಕಸಾಧನ ಸಮೂಹಮಾಧ್ಯಮಗಳ ಬಾಹುಳ್ಯಗಳಿಂದಾಗಿ ಭಾಷಾಪ್ರಾಂತಭೇದಗಳು ಕಡಿಮೆಯಾಗುತ್ತಲಿವೆ; ವೈವಿಧ್ಯತೆ ಏಕತೆಯತ್ತ ತಿರುಗುತ್ತಲಿದೆ. ಈ ಪ್ರಮಾಣಕ್ಕೆ ಅನುಗುಣವಾಗಿ ಈಗ ಪ್ರದೇಶವಿಶಿಷ್ಟ ಆಡಳಿತಪದಗಳು ಹಿಂದೆ ಸರಿದು, ಸಾರ್ವತ್ರಿಕ ಮನ್ನಣೆಯ ಪದಗಳು ಅಸ್ತಿತ್ವಕ್ಕೆ ಬಂದಿವೆ; ಬರುತ್ತಲಿವೆ. ಆದುದರಿಂದ ಈಗ ಅಲ್ಲಲ್ಲಿ ಅಳಿದುಳಿದಿರುವ ಪ್ರದೇಶನಿಷ್ಠ ಪಾರಿಭಾಷಿಕ ಪದಗಳು ಆಡಳಿತದಲ್ಲಿ ಅಷ್ಟಾಗಿ ತೊಂದರೆ ಕೊಡುವದಿಲ್ಲ. ಇನ್ನು ಕೆಲವೇ ವರ್ಷಗಳಲ್ಲಿ ಇವೂ ವೇಗವಾಗಿ ಮಾಯವಾಗುತ್ತವೆ. ಹೀಗೆ ಮಾಯವಾಗುವಲ್ಲಿ ಯಾವ ಒಂದು

ಪ್ರದೇಶದ ಪದಗಳು ಈ ತೆರನಾದ ಸ್ಥಾನವನ್ನು ಆಕ್ರಮಿಸುತ್ತವೆ? ಎಂಬುದು ಇಲ್ಲಿಯ ಪ್ರಶ್ನೆ. ಯಾವ ಪ್ರದೇಶದಲ್ಲಿ ಆಡಳಿತ ಕೇಂದ್ರವಿದೆಯೋ ಅಲ್ಲಿಯ ಆಡಳಿತ ಪದಗಳು ಎಲ್ಲ ಪ್ರದೇಶಗಳನ್ನು ಆಕ್ರಮಿಸುತ್ತದೆ. ಕರ್ನಾಟಕದ ಮಟ್ಟಿಗೆ ಹೇಳುವದಾದರೆ ರಾಜಧಾನಿ ಬೆಂಗಳೂರು ಪ್ರದೇಶದ ಅಂದರೆ ಹಳೆಯ ಮೈಸೂರು ಪ್ರದೇಶದ ಆಡಳಿತ ಪದಗಳು ಮಿಕ್ಕ ಪ್ರದೇಶದ ಪದಗಳನ್ನು ಮೂಲೆಗುಂಪಾಗಿಸಿ, ತಮ್ಮ ಅಧಿಕಾರ ನಡೆಸುತ್ತವೆ. ಈಗಾಗಲೇ ಮೈಸೂರು ಪ್ರದೇಶದ ಖಜಾನೆ, ಗೇಣೀದಾರ್, ಹೋಬಳಿ, ಬಡಾವಣೆ, ಪಿಂಚಣಿ, ದಾಸ್ತಾನು ಇತ್ಯಾದಿ ಪದಗಳು ೧೫-೨೦ ವರ್ಷಗಳಲ್ಲಿ ಉತ್ತರಕರ್ನಾಟಕದಲ್ಲಿಯೂ ಬೇರೂರಿದುದು ಇದಕ್ಕೆ ನಿದರ್ಶನ. ಇದಕ್ಕೆ ಪ್ರತಿಯಾಗಿ ಉತ್ತರಕರ್ನಾಟಕ ವಿಶಿಷ್ಟವಾದ ಒಂದೂ ಪದ ಬಹುಶಃ ಇಂದು ಆಡಳಿತದ ಕಡತವೇರಿರಲಾರದು. ಇದು ಅನಿವಾರ್ಯ, ಸಹಜ.

ಈ ಬಗೆಯ ಸ್ಥಿತ್ಯಂತರ ಬೆಂಗಳೂರೇತರ ಪ್ರದೇಶಗಳ ಒಂದು ತಲೆಮಾರಿನ ಜನತೆಗೆ ತೊಂದರೆಯನ್ನುಂಟುಮಾಡಬಹುದು. ಮುಂದಿನ ತಲೆಮಾರಿನವರು ಹೀಗೆ ಬದಲಾದ ಪಾರಿಭಾಷಿಕ ಪದಗಳನ್ನು ಸಲೀಸಾಗಿ ಬಳಸುತ್ತಾರೆ. ಇಂದು ನಾವು ಮಾಡುವ ಯಾವುದೇ ಕೆಲಸದ ಫಲ ನಮಗಾಗಿ ಅಲ್ಲ; ಮುಂದಿನ ತಲೆಮಾರಿನವರಿಗಾಗಿ - ಎಂಬ ತತ್ವದಂತೆ ಈ ಕ್ರಿಯೆ ಜರುಗುತ್ತದೆ. ಆದರೆ ಆಡಳಿತದ ಏಕತೆಯ ರಭಸದಲ್ಲಿ ಪ್ರಾಂತಭೇದಗಳಲ್ಲಿ ಸಿಗುವ ಅಪರೂಪದ ಪದಗಳು ಹಾಳಾಗಿಹೋಗದಂತೆ ಎಚ್ಚರವಹಿಸಬೇಕಾಗಿದೆ; ಅವುಗಳನ್ನು ಸಾರ್ವತ್ರಿಕ ಪ್ರಯೋಜನೆಗಾಗಿ ಬಳಸಿಕೊಳ್ಳಬೇಕಾಗಿದೆ.

ಆಡಳಿತಭಾಷೆಯನ್ನು ಪರಿಣಾಮಕಾರಿಯಾಗಿ ಬಳಕೆಗೆ ತರುವುದೆಂದರೆ ಹೊಸದಾಗಿ ಪಾರಿಭಾಷಿಕ ಪದಗಳನ್ನು ಸೃಷ್ಟಿಸುವುದು, ಬಳಸುವುದು ಎಂದು ಮಾತ್ರ ಕೆಲವರು ತಿಳಿದಿದ್ದಾರೆ. ಆದರೆ ಇಂಥ ಪಾರಿಭಾಷಿಕ ಪದಗಳಷ್ಟೇ ಆ ಭಾಷೆಯ ಸಾಮಾನ್ಯಪದಗಳೂ, ಸ್ಥಳೀಯ ಪಾರಿಭಾಷಿಕ ಪದಗಳೂ ಮುಖ್ಯವೆನಿಸುತ್ತವೆ. ಇವೆಲ್ಲ ಸೇರಿ ಒಂದು ಭಾಷೆಯಲ್ಲಿ ಸರಿಯಾಗಿ ವಾಕ್ಯವಾಗುವುದರ ಮೂಲಕ ಅರ್ಥ ಪ್ರತೀತಿಯನ್ನುಂಟು ಮಾಡುತ್ತವೆ. ಅಂದರೆ ಪದ ಯಾವುದೇ ಭಾಷೆಗೆ ಸಂಬಂಧಿಸಿದ್ದರೂ ವಾಕ್ಯಸಂಯೋಜನೆಯಲ್ಲಿ ಅವು ಕನ್ನಡವಾಗುತ್ತವೆ. ಉದಾ : ಪೂರ್ವ, ಸೂರ್ಯ, ಉದಯ- ಇವು ಸಂಸ್ಕೃತಪದಗಳು. ಇದ್ದ ಸ್ಥಿತಿಯಲ್ಲಿ ಇವು ಒಂದು ವಿಷಯವನ್ನು ವ್ಯಕ್ತಪಡಿಸುವುದಿಲ್ಲ. 'ಪೂರ್ವದಲ್ಲಿ ಸೂರ್ಯನ ಉದಯ' ಎಂಬಂತೆ ಕನ್ನಡ ವಾಕ್ಯಸಂಯೋಜನೆಯಲ್ಲಿ ಹೊಂದಿಕೊಂಡಾಗ ಮಾತ್ರ ಅವು ಒಂದು ವಿಷಯವನ್ನು ಸ್ಪಷ್ಟಪಡಿಸುತ್ತವೆ. ಆದುದರಿಂದ ಪರಿಭಾಷೆಗಳಷ್ಟೇ ವಾಕ್ಯಸಂಯೋಜನೆಯೂ ಆಡಳಿತದಲ್ಲಿ ಅವಶ್ಯ ಲಕ್ಷಿಸತಕ್ಕ ಸಂಗತಿಯಾಗಿದೆ. ಆಗ ಮಾತ್ರ ಒಂದು ಅಭಿಪ್ರಾಯ ಸರಿಯಾಗಿ ಸಂವಹನಗೊಳ್ಳುತ್ತದೆ. ಈ ತಿಳುವಳಿಕೆಯ ಕೊರತೆಯಿಂದಾಗಿ ಎಷ್ಟೋ ಸಲ ವಾಕ್ಯದಲ್ಲಿ ಪ್ರಾದೇಶಿಕ ಪದಗಳನ್ನು ಕಿಕ್ಕಿರಿದು ತುಂಬಿ, ಅರ್ಥ ಸಂವಹನತೆಯನ್ನು ಹಾಳು ಮಾಡುತ್ತೇವೆ. ಉದಾ : ಬೆಳಗಾವಿಯಿಂದ ಹೊರಡುವ 'ಕನ್ನಡಮ್ಮ' ದಿನಪತ್ರಿಕೆಯ (೪, ಫೆಬ್ರುವರಿ ೧೯೮೫) ಒಂದು ನೋಟೀಸಿನ ಭಾಗವನ್ನು ಇಲ್ಲಿ ನೋಡಬಹುದು.

"ಶಹರ ಬೆಳಗಾಂವ ಶಹಾಪೂರ ಹದ್ದಿನಲ್ಲಿ ಇರುವ ದಾನೆಗಲ್ಲಿಯಲ್ಲಿ ಇದ್ದ ಮನೆ ನಂ. ೭೯ಅ (ಹಳೇಮನೆ ನಂ. ೭೯-೮೦) ಇದು ನಮ್ಮ ಪಕ್ಷಗಾರನಾದ ಮೇಲೆ ತಿಳಿಸಿದವರ ಮಾಲಕಿ ನಾತೆ ಇಂದೆ ಕಬಜಾ ವಹಿವಾಟಿಯಲ್ಲಿ ಇರುತ್ತದೆ. ಹೀಗಿದ್ದಾಗಿಯೂ ಶ್ರೀ ಭರ್ಮಣ್ಣಾ ಅನಂತಪ್ಪಾ ಸಾಬನ್ನವರ ಇವರು ತಮ್ಮ ಹೆಸರು ಸಿ.ಟಿ.ಎಸ್. ರಿಕಾರ್ಡದಲ್ಲಿ ಇದ್ದ ಬಗ್ಗೆ ಗೈರ ಫಾಯದೆ ತೆಗೆದುಕೊಂಡು ಬೇರೆ ಜನರಿಗೆ ಮಾರುವ ವ ವಿಲೆವಾಟ್ ಮಾಡುವ ಕಟಪಟಿಯಲ್ಲಿ ಇರುತ್ತಾರೆ."

ಇದು ವಕೀಲರ, ಸ್ಟಾಂಪ್ ವೆಂಡರರ ಭಾಷೆ.[೧] ಮೇಲೆ ಸೂಚಿಸಿದಂತೆ ಅಧಿಕಾರಿಗಳು ಸಂಸ್ಕೃತಪದಗಳನ್ನು ಅಗತ್ಯಮೀರಿ ಬಳಸಿ ಕನ್ನಡ ವಾಕ್ಯಶಯ್ಯೆಯನ್ನು ಹಾಳುಮಾಡುತ್ತಿದ್ದರೆ, ಈ ವಕೀಲರೂ ಸ್ಟಾಂಪ್‌ವೆಂಡರರೂ ಪ್ರಾದೇಶಿಕ ಪದಗಳನ್ನು ಅಗತ್ಯಮೀರಿ ಬಳಸಿ ಕನ್ನಡದ ವಾಕ್ಯಶಯ್ಯೆಯನ್ನು ಹಾಳುಮಾಡುತ್ತ ನಡೆದಿದ್ದಾರೆ. ತಾವು ನಿವೃತ್ತರಾಗುವ ಮೊದಲು ಇವರು ತಮ್ಮ ಅಸಿಸ್ಟಂಟರಿಗೆ ಈ ಪ್ರಾದೇಶಿಕ ಬರವಣಿಗೆ ಶೈಲಿಯಲ್ಲಿ ತರಬೇತುಗೊಳಿಸುವುದರಿಂದ, ಸಾರ್ವತ್ರಿಕ ಆಡಳಿತಭಾಷಾ ಅನುಷ್ಠಾನ ಕಾರ್ಯದಲ್ಲಿ ಇವರು ಉದ್ದಕ್ಕೂ ಅಡ್ಡಿಯಾಗುತ್ತಾರೆ. ಆದುದರಿಂದ ಇಂದು ಅಧಿಕಾರಿಗಳಿಗಾಗಿ ನಡೆಸುವಂತೆ ಈ ವಕೀಲರಿಗೂ, ಸ್ಟಾಂಪ್‌ವೆಂಡರರಿಗೂ ತರಬೇತಿ ಶಿಬಿರ ನಡೆಸುವುದು ಅವಶ್ಯವಿದೆ. ಒಟ್ಟಿನಲ್ಲಿ ಮೇಲಿನ ಸ್ತರದಲ್ಲಿ ಅನುವಾದ ಮೂಲದ ಕೃತಕ ಭಾಷೆ, ಕೆಳಗಿನ ಸ್ತರದಲ್ಲಿ ಪ್ರಾದೇಶಿಕತೆ ಮೂಲದ ಕೃತಕಭಾಷೆಗಳು ಸಮಾಂತರವಾಗಿ ನಮ್ಮ ಆಡಳಿತದಲ್ಲಿ ಪ್ರಸಾರಗೊಳ್ಳುತ್ತಲಿವೆ. ಈಗ ಇಬ್ಬರಲ್ಲಿಯೂ ಕಂಡುಬರುವ ಈ ವಿಶಿಷ್ಟ ಕೃತಕತೆಯನ್ನು ನಿವಾರಿಸುವುದಲ್ಲದೆ, ಇಬ್ಬರ ಮಧ್ಯದ ಕಂದರವನ್ನು ಕಡಿಮೆ ಮಾಡಬೇಕು.

ಶಿಕ್ಷಣ, ಕೃಷಿ ಇತ್ಯಾದಿ ಕ್ಷೇತ್ರಗಳು ಆಯಾ ಕ್ಷೇತ್ರದ ವ್ಯಕ್ತಿಗಳಿಗೆ ಸಂಬಂಧಿಸಿದ್ದರೆ, ಆಡಳಿತ ಕ್ಷೇತ್ರ ಇವರೂ ಒಳಗೊಂಡಂತೆ ಸಮಸ್ತ ಪ್ರಜೆಗಳಿಗೆ ಸಂಬಂಧಿಸಿದೆ. ಆದುದರಿಂದ ಆಡಳಿತಭಾಷೆ ಎಲ್ಲ ಸ್ತರದವರಿಗೂ ಅರ್ಥವಾಗುವಂತೆ ಹೀಗೆ ಹದಗೊಳ್ಳಬೇಕು:

೧. ಕನ್ನಡಪದಗಳೆಂದರೆ ಕೇವಲ ಕನ್ನಡ ಪದಗಳಲ್ಲ. ಕೇವಲ ಸಂಸ್ಕೃತಪದಗಳೂ ಅಲ್ಲ. ಕನ್ನಡಿಗರಿಗೆ ದಟ್ಟ ಪರಿಚಿತವಿರುವ ಯಾವುದೇ ಭಾಷೆಯ ಪದಗಳು. ಇಂಥ ಸಾರ್ವತ್ರಿಕ ಪರಿಚಯದ ಪದಗಳನ್ನು ಆಡಳಿತದಲ್ಲಿ ಬಳಸಬೇಕು.

೨. ಆಡಳಿತಭಾಷೆಯಲ್ಲಿ ಈ ವರೆಗೆ ಬಳಕೆಯಾಗುತ್ತ ಬಂದ ವಾಕ್ಯಶೈಲಿ ಬದಲಾಗಬೇಕು. ಅಂದರೆ ಕನ್ನಡೇತರ ಪದಗಳನ್ನು ಪರಿಮಿತ ಸಂಖ್ಯೆಯಲ್ಲಿ ಬಳಸುವುದು, ಕಾರಕಸಂಬಂಧ ಸ್ಪಷ್ಟವಾಗಿರುವಂತೆ ನೋಡಿಕೊಳ್ಳುವುದು - ಇತ್ಯಾದಿ ಕ್ರಿಯೆಗಳಿಂದ ಕನ್ನಡ ಭಾಷೆಯ ವಾಕ್ಯಶಯ್ಯೆ ಕೆಡದಂತೆ ಎಚ್ಚರವಹಿಸಬೇಕು.

ಈ ಎರಡು ದೃಷ್ಟಿಯಿಂದ ಅಧಿಕಾರಿಗಳಿಗೆ, ಸ್ಟಾಂಪ್‌ವೆಂಡರ್ - ವಕೀಲರಿಗೆ ತರಬೇತಿ ನೀಡಬೇಕು ಮತ್ತು ಆಡಳಿತ ಸುಗಮತೆಗಾಗಿ ಈಗ ಬಳಕೆಯಲ್ಲಿರುವ ನಮೂನೆ ಫಾರ್ಮುಗಳನ್ನು ಸಾರ್ವತ್ರಿಕ ಸಂವಹನ ದೃಷ್ಟಿಯಿಂದ ತಿದ್ದುಪಡಿ ಮಾಡಬೇಕು, ಸರಳಗೊಳಿಸಬೇಕು.

ಈ ಎಲ್ಲ ಕೆಲಸಗಳಾಗಬೇಕಾದರೆ ನಮ್ಮ ನಾಡಿನ ಆಡಳಿತದ ಶಿರೋಸಂಸ್ಥೆಯಾದ ವಿಧಾನಸೌಧ ಮೊದಲು ಸುಧಾರಿಸಬೇಕು. ಇಲ್ಲದಿದ್ದರೆ 'ಯಥಾ ರಾಜಾ ತಥಾ ಪ್ರಜಾ' ಎಂಬಂತೆ ವಿಧಾನಸೌಧ ಮಾಡುವ ತಪ್ಪನ್ನು ಎಲ್ಲರೂ ಮಾಡುತ್ತಾರೆ.

ಆಕರ : ಮಾರ್ಗ ಸಂಪುಟ–೨

೧. ಇವರು ಇಂದಿನ ಜನರಿಗಾಗಿ ನೂರು ವರ್ಷಗಳಷ್ಟು ಹಿಂದಿನ ವಾಕ್ಯಶೈಲಿಯನ್ನು, ಸಿದ್ಧವಾಕ್ಯಗಳನ್ನು ಬಳಸಿ ಜನತೆ ಮತ್ತು ಬರವಣಿಗೆಗಳ ಮಧ್ಯೆ ಕಂದರವನ್ನು ಕಾಪಾಡುತ್ತ ನಡೆದಿದ್ದಾರೆ.

೪೩

ಪ್ರದರ್ಶನ–ಸಂದರ್ಭ–ಪ್ರಯೋಗ

'ಮಾತು–ಕಥೆ' ಎಂಬುದರ ನಿಜರೂಪ ಮಾತು ಮತ್ತು ಕಥೆಯಲ್ಲ, ಮಾತು ಮತ್ತು ಕೃತಿ. ಯಾವುದೇ ವ್ಯಕ್ತಿ ತನ್ನ ಅನಿಸಿಕೆಯನ್ನು ಕೃತಿಗಳಲ್ಲಿ ಮಾಡುತ್ತಾನೆ; ಇಲ್ಲವೆ ಮಾತಿನಲ್ಲಿ ಆಡುತ್ತಾನೆ. ಹೀಗಾಗಿ ವ್ಯಕ್ತಿಯ ಸಮಗ್ರ ಅಭಿವ್ಯಕ್ತಿಯ ವಾಹಕಗಳೆಂದರೆ ಮಾತು ಮತ್ತು ಕೃತಿ. ಇವುಗಳಲ್ಲಿ ಮಾತಿನ ಅಭಿವ್ಯಕ್ತಿ ಎರಡು ನೆಲೆಗಳಲ್ಲಿ ವ್ಯವಹರಿಸುತ್ತದೆ.

ಇವುಗಳಲ್ಲಿ 'ಕೃತಿ' ಎನ್ನುವುದು ಕ್ರಿಯಾತ್ಮಕ ಮತ್ತು ಅನುಕರಣಾತ್ಮಕವೆಂದೂ 'ಮಾತು' ಎನ್ನುವುದು ಧ್ವನ್ಯಾತ್ಮಕ ಮತ್ತು ಅಕ್ಷರಾತ್ಮಕವೆಂದೂ ಎರಡು ಕವಲು ಪಡೆಯುತ್ತವೆ. ಉದಾ: ಕೃತಿಗೆ ಸಂಬಂಧಿಸಿದಂತೆ ಬೀಸುವುದು ಕ್ರಿಯಾತ್ಮಕ; ಬೀಸುವಂತೆ ಅಭಿನಯಿಸುವುದು ಕ್ರಿಯಾನುಕರಣಾತ್ಮಕ. ಮಾತಿಗೆ ಸಂಬಂಧಪಟ್ಟಂತೆ ಅನಿಸಿಕೆಗಳನ್ನು ಹೇಳುವುದು ಧ್ವನ್ಯಾತ್ಮಕ, ಅನಿಸಿಕೆಯನ್ನು ಬರೆಯುವುದು ಅಕ್ಷರಾತ್ಮಕ.

ಇನ್ನು ಈ ಕ್ರಿಯಾತ್ಮಕದಲ್ಲಿ ಕ್ರಿಯೆಯನ್ನು ಅನುಸರಿಸಿ ಒಂದು ಕಲೆಯನ್ನು ಉತ್ಪಾದಿಸುವುದು ಕ್ರಿಯಾನುಸರಣಾರ್ಥಕ. ಉದಾ: ಬೀಸುವ ಕ್ರಿಯೆಯೊಂದಿಗೆ ಅದಕ್ಕೆ ಅನುಸರಿಸಿ ಹಾಡುವುದು. ಈ ಅನುಸರಣದಲ್ಲಿ ಆ ಕ್ರಿಯೆ ನಿಕ್ಷಿಪ್ತಗೊಂಡಿರುತ್ತದೆ. ಒಂದುವೇಳೆ ಕ್ರಿಯೆ ಕಳೆದುಹೋದರೂ ಅದನ್ನನು ಸರಿಸಿ ಹುಟ್ಟಿದ ಕಲೆಗಳಲ್ಲಿ ಅದರ ಸ್ವರೂಪ ಉಳಿದುಕೊಂಡಿರುತ್ತದೆ. ಉದಾ: ಬೀಸುವ ಕ್ರಿಯೆ ಕಳೆದು ಹೋದರೂ ಉಳಿಸಿಕೊಂಡ ಬೀಸುವ ಹಾಡು ಆ ಕ್ರಿಯೆಯೆಂಬ ಸ್ವರೂಪವನ್ನು ತಿಳಿಸುತ್ತದೆ. ಂದರೆ ಇಲ್ಲಿ ಕ್ರಿಯೆ–ಕತೆ ಬಿಂಬ–ಪ್ರತಿಬಿಂಬಾತ್ಮಕವಾಗಿರುತ್ತದೆ. ಈ ಅಕ್ಷರಾತ್ಮಕ ಎನ್ನುವುದು ಧ್ವನಿನಿಷ್ಠ, ಕ್ಷರನಿಷ್ಠವೆಂದು ಮತ್ತೆ ಎರಡು ಬಗೆಯಾಗಿದೆ. ಬೇಂದ್ರೆಯವರ ಕವಿತೆ ಧ್ವನಿನಿಷ್ಠ ಅಭಿವ್ಯಕ್ತಿಯಾದರೆ, ಕುವೆಂಪು ಅವರದು ಅಕ್ಷರನಿಷ್ಠ ಕವಿತೆಯಾಗಿದೆ. ಅಂದರೆ ಬೇಂದ್ರೆ ಪದ್ಯ ಆಸ್ವಾದಿಸುವಲ್ಲಿ ಧ್ವನಿ ಕೇಳಿದ ಅನುಭವವುಂಟಾಗುತ್ತದೆ. ಕುವೆಂಪು ಕಾವ್ಯ ಆಸ್ವಾದಿಸುವಲ್ಲಿ ಅಕ್ಷರ ಓದಿದ ಅನುಭವವಾಗುತ್ತದೆ. ಹೀಗೆ ಅಭಿವ್ಯಕ್ತಿ ಶಾಖೋಪಶಾಖೆಯಾಗಿ ಕವಲೊಡೆದಿವೆ. ಈ ಎಲ್ಲ ಅಭಿವ್ಯಕ್ತಿಗಳಿಗೆ (ಲಿಖಿತ ಬಿಟ್ಟು) ಸಂದರ್ಭ, ಪ್ರಯೋಗವೆಂಬ ಎರಡು ಮಗ್ಗಲುಗಳಿರುತ್ತವೆ. ಸಂದರ್ಭದಿಂದ ಬಾಹಿರ ಮಾಡಿದರೆ, ಮಾಧ್ಯಮದಿಂದ ಬಾಹಿರ ಮಾಡಿದರೆ ಅವುಗಳ ಮೂಲ ಸ್ವರೂಪ ನಾಶವಾಗುತ್ತದೆ.

ಹೀಗೆ ಭಿನ್ನ ಸಂದರ್ಭ, ಭಿನ್ನ ಮಾಧ್ಯಮಗಳು ಒಂದು ಕಲೆಯ ಮೂಲ ಸ್ವರೂಪದಲ್ಲಿ ವ್ಯತ್ಯಾಸವನ್ನುಂಟು ಮಾಡುವುದರಿಂದ ಹಾಗೆ ಮಾಡದೆ ಅವುಗಳನ್ನು ಆಯಾ ಸಂದರ್ಭ, ಆಯಾ ಮಾಧ್ಯಮಗಳಲ್ಲಿಯೇ ಅಭಿವ್ಯಕ್ತಿಸಬೇಕು. ಅದು ಮಾತ್ರ ಆ ಕ್ರಿಯೆಯ ಅಥವಾ ಕಲೆಯ ಸರಿಯಾದ ಪಾಠ(Text)ವೆನ್ನಿಸುತ್ತದೆ.

ಇದನ್ನು ಇತ್ತೀಚೆ 'ಪ್ರದರ್ಶನ ಸಿದ್ಧಾಂತ'ವೆಂದು ಕರೆಯುತ್ತಿದ್ದಾರೆ. ಇದು 'ಪರಫಾರಮನ್ಸ್' ಎಂಬುದಕ್ಕೆ ಪರ್ಯಾಯವಾಗಿ ಕನ್ನಡದಲ್ಲಿ ಬಳಕೆಯಾಗುತ್ತಿದೆ. ಇಂಗ್ಲಿಷ್‌ದಲ್ಲಿ ಪರಫಾರಮನ್ಸ್ ಎಂದರೆ ವ್ಯಕ್ತಮಾಡು, ಪ್ರಕಟಿಸು ಎಂದು ಅರ್ಥ. ಇದು ದೃಶ್ಯ ಮಾಧ್ಯಮವಾಗಿರಬಹುದು, ಶ್ರವ್ಯ ಮಾಧ್ಯಮವಾಗಿರಬಹುದು, ಉಭಯ ಮಾಧ್ಯಮವಾಗಿರಬಹುದು. ಆದರೆ ಇದಕ್ಕೂ 'ಪ್ರದರ್ಶನ ಸಿದ್ಧಾಂತ' ವೆಂದು ಬಳಸುವುದರಿಂದ ಅದು ಕೇವಲ ದೃಶ್ಯ ಮಾಧ್ಯಮಕ್ಕೆ ಸೀಮಿತಗೊಳ್ಳುತ್ತದೆ. ಏಕೆಂದರೆ ' ಪ್ರದರ್ಶನ' ಪದದಲ್ಲಿ 'ದೃಶ್ಯ'ದ ಅರ್ಥವಿದೆಯೇ ಹೊರತು ಶ್ರವ್ಯದ ಅರ್ಥವಿಲ್ಲ. ಉಭಯಾರ್ಥವಂತೂ ಹೊರಡುವುದೇ ಇಲ್ಲ. ಆದುದರಿಂದ 'ಪ್ರದರ್ಶನ ಸಿದ್ಧಾಂತ' ವೆಂಬ ಪದ ಅಸಮರ್ಪಕವೆನಿಸುತ್ತದೆ.

ಇದಕ್ಕೆ ಪರ್ಯಾಯವಾಗಿ ಕನ್ನಡದಲ್ಲಿ ಕೆಲವೊಮ್ಮೆ 'ಸಂದರ್ಭ ಸಿದ್ಧಾಂತ'ವೆಂಬ ಪದವನ್ನು ಬಳಸುತ್ತಾರೆ. ಇದು 'ದರ್ಶನ ಸಿದ್ಧಾಂತ'ಕ್ಕಿಂತ ಉತ್ತಮ ಪದವೆಂದೇ ಹೇಳಬೇಕು. ಒಂದು ಕ್ರಿಯೆಯನ್ನೋ, ಕಲೆಯನ್ನೋ ಅವುಗಳ ಸಂದರ್ಭಗಳಲ್ಲಿ ಇಟ್ಟು ಅಭ್ಯಸಿಸುವ ವಿಚಾರವನ್ನು ಇದು ಸಾರುತ್ತದೆ. 'ಸಂದರ್ಭ' ಎನ್ನುವುದು ಆ ಕ್ರಿಯೆ ಆಯಾ ಕಲೆಯ ಮಾಧ್ಯಮವನ್ನೂ ಒಳಗೊಳ್ಳುವುದರಿಂದ ಇದೇ ಸರಿಯಾದ ಪದವೆನ್ನಬೇಕಾಗುತ್ತದೆ.

ಕನ್ನಡಿಗರಿಗೆ ಈ ವಿಚಾರ ಗೊತ್ತಿರಲಿಲ್ಲವೇ? ಗೊತ್ತಿದ್ದರೆ ಅವರು ಇದಕ್ಕಾಗಿ ಬಳಸುತ್ತ ಬಂದ ಪದ ಯಾವುದು? ಎಂಬ ಬಗ್ಗೆ ಇಲ್ಲಿ ವಿಚಾರಿಸಬಹುದು. ಪ್ರಾಚೀನ ಕರ್ನಾಟಕ ನಿರಕ್ಷರಿಗಳ ನಾಡು. ಹೀಗಾಗಿ ಯಾವುದೇ ಕ್ರಿಯೆ, ಕಲೆ ಕಣ್ಣಿಗೆ ಕಾಣುವಂತಿರಬೇಕಾಗಿತ್ತು. ಕಿವಿಗೆ ಕೇಳಿಸುವಂತಿರಬೇಕಿತ್ತು. ಅಂದರೆ ದರ್ಶನ ಯೋಗ್ಯ, ಶ್ರವಣ ಯೋಗ್ಯವೆನಿಸಿದ್ದನ್ನು ಈ ಶತಮಾನದ ಆದಿಯಲ್ಲಿ ಸಾಕ್ಷರತೆ ಬೆಳೆದಂತೆ ಇವೆರಡೂ ವಾಚನಯೋಗ್ಯ ಕಲೆಗಳ ಸ್ಥಿತಿಗೆ ಇಳಿಯತೊಡಗಿದವು. ಹೀಗಾಗಿ ಒಂದು ಪಾತಳಿಯಲ್ಲಿ ಇದರಿಂದಾಗಿ ವರ್ತಮಾನ ಮಾತ್ರ ಇವುಗಳ ಸ್ಥಿತಿಯಾಗಿದ್ದಿತು. ಹುಟ್ಟುತ್ತಲೇ ಸಹೃದಯರಲ್ಲಿ ಲೀನವಾಗಿ ಬಿಡುವ, ಒಂದರ್ಥದಲ್ಲಿ ನಾಶವಾಗುವ ಸ್ಥಿತಿ ಅವುಗಳದಾಗಿದ್ದಿತು. ಇದರಿಂದಾಗಿ ಒಂದು ಸಲದ ಅಭಿವ್ಯಕ್ತಿ ಇನ್ನೊಂದು ಸಲದ ಅಭಿವ್ಯಕ್ತಿಗೆ ಭಿನ್ನವಾಗುತ್ತಿತ್ತು. ಪ್ರತಿಯೊಂದೂ ಒಂದು ಹೊಸ ಹೊಸ ಪ್ರಯೋಗವೆನಿಸಿದ್ದವು. ಇದನ್ನು ಕವಿರಾಜಮಾರ್ಗಕಾರನೇ ಶ್ರವ್ಯ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಗುರುತಿಸಿರುವನೆಂದು ಈ ಕೆಳಗಿನ ಪದ್ಯದಿಂದ ಗೊತ್ತಾಗುತ್ತದೆ.

ಪದನರಿದು ನುಡಿಯಲುಂ ನುಡಿ
ದುದನರಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್ ॥

ಈ ಪದ್ಯದಲ್ಲಿ ಬರುವ "ಕುರಿತೋದದೆಯುಂ" ಎಂಬುದು ನಿರಕ್ಷರಿಗಳಾದ ಕವಿಗಳನ್ನು ಸೂಚಿಸುತ್ತದೆ. ಇದರಿಂದ ಇದು 'ಲಿಖಿತ ಸಾಹಿತ್ಯದ ವ್ಯಕ್ತನೆ'ಯನ್ನಲ್ಲ, 'ಮೌಖಿಕ ಕಾವ್ಯದ ವ್ಯಕ್ತನೆ'ಯನ್ನು ಸೂಚಿಸುವ ಮಹತ್ವದ ಅಂಶವಾಗಿದೆ. ಇವರು ಸಂವಹನಿಸುವ ಕಲೆಯನ್ನು 'ಪ್ರಯೋಗ'ವೆಂಬ ಶಬ್ದದಿಂದ ಇಲ್ಲಿ ಸೂಚಿಸಲಾಗಿದೆ. ಶ್ರವ್ಯ ಪ್ರಕಾರಕ್ಕೆ ಅನ್ವಯಿಸಿ ಹೇಳಿದ ಇದನ್ನೇ 'ದೃಶ್ಯ' ಪ್ರಕಾರಕ್ಕೂ ಅನ್ವಯಿಸಿ ಅಲೇಖ ಕಲೆಯನ್ನು "ಪ್ರಯೋಗ" ಎಂದು ಕರೆಯಬಹುದಾಗಿದೆ. ಆದುದರಿಂದ ಪರಫಾರಮನ್ಸ್ ಥೇರಿಗೆ ಪರ್ಯಾಯವಾಗಿ ಪ್ರದರ್ಶನ ಸಿದ್ಧಾಂತ, ಸಂದರ್ಭ ಸಿದ್ಧಾಂತಗಳಿಗಿಂತ "ಪ್ರಯೋಗ ಸಿದ್ಧಾಂತ"ವೆಂದೇ ಕನ್ನಡಿಗರು ಇಟ್ಟುಕೊಳ್ಳಬಹುದಾಗಿದೆ. ಇದರಿಂದ ನಮ್ಮ ಪ್ರಾಚೀನರು ಅಲಿಖಿತ ಪರಂಪರೆಗೆ ಬಳಸುತ್ತಲಿದ್ದ 'ಪ್ರಯೋಗ' ಎಂಬ ಪದವನ್ನು ನಾವು ಬದುಕಿಸಿದಂತಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ ಒಂದು ಅಭಿನಯವಾಗಲೀ, ಒಂದು ಹಾಡುಗಾರಿಕೆಯಾಗಲೀ, ವಾದ್ಯಗಾರಿಕೆಯಾಗಲೀ ಪ್ರತೀ ಸಲವೂ ಪ್ರಯೋಗಾತ್ಮಕಗಳೇ. ನಿನ್ನೆ ವ್ಯಕ್ತಪಡಿಸಿದುದು ತದ್ರೂಪ. ಇಂದು ವ್ಯಕ್ತವಾಗುವುದಿಲ್ಲ. ಇಂದಿನದು ತದ್ರೂಪ ನಾಳೆ ವ್ಯಕ್ತವಾಗುವುದಿಲ್ಲ. ಆದುದರಿಂದ 'ಪ್ರಯೋಗ'ವೆಂಬುವುದು ಅರ್ಥವತ್ತಾದ ಪದವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ನಾಟಕವನ್ನು ೧೦೦ನೆಯ ಪ್ರಯೋಗವೆನ್ನಬೇಕು. ಸಿನಿಮಾವನ್ನು ೧೦೦ನೆಯ ಪ್ರದರ್ಶನವೆನ್ನಬೇಕು. ಆದರೆ ಇವುಗಳ ವ್ಯತ್ಯಾಸ ತಿಳಿಯದೇ ಎಷ್ಟೋ ಸಲ ನಾಟಕ ಪ್ರದರ್ಶನ, ಸಿನಿಮಾ ಪ್ರಯೋಗ ಎಂದೂ ತಪ್ಪು ಬಳಸುವುದನ್ನು ನಿಲ್ಲಿಸಬೇಕು.

ಹೀಗೆ ಸಾಹಿತ್ಯ "ಪ್ರಯೋಗ" ಧ್ವನಿರೂಪದಲ್ಲಿ ಧ್ವನಿರೂಪ ಸಾಹಿತ್ಯ ಸೃಷ್ಟಿಯಾಗಿ ಶ್ರವಣೇಂದ್ರಿಯ ಮೂಲಕ ಅನುಭವ ವೇದ್ಯಗೊಳ್ಳುವ ಅವಸ್ಥೆ ಅಸ್ತಿತ್ವದಲ್ಲಿದ್ದಿತು. ಮುಂದೆ ಅಕ್ಷರರೂಪಿ ಸಾಹಿತ್ಯ ಸೃಷ್ಟಿಯಾಗಿ ವಾಚನ ಮೂಲಕ ಅನುಭವ ವೇದ್ಯಗೊಳಿಸಿಕೊಳ್ಳುವ ಹೊಸ ದಾರಿಯೊಂದು ತೆರೆಯಿತು. ಆಗ ಕನ್ನಡಿಗರು ಮೊದಲಿನದನ್ನು ಹಾಡುಗಬ್ಬವೆಂದೂ ಆಮೇಲಿನದನ್ನು ಓದುಗಬ್ಬವೆಂದೂ ಕರೆದರು. ಈ ಎರಡೂ ಕವಲುಗಳು ನಮ್ಮಲ್ಲಿ ಮೊದಲಿನಿಂದಲೂ ಬೆಳೆದುಬಂದವು.

ಕಬ್ಬಿಗರೋದುಗಬ್ಬವ ಹಾಡುಗಬ್ಬವ
ಕಬ್ಬದೊಳೊರೆವರಿವೆರಡು
ಕಬ್ಬಿನಂತಿರಬೇಕು ಬಿದಿರಂತೆ ಇರಲು ಏ।
ಕಬ್ಬೆ ಹೇಳಲೆ ಸರಸತಿಯೆ।

ಎನ್ನುತ್ತಾನೆ ರತ್ನಾಕರ. ಇವೆರಡೂ ವಾಚನಲೋಪವಾಗಿದ್ದರೂ ಓದುಗಬ್ಬ ಶುದ್ಧ ಅಕ್ಷರ ಪಾತಳಿಯ ಸಾಹಿತ್ಯವಾದರೆ, ಹಾಡುಗಬ್ಬ ಅಕ್ಷರ ಪಾತಳಿಯದಾದರೂ ಧ್ವನ್ಯಂಶ ಉಳಿಸಿಕೊಂಡುದಾಗಿದೆ. ಒಂದು ವಾಚನ ಸಾಹಿತ್ಯವಾದರೆ ಇನ್ನೊಂದು ವಾಚನ ಶ್ರವಣಸಾಹಿತ್ಯವಾಗಿ ಮುಂದುವರೆಯಿತು. ದೇಶೀಯಲ್ಲಿಯೇ ಹರಿಶ್ಚಂದ್ರಕಾವ್ಯ ವಾಚನಸಾಹಿತ್ಯ, ಪ್ರಭುಲಿಂಗಲೀಲೆ ಶ್ರವಣಸಾಹಿತ್ಯ, ಕುಮಾರವ್ಯಾಸ ಭಾರತ ವಾಚನಸಾಹಿತ್ಯ, ಜೈಮಿನಿಭಾರತ ಶ್ರವಣಸಾಹಿತ್ಯವೆಂದು ಸುಲಭವಾಗಿ ಹೇಳಬಹುದು.

■■

ಆಕರ : ಮಾರ್ಗ ಸಂಪುಟ–೭

೪೪

ಯಾದಾಸ್ತು ಘಟ್ಟದ ಕೆಳಗಿನ ಭಾಷೆಗಳು

ಕರ್ನಲ್ ಮೆಕೆಂಝಿ ಸಂಗ್ರಹಿಸಿದ್ದ ಅಪಾರ ದಾಖಲೆ, ಶಾಸನ, ಸಾಹಿತ್ಯಕೃತಿ ಇತ್ಯಾದಿ ಸಾಮಗ್ರಿಯ ಬಹುಭಾಗ ಈಗ ಮದ್ರಾಸದ "ಓರಿಯಂಟಲ್ ಮ್ಯಾನ್ಯೂಸ್ಕ್ರಿಪ್ಟ್ ಲಾಯಿಬ್ರರಿ"ಯಲ್ಲಿ ಸುರಕ್ಷಿತವಾಗಿದೆ. ಈ ವೈವಿಧ್ಯಪೂರ್ಣ ಸಂಪತ್ತಿನ ಪ್ರಧಾನ ಭಾಗವಾದ ಇತಿಹಾಸಕ್ಕೆ ಸಂಬಂಧಪಟ್ಟ ಶಾಸನ, ಕೈಫಿಯತ್ತು, ಚರಿತ್ರೆ, ಸ್ಥಳಪುರಾಣ, ರಾಯರೇಖೆ, ಲೆಕ್ಕ, ಬಾಬು, ನಿರೂಪ, ಪತ್ರ, ವಂಶಾವಳಿ, ಸ್ಥಳಮಹಾತ್ಮೆ, ವೃತ್ತಾಂತ, ಭಟಾಂಗನಿ, ಬಖೈರು ಇತ್ಯಾದಿಗಳ ಸೂಚಿಯೆಂದೂ 'ಆ್ಯನ್ ಅಲ್ಫಾಬೆಟಿಕಲ್ ಇಂಡೆಕ್ಸ್ ಆಫ್ ಕನ್ನಡ ಮ್ಯಾನ್ಯೂಸ್ಕ್ರಿಪ್ಟ್ ಇನ್ ದಿ ಗವರ್ನ್‌ಮೆಂಟ್ ಮ್ಯಾನ್ಯೂಸ್ಕ್ರಿಪ್ಟ್ಸ್ ಲಾಯಬ್ರರಿ, ಮದ್ರಾಸ್ ' ಹೆಸರಿನಿಂದ ೧೯೫೨ರಲ್ಲಿ ಟಿ. ಚಂದ್ರಶೇಖರ ಅವರಿಂದ ಪ್ರಕಟವಾಗಿದೆ. ಈ ಸೂಚಿಯ ೬೨೩ನೆಯ ಕ್ರಮಸಂಖ್ಯೆಯ ಮುಂದೆ "ಘಟ್ಟದ ಕೆಳಗಣ ಕನ್ನಡ ವಿಶೇಷ ಭಾಷೆಗಳು" ಎಂಬ ಕಾಗದ ಪ್ರತಿಯನ್ನು ನಮೂದಿಸಲಾಗಿದೆ. ಇದು ಮೆಕೆಂಝಿ ಸಂಗ್ರಹದ ೩೫೩ನೆಯ ನಂಬರಿನ ಸಂಪುಟದಲ್ಲಿದೆ. ಈ ಸಂಪುಟದಿಂದ ಮರುನಕಲು ಮಾಡಿರುವ ಘಟ್ಟದ "ಲೋಕಲ್ ರಿಕಾರ್ಡ ವಾಲ್ಯೂಂ ೪೫ ಪುಟ ೪೨೨-೪೨೫"ದಿಂದ ಪ್ರಸ್ತುತ 'ಯಾದಾಸ್ತು ಘಟ್ಟದ ಕೆಳಗಿನ ಭಾಷೆಗಳು, ಕನ್ನಡಭಾಷೆಯಲ್ಲೂ ಕೂಡಿಯಿರುವುದರ ವಿವರ' ಎಂಬುದನ್ನು ಇಲ್ಲಿ ಪ್ರಕಟಿಸಲಾಗಿದೆ.

ವಿಶ್ವವಿದ್ಯಾನಿಲಯ ಧನಸಹಾಯದ ಆಯೋಗದ ನೆರವಿನಿಂದ ನಾನು ಕೈಗೆತ್ತಿಕೊಂಡ "ಕನ್ನಡ ಕೈಫಿಯತ್ತುಗಳು" ಎಂಬ ಯೋಜನೆಗೆ ಸಂಬಂಧಿಸಿದ ದಾಖಲೆಗಳೊಂದಿಗೆ ಈ ಹಸ್ತಪ್ರತಿಯನ್ನು ಬರೆದುಕೊಳ್ಳಲಾಯಿತು. ಘಟ್ಟದ ಕೆಳಗಿನ ಭಾಷೆಯಲ್ಲಿ ಬಳಕೆಯಲ್ಲಿದ್ದ ಕೆಲವು ಅಪೂರ್ವಪದಗಳಿಗೆ ಅರ್ಥ ಹೇಳುವುದು, ಕೊನೆಗೆ ಒಂದೆರಡು ಐತಿಹಾಸಿಕ ಮಾಹಿತಿಗಳನ್ನು ಸೂಚಿಸುವುದು ಇದರ ವಸ್ತು. ಇದನ್ನು ಬರೆದವರು ಕಾಮಪ್ಪ ಕರಣಿಕನೆಂದು ೨೨ನೆಯ ಚರಣದಿಂದ ಊಹಿಸಬಹುದಾಗಿದೆ. ಇಲ್ಲಿ ಬಳಕೆಯಾದುದು ೧೮ನೆಯ ಶತಮಾನದಲ್ಲಿ ಪ್ರಚಲಿತವಿದ್ದ ವ್ಯಾವಹಾರಿಕ ಭಾಷೆ. ಮುಸಲ್ಮಾನೀ ಪ್ರಭಾವಕ್ಕೆ ಗುರಿಯಾದ ಇದನ್ನು "ಇಸ್ಲಾಮೀ ಕನ್ನಡ" ಎಂದು ಕರೆಯಬಹುದು. ಈ ಭಾಷೆಯ ಸ್ವರೂಪ, ಬರವಣಿಗೆಯ ರೀತಿಗಳಿಗೆ ಧಕ್ಕೆ ಬರದಂತೆ ಇದನ್ನು ಇಲ್ಲಿ ಸಂಪಾದಿಸಲಾಗಿದೆ. ತಿದ್ದುಪಡಿಯನ್ನು ಚೌಕಕಂಸದಲ್ಲಿಯೂ ಅದರ ಮೂಲಸಂವಾದಿಯನ್ನು ಅಡಿಯಲ್ಲಿ 'ಮೂ' ಸಂಕೇತದಿಂದಲೂ ಸೂಚಿಸಲಾಗಿದೆ. ಸಂಪಾದಕನ ವಿವರಣೆಗಳನ್ನು ಅಡಿಯಲ್ಲಿ 'ಸಂ' ಸಂಕೇತದಿಂದ ಕೊಡಲಾಗಿದೆ. ಹಸ್ತಪ್ರತಿಯ ನೇರ ನಕಲನ್ನು ಇಲ್ಲಿ ನೋಡಬಹುದು.

ಯಾದಾಸ್ತು ಘಟ್ಟದ ಕೆಳಗಿನ ವಿಶೇಷ ಭಾಷೆಗಳು ಕನ್ನಡ ಭಾಷೆಯಲ್ಲಿ ಕೂಡಿಯಿರುವುದರ ವಿವರ

* ದೊಡ್ಡ ಕೆರೇಗೆ ಮರಗಾಯಂಬ ಹೆಸರು
* ಚಿಕ್ಕಕೊಣಕ್ಕೆ ಕೆರೆಯಂತ ಹೆಸರು.
* ಅರೆಕಲ್ಲು ಅಂಟೆ ತುರುಕರಾಳ್ಲುಭೂಮಿ.
* ಹೊಳೆವಳಗಿನ ಗಡೇಗೆ ಕುರ್‍ರ್ಯಿಯಂತ ಹೆಸರು.
* ಹೊಂಗೆಯೆಂದರೆ ಮೊಳಲ್ಲು.
* ಬೆಂಗೆರೆಯೆಂದರೆ ಸಮುದ್ರ.
* ಕುಳ ಕಡದವರು ಅಂದರೆ ಒಂದು ವಂಶ ನಿಃಸಂತಾನವಾದಕ್ಕೆ ಹೆಸರು.
* ಯಿರುಳು ತಪ್ಪಿದ್ದುಯಂದರೆ ವಿಧವಾವ್ಯಭಿಚಾರ ಹೆಸರು.
* ಹೊಲೆಜಾತಿಯಲ್ಲುವೊಂದು ಹೆಣ್ಣಿಗೆ ನಾಲ್ಕು ಮಂದಿ ಪರ್‍ಯಂತರ ಬಾಕುಡರುಯೆಂದು ಗಂಡರು ಆಗುತ್ತಾರೆ. ೧[1] ಹೊಲೆತಿಗೆ ಬಾಕಡೇರು, ಬತ್ತಾಡಾರು, ಮೇರರು ಯೀ ಮೂರು ಭೇದ.
* ರಾಜಿವಟಾಯಂದರೆ ನಿಯೋಗತನ.
* ಹಳೆಕೈಪ ಶಬ್ದ ತದ್ಭವವಾಗುವಾಗ್ಯೆ ಹಳಪೈಕಾಯಂತ ಹೆಸರು ಆಯಿತು.
* ಯಿವದಿರು ಯಿವರುಯೆಂಬ ಹೆಸರು.
* ಪಟ್ಟಡಿಯಂದರೆ ವಂಶಪರಂಪರೆ.
* ಕೊರಗದಲ್ಲಿ ಜಾತಿಭೇದ ೨ ಕೆ ವಿವರ:ಕೂಟ ಕೊರಗರು, ಸಪು ಕೊರಗರುಯಂದು ಉಭಯ ಜಾತಿಯರಡು. ಯೀ ಜಾತಿಯಲ್ಲು ಸತ್ತ, ಜೀವ ದನಗಳ ಕೊಂದು ಇದರಿಂದಾ ಜೀವಿಸುತ್ತಾರೆ. ಆ ಚರ್ಮವನ್ನು ಮಾರಿಕ್ಕೊಂಡು ಕಾಲಕ್ಷೇಪ ಮಾಡುತ್ತಾರೆ.
* ನೀರು ಮೊಗುವದುಯೆಂದರೆ ಗೂಡೆ ನೀರು ಯತ್ತುವದಕ್ಕೆ ಹೆಸರು.ಸಂಬಳಿಗೆಯಂದರೆ ಗೂಡಿಗೆ ಹೆಸರು.
* ಹೊಲೆಮರೆಯಂದರೆ ಹೊಲೇರಜಾತಿಯಲ್ಲಿ ಮದುವೆ ಹೆಸರು.
* ಮಂಡೆಹಣಯೆಂದರೆ ಹೆಗಲು ಬಾರಿಗೆ.
* ಕೀಳು ಕಿರಕಟ್ಟೆಯೆಂದರೆ ಸಣ್ಣ ಸಣ್ಣ ಹುಡುಗರು.
* ಗು....... ಸರಕುಯೆಂದರೆ ಹೊಲೇರ ಗಂಡಾ ಹೆಂಡತಿ ಮಕ್ಕಳು ಸಹಾವೊಂದು ಮನೆತನಕ್ಕೆ ಹೆಸರು.
* ಕೆಳಗದವರ ವಿಚಾರ ಶೃಂಗೇರಿ ಸೀಮೆ ತಿರ್ಥಳಿ ತಾಲೂಕುದಲ್ಲು ವಿಚಾರಿಸಬೇಕು. ......
* ಕಾಮಪ್ಪ ಕರಣಕರು, ಬಲೆ ತಾಲೂಕದ್ದು ಮಾಲೇರಜಾತಿ ರಿವಾಜ್ ಬ[ರಿ]ಯತಕ್ಕದ್ದು ಕಲ್ಮು[೧]
* ನವಾಯತಿ ಜಾತಿಯವರ ರಿವಾಜಿ[೨] ಬರುವದು.[೨]
* ಜನ್ನಾಯೆಂದರೆ ಭೂಮಿಮಾಲಿಕರು.
* ಬೇಳಾರಜಾತಿಯೆಂದರೆ ಹಸಲದಲ್ಲಿ ಬೇದು.
* ವೊಂದಡಿಯೆಂದರೆ ವೊಂದು ವಕ್ಕಲಿಗರಿಗೆ ಹೆಸರು.
* ಗೇಣಿ ಲಕ್ಕಿಯೆಂದರೆ ಅಕ್ಕಿಗುತ್ತಿಗೆ ನಿಷ್ಕರಷೆ.
* ಅವಡೆಯೆಂಬ ಧಾನ್ಯಕ್ಕೆ ರಾಜಮಾಹಾ.

---

೧. ಇಲ್ಲಿಗೆ ಒಂದು ವಿಷಯ ಮುಗಿಯಿತು ಎಂದು ಅರ್ಥ (ಸಂ.). ೨-೨ ಬರುವುದು=ಬರೆಯುವುದು (ಸಂ)

* ಸುತ್ತಿಗೆ ಮುಟ್ಟಿಗೆ ಪರ ಹವಾಲತಿ ತೆಗೆದುಕೊಳ್ಳುತ್ತ ಇರುವುದಕ್ಕೆ ಹೆಸರು.
* 'ಹಸರವಾಣಿ'ಯೆಂದರೆ ಕಾಯಿಪಲ್ಯೆದ ಹೆಸರು.
* ಕಾರ್ತಿಫಲವೆಂದರೆ ಕಾರ್ತೀಕ ಮಾಸಕ್ಕೆ ಬರುವ ಫಲಕ್ಕೆ ಹೆಸರು. ಹುಟುವಳಿ ೪೦.
* ಸುಲ್ಗಿಫಲಯೆಂದರೆ ಪುಷ್ಯಮಾಸಕ್ಕೆ ಸಹಾ ಬರುವ ಫಲ
* ಮಾಳಕಿ ಫಲವೆಂದರೆ ಜೇಷ್ಟಮಾಸಕ್ಕೆ ಕೊಯುವ ಫಲಕ್ಕೆ ಹೆಸರು.
* ಗೇಯೊದುಯಂದರೆ ವ್ಯವಸಾಯ ಮಾಡುವುದಕ್ಕೆ ಹೆಸರು.
* ಪಾಗಾರಯಂದರೆ ಗದೆ ಸುತ್ತಲು ಆದ ನಡುವೆ ಸುತ್ತಲು ಸಹಾ ಹಾಕುವ ಗೋಡೆ ಹಾಕುವ ವಿವರ.
* ಆಯ ದಾಯಂದರೆ: ಆಯಯಂದರೆ ಸಾಮ್ಯ ದಾಯಯಂದರೆ ಬೇಟೆ ವಗೈರೆರು ಯೇನುಯಿದ್ದಾಗ್ಯೂ ಯೀ ಮೂಲಿಗನ ಸ್ಥಳದಲ್ಲಿ ಬಂದರೆ ಅದರೊಳಗೆ ನಾಲ್ಕು ಮಟ್ಟಿನ ಪಾಲು, ಮಾಡುಕೊಳ್ಳುವಾಗ್ಯೆ ಸ್ಥಳದವಗೆ ಬಲ್ಲಿ ಬಾಗದ ಪಾಲು ಕೊಡುವದು ಅದು ದಾಯಯೆಂದು ಹೆಸರು.
* ಕಡ ಮೊದಲುಯಂದರೆ ಸರ್ಕಾರದಿಂದ ಕೊಡುವ ತಕಾವೆ ಹೆಸರು.
* ಯಜಮಾಡಿ ಹೊಳಿಯು ಮೂಲಿಕಗೆ ಹೋಗಬೇಕಾದಡೆ ದಾರಿ ಹೋಗುವ ಹೊಳಗೆ ಹೆಸರು.
* ಬಿರೆ ಅಡಕರ ಮಸ್ತಿಗಳು ಹೆಸರು ಅರ್ಭಕ ದಾರಿ ಕಾಯಂಬರು.
* ಕುಡ್ಡಿಯೆಂದರೆ ಆ ದೇವರ ಹೆಸರಿನಲ್ಲಿ ವೊಂದ ಸೊಪ್ಪಿಯ ತುಂಡು ಹಾಕುವುದಕ್ಕೆ ಹೆಸರು.
* ಧರ್ಮಸ್ಥಳವೆಂದರೆ ಉಡುಮಪುರವೆಂಬ ಹೆಸರು, ಶ್ರೀದೇವರ ಹೆಸರು ಮಂಜುನಾಥ ದೇವರು.
* ನಗರದ ಬೋದಿಬಸಪ್ಪನಾಯಕರಿಗೆ ಕಲಹಕೇತಿಗಳು ಬಂದು ದುರ್ಭೋದನವಂ ಮಾಡಿದರು. ಬ್ರಾಹ್ಮಣ ಭೋಜನ ಮಾಡಿದರೆ ವ್ಯರ್ಥ. ಜಂಗಮರಿಗೆ ಊಟ ಹಾಕಬೇಕು ಯಂತ ಹೇಳಿದಲ್ಲಿ ಅದೇ ಪ್ರಕಾರ ಮಾಡಿದ್ದು.
* ಬಲ್ಲಾಳರುಗೆ ಗಡೇರ ತೊಳಹಾರು ಯುದ್ದರ್ಕೆ ಮಾಗಣಿ ಮೂಲೆಗುತ್ತಿಗೆದಾರು ನಾಡಗೌಡರು ಉತ್ತರ ಮೂಡಲು ದೇಶದಲ್ಲು ಹೇಳುತ್ತಾರೆ.
* ಸಲವಿಟ್ಟದ್ದು ಜಪ್ತಿ ಮಾಡುವುದಕ್ಕೆ ಹೆಸರು.
* ಕಾಲು, ಕಾಟೆ, ಹೊಳೆಯು ಚರಕಲ್ಲು ಯಿಚೀಗೆ ಅದೆ.
* ಮಣಿಹಯಂದರೆ ಹಣಾಯತ್ತುವಗೆ ಹೆಸರು.
* ಉಗ್ರಾಣಿಗಳು ಯಂದರೆ ಹಳ್ಳಿ ಊಳಿಗದವರ ಹೆಸರು.........
* ಕಿಲ್ಲೇದ ಠಾಣೆದಾರುಯಂದರೆ ಕಿಲ್ಲೆದಾರಿಗೆ ಹೆಸರು.
* ಹೊಣೆಯೆಂದರೆ ಜಾಮೀನು ಹೆಸರು.
* ಹಂಗಾರದ ಗಿಡಾಯಂದರೆ ಹಾವಿವಾಣದ ಮರ.
* ಗದ್ಯಾಣಯೆಂದರೆ ವರಾಕ್ಕೆ ಹೆಸರು.

ಘಟ್ಟದ ಕೆಳಗಿನ ತಾಲ್ಲೂಕಿನಲ್ಲಿ ಪಟೇಲರು ಮೊಕರರು ಅದ್ದು ಶೋಭಕೃತು ಸಂವತ್ಸರದಲ್ಲು. ಟೀಪುಸುಲತಾನ ಕಾಲದಲ್ಲು ಗ್ರಾಮಕ್ಕೆ ವೊಬ್ಬ ಪಟೇಲನಾದ.

ತತ್ಪೂರ್ವದಲ್ಲಿ ಚಿಲ್ಲರೆ ವಕ್ಕಲುಗಳು ಯೆಂದರೆ ತಳವಾರು ಆಗಿಯಿತ್ತು. ಶಾನಭೋಗರುಯೆಂದರೆ ಬರಿಯುವವರು ಯಂತ ಹೆಸರು.

■■

ಆಕರ : ಮಾರ್ಗ ಸಂಪುಟ–೨

೪೫

ಸಂಶೋಧನೆಯ ಸ್ವರೂಪ

'ಸಂಶೋಧನೆ' ಎನ್ನುವುದು ಕಳೆದ ಶತಮಾನದಲ್ಲಿ ಕರ್ನಾಟಕವನ್ನು ಪ್ರವೇಶಿಸಿದ ಒಂದು ಹೊಸ ಶೈಕ್ಷಣಿಕ ಶಿಸ್ತು. ಇದು ಪಾಶ್ಚಾತ್ಯರ research ಎಂಬ ಚಟುವಟಿಕೆಗೆ ಸಮಾಂತರವಾಗಿ ನಾವು ನಡೆಸುತ್ತಲಿರುವ ಬೌದ್ಧಿಕ ಕ್ರಿಯೆಯಾಗಿದೆ,

ಸಂಶೋಧನೆ ಎರಡು ತೆರನಾಗಿದೆ. ಒಂದು : ಇದ್ದೂ ಕಣ್ಮರೆಯಾಗಿರುವ ಹಳೆಯದನ್ನು ಹುಡುಕುವುದು, ಭೂತಕಾಲಕ್ಕೆ ಸಂಬಂಧಿಸಿದುದು. ಇದು discovery. ಕಲೆ-ಸಂಸ್ಕೃತಿ ಕ್ಷೇತ್ರಕ್ಕೆ ಸಂಬಂಧಿಸಿದುದು. ಇನ್ನೊಂದು : ಈವರೆಗೆ ಇಲ್ಲದ ಹೊಸದನ್ನು ಹುಡುಕುವುದು, ಭವಿಷ್ಯತ್ಕಾಲಕ್ಕೆ ಸಂಬಂಧಿಸಿದುದು. ಇದು invention. ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದುದು. ಹೀಗೆ, ಶೋಧ ಕ್ರಿಯೆಯನ್ನು ಇಂಗ್ಲಿಷಿನಲ್ಲಿ discovery ಮತ್ತು invention ಪದಗಳಿಂದ ಬಿಡಿಸಿ ಹೇಳುತ್ತಾರೆ. ಕನ್ನಡದಲ್ಲಿ ಮಾತ್ರ ಈ ಎರಡೂ ಪ್ರಕ್ರಿಯೆಗಳಿಗೆ 'ಸಂಶೋಧನೆ' ಎಂಬ ಒಂದೇ ಪದವನ್ನು ಬಳಸುತ್ತಲಿರುವುದರಿಂದ ಈ ವಿಷಯದ ಬಗೆಗೆ ಒಂದಿಷ್ಟು ಗೊಂದಲ ಉಳಿದುಕೊಂಡಿದೆ. ಇದರ ಪರಿಹಾರಕ್ಕಾಗಿ ನಾವು ಇನ್ನು ಮುಂದೆ discoveryಗೆ ಪರ್ಯಾಯವಾಗಿ 'ಅನ್ವೇಷಣ'ವೆಂಬ ಹೊಸ ಪದವನ್ನು inventionಗೆ ಪರ್ಯಾಯವಾಗಿ 'ಆವಿಷ್ಕರಣ'ವೆಂಬ ಹೊಸ ಪದವನ್ನು ಕಟ್ಟುನಿಟ್ಟಾಗಿ ಬಳಸಬೇಕಾಗಿದೆ.

discovery ಪ್ರಕಾರದ ಹಿಂದೆಯೂ research ಇರುತ್ತದೆ. invention ಪ್ರಕಾರದ ಹಿಂದೆಯೂ research ಇರುತ್ತದೆ. ಆದುದರಿಂದ discovery ಮತ್ತು invention ಗಳಂತೆ research ಎಂಬುದು ಒಂದು ಸಂಶೋಧನ ಪ್ರಕಾರವಲ್ಲ. ಇವೆರಡರ ಹಿಂದೆ ನಡೆಯುವ ಒಂದು ಬೌದ್ಧಿಕ ಪ್ರಕ್ರಿಯೆಯಾಗಿದೆ.

ಕಲೆ ಸಾಹಿತ್ಯ ಸಂಸ್ಕೃತಿ ಕ್ಷೇತ್ರಗಳಲ್ಲಿ ಜರುಗುವ 'ಅನ್ವೇಷಣಾತ್ಮಕ ಸಂಶೋಧನೆ'ಯು ಆಕರಸಾಮಗ್ರಿಯನ್ನು ಅಪೇಕ್ಷಿಸುತ್ತದೆ. ಅದಕ್ಕಾಗಿಯೇ no source, no research ಎಂದು ಹೇಳುತ್ತಾರೆ. ಸಂಶೋಧಕನಾದವನು ಗತಕಾಲ ನಮಗಾಗಿ ಬಿಟ್ಟುಹೋಗಿರುವ ಆಕರ ಸಾಮಗ್ರಿಯನ್ನು ಮೊದಲು ಸಂಗ್ರಹಿಸಬೇಕಾಗುತ್ತಿದ್ದು, ಭಾರತದ ಮಟ್ಟಿಗೆ ಅವುಗಳ ಪ್ರಮಾಣ ಅಧಿಕವಾಗಿದ್ದರೂ ಪ್ರಾಮಾಣಿಕತೆ ಪ್ರಶ್ನಾರ್ಹವಾಗಿದೆ. ಏಕೆಂದರೆ, ಭಾರತೀಯರ ಧಾರ್ಮಿಕ ಮನಸ್ಸು ಕಾರಣವಾಗಿ ನಮ್ಮಲ್ಲಿ ಇತಿಹಾಸ

ಸಂಪ್ರದಾಯ ಗೌಣಸ್ಥಾನಕ್ಕೆ ಸರಿದು, ಪುರಾಣ ಸಂಪ್ರದಾಯ ಪ್ರಮುಖ ಸ್ಥಾನ ಪಡೆಯಿತು. ನಮ್ಮ ಕವಿಗಳು ಕೆಳದಿ ನೃಪವಿಜಯ, ಕುಮಾರರಾಮನ ಸಾಂಗತ್ಯದಂತಹ ಕಾವ್ಯಗಳನ್ನು ಬರೆಯಲು ಹೊರಟರೂ ಉತ್ಪ್ರೇಕ್ಷೆಯ ಕಾಟ ಅವರ ಬೆನ್ನುಬಿಡಲಿಲ್ಲ. ಹೀಗಾಗಿ, ನಮ್ಮ ಕೈಗೆ ಉಳಿದುಬಂದ ಆಕರಸಾಮಗ್ರಿಯನ್ನು ಕಣ್ಣು ಮುಚ್ಚಿ, ಸ್ವೀಕರಿಸಲು ಸಾಧ್ಯವಿಲ್ಲವಾಗಿದೆ. ಕಾಲಕ್ರಮೇಣ, ಈ ಸಾಮಗ್ರಿಯಲ್ಲಿ ಅರ್ಧದಷ್ಟು ಉಪೇಕ್ಷೆಗೆ ಗುರಿಯಾಗಿ ಕಳೆದೇ ಹೋಯಿತು. ಮಿಕ್ಕರ್ಧ ಸಾಮಗ್ರಿ ಹೊಣೆಗೇಡಿ ಕಿಡಿಗೇಡಿ ಜನವರ್ಗದಿಂದಾಗಿ ರೂಪವ್ಯತ್ಯಾಸ ಮಾಡಿಕೊಳ್ಳುತ್ತ ಸಾಗಿಬಂದಿತು. ಹೀಗಾಗಿ ಸಂಶೋಧಕನಾದವನು ತನ್ನ ಕೈಗೆ ಬಂದ ಆಕರ ಸಾಮಗ್ರಿಯಲ್ಲಿ ಸತ್ಯಾಸತ್ಯತೆ ಎಷ್ಟು? ಪೂರ್ಣಾಪೂರ್ಣತೆ ಎಷ್ಟು? ಎಂಬುದನ್ನು ಮೊದಲು ಶೋಧಿಸಬೇಕಾಗುತ್ತದೆ. ಅಂದರೆ ಮೊದಲನೆಯ ಹಂತದಲ್ಲಿ ಆಕರವನ್ನು ಶೋಧಿಸುವುದು, ಎರಡನೆಯ ಹಂತದಲ್ಲಿ ಶೋಧಿತ ಆಕರವನ್ನು ಪರೀಕ್ಷಿಸುವುದು, ಮೂರನೆಯ ಹಂತದಲ್ಲಿ ಈ ಪರೀಕ್ಷಿತ ಆಕರಗಳ ಸಹಾಯದಿಂದ ಸತ್ಯವನ್ನು ಕಂಡುಹಿಡಿಯುವುದು ಹೀಗೆ ಮೂರು ನೆಲೆಗಳಲ್ಲಿ ಸಂಶೋಧನೆ ಸಾಗಬೇಕಾಗುತ್ತದೆ.

ಸಂಶೋಧಕನಾದವನು ಶೋಧಿಸಬೇಕಾದ ಆಕರಗಳು ನಾಲ್ಕು ಬಗೆಯಾಗಿವೆ. ವಸ್ತುಸಾಮಗ್ರಿ, ಭಾಷಾಸಾಮಗ್ರಿ, ಕ್ರಿಯಾಸಾಮಗ್ರಿ ಮತ್ತು ಜ್ಞಾನಸಾಮಗ್ರಿ, ಇವು ಒಂದೇ ಸತ್ಯದ ಪರ್ಯಾಯ ರೂಪಗಳಾಗಿವೆ. ಕರ್ನಾಟಕಕ್ಕೆ ಬಂದರೆ ಭೂಮಿಯ ಮೇಲೆ ಮತ್ತು ಒಳಗೆ ಸಿಗುವ "ವಸ್ತು ಸಾಮಗ್ರಿ" ವಿಪುಲ ಪ್ರಮಾಣದಲ್ಲಿದೆ. "ಭಾಷಾಸಾಮಗ್ರಿ"ಗೆ ಸಂಬಂಧಪಟ್ಟ ಲಿಖಿತಸಾಮಗ್ರಿಯಲ್ಲಿ ದಾಖಲು ಸಾಮಗ್ರಿ ಮತ್ತು ಸಾಹಿತ್ಯ ಸಾಮಗ್ರಿಯೂ ತಕ್ಕಮಟ್ಟಿಗೆ ಸಿಗುತ್ತದೆ. ಇತ್ತೀಚೆಗೆ ಜಾನಪದದ ಹೆಸರಿನಲ್ಲಿ ಮೌಖಿಕ ಸಾಮಗ್ರಿಯ ಶೋಧ ನಡೆದು, ಆಕರಗಳ ಕ್ಷೇತ್ರ ವಿಸ್ತಾರಗೊಂಡಿದೆ. ಜನರ ದೈನಂದಿನ ಕ್ರಿಯೆ, ಆಚರಣಾತ್ಮಕ ಕ್ರಿಯೆಗಳು "ಕ್ರಿಯಾಸಾಮಗ್ರಿ"ಗಳಾದರೆ ಕಾಯಕ ದಾಸೋಹಗಳಂಥ ವಿಚಾರಗಳೂ ನಂಬಿಕೆಗಳೂ "ಜ್ಞಾನಸಾಮಗ್ರಿ"ಯೆನಿಸುತ್ತವೆ. ಈ ನಾಲ್ಕು ಬಗೆಯ ಆಕರಸಾಮಗ್ರಿಯನ್ನು ಸಂಶೋಧಕನಾದವನು ಕ್ಷೇತ್ರಕಾರ್ಯ, ಗ್ರಂಥಾಲಯಗಳಿಂದ ಸಂಗ್ರಹಿಸಿಕೊಳ್ಳಬೇಕಾಗುತ್ತದೆ.

ಹೀಗೆ, ಆಕರಗಳನ್ನು ಸಂಗ್ರಹಿಸಿಕೊಂಡು ಕಾರ್ಯಪ್ರವೃತ್ತನಾಗುವ ಸಂಶೋಧಕನಿಗೆ ಕೆಲವು ಮೂಲಭೂತ ಅರ್ಹತೆಗಳು ಅವಶ್ಯ. ಅವು: ಕುತೂಹಲ, ಪ್ರಾಮಾಣಿಕತೆ, ಧೈರ್ಯ, ವ್ಯುತ್ಪತ್ತಿ ಪ್ರತಿಭೆ ಮತ್ತು ಕ್ರಿಯಾಶೀಲತೆ. ಇವುಗಳಲ್ಲಿ ನಿರಂತರ ಜಾಗೃತವಾಗಿರಬೇಕಾದುದು ಕುತೂಹಲ, ಜನತೆಯ ಬದುಕನ್ನು ಕುತೂಹಲದಿಂದ ನೋಡುವ , ಬರವಣಿಗೆಯನ್ನು ಕುತೂಹಲದಿಂದ ಓದುವ ಒಂದು ವಿಶಿಷ್ಟ ಮನೋಧರ್ಮವನ್ನು ಆತ ಬೆಳೆಸಿಕೊಂಡಿರಬೇಕಾಗುತ್ತದೆ. ಸಾಮಾನ್ಯವಾಗಿ ಕೇಳಿಬರುವ "ದೇವರು ದಿಂಡರು" ಎಂಬ ಜೋಡುನುಡಿಯಲ್ಲಿಯ 'ದಿಂಡರು" ಪದಕ್ಕೆ ಏನು ಅರ್ಥ? "ಗುಡ್ಡ ಸುತ್ತಿ ಮೈಲಾರಕ್ಕೆ ಹೋಗು" ಎಂಬ ಗಾದೆ ಮಾತು, ಗುಡ್ಡ ಸುತ್ತಿ ಹೋಗುವ ಯಾವ ಮೈಲಾರ ಕ್ಷೇತ್ರವನ್ನು ಸೂಚಿಸುತ್ತದೆ? ಎಂಬುವಂಥ ಕುತೂಹಲಗಳನ್ನು ಬೆಳೆಸಿಕೊಂಡು ಅವುಗಳ ಬೆನ್ನುಹತ್ತಿ ಅವನು ಅತ್ಯಂತಿಕ ಸತ್ಯವನ್ನು ಶೋಧಿಸಬೇಕಾಗುತ್ತದೆ.

"ಸತ್ಯವನ್ನು ಹೇಳುತ್ತೇನೆ, ಸತ್ಯವನ್ನಲ್ಲದೆ ಬೇರೆ ಏನನ್ನೂ ಹೇಳುವುದಿಲ್ಲ" ಎಂಬ ಪ್ರಾಮಾಣಿಕತೆ ಅವನ ಇನ್ನೊಂದು ಲಕ್ಷಣವಾಗಿದೆ. Past is Perfect ಎಂದು ಹೇಳುವುದುಂಟು. ಹೀಗೆ ನಿರ್ದಿಷ್ಟಗೊಂಡ ಸತ್ಯವನ್ನು ಹುಡುಕಿ ಹೇಳುವಲ್ಲಿ ಅವನು ನೂರಕ್ಕೆ ನೂರು ಪ್ರಾಮಾಣಿಕತೆಯನ್ನು

ಮೆರೆಯಬೇಕು. ಸಂಶೋಧನೆಯ ಸಂಪರ್ಕ ಕಾರಣವಾಗಿ ಅವನಲ್ಲಿ ಗಟ್ಟಿಗೊಳ್ಳುತ್ತ ಬಂದ ಈ ಪ್ರಾಮಾಣಿಕ ಪ್ರಜ್ಞೆ, ನಿಜ ಜೀವನದಲ್ಲೂ ಅವನನ್ನು ಪ್ರಾಮಾಣಿಕನನ್ನಾಗಿ ರೂಪಿಸುತ್ತದೆ. ಹೀಗೆ, ನಿತ್ಯದ ಬದುಕು ಮತ್ತು ಬರಹದ ಬದುಕುಗಳಲ್ಲಿ ಪ್ರಾಮಾಣಿಕವಾಗಿ ಆಕಾರ ಪಡೆದ ಸಂಶೋಧಕ ಲೋಕವಿರೋಧಿಯಾಗಿ ಬಾಳಬೇಕಾದುದು ಸಹಜವಾಗಿದೆ.

ಪ್ರಾಮಾಣಿಕತೆ ತೀಕ್ಷ್ಣವಾಗಿದ್ದಷ್ಟೂ ಸಂಶೋಧನೆಯು ಪರಿಸರಕ್ಕೆ ಹೆಚ್ಚು ಕಹಿಯೆನಿಸುತ್ತದೆ. ಹೀಗಿದ್ದೂ, ಅದನ್ನು ಪ್ರಕಟಿಸುವ ಧೈರ್ಯ ಅವನಲ್ಲಿರಬೇಕಾದ ಇನ್ನೊಂದು ಲಕ್ಷಣವಾಗಿದೆ. ಕಂಡ ಸತ್ಯವನ್ನು ಖಂಡಿತವಾಗಿ ಹೇಳಿ ಸಿಲುಬೆಗೆ ಗುರಿಯಾದ, ಮರಣದಂಡನೆಗೆ ತುತ್ತಾದ, ವಿಷಪ್ರಾಶನಕ್ಕೆ ಈಡಾದ ಮಹಾತ್ಮರು ಸಂಶೋಧಕನ ಧೈರ್ಯಕ್ಕೆ ಶಾಶ್ವತ ನಿದರ್ಶನವೆನಿಸಿದ್ದಾರೆ.

ಆಕರ ಸಾಮಗ್ರಿ ಅಧಿಕವಾಗಿದ್ದಷ್ಟೂ ಸಂಶೋಧನೆ ಸಬಲವಾಗುತ್ತ ಹೋಗುತ್ತದೆ. ಆದುದರಿಂದ ಸಂಶೋಧಕನಾದವನ ವ್ಯಾಸಂಗ ತುಂಬ ವಿಸ್ತಾರವೂ ವೈವಿಧ್ಯಪೂರ್ಣವೂ ಆಗಿರಬೇಕಾಗುತ್ತದೆ. ಇದನ್ನೇ ವ್ಯುತ್ಪತ್ತಿ ಎಂದು ಕರೆಯುತ್ತಾರೆ.

ಕವಿಗೆ ಇರುವಂತೆ ಸಂಶೋಧಕನಿಗೂ ಕಾಣುವ ಪ್ರತಿಭೆಯಿರಬೇಕಾಗುತ್ತದೆ. ಕವಿಯಲ್ಲಿ ಅದು 'ಮೂಲ ಕಲ್ಪನೆ'ಯ ರೂಪದಲ್ಲಿದ್ದರೆ, ಸಂಶೋಧಕನಲ್ಲಿ 'ಮೂಲ ಊಹೆ'ಯ ರೂಪದಲ್ಲಿರುತ್ತದೆ. ಹೀಗೆ, ಕಂಡ ಸತ್ಯವನ್ನು ಕವಿಯಾದವನು ವಾಚ್ಯ, ಲಕ್ಷ್ಯ, ವ್ಯಂಗ್ಯ ಪಾತಳಿಗಳ ಭಾಷೆಯಲ್ಲಿ ಅಭಿವ್ಯಕ್ತಗೊಳಿಸಿದರೆ ಸಂಶೋಧಕನಾದವನು ವಾಚ್ಯಪಾತಳಿಯ ಭಾಷೆಯಲ್ಲಿ ಅಭಿವ್ಯಕ್ತಗೊಳಿಸುತ್ತಾನೆ. ಇದರಿಂದಾಗಿ ಕವಿಯ ರಚನೆಯು ಸೃಜನ ಪ್ರತಿಭೆಯಲ್ಲಿ ಬೆಳೆದರೆ, ಸಂಶೋಧಕನ ರಚನೆಯು ಸಂಯೋಜನ ಪ್ರತಿಭೆಯಲ್ಲಿ ಬೆಳೆಯುತ್ತದೆ.

ಕ್ರಿಯಾಶೀಲತೆ ಸಂಶೋಧಕನಲ್ಲಿ ಇರಬೇಕಾದ ಇನ್ನೊಂದು ಮುಖ್ಯ ಗುಣ. ಇದು ಅಧಿಕವಾಗಿದ್ದಷ್ಟೂ ಅವನ ಸಂಶೋಧನ ಪ್ರಜ್ಞೆ ಹರಿತವಾಗುತ್ತ ಹೋಗುತ್ತದೆ. ಸಂಶೋಧನೆಯ ಹೊಸ ಹೊಸ ಒಳನೋಟಗಳು ಅವನಿಗೆ ಕಾಣಿಸುತ್ತ ಹೋಗುತ್ತವೆ.

ಹೀಗೆ, ವಿಪುಲ ಆಕರಸಾಮಗ್ರಿಯನ್ನು ಬಳಸಿಕೊಂಡು, ವಿಶಿಷ್ಟ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಮುನ್ನಡೆಯುವ ಸಂಶೋಧಕ ವಿಶ್ಲೇಷಣಾತ್ಮಕ, ವ್ಯಾಖ್ಯಾನಾತ್ಮಕ ಹಂತಗಳಲ್ಲಿ ಸಂಶೋಧನಕ್ರಿಯೆಯನ್ನು ಪೂರೈಸಬೇಕಾಗುತ್ತದೆ. ಇವುಗಳಲ್ಲಿ ವಿಶ್ಲೇಷಣಾತ್ಮಕ ಸಂಶೋಧನೆಯು ರೂಪನಿಷ್ಠವಾಗಿದ್ದು, fact finding ಇದರ ಗುರಿಯಾಗಿದೆ. ಇಲ್ಲಿ ಆಕರಗಳನ್ನು ಸಂವೇದನಾರಹಿತವಾಗಿ ಬಳಸಿಕೊಂಡು ಫಲಿತಗಳನ್ನು ಪ್ರಕಟಿಸಲಾಗುತ್ತದೆ. ಇಲ್ಲಿಗೇ ನಿಲ್ಲದೆ ಆಕರಗಳನ್ನು ಸಂವೇದನಾಸಹಿತವಾಗಿ ಬಳಸಿಕೊಂಡು ಫಲಿತಗಳನ್ನು ಪ್ರಕಟಿಸುವುದೇ ವ್ಯಾಖ್ಯಾನಾತ್ಮಕ ಸಂಶೋಧನೆಯಾಗಿದ್ದು, thought finding ಇದರ ಗುರಿಯಾಗಿದೆ. ಸಂಶೋಧಕ ಹೆಚ್ಚಿನದಾಗಿ ತನ್ನ ಚಿಂತನವನ್ನೂ ಆಕರದಂತೆ ಬಳಸುವುದರಿಂದ ಈ ವ್ಯಾಖ್ಯಾನಾತ್ಮಕ ಸಂಶೋಧನೆಗೆ ಒಂದು ಬಗೆಯ ಚಲನಶೀಲತೆ ಪ್ರಾಪ್ತವಾಗುತ್ತದೆ. ವಿಶ್ಲೇಷಣೆ ಬೇರೆ, ವ್ಯಾಖ್ಯಾನ ಬೇರೆ; ಮೊದಲನೆಯದು ವಸ್ತುನಿಷ್ಠವಾಗಿದ್ದು ಎರಡನೆಯದು ಹೆಚ್ಚಿನದಾಗಿ ವ್ಯಕ್ತಿನಿಷ್ಠತೆಯನ್ನೂ ಒಳಗೊಳ್ಳುತ್ತದೆ. ಹೀಗಾಗಿ, ವಿಶ್ಲೇಷಣಾತ್ಮಕ ಸಂಶೋಧನೆ ಕೆಲವೊಮ್ಮೆ ವಿಮರ್ಶೆಯಾಗಿ ರೂಪುಗೊಳ್ಳುತ್ತದೆ. ಕರ್ನಾಟಕದಲ್ಲಿ ಇಂದು ಈ ಬಗೆಯ ಸಂಶೋಧನೆ ಬಿಚ್ಚಿಕೊಳ್ಳುತ್ತಲಿದ್ದು, ಇದು ಸಂಶೋಧನೆಯೋ ವಿಮರ್ಶೆಯೋ ಎಂಬ ಅನುಮಾನವನ್ನು ಹುಟ್ಟಿಸುತ್ತದೆ.

ಸಂಶೋಧನೆ ಮತ್ತು ವಿಮರ್ಶೆಗಳು ಅಂತಿಮ ಘಟ್ಟದಲ್ಲಿ ಒಂದೇಯಾಗಿವೆ ಎಂಬ ಸತ್ಯವನ್ನು ಇದು ಸ್ಪಷ್ಟಪಡಿಸುತ್ತದೆ.

'ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ' ಎಂದು ಹೇಳುತ್ತಾರೆ ಬಸವಣ್ಣನವರು. ನಿಜವಾದ ಸಂಶೋಧಕನಿಗೆ ಈ ಮಾತು ಮಾರ್ಗದರ್ಶಿಯಾಗಿದೆ. ಅಂದರೆ, ಆತ ಸತ್ಯಕ್ಕೆ ಕೇಡು ತಟ್ಟದಂತೆ, ತನ್ನ ಸ್ವಾತಂತ್ರ್ಯಕ್ಕೆ ಭಂಗ ಬರದಂತೆ ಸಂಶೋಧನವ್ರತವನ್ನು ಮುಂದುವರಿಸಬೇಕು. ಗತಿಸಿದ ಪರಂಪರೆಯ ಪ್ರಕಟಣೆಯ ಹೊರೆ ತನ್ನ ಮೇಲಿದೆ ಎಂಬ ಎಚ್ಚರ ಮನೆಮಾಡಿರಬೇಕು. ಪರಂಪರೆಯನ್ನು ವ್ಯತ್ಯಸ್ತಗೊಳಿಸುವ, ಮುಚ್ಚಿಹಾಕುವ ಪಾಪಕಾರ್ಯ ಅವನ ಕೈಯಿಂದ ಜರುಗಬಾರದು. ಆದುದರಿಂದ, ಆತ ಆಕರಸಾಮಗ್ರಿಯನ್ನು ಅವಲಂಬಿಸಿ ಸತ್ಯವನ್ನು, ಅದು ಸಾಧ್ಯವಾಗದಿದ್ದರೆ, ಸಂಭಾವ್ಯತೆಯನ್ನು ಸ್ಥಾಪಿಸಬೇಕಾಗುತ್ತದೆ. ಮುಂದಿನವರು ಈ ಸಂಭಾವ್ಯತೆಯನ್ನು ಹೊಸ ಆಕರಗಳಿಂದ ಸತ್ಯಗೊಳಿಸಬಹುದಾಗಿದೆ. ಅದಕ್ಕಾಗಿಯೇ "ಸಂಶೋಧನೆಯೆನ್ನುವುದು ಅಲ್ಪವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮದೆಡೆಗೆ ಸಾಗುವ ಕ್ರಿಯೆಯಾಗಿದೆ" ಎಂದು ಹೇಳುವುದು.

ಸಂಶೋಧನೆಯ ಹಾದಿಯಲ್ಲಿ ಅನೇಕ ಪ್ರಕಾರಗಳಿದ್ದರೂ ಗುರಿ ಒಂದೇ. ಅದು ಸತ್ಯಶೋಧ. ವಿದ್ವಾಂಸರು ಆ ದಾರಿಗಳನ್ನು ವಿಷಯನಿಷ್ಠ, ಉದ್ದೇಶನಿಷ್ಠ, ವಿಧಾನನಿಷ್ಠ, ಸ್ವರೂಪನಿಷ್ಠ, ಆನ್ವಯಿಕ, ಬಹುಶಿಸ್ತೀಯ, ಸಂಖ್ಯಾನಿಷ್ಠ, ಮಾದರಿನಿಷ್ಠ, ಘಟಕನಿಷ್ಠ ಮತ್ತು ಸಂಸ್ಕೃತಿನಿಷ್ಠವೆಂದು ಬಿಡಿಸಿಹೇಳಿದ್ದಾರೆ.

ಸಂಶೋಧನೆಯೆನ್ನುವುದು ಆಂಗ್ಲ ವಿದ್ವಾಂಸರು ನಮಗೆ ತೋರಿಸಿಕೊಟ್ಟ ಹೊಸ ಶೈಕ್ಷಣಿಕ ಶಿಸ್ತು. ಪ್ರಾರಂಭದಲ್ಲಿ Oriental Studies ಅಂದರೆ ಪ್ರಾಚ್ಯ ಸಂಶೋಧನೆ– ಹೆಸರಿನಲ್ಲಿ ಪ್ರಾರಂಭವಾದ ಈ ಕ್ರಿಯೆಯು ಆಕರಗಳ ಶೋಧ, ಆಮೇಲೆ ಆಕರಗಳ ವಿಶ್ಲೇಷಣಾತ್ಮಕ ಶೋಧ, ಕೊನೆಗೆ ಆಕರಗಳ ವ್ಯಾಖ್ಯಾನಾತ್ಮಕ ಶೋಧಗಳೆಂಬ ಘಟ್ಟಗಳಲ್ಲಿ ಸಾಗಿ ಬಂದಿದೆ. ಈ ಸಂಶೋಧನೆಯ ಮುಖ್ಯ ಅಂಗ ಪಿಎಚ್.ಡಿ. ಪ್ರಬಂಧಗಳ ಬರಬವಣಿಗೆ, ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಪಿಎಚ್.ಡಿ ಪ್ರಬಂಧಗಳ ಬರವಣಿಗೆ. ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಪಿಎಚ್.ಡಿ. ಅಧ್ಯಯನ ಮೊದಲು ಪ್ರಾರಂಭವಾದುದು ದೂರದ ಲಂಡನ್ ವಿಶ್ವವಿದ್ಯಾಲಯದಲ್ಲಿ. ಇಂಗ್ಲಿಷ್ ಮಾಧ್ಯಮದ ಮೂಲಕ ಸುಮಾರು ೬೫ ವರ್ಷಗಳಷ್ಟು ಹಿಂದೆ, ಅಂದರೆ ೧೯೩೦ರಲ್ಲಿ. ಲಂಡನ್ ವಿಶ್ವವಿದ್ಯಾನಿಲಯದಲ್ಲಿ, ಎಲ್. ಟಿ. ಬಾರ್ನೆಟ್ ಅವರ ಮಾರ್ಗದರ್ಶನದಲ್ಲಿ ಡಾ. ಎಸ್. ಸಿ. ನಂದೀಮಠ ಅವರು ಬರೆದು ಪದವಿ ಪಡೆದುದೇ ಕರ್ನಾಟಕದ ಪ್ರಥಮ ಪಿಎಚ್.ಡಿ. ಪ್ರಬಂಧವೆಂದು ತೋರುತ್ತದೆ. ಲಂಡನ್ ವಿಶ್ವವಿದ್ಯಾಲಯದ ಬಳಿಕ ಈ ಅಧ್ಯಯನ ಆರಂಭವಾದುದು ಮುಂಬೈ ವಿಶ್ವವಿದ್ಯಾಲಯದಲ್ಲಿ, ಕನ್ನಡ ಮಾಧ್ಯಮದ ಮೂಲಕ ಆರ್. ಎಸ್. ಪಂಚಮುಖಿ ಅವರ ಮಾರ್ಗದರ್ಶನದಲ್ಲಿ ಡಾ. ಎ.ಟಿ. ಪಾಟೀಲ ಅವರು ೧೯೪೭ ರಲ್ಲಿ ಪೂರೈಸಿದುದೇ ಈ ವಿಶ್ವವಿದ್ಯಾಲಯದ ಮೊದಲ ಪಿಎಚ್.ಡಿ. ಪ್ರಬಂಧವಾಗಿದೆ. ಮುಂಬೈ ವಿಶ್ವವಿದ್ಯಾಲಯದ ತರುವಾಯ ಈ ಅಧ್ಯಯನ ಕರ್ನಾಟಕದಲ್ಲಿ ಪ್ರಾರಂಭವಾಯಿತು. ಈ ಪ್ರಾಂತದಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವೇ ಮೊದಲು ಪಿಎಚ್.ಡಿ. ಪದವಿ ನೀಡಿದ್ದು. ಅದನ್ನು ಪಡೆದ ಕೀರ್ತಿ ಪ್ರೊ. ಕುಂದಣಗಾರರ ಮಾರ್ಗದರ್ಶನದಲ್ಲಿ ೧೯೫೫ ರಲ್ಲಿ ಜಾನಪದವನ್ನು ಕುರಿತು ಅಧ್ಯಯನ ಮಾಡಿದ ಡಾ. ಬಿ. ಎಸ್. ಗದ್ದಗಿಮಠ ಅವರಿಗೆ ಸಲ್ಲುತ್ತದೆ. ಆಮೇಲೆ ಕರ್ನಾಟಕದ ಒಳಹೊರಗಿನ ವಿಶ್ವವಿದ್ಯಾಲಯಗಳ ಮೂಲಕ ೩೦೦ ರಷ್ಟು ಪಿಎಚ್.ಡಿ. ಪ್ರಬಂಧಗಳು ಹೊರಬಂದಿವೆ. ಸಂಖ್ಯೆಯೇನೋ ವಿಪುಲವಾಗಿದೆ. ಸತ್ವ ಮಾತ್ರ

ಸಮಾಧಾನಕರವಾಗಿಲ್ಲ. ಕೇವಲ ನಾಲ್ಕೈದು ಕ್ಷೇತ್ರಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಳ್ಳುವುದು, ಮಾರ್ಗದರ್ಶಕನಾಗಲೀ ವಿದ್ಯಾರ್ಥಿಯಾಗಲೀ ಈ ಅಧ್ಯಯನವನ್ನು ಗಂಭೀರವಾಗಿ ಪರಿಗಣಿಸದಿರುವುದು ಇದಕ್ಕೆ ಕಾರಣವಾಗಿದೆ. ಹೀಗಾಗಿ, ಸಂಶೋಧನೆಯೆಂಬ ವಿದ್ಯಾವ್ಯಾಸಂಗವನ್ನು ಬದುಕಿನ ಭಾಗವಾಗಿ ತೆಗೆದುಕೊಳ್ಳುವ ಅಭ್ಯಾಸಿಗಳ ಸಂಖ್ಯೆ ದಿನದಿಂದ ದಿನಕ್ಕೆ ಕರ್ನಾಟಕದಲ್ಲಿ ಕಡಿಮೆಯಾಗುತ್ತಲಿದೆ. ಇದಕ್ಕೆ ಕಾರಣ, ಸಂಶೋಧನೆ ಅನಾಕರ್ಷವಾಗುತ್ತಲಿರುವುದು ಮತ್ತು ಲೌಕಿಕವಾಗಿ ಅಪ್ರಯೋಜಕ ಸ್ಥಿತಿಗ ತಳ್ಳಲ್ಪಟ್ಟಿರುವುದು. ಈ ಎರಡು ನೆಲೆಗಳಲ್ಲಿ ಪ್ರಗತಿ ಸಾಧಿಸಿದರೆ ಮಾತ್ರ ಸಂಶೋಧನೆಯು ವಿಮರ್ಶನ ಮತ್ತು ಸೃಜನ ಸಾಹಿತ್ಯಗಳಂತೆ ಗರಿ ಬಿಚ್ಚಿ ಬೆಳೆಯಬಹುದಾಗಿದೆ. ಸಂಶೋಧನೆಯನ್ನು ಆಕರ್ಷಕಗೊಳಿಸುವುದೆಂದರೆ ಅದರ ಭಾಷೆಯಲ್ಲಿ, ವಸ್ತು ನಿರ್ವಹಣೆಯಲ್ಲಿ, ವಸ್ತುವಿನ ಆಯ್ಕೆಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡುವುದು. ಇದು ಹಲವು ಜನರ ಹಲವು ಬಗೆಯ ಪ್ರಯತ್ನಗಳಿಂದ ಮೂಡಿ ಬರುವ ದಾರಿಯಾಗಿದೆ. ಸಂಶೋಧಕರ ಸಂಖ್ಯಾಪ್ರಮಾಣವೇ ಕಡಿಮೆಯಾಗಿರುವಾಗ ಇಂಥ ದಾರಿ ಕರ್ನಾಟಕದಲ್ಲಿ ಮೂಡಿಬರುವ ಬಗ್ಗೆ ಇಂದು ಅನುಮಾನಗಳಿವೆ.

ಸಂಶೋಧನ ಕ್ಷೇತ್ರ ಇಂದು ಬಡವಾಗುತ್ತ ನಡೆದಿದೆ. ಈ ದುರಂತದಿಂದ ಪ್ರಸ್ತುತ ಕ್ಷೇತ್ರವನ್ನು ಪಾರುಮಾಡುವುದೆಂದರೆ ಸಂಶೋಧಕರಿಗೂ ಸೃಜನ-ವಿಮರ್ಶನ ಸಾಹಿತಿಗಳಂತೆ ಸ್ಥಾನಗೌರವ, ಹುದ್ದೆಗಳನ್ನು ಒದಗಿಸಿಕೊಡುವುದು; ಸಂಶೋಧನ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗಗಳು ಉದ್ಭವಿಸುವ ವಾತಾವರಣ ಕಲ್ಪಿಸುವುದು. ಆಗ ಸಂಶೋಧಕ ಬದುಕಿ, ಸಂಶೋಧನೆ ಬೆಳೆಯುತ್ತದೆ. ಪರಂಪರೆಯ ಪ್ರಜ್ಞೆ ಜನತೆಯಲ್ಲಿ ಜಾಗೃತವಾಗುತ್ತದೆ. ಒಟ್ಟಾರೆ ಸಂಶೋಧನೆಯೆನ್ನುವುದು ಒಂದು ಜನಾಂಗದ ಬದುಕಿನ ಗತಕಾಲದ ಗುಣದೋಷಗಳನ್ನು ಆ ಜನಾಂಗದ ಕಣ್ಮುಂದೆ ನಿಲ್ಲಿಸಿ, ಅವರ ಕಣ್ಣು ತೆರೆಯಿಸುವುದಾಗಿದೆ. ದೋಷಗಳು ಪುನರಾವರ್ತನೆಗೊಳ್ಳದಂತೆ ಮಾಡುವ, ಗುಣಗಳು ಮಾದರಿಯಾಗುವಂತೆ ಮಾಡುವ ಬಹಳ ದೊಡ್ಡ ಹೊಣೆ ಯಾವುದೇ ದೇಶದ ಸಂಶೋಧಕನ ಹೆಗಲ ಮೇಲಿರುತ್ತದೆ. ಈ ಅರ್ಥದಲ್ಲಿ ಗತಕಾಲದ ಶೋಧವೆನ್ನುವುದು ವರ್ತಮಾನವನ್ನು ತಿದ್ದುವ ಒಂದು ಪ್ರಯತ್ನವೆನಿಸಿದೆ. ಜನತೆಯಲ್ಲಿ ಪರಂಪರೆಯ ಜಾಗೃತಿ ಮೂಡಿಸುವುದಾಗಿದೆ. ಉತ್ಸಾಹ ತುಂಬುವುದಾಗಿದೆ. ಅದಕ್ಕಾಗಿಯೇ, "ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು" ಎಂದು ಡಾ. ಅಂಬೇಡ್ಕರರು ಹೇಳಿದುದು. ಇಂದು ಕನ್ನಡಿಗರು ಹೊಸ ಇತಿಹಾಸವನ್ನು ಸೃಷ್ಟಿಸಬೇಕಾದರೆ ಹಳೆಯ ಇತಿಹಾಸವನ್ನು ಅರ್ಥಮಾಡಿಕೊಳ್ಳುವುದು, ಸಂಶೋಧಕರಾದವರು ಅವರಿಗೆ ಅದನ್ನು ಅರ್ಥ ಮಾಡಿಕೊಡುವುದು ಅವಶ್ಯವಿದೆ. ಈ ಕೆಲಸ ನಮ್ಮಲ್ಲಿ ಒಂದು ನಿರಂತರ ಪ್ರಕ್ರಿಯೆಯಾಗಿ ನಡೆದು ಬರದ ಕಾರಣ ಕನ್ನಡಿಗರಲ್ಲಿ ಇತಿಹಾಸಪ್ರಜ್ಞೆ ಬತ್ತುತ್ತ ಬಂದಿತು. ಇದರಿಂದಾಗಿ ಸ್ವಾಭಿಮಾನವೂ ಸೊರಗುತ್ತ ಬಂದಿತು. ಇದರ ಫಲವೆಂಬಂತೆ ನಾವು ವಿಶಾಲವಾದ ನಮ್ಮ ಭೂಖಂಡವನ್ನು ಕಳೆದುಕೊಳ್ಳುತ್ತ ಬಂದೆವು. ಭಾಷೆಯನ್ನು ಬಡವಾಗಿಸಿಕೊಳ್ಳುತ್ತ ಬಂದೆವು. ಈ ಎಲ್ಲ ಹಾನಿಗಳನ್ನು ತಡೆಗಟ್ಟಬೇಕೆಂದರೆ ನಮ್ಮಲ್ಲಿ ಮೊದಲು ಇತಿಹಾಸಪ್ರಜ್ಞೆ ಸ್ಥಾಪನೆಗೊಳ್ಳಬೇಕು. ಆ ಪ್ರಜ್ಞೆಯನ್ನು ಪೂರೈಸುವ ಸಂಶೋಧನೆ ಹೆಚ್ಚು ವೇಗವಾಗಿ, ವ್ಯಾಪಕವಾಗಿ ನಡೆಯಬೇಕು.

■■

ಆಕರ : ಮಾರ್ಗ ಸಂಪುಟ-೮

೪೬

ಸಂಶೋಧನೆಯಲ್ಲಿ ದೇಶಿವಾದ

ಒಂದು ಜನಸಮುದಾಯದ ಭೌಗೋಲಿಕ ಪರಿಸರ ಅವರ ಕ್ರಿಯೆಗಳನ್ನು, ಆ ಕ್ರಿಯೆಗಳು ಅವರ ಜ್ಞಾನವನ್ನು, ಈ ಕ್ರಿಯೆ ಮತ್ತು ಜ್ಞಾನಗಳು ಅವರ ಭಾಷೆಯನ್ನು ರೂಪಿಸುತ್ತವೆ. ಜನಾಂಗ ಪುರುಷನ ಕಾಯಾ, ಮನಸಾ, ವಾಚಾಗಳಾಗಿರುವ ಇವು ಮೂಲತಃ ಬಿಂಬ ಪ್ರತಿಬಿಂಬ ರೂಪದಲ್ಲಿರುತ್ತಿದ್ದು, ಇಂಥ ಬಂಧ 'ದೇಶಿ' ಎನಿಸಿಕೊಳ್ಳುತ್ತದೆ. ಅನ್ಯ ಸಂಪರ್ಕದೊಂದಿಗೆ ಬಾಳದೆ ಒಂದು ಜನಾಂಗ ತನ್ನ ಭೌಗೋಳಿಕ ಆವರಣದಲ್ಲಿಯೇ ಉಳಿದರೆ ಅದರ 'ದೇಶೀ'ಯ ಆಂತರಿಕ –ಬಾಹ್ಯ ಸ್ವರೂಪ ಗಟ್ಟಿ ಉಳಿಯುತ್ತದೆ. ವಲಸೆ ಹೋದರೆ ಪರಿಸರ ಕಾರಣವಾಗಿ ಅಥವಾ ದೇಶೀಯ ಹೊರ ಕವಚ ವ್ಯತ್ಯಾಸವಾಗಬಹುದೇ ಹೊರತು ಒಳಗೆ ಹಾಗೆಯೇ ಉಳಿಯುತ್ತದೆ. ಇದೇ ರೀತಿ ಅನ್ಯ ಜನ ಸಮುದಾಯದ ಸಂಪರ್ಕದಿಂದ ಬಾಹ್ಯ ಕವಚ ಬದಲಾಗುವುದೇ ಹೊರತು ಒಳ ತಿರುಳು ಗಟ್ಟಿಯಾಗಿ ಉಳಿದಿರುತ್ತದೆ. ಹೀಗಾಗಿ 'ದೇಶಿ'ಯೆನ್ನುವುದು ಒಂದು ಪ್ರದೇಶದ ಹೊಟ್ಟೆಯಿಂದ ಹೊರಬಂದ ಜೀವನ ಪದ್ಧತಿಯಾಗಿದ್ದು, ಅದರ ಪ್ರತಿಯೊಂದು ಚಟುವಟಿಕೆಯ ಮೇಲೆ ಆ ಪರಿಸರದ ಮುದ್ರೆ ಎದ್ದುಕಾಣುತ್ತಿರುತ್ತದೆ. ಒಂದು ಸಂಸ್ಕೃತಿಯ ಸ್ವರೂಪ ಘಟ್ಟ ಇಲ್ಲಿ ಬಹಳೆಂದರೆ ತನ್ನ ರೀತಿಯಲ್ಲಿಯೇ ಅಂದರೆ ತನ್ನ ಪರಿಸರದ ರೀತಿಯಲ್ಲಿಯೇ ಬೆಳೆಯುತ್ತದೆ.

ಕರ್ನಾಟಕಕ್ಕೆ ಬಂದರೆ ಇದು ಮೂಲತಃ ದ್ರಾವಿಡ ನೆಲೆಯಾಗಿದೆ. ಆಮೇಲೆ ಬಂದ ವಲಸೆಗಾರರು ಇಲ್ಲಿ ನೆಲೆ ನಿಂತಿದ್ದಾರೆ. ಬಹುಶಃ ದಕ್ಷಿಣ ಭಾರತದಲ್ಲಿ ಕರ್ನಾಟಕಕ್ಕೆ ಹೆಚ್ಚು ಜನಸಮೂಹಗಳು ವಲಸೆ ಬಂದಂತಿದೆ. ಇವುಗಳಿಗಿಂತ ದಾಳಿ ರೂಪದಲ್ಲಿ ಬಂದ ಆರ್ಯ, ಇಸ್ಲಾಂ, ಆಂಗ್ಲ ಪ್ರಭಾವ ಗಣ್ಯತಮವಾಗಿವೆ. ಇವುಗಳಲ್ಲಿ ನಮ್ಮ ಭಾಷೆಯನ್ನೇ ತನ್ನ ರೀತಿಯಲ್ಲಿ ರೂಪಿಸಿದ್ದು ಆರ್ಯ ಸಂಸ್ಕೃತಿ. ಹೀಗಾಗಿ ಮಿಕ್ಕವುಗಳಿಗಿಂತ ಆರ್ಯ ಪ್ರಭಾವದಲ್ಲಿ ನಮ್ಮ "ದೇಶೀ" ಮುಚ್ಚಿ ಹೋಯಿತು ಅಥವಾ ಕೊಚ್ಚಿ ಹೋಯಿತು. ಕೊಚ್ಚಿ ಹೋದುದನ್ನು ಗುರುತಿಸಿಕೊಡುವುದು, ಹೋದುದನ್ನು ಬಿಚ್ಚಿ ತೋರಿಸುವುದು ಸಂಶೋಧನೆಯಲ್ಲಿ "ದೇಶೀ" ವಾದವೆನಿಸುತ್ತದೆ.

ಸಂಸ್ಕೃತಿಯ ಮುಖ್ಯ ಲಕ್ಷಣ ಮಿಶ್ರಣ. ಹೀಗಾಗಿ ಯಾವುದೇ ಸಮಾಜ ಶುದ್ಧರೂಪದಲ್ಲಿ ಉಳಿಯುವುದಿಲ್ಲ. ಮಿಶ್ರವಾಗುವುದೇ ಅದರ ಮುಖ್ಯ ಲಕ್ಷಣ. ಮಿಶ್ರಣವಾಗದಿದ್ದರೆ ಅದು

ರಕ್ತಹೀನತೆಯಿಂದ ಬಳಲಬೇಕಾಗುತ್ತದೆ. ದೇಶೀಯ ಸಂಸ್ಕೃತಿಯ ಮೇಲೆ ಅನ್ಯ ಸಂಸ್ಕೃತಿಗಳ ಪ್ರಭಾವ ನಿರಂತರ ನಡೆದಿರುತ್ತದೆ. ದಾಳಿಯ ಮೂಲಕ ಈ ಕ್ರಿಯೆ ಜರುಗುತ್ತಿರುತ್ತದೆ. ಇದು 'ಅನ್ಯ' ವನ್ನೇ 'ಸ್ವ' ಎಂದು ಭ್ರಮಿಸುವಷ್ಟು ಪ್ರಮಾಣದಲ್ಲಿ ಸೇರಿಕೊಂಡಿರುತ್ತದೆ. ಅನುದ್ದೇಶಿತ ಇಲ್ಲವೆ ಉದ್ದೇಶಿತ ರೂಪದಲ್ಲಿ ಸೇರುವ ಮೂಲಕ ಮೂಲ ಸತ್ಯದ ಮೇಲೆ ಆಗಂತುಕ ಸತ್ಯ, ಇಲ್ಲವೆ 'ಆಗಂತುಕ ಸತ್ಯಗಳು' ಬೆಳೆದಿರುತ್ತವೆ. ಬಹಳಷ್ಟು ಸಲ ಈ ಆಗಂತುಕ ಸತ್ಯವನ್ನು ಅಥವಾ ಸತ್ಯಗಳನ್ನು ಶೋಧಿಸುವಲ್ಲಿ ಸಂಶೋಧಕರು ವಿರಮಿಸುತ್ತಾರೆ. ಇದರಿಂದ ಮೂಲ ಸತ್ಯ ಮತ್ತೂ ಮರೆಯಲ್ಲಿ ಉಳಿದುಬಿಡುತ್ತದೆ. ಈವರೆಗೆ ಕನ್ನಡದ ಸಂಶೋಧನೆ ಬಹಳಷ್ಟು ಸಲ ಹೀಗೆ ನಡೆದ ಕಾರಣ ಮೂಲಸತ್ಯ ಗುಪ್ತಗಂಗೆಯಾಗಿದೆಯೆನಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಭಾಷಾಶಾಸ್ತ್ರ, ಜನಪದಶಾಸ್ತ್ರ, ನಾಮಶಾಸ್ತ್ರ ಮೊದಲಾದವು ಕನ್ನಡದಲ್ಲಿ ಪ್ರವೇಶ ಪಡೆದು, ಮೂಲ ಸತ್ಯವನ್ನು ಪತ್ತೆ ಹಚ್ಚಲು ಸಾಧ್ಯವಾಗುತ್ತಲಿದೆ. ಆದುದರಿಂದ ಸಂಶೋಧನೆಯಲ್ಲಿ 'ದೇಶೀವಾದ' ಎಂಬ ಹೊಸ ಶೋಧ ದೃಷ್ಟಿಕೋನ ನಮ್ಮಲ್ಲಿ ಬೆಳೆದು ಬರಬೇಕಾಗಿದೆ.

ಆಗುಂತಕ ಸತ್ಯ ಅಥವಾ ಅನ್ಯದೇಶೀವಾದ, ಮೂಲಸತ್ಯ ಅಥವಾ ದೇಶೀವಾದಗಳೆಂದರೆ ಏನೆಂಬುದನ್ನು ಒಂದು ಉದಾಹರಣೆಯಿಂದ ಸ್ಪಷ್ಟಪಡಿಸಿಕೊಳ್ಳಬಹುದು. ಜಗತ್ತಿನ ಎಲ್ಲ ಭಾಷೆಗಳ ತಾಯಿ ಸಂಸ್ಕೃತ ಎಂಬ ಹೇಳಿಕೆ. ಕಳೆದ ಶತಮಾನದವರೆಗೆ ಕನ್ನಡವು ಸಂಸ್ಕೃತ ಜನ್ಯವೆಂಬ ವಾದ ಪ್ರಚಾರದಲ್ಲಿದ್ದಿತು. ಹೀಗಾಗಿ ಕನ್ನಡ ಭಾಷೆಯನ್ನು ಕುರಿತು ನಡೆದ ಶೋಧಗಳೆಲ್ಲ ಸಂಸ್ಕೃತ ಮೂಲದಲ್ಲಿಯೇ ವಿರಮಿಸುತ್ತಿದ್ದವು.

ಕನ್ನಡದಲ್ಲಿಯೂ ದ್ವಿವಚನವಿದೆ. ಪ್ರಥಮಾ ವಿಭಕ್ತಿಗಳಿವೆಯೆಂದೂ ಕೇಶಿರಾಜ ಹೇಳಿದುದು ದೇಶೀ ವಾದಕ್ಕೆ ವಿರುದ್ಧವಾದುದು. ಈಗ ಕನ್ನಡ ಸಂಸ್ಕೃತ ಜನ್ಯವಲ್ಲ, ದ್ರಾವಿಡ ಜನ್ಯವೆಂದು ಶೋಧ ನಡೆದುದು 'ದೇಶೀವಾದ'ವೆಂದೇ ಹೇಳಬೇಕು. ಭಾಷೆಯಂತೆ ನಮ್ಮ ಸಾಮೂಹಿಕ ಆಚಾರ, ವೈಯಕ್ತಿಕ ಘಟನೆ, ಸಾಮೂಹಿಕ ವಿಚಾರಗಳ ಮೇಲೆ ಅನ್ಯತೆಯ ಲೇಪ ಬಳೆಯಲ್ಪಟ್ಟಿದೆ. ಕಳೆದು ಹೋದ ಪಕ್ಷದಲ್ಲಿ ಈ ಅನ್ಯತೆಯ ಲೇಪಹಂತದ ವರೆಗೆ ಶೋಧ ನಡೆಸಿ ನಿಂತು ಬಿಡದೆ, ಅದರಾಚೆಯ 'ಮೂಲ' ಸ್ವರೂಪವನ್ನು ಶೋಧಿಸಬೇಕಾಗುತ್ತದೆ. 'ಆಗಂತುಕ ಸತ್ಯ' ಕ್ಕೆ ನಾವು ನಿಲ್ಲುವುದಕ್ಕೆ ಹೀಗೆ ಕಾರಣ ಕೊಡಬಹುದು.

ಕರ್ನಾಟಕದಲ್ಲಿ ಸಂಶೋಧನೆಯನ್ನು ಶೈಕ್ಷಣಿಕ ಶಿಸ್ತನ್ನಾಗಿ ಬೆಳೆಸಿದವರು ಆಂಗ್ಲ ವಿದ್ವಾಂಸರು. ಕಳೆದ ಶತಮಾನದಲ್ಲಿ ಆರಂಭವಾದ ಈ ಚರ್ಚೆಯಿಂದಾಗಿ ಗತಕಾಲದ ಅನೇಕ ಅಜ್ಞಾತ ಮುಖಗಳು ಕಾಣಿಸಿಕೊಂಡರೂ ಅವುಗಳ ಮೂಲ ಸ್ವರೂಪ ಇನ್ನೂ ನಿಗೂಢವಾಗಿಯೇ ಉಳಿದುಕೊಂಡಿದೆ. ಕಾಣಿಸಿಕೊಂಡ ಮುಖಗಳೇ ಮೂಲ ಮುಖಗಳೆಂಬ ಭ್ರಮೆಯಲ್ಲಿ ನಾವಿದ್ದೇವೆ. ಇದಕ್ಕೆ ಕಾರಣ ದೋಷಪೂರ್ಣ ಆಕರ ಸಾಮಗ್ರಿ ಮತ್ತು ಸಂಶೋಧಕರ ಪೂರ್ವಗ್ರಹ ಪೀಡಿತ ದೃಷ್ಟಿ. ಇವೆರಡೂ ಸೂತಕಗಳಿಂದ ಮುಕ್ತವಾಗದ ಹೊರತು ಕರ್ನಾಟಕದ ಗತ ಜೀವನದ 'ವಾಸ್ತವ ಚಿತ್ರ' ಬೆಳಕಿಗೆ ಬರುವುದಿಲ್ಲ. ಆಂಗ್ಲರು ಸಂಶೋಧನೆ ಮಾಡಿದರೂ ಅವರಿಗೆ ಆಕರ ಸಾಮಗ್ರಿ ಒದಗಿಸಿದವರು ಅವರ ಕೈಕೆಳಗೆ ಇದ್ದ ಅಕ್ಷರ ಜೀವಿಗಳು. ಕಳೆದ ಶತಮಾನದಲ್ಲಿ ಇಂಥ ಅಕ್ಷರ ಜೀವಿಗಳೆಂದರೆ ವೈದಿಕ ವ್ಯಕ್ತಿಗಳು. ಹೀಗಾಗಿ ಆಂಗ್ಲ ಶೋಧಕರಿಂದಲೂ ನಮ್ಮ ದೇಶೀ ಸಂಸ್ಕೃತಿ ಪ್ರಕಟವಾಗಲಿಲ್ಲ.

ತರುವಾಯ ಮುಂದಿನ ಘಟ್ಟದಲ್ಲಿ ಇವರ ಸ್ಥಾನವನ್ನು ಆವರಿಸಿದವರು ವೈದಿಕರು. ಈ ಹಿಂದೆ ಕೇವಲ ಆಕರ ಸಾಮಗ್ರಿ ಒದಗಿಸುತ್ತಿದ್ದ ಇವರು ಈಗ ಅವುಗಳ ಬಲದಿಂದ ಇತಿಹಾಸ ಬರೆಯುವವರೂ ಆದರು. ಇವರು ಏನೇ ಶೋಧ ಮಾಡಿದರೂ ಪದ್ಧತಿಯಲ್ಲಿ ಆಂಗ್ಲರನ್ನು, ಪ್ರಭಾವದಲ್ಲಿ ಆರ್ಯರನ್ನು ಒಪ್ಪಿಕೊಂಡವರು. ಹೀಗಾಗಿ ಇವರ ಶೋಧಗಳಲ್ಲಿಯೂ ದೇಶೀ ಮುಖಗಳು ವ್ಯಕ್ತವಾಗಲೇ ಇಲ್ಲ. ಇವರ ಕೈಯಲ್ಲಿ ಮೈಸೂರು ಮಹಿಷಪುರವಾಯಿತು.

■■

ಆಕರ : ಮಾರ್ಗ ಸಂಪುಟ-೮

೪೭

ಸೂಳ್ನುಡಿ ಎಂದರೇನು?

ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ
ನಿಮ್ಮ ನಿತ್ತೆ ಕಾಣಾ ರಾಮನಾಥಾ।

ಇದು ಜೇಡರ ದಾಸಿಮಯ್ಯನ ಸುಪ್ರಸಿದ್ಧ ವಚನ. ಇಲ್ಲಿ ಸೂಳ್ನುಡಿಯೆಂದರೆ ಮಹಾತ್ಮರ ವಾಣಿ ಎಂಬ ಸಾಮಾನ್ಯ ಅರ್ಥವನ್ನೂ, ವಚನಸಾಹಿತ್ಯ ಪ್ರಕಾರವೆಂಬ ವಿಶೇಷ ಅರ್ಥವನ್ನೂ ಹೇಳುತ್ತ ಬಂದಿದ್ದೇವೆ. ಆದರೆ ನಿಷ್ಪತ್ತಿ ಹೇಳುವ ಮತ್ತು ಸೂಳ್ನುಡಿಗೂ ವಚನಕ್ಕೂ ಇರಬಹುದಾದ ಸಂಬಂಧವನ್ನು ಸ್ಪಷ್ಟಪಡಿಸುವ ಕಡೆಗೂ ಯಾರೂ ಗಮನಹರಿಸಿಲ್ಲವೆಂದು ತೋರುತ್ತದೆ.

'ವಚನ' ಎಂಬ ಶಬ್ದಕ್ಕೆ ಈ ವರೆಗೆ 'ಗದ್ಯಪ್ರಕಾರ'ವೆಂಬ ನಿಘಂಟುವಿನ ಅರ್ಥವನ್ನೂ, ಬಹಳವೆಂದರೆ ಲಯಾತ್ಮಕ ಗದ್ಯವೆಂಬ ರೂಪನಿಷ್ಠ ಅರ್ಥವನ್ನೂ ಹೇಳುತ್ತ ಬರಲಾಗಿದ್ದಿತು. ಆದರೆ ವಚನವೆಂಬುದು ರೂಪವನ್ನು ಸೂಚಿಸುವುದಿಲ್ಲ ಗುಣವನ್ನು ಸೂಚಿಸುವುದೆಂದು ತಿಳಿಸುತ್ತ, ನಡೆ ಹೇಗೇ ಇರಲಿ, ನುಡಿ ಸುಂದರವಾದುದು 'ರಚನೆ', ನಡೆದಂತೆ ನುಡಿದುದು 'ವಚನ'ವೆಂದು ನನ್ನ ಲೇಖನವೊಂದರಲ್ಲಿ ವಿವರಿಸಿದ್ದೇನೆ. ಅಲ್ಲಿ ವಚನವೆಂಬುದು "ಆತ್ಮಸಾಕ್ಷಿಯ ಬರವಣಿಗೆ", "ಆತ್ಮಲಿಂಗದ ಮೇಲೆ ಆಣೆ (= ವಚನ)ಇಟ್ಟು ವ್ಯಕ್ತಪಡಿಸಿದ ಬರವಣಿಗೆ" ಎಂಬ ಅರ್ಥವನ್ನು ಹೇಳಿದ್ದೇನೆ. ಈ ತಿಳಿವಳಿಕೆಯ ಹಿನ್ನೆಲೆಯಲ್ಲಿ ಶರಣರು ಬಳಸಿದ ಸೂಳ್ನುಡಿ ಪದವನ್ನು ಬಿಚ್ಚಿ ಅರ್ಥವನ್ನು ಹೇಳಬೇಕಾಗುತ್ತದೆ.

ಸೂಳ್+ನುಡಿ ಎಂದು ಈ ಪದವನ್ನು ಸರಳವಾಗಿ ಬಿಡಿಸಬಹುದು. ಇಲ್ಲಿ ಸೂಳ್ ಎಂಬುದಕ್ಕೆ ಕ್ರಮ, ಸರದಿ ಎಂಬ ಅರ್ಥ ಪ್ರಸಿದ್ಧವಾಗಿದೆ. ಇದನ್ನು ಇಟ್ಟುಕೊಂಡು ಸೂಳ್ನುಡಿ ಎಂಬುದಕ್ಕೆ ಕ್ರಮವತ್ತಾದ ಮಾತು ಎಂದು ಮುಂತಾಗಿ ಅರ್ಥ ಹೇಳಿ, ಪರಂಪರಾಗತ ಮಾತು, ನೀತಿಕ್ರಮಕ್ಕೆ ಬದ್ಧವಾದ ಮಾತು ಎಂದು ಮಾಡಬಹುದಾದ ವ್ಯಾಖ್ಯಾನ ದೂರನ್ವಯವೆನಿಸುವುದಲ್ಲದೆ, ವಚನಕ್ಕೆ ಮೇಲೆ ಹೇಳಿದ ಅರ್ಥ(ಪ್ರತಿಜ್ಞೆ)ವನ್ನು ಇದು ಧ್ವನಿಸುವುದಿಲ್ಲ. ಹೀಗಾಗಿ 'ಸೂಳ್ನುಡಿ' ಶಬ್ದಕ್ಕೆ ಬೇರೆ ನಿಷ್ಪತ್ತಿ ಹೇಳಬೇಕೆನಿತ್ತದೆ.

ಹಳಗನ್ನಡದಲ್ಲಿ ಸೂರುಳ್ ಎಂದರೆ ಪ್ರತಿಜ್ಞೆ ಮಾಡು. ಶಬ್ದಮಣಿದರ್ಪಣದ ಧಾತು ಪ್ರಕರಣದಲ್ಲಿ "ಸೂರುಳ್ ಶಪಥೇ" ಎಂದು ಅರ್ಥ ಹೇಳಲಾಗಿದೆ. ಇದರಿಂದ ಸಿದ್ಧವಾಗುವ

"ಸೂರುಳ್+ನುಡಿ=ಸೂರುಳ್ನುಡಿ" ಎಂಬ ಸಮಸ್ತಪದಕ್ಕೆ ಪ್ರತಿಜ್ಞಾವಾಕ್ಯವೆಂಬ ಅರ್ಥ ಹೊರಟು, ನಾವು 'ವಚನ' ಪದಕ್ಕೆ ಮೇಲೆ ಹೇಳಿದ ವಿವರಣೆ ಇಲ್ಲಿ ಹೊಂದಿಕೊಳ್ಳುತ್ತದೆ. ಆದುದರಿಂದ ಬಹುಶಃ ಸೂರುಳ್ ಮೂಲದಿಂದಲೇ ಸೂಳ್ನುಡಿಗೆ ಅರ್ಥ ಹೇಳುವುದು ಸೂಕ್ತವೆನಿಸುತ್ತದೆ. ಅಂದರೆ ಸೂರುಳ್ನುಡಿ ಎಂಬುದರ ಮಧ್ಯದ ರ್ ಕರಗಿ ಸೂಳ್ನುಡಿ ಆಗಿದೆಯೆಂದು ಇಟ್ಟುಕೊಳ್ಳಬೇಕಾಗುತ್ತದೆ.

ಸೂಳ್ನುಡಿ ಎಂಬುದು ದ್ರಾವಿಡ ಪದ, ವಚನವೆಂಬುದು ಸಂಸ್ಕೃತ ಪದ. ಇವುಗಳಲ್ಲಿ ಖಂಡಿತವಾಗಿಯೂ ಸೂಳ್ನುಡಿ ಪ್ರಾಚೀನ ಪ್ರಯೋಗ. ಆದುದರಿಂದ ತಮಿಳಿನ ಶಿವಭಕ್ತರ ರಚನೆಗಳಿಗೆ 'ತೇವಾರಂ' ಎಂದು ಕರೆಯುವಂತೆ ಕರ್ನಾಟಕದ ಶಿವಭಕ್ತರ ರಚನೆಗಳಿಗೆ 'ಸೂಳ್ನುಡಿ'ಯೆಂದು ಕರೆಯುವ ಕಾಲಘಟ್ಟ ಮುಗಿದು, ೧೨ನೆಯ ಶತಮಾನದಲ್ಲಿ 'ವಚನ'ವೆಂದು ಕರೆಯುವ ಘಟ್ಟ ಪ್ರಾರಂಭವಾಗಿರಬಹುದೆನಿಸುತ್ತದೆ. ಆ ಪ್ರಾಚೀನ ಘಟ್ಟದಲ್ಲಿ ಕೆಲಸ ಮಾಡಿದವರನ್ನು, ಅವರ ರಚನೆಗಳನ್ನು, ಅವುಗಳ ಸ್ವರೂಪವನ್ನು, ಶೋಧಿಸುವುದು ವಿದ್ವಾಂಸರ ಕಣ್ಣುಮುಂದಿನ ಪ್ರಶ್ನೆಯಾಗಿದೆ. ಬಹುಶಃ ಸ್ಥಾವರಲಿಂಗ ಪೂಜಕರಾಗಿದ್ದ ಕಾಳಾಮುಖರು ಸೂಳ್ನುಡಿ ಘಟ್ಟದಲ್ಲಿ ವಚನರಚನಾಕಾರ್ಯ ಮಾಡಿರಬಹುದೇ? ಏಕೆಂದರೆ ಶಿವಶರಣರ ಮುದ್ರಿಕೆಗಳು ಅವರ ಇಷ್ಟಲಿಂಗದ ಹೆಸರುಗಳೆಂದು ಇಟ್ಟುಕೊಂಡರೂ ಅವರಿಗೆ ಸಂಬಂಧಪಟ್ಟ ಗ್ರಾಮಗಳಲ್ಲಿ ಆ ಹೆಸರಿನ ಕಾಳಾಮುಖ ಸಂಪ್ರದಾಯದ ಸ್ಥಾವರಲಿಂಗಗಳಿವೆ. ಉದಾ: ಜೇಡರ ದಾಸಿಮಯ್ಯನ ಮುದ್ರಿಕೆಯಾದ 'ರಾಮನಾಥಾ' ಹೆಸರಿನ ಕಾಳಾಮುಖ ಸ್ಥಾವರಲಿಂಗ ಮುದನೂರಿನಲ್ಲಿದೆ. ಎರಡನೆಯದಾಗಿ ಇಂದಿನ ವೀರಶೈವ ಮಠಗಳೂ, ದೇವಾಲಯಗಳೂ ಮೂಲತಃ ಕಾಳಾಮುಖರಿಗೆ ಸಂಬಂಧಪಟ್ಟಿವೆ. ನಾಡಿನ ಹಳ್ಳಿ-ಪಳ್ಳಿಗಳಲ್ಲಿ ಹರಡಿಕೊಂಡಿದ್ದ ಸಾವಿರಾರು ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟ ಈ ಸುಪ್ರಸಿದ್ಧ ಕಾಳಾಮುಖರು ಏನೂ ಸಾಹಿತ್ಯ ರಚಿಸಲಿಲ್ಲವೆಂದರೆ ನಂಬುಗೆ ಹುಟ್ಟುವುದಿಲ್ಲ. ಕಾರಣ, ಸೂಳ್ನುಡಿ ಘಟ್ಟದಲ್ಲಿ ಕಾಳಾಮುಖರು ವಚನಸಾಹಿತ್ಯ ಸೃಷ್ಟಿ ಮಾಡಿರುವ ಸಾಧ್ಯತೆಯಿದೆ. ಈಗ ಲಭ್ಯವಿರುವ ವಚನಸಾಹಿತ್ಯದಲ್ಲಿ ಅದು ಸೇರಿಕೊಂಡಿರುವ ಸಾಧ್ಯತೆಯೂ ಇದೆ.

ಈ ಸೂಳ್ನುಡಿ ಸಾಹಿತ್ಯವು ವಚನಸಾಹಿತ್ಯವೇ ಆಗಿದ್ದರೂ ರೂಪದೃಷ್ಟಿಯಿಂದ ಅದು ವಚನಗಳಿಗಿಂತ ಹೆಚ್ಚು ಲಯಾತ್ಮಕವಾಗಿದ್ದಿರಬಹುದು. ಜೇಡರ ದಾಸಿಮಯ್ಯನ ವಚನಗಳು ಇದಕ್ಕೆ ನಿದರ್ಶನವೆನಿಸಿವೆ. ಡಾ. ಚಿದಾನಂದಮೂರ್ತಿ ಅವರು ಊಹಿಸಿದಂತೆ ಅವು, ಇನ್ನೂ ಹಿಂದೆ ತ್ರಿಪದಿ ಲಯದಲ್ಲಿಯೇ ಇರುವ ಸಾಧ್ಯತೆಯಿದೆ. ಸರ್ವಜ್ಞನ ವಚನ(ತ್ರಿಪದಿ)ಗಳು ಆ ಪರಂಪರೆಯ ದೂರದ ಪ್ರತಿನಿಧಿಗಳಾಗಿರಬಹುದು. ಸ್ಥಾವರಲಿಂಗ ಪೂಜಕನಾಗಿದ್ದ ಸಿದ್ಧರಾಮನ ವಚನಗಳಲ್ಲಿ ಲಯ ಹೆಚ್ಚು. ಈತನು ತ್ರಿಪದಿಗಳನ್ನೂ ಬರೆದುದು ಸರ್ವಶ್ರುತ.

ರೂಪದಂತೆ ಇದು ಗುಣದೃಷ್ಟಿಯಿಂದಲೂ ವಿಶಿಷ್ಟ ಸಾಹಿತ್ಯವಾಗಿರಬಹುದು. ಭಾರತೀಯ ಧಾರ್ಮಿಕ ಕ್ಷೇತ್ರದಲ್ಲಿ ಆತ್ಮವಾದಿ ಸಾಹಿತ್ಯವೇ ಬೆಳೆದು ಬಂದಿದ್ದಿತು. ಆದರೆ ಧರ್ಮ ಬೇರೆಯಲ್ಲ, ಸಮಾಜ ಬೇರೆಯಲ್ಲವೆಂಬ ನಿಲುವಿನಿಂದ, ಆತ್ಮವಾದಿ ಸಮಾಜವಾದಿ ವಿಚಾರಗಳನ್ನು ಬೆರೆಸಿ ಬರೆಯುವುದು, ಈ ಹೊಸ ಬಗೆಯ ಸಾಹಿತ್ಯದ (Applied literature) ಲಕ್ಷಣವಾಗಿದ್ದಿತು. ಈ ಮಾತಿಗೂ ಜೇಡರ ದಾಸಿಮಯ್ಯನ ವಚನಗಳು ಉದಾಹರಣೆಯೆನಿಸಿವೆ.

■■

ಆಕರ : ಮಾರ್ಗ ಸಂಪುಟ–೩

೪೮

ಅಡ್ಡಹೆಸರು

ಸಮೂಹದಿಂದ ಒಬ್ಬ ವ್ಯಕ್ತಿಯನ್ನು ಸರಿಯಾಗಿ ಪ್ರತ್ಯೇಕಿಸಿ ಕೊಡಲು ಹೆಸರು ಅಸಮರ್ಥವಾದಲ್ಲಿ ತಂದೆಯ ಹೆಸರನ್ನು, ಅದೂ ಅಸಮರ್ಥವಾದಲ್ಲಿ ಹೆಚ್ಚಿನದಾಗಿ ಇನ್ನೊಂದು ಹೆಸರನ್ನು ಸೇರಿಸುವುದು ಚಲಾವಣೆಯಲ್ಲಿ ಬಂದಿರಬೇಕು. ಆದುದರಿಂದ ಒಬ್ಬನನ್ನು ಗುರುತಿಸುವಲ್ಲಿ ಬಳಸುವ ವ್ಯಕ್ತಿನಾಮ, ಪಿತೃನಾಮಗಳಲ್ಲದ ಮೂರನೆಯ ಹೆಸರೇ "ಅಡ್ಡಹೆಸರು" ಎಂದು ವ್ಯಾಖ್ಯಾನಿಸಬಹುದು. ಪ್ರತ್ಯೇಕಿಸಿ ಕೊಡುವುದೇ ಈ ಮೂರನೆಯ ಹೆಸರಿನ ಮುಖ್ಯ ಉದ್ದೇಶವಾಗಿದ್ದರೂ ಅದು ಆ ವ್ಯಕ್ತಿಯ - ಆತನ ಪೂರ್ವಜರ ನೆಲೆ, ಜೀವನವಿಧಾನ, ಸಂಸ್ಕೃತಿ ಪರಂಪರೆಗಳನ್ನು ಪ್ರತಿನಿಧಿಸುತ್ತದೆ.

'ಅಡ್ಡಹೆಸರು' ಎಂಬ ಪದ 'ನೇರವಲ್ಲದ ಹೆಸರು' ಎಂಬ ಅರ್ಥದಲ್ಲಿ ಬಂದಿರಬಹುದು. ಇಲ್ಲವೆ ಅರ್ಧ ಹೆಸರು>ಅಡ್ಡಹೆಸರು ಆಗಿರಬಹುದು. ತಮಿಳುನಾಡಿನಲ್ಲಿ ಈ ಮೂರನೆಯ ಹೆಸರಿನ ಬಳಕೆ ಇಲ್ಲವೆನ್ನುವಷ್ಟು ಕಡಿಮೆ. ಅಡ್ಡಹೆಸರು ಎಂಬುದರ ಸಮಾನ ಅರ್ಥದ ಪದವು ಆ ಕೋಶದಲ್ಲಿಲ್ಲ. ಮರಾಠಿಯ ಅಡನಾವ್, ಕನ್ನಡದ "ಅಡ್ಡಹೆಸರು"ಗಳಲ್ಲಿಯ ಧ್ವನಿಸಾಮ್ಯ, ರೂಢಿಸಾಮ್ಯಗಳು ನಮ್ಮ ಗಮನ ಸೆಳೆದರೂ ಯಾವುದರಿಂದ ಯಾವುದು ಪ್ರಭಾವಿತವಾಯಿತು, ಹೇಳುವುದು ಕಷ್ಟ.

ಅಡ್ಡಹೆಸರುಗಳು ಗ್ರಾಮ, ಕುಟುಂಬ, ವಂಶ, ವೃತ್ತಿ, ಜಾತಿಗಳನ್ನು ಪ್ರತಿನಿಧಿಸುತ್ತಿದ್ದು, ಸಾಮಾನ್ಯವಾಗಿ ಇವು ಆಯಾ ಕುಟುಂಬ, ವಂಶ, ವೃತ್ತಿ, ಜಾತಿಗಳ ಎಲ್ಲ ಸದಸ್ಯರನ್ನು ಮಾನಸಿಕವಾಗಿ ಬೆಸೆಯುತ್ತವೆ. ಸಾಂಘಿಕ ನಿಷ್ಠೆಯನ್ನು ಪ್ರೇರೇಪಿಸುತ್ತವೆ. ವ್ಯಕ್ತಿಗಳ ಪರಸ್ಪರ ಸಂಬಂಧವನ್ನು ದೃಢಪಡಿಸುತ್ತವೆ. ಪ್ರಾಚೀನ ಕರ್ನಾಟಕದಲ್ಲಿ ಗಂಗ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಇತ್ಯಾದಿ ಅರಸುಮನೆತನಗಳ ಹೆಸರುಗಳೆಲ್ಲ ಈ ಬಗೆಯವು. ಜೊತೆಗೆ ನಾವಿದ ಧೋರ(೧೦೮೭), ತೆಲ್ಲಿಗರ ಜಕ್ಕಿಯವ್ವೆ(೧೧೯೧), ಧನಗರ ಕಂಚಿಕವ್ವೆ(೯೮೦), ಹುರ್ವಿನ ಗೋವರ್ಧನ(೧೧೬೧), ಆನೆಯ ಕೇಶಿರಾಜ(೧೧೪೭), ಸೀರೆಯ ಕಾಳಿಸೆಟ್ಟಿ ಇತ್ಯಾದಿ ಅಡ್ಡಹೆಸರುಗಳು ಸಾಮಾನ್ಯರ ವಿಷಯದಲ್ಲಿಯೂ ಕ್ವಚಿತ್ತಾಗಿ ತೋರಿ ಬರುವುದು, ಈ ರೂಢಿಯ ಪ್ರಾಚೀನತೆಯನ್ನು ಸೂಚಿಸುತ್ತದೆ.

ಇಂದು ಕರ್ನಾಟಕದ ತುಂಬ ಹೆಸರಿನೊಂದಿಗೆ ಅಡ್ಡಹೆಸರನ್ನು ಬಳಸಲಾಗುತ್ತಿದ್ದು, ಅವುಗಳನ್ನು ೧. ಬಳಕೆಯ ವಿಧಾನ. ೨. ಸ್ವರೂಪ ೩. ಇತರ ಸಂಗತಿ ಎಂಬ ಮೂರು ವರ್ಗಗಳಲ್ಲಿ ವಿವೇಚಿಸಬಹುದು.

೧. ಬಳಕೆಯ ವಿಧಾನ :

ಅಡ್ಡಹೆಸರುಗಳು ಕರ್ನಾಟಕದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಭಿನ್ನವಿನ್ಯಾಸದಲ್ಲಿ ಬಳಕೆಯಾಗುತ್ತವೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಉತ್ತರದ ಆರ್.ಸಿ. ಹಿರೇಮಠ ದಕ್ಷಿಣದಲ್ಲಿದ್ದರೆ ಎಚ್.ಸಿ. ರುದ್ರಯ್ಯ ಇಲ್ಲವೆ ಎಚ್. ರುದ್ರಯ್ಯ ಆಗುತ್ತಿದ್ದರು. ದಕ್ಷಿಣದ ಜಿ.ಎಸ್. ಶಿವರುದ್ರಪ್ಪ ಉತ್ತರದಲ್ಲಿದ್ದರೆ ಎಸ್.ಎಸ್. ಗುಗ್ಗರಿ ಇಲ್ಲವೆ ಶಿವರುದ್ರಪ್ಪ ಗುಗ್ಗರಿ ಆಗುತ್ತಿದ್ದರು. ಇದನ್ನು ಅನುಲಕ್ಷಿಸಿ ಅಡ್ಡಹೆಸರಿನ ಬಳಕೆಯ ವಿಧಾನವನ್ನು

೧. ಅಡ್ಡಹೆಸರು ಪ್ರಧಾನ - ಹೆಸರು ಅಪ್ರಧಾನ ಪದ್ಧತಿ.
೨. ಅಡ್ಡಹೆಸರು ಅಪ್ರಧಾನ - ಹೆಸರು ಪ್ರಧಾನ ಪದ್ಧತಿ.
೩. ಅಡ್ಡಹೆಸರು ಪ್ರಧಾನ - ಹೆಸರು ಪ್ರಧಾನ ಪದ್ಧತಿ

ಎಂದು ೩ ರೀತಿಯಲ್ಲಿ ವಿಂಗಡಿಸಿ ಹೇಳಬಹುದು. ಉತ್ತರ ಕರ್ನಾಟಕದಲ್ಲಿ ಅಡ್ಡಹೆಸರು ಪ್ರಧಾನ, ಹೆಸರು ಅಪ್ರಧಾನ ಉದಾ: ಫ.ಗು. ಹಳಕಟ್ಟಿ. ದಕ್ಷಿಣ ಕರ್ನಾಟಕದಲ್ಲಿ ಅಡ್ಡಹೆಸರು ಅಪ್ರಧಾನ, ಹೆಸರು ಪ್ರಧಾನ. ಉದಾ : ತೀ.ನಂ. ಶ್ರೀಕಂಠಯ್ಯ. ಇಂಗ್ಲಿಷ್ ಪ್ರಭಾವದಿಂದ ಇವು ಪಿ.ಜಿ. ಹಳಕಟ್ಟಿ, ಟಿ.ಎನ್. ಶ್ರೀಕಂಠಯ್ಯ ಎಂದೂ ಬಳಕೆಯಾಗುತ್ತವೆ. ಇಲ್ಲಿ ಒಂದುಕಡೆ ಅಡ್ಡಹೆಸರು ಪ್ರಧಾನವಾಗಿ ವ್ಯಕ್ತಿನಾಮದ ಕೊನೆಗೆ ಬಂದರೆ, ಇನ್ನೊಂದು ಕಡೆ ಅಪ್ರಧಾನವಾಗಿ ವ್ಯಕ್ತಿನಾಮಕ್ಕೆ ಮೊದಲು ಬರುತ್ತದೆ. ಹೀಗಿದ್ದೂ ಈ ನಾಡಿನಲ್ಲಿ ಮೊದಮೊದಲು ವ್ಯಕ್ತಿನಾಮ ಹಿಡಿದು ಕರೆಯುವುದೇ ಪ್ರಧಾನವಾಗಿದ್ದಿತೆಂದು ತೋರುತ್ತದೆ. ಉದಾ : ಶಿವಲಿಂಗಪ್ಪ (ಬಸವನಾಳ), ನಿಜಲಿಂಗಪ್ಪ (ಸಿದ್ಧವನಹಳ್ಳಿ). ಈಗಲೂ ಹಳ್ಳಿಯಲ್ಲಿ ವ್ಯಕ್ತಿಯನ್ನು ಹೆಸರು ಹಿಡಿದೇ ಕರೆಯುವುದು, ಮಾತನಾಡುವುದು ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಮನೆಯಲ್ಲಿಯಂತೂ ಈ ರೂಢಿ ಅನಿವಾರ್ಯವೇ ಸರಿ. ಆದರೆ ಸುಶಿಕ್ಷಿತರೊಂದಿಗೆ, ಹಿರಿಯರೊಂದಿಗೆ ವ್ಯವಹರಿಸುವಾಗ ಮಾತ್ರ ಉತ್ತರಕರ್ನಾಟಕದಲ್ಲಿ 'ಬಸವನಾಳ' ಎಂಬಂತೆ ಅಡ್ಡಹೆಸರನ್ನು ಬಳಸುವುದು, ದಕ್ಷಿಣಕರ್ನಾಟಕದಲ್ಲಿ 'ನಿಜಲಿಂಗಪ್ಪ' ಎಂಬಂತೆ ಹೆಸರನ್ನು ಬಳಸುವುದು ಇಂದಿನ ರೂಢಿ.

ಹೆಸರು, ಅಡ್ಡಹೆಸರುಗಳನ್ನೂ ಪ್ರಧಾನವಾಗಿ ಬಳಸುವುದು ಸಾಮಾನ್ಯವಾಗಿ ಹೆಣ್ಣುಮಕ್ಕಳಲ್ಲಿ ಹೆಚ್ಚು. ಉದಾ: ಲೀಲಾವತಿ ಮಾಗಡಿ, ಸರೋಜಿನಿ ಮಹಿಷಿ. ಇದಕ್ಕೆ ಕಾರಣ ತಾನು ಸ್ತ್ರೀಯೆಂಬುದನ್ನು ಹೆಸರಿನ ಮೂಲಕ ಸ್ಪಷ್ಟಪಡಿಸುವುದು ಮತ್ತು ಸ್ತ್ರೀನಾಮಗಳು ಸುಂದರವಾಗಿರುವುದು. ಇತ್ತೀಚೆ ಪುರುಷರಲ್ಲಿಯೂ ಈ ಪ್ರವೃತ್ತಿ ತೋರಿಬರುತ್ತಿದೆ. ಉದಾ : ಪಾಟೀಲ ಪುಟ್ಟಪ್ಪ, ಕಡಿದಾಳ ಮಂಜಪ್ಪ.

೨. ಸ್ವರೂಪ :

ಈಗ ಪ್ರಚಲಿತವಿರುವ ಅಡ್ಡಹೆಸರುಗಳನ್ನು ಸ್ವರೂಪ ದೃಷ್ಟಿಯಿಂದ

೧. ಗ್ರಾಮನಾಮಸೂಚಿ : -ಮಾಳವಾಡ (ಎಸ್.ಎಸ್.), ಕುಪ್ಪಳ್ಳಿ (ಪುಟ್ಟಪ್ಪ).
೨. ವೃತ್ತಿನಾಮಸೂಚಿ : -ಕುಂದಣಗಾರ (ಕೆ.ಜಿ.), ಪುರೋಹಿತ(ತಿ. ನ.)
೩. ವಸ್ತುನಾಮಸೂಚಿ : -ಕಂಬಳಿ(ಸಿದ್ದಪ್ಪ), ಎಲಿ (ಮಲ್ಲಪ್ಪಶೆಟ್ಟರು).
೪. ಇತರ ನಾಮಸೂಚಿ : -ರಡ್ಡಿ, ಬಂದಮ್ಮನವರ, ಪಂಡಿತ.

ಎಂದು ವರ್ಗೀಕರಿಸಿ ವಿವೇಚಿಸಬಹುದು.

ಗ್ರಾಮನಾಮಸೂಚಿ : ಅಡ್ಡಹೆಸರುಗಳಲ್ಲಿ ಇದು ಪ್ರಧಾನವರ್ಗ. ಮಂಡಗೆಯ ಮಾದಿರಾಜ, ಮಾರುಡಿಗೆ ನಾಚಯ್ಯ, ಹಾವಿನಹಾಳ ಕಲ್ಲಯ್ಯ ಇತ್ಯಾದಿ ಉದಾಹರಣೆಗಳಲ್ಲಿಯೂ ಗ್ರಾಮಸೂಚನೆ ಕಂಡುಬರುವುದರಿಂದ ಗ್ರಾಮನಾಮಗಳನ್ನು ಅಡ್ಡಹೆಸರುಗಳಾಗಿ ಬಳಸುವ ಪದ್ಧತಿ ತಕ್ಕಮಟ್ಟಿಗೆ ಪ್ರಾಚೀನವೆಂದೇ ಹೇಳಬೇಕು. ಇಂದು ಉತ್ತರಕರ್ನಾಟಕ ಮತ್ತು ದಕ್ಷಿಣಕರ್ನಾಟಕಗಳಲ್ಲಿ ವ್ಯಕ್ತಿನಾಮದೊಂದಿಗೆ ಗ್ರಾಮನಾಮಗಳು ಅಡ್ಡಹೆಸರಿನಂತೆ ಬಳಕೆಯಾಗುತ್ತಿದ್ದರೂ ಅವುಗಳ ಸ್ವರೂಪ ಮತ್ತು ಬಳಕೆಯಾಗುವ ರೀತಿ ಬೇರೆಬೇರೆಯಾಗಿವೆ.

ಉತ್ತರಕರ್ನಾಟಕದಲ್ಲಿ ಎಸ್.ಎಸ್.ಮಾಳವಾಡ ಹೆಸರಿನ ಮೂಲರೂಪ ಸಂಗಪ್ಪ, ಸಂಗನಬಸಪ್ಪ, ಮಾಳವಾಡ, ದಕ್ಷಿಣಕರ್ನಾಟಕದ ಕೆ.ವ್ಹಿ.ಪುಟ್ಟಪ್ಪ ಹೆಸರಿನ ಮೂಲರೂಪ ಕುಪ್ಪಳ್ಳಿ ವೆಂಕಟಪ್ಪ (ನವರ ಮಗ) ಪುಟ್ಟಪ್ಪ. ಇಲ್ಲಿ (೧) 'ಮಾಳವಾಡ' ಪೂರ್ವಜರು ವಾಸವಾಗಿದ್ದ ಊರನ್ನು ಸೂಚಿಸಿದರೆ, ಕುಪ್ಪಳ್ಳಿ ಸಧ್ಯ ವಾಸವಾಗಿರುವ ಊರನ್ನು ಸೂಚಿಸುತ್ತದೆ. ಇದು ಉತ್ತರವದರು ಪ್ರಾಚೀನತೆಪ್ರಿಯರು; ದಕ್ಷಿಣದವರು ವರ್ತಮಾನನಿಷ್ಠರು ಎಂಬುದರ ಸೂಚನೆಯಾಗಿದೆ. ೨) ಉತ್ತರದಲ್ಲಿ ಗ್ರಾಮನಾಮ ಪ್ರಧಾನವಾಗಿ ನಿಂತು, ವ್ಯಕ್ತಿನಾಮ, ಪಿತೃನಾಮ ಸಂಕ್ಷೇಪಗೊಂಡರೆ, ದಕ್ಷಿಣದಲ್ಲಿ ವ್ಯಕ್ತಿನಾಮ ಪ್ರಧಾನವಾಗಿ ನಿಂತು, ಗ್ರಾಮನಾಮ ಪಿತೃನಾಮಗಳು ಸಂಕ್ಷೇಪಗೊಳ್ಳುತ್ತವೆ. ಇದು ಉತ್ತರದವರ ದೃಷ್ಟಿಯಲ್ಲಿ 'ಕುಟುಂಬ ಪ್ರಧಾನ, ವ್ಯಕ್ತಿ ಅಪ್ರಧಾನ'ವಾಗಿದ್ದರೆ, ದಕ್ಷಿಣದವರ ದೃಷ್ಟಿಯಲ್ಲಿ ವ್ಯಕ್ತಿಪ್ರಧಾನ 'ಕುಟುಂಬ ಅಪ್ರಧಾನ'ವೆಂಬುದನ್ನು ಸೂಚಿಸುತ್ತದೆ. ಈ ಎರಡೂ ಪದ್ಧತಿಗಳು (೧. ಪ್ರಾಚೀನಪ್ರಿಯತೆ, ಕುಟುಂಬ ಪ್ರಧಾನತೆ ೨. ವರ್ತಮಾನ ನಿಷ್ಠತೆ, ವ್ಯಕ್ತಿ ಪ್ರಧಾನತೆ) ಉತ್ತರದವರು ಹೆಚ್ಚು ಜಾನಪದೀಯರು, ದಕ್ಷಿಣದವರು ಹೆಚ್ಚು ಶಿಷ್ಟಪದೀಯರೆಂಬದುನ್ನು ತಿಳಿಸುವ ಅಂಶಗಳಾಗಿವೆ. ಪ್ರಾಚೀನ ಅರಸರಲ್ಲಿ ಗಂಗರು 'ಕುವಳಾಲಪುರವರಾಧೀಶ್ವರ', ರಾಷ್ಟ್ರಕೂಟರು 'ಲತ್ತಲೂರ ಪುರವರಾಧೀಶ್ವರ', ಶಿಲಾಹಾರರು 'ತಗರಪುರವರಾಧೀಶ್ವರ' ಎಂದು ತಮ್ಮ ಪೂರ್ವಜರ ಊರ ಹೆಸರನ್ನು ಬಳಸುವ ವಿಧಾನವು, ಉತ್ತರ ಕರ್ನಾಟಕದವರು ತಮ್ಮ ಪೂರ್ವಜರ ಊರನ್ನು ಅಡ್ಡಹೆಸರಿನಂತೆ ಬಳಸುವಲ್ಲಿ ಇನ್ನೂ ಉಳಿದುಕೊಂಡುಬಂದಿವೆ.

ವೃತ್ತಿನಾಮಸೂಚಿ : ಅಡ್ಡಹೆಸರಿನಲ್ಲಿ ಇದೂ ಒಂದು ಪ್ರಧಾನವರ್ಗ. ನಮ್ಮಲ್ಲಿ ವೃತ್ತಿ ಬೆಳೆದು ಜಾತಿಯಾಗಿರುವುದರಿಂದ ವೃತ್ತಿನಾಮವಾಚಿ ಅಡ್ಡಹೆಸರುಗಳು ಜಾತಿನಾಮವಾಚಿಯೂ ಆಗಿದ್ದು, ಇಂಥ ಅಡ್ಡಹೆಸರುಗಳಿಂದ ಅವರ ವೃತ್ತಿ ಮತ್ತು ಜಾತಿ ಎರಡನ್ನೂ ತಟ್ಟನೇ ಗುರುತಿಸಬಹುದು. ಈ ವೃತ್ತಿನಾಮವನ್ನು ಅಡ್ಡಹೆಸರಿನಂತೆ ವ್ಯಕ್ತಿನಾಮಕ್ಕೆ ಅಂಟಿಸಿಕೊಳ್ಳುವ ರೂಢಿ ಶರಣರ ಕಾಲದಿಂದ ಇನ್ನೂ ದಟ್ಟವಾಗಿ ಬಂದಿತೆಂದು ತೋರುತ್ತದೆ. ಸಮಾಜದಲ್ಲಿ ಕಾಯಕಮೌಲ್ಯ ಸ್ಥಾಪನೆಯಾಗುತ್ತಲೇ ತಮ್ಮನ್ನು ವೃತ್ತಿಯಿಂದ ಗುರುತಿಸಿಕೊಳ್ಳುವುದು ಅವರಿಗೆ ಬಲು ದೊಡ್ಡ ಹೆಮ್ಮೆ ಎನಿಸಿರಬೇಕು. ಧನಗರ ಕಂಚಿಯಬ್ಬೆ(೯೮೦), ನಾವಿದ ಧೋರ(೧೦೮೭) ಇತ್ಯಾದಿ ಅಡ್ಡಹೆಸರುಯುಕ್ತ ವ್ಯಕ್ತಿನಾಮಗಳು ಬಸವಪೂರ್ವಯುಗದಲ್ಲಿ ಕಂಡುಬರುತ್ತಿದ್ದರೂ ಮಾದರ ಚೆನ್ನಯ್ಯ, ಜೇಡರ ದಾಸಿಮಯ್ಯ, ಮೇದರ ಕೇತಯ್ಯ, ಮಡಿವಳ ಮಾಚಿದೇವ, ಆಯ್ದಕ್ಕಿ ಲಕ್ಕಮ್ಮ, ಎಲೆಗಾರ ಕಾಮಣ್ಣ, ಗಾಣದ ಕನ್ನಪ್ಪ, ತಳವಾರ ಕಾಮಿದೇವ ಎಂಬಂತಹ ಹೆಸರುಗಳು ಶರಣರಲ್ಲಿ ಒಮ್ಮೆಲೆ ಹಿಂಡುಹಿಂಡಾಗಿ ಬರುವುದು ಇದಕ್ಕೆ ಉದಾಹರಣೆಯಾಗಿದೆ. ಶರಣರಿಗೆ ವೃತ್ತಿಯೊಂದು ಕಸಬುಸ್ತರದಲ್ಲಿ ನಿಂತು ಕಾಡದೆ, ಕಾಯಕಸ್ತರದಲ್ಲಿ ನಿಂತು ಪೂಜ್ಯವೆನಿಸಲು, ಅದನ್ನು ಅಡ್ಡಹೆಸರಿನಂತೆ ಅಂಟಿಸಿಕೊಳ್ಳುವುದು ವ್ಯಾಪಕವಾಗಿ ಬೆಳೆದುಬಂದಿತು. ಉತ್ತರಕರ್ನಾಟಕದಲ್ಲಿ ಈ ಪದ್ಧತಿ ಹೇರಳ; ದಕ್ಷಿಣಕರ್ನಾಟಕದಲ್ಲಿ ಇಲ್ಲವೆನ್ನುವಷ್ಟು ವಿರಳ. ಉತ್ತರಕರ್ನಾಟಕ ಶರಣರ ಆಂದೋಲನದ ಕೇಂದ್ರಭೂಮಿಯಾಗಿದ್ದುದೇ ಇದಕ್ಕೆ ಕಾರಣವಾಗಿರಬೇಕು. ಮುಂದೆ

ಇದು ಜಮಾದಾರ, ಮುಲ್ಲಾ, ಪೋಲಿಸ ಇತ್ಯಾದಿ ಹೊಸ ಹೊಸ ವೃತ್ತಿಗಳನ್ನೂ ಅಡ್ಡಹೆಸರಾಗಿ ಸ್ವೀಕರಿಸುವುದಕ್ಕೆ ದಾರಿಮಾಡಿಕೊಟ್ಟಿತು. ಈ ವರ್ಗದ ಬಣಕಾರ, ಹಡಪದ ಇತ್ಯಾದಿಗಳು ಸಮೂಹವಾಚಿ ಅಡ್ಡಹೆಸರುಗಳಾಗಿದ್ದರೆ ಬಳ್ಳೊಳ್ಳಿ, ಉಳ್ಳಾಗಡ್ಡಿ, ಕುದರಿ ಇತ್ಯಾದಿ ಆಯಾ ಕೃಷಿ-ವ್ಯಾಪಾರ ವೃತ್ತಿಗಳ ಹಿನ್ನೆಲೆಯಲ್ಲಿ ಹುಟ್ಟಿಬಂದ ಸಮೂಹವಾಚಿಯಲ್ಲದ ಅಡ್ಡಹೆಸರುಗಳಾಗಿವೆ.

ವಸ್ತುನಾಮವಾಚಿ : ಕೆಲವು ವಸ್ತುಗಳ ಸಂಬಂಧ, ಬಳಕೆ ಇತ್ಯಾದಿಗಳಿಂದಾಗಿಯೂ ಅಡ್ಡಹೆಸರುಗಳು ಬಳಕೆಗೊಂಡಿರುತ್ತವೆ. ಅಂದರೆ ವ್ಯಕ್ತಿಗಳಿಗೆ ಸಂಬಂಧಿಸಿದ ವಸ್ತುಗಳಲ್ಲಿ ಯಾವುದು ಪ್ರಧಾನವಾಗಿ ಜನರ ಗಮನ ಸೆಳೆಯುವುದೊ ಅದು ಅವರ ಅಡ್ಡಹೆಸರಾಗಿರುತ್ತದೆ. ದೊಡ್ಡಮನಿ, ಹುಣಸಿಮರದ, ಬೇವಿನಮರದ ಇತ್ಯಾದಿಗಳು ವಸ್ತುಸಂಬಂಧ ಸೂಚಿಯಾಗಿ ಬಂದುವು. ಮಯೂರವರ್ಮನ ಮನೆತನಕ್ಕೆ 'ಕದಂಬ' ಹೆಸರು ಬರಲು ಮನೆಯ ಮುಂದಿನ ಕದಂಬವೃಕ್ಷವೇ ಕಾರಣವೆಂಬುದನ್ನು ಇಲ್ಲಿ ನೆನೆಯಬಹುದು. ಮೇಲೆ ಹೇಳಿದ ಬಳ್ಳೊಳ್ಳಿ, ಉಳ್ಳಾಗಡ್ಡಿ, ಕುದರಿ ಇತ್ಯಾದಿಗಳು ಈ ವಸ್ತುವನ್ನು ಅವರು ಪ್ರಧಾನವಾಗಿ ಬಳಸುವುದರಿಂದ, ಉತ್ಪಾದಿಸುವುದರಿಂದ ಇಲ್ಲವೆ ಮಾರಾಟ ಮಾಡುವುದರಿಂದ ಬಂದುವಾಗಿರಬಹುದು. ಸೆಟ್ಟರೊಬ್ಬರು ಕತ್ತೆಗಳ ಮೇಲೆ ವ್ಯಾಪಾರ ಸಾರಿಗೆ ಮಾಡುತ್ತಿದ್ದುದರಿಂದ ಅವರಿಗೆ ಕತ್ತಿಸೆಟ್ಟರು ಹೆಸರು ಬಂದಿತು. ಊರಿಗೆ ಮೊದಲಿಗರಾಗಿ ಗೋಡೆಗಡಿಯಾರ ಖರೀದಿಸಿ ತಮ್ಮ ಮಠದಲ್ಲಿ ತೂಗುಹಾಕಿದುದರಿಂದ ಒಂದು ಜಂಗಮ ಮನೆತನಕ್ಕೆ 'ಗಡಿಯಾರಮಠ' ಎಂಬುದು ಅಡ್ಡಹೆಸರಾಗಿ ಬಳಕೆಗೊಂಡಿತು. ಅಂದರೆ ಮಿಕ್ಕ ಸೆಟ್ಟರಿಂದ, ಮಿಕ್ಕ ಮಠದವರಿಂದ ಅವರನ್ನು ಬೇರೆ ಮಾಡಿ ತೋರಿಸಲು ಆ ವಸ್ತುಗಳು ಆ ಜನರಿಗೆ ಅನುಕೂಲವಾಗಿ ಕಂಡು ಅಡ್ಡಹೆಸರಿನಲ್ಲಿ ಸೇರಿಕೊಂಡವು. ಹೀಗೆ 'ವಸ್ತುಪ್ರಾಧಾನ್ಯತೆ'ಯೂ ಅಡ್ಡಹೆಸರಿನ ಸೃಷ್ಟಿಗೆ ಕಾರಣವಾಗುತ್ತದೆ.

ಇತರ ನಾಮಸೂಚಿ : ಚಾಲುಕ್ಯ ಮೊದಲಾದವುಗಳಂತೆ ಕೆಲವು ವಂಶನಾಮ, ಜನಾಂಗನಾಮಗಳು ಅಡ್ಡಹೆಸರಾಗಿ ನಿಲ್ಲುತ್ತವೆ. ಉದಾಹರಣೆಗೆ-ರಜಪೂತ, ಮರಾಠಾ, ಆರೇರು, ರಡ್ಡಿ, ರಾಠೋಡ ಇತ್ಯಾದಿ.

ಕೆಲವು ಮನೆತನಗಳಲ್ಲಿ ಆಗಿಹೋದ ಪ್ರಸಿದ್ಧ ಪುರುಷ ಇಲ್ಲವೆ ಸ್ತ್ರೀ ಆ ಮನೆತನದ ಅಡ್ಡಹೆಸರಾಗಿ ಪರಿಣಮಿಸುತ್ತಾರೆ. ಉದಾಹರಣೆಗೆ -ಬಾಲಪ್ಪಗೋಳ, ಬಂದಮ್ಮನವರ, ಕೆಂಚರಡ್ಡೇರ, ಸಣ್ಣಕ್ಕನವರ ಇತ್ಯಾದಿ.

ವ್ಯಕ್ತಿಗಳ ರೂಪ, ವ್ಯಕ್ತಿತ್ವ ಇತ್ಯಾದಿಗಳೂ ಅಡ್ಡಹೆಸರಾಗಿ ರೂಢಿಗೊಳ್ಳುತ್ತವೆ. ಕ್ರಿಸ್ತಶಕ ೧೧೬೧ರ ಮನಗೂಳಿ ಶಾಸನ 'ಹುಬ್ಬಿನವರು' ಹೆಸರಿನ ಮನೆತನವನ್ನು ಸೂಚಿಸುತ್ತಿದ್ದು, ದಟ್ಟವಾದ ಹುಬ್ಬು ಇವರಿಗಿದ್ದುದೇ ಈ ಹೆಸರಿನ ಉಗಮಕ್ಕೆ ಕಾರಣವೆಂದು ಶ್ರೀ ಮೇವುಂಡಿ ಊಹಿಸುತ್ತಾರೆ. ಇಂದಿನ ದಾಡಿ, ಗಡಿತರಣ್ಣನವರ, ಅವಧಾನಿ, ಪಂಡಿತ ಇತ್ಯಾದಿ ಅಡ್ಡಹೆಸರುಗಳು ಇದೇ ಬಗೆಯವು.

೩. ಇತರ ಸಂಗತಿಗಳು :

ಒಬ್ಬ ವ್ಯಕ್ತಿ ಒಂದು ಮನೆತನಕ್ಕೆ ದತ್ತು ಹೋದರೆ, ಒಬ್ಬ ಹೆಣ್ಣುಮಗಳು ಗಂಡನ ಮನೆಗೆ ಬಂದರೆ ಮೊದಲಿನ ಅಡ್ಡಹೆಸರನ್ನು ಕಡ್ಡಾಯವಾಗಿ ಬದಲಿಸಬೇಕಾಗುತ್ತದೆ. ಸಮಾಜಕ್ಕೆ ಇದು ಸಮ್ಮತವಾಗಿರುವುದರಿಂದ ಇಂಥ ಪ್ರಸಂಗಗಳಲ್ಲಿ ಅಡ್ಡಹೆಸರು ತೀವ್ರ ಬದಲಾಗುತ್ತದೆ. ಆದರೆ ಅಕಾರಣವಾಗಿ ಪ್ರಯತ್ನಿಸಿದರೆ ತುಂಬ

ನಿಧಾನವಾಗಿ ಬದಲಾಗುತ್ತದೆ; ಇಲ್ಲವೆ ಕತ್ತಿಯವರು ಸಕ್ಕರಿ ಹಂಚಿದಂತಾಗುತ್ತದೆ.* ಹೀಗೆ ಅಂದವಾಗಿರದ ಅಡ್ಡಹೆಸರನ್ನು ಬಲಿಸಿಕೊಳ್ಳುವುದರ ಜೊತೆ ಕತ್ತಿ>ಕಟ್ಟಿ, ಗುದ್ದೀನ>ಗುಡ್ಡೀನ ಎಂಬಂತೆ ಅಲ್ಪ ವ್ಯತ್ಯಾಸಗೊಳಿಸಿಕೊಳ್ಳುವುದೂ ಉಂಟು. ಉತ್ತರಕರ್ನಾಟಕದಲ್ಲಿ ಅಡ್ಡಹೆಸರು ಪ್ರಧಾನವಾಗಿದ್ದರೂ ಅದನ್ನು ಕೆಲವರು ಸಂಕ್ಷೇಪಿಸುವುದಕ್ಕೆ ಸೌಲಭ್ಯಾಕಾಂಕ್ಷೆಗಿಂತ ಸುಂದರವಾಗಿರದಿದ್ದುದೇ ಕಾರಣವಾಗಿರುತ್ತದೆ. ಉದಾಹರಣೆಗೆ: ಕರಿಗೌಡರ ಈಶ್ವರನ್ >ಕೆ. ಈಶ್ವರನ್, ಕೋಣದ ಚೆನ್ನಬಸಪ್ಪ>ಕೋ. ಚೆನ್ನಬಸಪ್ಪ. ಹೀಗಾಗಿ ಸುಂದರವಾದ ಅಡ್ಡಹೆಸರು ವ್ಯಕ್ತಿಗೆ ಸಂತೋಷವನ್ನುಂಟುಮಾಡುತ್ತಿದ್ದರೆ ಸುಂದರವಲ್ಲದ ಅಡ್ಡಹೆಸರು ಆ ವ್ಯಕ್ತಿಯನ್ನು ಜೀವನದುದ್ದಕ್ಕೂ ಕೊರೆಯುತ್ತಿದ್ದು, ಈ ಕೊರಗನ್ನು ತಪ್ಪಿಸಿಕೊಳ್ಳಬೇಕೆನ್ನುವವರಿಗೆ ಸಂಕ್ಷೇಪೀಕರಣವೊಂದು ವರದಾನವೆಂದೇ ಹೇಳಬೇಕು. ಕಾನೂನುಬದ್ಧವಾಗಿಯೂ ಇಂಥ ವ್ಯತ್ಯಾಸಗಳನ್ನು ಮಾಡಿಕೊಳ್ಳುತ್ತಾರೆ. ಆದರೆ ಸರ್ಕಾರಿ ದಫ್ತರದಲ್ಲಿ ಅವರು ಏನೇ ವ್ಯತ್ಯಾಸ ಮಾಡಿಕೊಂಡರೂ ಸಮಾಜದಲ್ಲಿ ತೀವ್ರ ಬದಲಾಗದಿರುವುದನ್ನು ಗಮನಿಸಿದಲ್ಲಿ, ಅಡ್ಡಹೆಸರು ವ್ಯಕ್ತಿಯೊಂದಿಗೆ ಎಂಥ ಅವಿನಾಭಾವ ಸಂಬಂಧ ಹೊಂದಿರುವುದೆಂಬುದು ಸ್ಪಷ್ಟವಾಗುತ್ತದೆ.

ಏಕಕಾಲಕ್ಕೆ ಒಬ್ಬರಿಗೆ ಅನೇಕ ಅಡ್ಡಹೆಸರು ರೂಢಿಯಲ್ಲಿರಬಹುದು. ಉದಾಹರಣೆಗೆ -ನನ್ನ ಅಡ್ಡಹೆಸರು ಕಲಬುರ್ಗಿ. ಹಳ್ಳಿಯಲ್ಲಿ ನಮ್ಮದು ಅಂಗಡಿ ಇರುವುದಿರಂದ ಅಂಗಡಿಯವರೆಂದೂ ಕರೆಯುತ್ತಾರೆ. ನಮ್ಮ ತಂದೆ ಪವಾಡಶೆಟ್ಟರ ಮನೆಗೆ ಅಳಿಯತನಕ್ಕೆ ಬಂದ ಕಾರಣ ಪವಾಡಿ ಎಂಬುದೂ ರೂಢಿಯಲ್ಲಿದೆ. ನಮ್ಮ ಹಳ್ಳಿಯಲ್ಲಿ ನಮ್ಮದೊಂದೇ ವೀರಶೈವ ಬಣಜಿಗ ಮನೆತನವಿರುವುದರಿಂದ ಕ್ವಚಿತ್ತಾಗಿ 'ಬಣಜಿಗರು' ಎಂದೂ ಕರೆಯುತ್ತಾರೆ.

ಸಮೂಹವಾಚಿಯಾಗಿರುವ ಮೇಲುವರ್ಗದ ಗೌಡ, ಶೆಟ್ಟಿ, ಮಠ ಮತ್ಯಾದಿ ಅಡ್ಡಹೆಸರುಗಳಲ್ಲಿ ಪ್ರತಿಷ್ಠಾಮೂಲ ಇಲ್ಲವೆ ವೃತ್ತಿಮೂಲ ತಾರತಮ್ಯಗಳು ಏರ್ಪಟ್ಟಿರುತ್ತವೆ. ಉದಾಹರಣೆಗೆ : ಗೌಡರ, ದೊಡ್ಡಗೌಡರ, ಹಿರೇಗೌಡರ, ಹೊಸಗೌಡರ, ಪೋಲೀಸಗೌಡರ, ಶೆಟ್ಟರ್, ಪಟ್ಟಣಶೆಟ್ಟರ್, ಮಹಾಶೆಟ್ಟರ್, ಮಾಜನಶೆಟ್ಟರ್, ಕೋರಿಶೆಟ್ಟರ, ಬಂಗಾರಶೆಟ್ಟರ್; ಮಠ, ಹಿರೇಮಠ, ಚಿಕ್ಕಮಠ, ಮಠಪತಿ, ಗಣಾಚಾರಿ. ವಸ್ತ್ರದ, ವಿರಕ್ತಮಠ ಇತ್ಯಾದಿ. ಆದರೆ ಸಮೂಹವಾಚಿಯಾಗಿದ್ದರೂ ಕೆಳವರ್ಗದ ಹೊಲೆಯ, ಮಾದಿಗ, ಕುಂಬಾರ ಜನಾಂಗಗಳ ಅಡ್ಡಹೆಸರಿನಲ್ಲಿ ಇಂಥ ತಾರತಮ್ಯ ತೋರಿಬರುವುದಿಲ್ಲ. ಈ ಸಂಗತಿ ಈ ಎರಡೂ ವರ್ಗಗಳ "ಸಾಮಾಜಿಕ ಶ್ರೇಣಿ, ಪ್ರತಿಷ್ಠೆ"ಗಳ ಮೇಲೆ ಬೆಳಕು ಚೆಲ್ಲುತ್ತದೆ.

ಭಾಷೆಯ ರೂಪವ್ಯತ್ಯಾಸಕ್ರಿಯೆ ಅದರ ಒಂದು ಅಂಗವಾದ ಅಡ್ಡಹೆಸರುಗಳಿಗೂ ಅನ್ವಯಿಸುತ್ತದೆ. ಹೀಗಾಗಿ ಇವುಗಳ ಉಚ್ಚಾರದಲ್ಲಿಯೂ ಸಂಕ್ಷೇಪೀಕರಣ, ಸುಲಭೀಕರಣ, ಅಕ್ಷರಪಲ್ಲಟ, ಸಮರೂಪಧಾರಣೆ ಮೊದಲಾದ ಕ್ರಮಬದ್ಧ ವ್ಯತ್ಯಾಸ ತಲೆದೋರುವುದರಿಂದ, ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿಯೇ ಇವುಗಳನ್ನು ಹಿಂಜಿ ನೋಡಬೇಕೇ ಹೊರತು ಪಾಮರ ನಿಷ್ಪತ್ತಿ, ಪಂಡಿತ ನಿಷ್ಪತ್ತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಬಾರದು.

---

* ಉತ್ತರ ಕರ್ನಾಟಕದಲ್ಲಿ ಜರುಗಿದ ಘಟನೆಯಿದು : ತಮ್ಮನ್ನು ಇನ್ನು ಮೇಲೆ 'ಸಕ್ಕರಿ' ಹೆಸರಿನಿಂದ ಕರೆಯಬೇಕೆಂದು 'ಕತ್ತಿ' ಅಡ್ಡಹೆಸರಿನವರು ಸಕ್ಕರಿ ಹಂಚಿದರಂತೆ. ಅವರ ಮನೆಯಿಂದ ಸಕ್ಕರಿ ತಿನ್ನುತ್ತ ಬರುವವರು 'ಕತ್ತಿ'ಯವರ ಮನೆಯಲ್ಲಿ ಸಕ್ಕರಿ ಹಂಚಿದರು ಎಂದು ಮಾತನಾಡುತ್ತಿದ್ದರು.

ಕರ್ನಾಟಕದಲ್ಲಿ 'ಅಡ್ಡಹೆಸರು' ಅಧ್ಯಯನದ ವಸ್ತುವಾಗಿ ವಿದ್ವಾಂಸರ ಲಕ್ಷ್ಯವನ್ನು ಅಷ್ಟಾಗಿ ಸೆಳೆದಿಲ್ಲವೆಂದೇ ಹೇಳಬೇಕು. ಈಗ ನಮ್ಮ ನಾಡಿನಲ್ಲಿ ಪ್ರಚಲಿತವಿರುವ ಎಲ್ಲ ಲಕ್ಷೋಪಲಕ್ಷ ಅಡ್ಡಹೆಸರುಗಳನ್ನು ಪಟ್ಟಿಮಾಡಿ ಬಳಸುವ ವಿಧಾನ, ಸ್ವರೂಪ ಇತ್ಯಾದಿ ದೃಷ್ಟಿಗಳಿಂದ ವರ್ಗೀಕರಿಸಿ ವಿವೇಚಿಸಿದಲ್ಲಿ ಅದು ನಮ್ಮ ಪೂರ್ವಜರ ನೆಲೆ, ವೃತ್ತಿ, ವಂಶ, ಜನಾಂಗ, ಭಾಷೆ, ಮನೋಧರ್ಮ ಇತ್ಯಾದಿಗಳ ಅಧ್ಯಯನವಾಗುತ್ತದೆ; ನಮ್ಮ ಸಂಸ್ಕೃತಿಯ ಅಧ್ಯಯನವೇ ಆಗುತ್ತದೆ.

■■

ಆಕರ : ಮಾರ್ಗ ಸಂಪುಟ–೨

೪೯

ಪುಣೆ : ಸ್ಥಳನಾಮ ವಿವೇಚನೆ

ದಕ್ಷಿಣ-ಪೂರ್ವಗಳಿಂದ ದ್ರಾವಿಡರೂ, ಪಶ್ಚಿಮ-ಉತ್ತರಗಳಿಂದ ಆರ್ಯರು ಒತ್ತಿ ಬಂದ ಕಾರಣ, ಕರ್ನಾಟಕವು ಎಲ್ಲ ಮಗ್ಗಲುಗಳಲ್ಲಿ ಕಿರಿದಾಗುತ್ತ ಬಂದಿತು. ಇದರಿಂದಾಗಿ ಕಳೆದು ಹೋಗಿರುವ ಕರ್ನಾಟಕದ ಭೂಪ್ರದೇಶವನ್ನು ಪತ್ತೆ ಹಚ್ಚುವಲ್ಲಿ ಸ್ಥಳನಾಮಗಳು ವಹಿಸುವ ಪಾತ್ರ ಮುಖ್ಯವಾದುದು. ಮೌಖಿಕ ಪರಂಪರೆಗೆ ಸಂಬಂಧಿಸಿದ ಇವು, ಸವಕಳಿ ಹೊಂದುತ್ತ ಬರುವುದು ಹೆಚ್ಚು. ಹೀಗೆ ಸವೆದ ಈ ನಾಮಗಳ ಮೂಲರೂಪವನ್ನು ಕಂಡುಹಿಡಿದರೆ, ಅವುಗಳ ಮೂಲ ಭಾಷೆ ಯಾವುದು? ಮೂಲದೇಶ ಯಾವುದು? ಎಂಬುದನ್ನು ನಿಖರವಾಗಿ ಹೇಳಲು ಸಾಧ್ಯವಾಗುತ್ತದೆ.

ನರ್ಮದಾ ನದಿಯ ಉತ್ತರಭಾಗ ಉತ್ತರಾಪಥ, ದಕ್ಷಿಣಭಾಗ ದಕ್ಷಿಣಪಥವೆಂದು ಅನೇಕ ಆಧಾರಗಳು ಸ್ಪಷ್ಟಪಡಿಸುತ್ತವೆ. ಉತ್ತರದ ವಿಕ್ರಮಾದಿತ್ಯನಿಗೂ ದಕ್ಷಿಣದ ಶಾಲಿವಾಹನನಿಗೂ ನರ್ಮದೆಯ ದಡದಲ್ಲಿ ಸುದೀರ್ಘಕಾಲ ಯುದ್ಧ ನಡೆದು, ಅವರಿಬ್ಬರೂ ಈ ನದಿಯನ್ನು ಸೀಮಾರೇಖೆಯೆಂದು ಒಪ್ಪಿಕೊಂಡರೆಂದೂ, ಇದರ ಉತ್ತರಕ್ಕೆ ವಿಕ್ರಮಶಕೆ, ದಕ್ಷಿಣಕ್ಕೆ ಶಾಲಿವಾಹನಶಕೆಗಳನ್ನು ಇವರು ಪ್ರಚಾರಕ್ಕೆ ತಂದರೆಂದೂ ತಿಳಿದುಬರುತ್ತದೆ.

ಮುಂದಿನ ದಿನಗಳಲ್ಲಿ ಇದೇ ನದಿಯ ತೀರದಲ್ಲಿ ಉತ್ತರದ ಹರ್ಷವರ್ಧನನಿಗೂ, ದಕ್ಷಿಣದ ಇಮ್ಮಡಿಪುಲಿಕೇಶಿಗೂ ಯುದ್ಧ ಜರುಗಿತೆಂದೂ, ಗೆದ್ದ ಪುಲಿಕೇಶಿ "ದಕ್ಷಿಣಾಪಥೇಶ್ವರ" ಬಿರುದು ಧರಿಸಿದನೆಂದೂ ಶಾಸನಗಳು ತಿಳಿಸುತ್ತವೆ. ಹೀಗೆ ಕರ್ನಾಟಕದ ಉತ್ತರ ಮೇರೆಯಾಗಿದ್ದ ನರ್ಮದೆಯಿಂದ ಆರಂಭವಾಗುವ ಭೂಪ್ರದೇಶದ ಗ್ರಾಮಗಳು, ಜನಾಂಗಗಳು ಕರ್ನಾಟಕದ ಚಹರೆಯನ್ನೊಳಗೊಂಡಿವೆಯೆಂದೂ ಶಂಬಾ ಜೋಶಿ ತಮ್ಮ ಬರೆವಣಿಗೆಗಳ ಮೂಲಕ ಈಗಾಗಲೇ ಸ್ಪಷ್ಟಪಡಿಸಿದ್ದಾರೆ.

ಮುಂದೆ ರಾಷ್ಟ್ರಕೂಟರ ಕಾಲಕ್ಕೆ ಈ ಸೀಮಾರೇಖೆ ನರ್ಮದೆಯಿಂದ ಗೋದಾವರಿಗೆ ಇಳಿಯಿತೆಂದು ಕವಿರಾಜಮಾರ್ಗದ "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡ"

ಎಂಬ ಮಾತು ಸಾಕ್ಷಿ ನುಡಿಯುತ್ತದೆ. ತರುವಾಯದ ದಿನಗಳಲ್ಲಿ ಈ ರೇಖೆ ಇನ್ನು ದಕ್ಷಿಣಕ್ಕೆ ಇಳಿದು, ಇಂದು ಭೀಮಾ ನದಿಗೆ ಬಂದು ನಿಂತಿದೆ.

* * *

ಇನ್ನು ಪ್ರಾಚೀನ ಕರ್ನಾಟಕದ ಪಶ್ಚಿಮಸೀಮೆಯನ್ನು ಕುರಿತು ಹೇಳುವುದಾದರೆ, ಪಶ್ಚಿಮ ಘಟ್ಟದ ಮೇಲಿರುವ ಇಂದಿನ ಮುಂಬಯಿಯ ಬಡಾವಣೆಗಳಾದ ಡೊಂಬಿವಲಿ, ಕಾಂದಿವಲಿ, ಬೋರಿವಲಿಗಳ ಪ್ರಾಚೀನ ರೂಪಗಳು ಡೊಂಬಿವಳ್ಳಿ, ಕಾಂದಿವಳ್ಳಿ, ಬೋರಿವಳ್ಳಿಗಳೆಂಬ ಕನ್ನಡ ನಾಮಗಳೆಂದು ವಿದ್ವಾಂಸರು ಈಗಾಗಲೇ ಹೇಳಿದ್ದಾರೆ. ಈ ಪಶ್ಚಿಮ ಘಟ್ಟದಿಂದ ಪೂರ್ವಕ್ಕೆ ಸರಿದಂತೆ ಗ್ರಾಮನಾಮಗಳಲ್ಲದೆ ಶಾಸನ, ದೇವಾಲಯ ಮೊದಲಾದ ಕನ್ನಡ ಕುರುಹುಗಳು ಇನ್ನೂ ಅಧಿಕವಾಗುತ್ತ ಹೋಗುತ್ತದೆ. ಈ ಅಧಿಕ ಸಂಖ್ಯೆಯ ಕನ್ನಡ ಕುರುಹುಗಳನ್ನೊಳಗೊಂಡ ಪ್ರದೇಶದ ನಗರವಾಗಿರುವುದರಿಂದ, ಇಂದಿನ ಪುಣೆ ಎಂಬುದೂ ಮೂಲತಃ ಕನ್ನಡ ನಾಮವಾಗಿರಬಹುದೆನಿಸುತ್ತದೆ.

ಎರಡನೆಯದಾಗಿ ಈ ಅಭಿಪ್ರಾಯವನ್ನು ಬಂಬಲಿಸುವಂತೆ, ಇದರ ಸುತ್ತಲಿನ ಗ್ರಾಮನಾಮಗಳು ಕನ್ನಡವಾಗಿವೆ. ಉದಾ: ಪುಣೆಯ ಸಮೀಪದಲ್ಲಿರುವ ಖಡಕಿ ಎನ್ನುವುದು ಕನ್ನಡ ನಾಮವಾಗಿದ್ದು, ಶಬ್ದರೂಪದಲ್ಲಿ ಇಂದಿನ ಕರ್ನಾಟಕದ ಕಾತರಕಿ, ಕಾಖಂಡಕಿ ಇತ್ಯಾದಿಗಳಿಗೆ ಸಮಾನವಾಗಿದೆ. ಇಲ್ಲಿಯ ಕೊನೆಯ ಕಿ ಎಂಬುದು ದ್ರಾವಿಡ ಕೆಯ್ ಪ್ರದೇಶ ಎಂಬುದರ ಸವೆದರೂಪವೆಂದು ಈಗಾಗಲೇ ವಿದ್ವಾಂಸರು ಒಪ್ಪಿಕೊಂಡಿದ್ದಾರೆ.

ಪುಣೆ ನೆರೆಯ ಇನ್ನೊಂದು ಗ್ರಾಮ ಶಿರೂರ ಎಂಬುದೂ ಕನ್ನಡನಾಮವೆಂದು ಬೇರೆ ಹೇಳಬೇಕಿಲ್ಲ. ಈ ಹೆಸರಿನ ಅನೇಕ ಊರುಗಳು ಕರ್ನಾಟಕದಲ್ಲಿವೆ. ಮತ್ತು ಇದರ ಉತ್ತರಾರ್ಧದ 'ಊರು' (ಸಿರಿ+ಊರು) ಎಂಬುದು ಅಚ್ಚಗನ್ನಡ ಪದವಾಗಿದೆ.

ಇಲ್ಲಿ ಗಮನಿಸಬೇಕಾದ ಪುಣೆ ಸಮೀಪದ ಇನ್ನೊಂದು ಗ್ರಾಮ ಶಿವನೇರಿ. ಇಲ್ಲಿಯ ಶಿವನ ಎಂಬ ಪದ ಕನ್ನಡ ಷಷ್ಠೀವಿಭಕ್ತಿಪ್ರತ್ಯಯವನ್ನೊಳಗೊಂಡಿದೆ. ಏರಿ ಅಂದರೆ ದ್ರಾವಿಡ ಭಾಷೆಯಲ್ಲಿ ಕೆರೆ ಎಂದು ಅರ್ಥ. ಕೆರೆಯ ಸಾಮೀಪ್ಯ ಕಾರಣವಾಗಿ ಶಿವನೇರಿ ಎಂಬ ಹೆಸರು ಇದಕ್ಕೆ ಬಂದಿದೆ. ಹಾವೇರಿ ಎಂಬುದೂ ಹೀಗೆಯೇ ರೂಪಗೊಂಡ ಗ್ರಾಮನಾಮವಾಗಿದೆ.

ಇಂದು ಪುಣೆಯ ಭಾಗವಾಗಿರುವ ಚಿಂಚವಾಡ ಗ್ರಾಮವು ಕರ್ನಾಟಕದ ಪ್ರಸಿದ್ಧ ಭೈರವನ ಕ್ಷೇತ್ರವಾದ (ಆದಿ)ಚುಂಚನಗಿರಿ ಇತ್ಯಾದಿ ಸ್ಥಳನಾಮಗಳನ್ನು ನೆನಪಿಸುತ್ತದೆ. ಚಿಂಚ<ಚುಂಚ=ಮೂಗು. ಉದ್ದನೆಯ ಮೂಗು ಕಾರಣವಾಗಿ ಭೈರವನ ಇನ್ನೊಂದು ಹೆಸರು ಚುಂಚಪ್ಪ (ಜುಂಜಪ್ಪ). ಚುಂಚ ಎಂಬುದೇ ಉಚ್ಚಾರದಲ್ಲಿ ಚಿಂಚವಾಗಿ, ಚಿಂಚಲಿ ಇತ್ಯಾದಿ ಭೈರವನ ಸ್ಥಾನಗಳು ಕರ್ನಾಟಕದಲ್ಲಿ ಕಂಡುಬರುತ್ತವೆ. ಆಶ್ಚರ್ಯದ ಸಂಗತಿಯೆಂದರೆ ಪುಣೆಯ ಭಾಗವಾಗಿರುವ ಈ ಚಿಂಚವಾಡದ ಗ್ರಾಮದೇವತೆ ಭೈರವನಾಥ. ಈತನ ಅರ್ಚಕರು ಗುರವ (ಹೂಗಾರ) ಸಮಾಜದವರು. ಇಂದಿಗೂ ಗುರವ ಸಮಾಜವು ಕರ್ನಾಟಕದಲ್ಲಿ ದೇವರ ಪೂಜಾರಿಗಳಾಗಿಯೇ ಉಪಜೀವಿಸುತ್ತಾರೆ. ಈ ಚಿಂಚವಾಡದ ಉತ್ತರಪದ 'ವಾಡ' ಎಂಬುದು ಕನ್ನಡದ ಬಾಡ ಎಂಬುದರ ಸಂಸ್ಕೃತರೂಪ. (ಶಿವಾಜಿಯ ತಾಯಿಯ ಜೀಜಾಬಾಯಿ ಎಂಬ ಹೆಸರು ಚಿಂಚಾಬಾಯಿ ಎಂಬುದರ ಪರಿವರ್ತಿತ ರೂಪವಾಗಿರಬಹುದು). ಒಟ್ಟಾರೆ

ಪುಣೆಯ ಸುತ್ತಲಿನ ಗ್ರಾಮನಾಮಗಳು ಕನ್ನಡವಾಗಿರುವುದರಿಂದ, ಪುಣೆ ಗ್ರಾಮನಾಮವೂ ಕನ್ನಡವಾಗಿರುವುದು ಸಹಜ.

ಈ ನಗರದ ಮೂಲ ನಾಮರೂಪ ಇಂದು ಗುರುತು ಸಿಗದಷ್ಟು ಸವಕಳಿ ಹೊಂದಿದೆ. ರಾಷ್ಟ್ರಕೂಟ ೩ನೆಯ ಕೃಷ್ಣನ ಎರಡು ತಾಮ್ರಪಟಗಳಲ್ಲಿ (ಕ್ರಿ.ಶ. ೭೫೮, ಕ್ರಿ.ಶ. ೭೬೮) ಇದು ಪುಣ್ಯವಿಷಯ, ಪೂನಕ ವಿಷಯವೆಂದು ವಿಭಾಗೀಯ ಹೆಸರಾಗಿ ಕಾಣಿಸಿಕೊಂಡಿದೆ. ಶಿಲಾಹಾರ ದೊರೆ ಅಪರಾಜಿತನ ತಾಮ್ರಪಟದಲ್ಲಿ (ಕ್ರಿ.ಶ. ೯೯೩) ಪುಣಕ ವಿಷಯವೆಂದು ಇದನ್ನು ಹೆಸರಿಸಲಾಗಿದೆ. ಇವೆಲ್ಲ ಸಂಸ್ಕೃತ ಶಾಸನಗಳು. ದೇಶಿ ಹೆಸರನ್ನು ಸಂಸ್ಕೃತಗೊಳಿಸಿ ಅಣ್ಣಿಗೆರೆ=ಅನ್ಯತಟಾಕ, ಬಾಗೇಪಳ್ಳಿ=ಭಾಗ್ಯವಲ್ಲೀ ಎಂದು ಕರೆಯುವ ರೀತಿಯಲ್ಲಿ ಇದನ್ನು ಪುಣ್ಯವಿಷಯವೆಂದು ಕರೆಯಲಾಗಿದ್ದು, ಈ ಪಂಡಿತನಿಷ್ಪತ್ತಿ ನೂರಕ್ಕೆ ನೂರು ಸರಿಯಾದುದಲ್ಲ. ಪ್ರಾಚೀನಕಾಲದಲ್ಲಿ ಪುಣ್ಯ, ಪಾಪ ಇತ್ಯಾದಿ ಪರಿಕಲ್ಪನೆಯಲ್ಲಿ ಗ್ರಾಮನಾಮ ಹುಟ್ಟುತ್ತಿರಲಿಲ್ಲ. ಮರಾಠಿ ದಫ್ತರ್‌ಗಳಲ್ಲಿ ಈ ನಗರವನ್ನು ಪುನೌಡಿ ಎಂದು ಕರೆಯಲಾಗಿದ್ದು, ಇದು ಪುನೆ+ವಾಡಿ ಶಬ್ದಗಳ ಸಂಕೋಚರೂಪವೆಂದು ವಿದ್ವಾಂಸರು ಹೇಳುತ್ತಿದ್ದು, ನಿಜನಾಮ ಶೋಧದಲ್ಲಿ ಇದೂ ನೆರವಾಗುವುದಿಲ್ಲ. ಹೀಗಾಗಿ ಮೇಲೆ ಚರ್ಚಿಸಿದ ಮೇರೆಗೆ ಸುತ್ತಲಿನವು ಕನ್ನಡ ನಾಮಗಳಾಗಿರುವುದರಿಂದ ಇದರ ಮೂಲವನ್ನು ಕನ್ನಡದಲ್ಲಿಯೇ ಹುಡುಕಬೇಕಾಗುತ್ತದೆ.

ಯಾವುದೇ ಗ್ರಾಮನಾಮವನ್ನು ನೇರವಾಗಿ ಅರ್ಥೈಸುವುದು ಸಾಧ್ಯವಾಗದಿದ್ದರೆ, ಅದನ್ನು ಹೋಲುವ ಇತರ ಗ್ರಾಮನಾಮಗಳನ್ನು ಅವಲಂಬಿಸಬೇಕಾಗುತ್ತದೆ. ಈ ದಿಕ್ಕಿನಲ್ಲಿ ಆಲೋಚಿಸಿದರೆ, ಕನ್ನಡ ಗ್ರಾಮನಾಮಗಳ ಕೊನೆಯಲ್ಲಿಯ 'ಕೆಯ್' (=ಸ್ಥಳ ಪ್ರದೇಶ) ಎಂಬುದರ ಸವೆದ ರೂಪಗಳಾದ (ಕೆ>)ಗೆ, ಗಿ ಪ್ರತ್ಯಯಗಳು ಮರಾಠಿ ಪ್ರಭಾವಿತ ಪ್ರದೇಶದಲ್ಲಿ ಉದುರಿ ಹೋಗಿ ಉಳಿದುಕೊಂಡಿರುವ (ನಿಪ್ಪಣಗೆ>) ನಿಪ್ಪಾಣಿ, (ತೇರಣಿಗೆ>) ತೇರಣಿ, (ಕುರುವಣಿಗೆ>) ಕುರುಣಿ ಎಂಬಂಥ ರೂಪಗಳು ಸಿಗುತ್ತದೆ. ಪೂಣೆ (ಪುಣೆ)ಎನ್ನುವುದೂ ಹೀಗೆ ಕೊನೆಯ ಅಕ್ಷರ ಕಳಚಿಕೊಂಡ ಶಬ್ದ ರೂಪವಾಗಿರಬಹುದು. ಪುಣೆ ನಾಮವನ್ನು ಹೋಲುವ ಇನ್ನೊಂದು ಗ್ರಾಮನಾಮ ದಾಮಣೆ. ಇದರ ಶಾಸನಸ್ಥ ರೂಪ ದಮ್ಮಣಗೆ. ಇದು ದಮ್ಮಣಕೆಯ್>ದಮ್ಮಣಕೆ>ದಮ್ಮಣಗೆ>ದಮ್ಮಣಗಿ>ದಾಮಣೆ ಎಂದಾಗಿದೆ. ಇಂಥ ಗ್ರಾಮನಾಮಗಳ ಮಧ್ಯದಲ್ಲಿ ಕಾಣಿಸುವ ಣ ಎಂಬುದು ಕನ್ನಡದ ಅಣ್ಣ ಎಂಬುದರ ಸವೆದ ರೂಪ. ಹೀಗಾಗಿ ಇದು ದಮ್ಮಣ್ಣ ಹೆಸರಿನ ವ್ಯಕ್ತಿಯ ಸ್ಥಳ(ಕೆಯ್)ವಾಗಿದೆ. ಹೀಗೆ ದಾಮಣೆ ಎಂಬುದರ ಮೂಲರೂಪ ದಮ್ಮಣಗೆ ಆಗಿದ್ದರೆ, ಇದನ್ನು ಹೋಲುವ ಪೂಣೆ ಎಂಬುದರ ಮೂಲರೂಪ 'ಪೂಣಗೆ' (ಪೂಣಕೆ) ಇರಬಹುದೆನಿಸುತ್ತದೆ. ಮೇಲೆ ಹೇಳಿದ ಶಾಸನೋಕ್ತ ಪೂನಕ, ಪುಣಕ ರೂಪಗಳೂ ಈ ನಿಲುವನ್ನು ಬೆಂಬಲಿಸುತ್ತವೆ. ಅದೇನೇ ಇರಲಿ, ಪೂಣಗೆ ಎಂಬುದರ ಕೊನೆಯ 'ಗೆ'ಯನ್ನು ಹೊರತುಪಡಿಸಿದರೆ ಉಳಿಯುವ ಪೂಣ ಎಂಬುದು ವ್ಯಕ್ತಿನಾಮವೆನಿಸಬೇಕಾದರೆ ನಡುವೆ ಅಕ್ಷರವೊಂದು ಅವಶ್ಯವೆನಿಸುತ್ತದೆ. ಕರಗಿ ಹೋಗಿರುವ ಅದನ್ನು ಊಹೆಯಿಂದ ತುಂಬಬೇಕಾಗುತ್ತದೆ.

ಕನ್ನಡದಲ್ಲಿ ಕರಗುವ ಅಕ್ಷರಗಳೆಂದರೆ ಯ ರ ಲ ವ ಇತ್ಯಾದಿ ಅರ್ಧಸ್ವರಗಳು. ಈ ಪೂಣ ಪದಕ್ಕೆ ಅಣ್ಣ ಎಂಬ ಅರ್ಥ ಬರಬೇಕಾದರೆ ಮಧ್ಯದಲ್ಲಿ ಅರ್ಧಸ್ವರ 'ವ' ಸೇರಿಸುವುದೇ ಸೂಕ್ತವೆನಿಸುತ್ತದೆ. ಹಾಗೆ ಸೇರಿಸಿದರೆ ಪೂವಣ (<ಪೂವಣ್ಣ) ಎಂಬ ಪದ ರೂಪುಗೊಳ್ಳುತ್ತದೆ. ದಮ್ಮಣ್ಣ ಎಂಬುವನ ಕೆಯ್ (ಸ್ಥಳ) ದಮ್ಮಣಗೆ, ಇದೇ ರೀತಿ ಪೂವಣ್ಣ (>ಹೂವಣ್ಣ) ಎಂಬವನ ಕೆಯ್ (ಸ್ಥಳ) ಪೂವಣಗೆ.

ಕಾಲಕ್ರಮದಲ್ಲಿ ಇಲ್ಲಿಯ ಗೆ ಕಳಚಿ ಹೋಗಿ, ದಾಮಣೆ ಆದಂತೆ ಪೂವಣೆ ಆಗಿರಬಹುದು. ಆಮೇಲೆ ಅರ್ಧಸ್ವರ ವ ಕರಗಿ ಹೋಗಿ ಪೂಣೆ, ಪುಣೆ, ಪೂಣಾ, ಪೂನಾ ಇತ್ಯಾದಿ ರೂಪ ಉಳಿದುಕೊಂಡಿರಬಹುದು.

ಒಟ್ಟಾರೆ, ಇದು ಪ್ರಸಿದ್ಧ ವ್ಯಕ್ತಿಯಾಗಿದ್ದ ಪೂವಣ್ಣ ಅಂದರೆ ಹೂವಣ್ಣನೆಂಬವನ ಹೆಸರಿನಲ್ಲಿ ಬೇರೊಬ್ಬರು ಕಟ್ಟಿಸಿದ ಅಥವಾ ಅವನೇ ಕಟ್ಟಿಸಿದ ಗ್ರಾಮವಾಗಿರುವ ಸಾಧ್ಯತೆಯಿದೆ. ಬಂಟ್ವಾಳ ತಾಲೂಕಿನ ಪೂಣಚಾ ಎಂಬ ಗ್ರಾಮ ನಾಮವೂ ಇದಕ್ಕೆ ಸಮಾನವಾದುದಾಗಿದೆ. ಕರ್ನಾಟಕದಲ್ಲಿ ಹೂವಿನಹಳ್ಳಿ ಗ್ರಾಮವಿದೆ. ಇವರ ನಿಜರೂಪ ಹೂವನ (ಹೂವನೆಂಬವನ ಹಳ್ಳಿ). ಈ ಮೇರೆಗೆ ಪೂಣಾಯೆನ್ನುವುದೂ ಪೂವಣ್ಣ ಹೆಸರಿನ ಕನ್ನಡ ವ್ಯಕ್ತಿಯೊಬ್ಬನ ಹೆಸರಿನಲ್ಲಿ ಹುಟ್ಟಿದ ಗ್ರಾಮವಾಗಿರಬಹುದು.

ಯಾವುದೇ ಪ್ರದೇಶದಲ್ಲಿ ಒಂದೇ ಹೆಸರಿನ ಹಲವು ಗ್ರಾಮಗಳು ಕಂಡುಬರುತ್ತವೆ. ಇಂಥವುಗಳನ್ನು ಪ್ರತಿಕರಣ ಗ್ರಾಮನಾಮ (Duplicative Place name) ಎಂದು ಕರೆಯುತ್ತಾರೆ. ಅಮೇರಿಕೆಯಲ್ಲಿ ಬರ್ಲಿನ್ ಹೆಸರಿನ ೩೨, ರೋಮ್ ಹೆಸರಿನ ೨೧, ವಿಯನ್ನಾ ಹೆಸರಿನ ೧೯ ಗ್ರಾಮಗಳಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಕರ್ನಾಟಕ ಮಹಾರಾಷ್ಟ್ರಗಳಲ್ಲಿಯೂ ಇಂಥ ಪ್ರತಿಕರಣ ನಾಮಗಳಿರುವುದು ಸಹಜ. ನಮಗೆ ತಿಳಿದಮಟ್ಟಿಗೆ ಪುಣೆ ಉಚ್ಚಾರಸಾಮ್ಯದ ಪ್ರತಿಕರಣಗ್ರಾಮ ನಾಮ ಸೊಲ್ಲಾಪುರ ಜಿಲ್ಲೆಯ ಪುಣಜೆ ಅಥವಾ ಪುಳಜೆ (ಇದರ ಸಂಸ್ಕೃತ ರೂಪ ಪೂರ್ಣಜಾ). ಇಲ್ಲಿಯ ಉತ್ತರಾರ್ಧದ ಜೆ ಎನ್ನುವುದು ಕೆಯ್>ಕೆ>ಚೆ>ಜೆ ಎಂದು ಬದಲಾಗುತ್ತ ಬಂದಿದೆ. ಬಹುಶಃ ಪೂವಣ್ಣಕೆಯ್>ಪೂವಣಕೆಯ್> ಪೂಣಕೆಯ್> ಪೂಣಕೆ>ಪೂಣಚೆ>ಪೂಣಜೆ>ಪುಣಜೆ ಎಂದೂ, ಪೂವಣ್ಣಕೆಯ್>ಪೂವಣಕೆಯ್> ಪೂಣಕೆಯ್>ಪೂಣಕೆ>ಪೂಳಚೆ>ಪೂಳಜೆ>ಪುಳಜೆ ಎಂದೂ ಎರಡು ದಾರಿಗಳಲ್ಲಿ ಬೆಳೆದಿರಬಹುದು.

ಒಟ್ಟಾರೆ, ಪೂವಣ್ಣ ಹೆಸರಿನಲ್ಲಿ ಹುಟ್ಟಿದ ಒಂದು ಗ್ರಾಮ ಪುಣಜೆ ಎಂದಾದರೆ, ಅದೇ ವ್ಯಕ್ತಿ ಹೆಸರಿನಲ್ಲಿ ಹುಟ್ಟಿದ ಇನ್ನೊಂದು ಗ್ರಾಮ ಪೂಣೆ ಎಂದಾಯಿತು.

ಗ್ರಾಮನಾಮಗಳ ಬೆಳವಣಿಗೆಯ ಇತಿಹಾಸದಲ್ಲಿ ನಿಸರ್ಗವಾಚಿ ನಾಮಗಳುಳ್ಳವು ಹಳೆಯ ಊರುಗಳು (ಕಲ್ಲೂರು), ಜನಾಂಗವಾಚಿ ನಾಮಗಳುಳ್ಳವು ಈಚಿನವು (ಮುಂಡರಗಿ), ವ್ಯಕ್ತಿವಾಚಿ ನಾಮಗಳುಳ್ಳವು (ಚಾಮರಾಜನಗರ) ಇನ್ನೂ ಈಚಿನವು- ಎಂಬ ಮೂರು ಘಟ್ಟಗಳು ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ, ವ್ಯಕ್ತಿವಾಚಿ ಮೂಲದ ಇಂದಿನ ಪುಣೆನಗರವು ಮೂಲತಃ ಗ್ರಾಮಗಳ ಬೆಳವಣಿಗೆಯ ಇತಿಹಾಸದ ಮೂರನೆಯ ಘಟ್ಟದಲ್ಲಿ ಹುಟ್ಟಿದುದಾಗಿದೆ.

■■

ಆಕರ : ಮಾರ್ಗ ಸಂಪುಟ–೩

೫೦

ಬನವಾಸಿ : ಸ್ಥಳನಾಮ ವಿವೇಚನೆ

ಸ್ಥಳನಾಮವಿದ್ವಾಂಸರಿಗೆ 'ಬನವಾಸಿ' ಹೆಸರಿನ ನಿಷ್ಪತ್ತಿ ಇಂದಿಗೂ ಒಂದು ಆಹ್ವಾನವಾಗಿ ನಿಂತಿದೆ. ನಮ್ಮ ನಾಡಿನ ಪ್ರಾಚೀನತಮ ಮತ್ತು ಪ್ರಥಮ ರಾಜಧಾನಿಯಾದ ಇದು ಬೌದ್ಧ-ಜೈನ-ಹಿಂದೂ ಕೃತಿಗಳಲ್ಲಿ, ಪ್ರವಾಸಿಗಳ ದಿನಚರಿಗಳಲ್ಲಿ, ಶಾಸನ -ಐತಿಹ್ಯಗಳಲ್ಲಿ ಉದ್ದಕ್ಕೂ ಉಲ್ಲೇಖಗೊಂಡಿದೆ. ಅಲ್ಲಿ ಜಯಂತಿ-ವೈಜಯಂತಿ ಮತ್ತು ಇವುಗಳ ಅನೇಕ ನಾಮರೂಪಗಳೂ, ಬನವಸೆ-ಬನವಾಸಿ ಮತ್ತು ಇವುಗಳ ಅನೇಕ ನಾಮರೂಪಗಳೂ ಕಂಡುಬರುತ್ತವೆ. ಈ ಬನವಸೆ-ಬನವಾಸಿಗಳಲ್ಲಿ ಯಾವುದು ಮೂಲ, ಯಾವುದು ನಿಷ್ಪನ್ನವೆಂಬುದು ಚಿಂತನೀಯ ವಿಷಯವಾಗಿದೆ.

ಕನ್ನಡ ಪದಗಳ ಪ್ರಾರಂಭದಲ್ಲಿ ಒಂದು ದೀರ್ಘ ಇಲ್ಲವೆ ಎರಡು ಹ್ರಸ್ವ ವರ್ಣಗಳು ಅತ್ಯವಶ್ಯ. ತರುವಾಯದ ಅಕ್ಷರ ಹ್ರಸ್ವವಾಗಿದ್ದರೂ ಆಡುಮಾತಿನಲ್ಲಿ ದೀರ್ಘವಾಗುತ್ತದೆ: ಮಾದರ ಚೆನ್ನಯ್ಯ >ಮಾದಾರ ಚೆನ್ನಯ್ಯ, ಹೊಸಕೆರೆ > ಹೊಸಕೇರಿ, ಈ ಮೇರೆಗೆ ಬನವಸೆ>ಬನವಾಸೆ ಆಗಿ, ಪದಾಂತ್ಯದ 'ಎ'ಕಾರವು; 'ಇ'ಕಾರವಾಗುವ ತತ್ವಕ್ಕನುಸರಿಸಿ ಕೊನೆಗೆ ಇದು 'ಬನವಾಸಿ' ಎಂಬ ರೂಪಕ್ಕೆ ತಿರುಗಿದೆ. ಒಟ್ಟಿನಲ್ಲಿ 'ಬನವಸೆ' ಮೂಲದ ರೂಪ, 'ಬನವಾಸಿ' ತರುವಾಯದ ರೂಪ.

ಯಾವುದೇ ಪದಕ್ಕೆ ಎರಡು ರೂಪಗಳಿದ್ದರೆ ಗ್ರಂಥಸಂಪಾದನತತ್ವದ ಪ್ರಕಾರ ಇವುಗಳಲ್ಲಿ ಸಾಮಾನ್ಯವಾಗಿ ಸರಳರೂಪ ಅರ್ವಾಚೀನವಾಗಿರುತ್ತದೆ. ಅಶುದ್ಧವಾಗಿರುತ್ತದೆ. ಈ ಮೇರೆಗೆ ಕೆಲವು ವಿದ್ವಾಂಸರು "ಬನ+ವಾಸಿ" ಎಂದು ತೊಂದರೆಯಿಲ್ಲದೆ ಅರ್ಥವತ್ತಾಗಿ ಬಿಡಿಸಿ, ಒಪ್ಪಿಕೊಂಡಿರುವ "ಬನವಾಸಿ' ಎಂಬ ಸರಳರೂಪ ಅರ್ವಾಚೀನ, ಅಶುದ್ಧವೆನ್ನಬೇಕಾಗುತ್ತದೆ. ಇವರ ಮಾದರಿಯಲ್ಲಿಯೇ ಕೆರವಸೆ, ತೊಗರಸೆ, ವಡ್ಡರಸೆ ಗ್ರಾಮನಾಮಗಳನ್ನು ಕೆರ+ವಸೆ, ತೊಗ+ರಸೆ, ವಡ್ಡ+ರಸೆ ಎಂದು ಬಿಡಿಸಿದರೆ ಪೂರ್ವಪದ ಹೋಗಲಿ, ಉತ್ತರಪದಗಳಾದ ವಸೆ, ರಸೆಗಳೂ ಅರ್ಥವಿಲ್ಲದ ಪದಗಳಾಗಿಬಿಡುತ್ತವೆ. ಆದುದರಿಂದ 'ಬನವಸೆ'ಯನ್ನೇ ಶುದ್ಧರೂಪವೆಂದಿಟ್ಟುಕೊಂಡು, ಈ ಮಾದರಿಯ ಹೆಸರುಗಳನ್ನು

೧. ತೊಗರ + ಸೆ

ವಡ್ಡರ + ಸೆ

೨. ಬನವ + ಸೆ

ಕೆರವ + ಸೆ

ಎಂದು ವಿಗ್ರಹಿಸಿ, ಅರ್ಥ ಹುಡುಕುವುದು ಅನಿವಾರ್ಯವಾಗುತ್ತದೆ. ಈ ನಾಲ್ಕು ಗ್ರಾಮನಾಮಗಳಲ್ಲಿ ತೊಗರ, ವಡ್ಡರ ಒಂದು ಗುಂಪು; ಬನವ, ಕೆರವ ಇನ್ನೊಂದು ಗುಂಪು, 'ಮುಂಡರಗಿ' ಗ್ರಾಮನಾಮದ ಪೂರ್ವಪದವಾದ 'ಮುಂಡರ' ಎಂಬುದು 'ಮುಂಡ' ಜನಾಂಗನಾಮದ ಷಷ್ಠೀಬಹುವಚನ ರೂಪವಾಗಿರುವಂತೆ ಇಲ್ಲಿಯ ತೊಗರ, ವಡ್ಡರ ಎಂಬಿವು ತೊಗ,[೧] ವಡ್ಡ ಹೆಸರಿನ ಜನಾಂಗನಾಮಗಳ ಷಷ್ಠೀ ಬಹುಚನರೂಪಗಳಾಗಿವೆ.

ಇನ್ನು ಎರಡನೆಯ ಗುಂಪಿನ ಬನವ, ಕೆರವ ಎಂಬಿವುಗಳ ವಿಚಾರ: ಕೇಶಿರಾಜ ಉದಾಹರಿಸಿದ ಕಾಟ, ಮಾಚ, ತಿಪ್ಪಗಳಂತೆ 'ಕಸವ' ಎಂಬುದೂ ಅಂಕಿತನಾಮವಾಗಿದೆ. ಇದೇ ರೀತಿ ಇಲ್ಲಿಯ ಬನವ, ಕೆರವಗಳೂ ಅಂಕಿತನಾಮಗಳೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಇವುಗಳಲ್ಲಿ ಬನವಪ್ಪ ಅಥವಾ ಬನವಮ್ಮಗಳ ಸಣ್ಣಿಸಿದ ರೂಪ ಬನವ ಆಗಿರಬಹುದು.[೨] ಅದೇನೇ ಇರಲಿ ಪೂರ್ವಪದ ಬನವ ಎಂಬುದು ವ್ಯಕ್ತಿನಾಮವೆಂಬುದು ಗಟ್ಟಿಮಾತು. ಇದನ್ನು ಬೆಂಬಲಿಸುವಂತೆ ಶಾಸನಗಳಲ್ಲಿ ಬನವಳ್ಳಿ, ಬನವೂರು ಹೆಸರಿನ ಗ್ರಾಮಗಳೂ ಬನವಣ್ಣ, ಬನವಪ್ಪ, ಬನವಿಭಟ್ಟ, ಬನವಿಗಾವುಂಡ, ಬನವಿಗೊಂಡ[೩] ಎಂಬ ಅಂಕಿತನಾಮಗಳೂ ಸಿಗುವುದನ್ನು ಇಲ್ಲಿ ನೆನೆಯಬೇಕು.

ಈಗ ಉತ್ತರಲ್ಲಿರುವ 'ಸೆ' ಆಕೃತಿವಿಾ ವಿಚಾರ: ಯ್, ವ್ ಮೊದಲಾದವು ಅರ್ಧಸ್ವರೂಪಗಳಾದುದರಿಂದ ಪದಮಧ್ಯ ಮತ್ತು ಪದಾಂತ್ಯಸ್ಥಾನಗಳಲ್ಲಿ ಅವು ಬಿದ್ದುಹೋಗುತ್ತವೆ. ಈ ತತ್ವದಂತೆ 'ಸೆಯ್' ಆಕೃತಿಮಾದ ಕೊನೆಯ 'ಯ್' ಬಿದ್ದುಹೋಗಿ 'ಸೆ' ಎಂಬುದು ಇಲ್ಲಿ ಉಳಿದಿರಬಹುದು. ದ್ರಾವಿಡಭಾಷೆಯ ಚ್>ಸ್ ವ್ಯತ್ಯಾಸ ಕ್ರಿಯೆಯ ಹಿನ್ನೆಲೆಯಲ್ಲಿ ಈ 'ಸೆಯ್' ಎಂಬುದರ ರೂಪ 'ಚೆಯ್' ಎಂದೂ, ಕ್>ಚ್ ವ್ಯತ್ಯಾಸಕ್ರಿಯೆಯ ಹಿನ್ನೆಲೆಯಲ್ಲಿ ಈ 'ಚೆಯ್' ಎಂಬುದರ ಹಿಂದಿನ ರೂಪ ಕೆಯ್ ಎಂದೂ ಹೇಳಬೇಕಾಗುತ್ತದೆ. ಇದರಿಂದ 'ಬನವ+ಸೆ'ಯ ಹಳೆಯ ರೂಪ 'ಬನವ+ಸೆಯ್', ಇನ್ನೂ ಹಳೆಯ ರೂಪ 'ಬನವ+ಚೆಯ್', ಮತ್ತೂ ಹಳೆಯ ರೂಪ 'ಬನವ+ಕೆಯ್' ಎಂದು ಸ್ಪಷ್ಟವಾಗುತ್ತದೆ. 'ಕೆಯ್' ಎಂಬ ಪದಕ್ಕೆ ಪ್ರದೇಶ, ಸ್ಥಳವೆಂದು ಅರ್ಥವಿರುವದರಿಂದ ಬನವಕೆಯ್>ಬನವಚೆಯ್>ಬನವಸೆಯ್>ಬನವಸೆ ಎಂದರೆ ಬನವ ಎಂಬವನ ಸ್ಥಳ ಅಥವಾ ಗ್ರಾಮವೆಂದು ಅರ್ಥ.

---

೧. ಶಾಸನಗಳಲ್ಲಿ ದೀರ್ಘಚಿಹ್ನೆ ಬಳಸುವದಿಲ್ಲವಾದದುದರಿಂದ ಇದರ ಸರಿಯಾದ ರೂಪ ತೋಗ ಇರಬಹುದು. ತೋಗೆರೆ (ತೋಗ+ಕೆರೆ) ಹೆಸರಿನ ಗ್ರಾಮ ಮೈಸೂರು ಪ್ರದೇಶದಲ್ಲಿರುವದನ್ನು ಗಮನಿಸಬೇಕು.

೨. 'ಪ್ರಣವ'ದ ತದ್ಭವರೂಪ ಬನವ ಆಗಿರಬಹುದೇ ? ಕದಂಬರ ಮೂಲಗ್ರಾಮವಾದ ತಾಳಗುಂದದಲ್ಲಿ ಪ್ರಣವೇಶ್ವರ ಹೆಸರಿನ ದೇವರಿರುವುದನ್ನೂ, ಕದಂಬರು ಈ ದೇವರ ಭಕ್ತರೆಂಬುದನ್ನೂ ಇಲ್ಲಿ ನೆನೆಯಬೇಕು.

೩. ಇಲ್ಲಿ 'ಬನವಿ'ರೂಪ ಚಿಂತನೀಯ : ಬನವಯ್ಯ+ಭಟ್ಟ>ಬನವೇಭಟ್ಟ>ಬನವಿಭಟ್ಟ, ಬನವಯ್ಯ +ಗಾವುಂಡ>ಬನವೇಗಾವುಂಡ>ಬನವಿಗಾವುಂಡ>ಬನವಿಗೊಂಡ ಹೀಗೆ ರೂಪ ಸಿದ್ಧಿಸುವುದು ಕನ್ನಡದಲ್ಲಿ ಸಾಮಾನ್ಯ.

ಈ ಬನವಕೆಯ್ ಪ್ರದೇಶದಲ್ಲಿಯೇ ಗ್ರಾಮನಾಮಗಳಾಗಿ ತೊರೆಯಕೆಯ್ (ತೊರ್ಕೆ), ಮೂಲಕೆಯ್ (ಮೂಲ್ಕಿ) ಎಂಬ ಸಮಾನರೂಪಗಳು ಸಿಗುವುದರಿಂದ, ಅಂದಿನ ಕಾಲದಲ್ಲಿ ಊರುಗಳಿಗೆ ಇಂಥ ಹೆಸರುಗಳು ಅಲ್ಲಿ ಸಹಜವಾಗಿದ್ದುವೆಂದು ಸ್ಪಷ್ಟವಾಗುತ್ತದೆ. ಹೀಗೆ ಕೆಯ್ ಎಂಬುದು ಕೆ.ಕಿ (ತೊರ್ಕೆ, ಮೂಲ್ಕಿ)ಯಾಗಿರುವುದಲ್ಲದೆ 'ಗಿ' ರೂಪವನ್ನೂ ತಾಳಿರುವುದಕ್ಕೆ ಕಲಬುರಗಿ (ಕಲಂಬರ+ಕೆಯ್), ಜೇವರಗಿ (ಜೇವರ+ಕೆಯ್)ಗಳು ಉದಾಹರಣೆಯಾಗಿವೆ. ಚೆಯ್-ಚೆ-ಚಿ ರೂಪತಾಳಿರುವುದಕ್ಕೆ ಗೊಡಚಿ ತೋಣಚಿಗಳೂ ಸೆಯ್-ಸೆ-ಸಿ ರೂಪ ತಾಳಿರುವುದಕ್ಕೆ ಬನವಸೆ ತೊಗರ್ಸಿಗಳೂ, ಜೆಯ್-ಜೆ-ಜಿ ರೂಪ ತಾಳಿರುವುದಕ್ಕೆ ತೊಳಂಜೆ, ಅಣಜಿಗಳೂ ಉದಾಹರಣೆಯಾಗಿವೆ. ಒಟ್ಟಿನಲ್ಲಿ

ಕೆಯ್ ಕೆ-ಕಿ
(ತೊರ್ಕೆ, ಮೂಲ್ಕಿ)

ಗೆಯ್-ಗೆ-ಗಿ
(ಕಲಬುರಗಿ, ಜೇವರಗಿ)

ಚೆಯ್-ಚೆ-ಚಿ
(ಗೊಡಚಿ, ತೋಣಚಿ)

ಸೆಯ್ -ಸೆ-ಸಿ
(ಬನವಸೆ, ತೊಗರ್ಸಿ)

ಜೆಯ್-ಜೆ-ಜಿ
(ತೊಳಂಜೆ, ಅಣಜಿ)

ಹೀಗೆ 'ಕೆಯ್' ಆಕೃತಿಮಾದ ವಿವಿಧರೂಪಗಳು ಗ್ರಾಮನಾಮಗಳಲ್ಲಿ ಸೇರಿಕೊಂಡು ಕರ್ನಾಟಕದ ತುಂಬ ವ್ಯಾಪಿಸಿವೆ.

ನಿಸರ್ಗವಾಚಿ, ಜನಾಂಗವಾಚಿ, ಗ್ರಾಮನಾಮಗಳಿಗಿಂತ ವ್ಯಕ್ತಿವಾಚಿ ಗ್ರಾಮನಾಮ ಅರ್ವಾಚೀನವೆಂದು ನಾನು ಬೇರೊಂದೆಡೆಯಲ್ಲಿ ಪ್ರಸ್ತಾಪಿಸಿರುವ ಮೇರೆಗೆ ಬನವ ಹೆಸರಿನ ವ್ಯಕ್ತಿಸೂಚಿಯಾದ ಬನವಸೆ ಕಾಲದೃಷ್ಟಿಯಿಂದ ನಮ್ಮ ನಾಡಿನ ಗ್ರಾಮಗಳ ಇತಿಹಾಸದ ಮೂರನೆಯ ಘಟ್ಟದಲ್ಲಿ ಅಸ್ತಿತ್ವಕ್ಕೆ ಬಂದ ಗ್ರಾಮವಾಗಿದೆಯೆಂದು ಊಹಿಸಬಹುದು. ಎರಡನೆಯದಾಗಿ ಇದು 'ಬನವಕೆಯ್' ಹೆಸರಿಟ್ಟುಕೊಂಡು ಹುಟ್ಟಿ 'ಬನವಚೆಯ್' ಅವಸ್ಥೆಯನ್ನು ಅನುಭವಿಸಿ, 'ಬನವಸೆಯ್' ರೂಪಕ್ಕೆ ಹೊರಳಿ, 'ಬನವಸೆ' ರೂಪಕ್ಕೆ ತಿರುಗಿತೋ, ಇವುಗಳಲ್ಲಿ ಯಾವುದೋ ಒಂದು ರೂಪ ಪ್ರಚಾರದಲ್ಲಿದ್ದ ಕಾಲಘಟ್ಟದಲ್ಲಿ ಈ ಗ್ರಾಮ ಹುಟ್ಟಿ ಬೆಳೆಯಿತೋ ಸ್ಪಷ್ಟವಾಗುವುದಿಲ್ಲ. ಆದರೆ ಕೆಯ್, ಚೆಯ್‌ಗಳಿಗಿಂತ ಸೆಯ್ ಅರ್ವಾಚೀನ, ಇದಕ್ಕಿಂತ 'ಸೆ'ಇನ್ನೂ ಅರ್ವಾಚೀನವೆಂಬುದನ್ನು ನೆನೆದರೆ, ಇಂದು ನಮ್ಮ ಕೈಗೆ ಇಳಿದು ಬಂದ 'ಬನವಸೆ' ಎಂಬ ಹೆಸರು ರೂಪದೃಷ್ಟಿಯಿಂದ ತೀರ ಇತ್ತೀಚಿನದೆಂದು ಹೇಳಬೇಕಾಗುತ್ತದೆ.

■■

ಆಕರ : ಮಾರ್ಗ ಸಂಪುಟ–೨

೫೧

ಧಾರವಾಡ : ಗ್ರಾಮನಾಮ ವಿವೇಚನೆ

ಗ್ರಾಮನಾಮಗಳ ಅಧ್ಯಯನ ಪ್ರಸಂಗದಲ್ಲಿ ಅದರ ನಿಷ್ಪತ್ತಿನಿರ್ಣಯ ಪ್ರಥಮ ಮತ್ತು ಪ್ರಮುಖ ಅಂಶವಾಗಿದೆ. ಇದನ್ನು ಸರಿಯಾಗಿ ಗುರುತಿಸದೆ ಮಾಡುವ ಅಧ್ಯಯನಗಳೆಲ್ಲ ವ್ಯರ್ಥವೆಂದು ಬೇರೆ ಹೇಳಬೇಕಿಲ್ಲ; ಆದರೆ 'ನಿಷ್ಪತ್ತಿನಿರ್ಣಯ' ಅಷ್ಟು ಸುಲಭವಾದುದೂ ಅಲ್ಲ.

ಸಾಮಾನ್ಯವಾಗಿ ಯಾವುದೇ ಗ್ರಾಮದ ಹೆಸರಿನ ಬಗೆಗೆ ಮೂರು ನಿಷ್ಪತ್ತಿಗಳು ಕೇಳಿಬರುತ್ತವೆ: ೧. ಪಾಮರ ನಿಷ್ಪತ್ತಿ[೧] ೨. ಪಂಡಿತ ನಿಷ್ಪತ್ತಿ. ೩. ನಿಜನಿಷ್ಪತ್ತಿ. ಇವುಗಳಲ್ಲಿ ಮೊದಲಿನ ಎರಡು ಕಲ್ಪಕತೆ, ಮೂರನೆಯದು ಸತ್ಯ. ಯಾವುದೇ ಗ್ರಾಮದ ಹೆಸರಿನ ಬಗೆಗೆ ಒಂದು ಇಲ್ಲವೆ ಒಂದಕ್ಕಿಂತ ಹೆಚ್ಚು ಕಲ್ಪಕತೆಗಳು ಕೇಳಿಬರಬಹುದು; ನಿಜನಿಷ್ಪತ್ತಿ ಮಾತ್ರ ಒಂದೇ ಒಂದು ಇರುತ್ತದೆ.

ಗ್ರಾಮದ ಹೆಸರಿನ ಮೂಲಸ್ವರೂಪವನ್ನು ಕಂಡುಹಿಡಿಯಲು ನೆರವಾಗುವುವೆಂದರೆ ಶಾಸನಗಳು, ಕಾವ್ಯಗಳು, ವದಂತಿಗಳು. ಇವು ಸತ್ಯಸಂಗತಿಯನ್ನೂ ತಿಳಿಸಿಕೊಡುವಂತೆ ಕೆಲವು ಸಲ ಅಸತ್ಯಸಂಗತಿಯನ್ನೂ ಒದಗಿಸುತ್ತವೆ. ಇಷ್ಟು ಹಿನ್ನೆಲೆಯಲ್ಲಿ 'ಧಾರವಾಡ' ಎಂಬ ಹೆಸರಿನ ನಿಜಸ್ವರೂಪ ಮತ್ತು ಅರ್ಥಗಳನ್ನು ನೋಡಬಹುದು.

'ಧಾರವಾಡ' ಹೆಸರಿನ ಬಗೆಗೆ ಈವರೆಗೆ ಕೇಳಿಬರುವ ಪಾಮರ ನಿಷ್ಪತ್ತಿ, ಪಂಡಿತ ನಿಷ್ಪತ್ತಿಗಳು ಹೀಗಿವೆ: ಧಾರವಾರ್ ಎಂಬವನು ವಿಜಯನಗರದ ರಾಮರಾಯನ ಆಳ್ವಿಕೆಯಲ್ಲಿ ೧೪೦೩ರಂದು ಕಟ್ಟಿಸಿದ ಕೋಟೆ ಕಾರಣವಾಗಿ ಈ ಊರಿಗೆ ಧಾರವಾಡ ಹೆಸರು ಬಂದಿತೆಂದು ಧಾರವಾಡ ಜಿಲ್ಲೆಯ ಗೆಝೆಟಿಯರ್ (೧೮೮೪)ದಲ್ಲಿ ಹೇಳಲಾಗಿದೆ. ಆದರೆ ಇಲ್ಲಿ ಧಾರವಾರ್ ಹೆಸರಿನ ವ್ಯಕ್ತಿಯೊಬ್ಬನಿದ್ದ ವಿಷಯ ಬೇರೆ ಮೂಲಗಳಿಂದ ತಿಳಿದುಬಂದಿಲ್ಲ; ೧೪೦೩ರಲ್ಲಿ ರಾಮರಾಯ ಆಳುತ್ತಿರಲಿಲ್ಲ. ಮತ್ತು ಇದಕ್ಕಿಂತ ಮೊದಲು ೧೨ನೆಯ ಶತಮಾನದ ಶಾಸನದಲ್ಲಿಯೇ ಧಾರವಾಡ ಎಂಬ ಹೆಸರು ಸಿಗುತ್ತದೆ. ಹೀಗಾಗಿ ಇದು ಜನತೆಯಲ್ಲಿ ಪ್ರಚಲಿತವಿರುವ ಪಾಮರ ನಿಷ್ಪತ್ತಿಯೆಂದು ನಿರ್ಧರಿಸಿ ಕೈಬಿಡಬಹುದು.

---

೧. ಇದನ್ನು "ಜಾನಪದ ನಿಷ್ಪತ್ತಿ" ಎಂದೂ ಕರೆಯಬಹುದು.

ವಿದ್ವಾಂಸರಾದವರು ಇತ್ತೀಚೆ 'ಧಾರವಾಡ'ಕ್ಕೆ ತಂತುಪುರ, ಧಾರಾನಗರಿಯೆಂಬ ಹೆಸರುಗಳನ್ನು ಬಳಸಿರುವರು. ಇದು ಪಂಡಿತ ನಿಷ್ಪತ್ತಿ.

ಈ ವಿಷಯದಲ್ಲಿ ವಿಶೇಷ ಪ್ರಯತ್ನಿಸಿದ ಡಾ.ಪಿ.ಬಿ. ದೇಸಾಯಿಯವರ ಅಭಿಪ್ರಾಯ ಹೀಗಿದೆ: ಧಾರವಾಡ, ನರೇಂದ್ರ, ಮನಗುಂಡಿ, ಹೊಂಬಳ, ಕಟನೂರು ಶಾಸನಗಳಲ್ಲಿ ಈ ಊರಿನ ಹೆಸರು 'ದಾರವಾಡ'ವೆಂದು ಉಲ್ಲೇಖಿಸಲ್ಪಟ್ಟಿದೆ. ದಾರವಾಡವೆಂಬ ಅಲ್ಪಪ್ರಾಣಯುಕ್ತರೂಪ ಪ್ರಾಚೀನವಾದುದಾಗಿದೆ.

ಇಲ್ಲಿಯ ಉತ್ತರಪದ 'ವಾಡ' ಎಂಬುದು ಸಂಸ್ಕೃತದ 'ವಾಟ' (Locality)ದಿಂದ ಬಂದಿದೆ. ಪೂರ್ವಪದವಾದ 'ದಾರ' ಎಂಬುದು ಸಂಸ್ಕೃತ 'ದ್ವಾರ' ತದ್ಭವ. ಆದುದರಿಂದ ಇದರ ಮೂಲ ಹೆಸರು ದ್ವಾರವಾಟ. ಈ ಊರು ಮಲೆನಾಡು ಮತ್ತು ಬಯಲು ಸೀಮೆಗಳ ಗಡಿರೇಖೆಯ ಮೇಲಿದ್ದು ಎರಡೂ ಪ್ರದೇಶಗಳ ಪರಸ್ಪರ ಸರಕುಗಳ ಸಾಗಾಟಕ್ಕೆ ದ್ವಾರದಂತಿರುವುದರಿಂದಲೇ ಈ ಹೆಸರು ಬಂದಿರಬೇಕು. ಇಷ್ಟೇ ಅಲ್ಲ, ಸಾಗಾಟದ ಸರಕುಗಳ ಮೇಲೆ ಇಲ್ಲಿ ಸುಂಕವನ್ನು ಆಕರಣೆ ಮಾಡಲಾಗುತ್ತಿದ್ದಿತೆಂಬ ಇಲ್ಲಿಯ ಶಾಸನೋಕ್ತ ಸಂಗತಿಯೂ ಈ ಅಭಿಪ್ರಾಯವನ್ನು ಬೆಂಬಲಿಸುತ್ತದೆ. ಇಷ್ಟು ಡಾ. ದೇಸಾಯಿ ಅವರ ವಿವರಣೆ.

ಸಂಸ್ಕೃತದ 'ದ್ವಾರ' ಎಂಬುದು, ಪೂರ್ವಸ್ಥಾನ(ದ್ವಾರಪಟ್ಟ >ದಾರಪಟ್ಟ)ದಲ್ಲಿದ್ದರೂ ಉತ್ತರಸ್ಥಾನ (ವಕ್ರದ್ವಾರಂ>ವಂಕದಾರಂ)ದಲ್ಲಿದ್ದರೂ 'ದಾರ' ಎಂದಾಗುವುದು ಸಹಜ. ಆದರೆ ಡಾ. ದೇಸಾಯಿ ಅವರು ತಾವು ಭಾವಿಸಿಕೊಂಡಿರುವ 'ದ್ವಾರ'ವನ್ನು ಸಮರ್ಥಿಸಲಿಕ್ಕೆ ಮಲೆನಾಡು+ಬಯಲು ಸೀಮೆಗಳ ಗಡಿರೇಖೆಯ ಮೇಲೆ ಬಾಗಿಲಿನಂತೆ ಇರುವುದೇ ಕಾರಣವಾಗಿ ಈ ಊರಿಗೆ 'ದ್ವಾರವಾಟ' ಎಂಬ ಹೆಸರು ಪ್ರಾಪ್ತವಾಗಿದೆಯೆಂದು ಹೇಳಿದುದು ಸಂಶೋಧಕನ ಊಹೆಯೂ ಅಲ್ಲ; ಕವಿಯ ಕಲ್ಪನೆಯಂತಿದೆ. ಏಕೆಂದರೆ ಸಾಮಾನ್ಯವಾಗಿ ಊರ ಹೆಸರನ್ನು ಇಷ್ಟರಮಟ್ಟಿಗೆ ಕಲ್ಪನೆ ಕಟ್ಟಿ ಆದೂ ಸಂಸ್ಕೃತಭೂಯಿಷ್ಠವಾಗಿ ಇಡುವುದು ಸಾಮಾನ್ಯವಾಗಿ ಅಸಂಭವ. ಸುದೈವಕ್ಕೆ ಇಲ್ಲಿ ಸುಂಕವನ್ನು ಆಕರಿಸುತ್ತಿದ್ದರೆಂಬುದನ್ನು ಸೂಚಿಸುವ ಶಾಸನವೊಂದು ಅವರಿಗೆ ಆಧಾರವಾಗಿ ಸಿಕ್ಕಿದೆ. ಆದರೆ ಬಯಲುನಾಡು-ಮಲೆನಾಡುಗಳ ಸೀಮಾರೇಖೆಯ ಮೇಲೆ ಧಾರವಾಡವೊಂದೇ ಗ್ರಾಮವಿಲ್ಲ; ಇದೊಂದೇ ಗ್ರಾಮದ ಮೂಲಕ ಎರಡೂ ವಿಶಾಲ ಪ್ರದೇಶಗಳ ಸುಂಕವನ್ನು ಆಕರಿಸುತ್ತಿದ್ದರೆಂಬುದು ನಂಬದ ಮಾತು. ಇದಲ್ಲದೆ ಸುಂಕ ಪಡೆಯುವ ಒಂದು ಸಾಮಾನ್ಯ ಕೆಲಸದ ಸ್ಥಳಕ್ಕೆ 'ದ್ವಾರವಾಟ' ಎಂಬ ಭವ್ಯ ಹೆಸರಿಟ್ಟರೆಂಬುದೂ ಅಸಹಜವಾಗಿ ತೋರುತ್ತದೆ. ನಿಜಸಂಗತಿಯೆಂದರೆ ಸುಂಕಸಂಗ್ರಹ ಸಾಮಾನ್ಯವಾಗಿ ಎಲ್ಲ ಊರಿನ ಶಾಸನಗಳಲ್ಲಿಯೂ ಕಂಡುಬರುವ ವಿಷಯವೆಂದು ಶಾಸನಾಭ್ಯಾಸಿಗಳಿಗೆ ಗೊತ್ತು. ಹೀಗಾಗಿ ಸಂಸ್ಕೃತದ ಕನ್ನಡಕದಿಂದ ನೋಡಿ ಮಂಡಿಸಿರುವ ಅವರ ಅಭಿಪ್ರಾಯವನ್ನು ಇದೂ ಒಂದು ಬಗೆಯ ಪಂಡಿತನಿಷ್ಪತ್ತಿಯೆಂದು ಭಾವಿಸಿ ಕೈಬಿಡಬೇಕಾಗುತ್ತದೆ.

ಯಾವುದೇ ಗ್ರಾಮನಾಮದ ಮೂಲರೂಪವನ್ನು ಆ ಪ್ರದೇಶದ ಗ್ರಾಮನಾಮಗಳ ಸ್ವರೂಪದ ತುಲನೆಯಿಂದ ನಿರ್ಧರಿಸಿಕೊಳ್ಳುವುದೇ ಸರಿಯಾದ ಮಾರ್ಗ. ಈ ದೃಷ್ಟಿಯಿಂದ ವಿಚಾರಿಸಿದರೆ 'ದಾರವಾಡ'ದ 'ದಾರ' ಎಂಬುದು ರಕಾರಾಂತ ಪೂರ್ವಪದ. ಈ ಅಂತ್ಯ ರಕಾರವು ಪ್ರಕೃತಿಯ ಭಾಗವಾಗಿರಬಹುದಾದರೂ ಗ್ರಾಮನಾಮಗಳಲ್ಲಿ ಅದು ಅರ್+ಅ ಎಂಬ ಷಷ್ಠೀ ಬಹುವಚನರೂಪವಾಗಿರುವುದು ವಿಶೇಷ. ಇಂಥ ರೂಪಗಳು ಕರ್ನಾಟಕದ ಅನೇಕ ಗ್ರಾಮನಾಮಗಳಲ್ಲಿ ತೋರಿಬರುತ್ತವೆ.

೧. ಮುಂಡರ +ಕೆಯ್=ಮುಂಡರಗೆಯ್>ಮುಂಡರಗೆ>ಮುಂಡರಗಿ.

೨. ಕಾದರ+ಪಳ್ಳಿ>ಕಾದರಹಳ್ಳಿ>ಕಾದರೊಳ್ಳಿ.

೩. ಗೊಲ್ಲರ+ಪಟ್ಟಿ=ಗೊಲ್ಲರಪಟ್ಟಿ>ಗೊಲ್ಲರಹಟ್ಟಿ.

೪. ನಾಗರ+ಪಾಳ್ಯ=ನಾಗರಪಾಳ್ಯ>ನಾಗರಹಾಳ.

೫. ಚಿತ್ತರ+ಕಲ್ಲು=ಚಿತ್ತಕಲ್ಲು (ದುರ್ಗ)>ಚಿತ್ರದುರ್ಗ.

೬. ಉಂಬರ+ವಾಡಿ=ಉಂಬರವಾಡಿ>ಉಮ್ರಾಣಿ.

೭. ಬೊಂದರ+ವಾಡ=ಬೊಂದರವಾಡ>ಬಂದರವಾಡ.

೮. ತಾವರ+ಖೇಡ=ತಾವರಖೇಡ>ತಾವರ್ಖೇಡ.

೯. ಬುಡ್ಡರ+ಸಿಂಗಿ=ಬುಡ್ಡರಸಿಂಗಿ+ಬುಡರಸಿಂಗಿ

೧೦. ಅಂಗರ+ಕಟ್ಟಿ=ಅಂಗರಕಟ್ಟಿ.

೧೧. ಕೆಳವರ+ಕೊಪ್ಪ =ಕೆಳವರಕೊಪ್ಪ.

ಇಲ್ಲಿ ಮುಂಡರು, ಕಾದರು, ಗೊಲ್ಲರು, ನಾಗರು, ಚಿತ್ತರು, ಉಂಬರು, ಬೊಂದರು, ತಾವರು, ಬುಡ್ಡರು, ಅಂಗರು, ಕೆಳವರು ಎಂಬ ಜನಾಂಗಗಳು ಬಂದು ನೆಲೆನಿಲ್ಲಲು, ಅವರ ನೆಲೆಗಳೆಂಬ ಅರ್ಥದಲ್ಲಿ ಈ ಊರ ಹೆಸರುಗಳು ರೂಢಿಯಲ್ಲಿ ಬಂದವು. ಈ ಹಿನ್ನೆಲೆಯಲ್ಲಿ ಧಾರವಾಡ ಹೆಸರಿನ ಪೂರ್ವದಲ್ಲಿರುವ ರಕಾರಾಂತ 'ದಾರ'ವನ್ನು ಪರಿಭಾವಿಸಬೇಕೆಂದು ತೋರುತ್ತದೆ.

ಇಲ್ಲಿ 'ದಾರ' ಎಂಬುದು ವ್ಯಕ್ತಿಯ ಇಲ್ಲವೆ ಇನ್ನಾವುದರ ನಾಮವಾಗಿರುವುದಕ್ಕಿಂತ, ಮೇಲಿನ ಉದಾಹರಣೆಗಳನ್ನು ನೆನೆದರೆ ಅಂತ್ಯ ರಕಾರವುಳ್ಳ ಈ ಪದವೂ ಜನಾಂಗವನ್ನೇ ಸೂಚಿಸುತ್ತಿರಬಹುದೆಂದು, ಬಹುಶಃ ದಾಯರ, ದಾರರ, ದಾವರ, ದಾಹರಗಳಲ್ಲಿ ಒಂದರ ಸಣ್ಣಿಸಿದ ರೂಪವೆಂದು ಹೇಳಲು ಮನಸ್ಸಾಗುತ್ತದೆ. ಅಂದರೆ ಈ ಊರು ದಾಯರು, ದಾರರು, ದಾವರು, ದಾಹರು ಇವುಗಳಲ್ಲಿ ಒಂದು ಜನಾಂಗದ ನೆಲೆ. ದಾಯರ +ವಾಡ, ದಾರರ+ವಾಡ, ದಾವರ +ವಾಡ, ದಾಹರ+ವಾಡ ಇವುಗಳಲ್ಲಿ ಒಂದು 'ಧಾರವಾಡ'ದ ಮೂಲರೂಪವಾಗಿರಬಹುದು.

ನನಗೆ ತಿಳಿದಮಟ್ಟಿಗೆ ಇಂಥ ಇನ್ನೊಂದು ಗ್ರಾಮನಾಮ ವಿಜಾಪುರ ಜಿಲ್ಲೆಯ ಸಾರವಾಡ. ಆದರೆ ಒಂದೂ ಶಾಸನದಲ್ಲಿ ಇದರ ಪ್ರಾಚೀನ ಹೆಸರು ಲಭಿಸಿದ ಕಾರಣ, ಇದು ನಮ್ಮ ಸಹಾಯಕ್ಕೆ ಬರದು. 'ಗಾವರವಾಡ' ಎಂಬ ಗ್ರಾಮನಾಮ ಇಂದಿಗೂ ಉಳಿದಿದ್ದು, 'ದಾವರವಾಡ'ದಲ್ಲಿ ಮಾತ್ರ 'ವ' ಮಾಯವಾಯಿತೇ? ಎಂಬುದು ವಿಚಾರಣೀಯ. ಮೇಲಿನ ದಾಯರ, ದಾರರ, ದಾವರ, ದಾಹರ ರೂಪಗಳಲ್ಲಿಯ ಯ್, ರ್, ವ್, ಹ್‌ಗಳು ಅರ್ಧಸ್ವರಗಳು (Semi-Vowel). ಪದಮಧ್ಯದ ಸ್ವರ ಮಾಯವಾಗುವಂತೆ ಅರ್ಧಸ್ವರವೂ ಮಾಯವಾಗುವುದು ಕನ್ನಡದ ಜಾಯಮಾನ. ಆದುದರಿಂದ ಮೇಲಿನ ನಾಲ್ಕು ಸಾಧ್ಯತೆಗಳನ್ನು ಈಗಿನ ಮಟ್ಟಿಗೆ ಒಪ್ಪಿಕೊಳ್ಳಬಹುದು.

ಗ್ರಾಮಗಳಿಗೆ ಪ್ರಾರಂಭದಲ್ಲಿ ಪ್ರಕೃತಿನಾಮ (ನವಿಲುಗುಂದ), ಆಮೇಲೆ ಜನಾಂಗನಾಮ (ಹಂದರಾಳ), ಇನ್ನೂ ಆಮೇಲೆ ವ್ಯಕ್ತಿನಾಮ (ಬುಕ್ಕಸಾಗರ)ಗಳನ್ನಿಡುತ್ತ ಬರಲಾಗಿದೆಯೆಂದು ತಿಳಿದುಬರುವುದರಿಂದ, ಜನಾಂಗನಾಮವಿಡುತ್ತಲಿದ್ದ ಕಾಲಘಟ್ಟದಲ್ಲಿ ಹುಟ್ಟಿದ 'ದಾರವಾಡ' ತಕ್ಕಮಟ್ಟಿಗೆ ಹಳೆಯದೇಂದೇ ಹೇಳಬೇಕು.

ಇನ್ನು ಉತ್ತರಪದವಾದ 'ವಾಡ' ಎಂಬುದು ಸಂಸ್ಕೃ 'ವಾಟ'ದಿಂದ ಬಂದಿದೆಯೆಂದು ಡಾ. ದೇಸಾಯಿ ಅವರು ಹೇಳುತ್ತಾರೆ. ಇದು ಸಾಮಾನ್ಯವಾಗಿ ಎಲ್ಲ ವಿದ್ವಾಂಸರ ನಂಬುಗೆಯೂ ಆಗಿದೆ. ಆದರೆ ವಾಟ>ವಾಡ>ಬಾಡ ಎಂಬಂತೆ ಇದು ಸಂಸ್ಕೃತದಿಂದ ಬರುವುದಕ್ಕಿಂತಲೂ ದ್ರಾವಿಡರೂಪವಾಗಿರಬಹುದು. 'ಬಾಡ' ಎಂಬುದೇ ಇಲ್ಲಿ ನೇರವಾಗಿ ಬಳಕೆಯಾಗಿರುವ ಸಾಧ್ಯತೆಯಿದೆ.

ಗ್ರಾಮನಾಮದ ಉತ್ತರಸ್ಥಾನದಲ್ಲಿ ಬರುವ -ಕುಂದ, -ಗೆ, -ಕೆರೆ ಇತ್ಯಾದಿಗಳು ಆ ಊರಿನ ಭೌಗೋಲಿಕ ಮೊದಲಾದ ವೈಶಿಷ್ಟ್ಯಗಳನ್ನು ಹೇಳುವಂತೆ 'ವಾಡ' ಎಂಬುದಕ್ಕೂ ಒಂದು ವೈಶಿಷ್ಟ್ಯವಿರುವುದು ಸಹಜ. ಇದನ್ನು ಶೋಧಿಸಿದಲ್ಲಿ ಧಾರವಾಡ ಅಸ್ತಿತ್ವಕ್ಕೆ ಬಂದುದರ ಹಿನ್ನೆಲೆ ಇನ್ನೂ ಸ್ಪಷ್ಟವಾಗುತ್ತದೆ.

ಒಟ್ಟಿನಲ್ಲಿ 'ಧಾರವಾಡ'ದ ಮೂಲರೂಪವನ್ನು 'ಧಾರರಾವ್' ವ್ಯಕ್ತಿನಾಮದಿಂದ ಸಾಧಿಸುವುದು ಪಾಮರ ನಿಷ್ಪತ್ತಿ, ತಂತುಪುರ, ಧಾರಾನಗರಿ, ದ್ವಾರವಾಟಗಳಿಂದ ಸಾಧಿಸುವುದು ಪಂಡಿತ ನಿಷ್ಪತ್ತಿ, ಬಹುಶಃ ದಾಯರವಾಡ ಇಲ್ಲವೆ ದಾರರವಾಡ ಇಲ್ಲವೆ ದಾವರವಾಡ ಇಲ್ಲವೆ ದಾಹರವಾಡವೆಂಬುದೇ ನಿಜರೂಪ. ಗಾವರವಾಡದಂತೆ ಇದರ ನಿಜನಾಮ ದಾವರವಾಡವಾಗಿರುವುದು ಹೆಚ್ಚು ಸಂಭವನೀಯ. ಇದು ಈ ಊರ ಹೆಸರಿನ ಮೊದಲ ಘಟ್ಟ. ಇದರ ಮುಂದಿನ ಘಟ್ಟ ದಾರವಾಡ. ಇದನ್ನೊಳಗೊಂಡ ಪ್ರಾಚೀನತಮ ಶಾಸನದ ಕಾಲ ಕ್ರಿ.ಶ. ೧೧೧೭. ಇದರ ತರುವಾಯ ಎಷ್ಟೋ ವರ್ಷ ಕಳೆಯುವಲ್ಲಿ ಬಳಕೆಗೆ ಬಂದ 'ಧಾರವಾಡ'ವೆಂಬುದು ಇನ್ನೊಂದು ಘಟ್ಟ. ಬ್ರಿಟಿಷರು ಬಂದಮೇಲೆ ಕಾಣಿಸಿಕೊಂಡ 'ಧಾರವಾರ್' ಎಂಬುದು ಇತ್ತೀಚಿನ ಘಟ್ಟವಾಗಿದೆ.

■■

ಆಕರ : ಮಾರ್ಗ ಸಂಪುಟ–೨

೫೨

ಕುಂತಳ, ಕರ್ನಾಟಕ : ನಿಷ್ಪತ್ತಿ

ಕಳೆದ ನೂರು ವರ್ಷಗಳಿಂದ ನಮ್ಮಲ್ಲಿ ಸಂಶೋಧನೆ ನಡೆದಿದ್ದರೂ ಕೆಲವು ಮಹತ್ವದ ಪದಗಳಿಗೆ, ಹೆಸರುಗಳಿಗೆ ಅರ್ಥ ಹೇಳುವುದಾಗಿಲ್ಲ. ಇವುಗಳ ಸಾಲಿನಲ್ಲಿ ಪರಿಗಣಿಸಬೇಕಾದುವು ಕುಂತಳ, ಕರ್ನಾಟಕ. ತುಂಬ ಪ್ರಾಚೀನತೆ ಮತ್ತು ಅಧಿಕ ಬಳಕೆಯಿಂದಾಗಿ ಸವಕಲಾಗುತ್ತ ಬಂದುದೂ, ಸಾಲದುದಕ್ಕೆ ಸಂಸ್ಕೃತದ ಪ್ರಭಾವದಲ್ಲಿ ರೂಪವ್ಯತ್ಯಾಸಮಾಡಿಕೊಂಡುದೂ ಇತ್ಯಾದಿ ಕಾರಣಗಳಿಂದಾಗಿ ಈ ಶಬ್ದಗಳ ಅರ್ಥಶೋಧ ದುರ್ಗಮವೆನಿಸಿದೆ. ಹೀಗಿದ್ದೂ ಇವುಗಳ ನಿಷ್ಪತ್ತಿಯ ಬಗ್ಗೆ ಒಂದಿಷ್ಟು ಚರ್ಚೆ ನಡೆಸಬಹುದು.

ಕುಂತಳ:

ಇದು ಕುಂತಳದೇಶ, ಕುಂತಳನಗರ ಎಂದು ಎರಡು ರೂಪಗಳಲ್ಲಿ ಸಿಗುವುದರಿಂದ, ನಗರದ ಹೆಸರೇ ದೇಶಕ್ಕೆ ವಿಸ್ತರಿಸಿದೆಯೆನಿಸುತ್ತದೆ. ಉದಾ: ಬನವಾಸಿ–ಬನವಾಸಿದೇಶ, ಮೈಸೂರುನಗರ–ಮೈಸೂರುರಾಜ್ಯ ಇತ್ಯಾದಿ. ಈ ಬೆಳಕಿನಲ್ಲಿ ಹೇಳುವುದಾದರೆ ಬಹುಶ: ಕುಂತಳವೆಂಬುದು ಒಂದು ಗ್ರಾಮವಾಗಿದ್ದು, ಅದು ರಾಜಧಾನಿಯಾಗುವ ಮೂಲಕ ರಾಜ್ಯದ ಹೆಸರಾಗಿಯೂ ಬಳಕೆಯಾಗುತ್ತ ಬಂದಿದೆಯೆನಿಸುತ್ತದೆ.

ಈ ವರೆಗೆ ಈ ರಾಜ್ಯದ ವಿಸ್ತಾರ, ಪ್ರಾಚೀನತೆಗಳ ಬಗ್ಗೆ ಚರ್ಚೆ ನಡೆದಿದೆ. ಇದು ಬಹುಶಃ ಕಾವೇರಿಯಿಂದ ಗೋದಾವರಿ ವರೆಗೆ ವಿಸ್ತರಿಸಿದ್ದ ಆಡಳಿತ ಪ್ರದೇಶವೆಂದು ಹೇಳುತ್ತ ಬರಲಾಗಿದೆ. ಮಹಾಭಾರತದಷ್ಟು ಪೂರ್ವದಲ್ಲಿಯೇ ಈ ದೇಶದ ಉಲ್ಲೇಖ ಸಿಗುತ್ತದೆ. ಪ್ರಾಚೀನ ಅನೇಕ ಕೃತಿಗಳಲ್ಲಿ ಕರ್ನಾಟಕ, ಬನವಾಸಿ, ಕುಂತಲವೆಂದು ಮುಂತಾಗಿ ಈ ರಾಜ್ಯಗಳ ಹೆಸರನ್ನು ಜೊತೆಜೊತೆಯಾಗಿ ಬಿಡಿಸಿ ಹೇಳಿರುವ ಕಾರಣ, ಕರ್ನಾಟಕದಿಂದ ಕುಂತಳ ಬನವಾಸಿಗಳು ಬೇರೆಯೆಂದು ಕೆಲವರು, ಬೃಹತ್ಕರ್ನಾಟಕದ ಭಾಗಗಳೆಂದು ಮತ್ತೆ ಕೆಲವರು, ಒಂದೇ ದೇಶದ ಭಿನ್ನ ಹೆಸರುಗಳೆಂದು ಬೇರೆ ಕೆಲವರು ಹೇಳುತ್ತ ಬಂದಿದ್ದಾರೆ. ಒಂದು ರಾಜ್ಯದ ಐತಿಹಾಸಿಕ ಬೆಳವಣಿಗೆಯಲ್ಲಿ ಇಂಥ ವ್ಯತ್ಯಾಸಗಳು ಘಟಿಸುತ್ತ ಬರುವುದು ಸಹಜವೂ ಆಗಿದೆ.

ಮೇಲೆ ಹೇಳಿದಂತೆ ಗ್ರಾಮ ಮತ್ತು ನಾಡಿನ ಹೆಸರಾಗಿರುವ ಇದು, ಮೂಲತಃ ಗ್ರಾಮನಾಮವಾಗಿ, ಬಳಿಕ ನಾಡನಾಮವಾಗಿ ಬೆಳೆದಿದೆ. ಇದು ಸಹಜವೂ ಹೌದು. ಹಾಗಿದ್ದರೆ ಈ ಗ್ರಾಮ ಯಾವುದು? ಈ ಪ್ರಶ್ನೆ ಬಿಡಿಸಲು ಮುಂದಾಗುತ್ತಲೇ ಇದರ ವಿಭಿನ್ನ ರೂಪಗಳು

ಎದುರಾಗುತ್ತವೆ. ಪ್ರಾಚೀನ ಬರೆವಣಿಗೆಗಳಲ್ಲಿ ಇದು ಕುಂತಲ, ಕುಂತಳ ರೂಪಗಳಲ್ಲಿ ಸಿಗುತ್ತದೆ. ಸಂಸ್ಕೃತದ "ಲಳಯೋರಭೇದ:" ಸೂತ್ರದ ಪ್ರಕಾರ, ಕಲಹಂಸ>ಕಳಹಂಸದಂತೆ ಕುಂತಲ>ಕುಂತಳ ಎಂದು ಪರಿವರ್ತನೆಗೊಂಡಿದೆಯೆಂದು ವಿದ್ವಾಂಸರು ಭಾವಿಸುತ್ತ ಬಂದಿದ್ದಾರೆ. ಕುಂತಲಕ್ಕೆ ಕೂದಲು ಅರ್ಥವನ್ನು ಪರಿಭಾವಿಸುತ್ತಲೂ ಬಂದಿದ್ದಾರೆ. ಆದರೆ ಯಾವುದೇ ಗ್ರಾಮಕ್ಕೆ ಕೂದಲು ಮುಂತಾದ ಅರ್ಥದ ಹೆಸರಿಡುವುದು ಅಸಂಭವ. ಆದುದರಿಂದ ಕುಂತಳ ಎಂಬುದೇ ಮೂಲವಾಗಿದ್ದು, ಆಮೇಲೆ ಇದನ್ನು ಕುಂತಲವೆಂದು ಸಂಸ್ಕೃತಕ್ಕೆ ಪರಿವರ್ತಿಸಿಕೊಂಡಿರಬೇಕು.

ಈ ಮೇರೆಗೆ "ಕುಂತಳ" ಎಂಬುದೇ ಮೂಲರೂಪವಾಗಿದ್ದರೆ, ಳ-ಣ (ನೊಳ>ನೊಣ) ಭೇದದಂತೆ ಇದರ ಇನ್ನೊಂದು ರೂಪ ಕುಂತಣ ಇರಬೇಕಾಗುತ್ತದೆ. ಇಂಥ ರೂಪಗಳೂ, ಜೋಡುರೂಪಗಳೂ ಕರ್ನಾಟಕದಲ್ಲಿ, ಇಂದಿನ ನೆರೆಹೊರೆಯ ಪ್ರಾಂತಗಳಲ್ಲಿ ಸಾಕಷ್ಟು ಸಿಗುತ್ತವೆ. ಕೊಪಣ(ನಗರ), ಪೈಠಣ, ಕಲ್ಯಾಣ ಇತ್ಯಾದಿ. ಕೊಪಣ(ನಗರ)ವು ಕೊಪ್ಪಳ ಆಗಿರುವಂತೆ ಕುಂತಣವು ಕುಂತಳ ಆಗಿ, ಸಂಸ್ಕೃತ ವ್ಯಾಮೋಹಿಗಳಿಂದ ಕುಂತಲ ಎಂಬ ಪರಿಚಿತರೂಪಕ್ಕೆ ತಿರುಗಿದೆ. ಹಾಗಿದ್ದರೆ ಈ ಕುಂತಣ ಗ್ರಾಮ ಯಾವುದು?

ಈಗಿನ ಬೆಳಗಾವ ಜಿಲ್ಲೆಯ ರಾಯಬಾಗದ ಹಳೆಯ ಹೆಸರು ಪೂವಿನಬಾಗೆ. ರಾಜಾದಿತ್ಯನು ಈ ಊರಿನವನಿದ್ದು, ತನ್ನ ಗಣಿತವನ್ನು "ಕುಂತಣಬಾಗೆಯ ಪರಿಭಾಷೆ"ಯಲ್ಲಿ ಬರೆಯುವುದಾಗಿ ಹೇಳುತ್ತಾನೆ. ಇಂದಿನಂತೆ ಪ್ರಾಚೀನಕಾಲದಲ್ಲಿಯೂ ಯಾವುದೇ ಊರನ್ನು ಗುರುತಿಟ್ಟು ಹೇಳುವಲ್ಲಿ, ನೆರೆಯ ಊರಿನ ಹೆಸರನ್ನು ಜೋಡಿಸುವ ಪದ್ಧತಿ ಬಳಕೆಯಲ್ಲಿದ್ದಿತು. ಉದಾ: ತೆರಕಣಬೆ ಹಂಗುಳ (ಶಿ. ಚಿ. ೩೮-೮೯). ಈ ಮೇರೆಗೆ ರಾಜಧಾನಿ ಕುಂತಣವು ಇಂದಿನ ರಾಯಬಾಗ ನೆರೆಯಲ್ಲಿರಬಹುದೇ? ಎನಿಸುತ್ತದೆ. ಕುಂತಣವು ಕೊಂತಣ ಎಂದು ಬದಲಾಗುವುದೂ ಸಹಜ. ರಾಯಬಾಗ ಎಡಬಲಗಳಲ್ಲಿ ಇದನ್ನು ಹೋಲುವ ಹೆಸರುಗಳನ್ನು ಶೋಧಿಸಬೇಕು. ನೆರೆಯ ಚಿಕ್ಕೋಡಿ ತಾಲೂಕಿನಲ್ಲಿ ಕುಥಳಿ, ಕೊಥಳಿ ಹೆಸರಿನ ಗ್ರಾಮಗಳಿವೆ. ಈ ಮತ್ತು ಇದನ್ನು ಹೋಲುವ ಬೇರೆ ಗ್ರಾಮಗಳಲ್ಲಿ ಶೋಧ ನಡೆಸುವುದು ಅವಶ್ಯವಿದೆ.

ಶಿವತತ್ವಚಿಂತಾಮಣಿಯು ಹೊಯ್ಸಣದೇಶದ ಸಾಸಲು (೩೮-೮೯), ಪಡುವನಾಡ ಕೊಟಬಾವಿ (೩೮-೧೩೩)ಎಂಬ ಹೆಸರುಗಳನ್ನು ಉಲ್ಲೇಖಿಸುತ್ತಿದ್ದು, ಇದೇ ರೀತಿ "ಕುಂತಣಬಾಗೆ" ಎಂದರೆ ಕುಂತಣದೇಶದ ಬಾಗೆ ಎಂದು ಇಲ್ಲಿ ಅರ್ಥ ಹೇಳಬಹುದಾದರೂ, ಅಲ್ಲಿ ಹೊಯ್ಸಳ+ದೇಶ, ಪಡುವ+ನಾಡು ಎಂದು ರಾಜ್ಯವಾಚಿ ಶಬ್ದ ಬಳಸಿದಂತೆ ಇಲ್ಲಿ ಬಳಸಿಲ್ಲವೆಂಬುದನ್ನು ನೆನೆದರೆ, ನಾವು ಮಾಡಿದ ಊಹೆಯೇ ಒಂದಿಷ್ಟು ಹೆಚ್ಚು ಸರಿ ಎನಿಸುತ್ತದೆ. ಅದೇನೇ ಇದ್ದರೂ ಇಂದು ಕುಂತಳ ರಾಜ್ಯವಿಲ್ಲ. ಕುಂತಳ ನಗರವಿರಬಹುದು, ಹುಡುಕಬೇಕು.

ಕರ್ನಾಟಕ:

ತಮಿಳುನಾಡು, ತಮಿಳುಭಾಷೆ-ಈ ಪದಗಳಲ್ಲಿರುವ ಶಾಬ್ದಿಕ ಏಕರೂಪತೆ ಕಾರಣವಾಗಿ, ಒಂದನ್ನು ಉಚ್ಚರಿಸುತ್ತಲೇ ಇನ್ನೊಂದರ ನೆನಪಾಗಿ ಅವುಗಳ ನಾಡು-ನುಡಿ ಸಂಬಂಧ ತಟ್ಟನೆ ವ್ಯಕ್ತವಾಗುತ್ತದೆ. ಕರ್ನಾಟಕ, ಕನ್ನಡ ಎಂಬಲ್ಲಿ ಇಂಥ ಏಕರೂಪತೆ ಇಲ್ಲವಾಗಿ ಅವುಗಳ ಸಂಬಂಧ ತಟ್ಟನೆ ವ್ಯಕ್ತವಾಗುವುದಿಲ್ಲ. ಈ ಏಕರೂಪತೆಗಾಗಿ "ಕರ್ನಾಟಕ"ಕ್ಕೆ ಬದಲು ಕನ್ನಡನಾಡು ಎಂಬುದನ್ನು ಬಳಕೆಗೆ ತರುವುದು ಸೂಕ್ತವೆನಿಸುತ್ತದೆ. ಹಾಗೆ ತಂದುದೇ ಆದರೆ "ಕನ್ನಡನಾಡು, ಕನ್ನಡಭಾಷೆ"

ಎಂಬ ಶಾಬ್ದಿಕ ಏಕರೂಪತೆ ಸಾಧ್ಯವಾಗಿ, ನಾಡನ್ನು ಉಚ್ಚರಿಸುತ್ತಲೇ ನುಡಿ, ನುಡಿಯನ್ನು ಉಚ್ಚರಿಸುತ್ತಲೇ ನಾಡು ತಂತಾನೇ ನೆನಪಾಗುತ್ತವೆ. ಅದೇನೇ ಇರಲಿ, ಇಂದು ಬಳಕೆಯಲ್ಲಿರುವ ಕರ್ನಾಟಕ, ಕನ್ನಡ ಪದಗಳ ನಿಜವಾದ ರೂಪ, ಅರ್ಥಗಳೇನು? ಇವು ಒಂದೇ ಪ್ರಕೃತಿಯ ಎರಡು ಭಿನ್ನರೂಪಗಳೇ? ಎರಡು ಭಿನ್ನಪ್ರಕೃತಿಗಳ ಎರಡು ಭಿನ್ನರೂಪಗಳೇ? ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ.

ಕರ್ನಾಟ–ಕರ್ನಾಟಕ, ಕರ್ಣಾಟ–ಕರ್ಣಾಟಕ ಶಬ್ದಗಳ ಚರ್ಚೆಗೆ ನೂರು ವರ್ಷಗಳ ಇತಿಹಾಸವಿದೆ. ಈ ಶಬ್ದಗಳ ಮಧ್ಯದಲ್ಲಿ ರಕಾರವಿದೆ. ಇದು ಮೂರ್ಧನ್ಯ ವರ್ಣ. ಇದರ ಪ್ರಭಾವದಿಂದ "ರ್ನಾ" ಎಂಬುದು ಉಚ್ಚಾರದಲ್ಲಿ "ರ್ಣಾ" ಎಂದಾಗುವುದರಿಂದ, ಕರ್ಣಾಟ–ಕರ್ಣಾಟಕ ಎಂಬುವೇ ಸರಿಯಾದ ರೂಪಗಳು. ಆದರೆ ಇವುಗಳಲ್ಲಿ ಕಿವಿಗೆ ಹಿತವೆನಿಸುವ ಕರ್ನಾಟ–ಕರ್ನಾಟಕ ಎಂಬಿವುಗಳನ್ನೇ ಬಳಸುತ್ತ ಬರಲಾಗಿದೆ.

ಇಲ್ಲಿಯ ಪೂರ್ವಪದ ಕರಿದು ಇದ್ದರೆ ಕಪ್ಪು ಎಂದು ಅರ್ಥ. ಕರು ಇದ್ದರೆ ಎತ್ತರ, ವಿಶಾಲ ಎಂದು ಅರ್ಥ. ನಮ್ಮ ನಾಡು ಕಪ್ಪುನೆಲವುಳ್ಳದು, ಎತ್ತರ ಭೂಪ್ರದೇಶವುಳ್ಳದು–ಒಂದು ಕಾಲಕ್ಕೆ ವಿಶಾಲವಾಗಿದ್ದುದು ಆಗಿದ್ದ ಕಾರಣ, ಈ ಮೂರೂ ಅರ್ಥಗಳನ್ನು ಇಲ್ಲಿ ಹೇಳಬಹುದಾಗಿದೆ.

ಇಲ್ಲಿಯ ಉತ್ತರಪದ ನಾಟ ಎಂಬುದಕ್ಕೆ ದೇಶವೆಂದು ಅರ್ಥ. ದ್ರಾವಿಡಭಾಷೆಯ ವೈಶಿಷ್ಟ್ಯದಂತೆ ಒಂದೇ ಪದ ಬರೆವಣಿಗೆಯಲ್ಲಿ ನಾಟ, ಉಚ್ಚಾರದಲ್ಲಿ ನಾಡ ಎಂದಾಗುತ್ತದೆ. ಆದರೆ ಬರೆದಂತೆ ಉಚ್ಚರಿಸುವ, ಉಚ್ಚರಿಸಿದಂತೆ ಬರೆಯುವ ಸಂಸ್ಕೃತದಲ್ಲಿ ಇವು (ನಾಟ, ನಾಡ) ಸ್ವತಂತ್ರ ಪದಗಳೇ ಆಗುತ್ತವೆ. ಇದರ ಫಲವಾಗಿ (೧)ಕರಿದುನಾಟ/ಕರುನಾಟ, (೨)ಕರಿದು ನಾಡ/ಕರುನಾಡು ಎಂಬ ಎರಡು ಸ್ವತಂತ್ರ ರೂಪಗಳು ಬೆಳೆದುಬಂದವು.

ಇವುಗಳಲ್ಲಿ ಕರಿದುನಾಟ/ಕರುನಾಟ ಎಂಬ ಬರೆಹರೂಪದ ದೇಶವಾಚಿಪದವು, ಈ ದೇಶಕ್ಕೆ ಸಂಬಂಧಪಟ್ಟ ಪ್ರಜೆ ಅರ್ಥದ –ಕ ಪ್ರತ್ಯಯ ಹಚ್ಚಿಕೊಂಡು, ಕರಿದುನಾಟಕ/ಕರುನಾಟಕ (ಕರ್ನಾಟಕದವನು)ಎಂಬ ರೂಪ ತಳೆಯಿತು. ಈ ಪ್ರಜಾವಾಚಿ ಪದವಾದ ಕರಿದುನಾಟಕ/ಕರುನಾಟಕ ಎಂಬುದೇ ಉಚ್ಚಾರ ಸೌಲಭ್ಯಕ್ಕಾಗಿ ಕರ್ನಾಟಕ ರೂಪಕ್ಕೆ ತಿರುಗಿ, ಮುಂದೆ ದೇಶವಾಚಿಯಾಗಿಯೂ ಬಳಕೆಯಾಗುತ್ತ ಬಂದಿತು. ಅಂದರೆ "ಕರ್ನಾಟಕ"ವೆಂಬುದು ಪ್ರಜಾವಾಚಿಯಿಂದ ದೇಶವಾಚಿಗೆ ಹೊರಳಿತು.

ಇನ್ನೊಂದು ರೂಪವಾದ ಕರಿದುನಾಡ/ಕರುನಾಡ ಎಂಬುದರ ಉಚ್ಚಾರದಲ್ಲಿ ಮಧ್ಯದ ರಕಾರವು ಅರ್ಧಸ್ವರವಾಗಿರುವುದರಿಂದ ಅದು, ಸೊನ್ನೆ ರೂಪಕ್ಕೆ ತಿರುಗುವಲ್ಲಿ ಕಂನಾಡ ಎಂಬ ರೂಪ ತಳೆದು, ಉಚ್ಚಾರ ಸೌಲಭ್ಯಕ್ಕಾಗಿ "ಕಂನಡ>ಕನ್ನಡ" ಎಂದಾಯಿತು.

ಒಟ್ಟಾರೆ ಈ ನೆಲದ ಹೆಸರು ದ್ರಾವಿಡಭಾಷೆಯ ಬರಹರೂಪದಲ್ಲಿ (ಕರಿದುನಾಟ, ಕರುನಾಟ) ನಾಡಿಗೂ, ಉಚ್ಚಾರರೂಪದಲ್ಲಿ (ಕರಿದುನಾಡು, ಕರುನಾಡು)ನುಡಿಗೂ ಹಂಚಿಹೋಯಿತು. ಕೆಲವು ಸಲ ಕರ್ನಾಟಕಭಾಷೆಯೆಂದೂ, ಬಹಳ ಸಲ ಕನ್ನಡನಾಡು ಎಂದೂ ಪರಸ್ಪರ ಬದಲಿಸಿ ಕರೆದುದು ಕಂಡುಬಂದರೂ, ಸಾಮಾನ್ಯವಾಗಿ ಕರ್ನಾಟಕ ಎಂಬುದು ದೇಶವಾಚಿಯಾಗಿ, ಕನ್ನಡ ಎಂಬುದು ಭಾಷಾವಾಚಿಯಾಗಿ ಇಂದಿಗೂ ಹೆಚ್ಚು ಬಳಕೆಯಲ್ಲಿವೆ.

ಹೀಗಿದ್ದೂ ದೇಶ ಮತ್ತು ಭಾಷೆಗಳ ಅನ್ಯೋನ್ಯತೆಯು ತಟ್ಟನೇ ನಮ್ಮ ಗಮನಕ್ಕೆ, ನಮಗಿಂತ ಹೊಸಬರ ಗಮನಕ್ಕೆ ಬರುವ ದೃಷ್ಟಿಯಿಂದ ತಮಿಳುನಾಡು-ತಮಿಳುಭಾಷೆ, ತುಳುನಾಡು-ತುಳುಭಾಷೆಯಂತೆ ಕನ್ನಡನಾಡು-ಕನ್ನಡಭಾಷೆಯೆಂದು ಕರೆಯುವುದು ತುಂಬ ಔಚಿತ್ಯವೆನಿಸುತ್ತದೆ. ಇದೇ ರೀತಿ ತೆಲುಗುನಾಡು-ತೆಲುಗುದೇಶ, ಕೇರಳನಾಡು-ಕೇರಳಭಾಷೆ[೧] ಎಂದು ಕರೆದರೆ ದ್ರಾವಿಡರಾಜ್ಯಗಳ ಹೆಸರುಗಳಲ್ಲಿ ಏಕರೂಪತೆ ಪ್ರಾಪ್ತವಾಗಿ, ಇವುಗಳ ಒಂದು ಅಖಂಡಸಂಸ್ಕೃತಿ ಅನುಭವಕ್ಕೆ ಬರುತ್ತದೆ.

■■

ಆಕರ : ಮಾರ್ಗ ಸಂಪುಟ-೪

೧. ಮಲೆಯಾಳ ನಾಡು-ಮಲೆಯಾಳ ಭಾಷೆ ಎಂದೂ ಕರೆಯಬಹುದು.

೫೩

ಕುಂತಳದ ಮೂಲ ರೂಪ ಕುಂತಳಹಳ್ಳಿಯೇ?

ಪ್ರಾಚೀನ ಕರ್ನಾಟಕದ ಶಾಸನ-ಕಾವ್ಯಗಳಲ್ಲಿ 'ಕುಂತಳನಾಡು' ಅನೇಕ ಸಲ ಉಲ್ಲೇಖಗೊಂಡಿದೆ. ಬಹಳಷ್ಟು ಸಲ ಇದು ಕರ್ನಾಟಕ ಎಂಬುದಕ್ಕೆ ಪರ್ಯಾಯಪದವಾಗಿಯೂ ಕಾಣಿಸಿಕೊಂಡಿದೆ. ಈ ಕುಂತಳ ಶಬ್ದದ ಅರ್ಥವೇನು? ಈ ನಾಡಿನ ವ್ಯಾಪ್ತಿ ಎಷ್ಟು? ಇದು 'ಕರ್ನಾಟಕ' ಶಬ್ದದ ಪರ್ಯಾಯ ಪದವೇ? ಇತ್ಯಾದಿ ವಿಷಯಗಳು ಪ್ರಶ್ನೆಗಳಾಗಿಯೇ ಉಳಿದುಕೊಂಡಿವೆ.

ಎಲ್ಲ ಶಬ್ದಗಳನ್ನೂ ಸಂಸ್ಕೃತದ ಹಿನ್ನೆಲೆಯಲ್ಲಿ ಅರ್ಥೈಸುವುದು ನಮ್ಮ ಪ್ರಾಚೀನರ ಒಂದು ಹವ್ಯಾಸವಾಗಿದ್ದಿತು. ಆ ಮೇರೆಗೆ ಯಾವುದೋ ಒಂದು ಮೂಲ ಕನ್ನಡ ಶಬ್ದವನ್ನು ಸಂಸ್ಕೃತ ಶಬ್ದಕ್ಕೆ ಹೊಂದುವಂತೆ ವ್ಯತ್ಯಾಸಗೊಳಿಸಿ, ಅದಕ್ಕೆ ಸಂಸ್ಕೃತ ಅರ್ಥ ಆರೋಪಿಸುವುದು ಉದ್ದಕ್ಕೂ ನಡೆದುಬಂದಿದೆ. ಈ ಬೆಳಕಿನಲ್ಲಿ ಹೇಳುವುದಾದರೆ ಕನ್ನಡ ಯಾವುದೇ ಒಂದು ಶಬ್ದವನ್ನು 'ಕುಂತಳ' ರೂಪಕ್ಕೆ ಸರಿಪಡಿಸಿ, ಅದಕ್ಕಿರುವ 'ಕೂದಲ' ಎಂಬ ಅರ್ಥವನ್ನು ನಂಬಿ, ಈ ನಾಡು ಭೂದೇವಿಯ ತಲೆಗೂದಲಿಗೆ ಸಮಾನವೆಂದು ಪಂಡಿತರು ಹೇಳುತ್ತ ಬಂದಿದ್ದಾರೆ. ಆದರೆ ಇದು ಒಪ್ಪದ ಮಾತು.

ಹೀಗಾಗಿ ಈ ಬಗ್ಗೆ ಚರ್ಚೆ ಎತ್ತಿಕೊಂಡು ನಾನು "ಕುಂತಳ, ಕರ್ನಾಟಕ: ನಿಷ್ಪತ್ತಿ" ಹೆಸರಿನ ಲೇಖನ(ಮಾರ್ಗ-೪. ಪುಟ.೪೦೬) ಬರೆದಿದ್ದೆನು. ಈ ಲೇಖನದಲ್ಲಿ ನಾನು ಪ್ರತಿಪಾದಿಸಿದುದು ಇಷ್ಟು: ಬೆಳಗಾವಿ ಜಿಲ್ಲೆಯ ರಾಯಬಾಗದವನಾದ ರಾಜಾದಿತ್ಯನು "ಕುಂತಣಬಾಗೆಯ ಪರಿಭಾಷೆ"ಯಲ್ಲಿ ಗಣಿತವನ್ನು ಬರೆದುದಾಗಿ ಹೇಳಿದ್ದಾನೆ. ಹೀಗಾಗಿ ಇದರ ಇನ್ನೊಂದು ರೂಪ ಕುಂತಣವೆಂದೂ ಹೇಳಬಹುದು. ಕೊಪಣ(ನಗರ)ವು ಕೊಪ್ಪಳವಾಗಿರುವಂತೆ ಕುಂತಣವು ಕುಂತಳವಾಗಿರಬಹುದು. ಇದೇ ಕುಂತಲವೂ ಆಗಿರಬಹುದು.

ಒಟ್ಟಾರೆ ಇದು ಕೂದಲು ಅರ್ಥದ ಶಬ್ದವಲ್ಲ, ಗ್ರಾಮನಾಮವಾಗಿದೆಯೆಂದು ಆ ಲೇಖನದಲ್ಲಿ ಹೇಳಿದ್ದೆನು. ಹಾಗಿದ್ದರೆ ಈ ಊರಿನ ಮೂಲರೂಪ ಏನು? ಇದು ಎಲ್ಲಿದೆ? ಎಂಬುದು ನಮ್ಮ ಮುಂದಿನ ಪ್ರಶ್ನೆ.

ಬಹುಶಃ ಈ ಗ್ರಾಮದ ನಿಜದ ಹೆಸರು 'ಕುಂತಹಳ್ಳಿ' ಎಂದಿರಬಹುದು. ಕರ್ನಾಟಕದಲ್ಲಿ 'ಹಳ್ಳಿ' ಪದವನ್ನು ಉತ್ತರಾರ್ಧದಲ್ಲಿ ಹೊಂದಿದ ಸಾವಿರಾರು ಪದಗಳಿವೆ. ಹಳ್ಳಿ ಎಂಬುದು ಶುದ್ಧ ಕನ್ನಡಪದವಾಗಿರುವುದರಿಂದ ಇದು ಸಹಜವೇ ಆಗಿದೆ. ಇದಕ್ಕೆ ನಾನು ಸೂಚಿಸುವ ಒಂದು ಸಣ್ಣ

ಆಧಾರವೆಂದರೆ "ಕುಂತಳಿಯವರ ಕುರಂಲಿಂಗ" ಎಂಬ ವಚನ ಮುದ್ರಿಕೆ ಸಿಗುತ್ತಿದ್ದು, ಇದು ಕರ್ನಾಟಕ ಸರಕಾರ ಪ್ರಕಟಿಸಿದ ೯ನೆಯ ವಚನ ಸಂಪುಟದಲ್ಲಿ ಪ್ರಕಟವಾಗಿದೆ. ಇಲ್ಲಿ 'ಕುಂತಳದ' ಎಂಬುದಕ್ಕೆ ಬದಲು 'ಕುಂತಳಿಯ' ಎಂಬ ಪದವಿರುವುದನ್ನು ಅವಶ್ಯವಾಗಿ ಗಮನಿಸಬೇಕು. ಬಹುಶಃ ಇದು 'ಕುಂತಳಿ' ಗ್ರಾಮದ ದೇವರನ್ನು ಸೂಚಿಸುತ್ತದೆ. ಕೆಲವೊಮ್ಮೆ ರಾಜಧಾನಿ ನಗರದ ಹೆಸರು ನಾಡಿಗೂ ಅನ್ವಯಿಸುವುದನ್ನು (ಮೈಸೂರು ರಾಜಧಾನಿ ನಗರ, ಮೈಸೂರು ರಾಜ್ಯ)ಗಮನಿಸಿದರೆ, ಈ ಕುಂತಳಿಯು ರಾಜಧಾನಿಯಾಗಿದ್ದು, ಇದೇ ಹೆಸರನ್ನು ನಾಡಿಗೂ ಅನ್ವಯಿಸುತ್ತ ಬರಲಾಗಿದೆಯೆಂದು ಹೇಳಬಹುದು.

ಹಾಗಿದ್ದರೆ ಈ ನಗರ ಯಾವುದು? 'ಮಾರ್ಗ-೪'ರಲ್ಲಿ ಪ್ರಕಟವಾದ ಲೇಖನದಲ್ಲಿ ಇದು ಬೆಳಗಾವಿ ಜಿಲ್ಲೆಯ ಕೊತ್ತಳಿಯೋ ಬೇರಾವುದೋ ಗ್ರಾಮವಾಗಿರಬಹುದೆಂದು ನಾನು ಊಹಿಸಿದ್ದೇನೆ. ಆದರೆ ಕರ್ನಾಟಕ ಮಹಾರಾಷ್ಟ್ರದ ಸೀಮೆಯಲ್ಲಿ 'ಕುಂತಳಗಿರಿ' ಹೆಸರಿನ ಗ್ರಾಮವಿದೆ. ಬಹುಶಃ ಇದರ ಮೂಲರೂಪ 'ಕುಂತಳಿಗಿರಿ' ಎಂದಿರಬಹುದು. ಇದು ಸುಪ್ರಸಿದ್ಧ ಜೈನ ಧಾರ್ಮಿಕಕೇಂದ್ರವಾಗಿದ್ದು, ಇಲ್ಲಿ ಮೂಲತಃ 'ಕುಂತಳಜಿನ'ನ ಪ್ರಸಿದ್ಧ ಬಸದಿಯಿದ್ದಿರಬಹುದು. ಈಗ ಈ ಜಿನನಿಂದಾಗಿಯೇ 'ಕುಂತು+ಹಳ್ಳಿ' ಗ್ರಾಮ ಅಸ್ತಿತ್ವಕ್ಕೆ ಬಂದಿದ್ದರೆ ಆಶ್ವರ್ಯ ಪಡಬೇಕಿಲ್ಲ. ಸಂಸ್ಕೃತ ವ್ಯಸನದ ವಿದ್ವಾಂಸರು ಈ 'ಕುಂತಳಿ'(ಕುಂತುಹಳ್ಳಿ) ಎಂಬುದನ್ನೆ 'ಕುಂತಳ>ಕುಂತಲ' ಎಂದು ಸುಧಾರಣೆ ಮಾಡಿಕೊಂಡಿರುವ ಸಾಧ್ಯತೆಯಿದೆ.

ಈಗ ಈ ಸ್ಥಳದಲ್ಲಿ ಸಂಶೋಧನೆ ನಡೆಸಿದ ಬಳಿಕ ಮೇಲಿನ ನನ್ನ ಅಭಿಪ್ರಾಯ ಗಟ್ಟಿಗೊಂಡರೆ ಕುಂತಳ ನಾಡಿನ ರಾಜಧಾನಿ ಇಂದಿನ ಕುಂತಳಗಿರಿಯೆಂದೂ, ಸಾಮಾನ್ಯವಾಗಿ ರಾಜಧಾನಿಗಳು ನಾಡಿನ ಮಧ್ಯವರ್ತಿ ಸ್ಥಳದಲ್ಲಿರುವುದರಿಂದ ಮೂಲ ಕುಂತಳನಾಡು ಮಹಾರಾಷ್ಟ್ರ-ಕರ್ನಾಟಕಗಳನ್ನು ವ್ಯಾಪಿಸಿದ್ದಿತೆಂದೂ ಹೇಳುವುದು ಅನಿವಾರ್ಯವಾಗುತ್ತದೆ. 'ಕುಂತಳ ನಾಡ'ನ್ನು ಉಲ್ಲೇಖಿಸುವ ಬಹಳಷ್ಟು ಪ್ರಾಚೀನ ಶಾಸನಗಳು ಈ ಪ್ರದೇಶದಲ್ಲಿಯೆ ಸಿಗುತ್ತವೆ. ಬರು ಬರುತ್ತ ಈ ಹೆಸರು ಮಧ್ಯ ಕರ್ನಾಟಕ, ದಕ್ಷಿಣ ಕರ್ನಾಟಕ ಶಾಸನಗಳಲ್ಲಿ ಕಾಣಿಸತೊಡಗಿದೆ. ಇದು ಕೇವಲ ಹೆಸರು ಮಾತ್ರ ವಿಸ್ತಾರಗೊಂಡುದುದನ್ನು ಸೂಚಿಸುವದೋ, ಆ ನಾಡಿನ ಸೀಮೆ ವಿಸ್ತಾರಗೊಂಡುದನ್ನು ಸೂಚಿಸುವದೋ ಎರಡನ್ನೂ ಸೂಚಿಸುವುದೋ ವಿಚಾರಿಸಬೇಕಾಗಿದೆ.

■■

ಆಕರ : ಮಾರ್ಗ ಸಂಪುಟ-೭

೫೪

ವೀರಶೈವ ವರ್ತಕವರ್ಗದ ಅಡ್ಡಹೆಸರುಗಳು

'ನಾಮಶಾಸ್ತ್ರ' (Onomastics) ಇಂದು ಮಹತ್ವಪೂರ್ಣ ಶಾಖೆಯಾಗಿ ಬೆಳೆದಿದೆ. ಇದರ ಒಂದು ಭಾಗ ಅಡ್ಡಹೆಸರು (Surname). ವೀರಶೈವ ಮತ್ತು ವೀರಶೈವೇತರ ಸಮಾಜಗಳಿಗೆ ಸಾಮಾನ್ಯವಾಗಿರುವ ಅಡ್ಡಹೆಸರುಗಳನ್ನು ಬಿಟ್ಟರೂ ಬಣಜಿಗರೆಂದು ಕರೆಯಿಸಿಕೊಳ್ಳುವ ವೀರಶೈವ ವ್ಯಾಪಾರಿವರ್ಗಕ್ಕೇ ವಿಶಿಷ್ಟವಾದ ಕೆಲವು ಅಡ್ಡಹೆಸರುಗಳು ಕರ್ನಾಟಕದಲ್ಲಿ ರೂಢಿಯಲ್ಲಿವೆ. ಇವುಗಳಲ್ಲಿ ಚಿನವಾಲ (ಚಿನವಾರ), ವಾರದ, ಪಸಾರದ, ಕೋರಿ, ಕತ್ತಿ, ಪಟ್ಟಣಶೆಟ್ಟಿ, ವಾಲಿ, ಹತ್ತಿ, ಲಿಗಾಡೆ, ಮಹಾಜನಶೆಟ್ಟಿ ಮುಖ್ಯವಾದವು. ಕುತೂಹಲಕಾರಿ ಫಲಿತಾಂಶಗಳನ್ನು ಪ್ರಕಟಪಡಿಸಬಹುದಾದ ಇವುಗಳಲ್ಲಿ ಕೆಲವನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ.

ಚಿನವಾಲ: ಇದು ಚಿನವಾಲ-ಚಿನವಾರ, ಚಿನವಾಲದ-ಚಿನವಾರದ ಎಂಬ ರೂಪಗಳಲ್ಲಿ ದೊರೆಯುತ್ತದೆ. ಇಲ್ಲಿಯ 'ನ' ಕೆಲವೊಮ್ಮೆ 'ನಿ' ರೂಪದಲ್ಲಿಯೂ ಸಿಗುತ್ತದೆ. ಈ ಹೆಸರು ಬಂಗಾರ ವ್ಯಾಪಾರಕ್ಕೆ ಸಂಬಂಧಿಸಿದೆಯೆಂದೂ, ಚಿನ್ನವನ್ನು ಒರೆಗೆ ಹಚ್ಚುವ ಉದ್ಯೋಗವನ್ನು ಇದು ಸೂಚಿಸುವುದೆಂದೂ ಗ್ರಾಮೀಣರು ಭಾವಿಸಿದ್ದಾರೆ. ಅಂದರೆ ಇಲ್ಲಿಯ -ವಾರ ಪದವನ್ನು ಅವರು 'ಒರೆ' ಧಾತುವಿನ ಹಿನ್ನೆಲೆಯಲ್ಲಿ ಪರಿಭಾವಿಸುತ್ತಾರೆ. ಆದರೆ ಇದನ್ನು 'ಚಿನ್ನ+ಪರದ' ಎಂದು ಬಿಡಿಸುವುದು ಸರಿಯಾದ ಕ್ರಮ. ಬಂಗಾರ ವ್ಯಾಪಾರಿಯೆಂದು ಇದರ ಅರ್ಥ. ಇಲ್ಲಿಯ ಚಿನ್ನಪರದ ಎಂಬುದು ಚಿನ್ನವರದ>ಚಿನವರದ ರೂಪಗಳಿಗೆ ತಿರುಗಿದೆ. ಅಂಶಗಣದಲ್ಲಿ ಮೊದಲಿನ ಎರಡು ಲಘುಗಳು ಒಂದು ಅಂಶ, ಆಮೇಲಿನ ಒಂದು ಲಘುವೂ ಒಂದು ಅಂಶ(=ಗುರು)ವಾಗಿರುವುದೆಂಬ ನಿಯಮದ ಪ್ರಕಾರ ಚಿನವರದ ಎಂಬುದು ಚಿನವಾರದ ಎಂದಾಗಿದೆ. ಆಮೇಲೆ ರ>ಲ ವ್ಯತ್ಯಾಸ ತತ್ವದಂತೆ ಚಿನವಾಲದ ಎಂದೂ ಆಗಿದೆ. ಕೊನೆಯ 'ದ' ವರ್ಣವನ್ನು ಕಳಚಿಕೊಂಡು ಚಿನವಾರ, ಚಿನವಾಲ ರೂಪಗಳಲ್ಲಿಯೂ ಸಿಗುತ್ತದೆ.

ಜೋಳ>ಜೋಳದ, ಬೇವಿನಮರ>ಬೇವಿನಮರದ ಎಂಬ ಅಡ್ಡಹೆಸರುಗಳಲ್ಲಿಯ 'ದ' ಷಷ್ಠೀವಿಭಕ್ತಿಸೂಚಿ. ಆದರೆ ಚಿನವಾರದ, ಚಿನವಾಲದಗಳಲ್ಲಿಯ 'ದ'ಕಾರವು ಷಷ್ಠೀವಿಭಕ್ತಿ ಸೂಚಿಯಲ್ಲ, 'ಪರದ' ಶಬ್ದದ ಭಾಗ.

ವಾರದ: ಇದು ವಾರ, ದಿನಗಳತ್ತ ನಮ್ಮ ಲಕ್ಷ್ಯಸೆಳೆಯುವ ಪದ. ಜನಸಾಮಾನ್ಯರಂತೆ ವಿದ್ವಾಂಸರೂ ಇದೇ ರೀತಿ ಆಲೋಚಿಸುತ್ತಿದ್ದಾರೆ. ಆದರೆ ಮೇಲೆ ವಿವರಿಸಿದ ಚಿನ್ನ+ಪರದ>ಚಿನ+ವಾರದ ಎಂಬಲ್ಲಿ ಇರುವ

ವಾರದ ಎಂಬುದು 'ಪರದ' ಎಂಬುದರ ವ್ಯತ್ಯಸ್ತರೂಪವೆಂಬುದನ್ನು ನೆನೆದರೆ, ವಾರದ ಎಂಬುದೂ ಪರದ ಶಬ್ದದಿಂದಲೇ ಬಂದಿದೆಯೆಂದು ಸ್ಪಷ್ಟವಾಗುತ್ತದೆ. ಚಿನ+ವಾರದ ಎಂಬಲ್ಲಿಯಂತೆ ವಾರದ ಎಂಬ ಹೆಸರಿನ ಹಿಂದೆ ಮೂಲತಃ ಯಾವುದೋ ವಿಶೇಷಣವಿದ್ದು, ಕಾಲಕ್ರಮದಲ್ಲಿ ಅದು ಕಳಚಿಹೋಗಿರಬಹುದು. ಇಲ್ಲವೆ 'ಪರದ' ಎಂಬುದೇ ನೇರವಾಗಿ ವಾರದ ಆಗಿರಬಹುದು.

ಪಸಾರದ : ಪಸಾರದ ಹೆಸರಿನ ವೀರಶೈವ ವ್ಯಾಪಾರಿಮನೆತನಗಳು ಕೆಲವೆಡೆಗಳಲ್ಲಿವೆ. ಪಸರ, ಪಸಾರ=ಬಯಲು ಅಂಗಡಿ. ಇದಕ್ಕೆ 'ದ' ಎಂಬ ಷಷ್ಠೀವಿಭಕ್ತಿ ಪ್ರತ್ಯಯ ಸೇರಿಕೊಂಡಿರುವುದರಿಂದ 'ಪಸಾರ+ದ' ಅಂದರೆ ಬಯಲು ಅಂಗಡಿ ಉದ್ಯೋಗದವನು ಎಂದು ಅರ್ಥ ಹೇಳಲು ಮನಸ್ಸಾಗುತ್ತಿದ್ದರೂ ಇದನ್ನು ಪಸು+ಪರದ ಎಂದು ಬಿಡಿಸುವುದೇ ಯೋಗ್ಯವೆನಿಸುತ್ತದೆ. ಪಸು=ಹಂಚು, ವಿಭಾಗಿಸು, ಬಿಚ್ಚು, ಪಾಲುಮಾಡು. ಇದರಿಂದಲೇ ಹಸುಬೆ, ಪಸಗಿ, ಕರಣಹಸಿಗೆ ಪದಗಳು ಹುಟ್ಟಿವೆ. ಈಗ ಈ ಪದವನ್ನು ಪಸು+ಪರದ>ಪಸುವರದ>ಪಸಾರದ ಎಂದು ಸರಿಯಾಗಿ ಮನಗಾಣಿಸಬಹುದು. ವಸ್ತುಗಳನ್ನು ಬಿಚ್ಚಿ (ಬಯಲಲ್ಲಿ) ಇಟ್ಟು ಮಾರುವವನು ಎಂದು ಇದರ ಅರ್ಥ. ಆದರೆ ಕಾಲಕ್ರಮದಲ್ಲಿ 'ಸುಂಕದ' 'ಸುಂಕ' ಎಂಬಂಥ ಜೋಡಿ ಪದಗಳ ಮಾದರಿಯಲ್ಲಿ 'ಪಸಾರದ' (ಪಸು+ಪರದ) ಪದದಿಂದಲೇ ಪ್ರಸಾರ, ಪಸರ(=ಅಂಗಡಿ) ಪದಗಳು ಹುಟ್ಟಿದವೆಂದು ತೋರುತ್ತದೆ. ಆದುದರಿಂದ ಕೆಲವರು ಭಾವಿಸಿದಂತೆ ಪ್ರಸರ, ಪ್ರಸಾರಗಳಿಂದ ಪಸಾರ, ಪಸಾರದ ರೂಪಗಳು ಹುಟ್ಟಿರಲಿಕ್ಕಿಲ್ಲ.

ಕೋರಿ: ಇದು ವೀರಶೈವ ವ್ಯಾಪಾರಿವರ್ಗದ ಅಡ್ಡಹೆಸರು, ಕೋರಿಶೆಟ್ಟಿ ಎಂಬ ಪರ್ಯಾಯಪದವೂ ಬಳಕೆಯಲ್ಲಿದೆ. ಅಲ್ಲಲ್ಲಿ ಕ್ವಚಿತ್ತಾಗಿ ಈಗಲೂ ಗೌರಿ (ಗವರಿ), ಗೌರಿಶೆಟ್ಟಿ,(ಗವರಶೆಟ್ಟಿ, ಗೌರಶೆಟ್ಟಿ) ಎಂಬ ಹೆಸರುಗಳು ಕೇಳಿಬರುತ್ತವೆ. ಇನ್ನೂ ಹಿಂದೆ ಹೋದರೆ ಶಾಸನಗಳಲ್ಲಿ ಗವಱೆ, ಗವಱೆಶೆಟ್ಟಿ ಪದಗಳು ಸಿಗುತ್ತವೆ. ಇವುಗಳ ರೂಪಸಾಮ್ಯವನ್ನು ಗಮನಿಸಿದರೆ ಕೋರಿ-ಕೋರಿಶೆಟ್ಟಿ, ಗವಱೆ-ಗವಱೆಶೆಟ್ಟಿ ಒಂದೇ ಮೂಲದ ಪರ್ಯಾಯಪದಗಳೆಂದೂ ಪ್ರಾಚೀನ ಶಾಸನಗಳಲ್ಲಿ ಬರುವ 'ಗವಱೆ' ಎಂಬ ವ್ಯಾಪಾರಿವರ್ಗವೇ ಇಂದಿನ 'ಕೋರಿ' ವ್ಯಾಪಾರಿವರ್ಗವೆಂದೂ ಸ್ಪಷ್ಟವಾಗುತ್ತದೆ. ಶಿವತತ್ವ ಚಿಂತಾಮಣಿಯಲ್ಲಿ ಬರುವ 'ಕೋರಿಯಾ ಕಾಯಕದ ಗವಱೆ ಬಸವಣ್ಣ'(೩೮-೧೭೨) ಎಂಬ ಹೇಳಿಕೆ ಕೋರಿ ಮತ್ತು ಗವಱೆ ಪದಗಳಲ್ಲಿಯ ಭಾಷಿಕ ಸಂಬಂಧದ ಮಟ್ಟಿಗೆ ನಮ್ಮ ಗಮನ ಸೆಳೆಯುತ್ತದೆ. (ಗವರೆಗಳದು ಕೇವಲ ಕೋರಿಕಾಯಕವೆಂಬುದನ್ನು ಮಾತ್ರ ಒಪ್ಪಲು ಸಾಧ್ಯವಿಲ್ಲ).

ಈ ಗವಱೆ ಪದದ ಅರ್ಥವೇನು? ಈ ಬಗ್ಗೆ ಡಾ. ಚಿದಾನಂದಮೂರ್ತಿ ಅವರು 'ಗವಱೆ' ಎಂಬುದು ವರ್ತಕರಿಗೆ ಇದ್ದ ಸಾಮಾನ್ಯ ಹೆಸರು'[೧] ಎಂದು ಹೇಳಿದರೆ, ಪರಿಷತ್ತಿನ ನಿಘಂಟು ಸ್ವಲ್ಪ ನಿರ್ದಿಷ್ಟವಾಗಿ 'ವರ್ತಕರಲ್ಲಿ ಒಂದು ವರ್ಗ'ವೆಂದು ಹೇಳುತ್ತದೆ. ಈ ಸಂದರ್ಭದಲ್ಲಿ ಡಾ. ಬಿ.ಆರ್. ಹಿರೇಮಠ ಅವರು "ಗವರೆ: ಕತ್ತೆ ಮೊದಲಾದ ಪ್ರಾಣಿಗಳ ಮೇಲೆ ವೀಳ್ಯದೆಲೆ ಹೇರಿಕೊಂಡು ಊರಿಂದೂರಿಗೆ ಅಲೆಯುತ್ತ ವ್ಯಾಪಾರ ಮಾಡುವ ವರ್ತಕ ಪ್ರಕಾರವಿದು'[೨] ಎಂದು ಇನ್ನೂ ನಿರ್ದಿಷ್ಟ ಅರ್ಥಹೇಳಲು ಪ್ರಯತ್ನಿಸಿದ್ದಾರೆ. ಆದರೆ 'ಗವಱೆ'ಶಬ್ದವನ್ನು ನಿಷ್ಪತ್ತಿಯ ಬೆಳಕಿನಲ್ಲಿ ಇವರಾರೂ ವಿವರಿಸಿಲ್ಲವಾದುದರಿಂದ, ಈ ವರೆಗೆ ಈ ಪದಕ್ಕೆ ಯಾರೂ ಸರಿಯಾಗಿ (ಸರಿಯಾದ) ಅರ್ಥ ಹೇಳಿಲ್ಲವೆನ್ನಬೇಕಾಗುತ್ತದೆ.

---

೧. ಡಾ. ಎಂ. ಚಿದಾನಂದ ಮೂರ್ತಿ- ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. ೩೭೮.

೨. ಡಾ. ಬಿ.ಆರ್ ಹಿರೇಮಠ-ಶಾಸನಗಳಲ್ಲಿ ಕರ್ನಾಟಕದ ವರ್ತಕರು ಪು. ೫೯.

ದ್ರಾವಿಡಭಾಷೆಯ ಪದಗಳ ಆದಿಯಲ್ಲಿ ಮೃದುವರ್ಣಗಳ ಉಚ್ಚಾರವಿಲ್ಲ. ಆದುದರಿಂದ ಗವಜಿ ಎಂಬುದರ ನಿಜರೂಪ ಕವಳಿ ಇರಬಹುದು. ಇದರ ಇನ್ನೊಂದು ರೂಪ ಕವಲೆ=ಗೂಳಿ, ಎತ್ತು. ಹೀಗಾಗಿ ಗವಜೆಗಳು ಎಂದರೆ ಕವಲೆ ಎತ್ತಿನ ಮೇಲೆ ವಸ್ತುಗಳನ್ನು ಹೇರಿಕೊಂಡು ವ್ಯಾಪಾರ ಮಾಡುವವರು ಎಂದು ಊಹಿಸಬಹುದು. ಮೀರಕಲ್ಲ ಶಾಸನದಲ್ಲಿ[೩] ಬರುವ 'ಎತ್ತಿನ ವಣಿಜರು'ಎಂಬುದು ಇವರನ್ನೇ ಸೂಚಿಸುವಂತಿದೆ. ಆದುದರಿಂದ ಡಾ.ಬಿ.ಆರ್.ಹಿರೇಮಠರು ಹೇಳುವಂತೆ ಇವರು ಕತ್ತೆ ಮೊದಲಾದ ಪ್ರಾಣಿಗಳನ್ನು ಸಾರಿಗೆಗಾಗಿ ಬಳಸುವವರು, ವೀಳ್ಯದೆಲೆಯನ್ನೇ ಮಾರುವವರು ಆಗಿರಲಿಕ್ಕಿಲ್ಲ. ಎತ್ತನ್ನು ಮಾತ್ರ ಸಾರಿಗೆ ಸಾಧನ ಮಾಡಿಕೊಂಡು ಯಾವುದೇ ವಸ್ತುವನ್ನು (ಎಲೆಸಹಿತ) ಮಾರಾಟ ಮಾಡುವ ವ್ಯಾಪಾರಿಗಳಾಗಿರಬೇಕು. ಇದಕ್ಕೆ ಇನ್ನೂ ಕೆಲವು ವಿವರಣೆಗಳನ್ನು ಹೀಗೆ ಕೊಡಬಹುದು. (೧) ಪ್ರಾಚೀನ ಕಾಲದಲ್ಲಿ ಎಲೆಯ ತೋಟದೊಳಗೆ ಕೆಲಸಮಾಡುವವರನ್ನೂ, ಎಲೆ ಸಂಗ್ರಹಿಸುವವರನ್ನೂ ಬಿಟ್ಟರೆ ಅವುಗಳನ್ನು ಮಾರಾಟ ಮಾಡುವವರಿಗೆ 'ತಂಬುಲಿಗಸಾಸಿರ್ವರು' ಎಂಬ ಹೆಸರು ಇರುವುದರಿಂದ, ಹೆಚ್ಚಿನದಾಗಿ 'ಗವಜಿ' ಎಂಬ ಹೆಸರೂ ಎಲೆ ವ್ಯಾಪಾರಿಗಳಿಗೆ ಇರಲಿಕ್ಕಿಲ್ಲ. (೨) ಮೇಲೆ ವಿವರಿಸಿದಂತೆ ಪ್ರಾಚೀನ ಗವಜಿಗಳೇ ಆಗಿರುವ ಇಂದಿ ಕೋರಿ ಮನೆತನದವರು ಕೇವಲ ಎಲೆಯ ವ್ಯಾಪಾರ ಮಾಡುತ್ತಿದ್ದರೆಂಬುದಕ್ಕೆ ಈಗಿನ ಕೋರಿ ಮನೆತನಗಳಲ್ಲಿ ಒಂದೂ ಸೂಚನೆ ಸಿಗುವುದಿಲ್ಲ. (೩) ಇಂದು ಕೋರಿ ಹೆಸರಿನ ಮನೆತನಗಳು ವಿಪುಲ ಸಂಖ್ಯೆಯಲ್ಲಿ ಸಿಗುವುದನ್ನು ನೋಡಿದರೆ ಪ್ರಾಚೀನ ಕಾಲದಲ್ಲಿ ಇಷ್ಟು ಸಂಖ್ಯಾಪ್ರಮಾಣದಲ್ಲಿ ಎಲೆಯ ವ್ಯಾಪಾರಿಗಳ ಮನೆತನಗಳಿದ್ದವೆಂಬುದು, ಇವರೆಲ್ಲ ಎಲೆ ವ್ಯಾಪಾರಿಗಳಾಗಿದ್ದರೆಂಬುದು ಅಸಂಭವವೆನಿಸುತ್ತದೆ. (೪) ಎಲೆಯದು ಭವ್ಯವಾದ ದೇವಾಲಯ ಕಟ್ಟಿಸುವಷ್ಟು ದೊಡ್ಡ ಮೊತ್ತದಲ್ಲಿ ಹಣಗಳಿಸುವ ಅಂಥ ಶ್ರೀಮಂತ ವ್ಯಾಪಾರವಲ್ಲ. ಹೀಗಾಗಿ ಶಾನಗಳು ತಿಳಿಸುವಂತೆ ಪದೇ ಪದೇ ದಾನಕಾರ್ಯಗಳಲ್ಲಿ ತೊಡಗಿರುವ, ಗವರೇಶ್ವರ ಹೆಸರಿನ ನೂರಾರು ದೇವಾಲಯಗಳನ್ನು ಕಟ್ಟಿಸಿರುವ ಗವಜಿಗಳು ಕೇವಲ ಎಲೆಯ ವ್ಯಾಪಾರಿಗಳಾಗಿರುವುದು ಅಸಂಭವವೆನಿಸುತ್ತದೆ. ಈ ದೊಡ್ಡ ದಾನಿಗಳು ಮತ್ತು ದೇವಾಲಯ ನಿರ್ಮಾತೃಗಳು ಎತ್ತಿನ ಮೂಲಕ ವ್ಯಾಪಾರ ಮಾಡುವವರಾಗಿರುವುದು ಸಂಭವನೀಯವೆನಿಸುತ್ತದೆ. (೫) ಕವಲೆತ್ತನ್ನು ಸಾರಿಗೆ ಸಾಧನವಾಗಿ ಬಳಸುತ್ತಿದ್ದ ಈ ಗವಜಿಗಳು ಕಟ್ಟಿಸಿದ ಗವಜೀಶ್ವರ ದೇವಸ್ಥಾನಗಳಂತೆ ಕವಿಲೇಶ್ವರ>ಕಪಿಲೇಶ್ವರ, ಕಪಿಲಸಿದ್ಧೇಶ್ವರ ದೇವಸ್ಥಾನಗಳೂ ಇವರ ನಿರ್ಮಾಣಗಳೇ ಆಗಿರಬಹುದು. (೬) ಈಗ ರೂಢಿಯಲ್ಲಿರುವ ವೀರಶೈವ ಬಣಜಿಗವರ್ಗದ ಕವದಿ(>ಕೌದಿ), ಕವಳಿ ಎಂಬ ಅಡ್ಡಹೆಸರುಗಳೂ ಗವರೆ (ಗವಜಿ>ಕವಜಿ)ಯಿಂದಲೇ ಬಂದಿರಬಹುದು. (೭) ಗೌರಿಬಿದನೂರು, ಕವಲೇದುರ್ಗಗಳೆಲ್ಲ ಮೂಲತಃ ಇಂಥ ವ್ಯಾಪಾರಿಗಳ ನೆಲೆಗಳೇ ಆಗಿರಬೇಕು. (೮) ಎತ್ತಿನ ಮೇಲೆ ವಸ್ತುಗಳನ್ನು ಹೇರುತ್ತಿದ್ದ ಇವರು ಅನಿವಾರ್ಯಪ್ರಸಂಗಗಳಲ್ಲಿ ಹೆಗಲಮೇಲೆಯೂ ಹೊರುತ್ತಿರಬೇಕು. ಒಂದೆರಡು ಶಾಸನಗಳು ಬಳಸಿದ 'ಹೆಗಲಗವಜಿ' ಎಂಬ ಪದ ಇಂಥವರನ್ನೇ ಸೂಚಿಸುತ್ತಿಬಹುದು.

ಒಟ್ಟಿನಲ್ಲಿ ಇಂದಿನ ಕೋರಿ, ಕೋರಿಶೆಟ್ಟಿ, ಗೌರಿ, ಗೌರಿಶೆಟ್ಟಿ, ಕೌದಿ, ಕವಳಿ, ಕವಲಿ (?) ಅಡ್ಡಹೆಸರುಗಳೆಲ್ಲ ಗವಜಿಯಿಂದಲೇ ಬಂದುವು. ಈ ಅಡ್ಡಹೆಸರಿನವರು ಎತ್ತನ್ನು ಸಾರಿಗೆ ಸಾಧನ ಮಾಡಿಕೊಂಡಿದ್ದ ವ್ಯಾಪಾರಿಗಳು - ಎಂದು ಹೇಳಬಹುದು. ಕತ್ತೆಯನ್ನು ಸಾರಿಗೆ ಸಾಧನ ಮಾಡಿಕೊಂಡವರು ಕತ್ತಿಯವರೆಂಬುದನ್ನು ಇಲ್ಲಿ ನೆನೆಯಬಹುದು.

---

೩. Historical anf cultural studies of the region around Basava Kalyana-No. 23.

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುವಿನಲ್ಲಿ ಕೋರಿಶೆಟ್ಟಿಯೆಂಬುದಕ್ಕೆ "ಹೆಗಲ ಕಂಬಳಿ ಹೊದೆದು ವ್ಯಾಪಾರಕ್ಕಾಗಿ ಕೈಚೀಲದಲ್ಲಿ ಸಾಮಾನುಗಳನ್ನು ತುಂಬಿಕೊಂಡು ಸಂಚರಿಸುವ ಲಿಂಗಾಯತ ವರ್ತಕ, ಬಣಜಿಗನ ಗಳಿಕೆಯಲ್ಲಿ ದಾಸೋಹಕ್ಕೆ ಕೊಡುವ ವ್ಯಾಪಾರಸ್ಥ, ಚಿಲ್ಲರೆ ವ್ಯಾಪಾರಿ, ತಿರುಗುವ್ಯಾಪಾರಿ" ಎಂಬ ಅರ್ಥಗಳನ್ನು ಕೊಡಲಾಗಿದೆ. ಬೇರೆ ವ್ಯಾಪಾರಿಗಳು ಕಂಬಳಿ ಹೊರುತ್ತಿರಲಿಲ್ಲ; ತಮ್ಮ ಗಳಿಕೆಯ ಭಾಗವನ್ನು (ಕೋರು= ಪಾಲು) ದಾಸೋಹಕ್ಕೆ ಕೊಡುತ್ತಿರಲಿಲ್ಲವೆಂದು ನಂಬುವುದು ಕಷ್ಟವೆನಿಸುವುದರಿಂದ ಈ ಅರ್ಥ ಸಮಂಜಸವೆನಿಸುವದಿಲ್ಲ. ಚಿಲ್ಲರೆ ವ್ಯಾಪಾರಿ, ತಿರುಗುವ್ಯಾಪಾರಿ ಎಂಬ ಅರ್ಥ ಕೋರಿ ಪದದಿಂದ ನಿಷ್ಪನ್ನವಾಗುವದಿಲ್ಲ.

ಇವರು ಮಾರಾಟದ ವಸ್ತುಗಳನ್ನು ಕಂಬಳಿಯಲ್ಲಿ ಮೂಟೆಕಟ್ಟಿ ಒಯ್ಯುತ್ತಿದ್ದರೆಂದು, ಕಂಬಳಿಯನ್ನು ಮಾರುತ್ತಿದ್ದರೆಂದು ಜಾನಪದರು ಹೇಳುವ ಅರ್ಥವೂ ಇಲ್ಲಿ ಸರಿಯೆನಿಸುವುದಿಲ್ಲ. ನಿರಂಜನ ವಂಶರತ್ನಾಕರದಲ್ಲಿ "ಬಸವನ ಮುದ್ರೆ, ಮುರಿಗೆ ದೊಣ್ಣೆ, ಸರ್ವಸಂಭಾರದಹಸುಬೆ ಇವುಗಳಿಂದ ವ್ಯಾಪಾರವ ಮಾಡಿ, ತನ್ನ ಕುಟುಂಬ ಸಂರಕ್ಷಣೆ ಮುಂತಾದ ಜಂಗಮಾರ್ಚನೆ ತೃಪ್ತಿಮಾಡುವುದು" ಕೋರಿಶೆಟ್ಟಿಯ ಲಕ್ಷಣವೆಂದು ಹೇಳಲಾಗಿದೆ.[೪] ಇಲ್ಲಿಯ 'ಬಸವನ ಮುದ್ರೆ' ಎಂಬುದು ಇವರು ಎತ್ತನ್ನು ಸಾರಿಗೆ ಸಾಧನ ಮಾಡಿಕೊಂಡುದಕ್ಕೆ ಪರ್ಯಾಯ ಸೂಚನೆ ನೀಡುತ್ತದೆ.

ಕತ್ತಿ : ಇದು ವೀರಶೈವ ವ್ಯಾಪಾರಿವರ್ಗದ ಇನ್ನೊಂದು ಅಡ್ಡಹೆಸರು, ಕತ್ತಿಶೆಟ್ಟಿ ರೂಪದಲ್ಲಿಯೂ ಇದು ಸಿಗುತ್ತದೆ. ಪೂರ್ವಕಾಲದಲ್ಲಿ ಕತ್ತೆಗಳನ್ನು ಸಾರಿಗೆ ಸಾಧನವಾಗಿ ಉಪಯೋಗಿಸುತ್ತಿದ್ದ ವ್ಯಾಪಾರಿವರ್ಗವಿದು. ಇಂದು ವಿಪುಲಸಂಖ್ಯೆಯಲ್ಲಿ ಸಿಗುವ ಈ ಅಡ್ಡಹೆಸರುಳ್ಳ ವ್ಯಾಪಾರಿಗಳಿಗೆ ಪ್ರಾಚೀನ ಕಾಲದಲ್ಲಿ ಯಾವ ಹೆಸರಿದ್ದಿತು? ಶಾಸನಗಳು ಇವರನ್ನು ಯಾವ ಹೆಸರಿನಿಂದ ಕರೆದಿವೆ? ಎಂಬ ಕುತೂಹಲ ಹುಟ್ಟುವುದು ಸಹಜ. ಎತ್ತು-ಕತ್ತೆ ಪ್ರಾಚೀನ ಕಾಲದ ಮುಖ್ಯ ಸಾರಿಗೆ ಸಾಧನಗಳು. ಶಾಸನಗಳಲ್ಲಿ 'ಗವಱೆ-ಗಾತ್ರಿಗ' ಎಂಬ ವರ್ತಕಸೂಚಿಪದಗಳು ಜೊತೆ ಜೊತೆಯಾಗಿಯೇ ಬರುವುದರಿಂದ ಗವಱೆಗಳು ಎತ್ತು ಬಳಸುವವರಾದರೆ, ಗಾತ್ರಿಗರು ಕತ್ತೆ ಬಳಸುವ ವರ್ತಕರ? ಎಂಬ ಅನುಮಾನ ಹುಟ್ಟುತ್ತದೆ. ಹಾಗಿದ್ದಲ್ಲಿ ಶಾಸನಗಳಲ್ಲಿ ಬರುವ ಗಾತ್ರಿಗ ಎಂಬುದೇ ಸವೆದು 'ಕತ್ತಿ' ರೂಪದಲ್ಲಿ ಇಂದು ವ್ಯವಹರಿಸುತ್ತಿದೆಯನಿಸುತ್ತದೆ.

ಡಾ. ಚಿದಾನಂದಮೂರ್ತಿ ಅವರು 'ಗಾತ್ರಿಗ' ಎಂಬುದು "ಹೆಗಲು ಮೇಲೆ ಅಥವಾ ತಲೆಯ ಮೇಲೆ ವಸ್ತುಗಳನ್ನು ಹೊತ್ತು ಮಾರುವವರನ್ನು ಸೂಚಿಸುವಂತೆ ಕಾಣುತ್ತದೆ. (ಸಂ. ಗಾತ್ರ= ದೇಹ)[೫] ಎಂದು ಹೇಳುತ್ತಾರೆ. ಗಾತ್ರವೆಂದರೆ ದೇಹವೇನೋ ನಿಜ. ಆದರೆ ಇಷ್ಟು ಅಪ್ರಸಿದ್ಧ ಸಂಸ್ಕೃತಪದವನ್ನು ಹುಡುಕಿ, ಇದರಿಂದ ಗಾತ್ರಿಗ ಪದವನ್ನು ಕನ್ನಡಿಗರು ಸೃಷ್ಟಿಸಿಕೊಂಡಿರಲಿಕ್ಕಿಲ್ಲ.

ಪರಿಷತ್ತಿನ ನಿಘಂಟುವಿನಲ್ಲಿ ಗಾತ್ರ ಎಂಬುದಕ್ಕೆ "ಒಂದು ಸಾವಿರ ವೀಳ್ಯೆಯದೆಲೆಗಳುಳ್ಳ ಕಟ್ಟು" ಎಂದು ಅರ್ಥ ಹೇಳಲಾಗಿದೆ. ಇದನ್ನು ಗಮನಿಸಿ ಡಾ. ಬಿ.ಆರ್. ಹಿರೇಮಠ ಅವರು 'ಒಂದು ಸಾವಿರ ವೀಳ್ಯದೆಲೆಯ

---

೪. ನಿರಂಜನ ವಂಶರತ್ನಾಕರ ಪು. ೨೭.

೫. ಡಾ. ಎಂ. ಚಿದಾನಂದಮೂರ್ತಿ-ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. ೩೭೮.

ಕಟ್ಟುಳ್ಳುದು ಗಾತ್ರ. ಇಂಥ (ವೀಳ್ಯದೆಲೆ) ಕಟ್ಟುಗಳನ್ನು (ತಲೆ, ಹೆಗಲ ಮೇಲೆ) ಹೊತ್ತು ಇಲ್ಲವೆ ಪ್ರಾಣಿಗಳ ಮೇಲೆ ಹೇರಿಕೊಂಡು ವ್ಯಾಪಾರ ಮಾಡುವವ ಗಾತ್ರಿಗ(ಗಾತ್ರ+ಇಗ)' ಎಂದು ಅರ್ಥಹೇಳುತ್ತಾರೆ.[೬] ಗಾತ್ರ=ಎಲೆಯಕಟ್ಟು ಎಂಬ ಅರ್ಥ ಇದೆಯಾದರೂ ಇಂಥ ಸಂಸ್ಕೃತ ಅಪರಿಚಿತ ಪದದಿಂದ ಗಾತ್ರಿಗ ಪದ ಸಮಾಜದಲ್ಲಿ ಬಳಕೆಗೊಳ್ಳುವುದು ಅಸಹಜ. ಇನ್ನು ಅವರೇ ಹೇಳುವಂತೆ 'ಗವಱೆ'ಗಳು ಎಲೆಯ ವ್ಯಾಪಾರಿಗಳಾಗಿರುವಾಗ ೧೦೦೦ ಎಲೆಯ ಕಟ್ಟು ಹೊತ್ತು ಮಾರಿದ ಮಾತ್ರಕ್ಕೆ 'ಗಾತ್ರಿಗ'ರೆಂಬ ಇನ್ನೊಂದು ಹೆಸರೂ ಅವರಿಗಾಗಿ ಹುಟ್ಟಿದುದು ಅಸಂಭವ.

"ಗಾತ್ರಿಗರು ತಮ್ಮ ಎಲೆಯ ಹೇರಿಂಗೆ ವೀಸ" ಸುಂಕ ಬಿಟ್ಟರೆಂಬಂಥ ಉಲ್ಲೇಖಗಳು ಗಾತ್ರಿಗ ಮತ್ತು ಎಲೆಗಳಿಗೆ ಸಂಬಂಧವಿದೆಯೆಂಬ ಸೂಚನೆ ನೀಡುತ್ತಿದ್ದರೂ ಇಲ್ಲಿ ಕತ್ತೆಯ ಮೇಲೆ ಸಾಗಿಸುತ್ತಿದ್ದ ಅನೇಕ ವಸ್ತುಗಳಲ್ಲಿ ಒಂದಾದ 'ಎಲೆಯ ಹೇರಿಂಗೆ ವೀಸ' ಬಿಟ್ಟರೆಂದೂ ಅರ್ಥಹೇಳಬಹುದಾಗಿದೆ. ಇದು ನಿಜವಿದ್ದರೆ ಗಾತ್ರಿಗ ಎಂಬುದು ವಸ್ತುಗಳನ್ನು ಹೊತ್ತು ಮಾರುವ, ಎಲೆಯ ಕಟ್ಟನ್ನು ಮಾರುವ ವ್ಯಾಪಾರಿಯನ್ನು ಸೂಚಿಸುವುದಿಲ್ಲ. ಹೀಗಾಗಿ ಇದರ ಮೂಲವನ್ನು ಬೇರೆ ಕಡೆಗಳಿಂದ ಹುಡುಕುವುದು ವಿಹಿತವೆನಿಸುತ್ತದೆ.

ಗಾತ್ರಿಗ ಎಂಬುದು ದ್ರಾವಿಡದಿಂದ ಬಂದಿದ್ದರೆ, ಇದರ ಮೂಲ ಕಾತ್ತಿರಿಗ. ಇಲ್ಲಿಯ 'ಇಗ'ವೆಂಬ ತದ್ಧಿತ ಪ್ರತ್ಯಯವನ್ನು ತೆಗೆದುಹಾಕಿದರೆ ಉಳಿಯುವ ಕಾತ್ತಿರಿ/ಕಾತ್ತಿರ ಎಂಬುದು ಕತ್ತೆ (ಹೇಸರಗತ್ತೆ)ಯನ್ನು ಸೂಚಿಸುತ್ತಿದ್ದರೆ ನಮ್ಮ ಊಹೆ ನಿಜವಾಗುತ್ತದೆ. ವಿದ್ವಾಂಸರು ಈ ಬಗ್ಗೆ ಶೋಧಿಸಬೇಕು. ೧೮೨ರ ಮೀರಕಲ್ಲ ಶಾಸನದಲ್ಲಿ ಈ ವ್ಯಾಪಾರಿವರ್ಗವನ್ನು 'ಕತ್ತೆಯ ಸೆಟ್ಟಿ' ಎಂದು ನೇರವಾಗಿಯೇ ಕರೆದುದನ್ನು ಇಲ್ಲಿ ಗಮನಿಸಬೇಕು.

ಈಗಿನ ಮಟ್ಟಿಗೆ ಈ ಗವಱೆ, ಗಾತ್ರಿಗ ಪದಗಳು ೧೧ನೆಯ ಶತಮಾನದಷ್ಟು ಪೂರ್ವದ ಶಾಸನಗಳಲ್ಲಿ ಬಂದುಬರುವುದರಿಂದ ಪ್ರಾಚೀನ ಕನ್ನಡಿಗರು ಎತ್ತು, ಕತ್ತೆಗಳನ್ನು ವ್ಯಾಪಾರದ ಸಾಧನ ಮಾಡಿಕೊಂಡುದು ಕನಿಷ್ಠಪಕ್ಷ ಅಷ್ಟು ಹಿಂದೆ ಹೋಗುತ್ತದೆ.

ಪಟ್ಟಣಶೆಟ್ಟಿ : ಪ್ರಾಚೀನ ಶಾಸನಗಳಲ್ಲಿ ಪದೇ ಪದೇ ಕಂಡುಬರುತ್ತಿರುವ ಪಟ್ಟಣಶೆಟ್ಟಿ, ಪಟ್ಟಣಸ್ವಾಮಿ ಎಂಬ ಪದಗಳ ಬಗ್ಗೆ ವಿಪುಲಚರ್ಚೆ ನಡೆದಿದ್ದರೂ ಅದಕ್ಕೆ ಇನ್ನೂ ನಿರ್ದಿಷ್ಟ ಅರ್ಥಹೇಳಲಾಗಿಲ್ಲ. "ವ್ಯಾಪಾರಿ ಸಂಘದ ಮುಖ್ಯಸ್ಥನನ್ನು ಪಟ್ಟಣಸ್ವಾಮಿ ಎಂಬುದಾಗಿ ಕರೆಯುತ್ತಿದ್ದರು."[೭] ಎಂಬ ಡಾ. ಎಂ. ಚಿದಾನಂದಮೂರ್ತಿಯವರ ಅಭಿಪ್ರಾಯವನ್ನು ಡಾ.ಬಿ.ಆರ್.ಹಿರೇಮಠ ಅವರು ಸರಿಯಾಗಿಯೇ ತಳ್ಳಿಹಾಕಿ, "ಪ್ರಾಚೀನ ಕರ್ನಾಟಕದಲ್ಲಿ ಸಂತೆ ನೆರೆಯಿಸುವುದರಿಂದ ಯಾವುದೇ ಗ್ರಾಮ ಪಟ್ಟಣವೆನಿಸಿಕೊಳ್ಳುತ್ತಿದ್ದುದನ್ನು ಮೂಗೂರು ಶಾಸನ ತಿಳಿಸುತ್ತದೆ." "ಇಂಥ ಪಟ್ಟಣಗಳ ರಚನೆ, ಸಂತೆಯ ನಿರ್ಮಾಣ ಮತ್ತು ಸಂತೆಯ ಸಂಯೋಜನ ಕಾರ್ಯಗಳನ್ನು ಮಾಡುವವ ಪಟ್ಟಣಸ್ವಾಮಿ ಎಂದು ತಿಳಿದುಬರುತ್ತದೆ"[೮] ಎಂದು ಹೇಳಿರುವರಾದರೂ ಇದನ್ನು ಇನ್ನಷ್ಟು ವ್ಯವಸ್ಥಿತವಾಗಿ, ಖಚಿತವಾಗಿ ಹೀಗೆ ಹೇಳಬಹುದು. (೧) ಗ್ರಾಮವೊಂದು ಸಂತೆ ನೆರೆಯುವಿಕೆಯಿಂದಾಗಿ

---

೬. ಡಾ.ಬಿ.ಆರ್.ಹಿರೇಮಠ -ಶಾಸನಗಳಲ್ಲಿ ಕರ್ನಾಟಕದ ವರ್ತಕರು ಪು. ೬೧.

೭. ಡಾ. ಎಂ. ಚಿದಾನಂದಮೂರ್ತಿ-ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. ೩೮೩.

೮. ಡಾ. ಬಿ.ಆರ್. ಹಿರೇಮಠ-ಶಾಸನಗಳಲ್ಲಿ ಕರ್ನಾಟಕದ ವರ್ತಕರು ಪು. ೧೩೨.

ಪಟ್ಟಣವೆನಿಸಿಕೊಳ್ಳುತ್ತಿತ್ತು, ಹೀಗೆ ಸಂತೆಯನ್ನು ಅನುಷ್ಠಾನಕ್ಕೆ ತಂದು ಅದನ್ನು ಸರಿಯಾಗಿ ನಡೆಸಿಕೊಂಡು ಹೋಗುವವ ಪಟ್ಟಣಶೆಟ್ಟಿಯೆನಿಸಿಕೊಳ್ಳುತ್ತಿದ್ದನು. ಕ್ವಚಿತ್ತಾಗಿ ಈತ ಸಂತೆ ನೆರೆಯುವ ಸ್ಥಳದಲ್ಲಿ ಕಟ್ಟಡಗಳನ್ನು ಕಟ್ಟಿಸಬಹುದು, ಇಲ್ಲವೆ ಸಂತೆಗಾಗಿ ಹೊಸದೊಂದು ಪಟ್ಟಣವನ್ನು ಕಟ್ಟಿಸಬಹುದು. ಈತನಿಗೆ ಈ ರಚನೆಗಳು ಗೌಣ, ಸಂತೆಯ ಸಂಯೋಜನೆಯಿಂದ ಮಾತ್ರ ಈತ ಪಟ್ಟಣಶೆಟ್ಟಿಯೆನಿಸಿಕೊಳ್ಳುತ್ತಿದ್ದನು. (೨) ಡಾ. ಬಿ.ಆರ್. ಹಿರೇಮಠ ಅವರು ಇವನಿಗಿದ್ದ ಆರ್ಥಿಕ ಆದಾಯದ ಸ್ವರೂಪವೇನೆಂಬುದನ್ನು ತಿಳಿಸುವುದಿಲ್ಲ. ಅದು ಹೀಗಿದೆ: ನಿರ್ದಿಷ್ಟ ಹಣದ ಮೊತ್ತವನ್ನು ಇಲ್ಲವೆ ಸಂತೆಯಲ್ಲಿ ಸಂಗ್ರಹವಾದ ಸುಂಕದ ಕೆಲವು ಭಾಗಗಳನ್ನು ಅರಸನಿಗೆ ಕೊಡುವುದಾಗಿ ಗೊತ್ತುಪಡಿಸಿ, ಇವನು ಪಟ್ಟಣದ (=ಸಂತೆಯ) ಸುಂಕವನ್ನು ಗುತ್ತಿಗೆ ಹಿಡಿಯುತ್ತಿದ್ದನು. ತನಗೆ ದೊಡ್ಡಪ್ರಮಾಣದ ಲಾಭವಾಗಬೇಕೆಂಬ ಉದ್ದೇಶದಿಂದ ಇವನು ಸಂತೆಯನ್ನು ಆದಷ್ಟು ದೊಡ್ಡ ಪ್ರಮಾಣದಲ್ಲಿ ಸಂಯೋಜಿಸಲು ಪ್ರಯತ್ನಿಸುತ್ತಿದ್ದನು. ಹೀಗೆ ಅರಸನಿಂದ ಸಂತೆಯ ಸುಂಕದ ಕಾಂಟ್ರಾಕ್ಟ ಹಿಡಿಯುತ್ತಿದ್ದವನು ಪಟ್ಟಣಶೆಟ್ಟಿಯಾದರೆ, ಅಲ್ಲಿ ವ್ಯಾಪಾರ ಮಾಡುವವರು ಶೆಟ್ಟಿ ಮುಂತಾದವರು. ಈ ಪಟ್ಟಣಶೆಟ್ಟಿತನ ವಂಶಪಾರಂಪರ್ಯವಾಗಿ ಮುಂದುವರಿಯುತ್ತಿದ್ದರೂ ಕೆಲವೊಮ್ಮೆ ಬೇರೊಬ್ಬರು ಹೆಚ್ಚಿನ ಹಣಕ್ಕೆ ಸಂತೆಯ ಕಾಂಟ್ರಾಕ್ಟ ಹಿಡಿದು ಮೊದಲಿನವನ ಸ್ಥಾನವನ್ನು ಆಕ್ರಮಿಸುತ್ತಿರಬಹುದು. ಪಟ್ಟಣಶೆಟ್ಟಿಯನ್ನು ಕುರಿತು ಕೆಲವು ಗಾದೆಮಾತುಗಳು ಬಳಕೆಯಲ್ಲಿವೆ. "ಸೆಟ್ಟಿಯಿಳಿದಲ್ಲಿ ಪಟ್ಟಣ" ಅಂದರೆ ಸೆಟ್ಟಿ ಇಳಿದಲ್ಲಿ ಸಂತೆ ಎಂದು ಅರ್ಥ. "ಸೆಟ್ಟಿ ಸಿಂಗಾರ ಆಗುದರಾಗ ಪಟ್ಟಣ ಹಾಳಾಯಿತು". ಅಂದರೆ ಸಂತೆಯನ್ನು ಸಂಯೋಜಿಸಬೇಕಾದ ಸೆಟ್ಟಿ ಶೃಂಗಾರ ಮಾಡಿಕೊಳ್ಳುವಲ್ಲಿಯೇ ಕಾಲಕಳೆದರೆ ಸಂತೆಯ ಸಂಯೋಜನೆಯೇ ಹಾಳಾಗುತ್ತದೆ. ಒಟ್ಟಿನಲ್ಲಿ ಪಟ್ಟಣಶೆಟ್ಟಿ ಎಂದರೆ ಸಂತೆಶೆಟ್ಟಿ ಅಂದು ಅರ್ಥ.

'ಶೆಟ್ಟಿ'ಅಡ್ಡಹೆಸರು ವೈಶ್ಯ (ಕೊಮಟ)ರಲ್ಲಿ, ದಕ್ಷಿಣ-ಉತ್ತರ ಕನ್ನಡ ಜಿಲ್ಲೆಗಳ ಬಂಟರಲ್ಲಿಯಂತೆ ವೀರಶೈವರಲ್ಲಿಯೂ ಕಂಡುಬರುತ್ತದೆ. ಪಟ್ಟಣಶೆಟ್ಟಿಯೆಂಬುದು ವೀರಶೈವರಿಗೆ ಮಾತ್ರ ಸೀಮಿತವಾಗಿದೆ. ಅದೂ ಉತ್ತರಕರ್ನಾಟಕದ ವೀರಶೈವರಿಗೆ ಮಾತ್ರ ವಿಶೇಷ ಬಳಕೆಯಾಗಿದೆ. ಈ ಪದ ಸಂಸ್ಕೃತದ ಪತ್ತನದಿಂದ ಬಂದಿದೆಯೋ, ಕನ್ನಡದ ಪಟ್ಟಣವೇ ಸಂಸ್ಕೃತದಲ್ಲಿ 'ಪತ್ತನ'ವಾಗಿದೆಯೋ ಸಂದೇಹ. ಮೂಲತಃ ಕನ್ನಡದ್ದೇ ಆದ್ದಲ್ಲಿ 'ಪಡು' (=ವಾಸಿಸು, ಪಟ್ಟಿ=ನಿವಾಸ) ಧಾತುವಿನಿಂದ ಇದನ್ನು ಸಾಧಿಸಬೇಕಾಗುತ್ತದೆ. ಇಲ್ಲಿಯ 'ಅಣ್' ದಿಗ್‌ವಾಚಿ ಪದವಾಗಿದ್ದು ವಾಸಿಸುವ, ನೆಲೆನಿಲ್ಲುವ ಸ್ಥಳ ಎಂಬ ಅರ್ಥ ಇದರಿಂದ ಹೊರಡುತ್ತದೆ. ಈ ಅರ್ಥ ಒಂದು ಸಾಧ್ಯತೆ ಮಾತ್ರ.[೯]

ಮಹಾಜನಶೆಟ್ಟಿ : ಮಹಾಜನ ಎಂಬುದು ನಮ್ಮ ಶಾಸನಗಳಲ್ಲಿ ಪದೇ ಪದೇ ಕಂಡುಬರುವ ಪದ. ಇದಕ್ಕೆ ಅಗ್ರಹಾರವನ್ನು ದಾನವಾಗಿ ಪಡೆದ ಬ್ರಾಹ್ಮಣ ಕುಟುಂಬವರ್ಗದವರು ಎಂದು ಈಗ ಅರ್ಥ ಹೇಳುತ್ತಿದ್ದೇವೆ. ಇಲ್ಲಿ ಮೂರು ಪ್ರಶ್ನೆಗಳು ಉದ್ಭವಿಸುತ್ತವೆ. (೧) ಲಕ್ಕುಂಡಿ, ಬಾಗೇವಾಡಿಗಳಂಥ ಗ್ರಾಮಗಳಲ್ಲಿ

---

೯. ಪಡುವಣ (ಪಡು>ಪಟ್+ಅಣ್), ಪಟ್ಟಣಗಳ ಅರ್ಥ ಮೂಲತಃ ಒಂದೇ ಎನಿಸುತ್ತದೆ. ಪಡುವಣ>ಹಡುವಣ>ಹಡಣ>ಹಣ ಎಂದಾಗಿದ್ದರೆ 'ಹಣಶೆಟ್ಟಿ' ಎಂಬ ಹೆಸರನ್ನೂ 'ಪಟ್ಟಣಶೆಟ್ಟಿ'ಯಿಂದಲೇ ಸಾಧಿಸಬೇಕಾಗುತ್ತದೆ.

೫೦೦ ಮಹಾಜನರ ಉಲ್ಲೇಖ ಬರುತ್ತಿದ್ದು, ಅಲ್ಲಿ ಆಗ ಇಷ್ಟು ಸಂಖ್ಯೆಯಲ್ಲಿ ಬ್ರಾಹ್ಮಣ ಕುಟುಂಬಗಳಿದ್ದುವೇ? ಕೊನೆಯ ಪಕ್ಷ ಅಷ್ಟು ಸಂಖ್ಯೆಯಲ್ಲಿ ಬ್ರಾಹ್ಮಣ ವ್ಯಕ್ತಿಗಳಾಗರೂ ಇದ್ದರೇ? ಏಕೆಂದರೆ ಬ್ರಾಹ್ಮಣರದು ಮೂಲತಃ ಅಲ್ಪಸಂಖ್ಯಾತ ಸಮಾಜ. ಬೆಳೆದುನಿಂತಿರುವ ಬಾಗೇವಾಡಿಯಂಥ ತಾಲೂಕು ಸ್ಥಳಗಳಲ್ಲಿ ಇಂದಿಗೂ ೫೦೦ ಬ್ರಾಹ್ಮಣ ಮನೆತನಗಳಿಲ್ಲ. ಹೀಗಾಗಿ 'ಮಹಾಜನ' ಸಮೂಹದಲ್ಲಿ ಬ್ರಾಹ್ಮಣೇತರರೂ ಪರಿಗಣಿಸಲ್ಪಡುತ್ತಿರದ್ದರೇ? ಹೀಗೆ ಪರಿಗಣಿತರಾದ ಪ್ರತಿಷ್ಠಿತರಲ್ಲಿ ಮಹಾಜನಶೆಟ್ಟಿಗಳೂ ಒಬ್ಬರಾಗಿರಬಹುದೇ? (೨) ಜೈನ, ವೀರಶೈವರಲ್ಲಿ ಮಹಾಜನಶೆಟ್ಟಿ, ಮಹಾಜನಶೆಟ ಎಂಬ ಹೆಸರುಗಳಿವೆ. ಮೂಲತಃ ಇವರು ಬ್ರಾಹ್ಮಣರೇ ಆಗಿದ್ದು ಜೈನ, ವೀರಶೈವಗಳಿಗೆ ಮತಾಂತರಗೊಂಡು ವ್ಯಾಪಾರವೃತ್ತಿ ಕೈಕೊಂಡು 'ಮಹಾಜನಶೇಟ' ಎಂಬ ಹೆಸರು ಪಡೆದರೇ? (೩) ಬ್ರಾಹ್ಮಣರಾದ ಮಹಾಜನ ಕುಟುಂಬಗಳಿಗೆ ಬೇಕಾಗುವ ವಸ್ತುಗಳ ಖರೀದಿ-ವಿನಿಮಯ ಮೊದಲಾದ ಕೆಲಸಗಳನ್ನು ನೋಡಿಕೊಳ್ಳುವ ಇವರು ಮಹಾಜನರ ವೈಯಕ್ತಿಕ ವ್ಯಾಪಾರಿಗಳೇ? ವಿಚಾರಿಸಬೇಕು.[೧೦]

ಹೀಗೆ ವೀರಶೈವ ಬಣಜಿಗವರ್ಗದ ಕೆಲವು ಅಡ್ಡಹೆಸರುಗಳಿಗೆ ಇಲ್ಲಿ ಅರ್ಥಹೇಳುವ ಪ್ರಯತ್ನ ಮಾಡಲಾಗಿದೆ. ಇದೇ ರೀತಿ ವೀರಶೈವರಲ್ಲಿ, ಇತರ ಮತೀಯರಲ್ಲಿ ಪ್ರಚಲಿತವಿರುವ ಅಡ್ಡಹೆಸರುಗಳ ಅಭ್ಯಾಸಕ್ಕೆ ತೊಡಗಿದರೆ ಹೊಸ ಅಧ್ಯಯನ ಕ್ಷೇತ್ರವೊಂದು ನಮ್ಮಲ್ಲಿ ತೆರೆದುಕೊಳ್ಳುತ್ತದೆ. ನಮ್ಮ ಜನಜೀವನಕ್ಕೆ ಸಂಬಂಧಿಸಿದ ಅನೇಕ ಕುತೂಹಲಪೂರ್ಣ ಹೊಸವಿಷಯಗಳು ಬೆಳಕಿಗೆ ಬರುತ್ತವೆ.

■■

ಆಕರ : ಮಾರ್ಗ ಸಂಪುಟ-೨

---

೧೦. ಏರಿಗೆ ಶಾಸನ (ನಾಂದೇಡ ಜಿಲ್ಲೆಯ ಶಾಸನಗಳು)ದಲ್ಲಿ "ಏರಿಗೆಯಶೇಷಮಹಾಜನಂಗಳುಂ .... ಬ್ರಹ್ಮಪುರಿಯ ಮಹಾಜನಂಗಳುಂ ....." ಎಂಬ ವಾಕ್ಯ ಬರುವುದರಿಂದ ಬ್ರಹ್ಮಪುರಿಯ ಮಹಾಜನರೆಂದರೆ ಕೇವಲ ಬ್ರಾಹ್ಮಣರು, ಅಶೇಷ ಮಹಾಜನರೆಂದರೆ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರು ಎಂದು ಅರ್ಥ ಹೇಳಬಹುದೇನೋ.

೫೫

ಕೆಲವು ಪ್ರಾಚೀನ ವ್ಯಕ್ತಿನಾಮ-ಗ್ರಾಮನಾಮಗಳು

ಇತ್ತೀಚೆ ಸಂಸ್ಕೃತಿಯ ಅಧ್ಯಯನ ಪ್ರಸಂಗದಲ್ಲಿ ನಾಮವಿಜ್ಞಾನ ಮಹತ್ವದ ಸ್ಥಾನ ಪಡೆಯುತ್ತಲಿದೆ. ಯಾವುದೇ ಅಂಕಿತನಾಮದ ಹಿಂದೆ ಒಂದು ದೊಡ್ಡ ಅರ್ಥ ಪರಂಪರೆ ಇರುವುದನ್ನು ವಿದ್ವಾಂಸರು ಗುರುತಿಸಿದ್ದು, ಇಲ್ಲಿ ಅಂಥ ಕೆಲವು ನಾಮಗಳನ್ನು ಕುರಿತು ಚರ್ಚಿಸಬಹುದು.

ಕೊಂಡಗುಳಿ ಕೇಶಿರಾಜ:

ಶರಣ ಪರಂಪರೆಯಲ್ಲಿ ಕೊಂಡಗುಳಿ ಕೇಶಿರಾಜನದು ಪ್ರಸಿದ್ಧ ಹೆಸರು. ಈತನು ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಡೋಣಿ ಕೊಂಡಗುಳಿಯವನೆಂದು ಇತ್ತೀಚೆ ಲಭ್ಯವಾದ ಶಾಸನಗಳಿಂದ ಸ್ಪಷ್ಟವಾಗಿದೆ. ಈ ಕೊಂಡಗುಳಿಯಲ್ಲಿ ತಾವು ಮಾಡಿಸಿದ ಸೋಮೇಶ್ವರದೇವರಿಗೆ ಭೂಮಿದಾನ ನೀಡಿದನೆಂದು ಹೇಳುತ್ತ, ಅಲ್ಲಿಯ ಶಾಸನವು "ತಮ್ಮ ಪ್ರಭುತ್ವದ" ಹೊಲವನ್ನು, "ತಮ್ಮಂಶಕ್ಕೆ ಬಂದ" ಹೊಲವನ್ನು ಎಂಬ ವಾಕ್ಯಗಳನ್ನು ಬಳಸಿರುವುದರಿಂದ, ಈತ ಮೂಲತ: ಇದೇ ಊರಿನವನೆಂದು ಖಚಿತವಾಗುತ್ತದೆ.

ಕನಸಿನಲ್ಲಿಯೂ ಅನ್ಯದೈವವನ್ನು ನೆನೆಯದ ಶಿವನಿಷ್ಠೆ ಈತನದು. ಈತನ ಕೃತಿಗಳಿಂದ ಮತ್ತು ಈತನನ್ನು ಕುರಿತ ಕೃತಿಗಳಿಂದ ಈ ಅಂಶ ಸ್ಪಷ್ಟವಾಗುತ್ತದೆ. ಹೀಗಿದ್ದೂ ವಿಷ್ಣುಪರ್ಯಾಯನಾಮದ ಕೇಶವ ಹೆಸರು ಇಲ್ಲಿ ಆಶ್ಚರ್ಯ ಹುಟ್ಟಿಸುತ್ತದೆ. ಈ ಊರಿನಲ್ಲಿ ಕೇಶವದೇವರ ದೇವಾಲಯವಿದ್ದ ಉಲ್ಲೇಖ ೧೧೩೨ರ ಶಾಸನದಲ್ಲಿದ್ದು, ಹಿರಿಯರು ಈ ಹೆಸರನ್ನು ಈತನಿಗೆ ಇಟ್ಟಿರಬಹುದು. ಅಥವಾ ಇದು ಕೇಶಿರಾಜನ ವೃದ್ಧಾಪ್ಯದ ಶಾಸನವಾಗಿರುವುದರಿಂದ ಇವನೇ ತನ್ನ ಹೆಸರಿನಲ್ಲಿ ಲಿಂಗಸ್ಥಾಪಿಸಿ ಅದಕ್ಕೆ ತನ್ನ ಪ್ರಚಲಿತ ಹೆಸರನ್ನಿಟ್ಟಿರಬಹುದು. ಈ ರೀತಿ ಊಹಿಸಲು ಸಾಧ್ಯವಿದ್ದರೂ ಈ ಬಗ್ಗೆ ಬೇರೆ ಊಹೆ ಮಾಡಲು ಮನಸ್ಸಾಗುತ್ತದೆ.

ಶಾಸನಗಳಲ್ಲಿ ೧. ಕೇಶವರಾಜ, ೨. ಕೇಶಿರಾಜದಣ್ನಾಯಕ, ೩. ಕೇಸಿರಾಜರಸ, ಕೇಸಿಮಯ ದಂಡನಾಯಕ-ಹೀಗೆ ಈತನಿಗೆ ಮೂರು ಬಗೆಯಲ್ಲಿ ಹೆಸರುಗಳು ಕಂಡುಬರುತ್ತವೆ. ಇವುಗಳಲ್ಲಿ ೧ನೆಯದು ಕೇಶವರಾಜ, ಸ್ಪಷ್ಟವಾಗಿ ಕೇಶವನ=ವಿಷ್ಣುವಿನ ಹೆಸರು. ೨ನೆಯದು ಕೇಶವರಾಜವೆಂಬುದೇ ಉಚ್ಚಾರದಲ್ಲಿ ಕೇಶಿರಾಜ ಎಂದಾಗಿದೆ. ೩ನೆಯದು ಚಿಂತನಯೋಗ್ಯವೆನಿಸಿದೆ. ಇಲ್ಲಿ ಕೇಶಿ ಎಂಬುದೇ ಕೇಸಿ ಎಂದಾಗಿರಬಹುದಾದರೂ, ಬಹುಶಃ ಇದರ ಮೂಲರೂಪ ಕೇತಿ ಇರಬಹುದೇ? ಎನಿಸುತ್ತದೆ.

ತ್, ಸ್ ಗಳು ವತ್ಸ್ಯ್ಸ್ಥಾನೀಯಗಳಾಗಿರುವುದರಿಂದ ಇಲ್ಲಿ ಪಲ್ಲಟಕ್ಕೆ ಅವಕಾಶವಿದೆ. (ಪೊಲಕೇಸಿಯೆಂಬಲ್ಲಿಯೂ ಈ ಕೇತಿ ರೂಪವಿರುವ ಸಾಧ್ಯತೆಯಿದೆ). ಇಲ್ಲಿಯ ಕೇಸಿಮಯ್ಯ ಎಂಬ ರೂಪ (ಕೇಸಿ+ಅಮ್ಮ+ ಅಯ್ಯ) ಕೇಶವವನ್ನು ಅಲ್ಲಗಳೆದು, ಕೇಸಿ (ಕೇತಿ)ಯನ್ನು ಬೆಂಬಲಿಸುತ್ತದೆ. ಕೇಶವದಿಂದಲೇ ಇದು ಸಾಧಿತವಾಗಿದ್ದರೆ ಕೇಶವಯ್ಯ(ಕೇಶವ+ಅಯ್ಯ)ವಾಗಬೇಕೇ ಹೊರತು ಕೇಸಿಮಯ್ಯ ಅಲ್ಲ. ಆದುದರಿಂದ ಮೂಲತ: ಈ ಊರಿನಲ್ಲಿ ಮೇಲೆ ಹೇಳಿದ ದೇವಾಲಯವನ್ನು ಈ ಕೇಶಿರಾಜ ತನ್ನ ಪ್ರಚಲಿತ ಹೆಸರಿನಿಂದ ನಿರ್ಮಿಸದಿದ್ದ ಪಕ್ಷದಲ್ಲಿ, ಕೇತಿಮಯ್ಯನೆಂಬವನು ಸ್ಥಾಪಿಸಿರಬಹುದು. ಅದು ಕೇತಿಮೇಶ್ವರ > ಕೇಸಿಮೇಶ್ವರ > ಕೇಶಿಮೇಶ್ವರ > ಕೇಶವೇಶ್ವರವೆಂದು, ಕೆಲವೊಮ್ಮೆ ಕೇಶಿರಾಜವೆಂದು ರೂಪಾಂತರಗೊಂಡಿದ್ದು, ಅದನ್ನೆ ಈ ಕೇಶಿರಾಜನಿಗೆ ಇಟ್ಟಿರಬಹುದು. ಆದುದರಿಂದ ಶರಣ ಕೇಶಿರಾಜನ ಹೆಸರು ವಿಷ್ಣು ಪರ್ಯಾಯನಾಮವಲ್ಲ. ಅದು ಕೇತಿ+ರಾಜ>ಕೇಶಿ+ರಾಜ. ಕನ್ನಡ ಶಾಸನಗಳಲ್ಲಿ ಕೇತಗಾವುಂಡ, ಕೇತಿಮಯ್ಯ, ಕೇತಿಸೆಟ್ಟಿ, ಕೇತಿಯರಸ ಇತ್ಯಾದಿ ಹೆಸರುಗಳು ಅನೇಕ ಸಂಖ್ಯೆಯಲ್ಲಿ ಸಿಗುತ್ತವೆ. ಇದನ್ನು ಒಪ್ಪಿಕೊಂಡರೆ ಶಿವಭಕ್ತ ಕೇಶಿರಾಜನಿಗೆ ವಿಷ್ಣುಮೂಲದ ಹೆಸರೇಕೆ? ಎಂಬ ಅನುಮಾನ ಪರಿಹಾರವಾಗುತ್ತದೆ.

ರಾಘವಾಂಕ:

ಈ ಮೊದಲು "ಹರಿಹರ ಹೆಸರಿನ ನಿಜರೂಪ" ಲೇಖನದಲ್ಲಿ ಆ ಕವಿಯ ಹೆಸರಿನ ಮೂಲ ಹರಿಯರದೇವ(ಪೆರೆಯಾಳದೇವ=ಶಿವ)ನೆಂದು ಹೇಳಿ, "ಇದಕ್ಕಿಂತ ಕಠಿನವಾದುದು ರಾಘವಾಂಕ ಹೆಸರಿನ ಮೂಲ. ಕವಿಯ ಕೌಟುಂಬಿಕ ಸಂಸ್ಕೃತಿಯನ್ನು ನೋಡಿದರೆ ಇಲ್ಲಿಯೂ ರಾಮನ ಇನ್ನೊಂದು ಹೆಸರಾದ ರಾಘವ ಎಂಬ ಸಂಸ್ಕೃತರೂಪವನ್ನು ಬಿಟ್ಟು, ದ್ರಾವಿಡದಲ್ಲಿ ಇದರ ಮೂಲ ಹುಡುಕಬೇಕೆನಿಸುತ್ತದೆ" ಎಂದು ಸೂಚಿಸಿದ್ದೆನು. ಈಗ ಈ ಸೂಚನೆಯನ್ನು ಒಂದಿಷ್ಟು ಚರ್ಚಿಸಬಹುದು.

"ರಾಘವಾಂಕಮಠ" ಹೆಸರಿನ ಒಂದು ವೀರಶೈವಮಠ ಕುರಗೋಡದಲ್ಲಿದೆ. ಇದು ಕವಿರಾಘವಾಂಕನ ತರುವಾಯ ಹುಟ್ಟಿದ ಮಠವಾಗಿದ್ದು, ಇದಕ್ಕೂ ಕವಿ ರಾಘವಾಂಕನಿಗೂ ಇರುವ ಸಂಬಂಧವಾಗಲೀ, ರಾಘವಾಂಕ ಹೆಸರಿನ ನಿಷ್ಪತ್ತಿ ತಿಳಿದುಕೊಳ್ಳುವುದಕ್ಕಾಗಲೀ ನೆರವಾಗುವುದಿಲ್ಲ. ಹಾಗಾದರೆ ರಾಘವಾಂಕ ಎಂಬುದಕ್ಕೆ ಏನು ಅರ್ಥ?

ಇಲ್ಲಿ ಅಂಕ ಎಂಬುದು ನಾಮ ಎಂಬುದಕ್ಕೆ ಸಮಾನಪದ. ಕವಿ ಲಕ್ಷ್ಮೀಶನ ತಂದೆ ಅಣ್ಣಮಾಂಕ. ಕನ್ನಡದ ಕಾವ್ಯಶಾಸ್ತ್ರವೊಂದರ ಕರ್ತೃ ಮಾಧವಾಂಕ. ಇದೇ ರೀತಿಯದು ರಾಘವಾಂಕ ಹೆಸರು. ಅಂಕವನ್ನು ಕಳೆದರೆ ಉಳಿಯುವುದು ರಾಘವ. ಇದು ರಾಮನ ಇನ್ನೊಂದು ಹೆಸರು. ಸಂಸ್ಕೃತ ಮೂಲವನ್ನು ಬಿಟ್ಟು ದ್ರಾವಿಡಮೂಲದಲ್ಲಿ ಹುಡುಕ ಹೊರಟರೆ ಈ ಭಾಷೆಯಲ್ಲಿ ಮಹಾಪ್ರಾಣವಿಲ್ಲವಾಗಿ ರಾಗವ ಎಂಬುದೇ ಇದರ ನಿಜಸ್ವರೂಪವೆನಿಸುತ್ತದೆ. ಅಣ್ಣಮ ಹೆಸರಿನಂತೆ ಈ ರಾಗವ ಎಂಬುದರ ಸರಿಯಾದ ರಾಗಮ (ರಾಗ+ಅಮ್ಮ). ಅಮ್ಮ ಪ್ರತ್ಯಯವನ್ನು ತೆಗೆದು ಹಾಕಿದರೆ ಉಳಿಯುವ ಮೂಲರೂಪ ರಾಗ.

ರಾಘವಾಂಕನದು ಹಂಪಿ. ಇದು ತೆಲುಗುಭಾಷೆಗೆ ತೀರ ಹತ್ತಿರದ ಪ್ರದೇಶ. ತೆಲುಗು ಭಾಷೆಯಲ್ಲಿ ವರ್ಣಪಲ್ಲಟ ಪ್ರಕ್ರಿಯೆ ಅಧಿಕ. ಇಲ್ಲಿಯ ರಾಗ ಎಂಬುದು ವರ್ಣಪಲ್ಲಟಗೊಂಡ ರೂಪವಾಗಿದ್ದರೆ ಇದರ ನಿಜರೂಪ ತೆಲುಗಿನಲ್ಲಿ ಇರ್ರಗ, ಎರ್ರಗ. ಕನ್ನಡದಲ್ಲಿ ಇರುಗ, ಎರಗ.

(ವಿಜಯನಗರ ರಾಜ್ಯದ ಪ್ರಸಿದ್ಧ ದಂಡನಾಯಕ ಇರುಗಪ್ಪ ಎಂಬುದು ಎಲ್ಲರಿಗೂ ಗೊತ್ತು). ಇ > ಎ ವರ್ಣಪಲ್ಲಟ (Mutation) ತತ್ವದ ಹಿನ್ನೆಲೆಯಲ್ಲಿ ಪರಿಭಾವಿಸಿದರೆ, ಇವೆರಡೂ ಸಮಾನಾರ್ಥಕ ಪದಗಳೆನಿಸುತ್ತದೆ. ಹಾಗಿದ್ದರೆ ಇದರ ಅರ್ಥವೇನು? ಎಂಬುದು ನಮ್ಮ ಮುಂದಿರುವ ಪ್ರಶ್ನೆ. ದ್ರಾವಿಡದಲ್ಲಿ ಎರ್ರ ಎಂಬುದರ ಸಾಧಿತ ರೂಪಗಳಾದ ಎರೆಯ, ಎರೆಯಂಗ, ಎರೆಯಪ ಹೆಸರುಗಳು ಬಳಕೆಯಲ್ಲಿದ್ದವು. ಒಡೆಯ ಎಂಬುದು ಇದರ ಅರ್ಥ.

ಒಟ್ಟಾರೆ, ಎರಚು>ರಾಚು ಆಗುವಂತೆ ಎರಗ>ರಾಗವಾಗಿ, ರಾಗಮ (ರಾಗ+ಅಮ್ಮ)ವೆಂದು ರೂಪತಾಳಿ, ಮುಂದೆ ರಾಗಮಾಂಕವೆಂಬುದೇ ರಾಘವಾಂಕವೆಂದು ಆಕಾರ ಪಡೆದಿರಬಹುದು.

ಕನ್ನಕೈರ:

ಮಧ್ಯಕಾಲೀನ ಶಾಸನಗಳಲ್ಲಿ "ಕನ್ನಕೈರ ದಿಶಾಪಟ್ಟ" ಎಂಬುದು ಬಿರುದಿನಂತೆ ಅನೇಕ ಸಲ ಕಾಣಿಸಿಕೊಂಡಿದೆ. ಕೊಂಡಗುಳಿ ಕೇಶಿರಾಜನ ತಂದೆ ನಿಬಣದಂಡನಾಯಕನಿಗೆ ಕೊಂಡಗುಳಿ ಶಾಸನವು ಈ ವಿಶೇಷಣ (ಎಸ್. ಆಯ್. ಆಯ್. ೨೦–೬೯ ಕೊಂಡಗುಳಿ ಕ್ರಿ. ಶ. ೧೧೦೭)ವನ್ನು ಬಳಸಿದೆ. ಕನ್ನಕೈರನೆಂಬವನನ್ನು ಧೂಳಿಪಟ ಮಾಡಿದನೆಂದು ಇದರ ಅರ್ಥ. ಈ ಕನ್ನಕೈರನು ಕುಹುಂಡಿ ಮೂರು ಸಾವಿರವನ್ನಾಳುತ್ತಲಿದ್ದ ರಟ್ಟವಂಶದ ಕಾಳಸೇನಭೂಪನ ಹಿರಿಯ ಮಗನು. (ಎಸ್. ಆಯ್. ಆಯ್. ೨೦–೬೨ ಸವದತ್ತಿ ಕ್ರಿ. ಶ. ೧೦೯೮). ಈ ಹೆಸರು ತುಂಬ ವಿಚಿತ್ರವಾಗಿ ಕೇಳಿಸುತ್ತದೆ. ಇದರ ನಿಷ್ಪತ್ತಿ ಮೇಲು ನೋಟಕ್ಕೆ ಜಟಿಲವಾಗಿ ತೋರುತ್ತದೆ. ಕನ್ನ+ಕೈರ ಎಂದು ಸರಳವಾಗಿ ಬಿಡಿಸಿ ನೋಡುವ ಹಂಬಲ ಉಂಟಾಗುತ್ತದೆ. ಆದರೆ ಇಲ್ಲಿ ಕನ್ನ>ಕನ್ನಕ ಹೆಸರನ್ನೇ ಮೂಲವಾಗಿ ಪರಿಭಾವಿಸಬೇಕೆಂದು ತೋರುತ್ತದೆ. ಹಾಗಿದ್ದರೆ ಇದರ ನಿಜರೂಪ ಕನ್ನಕವೀರವಿರಬಹುದು. ವೀರ>ಈರ ಎಂದಾಗುವುದು ಸಹಜ. ಆದುದರಿಂದ ಕನ್ನಕವೀರ>ಕನ್ನಕ ಈರ> ಎಂದಾಗಿ, ಬಳಿಕ ಕನ್ನಕಯೀರ>ಕನ್ನಕಯಿರ>ಕನ್ನಕೈರವೆಂದು ರೂಪಾಂತರ ಹೊಂದಿದಂತಿದೆ. ಮೇಲೆ ಉಲ್ಲೇಖಿಸಿದ ಸವದತ್ತಿ ಶಾಸನ ಸಂಸ್ಕೃತಭಾಷೆಯಲ್ಲಿದೆ. ಕನ್ನಡದ ಹೆಸರು ಸಂಸ್ಕೃತ ಪರಿಸರದಲ್ಲಿ ಬೇರೆ ರೀತಿಯ ವ್ಯತ್ಯಾಸ ಹೊಂದುತ್ತದೆ. ಉದಾ: ಭೀಮಪಯ್ಯಯೆಂಬುದು ಉಚ್ಚಾರದಲ್ಲಿ ಭೀಮಪ್ಪೈ ಎಂದಾಗಿ ದೇವನಾಗರಿ ಶಾಸನದಲ್ಲಿ ಭೀಮ ಪೈ ಎಂದಾದುದು ನನ್ನ ಗಮನಕ್ಕೆ ಬಂದಿದೆ. (ಗೋವಿಂದ ಪೈ ನೆನಪಿಸಿಕೊಳ್ಳಿ). ಈ ಎಲ್ಲ ಚರ್ಚೆಯ ಹಿನ್ನೆಲೆಯಲ್ಲಿ ಹೇಳುವುದಾದರೆ, ಕನ್ನಕೈರ ಎಂಬುದರ ನಿಜರೂಪ ಕನ್ನಕವೀರವಾಗಿರಬಹುದು.

ಮಾವುಲಿ ತೈಲ:

ಬನವಾಸಿ ಕಂದಂಬರ ಒಂದು ಶಾಖೆ ಹಾನುಗಲ್ಲ ಕದಂಬರು. ಈ ವಂಶದಲ್ಲಿ ಮಾವುಲಿ ತೈಲ ಹೆಸರಿನ ಅರಸು ಸುಪ್ರಸಿದ್ಧ. ಕೆಲವು ವರ್ಷಗಳ ಹಿಂದೆ ಸರಕು ಸಾಗಿಸುವ ಲಾರಿಯ ಮೇಲೆ "ಮಾವುಲಿ(ಇಲ್ಲಿ ಮುಂದೆ ಯಾವುದೋ ದೇವರ ಹೆಸರಿದ್ದಿತು, ನೆನಪಿಲ್ಲ) ಪ್ರಸನ್ನ" ಎಂಬ ಬರೆವಣಿಗೆ ನೋಡಿದೆ. ಬಹುಶ: ಮಾವುಲಿಯೆಂಬುದು ಈ ದೇವರಿರುವ ಗ್ರಾಮವಾಗಿರಬಹುದೆಂದು ಭಾವಿಸಿ, ಆ ಗ್ರಾಮದ ಶೋಧದತ್ತ ಪ್ರಯತ್ನಿಸಿದೆ. ಇದರ ಫಲವಾಗಿ ನಾಂದೇಡ ಜಿಲ್ಲೆಯ ಮುಖೇಡ ತಾಲೂಕಿನಲ್ಲಿ, ಸಾತಾರಾ ಜಿಲ್ಲೆಯ ಸಾತಾರಾ ತಾಲೂಕಿನಲ್ಲಿ ಹೀಗೆ ಈ ಹೆಸರಿನ ಎರಡು ಗ್ರಾಮಗಳಿರುವುದಾಗಿ ತಿಳಿದು ಬಂದಿತು. ಈ ತೈಲನು ಈ ಎರಡರಲ್ಲಿ ಒಂದು ಗ್ರಾಮಕ್ಕೆ (ಬಹುಶಃ ಸಾತಾರಾ ತಾಲೂಕಿನ ಪ್ರಸಿದ್ಧ ಮಾವುಲಿಗೆ) ಸಂಬಂಧಿಸಿರಬಹುದೆಂದು ಭಾವಿಸಿದೆ.

ಹೀಗಿರುವಾಗ ಇತ್ತೀಚೆ ಪುಣೆಯ ಒಂದು ಅಂಗಡಿಯ ಮೇಲೆ "ಸಾಯಿ ಮಾವುಲಿ" ಬೋರ್ಡ ನೋಡಿದೆ. ಈ ಬಗ್ಗೆ ಅಲ್ಲಿಯ ವಿದ್ವಾಂಸರನ್ನು ವಿಚಾರಿಸಲಾಗಿ "ಮಾವುಲಿ" ಎನ್ನುವುದು "ಮಾತೃ" ಎಂಬುದರ ಸಾಧಿತರೂಪವೆಂದೂ, ತಾಯಿ ಸದೃಶ ಇದರ ಅರ್ಥವೆಂದೂ, ಮಹಾರಾಷ್ಟ್ರದಲ್ಲಿ ಇದು ಹೆಚ್ಚು ಪ್ರಚಲಿತಪದವೆಂದೂ ತಿಳಿದು ಬಂದಿತು. ಹಾಗಿದ್ದರೆ ಮಾತೃಸದೃಶನಾದ ತೈಲನೆಂದು ಇದಕ್ಕೆ ಅರ್ಥವೇ? ಈ ಎರಡೂ ಅರ್ಥಗಳಲ್ಲಿ ಮಾವುಲಿ ತೈಲನಿಗೆ ಸಂಬಂಧಿಸಿದುದು ಯಾವುದು? ಶೋಧಿಸಬೇಕು.

ಇದಲ್ಲದೆ ವೈದಿಕ ಸ್ವಾದಿಮಠದ ಶಿಷ್ಯರಲ್ಲಿ "ಮಾವುಲಿ" (ಮಾಹುಲಿ)ವಿಶೇಷಣದ ಬ್ರಾಹ್ಮಣ ಮನೆತನಗಳು ಕಂಡುಬರುತ್ತವೆ. ಅಥಣಿ ಪರಿಸರದಲ್ಲಿ ಈ ಅಡ್ಡ ಹೆಸರುಗಳು ಹೆಚ್ಚು ಸಂಖ್ಯೆಯಲ್ಲಿವೆ. ಸಾಲೊಟಗಿ ಶಾಸನದಲ್ಲಿ ಯಾದವ ಭಿಲ್ಲಮನ ಸಾಮಂತ ಬಂದರಸನು ಪೌಳಗೆಯ ಭೋಗೇಶ್ವರದೇವರಿಗೆ ಮಾವುಲಿಗನೂರನ್ನು ದಾನವಾಗಿ ಬಿಟ್ಟ ಉಲ್ಲೇಖವಿದೆ (ಎಸ್. ಆಯ್. ಆಯ್. XX ೧೮೯ ಸಾಲೊಟಗಿ ಕ್ರಿ. ಶ. ೧೧೮೭). ಹಾನಗಲ್ಲ ಪ್ರದೇಶವನ್ನಾಳುತ್ತಲಿದ್ದ ಮಾವುಲಿ ತೈಲನು ದೂರದ ಸಾಲೊಟಗಿ ಪರಿಸರದಲ್ಲಿ ತನ್ನ ಹೆಸರಿನ ಮಾವುಲಿಗನೂರು ಗ್ರಾಮ ಸ್ಥಾಪಿಸಿರುವುದು ಅಸಂಭವ. ಆದುದರಿಂದ ಇಲ್ಲಿಯ ಮಾವುಲಿಗನು ಹೆಸರಿನ ಬೇರೆ ವ್ಯಕ್ತಿಯಾಗಿರಬಹುದು.

ಕಲ್ಯಾಣ:

ಕರ್ನಾಟಕದ ಸುಮಾರು ೨೯,೨೬೦ ಗ್ರಾಮಗಳಲ್ಲಿ ಕಲ್ಯಾಣ ತುಂಬ ವಿಶಿಷ್ಟವಾದುದು. ಇದಕ್ಕೆ "ಶುಭ" "ಮಂಗಳ" ಎಂಬ ವಾಚ್ಯಾರ್ಥವನ್ನು ಈ ವರೆಗೆ ನಾವು ಭಾವಿಸುತ್ತ ಬಂದಿದ್ದೇವೆ. ಆದರೆ ಪ್ರಾಚೀನ ಕರ್ನಾಟಕದಲ್ಲಿ ಗ್ರಾಮಗಳಿಗೆ ಇಂಥ ಹೆಸರಿಡುವ ಪದ್ಧತಿಯಿರಲಿಲ್ಲ. ಈ ಪ್ರಶ್ನೆಗೆ ಸಮಾಧಾನವೆಂಬಂತೆ ಇದರ ನಿಜನಾಮ ಕಲ್ಯಾಣನಗರ, ಕಲ್ಯಾಣಪಟ್ಟಣ, ಕಲ್ಯಾಣಪುರ–ಇವುಗಳಲ್ಲಿ ಒಂದು ಎಂದು ಹೇಳಬಹುದಾದರೂ, ಇಲ್ಲಿಯ –ನಗರ, –ಪಟ್ಟಣ, –ಪುರ ವಾರ್ಗಿಕಗಳು ಆಮೇಲೆ ಶಿಷ್ಟರು ಅಂಟಿಸಿದವುಗಳಾಗಿದ್ದು, ಇದರ ನಿಜರೂಪ "ಕಲ್ಯಾಣ" ಶಬ್ದದಲ್ಲಿಯೇ ಅಡಗಿದೆಯೆನಿಸುತ್ತದೆ.

ಗ್ರಾಮನಾಮಗಳನ್ನು ಸಂಸ್ಕೃತಕ್ಕೆ ಭಾಷಾಂತರಿಸುವುದು (ಪುಲಿಗೆರೆ>ವ್ಯಾಘ್ರಪುರ) ಇಲ್ಲವೆ ಉದಾತ್ತ ಅರ್ಥ ಬರುವಂತೆ ಸಂಸ್ಕೃತಕ್ಕೆ ರೂಪಾಂತರಿಸುವುದು (ಮಂಚಾಲೆ> ಮಂತ್ರಾಲಯ) ಕನ್ನಡದಲ್ಲಿ ನಡೆದು ಬಂದ ಪದ್ಧತಿಯಾಗಿದೆ. ಈ ಮೇರೆಗೆ ದೇಶೀಶಬ್ದವೊಂದನ್ನು ಉದಾತ್ತ ಅರ್ಥ ಬರುವಂತೆ ಕಲ್ಯಾಣವೆಂದು ಸಂಸ್ಕೃತಕ್ಕೆ ರೂಪಾಂತರಿಸಿಕೊಂಡಂತಿದ್ದು, ಕಳೆದು ಹೋದ ಮೂಲದೇಶೀಶಬ್ದವನ್ನು ಈಗ ಶೋಧಿಸಬೇಕಾಗಿದೆ.

ಯಾವುದೇ ರಾಜ್ಯದಲ್ಲಿ ಒಂದೇ ಹೆಸರಿನ ಒಂದಕ್ಕಿಂತ ಹೆಚ್ಚು ಗ್ರಾಮನಾಮಗಳಿರುತ್ತವೆ (ಉದಾ: ಶಿರೂರ) ಮತ್ತು ಆ ರಾಜ್ಯದ ಗ್ರಾಮನಾಮಗಳಿಗೆ ಪ್ರಾದೇಶಿಕ ವಿಶಿಷ್ಟ ರಚನೆಯಿರುತ್ತದೆ. ಹೀಗಾಗಿ ಯಾವುದೇ ಗ್ರಾಮನಾಮದ ಅರ್ಥ ತಿಳಿದುಕೊಳ್ಳುವಲ್ಲಿ ವಿಫಲರಾದ ಪಕ್ಷದಲ್ಲಿ, ಇದೇ ಹೆಸರನ್ನುಳ್ಳ ಇಲ್ಲವೆ ಹೋಲಿಕೆ ರೂಪದ ಬೇರೆ ಗ್ರಾಮನಾಮಗಳ ಸಹಾಯ ಪಡೆಯಬೇಕಾಗುತ್ತದೆ. ಈ ಮೇರೆಗೆ ಕರ್ನಾಟಕದಲ್ಲಿರುವ ಕಲ್ಯಾಡಿ (ಅರಸಿಕೆರೆ ತಾಲೂಕು), ಕಲ್ಲಣೆ (ತುರುವೇಕೆರೆ ತಾಲೂಕು) ಎಂಬಿವು ಕಲ್ಯಾಣವನ್ನು ನೆನಪಿಸುವವಾದರೂ ಮೂಲಶೋಧಕ್ಕೆ ನೆರವಾಗುವುದಿಲ್ಲ. ಕಲ್ಯಾಣಪುರ (ತುಮಕೂರು ತಾಲೂಕು, ಕೆ. ಆರ್. ನಗರ ತಾಲೂಕು, ಮಾಗಡಿ ತಾಲೂಕು) ಕಲ್ಯಾಣಿಕಾವಲು,

• ಕಲ್ಯಾಣ ಒಡೆಯರಮಠ(ಮಾಗಡಿ ತಾಲೂಕು) ಇವು ಪ್ರಸಿದ್ಧ ಬಸವಕಲ್ಯಾಣ ಹೆಸರಿನ ಆದರ್ಶದಲ್ಲಿ ಆಮೇಲೆ ಹುಟ್ಟಿರಬಹುದೆನಿಸುತ್ತದೆ.

ಇಂಥ ನಿರಾಸೆಯ ಸ್ಥಿತಿಯಲ್ಲಿ ಸಿಗ್ಗಾವ ತಾಲೂಕಿನ ಕಲ್ಯಾಣ ಹೆಸರಿನ ಊರು ನೆರವಾಗಬಹುದೆನಿಸುತ್ತದೆ. ಇದು ಸಣ್ಣಹಳ್ಳಿ. ಇಲ್ಲಿ ಶಾಸನ ಇತ್ಯಾದಿ ಆಕರಗಳಿಲ್ಲ. ಆದರೆ ನೆರೆಯ ಹೊಟ್ಟೂರು ಶಾಸನ ಮತ್ತು ಲಕ್ಷ್ಮೇಶ್ವರ ಶಾಸನಗಳು ಇದನ್ನು ಕಲ್ಲವಣವೆಂದು ಹೀಗೆ ಕರೆದಿವೆ.

೧. "ಮೂಲವಳ್ಳಿ ಬಾಡ ಕಲ್ಲವಣಂ ಅಂತು ನಾಲ್ಕು ಬಾಡಕಂ"

(ಎ. ಇ. XVI-೧೧ ಹೊಟ್ಟೂರು ಕ್ರಿ. ಶ. ೧೦೩೭)

೨. "ಕುನ್ದವುರ ಮೂವತ್ತರ ಬಳಿಯ ಬಾಡಂ ಕಲ್ಲವಣ"

(ಐ. ಎ. XVI- ಪು. ೩೬, ೩೭ ಲಕ್ಷ್ಮೇಶ್ವರ ಕ್ರಿ. ಶ. ೧೧೧೭)

ಈ ವಿವರಣೆಯ ಹಿನ್ನೆಲೆಯಲ್ಲಿ (ಬಸವ) ಕಲ್ಯಾಣದ ಮೂಲ ಹೆಸರೂ ಕಲ್ಲವಣ ಆಗಿರುವ ಸಾಧ್ಯತೆಯಿದೆ.

ಗ್ರಾಮನಾಮಗಳು ಸಾಮಾನ್ಯವಾಗಿ ನಿರ್ದಿಷ್ಟ+ವಾರ್ಗಿಕಗಳ ಸಂಯುಕ್ತರೂಪಗಳಾಗಿರುತ್ತವೆ. ಉದಾ: ಕೆರೆಯ+ಊರು=ಕೆರೂರು. ಇದೇ ರೀತಿ "ಕಲ್ಲವಣ" ದೇಶೀ ಪದವನ್ನು ಬಿಡಿಸಿ ನೋಡಬೇಕೆನಿಸುತ್ತದೆ.

ಗ್ರಾಮನಾಮಗಳ ಅಂತ್ಯದಲ್ಲಿ "ಣ" ಬರುವ ಅನೇಕ ಹೆಸರುಗಳು ನಮ್ಮಲ್ಲಿವೆ. ಉದಾ: ಸ್ಥಾನ>ಠಾಣ(ನಾಗಠಾಣ), ತಾಣ(ಚಟೆಯತಾಣ>ಚಡಚಣ) ಇತ್ಯಾದಿ. ಕೆಲವೊಮ್ಮೆ ಕೊನೆಯ ಣ ಎಂಬುದು ಳ (ಕೊಪಣ-ಕೊಪ್ಪಳ)ಇತ್ಯಾದಿ ಆಗಬಹುದು. ಇವೇ ಮೊದಲಾದ ಸಾಧ್ಯತೆಗಳ ಹಿನ್ನೆಲೆಯಲ್ಲಿ ಕಲ್ಲವಣದ ನಿಜರೂಪವನ್ನು ವಿದ್ವಾಂಸರು ಶೋಧಿಸಬೇಕಾಗಿದೆ.

ಹೀಗಿದ್ದೂ ಕನ್ನಮ+ಹಳ್ಳಿ ಎಂಬುದರ ಸಂಯುಕ್ತರೂಪ ಕನ್ನವಳ್ಳಿ, ಕನವಳ್ಳಿ. ಇದೇ ರೀತಿ ಕಲ್ಲಮ + ತಾಣ = ಕಲ್ಲಮ + ಆಣ = ಕಲ್ಲಮಾಣ = ಕಲ್ಲವಾಣ > ಕಲ್ಲವಣ ವಾಗಿರಬಹುದು. ಉತ್ತರಾರ್ಧದ ವಾರ್ಗಿಕದ ಬಗ್ಗೆ ಸ್ವಲ್ಪ ಸಂದೇಹವಿದೆ. ಪೂರ್ವಾರ್ಧವಂತೂ ಕಲ್ಲಮ ಎಂಬ ವ್ಯಕ್ತಿನಾಮವನ್ನು ಪ್ರತಿನಿಧಿಸುತ್ತದೆ. ಅಂದರೆ ಕಲ್ಯಾಣವು ಈ ವ್ಯಕ್ತಿ ಹೆಸರಿನಲ್ಲಿ ನಿರ್ಮಾಣಗೊಂಡ ಗ್ರಾಮವೆಂದು ಹೇಳಬಹುದಾಗಿದೆ.

ಬೆಳ್ಗೊಳ:

ಬೆಳ್ಗೊಳ ಎಂದಾಕ್ಷಣ ನೆನಪಾಗುವುದು ಪ್ರಸಿದ್ಧ ಶ್ರವಣಬೆಳ್ಗೊಳ. ಇದರ ಹತ್ತಿರ ಹಳೆಯಬೆಳ್ಗೊಳ ಹೆಸರಿನ ಇನ್ನೊಂದು ಗ್ರಾಮವಿದೆ. ಇಲ್ಲಿಯ ಹಳೆಯ ಎಂಬ ವಿಶೇಷಣವು ಇದೇ ಪ್ರಾಚೀನಗ್ರಾಮವೆಂದೂ, ಇದರ ಮಗ್ಗುಲಿಗೆ ಶ್ರವಣರು ನೆಲೆನಿಲ್ಲುವಲ್ಲಿ ಶ್ರವಣಬೆಳ್ಗೊಳ ಗ್ರಾಮ ಆಮೇಲೆ ಹುಟ್ಟಿಕೊಂಡಿತೆಂದೂ ಸೂಚಿಸುತ್ತದೆ. ಆದುದರಿಂದ ಬೆಳ್ಗೊಳ ಪದದ ನಿಷ್ಪತ್ತಿಯನ್ನು ಪ್ರಸಿದ್ಧ ಶ್ರವಣಬೆಳ್ಗೊಳದ ಭೌಗೋಲಿಕತೆ-ಐತಿಹಾಸಿಕತೆಯನ್ನಾಧರಿಸಿ ಅಲ್ಲ, ಆ ಪೂರ್ವದ ಹಳೆಯ ಬೆಳ್ಗೊಳದ ಭೌಗೋಲಿಕ-ಐತಿಹಾಸಿಕತೆಯನ್ನಾಧರಿಸಿ ಹೇಳುವುದೇ ಸರಿಯೆನಿಸುತ್ತದೆ.

ಗ್ರಾಮನಾಮದ ನಿಷ್ಪತ್ತಿ ಹುಡುಕುವ ವಿದ್ವಾಂಸರಿಗೆ ಆಯಾ ದೇಶದ ಗ್ರಾಮಗಳ ನಾಮಕರಣಪದ್ಧತಿಯ ಸ್ವರೂಪ ಮತ್ತು ಆ ಪದ್ಧತಿಯ ಐತಿಹಾಸಿಕ ಬೆಳವಣಿಗೆಗಳ ಸ್ಪಷ್ಟ ತಿಳಿವಳಿಕೆ ಅಗತ್ಯ. ಆದರೆ ಈ ವರೆಗೆ ಬೆಳ್ಗೊಳವನ್ನು ಕುರಿತು, ಬೆಳ್(<ಬಿಳಿದು) ಎಂಬುದನ್ನಾಧರಿಸಿ "ಧವಲತೀರ್ಥ" ಎಂಬ ಅರ್ಥವನ್ನೇ ಅಂದಿನ-ಇಂದಿನ ವಿದ್ವಾಂಸರು ಹೇಳುತ್ತ ಬಂದಿದ್ದಾರೆ. ಆದರೆ ಗ್ರಾಮಗಳಿಗೆ ಪ್ರಾಚೀನಕಾಲದಲ್ಲಿ ಹೀಗೆ ಆಲಂಕಾರಿಕವಾಗಿ ಹೆಸರಿಡುವ ಪದ್ಧತಿ ರೂಢಿಯಲಿರಲಿಲ್ಲ. ಹೀಗಾಗಿ ಧವತೀರ್ಥವೆಂಬ ಅರ್ಥ ಪಂಡಿತರ ಕಲ್ಪನಾವಿಲಾಸವೇ ಸರಿ.

ನಾನು ಬೇರೆಡೆಯಲ್ಲಿ ಚರ್ಚಿಸಿದಂತೆ ಗ್ರಾಮಗಳಿಗೆ ಹೆಸರಿಡುವ ವಿಷಯವಾಗಿ ನಮ್ಮಲ್ಲಿ ನಿಸರ್ಗವಾಚಿ, ಜನಾಂಗವಾಚಿ, ವ್ಯಕ್ತಿವಾಚಿ-ಎಂಬ ಮೂರು ಘಟ್ಟಗಳು ಕಂಡುಬರುತ್ತವೆ. ಇಂದಿನ ಹಳೆಯಬೆಳ್ಗೊಳ ಗ್ರಾಮದ ಮಧ್ಯದಲ್ಲಿ ಕೊಳ(ತೀರ್ಥ), ಸುತ್ತಲೂ ಜೈನ ಅವಶೇಷಗಳಿರುವುದನ್ನು ಪರಿಭಾವಿಸಿದರೆ, ಈ ಕೊಳವು ನೈಸರ್ಗಿಕವಾಗಿರದೆ, ವ್ಯಕ್ತಿನಿರ್ಮಿತವೆನಿಸುತ್ತದೆ. ಆದುದರಿಂದ ಈ ಗ್ರಾಮ "ವ್ಯಕ್ತಿವಾಚಿ" ಘಟ್ಟದಲ್ಲಿ ಹುಟ್ಟಿದ್ದು, ಯಾವನೋ ವ್ಯಕ್ತಿ ಕಟ್ಟಿಸಿದ ಕೊಳ-ಎಂಬ ಅರ್ಥದಲ್ಲಿ ಈ ಹೆಸರು ರೂಪಗೊಂಡಿರಬಹುದು. ಪ್ರಾಚೀನ ಕಾಲದಲ್ಲಿ ವ್ಯಕ್ತಿಗಳು ಕೊಳ, ಕೆರೆಕಟ್ಟಿಸಿ ತಮ್ಮ ಹೆಸರಿಟ್ಟು ಸುತ್ತಲೂ ಗ್ರಾಮ ಬೆಳೆಸುತ್ತಿದ್ದುದು ಸಹಜಕ್ರಿಯೆಯಾಗಿದ್ದಿತು. ಶ್ರವಣಬೆಳ್ಗೊಳ ಶಾಸನ ಸಂಪುಟ(ದ್ವಿ. ಆ)ದ ಪುಟ ೨೮೦ರ ಮೇಲೆ ಬಳ್ಳೆಯಕೆರೆ ಹೆಸರು ಕಂಡುಬರುವುದನ್ನು ನೋಡಿದರೆ ಬಳ್ಳೆಯ ಎಂಬುದು ಆ ಪ್ರದೇಶದಲ್ಲಿ ಪ್ರಚಲಿತವಿದ್ದ ವ್ಯಕ್ತಿನಾಮವೆಂದು ಸ್ಪಷ್ಟವಾಗುತ್ತದೆ. ಈ ಬಳ್ಳೆಯನೋ ಈ ಹೆಸರಿನ ಇನ್ನೊಬ್ಬನೋ ಬೆಳ್ಳೆಯನೆಂಬ ಬೇರೊಬ್ಬನೋ ಕಟ್ಟಿಸಿದ ಕೊಳ ಅರ್ಥದಲ್ಲಿ ಇದಕ್ಕೆ ಬೆಳ್ಗೊಳನಾಮ ಪ್ರಾಪ್ತವಾದಂತಿದೆ. ಇದೇ ಮುಂದೆ ಬೆಳುಗುಳ, ಬೆಳ್ಗುಳ, ಬೆಳುಗೊಳ ಇತ್ಯಾದಿ ಪರ್ಯಾಯ ನಾಮಗಳಿಂದ ಶಾಸನ-ಕಾವ್ಯಗಳಲ್ಲಿ ಕಾಣಿಸಿಕೊಂಡಿದೆ. ಈ ಹೆಸರಿನ ಬೇರೆ ಬೇರೆ ವ್ಯಕ್ತಿಗಳು ಅಲ್ಲಲ್ಲಿ ಕೆರೆಕಟ್ಟಿಸಿ ತಮ್ಮ ಹೆಸರನ್ನಿಡುವುದರ ಮೂಲಕ ಅಸ್ತಿತ್ವಕ್ಕೆ ಬಂದ ಬೆಳ್ಗೊಳ, ಬೆಳುಗೊಳ ಹಳ್ಳಿಗಳು ಅಲ್ಲಲ್ಲಿ ಕಂಡುಬರುತ್ತಿದ್ದು, ಈ ಎಲ್ಲ ಕುಗ್ರಾಮಗಳಿಗೆ "ಧವಲತೀರ್ಥ" ಮೂಲದಿಂದ ನಿಷ್ಪತ್ತಿ ಹೇಳುವುದು ಆಭಾಸವೆನಿಸುತ್ತದೆ. ಆದುದರಿಂದ ಈ ಹೆಸರಿನ ಯಾವಯಾವನೋ ಕಟ್ಟಿಸಿದ ಕೊಳದಿಂದಾಗಿ ಬೆಳ್ಳಿಗೊಳ, ಬೆಳ್ಗುಳಿ ಗ್ರಾಮಗಳೂ, ಕೆರೆಯಿಂದಾಗಿ ಬೆಳಕೆರೆ, ಬೆಳ್ಕೆರೆ, ಬೆಳೇಕೆರೆ, ಬೆಳೆಯಗೆರೆ, ಬೆಳ್ಗೆರೆ, ಬೆಳ್ಳಿಗೆರೆ, ಬೆಳ್ಳಿಗೆರಿ, ಬೆಳುಗೆರೆ, ಬೆಳುಕೆರೆ ಗ್ರಾಮಗಳೂ ಹುಟ್ಟಿಕೊಂಡಿದ್ದು, ಇದೇ ಮಾದರಿಯಲ್ಲಿ (ಹಳೆಯ) ಬೆಳ್ಗೊಳ ಹುಟ್ಟಿಕೊಂಡಿದೆ; ಆಮೇಲೆ ಇದರ ನೆರೆಯಲ್ಲಿ ಶ್ರವಣದ ವಸತಿಯಿಂದಾಗಿ ಅಸ್ತಿತ್ವಕ್ಕೆ ಬಂದ ಗ್ರಾಮಕ್ಕೆ "ಶ್ರವಣಬೆಳ್ಗೊಳ" ಎಂಬ ಹೆಸರು ಪ್ರಾಪ್ತವಾಗಿದೆಯೆಂದು ಹೇಳಬಹುದು.

ಮೊದಲಿನಿಂದಲೂ ಇಲ್ಲಿಯ ಚಿಕ್ಕಬೆಟ್ಟ(ಚಂದ್ರಗಿರಿ), ದೊಡ್ಡಬೆಟ್ಟ(ಇಂದ್ರಗಿರಿ) ಗಳನ್ನು ಕ್ರಮವಾಗಿ ಕಟ್ವಪ್ಪು, ಪೆರ್ಗ್ಗಟ್ವಪ್ಪು ಹೆಸರಿನಿಂದ ಕರೆಯುತ್ತಿದ್ದರು. ಇವುಗಳ ಮಗ್ಗುಲಲ್ಲಿ ತಲೆಯೆತ್ತಿದ ಶ್ರವಣರ ವಸತಿಗೆ ಶ್ರವಣಕಟ್ವಪ್ಪು ಇತ್ಯಾದಿಯಾಗಿ ಕರೆಯ ಬಹುದಿತ್ತು. ಆದರೆ ಒಂದಿಷ್ಟು ದೂರದಲ್ಲಿದ್ದರೂ ಜನವಸತಿಯ (ಹಳೆಯ)ಬೆಳ್ಗೊಳ ಹೆಸರನ್ನೇ ಬಳಸಿಕೊಂಡು, ಇದಕ್ಕೆ "ಶ್ರವಣಬೆಳ್ಗೊಳ" ಎಂದು ಕರೆದರೆನಿಸುತ್ತದೆ.

ಒಟ್ಟಾರೆ (೧) ಇಂದ್ರಗಿರಿ ಚಂದ್ರಗಿರಿಗಳೆಂಬ ಎರಡು ಬೆಟ್ಟಗಳ ನಡುವಿರುವ ಕೊಳವನ್ನು ಗಮನಿಸಿ (ಶ್ರವಣ)ಬೆಳ್ಗೊಳ ಎಂಬ ಹೆಸರು ರೂಪಗೊಳ್ಳದೆ, ಹಳೆಯ ಬೆಳ್ಗೊಳ(ಗ್ರಾಮ)ವನ್ನು

ಗಮನಿಸಿ ರೂಪಗೊಂಡಿದೆ. (೨) ಈ ವರೆಗೆ ವಿದ್ವಾಂಸರು ಹೇಳುವಂತೆ ಧವಳ ಅರ್ಥದಲ್ಲಿ ರೂಪಗೊಳ್ಳದೆ ಯಾವನೋ ಬೆಳ್ಳಿಯನೆಂಬವನು ಕಟ್ಟಿಸಿದ ಕೊಳಪರಿಸರದ ಗ್ರಾಮವೆಂಬುದನ್ನು ಆಧರಿಸಿ (ಹಳೆಯ)ಬೆಳ್ಗೊಳ ಹೆಸರು, ಆಮೇಲೆ ಇದನ್ನು ಅನುಕರಿಸಿ ಶ್ರವಣಬೆಳ್ಗೊಳ ಹೆಸರು ರೂಪಗೊಂಡಿವೆ–ಎಂದು ಹೇಳಬಹುದು.

■■

ಆಕರ : ಮಾರ್ಗ ಸಂಪುಟ–೪

೫೬

ಊರ ಹೆಸರುಗಳ ಕೊನೆಯ -ವರ, -ವಾರ

ಡಾ.ಎಂ. ಚಿದಾನಂದಮೂರ್ತಿ ಅವರು "ವರ, -ವಾರ ಕೊನೆಯಾಗುವ ಊರ ಹೆಸರುಗಳು" ಎಂಬ ಲೇಖನ (ಸಾಧನೆ ೭-೧ ಮಂಥನ)ದಲ್ಲಿ

-ವರ:ಬಾಣಾ+ವರ, ಹೊನ್ನಾ+ವರ, ಬಿಜ್ಜಾ+ವರ ....

-ವಾರ: ಬೊಮ್ಮ+ವಾರ, ಸಿರಿ+ವಾರ, ನಾಗ+ವಾರ........

ಈ ಪ್ರಯೋಗಗಳ ಬಲದಿಂದ ಕೆಲವು ವಿಚಾರಗಳನ್ನು ನಮ್ಮ ಮುಂದೆ ಇಟ್ಟಿರುವರು.

ಅವು: ೧. "ಹಿಂದಿನ ಸ್ವರವು ದೀರ್ಘವಾಗಿದ್ದರೆ ಅದರ ಮುಂದೆ ಹ್ರಸ್ವಾದಿಯ '-ವರ'ವೂ ಹ್ರಸ್ವವಾಗಿದ್ದರೆ ಅದರ ಮುಂದೆ ದೀರ್ಘಾದಿಯ '-ವಾರ'ವೂ ಕಾಣಿಸಿಕೊಳ್ಳುತ್ತದೆ........ ಆದ್ದರಿಂದ -ವರ, -ವಾರಗಳು ಒಂದೇ ಆಕೃತಿಮದ ಎರಡು ಉಪಾಕೃತಿಮ"ಗಳಾಗಿವೆ.

೨."ಕನ್ನಡ ಶಾಸನಗಳಲ್ಲಿ ಬಂದಿರುವ ಹಿಂದಿನ ರೂಪಗಳು '-ವರ' ಎಂಬುದು '-ಪುರ'ದಿಂದ ಬಂದಿದೆಯೆಂಬುದನ್ನು ದೃಢೀಕರಿಸುತ್ತವೆ. ದೇವನಹಳ್ಳಿ ತಾಲ್ಲೂಕಿನ ಇಂದಿನ 'ಗಂಗವಾರ'ವು ಹಿಂದಿನ ಶಾಸನವೊಂದರಲ್ಲಿ ಗಂಗಾಪುರ 'ಎಂಬ ರೂಪದಲ್ಲಿ ದೊರಕುತ್ತದೆ." (EC IX. Devanahalli A.D. 780)

೩. "-ವಾರ ಹೆಸರುಗಳಿಗಿಂತ -ವರ ಹೆಸರುಗಳು ಪ್ರಾಚೀನವೆಂದು ಊಹಿಸಬಹುದು. ಪುರವು ಮೊದಲು -ವರ ಆಗಿರಬೇಕು. -ವರದ ಹಿಂದಿನ ದೀರ್ಘಸ್ವರ ಹ್ರಸ್ವವಾದಾಗ -'ವರ'ದ ಆದಿಹ್ರಸ್ವವು ದೀರ್ಘವಾಗಿ '-ವಾರ' ಬಂದಿರಬೇಕು."

೪. "-ವರ ಹಿಂದಿನ ದೀರ್ಘಕ್ಕೆ ಮೂಲಪದದ ಸಹಾಯದಿಂದ ವಿವರಣೆ ಕೊಡುವದು ಕಷ್ಟ.

ಹೀಗೆ ಕ್ರಮವಾಗಿ ನಾಲ್ಕು ನಿರ್ಣಯಗಳನ್ನು ಸ್ಥಾಪಿಸುತ್ತ ಬಂದು, ಕೊನೆಯದರಲ್ಲಿ "....... ವಿವರಣೆ ಕೊಡುವುದು ಕಷ್ಟ" ಎಂದು ನಿಂತುಬಿಟ್ಟಿರುವುದಕ್ಕೆ ಬಹುಶಃ ಅವರು '-ಪುರ'ದಿಂದ '-ವರ' '-ವಾರ' ಬಂದಿವೆಯೆಂದು ಗ್ರಹಿಕೆಮಾಡಿಕೊಂಡಿರುವುದೇ ಕಾರಣವಾಗಿದೆ. ಡಾ. ಮೂರ್ತಿ ಅವರ ಗ್ರಹಿಕೆಗೆ ನೇರ ಆಧಾರವೆಂದರೆ ಶಾಸನಗಳು. ಆದರೆ ನಮ್ಮ ಶಾಸನಗಳಲ್ಲಿ ಎಷ್ಟೋಸಲ ಗ್ರಾಮನಾಮದ ಕಲ್ಪಿತರೂಪಗಳು ತಲೆದೋರಿ ನಿಜರೂಪ ಮರೆಯಾದ

ಸಂದರ್ಭಗಳೂ ಉಂಟು. ಉದಾ: ಕಿತ್ತೂರು (ಕೀರ್ತಿಪುರ), ಸಿರಸಂಗಿ (ರಿಷ್ಯಶೃಂಗ), ಬೋಧನ (ಬಹುಧಾನ್ಯ), ಸೌದತ್ತಿ (ಸುಗಂಧವರ್ತಿ) ಇತ್ಯಾದಿ. ' ಗಂಗವಾರ'ದ ಪ್ರಾಚೀನರೂಪ 'ಗಂಗಪುರ'ವೆಂದು ಶಾಸನವೊಂದು ತಿಳಿಸಿರುವುದಕ್ಕೆ ಇಂಥ ಕಲ್ಪನೆಯೇ ಕಾರಣವಾಗಿರಬೇಕು. ಅಂದರೆ ಈ ಶಾಸನದ ಲೇಖಕ -ವಾರ, -ಪುರಗಳಲ್ಲಿಯ ಧ್ವನಿಸಾಮ್ಯಭ್ರಾಂತಿಯಿಂದಾಗಿ '-ವಾರ'ದ ಮೂಲರೂಪವನ್ನು '-ಪುರ'ದಲ್ಲಿ ಹುಡುಕಿರುವನೆಂದೇ ಹೇಳಬೇಕು. ಏಕೆಂದರೆ '-ಪುರ' ಎಂಬುದು -ಹುರ(ವುರ) ಆಗಬಹುದೇ ಹೊರತು[೧] -ವರ, -ವಾರವಾಗುವುದಕ್ಕೆ ಕನ್ನಡಭಾಷಾ ಮರ್ಯಾದೆಯಲ್ಲಿ ಅವಕಾಶವೇ ಇಲ್ಲ. ಆದುದರಿಂದ -ವರ, -ವಾರಗಳು ಬೇರೊಂದು ಮೂಲದಿಂದ ಬಹುಶಃ "ಆಹಾರ" ಆಕೃತಿಮಾದಿಂದ ಬಂದ ಉಪಾಕೃತಿಮಾಗಳಾಗಿವೆ.

'ಆಹಾರ'ವೆಂದರೆ ಪ್ರದೇಶ, ಸ್ಥಳವೆಂದು ಅರ್ಥ. ತೀರ ಪ್ರಾಚೀನ ಶಾಸನಗಳಲ್ಲಿ ಇದರಿಂದ ಹುಟ್ಟಿದ ತ್ರೇಯಣಾಹಾರ, ತರಕಾಗಾಹಾರ, ಕಾರ್ಮಣೇಯಾಹಾರ, ತಾಲಿತಟಾಕಾಹಾರ, ಮೃಗಥಣಿಕಾಹಾರ, ಕೇಟಾಹಾರ ಎಂಬ ಗ್ರಾಮನಾಮಗಳು ಕಂಡುಬರುತ್ತವೆ.[೨] ಈ ಪದ ಅಗ್ರಾಹಾರ (ಅಗ್ರ+ಆಹಾರ=ಅಗ್ರಾಹಾರ)>ಅಗ್ರಹಾರ ಎಂಬಲ್ಲಿ ಇನ್ನೂ ನಿಚ್ಚಳವಾಗಿ ಉಳಿದುಕೊಂಡದ್ದನ್ನು ಲಕ್ಷಿಸಬೇಕು. ಇದೇ ಮಾದರಿಯಲ್ಲಿ

ಬಾಣ+ಆಹಾರ = ಬಾಣಾಹಾರ>ಬಾಣಾವಾರ*
ನಾಗ+ಆಹಾರ = ನಾಗಾಹಾರ>ನಾಗವಾರ*

ಎಂಬ ಸವರ್ಣದೀರ್ಘಸಂಧಿ ರೂಪಗಳು ಸಿದ್ಧಿಸಿದ ಬಳಿಕ, ಕೆಲವು ಗ್ರಾಮಗಳು ಮಧ್ಯದ ಉಭಯದೀರ್ಘಗಳಲ್ಲಿ ಮೊದಲನೆಯ ದೀರ್ಘವನ್ನು ಹ್ರಸ್ವಮಾಡಿಕೊಂಡರೆ (ನಾಗವಾರ)[೩], ಇನ್ನು ಕೆಲವು ಗ್ರಾಮಗಳು ಎರಡನೆಯ ದೀರ್ಘವನ್ನು ಹ್ರಸ್ವಮಾಡಿಕೊಂಡಿವೆ (ಬಾಣಾವರ). ಹೀಗೆ ಹ್ರಸ್ವಮಾಡಿಕೊಳ್ಳುವುದಕ್ಕೆ ಇಲ್ಲಿ ಬಂದ ೩ ದೀರ್ಘಗಳ ಉಚ್ಚಾರದ ತೊಂದರೆಯನ್ನು ನಿವಾರಿಸಿಕೊಳ್ಳಬೇಕೆಂಬುದೇ ಕಾರಣ. ಆದುದರಿಂದ

೧. -ವರ, -ವಾರ ಎಂಬಿವು 'ಆಹಾರ' ಎಂಬ ಆಕೃತಿಮಾದ ಎರಡು ಉಪಾಕೃತಿಗಳು.

೨. ದೇವನಹಳ್ಳಿ ತಾಲೂಕಿನ ಶಾಸನ (ಕ್ರಿ.ಶ. ೭೮೦)ದಲ್ಲಿ ಇಂದಿನ ಗಂಗವಾರವನ್ನು 'ಗಂಗಾಪುರ' ಎಂದು ಕರೆದುದು ವಾರ, ಪುರಗಳಲ್ಲಿಯ ಉಚ್ಚಾರಸಾಮ್ಯದ ಭ್ರಾಂತಿಯಾಗಿದ್ದು, ಕ್ರಿ.ಶ. ೭೮೦ರಷ್ಟು ಪೂರ್ವದಲ್ಲಿಯೇ ಗ್ರಾಮನಾಮಗಳಲ್ಲಿಯ 'ಆಹಾರ' ಆಕೃತಿಮಾ ತನ್ನ ರೂಪವನ್ನು ಮರೆಮಾಚಿಕೊಳ್ಳುವಷ್ಟು ಜನತೆಯಿಂದ ದೂರವಾಗಿದ್ದಿತು.

೩. -ವರ, -ವಾರಗಳಲ್ಲಿ ಯಾವುದು ಮೊದಲು? ಯಾವುದು ತರುವಾಯ? ಎಂದು ಹೇಳುವುದು ಕಷ್ಟ. -ವರದ ಹಿಂದಿನ ದೀರ್ಘವನ್ನು ಒಂದು ಪ್ರದೇಶದವರು ಉಳಿಸಿಕೊಂಡರೆ, -ವಾರದ ಹಿಂದಿನ ದೀರ್ಘವನ್ನು ಇನ್ನೊಂದು ಪ್ರದೇಶದವರು ಹ್ರಸ್ವಗೊಳಿಸಿಕೊಂಡಂತಿದೆ.

---

೧. ವಿಜಯಪುರವನ್ನು ಶಾಸನಗಳು ವಿಜಯಹುರ ಎಂದು ಕರೆದಿವೆ.

೨. ಕರ್ನಾಟಕದ ಅರಸುಮನೆತನಗಳು-ಪಂಚಮುಖಿ (ಸಂಪುಟ ೧. ೧೯೪೬) ಪು. ೫೦, ೭೭, ೮೫, ೮೭, ೯೪, ೯೯,

* ಸಂಧಿಕ್ರಿಯೆಯಲ್ಲಿ ಹಕಾರವು ವಕಾರವಾಗುತ್ತದೆ. ಅರ+ಹಾವು=ಅರವಾವು
(ಪುಲಿಗಂಜಿ ಪುತ್ತನೇರಿದೊಡರೆವಾವು ಕೊಂಡುದು. ಶ.ಮ. ದರ್ಪಣ ಸೂ ೧೪೧ ರ ಪ್ರಯೋಗ).

೩. ಇದೇರೀತಿ ಅಗ್ರಾಹಾರ>ಅಗ್ರಹಾರವಾಗಿರುವುದನ್ನು ಇಲ್ಲಿ ಗಮನಿಸಬೇಕು.

ಈ ಬಗೆಯಾಗಿ ಮೇಲಿನ ಗ್ರಾಮನಾಮಗಳಿಗೆ ನಿಷ್ಪತ್ತಿ ಹೇಳುವುದು ಸರಿಯೆಂದು ತೋರುತ್ತದೆ. ಈ -ವರ, -ವಾರಗಳ ಪ್ರಾಚೀನರೂಪಗಳಾದ -ಹರ, -ಹಾರ, ಬೇರೊಂದು ರೂಪಗಳಾದ -ಯರ, -ಯಾರ ಮತ್ತು ವಕಾರಲೋಪದ ಉದಾಹರಣೆಗಳೂ ಸಿಗುತ್ತವೆ.

-ಹರ <ಉದಾಹರಣೆ ಸಿಕ್ಕಿಲ್ಲ

-ಹಾರ <ಗಣಿಹಾರ, ಕೋಲ್ಹಾರ

-ಯರ <ಉದಾಹರಣೆ ಸಿಕ್ಕಿಲ್ಲ

-ಯಾರ <ಭೂಯಾರ (=ಬೂಯಾರ)

ವಕಾರಲೋಪಕ್ಕೆ ಡವಳಾರ, ಮೈಲಾರ[೪]

ಕೆಲವು ಸಲ ಕೊನೆಯ ರಕಾರವು ರಿಕಾರವಾಗಿ ಬಳಕೆಗೊಂಡಿರುವ ಸಾಧ್ಯತೆಯಿದೆ. ವಿದ್ವಾಂಸರು ಅಂಥ ರೂಪಗಳನ್ನು ಗುರುತಿಸಬೇಕಾಗಿದೆ.

■■

ಆಕರ : ಮಾರ್ಗ ಸಂಪುಟ-೨

---

೪. ತೊರವಮಾರ (ತೊರವ+ಆಹಾರ=ತೊರವಮಾಹಾರ>ತೊರವಮಾವಾರ>ತೊರವಮಾರ) ಎಂಬ ರೂಪ ೮ನೆಯ ಶತಮಾನದ ಶಾಸನದಲ್ಲಿಯೇ ಕಂಡುಬರುವುದರಿಂದ ವಕಾರಲೋಪಕ್ರಿಯೆ ಅಷ್ಟು ಪೂರ್ವದಿಂದಲೇ ಘಟಿಸತೊಡಗಿದೆಯೆಂದು ಹೇಳಬಹುದು. (ಕರ್ನಾಟಕದ ಅರಸು ಮನೆತನಗಳು. ಪು.೮೮)

೫೭

ಹರಿಹರ ಹೆಸರಿನ ನಿಜರೂಪ

ಹರಿಹರ ರಾಘವಾಂಕರದು ಕನ್ನಡಸಾಹಿತ್ಯದಲ್ಲಿ ಸುಪ್ರಸಿದ್ಧ ಹೆಸರು. ಇವರ ಗುರುಪರಂಪರೆ ಮತ್ತು ಕುಟುಂಬ ಪರಿಸರಗಳು ತುಂಬ ಶೈವನಿಷ್ಠವಾದುವು. ವೈಯಕ್ತಿಕವಾಗಿಯೂ ಈ ಕವಿಗಳು "ಈಶ್ವರಂಗೆಯ್ದಿ ನಾಲಗೆಯಂ ಮಾರಿದೆಂ" ಎಂದು ಮುಂತಾಗಿ ಪ್ರತಿಜ್ಞಾಬದ್ಧ ಜೀವನ ನಡೆಸಿದವರು. ಹೀಗೆ ಮತಾವೇಶ ಮಟ್ಟದ ಶೈವ ಪರಿಸರದಲ್ಲಿ ಹುಟ್ಟಿ ಬೆಳೆದ ಈ ಕವಿಗಳಿಗೆ ವಿಷ್ಣುಸಂಬಂಧಿ ಹರಿ, ರಾಘವ ಹೆಸರುಗಳೇಕೆ? ಎಂಬ ಸಂದೇಹ ಮೂಡುವುದು ಸಹಜ.

ಪ್ರಾಚೀನಕಾಲದಲ್ಲಿ ವ್ಯಕ್ತಿಗಳಿಗೆ ಪರಂಪರೆ ಇಲ್ಲವೆ ಪರಿಸರದ ಹೆಸರುಗಳು ಸಹಜವಾಗಿಯೇ ಅಂಟಿಕೊಳ್ಳುತ್ತಲಿದ್ದವು. ಹರಿಹರನ ತಂದೆ ತಾಯಿಗಳ ಹೆಸರು ಮಹಾದೇವ-ಶರ್ವಾಣಿ. ರಾಘವಾಂಕನ ತಂದೆ ತಾಯಿಗಳ ಹೆಸರು ಮಹಾದೇವ-ರುದ್ರಾಣಿ. ಇವರ ಗುರು ಪರಂಪರೆಯಲ್ಲಿ ಬರುವ ಹೆಸರುಗಳು ಶಂಕರದೇವ, ಮಾದಿರಾಜ ಮತ್ತು ಮಹಾದೇವ. ಹೀಗೆ ಪರಿಸರದ ಹೆಸರುಗಳೆಲ್ಲ ಶಿವಪರವಾಗಿರುವಾಗ ಕವಿ ಹರಿಹರನ ಹೆಸರಿನಲ್ಲಿ "ಹರಿ" ಸೇರಿಕೊಂಡುದೇಕೆ? ರಾಘವಾಂಕ ಎಂಬುದಂತೂ ಇಡಿಯಾಗಿ ಶ್ರೀರಾಮನನ್ನು ಪ್ರತಿನಿಧಿಸುವುದೇಕೆ? "ಹರಿಹರ" ಎಂಬುದರಲ್ಲಿ ಶೈವ ವೈಷ್ಣವ ಸಾಮರಸ್ಯವಿದೆಯೆಂದು ಹೇಳುವುದು ಈ ಕವಿ ಸಂಸ್ಕೃತಿಗೆ ಒಪ್ಪುವುದಿಲ್ಲ. ಹರಿಯನ್ನು ಹರಣ ಮಾಡಿದವ ಎಂದು ಅರ್ಥಹಚ್ಚುವುದೂ ಮತಾಭಿಮಾನದ ವ್ಯಾಖ್ಯಾನವೇ ಸರಿ. ಹೀಗೆ ಯಾವ ಮಗ್ಗುಲಿನಿಂದ ನೋಡಿದರೂ ಈ ಹೆಸರಿನ ವಿಷಯವಾಗಿ ಸಮಾಧಾನದ ಉತ್ತರ ಸಿಗುವುದಿಲ್ಲ.

ಈ ಕವಿಗಳು ಮೂಲತಃ ಹಂಪೆಯವರು. ಈ ಪ್ರದೇಶದ ಶಾಸನಗಳಲ್ಲಿ ಹರಿಯಪ್ಪೊಡೆಯ, ಹರಿಯಲದೇವಿ ಎಂಬ ಹೆಸರುಗಳು ವಿಶೇಷವಾಗಿ ಕಂಡುಬರುತ್ತವೆ. ಹರಿಹರನನ್ನು ಕುರಿತು ನಮ್ಮ ಕಾವ್ಯಗಳು ಬಳಸಿದ ಹರಿಪ ಎಂಬುದೂ ಹರಿಯಪ್ಪೊಡೆಯ ಎಂಬುದೂ ಒಂದೇ ಗುಂಪಿನ ಹೆಸರುಗಳಾಗಿವೆ. ಶಾಸನಗಳಲ್ಲಿ ಕಂಡು ಬರುವ ಇಂಥ ಇನ್ನೊಂದು ಹೆಸರು ಹರಿಯಲದೇವಿ. ಇದರ ಪುಲ್ಲಿಂಗರೂಪ ಹರಿಯಲದೇವ. ಇದು ಹದಿಮೂರನೆಯ ಶತಮಾನದ ಹೊತ್ತಿಗೆ ಜನಭಾಷೆಯಲ್ಲಿ 'ಹರಿಯರದೇವ' ಎಂಬ ರೂಪಕ್ಕೆ ಹೊರಳಿ, ಆಮೇಲೆ 'ಹರಿಹರದೇವ' ಎಂಬ ಸಂಸ್ಕೃತರೂಪಕ್ಕೆ ತಿರುಗಿದ್ದಿತೆಂದು ಕಾಣುತ್ತದೆ. ಈ ಬಗೆಯ ಪರಿವರ್ತನೆ ಕನ್ನಡ ಭಾಷೆಯಲ್ಲಿ ಸಹಜ. ಇದೇ ಪ್ರದೇಶದವಳಾದ ಕುಮಾರರಾಮನ

ತಾಯಿ ಹರಿಯಲದೇವಿಯನ್ನು ಪ್ರಾಚೀನ ಕಾವ್ಯಗಳು ಹರಿಹರದೇವಿ ಎಂದೂ ಕರೆದುದನ್ನು ಇಲ್ಲಿ ಸ್ಮರಿಸಬಹುದು. ೧೧೭೪ರ ಕರಡಾಳು ಶಾಸನದಲ್ಲಿ ಹರ್ಯಲದೇವಿಯನ್ನು ಹರಿಹರದೇವಿ ಎಂದು ಕರೆದುದನ್ನು ನೋಡಿದರೆ ಹರಿಯಲ>ಹರಿಹರ ಪರಿವರ್ತನೆ ಇನ್ನೂ ಹಳೆಯದೆಂದು ಸ್ಪಷ್ಟವಾಗುತ್ತದೆ. ಹೀಗೆ ಹರಿಯಲದೇವ ಎಂಬುದರ ಸ್ಥಾನದಲ್ಲಿ ಒಮ್ಮೆ ಹರಿಹರದೇವ ಎಂಬ ರೂಪ ಬಳಕೆಗೆ ಬಂದ ಮೇಲೆ ಹರಿಹರ, ಹರಿಹರದೇವ, ಹರಿದೇವ, ಹರೀಶ್ವರ ಎಂಬ ರೂಪಾಂತರಗಳು ಸ್ವಾಭಾವಿಕವಾಗಿಯೇ ಆಕಾರ ಪಡೆದವೆಂದು ತೋರುತ್ತದೆ.

ಈ ವರೆಗಿನ ವಿವೇಚನೆಯಂತೆ ಹರಿಹರದೇವ ಎಂಬುದರ ಮೂಲರೂಪ ಹರಿಯಲದೇವ ಎಂದಿಟ್ಟುಕೊಂಡರೂ, ಈ ಹೆಸರಿನಲ್ಲಿಯೂ ವಿಷ್ಣುಸೂಚಕವಾದ "ಹರಿ" ಎಂಬುದಕ್ಕೆ ಏನು ಸಮಾಧಾನ? ಎಂಬ ಪ್ರಶ್ನೆ ಉಳಿದುಕೊಳ್ಳುತ್ತದೆ. ಈಗ ಹರಿಯಲದೇವ ಎಂಬಲ್ಲಿಯ "ಹರಿ" ಎಂಬುದಕ್ಕೆ ದ್ರಾವಿಡ ಮೂಲದಿಂದ ನಿಷ್ಪತ್ತಿ ಹೇಳಬೇಕು. ಶಾಸನಗಳಲ್ಲಿ ಸಿಗುವ ಹರಿಗ, ಹರಿಯಮ್ಮ ಎಂಬ ಹೆಸರುಗಳು ವಿಷ್ಣು ಅರ್ಥದ "ಹರಿ" ಎಂಬುದರಿಂದ ಬಂದಿರಲಾರವು. ಏಕೆಂದರೆ ಸಾಮಾನ್ಯರು ದಿನಬಳಕೆಯಲ್ಲಿಲ್ಲದ "ಹರಿ" ಎಂಬ ಈ ಸಂಸ್ಕೃತ ಪದವನ್ನು ಹೆಸರಿಗಾಗಿ ಸ್ವೀಕರಿಸುವುದು ಅಸಂಭವವಾದುದರಿಂದ ಇದು ಅಂದು ಪ್ರಚಲಿತವಿದ್ದ ದೇಶೀ ಪದವೇ ಆಗಿರಬಹುದು. ಇದು ನಿಜವಿದ್ದರೆ, ಇಲ್ಲಿಯ "ಹರಿ" ಎಂಬುದರ ಹಳೆಯ ರೂಪ "ಪರಿ" ಇರಬೇಕಾಗುತ್ತದೆ. ಶಾಸನಗಳಲ್ಲಿ ಪಱಿದೇವಯ, ಪಱಿಯಣ್ಣಗಾವುಂಡ, ಪರಿಯಲದೇವಿ ಇತ್ಯಾದಿ ದೇಶಿ ಹೆಸರುಗಳು ಸಿಗುತ್ತವೆ. ಒಟ್ಟಿನಲ್ಲಿ ಪಱಿ ಅಥವಾ ಪರಿ ಶಬ್ದಗಳಿಂದ ಅಥವಾ ಇಂಥ ಯಾವುದೇ ದ್ರಾವಿಡ ಮೂಲದಿಂದ "ಹರಿಹರ" ಹೆಸರಿನ ನಿಜಸ್ವರೂಪವನ್ನು ವಿದ್ವಾಂಸರು ಹುಡುಕುವರೆಂದು ಆಶಿಸುತ್ತೇನೆ.

ಇದಕ್ಕಿಂತ ಕಠಿಣವಾದುದು "ರಾಘವಾಂಕ" ಹೆಸರಿನ ಮೂಲ. ಕವಿಯ ಕೌಟುಂಬಿಕ ಸಂಸ್ಕೃತಿಯನ್ನು ನೋಡಿದರೆ ಇಲ್ಲಿಯೂ ರಾಮನ ಇನ್ನೊಂದು ಹೆಸರಾದ ರಾಘವ ಎಂಬ ಸಂಸ್ಕೃತ ರೂಪವನ್ನು ಬಿಟ್ಟು, ದ್ರಾವಿಡದಲ್ಲಿ ಇದರ ಮೂಲ ಹುಡುಕಬೇಕೆನಿಸುತ್ತದೆ.

ಈಗ ಈ ಎರಡೂ ಹೆಸರುಗಳ ವಿಷಯವಾಗಿ ಕೆಲವು ಸಂದೇಹಗಳನ್ನು ವ್ಯಕ್ತಪಡಿಸಿದ್ದೇನೆ. ಈ ದಿಸೆಯಲ್ಲಿ ಮುಂದುವರಿದು ವಿದ್ವಾಂಸರು ಸರಿಯಾದ ರೂಪ-ಅರ್ಥಗಳನ್ನು ಶೋಧಿಸಬೇಕಾಗಿದೆ.

■■

ಆಕರ : ಮಾರ್ಗ ಸಂಪುಟ–೩

---

* ಮೈಸೂರು ಭಾಗದವರು 'ಹಕ್ಕ' ಎಂದು ಬಳಸುತ್ತಾರೆ. ಹುಕ್ಕೇರಿ (ಹುಕ್ಕ ಹೆಸರಿನವನು ಕಟ್ಟಿಸಿದ ಕೆರೆ) ಇತ್ಯಾದಿ ಸ್ಥಳನಾಮಗಳನ್ನು ಗಮನಿಸಿದರೆ ಹುಕ್ಕ ಎನ್ನುವುದೇ ಸರಿ ಎನಿಸುತ್ತದೆ.

೫೮

ಹರಿಹರದೇವನ ಹೆಸರು : ಮರುಸಮರ್ಥನೆ

ಕವಿ ಹರಿಹರದೇವನ ಹೆಸರಿಗೆ ದ್ರಾವಿಡ ಭಾಷಾಮೂಲದಲ್ಲಿ ಅರ್ಥ ಹುಡುಕಬೇಕೆಂದು ಹೇಳಿ, ಹರಿಯಲದೇವ-ಹರಿಯರದೇವ-ಹರಿಹರದೇವ- ಎಂಬ ಬದಲಾವಣೆಗಳನ್ನು ಸಂಶೋಧನ ವ್ಯಾಸಂಗ (IV-5)ದಲ್ಲಿ ಸೂಚಿಸಿದ್ದೆನು. ಇದನ್ನು ವಿರೋಧಿಸಿ ಶ್ರೀ ವೃಷಭೇಂದ್ರಾಚಾರ್ ಅರ್ಕಸಾಲಿ ಅವರು "ಹರಿಹರ ಸಮನ್ವಯ"ದ ಹಳೆಯ ಮತ್ತು ಸರಳ ವಾದವನ್ನೇ ಎತ್ತಿ ಹಿಡಿದಿದ್ದಾರೆ. ಯಾವುದೇ ದೇಶದಲ್ಲಿ ಅಪ್ರಸಿದ್ಧ ಅಥವಾ ಅಪರಿಚಿತ ಪದವನ್ನು ಸುಪ್ರಸಿದ್ಧ ಅಥವಾ ಸುಪರಿಚಿತ ಪದಗಳು ನುಂಗಿಹಾಕುವುದು ಸಹಜ. ಆ ಸುಪ್ರಸಿದ್ಧ ಪದ ಭಾವೈಕ್ಯತೆ ಮೊದಲಾದ ಉದಾತ್ತ ಅರ್ಥವನ್ನೊಳಗೊಂಡಿದ್ದರೆ ಅದನ್ನು ನಂಬುವುದು ಇನ್ನೂ ಸಹಜ. ಇಂಥ ಸಂದರ್ಭದಲ್ಲಿ ಕಳೆದುಹೋದ ಆ ಅಪ್ರಸಿದ್ಧ ಶಬ್ದದ ಕಡೆಗೆ ಗಮನ ಸೆಳೆದರೆ ಓದುಗರು ಬೆಚ್ಚಿಬೀಳುವುದು, ತಕ್ಷಣ ಪ್ರತಿಕ್ರಿಯಿಸುವುದು ಸ್ವಾಭಾವಿಕ. ಅಂಥ ಒಂದು ಭಾವನಾತ್ಮಕ ಪ್ರತಿಕ್ರಿಯೆಯನ್ನು ಶ್ರೀ ವೃಷಭೇಂದ್ರಾಚಾರ್ ತೋರಿದ್ದಾರೆ.

ಪ್ರಾಚೀನ ಕಾಲದಲ್ಲಿ ಸಾಮಾನ್ಯವಾಗಿ ಅವರವರ ಕೌಟುಂಬಿಕ ಸಂಪ್ರದಾಯಕ್ಕನುಗುಣವಾಗಿ ಮಕ್ಕಳಿಗೆ ಹೆಸರಿಡುತ್ತಿದ್ದರು. ಮತ್ತು ಅವು ಆ ಪ್ರದೇಶದ ಅಂಥ ಕುಟುಂಬಗಳಲ್ಲಿ ಹರಡಿಕೊಂಡಿರುತ್ತಿದ್ದವು. "ನಾಮವಿಜ್ಞಾನ"ಕ್ಕೆ ಸಂಬಂಧಿಸಿದ ಈ ಎರಡು ತತ್ವಗಳ ಆಧಾರದಿಂದ ನನ್ನ ವಿಚಾರವನ್ನು ಮಂಡಿಸಿದ್ದೆನು. ಶ್ರೀ ಅರ್ಕಸಾಲಿಯವರು ಇದನ್ನು ವೈಜ್ಞಾನಿಕವಾಗಿ ವಿರೋಧಿಸದೆ, ಸಂಬಂಧಪಡದ ಕೆಲವು ವಿಷಯಗಳನ್ನು ತಮ್ಮ ಅನುಕೂಲಕ್ಕೆ ಬಳಸಿಕೊಂಡಿದ್ದಾರೆ.

ಇವರು ಹೇಳುವಂತೆ "ಹರಿಹರ ಸಮನ್ವಯ" ಸಂಪ್ರದಾಯ ಭಾರತದಲ್ಲಿರಬಹುದು, ಕರ್ನಾಟಕದಲ್ಲಿ ಇರಬಹುದು. ಹರಿಹರದೇವನ ಮನೆತನದಲ್ಲಿ ಇತ್ತೇ? ಎಂಬುದು ಮುಖ್ಯ ಪ್ರಶ್ನೆ. ಇದಕ್ಕೆ ಇವರಲ್ಲಿ ಉತ್ತರವಿಲ್ಲ.

ಎರಡನೆಯದಾಗಿ ಈ ಹರಿಹರ ಸಮನ್ವಯ ವಾದಕ್ಕೆ ಅವರು ಶಿವಭಕ್ತನಾಗಿದ್ದರೂ ಜೇಡರ ದಾಸಿಮಯ್ಯನ ಆರಾಧ್ಯದೈವದ ಹೆಸರು "ರಾಮನಾಥ" ಎಂದಿರುವುದನ್ನು, ವಚನಕಾರ ಸಿದ್ಧರಾಮನ ಹೆಸರಿನಲ್ಲಿ ರಾಮ ಸೇರಿಕೊಂಡಿರುವುದನ್ನು ಆಧಾರವಾಗಿ ಒಡ್ಡಿದ್ದಾರೆ. ಮುದನೂರಿನಲ್ಲಿರುವ "ರಾಮನಾಥ" ಎಂಬುದು ಶ್ರೀರಾಮಚಂದ್ರನ ಹೆಸರಾಗಿರದೆ, ಅದನ್ನು ಸ್ಥಾಪಿಸಿದ ವ್ಯಕ್ತಿಯ ಹೆಸರಾಗಿದ್ದು, ತಾತ್ವಿಕವಾಗಿ ಅದು ಶಿವಲಿಂಗವೇ ಆಗಿದೆ. ದಾಸಿಮಯ್ಯ ಈ ಶಿವಲಿಂಗದ ಹೆಸರನ್ನು ಮುದ್ರಿಕೆಯಾಗಿಟ್ಟುಕೊಂಡಿರುವನೇ ಹೊರತು, ನೇರವಾಗಿ ಶ್ರೀರಾಮಚಂದ್ರನನ್ನು ಸಂಕೇತಿಸುವ ಲಿಂಗದ ಹೆಸರನ್ನಲ್ಲ.

ವಚನಕಾರ ಸಿದ್ಧರಾಮ ಮೂಲತಃ ಗ್ರಾಮೀಣ ಪರಿಸರದವ; ಅಲ್ಲಿ ಸಂಸ್ಕೃತಿಯ ಮಿಶ್ರಣ ಸಹಜ. ಹರಿಹರದೇವ ಶಿಷ್ಟ ಪರಿಸರದವ; ಇಂಥಲ್ಲಿ ಸಂಸ್ಕೃತಿಯ ಮಿಶ್ರಣ ಇಲ್ಲವೆನ್ನುವಷ್ಟು ಕಡಿಮೆ. ಇಂಥ ಮನೆತನಗಳಲ್ಲಿ ಒಂದು ಸಂಪ್ರದಾಯವನ್ನು ಭೇದಿಸಿ, ಇನ್ನೊಂದು ಸಂಪ್ರದಾಯದ ಹೆಸರು ಒಳ ನುಗ್ಗುವುದು ಆ ಕಾಲದಲ್ಲಿಯಂತೂ ಅಸಂಭವ.

ಇವರು ಹೇಳುವಂತೆ "ಹರಿಯಲಾ"ಯೆನ್ನುವುದು ಸ್ತ್ರೀನಾಮ ನಿಜ. ಇದಕ್ಕೆ ದೇವ ಎಂಬುದನ್ನು ಹಚ್ಚಿ (ಹರಿಯಲದೇವ) ಪುರುಷನಾಮ ಮಾಡಿಕೊಳ್ಳುವುದು ಸಹಜ ಪ್ರಕ್ರಿಯೆ. ಉದಾ: ಎಲ್ಲಮ್ಮ-ಎಲ್ಲಪ್ಪ. ಹೀಗಿದ್ದೂ ಮೇಲೆ ನೀಡಿದ ನನ್ನ ವಿವರಣೆಗಳ ಹಿನ್ನಲೆಯಲ್ಲಿ ಶ್ರೀ ಅರ್ಕಸಾಲಿ ಅವರ ಲೇಖನವನ್ನು ಗಂಭೀರವಾಗಿ ತೆಗೆದುಕೊಳ್ಳಲು ಬರುವುದಿಲ್ಲ.

ನನ್ನ ಲೇಖನದಲ್ಲಿ ಹರಿಹರದೇವನ ನಿಜನಾಮ ಹರಿಯಲದೇವ ಎಂಬ ನೆಲೆಯನ್ನು ಮುಟ್ಟಿ, ವಿದ್ವಾಂಸರು ಇದಕ್ಕೆ ದ್ರಾವಿಡ ಭಾಷೆಯಲ್ಲಿ ಮೂಲವನ್ನೂ ಅರ್ಥವನ್ನೂ ಹುಡುಕಬೇಕೆಂದು ಸೂಚಿಸಿದ್ದೆನು. ಈ ಹಿಂದೆ ಹೇಳಿದಂತೆ ಕುಮಾರರಾಮನ ತಾಯಿಯ ಹೆಸರಿನ ವಿಷಯವಾಗಿ ಹರಿಯಲದೇವಿ, ಹರಿಹರದೇವಿ ರೂಪಗಳಲ್ಲದೆ, ಇತ್ತೀಚೆ ಕೈಫಿಯತ್ತುಗಳಲ್ಲಿ ಹೆರೆಯಾಳದೇವಿ, ಹೆರೆಯಳದೇವಿ ಎಂಬ ರೂಪಗಳೂ ನನ್ನ ಗಮನಕ್ಕೆ ಬಂದಿವೆ. "ಆಳ್"ದಿಂದ ಕೊನೆಗೊಳ್ಳುವ ಸಿರಿಯಾಳ, ಗೊಲ್ಲಾಳ, ಚೀಲಾಳ ಇತ್ಯಾದಿ ಹೆಸರುಗಳು ಆ ಕಾಲದಲ್ಲಿ ಸ್ವಾಭಾವಿಕ.

ಇಲ್ಲಿ ಹೆರೆಯಾಳ ಎಂಬುದನ್ನು ಹಿರಿಯ ಆಳ್ ಎಂದು ಬಿಡಿಸಿ, ನಮ್ಮೆಲ್ಲರಿಗೂ ದೊಡ್ಡವನು ಅಂದರೆ ಶಿವಯೆಂಬ ಲಕ್ಷ್ಯಾರ್ಥವನ್ನು ಇದಕ್ಕೆ ಹೇಳಬಹುದು. ಇದನ್ನು ಸಮರ್ಥಿಸುವಂತೆ ಹರಿಹರಕವಿ ಜೀವಿಸಿದ್ದ ಬಳ್ಳಾರಿ ಪ್ರದೇಶದ ಶಾಸನದಲ್ಲಿಯೇ ಪೆರಿಯಾಳುವ ಸೆಟ್ಟಿ ಎಂಬ ರೂಪ ಸಿಗುವುದನ್ನು ಇಲ್ಲಿ ಸ್ಮರಿಸಬಹುದು.

ಎರಡನೆಯದಾಗಿ ಹೆರೆಯಾಳ ಎಂಬುದಕ್ಕೆ ಖಂಡಚಂದ್ರ (=ಹೆರೆ)ನನ್ನು ಧರಿಸಿದ ಶಿವನೆಂದೂ ಅರ್ಥ ಹೇಳಬಹುದು. ಈ ಹೆರೆಯಾಳ ಎಂಬುದೇ ಸವಕಳಿ ಹೊಂದಿ ಹರಿಯಾಳ>ಹರಿಯಲ>ಹರಿಯರ> ಹರಿಹರ ಆಗಿದೆ. ಭಾಷೆಯಲ್ಲಿ ಇದು ಸಹಜವೆಂಬುದಕ್ಕೆ ಬಳ್ಳಾರಿ ಜಿಲ್ಲೆಯ ಹಿರೇಹಳ್ಳಿ (ಹಿರೇಹಾಳು) ಎಂಬ ಗ್ರಾಮನಾಮ "ಹರಿಹರಪುರ" ಎಂದು ಶಾಸನಗಳಲ್ಲಿ ಕಾಣಿಸಿಕೊಂಡುದೇ ಸಾಕ್ಷಿಯಾಗಿದೆ.* ಕಾರಣ ಶಿವ ಅರ್ಥದ ಹೆರೆಯಾಳ ಎಂಬುದೇ ಮೂಲರೂಪವಾಗಿದ್ದು, ಇದೇ ಕಾಲಕ್ರಮದಲ್ಲಿ ವ್ಯತ್ಯಾಸಗೊಳ್ಳುತ್ತ ಸಾಗಿ "ಹರಿಹರ"ರೂಪಕ್ಕೆ ಹೊರಳಿದೆಯೆಂದು ಹೇಳಬಹುದು.

ಹೀಗೆ ಶೈವಕವಿಯಾದ ಹರಿಹರನ ಹೆಸರಿಗೆ ಶೈವ ಕೌಟುಂಬಿಕ ಸಂಪ್ರದಾಯದ ಹಿನ್ನೆಲೆಯಲ್ಲಿಯೇ ಅರ್ಥ ಹೇಳುವುದು ಹೆಚ್ಚು ಸುಸಂಗತವೆನಿಸುತ್ತದೆ. ನಾಮವಿಜ್ಞಾನ, ಭಾಷಾವಿಜ್ಞಾನ, ಸಂಸ್ಕೃತಿವಿಜ್ಞಾನದ ಅಭ್ಯಾಸಿಗಳು ಮಾತ್ರ ಈ ದ್ರಾವಿಡವಾದವನ್ನು ಬೆಂಬಲಿಸುವರೆಂದೂ, ನವೋದಯ ಸಂಶೋಧಕರಿಗೆ "ಹರಿಹರ ಸಮನ್ವಯ" ವಾದಕ್ಕಿಂತ ಬೇರೆ ಯಾವುದೂ ಹೊಳೆಯುವುದಿಲ್ಲವೆಂದೂ ಭಾವಿಸುತ್ತೇನೆ.

■■

ಆಕರ : ಮಾರ್ಗ ಸಂಪುಟ–೩

* ಹರಿಕೇಶ್ವರ>ಅರಿಕೇಶ್ವರ>ಅರ್ಕೇಶ್ವರ, ಇಲ್ಲಿಯ ಕೊನೆಯ ಎರಡು ಹೆಸರುಗಳು ಮಧುವಯ್ಯನ ವಚನ ಮುದ್ರಿಕೆಯಾಗಿ ಕಂಡುಬರುತ್ತವೆ. ಹೀಗಾಗಿ ಮಧುವಯ್ಯನು ವೇಮುಲವಾಡ ಪರಿಸರದವನಿರಬಹುದೆ? ವಿಚಾರಿಸಬೇಕು.

೫೯

ಅರಿಕೇಸರಿ ಹೆಸರಿನ ನಿಜರೂಪ

ಪಂಪಭಾರತದ ಕಥಾನಾಯಕನ ಹೆಸರು ಅರಿಕೇಸರಿಯೆಂದು ಕವಿಯೇ ಸ್ಪಷ್ಟಪಡಿಸಿರುವಾಗ ಈ ಹೆಸರಿನ ನಿಜ ಸ್ವರೂಪವೇನು? ಎಂಬ ಪ್ರಶ್ನೆ ಕೆಲವರಿಗೆ ಗಾಬರಿ ಹುಟ್ಟಿಸುವುದು ಸಹಜ.

ವೈರಿಗಳಿಗೆ ಸಿಂಹಸ್ವರೂಪನು ಎಂಬ ಅರ್ಥದ ಈ ಹೆಸರು ಬಿರುದಿನಂತೆ ಕೇಳಿಸುವುದರಿಂದ ಇವನ ವ್ಯಕ್ತಿನಾಮದ ನಿಜಸ್ವರೂಪ ಬೇರೆ ಇರಬಹುದೇ? ಅದು ಪ್ರಯತ್ನಪೂರ್ವಕವಾಗಿಯೋ, ಅಪ್ರಯತ್ನಪೂರ್ವಕವಾಗಿಯೋ ಅರಿಕೇಸರಿ ಎಂದು ಬದಲಾವಣೆ ಹೊಂದಿರಬಹುದೇ? ಎಂಬ ಪ್ರಶ್ನೆಗಳು ಇತ್ತೀಚೆ ನನ್ನನ್ನು ಕಾಡತೊಡಗಿದವು. ಬೇರೆ ಬೇರೆ ಆಕರಗಳನ್ನು ಅಭ್ಯಸಿಸುವಲ್ಲಿ ಈ ಬಗ್ಗೆ ಹೊಳೆದ ಕೆಲವು ವಿಚಾರಗಳನ್ನು ಇಲ್ಲಿ ಮಂಡಿಸುತ್ತೇನೆ.

ಪಂಪಭಾರತದಲ್ಲಿ ಕೆಲವಡೆ ಅರಿಕೇಸರಿಯೆಂಬುದಕ್ಕೆ ಪರ್ಯಾಯವಾಗಿ ಅರಿಗ, ಹರಿಗ ರೂಪಗಳು ಕಂಡುಬರುವುದರಿಂದ, ಈ ಅರಸನ ಹೆಸರು ಅರಿಕೇಸರಿಯೋ, ಹರಿಕೇಸರಿಯೋ ಎಂಬ ಸಂದೇಹ ಹುಟ್ಟುತ್ತದೆ. ಕನ್ನಡದಲ್ಲಿ ಅಕಾರ, ಹಕಾರಗಳು ಪರಸ್ಪರ ಪಲ್ಲಟವಾಗುವುದು ತೀರ ಸಹಜವಾಗಿದ್ದರೂ ದ್ರಾವಿಡದಲ್ಲಿ ಹಕಾರ ಆಮೇಲೆ ಹುಟ್ಟಿದ ವರ್ಣವಾಗಿರುವುದರಿಂದ ಅರಿಗ ರೂಪ ಹಳೆಯದು, ಹರಿಗ ರೂಪ ಆಮೇಲಿನದೆನಿಸುತ್ತದೆ. ಪಂಪನಿಗಿಂತ ಪೂರ್ವದಲ್ಲಿ ಅರಿಕೇಸರಿ (ಬೋಧನ ಚಾಲುಕ್ಯ ಅರಸು)ಯೆಂಬ ಹೆಸರು, ತರುವಾಯದಲ್ಲಿ ಹರಿಕೇಸರಿ (ಹಾನಗಲ್ಲು ಕದಂಬ ಅರಸು)ಯೆಂಬ ಹೆಸರುಗಳು ಕಂಡುಬರುವುದು ಈ ಅಭಿಪ್ರಾಯವನ್ನು ಬೆಂಬಲಿಸುತ್ತದೆ. ಇದೆಲ್ಲವನ್ನು ನೋಡಿದರೆ ಹರಿಗ ಎಂಬುದಕ್ಕಿಂತ ಅರಿಗ ಎಂಬುದು, ಅಂದರೆ ಹರಿಕೇಸರಿಯೆಂಬುದಕ್ಕಿಂತ ಅರಿಕೇಸರಿಯೆಂಬುದು ಹಳೆಯ ರೂಪವೆಂದು ಸ್ಪಷ್ಟವಾಗುತ್ತದೆ.

ಈ ಸಂದರ್ಭದಲ್ಲಿ ಕ್ರಿ.ಶ. ೭೨೬ರಷ್ಟು ಪೂರ್ವದ ತಳಕಾಡಿನ ಒಂದು ಶಾಸನದಲ್ಲಿಯ "ಅರಕೇಸಿ" ಎಂಬ ಹೆಸರು ನಮ್ಮ ಗಮನ ಸೆಳೆಯುತ್ತದೆ. ಇದು ಅರಿಕೇಸರಿಯೆಂಬುದರ ಪ್ರಾಚೀನ ರೂಪವಾಗಿರಬಹುದು. ಈ 'ಅರಕೇಸಿ' ಎಂಬುದನ್ನು ನೋಡುತ್ತಲೆ ಬಾದಾಮಿ ಚಾಲುಕ್ಯ ಅರಸು "ಪೊಲಕೇಸಿ" (ಈಗ ರೂಢಿಯಲ್ಲಿರುವ ಪುಲಿಕೇಶಿ ನಿಜರೂಪವಲ್ಲ) ನೆನಪಾಗುತ್ತಾನೆ. ಬಹುಶಃ ಚಾಲುಕ್ಯ ಮನೆತನದಲ್ಲಿ ಪೊಲಕೇಸಿ, ಅರಕೇಸಿ (>ಅರಿಕೇಸರಿ) ಎಂಬಂತೆ "ಕೇಸಿ"ಯಿಂದ ಕೊನೆಗೊಳ್ಳುವ ಹೆಸರುಗಳನ್ನಿಡುವ ಪದ್ಧತಿ ಅಸ್ತಿತ್ವದಲ್ಲಿದ್ದಿತೆಂದು ತೋರುತ್ತದೆ. ಬಾದಾಮಿ ಸುತ್ತಮುತ್ತಲಿನ ೬-

೭ನೆಯ ಶತಮಾನದ ಶಾಸನಗಳಲ್ಲಿ ಚಾಳುಗೇಸಿ, ಬಾದುಗೇಸಿ, ಬೆಣ್ಣಿಗೇಸಿ ಎಂಬ ವ್ಯಕ್ತಿನಾಮಗಳು ಕಂಡುಬರುವುದರಿಂದ, "ಕೇಸಿ"ಯಿಂದ ಅಂತ್ಯವಾಗುವ ಹೆಸರುಗಳು ಅಂದು ಆ ಪ್ರದೇಶದಲ್ಲಿ ತಕ್ಕಮಟ್ಟಿಗೆ ಪ್ರಚಲಿತವಿರಬಹುದೆನಿಸುತ್ತದೆ. ಇಲ್ಲಿಂದ ಮುಂದೆ ೯-೧೦ನೆಯ ಶತಮಾನಗಳಿಗೆ ಬಂದರೆ, ಬೋಧನ ಚಾಲುಕ್ಯ ಮನೆತನದಲ್ಲಿ ಅರಕೇಸಿ (ಲಭ್ಯರೂಪ ಅರಿಕೇಸರಿ) ಹೆಸರಿನ ಮೂರು ಜನ ಅರಸರು ಕಂಡು ಬರುತ್ತಾರೆ. ಹರಿಕೇಶ್ವರ ಹೆಸರಿನ ಶಿವಾಲಯದ ಉಲ್ಲೇಖ ಬೋಧನ ಸಮೀಪದ ವೇಮುಲವಾಡ ಶಾಸನ (೧೧ನೆಯ ಶತಮಾನ)ದಲ್ಲಿ ಸಿಗುತ್ತದೆ*. ತರುವಾಯದ ಕನ್ನಡ ಶಾಸನಗಳಲ್ಲಿಯೂ ಜಯಕೇಸಿ, ಇಂದ್ರಕೇಸಿಯೆಂಬ ಹೆಸರುಗಳು ಕಾಣಿಸಿಕೊಂಡಿವೆ. ಇವೆಲ್ಲ ನಿದರ್ಶನಗಳ ಬಲದಿಂದ 'ಕೇಸಿ' ಅಂತ್ಯದ "ಅರಕೇಸಿ"ಯೆಂಬುದೇ ಮೂಲ ಹೆಸರಾಗಿರಬಹುದೆಂದು ಹೇಳಲು ಮನಸ್ಸಾಗುತ್ತದೆ. ಮುಂದೆ ಇದೇ ಪಂಪನಂಥ ಪಂಡಿತರ ಕೈಯಲ್ಲಿ ಅರಿಕೇಸರಿ ಎಂಬ ಸುಧಾರಿತ ರೂಪಕ್ಕೆ ಹೊರಳಿರಬಹುದು. ಹೆಸರನ್ನು ಸುಧಾರಣೆ ಮಾಡಿಕೊಳ್ಳುವುದು ಈಗಿನಂತೆ ಪ್ರಾಚೀನ ಕಾಲದಲ್ಲಿಯೂ ಸಹಜವಾಗಿದ್ದಿತು.

ಇನ್ನು ಅರಕೇಸಿ ಪದದ ಅರ್ಥವನ್ನು ನೋಡಬಹುದು: ಪೊಲಕೇಸಿಯಂತೆ ಇದರ ಅರ್ಥವೂ ಜಟಿಲವಾಗಿದೆ. ಇಲ್ಲಿ ಅರ+ಕೇಸಿ ಎಂಬ ಎರಡು ಪದಗಳಿವೆ. ಅರ ಶಬ್ದ ಶಕಟರೇಫಯುಕ್ತವಾಗಿದ್ದರೆ ಧರ್ಮ ಎಂಬ ಅರ್ಥ ಹೇಳಬಹುದಿತ್ತು, ವಸ್ತು ಸ್ಥಿತಿ ಹಾಗಿಲ್ಲ. ಆದುದರಿಂದ ಅರ ಎಂಬುದನ್ನೇ ಮೂಲರೂಪವೆಂದು ಇಟ್ಟುಕೊಳ್ಳಬೇಕಾಗುತ್ತದೆ. ಅರಸು+ಮನೆ>ಅರ ಮನೆಯೆಂಬಂತೆ ಇಲ್ಲಿಯ ಅರ ಎಂಬುದು ಅರಸು ಎಂಬುದರ ಸಾಧಿತ ರೂಪವಿರಬಹುದು.

ಇದಕ್ಕಿಂತ ಜಟಿಲವಾಗಿದೆ "ಕೇಸಿ" ಎಂಬುದಕ್ಕೆ ಅರ್ಥ ಹೇಳುವುದು. ಬಹುಶಃ ಇದು "ಮಾಡುವವನು" ಎಂಬ ಅರ್ಥ ಕೊಡುವಂತೆ ತೋರುತ್ತದೆ. ಕೆಯ್ಯಿತ=ಮಾಡುವವನು (ಕಲಕೇತಿ-ಕಲಕೇತ ಇತ್ಯಾದಿ ರೂಪಗಳನ್ನು ಇಲ್ಲಿ ಸ್ಮರಿಸಬಹುದು). ಇದೇ ಕೆಯ್ತಿ>ಕೇತಿ>ಕೇಸಿ ಎಂಬಂಥ ರೂಪಪಲ್ಲಟಗಳಿಗೆ ಗುರಿಯಾಗಿರಬಹುದು.

ಇದೆಲ್ಲ ನಿಜವಿದ್ದರೆ ಅರಕೇಸಿಯೆಂಬುದಕ್ಕೆ 'ರಾಜ್ಯಭಾರ ಮಾಡುವವನು' ಎಂಬ ಅರ್ಥವನ್ನು ಹೇಳಬೇಕಾಗುತ್ತದೆ. ಇದೇ ರೀತಿ ಪೊಲಕೇತಿ>ಪೊಲಕೇಸಿ ಎಂಬುದಕ್ಕೆ 'ಹೊಲ ಮಾಡುವವನು' ಎಂಬ ಅರ್ಥವಿರಬಹುದು, ತೀರ ಪ್ರಾಚೀನ ಕಾಲದಲ್ಲಿ ವ್ಯಕ್ತಿಯನ್ನು ವೃತ್ತಿಯಿಂದ ಗುರುತಿಸುವ ನಾಮಕರಣ ಪದ್ಧತಿ ರೂಢಿಯಲ್ಲಿದ್ದಿತು. ಉದಾ: ಮಡಿವಾಳ(=ಅಗಸ)ಯ್ಯ, ಘಟ್ಟಿವಾಳ(=ಗಂಧತೇಯುವವ)ಯ್ಯ. ಈ ಸಂಪ್ರದಾಯದಲ್ಲಿ ಈ ವ್ಯಕ್ತಿನಾಮಗಳು ರೂಪಗೊಂಡಿರಬಹುದು. ಇಲ್ಲಿ ಅರಕೇಸಿಯೆಂಬುದೇ ಸಾಮಾನ್ಯರ ಬಾಯಿಯಲ್ಲಿ ಅರಿಕೇಸಿಯಾಗಿ, ಪಂಡಿತರ ಕೈಯ್ಯಲ್ಲಿ ಅರಿಕೇಸರಿಯಾದಂತಿದೆ. ಪ್ರೀತಿ ಸಂದರ್ಭದಲ್ಲಿ ಇದು ಅರಿಗ ಎಂದಾಗಿ, ಅ>ಹ ಪರಿವರ್ತನ ತತ್ವದಂತೆ ಹರಿಗ ಆಗಿರಬಹುದು. ಈ ಹರಿಗ(ಕ)ನ ಹೆಸರಿನಿಂದ ವೇಮುಲವಾಡದಲ್ಲಿ ಕಟ್ಟಿಸಿದ ದೇವಾಲಯವೇ ಹರಿಕೇಶ್ವರ ಎಂದು ಪ್ರಸಿದ್ಧವಾಗಿದೆ.

ಒಂದು ಮಾತು ನಿಜ. ಕೇಸಿ ಎನ್ನುವುದು ದೇಶೀ ಪದವಾಗಿರುವುದರಿಂದ ಇಡೀ ಹೆಸರು ದೇಶೀ ಮೂಲಕ್ಕೇ ಸಂಬಂಧಪಟ್ಟುದಾಗಿದೆ. ಈ ದೇಶೀ ಮೂಲದ ಅರಕೇಸಿ ಎಂಬುದರ ಸುಧಾರಿತ ರೂಪ ಅರಿಕೇಸರಿಯಾಗಿದೆ, ಇದು ನನ್ನ ತಾತ್ಪೂರ್ತಿಕ ನಿಲವು.

■■

ಆಕರ : ಮಾರ್ಗ ಸಂಪುಟ–೩

೬೦

ಪ್ರೌಢದೇವರಾಯ ಹೆಸರಿನ ನಿಜರೂಪ

'ಹೆಸರು' ಸಂಸ್ಕೃತಿ ಅಧ್ಯಯನದ ಬಹುಮುಖ್ಯ ಆಕರ ಸಾಮಗ್ರಿಯಾಗಿ ಇಂದು ಬಳಕೆಯಾಗುತ್ತಲಿದೆ. ಗ್ರಾಮ, ಕುಟುಂಬಗಳ ಹೆಸರುಗಳಂತೆ ವ್ಯಕ್ತಿಯ ಹೆಸರನ್ನೂ ಸರಿಯಾಗಿ ಬಿಚ್ಚಿ, ಅದು ಪ್ರತಿನಿಧಿಸುವ ಸಂಸ್ಕೃತಿಯ ಶೋಧಕಾರ್ಯದಲ್ಲಿ ವಿದ್ವಾಂಸರು ದಿನೇ ದಿನೇ ಹೆಚ್ಚು ಆಸಕ್ತಿ ವಹಿಸುತ್ತಲಿದ್ದಾರೆ. ಪ್ರಾಚೀನ ಕಾಲದ ಪೊಲಕೇಸಿ, ಅರಿಕೇಸರಿ, ಹುಕ್ಕ-ಬುಕ್ಕ ಮೊದಲಾದವುಗಳಂತೆ ವಿಜಯನಗರದ ಅರಸನಿಗಿರುವ ಪ್ರೌಢದೇವರಾಯ ಎಂಬ ಹೆಸರೂ ಶೋಧನೀಯವೆನಿಸಿದೆ.

ಪ್ರೌಢದೇವರಾಯ ಹೆಸರಿನಲ್ಲಿ ದೇವರಾಯ ಎಂಬುದು ವ್ಯಕ್ತಿನಾಮ, ಪ್ರೌಢವೆಂಬುದು ವಿಶೇಷಣ. ಪ್ರಾಚೀನ ಕಾಲದಲ್ಲಿ ವ್ಯಕ್ತಿನಾಮದ ಹಿಂದೆ ವಿಶೇಷಣಗಳು ಬಳಕೆಯಾಗುತ್ತಿದ್ದುದಕ್ಕೆ ಅನೇಕ ಉದಾಹರಣೆಗಳು ಕಾವ್ಯ, ಶಾಸನಗಳಲ್ಲಿ ಸಿಗುತ್ತವೆ. ಮುಮ್ಮಡಿ ತೈಲಪ, ಹಿರಿಯ ವೆಂಕಟಪ್ಪನಾಯಕ, ದೊಡ್ಡ ದೇವರಾಜ ಇತ್ಯಾದಿಗಳಲ್ಲಿಯ ಮುಮ್ಮಡಿ, ಹಿರಿಯ, ದೊಡ್ಡ ಎಂಬಂಥ ವಿಶೇಷಣಗಳು ಪ್ರಾಚೀನ ಕಾಲದಲ್ಲಿ ಸಾಮಾನ್ಯವಾಗಿದ್ದವು. ಹೀಗೆ ರೂಢಿಯಲ್ಲಿದ್ದ ಈ ವಿಶೇಷಣಗಳಿಂದ ತೀರ ಭಿನ್ನವೆಂಬಂತೆ ಇಲ್ಲಿ ದೇವರಾಯನಿಗೆ 'ಪ್ರೌಢ' ಎಂಬ ವಿಶೇಷಣ ಬಳಸಲಾಗಿದೆ. ಇದಕ್ಕೆ ಪ್ರಬುದ್ಧ, ವಿದ್ವಾಂಸ ಇತ್ಯಾದಿ ಅರ್ಥಹೇಳಬಹುದಾದರೂ ಈ ವಿಶೇಷಣ ಆ ಕಾಲದ ರೂಢಿಗೆ ಪರಕೀಯವೆನಿಸುತ್ತದೆ ಮತ್ತು ಆ ಕಾರಣಕ್ಕಾಗಿ ಅದು ಕುತೂಹಲ ಹುಟ್ಟಿಸುತ್ತದೆ.

ಪ್ರಾಚೀನ ದಾಖಲೆಗಳಲ್ಲಿ ಈ ಅರಸನಿಗೆ ದೇವರಾಯ, ಪ್ರೌಢರಾಯ, ಪ್ರೌಢದೇವರಾಯ, ಪ್ರೌಢಪ್ರತಾಪ ದೇವರಾಯ ಎಂಬ ಹೆಸರುಗಳು ಕಂಡುಬರುತ್ತವೆ. ಕೆಲವೊಮ್ಮೆ ಹಸ್ತಪ್ರತಿಗಳಲ್ಲಿ ಇಲ್ಲಿಯ ಪ್ರೌಢ ಎಂಬುದರ ಸ್ಥಾನದಲ್ಲಿ ಪ್ರಭುಡ, ಪ್ರಹುಡ, ಪ್ರವುಡ ಪದಗಳನ್ನೂ ಬಳಸಲಾಗಿದೆ. ಉದಾ: 'ಪ್ರಭುಡರಾಯನ ಕಾವ್ಯ ಸಮಾಪ್ತ ಮಂಗಳ ಮಹಾಶ್ರೀ', 'ಪ್ರಹುಡರಾಯನ ಕಾವ್ಯವು ಸಮಾಪ್ತಿ', 'ಪ್ರವುಡರಾಯನ ಕಾವ್ಯ ಬರೆಯುವುದಕ್ಕೆ . . . .' ಇತ್ಯಾದಿ. ಇಂಥ ರೂಪಗಳು ಶಾಸನಗಳಲ್ಲಿಯೂ ಸಿಗುತ್ತವೆ.

ಇಲ್ಲಿ ಪ್ರಭುಡ, ಪ್ರಹುಡ, ಪ್ರವುಡಗಳ ಪರಿಷ್ಕೃತ ರೂಪ ಪ್ರೌಢವೋ, ಪ್ರೌಢವೆಂಬುದರ ಅಪಭ್ರಂಶ ರೂಪಗಳೇ ಪ್ರಭುಡ, ಪ್ರಹುಡ, ಪ್ರವುಡಗಳೋ ಎಂಬ ಸಂದೇಹ ಹುಟ್ಟುತ್ತದೆ. ಮೇಲೆ ನೋಡಿದಂತೆ ಹೆಸರಿನ ಹಿಂದೆ ಪ್ರೌಢವೆಂಬ ವಿಶೇಷಣ ಬಳಸುವ ಸಂಪ್ರದಾಯ ನಮ್ಮಲ್ಲಿ ಇಲ್ಲವಾದುದರಿಂದ, ಈ ಪ್ರಭುಡ, ಪ್ರಹುಡಗಳೇ ಮೂಲರೂಪ, ಪ್ರೌಢವೆಂಬುದೇ ಸುಧಾರಿತ ರೂಪವೆನ್ನಬೇಕಾಗುತ್ತದೆ. ಈ ಮೂರರಲ್ಲಿ ಪ್ರಭುಡವೇ ಹಳೆಯ ರೂಪ, ಪ್ರಹುಡ, ಪ್ರವುಡಗಳೇ ಅಮೇಲಿನ ರೂಪಗಳೆಂದು ಭಾಷಾಧೋರಣೆಯಿಂದ ಹೇಳಬಹುದಾಗಿದೆ. ಹಾಗಿದ್ದರೆ ಮೂಲವಾಗಿರುವ ಪ್ರಭುಡ ಶಬ್ದದ ಅರ್ಥವೇನು?

ಈ ಸಂದರ್ಭದಲ್ಲಿ ವಿಜಯನಗರ ಪ್ರೌಢದೇವರಾಯನಿಗಿಂತ ಇನ್ನೂರು ವರ್ಷ ಹಿಂದೆ ಆಳಿದ ತೆಲುಗುನಾಡಿನ ಓರಂಗಲ್ಲಿನ ಕಾಕತೀಯರು ನೆನಪಾಗುತ್ತಾರೆ. ಅವರಲ್ಲಿ ಪ್ರತಾಪರುದ್ರ, ಪ್ರೌಢಪ್ರತಾಪರುದ್ರ ಹೆಸರು ತುಂಬ ಪ್ರಸಿದ್ಧ. ವಿಜಯನಗರದ ದೇವರಾಯನಿಗೂ ಇವೇ ಬಿರುದುಗಳನ್ನು ಬಳಸಿ, ಅವನನ್ನು ಪ್ರತಾಪದೇವರಾಯ, ಪ್ರೌಢ ಪ್ರತಾಪದೇವರಾಯ ಎಂಬ ಪರ್ಯಾಯನಾಮಗಳಿಂದ ಶಾಸನಗಳಲ್ಲಿ ಕರೆಯಲಾಗಿದೆ. ಬಹುಶಃ ತೆಲುಗುನಾಡಿನಲ್ಲಿ ಪ್ರಚಾರದಲ್ಲಿದ್ದ ಈ ಬಿರುದುಗಳನ್ನೇ ವಿಜಯನಗರದ ದೇವರಾಯ ಧರಿಸಿದಂತಿದೆ. ಹಾಗಿದ್ದರೆ 'ಪ್ರೌಢ' ಎಂಬುದರ ನಿಜರೂಪವನ್ನು ಕನ್ನಡದಲ್ಲಿ ಹುಡುಕದೆ, ತೆಲುಗು ಮೂಲದಲ್ಲಿ ಶೋಧಿಸಬೇಕಾಗುತ್ತದೆ. ಈ ಹಿಂದೆ ಹೇಳಿದಂತೆ 'ಪ್ರಭುಡ' ಎಂಬ ಮೂಲರೂಪವನ್ನೇ ಆಧಾರವಾಗಿಟ್ಟುಕೊಂಡು ನಿಜರೂಪ ಶೋಧಕ್ಕೆ ಮುಂದುವರಿಯಬಹುದಾಗಿದೆ.

ತೆಲುಗು ಮೂಲದ ಕಾಕತೀಯರನ್ನು, ಆ ಭಾಷೆಯಲ್ಲಿ ಸಹಜವಾಗಿಯೇ 'ಪ್ರಭುಡು' ಎಂದು ಕರೆಯುತ್ತಿರಬಹುದು. ಪ್ರಭುಡು ಎಂದರೆ ತೆಲುಗಿನಲ್ಲಿ 'ಪ್ರಭುವು' ಎಂದು ಅರ್ಥ. ಹೀಗಾಗಿ ಪ್ರಭುಡು ಪ್ರತಾಪರುದ್ರ ಎಂಬುದಕ್ಕೆ ಪ್ರಭುವಾಗಿರುವ ಪ್ರತಾಪರುದ್ರ ಎಂದು ಅರ್ಥವಿವರಣೆ ನೀಡಬಹುದು. ಈ ಪ್ರಭುಡು ಎಂಬುದೇ ಆಂಧ್ರಪ್ರದೇಶದಲ್ಲಿ ಪ್ರೌಢ ಎಂದು ಬದಲಾವಣೆ ಪಡೆದು, ಆಮೇಲೆ ಅದೇ ರೂಪದಲ್ಲಿ ವಿಜಯನಗರದ ದೇವರಾಯನಿಗೂ ಬಳಕೆಯಾಗಿರಬಹುದು.

ಪ್ರಭು ಎಂಬುದನ್ನು ವಿಶೇಷಣವಾಗಿ ಬಳಸುವುದು ಸರ್ವೆ ಸಾಮಾನ್ಯ. ಇದಕ್ಕೆ ಪ್ರಾಚೀನ ಕಾಲದಲ್ಲಿ ಅನೇಕ ಉದಾಹರಣೆಗಳು ಸಿಗುತ್ತವೆ. ಇದೇ ರೀತಿ 'ಪ್ರಭುಡು' ಎಂಬುದು ವಿಶೇಷಣದಂತೆ ಆಂಧ್ರಪ್ರದೇಶದಲ್ಲಿ ಬಳಕೆಯಾಗಿ 'ಪ್ರೌಢ' ರೂಪಕ್ಕೆ ಹೊರಳಿ, ಮುಂದೆ ವಿಜಯನಗರದ ದೇವರಾಯನಿಗೂ ಅದು ಬಳಕೆಯಾಗಲು ಪ್ರಾರಂಭಿಸಿರಬಹುದು.

■■

ಆಕರ : ಮಾರ್ಗ ಸಂಪುಟ–೩

೬೧

ಬಸವಣ್ಣನ ಅಡ್ಡ ಹೆಸರು

ಒಂದು ಗ್ರಾಮದಲ್ಲಿ ಒಂದೇ ಹೆಸರಿನ ಅನೇಕ ವ್ಯಕ್ತಿಗಳಿದ್ದರೆ ನಮಗೆ ಬೇಕಾಗಿರುವವನನ್ನು ಕರೆಯುವುದು ಕಷ್ಟವಾಗುತ್ತದೆ. ಆಗ ಅವನ ಹೆಸರಿನ ಜೊತೆಗೆ ಅವನ ತಂದೆಯ ಹೆಸರನ್ನೂ ಜೋಡಿಸುತ್ತೇವೆ. ಆಗಲೂ ಗುರುತಿಸುವುದು ಸಾಧ್ಯವಾಗದಿದ್ದರೆ ಇನ್ನೊಂದು ಹೆಸರನ್ನು ಜೋಡಿಸುತ್ತೇವೆ. ಈ ಮೂರನೆಯ ಹೆಸರೇ ಅಡ್ಡಹೆಸರು. ಈ ಅಡ್ಡಹೆಸರಿನ ಹಿಂದೆ ಒಂದು ಅರ್ಥ, ಒಂದು ಇತಿಹಾಸವಿರುತ್ತದೆ.

ಅಡ್ಡಹೆಸರನ್ನು ಇಟ್ಟುಕೊಳ್ಳುವುದು ನಮ್ಮ ನಾಡಿನಲ್ಲಿ ತುಂಬ ಪ್ರಾಚೀನ ಪದ್ಧತಿಯೆಂದು ತೋರುತ್ತದೆ. ಮನೆಯ ಮುಂದಿನ ವೃಕ್ಷ ಕಾರಣವಾಗಿ ಮಯೂರವರ್ಮನಿಗೆ "ಕದಂಬ" ಅಡ್ಡಹೆಸರು ಬಂದಿತೆಂದು ಇತಿಹಾಸ ತಿಳಿಸುತ್ತದೆ. ಚಾಲುಕ್ಯ ರಾಷ್ಟ್ರಕೂಟ ಇತ್ಯಾದಿಗಳೆಲ್ಲ ಇಂಥ ಅಡ್ಡಹೆಸರುಗಳೇ. ಮಡಿವಾಳ ಮಾಚಯ್ಯ, ಮಾದರ ಚೆನ್ನಯ್ಯ ಹೆಸರುಗಳಲ್ಲಿರುವ ವೃತ್ತಿ ಸೂಚಕಗಳೂ ಅಡ್ಡಹೆಸರುಗಳೇ. ಕೆಲವೊಮ್ಮೆ ಈಗಿನಂತೆ ಊರ ಹೆಸರುಗಳನ್ನೂ ಅಡ್ಡಹೆಸರಾಗಿ ಬಳಸುತ್ತಿದ್ದುದಕ್ಕೆ ನೆಲುವಿಗೆಯ ಶಾಂತಯ್ಯ, ಕೆಂಭಾವಿ ಭೋಗಣ್ಣ ಉದಾಹರಣೆಯೆನಿಸಿವೆ. ಈ ಸಂಪ್ರದಾಯದ ಒಂದು ಭಾಗವಾಗಿರುವ ಬಸವಣ್ಣನವರ ಅಡ್ಡಹೆಸರು ಏನಿರಬಹುದು? ಅದರ ಅರ್ಥವೇನು? ಎಂಬುದು ಕುತೂಹಲದ ವಿಷಯ.

ಬಸವಣ್ಣನವರ ತಂದೆಯ ಹೆಸರು ಮಾದಿರಾಜ. ಊರು ಬಾಗೇವಾಡಿ. ಇಷ್ಟು ಎಲ್ಲರಿಗೂ ಗೊತ್ತು. ಸಮಕಾಲೀನ ಶರಣ ಘಟ್ಟಿವಾಳಯ್ಯ, "ಮಂಡಗೆಯ ಮಾದಿರಾಜ ಮಾದಲಾಂಬಿಕೆಯಮ್ಮನವರ ಬಸುರಲ್ಲಿ ಬಂದನೆನ್ನಬಹುದೆ ಬಸವೇಶ್ವರನು?" ಎನ್ನುತ್ತಾನೆ. ಬಸವಣ್ಣನವರ ತಂದೆಯನ್ನು ವೀರಶೈವ ಕಾವ್ಯಗಳೂ "ಮಂಡಗೆಯ ಮಾದಿರಾಜ" ಎಂದು ಕರೆದಿವೆ. ಆದುದರಿಂದ ಮಂಡಗೆ ಇವರ ಮನೆತನದ ಅಡ್ಡಹೆಸರಾಗಿರಬೇಕು. ಇದರ ಅರ್ಥವೇನು?

ಬೆಳಗಾವಿಯಲ್ಲಿ ಮಂಡಗಿ ಅಡ್ಡಹೆಸರಿನ ಪ್ರತಿಷ್ಠಿತ ಬ್ರಾಹ್ಮಣ ಮನೆತನವಿದೆ. ಬಸವಣ್ಣನೂ ಮೂಲತಃ ಬ್ರಾಹ್ಮಣ. ಬಸವಣ್ಣನವರ ವಂಶಜರು ವಾಸವಾಗಿದ್ದುದು ಬೆಳಗಾವ ಜಿಲ್ಲೆಯ ಹುಕ್ಕೇರಿ ತಾಲೂಕಿನ ಅರ್ಜುನವಾಡದ ನೆರೆಯಲ್ಲಿ ಹಾಳಾಗಿರುವ ಕವಿಳಾಸಪುರದಲ್ಲಿ. ಕಾರಣ, ಬೆಳಗಾವಿಯ ಮಂಡಗಿ ಮನೆತನದ ಕಡೆಗೆ ಸಂಶೋಧಕರ ಗಮನ ಸಹಜವಾಗಿಯೇ ಹರಿಯುತ್ತದೆ. ಆದರೆ ಮಂಡಗಿ

ಎಂಬ ಖಾದ್ಯದಿಂದಾಗಿ ತಮ್ಮ ಮನೆತನಕ್ಕೆ ಈ ಅಡ್ಡಹೆಸರು ಬಂದಿರಬಹುದೆಂದೂ, ಬಸವಣ್ಣನವರ ಅಡ್ಡಹೆಸರು "ಮಂಡಗೆ" ಎಂದು ಇರುವುದಾಗಲೀ, ತಮಗೂ ಬಸವಣ್ಣನವರ ಮನೆತನಕ್ಕೂ ಸಂಬಂಧ ಇರುವುದಾಗಲೀ, ಯಾವುದೂ ತಮಗೆ ಗೊತ್ತಿಲ್ಲವೆಂದು ಇವರು ಹೇಳುತ್ತಾರೆ.

'ಗೆ' ಪ್ರತ್ಯಯದಿಂದ ಕೊನೆಗೊಳ್ಳುವ ಗ್ರಾಮನಾಮಗಳು ಉತ್ತರ ಕರ್ನಾಟಕದಲ್ಲಿ ವಿಪುಲವಾಗಿವೆ. ಆದುದರಿಂದ ಬಸವಣ್ಣನವರ ಅಡ್ಡಹೆಸರು "ಮಂಡಗೆ"ಎಂಬುದು ಊರ ಹೆಸರನ್ನೇ ಸೂಚಿಸುತ್ತಿರಬೇಕು. ಬಾಗೆವಾಡಿಗೆ ಬರುವುದಕ್ಕೆ ಮೊದಲು ಈ ಮನೆತನ ಮಂಡಗೆ ಗ್ರಾಮಕ್ಕೆ ಸಂಬಂಧಿಸಿರಬಹುದು, ಶಂಕರ ಕವಿಯ ಚೋರಬಸವ ಚಾರಿತ್ರ್ಯವು "ಬಸವನಿದರ್ಪನು ಮಂಡಗೆಯೊಳು" ಎನ್ನುತ್ತ, ಅದು ಒಂದು ಸ್ಥಳನಾಮವೆಂಬ ಸೂಚನೆ ಕೊಡುತ್ತದೆ. ಹೀಗಾಗಿ ಕೆಂಭಾವಿ ಭೋಗಣ್ಣ, ಕೊಂಡಗುಳಿ ಕೇಶಿರಾಜರಂತೆ ಇವರ ಹೆಸರೂ ಮಂಡಗೆಯ ಬಸವರಾಜ ಎನ್ನಬೇಕಾಗುತ್ತದೆ.

"ಮಂಡಗೆ" ಎಂಬ ಅಡ್ಡಹೆಸರು ಬಸವಣ್ಣನವರಂತೆ ಆ ಕಾಲದಲ್ಲಿ ಬೇರೆಯವರಿಗೂ ಕಂಡುಬರುತ್ತದೆ. ಜೇವರಗಿ ತಾಲೂಕಿನ ಜೇಡರ ದಾಸಿಮಯ್ಯನ ಮುದನೂರಿನ ಒಂದು ಶಾಸನದಲ್ಲಿ "ಮಂಡಗೆಯ ರಾಮಿಶೆಟ್ಟಿ" ಎಂಬ ವ್ಯಕ್ತಿಯ ಉಲ್ಲೇಖ ಬರುತ್ತದೆ.[೧] ಪಾಲ್ಕುರಿಕೆ ಸೋಮನಾಥನು ತನ್ನ ತೆಲುಗು ಬಸವಪುರಾಣವನ್ನು ಮಂಡಗೆಯ ಮಾದಿರಾಜನ ಶಿಷ್ಯ ಗಬ್ಬೂರ ಸಂಗನಾಮಾತ್ಯನ ಆಶ್ರಯದಲ್ಲಿ ಬರೆದುದಾಗಿ ಹೇಳುತ್ತಾನೆ. ಹೀಗಾಗಿ ಬಾಗೇವಾಡಿ, ಮುದನೂರು, ಗಬ್ಬೂರು ಗ್ರಾಮಗಳ ಪರಿಸರದಲ್ಲಿ ಈ ಮಂಡಗೆ ಹೆಸರಿನ ಗ್ರಾಮವಿರಬಹುದು. ರೂಪವ್ಯತ್ಯಾಸದಿಂದ ಅದು ಎಲ್ಲಿಯೋ ಮರೆಯಾಗಿರುವ ಸಾಧ್ಯತೆಯಿದೆ. ಸಾರ್ವಜನಿಕರು ಈ ಗ್ರಾಮ ಎಲ್ಲಿದೆಯೆಂಬುದನ್ನು ಸೂಚಿಸುವುದರ ಮೂಲಕ ಸಂಶೋಧನೆ ಮುಂದುವರಿಯಲು ನೆರವಾಗುವರೆಂದು ಆಶಿಸಲಾಗಿದೆ.

ಇದೆಲ್ಲವನ್ನು ಗಮನಿಸಿದರೆ, ತಂದೆ ಮಾದಿರಾಜನ ಕಾಲಕ್ಕೆ ಅಥವಾ ಇವನಿಗಿಂತ ಹಿಂದಿನ ತಲೆಮಾರಿನವರ ಕಾಲಕ್ಕೆ ಬಿಟ್ಟು ಬಂದ ಗ್ರಾಮವಾಗಿರುವ ಮಂಡಗೆ ಎಂಬ ಹೆಸರು, ಬಸವಣ್ಣನವರಿಗೂ ಅಡ್ಡಹೆಸರಿನಂತೆ ಅಂಟಿಕೊಂಡಿತ್ತು. ಇವತ್ತಿನ ಉತ್ತರ ಕರ್ನಾಟಕ ಪದ್ಧತಿಯಲ್ಲಿ ಹೇಳುವುದಾದರೆ ಅವನ ಪೂರ್ಣ ಹೆಸರು ಬಸವರಾಜ ಮಾದಿರಾಜ ಮಂಡಗಿ.

■■

ಆಕರ : ಮಾರ್ಗ ಸಂಪುಟ-೩

೬೨

ಸ್ತ್ರೀ ನಾಮಗಳ ಕೊನೆಯಲ್ಲಿ ಕಂಡುಬರುವ - 'ಬಾಯಿ'

ದೇಶ ಕಾಲಗಳ ಸಾಮಾಜಿಕ-ಧಾರ್ಮಿಕ ಪರಿಸರಗಳಿಗನುಗುಣವಾಗಿ ಬದಲಾಗುತ್ತ ಬರುವ ವ್ಯಕ್ತಿನಾಮಗಳು ಆಯಾ ಜನಾಂಗಗಳ ಸಂಸ್ಕೃತಿಯ ಘಟಕಗಳೆಂಬ ಅಂಶ ಇಂದು ಸ್ಪಷ್ಟವಾಗುತ್ತ ನಡೆದಿದೆ. ಈ ದೃಷ್ಟಿಯಿಂದ ಪ್ರಾಚೀನ ಕರ್ನಾಟಕದ ಸ್ತ್ರೀಪುರುಷರ ಹೆಸರುಗಳ ಅಧ್ಯಯನವನ್ನು ಕೈಕೊಂಡರೆ ಕನ್ನಡಭಾಷೆ ಮತ್ತು ಸಂಸ್ಕೃತಿಗಳಿಗೆ ಸಂಬಂಧಪಟ್ಟ ಅನೇಕ ಸಂಗತಿಗಳು ಬೆಳಕಿಗೆ ಬರುತ್ತವೆ. ಇಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಇಂದು ತುಂಬ ಪ್ರಚಾರದಲ್ಲಿರುವ ಸ್ತ್ರೀನಾಮಗಳ ಕೊನೆಯ - 'ಬಾಯಿ' ಆಕೃತಿಮಾದ ನಿಷ್ಪತ್ತಿಯನ್ನು ವಿವೇಚಿಸಲಾಗಿದೆ.

ಶಾಸನಗಳಲ್ಲಿ ಕಂಡುಬರುವ ಪ್ರಾಚೀನಕರ್ನಾಟಕ ಸ್ತ್ರೀಯರ ಹೆಸರುಗಳು ಒಂದು ಆಕೃತಿಮಾದವುಗಳಲ್ಲ; ಎರಡು ಇಲ್ಲವೆ ಎರಡಕ್ಕಿಂತ ಹೆಚ್ಚು ಆಕೃತಿಮಾದವುಗಳು. ಇವುಗಳನ್ನು ಪೂರ್ವ ಆಕೃತಿಮಾ, ಉತ್ತರ ಆಕೃತಿಮಾ ಎಂದು ಬಿಡಿಸಿ ನೋಡಿದರೆ ಪೂರ್ವಸ್ಥಾನದಲ್ಲಿ ಸಾಮಾನ್ಯವಾಗಿ ಒಂದೇ ಆಕೃತಿಮಾ ಇದ್ದು,[೧] ಅದಕ್ಕೆ ಉತ್ತರಸ್ಥಾನದಲ್ಲಿ ಒಂದು ಇಲ್ಲವೆ ಒಂದಕ್ಕಿಂತ ಹೆಚ್ಚು ಆಕೃತಿಮಾಗಳು ಸೇರಿಕೊಂಡುದು ವೇದ್ಯವಾಗುತ್ತದೆ. ಉದಾ :

ಕನಕ	+ಅಬ್ಬೆ=ಕನಕಬ್ಬೆ
ಕಂಚಿ	+ಅಕ್ಕ+ಅಬ್ಬೆ=ಕಂಚಿಕಬ್ಬೆ
ಚಟ್ಟಿ	+ಅಕ್ಕ+ಅಬ್ಬೆ+ಗಾವುಂಡಿ=ಚಟ್ಟಿಕಬ್ಬೆಗಾವುಂಡಿ

ಇಲ್ಲಿಯ ೨, ೩ನೆಯ ಉದಾಹರಣೆಗಳಲ್ಲಿ ಮೊದಲು -'ಅಕ್ಕ' ಅದರ ಮೇಲೆ '-ಅಬ್ಬೆ' ಸೇರಿಕೊಂಡುದನ್ನು ಗಮನಿಸಿದರೆ ಇವರನ್ನು ಪ್ರಾಯದಲ್ಲಿ ಕಂಚಿಯಕ್ಕ, ಚಟ್ಟಿಯಕ್ಕ ಎಂದು ಪ್ರೌಢ ವಯಸ್ಸಿನಲ್ಲಿ ಕಂಚಿಕಬ್ಬೆ, ಚಟ್ಟಿಕಬ್ಬೆ ಎಂದು ಕರೆದುದು ಸ್ಪಷ್ಟವಾಗುತ್ತದೆ.[೨] ಇದಲ್ಲದೆ ಚಟ್ಟಿಕಬ್ಬೆಯು ಗಾವುಂಡನೊಬ್ಬನನ್ನು ಮದುವೆಯಾಗುವಲ್ಲಿ ಆಕೆಯ ಹೆಸರು ಚಟ್ಟಿಕಬ್ಬೆಗಾವುಂಡಿಯಾಗಿಯೂ ಬೆಳೆಯಿತು. ಇದರಿಂದ ಸ್ತ್ರೀಯರ ವಯಸ್ಸು, ಅಂತಸ್ತುಗಳ ಬೆಳವಣಿಗೆಯೊಂದಿಗೆ ಅವರ ಹೆಸರುಗಳೂ ರೂಪದಲ್ಲಿ ವ್ಯತ್ಯಾಸವಾಗುತ್ತ ಹೋಗುತ್ತಿದ್ದವೆಂದು ಮನವರಿಕೆಯಾಗುತ್ತದೆ. ಇಷ್ಟು ಹಿನ್ನೆಲೆಯಲ್ಲಿ '-ಬಾಯಿ' ಆಕೃತಿಮಾದ ನಿಷ್ಪತ್ತಿಯನ್ನು ನೋಡಬಹುದು.

ಇಂದು ಗ್ರಾಮೀಣ ಜನತೆಯಲ್ಲಿ '-ಅವ್ವ', '-ಅಮ್ಮ', '-ಬಾಯಿ' ಕೊನೆಯಾಗುವ ಪಾರ್ವತವ್ವ ಸಾಮಾನ್ಯವರ್ಗದ, ಪಾರ್ವತಮ್ಮ ಮಧ್ಯಮವರ್ಗದ, ಪಾರ್ವತೀಬಾಯಿ ಪ್ರತಿಷ್ಠಿತವರ್ಗದ ಹೆಸರುಗಳಾಗಿ ಬಳಕೆಯಲ್ಲಿವೆ. ಇವುಗಳಲ್ಲಿ ತುಂಬ ಕುತೂಹಲ ಹುಟ್ಟಿಸುವ ಆಕೃತಿಮಾ '-ಬಾಯಿ'. ಶಾಸನಗಳಲ್ಲಿ ಹೀರುಬಾಯಿ, ಚಿಕ್ಕರಸಿಗಂಬಾಯಿ, ಜಸಮಬಾಯಿ, ಸಾವಿಬಾಯಿ, ಅರಸುಬಾಯಿ, ಮಲ್ಲುಬಾಯಿ, ಎಕ್ಕಲಬಾಯಿ ಎಂಬ ಹೆಸರುಗಳು ೧೨ನೆಯ ಶತಮಾನದಿಂದಲೂ ಸಿಗುತ್ತವೆ. ಇಲ್ಲಿಯ '-ಬಾಯಿ' ಆಕೃತಿಮಾದ ನಿಷ್ಪತ್ತಿಯನ್ನು ವಿವೇಚಿಸುವುದಕ್ಕೆ ಪೂರ್ವಭಾವಿಯಾಗಿ '-ಅಬ್ಬೆ', '-ಅವ್ವೆ' ಆಕೃತಿಮಾಗಳು ಸ್ತ್ರೀನಾಮಗಳಿಗೆ ಅಂಟುವ ರೀತಿ, ಆಗ ತಳೆಯುವ ರೂಪವ್ಯತ್ಯಾಸಗಳನ್ನು ಸ್ಪಷ್ಟಪಡಿಸಿಕೊಳ್ಳಬೇಕು.

'-ಅಬ್ಬೆ' ಎಂಬುದು ಹೆಸರಿನ ಕೊನೆಗೆ '-ಬ್ಬೆ' '-ಬೆ' ಎಂಬ ರೂಪದಿಂದ ಸೇರಿಕೊಳ್ಳುತ್ತದೆ. ಉದಾ: ಮಾಚಿಯಬ್ಬೆ (ಯಕಾರಾಗಮ ಸಂಧಿ), ಅಯ್ಯುಬ್ಬೆ (ವಕಾರಾಗಮ ಸಂಧಿ), ಕನಕಬ್ಬೆ (ಸ್ವರಲೋಪಸಂಧಿ) ಭಗಿಬೆ, ಜಾಬೆ ಇತ್ಯಾದಿ.

'-ಅವ್ವೆ' ಎಂಬುದು ಹೆಸರಿನ ಕೊನೆಯಲ್ಲಿ '-ವ್ವೆ'> '-ವ್ವಿ'> 'ವಿ' ಆಗಿ ಆಮೇಲೆ ಯಕಾರಾದೇಶ ನಿಯಮದಂತೆ '-ಯಿ' ಆಗುವುದು ಕನ್ನಡ ಭಾಷೆಯಲ್ಲಿ ಮಾನ್ಯವಾದ ಪ್ರಕ್ರಿಯೆ. ಈ ಪ್ರಕ್ರಿಯೆಗೆ ಅನುಗುಣವಾಗಿ ಹುಟ್ಟಿದ ಕಾಮಾಯಿ (ಕಾಮವ್ವೆ>ಕಾಮವ್ವಿ>ಕಾಮಾವಿ>ಕಾಮಾಯಿ), ರಾಮಾಯಿ, ಜೊಮ್ಮಾಯಿ, ಚಿಮ್ಮಾಯಿ, ನಾಗಾಯಿ, ದೇಮಾಯಿ, ಸೋಮಾಯಿ ಇತ್ಯಾದಿ ನಾಮುಗಳು ಶಾಸನಗಳಲ್ಲಿ ಸಿಗುತ್ತವೆ. ಪರಿಹಾರ ದೀರ್ಘನಿಯಮಕ್ಕನುಗುಣವಾಗಿ ಎರಡನೆಯ ಅಕ್ಷರ ಗುರುವಾಗಬೇಕಾಗಿರುವುದರಿಂದ ಇಲ್ಲಿ ಉತ್ತರಪದ ರೂಪ '-ಆಯಿ' ಆಗಿದೆ.

ಕರ್ನಾಟಕದಲ್ಲಿ ಲಭಿಸುವ ಶಾನಗಳನ್ನು ಕಣ್ಣುಮುಂದೆ ಹರಡಿಕೊಂದು ನೋಡಿದರೆ ಸ್ತ್ರೀನಾಮಕ್ಕೆ ಸಂಬಂಧಪಟ್ಟಂತೆ ಉತ್ತರ ಆಕೃತಿಮಾಗಳು ಹೀಗೆ ಸಿಗುತ್ತವೆ:

೧. -+ಅಕ್ಕ
೨. -+ಅಬ್ಬೆ
೩. -+ಅವ್ವೆ
೪. -+ಅಕ್ಕ+ಅಬ್ಬೆ
೫. -+ಅಕ್ಕ+ಅವ್ವೆ
೬. -+ಅಬ್ಬೆ+ಅವ್ವೆ
೭. -+ಅಕ್ಕ+ಅಬ್ಬೆ+ಅವ್ವೆ

ಇವುಗಳಲ್ಲಿ ಆರನೆಯಾದಾದ 'ಅಬ್ಬೆ+ಅವ್ವೆ' ಎಂಬ ಆಕೃತಿಮಾಗಳನ್ನು ಸ್ತ್ರೀಯರ ಹೆಸರುಗಳು ಹೊತ್ತುದಕ್ಕೆ ಜಟಿಬೆಯವೆ (ಜಟಿ+ಅಬ್ಬೆ+ಅವ್ವೆ)ಯಂಥ ರೂಪಗಳು ಶಾಸನಗಳಲ್ಲಿ ಸಿಗುತ್ತವೆ. '-ಅಬ್ಬೆ' ಎಂಬುದು '-ಬೆ' ಎಂದೂ; '-ಅವ್ವೆ' ಎಂಬುದು '-ಆಯಿ' ಎಂದೂ ರೂಪಾಂತರವಾಗುತ್ತವೆಂದು ಮೇಲೆ ಸ್ಪಷ್ಟಪಡಿಸಲಾಗಿದೆ. ಆದುದರಿಂದ ಜಟಿಬೆಯವೆ ಎಂಬಂಥ ಪ್ರಾಚೀನರೂಪಗಳೇ ಕಾಲಕ್ರಮದಲ್ಲಿ ಜಟಿಬಾಯಿ (ಜಟಿ+ಬೆ+ಆಯಿ) ಎಂಬಂಥ ರೂಪಕ್ಕೆ ತಿರುಗಿವೆಯೆಂದು ಹೇಳಬಹುದು.

ಶಾಸನಗಳಲ್ಲಿ ಹೀರುಬಾಯಿ, ಮಲ್ಲುಬಾಯಿ ರೂಪಗಳೂ ಸಿಗುತ್ತಿದ್ದು ಇವುಗಳ ಶುದ್ಧರೂಪ ಹೀರೂಬಾಯಿ, ಮಲ್ಲೂಬಾಯಿ ಇರಬಹುದು. ಹೀರ, ಮಲ್ಲ ಎಂಬಿವುಗಳ ಮುಂದೆ ಬಂದ '-ಬ್ಬೆ' ಎಂಬುದು ತನ್ನ ಒತ್ತನ್ನು ಕಳೆದುಕೊಳ್ಳುವಲ್ಲಿ 'ಪರಿಹಾರದೀರ್ಘ' ನಿಯಮದಂತೆ ಅಲ್ಲಿ ಹೀರೂ, ಮಲ್ಲೂ ಎಂಬ ದೀರ್ಘ ಹುಟ್ಟಿಕೊಂಡಿರಬೇಕು. ಲಕ್ಷ್ಮೀಬಾಯಿ ಎಂಬ ರೂಪವು ಇಂಥದೇ. ಆದರೆ ಕೆಲವು ಸಲ ಲಕ್ಷ್ಮಿಂಬಾಯಿ ಎಂಬಂತಹ ಉದಾಹರಣೆಗಳು ಸಿಗುತ್ತಿದ್ದು, ಇಲ್ಲಿ '-ಬ್ಬೆ' ಎಂಬುದರ ಒತ್ತಿಗೆ ಪ್ರತಿಯಾಗಿ ಬರಬೇಕಾಗಿದ್ದ ದೀರ್ಘಕ್ಕೆ ಬದಲು ಬಿಂದು ಬಂದಂತಿದೆ. ಅಥವಾ ಅಬ್ಬೆಗೆ ಬದಲು ಅಂಬೆ ಬಳಕೆಯಾಗಿರುವ ಸಾಧ್ಯತೆಯೂ ಇದೆ. ಚಿಕ್ಕರಸಿಗಂಬಾಯಿ ಎಂಬ ಪ್ರಾಚಿನ ರೂಪವನ್ನು ಇಲ್ಲಿ ಲಕ್ಷಿಸಬೇಕು.

'ಅಬ್ಬೆ+ಅವ್ವೆ' ಎಂಬ ಉಭಯ ಆಕೃತಿಮಾಗಳು '-ಬಾಯಿ' ಎಂದು ರೂಪಾಂತರ ಹೊಂದಿ ಹೆಸರುಗಳಿಗೆ ಹತ್ತುತ್ತದೆಯೆಂದು ಈ ವರೆಗಿನ ವಿವೇಚನೆಯಿಂದ ಸ್ಪಷ್ಟವಾಗುತ್ತದೆ. ಒಂದೇ ಅರ್ಥದ ಈ 'ಅಬ್ಬೆ+ಅವ್ವೆ' ಎಂಬ ಎರಡೂ ಆಕೃತಿಮಾಗಳು ಹತ್ತಿದುದಕ್ಕೆ ಕಾರಣಗಳನ್ನು ಹೀಗೆ ಊಹಿಸಬಹುದು:

೧.ವ್ಯಕ್ತಿಗಳಿಗೆ ಗೌರವವನ್ನು ಸೂಚಿಸುವಲ್ಲಿ ಎರಡು ಬಹುವಚನ ಪ್ರತ್ಯಯಗಳನ್ನು ಬಳಸುವಂತೆ, ಗೌರವ ಮತ್ತು ವಯಸ್ಸುಗಳ ಸೂಚನೆಗಾಗಿ ಸ್ತ್ರೀಯರಿಗೆ ತಾಯಿ ಅರ್ಥದ 'ಅಬ್ಬೆ+ಅವ್ವೆ' ಎಂಬ ಎರಡೂ ಆಕೃತಿಮಾಗಳನ್ನು ಬಳಸಿರಬಹುದು. (ಅ.ಟಿ. ೨ ನೋಡಿರಿ.).

೨.ಭಾಷೆಯಲ್ಲಿ ಕೆಲವುಸಲ ಕೂಡಲಸಂಗಮ ಎಂಬಂತಹ ದ್ವಿರುಕ್ತಿಗಳು ಕಂಡುಬರುತ್ತವೆ. ಕೂಡಲ ಶಬ್ದದ ಅರ್ಥ ಅಪರಿಚಿತವಾಗುತ್ತ ನಡೆದಂತೆ ಅದೇ ಅರ್ಥದ ಸಂಗಮವನ್ನು ಜೊತೆಯಲ್ಲಿ ಬಳಸುವುದು ಇಲ್ಲಿಯ ಉದ್ದೇಶ. ಇದೇ ರೀತಿ ಸ್ತ್ರೀನಾಮದಲ್ಲಿರುವ '-ಬೆ'ಯಲ್ಲಿ ತಾಯಿ ಅರ್ಥವಿದೆಯೆಂಬುದು ಕಾಲಾಂತರದಲ್ಲಿ ಗೊತ್ತಾಗದಿರಲು, ಅದಕ್ಕೆ ಮತ್ತೆ ಅಂದು ರೂಢಿಯಲ್ಲಿದ್ದ 'ಅವ್ವೆ'ಯನ್ನು ಜೋಡಿಸುವುದು ಪ್ರಾರಂಭವಾಗಿರಬೇಕು. ಅಂದರೆ 'ದ್ವಿರುಕ್ತಿ ನಿಯಮ'ದ ಪ್ರಕಾರ ಈ ಜೋಡಿಗಳನ್ನು ಬಳಸಿರಬಹುದು.

ಒಟ್ಟಿನಲ್ಲಿ 'ಅಬ್ಬೆ+ಅವ್ವೆ' ಎಂಬಿವುಗಳ ರಾಸಾಯನಿಕ ರೂಪ '-ಬಾಯಿ'. ಮೇಲೆ ಊಹಿಸಿದಂತೆ ಇದು ಪ್ರತಿಷ್ಠಿತ ಹೆಸರಿನ ಸಂಕೇತವೆನಿಸಿದ್ದ ಕಾರಣ ಒಂದು ಕಾಲದಲ್ಲಿ ಮಹಾರಾಷ್ಟ್ರದ ಪ್ರತಿಷ್ಠಿತರು ಇದನ್ನು ಕರ್ನಾಟಕದಿಂದ ಸ್ವೀಕರಿಸಿ ಅದ್ದೂರಿಯಿಂದ ಬಳಸಿದರು; ಇದನ್ನು ಕಂಡ ಇತ್ತೀಚಿನ ಕನ್ನಡಿಗರು ಇದು ಮರಾಠಿ ಮೂಲದ ಆಕೃತಿಮಾಯೆಂದು ಭ್ರಮಿಸಿದರು. ಆದರೆ ಇದು ಕನ್ನಡ ಮೂಲದ ಆಕೃತಿಮಾಯೆಂದು ಈ ವರೆಗಿನ ವಿವೇಚನೆಯಿಂದ ಸ್ಪಷ್ಟವಾಗುತ್ತದೆ.

■■

ಆಕರ : ಮಾರ್ಗ ಸಂಪುಟ-೨

೬೩

-ಕೇಸಿ, -ಕೇರಿ

ಕನ್ನಡ ಭಾಷೆಯ ಪ್ರಾಂತಭೇದಗಳನ್ನು ಒಳಹೊಕ್ಕು ನೋಡುವುದು ಇನ್ನೂ ಕೈಗೆ ನಿಲುಕದ ಕಾರ್ಯವಾಗಿ ನಿಂತಿದೆ. ಒಂದುವೇಳೆ ಒಳಹೊಕ್ಕು ಸೋಸಿ ನೋಡಿದರೆ ಭಾಷಿಕವಾದ ಅನೇಕ ಆಂತರಿಕ ರಚನೆಗಳು, ಮರುರಚನೆಗಳು ಪ್ರಕಟವಾಗುವದರಲ್ಲಿ ಸಂದೇಹವಿಲ್ಲ.

ಸಾಮಾನ್ಯವಾಗಿ ಕನ್ನಡ ಭಾಷೆಯಯನ್ನು ಮೈಸೂರು ಕನ್ನಡ, ಧಾರವಾಡ ಕನ್ನಡವೆಂದು ಎರಡು ಪ್ರಾಂತಭೇದಗಳಲ್ಲಿ ವಿಂಗಡಿಸುತ್ತೇವೆ. ಆದರೆ ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ, ಗುಲ್ಬರ್ಗ ಕನ್ನಡ ಎಂದು ವಿಭಾಗಿಸುವುದು ಹೆಚ್ಚು ಯೋಗ್ಯವೆನಿಸುತ್ತದೆ. ಇವುಗಳಲ್ಲಿ ಗುಲ್ಬರ್ಗ ಕನ್ನಡದ ಸೀಮಾರೇಖೆ ಬೀದರ-ಗುಲ್ಬರ್ಗ ಜಿಲ್ಲೆಗಳನ್ನೂ ವಿಜಾಪುರ-ರಾಯಚೂರು ಜಿಲ್ಲೆಗಳ ಉತ್ತರಭಾಗವನ್ನೂ ಒಳಗೊಳ್ಳುತ್ತದೆ. ಇಲ್ಲಿಯ ವಿಶಿಷ್ಟರೂಪಗಳಾಗಿವೆ. -ಕೇಸಿ, -ಕೇರಿ.

ಗುಲ್ಬರ್ಗ ಕನ್ನಡದಲ್ಲಿ ಅಹನ್, ಇಹೆನ್‌ಗಳ ಸಣ್ಣಿಸಿದ ರೂಪಗಳಾದ ಹಾನ, ಹೀನಿಗಳಂತೆ, ಕೋ+ಅಲ್ಲಿ, ಕೋ+ಇಲ್ಲಿ ಎಂಬ ದರ್ಶಕ ಸರ್ವನಾಮಗಳ ಸಣ್ಣಿಸಿದ ರೂಪಗಳಾದ ಕಲ್ಲಿ, ಕಿಲ್ಲಿಗಳಂತೆ ತುಂಬ ಎದ್ದುಕಾಣುವ ಪೂರ್ಣಭೂತಕಾಲದ ಪ್ರತ್ಯಯಗಳೆಂದರೆ -ಕೇಸಿ, -ಕೇರಿ. ಉದಾ: ಹೋಗಕೇಸಿ, ಹೋಗಕೇರಿ.

'Linguistic Survey of India' ಗ್ರಂಥಮಾಲಿಕೆಯ ನಾಲ್ಕನೆಯ ಸಂಪುಟದಲ್ಲಿ 'ವಿಜಾಪುರ ಕನ್ನಡ'ವನ್ನು ಸ್ವತಂತ್ರವಾಗಿ ಪರಿಗಣಿಸಿದ Griesrson ಮೊದಲು ಮಾಡಿ ಇಂದಿನ ವರೆಗೆ ಈ ಪ್ರದೇಶದ ಭಾಷೆಯನ್ನು ಕುರಿತು ಕೆಲವರು ಪ್ರಸ್ತುತ -ಕೇಸಿ, ಕೇರಿ ರೂಪಗಳನ್ನು ಗಮನಿಸಿಲ್ಲ. ಕೆಲವರು ಗಮನಿಸಿದ್ದರೂ ಇವುಗಳ ರಚನೆ, ಮೂಲಗಳ ಬಗ್ಗೆ ಚರ್ಚಿಸಿಲ್ಲ. ಇಲ್ಲಿ ಈ ಸಮಸ್ಯೆಯನ್ನು ಕೈಗೆತ್ತಿಕೊಳ್ಳಬಹುದು.

ಕರ್ನಾಟಕದಲ್ಲಿ ಇಂದು ಮೂರು ಬಗೆಯ ಪೂರ್ಣಭೂತಕಾಲದ ಪ್ರತ್ಯಯಗಳು ಬಳಕೆಯಲ್ಲಿವೆ.

೧. ಧಾರವಾಡ ಮಂಗಳೂರು ಕನ್ನಡ : ಹೋಗಿ ಬಂದೆ.
೨. ಮೈಸೂರು ಕನ್ನಡ: ಹೋಗಿಬಿಟ್ಟು ಬಂದೆ.
೩. ಗುಲ್ಬರ್ಗ ಕನ್ನಡ : ಹೋಗಿಕೇಸಿ ಬಂದೆ.
ಹೋಗಿಕೇರಿ ಬಂದೆ.

ಗುಲ್ಬರ್ಗ ಕನ್ನಡದಲ್ಲಿ Free Variation ರೂಪದಲ್ಲಿ ಬಳಕೆಯಾಗುವ ಈ -ಕೇಸಿ, -ಕೇರಿ ಪ್ರತ್ಯಯಗಳು ಪ್ರಾದೇಶಿಕ ಭಿನ್ನತೆಗಿಂತ ವ್ಯಕ್ತಿಗಳ ಸಾಮಾಜಿಕ ಅಂತಸ್ತಿಗೆ ಅನುಗುಣವಾಗಿ ಹಲವು ರೂಪಗಳಲ್ಲಿ ಬಳಕೆಯಾಗುತ್ತಲಿದ್ದು ಅವುಗಳನ್ನು

೧. -ಕೇಸಿ, -ಕೆಸಿ, -ಕಾಸಿ, -ಕಽಸಿ
-ಕೇಸೆ, -ಕೆಸೆ, -ಕ್ಯಾಸೆ, -ಕಾಸೆ, -ಕಽಸೆ

೨. -ಕೇರಿ, -ಕೆರಿ, -ಕ್ಯಾರಿ, -ಕಾರಿ, -ಕಽರಿ
-ಕೇರೆ, -ಕೆರೆ, -ಕ್ಯಾರೆ, -ಕಾರೆ, -ಕರೆ

ಎಂದು ಸಂಗ್ರಹಿಸಿ ಹೇಳಬಹುದು. ಈ ಉಭಯ ಪ್ರತ್ಯಯಗಳ ಮೂಲವನ್ನು ಯಾವುದಕ್ಕೆ ಮುಟ್ಟಿಸಬೇಕೆಂಬುದು ಇಲ್ಲಿಯ ಮುಖ್ಯ ಪ್ರಶ್ನೆಯಾಗಿದೆ.

-ಕೇಸಿ : ಮೂಲದ್ರಾವಿಡದ ಮಾಡು (=to do) ಅರ್ಥದ 'ಕೆಯ್' ಧಾತು ಪ್ರಾಚೀನ ಕನ್ನಡದಲ್ಲಿ ಕೆಯ್ ಎಂದೇ ಪ್ರಯೋಗವಾಗುತ್ತದೆ. ಇದರ ಪೂರ್ಣಭೂತಕಾಲದ ರೂಪ ಕೆಯ್ಸಿ. ಹಳನ್ನಡ ಸಾಹಿತ್ಯದಲ್ಲಿ ಇದಕ್ಕೆ ಉದಾಹರಣೆಯಾಗಿ

೧. ಒರ್ಕ್ಕೆಸಿ ಬಿಲ್ಲುಮಂಬುಮಂ..... (ಶ. ಮ. ದ. ಸೂ. ೭೬)
೨. ಬೆಮರ್ಗಳನೂದಿ ನುಣ್ಪೊಡೆಗಳಂ ಪಿಡಿಕೆಯ್ಸಿ (ಶ. ಮ. ದ. ಸೂ. ೫೨)

ಎಂಬ ಪ್ರಯೋಗಗಳು ಸಿಗುತ್ತವೆ. ಈ ಕೆಯ್ಸಿ ಎಂಬುದರ ಆಧುನಿಕ ರೂಪವೇ ಕೇಸಿ. ಬೇಡ>ಬ್ಯಾಡ, ಪೇಟೆ>ಪ್ಯಾಟಿಗಳ ಧಾಟಿಯಲ್ಲಿ ಈ ಕೇಸಿ ಎಂಬುದು '-ಕ್ಯಾಸಿ' ಎಂಬ ರೂಪದಿಂದ ಇಲ್ಲವೆ ಅಲ್ಪ ವ್ಯತ್ಯಸ್ತ ರೂಪಗಳಿಂದ ಈಗ ಸಿಗುತ್ತದೆ. ರಾಮದುರ್ಗ ಮೊದಲಾದ ಊರುಗಳಲ್ಲಿ ಅದು 'ಸ್ಯಾಕಿ' ಎಂಬ ಪಲ್ಲಟರೂಪದಲ್ಲಿಯೂ ಸಿಗುತ್ತದೆ.

ಪ್ರಾಚೀನ ಕನ್ನಡದ ಕೆಯ್ಸಿ ಎಂಬುದಕ್ಕೆ ಸಮಾನವಾಗಿ ಪ್ರಾಚೀನ ತೆಲುಗಿನಲ್ಲಿರುವ ರೂಪ ಚೆಯ್ಸಿ>ಚೇಸಿ. ಇದರ ಪ್ರಭಾವದಿಂದಾಗಿ ತೆಲುಗುನಾಡಿನ ನೆರೆಯ ಬಳ್ಳಾರಿ ಜಿಲ್ಲೆಯ ಕನ್ನಡಿಗರಲ್ಲಿ ಮಾಡಿಚೇಸಿ, ನೋಡಿಚೇಸಿ ಎಂಬ ಮಾತುಗಳು ನಿರಾತಂಕವಾಗಿ ಬಳಕೆಯಾಗುತ್ತಿರುವುದು ಗಮನಾರ್ಹವೆನಿಸಿದೆ. ಕೆಲವು ಕಡೆಗೆ ಕೇಸಿಗೆ ಬದಲು 'ಕೇದು' ಗೋಚರಿಸುತ್ತದೆ. ಇದು ಹಳಗನ್ನಡದ 'ಕೆಯ್ದು' ಎಂಬುದರ ಆಧುನಿಕರೂಪ.

ಒಟ್ಟಿನಲ್ಲಿ ಹೋಗಿಕೇಸಿ ಬಂದೆ ಎಂಬುದಕ್ಕೆ ಹೋಗಮಾಡಿ ಬಂದೆ ಅಂದರೆ ಹೋಗುವ ಕೆಲವಸನ್ನು ಮಾಡಿ(ಮುಗಿಸಿ) ಬಂದೆ ಎಂದು ಅರ್ಥ.

-ಕೇರಿ : ಕೇಸಿಗೆ ಪರ್ಯಾಯವಾಗಿ ಬಳಕೆಯಾಗುವ ಬೇರೊಂದು ಪ್ರತ್ಯಯ -ಕೇರಿ. ದ್ರಾವಿಡಮೂಲದಿಂದ -ಕೇಸಿ ಬಂದರೆ, ಈ -ಕೇರಿ ಬಂದುದು ಬಹುಶಃ ಉರ್ದುಮೂಲದಿಂದ. ಕರ್ನಾಟಕದಲ್ಲಿ ಮೊದಲು ಉರ್ದುಭಾಷೆಯ ಪ್ರಭಾವಕ್ಕೆ ಗುರಿಯಾದುವು ಬೀದರ, ಗುಲ್ಬರ್ಗ, ವಿಜಾಪುರ ಮತ್ತು ರಾಯಚೂರ ಜಿಲ್ಲೆಗಳು. ಹೀಗಾಗಿ ಕಳೆದ ೭೦೦ ವರ್ಷಗಳಿಂದ ಉರ್ದು ಅಲ್ಲಿಯ ಕನ್ನಡದ ಮೇಲೆ ಗಾಢವಾದ ವರ್ಚಸ್ಸು

ಬೇರಿದೆ. ಉರ್ದುವಿನಲ್ಲಿ ಪೂರ್ಣಭೂತಕಾಲಕ್ಕೆ ಬಳಸುವ ಪ್ರತ್ಯಯ -ಕರ್. ಉದಾ:ಆಕರ್ ಗಯಾ, ದೇಖಕರ್ ಗಯಾ ಇತ್ಯಾದಿ.

ಇದೇ ರೀತಿ ಬಂದಕರ್ ಹೋದ, ನೋಡಿಕರ್ ಹೋದ ಎಂಬ ರೂಪಗಳು ಕನ್ನಡದಲ್ಲಿ ರೂಢಗೊಂಡಿರಬೇಕು. ಆದರೆ -ಕೇಸಿಗೆ ಪ್ರತಿಯಾಗಿ (substitute) ಬಂದ ಕಾರಣ -ಕರ್ ಎಂಬುದು -ಕೇರಿ ಎಂಬ ಸಾದೃಶ್ಯರೂಪ ತಾಳಿ, ಆಮೇಲೆ ಆಡುಮಾತಿನಲ್ಲಿ ತೀರ ಸಹಜವಾಗಿಯೇ -ಕ್ಯಾರಿ..... ಇತ್ಯಾದಿ ರೂಪಗಳನ್ನು ಧರಿಸಬೇಕು.

ಈ ಎರಡೂ ರೂಪಗಳು ಇಂದು ಉಚ್ಚಾರ ಸೌಲಭ್ಯ ಕಾರಣವಾಗಿ -ಕೇ, -ಕೆ, -ಕs, -ಕಾ, -ಕ್ಯಾ ಎಂದೂ ಕೆಲವು ಸಲ ಬಳಕೆಯಾಗುವುದುಂಟು. ಇನ್ನು ಕೆಲವು ಸಲ -ಕೇಸಿಂದ, -ಕೆಸಿಂದ, -ಕೇರಿಂದ, -ಕಸಿಂದ, -ಕಾಸಿಂದ, -ಕ್ಯಾಸಿಂದ, -ಕ್ಯಸಿಂದ, -ಕ್ಯಾರಿಂದ, -ಕ್ಯರಿಂದ ಇಷ್ಟು ರೂಪಗಳಲ್ಲಿಯೂ ದೊರೆಯುತ್ತದೆ.

■■

ಆಕರ : ಮಾರ್ಗ ಸಂಪುಟ–೨

೬೪

-ಕೆ -ಗೆ,-ಕಿ -ಗಿ

ಬಸ್ಸಿನಲ್ಲಿ ಪ್ರಯಾಣಿಸುತ್ತ, ದಾರಿಯ ಮೇಲಿನ ಊರಿನ ಹೆಸರುಗಳನ್ನು ಓದುವುದು, ಅರ್ಥವನ್ನು ಆಲೋಚಿಸುವುದು, ಅದು ಹೊಳೆದಾಗ ಖುಷಿಪಡುವುದು ನನಗೆ ಬಾಲ್ಯದಿಂದಲೂ ಅಂಟಿಕೊಂಡುಬಂದ ಹವ್ಯಾಸ. ಈಗಲೂ ಪ್ರಯಾಣದ ಬೇಸರ ಕಳೆಯಲು ಈ ಹವ್ಯಾಸ ನನಗೆ ವರವಾಗಿ ಪರಿಣಮಿಸಿದೆ. ಹೆಸರಿನ ಹಿಂದೆ ಥಟ್ಟನೆ ಯಾವುದೋ ಇತಿಹಾಸ ಮಿಂಚಿದರೆ, ಅನೇಕ ಸಲ ಮಾರ್ಗಮಧ್ಯದಲ್ಲಿಯೇ ಬಸ್ ಇಳಿದು, ಆ ಊರಲ್ಲಿ ಸಂಚರಿಸಿ ಮಾಹಿತಿ ಸಂಗ್ರಹಿಸಿ, ಮತ್ತೆ ಪ್ರಯಾಣ ಮುಂದುವರಿಸಿದ್ದೇನೆ. ನನ್ನ ಈ ವರ್ತನೆಯಿಂದಾಗಿ ಕಂಡಕ್ಟರನ ಆಶ್ಚರ್ಯಕ್ಕೂ, ಸಹಪ್ರಯಾಣಿಕರ ಕುತೂಹಲಕ್ಕೂ ಗುರಿಯಾಗಿದ್ದೇನೆ.

ಬಸ್ ಮೂಲಕ ಕಲಬುರ್ಗಿಯಿಂದ ವಿಜಾಪುರಕ್ಕೆ ಹೊರಟರೆ ಸಾಕು. ದಾರಿಯುದ್ದಕ್ಕೂ ಕಲಬುರ್ಗಿ, ಗೋಗಿ, ಜೇವರ್ಗಿ, ನೇದಲಗಿ, ಜೇರಟಗಿ, ಮೋರಟಗಿ, ಗಬ್ಬಸಾವಳಗಿ, ಸಿಂದಗಿ, ಚಿಕ್ಕಸಿಂದಗಿ, ಹಿಪ್ಪರಗಿ, ಶಿವಣಗಿ, ಹೊನ್ನಟಗಿ, ಕವಟಗಿ, ಕೌಲಗಿ ಎಂಬ'ಗಿ' ಪ್ರತ್ಯಯದ ಗ್ರಾಮಗಳು ಹತ್ತು ಮೈಲಿಗೆ ಒಂದರಂತೆ ಭೆಟ್ಟಿಯಾಗುತ್ತವೆ. ಬಾಲ್ಯದಲ್ಲಿಯೇ ನನ್ನಲ್ಲಿ ಕುತೂಹಲ ಹುಟ್ಟಿಸಿದ ಹೆಸರುಗಳಿವು. ಆಮೇಲೆ ಕಾತರಕಿ ಬತಗುಣಕಿ, ಚಟ್ಟರಕಿ, ಹತ್ತರಕಿ, ಕಾಖಂಡಕಿ, ಹಳಗುಣಕಿ, ಟಿಕ್ಕಳಕಿ, ಎಂಬ - 'ಕಿ' ಪ್ರತ್ಯಯಗಳ ಗ್ರಾಮಗಳ ದೊಡ್ಡ ಗುಂಪು ನನ್ನ ಗಮನ ಸೆಳೆದಿದೆ. ಬಹುಶಃ ಇಲ್ಲಿಯ 'ಕಿ'- ಪ್ರತ್ಯಯ, ಮೇಲೆ ಹೇಳಿದ - 'ಗಿ' ಪ್ರತ್ಯಯಗಳಲ್ಲಿ ಪರಸ್ಪರ ಸಂಬಂಧವಿರಬಹುದೆಂಬ ಅಂಶ ನನ್ನನ್ನು ಸಣ್ಣವನಿರುವಾಗಲೇ ಕಾಡಿದೆ.

ದೊಡ್ಡವನಾದಂತೆ ಇಂಥ ಊರುಗಳು ಮೈಸೂರು, ಮಂಗಳೂರು ಪ್ರಾಂತಗಳಲ್ಲಿಯೂ ಇರುವ ವಿಷಯ ನನ್ನ ಸಂಶೋಧನ ಆಸಕ್ತಿಯನ್ನು ಉದ್ರೇಕಗೊಳಿಸಿದೆ. ಶಾಸನಗಳಲ್ಲಿ ಸಿಗುವ ಇವುಗಳ ಹಳೆಯ ರೂಪಗಳು ತಕ್ಕಮಟ್ಟಿಗೆ ನನ್ನ ಉದ್ರೇಕಕ್ಕೆ ಉತ್ತರ ಕೊಟ್ಟಿವೆ. ಬಾಲ್ಯದಲ್ಲಿ ಒಬ್ಬ ಸಂಸ್ಕೃತ ಪಂಡಿತರನ್ನು ಈ ಬಗ್ಗೆ ಕೇಳಿದ್ದೆ. 'ಗಿರಿ' ಎಂಬುದೇ 'ಗಿ' ಆಗಿರಬಹುದೆಂದಿದ್ದರು. ಕಾಲೇಜು ವಿದ್ಯಾರ್ಥಿಯಾಗಿರುವಾಗ ಇವರದು ಹುರುಳಿಲ್ಲದ ಅಭಿಪ್ರಾಯವೆಂದು ಖಚಿತಪಡಿಸಿಕೊಂಡೆ. ನಿಜಸಂಗತಿಯೆಂದರೆ, ಮೂಲತಃ ಗ್ರಾಮ, ಕೆಯ್, ಇಕ್ಕೆ ಎಂಬ ಮೂರು ಸ್ವತಂತ್ರ ಮೂಲಗಳಿಂದ ಹುಟ್ಟಿ, ಕೊನೆಗೆ 'ಗಿ'ದಲ್ಲಿ ಪರ್ಯವಸಾನವಾದ ಇವುಗಳ ವಿವರ ಹೀಗಿದೆ-

೧. ಇಲ್ಲಿ ಮೂಲತಃ ಊರಿನ ಹೆಸರಿನ ಕೊನೆಗೆ 'ಗ್ರಾಮ' ಎಂಬ ಶಬ್ದವಿದ್ದಿತು. ಈ ಗ್ರಾಮ>ಗಾವ್ ಆಗುತ್ತದೆ. ಇಲ್ಲಿಯ ಅರ್ಧ ಸ್ವರವಾದ 'ವ್' ಆಡುಮಾತಿನಲ್ಲಿ ಉದುರಿ ಹೋಗುತ್ತದೆ. ಆಗ ಉಳಿಯುವ ಗಾ>ಗೆ ಆಗುವುದು, ಗೆ>ಗಿ ಆಗುವುದು, ಭಾಷೆಯಲ್ಲಿ ಜರುಗುವ ಸಹಜ ಕ್ರಿಯೆಯಾಗಿದೆ. ಉದಾ: ಶಾಸನೋಕ್ತ ಸಕ್ಕರಿಗಾವೆ>ಸಕ್ಕರಗಿ.

೨. ಶಾಸನಗಳಲ್ಲಿ ಬೇಡಗೆ (ಬ್ಯಾಡಗಿ), ಕಲಂಬರಿಗೆ (ಕಲಬುರಗಿ) ಎಂಬ ಹೆಸರುಗಳು ಸಿಗುತ್ತವೆ. ಇವುಗಳನ್ನು ಬೇಡ+ಕೆಯ್, ಕಲಂಬರ+ಕೆಯ್ ಎಂದು ಬಿಡಿಸಬಹುದು. ಕೆಯ್=ಪ್ರದೇಶ, ಕೃಷಿಪ್ರದೇಶ. ಹೀಗಾಗಿ ಬೇಡರ ಸ್ಥಳ, ಕಲಂಬರು ಹೆಸರಿನ ಜನಾಂಗದ ಸ್ಥಳ ಎಂದು ಇವುಗಳಿಗೆ ಅರ್ಥ. ಇಲ್ಲಿ ಕೆಯ್>ಕೆ (ಗೆ)>ಕಿ(ಗಿ) ಹೀಗೆ ರೂಪವ್ಯತ್ಯಾಸ ಕ್ರಿಯೆ ಜರುಗಿದೆ. ಇಲ್ಲಿಯೂ ಅರ್ಧ ಸ್ವರವಾಗಿರುವ 'ಯ್' ಉದುರುವುದೂ, ಆಗ ಉಳಿಯುವ ಕೆ<ಕಿ, ಕಿ>ಗಿ ಆಗುವುದೂ ಕೆ>ಗೆ, ಗೆ>ಗಿ ಆಗುವುದೂ, ಆಡುಮಾತಿನಲ್ಲಿ ಸಹಜವೆಂದೇ ಹೇಳಬೇಕು. ಉದಾ: ಶಾಸನೋಕ್ತ ಪೆಂಗುರಕೆಯ್>ಪೆಂಗುರಕೆ (ಗೆ)>ಪೆಂಗುರಕಿ (ಗಿ)>ಹಂಗರಗಿ.

೩. ಶಾಸನಗಳಲ್ಲಿ ಬಂದಳಿಕೆ ಗ್ರಾಮವನ್ನು ಬಂದಣಿಕ್ಕೆ ಎಂದು ಕರೆಯಲಾಗಿದೆ. ಇದನ್ನು ಬಂದಣ+ಇಕ್ಕೆ ಎಂದು ಬಿಡಿಸಬೇಕು. ಇಕ್ಕೆ=ಸ್ಥಳ, ಪ್ರದೇಶ. ಬಂದಣ್ಣ ಎಂಬುವನ ಸ್ಥಳವೆಂದು ಇದರ ಅರ್ಥ. ಈ ಮಾದರಿಯಲ್ಲಿ ನಂದಳಿಕೆ, ಅರಸಳಿಕೆ, ಇತ್ಯಾದಿ ರೂಪಗಳು ಸಿಗುತ್ತವೆ. ಇಲ್ಲಿಯೂ ಇಕ್ಕೆ>ಕ್ಕೆ>ಕೆ(ಗೆ)>ಕಿ(ಗಿ) ಆಗಿರುವುದು ಸಹಜ.

ಒಟ್ಟಿನಲ್ಲಿ ಊರ ಹೆಸರಿನ ಕೊನೆಯ 'ಗ್ರಾಮ' ಎಂಬುದು ಗಾ, ಗೆ, ಗಿ, ಆಗಿದೆ. 'ಕೆಯ್' ಮತ್ತು 'ಇಕ್ಕೆ' ಎಂಬಿವೂ ಕೆ, ಕಿ, ಗೆ, ಗಿ ಆಗಿವೆಯೆಂದು ಹೇಳಬಹುದು. ಇಲ್ಲಿ ಇನ್ನೂ ಕೆಲವು ಸಂಗತಿಗಳನ್ನು ಹೇಳಬಹುದು.

(೧) ಇಲ್ಲಿಯ 'ಗ್ರಾಮ' ಎಂಬುದು ಸಂಸ್ಕೃತದ ಪದ; ಕೆಯ್, ಇಕ್ಕೆ ಎಂಬವು ದ್ರಾವಿಡ ಪದಗಳು. ಸಂಸ್ಕೃತ ಮೂಲದ ಊರುಗಳು ಇತ್ತೀಚಿನವು, ದ್ರಾವಿಡ ಮೂಲದ ಊರುಗಳು ಹಳೆಯದು. (೨) ಕೆಯ್ ಅಥವಾ ಇಕ್ಕೆ ಒಂದು ಕಡೆ ಕೆ (ಕಿ), ಗೆ (ಗಿ) ಆಗಿದ್ದರೆ ಇನ್ನೊಂದು ಕಡೆ ಚೆ (ಚಿ), ಜೆ (ಜಿ), ಸೆ (ಸಿ) ಆಗಿರುವ ಸಾಧ್ಯತೆ ಇದೆ. ಉದಾ: ಗೊಡಚಿ, ಕೊಣಾಜೆ, ಬನವಸೆ. (೩) ಕೆಲವಡೆ ಈ ಪ್ರತ್ಯಯಗಳು ಉದುರಿ ಹೋಗಿವೆ. ಉದಾ: ನಿಪ್ಪಣಿಗೆ>ನಿಪ್ಪಾಣಿ, ತಮ್ಮುಗೆ>ತಾಂಬಾ. ಕೆಲವು ಸಲ ಇವುಗಳ ಸ್ಥಾನದಲ್ಲಿ ಬೇರೆ ಪದಗಳು ಸೇರಿಕೊಂಡಿವೆ. ಉದಾ: ಬಾಗಡಗೆ+ಕೋಟೆ=ಬಾಗಲಕೋಟೆ. (೪) ಕೆಯ್=ಕೃಷಿಭೂಮಿ. ಆದುದರಿಂದ ಇವು ಕೆಯ್‌ದಿಂದ ಹುಟ್ಟಿರುವ ಕೃಷಿ ವಿಶಿಷ್ಟ ಗ್ರಾಮಗಳೆಂದು ಹೇಳಬಹುದು. ಇಂಥ ಅನ್ವರ್ಥಕವಾಚಿ ಹೆಸರಿನ ಊರುಗಳು ಕಾಲ ದೃಷ್ಟಿಯಿಂದ ಪ್ರಾಚೀನವಾಗಿರುತ್ತವೆ.

■■

ಆಕರ : ಮಾರ್ಗ ಸಂಪುಟ–೩

೬೫

ವಿರೂಪಾಕ್ಷ

"ವಿರೂಪಾಕ್ಷ" ಎಂಬ ಹೆಸರನ್ನು ವಿರೂಪ+ಅಕ್ಷ ಎಂದು ಬಿಡಿಸುತ್ತ, ಇದಕ್ಕೆ ಅಸಮನೇತ್ರವಾದ ಶಿವ ಎಂದು ಅರ್ಥ ಹೇಳುತ್ತ ಬಂದಿದ್ದೇವೆ. ಬಹುಶಃ ಈ ದೇವತೆಗೆ ಬೇರೆ ಹೆಸರಿದ್ದು, ಅದನ್ನು ಧ್ವನಿಸಾಮ್ಯತೆಯ ಮೂಲಕ ಸಂಸ್ಕೃತ 'ವಿರೂಪಾಕ್ಷ'ದೊಂದಿಗೆ ಸಮೀಕರಿಸಿಕೊಂಡಂತೆ ತೋರುತ್ತದೆ.

ಹಂಪೆಯಲ್ಲಿ ಬೇರೆ ಬೇರೆ ಭಂಗಿಯ ಸುಮಾರು ೫೦ ರಷ್ಟು ವೀರಭದ್ರನ ವಿಗ್ರಹಗಳಿವೆ. ಬೇರೆ ಯಾವುದೇ ಗ್ರಾಮದಲ್ಲಿಯೂ ಇರದೆ, ಈ ಒಂದು ಸ್ಥಳದಲ್ಲಿ ಮಾತ್ರ ಇಷ್ಟು ವಿಗ್ರಹಗಳಿರುವುದರಿಂದ, ಹಂಪೆ ವೀರಭದ್ರನ ಉಪಾಸನೆಯ ಕೇಂದ್ರ ಭೂಮಿಯಾಗಿದ್ದು, ಅವನೇ ಈ ಪ್ರದೇಶದ ಅಧಿದೈವನೆಂದು ಸ್ಪಷ್ಟವಾಗುತ್ತದೆ. ಹೀಗಾಗಿ ರೌದ್ರಭಾವದ ವೀರಭದ್ರನ ಇನ್ನೊಂದು ರೂಪವೇ ಇಲ್ಲಿಯ ರೌದ್ರಭಾವದ ವಿರೂಪಾಕ್ಷನಾಗಿರಬಹುದೆ? ಎಂಬ ಸಂದೇಹ ಹುಟ್ಟುತ್ತದೆ.

ಶಿವಮೊಗ್ಗ ತಾಲೂಕಿನ ಒಂದು ಊರಿಗೆ ವಿರಪೇನಕೊಪ್ಪ ಮತ್ತು ವಿರುಪನಕೊಪ್ಪ ಎಂಬ ಎರಡು ಹೆಸರುಗಳು ಬಳಕೆಯಲ್ಲಿವೆ. ಇದರಿಂದ ವೀರಪ್ಪ (=ವೀರಭದ್ರ), ವಿರೂಪ(=ವಿರೂಪಾಕ್ಷ)ಗಳು ಸಾಮ್ಯಭ್ರಾಂತಿ ಹುಟ್ಟಿಸುವ ಹೆಸರುಗಳೆಂದು ಖಚಿತವಾಗಿ, ಇಂಥ ಪ್ರಕ್ರಿಯೆ ಹಂಪೆಯಲ್ಲಿಯ ವೀರಭದ್ರ(=ವೀರಪ್ಪ) ಸಂಪ್ರದಾಯವನ್ನು ಕ್ರಮೇಣ ವಿರೂಪಾಕ್ಷ (=ವಿರೂಪ) ಸಂಪ್ರದಾಯವನ್ನಾಗಿ ಪರಿವರ್ತಿಸಿರಬಹುದೆನಿಸುತ್ತದೆ. ಬಹುಶಃ ಹಂಪೆಯ ಅಧಿದೈವವಾದ ವಿರೂಪಾಕ್ಷಲಿಂಗದ ಹೆಸರು ಮೂಲತಃ 'ವೀರಪಚ್ಚ' ಎಂದಿದ್ದು (ಅಚ್ಚ=ಅಪ್ಪ, ಇಂದಿನ ಪೂಣಚ್ಚ ಹೆಸರನ್ನು ನೆನಪಿಸಿಕೊಳ್ಳಿ), ಅದನ್ನೇ ವಿರೂಪಾಕ್ಷ ಎಂದು ಸಂಸ್ಕೃತಕರಿಸಿಕೊಂಡಂತೆ ತೋರುತ್ತದೆ. ಮುಂದೆ ಪಂಡಿತರಾದವರು, ಕಾಮದಹನ ಲೀಲೆಯ ವಿರೂಪಾಕ್ಷ ಮತ್ತು ವೀರಭದ್ರರಲ್ಲಿರುವ ರುದ್ರಭಾವವನ್ನು ಗುರುತಿಸಿ, ಇವರಿಬ್ಬರೂ ತಂದೆ ಮಕ್ಕಳೆಂಬ ಪುರಾಣ ಕಥೆ ಕಟ್ಟಿರಬಹುದು. ಒಟ್ಟಾರೆ, ಹಂಪೆಯಲ್ಲಿಯ ಲಿಂಗರೂಪದ ವೀರಭದ್ರನೇ ಮುಂದೆ ವಿರೂಪಾಕ್ಷನೆಂಬ ಹೆಸರು ಪಡೆದನೆಂದು ಹೇಳಬಹುದಾಗಿದೆ.

ಇದಕ್ಕೆ ಕಣ್ಣು ಮುಂದಿನ ಬಹುಮುಖ್ಯ ಆಧಾರವೆಂದರೆ ಬೆಳಗಾವಿ ಜಿಲ್ಲೆಯ ಎಡೂರು ಗ್ರಾಮದ ಸುಪ್ರಸಿದ್ಧ ವೀರಭದ್ರದೇವಾಲಯ. ಇಲ್ಲಿ ವೀರಭದ್ರನ ವಿಗ್ರಹವಿಲ್ಲ, ಶಿವಲಿಂಗವಿದೆ.

ಲಿಂಗರೂಪದ ಈ ದೇವರನ್ನು ವೀರಶೈವ ಮೊದಲಾದ ಸಾಮಾನ್ಯವರ್ಗದ ಜನ 'ವೀರಭದ್ರ'ನೆಂದು ಕರೆದರೆ, ವೈದಿಕವರ್ಗದ ಜನ ವಿರೂಪಾಕ್ಷನೆಂದು ಕರೆಯುತ್ತಾರೆ. ಇದು ವೀರಭದ್ರ ಮತ್ತು ವಿರೂಪಾಕ್ಷ ಅಭಿನ್ನರೆಂದು ಸಾರುತ್ತ, ಇಂದಿನ ಹಂಪೆಯ ವಿರೂಪಾಕ್ಷನೂ ಮೂಲತಃ ವೀರಭದ್ರನೇ ಹೊರತು, ಅಸಮನೇತ್ರನಾದ ಶಿವನಲ್ಲವೆಂಬ ಮೇಲಿನ ನಮ್ಮ ಊಹೆಯನ್ನು ಸಮರ್ಥಿಸುತ್ತದೆ. ಹೀಗಾಗಿ ಹಂಪೆಯ ಈ ಲಿಂಗರೂಪಿ ವೀರಭದ್ರ(=ವಿರೂಪಾಕ್ಷ)ನನ್ನು ವ್ಯಕ್ತಿರೂಪದಲ್ಲಿ ಪ್ರತಿನಿಧಿಸುತ್ತ, ೫೦ರಷ್ಟು ವೀರಭದ್ರನ ವ್ಯಕ್ತಿ ವಿಗ್ರಹಗಳು ಅಲ್ಲಲ್ಲಿ ನಿಂತಿವೆಯೆಂದು ಹೇಳಬಹುದಾಗಿದೆ.

ಹೀಗೆ ವಿರೂಪಾಕ್ಷನಿಗೆ ಹಿಂದೆ ವೀರಭದ್ರನ ಹಂತವಿದ್ದರೆ, ಈ ವೀರಭದ್ರನಿಗೆ ಹಿಂದೆ ಬೀರದೇವರ ಹಂತವಿರುವಂತೆ ತೋರುತ್ತದೆ. ಏಕೆಂದರೆ ಇದೇ ಎಡೂರಿನ ವೀರಭದ್ರದೇವರ ಗರ್ಭಗೃಹದ ಗೋಡೆಯ ಹೊರಮಗ್ಗಲು ಒಂದು ಮಾಡವಿದೆ. ಜನರು ಅದನ್ನು ಬೀರಪ್ಪನ ಗದ್ದಿಗೆಯೆಂದು ಮೊದಲಿನಿಂದಲೂ ಕರೆಯುತ್ತ ಬಂದಿದ್ದಾರೆ. ಕುರುಬರು ಬಂದು ಅಲ್ಲಿ ಹಾಲು ಹೊಯ್ಯುವರೆಂದೂ ಹೇಳುತ್ತಾರೆ. (ಇತ್ತೀಚೆ ಕುರುಬನನ್ನು ಹೋಲುವ ಕಂಬಳಿ ಹೊತ್ತ ವ್ಯಕ್ತಿಯ ಶಿಲ್ಪವನ್ನು ಅಲ್ಲಿ ನಿಲ್ಲಿಸಿದ್ದಾರೆ). ಎರಡನೆಯದಾಗಿ ಇಡೈ=ಕುರುಬ, ಗೋಪಾಲ. ಇಡೈಯೂರು=ಕುರಬರ ಊರು. ಇದೇ ಮುಂದೆ ಎಡೆಯೂರು, ಎಡೂರು ಎಂದಾಗಿದೆ. ಮೂರನೆಯದಾಗಿ ಈ ಪ್ರದೇಶದ ಗೋಕಾಕ, ರಾಯಬಾಗ ತಾಲೂಕುಗಳಲ್ಲಿ ಕುರುಬರ ಸಂಖ್ಯೆ ದಟ್ಟವಾಗಿದೆ. ಈ ಕಾರಣಗಳಿಂದಾಗಿ ಎಡೂರಿನಲ್ಲಿ ಮೂಲತಃ ಬೀರದೇವರೇ ಇದ್ದು, ಅವನು ಎರಡನೆಯ ಹಂತದಲ್ಲಿ ವೀರಭದ್ರನಾಗಿ, ಮೂರನೆಯ ಹಂತದಲ್ಲಿ ವಿರೂಪಾಕ್ಷನಾಗಿರಬಹುದೆನಿಸುತ್ತದೆ. ಈ ಮಾತನ್ನು ಹಂಪೆಯ ವಿರೂಪಾಕ್ಷನಿಗೂ ಅನ್ವಯಿಸಬಹುದಾಗಿದೆ. ಇಲ್ಲಿಯ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ ಹುಕ್ಕ-ಬುಕ್ಕರು ಕುರುಬರೆಂಬುದನ್ನು, ಹಂಪೆಯ ಸುತ್ತಮುತ್ತ ಕುರುಬರು ಅಧಿಕ ಸಂಖ್ಯೆಯಲ್ಲಿರುವುದನ್ನು ನೆನೆದರೆ, ಇಲ್ಲಿಯ ವಿರೂಪಾಕ್ಷಲಿಂಗ ಮೂಲತಃ ಕುರುಬರ ಆರಾಧ್ಯದೈವ ಬೀರಪ್ಪನಾಗಿರಬಹುದೆಂಬ ನಂಬುಗೆ ಇನ್ನೂ ಗಟ್ಟಿಯಾಗುತ್ತದೆ. ಬಹುಶಃ ಹಂಪೆಯ ವಿರೂಪಾಕ್ಷದೇವಾಲಯವನ್ನು, ಅಲ್ಲಿಯ ಆಚರಣೆಗಳನ್ನು ಪರಿಶೀಲಿಸಿದರೆ, ಕುರುಬರಿಗೆ ಸಂಬಂಧಿಸಿದ ಬೇರೆ ಕೆಲವು ಆಧಾರಗಳು ಅಲ್ಲಿ ಸಿಗಬಹುದಾಗಿದೆ.

ಯಾವುದೇ ವೀರಭದ್ರ ವಿಗ್ರಹದ ಮಗ್ಗಲು ದಕ್ಷಬ್ರಹ್ಮನ ಸಣ್ಣ ಶಿಲ್ಪವೊಂದು ತಪ್ಪದೇ ಕಂಡು ಬರುತ್ತದೆ. ಈ ಶಿಲ್ಪದ ತಲೆ ಕುರುಬರು ಸಾಕುವ ಟಗರಿನದಾಗಿರುವುದಕ್ಕೂ ವೀರಭದ್ರ ಮೂಲತಃ ಕುರುಬರ ದೇವತೆಯಾಗಿರುವುದಕ್ಕೂ ಇರಬಹುದಾದ ಸಂಬಂಧದ ಕಡೆಗೆ ಇದು ಬೆರಳು ನೀಡುತ್ತದೆ. ಅಂದರೆ ಕುರುಬರ ಬೀರಪ್ಪನು ಶೈವ ವೀರಭದ್ರನಾದರೂ ಕುರುಬರ ಕುರಿಯ ಅಂಶ ದಕ್ಷಬ್ರಹ್ಮನ ತಲೆಯ ರೂಪದಿಂದ ಅಲ್ಲಿ ಉಳಿದುಕೊಂಡಿದೆಯೆಂದು ತೋರುತ್ತದೆ.

ಇಂದಿಗೂ ವೀರಶೈವರಂತೆ ಕೆಲವು ಕುರುಬ ಕುಟುಂಬಗಳಿಗೂ ವೀರಭದ್ರ ಮನೆದೈವವಾಗಿದ್ದಾನೆ. ಕುರುಬರಲ್ಲಿರುವ 'ವೀರಗಾರ ಸಂಪ್ರದಾಯ'ವು ವೀರಭದ್ರನ 'ಪುರವಂತ ಸಂಪ್ರದಾಯ'ದ ಹಳೆಯ ರೂಪದಂತೆ ತೋರುತ್ತದೆ. ವೀರಶೈವರಂತೆ ಕುರುಬರಿಗೂ ಗುರುವಾಗಿರುವ ರೇವಣಸಿದ್ಧನ ಸಂಪ್ರದಾಯ "ವೀರಭದ್ರಗೋತ್ರ"ದ್ದಾಗಿದೆ. ಸಾಮಾನ್ಯವಾಗಿ ಎಲ್ಲ ವೀರಭದ್ರದೇವಾಲಯಗಳು ರೇವಣಸಿದ್ಧಪೀಠ ಪರಂಪರೆಯ ಜಂಗಮ ಮಠಾಧಿಪತಿಗಳ ಒಡೆತನಕ್ಕೆ ಸೇರಿವೆ. ಇನ್ನೂ ವಿಶೇಷವೆಂಬಂತೆ ಎಡೂರ

ದೇವಾಲಯ ಈ ರೇವಣಸಿದ್ಧಸಂಪ್ರದಾಯದ ಕಾಡಸಿದ್ಧ ಶಾಖೆಗೆ ಸೇರಿದೆ. ಕಾಡಸಿದ್ಧ ಎಂಬ ಹೆಸರು ಕುರುಬರನ್ನು ನೆನಪಿಸುವುದೆಂದು ಬೇರೆ ಹೇಳಬೇಕಿಲ್ಲ. ಒಟ್ಟಿನಲ್ಲಿ ಕುರುಬರ ಬೀರಪ್ಪನು ಶೈವರಲ್ಲಿ ವೀರಭದ್ರನಾಗಿ (ಇವರಿಬ್ಬರಲ್ಲಿ ಸಂಬಂಧಕಲ್ಪಿಸುವ ಕಥೆಗಳು ಕುರುಬರಲ್ಲಿ ಕೇಳಿಬರುತ್ತವೆ), ಕೊನೆಗೆ ವೈದಿಕರಲ್ಲಿ ವಿರೂಪಾಕ್ಷನಾಗಿ ಬೆಳೆದನೆಂದು ಹೇಳಲು ಇವೆಲ್ಲ ಪೂರಕ ಆಧಾರಗಳಾಗಿ ನಿಲ್ಲುತ್ತವೆ.

■■

ಆಕರ : ಮಾರ್ಗ ಸಂಪುಟ-೩

* ಪೆರುಮಾಳ ದಂಡನಾಯಕ ಇತ್ಯಾದಿ ಹೆಸರುಗಳು ಶಾಸನಗಳಲ್ಲಿ ಸಿಗುತ್ತಿದ್ದರೂ ಈ ಹೆಸರು ಮೂಲತಃ ವಿಷ್ಣುವನ್ನು ಸೂಚಿಸುತ್ತದೆ. ವಿಷ್ಣುವೂ ವೈಷ್ಣವರಿಗೆ ದೊಡ್ಡವನೇ.

೬೬

ಹುಕ್ಕ-ಬುಕ್ಕ

ಯಾವುದೇ ದೇಶದಲ್ಲಿ ವ್ಯಕ್ತಿನಾಮಗಳಿಗೆ ವಿಶಿಷ್ಟ ರಚನಾಸ್ವರೂಪವಿರುವಂತೆ, ವಿಶಿಷ್ಟ ಸಾಂಸ್ಕೃತಿಕ ಹಿನ್ನೆಲೆಯಿರುತ್ತದೆ. ಇವೆರಡನ್ನೂ ಅರ್ಥ ಮಾಡಿಕೊಂಡವರು ಮಾತ್ರ ಆ ದೇಶದ ವ್ಯಕ್ತಿನಾಮಗಳ ಅಧ್ಯಯನಕ್ಕೆ ನ್ಯಾಯ ಒದಗಿಸುತ್ತಾರೆ. ಹೀಗೆ ಅಧ್ಯಯನ ಮಾಡಬೇಕಾದ ಪುಲಿಕೇಶಿ, ಶಿವಮಾರ, ಮೈಲಾರ, ಜುಂಜಪ್ಪ, ಮಂಟೇಸ್ವಾಮಿ ಮೊದಲಾದವುಗಳ ಸಾಲಿನಲ್ಲಿ ನಿಲ್ಲುವ ಹೆಸರುಗಳಾಗಿವೆ, ಹುಕ್ಕ-ಬುಕ್ಕ.

ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ಈ ಸೋದರರ ಹೆಸರುಗಳ ಮೂಲರೂಪ ಮತ್ತು ಅರ್ಥಗಳನ್ನು ಕುರಿತು ಈ ವರೆಗೆ ಯಾರೂ ಯೋಚಿಸಿದಂತಿಲ್ಲ. ಮೇಲುನೋಟಕ್ಕೆ ತುಂಬ ವಿಚಿತ್ರವಾಗಿ ಕಾಣುವ ಇವುಗಳನ್ನು ಹೇಗೆ ಬಿಚ್ಚಿಕೊಳ್ಳಬೇಕೆಂಬುದೇ ಮೊದಲ ಸಮಸ್ಯೆಯಾಗಿದೆ.

ವ್ಯಕ್ತಿನಾಮದಲ್ಲಿ ಪೂರ್ವ ಮತ್ತು ಉತ್ತರ ಎಂಬ ಎರಡು ಘಟಕಗಳಿರುತ್ತಿದ್ದು, ಪೂರ್ವಘಟಕವೇ ವ್ಯಕ್ತಿಯ ನಿಜವಾದ ಹೆಸರು, ಉತ್ತರದಲ್ಲಿರುವುದು ಎಲ್ಲ ವ್ಯಕ್ತಿಗಳ ಹೆಸರಿಗೂ ಅಂಟುವ ಸಾಮಾನ್ಯ ಘಟಕ. ಈ ತಿಳಿವಳಿಕೆಯ ಹಿನ್ನೆಲೆಯಲ್ಲಿ ಹುಕ್ಕ-ಬುಕ್ಕ ಹೆಸರುಗಳ ಪದಚ್ಛೇದ ಸರಿಯಾಗಿ ಮಾಡಿಕೊಂಡರೆ ಮಾತ್ರ, ಇವುಗಳ ನಿಜವಾದ ಅರ್ಥ ಸ್ಪಷ್ಟವಾಗುತ್ತದೆ.

ಇಗ, ಉಗ ಎಂಬಿವು ಉತ್ತರ ಘಟಕಗಳಾಗಿ ವ್ಯಕ್ತಿನಾಮಗಳಿಗೆ ಅಂಟಿಕೊಳ್ಳುವುದಕ್ಕೆ ಪ್ರಾಚೀನ ಕಾಲದಲ್ಲಿ ಅನೇಕ ಉದಾಹರಣೆಗಳು ಸಿಗುತ್ತವೆ. ಉದಾ: ಮಾಚ+ಇಗ=ಮಾಚಿಗ, ದೇವ+ಉಗ=ದೇವುಗ, ಬಹುಶಃ ಈ ಉತ್ತರ ಘಟಕಗಳ ಹಳೆಯ ರೂಪ ಇಕ, ಉಕ ಇರಬಹುದು. ಇವುಗಳ ಸವೆದ ರೂಪ 'ಕ.' ಹುಕ್ಕ-ಬುಕ್ಕಗಳ ಕೊನೆಯ ಅಕ್ಷರ ಇಂಥ 'ಕ' ಎಂಬುದೇ ಆಗಿರುವಂತೆ ತೋರುತ್ತದೆ.

ವ್ಯಕ್ತಿನಾಮದಲ್ಲಿ ಉತ್ತರ ಘಟಕಕ್ಕಿಂತ ಪೂರ್ವ ಘಟಕ ರೂಪಾಂತರಕ್ಕೆ ಹೆಚ್ಚು ಗುರಿಯಾಗಿರುತ್ತದೆ. ಇದೇ ರೀತಿ ಹುಕ್ಕ-ಬುಕ್ಕ ಹೆಸರುಗಳಲ್ಲಿ ಪೂರ್ವಘಟಕ ಹೆಚ್ಚು ರೂಪಾಂತರಗೊಂಡಂತಿದೆ. ಇಲ್ಲಿ ಮೊದಲು ಬುಕ್ಕ ಹೆಸರನ್ನೇ ವಿವೇಚಿಸಬಹುದು.

ಬುಕ್ಕ ಎಂಬುದಕ್ಕೆ ಬೂತು ಮೂಲದಿಂದ ಅರ್ಥ ಹೇಳಬಹುದಾಗಿದೆ. "ಇದರೊಂದಿಗೆ

ವ್ಯವಹರಿಸುವವನು" ಅರ್ಥದ ಉಕ(>ಕ) ತದ್ಧಿತ ಪ್ರತ್ಯಯವು ಬೂತು ಎಂಬುದಕ್ಕೆ ಹತ್ತಿ, ಬೂತುಕ ಎಂಬ ರೂಪ ಸಿದ್ಧವಾಗುತ್ತದೆ. ಪ್ರಾಚೀನ ಕಾಲದಲ್ಲಿ 'ಕ'ದಿಂದ ಕೊನೆಗೊಳ್ಳುವ ಕಾಕ(ಕಾಕನಕೋಟೆ ನೆನೆಸಿಕೊಳ್ಳಿ,) ತೀಕ ಎಂಬ ಹೆಸರುಗಳು ಸಾಮಾನ್ಯ. ಈ ಮಾದರಿಯಲ್ಲಿ ಬೂತುಕ (>ಬೂತುಗ) ಎಂಬುದು ಅಂದು ಬಳಕೆಯಲ್ಲಿದ್ದ ಸರ್ವಸಾಮಾನ್ಯ ಪದ. ಇಲ್ಲಿ ತಕಾರವು ದಕಾರವಾಗುವ (ಚತುರ>ಚದುರ), ಬಳಿಕ ದಕಾರವು ವಕಾರವಾಗುವ (ಪಾದುಕೆ>ಹಾವುಗೆ) ರೀತಿಯಲ್ಲಿ ಬೂತುಕ>ಬೂದುಕ>ಬೂವುಕ ಎಂದಾಗಿರಬಹುದು. ಶಾಸನಗಳಲ್ಲಿ ಬೂತೇಗೌಡ>ಬೂವೇಗೌಡ ರೂಪಗಳು ಸಿಗುವುದನ್ನು ಇಲ್ಲಿ ಗಮನಿಸಬೇಕು. ಈ ಬೂವುಕ ಎಂಬಲ್ಲಿಯ ಅರ್ಧಸ್ವರವಾದ 'ವು' ಎಂಬುದು ಕರಗುವಲ್ಲಿ, ಬೂಕ ಇಲ್ಲವೆ ಆ ಕೊರತೆಯನ್ನು ತುಂಬಿಕೊಳ್ಳಲು ಬುಕ್ಕ ರೂಪಗಳು ಸೃಷ್ಟಿಯಾಗಿರಬೇಕು. ಇದಕ್ಕೆ ಭಾಷಾಶಾಸ್ತ್ರದಲ್ಲಿ ಪರಿಹಾರ ದೀರ್ಘೀಕರಣ ಎನ್ನುತ್ತಾರೆ. ಒಟ್ಟಿನಲ್ಲಿ ಬೂತುಕ>ಬೂವುಕ>ಬೂಕ ಇಲ್ಲವೆ ಬುಕ್ಕ ಎಂಬ ರೂಪಾಂತರಗಳು ಇಲ್ಲಿ ಘಟಿಸಿದಂತೆ ತೋರುತ್ತದೆ. ಶಾಸನಗಳಲ್ಲಿ ಸಿಗುವ ಬೂಕಗೌಡ-ಬುಕ್ಕಗೌಡ, ಬೂಕಣ್ಣ ಒಡೆಯ-ಬುಕ್ಕಣ ಒಡೆಯ ಹೆಸರುಗಳನ್ನು ಹೆಚ್ಚಿನ ಆಧಾರವಾಗಿ ಇಲ್ಲಿ ಇಟ್ಟುಕೊಳ್ಳಬಹುದು.

ಬೂತುಕ ಎಂದೆಡೆ ಬೂತ(ಪಿಶಾಚಿ)ಗಳೊಡನೆ ವರ್ತಿಸುವ ಶಿವ. ಕುರುಬರು ನಮ್ಮಲ್ಲಿ ಮೂಲತಃ ಶಿವಭಕ್ತರು, ಹೀಗಾಗಿ ಈ ಹೆಸರನ್ನು ಕುರುಬನಾದ ಬುಕ್ಕನಿಗೆ ಇಟ್ಟಿರಬಹುದು. ಇಂದಿಗೂ ಬೂತಪ್ಪ, ಬೂತಯ್ಯ ಹೆಸರುಗಳು ಕುರುಬರಲ್ಲಿ ಹೆಚ್ಚು ಕಂಡುಬರುತ್ತವೆ.

ಬುಕ್ಕ ಹೆಸರಿನ ದಾರಿಯಲ್ಲಿಯೇ ಹುಕ್ಕ ಎಂಬುದಕ್ಕೆ ನಿಷ್ಪತ್ತಿ ಹೇಳಬಹುದು. ಬಹುಶಃ ಇದರ ಮೂಲರೂಪ ಹೂವುಗ (ಹೂವುಕ). ಪುಷ್ಪ ಅರ್ಥದ ಹೂವು ಪದವನ್ನು ವ್ಯಕ್ತಿನಾಮಗಳಿಗೆ ಬಳಸುತ್ತಿದ್ದುದಕ್ಕೆ ಶಾಸನಗಳಲ್ಲಿ ಹೂವಿನಶೆಟ್ಟಿ ಮೊದಲಾದ ಉದಾಹರಣೆಗಳು ಸಿಗುತ್ತವೆ. ಈಗಲೂ ಹೂವಪ್ಪ ಹೆಸರು ಹಳ್ಳಿಗಳಲ್ಲಿ ಪ್ರಚಲಿತವಿದೆ. ಬೂತುಕ>ಬೂವುಕ>ಬುಕ್ಕ ರೀತಿಯಲ್ಲಿ ಹೂವುಕ>ಹೂಕ>ಹುಕ್ಕ ಆಗಿರಬಹುದು.*

ಇದೆಲ್ಲವನ್ನು ನೋಡಿದರೆ ದೇಶೀ ಹಿನ್ನೆಲೆಯಿಂದ ಹುಟ್ಟಿ ಬಂದ ಈ ಅಣ್ಣ ತಮ್ಮಂದಿರಿಗೆ ಈ ದೇಶೀಮೂಲ ಹೆಸರುಗಳಿರುವುದು ಸಹಜವೆನಿಸುತ್ತದೆ.

■■

ಆಕರ : ಮಾರ್ಗ ಸಂಪುಟ-೩

೬೭

ಕುಮಾರರಾಮ

ಬಳ್ಳಾರಿ ಜಿಲ್ಲೆಯ ಕಮ್ಮಟದುರ್ಗ ರಾಜಧಾನಿಯಿಂದ ಆಳುತ್ತಲಿದ್ದ ಕಂಪಿಲ ದೇವರಾಯನ ಮಗನಾದ ಕುಮಾರರಾಮ ಇತಿಹಾಸ ಪ್ರಸಿದ್ಧ ವ್ಯಕ್ತಿ. ಜಟಂಗ ರಾಮೇಶ್ವರನ ವರದಿಂದ ಹುಟ್ಟಿದ ಕಾರಣ ಇವನಿಗೆ ಇಟ್ಟ ಹೆಸರು ರಾಮ. ಇದೇ, ಅವನ ಹೆಸರಿನ ನಿಜವಾದ ರೂಪ. ಆದರೆ ಈ ಹೆಸರಿನ ಹಿಂದೆ 'ಕುಮಾರ' ಎಂಬ ವಿಶೇಷಣ ಜೋಡಿಸಿದುದರ ಉದ್ದೇಶವೇನು? ಇದರ ಅರ್ಥವೇನು? ಈ ಬಗ್ಗೆ ಯಾರೂ ಗಂಭೀರವಾಗಿ ವಿಚಾರ ಮಾಡಿದಂತಿಲ್ಲ. ಕಂಪಿಲ ದೇವರಾಯನ 'ಮಗ'ನೆಂಬ ಅರ್ಥದಲ್ಲಿ ಇಲ್ಲವೆ 'ತರುಣವ್ಯಕ್ತಿ' ಎಂಬ ಅರ್ಥದಲ್ಲಿ 'ಕುಮಾರ' ಎಂಬ ಪದವನ್ನು ಇಲ್ಲಿ ಬಳಸಿರಬಹುದೆಂದು ನಾವು ಭಾವಿಸುತ್ತ ಬಂದಿದ್ದೇವೆ. ಆದರೆ ಈ ಪದದ ಬಳಕೆಗೆ ಇನ್ನೂ ಬೇರೆ ಅರ್ಥ ಛಾಯೆಗಳಿವೆಯೆನಿಸುತ್ತದೆ.

೧. ಕುಮಾರ ಪದಕ್ಕೆ ಯುವರಾಜ ಎಂಬ ಅರ್ಥವೂ ಉಂಟು. ಶಾಸನಗಳಲ್ಲಿ ಯುವರಾಜನಿಗೆ ಸಂಬಂಧಪಟ್ಟಂತೆ ಕುಮಾರವೃತ್ತಿ, ಕುಮಾರಗಾಣಿಕೆ ಇತ್ಯಾದಿ ಪ್ರಯೋಗಗಳು ಸಿಗುತ್ತವೆ. ಇಲ್ಲಿ ಕಂಪಿಲದೇವರಾಯನೆಂಬವನಿಗೆ ಯುವರಾಜ ಅರ್ಥದಲ್ಲಿ ಕುಮಾರರಾಮ ಎಂದು ಕರೆದಿರಬಹುದು.

೨. ಕುಮಾರ ಎಂಬ ಶಬ್ದಕ್ಕೆ ವೀರ ಎಂಬ ಅರ್ಥವೂ ಇದ್ದಂತೆ ಕಾಣುತ್ತದೆ. ಈ ದೃಷ್ಟಿಯಿಂದ ನೋಡಿದರೆ ಕುಮಾರರಾಮ ಎಂಬುದಕ್ಕೆ ಮಗನಾದ ರಾಮ ಅಥವಾ ಯುವರಾಜನಾದ ಎಂದು ಮಾತ್ರವಲ್ಲ, 'ವೀರನಾದ ರಾಮ' ಎಂದೂ ಅರ್ಥ ಹೊರಡುತ್ತದೆ.

೩. ಕುಮಾರರಾಮನ ವ್ಯಕ್ತಿತ್ವದ ಮುಖ್ಯ ಲಕ್ಷಣ ವೀರವೊಂದೇ ಅಲ್ಲ, ಶೌಚ ಕೂಡ. 'ಪರನಾರೀ ಸೋದರ' ಎಂಬುದು ಅವನ ಬಹುಮುಖ್ಯ ಬಿರುದು. ಚಿಕ್ಕಮ್ಮ ರತ್ನಾಜಿಯ ಮೋಹವನ್ನು ನಿರಾಕರಿಸಿ ಶುಚಿತ್ವವನ್ನು ಮೆರೆದುದು ಅವನ ಜೀವನದ ಮುಖ್ಯ ಘಟನೆ. ಈ ಘಟನೆಯನ್ನು ಇನ್ನೂ ಸ್ಫುಟಗೊಳಿಸುವುದಕ್ಕಾಗಿ ಊರ್ವಶಿಯ ಕಥೆ, ಸಾರಂಗಧರನ ಕಥೆ ಮೊದಲಾದವುಗಳನ್ನು ಕವಿಗಳು ಅವನ ಸುತ್ತು ಜೋಡಿಸಿದ್ದಾರೆ. ಇವುಗಳಿಗಿಂತ ಮುಖ್ಯ ಘಟನೆಯೆಂದರೆ ಮುಸಲ್ಮಾನರ

ಸೈನ್ಯ ಮಾತಂಗಿಯೆಂಬ ಹೆಣ್ಣನ್ನು ರಾಮನ ಎದುರು ನಿಲ್ಲಿಸಿತೆಂದೂ, ಅವಳನ್ನು ನೋಡಿ ಖಡ್ಗ ಕೆಳಗಿಟ್ಟ ರಾಮನ ರುಂಡ ಕತ್ತರಿಸಲ್ಪಟ್ಟಿತೆಂದೂ ಕವಿಗಳೂ ವರ್ಣಿಸಿದುದು. ಈ ಎಲ್ಲ ವಿವರಗಳು ಶೂರನಾದ ರಾಮನ ಶುಚಿತ್ವವನ್ನು ಪ್ರತಿಪಾದಿಸುತ್ತವೆ.

ಶಿವನ ಮಗನಾದ ಷಣ್ಮುಖ, ಶೌರ್ಯ ಮತ್ತು ಶುಚಿತ್ವಗಳ ಸಂಗಮ. ದೇವತೆಗಳ ಸೇನಾನಿಯೂ ಬ್ರಹ್ಮಚಾರಿಯೂ ಆಗಿರುವ ಈತನ ಪ್ರಸಿದ್ಧ ಹೆಸರು ಕುಮಾರ. ಬಹುಶಃ ಈ ಹೆಸರನ್ನೇ ಶೌರ್ಯ ಶುಚಿತ್ವಗಳ ಸಂಗಮವೆನಿಸಿದ ಕಂಪಿಲರಾಯನ ಮಗ ರಾಮನ ಹೆಸರಿಗೆ ಜೋಡಿಸಿರಬಹುದು. ಕಮ್ಮಟದುರ್ಗ, ಸಂಡೂರು ಸಮೀಪದ ಗ್ರಾಮಗಳು. ಸಂಡೂರಿನ ಕುಮಾರಸ್ವಾಮಿದೇವಾಲಯ ಸುಪ್ರಸಿದ್ಧವಾದುದು. ಸ್ತ್ರೀಯರು ಈ ದೇವತಾ ವಿಗ್ರಹದ ಮುಖ ನೋಡಬಾರದೆಂಬ ಕಟ್ಟಳೆಯನ್ನು ಉದ್ದಕ್ಕೂ ಪಾಲಿಸಿಕೊಂಡು ಬರಲಾಗಿದೆ. ಹೀಗೆ ಶೌರ್ಯ ಶುಚಿತ್ವಗಳಿಗೆ ಆದರ್ಶವೆಂದು ಸುತ್ತಲಿನ ಪ್ರದೇಶದಲ್ಲಿ ಈ ದೇವತೆ ಸುಪ್ರಸಿದ್ಧವಾಗಿದ್ದು, ಆ ಕಾರಣಕ್ಕಾಗಿಯೇ 'ಕುಮಾರ' ಎಂಬ ಹೆಸರನ್ನು ಕಂಪಿಲರಾಯನ ಮಗ ರಾಮನ ಹೆಸರಿಗೆ ಜನತೆ ಜೋಡಿಸಿರಬಹುದು. ಈಗಲೂ ಸಂಡೂರಿನ ಸುತ್ತಮುತ್ತ ಕುಮಾರರಾಮನಿಗೆ ಸಂಬಂಧಿಸಿದ ಅನೇಕ ಐತಿಹ್ಯಗಳು ಜನತೆಯಲ್ಲಿ ಕೇಳಿಬರುತ್ತಿವೆ.

ಒಟ್ಟಿನಲ್ಲಿ ಕುಮಾರರಾಮ ಹೆಸರಿನಲ್ಲಿಯ 'ಕುಮಾರ' ಎಂಬುದು ಕೇವಲ 'ಮಗ' ಎಂಬ ವಾಚ್ಯಾರ್ಥವನ್ನು ಪ್ರತಿನಿಧಿಸದೆ, ಅದನ್ನೂ ಮೀರಿ ಬೇರೆ ಬೇರೆ ಅರ್ಥಗಳನ್ನು ಪ್ರತಿನಿಧಿಸುತ್ತ, ಕೊನೆಗೆ ಷಣ್ಮುಖನನ್ನೂ ಸಂಕೇತಿಸುವುದೆಂದು ಭಾವಿಸಬಹುದಾಗಿದೆ.

ಶಿವನ ಮಗನಾದ ಕುಮಾರಸ್ವಾಮಿಯ ಶೌಚ-ಶೌರ್ಯಗಳ ಪ್ರತೀಕನಾದ ಕಂಪಿಲನ ಮಗ ರಾಮ 'ಕುಮಾರರಾಮ'ನಾಗಿ ಬೆಳೆದ. ಆಗ ಶೌಚ-ಶೌರ್ಯಗಳಿಗಾಗಿ ಜನತೆ ಕುಮಾರ(ಷಣ್ಮುಖ)ನನ್ನೂ ಮರೆತು, ಈ 'ಕುಮಾರರಾಮ'ನನ್ನೇ ಆದರ್ಶವಾಗಿಟ್ಟುಕೊಂಡರು. ಇಂಥ ಒಂದು ಪರಂಪರೆಯೇ ಕರ್ನಾಟಕದ ಇತಿಹಾಸದಲ್ಲಿ ಕಂಡುಬರುತ್ತದೆ. ಈ ಪರಂಪರೆಯಲ್ಲಿ ಹೆಸರಿಸಬೇಕಾದವರೆಂದರೆ ಬಿಜ್ಜಾವರದ ಅರಸು ಇಮ್ಮಡಿ ಚಿಕ್ಕಭೂಪಾಲನ ಮಗನಾದ ಕುಮಾರ ತೋಟೇಂದ್ರ ತಾನೂ ಶುಚಿ-ವೀರನಾಗಿ ಬಾಳುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಈ ಕೃತಿಯಲ್ಲಿ ಇವನನ್ನು 'ಕುಮಾರ ತೋಟೇಂದ್ರ' ಎಂದು ಪದೇ ಪದೇ ಕರೆಯಲಾಗಿದೆ.

ಪಾಂಚಾಳಗಂಗ ವಿರಚಿತ 'ಕುಮಾರರಾಮನ ಸಾಂಗತ್ಯ'ದಲ್ಲಿ ಪದ್ಯವೊಂದು "ಇನ್ನು ಪೇಳುವೆ ಚೆನ್ನರಾಮನ ಕಥೆಯನು" ಎಂದು ಪ್ರಾರಂಭವಾದರೆ, ಕೆಂಚಿಶೆಟ್ಟಿಸುತ ರಾಮ ವಿರಚಿತ 'ಸಿರುಮನ ಸಾಂಗತ್ಯ'ದಲ್ಲಿ 'ಇನ್ನು ಪೇಳುವೆ ಚೆನ್ನಮಲ್ಲನ ಕೃತಿಯನು' ಎಂಬ ಅನುಕರಣ ರೂಪದ ಪದ್ಯವಿದೆ. ಅಲ್ಲಿಯ 'ಚೆನ್ನರಾಮು' ಎಂಬುದಕ್ಕೆ ಪ್ರತಿಯಾಗಿ ಇಲ್ಲಿ 'ಚೆನ್ನಮಲ್ಲ' ಎಂಬ ಪದವಿಡಲಾಗಿದೆ. ಕಾವ್ಯದುದ್ದಕ್ಕೂ ಸಿರುಮನ ಮಗನಾದ ಮಲ್ಲಯ್ಯನನ್ನು 'ಕುಮಾರಮಲ್ಲ' ಎಂದೇ ಕರೆಯಲಾಗಿದೆ.

ಹೀಗೆ ಇವರನ್ನು ಕುಮಾರ ತೋಟೇಂದ್ರ, ಕುಮಾರ ಮಲ್ಲ ಎಂದು ಕಾವ್ಯಗಳು ಸಂಬೋಧಿಸುವುದಕ್ಕೆ ಆದರ್ಶ ಶಿವನ ಮಗನಾದ ಕುಮಾರನಲ್ಲ, ಕಂಪಿಲರಾಯನ ಮಗ ಕುಮಾರರಾಮ.

ಇದೆಲ್ಲವನ್ನು ಗಮನಿಸಿದರೆ 'ಕುಮಾರರಾಮ' ಎಂಬುದಕ್ಕೆ 'ಮಗನಾದ ರಾಮ' ಎಂದು ಅರ್ಥವಲ್ಲ, ಶುಚಿ-ಶೌರ್ಯಗಳ ಸಂಗಮವೆನಿಸಿದ 'ಷಣ್ಮುಖನಿಗೆ ಸಮಾನವಾದ ರಾಮ'ನೆಂಬ ಅರ್ಥವಿದೆಯೆಂದೂ, ಹಾಗೆ ಇಟ್ಟುಕೊಳ್ಳುವುದರಿಂದ ಈ ಹೆಸರಿಗೆ ಆಳವಾದ ಅರ್ಥಪ್ರಾಪ್ತವಾಗುವುದೆಂದೂ ಹೇಳಬಹುದಾಗಿದೆ. ಮುಂದಿನ ದಿನಗಳಲ್ಲಿ ಹೀಗೆ 'ಕುಮಾರ' ಪದವನ್ನು ಜೋಡಿಸಿಕೊಂಡು ಹೆಸರು ಇಟ್ಟುಕೊಳ್ಳುವುದುಒಂದು ಪರಂಪರೆಯಾಗಿ ಬೆಳೆದಿದೆಯೆಂದೂ, ಇದಕ್ಕೆ 'ಕುಮಾರರಾಮ'ನೇ ಮೊದಲಿಗನಾದನೆಂದೂ ಸೂಚಿಸಬಹುದಾಗಿದೆ.

■■

ಆಕರ : ಮಾರ್ಗ ಸಂಪುಟ–೩

೬೮

ಕೊಂಡೆಯ ಮಂಚಣ್ಣ

ಕಥಾನಾಯಕರ ಜೀವನದಲ್ಲಿ ಖಳನಾಯಕರು ದೊಡ್ಡ ಪಾತ್ರ ವಹಿಸುತ್ತಾರೆ. ಬಸವಣ್ಣನವರ ವಿಷಯದಲ್ಲಿ ಕೇಳಿಬರುವ ಇಂಥ ಒಬ್ಬ ಛಿದ್ರಾನ್ವೇಷಕ ವ್ಯಕ್ತಿ ಕೊಂಡಿ ಮಂಚಣ್ಣ. ಈತ ಐತಿಹಾಸಿಕ ವ್ಯಕ್ತಿಯೋ, ಕವಿಕಲ್ಪಿತ-ಜನಕಲ್ಪಿತ ವ್ಯಕ್ತಿಯೋ ಈ ವರೆಗೆ ಅದನ್ನು ಸ್ಪಷ್ಟಪಡಿಸುವ ಗೋಜಿಗೆ ಯಾರೂ ಹೋಗಿಲ್ಲ. ಬಹುಶಃ ಬಿಜ್ಜಳನ ಆಸ್ಥಾನದಲ್ಲಿರಬಹುದಾದ ಮಂಚಣ್ಣನೆಂಬ ಪ್ರಭಾವಿ ವ್ಯಕ್ತಿಯೊಬ್ಬನಿಗೆ ಕೊಂಡೆ ಎಂಬ ಶಬ್ದ ವಿಶೇಷಣದಂತೆ ಅಂಟಿಕೊಂಡಿದೆ. ಈ ಶಬ್ದಕ್ಕೆ ಚಾಡಿಯ ಮಾತು ಎಂಬ ಅರ್ಥ ರೂಢಿಯಲ್ಲಿದೆ. ನೀತಿವಾಕ್ಯಾಮೃತ, ಮಂಗರಾಜ ನಿಘಂಟು ಇತ್ಯಾದಿಗಳಲ್ಲಿಯೂಈ ಅರ್ಥವಿದೆ. ನಮ್ಮ ಕಾವ್ಯಗಳಲ್ಲಿ "ವಿದುರಾದಿಗಳ ಕೊಂಡೆಯಕೆ ಕಿವಿಗೊಡದೆ" ಇತ್ಯಾದಿ ಪ್ರಯೋಗಗಳು ಕಂಡುಬರುತ್ತವೆ. ಹೆಚ್ಚಿನದಾಗಿ ಈ ಕೊಂಡೆ>ಕೊಂಡಿ ಶಬ್ದಕ್ಕೆ ಕೊಕ್ಕೆ, ಬಾಗುಳ್ಳ ಮೊಳೆ, (ಕುಟುಕುವ) ಮೊನೆಯಾದ ಮುಳ್ಳು ಎಂಬ ಅಪಾಯಕಾರಿವಸ್ತು ಅರ್ಥವಿದೆ. ಚೇಳಿನಕೊಂಡಿ ಇತ್ಯಾದಿಗಳನ್ನೂ ಇಲ್ಲಿ ನೆನೆಯಬಹುದು. ಹೀಗೆ ನೇರ ಅರ್ಥವಲ್ಲದೆ, ಆರೋಪಿತ ಅರ್ಥಗಳೂ ಸೇರಿ, ಸಹಜವಾಗಿಯೇ ಕೊಂಡೆಯ ಮಂಚಣ್ಣ ಹೆಸರಿಗೆ ಚಾಡಿಕೋರನಾದ ಮಂಚಣ್ಣನೆಂಬ ಅರ್ಥ ರೂಢಿಗೆ ಬಂದಿದೆ. ಇದು ಎಷ್ಟು ಪ್ರಸಿದ್ಧವಾಗಿದೆಯೆಂದರೆ ಸಮಾಜದಲ್ಲಿ ಯಾರಾದರೂ ಚಾಡಿಕೋರರಿದ್ದರೆ, ಅವರನ್ನು ಕೊಂಡೆಯ ಮಂಚಣ್ಣ ಎಂದೇ ಕರೆಯುತ್ತಾರೆ. ದೇವಲೋಕದ ನಾರದನಂತೆ ಕನ್ನಡ ಲೋಕದಲ್ಲಿ ಕೊಂಡೆಯ ಮಂಚಣ್ಣ ಚಾಡಿಗೆ ಪ್ರಸಿದ್ಧ ಹೆಸರಾಗಿ ಉಳಿದಿದೆ. ಆದರೆ ಮೂಲತಃ ಇವನ ಹೆಸರಿಗೆ ಹೊಂದಿಕೊಂಡಿರುವ ಕೊಂಡೆಯ ಪದಕ್ಕೆ ಚಾಡಿಕೋರ ಎಂಬ ಅರ್ಥವಿರದೆ ಬೇರೆ ಅರ್ಥವಿರಬಹುದೆಂದು ನಮ್ಮ ಶಾಸನಗಳು ತಿಳಿಸುವಂತಿದೆ.

ಪ್ರಾಚೀನಕರ್ನಾಟಕದ ಆಡಳಿತ ಹುದ್ದೆಗಳಲ್ಲಿ "ಕೊಂಡೆಯರು" ಎಂಬುದೊಂದು ಹುದ್ದೆ. ದುರ್ದೈವದ ಸಂಗತಿಯೆಂದರೆ ನಮ್ಮ ಪ್ರಾಚೀನ ಆಡಳಿತ ವ್ಯವಸ್ಥೆಯನ್ನು, ಹುದ್ದೆಯ ಹೆಸರುಗಳನ್ನು ಚಾಣಕ್ಯನ ಅರ್ಥಶಾಸ್ತ್ರದಲ್ಲಿ ಹೇಳಲಾದ ಹುದ್ದೆಗಳ ಇಲ್ಲವೆ ಇಂದು ಪ್ರಚಾರದಲ್ಲಿರುವ ಇಂಗ್ಲಿಷ್ ಹುದ್ದೆಗಳ ಬೆಳಕಿನಲ್ಲಿ ಅರ್ಥೈಸುತ್ತ ಗೊಂದಲ ಸೃಷ್ಟಿಸಿಕೊಂಡಿದ್ದೇವೆ. ಉದಾ: ದಂಡನಾಯಕ=ಮಂತ್ರಿ, ಸೇನಾನಿ, Minister, Captain, Commander ಇತ್ಯಾದಿ. ಇದೆಲ್ಲ ಬಿಟ್ಟು ನಮ್ಮ ಪಾರಿಭಾಷಿಕ ಶಬ್ದಗಳನ್ನು ನಮ್ಮ ಪ್ರಾಚೀನ ಬದುಕಿನ ಆವರಣದಲ್ಲಿಟ್ಟು ಅರ್ಥೈಸುವ ಕೆಲಸಕ್ಕೆ ತೊಡಗಬೇಕಾಗಿದೆ.

ಶಾಸನಗಳಲ್ಲಿ "ಆಳುತ್ತಮಿರೆ" ಎಂಬ ಶಬ್ದ ಬಳಕೆಯಾಗಿದೆ. ಇದಕ್ಕೆ To rule (ಆಳುವಿಕೆ), To administrate (ಆಡಳಿತ ನಡೆಸುವಿಕೆ) ಎಂದು ಎರಡು ಅರ್ಥಗಳಿವೆ. ಆಳುವುದು ಬೇರೆ, ಆಡಳಿತ ನಡೆಸುವುದು ಬೇರೆ. ಉದಾ: ರಾಜನು ಆಳುವವ, ಮಂತ್ರಿ ಆಡಳಿತ ನಡೆಸುವವ. ಆದುದರಿಂದ "ಆಳುತ್ತಮಿರೆ" ಎಂಬ ಪ್ರಯೋಗವು ಇವುಗಳಲ್ಲಿ ಯಾವ ಅರ್ಥದಲ್ಲಿ ಬಳಕೆಯಾಗಿದೆಯೆಂಬುದನ್ನು ಅಭ್ಯಾಸದ ಮೊದಲು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. ಆಮೇಲೆ ಆಳುವ ವರ್ಗದ ಹುದ್ದೆಗಳಾವುವು? ಆಡಳಿತವರ್ಗದ ಹುದ್ದೆಗಳಾವುವು? ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಆಳುವ ವರ್ಗ (Ruler)ವನ್ನೇ ಕುರಿತು ಚರ್ಚಿಸುವ ಪ್ರಸಂಗದಲ್ಲಿ

ಮೊದಲೊಳ್ ಸಾವಂತರಿನಿನಿ
ಸುದಿತೋದಿತನಾಗಿ ಮಂಡಲೇಶ್ವರನಿಂದ।
ಭ್ಯುದಯಪರನೆನಿಸಿ ಚಕ್ರಯಿ
ನುದಯ ಪರಂಪರೆಯನೆಯ್ದಿದಂ ಕವಿ ರನ್ನಂ॥ (ಗ. ಯು ೧೦೩೪)

ಎಂಬ ಗದಾಯುದ್ಧದ ಪದ್ಯ ನಮ್ಮ ಗಮನ ಸೆಳೆಯುತ್ತದೆ. ರನ್ನನು ಮೊದಲು ಸಾಮಂತನಲ್ಲಿ, ಆಮೇಲೆ ಮಾಂಡಲಿಕನಲ್ಲಿ, ಕೊನೆಗೆ ಚಕ್ರವರ್ತಿಯಲ್ಲಿ ಆಶ್ರಯ ಪಡೆದುದನ್ನು ಈ ಪದ್ಯದಲ್ಲಿ ತಿಳಿಸುತ್ತಾನೆ. ಮುಳಗುಂದ ಶಾಸನದಲ್ಲಿ ಬರುವ "ಚಕ್ರವರ್ತಿ ಮಣ್ಡಳಿಕ ಮಹಾಸಾಮನ್ತಾದ್ಯನೇಕ ರಾಜಮಂಡಳೀ ಮಕುಟಘಟ್ಟಿತ ಪಾದಾಂಭೋಜ ವಿರಾಜಮಾನರಪ್ಪ" ಎಂಬ ವಾಕ್ಯವೂ ಈ ಮೂರು ಬಗೆಯ ಆಳುವವರನ್ನು ಬಿಡಿಸಿ ಹೇಳುತ್ತದೆ. (ಎಸ್. ಆಯ್. ಆಯ್. XI-i–೬೪ ಮುಳಗುಂದ ಕ್ರಿ. ಶ. ೧೦೨೮). ಈ ಮೂರೂ ಆಳುವ ವರ್ಗ (Ruler). ಇದನ್ನೇ ಕನ್ನಡಕಾವ್ಯ–ಶಾಸನಗಳು "ಮೂವರ್ರಾಯರ್" ಎಂದೂ ಕರೆದಿವೆ. "ಮೂರುರಾಯ ಕಟಕ ಪಾತ್ರ ಜಗದಳೆ" ಎಂಬಂಥ ಶಾಸನ ವಾಕ್ಯಗಳಿಗೆ ಈ ಮೂವರೂ ರಾಜರ ಆಸ್ಥಾನಗಳಲ್ಲಿ ನರ್ತಿಸಿದವಳು ಎಂದು ಅರ್ಥ. "ಬಿರುದು ಮೂರುರಾಯ ಸ್ಥಾನದೊಳೋದಿ ಪಾಡಿಸುವ ಮನ್ನೆಯರ ಗಂಡ" ಎಂಬ ವಾಕ್ಯವನ್ನೂ ಇಲ್ಲಿ ನೆನೆಯಬಹುದು. ಇಲ್ಲಿಯ ಸಾಮಂತರಿಗೆ ಅಥವಾ ಮಾಂಡಲಿಕರಿಗೆ "ಮನ್ನೆಯರು" ಎಂಬ ಗೌರವ ಪದ ಬಳಸುತ್ತಿದ್ದರು. ಈ ಸಾಮಂತರ ಕೆಳಗೆ ಇನ್ನೂ ಒಂದು ಆಳುವ ವರ್ಗವಿದ್ದಿತು, ಪ್ರಭು ಅಥವಾ ಪ್ರಭುಗಾವುಂಡ. ಇದಕ್ಕೆ

ನಿಯತಂ ಚಕ್ರಿಯ ಕೈಯೊಳಾಳ್ಕೆವಡೆದಾ ಸಾಮಂತರುಂ ನಾಡ ಮಂ
ನ್ನೆಯರುಂ ಗ್ರಾಮದ ಮೂಲಿಗರ್ಪ್ರಭುಗಳಿಂತೀ ಧರ್ಮಮಂ ಸಂತತಂ
ಪ್ರಿಯದಿಂ ರಕ್ಷಿಸುತಿರ್ಕೆ.......................................

(ಹೈದರಾಬಾದಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು. ಪು ೧೨ ಮತ್ತು ೫೨)

ಎಂಬ ಶಾಸನಪದ್ಯವನ್ನು ನೋಡಬಹುದು. ಇವರಲ್ಲಿ ಗಾಂವುಡರು ನಿರ್ದಿಷ್ಟವಾದ ಊರು–ಹಲವು ಊರುಗಳ ವಿಭಾಗವನ್ನು, ಸಾಮಂತರು ಸಣ್ಣ ನಾಡನ್ನು, ಮಾಂಡಲಿಕರು ದೊಡ್ಡ ಮಂಡಲವನ್ನು ವಂಶಪಾರಂಪರ್ಯ ಆಳುತ್ತಿದ್ದರು. ಈ ನಾಲ್ಕು ಹಂತಗಳಲ್ಲಿ ಪ್ರಜೆಗಳ ನಿತ್ಯ ವ್ಯವಹಾರದಲ್ಲಿ ಕೈಹಾಕುವವರೆಂದರೆ ಚಕ್ರವರ್ತಿಯನ್ನು ಹೊರತುಪಡಿಸಿ ಗ್ರಾಮಪ್ರಭು (ಗಾವುಂಡ)ಗಳು ಸಾಮಂತರು ಮತ್ತು ಮಾಂಡಲಿಕರೆಂಬ ಮೂರೂ ಹಂತದವರು.

ಪ್ರಾಚೀನಕಾಲದಲ್ಲಿ ಈಗಿನಂತೆ ರಾಜ್ಯ, ಕೇಂದ್ರ ಎಂಬ ಜೋಡು ಆಡಳಿತಗಳಿದ್ದವು. ಅಂದರೆ ಮೇಲೆ ಹೇಳಿದ ಆಳುವ ಹಂತದವರಲ್ಲದೆ ಸಾಮಂತ ಮಾಂಡಲಿಕರನ್ನು ನಿಯಂತ್ರಿಸಲು ಕೇಂದ್ರದಿಂದ "ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ" ಹುದ್ದೆಯವರು ರಾಜನಿಂದ ನೇರವಾಗಿ ನಿಯಮಿಸಲ್ಪಡುತ್ತಿದ್ದರು. ಇವರು ಆಗಾಗ ವರ್ಗಾವಣೆ ಹೊಂದುತ್ತಿದ್ದರು. ಮೇಲೆ ಹೇಳಿದ ಗಾವುಂಡ–ಸಾಮಂತ–ಮಾಂಡಳಿಕರೆಂಬ ಆಳುವವರ (Ruler) ಮೆಲೆ ಚಕ್ರವರ್ತಿಯ ಪರವಾಗಿ ಇವರು ಆಡಳಿತ (Administration)ಮಾಡುತ್ತಿದ್ದರಿಂದ ಇವರಿಗೆ ಮೇಲಾಳ್ಕೆಯವರು ಎಂದೂ ಕರೆಯುತ್ತಿದ್ದರು. ಇದಲ್ಲದೆ ಈಕಡೆ ಗಾವುಂಡ–ಸಾಮಂತ–ಮಂಡಳಿಕರ, ಆಕಡೆ ಚಕ್ರವರ್ತಿಗಳ ನಡುವೆ ಕೊಂಡಿಯಂತೆ ಇವರು ವರ್ತಿಸುತ್ತಿದ್ದುದರಿಂದ ಇವರನ್ನು "ಕೊಂಡೆಯರು" ಎಂದೂ ಕರೆಯುತ್ತಿದ್ದರು. ಅಂದರೆ ಮೇಲಾಳ್ಕೆ =ಕೊಂಡೆಯ ಇವು ಒಂದೇ ಹುದ್ದೆಯ ಎರಡು ಪಾರಿಭಾಷಿಕ ಪದಗಳು. ಈ ಎರಡೂ ಪದಗಳನ್ನು ಪರ್ಯಾಯವೆಂಬಂತೆ ಬಳಸಿದ ಉದಾಹರಣೆಗಳ ಎರಡು ಗುಂಪುಗಳನ್ನು ಇಲ್ಲಿ ನೋಡಬಹುದು.

I "ಪ್ರಭು ಮೇಲಾಳ್ಕೆಯವರಕ್ಕೆ ನಾಡರಸುಗಳಕ್ಕೆ......

(ಕಲ್ಬುರ್ಗಿ ಜಿಲ್ಲೆಯ ಶಾಸನಗಳು– ಆಳಂದ ತಾಲೂಕು ೧೩ ನಿಂಬರಗಿ, ಕ್ರಿ. ಶ. ೧೧೯೪)

ಪ್ರಭುಗಾವುಂಡುಗಳುಂ ನಾಡಮನ್ನೆಯರುಂ ಮೇಲಾಳ್ಕೆಯರಸುಂ......

(ಎಸ್. ಆಯ್. ಆಯ್. ೧೮–೧೧೩ ಅಗಡಿ ಕ್ರಿ.ಶ. ೧೧೧೬)

ಪ್ರಭುಗಳುಂ ಮನ್ನೆಯರುಂ ಮೇಲಾಳ್ಕೆಯರುಂ ಪ್ರತಿಪಾಳಿಸುವರು......

(ಎಸ್. ಆಯ್. ಆಯ್. ೨೦–೧೧೫ ಯರಗಲ್ಲ)

ಇಲ್ಲಿ ಊರ (ಊರುಗಳ)ಒಡೆಯರಾದ ಪ್ರಭು, ಮನ್ನೆಯರು (ನಾಡಮನ್ನೆಯ. ನಾಡರಸು), ಮೇಲಾಳ್ಕೆಯವರು ದತ್ತಿಯನ್ನು ರಕ್ಷಿಸಬೇಕೆಂದು ಶಾಸನಗಳು ಬಿನ್ನವಿಸಿಕೊಂಡಿವೆ.

II ಕೆಲವೊಮ್ಮೆ ಇಲ್ಲಿಯ ಮೇಲಾಳ್ಕೆಗೆ ಬದಲು ಹೀಗೆ ಕೊಂಡೆಯ ಪದವನ್ನು ಬಳಸಲಾಗಿದೆ. ಉದಾ

ಊರೊಡೆಯರಕ್ಕೆ ಮಂನೆಯ
ರೂರಾಳ್ವರಸಕ್ಕೆ ನಾಡ ಕೊಂಡೆಯರಕ್ಕಿಂ।
ತಾರಾದೊಡಮೀ ಧಮ್ಮಮ
ನೋನ್ತಿರೆ ಕಿಡಿಸಿದವರಥೋಗತಿಗಿಳಿಗುಂ॥

(ಎಸ್. ಆಯ್. ಆಯ್. XX– ೧೭೦ ಹಿರೇಬೇವಿನೂರ ಕ್ರಿ. ಶ. ೧೧೯೦)

ಊರೊಡೆಯರಕ್ಕು ಮನ್ನೆಯ
ರೂರಾಳ್ವರಸಕ್ಕು ನಾಡ ತೊಂ(ಕೊಂ)ಡೆಯರರ್ಕಿ।
ನ್ನಾರಾದೊಡಮೀ ಧರ್ಮಮಂನಳಿದ
ರೋರಂತಿರೆ ರೌರವಕ್ಕೆ ಗಳಗಳನಿಳಿವರು॥

(ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು. ೯೭. ಮತ್ತೂರು ಕ್ರಿ.ಶ. ೧೧೨೩)

ಉದಾಹರಣೆಯ ಈ ಎರಡು ಗುಂಪುಗಳಲ್ಲಿ ಊರೊಡೆಯ, ಮನ್ನೆಯರೆಂಬ ಪದಗಳು ಪುನರುಕ್ತಗೊಂಡು, ಮೇಲಾಳ್ಕೆಗೆ ಬದಲು ಕೊಂಡೆಯ ಪದ ಬಳಕೆಗೊಂಡಿದೆ.

ಬಹುಶಃ ಆ ಕಾಲದಲ್ಲಿ ಕೊಂಡೆಯ ಪದಕ್ಕೆ (ಹುದ್ದೆಗೆ) ಈಗಿನಂತೆ ಹೀನಾರ್ಥ ಪ್ರಾಪ್ತವಾಗಿರಲಿಲ್ಲವೆಂದು ಈ ಉದಾಹರಣೆಗಳೇ ಸ್ಪಷ್ಟಪಡಿಸುತ್ತವೆ. ಚಕ್ರವರ್ತಿ ಮತ್ತು ಮನ್ನೆಯ ನಡುವಿನ ಈ ಹುದ್ದೆಯವರು ರಾಜನ ಕೆಳಗಿನ ಮನ್ನೆಯರ (ಗಾವುಂಡ, ಸಾಮಂತ, ಮಾಂಡಳಿಕ)ವಿಷಯವಾಗಿ ಏನೇನೋ ಹೇಳಿ ಅವನ ಮನಸ್ಸನ್ನು ಕೆಡಿಸುವ ವ್ಯಕ್ತಿಗಳೆಂದು ಭಾವಿಸುವುದು ಸಹಜ. ಹೀಗಾಗಿ ಕೊಂಡೆಯ ಎಂಬ ಒಳ್ಳೆಯ ಅರ್ಥದ ಪದ ಆಕಾಲದಲ್ಲಿಯೇ ಚಾಡಿಹೇಳುವವ ಎಂದು ಪರ್ಯಾಯ ಅರ್ಥ ಪಡೆದಿರಬಹುದೆನಿಸುತ್ತದೆ. ಮುಂದೆ ಹುದ್ದೆಯ ಹೆಸರೆಂಬ ಅರ್ಥವನ್ನು ಕಳೆದುಕೊಂಡು ಅದು ಚಾಡಿಕೋರ ಅರ್ಥಕ್ಕೆ ಇಳಿಯಿತೆಂದು ತೋರುತ್ತದೆ. (ಕಿರುಕುಳ ವೆಂಬುದು ಮೂಲತ: ಚಿಕ್ಕ ತೆರಿಗೆ. ಇದು ತೊಂದರೆದಾಯಕ ತೆರಿಗೆ ಆಗಿದ್ದುದರಿಂದ ಇಂದು ಯಾವುದೇ ಸಣ್ಣ ತೊಂದರೆಗೆ ಕಿರುಕುಳ ಶಬ್ದ ಬಳಸಲಾಗುವುದನ್ನು ಇಲ್ಲಿ ನೆನೆಯಬಹುದು).

ಈ ವಿವರಣೆಯ ಬೆಳಕಿನಲ್ಲಿ ಹೇಳುವುದಾದರೆ ಬಿಜ್ಜಳನ ಆಸ್ಥಾನದಲ್ಲಿ ಮಂಚಣ್ಣನೆಂಬವನು ಮೇಲಾಳ್ಕೆ (ಕೊಂಡೆಯ) ಅಧಿಕಾರಿಯಾಗಿರಬಹುದು. ಅಂದರೆ ಮಹಾಪ್ರಚಂಡ ದಂಡನಾಯಕನಾಗಿರಬಹುದು. ಹುದ್ದೆ ಕಾರಣವಾಗಿ ಅವನನ್ನು ಕೊಂಡೆಯ ಮಂಚಣ್ಣ ಎಂದೇ ಕರೆಯುತ್ತಿರಬಹುದು. ಬಸವಣ್ಣನವರ ವಿಷಯದಲ್ಲಿ ಚಾಡಿಹೇಳುವವರಲ್ಲಿ ಇವನು ಒಂದಿಷ್ಟು ಮುಖ್ಯ ಪಾತ್ರ ವಹಿಸಿದ ಕಾರಣ, ಕೊಂಡೆಯ ಮಂಚಣ್ಣ=ಮೇಲಾಳ್ಕೆ ಮಂಚಣ್ಣ=ಮಹಾಪ್ರಚಂಡ ದಂಡನಾಯಕ ಮಂಚಣ್ಣ ಎಂಬ ಅರ್ಥ ಮರೆಯಾಗಿ, ಚಾಡಿಹೇಳುವ ಮಂಚಣ್ಣನೆಂದು ಇವನು ಪ್ರಚಾರಪಡೆದನೆಂದು ತೋರುತ್ತದೆ. ಬಿಜ್ಜಳನ ಕಾಲದ ಶಾಸನಗಳಲ್ಲಿ ಹುಡುಕಿದರೆ ಈ ಮಂಚಣ್ಣನ ಹೆಸರು ಸಿಗಬಹುದಾಗಿದೆ.

ಇನ್ನಷ್ಟು ವಿಷಯ:

ಅವನಿಪಾಲರು ಕಂಗಳಿಂದವೆ
ಕಿವಿಗೆ ಕರವೊಳ್ಳಿದರು ಕಂಡುದ
ನವರು ನಂಬರು ಕೊಂಡೆಯರ ನುಡಿಗೇಳ್ದು ನಂಬುವರು॥

ಕುಮಾರವ್ಯಾಸ ಭಾರತದ (ದ್ರೋಣಪರ್ವ ೧೮-೨) ಈ ಪದ್ಯ, ಅವನಿಪಾಲಕರು ಕಣ್ಣಿಗಿಂತ ಕಿವಿಯನ್ನೇ ಹೆಚ್ಚು ನಂಬುತ್ತಾರೆ. ಕಂಡುದಕ್ಕಿಂತ ಕೊಂಡೆಯರ ನುಡಿಯನ್ನೇ ಕೇಳುತ್ತಾರೆ-ಎಂದು ಹೇಳುತ್ತದೆ. ಇಲ್ಲಿ ಕೊಂಡೆಯರು ಎಂದರೆ ಮೇಲಾಳ್ಕೆಯವರು ಎಂದೇ ಅರ್ಥಮಾಡುವುದು ಸೂಕ್ತವೆನಿಸುತ್ತದೆ. ಅಂದರೆ ಕುಮಾರವ್ಯಾಸನ ಕಾಲಕ್ಕೆ ಇದು ಮೇಲಾಳ್ಕೆಯೆಂಬ ಅರ್ಥವನ್ನು ಇನ್ನೂ ಉಳಿಸಿಕೊಂಡಿರಬಹುದೆನಿಸುತ್ತದೆ.

ಮೇಲಾಳ್ಕೆಯವರಲ್ಲಿಯೇ ತಾವು ಪ್ರಸಿದ್ಧರೆಂದು ಹೊಗಳಿಸಿಕೊಳ್ಳುವ ಪ್ರಸಂಗದಲ್ಲಿ "ಕೊಂಡೆಯರ ಗಂಡ" ಎಂದು ಕೆಲವರು ಹೇಳಿಕೊಳ್ಳುತ್ತಿದ್ದುದಕ್ಕೆ ಬಿಜಾಪುರ ಶಾಸನದ(ಎಸ್. ಆಯ್. ಆಯ್. XVIII-೨೧೬ ಕ್ರಿ.ಶ. ೧೨೩೪) ಕೊಂಡೆಯ ಹುದ್ದೆಯವನಾದ ತಿಕ್ಕರಸ

ನಿದರ್ಶನವೆನಿಸಿದ್ದಾನೆ. ಮುಳಗುಂದ ಶಾಸನದಲ್ಲಿ (ಎಸ್. ಆಯ್. ಆಯ್. XI-ii-೧೫೭ ಕ್ರಿ. ಶ. ೧೧೧೮) ಕೊಂಡೆಯ ಹುದ್ದೆಯ ಚಾವುಂಡರಾಯನು ತನ್ನನ್ನು "ಕೊಂಡೆಯ ಕುಳ ಕಾಳದಂಡ" (ಕೊಂಡೆಯರ ಸಮೂಹಕ್ಕೆ ಯಮ) ಎಂದು ಹೆಮ್ಮೆಯಿಂದ ವರ್ಣಿಸಿಕೊಂಡಿದ್ದಾನೆ. ಇವನಿಗೆ ಬಳಸಲಾಗಿರುವ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಎಂಬುದು ಇವನು ಸಾಮಂತರ ಅಧಿಪತಿಯಾಗಿ (ಕೊಂಡೆಯನಾಗಿ) ಕೆಲಸ ಮಾಡುತ್ತಿರುವವನೆಂದೂ ತಿಳಿಸುತ್ತದೆ. "ಮಹಾಪ್ರಧಾನ ಸೇನಾಧಿಪತಿ ದಂಡನಾಯಕ" ಎಂದೂ ಕರೆದುಕೊಂಡುದು ಈ ಕೊಂಡೆಯರ ಅಧಿಕಾರದ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ. ಮೇಲೆ ಹೇಳಿದ ಬಿಜಾಪುರ ಶಾಸನೋಕ್ತ ತಿಕ್ಕರಸನನ್ನು "ತದ್ದವಾಡಿ ಹೆಡ ಕಣಬಡೆಯಂತು ಮೂಱುನಾಡನು ತ್ರಿಭೋಗಾಭ್ಯಂತರಂ ಸರ್ವಾಧಿಕಾರವಂ ಮಾಡುತ್ತವಿರಲು" ಎಂದು ಕರೆಯಲಾಗಿದೆ. ಹೀಗಾಗಿ ಈ ಕೊಂಡೆಯರು ಒಂದಕ್ಕಿಂತ ಹೆಚ್ಚು ನಾಡಿನ ಮನ್ನೆಯರ ಮೇಲೆ ಅಧಿಕಾರ ನಡೆಸುವವರಾಗಿದ್ದರೆಂದೂ ಇವರಿಗೆ "ಸರ್ವಾಧಿಕಾರ"ದ ಅವಕಾಶವಿದ್ದಿತೆಂದು ತಿಳಿದುಬರುತ್ತದೆ.

ಇನ್ನೂ ಒಂದು ವಿಷಯವೆಂದರೆ ಮುಳಗುಂದ ಶಾಸನೋಕ್ತ ಚಾವುಂಡಮಯ್ಯನು "ವಿಪ್ರಪುಳಕಮಳ ಮಾರ್ತಂಡಂ" ಎಂದು ಕರೆದುಕೊಂಡಿದ್ದಾನೆ. ಬಹುಶ: ಬಿಜಾಪುರ ಶಾಸನೋಕ್ತ ತಿಕ್ಕರಸನೂ ವಿಪ್ರಜಾತಿಯವನೇ ಆಗಿರಬೇಕು(ಇವನು ನರಸಿಂಹದೇವರಿಗೆ ದತ್ತಿ ಬಿಟ್ಟಿದ್ದಾನೆ). ಸಾಮಾನ್ಯವಾಗಿ ಈ ಮೇಲಾಳ್ಕೆಯವರೆಲ್ಲ ಬ್ರಾಹ್ಮಣರೇ ಆಗಿರುವುದು ಶಾಸನಗಳಿಂದ ತಿಳಿದು ಬರುತ್ತದೆ.

ಇದರಿಂದ ಒಂದು ಅಂಶ ಸ್ಪಷ್ಟವಾಗುತ್ತದೆ. ಭುಜಬಲ ವೀರರಾದ ಅಬ್ರಾಹ್ಮಣರು ಸಾಮಂತರೋ, ಮಾಂಡಲಿಕರೋ ಆಗಿರುತ್ತಿದ್ದರು. ಅಕ್ಷರ ಜೀವಿಗಳಾದ ಬ್ರಾಹ್ಮಣರು ಇವರ ತಲೆಯ ಮೇಲೆ ಮೇಲಾಳ್ಕೆಯವರಾಗಿ, ಇವರ ಮತ್ತು ಚಕ್ರವರ್ತಿಗಳ ನಡುವೆ ಮೇಲಾಳ್ಕೆ ಅಧಿಕಾರಿಗಳಾಗಿ ವ್ಯವಹರಿಸುತ್ತಿದ್ದರು. ಅತಿ ಬುದ್ಧಿವಂತರಾದ ಬ್ರಾಹ್ಮಣರ ಬಗ್ಗೆ ಕಿಡಿಗೇಳಿಗಳೆಂದು ಸಾಮಾನ್ಯವಾಗಿ ಈಗಲೂ ಜನರ ಭಾವನೆಯಾಗಿದೆ. ಇವರು ಮೇಲಾಳ್ಕೆಯವರಾಗಿರುವುದರಿಂದಲೂ, ಕೊಂಡೆಯರು ಎಂಬುದಕ್ಕೆ ಚಾಡಿಕೋರರು ಎಂಬ ಅರ್ಥ ಬರಲು ಇದು ಇನ್ನೂ ಅನುಕೂಲವಾಯಿತೆಂದು ಕಾಣುತ್ತದೆ. ಹೀಗೆ ಅಂದು ಕೊಂಡೆಯರು ಸಾಮಾನ್ಯವಾಗಿ ಬ್ರಾಹ್ಮಣರೇ ಆಗಿರುತ್ತಿದ್ದುದರಿಂದ ಬಿಜ್ಜಳನ ಕೈಕೆಳಗಿನ ಕೊಂಡೆಯ ಮಂಚಣ್ಣನೂ ಬ್ರಾಹ್ಮಣನೇ ಆಗಿರಬಹುದು. ಜನರ ನಂಬುಗೆಯೂ ಇದೇ ಆಗಿದೆ.

■■

ಆಕರ : ಮಾರ್ಗ ಸಂಪುಟ-೪

೬೯

ಪಟ್ಟಣಶೆಟ್ಟಿ

ಕತ್ತಿ-ಕುದುರಿ, ಅಕ್ಕಿ-ಗೋದಿ, ರೊಟ್ಟಿ-ಹುಗ್ಗಿ, ಉಳ್ಳಾಗಡ್ಡಿ-ಮೆಣಸಿನಕಾಯಿ ಇವು ನಮ್ಮ ಅಡ್ಡ ಹೆಸರಿನ ಕೆಲವು ಮಾದರಿಗಳು. ಪಾಟೀಲ-ಹಿರೇಮಠ-ಉಪಾಧ್ಯೆ-ಜಮಾದಾರ-ಪೋಲಿಸಗೌಡರ ಎಂಬ ವೃತ್ತಿಗಳೂ, ಜತ್ತಿ-ಕಲಬುರ್ಗಿ-ಕಡಿದಾಳ ಇತ್ಯಾದಿ ಗ್ರಾಮನಾಮಗಳೂ ನಮ್ಮ ಅಡ್ಡಹೆಸರುಗಳಾಗಿವೆ. ಕಲ್ಯಾಣದಲ್ಲಿ ಗಡಿಯಾರಮಠ ಅಡ್ಡಹೆಸರಿನ ಒಂದು ವೀರಶೈವ ಮಠವಿದೆ. ಹೀಗೆ ಮೇಲುನೋಟಕ್ಕೆ ವಿಚಿತ್ರವಾಗಿ, ಒಂದಕ್ಕೊಂದು ಸಂಬಂಧವಿಲ್ಲದಂತೆ ಕಾಣುವ ಈ ಅಡ್ಡಹೆಸರುಗಳನ್ನು ಸಂಗ್ರಹಿಸಿ, ವರ್ಗೀಕರಿಸಿ ಬಿಚ್ಚಿ ನೋಡಿದರೆ ಇವುಗಳ ಹಿಂದೆ ಒಂದು ಅರ್ಥ, ಒಂದು ಇತಿಹಾಸ ಮಿಂಚುತ್ತದೆ. ಹೀಗಾಗಿ ಇಂದು ವಿದ್ವಾಂಸರು ಇತಿಹಾಸ ರಚನೆಯ ಆಧಾರ ಸಾಮಗ್ರಿಯಾಗಿ ಅಡ್ಡಹೆಸರುಗಳನ್ನು ಬಳಸಿಕೊಳ್ಳುತ್ತಲಿದ್ದಾರೆ. ಹೀಗೆ ಬಳಸಿಕೊಂಡು, ನಮ್ಮ ಪ್ರಾಚೀನ ವ್ಯಾಪಾರ ವ್ಯವಸ್ಥೆಯ ಸ್ವರೂಪ, ಇತಿಹಾಸಗಳನ್ನು ಕಟ್ಟುವಲ್ಲಿ ನೆರವಾಗುವ ಒಂದು ಅಡ್ಡಹೆಸರು, ಪಟ್ಟಣಶೆಟ್ಟಿ.

ಶೆಟ್ಟಿ ಎಂಬ ಅಡ್ಡಹೆಸರು ಇಂದು ವೈಶ್ಯ, ಬಂಟ, ವೀರಶೈವರಲ್ಲಿ ಕಂಡು ಬರುತ್ತಿದ್ದರೂ ಪಟ್ಟಣಶೆಟ್ಟಿ ಮಾತ್ರ ಕೇವಲ ವೀರಶೈವ ಕುಟುಂಬಗಳ ಅಡ್ಡಹೆಸರಾಗಿದೆ.[೧] ಈ ಹೆಸರಿನ ಮನೆತನಗಳು ಇಲ್ಲಿ ವಿಪುಲ ಸಂಖ್ಯೆಯಲ್ಲಿಸಿಗುವುದರಿಂದ, ಇದು ವೀರಶೈವ ಸಮಾಜದ ಬಹುಭಾಗವನ್ನು ವ್ಯಾಪಿಸಿರುವ, ಅಷ್ಟೇ ಪ್ರಾಚೀನವಾಗಿರುವ ಕುಟುಂಬವರ್ಗವೆಂದು ಹೇಳಬಹುದು.

ಪಟ್ಟಣಶೆಟ್ಟಿ ಹೆಸರನ್ನು ಅರ್ಥೈಸಲು ಈವರೆಗೆ ಅನೇಕ ವಿದ್ವಾಂಸರು ಪ್ರಯತ್ನಿಸಿದ್ದಾರೆ. ಇದು ಶಾಸನಗಳಲ್ಲಿ ಸಿಗುವ ಪಟ್ಟಣಸ್ವಾಮಿ ಎಂಬುದರ ಸಮಾನ ಪದವೆಂದು ಸರಿಯಾಗಿಯೇ ಗುರುತಿಸಿದ್ದಾರೆ. ಆದರೆ ಪಟ್ಟಣಸ್ವಾಮಿಯ ಕಾರ್ಯಸ್ವರೂಪವನ್ನು ಕುರಿತು, ಈತನು ನಗರದ ವ್ಯಾಪಾರಿ ಸಮೂಹದ ಮುಖ್ಯಸ್ಥನೆಂದು ಕೆಲವರು ಹೇಳಿದರೆ, ಇನ್ನು ಕೆಲವರು ಈಗಿನ ಮೇಯರ್‌ನಂತೆ ಪಟ್ಟಣದ ಸಮಗ್ರ ಅಧಿಕಾರಿಯೆಂದೂ ಊಹಿಸಿದ್ದಾರೆ. ಆದರೆ ಇತ್ತೀಚಿನ ವಿದ್ವಾಂಸರು ನಡೆಸಿದ ಶೋಧನೆಗಳಿಂದಾಗಿ ಈತನ ಬಗ್ಗೆ ಕೆಲವು ನಿರ್ದಿಷ್ಟ ಮಾತುಗಳನ್ನು ಹೇಳಲು ಸಾಧ್ಯವಾಗಿದೆ.

---

೧. ದೇವಚಂದ್ರನ ರಾಜಾವಳಿ ಕಥೆಯಲ್ಲಿ ಇಂಗಳೇಶ್ವರದ ಮಂಡಗೆ ಎಂಬ ಉಲ್ಲೇಖವಿರುವ ವಿಷಯ ಇತ್ತೀಚೆ ನಮ್ಮ ಗಮನಕ್ಕೆ ಬಂದಿದೆ.

ಪ್ರಾಚೀನ ಕಾಲದಲ್ಲಿ ಸಂತೆಯಿಂದಾಗಿ ಒಂದು ಊರು ಪಟ್ಟಣವೆನಿಸಿಕೊಳ್ಳುತ್ತಿದ್ದಿತು. ಗ್ರಾಮವೊಂದರಲ್ಲಿ ಸಂತೆ(ಪಟ್ಟಣ)ಯನ್ನು ಸಂಘಟಿಸಲು ಒಬ್ಬ ವರ್ತಕ ಮುಂದಾಗುತ್ತಿದ್ದನು. ಇದಕ್ಕೆ ಸರಕಾರದ ಒಪ್ಪಿಗೆ ಬೇಕಾಗುತ್ತಿತ್ತು. ಇದಲ್ಲದೆ ಪ್ರತಿ ಸಂತೆಗೆ ಇಲ್ಲವೆ ಪ್ರತಿವರ್ಷಕ್ಕೆ ಇಂತಿಷ್ಟು ಹಣವನ್ನು ಸರಕಾರಕ್ಕೆ ಕೊಡುವ ಕರಾರಿನ ಮೇಲೆ ಒಂದು ಊರಲ್ಲಿ ಸಂತೆ ಸಂಘಟಿಸುವ ಹೊಣೆಯನ್ನು ಈತ ಹೊರುತ್ತಿದ್ದನು. ಅಂದರೆ ಸಂತೆಯನ್ನು ಕಾಂಟ್ರಾಕ್ಟ ಹಿಡಿಯುತ್ತಿದ್ದನು. ಸಂತೆಯಲ್ಲಿ ಗ್ರಾಹಕರಿಂದ, ವ್ಯಾಪಾರಿಗಳಿಂದ ಹಣ, ಧಾನ್ಯ ಇತ್ಯಾದಿ ರೂಪದಲ್ಲಿ ಸಂಗ್ರಹಿಸುತ್ತಿದ್ದ ಸುಂಕದಲ್ಲಿ ಸರಕಾರಕ್ಕೆ ಕೆಲವು ಪಾಲು ಹೋಗಿ, ಮಿಕ್ಕುದು ಇವನಿಗೆ ಉಳಿಯುತ್ತಿತ್ತು.

ಸಂತೆಯನ್ನು ದೊಡ್ಡದಾಗಿ ಸಂಘಟಿಸಿದಷ್ಟೂ ಈತನ ಉಳಿತಾಯ ದೊಡ್ಡದಾಗುತ್ತಿತ್ತು. ಹೀಗಾಗಿ ಇವನು ಸಂತೆಗೆ ಬರುವ ವ್ಯಾಪಾರಿಗಳಿಗೂ ಗ್ರಾಹಕರಿಗೂ ಮಳಿಗೆ ಕಟ್ಟಿಸುವುದು, ಮರಗಳನ್ನು ನೆಡುವುದು, ಬಾವಿ ತೋಡುವುದು ಮೊದಲಾದ ಸೌಕರ್ಯಗಳನ್ನು ಒದಗಿಸುತ್ತಿದ್ದನು. ಹೀಗೆ ಸಂತೆಯನ್ನು ಅಂದರೆ ಪಟ್ಟಣವನ್ನು ರೂಪಿಸುವ, ನಿಯಂತ್ರಿಸುವ, ಪ್ರಭಾವಶಾಲಿ ಶೆಟ್ಟಿಯಾಗಿರುವ ಇವನನ್ನು ಪಟ್ಟಣಶೆಟ್ಟಿಯೆಂದು ಕರೆಯುತ್ತಿದ್ದರು. ಆದುದರಿಂದ ಪಟ್ಟಣಶೆಟ್ಟಿಯೆಂದರೆ ಸಂತೆಯಶೆಟ್ಟಿ ಎಂದೇ ಅರ್ಥ. ಮಿಕ್ಕ ಶೆಟ್ಟಿಗಳಿಂದ ಈತನು ಸಂತೆಯ ಸಂಘಟನೆಯ ಕಾರ್ಯದಿಂದಾಗಿ ಭಿನ್ನನೆನಿಸುತ್ತಿದ್ದನು.

"ಶೆಟ್ಟಿ ಇಳಿದಲ್ಲಿ ಪಟ್ಟಣ" ಎಂಬುದೊಂದು ಗಾದೆ. ಇಲ್ಲಿ ಪಟ್ಟಣವೆಂದರೆ ಈಗಿನ ಅರ್ಥದ ನಗರ(town) ಅಲ್ಲ. ಏಕೆಂದರೆ ಶೆಟ್ಟಿಗೂ ಒಂದು ನಗರ (town) ರೂಪಗೊಳ್ಳುವುದಕ್ಕೂ ಏನು ಸಂಬಂಧ? ಆದುದರಿಂದ "ಶೆಟ್ಟಿ ಇಳಿದಲ್ಲಿ ಪಟ್ಟಣ"ವೆಂದರೆ "ಶೆಟ್ಟಿ ಇಳಿದಲ್ಲಿ ಸಂತೆ"ಯೆಂದೇ ಅರ್ಥ. ಸಂತೆಯ ಸಂಘಟನೆ ಇವನ ಕರ್ತವ್ಯವಾಗಿರುವುದರಿಂದ, ಈ ಕೆಲಸದಲ್ಲಿ ಇವನು ಚತುರನಾಗಿರುವುದರಿಂದ, ಈತನು ಇಳಿದಲ್ಲಿ ಸಂತೆಯನ್ನೇ ರೂಪಿಸುವನೆಂದು ಅರ್ಥ.

"ಶೆಟ್ಟಿ ಸಿಂಗಾರಾಗೂದರಾಗ ಪಟ್ಟಣ ಹಾಳಾಯಿತು" ಎಂಬುದು ಇನ್ನೊಂದು ಗಾದೆ. ಶೆಟ್ಟಿಯು ನಗರವನ್ನು ರಕ್ಷಿಸುವ ಅಂದರೆ ನಾಶವಾಗದಂತೆ ನೋಡಿಕೊಳ್ಳುವ ಅಧಿಕಾರಿಯಲ್ಲ. ಹೀಗಿರುವಾಗ ಅವನು ಸಿಂಗಾರ ಆಗುವುದರೊಳಗಾಗಿ ನಗರ(town) ಹಾಳಾಯಿತೆಂಬ ಮಾತಿಗೆ ಏನು ಅರ್ಥ? ಎಂಬ ಸಂದೇಹ ಹುಟ್ಟುತ್ತದೆ. ಕಾರಣ ಇಲ್ಲಿಯೂ ಪಟ್ಟಣವೆಂದರೆ ಸಂತೆಯೆಂದೇ ಅರ್ಥ ಹೇಳಬೇಕು. ಸಂತೆಯನ್ನು ಸಂಘಟಿಸಬೇಕಾದ ಶೆಟ್ಟಿಯೇ ಸಿಂಗಾರ ಮಾಡಿಕೊಳ್ಳುತ್ತ ಮನೆಯಲ್ಲಿ ಉಳಿದರೆ, ಸಾಯಂಕಾಲದೊಳಗಾಗಿ ಸಂತೆ ಮುಗಿದೇ ಹೋಗುತ್ತದೆ ಅಥವಾ ನಾಶವಾಗುತ್ತದೆ ಎಂದು ಇಲ್ಲಿಯ ಅಭಿಪ್ರಾಯ.

ಈ ವಿವರಗಳು ಪಟ್ಟಣಶೆಟ್ಟಿಯೆಂದರೆ ಸಂತೆಯನ್ನು ಸಂಘಟಿಸುವ ಶೆಟ್ಟಿಯೆಂದು ತಿಳಿಸುತ್ತವೆ. ಅಲ್ಲಲ್ಲಿ ಇರುವ ತುಂಬ ಹಳೆಯ, ಸಂಪ್ರದಾಯಸ್ಥ ಪಟ್ಟಣಶೆಟ್ಟಿ ಮನೆತನಗಳನ್ನು ಪರಿಶೀಲಿಸಿದರೆ, ಅಲ್ಲಿ ಇನ್ನೂ ಉಳಿದಿರಬಹುದಾದ ಆಚರಣೆಗಳು, ವದಂತಿಗಳು, ಇವರ ವೃತ್ತಿಯ ಮೇಲೆ ಹೆಚ್ಚಿನ ಬೆಳಕು ಚೆಲ್ಲುವ ಸಾಧ್ಯತೆಯಿದೆ.

ಆಕರ : ಮಾರ್ಗ ಸಂಪುಟ–೩

ಪಂಚಮಸಾಲಿ : ಹಾಗೆಂದರೇನು?

ಲಿಂಗಾಯತ ಸಾಹಿತ್ಯ-ಸಿದ್ಧಾಂತಗಳನ್ನು ಕುರಿತು ನಡೆದಿರುವಷ್ಟು ಸಂಶೋಧನೆ, ಸಮಾಜವನ್ನು ಕುರಿತು ನಡೆದಿಲ್ಲ. ಹೀಗಿದ್ದೂ, ಅಬ್ಬೆದುಬ್ಬೈ, ಥರ್ಸ್ಟನ್, ಎಂಥೋವನ್, ಅಯ್ಯರ್, ನಂಜುಂಡಯ್ಯ ಅವರ ಕೃತಿಗಳಲ್ಲಿ ಲಿಂಗಾಯತ ಅಧ್ಯಯನಕ್ಕೆ ಅವಕಾಶ ಪ್ರಾಪ್ತವಾಗಿದೆ. ಇವುಗಳನ್ನು ಹೊರತುಪಡಿಸಿ, ಅಲ್ಲಲ್ಲಿ ಸಣ್ಣಪುಟ್ಟ ಗ್ರಂಥ ಲೇಖನಗಳು ಪ್ರಕಟವಾಗಿವೆ. ಈಗ ಸಮಾಜ ವೇಗವಾಗಿ ಬದಲಾಗುತ್ತಲಿರುವುದರಿಂದ, ಈ ಬಗ್ಗೆ ಅವಸರದ ಅಧ್ಯಯನ ಕೈಕೊಳ್ಳುವುದು ಅಗತ್ಯವೆನಿಸುತ್ತದೆ.

ಇತ್ತೀಚೆ ಲಿಂಗಾಯತ ಸಮಾಜದ ಒಡೆಯುವಿಕೆ ದಿನೇ ದಿನೇ ವರ್ಧಿಸುತ್ತ ನಡೆದಿದೆ. "ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು" ಎನ್ನುತ್ತ ಬಸವಣ್ಣ ಕಟ್ಟಿದ "ಭಕ್ತ" ಪಕ್ಷವು "ವಿಭಕ್ತ"ಗೊಳ್ಳುತ್ತ ನಡೆದು, ಇಂದು ಅಪಾಯದ ಅಂಚಿನತ್ತ ಸರಿದಿದೆ. ಇದೆಲ್ಲಕ್ಕೆ ಕಾರಣ ಕಟ್ಟುಕಥೆ ಹೇಳುವ ಪುರೋಹಿತರು, ಇದು ಸತ್ಯವೆಂದು ನಂಬುವ ಮುಗ್ಧಭಕ್ತರು. ಹೀಗೆ ವಿರೂಪಗೊಳಿಸಿದ ಇತಿಹಾಸವನ್ನು ಸರಿಪಡಿಸಿ, ವರ್ತಮಾನವನ್ನು ಶೋಷಣೆಯಿಂದ ಮುಕ್ತಮಾಡುವುದೇ ನಿಜವಾದ ಸಂಶೋಧನೆ. ಅಂಥ ಒಂದು ಪ್ರಯತ್ನವಾಗಿದೆ, ಈ ಲೇಖನ.

"ಪಂಚಮಸಾಲಿ ಎಂಬ ಪದದ ಅಕ್ಷರಶಃ ಅರ್ಥವೇನೆಂಬುದು ತಿಳಿಯದು"[೧] ಎಂದು ವಿದ್ವಾಂಸರು ಹೇಳುತ್ತಲೇ ಬಂದಿದ್ದಾರೆ. ಇದನ್ನು ಸಾಮಾನ್ಯವಾಗಿ ಅಕ್ಕಸಾಲಿ ಇತ್ಯಾದಿ ಶಬ್ದಗಳಂತೆ ಪಂಚಮ+ಸಾಲಿ ಎಂದು ಸರಳವಾಗಿ ಬಿಡಿಸಿಕೊಂಡು, ಪಂಚಮವೆಂಬುದು ಚಾತುರ್ವರ್ಣ ವ್ಯವಸ್ಥೆಗೂ ಆಚೆಯ ಜನಸಮುದಾಯ, ಸಾಲಿಯೆಂಬುದು ಶಾಲೆ ಎಂಬುದರ ತದ್ಭವ-ಹೀಗೆ ಸರಳ ಅರ್ಥ ಕಂಡು ಗಲಿಬಿಲಿಗೊಂಡು, ದಾರಿ ಕಾಣದೆ ನಿಂತುಬಿಟ್ಟಿದ್ದಾರೆ. ಹೀಗಾಗಿ ಇಲ್ಲಿ ಪಂಚಮವೆಂಬುದನ್ನು ವೈದಿಕ ವರ್ಣವ್ಯವಸ್ಥೆಯ ಹಿನ್ನೆಲೆಯಲ್ಲಿ, ಸಾಲಿ ಎಂಬುದನ್ನು ಸಂಸ್ಕೃತಭಾಷೆಯ ತದ್ಭವ ಹಿನ್ನೆಲೆಯಲ್ಲಿ ನೋಡಬಾರದೆನಿಸುತ್ತದೆ.

---

೧. ಲಿಂಗಾಯತ ಅಧ್ಯಯನಗಳು-ಡಾ॥ ಚಿದಾನಂದಮೂರ್ತಿ. ಪು ೫೨೩.

ಇನ್ನು ಕೆಲವರು ಇದನ್ನು ಶರಣಧರ್ಮದ ಪಂಚ ಆಚಾರಗಳ (ಪಂಚಾಚಾರ) ಹಿನ್ನೆಲೆಯಲ್ಲಿ ಅರ್ಥೈಸಲು ಮಾಡುವ ಪ್ರಯತ್ನವು ಈ ಸಿದ್ಧಾಂತದ ಅಂಗವಾಗಿರುವ ಅಷ್ಟಾವರಣ-ಆತ್ಮವಾಗಿರುವ ಷಟ್ಥಲಗಳನ್ನು ದೂರವಿಟ್ಟು, ವ್ಯಾಪಕ ಪರಿಕಲ್ಪನೆಯನ್ನು ಸೀಮಿತಗೊಳಿಸುತ್ತದೆ.

ಮತ್ತೆ ಕೆಲವರು ವೀರಶೈವ ಪಂಚಾಚಾರ್ಯರಿಗೂ, ಪಂಚಮಸಾಲಿಗೂ ಸಂಬಂಧ ಕಲ್ಪಿಸುವ ವ್ಯವಸ್ಥಿತ ಪ್ರಯತ್ನ ನಡೆಸಿದ್ದಾರೆ. ಆದರೆ "ವೀರಶೈವ" ಶಬ್ದ ಆಂಧ್ರದಿಂದ ಕರ್ನಾಟಕವನ್ನು ಪ್ರವೇಶಿಸಿದುದು ೧೪ನೆಯ ಶತಮಾನದಲ್ಲಿ, ಆಂಧ್ರ ವೀರಶೈವರಿಂದ ಚತುರಾಚಾರ್ಯ ಒಕ್ಕೂಟ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದುದು ೧೬ನೆಯ ಶತಮಾನದಲ್ಲಿ, ಕಾಶಿಪೀಠವನ್ನು ಸೇರಿಸಿಕೊಳ್ಳುವ ಮೂಲಕ ಈ ಒಕ್ಕೂಟದ ಹೆಸರು ಪಂಚಾಚಾರ್ಯವಾದದ್ದು ೧೭ನೆಯ ಶತಮಾನದಲ್ಲಿ-ಇವು ನನಗೆ ಮತ್ತು ನನ್ನಂತೆ ಅನೇಕರಿಗೆ ಖಚಿತವಾಗಿರುವುದರಿಂದ, ಪಂಚಮಸಾಲಿ ಮತ್ತು ಪಂಚಾಚಾರ್ಯಗಳಿಗೆ ಕಲ್ಪಿಸುವ ಸಂಬಂಧವು ಪಂಚಮಸಾಲಿಗಳ ಪ್ರಾಚೀನತೆಯನ್ನು ೧೭ನೆಯ ಶತಮಾನದಷ್ಟು ಈಚೆಗೆ ನಿಲ್ಲಿಸುತ್ತದೆ. ಹೀಗಾಗಿ ಇವುಗಳಲ್ಲಿ ಪ್ರಾಸನ್ನು ಬಿಟ್ಟರೆ, ಯಾವುದೇ ಪರಂಪರಾಗತ ಸಂಬಂಧವಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದಾಗಿದೆ.

ಇಂಥ ಸಂದರ್ಭದಲ್ಲಿ ವೈದಿಕರ ಚಾತುರ್ವರ್ಣ ಸಮಾಜವ್ಯವಸ್ಥೆಯನ್ನು ನಿರಾಕರಿಸಿ, ಬಸವಣ್ಣ ಹುಟ್ಟುಹಾಕಿದ "ಅತಿವರ್ಣಿ"ಗಳೆಂಬ ಐದನೆಯ ಸಮಾಜವೇ ಪಂಚಮ (=ಐದನೆಯ) ಸಾಲು (=ಸಂಪ್ರದಾಯ)ಸಮುದಾಯವಾಗಿರಬಹುದೆ? ಎಂಬ ಅನುಮಾನ ನನ್ನಲ್ಲಿ ಮೂಡಿದ್ದಿತು. ಅಂದರೆ ಬಸವಣ್ಣ ರೂಪಿಸಿದ ವರ್ಣರಹಿತ ಒಟ್ಟು ಸಮಾಜವೇ "ಪಂಚಮಸಾಲು". ಈ ಸಮಾಜವೇ ವೃತ್ತಿ ಕಾರಣವಾಗಿ ಪಂಚಮಸಾಲು ಗಾಣಿಗ, ಪಂಚಮಸಾಲು ಅಗಸ, ಪಂಚಮಸಾಲು ಬಣಜಿಗ ಹೀಗೆ ಮತ್ತೆ ಉಪಪಂಗಡಗಳಾಗಿ ಬಿಚ್ಚಿಕೊಂಡಿರಬಹುದೆ? ಎಂದು ಸಂದೇಹಿಸಿದ್ದೆನು. ಇದಕ್ಕೆ ಇಂದು ಆಧಾರಗಳಿಲ್ಲ, ಹಿಂದೆಯೂ ಆಧಾರಗಳು ಸಿಗುವದಿಲ್ಲ.

ವಾಣಿಜ್ಯ ಉತ್ಪತ್ತಿ, ಪಂಚಶೆಟ್ಟಿ ಉತ್ಪತ್ತಿ ಇತ್ಯಾದಿ ಹೆಸರಿನ ಸಣ್ಣಪುಟ್ಟ ಪ್ರಾಚೀನ ಹಸ್ತಪ್ರತಿಗಳಲ್ಲಿ ಶಿವನ ೫ ಮುಖಗಳಿಂದ ಹುಟ್ಟಿದ ೫ ಜನ ಪಂಚಮರೇ (ಮಖಾರಿ, ಕಾಲಾರಿ, ಪುರಾರಿ, ಸ್ಮರಾರಿ, ವೇದಾರಿ) ಪಂಚಮಸಾಲಿಗಳ ಮೂಲವೆಂದು ಹೇಳಲಾಗಿದೆ. "ವೀರಶೈವ ಸದಾಚಾರಸಂಗ್ರಹ" ಕೃತಿಯಲ್ಲಿ ಶಿವನ ೫ ಮುಖಗಳಿಂದಲ್ಲ, ೫ನೆಯದಾದ ಈಶಾನ ಮುಖದಿಂದ ಪಂಚಮುಖ ಗಣೇಶ್ವರ ಹುಟ್ಟಿದ. ಇವನ ಐದು ಮುಖಗಳಿಂದ ಐವರು ಪಂಚಮರು ಹುಟ್ಟಿದರು. ಇವರೇ ಪಂಚಮಸಾಲಿಗಳು. ಈ ಒಂದೊಂದರಲ್ಲಿ ಮತ್ತೆ ೧೨ ಪಂಗಡಗಳು ಹುಟ್ಟಿದವು-ಎಂದು ಹೇಳಲಾಗಿದೆ. ಹೀಗೆ ಏನೇನೋ ಕಟ್ಟುಕಥೆ ಹುಟ್ಟಿಸಿಕೊಂಡು ಹೇಳಿದ, ಈ ೫ ಶಾಖೆ, ೬೦ ಉಪಶಾಖೆಗಳ ಹೆಸರುಗಳಲ್ಲಿ ಈಗ ಒಂದೂ ಕಾಣುತ್ತಿಲ್ಲವಾಗಿ ಮತ್ತು ಮಖಾರಿ, ಕಾಲಾರಿ, ಪುರಾರಿ ಇತ್ಯಾದಿ ಹೆಸರುಗಳೆಲ್ಲ ಜಂಗಮರಿಂದ ಆಧುನಿಕ ಕಾಲದಲ್ಲಿ ಕಲ್ಪಿತಗಳಾಗಿ ತೋರುತ್ತವೆ" ಎನ್ನುವ ಡಾ|| ಚಿದಾನಂದಮೂರ್ತಿಗಳ ಅಭಿಪ್ರಾಯ ತುಂಬಾ ಸರಿಯಾದುದು. ಇದಲ್ಲದೆ ಪಂಚಾಸ್ಯ ಗಣವರನ ಒಬ್ಬ ಸತಿ ಸರ್ವಮಂಗಳೆಗೆ ೧೩ ಜನ ಪಂಚಮರು, ಇನ್ನೊಬ್ಬ ಸತಿ ಗಂಗಾಯಿಗೆ ೧೩ ಜನ ಗೌರವರು (ಗವರೆ=ವ್ಯಾಪಾರಿ) ಹುಟ್ಟಿದರೆಂಬ ಬೇರೊಂದು ಕಥೆಯಿದೆ. ಮಿಂಡಗುದ್ದಲಿಸೆಟ್ಟಿಗೆ ಉತ್ತರ ದಿಕ್ಕು, ಸೆಟ್ಟಿಗುತ್ತಗೆ ಪೂರ್ವದಿಕ್ಕು, ಗುಡಿಸೆಟ್ಟಿಗೆ ದಕ್ಷಿಣದಿಕ್ಕು, ಹಸಿಬೆಸೆಟ್ಟಿಗೆ ಪಶ್ಚಿಮ ದಿಕ್ಕು, ನಾಡನಾಳುವ ಸೆಟ್ಟಿಗೆ ಸಮಸ್ತದೇಶ-ವಹಿಸಿಕೊಡಲಾಯಿತೆಂಬ ಇನ್ನೊಂದು ಕಥೆಯಿದೆ.

ಇಂಥ ಗೊಂದಲದ ನಡುವೆಯೂ, ನನಗೆ ಗೊತ್ತಿದ್ದ ಹಳೆಯ ಸಾಮಗ್ರಿಯನ್ನೇ ಇತ್ತೀಚೆ ಹೊಸ ದೃಷ್ಟಿಯಿಂದ ನೋಡಿದ ಫಲವಾಗಿ, ಈ ಸಮಸ್ಯೆಗೆ ಒಂದಿಷ್ಟು ಪರಿಹಾರ ಲಭಿಸಿದೆ. ಅದು: ನೂರಿನ್ನೂರು ವರ್ಷಗಳಷ್ಟು ಹಿಂದಿನವಾಗಿರಬಹುದಾದ, ಸಣ್ಣ ಸಣ್ಣ ಕನ್ನಡ ಕೃತಿಗಳು

೧. ವಾಣಿಜ್ಯ ಉತ್ಪತ್ತಿ (ಕರ್ತೃ?), ವಾಣಿಜ್ಯೋತ್ಪತ್ತಿ (ಚೆನ್ನವೀರಾರ್ಯ), ವಣಿಗುತ್ಪತ್ತಿ (ಗುಬ್ಬಿಯ ಮಲ್ಲಣ್ಣ)

೨. ಪಂಚಮಸಾಲಿ ಉತ್ಪತ್ತಿ, ಪಂಚಮಜಾತಿ ಲಕ್ಷಣವು, ಪಂಚಮಿಸೆಟ್ಟಿಗಳ ವಿಸ್ತೀರ್ಣ, ಪಂಚಮಶಿವಭಕ್ತರ ಕುಲಾಗಮ. ಪಂಚಶೆಟ್ಟಿ ಉತ್ಪತ್ತಿ.

ಈ ಶೀರ್ಷಿಕೆಯಿಂದ ಸಿಗುತ್ತವೆ. ಇದೇ ವಿಷಯವು ಸಂಸ್ಕೃತ ಬ್ರಹ್ಮಾಂಡಪುರಾಣ, ವಾತುಲ–ಸುಪ್ರಭೇದ ಇತ್ಯಾದಿ ಆಗಮಗಳ ಭಾಗವಾಗಿಯೂ ದೊರೆಯುತ್ತದೆ. ಇದಲ್ಲದೆ ಒಂದು ಷಟ್ಪದಿ ಕೃತಿಯನ್ನು "ಪಂಚಮೋದ್ಭವ ಕಾವ್ಯ" ಹೆಸರಿನಿಂದ ೧೭ನೆಯ ಶತಮಾನದ ಮೋದಿಯರುದ್ರ ಬರೆದಿದ್ದು, ಅಲಭ್ಯವೆಂದು ಕವಿಚರಿತೆಕಾರರು ಹೇಳಿದ್ದಾರೆ. ಆದರೆ ನನಗೆ ಇದರ ಒಂದು ಅಪೂರ್ಣ ಕಾಗದಪ್ರತಿ ಸಿಕ್ಕಿದ್ದರೂ ಮೇಲಿನ ಕೃತಿಗಳ ವಿಷಯವೇ ಇಲ್ಲಿದೆ.

ಮೇಲೆ ಹೇಳಿದ ಎಲ್ಲ ಕೃತಿಗಳಿಗೆ ಲಿಪಿಕಾರರ ಅಜ್ಞಾನ ಕಾರಣವಾಗಿ ಶೀರ್ಷಿಕೆ ಬೇರೆ ಬೇರೆಯಾಗಿದ್ದರೂ ಐದು ಶೆಟ್ಟಿಗಳನ್ನು ಕುರಿತ ಇವುಗಳ ಪಠ್ಯ ವಿವರಣೆ ಹೆಚ್ಚು ಕಡಿಮೆ ಒಂದೇ ಆಗಿದೆ. ಸಾಮಾಜಿಕರ ವೃತ್ತಿಗಳನ್ನು, ವೃತ್ತಿಕಾರರನ್ನು ಪೌರಾಣೀಕರಿಸಿ ಬರೆದ ಬರಹಗಳಿವು. ಇಲ್ಲಿಯ ವಾತುಲಾಗಮ, ಬ್ರಹ್ಮಾಂಡಪುರಾಣ ಇತ್ಯಾದಿ ಆಕರ ನಾಮಗಳೇ ಇದೆಲ್ಲ ವೈಭವೀಕೃತ ವಾಸ್ತವವೆಂದು ಸ್ಪಷ್ಟಪಡಿಸುತ್ತವೆ. ಅದೇನೇ ಇರಲಿ, ಈ ಕೃತಿಗಳಲ್ಲಿ ಬರುವ ವಿವರ ಹೀಗಿದೆ.

"ಐಹೊಳೆಯ[೨] ಒಡೆಯ ವೀರಗಂಧರ್ವ, ಹೆಂಡತಿ ಸುಮತಾದೇವಿ, ಮಗಳು ಬಲಿದೇವಿ. ತಂದೆಯಾದ ವೀರಗಂಧರ್ವನನ್ನು ಬಂಧಿಸಿದ ಗೋಮುಖಾಸುರನನ್ನು ವಧಿಸಲು ಬಲಿದೇವಿ ಕೈಕೊಂಡ ತಪಸ್ಸಿಗೆ ಮೆಚ್ಚಿದ ಶಿವನು, ತನ್ನ ಬಲದ ಕಂಕುಳದಿಂದ ಪಂಚಮುಖ ಗಣಾಧೀಶ್ವರನನ್ನು ಹುಟ್ಟಿಸಿದನು.

ಈ ಪಂಚಮುಖ ಗಣಾಧೀಶ್ವರನು ಗೋಮುಖಾಸುರನನ್ನು ಕೊಂದು, ಬಲಿದೇವಿಯನ್ನು ಮದುವೆಯಾದನು. ಇವರ ಮಗ ಮಖಾರಿ. ಈತನು ಪಾತಾಳಕ್ಕೆ ಹೋಗಿ, ನಾಗರಾಜನ ಮಗಳು ಫಣಾಮಣಿಯನ್ನು ಮದುವೆಯಾಗಿ, ಅಲ್ಲಿಂದ ಮಂಗಲಕಾರ್ಯಗಳಿಗೆ ಬೇಕಾಗುವ ನಾಗವಲ್ಲಿ, ಕರತಾಳ, ಅಡಕೆ, ತೆಂಗು, ಅರಿಷಿಣ–ಈ ಐದು ವಸ್ತುಗಳನ್ನು ತಂದನು. ಪ್ಯಾಟಿ, ಪಟ್ಟಣ ಕಟ್ಟಿಸಿ ಪ್ರಸಿದ್ಧನಾದನು. ಈ ದಂಪತಿಗಳಿಗೆ ನಾಡನಾಳುವ ಸೆಟ್ಟಿ, ಸೆಟ್ಟಿಗುತ್ತ, ಮಹಾಜನಸೆಟ್ಟಿ, ಪಟ್ಟಣಸೆಟ್ಟಿ, ಮಿಂಡಗುದ್ದಲಿಸೆಟ್ಟಿ ಎಂಬ ೫ ಜನ ಮಕ್ಕಳಾದರು. ತಂದೆ ಇವರಿಗೆ ಒಂದೊಂದು ಹೊಣೆ ಹೊರಿಸಿದನು. ೫ನೆಯವನಾದ ಮಿಂಡಗುದ್ದಲಿ ಸೆಟ್ಟಿಗೆ ಹೊಲ ತೋಟ ಗದ್ದೆಗಳಲ್ಲಿ ೧೮ ತರದ ಧಾನ್ಯ ಬೆಳೆಯಲು ಹೇಳಿದನು".

---

೨. ಐಹೊಳೆಯು ೫೦೦ ಜನ ವ್ಯಾಪಾರಿ ಸದಸ್ಯರ ಸಂಘದ ಕೇಂದ್ರವಾಗಿದ್ದುದು ಶಾಸನಪ್ರಸಿದ್ಧ ವಿಷಯ.

ಈ ಐದು ಬಗೆಯ ಸೆಟ್ಟಿಯರ ಹೆಸರು, ಕ್ರಮಗಳಲ್ಲಿ ಒಂದಿಷ್ಟು ವ್ಯತ್ಯಾಸವಿದ್ದರೂ[೩] ಸಾಮಾನ್ಯವಾಗಿ ೫ನೆಯ ಶೆಟ್ಟಿ ಹೆಸರು ಮಿಂಡಗುದ್ದಲಿಶೆಟ್ಟಿ ಎಂದು ದಾಖಲಾಗಿದೆ. ಅಣ್ಣತಮ್ಮಂದಿರೆನಿಸುವ ಈ ಐದು ಸೆಟ್ಟಿಗಳೇ ಪಂಚಸೆಟ್ಟಿಗಳು. ೫ನೆಯ ಮಿಂಡಗುದ್ದಲಿಸೆಟ್ಟಿಯೇ ಪಂಚಮಸೆಟ್ಟಿ. ಈ ಪಂಚಮಸೆಟ್ಟಿಯದೇ ಪಂಚಮಸಾಲು ಅಥವಾ ಪಂಚಮಸಾಲಿ. ಇವನನ್ನು ಬಿಟ್ಟರೆ ೪ನೆಯ ಚತುರ್ಥಸೆಟ್ಟಿಯೇ ಚೌಸೆಟ್ಟಿ (ಈ ಅಡ್ಡಹೆಸರಿನ ಲಿಂಗಾಯತ ಸೆಟ್ಟಿಗಳು ಹಾವೇರಿಯಲ್ಲಿ ಈಗಲೂ ಇದ್ದಾರೆ. ಬಹುಶಃ ಕೌಸಾಳಿ ಎಂಬ ಅಡ್ಡಹೆಸರು ಮೂಲತಃ ಚೌಸಾಳಿಯಾಗಿದ್ದರೆ ಇದರ ನಿಜರೂಪ ಚತುರ್ಥಸಾಲು>ಚೌಸಾಲು ಇರಬಹುದು). ಮೂರನೆಯ ಸೆಟ್ಟಿಯೇ ತೃತೀಯ ಸೆಟ್ಟಿ. ಬಹುಶಃ ತಿರಸೆಟ್ಟಿ ಹೆಸರಿನ ಅಡ್ಡ ಹೆಸರಿನ ಕುಟುಂಬಗಳು ಸಿಗುವ ಸಂಭವವಿದೆ, ಶೋಧಿಸಬೇಕು. ಇಂದು ಇದು ಬೈಗುಳವಾಗಿ ಬಳಕೆಯಲ್ಲಿರುವುದನ್ನು ನೋಡಿದರೆ, ಈ ಮೂರನೆಯ ಶೆಟ್ಟಿವರ್ಗ ಬಹುಶಃ ತುಂಬ ಒರಟ, ಹಟಮಾರಿ ಇರಬಹುದು. "ದ್ವಿತೀಯ ಶೆಟ್ಟಿ" ಹೆಸರು ಶೋಧಿಸಬೇಕಾಗಿದೆ. ಸಂತೋಷದ ಸಂಗತಿಯೆಂದರೆ ಹುಬ್ಬಳ್ಳಿಯ ಜೈನರಲ್ಲಿ ಪ್ರಥಮಶೆಟ್ಟಿ (ಬೋಗಾರ)ಅಡ್ಡ ಹೆಸರಿನ ಕುಟುಂಬಗಳು ಈಗಲೂ ಕಂಡುಬರುತ್ತವೆ. ಲಿಂಗಾಯತ ಆದಿಬಣಜಿಗರೇ ಪ್ರಥಮಶೆಟ್ಟಿ (ಆದಿ=ಪ್ರಥಮ)ಆಗಿರಬಹುದು. ಇನ್ನೂ ಒಂದು ವಿಶೇಷವೆಂದರೆ ಜೈನರಲ್ಲಿ ಚತುರ್ಥ (ವ್ಯಾಪಾರ), ಪಂಚಮ (ಕೃಷಿ) ಎಂಬ ವರ್ಗಗಳಿವೆ. ಇವು ಮೇಲೆ ಹೇಳಿದ ಚೌಸೆಟ್ಟಿ, ಪಂಚಮಸೆಟ್ಟಿಗಳನ್ನು ನೆನಪಿಸುತ್ತವೆ.[೪] ಮಿಂಡಗುದ್ದಲಿ ಕೇತಿಸೆಟ್ಟಿಯವರ ಮಗ ಮಲ್ಲಿಸೆಟ್ಟಿಯು ಪಾರ್ಶ್ವನಾಥ ವಿಗ್ರಹ ಮಾಡಿಸಿರುವ ವಿಷಯ ಯಲಬುರ್ಗಾ ಶಾಸನ (ಕೊಪ್ಪಳ ಜಿಲ್ಲೆಯ ಶಾಸನಗಳು: ಯಲಬುರ್ಗಾ-೬, ಯಲಬುರ್ಗಾ, ೧೩ನೆಯ ಶತಮಾನ)ದಲ್ಲಿ ಬರುವುದರಿಂದ, ಜೈನರಲ್ಲಿಯೂ ಮಿಂಡಗುದ್ದಲಿಸೆಟ್ಟಿಗಳಿದ್ದರೆಂದು ಸ್ಪಷ್ಟವಾಗುತ್ತದೆ.

ಈ ವಿವರಗಳನ್ನು ನೋಡಿದರೆ, ಪ್ರಾಚೀನಕಾಲದ ಲಿಂಗಾಯತರಲ್ಲಿ ಮೂಲತಃ ೫ ವೃತ್ತಿ ವರ್ಗಗಳನ್ನು ಕಲ್ಪಿಸಲಾಗಿದ್ದು, ಬಹುಶ: ಜೈನರಿಂದಲೇ ಈ ಕಲ್ಪನೆಯನ್ನು ಇವರು ಸ್ವೀಕರಿಸಬಹುದು.

*****

ಇಲ್ಲಿಯ ಮಿಂಡಗುದ್ದಲಿಸೆಟ್ಟಿಯ ಅಂದರೆ ಪಂಚಮಸಾಲಿಯವರ ಕೃಷಿವೃತ್ತಿಯನ್ನು ನೋಡಿದರೆ, ಶೆಟ್ಟಿ ಅಥವಾ ಬಣಜಿಗರೆಂದರೆ ಮೂಲತಃ ವ್ಯಾಪಾರ (Business) ಮಾಡುವವರೇ ಎಂದು ಅರ್ಥವಿರಲಿಕ್ಕಿಲ್ಲ, ವೃತ್ತಿ(Profession)ಗಾರರು ಎಂದೇ ಅರ್ಥವಿರಬಹುದು. ಇಂದಿಗೂ ಮೈಸೂರು ಪ್ರದೇಶದಲ್ಲಿ ಅಗಸರು, ಕುಂಬಾರರು, ಗಾಣಿಗರು ತಮ್ಮನ್ನು ಮಡಿವಾಳಶೆಟ್ಟಿ,

---

೩. ಕೆಲವು ಹಸ್ತಪ್ರತಿಗಳಲ್ಲಿ ಗುಡಿಸೆಟ್ಟಿ, ಹಸಿಬೆಸೆಟ್ಟಿ ಹೆಸರುಗಳು ಸಿಗುತ್ತವೆ. ಇಲ್ಲಿಯ ಗುಡಿಸೆಟ್ಟಿಯೆಂದರೆ ಗುಡಾರಸೆಟ್ಟಿ. ಇದರ ಸವೆದರೂಪ ಗುಣಾರಿಸೆಟ್ಟಿ. ಗುಣಾರಿ ಅಡ್ಡಹೆಸರಿನ ಬಣಜಿಗ ಕುಟುಂಬಗಳು ಅಲ್ಲಲ್ಲಿ ಕಂಡುಬರುತ್ತವೆ. ಗುಣಾರಿಮಠ ಹೆಸರಿನ ಜಂಗಮ ಮನೆತನಗಳೂ ಗುಣಾರಿ ಹೆಸರಿನ ಭಕ್ತರ ಮನೆತನೆಗಳೂ ಅಲ್ಲಲ್ಲಿ ಸಿಗುತ್ತವೆ. ಹಸಿಬೆಸೆಟ್ಟಿಯೆಂದರೆ ಇಂದಿನ ಹಸಬಿ ಅಡ್ಡಹೆಸರಿನ ಬಣಜಿಗ ಕುಟುಂಬಗಳು.

೪. ನನ್ನ ಪಂಚಮಸಾಲಿ ಮಿತ್ರರೊಬ್ಬರು ತಾವು ಪಂಚಮರೆಂದು ಹೇಳುತ್ತ, ಸದಲಗಾ ಕ್ಷೇತ್ರದ ಶಾಸಕರಾದ ಶ್ರೀ ಪ್ರಕಾಶ ಹುಕ್ಕೇರಿಯವರು "ಚತುರ್ಥರು" ಎಂದು ನುಡಿದರು. ಶ್ರೀ ಹುಕ್ಕೇರಿಯರು ಬಣಜಿಗರಾಗಿದ್ದು, ಜನರ ಮನಸ್ಸಿಲ್ಲಿ ಬಣಜಿಗರು=ಚತುರ್ಥರೆಂಬ ಅಂಶ ಜೀವಂತವಾಗಿರುವುದಕ್ಕೆ ನಿದರ್ಶನವಿದು.

ಕುಂಬಾರಶೆಟ್ಟಿ, ಗಾಣಿಗಶೆಟ್ಟಿಯೆಂದು ಕರೆದುಕೊಳ್ಳುವುದನ್ನು ನೆನೆಯಬಹುದು. ಶಾಸನಗಳೂ ಈ ಅಭಿಪ್ರಾಯವನ್ನು ಬೆಂಬಲಿಸುತ್ತವೆ. ಸಾಹಿತ್ಯ ಪರಿಷತ್ತಿನ ನಿಘಂಟು ವೈಶ್ಯ ಶಬ್ದಕ್ಕೆ ಅರ್ಥ ಬರೆಯುತ್ತ, ಭಗವದ್ಗೀತೆಯಲ್ಲಿ ವೈಶ್ಯನಿಗೆ ಕೃಷಿ, ಗೋರಕ್ಷೆ, ವಾಣಿಜ್ಯ ಇತ್ಯಾದಿ ವೃತ್ತಿಗಳನ್ನು ಹೇಳಲಾಗಿರುವುದನ್ನು ಇಲ್ಲಿ ನೆನೆಯಬಹುದು. ಈ ಪಂಚಶೆಟ್ಟಿಗಳಿಗೆ ನೆರವಾಗಿ ಆಯ ಪಡೆಯುತ್ತಿದ್ದ ಬಡಿಗ, ಕಮ್ಮಾರ ಮೊದಲಾದ ಎಂಟು ವೃತ್ತಿಗಳಿಗೆ ಸಂಬಂಧಿಸಿದವರನ್ನು ಶಾಸನಗಳು "ಎಂಟು ಹಿಟ್ಟು" ಎಂದು ಕರೆದಿವೆ. ಶಾಸನಗಳಂತೆ ಅಲ್ಲಮನೂ " ಎಂಟು ಹಿಟ್ಟು ಪಂಚಮಠವುಂಟು ಧರೆಯಮೇಲೆ"* ಎಂದು ಎರಡೂ ಪದಗಳನ್ನು ಜೊತೆಗೂಡಿಸಿಯೇ ಕರೆದಿರುವುದು, ಈ ಎರಡೂ ಸಂಘಟನೆಗಳ ಪರಸ್ಪರ ಸಂಬಂಧವನ್ನು ಸೂಚಿಸುತ್ತದೆ.

ಇದಲ್ಲದೆ " ಪಂಚಬಣಜಿಗರು" ಎಂಬುದಕ್ಕೆ ಬೇರೆ ಬೇರೆ ಐದು "ಬಣ"ಗಳಿಗೆ ಸಂಬಂಧಿಸಿದವರು ಎಂಬ ಅರ್ಥವೂ ಇರಬಹುದು. ಬಣ್ಣಕಾರ (Colurist)ರಲ್ಲದ "ಬಣಕಾರ" ಅಡ್ಡಹೆಸರು ಲಿಂಗಾಯತರಲ್ಲಿರುವುದನ್ನು ಇಲ್ಲಿ ನೆನೆಯಬಹುದು. ಲಿಂಗಾಯತ "ಬಳೆಗಾರ" ಅಡ್ಡಹೆಸರು ಬಳೆಮಾರುವ ವೃತ್ತಿಯನ್ನು ಸೂಚಿಸಿದೆ, ಬಣಕಾರ>ಬಳಗಾರ>ಬಳೆಗಾರ ಎಂಬುದರ ಸವೆದ ರೂಪವಾಗಿದೆ. ಶಾಸನಗಳಲ್ಲಿ ಬರುವ "ಬಳೆಗಾರಸೆಟ್ಟಿ" ಪದ ಬಳೆಯ ವ್ಯಾಪಾರಿಯನ್ನಲ್ಲ, ಈ ಬಣಗಳಿಗೆ ಸಂಬಂಧಪಟ್ಟವನನ್ನು ಸೂಚಿಸುತ್ತಿರಬಹುದು. ಒಟ್ಟಾರೆ, ಬಣ>ಬಳ>ಬಳಗ (ಸಮೂಹ) ಇತ್ಯಾದಿ ಶಬ್ದಗಳನ್ನು ನೋಡಿದರೆ "ಬಣಜು" ಎಂಬುದಕ್ಕೆ ಸಮುದಾಯತನ ಎಂಬ ಅರ್ಥವನ್ನು ಹೇಳಲು ಮನಸ್ಸಾಗುತ್ತದೆ.

ಇಷ್ಟು ಚರ್ಚೆಯ ಹಿನ್ನೆಲೆಯಲ್ಲಿ ಜನೆಯದಾದ ಮಿಂಡಗುದ್ದಲಿ ಸೆಟ್ಟಿವರ್ಗವನ್ನು ಕುರಿತು ಚರ್ಚಿಸಬಹುದು. ಇದರ ನಿಜರೂಪ ಮೇಂಡೆಗುದ್ದಲಿ ಸೆಟ್ಟಿ. ಮೇಂಡೆ ಎಂದರೆ ಮೇಟೆ, ಮೇಟಿ. ಮೇಟಿಗುದ್ದಲಿಸೆಟ್ಟಿಗಳೆಂದು ಇದರ ಅರ್ಥ. (ಪಂಚಮಸಾಲಿಗಳಾಗಿರುವ ಮೇಂಡೆಗಾರ, ಮೆಟಗೊಡ್ಡಿ ಅಡ್ಡಹೆಸರಿನ ಕುಟುಂಬಗಳು ಮಿಂಡಗುದ್ದಲಿಸೆಟ್ಟಿಗಳೇ ಆಗಿದ್ದಾರೆ). ಇಂದಿಗೂ ಪಂಚಮಸಾಲಿಗಳ ಮುಖ್ಯವೃತ್ತಿ ಮೇಟಿ ಗುದ್ದಲಿ ಇತ್ಯಾದಿ ಉಪಕರಣಗಳ ಕೃಷಿಯೇ ಆಗಿರುವುದನ್ನು ಇಲ್ಲಿ ಗಮನಿಸಬೇಕು. ಒಟ್ಟಾರೆ, ಪ್ರಥಮಸೆಟ್ಟಿಯೆಂದರೆ ಪ್ರಥಮಸಾಲು, ಪಂಚಮಸೆಟ್ಟಿಯೆಂದರೆ ಪಂಚಮಸಾಲು. ಈ ಪಂಚಮಸಾಲು ಎಂಬುದೇ ಪಂಚಮಸಾಲಿಯಾಗಿದೆ. ಇಲ್ಲಿ ಸಾಲು ಅಂದರೆ ಸಂಪ್ರದಾಯ ಎಂದು ಅರ್ಥ. (ಸಾಲಾವಳಿ ಪದ ಗಮನಿಸಿರಿ). ನಮ್ಮದು ಕೃಷಿಪ್ರಧಾನ ರಾಜ್ಯವಾಗಿರುವುದರಿಂದ ಈ ವೃತಿಯ ಮಿಂಡಗುದ್ದಲಿಸೆಟ್ಟಿಗಳು ಅಂದರೆ ಪಂಚಮಸಾಲಿಗಳು ಸಹಜವಾಗಿಯೇ ದೊಡ್ಡ ಸಂಖ್ಯೆಯಲ್ಲಿದ್ದಾರೆ.

ಇಂದು ಸಂಕೇಶ್ವರ ಇತ್ಯಾದಿ ಗ್ರಾಮಗಳಲ್ಲಿರುವ ಮೆಂಡಗುದ್ದಲಿ, ಮಿಂಡಗುದ್ದಲಿಸೆಟ್ಟಿ ಕುಟುಂಬಗಳು ತಮ್ಮನ್ನು ಬಣಜಿಗರೆಂದು ಹೇಳಿಕೊಳ್ಳುತ್ತಲಿದ್ದಾರೆ. ಹೀಗೆ ಹೇಳಿಕೊಳ್ಳಲು ಕಾರಣ, ಮೂಲತಃ ಪಂಚಮಸಾಲಿಗಳೇ ಆಗಿರುವ ಇವರು ಮಿಂಡಗುದ್ದಲಿ+ಸೆಟ್ಟಿ ಎಂದು ಕರೆದುಕೊಳ್ಳುತ್ತ, ಸೆಟ್ಟಿಪದ ಉಳಿಸಿಕೊಂಡುದು. ಮಿಕ್ಕವರು ಪಂಚಮಸೆಟ್ಟಿಗೆ ಬದಲು ಪಂಚಮಸಾಲು ಎಂದು ಕರೆಯಿಸಿಕೊಳ್ಳುವಲ್ಲಿ ಪಂಚಮಸಾಲಿಗಳೆನಿಸಿದರು.

---

* ಪಂಚಮಠ=ಐದು ಶೆಟ್ಟಿಗಳಿಗೆ ಸಂಬಂಧಿಸಿದ ಲಾಕುಳಶೈವ ಮಠಗಳು ?

ಒಟ್ಟಾರೆ ಪಂಚಮಸಾಲಿಗಳೆಂದರೆ ಅಣ್ಣತಮ್ಮಂದಿರಾದ ಐದು ಬಗೆಯ ಸೆಟ್ಟಿಗಳಲ್ಲಿ ಐದನೆಯವರಾದ ಪಂಚಮಸೆಟ್ಟಿಗಳು ಅಥವಾ ಪಂಚಮಸಾಲಿ ಸೆಟ್ಟಿಗಳು ಅಥವಾ ಮಿಂಡಗುದ್ದಲಿಸೆಟ್ಟಿಗಳು. ಈ ಮಿಂಡಗುದ್ದಲಿಸೆಟ್ಟಿಗಳ ಉಲ್ಲೇಖ ೧೧ನೆಯ ಶತಮಾನದಿಂದಲೂ ಶಾಸನಗಳಲ್ಲಿ ಕಂಡುಬರುತ್ತದೆ.

ಬಹುಶಃ ಶಾಸನಗಳಲ್ಲಿ ಬರುವ ಲಾಕುಳಶೈವರ "ಪಂಚಮಠ"ವೆಂಬುದು ಈ ೫ ಬಗೆಯ ಸೆಟ್ಟಿಗಳಿಗೇ ಸಂಬಂಧಿಸಿರಬಹುದು. ಕೆಲವೊಮ್ಮೆ ವಿಷಯ ಸ್ಪಷ್ಟನೆಗಾಗಿ ಈ ಪಂಚಮಠವೆಂಬುದನ್ನೇ "ಪಂಚವಣಿಜ(=ಸೆಟ್ಟಿ)ಮಠ"ವೆಂದೂ ಕರೆದಿರುವಂತೆ ತೋರುತ್ತದೆ. ೧೬-೧೭ನೆಯ ಶತಮಾನಗಳ ಮಧ್ಯದಲ್ಲಿ ಆಂಧ್ರದ ಆರಾಧ್ಯರು ಹುಟ್ಟುಹಾಕಿದ ಪಂಚಾಚಾರ್ಯರ ಒಕ್ಕೂಟವು, ಇತರ ಮಠಗಳೊಂದಿಗೆ ಲಾಕುಳಶೈವರ ಈ ಪಂಚಮಠಗಳನ್ನೂ ವಶಪಡಿಸಿಕೊಂಡು, ಅರ್ಥ ತಿಳಿಯದ ಕಾರಣ "ಪಂಚವಣ್ಣಿಗೆ ಮಠ"ಗಳೆಂದು ಕರೆಯತೊಡಗಿತು. ಇಂದು ತೊಗರ್ಸಿ (ಪುತ್ರವರ್ಗದ ೧ ಮಠ), ಹೂಲಿ (ಪುತ್ರವರ್ಗದ ಮಠ ೧, ಶಿಷ್ಯವರ್ಗದ ಮಠ ೧)-ಹೀಗೆ ಎರಡು ಊರುಗಳಲ್ಲಿ ಮೂರು ಮಠಗಳು ಮಾತ್ರ ಉಳಿದಿವೆ.

ಇದಲ್ಲದೆ, ಪಂಚಗೃಹಮಠ ಹೆಸರಿನವು ನವಿಲಗುಂದ, ಕುಂದಗೋಳ(-ಕಾಶಿ), ನರಗುಂದ(-ಉಜ್ಜಯಿನಿ), ಅಮ್ಮಿನಭಾವಿ, ಸುಳ್ಳ, ಕಲಾದಗಿ(-ರಂಭಾಪುರಿ) ಗ್ರಾಮಗಳಲ್ಲಿದ್ದು, ಬಹುಶಃ ಇವು ಪಂಚವಣ್ಣಿಗೆ ಮಠದಿಂದ ಭಿನ್ನವಾಗಿರಬಹುದು. ೧೬-೧೭ನೆಯ ಶತಮಾನಗಳಲ್ಲಿ ಕೈಗೆ ಬಂದಂತೆ ಪಂಚಾಚಾರ್ಯರು ಮಠಗಳನ್ನು ಹಂಚಿಕೊಳ್ಳುವಾಗ ಈ ಪಂಚವಣ್ಣಿಗೆಮಠ (ಪಂಚವಣಿಜಮಠ)ಗಳು ಕಾಶೀಪೀಠದ ಪಾಲಿಗೆ ಹೋದವೆಂದು ಕಾಣುತ್ತದೆ.[೫]

ಇದೆಲ್ಲವನ್ನು ನೋಡಿದರೆ ಶಿವೋಪಾಸಕ ಮೂಲದ ಉತ್ಪಾದನೆ - ಮಾರಾಟ-ಉತ್ಪಾದನೆಮಾರಾಟದ ಜನಸಮುದಾಯವೊಂದು ವೃತ್ತಿಭೇದದಿಂದ ಐದು ಕವಲಾಯಿತೆಂದೂ, ಇವುಗಳಲ್ಲಿ ಐದನೆಯ ಕವಲಿನ ಸೆಟ್ಟಿಗಳೇ ಪಂಚಮಸಾಲಿಗಳೆಂದೂ, ಸ್ಪಷ್ಟವಾಗುತ್ತದೆ. ಹೀಗಾಗಿ ಪ್ರಾಸವನ್ನು ಬಿಟ್ಟರೆ ಈ ಪಂಚಮಸಾಲಿಗಳಿಗೂ ಪಂಚಾಚಾರ್ಯರಿಗೂ (ಇವರು ಮೂಲತಃ ಚತುರಾಚಾರ್ಯರು) ನೇರ ಸಂಬಂಧವಿಲ್ಲ. ಒಂದು ವೇಳೆ ಸಂಬಂಧವಿದ್ದರೆ ಇವರಿಗೆ ಪಂಚಮಸಾಲಿಗಳು ಎಂಬುದಕ್ಕೆ ಬದಲು ಪಂಚಸಾಲಿಗಳು ಎಂಬ ಹೆಸರಿರಬೇಕಿತ್ತು. ಹಾಗಿಲ್ಲವಾಗಿ ಪಂಚಾಚಾರ್ಯರಿಗೂ ಪಂಚಮಸಾಲಿಗಳಿಗೂ ಈಗ ಪ್ರಚಾರ ಮಾಡುತ್ತಲಿರುವಂಥ ಸಂಬಂಧವೇನೂ ಇಲ್ಲವೆಂದು ಹೇಳಬಹುದು (ನೋಡಿ : ಇದೇ ಪುಸ್ತಕದ "ಪಂಚಮಠ" ಹೆಸರಿನ ಲೇಖನ). ಹಾಗಿದ್ದರೆ ಇವರು ಯಾರಿಗೆ ಸಂಬಂಧಿಸಿದವರು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಮೇಲೆ ವಿವರಿಸಿದ ಮೇರೆಗೆ ಈ ಐದೂ ಕವಲಿನವರು ಶೆಟ್ಟರಾಗಿದ್ದಾರೆ, ಬಣಜಿಗರಾಗಿದ್ದಾರೆ. ಮದ್ರಾಸ ಓರಿಯಂಟಲ್ ರೀಸರ್ಚ ಲೈಬ್ರರಿಯ ಮೆಕೆಂಝಿ ಸಂಗ್ರಹದಲ್ಲಿರುವ "ಶೈವರ ನಡತೆ ವಿವರ", ಕೃತಿಯಲ್ಲಿ "ಬಣಜಿಗರು ಬಸವೇಶ್ವರನ ಸಂತತಿ" ಎಂದು ಹೇಳಲಾಗಿದೆ. ಬಣಜಿಗರ ಐದೂ ಶಾಖೆಗಳು

---

೫. ಕರ್ನಾಟಕದ ವೀರಶೈವ ಮಠಗಳು-ಚಂದ್ರಶೇಖರ ನಾರಣಾಪುರ ಪು. ೮೯೨ ಮತ್ತು ೧೧೭೬.

ಬಸವೇಶ್ವರನ ಅನುಯಾಯಿಗಳೆಂದು ಇದರರ್ಥ. ಹೀಗಾಗಿ ಜನೆಯ ಶಾಖೆಯುವರಾದ ಪಂಚಮಸಾಲಿಗಳು ಸಹ ಬಸವೇಶ್ವರನ ಸಂತತಿಯೆಂದು ಹೇಳಬೇಕಾಗಿತ್ತದೆ. ಈ ಚರ್ಚೆಯ ಬೆಳಕಿನಲ್ಲಿ ನೋಡಿದರೆ ಈ ವರೆಗೆ ನಂಬಿಕೊಂಡು ಬಂದಂತೆ ಪಂಚಮಸಾಲಿಗಳು ಪಂಚಾಚಾರ್ಯ ಸಂಪ್ರದಾಯದ ಅನುಯಾಯಿಗಳಲ್ಲ, ಬಸವೇಶ್ವರ ಸಂಪ್ರದಾಯದ ಅನುಯಾಯಿಗಳೆಂದು ತಾನಾಗಿಯೇ ಖಚಿತವಾಗುತ್ತದೆ.

■■

ಆಕರ : ಮಾರ್ಗ ಸಂಪುಟ–೪

೭೧

ಮಿಂಡಗುದ್ದಲಿ-ಮೆಂಡೆಗಾರ-ಮೆಟಗೊಡ್ಲಿ

ಉತ್ತರ ಕರ್ನಾಟಕದ ಸಂಕೇಶ್ವರ ಮೊದಲಾದ ಊರುಗಳಲ್ಲಿ ಮಿಂಡಗುದ್ದಲಿ ಅಡ್ಡ ಹೆಸರಿನ ಲಿಂಗವಂತ ಬಣಜಿಗ ಮನೆತನಗಳಿವೆ. ತುಂಬ ವಿಚಿತ್ರವೆನಿಸುವ ಈ ಶಬ್ದ ಕನ್ನಡ ಸಾಹಿತ್ಯ ಮತ್ತು ಶಾಸನಗಳಲ್ಲಿಯೂ ಕಂಡುಬರುತ್ತಿರುವುದರಿಂದ ಯಾವುದೋ ಒಂದು ಸಂಸ್ಕೃತಿಯ ಪಳಿಯುಳಿಕೆಯಾಗಿರಬಹುದೆನಿಸುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಈ ಪದಕ್ಕೆ ಒಂದು ವಂಶದ ಹೆಸರು ಎಂದು ಅರ್ಥಕೊಟ್ಟು, ಕೆಳಗಿನ ಆಕರಗಳನ್ನು ದಾಖಲಿಸಿದೆ.

(೧) "ತೊಗರೆ ಮಾಚಿಸೆಟ್ಟಿಯುಂ ಮಿಂಡಗುದ್ದಲಿ ನಾಮಿಸೆಟ್ಟಿಯುಂ ಸಮಸ್ತ ಮುಮ್ಮರಿದಂಡಗಳುಮಿಂತು ಪಟ್ಟಣಮಶೇಷದ ಸನ್ನಿಧಾನದಲು...... ದೇವರ್ಗ್ಗೆ ಕೊಟ್ಟ ಕೆಯಿ ಕಂಮವಯ್ವತ್ತು" (ಎಕ VII-ಶಿಕಾರಿಪುರ ೧೦೬ ಕ್ರಿ. ಶ. ೧೯೮).

(೨) "ಹುಲಿಗೆಱೆಯ ನಗರ ಮುಮ್ಮುರಿದಂಡ ಮಿಂಡಗುದ್ದಲಿ ಸಮಯ ಮಂತ್ರಿ ಸಾಮಂತ ಪಟ್ಟಣಸ್ವಾಮಿಗಳು......ಆದಿಯಾದ ಹಲರು ಹದಿನೆಂಟು ಸಮಯವದೆಯ್ದೆ" (ಸೋಮನಾಥಚರಿತೆ ೫-೪೫.)

ಹೀಗೆ ಉದಾಹರಣೆಯನ್ನು ಕೊಟ್ಟ ಈ ನಿಘಂಟಿನಲ್ಲಿ ಈ ಶಬ್ದದ ನಿಶ್ಪತ್ತಿ ಬಗ್ಗೆ ಪ್ರಶ್ನೆಚಿಹ್ನೆ ಹಾಕಲಾಗಿದೆ. ಈ ಉದಾಹರಣೆಗಳಲ್ಲದೆ ಇನ್ನೂ ಕೆಲವು ಹೀಗಿವೆ.

(೧) "ತುಂಬುಳ ಪಟ್ಟಣದ ಸ್ಥಾನದ ಮಿಂಡಗುದ್ದಲಿ ದೇಮಿಸೆಟ್ಟಿ"

(ಆಂಧ್ರಪ್ರದೇಶದ ಶಾಸನಗಳು ಭಾಗ-೨ ವರ್ಧಮಾನಪುರಂ ೧೨೨೯).

(೨) "ಮಿಂಡಗುದ್ದಲಿ ಬೈವಿಸೆಟ್ಟಿ"

(ಎಕ-X ಶಿಡ್ಲಘಟ್ಟ ೧೧೨, ರಾಮೇಶ್ವರ ೧೩ ೭೮).

(೩) "ವಾಗಟದ ಗೌಡಸೆಟ್ಟಿ ಪಟ್ಟಣಸ್ವಾಮಿ ಮಿಂಡಗುದ್ದಲಿವೊಳಗಾದ"

(ಎಕ-IX ಹೊಸಕೋಟೆ ೧೨೮ ಕನಬೆ. ೧೪೯೧).

(೪) "ಮಿಂಡಗುದ್ದಲಿ ಕೇತಿಸೆಟ್ಟಿಯರ ಮಗ ಮಲ್ಲಿಸೆಟ್ಟಿಯರು ಪಾರ್ಶ್ವದೇವರ ಮಾಡಿಸಿದ"

(ಕೊಪ್ಪಳ ಜಿಲ್ಲೆಯ ಶಾಸನಗಳು. ಯಲಬುರ್ಗಾ-೬ ಯಲಬುರ್ಗಾ ೧೩ ಶತ).

(೫) "ಶೆಟ್ಟಿಗಾದರಿ, ಪೃಥ್ವಿಶೆಟ್ಟಿ, ಕೋರಿಶೆಟ್ಟಿ, ಬಳೆಶೆಟ್ಟಿ, ನಾಡನಾಲಗೆ, [ಮಿಂಡ]ಗುದ್ದಲಿ, ಬಡವ, ಬೋವಿಯೆಂತಪ್ಪ ಎಂಟು ಕಟ್ಟೆಯವರು". (ಅಂಬಿಗರ ಚೌಡಯ್ಯನ ವಚನ ೨೧. ಸಂ-೬).

ಹೀಗೆ ೧೧ರಿಂದ ೧೫ನೆಯ ಶತಮಾನದ ವರೆಗೆ ಈ ಪದ ಬಳಕೆಯಾಗುತ್ತ ಬಂದಿದೆ. ವಾತುಲಾಗಮದ ವಿಜಯಭೈರವಿ ಪಟಲದಲ್ಲಿ ಪಂಚಶೆಟ್ಟಿಗಳ ಉಲ್ಲೇಖ ಹೀಗೆ ಬರುತ್ತದೆ:[೧] ಐಹೊಳೆಯ ಒಡೆಯ ವೀರಗಂಧರ್ವ. ಹೆಂಡತಿ ಸುಮತಾದೇವಿ. ಮಗಳು ಬಲಿದೇವಿ. ತಂದೆಯಾದ ವೀರಗಂಧರ್ವನನ್ನು ಬಂಧಿಸಿದ ಗೋಮುಖಾಸುರನನ್ನು ಜಯಿಸಲು ಮಗಳು ಬಲಿದೇವಿ ಕೈಕೊಂಡ ತಪಸ್ಸಿಗೆ ಮೆಚ್ಚಿದ ಶಿವನು, ತನ್ನ ಬಲದ ಕಂಕುಳದಿಂದ ಪಂಚಮುಖ ಗಣಾಧೀಶ್ವರನನ್ನು ಹುಟ್ಟಿಸಿದನು.

ಈ ಪಂಚಮುಖ ಗಣಾಧೀಶ್ವರನು ಗೋಮುಖಾಸುರರನ್ನು ಕೊಂದು, ಬಲಿದೇವಿಯನ್ನು ಮದುವೆಯಾದನು. ಇವರ ಮಗ ಮಖಾಲಿ. ಈತನು ಪಾತಾಳಲೋಕಕ್ಕೆ ಹೋಗಿ, ನಾಗರಾಜನ ಮಗಳು ಫಣಾಮಣಿಯನ್ನು ಮದುವೆಯಾಗಿ ಅಲ್ಲಿಂದ ಶುಭಕಾರ್ಯಗಳಿಗೆ ಬೇಕಾಗುವ ನಾಗವಲ್ಲಿ, ಕರತಾಳಿ, ಅಡಕೆ, ತೆಂಗು, ಅರಿಷಿಣ-ಈ ಐದು ವಸ್ತುಗಳನ್ನು ತಂದನು. ಪ್ಯಾಟಿ ಪಟ್ಟಣ ಕಟ್ಟಿಸಿ ಪ್ರಸಿದ್ಧನಾದನು. ಈ ದಂಪತಿಗಳಿಗೆ ನಾಡನಾಳುವ ಸೆಟ್ಟಿ, ಸೆಟ್ಟಿಗುತ್ತ, ಮಹಾಜನಶೆಟ್ಟಿ, ಪಟ್ಟಣಶೆಟ್ಟಿ, ಮಿಂಡಗುದ್ದಲಿಶೆಟ್ಟಿ ಎಂಬ ೫ ಜನ ಮಕ್ಕಳಾದರು. ತಂದೆ ಇವರಿಗೆ ಒಂದೊಂದು ಹೊಣೆ ಹೊರಿಸಿದನು. ೫ನೆಯವನಾದ ಮಿಂಡಗುದ್ದಲಿಶೆಟ್ಟಿಗೆ ಹೊಲ ತೋಟ ಗದ್ದೆಗಳಲ್ಲಿ ೧೮ ತರದ ಧಾನ್ಯ ಬೆಳೆಯಲು ಹೇಳಿದನು. ನಿರಂಜನ ವಂಶರತ್ನಾಕರದಲ್ಲಿಯೂ ಸ್ವಲ್ಪ ಹೆಚ್ಚು ಕಡಿಮೆ ಇದೇ ವಿವರಣೆ ಬರುತ್ತದೆ.

ಶಾಸನ, ಕಾವ್ಯ ಮತ್ತು ಮೇಲಿನ ದಾಖಲೆಗಳಿಂದ ಮಿಂಡಗುದ್ದಲಿಶೆಟ್ಟಿಗಳು ಸಮಾಜದ ಪ್ರತಿಷ್ಠಿತರಲ್ಲಿ ಒಬ್ಬರೂ, ತೋಟ, ಹೊಲಗಳ ಕಾಯಕದವರೂ ಎಂದು ಸ್ಪಷ್ಟವಾಗುತ್ತದೆ.

ಮಿಂಡ ಪದಕ್ಕೆ ಜಾರ, ಉಪಪತಿ ಎಂಬ ಅರ್ಥಗಳಿದ್ದರೂ, ಅವು ಇಲ್ಲಿ ಅನ್ವಯವಾಗುವುದಿಲ್ಲ. ವೀರ, ಪರಾಕ್ರಮಿ ಅರ್ಥಗಳೂ ಇವೆ. ಪ್ರಾಚೀನಕಾಲದಲ್ಲಿ ಸೆಟ್ಟಿಗಳು ತಮ್ಮ ಸರಕು-ಸಾಗಾಣಿಕೆಗಳ ರಕ್ಷಣೆಗಾಗಿ ಪರಾಕ್ರಮಶಾಲಿ ಸೈನ್ಯ ಸಾಕುತ್ತಿದ್ದರು. ಆದರೆ ಮಿಂಡಗುದ್ದಲಿಗಳು ಸೈನ್ಯದ ಭಾಗವಲ್ಲವೆಂದು ಮೇಲಿನ ಕಥೆ ತಿಳಿಸುತ್ತದೆ. ಹಾಗಾದರೆ ಇದರ ಅರ್ಥವೇನಿರಬಹುದು?

ಮೇಲಿನ ಕಥೆಯ ಹಸ್ತಪ್ರತಿಗಳಲ್ಲಿ ಕೆಲವೊಮ್ಮೆ "ಮೆಂಡೆಗುದ್ದಲಿ" ಪದ ಕಾಣಿಸಿಕೊಂಡಿದೆ.[೨] ಹಳೆಯ ಹಸ್ತಪ್ರತಿಗಳಲ್ಲಿ ದೀರ್ಘಕ್ಕೆ ಬದಲು ಹ್ರಸ್ವ ಬರೆಯುವುದೇ (ಬೇವು>ಬೆವು)ರೂಢಿಯಲ್ಲಿದ್ದಿತು. ಆದುದರಿಂದ ಇಲ್ಲಿಯ ಮೆಂಡೆ ಎಂಬುದರ ಸರಿಯಾದ ರೂಪ ಮೇಂಡೆ ಇರಬಹುದು. ವಿಜಾಪುರ ತಾಲೂಕಿನ ನಿಡೋಣಿ ಶಾಸನದಲ್ಲಿ (ಎಸ್. ಆಯ್. ಆಯ್. XVIII-೧೧೦ ಕ್ರಿ. ಶ. ೧೧೧೫)ಬರುವ "ಮೇಣ್ಡೆಯ ಬರ್ಮಣ" ಎಂಬ ಹೆಸರು ನಮ್ಮ ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ.

---

೧. ಈ ಕಥೆಯಲ್ಲಿಯ ಪೌರಾಣಿಕತೆಯಲ್ಲಿ ಕೆಲವೊಮ್ಮೆ ವ್ಯತ್ಯಾಸ ಕಂಡುಬರುತ್ತದೆ.

೨. ಅಡ್ಡಹೆಸರುಗಳಲ್ಲಿಯೂ ಮೆಂಡೆಗುದ್ದಲಿ ಕಂಡುಬರುತ್ತದೆ.

ಇನ್ನು ಮೇಂಡೆಗುದ್ದಲಿ ಸಮಸ್ತಪದದಲ್ಲಿ, ಗುದ್ದಲಿ ಕೃಷಿಗೆ ಸಂಬಂಧಿಸಿದ ಪದವಾಗಿರುವುದರಿಂದ, ಮೇಂಡೆಯೆಂಬುದೂ ಕೃಷಿಗೇ ಸಂಬಂಧಿಸಿರಬಹುದು. ಕೃಷಿಯಲ್ಲಿ ಇದಕ್ಕೆ ಸಮೀಪದ ಪದ ಮೇಂಟೆ. ಹೀಗಾಗಿ ಇದರ ಮೂಲರೂಪ ಮೇಂಟೆಗುದ್ದಲಿ ಇರಬಹುದು. ದ್ರಾವಿಡಭಾಷೆಯಲ್ಲಿ ಮೇಂಟೆ>ಮೇಂಡೆ ವ್ಯತ್ಯಾಸಕ್ಕೆ ಅವಕಾಶವೂ ಇದೆ. ಒಟ್ಟಾರೆ ಇದು ಕೃಷಿಯ ವಸ್ತುಗಳಾದ ಮೇಟಿ ಮತ್ತು ಗುದ್ದಲಿಗಳನ್ನು ಸಂಕೇತವಾಗುಳ್ಳ (ಇಂದಿನ ಕಮ್ಯುನಿಷ್ಟರು ಕುಡುಗೋಲು–ಸುತ್ತಿಗೆ–ಗೋದಿತೆನೆಯ ಸಂಕೇತ ಹೊಂದಿದಂತೆ) ಸಮಾಜವೆಂದು ಹೇಳಬಹುದಾಗಿದೆ. ಇಂದು ಈ ಹೆಸರು ವೀರಶೈವ ಕುಟುಂಬಗಳಿಗೆ ಸೀಮಿತವಾಗಿದ್ದರೂ(?) ಮೇಲೆ ಹೇಳಿದ ಯಲಬುರ್ಗಾ ಶಾಸನದಲ್ಲಿ ಮಿಂಡಗುದ್ದಲಿ ಕೇತಿಸೆಟ್ಟಿಯರ ಮಗ ಮಲ್ಲಿಸೆಟ್ಟಿಯು ಪಾರ್ಶ್ವನಾಥ ತೀರ್ಥಂಕರನ ವಿಗ್ರಹ ಮಾಡಿಸಿದ ಪ್ರಸ್ತಾಪ ಬರುವುದರಿಂದ, ಜೈನರಲ್ಲಿಯೂ ಮಿಂಡಗ್ನುದ್ದಲಿಯವರಿದ್ದರೆನಿಸುತ್ತದೆ. ಬಹುಶಃ ಇಂಥವು ಒಕ್ಕಲುತನದ ಜೈನ ಕುಟುಂಬಗಳಾಗಿರಬಹುದು.

ಮೇಲಿನ ಶಾಸನಗಳನ್ನು ಗಮನಿಸಿದರೆ ಮೆಹಬೂಬನಗರ, ಶಿಕಾರಿಪುರ, ಚೆನ್ನಪಟ್ಟಣ, ಶಿಡ್ಲಘಟ್ಟ, ಹೊಸಕೋಟೆ ಇತ್ಯಾದಿ ಪ್ರದೇಶಗಳಲ್ಲಿ ಈ ಸಮಾಜದವರಿದ್ದರೆಂದು, ಇಲ್ಲವೆ ತಾವು ಭೂಮಿಯಲ್ಲಿ ಬೆಳೆದ ವಸ್ತುಗಳ ಮಾರಾಟಕ್ಕಾಗಿ ಈ ಸ್ಥಳಗಳಿಗೆ ಪ್ರವಾಸಕ್ಕೆ ಹೋಗಿರಬಹುದೆಂದು ತಿಳಿದುಬರುತ್ತದೆ. ಮೇಲೆ ಹೇಳಿದ ಕಥೆಯ ಪ್ರಕಾರ ಇವರು ಐಹೊಳೆ ಮೂಲದವರಾಗಿರುವುದೂ, ಮಿಂಡಗುದ್ದಲಿ (ಮೆಂಡೆಗುದ್ದಲಿ) ಅಡ್ಡ ಹೆಸರಿನ ಕುಟುಂಬಗಳು ಬೆಳಗಾವಿ ಇತ್ಯಾದಿ ಜಿಲ್ಲೆಗಳಲ್ಲಿರುವುದೂ, ಇವರು ಇಂದಿನಂತೆ ಹಿಂದೆಯೂ ಕರ್ನಾಟಕದಲ್ಲಿದ್ದರೆಂದು ಸ್ಪಷ್ಟಪಡಿಸುತ್ತವೆ. ಈ ವಿಷಯದಲ್ಲಿ ಹೆಚ್ಚಿನ ವಿವರಗಳು ಇಂದಿನ ಮಿಂಡಗುದ್ದಲಿ ಕುಟುಂಬಗಳಿಂದ ಏನೂ ತಿಳಿದು ಬರುವುದಿಲ್ಲ. ಇಂದು ಬಣಜಿಗರೆಂದು ಹೇಳಿಕೊಳ್ಳುತ್ತಿದ್ದರೂ ಕೃಷಿಕಾಯಕದ ಇವರು ಮೂಲತ: ಪಂಚಮ ಸಾಲಿಗಳೇ ಆಗಿರುವರು. (ಇದೇ ಗ್ರಂಥದಲ್ಲಿಯ "ಪಂಚಮಸಾಲಿ, ಹಾಗೆಂದರೇನು?" ಲೇಖನ ನೋಡಿರಿ.)

ಮೆಟಗೊಡ್ಲಿ ಅಡ್ಡ ಹೆಸರಿನ ಲಿಂಗವಂತ ಪಂಚಮಸಾಲಿ ಮನೆತನಗಳು ಉತ್ತರ ಕರ್ನಾಟಕದಲ್ಲಿವೆ. ಇಲ್ಲಿ ಒಕ್ಕಲುತನದ ಇನ್ನೊಂದು ಉಪಕರಣ ಕೊಡ್ಲಿ ಕಾಣಿಸಿಕೊಂಡಿದೆ. ಬಹುಶ: ಇದೂ ಗುದ್ದಲಿ>ಗುದ್ಲಿ>ಗುಡ್ಲಿ>ಗೊಡ್ಲಿ ಎಂಬ ರೂಪಾಂತರಕ್ಕೆ ಗುರಿಯಾಗಿರುವ ಸಾಧ್ಯತೆಯಿರುವುದರಿಂದ, ಇದರ ಮೂಲರೂಪವೂ ಮಿಂಡಗುದ್ಲಿ ಎಂದೇ ಇರಬಹುದು. ಉತ್ತರ ಕರ್ನಾಟಕದಲ್ಲಿ ಮೆಟಗುಡ್ಡ, ಮೆಟಗುಡ್ಡಮಠ ಅಡ್ಡ ಹೆಸರಿನ ಮನೆತನಗಳಿವೆ. ಇವು ಮಿಂಡಗುದ್ಲಿಯ ಸಾಧಿತ ರೂಪಗಳೆಂಬ ಅನುಮಾನ ಬರುತ್ತದೆ. ಆದರೆ ಇವು ಮುಧೋಳ ತಾಲೂಕಿನ ಮೆಟಗುಡ್ಡ ಗ್ರಾಮಕ್ಕೆ ಸಂಬಂಧಪಟ್ಟ ಕುಟುಂಬಗಳೆಂದು ತಿಳಿದು ಬರುವುದರಿಂದ ಈ ಪ್ರಶ್ನೆಯನ್ನು ಕೈಬಿಡಬಹುದು.

ಇನ್ನೂ ಒಂದು ವಿಷಯ: ಉತ್ತರ ಕರ್ನಾಟಕದಲ್ಲಿ ಮೆಂಡೆಗಾರ ಅಡ್ಡ ಹೆಸರಿನ ಮನೆತನಗಳೂ ಇವೆ. ಬಹುಶ: ಈ ಹೆಸರು ಮೇಂಟೆ+ಗರ್= ಮೇಂಟೆಗರ್> ಮೇಂಟೆಗರು> ಮೇಂಟೆಗಾರ> ಮೇಂಡೆಗಾರ> ಮೆಂಡೆಗಾರ ಎಂದು ಬದಲಾಗುತ್ತ ಬಂದಿರಬಹುದು. ಇದು ನಿಜವಿದ್ದರೆ ಇವರೂ ಮಿಂಡಗುದ್ದಲಿ ಪರಿವಾರದವರೇ ಆಗಿರುವ ಸಾಧ್ಯತೆ ಇದೆ.

---

೩. ಇಂದಿಗೂ ಜೈನರಲ್ಲಿ ಕೃಷಿಕ ಕುಟುಂಬಗಳನ್ನು ಪಂಚಮ ಹೆಸರಿನಿಂದ ಕರೆಯುತ್ತಾರೆ.

ಶಾಸನಗಳಲ್ಲಿ ಕೃಷಿಗೆ ಸಂಬಂಧಿಸಿದ ಅರುವತ್ತೊಕ್ಕಲು, ಗಳೆಯ ಮೂನೂರ್ವರು, ಮೇಳಿ ಸಾಸಿರ್ವರು ಎಂಬ ಉತ್ಪಾದಕ ಸಂಘಗಳು ಕಂಡುಬರುತ್ತವೆ. ಪರಿಷತ್ತಿನ ನಿಘಂಟಿನಲ್ಲಿ ಮೇಂಟಿ>ಮೇಟಿ>ಮೇಳಿ ಎಂದು ಸಾಧಿತರೂಪ ಕೊಡಲಾಗಿದೆ. ಮೇಲೆ ಹೇಳಿದ ಮೇಳಿಸಾಸಿರ್ವರೂ ಈ ಮಿಂಡ(ಮೇಂಟೆ)ಗುದ್ದಲಿ ಸಮುದಾಯದವರೇ ಆಗಿರಬಹುದೇ? ಎನಿಸುತ್ತದೆ. ವಿದ್ವಾಂಸರು ಈ ಚರ್ಚೆಯನ್ನು ಮುಂದುವರಿಸುವರೆಂದು ಆಶಿಸುತ್ತೇನೆ.

■■

ಆಕರ : ಮಾರ್ಗ ಸಂಪುಟ–೪

೭೨

ಕಮ್ಮೆ ಬ್ರಾಹ್ಮಣರು

ಪಂಪ, ನಾಗವರ್ಮ, ಅತ್ತಿಮಬ್ಬೆ, ದುರ್ಗಸಿಂಹ, ಬಸವಣ್ಣ, ಜನ್ನ ಕವಿಗಳ ಪೂರ್ವಜರು ಪ್ರಾಚೀನ ವೆಂಗಿಮಂಡಲದ ಕಮ್ಮೆನಾಡಿನಿಂದ ಕರ್ನಾಟಕಕ್ಕೆ ಬಂದವರೆಂದೂ, ಆ ಮೂಲಪ್ರದೇಶ ಕಾರಣವಾಗಿ ಇವರು "ಕಮ್ಮೆ ಬ್ರಾಹ್ಮಣ"ರೆನಿಸಿದರೆಂದೂ, ಗದುಗಿನಲ್ಲಿ ಇತ್ತೀಚೆ ಜರುಗಿದ ಇತಿಹಾಸ ಸಮ್ಮೇಳನದಲ್ಲಿ ನಾನು ಹೇಳಿದ್ದೆನು. ಆದರೆ ಕಮ್ಮೆ ಬ್ರಾಹ್ಮಣರು ಮೂಲತಃ ಕನ್ನಡಿಗರೆಂದೂ, ಕಮ್ಮೆ ಎಂಬುದು ಯಜ್ಞ "ಕರ್ಮಿನ್" ಶಬ್ದದಿಂದ ಹುಟ್ಟಿದೆಯೆಂದೂ ಡಾ. ಎಂ. ಚಿದಾನಂದಮೂರ್ತಿ ಅವರು ಪ್ರಜಾವಾಣಿ ಪತ್ರಿಕೆಯಲ್ಲಿ (೨೯.೬.೮೯) ಪ್ರತಿಕ್ರಿಯೆಯ ವ್ಯಕ್ತಪಡಿಸಿದ್ದಾರೆ. ಅದಕ್ಕೆ ವಿವರಣೆ.

ಪಂಪನ ಪೂರ್ವಜರು ವೆಂಗಿಮಂಡಲದ ಕಮ್ಮೆನಾಡಿನ ವೆಂಗಿಪಳು ಗ್ರಾಮದ (ಆಂಧ್ರಪ್ರದೇಶದ ಗುಂಟೂರು ಜಿಲ್ಲೆ) ನಿವಾಸಿಗಳು. ಜಾತಿಯಿಂದ ಕಮ್ಮೆಬ್ರಾಹ್ಮಣರು ಎಂಬುದು ತಿಳಿದ ವಿಷಯವೇ ಆಗಿದೆ. ಒಂದು ಊರಿನಿಂದ ಇನ್ನೊಂದು ಊರಿಗೆ ಬಂದ ಕುಟುಂಬವನ್ನು ಇಂದಿಗೂ ಆ ಮೂಲ ಊರಿನ ಹೆಸರಿನಿಂದಲೇ ಕರೆಯುವಂತೆ, ಪ್ರಾಚೀನ ಕಾಲದಲ್ಲಿ ಕಮ್ಮೆನಾಡಿನಿಂದ ಕರ್ನಾಟಕಕ್ಕೆ ಬಂದ ಈ ಬ್ರಾಹ್ಮಣರನ್ನು ಕಮ್ಮೆ ಬ್ರಾಹ್ಮಣರೆಂದು ಇಲ್ಲಿಯ ಜನ ಕರೆದಿರಬೇಕು. ಹೀಗೆ ಪ್ರದೇಶವಾಚಿಯಾಗಿ ಜನವರ್ಗವನ್ನು ಕರೆಯುತ್ತಿದ್ದುದಕ್ಕೆ ವಿವೇಕ ಚಿಂತಾಮಣಿಯಲ್ಲಿ ಬರುವ "ಕಮ್ಮೆ, ಕನ್ನಡಿಗ,ಆಂಧ್ರ, ದ್ರಾವಿಡವೆಂಬಂತೆ ನಾಲ್ಕು ಜಾತಿಗಳು" ಎಂಬ ಪ್ರದೇಶನಿಷ್ಠ ವರ್ಗೀಕರಣ ನಿದರ್ಶನವೆನಿಸಿದೆ. ಇಲ್ಲಿ ಕಮ್ಮೆ ಕನ್ನಡಿಗ ಎಂದು ಎರಡೂ ಹೆಸರುಗಳು ಸ್ವತಂತ್ರವಾಗಿ ಬಂದಿರುವುದರಿಂದ, ಮೂಲತಃ ಕಮ್ಮೆಗಳು ಕನ್ನಡಿಗರಲ್ಲವೆಂದು ಸ್ಪಷ್ಟವಾಗುತ್ತದೆ. ಆದುದರಿಂದ "ಕಮ್ಮೆ" ಪದವು ಒಂದು ಪ್ರದೇಶದಿಂದ ಬಂದವರೆಂದು ಸೂಚಿಸುತ್ತಿದ್ದು, "ಕಮ್ಮೆಕುಲ"ದವರಾದ ಪಂಪ, ದುರ್ಗಸಿಂಹ, (ಜನಾರ್ದನ) ಜನ್ನ, ಬಸವಣ್ಣ, ಅತ್ತಿಮಬ್ಬೆ ಮೊದಲಾದವರ ಪೂರ್ವಜರು ಕಮ್ಮೆನಾಡಿನಿಂದಲೇ ಬಂದಿರಬೇಕು. ಈ ಕಮ್ಮೆನಾಡು ಈಗಿನ ಆಂಧ್ರಪ್ರದೇಶದ ನಲ್ಗೊಂಡ, ಕೃಷ್ಣ, ಗುಂಟೂರು ಜಿಲ್ಲೆಗಳ ಭಾಗವೆಂದು ಶಾಸನ ವಿದ್ವಾಂಸರ ಮತವಾಗಿದೆ. ಈ ಪ್ರದೇಶದಲ್ಲಿ ಮೊದಲಿನಿಂದಲೂ ಪ್ರಧಾನವಾಗಿ ತೆಲುಗು ಶಾಸನಗಳು ಸಿಗುವುದರಿಂದ ಇದು, ಅಂದು ಕೂಡ ತೆಲುಗು ಭಾಷಿಕರ ನೆಲೆಯೇ ಆಗಿದ್ದಿತು. ಗುಂಟೂರು ಜಿಲ್ಲೆ ಬಂಗಾಲ ಉಪಸಾಗರಕ್ಕೆ ಹೊಂದಿಕೊಂಡಿರುವುದರಿಂದ ಅಷ್ಟು ದೂರದ ವರೆಗೆ ಅಂದು ಕನ್ನಡಭಾಷೆ ಚಾಚಿಕೊಂಡಿದ್ದು ಅಸಾಧ್ಯವೆ ಸರಿ.

ಇಂದು ಆಂಧ್ರಪ್ರದೇಶದಲ್ಲಿ ಕಮ್ಮೆ ಬ್ರಾಹ್ಮಣ ಹೆಸರು ಕೇಳಿಬರುವುದಿಲ್ಲವೆಂದು ಡಾ. ಮೂರ್ತಿ ಹೇಳಿದ್ದಾರೆ. ಈ ಹೇಳಿಕೆಯನ್ನು ಪರೀಕ್ಷಿಸುವುದು ಅವಶ್ಯವಿದೆ. ಮೇಲಾಗಿ ಒಂದು ಪ್ರದೇಶದಿಂದ ಹೊರಗೆ ಬಂದವರನ್ನು ಆ ಮೂಲ ಪ್ರದೇಶದ ಹೆಸರಿನಿಂದ ಕರೆಯಲಾಗುವುದೇ ಹೊರತು, ಅಲ್ಲಿಯೇ ಉಳಿದುಕೊಂಡವರನ್ನು ಹಾಗೆ ಕರೆಯುವ ಅವಶ್ಯಕತೆ ಉದ್ಭವಿಸುವುದಿಲ್ಲ. ಹೀಗಾಗಿ ಇಂದು ಆಂಧ್ರಪ್ರದೇಶದಲ್ಲಿ ಕಮ್ಮೆ ಎಂಬ ವಿಶೇಷಣ ಬ್ರಾಹ್ಮಣರಿಗೆ ಇರದಿದ್ದರೆ ಅದು ಸಹಜವೇ ಆಗಿದೆ.

ಹೀಗೆ ಕಮ್ಮೆನಾಡಿನಿಂದ ದಕ್ಷಿಣ ಕರ್ನಾಟಕಕ್ಕೆ ವಲಸೆ ಬಂದ ಕಮ್ಮೆ ಬ್ರಾಹ್ಮಣರು, ಕ್ರಮೇಣ ತಮ್ಮ ಮಾತೃಭಾಷೆಯಾದ ತೆಲುಗನ್ನು ಮರೆತು ಕನ್ನಡವನ್ನು ಬಳಸುತ್ತ ಬಂದರೂ ಬಬ್ಬೂರ ಕಮ್ಮೆ, ಉಲುಚಿ ಕಮ್ಮೆ ಇತ್ಯಾದಿ ಹೊಸ ಹೆಸರುಗಳಲ್ಲಿ ಕಮ್ಮೆ ಪದವನ್ನು ಉಳಿಸಿಕೊಂಡಿದ್ದಾರೆ. ಆದರೆ ಕಮ್ಮೆನಾಡಿನಿಂದ ಉತ್ತರ ಕರ್ನಾಟಕಕ್ಕೆ ಬಂದಿದ್ದ ಪಂಪಾದಿಗಳ ಪೂರ್ವಜರಾದ ಕಮ್ಮೆ ಬ್ರಾಹ್ಮಣರು ಮಾತೃಭಾಷೆಯಾಗಿದ್ದ ತೆಲುಗನ್ನಲ್ಲದೆ, ಮತಾಂತರ ಇತ್ಯಾದಿ ಕಾರಣಗಳಿಂದಾಗಿ ಕಮ್ಮೆ ಎಂಬ ತಮ್ಮ ಜಾತಿವಾಚಿ ಪದವನ್ನೂ ಕೈಬಿಟ್ಟರೆಂದು ಕಾಣುತ್ತದೆ.

ಇಮ್ಮಡಿ ಪುಲಕೇಶಿಯಿಂದ ಗೆದೆಯಲ್ಪಟ್ಟ ವೆಂಗಿಮಂಡಲವನ್ನು ಅವನ ತಮ್ಮ ವಿಷ್ಣುವರ್ಧನ ಆಳುತ್ತಲಿದ್ದ ಸಂದರ್ಭದಲ್ಲಿ ಪಂಪನ ಪೂರ್ವಜರು ಕರ್ನಾಟಕದಿಂದ ಅಲ್ಲಿಗೆ ಹೋಗಿರಬೇಕೆಂದು ಡಾ. ಮೂರ್ತಿ ಹೇಳುವುದು ಕೇವಲ ಊಹೆ. ಏಕೆಂದರೆ ಈ ಕುಟುಂಬ ಇಲ್ಲಿಂದ ಅಲ್ಲಿಗೆ ಹೋದ ಬಗ್ಗೆ ಒಂದೂ ಆಧಾರವಿಲ್ಲ. ಆದರೆ ಅಲ್ಲಿಂದ ಇಲ್ಲಿಗೆ ಬಂದ ಬಗ್ಗೆ ಕಾವ್ಯ ಶಾಸನಗಳ ಆಧಾರವಿದೆ. ಪಂಪನ ಮೂಲಪುರುಷ ಮಾಧವ ಸೋಮಯಾಜಿ. ಆಂಧ್ರಪ್ರದೇಶದಲ್ಲಿ ಸೋಮಯಾಜಿ ಹೆಸರಿನ ಮನೆತನಗಳು ಇಂದಿಗೂ ಹೆಚ್ಚು ಜನಸಂಖ್ಯೆಯಲ್ಲಿ ಕಂಡುಬರುತ್ತವೆ. ಈ ಎಲ್ಲ ಕಾರಣದಿಂದಾಗಿ ಪಂಪನ ಪೂರ್ವಜರು ಮೂಲತಃ ಇಂದಿನ ಆಂಧ್ರಪ್ರದೇಶದ ಕಮ್ಮೆನಾಡಿನಿಂದ ಬಂದ ಬ್ರಾಹ್ಮಣರೇ ಆಗಿದ್ದಾರೆ.

ಕಮ್ಮೆ ಎಂಬುದು 'ಕರ್ಮಿನ್' ಸಂಸ್ಕೃತ ಶಬ್ದದಿಂದ ಬಂದಿದೆ ಎಂದು, ಇದು ಯಜ್ಞಕರ್ಮ ಮಾಡುವ ಬ್ರಾಹ್ಮಣರನ್ನು ಸೂಚಿಸುವುದೆಂದು ಶ್ರೀ ಲಕ್ಷ್ಮೀನಾರಾಯಣರಾಯರು ಹೇಳುವುದನ್ನು ಡಾ. ಮೂರ್ತಿ ಎತ್ತಿ ಹಿಡಿಯುತ್ತಾರೆ. ಕಬ್ಬಿಣದ ಕೆಲಸ ಮಾಡುವ ಕಮ್ಮಾರ ಕುಲನಾಮವನ್ನೂ ಕರ್ಮಿನ್ ಪದದಿಂದಲೇ ಸಾಧಿಸುತ್ತಿರುವಾಗ, ಇದನ್ನು ಯಜ್ಞಕರ್ಮಕ್ಕೆ ಮಾತ್ರ ಸೀಮಿತಗೊಳಿಸುವುದು ಸಾಧುವೆನಿಸುವುದಿಲ್ಲ. ಭಾರತದ ಯಾವುದೇ ಭಾಷೆಯ ಯಾವುದೇ ಶಬ್ದಕ್ಕೆ ಸಮಾನ ಉಚ್ಚಾರದ ಶಬ್ದವನ್ನು ತನ್ನಲ್ಲಿ ತೋರಿಸುವುದು ಸಂಸ್ಕೃತ ಭಾಷೆಯ ಅಪಾಯಕಾರಿ ಗುಣಧರ್ಮವಾಗಿದೆ. ಇಂಥ ಸಾಮ್ಯ ಭ್ರಾಂತಿಯಿಂದಾಗಿಯೇ ಶಾಸನಗಳಲ್ಲಿ ಕೆಲವೊಮ್ಮೆ ಕಮ್ಮೆನಾಡನ್ನು ಕರ್ಮರಾಷ್ಟ್ರವೆಂದು ಕರೆಯುವ ತಪ್ಪು ಮಾಡಲಾಗಿದೆ. ಆದುದರಿಂದ ಡಾ. ಮೂರ್ತಿಯವರ ಕರ್ಮ>ಕಮ್ಮೆವಾದವು ಸಾಮ್ಯಭ್ರಾಂತಿಯೆನಿಸುತ್ತದೆ. ಕಮ್ಮೆ ಎಂಬ ಕನ್ನಡ ಪದದ ತೆಲುಗು ರೂಪ ಕಮ್ಮ. ಶಾಸನಗಳಲ್ಲಿ ಕಮ್ಮ ಬ್ರಾಹ್ಮಣ, ಕಮ್ಮ ವೈಶ್ಯ ಎಂಬ ಪ್ರಯೋಗಗಳು ಸಿಗುತ್ತವೆ. ಇಲ್ಲಿ ಕಮ್ಮ ಬ್ರಾಹ್ಮಣ ಎಂಬುದಕ್ಕೆ ಯಜ್ಞಕರ್ಮ ಮಾಡುವ ಬ್ರಾಹ್ಮಣವೆಂದು ಅರ್ಥ ಹಚ್ಚಿದರೆ, ಕಮ್ಮ ವೈಶ್ಯಯೆಂಬುದಕ್ಕೆ ಯಜ್ಞಕರ್ಮ ಮಾಡುವ ವೈಶ್ಯವೆಂದು ಅರ್ಥ ಹಚ್ಚಬೇಕಾಗುತ್ತದೆ. ಆದರೆ ಇದು ಸರಿಯಲ್ಲ. ಆದುದರಿಂದ ಕಮ್ಮ (ಕಮ್ಮೆ) ಎಂಬುದು ಪ್ರದೇಶನಾಮವಾಗಿದ್ದು ಅದಕ್ಕೆ ಸಂಬಂಧಿಸಿದ ಬ್ರಾಹ್ಮಣರೇ ಕಮ್ಮೆ ಬ್ರಾಹ್ಮಣರು, ಅದಕ್ಕೆ ಸಂಬಂಧಿಸಿದ ವೈಶ್ಯರೇ ಕಮ್ಮೆ ವೈಶ್ಯರೆಂದು ಹೇಳುವುದು ಸರಿಯಾದ ಕ್ರಮ. 'ಪ್ರಾಚೀನಾಂಧ್ರ

ಶಾಸನಾಲು' ಪುಸ್ತಕದಲ್ಲಿ (ಪುಟ ೨೬೩) ಈ ಕಮ್ಮ ಪದವನ್ನು ಸಂಸ್ಕೃತದ ಕರ್ಮದಿಂದ ಸಾಧಿಸುವುದನ್ನು ಅಲ್ಲಗಳೆದು, ತೆಲುಗು ಕಮ್ಮ(ನ) ಎಂಬುದರತ್ತ ಒಲವು ತೋರಲಾಗಿದೆ.

ಆಂಧ್ರಪ್ರದೇಶದಲ್ಲಿ 'ಕಮ್ಮೆ' ಹೆಸರಿನ ಬೇರೊಂದು ಕೃಷಿವರ್ಗವಿರವುದು ನನಗೆ ಗೊತ್ತಿಲ್ಲವೆಂದು ಡಾ. ಮೂರ್ತಿ ಹೇಳುತ್ತಾರೆ. ಆದರೆ ಮುಖ್ಯಮಂತ್ರಿ ಎನ್. ಟಿ. ರಾಮರಾವ್ ಅವರಿಗೆ ಸಂಬಂಧಿಸಿದ 'ಕಮ್ಮ' ಹೆಸರಿನ ಜನವರ್ಗವೊಂದು ಆಂಧ್ರಪ್ರದೇಶದಲ್ಲಿರುವುದು ನನಗೆ ಎಂದೋ ಗೊತ್ತಿದೆ. ಬಹುಶಃ ಕಮ್ಮೆ ಬ್ರಾಹ್ಮಣ, ಕಮ್ಮೆ ವೈಶ್ಯರಂತೆ ಇವರೂ ಮೂಲತಃ ಕಮ್ಮೆ (ಕಮ್ಮ) ನಾಡಿಗೇ ಸಂಬಂಧಿಸಿರಬಹುದು. ಇಂದಿನ ನಲ್ಗೊಂಡ ಕೃಷ್ಣಾ ಜಿಲ್ಲೆಗಳ ನೆರೆಯ ಜಿಲ್ಲೆಯಾದ 'ಖಮ್ಮಾ' ಎಂಬುದು ಪ್ರಾಚೀನ 'ಕಮ್ಮೆ' ಪ್ರಾಂತವನ್ನೇ ಸೂಚಿಸುತ್ತಿರಬಹುದು.

ಅತ್ತಿಮಬ್ಬೆಯ ತವರುಮನೆ ವೆಂಗಿಮಂಡಲದ ಕಮ್ಮೆನಾಡಿನ ಪುಂಗನೂರು ಎಂದು ಪೊನ್ನ, ರನ್ನ ಹೇಳುತ್ತಾರೆ. ಕರ್ನಾಟಕದ ತುಮಕೂರು ಜಿಲ್ಲೆಗೆ ಹೊಂದಿಕೊಂಡಿರುವ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿ ಪುಂಗನೂರು ಹೆಸರಿನ ಪಟ್ಟಣವಿದೆ. ಪ್ರಾಚೀನ ಕಮ್ಮೆನಾಡಿನ ಪ್ರದೇಶವಾದ ಗುಂಟೂರು ಜಿಲ್ಲೆಯಿಂದ ಚಿತ್ತೂರು ಜಿಲ್ಲೆ ದೂರವಿರುವುದರಿಂದ ಅತ್ತಿಮಬ್ಬೆಯ ತವರುಮನೆಯ ಪುಂಗನೂರು ಬೇರೊಂದು ಇರಬಹುದು. ಕಾವ್ಯಗಳು ಇವರನ್ನು ಜೈನಬ್ರಾಹ್ಮಣರೆಂದು ಕರೆದ ಕಾರಣ, ಕಮ್ಮೆನಾಡಿನ ಈ ಮನೆತನವೂ "ಕಮ್ಮೆ ಬ್ರಾಹ್ಮಣ"ಕ್ಕೆ ಸಂಬಂಧಿಸಿದುದೇ ಆಗಿರಬೇಕು.

ಈ ಕಾರಣಗಳಿಂದಾಗಿ ಪಂಪ, ಅತ್ತಿಮಬ್ಬೆ ಮೊದಲಾದವರ ಪೂರ್ವಜರು ಆಂಧ್ರಪ್ರದೇಶದ ಕಮ್ಮೆನಾಡಿನವರೆಂದು, ಇದರಿಂದಾಗಿಯೇ ಅವರಿಗೆ "ಕಮ್ಮೆಬ್ರಾಹ್ಮಣ" ಹೆಸರು ಬಂದಿತೆಂದು ಹೇಳಬಹುದು.

■■

ಆಕರ : ಮಾರ್ಗ ಸಂಪುಟ–೩

೭೩

ಹುಡಿಗ-ಹುಡಿಗಿ

ಭಾಷೆ ಪರಿವರ್ತನಶೀಲ ಮಾಧ್ಯಮ. ಇದಕ್ಕೆ ಧ್ವನಿ ಮತ್ತು ಅರ್ಥಗಳೆಂಬ ಎರಡು ಮೈಗಳಿವೆ. ಈ ಎರಡೂ ಮೈಗಳಲ್ಲಿ ಜರುಗುವ ಪರಿವರ್ತನೆಯು ೧. ಧ್ವನಿಪರಿವರ್ತನೆ (ಆನೆ>ಆನಿ), ೨.ಅರ್ಥಪರಿವರ್ತನೆ (ಪೆದ್ದ=ಪಂಡಿತ, ಪೆದ್ದ=ಮೂರ್ಖ). ೩. ಧ್ವನಿ ಮತ್ತು ಅರ್ಥಪರಿವರ್ತನೆ (ಮೆದೆಕೆರೆ ನಾಯಕ = ಮೆದೆಕೆರೆಯೆಂಬ ಗ್ರಾಮದ ನಾಯಕ>ಮದಕರಿನಾಯಕ=ಮದಕರಿಯಂಥ ನಾಯಕ)-ಹೀಗೆ ಮೂರು ರೀತಿಗಳಲ್ಲಿ ಕಾಣಿಸಿಕೊಳ್ಳುತ್ತದೆ. ಇವುಗಳಲ್ಲಿ Boy ಮತ್ತು Girl ಅರ್ಥದ ಕನ್ನಡ ಪದಗಳ ಧ್ವನಿ ಪರಿವರ್ತಿತ ರೂಪಗಳು ಹೀಗೆ ಪ್ರಚಾರದಲ್ಲಿವೆ: ಹುಡುಗ-ಹುಡಗ, ಹುಡುಗಿ-ಹುಡಗಿ (ಇದು ಹುಡುಗೆ-ಹುಡಿಗೆ ಹೀಗೆ ಇನ್ನೂ ಎರಡು ರೂಪಗಳಲ್ಲಿ ಸಿಗುತ್ತದೆ). ಈ ಜೊತೆಗಳಲ್ಲಿ ಒಂದು ಸರಿ ಇರಬಹುದು. ಅಥವಾ ಎರಡೂ ಸರಿಯಿಲ್ಲದೆ, ಸರಿಯಾದ ರೂಪ ಬೇರೊಂದು ಇರಬಹುದು. ಈ ರೀತಿ ಸಂದೇಹ ಕಾಡುವಾಗ ಸರಿಯಾದ ರೂಪ ತಿಳಿದುಕೊಳ್ಳುವುದಕ್ಕೆ ನಿಷ್ಪತ್ತಿ ನೋಡುವಿಕೆ ನೆರವಾಗುತ್ತದೆ.

ಹುಡುಗ-ಹುಡಗ, ಹುಡುಗಿ-ಹುಡಗಿ ಇವುಗಳಲ್ಲಿ ಅಂತ್ಯದ-ಗ,-ಗಿ ಇವು ತದ್ಧಿತ ಪ್ರತ್ಯಯಗಳಾಗಿವೆ; ಒಂದು ಪುರುಷವಾಚಿ, ಇನ್ನೊಂದು ಸ್ತ್ರೀವಾಚಿ.-ಉಕ,-ಉಗ ತದ್ಧಿತ ಪ್ರತ್ಯಯಗಳು ಶಬ್ದಮಣಿದರ್ಪಣದಲ್ಲಿ ಕಂಡುಬರುವುದರಿಂದ-ಅಗ ಎಂಬುದನ್ನೊಳಗೊಂಡ ಹುಡಗ ತಪ್ಪು ರೂಪವೆಂದೂ, ಹುಡುಗ ಎಂಬುದೇ ನಿಜರೂಪವಾಗಿದ್ದು, ಇದು (-ಉಕ>)-ಉಗ ಪ್ರತ್ಯಯವನ್ನು ಅಂಟಿಸಿಕೊಂಡಿದೆಯೆಂದೂ ಹೇಳಬೇಕೆನಿಸುತ್ತದೆ. ಈ ಅಭಿಪ್ರಾಯವನ್ನು ಪರಿಷತ್ತಿನ ನಿಘಂಟಿನಲ್ಲಿ ದಾಖಲಾಗಿರುವ ಪುಡುಗ, ಹುಡುಗ ರೂಪಗಳೂ ಪುಷ್ಟೀಕರಿಸುತ್ತವೆ.

ಆದರೆ ಸಣ್ಣದು, ಕಿರಿದು ಎಂಬುದನ್ನು ಸೂಚಿಸುವ ಪುಡಿಯಾಳು, ಪುಡಿಕಾಸು ಪದಗಳಲ್ಲಿ "ಇ" ಕಾರವಿರುವುದರಿಂದ ಪುಡುಗ, ಹುಡುಗಗಳಿಗಿಂತ ಪುಡಿಗ, ಹುಡಿಗಗಳೇ ಮೂಲರೂಪವಿರಬೇಕೆನಿಸುತ್ತದೆ. ಆಗ ಇಲ್ಲಿ -ಇಗ ತದ್ಧಿತಪ್ರತ್ಯಯವಿದೆಯೆಂದೂ (-ಇಕ, -ಇಗ ಪ್ರತ್ಯಯಗಳನ್ನು ಶಬ್ದಮಣಿದರ್ಪಣದಲ್ಲಿ ಹೇಳಲಾಗಿದೆ. ಸೂ ೨೦೮, ೨೧೪), ಪುಡಿ, ಹುಡಿಗಳೇ

ಪ್ರಕೃತಿರೂಪಗಳೆಂದೂ ಒಪ್ಪಬೇಕಾಗುತ್ತದೆ. ಮೋಳಿಗೆಯ ಮಾರಯ್ಯನ ವಚನದಲ್ಲಿರುವ ಹುಡಿಗ ಎಂಬ ಪ್ರಯೋಗ (೭೩೩) ಈಗ ನಮ್ಮ ಬೆಂಬಲಕ್ಕೆ ಬರುತ್ತದೆ. ಆದುದರಿಂದ ಸಣ್ಣವ್ಯಕ್ತಿ ಅರ್ಥದ ಹುಡಿಗ ಎಂಬುದೇ ನಿಜರೂಪವೆಂಬ, ಹುಡಿಗಿ ಇದರ ಸ್ತ್ರೀವಾಚಿಯೆಂಬ ನಿರ್ಣಯಕ್ಕೆ ಬರಬಹುದಾಗಿದೆ.

ಇಲ್ಲಿ ಪುರುಷವಾಚಿ ಹುಡಿಗ ಎಂಬುದರ ಆರಂಭದ ಹು ಅಕ್ಷರದ ಪ್ರಭಾವದಿಂದ ತರುವಾಯದ ಡಿ ಎಂಬುದು ಡು ಆಗಿ, ಹುಡುಗ ರೂಪತಾಳಿದೆ (ಹುಡಿಗ>ಹುಡುಗ). ಅದೇ ರೀತಿ ಅಂತ್ಯ ಗ ದ ಪ್ರಭಾವದಿಂದ ಅದರ ಹಿಂದಿನ ಡಿ>ಡ ಆಗಿ ಹುಡಗ ರೂಪ ತಾಳಿದೆ (ಹುಡಿಗ>ಹುಡಗ). ಒಟ್ಟಾರೆ, ಹುಡಿಗ>ಹುಡುಗ, ಹುಡಗ ಎಂಬ ರೂಪದಲ್ಲಿ ಬಿಚ್ಚಿಕೊಂಡಿತು.

ಇದೇ ರೀತಿ ಸ್ತ್ರೀವಾಚಿ ಹುಡಿಗಿ ಎಂಬುದು ಅಂತ್ಯದ ಇಕಾರವು ಎಕಾರವಾಗುವ ನಿಯಮದಂತೆ ಒಮ್ಮೆ ಹುಡಿಗೆ ರೂಪತಾಳಿತು. ಇನ್ನೊಮ್ಮೆ ಆರಂಭದ ಹು ಅಕ್ಷರದ ಪ್ರಭಾವದಿಂದ ತರುವಾಯದ ಡಿ ಎಂಬುದು ಡು ಆಗಿ ಹುಡುಗಿ ರೂಪತಾಳಿತು. ಅಂತ್ಯದ ಇಕಾರವು ಎಕಾರವಾಗುವ ನಿಯಮದಂತೆ ಇದೂ ಹುಡುಗೆ ರೂಪತಾಳಿತು. ಕೆಲವೊಮ್ಮೆ ಪುರುಷವಾಚಿ ಹುಡಗ ಎಂಬುದೇ ಸ್ತ್ರೀವಾಚಿಯಾಗುವಲ್ಲಿ ಹುಡಗಿ ರೂಪ ತಾಳಿತು. ಇಕಾರವು ಎಕಾರವಾಗುವ ನಿಯಮದಂತೆ ಇದೂ ಹುಡಗೆ ರೂಪವನ್ನು ತಾಳಿತು. ಒಟ್ಟಾರೆ, ಹುಡಿಗಿ>ಹುಡಿಗೆ, ಹುಡುಗಿ, ಹುಡುಗೆ, ಹುಡಗಿ, ಹುಡಗೆ ಎಂಬ ರೂಪಗಳಲ್ಲಿ ಬಿಚ್ಚಿಕೊಂಡಿತು.

■■

ಆಕರ : ಮಾರ್ಗ ಸಂಪುಟ–೪

ವಾಕ್ಪಲ್ಲವಿ

ದಕ್ಷಿಣ ಕರ್ನಾಟಕದ ಮಲೆಯ ಮಾದೇಶ್ವರ ಸಂಪ್ರದಾಯದ "ದೇವರ ಗುಡ್ಡರು"ಹೆಸರಿನ ವೃತ್ತಿಗಾಯಕರು "ಕರಪಾಲ ಮೇಳ"ವೆಂಬ ಕಥಾಮೇಳವನ್ನು ಜರುಗಿಸುತ್ತಾರೆ. ಕೈಯಿಂದ ಕಂಸಾಳೆ (ಕಂಚಿನ ತಾಳ)ಯನ್ನು ನುಡಿಸುತ್ತ ಗದ್ಯ-ಪದ್ಯ ಮಾಧ್ಯಮದಲ್ಲಿ ಕಥೆಗಳನ್ನು ಮುನ್ನಡೆಸುವ ಇವರು, ಕಥೆಯ ಮಧ್ಯ ಇಲ್ಲವೆ ಕೊನೆಯ ಮಂಗಳಾರತಿ ಪ್ರಸಂಗಗಳಲ್ಲಿ ಕೈಚಲನೆ ಇಲ್ಲವೆ ಮಾತು ಇವುಗಳ ಮೂಲಕ ಸೂಚಿಸಿದ ಸಂಕೇತಗಳನ್ನು ವಿಸಂಕೇತಿಸುತ್ತಾರೆ. ಇದಕ್ಕೆ "ಕರಪಾಲ ಮೇಳ"ವೆಂದು ಹೆಸರು. ಇದರ ಶುದ್ಧರೂಪ ಕರಪಲ್ಲವ. ಬಹುಶ: ಕೈಚಲನೆ (ಕರಪಲ್ಲವ)ಯನ್ನು ಗಮನಿಸಿಯೇ ಇದಕ್ಕೆ ಕರಪಲ್ಲವ ಎಂದು ಕರೆದರು. ಆಮೇಲೆ ಅದು ಕರಪಾಲವೆಂದು ಬಳಕೆಗೊಂಡಿರಬಹುದು. ಮುಂದೆ ಕರ ಸಂಕೇತ ಸ್ಥಾನದಲ್ಲಿ "ಭಾಷಾ" ಸಂಕೇತ ಬಳಸಿದರೂ, ಇನ್ನೂ ಮುಂದೆ ಕಥಾನಿರೂಪಣೆ ಪ್ರಧಾನವಾಗಿ ಬೆಳೆದರೂ ಮೂಲದ ಕರಪಲ್ಲವ ಅಥವಾ ಕರಪಾಲವೆಂಬುದೇ ಈ ಕಲೆಯ ಸಾರ್ವತ್ರಿಕ ಹೆಸರಾಗಿ ಉಳಿದುಕೊಂಡಿತು.

ದಕ್ಷಿಣಕರ್ನಾಟಕದಲ್ಲಿ ಈ ಕಲೆ ಹೀಗೆ ಸಂಕೇತಗಳನ್ನು ವಿಸಂಕೇತಗೊಳಿಸುವುದು ಮತ್ತು ಕಥನಗೀತ ಹೇಳುವುದು-ಈ ಎರಡೂ ಕಲೆಗಳನ್ನು ಮೇಳವಿಸಿಕೊಂಡಿದೆ. (ಇತ್ತೀಚೆ ಸಂಕೇತ-ವಿಸಂಕೇತಭಾಗ ಮಾಯವಾಗುತ್ತ ನಡೆದಿದೆ). ಉತ್ತರ ಕರ್ನಾಟಕದಲ್ಲಿ ಮಾತ್ರ ಇದು ಸಂಕೇತಗಳನ್ನು ವಿಸಂಕೇತಗೊಳಿಸುವುದಕ್ಕೆ ಸೀಮಿತವಾಗಿದೆ. ಇಲ್ಲಿ ಜಂಗಮರು ಅಥವಾ ಕೊಡೆಕಲ್ಲ ಜಂಗಮರು ಈ ಕಲೆಯನ್ನು ಪ್ರದರ್ಶಿಸುತ್ತಾರೆ.

ದಕ್ಷಿಣ ಕರ್ನಾಟಕದಲ್ಲಿ ನಿರ್ದಿಷ್ಟ ಸ್ಥಳದಲ್ಲಿ, ನಿರ್ದಿಷ್ಟ ದಿನದಂದು ಈ ಮೇಳ ಜರುಗಿಸಿದರೆ, ಉತ್ತರ ಕರ್ನಾಟಕದಲ್ಲಿ ಸಂತೆ, ಜಾತ್ರೆಗಳಂಥ ಸಂದರ್ಭಗಳಲ್ಲಿ ಅಂಗಡಿಯಿಂದ ಅಂಗಡಿಗೆ, ಇಲ್ಲವೆ ಮನೆಯಿಂದ ಮನೆಗೆ ಸಂಚರಿಸಿ ತಮ್ಮ ಕಲೆಯನ್ನು ಪ್ರದರ್ಶಿಸುತ್ತಾರೆ. ಇಲ್ಲಿಯ ಸಂಕೇತ-ವಿಸಂಕೇತಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಸಾಹಿತ್ಯ ಮತ್ತು ಲೇಖನ ಪ್ರಕಟವಾಗಿವೆ.

೧. ಹಸ್ತ ಸಂಕೇತ ಕರಪಲ್ಲವಿ
 -ಧೋಂಡ ಕೇಶವ ಜೋಶಿ-೧೮೮೮ ಜ್ಞಾನ ಚಂದ್ರೋದಯ ಪ್ರೆಸ್ ಗದಗ.
೨. ಅಪೂರ್ವ ಜನಪದ ಕಲೆ: ಕರಪಾಲ ಮೇಳ
 -ಡಾ। ಜೀ. ಶಂ. ಪರಮಶಿವಯ್ಯ (ಜನಪದ ಸಾಹಿತ್ಯ ಸಮೀಕ್ಷೆ)
೩. ಕರಪಲ್ಲ
 -ಡಾ।ಎಂ. ಚಿದಾನಂದಮೂರ್ತಿ. (ಜಾನಪದ ೧-೧)
೪. ಒಂದು ಸಂಕೇತ ಭಾಷೆ-ಕರಪಲ ಸವುಜ್ಞಕಂ
 -ಜಿ. ಜಿ. ಮಂಜುನಾಥ (ಪ್ರಬುದ್ಧ ಕರ್ನಾಟಕ ೫೫-೪)
೫. ಕರಪಲ್ಲ : ಒಂದು ವಿವೇಚನೆ
 -ಬಸವಲಿಂಗ ಸೊಪ್ಪಿಮಠ (ಬಸವಪಥ ೬-೧೨)

ಸಂಕೇತಿಸುವ-ವಿಸಂಕೇತಿಸುವ ಈ ಕಲೆ ಆಂಗಿಕ ಮತ್ತು ಭಾಷಿಕಗಳೆಂಬ ಎರಡು ಮಾಧ್ಯಮಗಳಲ್ಲಿ ಪ್ರಕಟವಾಗುವುದನ್ನು ಡಾ।। ಜೀ. ಶಂ. ಪ ಗುರುತಿಸಿದ್ದಾರೆ. (ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಚಾರಗಳು ೨೭೨-೮೦). ಡಾ।। ಚಿದಾನಂದಮೂರ್ತಿಯವರು ಆಂಗಿಕ ಮಾಧ್ಯಮದ ಸಮಗ್ರ ಪರಿಚಯ ಮಾಡಿಕೊಟ್ಟಿದ್ದಾರೆ. ಜಿ. ಜಿ. ಮಂಜುನಾಥ ಅವರು ಈ ವಿಷಯಕ್ಕೆ ಸಂಬಂಧಿಸಿದ ಪ್ರಾಚೀನ ಹಸ್ತಪ್ರತಿಯನ್ನು ಸಂಸ್ಕರಿಸಿ, ವಿವರಣೆ ನೀಡಿದ್ದಾರೆ.

ಇತ್ತೀಚೆ ನನ್ನ ಗಮನಕ್ಕೆ ಬಂದ ಭಾಷಿಕ ಮಾಧ್ಯಮದ ಒಂದು ಭಿನ್ನಪತ್ಯವನ್ನು ಇಲ್ಲಿ ಪ್ರಕಟಿಸುತ್ತಿದ್ದೇನೆ. ಹುಬ್ಬಳ್ಳಿಯ ನೆಹರೂ ಕಾಲೇಜಿನ ಕನ್ನಡ ಪ್ರಾಧ್ಯಾಪಕ(ನಿವೃತ್ತ) ರಾದ ಪ್ರೊ. ಸಿ. ಪಿ. ಹೇಮಗಿರಿಮಠ ಅವರ ಮೂಲಕ ಈ ಪತ್ಯ ನನ್ನ ಕೈಸೇರಿತು. ಇದು ಪ್ರೊ। ಹೇಮಗಿರಿಮಠ ಅವರ ಅಜ್ಜಂದಿರಾದ ಚೆನ್ನಬಸಯ್ಯ ಹೇಮಗಿರಿಮಠ ಅವರ ಹಸ್ತಾಕ್ಷರದಲ್ಲಿದೆ. ಈ ಪತ್ಯವನ್ನು, ಇವರೇ ರಚಿಸಿದರೆಂದು ಸ್ಪಷ್ಟವಾಗಿ ಹೇಳಲಾಗಿದೆ. ೧೮೯೮ರಷ್ಟು ಪೂರ್ವದ ಪತ್ಯವೆಂಬುದು ಗಮನಿಸಬೇಕಾದ ಸಂಗತಿಯಾಗಿದೆ. "ಶಬ್ದ ಸಂಕೇತ-ವಾಕ್ಪಲ್ಲವಿಯು" ಎಂದು ಕರೆಯುವುದರ ಮೂಲಕ ಇದು ಭಾಷಿಕ ಮಾಧ್ಯಮದ ಪತ್ಯವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಶಾಬ್ದಿಕ ದೋಷಗಳನ್ನು ಸರಿಪಡಿಸಿ ಈ ಪತ್ಯವನ್ನು ಮೂಲರೂಪದಲ್ಲಿಯೇ ಹೀಗೆ ಪ್ರಕಟಿಸುತ್ತಿದ್ದೇನೆ:

ಶ್ರೀ
ಗಜಾನ ಪ್ರಸನ್ನ
ಶಬ್ದಸಂಕೇತ
ವಾಕ್ಪಲ್ಲವಿಯು
ಚೆನ್ನಬಸಪ್ಪಯ್ಯಾ ಹೇಮಗಿರಿಮಠ
ಬನ್ನಿಕೊಪ್ಪ. ತಾ. ಶಿರಟ್ಟಿ ಇ. ಸಾಂಗಲಿ
ಇವರು ಲೋಕಹಿತಾರ್ಥವಾಗಿ ಜನರ ಕರ್ಮಣೂಕಿ ಸಲುವಾಗಿ ರಚಿಸಿದ್ದು
ತಾ: ೨೯ನೇ ಜೂನ ಸನ್ ೧೮೯೮ನೆ ಇ.

ಸೂಚನೆ

ಕೆಲವು ಜನರು ತಾವು ಕರಪಲ್ಲವೀ ಮುಂತಾದ್ದನ್ನು ಮಾಡಬಲ್ಲೆವೆಂದು ವೂರೂರಿಗೆ ಬರುತ್ತಾರೆ. ಸದರೀ ಜನರ ಪೈಕಿ ಒಬ್ಬನನ್ನು ದೂರ ಕರದೊಯ್ದು, ಅವನ ಮುಂದೆ ತಮ್ಮ ಹೆಸರು ಅಡ್ಡಹೆಸರು

ಅಥವಾ ಯಾವದಾದರೊಂದು ಪದಾರ್ಥದ ಹೆಸರು ಹೇಳಿದರೆ, ಅವನು ಅಲ್ಲಿಂದಲೇ ನಾನಾ ಪ್ರಕಾರದ ಸನ್ನೆಗಳ ಮಾಡಿ ಇತ್ತ ಕಡೆ ಇದ್ದವಗೆ ತೋರಲು, ಇವನು ಸ್ಪಷ್ಟವಾಗಿ ವುಚ್ಚರಿಸುತ್ತಾನೆ. ಅದಕ್ಕೆ ಜನರು ಆಶ್ಚರ್ಯಪಡುವರಾದ ಕಾರಣ ಏನೂ ಅಂಗವಿಕೃತಿಗಳಿಲ್ಲದೆ ಶುಲಭ ಶಬ್ದಗಳಿಂದಲೇ ಜನರು ಹೇಳಿದ್ದನ್ನು ವುಚ್ಚರಿಸಲಿಕ್ಕೆ ಬರುವಂತೆ ಯಿರುವ ಯೀಪುಸ್ತಕವನ್ನು ಅಭ್ಯಾಸಿಸಿ ಶುಲಭವಾಗಿ ಹೇಳುವ ಹಾಗೆ ಸಿದ್ಧಮಾಡಿದ್ದೇನೆ (ಪುಸ್ತಕಕರ್ತಾ).

ಶಬ್ದಸಂಕೇತ

ವಾಕ್ಪಲ್ಲವಿ

ಸ್ವರಗಳು

ಗುರು ಅಂದ್ರೆ ಅ	ಹರ ಅಂದ್ರೆ ಆ
ಬ್ರಹ್ಮ = ಇ	ವಿಷ್ಣು = ಈ
ಇಂದ್ರ = ಉ	ಅಗ್ನಿ = ಊ
ಯಮ = ಏ	ನೈರುತ್ಯ = ಐ
ವರುಣ = ಓ	ವಾಯವ್ಯ = ಔ
ಕುಭೇರಾ = ಂ	ಈಶಾನ್ಯ = ಃ

ವ್ಯಂಜನಗಳು

ಕಶ್ಯಪ = ಕ, ಅತ್ರಿ = ಖ, ಭಾರದ್ವಾಜ = ಗ, ವಿಶ್ವಾಮಿತ್ರ = ಘ, ಗೌತುಮ = ಙ. ಜಮಗದ್ನಿ = ಚ, ವಶಿಷ್ಟ = ಛ, ಸಾನಂದ = ಜ, ಮಾರ್ಕಂಡೆಯ = ಝ, ನಾರದ= ಞ. ಸೂರ್ಯ = ಟ, ಚಂದ್ರ = ಠ, ಮಂಗಳ= ಡ, ಬುಧ = ಢ, ಬ್ರಹಸ್ಪತಿ = ಣ. ಶುಕ್ರ = ತ, ಶನಿ = ಥ, ರಾಹು = ದ, ಕೇತು = ಧ, ಅರುಣ = ನ. ಪೃಥ್ವಿ = ಪ, ಅಪ್ಪು = ಫ, ತೇಜ = ಬ, ವಾಯು = ಭ, ಆಕಾಶ = ಮ.

ಅವರ್ಗೀಯ ವ್ಯಂಜನಗಳು

ತಿಥಿ = ಯ, ವಾರ = ರ, ನಕ್ಷತ್ರ = ಲ, ಯೋಗ = ವ, ಕರಣ = ಶ, ಕಾಮ = ಷ, ಕ್ರೋಧ = ಸ, ಲೋಭ= ಹ, ಮೋಹ = ಳ, ಮದ = ಕ್ಷ, ಮತ್ಸರ = ಜ್ಞ.

ಬಳ್ಳಿಗಳನ್ನು ಹೇಳಬೇಕಾದ್ರೆ ಯಾವ ವ್ಯಂಜನಕ್ಕೆ ಯಾವ ಶಬ್ದ ಹೇಳಿರುವುದೋ ಆ ಶಬ್ದಕ್ಕೆ ಬೇಕಾದ ಸ್ವರಸಂಜ್ಞೆಯ ಶಬ್ದಗಳನ್ನು ಕೂಡ್ಸಿ, ಆ ಮಿಶ್ರಶಬ್ದಗಳ ಸಂಜ್ಞಾಕ್ಷರಗಳನ್ನು ತಿಳಿಯುವದೂ.

(ಕನಬಳ್ಳಿ)

ಕಶ್ಯಪಗುರು=ಕ	ಅತ್ರಿಗುರು=ಖ
ಕಶ್ಯಪಶಿವ=ಕಾ	ಅತ್ರಿಶಿವ=ಖಾ
ಕಶ್ಯಪಬ್ರಹ್ಮ=ಕಿ	ಅತ್ರಿಬ್ರಹ್ಮ=ಖಿ
ಕಶ್ಯಪವಿಷ್ಣು=ಕೀ	ಅತ್ರಿವಿಷ್ಣು=ಖೀ
ಕಶ್ಯಪಇಂದ್ರ=ಕು	ಅತ್ರೇಂದ್ರ=ಖು

ಕಶ್ಯಪಾಗ್ನಿ=ಕೊ ಅತ್ರಿಅಗ್ನಿ=ಖೊ
ಕಶ್ಯಪಯಮ=ಕೇ ಅತ್ರಿಯಮ=ಖೇ
ಕಶ್ಯಪನೈರುತ್ಯ=ಕೈ ಅತ್ರಿನೈರುತ್ಯ=ಖೈ
ಕಶ್ಯಪವರುಣ=ಕೋ ಅತ್ರಿವರುಣ=ಖೋ
ಕಶ್ಯಪವಾಯುವ್ಯ=ಕೌ ಅತ್ರಿವಾಯುವ್ಯ=ಖೌ
ಕಶ್ಯಪಕುಭೇರ=ಕಂ ಅತ್ರಿಕುಭೇರ=ಖಂ
ಕಶ್ಯಪಈಶಾನ್ಯ=ಕಃ ಅತ್ರೀಶಾನ್ಯ=ಖಃ

ಉದಾಹರಣ

ನಕಾಶ ಹೇಳುವುದಾದರೆ (ಅರುಣ, ಕಶ್ಯಪ, ಶಿವ, ಕರಣ) ಈ ನಾಲ್ಕು ಶಬ್ದಗಳು ಕೂಡಿ ನಕಾಶವಾಯಿತು. (ಮುಂಬಯಿ) ಹೇಳುವುದಾದರೆ (ಆಕಾಶೇಂದ್ರ, ಕುಭೇರ, ತೇಜ, ಬ್ರಹ್ಮ) ಇದು ಮುಂಬಯಿ ಆಯಿತು. ಯಿದೇ ಪ್ರಕಾರ ಅನೇಕ ಶಬ್ದಗಳನ್ನು ಹೇಳಲಿಕ್ಕೆ ಮನನಾದ ನಂತರ ವತ್ತಕ್ಷರ ಹೇಳುವ ಸಾಧನ ಮಾಡಬೇಕು.

ವತ್ತಕ್ಷರಗಳು

ವಂದು ಅಕ್ಷರಕ್ಕೆ ಯರಡು ಮೂರು ಅಕ್ಷರಗಳು ಕೂಡಿಸುವುದಿದ್ದರೆ ಯಾವ ಅಕ್ಷರಗಳಿಗೆ ಜೋಡಿಸುವದಿದ್ದೀತು, ಆ ಅಕ್ಷರಗ ಶಬ್ದಗಳ ವುಚ್ಚರಿಸಿದ ನಂತರ ೦ ಅಂದು, ಮತ್ತೊಂದು ಕೂಡಿಸುವ ಶಬ್ದ ವುಚ್ಚರಿಸಬೇಕು. ಉದಾಹರಣ–ಕ್ರಾ ಬರಿಯತಕ್ಕದ್ದಾದರೆ (ಕಶ್ಯಪ ಶಿವ ೦ ವಾರ) ಅಂದರೆ ಕ್ರಾ ಹೇಳಿದ ಹಾಗಾಯಿತು. ಸ್ತ್ರೀ ಬರೆಯುವದಾದರೆ (ಕ್ರೋಧ, ಬ್ರಹ್ಮ ೦ ಶುಕ್ರ ೦ ವಾರ) ಅಂದರೆ ಸ್ತ್ರೀ ಬರೆದ ಹಾಗಾಯಿತು. ಚಕ್ರ ಹೇಳಬೇಕಾದರೆ (ಜಮದಗ್ನಿಮ ಕಶ್ಯಪ ೦ ವಾರ) ಅಂದರೆ ಚಕ್ರ ಎಂತ ಹೇಳಿದ ಹಾಗಾಯಿತು. ಯಿ ಪ್ರಕಾರ ದ್ವಿತ್ತಕ್ಷರಗಳನ್ನು ಮನನ ಮಾಡಿಕೊಂಡು ಯಿದ್ದರೆ ಬೇಕಾದಂಥ ಕಠಿಣಶಬ್ದಗಳನ್ನು ಹೇಳಲಿಕ್ಕೆ ಬರುವದು.

ಅಂಕೆಗಳು

ಕೆಂಪು = ೧, ಕಪ್ಪು = ೨, ಹಳದಿ=೩, ಹಸುರು=೪, ಬಿಳದು=೫,
ಶಂಖ = ೬, ಚಕ್ರ = ೭, ಗಧಾ= ೮, ಖಡ್ಗ = ೯, ಶಾರ್ಙ್ಗ = ೦.
ಕೆಂಪುಶಾರ್ಙ್ಗ=೧೦, ಕಪ್ಪುಶಾರ್ಙ್ಗ=೨೦, ಹಳದಿಶಾರ್ಙ್ಗ=೩೦, ಹಸುರುಶಾರ್ಙ್ಗ=೪೦, ಬಿಳದುಶಾರ್ಙ್ಗ=೫೦, ಶಂಖಶಾರ್ಙ್ಗ = ೬೦, ಚಕ್ರಶಾರ್ಙ್ಗ = ೭೦, ಗಧಾಶಾರ್ಙ್ಗ = ೮೦, ಖಡ್ಗಶಾರ್ಙ್ಗ = ೯೦, ಕೆಂಪುಶಾರ್ಙ್ಗ ಶಾರ್ಙ್ಗ = ೧೦೦

೧೧ ಹೇಳಬೇಕಾದ್ರೆ (ಕೆಂಪಶಾರ್ಙ್ಗ ಕೆಂಪ) ಅಂದ್ರೆ ೧೧ ಆಯಿತು.
೧೨ ಹೇಳಬೇಕಾದ್ರೆ (ಕೆಂಪಶಾರ್ಙ್ಗ ಕಪ್ಪು) ಅಂದ್ರೆ ೧೨ ಆಯಿತು.

ಯಿ ಪ್ರಕಾರ ಸಂಖ್ಯೆ ಹೇಳಲಿಕ್ಕೆ ಅಭ್ಯಾಸಮಾಡಬೇಕು. ಯೀ ನಿಯಮದಂತೆ ಯೀ ಯೆಲ್ಲಾ ಶಬ್ದಗಳನ್ನು ಜೊತೆಗಾರರಿಬ್ಬರು ಪಾಠಮಾಡಿದ್ದಾದರೆ, ಪ್ರತಿಯೊಬ್ಬನ ಮುಂದೆ ಯಾರಾದರೂ ವಂದು ತಮ್ಮ ಯಿಚ್ಛೆಯ ಪದಾರ್ಥದ ಹೆಸರಾಗಲಿ ಅಥವಾ ತಮ್ಮ ಹೆಸರನ್ನೇ ಆಗಲಿ ಹೇಳಿದರೆ, ಆ ಶಬ್ದವನ್ನು

ಸದರೀ ಪ್ರಕರ್ಣ ಅಭ್ಯಾಸಮಾಡಿದವನು ತನ್ನ ಜೊತೆಗಾರನೊಡನೆ ಮೇಲಿನ ಶಬ್ದಗಳ ಕ್ರಮದಂತೆ ತಿಳಿಸಿದರೆ, ಆ ಮನುಷ್ಯನು ಆ ವಾಕ್ಯವ ಸ್ಪಷ್ಟವಾಗಿ ವುಚ್ಛಾರಮಾಡುವುದನ್ನು ಕೇಳಿದರೆ, ಜನರಿಗೆ ಆಶ್ಚರ್ಯಕರವಾಗಿ ತೋರೀತು. ಕಾರಣಾ ಯೀ ಶಬ್ದಸಂಕೇತವನ್ನು ವಿನೋದಕರ್ತರಾದವರು ಅಭ್ಯಾಸಿಸಿ ಸಂತೋಷಪಡುವರೆಂದು ನಂಬುತ್ತೇವೆ.

ಸಮಾಪ್ತ

*****

ಗ್ರಾಮೀಣ ಪ್ರತಿಭೆಗಳು ಕಾಲಕ್ಷೇಪ, ವೃತ್ತಿವಿನೋದಗಳಿಗೆ ಸಾಧನಗಳನ್ನು ರೂಪಿಸಿಕೊಳ್ಳುವುದಕ್ಕೆ ಇದು ಒಂದು ಉದಾಹರಣೆ. ಶ್ರೀ॥ ಚೆನ್ನಬಸಯ್ಯನವರು ಸಿದ್ಧಪಡಿಸಿದ ಈ ವಾಕ್ಪಲ್ಲವಿ ಕೇವಲ ಪುಸ್ತಕದಲ್ಲಿ ಉಳಿಯಿತೋ, ಉಪಜೀವನಕ್ಕಾಗಿ ಇದನ್ನು ಯಾರಾದರೂ ಪ್ರಯೋಗಿಸುತ್ತಿದ್ದರೋ ತಿಳಿದುಬರುವುದಿಲ್ಲ. ಚೆನ್ನಬಸಯ್ಯನವರ ವ್ಯಕ್ತಿತ್ವ ವಿಲಕ್ಷಣವಾದುದೆಂದು ಮಾತ್ರ ತಿಳಿದುಬರುತ್ತದೆ.

■■

ಆಕರ : ಮಾರ್ಗ ಸಂಪುಟ–೪

ಮೇಣ ಬಸದಿ

ಬಾದಾಮಿಯ ಮೇಣಬಸದಿ ಕನ್ನಡ ನಾಡಿನ ಒಂದು ಅಪೂರ್ವ ಶಿಲ್ಪಕಲಾಕೃತಿ. ಕರ್ನಾಟಕಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟ ಈ ಗುಹಾಶಿಲ್ಪ, ಬಾದಾಮಿ ಚಾಲುಕ್ಯರ ಮುಖ್ಯ ಕೊಡುಗೆಗಳಲ್ಲಿ ಒಂದು.

ಕಲ್ಲಿನಲ್ಲಿ ನಾಲ್ಕು ಕಲಾತ್ಮಕ ಗವಿಗಳನ್ನು ಇಲ್ಲಿ ಕೊರೆಯಲಾಗಿದೆ. ಒಂದನೆಯದು ಶಿವಪರ, ಎರಡನೆಯದು ಮತ್ತು ಮೂರನೆಯದು ವಿಷ್ಣುಪರ, ನಾಲ್ಕನೆಯದು ತೀರ್ಥಂಕರಪರ. ಎರಡನೆಯ ಗವಿಯ ಪೂರ್ವಭಾಗದಲ್ಲಿ ಒಂದು ನೈಸರ್ಗಿಕ ಗವಿಯಿದೆ; ಅದು ಬೌದ್ಧಪರ.

ಮಂಗಳೇಶನ ಶಾಸನದ ಪ್ರಕಾರ ಇದರ ಹೆಸರು ಕಲ್ಮನೆ. ಆದರೆ ಇಂದು ರೂಢಿಯಲ್ಲಿರುವ ಹೆಸರು ಮೇಣಬಸದಿ. ಇಲ್ಲಿ ಶೈವ, ವೈಷ್ಣವ ಗವಿಗಳೇ ಹೆಚ್ಚು ಕಲಾತ್ಮಕ, ಹೆಚ್ಚು ವಿಸ್ತಾರ. ಹೀಗಿದ್ದೂ ಇದರ ಹೆಸರಿನಲ್ಲಿ 'ಬಸದಿ' ಎಂಬ ಜೈನ ಪದವೇಕೆ? 'ಮೇಣ' ಎಂಬುದಕ್ಕೆ ಅರ್ಥವೇನು? ಈ ಪ್ರಶ್ನೆಗಳಿಗೆ ಸಿಗುವ ಉತ್ತರ ಭಾಷೆ, ಧರ್ಮ, ಗವಿನಿರ್ಮಾಣದ ಕಾಲಗಳ ಮೇಲೆ ಬೆಳಕು ಚೆಲ್ಲಬಹುದಾಗಿದೆ.

ಕಲ್ಲನ್ನು ಮೇಣದಂತೆ ಕೊರೆದಿರುವ ಕೆತ್ತನೆಯಾಗಿರುವುದರಿಂದ ಇದರ ಹೆಸರು ಮೇಣಬಸದಿ ಎಂದು ಜನಸಾಮಾನ್ಯರು ಹೇಳುತ್ತಾರೆ. ಹಾಗಿದ್ದರೆ ಇದೇ ರೀತಿ ಏಕಶಿಲೆಯಲ್ಲಿ ಕೊರೆದ ಅಜಂತಾ ಮೊದಲಾದ ಗವಿಗಳಿಗೆ ಮೇಣಬಸದಿ ಎಂದು ಏಕೆ ಕರೆಯುವುದಿಲ್ಲ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಮೇಗಣಬಸದಿ ಎಂಬುದೇ ಆಡುಮಾತಿನಲ್ಲಿ ಮೇಣ ಬಸದಿಯಾಗಿರಬಹುದೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಹಾಗಿದ್ದರೆ ಕೆಳಗೆ ಒಂದು ಬಸದಿ ಇರಬೇಕಾಗುತ್ತದೆ. ಬಾದಾಮಿಯಲ್ಲಿ ಅಂಥ ಕುರುಹು ಕಂಡುಬರುವುದಿಲ್ಲ. ಭಾಷಾ ನಿಮಯದ ಪ್ರಕಾರ ಮೇಗಣ ಶಬ್ದ ಮೇಣವಾಗುವುದಿಲ್ಲ. ಬಹಳೆಂದರೆ ಮೇಲಿನ ಅಥವಾ ಮ್ಯಾಲಿನ ಆಗಬಹುದು. ಇಲ್ಲವೆ ಶ್ರವಣ ಬೆಳ್ಗೊಳದಲ್ಲಿಯ ಒಂದು ಬಸದಿಗೆ 'ಮೇಗಣ ಬಸದಿ' ಎಂಬ ಹಳೆಯ ಹೆಸರೇ ಇನ್ನೂ ಮುಂದುವರಿದಂತೆ ಇಲ್ಲಿಯೂ ಮುಂದುವರಿಯಬಹುದಿತ್ತು. ಹೀಗಾಗಿ ಈ ವಿವರಣೆಯನ್ನೂ ಕೈಬಿಟ್ಟು ಬೇರೊಂದು ಅರ್ಥ ಹುಡುಕಬೇಕಾಗುತ್ತದೆ.

ಬೌದ್ಧ ಭಿಕ್ಷುಗಳು ವಾಸಮಾಡುವ ಗವಿಗೆ ಲಯನ ಅಥವಾ ಲಯಣವೆನ್ನುತ್ತಾರೆ. ಇವು ಅಖಂಡ ಕಲ್ಲಿನಲ್ಲಿ ಕೊರೆದ ವಸತಿಗಳು. ಸುತ್ತಲೂ ಕೊಠಡಿಯುಳ್ಳ ದೊಡ್ಡ ಅಂಗಳ, ಕೊಠಡಿಗಳಲ್ಲಿ ಭಿಕ್ಷುವಿಗೆ ಮಲಗಲು ಕಲ್ಲು ಹಾಸಿಗೆ, ನೀರಿಗಾಗಿ ಪೋಥಿ ಹೆಸರಿನ ಒಂದೆರಡು ಕಲ್ಲಿನ ತೊಟ್ಟಿಗಳು. ಮಳೆಗಾಲದಲ್ಲಿ ಬೌದ್ಧ ಭಿಕ್ಷುಗಳು ವಾಸಮಾಡುವ ಲಯಣಗಳ ಸ್ವರೂಪವಿದು. ಲಯಣವೆಂಬುದು ಆಡು ಮಾತಿನಲ್ಲಿ ಲೇಣ ಎಂದಾಗುತ್ತದೆ.

ಬಾದಾಮಿ ಬೌದ್ಧರ ನೆಲೆಯಾಗಿದ್ದಿತೆಂದೂ, ಅಲ್ಲಿ ಅನೇಕ ಸಂಘಾರಾಮಗಳಿದ್ದವೆಂದೂ ಪುಲಿಕೇಶಿಯ ಆಸ್ಥಾನಕ್ಕೆ ಬಂದಿದ್ದ ಚೀನಿ ಪ್ರವಾಸಿ ಹುಯೇನ್‌ತ್ಸಾಂಗ ಹೇಳುತ್ತಾನೆ. ಪದ್ಮಪಾಣಿ ಬುದ್ಧನ ಶಿಲ್ಪವಿರುವ ನೈಸರ್ಗಿಕ ಗವಿ ಈ ಬೆಟ್ಟದಲ್ಲಿದೆ. ಈ ಗವಿ ಬೌದ್ಧಯತಿಗಳ ವಾಸಸ್ಥಾನವಾಗಿರುವುದರಿಂದ ಇದು ಲಯಣವೇ ಆಗಿದೆ. ಇದರಿಂದಾಗಿ ಒಂದು ಕಾಲಕ್ಕೆ ಇಡೀ ಬೆಟ್ಟವನ್ನು ಲಯಣ ಇಲ್ಲವೆ ಲೇಣವೆಂದು ಕರೆಯುತ್ತಿರಬಹುದು. ವೈದಿಕ ಸಂಪ್ರದಾಯದವರಾದ ಬಾದಾಮಿ ಚಾಲುಕ್ಯರು ಕಾರಣವಾಗಿ ಈ ಭಾಗದಲ್ಲಿ ಬೌದ್ಧಮತ ಕ್ರಮೇಣ ನಾಶವಾಯಿತೆಂದು ಇತಿಹಾಸತಜ್ಞರ ಅಭಿಪ್ರಾಯವಾಗಿದೆ.

ಬಾದಾಮಿಯಲ್ಲಿ ಬೌದ್ಧರಂತೆ ಜೈನರೂ ವಾಸವಾಗಿದ್ದರು. ಪುಲಕೇಶಿಯ ಆಸ್ಥಾನ ಕವಿ ರವಿಕೀರ್ತಿ ಜೈನ. ಬಾದಾಮಿಯ ನಾಲ್ಕನೆಯ ಗವಿ ಜೈನರದು. ಬೌದ್ಧಯತಿಗಳ ವಾಸಸ್ಥಾನ ಲಯಣವಾದರೆ ಜೈನ ಯತಿಗಳ ವಾಸಸ್ಥಾನ ಬಸದಿ (ಲಯಣ ಪದ ಜೈನರಲ್ಲಿ ಇದ್ದರೂ ಗೌಣ). ಬಾದಾಮಿ ಬೆಟ್ಟದಲ್ಲಿಯ ಬೌದ್ಧಗವಿಗಿಂತ ಜೈನಗವಿ ತರುವಾಯದ್ದು. ಹೀಗೆ ಬೌದ್ಧಗವಿಗೆ ಜೈನಗವಿ ಜೊತೆಯಾದಾಗ ಆ ಬೆಟ್ಟವನ್ನು ಲೇಣ+ಬಸದಿ ಎಂದು ಕರೆಯತೊಡಗಿರಬೇಕು. ಈ ಹೆಸರಿನಲ್ಲಿ ಬೌದ್ಧ ಮತ್ತು ಜೈನಗವಿಗಳ ಸೂಚನೆ ಮಾತ್ರ ಕಂಡು ಬರುವುದರಿಂದ ಶೈವ, ವೈಷ್ಣವ ಗವಿಗಳು ಇವುಗಳಿಗೆ ತರುವಾಯ ಹುಟ್ಟಿರುವ ಸಾಧ್ಯತೆಯಿದೆ. ಹೀಗೆ ಹೊಸ ಗವಿಗಳು ನಿರ್ಮಾಣವಾದರೂ ಹೆಸರು ಮಾತ್ರ ಹಳೆಯದೇ ಮುಂದುವರಿಯಿತೆಂದು ಕಾಣುತ್ತದೆ.

ಕಾಲಕ್ರಮದಲ್ಲಿ ಲೇಣಬಸದಿ ಹೆಸರಿನ ಅರ್ಥ ಅಪರಿಚಿತವಾದಾಗ ಜನಸಾಮಾನ್ಯರು ಲೇಣದ ಸ್ಥಾನದಲ್ಲಿ ತಮಗೆ ಪರಿಚಿತವಿರುವ, ಧ್ವನಿಸಾಮ್ಯದ ಮೇಣ ಪದವನ್ನು ಬಳಸಿದಂತಿದೆ. ಇದು ಭಾಷೆಯಲ್ಲಿ ಜರುಗುವ ಸಹಜ ಕ್ರಿಯೆ. ಅಂದಿನಿಂದ ಮೇಣಬಸದಿ ಎಂಬ ಹೆಸರೂ ಮೇಣದಲ್ಲಿ ಕೆತ್ತಿದಂಥ ಶಿಲ್ಪಕಲೆ ಎಂಬ ಅರ್ಥವಿವರಣೆಯೂ ಪ್ರಚಾರದಲ್ಲಿ ಬಂದವು. ಹೀಗೆ ಶೈವ, ವೈಷ್ಣವ ಗವಿಗಳು ಇಲ್ಲಿಯ ಮುಖ್ಯ ಆಕರ್ಷಣೆಗಳಾಗಿದ್ದರೂ ಈ ಬೆಟ್ಟಕ್ಕೆ ಯಾವ ಕಾಲಕ್ಕೂ ಹಿಂದೂ ಹೆಸರು ಪ್ರಾಪ್ತವಾಗಲಿಲ್ಲ. ಬೌದ್ಧರ ಕಾಲದಲ್ಲಿ ಲೇಣವೆಂಬ, ಜೈನರ ಕಾಲದಲ್ಲಿ ಲೇಣಬಸದಿಯೆಂಬ, ತರುವಾಯ ಮೇಣಬಸದಿಯೆಂಬ ಹೆಸರುಗಳು ಬೆಳೆದು ಬಂದಿವೆ. ಒಂದೂವರೆ ಸಾವಿರ ವರ್ಷ ಕಳೆದರೂ ಲೇಣವೆಂಬ ಹಳೆಯ ಶಬ್ದ ಮೇಣವೆಂಬ ಹೊಸ ಶಬ್ದದ ಹೊಟ್ಟೆಯಲ್ಲಿ ಇನ್ನೂ ಜೀವ ಹಿಡಿದುಕೊಂಡು ಉಳಿದುಬಂದಿದೆ.

■■

ಆಕರ : ಮಾರ್ಗ ಸಂಪುಟ–೩

೭೬

ಮಲ್ಲೇಶ = ಅದ್ರೀಶ > ಅದೃಶ್ಯ

ಸಂಶೋಧನ ಸಂದರ್ಭದಲ್ಲಿ ಆಕರಸಾಮಗ್ರಿ ವಹಿಸುವ ಪಾತ್ರ ತುಂಬ ಮಹತ್ವದ್ದಾಗಿದೆ. ಇವುಗಳನ್ನು ಬದಲಾಗದೆ ಉಳಿದು ಬರುವ ಆಕರಸಾಮಗ್ರಿ, ಬದಲಾಗುತ್ತ ಬರುವ ಆಕರಸಾಮಗ್ರಿಯೆಂದು ವರ್ಗೀಕರಿಸಬಹುದು. ಬದಲಾಗುತ್ತ ಬರುವ ಆಕರ ಸಾಮಗ್ರಿಯಲ್ಲಿ ಭಾಷೆ ತುಂಬ ಮುಖ್ಯವಾದುದು. ಇದು ಕಾಲನಿಷ್ಠವಾಗಿ ಅವಸ್ಥಾಭೇದಗಳನ್ನು, ದೇಶನಿಷ್ಠವಾಗಿ ಪ್ರಾಂತಭೇದಗಳನ್ನು ಮೈಗೂಡಿಸಿಕೊಂಡು ರೂಪಾಂತರಗೊಳ್ಳುತ್ತ ಮುನ್ನಡೆಯುತ್ತದೆ. ಹೀಗಿರುವಾಗ ಯಾವುದೋ ಕಾಲದ, ಯಾವುದೋ ಪ್ರಾಂತದ ಬದಲಾದ ಒಂದು ರೂಪವನ್ನು ಮೂಲರೂಪವೆಂದು ನಂಬಿ ಮಾಡುವ ಅಧ್ಯಯನ, ಅಡ್ಡದಾರಿ ಹಿಡಿಸುತ್ತದೆ. ಆದುದರಿಂದ ಸಂಶೋಧಕನಾದವನು ಆ ರೂಪ(Form)ದ ಮೂಲಸ್ವರೂಪವನ್ನು ಶೋಧಿಸಿ, ಅಧ್ಯಯನ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಮೇಲಿನ ಶಬ್ದಗಳ ಮೂಲ ರೂಪ-ಮೂಲ ಅರ್ಥ, ಪಲ್ಲಟವಾದ ರೂಪ-ಪಲ್ಲಟವಾದ ಅರ್ಥಗಳನ್ನು ಕಂಡುಹಿಡಿಯಲು ಮಾಡಿದ ಪ್ರಯತ್ನ ಈ ಲೇಖನ.

ಭಾಷೆಯೆನ್ನುವುದು ಸಂಸ್ಕೃತಿಯ ಪ್ರತಿಬಿಂಬ. ಈ ಭಾಷಿಕ "ಪ್ರತಿಬಿಂಬ"ವನ್ನಾಧರಿಸಿ ಮೂಲ "ಬಿಂಬ"ವನ್ನು ಶೋಧಿಸಬಹುದಾಗಿದೆ. ಇಂಥ ಶೋಧದೃಷ್ಟಿಯಿಂದಲೂ ಮೇಲಿನ ಪದಗಳ ವಿವೇಚನೆ ತುಂಬ ಮಹತ್ವದ್ದೆನಿಸುತ್ತದೆ.

ಪ್ರಾಚೀನ ಕಾಲದಿಂದಲೂ ಕರ್ನಾಟಕದ ವೀರಶೈವರಿಗೆ ಶ್ರೀಶೈಲ ತುಂಬ ಮಹತ್ವದ ಕ್ಷೇತ್ರವೆನಿಸಿದೆ. ಆಂಧ್ರಪ್ರದೇಶದಲ್ಲಿರುವ ಈ ದೇವರ ಹೆಸರಿನ ಮಲ್ಲಿಕಾರ್ಜುನ, ಮಲ್ಲಯ್ಯ ಇತ್ಯಾದಿ ದೇವಾಲಯಗಳೂ, ಮಠಗಳೂ ಕರ್ನಾಟಕದಲ್ಲಿ ಬಹುಸಂಖ್ಯೆಯಲ್ಲಿ ಹರಡಿಕೊಂಡಿವೆ. ಶ್ರೀಶೈಲ ಮಲ್ಲಿಕಾರ್ಜುನ ಇಲ್ಲಿಯ ಬಹುಸಂಖ್ಯೆ ಕುಟುಂಬಗಳ ಮನೆದೇವರಾಗಿದ್ದಾನೆ. ವೀರಶೈವರು ತಮ್ಮ ಮಕ್ಕಳಿಗೆ ಈ ದೇವರ ಹೆಸರಿಡುತ್ತಿದ್ದು, ಈ ಸಮಾಜದ ವ್ಯಕ್ತಿಗಳ ಪ್ರಮುಖ ಹೆಸರುಗಳಲ್ಲಿ ಒಂದೆಂಬಂತೆ ಇದು ಪ್ರಚಾರದಲ್ಲಿದೆ. ಸಾಲದುದಕ್ಕೆ ಪ್ರತಿವರ್ಷ ಶಿವರಾತ್ರಿ ಸಂದರ್ಭದಲ್ಲಿ ನೂರಾರು ಕಾವಡಿಗಳು ಕರ್ನಾಟಕದಿಂದ ಅಲ್ಲಿಗೆ ಹೋಗುತ್ತವೆ. ವರ್ಷದುದ್ದಕ್ಕೂ ಇಲ್ಲಿಯ ಭಕ್ತರು ಆ

ದೇವರ ದರ್ಶನಕ್ಕೆ ಹೋಗುತ್ತಾರೆ. ಹೀಗೆ ಕರ್ನಾಟಕದ ಒಂದು ಮುಖ್ಯಬೇರು ಎಂಬಂತೆ ಈ ಕ್ಷೇತ್ರ ಇತಿಹಾಸದುದ್ದಕ್ಕೂ ನಮ್ಮ ಪ್ರಾಂತವನ್ನು ಧಾರ್ಮಿಕವಾಗಿ ಆಳುತ್ತ ಬಂದಿದೆ. ಇದನ್ನು ಗಮನಿಸಿಯೇ ಬಸವಣ್ಣನವರು

> ಕೃತಯುಗದಲ್ಲಿ ಕೇತಾರ ಮೂಲಸ್ಥಾನ,
> ತ್ರೇತಾಯುಗದಲ್ಲಿ ವಾರಣಾಸಿ ಮೂಲಸ್ಥಾನ,
> ದ್ವಾಪರಯುಗದಲ್ಲಿ ವಿರೂಪಾಕ್ಷ ಮೂಲಸ್ಥಾನ,
> ಕಲಿಯುಗದಲ್ಲಿ ಪರ್ವತ ಮೂಲಸ್ಥಾನ.

ಎನ್ನುತ್ತ, ಈ ಕಲಿಯುಗದಲ್ಲಿ ಶ್ರೀಶೈಲ(ಪರ್ವತ)ವು ಮೂಲಸ್ಥಾನವಾಗಿ ಪ್ರಭಾವ ಬೀರುತ್ತಿದ್ದುದನ್ನು ಗುರುತಿಸಿ, ಹೇಳಿದ್ದಾರೆ.

ಇಲ್ಲಿ ಶ್ರೀಶೈಲಕ್ಕೆ "ಪರ್ವತ"ವನ್ನು ಪರ್ಯಾಯನಾಮವೆಂಬಂತೆ ಬಸವಣ್ಣನವರು ಬಳಸಿದ್ದಾರೆ. ಕರ್ನಾಟಕಾಂಧ್ರ ಲಿಂಗಾಯತರಿಗೆ ಪರ್ವತವೆಂದರೆ ಯಾವ ಪರ್ವತವೂ ಅಲ್ಲ, ಶ್ರೀಶೈಲ ಮಾತ್ರ–ಎಂಬಷ್ಟು ಇದಕ್ಕೆ ಪರ್ವತ ಪ್ರಸಿದ್ಧಿಯಿದ್ದಿತು. ಶ್ರೀಶೈಲ, ಪರ್ವತ ಸಂಸ್ಕೃತ ಶಬ್ದಗಳ ದ್ರಾವಿಡರೂಪ ಮಲೆ(ಮಲೈ).

ಈ ಮಲೆಯ+ಈಶಯೆಂಬುದೇ ಮಲ್ಲೇಶ ರೂಪ ತಾಳಿದೆ. ದುರ್ದೈವದ ಸಂಗತಿಯೆಂದರೆ ಈ ಪದವನ್ನು ಹೀಗೆ ಬಿಡಿಸಿಕೊಳ್ಳದೆ, ಸಂಸ್ಕೃತದ ಬೆಳಕಿನಲ್ಲಿ ಮಲ್ಲ+ಈಶ ಎಂದು ತಪ್ಪಾಗಿ ಬಿಡಿಸಿ, ಏನೇನೋ ಅರ್ಥ ಹೇಳುತ್ತ ಬರಲಾಗಿದೆ. ಇನ್ನೂ ವಿಷಾದದ ಸಂಗತಿಯೆಂದರೆ ಇದರ ಸಂವಾದಿ ಪದವಾಗಿರುವ ಮಲ್ಲಿಕಾರ್ಜುನ ಎಂಬುದನ್ನು ಮಲ್ಲಿಕಾ+ಅರ್ಜುನ ಎಂದು ಸರಳವಾಗಿ ಬಿಡಿಸಿ, ಮಹಾಭಾರತದ ಅರ್ಜುನನೊಂದಿಗೆ ಸಂಬಂಧ ಕಲ್ಪಿಸಿ, ರೋಚಕ ಕಥೆ, ಕಾವ್ಯ, ಪುರಾಣಗಳನ್ನು ಸೃಷ್ಟಿಸುತ್ತ ಬಂದಿದ್ದೇವೆ. ದ್ರಾವಿಡರೂಪವಾಗಿರುವ ಮಲೈಕ್ಕು+ಅರಸನ್ =ಮಲೈಕ್ಕರಸನ್ (ಮಲೆಯ ಅರಸನು) ಎಂಬುದನ್ನೇ ಸಂಸ್ಕೃತಕರಿಸಿ ಮಲ್ಲಿಕಾರ್ಜುನ ಮಾಡಿಕೊಂಡುದರ ಫಲವಿದು. ಈ ಮಲ್ಲೇಶ, ಮಲ್ಲಿಕಾರ್ಜುನ ಹೆಸರುಗಳಲ್ಲಿ ಪ್ರಸ್ತುತ ಚರ್ಚೆಯ ವಸ್ತುವಾಗಿದೆ, ಮಲ್ಲೇಶ.

ಮೇಲೆ ಚರ್ಚಿಸಿದಂತೆ ಮಲೆಯ+ಈಶ ಎನ್ನುವುದೇ ಮಲ್ಲೇಶವಾಯಿತು. ಆದರೆ ಮಲ್ಲೇಶದಲ್ಲಿ ಮಲೆ ಶಬ್ದ ಅಡಗಿಕೊಂಡಿದೆಯೆಂಬುದನ್ನು ಮರೆತು, ಅದಕ್ಕೆ ಇನ್ನೊಮ್ಮೆ ಮಲೆ ಶಬ್ದವನ್ನು ಜೋಡಿಸಿ ಮಲೆಯ ಮಲ್ಲೇಶ ಎಂಬ ಪದವನ್ನು ದ್ವಿರುಕ್ತಿರೂಪದಲ್ಲಿ ಸೃಷ್ಟಿಸಿಕೊಂಡರು. ಇದು ಒಂದನೆಯ ತಪ್ಪು.

ಆಮೇಲೆ ಇಲ್ಲಿಯ ದ್ರಾವಿಡ ಪದವಾದ ಮಲೆ ಎನ್ನುವುದರ ಅರ್ಥ ಗೊತ್ತಾಗದಾಗ, ಅದನ್ನು ಮಳೆ ಎಂದು ಭ್ರಮಿಸಿದರು. ಆಗ ಮಲೆಯ ಮಲ್ಲೇಶ ಎಂಬುದನ್ನು ಮಳೆಯ ಮಲ್ಲೇಶ ಎಂದು ಪರಿವರ್ತಿಸಿಕೊಂಡರು. ಇದು ಎರಡನೆಯ ತಪ್ಪು.

ಆಮೇಲೆ ಈ ಮಳೆಯ ಮಲ್ಲೇಶ ಪದಕ್ಕೆ ಜನರು ನಂಬುವಂತೆ ಅರ್ಥ ಹೇಳಲು ಬಯಸಿ, ಮಲ್ಲೇಶ ಹೆಸರಿನ ಗುರು ಅಕಾಲದಲ್ಲಿ ಮಳೆ ತರಿಸಿದ ಕಾರಣ, ಅವನಿಗೆ ಮಳೆಯ ಮಲ್ಲೇಶ ಎಂಬ ಹೆಸರು ಪ್ರಸಿದ್ಧಿಗೆ ಬಂದಿತೆಂದು ಕಥೆಕಟ್ಟಿ ಪ್ರಚಾರಮಾಡಿದರು. ಇದು ಮೂರನೆಯ ತಪ್ಪು. ಇದು ಈಗಲೂ ಮಳೆಸ್ವಾಮಿ, ಮಳೆಯ್ಯ ರೂಪಗಳಲ್ಲಿ ಬಳಕೆಯಾಗುತ್ತಲಿದೆ. ಕೊಪ್ಪಳದ ಮಳಿ ಮಲ್ಲಪ್ಪನ

ಗುಡ್ಡವನ್ನು ರೋಮನ್ ಲಿಪಿಯಲ್ಲಿ ಓದಿ ಮಾಲಿ ಮಲ್ಲಪ್ಪನ ಗುಡ್ಡ ಎಂದು ದಾಖಲಿಸಿದ ಪ್ರಮಾದಗಳೂ ಘಟಿಸಿವೆ.[೧]

ಹೀಗೆ ಮಳೆಯ ಮಲ್ಲೇಶ ಎಂಬುದು ಸೃಷ್ಟಿಯಾದ ಬಳಿಕ, ಈ ಹೆಸರಿನ ಅನೇಕಜನ ಸ್ವಾಮಿಗಳು ಕರ್ನಾಟಕದಲ್ಲಿ ಆಗಿಹೋಗಿದ್ದಾರೆ. ಇವರಲ್ಲಿ ಒಬ್ಬನಾಗಿದ್ದಾನೆ, ವಿಜಾಪುರ ಜಿಲ್ಲೆಯ ಬೆಳ್ಳುಬ್ಬಿಯಲ್ಲಿ ಮಠಸ್ಥಾಪಿಸಿದ ಮಳೆಯ ಮಲ್ಲೇಶ. ಈ ಬೆಳ್ಳುಬ್ಬಿಯ ಮಳೆಯ ಮಲ್ಲೇಶನ ಭಕ್ತರು, ಸಮೀಪದ ಕೊಲ್ಲಾರ ದೇಸಾಯಿಗಳು. ಈ ಮನೆತನದಲ್ಲಿ ಪ್ರೌಢದೇವರಾಯನ ಕಾವ್ಯ ಬರೆದವನ ಹೆಸರು ಅದ್ರೀಶ, ಅದೃಶ್ಯವೆಂದು ಎರಡು ರೀತಿಯಲ್ಲಿ ಕಂಡುಬರುತ್ತದೆ. ಇವುಗಳಲ್ಲಿ ನಿಜವಾದ ಹೆಸರು ಯಾವುದು? ಎಂಬುದು ಒಂದು ಸಮಸ್ಯೆಯಾಗಿದೆ.

ಮೇಲಿನ ಚರ್ಚೆ ಈ ಸಮಸ್ಯೆಗೆ ಉತ್ತರದ ಸುಳಿವು ನೀಡುತ್ತದೆ. ಅದು: ಇವನ ಗುರು (ಬೆಳ್ಳುಬ್ಬಿಯ) ಮಳೆಯ ಮಲ್ಲೇಶ ಹೆಸರಿನ ನಿಜರೂಪ ಮಲೆಯ ಮಲ್ಲೇಶ. ಇಲ್ಲಿಯ ದ್ವಿರುಕ್ತಿಯನ್ನು ಕಳೆದರೆ ಉಳಿಯುವ ಹಳೆಯ ರೂಪ ಮಲ್ಲೇಶ. ಇದರ ನಿಜರೂಪ, ಮೇಲೆ ಹೇಳಿದಂತೆ ಮಲೆಯ+ಈಶ. ಇದರ ಸಂಸ್ಕೃತರೂಪ ಅದ್ರಿ+ಈಶ=ಅದ್ರೀಶ. ಅಂದರೆ ಮಲ್ಲೇಶ ಎಂಬುದೇ ಈ ಕವಿಯ ನಿಜನಾಮವಾಗಿದ್ದು, ಬಹುಶ: ಈ ಕವಿಯೇ ಸಂಸ್ಕೃತ ವ್ಯಾಮೋಹಕ್ಕೆ ತುತ್ತಾಗಿ ಅದನ್ನು ಅದ್ರೀಶವೆಂದು ಸಂಸ್ಕೃತಗೊಳಿಸಿಕೊಂಡಂತಿದೆ. ಮುಂದಿನ ತಲೆಮಾರಿನವರು ಅದ್ರೀಶವೆಂಬುದರ ಅರ್ಥ ತಿಳಿಯದೇ ಹೋಗಲು, ಅದರ ಸ್ಥಾನದಲ್ಲಿ ಪರಿಚಿತ ಪದವಾದ ಅದೃಶ್ಯ ಪದವನ್ನು ಬಳಸಿದರೆಂದು ತೋರುತ್ತದೆ. ಇಂದು ಸಿಗುವ ಪ್ರೌಢದೇವರಾಯನ ಕಾವ್ಯದ ಹಸ್ತ ಪ್ರತಿಗಳಲ್ಲಿ ಈ ಎರಡೂ ರೂಪಗಳು ಬಳಕೆಯಾಗಿದ್ದರೂ, ಇಲ್ಲಿಯ ನಿಜಪಾಠ ಅದ್ರೀಶವೆಂದೂ,[೨] ಈ ಕವಿಯ ನಿಜನಾಮ ಮಲ್ಲೇಶವೆಂದೂ ಹೇಳಬಹುದಾಗಿದೆ.

*****

ಶ್ರೀಶೈಲ(=ಮಲೆ) ಪರಂಪರೆಯ ಲಿಂಗಾಯತ ಜಂಗಮರದು "ಮಲೆಯ ಬಗೆ." ಮಲೆಯೆಂಬುದರ ಅರ್ಥ ಅಪರಿಚಿತವಾಗಲು ಇದರ ಸ್ಥಾನದಲ್ಲಿ ಮಳೆ ಎಂಬ ಪರಿಚಿತ ಪದವನ್ನು ಬಳಸಿ, ತಮ್ಮದು ಮಳೆಯ ಬಗೆ(ಪರ್ವತಾವಳಿ)ಎಂದು ಕರೆದುಕೊಂಡರು. ಈ ಮಳೆಯ ಬಗೆಯ ಮಠಗಳೇ ಮಳಿಮಠಗಳು. ಇಂದು ಉತ್ತರ ಕರ್ನಾಟಕದಲ್ಲಿ ಸಿಗುವ ಮಳಿಮಠ ಅಡ್ಡಹೆಸರಿನ ಕುಟುಂಬಗಳು ಈ ಸಂಪ್ರದಾಯಕ್ಕೆ ಸಂಬಂಧಿಸಿವೆ.

ಕಾಲಕ್ರಮೇಣ ಪ್ರತಿಷ್ಠೆಯ ದ್ಯೋತಕವೆಂಬಂತೆ ಈ ಮಳೆ ಪದವನ್ನು ವೃಷ್ಟಿಯೆಂದು ಭಾಷಾಂತರಿಸಿ, ಮಳೆಯ ಬಗೆ ಎಂಬುದನ್ನು ವೃಷ್ಟಿಸೂತ್ರವೆಂದೂ ಪ್ರಚಾರಗೊಳಿಸಿದರು. ಒಟ್ಟಾರೆ, ಮಲೆ ಎಂಬುದನ್ನು ಅಜ್ಞಾನ ಕಾರಣವಾಗಿ ಮಳೆಯೆಂದು ಪರಿವರ್ತಿಸಿಕೊಂಡುದೂ, ಪ್ರತಿಷ್ಠೆ ಕಾರಣವಾಗಿ ವೃಷ್ಟಿಯೆಂದು ಭಾಷಾಂತರಿಸಿಕೊಂಡುದೂ ಇಲ್ಲಿ ಕಂಡುಬರುತ್ತದೆ.

■■

ಆಕರ : ಮಾರ್ಗ ಸಂಪುಟ-೪

---

೧. ಕೊಪ್ಪಳ ಶಾಸನಗಳು-ಪು ೧-ಹಂಪ ನಾಗರಾಜಯ್ಯ.

೨. ಅದ್ರೀಶ ಎಂಬುದೇ ಸರಿಯಾದ ಹೆಸರೆಂದು ತೋರುತ್ತದೆ-ಎಂದು ಎಚ್. ದೇವೀರಪ್ಪ ಹೇಳುವುದಾದರೂ ಕಾರಣ ಕೊಡುವುದಿಲ್ಲ. ನೋಡಿ: ಸಂಶೋಧನ ಸಂಪುಟ ಪುಟ ೭. ಅ. ಟಿ.

೭೭

ಭೈರವ, ಜುಂಜಪ್ಪ ಮತ್ತು ಮೈಲಾರ

ಸಂಶೋಧನೆಗೆ ಮುಖ್ಯವಾದುದು ಆಕರಸಾಮಗ್ರಿ. ಇದು ಬದಲಾಗುತ್ತ ಬಂದುದು, ಬದಲಾಗದೆ ಉಳಿದುದು–ಎಂದು ಎರಡು ಬಗೆಯಾಗಿದೆ. ಬದಲಾಗದೆ ಬಂದ ಸಾಮಗ್ರಿಗೆ ಮೂಲಮೌಲ್ಯವಿದ್ದರೆ, ಬದಲಾಗುತ್ತ ಬಂದುದಕ್ಕೆ ಮುಖಮೌಲ್ಯವಿರುತ್ತದೆ. ಸಂಶೋಧನೆಯ ಸಂದರ್ಭದಲ್ಲಿ ಮುಖಮೌಲ್ಯದ ತಳದಲ್ಲಿರುವ ಮೂಲಮೌಲ್ಯವನ್ನು ಶೋಧಿಸಿ, ಅದನ್ನು ರಾಗದ್ವೇಷರಹಿತವಾಗಿ ಬಳಸಿಕೊಂಡು, ಅಂತಿಮ ಸತ್ಯವನ್ನು ಶೋಧಿಸಬೇಕಾಗುತ್ತದೆ. ಇಂಥ ಚಟುವಟಿಕೆಗೆ ಕರ್ನಾಟಕದ ದೇವತೆಗಳನ್ನು ಗುರುಪಡಿಸಿ, ಸಂಸ್ಕೃತಿಯ ಸಂಘಟನೆ–ವಿಘಟನೆ, ಸ್ಥಿತಿ–ಗತಿಗಳ ಆವರಣದಲ್ಲಿಟ್ಟು ಅಧ್ಯಯನ ಮಾಡುವುದು ಇನ್ನೂ ಕೈಗೂಡದ ಕೆಲಸವಾಗಿ ಉಳಿದಿದೆ. ಇಂಥ ಸಂದರ್ಭದಲ್ಲಿ ಕೆಲವು ಸಣ್ಣ ಸಣ್ಣ ತೊಡಕುಗಳನ್ನು ಮೊದಲು ಬಿಡಿಸಿಕೊಳ್ಳಬೇಕಾಗುತ್ತದೆ. ಇಂಥ ಒಂದು ತೊಡಕು ಭೈರವ–ಜುಂಜಪ್ಪ–ಮೈಲಾರಗಳಿಗೆ ಸಂಬಂಧಿಸಿದುದು.

ಬದುಕಿನ ವಿಕಾಸಕ್ರಮದಲ್ಲಿ ಪ್ರಥಮಹಂತದ್ದು ಬೇಟೆಯ ಸಂಸ್ಕೃತಿ, ಇದರ ದೈವತ ಭೈರವ. ದ್ವಿತೀಯ ಹಂತದ್ದು ಪಶುಪಾಲನ ಸಂಸ್ಕೃತಿ, ಇದರ ದೈವತ ಮೈಲಾರ. ತೃತೀಯ ಹಂತದ್ದು ಕೃಷಿಸಂಸ್ಕೃತಿ, ಇದರ ದೈವತ ಮಲ್ಲಯ್ಯ (ಮಲ್ಲಿಕಾರ್ಜುನ, ಶಿವ). ಇವುಗಳಲ್ಲಿ ಮೊದಲಿನ ಎರಡು ಮಾಂಸಾಹಾರ ಸಂಸ್ಕೃತಿ, ಮೂರನೆಯದು ಶಾಕಾಹಾರ ಸಂಸ್ಕೃತಿ. ಮಾಂಸಾಹಾರ ಸಂಸ್ಕೃತಿಗಳಾಗಿರುವುದರಿಂದ ಮೊದಲಿನ ಎರಡು ಸಂಸ್ಕೃತಿಗಳಲ್ಲಿ ಅಂಥ ವ್ಯತ್ಯಾಸವೇನೂ ಇಲ್ಲ. ಬೇಟೆ ಸಂಸ್ಕೃತಿಯಲ್ಲಿ ಪ್ರಾಣಿಗಳನ್ನು ಬೆನ್ನಟ್ಟಿ ಹೋಗಿ ಅವುಗಳ ಮಾಂಸವನ್ನು ಸಂಗ್ರಹಿಸುವ ದೊಡ್ಡ ಶ್ರಮವಿದ್ದರೆ, ಪಶುಪಾಲನ ಸಂಸ್ಕೃತಿಯಲ್ಲಿ ಕುಳಿತಲ್ಲಿಯೇ ಪ್ರಾಣಿಗಳಿಂದ ಮಾಂಸವನ್ನು ಉತ್ಪಾದಿಸಿಕೊಳ್ಳುವ ಅಲ್ಪ ಶ್ರಮವಿರುತ್ತದೆ.

ಇವುಗಳಲ್ಲಿ, ಬೇಟೆಗೆ ನೆರವಾಗುವ ನಾಯಿಯು ಪಶುಪಾಲನೆಗೂ ನೆರವಾಗುವುದರಿಂದ ಅದು ಎರಡೂ ಸಂಸ್ಕೃತಿಯಲ್ಲಿ ಲಾಂಛನವಾಗಿ ಉಳಿದುಕೊಂಡಿತು. ಅಂದರೆ ಬೇಟೆ ಸಂಸ್ಕೃತಿಯ ಭೈರವನಿಗೂ, ಪಶುಪಾಲನ ಸಂಸ್ಕೃತಿಯ ಮೈಲಾರನಿಗೂ ನಾಯಿಯೇ ಲಾಂಛನವಾಯಿತು. ಮುಂದೆ ಕೃಷಿಸಂಸ್ಕೃತಿಯಲ್ಲಿ ನಂದಿ ಲಾಂಛನವಾಯಿತು. ಈ ಬೆಳವಣಿಗೆಗೆ ತಕ್ಕಂತೆ ನಾಯಿ ಲಾಂಛನದ

ಭೈರವ ವಿಗ್ರಹ, ನಾಯಿ ಲಾಂಛನದ ಮೈಲಾರ ವಿಗ್ರಹ, ನಂದಿ ಲಾಂಛನದ ಶಿವಲಿಂಗಗಳು ಕರ್ನಾಟಕದ ತುಂಬ ಹಬ್ಬಿ ಹರಡಿದವು. ಈ ಮೂರೂ ಸಂಸ್ಕೃತಿಗಳಿಗೆ ಸಂಬಂಧಪಟ್ಟಂತೆ ಆದಿ ಚುಂಚನಗಿರಿ, ಮೈಲಾರ, ಶ್ರೀಶೈಲಗಳೆಂಬ ಮೂರು ಮುಖ್ಯಕ್ಷೇತ್ರಗಳೂ, ಉಪಕ್ಷೇತ್ರಗಳೂ ಕಿಕ್ಕಿರಿದು ತುಂಬಿದವು. ಇವುಗಳಲ್ಲಿ ಭೈರವ, ಮೈಲಾರ ಸಂಬಂಧವನ್ನು, ಹೆಚ್ಚಿನದಾಗಿ ಜುಂಜಪ್ಪ ದೈವತದ ಸಂಬಂಧವನ್ನು ಇಲ್ಲಿ ಚರ್ಚಿಸಬಹುದು.

ಇತಿಹಾಸದ ಒಂದು ಘಟ್ಟದಲ್ಲಿ ವ್ಯಕ್ತಿಗಳ ಆಂಗಿಕ ಲಕ್ಷಣಕ್ಕೆ ಅನುಗುಣವಾಗಿ ಅವರನ್ನು ಅನ್ವರ್ಥನಾಮದಿಂದ ಕರೆಯುತ್ತಿದ್ದರೆಂದು ತೋರುತ್ತದೆ. ಉದಾ: ಕರೆಪ್ಪ, ಕೆಂಚಪ್ಪ ಇತ್ಯಾದಿ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಭೈರವನ ಶಾರೀರಿಕ ಮುಖ್ಯ ಲಕ್ಷಣ ನೀಳವಾಗಿರುವ ಮೂಗು. ಈತನನ್ನು ಕುರಿತ ಜನಪದ ಹಾಡುಗಳಲ್ಲಿ "ಉದ್ದನ್ನ ಮೂಗಿನವ" ಎಂದು ಆಗಾಗ ಕರೆಯಲಾಗಿದೆ. ಉದ್ದನೆಯ ಮೂಗು ಎಂದರೆ ಚುಂಚ. ಹೀಗಾಗಿ ಒಂದು ಕಾಲದಲ್ಲಿ ಭೈರವನನ್ನು ಚುಂಚ, ಚುಂಚಪ್ಪನೆಂದು ಕರೆಯುತ್ತಿದ್ದರು. ಪ್ರಸಿದ್ಧ ಭೈರವಕ್ಷೇತ್ರವನ್ನು (ಆದಿ)ಚುಂಚನಗರಿಯೆಂದು ಕರೆಯುವುದು, ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಈ ಚುಂಚ, ಚುಂಚಪ್ಪ ಎಂಬುದೇ ದ್ರಾವಿಡ ಭಾಷೆಯ ಮೃದು-ಪರುಷವರ್ಣ ವ್ಯತ್ಯಾಸ ಪ್ರಕ್ರಿಯೆಯಂತೆ ಜುಂಜ, ಜುಂಜಪ್ಪ ಎಂದಾಗುತ್ತದೆ. ಇದರಿಂದ ಭೈರವ=ಉದ್ದನ್ನ ಮೂಗಿನವ=ಚುಂಚಪ್ಪ=ಜುಂಜಪ್ಪ ಪದಗಳು ಒಂದೇ ದೇವತೆಯ ಭಿನ್ನ ಹೆಸರುಗಳೆಂದು ಸ್ಪಷ್ಟವಾಗುತ್ತದೆ.

ಭೈರವನ ಅನುಯಾಯಿಗಳು ಕಾಡುಗೊಲ್ಲರು. ಈ ಜನಾಂಗದಲ್ಲಿ ಭೈರವನ ಪರ್ಯಾಯನಾಮವಾಗಿರುವ ಜುಂಜಪ್ಪ ಹೆಸರಿನ ಒಬ್ಬ ಸಾಂಸ್ಕೃತಿಕ ನಾಯಕ ಆಗಿ ಹೋದನೆಂದು ಕಾಣುತ್ತದೆ. ಇವನನ್ನು ಕುರಿತು ಸ್ಮಾರಕಗಳೂ, ಕಥೆ, ಕಾವ್ಯ, ವದಂತಿಗಳೂ ಕೇಳಿಬರುತ್ತಿದ್ದು, ಮರಣೋತ್ತರ ಕಾಲದಲ್ಲಿ ಇವನೂ ಆರಾಧ್ಯದೈವನಾಗಿ ಪೂಜೆಗೊಳ್ಳತೊಡಗಿದನೆಂದು ತೋರುತ್ತದೆ. ಅಂದರೆ ಭೈರವ ಹೆಸರಿನಿಂದ ದೈವತ ಜುಂಜಪ್ಪ, ಸಾಂಸ್ಕೃತಿಕ ನಾಯಕನಾದ ಐತಿಹಾಸಿಕ ಜುಂಜಪ್ಪ-ಹೀಗೆ ಇಬ್ಬರು ದೇವರು ಇಲ್ಲಿ ಬೆಳೆದು ಬಂದಿದ್ದಾರೆ.

ಶ್ರೀಶೈಲದ ಸಂಪರ್ಕ ದಕ್ಷಿಣ ಕರ್ನಾಟಕಕ್ಕೆ ಕಡಿಮೆ. ಹೀಗಾಗಿ ಅಲ್ಲಿ ದೈವತ ಮಲ್ಲಿಕಾರ್ಜುನ ಸಂಸ್ಕೃತಿ ಬೆಳೆಯದೆ ಭೈರವ ಸಂಸ್ಕೃತಿಯೇ ಉಳಿದು ಬಂದಿತು. ಅಲ್ಲಿ ಸಾಂಸ್ಕೃತಿಸ ನಾಯಕ ಜುಂಜಪ್ಪನ ಭಕ್ತರಾದ ಕಾಡುಗೊಲ್ಲರೂ ಹೆಚ್ಚು. ಹೀಗಾಗಿ ಆ ಭಾಗದಲ್ಲಿ ಈ ಇಬ್ಬರೂ (ಭೈರವ, ಜುಂಜಪ್ಪ) ದೇವತೆಗಳು, ಇವರ ದೇವಾಲಯಗಳು ವಿಪುಲ ಸಂಖ್ಯೆಯಲ್ಲಿವೆ. ಉತ್ತರ ಕರ್ನಾಟಕದ ಮೇಲೆ ಶ್ರೀಶೈಲದ ದಟ್ಟಪ್ರಭಾವದಿಂದಾಗಿ ಭೈರವ ದೈವತ ಇಳಿಮುಖವಾಗುತ್ತಾ ಬಂದಿತು. ಇಲ್ಲಿ ಕಾಡುಗೊಲ್ಲರೂ ಇಲ್ಲವಾಗಿ ಐತಿಹಾಸಿಕ ಜುಂಜಪ್ಪನೂ ಬೆಳೆದು ಬರಲಿಲ್ಲ. ಆದುದರಿಂದ ಇಲ್ಲಿ ದೇವರಿಗೆ ಭೈರವ ಹೆಸರು ಒಂದಿಷ್ಟು ಸಲ ಕಂಡುಬಂದರೂ ಜುಂಜಪ್ಪ ಕಂಡುಬರುವುದು ತೀರ ಕಡಿಮೆ. ಉದಾ: ನೇರವಾಗಿ ಭೈರವ ಹೆಸರಿನ ದೇವತೆಗಳು ಮುಳಗುಂದ, ಸಿರಸಂಗಿ, ಅಮರಗೋಳ, ಸಿರಗುಪ್ಪಿ ಇತ್ಯಾದಿ ಗ್ರಾಮಗಳಲ್ಲಿ ಸಿಗುತ್ತವೆ. ಜುಂಜಪ್ಪನ ಗುಡಿಗಳು, ಜುಂಜರವಾಡ ಜುಂಜನಬೈಲು ಹೆಸರಿನ ಗ್ರಾಮಗಳು ವಿರಳವಾಗಿ ಕಂಡುಬರುತ್ತವೆ. ದಕ್ಷಿಣ ಕರ್ನಾಟಕದಲ್ಲಿ ಇದಕ್ಕೆ ವಿರುದ್ಧವೆಂಬಂತೆ ಬೈರೇಗೌಡ (ಭೈರವಗೌಡ), ಬೋರಲಿಂಗಯ್ಯ (ಭೈರವಲಿಂಗಯ್ಯ),

ಬೋರಯ್ಯ(ಭೈರವಯ್ಯ) ಹೆಸರಿನ ವ್ಯಕ್ತಿಗಳು ವಿಪುಲ ಸಂಖ್ಯೆಯಲ್ಲಿ ಸಿಗುತ್ತಾರೆ. ಉತ್ತರ ಕರ್ನಾಟಕದಲ್ಲಿ ಪುರುಷ ವ್ಯಕ್ತಿಗಳು ಸಿಗುವುದಿಲ್ಲ. ಬೋರವ್ವ, ಬೌರವ್ವ ಹೆಸರಿನ ಸ್ತ್ರೀವ್ಯಕ್ತಿಗಳು ಸಿಗುತ್ತಾರೆ.

ಉತ್ತರ ಕರ್ನಾಟಕದ ಈ ಬೋರವ್ವ, ಬೌರವ್ವ ಹೆಸರುಗಳು ಶ್ರೀಶೈಲ ಮೂಲದವಾಗಿವೆ. ಭೈರವನ ಹೆಂಡತಿ ಭೈರವಿ. ಬೇಟೆ ಸಂಸ್ಕೃತಿಯ ಭೈರವನು ಪಶುಪಾಲನ ಸಂಸ್ಕೃತಿಯ ಮೈಲಾರನಾಗಿ, ಶ್ರೀಶೈಲದಲ್ಲಿ ಕೃಷಿಸಂಸ್ಕೃತಿಯ ಮಲ್ಲಿಕಾರ್ಜುನನಾಗಿ ಪಲ್ಲಟಗೊಳ್ಳುತ್ತ ಬಂದರೂ, ಭೈರವನ ಹೆಂಡತಿಯ ಹೆಸರು ಪಲ್ಲಟಗೊಳ್ಳದೆ ಅಲ್ಲಿ (ಶ್ರೀಶೈಲದಲ್ಲಿ) ಭೈರವಿಯಾಗಿಯೇ ಉಳಿಯಿತು. ಇದರ ಪರಿಷ್ಕೃತ ರೂಪವೇ ಮಲ್ಲಿಕಾರ್ಜುನನ ಹೆಂಡತಿ ಭ್ರಮರಾಂಬೆ. ಶ್ರೀಶೈಲಕ್ಕೂ ಉತ್ತರ ಕರ್ನಾಟಕಕ್ಕೂ ಸಂಬಂಧ ಅಧಿಕ. ಹೀಗಾಗಿ ಮಲ್ಲಿಕಾರ್ಜುನನ ಹೆಂಡತಿ ಭ್ರಮರಾಂಬೆಯೇ ಈ ಭಾಗದಲ್ಲಿ ಭೌರವ್ವ (ಭೈರವಿ+ಅವ್ವ) ಹೆಸರಿನಿಂದ ಪ್ರಚಾರ ಪಡೆದಿದ್ದಾಳೆ.

*****

ಜಾನಪದ ಸಾಹಿತ್ಯದಲ್ಲಿ ಭೈರವನನ್ನು ಉದ್ದನೆಯ ಮೂಗಿನವನೆಂದು ಕರೆಯುವಂತೆ ಮೈಲಾರನನ್ನೂ ಉದ್ದನೆಯ ಮೂಗಿನವನೆಂದು ಕರೆಯಲಾಗಿದೆ. ಇದರಿಂದ ಭೈರವ (ಚುಂಚಪ್ಪ, ಜುಂಜಪ್ಪ)ಮತ್ತು ಮೈಲಾರ ಒಬ್ಬನ ಬೆಳವಣಿಗೆ ಇನ್ನೊಬ್ಬನೆಂದು ಹೇಳಬೇಕಾಗುತ್ತದೆ. ಇಬ್ಬರಿಗೂ ನಾಯಿ ಲಾಂಛನವಾಗಿರುವುದೂ ಈ ಹೇಳಿಕೆಯನ್ನು ಬೆಂಬಲಿಸುತ್ತದೆ. ಇದಲ್ಲದೆ ಕರಾಕೃ ಅವರ "ಅಂಬಿಗರ ಗಂಗ" ಕೃತಿಯ "ಭೈರವನ ಸ್ವಾರಿ" ಜನಪದ ಹಾಡಿನಲ್ಲಿ ಭೈರವನಿಗೆ ಇಬ್ಬರು ಹೆಂಡಿರೆಂದೂ, ಅವರ ಹೆಸರು ಮಾಳಮ್ಮ, ಕುರುಬತಿಯೆಂದೂ ಹೇಳಲಾಗಿದೆ.[೧] ಇವರಿಬ್ಬರೂ ಮೈಲಾರನ ಹೆಂಡಿರೆಂಬುದು ತಿಳಿದ ವಿಷಯವೇ ಆಗಿದೆ. ಈ ಅಂಶವೂ ಭೈರವ-ಮೈಲಾರ ಒಂದೇ ದೈವದ ಎರಡು ಹಂತಗಳೆಂದು ಸ್ಪಷ್ಟಪಡಿಸುತ್ತದೆ. ಬೀದರ ಜಿಲ್ಲೆಯ ಅಣದೂರ ಶಾಸನದಲ್ಲಿಯ (ಶ್ರೀಮತಿ ಹನುಮಾಕ್ಷಿ ಗೋಗಿಯವರ ಸಂಗ್ರಹ) "ಶ್ರೀಮನುಮಹಾಭೈರವಂ ಮೈಳಾರದೇವ" ಎಂಬ ಉಲ್ಲೇಖವೂ ಈ ಅಭಿಪ್ರಾಯವನ್ನು ಬೆಂಬಲಿಸುತ್ತದೆ. ಮೇಲೆ ಹೇಳಲಾಗಿರುವ ಭೈರವನು ಬೇಟೆ ಸಂಸ್ಕೃತಿಯ, ಮೈಲಾರನು ಇದರ ಮುಂದುವರಿದ ಪಶುಪಾಲನ ಸಂಸ್ಕೃತಿಯ ದೇವರೆಂಬುದನ್ನು ಇಲ್ಲಿ ನೆನೆಯಬಹುದು.

"ಕೊಂಕಣಸುತ್ತಿ ಮೈಲಾರಕ್ಕೆ ಹೋಗು", "ಗುಡ್ಡ ಸುತ್ತಿ ಮೈಲಾರಕ್ಕೆ ಹೋಗು" ಎಂಬ ಗಾದೆಮಾತುಗಳು ಮೈಲಾರದೇವರು "ಕೊಂಕಣಪ್ರದೇಶದ ಗುಡ್ಡ"ದ ತುದಿಯ ದೇವರು (ಮಲೆಯ+ಅರಸ) ಎಂಬುದನ್ನು ತಿಳಿಸುತ್ತವೆ. ಈ ಗುಡ್ಡ ನೀಲಗಿರಿಯಾಗಿದೆ. ಈ ಅಂಶವನ್ನು ಬೆಂಬಲಿಸುವಂತೆ ಮೈಲಾರಲಿಂಗನ ಪದಗಳಲ್ಲಿ "ನೀಲಗಿರಿ ಮೇಲಾದ ಗಿರಿಯೋ" ಎಂಬ ವಾಕ್ಯಗಳು ಕಂಡುಬರುತ್ತವೆ. ಇದಲ್ಲದೆ ಈ ನೀಲಗಿರಿ ವಾಸ ಕಾರಣವಾಗಿ ಮೈಲಾರನ ಜನಪದ ಹಾಡುಗಳಲ್ಲಿ "ಹುಟ್ಟಿದ ಮಕ್ಕಳಿಗೆ।ನಿಂಗಣ್ಣ, ನೀಲಣ್ಣ ಅಂದು ಅವರಿಗೆ ಹೆಸರಿಡಲೇ" ಎಂಬ ಸಾಲುಗಳೂ ಬಳಕೆಯಾಗಿವೆ. ಆಶ್ಚರ್ಯದ ಸಂಗತಿಯೆಂದರೆ ಈ ನೀಲಗಿರಿ, ನೀಲಣ್ಣ ಪದಗಳು ಭೈರವನಿಗೂ ಹಾಡುಗಳಲ್ಲಿ ಕಾಣಸಿಗುತ್ತವೆ. ಈ ಅಂಶವೂ ಭೈರವ ಮತ್ತು ಮೈಲಾರ ಒಬ್ಬನ ಪರಿಷ್ಕೃತರೂಪ ಇನ್ನೊಬ್ಬನೆಂಬುದನ್ನು ದೃಢಪಡಿಸುತ್ತದೆ. ಹೀಗೆ ಭೈರವನ ಪರಿಷ್ಕೃತ ರೂಪವೆನಿಸಿರುವ ಮೈಲಾರನು

ಕೃಷಿಸಂಸ್ಕೃತಿಯಲ್ಲಿ ನಂದಿಲಾಂಛನದ ಮಲ್ಲಿಕಾರ್ಜುನನಾದನೆಂದು ಇದೇ ಗ್ರಂಥದ ಮುದಿಮಲ್ಲಯ್ಯ-ಮುದಿವೀರಣ್ಣ-ಮುದಿಸಂಗಯ್ಯ ಲೇಖನದಲ್ಲಿ ಸ್ಪಷ್ಟ ಪಡಿಸಿದ್ದೇನೆ. ಈ ಮೂರು ದೇವತೆಗಳ ಅನುಯಾಯಿಗಳು ಸಾಮಾನ್ಯವಾಗಿ ಬೇಡರು, ಕುರುಬರು, ವೀರಶೈವರು-ಒಕ್ಕಲಿಗರು ಎಂದು ಹೇಳಬಹುದು.

■■

ಆಕರ : ಮಾರ್ಗ ಸಂಪುಟ-೪

---

೧. "ಆದಿಚುಂಚನಗಿರಿಯ ಜನಪದ ಸಂಕಲನ"ದಲ್ಲಿಯೂ ಈ ಅಭಿಪ್ರಾಯದ ಹಾಡುಗಳಿವೆ.

೭೮

ಮುದಿಮಲ್ಲಯ್ಯ-ಮುದಿವೀರಣ್ಣ-ಮುದಿಸಂಗಯ್ಯ

ಕರ್ನಾಟಕದ ಸಮಗ್ರ ದೈವಗಳ ಉಗಮ-ವಿಕಾಸದ ಅಭ್ಯಾಸ ಈ ವರೆಗೆ ನಡೆಯಲಿಲ್ಲ. ಅಲ್ಲಲ್ಲಿ ದ್ವೀಪವಾಗಿ ಉಳಿದಿರುವ ಈ ದೈವಗಳ ಪರಸ್ಪರ ಸಂಬಂಧ, ಚಾರಿತ್ರಿಕ ಬೆಳವಣಿಗೆ, ಸಾಂಸ್ಕೃತಿಕ ಪಲ್ಲಟ ಇತ್ಯಾದಿಗಳು ಸ್ಪಷ್ಟವಾಗದೆ ಉಳಿದಿವೆ. "ಇತಿಹಾಸ-ಭೂಗೋಲ" ಕ್ರಮದಲ್ಲಿ ಜರುಗಬೇಕಾಗಿರುವ ಈ ಅಧ್ಯಯನ ಮಹಾಸಂಶೋಧನೆಯ ವಸ್ತುವಾಗಿದೆ. ಈ ಮಹತ್ವದ ಅಧ್ಯಯನಕ್ಕೆ ಮೊದಲು, ಕೆಲವು ಸಮಸ್ಯೆಗಳನ್ನು ಬಿಡಿರೂಪದಲ್ಲಿ ಬಿಡಿಸಿಕೊಳ್ಳಬೇಕಾಗುತ್ತದೆ. ಇಂಥ ಬಿಡಿ ಅಧ್ಯಯನಗಳು ಇಡಿ ಅಧ್ಯಯನದ ದಾರಿಯನ್ನು ಸುಗಮಗೊಳಿಸುತ್ತವೆ. ಇಂಥ ಅಧ್ಯಯನಗಳಲ್ಲಿ ತುಂಬ ಮಹತ್ವದ್ದಾಗಿದೆ, ಮುದಿ ಮಲ್ಲಯ್ಯ-ಮುದಿ ವೀರಣ್ಣ-ಮುದಿ ಸಂಗಯ್ಯ ಸಮಸ್ಯೆ. ಈ ದೇವತೆಗಳ "ಮುದಿ" ವಿಶೇಷಣಕ್ಕೆ ಪರ್ಯಾಯವಾಗಿ ಕೆಲವೊಮ್ಮೆ ಶಿಷ್ಟರಲ್ಲಿ "ಮುದ್ದು" ಇಲ್ಲವೆ "ಮುಗ್ಧ"ರೂಪಗಳು ಬಳಕೆಯಲ್ಲಿದ್ದರೂ ಸಾಮಾನ್ಯರಲ್ಲಿ ಮಾತ್ರ ಮುದಿ ವಿಶೇಷಣವೇ ಪ್ರಚಾರದಲ್ಲಿದ್ದು, ಇದೇ ಸರಿಯಾದುದಾಗಿದೆ. ಮತ್ತು ಅವರು ಈ ಹೆಸರುಗಳನ್ನು ವ್ಯಕ್ತಿನಾಮಗಳಾಗಿಯೂ ಬಳಸುತ್ತಾರೆ.

ಮುದಿ ಎಂದರೆ ವೃದ್ಧ, ಹಳೆಯ ಎಂಬುದು ನೆನಪಾಗುತ್ತಲೇ ಹಳೆಯ ಮಲ್ಲಯ್ಯ, ಹಳೆಯ ವೀರಣ್ಣ, ಹಳೆಯ ಸಂಗಯ್ಯ ಎಂದು ಇವುಗಳಿಗೆ ಅರ್ಥವಿರಬೇಕೆಂದೂ, ಹೊಸಮಲ್ಲಯ್ಯ, ಹೊಸವೀರಣ್ಣ, ಹೊಸಸಂಗಯ್ಯ ಅಸ್ತಿತ್ವಕ್ಕೆ ಬರುತ್ತಲೇ ಮೊದಲಿನ ಈ ದೈವಗಳನ್ನು ಹಳೆಯ ಅರ್ಥದ ಮುದಿ ವಿಶೇಷಣದಿಂದ ಕರೆಯಲಾರಂಭಿಸಿರಬೇಕೆಂದೂ ಅನಿಸುತ್ತದೆ.

ಕೆಲವು ದೇವಾಲಯಗಳಲ್ಲಿ ಹಳೆಯ, ಹೊಸ ಅರ್ಥದ ಈ ಎರಡೂ ದೈವಗಳಿರುವುದನ್ನು ಕಾಣುತ್ತೇವೆ. ಶ್ರೀಶೈಲದಲ್ಲಿ ಮಲ್ಲಿಕಾರ್ಜುನ ಲಿಂಗವಲ್ಲದೆ, ವೃದ್ಧಮಲ್ಲಿಕಾರ್ಜುನ ಹೆಸರಿನ ಇನ್ನೊಂದು ಲಿಂಗವೂ ಇದೆ. ಇತಿಹಾಸ ಪ್ರಸಿದ್ಧ ಬೆಳಗಾವಿ ಜಿಲ್ಲೆಯ ಗೊಡಚಿ ದೇವಾಲಯದ ಗರ್ಭಗುಡಿಯಲ್ಲಿ ನಿಂತ ವೀರಭದ್ರನ ವಿಗ್ರಹವಲ್ಲದೆ, ಮಗ್ಗುಲಿನ ಗುಡಿಯಲ್ಲಿ ಕುಳಿತ ಭಂಗಿಯ ಮುದಿ ವೀರಭದ್ರನ ಇನ್ನೊಂದು ವಿಗ್ರಹವಿದೆ. ಸಿಂದಗಿಯ ಸಂಗಮೇಶ್ವರ ದೇವಾಲಯದ

ಗರ್ಭಗುಡಿಯಲ್ಲಿ ಸಂಗಮೇಶ್ವರ ಹೆಸರಿನ ಈಶ್ವರಲಿಂಗವಿದ್ದರೆ, ಆವರಣದ ಸಣ್ಣ ಗುಡಿಯಲ್ಲಿ ಮುದಿ ಸಂಗಮೇಶ್ವರ ಹೆಸರಿನ ಇನ್ನೊಂದು ಈಶ್ವರಲಿಂಗವಿದೆ.

ಈ ದೈವಗಳಿಗೆ ಮುದಿ ವಿಶೇಷಣ ಬಳಸುತ್ತಿರುವುದಕ್ಕೆ ಕಾರಣ, ಇತಿಹಾಸದ ಯಾವುದೋ ಘಟ್ಟದಲ್ಲಿ ಈ ದೈವಗಳ ಪರಿಷ್ಕೃತ ರೂಪವೆಂಬಂತೆ ಹೊಸದೈವಗಳು ಅಸ್ತಿತ್ವಕ್ಕೆ ಬಂದು, ಹೆಚ್ಚು ಪ್ರಚಾರ ಪಡೆದುದೇ ಆಗಿರಬೇಕು. ಹಾಗಿದ್ದರೆ ಈ ಮುದಿಮಲ್ಲಯ್ಯ-(ಹೊಸ)ಮಲ್ಲಯ್ಯ, ಮುದಿವೀರಣ್ಣ-(ಹೊಸ)ವೀರಣ್ಣ, ಮುದಿ ಸಂಗಯ್ಯ-(ಹೊಸ)ಸಂಗಯ್ಯ ಯಾರು? ಎಂಬ ಪ್ರಶ್ನೆ ಎದುರಾಗುತ್ತಿದ್ದು, ಇವುಗಳಿಗೆ ಹೀಗೆ ವಿವರಣೆ ಕೊಡಬಹುದು.

ಮುದಿಮಲ್ಲಯ್ಯ-(ಹೊಸ)ಮಲ್ಲಯ್ಯ:

ಮಲ್ಲಯ್ಯ ಪದವನ್ನು ಮಲ್ಲ+ಅಯ್ಯ ಎಂದು ಬಿಡಿಸಿ ಅರ್ಥ ಹೇಳುವುದು ರೂಢಿಯಲ್ಲಿದೆ. ಇಲ್ಲಿ ಮಲ್ಲಯೆಂಬುದು ಸಂಸ್ಕೃತ ಪದವಾಗಿದ್ದು, ಶೂರವೆಂದು ಇದರ ಅರ್ಥ. ಆದರೆ ಇದು ಸಂಸ್ಕೃತ ಪದವಲ್ಲ, ದ್ರಾವಿಡ ಪದ. ಅಂದರೆ ಇದರ ನಿಜರೂಪ ಮಲೆಯ+ಅಯ್ಯ. ಬೆಟ್ಟದ ಒಡೆಯನೆಂದು ಇದರ ಅರ್ಥ. ಇದು ಮಲೆಯ+ಅರಸ>ಅರ=ಮೈಲಾರ ಎಂಬ ರೂಪದಲ್ಲಿಯೂ ಬಳಕೆಯಲ್ಲಿದೆ. ಅಂದರೆ ಮೈಲಾರ=ಮಲ್ಲಯ್ಯ, ಒಂದೇ ಅರ್ಥದ ಪದಗಳು. ಆದರೆ ಮೊದಲ ಘಟ್ಟದಲ್ಲಿ ಮೈಲಾರನೆಂದೂ, ಎರಡನೆಯ ಘಟ್ಟದಲ್ಲಿ ಮಲ್ಲಯ್ಯ (=ಮಲ್ಲಿಕಾರ್ಜುನ)ನೆಂದೂ ಈ ದೇವರು ಪ್ರಸಿದ್ಧಿ ಪಡೆದಿದ್ದಾರೆ. ಮೊದಲನೆಯ ಘಟ್ಟದಲ್ಲಿ ಪಶುಪಾಲಕರ(ಕುರುಬರ) ದೇವತೆಯಾಗಿದ್ದ ಈತ ಎರಡನೆಯ ಘಟ್ಟದಲ್ಲಿ ಕೃಷಿಕ ದೇವತೆ (ಮಲ್ಲಯ್ಯ)ಯಾಗಿ ಬೆಳೆದನು. ಆಗ ಮೈಲಾರನಿಗೆ ಪಶುಗಳನ್ನು ಕಾಯುವ ನಾಯಿ ಲಾಂಛನವಾಗಿದ್ದು, ಈಗ ಮಲ್ಲಯ್ಯನಿಗೆ ಉಳುಮೆಮಾಡುವ ನಂದಿ ಲಾಂಛನವಾಯಿತು. ಆಗ ಮಾಳವ್ವ ಗಂಗವ್ವ ಹೆಂಡಿರಾದರೆ, ಈಗ ಪಾರ್ವತಿ(ಮಾಳ=ಪರ್ವತ) ಗಂಗೆ ಹೆಂಡಿರಾದರು. ಮೊದಲ ಹಂತದ ದೇವರ ಮೂಲಸ್ಥಳ ಪಶ್ಚಿಮ ಘಟ್ಟದ ನೀಲಗಿರಿಯಾದರೆ, ಎರಡನೆಯ ಹಂತದ ದೇವರ ಮೂಲಸ್ಥಳ ಪೂರ್ವಘಟ್ಟದ ಶ್ರೀಶೈಲವಾಯಿತು. ಪಶುಪಾಲನ ಸಂಸ್ಕೃತಿಯು ಕೃಷಿಸಂಸ್ಕೃತಿಯಾಗಿ ಪಲ್ಲಟಗೊಂಡ ಸಂದರ್ಭದಲ್ಲಿ ಹೀಗೆ ದೇವತೆಗಳ ಪಲ್ಲಟವೂ ಸಂಭವಿಸಿತು. ಆಗ ಹಳೆಯ ದೇವರನ್ನು ಮುದಿ ವಿಶೇಷಣದಿಂದ ಕರೆಯಲಾಯಿತು. ಹೀಗಾಗಿ ಮುದಿಮಲ್ಲಯ್ಯ=ಮೈಲಾರನೆಂದು ಹೇಳಬೇಕಾಗುತ್ತದೆ. ಶ್ರೀಶೈಲದ ವೃದ್ಧಮಲ್ಲಿಕಾರ್ಜುನ ಮೈಲಾರನಾಗಿರುವದಕ್ಕಿಂತ ಇನ್ನೂ ಹಿಂದಿನ ಹಂತದ ಭೈರವನೇ ಆಗಿರಬಹುದು. ಏಕೆಂದರೆ ಇಲ್ಲಿ ಭೈರವನ ಹೆಂಡತಿ ಭ್ರಮರಾಂಬೆ (ಭೈರವಾಂಬೆ) ಇದ್ದಾಳೆ.

ಇನ್ನುಮೇಲೆ, ಮುದಿಮಲ್ಲಯ್ಯ ಹೆಸರಿನ ದೇವತೆಯ ಗ್ರಾಮಗಳಲ್ಲಿ ಕ್ಷೇತ್ರಕಾರ್ಯ ನಡೆಸಿ, ವಿಗ್ರಹಗಳ ಸ್ವರೂಪ, ಆಚರಣೆ, ಸಾಹಿತ್ಯ, ಸಂಪ್ರದಾಯಗಳನ್ನು ಅಭ್ಯಸಿಸುವುದು ಅಗತ್ಯವಿದೆ.

ಮುದಿವೀರಣ್ಣ-(ಹೊಸ)ವೀರಣ್ಣ:

ಮುದಿಮಲ್ಲಯ್ಯ-(ಹೊಸ)ಮಲ್ಲಯ್ಯ ರೀತಿಯಂತೆಯೇ ಇಲ್ಲಿಯೂ ಎರಡು ಹಂತಗಳಲ್ಲಿ ದೈವತದ ಪಲ್ಲಟನಡೆದು ಹಳೆಯ ದೇವರು ಮುದಿವೀರಣ್ಣನೆಂದೂ, ಹೊಸದೇವರು ವೀರಣ್ಣ(ವೀರಭದ್ರ)ನೆಂದೂ ಕರೆಯಿಸಿಕೊಂಡಂತಿದೆ. ಈ ದಿಸೆಯಲ್ಲಿ ಸತ್ಯವನ್ನು ಶೋಧಿಸ ಹೊರಟರೆ

ಬೆಳಗಾವಿ ಜಿಲ್ಲೆಯ ಪ್ರಸಿದ್ಧ ಎಡೂರು ಗ್ರಾಮ ನಮಗೆ ಮಾರ್ಗದರ್ಶನ ಮಾಹಿತಿನೀಡುತ್ತದೆ. ಇಲ್ಲಿ ವೀರಭದ್ರ ಹೆಸರಿನ ಪ್ರಸಿದ್ಧ ದೇವಸ್ಥಾನವಿದ್ದು, ವೀರಭದ್ರನ ವಿಗ್ರಹದ ಬದಲು ಲಿಂಗವಿದೆ. (ಇದನ್ನು ಮುಂಜಾನೆ ಪೂಜಿಸುವ ಲಿಂಗಾಯತರು ವೀರಭದ್ರನೆಂದು ಕರೆದರೆ, ಮಧ್ಯಾಹ್ನ ಪೂಜಿಸುವ ಬ್ರಾಹ್ಮಣರು ವಿರೂಪಾಕ್ಷನೆಂದು ಕರೆಯುತ್ತಾರೆ. ಇದು ವೀರಭದ್ರದ ಇನ್ನೊಂದು ರೂಪ, ವರ್ಧಿತ ರೂಪವೇ ವಿರೂಪಾಕ್ಷನೆಂಬ ಸೂಚನೆ ನೀಡುತ್ತದೆ).

ಇನ್ನೊಂದು ಆಶ್ಚರ್ಯವೆಂದರೆ, ಇದೇ ದೇವಾಲಯದ ಗರ್ಭಗುಡಿ ಗೋಡೆಯ ಹೊರಮಗ್ಗಲು ಮಾಡವಿದ್ದು, ಅದನ್ನು ಬೀರಪ್ಪನ ಗದ್ದುಗೆ ಎಂದು ಜನ ಕರೆಯುತ್ತಾರೆ. ಇತ್ತೀಚೆ ಹೆಗಲ ಮೇಲೆ ಕಂಬಳಿ ಹೊದ್ದ ಬೀರಪ್ಪ ಹೆಸರಿನ ಪುರುಷವಿಗ್ರಹವನ್ನು ಸ್ಥಾಪಿಸಿದ್ದಾರೆ. ಹೀಗೆ ಒಂದೇ ಆವರಣದಲ್ಲಿ ಬೀರಪ್ಪ, ವೀರಭದ್ರ ಎಂಬ ಎರಡು ದೇವತೆಗಳಿದ್ದು, ಬೀರಪ್ಪ, ವೀರಭದ್ರ, ವಿರೂಪಾಕ್ಷ ಎಂಬ ಮೂರು ಹೆಸರುಗಳಿದ್ದು, ಇವು ಒಂದರ ಪರಿಷ್ಕೃತ ರೂಪ ಇನ್ನೊಂದು–ಎಂಬುದರತ್ತ ಸೂಚನೆ ನೀಡುತ್ತವೆ. ಮಸ್ಕಿ ಶಾಸನಗಳಲ್ಲಿ (ರಾಯಚೂರು ಜಿಲ್ಲೆಯ ಶಾಸನಗಳು, ಲಿಂಗಸೂಗೂರು–೩೬, ೬೯ ಕ್ರಿ. ಶ. ೧೫೩೭) "ಶ್ರೀ ಬಿರುಪಾಕ್ಷಲಿಂಗಯಂ ನಮ:" ಎಂಬ ಪಾಠವಿರುವುದನ್ನು ಇಲ್ಲಿ ಸ್ಮರಿಸಬಹುದು.

ಎಡೂರು ಹೆಸರಿನಲ್ಲಿ ಇಡ್ಯೆ+ಊರು ಎಂಬ ಎರಡು ಶಬ್ದಗಳಿದ್ದು, ಇಡ್ಯೆ ಎಂದರೆ ಕುರುಬ ಎಂಬ ಅರ್ಥವಿದೆ. ಈಗಲೂ ಇಲ್ಲಿ ಕುರುಬರು ಬಹು ಸಂಖ್ಯೆಯಲ್ಲಿದ್ದಾರೆ. ಇದಲ್ಲದೆ ಇಲ್ಲಿ ರೇವಣಸಿದ್ಧೇಶ್ವರ ಸಂಪ್ರದಾಯದ ವೀರಶೈವ ಮಠವಿರುವುದು, ಈ ಮಠದ ಗೋತ್ರಪುರುಷ ವೀರಭದ್ರ ಎಂಬುದು ಮುಖ್ಯ ಸಂಗತಿಯಾಗಿದೆ. ಇದರಿಂದಲೂ ಬೀರಪ್ಪನ ಪರಿಷ್ಕೃತ ರೂಪ ವೀರಭದ್ರನೆಂಬ ಅಂಶ ಇನ್ನಷ್ಟು ದೃಢಪಡುತ್ತದೆ.

ವೀರಭದ್ರನ ವಿಗ್ರಹದ ಮಗ್ಗಲು ಕಡ್ಡಾಯವಾಗಿರುವ ದಕ್ಷಬ್ರಹ್ಮನ ವಿಗ್ರಹಕ್ಕೆ, ಕುರುಬರ ಸಾಕು ಪ್ರಾಣಿಯಾಗಿರುವ ಟಗರಿನ ತಲೆಯಿರುವುದನ್ನು ಅವಶ್ಯ ಗಮನಿಸಬೇಕು. ವೀರಭದ್ರನಾಗಿ ಪರಿಷ್ಕೃತಗೊಂಡರೂ ಕುರುಬರ ಟಗರಿನ ತಲೆ ಸಾಂಕೇತಿಕವಾಗಿ ಇಲ್ಲಿ ಉಳಿದುದು ಈ ಸಂಸ್ಕೃತಿ ಪಲ್ಲಟದ ಬಹುಮುಖ್ಯ ಆಧಾರವೆನಿಸುತ್ತದೆ. ಇದಲ್ಲದೆ ಪ್ರಸಿದ್ಧ ವೀರಭದ್ರನ ದೇವಾಲಯಗಳಲ್ಲಿ ವಿಗ್ರಹದ ಮಗ್ಗಲು ಖಡ್ಗ ಇತ್ಯಾದಿ ಆಯುಧಕ್ಕೆ ಬದಲು ಕೋಲು ಇರುತ್ತಿದ್ದು, ಇದನ್ನು ದೋಟಿ ಎಂದು ಕರೆಯುತ್ತಾರೆ. ಗಿಡದ ತಪ್ಪಲನ್ನು ಕೀಳಲು ಉಪಯೋಗಿಸುವ ಕೋಲು ಎಂದು ಇದರ ಅರ್ಥ. ಕುರಿಗಳಿಗೆ ತಪ್ಪಲು ಕೀಳಲು ಕುರುಬರು ಇಂದಿಗೂ ಕೋಲನ್ನು ಬಳಸುತ್ತಿದ್ದು, ಅದನ್ನು ದೋಟಿಯೆಂದೇ ಕರೆಯುತ್ತಾರೆ. ಇವೆಲ್ಲ ಅಂಶಗಳನ್ನು ಗಮನಿಸಿದರೆ ವೀರಭದ್ರನು ಬೀರಪ್ಪನ ಪರಿಷ್ಕೃತ ರೂಪವೆಂದು ಇನ್ನೂ ಸ್ಪಷ್ಟವಾಗುತ್ತದೆ. ಆದುದರಿಂದ ಎರಡನೆಯ ಘಟ್ಟದಲ್ಲಿ ಹೊಸ ವೀರಣ್ಣ(ವೀರಭದ್ರ)ಆಕಾರಗೊಳ್ಳಲು, ಮೊದಲನೆಯ ಘಟ್ಟದ ಬೀರಪ್ಪನನ್ನು ಮುದಿವೀರಣ್ಣ(ಹಳೆಯ ವೀರಭದ್ರ)ನೆಂದು ಕರೆಯತೊಡಗಿದರೆಂದು ತೋರುತ್ತದೆ. ಈ ವಿವರಣೆಯಿಂದ ಮುದಿವೀರಣ್ಣ=ಕುರುಬರ ಬೀರಪ್ಪನೆಂದು ಹೇಳಬೇಕಾಗುತ್ತದೆ.

ಇನ್ನು ಮೇಲೆ ಮುದಿವೀರಣ್ಣ ಹೆಸರಿನ ದೇವಾಲಯವಿರುವ ಗ್ರಾಮಗಳಲ್ಲಿ ಕ್ಷೇತ್ರಕಾರ್ಯ ನಡೆಸಿ, ವಿಗ್ರಹಗಳ ಸ್ವರೂಪ, ಆಚರಣೆ, ಸಾಹಿತ್ಯಗಳನ್ನು ಸಂಗ್ರಹಿಸಿ, ಅಭ್ಯಾಸ ಮುಂದುವರಿಸುವುದು ಅವಶ್ಯವಿದೆ.

ಮುದಿಸಂಗಯ್ಯ-(ಹೊಸ) ಸಂಗಯ್ಯ:

ಮುದಿಮಲ್ಲಯ್ಯ-ಮಲ್ಲಯ್ಯ, ಮುದಿವೀರಣ್ಣ-ವೀರಣ್ಣಗಳಂತೆ ಇಂದು ರೂಢಿಯಲ್ಲಿರುವ ಸಂಗಯ್ಯನಿಂದ ಮುದಿಸಂಗಯ್ಯನನ್ನು ಬಿಡಿಸಿ ಗುರುತಿಸಲು ಸಾಧ್ಯವಾಗುತ್ತಿಲ್ಲ. ಅಂದರೆ ಮುದಿಮಲ್ಲಯ್ಯ=ಮೈಲಾರ, ಮುದಿವೀರಣ್ಣ=ಬೀರಪ್ಪ ಎಂಬಂತೆ, ಮುದಿಸಂಗಯ್ಯ ಹೆಸರಿನ ಹಳೆಯ ಸಂಗಯ್ಯ ಯಾರೆಂಬುದನ್ನು ಹೇಳಲು ನಮ್ಮಲ್ಲಿ ಆಧಾರಗಳಿಲ್ಲ.

ಎರಡು ನದಿಗಳು ಕೂಡುವ ಸ್ಥಳದಲ್ಲಿ ಸ್ಥಾಪಿತವಾದ ದೈವತ ಸಂಗಮೇಶ್ವರ ಅಥವಾ ಕೂಡಲೇಶ್ವರ ಎನಿಸಿಕೊಳ್ಳುವುದು ಸಹಜ. ಆದರೆ ಸಂಗಮೇಶ್ವರ ಹೆಸರಿನ ಬಹಳಷ್ಟು ದೇವಾಲಯಗಳು ನದಿ ಸಂಗಮದಲ್ಲಿರದೆ ಬಯಲು ಪ್ರದೇಶದಲ್ಲಿರುವುದರಿಂದ, ಈ ದೈವತದ ಹೆಸರಿಗೆ ನದಿಗಳ ಸಂಗಮದಿಂದ ಭಿನ್ನವಾದ ಅರ್ಥ ಹುಡುಕಬೇಕೆನಿಸುತ್ತದೆ. ಪ್ರಾಚೀನಶಾಸನಗಳಲ್ಲಿ ಸಂಕಮ ಎಂಬ ವ್ಯಕ್ತಿನಾಮ ಕಂಡುಬರುವುದು, ಇಂದಿನ ಸಂಗೂರು ಗ್ರಾಮವನ್ನು ಪ್ರಾಚೀನಕಾಲದಲ್ಲಿ ಚಂಗೂರು ಎಂದು ಕರೆದಿರುವುದು, ನಮಗೆ ನೆರವಾಗುವಂತಿಲ್ಲ. ಚೆಂಗಣ್ಣನ್=ಕೆಂಪುಕಣ್ಣಿನವ, ಶಿವ. ಇದೇ ಚೆಂಗಮ > ಸಂಗಮ > ಸಂಗಮೇಶ್ವರವಾಗಿರಬಹುದೇ? ಎಂಬುದನ್ನು ಒಂದು ಊಹೆಯನ್ನಾಗಿ ಇಟ್ಟುಕೊಳ್ಳಬಹುದು. ಒಟ್ಟಾರೆ, ಮುದಿಸಂಗಯ್ಯದೇವರ ವಿಷಯದಲ್ಲಿ ಸಂಶೋಧನೆ ಬೇರೆ ಆಧಾರಗಳನ್ನು ಬಯಸುತ್ತದೆ.

■■

ಆಕರ : ಮಾರ್ಗ ಸಂಪುಟ-೪

೭೯

ಹನ್ನಿಬ್ಬರು–ಬೋಳುಕರು

"ಕೊಡೆವಿಡಿಯೆ ದೃಢವುಳ್ಳ ರಾವುತನೇರೆ ಕೊಡೆಕೋಟಿ, ಶೂರರು ಹನ್ನಿಬ್ಬರಯ್ಯಾ" ಎಂಬ ಬಸವಣ್ಣನವರ ವಚನ(೧೬)ವಾಕ್ಯದಲ್ಲಿ "ಹನ್ನಿಬ್ಬರು" ಪದ ಬಳಕೆಯಾಗಿದೆ. ಹನ್ನಿಬ್ಬರು ಎಂದರೆ ಹನ್ನೆರಡು ಜನರು. ಇಲ್ಲಿ ಶೂರರಾದ ೧೨ ಜನರ ಸೂಚನೆಯಿದೆ. ಇದು ಪುರಾಣಪರಿಕಲ್ಪನೆಗಿಂತ ಐತಿಹಾಸಿಕವೇ ಆಗಿದ್ದು, ಬಸವಣ್ಣನವರ ಹೊತ್ತಿಗೆ ಒಂದು ನಾಣ್ಣುಡಿಯಾಗಿ ಬಳಕೆಗೊಂಡಿದ್ದಿತೆಂದು ತೋರುತ್ತದೆ. "ಹನ್ನಿಬ್ಬರು" ಎಂಬ ಪದ ಶಾಸನಗಳಲ್ಲಿ ಪದೇ ಪದೇ ಕಾಣಿಸಿಕೊಂಡಿದೆ. ಗುತ್ತವೊಳಲಿನ ಜೋಯಿದೇವ, ವಿಕ್ರಮಾದಿತ್ಯ ಅರಸರಿಗೆ "ಪನ್ನಿಬ್ಬರ ಗಂಡ" ಎಂಬ ಬಿರುದನ್ನು ಅನೇಕ ಸಲ ಬಳಸಲಾಗಿದೆ. (ಕೆ. ಆಯ್. VI–೩೯ ಕ್ರಿ. ಶ. ೧೧೮೧, ಕೆ. ಆಯ್. VI-೭೪ ಕ್ರಿ. ಶ. ೧೧೮೮). ಈ ವಂಶದ ಜೋಯಿದೇವನನ್ನು

> ರುಜು ತಾನೊರ್ಬ್ಬನೆ ಕಾಮರಿರ್ಬ್ಬರಮೃತಾಂಗರ್ಮೂರ್ವರಾ ನಾಲ್ವ।
> ರಜರ್ರೈವರ್ಸಲೆ ದೇವತಾತ್ಮರರುವಕ್ಕುಂತೀಜರೇಳ್ಬರ್ಮಹೀ
> ಭುಜರೆಣ್ಬರ್ಮ್ಮನಿಪರ್ಸ್ಸುಗೋತ್ರಪತಿಗಳಾ ವೊಂಬದಿಂಬರ್ಶ್ಯಕ।
> ತ್ವಂ ಜಯನ್ರ್ನೋಡ ಪಯಿಂಬರಾ...... ರ್ಪ್ಪಂನ್ನೊಂಬರೀ ಜೋಮನಿಂ॥
> ಎನಿಸಿದ ಪನ್ನಿರ್ಬ್ಬರ ಗಂ
> ಡನೆ ಪದಿಮೂರನೆಯ ಭಾನು ಪದಿನಾಲ್ಕನೆಯೊ
> ಳ್ವಿನಂ ವಿಶ್ವಕೃತ್ತು ಪದಿನೈ
> ದೆನೆಯ ಪ....ಪ್ರವನೆನಿಸಿ ಮೆರೆದಂ ಜೋಮಂ॥

(ಕೆ. ಆಯ್. ೬–೭೪ ಹರಳಹಳ್ಳಿ, ಕ್ರಿ.ಶ. ೧೧೮೮)

ಎಂದು ಅಲಂಕಾರ ರೀತಿಯಲ್ಲಿ ಹೇಳಲಾಗಿರುವುದೂ ನೆರವಾಗುವುದಿಲ್ಲ. ಈಗ ಬೇರೆ ಕೆಲವು ಉದಾಹರಣೆಗಳನ್ನು ನೋಡಬಹುದು.

೧. ರಾಷ್ಟ್ರಕೂಟರ ಕಾಲ ಮೊದಲು ಮಾಡಿ ಕರ್ನಾಟಕದ ಶಾಸನಗಳಲ್ಲಿ ಸಾಮಂತ, ಮಾಂಡಲಿಕ ವಿಷಯದಲ್ಲಿ "ಹನ್ನಿಬ್ಬರು" ಪದಪ್ರಯೋಗ ಹೀಗೆ ಕಂಡುಬರುತ್ತದೆ:

(ಅ) ಪನ್ನಿರ್ಬ್ಬರ್ಮಹಾಸ್ಸಾಮನ್ತ ಲಚ್ಚಿಕೊಂಗಣಿಮ್ಬ ನಾಟ್ಗಾಮುಣ್ಡನ ಮಾಚಮ[ನಾ] ಊರಟುವಿನೊಳೆ ಹೋಗೆನೆನ್ದು (ಎಸ್. ಆಯ್. ಆಯ್. IX–i– ೬೧. ಶಿರಸ್ತಹಳ್ಳಿ ೯೩೦)

ಪನ್ನಿರ್ಬ್ಬರು ಮಹಾಸಾಮಂತರ ಪೈಕಿ ಲಚ್ಚಿಕೊಂಗಣಿ ಹೆಸರಿನ ನಾಳ್ಗಾವುಂಡನ ಪರವಾಗಿ, ಮಾಚಮನೆಂಬವನು ಊರಮೇಲೆ ದಾಳಿಮಾಡಿದ ಸಂದರ್ಭದಲ್ಲಿ, ಅವನನ್ನು ಎದುರಿಸದೆ ಊರ ಪ್ರವೇಶ ಮಾಡೆನೆಂದು ಯೋಧನೊಬ್ಬ ಹೋರಾಡಿ ಸಾಯುತ್ತಾನೆ.

(ಆ) ಮುಳಿಸಿಂ ಮುಯ್ಯೇಳ್ ಸೂಳ್ದು ಕ್ಷತ್ರಿಯರನರಸಿಕೊಂದಿಕ್ಕಿದಾ ರಾಮನಿಂದ
ಗ್ಗಳಮೆಂಬಂತಾವಗಂ ಮನ್ನೆಯರನಱಿಸಿ ಪನ್ನಿರ್ವ್ವರ ಕೊಂದು ಬಾಹಾ

ಬಳದಿಂನಯ್ವತ್ತೇೞ್ಕಾಳೆಗಮನದಟಿಂ ಗೆಲ್ದು ನಿರ್ವ್ಯಾಕುಳಂ ಮಂ

ಗಳಿವೇಡಂ ಬಿಡುದಾಣಂ ತನಗೆನೆ ಜಸಮಂ ತಾಳ್ದಿದಂ ಕ್ರಿಷ್ಣರಾಜಂ॥

(ಎಸ್. ಆಯ್. ಆಯ್. XX ೧೭೦ ಚಡಚಣ. ೧೦೬೭)

ಮಂಗಳಿವೇಡದಲ್ಲಿ ಆಳುತ್ತಲಿದ್ದ ಮಹಾಮಂಡಳೇಶ್ವರ ಕನ್ನಮರಸನನ್ನು ಕುರಿತ ಪದ್ಯವಿದು. ಇಲ್ಲಿ ಇವನಿಂದ ಪನ್ನಿರ್ವರು ಮನ್ನೆಯರು ಕೊಲೆಗೀಡಾದ ಪ್ರಸ್ತಾಪವಿದೆ.

(ಇ) "ಚಾಲುಕ್ಯಚಕ್ರವರ್ತಿ ತ್ರಿಭುವನಮಲ್ಲ ಪೆರ್ಮಾಡಿದೇವನ ದಳಂ ಪನ್ನಿರ್ವಸ್ಸಾಮನ್ತರ್ವೆರಸು ಕಣ್ಣೆಗಾಲ ಬೀಡಿನಲು ಬಿಟ್ಟಿರೆ" (ಎಪಿ. ಕ II ೮೨. ಶ್ರವಣಬೆಳಗೊಳ)

ಏರಿ ಬಂದು ಕಣ್ಣೆಗಾಲದಲ್ಲಿ ಬೀಡುಬಿಟ್ಟಿದ್ದ ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಪನ್ನಿರ್ವರ್ ಸಾಮಂತರನ್ನು ಹೊಯ್ಸಳದಂಡಾಧೀಶ ಗಂಗರಾಜನು ಸೋಲಿಸಿದ ವಿಷಯವಿಲ್ಲಿದೆ. ಇದೇ ಶಾಸನ ಸಂಪುಟದ ೧೫೪, ೫೬೧ನೆಯ ನಂಬರಿನ ಶಾಸನಗಳಲ್ಲಿಯೂ ಈ ವಾಕ್ಯ ಬಂದಿದೆ.

(ಈ) ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯ ಮಗ ಮೂರನೆಯ ಸೋಮೇಶ್ವರನನ್ನು ಗೂಡೂರ ಶಾಸನ "ದ್ವಾದಶ ಮಂಡಳಿಕರೊಳು ಮಾರ್ತಣ್ಡಂ" (ಆಂಧ್ರಪ್ರದೇಶದ ಶಾಸನಗಳು– II ೪೮೯. ಕ್ರಿ. ಶ. ೧೧೨೪)ಎಂದು ವರ್ಣಿಸಿದೆ.

(ಉ) ಆಂಧ್ರಪ್ರದೇಶದ ಸಿದ್ಧವಟಂ ತಾಲೂಕಿನ ದೊಂಗಲಸಾನಿ ಗ್ರಾಮದ ಶಾಸನವು (ಆಂಧ್ರಪ್ರದೇಶದ ಕನ್ನಡ ಶಾಸನಗಳು–II–೩೬೫., ಕ್ರಿ. ಶ. ೧೧೮೯) ಶ್ರೀ ಮನ್ಮಹಾಪ್ರಧಾನ ರೇವಣ್ಣ ಹೆಗ್ಗಡೆಯು ಯುದ್ಧದಲ್ಲಿ ಸೋಮೇಶ್ವರ ದೇವನೆಂಬವನನ್ನೂ "ಹಂನಿಬ್ಬರರಸು"ಗಳನ್ನೂ, ಸಾವಿರಸೈನ್ಯವನ್ನೂ ಕೊಂದನೆಂದು ತಿಳಿಸುತ್ತದೆ.

(ಊ) ಗುತ್ತವ್ೊಳಲಿನ ವಿಕ್ರಮಾದಿತ್ಯನನ್ನು ಚೌಡದಾನಪುರ ಶಾಸನವು "ಪಂನಿರ್ಬ್ಬರ್ಮ್ಮಂಡಳಿಕರ ಗಂಡ"ನೆಂದು ಕರೆದಿದೆ. (ಎಸ್. ಆಯ್. ಆಯ್. XVIII ೨೪೬. ಕ್ರಿ. ಶ. ೧೨೬೩)

(ಋ) ವಿಜಯನಗರದ ಅಳಿಯ ರಾಮರಾಜಯ್ಯನ ತಂದೆ ಮಂಡಳೇಶ್ವರ ರಂಗರಾಜಯ್ಯನನ್ನು ಬನವಾಸಿ ಶಾಸನ (೧೫೫೨) "ಹಂನಿಬ್ಬಗಂಡ"ಎಂದು ಕರೆದಿದೆ. (ಎಸ್. ಆಯ್. ಆಯ್. XX– ೨೩೬)

(ೠ) ಇನ್ನೂ ಒಂದು ವಿಷಯವೆಂದರೆ ಬಸವಪುರಾಣದಲ್ಲಿ ಬಸವಣ್ಣನವರನ್ನು "ಪನ್ನಿಬ್ಬರು ಮಹಾಮಾತ್ಯರೊಳಗಗ್ರೇಶ್ವರಂ" (ಬ. ಪು. ೫–೬೫)ಎಂದೂ, "ಭಂಡಾರಿಗಳು ಪನ್ನಿಬ್ಬರವರೊಳಗೆ

ಹಿರಿಯ" (ಬ. ಪು. ೫-೧೯)ಎಂದೂ, ರಟ್ಟಮತದಲ್ಲಿ (೧-೧೩) ಚಕ್ರವರ್ತಿಯ "ಪನ್ನಿರ್ಬರ್ ಸಾಮಂತರುಮಂ ಗೆಲ್ದ ಕಾಡಮರಸ" ಎಂದೂ ಹೇಳಲಾಗಿದೆ.

*****

ಈ ಉನ್ನತ ದರ್ಜೆಯವರಲ್ಲದೆ, ಗ್ರಾಮಮಟ್ಟದ ಗೌಡರ ವಿಷಯದಲ್ಲಿಯೂ "ಹನ್ನಿಬ್ಬರು" ಬಳಕೆಯಾಗಿದೆ.

"ಹಂನಿರ್ವ್ವರ್ಗಾವುಂಡುಗಳುಂ"

(ಎಸ್. ಆಯ್. ಆಯ್. XX-೨೪೮ ಸವದತ್ತಿ ೧೨೨೮)

"ಗುಡಿಗೆಱೆಯ ಹ(ಂ)ನ್ನಿರ್ವರ್ಗ್ಗಾವುಂಡುಗಳನಭ್ಯರ್ಚಿಸಿ"

(ಎಸ್. ಆಯ್. ಆಯ್. XX-೩೧೪ ಗುಡಗೇರಿ, ೧೨ನೆಯ ಶತಮಾನ)

"ಹರತಿಯ ಹಂನಿರ್ಬ್ಬರ್ಗಾವುಂಡುಗಳುಂ"

(ಎಸ್. ಆಯ್. ಆಯ್. XV-೧೭೬ ಹರ್ತಿ ೧೨೩೬)

ಹೀಗೆ ಇನ್ನೂ ಅನೇಕ ಗ್ರಾಮಗಳಲ್ಲಿ ಹನ್ನಿಬ್ಬರು ಗಾವುಂಡರು ಎಂಬ ನುಡಿಗಟ್ಟು ಬರುತ್ತದೆ.

ಮೋಟೆಬೆನ್ನೂರ ಶಾಸನ (ಎಸ್. ಆಯ್. ಆಯ್. XVIII-೭೧ ಕ್ರಿ. ಶ. ೧೦೬೬)ವು ಸತ್ತಳಿಗೆ ೭೦ನ್ನು ಗೊಯಿಮ್ಮರಸನು "ನಾರ್ಗಾವುಣ್ಡುಗೆಯ್ಯೆ, ತತ್ಪಾದ ಪದ್ಮೋಪ ಜೀವಿಗಳ್। ಸಲ್ಲಿಯ ರಾಲಗಾವುಣ್ಡಂ, ಮುಕ್ಕುಟ ರೇಕಗಾವುಣ್ಡಂ, ತೆನೆಯರ ಕುನ್ದಗಾವುಣ್ಡಂ, ಮಲ್ಲಗಾವುಣ್ಡಂ, ಬಾದಿಗ ದೇವಗಾವುಣ್ಡಂ, ಸೋವಗಾವುಣ್ಡಂ, ಕೊಣ್ಡಸ ಬಮ್ಮರ್ಗಾವುಣ್ಡ, ಆಲುಗರ ಬಮ್ಮರ್ಗಾವುಣ್ಡಂ, ಸಲ್ಲಿಯರಜ್ಜಗಾವುಣ್ಡಂ, ಪಳೆಯರ ಚಾವಗಾವುಣ್ಡಂ, ಕಲಿಯಮ ಗಾವುಣ್ಡಂ, ನಟ್ಟಿಯ ಬಮ್ಮರ್ಗಾವುಣ್ಡನನ್ತು ಬೆಣ್ಣೆವುರದ ಪನ್ನಿರ್ವ್ವರ್ಗ್ಗಾವುಣ್ಡಗೆಯ್ಯೆ" ಎಂದು ಬೆಣ್ಣೆವುರದ ೧೨ಜನ ಗಾವುಂಡರ ಹೆಸರನ್ನೇ ಎಣಿಸಿ ಹೇಳುತ್ತದೆ. ರಾಯಚೂರು ಶಾಸನ (ಹೈದ್ರಾಬಾದ ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು: ನಂ ೧೦೪. ೧೯೯೪)ದಲ್ಲಿ "ಹನ್ನಿಬ್ಬರ ಗಂಡ। ಹದಿಮೂವರ ಗಂಡ" ಎಂಬ ವಿಶಿಷ್ಟ ಪ್ರಯೋಗವೂ ಇದೆ.

ಹೀಗೆ ಮೇಲುಹಂತದ ಸಾಮಂತ, ಮಂಡಳಿಕ, ಅಮಾತ್ಯರ ವಿಷಯವಾಗಿ, ಕೆಳಹಂತದ ಗೌಡರ ವಿಷಯುವಾಗಿ ಈ ಪದ ಉದ್ದಕ್ಕೂ ಬಳಕೆಯಾಗಿದೆ. ಒಂದೇ ಊರಲ್ಲಿ ೧೨ ಜನ ಗೌಡರಿರುತ್ತಿದ್ದುದನ್ನೂ ಇಲ್ಲಿ ಸೂಚಿಸಲಾಗಿದೆ. ಬಹುಶ: ಮೂಲದಲ್ಲಿ ಇದು ೧೨ಜನ ಆಳುವವರ್ಗವನ್ನು ನಿರ್ದಿಷ್ಟವಾಗಿ ಸೂಚಿಸುತ್ತಿದ್ದು, ಆಮೇಲೆ ಕೆಲವೊಮ್ಮೆ ಇಷ್ಟು ಜನರಿರದ್ದರೂ ಒಂದು ಸಂಪ್ರದಾಯುವೆಂಬಂತೆ ಬಳಕೆಯಾಗುತ್ತ ಬಂದಿರುವ ಸಾಧ್ಯತೆಯಿದೆ. ಬಸವಣ್ಣ ಈ ಸಾಂಪ್ರದಾಯಿಕ ಪದವನ್ನೇ ತನ್ನ ವಚನದಲ್ಲಿ ಬಳಸಿದಂತಿದೆ.

*****

"ಬೋಳುಕ" ಎಂಬ ಪದ ಸಾಹಿತ್ಯದಲ್ಲಿ ಅನೇಕ ಸಲ ಬಳಕೆಯಾಗಿದೆ. ತಲೆ ಬೋಳಿಸಿಕೊಂಡವರು ಎಂದು ಇದರ ಸಾಮಾನ್ಯ ಅರ್ಥ. ಈ ಪದ ಧಾರ್ಮಿಕ, ಸಾಮಾಜಿಕ, ರಾಜಕೀಯ ಮೂರೂ ಪ್ರಸಂಗಗಳಲ್ಲಿ ವಿಶೇಷ ಅರ್ಥ ಪಡೆದುಕೊಂಡಿದೆ.

ಕೊಡೇಕಲ್ಲ ಬಸವಣ್ಣನದು ವೀರಶೈವ ಒಲವಿನ ನಾಥಸಂಪ್ರದಾಯ. ಈ ಸಂಪ್ರದಾಯದವರಿಗೆ "ಬೋಳುಕ"ರೆಂದು ಈಗಲೂ ಕರೆಯುತ್ತಾರೆ. ಧಾರ್ಮಿಕ ಪರಂಪರೆಯಲ್ಲಿ

ಗಡ್ಡ-ಜಟಾಧಾರಿಯಾಗಿರುವುದು ಒಂದು ಪದ್ಧತಿ, ಗಡ್ಡ-ಜಟೆ ತೆಗೆಯಿಸಿಕೊಳ್ಳುವುದು ಇನ್ನೊಂದು ಪದ್ಧತಿ. ಮೇಲೆ ಹೇಳಿದ ನಾಥಸಂಪ್ರದಾಯದವರು ಗಡ್ಡ-ಜಟೆ ತೆಗೆಯಿಸುವವರಾಗಿದ್ದಾರೆ. ವೀರಶೈವಧರ್ಮ ಪರಂಪರೆಯಲ್ಲಿಯೂ ಮಂಡೆ ಬೋಳಿಸಿಕೊಳ್ಳುವುದೇ ಸರಿಯಾದ ಕ್ರಮವೆಂದು ತೋರುತ್ತದೆ. "ಮಂಡೆ ಬೋಳಿಸಿಕೊಂಡರೇನು? ಮನಬೋಳಿಸಿಕೊಳ್ಳದನಕ್ಕ" ಎಂಬಂಥ ವಚನೋಕ್ತಿಗಳು ಇದನ್ನು ಬೆಂಬಲಿಸುತ್ತವೆ. ಈ ಧರ್ಮಗುರುಗಳು ದೀಕ್ಷಾಪ್ರಸಂಗದಲ್ಲಿ ಜಡೆ ತೆಗೆಯಿಸುವುದು ಕಡ್ಡಾಯವಾಗಿದೆ.

ಸಾಮಾಜಿಕಕ್ಕೆ ಬಂದರೆ, ಒಡೆಯನಲ್ಲಿ ದುಡಿಯಬಯಸುವ ಗಂಡುದೊತ್ತು ಕಡ್ಡಾಯವಾಗಿ ತಲೆ ಬೋಳಿಸಿಕೊಳ್ಳಬೇಕಿತ್ತು. "ಮಂಡೆ ಬೋಳಿಸಿಕೊಂಡು ಗಂಡುದೊತ್ತುವೊಕ್ಕೆನಯ್ಯಾ" ಎಂಬ ಬಸವಣ್ಣನವರ ವಚನಗಳಲ್ಲಿ ಈ ಸೂಚನೆಯಿದೆ. ಹೀಗೆ ಒಡೆಯನಿಗಾಗಿ ಗಂಡುದೊತ್ತು ಮಂಡೆಬೋಳಿಸಿಕೊಂಡರೆ, ತಿರುಪತಿ ವೆಂಕಟೇಶ ಇತ್ಯಾದಿ ದೇವರಿಗಾಗಿ ಗಂಡು-ಹೆಣ್ಣು ಮಂಡೆಬೋಳಿಸಿಕೊಳ್ಳುವುದು ಈಗಲೂ ಪ್ರಚಾರದಲ್ಲಿದೆ.

ರಾಜಕೀಯಕ್ಕೆ ಬಂದರೆ ರಾಜನ ಎಂಜಲನ್ನು ಸಾರ್ವಜನಿಕವಾಗಿ ತಿನ್ನುವ ಮೂಲಕ ವ್ಯಕ್ತಿಯೊಬ್ಬ ವೇಳೆವಾಳಿಯಾಗುತ್ತಿದ್ದ. ಇವರಿಗೆ ಬೆಸಮಗ, ಲೆಂಕ, ಮನೆಯ ಮಗ ಇತ್ಯಾದಿ ಶಬ್ದಗಳನ್ನು ಬಳಸುತ್ತಿದ್ದರು. ಇದಲ್ಲದೆ ಇವರು ಎಂಜಲು ತಿನ್ನುವುದರ ಜೊತೆಗೆ, ಇಲ್ಲವೆ ಎಂಜಲು ತಿನ್ನದೆ ಮಂಡೆ ಬೋಳಿಸಿಕೊಳ್ಳುತ್ತಿದ್ದರೆಂದು ಕಾಣುತ್ತದೆ. ಕುಮಾರರಾಮನಿಗೆ ಇಂಥ ಎಪ್ಪತ್ತೇಳು ಜನ (ಎಪ್ಪತ್ತೆರಡು ಜನ ಎಂಬ ಪಾಠಾಂತರವೂ ಇದೆ) ವಿಶ್ವಾಸಿಕರಿದ್ದರೆಂದು "ಹೊಸ ಕುಮಾರರಾಮನ ಸಾಂಗತ್ಯ" ಹೇಳುತ್ತದೆ (೩-೩೫).

> ಎಪ್ಪತ್ತೇಳು ಮಂದಿ ಬೋಳುಕ ರಾಯ[ರು]
> ಪುಷ್ಪಬಾಣನ ಸಮನವರ।
> ಒಪ್ಪುವ ಕಂಪಿಲ ತನ್ನ ಕುಮಾರಗೆ
> ಒಪ್ಪಿಸಿಹನು ಹರುಷದಲಿ॥

ಇಲ್ಲಿ ವಿಶ್ವಾಸಿಕರನ್ನು ಬೋಳುಕರೆಂದು ಕರೆಯಲಾಗಿದ್ದು, ಈ ಪದ ಈ ಕಾವ್ಯದಲ್ಲಿ ಮತ್ತೆ ಮತ್ತೆ ಬಂದಿದೆ. ಈ ಶಬ್ದವೇ ಇವರು ತಲೆಬೋಳಿಸಿಕೊಂಡವರೆಂಬುದನ್ನು ಸೂಚಿಸುತ್ತದೆ.

ವಿಶ್ವಾಸ ಸೂಚನೆಗಾಗಿ ಮಂಡೆ ಬೋಳಿಸಿಕೊಳ್ಳುವ ಪದ್ಧತಿ ಈಗಲೂ ಬಳಕೆಯಲ್ಲಿದೆ. "ಗಡ್ಡ ಮಂಡೆಪದ್ಧತಿ" ಎಂದು ಇದನ್ನು ಕರೆಯುತ್ತಾರೆ. ಹೀಗೆ ರಾಜನ ಯುದ್ಧದಲ್ಲಿ ಅವನ ಮೀಸಲು ವಿಶ್ವಾಸಿಗಳಾಗಿತ್ತಿದ್ದವರನ್ನು (ಅಂಗರಕ್ಷಕರು?) ಪ್ರಾಚೀನ ಕಾಲದಲ್ಲಿ ಬೋಳುಕರೆಂದು ಕರೆಯುತ್ತಿದ್ದರು.

■■

ಆಕರ : ಮಾರ್ಗ ಸಂಪುಟ-೪

೮೦

ತೊಲಗದ ಕಂಬ-ಬಾವನ್ನವೀರ

ಶಾಸನೋಕ್ತ ಅನೇಕ ವಿಶಿಷ್ಟ ಪದಗಳಿಗೆ ಅರ್ಥ ಹೇಳುವುದು ಇನ್ನೂ ಸಾಧ್ಯವಾಗಿಲ್ಲ. ಆಗಾಗ ಇಂಥ ಪ್ರಯತ್ನ ಮಾಡುತ್ತಬಂದಿದ್ದರೂ "ತೊಲಗದ ಕಂಬ" ಪದ ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ. ಶಾಸನಗಳಲ್ಲಿ ವೀರನಾದವನಿಗೆ "ತೊಲಗದ ಗಂಡ" ಎಂಬ, ಮಲಹರ ಕಾಯಕದ ಚಿಕ್ಕದೇವನ ವಚನದಲ್ಲಿ "ರಣಕ್ಕೆ ತೊಲಗದ ಪಟುಭಟ" ಎಂಬ ಉಲ್ಲೇಖಗಳು ಕಂಡುಬರುತ್ತವೆ. ಇವೆಲ್ಲ ರಣರಂಗದಿಂದ ತೊಲಗದ ವ್ಯಕ್ತಿಯನ್ನು ಸೂಚಿಸುವ ವಾಚ್ಯಾರ್ಥದ ಉಲ್ಲೇಖಗಳು. "ಬಯಲದೇಹದಲ್ಲಿ ಒಂದು ತೊಲಗದ ಕಂಬವ ಕಂಡೆ" ಎಂದು ಹಡಪದ ಅಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮನ ಬೋಧೆಯ ವಚನ (೭೬)ದಲ್ಲಿ ಬೆಡಗಿನ ರೀತಿಯಲ್ಲಿ ಕಂಡುಬರುವ ಈ ವಾಕ್ಯದಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಹೊಯ್ಸಳರ ಅಮಾತ್ಯನಾದ ಪೊಲಾಳ್ವದಂಡನಾಥನನ್ನು ಬಾನವಳ್ಳಿ ಶಾಸನದಲ್ಲಿ (ಕಕಚ I-೩೯)"ತೊಲಗದ ಕಂಬ" ಎಂದು ಕರೆಯಲಾಗಿದೆ. ಆದಯ್ಯನ ಮೇಲೆ ಎರಗಿದ ಸೈನ್ಯವನ್ನು "ತೊಲಗದ ಕಂಬ" "ಬಿರುದಿನಗ್ಗದ ಹರಿಗೆ ಹಬ್ಬಿದವು" ಎಂದು ಸೋಮನಾಥ ಚಾರಿತ್ರದಲ್ಲಿ (೫-೨೫) ವರ್ಣಿಸಲಾಗಿದೆ. ಕೆರೆಯ ಪದ್ಮರಸನ ದೀಕ್ಷಾಬೋಧೆಯಲ್ಲಿ ನಿಶ್ಚಲ ಶಿಷ್ಯನನ್ನು "ತೊಲಗದ ಕಂಬ" ಎಂದು ಸಂಬೋಧಿಸಲಾಗಿದೆ (ಪು-೨೨). ಬೆಂಗಳೂರು ಜಿಲ್ಲೆಯ ಕಾನಕಾನಹಳ್ಳಿ ತಾಲೂಕಿನ ಕಲ್ಲಹಳ್ಳಿ ಗ್ರಾಮದ ವೀರಗಲ್ಲಿನಲ್ಲಿ (೧೩೦೪)ಬರುವ "ತೊಲಗದ ಕಂಬ ಹಲ್ಲೇನಹಳ್ಳಿಯ ಬಾಮನಗೌಡನ ಮಗ ರಾಮೆಯನಾಯಕ ತಮ್ಮ ಸಾತೆಯ ನಾಯಕ"[೧] ಎಂಬ ವಾಕ್ಯ ಕಂಡುಬರುತ್ತದೆ. ಸೊಡ್ಡಳ ಬಾಚರಸನ ಮೇಲೆ ಎರಗಿದ ಬಿಜ್ಜಳನ ಸೈನ್ಯದಲ್ಲಿ ಹತರಾದವರನ್ನು ಹೆಸರಿಸುತ್ತ "ತೊಲಗದ ಕಂಬ ವಿರುಪ ಭೀಮರು ಬಿದ್ದರು" ಎಂದು ಸಿಂಗಿರಾಜಪುರಾಣದಲ್ಲಿ (೨೩-೧೭) ಎಂದು ಹೇಳಲಾಗಿದೆ. "ಇಕ್ಕಿದ ಹರಿಗೆ ತೊಲಗದ ಕಂಬವೆಂದು ಬಿರಿದನಿಕ್ಕಿ, ಹುಯ್ಯಲ ಕಂಡು ಓಡಿ ಬರುವಂಗೆ ಆ ಬಿರಿದೇತಕಯ್ಯಾ"? ಎಂಬ ಮಾತು ಘನಲಿಂಗಿದೇವನ ವಚನ (೩೫)ದಲ್ಲಿ ಬರುತ್ತದೆ. ಇಲ್ಲೆಲ್ಲ ಇದು ಪಾರಿಭಾಷಿಕ ಪದದಂತೆ ಬಳಕೆಯಾಗಿದೆ. ಇದಕ್ಕೆ ಸಮಾಧಾನಕರ ಉತ್ತರವೆಂಬಂತೆ ಪ್ರಾಚೀನ ನಿಘಂಟುವಿನಲ್ಲಿ "ತೊಲಗದ ಕಂಬಮೆನಲ್ ಸಂಸಪ್ತಕರ್"[೨] ಎಂಬ ಉಲ್ಲೇಖ ಸಿಗುತ್ತದೆ. ಇದನ್ನು ಓದುತ್ತಲೇ ಚಕ್ರವ್ಯೂಹ

---

೧. ಎಪಿ. ಕ. IX ಕಾನಕಾನಹಳ್ಳಿ ೧೦೭ (ಹಳೆಯ ಆವೃತ್ತಿ)

೨. ಪ್ರಾಚೀನ ನಿಘಂಟಿನಲ್ಲಿ ನೋಡಿದ ನೆನಪು. ಹುಡುಕಿದರೆ ಸಿಗುತ್ತಿಲ್ಲ.

ಪ್ರಸಂಗದಲ್ಲಿ ಅರ್ಜುನನು ಸಂಸಪ್ತಕರೊಡನೆ ಯುದ್ಧನಿರತನಾದ ಸಂಗತಿನೆನಪಾಗುವುದು ಸಹಜ. ಇದರ ಸರಿಯಾದ ರೂಪ ಸಂಶಪ್ತಕ. ಇದು ಶಪಥದಿಂದ ಸಾಧಿತವಾದ ಪದ. ರಣರಂಗದಲ್ಲಿ ನಿಂತಸ್ಥಳದಿಂದ ಹೆಜ್ಜೆಕಿತ್ತದೆ ಹೋರಾಡುವ ಅಂದರೆ ಕಂಬದಂತೆ ತೊಲಗದೆ ನಿಲ್ಲುವ ಯೋಧರೆಂದು ಇದರ ಅರ್ಥ. ಪುರಾಣನಾಮ ಚೂಡಾಮಣಿಯಲ್ಲಿ ಈ ಬಗ್ಗೆ ಕೆಳಗಿನ ವಿವರವಿದೆ:

"ಸಂಶಪ್ತಕ:ಯುದ್ಧದಲ್ಲಿ ಶಪಥಮಾಡಿ (ಆಣೆಯಿಟ್ಟು) ಯುದ್ಧಮಾಡತಕ್ಕವರಿಗೆಲ್ಲ ಈ ಹೆಸರು ಸಲ್ಲುತ್ತದೆ. ಸಾಮಾನ್ಯವಾಗಿ ಭಾರತಯುದ್ಧದಲ್ಲಿ ತ್ರಿಗರ್ತರಾಜನಾದ ಸುಶರ್ಮ, ಅವನ ತಮ್ಮಂದಿರಾದ ಸತ್ಯೇಷು, ಸತ್ಯಕರ್ಮ, ಸತ್ಯದೇವ, ಸತ್ಯರಥ ಇವರೈವರಿಗೂ ಈ ಹೆಸರು ರೂಢಿಯಲ್ಲಿದೆ. ಇವರು ಎಂಬತ್ತು ಕೋಟಿ ಸೈನ್ಯದೊಂದಿಗೆ ಶಪಥಪೂರ್ವಕವಾಗಿ ಯುದ್ಧಮಾಡಿ, ಅರ್ಜುನನನ್ನು ಇದಿರಿಸಿ ಮಡಿದರು (ಭಾರ-ಆ೨. ದ್ರೋ ೧೭-೨೭, ಕರ್ಣ ೧೮, ೪೮, ೫೫)".

ಈ ವಿವರವನ್ನು ನೋಡಿದರೆ ಮಹಾಭಾರತದ ಸಂಶಪ್ತಕ ಎಂಬುದನ್ನು ಕನ್ನಡಿಗರು "ತೊಲಗದ ಕಂಬ"ವೆಂದು ಅನುವಾದಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಕರ್ನಾಟಕದಲ್ಲಿ ಸಂಶಪ್ತಕದಂತೆ ತೊಲಗದ ಕಂಬ ಹೆಸರಿನಿಂದ ಸೈನ್ಯಪಡೆ ನಿರ್ಮಾಣ ಮಾಡುತ್ತಿದ್ದ ಬಗ್ಗೆ ಆಧಾರಗಳಿಲ್ಲ. ವಿಶೇಷಣವಾಗಿ ಮಾತ್ರ ಇದು ಶಾಸನ-ಕಾವ್ಯಗಳಲ್ಲಿ ಬಳಕೆಯಾಗಿದೆ.

*****

ಬಾವನ್ನವೀರವೆಂಬುದು ಶಾಸನ-ಕಾವ್ಯಗಳಲ್ಲಿ ಕಂಡುಬರುವ ಇಂಥ ಇನ್ನೊಂದು ಪದ. ಬಾವನ್ನವೆಂದರೆ ಐವತ್ತೆರಡು. ಇದು ಯಾವುದೋ ಕಾಲದ ಐವತ್ತೆರಡು ವೀರರ ಸಮುದಾಯವನ್ನು ಸೂಚಿಸುವಂತೆ ತೋರುತ್ತದೆ. ಇವರು ಯಾರು? ಯಾವ ಕಾಲದಲ್ಲಿದ್ದರು? ಇತ್ಯಾದಿ ವಿಷಯಗಳು ಅಸ್ಪಷ್ಟವಾಗಿಯೇ ಉಳಿದಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುವಿನಲ್ಲಿ ಈ ಬಗ್ಗೆ "ಬಾವನ್ನವೀರ=(ನಾ) ೧. ಐವತ್ತೆರಡು ಸಂಖ್ಯೆಗಳಿರುವ ದೇವತೆಗಳ ಒಂದು ಗುಂಪು-ದೇವತಾಸಮೂಹ. ೨. ಮಹಾವೀರ, ಪರಾಕ್ರಮಿ" ಎಂದು ಅರ್ಥ ಹೇಳಲಾಗಿದೆ.

ಇಲ್ಲಿಯ ದೇವತಾಸಮೂಹವೆಂಬುದು ಸಮಾಧಾನಕರ ಉತ್ತರವಾಗಿಲ್ಲ. ಮಹಾವೀರ, ಪರಾಕ್ರಮಿ ಎಂಬಿವು ಸಾಮಾನ್ಯ ಅರ್ಥಗಳು.

ಮರಾಠಿಯಲ್ಲಿ ಬಾವನ್ನವೀರ, ಹಿಂದಿಯಲ್ಲಿ ಬಾವನವೀರ ರೂಪಗಳು ಸಿಗುವುದನ್ನು ಪರಿಷತ್ತಿನ ನಿಘಂಟು ಸೂಚಿಸುತ್ತದೆ. ಮರಾಠಿಯಲ್ಲಿ ಬಾವನ್ನ ಪದಕ್ಕೆ ಶ್ರೇಷ್ಠ, ಉತ್ಕೃಷ್ಟ ಎಂಬ ಅರ್ಥಗಳಿದ್ದು, ಇವುಗಳಿಂದಲೂ ಸಮಾಧಾನವೆನಿಸುವುದಿಲ್ಲ. ಹಿಂದಿ ನಿಘಂಟುಗಳಲ್ಲಿ ಈ ಶಬ್ದ ನನಗೆ ಸಿಗಲಿಲ್ಲ. ಕನ್ನಡದಲ್ಲಿ ಬಾವನ್ನವೆಂದರೆ ಶ್ರೀಗಂಧವೆಂಬ ಅರ್ಥವಿದೆ. ಇದು ಹೊಂದಿಕೆಯಾಗುವುದೇ ಇಲ್ಲ.

"ವಚನಸಾಹಿತ್ಯ: ಒಂದು ಸಾಂಸ್ಕೃತಿಕ ಅಧ್ಯಯನ" ಕೃತಿಯಲ್ಲಿ (ಪು. ೨೫೪) ಡಾ|| ಪಿ. ವಿ. ನಾರಾಯಣ ಅವರು "ಬಾವನ್ನವೀರರು" ಎಂಬ ಉಲ್ಲೇಖ ಆದಯ್ಯನ ಒಂದು ವಚನದಲ್ಲಿ ಬರುತ್ತದೆ. ಇದು ಯಾರೋ ಐವತ್ತೆರಡು ಮಂದಿ ವೀರರ ಒಂದು ತಂಡವನ್ನು ಸೂಚಿಸುತ್ತದೆ-ಎಂದು ಹೇಳಿ ನಿಂತು ಬಿಟ್ಟಿದ್ದಾರೆ.[೩]

---

೩. ಕೋವೂರು ಬೊಮ್ಮಯ್ಯನ ರಗಳೆಯಲ್ಲಿಯೂ ಬಾವನ್ನವೀರ ಪ್ರಯೋಗವಿದೆ.

ಮೆಹಬೂಬನಗರ ಜಿಲ್ಲೆಯ ಅಲಂಪುರ ಶಾಸನದಲ್ಲಿ (ಆಂಧ್ರಪ್ರದೇಶದ ಶಾಸನಗಳು– II– ೪೮೬ ಕ್ರಿ. ಶ. ೧೦೮೫) "ಬಾವನ್ನವೀರ" ಶಬ್ದವು ವೀರನೊಬ್ಬನಿಗೆ ಬಿರುದಾಗಿ ಬರುತ್ತದೆ. ಅಪಪಾಠ ಕಾರಣವಾಗಿ ಅಲ್ಲಿಯ ಮಿಕ್ಕ ವಿವರಗಳು ತಿಳಿದು ಬರುವುದಿಲ್ಲ.

ಮುಗದ ಶಾಸನದಲ್ಲಿ (ಎಸ್. ಆಯ್. ಆಯ್. XI-i–೭೮ ಕ್ರಿ. ಶ. ೧೦೪೫) ಸಾಮಂತ ಮಾರ್ತಂಡಯ್ಯನಿಗೆ "ಬಾವನ್ನವೀರ"ನೆಂಬ ವಿಶೇಷಣ ಬಳಸಲಾಗಿದೆ.

ಡೋಣಿ ಶಾಸನದಲ್ಲಿ (ಬಿ. ಕೆ. ಆಯ್. I-i–೧೮೧ ಕ್ರಿ. ಶ. ೧೧೯೪)ದಲ್ಲಿ ಉಗುರು ಮುನ್ನೂರ್ವ್ವರನ್ನು ಕುರಿತು "ನೆರೆದಾನ್ತರಾತಿ ಬಳಮಂ ಸಂಹಾರಿಪಾತ್ಮೀಯ ಭೀಕರ ಶೌರ್ಯೋದಯದಿಂ ಪರಿಕಿಪೊಡೆ ಬಾವನ್ನವೀರರ್ಕ್ಕಳನ್ನರ್" ಎಂದು ಹೇಳಲಾಗಿದೆ.

ಕೋಳೂರು ಶಾಸನದಲ್ಲಿ (ಎಸ್. ಆಯ್. ಆಯ್. IX-i–೨೪೯ ಕ್ರಿ. ಶ. ೧೧೪೭)ಮಾಧವಗೌಡನನ್ನು ಕುರಿತು

ಭಾವಂನ ನಿರತಂ ತಂ।
ದಾವಗವೊಂದೆಸೆಯೊಳಿಟ್ಟು ತಂನಂ ಪ್ರತಿಯಿ।
ಟ್ಟ ವೀರರೊಡನೆ ತೂಗಿದೊ
ಡೋವತ ವೀರಕ್ಕೆ ಮಾಧವಂ ಗೆಲೆವಂದಂ॥

ಎಂಬ ಕಂದಪದ್ಯ ಬರುತ್ತಿದ್ದು, ಇದನ್ನು ಹೀಗೆ ಪರಿಷ್ಕರಿಸಬಹುದು:

ಬಾವನ್ನ [ವೀರರಂ] ತಂ
ದಾವಗವೊಂದೆಸೆಯೊಳಿಟ್ಟು ತನ್ನಂ ಪ್ರತಿಯಿ।
ಟ್ಟಾ ವೀರರೊಡನೆ ತೂಗಿದ
ಡೋವತ ವೀರಕ್ಕೆ ಮಾಧವಂ ಗೆಲೆವಂದಂ॥

ಬಾವನ್ನವೀರರಿಗಿಂತ ಇವನ ತೂಕ ಅಧಿಕವಾದುದೆಂದು ಇಲ್ಲಿ ಹೇಳಲಾಗಿದೆ.

ಹರಳಹಳ್ಳಿ ಶಾಸನದಲ್ಲಿ (ಕೆ. ಆಯ್ VI ೩೯. ಕ್ರಿ. ಶ. ೧೧೮೧)ಗುತ್ತ ಅರಸು ಜೋಯಿದೇವನನ್ನು "ಆದಿ ವೀರರ್ಕ್ಕಳನನುವರದೊಳ್ ಪೋಲಿಸಲ್ಕೆಂತಾ ಬಾವಂನರನಿಂತೀ ಶತ್ರುಭೂಮೀಶರನದ[ಟಿನಲೆವಂ] ನನೊಳ್" ಎಂದು ವರ್ಣಿಸುತ್ತ ಬಳಸಲಾದ "ಬಾವನ್ನರಂ" ಎಂಬುದು ಬಾವನ್ನವೀರರನ್ನೇ ಸೂಚಿಸುತ್ತದೆ.

ಇಷ್ಟು ವಿವರಗಳೊಂದಿಗೆ ಹೊಯ್ಸಳ ವಿಷ್ಣುವರ್ಧನನ ವೇಳೆವಾಳಿಯಾಗಿದ್ದ ಪ್ರಸಿದ್ಧ ಕುವರಲಕ್ಷ್ಮನ ಪ್ರಸಿದ್ಧ ಶಾಸನದ ಒಂದು ಪದ್ಯವನ್ನು ಇಲ್ಲಿ ನೋಡಬಹುದು.

ಧರೆಗೆ ನೆಗಟ್ಟೆವೆತ್ತೆಸೆವ ಶಕ್ತಿಗೆ ಶೂದ್ರಕ ಭೂಭುಜಂಗೆ ಭಾ
ಸುರಮೆನೆ ಭಾಷಿತಂ ನೆಱಪುವಗ್ಗದ ಬೀರರದಯ್ವದಯ್ವದಿಂ
ಬರೆ ಸುಭಟೋತ್ತಮರ್ಕುವರ ಲಕ್ಷ್ಮಚಮೂಪತಿಗಿತ್ತು ಭಾಷೆಯಂ
ಧರೆ ಪೊಗಳ್ವನ್ನೆಗಂ ನೆಱಪುವಗ್ಗದ ವೀರರದೊಂದು ಸಾಸಿರಂ॥

ಶಕ್ತಿದೇವತೆಗೆ ಮತ್ತು ಶೂದ್ರಕ ಭೂಪತಿಗೆ "ಭಾಷಿತಂ ನೆರಪುವ" ಅಂದರೆ ಪ್ರತಿಜ್ಞೆಯನ್ನು ಪೂರೈಸುವ ವೀರರು (ಕ್ರಮವಾಗಿ) ಐವತ್ತು(ಐವದ್)ಜನ ಮತ್ತು ಐವತ್ತೆರಡು (ಐವದಿಂಬರ್)ಜನ.

ಆದರೆ ಕುವರಲಕ್ಷ್ಮಚಮೂಪತಿಗೆ ಕೊಟ್ಟ ಭಾಷೆಯನ್ನು ಪೂರ್ಣಗೊಳಿಸುವವರು ಒಂದು ಸಾವಿರ ಜನರು–ಎಂದು ಈ ಪದ್ಯದ ಅರ್ಥ. ಇಲ್ಲಿ ಶಕ್ತಿದೇವತೆಗೆ ನೆರವಾಗುವ ಐವತ್ತು ಜನ ನಮಗೆ ಅಪ್ರಸ್ತುತ. ಶೂದ್ರಕನಿಗೆ ನೆರವಾಗುವ ಐವತ್ತೆರಡು ವೀರರೇ ನಮಗೆ ಪ್ರಸ್ತುತವೆನಿಸುವ ಬಾವನ್ನವೀರರು. ಶೂದ್ರಕರಾಜನಿಗೆ ಐವತ್ತೆರಡು ಜನ ರಕ್ಷಕರಾಗಿ ಮಹಾವೀರರೆನಿಸಿದ್ದರೆಂದು ಇಲ್ಲಿ ಸೂಚಿಸಲಾಗಿದೆ. ಶೂದ್ರಕನಿಗೆ ಸಂಬಂಧಪಟ್ಟ ಯಾವ ಕಥೆಯಲ್ಲಿಯೂ ಈ ವಿಷಯವನ್ನೊಳಗೊಂಡ ವಿವರ ನನಗೆ ಸಿಗಲಿಲ್ಲ. ಸೇಡಂ ಶಾಸನದಲ್ಲಿ (ಕಲ್ಬುರ್ಗಿ ಜಿಲ್ಲೆಯ ಶಾಸನಗಳು. ಪು ೫೦೩–೫೦೪. ಕ್ರಿ. ಶ. ೧೦೭೯)ಚಲದಂಕರಾಮರೆನಿಸಿದ ಅಲ್ಲಿಯ ಮುನ್ನೂರು ಮಂದಿ ಮಹಾಜನರ ವರ್ಣನೆ ಹೀಗೆ ಬರುತ್ತದೆ:

ಏದೊರೆಯರ್ಸ್ಸೇಡಿಂಬದ
ನಾದಿಯ ಬಾವನ್ನವೀರರೊಳ್ಮಚ್ಚರದಿಂ।
ಕಾದುವರಾಕ್ಕಾಂಚೀಪುಟ
ಭೇದನ ಪಟುತರ ಕವಾಟಪುಟ ವಿಘಟನರೊಳ್॥

ಸೇಡಿಂಬದ ೩೦೦ ಜನ ಮಹಾಜನರು ಬಾವನ್ನವೀರರಿಗೆ ಸಮಾನರಾಗಿದ್ದರು. ಆ ಬಾವನ್ನವೀರರು ಕಾಂಚಿಯನ್ನು, ಅದರ ದ್ವಾರವನ್ನು ಸೂರೆಮಾಡಿದ ಸಮರ್ಥರು–ಎಂದು ಇಲ್ಲಿ ಹೇಳಲಾಗಿದೆ. ಇದರಿಂದ ಶೂದ್ರಕನ ಬಾವನ್ನವೀರರು ಕಾಂಚಿಯಲ್ಲಿ ತಮ್ಮ ಶಕ್ತಿಸಾಮರ್ಥ್ಯ ಮೆರೆದವರೆಂಬ ಸೂಚನೆ ಸಿಗುತ್ತದೆ. "ಶೂದ್ರಕನ ತಲೆಯ ಕಂಚಿಯಲ್ಲಿ ಕಟ್ಟಿತ್ತು"(ಆರ್. ಸಿ. ಹಿರೇಮಠ. ೯೭೧) ಎಂದು ಬಸವಣ್ಣನವರು ಹೇಳುತ್ತಾರೆ. ಶಾಸನೋಕ್ತ ಕಾಂಚಿ, ವಚನೋಕ್ತ ಕಂಚಿ ಒಂದೇ ಆಗಿರುವುದು ಸಹಜ. ಆದುದರಿಂದ ಕಂಚಿ (ಕಾಂಚಿ), ದ್ವಾರಭೇದನ ಘಟನೆ, ಶೂದ್ರಕ–ಈ ಅಂಶಗಳನ್ನೊಳಗೊಂಡ ಕಥೆಯನ್ನು ಶೋಧಿಸಿದರೆ ಬಾವನ್ನವೀರ ಪದಕ್ಕೆ ಇನ್ನೂ ಹೆಚ್ಚಿನ ಅರ್ಥ ಹೇಳಲು ಸಾಧ್ಯವಿದೆ.

■■

ಆಕರ : ಮಾರ್ಗ ಸಂಪುಟ–೪

೮೧

ನೊಳಂಬದೊಡ್ಡ–ನೊಳಂಬವಟ್ಟ

ಪ್ರಾಚೀನಕರ್ನಾಟಕದ ಅರಸು ಮನೆತನಗಳಲ್ಲಿ ನೊಳಂಬರದೂ ಒಂದು. ನೊಳಂಬಪಲ್ಲವರೆಂದೇ ಹೆಸರಾಗಿರುವ ಇವರು ಕಂಚಿ ಪಲ್ಲವ ಮೂಲದವರಾಗಿದ್ದಾರೆ. ಗಂಗರ, ಕಲ್ಯಾಣ ಚಾಲುಕ್ಯರ ಕೈಕೆಳಗೆ ಇವರು ಚಿತ್ರದುರ್ಗ, ತುಮಕೂರು ಜಿಲ್ಲೆಗಳನ್ನು ಮತ್ತು ಆಂಧ್ರಪ್ರದೇಶದ ಕೆಲವು ಭಾಗಗಳನ್ನು ಇಂದಿನ ಮಡಕಶಿರಾ ತಾಲೂಕಿನ ಹೆಂಜೇರು ಅಥವಾ ಹೇಮಾವತಿ ರಾಜಧಾನಿಯಿಂದ ಆಳುತ್ತಿದ್ದರು. ಮೊದಲು "ನೊಳಂಬಳಿಗೆ ಸಾವಿರ" ಅಂದರೆ ಒಂದು ಸಾವಿರ ಹಳ್ಳಿಗಳ ರಾಜ್ಯವಾಗಿದ್ದ ಇದು, ಮುಂದೆ ನೊಳಂಬವಾಡಿ ೩೨ ಸಾವಿರ ಅಂದರೆ ೩೨ ಸಾವಿರ ಹಳ್ಳಿಗಳ ರಾಜ್ಯವಾಗಿ ಬೆಳೆಯಿತು.

ಈ ನೊಳಂಬ ಎಂಬುದೇ ನೊಳಬ, ನೊಣಬ ರೂಪಗಳಲ್ಲಿ ಕಂಡುಬರುತ್ತಿದ್ದು, ಈ ನಾಡಿಗೆ ಸಂಬಂಧಿಸಿದವರೇ ಇಂದಿನ ನೊಣಬ ಲಿಂಗಾಯತರು.

ನೊಳಂಬರ ೯ನೆಯ ಶತಮಾನದ (ಎಸ್. ಆಯ್. ಆಯ್ IX-i-17. ಕಂಬದೂರು, ಕಲ್ಯಾಣದುರ್ಗ ತಾಲೂಕು. ಅನಂತಪುರ ಜಿಲ್ಲೆ) ಒಂದು ಶಾಸನ ತುಂಬ ಗಮನಾರ್ಹವಾಗಿದೆ. ಇಲ್ಲಿ ನೊಳಂಬಾಧಿರಾಜ ಅರಸನು ಬೆದ್ದುಗೊಂದೆಯ ಕೆರೆಯನ್ನು ಕಟ್ಟಿಸಿದ ಸಂದರ್ಭದಲ್ಲಿ "ಅಜ್ಜಪರ್ವರ[೧] ಭಿದಿಯೆಱೆಯ[ರ್] ನೊಟಿಮ್ಬದೊಡ್ಡನೆಂದು[೨] ಕಡಗಮಿಟ್ಟರ್. ಶ್ರೀಮು[ಖ]ರಾಮರ್ ಶ್ರೀಮುಕದೊಡ್ಡರೆಂದು ಕಡಗಮಿಟ್ಟರ್, ಸಿಙ್ಗಪೋತರಸರು ಧರ್ಮಮಹಾದೇವಿಯರುಡಿತಿಟ್ಟು ಪೊನ್ನೇಱದೊಡ್ಡರೆಂದು ಕಡಗಮಿಟ್ಟರ್" ಎಂದು ಹೇಳಲಾಗಿದೆ. ಕೆರೆಕಟ್ಟಿಸಿ ಅದರ ಉದ್ಘಾಟನ ಅಂಗವಾಗಿ ವ್ಯಕ್ತಿಗಳಿಗೆ ಸಲ್ಲಿಸಿದ ಗೌರವನ್ನೋ, ವ್ಯಕ್ತಿಗಳೇ ಪ್ರತಿಜ್ಞೆಸಾರಿ ಬಿರುದು ಹೊತ್ತುದನ್ನೋ ಇದು ಸೂಚಿಸುವಂತಿದೆ. ಇಲ್ಲಿ ನೊಳಂಬದೊಡ್ಡ, ಶ್ರೀಮುಕದೊಡ್ಡ, ಪೊನ್ನೇರದೊಡ್ಡ ಎಂಬ ಮೂರು ಪ್ರಶಸ್ತಿ ನಾಮಗಳಿವೆ. ನೊಳಂಬವೆಂಬುದು ಒಂದು

---

೧. ಅಜ್ಜಪರ್ವರ ದಂಡಿಗಾವುಂಡನ ಉಲ್ಲೇಖ ಎಸ್. ಆಯ್. ಆಯ್. IX-i-18 ರಲ್ಲಿದೆ.

೨. ನೊಳಂಬದೊಡ್ಡನೆಂಬ ಪದಪ್ರಯೋಗ ಇನ್ನೊಂದು ಶಾಸನದಲ್ಲಿದೆ. ಎಸ್. ಆಯ್. ಆಯ್. IX-i-18.

ಕುಟುಂಬನಾಮವೆಂದು ನಮಗೆ ಗೊತ್ತು. ಆದುದರಿಂದ ಮಿಕ್ಕ ಶ್ರೀಮುಕ, ಪೊನ್ನೇರ ಎಂಬ ಎರಡೂ ಕುಟುಂಬ ನಾಮಗಳೇ ಆಗಿರಬಹುದು. ತಮ್ಮ ತಮ್ಮ ಕುಟುಂಬ ನಾಮದೊಂದಿಗೆ ಇವರು ನೊಟಂಬ+ದೊಡ್ಡ, ಶ್ರೀಮುಕ+ದೊಡ್ಡ, ಪೊನ್ನೇರ+ದೊಡ್ಡ ಎಂಬ ಪ್ರಶಸ್ತಿ ಧರಿಸಿದಂತಿದೆ. ಇಲ್ಲಿಯ ಶ್ರೀಮು[ಖ]ರಾಮನೆಂಬವನು ಶ್ರೀಮುಕದೊಡ್ಡ ಎಂದು ಪ್ರಶಸ್ತಿ ಹೊತ್ತುದು ನಮ್ಮ ಊಹೆಯನ್ನು ಬೆಂಬಲಿಸುತ್ತದೆ. ಇಲ್ಲಿ ಸಿಂಗಪೋತರಸನ ಜೊತೆ ಧರ್ಮಮಹಾದೇವಿ ಯರುಡಿತಿ ಹೆಸರಿನ ಮಹಿಳೆಗೂ ಪೊನ್ನೇರದೊಡ್ಡ ಎಂದು ಕಡಗವಿಟ್ಟುದು ಗಮನಾರ್ಹವೆನಿಸಿದೆ.

ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ನೊಳಂಬ ಹೆಸರಿನ ಅರ್ಥ. Peasant State and Society in Medieval South India (Delhi, 1980) ಈ ಗ್ರಂಥದಲ್ಲಿರುವ Nu(o)lumbavadi, Tamil, large territory like Mandlam (ಪುಟ ೧೪) ಎಂಬ ವಿವರಣೆಯಿಂದ ನೊಳಂಬ=ದೊಡ್ಡ ಎಂದು ತಿಳಿದುಬರುತ್ತದೆ. ಹೀಗಾಗಿ ಇವುಗಳಿಗೆ ಶ್ರೀಮುಖ ಶ್ರೇಷ್ಠ, ನೊಳಂಬಶ್ರೇಷ್ಠ, ಪೊನ್ನೇರ ಶ್ರೇಷ್ಠ ಎಂದು ಅರ್ಥ ಹೇಳಬಹುದು. ಗಮನಸೆಳೆಯುವ ಅಂಶವೆಂದರೆ ಮಹಿಳೆಗೂ ಇಂಥ ಘನತೆ ಪ್ರಾಪ್ತವಾದುದು.

*****

ಈ ದೊಡ್ಡಸ್ತಿಕೆಯನ್ನು ಸಮರ್ಥಿಸುವಂತೆ "ನೊಳಂಬವಟ್ಟ" ಎಂಬ ಪದ ಹಾನಗಲ್ಲ ತಾಲೂಕಿನ ಕಲಕೆರೆ ಗ್ರಾಮದ ಶಾಸನದಲ್ಲಿ ಕಾಣಿಸಿಕೊಂಡಿದೆ. ಭುವನೈಕಮಲ್ಲ ವೀರನೊಳಂಬನು ನೊಳಂಬವಾಡಿ, ಪಾನುಂಗಲ್ಲನಾಡು, ಬನವಾಸಿ ದೇಶಗಳನ್ನು ಆಳುತ್ತ, ಕಲಕೆರೆಯ ಸೋಮೇಶ್ವರ ದೇವರಿಗೆ ಪುಲ್ಲವಳ ಗ್ರಾಮವನ್ನು ದೇವಸಿಂಗಿಪಂಡಿತರ ಪಾದತೊಳೆದು ಬಿಟ್ಟುದನ್ನು ಹೇಳುತ್ತದೆ (೧೦೭೬). ಅಲ್ಲಿ

ಒಸೆದು ಶಿವಲಿಂಗಮಂ ಪೂ
ಜಿಸುವ ಶಿವಬ್ರತಿಗೆ ಭಕ್ತಿಯಂ ಮಾಳ್ಪ ಜಗ।
ಕ್ಕೆಸೆಯೆ ಶಿವಾಲಯಮಂ ಮಾ
ಡಿಸುವಂಗೆ ನೊಳಂಬವಟ್ಟವೆಂಬುದು ಬ[ಪಿ]ರಿದೇ॥

(ಎಸ್. ಆಯ್. ಆಯ್ XX-೮೯, ಕಲಕೇರಿ)

ಎಂದು ವರ್ಣಿಸಲಾಗಿದೆ. ಇಲ್ಲಿ ಶಿವಲಿಂಗಪೂಜಿಸುವ, ಶಿವವ್ರತಿಗೆ ಭಕ್ತಿಸಲ್ಲಿಸುವ, ಶಿವ ದೇವಾಲಯ ನಿರ್ಮಿಸುವ ವ್ಯಕ್ತಿಗೆ "ನೊಳಂಬವಟ್ಟ" ಲಭ್ಯವಾಗುತ್ತದೆಯೆಂದು ಹೇಳಲಾಗಿದೆ. ಇಲ್ಲಿ ನೊಳಂಬಮನೆತನಕ್ಕೂ ಈ ಪಟ್ಟಕ್ಕೂ ಏನೂ ಸಂಬಂಧವಿರುವಂತಿಲ್ಲ. ಸಾಮಾನ್ಯಾರ್ಥದಲ್ಲಿ ದೊಡ್ಡಪಟ್ಟ, ದೊಡ್ಡಪದವಿ ಸಿಗುವುದೆಂದು ಹೇಳಿದಂತಿದೆ. ಬಹುಶ: ಈ ಅರ್ಥದಲ್ಲಿ ನೊಳಂಬವಟ್ಟ ಎಂಬುದು ಜನಪ್ರಿಯ ನುಡಿಗಟ್ಟಾಗಿರಬಹುದು.

■■

ಆಕರ : ಮಾರ್ಗ ಸಂಪುಟ-೪

೮೨

ಗುಡ್ಡಧ್ವಜ-ಸೆಟ್ಟಿವಟ್ಟ-ಬಣಂಜುವಟ್ಟ

ಇಂದು ಬೇರೆ ಬೇರೆ ರಾಷ್ಟ್ರಗಳು ಬಳಸುವಂತೆ ಪ್ರಾಚೀನಕಾಲದಲ್ಲಿಯೂ ಬೇರೆ ಬೇರೆ ಅರಸರು ತಮತಮಗೆ ವಿಶಿಷ್ಟ ಧ್ವಜಗಳನ್ನು ಬಳಸುತ್ತಿದ್ದರು. ಉದಾ: ಕಲಚುರಿಗಳು ವೃಷಭಧ್ವಜ, ಗಂಗರು ಗಜಧ್ವಜ ಇತ್ಯಾದಿ.

ಹೀಗೆ ಅರಸರಲ್ಲದೆ ಪ್ರಾಚೀನ ಕಾಲದ "ಅಯ್ಯಾವೊಳೆಯ ಐನೂರ್ವರು" ಹೆಸರಿನ ವ್ಯಾಪಾರಿಸಂಘದವರು ವಿಶಿಷ್ಟವಾದ ಧ್ವಜವನ್ನು ಬಳಸುತ್ತಿದ್ದರು. ಅದರ ಹೆಸರು ಗುಡ್ಡಧ್ವಜ. "ಪೂವಲ್ಲಿಯ ಸಿಂಹಾಸನದ ಬೃಹನ್ಮಠದ ಸಂಕ್ಷಿಪ್ತ ಇತಿಹಾಸವು" ವರ್ತಕರನ್ನು ಕುರಿತು ಬರೆಯುತ್ತ, ಅವರದು "ಕೈಲಾಸ ನಿಶಾನೆ" ಎಂದು ಹೇಳುತ್ತದೆ. "ಶ್ವೇತಪರ್ವತ" (ಶುದ್ಧಗುಡ್ಡ)ಧ್ವಜರೆಂದು ಬಳ್ಳಿಗಾವಿ ಶಾಸನ ಹೇಳುವುದು ಇದನ್ನು ಬೆಂಬಲಿಸುತ್ತದೆ. ಇದನ್ನು ಗಮನಿಸಿ ವಿದ್ವಾಂಸರು ಸಹಜವಾಗಿಯೇ ಗುಡ್ಡಧ್ವಜವೆಂದರೆ ಕೈಲಾಸಪರ್ವತ ಚಿತ್ರವನ್ನೊಳಗೊಂಡ ನಿಶಾನೆಯೆಂಬ ನಿರ್ಣಯಕ್ಕೆ ಬಂದಿದ್ದಾರೆ. ಇದು ಬಹುಮಟ್ಟಿಗೆ ಸರಿಯೆಂದು ತೋರುತ್ತದೆ. ಇಷ್ಟನ್ನು ಬಿಟ್ಟರೆ ಗುಡ್ಡಧ್ವಜದ ಬಗೆಗೆ ಹೆಚ್ಚಿನ ಸಂಗತಿಗಳನ್ನು ಹೇಳಲು ಈ ವರೆಗೆ ವಿದ್ವಾಂಸರಿಗೆ ಸಾಧ್ಯವಾಗಿಲ್ಲ. ಈ ಲೇಖನದಲ್ಲಿ ಪ್ರಸ್ತುತ ಗುಡ್ಡಧ್ವಜದ ಮೂಲ ಮತ್ತು ಸ್ವರೂಪವನ್ನು ಚರ್ಚಿಸಲಾಗಿದೆ.

ಉತ್ತರದ ಮೌರ್ಯರ ಮಾಂಡಲಿಕರಾಗಿ ದಕ್ಷಿಣದಲ್ಲಿ ಆಂಧ್ರ, ಮಹಾರಾಷ್ಟ್ರ, ಕರ್ನಾಟಕ ಮೊದಲಾದ ಪ್ರದೇಶಗಳನ್ನು ಆಳಿದವರು, ಶಾತವಾಹನರು. ಇವರ ಕಾಲಕ್ಕೆ ಭೂಮಾರ್ಗ, ಜಲಮಾರ್ಗಗಳ ವ್ಯಾಪಾರ ಅಭಿವೃದ್ಧಿಗೊಂಡಿತೆಂಬ ವಿಷಯ ಎಲ್ಲರಿಗೂ ಗೊತ್ತು. ಹೀಗೆ ಅಭಿವೃದ್ಧಿಗೊಳ್ಳಲು ಇವರು ಮೂಲತ: ವ್ಯಾಪಾರಿಗಳಾಗಿರುವುದೇ (ಈಸ್ಟ ಇಂಡಿಯಾ ಕಂಪನಿಯ ಇಂಗ್ಲಿಷ್‌ರಂತೆ) ಕಾರಣವಾಗಿರಬಹುದು. ಏಕೆಂದರೆ ಶಾತವಾಹನವೆಂಬುದು "ಸಾರ್ಥವಾಹ"ದ ಪರಿವರ್ತಿತರೂಪವಾಗಿರುವಂತಿದೆ. ಇಲ್ಲಿ ಸಾರ್ಥವೆಂದರೆ ಸ+ಅರ್ಥ, ದ್ರವ್ಯಸಂಬಂಧಿಗಳೆಂದೂ, ವಾಹವೆಂದರೆ ವ್ಯಾಪಾರಿಗಳೆಂದೂ ಅರ್ಥ. ಬಹುಶ: ಇವರು ಸಾಮನ್ಯ ವ್ಯಾಪಾರಿಗಳಲ್ಲದೆ, ಮೂಲತ: ರಾಜ್ಯದ ವಾಣಿಜ್ಯ ಚಟುವಟಿಕೆ ನೋಡಿಕೊಳ್ಳುವ ಸರಕಾರಿ ಅಧಿಕಾರಿಗಳಾಗಿರಬಹುದು. ಈ ಕಾರಣಕ್ಕಾಗಿಯೇ ಇವರ ಹೆಸರುಗಳ ಮುಂದೆ ಸ್ಕಂದ+ಸಾತಕರ್ಣಿ, ಶ್ರೀಯಜ್ಞ+ಸಾತಕರ್ಣಿ,

ವಿಜಯ+ಸಾತಕರ್ಣಿ, ಶಕ+ಸಾತಕರ್ಣಿ, ಕೃಷ್ಣ+ಸಾತಕರ್ಣಿ, ರುದ್ರ+ಸಾತಕರ್ಣಿ ಎಂಬಂತೆ ಹುದ್ದೆಯನ್ನು ಸೂಚಿಸುವ ಕರ್ಣಿ ಪದ ಬಳಕೆಯಾಗಿದೆ. ಇಲ್ಲಿ ಕರ್ಣಿಯೆಂಬುದು ಕರಣಿ, ಕರಣಿಕ ಎಂಬ ಅರ್ಥವನ್ನೊಳಗೊಂಡಿದೆ (ಕುಲಕರ್ಣಿ ಪದವನ್ನು ಗಮನಿಸಿರಿ). ಹೀಗೆ ವಾಣಿಜ್ಯ ಮೂಲದವರೂ, ವಾಣಿಜ್ಯಾಧಿಕಾರಿಗಳೂ, ಆ ಕಾರಣದಿಂದಾಗಿ ದೇಶ ವಿದೇಶಗಳ ಗಾಢ ಸಂಪರ್ಕವುಳ್ಳವರೂ ಆಗಿದ್ದ ಇವರು, ಆಳರಸರಾದ ಮೌರ್ಯರನ್ನೂ ಮೀರಿ, ದಕ್ಷಿಣದಲ್ಲಿ ಸ್ವತಂತ್ರರಾದರೆಂದು ತೋರುತ್ತದೆ.

ವ್ಯಾಪಾರಿಮೂಲದವರಾಗಿರುವ ಈ ಶಾತವಾಹನ ಅರಸರ ನಾಣ್ಯದಲ್ಲಿ ಸಾಮಾನ್ಯವಾಗಿ ಪರ್ವತದ ಮೂರು ಶಿಖರಗಳ ಚಿತ್ರ ಕಂಡುಬರುತ್ತದೆ. ಇವರಿಗಿಂತ ಮೊದಲು ದಕ್ಷಿಣಭಾರತವನ್ನಾಳಿದ ರಥಿಕರ, ಚುಟುಗಳ ನಾಣ್ಯಗಳಲ್ಲಿಯೂ ಪರ್ವತ ಶಿಖರಗಳ ಚಿತ್ರವಿದ್ದು, ಈ ಶಿಖರಗಳ ತುದಿ ೩, ೫, ೬, ೭, ೮ ಹೀಗೆ ಅನಿರ್ದಿಷ್ಟ ಸಂಖ್ಯೆಯಲ್ಲಿದೆ. ದಕ್ಷಿಣದಲ್ಲಿ ಇವರ ತರುವಾಯ ಆಳಿದವರೇ ಶಾತವಾಹನರು. ಆರಂಭದ ಅರಸರು ಹೊರಡಿಸಿದ ನಾಣ್ಯದ ಮೇಲೆ ಮೂರು ಶಿಖರಗಳು ನಿರ್ದಿಷ್ಟವಾಗಿ ಕಾಣುತ್ತವೆ. ಶಿಖರಗಳ ನೆತ್ತಿಯ ಮೇಲೆ ಒಂದು ಕೋರೆಚಂದ್ರವಿರುತ್ತದೆ. ನಾಣ್ಯದಲ್ಲಿಯ ಈ ಚಿತ್ರವನ್ನು ಇತಿಹಾಸಕಾರರು The three arch hill ಎಂದು ಕರೆದಿದ್ದಾರೆ. ಬಹುಶ: ಈ ಪರ್ವತ ಲಾಂಛನವೇ ಅಯ್ಯವೊಳೆ ಐನೂರ್ವರಿಗೆ ಬಳುವಳಿಯಾಗಿ ಬಂದು, ಗುಡ್ಡಧ್ವಜ ಹೆಸರಿನಿಂದ ಪ್ರಸಿದ್ಧಿ ಪಡೆದಿರಬೇಕು. ಅಂದರೆ ರಾಜರಾಗಿದ್ದರೂ ಮೂಲತ: ವರ್ತಕರಾಗಿದ್ದ ಶಾತವಾಹನರ ಲಾಂಛನವನ್ನೇ ಅಯ್ಯವೊಳೆ ಐನೂರ್ವರು ಹೆಸರಿನ ವರ್ತಕ ಸಂಘ ಬಳಸುತ್ತ ಬಂದಂತಿದೆ. ಶಿವದತ್ತ, ಶಿವಕದಿಲ, ಕುಮಾರ, ಸ್ಕಂದ ಇತ್ಯಾದಿ ಶಾತವಾಹನರ ಹೆಸರುಗಳೂ, ಈ ವಂಶದ ಹಾಲನ ಗಾಥಾ ಸಪ್ತಶತಿಯು ಪಶುಪತಿ-ಗೌರಿಯರ ಪ್ರಾರ್ಥನೆಯೊಂದಿಗೆ ಆರಂಭವಾಗುವುದೂ, ಇವರು ಶೈವರೆಂಬ ಸೂಚನೆ ನೀಡುತ್ತವೆ. ಈ ಕಾರಣದಿಂದಾಗಿ ಶಾತವಾಹನರು ಶಿವನ ಕೈಲಾಸನಿಶಾನೆ ಬಳಸಿದ್ದು, ಮೂಲತ: ಶೈವರಾಗಿದ್ದ ಅಯ್ಯಾವೊಳೆ ಐನೂರ್ವರೂ ಇದನ್ನು ಮುಂದುವರಿಸಿಕೊಂಡು ಬಂದಂತಿದೆ. ಶಾತವಾಹನರ ಕಾಲದಲ್ಲಿ ಕುಲಕಾರಕ (ಕುಂಬಾರ) ಶ್ರೇಣಿ, ಧನ್ನಿಕ (ಧಾನ್ಯವರ್ತಕ) ಶ್ರೇಣಿ, ಕಾಸಕಾರ (ಕಂಚಗಾರ)ಶ್ರೇಣಿ, ವಸಾಕರ (ಮೇದರು) ಶ್ರೇಣಿಗಳು ಅಸ್ತಿತ್ವದಲ್ಲಿದ್ದವೆಂದು ಅವರ ಶಾಸನಗಳು ತಿಳಿಸುತ್ತವೆ. ಹೀಗೆ ಬೆಳೆದ ವರ್ತಕಶ್ರೇಣಿಗಳೇ ಐಹೊಳೆಯ ಐನೂರ್ವರು ಹೆಸರಿನ ವರ್ತಕಶ್ರೇಣಿ ಅಸ್ತಿತ್ವಕ್ಕೆ ಬರಲು ಪ್ರಚೋದನೆ ನೀಡಿರಬಹುದು.

ಶಾತವಾಹನರ ಅಂತ್ಯ ೪ನೆಯ ಶತಮಾನವಾಗಿದ್ದುದೂ, ಅಯ್ಯಾವೊಳೆ ಐನೂರ್ವರ ಸಂಘದ ಉಲ್ಲೇಖ ೫ನೆಯ ಶತಮಾನದಷ್ಟು ಪೂರ್ವದಲ್ಲಿ ಉಲ್ಲೇಖಗೊಂಡದೂ ಕಾಲ ದೃಷ್ಟಿಯಿಂದ ಗಮನಿಸಬೇಕಾದ ಅಂಶವಾಗಿದೆ. ಇದಲ್ಲದೆ ಪ್ರದೇಶ ದೃಷ್ಟಿಯಿಂದಲೂ ಗಮನಿಸಬೇಕಾದ ಶೋಧವೊಂದು ಇತ್ತೀಚೆ (೧೯೯೨)ಬೆಳಕಿಗೆ ಬಂದಿದೆ, ಅದು: ಪುರಾತತ್ವಜ್ಞರು ಶಾತವಾಹನರ ನೆಲೆಯನ್ನು ಐಹೊಳೆಯಲ್ಲಿ ಕಂಡುಹಿಡಿದುದಾಗಿದೆ. ಶಾತವಾಹನರ ನೆಲೆಗಳು ಅನೇಕ ಕಡೆಗಳಲ್ಲಿ ಸಿಗುತ್ತಿದ್ದರೂ, ಅವರ ಧ್ವಜ ಅವಶೇಷವು ಐಹೊಳೆಯಿಂದಲೇ ಮುಂದುವರಿದಿರುವುದರಿಂದ, ಈ ಮನೆತನಕ್ಕೂ ಐಹೊಳೆಗೂ ಸಂಬಂಧವಿರಬಹುದು, ಇಲ್ಲವೆ ಈ ರಾಜಮನೆತನದ ಮುಂದುವರಿದ ಅವಶೇಷ ಐಹೊಳೆಯಾಗಿರಬಹುದು. ನನಗೇನೋ ಎರಡನೆಯ ಅಭಿಪ್ರಾಯವೇ ಸರಿ ಎನಿಸುತ್ತದೆ. ಬಹುಶ: ಶಿಲ್ಪಗಳಲ್ಲಿ ಹುಡುಕಿದರೆ ಈ ಧ್ವಜಚಿತ್ರ ಐಹೊಳೆಯಲ್ಲಿ ಸಿಗಬಹುದಾಗಿದೆ.

ಅಯ್ಯಾವೊಳೆ ಐನೂರ್ವರು ಭಗವತೀ ಲಬ್ಧವರ ಪ್ರಸಾದರು. ಈ ಭಗವತೀ ದೇವಾಲಯ ಐಹೊಳೆಯಲ್ಲಿಯೇ ಇರುವುದು ಸಹಜ. ಬಹುಶಃ ಐಹೊಳೆಯ ಇಂದಿನ ದುರ್ಗಾದೇವಾಲಯವೇ (ದುರ್ಗೆ=ಭಗವತಿ) ಇವರ ಭಗವತೀದೇವಾಲಯವಾಗಿರಬಹುದು. ಇದರ ರಚನಾವಿನ್ಯಾಸ ದೇವಾಲಯಕ್ಕಿಂತ ಸಭಾಗೃಹದಂತೆಯಿರುವುದರಿಂದ ವ್ಯಾಪಾರಿಗಳ ಸಭೆಗೂ ಅನುಕೂಲವಾಗುವಂತೆ ಇದನ್ನು ಕಟ್ಟಿಸಿರುವುದರೆಂದು ಊಹಿಸಬೇಕಾಗುತ್ತದೆ. ಇಂದು ಇದಕ್ಕೆ ಗೌಡರ ಗುಡಿ ಎನ್ನುತ್ತಾರೆ. ಇದರ ಸರಿಯಾದ ರೂಪ ಗುಡ್ಡ(ಧ್ವಜ)ರ ಗುಡಿಯಾಗಿರಬಹುದೇ?[೧]

ಈ ಶಾತವಾಹನರ ನೆಲೆಯಿಂದಾಗಿ ಐಹೊಳೆ ಮತ್ತು ಅದರ ಸುತ್ತಲಿನ ಪ್ರದೇಶ ತುಂಬ ಪ್ರಸಿದ್ಧಿ ಪಡೆದಿದ್ದ ಕಾರಣವಾಗಿಯೇ, ಬಾದಾಮಿ ಚಾಲುಕ್ಯರು ಈ ಪ್ರದೇಶವನ್ನು ತಮ್ಮ ರಾಜಧಾನಿಕೇಂದ್ರ ಮಾಡಿಕೊಂಡಿರಬಹುದು.

*****

ಶಾಸನಗಳಲ್ಲಿ ವಣಿಜರ ವಿಷಯವಾಗಿ ಸಿಗುವ ಇನ್ನೊಂದು ಪದ ಸೆಟ್ಟಿವಟ್ಟ. ಬಹುಶ: ಬಳಂಜುವಟ್ಟವೆನ್ನುವುದು ಇದರ ಪರ್ಯಾಯಪದವೆಂದು ತೋರುತ್ತದೆ. ವಡ್ಡಾರಾಧನೆಯ ಸುಕೌಶಳಸ್ವಾಮಿ ಕಥೆಯಲ್ಲಿ ಜಯಾವತಿ ಹಡೆದ ಸುದ್ದಿ ತಿಳಿದು, ನೆಲಮನೆಗೆ ಬಂದ ರಾಜಶ್ರೇಷ್ಠಿ "ಸೋಂಕಿಲೊಳಿರ್ದ ಕೂಸಿಂಗೆ ಸೆಟ್ಟಿವಟ್ಟಂಗಟ್ಟಿ"ದನೆಂಬ ಉಲ್ಲೇಖವಿದೆ. ಶಾಸನಗಳಲ್ಲಿ ಹೊಯ್ಸಳಸೆಟ್ಟಿ, ನೊಳಂಬಸೆಟ್ಟಿ ಇತ್ಯಾದಿಯಾಗಿ ರಾಜ ಮನೆತನದ ಹೆಸರಿನೊಂದಿಗೆ ಸೆಟ್ಟಿ ಸೇರಿಕೊಂಡ ನುಡಿಗಟ್ಟುಗಳು ಸಿಗುತ್ತವೆ. ಒಂದು ರಾಜ್ಯಕ್ಕೆ ಒಬ್ಬ ಇಂಥ ಶೆಟ್ಟಿ ಇರುತ್ತಿದ್ದನೋ, ರಾಜ್ಯದ ಒಂದು ವಿಭಾಗಕ್ಕೆ ಒಬ್ಬನಂತೆ ಅನೇಕರು ಇರುತ್ತಿದ್ದರೋ, ಯಾವುದೋ ಒಂದು ಮುಖ್ಯ ನಗರಕ್ಕೆ ಒಬ್ಬ ಇರುತ್ತಿದ್ದನೋ ಸ್ಪಷ್ಟವಾಗುವುದಿಲ್ಲ. ಈ ಸಂದರ್ಭದ ಆಚರಣೆಗಳೂ ತಿಳಿದು ಬರುವುದಿಲ್ಲ. ಚಿತ್ತೂರ ಜಿಲ್ಲೆಯ ಪುಂಗನೂರ ತಾಲೂಕಿನ ನೆಲಪಲ್ಲಿಯ ಶಾಸನವೊಂದು (ಆಂಧ್ರಪ್ರದೇಶದ ಕನ್ನಡ ಶಾಸನಗಳು–II-228) ಆ ಕಾಲದಲ್ಲಿ ವ್ಯಕ್ತಿಗಳಿಗೆ ಸಲ್ಲಿಸುತ್ತಿದ್ದ ಸಾಮಾಜಿಕ ಗೌರವ–ಪದವಿಯನ್ನು ಹೀಗೆ ಸೂಚಿಸುತ್ತದೆ. "ಇೞವನೊಟಿಂಬ ಘಟೆಯಂಕಕಾಱ ಪಲ್ಲವಾದಿತ್ಯಂ ಪ್ರಿಥ್ವೀರಾಜ್ಯಂಗೆಯ್ಯುತ್ತಂ ಪಱುವಿನಾಡ ವೆನ್ದುಱುಪೊಂನೆಯುಳಿಟ್ಟಿ, ಕೊಯತುರ ಬಳಿಗಾಱ(ರ)ಂ ರಾಮೇಶ್ವಱ ಹರಪಲ್ಲಯ್ಯಂ ಗವಱೆಸೆಟ್ಟಿಯಾ ಮಗಂ ಕರವಯ್ಯ ಮುಮ್ಮಡಿಗವಱೆ ಪಲ್ಲವಾದಿತ್ಯ ನೊಟಿಮ್ಬಸೆಟ್ಟಿಯೆನ್ದು ಪೆಸರಂ ದಯುಗೆಯ್ದು ಪಟ್ಟಂಗಟ್ಟಿ ಏಱಕುದುರೆ ಕೊಡೆ ಆಳಪಣ್ಬುವಕೆ ಕುಞ್ಚನ್ತಳಿಗೆ ಕೀಲ್ಪಟ್ಟ ಅಡ್ಡಣಿಗೆ ಗದ್ದಿಗೆ ರಾಜಚಿನ್ನವ ಕೊಟ್ಟು ಅಂಕವ(ಂ)ನ್ನೋಡಲ್ಪಡೆದು ಪುಲಿನಾಡ ಕೊಳತೂರಂ ಪಲ್ಲವಾದಿತ್ಯಪೂರವಾಗೆ ನಕರಂ ಮಾಡಿ, ವೈಶ್ಯದತ್ತಿಯಾಗೆ ಮಾಡಿ ನೊಣಿಂಬಸೆಟ್ಟಿಗೆ

---

೧. ಅ. ಗೌಡರ ಗುಡಿಯು ಭಗವತಿ ದೇವಾಲಯವೆಂದು ಒಪ್ಪುವ ರಾಜಶೇಖರ ಅವರು ಲಾಡಖಾನ ದೇವಾಲಯವು ಸಭಾಗೃಹವೆನ್ನುತ್ತಾರೆ.(ಇತಿಹಾಸ ದರ್ಶನ–೧೯. ಕರ್ನಾಟಕ ಇತಿಹಾಸ ಅಕಾಡೆಮಿ ಅಧ್ಯಕ್ಷೀಯ ಭಾಷಣ.

ಆ. ಇಂದು ಚಿತ್ರದುರ್ಗ ಪ್ರದೇಶದ ಮಾದಿಗ ಜನಾಂಗದಲ್ಲಿ ಐಹೊಳೆಶೆಟ್ಟಿ ಎಂಬ ಬೆಡಗು (ಗೋತ್ರ) ಕಂಡುಬರುತ್ತದೆ. ರೋಣ ತಾಲೂಕಿನ ಅಬ್ಬಿಗೇರಿಯಲ್ಲಿ ಐಹೊಳೆಕೇರಿ ಹೆಸರಿನ ಮಾದಿಗರ ಬಡಾವಣೆಯಿದೆ. ಲಿಂಗಾಯತ ಬಣಜಿಗರಿಗೆ ಮದುವೆ ಹಾಡುಗಳಲ್ಲಿ ವರನ ತಂದೆಯ ಹೆಸರಿಗೆ ಬದಲು ಅಯ್ಯಪ್ಪಸೆಟ್ಟಿ ಪದವನ್ನು ಬಳಸುತ್ತಾರೆ.

ಕೊಡಂಗೆಯಾಗೆ ಕೊಟ್ಟಂ. ಚಂದ್ರಾದಿತ್ಯರುಳ್ಳನ್ನೆಗಂ ಆತನ ಮಕ್ಕಳ ಮಕ್ಕಳುವರಂ ಸಲ್ವುದುಮಾಭ್ಯಾನ್ತರಶಿದ್ಧಿಯಾಗೆ" (ಮುಂದೆ ಸೀಮಾರೇಖೆಯ ವಿವರವಿದೆ).

ಇಲ್ಲಿ ಮುಖ್ಯವ್ಯಕ್ತಿ ಕರವಯ್ಯ. ಈತ ಬಳೆಗಾರ ಸೆಟ್ಟಿ. ಇವನಿಗೆ "ಮುಮ್ಮಡಿ ಗವಱೆ ಪಲ್ಲವಾದಿತ್ಯ ನೊಳಂಬಸೆಟ್ಟಿ" ಎಂಬ ಹೆಸರನ್ನು ಕೊಡಲಾಯಿತೆಂದು ಶಾಸನ ಹೇಳುತ್ತದೆ. ಗವಱೆ ಎಂಬುದು ವ್ಯಾಪಾರಸ್ಥರ ಒಂದು ಪ್ರಕಾರ. (ಗವರೆಗಳುಂ ಗಾತ್ರಿಗರುಂ ಎಂಬ ಪ್ರಯೋಗವನ್ನು ಇಲ್ಲಿ ನೆನೆಯಬಹುದು). ಬಹುಶ: ಇವರು ಎತ್ತಿನ ಮೇಲೆ ವಸ್ತು ಸಾಗಾಣಿಕೆ ಮಾಡುವ ವ್ಯಾಪಾರಿ (ಇಂದಿನ ಕೋರಿ ಅಡ್ಡಹೆಸರಿನ ವೀರಶೈವ ಕುಟುಂಬಗಳು)ಗಳೆಂದು ನಾನು ಬೇರೆಡೆ ಚರ್ಚಿಸಿದ್ದೇನೆ. ಮುಮ್ಮಡಿ ಗವರೆಯೆಂದರೆ ಮೂರುಪಟ್ಟು ಎಂಬರ್ಥವೋ, ಮೂರನೆಯ ಎಂದು ಅರ್ಥವೋ ಗೊತ್ತಾಗುವುದಿಲ್ಲ. ನಿಜಪಾಠ ಮುಮ್ಮುಡಿ ಎಂದಿದ್ದರೆ ಮೂರು ಕಿರೀಟವೆಂಬ ಅರ್ಥ ಹೊರಡುತ್ತದೆ. (ತಮಿಳು ಶಾಸನಗಳಲ್ಲಿ ಇಂಥ ಪ್ರಯೋಗಗಳಿವೆ). ನಿಜಪಾಠ ಮುಮ್ಮುರಿ ಇದ್ದರೆ, ವ್ಯಾಪಾರಿಗಳಿಗಿರುವ ಮುಮ್ಮುರಿದಂಡ ಶಬ್ದದ ಆವರಣದಲ್ಲಿ ಇದಕ್ಕೆ ಅರ್ಥ ಹೇಳಬೇಕಾಗುತ್ತದೆ. ಇನ್ನೂ ಒಂದು ಅರ್ಥ: ಮುಮ್ಮಡಿ ಎಂಬುದು ಒಂದು ಪಟ್ಟಣದ ಹೆಸರಾಗಿರುವ (ಮುಮ್ಮಡಿಪಟ್ಟಣ) ಸಾಧ್ಯತೆಯೂ ಇದೆ. ಇವನಿಗೆ ಬಳಸಿರುವ ಪಲ್ಲವಾದಿತ್ಯ ವೆಂಬುದು ಈ ಶಾಸನದ ಅರಸನ ಬಿರುದೂ ಆಗಿದೆ. ಬಿರುದನ್ನು ತಮ್ಮ ನೆಚ್ಚಿನ ವ್ಯಕ್ತಿಗಳಿಗೆ ರಾಜರು ಕೊಡುವ ಸಂಪ್ರದಾಯ ನಮ್ಮಲ್ಲಿದ್ದಿತು. (ಅರಿಕೇಸರಿ ಗುಣಾರ್ಣವ, ಪಂಪ ಕವಿತಾಗುಣಾರ್ಣವ). ನೊಳಂಬಸೆಟ್ಟಿಯೆನ್ದು ಪೆಸರಂ ದಯೆಗೆಯ್ದು ಎಂದು ನೇರವಾಗಿಯೇ ಇಲ್ಲಿ ಹೇಳಲಾಗಿದೆ. ಪಟ್ಟಂಗಟ್ಟಿ ಎನ್ನುವುದಂತೂ ಈ ವ್ಯಾಪಾರಿಗೆ ಸೆಟ್ಟಿಪಟ್ಟ ಕಟ್ಟಿದುದನ್ನು ವ್ಯಕ್ತವಾಗಿಯೇ ಸೂಚಿಸುತ್ತದೆ. ಹೀಗಿದ್ದೂ ಇಲ್ಲಿಯ ಮುಮ್ಮಡಿ ಗವಱೆ ಪಲ್ಲವಾದಿತ್ಯ ನೊಳಂಬಸೆಟ್ಟಿ ಎಂಬುದರ ಅರ್ಥ ಇನ್ನೂ ಅಸ್ಪಷ್ಟವಾಗಿ ಉಳಿಯುತ್ತದೆಯೆಂದೇ ಹೇಳಬೇಕು. ಈತನ ಅಧಿಕಾರದ ಪ್ರಾದೇಶಿಕ ವ್ಯಾಪ್ತಿ ಇತ್ಯಾದಿ ವಿವರಗಳು ತಿಳಿದು ಬರುವುದಿಲ್ಲ. ಈ ಬಗ್ಗೆ ಸಂಶೋಧನೆ ನಡೆಯಬೇಕಾಗಿದೆ.

ಹೀಗಿದ್ದೂ ಇಲ್ಲಿ ನೀಡಲಾದ ಗೌರವಸೂಚಿ ವಸ್ತುಗಳು ನಮ್ಮ ಗಮನ ಸೆಳೆಯುತ್ತವೆ. ಪ್ರಾಚೀನಕಾಲದಲ್ಲಿ ಕೆಲವರಿಗೆ ಇಂಥ ಬೇರೆ ಗೌರವ ಸಂದ ಉಲ್ಲೇಖಗಳು ಶಾಸನಗಳಲ್ಲಿವೆ. ವೀಸೋತ್ತರಪಂಡಿತ, ಕೇಶಿಗಾವುಂಡ, ನಾಗರಸ, ಆಯ್ತವರ್ಮರಿಗೆ ರಾಜರಿಂದ ಸಂದ ಗೌರವವಸ್ತು ಪದವಿಗಳನ್ನು ಶಾಸನಗಳು ಉಲ್ಲೇಖಿಸುತ್ತವೆ. ರನ್ನನಿಗೆ ತೈಲಪನು ಮದನಾವತಾರ ಹೆಸರಿನ ಕೊಡೆ, ಕನಕದಂಡ ಚಾಮರ, ಆನೆ, ಬತ್ತಗಾವೆ (ಉಂಬಳಿಗ್ರಾಮ)ನೀಡಿದ ವಿಷಯ ಅಜಿತಪುರಾಣದಲ್ಲಿ ಬರುತ್ತದೆ. ಇದೇ ರೀತಿ ಮೇಲೆ ಹೇಳಿದ ನೆಲಪಲ್ಲಿ ಶಾಸನದಲ್ಲಿ ಕುದುರೆ, ಕೊಡೆ, ಕುಂಚ (ಚಾಮರ?) ತಳಿಗೆ (ಊಟದ ತಟ್ಟೆ?), ಅಡ್ಡಣಿಗೆ, ಗದ್ದಿಗೆಗಳನ್ನು ಕೊಡಲಾಗಿದೆ. ಇದಲ್ಲದೆ ಇನ್ನೂ ಕೊಡಲಾದ ಆಳಪಟ್ಟವಕೆ, ಕೀಳ್ವಟ್ಟಗಳ ಅರ್ಥ ಸ್ಪಷ್ಟವಾಗುವುದಿಲ್ಲ. "ಅಂಕವನ್ನೊಡಲ್ಪಡೆದು" ಎಂಬುದಕ್ಕೆ ಅರ್ಥ ಹಚ್ಚಲು ಸಾಧ್ಯವಾಗುತ್ತಿಲ್ಲ.

ಬೇರೆ ಶಾಸನಗಳಲ್ಲಿ ಇಂಥ ಉಲ್ಲೇಖಗಳನ್ನೂ, ವಿವರಗಳನ್ನೂ ಶೋಧಿಸಬೇಕಾಗಿದೆ. ಹೊಯ್ಸಳರ ಶಾಸನಗಳಲ್ಲಿ "ಹೊಯ್ಸಳಸೆಟ್ಟಿ" ಎಂಬ ಹೆಸರು ಪದೇ ಪದೇ ಬರುತ್ತದೆ. ಆದರೆ ಇಲ್ಲಿಯಂತೆ ಪಟ್ಟಗಟ್ಟಿದ, ಗೌರವ ಉಪಕರಣ ನೀಡಿದ ಉಲ್ಲೇಖ ಬರುವುದಿಲ್ಲವೆನಿಸುತ್ತದೆ.

■■

ಆಕರ : ಮಾರ್ಗ ಸಂಪುಟ-೪

೮೩

ಲಾಳಸಂಧಿವಿಗ್ರಹಿ

ಶಾಸನಗಳಲ್ಲಿ ವಿಶಿಷ್ಟ ಪರಿಭಾಷೆಯ ಪದಗಳು ಬಳಕೆಯಾಗಿವೆ. ಸಾಮಾಜಿಕ, ರಾಜಕೀಯ, ಆರ್ಥಿಕ ಇತ್ಯಾದಿ ಕ್ಷೇತ್ರಗಳಿಗೆ ಸಂಬಂಧಿಸಿದ ಈ ಪದಗಳಲ್ಲಿ ಕೆಲವನ್ನು ಮಾತ್ರ ಈ ವರೆಗೆ ಅಭ್ಯಸಿಸಲಾಗಿದೆ. ಇನ್ನು ಕೆಲವು ಅರ್ಥವಾಗದೆ ಉಳಿದಿವೆ. ಕೆಲವು ತಪ್ಪು ಅರ್ಥವಿವರಣೆಗೆ ಗುರಿಯಾಗಿವೆ. ಕಾಲಕಾಲಕ್ಕೆ ಮುಂದುವರಿಯುವ ಚರ್ಚೆಯಿಂದ ಮಾತ್ರ ಈ ತೊಡಕು ಪರಿಹಾರವಾಗುವುದು ಸಹಜ. ಲಾಳಸಂಧಿವಿಗ್ರಹಿ ಮತ್ತು ಅದಕ್ಕೆ ಸಂಬಂಧಿಸಿದ ಬೇರೆ ಕೆಲವು ಶಬ್ದಗಳ ಚರ್ಚೆಗೆ ಇಲ್ಲಿ ಅವಕಾಶ ಮಾಡಿಕೊಡಲಾಗಿದೆ.

ಲಾಳಸಂಧಿವಿಗ್ರಹಿ-ಹೇರಿಲಾಳ ಸಂಧಿವಿಗ್ರಹಿ:

ಶಾಸನಾಭ್ಯಾಸಿಗಳ ತಪ್ಪು ಅರ್ಥ ವಿವರಣೆಗೆ ಗುರಿಯಾಗಿರುವ ಶಬ್ದಗಳಲ್ಲಿ ಲಾಳಸಂಧಿವಿಗ್ರಹಿಯೂ ಒಂದು. ಇಂಥ ಶಬ್ದಗಳ ಕಾರ್ಯಕ್ಷೇತ್ರದ ತಿಳಿವಳಿಕೆಯಲ್ಲಿ ಮತ್ತು ಅದರ ಭಾಷಿಕ ರಚನೆಯ ತಿಳಿವಳಿಕೆಯಲ್ಲಿ ಕೊರತೆಯುಂಟಾದರೆ ಇಂಥ ತಪ್ಪು ತಲೆಯೆತ್ತುವುದು ಸಹಜ.

ಸಂಧಿವಿಗ್ರಹಿ ಎಂಬ ಪದ ಒಪ್ಪಂದ(ಸಂಧಿ) ಮತ್ತು ಯುದ್ಧ(ವಿಗ್ರಹ)ಗಳ ವಿಷಯವನ್ನು ನೋಡಿಕೊಳ್ಳುವ ಅಧಿಕಾರಿಯನ್ನು ಸೂಚಿಸುತ್ತದೆ. ಪ್ರಾಚೀನ ಶಬ್ದಕೋಶ ಮತ್ತು ವಿಶ್ವಕೋಶಗಳಲ್ಲಿ ಈ ಅರ್ಥವಿವರಣೆಯೊಂದಿಗೆ ಈ ಪದ ಅನೇಕ ಸಲ ಕಾಣಿಸಿಕೊಂಡಿರುವುದರಿಂದ ಇಲ್ಲಿ ಅರ್ಥ ಸಮಸ್ಯೆಯೇ ಇಲ್ಲವೆಂದು ಹೇಳಬಹುದು. ಆದರೆ ಆರಂಭದ ಲಾಳ ಪದದ ಅರ್ಥ ತೊಡಕಿನದಾಗಿದೆ. ಯಾವುದೇ ಕನ್ನಡಪದಕ್ಕೆ ಅರ್ಥಹೇಳುವಾಗ ಸಂಸ್ಕೃತದಲ್ಲಿ ಅದರ ಮೂಲರೂಪ ಹುಡುಕುವುದು ಕನ್ನಡ ವಿದ್ವಾಂಸರಿಗೆ ರೂಢಿಯಾಗಿ ಬಿಟ್ಟಿದೆ. ಈ ಮೇರೆಗೆ ಲಾಳವೆಂಬುದು ಲಾಟ ಎಂಬುದರ ತದ್ಭವವೆಂದು ಗ್ರಹಿಸಿದ್ದಾರೆ. ಲಾಟದೇಶದೊಂದಗಿನ ಯುದ್ಧ-ಒಪ್ಪಂದ ನೋಡಿಕೊಳ್ಳುವ ಅಧಿಕಾರಿಯೆಂದು ಅರ್ಥಹೇಳುತ್ತ ಬಂದಿದ್ದಾರೆ. ಇದೇ ರೀತಿ ಲಾಳಖಂಡೆಯಾಧಿಷ್ಠಾಯಕ-ಲಾಟದೇಶದ ಮೇಲೆ ಏರಿಹೋಗುವ ಸೈನ್ಯದ ಮುಖ್ಯಸ್ಥ ಎಂಬಂಥ ಅರ್ಥವನ್ನೂ ಬರೆದಿದ್ದಾರೆ.

ಶಾಸನಗಳಲ್ಲಿ ಯುದ್ಧ-ಒಪ್ಪಂದಗಳ ಅಧಿಕಾರಕ್ಕೆ ಸಂಬಂಧಪಟ್ಟಂತೆ ಈ ಲಾಳಸಂಧಿವಿಗ್ರಹ ಎಂಬ ಪದ ಪದೇ ಪದೇ ಬರುತ್ತದೆ. ಹೀಗಾಗಿ ಕನ್ನಡಿಗರು ಕೇವಲ ಲಾಟ(ಗುಜರಾಥ) ದೇಶದವರೊಂದಿಗೆ ಯುದ್ಧ-ಒಪ್ಪಂದ ನಡೆಸುತ್ತಿದ್ದರೆ? ಬೇರೆ ಪ್ರಾಂತಗಳೊಂದಿಗೆ ಇಂಥ ಕ್ರಿಯೆಗಳು ಜರುಗುತ್ತಿರಲಿಲ್ಲವೇ? ಎಂದು ಕೇಳಬೇಕಾಗುತ್ತದೆ. ಇದು ಅಸಂಭವವಾಗಿರುವುದರಿಂದ ಲಾಳ

ಶಬ್ದಕ್ಕೆ ಬೇರೆ ಅರ್ಥ ಹೇಳಬೇಕಾಗುತ್ತದೆ. ಶಬ್ದಗಳಲ್ಲಿ ಜರುಗುವ ರೂಪಪರಿವರ್ತನೆ ದೃಷ್ಟಿಯಿಂದ ಸೂಕ್ಷ್ಮವಾಗಿ ನೋಡಿದರೆ, ಲಾಟ>ಲಾಳ ದಂತೆ ನಾಡ>ಲಾಳ ವ್ಯತ್ಯಾಸದ ಸಾಧ್ಯತೆಯೂ ಇದೆ.[೧] ಈ ಸಾಧ್ಯತೆ ಗಮನಕ್ಕೆ ಬರುತ್ತಲೇ ಇದಕ್ಕೆ ಮೂಲವಾದುದು ನಾಡ ಸಂಧಿವಿಗ್ರಹ–ಎಂದು ಮನವರಿಕೆಯಾಗುತ್ತದೆ. ಇದಕ್ಕೆ ಪೋಷಕವಾಗಿ ನಾಡಸಂಧಿವಿಗ್ರಹ ಎಂಬ ಪದ ನೇರವಾಗಿ ಮುದನೂರ ಶಾಸನ (೧೩ನೆಯ ಶತಮಾನ)ದಲ್ಲಿ ಬರುತ್ತದೆ, ಸಮೀಪದ ಏವೂರ ಶಾಸನದಲ್ಲಿ ಲಾಳಸಂಧಿ ವಿಗ್ರಹಿ ಎಂಬುದೂ (೧೦೭೭)ಕಂಡುಬರುತ್ತದೆ. ಈ ನಾಡ ಸಂಧಿವಿಗ್ರಹಿಯ ವ್ಯವಹಾರ ೩ ಬಗೆಯಾಗಿರಬಹುದು.

(೧) ಒಳನಾಡಿನ ಸಾಮಂತರಲ್ಲಿ ಪರಸ್ಪರ ಘಟಿಸುವ ಮನಸ್ತಾಪ ಸಂದರ್ಭದಲ್ಲಿ ಯುದ್ಧ–ಒಪ್ಪಂದ (ಸಂಧಿ–ವಿಗ್ರಹ) ನಿರ್ಧರಿಸುವುದು.

(೨) ಒಳನಾಡಿನ ಸಾಮಂತರು ಮತ್ತು ಚಕ್ರವರ್ತಿ–ಇವರಲ್ಲಿ ಪರಸ್ಪರ ಘಟಿಸಿದ ಮನಸ್ತಾಪ ಸಂದರ್ಭದಲ್ಲಿ ಸಂಧಿ–ವಿಗ್ರಹ ನಿರ್ಧರಿಸುವುದು.

(೩) ತನ್ನ ನಾಡು ಮತ್ತು ಅನ್ಯರ ನಾಡುಗಳಲ್ಲಿ ಉಂಟಾಗುವ ಮನಸ್ತಾಪದ ವಿಷಯದಲ್ಲಿ ಸಂಧಿ–ವಿಗ್ರಹ ನಿರ್ಧರಿಸುವುದು.

ಇವುಗಳಲ್ಲಿ ಒಂದನ್ನೋ ಎಲ್ಲವನ್ನೋ ನೋಡಿಕೊಳ್ಳುವ ಅಧಿಕಾರಿಯೇ ಲಾಳಸಂಧಿವಿಗ್ರಹಿ. ಶಾಸನಗಳಲ್ಲಿ ಕಂಡುಬರುವ ಇನ್ನೊಂದು ಪದ "ಕನ್ನಡ ಸಂಧಿವಿಗ್ರಹಿ". ಇದು ಲಾಳಸಂಧಿವಿಗ್ರಹಿಗೆ ಸಮಾನವಾದ ಪದವಾಗಿರಬಹುದು. ಏಕೆಂದರೆ ಸಂಧಿವಿಗ್ರಹಿಯೆಂದರೆ ಕನ್ನಡ ನಾಡ ಸಂಧಿವಿಗ್ರಹಿಯಾಗಿರುವ ಸಾಧ್ಯತೆಯಿದೆ. "ಕರ್ನಾಟಕ ಸಂಧಿವಿಗ್ರಹಾಧಿಪತಿ" ಎಂಬ ಪದವೂ ಶಾಸನಗಳಲ್ಲಿ ಕ್ವಚಿತ್ತಾಗಿ ಕಾಣಿಸಿಕೊಳ್ಳುತ್ತದೆ.

"ಹೇರಿಲಾಳ ಸಂಧಿವಿಗ್ರಹಿ" ಎಂಬುದು ಶಾಸನಗಳಲ್ಲಿ ಕಂಡುಬರುವ ಇನ್ನೊಂದು ಪದ. ಇದಕ್ಕೆ (ಹೇರಿ=ಬೇಹುಗಾರಿಕೆ) ಬೇಹುಗಾರಿಕೆಯನ್ನೊಳಗೊಂಡ ಕನ್ನಡ ಸಂಧಿವಿಗ್ರಹಿ ಎಂಬ ಡಾ॥ ರಿತ್ತಿಯವರ ಹೇಳಿಕೆ ಸರಿಯಾದುದಲ್ಲ.[೨] ಬಹುಶ: ಈತನು ಲಾಳಸಂಧಿವಿಗ್ರಹಿಯ ಮೇಲಿನ ಅಧಿಕಾರಿಯಾಗಿರಬೇಕು. ಇಲ್ಲವೆ ಲಾಳಸಂಧಿವಿಗ್ರಹಿ ಒಳನಾಡಿನ ವಿಷಯದಲ್ಲಿ, ಹೇರಿಲಾಳ ಸಂಧಿವಿಗ್ರಹಿ ಹೊರನಾಡಿನ ವಿಷಯದಲ್ಲಿ ವ್ಯವಹರಿಸುವ ವರಾಗಿರಬಹುದು. ಇದು ಹಿರಿಯ (=ಹೇರಿ)ಸಂಧಿವಿಗ್ರಹಿ, ಹೇರಿಸಂಧಿವಿಗ್ರಹಿ, ಹೇರಿ ಕನ್ನಡ ಸಂಧಿವಿಗ್ರಹಿ ರೂಪಗಳಲ್ಲಿಯೂ ಸಿಗುತ್ತದೆ. ಕೆಲವೊಮ್ಮೆ ಹೇರಿಲಾಳ ಕನ್ನಡಸಂಧಿವಿಗ್ರಹಿ ರೂಪವೂ ಸಿಗುತ್ತದೆ.

ಒಪ್ಪಂದ–ಯುದ್ಧಗಳಿಗೆ ಸಂಬಂಧಿಸಿದ ದಾಖಲೆ–ಶಾಸನಗಳನ್ನು ಬರೆಯುವುದೂ ಅಧಿಕಾರ ವ್ಯಾಪ್ತಿಗೆ ಸೇರಿದ್ದಿತು. ಇದಕ್ಕೆ ನಿದರ್ಶನವೆಂಬಂತೆ "ಮಹಾಸಂಧಿ ವಿಗ್ರಹಿಕ ಶ್ರೀರಾಮಪುಣ್ಯವಲ್ಲಭೇನ ಲಿಖಿತಮಿದಂ ಶಾಸನಂ" ಇತ್ಯಾದಿ ಪ್ರಯೋಗಗಳು ಸಿಗುತ್ತವೆ.[೩]

---

೧. ರಾಘವಾಂಕನ ಸಿದ್ಧರಾಮ ಚಾರಿತ್ರದಲ್ಲಿ ನಾಡಪಡೆ ಎಂಬುದಕ್ಕೆ ಬದಲಾಗಿ ಲಾಳಪಡೆ ಎಂಬ ಪದಪ್ರಯೋಗವಿದೆ (೯–೧೮).

೨. ಪ್ರಾಚೀನ ಕರ್ನಾಟಕದ ಆಡಳಿತಪದಕೋಶ–ಪು. ೧೩೯.

೩. ಕೆ.ಆಯ್. II–೩. ಕೊಲ್ಲಾಪುರ

ಒಟ್ಟಾರೆ ಈ ಲೇಖನದ ಉದ್ದೇಶ ಲಾಳ ಎಂಬುದಕ್ಕೆ ಲಾಟ ಎಂದು ಅರ್ಥ ಹೇಳದೆ, ನಾಡ ಎಂದು ಅರ್ಥ ಹೇಳಬೇಕೆಂಬುದೇ ಆಗಿದೆ.

ರಾಯಚೂರು ಜಿಲ್ಲೆಯಲ್ಲಿ "ಲಾಳಗೊಂಡ" ಹೆಸರಿನ ಲಿಂಗಾಯತ ಒಳಪಂಗಡದವರಿದ್ದಾರೆ. ಇವರಲ್ಲಿ ಕೆಲವರ ಅಡ್ಡ ಹೆಸರು ನಾಡಗೌಡ ಎಂದೇ ಇದೆ. ಇದರಿಂದ ನಾಡಗೌಡ=ಲಾಳಗೊಂಡ ಇವು ಸಮಾನಾರ್ಥಕ ಪದಗಳೆಂದು ಸ್ಪಷ್ಟವಾಗುತ್ತದೆ.

■■

ಆಕರ : ಮಾರ್ಗ ಸಂಪುಟ–೪

೮೪

ಮಲ್ಲೀಗಿ ಮುಡಿಯೆಂದ

ಭಾಷೆ ಪ್ರಿಯತಮೆ ಇದ್ದಂತೆ. ವಿಶ್ವಾಸದಿಂದ ಪ್ರೀತಿಸಿದಷ್ಟೂ, ಮುದ್ದಿಸಿದಷ್ಟೂ, ಆಲಿಂಗಿಸಿದಷ್ಟೂ ಅದು ತನ್ನ ಅಂಗಾಂಗಗಳನ್ನು ಬಿಚ್ಚಿ ಬಿಚ್ಚಿ ತೋರಿಸುತ್ತದೆ. ಹೀಗೆ ಬಿಚ್ಚಿತೋರಿಸುವ ಅದರ ಅರ್ಥ ಪದರುಗಳನ್ನು ನಮ್ಮ ಪ್ರಾಚೀನರು ವಾಚ್ಯ, ಲಕ್ಷ್ಯ, ವ್ಯಂಗ್ಯವೆಂದು ಬಿಡಿಸಿ ಹೇಳಿದ್ದಾರೆ.

ಅಭಿವ್ಯಕ್ತಿ ಪ್ರಸಂಗದಲ್ಲಿ ವಾಚ್ಯ ಸೋತು ನಿಂತರೆ ಲಕ್ಷ್ಯವೋ ವ್ಯಂಗ್ಯವೋ ಬಳಕೆಯಾಗುತ್ತದೆ. ಅದರಲ್ಲಿಯೂ ಆಧ್ಯಾತ್ಮದಂತಹ ಗೂಢ, ಕಾಮದಂತಹ ಗುಪ್ತ ಅನುಭವಗಳ ಅಭಿವ್ಯಕ್ತಿಯಲ್ಲಿ ವಾಚ್ಯಕ್ಕಿಂತ ಹೆಚ್ಚು ಕಾಣಿಸಿಕೊಳ್ಳುತ್ತದೆ ಲಕ್ಷ್ಯ. ಅಂದರೆ ಆಧ್ಯಾತ್ಮದಲ್ಲಿ ಅನಿರ್ವಚನೀಯವನ್ನು, ಕಾಮದಲ್ಲಿ ಅವಾಚ್ಯವನ್ನು ಮುಚ್ಚಿ ನುಡಿಯಲು ಇದನ್ನು ಬಳಸಲಾಗುತ್ತದೆ. ಜಾನಪದದಲ್ಲಿಯೂ ಅಶ್ಲೀಲವನ್ನು ಇಂಥ ಲಕ್ಷ್ಯದ ಮೂಲಕ ಮುಚ್ಚಿ ನುಡಿದಿರುವ ಅನೇಕ ಉದಾಹರಣೆಗಳು ಸಿಗುತ್ತವೆ.

ಕೆಲವು ದಿನಗಳಿಂದ ನನ್ನನ್ನು ಕಾಡಿ, ಕೊನೆಗೆ ವಾಚ್ಯಾರ್ಥ ವಲಯದ ಆಚೆಗಿನ ತನ್ನ ಲಕ್ಷ್ಯಾರ್ಥವನ್ನು ಬಿಚ್ಚಿ ತೋರಿಸಿದ ಒಂದು ಜಾನಪದ ಅಭಿವ್ಯಕ್ತಿ "ಮಲ್ಲಿಗೆ ಮುಡಿಯುವಿಕೆ." ಇಂದು ಲಕ್ಷ್ಯಾರ್ಥ ಮರೆತುಹೋಗಿ, ಇದು ವಾಚ್ಯಾರ್ಥದಲ್ಲಿ ಬಳಕೆಯಾಗುತ್ತಲಿದೆ. ಹೀಗೆ ಮರೆತು ಹೋದ ಈ ಅರ್ಥದ ಶೋಧ ಇಲ್ಲಿಯ ಉದ್ದೇಶ.

ಹಾಸಿಗಿ ಹಾಸೆಂದ । ಮಲ್ಲಿಗಿ ಮುಡಿಯೆಂದ
ಬ್ಯಾಸತ್ತರ ಮಡದಿ ಮಲಗೆಂದ । ನನ ರಾಯ
ತನ್ನ ನೋಡಿ ತವರ ಮರೆಯೆಂದ ॥

ತವರು ಮನೆಯನ್ನು ಮರೆಯುವುದರ ಸಲುವಾಗಿ ಸ್ತ್ರೀ ಅನುಸರಿಸಬಹುದಾದ ಕ್ರಿಯೆಗಳ ವಿವರಣೆ ಈ ತ್ರಿಪದಿಯ ವಸ್ತು. ಹಾಸಿಗೆ ಹಾಸುವುದು, ಮಲ್ಲಿಗೆ ಮುಡಿಯುವುದು, ಬೇಸತ್ತರೆ ಮಲಗುವುದು, ಗಂಡನನ್ನು ನೋಡಿ ನಲಿಯುವುದು-ಹೀಗೆ ಈ ತ್ರಿಪದಿಯಲ್ಲಿ ನಾಲ್ಕು ಕ್ರಿಯೆಗಳಿವೆ. ಇಲ್ಲಿ 'ಹಾಸಿಗೆ ಹಾಸುವುದು' ಎಂದರೆ 'ಮಲಗುವುದು' ಎಂದೇ ಅರ್ಥವಿರುವಾಗ ಎರಡನೆಯ ಸಾಲಿನಲ್ಲಿ'ಬ್ಯಾಸತ್ತರ ಮಡದಿ ಮಲಗೆಂದ' ಎಂಬ ಮಾತು ಮತ್ತೆ ಏಕೆ ಬಂತು? ಹಾಸಿಗೆ ಹಾಸುವುದು, ಬೇಸತ್ತರೆ ಮಲಗುವುದು ಇವುಗಳ ಮಧ್ಯ 'ಮಲ್ಲಿಗೆ ಮುಡಿಯುವುದು' ಏಕೆ ಸೇರಿಕೊಂಡಿತು? ಒಂದು ವೇಳೆ ಇಲ್ಲಿಯ ಕ್ರಿಯೆಗಳಲ್ಲಿ

ಒಂದು ಕ್ರಮವಿದೆಯೆಂದು ಭಾವಿಸಿದರೆ, ಹಾಸಿಗೆ ಹಾಸಿ ಮಲಗುವಾಗ ಮಲ್ಲಿಗೆ ಮುಡಿಯುವುದರಿಂದ ಅಂಥ ಪ್ರಯೋಜನವಾದರೂ ಏನು? ಇತ್ಯಾದಿ ಪ್ರಶ್ನೆಗಳು ಏಳುತ್ತವೆ. ಇಂದು ನಾವು ಹೇಳುತ್ತಲಿರುವ ಇದರ ಅರ್ಥದಲ್ಲಿ ಒಂದು ಅಸಮರ್ಪಕತೆ ತೋರಿಬಂದು, ಬೇರೊಂದು ಅರ್ಥ ಹುಡುಕಲು ಮನಸ್ಸಾಗುತ್ತದೆ.

ಪ್ರಾರಂಭದಲ್ಲಿ ಸೂಚಿಸಿದಂತೆ ತನ್ನಲ್ಲಿಯ ಅಶ್ಲೀಲ, ಲೈಂಗಿಕ ಕ್ರಿಯೆಗಳನ್ನು ನೇರವಾಗಿ ಹೇಳದೆ ಬೇರೆ ರೀತಿಯಲ್ಲಿ ಮುಚ್ಚಿ ಹೇಳುವುದು ಯಾವುದೇ ಭಾಷೆಯ ಸಹಜ ಕ್ರಿಯೆ. ಇದೇ ರೀತಿ ಇಲ್ಲಿ 'ಮಲ್ಲಿಗೆ ಮುಡಿ' ಎನ್ನುವುದು ಲೈಂಗಿಕ ಕ್ರಿಯೆಯಾದ 'ಸಂಭೋಗ ಸುಖಪಡೆ' ಎಂಬ ಅರ್ಥವನ್ನು ಸೂಚಿಸುತ್ತಿರಬಹುದು. ಇದರಿಂದ "ಹಾಸಿಗೆ ಹಾಸೆಂದ, ಮಲ್ಲಿಗೆ ಮುಡಿಯೆಂದ" ಎಂಬ ಕ್ರಿಯೆಗಳಲ್ಲಿ ಒಂದು ಕ್ರಮ ಪ್ರಾಪ್ತವಾಗುವುದಲ್ಲದೆ, ಮೇಲೆ ತಲೆದೋರಿದ್ದ ಅರ್ಥದ ಅಸಮರ್ಪಕತೆಯೂ ದೂರವಾಗುತ್ತದೆ. ಇದಕ್ಕೆ ಪೋಷಕವೆನಿಸುವ ಪ್ರಶ್ನೋತ್ತರ ರೂಪದ ಬೇರೆ ತ್ರಿಪದಿಗಳು ಹೀಗಿವೆ.

ಚಿಂತಾಕು ಇಟಗೊಂಡು। ಚಿಪ್ಪಾಡಿ ಬಳಿವಾಕಿ ।
ಚಿಂತಿಲ್ಲ ಏನ ನಿನಗಿಷ್ಟು। ನಿನ ಗಂಡ
ಅಲ್ಲೊಬ್ಬಳ ಕೂಡ ನಗತಿದ್ದ॥

ನಕ್ಕರ ನಗಲೆವ್ವ। ನಗೆಮುಖ ಕ್ಯಾದಿಗಿ।
ನಾ ಮುಚ್ಚಿ ಮುಡಿವ ಮಲ್ಲಿಗಿ।ಯಾ ಹೂವ
ಅವಳೊಂದು ಗಳಿಗಿ ಮುಡಿಯಲಿ॥

ಈ ತ್ರಿಪದಿಗಳಲ್ಲಿಯ "ಮುಚ್ಚಿಮುಡಿವ ಮಲ್ಲಿಗಿ" ಸಂಭೋಗ ಕ್ರಿಯಾಸೂಚಿಯೆಂದು ಬೇರೆ ಹೇಳಬೇಕಿಲ್ಲ. ಇಂಥದೇ ಇನ್ನೊಂದು ತ್ರಿಪದಿ.

ಹಚ್ಚಡದ ಪದರಾಗ। ಅಚ್ಚ ಮಲ್ಲಿಗಿ ಹೂವ।
ಬಿಚ್ಚಿ ನನಮ್ಯಾಲ ಒಗೆವಂಥ। ರಾಯರನ
ಬಿಟ್ಟ್ಯಾಂಗ ಬರಲೆ ಹಡದವ್ವ॥

ಹಚ್ಚಡದ ಪದರಿನಲ್ಲಿ ಕಟ್ಟಿಕೊಂಡು ಬಂದ ಮಲ್ಲಿಗೆ ಹೂವುಗಳನ್ನು ಬಿಚ್ಚಿ ತನ್ನ ಮೇಲೆ ವಿನೋದಕ್ಕಾಗಿ ತೂರುವ ಗಂಡನನ್ನು ಬಿಟ್ಟು ತವರಿಗೆ ಹೇಗೆ ಬರಲಿ? ಎಂದು ಗರತಿಯೊಬ್ಬಳು ಇಲ್ಲಿ ಹೇಳಿರುವಳೆಂದು ಸಾಮಾನ್ಯವಾಗಿ ಅರ್ಥಮಾಡುತ್ತೇವೆ. ಆದರೆ ಹಚ್ಚಡ ತೀರ ಉರುಟು ಬಟ್ಟೆ; ಮಲ್ಲಿಗೆ ಮೃದುವಾದ ಹೂವು, ಅದರಲ್ಲಿ ಕಟ್ಟಿಕೊಂಡು ಬಂದನೆಂಬುದು ತೀರ ಒರಟು ಅಭಿವ್ಯಕ್ತಿ. ಮೇಲಾಗಿ ಹಚ್ಚಡ ಮಲಗುವ ಸಮಯದಲ್ಲಿ ಮಾತ್ರ ಬಳಕೆಯಾಗುವಂತಹದು. ಆದುದರಿಂದ ಸಂಭೋಗಕ್ರಿಯೆಯ ಹಿನ್ನೆಲೆಯಲ್ಲಿಯೇ ಇದಕ್ಕೆ ಅರ್ಥ ಹೇಳಬೇಕೆಂದು ತೋರುತ್ತದೆ. ಆಗ "ಹಚ್ಚಡದ ಮುಸುಕಿನಲ್ಲಿ ಸಂಭೋಗಸುಖವನ್ನು ನೀಡುವ ಗಂಡನನ್ನು ಬಿಟ್ಟು, ಹೇಗೆ ಬರಲಿ?" ಎಂಬ ಸುಂದರ ಅರ್ಥ ಧ್ವನಿತವಾಗುತ್ತದೆ.

ಮೇಲಿನವು ಸ್ತ್ರೀ ನುಡಿದ ತ್ರಿಪದಿಗಳಾದುದರಿಂದ "ಮಲ್ಲಿಗೆ ಮುಡಿ" ಎಂಬುದು ಪುರುಷನಿಂದ ಸ್ತ್ರೀ ಪಡೆಯುವ ಸಂಭೋಗ ಸುಖವನ್ನು ಮಾತ್ರ ಸೂಚಿಸುತ್ತಿರಬಹುದೇ? ಎನಿಸುತ್ತದೆ. ವಾಸ್ತವವಾಗಿ ನೋಡಿದರೆ ಮಲ್ಲಿಗೆ ಹೂವು ತನ್ನ ಕೋಮಲತೆ, ಗಂಧವತ್ತತೆಗಳಿಂದ ಸ್ತ್ರೀಯನ್ನೇ ಪ್ರತಿಪಾದಿಸುವುದರಿಂದ, ನಮ್ಮ ಕವಿಗಳು ಮಲ್ಲಿಗೆ-ಮಾಮರ, ಮಲ್ಲಿಗೆ-ದುಂಬಿ, ಮಲ್ಲಿಗೆ-ಗಾಳಿಗಳನ್ನು ಸ್ತ್ರೀ-ಪುರುಷರೆಂದು

ವರ್ಣಿಸಿರುವುದರಿಂದ "ಮಲ್ಲಿಗೆ ಮುಡಿ" ಎಂಬುದು ಸ್ತ್ರೀಯರಿಂದ ಪುರುಷ ಪಡೆವ ಸಂಭೋಗಸುಖದ ಸೂಚನೆಯೂ ಆಗಬಹುದು. ಒಟ್ಟಿನಲ್ಲಿ ಸ್ತ್ರೀ ಪುರುಷರ ಪರಸ್ಪರ ರತಿಸುಖದ ಸೂಚನೆಗಾಗಿ 'ಮಲ್ಲಿಗೆ ಮುಡಿ'ಪದವನ್ನು ನಮ್ಮ ಜಾನಪದರು ಬಳಸುತ್ತಿದ್ದರೆಂದು ಹೇಳಬೇಕಾಗುತ್ತದೆ. ಆದರೆ ಈಗ ಆ ಪದದ ಲಕ್ಷ್ಯಾರ್ಥ ಕಳೆದುಹೋದ ಕಾರಣ, ನಾವು ಅದನ್ನು ವಾಚ್ಯಾರ್ಥದಲ್ಲಿ ಬಳಸುತ್ತಲಿದ್ದೇವೆ.

ಪ್ರಾಚೀನ ಕನ್ನಡ ಶಾಸನಗಳಲ್ಲಿ ಕೆಲವು ಅರಸರಿಗೆ 'ಮಲ್ಲಿಕಾಮೋದ' ಎಂಬ ಬಿರುದು ಪದೇ ಪದೇ ಕಂಡುಬರುತ್ತದೆ. ಅಲ್ಲಿ ಅವರ ಮಲ್ಲಿಗೆ ಹೂವಿನ ವಾಸನಾಪ್ರಿಯತೆಯನ್ನೇ ಬಿರುದಾಗಿ ಬಳಸಿರುವರೆಂದರೆ ಅದು ತೀರ ಸಾಮಾನ್ಯ ಅರ್ಥವೆನಿಸುತ್ತದೆ. ಈ ಮಾತು ಬಹುಶಃ ನಮ್ಮ ಅರಸರ 'ಸ್ತ್ರೀಭೋಗ ಪ್ರಿಯತೆ'ಯನ್ನು ಧ್ವನಿಸುತ್ತಿರಬೇಕು. ತಮ್ಮ ಸಂಭೋಗಪ್ರಿಯತೆಯನ್ನೋ, ಸಂಭೋಗಸಾಮರ್ಥ್ಯವನ್ನೋ ಬಹಿರಂಗವಾಗಿ ಬರೆದುಕೊಳ್ಳುತ್ತಿದ್ದುದು ಆ ಕಾಲದ ಸಹಜಪ್ರವೃತ್ತಿ. ಶಾಸನಗಳಲ್ಲಿ ನಮ್ಮ ಅರಸರು "ವಿಟಚಕ್ರವರ್ತಿ, ವೇಶ್ಯಾಭುಜಂಗ, ವಾರವಧೂಜನ ಕಾಮ" ಎಂದೂ ಪಂಪ "ಯುವತೀ ಜಘನಕಾಂಚೀರತ್ನಂ, ಗಣಿಕಾಸ್ತನತಟಹಾರಂ, ಆಂಧ್ರೀ ನಿರಂಧ್ರ ಬಂಧುರಸ್ತನಹಾರಂ" ಎಂದೂ ತಮ್ಮನ್ನು ಸಂಕೋಚವಿಲ್ಲದೆ ಹೇಳಿಕೊಂಡಿರುವುದು ಇಲ್ಲಿ ಉಲ್ಲೇಖನೀಯ. ಆದುದರಿಂದ ಜಾನಪದ ಕವಿ 'ಮಲ್ಲಿಗೆ ಮುಡಿ' ಎಂದುದನ್ನೇ ಶಿಷ್ಟಕವಿ 'ಮಲ್ಲಿಕಾ ಮೋದ' ಪದದಿಂದ ಸೂಚಿಸಿರುವನೆಂದು ಭಾವಿಸಬೇಕಾಗುತ್ತದೆ.

ಸಂಭೋಗಕ್ರಿಯೆಗೆ ಪರ್ಯಾಯವಾಗಿ ಇಲ್ಲಿ ಬಳಸಿದ 'ಮಲ್ಲಿಗೆ ಮುಡಿ' ತುಂಬ ಅರ್ಥವತ್ತಾದ ಸಂಕೇತ. ಏಕೆಂದರೆ ಗಂಧಸುಖಗಳಲ್ಲಿ ಮಲ್ಲಿಗೆಯದೇ ಮಹಾಸುಖ; ಸ್ಪರ್ಶಸುಖಗಳಲ್ಲಿ ಸಂಭೋಗಸುಖವೇ ಪರಮಸುಖ. ಹೀಗಾಗಿ ಇಲ್ಲಿ ಒಂದು ಇಂದ್ರಿಯ ಸುಖವನ್ನು ಬೇರೊಂದು ಇಂದ್ರಿಯ ಸುಖದ ಮೂಲಕ ಸಂಕೇತಿಸಿದ ಜಾನಪದರ ಕಲ್ಪನೆ ತುಂಬ ರಮ್ಯವೂ, ಸುಸಂಸ್ಕೃತವೂ ಎನಿಸುತ್ತದೆ.

ಮಲ್ಲಿಗೆಯನ್ನು ಬಿಟ್ಟರೆ ಮನದನ್ನ, ಮನದನ್ನನನ್ನು ಬಿಟ್ಟರೆ ಮಲ್ಲಿಗೆ-ಇವೇ ಸ್ತ್ರೀಜೀವನದ ಸಾರ ಸರ್ವಸ್ವಗಳೆಂದು ತೋರುತ್ತದೆ. ಸೂಕ್ತಿಸುಧಾರ್ಣವದಲ್ಲಿ (೧೧.೪೫) ಒಬ್ಬ ಸತಿ "ವಲ್ಲಭನ ತೋಳ ಸೋಂಕುಂ ಮಲ್ಲಿಗೆಯುಂ ಕುಂದದಿರ್ಕೆ ಸಂತತಂ" ಎನ್ನುತ್ತ ಪತಿ ಮತ್ತು ಪುಷ್ಪಗಳಿಗೆ ಸಮಾನ ಪ್ರೀತಿ ತೋರಿದ್ದಾಳೆ. ಹೀಗಾಗಿ ಪತಿಸುಖವನ್ನು ಪುಷ್ಪಸುಖದಿಂದ ಸೂಚಿಸಿದ ವ್ಯಂಜಕತೆ ಈ ದೃಷ್ಟಿಯಿಂದಲೂ ಅರ್ಥವತ್ತಾಗಿದೆ.

'ಶೃಂಗಾರ ಕಾರಾಗೃಹ' ಖ್ಯಾತಿಯ ನೇಮಿಚಂದ್ರ ಕವಿ "ಸ್ತ್ರೀರೂಪಮೆ ರೂಪಂ ಶೃಂಗಾರವೊಂದೆ ರಸಂ" ಎನ್ನುತ್ತ "ಸುರತಗಂಧಮೆ ಗಂಧಂ" ಎಂದು ಹೇಳುತ್ತಾನೆ. ಜಾನಪದ ಕವಿಯೂ ಇಲ್ಲಿ ಸುರತಸುಗಂಧವನ್ನು ಗಂಧವತಿ ಮಲ್ಲಿಗೆಯ ಮೂಲಕ ಸೂಚಿಸಿದ್ದಾನೆ.

ಹೀಗೆ ಕಾಲದಿಂದ ಕಾಲಕ್ಕೆ ಪದಗಳು ಅರ್ಥ ಕಳೆದುಕೊಂಡು ಪಳೆಯುಳಿಕೆಯಾಗಿ ಬಿಡುತ್ತವೆ. ಇಂಥ ಪಳೆಯುಳಿಕೆಗಳನ್ನು ಪರೀಕ್ಷಿಸಿ, ಅವುಗಳಲ್ಲಿಯ ಮೂಲ ಅರ್ಥಜೀವವನ್ನು ಶೋಧಿಸುವ ಕೆಲಸ ಕನ್ನಡದಲ್ಲಿ ನಡೆಯಬೇಕಾಗಿದೆ.

■■

ಆಕರ : ಮಾರ್ಗ ಸಂಪುಟ–೩

೮೫

ಕನ್ನಡ ಛಂದಸ್ಸಿನ ಸ್ವರೂಪ

ಕಾವ್ಯಮೀಮಾಂಸೆ, ನಿಘಂಟು, ವ್ಯಾಕರಣಗಳಂತೆ ಸಾಹಿತ್ಯಕ್ಕೆ ಸಂಬಂಧಪಟ್ಟ ಒಂದು ಶಾಸ್ತ್ರವಾಗಿದೆ, ಈ ಛಂದಸ್ಸು. ಇವುಗಳಲ್ಲಿ ಮೊದಲಿನ ಮೂರು ಗದ್ಯ-ಪದ್ಯಗಳಿಗೆ ಅನ್ವಯವಾಗುತ್ತಿದ್ದರೆ, ಛಂದಸ್ಸು ಪದ್ಯಪ್ರಸಂಗದಲ್ಲಿ ಮಾತ್ರ ಪ್ರಯೋಜಕವೆನಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ಭಾರತೀಯ ಕಾವ್ಯಮೀಮಾಂಸೆಯು ಪಾಶ್ಚಿಮಾತ್ಯ ಕಾವ್ಯಮೀಮಾಂಸೆಯ ಸಂಪರ್ಕದಿಂದಾಗಿ ಹೊಸ ಹೊಸ ಆಯಾಮಗಳನ್ನು ಮೂಡಿಸಿಕೊಂಡು ಮುನ್ನಡೆದಿದೆ. ಜೊತೆಗೆ ವಿಮರ್ಶೆಯ ಸಂಪರ್ಕದಿಂದ ತನ್ನ ವ್ಯಾಪ್ತಿಯನ್ನು ವರ್ಧಿಸಿಕೊಂಡಿದೆ. ಆನ್ವಯಿಕ ವಿಮರ್ಶೆಗೆ ಹೊರಳಿ ಪ್ರಾಯೋಗಿಕ ನೆಲೆಗೂ ತಲುಪಿದೆ. ವ್ಯಾಕರಣವು ಭಾಷಾಶಾಸ್ತ್ರವಾಗಿ ಶಾಖೋಪಶಾಖೆಗಳನ್ನು ಬಿಚ್ಚಿಕೊಂಡು ಬೆಳೆಯುತ್ತಲಿದೆ. ನಿಘಂಟುಯೆನ್ನುವುದು ನಿಘಂಟು ವಿಜ್ಞಾನ ಹೆಸರಿನಿಂದ ಹೊಸಬಗೆಯ ಶಿಸ್ತುಗಳನ್ನು ಅಳವಡಿಸಿಕೊಳ್ಳುತ್ತ ಸಾಗಿದೆ. ಹೀಗೆ ಸಾಹಿತ್ಯಶಾಸ್ತ್ರಗಳು ಲೋಕಪ್ರಸಿದ್ಧಿಯನ್ನು ಪಡೆಯುತ್ತಲಿವೆ. ಲೋಕವಿಖ್ಯಾತ ವಿದ್ವಾಂಸರಿಂದಾಗಿ ಅವುಗಳ ಮೈ-ಮನಸ್ಸಿನ ವಿನೂತನ ಪದರುಗಳು ಪ್ರಕಟವಾಗುತ್ತಲಿವೆ. ಇವುಗಳೊಂದಿಗೆ ಹೋಲಿಸಿದರೆ 'ಛಂದಸ್ಸು' ತುಂಬ ಉಪೇಕ್ಷೆಗೆ ಗುರಿಯಾದ ಶಾಸ್ತ್ರವೆನಿಸುತ್ತದೆ.

ಪ್ರಾಚೀನ ಕರ್ನಾಟಕದಲ್ಲಿ ಛಂದೋಂಬುಧಿ, ಕವಿಜಿಹ್ವಾಬಂಧನ, ನಂದಿಛಂದಸ್ಸು ಹೆಸರಿನ ಕನ್ನಡ ಕೃತಿಗಳು, ಛಂದೋನುಶಾಸನ, ಮಾನಸೋಲ್ಲಾಸ, ಸಂಗೀತರತ್ನಾಕರ ಹೆಸರಿನ ಸಂಸ್ಕೃತ ಕೃತಿಗಳು ಹುಟ್ಟಿದರೂ ಅವೆಲ್ಲ ಸ್ವಲ್ಪ ಹೆಚ್ಚು ಕಡಿಮೆ ಒಂದೇ ದೃಷ್ಟಿಕೋನ, ವ್ಯಾಪ್ತಿಯಲ್ಲಿ ಸಾಗಿವೆ. ಆಧುನಿಕ ಕಾಲದಲ್ಲಿ ಕನ್ನಡ ಕೈಪಿಡಿ ರಚಿತವಾದ ಬಳಿಕ ಡಿ.ಎಸ್. ಕರ್ಕಿ, ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು ಪ್ರಾಚೀನ ಛಂದೋವಿಚಾರಗಳನ್ನು ಸರಳಗನ್ನಡದಲ್ಲಿ ವಿವರಿಸುವ, ಬಹಳೆಂದರೆ ಎದುರಾದ ಸಮಸ್ಯೆಗಳಿಗೆ ಸಮಾಧಾನ ನೀಡುವ ಪ್ರಯತ್ನ ಮಾಡಿದ್ದಾರೆ. ಆದರೆ ಛಂದೋತತ್ವದ ತಿಳಿವಳಿಕೆಯನ್ನು ವಿಸ್ತರಿಸಿಲ್ಲ. ತೀ.ನಂ.ಶ್ರೀ, ಸೇಡಿಯಾಪು, ಡಾ. ಎಂ. ಚಿದಾನಂದಮೂರ್ತಿ, ಡಾ. ಎಂ.ಎಂ. ಕಲಬುರ್ಗಿ ಅವರು ಕೆಲವು ಮೂಲಭೂತ ವಿಚಾರಗಳನ್ನು ಪ್ರಕಟಿಸಿದ್ದಾರೆ. ಹೀಗಿದ್ದೂ ಕನ್ನಡ ಛಂದಸ್ಸಿನ ಸಮಗ್ರ ಸ್ವರೂಪದ ವಿವೇಚನೆ ಈವರೆಗೆ ಸಾಧ್ಯವಾಗಲೇ ಇಲ್ಲ. ಈಗ ಕನ್ನಡದಲ್ಲಿ ಉದ್ದಕ್ಕೂ ಬಳಕೆಯಾದ ಸಮಗ್ರ ಛಂದಸ್ಸನ್ನು ವಿಶ್ಲೇಷಿಸುವ, ಈ ವರೆಗೆ ಮಂಡಿಸಲ್ಪಟ್ಟ ವಿಚಾರಗಳ

ಗುಣದೋಷಗಳನ್ನು ತಿದ್ದುವ, ಆಮೂಲಕ ಸರಿಯಾದ ವಿಚಾರಗಳನ್ನು ಸ್ಥಾಪಿಸುವ ಕೆಲಸ ಇಂದು ನಡೆಯಬೇಕಾಗಿದೆ.

ಛಂದೋಲಂಕಾರ: 'ಛಂದಸ್ಸು' ಎಂಬುದು ಪದ್ಯಪ್ರಸಂಗದಲ್ಲಿ ಬಳಕೆಯಾಗುವ ಪ್ರಕ್ರಿಯೆ. ಈ ಪ್ರಕ್ರಿಯೆಯ ಸ್ವರೂಪ, ಸಂಯೋಜನೆ ಮತ್ತು ಪರಿಣಾಮಗಳನ್ನು ವಿವೇಚಿಸುವುದು ಛಂದಶ್ಶಾಸ್ತ್ರ. ಸಾಹಿತ್ಯದಲ್ಲಿ ಗದ್ಯ-ಪದ್ಯವೆಂದು ಎರಡು ಪ್ರಮುಖ ಪ್ರಕಾರಗಳಿವೆ. ಇವುಗಳಲ್ಲಿ ಛಂದಸ್ಸು ಪದ್ಯಪ್ರಸಂಗಗಳಲ್ಲಿ ಪ್ರಯೋಜಕವಾಗುವುದಾಗಿದೆ. ಈ ಪದ್ಯವೆನ್ನುವುದು ಭಾಷಾಮಾಧ್ಯಮದಲ್ಲಿ ಪ್ರಕಟವಾಗುವ ಕಲಾಪ್ರಕಾರವಾಗಿದೆ. ಈಗ ಕವಿಯಾದವನು ಭಾಷೆಯ ಶಕ್ತಿಕೋಶಗಳನ್ನು ಬಯಲಿಗೆಳೆದು ಬಳಸಿಕೊಳ್ಳುತ್ತಾನೆ. ಭಾಷೆಯಲ್ಲಿ ಅತಿಸಣ್ಣ ಅರ್ಥಪೂರ್ಣ ಘಟಕವೆಂದರೆ ಪದ(Word). ಕವಿಯಾದವನು ಭಾಷೆಯ ಶಕ್ತಿಕೋಶಗಳನ್ನು ಬಯಲಿಗೆಳೆಯುವುದೆಂದರೆ ಈ ಪದದ (Word) ಶಕ್ತಿಕೋಶಗಳನ್ನು ಬಯಲಿಗೆಳೆಯುವುದಾಗಿದೆ. ಹೀಗೆ ಕವಿ ಬಯಲಿಗೆಳೆಯುವ ಪದದ ಆಯಾಮಗಳು ಮೂರು : ಶಬ್ದ(Sound), ಅರ್ಥ(Meaning) ಮತ್ತು ಪ್ರಮಾಣ(Measure).

ಪದ(Word)ಮೊದಲು ನಮ್ಮ ಅನುಭವಕ್ಕೆ ಬರುವುದು ಶಬ್ದ(Sound) ರೂಪದಿಂದ. ಈ ಶಬ್ದವನ್ನು(Sound) ಪದ್ಯಕವಿ ಕಲಾತ್ಮಕವಾಗಿ ಬಳಸಿಕೊಳ್ಳುವ ಪ್ರಯತ್ನ ಮಾಡುತ್ತಾನೆ. ಉದಾ:

ಸೂರ್ಯೋದಯ, ಚಂದ್ರೋದಯ
ದೇವರದಯ ಕಾಣೊ

ಎಂಬ ಪದ್ಯದಲ್ಲಿ 'ದಯ' ಎಂಬ ಶಬ್ದ(Sound) ಪುನರುಕ್ತಗೊಂಡು ಒಂದು ಬಗೆಯ ಕರ್ಣಸುಖ ನೀಡುತ್ತದೆ. ಇಲ್ಲಿ 'ದೇವರ ಕೃಪೆ ಕಾಣೊ' ಎಂದು ಇಟ್ಟುಕೊಂಡರೆ ಅರ್ಥವ್ಯತ್ಯಾಸವಾಗುವುದಿಲ್ಲ. ಆದರೆ ಶಬ್ದ(Sound) ವ್ಯತ್ಯಾಸವಾಗಿ ಕಲಾತ್ಮಕತೆಗೆ ಭಂಗ ಬರುತ್ತದೆ. ಅಂದರೆ ಶಬ್ದ(Sound)ದಿಂದ ಪದ್ಯದ ಸೌಂದರ್ಯ ಅಥವಾ ಅಲಂಕಾರ ವರ್ಧಿಸುವುದೆಂದು ಹೇಳಬೇಕಾಗುತ್ತದೆ. ಹೀಗೆ ಶಬ್ದದಿಂದ ಪದ್ಯದ ಅಲಂಕಾರವನ್ನು ವರ್ಧಿಸುವುದೇ ಶಬ್ದಾಲಂಕಾರ.

ಶಬ್ದ(Sound)ದ ಅನೇಕ ಬಗೆಗಳಲ್ಲಿ ಕವಿಯಾದವನು ಪದ್ಯವನ್ನು ಅಲಂಕರಿಸುತ್ತಾನೆ. ಸಂಸ್ಕೃತದಲ್ಲಿ ಶಬ್ದ(Sound) ಪ್ರಯೋಗವನ್ನು ನೂರಾರು ಬಗೆಗಳಲ್ಲಿ ಯೋಜಿಸಿ ಅನುಪ್ರಾಸ, ಯಮಕ ಮೊದಲಾದ ಪ್ರಕಾರಗಳು ಬೆಳೆದು ಕೃತಕ ಪ್ರಯೋಗ, ಒಣಪಾಂಡಿತ್ಯದ ನೆಲೆಯನ್ನು ಮುಟ್ಟಿ 'ಚಿತ್ರಕಾವ್ಯ' ರೂಪವನ್ನು ಪಡೆಯಿತು. ಕನ್ನಡದಲ್ಲಿ ಕೃತಕ ಪಾಂಡಿತ್ಯದ ಮಟ್ಟಕ್ಕೆ ಇಳಿಯದಿದ್ದರೂ ಶಬ್ದ(Sound) ದ ಮೇಲೆ ಆಟವಾಡಿದ ಕೆಲವು ಉದಾಹರಣೆಗಳು ಸಿಗುತ್ತವೆ. ಈ ಎಲ್ಲ ಬಗೆಗಳನ್ನು ವಿವೇಚಿಸುವುದೇ ಶಬ್ದಾಲಂಕಾರಶಾಸ್ತ್ರ.

ಪದ(Word) ಕಿವಿಗೆ ಶಬ್ದ(Sound)ವಾಗಿ ಕೇಳಿಸುವಷ್ಟರಲ್ಲಿ ಅದರ ಬೆನ್ನ ಹಿಂದೆಯೇ ಅರ್ಥ ಅರಿವಾಗುತ್ತದೆ. ಈ ಅರ್ಥದಿಂದ ಪದ್ಯವನ್ನು ಕವಿ ಅಲಂಕರಿಸುತ್ತಾನೆ. ಉದಾ:

ನಿಮ್ಮ ಚರಣ ಕಮಲದಲಿ
ಆನು ತುಂಬಿ

ಇದು ಬಸವಣ್ಣನವರ ಸುಪ್ರಸಿದ್ಧ ವಚನ. ಇಲ್ಲಿ ನಿಮ್ಮ ಚರಣದಲ್ಲಿ ನಾನು ತುಂಬಿಕೊಂಡಿದ್ದೇನೆ ಎಂಬ ಸಾಮಾನ್ಯ ಅರ್ಥವಲ್ಲದೆ ಕಮಲ-ತುಂಬಿಗಳ ಸಂಬಂಧದಿಂದಾಗಿ ಮೊದಲಿನ ಅರ್ಥ,

'ವಿಸ್ತಾರ' ಪಡೆಯುತ್ತದೆ. ಈಗ "ಚರಣ ದ್ವಯದಲಿ ಆನು ತುಂಬಿ" ಎಂದೋ "ಚರಣ ಕಮಲದಲಿ ಆನು ನೆಲಸಿ" ಎಂದೊ ಹೇಳಿ ಕಮಲ-ತುಂಬಿಗಳ ಸಂಬಂಧ ತಪ್ಪಿಸಿದರೆ ಆ ಅರ್ಥ 'ವಿಸ್ತಾರ' ಕಳೆದು ಹೋಗುತ್ತದೆ. ಅಂದರೆ ಇಲ್ಲಿ ಕಮಲ ಮತ್ತು ತುಂಬಿಗಳ ಅರ್ಥದಿಂದಾಗಿ ಪದ್ಯಕ್ಕೆ ಹೆಚ್ಚಿನ ಅಲಂಕಾರ ಪ್ರಾಪ್ತವಾಗಿದೆ. ಇದು ಅರ್ಥಾಲಂಕಾರ. ಕವಿಯಾದವನು ಇಂಥ ಅನೇಕ ಬಗೆಗಳನ್ನು ಪದ್ಯಗಳಲ್ಲಿ ಯೋಜಿಸುತ್ತಾನೆ. ಇಂಥ ಅಧಿಕ ಸಂಖ್ಯೆಯ ಅಲಂಕಾರಗಳಲ್ಲಿ ಮುಖ್ಯವಾದುದು ಉಪಮಾ. ಮುಂದೆ ಈ ಸಂಖ್ಯೆ ೪ಕ್ಕೆ, ಆ ಮೇಲೆ ೧೦೬ಕ್ಕೆ ಕೊನೆಗೆ ನೂರಾರು ಸಂಖ್ಯೆಗೆ ತಲುಪಿದೆ. ಒಂದು ಅಲಂಕಾರದಲ್ಲಿಯೇ ಅನೇಕ ಕವಲುಗಳು ಕಾಣಸಿಕೊಂಡು ಸಿದ್ಧ ಮಾದರಿಗಳ ಕೃತಕತೆ ಇಲ್ಲಿಯೂ ಬೆಳೆದು ನಿಂತಿದೆ. ಈ ಎಲ್ಲ ಬಗೆಗಳನ್ನು ವಿವೇಚಿಸುವುದೇ ಅರ್ಥಾಲಂಕಾರಶಾಸ್ತ್ರವಾಗಿದೆ.

ಹೀಗೆ ಶಬ್ದ(Sound), ಅರ್ಥ(Meanimg) ಗಳಲ್ಲದೆ ಪದಕ್ಕೆ ಪ್ರಮಾಣ(Measure) ವೆನ್ನುವುದು ಇರುತ್ತದೆ. ಸಣ್ಣ ದೊಡ್ಡ ಈ ಪ್ರಮಾಣದ ಈ ಪದಗಳನ್ನು ಹಿಂದು ಮುಂದು ಜೋಡಿಸುವುದರ ಮೂಲಕ ವಿಶಿಷ್ಟ ಕ್ರಮದಲ್ಲಿ ಯೋಜಿಸಿ ಕವಿಯಾದವನು ಪದ್ಯದ ಅಲಂಕಾರವನ್ನು ಹೆಚ್ಚಿಸುತ್ತಾನೆ. ಉದಾ:

ಚಿಮ್ಮುತ ನಿರಿಯನು ಬನದಲಿ ಬಂದಳು
ಬಿಂಕದ ಸಿಂಗಾರಿ

ಎಂಬುದು '೪। ೪। ೪। ೪। ೪। ೪। ಗು' ಎಂಬ ನಿಯತ ಪ್ರಮಾಣದಿಂದಾಗಿ ಹೃದ್ಯವೆನಿಸುತ್ತದೆ. ಇವನ್ನೇ

೪ ೫ ೪
ಬಿಂಕದ। ಸಿಂಗಾರಿ। ಬನದಲಿ।
೪ ೪ ೪
ನಿರಿಯನು। ಚಿಮ್ಮುತ। ಬಂದಳು।

ಎಂದು ಯೋಜಿಸಿದರೆ ನಿಯತಪ್ರಮಾಣ ತಪ್ಪಿ ಆ ಹೃದ್ಯತೆ ನಾಶವಾಗುತ್ತದೆ. ಅಂದರೆ ಪ್ರಮಾಣಬದ್ಧವಾಗಿ ಪದಗಳನ್ನು ಮುನ್ನಡೆಸುವುದೂ ಪದ್ಯಕ್ಕೆ ಅಲಂಕಾರವೇ ಸರಿ. ಇದೇ ಛಂದಸ್ಸು. ಆದುದರಿಂದ ಶಬ್ದಾಲಂಕಾರ, ಅರ್ಥಾಲಂಕಾರಗಳಂತೆ 'ಛಂದಸ್ಸೂ' ಒಂದು ಅಲಂಕಾರ. ಸಶಕ್ತ ಕವಿಯಾದವನು ಇದನ್ನು ಅಲಂಕಾರವಾಗಿ ಬಳಸುತ್ತಾನೆ. ಸಾಮಾನ್ಯಕವಿ ಆಧಾರವಾಗಿ ಹಿಡಿದುಕೊಳ್ಳುತ್ತಾನೆ, ಅಷ್ಟೇ.

ಕನ್ನಡದಲ್ಲಿ ರಾಘವಾಂಕ, ಲಕ್ಷ್ಮೀಶ ವಾರ್ಧಕವನ್ನೆ ಬಳಸಿದ್ದರೂ ಇಬ್ಬರೂ ಬಳಸಿಕೊಂಡ ಭಾಷೆ ಯೋಜಿಸಿಕೊಂಡ ಅದರ ಪ್ರಮಾಣ, ಸಂಯೋಜಿಸಿಕೊಂಡ ಅವುಗಳ ಪರಂಪರೆಗಳ ನ್ನೊಳಗೊಂಡ ಛಂದಸ್ಸು ಭಿನ್ನವಾಗಿರುವುದರಿಂದ ಒಬ್ಬನದು ಒಂದು ಬಗೆಯ ಸೌಂದರ್ಯ, ಇನ್ನೊಬ್ಬನದು ಇನ್ನೊಂದು ಬಗೆಯ ಸೌಂದರ್ಯದಿಂದ ಶೋಭಿಸುತ್ತವೆ. ಇದೇ ರೀತಿ ಚಾಮರಸ, ಕುಮಾರವ್ಯಾಸರು ಭಾಮಿನಿಯನ್ನು ಬಳಸಿದ್ದರೂ ಒಬ್ಬನ ಮಾರ್ಧವತೆ ಇನ್ನೊಬ್ಬನಲ್ಲಿಲ್ಲ. ಇನ್ನೊಬ್ಬನ ಸಂಕೀರ್ಣತೆ ಮತ್ತೊಬ್ಬನಲ್ಲಿಲ್ಲ. ಹೀಗಿದ್ದೂ ಅವುಗಳಿಗೆ ವಿಶಿಷ್ಟ ಸೌಂದರ್ಯವಿದೆ. ಸಾಮಾನ್ಯವಾಗಿ

ನಮ್ಮ ಚಂಪೂ ಕವಿಗಳು ಕಂದಗಳನ್ನು ಅಧಿಕ ಸಂಖ್ಯೆಗಳಲ್ಲಿ ಬಳಸಿದ್ದರೂ ನಾಗಚಂದ್ರ, ಜನ್ನರ ಕಂದಗಳಲ್ಲಿ ಒಂದು ರಚನಾ ವಿಶೇಷತೆ ಕಂಡುಬರುವುದು ಛಂದೋ ವಿಶೇಷತೆ ಆಗಿದೆ. ಕವಿಗಳಾದವರು ಹೀಗೆ ವೈವಿಧ್ಯವುಂಟುವಾಗಿ ಛಂದಸ್ಸನ್ನು ದುಡಿಸಿಕೊಳ್ಳುವ ಮೂಲಕ ಪದ್ಯಕ್ಕೆ ಸೃಜನಶೀಲತೆಯನ್ನುಂಟುಮಾಡುತ್ತಾರೆ. ಪದ್ಯವನ್ನು ಕಾವ್ಯವಾಗಿಸುವಲ್ಲಿ ಛಂದಸ್ಸನ್ನು ಒಂದು ಪೂರಕ ಸಾಮಗ್ರಿಯಾಗಿ ಬಳಸುತ್ತಾರೆ. ಆದುದರಿಂದ ಛಂದಸ್ಸೂ ಒಂದು ಅಲಂಕಾರವೆಂದು ಹೇಳಬಹುದಾಗಿದೆ.

ಛಂದಶ್ಶಾಸ್ತ್ರ, ಸಂಗೀತಶಾಸ್ತ್ರ, ಶೈಲಿಶಾಸ್ತ್ರ :

ಛಂದಸ್ಸನ್ನು ಕುರಿತು ಅಭ್ಯಾಸ ಮಾಡುವಾಗ ಸಂಗೀತ, ಶೈಲಿಗಳ ತಿಳಿವಳಿಕೆ ಅವಶ್ಯವೆನಿಸುತ್ತದೆ. ಇವುಗಳಲ್ಲಿ ಛಂದಸ್ಸು ಮತ್ತು ಸಂಗೀತಗಳು ಭಾಷೆಯ ಕಾಲ ಪ್ರಮಾಣವನ್ನು ನಿರ್ದೇಶಿಸುತ್ತಿದ್ದರೆ, ಛಂದಸ್ಸು-ಶೈಲಿಗಳು ಭಾಷೆಯ ಕಾಲಪ್ರಮಾಣದ ಸಾರ್ಥಕತೆಯನ್ನು ನಿರ್ದೇಶಿಸುತ್ತವೆ. ಈ ದೃಷ್ಟಿಯಿಂದ ನೋಡದ ಕಾರಣ ಕೆಲವೊಮ್ಮೆ ಛಂದಸ್ಸಿನ ಅಭ್ಯಾಸದಲ್ಲಿ ಸಂಗೀತ, ಶೈಲಿಗಳ ಅಭ್ಯಾಸವೂ ಸೇರಿಕೊಳ್ಳುತ್ತದೆ.

ಛಂದಸ್ಸು ಮತ್ತು ಸಂಗೀತ ಭಿನ್ನವಾಗುವುದು ಬಳಸುವ ಭಾಷೆಯ ಕಾಲ ಪ್ರಮಾಣದ ನೆಲೆಯ ಮೇಲೆ. ಅಂದರೆ ಛಂದಸ್ಸಿನಲ್ಲಿ ಬಳಸುವ ಭಾಷೆ ಕಾಲಬದ್ಧವಾಗಿರುತ್ತದೆ. ಸಂಗೀತದಲ್ಲಿ ಬಳಸುವ ಭಾಷೆ ಕಾಲಬದ್ಧವಾಗಿರುವುದಿಲ್ಲ.

ಉದಾ: ಶ್ರೀವನಿತೆಯರಸನೆ ವಿಮಲ ರಾ
ಜೀವಪೀಠನಪಿತನೆ ಜಗಕತಿ
ಕಾರಣನೆ ಸನಕಾದಿ ಸಜ್ಜನ ನಿಕರದಾತಾರ।

ಎಂಬ ಭಾಮಿನಿ ಛಂದಸ್ಸಿನಲ್ಲಿ ಭಾಷೆ ಒಂದು ನಿರ್ದಿಷ್ಟ ಕಾಲಬದ್ಧತೆಯಲ್ಲಿ ನಡೆಯುತ್ತದೆ. ಸಂಗೀತದಲ್ಲಿ ಹೃಸ್ವ-ದೀರ್ಘ ಕಾಲ ವ್ಯತ್ಯಾಸದಿಂದ ನಡೆಯುತ್ತದೆ. ಆಲಾಪದಿಂದ ಅದನ್ನು ಹಿಗ್ಗಿಸುತ್ತಾನೆ, ಕುಗ್ಗಿಸುತ್ತಾನೆ. ಆದುದರಿಂದ ಛಂದಸ್ಸಿನಲ್ಲಿ ಬಳಸುವ ಭಾಷೆ ಕಾಲಬದ್ಧವಾಗಿರಬೇಕಾಗುತ್ತದೆ. ಸಂಗೀತದಲ್ಲಿ ಬಳಸುವ ಭಾಷೆ ಕಾಲಬದ್ಧವಾಗಿರಬೇಕೆಂದೇನಿಲ್ಲ. ಮಾತ್ರಾಮೌಲ್ಯ ನಿರ್ದಿಷ್ಟವಾಗಿರಬೇಕೆಂದೇನಿಲ್ಲ. ಛಂದಸ್ಸಿನ ಅಧ್ಯಯನ ಪ್ರಸಂಗದಲ್ಲಿ ಈ ಅಂಶಗಳನ್ನು ಅರ್ಥಮಾಡಿಕೊಳ್ಳಬೇಕು.

ಸಂಗೀತ ಮತ್ತು ಛಂದಸ್ಸು ಭಿನ್ನ ಅಧ್ಯಯನಗಳಾದರೆ ಛಂದಸ್ಸು ಮತ್ತು ಶೈಲಿ ಅಭಿನ್ನ ಅಧ್ಯಯನಗಳೆನಿಸಿವೆ. ಯಾವುದೇ ಪದ್ಯವನ್ನು ಎರಡು ಪಾತಳಿಗಳಲ್ಲಿ ಅಧ್ಯಯನ ಮಾಡಬೇಕು. ಒಂದು: ಪದ್ಯದ ರಚನಾ ಸ್ವರೂಪ. ಎರಡು: ರಚನಾ ಔಚಿತ್ಯ ಸ್ವರೂಪ. ಇವುಗಳಲ್ಲಿ ಒಂದು ಛಂದಸ್ಸು, ಇನ್ನೊಂದು ಶೈಲಿ.

ಭೇದಿಸಲೆಂದೆ ದಲ್ ನುಡಿದರೆನ್ನದಿರೊಯ್ಯನೆ ಕೇಳ ಕರ್ಣ ನಿ।
ನ್ನಾದಿಯೊಳಬ್ಬೆ ಕೊಂತಿ ನಿನಗಮ್ಮನಹರ್ಪತಿ ಪಾಂಡುನಂದನರ್।
ಸೋದರರರೆಯ್ದೆ ಮಯ್ದುನನೆ ನಾಂ ಪೆಱತೇಂ ಪಡೆಮಾತು ನಿನ್ನದೀ।
ಮೇದಿನಿಪಟ್ಟಮುಂ ನಿನತೆ ನೀನಿರೆ ಮತ್ತೆ ಪೆಱರ್ ನರೇಂದ್ರರೇ॥

ಇದು ಉತ್ಪಲಮಾಲಾವೃತ್ತ, "ಭರಂನಭಭಂರಲಗಂ" ಇದರ ಲಕ್ಷಣ ಎಂಬುದು ಛಂದಸ್ಸಿನ ವಿಚಾರ. ಈ ಲಕ್ಷಣ ಸನ್ನಿವೇಶವನ್ನು ಹೇಗೆ ಅಭಿವ್ಯಕ್ತಿಗೊಳಿಸಿದೆ ಎನ್ನವುದು ಶೈಲಿ ವಿಚಾರ.

"ಕರ್ಣಭೇದಪ್ರಸಂಗದ ಈ ವೃತ್ತ ಒಂದು ಲಘುವಾಕ್ಯಸಮುಚ್ಚಯ. ಪ್ರತಿ ಪಾದಾಂಶವೂ ನೇರವಾಗಿ ಗುರಿ ಮುಟ್ಟುವಂತಾಗಲು, ಒಂದೊಂದರ ಬಳಿಕವೂ ಅರ್ಥಯತಿಸ್ಥಾನ ಕಲ್ಪಿತವಾಗಿದೆ. ವಾಕ್ಯಾದಿಯಲ್ಲಿ ಬೀಳುವ ಸ್ವರಾಘಾತ ಕರ್ಣನ ಮನಸ್ಸಿಗೆ ಸಂಬಂಧವನ್ನೂ ಸ್ವಾಮಿತ್ವವನ್ನೂ ಮನದಟ್ಟು ಮಾಡುವಂತಿದೆ. ಅಲ್ಲದೆ 'ನಿನ್ನ' 'ನಿನಗೆ' ಮುಂತಾಗಿ ಬಳಸಿದ ಸರ್ವನಾಮ ಶಬ್ದಗಳು ಕರ್ಣನನ್ನು ಅಭಿಮುಖೀಕರಣ ಮಾಡಿಕೊಂಡು, ಅವನಲ್ಲಿ ಆತ್ಮಪ್ರತ್ಯಯವನ್ನು ತುಂಬುದವಂತೆ, ಅವನ ಮನಸ್ಸಿನಲ್ಲಿ ಆಸೆ, ಆಕಾಂಕ್ಷೆಗಳು ಮೊಳೆಯುವಂತೆ ಸಮರ್ಥವಾಗಿ ಬಳಕೆಯಾಗಿವೆ. ದಿಟವಾಗಿ ಈ ವೃತ್ತ ತಾನು ಕಾಣುತ್ತಿರುವುದಕ್ಕಿಂತ ಹೆಚ್ಚು ವಿಸ್ತಾರವಾದದ್ದು" ಈ ರೀತಿಯಾಗಿ ಛಂದಸ್ಸಿನ ಸಾರ್ಥಕತೆಯನ್ನು ವಿವೇಚಿಸುವುದು ಶೈಲಿಗೆ ಸಂಬಂಧಪಟ್ಟ ವಿಷಯವಾಗಿದೆ. ಪದ್ಯದಲ್ಲಿ ಛಂದಃಕೌಶಲವೇ ಇಲ್ಲಿ ಶೈಲಿಯೆನಿಸುತ್ತದೆ.

ಲಯ-ಅಂಶ :

ಛಂದಸ್ಸು ಪದ್ಯಪ್ರಸಂಗದಲ್ಲಿ ಬಳಕೆಯಾಗುವ ಪ್ರಕ್ರಿಯೆ. ಪದ್ಯವೆನ್ನುವುದು ಪದಗಳ ಪ್ರಮಾಣ ಬದ್ಧ ನಡಿಗೆ. ಈ ಪ್ರಮಾಣಬದ್ಧ ನಡಿಗೆಯಲ್ಲಿ ಘಟಕಗಳು ರೂಪಪಡೆಯುತ್ತವೆ. ಪದ್ಯವನ್ನು ಒಂದು ಗತಿ ಅಥವಾ ಗತ್ತಿನಿಂದ ಓದಬೇಕಾಗುತ್ತದೆ. ಹಾಗೆ ಓದುವಾಗ ಆಘಾತಗಳು ಬೀಳುತ್ತ ಹೋಗುತ್ತವೆ. ಈ ಆಘಾತಗಳೇ ತಾಳ, ಎರಡು ಆಘಾತಗಳ ಮಧ್ಯಭಾಗವೇ ಲಯ. ಪದ್ಯವೆನ್ನುವುದು ಇಂಥ ಲಯಗಳ ಪರಂಪರೆಯಾಗಿರುತ್ತದೆ. ಈ ಲಯಗಳ ಸ್ವರೂಪ ಮತ್ತು ಸಂಯೋಜನೆಗಳ ಅಭ್ಯಾಸವೇ ಛಂದಸ್ಸು.

ಯಾವುದೇ ಪದ್ಯದಲ್ಲಿ ಲಯಗಳು ಒಂದೇಬಗೆಯವಾಗಿರಬಹುದು. ಇಲ್ಲವೆ ಒಂದಕ್ಕಿಂತ ಹೆಚ್ಚು ಬಗೆಯವಾಗಿರಬಹುದು. ಒಂದಕ್ಕಿಂತ ಹೆಚ್ಚು ಬಗೆಯವಾಗಿದ್ದರೂ ಅದರಲ್ಲಿಯೇ ಒಂದು ರೀತಿಯ ಕ್ರಮಬದ್ಧತೆ ಅವಶ್ಯಬೇಕು. ಉದಾ: "ತಿರುಕ । ನೊರ್ವ । ನೂರ । ಮುಂದೆ ।" ಎಂಬಲ್ಲಿ ೩ ಮಾತ್ರಾ ಪ್ರಮಾಣವಿದೆ. ಅಂದರೆ ಒಂದೇ ಗಾತ್ರದ ಲಯಗಳಿವೆ. ಈ ಬಳಿಕ "ಮುರುಕು । ಧರ್ಮ । ಶಾಲೆಯಲ್ಲಿ ।" ಎಂದು ೩ ಮಾತ್ರಾ ಪ್ರಮಾಣದ ಲಯಗಳೇ ಮುಂದುವರಿಯಬೇಕು. ಅದನ್ನು ಬಿಟ್ಟು "ಮುರುಕು। ಧರ್ಮದ । ಶಾಲೆ। ಯಲ್ಲಿ ।" ಎಂದು ಹೇಳಿದರೆ ಲಯ ಹಾಳಾಗಿ ಅದರ ಪದ್ಯತ್ವಕ್ಕೆ ಭಂಗಬರುತ್ತದೆ.

ಇದೇ ರೀತಿ "ಹಲಗೆ । ಬಳಪವ । ಪಿಡಿಯ । ದೊಂದ । ಗ್ಗಳಿಕೆ ।" ಎಂದು ಒಂದಕ್ಕಿಂದ ಹೆಚ್ಚು ಬಗೆಯ ಅಂದರೆ ೩ । ೪ ಎಂದು ಎರಡು ಬಗೆಯ ಲಯಗಳಿದ್ದರೂ ಒಂದು ಕ್ರಮದಲ್ಲಿಯೇ ಮುನ್ನಡೆಸಬೇಕು. ಅದನ್ನು ಬಿಟ್ಟು "ಹಲಗೆ । ಬಳಪಗಳ । ಪಿಡಿಯ । ದೊಂದ । ಗ್ಗಳಿಕೆ" ಎಂದು ಯೋಜಿಸಿಕೊಂಡರೆ ಅದರ ಲಯ ಹಾಳಾಗಿ ಪದ್ಯತ್ವಕ್ಕೆ ಭಂಗ ಬರುತ್ತದೆ. ಇದೆಲ್ಲವನ್ನು ನೋಡಿದರೆ ಪದ್ಯದಲ್ಲಿ ಲಯದ ಮಹತ್ವ ವ್ಯಕ್ತವಾಗುತ್ತದೆ. ಭಾಷೆಯಲ್ಲಿ ಅರ್ಥವತ್ತಾದ ಅತಿಸಣ್ಣ ಘಟಕ 'ಆಕೃತಿಮಾ' ಆಗಿರುವಂತೆ ಪದ್ಯದಲ್ಲಿ ಅರ್ಥವತ್ತಾದ ಅತಿ ಸಣ್ಣ ಘಟಕ 'ಲಯ' ಆಗಿರುತ್ತದೆ. ಆದುದರಿಂದ "Morpheme is the minimum meaingful Unit in the Verse" ಎನ್ನುವಂತೆ "Laya is the minimum meanigful Unit in the Verse"ಎಂದು ಹೇಳಬಹುದು.

ಲಯದಲ್ಲಿಯೇ ಮತ್ತೆ ಸಣ್ಣ ಘಟಕಗಳಿರುತ್ತವೆ. ಒಂದು ಗತ್ತಿನಲ್ಲಿ ಪದ್ಯವನ್ನು ನುಡಿಯುವಾಗ ಅವು ಗಮನಕ್ಕೆ ಬರುತ್ತವೆ. ಅದನ್ನು ನಮ್ಮವರು 'ಅಂಶ' ವೆಂದು ಕರೆದಿದ್ದಾರೆ. ಉದಾ: "ವೀರ । ನಾರಾ । ಯಣನೆ। ಕವಿ ಲಿಪಿ । ಕಾರ । ಕುವರ । ವ್ಯಾಸ।" ಎಂಬಲ್ಲಿ ೭ ಲಯಗಳಿವೆ. ಇವುಗಳಲ್ಲಿಯೇ

"ವೀ.ರ । ನಾ.ರಾ । ಯಣ.ನೆ। ಕವಿ. ಲಿಪಿ । ಕಾ.ರ । ಕುವ.ರ । ವ್ಯಾ.ಸ।" ಎಂಬ ಸಣ್ಣ ಘಟಕಗಳು ಅಂದರೆ ಅಂಶಗಳಿವೆ. ಇವುಗಳನ್ನು ದೊಡ್ಡ ಲಯ, ಸಣ್ಣಲಯವೆಂದು ಕರೆಯಬಹುದು.

೨ ಅಂಶ - U, UU.UU, UU.U, UU-, -UU, - - ಪದ್ಯದ ಓಟ ಲಯ ಪ್ರಧಾನವಾಗಿದ್ದರೆ ೬ ಮಾತ್ರೆ ಸಾಧ್ಯ. ಪದ್ಯದ ಓಟ ತಾಳಪ್ರಧಾನವಾಗಿದ್ದರೆ ೫ ಮಾತ್ರೆ ಸಾಧ್ಯ.

ಅಂಶ-ಲಯಗಳ ಪ್ರಮಾಣ ಸ್ವರೂಪ:

ಭಾಷಾಸಾಮಗ್ರಿಯಲ್ಲಿ ಮೂರ್ತಗೊಳ್ಳುವ ಅಂಶ ಮತ್ತು ಲಯ ಅಮೂರ್ತವಾದುವು. ಇವುಗಳಲ್ಲಿ ಲಯವೆನ್ನುವುದು ಅಂಶಗಳಿಂದ ಆಕಾರಪಡೆಯುವದರಿಂದ ಅಂಶದ ಪ್ರಮಾಣವನ್ನು ಕುರಿತು ಮೊದಲು ವಿವೇಚಿಸಬೇಕಾಗುತ್ತದೆ.

ಈ ವರೆಗೆ ಅಂಶದ ಬಗ್ಗೆ ಪ್ರತಿಪಾದಿತವಾದ ವಿಚಾರಗಳು ಹೀಗಿವೆ: ಅಂಶ ಎನ್ನುವುದು ಒಂದು ದೀರ್ಘದ್ದಿರುತ್ತದೆ. ಇಂಥ ಒಂದು ಎರಡು ಇಲ್ಲವೆ ಮೂರು ಅಂಶಗಳು ಸೇರಿ ಒಂದು ಲಯವಾಗುತ್ತದೆ. ಇಲ್ಲಿ (೧)ಲಯ ಆಕಾರ ಪಡೆಯುವಾಗ ಪ್ರಥಮ ಅಂಶದಲ್ಲಿ ಕಡ್ಡಾಯವಾಗಿ ಒಂದು ದೀರ್ಘ ಇಲ್ಲವೆ ಎರಡು ಹ್ರಸ್ವ ಇರಬೇಕು. ಮುಂದಿನ ಅಂಶಗಳಲ್ಲಿ ಈ ಕಡ್ಡಾಯವಿಲ್ಲ. ಅಂದರೆ(೨) ದ್ವಿತೀಯ ಅಂಶದಲ್ಲಿ ಒಂದು ದೀರ್ಘ ಇಲ್ಲವೆ ಒಂದು ಹ್ರಸ್ವ ಇರಬಹುದು. ತೃತೀಯ ಅಂಶದಲ್ಲಿಯೂ ಒಂದು ದೀರ್ಘ ಇಲ್ಲವೆ ಒಂದು ಹ್ರಸ್ವ ಇರಬಹುದು. ಇದರಿಂದ ಲಯದಲ್ಲಿ ಮೊದಲಿನ ಅಂಶ ಕಡ್ಡಾಯವಾಗಿ ನಿಸ್ತರಂಗ ಸ್ವರೂಪದ್ದು, ಆ ಮೇಲಿನ ಅಂಶಗಳು ನಿಸ್ತರಂಗವಾಗಿರಬಹುದು, ಇಲ್ಲವೆ ತರಂಗವಾಗಿರಬಹುದು ಎಂದು ಹೇಳಿದಂತಾಗುತ್ತದೆ.

ಹೆಸರ್ರಿ$_s$ಗಿ । ರಬ.ಕ್$_s$.ವಿ । ಮೊಸ.ರ್ರಿ$_s$.ಗಿ । ನೀ.ರ್ರಿ$_s$.ಲ್ಲ$_s$ ।

ಇಲ್ಲಿ ಪ್ರತಿಯೊಂದು ಲಯದ ಮೊದಲಿನ ಅಂಶಗಳೆಲ್ಲ ಎರಡು ಲಘು, ಒಂದು ಗುರುವಿನಿಂದ ನಿಸ್ತರಂಗವಾಗಿವೆ. ಆಮೇಲಿನ ೨ನೆಯ ಅಂಶ ಮೂರು ಕಡೆ ಮೂರನೆಯ ಅಂಶ ಒಂದೆಡೆ ತರಂಗದಿಂದ ಕೂಡಿವೆ.

ಶಾಸ್ತ್ರವೆನ್ನುವುದು ರಚನೆಯನ್ನು ಅವಲಂಬಿಸಿ ಹುಟ್ಟುತ್ತದೆ. ಕನ್ನಡದ ರಚನೆಗಳನ್ನು ಅವಲೋಕಿಸಿದಲ್ಲಿ ಮೇಲಿನ ಮೂರು ಕಡೆ ನಿಯಮಗಳನ್ನು ಮರುಪರಿಶೀಲಿಸಬೇಕೆನಿಸುತ್ತದೆ.

(೧) ಕಡಲಿಕಾ । ಳ್ಯತಿಂದು । ಮಡದ ನೀ । ರ್ಯಕುಡದು ।

ಎಂಬ ತ್ರಿಪದಿಯ ಮೊದಲಿನ ಸಾಲಿನಲ್ಲಿ । ಳ್ಯತಿಂದು । ಮತ್ತು । ರ್ಯಕುಡಿದು । ಎಂಬಲ್ಲಿ ಮೊದಲ ಅಂಶ ಒಂದು ಹ್ರಸ್ವಾಕ್ಷರವಾಗಿದೆ. ಇದನ್ನು ಜನಪದರು ದೀರ್ಘವಾಗಿ ಎಳೆಯುತ್ತಾರೆ. ಇಂಥ ಅನೇಕ ಉದಾಹರಣೆಗಳು ಜನಪದರಲ್ಲಿ ಸಿಗುತ್ತವೆ. ಇದನ್ನು ನೋಡಿದರೆ ಲಯದಲ್ಲಿಯ ಪ್ರಥಮ ಅಂಶ ಗುರು ಇಲ್ಲವೆ ಎರಡು ಲಘು ಇರಬೇಕೆಂಬ ಕಡ್ಡಾಯವೇನಿಲ್ಲವೆನಿಸುತ್ತದೆ. ಅಂದರೆ ಗುರು ಇಲ್ಲವೆ ಎರಡು ಲಘು ಇಲ್ಲವೆ ಒಂದು ಲಘು ಇರಬಹುದೆಂಬ ಹೊಸ ನಿಯಮ ಹೇಳಬೇಕಾಗುತ್ತದೆ. ತಮಿಳಿನಲ್ಲಿ ಇದೇ ನಿಯಮವಿದೆಯೆಂದು ಹೇಳುತ್ತಾರೆ.

(೨) ದ್ವಿತೀಯ ಅಂಶ ಒಂದು ದೀರ್ಘ ಇಲ್ಲವೆ ಒಂದು ಹ್ರಸ್ವವಾಗಿರಬೇಕೆಂದು ಈ ವರೆಗೆ ಹೇಳುತ್ತ ಬಂದಿರುತ್ತೇವೆ. ಆದರೆ

ಅತ್ತಿಯ । ಮನಿಯಾಗ । ಮುತ್ತಾಗಿ । ಇರಬೇಕ।

ಹೊತ್ತ ನೀ । ಡಿದರ । ಉಣಬೇಕ । ತವರವರ ।

ಉತ್ತಮ । ರೈಸರ । ತರಬೇಕ ।

ಎನ್ನುವಲ್ಲಿ । ತವರವರ । ಎಂಬ ಲಯದಲ್ಲಿ ದ್ವಿತೀಯ ಅಂಶ ಎರಡು ಹ್ರಸ್ವಗಳನ್ನೊಳಗೊಂಡಿದೆ. ಇಂಥ ಉದಾಹರಣೆಗಳು ಜನಪದ ರಚನೆಯಲ್ಲಿ ಹೆಜ್ಜೆ ಹೆಜ್ಜೆಗೂ ಸಿಗುತ್ತವೆ. ಆದುದರಿಂದ ಲಯದಲ್ಲಿಯ ದ್ವಿತೀಯ ಅಂಶದಲ್ಲಿ ಒಂದು ದೀರ್ಘ ಇಲ್ಲವೆ ಒಂದು ಹ್ರಸ್ವ ಇಲ್ಲವೆ ಎರಡು ಹ್ರಸ್ವ ಇರಬಹುದೆಂದು ಹೇಳಬೇಕಾಗುತ್ತದೆ.

(೩) ತೃತ್ತೀಯ ಅಂಶಕ್ಕೂ ಮೇಲೆ ಹೇಳಿದ ನಿಯಮವೇ ಅನ್ವಯವಾಗುತ್ತದೆ.

ಒಟ್ಟಿನಲ್ಲಿ ಲಯದ ಪ್ರಥಮ, ದ್ವಿತೀಯ, ತೃತೀಯ ಯಾವುದೇ ಅಂಶಸ್ಥಾನದಲ್ಲಿ ಒಂದು ದೀರ್ಘ, ಒಂದು ಹ್ರಸ್ವ ಇಲ್ಲವೆ ಎರಡು ಹೃಸ್ವ ಇರಬೇಕೆಂಬುದು ಸಾಮಾನ್ಯ ನಿಯಮವಿದೆ.

"ಒಮ್ಮನ.ಮ । ದ್ದೀಗಿ. ಬೆಂಕಿ ಒ.ಮ್ಮೀಲೆ । ಕೊ.ಟ್ಟಂ.ಗ ।

ತ.ಮ್ಮನ. । ಹೊಟ್ಟಿ । ತಳ.ಮ.ಳಿಸೆ । ಅಕ್ಕ.ನನ.ಗ ।

ರ.ಮ್ಮಿಸಿ । ಹಣ್ಣ. । ಕೊಡತಿದ್ದೆ ।" ಎಂಬಂತೆ

- UUU,   UUUU

ಒ.ಮ್ಮನ. ಮ । ತಳ. ವಳಿ.ಸೆ । ಎಂಬಂತೆ ದ್ವಿತೀಯ ಅಂಶ ಎರಡು ಲಘುಗಳನ್ನೊಳಗೊಂಡಿದ್ದರೆ

-U

।ಅಕ್ಕ. ನನ.ಗ। ಎಂಬ ಲಯ ಪ್ರಥಮ, ದ್ವಿತೀಯ ಅಂಶಗಳು ಕ್ರಮವಾಗಿ -U,UU ಒಳಗೊಂಡುದನ್ನು ನೋಡಿದರೆ 'ಸಣ್ಣಲಯ'ದಲ್ಲಿ ಇಷ್ಟೇ ಅಕ್ಷರ ಬರಬೇಕು, ಇಂಥ ಅಕ್ಷರಗಳೇ ಬರಬೇಕೆಂಬ ನಿಯಮವಿಲ್ಲ. ಅಲ್ಲಿ ಲಯ ಘಟಕ ನಿರ್ದಿಷ್ಟವಾಗಿದ್ದು, ಅಲ್ಲಿ ಬೇಕಾದ ಅಕ್ಷರಗಳನ್ನು, ಬೇಕಾದಷ್ಟು ಸಂಖ್ಯೆಯಲ್ಲಿ ತುಂಬುವ ಮುಕ್ತ ಅವಕಾಶವಿದೆಯೆಂದು ಹೇಳಬೇಕಾಗುತ್ತದೆ. ಇದು ಮೂಲತಃ ಇದ್ದ ನಿಯಮ.

ಕಾಲಕ್ರಮದಲ್ಲಿ ಮಾತ್ರಾಛಂದಸ್ಸು ಪ್ರವೇಶಿಸುವಲ್ಲಿ ಅಕ್ಷರಗಳ ಮಾತ್ರಾಮೌಲ್ಯ ನಿರ್ದಿಷ್ಟವಾದವು. ಅಕ್ಷರಗಳನ್ನು ಹಿಗ್ಗಿಸುವುದು, ಕುಗ್ಗಿಸುವುದೂ ನಿಂತು ಹೋಯಿತು. ಆಗ ಈ ಲಯಗಳು ಮಾತ್ರಾಮೌಲ್ಯ ನಿಷ್ಠವಾದವು. ಆದುದರಿಂದ ಮೊದಲಿನದನ್ನು 'ಅಂಶಲಯ'ವೆಂದು, ಎರಡನೆಯದನ್ನು 'ಮಾತ್ರಾಲಯ'ವೆಂದೂ ಕರೆಯುತ್ತಾರೆ.(ಇಲ್ಲಿ ಲಯಕ್ಕಿಂತ ತಾಳ ಸ್ಫುಟವಾಗಿ ಕೇಳುವುದರಿಂದ ತಾಳ ಪ್ರಧಾನ, ಲಯ ಅರ್ಥದಲ್ಲಿ ಪ್ರಧಾನ ಲಯ ಎಂದೂ ಕರೆಯಬಹುದು). ಒಂದು ಮಾತು : ಇಲ್ಲಿ ಎರಡೂ ಬಗೆಗಳ ನಡಿಗೆ ಒಂದೇ ರೀತಿಯಾಗಿದೆ.

■■

ಆಕರ : ಮಾರ್ಗ ಸಂಪುಟ–೮

೮೬

ಅಂಶಗಣ ಇತಿಹಾಸ

"ಛಂದಸ್ಸಿನ ಮೂಲತತ್ವಗಳನ್ನು ಗುರುತಿಸುವ, ವಿವರಿಸುವ ಕಾಲ ಇನ್ನೂ ಬಂದಿಲ್ಲ. ಅವಶ್ಯಕ ಪರಿಕರಗಳು ಸಾಲದಿರುವದು, ಸರಿಯಾಗಿ ಪ್ರಾಥಮಿಕ ಅಭ್ಯಾಸ ನಡೆಯದಿರುವುದು, ಮಿಗಿಲಾಗಿ ಅಭಿರುಚಿ ಕಡಿಮೆಯಾಗಿರುವುದು ಇದಕ್ಕೆ ಕಾರಣವಾಗಿರಬಹುದು."[೧]

ನಮ್ಮಲ್ಲಿ ನಡೆದ ಛಂದಸ್ಸಿನ ಅಭ್ಯಾಸದ ಬಗ್ಗೆ ೧೯೬೦ರಲ್ಲಿ ಹೇಳಿದ ಮಾತಿದು. ಅಂಶಛಂದಸ್ಸಿನ ಅಭ್ಯಾಸದ ವಿಷಯವಾಗಿ ಈ ಮಾತು ಇನ್ನೂ ಸತ್ಯವಾದುದು. ಅಂಶ ಛಂದಸ್ಸಿನ ಬಗೆಗೆ ಮೊದಲು ವಿವೇಚಿಸಿದವರು ಬಿ.ಎಂ.ಶ್ರೀ. ಕನ್ನಡ ಛಂದಸ್ಸಿನ ತಿಳುವಳಿಕೆ ಅಸ್ಪಷ್ಟವಾಗಿದ್ದ, ಅಭ್ಯಾಸ ಅಸಮರ್ಪಕವಾಗಿದ್ದ ಕಾಲವದು. ಆಗ ಹೇಳಿದ ಬಿ.ಎಂ.ಶ್ರೀ ಮಾತು, ಮಾರ್ಗವಾಗಿ ಪರಿಣಮಿಸಿತು, ಆಮೇಲೆ ಡಾ. ಡಿ.ಎಸ್.ಕರ್ಕಿ, ತೀ.ನಂ.ಶ್ರೀ., ಶಿವರಾಮ ಐತಾಳ, ಟಿ. ವ್ಹಿ.ವೆಂಕಟಾಚಲಶಾಸ್ತ್ರೀ ಮೊದಲಾದವರು ಒಂದೆರಡು ಹೊಸ ಸೂಚನೆಗಳನ್ನು ಮಂಡಿಸಿದರೂ ಬಿ.ಎಂ. ಶ್ರೀ ಮಾರ್ಗವೇ ಇವರಿಗೆ ಮೂಲಧನವಾಗಿ ನಿಂತಿದೆ. ಈಗ ಎಲ್ಲ ದ್ರಾವಿಡ ಭಾಷೆಗಳನ್ನು ಕಣ್ಣು ಮುಂದಿಟ್ಟುಕೊಂಡು ಅಂಶಛಂದಸ್ಸಿನಲ್ಲಿ ಸಂಶೋಧನೆ ನಡೆಸುವುದು ಅತ್ಯವಶ್ಯವಾಗಿದೆ. ಈ ಹಿನ್ನೆಲೆಯಲ್ಲಿ ಒಂದೆರಡು ಹೊಸ ಸಂಗತಿಗಳನ್ನು ಇಲ್ಲಿ ಮಂಡಿಸಬಹುದಾಗಿದೆ.

ಪದ್ಯವನ್ನು ಲಯಬದ್ಧವಾಗಿ ಹೇಳುತ್ತ ಹೋದ ಹಾಗೆ ತಾಳಗಳು ಬೀಳುತ್ತ ಹೋಗುತ್ತವೆ. ಇಂಥ ಎರಡು ತಾಳಗಳ ಮಧ್ಯಭಾಗವೇ ಲಯ. ಈ ಲಯದಲ್ಲಿ ಮತ್ತೆ ಒಳಲಯಗಳು ಗೋಚರಿಸುತ್ತದೆ. ಉದಾ :

|ಅ. ಕ್ಕ. ತಂ| ಗೆರ. ಬ. ಣ್ಣ| ಅವ. ರಿ. ಹೂ| ವಿನ. ಬ. ಣ್ಣ|

ಇಲ್ಲಿ ಕೊರೆದ ಗೆರೆಗಳು ತಾಳ. ಎರಡು ಗೆರೆಗಳ ಮಧ್ಯಭಾಗ ಲಯ. ಈ ಲಯಗಳಲ್ಲಿ ಬಿಂದುಗಳಿಂದ ತೋರಿಸಿದ ಒಂದೊಂದು ಘಟಕ ಒಳಲಯಗಳು. ಛಂದಸ್ಸಿನ ಪರಿಭಾಷೆಯಲ್ಲಿ ಹೇಳುವುದಾದರೆ ಈ ಹೊರಲಯಗಳೇ ಗಣ; ಒಳಲಯಗಳೇ ಅಂಶ.

---

೧. ಕೆ. ಶಿವರಾಮ ಐತಾಳ, ಅಂಶಲಯ ವಿಚಾರ (ಹೊಸ ಬೆಳಕು, ಪು ೧೩೧).
(ಅ) ಪ್ರಥಮಾಂಶದಲ್ಲಿ ಒಂದು ಗುರು ಇಲ್ಲವೆ ಎರಡು ಲಘು ಬರಬೇಕು. ಪ್ರಥಮೇತರಾಂಶಗಳಲ್ಲಿ ಒಂದು ಗುರು ಇಲ್ಲವೆ ಒಂದು ಲಘು ಬರಬೇಕು. ಈ ಎರಡು ನಿಯಮಗಳ ಪರಿಷ್ಕರಣ ಕಾರ್ಯನಡೆಯಬೇಕಾಗಿದೆ. (ಆ) ಮಾತ್ರಾ ಛಂದಸ್ಸಿನ ಪರಿಭಾಷೆಯಿಂದ ಅಂಶಛಂದಸ್ಸನ್ನು ಬೋಧಿಸುವುದು ಎಷ್ಟುಮಟ್ಟಿಗೆ ಸಾಧುವೆಂಬುದನ್ನು ವಿವೇಚಿಸಬೇಕಾಗಿದೆ.

ಮೂಲತಃ ಒಂದು ಅಂಶವೆನ್ನುವುದು ಒಂದು ಗುರುವಿಗೆ[೨] ಸಮಾನವಾದುದು. ಇಂಥ ಎರಡು ಅಂಶಗಳಿಂದ ಕೂಡಿದುದು ಬ್ರಹ್ಮಗಣ, ಮೂರು ಅಂಶಗಳಿಂದ ಕೂಡಿದುದು ವಿಷ್ಣುಗಣ. ಇವುಗಳನ್ನು ಹೀಗೆ ಬರೆಯಬಹುದು.

I – –.– –.I ಬ್ರಹ್ಮಗಣ

I – –.– –.– –I ವಿಷ್ಣುಗಣ

ನಾಲ್ಕು ಅಂಶ (–.–.–.–)ಗಳ ರುದ್ರಗಣವನ್ನು ನಾಗವರ್ಮ ಮೊದಲುಮಾಡಿ ಆಧುನಿಕ ವಿದ್ವಾಂಸರು ಹೇಳುವರಾದರೂ ರುದ್ರಗಣವೆಂಬುದು ಸಾಧ್ಯವಿಲ್ಲವೆಂದು ನನ್ನ ಅನಿಸಿಕೆ. ಅದು ಚರಣಮಧ್ಯದಲ್ಲಿ ಬಂದರೆ ಎರಡು ಬ್ರಹ್ಮವಾಗುವುದೂ[೩] ಚರಣಾಂತ್ಯದಲ್ಲಿ ಬಂದರೆ ವಿ+ – ಆಗುವುದೂ ಈ ಅನಿಸಿಕೆಗೆ ಕಾರಣ. ಕರ್ನಾಟ ವಿಷಯಜಾತಿವೃತ್ತಗಳಲ್ಲಿ ರುದ್ರಗಣ ಒಮ್ಮೆಯೂ ಮಧ್ಯ ಬಂದಿಲ್ಲ. ಕ್ವಚಿತ್ತಾಗಿ ಕೊನೆಗೆ ಬಂದಿದೆ ಎಂಬುದನ್ನೂ, ಹಾಗೆ ಬಂದಾಗ ಅದು '1ವಿ+1ಗು. ಆಗಿ ಒಡೆದುಕೊಳ್ಳುವುದನ್ನೂ ಇಲ್ಲಿ ನೆನೆಯಬಹುದು. ಒಟ್ಟಿನಲ್ಲಿ ಅಂಶಗಣಗಳು ಎರಡು ಮಾತ್ರ. ಅವು: ಬ್ರಹ್ಮಗಣ, ವಿಷ್ಣುಗಣ. ಈ ಗಣಗಳು ತಮ್ಮ ಜೀವನೇತಿಹಾಸದಲ್ಲಿ ಅನುಭವಿಸಿದ ಎರಡು ಅವಸ್ಥೆಗಳು ಹೀಗಿವೆ:

ಪ್ರಥಮ ಅವಸ್ಥೆ

ಮೂಲತಃ ಅಂಶವೆನ್ನುವುದು 'ಗುರುವ್ಯಾಪ್ತಿ'ಯದೆಂಬ ಭಾವನೆಯಿಂದ ಕೇವಲ ಗುರುವರ್ಣಗಳಿಂದ ಗಣ ಕಟ್ಟುವುದು ಅಸಾಧ್ಯ; ಎಲ್ಲ ಲಘುವರ್ಣಗಳನ್ನು ಎಳೆದು ಗುರುವನ್ನಾಗಿಸುವುದೂ ಅಸಾಧ್ಯ. ಈ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಅರಿಯಬೇಕಾದರೆ ಗಣದ ಆದಿ, ಮಧ್ಯ, ಅಂತ್ಯ ಅಂಶಗಳ ಸ್ವರೂಪವನ್ನು ಮೊದಲು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

೧. ಆದಿ ಅಂಶ : ಲಯಬದ್ಧವಾಗಿ ಪದ್ಯ ಹೇಳುವಾಗ ತಾಳವು ಗಣದ ಪ್ರಾರಂಭದಲ್ಲಿಯೇ ಬೀಳುತ್ತದೆ. ತಾಳದ ಈ ಭಾರವನ್ನು ಹೊರಬೇಕಾದುದರಿಂದ ಗಣದ ಪ್ರಥಮಾಂಶ ಗುರುವಾಗಿರಲೇಬೇಕು; ಇಲ್ಲವೆ 'ಗುರುವ್ಯಾಪ್ತಿಗೆ' ಸರಿಹೋಗುವ ಹಾಗೆ ಎರಡು ಲಘುವಿರಬೇಕು.[೪] ಈ ಕಡ್ಡಾಯ ಕಾರಣವಾಗಿ ಪ್ರಥಮಾಂಶದಲ್ಲಿ ಧ್ವನಿತರಂಗಕ್ಕೆ ಅವಕಾಶವಿರುವುದಿಲ್ಲ.

೨. ಅಂತ್ಯ ಅಂಶ : ಬ್ರಹ್ಮದ ಎರಡನೆಯ ಅಂಶ, ವಿಷ್ಣುವಿನ ಮೂರನೆಯ ಅಂಶಗಳು ಗಣದ ಅಂತ್ಯ ಅಂಶಗಳೆನಿಸುತ್ತವೆ. ಇವು ಗುರುವರ್ಣವಿದ್ದರಂತೂ ಸರಿಯೇ, ಲಘು ವರ್ಣವಿದ್ದರೆ ಗಣದಿಂದ ಗಣಕ್ಕೆ ದಾಟಬೇಕಾಗುವ ಕಾರಣ ನಮಗರಿಯದಂತೆ ತಂತಾನೇ ಗುರುವರ್ಣವಾಗಿಬಿಡುತ್ತವೆ. ಅಂದರೆ ಅಂತ್ಯ ಅಂಶದಲ್ಲಿ ಧ್ವನಿತರಂಗಕ್ಕೆ ಅವಕಾಶವುಂಟು.

---

೨. ಇಲ್ಲಿ 'ಗುರು' ಶಬ್ದಕ್ಕೆ ಬದಲು 'ದೀರ್ಘ' ಶಬ್ದವನ್ನು ಬಳಸುವುದು ಹೆಚ್ಚು ಶಾಸ್ತ್ರೀಯ.

೩. ಚರಣಮಧ್ಯದಲ್ಲಿ '೧ವಿ+೧ಗು' ಬಂದಿದ್ದರೆ ವಾಸ್ತವವಾಗಿ ಅಲ್ಲಿ ಚರಣ ಮುಗಿದಿರುತ್ತದೆ.

೪. ಪ್ರಥಮೇತರಾಂಶದಂತೆ ಪ್ರಥಮಾಂಶವೂ ಒಂದು ಗುರುವಾಗಿರಬಹುದು; ಇಲ್ಲವೆ ಲಘುವಾಗಿರಬಹುದು ಎಂಬ ನಿಯಮ ತೀರ ಪ್ರಾಚೀನ ಕಾಲದಲ್ಲಿದ್ದಿತೇನೋ, ತಮಿಳು ಛಂದೋಗ್ರಂಥಗಳಲ್ಲಿ ಇದಕ್ಕೆ ಮನ್ನಣೆಯಿದೆ. ಕನ್ನಡ ಜನಪದಸಾಹಿತ್ಯದಲ್ಲಿಯೂ ಇದಕ್ಕೆ ನಿದರ್ಶನಗಳು ಸಿಗುತ್ತವೆ.
ಉದಾ: lಕಡ. ಲಿs. ಕಾlಳs.ತಿಂ. ದುlಮಡ. ದs. ನೀlರs.ಕು. ಡ್ದು!

೩. ಮಧ್ಯ ಅಂಶ : ಇದು ವಿಷ್ಣು ಗಣದ ಎರಡನೆಯ ಅಂಶ. ಗುರುವಿದ್ದರಂತೂ ಸರಿಯೇ. ಲಘುವಿದ್ದರೆ ಮಾತ್ರ ಅದನ್ನು ಗುರುವಿನಷ್ಟು ಹಿಗ್ಗಿಸಿ ಅಂಶ ಬೆಲೆಗೆ ಒಗ್ಗಿಸಬೇಕಾಗುತ್ತದೆ. ಉದಾ:

।ಹೆಸ.ರಿs. ಗಿ। ರಬ. ಕs.ವಿ। ಮೊಸ. ರಿs. ಗಿ। ನೀ. ರಿ. ಲ್ಲ।

ಇಲ್ಲಿ ರಿs, ಕs ರಿsಗಳು ಹಿಗ್ಗಿದುದನ್ನು ಗಮನಿಸಬೇಕು. ಅಂದರೆ ಮಧ್ಯ ಅಂಶದಲ್ಲಿಯೂ ಧ್ವನಿತರಂಗಕ್ಕೆ ಅವಕಾಶವಿದೆ; ಅದು ಸ್ಪಷ್ಟವಾಗಿಯೂ ಗಮನಕ್ಕೆ ಬರುತ್ತದೆ. ಈ ಹಿನ್ನೆಲೆಯಲ್ಲಿ ಬ್ರಹ್ಮ, ವಿಷ್ಣು ಗಣಗಳ ಸಾಧ್ಯತೆಗಳು ಹೀಗಾಗುತ್ತವೆ:

ಬ್ರಹ್ಮ ಗಣ	ವಿಷ್ಣು ಗಣ
–. –.	–. –. –.
	–. –. ∪s (ತರಂಗಗಣ)
∪∪ . –	∪∪ . – . –
	∪∪. – . ∪s (ತರಂಗಗಣ)
–. ∪s. (ತರಂಗಗಣ)	–. ∪s. – (ತರಂಗಗಣ)
	–. ∪s. ∪s (ತರಂಗಗಣ)
∪s. ∪s (ತರಂಗಗಣ)	∪∪. ∪s. – (ತರಂಗಗಣ)
	∪∪. ∪s. ∪s. (ತರಂಗಗಣ)

ಬ್ರಹ್ಮ೪, ವಿಷ್ಣು ೮ - ಈ ಹನ್ನೆರಡು ಮೂಲ ಅಂಶಗಣಗಳು. ಇವುಗಳಲ್ಲಿ ಎಂಟು (ಬ್ರಹ್ಮ ೨, ವಿಷ್ಣು ೬) ತರಂಗಗಣಗಳಿವೆ. ಈ ಹನ್ನೆರಡು ಗಣಗಳ ಅನೇಕ ರೀತಿಯ ಸಂಯೋಜನೆಯಿಂದ ರೂಪಗೊಳ್ಳುವ ಅನೇಕ ಉದ್ದಳತೆಯ ಚರಣಗಳನ್ನು ಎಣಿಸಿ ಹೇಳುವ ಕಾರ್ಯ ಈ ವರೆಗೂ ನಡೆದಿಲ್ಲ. ಗಣಿತದೃಷ್ಟಿಯಿಂದ ಹೇಳುವುದಾದರೆ ಅಂಶವೃತ್ತದ ಅತಿ ಸಣ್ಣ ಚರಣ ೧ ಗಣದ್ದು, ಅಂದರೆ ೨ ಅಂಶಗಳದ್ದು. ಒಮ್ಮೆ ಬಂದ ಗಣ ಇನ್ನೊಮ್ಮೆ ಬರದಂತೆ ಯೋಜಿಸಿದರೆ ಅತಿ ದೊಡ್ಡ ಚರಣ ೧೨ ಗಣದ್ದು, ಅಂದರೆ ೩೨ ಅಂಶ (ಬ್ರಹ್ಮದ ೮ ಅಂಶ, ವಿಷ್ಣುವಿನ ೨೪ ಅಂಶ)ಗಳದ್ದು. ಈ ೨ ಅಂಶದಿಂದ ೩೨ ಅಂಶಗಳ ವರೆಗಿನ ಅನೇಕ ರೀತಿಯ ಸಂಯೋಜನೆಯಿಂದ ಒಟ್ಟು ೧, ೩೦, ೨೦, ೬೧, ೩೪೪ ಬಗೆಯ ಚರಣಗಳಾಗುತ್ತವೆ.

ಒಂದು ವೇಳೆ ಇಲ್ಲಿಯ ಪ್ರತಿಯೊಂದು ಚರಣದ ಕೊನೆಗೆ ಒಂದು ಅಂಶವನ್ನು ಹೆಚ್ಚಿಗೆ ಸೇರಿಸಿದರೆ ಈ ಚರಣಸಂಖ್ಯೆ ದ್ವಿಗುಣಿತಗೊಂಡು ೨೬೦, ೪೧, ೨೨, ೬೮೮ ಆಗುತ್ತದೆ. ಒಮ್ಮೆ ಬಂದ ಗಣ ಇನ್ನೊಮ್ಮೆ ಬರಲು ಅವಕಾಶ ಕೊಟ್ಟರೆ ಈ ಸಂಖ್ಯೆ ೨, ೨೯, ೬೬, ೩೬, ೧೪, ೮೬, ೪೨೮ನ್ನು ತಲುಪುತ್ತದೆ. ಇಲ್ಲಿಯೂ

ಪ್ರತಿಯೊಂದು ಚರಣದ ಕೊನೆಗೆ ಒಂದು ಅಂಶವನ್ನು ಹೆಚ್ಚಿಗೆ ಸೇರಿಸಿದರೆ ಈ ಚರಣಸಂಖ್ಯೆಯೂ ದ್ವಿಗುಣಿತಗೊಂಡು ೪, ೫೯, ೩೨, ೭೨, ೨೯, ೭೨, ೮೫೬ ಆಗುತ್ತದೆ.[೫]


ಹೀಗೆ ಮೂಲದ ೪ ಬ್ರಹ್ಮಗಣ ೮ ವಿಷ್ಣುಗಣಗಳನ್ನು ಪುನರುಕ್ತವಾಗದಂತೆ ಪುನರುಕ್ತವಾಗುವಂತೆ ಬಳಸಿಕೊಂಡು, ಬೇಕಿದ್ದರೆ ಚರಣಾಂತ್ಯದಲ್ಲಿ ಒಂದು ಅಂಶವನ್ನು ಹೊಂದಿಸಿಕೊಂಡು ಅನೇಕ ಉದ್ದಳತೆಯ ಚರಣಗಳು ರೂಪಗೊಳ್ಳುತ್ತಿದ್ದ ಕಾಲವೊಂದಿತ್ತು.[೬] ಆಗ ಅಂಶವೃತ್ತಗಳು ತರಂಗದಿಂದ ತೊನೆಯುತ್ತಿದ್ದವು. ಇದು ಅಂಶಗಣಗಳ ಬಳಕೆಯ ಪ್ರಥಮ ಅವಸ್ಥೆ.

ದ್ವಿತೀಯ ಅವಸ್ಥೆ

ಈ ರೀತಿ ಮೂಲ ಅಂಶಗಣಗಳು ವ್ಯವಹರಿಸುತ್ತಿರುವಾಗ ಸಂಸ್ಕೃತದ ಅಕ್ಷರಗಣ ಮತ್ತು ಪ್ರಾಕೃತದ ಮಾತ್ರಾಗಣಗಳು ನಮ್ಮ ನಾಡನ್ನು ಪ್ರವೇಶಿಸಿದವು. ಇವುಗಳಲ್ಲಿ ಅಕ್ಷರ ಗಣದ ಪ್ರಭಾವಕ್ಕೆ ಪಕ್ಕಾಗದ ಅಂಶಗಣಗಳು, ಅನಿವಾರ್ಯವಾಗಿ ಮಾತ್ರಾಗಣದ ಪ್ರಭಾವಕ್ಕೆ ಗುರಿಯಾದವು. ಇದಕ್ಕೆ ಕಾರಣ, ಅಂಶಛಂದಸ್ಸಿನಂತೆ ಮಾತ್ರಾ ಛಂದಸ್ಸೂ ಲಯಾನುವರ್ತಿಯಾಗಿರುವುದು.

ಈಗ ತರಂಗಗುಣವಿಲ್ಲದ ಪ್ರಥಮಾಂಶ ಹಾಗೆಯೇ ಉಳಿದು, ತರಂಗಗುಣವುಳ್ಳ ಪ್ರಥಮೇತರ ಅಂಶಗಳಲ್ಲಿ ಮಾತ್ರಾಛಂದಸ್ಸಿನ ಪ್ರಭಾವ ಪ್ರವೇಶಮಾಡಿತು. ಅಂದರೆ ಪ್ರಥಮೇತರಾಂಶಗಳಲ್ಲಿ ಒಂದು ಗುರುವಿನ (=ಗುರು ಅಂಶದ) ಬದಲು ಎರಡು ಲಘು ಬರುವುದು ರೂಢಗೊಂಡಿತು.[೭] ಇದರಿಂದ ಮೂಲ ಅಂಶಗುಣಗಳು ಮಾತ್ರಾನಿಷ್ಠ ಅಂಶಗಳಾಗಿ ಬ್ರಹ್ಮ ವಿಷ್ಣುಗಳ ಗಣಸಾಧ್ಯತೆಗಳು ಕೆಳಗಿನಂತೆ ಬೆಳೆದು ನಿಂತವು.

ಬ್ರಹ್ಮಗಣ



೫. ಶ್ರಮವಹಿಸಿ ಈ ಲೆಕ್ಕ ಮಾಡಿಕೊಟ್ಟವರು ಕರ್ನಾಟಕ ವಿಶ್ವವಿದ್ಯಾಲಯ ಗಣಿತ ವಿಭಾಗದ ಪ್ರಾಧ್ಯಾಪಕರಾದ ಸ್ನೇಹಿತ ಡಾ. ವ್ಹಿ. ಎನ್ ಕುಲಕರ್ಣಿಯವರು.


೬. ನಮಗೆ ಗೊತ್ತಿರುವಂತೆ ಇವುಗಳಲ್ಲಿ ಈಗ ಶುದ್ಧ ಅಂಶನಿಷ್ಠವಾಗಿರುವುದೆಂದರೆ ಸಾಂಗತ್ಯವೃತ್ತ. ಆದರೆ ಕೆಲವರು ಇಲ್ಲಿಯೂ ಅಂಶನಿಯಮ ಮೀರಿದ್ದಾರೆ.

೭. ಈ ಸಂಗತಿಯನ್ನು ಕೈಪಿಡಿಕಾರರು, ಡಾ. ಡಿ.ಎಸ್.ಕರ್ಕಿ ಅವರು ಗುರುತಿಸಿದ್ದಾರೆ. ನೋಡಿರಿ ; ಕನ್ನಡ ಕೈಪಿಡಿ (೧೯೫೫) ಪು. ೯೯, ಕನ್ನಡ ಛಂದೋವಿಕಾಸ (೧೯೫೬) ಪು. ೬೬-೬೭

ಹೀಗೆ 4 ಮೂಲಬ್ರಹ್ಮಗಣಗಳ ಜೊತೆಗೆ 2 ಮಾತ್ರಾನಿಷ್ಠ ಬ್ರಹ್ಮಗಣಗಳು ಹೊಸದಾಗಿ ಹುಟ್ಟಿ, ಬ್ರಹ್ಮಗಣದ ಸಂಖ್ಯೆ 4 ರಿಂದ 6ಕ್ಕೇರಿತು. ಇಲ್ಲಿ ಮೂಲದ ಎರಡೂ ತರಂಗಗಣಗಳು ನಿಸ್ತರಂಗವಾದವು. ಇದೇ ರೀತಿ ಮೂಲದ ವಿಷ್ಣುಗಣಗಳು ಕೆಳಗಿನಂತೆ ಬೆಳೆದು ನಿಂತವು:

ವಿಷ್ಣುಗಣ

ಮೂಲ ಅಂಶಗಣ — ಮಾತ್ರಾನಿಷ್ಠ ಅಂಶಗಣ



ಹೀಗೆ ೮ ಮೂಲ ವಿಷ್ಣುಗಣಗಳ ಜೊತೆಗೆ ೧೦ ಮಾತ್ರಾನಿಷ್ಠ ವಿಷ್ಣುಗಣಗಳು ಹೊಸದಾಗಿ ಹುಟ್ಟಿ, ವಿಷ್ಣುಗಣದ ಸಂಖ್ಯೆ ೮ ರಿಂದ ೧೮ಕ್ಕೇರಿತು. ಇಲ್ಲಿ ಮೂಲದ ೬ ತರಂಗಗಣಗಳು ನಿಸ್ತರಂಗವಾದವು.

ಒಟ್ಟಿನಲ್ಲಿ ಮೂಲದ ಬ್ರಹ್ಮ, ವಿಷ್ಣುವೆಂಬ ಎಲ್ಲ ೧೨ ಗಣಗಳಿಗೆ ಬದಲಾಗಿ ಮೂಲ ಮತ್ತು ಮಾತ್ರಾನಿಷ್ಠ ಬ್ರಹ್ಮ ವಿಷ್ಣುವೆಂಬ ೨೪ ಗಣಗಳು ವ್ಯವಹರಿಸತೊಡಗಿದವು. ಈಗ ಎಲ್ಲ ೮ ತರಂಗಗಣಗಳು ನಿಸ್ತರಂಗವಾದವು.

ಗಣಿತ ದೃಷ್ಟಿಯಿಂದ ಹೇಳುವುದಾದರೆ ಮೂಲ ಮತ್ತು ಮಾತ್ರಾನಿಷ್ಠ ಅಂಶ ವೃತ್ತದ ಅತಿ ಸಣ್ಣ ಚರಣ ೧ ಗಣದ್ದು, ಅಂದರೆ ೨ ಅಂಶದ್ದು. ಒಮ್ಮೆ ಬಂದ ಗಣ ಇನ್ನೊಮ್ಮೆ ಬರದಂತೆ ಯೋಜಿಸಿದರೆ ಅತಿ ದೊಡ್ಡ ಚರಣ ೨೪ ಗಣದ್ದು. ಅಂದರೆ ೬೬ ಅಂಶದ್ದು (ಬ್ರಹ್ಮದ ೧೨ ಅಂಶ, ವಿಷ್ಣುವಿನ ೫೪ ಅಂಶ).ಈ ೨

---

* ಈ ನಾಲ್ಕು, ಮಾತ್ರಾನಿಷ್ಠ ಅಂಶಗಣಗಳಾಗಿದ್ದರೂ ಇಲ್ಲಿ ಲಘು ಅಂಶಗಳು ಉಳಿದುಕೊಂಡು ತರಂಗಕ್ಕೆ ಅವಕಾಶವುಂಟು.

ಅಂಶ, ೬೬ ಅಂಶಗಳ ಸಂಯೋಜನೆಯಿಂದ ಅಗಣಿತ ಬಗೆಯ ಚರಣಗಳಾಗುತ್ತವೆ. ಒಂದು ವೇಳೆ ಇಲ್ಲಿಯ ಪ್ರತಿಯೊಂದು ಚರಣದ ಕೊನೆಗೆ ೧ ಅಂಶವನ್ನು ಹೆಚ್ಚಿಗೆ ಸೇರಿಸಿದರೆ ಈ ಸಂಖ್ಯೆ ದ್ವಿಗುಣಿತಗೊಳ್ಳುತ್ತದೆ. ಒಮ್ಮೆ ಬಂದ ಗಣ ಇನ್ನೊಮ್ಮೆ ಬರಲು ಅವಕಾಶ ಮಾಡಿಕೊಟ್ಟರೆ ಈ ಸಂಖ್ಯೆ ಅಗಣಿತದಿಂದ ಅನಂತಕ್ಕೇರುತ್ತದೆ. ಇಲ್ಲಿಯೂ ಪ್ರತಿಯೊಂದು ಚರಣದ ಕೊನೆಗೆ ಒಂದು ಅಂಶವನ್ನು ಹೆಚ್ಚಿಗೆ ಸೇರಿಸಿದರೆ ಈ ಅನಂತ ಸಂಖ್ಯೆ ದ್ವಿಗುಣಿತಗೊಳ್ಳುತ್ತದೆ.

ಹೀಗೆ ೬ ಬ್ರಹ್ಮಗಣ ೧೮ ವಿಷ್ಣುಗಣಗಳನ್ನು ಪುನರುಕ್ತವಾಗದಂತೆ, ಪುನರುಕ್ತವಾಗುವಂತೆ ಯೋಜಿಸಿಕೊಂಡು, ಬೇಕಿದ್ದರೆ ಚರಣಾಂತ್ಯದಲ್ಲಿ ಒಂದು ಗುರುವನ್ನು ಹೊಂದಿಸಿಕೊಂಡು, ಅನೇಕ ಉದ್ದಳೆಯ ಚರಣಗಳನ್ನು ರೂಪಿಸಿಕೊಳ್ಳಲು ಪ್ರಾರಂಭಮಾಡಿದರು.

ಈ ಗಣಗಳ ಬಳಕೆ ವರ್ಧಿಸಿದಂತೆ ಅಂಶಗಣಗಳ ಶರೀರದಲ್ಲಿ ಈ ಕೆಳಗಿನ ಕೆಲವು ವ್ಯತ್ಯಾಸಗಳು ತಲೆದೋರಿದವು.

೧. ವೃತ್ತಗಳಲ್ಲಿಯ ಮೂಲ ಅಂಶಗಣಗಳು ಪಾಠಾಂತರ ಮಾಡಿಕೊಂಡು ಮಾತ್ರಾನಿಷ್ಠ ಅಂಶಗಣಗಳಾಗತೊಡಗಿದವು ಉದಾ :

∪ — ∪ —

ಅಂಶಛಂದಸ್ಸು : ।ಅ.ನ್ನಽ.ವ। ನೀ. ಡೂ. ದು.। ನ. ನ್ನಿಽ.ಯ. ।ನುಡಿ. ವೂದು।[೮]

∪∪ ∪∪ ∪∪ ∪∪

ಮಾತ್ರಾಛಂದಸ್ಸು : ।ಅ.ನ್ನವ.ನು।ನೀ.ಡುವು.ದ।ನ.ನ್ನಿಯ.ನು।ನುಡಿ.ಯುವು.ದು।

ಇಲ್ಲಿ ಮಧ್ಯದ ಒಂದು ಲಘು ಅಂಶಕ್ಕೆ ಬದಲು ೨ ಲಘು, ಒಂದು ಗುರು ಅಂಶಕ್ಕೆ ಬದಲು ೨ ಲಘು ಬಂದಿರುವುದನ್ನು ಗಮನಿಸಬೇಕು.

೨. ವೃತ್ತಗಳು ಸೃಷ್ಟಿಯಾಗುವಾಗ ಅಂಶಗಣಗಳ ಮಧ್ಯೆ ಕಣ್ಣುತಪ್ಪಿಸಿ ಮಾತ್ರಾನಿಷ್ಠ ಅಂಶಗಣಗಳೂ ಅಲ್ಲಲ್ಲಿ ಸೇರತೊಡಗಿದವು. ಉದಾ :

।ಸ. ತ್ಯ. ರ ।ನುಡಿ. ತೀ. ರ್ಥ।ನಿ. ತ್ಯ.ರ.।ನಡೆ. ತೀ. ರ್ಥ।
।ಉ.ತ್ತಮ. ರ.।ಸಂ. ಗ।ವದು. ತೀ. ರ್ಥ।ಹರಿ. ವ. ನೀ।
।ರೆ. ತ್ತಣ. ದು।ತೀ. ರ್ಥ।ಸ. ರ್ವ.ಜ್ಞ।

ಇಲ್ಲಿ ಎಲ್ಲವೂ ಮೂಲಅಂಶಗಣಗಳಾಗಿದ್ದರೆ 'ಉ. ತ್ತಮ. ರ' ಮತ್ತು 'ರೆ. ತ್ತಣ. ದು' ಮಾತ್ರಾನಿಷ್ಠ ಅಂಶಗಣಗಶಳಾಗಿವೆ.

೩.ಮೂಲ ಅಂಶಛಂದಸ್ಸಿನ ಪದ್ಯವನ್ನು ಮಾತ್ರಾನಿಷ್ಠ ಅಂಶಛಂದಸ್ಸಿನ ದೃಷ್ಟಿಯಿಂದ ಹೇಳುವುದು ಪ್ರಾರಂಭವಾಯಿತು. ಅಂದರೆ ಪ್ರಥಮೇತರ ಸ್ಥಾನದ ಲಘುರೂಪದ ಎರಡು ಸ್ವತಂತ್ರ ಅಂಶಗಳನ್ನು ಒಂದು ಅಂಶವನ್ನಾಗಿ ಭಾವಿಸುವುದು ರೂಢವಾಯಿತು. ಉದಾ :

---

೮. ಸರ್ವಜ್ಞನು ಶುದ್ಧ ಅಂಶಛಂದಸ್ಸಿನಲ್ಲಿ ಬರೆದಿದ್ದರೆ ಇದ್ದಿರಬಹುದಾದ ಚರಣವಿದು.

ವಿ ಬ್ರ ವಿ ಬ್ರ ವಿ ವಿ ಗು
ಮುರ. ರಿs.ಪು|ಬೊ. ಮ್ಮಂ| ಮುರ. ರಿs. ಪು.| ಬೊ. ಮ್ಮಂ| ಮುರ, ರಿs ಪು| ಶೂ.ಲs.ಧ|ರಂ

ನಾಗವರ್ಮನ ಪ್ರಕಾರ ಮೇಲಿನಂತೆ ಇದರ ಪ್ರಸ್ತಾರ. ಆದರೆ ಇಂದು

ಬ್ರ ಬ್ರ ಬ್ರ ಬ್ರ ಬ್ರ ಬ್ರ ಗು
|ಮುರ.ರಿಪು|ಬೊ. ಮ್ಮಂ|ಮುರ.ರಿಪು|ಬೊ. ಮ್ಮಂ|ಮುರ. ರಿಪು|ಶೂ. ಲಧ|ರಂ

ಹೀಗೆ ಸರ್ವ ಬ್ರಹ್ಮಲಯದಲ್ಲಿ ಹೇಳುತ್ತಾರೆ. ಮೂಲತಃ ಸ್ವತಂತ್ರವಾಗಿದ್ದ ರಿs, ಪು, ಎಂಬ ಎರಡು ತರಂಗ ಅಂಶಗಳು ಹೊಂದಿಕೊಂಡು ಒಂದು ನಿಸ್ತರಂಗ ಅಂಶವು ರೂಪತಾಳಿದೆ. ಹಾಗೆಯೇ ಲs, ಧ, ಎಂಬ ಎರಡು ಸ್ವತಂತ್ರ ತರಂಗ ಅಂಶಗಳು ಹೊಂದಿಕೊಂಡು ಒಂದು ನಿಸ್ತರಂಗ ಅಂಶವು ರೂಪತಾಳಿದೆ.

೪. ಮಾತ್ರಾನಿಷ್ಠ ಅಂಶಛಂದಸ್ಸಿನ ಪದ್ಯವನ್ನು ಮೂಲ ಅಂಶಛಂದಸ್ಸಿನ ದೃಷ್ಟಿಯಿಂದ ನೋಡುವದೂ ಪ್ರಾರಂಭವಾಯಿತು. ಉದಾ :

ವಿ ವಿ ವಿ ಬ್ರ
|ಹಗ. ಲೆ.ನ್ನದೆ|ಇರು. ಳೆ. ನ್ನದೆ| ಗಗ. ನಾಂ. ಗಣ|ದ. ಲ್ಲಿ|

ಈ ಪದ್ಯದ ನಿಜವಾದ ಪ್ರಸ್ತಾರವಿದು. ಆದರೆ ಪ್ರಥಮೇತರಸ್ಥಾನದಲ್ಲಿ ಗುರುವಿದ್ದರೂ ಒಂದು ಅಂಶ, ಲಘುವಿದ್ದರೂ ಒಂದು ಅಂಶವೆಂದು ನಂಬಿದ ಕನ್ನಡ ಕೈಪಿಡಿನಿಷ್ಠರು.

ರು ರು ರು ಬ್ರ
|ಹಗ.ಲೆ.ನ್ನ. ದೆ|ಇರು.ಳೆ.ನ್ನ.ದೆ|ಗಗ.ನಾಂ.ಗ.ಣ.|ದ.ಲ್ಲಿ|

ಎಂದು ಈ ಪದ್ಯದ ಛಂದಸ್ಸನ್ನು ತಪ್ಪಾಗಿ ಭಾವಿಸುತ್ತಾರೆ. ಕಿವಿಯ ಛಂದಸ್ಸು ಕಣ್ಣಿನ ಛಂದಸ್ಸಾದುದರ ಫಲವಿದು.

ಮಾತ್ರಾ ಛಂದಸ್ಸಿನ ಆಗಮನದಿಂದ ಹೀಗೆ ಅಂಶ ಛಂದಸ್ಸು ತನ್ನ ಮೂಲ ಲಯ ವಿನ್ಯಾಸವನ್ನು ಬದಲಿಸಿಕೊಂಡಿತು. ಇದರಿಂದ ತರಂಗಗಣಗಳೆಲ್ಲ ನಿಸ್ತರಂಗಗೊಂಡು ಲಯದ ಮೇಲಿನ ಒತ್ತು ತಾಳದ ಮೇಲೆ ಬಂದಿತು. ಅಂಶಛಂದಸ್ಸು 'ನಾದಯುಕ್ತಾ, ತಾಲಮುಕ್ತಾ' ಎಂಬ ಮಾತು, 'ನಾದಮುಕ್ತಾ, ತಾಲಯುಕ್ತಾ' ಎಂದು ತಿರುವುಮುರುವಾಯಿತು.

■■

ಆಕರ : ಮಾರ್ಗ ಸಂಪುಟ–೨

೮೭

ಉಯ್ಯಲಗಣ ಯಾವುದು ? ತರಂಗಗಣ ಸೂಕ್ತ ಹೆಸರು

"ಪುಲಿಗೆರೆಯ ಶಂಖಜಿನೋದ್ಭವ ಕಾವ್ಯ"ದ ಪದ್ಯಛಂದಸ್ಸನ್ನು ಕುರಿತು ಡಾ. ಎಂ. ಚಿದಾನಂದಮೂರ್ತಿ (ಸಾಧನೆ ೯-೧) ಮತ್ತು ಪ್ರೊ. ಎನ್.ಎಸ್, ಲಕ್ಷ್ಮೀನಾರಾಯಭಟ್ಟ' (ಅಂಕಣ ೨-೩) ಪರ -ವಿರೋಧ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಇದೇ ಬಗೆಯ ಛಂದೋಗತಿಯುಳ್ಳ "ಮಣಿಪುರಕೆ ಬಂದವಾಗ ಗಿಣಿಗಳು......." ಎಂಬ ಪದ್ಯದ ಲಯ ನನ್ನನ್ನು ವಿದ್ಯಾರ್ಥಿ ದೆಸೆಯಿಂದಲೂ ಆಕರ್ಷಿಸಿದ್ದುದರಿಂದ, ಶಂಖಜಿನೋದ್ಭವಕಾವ್ಯದ ಪರಿಷ್ಕರಣ ಪ್ರಸಂಗದಲ್ಲಿಯೇ* ಅದರ ಛಂದಸ್ಸು ನನ್ನ ಗಮನ ಸೆಳೆದಿದ್ದುದರಿಂದ, ಇತ್ತೀಚೆ ಇದೇ ಛಂದೋಗತಿಯ 'ಉಯ್ಯಲ ಪದ'ವನ್ನು ನಾನು ಪ್ರಕಟಿಸಿರುವುದರಿಂದ (ಆದಯ್ಯನ ಲಘುಕೃತಿಗಳು) ಈ ವಾದದಲ್ಲಿ ಪ್ರವೇಶಿಸಲು ನನಗೆ ಮನಸ್ಸಾಗುತ್ತಿದೆ.

'ಶಂಖಜಿನೋದ್ಭವಕಾವ್ಯ' ನೂರನಾಲ್ವತ್ತು ಪದ್ಯಗಳ ಕೃತಿ. ಈ ಪದ್ಯಗಳನ್ನು ಸಂಪಾದಕರು ಹೀಗೆ ಅಚ್ಚಿಸಿದ್ದಾರೆ :

ತಮ್ಮೊಳು ತಾವೆಲ್ಲರು ।ಓಕುಳಿಗಳ
ಗಮ್ಮನೆ ಆಡುತಲಿ।
ಕಮ್ಮಂಗೋಲನ ಗೆಲಿದ । ಸ್ವಾಮಿಯ
ಹೆಮ್ಮೆಯೊಳ್ಪಲಗೊಂಡರು ।

ಈ ಪದ್ಯವನ್ನು ಡಾ. ಮೂರ್ತಿ, ಪ್ರೊ. ಭಟ್ಟ ಅವರು ಗಣದೃಷ್ಟಿಯಿಂದ ಹೀಗೆ ವಿಭಜಿಸಿದ್ದಾರೆ.

ಡಾ. ಮೂರ್ತಿ -	ತಮ್ಮೊಳು।ತಾವೆಲ್ಲ । ರು [ಓಕುಳಿಗಳ] ಗಮ್ಮನೆ ।ಆಡುತ।ಲಿ
ಪ್ರೊ. ಭಟ್ಟ-	ತಮ್ಮೊಳು। ತಾವೆಲ್ಲ।ರು-ಓ।ಕುಳಿಗಳ ಗಮ್ಮನೆ ಆಡುತ।ಲಿ

* ಪರಿಷ್ಕರಿಸಿ ಪ್ರಕಟಿಸಲು ಹಸ್ತಪ್ರತಿಯನ್ನು ಸಂಪಾದಕನಿಗೆ ಕೊಟ್ಟವನು ನಾನು.

೧. ಇಲ್ಲಿಯ 'ಓಕುಳಿಗಳ' ಎಂಬುದು ಮೊದಲನೆಯ ಚರಣಕ್ಕಾಗಲೀ, ಎರಡನೆಯ ಚರಣಕ್ಕಾಗಲೀ ಸಂಬಂಧಿಸದ, ಆದರೆ ಎರಡರ ಮಧ್ಯದ ಉಯ್ಯಾಲೆ ರೂಪದ ಭಾಗವೆಂದು ಡಾ. ಮೂರ್ತಿ, ಮೊದಲ ಚರಣಕ್ಕೆ ಸಂಬಂಧಿಸಿದ ಭಾಗವೆಂದು ಪ್ರೊ. ಭಟ್ಟ ಹೇಳುತ್ತಾರೆ. ಇವರಲ್ಲಿ ಪ್ರೊ. ಭಟ್ಟರ ಅಭಿಪ್ರಾಯ ಸರಿಯಾಗಿದೆ. (ವಿವರಗಳಿಗಾಗಿ ನೋಡಿ: ಅಂಕಣ ೨-೩).

೨. ಗಣವನ್ನು ಡಾ. ಮೂರ್ತಿಯವರು |ರು|ಓಕುಳಿಗಳ|ಎಂದು, ಪ್ರೊ. ಭಟ್ಟ ಅವರು |ರು-ಓ|ಕುಳಿಗಳ| ಎಂದು ವಿಭಜಿಸುತ್ತಾರೆ.

ಪ್ರೊ. ಭಟ್ಟರ ವಿಭಜನೆಯಿಂದಾಗಿ ಮಿಕ್ಕ ಪದ್ಯಗಳಿಂದ

|ಯಾ-ವಿ|ಸ್ಮಿತವಾಗಿ, |ಗೆ-ಯೊ|ಳು ತಾವು

|ನು-ಸ್ತು|ತಿಸಿದನು, |ನಾ-ಗೆ|ಲಿದ ದೇವ

|ನ-ಕ|ರ್ಮಂಗಳ, |ದಾ-ಜಿ|ನಗೆ ಪುಷ್ಪ

|ರು-ಓ|ಕುಳಿಗಳ, |ಬ್ರ-ಚೂ|ಡನು ತನ್ನ

ಎಂಬಂಥ ಶ್ರುತಿಸಹ್ಯವಲ್ಲದ, ಅರ್ಥರಹಿತ ಗಣಗಳೇ ಹೊರಡುವುದರಿಂದ ಈ ವಿಭಜನೆ ಸರಿಯಾದುದಲ್ಲ, ಹೀಗೆ ವಾಚಿಸುತ್ತ ಹೋದರೆ ಪದ್ಯದ ಅರ್ಥಪ್ರತೀತಿ ಉದ್ದಕ್ಕೂ ಹಾಳಾಗುತ್ತದೆ. ಆದುದರಿಂದ ಡಾ. ಮೂರ್ತಿಯವವರ ಅಭಿಪ್ರಾಯದಂತೆ |ರು|ಓಕುಳಿಗಳ| ಎಂದು ಬಿಡಿಸುವುದೇ ಸರಿಯಾದುದು.

೩. ಇಲ್ಲಿ |ರು| ಎಂಬುದು ಮುಡಿಯಾಗಿ ಬಂದು ತನ್ನ ಹಿಂದಿನ ವಿಷ್ಣುಗಣದ ವ್ಯಾಪ್ತಿಗೆ ಸಮನಾಗಿ ಹಿಗ್ಗಿಕೊಳ್ಳುತ್ತದೆ. ಆದುದರಿಂದ |ರುs| ಎಂಬುದೂ ಒಂದು ವಿಷ್ಣುಗಣ.

೪. |ಓಕುಳಿಗಳ| ಎಂಬುದು ಡಾ. ಮೂರ್ತಿಗಳು ಹೇಳುವಂತೆ ರುದ್ರಗಣವಲ್ಲ; ಮೂರು ಅಂಶಗಳಲ್ಲಿ ವ್ಯಾಪಿಸಿದ ಮಾತ್ರಾಘಟಿತ ವಿಷ್ಣುಗಣ. ಇದರ ವಿನ್ಯಾಸ ಹೀಗೆ :

∪ ∪. ∪ ∪
|ಓ. ಕು ಳಿ. ಗ ಳ|. ಇಲ್ಲಿ ಪ್ರಥಮೇತರ ಒಂದೊಂದು ಅಂಶಸ್ಥಾನಗಳಲ್ಲಿ ಬರಬೇಕಾದ ಒಂದು ಲಘು ಇಲ್ಲವೆ ಒಂದು ಗುರುವಿಗೆ ಬದಲು ಎರಡೆರಡು ಲಘುಗಳನ್ನು ಯೋಜಿಸಲಾಗಿದೆ, ಅಷ್ಟೇ. (ನಮ್ಮ ವಿದ್ವಾಂಸರಿಗೆ 'ಮಾತ್ರಾಘಟಿತ ಅಂಶ'ಗಳ ರಹಸ್ಯ ಇನ್ನೂ ಅರ್ಥವಾಗಿಲ್ಲ. ಇದಕ್ಕೆ ಕಾರಣ ಇವರು ಕಿವಿಯ ವಸ್ತುವಾದ ಪದ್ಯಛಂದಸ್ಸನ್ನು ಕಣ್ಣಿನಿಂದ ನೋಡಿ ವಿವೇಚಿಸುತ್ತಿರುವುದು). ಹೀಗಾಗಿ ಈ ಪದ್ಯದ ತುಂಬ ವಿಷ್ಣುಗಣಗಳೇ ಇದ್ದು ಮೊದಲನೆಯ ಚರಣವನ್ನು ಡಾ. ಮೂರ್ತಿ ಮತ್ತು ಪ್ರೊ. ಭಟ್ಟರಿಂದ ಬೇರೆಯಾಗಿ

ವಿ ವಿ ವಿ ವಿ
|ತ. ಮ್ಮೊ. ಳು|ತಾ. ವೆ. ಲ್ಲ. |ರುs|ಓ. ಕುಳಿ. ಗಳ |

ಎಂದು ಬಿಡಿಸುವುದೇ ಸರಿಯಾದ ರೀತಿಯಾಗಿದೆ. ಈ ವರೆಗಿನ ವಿವೇಚನೆಯಿಂದ ಕೆಳಗಿನ ನಿರ್ಣಯಗಳಿಗೆ ಬರಬಹುದು:

ಅ). ಈ ಚರಣವು ಪ್ರಾರಂಭದಲ್ಲಿ ಅಂಶಘಟಿತ ೨ ವಿಷ್ಣುಗಣ, ಆಮೇಲೆ ಮುಡಿರೂಪದ ೧ ವಿಷ್ಣುಗಣ, ಕೊನೆಗೆ ಮಾತ್ರಾಘಟಿತ ೧ ವಿಷ್ಣುಗಣಗಳಿಂದ ಕೂಡಿದ ಮಿಶ್ರಗಣಬಂಧವಾಗಿದೆ.

ಆ). ಇಲ್ಲಿಯ ಪ್ರಾರಂಭದ ಎರಡು ಗಣಗಳಲ್ಲಿ ವ್ಯತ್ಯಾಸ ತೋರಬಹುದು. ಉದಾ :

ವಿ

೧. |ಬಡ. ಮತಿ. ಯ|ನುಡಿಯಿದೆಂ|ದುs |ಈ ಕೃತಿಯೆ

(ಅಂಶಘಟಿತ ವಿಷ್ಣುಗಣಕ್ಕೆ ಬದಲು ಮಾತ್ರಾಘಟಿತ ವಿಷ್ಣುಗಣ)

ವಿ

೨. | ಕುಸು. ಮಾs.| ಸ್ತ್ರನ ಗೆದ್ದ|ನs|ಕರ್ಮಂಗಳ|

(ನೋಟಕ್ಕೆ ಬ್ರಹ್ಮವಾಗಿರುವ ವಿಷ್ಣುಗಣ)

ಅಥವಾ

ವಿ

|ಕುಸು. ಮಾ. ಸ್ತ್ರ|ನs. ಗೆ. ದ್ದ| ನs| ಕರ್ಮಂಗಳ |

(ಛಂದೋವ್ಯತ್ಯಯದ ವಿಷ್ಣುಗಣ)

ಇ). ಮುಡಿರೂಪದ ವಿಷ್ಣುಗಣ ಇಲ್ಲಿ ಕಡ್ಡಾಯ. ಅಕ್ಷರಗಳ ಕೊರತೆಯಿಂದಾಗಿ ಉಯ್ಯಾಲೆ ಸ್ಥಿತಿಯಿರುವುದು ಈ ಗಣದಲ್ಲಿಯೇ ಹೊರತು, ಡಾ. ಮೂರ್ತಿ ಹೇಳುವಂತೆ ಇದರ ಮುಂದಿನ ಗಣದಲ್ಲಲ್ಲ. ಇಂಥ ಲಯದ ಹಾಡುಗಳನ್ನು ಪ್ರಾಚೀನರು 'ಉಯ್ಯಲಪದ'ವೆಂದು ಕರೆದಿರುವುರಿಂದ ಈ ಗಣವನ್ನು ಉಯ್ಯಾಲೆ ಗಣವೆಂದು ಕರೆಯಬಹುದಾದರೂ ಇಲ್ಲಿ ತೆರವಾದ ಭಾಗದಲ್ಲಿ ಅಕ್ಷರಗಳು ಸೇರಿಕೊಂಡಾಗ ಈ ಉಯ್ಯಾಲೆ ಅಥವಾ ತರಂಗ ನಿಂತು ನಿಸ್ತರಂಗವಾಗುವ ಕಾರಣ ಇದನ್ನು 'ತರಂಗಗಣ'ವೆಂದೇ ಕರೆದಿದ್ದೇನೆ.[೧] (ತರಂಗ-ನಿಸ್ತರಂಗದಂತೆ, ಉಯ್ಯಾಲೆಗೆ ಸರಿಯಾದ ವಿರುದ್ಧ ಶಬ್ದ ಸಿಗುವುದಿಲ್ಲ).

ವಿ

ಈ). ಕೊನೆಯ ಗಣವು |ಓ. ಕುಳಿ. ಗಳ| ಎಂಬಂತೆ ಮಾತ್ರಾಘಟಿತ ವಿಷ್ಣುಗಣವಾಗಿರುತ್ತದೆ.

ವಿ

ಇಲ್ಲವೆ ಕಮ್ಮಂಗೋ|ಲನ ಗೆಲಿ|ದs| ಸ್ವಾ. ಮಿ. ಯ | ಎಂಬಲ್ಲಿಯಂತೆ ಅಂಶಘಟಿತ ವಿಷ್ಣುಗಣವಾಗಿರುತ್ತದೆ.

ಒಟ್ಟಿನಲ್ಲಿ ಶಂಖಜಿನೋದ್ಭವಕಾವ್ಯ ಮೂಲತಃ ಅಂಶವೃತ್ತಯುಕ್ತ 'ಶಿಷ್ಟಪದ' ಕೃತಿಯಾಗಿದ್ದರೂ 'ಜಾನಪದ' ಸೀಮೆಯತ್ತಲೂ ವಾಲಿದೆ. ಇಂಥ ಕೃತಿಗಳ ಛಂದಸ್ಸಿನಲ್ಲಿ ಒಂದು ಬಗೆಯ ಶಿಥಿಲ ಧೋರಣೆ ಕಂಡುಬರುವುದು ಸ್ವಾಭಾವಿಕ. ಅಂದರೆ ಗಣದ ಚೌಕಟ್ಟಿಗೆ ಧಕ್ಕೆ ಬರದಂತೆ ಅದರ ಒಳಗಿನ ಅಂಶಘಟಕಗಳು

---

೧. ಎಂ.ಎಂ. ಕಲಬುರ್ಗಿ 'ಅಂಶಗಣದ ಇತಿಹಾಸ' ಕರ್ನಾಟಕ ಭಾರತಿ ೮-೨.

ವಿರಳ - ಸಾಂದ್ರವಾಗಿರುವುದುಂಟು; ಆಗಾಗ ಅಂಶಗಳಣಗಳು ಮಾತ್ರಾಮುಖಿಯಾಗಿರುವುದೂ ಉಂಟು. ಈ ಗುಟ್ಟನ್ನು ಅರಿಯದಿದ್ದರೆ ಹಾಡುವ ಪದ್ಯವನ್ನು ಓದುವ ಪದ್ಯದ ಛಂದೋಮಾನದಿಂದ ಅಳೆದಂತಾಗುತ್ತದೆ; ಕೆಲವರಿಂದ ಅಳೆಯಲಾಗಿದೆ. ಆದುದರಿಂದ ಈವರೆಗೆ ಅಂಶಛಂದಸ್ಸನ್ನು ಕುರಿತು ಬಂದ ಎಲ್ಲ ಲೇಖನಗಳನ್ನು ಅದರಲ್ಲಿಯೂ ತೀ.ನಂ.ಶ್ರೀ ಅವರ ಲೇಖನಗಳನ್ನು ಇಂದು ವಿದ್ವಾಂಸರು ಮತ್ತೆ ವಿವೇಚಿಸಬೇಕಾಗುತ್ತದೆ.

ಅನುಬಂಧ :

ಕನ್ನಡದಲ್ಲಿ ಸಿಗುವ ಇನ್ನೆರಡು ಉಯ್ಯಲಪದ ಪದ್ಯಗಳು ಹೀಗಿವೆ:

೧. ನಿಲ್ಲದ । ಧರೆಯ ಮೇ।ಲೆಽ । ನೆಟ್ಟವೆರ
ಡಾಲಿ ಕಲ್ಲಿನ ಕಂಭವು
[ಮೇಲೆ] ಮಾ।ಣಿಕದ ತೊ।ಲೆಽ। [1]ಕೀಲಿಟ್ಟು[1]
ಜಾಣನಾಡಿದನುಯ್ಯಲ ।

(ಶಿವದಾಸ ಗೀತಾಂಜಲಿ- ತೂಗಿದೆನು ನಿಜದುಯ್ಯಲ ಪು. ೧೭೪)

೨. ಸೀಮೆಯಿ।ಲ್ಲದ ಉಯ್ಯ।ಲಽ। ಸೌರಾಷ್ಟ್ರ
ಸೋಮೇಶ ನಿಮ್ಮ ಶರಣ
ನಾಮವಿ।ಲ್ಲದ ನಾಮ।ದಿಂಽ।ದೊಲಿದಾಡು
ವಾ ಮಹಾಮಹದಂಗದಿಂ।

(ಆದಯ್ಯನ ಲಘುಕೃತಿಗಳು- ಉಯ್ಯಲಪದ -ಪು-೩೩.)

■■

ಆಕರ : ಮಾರ್ಗ ಸಂಪುಟ–೨

೧-೧ ಈ ಪದವನ್ನು ಸಂಪಾದಕರು ತಪ್ಪಾಗಿ ನಾಲ್ಕನೆಯ ಚರಣದ ಆದಿಗೆ ಜೋಡಿಸಿದ್ದಾರೆ. ಇಲ್ಲಿ ಮೂರನೆಯ ಚರಣದ ಅಂತ್ಯಕ್ಕೆ ಹೊಂದಿಸಿಕೊಂಡಿದ್ದೇವೆ.

೮೮

ಷಟ್ಪದಿಯ ಉಗಮ ಮತ್ತು ವಿಕಾಸ

ಆರು ಕಾಲುಗಳಿಂದ ನಡೆವಳು
ಮೂರು ಹೆಜ್ಜೆಗಳಿಂದ ರಂಜಿಸಿ
ಸಾರಿ ಡಂಗುರ ಹೊಯಿಸಿ ಕವಿಗಳಿಗಾನೆ ನೆರವೆಂದು ।
ತೋರಿದುಕ್ತಿಯನಧಿಕ ವೇಗದಿ
ತೋರಿ ಸೊಗಸನು ಬೀರಿ ಸುಖವನು
ಸೂರೆಗೊಟ್ಟಳು ಕೇಳಿದವರಿಗೆ ಭಾರತೀರನ್ನೇ ॥

-ಆದಿತ್ಯ ಪುರಾಣ : ರಾಮಚಂದ್ರ ಗುರುಶಿಷ್ಯ.

* * * *

ಅನುಭವದ ಕಲಾತ್ಮಕ ಸೃಷ್ಟಿಯಾದ ಕಾವ್ಯ, ಭಾಷಾಮಾಧ್ಯಮದ ಮಾರ್ಗವಾಗಿ ತನ್ನ ಸೆರೆಯನ್ನು ಬಿಡಿಸಿಕೊಳ್ಳುತ್ತದೆ. ಕಾವ್ಯದ ಇಂಥ ಭಾಷಾಮಾಧ್ಯಮಗಳಲ್ಲಿ ಪ್ರಮುಖವಾದುವು ಗದ್ಯ ಮತ್ತು ಪದ್ಯ. ಗದ್ಯಕ್ಕೆ ಲಯ ಕೂಡಿದರೆ ಪದ್ಯವಾಗುತ್ತದೆ. ಉದಾ : "ಇಂದು ಊರಿಗೆ ಹೋಗಿ ನಾಳೀಗಿ ಬರತೀನಿ" ಇದು ಗದ್ಯ. ಇದನ್ನೇ ಲಯದ ದೃಷ್ಟಿಯಿಂದ ಗಮನಿಸಿದಾಗ" ।ಇಂದು ಊ।ರಿಗೆ ಹೋಗಿ ।ನಾಳೀಗಿ ।ಬರತೀನಿ।" ಎಂದು ಪದ್ಯವಾಗುತ್ತದೆ. ಪದ್ಯದಲ್ಲಿ ಪ್ರವಹಿಸುವ ಲಯದ ವಿನ್ಯಾಸವೇ ಛಂದಸ್ಸು.

ಪದ್ಯದಲ್ಲಿಯ ಈ ಲಯವನ್ನು ಸ್ಫುಟಗೊಳಿಸಿ ಕೊಡುವುದು ತಾಳ, ಒಂದು ಪದ್ಯವನ್ನು ಹಾಡುತ್ತ ಹೋದಂತೆ, ತಾಳಗಳು ಬೀಳುತ್ತ ಹೋಗುತ್ತವೆ. ಉದಾ :

।ತಿರುಕ।ನೋರ್ವ। ನೂರ।ಮುಂದೆ ।

ಇಲ್ಲಿ ಕೊರೆದ ಗೆರೆಗಳೆಲ್ಲ ತಾಳ. ಎರಡು ತಾಳಗಳ ಮಧ್ಯಭಾಗವೇ ಲಯ. ದ್ರಾವಿಡ ಜನಾಂಗ ಈ ಲಯ (ಗಣ)ವನ್ನು ಮತ್ತೆ ಲಯದಿಂದಲೇ ವಿಶ್ಲೇಷಿಸಿ ನೋಡುತ್ತದೆ. ಆಗ ಈ ಲಯದಲ್ಲಿ ಆಂತರಿಕ ಲಯಗಳು ಗೋಚರಿಸುತ್ತವೆ. ಇವುಗಳಿಗೆ 'ಅಂಶ' ಎಂದು ಹೆಸರು.

।ತಿರು. ಕ. । ನೋ. ರ್ವ.। ನೂ.ರ । ಮುಂ. ದೆ।

ಇಲ್ಲಿ ಬಿಂದುಗಳು ಅಂಶವನ್ನು, ಗೆರೆಗಳು ಅಂಶಗಳಿಂದಾದ ಲಯವನ್ನು ಸೂಚಿಸುತ್ತವೆ. ನಮ್ಮ ನಾಲಗೆ ಎರಡು, ಮೂರು, ನಾಲ್ಕು ಅಂಶಗಳಿಂದ ಕೂಡಿದ ಲಯಗಳನ್ನು ವ್ಯಕ್ತಗೊಳಿಸುತ್ತದೆ. ಇವುಗಳಿಗೆ ಕ್ರಮವಾಗಿ ಬ್ರಹ್ಮಲಯ, ವಿಷ್ಣುಲಯ ಮತ್ತು ರುದ್ರಲಯಗಳೆಂದು ಹೆಸರು. *

ಈ ಮೂರು ಲಯಗಳ ವಿವಿಧ ಸಂಯೋಜನೆಯಿಂದ ಹಲವು ಬಗೆಯ ಪಾದಗಳು, ಈ ಪಾದಗಳ ಉದ್ದಳತೆಯ ಪ್ರಮಾಣ ಮತ್ತು ಸಂಖ್ಯೆಗಳ ನಿರ್ದಿಷ್ಟತೆಯಿಂದ ಅನೇಕ ರೀತಿಯ ಪದ್ಯಗಳು ರೂಪ ಪಡೆಯುತ್ತವೆ. ಕನ್ನಡಿಗರು ರೂಪಿಸಿಕೊಂಡ ಇಂಥ ಅನಂತ ಪದ್ಯಗಳ ಸಮಗ್ರ ಅಧ್ಯಯನ ಈ ವರೆಗೂ ನಡೆಯದುದು ದುರ್ದೈವದ ಸಂಗತಿ. ಆದರೆ ಇಂದಿಗೆ ಸಾವಿರ ವರ್ಷಗಳ ಹಿಂದೆ ಇವುಗಳಲ್ಲಿ ಹತ್ತನ್ನು ಮಾತ್ರ ಹೀಗೆ ಎಣಿಸಿ ಹೇಳಿದ್ದಾರೆ:

ಮದನವತಿಯಕ್ಕರಂ ಚೌ ।
ಪದಿ ಗೀತಿಕೆಯೇಳೆ ತಿವದಿಯುತ್ಸಾಹಂ ಷ॥
ಟ್ಪದಿಯಕ್ಕರಿಕೆ ಕರಂ ಚೆ ।
ಲ್ವೊದವಿದ ಛಂದೋವಸಂತಮಬ್ಜದಳಾಕ್ಷೀ[೧] ॥

ಇವುಗಳಲ್ಲಿ ಷಟ್ಪದಿಯೂ ಒಂದು. ಇದರ ಲಕ್ಷಣವನ್ನು ಜಯಕೀತಿ, ನಾಗವರ್ಮ ಲಕ್ಷ್ಯ ಲಕ್ಷಣ ಸಮನ್ವಿತ ಪದ್ಯಗಳಲ್ಲಿ, ಸೋಮೇಶ್ವರ, ಶಾರ್ಙ್ಗದೇವರು ಶ್ಲೋಕಪದ್ಯಗಳಲ್ಲಿ ಹೀಗೆ ಹೇಳುತ್ತಾರೆ:

೧. **ಜಯಕೀರ್ತಿ (೯ನೆಯ ಶತಮಾನ):**

ಸ್ಮರಗಣಃ ಪರಿತೋಽತ್ರ
ಶರಣಗಣಃ ಪುರಷಷ್ಠ
ಚರಣಾನ್ತಯೋಸ್ತದನ್ತೋ ವಿರಾಮಃ ॥
ಕರಕರ ಪುರಗಣಾಃ
ದ್ವಿರಿಹತ್ಯಾಶ್ಚರಣಾಶ್ಚೇತ್
ಸ್ಫುರತಿ ಷಟ್‌ಚರಣಾವತ್ ಷಟ್ಪದಿಕಾ[೨] ॥

೨. **ನಾಗವರ್ಮ (೯೯೦) :**

ಮಂದರಧರಗಣ ।
ಬಂದಿರ್ಕಾಱಿಂತ್ಯದೊಳ್।
ಕುಂದದೆ ನೆಲಸುಗೆ ಮದನಹರಂ ।
ಇಂದುನಿಭಾನನೆ।
ಮುಂದಣ ತೆಱನುಮೀ ।
ಯಂದಮಾದಂದು ಷಟ್ಪ[ದ] ಲಕ್ಷಣಂ[೩]॥

---

* ನಾಗವರ್ಮಾದಿಗಳು ಹೇಳುವ ರುದ್ರಗಣದ ಅಸ್ತಿತ್ವದ ಬಗೆಗೆ ನನಗೆ ಸಂದೇಹವಿದೆ..

೧. ಛಂದೋಂಬುಧಿ ಅಧಿಕಾರ ೫. ಛಂದೋನುಶಾಸನ ಅಧಿಕಾರ ೭.

೨. ಛಂದೋನುಶಾಸನ ೭-೧೭

೩. ಛಂದೋಂಬುಧಿ ೫-೨೧.

೩. **ಸರ್ವಜ್ಞಸೋಮೇಶ್ವರ (೧೧೨೯) :**

ಪಾದೇ ಪಾದೇ ತು ಕರ್ತವ್ಯೌದ್ವೌಗಣೌ ಮಾನ್ಮಥಸ್ತ್ರಿಷು
ಅಂತೇ ಬಾಣಸ್ತು ಷಟ್ಪದ್ಯಾಮುತ್ತರಾರ್ಧಂ ತಥೈವ ಚ[೪] ॥
ಕರ್ಣಾಟಭಾಷಯಾ ಗೇಯಾ ಪ್ರಾಣಾಕ್ಷರಸಮನ್ವಿತಾ
ಷಟ್ಪದೀ ತಾಲ ರಹಿತಾ ಸಾನುಪ್ರಾಸಾ ಕಥಾತ್ಮಿಕಾ[೫]॥

೪. **ಶಾರ್ಙ್ಗದೇವ (೧೨೫೦):**

ಷಷ್ಠಸ್ತೃತೀಯಸ್ತ್ರಿಗಣ ಪ್ರಥಗ್, ದ್ವಿದ್ವಿಗಣಾಃ ಪರೇ।
ಚತ್ವಾರಶ್ಚರಣಾ, ಬಾಣಪ್ರಾನ್ತೌ ಷಷ್ಠ ತೃತೀಯಕೌ ॥
ಶೇಷಾಸ್ತು ಮಾನ್ತಥಾಗಣಾ, ಯಸ್ಯಾಂ ಸಾ ಷಟ್ಪದೀ ಮತಾ ॥
ಕರ್ಣಾಟಭಾಷಯಾ, ತಾಲವರ್ಜಿತಾ, ನಾದಯುಕ್ತಿಕಾ[೬] ॥

ಈ ನಾಲ್ಕು ಹೇಳಿಕೆಗಳಿಂದ ಷಟ್ಪದಿಯ ಲಕ್ಷಣಗಳನ್ನು ಹೀಗೆ ಸಂಗ್ರಹಿಸಬಹುದು :

೧. ಷಟ್ಪದಿಗೆ ಆರು ಪಾದಗಳು (ಛಂದೋನುಶಾಸನ, ಮಾನಸೋಲ್ಲಾಸ, ಸಂಗೀತರತ್ನಾಕರ).
೨. ಪೂರ್ವಾರ್ಧಕ್ಕೆ ಉತ್ತಾರಾರ್ಧ ಸಮ (ಛಂದೋಂಬುಧಿ, ಛಂದೋನುಶಾಸನ, ಮಾನಸೋಲ್ಲಾಸ).
೩. ೧, ೨, ೪, ೫ ನೆಯ (ಕಿರಿಯ) ಪಾದಗಳಲ್ಲಿ ಎರಡು ವಿಷ್ಣುಗಣಗಳು.
೪. ೩, ೬ನೆಯ (ಹಿರಿಯ) ಪಾದಗಳಲ್ಲಿ ಎರಡು ವಿಷ್ಣುಗಣ ಒಂದು ರುದ್ರಗಣ.
೫. ೩, ೬ ನೆಯ ಪಾದಗಳ ಕೊನೆಗೆ ಯತಿ (ಛಂದೋನುಶಾಸನ).
೬. ಅನುಪ್ರಾಸವುಳ್ಳದು (ಮಾನಸೋಲ್ಲಾಸ).
೭. ಆದಿಪ್ರಾಸವುಳ್ಳದು(ಮಾನಸೋಲ್ಲಾಸ)
೮. ಕನ್ನಡಭಾಷೆಯಲ್ಲಿ ಹಾಡುವಂತಹದು (ಮಾನಸೋಲ್ಲಾಸ, ಸಂಗೀತರತ್ನಾಕರ).
೯. ಕಥಾತ್ಮಕವಾದುದು[೭] (ಮಾನಸೋಲ್ಲಾಸ)
೧೦. ತಾಲರಹಿತವಾದುದು (ಮಾನಸೋಲ್ಲಾಸ, ಸಂಗೀತ ರತ್ನಾಕರ)
೧೧. ನಾದಯುಕ್ತವಾದುದು (?) (ಸಂಗೀತ ರತ್ನಾಕರ)
೧೨. ದುಂಬಿಯಂತೆ ಝೇಂಕರಿಸುವುದು (ಛಂದೋನುಶಾಸನ)

ಇಲ್ಲದೆ ಮಾನಸೋಲ್ಲಾಸ ಇನ್ನೊಂದು ಕಡೆಯಲ್ಲಿ "ಚಿತ್ರಕಥಕನು ಷಟ್ಪದಿಯನ್ನು ಪಠಿಸುತ್ತಿದ್ದನು."[೮] ಎಂದು ತಿಳಿಸುತ್ತದೆ. ಈ ಲಕ್ಷಣಗಳಿಂದ ಕೂಡಿದ ಆರು ಸಾಲಿನ ಪದ್ಯಕ್ಕೆ ನಾಗವರ್ಮ 'ಷಟ್ಪದಿ' ಎಂದೂ ಜಯಕೀರ್ತಿ 'ಷಟ್ಪದಿಕಾ' ಎಂದೂ ಹೆಸರಿಸಿದ್ದಾರೆ. ತರುವಾಯದ ಷಟ್ಪದಿಗಳಿಂದ ಪ್ರತ್ಯೇಕಿಸಲು ಕೆಲವರು ಇದನ್ನು

೪. ಮಾನಸೋಲ್ಲಾಸ ೪-೧೬-೨೮೭.
೫. ಮಾನಸೋಲ್ಲಾಸ ೪-೧೬-೨೮೯
೬. ಸಂಗೀತರತ್ನಾಕರ ೪-೨೭೨ ಮತ್ತು ೨೭೩.
೭. "ಕಥಾಸು ಷಟ್ಪದೀ ಯೋಜ್ಯಾ ....." (ಮಾನಸೋಲ್ಲಾಸ ೪-೧೬-೫೫೨ ಹೋಲಿಸಿರಿ)
೮. "ಕರ್ಣಾಟಭಾಷಯಾ ಯಸ್ತು ಷಟ್ಪದೀ ಪಠನೋದ್ಯತಃ" (೪-೧೫-೧೪೨೫)

'ಮೂಲಷಟ್ಪದಿ' ಎಂದು ಕರೆದರೆ, ತೀ.ನಂಶ್ರೀ ಅವರು 'ಷಟ್ಪದ' ಎಂದು ಕರೆದಿದ್ದಾರೆ.[೯] ಅವರಿಗೆ ಆಧಾರ ಅಮ್ಮಿನಭಾವಿ ಶಾಸನ, ಸುಕುಮಾರಚರಿತೆ ಮತ್ತು ತೆಲುಗಿನ ಮೂರು ಛಂದೋಗ್ರಂಥಗಳಲ್ಲಿಯ ಪ್ರಯೋಗ. ಮೂಲದಲ್ಲಿದ್ದುದು ಈ ಒಂದು ಷಟ್ಪದಿ ಮಾತ್ರ. ಕನ್ನಡಿಗರ ಕಂಠದಲ್ಲಿ ಕೇಳಿಬರುತ್ತಿದ್ದ ನೂರಾರು ಬಂಧಗಳಲ್ಲಿ ಪ್ರಮುಖವಾದ ಹತ್ತು ಬಂಧಗಳ ಬಳಗಕ್ಕೆ ಸೇರಿದುದು ಇದರ ಪ್ರಸಾರ, ಜನಪ್ರಿಯತೆಗಳಿಗೆ ಸಾಕ್ಷಿಯಾಗಿದೆ.

ಈ ಷಟ್ಪದಿಗೆ ಉದಾಹರಣೆಯಾಗಿ ಸಿಕ್ಕುವು ಚಂದ್ರರಾಜ(೧೦೩೦)ನ 'ಮದನತಿಲಕ'ದಲ್ಲಿ ಮೂರು,[೧೦] ಶಾಂತಿನಾಥ (೧೦೬೮)ನ 'ಸುಕುಮಾರ ಚರಿತೆ'ಯಲ್ಲಿ ಒಂದು.[೧೧] ಸೋಮೇಶ್ವರ (೧೧೨೧)ನ (ಸಂಸ್ಕೃತ) 'ಮಾನಸೋಲ್ಲಾಸ'ದಲ್ಲಿ[೧೨] ಒಂದು ಹೀಗೆ ಗ್ರಂಥಗಳಲ್ಲಿ ಐದು; ಅಮ್ಮಿನಭಾವಿ ಶಾಸನದಲ್ಲಿ (೧೧೭೧) ಒಂದು,[೧೩] ಭೀಮಸಮುದ್ರ ಶಾಸನ (೧೦೭೬) ದಲ್ಲಿ

---

೯. ಸಮಾಲೋಕನ, ಪು. ೨೨೨-೨೨೩.

೧೦. i) ಮಾಸಪ್ರಸೂತೆ ಷಣ್ಮಾಸ ಗರ್ಭಿಣಿ ತಾಂ ಕ್ಷು।
ಧಾಸತಿ ಮೆಯಿಗಳಿಂಗೆಚ್ಚತ್ತಿವಳ್ ॥
ಮಾಸರ ನೃತ್ಯ ವಿಳಾಸಿನಿಗಂ ಕಾ ।
ಮಸುಖಂ ಕೂಟಮುಂ ತತ್ಕಾಲಮೇ ॥ (೧೧-೧೦)

ii) ಅಂಗನೃಪಾಯತಿ ।ತುಂಗಭುಜಂ ಕಲಿ।
ಯಂಗಿತ ಶಿಕ್ಷಿತನಿಂದು ಯಶಂ ।
ಪಿಂಗಜದೊಂಗತ।ಭೃಂಗಕಚಂ ಕಲಿ।
ಮಂಗಳ ಲಕ್ಷಣಯುಕ್ತನಿವಂ ॥

iii) ಸಂಗರ ಕೇಸರಿ । ಸಂಗಗುಣಂ ಬಲಿ ।
ಭೃಂಗರದಕ್ಷನು ವಾಯತನುಂ॥
ಸಂಗದ ಸನ್ಮತಿ। ವಂಗವಹಂ ಸಲೆ ।
ಭಂಗಿಯನೀಕ್ಷಿಸಿ ರೇಚನೃಪಂ ॥ (೧೧-೧೫)

೧೧. ಅದು ಪರಮಾಸ್ಪದ।ಮದುಪುಣ್ಯ ಸಂಪದ
ಮದು ಮಹಾಭ್ಯುದಯ ವಿಲಾಸವಾಸಂ ॥
ಅದು ದಿಬ್ಬಮದು ಸೇಬ್ಯ ಮದು ಸೌಖ್ಯಮದು ರಮ್ಯ।
ಮದು ಸುಖಾಧಾರ ಸಂಸಾರಸಾರಂ॥ (೧೨-೫೧)

೧೨. ಗಡಣದಿಂದುರಗನ । ಪೆಡೆವಣಿಗಳ ದೀಪ್ತಿ ।
ಗೆಡೆಗೊಂಡು ತಮಗೆತ್ತುವಾರತಿಯ॥
ಸೊಡರ್ಗಳ ಪೋಲೆ ಪಾ।ಲ್ಗಡಲೊಳಿರ್ದಾ ವಿಷ್ಣು।
ಕುಡುತಿಕ್ಕೆ ನಮಗಿಷ್ಟ ಸಂಸಿದ್ಧಿಯಂ॥ (೪-೧೬-೨೮೮)

೧೩. ಹರಪಾದಾಂಬುಜ ಭೃಂಗ।ಪರನಾರೀಜನದೂರಂ।
..............................।
............ಜಾತರೂಪಂ । ಸರಸತಿಗಣ ಭಕ್ತಂ[ತಾಂ]
ನರಸಮ್ಮಂ ನೆಗರ್ದನೀ ಧರೆಗಲ್ಲಂ ॥

ಒಂದು,[೧೪] ಚಡಚಣಶಾಸನ (೧೦೬೭)ದಲ್ಲಿ ಮೂರು,[೧೫] ಗಂಗಾಪುರ ಶಾಸನ (೧೧೦೦-೧೧೪೦) ದಲ್ಲಿ ಒಂದು[೧೬] - ಹೀಗೆ ಶಾಸನಗಳಲ್ಲಿ ೬, ಹೀಗೆ ಒಟ್ಟು ೧೧ ಬಿಡಿಪದ್ಯಗಳೇ ಹೊರತು ಇಡಿ ಕಾವ್ಯಗಳಲ್ಲ.

"ಕಥಾಸು ಷಟ್ಪದೀ ಯೋಜ್ಯಾ" "ಷಟ್ಪದೀ ಕಥಾತ್ಮಿಕಾ" "ಕರ್ನಾಟ ಭಾಷಯಾಯಸ್ತು ಷಟ್ಪದೀ ಪಠನೋದ್ಯತಃ" ಎಂಬ ಮಾನಸೋಲ್ಲಾಸದ ಮಾತುಗಳು ಅಂಥ ಕೃತಿಗಳಿದ್ದುವು; ಕೊನೆಯ ಪಕ್ಷ ಮೌಖಿಕರೂಪದಲ್ಲಿಯಾದರೂ ಖಂಡಿತ ಇದ್ದುವೆಂದೂ ಅವುಗಳನ್ನು ಚಿತ್ರಕಥಕರು ಹಾಡುತ್ತಿದ್ದರೆಂದೂ ಸ್ಪಷ್ಟಪಡಿಸುತ್ತವೆ. ಮಾತ್ರಾ ಷಟ್ಪದಿ ಸಾಹಿತ್ಯ ಬೆಳೆಬೆಳೆದಂತೆ ಇವು ಅಳಿದು ಹೋಗಿರಬೇಕು. ಇದು ಷಟ್ಪದಿಯ ಮೊದಲ ಘಟ್ಟ. ಎರಡನೆಯ ಘಟ್ಟ ಪ್ರಾರಂಭವಾದುದು ವೀರಶೈವ ಶರಣರಿಂದ.

II

ಹನ್ನೆರಡನೆಯ ಶತಮಾನದ್ದು ಪ್ರಯೋಗಶೀಲ ಮನಸ್ಸು, ಎಲ್ಲ ಕ್ಷೇತ್ರಗಳಲ್ಲಿ ನುಗ್ಗಿಬಂದ ಈ ಪ್ರಯೋಗಶೀಲತೆ ಛಂದೋಕ್ಷೇತ್ರವನ್ನೂ ಪ್ರವೇಶಿಸಿತು. ಶರಣರ ಕಣ್ಣುಮುಂದೆ ನಿಂತುದು, ಸಂಸ್ಕೃತ ಬದುಕುವ ಪುರೋಹಿತವರ್ಗವಲ್ಲ, ಪಂಡಿತವರ್ಗವಲ್ಲ; ಮಾತೃಭಾಷೆಯನ್ನೇ ಬದುಕುವ ದಲಿತವರ್ಗ, ಪಾಮರ ವರ್ಗ.

---

೧೪. ಮಣ್ಡಲಿಗಾವ ಪ್ರ।ಚಣ್ಡ ಬಿಬ್ಬಿಗಂ ಜಯ ।
ಗೊಣ್ಡೇಶ್ವರಕ್ಕೆ ಬಿಟ್ಟುಂಬಳಿಯಂ ।
ಭಣ್ಡಣಕ್ಕಳ್ಕದ । ಗಣ್ಡನೀಯಲ್ಕಾಂಪ ।
ಗಣ್ಡಂ ಮಾಚಿಗನೆಯ್ದೆ ರಕ್ಷಿಪಂ (EC. IX ಚಿತ್ರದುರ್ಗ ೪೭)

೧೫. i) ರಾಜಿತಭುವನಕ್ಕೆ । ವಾಜಿಗಾಗರವಲ್ಲಿ ।
ರಾಜಧಾನಿಯೆನಿಪ ಚ[ಟೆ]ತಾಣ।
ರಾಜಸೇವ್ಯ ಪ್ರಭು । ರಾಜ ಚಟ್ಟನ ಪುತ್ರ ।
ರಾಜಿತ ಕೀರ್ತಿ ವಿಳಾಸ ದಾಸಂ ।

ii) ಶ್ರೀಸೈಳ ಕೈಳಾಸ । ವಾಸಿ ಕುಂಭೇಸಂಗೆ
ಶ್ರೀ ಸೂರ್ಯಗ್ರಹಣ ನಿಮಿತ್ತಮಾಗೆ ।
ದೋಷವರ್ಜಿತಪ್ರಭು । ದಾಸನುಂ ಜನುಮೆಲ್ಲ
ವೀಸಂಗೆ ಹಯಮಱಸಲಿಕೆ ಬಂದ ॥

iii) ಬಾಣರಾಸಿವೊಲ[ಕ್ಷೊ]ಣ ಸದ್ಧರ್ಮ ಪ್ರ।
ವೀಣರಿಂ ಸಿವ ಮಹಾರ್ಚನೆಗಳಿಂದ।
ಕ್ಷೋಣಿಗೊಪ್ಪುವ ಚಚ್ಚೆ । ತಾಣಿದೋ..... ವ ।
ಬಾಣನಿರ್ಪಂತಿರ್ಪ್ಪಿಂ ಮುದ್ದರಾಜಂ ॥ (SII xx-೧೩೩)

೧೬. ಶ್ರೀನಾರೀನಿಳಯಂ ಶ್ರೀ ಮೀನಾಂಬರ ದಿವ್ಯ
ಸ್ಥಾನಾಮೋದಿ ಚೂಡಾಮಣಿ ಮುನಿಪಂ
ಧ್ಯಾನಾರೂಢದೆ ನೋಡಿ। ತಾನೊಪ್ಪೆ ಕೇವಳ
ಜ್ಞಾನ ಪ್ರಸಿದ್ಧಮಂ ಪ್ರಕಟಿಸಿದಂ ॥

(Kannada inscriptions in Andhra Predesh 1961 No, 52) ಈ ಪದ್ಯಗಳನ್ನು ಹುಡುಕಿದವರು ಆರ್. ನರಸಿಂಹಾಚಾರ್, ಶ್ರೀ ಡಿ.ಎಲ್, ನರಸಿಂಹಾಚಾರ್ಯ, ತ.ಸು. ಶಾಮರಾಯ, ಪಿ.ಬಿ. ದೇಸಾಯಿ, ಎಂ ಚಿದಾನಂದಮೂರ್ತಿ. ಚಡಚಣ ಶಾಸನದ ಪದ್ಯಗಳು ಡಾ. ಡಿ.ಎಲ್.ಎನ್. ಅವರಿಗಿಂತ ಒಂದು ವರ್ಷ ಮೊದಲು ನನ್ನ ಗಮನಕ್ಕೆ ಬಂದಿದ್ದವು. ಸಿದ್ಧವಾದ ನನ್ನ ಲೇಖವನ್ನು ಪತ್ರಿಕೆಗಳಿಗೆ ಕಳಿಸುವಲ್ಲಿ ತೀರ ವಿಲಂಬಮಾಡಿದೆ. ಅಷ್ಟರಲ್ಲಿ ಡಿ.ಎಲ್. ಎನ್. ಅವರ ಲೇಖನ ಪ್ರಕಟವಾಗಿಬಿಟ್ಟಿತು.

ಶರಣರು ಇವರಿಗಾಗಿ ಸಾಹಿತ್ಯ ರಚಿಸಬೇಕಾಗಿ ಬಂದುದರಿಂದ ಕನ್ನಡಭಾಷೆಗೆ ಅಸಹಜವಾದ ಆರ್ಯ (ಅಕ್ಷರ) ಛಂದಸ್ಸು ಅಸ್ಪೃಶ್ಯವಾಯಿತು.; ದ್ರಾವಿಡ (ದೇಶೀ) ಛಂದಸ್ಸು ಸ್ಪೃಶ್ಯವಾಯಿತು. ಎರಡನೆಯದಾಗಿ ಸಾಂಪ್ರದಾಯಿಕವಾಗಿದ್ದ ಈ ದ್ರಾವಿಡ (ದೇಶೀ) ಛಂದಸ್ಸು ಶರಣರ ಪ್ರಯೋಗಶೀಲತೆಗೆ ಒಳಗಾಯಿತು. ಇದರ ಫಲವಾಗಿ ಒಂದು: ಅಂಶನಿಷ್ಠವಾದ ದೇಶೀಛಂದಸ್ಸಿನಲ್ಲಿ ಹೊಸ ಹೊಸ ಪ್ರಯೋಗಗಳು ಹುಟ್ಟಿದವು ; ಎರಡು: ಅಂಶಛಂದಸ್ಸು ಕ್ರಮೇಣ ಮಾತ್ರಾಛಂದಸ್ಸಿನಲ್ಲಿ ದುಡಿಯಲಾರಂಭಿಸಿತು. ಈ ಉಭಯ ಪ್ರಯೋಗಗಳಿಗೆ ಕೆಳಗಿನಂತೆ ಗುರಿಯಾಯಿತು, ಮೂಲಷಟ್ಪದಿ:

೧. ಈ ಮೂಲಷಟ್ಪದಿಯ ಪ್ರಧಾನಗಣಗಳು ವಿಷ್ಣು. ಆರುಮಾತ್ರೆಯ ಗಣಗಳಿಗಿಂತ ಇಲ್ಲಿ ನಾಲ್ಕು ಮತ್ತು ಐದು ಮಾತ್ರೆಯ ಗಣಗಳೇ ಅಧಿಕ. ನಾಲ್ಕು ಮಾತ್ರೆಯ ವಿಷ್ಣುಗಣ ಪ್ರಾಧಾನ್ಯದಿಂದ 'ಶರ'ಕ್ಕೆ ಸಮೀಪವಾದ, ಐದು ಮಾತ್ರೆಯ ವಿಷ್ಣುಗಣ ಪ್ರಾಧಾನ್ಯದಿಂದ 'ಕುಸುಮ'ಕ್ಕೆ ಸಮೀಪವಾದ, ಈ ಎರಡರ ಇಮ್ಮಡಿಯಿಂದ 'ಪರಿವರ್ಧಿನಿ', 'ವಾರ್ಧಕ'ಗಳಿಗೆ ಸಮೀಪವಾದ ಅಂಶಷಟ್ಪದಿಗಳು ತಲೆದೋರಿದವು. ಹೀಗೆ ರೂಪಗೊಂಡ ಷಟ್ಪದಿ ಚೌಕಟ್ಟಿನ ಆದರ್ಶದಲ್ಲಿ ಭಾಮಿನಿಗೆ ಸಮೀಪವಾದ ಅಂಶ ಷಟ್ಪದಿಗಳು ರೂಪ ತಾಳಿದವು. ೧೧೨೯ರ ಮಾನಸೋಲ್ಲಾಸದಲ್ಲಿ ಒಂದೇ ಒಂದು ಮೂಲ ಷಟ್ಪದಿಯ ಲಕ್ಷ್ಯಪದ್ಯದ ಉಲ್ಲೇಖವಿದ್ದರೆ ಶರಣರ 'ಸ್ವರವಚನ'ಗಳಲ್ಲಿ ಅಂಶನಿಷ್ಠವಾದ ಆರೂ ಷಟ್ಪದಿಗಳು ಸಿಗುತ್ತವೆ. ಕಾರಣ ಆರೂ ಅಂಶಷಟ್ಪದಿಗಳು ಶರಣರ ಸೃಷ್ಟಿಯೆಂದು ಹೇಳಬೇಕಾಗುತ್ತದೆ.[೧೭]

೨. ಭಾವನಾಶೀಲತೆಯಲ್ಲಿ ಲಯ, ವಿಚಾರಶೀಲತೆಯಿದ್ದಲ್ಲಿ ತಾಳ. ಭಾವನಾಶೀಲತೆಯೊಂದಿಗೆ ವಿಚಾರಶೀಲತೆಯನ್ನೂ ಬೆಳೆಸಿಕೊಂಡ ಶರಣರ ಆಂದೋಲನ ಕಾರಣವಾಗಿ ಲಯದ ಮೇಲಿನ ಒತ್ತು ತಾಳದ ಮೇಲೆ ಸರಿಯತೊಡಗಿತು. ಆಗ ದೇಶೀಬಂಧಗಳೆಲ್ಲ ಲಯಕ್ಕೆ ತಕ್ಕಂತೆ ತೂಗುವುದರೊಂದಿಗೆ ತಾಳಕ್ಕೆ ತಕ್ಕಂತೆ ಕುಣಿಯಲಾರಂಭಿಸಿದವು. ಲಯ ಪ್ರಧಾನವಾಗಿದ್ದ ಅಂಶಛಂದಸ್ಸು ಕ್ರಮೇಣ ತಾಳಪ್ರಧಾನವಾಗಿ ಮಾತ್ರಾಛಂದಸ್ಸಿಗೆ ತಿರುಗತೊಡಗಿತು. ಈ ಪ್ರಯೋಗಕ್ಕೂ ಒಳಗಾಯಿತು, ಮೂಲ ಷಟ್ಪದಿ. ಆಗ :

।ಮಂದರ ।ಧರಗಣ।
।ಬಂದಿರ್ಕಾ।ಱಂತ್ಯದೊಳ್।
।ಕುಂದದೆ ।ನೆಲಸುಗೆ ।ಮದನಹ।ರಂ

ಎಂಬಲ್ಲಿಯಂತೆ ಈವರೆಗೆ ಅಖಂಡವಾಗಿದ್ದ ಕೊನೆಯ ರುದ್ರಗಣ ತಾಳಕ್ಕೆ ಸಿಕ್ಕು 'ವಿಷ್ಣು+ಗುರು' ಎಂದು ತುಂಡಾಯಿತು. ಆಗ ಹಿರಿಯ ಚರಣದ ಪ್ರಮಾಣವು "ಕಿರಿಯ ಚರಣದ ಒಂದೂವರೆ ಪಟ್ಟು + ಒಂದು ಗುರು" ಎಂದು ಹೇಳುವುದು ಪ್ರಾರಂಭವಾಯಿತು.

ಶರಣರ ತರುವಾಯ ವೀರಶೈವ ಸಾಹಿತ್ಯವನ್ನು, ತನ್ಮೂಲಕ ಕನ್ನಡ ಸಾಹಿತ್ಯವನ್ನು ಕೈಗೆತ್ತಿಕೊಂಡವ ಹರಿಹರ. ಈತನ ಕಾಲದಲ್ಲಿ ಮಾತ್ರ ಛಂದಸ್ಸಿನ ರಗಳೆಯ ಜೊತೆಗೆ ಮಾತ್ರಾ ಛಂದಸ್ಸಿನತ್ತ ಒಲವು ತೋರುತ್ತಲಿದ್ದ ಈ ಅಂಶಷಟ್ಪದಿಗಳೂ ಹುಟ್ಟುತ್ತಿರಬಹುದು.[೧೮] ೧೨೨೪ ರಲ್ಲಿದ್ದ ಪೋಲಾಳ್ವ ದಂಡನಾಥ 'ಹರಿಚಾರಿತ್ರ್ಯ'

---

೧೭. ಡಾ. ಎಲ್. ಬಸವರಾಜು 'ಶಿವದಾಸ ಗೀತಾಂಜಲಿ'ಯ ಹಾಡುಗಳನ್ನು ನೋಡಿರಿ.
೧೮.. ಹರಿಹರನ ಹೆಸರಿನಲ್ಲಿ 'ಗೊಲ್ಲಾಳೇಶ್ವರ ಪುರಾಣ'ಎಂಬ ಕೃತಿಯೊಂದು ಷಟ್ಪದಿ ರೂಪದಲ್ಲಿ ಸಿಗುತ್ತದೆ.

ಬರೆದುದು ಇಂಥ ಒಂದು ಪ್ರಕಾರದ ಅಂಶ ಷಟ್ಪದಿಯಲ್ಲಿ, ಅಥವಾ ಅಂಶಷಟ್ಪದಿಗಳಲ್ಲಿ.[೧೯] ಹರಿಹರನ ಸಮಕಾಲೀನನಾಗಿರಬಹುದಾದ ಕುಮುದೇಂದು (೧೨೭೫) 'ರಾಮಾಯಣ' ಬರೆದದ್ದು ಇಂಥ ಅಂಶಗಣಾನ್ವಿತ ಕುಸುಮ, ಭಾಮಿನಿ, ಪರಿವರ್ಧಿನಿ, ವಾರ್ಧಕ ಷಟ್ಪದಿಗಳಲ್ಲಿ; ಕೊನೆಯ ಪಕ್ಷ ಪರಿವರ್ಧಿನಿಯನ್ನಾದರೂ ಅಂಶಛಂದಸ್ಸಿನಲ್ಲಿ.[೨೦] ಹೀಗೆ ರಾಘವಾಂಕ ಬರುವ ವರೆಗೆ ಷಟ್ಪದಿಯಲ್ಲಿ ಒಂದು ಬಗೆಯ ಅನುದ್ದೇಶಿತ ಗೊಂದಲವೋ, ಪ್ರಯೋಗವೋ ಎನ್ನಬಹುದಾದ ಛಂದಸ್ಸಿನ ಗುದುಮುರಿಗೆ ನಡೆದೇ ಇದ್ದಿತು. ಈ ಮಧ್ಯೆ ಹರಿಹರನು ರಗಳೆಗಾಗಿ ನಡೆಸಿದ ಮಾತ್ರಾಛಂದಸ್ಸಿನ ಕೃಷಿಯು ಮಾತ್ರೆಯತ್ತ ಜಾರುತ್ತಿದ್ದ ಅಂಶಷಟ್ಪದಿ ಇನ್ನೂ ಜಾರಲು ಅನುವು ಮಾಡಿಕೊಟ್ಟಿತು. ಇಂಥ ಸಂಕ್ರಮಣ ಪರಿಸ್ಥಿತಿಯ ಪ್ರಯೋಗಕೃತಿ, ರಾಘವಾಂಕನ 'ಉದ್ದಂಡ ಷಟ್ಪದಿ'ಯ 'ವೀರೇಶ ಚರಿತೆ'.

ಉದ್ದಂಡ ಷಟ್ಪದಿಯ ಲಕ್ಷಣ, ಪ್ರಾಚೀನಛಂದೋಗ್ರಂಥಗಳಲ್ಲಿ ಕಂಡುಬರುವುದಿಲ್ಲ. ಕಿರಿಯ ಪಾದಗಳಲ್ಲಿ ನಾಲ್ಕು ಮಾತ್ರೆಯ ಐದು ಗಣ, ಹಿರಿಯ ಪಾದಗಳಲ್ಲಿ ನಾಲ್ಕು ಮಾತ್ರೆಯ ಏಳೂವರೆ ಗಣ+ಒಂದು ಗುರು (ವೀರೇಶ ಚರಿತೆಯ ಮುನ್ನುಡಿಯಲ್ಲಿ ೪ ಮಾತ್ರೆಯ ಎಂಟು ಗಣ ಎಂದು ಹೇಳಿದ್ದಾರೆ.) ಎಂಬುದು ಡಿ.ಎಲ್.ಎನ್ ಅಭಿಪ್ರಾಯ.[೨೧] ಈ ಸಂದರ್ಭದಲ್ಲಿ ಎಸ್ ಎನ್ ಕೃಷ್ಣಜೋಯಿಸರು ಕಿರಿಯ ಪಾದಕ್ಕೆ ೪+೬+೪+೬, ಹಿರಿಯ ಪಾದಕ್ಕೆ ಇದರ ಒಂದೂವರೆ ಪಟ್ಟು + ಒಂದು ಗುರು ಅಂದರೆ ೪+೬+೪+೬+೪+೬+ ಗುರು ಎಂದು ಹೇಳಿದರು.[೨೨] ಡಿ.ಎಲ್.ಎನ್. ಹೇಳಿಕೆಯಲ್ಲಿ ಕಂಡುಬರದ "ಒಂದೂವರೆ ಪಟ್ಟು, ಒಂದು ಗುರು" ಎಂಬ ಲಕ್ಷಣಗಳನ್ನೊಳಗೊಂಡ ಜೋಯಿಸರ ಅಭಿಪ್ರಾಯ ಹೆಚ್ಚು ಸಮಂಜಸವೆನಿಸುತ್ತದೆ. ಆದರೆ ಆರು ಮಾತ್ರೆಯ ಅಖಂಡ ಲಯ ಸಾಧ್ಯವೇ? ಎಂಬುದು ನನ್ನ ಸಂದೇಹ.[೨೩] ಅದೇನೇ ಇದ್ದರೂ ಅಂಶಷಟ್ಪದಿಯನ್ನು ಮಾತ್ರಾಷಟ್ಪದಿಯನ್ನಾಗಿ ತಿರುಗಿಸಿಕೊಳ್ಳಲು ನಡೆಸಿದ ಉದ್ದೇಶಪೂರ್ವಕ ಪ್ರಥಮ ಪ್ರಯೋಗವಾಗಿದೆ, ವೀರೇಶ ಚರಿತೆ (ಇದು ಅಂಶಗಣಾನ್ವಿತ ಷಟ್ಪದಿಯಾಗಿರಲಿಕ್ಕಿಲ್ಲ.). ರಾಘವಾಂಕ ಶರಷಟ್ಪದಿ ರೂಪದ 'ಅನುಭವ ಶಿಖಾಮಣಿ' ಹೆಸರಿನ ಕೃತಿ ಬರೆದಂತೆಯೂ ತಿಳಿದುಬರುತ್ತದೆ.[೨೪]

ಹೀಗೆ ಮೂಲಷಟ್ಪದಿಯ ತರುವಾಯ, ಅಂಶ ಛಂದಸ್ಸನ್ನೂ ಬಿಡದೆ ಮಾತ್ರಾಛಂದಸ್ಸಿಗೂ ಒಳಗಾಗದೆ ಆರೂ ಷಟ್ಪದಿಗಳು "ತೂಕದ ಕೋಲ ತೊಲೆಯಂತೆ" ಜೋಲಿ ಹೊಡೆಯುತ್ತ ಬರುತ್ತಿರುವಾಗ, ರಾಘವಾಂಕ ಅವನ್ನು, ವಿಶೇಷವಾಗಿ ವಾರ್ಧಕವನ್ನು ಮಾತ್ರೆಯ ತಕ್ಕಡಿಯಲ್ಲಿ ಸರಿಯಾಗಿ ತೂಗಿ "ಷಟ್ಪದಿ ಸಂಸ್ಥಾಪನಾಚಾರ್ಯ" ನೆನಿಸಿದನು.

---

೧೯. ನೋಡಿರಿ (ಶರಣ ಸಾಹಿತ್ಯ ೨೧-೪, ಜಯಕರ್ನಾಟಕ ೩೬-೮)

೨೦. ಇದು ಡಾ. ಡಿ.ಎಲ್.ಎನ್. ಅಭಿಪ್ರಾಯ (ನೋಡಿರಿ :ಕ. ಸಾ. ಪ. ೨೪-೩)

೨೧. ಉದ್ದಂಡ ಷಟ್ಪದಿಗೆ ಈ ಲಕ್ಷಣ ಹೇಳಿದವರಲ್ಲಿ ಡಿ.ಎಲ್.ಎನ್. ಮೊದಲಿಗರೆಂದು ಕಾಣುತ್ತದೆ. (ನೋಡಿರಿ ಕ. ಸಾ. ಪ. ೨೧-೨ ಪು. ೧೪೭).

೨೨. ಪ್ರ.ಕ. ೪೯-೨ (ಸಿ.ಪಿ.ಕೆ. ಅವರ 'ಉದ್ದಂಡ ಷಟ್ಪದಿ' ಒಂದು ಟಿಪ್ಪಣಿ ಪ್ರ. ಕ. ೫೦-೪ನ್ನು ನೋಡಿರಿ.)

೨೩. ಆರು ಮಾತ್ರೆಯ ವಿಷ್ಣುಲಯ, ರುದ್ರಲಯಗಳು ಸಾಧ್ಯವಿದ್ದರೂ ಅವು ಬರುವುದು ಸಾಮಾನ್ಯವಾಗಿ ಚರಣಾಂತ್ಯಕ್ಕೆ.

೨೪. ಅನುಭವಶಿಖಾಮಣಿಯ ಕರ್ತೃ ನಾರಸಿಂಹನು "ಧರೆಯೊಳಗೆ ಈ ಕಾವ್ಯ ಹಂಪೆಯ ಹರಿಹರಾತ್ಮಜ ರಾಘವಾಂಕನು ಹರುಷದಿಂ ಶರಷಟ್ಪದಿಯಲಿ ಮಾಡಿರಲು ನೋಡಿ" ತಾನು ಈ ಕಾವ್ಯ ರಚಿಸಿದೆನೆಂದು ಹೇಳುತ್ತಾನೆ.

ಕಲ್ಯಾಣದಲ್ಲಿ ಕಂಡರಿಸಲು ಪ್ರಾರಂಭವಾದ ಮಾತ್ರಾ ಷಟ್ಪದಿಯ ಮೂರ್ತಿಶಿಲ್ಪ ಹಂಪೆಯಲ್ಲಿ ಪೂರ್ಣರೂಪ ಪಡೆಯಿತು. ರಾಘವಾಂಕನಿಂದಲೇ ಅದು ಸಾಧ್ಯವಾದುದಕ್ಕೆ ಒಂದು ಅರ್ಥವಿದೆ. ಹರಿಹರನ ಒಂದು ಕೈಯಲ್ಲಿ ರಗಳೆ ಹುಟ್ಟಿದರೆ, ಇನ್ನೊಂದು ಕೈಯಲ್ಲಿ ರಾಘವಾಂಕ ಹುಟ್ಟಿದ. ರಗಳೆಯ ಒಡನಾಟ, ಆದರ ಮಾತ್ರಾಛಂದಸ್ಸಿನ ಉಸಿರಾಟ ಕಾರಣವಾಗಿ ಅಂಶಷಟ್ಪದಿಯನ್ನು ಮಾತ್ರಾಷಟ್ಪದಿಯನ್ನಾಗಿ ಬಗ್ಗಿಸಲು ಇವನಿಗೆ ಸಾಧ್ಯವಾಯಿತು.

ಹೀಗೆ, ಈ ಹೊಸ ಷಟ್ಪದಿಯ ಹುಟ್ಟಿಗೆ ರಾಘವಾಂಕ ಕಾರಣನಾದರೂ ಅವನಿಂದ ಕಾರ್ಯ ಮಾಡಿದಿದುದು, ಆ ಯುಗ. ಹಳಗನ್ನಡಕ್ಕೆ ಹೇಳಿ ಮಾಡಿಸಿದ ಮಾಧ್ಯವಾದ ಚಂಪೂವಿನ ಚೌಕಟ್ಟಿನಲ್ಲಿ ಈತನ ಕಾಲದ ನಡುಗನ್ನಡ ಸರಿಯಾಗಿ ಹೊಂದಿಕೊಳ್ಳಲಿಲ್ಲ. ಛಂದೋಮಾಧ್ಯಮ ಮತ್ತು ಭಾಷಾಸ್ವರೂಪಗಳ ಮಧ್ಯ ಕಂದರವೇ ಏರ್ಪಟ್ಟು ಛಂದೋಮಾಧ್ಯವನ್ನಾದರೂ ಬದಲಿಸಬೇಕು, ಭಾಷೆಯನ್ನಾದರೂ ಬದಲಿಸಬೇಕು - ಎಂಬ ಪರಿಸ್ಥಿತಿ ಉಂಟಾಗಿದ್ದಿತು. ಭಾಷೆಯನ್ನು ಬದಲಿಸುವುದು ಯಾರಿಂದಲೂ ಸಾಧ್ಯವಿಲ್ಲದ ಕಾರಣ, ಛಂದೋಮಾಧ್ಯವನ್ನು ಬದಲಿಸುವುದು ಅನಿವಾರ್ಯವಾಯಿತು. ಈ ಕಾರ್ಯವನ್ನು ಪೂರೈಸಿಕೊಡುವ 'ಕಾರಣಪುರುಷನ' ದಾರಿ ನೋಡುತ್ತಲಿದ್ದಿತು, ಆ ಕಾಲದ ಸಮಾಜ. ವಚನ, ರಗಳೆಗಳ ಪ್ರಯೋಗ ನಡೆಸಿ, ಷಟ್ಪದಿಯನ್ನು ಮಾತ್ರ ಸರ್ವಮಾನ್ಯ ಛಂದೋಮಾಧ್ಯಮವೆಂದು ಆ ಯುಗ ಸ್ವೀಕರಿಸಿತು. ಹೀಗೆ ಷಟ್ಪದಿ ರಾಘವಾಂಕನ ಕೃತಿಗಳ ನೆವದಲ್ಲಿ ಆ ಯುಗದ ಅನಿವಾರ್ಯ ಮಾಧ್ಯಮವಾಗಿ ಮೂಡಿಬಂದಿತು. ಯಾವ ಕಾಲಕ್ಕೂ ಇಂಥ ಅನಿವಾರ್ಯ ಮಾಧ್ಯಮಗಳು ಪ್ರಥಮ ಪ್ರಯೋಗಗಳಾಗಿದ್ದರೂ ಪರಿಣತ ಸಿದ್ಧಿಯಿಂದ ಕಂಗೊಳಿಸುತ್ತವೆ. ಇದಕ್ಕೆ ಅಪವಾದವಲ್ಲದ ರೀತಿಯಲ್ಲಿ ಛಂದಸ್ಸು, ಭಾಷೆ, ತಂತ್ರ ಮೊದಲಾದ ಷಟ್ಪದಿ ಪರಿಕರಗಳು ರಾಘವಾಂಕನಲ್ಲಿಯೇ ಸಜ್ಜಾಗಿ ಮೇಳಗೊಂಡವು. ರಾಘವಾಂಕ ದಾರಿ ತೋರಿದುದೇ ತಡ, ಅಂಶಗಣದಲ್ಲಿ ತೂಗುತ್ತಿದ್ದ ಕುಸುಮ, ಭಾಮಿನಿಗಳನ್ನು ಕುಮಾರ ಪದ್ಮರಸ ತನ್ನ 'ಸಾನಂದ ಚರಿತ್ರೆ'ಯಲ್ಲಿ ಮಾತ್ರೆಯ ಮಗ್ಗದ ಮೇಲೆ ಕುಳ್ಳಿರಿಸಿಬಿಟ್ಟನು.

ಹೀಗೆ ನಡುಗನ್ನಡ ಭಾಷೆಗೆ ಸಾಹಿತ್ಯಸಂವೇದನೆಯನ್ನು ಶಿವಶರಣರು ಧಾರೆಯೆರೆದರೆ, ಶಿವಕವಿಗಳು ಷಟ್ಪದಿ ಮಾಧ್ಯಮವನ್ನು ರೂಪಿಸಿಕೊಟ್ಟರು. ಸಂವೇದನೆ ಬದಲಾದರೆ ಮಾಧ್ಯಮವೂ ಬದಲಾಗುತ್ತದೆ, ಕೊಂಚ ತಡವಾಗಿ - ಎಂಬುದನ್ನು ಇಲ್ಲಿ ಗಮನಿಸಬೇಕು. ಇಲ್ಲಿಗೆ ಷಟ್ಪದಿಯಲ್ಲಿ ಪ್ರಯೋಗ ನಿಂತು, ಪರಂಪರೆ ಪ್ರಾರಂಭವಾಯಿತು. ಹೀಗಾಗಿ ರಾಘವಾಂಕ ಷಟ್ಪದಿಯ ನಿರ್ಮಾಪಕನಾದಂತೆ ಸಂಪ್ರದಾಯದ ಸಂಸ್ಥಾಪಕನೂ ಆದ.

ಇಷ್ಟರಲ್ಲಿ ಮುಸಲ್ಮಾನರ ದಾಳಿಗೆ ಸಿಕ್ಕ ನಮ್ಮ ಸಮಾಜ ಭೀತಿಯಲ್ಲಿ ಬದುಕತೊಡಗಿ, ಸಾಹಿತ್ಯಕ್ಕೆ ಕತ್ತಲು ಕವಿಯಿತು. ಹೀಗಿದ್ದೂ ೧೩೬೯ರ ಸುಮಾರಿಗೆ ಕನ್ನಡಕ್ಕೆ ಭಾಮಿನಿಯಾಗಿ ಬಂದಿತು, ಆಂಧ್ರ 'ಬಸವಪುರಾಣ'. ಕಲ್ಯಾಣ ಕ್ರಾಂತಿಯ ತರುವಾಯ ಉಭಯ ಪ್ರಾಂತದ ವೀರಶೈವ ಕವಿಗಳಿಗೆ ಆ ಕ್ರಾಂತಿಯೇ ಸಾಹಿತ್ಯದ ವಸ್ತುವಾಯಿತು. ಆಗ ಕರ್ನಾಟಕದ ಹರಿಹರ ರಾಘವಾಂಕರು ಶರಣರ 'ಚರಿತ್ರೆ' ಬರೆದರೆ, ಆಂಧ್ರದ ಪಾಲ್ಕುರಿಕೆ ಸೋಮನಾಥಾದಿಗಳು ಶರಣರ ಪುರಾಣ'ಗಳನ್ನು ಬರೆದರು. ಮುಂದೆ ಭೀಮಕವಿಯ ಮೂಲಕ ಪಾಲ್ಕುರಿಕೆ ಸೋಮನಾಥನ 'ಬಸವ ಪುರಾಣ' ಕನ್ನಡಕ್ಕೆ ಬರುವಲ್ಲಿ, ಈ ವರೆಗೆ ಚರಿತ್ರವಾಹಿನಿಯಾಗಿದ್ದ ಕನ್ನಡ ಷಟ್ಪದಿ ಪುರಾಣವಾಹಿನಿಯಾಗಿ ಹರಿಯಿತು. ಇದರಿಂದ ಕನ್ನಡ ಷಟ್ಪದಿ ತನ್ನ ಚರಿತ್ರದೃಷ್ಟಿಯನ್ನು ಕಳೆದುಕೊಂಡಿತೇನೋ ನಿಜ, ಆಂಧ್ರದಿಂದ ಪುರಾಣಪ್ರಜ್ಞೆಯನ್ನು ಮಾತ್ರ ಪಡೆದುಕೊಂಡಿತು. ಈ ಪ್ರಜ್ಞೆ ಚೆನ್ನಬಸವಪುರಾಣ, ವೀರಶೈವಾಮೃತಪುರಾಣಗಳಲ್ಲಿ ಇನ್ನೂ ವ್ಯಾಪಕವಾಗಿ ಮುನ್ನಡೆಯಿತು.

ರಾಘವಾಂಕನ ತರುವಾಯ ವೀರಶೈವರೊಂದಿಗೆ ಮುಳುಗಿದ್ದ ಷಟ್ಪದಿ ೧೫ನೆಯ ಶತಮಾನದಲ್ಲಿ ಅವರೊಂದಿಗೇ ತೇಲಿಬಂದಿತು. ಇದು 'ಗೆದೆಯುವ ಎತ್ತು' ಎಂದು ಖಚಿತವಾಗಲು, ಈವರೆಗೆ ದೂರದಲ್ಲಿ ನಿಂತಿದ್ದ ಜೈನ, ಬ್ರಾಹ್ಮಣ ಕವಿಗಳೂ ಧಾವಿಸಿ ಬಂದರು. ಈ ಉಭಯ ಮತೀಯರನ್ನು ಒಳಗು ಮಾಡಿಕೊಂಡು ನಡೆಯಿತು, 'ವೀರಶೈವ ಷಟ್ಪದಿ.' ಕುಮಾರವ್ಯಾಸನಂಥ ಮಹಾಕವಿ ಸವೇಗದಿಂದ ಈಸಿ ಬಂದಾಗಲೂ ತುಂಬಿ ತುಳುಕೀತೇ ಹೊರತು, ಪಾತ್ರ ಬದಲಿಸಿಕೊಳ್ಳಲಿಲ್ಲ. ಅಷ್ಟರಮಟ್ಟಿಗೆ ಷಟ್ಪದಿಯ ಪಾತ್ರ ವಿಸ್ತಾರವಾಗಿದ್ದಿತು, ಗಟ್ಟಿಯಾಗಿದ್ದಿತು. ಇದೇ ಸಮಯಕ್ಕೆ ಚಾಮರಸನ ಸಂಯಮಶೀಲ ಕವಿತ್ವವೂ ಆ ಪಾತ್ರದಲ್ಲಿ ಪ್ರವಹಿಸಿತು. ಹೀಗೆ ರಾಘವಾಂಕನ ತರುವಾಯ ನೂರಾರು ಪ್ರತಿಭೆಗಳಿಗೆ ಮಾಧ್ಯಮವಾಗಿ ದುಡಿದು ಕ್ರಮೇಣ ತನ್ನ ಯೌವನದ ಸಂವೇದನಶಕ್ತಿಯನ್ನೆಲ್ಲ ಕಳೆದುಕೊಂಡಿತು. ಆರುವ ದೀಪದಂತೆ ಲಕ್ಷ್ಮೀಶನಲ್ಲಿ ಲಾಸ್ಯವಾಡಿ, ತೀರ ಜೀರ್ಣಸ್ಥಿತಿಗೆ ಇಳಿಯಿತು. ಹೀಗಿದ್ದರೂ ಆರು ಸಾಲು, ಕಿರಿಯ ಸಾಲಿನ ಒಂದುವರೆ ಪಟ್ಟು+ ಒಂದು ಗುರು ವ್ಯಾಪ್ತಿಯ ಹಿರಿಯ ಸಾಲು, ಪ್ರಾಸ- ಈ ಚೌಕಟ್ಟಿನಲ್ಲಿ ಮುತ್ತು ಕಳೆದುಕೊಂಡ ಸಿಂಪಿಯಂತಹ ಷಟ್ಪದಿಕಾವ್ಯಗಳು ಇಂದಿಗೂ ಹುಟ್ಟುತ್ತಲಿವೆ. ಇವುಗಳಲ್ಲಿ ದ್ಯಾಂಪುರ ಚನ್ನಕವಿಗಳಂಥವರ ಕೃತಿಗಳಿಗೆ ಮಾತ್ರ ಕಾವ್ಯದ ಕಾವು ಕೆಲಮಟ್ಟಿಗಿದೆ.

ಈ ಅವಧಿಯಲ್ಲಿ ವಾರ್ಧಕ-ಭಾಮಿನಿಗಳು ಪ್ರಬದ್ಧರೀತಿಯಲ್ಲಿ ಬೆಳೆದು ಬಂದಿದ್ದು, ಮಿಕ್ಕ, ಶರ, ಕುಸುಮ, ಭೋಗ, ಪರಿವರ್ಧಿನಿ ಆಗೊಮ್ಮೆ ಈಗೊಮ್ಮೆ ಕಣ್ಣು ತೆರೆದಿವೆ. 'ಸಪ್ತಕಾವ್ಯ'ದ ಗುರುಬಸವ ತನ್ನ ಬೇರೆ ಬೇರೆ ಕೃತಿಗಳಲ್ಲಿ ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿಗಳನ್ನು; ನಾರಸಿಂಹ, ಚನ್ನಬಸವಾಂಕಾದಿಗಳು ಒಂದೇ ಕೃತಿಯಲ್ಲಿ ಬೇರೆ ಬೇರೆ ಷಟ್ಪದಿಗಳನ್ನು ಬಳಸಿದರೆ, ಸದಾಶಿವಯೋಗಿಯು (೧೬ನೆಯ ಶತಮಾನ) 'ರಾಮನಾಥ ವಿಲಾಸ'ವೆಂಬ ಚಂಪೂಕೃತಿಯಲ್ಲಿ ಷಟ್ಪದಿಯನ್ನು, ಚನ್ನಬಸವಾಂಕನು (ಸು. ೧೫೫೦) 'ಮಹಾದೇವಿಯಕ್ಕನ ಪುರಾಣ'ವೆಂಬ ಸರ್ವಷಟ್ಪದಿ ಕಾವ್ಯದಲ್ಲಿ ಸಾಂಗತ್ಯವನ್ನು ಬಳಸಿದನು. ತನ್ನ ಜೀವನದುದ್ದಕ್ಕೂ ರಾಘವಾಂಕ, ಚಾಮರಸ, ಕುಮಾರವ್ಯಾಸಾದಿಗಳಲ್ಲಿ ಕಾವ್ಯಮಾಧ್ಯಮವಾಗಿ, ಭೀಮಕವಿ, ವಿರೂಪಾಕ್ಷಪಂಡಿತ ಮೊದಲಾದವರಲ್ಲಿ ಪುರಾಣ ಮಾಧ್ಯಮವಾಗಿ, ಗುರುಬಸವ, ಮಹಲಿಂಗರಂಗ, ನಾಗರಾಜರಲ್ಲಿ ತತ್ವಮಾಧ್ಯಮವಾಗಿ, ಜಾಯಪ್ಪ ದೇಸಾಯಿ ಮೊದಲಾದವರಲ್ಲಿ ಶಾಸ್ತ್ರ ಮಾಧ್ಯಮವಾಗಿ ಸಂಚರಿಸಿ ನಡುಗನ್ನಡ ಸಾಹಿತ್ಯಕ್ಷೇತ್ರವನ್ನೇ ವ್ಯಾಪಿಸಿತು.

ರಾಘವಾಂಕಪೂರ್ವದ ಅಂಶಷಟ್ಪದಿಗಳು ಮುದಿನ ಕಾಲದಲ್ಲಿಯೂ ಆಗೊಮ್ಮೆ ಈಗೊಮ್ಮೆ ಹುಟ್ಟಿಬಂದವು. ಕುಮುದೇಂದು ರಾಮಾಯಣದ ಮಾದರಿಯಲ್ಲಿ ೧೪೩೯ರ ಕಲ್ಯಾಣಕೀರ್ತಿ ತನ್ನ 'ಜ್ಞಾನಚಂದ್ರಾಭ್ಯುದಯ'ದ ಒಂದನೆಯ ಸಂಧಿಯಲ್ಲಿ ಅಂಶಗಣಾತ್ಮಕ ವಾರ್ಧಕವನ್ನು, ಆರನೆಯ ಸಂಧಿಯಲ್ಲಿ ಅಂಶಗಣಾತ್ಮಕ ಪರಿವರ್ಧಿನಿಯನ್ನು ಬಳಸಿದ. ಇದಲ್ಲದೆ ರಾಘವಾಂಕನ 'ವೀರೇಶಚರಿತೆ'ಯ ಮಾದರಿಯಲ್ಲಿ ಬಸವಾಂಕ ತನ್ನ 'ಉದ್ಭಟದೇವಚರಿತೆ'ಯಲ್ಲಿ, ಸಿದ್ಧನಂಜೇಶ ತನ್ನ 'ರಾಘವಾಂಕಚರಿತೆ'ಯಲ್ಲಿ ಉದ್ದಂಡ ಷಟ್ಪದಿಯನ್ನು ಪ್ರಯೋಗಿಸಿದರು.[೨೫]

ಒಳಪ್ರಾಸವುಳ್ಳ ಎರಡು ವಿಧದ ಸಾಂಗತ್ಯ[೨೬]ಗಳೂ ಶರ, ಕುಸುಮ,ಷಟ್ಪದಿಗಳೂ ಪರಸ್ಪರ ಗೊಂದಲವನ್ನುಂಟು ಮಾಡಿಕೊಂಡಿವೆ. ನಂಜುಂಡಕವಿಯ 'ಭೈರವೇಶ್ವರ ಕಾವ್ಯ'ವನ್ನು ಕುರಿತು ಹೇಳಿದ "ಈ

---

೨೫. ಎಸ್.ಎನ್. ಕೃಷ್ಣ ಜೋಯಿಸ - ಉದ್ದಂಡ ಷಟ್ಪದಿಯ ಎರಡು ಮುಖಗಳು (ಪ್ರ. ಕ. ೪೯-೨)

೨೬. ಏಳನೆಯ ಗಣದಲ್ಲಿ ಬ್ರಹ್ಮ ಬರುವದು ಒಂದು ವಿಧ, ಏಳನೆಯ ಗಣದಲ್ಲಿ ವಿಷ್ಣು ಬರುವುದು ಇನ್ನೊಂದು ವಿಧ.

ಗ್ರಂಥವನ್ನು ಕೆಲವು ಓದುಗರು ಸಾಂಗತ್ಯದಿಂದ ರಚಿವಾಗಿದೆಯೆಂದು ಭಾವಿಸಿದ್ದಾರೆ...... ೧-೨, ೪-೫ನೇ ಪಾದಗಳು ಸ್ವಲ್ಪ ಹೆಚ್ಚು ಕಮ್ಮಿ ಕುಸುಮ ಷಟ್ಪದಿಯ ಮಾತ್ರೆಗಳನ್ನೇ ಹೋಲುವುವಾದರೂ ೩-೬ನೆಯ ಪಾದಗಳು ಶರಷಟ್ಪದಿಯ ಮಾತ್ರೆಗಳನ್ನೇ ಹೆಚ್ಚಾಗಿ ಅನುಸರಿಸುವದರಿಂದ, ನಾವು ಶರಷಟ್ಪದಿಯೆಂದೇ ನಿಶ್ಚಯಿಸಿದ್ದೇವೆ"[೨೭] ಎಂಬ ಸಂಪಾದಕರ ನುಡಿಯನ್ನು ಇಲ್ಲಿ ಗಮನಿಸಬೇಕು. ಕನ್ನಡದಲ್ಲಿ ಸಿಗುವ ಇಂಥ ಹತ್ತಾರು ಕೃತಿಗಳ ಛಂದೋವಿವೇಚನೆ ಅವಶ್ಯ ನಡೆಯಬೇಕಾಗಿದೆ.

ಷಟ್ಪದಿಯ ಸಾಹಿತ್ಯಮುಖದಂತೆ ಸಂಗೀತಮಯವೂ ಅಭ್ಯಾಸಯೋಗ್ಯವೆನಿಸಿದೆ. ಗೇಯ ವೃತ್ತವಾದ ಕಾರಣ "ಲಲಿತಮಂಜುಳ ಶಬ್ದದಿಂದ ಕಿವಿಗಿಂಪಾಗಿ ಚರಿಸುವ ಸುಲಲಿತ ಷಟ್ಪದಿಗಳು " ಎಡೆಬಿಡದೆ ಮನೆ-ಮಠಗಳಲ್ಲಿ ಝೇಂಕರಿಸಿದವು. ಕಾವ್ಯದ ಸನ್ನಿವೇಶಕ್ಕೆ ತಕ್ಕಂತೆ ಬೇರೆ ಬೇರೆ ರಾಗದಲ್ಲಿ ಅಭಿನಯಿಸಿದವು. ಷಟ್ಪದಿಕಾವ್ಯಗಳ ಹಸ್ತಪ್ರತಿಗಳಲ್ಲಿ ಇಂಥ ನೂರು ನೂರು ರಾಗಗಳು ಕಣ್ಣಿಗೆ ಬೀಳುತ್ತವೆ. ಪ್ರಭುಲಿಂಗಲೀಲೆಯ ಮೊದಲಿನ ಏಳು ಗತಿಗಳಿಗೆ ಬೇರೆ ಬೇರೆ ಹಸ್ತಪ್ರತಿಗಳಲ್ಲಿ ಕಂಡುಬರುವ ಬೇರೆ ಬೇರೆ ರಾಗಗಳನ್ನು ಇಲ್ಲಿ ನೋಡಬಹುದು.[೨೮]

ಗತಿ ೧	:	ಭೂಪಾಳಿ, ಶಾಂತಮಲಹರಿ, ದೇಶಾಕ್ಷಿ
ಗತಿ ೨	:	ಮಲಹರಿ, ಶಂಕರಾಭರಣ
ಗತಿ ೩	:	ಕುರಂಜಿ, ಗುಜ್ಜರಿ.
ಗತಿ ೪	:	ಗುಂಡಕ್ರೀ, ರಾಮಕ್ರೀ, ತಮ್ಮಿಚ್ಚೆ.
ಗತಿ ೫	:	ಕಾಂಬೋದಿ, ವರಾಳಿ, ಕಾಮೋದ್ರಿ, ಮಾಳವಗೌಳ, ಬಹುಳಿ.
ಗತಿ ೬	:	ಗುಜ್ಜರಿ, ಬೌಳಿ, ಬಹುಳಿ, ಕೇದಾರಗೌಳಿ, ಮಲಹರಿ, ಫಳಮಂಜರಿ, ರಾಮಕ್ರೀ, ನಾಟಿ.
ಗತಿ ೭	:	ಆಹರಿ, ಮಾಳವಗೌಳಿ, ನಾಟಿ, ವರಾಳಿ, ತೊಂಡರವಾಳಿ, ದೇವಗಾಂಧಾರಿ, ಮಲಹರಿ, ಲಲಿತ, ರೇವಗುಪ್ತಿ.

ಒಂದೊಂದು ಕಾವ್ಯದ ಹಸ್ತಪ್ರತಿಗಳಲ್ಲಿಯ ಇಂತಹ ರಾಗಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ ಅಭ್ಯಸಿಸಿದರೆ ಆ ಕಾವ್ಯದ ಸನ್ನಿವೇಶಗಳನ್ನು ಯಾವ ಯಾವ ಪ್ರದೇಶದವರು ಯಾವ ಯಾವ ರಾಗಗಳಲ್ಲಿ ಹಾಡುತ್ತಿದ್ದರು? ಇದೇ ರೀತಿ ಸರ್ವಷಟ್ಪದಿ ಸಾಹಿತ್ಯ ಯಾವ ರಾಗಗಳಲ್ಲಿ ಹೊಳೆದು ಹೊಮ್ಮಿತು? ಹೇಗೆ ಬೆಳೆದು ಬಂದಿತು? ಎಂಬ ಒಂದು ಸ್ಪಷ್ಟ ಇತಿಹಾಸ ಕಣ್ಣುಮುಂದೆ ನಿಲ್ಲಬಹುದಾಗಿದೆ.

ಇದು ಪ್ರಾಚೀನ ಕರ್ನಾಟಕದಲ್ಲಿ ಷಟ್ಪದಿ ಮಾಡಿದ ಬದುಕು. ಈ ಅವಧಿಯಲ್ಲಿ ಸಾವಿರಾರು ಕವಿಗಳಿಗೆ, ಸಂಗೀತಜ್ಞರಿಗೆ ಅದು ಉಸಿರಾದರೂ ಛಂದಸ್ಸಿನಲ್ಲಿ ಕರಗಿಸಿ ಅದಕ್ಕೆ ಹೆಸರು ತಂದವರು, ರಾಘವಾಂಕ- ಕುಮಾರವ್ಯಾಸ, ಚಾಮರಸ- ಲಕ್ಷ್ಮೀಶ. ಇವರಲ್ಲಿ ರಾಘವಾಂಕ - ಕುಮಾರವ್ಯಾಸರದೇ ಒಂದು ರೀತಿ, ಚಾಮರಸ-ಲಕ್ಷ್ಮೀಶರದೇ ಒಂದು ರೀತಿ. ಒಬ್ಬರ ಗಣಶಿಲ್ಪ ಲಲಿತ; ನಾದಮಯ, ಇನ್ನೊಬ್ಬರದು ಹೀಗಲ್ಲ. ಇವರಿಂದಾಗಿ ಷಟ್ಪದಿಯ ವಜ್ರಕುಸುಮ ಆಯಾಮಗಳು ಪೂರ್ಣಪ್ರಮಾಣದಲ್ಲಿ ಪ್ರಕಟವಾದವು. ಮಿಕ್ಕವರು ಪರಂಪರೆಯನ್ನು ಬೆಳಸಿಕೊಂಡು ಬರದಿದ್ದರೂ ಉಳಿಸಿಕೊಂಡು ಬಂದರು. ಇದೇ ಅವರ ಕೊಡುಗೆ.

---

೨೭. ಭೈರವೇಶ್ವರ ಕಾವ್ಯ (ಸಂ. ಶ್ರೀ ಶಿವಬಸವಸ್ವಾಮಿಗಳು, ಪ್ರಸ್ತಾವನೆ, ಪುಟ-೧೮)

೨೮. ಪ್ರಭುಲಿಂಗಲೀಲೆ (ಸಂ. ಆರ್.ಸಿ. ಹಿರೇಮಠ ಮತ್ತು ಎಂ.ಎಸ್. ಸುಂಕಾಪುರ)

ಹೀಗೆ ಷಟ್ಪದಿ ರಾಘವಾಂಕನಿಂದ ಹೊರಟು ಮುದ್ದಣನನ್ನೂ ದಾಟಿ, ಆರು ನೂರು ವರ್ಷ ಅವಿಶ್ರಾಂತವಾಗಿ ನಡೆದು ಬಂದು, ಬಿ.ಎಂ.ಶ್ರೀ ಕಾಲಕ್ಕೆ ಕಾಲುಸೋತು ನಿಂತುಬಿಟ್ಟಿತು. ಇದು ಕನ್ನಡ ಸಾಹಿತ್ಯದಲ್ಲಿ ಸಾಹಿತ್ಯಪ್ರಕಾರ ದೃಷ್ಟಿಯಿಂದ ಒಂದು ಅಖಂಡ ಘಟ್ಟ; ಧೋರಣೆ ದೃಷ್ಟಿಯಿಂದಲೂ ಒಂದು ಅಖಂಡ ಘಟ್ಟ. ಚಂಪೂ ವೀರರಸದ ಆವೇಶ, ಹಳಗನ್ನಡ ಭಾಷೆಯ ಗಡುಸು, ಮಾರ್ಗಶೈಲಿಯ ಗಂಭೀರತೆ, ವಿದ್ವಜ್ಜನಾಭಿಮುಖತೆಯಿಂದ ಕಂಗೊಳಿಸಿದರೆ, ಅದರ ವಾರಸುದಾರವೆನಿಸಿದ ಷಟ್ಪದಿ ಭಕ್ತಿರಸದ ಪ್ರಶಾಂತತೆ, ನಡುಗನ್ನಡ ಭಾಷೆಯ ಸರಳತೆ, ದೇಶಿಶೈಲಿಯ ಸೊಗಸು, ಪ್ರಜಾಭಿಮುಖತೆಯಿಂದ ಶೋಭಿಸಿತು. ನಡುಗನ್ನಡ ಸಾಹಿತ್ಯಕ್ಕೆ ಈ ಎಲ್ಲ ಲಕ್ಷಣಗಳ ದೀಕ್ಷೆ ನೀಡಿದ ಪ್ರಥಮರು ಶಿವಶರಣರು. ಆದುದರಿಂದ ಷಟ್ಪದಿ ಸಾಹಿತ್ಯದ ದೃಷ್ಟಿ ವಚನಕಾರರು, ಸೃಷ್ಟಿ ರಾಘವಾಂಕನದು, ಪುಷ್ಟಿ ಸರ್ವಮತೀಯರದು; ವಿಶೇಷವಾಗಿ ವೀರಶೈವರದು. ಅಂದರೆ ಷಟ್ಪದಿ ಪ್ರವಾಹ ನಿಂತುಹೋಗದಂತೆ ಕಾಳಜಿ ವಹಿಸಿ ಹರಿಗಡಿಯುತ್ತ ಬಂದವರು, ವೀರಶೈವರು (ಜೈನರು ಚಂಪೂಪ್ರವಾಹವನ್ನು ಹರಿಗಡಿಯುತ್ತ ಬಂದಂತೆ).

III

ಕರ್ನಾಟಕದಲ್ಲಿ ಷಟ್ಪದಿಯ ತರುವಾಯದ ಘಟ್ಟ, ಭಾವಗೀತೆಯಿಂದ ಪ್ರಾರಂಭವಾಗುತ್ತದೆ. ಅನ್ಯಭಾಷೆಯಾದ ಸಂಸ್ಕೃತದ ಚಂಪುವನ್ನು ಹಿಂದೆ ಹಾಕಿ ಬಂದ ಷಟ್ಪದಿ, ಇನ್ನೊಂದು ಅನ್ಯಭಾಷೆಯಾದ ಇಂಗ್ಲೀಷಿನ ಭಾವಗೀತೆಗೆ ಹಿಂದೆ ಬೀಳಬೇಕಾಗಿ ಬಂದುದು ಒಂದು ಯೋಗಾಯೋಗ. ಆರಂಭದಲ್ಲಿ ಈ ಭಾವಗೀತಸಂಪ್ರದಾಯ ಷಟ್ಪದಿ, ಸಾಂಗತ್ಯ, ಚೌಪದಿ, ದ್ವಿಪದಿ ಮೊದಲಾದ ಹಳೆಯ ಛಂದೋಬಂಧಗಳಲ್ಲಿ ಚಿಮ್ಮಿ ಬಂದಿತು. ಎಸ್. ಜಿ. ನರಸಿಂಹಾಚಾರ, ಹಟ್ಟಿಯಂಗಡಿ ನಾರಾಯಣರಾವ ಅವರ ಬಂಧಗಳು ತೀರ 'ರಿಜಿಡ್' ಆಗಿವೆ. ಪಂಜೆ ಮಂಗೇಶರಾಯರು ಆದಿಪ್ರಾಸವನ್ನಿಟ್ಟುಕೊಂಡೂ ಹೊಸ ಸಂವೇದವನೆಯನ್ನು ತುಂಬಿದರೆ, ಅವರ ಶಿಷ್ಯರಾದ ಪೈಗಳು ಒಂದು ಹೆಜ್ಜೆ ಮುಂದೆ ಹೋಗಿ ಆದಿಪ್ರಾಸದ ಕಟ್ಟನ್ನು ಹರಿದು, ಭಾವಗೀತೆ ಮೇಣದಂತೆ ಮೈಹೊರಳಿಸಲು ಅನುವು ಮಾಡಿಕೊಟ್ಟರು. ಆಮೇಲೆ ಬಂದ ಬಿ.ಎಂ. ಶ್ರೀಯವರು ಭಾವಗೀತೆಯಲ್ಲಿ ಸಾಧಿಸಬಹುದಾದ ಛಂದಸ್ಸಿನ ಸರ್ವಸಾಧ್ಯತೆಗಳತ್ತ ಬೆರಳು ತೋರಿದರು. ಈ ದೃಷ್ಟಿಯಿಂದ ಇವರ 'ಇಂಗ್ಲೀಷ್ ಗೀತಗಳು' ನವೋದಯ ಕಾವ್ಯದ 'ಛಂದೋಂಬುಧಿ'ಯಾಗಿದೆ.[೨೯]

ಈ ಯುಗದಲ್ಲಿ ಛಂದಸ್ಸಿನ ಪ್ರಯೋಗದ ವಿಷಯವಾಗಿ, ನಾವು ಇಂಗ್ಲೀಷಿನ ಋಣವನ್ನು ಸ್ವಲ್ಪ ಅತಿಯಾಗಿಯೇ ಹೇಳಿಕೊಳ್ಳುತ್ತಲಿದ್ದೇವೆ. ಏಕೆಂದರೆ ಭಾವಗೀತೆಗೆ ಬಳಸಿದ ಲಯಗಳು ಸಾರ್ವ-ಪ್ರಾದೇಶಿಕವಾದುದರಿಂದ ಅವು ನಮ್ಮಲ್ಲಿಯೂ ಇದ್ದುವು. ಆದರೆ ನಮ್ಮ ಶಿಷ್ಟಕವಿಗಳು ಪಾದಗಳಿಗಾಗಿ ಲಯದ ಕೆಲವೇ ಪರ್ಮಿಟೇಶನ್ ಕಾಂಬಿನೇಶನ್‌ಗಳನ್ನು, ಪದ್ಯಗಳಿಗಾಗಿ ೨, ೩, ೪,೬ ಪಾದಗಳನ್ನು ಮಾತ್ರ ಬಳಸುತ್ತಿದ್ದರು. ಈಗ ಈ ಸೀಮೆ ಹೀಗೆ ನಿಸ್ಸೀಮವಾಯಿತು:

೧.. ಪಾದಗಳಿಗಾಗಿ ಲಯಗಳ ಅನೇಕ ಪರ್ಮಿಟೇಶನ್, ಕಾಂಬಿನೇಶನ್ ಮಾಡಿಕೊಂಡರು.

೨. ಪದ್ಯಗಳಿಗಾಗಿ ಅನೇಕ ಉದ್ದಳತೆಯ, ಅನೇಕ ಸಂಖ್ಯೆಯ ಪಾದಗಳನ್ನು ಬಳಸಿದರು.

---

೨೯. ಇಂಗ್ಲೀಷ ಗೀತಗಳು, ಮುನ್ನುಡಿ- ತೀ.ನಂ. ಶ್ರೀ.

೩. ಸಾಮಾನ್ಯವಾಗಿ ಚರಣದ, ಪದ್ಯಾರ್ಧದ ಮತ್ತು ಪದ್ಯದ ಕೊನೆಗೆ ಬರುವ ರುದ್ರಲಯವನ್ನು ಆದಿ-ಮಧ್ಯಗಳಲ್ಲಿ ತರುವ, ಲಯಗಳನ್ನು ತುಂಡುಗೊಳಿಸಿ ವೈವಿಧ್ಯಪೂರ್ಣವಾಗಿ ಜೋಡಿಸುವ ಬುದ್ಧಿವಂತಿಕೆಯನ್ನು ತೋರಿದರು.

೪. ಆದಿಪ್ರಾಸವನ್ನು ಸಂಪೂರ್ಣವಾಗಿ ಬಿಟ್ಟು ಅಂತ್ಯಪ್ರಾಸವನ್ನು ತೋರಿದರು.

ನಿಜ ಹೇಳುವುದಾದರೆ, ಈ ಎಲ್ಲ ವೈವಿಧ್ಯಗಳು ನಮ್ಮ ಜನಪದಸಾಹಿತ್ಯದಲ್ಲಿ ತುಂಬಿನಿಂತಿವೆ. ಇವುಗಳನ್ನು ಉಸಿರಾಡಿಸುತ್ತಿದ್ದ ನವೋದಯ ಕವಿಗಳು ಇಂಗ್ಲೀಷ್ ಲಿರಿಕ್' ನೋಡಿ ಈ ಜಾನಪದ ವೈವಿಧ್ಯವನ್ನು ಬಳಸಿಕೊಂಡರು. ಇದರ ಫಲವಾಗಿ ಹುಟ್ಟಿದ ಭಾವಗೀತ ಪ್ರಪಂಚದಲ್ಲಿ ಷಟ್ಪದಿಗಳನ್ನೂ ಗುರುತಿಸಿದ್ದಾರೆ, ವಿದ್ವಾಂಸರು. ಇವರಲ್ಲಿ ಪಟ್ಟೇದ ಚನ್ನಬಸಪ್ಪ,[೩೦] ಗೋವಿಂದ ಪೈ,[೩೧] ಕುಂದಣಗಾರ[೩೨] ಪ್ರ. ಗೋ. ಕುಲಕರ್ಣಿ[೩೩] ಮುಖ್ಯರು.

ಷಟ್ಪದಿಯ ಕಿರಿಯ ಚರಣಗಳು ಎರಡು ಮಾತ್ರೆಗಳ ಅಂತರದಿಂದ ೮-೧೦-೧೨-೧೪-೧೬ ಎಂದು ನಡೆದು ಒಮ್ಮೆಲೆ ೨೦ಕ್ಕೆ ಹೆಜ್ಜೆ ಇಡುವಲ್ಲಿ, ನಡುವೆ ೧೮ ಕಾಣದಿರುವುದು ಎಲ್ಲರ ಗಮನವನ್ನು ಸೆಳೆದಿದೆ. ಇಂಥ ಷಟ್ಪದಿಯೊಂದು ಇದ್ದು ಕಳೆದಿರಬೇಕು; ಇಲ್ಲದಿದ್ದರೆ ಹೊಸದನ್ನು ರೂಪಿಸಬೇಕು; ಪರಿವರ್ಧಿನಿ ವಾರ್ಧಕಗಳ ಮಧ್ಯದ ಇದನ್ನು ಪ್ರೌಢವೆಂದು ಕರೆಯಬೇಕು- ಎಂದು ಕೆಲವರ ಅಭಿಪ್ರಾಯ. ಎರಡನೆಯದಾಗಿ ವಾರ್ಧಕದ ಅರ್ಧ ಕುಸುಮ, ಪರಿವರ್ಧಿನಿಯ ಅರ್ಧ ಶರಗಳು ಮೊದಲಿನಿಂದಲೂ ಇವೆ. ಇದೇ ರೀತಿ ಪ್ರೌಢದ ಅರ್ಧ 'ವಿಷಮ' (೯ ಮಾತ್ರೆ)' ಭಾಮಿನಿಯ ಅರ್ಧ 'ಜಲ' (೭ಮಾತ್ರೆ), ಭೋಗದ ಅರ್ಧ 'ತಲ' (೬ ಮಾತ್ರೆ) ಷಟ್ಪದಿಗಳ ಸಾಧ್ಯತೆಯಿದೆಯೆಂದಿದ್ದಾರೆ. ಕೆಲವರು ಇನ್ನೂ ಕಡಿಮೆ ಎಂದರೆ ೨, ೪ ಮಾತ್ರೆಗಳ, ಹೆಚ್ಚೆಂದರೆ ೨೨, ೨೪, ೨೮ ಮಾತ್ರೆಯ ಷಟ್ಪದಿಗಳಿಗೆ ಉದಾಹರಣೆ ಸಾಧ್ಯವಿದೆಯೆನ್ನುತ್ತಾರೆ.ಈ ಹೊಸ ತಲ, ಜಲಗಳಿಗೆ ಭಾವಗೀತೆಗಳಿಂದ ಆಯ್ದು, ವಿಷಮ, ಪ್ರೌಢಗಳಿಗೆ ಕೈಯಿಂದ ಕಟ್ಟಿ ಉದಾಹರಣೆ ಕೊಡುತ್ತ ೨೨, ೨೪, ೨೮ ಮಾತ್ರೆಯ ಷಟ್ಪದಿಗಳಿಗೆ ಉದಾಹರಣೆ ಸಾಧ್ಯವಿದೆಯೆನ್ನುತ್ತಾರೆ. ಹೀಗೆ ೨, ೬, ೭, ೮, ೯, ೧೦, ೧೨, ೧೪, ೧೬, ೧೮, ೨೦, ೨೨, ೨೪, ೨೮ ಮಾತ್ರೆಯ ಕಿರಿಯ ಚರಣವುಳ್ಳ ಷಟ್ಪದಿಗಳು ಸಾಧ್ಯವೆನ್ನುತ್ತ ಕೂದಲ ಸೀಳುವ ಇವರು, ಗಣಿತಮಾರ್ಗದವರೇ ಹೊರತು ಕಾವ್ಯಮಾರ್ಗದವರಲ್ಲ. ೨, ೪, ೭, ೯ ಮಾತ್ರೆಯ ಷಟ್ಪದಿಗಳಲ್ಲಿ ಹಿರಿಪಾದವೆನ್ನುವುದು "ಕಿರಿಯ ಪಾದದ ಒಂದೂವರೆ ಪಟ್ಟು+ ಒಂದು ಗುರು" ಎಂಬ ಲಕ್ಷಣ ಸಾಧ್ಯವಾಗುವುದಿಲ್ಲ. ಕಾರಣ, ಇವರು ಬಯಸುವ ಷಟ್ಪದಿಯ ಸಾಮಾನ್ಯ ಲಕ್ಷಣವಾದರೂ ಏನು? ಎಂದು ಕೇಳಬೇಕಾಗುತ್ತದೆ. ಇವರಿಗೆ ಪಾದಗಳನ್ನು ಮುರಿಮುರಿದು ಜೋಡಿಸಿ ಷಟ್ಪದಿಗಳನ್ನು ಸಾಧಿಸುವುದು ಒಂದು ಚಾಪಲ್ಯ.

ಜಗವ ತುಂಬಿದ ಬೆಳಕು ನಮಗೇಕೋ ಸಾಲದಿದೆ
ಎನಿತು ಮಾನವನೆದೆಯ ಆಳ ಅಗಲ ?
ಬಂದಷ್ಟು ಇಂಗುತಿದೆ ಮತ್ತೆ ಬರಿದಾಗುತಿದೆ
ಎಷ್ಟು ಸೆಲೆಯೊಡೆದರೂ ವಿಫಲ ವಿಫಲ ||[೩೪]

---

೩೦. ಕನ್ನಡ ಷಟ್ಪದಿಗಳು (ಸಾ.ಪ. ೧೪-೪). ದಶ ಷಟ್ಪದಿಗಳೂ ಪಂಚ ತ್ರಿಪುಡೆಗಳೂ (ಶ.ಸಾ. ೭-೭) ಷಟ್ಪದಿ ವಂಶ ವಿಕಾಸ (೧೯೫೨).

೩೧. ಕನ್ನಡ ಷಟ್ಪದಿಗಳು (ಜ.ಕ. ೯-೨, ೩; ೧೦-೧೧)

೩೨. ಷಟ್ಪದಿಕಾರ ರಾಘವಾಂಕ (ಸಾ. ಪ. ೨೭-೧)

೩೩. ಕನ್ನಡ ಷಟ್ಪದಿಗಳು (ಜ.ಕ.೯-೧೨)

೩೪. ಚೆನ್ನವೀರ ಕಣವಿ : ಆಕಾಶಬುಟ್ಟಿ - ಚಿರಂತನ ದಾಹ.

ಇದು ನಾಲ್ಕು ಸಾಲುಗಳಲ್ಲಿ ಪ್ರಕಟವಾದ ಶ್ರೀ ಕಣವಿ ಅವರ ಒಂದು ಪದ್ಯ. ಇದನ್ನು ಮುರಿದರೆ (ಪ್ರಾಸರಹಿತವಾದ) ಆರು ಸಾಲುಗಳು ಕುಸುಮ ಷಟ್ಪದಿಯಾಗುತ್ತದೆ. ಹಾಗೆ ಕರೆದರೆ ಈ ಪದ್ಯದ ಮೂಲ ರೂಪಕ್ಕೇನು ಅರ್ಥ ?

ಇವಳ ಹೊಟ್ಟೆ ಚರಂಡಿಗಾರು ಕುಕ್ಕಿದರಯ್ಯ, ಕಳ್ಳಬಸುರಿನ ಯಾವ ಜಾಣರಂಭೆ ?
ಗಂಗೆಯಲಿ ತೇಲಿ ಬಂದನು ಕರ್ಣ, ರಾಧೇಯ; ಸಾಯಿಸಲಿಕಲ್ಲದೇ ಬರಲು ಕುಂತಿ.[೩೫]

ಇದು ಅಡಿಗರ 'ಭೂಮಿಗೀತ'ದ ಭಾಗ. ಇದನ್ನೂ ಮುರಿದರೆ (ಪ್ರಾಸರಹಿತವಾದ) ಆರು ಸಾಲುಗಳ ಕುಸುಮ ಷಟ್ಪದಿಯಾಗುತ್ತದೆ. ಆದರೆ ಹಾಗೆ ಕರೆಯುವುದು ತಪ್ಪಾಗುತ್ತದೆ.

ಕಾರಣ, ಭಾವಗೀತೆಗಳನ್ನು ಇದ್ದ ರೂಪ (Form)ದಲ್ಲಿ ಅಭ್ಯಸಿಸಬೇಕು. ಹೀಗೆ ಚರಣಗಳನ್ನು ಮುರಿಮುರಿಯುತ್ತ ಹೋದರೆ ಯಾವುದೇ ಪದ್ಯ ಯಾವುದೇ ಇನ್ನೊಂದು ಪದ್ಯವಾಗುವುದರಿಂದ, ಇದು ಬರಿಯ ಹುಡುಕಾಟವೆನಿಸುತ್ತದೆ. ಶಾಸ್ತ್ರಶುದ್ಧವಾಗಿ ಮಾತನಾಡುವುದಾದರೆ ಪದ್ಯವೆನ್ನುವುದು ಲಯ ಪರಂಪರೆ. ಈ ಲಯ ಪರಂಪರೆಯನ್ನು ಅನುಕೂಲ ದೃಷ್ಟಿಯಿಂದ ಒಂದು ಅಳತೆಯಲ್ಲಿ ಕತ್ತರಿಸಿಕೊಂಡು ಪಾದವೆಂದೂ ಕೆಲವು ಪಾದಗಳನ್ನು ಜೋಡಿಸಿಕೊಂಡು ಪದ್ಯವೆಂದೂ ಕರೆಯುತ್ತೇವೆ.[೩೬] ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಕವಿಯೇ ಷಟ್ಪದಿದೃಷ್ಟಿಯಿಂದ ಕಟ್ಟಿದ ಪದ್ಯಗಳೇ ಷಟ್ಪದಿಗಳು. ಮಿಕ್ಕವು ೩, ೪, ೫ ಮಾತ್ರೆಗಳ ಇಲ್ಲವೆ ೨, ೩, ೪ ಅಂಶಗಣ ಗಣಸಂಯೋಜನೆಗಳು; ಅಥವಾ ಇನ್ನೂ ನಾಮಕರಣಗೊಳ್ಳದ ಅನಾಮಧೇಯ ಪದ್ಯಗಳು.

ನವೋದಯ ಕಾಲದಲ್ಲಿ ಹುಟ್ಟಿದ ಷಟ್ಪದಿಗಳನ್ನು ಮಾತ್ರಾಗಣಾನ್ವಿತ ಮತ್ತು ಅಂಶಗಣಾನ್ವಿತಗಳೆಂದು ವರ್ಗೀಕರಿಸಬಹುದು. ಬಿ.ಎಂ.ಶ್ರೀ., ಬೇಂದ್ರೆ, ಕೆ.ಎಸ್.ನರಸಿಂಹಸ್ವಾಮಿ, ಕಣವಿ, ಅಡಿಗ ಮೊದಲಾದವರು ಉದ್ದೇಶಪೂರ್ವಕವಾಗಿ ಕೆಲವು ಮಾತ್ರಾಷಟ್ಪದಿಗಳನ್ನು ಬರೆದಿದ್ದಾರೆ. ಷಟ್ಪದಿಯನ್ನು ಭಾವಗೀತೆಗೊಳಿಸಿದುದು ಇಲ್ಲಿಯ ಹೊಸತನ, ಇವರ ಒಂದು ಕೊಡುಗೆ ಎಂದರೆ ತಲಷಟ್ಪದಿ. ಬೇಂದ್ರೆಯವರ

ನನ್ನ ಹರಣ
ನಿನಗೆ ಶರಣ
ಸಕಲ ಕಾರ್ಯ ಕಾರಣ

ಎಂಬ ಸುಪ್ರಸಿದ್ಧ ಪದ್ಯ ಇದಕ್ಕೆ ಉತ್ತಮ ಉದಾಹರಣೆ. ಮಿಕ್ಕ ಜಲ, ವಿಷಮ ಮೊದಲಾದವುಗಳು ಷಟ್ಪದಿಗಳೇ ಅಲ್ಲ.

ಷಟ್ಪದಿ ಮಾತ್ರಾಗಣಾತ್ಮಕವೇ ಇರಲಿ ಅಂಶಗಣಾತ್ಮಕವೇ ಇರಲಿ, ಆದಿಪ್ರಾಸರಾಹಿತ್ಯ ಆಧುನಿಕರ ಇನ್ನೊಂದು ಸಾಧನೆ. ಇದರಿಂದ ಹೆಜ್ಜೆ ಹೆಜ್ಜೆಗೂ ಪ್ರಾಸದ ಪಾಶಕ್ಕೆ ಕೊರಳುಕೊಡಬೇಕಾದುದನ್ನು ತಪ್ಪಿಸಿಕೊಂಡು, ಪಾದಪಾದಕ್ಕೂ ಕಾಲುಚಾಚುವ ಸ್ವಾತಂತ್ರ್ಯ ಪಡೆಯಿತು, ಷಟ್ಪದಿ. ಇದು ಇಪ್ಪತ್ತನೆಯ ಶತಮಾನದ ಸಾಧನೆಯಾದರೂ ಇಷ್ಟೇ ಸ್ಪಷ್ಟವಾದ ಸಾಧನೆ ೧೨ನೆಯ ಶತಮಾನದಲ್ಲಿಯೂ ಮಿಂಚಿದೆ. ಉದಾ :

---

೩೫. ಗೋಪಾಲಕೃಷ್ಣ ಅಡಿಗ -ಭೂಮಿಗೀತ - ಭೂಮಿಗೀತ

ಇಹಪರದ ಪರಿಯನ್ನು ಅಯ್ಯ ನೀನೇ ಬಲ್ಲೆ
ನಿಮ್ಮ ಶರಣನು ಬಲ್ಲ ಪ್ರಭುರಾಯನು
ಆತನನುಮತದಿಂದ ಮಾಯೆಯನು ಗೆಲುವುದನು
ನೀವೆನಗೆ ಕಲಿಸುವುದು ಯೋಗಿನಾಥ ||[೩೭]

ಶರಣರ ಕ್ರಾಂತಿಯನ್ನು ಲಯದಲ್ಲಿ ಗುರುತಿಸಿದ ನಾವು, ಪ್ರಾಸದಲ್ಲಿ ಗುರುತಿಸದೇ ಹೋದುದು ಆಶ್ಚರ್ಯವೇ ಸರಿ. ಅದೇನೆ ಇದ್ದರೂ ನವೋದಯ ಕಾಲದಲ್ಲಿ ಷಟ್ಪದಿಯು ಪ್ರಾಸದ ಕಾಲುತೊಡಕಿನಿಂದ ಮುಕ್ತವಾಗಿ, ಪಾದದಿಂದ ಪಾದಕ್ಕೆ ಪ್ರವಹಿಸಿದುದು ಒಂದು ಸಾಧನೆಯಾಗಿದೆ.

ಒಟ್ಟಿನಲ್ಲಿ ನವೋದಯ ಕವಿಗಳು ಷಟ್ಪದಿಯಲ್ಲಿ ವಿಶೇಷ ಪ್ರಯೋಗವನ್ನು ಮಾಡಿದರೆನ್ನುವುದಕ್ಕಿಂತ, ಛಂದಸ್ಸಿನಲ್ಲಿ ಮಾಡಿದರೆನ್ನುವುದು ಹೆಚ್ಚು ಸಮಂಜಸ.

ಹೀಗೆ ಆದಿಯಲ್ಲಿ ಒಂದಾಗಿದ್ದ ಮಾಲಷಟ್ಪದಿ, ಆರು ಅಂಶಷಟ್ಪದಿಗಳಾಗಿ, ಆರು ಮಾತ್ರಾ ಷಟ್ಪದಿಗಳಿಗೆ ತಿರುಗಿ, ಕನ್ನಡಿಗರ ಅನುಭವಗಳಿಗೆ ಕಾವ್ಯಮಾಧ್ಯಮವಾಗುತ್ತ ಎಲ್ಲ ಪ್ರಕಾರಗಳಿಗಿಂತ ಹೆಚ್ಚು ಕಾಲ ನಡೆದು ಬಂದು, ನವೋದಯ ಕಾಲದಲ್ಲಿಯೂ ಚಂಚು ಪ್ರವೇಶ ಮಾಡಿದಾಗ ಅದರ ಏಕತಾನತೆ ಬೇಸರವನ್ನುಂಟು ಮಾಡಿತು; ಆಧುನಿಕ ಜೀವನ ವೈವಿಧ್ಯಪೂರ್ಣವಾದಂತೆ ಅನುಭವಗಳೂ ವೈವಿಧ್ಯಪೂರ್ಣವಾಗಲು ಅದಕ್ಕೆ ಷಟ್ಪದಿಯ ಪ್ರಾಚೀನ ಲಯಗಳು ಸಾಲದಾದವು. ಆಗ "ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು" ಎಂಬ ಮನೋಭಾವ ಜಾಗ್ರತವಾಗಿ, ಛಂದಸ್ಸಿನಲ್ಲಿ ಆಧುನಿಕತೆ ಕಣ್ಣುತೆರೆಯಿತು.

■■

ಆಕರ : ಮಾರ್ಗ ಸಂಪುಟ–೨

---

೩೬. ಈ ದೃಷ್ಟಿಯಿಂದ ನೋಡಿದರೆ ಪಂಪಭಾರತದ ಬನವಾಸಿ ವರ್ಣನೆಯ ನಾಲ್ಕು ವೃತ್ತಗಳು ಒಂದೇ ಪದ್ಯ. ಇಡೀ ಕುಮಾರವ್ಯಾಸ ಭಾರತವೂ ಒಂದೇ ಪದ್ಯ ನೋಡಿ: "ಚಾಗದ. ಭೋಗ. ದಕ್ಕರದ. ಗೇಯದ. ಗೊಟ್ಟಿಯ. ಲಂಪಿ. ನಿಂಪುಗ. ಳ್ಗಾಗರ. ಮಾದ. ಮಾನಸರೆ. ಮಾನಸ. ರಂತವ. ರಾಗಿ. ಪುಟ್ಟಲೇ. ನಾಗಿಯು. ಮೇನೋ. ತೀರ್ದಪುದೆ. ತೀರದೊ. ಡಂ ಮರಿ. ದುಂಬಿಯಾಗಿ, ಮೇಣ್. ಕೋಗಿಲೆ ಯಾಗಿ. ಪುಟ್ಟುವುದು. ನಂದನ. ದೊಳ್ ಬನ. ವಾಸಿ. ದೇಶದೊಳ್. ತೆಂಕಣ. ಗಾಳಿ. ಸೋಂಕಿದೊಡ. ಮೊಳ್ನಡಿ. ಗೇಳ್ದೊಡ. ಮಿಂಪ. ನಾಳ್ದಗೆ. ಯಂ ಕಿವಿ. ವೊಕ್ಕೊ ಡಂ. ಬಿರಿದ. ಮಲ್ಲಿಗೆ. ಗಂಡೊಡ. ಮಾದ. ಕೆಂದಲಂ. ಪಂಗೆಡೆ. ಗೊಂಡೊಡಂ. ಮಧು...." ಹೀಗೆ ಲಯಪರಂಪರೆಯನ್ನು ಗಮನಿಸಬಹುದು.

೩೭. ಕನ್ನಡ ಛಂದಸ್ಸಿನ ರೂಪಗಳು - ಪ್ರ ೧೮೬.

೪೯

ಗೋವಿಂದ ಪೈಗಳ ಸಂಶೋಧನೆಯ ಪದ್ಧತಿ-ಸಾಧನೆ

ಸಂಶೋಧಕ ಗೋವಿಂದ ಪೈ ಇಂದು ಸಂಶೋಧನೆಯ ವಸ್ತುವಾಗಿ ಪರಿಣಮಿಸಿದ್ದಾರೆ. ಅವರ ಬದುಕಿಗೆ ಸಂಬಂಧಿಸಿದ ಸಂಗತಿಗಳನ್ನು ಬಿಟ್ಟರೂ ಬರಹಕ್ಕೆ ಸಂಬಂಧಿಸಿದ ಲೇಖನಗಳನ್ನು ಪತ್ತೆ ಹಚ್ಚುವುದೂ, ಅವುಗಳ ಸತ್ಯ ಮತ್ತು ಸತ್ವಗಳನ್ನು ಪರೀಕ್ಷಿಸುವುದೂ ಒಂದು ಮಹತ್ವದ ಶೋಧವೇ ಸರಿ.

ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿರುವ ಪೈಗಳ ಲೇಖನಗಳು ರಾಜ್ಯ ಮತ್ತು ರಾಷ್ಟ್ರಮಟ್ಟದ ಪ್ರಸಿದ್ಧ-ಅಪ್ರಸಿದ್ಧ ನಿಯತಕಾಲಿಕೆಗಳಲ್ಲಿ, ವಿಶೇಷ ಸಂಚಿಕೆ - ಅಭಿನಂದನ ಗ್ರಂಥಗಳಲ್ಲಿ ಚದರಿಹೋಗಿವೆ. ಒಂದು ಅಂದಾಜಿನ ಪ್ರಕಾರ ೧೯೨೬ ರಿಂದ ೧೯೬೨ ವರೆಗಿನ ೩೬ ವರ್ಷಗಳಲ್ಲಿ ಪ್ರಕಟವಾದ ಅವರ ಸಂಶೋಧನ ಲೇಖನಗಳ ಸಂಖ್ಯೆ ಸುಮಾರು ೨೦೦. ಇವು ಪ್ರಕಟವಾದ ಆಕರಗಳ ಸಂಖ್ಯೆ ಸುಮಾರು ೮೦ ಎಂದು ಶ್ರೀ ಹಾವನೂರ, ಶ್ರೀ ನಾಯಕ ಈಗಾಗಲೇ ಲೆಕ್ಕಹಾಕಿದ್ದಾರೆ.[೧] ಗ್ರೀಕ್ ಪ್ರಹಸನದಿಂದ ತುಳು ಯಕ್ಷಗಾನದ ವರೆಗೆ ಭೂಗೋಲವನ್ನೂ, ಮಹಾವೀರನಿಂದ ಮುದ್ದಣ್ಣನ ವರೆಗೆ ಇತಿಹಾಸವನ್ನೂ ವ್ಯಾಪಿಸಿರುವ ವಿಪುಲಸಂಖ್ಯೆಯ ಈ ವಿವಿಧ ಬರಹಗಳ ವಿಷಯವನ್ನು ಒಂದು ಚೌಕಟ್ಟಿಗೆ ಅಳವಡಿಸುವುದು ತೀರ ಕಷ್ಟದ ಕೆಲಸ. ಹೀಗಿದ್ದೂ ಇವುಗಳ ಹಿಂದಿರುವ ಪೈಗಳ ಮನೋಧರ್ಮವನ್ನು ಶೋಧಿಸಿ, ಅವರ ಸಂಶೋಧನೆಯ ಸಾಮಾನ್ಯಸೂತ್ರಗಳನ್ನು ಗುರುತಿಸುವುದು, ಸಾಧನೆಗಳನ್ನು ಸೂಚಿಸುವುದು ಈ ಲೇಖನದ ಉದ್ದೇಶವಾಗಿದೆ.

ಪ್ರತಿಭೆ, ಪಾಂಡಿತ್ಯಗಳು ವಿರುದ್ಧಮುಖಿಗಳಾದರೂ ಪ್ರತಿಭೆಯ ಕ್ರಿಯೆಯಾದ ಕಾವ್ಯಕ್ಕೆ ಗಟ್ಟಿತನ ಬರುವುದು ಪಾಂಡಿತ್ಯ ಅಥವಾ ವ್ಯುತ್ಪತ್ತಿಯ ಸಹಯೋಗದಿಂದ. ಇದಕ್ಕೆ ಪಂಪ, ಕುವೆಂಪು, ಬೇಂದ್ರೆಯವರ ಸಾಹಿತ್ಯ ನಿದರ್ಶನವೆನಿಸಿದೆ. ಆದರೆ ಬೇಕೆನಿಸಿದಾಗ ಪ್ರತಿಭೆಯಲ್ಲಿ ಪಾಂಡಿತ್ಯವನ್ನು ಲೀನಗೊಳಿಸಿಕೊಂಡು ಕಾವ್ಯನಿರ್ಮಿಸುವ, ಬೇಡೆನಿಸಿದಾಗ ಪ್ರತಿಭೆಯಿಂದ ಪಾಂಡಿತ್ಯವನ್ನು ಪ್ರತ್ಯೇಕವಾಗಿಟ್ಟುಕೊಂಡು ಸಂಶೋಧನಾತ್ಮಕ ಸಾಹಿತ್ಯ ನಿರ್ಮಿಸುವ ಕವಿಗಳು ವಿರಳ. ಈ ವಿರಳರ ಸಾಲಿನಲ್ಲಿ ಬರುವ ರಘುವಂಶಮಹಾಪುರಾಣ-ಕವಿರಾಜಮಾರ್ಗಗಳ ಶ್ರೀವಿಜಯ, ಶಬ್ದಮಣಿದರ್ಪಣ-ಚೋಳಪಾಲಚರಿತಾದಿಗಳ ಕೇಶಿರಾಜರ ಜೊತೆ ಗೊಲ್ಗೊಥಾ-ವೈಶಾಖಿಗಳ ಪೈಗಳು ೨೦ನೆಯ ಶತಮಾನದ ಏಕೈಕ ಉದಾಹರಣೆಯಾಗಿ ನಿಲ್ಲುತ್ತಾರೆ. ಏಕಕಾಲಕ್ಕೆ

---

೧. ಮ. ವಿ. ನಾಯಕ, ಶ್ರೀನಿವಾಸ ಹಾವನೂರ : ಗೋವಿಂದ ಪೈ ವಾಙ್ಮಯದರ್ಶನ, ೧೯೬೬.

ಎರಡು ಹಾದಿಗಳನ್ನು ತುಳಿಯುವ ತಮ್ಮ ಈ ತೊಂದರೆಯನ್ನು ಪೈಗಳೇ ಒಂದು ಕಡೆ "ಕವಿತಾಮಾರ್ಗ ಬೇರೆ, ಸಂಶೋಧನಮಾರ್ಗ ಬೇರೆ. ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆಯಿತು. ವಿಶಿಷ್ಟವಾದ ದೈವಕೃಪೆ ಉಳ್ಳವರು ಅವೆರಡನ್ನೂ ಕೆಯ್ಕೊಂಡು ಹೊತ್ತನ್ನು ಹಿಡಿತದಿಂದ ಬಳಸಿದರೆ ಸವ್ಯಸಾಚಿಯಾಗಬಹುದಾದರೂ ನನ್ನ ಬಗೆಗಾದರೋ ಅವು ಮುಳುವಾಗಿವೆ. ಹಾಲು ಕಾಯಿಸಲಿಕ್ಕೂ ಹುರುಳಿ ಹುರಿಯಲಿಕ್ಕೂ ಸರಿಯಾಗದೆ, ಅವುಗಳನ್ನು ಸವಡಿಸಲಿಕ್ಕೆ ಯತ್ನಿಸುವಲ್ಲಿ, ಒಂದು ಒರೆಯಲ್ಲಿ ಎರಡು ಕತ್ತಿಯನ್ನು ಸಿಕ್ಕಿಸಿಡಲಿಕ್ಕೆ ಪೇಚಾಡುತ್ತೇನೆ"[೨] ಎಂದು ಹೇಳಿರುವುದು ವಿನಯದ ಮಾತಾಗಿರುವಂತೆ ಕೆಲಮಟ್ಟಿಗೆ ಸತ್ಯವೂ ಆಗಿದೆ.

೧೮೮೩ರಲ್ಲಿ ಹುಟ್ಟಿದ ಪೈಗಳು ಸೃಜನಸಾಹಿತ್ಯ ರಚನೆಯನ್ನು ಪ್ರಾರಂಭಿಸಿದುದು ೧೯೦೦ರಲ್ಲಿ; ಸಂಶೋಧನಸಾಹಿತ್ಯವನ್ನು ಪ್ರಾರಂಭಿಸಿದುದು ೧೯೨೬ರಲ್ಲಿ. ಹೀಗೆ ಕಾಲದೃಷ್ಟಿಯಿಂದ ಸೃಜನಶೀಲಸಾಹಿತ್ಯ ಅವರ ಪ್ರಥಮಪ್ರೀತಿ (First Love), ಸಂಶೋಧನಸಾಹಿತ್ಯ ದ್ವಿತೀಯ ಪ್ರೀತಿ (Second Love) ಆಗಿದ್ದರೂ ಎರಡನೆಯ ಹೆಂಡತಿಯಂತೆ ಅವರನ್ನು ಉದ್ದಕ್ಕೂ ಆಳಿದುದು ಸಂಶೋಧನೆಯೇ. ಹೀಗಾಗಿ ಅದು ಅವರ ಸೃಜನಶೀಲ ಸಾಹಿತ್ಯದ ಪ್ರಕಾರಗಳಾದ ಕವನ-ನಾಟಕಗಳಲ್ಲಿಯೂ ಅಡಿಟಿಪ್ಪಣಿ, ಕಠಿಣಪದಕೋಶ ರೂಪದಿಂದ ಒತ್ತಿ ಬಂದಿರುವುದನ್ನು ಕಾಣಬಹುದು.

ಕವಿಯಾಗಿರುವ ಪೈಗಳಲ್ಲಿ ಸಹೃದಯತೆ ತೀರ ಸ್ವಾಭಾವಿಕ. ಆದರೆ ಅವರಲ್ಲಿ ಈ ಸಹೃದಯತೆಯನ್ನು ಮೆಟ್ಟಿನಿಂತು ಕಾರ್ಯಮಾಡುತ್ತದೆ, ಸಂಶೋಧನೆ. ಆದುದರಿಂದಲೇ ಪಂಪ, ರನ್ನ, ಹರಿಹರ, ಕುಮಾರವ್ಯಾಸರ ಕಾವ್ಯಗಳ ರಸಸ್ಥಾನಗಳಿಗಿಂತ ಮಹಾವೀರ, ಬುದ್ಧ, ಬಸವೇಶ್ವರರ ಪರಮಸಿದ್ಧಾಂತಗಳಿಗಿಂತ ಅವರ ಕಾಲ, ದೇಶ ನಿರ್ಣಯಗಳಿಗೇ ಪೈಗಳು ತೀವ್ರ ಸೋತು ಬಿಡುತ್ತಾರೆ. ಒಟ್ಟಿನಲ್ಲಿ ಪೈಯೆಂದಾಕ್ಷಣ ನಮ್ಮ ಕಣ್ಣು ಮುಂದೆ ಮೊದಲು ಬರುವುದು ಒಬ್ಬ ಕವಿಯ ಚಿತ್ರವಲ್ಲ; ಒಬ್ಬ ಸಂಶೋಧಕನ ಚಿತ್ರ.

ಪೈಗಳು ಬರೆಯುತ್ತಿದ್ದುದು ೨೦ನೆಯ ಶತಮಾನದ ಪೂರ್ವಾರ್ಧದಲ್ಲಿ. ನಮ್ಮ ಪರಂಪರೆ-ಪ್ರಾಚೀನತೆಗಳ ಅಭಿಮಾನ ಗಾಢವಾಗಿದ್ದ ನವೋದಯ ಕಾಲವದು. ಕಾಲದ ಪ್ರತಿನಿಧಿಯಾಗಿ ನಿಂತು, ಅಂದಿನ ಕವಿಗಳು ತಮ್ಮ ಸಾಹಿತ್ಯದಲ್ಲಿ ಈ ಅಭಿಮಾನಕ್ಕೆ ಅವಕಾಶ ಮಾಡಿಕೊಟ್ಟು ರಮ್ಯಪಂಥವನ್ನು ರೂಢಿಸಿದರು. ಸಂಶೋಧಕನಾದವನು ಕವಿವಿಶಿಷ್ಟವಾದ ವ್ಯಕ್ತಿನಿಷ್ಠತೆಯನ್ನು ನಿರಸನ ಮಾಡಿಕೊಂಡು ವಸ್ತುನಿಷ್ಠ ನೀತಿಗೆ ಅಂಟಿಕೊಳ್ಳಬೇಕಾಗುತ್ತದೆ; ರಮ್ಯಮನೋಭಾವದಿಂದ ಪಾರಾಗಬೇಕಾಗುತ್ತದೆ. ಆದರೆ ಕವಿಗಳೂ ಸಹೃದಯರೂ ಆಗಿದ್ದ ಪೈಗಳು ಈ ನವೋದಯ ಮನೋಧರ್ಮದಿಂದ ಪಾರಾಗದುದು ಅವರ ಸಂಶೋಧನೆಯ ಒಂದು ಪ್ರಮುಖ ದೌರ್ಬಲ್ಯವಾಗಿದೆ. ಹೀಗಾಗಿ ವಸ್ತುನಿಷ್ಠವಾಗಬೇಕಿದ್ದ ಅವರ ಸಂಶೋಧನೆಯಲ್ಲಿ ನಾಡು-ನುಡಿ, ಸಂಸ್ಕೃತಿ, ಸಾಹಿತ್ಯಗಳ ವ್ಯಾಮೋಹ ಆಗಾಗ ಇಳಿದುಬರುತ್ತದೆ. ಸಾಮಾನ್ಯವಾಗಿ ನಮ್ಮ ಕವಿಕೃತಿಗಳ ಕಾಲವನ್ನು ಉಳಿದವರಿಗಿಂತ ಹಿಂದೆ ಒಯ್ಯುವ, ರತ್ನಾಕರವರ್ಣಿಹೋಗಲಿ, ಮುದ್ದಣ್ಣನನ್ನು ವಿಶ್ವಸಾಹಿತ್ಯ ವೇದಿಕೆಯ ಮೇಲೆ ನಿಲ್ಲಿಸುವ ತೀರ್ಪುಗಳು ಈ ದೌರ್ಬಲ್ಯದ ಕುರುಹುಗಳಾಗಿವೆ. ಇದರಿಂದಾಗಿ ಪೈಗಳು ಮಂಡಿಸಿದ ಹಲ್ಮಿಡಿ ಶಾಸನದ ಕಾಲ, ವಡ್ಡಾರಾಧನೆಯ ಕಾಲ, ಲಕ್ಷ್ಮೀಶನ ಕಾಲ ಮೊದಲಾದವು ಇಂದಿಗೂ ಸತ್ಯವಾಗಿಲ್ಲ; ಸತ್ಯವಾಗುವ ಲಕ್ಷಣಗಳೂ ಇಲ್ಲ. ಈ ದೌರ್ಬಲ್ಯದಲ್ಲಿ ಸಿಕ್ಕುಬೀಳದವರೆಂದರೆ ಆ ಕಾಲದವರೇ ಆದ ಎ. ವೆಂಕಟಸುಬ್ಬಯ್ಯನವರು. ಹೀಗಾಗಿ ಅಂದು ಅನೇಕರು ಒಪ್ಪದಿದ್ದರೂ ವೆಂಕಟಸುಬ್ಬಯ್ಯನವರ ಶೋಧಗಳು

---

೨. ದೀವಿಗೆ - ಭಾಗ ೨, ಪುಟ ೪.

ಇಂದು ಸತ್ಯವಾಗುತ್ತ ನಡೆದರೆ, ಪೈಗಳ ಸಂದೇಹಗಳು ಸತ್ಯವಾಗುವುದಿರಲಿ ಸತ್ಯಗಳೂ ಆಗಾಗ ಬಿದ್ದುಹೋಗುತ್ತಲಿವೆ.

ಪೈಗಳ ಈ ಅಭಿಮಾನ ಒಮ್ಮೊಮ್ಮೆ ಆವೇಶಕ್ಕೆ ತಿರುಗುವುದರಿಂದ "ಕ್ರಿ.ಶ. ೧೫೬೦ರಲ್ಲಿ ಪೋರ್ಚುಗೀಸರು ವಿಧಿಸಿದ ಧರ್ಮಪರಿವರ್ತನ ಬಲತ್ಕಾರವನ್ನು ಎಡಗಾಲಿನಿಂದ ಅವರ ಮೋರೆಗೆ ಒದ್ದು, ಧರ್ಮಾತ್ಮರಾದ ನಮ್ಮ ಹಿರಿಯರು ಸ್ವಧರ್ಮಕ್ಕಾಗಿ ತಮ್ಮ ಚಿರಕಾಲದ ಮಾತೃಭೂಮಿಯಾಗಿದ್ದ ಗೋವೆಯನ್ನು ಬಿಟ್ಟು, ಈ ಕರಾವಳಿಯಲ್ಲಿ ಈ ದುರುಳರ ಹಿಡುವಳಿಯ ಹೊರಗಿದ್ದ ಅನ್ಯಾನ್ಯ ಅನೇಕ ಠಾವುಗಳಲ್ಲಿ ಬಂದು ನೆಲೆಸಿದಂದಿನಿಂದ ಇದುವರೆಗೂ ನಮ್ಮವರು ಈ ಕನ್ನಡ ತುಳು ಕೇರಳ ಜಿಲ್ಲೆಗಳಲ್ಲಿ ಇರುವಷ್ಟೇ"[೩] ಎಂಬಂಥ ಕೋಪ-ತಾಪದ ವಾಕ್ಯಗಳು ಅವರ ಲೇಖನಗಳಲ್ಲಿ ತಲೆಹಾಕುತ್ತವೆ. ಪರಂಪರೆಯ ಬಗೆಗಿನ ಅದಮ್ಯ ಅಭಿಮಾನದ ಪ್ರತೀಕವಾದ ಈ ಭಾವಾವೇಶ ಪೈಗಳ ಮನೋಧರ್ಮವನ್ನು ಸರಿಯಾಗಿ ಪ್ರತಿನಿಧಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ವಿದ್ವಾಂಸರು ಸ್ಪೆಶಲೈಝೇಷನ್ ಪರಿಮಿತಿಯಲ್ಲಿ ಕೆಲಸ ಮಾಡುತ್ತಲಿದ್ದಾರೆ. ಕಳೆದ ತಲೆಮಾರಿನ ಪರಿಸ್ಥಿತಿ ಇದಕ್ಕಿಂತ ಬೇರೆಯಾಗಿದ್ದಿತು. ಆ ಕಾಲದ ವಿದ್ವಾಂಸರು ಏಕಕಾಲಕ್ಕೆ ಅನೇಕ ಕ್ಷೇತ್ರಗಳ ಹೊಣೆ ಹೊರುತ್ತಿದ್ದರು. ಅದು ಅನಿವಾರ್ಯವೂ ಆಗಿದ್ದಿತು. ಸಂಶೋಧನೆಯಲ್ಲಿ ಏಕಕಾಲಕ್ಕೆ ಅನೇಕ ಪಥಗಳನ್ನು, ಅದರಲ್ಲಿಯೂ ಒಂದಕ್ಕೊಂದು ಸಂಬಂಧವಿಲ್ಲದ ಪಥಗಳನ್ನು ತುಳಿಯುತ್ತಲಿದ್ದ ಪೈಗಳು ಇದಕ್ಕೆ ಪರಮಾವಧಿ ನಿದರ್ಶನ. ವಿಷಯ ವೈವಿಧ್ಯದಲ್ಲಿ ಅಂದು ಅವರನ್ನು ಮೀರಿಸುವ ಸಂಶೋಧಕರು ನಮ್ಮ ನಾಡಿನಲ್ಲಿರಲಿಲ್ಲ. ಅವರ ಇತಿಹಾಸಶೋಧ ತುಳುನಾಡು, ಕರ್ನಾಟಕ, ಭಾರತಗಳನ್ನೂ ಸಾಹಿತ್ಯಿಕಶೋಧ ಹಳಗನ್ನಡ ನಡುಗನ್ನಡ ಹೊಸಗನ್ನಡಗಳನ್ನೂ ಸಾಲದುದಕ್ಕೆ ಭಾಷೆ -ಧರ್ಮಗಳನ್ನೂ ತಬ್ಬಿಕೊಂಡು ಮುನ್ನಡೆಯಿತು. ಸಾರಸ್ವತರ ಬಗೆಗೆ ಬರೆಯಹೊರಟು, ನೋಡುನೋಡುವಷ್ಟರಲ್ಲಿ ಅವರು ಸಂಶೋಧನ ಸಾರಸ್ವತವನ್ನು ವ್ಯಾಪಿಸಿದರು. "ವೃಥಾ ಬಾವಿಯಲ್ಲಿ ಗಾಳ ಹಾಕಿ ಲಾಭವೇನು? ಹಾಕಬೇಕು ಕಡಲಲ್ಲಿ ಬೀಸು ಬಲೆಯನ್ನು ಎಂದು ನಿರ್ಧರಿಸಿ, ಸಮಗ್ರ ಭಾರತದ ಐತಿಹಾಸಿಕ ಸಂಶೋಧನಕ್ಕೆ ಕೈ ಹಚ್ಚಿದೆ"[೪] ಎಂಬ ಮಾತು ಅವರ ಸಂಶೋಧನೆಯ ಭಾರತೀಯ ವ್ಯಾಪ್ತಿಯನ್ನು ಸೂಚಿಸುತ್ತದೆ. ಈ ಧ್ಯೇಯ-ದುಡಿಮೆಗಳಿಂದಾಗಿ ಕರ್ನಾಟಕ ವ್ಯಾಪ್ತಿಯ "ರಾಷ್ಟ್ರಕವಿ"ಗಳಾದ ಅವರು ಭಾರತ ವ್ಯಾಪ್ತಿಯ "ರಾಷ್ಟ್ರಸಂಶೋಧಕ"ರಾಗಿ ಬೆಳೆದರು. ಕನ್ನಡಿಗರೆಂಬ ಕಾರಣದಿಂದ, ಸರಕಾರೀ ಹುದ್ದೆ ಅಲಂಕರಿಸಿರಲಿಲ್ಲವೆಂಬ ಕಾರಣದಿಂದ, ಪೈಗಳಿಗೆ ಅಖಿಲ ಭಾರತ ಮಟ್ಟದ ಪ್ರಚಾರ ಸಿಗದಿದ್ದರೂ ಅವರು ಆರ್. ಜಿ. ಭಂಡಾರಕರ ಶ್ರೇಣಿಯ ದೊಡ್ಡ ವಿದ್ವಾಂಸರು. ಭಂಡಾರಕರರಂತೆ ಇವರದೂ ಬಹುಮುಖ ಸಂಶೋಧನೆ.

ಸಂಶೋಧನೆ ಎರಡು ತೆರನಾಗಿದೆ: ಒಂದು ಚರಿತ್ರೆಗೆ ಸಂಬಂಧಿಸಿದುದು, ಇನ್ನೊಂದು ಸಂಸ್ಕೃತಿಗೆ ಸಂಬಂಧಿಸಿದುದು. ೨೦ನೆಯ ಶತಮಾನದ ಪೂರ್ವಾರ್ಧದಲ್ಲಿ ನಮ್ಮ ಪ್ರಾಂತರಚನೆಯಷ್ಟೇ ನಮ್ಮ ಪ್ರಾಚೀನಚರಿತ್ರೆಯ ಗಚನೆಯೂ ಅನಿವಾರ್ಯವಾಗಿದ್ದಿತು. ಈ ಅನಿವಾರ್ಯತೆಯ ಪೂರೈಕೆಗಾಗಿ ಅಂದಿನ ಇತರ ಸಂಶೋಧಕರಂತೆ ಪೈಗಳೂ ಚಾರಿತ್ರಿಕ ಸಂಶೋಧನ ಮಾರ್ಗದಲ್ಲಿ ಹೆಜ್ಜೆಹಾಕಿದರು. "ಜಿನಪತಿ ಸಭೆಯೊಳ್ ಪೂಜ್ಯಂ" ಎಂಬುದನ್ನು "ಜನಪತಿ ಸಭೆಯೊಳ್ ಪೂಜ್ಯ"[೫] ಎಂದೂ, "ಬಿಜ್ಜಳನ ಮಮ್ಮಂ ಕರ್ಣದೇವಂ"

೩. ದೀವಿಗೆ - ಭಾಗ ೨, ಪುಟ ೪೩.

೪. ದೀವಿಗೆ - ಭಾಗ ೨ ಪುಟ ೪.

೫. ಅಭಿನವಪಂಪ (ಪು.೨೮)

ಎಂಬುದನ್ನು "ಬಿಜ್ಜಳನ ತಮ್ಮಂ ಕರ್ಣದೇವಂ"[೬] ಎಂದೂ ಪರಿಷ್ಕರಿಸಿ ಚರಿತ್ರೆಯನ್ನು ಪುನರ್ರಚಿಸುವ ರೀತಿ ಅವರ ಸೂಕ್ಷ್ಮದೃಷ್ಟಿಯನ್ನು ಪ್ರತಿನಿಧಿಸುತ್ತದೆ. ಆದರೆ ಎಷ್ಟೆಂದರೂ ಚರಿತ್ರೆಯಶೋಧ ವಿಷಯದ ಸ್ಥೂಲತನು ಪಾತಳಿಯ ಮೇಲೆ ನಡೆಯುವಂಥಹದು. ಬಹಳೆಂದರೆ ಅದು ಸೂಕ್ಷ್ಮತನು ಪಾತಳಿಯದೇ ಹೊರತು, ಕಾರಣತನು ಪಾತಳಿಯದಲ್ಲ. ಚರಿತ್ರೆಯ ಸಂಶೋಧಕರಾದ ಪೈಗಳ ಅನ್ವೇಷಣೆಗೂ ಈ ಮಾತು ಅನ್ವಯಿಸುವುದರಿಂದ ಇವರ ಲೇಖನಗಳನ್ನೋದುವಾಗ ನಮ್ಮ ಪರಂಪರೆಯ ಮೈ ಕಾಣಿಸುತ್ತದೆಯೇ ಹೊರತು, ಮನಸ್ಸು ಕಾಣುವುದಿಲ್ಲ.

ಸಂಶೋಧನೆಯ ಕಾರ್ಯವಿಧಾನ ಸಾಮಗ್ರಿಮುಖಿ (Data oriented) ಮತ್ತು ವ್ಯಾಖ್ಯಾನಮುಖಿ (Interpritation oriented) ಎಂದು ಎರಡು ಬಗೆಯಾಗಿದೆ. ಇಂದು ಸಂಸ್ಕೃತಿಶೋಧದತ್ತ ವಾಲುತ್ತಲಿರುವ ನಮ್ಮ ಸಂಶೋಧನೆ ವ್ಯಾಖ್ಯಾನುಮುಖಿಯಾಗುತ್ತಲಿದ್ದರೆ, ಹಳೆಯ ತಲೆಮಾರಿನಲ್ಲಿ ಚರಿತ್ರೆಯ ಶೋಧ ಕಾರಣವಾಗಿ ಅದು ಸಾಮಗ್ರಿಮುಖಿಯಾಗಿದ್ದಿತು ಈ ಬಗೆಯ ಅತಿರಥರ ಪಂಕ್ತಿಯಲ್ಲಿ ಪೈಗಳು ಅಗ್ರಗಣ್ಯರು. ಒಬ್ಬ ಮನುಷ್ಯ ಇಷ್ಟು ಸಾಮಗ್ರಿ ಸಂಗ್ರಹಿಸಬಲ್ಲನೇ? ಎಂದು ಆಶ್ಚರ್ಯ ಹುಟ್ಟುವಷ್ಟರಮಟ್ಟಿಗೆ ಅನೇಕ ಭಾಷೆ, ಸಾಹಿತ್ಯ, ಶಾಸನ, ಐತಿಹ್ಯ, ಪುರಾಣ ಇತ್ಯಾದಿಗಳಿಂದ ಬಂಡಿಗಟ್ಟಲೆ ಆಧಾರಗಳನ್ನು ತಂದು ಇವರು ಅಡಕಿಲೇರಿಸುತ್ತಾರೆ. ಅದೂ ವಿದ್ಯಾಸಂಸ್ಥೆಯಿಂದ, ವಿದ್ವಾಂಸರ ಪರಿಸರದಿಂದ ದೂರವಿರುವ ಮಂಜೇಶ್ವರದ ಮೂಲೆಯಲ್ಲಿ ನಿಂತು ಸಾಮಗ್ರಿಯನ್ನು ಸಂಗ್ರಹಿಸುವ ಈ ಪ್ರಯತ್ನಶೀಲತೆ ಯಾರನ್ನೂ ಬೆರಗುಗೊಳಿಸುತ್ತದೆ.

ಹೀಗೆ ಪೈಗಳು ಆಧಾರವಾಗಿ ಮೂಲಸಾಮಗ್ರಿಯೇ (Primary Source) ಇರಲಿ, ಆನುಷಂಗಿಕ ಸಾಮಗ್ರಿಯೇ (Secondary Source) ಇರಲಿ, ಅದು ಪ್ರಥಮ ಹಸ್ತದ್ದೇ (First hand) ಹೊರತು ದ್ವಿತೀಯ ಹಸ್ತ (Secondary hand)ದ್ದಲ್ಲ. ಶಾಸನಪಾಠ, ಹಸ್ತಪ್ರತಿಪಾಠಗಳನ್ನು ಮೂಲಕ್ಕೆ ಎಳ್ಳಷ್ಟೂ ಚ್ಯುತಿ ಬರದಂತೆ ಸ್ಖಾಲಿತ್ಯಸಹಿತ ಉದ್ಧರಿಸುವಲ್ಲಿ ಪೈಗಳದು ಪತಿವ್ರತೆಯ ಪ್ರಾಮಾಣಿಕತೆಯೇ ಸರಿ.

ಸಾಮಗ್ರಿಮುಖಿ ಸಂಶೋಧನಪದ್ಧತಿಯ ಮುಖ್ಯ ಲಕ್ಷಣ ಆಧಾರಗಳ ಸಂಯೋಜನೆಯ ಮೂಲಕ ಸತ್ಯವನ್ನು ಶೋಧಿಸುವುದು. ಈ "Assimilation and identification" ಪದ್ಧತಿಯನ್ನು ಕರ್ನಾಟಕದಲ್ಲಿ ಮೊದಲು ರೂಪಿಸಿದ, ರೂಢಿಸಿದ ವಿದ್ವಾಂಸರಲ್ಲಿ ಪೈಗಳ ಪಾಲು ಮಿಗಿಲಾಗಿದೆ. ಈ "ಪೈಪದ್ಧತಿ" ಆ ಕಾಲದ ಇಂಥ ಸಂಶೋಧಕರನ್ನು ಪಂಥವಾಗಿ ಮುನ್ನಡೆಸಿತು. ಇದಲ್ಲದೆ ಆಧಾರಗಳನ್ನು ಆಂತರಿಕ ಬಾಹ್ಯವೆಂದು ಗುರುತಿಸಿಕೊಳ್ಳುವ, ಕಾಲನಿರ್ಣಯದಲ್ಲಿ ಮೇಲಿನ ಕೆಳಗಿನ ಗಡುವುಗಳನ್ನು ನಿರ್ಣಯಿಸಿ ಅವುಗಳ ಅಂತರವನ್ನು ಕಿರಿದು ಮಾಡುತ್ತ ಬರುವ ಒಳದಾರಿಗಳನ್ನು ರೂಢಿಸಿಕೊಟ್ಟವರಲ್ಲಿಯೂ ಪೈಗಳು ಪ್ರಮುಖರು. ಈ ವಿಧಾನಗಳನ್ನವಲಂಬಿಸಿ ಅನೇಕ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದ ಪೈಗಳಿಗೆ 'ಕಾಲನಿರ್ಣಯ' ವಿಶೇಷ ಕ್ಷೇತ್ರವೆನಿಸಿದ್ದಿತು. ಈ ಪಂಚಾಂಗಪ್ರಜ್ಞೆ ಮತ್ತು ಅದರಲ್ಲಿ ತೋರುತ್ತಲಿದ್ದ ಸಹನಾತೀತ ಆಸಕ್ತಿಗಳಿಂದಾಗಿ ಅವರು ಬುದ್ಧನಿಂದ ಮುದ್ದಣ್ಣನ ವರೆಗೆ ನೂರಾರು ಕವಿ, ಕೃತಿ, ರಾಜವಂಶ, ಸ್ಥಳ, ದೇವಾಲಯಗಳ ಕಾಲನಿರ್ಣಯ ಮಾಡಿದ್ದಾರೆ. ಒಂದು ಕಾಲದಲ್ಲಿ "ಕಾಲನಿರ್ಣಯವೆಂದರೆ ಪೈ, ಪೈಯೆಂದರೆ ಕಾಲ ನಿರ್ಣಯ" ಎಂಬುದು ಮನೆಮಾತಾಗಿದ್ದಿತು. ಯಾರೇ ಸಂಶೋಧನಾತ್ಮಕ ಲೇಖನ ಬರೆದರೂ ಕಾಲವನ್ನು ಕುರಿತ ಪೈಗಳ ತೀರ್ಪನ್ನು ಗಮನಿಸುವುದು ಅಂದು ಅನಿವಾರ್ಯವಾಗಿದ್ದಿತು.

---

೬. ಮೂರು ಉಪನ್ಯಾಸಗಳು (೧೯೬೦), ಪು.೯೨.

ಸಂಶೋಧನಪದ್ಧತಿ ಯಾವುದೇ ಇರಲಿ, ತೀರ್ಪು ಮುಖ್ಯ. ಇದು ಆಯಾ ಕಾಲದ ಲಭ್ಯವಿರುವ ಆಧಾರಸಾಮಗ್ರಿಯನ್ನವಲಂಬಿಸಿರುತ್ತದೆ. ಯಾವುದೇ ಸಂಶೋಧಕ ಸಬಲ ಆಧಾರಗಳು ಲಭ್ಯವಿರುವಾಗ ಸರಿಯಾದ ನೆಲೆಯನ್ನು ಮುಟ್ಟುವನಾದರೂ ದುರ್ಬಲ ಸಾಮಗ್ರಿಯನ್ನವಲಂಬಿಸಿ ಊಹೆಯ ಮೂಲಕ ಸತ್ಯವನ್ನು ಸ್ಥಾಪಿಸುವಲ್ಲಿ ಅವನ ಸತ್ವಪರೀಕ್ಷೆ ನಡೆಯುತ್ತದೆ. ಪೈಗಳ ಮಟ್ಟಿಗೆ ಹೇಳುವುದಾದರೆ ಗಟ್ಟಿ ಆಧಾರಗಳ ಸಂದರ್ಭದಲ್ಲಿ "ಬಿಜ್ಜಳನು ಸರ್ವಥಾ ಜೈನನಲ್ಲ"[೭] ಎಂಬಂಥ ನಿರ್ಣಯಗಳಿಗೆ ಬರುವ ಅವರು, ಊಹೆಯ ಪ್ರಸಂಗದಲ್ಲಿ ಎಡವಿದುದೇ ಹೆಚ್ಚು. ಈಗ ಅವರ ಊಹೆಯು ಸಂಭಾವ್ಯವಾಗುವುದಾಗಲೀ, ಸಂಭಾವ್ಯವು ಸತ್ಯವಾಗುವುದಾಗಲೀ ಕಡಿಮೆ. ಇದಕ್ಕೆ ಕಾರಣ, ಅವರ ನವೋದಯ ಮನೋಧರ್ಮ ಮತ್ತು ಊಹೆಗೆ ಊಹೆಯನ್ನು ಆಧಾರವಾಗಿಟ್ಟುಕೊಳ್ಳುವ ವಿಧಾನ.

ಸಾಮಗ್ರಿಮುಖಿ ಸಂಶೋಧನಪ್ರಬಂಧ ಸ್ವಾಭಾವಿಕವಾಗಿಯೇ ದೀರ್ಘವಾಗುತ್ತದೆ. ಇದಕ್ಕೆ ಪೈ ಬರಹ ಪರಮನಿದರ್ಶನವಾಗಿದ್ದು, ಅದಕ್ಕೆ ಕಾರಣಗಳು ಹೀಗಿವೆ: ೧. ಒಂದಕ್ಕೆ ಬದಲು ಒಂಭತ್ತು ಉದಾಹರಣೆ ಕೊಡುವುದು. ಉದಾ: "ಕರ್ನಾಟಕದ ನಿಷ್ಪತ್ತಿ" ಲೇಖನದಲ್ಲಿ[೮] ಮಹಾಭಾರತ, ಮಾರ್ಕಂಡೇಯ ಪುರಾಣ, ಭಾಗವತ ಪುರಾಣ, ಕಥಾಸರಿತ್ಸಾಗರ, ಬೃಹತ್ಸಂಹಿತೆ, ಕಾವ್ಯಮೀಮಾಂಸೆ, ಬಾಲರಾಮಾಯಣ, ವಿದ್ಧಶಾಲಭಂಜಿಕಾ ಮೊದಲು ಮಾಡಿ ಪಂಪನ ಆದಿಪುರಾಣ, ನಾಗವರ್ಮನ ಭಾಷಾಭೂಷಣ, ಕೇಶಿರಾಜನ ಶಬ್ದಮಣಿದರ್ಪಣ ಹೀಗೆ ಅನೇಕ ಗ್ರಂಥಗಳಿಂದ ಅನವಶ್ಯವೆನ್ನುವಷ್ಟು ಅವತರಣಿಕೆಗಳನ್ನು ಉದ್ಧರಿಸಿದುದು. ೨.ಆನುಷಂಗಿಕ ಚರ್ಚೆಗಳು ಮೂಲವಿಷಯವನ್ನು ಮರೆಸುವಷ್ಟು ದೀರ್ಘವಾಗಿರುವುದು. ಉದಾ: ನೃಪತುಂಗನ ಕಾಲವಿಚಾರ ಮಾಡುತ್ತ, ಜಿನಸೇನಾಚಾರ್ಯರ ಕಾಲವನ್ನು,[೯] ಪಂಪನ ದೇಶ-ಕಾಲನಿರ್ಣಯದಲ್ಲಿ ಅರಿಕೇಸರಿಯ ವಂಶಾವಳಿಯನ್ನು,[೧೦] ರನ್ನನ ವಿಷಯವಾಗಿ ಬರೆಯುವಾಗ ಗಂಗ ಅರಸರ, ಶಂಕರ ಗಂಡನ ಪ್ರಸ್ತಾಪವನ್ನು[೧೧] ವಾಕಾಟಕ ಪಲ್ಲವರ ಬಗೆಗೆ ಬರೆಯುತ್ತ ಚೇದಿ-ಚೋಳರನ್ನು[೧೨] ಕುರಿತು ವಿವರವಾಗಿ ಚರ್ಚಿಸಿದುದು. ಇದು ಕಥಾನಾಯಕನನ್ನು ಆಗಾಗ ಮಧ್ಯದಲ್ಲಿಯೇ ಕೈಬಿಟ್ಟು ವರ್ಣನೆಗಳಿಂದಲೋ ಇತರ ಘಟನೆಗಳಿಂದಲೂ ಕಾವ್ಯವನ್ನು ಬೆಳೆಸುವ ನಮ್ಮ 'ಪುರಾಣಪದ್ಧತಿ'ಯನ್ನು ಹೋಲುತ್ತದೆ. ೩. ತಮ್ಮ ಸಿದ್ಧಾಂತಕ್ಕೆ ಹಲವು ಸಾದೃಶ್ಯಗಳನ್ನು ಒಡ್ಡುವುದು. ಉದಾ: "ಬುದ್ಧನ ಜನನ, ಬೋಧಿಜ್ಞಾನ ಮತ್ತು ಪರಿನಿರ್ವಾಣ-ಇವು ಮೂರೂ ಒಂದೇ ತಿಥಿಯಂದು ಜರುಗಿದುವಷ್ಟೇ.ಈ ಯೋಗಾಯೋಗವು ಇತಿಹಾಸದಲಿ ಅಪೂರ್ವವಾದದ್ದೇನೂ ಅಲ್ಲ. ಮಹಮ್ಮದ ಪೈಗಂಬರನು ರಬ್ಬಿಉಲ್ ಅವಲ್ ತಿಂಗಳದ ೧೨ನೇ ಸೋಮವಾರವೇ ಹುಟ್ಟಿದ್ದು, ಮುಂದೆ ಬೇರೆ ವರ್ಷದ ಅದೇ ದಿನ, ವಾರದಂದು ತೀರಿಕೊಂಡದ್ದು.[೧೩] ಹೀಗೆ ಹಲವು ಸಾದೃಶ್ಯಗಳನ್ನು ಕೊಡುತ್ತಾರೆ. ಈ ವಿಧಾನಗಳಿಂದಾಗಿ ಅವರ ಲೇಖನ ಅನವಶ್ಯ ದೀರ್ಘವಾಗುತ್ತದೆ. ಇದಕ್ಕೆ ತಕ್ಕಂತೆ ಅಡಿ ಟಿಪ್ಪಣಿಗಳ ಸಂಖ್ಯೆಯೂ ಅನಿವಾರ್ಯ ಬೆಳೆಯುತ್ತದೆ. ಉದಾ:ಬುದ್ಧನ ಪರಿನಿರ್ವಾಣ ಕುರಿತ ೧೨ ಪುಟದ ಲೇಖನಕ್ಕೆ ೫೫ ಅಡಿಟಿಪ್ಪಣಿ ಕೊಟ್ಟಿದ್ದು.[೧೪] ಆ ಪ್ರಸಂಗದಲ್ಲಿ

---

೭. ಮೂರು ಉಪನ್ಯಾಸಗಳು (೧೯೬೦), ಪು.೭೮.

೮. ದೀವಿಗೆ - ಭಾಗ ೨, ಪುಟ.೪೬.

೯. ನೃಪತುಂಗ ಮತವಿಚಾರ (ಕ.ಸಾ.ಪ. ೧೨-೪).

೧೦. ಪಂಪ ಮಹಾಕವಿ (ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಕಟನೆ-೧೯೫೧), ಪುಟ ೫೭-೧೧೬.

೧೧. ಮೂರು ಉಪನ್ಯಾಸಗಳು (೧೯೬೦) ಪು. ೨೦-೯೫.

೧೨. Journal of India history 14. 1-26, 165-204.

೧೩. Journal of oriental institute of Baroda I-IV (1952).

೧೪. Journal of oriental institute of Baroda I-IV (1952).

ಪೈಗಳ ಸಂಶೋಧನೆಯನ್ನು ಒಂದು ದೊಡ್ಡ ಕಾರ್ಖಾನೆ ಎಂದು ಕರೆಯಬಹುದು. ಆ ಕಾರ್ಖಾನೆಯಲ್ಲಿ ಮುಖ್ಯ ಉತ್ಪತ್ತಿಯಷ್ಟೇ ಬೆಲೆಯುಳ್ಳದ್ದು, ಉಪನಿಷ್ಪತ್ತಿ"[೧೫] ಎಂಬ ವಿದ್ವಾಂಸರ ಮಾತು ನಿಜವಾದರೂ ಆಯಾ ಸಂದರ್ಭಕ್ಕೆ ಅದು ಎಷ್ಟರಮಟ್ಟಿಗೆ ಔಚಿತ್ಯವೆಂದು ಕೇಳಬೇಕಾಗುತ್ತದೆ.

ಕೆಲವೊಮ್ಮೆ ಭಾವಾವೇಶದ ಭಾಷೆಯನ್ನು ಬಳಸುವರಾದರೂ ಅಲಂಕಾರಿಕಭಾಷೆಯನ್ನೂ, ವಾದ-ಪ್ರತಿವಾದದಲ್ಲಿ ವ್ಯಂಗ್ಯ-ಕಟಕಿಗಳನ್ನೂ ಬಳಸದಿರುವುದು ಪೈಗಳ ಬಹುದೊಡ್ಡ ಸಾಧನೆಯಾಗಿದೆ. ಆದರೆ ದೀರ್ಘವೂ ಕಷ್ಟವೂ ಆದ ವಾಕ್ಯ ಮತ್ತು ಅಪರಿಚಿತಪದಗಳಿಂದಾಗಿ ಅವರ ಬರವಣಿಗೆ ಬಹಳ ಸಲ ತೊಡಕಾಗುತ್ತದೆ. ಒಂದೇ ವಾಕ್ಯ ಅರ್ಧ ಪುಟವನ್ನು, ಒಮ್ಮೊಮ್ಮೆ ಪೂರ್ಣಪುಟವನ್ನು ನುಂಗಿದ ಹೇರಳ ಉದಾಹರಣೆಗಳು ಅವರಲ್ಲಿ ಸಿಗುತ್ತವೆ. ಇದಲ್ಲದೆ "ಕನ್ನಡಕ್ಕೆ ಒಂದು ಅರಸ್ಥಾನವಿದೆ"[೧೬] "ಅದರಲ್ಲಿ ಶಾನೆ ಪ್ರೌಢವಲ್ಲದಿದ್ದರೆ"[೧೭] "ಅವರು ಯಾದೃಚ್ಛೆಯಾ ನೀಡದಿದ್ದರೆ ಒಮ್ಮೆ ಇಮ್ಮೆ ಮೂಮೆ ಕೊನೆಗೆ ಹಲಮೆ-ಮನೆ ಮನೆ ಇತ್ಯಾದಿ ತಿರಿವಾತನ ಗೋಪಾಲಬುಟ್ಟಿಯಲ್ಲಿ ಏನಕೆ ಹಣಕಾಸು ಬೀಳದೆ ಬಿಟ್ಟೀತೇ?"[೧೮] ಇತ್ಯಾದಿ ಮಾತುಗಳಲ್ಲಿ ಪ್ರಾದೇಶಿಕಪದಗಳೂ ಪ್ರಾಚೀನ ಪ್ರಯೋಗಗಳೂ ಸಾಲದುದಕ್ಕೆ ಅತ ಏವ, ಏವಂಚ, ಯದ್ಯಪಿ, ಸ್ವಯಮೇವ ಎಂಬಿವೂ ಅಡ್ಡಾಡ್ಡ ಬಂದು, ಬರವಣಿಗೆಯನ್ನು ಜಟಿಲಗೊಳಿಸುತ್ತವೆ. ಶೈಲಿಭೇದದಿಂದಾಗಿ ಗದಾಯುದ್ಧದ ರನ್ನನೇ ಬೇರೆ, ಅಜಿತಪುರಾಣದ ರನ್ನನೇ ಬೇರೆ ಎಂದು ಹೇಳುವಂತೆ ತನಿಯಾದ ಭಾಷೆಯ ಲಲಿತಪ್ರಬಂಧಗಳ ಪೈಗಳೇ ಬೇರೆ, ಜಟಿಲಭಾಷೆಯ ಸಂಶೋಧನ ಪ್ರಬಂಧಗಳ ಪೈಗಳೇ ಬೇರೆ ಎಂದು ಹೇಳುವಷ್ಟರ ಮಟ್ಟಿಗೆ ಇವರ ಗದ್ಯಶೈಲಿಯಲ್ಲಿ ಬಿರುಕು ಕಾಣಿಸುತ್ತದೆ. ಈ ಬಗೆಯ ಕ್ಲಿಷ್ಟ ನಿರೂಪಣೆಯಿಂದಾಗಿ ಓದು ಭಾರವಾಗುತ್ತದೆ. ಓದುಗ ತೀವ್ರ ದಣಿದೋ, ದಾರಿ ತಪ್ಪಿಸಿಕೊಂಡೋ ಮಧ್ಯದಲ್ಲಿಯೇ ನಿಂತು ಬಿಡುತ್ತಾನೆ. ಹೀಗಾಗಿ ಅವರ ಲೇಖನಗಳನ್ನು ಒಂದು ಪಟ್ಟಿಗೆ ಓದಿ ಮುಗಿಸುವುದಾಗಲೀ, ಒಂದೇ ಸಲಕ್ಕೆ ಓದಿ ಅರ್ಥಮಾಡಿಕೊಳ್ಳುವುದಾಗಲೀ ಕಷ್ಟವಾಗುತ್ತದೆ. ಆದುದರಿಂದ ಒಂದೇ ಕಾಲದ ಸಂಶೋಧಕರಾದ ಶಂ.ಬಾ. ಜೋಶಿಯವರ ಬರವಣಿಗೆ ಒಂದು ಬಗೆಯ ಕ್ಲಿಷ್ಟವಾದರೆ, ಪೈಯವರದು ಇನ್ನೊಂದು ಬಗೆಯ ಕ್ಲಿಷ್ಟವೆಂದೇ ಹೇಳಬೇಕು.

ಹೀಗಿದ್ದೂ ಇಲ್ಲಿ ಒಂದು ಸಂಗತಿ ಮುಖ್ಯವಾಗಿದೆ. ಅದು, ಪರಿಶ್ರಮದಷ್ಟೇ ಪೈಗಳು ತೋರುವ ಪ್ರಾಮಾಣಿಕತೆ. ಹಿಂದೆ ಹೇಳಿದಂತೆ ಆಧಾರಗಳನ್ನು ಉದ್ಧರಿಸುವಲ್ಲಿಯ ಪ್ರಾಮಾಣಿಕತೆಯಲ್ಲದೆ, "೪ ವರ್ಷಗಳ ಹಿಂದೆ.... 'ಉದಯ ಭಾರತ'ದಲ್ಲಿ (೧೯೨೮ II ೩ ಪು.೯೮) ಬರೆದಾಗ ನಾನು ಗುಣಭದ್ರನ ಸಂಸ್ಕೃತ ಉತ್ತರಪುರಾಣವನ್ನು ಕಂಡಿಲ್ಲದುದರಿಂದ ಸುಭೌಮನೆಂಬ ಕಾರ್ತವೀರ್ಯನನ್ನು..... ಗೆದ್ದ ಪರಶುರಾಮನನ್ನು..... ರನ್ನನು ಉದ್ದೇಶಿಸಿ ಪರಶುರಾಮಚರಿತವನ್ನು ರಚಿಸಿರಬೇಕೆಂಬುದು ವಿಹಿತವೇ - ಎಂದು ಅಲ್ಲಿ ಊಹಿಸಿಬಿಟ್ಟೆ. ಆಮೇಲೆ ಉತ್ತರಪುರಾಣವನ್ನು ನೋಡಿದಾಗ ನನ್ನ ಈ ಹಿಂದಣ ಊಹೆ ತೀರ ತಪ್ಪೆಂದು ಮುಕ್ತಕಂಠವಾಗಿ"[೧೯]

---

೧೫. ದೀವಿಗೆ - ಭಾಗ ೧, ಪುಟ. ೧೪೦.

೧೬. ದೀವಿಗೆ - ಭಾಗ ೨, ಪುಟ.೨೨.

೧೭. ಮೂರು ಉಪನ್ಯಾಸಗಳು (೧೯೬೦) ಪು. ೧೬೪.

೧೮. ದೀವಿಗೆ - ಭಾಗ ೨ ಪು. ೨೨.

೧೯. ಮೂರು ಉಪನ್ಯಾಸಗಳು (೧೯೬೦) ಪುಟ. ೪.

ಹೇಳುತ್ತೇನೆ ಎಂಬಂಥ ತಪ್ಪನ್ನು ತಿದ್ದಿಕೊಳ್ಳುವ ಪ್ರಾಮಾಣಿಕತೆ, "ಯಕ್ಷಗಾನವನ್ನು ನಾನಷ್ಟು ಅಭ್ಯಸಿಸಿದವನಲ್ಲದ ಕಾರಣ ಅದು ಯಾವಂದು ಮತ್ತು ಎಲ್ಲಿಂದ ಮೊದಲಾಯಿತು? ಎಂದು ಹೇಳಲಾರೆ"[೨೦] ಎಂಬಂಥ ಗೊತ್ತಿಲ್ಲದ ವಿಷಯವನ್ನು ಒಪ್ಪಿಕೊಳ್ಳುವ ಪ್ರಾಮಾಣಿಕತೆಗಳು ಸಂಶೋಧಕ ಗೋವಿಂದ ಪೈಗಳ ಸ್ಥಾಯಿಭಾವಗಳಾಗಿವೆ. ಆದುದರಿಂದ ಪೈಗಳ ಬರವಣಿಗೆಯಲ್ಲಿ ಭಾವಾವೇಶವಿರಬಹುದು, ಅನವಶ್ಯಕ ಭಾಗವಿರಬಹುದು, ತಪ್ಪು ನಿರ್ಣಯಗಳಿರಬಹುದು, ಆದರೆ ಅಲ್ಲಿ "ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಲಾರ" ಎಂಬಂಥ ಅನನ್ಯ ಪ್ರಾಮಾಣಿಕತೆಯಿದೆ, ಅನನ್ಯ ಪರಿಶ್ರಮವಿದೆಯೆಂಬುದನ್ನು ಮರೆಯಲಾಗದು. ಈ ಗುಣಗಳಿಂದಾಗಿ ಅವರ ಲೇಖನಗಳು ಕಾಲಗತಿಸಿದರೂ ಆಕರ್ಷಣೆ ಕಳೆದುಕೊಳ್ಳುವುದಿಲ್ಲ. ಒಂದು ವೇಳೆ ಅವರ ಎಲ್ಲ ನಿರ್ಣಯಗಳು ಬಿದ್ದು ಹೋದರೂ ಆ ಕಾಲದಲ್ಲಿ ಸಂಶೋಧನೆಯ ಅನೇಕ ನೆಲೆಗಳನ್ನು ತೆರೆದುಕೊಟ್ಟ, ಸಂಶೋಧನ ಬರವಣಿಗೆಯ ದಾರಿಯನ್ನು ಬರೆದುಕೊಟ್ಟ ಶಾಶ್ವತ ಕೀರ್ತಿ ಅವರದಾಗುತ್ತದೆ.

ಒಟ್ಟಿನಲ್ಲಿ, ನವೋದಯ ಮನೋಧರ್ಮ, ಚಾರಿತ್ರಿಕ ಶೋಧ, ಬಹುಮುಖಿ ವಿದ್ವತ್ತು, ಸಂಗ್ರಹಮುಖಿ ವಿಧಾನ, ಊಹೆಯ ಆಧಿಕ್ಯ, ಜಟಿಲ ನಿರೂಪಣೆ, ಪ್ರಾಮಾಣಿಕ ನಿಲುವು ಮತ್ತು ಪರಿಶ್ರಮ ಪ್ರವೃತ್ತಿಗಳಿಂದ ಸಮನ್ವಿತವಾದ ಪೈಗಳ ಸಂಶೋಧನೆಯನ್ನು ೧. ಬಿದ್ದು ಹೋಗಿರುವ ಶೋಧಗಳು, ೨. ಸತ್ಯವಾಗಿರುವ ಶೋಧಗಳು, ೩. ಸಂದೇಹದಲ್ಲಿ ನಿಂತಿರುವ ಶೋಧಗಳು, ೪. ಪರೀಕ್ಷಿಸಬೇಕಾದ ಶೋಧಗಳು ಎಂದು ವರ್ಗೀಕರಿಸಬಹುದು. ಇವುಗಳಲ್ಲಿ ಸಂದೇಹದಲ್ಲಿ ನಿಂತಿರುವ ಶೋಧ, ಪರೀಕ್ಷಿಸಬೇಕಾದ ಶೋಧಗಳನ್ನು ಒರೆಗೆ ಹಚ್ಚುವ ಕೆಲಸ ಈಗ ನಡೆಸಬೇಕಾಗಿದೆ. ಇದೇ ನಾವು ಪೈಯವರಿಗೆ ಸಲ್ಲಿಸುವ ಜನ್ಮಶತಮಾನದ ಶ್ರದ್ಧಾಂಜಲಿಯಾಗಿದೆ.

■■

ಆಕರ : ಮಾರ್ಗ ಸಂಪುಟ–೧

---

೨೦. ದೀವಿಗೆ - ಭಾಗ ೨, ಪುಟ. ೧೪.

೯೦

ಗೋವಿಂದ ಪೈ : ಹಳಗನ್ನಡ - ನಡುಗನ್ನಡ ಸಾಹಿತ್ಯ ಸಂಶೋಧನೆ

ಗೋವಿಂದ ಪೈ (ಗೋವಿಂದ+ಅಪ್ಪಯ್ಯ>ಗೋವಿಂದಪೈ>ಗೋವಿಂದ ಪೈ) ಆಧುನಿಕ ಕನ್ನಡ ಕಾವ್ಯಸಂದರ್ಭದಲ್ಲಿ ಪ್ರಸಿದ್ಧ ಹೆಸರು; ಸಂಶೋಧನ ಸಂದರ್ಭದಲ್ಲಿ ಸುಪ್ರಸಿದ್ಧ ಹೆಸರು. ಹೀಗಿದ್ದೂ "ಕವಿತಾಮಾರ್ಗ ಬೇರೆ, ಸಂಶೋಧನಮಾರ್ಗ ಬೇರೆ, ಎತ್ತು ಏರಿಗೆ ಎಳೆದರೆ, ಕೋಣ ನೀರಿಗೆ ಎಳೆಯಿತು. ವಿಶಿಷ್ಟವಾದ ದೈವಕೃಪೆಯುಳ್ಳವರು ಅವೆರಡನ್ನೂ ಕೈಯ್ಕೊಂಡು ಹೊತ್ತನ್ನು ಹಿಡಿತದಿಂದ ಬಳಸಿದರೆ ಸವ್ಯಸಾಚಿಯಾಗಬಹುದಾದರೂ ನನ್ನ ಬಗೆಗಾದರೋ ಅವು ಮುಳುವಾಗಿವೆ. ಹಾಲು ಕಾಯಿಸಲಿಕ್ಕೂ ಹುರುಳಿ ಬೇಯಿಸಲಿಕ್ಕೂ ಸರಿಯಾಗದೆ, ಅವುಗಳನ್ನು ಯತ್ನಿಸುವಲ್ಲಿ ಒಂದು ಒರೆಯಲ್ಲಿ ಎರಡು ಕತ್ತಿಯನ್ನು ಸಿಕ್ಕಿಡಲಿಕ್ಕೆ ಪೇಚಾಡುತ್ತಿದ್ದೇನೆ" ಎಂದು ಅವರು ತಮ್ಮ ಬಗೆಗೆ ಬರೆದುಕೊಂಡುದು, ಸೌಜನ್ಯದ ಮಾತು. ನಿಜಸ್ಥಿತಿಯೆಂದರೆ ಪ್ರಾಚೀನ ಪ್ರಸಿದ್ಧ ಕವಿಗಳಾದ ಶ್ರೀವಿಜಯ, ನಾಗವರ್ಮ, ಕೇಶಿರಾಜರಂತೆ ಗೋವಿಂದ ಪೈಗಳದು 'ಸೃಜನಪ್ರತಿಭೆ' ಮತ್ತು 'ಸಂಶೋಧನಪಾಂಡಿತ್ಯ'ಗಳ ಸಮನ್ವಯ ವ್ಯಕ್ತಿತ್ವವಾಗಿದೆ. ೧೯೦೦ರಿಂದ ಸೃಜನಸಾಹಿತ್ಯ ರಚನೆಯಲ್ಲಿ ತೊಡಗಿ, ೧೯೨೬ರಲ್ಲಿ ತಟ್ಟನೇ ಸಂಶೋಧನೆಗೆ ಹೊರಳಿದ ಇವರು, ಕೊನೆಯ ವರೆಗೂ ಆ ದಾರಿಯಲ್ಲಿ ನಡೆದರು, ದುಡಿದರು. ಕಾಲಮಾನ ದೃಷ್ಟಿಯಿಂದ ಸೃಜನ ಅವರ ಪೂರ್ವಾರ್ಧ ಜೀವನಕೃಷಿ, ಸಂಶೋಧನ ಉತ್ತರಾರ್ಧ ಜೀವನಕೃಷಿ. ಹೀಗಿದ್ದೂ ಎರಡನೆಯ ಹೆಂಡತಿಯಂತೆ ಅವರು ಸಂಶೋಧನೆಯನ್ನು ಹೆಚ್ಚು ಪ್ರೀತಿಸಿದರು. ಈ ಐತಿಹಾಸಿಕ ತಿರುವಿಗೆ ಕಾರಣ ಅವರೇ ಹೇಳುವಂತೆ ಪ್ರಿಯಪತ್ನಿಯ ವಿಯೋಗ. ಉದ್ರಿಕ್ತ ಭಾವನೆಗಳ ನೆಲೆಯಲ್ಲಿ ನಡೆಯುವ ಕಾವ್ಯಕ್ರಿಯೆಗಿಂತ, ಅನ್ವೇಷಣಪ್ರಜ್ಞೆಯ ನೆಲೆಯಲ್ಲಿ ನಡೆಯುವ ಸಂಶೋಧನೆ ಅವರಿಗೆ ಈಗ ಅವಶ್ಯವೆನಿಸಿತು; ಅನಿವಾರ್ಯವೆನಿಸಿತು. ಮುಂದೆ "ಪೈ ಅಂದರೆ ಸಂಶೋಧನೆ, ಸಂಶೋಧನೆಯೆಂದರೆ ಪೈ" ಎನ್ನುವಷ್ಟರ ಮಟ್ಟಿಗೆ ಅದು ಅವರ ಪ್ರಧಾನ ಸಾಹಿತ್ಯಕೃಷಿಯಾಗಿ ಬೆಳೆಯಿತು.

೧೯೨೬ರಿಂದ ೧೯೬೨ರ ವರೆಗಿನ ೩೬ ವರ್ಷಗಳಲ್ಲಿ ಪೈ ಅವರು ಮಾಡಿದ ಸಂಶೋಧನ ಕೃಷಿ, ಗುಣ-ಗಾತ್ರದೃಷ್ಟಿಯಿಂದ ಆಶ್ಚರ್ಯ ಹುಟ್ಟಿಸುವಂತಹದು. ಒಂದು ಅಂದಾಜಿನ ಪ್ರಕಾರ ಅವರ ಲೇಖನಗಳ ಸಂಖ್ಯೆ ಸುಮಾರು ೨೦೦. ಇವು ಪ್ರಕಟವಾದ ಆಕರ ಸಂಖ್ಯೆ ಸುಮಾರು ೮೦. ಇವುಗಳಿಗೆ ಬಳಸಿದ

ಭಾಷೆ ಕನ್ನಡ-ಇಂಗ್ಲಿಷ್. ಇವೆಲ್ಲ ರಾಜ್ಯ-ರಾಷ್ಟ್ರಮಟ್ಟದ ಪ್ರಸಿದ್ಧ-ಅಪ್ರಸಿದ್ಧ ಪತ್ರಿಕೆಗಳಲ್ಲಿ, ವಿಶೇಷ ಸಂಚಿಕೆ-ಅಭಿನಂದಗ್ರಂಥಗಳಲ್ಲಿ ಚದರಿಹೋಗಿವೆ. ಸಂಶೋಧಕ ಪೈಗಳ ಈ ಲೇಖನಗಳನ್ನು ಹುಡುಕುವುದೇ ಒಂದು ಶೋಧನೆ, ಇವುಗಳ ಅಧ್ಯಯನವೇ ಒಂದು ಸಂಶೋಧನೆಯೆನಿಸಿದೆ.

ಇತ್ತೀಚೆ ವಿದ್ವಾಂಸರು ಏಕ ವಿಷಯ ಪರಿಮಿತಿಯಲ್ಲಿ ಸಂಶೋಧನೆಗೆ ತೊಡಗಿಸಿಕೊಳ್ಳುತ್ತಾರೆ. ಪೈಗಳು ಹೀಗಲ್ಲ. ಅವರ ಸಂಶೋಧನೆಗೆ ಅನೇಕ ಮಗ್ಗಲುಗಳಿವೆ. ಇದಕ್ಕೆ ಕಾರಣ, ಅವರು ಬಾಳಿದ ನವೋದಯ ಸಾಹಿತ್ಯ ಸಂದರ್ಭ. ಆ ಕಾಲದಲ್ಲಿ ನಮ್ಮ ಸಾಹಿತಿಗಳು ಮನೆಯ ಹಿರಿಯ ಮಗನಂತೆ ಹುಟ್ಟಿಬಂದರು. ಹಿರಿಯ ಮಗನು ಕುಟುಂಬದ ಎಲ್ಲ ಜವಾಬ್ದಾರಿ ಹೊರುವಂತೆ ಸಾಹಿತ್ಯದ ಎಲ್ಲ ಜವಾಬ್ದಾರಿಗಳನ್ನು ಹೊರುವುದು ಈ ಕಾಲದ ಸಾಹಿತಿಗಳಿಗೆ ಅಂದು ಅನಿವಾರ್ಯವಾಗಿದ್ದಿತು. ಈ ಮೇರೆಗೆ ಕಾವ್ಯದ ಜೊತೆಗೆ ಸಂಶೋಧನೆಯನ್ನು, ಒಂದಕ್ಕಿಂತ ಹೆಚ್ಚು ಸಂಶೋಧನ ಕ್ಷೇತ್ರಗಳನ್ನು ಆವರಿಸುವುದು ಪೈಗಳಿಗೆ ಅನಿವಾರ್ಯವಾಯಿತು. ಪ್ರಸ್ತುತ "ಗೋವಿಂದ ಪೈ ಸಂಶೋಧನ ಸಂಪುಟ"ದಲ್ಲಿ ಕಂಡುಬರುವ ಹಳಗನ್ನಡ-ನಡುಗನ್ನಡ ಸಾಹಿತ್ಯ, ಹೊಸಗನ್ನಡ ಸಾಹಿತ್ಯ, ತಮಿಳುನಾಡಿನ ಇತಿಹಾಸ, ಕರ್ನಾಟಕದ ಇತಿಹಾಸ, ಭಾರತದ ಇತಿಹಾಸ, ಪದಾರ್ಥಚಿಂತನೆ, ಧರ್ಮ-ತತ್ವಜ್ಞಾನವೆಂಬ ವಿಭಾಗಗಳು ಈ ಮಾತಿಗೆ ನಿದರ್ಶನವೆನಿಸಿವೆ. ಈ ವ್ಯಾಪಕ ಸಂಶೋಧನೆಯ ಒಂದು ಭಾಗವಾಗಿದೆ. 'ಹಳಗನ್ನಡ-ನಡುಗನ್ನಡ ಸಾಹಿತ್ಯ ಸಂಶೋಧನೆ.'

ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಹಳಗನ್ನಡ-ನಡುಗನ್ನಡ ವಿಸ್ತಾರಕ್ಕೆ ಸುಮಾರು ಒಂದು ಸಾವಿರ ವರ್ಷಗಳ ವ್ಯಾಪ್ತಿಯಿದೆ. ಈ ವಿಭಾಗದಲ್ಲಿ ಅಡಕಗೊಳಿಸಿದ ಭಾಸನ ಊರುಭಂಗವೂ ಗದಾಯುದ್ಧವೂ, ಕನ್ನಡ ಭಾರತದ ಭೀಮಸೇನ, ಕನ್ನಡ ಭಾರತದ ಅರ್ಜುನ, ಕನ್ನಡ ಭಾರತದ ಕರ್ಣ, ಕನ್ನಡ ಭಾರತದ ದುರ್ಯೋಧನ, ಪುರಂದರದಾಸರೂ ಭಕ್ತಿಮಾರ್ಗವೂ-ಎಂಬ ವಿಮರ್ಶಾರೂಪದ ಲೇಖನಗಳನ್ನು ಬಿಟ್ಟರೆ ಶುದ್ಧಾಂಗವಾಗಿ ಉಳಿಯುವ ಪೈಗಳ ಹಳಗನ್ನಡ-ನಡುಗನ್ನಡ ಸಂಶೋಧನ ಲೇಖನಗಳು ಸುಮಾರು ೫೦, ಇವುಗಳನ್ನು ಕಾಲನಿರ್ಣಯ, ದೇಶನಿರ್ಣಯ, ಮತನಿರ್ಣಯ, ಕವಿ-ಕೃತಿ ವಿಷಯ ನಿರ್ಣಯ. ಪಾಠನಿರ್ಣಯ, ಶಾಸ್ತ್ರವಿಷಯ ನಿರ್ಣಯವೆಂದು ವರ್ಗೀಕರಿಸಬಹುದು.

ಕಾಲನಿರ್ಣಯ

'ಕಾಲ ಇತಿಹಾಸದ ಕಣ್ಣು' ಎಂದು ಹೇಳುವುದುಂಟು. ಇದನ್ನು ಒಪ್ಪಿಕೊಂಡಲ್ಲಿ ಕರ್ನಾಟಕದ 'ಇತಿಹಾಸಪುರುಷ' ಬಹುಮಟ್ಟಿಗೆ ಕುರುಡನೆಂದೇ ಭಾವಿಸಬೇಕಾಗುತ್ತದೆ. ಏಕೆಂದರೆ ಶಾಸನಗಳನ್ನು ಬಿಟ್ಟರೆ ಮಿಕ್ಕ ಆಕರಸಾಮಗ್ರಿಗಳು ಕಾಲದ ಬಗೆಗೆ ತುಂಬ ಉಪೇಕ್ಷೆ ತಾಳಿವೆ. ಪಂಪಭಾರತದಂಥ ಕೃತಿಗಳ ರಚನೆ, ಕುಮಾರವ್ಯಾಸನಂಥ ಕವಿಗಳ ಜನನ-ಮರಣ - ಇಂಥ ಮಹತ್ವದ ಘಟನೆಗಳ ಕಾಲವೇ ಅಸ್ಪಷ್ಟವಾಗಿರುವಾಗ, ಸಣ್ಣಪುಟ್ಟ ಘಟನೆಗಳ ವಿಷಯ ದೂರವೇ ಉಳಿಯಿತು.

ಜೀವನವನ್ನು, ಅದರ ಶಾಖೋಪಶಾಖೆಗಳನ್ನು ಕ್ರಮಬದ್ಧವಾಗಿ ನೋಡದಿದ್ದರೆ, ಅವುಗಳ ಸರಿಯಾದ ಸ್ವರೂಪ ಗೊತ್ತಾಗುವುದಿಲ್ಲ. ಏಕೆಂದರೆ, ಅಲ್ಲಿ ಪ್ರೇರಣೆ-ಪೋಷಣೆ, ಪರಂಪರೆ-ಪ್ರಗತಿಗಳ ಒಂದು ಕ್ರಮವಿರುತ್ತದೆ. ಈ ಕ್ರಮವನ್ನು ಕಟ್ಟಿಕೊಡುವುದು ಕಾಲ. ದುರ್ದೈವದ ಸಂಗತಿಯೆಂದರೆ ಕಾಲದ ಈ ಕೊಂಡಿಗಳು ಮುರಿದುಹೋಗಿ ನಮ್ಮ ವರ್ತಮಾನವು ಗತಕಾಲಕ್ಕೂ, ಗತಕಾಲವು

ವರ್ತಮಾನಕ್ಕೂ ಸರಿದುಹೋಗಿವೆ. ಪ್ರಾಚೀನತೆಯ ಪ್ರಿಯರಾದ ನಾವು ಇತಿಹಾಸ ಘಟನೆಗಳನ್ನು ಪುರಾಣಗಳ ಕಾಲದಷ್ಟು, ಕೆಲವೊಮ್ಮೆ ದೇವತೆಗಳ ಕಾಲದಷ್ಟು ಹಿಂದಕ್ಕೆ ನಿಲ್ಲಿಸಿದ್ದೇವೆ. ಆದುದರಿಂದ ಕಾಲದ ವಿಷಯವಾಗಿ ನಿರ್ಮಾಣವಾಗಿರುವ ಅವ್ಯವಸ್ಥೆಯನ್ನು ವ್ಯವಸ್ಥೆಗೊಳಿಸುವುದು ಇತಿಹಾಸದ ಅಧ್ಯಯನದಲ್ಲಿ ಮೊದಲು ನಡೆಯಬೇಕಾಗುತ್ತದೆ. ನಮ್ಮ ನವೋದಯ ಸಂದರ್ಭದಲ್ಲಿ ಈ ಕಾರಣದಿಂದಾಗಿ 'ಕಾಲನಿರ್ಣಯ'ಕ್ಕೆ ಸಂಶೋಧಕರು ಆದ್ಯ ಗಮನಕೊಡಬೇಕಾಗಿದ್ದಿತು. ಇದೇ ನಿಜವಾದ ಸಂಶೋಧನೆಯೆಂಬಷ್ಟರ ಮಟ್ಟಿಗೆ ಅದು ಪ್ರಮುಖವಾಗಿದ್ದಿತು. ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಈ ಬಗ್ಗೆ ಗಾಢ ಚಿಂತನೆ ನಡೆಸಿದವರಲ್ಲಿ ಆರ್. ನರಸಿಂಹಾಚಾರ್, ಎ. ವೆಂಕಟಸುಬ್ಬಯ್ಯ ಮುಖ್ಯರು; ಗೋವಿಂದ ಪೈ ಅತಿಮುಖ್ಯರು.

ಗೋವಿಂದ ಪೈಯೆಂದರೆ ಕಾಲನಿರ್ಣಯ, ಕಾಲನಿರ್ಣಯವೆಂದರೆ ಗೋವಿಂದ ಪೈ -ಎನ್ನುವಷ್ಟರ ಮಟ್ಟಿಗೆ ಅವರು ಈ ಕ್ಷೇತ್ರಕ್ಕೆ ದೊಡ್ಡ ಪ್ರಮಾಣದ ಕಾಣಿಕೆ ಸಲ್ಲಿಸಿದ್ದಾರೆ. ಈ ಕಾಣಿಕೆಯಲ್ಲಿ ಹಳಗನ್ನಡ-ನಡುಗನ್ನಡಗಳ ಭಾಷೆ, ಸಾಹಿತ್ಯ, ಕವಿ, ಕೃತಿಗಳ ಕಾಲನಿರ್ಣಯ ಅಡಕಗೊಂಡಿದೆ. ಇಲ್ಲಿ ಕನ್ನಡ ಭಾಷೆ-ಸಾಹಿತ್ಯಗಳ ಪ್ರಾಚೀನತೆಯನ್ನು ಕುರಿತು ಪೈಗಳು "ಕನ್ನಡ ಸಾಹಿತ್ಯದ ಪ್ರಾಚೀನತೆ", "ಕನ್ನಡ ಸಾಹಿತ್ಯದ ಹಳಮೆ", "ಕನ್ನಡ ಸಾಹಿತ್ಯ ಹಾಗೂ ಭಾಷೆಯ ಪ್ರಾಚೀನತೆ", "ಗ್ರೀಕ ಪ್ರಹಸನದಲ್ಲಿ ಕನ್ನಡ ಮಾತುಗಳು"-ಇಷ್ಟು ಲೇಖನಗಳನ್ನು ಬರೆದಿದ್ದು, ಇವುಗಳಲ್ಲಿ ಕೊನೆಯ ಲೇಖನದ ಪ್ರಯತ್ನವನ್ನು ಮೆಚ್ಚಬಹುದಾದರೂ ಅದರ ಫಲಿತಗಳು ಮಾತ್ರ ಇನ್ನೂ ಪ್ರಶ್ನಾರ್ಹವಾಗಿಯೇ ಉಳಿದಿವೆ. ಮಿಕ್ಕ ಲೇಖನಗಳು ಕನ್ನಡ ಸಾಹಿತ್ಯ, ಕನ್ನಡೇತರಸಾಹಿತ್ಯ, ಶಾಸನಗಳನ್ನು ಆಧರಿಸಿ ಮಾಡಿದ ಊಹೆ, ನೀಡಿದ ನಿರ್ಣಯಗಳನ್ನೊಳಗೊಂಡಿದ್ದು, ಇಲ್ಲಿ ಒಪ್ಪಬಹುದಾದ ಅನೇಕ ಅಂಶಗಳಿವೆ. ಚೂಡಾಮಣಿ ಕೃತಿಗಳ ತೊಡಕು, ಹಲ್ಮಿಡಿ ಶಾಸನಪೂರ್ವದ ಶಾಸನಗಳನ್ನು ಕುರಿತ ನಿರ್ಣಯ ಪುನಃ ಪರಿಶೀಲಿಸಬೇಕಾಗಿದ್ದು, ಇಂಥ ಒಂದೆರಡು ಅಂಶಗಳನ್ನು ಬಿಟ್ಟರೆ, ಇಲ್ಲಿಯ ಮಿಕ್ಕ ವಿಚಾರಗಳನ್ನು ಎಲ್ಲರೂ ಒಪ್ಪಿಕೊಂಡಿರುವರೆಂದೇ ಹೇಳಬೇಕು. ಈ ಸಂದರ್ಭದಲ್ಲಿ ಸೂಚಿಸಲೇಬೇಕಾದ ಒಂದು ವಿಷಯವೆಂದರೆ, ಪೈ ಅವರಿಗೆ ಕನ್ನಡ ಭಾಷೆ-ಸಾಹಿತ್ಯಗಳ ಪ್ರಾಚೀನತೆಯನ್ನು ಹಿಂದೆ ಒಯ್ಯುವುದರಲ್ಲಿ ಒಂದಿಷ್ಟು ಹೆಚ್ಚು ಒಲವು. ನವೋದಯ ಕಾಲದ ಸಾಹಿತಿಗಳಿಗೆ ಇದು ಸಹಜವೇ ಆಗಿದ್ದಿತು.

"ಕನ್ನಡ ನಾಟಕದ ಹಳಮೆ", "ಹಳೆಯದೊಂದು ಕನ್ನಡ ನಾಟಕ", "ಅಜ್ಞಾತವಾದ ಕನ್ನಡದ ಹಳೆಯ ನಾಟಕಕಾರ" - ಎಂದು ಕನ್ನಡ ನಾಟಕಗಳ ಬಗೆಗೆ ಮೂರು ಲೇಖನ ಬರೆದಿದ್ದಾರೆ. ಕನ್ನಮಯ್ಯನ ಮಾಳವೀಮಾಧವ, ಕೇಶಿರಾಜನ ಸುಭದ್ರಾಹರಣ, ಪ್ರಬೋಧ ಚಂದ್ರೋದಯ ಮೊದಲಾದವು ಸಂಸ್ಕೃತಮೂಲದ ಕನ್ನಡ ಅನುವಾದ ನಾಟಕಗಳಾಗಿರಬಹುದೆಂದು ಪೈ ಹೇಳುತ್ತಾರೆ. ನಾಟಕವೆಂಬುದು ಮೂಲತಃ ರಂಗಕೃತಿಯೇ ಹೊರತು ಸಾಹಿತ್ಯಕೃತಿಯಲ್ಲ. ಈ ತತ್ವದ ನೆಲೆಯಲ್ಲಿ ಕನ್ನಡಿಗರು ನಾಟಕಪ್ರಕಾರವನ್ನು 'ರಂಗಕೃತಿ'ಯಾಗಿ ಬೆಳೆಸಿದ್ದರೇ ಹೊರತು, 'ಸಾಹಿತ್ಯ ಕೃತಿ'ಯಾಗಿ ಬೆಳೆಸಿರಲಿಲ್ಲವೆಂದು ತೋರುತ್ತದೆ. ಆದುದರಿಂದ ಪೈಯವರ ಹೇಳಿಕೆ ಇಂದಿಗೂ ಒಂದು ಊಹೆಯಾಗಿ ಉಳಿದಿದೆ.

ಕವಿ, ಕೃತಿಗಳ ಕಾಲನಿರ್ಣಯದ ವಿಷಯವಾಗಿ ಪೈಗಳ ದುಡಿಮೆ ವಿಪುಲವಾದುದು. ಈ ಸಂದರ್ಭದಲ್ಲಿ ಅವರು ಹೊಸ ಹೊಸ ಆಕರಗಳ ಲಭ್ಯತೆ, ಹೊಸ ಹೊಸ ವಿಚಾರಗಳ ಸ್ಫುರಣೆ ಕಾರಣವಾಗಿ, ಒಬ್ಬ ಕವಿ, ಅಥವಾ ಒಂದು ಕೃತಿ ವಿಚಾರವನ್ನು ಒಂದಕ್ಕಿಂತ ಹೆಚ್ಚು ಸಲ ಚರ್ಚಿಸಿದ್ದಾರೆ. ಈಗ ತಮ್ಮ

ಮೊದಲಿನ ವಾದವನ್ನು ಸಮರ್ಥನೆಗೊಳಿಸಿಕೊಂಡಿದ್ದಾರೆ; ತಿದ್ದಿಕೊಂಡಿದ್ದಾರೆ. ಈ ಬಗೆಗಳಿಂದಾಗಿ ಕಾಲನಿರ್ಣಯ ಲೇಖನಗಳ ಸಂಖ್ಯೆ ವರ್ಧಿಸಿದೆ. ಇಲ್ಲಿ ಕವಿಯು ಕಾಲವನ್ನು ಸೂಚಿಸಿರದಿದ್ದರೆ, ಸೂಚಿಸಿದ್ದರೂ ಪಾಠಾಂತರ ಉದ್ಭವಿಸಿದ್ದರೆ - ಹೀಗೆ ಎರಡು ಸಂದರ್ಭಗಳಲ್ಲಿ ಪೈ ಕಾಲನಿರ್ಣಯ ಚರ್ಚೆಯನ್ನು ಕೈಗೆತ್ತಿಕೊಳ್ಳುತ್ತಾರೆ. ಕವಿ ಹೇಳಿರದ ಪಕ್ಷದಲ್ಲಿ ಕಾವ್ಯದ ಮೂಲೆಮೂಲೆಗಳನ್ನು ಹೊಕ್ಕು ಆಂತರಿಕ ಆಧಾರಗಳನ್ನು ಅವಲಂಬಿಸುವ ಅವರು, ಅನ್ಯಪ್ರಭಾವ, ಸನಿಹದ ಪ್ರಾಚೀನ ಮತ್ತು ಅರ್ವಾಚೀನ ಕವಿಸ್ತುತಿ, ಶಾಸನಗಳಂಥ ಲಿಖಿತ ದಾಖಲೆ, ಜನವದಂತಿಗಳಂಥ ಮೌಖಿಕ ದಾಖಲೆಗಳೆಂಬ ಬಾಹ್ಯ ಆಧಾರಗಳನ್ನು ಅವಲಂಬಿಸುತ್ತಾರೆ. ಈ ದಾರಿಯಲ್ಲಿ ಮುನ್ನಡೆದ ಪೈಗಳು ಪಂಪಪೂರ್ವದ ಅನುಪಲಬ್ಧ ಕವಿ-ಕೃತಿಗಳನ್ನು ಕುರಿತು ನೀಡಿದ ಕಾಲನಿರ್ಣಯ ತೀರ್ಪು, ಆಧಾರಗಳ ಅಭಾವದಿಂದಾಗಿ ಸ್ಥೂಲಸ್ವರೂಪದ್ದಾಗಿದೆ. ವಡ್ಡಾರಾಧನೆಯ ಕಾಲ ೬ನೆಯ ಶತಮಾನವೆನ್ನುವುದು ಇನ್ನೂ ಒಪ್ಪಿತವಾಗಿಲ್ಲ. ಜಯಕೀರ್ತಿಯು ಛಂದೋಂಬುಧಿಯ ನಾಗವರ್ಮನಿಗೆ ಪ್ರಾಚೀನನೆಂಬ ವಾದವನ್ನು ಪೈಗಳು ಮಂಡಿಸುತ್ತಾರೆ. ಈತನು ಕರ್ಣಾಟಕ ಜಾತಿವೃತ್ತ ಬಳಸಿದ ಪಂಪಾದಿಗಳನ್ನು ಕೈಬಿಟ್ಟು ತೀರ ಪ್ರಾಚೀನರನ್ನೇ ಹೆಸರಿಸುವುದು, ಇವರು ತಮ್ಮ ವಾದಕ್ಕೆ ಹಿಡಿಯುವ ಮುಖ್ಯ ಆಧಾರವಾಗಿದೆ. ಹಲವರು ಜಯಕೀರ್ತಿ ನಾಗವರ್ಮೋತ್ತರ ಕಾಲೀನನೆಂದು ಹೇಳುತ್ತಿದ್ದರೂ, ನನಗೆ ಮಾತ್ರ ಪೈ ವಾದವೇ ಸರಿ ಎನಿಸುತ್ತದೆ. ಪಂಪನ ಆದಿಪುರಾಣದ ಕಾಲ, ಪಂಪನ ಕಾಲ- ಇವುಗಳನ್ನು ಕುರಿತು ಬರೆದ ಮೂರು ಲೇಖನಗಳಲ್ಲಿ ಮಂಡಿಸಿದ ವಾದಕ್ಕೆ ಇಂದಿಗೂ ಚ್ಯುತಿ ಬಂದಿಲ್ಲ. ಇದಕ್ಕೆ ಕಾರಣ ಕವಿಯೇ ತನ್ನ ಕೃತಿಕಾಲವನ್ನು ಸೂಚಿಸಿದುದು.

ರನ್ನನ ಅಲಭ್ಯ ಪರಶುರಾಮ ಚರಿತ್ರೆ, ಚಕ್ರೇಶ್ವರ ಚರಿತೆ, ಲಭ್ಯ ಗದಾಯುದ್ಧಗಳ ರಚನಾ ಕಾಲವನ್ನು ಕುರಿತು ಪೈಗಳು ಮೂರು ಲೇಖನಗಳನ್ನು ಬರೆದಿದ್ದು, ಇವು ಹೆಚ್ಚು ಕಡಿಮೆ ಪಂಡಿತಮಾನ್ಯವೆನಿಸಿವೆ. ಗದಾಯುದ್ಧ ೯೮೨ರಲ್ಲಿ ಬರೆಯಲ್ಪಟ್ಟು ೯೯೩ರಲ್ಲಿ ಪರಿಷ್ಕರಿಸಲ್ಪಟ್ಟಿತು - ಎಂಬ ವಾದ ಕುತೂಹಲಕಾರಿಯಾಗಿದೆ.

ದುರ್ಗಸಿಂಹನ ಪಂಚತಂತ್ರದ ರಚನಾಕಾಲದ ಬಗೆಗೆ ಅದರ ಸಂಪಾದಕರು ಮೌನತಾಳಿದ್ದರು. ಕವಿಚರಿತೆಕಾರರು ೧೧೪೫ ಎಂದು, ಎ. ವೆಂಕಟಸುಬ್ಬಯ್ಯ ಅವರು ೧೦೩೫ ಎಂದು ಹೇಳಿದ್ದರು. ಆರಾ ಹಸ್ತಪ್ರತಿಯನ್ನಾಧರಿಸಿ ಪೈಗಳು ೧೦೫೧ ಎಂದು ಖಚಿತವಾಗಿಯೇ ಟಿಪ್ಪಣಿಸಿದ್ದಾರೆ.

ನಾಗಚಂದ್ರನ ಕಾಲ ಬಹಳ ದಿನಗಳಿಂದ ಬಹಳ ಜನ ವಿದ್ವಾಂಸರನ್ನು ಸುತ್ತುಹಾಕಿಕೊಂಡಿದೆ. ಸ್ವತಃ ಪೈಗಳೇ "ಅಭಿನವ ಪಂಪನೆಂಬ ನಾಗಚಂದ್ರನ ಕಾಲನಿರ್ಣಯ" ಲೇಖನ ಬರೆದರು. ಇದಕ್ಕೆ ವೆಂಕಟಸುಬ್ಬಯ್ಯನವರು ತೋರಿಸಿದ ಪ್ರತಿಕ್ರಿಯೆಯನ್ನು ವಿರೋಧಿಸಿ, ಇನ್ನೊಂದು ಲೇಖನ ಬರೆದರು. ಆಮೇಲೆ ತಮ್ಮ ಗಮನಕ್ಕೆ ಬಂದ ಹೆಚ್ಚಿನ ಮಾಹಿತಿಯನ್ನು ಸೇರಿಸಿ, "ಅಭಿನವ ಪಂಪನ ಕಾಲವಿಚಾರದಲ್ಲಿ ಇನ್ನೆರಡು ಮಾತು" ಎಂಬ ಮೂರನೆಯ ಲೇಖನ ಬರೆದರು. ಪೈಗಳ ಪ್ರಬಂಧಗಳು ಹೇಗೆ ಬೆಳೆಯುತ್ತಿದ್ದವೆನ್ನುವುದಕ್ಕೆ ಇದು ಒಂದು ಉತ್ತಮ ಉದಾಹರಣೆ. ಇಲ್ಲಿ ಅವರು ಮುಖ್ಯವಾಗಿ ಮುನಿಪರಂಪರೆ, ರಾಜಕೀಯ ಪರಿಸರಗಳನ್ನು ಗಮನದಲ್ಲಿಟ್ಟುಕೊಂಡು, ಮಲ್ಲಿನಾಥ ಪುರಾಣ ೧೧೨೦ರಲ್ಲಿ ಪಂಪರಾಮಾಯಣ ೧೧೪೦ರಲ್ಲಿ ಹುಟ್ಟಿರಬಹುದೆಂಬ ನೆಲೆಯನ್ನು ತಲುಪಿದ್ದಾರೆ. ಆದರೆ, ನಾಗಚಂದ್ರನ ಪದ್ಯವನ್ನು ತನ್ನ ಕಾವ್ಯಾವಲೋಕನದಲ್ಲಿ ಬಳಸಿಕೊಂಡ ಇಮ್ಮಡಿ ನಾಗವರ್ಮನ ವರ್ಧಮಾನ ಪುರಾಣ

ಇತ್ತೀಚೆ ಲಭ್ಯವಾಗಿ, ಅದರ ಕಾಲ ೧೦೪೨ಯೆಂದು ತಿಳಿದುಬಂದಿರುವುದರಿಂದ, ನಾಗಚಂದ್ರನ ಕಾಲ ೧೦೪೨ಕ್ಕೆ ಹಿಂದೆ ಹೋಗಬಹುದಾಗಿದೆ. ಇದರಿಂದ ಪೈಗಳ ವಾದ ಬಿದ್ದುಹೋಗಿ, ವೆಂಕಟಸುಬ್ಬಯ್ಯನವರ ವಾದ ಸ್ಥಾಪಿತವಾಗುವ ಸಾಧ್ಯತೆಯಿದೆ.

೨ನೆಯ ನಾಗವರ್ಮನ ಕಾಲ ೧೧೨೦-೧೨೦೦ ಎಂದು ಪೈಗಳು ನಿರ್ಧರಿಸಿರುವರಾದರೂ, ಮೇಲೆ ಹೇಳಿದಂತೆ ಈತನ ವರ್ಧಮಾನ ಪುರಾಣ (೧೦೪೨) ಸಿಕ್ಕು ಆ ನಿರ್ಧಾರವನ್ನು ತಳ್ಳಿಹಾಕಿದೆ. ಇವರು ಹೇಳುವಂತೆ ಈ ಕವಿ ಕಟಕೋಪಾಧ್ಯಾಯನಾಗಿದ್ದುದು ಕಲ್ಯಾಣ ಚಾಲುಕ್ಯ ಚಕ್ರವರ್ತಿ ೩ನೆಯ ಜಗದೇಕಮಲ್ಲ (೧೧೬೩-೮೪)ನಲ್ಲಿ ಅಲ್ಲ; ೧ನೆಯ ಜಗದೇಕಮಲ್ಲ ಜಯಸಿಂಹ (೧೦೧೫-೪೨)ನಲ್ಲಿ.

ಜೇಡರ ದಾಸಿಮಯ್ಯ ೧೧೪೮ರ ಗೊಬ್ಬೂರ ಶಾಸನಕ್ಕೆ ಹಿಂದಿನವನೆಂಬ ಪೈಗಳ ಹೇಳಿಕೆ ಸರ್ವಸಮ್ಮತವಾಗಿದ್ದರೂ, ಚಾಲುಕ್ಯ ಜಯಸಿಂಹನ (೧೦೧೫-೪೨) ಕಾಲದಷ್ಟು ಹಿಂದಿನವನೆಂಬುದಕ್ಕೆ ಆಧಾರಗಳು ಸಾಲುವುದಿಲ್ಲವೆಂದೇ ಹೇಳಬೇಕು. ಬಸವೇಶ್ವರನ ಕಾಲ ೧೧೩೦-೬೮ ಎಂಬ ಪೈಗಳ ಅಭಿಪ್ರಾಯವನ್ನು ಸಾಮಾನ್ಯವಾಗಿ ಇಂದು ಎಲ್ಲರೂ ಒಪ್ಪುತ್ತಲಿದ್ದರೂ, ಬಾಡಾಲು ರಾಮಯ್ಯ, ಜಿ. ಎಸ್. ದೀಕ್ಷಿತ ಅವರ ಇತ್ತೀಚಿನ ಲೇಖನಗಳಿಂದ ಅದು ಇನ್ನಷ್ಟು ಮುಂದೆ ಸರಿಯಬಹುದಾಗಿದೆ.

ಜೈನಕವಿ ಬ್ರಹ್ಮಶಿವನ ಕಾಲ ೧೧೫೦-೧೨೨೦ ಎಂಬ ಪೈಗಳ ನಿರ್ಣಯ ಇಂದಿಗೂ ನಿಶ್ಚಲವಾಗಿ ನಿಂತಿದೆ. ಹರಿಹರ ರಾಘವಾಂಕರ ಕಾಲಾವಧಿ ಅನೇಕರು ವಾದ-ಪ್ರತಿವಾದಗಳಿಗೆ ಇಳಿಯುವಂತೆ ಮಾಡಿದೆ. ಪೈ ಅವರೇ ಈ ಬಗ್ಗೆ ಎರಡು ಲೇಖನ ಬರೆದು, ಅವರನ್ನು ೧೨೦೦ರ ಒಳಹೊರಗೆ ನಿಲ್ಲಿಸಿದರೂ ಗೊಪೆಯ ಶಿವದೇವ, ಪುರಾಣದ ಮಾಯಿದೇವ ಮೊದಲಾದವರ ಜೀವನಕ್ಕೆ ಸಂಬಂಧಪಟ್ಟ ಇತ್ತೀಚಿನ ಆಧಾರಗಳಿಂದ ಅದು ಸ್ವಲ್ಪ ಮುಂದೆ ಬರುವಂತೆ ಕಾಣುತ್ತದೆ. ಇಂತಹದೇ ಇನ್ನೊಂದು ಮುಖ್ಯ ವಿಷಯ, ಕವಿ ಕುಮಾರವ್ಯಾಸನ ಕಾಲವನ್ನು ಕುರಿತುದು. ಪೈಗಳು ಈ ಬಗ್ಗೆ ಸುದೀರ್ಘವಾದ ಲೇಖನ ಬರೆದು, ಕ್ರಿ.ಶ. ೧೫೫೯ರ ಗದುಗು ಶಾಸನದಲ್ಲಿ ಈ ಕವಿಯ ಉಲ್ಲೇಖವಿರುವುದರಿಂದ ಇವನು ಇಲ್ಲಿಂದ ಹಿಂದಿನವನೆಂಬ ಇವರ ಅಭಿಪ್ರಾಯ ಒಪ್ಪತಕ್ಕುದಾಗಿದೆ. ಆದರೆ ಎಲ್ಲರೂ ಇವನನ್ನು ಕೃಷ್ಣದೇವರಾಯನ ಕಾಲಕ್ಕೆ ನಿಲ್ಲಿಸುತ್ತಿದ್ದರೆ, ಪೈಗಳು ಮಾತ್ರ ಇನ್ನೂ ಹಿಂದೆ ತಳ್ಳುತ್ತ ಹೋಗಿ, ೧೩ನೆಯ ಶತಮಾನದ ಪೂರ್ವಾರ್ಧಕ್ಕೆ ನಿಲ್ಲಿಸುತ್ತಾರೆ. ಕುಮಾರವ್ಯಾಸನು ರಾಘವಾಂಕನ ಸಮಕಾಲೀನನೆಂದು ವೀರಶೈವ ಪುರಾಣಗಳು ಹೇಳುವುದೂ ಇವರಿಗೆ ಆಧಾರವಾಗಿದೆ. ಆದರೆ ವೀರಶೈವ ಬೇರೆ ಪುರಾಣಗಳು, ಈತನು ಚಾಮರಸನ ಸಮಕಾಲೀನನೆಂದು ಹೇಳುವುದೇ ಸರಿಯೆನಿಸುತ್ತದೆ. ಬಹುಜನ ವಿದ್ವಾಂಸರು ಇದನ್ನು ಒಪ್ಪಿದ್ದು, ೧೩ನೆಯ ಶತಮಾನದವನೆನ್ನುವ ಪೈಗಳ ವಾದವನ್ನು ಯಾರೂ ಗಂಭೀರವಾಗಿ ಪರಿಗಣಿಸುತ್ತಿಲ್ಲ.

ಕವಿ ಲಕ್ಷ್ಮೀಶನ ಕಾಲವಿಚಾರವಾಗಿ ಪೈಗಳು ಮೂರು ಲೇಖನ ಬರೆದಿದ್ದಾರೆ. ಇಲ್ಲಿ ಅವನನ್ನು ೧೪ನೆಯ ಶತಮಾನಕ್ಕೆ ನಿಲ್ಲಿಸಲು ಪ್ರಯತ್ನಿಸಿದ್ದರೂ, ಇದು ನಂಬಿಕೆ ಹುಟ್ಟಿಸುತ್ತಿಲ್ಲ. ಚೆನ್ನಬಸವಪುರಾಣ ಮತ್ತು ಜೈಮಿನಿ ಭಾರತಗಳು ಎಡಬಲದಲ್ಲಿ ಹುಟ್ಟಿವೆಯೆಂದು ಅನ್ಯ ವಿದ್ವಾಂಸರು ನಿರ್ಣಯಿಸಿರುವುದೇ ಸರಿಯಾಗಿರುವ ಕಾರಣ, ಪೈಗಳ ಹೇಳಿಕೆ ತೀವ್ರ ಉಪೇಕ್ಷೆಗೆ ಗುರಿಯಾಗಿದೆಯೆಂದೇ ಹೇಳಬೇಕು. ಕವಿ ಕೋನಪ್ಪನ ಕಾಲ ಕವಿಚರಿತೆಕಾರರ ಪ್ರಕಾರ ೧೭೫೦. ಆದರೆ ಪೈಗಳು ಶಾಸನಗಳ ಆಧಾರದಿಂದ ಇವನು ವಿಜಯನಗರದ ಕೃಷ್ಣದೇವರಾಯನ ಕಾಲ (೧೫೦೯-೧೫೨೯)ದವನೆಂದುದು ಸಮಂಜಸವಾಗಿದೆ.

'ಶಿಶುಮಾಯಣ ಕವಿಯ ಕಾಲ ವಿಚಾರ' ಲೇಖನ ಪೈಗಳ ಕಾಲನಿರ್ಣಯಶೋಧ ಮತ್ತು ಪಾಠಪರಿಷ್ಕರಣ ಪರಿಣತಿಗೆ ಸಾಕ್ಷಿಯಾಗಿದೆ. ಕವಿಚರಿತೆಕಾರರು ಈ ವಿಷಯವಾಗಿ ೧೨೩೨ರಷ್ಟು ಹಿಂದೆ ಹೋದರೆ, ವೆಂಕಟಸುಬ್ಬಯ್ಯನವರು ೧೬೬೦ರಷ್ಟು ಮುಂದೆ ಬರುತ್ತಾರೆ. ಪೈಗಳು ಉತ್ಸಕಲ, ವಿಕಲ ಪಾಠಗಳನ್ನು ಸಮಾಲೋಚಿಸಿ ೧೪೭೨ಯೆಂದು ನೀಡಿದ ನಿರ್ಣಯ ತೀರ ಸಮರ್ಪಕವೆನಿಸಿದೆ.

ಉದ್ಭಟಕಾವ್ಯದ ಸೋಮರಾಜಕವಿಯ ಕಾಲದ ಚರ್ಚೆಗಾಗಿ ಪೈಗಳು ೨ ಲೇಖನಗಳನ್ನು ಬರೆದು, ಈ ಕೃತಿಸಂಪಾದಕರ ಮತ್ತು ಕವಿಚರಿತೆಕಾರರ ವಾದಗಳನ್ನು ಅಲ್ಲಗಳೆದಿದ್ದಾರೆ. ಇಲ್ಲಿ ಮುಖ್ಯವಾಗಿ ಆಧಾರ ಹಿಡಿದುದು ಪಾಠಪರಿಷ್ಕರಣ ವಿದ್ವತ್ತನ್ನು. ಛಂದೋದೋಷವನ್ನು ತಿದ್ದುತ್ತ, ನಿಜಪಾಠವನ್ನು ಊಹಿಸುತ್ತ, ಸಮಕಾಲೀನ ಸಾಹಿತ್ಯ ಮತ್ತು ರಾಜಕೀಯ ಘಟನೆಗಳನ್ನು ಬಳಸಿಕೊಳ್ಳುತ್ತ, ಈ ಕವಿಯ ಕಾಲ ೧೨೨೨ ಅಲ್ಲ, ೧೫೨೨ಯೆಂದು ಸರಿಯಾಗಿಯೇ ನಿರ್ಣಯಿಸಿದ್ದಾರೆ.

ಮಹತ್ವದ ಚಂಪೂಕವಿಯಾದ ಷಡಕ್ಷರದೇವನ ಕೃತಿಗಳಲ್ಲಿ ಬರುವ ಕಾಲನಿರ್ದೇಶಿತ ಪದ್ಯಗಳನ್ನಾಧರಿಸಿ, ರಾಜಶೇಖರವಿಳಾಸದ ಕಾಲ ೧೬೫೮, ವೃಷಭೇಂದ್ರ ವಿಜಯದ ಕಾಲ ೧೬೭೮ಯೆಂದು ನಿಜವನ್ನೆ ಹೇಳಿದ್ದಾರೆ. "ರತ್ನಾಕರವರ್ಣಿಯ ಕಾಲವಿಚಾರ", "ರತ್ನಾಕರಸಿದ್ಧನ ಕಾಲನಿರ್ಣಯ" ಲೇಖನಗಳು ನೋಡಲಿಕ್ಕೆ ಎರಡು ಕಂಡರೂ, ಬಹುಭಾಗ ಶಬ್ದಶಃ ಪುನರುಕ್ತವಾಗಿರುವುದರಿಂದ ಅವೆರಡನ್ನೂ ಒಂದೇ ಲೇಖನವೆಂದು ಭಾವಿಸಬಹುದು. "ಮಣಿಶೈಲ ಗತಿಯಿಂದು" ಎಂಬ ಕಾಲಸೂಚಿ ಪದ್ಯಗಳಲ್ಲಿಯ 'ಗತಿ' ಎಂಬುದು ಸೂಚಿಸುವುದು ಮೂರನ್ನೋ, ನಾಲ್ಕನ್ನೋ ಎಂಬ ಸಂದೇಹಕ್ಕೆ ಆಸ್ಪದವಿದೆ. ಅನೇಕ ಆಧಾರಗಳನ್ನವಲಂಬಿಸಿ ನಾಲ್ಕನ್ನೇ ಇಟ್ಟುಕೊಂಡು, ಈತನ ತ್ರಿಲೋಕಶತಕದ ಕಾಲ ೧೫೫೭-೫೮ ಎಂದು ಸರಿಯಾಗಿಯೇ ಹೇಳಿದ್ದಾರೆ.

ಕಾಲನಿರ್ಣಯ ಸಂದರ್ಭದಲ್ಲಿ ಪೈಯವರು ಕೈಗೆತ್ತಿಕೊಂಡ ಇತ್ತೀಚಿನ ಕವಿ ಪಾರ್ತಿಸುಬ್ಬ. ಲಿಖಿತ ಸಾಮಗ್ರಿಯೊಂದಿಗೆ ಮೌಖಿಕ ಸಾಮಗ್ರಿಯನ್ನೂ ಬಳಸಿಕೊಂಡುದು ಇಲ್ಲಿಯ ವೈಶಿಷ್ಟ್ಯ. ಒಬ್ಬ ಮೌಖಿಕ ಇತಿಹಾಸಕಾರ (Oral historian) ನಂತೆ ವ್ಯವಹರಿಸಿ ಪೈಗಳು ಈ ಕವಿಯ ಕಾಲ ೧೭೩೦-೧೮೦೦ ಎಂದು ನಿರ್ಧರಿಸಿದುದು ವಿದ್ವಜ್ಜನಮಾನ್ಯವಾಗಿದೆ. ಆನುಷಂಗಿಕವಾಗಿ ಮುದ್ದಣನ ಕಾಲವನ್ನು ೧೮೭೦-೧೯೦೧ ಎಂದು, ಈತನು ಪ್ರತಿಮಾಡಿದ ಕಾಮಶಾಸ್ತ್ರದ ಕರ್ತೃ ಮಲ್ಲಿಕಾರ್ಜುನನೃಪಾಲನೆಂದು ನಿರ್ಣಯಿಸುತ್ತ, ಈ ಕೃತಿಕಾಲವನ್ನು ೧೪೫೧-೬೫ ಎಂದು ಸರಿಯಾಗಿಯೇ ಸೂಚಿಸಿದ್ದಾರೆ.

ಹೀಗೆ ಪೈಗಳು ಕವಿ-ಕೃತಿಗಳ ಕಾಲದ ಬಗೆಗೆ ವಿಪುಲ ಚರ್ಚೆ ನಡೆಸಿ, ವಿದ್ವಾಂಸರ ಕಣ್ಣು ತೆರೆಸಿದ್ದಾರೆ. ಅಂದಿನ ಕಾಲದಲ್ಲಿ, ಇಂದಿನ ಕಾಲದಲ್ಲಿಯೂ ಕೂಡ, ಕಾಲವಿಚಾರ ಪ್ರಸಂಗದಲ್ಲಿ ಪೈ ಅವರ ಅಭಿಪ್ರಾಯಗಳನ್ನು ಉಪೇಕ್ಷಿಸುವುದು ಸಾಧ್ಯವಿಲ್ಲವೆಂಬಷ್ಟರ ಮಟ್ಟಿಗೆ, ಅವರ ಲೇಖನಗಳಿಗೆ ಮಹತ್ವ ಸಲ್ಲುತ್ತದೆ.

ದೇಶ ನಿರ್ಣಯ

ಕವಿಗಳ ಕಾಲನಿರ್ಣಯದಷ್ಟೇ ಮಹತ್ವದ್ದಾಗಿದೆ, ದೇಶನಿರ್ಣಯ. ಏಕೆಂದರೆ ಕವಿಯನ್ನು, ಅವನ ಕೃತಿಯನ್ನು ರೂಪಿಸುವಲ್ಲಿ ಪ್ರದೇಶವೂ ಮುಖ್ಯಪಾತ್ರವಹಿಸುತ್ತದೆ. ಪೈ ಅವರು ಈ ದಿಕ್ಕಿನಲ್ಲಿಯೂ ಹೆಜ್ಜೆ ಹಾಕಿ ಕೆಲವಡೆ ನಿಜದ ನೆಲೆಗಳನ್ನು ತಲುಪಿದ್ದಾರೆ.

ಕವಿಚರಿತೆಕಾರರು ಮೊದಲು ಮಾಡಿ ಸಾಮಾನ್ಯವಾಗಿ ಎಲ್ಲರೂ ಪುಲಿಗೆರೆಯೇ ಅರಿಕೇಸರಿಯ ರಾಜಧಾನಿಯೆಂದು ಹೇಳುತ್ತಲಿದ್ದ ಕಾಲವದು. ಪೈಗಳು ಈ ಹೇಳಿಕೆಯನ್ನು ಸಕಾರಣ ತಳ್ಳಿಹಾಕಿ, ಕ್ರಿ.ಶ. ೯೪೨ರ ವರೆಗಾದರೂ ಬೋಧನವೇ ಅರಿಕೇಸರಿಯ ರಾಜಧಾನಿಯಾಗಿದ್ದಿತೆಂದು ನಿರ್ಣಯಿಸಿದುದು ಅತ್ಯಂತಿಕ ಸತ್ಯವಾಗಿ ಪರಿಣಮಿಸಿದೆ. ಆದರೆ ಪಂಪನ ಪೂರ್ವಜರ ವೆಂಗಿಪಳು "ಅದುವೆ ಈಗಿನ ಬೆಳಗಾವಿ ಜಿಲ್ಲೆಯ ಕೊಟ್ಟೂರಿಗೂ, ಧಾರವಾಡ ಜಿಲ್ಲೆಯಲ್ಲಿಯ ನಿಡಗುಂದಿಗೂ ಸರಿಯಾಗಿತ್ತು" ಎಂದು ವ್ಯಾಖ್ಯಾನಿಸಿದುದು ತಪ್ಪು. ಈ ನಿಡಗುಂದಿಯೆಂಬುದು ಇಂದಿನ ಆಂಧ್ರಪ್ರದೇಶದ ಗುಂಡಿನದಿ ತೀರದ ಗ್ರಾಮವೆಂದು ಇತ್ತೀಚೆ ಲಭ್ಯವಾದ ಕುರ್ಕಿಯಾಲ್ ಶಾಸನ ಸ್ಪಷ್ಟಪಡಿಸಿದೆ. ಕೊಟ್ಟೂರು ಅಲ್ಲಿಯೇ ಸಮೀಪದಲ್ಲಿರುವ ಗ್ರಾಮವಾಗಿದೆ. ಮುಂದುವರಿದು, ವೆಂಗಿಪಳುವೆಂಬುದು ಕರ್ನಾಟಕದ ಗ್ರಾಮವೆಂದು ಪೈಗಳು ಹೇಳಿದುದು ಸರಿಯಲ್ಲ. ಇದು ಆ ನಿಡುಗುಂದಿಯ ನೆರೆಯಲ್ಲಿರುವ ಆಂಧ್ರಪ್ರದೇಶದ ಗ್ರಾಮ. ಪಂಪನು ಅರಿಕೇಸರಿಯಿಂದ ಬಚ್ಚೆ ಸಾಸಿರದ ಧರ್ಮಪುರವನ್ನು ದಾನವಾಗಿ ಪಡೆದುದಾಗಿ ಹೇಳುತ್ತಾನೆ. ಬಚ್ಚೆ ಎಂದರೆ ಈಗಿನ ಛಬ್ಬಿ, ಧರ್ಮಪುರವೆಂಬುದು ಗದಗ ತಾಲೂಕಿನ ಡಂಬಳವೆಂದು ಇವರು ಹೇಳಿದುದು ಈಗ ಬಿದ್ದುಹೋದ ವಿಚಾರವೇ ಸರಿ. ಬಚ್ಚೆ ಸಾಸಿರವೆನ್ನುವುದು ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ಪ್ರದೇಶವೆಂದು, ಧರ್ಮಪುರವೆಂಬುದು ಕುರ್ಕಿಯಾಲ್ ಶಾಸನ ಪರಿಸರದ ಹಾಳಾದ ಗ್ರಾಮವೆಂದೂ ಇದೇ ಶಾಸನ ತಿಳಿಸಿದೆ. ಪಂಪ ಹುಟ್ಟಿದುದು ಲಕ್ಷ್ಮೇಶ್ವರದಲ್ಲಿ ಅಲ್ಲ, ಬನವಾಸಿಯಲ್ಲಿಯೆಂದು ಪೈಗಳು ತಮ್ಮ ವಾದವನ್ನು ಸ್ಥಾಪಿಸುತ್ತಾರೆ. ನಿಜಸ್ಥಿತಿಯೆಂದರೆ ಎರಡೂ ಅಲ್ಲ; ಜೊಚ್ಚಲು ಮಗನಾದ ಇವನು ತಾಯಿಯ ತವರುಮನೆಯಾದ ಅಣ್ಣಿಗೆರೆಯಲ್ಲಿ ಹುಟ್ಟಿರುವ ಸಾಧ್ಯತೆಯಿದೆ. ರನ್ನನಿಗೆ ಎಳಮೆಯಲ್ಲಿ ಆಶ್ರಯ ನೀಡಿದ್ದವನು ಸವದತ್ತಿಯ ರಟ್ಟ ಅರಸು ಎಂದು ಹೇಳಿದುದು, ಕೇವಲ ಊಹೆಯಾಗಿದೆ. ಒಂದನೆಯ ನಾಗವರ್ಮನಿಗೆ ಧಾರಾನಗರದ ಪರಮಾರ ವಂಶೀಯ ಅರಸನಾದ ಭೋಜನು ಅಶ್ವಗೌರವ ನೀಡಿದನೆಂದು ಪೈಗಳು ಹೇಳುವುದು ಅಷ್ಟು ಸಮಂಜಸವೆನಿಸದು. ಬಹುಶಃ ಈತನು ಕೊಲ್ಲಾಪುರ ಶಿಲಾಹಾರ ವಂಶೀಯ ಅರಸು ಭೋಜನಾಗಿರುವ ಸಾಧ್ಯತೆಯಿದೆ.

'ಜಿನಪತಿ ಸಭೆಯೊಳ್ ಪೂಜ್ಯಂ' ಎಂಬುದನ್ನು 'ಜನಪತಿ ಸಭೆಯೊಳ್ ಪೂಜ್ಯಂ' ಎಂದು ಪಾಠ ಪರಿಷ್ಕರಿಸಿಕೊಂಡು, ನಾಗಚಂದ್ರನು ರಾಜಾಸ್ಥಾನ ಗೌರವ ಪಡೆದಿದ್ದನೆಂದು ಪೈಗಳು ಹೇಳುವುದು ಸರಿಯಾದ ವಿಚಾರ. ಆದರೆ "ಈತನು ಪಶ್ಚಿಮ ಸಮುದ್ರದ ಕರಾವಳಿಯಲ್ಲಿಯೇ ಇರುವ ಯಾವುದೊಂದು ಊರಿನಲ್ಲಿ ಹುಟ್ಟಿರಬೇಕು. ಬಹುಶಃ ಬನವಾಸಿ ಸೀಮೆಯವನಾಗಿರಬೇಕು", "ಹೊಯ್ಸಳ ವಿಷ್ಣುವರ್ಧನನ ರಾಜಧಾನಿಯಾಗಿದ್ದ ದ್ವಾರಸಮುದ್ರಕ್ಕೆ ಹೋಗಿ, ಅಲ್ಲಿ ಕೆಲಕಾಲ ನೆಲೆಸಿರುವಂದು ತಾನೆ, ಆತನಿಗೂ ಆ ಕಬ್ಬಿಗಿತಿಯಾದ ಕಂತಿಗೂ ಆದವೆಂದಿರುವ ಸಮಸ್ಯೆಗಳು ಜರುಗಿರಬೇಕು" ಎಂದುದು ತೀರ ನಿರಾಧಾರ ಹೇಳಿಕೆ. ನಾಗಚಂದ್ರ ಅಲ್ಲಿಂದ ವಿಜಾಪುರಕ್ಕೆ ಬಂದನೆನ್ನುವುದಕ್ಕಿಂತ ಇವನು ಮೂಲತಃ ವಿಜಾಪುರದವನೆಂದು ಹೇಳುವುದೇ ನ್ಯಾಯಸಮ್ಮತ. ಇತ್ತೀಚೆ ಲಭ್ಯವಾದ ಬಾಬಾನಗರ ಶಾಸನ ಇದನ್ನು ದೃಢಪಡಿಸಿದೆ. ಈ ಕವಿ ಬಹುಶಃ ಕಲ್ಯಾಣ ಚಾಲುಕ್ಯ ಚಕ್ರವರ್ತಿಯಿಂದ ಪೂಜಿತನಾಗಿರಬಹುದು.

"ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವರ್ಮಂ" ಎಂಬ ಅನಂಥನಾಥಪುರಾಣದ ಪದ್ಯಕ್ಕೆ ಕವಿಚರಿತೆಕಾರರಂತೆ ಪೈಗಳೂ ತಪ್ಪು ಅರ್ಥಹಚ್ಚಿ, ೨ನೆಯ ನಾಗವರ್ಮನು ಒಂದು ಕಾಲಘಟ್ಟದಲ್ಲಿ ಜನ್ನನಿಗೆ ಉಪಾಧ್ಯಾಯನಾಗಿದ್ದನೆನ್ನುತ್ತ, ಇವರಿಬ್ಬರೂ ದ್ವಾರಸಮುದ್ರದಲ್ಲಿ ಇಲ್ಲವೆ ಕಲ್ಯಾಣದಲ್ಲಿ

ಸಂಧಿಸಿದ್ದರೆಂದು ಪರ್ಯಾಯವಾಗಿ ಹೇಳಿದುದು ಸಂಪೂರ್ಣ ಅಸತ್ಯ. ಈ ಸಂದರ್ಭದಲ್ಲಿ ವೆಂಕಟಸುಬ್ಬಯ್ಯನವರು ಪ್ರಸ್ತುತ ಪದ್ಯಕ್ಕೆ ಸರಿಯಾದ ಅರ್ಥಹಚ್ಚಿ, ನಾಗವರ್ಮನಿಗೂ ಜನ್ನನಿಗೂ ಸಂಬಂಧವಿಲ್ಲ, ಕಲ್ಯಾಣ ಚಾಲುಕ್ಯ ಜಗದೇಕಮಲ್ಲನಲ್ಲಿ ನಾಗವರ್ಮನು ಕಟಕೋಪಾಧ್ಯಾಯನಾಗಿದ್ದಂತೆ, ಹೊಯ್ಸಳ ನರಸಿಂಹನಲ್ಲಿ ಕಟಕೋಪೋಧ್ಯಾಯನಾಗಿದ್ದ ಕವಿ ಸುಮನೋಬಾಣನು ಜನ್ನನಿಗೆ ಉಪಾಧ್ಯಾಯನಾಗಿದ್ದನೆಂದು ನೀಡಿದ ತೀರ್ಮಾನ ಆತ್ಯಂತಿಕ ಸತ್ಯವಾಗಿದೆ.

ಚೆನ್ನಬಸವಣ್ಣನವರು ತಮ್ಮ ಉತ್ತರಾರ್ಧ ಜೀವನದಲ್ಲಿ ಸಿಂದವಂಶೀಯ ಬಿಜ್ಜಳನ ಆಸ್ಥಾನ ಸೇರಿದರೆಂದು ಹೇಳಿದುದು ನಿರಾಧಾರ ಅಭಿಪ್ರಾಯ. ಅರ್ಜುನವಾಡ ಶಾಸನವು ಈಗ ವಿಜಾಪುರ ಜಿಲ್ಲೆಯ ಬಾಗೇವಾಡಿ ಕಛೇರಿಯಲ್ಲಿದೆಯೆಂದು ಪೈ ಹೇಳುತ್ತಾರೆ. ನಿಜಸ್ಥಿತಿಯೆಂದರೆ, ಅದು ಅರ್ಜುನವಾಡದಿಂದ ನೇರವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಗೆ ಸ್ಥಳಾಂತರಿಸಲ್ಪಟ್ಟಿದೆ. ರಾಘವಾಂಕನಿಗೆ ಗೌರವ ಸಲ್ಲಿಸಿದ ಹಂಪೆಯ ದೇವರಾಯನೆಂದರೆ ಸಿಂದ (ಮಲ್ಲಿ+) ದೇವರಸ ಅಥವಾ ಉಚ್ಚಂಗಿಯ ತ್ರಿಭುವನಮಲ್ಲಪಾಂಡ್ಯ ದೇವರಸನೆಂದು ಪೈಗಳು ಹೇಳುವುದು ಕೇವಲ ಊಹೆಯೆನಿಸಿದೆ. ಲಕ್ಷ್ಮೀಶನು ಗುಲ್ಬರ್ಗಾ ಜಿಲ್ಲೆಯ ದೇವಪುರದವ, ಕಡೂರ ಜಿಲ್ಲೆಯ ದೇವನೂರವ- ಎಂಬುದು ಹಳೆಯ ವಾದ. ಇಲ್ಲಿ ಎರಡನೆಯ ಅಂಶವನ್ನು ಎತ್ತಿಹಿಡಿಯುವ ಪೈಗಳ ವಿಚಾರ ಸರಿಯೆಂದು ಕಾಣುತ್ತದೆ.

ಉದ್ಭಟಕಾವ್ಯದ ಕರ್ತೃ ಸೋಮರಾಜನ ಚರಿತ್ರೆಗೆ ಸಂಬಂಧಪಟ್ಟ ಅಂಶಗಳು ಸಿಗುವುದು ತೀರ ಕಡಿಮೆ. ಈತನು ಮೂಲತಃ ಸೋಮೇಶ್ವರನ ಭಕ್ತರಾದ ದಕ್ಷಿಣ ಕನ್ನಡ ಜಿಲ್ಲೆಯ ಚೌಟರಾಜವಂಶೀಯನೆಂದು ಪೈಗಳ ವಾದ. ಈ ಅರಸರಲ್ಲಿ ಕೆಲವರು ಜೈನರಾದರೆ ಸೋಮರಾಜ ಮಾತ್ರ ಯಾವುದೋ ಕಾರಣದಿಂದ ವಿಜಯನಗರ ಪ್ರದೇಶದಲ್ಲಿ ನೆಲೆನಿಂತು, ವೀರಶೈವನಾಗಿರಬಹುದೆಂದು ಇವರು ಸಾಧಿಸಿದುದು ಎಲ್ಲರೂ ಒಪ್ಪುವ ತರ್ಕವಾಗಿದೆ. ಷಡಕ್ಷರದೇವನು ದನಗೂರಿನವನಾಗಿದ್ದು, ಆಮೇಲೆ ಎಳಂದೂರು ಮಠಾಧೀಶನಾಗಿ ಹದಿನಾಡು ಅರಸರಿಂದ, ಕೆಳದಿ-ಮೈಸೂರು ಅರಸರಿಂದ ಗೌರವ ಪಡೆದನೆಂದು ಹೇಳಿದುದು ಗಟ್ಟಿ ನಿರ್ಣಯ. ಪಾರ್ತಿಸುಬ್ಬನ ವಿಷಯವಾಗಿ ಪೈಗಳು ಬರೆದ ಲೇಖನಗಳು ತುಂಬ ಬೆಲೆಯುಳ್ಳವು. ಅವುಗಳಲ್ಲಿ ಈತನು ಕುಂಬಳೆ ನೆರೆಯ ದೇಶಮಂಗಲದವನೆಂದು ಒಂದು ಲೇಖನದಲ್ಲಿ ಹೇಳಿ, ಕೊನೆಗೆ ಈ ದೇಶಮಂಗಲ ನೆರೆಯ ಅಜಾವರದವನೆಂದುದು ಆತ್ಯಂತಿಕ ಶೋಧನವಾಗಿದೆ.

ಹೀಗೆ ಕನ್ನಡ ಕವಿಗಳ ಜನ್ಮಗ್ರಾಮ, ಅವರು ಪಡೆದ ರಾಜಾಶ್ರಯಗಳ ಬಗೆಗೆ ಪೈಗಳು ಶೋಧ ನಡೆಸಿದ್ದು, ನಿನಗರ್ಧ ನನಗರ್ಧವೆಂಬಂತೆ ಸತ್ಯಾಸತ್ಯಗಳ ಪಾಲು ಅಲ್ಲಿ ಕಂಡುಬರುತ್ತದೆ.

ಮತ ನಿರ್ಣಯ

ಕವಿಯ ಕಾಲ, ದೇಶಗಳಂತೆ ಅವನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮತದ ಪಾತ್ರ ಪ್ರಾಚೀನ ಸಂದರ್ಭದಲ್ಲಿ ಮುಖ್ಯವಾದುದು. ಆದುದರಿಂದ ಅದನ್ನು ನಿರ್ಣಯಿಸಿಕೊಡಬೇಕಾದುದು ಸಂಶೋಧಕನ ಕರ್ತವ್ಯವಾಗಿದ್ದು, ಪೈಗಳು ಕೆಲವೊಮ್ಮೆ ನೇರವಾಗಿ, ಇನ್ನು ಕೆಲವೊಮ್ಮೆ ಆನುಷಂಗಿಕವಾಗಿ ಈ ಪ್ರಯತ್ನ ಮಾಡಿದ್ದಾರೆ.

"ಗದಾಯುದ್ಧ ಬರೆದವನು ವೈದಿಕ ರನ್ನ, ಅಜಿತಪುರಾಣ ಬರೆದವನು ಜೈನ ರನ್ನ" ಎಂಬ ವಾದವನ್ನು ಟಿ. ಶ್ರೀನಿವಾಸ ಅಯ್ಯಂಗಾರ್ ಮಂಡಿಸಿದ್ದರು. ವೈದಿಕ ರನ್ನನೊಬ್ಬನಿದ್ದರೆ ಮುಂದೆ ಬಂದ ವೈದಿಕ ಕವಿಗಳು ಅವನನ್ನು ಸ್ಮರಿಸುತ್ತಿದ್ದರು - ಇತ್ಯಾದಿ ತರ್ಕಗಳಿಂದ ಪೈಗಳು ಈ ವಾದವನ್ನು ಸಾಧಾರ ಖಂಡಿಸಿ "ರನ್ನನೊಬ್ಬನೇ" ಎಂದು ಸಾರಿದುದು ಸತ್ಯದ ಮರುಸ್ಥಾಪನೆಯಾಗಿದೆ. ಇಲ್ಲಿಯೇ ಕಾದಂಬರಿ ನಾಗವರ್ಮನು ಶೈವಬ್ರಾಹ್ಮಣನೆಂದು ನೀಡಿದ ತೀರ್ಮಾನ ಸರಿಯಾಗಿದೆ. ಹರಿಹರ ಮೂಲತಃ ಶೈವಬ್ರಾಹ್ಮಣನೆಂದು ಒಮ್ಮೆ, ತಮಿಳು ಶೈವನೆಂದು ಇನ್ನೊಮ್ಮೆ ಹೇಳಿದುದರ ಹಿಂದೆ ಮೂಲತಃ ಇವನೊಬ್ಬ ಶೈವನೆಂದು ಸೂಚಿಸುವುದು ಪೈಗಳ ಉದ್ದೇಶವಾಗಿದೆ. ಅದೇನೇ ಇದ್ದರೂ ಇವನೂ, ಶೈವಬ್ರಾಹ್ಮಣನಾಗಿದ್ದ ರಾಘವಾಂಕನೂ ತಮ್ಮ ಬದುಕಿನ ಉತ್ತರಾರ್ಧದಲ್ಲಿ ವೀರಶೈವರಾದರೆಂದು ಹೇಳಿದುದು ಇಂದಿಗೂ ಸಾಹಿತ್ಯಚರಿತ್ರೆಯಲ್ಲಿ ಮಾನ್ಯವಾಗಿದೆ. ದೇವರ ದಾಸಿಮಯ್ಯ ಸಂಧಿಸಿದ್ದ ಜಗದೇಕಮಲ್ಲ ಜಯಸಿಂಹ, ಕಲಚುರಿ ಬಿಜ್ಜಳ ಇವರು ಜೈನರೆಂದು ವೀರಶೈವ ಕವಿಗಳು ಹೇಳಿದುದು ಸರಿಯಲ್ಲ, ಬಿಜ್ಜಳನಂತೂ ಶೈವ-ಎಂದು ಪೈಗಳು ನೀಡಿದ ತೀರ್ಪು ಮಹತ್ವದ್ದಾಗಿದೆ.

ಕುಮಾರವ್ಯಾಸನು ಭಾಗವತ ಸಂಪ್ರದಾಯದವನೆಂದು ಅವನ ಕಾವ್ಯದ ಆಂತರಿಕ ಆಧಾರಗಳಿಂದ ಸ್ಥಾಪಿಸಿದುದು ಸತ್ಯವೆಂದೇ ತೋರುತ್ತದೆ. ಲಕ್ಷ್ಮೀಶ ಮಾಧ್ವನಲ್ಲ ಭಾಗವತನೆಂದು ಪೈಗಳು ಹೇಳುತ್ತಾರೆ. ಆದರೆ ಇವನು ರಾಮಾನುಜೀಯನಾಗಿರುವ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ. ಈ ಸಂದರ್ಭದಲ್ಲಿ ಜೈನರತ್ನಾಕರವರ್ಣಿ ಕೆಲವು ಕಾಲ ವೀರಶೈವನಾಗಿದ್ದನೆಂಬ ಐತಿಹ್ಯವನ್ನು ಪೈಗಳು ಬೆಂಬಲಿಸುವುದು ಸರಿಯಾದ ತೀರ್ಮಾನವೇ ಸರಿ.

ಭಾರತೀಯ ಸಂದರ್ಭದಲ್ಲಿ ಮತವೆನ್ನುವುದು ಕವಿಯ ಅಭಿಮತವನ್ನು ನಿಯಂತ್ರಿಸುವುದರಿಂದ, ಕಾವ್ಯವ್ಯಾಸಂಗಕ್ಕೆ ಪೂರ್ವಭಾವಿಯಾಗಿ ಅವನ ಮತದ ಅಧ್ಯಯನ ಅವಶ್ಯವೆನಿಸುತ್ತದೆ. ಪೈಗಳ ಲೇಖನಗಳು ಇಂಥ ಪ್ರಸಂಗಗಳಲ್ಲಿ ತುಂಬ ನೆರವಾಗುತ್ತವೆಯೆಂದು ಹೇಳಬೇಕು.

ಕವಿ-ಕೃತಿ ವಿಷಯ ನಿರ್ಣಯ

ಕವಿಗಳ ಕಾಲ, ದೇಶ, ಮತಗಳನ್ನಲ್ಲದೆ, ಸಂಶೋಧಕನಾದವನು ಕವಿ ಮತ್ತು ಕೃತಿಗಳಿಗೆ ಸಂಬಂಧಿಸಿದ ಇತರ ವಿಷಯಗಳನ್ನೂ ಸಮಾಲೋಚಿಸಬೇಕಾಗುತ್ತದೆ. ಪೈಗಳು ಈ ವ್ಯಾಪ್ತಿಯಲ್ಲಿ ನಡೆಸಿದ ಚರ್ಚೆ ವಿಪುಲವಾಗಿದೆ. ಶ್ರವಣಬೆಳ್ಗೊಳ ಶಾಸನೋಕ್ತ ಶ್ರೀವರ್ಧದೇವನ ಸಂಸ್ಕೃತಕಾವ್ಯವಾಗಿರುವ ಚೂಡಾಮಣಿ, ಭಟ್ಟಾಕಳಂಕ ಹೇಳುವ ತತ್ತ್ವಾರ್ಥಸೂತ್ರವ್ಯಾಖ್ಯಾನವಾಗಿರುವ ಚೂಡಾಮಣಿ, ಉಭಯಸಿದ್ಧಾಂತದ ವ್ಯಾಖ್ಯಾನವಾಗಿರುವ ತುಂಬಳೂರಾಚಾರ್ಯರ ಚೂಡಾಮಣಿಗಳು ಪರಸ್ಪರ ಸಂಬಂಧವಿಲ್ಲದ ಸ್ವತಂತ್ರಕೃತಿಗಳು. ಆದರೆ ಬಹಳಷ್ಟು ಜನ ವಿದ್ವಾಂಸರು ಇವೆಲ್ಲ ಒಂದೇ ಎಂದು ಹೇಳುವುದು ಸರಿಯಲ್ಲ. ಪೈಗಳು ಮೊದಲಿನವೆರಡು ಒಂದೇ ಕೃತಿ. ಇದಕ್ಕೆ ವ್ಯಾಖ್ಯಾನ ಬರೆದವನು ಮೂರನೆಯವನೆಂಬ ಅರ್ಥದ ಮಾತುಗಳನ್ನಾಡಿದುದೂ ಸರಿಯಲ್ಲವೆಂದೇ ಹೇಳಬೇಕು.

ಕವಿರಾಜಮಾರ್ಗದ ಕರ್ತೃ ಯಾರು? ಎಂಬುದು ಕನ್ನಡಸಾಹಿತ್ಯದ ಶಾಶ್ವತ ಪ್ರಶ್ನೆಯೆನಿಸಿದೆ. ಪೈಗಳ ಪ್ರಕಾರ ಶ್ರೀವಿಜಯನ 'ಕವಿಮಾರ್ಗ' ಹೆಸರಿನ ಕೃತಿ, ನೃಪತುಂಗನ ಅಭಿಮತಗಳನ್ನೊಳಗೊಂಡು 'ಕವಿರಾಜಮಾರ್ಗ'ವಾಯಿತು. ಇದು ಇಂದಿಗೂ ಒಂದು ಊಹೆಯಾಗಿಯೇ ಉಳಿದಿದೆ. ಈ ಶ್ರೀವಿಜಯನು

ಚಂದ್ರಪ್ರಭಪುರಾಣದ ಕರ್ತೃವೆಂದು ಮಂಗರಸನ ನೇಮಿಜಿನೇಶ ಸಂಗತಿಯನ್ನವಲಂಬಿಸಿ ಪೈಗಳು ಹೇಳುತ್ತಾರೆ. ಇತ್ತೀಚೆ ಲಭಿಸಿದ ನಾಗವರ್ಮನ ವರ್ಧಮಾನಪುರಾಣ (೧೦೪೨)ದಿಂದ ಈ ಶ್ರೀವಿಜಯನು ರಘುವಂಶಮಹಾಪುರಾಣ ಬರೆದಿರುವನೆಂದು ತಿಳಿದುಬರುವುದರಿಂದ, ಮಂಗರಸನಿಂದ ಸೂಚಿತನಾದವನು ೧೧ನೆಯ ಶತಮಾನ ತರುವಾಯದಲ್ಲಿದ್ದ ಬೇರೊಬ್ಬ ಶ್ರೀವಿಜಯನಾಗಿರಬೇಕು.

ಪಂಪನ ತಂದೆಯ ಹೆಸರು (ಅಭಿರಾಮ) ದೇವರಾಯನೆಂದು ಪಂಪಭಾರತದ ಅಪಪಾಠವನ್ನಾಧರಿಸಿ ಎಲ್ಲರಂತೆ ಪೈಗಳೂ ಹೇಳಿದ್ದಾರೆ. ಆದರೆ ಕುರ್ಕಿಯಾಲ್ ಶಾಸನ ಸಿಕ್ಕು, ಅವನ ತಂದೆಯ ನಿಜನಾಮ ಭೀಮಪಯ್ಯನೆಂದು ತಿಳಿದುಬಂದಿದೆ. ಅರಿಕೇಸರಿಯ ಹೆಂಡತಿಯಾದ ಲೋಕಾಂಬಿಕೆಯ ಪರ್ಯಾಯ ನಾಮವಾದ ರೇವಕನಿಮ್ಮಡಿ ಎಂಬುದಕ್ಕೆ, ವ್ಯಕ್ತಿತ್ವದಲ್ಲಿ ರೇವಕ್ಕನಿಗೆ ದ್ವಿಗುಣವೆನಿಸಿದವಳು ಎಂಬ ಅರ್ಥವನ್ನು ಪೈಗಳು ಹೇಳುತ್ತಾರೆ. ಇತ್ತೀಚಿನ ವಿದ್ವಾಂಸರು ನಿಮ್ಮಡಿ=ಪೂಜ್ಯ ಅರ್ಥವನ್ನು ಪರಿಭಾವಿಸುತ್ತಲಿದ್ದಾರೆ. ಇದು ಚಿಂತನೀಯ ವಿಷಯವಾಗಿದೆ. ಮುಂದುವರಿದು ಪೈಗಳು ಭುವನೈಕರಾಮಾಭ್ಯುದಯದ ಕಥಾನಾಯಕ ಶಂಕರಗಂಡನೆಂಬ ಡಿ. ಎಲ್. ಎನ್. ಅಭಿಪ್ರಾಯವನ್ನು ಅಲ್ಲಗಳೆದು, ರಾಷ್ಟ್ರಕೂಟ ಕೃಷ್ಣನೆಂಬ ಹಳೆಯ ಅಭಿಪ್ರಾಯವನ್ನು ಎತ್ತಿಹಿಡಿದುದು ಸರಿಯಾದ ನಿಲವು. ಇದಕ್ಕೆ ಹೊಸ ಆಧಾರವೆಂಬಂತೆ ಈ ಕೃಷ್ಣನಿಗೆ 'ಭುವನೈಕರಾಮ' ಎಂಬ ಬಿರುದಿದ್ದ ವಿಷಯ, ಅಪಭ್ರಂಶ ಭಾಷೆಯಲ್ಲಿ ಪುಷ್ಪದಂತ ಬರೆದ 'ತಿಸಟ್ಠಿ ಮಹಾಪುರಿಸ ಗುಣಾಲಂಕಾರ' ಕೃತಿಯಿಂದ ಇತ್ತೀಚೆ ತಿಳಿದುಬಂದಿದೆ.

ಗದಾಯುದ್ಧದಲ್ಲಿ ಕಾಣಿಸಿಕೊಂಡ ಅಪರಾದಿತ್ಯನೆಂದರೆ ಚೋಳರಾಜನೆಂದು ಶ್ರೀ ರಾಮಾನುಜ ಅಯ್ಯಂಗಾರ್ ಹೇಳಿದುದನ್ನು ನಿರಾಕರಿಸಿ, ಇವನು ಕೊಂಕಣ ದೇಶದ ಶಿಲಾಹಾರ ಅಪರಾದಿತ್ಯನೆಂದು ಸರಿಯಾಗಿಯೇ ಸ್ಥಾಪಿಸಿದ್ದಾರೆ. ಗದಾಯುದ್ಧ ಹೇಳುವ ಈ ಅಪರಾದಿತ್ಯರ ಅಂಶನಗರವೆಂದರೆ ಈತನ ವಂಶದ ಛಿತ್ತಿರಾಜನ ಶಾಸನದಲ್ಲಿ ಬರುವ ಹಂಷಮನ ನಗರ, ಇತರ ಶಾಸನಗಳಲ್ಲಿ ಬರುವ ಹಂಜಮನನಗರ ಎಂದು ಸರ್ವಸಮ್ಮತ ರೀತಿಯಲ್ಲಿ ಗುರುತಿಸಿದ್ದಾರೆ. ಮತ್ತು ಇದು ಇಂದಿನ ಠಾಣಾ ಜಿಲ್ಲೆಯ ಸಂಜನ ಹೆಸರಿನ ಹಳ್ಳಿಯೆಂದು ಸರಿಯಾಗಿಯೇ ಶೋಧಿಸಿದ್ದಾರೆ. ರನ್ನನು ತನ್ನ ಎರಡು ಕೃತಿಗಳನ್ನು (ಪರಶುರಾಮ ಚರಿತೆ, ಚಕ್ರೇಶ್ವರ ಚರಿತೆ) ತನ್ನ ಇಬ್ಬರು ಮಕ್ಕಳಿಗೆ ಅಂಕಿತ ಮಾಡಿರುವನೆಂಬ ಶ್ರೀ ರಾಮಾನುಜ ಅಯ್ಯಂಗಾರ ಅವರ ಅಭಿಪ್ರಾಯವನ್ನು 'ರನ್ನನ ಕಾವ್ಯಗಳನ್ನು ಕುರಿತು' ಲೇಖನದಲ್ಲಿ ಪೈಗಳು ಒಪ್ಪಿದ್ದಾರೆ. ಆಮೇಲೆ 'ರನ್ನನ ಪರಶುರಾಮ ಚರಿತ-ಚಕ್ರೇಶ್ವರ ಚರಿತಗಳನ್ನು, ಗದಾಯುದ್ಧದ ಕಾಲವನ್ನು ಕುರಿತು' ಲೇಖನದಲ್ಲಿ ತಾವೇ ಅದನ್ನು ನಿರಾಕರಿಸಿದ್ದಾರೆ. ಚಕ್ರೇಶ್ವರ ಚರಿತೆಯ ಕಥಾನಾಯಕನು ಚಾವುಂಡರಾಯನೆಂಬ ಕವಿಚರಿತೆಯ ಊಹೆಯನ್ನು ಶ್ರೀ ಅಯ್ಯಂಗಾರ್ ಅವರು ನಿರಾಕರಿಸಿ, ಜೈನ ೧೨ ಜನ ಚಕ್ರವರ್ತಿಗಳಲ್ಲಿ ಒಬ್ಬನಾಗಿರಬೇಕೆಂದು ಹೇಳಿದುದನ್ನು ಪೈಗಳು ಒಪ್ಪಿಕೊಳ್ಳುತ್ತ, ಅವನು ಭರತಚಕ್ರವರ್ತಿಯೇ ಆಗಿರಬೇಕೆಂದು ಊಹಿಸುತ್ತಾರೆ. ರನ್ನನ ಇನ್ನೊಂದು ಕೃತಿಯಾದ ಪರಶುರಾಮ ಚರಿತೆಯ ಕಥಾನಾಯಕ ವೈದಿಕ ಪರಶುರಾಮನೆಂದು ಒಮ್ಮೆ ಹೇಳಿ, ಇನ್ನೊಮ್ಮೆ ಜೈನ ೧೨ ಜನ ಚಕ್ರವರ್ತಿಗಳಲ್ಲಿ ಒಬ್ಬನಾದ ಸುಭೌಮನಿಂದ ಕೊಲ್ಲಲ್ಪಟ್ಟ ಪರಶುರಾಮನೆಂದು ತಿದ್ದಿಕೊಂಡಿದ್ದಾರೆ. ಇವೆಲ್ಲ ಊಹೆಗಳೇ ಸರಿ. "ವಾಗ್ದೇವಿಯ ಭಾಂಡಾರದ ಮುದ್ರೆಯನೊಡೆದಂ ಸಾರಸ್ವತಮೆನಿಪ ಕವಿತೆಯೊಳ್" ಎಂಬ ವಾಕ್ಯವನ್ನಾಧರಿಸಿ ರನ್ನನು "ಸಾರಸ್ವತ" ಹೆಸರಿನ ವಾಕ್ಯಕರಣ ಬರೆದು ಅದರಲ್ಲಿ ವಾಕ್‌ದೇವಿಯ ಅಂದರೆ

ಭಾಷೆಯ ವಿಚಾರವನ್ನು ನಿರೂಪಿಸಿರುವನೆಂಬ ಪೈಗಳ ಊಹೆ ಕೇವಲ ಊಹೆಯೆಂದೇ ಹೇಳಬೇಕು. ಇದಲ್ಲದೆ, ಗದಾಯುದ್ಧದ ೧-೩೯ನೆಯ ಪದ್ಯವನ್ನಾಧರಿಸಿ ಈತನು 'ಕವಿಮಾರ್ಗ' ಹೆಸರಿನ ಅಲಂಕಾರಗ್ರಂಥ ಬರೆದಿರಬಹುದೆಂದು ಹೇಳಿದುದೂ ಊಹೆಯೇ ಸರಿ. ಇವನು ಚಾವುಂಡರಾಯನನ್ನು ಕುರಿತು ಒಂದು ಕಾವ್ಯ ಬರೆದಿರಬಹುದು, 'ಉಭಯಕವಿ'ಯೆಂದು ಕರೆದುಕೊಂಡಿರುವುದರಿಂದ ಸಂಸ್ಕೃತದಲ್ಲಿಯೂ ಕೃತಿರಚನೆ ಮಾಡಿರಬಹುದು, "ಉಭಯವ್ಯಾಕರಣ ಪಂಡಿತ" ಎಂದು ಹೇಳಿಕೊಂಡಿರುವುದರಿಂದ ಪೂಜ್ಯಪಾದನ ಸಂಸ್ಕೃತ ಜೈನೇಂದ್ರ ವ್ಯಾಕರಣಕ್ಕೆ ಸಂಸ್ಕೃತ ವ್ಯಾಖ್ಯಾನವನ್ನೂ, ಶಬ್ದಾನುಶಾಸನ ಹೆಸರಿನ ಸ್ವತಂತ್ರ ಅಥವಾ ವ್ಯಾಖ್ಯಾನುರೂಪದ ಕನ್ನಡ ವ್ಯಾಕರಣಗ್ರಂಥವನ್ನೂ ಬರೆದಿರಬಹುದೆಂದು ಹೇಳಿದುದು ಊಹೆಗಳ ಸರಮಾಲೆಯೇ ಸರಿ. ರನ್ನನಿಘಂಟು ಈತನ ಕೃತಿಯೆಂದು ಕವಿಚರಿತೆಕಾರರು ಹೇಳಿದುದನ್ನು ಪೈಗಳು ಗಮನಿಸಿದ್ದಾರೆ. ಗದಾಯುದ್ಧದ ಕೊನೆಯ ಪಠ್ಯಭಾಗ ಒಂದಿಷ್ಟು ಅಸ್ತವ್ಯಸ್ತವೂ, ಪಂಪಭಾರತದ ಪದ್ಯಗಳನ್ನೊಳಗೊಂಡುದೂ ಆಗಿರುವುದನ್ನು ಪೈಗಳ ಗರುಡದೃಷ್ಟಿ ಗುರುತಿಸಿದೆ. ಗದಾಯುದ್ಧ, ಅಜಿತಪುರಾಣಗಳ ಒಂದೊಂದು ಪದ್ಯ ಬೆಳ್ಗೊಳದ ಸಾವಿಯಬ್ಬೆ ಶಾಸನದಲ್ಲಿ ಸಿಗುವುವೆಂದು ನಾನು ತೋರಿಸಿಕೊಟ್ಟಿದ್ದೇನೆ. ಆದರೆ "ರನ್ನನೊಬ್ಬನೇ" ಲೇಖನದಲ್ಲಿ ಪೈಗಳೇ ಈ ಕೆಲಸ ಮಾಡಿಮುಗಿಸಿದ್ದಾರೆ.

ಕಾದಂಬರಿ ನಾಗವರ್ಮ, ಛಂದೋಂಬುಧಿ ನಾಗವರ್ಮ ಒಬ್ಬನೇ, ಆತ ಬ್ರಾಹ್ಮಣ ಎಂದು ಹೇಳಿದುದು ಸರಿಯಾದ ವಿಚಾರವಾದರೂ, ಬಹುಶಃ ಈ ಬ್ರಾಹ್ಮಣ ನಾಗವರ್ಮನ ಛಂದೋಂಬುಧಿಯಲ್ಲಿ ಜೈನ ನಾಗವರ್ಮನ ಛಂದೋವಿಚಿತ ಸೇರಿಹೋಗಿದೆ ಎಂದೂ ಹೇಳಿದ್ದರೆ, ಅವರ ಅಭಿಪ್ರಾಯಕ್ಕೆ ಪೂರ್ಣತೆ ಬರುತ್ತಲಿದ್ದಿತು.

ಸಾಮಾನ್ಯವಾಗಿ ಎಲ್ಲ ವಿದ್ವಾಂಸರು ಸುಮನೋಬಾಣನೆಂಬುದು ಜನ್ನನ ತಂದೆಯಾದ ಶಂಕರನ ಬಿರುದಾಗಿದ್ದಿತು-ಎಂದು ಹೇಳುತ್ತಿದ್ದುದನ್ನು ವಿರೋಧಿಸಿ, ಶಂಕರ ತಂದೆ, ಸುಮನೋಬಾಣ ಗುರು ಎಂದು ಪೈಗಳು ಸರಿಯಾಗಿಯೇ ಹೇಳಿದ್ದಾರೆ. ಇತ್ತೀಚೆ ಹೆಚ್ಚಿನ ಆಧಾರಗಳಿಂದ ಈ ಅಂಶವನ್ನು ನಾನು ಸ್ಪಷ್ಟಪಡಿಸಿದ್ದರೂ ನನ್ನ ವಾದಕ್ಕೆ ಬೀಜ ಬಿತ್ತಿದವರು ಪೈಗಳೆಂದೇ ಹೇಳಬೇಕು.

ದೇವರ ದಾಸಿಮಯ್ಯ, ಜೇಡರ ದಾಸಿಮಯ್ಯ ಅಭಿನ್ನ ಎಂದು ಸಾಮಾನ್ಯವಾಗಿ ಎಲ್ಲ ಅಭ್ಯಾಸಿಗಳು ಹೇಳುತ್ತಿದ್ದರೂ, ಗಂಭೀರ ಪ್ರವೃತ್ತಿಯ ಸಂಶೋಧಕರು ಮಾತ್ರ ಇಬ್ಬರೂ ಭಿನ್ನರೆಂದು ಇತ್ತೀಚೆ ಹೇಳುತ್ತಲಿದ್ದಾರೆ. ಈ ಮಾತನ್ನು ಪೈಗಳು ಎಂದೋ ಹೇಳಿದುದು ಮಹತ್ವದ ಶೋಧವಾಗಿದೆ. ಆದರೆ ಇವರಿಬ್ಬರೂ ಸಮಕಾಲೀನರೆಂಬ ಪೈಗಳ ವಾದ ಸಮಂಜಸವಲ್ಲ. "ದಾಸ ಕುಲವಾದಾತ ಈಶಂಗಲ್ಲದೆ ಶರಣೆನ್ನ" ಎಂಬ ವಾಕ್ಯವನ್ನು ಸೂಕ್ಷ್ಮಾವಲೋಕನೆಗೆ ಒಡ್ಡಿ, "ದಾಸನ ಕುಲವೆಂಬ ಅದೊಂದು ಕೂಟ ಹುಟ್ಟಿರಬೇಕು" ಎಂದು ಹೇಳಿರುವುದು, 'ಜೇಡರ ದಾಸಿಮಯ್ಯನ ಮಗ ಕಾಟಿಗೌಡ' ಎಂಬಲ್ಲಿ ಕಾಟಿಗೌಡ ಮಗನಲ್ಲ ಶಿಷ್ಯನೆಂದು ತೀರ್ಮಾನಿಸಿದುದು, ತುಂಬ ಔಚಿತ್ಯಪೂರ್ಣ ಅಭಿಪ್ರಾಯವೆನಿಸಿವೆ.

ಗುಡಿಹಾಳ ಕುಂಟೋಜಿ ಶಾಸನವು ಪೈಗಳು ಭಾವಿಸಿರುವಂತೆ ಕಲ್ಯಾಣ ಬಸವಣ್ಣನಿಗೆ ಸಂಬಂಧಿಸಿದುದಲ್ಲ, ಕುಂಟೋಜಿ ಬಸವಣ್ಣ (ನಂದಿ) ವಿಗ್ರಹದ ಪೂಜೆಗಾಗಿ ಬಿಟ್ಟ ಮಾನ್ಯವನ್ನು ಸೂಚಿಸುತ್ತಿರಬೇಕು. ಸೊರಟೂರು ಮಲ್ಲೇಶ್ವರದೇವಾಲಯದ ಸ್ತಂಭಶಾಸನ, ಕರಸ್ಥಳದ ಬಸವಿದೇವನ ಕಣ್ಣಾನೂರು ಶಾಸನಗಳು ಕಲ್ಯಾಣ ಬಸವಣ್ಣನನ್ನು ಸೂಚಿಸುವುವೆಂದು ಪೈಗಳು ಹೇಳುವುದು ತೀರ

ತಪ್ಪು. ಅರ್ಜುನವಾಡ ಶಾಸನದ "ಸಂಗನಬಸವನ ಅಗ್ರಜ . . ." ಪದ್ಯದಿಂದ ದೇವರಾಜ>ಕಾವರಸ>ಕಲಿದೇವ ಎಂಬ ವಂಶಾವಳಿಯನ್ನು ಪೈ ಮೊದಲಾದವರು ಭಾವಿಸುತ್ತಾರೆ. ಆದರೆ ನನ್ನ ಲೇಖನವೊಂದರಲ್ಲಿ ಸೂಚಿಸಿದ ಪ್ರಕಾರ ಕಲಿದೇವನು ದೇವರಾಜನ ಮಗ, ಕಾವರಸನ ಶಿಷ್ಯನೆಂದು ಭಾವಿಸುವುದೇ ಸೂಕ್ತವೆನಿಸುತ್ತದೆ. "ಅರಸು ವಿಚಾರ . . . ." ಎಂಬ ವಚನಗಳನ್ನವಲಂಬಿಸಿ, ಕಲ್ಯಾಣ ತೈಲಪನ ರಾಜ್ಯವವನ್ನು ನಾಶಮಾಡಲು ಬಿಜ್ಜಳನಿಗೆ ಬಸವಣ್ಣನೇ ಪ್ರೇರೇಪಿಸಿದನೆಂದು ಪೈಗಳು ಹೇಳಿದುದು ಶುದ್ಧ ತಪ್ಪು. ಬಿಜ್ಜಳನು ಮಗನಿಗೆ ರಾಜ್ಯಭಾರ ನೀಡಿ ನಿವೃತ್ತನಾದನೆಂದು ಇತ್ತೀಚಿನ ವಿದ್ವಾಂಸರು ಹೇಳುವರಾದರೂ, ಪೈಗಳೇ ಈ ಅಭಿಪ್ರಾಯ ವ್ಯಕ್ತಪಡಿಸಿದುದು ಮಹತ್ವದ ಅಂಶವೆನಿಸಿದೆ.

ಬ್ರಹ್ಮಶಿವ ತಾನು ಅಗ್ಗಳದೇವನ ಕೆಳೆಯನೆಂದು ಹೇಳಿಕೊಂಡಿದ್ದಾನೆ. ಈತನು ಚಂದ್ರಪ್ರಭ ಪುರಾಣದ ಅಗ್ಗಳನೆಂದು ಎಲ್ಲ ವಿದ್ವಾಂಸರಂತೆ ಪೈ ಅವರು ಹೇಳುವರಾದರೂ, ಈತನು ಪೊಟ್ಟಳಕೆರೆಯಲ್ಲಿ ಇತ್ತೀಚೆ ಲಭ್ಯವಾದ ಶಾಸನೋಕ್ತ ಬೇರೊಬ್ಬ ಅಗ್ಗಳನೆಂದು ಹೇಳಬಹುದಾಗಿದೆ.

ಮುದ್ದಣನು 'ಕಾಮಶಾಸ್ತ್ರ' ಹೆಸರಿನ ಕೃತಿ ರಚಿಸಿರಬೇಕೆಂದು ಕೆಲವರು ಹೇಳುತ್ತಾರೆ. ಪೈ ಅವರು ಅಲ್ಲಗಳೆದು, ಇದರ ಕರ್ತೃ ವಿಜಯನಗರ ಪ್ರೌಢದೇವರಾಯನ ಮಗ ಮಲ್ಲಿಕಾರ್ಜುನ, ಇದನ್ನು ಪ್ರತಿ ಮಾಡಿದವ ಮುದ್ದಣನೆಂದು ಆಧಾರಸಹಿತ ಸ್ಪಷ್ಟಪಡಿಸಿದ್ದಾರೆ. ಕೃತಿಕರ್ತೃ ವಿಷಯವಾಗಿ ಪೈ ಸಲ್ಲಿಸಿದ ಮುಖ್ಯ ಕಾಣಿಕೆಯೆಂದರೆ, ಶ್ರೀರಾಮಪಟ್ಟಾಭಿಷೇಕದ ಕರ್ತೃ ಮುದ್ದಣನೆಂದು ಪ್ರಶ್ನಾತೀತವಾಗಿ ಸ್ಥಾಪಿಸಿದುದು. ಶ್ರೀರಾಮಾನುಜ್ಯಂಗಾರ್ ಅವರು ಕಾವ್ಯೋಕ್ತ ಅಂಶಗಳನ್ನೂ ಮತ್ತು ಮುದ್ದಣ ಬರೆದು ತಿಳಿಸಿದುದನ್ನೂ ನಂಬಿ, ಇದರ ಕರ್ತೃ ಚಾವಡಿಯ ರಂಗಭಟ್ಟನಾತ್ಮಜೆ ಮಹಾಲಕ್ಷ್ಮಿಯೆಂದು ಲೇಖನ ಬರೆದಿದ್ದರು, ಮುನ್ನುಡಿಯಲ್ಲಿ ದಾಖಲಿಸಿದ್ದರು. ಇದನ್ನು ಪೈ ಅವರು ಸರಿಯಾಗಿಯೇ ಅಲ್ಲಗಳೆದರು.

ಸಾಹಿತ್ಯಸಂದರ್ಭದಲ್ಲಿ ಸಂಶೋಧನೆಯೆಂದರೆ ಕವಿ-ಕಾವ್ಯಗಳ ಚಾರಿತ್ರಿಕ ವಲಯಕ್ಕೆ ಮಾತ್ರ ಸೀಮಿತವೆಂಬ ಭಾವನೆ ಬಲವಾಗಿದ್ದ ಕಾಲವದು. ಅದು ಆಗಿನ ಆವಶ್ಯಕತೆಯೂ ಎನಿಸಿದ್ದಿತು. ಮೇಲಿನ ಬರವಣಿಗೆಯನ್ನು ನೋಡಿದರೆ ಪೈಗಳು ದೊಡ್ಡ-ಸಣ್ಣ ತೊಡಕುಗಳನ್ನು ಬಿಡಿಸುವ ಮೂಲಕ ದುರ್ಗಮವಾಗಿದ್ದ ಸಾಹಿತ್ಯದಲ್ಲಿಯ ಚರಿತ್ರೆಯ ಹಾದಿಯನ್ನು ಸುಗಮಗೊಳಿಸಿರುವರೆಂದು ಯಾರಿಗಾದರೂ ಸ್ಪಷ್ಟವಾಗುತ್ತದೆ.

ಪಾಠನಿರ್ಣಯ

ಪ್ರಾಚೀನ ಕೃತಿಗಳನ್ನು ಕುರಿತು ಸಂಶೋಧನ ಇಲ್ಲವೆ ವಿಮರ್ಶೆ ನಡೆಸುವ ಸಂದರ್ಭದಲ್ಲಿ ಮೊದಲು ಜರುಗಬೇಕಾದುದು ಪಾಠಪರಿಷ್ಕರಣ. ತಪ್ಪು ಪಾಠವನ್ನವಲಂಬಿಸಿ ಮಾಡಿದ ಸಂಶೋಧನೆಯಾಗಲಿ, ವಿಮರ್ಶೆಯಾಗಲಿ ತಪ್ಪು ಗುರಿ ಮುಟ್ಟುವುದರಿಂದ ವಿದ್ವಾಂಸರಾದವರು ಪಾಠವಿಮರ್ಶೆಗೆ ಆದ್ಯಗಮನ ಕೊಡಬೇಕಾಗುತ್ತದೆ. ಪೈಗಳು ಈ ದಿಸೆಯಲ್ಲಿ ಮಾಡಿದ ಕೆಲಸ ಬೆಲೆಯುಳ್ಳದಾಗಿದ್ದು, ಈವರೆಗೆ ಅದನ್ನು ಯಾರೂ ಗಮನಿಸದಿರುವುದು ವಿಷಾದದ ಸಂಗತಿಯಾಗಿದೆ. ಪಾಠವಿಮರ್ಶೆಯ ಪ್ರಸಂಗದಲ್ಲಿ ವ್ಯಾಕರಣ, ಛಂದಸ್ಸಿನ ಜ್ಞಾನ ಅವಶ್ಯವಿದ್ದು, ಇಲ್ಲೆಲ್ಲ ಪೈಗಳ ಪರಿಶ್ರಮ ಆಶ್ಚರ್ಯ ಹುಟ್ಟಿಸುತ್ತದೆ.

"ಆದಿಪುರಾಣದ ರಚನಾಕಾಲವನ್ನು ಕುರಿತೊಂದು ಅಪಪಾಠ" ಎಂಬ ಲೇಖನ ಈ ಕೃತಿಕಾಲವನ್ನು ಸೂಚಿಸುವ ಪದ್ಯದ ಪಾಠವಿಮರ್ಶೆಯನ್ನೊಳಗೊಂಡಿದೆ. ಇಲ್ಲಿ ಪ್ರಕಟಿತ ಪದ್ಯದೊಂದಿಗೆ ಬೆಳ್ಗೊಳದ ಎರಡು ಪ್ರತಿಗಳಲ್ಲಿ ಸಿಗುವ ಭಿನ್ನ ಪಾಠಗಳ ವಿಮರ್ಶೆಯಿದೆ. ಒಂದನೆಯ ಪ್ರತಿಯಲ್ಲಿ ವರ್ಷ>ವರುಷ, ಅಱುವತ್ತು ಮೂಱು>ಅಱುವತ್ತಮೂಱು, ಸಂದಂದು>ಮಾದಂದು, ಕಾರ್ತಿಕ>ಕಾರ್ತ್ತೀಕ, ಶುಭದ ಮೂಲನಕ್ಷತ್ರ>ಶುಭಮಾದ ನಕ್ಷತ್ರ, ಮತ್ಕೃತಿ>ಜತ್ಕೃತಿ ಎಂಬ ಭಿನ್ನಪಾಠಗಳು, ಎರಡನೆಯ ಪ್ರತಿಯಲ್ಲಿ ನೂಱಿಕ್ಕೆ>ನೂಱಿದರ, ನೆಗಳ್ದುದೀ ಮತ್ಕೃತಿ>ನೆಗಳ್ದುದಂದೀಕೃತಿ, ಸಾಗರಾಂತ ಕ್ಷಿತಿಯಂ>ಸಾಗರಾಂತಂಬರಂ ಎಂಬ ಭಿನ್ನಪಾಠಗಳಿದ್ದು, ಇವುಗಳಿಂದ ಅರ್ಥಕ್ಕೆ ಬಾಧೆಯಿಲ್ಲ. ಬಾಧೆಯಿರುವುದು ೨ನೆಯ ಪ್ರತಿಯಲ್ಲಿಯ "ಪ್ಲವ ಸಂವತ್ಸರ>ಪ್ಲವಂಗ ಸಂವತ್ಸರ" ಪಾಠ ವ್ಯತ್ಯಾಸದಿಂದ. ಇಲ್ಲಿ ಛಂದೋದೋಷ ಉದ್ಭವಿಸಿಲ್ಲ. ಹೀಗಾಗಿ ಪಂಚಾಂಗದ ಆಧಾರದಿಂದ ಪ್ಲವಸಂವತ್ಸರ ಎಂಬುದೇ ಸರಿಯಾದ ಪಾಠವೆಂದು ನಿರ್ಣಯಿಸಿದ್ದಾರೆ.

ಗದಾಯುದ್ಧ ರಚನೆಯ ಕಾಲಸೂಚಿ ಪದ್ಯದಲ್ಲಿ "ಶಕಸಮಗತಿಋತುಯುಗಶಶಿನಿಕರ" ಎಂಬ ವಾಕ್ಯವಿದೆ. ಇದರ ಸರಿಯಾದ ಪಾಠ "ಶಕಸಮಗತಿಯುತಯುಗಶತನಿಕರ" ಎಂದು ತಿದ್ದಿಕೊಂಡಿದ್ದಾರೆ. ಅಕ್ಷರದ ರೂಪಸಾಮ್ಯತೆ, ವಾರ, ತಿಥಿ, ನಕ್ಷತ್ರಗಳ ಹೊಂದಿಕೆಗಳ ಬಲದಿಂದ ಋತು>ಯುತ, ಶಶಿ>ಶತ ಎಂದು ಪಾಠವನ್ನು ತಿದ್ದಿಕೊಂಡು, ಈ ಕೃತಿ ಶಾಲಿವಾಹನ ಶಕೆ ೯೦೪ರಲ್ಲಿ ಅಂದರೆ ಕ್ರಿ.ಶ. ೯೮೨ರ ಚಿತ್ರಭಾನುವಿನಲ್ಲಿ ಹುಟ್ಟಿದೆಯೆಂದು ನಿರ್ಧರಿಸಿದ್ದಾರೆ. "ರನ್ನನ ಪರಶುರಾಮಚರಿತ, ಚಕ್ರೇಶ್ವರ ಚರಿತೆಗಳನ್ನೂ ಗದಾಯುದ್ಧದ ರಚನಾಕಾಲವನ್ನೂ ಕುರಿತು" ಲೇಖನದಲ್ಲಿ ಈ ಪದ್ಯ ಮೂಲತಃ ಚಕ್ರೇಶ್ವರ ಚರಿತೆಗೆ ಸಂಬಂಧಿಸಿರಬಹುದೆಂದು ಊಹಿಸಿದ್ದಾರೆ. ಇರಿವ ಬೆಡಂಗನಿಂದ ಸೋತ ಶಿಲಾಹಾರ ಅರಸನ ಹೆಸರಿಗೆ ಗದಾಯುದ್ಧದ ಪ್ರಥಮ ಆವೃತ್ತಿ (೧೮೯೫)ಯಲ್ಲಿ ಅಪರಾಜಿತ ಎಂಬ, ದ್ವಿತೀಯ (೧೯೧೯), ತೃತೀಯ ಆವೃತ್ತಿ (೧೯೨೫)ಗಳಲ್ಲಿ 'ಅಪರಾದಿತ' ಎಂಬ ಪಾಠವಿರುವುದನ್ನು ಗಮನಿಸಿ, ಇವನ ನಿಜನಾಮ 'ಅಪರಾದಿತ್ಯ' ಇರಬಹುದೆಂದು ಸರಿಯಾಗಿಯೇ ಊಹಿಸಿದ್ದಾರೆ. ಇಲ್ಲಿಯೇ ಬರುವ "ಶಂತರ್ಣ ವಂಶಾರ್ಣವಂ" ಎಂಬುದರ ಪಾಠಸಮಸ್ಯೆ ಬಗೆಹರಿಯದಿದ್ದಾಗ "ಬಲ್ಲವರು ಇದನ್ನು ಸಾಧಾರವಾಗಿ ನಿಷ್ಕೃಷ್ಟ ಮಾಡತಕ್ಕುದು" ಎಂದು ತಮ್ಮ ಅಸಾಮರ್ಥ್ಯವನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಗದಾಯುದ್ಧದ ಅಂತ್ಯಭಾಗದ ಪದ್ಯಗಳು ಅನ್ಯರಿಂದ ಸೇರಿಸಲ್ಪಟ್ಟಿವೆ; ಗದಾಯುದ್ಧ ಅಜಿತಪುರಾಣಗಳನ್ನು ಸ್ವತಃ ಕವಿಯೇ ಪರಿಷ್ಕರಿಸಿದ್ದು, ಆಗ ಕೆಲವು ಪದ್ಯಗಳನ್ನು ಮತ್ತೆ ಸೇರಿಸಿರುವನೆಂದು ಹೇಳಿರುವುದು ಗಮನಾರ್ಹ ಅಂಶವಾಗಿದೆ. ರನ್ನನ ಮಗನ ಜನ್ಮದಿನ ಮಂಗಳವಾರವೆಂದು ನಿರ್ಧರಿಸುತ್ತ, ಪದ್ಯದಲ್ಲಿಯ 'ಆದಿವಾಸರ' ಎಂಬುದು ಇದಕ್ಕೆ ಹೊಂದುವುದಿಲ್ಲವಾಗಿ ಇದರ ನಿಜಪಾಠ 'ಆರವಾಸರ' ಇರಬಹುದೆಂಬ ನಿರ್ಣಯಕ್ಕೆ ಬಂದಿದ್ದಾರೆ. ಆರ=ಅಂಗಾರಕ=ಮಂಗಳ ಎಂಬ ಅರ್ಥಗಳಿಂದ ತಮ್ಮ ವಾದವನ್ನು ಸಮರ್ಥಿಸಿಕೊಂಡಿದ್ದರೂ, ಇದು ಸಮರ್ಪಕವೆನಿಸುವುದಿಲ್ಲ. ರನ್ನನ ಬಗೆಗೆ ಬರೆಯುತ್ತ, ಆತನ ಪದ್ಯಗಳನ್ನೊಳಗೊಂಡ ಬೆಳ್ಗೊಳ ಶಾಸನೋಕ್ತ 'ಬಾಯಕನೆಂಬ' ಎಂಬುದು ಪ್ರಸ್ತಾರಕ್ಕೆ ಹೊಂದುವುದಿಲ್ಲವಾಗಿ ಅದು 'ಬಾಯಕನೆಂಬುವ' ಅಥವಾ 'ಬಾಯಿಕನೆಂಬಾ' ಇರಬೇಕೆಂದು ಊಹಿಸಿದುದು ಸರಿಯಾಗಿಯೇ ಇದೆ. ಅಜಿತಪುರಾಣದ ಇತ್ತೀಚಿನ ಆವೃತ್ತಿಗಳ ಒಂದು ಪದ್ಯದಲ್ಲಿ ಸಹ 'ಪಿರಿಯಂ ಬೂತಗನಾತನಿಮ್ಮಮಳ' ಎಂಬ ಪಾಠವೇ ಇದೆ. ಡಾ. ಡಿ. ಎಲ್. ಎನ್. ಅವರು ಇದನ್ನು 'ಪಿರಿಯಂ

ಬೂತುಗನಾತನಿಂ ಮರುಳ' ಎಂದು ಸರಿಯಾಗಿಯೇ ತಿದ್ದಿದ್ದಾರೆ. ನಿಜಸ್ಥಿತಿಯೆಂದರೆ ಹೀಗೆ ಮೊದಲು ತಿದ್ದಿದವರು ಪೈಗಳೆಂಬುದು ಇಲ್ಲಿಯ ಒಂದು ಲೇಖನದಿಂದ ಸ್ಪಷ್ಟವಾಗುತ್ತದೆ.

"ದುರ್ಗಸಿಂಹನ ಪಂಚತಂತ್ರದ ರಚನಾಕಾಲ" ಲೇಖನದಲ್ಲಿ ಈ ಕೃತಿಯ ಆರಾ ಪ್ರತಿಯಲ್ಲಿ ಸಿಗುವ ಕಾಲಸೂಚಿ ಪದ್ಯದ ಪರಿಷ್ಕರಣವನ್ನು ಕೈಗೆತ್ತಿಕೊಂಡು, "ಸದ್ಗುಹ ನಿವಾಸಸ್ಥಾನ>ಸದ್ಗುಣ ನಿವಾಸಸ್ಥಾನ" ಎಂದು ಸರಿಯಾಗಿಯೇ ಪರಿಷ್ಕರಿಸಿದ್ದಾರೆ. ಮಲ್ಲಿನಾಥ ಪುರಾಣದಲ್ಲಿ ನಾಗಚಂದ್ರನನ್ನು ವರ್ಣಿಸುವ ಪದ್ಯವೊಂದು "ಜಿನಪತಿ ಸಭೆಯೊಳ್ ಪೂಜ್ಯಂ" ಎಂದು ಅಚ್ಚಾಗಿದೆ. ತೀರ್ಥಂಕರನ ಸಭೆಯಲ್ಲಿ ನಾಗಚಂದ್ರ ಪೂಜ್ಯನಾಗುವುದು ಅಸಮಂಜಸ, ಅಸಂಭವವೆಂದು ಹೇಳಿ, ಅದನ್ನು "ಜನಪತಿ ಸಭೆಯೊಳ್ ಪೂಜ್ಯಂ" ಎಂದು ತಿದ್ದಿಕೊಂಡುದು ಸೂಕ್ತ ಪರಿಷ್ಕರಣವಾಗಿದ್ದು, ಮುಂದುವರಿದು ಈ ಕವಿ ರಾಜ(ಜನಪತಿ) ಪೂಜಿತನಾಗಿದ್ದನೆಂಬ ನಿರ್ಣಯಕ್ಕೆ ಬಂದುದು ಇನ್ನೂ ಸೂಕ್ತ ಸಂಶೋಧನೆಯಾಗಿದೆ.

"ದೇವರದಾಸಿಮಯ್ಯನ ಕಾಲವಿಚಾರ" ಲೇಖನದಲ್ಲಿ 'ಶಿವಶರಣವಿಲಾಸ' ಕೃತಿಯಲ್ಲಿಯ ಪದ್ಯಗಳ ಛಂದೋದೋಷವನ್ನು, ದಾಸಿಮಯ್ಯನ ವಚನಸ್ಥ ಸಂಸ್ಕೃತ ಉದ್ಧರಣೆಯ ದೋಷವನ್ನು ಸರಿಯಾಗಿಯೇ ನಿವಾರಣೆ ಮಾಡಿದ್ದಾರೆ. "ಬಸವೇಶ್ವರನ ಕಾಲನಿರ್ಣಯ" ವಿಷಯವನ್ನು ಚರ್ಚಿಸುತ್ತ ಹೊನ್ನಾಳಿ ೫೦ನೆಯ ನಂಬರಿನ ಶಾಸನದಲ್ಲಿರುವ "ಕಲಿದೇವನರ್ಣವಮಹಿಮಂ" ಎಂಬುದರ ಸರಿಯಾದ ಪಾಠ "ಕೃಷ್ಣದೇವನರ್ಣವಮಹಿಮಂ" ಅಥವಾ "ಕರ್ಣದೇವನರ್ಣವಮಹಿಮಂ" ಇರಬೇಕೆಂದು ಊಹಿಸಿ, ಕೊನೆಯದನ್ನು ಎತ್ತಿಹಿಡಿದುದು ಸರಿಯಾದ ತೀರ್ಮಾನವಾಗಿದೆ. ಇದೇ ಸಂದರ್ಭದಲ್ಲಿ ಸಿದ್ಧರಾಮ ಪುರಾಣದಲ್ಲಿ ಬರುವ "ಬಿಜ್ಜಳನ ತಮ್ಮಂ ಕರ್ಣದೇವಂ" ಎಂಬುದರ ನಿಜಪಾಠ "ಬಿಜ್ಜಳನ ಮಮ್ಮಂ ಕರ್ಣದೇವಂ" ಎಂದು ಶಾಸನಗಳ ಆಧಾರದಿಂದ ತಿದ್ದಿಕೊಂಡುದು ಪೈಗಳ ವಿಶಾಲ ವ್ಯಾಸಂಗವನ್ನು ಭಾಷಾತಜ್ಞತೆ-ಛಂದೋತಜ್ಞತೆಗಳನ್ನೂ ಪ್ರತಿನಿಧಿಸುತ್ತದೆ.

"ಕನ್ನಡ ಷಟ್ಪದಿಗಳು" ಲೇಖನದಲ್ಲಿ ಗದಾಯುದ್ಧದ 'ಮಾತ್ರಾಸಮಕ ಷಟ್ಪದಿ'ಯ ಚರ್ಚೆಯನ್ನು ಆರಂಭಿಸುವ ಮೊದಲು, ಅದರ ಸಂಪಾದಕರು ಈ ಪಾಠವನ್ನು ವ್ಯತ್ಯಸ್ತಗೊಳಿಸಿದುದನ್ನು ಆಕ್ಷೇಪಿಸಿ, ಇದು ಪ್ರಕ್ಷಿಪ್ತವಾಗಿರಬಹುದೆಂದೂ ಅನುಮಾನಿಸಿದ್ದಾರೆ. ಇದೇ ಕಾವ್ಯದ "ಪದ್ಯರಚನೆಯೊಳ್" ಎಂಬುದು ತ್ರಿಪದಿಯಲ್ಲ, ಕಂದವೆಂದು ಪರಿಷ್ಕರಿಸಿಕೊಟ್ಟಿದ್ದಾರೆ. ಆದರೆ ಈ ಲೇಖನದಲ್ಲಿ ಪೈಗಳ ಊಹಿತ ಪಾಠ ಅತಿಯಾಯಿತೆನಿಸುತ್ತದೆ. ಇಲ್ಲಿಯೇ "ಮಂದರಧರಗಣ . . ." ಎಂದು ಪ್ರಾರಂಭವಾಗುವ ಷಟ್ಪದಿಯ ಸೂತ್ರವು ಪಾಠಾಂತರಕ್ಕೆ ಗುರಿಯಾದುದನ್ನೂ ಗಮನಿಸಿದ್ದಾರೆ.

'ಕುಮಾರವ್ಯಾಸನ ಮತವಿಚಾರ' ಲೇಖನದಲ್ಲಿ ಪಾಠಾಂತರಗಳ ಕಡೆಗೆ ಗಮನಹರಿಸಿದುದು, ಈ ಕವಿಯ "ವೇದಪುರುಷನ ಸುತನ ಸುತನ" ಎಂಬ ಪದ್ಯದಲ್ಲಿಯ ಪಾಠಗಳನ್ನು ರೂಪನ>ಮಾವನ, ಹೆಮ್ಮಗನ>ಮೊಮ್ಮಗನ, ಕಾದಿಗೆಲಿದನನಣ್ಣನವ್ವೆಯ>ಕಾದಿಗೆಲಿದವನಣ್ಣನವ್ವೆಯ" ಎಂದು ಪರಿಷ್ಕರಿಸಿದುದು ಎತ್ತಿಹೇಳಬೇಕಾದ ಪರಿಷ್ಕರಣ ಪ್ರಜ್ಞೆಯೆನಿಸಿವೆ. "ಲಕ್ಷ್ಮೀಶಃ ಕಾಲ, ನಿವಾಸಸ್ಥಾನ ಮತ್ತು ಮತ" ಲೇಖನದ ಅಡಿಯಲ್ಲಿ ಭಿನ್ನಪಾಠಗಳನ್ನು ದಾಖಲಿಸಿದ್ದಾರೆ ಮತ್ತು ಚರ್ಚಿಸಿದ್ದಾರೆ. ಇದೇ ಕವಿಯನ್ನು ಕುರಿತ ಇನ್ನೊಂದು ಲೇಖನದಲ್ಲಿ, ಚಿತ್ರಭಾರತದ ಪದ್ಯವನ್ನು ಚರ್ಚಿಸುತ್ತ, ಇಲ್ಲಿಯ 'ವಿಷ್ಣುನಾಮಸಂವತ್ಸರ' ಎಂಬುದನ್ನು 'ವಿಷುನಾಮ ಸಂವತ್ಸರ' ಎಂದೂ, 'ಭೂತತ್ರಿತೀಯ' ಎಂಬುದನ್ನು 'ಭೂತತ್ರಿತಯ' ಎಂದೂ ಸರಿಯಾಗಿಯೇ ತಿದ್ದಿದ್ದಾರೆ.

ಒಂದು ಅಕ್ಷರದೋಷ ದೊಡ್ಡ ಪ್ರಮಾದಕ್ಕೆ ದಾರಿಮಾಡಿಕೊಡುವುದರಿಂದ ಪೈಗಳು ಪಾಠಪ್ರಸಂಗದಲ್ಲಿ ತುಂಬ ಎಚ್ಚರವಹಿಸುತ್ತಾರೆ. ಆನೆಸಿದ್ರಿ ಗ್ರಾಮದ ಶಾಸನವನ್ನು ಪರಿಶೀಲಿಸುತ್ತ, ಆ ಶಾಸನದ ಕನ್ನಡದ ಲಿಪಿಯ ಪ್ರತಿಯಲ್ಲಿ "ಮಾರ . . . ಯಿತಂ ವಕಾದಲಿ॥" ಎಂದಿರುವ ಜಾಗದಲ್ಲಿ ಅದರ ರೋಮನ್‌ಲಿಪಿಯಲ್ಲಿ "ಮಾರ . . . ದಲಿ॥ ಎಂದಿದೆ" ಎಂಬ ವ್ಯತ್ಯಾಸವನ್ನು ಎತ್ತಿಹೇಳಿದ್ದಾರೆ.

ಕಾಲನಿರ್ಣಯ ಸಂದರ್ಭದಲ್ಲಿ ಶುದ್ಧಪಾಠ ನಿರ್ಣಯ ಮುಖ್ಯವಾಗಿರುವ ಕಾರಣ, ಪಂಪನ ಆದಿಪುರಾಣ, ರನ್ನನ ಗದಾಯುದ್ಧ ಪದ್ಯಗಳನ್ನು ಪರಿಶೀಲಿಸಿದಂತೆ ಪೈಗಳು ಇನ್ನೂ ಆಳವಾಗಿ ಪರಿಶೀಲಿಸಿದವುಗಳೆಂದರೆ ಶಿಶುಮಾಯಣ ಮತ್ತು ಸೋಮರಾಜರ ಪದ್ಯಗಳು. ಶಿಶುಮಾಯಣನ ಪದ್ಯಕ್ಕೆ "ಸಾಸಿರದ ನೂರರೊಳುತ್ಸಕಲ" ಮತ್ತು "ಸಾಸಿರದ ನಾನೂರೊಳ್ಪಿಕಲ" ಎಂಬ ಭಿನ್ನ ಪಾಠಗಳಿವೆ. ಇವುಗಳಲ್ಲಿ ಎರಡನೆಯ ಪಾಠವೇ ಸರಿಯಾದುದೆಂದೂ ಇದಕ್ಕೆ ಸಮಾನವಾದುದು. ಕ್ರಿ.ಶ. ೧೩೭೨ ಎಂದೂ ಪೈಗಳು ಶೋಧಿಸಿದ್ದಾರೆ. ಸೋಮರಾಜನ ಉದ್ಭಟಕಾವ್ಯದ "ಸಾಸಿರದ ನೂರ್ಸಂದ" ಎಂಬ ಪಾಠದಲ್ಲಿ ಛಂದೋದೋಷ[illegible]ಯೆಂದು ಹೇಳುತ್ತ "ಸಾಸಿರದ ನಾಲ್ನೂರ್ಸಂದ" ಎಂಬ ಹೊಸಪಾಠವನ್ನು ಸಂವತ್ಸರದ ಹಿನ್ನೆಲೆಯಲ್ಲಿ ಊಹಿಸಿ, ಇದು ಕ್ರಿ.ಶ. ೧೫೨೨ಕ್ಕೆ ಸಮಾನವಾಗಿದೆಯೆಂದು ತಿಳಿಸಿದುದು ಒಪ್ಪತಕ್ಕ ವಿಚಾರವಾಗಿದೆ. ಇದೇ ಲೇಖನದ ಅಡಿಯಲ್ಲಿ ಉದ್ಭಟಕಾವ್ಯ, ಕೆಳದಿನೃಪವಿಜಯಗಳ ಎರಡು ಕಂದಗಳನ್ನು ಚರ್ಚಿಸುತ್ತ, ಅಲ್ಲಿಯ ಛಂದೋದೋಷಗಳನ್ನು ಗುರುತಿಸಿ ಹೇಳಿದ್ದಾರೆ. 'ಪಾರ್ತಿಸುಬ್ಬ' ಲೇಖನದಲ್ಲಿ ಅವನ ಒಂದು ಪದ್ಯದ ಛಂದೋದೋಷವನ್ನೂ ತೋರಿಸಿ, ತಿದ್ದಲು ಪ್ರಯತ್ನಿಸಿದ್ದಾರೆ.

ಈ ವಿವರಗಳ ಮೇಲೆ ಕಣ್ಣಾಡಿಸಿದರೆ ಪೈಗಳಿಗೆ ಶುದ್ಧಪಾಠದ ಬಗೆಗೆ ಇರುವ ಒಲವು, ಅದರ ನಿರ್ಣಯಕ್ಕೆ ಅವಶ್ಯವಿರುವ ಸೂಕ್ಷ್ಮ ಪಾಂಡಿತ್ಯ, ಈ ದಾರಿಗಳಲ್ಲಿ ನಡೆದು ಗ್ರಂಥಸಂಪಾದನ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಕಾಣಿಕೆ ಇತ್ಯಾದಿಗಳು ಹೆಜ್ಜೆ ಹೆಜ್ಜೆಗೂ ಎದ್ದುಕಾಣುತ್ತದೆ.

ಶಾಸ್ತ್ರವಿಷಯ ನಿರ್ಣಯ

ವ್ಯಾಕರಣ, ನಿಘಂಟು, ಛಂದಸ್ಸುಗಳಿಗೆ ಸಂಬಂಧಪಟ್ಟಂತೆ ಪೈ ಅವರ ಜ್ಞಾನ ಅಪಾರ ಮತ್ತು ನಿರ್ದಿಷ್ಟ. "ಕನ್ನಡ ಸಾಹಿತ್ಯದ ಪ್ರಾಚೀನತೆ" ಲೇಖನದಲ್ಲಿ ವಡ್ಡಾರಾದನೆಯ ಭಾಷಾಸ್ವರೂಪವನ್ನು ಕುರಿತು ಹೇಳುತ್ತ, ದರ್ಪಣಕಾರ ಕಳ್ ಧಾತುವಿಗೆ ದ್ವಿತ್ವವಿಲ್ಲವೆನ್ನುತ್ತ 'ಕಳದೆ ಬಂದಂ' ಎನ್ನುವನಾದರೂ ಆದಿಪುರಾಣ, ಶಾಂತಿಪುರಾಣ, ವಡ್ಡಾರಾಧನೆಗಳಲ್ಲಿ 'ಕಳ್ದು' ರೂಪವಿರುವುದನ್ನು ತೋರಿಸಿದ್ದಾರೆ. ಕಲ್ ಎಂಬುದರ ಕಲ್ಪಿ ಭಾವನಾಮ ಪಂಪಭಾರತ, ವಡ್ಡಾರಾಧನೆಗಳಲ್ಲಿ ಮಾತ್ರ ಇದೆ. ಬಡಿಸು ಎಂಬುದರ ಪರ್ಯಾಯರೂಪವಾದ ಬಡ್ಡಿಸು ಕವಿರಾಜಮಾರ್ಗ, ವಡ್ಡಾರಾಧನೆಗಳಲ್ಲಿದೆ. ವಡ್ಡಾರಾಧನೆಯಲ್ಲಿ ಬದುಕು=ಬಾಳು ಅರ್ಥದ ಸಾಧಿತರೂಪಗಳಾದ ಬಟ್ದನ್ ಎಂಬುದೂ, ಬರ್ದರ್ ಎಂಬುದೂ ಸಿಗುತ್ತವೆ. ಕೆಂದು (=ಮಲಗು) ಎಂಬ ಧಾತು ಪಂಪಭಾರತ, ವಡ್ಡಾರಾಧನೆಗಳಲ್ಲಿದೆ. ಚೇತನಭಾವದ "ಪಿ" ಪ್ರತ್ಯಯದ ಕಲ್ಪಿ, ನೋಂಪಿ ರೂಪಗಳು ಕೆಲವೆಡೆ ಸಿಗುತ್ತವೆ; ವಡ್ಡಾರಾಧನೆಯಲ್ಲಿ ಕೇಳ್ಪಿಯೆಂಬ ಹೆಚ್ಚಿನ ರೂಪವಿದೆ. ವಡ್ಡಾರಾಧನೆಯಲ್ಲಿ ಮಾತ್ರ ಲುಂದು (=ಮಲಗು) ಎಂಬ ಧಾತುವಿನ ಬಳಕೆಯಿದೆ. ಕೆಡು (=ಪತನ) ಧಾತುವಿನಿಂದಾದ ಕೆಟ್ಟಿತ್ತು ರೂಪ, ತೊಡು (=ಪ್ರಾರಂಭಿಸು) ಧಾತುವಿನಿಂದಾದ ತೊಟ್ಟು ರೂಪಗಳು ವಡ್ಡಾರಾಧನೆಯಲ್ಲಿವೆ. ಇರ್ದು=ಇಟ್ಟು, ಪೊರ್ದು=ಪೊಟ್ಟು ಎಂಬ ಪರ್ಯಾಯ ರೂಪಗಳು ಈ ಕೃತಿಯಲ್ಲಿವೆ. ಒಡೆ (=ಉಳ್) ತದ್ಧಿತ ಪ್ರತ್ಯಯದ ರೂಪಗಳು ವಡ್ಡಾರಾಧನೆಯಲ್ಲಿ ಮಾತ್ರ ಸಿಗುತ್ತವೆ.

ಕರ್ಮಣಿ ಪ್ರಯೋಗಗಳು ಇಲ್ಲಿ ವಿಪುಲ ಪ್ರಮಾಣದಲ್ಲಿದೆ. ಅ+ಇ ಸಂಧಿರೂಪಗಳೂ ಅನೇಕ ಸಂಖ್ಯೆಯಲ್ಲಿವೆ. ಇತ್ಯಾದಿ ಚರ್ಚೆಗಳು ತುಂಬ ಮೌಲಿಕವೆನಿಸಿದೆ. ಇಲ್ಲಿಯೇ ಶಾಸನಭಾಷೆಯ ಸಮಾಲೋಚನೆ ಆಗಾಗ ಸಮರ್ಪಕವಾಗಿ ಬಂದಿದೆ. "ಕನ್ನಡಸಾಹಿತ್ಯದ ಹಾಗೂ ಭಾಷೆಯ ಹಳಮೆ" ಲೇಖನದಲ್ಲಿಯೂ ಈ ಪರಿಶ್ರಮವನ್ನು ಕಾಣಬಹುದು. ಆದರೆ "ಗ್ರೀಕ್ ಪ್ರಹಸದಲ್ಲಿ ಕನ್ನಡ ಮಾತುಗಳು" ಲೇಖನದ ಮೌಲಿಕತೆಯನ್ನು ಇತ್ತೀಚೆ ವಿದ್ವಾಂಸರು ಸಂದೇಹದಿಂದ ನೋಡುತ್ತಲಿದ್ದಾರೆ. ಇದಲ್ಲದೆ, ತಮ್ಮ ಲೇಖನಗಳ ಉದ್ದಕ್ಕೂ ಅಲ್ಲಲ್ಲಿ ಭಾಷಾರೂಪಗಳ ಚರ್ಚೆ ನಡೆಸಿ, ತಾವು ಭಾಷಾಸಂಶೋಧಕರೂ ಆಗಿರುವುದನ್ನು ಪೈ ಅವರು ಸ್ಪಷ್ಟಪಡಿಸಿದ್ದಾರೆ.

ಪೈಗಳ ನಿಘಂಟುಜ್ಞಾನವೂ ಅಗಾಧ. ಅವರು ಕಿಟೆಲ್ ಕೋಶವನ್ನು ಪಾರಾಯಣದಂತೆ ಅಧ್ಯಯನ ಮಾಡಿದ್ದಾರೆ. ಇದರ ಫಲವಾಗಿ ಉತ್ಸಕಲ, ವಿಕಲಗಳಂಥ ರೂಪಗಳ ಅರ್ಥ ಹೇಳುವಲ್ಲಿ ಹಿಡಿಯುವ ಆಧಾರ, ವಹಿಸುವ ತಾಳ್ಮೆ, ನೀಡುವ ತೀರ್ಪು ಆಶ್ಚರ್ಯ ಹುಟ್ಟಿಸುತ್ತವೆ. ಪ್ರಾಚೀನ ಕವಿಗಳು ಕಾಲಸೂಚನೆಯ ಸಂದರ್ಭದಲ್ಲಿ ಸಾಂಕೇತಿಕ ಶಬ್ದ ಬಳಸುತ್ತ ಬಂದಿದ್ದಾರೆ. ಕಾಲನಿರ್ಣಯ ಕೋವಿದರಾದ ಪೈಗಳು ಅವುಗಳನ್ನು ಸರಿಯಾದ ಅರ್ಥದಲ್ಲಿ ವಿಸಂಕೇತಿಸುತ್ತಿರುವಲ್ಲಿಯೂ ಅವರ ನಿಘಂಟುಜ್ಞಾನ ಎದ್ದುಕಾಣುತ್ತದೆ. ಇದೇ ಗ್ರಂಥದ ಬೇರೆ ವಿಭಾಗಗಳಲ್ಲಿಯ ಗೊಮ್ಮಟ, ಕರ್ಣಾಟ ರೂಪಗಳನ್ನು ಕುರಿತ ಲೇಖನಗಳನ್ನೂ ಇಲ್ಲಿ ನೆನೆಯಬಹುದು.

ಛಂದಸ್ಸಿಗೆ ಸಂಬಂಧಪಟ್ಟಂತೆ "ಜಯಕೀರ್ತಿಯ ಛಂದೋನುಶಾಸನದ ಕಾಲ", "ಕನ್ನಡ ಷಟ್ಪದಿಗಳು" ಲೇಖನಗಳು ಈ ಸಂಪುಟದಲ್ಲಿವೆ. ಇಲ್ಲಿ ಛಂದೋಂಬುಧಿಯಲ್ಲಿಯದು ಶರಷಟ್ಪದಿಯೆಂದೂ, ಛಂದೋನುಶಾಸನದಲ್ಲಿಯದು ಕುಸುಮ ಷಟ್ಪದಿಯೆಂದೂ ಇವರು ಭಾವಿಸಿದುದು ತಪ್ಪು. ಜಯಕೀರ್ತಿಯ ಈ ಷಟ್ಪದಿ ಪೈಗಳು ಹೇಳುವಂತೆ ಪಾಠಾಂತರಕ್ಕೆ ಗುರಿಯಾಗಿಲ್ಲ. ಸುಕುಮಾರ ಚರಿತೆಯಲ್ಲಿಯದು ಇವರು ಹೇಳುವಂತೆ ಕುಸುಮ ಷಟ್ಪದಿಯಲ್ಲ, ಅದೂ ಪಾಠಾಂತರಕ್ಕೆ ಗುರಿಯಾಗಿಲ್ಲ. ಇವೆಲ್ಲ ಅಂಶಗಣಾನ್ವಿತ ಮೂಲಷಟ್ಪದಿಗಳಾಗಿವೆ. ಮಾತ್ರಾಛಂದಸ್ಸಿನ ದೃಷ್ಟಿಯಿಂದ ನೋಡದ ಕಾರಣ ಅವರಿಗೆ ಶರದಂತೆ, ಕುಸುಮದಂತೆ ಕಾಣಿಸಿವೆ. ಇಲ್ಲಿಯೇ ಪರಿಶೀಲಿಸಿದ ಸ್ಕಂದಕ-ಕಂದ ಚರ್ಚೆ ಬೆಲೆಯುಳ್ಳುದಾಗಿದೆ. ಪ್ರಾಕೃತ ಪಜ್ಝಟಿಕಾದಿಂದ ಕನ್ನಡ ರಗಳೆ ಹುಟ್ಟಿದೆಯೆಂಬ ಡಾ. ಎಚ್. ಡಿ. ವೆಲಂಕರ ಅವರ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತ, ಸುಕುಮಾರಚರಿತ ಮೊದಲಾದ ಕಾವ್ಯಗಳಲ್ಲಿರುವ ಪದ್ದಳಿಗಳನ್ನು ಹುಡುಕಿ ಹೇಳಿದುದು ವಿಶೇಷ ಅಂಶವೆನಿಸಿದೆ (ರಗಳೆಯು ದಂಡಕದಿಂದ ಹುಟ್ಟಿದೆಯೆಂದು ಇತ್ತೀಚೆ ಕುಕ್ಕಿಲ ಕೃಷ್ಣಭಟ್ಟರು ಹೇಳಿದ್ದಾರೆ). ಜಯಕೀರ್ತಿ ಮತ್ತು ನಾಗವರ್ಮ ಹೇಳುವ ಚೌಪದಿಯ ಲಕ್ಷಣಗಳು ತೀರ ಭಿನ್ನವಾಗಿವೆಯೆಂಬುದು ಸರಿಯಾದ ತೀರ್ಮಾನವಲ್ಲ. "ಕನ್ನಡ ಷಟ್ಪದಿಗಳು" ಲೇಖನದಲ್ಲಿ ಮದನತಿಲಕದ ವನಮಂಜರಿ ವೃತ್ತದಿಂದ ಪರಿವರ್ಧಿನಿ ಷಟ್ಪದಿಯನ್ನು ಹೊರಡಿಸಿದುದಾಗಲೀ, ನಾಗವರ್ಮ ಶರಷಟ್ಪದಿ ಲಕ್ಷಣ ಹೇಳಿರುವನೆಂದುದಾಗಲೀ, ಮದನತಿಲಕಕ್ಕೆ ಮೊದಲು ಎಲ್ಲ ಷಟ್ಪದಿಗಳು ಬಳಕೆಯಲ್ಲಿದ್ದುವೆಂದುದಾಗಲೀ, ಎಲ್ಲ ಷಟ್ಪದಿಗಳು ವರ್ಣವೃತ್ತದಿಂದಲೇ ಬಂದುವೆಂದು ನೀಡಿದ ತೀರ್ಮಾನವಾಗಲೀ, ದೊಡ್ಡ ತಪ್ಪುಗಳೇ ಆಗಿವೆ. ಈಗ ೮, ೧೦, ೧೨, ೧೪, ೧೬, ೨೦ ಮಾತ್ರೆಗಳ ೬ ಷಟ್ಪದಿಗಳು ರೂಢಿಯಲ್ಲಿವೆ. ಇವಲ್ಲದೆ, ೨, ೪, ೬, ೧೮, ೨೨, ೨೪ ಮಾತ್ರೆಗಳ ಷಟ್ಪದಿಯನ್ನೂ ಸೃಷ್ಟಿಸಬಹುದೆಂಬ ಸೂಚನೆ ಪೈ ನೀಡುತ್ತಾರೆ. ಮುಂದುವರಿದು ಈ ವರೆಗೆ ಯಾರೂ

ಗಮನಿಸದ ಷಟ್ಪದಿ ಮತ್ತು ತಾಳ ಸಂಬಂಧವನ್ನು ಕುರಿತು ಸರಿಯಾಗಿ ಚರ್ಚಿಸಿದುದಲ್ಲದೆ, ಮೇಲೆ ಹೇಳಿದವುಗಳಲ್ಲಿ ೨, ೪, ೧೮, ೨೨, ಮಾತ್ರೆಯ ನಾಲ್ಕು ಬಗೆಯ ಷಟ್ಪದಿಗಳು ತಾಳಕ್ಕೆ ಹೊಂದದ ಕಾರಣ ಅವು ಹುಟ್ಟಿಲ್ಲ, ಹುಟ್ಟಲು ಸಾಧ್ಯವೇ ಇಲ್ಲವೆಂದು ನೀಡಿದ ನಿರ್ಣಯ ಸ್ವಾಗತಾರ್ಹವೂ, ವಿನೂತನವೂ ಎನಿಸಿದೆ. ತಾಳಕ್ಕೆ ಒಳಪಡುವ ೬, ೨೪ ಮಾತ್ರೆಯ ಷಟ್ಪದಿಗಳು ಹುಟ್ಟಬಹುದಾದರೂ ಒಂದು ಅತಿ ಹ್ರಸ್ವ, ಇನ್ನೊಂದು ಅತಿ ದೀರ್ಘವೆನಿಸಿ ಪ್ರಾಚೀನರು ಕೈಬಿಟ್ಟಿರಬೇಕೆಂಬ ಪೈಗಳ ಅಭಿಪ್ರಾಯ ಸಮಂಜಸವೆನಿಸಿದೆ. ರನ್ನ ಗದಾಯುದ್ಧದ ಮಾತ್ರಾಸಮಕ ಷಟ್ಪದಿ ಪ್ರಕ್ಷಿಪ್ತವಾಗಿರಬೇಕೆಂದು ಪೈಗಳ ಮತ. ಇದರ ಸ್ಥಳದಲ್ಲಿ ಸ್ವಲ್ಪ ಹೆಚ್ಚುಕಡಿಮೆ ಇದೇ ಪಾಠವನ್ನೊಳಗೊಂಡ ಕಂದಪದ್ಯವೊಂದು ಬೇರೆ ಹಸ್ತಪ್ರತಿಗಳಲ್ಲಿದ್ದು, ದುರ್ಯೋಧನನ ಅವಸಾನ ಸಂದರ್ಭಕ್ಕೆ ಹೊಂದಿಕೊಳ್ಳುವ ಅದನ್ನು ೯ನೆಯ ಆಶ್ವಾಸದಿಂದ ೩ನೆಯ ಆಶ್ವಾಸಕ್ಕೆ ಲಿಪಿಕಾರನೊಬ್ಬ ಪ್ರಮಾದವಶಾತ್ ವರ್ಗಾಯಿಸಿರಬೇಕೆಂದು ಊಹಿಸುತ್ತಾರೆ. ಮತ್ತು ಮಾತ್ರಸಮಕವು ರನ್ನನಪದ್ಯವೆಂದು ಒಪ್ಪಿಕೊಂಡಲ್ಲಿ, ಪ್ರಾಸದೋಷವನ್ನು ತಿದ್ದಿಕೊಳ್ಳುವುದಕ್ಕಾಗಿ ಪ್ರತಿಯೊಂದು ಚರಣದ ಆದಿಯಲ್ಲಿ 'ಹಾ' ಸೇರಿಸಬೇಕೆಂದೂ, ಆಗ ಇದು ಪರಿವರ್ಧಿನಿಯಾಗುವುದೆಂದೂ ತೀರ್ಮಾನಕ್ಕೆ ಬರುತ್ತಾರೆ. ಇವೆಲ್ಲ ಊಹೆಗಳೇ ಸರಿ. ಇದೇ ಸಂದರ್ಭದಲ್ಲಿ ಗದಾಯುದ್ಧದಲ್ಲಿಯ "ಪದ್ಯರಚನೆಯೊಳ್ . . . " ಎಂಬುದು ತ್ರಿಪದಿಯಲ್ಲ, ಕಂದವೆಂದು ಸೂಚಿಸಿರುವುದು ಸರಿಯಾದ ನಿರ್ಣಯವೆಂದೇ ಹೇಳಬೇಕು.

ವ್ಯಾಕರಣ, ನಿಘಂಟು, ಛಂದಸ್ಸುಗಳಲ್ಲಿ ಕೊನೆಯ ಎರಡು ಶಿಸ್ತುಗಳು ನಮ್ಮಲ್ಲಿ ಉಪೇಕ್ಷೆಗೆ ಗುರಿಯಾಗಿವೆ. ನಿಷ್ಪತ್ತಿಶಾಸ್ತ್ರದ ನೆಲೆಯಲ್ಲಿ ಅಂಕುರಿಸುವ ನಿಘಂಟುವಿನ ವಿಷಯದಲ್ಲಿ ಪೈಗಳಿಗೆ ಇದ್ದ ಪರಿಶ್ರಮಕ್ಕೆ ಒಟ್ಟು ಬರವಣಿಗೆ, ಆನುಷಂಗಿಕ ಚರ್ಚೆಗಳು ನಿದರ್ಶನವೆನಿಸಿವೆ. ಛಂದಸ್ಸು ನಮ್ಮಲ್ಲಿ ಮೊದಲಿನಿಂದಲೂ ಅಲಕ್ಷ್ಯಕ್ಕೆ ಗುರಿಯಾಗುತ್ತ ಬಂದಿದೆ. ಶೋಧ-ವ್ಯಾಖ್ಯಾನ ನೆಲೆಗಳಲ್ಲಿ ಅದರ ಅಭ್ಯಾಸ ನಡೆಯುವುದು ಅವಶ್ಯವಿದೆ. ಶೋಧನೆಲೆಯ ಅಭ್ಯಾಸ ಮಾಡಬೇಕೆನ್ನುವವರು ಅವಶ್ಯ ಗಮನಿಸಬೇಕಾದ ಅಂಶಗಳು ಪೈಗಳ ಛಂದೋಲೇಖನದಲ್ಲಿವೆಯೆಂದು ಬೇರೆ ಹೇಳಬೇಕಿಲ್ಲ.

ಇದು, ಹಳಗನ್ನಡ-ನಡುಗನ್ನಡ ಸಂದರ್ಭಗಳಲ್ಲಿ ಪೈಗಳು ನಡೆಸಿದ ಸಂಶೋಧನೆಯ ಪರಿಶೀಲನೆ. ಸಂಶೋಧನೆಗೆ ಮುಖ್ಯವಾದುದು ವ್ಯುತ್ಪತ್ತಿ ಮತ್ತು ಸಂಯೋಜಕ ಪ್ರತಿಭೆ. ಪೈಗಳಲ್ಲಿ ಇವೆರಡೂ ವಿಪುಲ ಪ್ರಮಾಣದಲ್ಲಿವೆ. ಕನ್ನಡ-ಕನ್ನಡೇತರ ಭಾಷಾ ಪರಿಣಿತಿ, ಲಿಖಿತ-ಮೌಖಿಕ ಆಕರ ಸಂಗ್ರಹ, ಯಂತ್ರಪ್ರತಿ-ಹಸ್ತಪ್ರತಿಗಳ ಅಧ್ಯಯನ, ಸಾಹಿತ್ಯ-ಶಾಸ್ತ್ರಗಳ ಅಭಿರುಚಿ, ಶಾಸನ-ಕಾವ್ಯ ವ್ಯಾಸಂಗ ಇತ್ಯಾದಿಗಳು ನಾ ಮುಂದು ತಾ ಮುಂದು ಎಂಬಂತೆ ಪೈಗಳ ಕೈಗಳಲ್ಲಿ ದುಡಿದಿವೆ. ಆಕರ ಸಾಮಗ್ರಿಯ ಬಳಕೆಗೆ ಸಂಬಂಧಪಟ್ಟಂತೆ ಪೈಗಳು ಅಪ್ರತಿಮರೆನಿಸುವುದು, ಈ ಕಾರಣಕ್ಕಾಗಿ.

ಸಂಗ್ರಹಿಸಿದ ಆಕರವನ್ನು ತೀವ್ರ ಪರೀಕ್ಷೆಗೆ ಗುರಿಪಡಿಸಿ, ಅದರ ಪ್ರಾಮಾಣಿಕತೆಯನ್ನು ನಿರ್ಧರಿಸುವಲ್ಲಿ ಪೈಗಳದು ನಿಷ್ಠುರ ಸ್ವಭಾವ. ಶಾಸನ-ಕಾವ್ಯಗಳಲ್ಲಿ ಬರುವ ಕಾಲಸೂಚಿಗಳನ್ನು ಕಣ್ಣುಮುಚ್ಚಿ ಸ್ವೀಕರಿಸದೆ, ಅವುಗಳ ನಿಜಪಾಠಕ್ಕೆ ಇಳಿಯುವಲ್ಲಿ ಈ ಅಂಶವನ್ನು ಗುರುತಿಸಬಹುದು.

ಹೀಗೆ ಆಕರಸಾಮಗ್ರಿಯನ್ನು ಆಧಾರಸಾಮಗ್ರಿಯನ್ನಾಗಿ ಶುದ್ಧೀಕರಿಸಿಕೊಂಡು, ತಾವೇ ಪ್ರಶ್ನೆಹಾಕಿಕೊಳ್ಳುತ್ತ, ತಾವೇ ಉತ್ತರಕೊಡುತ್ತ ಮುನ್ನಡೆಸುವ ಸಂವಾದಶೈಲಿ ಮತ್ತು ಇಂದು

ಭಾಷಾವಿಜ್ಞಾನದಲ್ಲಿ ಅನುಕ್ರಮ ನಂಬರ್ ಕೊಡುತ್ತ ಹಂತ ಹಂತವಾಗಿ ವಿಷಯವನ್ನು ನಿರೂಪಿಸುವಂತೆ ಲೇಖನ ಮುಂದುವರಿಸುವ ನಿರೂಪಣಾಪದ್ಧತಿಗಳು ಪೈ ಪ್ರಬಂಧದ ರಚನಾ ವೈಶಿಷ್ಟ್ಯಗಳಾಗಿವೆ.

ಈ ಬಗೆಯ ಪ್ರಬಂಧ ಚೌಕಟ್ಟಿನಲ್ಲಿ ಸಂಯೋಜಕ ಪ್ರತಿಭೆ ಕೆಲಸಮಾಡುವ ರೀತಿ ಬೆರಗು ಹುಟ್ಟಿಸುತ್ತದೆ. ಸಮಸ್ಯೆಯನ್ನು ಎಲ್ಲ ಮಗ್ಗಲುಗಳಿಂದ ಪರಿಶೀಲಿಸುವ, ಪ್ರಶ್ನೆ-ಉಪಪ್ರಶ್ನೆ, ನೇರಪ್ರಶ್ನೆ-ಪೂರಕಪ್ರಶ್ನೆಗಳಿಂದ ಅದನ್ನು ತರ್ಕಬದ್ಧವಾಗಿ ಶಸ್ತ್ರಕ್ರಿಯೆಗೆ ಒಳಪಡಿಸುವ, ಊಹೆಗಳಿಂದ ಕೊರತೆಯನ್ನು ತುಂಬಿಕೊಳ್ಳುವ, ಫಲಿತಾಂಶವನ್ನು ಅಲ್ಲಲ್ಲಿಯೇ ಹೊರಹಾಕುವ, ಕೊನೆಗೆ ಅದೆಲ್ಲವನ್ನೂ ಏಕಸೂತ್ರದಲ್ಲಿ ಬಂಧಿಸುವ ಚಟುವಟಿಕೆಗಳ ಬರವಣಿಗೆ, ಚಲನಕ್ರಿಯೆಯಲ್ಲಿರುವ ಒಂದು ದೊಡ್ಡ ಯಂತ್ರವನ್ನು ನೆನಪಿಗೆ ತರುತ್ತದೆ. ಇದು ಕಾರಣವಾಗಿ ಕೆಲವೊಮ್ಮೆ ಪಡೆದ ಫಲಿತಾಂಶ ವಿಫಲವೆನಿಸುತ್ತಿದ್ದರೂ ದುಡಿದ ರೀತಿ ಅನುಕರಣೀಯವೆನಿಸುತ್ತದೆ. ನೀಡಿದ ನಿರ್ಣಯದ ತಪ್ಪನ್ನು ಅನ್ಯರು ಎತ್ತಿತೋರಿಸಿದಾಗ, ಏಕೆ ತಮಗೇ ಗೊತ್ತಾದಾಗ ಪೈಗಳು ಕೂಸಿನಂತೆ ನಿರ್ವಿಕಾರವಾಗಿ ಒಪ್ಪಿಕೊಳ್ಳುವ ರೀತಿ, ಆಗ ಬಳಸುವ ಭಾಷೆ ನಾವು ತಲೆದೂಗುವಂತೆ ಮಾಡುತ್ತವೆ. ಈ ಎಲ್ಲ ಗುಣಾಧಿಕ್ಯಗಳ ನಡುವೆಯೂ ಒಂದಿಷ್ಟು ದೌರ್ಬಲ್ಯಗಳೂ ಕಾಣುತ್ತವೆ. ಅವು: ಕೆಲವೊಮ್ಮೆ ಊಹೆ ಅತಿಯಾಗುತ್ತದೆ, ನವೋದಯ ಕಾಲದ ವೈಭವೀಕರಣ ಇಣುಕುತ್ತದೆ; ಲೇಖನವನ್ನು ಅನವಶ್ಯ ಬೆಳೆಸುತ್ತಾರೆ; ಬರವಣಿಗೆಯ ಶೈಲಿ ಜಟಿಲವೆನಿಸುತ್ತದೆ- ಎತ್ತಿಹೇಳಬೇಕಾದ ದೋಷಗಳಿವು.

ಈ ಗುಣದೋಷಗಳ ಮನೋಮಾರ್ಗದಲ್ಲಿ ಹಾಯ್ದುಬಂದ ಪೈಗಳ ಹಳಗನ್ನಡ-ನಡುಗನ್ನಡ ಸಂಶೋಧನೆಗಳಲ್ಲಿ ಬಹಳಷ್ಟು ಇಂದಿಗೂ ಮೌಲಿಕ ಬರಹಗಳಾಗಿದ್ದು, ಅವುಗಳಿಗೆ ಶಾಶ್ವತ ಬೆಲೆಯಿದೆ. ಆದರೆ ಸುದೀರ್ಘತೆ, ಜಟಿಲತೆ ಕಾರಣವಾಗಿ, ಅಭ್ಯಾಸಿ ಅವುಗಳನ್ನು ಪೂರ್ಣ ಓದುವಲ್ಲಿ ದಣಿಯುತ್ತಾನೆ, ಸಂಯಮ ಕಳೆದುಕೊಳ್ಳುತ್ತಾನೆ. ವ್ಯಾಪಕ ವ್ಯುತ್ಪತ್ತಿ ಇಲ್ಲದ ಅಭ್ಯಾಸಿಗಳಿಗಂತೂ ವಿಷಯ ತೆಕ್ಕೆಗೆ ಸಿಗುವುದೇ ಇಲ್ಲ. ಹೀಗಾಗಿ ಪೈ ಫಲಿತಾಂಶಗಳು ಇನ್ನು ಮುಂದೆ ಓದುವವರಿಂದ ದೂರ ಉಳಿಯುವ ಭಯವಿದೆ. ಈ ಅಪಾಯವನ್ನು ತಪ್ಪಿಸುವ ಸಲುವಾಗಿ ಸರಳ ಭಾಷೆಯಲ್ಲಿ, ಒಂದು ಪುಟ ವ್ಯಾಪ್ತಿಯಲ್ಲಿ ಪ್ರತಿಯೊಂದು ಪ್ರಬಂಧದ 'ಸಾರಲೇಖನ'ವನ್ನು ಬರೆದು 'ಪೈ ಸಂಶೋಧನ ವಾಚಿಕೆ'ಯನ್ನು ಸಿದ್ಧಪಡಿಸುವುದು ಇಂದು ಅವಶ್ಯವಿದೆ.

■■

ಆಕರ : ಮಾರ್ಗ ಸಂಪುಟ–೩

೯೧

ಕುವೆಂಪು ಛಂದಸ್ಸು

ಕಾವ್ಯಶಾಸ್ತ್ರ, ಭಾಷಾಶಾಸ್ತ್ರಗಳ ವಿವೇಚನೆ ಇಂದು ಲೋಕವ್ಯಾಪಕವಾಗಿ ನಡೆಯುತ್ತಿರುವಂತೆ ಛಂದಃಶಾಸ್ತ್ರದ ವಿವೇಚನೆ ನಡೆದಿಲ್ಲ; ನಡೆಯುತ್ತಿಲ್ಲ. ಇದಕ್ಕೆ ಕಾರಣ ಪದ್ಯದ ಎರಡು ದ್ರವ್ಯಗಳಾದ ಲಯ ಮತ್ತು ಭಾಷೆಗಳ ಸಂಬಂಧದ ಸ್ಪಷ್ಟ ತಿಳಿವಳಿಕೆಯಿಲ್ಲದಿರುವುದು ಮತ್ತು ಛಂದಶಾಸ್ತ್ರವನ್ನು ವಿವೇಚಿಸುವ ನೆವದಲ್ಲಿ ಶೈಲಿಶಾಸ್ತ್ರ (Stylistics) ವನ್ನೂ ಪ್ರಧಾನವಾಗಿ ಅವಲೋಕಿಸುವುದು. ಈ ಸೂತಕಗಳಿಂದ ಮುಕ್ತರಾದವರು ಮಾತ್ರ ಛಂದಸ್ಸಿನ, ಕುವೆಂಪು ಛಂದಸ್ಸಿನ ಅಭ್ಯಾಸಕ್ಕೆ ನ್ಯಾಯ ಒದಗಿಸಬಲ್ಲರು. ಪದ್ಯ, ಭಾಷೆಯಲ್ಲಿ ಮೈಪಡೆಯುವ ಕಲಾವಿಶೇಷವಾಗಿರುವುದರಿಂದ ಕವಿಯಾದವನು ಭಾಷೆಯನ್ನೇ ಮೂಲದ್ರವ್ಯವನ್ನಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಭಾಷೆಯ ಅರ್ಥವತ್ತಾದ ಘಟಕ, ಪದ (Word). ಪದವು ಶಬ್ದ(Sound), ಅರ್ಥ (Meaning) ಮತ್ತು ಪ್ರಮಾಣ (Measure) ಗಳೆಂಬ ಮೂರು ಲಕ್ಷಣಗಳಿಂದ ಕೂಡಿರುತ್ತದೆ. ಈ ಪದಗಳನ್ನು ಪ್ರಮಾಣಬದ್ಧವಾಗಿ ವಿನ್ಯಾಸಗೊಳಿಸುವಲ್ಲಿ ವಿಶಿಷ್ಟ ಲಯಪ್ರಾಪ್ತವಾಗಿ ಪದ್ಯ ರೂಪಪಡೆಯುತ್ತದೆ. ಪದ್ಯದ ಈ ರೂಪನಿರ್ಮಾಣಕ್ರಿಯೆಯಲ್ಲಿ ಪದಗಳ ಶಬ್ದ(Sound) ಸಂಯೋಜನೆಯಿಂದ ಪದ್ಯಕ್ಕೆ ಶಬ್ದಸೌಂದರ್ಯ, ಅರ್ಥ (Meaning) ಪ್ರಕಾಶನದಿಂದ ಅರ್ಥಸೌಂದರ್ಯ ಪ್ರಾಪ್ತವಾಗುವಂತೆ, ಪ್ರಮಾಣ(ಲಯ)ಬದ್ಧ ವಿನ್ಯಾಸದಿಂದಾಗಿಯೂ ಒಂದು ಬಗೆಯ ಸೌಂದರ್ಯ ಪ್ರಾಪ್ತವಾಗುತ್ತದೆ. ಇದನ್ನು ಛಂದೋಸೌಂದರ್ಯವೆಂದು ಕರೆಯಬಹುದು. ಹೀಗೆ ಛಂದಸ್ಸೂ ಅಭಿವ್ಯಕ್ತಿಗೆ ಸೌಂದರ್ಯವನ್ನುಂಟು ಮಾಡುವುದರಿಂದ "ಶಬ್ದಾಲಂಕಾರ" "ಅರ್ಥಾಂಲಂಕಾರ"ಗಳಂತೆ "ಛಂದೋಲಂಕಾರ"ವೂ ಪದ್ಯಪರಿಕರವಾಗಿದೆ.

ಲಯಾನುವರ್ತಿಯಾದ ಪದಪರಂಪರೆಯಿಂದ ಗಣ, ಗಣಪರಂಪರೆಯಿಂದ ಚರಣ, ಚರಣಪರಂಪರೆಯಿಂದ ಪದ್ಯ (Stanza)- ಪದ (Poem)ಗಳು ಸೃಷ್ಟಿಪಡೆಯುತ್ತವೆ. ಇವುಗಳಲ್ಲದೆ ಈ ಗಣಗಳ ನಿರಂತರ ನಡಿಗೆಯಾದ ಸರಳರಗಳೆ, ಇದರ ಪ್ರವರ್ಧಮಾನರೂಪವಾದ ಮಹಾ ಛಂದಸ್ಸು - ಇವು ಕುವೆಂಪು ಪದ್ಯಪ್ರಪಂಚದ ಪರಿವಾರವೆನಿಸಿವೆ. ಆದುದರಿಂದ ಕುವೆಂಪು ಪದ್ಯ ಸಾಹಿತ್ಯವನ್ನು ಗಣ, ಚರಣ, ಪದ್ಯ-ಪದ, ಸರಳರಗಳೆ, ಮಹಾಛಂದಸ್ಸು ಎಂದು ಬಿಡಿಸಿ ನೋಡಬೇಕಾಗುತ್ತದೆ.

ಗಣ : ಪದ್ಯಪ್ರಪಂಚದಲ್ಲಿ ಗಣವೆಂಬುದು ಅರ್ಥವತ್ತಾದ ಘಟಕ; ಭಾಷಾ ಪ್ರಪಂಚದ Morphemeದಂತೆ. ಪದ್ಯ ಬರೆಯಹೊರಟ ಕವಿಯ ಕೈಯಲ್ಲಿ ಪದಗಳು ವಿಶಿಷ್ಟ

ಲಯಾನುವರ್ತಿಯಾಗುವಲ್ಲಿ ಗಣಗಳು ಆಕಾಪಡೆಯುತ್ತಿದ್ದು, ಈ ಗಣಗಳು ಮತ್ತೆ ತಮ್ಮೊಳಗೇ ಘಟಕಗಳನ್ನು ರೂಪಿಸಿಕೊಳ್ಳುತ್ತವೆ. ಈ ಘಟಕವನ್ನು ನಮ್ಮ ಪ್ರಾಚೀನರು ಅಂಶವೆಂದು ಕರೆದಿದ್ದಾರೆ. ಒಂದು ಗುರುವ್ಯಾಪ್ತಿಯುಳ್ಳ ಈ ಅಂಶವು ಗಣದ ಪ್ರಥಮಸ್ಥಾನದಲ್ಲಿ ಒಂದು ಗುರು ಅಥವಾ ಎರಡು ಲಘು; ಪ್ರಥಮೇತರ ಸ್ಥಾನಗಳಲ್ಲಿ ಒಂದು ಗುರು ಇಲ್ಲವೆ ಒಂದು ಲಘು ಮರ್ಯಾದಿತವಾಗಿರುತ್ತದೆ- ಎಂಬುದು ಪ್ರಾಚೀನರಿಟ್ಟುಕೊಂಡ ನಿಯಮ.


ಆದರೆ ನವೋದಯ ಕಾಲದ ಕವಿಗಳು ಗಣದ ಪ್ರಥಮಸ್ಥಾನದಲ್ಲಿ ಒಂದು ಗುರು ಇಲ್ಲವೆ ಎರಡು ಲಘುಗಳಿಗೆ ಬದಲು ಒಂದು ಲಘುವನ್ನೂ ಪ್ರಥಮೇತರ ಸ್ಥಾನಗಳಲ್ಲಿ ಒಂದು ಗುರು ಇಲ್ಲವೆ ಒಂದು ಲಘುವಿನ ಬದಲು ಎರಡು ಲಘುಗಳನ್ನೂ ಯೋಜಿಸತೊಡಗುವಲ್ಲಿ ಪ್ರಾಚೀನ 'ಅಂಶ' ಪರಿಕಲ್ಪನೆ ಸಡಿಲುಗೊಂಡಿರುವುದರಿಂದ, ಅದನ್ನು ಇಂದು 'ಘಟಕ' ಎಂಬ ಬೇರೊಂದು ಹೆಸರಿನಿಂದ ಕರೆಯುವುದು ಸೂಕ್ತ. ಇದರಿಂದಾಗಿ ಮೂಲದ ಹನ್ನೆರಡು "ಅಂಶಗಣ" (ಬ್ರಹ್ಮ ೪, ವಿಷ್ಣು೮)* ಪ್ರಪಂಚ ತನ್ನ ಸಿವುಡು ಬಿಚ್ಚಿಕೊಂಡು ಒಟ್ಟು ಮೂವತ್ತಾರು "ಘಟಕಗಣ"ಗಳನ್ನು ಹೀಗೆ ಸಾಧಿಸಿಕೊಂಡಿದೆ:

ಎರಡು ಘಟಕದ ಗಣಗಳು :

4 ಮೂಲಗಣಗಳು	5 ಸಾಧಿತ ಗಣಗಳು		
	I ಮೂಲಗಣದ ಪ್ರಥಮ ಘಟಕ ತರಂಗಗೊಳ್ಳುವಲ್ಲಿ ಉಂಟಾದ 2 ಸಾಧಿತ ಗಣಗಳು	II ಮೂಲಗಣದ ಪ್ರಥಮೇತರ ಘಟಕ ನಿಸ್ತರಂಗಗೊಳ್ಳುವಲ್ಲಿ- ಉಂಟಾದ 2 ಸಾಧಿತ ಗಣಗಳು	IIನೆಯ ಗಣದ ಪ್ರಥಮ ಘಟಕ ತರಂಗಗೊಳ್ಳುವಲ್ಲಿ ಉಂಟಾದ 1 ಸಾಧಿತಗಣ
— . — ∪∪ . —	→ ∪S . —	→ — . ∪∪	→ ∪S . ∪∪
— . ∪S ∪∪ . ∪S	→ ∪S . ∪S	→ ∪∪ . ∪∪	
			ಒಟ್ಟು 9 ಘಟಕ ಗಣಗಳು

* 'ರುದ್ರಗಣ'ವೆನ್ನುವುದು ಇರುವ ಬಗ್ಗೆ ನನಗೆ ಸಂದೇಹವಿರುವುದರಿಂದ ಅದನ್ನು ಇಲ್ಲಿ ಕೈಬಿಡಲಾಗಿದೆ.

ಮೂರು ಘಟಕದ ಗಣಗಳು



೯+೨೭ ಈ ಪರಮಾವಧಿ ೩೬ ಘಟಕಗಳನ್ನು ೮ ತರಂಗಗಣ, ೧೬ ಅರ್ಧತರಂಗಗಣ, ೧೨ ನಿಸ್ತರಂಗಗಣ ಎಂದು ಬಿಡಿಸಿ ಹೇಳಬಹುದು.[೧] ಕುವೆಂಪು ಅವರ ಪದ್ಯಪ್ರಪಂಚ ಈ ಮೂವತ್ತಾರು ಗಣಗಳನ್ನೂ ಬಳಸಿಕೊಂಡಿರುವ ಸಾಧ್ಯತೆಯಿದೆ. ಇದಕ್ಕೆ ಹೆಚ್ಚಿನದಾಗಿ ಎರಡಕ್ಕಿಂತ ಹೆಚ್ಚು ಮಾತ್ರೆಗಳ ಘಟಕವನ್ನೂ ರೂಪಿಸಿಕೊಂಡಿರಬಹುದು; ಲಯದ ಏಕತಾನತೆ ಮುರಿಯಲು ಗದ್ಯ ತುಂಡುಗಳನ್ನು ಮಧ್ಯ ಮಧ್ಯ ಸೇರಿಸಿಕೊಂಡಿರಬಹುದು; ತೀ.ನಂ. ಶ್ರೀ. ಸೂಚಿಸುವ ಪದ್ಮಗಣ, ಗಣಪರಿವೃತ್ತಿ, ಪ್ಲುತಗಣ, ಕಂಪಿತಗಣ, ಮೌನ, ಮುಡಿಗಳನ್ನೂ ಬಳಸಿಕೊಂಡಿರಬಹುದು.[೨]

ಕುವೆಂಪು ಅವರು ಸ್ವಾತಂತ್ರ್ಯವಹಿಸಿ ಇಂಥ ಗಣರಚನೆ, ಈ ಗಣಗಳಿಂದ ಚರಣಸಂಯೋಜನೆಗಳನ್ನು ತುಂಬ ಸಂಕೀರ್ಣ ರೀತಿಯಲ್ಲಿ ಸಾಧಿಸಿದುದು ಅದ್ಭುತ ಸಿದ್ಧಿಯೇ ಸರಿ. ಈ ಪ್ರಸಂಗದಲ್ಲಿ ಭಾಷೆಯ ಅರ್ಥಕ್ಕೂ ಪೆಟ್ಟು ತಾಗದಂತೆ ಛಂದಸ್ಸಿನ ಲಯಕ್ಕೂ ಪೆಟ್ಟು ತಾಗದಂತೆ ಕವಿಯಾದವನು ಎಚ್ಚರವಹಿಸಿ ಪದ್ಯ ನಿರ್ಮಿಸಬೇಕಾಗುತ್ತದೆ. ಅಂದರೆ ಭಾಷೆಯನ್ನು ಲಯದಲ್ಲಿ ಹೇಗೆ ದುಡಿಸಿಕೊಳ್ಳುತ್ತಾರೆ ಎನ್ನುವಲ್ಲಿಯೇ ಕವಿಗಳ ಛಂದೋಸಿದ್ಧಿಯಿರುವುದು. ಆದರೆ ಭಾಷೆಗಾಗಿ ಲಯವನ್ನು, ಲಯಕ್ಕಾಗಿ ಭಾಷೆಯನ್ನು ಅಲಕ್ಷಿಸುವುದು ಯಾವುದೇ

---

೧. ನೋಡಿ: ಡಾ. ಎಂ.ಎಂ. ಕಲಬುರ್ಗಿ - ಅಂಶಗಣದ ಇತಿಹಾಸ (ಕರ್ನಾಟಕ ಭಾರತಿ ೮.೨)

೨. ನೋಡಿ : ತೀ.ನಂ.ಶ್ರೀ. - 'ಸಮಾಲೋಕನ'ದಲ್ಲಿಯ ಛಂದಸ್ಸಿನ ಲೇಖನಗಳು

ಕವಿಯ ವೈಫಲ್ಯವನ್ನು ಸೂಚಿಸುತ್ತದೆ. ಶ್ರೀ ಕುವೆಂಪು ಅವರು ಇಂಥಲ್ಲಿ ತುಂಬ ಎಚ್ಚರವಹಿಸುತ್ತಿದ್ದರೂ ಕ್ವಚಿತ್ತಾಗಿ "ನನ್ನಯ್ಯ। ಫಿರ್ದೂಷಿ। ಕಂಬಾರ। ವಿಂದರಿಗೆ" ಎಂಬಲ್ಲಿಯ "ಕಂಬಾರ" ಮತ್ತು "ಮಾಧವ। ಮಧುಸೂ। ದನರವ । ತರಿಸಿದ" ಎಂಬಲ್ಲಿಯ 'ದನ' ಇತ್ಯಾದಿಗಳು ಭಾಷೆಯ ಅರ್ಥವನ್ನು ಅಲಕ್ಷಿಸಿದುದರ ಪರಿಣಾಮಗಳೆನಿಸಿವೆ.

ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ

ಇಲ್ಲಿ ಏನು ಮಾಡಿದರೂ ಲಯಕ್ಕೆ ಹೊಂದದ "ನಮಗಿಂದು" ಎಂಬುದು ಛಂದಸ್ಸನ್ನು ಅಲಕ್ಷಿಸಿದುದರ ಪರಿಣಾಮವೆನಿಸಿದೆ. ಇಂಥಲ್ಲಿ ಪದ್ಯವು ಲಯಗತಿಗೆ ಎರವಾಗಿ ಗದ್ಯಗತಿಗೆ ಉರುಳುತ್ತದೆ. ಹೀಗೆ ಕುವೆಂಪು ಅವರು ಛಂದಸ್ಸಿನ ಲಯವನ್ನು ಕ್ವಚಿತ್ತಾಗಿ ಅಲಕ್ಷಿಸುತ್ತಾರೆ. ಇಂಥ ಪ್ರಯೋಗಗಳು 'ಗಪದ್ಯ'ವಾಗಿ ಬಿಡುತ್ತವೆ.

ಚರಣ : ಚರಣಗಳು ರೂಪಗೊಳ್ಳುವುದು ಗಣಗಳ ವಿನ್ಯಾಸದಿಂದ. ಪದ್ಯರಚನೆಗಾಗಿ ಕೇವಲ ಎರಡು ಘಟಕದ ೯ ಗಣಗಳಲ್ಲಿ ಕೆಲವನ್ನು, ಮೂರು ಘಟಕದ ೨೭ ಗಣಗಳಲ್ಲಿ ಕೆಲವನ್ನು ಕವಿ ಬಳಸಬಹುದು. ಇಲ್ಲವೆ ಎರಡನ್ನೂ ಮಿಶ್ರಗೊಳಿಸಬಹುದು.

ಉದಾ :

೨ ಘಟಕಗಣದ ಚರಣ :

।ಹಾ. ಲನು। ಮಾ. ರಿ.। ಹರಿ. ಯನು। ಕೊ. ಳ್ಳುವ।

೩ ಘಟಕಗಣದ ಚರಣ :

।ಕವ. ನಗ. ಳೆ। ಮಂ. ತ್ರಗ. ಳೆ। ರಸ. ಯೋ. ಗಿ। ಕವಿ. ಋಷಿ. ಗೆ।

೨. ಘಟಕಗಣ ೩ ಘಟಕಗಣಗಳ ಮಿಶ್ರಚರಣ :

।ಇ. ಲ್ಲಿ।ಹುಗ. ಲಿ. ಲ್ಲ।ನಿನ. ಗೆ। ಓ. ಬಿಯ. ದ।

ಇದಕ್ಕೆ ಹೆಚ್ಚಿನದಾಗಿ ಕಂಪಿತಗಣ, ಮುಡಿ ಇತ್ಯಾದಿ ವಿಶೇಷತೆಗಳು ಅನೇಕ ಸಲ ಚರಣ ಮಧ್ಯ ಹೆಣೆದುಕೊಂಡು ನಿಲ್ಲುತ್ತವೆ, ಕುವೆಂಪುವಿನಲ್ಲಿ.

ಕುವೆಂಪು ಪದ್ಯದಲ್ಲಿ ಒಂದು ಚರಣವು ಕಡಿಮೆಯೆಂದರೆ ।ಓ।, ।ಹೇ। ಎಂಬ ಏಕಾಕ್ಷರಿಗಣವಾಗಿ ಮುಗಿಯಬಹುದು. ಹೆಚ್ಚೆಂದರೆ "ಸೃಷ್ಟಿಯ।ಹೃದಯಕೆ। ಪ್ರಾಣಾ।ಗ್ನಿಯ ಹೊಳೆ।ಹರಿಯಿಸಿ।ರವಿ ದಯ।ಮಾಡುವನು" ಎಂಬಂತೆ ಏಳು ಗಣಗಳ ವಿಸ್ತಾರ ಪಡೆಯಬಹುದು. ಈ ಮಧ್ಯದ ಯಾವುದೇ ಉದ್ದಳತೆಯ ಚರಣವನ್ನು ಇವರು ಕಟ್ಟುತ್ತಾರೆ. ಹಾಗೆ ನೋಡಿದರೆ ಲಯದ ನಿರಂತರ ಗತಿಯಾಗಿರುವ ಪದ್ಯದಲ್ಲಿ ಚರಣವೆಂಬುದಕ್ಕೆ ಅರ್ಥವೇ ಇಲ್ಲ. ಕುವೆಂಪು ಅವರ ಸರಳರಗಳೆ, ಮಹಾಛಂದಸ್ಸುಗಳು ಅದಕ್ಕೆ ನಿದರ್ಶನ (ಛಂದಸ್ಸಿನ ನಿಜವಾದ ಅರ್ಥದಲ್ಲಿ ಕುವೆಂಪು ಶ್ರೀ ರಾಮಾಯಣ ದರ್ಶನಂ ಅನೇಕ ಸಾಲುಗಳ ಕಾವ್ಯವಲ್ಲ, ತರಂಗ ತರಂಗವಾಗಿ ಮುಂದುವರಿದ ಒಂದೇ ಸಾಲಿನ ಕಾವ್ಯ).

ಪದ್ಯ-ಪದ : ಆಧುನಿಕರಲ್ಲಿ ಕಾವ್ಯಕಟ್ಟಡ ರೂಪಪಡೆಯುವುದು ೨ ಬಗೆಯಿಂದ. ಒಂದು : "ಏಕರೀತಿಯ ಗಣ" ಇಲ್ಲವೆ "ಮಿಶ್ರಗಣ"ದ ಚರಣಗಳಿಂದ ನಿರ್ದಿಷ್ಟ ಪದ್ಯವನ್ನು (Stanza) ರೂಪಿಸಿಕೊಂಡು, ಆ ಪದ್ಯಗಳನ್ನು ಅಡಕಿಲೇರಿಸುವುದು, ಇದು "ಪದ್ಯಶ್ರೇಣಿ". ಕುವೆಂಪು ರಚಿತ "ಪದ್ಯಶ್ರೇಣಿ"ಯಲ್ಲಿ ಎರಡು, ಮೂರು ಇಲ್ಲವೆ ಅನೇಕ ಪದ್ಯ(Stanza)ಗಳನ್ನು ಅಡಕಲೇರಿಸಿಕೊಂಡ ಸಾಕಷ್ಟು ಪ್ರಯೋಗಗಳು ಸಿಗುತ್ತವೆ. ಎರಡು: ಪದ್ಯಗಳನ್ನು ರೂಪಿಸಿಕೊಳ್ಳದೇ ಇಡಿ ಪದ (Poem)ವನ್ನು ನವ್ಯಕಾವ್ಯದ ಮಾದರಿಯಲ್ಲಿ ಭಾವಕ್ಕೆ ತಕ್ಕಂತೆ ಬೆಳೆಸಿಕೊಂಡು ಹೋದುದು, ಇದು "ಪದಶ್ರೇಣಿ". ಭಾವಕ್ಕೆ ತಕ್ಕಂತೆ ಗಣ ಕಟ್ಟಿಕೊಂಡು ಬೆಳೆಯುವ ಸಾನೆಟ್, ಪ್ರಗಾಥ, ವಚನ ಇತ್ಯಾದಿ ರೂಪದ "ಪದಶ್ರೇಣಿ" ವಿಧಾನ ಕುವೆಂಪುವಿನಲ್ಲಿ ವೈಭವ, ವೈವಿಧ್ಯಗಳಿಂದ ಶೋಭಿಸುತ್ತದೆ. ಉದಾ :

ಪಕ್ಷಿ?
ಅಲ್ತಲ್ತಾ ತರುಚೇತನ, ಚೈತ್ಯಾಕ್ಷಿ
ಗರಿ ತಳೆದಿದೆ ಸಸ್ಯಪ್ರಜ್ಞೆಗೆ ಸೇಂದ್ರಿಯ ಸಾಕ್ಷಿ!

ಹೀಗೆ ಭಾವದೊಂದಿಗೆ ಬೆಳೆದುಕೊಂಡು ಪ್ರವಹಿಸುವ ಈ ಸಣ್ಣ ದೊಡ್ಡ ಲಯಗಳು ಮಹಾಗ್ರಸ್ಥರೆ ಮೊದಲಾದವುಗಳ ಅಸ್ಪಷ್ಟ ಲಯಪ್ರವಹನವನ್ನು ನೆನಪಿಸುತ್ತವೆ. ಕುವೆಂಪು ಅವರಲ್ಲಿ ಸಂಖ್ಯೆ ಮತ್ತು ಸತ್ವದೃಷ್ಟಿಯಿಂದ ಇಂಥ ರಚನೆಗಳೇ ಪ್ರಧಾನವಾಗಿರುವುದಿರಂದ ಅವರ ಮನಸ್ಸು 'ಗೇಯತೆ'ಗಿಂತ 'ಗದ್ಯತೆ'ಗೆ ಹೆಚ್ಚುವಾಲುವುದೆಂಬ ನಿರ್ಣಯಕ್ಕೆ ಬರಬೇಕಾಗುತ್ತದೆ. ಅವರ ಭಾಷೆಯೂ ಗೇಯತೆಗೆ ಭಾರವೆನಿಸುತ್ತದೆ; ಗದ್ಯತೆಗೆ ಸಹಜಗಂಭೀರವೆನಿಸುತ್ತದೆ. ಈ ಕಾರಣಕ್ಕಾಗಿಯೇ ಅವರು ಗೇಯಗುಣದ ಭಾವಗೀತೆಗಳಿಗಿಂತ ಗದ್ಯಗುಣದ ಪದ-ಪ್ರಗಾಥ-ಸರಳಗಳೆ -ಮಹಾಛಂದಸ್ಸುಗಳನ್ನು ಸಮರ್ಥವಾಗಿ ಬರೆಯಬಲ್ಲರು,. ಅವರ ಈ ಬಲ ಮತ್ತು ದೌರ್ಬಲ್ಯಗಳು ಅವರಿಗೇ ಮನವರಿಕೆಯಾಗಿರುವೆಂಬಂತೆ, ತನ್ನ ದಾರಿಯನ್ನು ತಾವು ಹುಡುಕಿಕೊಂಡು ಹರಿಯುವ ನೀರಿನ ಹಾಗೆ ಅವರು ಗೇಯಗುಣದ ಭಾವಗೀತೆಯನ್ನು ಕೈಬಿಡುತ್ತ ಗದ್ಯಗುಣದ ಸರಳರಗಳೆ ಮಹಾಛಂದಸ್ಸುಗಳನ್ನು ಆಶ್ರಯಿಸುತ್ತ ನಡೆದಿರುವುದು. ಒಟ್ಟಿನಲ್ಲಿ, ಬೇಂದ್ರೆಯವರು ಗೇಯಗುಣದ ಭಾವಗೀತೆಯತ್ತ, ಕುವೆಂಪು ಅವರು ಗದ್ಯಗುಣದ ಸರಳರಗಳೆ - ಮಹಾಛಂದಸ್ಸುಗಳತ್ತ ಲೇಸಾಗಿ ನಡೆಯುತ್ತಾರೆ. ಅಂದರೆ ಪದ್ಯವನ್ನು ಬೇಂದ್ರೆಯರು ಸಂಗೀತದ ಸಮೀಪ ನಿಲ್ಲಿಸುತ್ತಾರೆ.- ಸಂಗೀತಕೂಪಕ್ಕೆ ಬೀಳದಂತೆ; ಕುವೆಂಪು ಅವರು ಗದ್ಯದ ಸಮೀಪ ನಿಲ್ಲಿಸುತ್ತಾರೆ - ಗದ್ಯಕೂಪಕ್ಕೆ ಬೀಳದಂತೆ. ಅದಕ್ಕಾಗಿಯೇ ಬೇಂದ್ರೆಯವರ ಪದ್ಯವನ್ನು ಗೇಯಸೌಂದರ್ಯಕ್ಕಾಗಿ ಒಮ್ಮೆ, ಅರ್ಥಸೌಂದರ್ಯಕ್ಕಾಗಿ ಒಮ್ಮೆ ಓದಬೇಕಾಗುವಂತೆ, ಕುವೆಂಪು ಅವರ ಪದ್ಯವನ್ನು ಭಾಷಾಸೌಂದರ್ಯಕ್ಕಾಗಿ ಒಮ್ಮೆ, ಅರ್ಥಸೌಂದರ್ಯಕ್ಕಾಗಿ ಒಮ್ಮೆ ಓದಬೇಕಾಗುತ್ತದೆ. ಇದು ಕುವೆಂಪು ಅವರ ಛಂದಸ್ಸಿನ ಗುಟ್ಟೂ ಹೌದು; ಕವಿತ್ವದ ಗುಟ್ಟೂ ಹೌದು.

ಗದ್ಯಗಂಧಿಯಾಗಿಯೇ ನಡೆವ ಕುವೆಂಪು ಅವರ ಪದ್ಯಗಳ ಅಸ್ಪಷ್ಟ ಲಯಗಳು ಇನ್ನೂ ಅಸ್ಪಷ್ಟತೆಗೆ ಇಳಿಯುವಲ್ಲಿ, ಸ್ವಾಭಾವಿಕವಾಗಿಯೇ ಅವು ನವ್ಯಕಾವ್ಯಕ್ಕೆ ಹೊರಳುತ್ತವೆ. ಉದಾ:

ದಿಗಂತದಿಂ ದಿಗಂತಕೆ ಹಬ್ಬಿದೆ
ವಿಶ್ವವ ತಬ್ಬಿದೆ
ರುಂದ್ರ ರಾತ್ರಿ!
ಸಾಂದ್ರ ತಮಂಧದಿ ಮುಳುಮುಳುಂಗುತೆ ಕರಂಗಿದೋಲಿದೆ ಧಾತ್ರಿ

ವಿಶಾಲವ್ಯೋಮದಿ ತಾರೆಗಳಿಲ್ಲ
ಶಶಿಯಿಲ್ಲ
ಕಾಂತಿಯ ಕಣವಿಲ್ಲ
ಜಗತ್ತು
ಪ್ರಜ್ಞೆಯಿಲ್ಲದೆ ಶೂನ್ಯಮಹಾಶವ ಬಿದ್ದವೊಲಿದ್ದತ್ತು.

ಈ ರಚನೆ ಗೇಯತೆಯ ಕಾಟವನ್ನು ತಪ್ಪಿಸಿಕೊಂಡು ಗದ್ಯಗಂಧಿಯ ನವ್ಯಕಾವ್ಯಲಯಕ್ಕೆ ಹೊರಳಿದುದನ್ನು ಕಾಣಬಹುದು. ಇನ್ನಷ್ಟು ಹೊರಳಿದರೆ ಇದು ಗದ್ಯವೇ ಆಗಿ ಬಿಡುತ್ತದೆ.

ಸರಳ ರಗಳೆ -ಮಹಾಛಂದಸ್ಸು :

ಕನ್ನಡದ ಲಲಿತರಗಳೆಯೇ ಪ್ರತಿಚರಣದ ಆದಿಪ್ರಾಸ, ಯತಿರೂಪದ ಅಂತ್ಯಪ್ರಾಸಗಳನ್ನು ಕಳಚಿಕೊಂಡು ತಡೆಯಿಲ್ಲದೆ ಹರಿಯುವ 'ಸರಳರಗಳೆ'ಯಾಯಿತೆಂದು ಸಾಮಾನ್ಯವಾಗಿ ಎಲ್ಲರ ಹೇಳಿಕೆ. ಆದರೆ ನಾಗವರ್ಮನ ಪ್ರಕಾರ ಲಲಿತರಗಳೆಗೆ ಮೂಲವಾದುದು ಸರಳರಗಳೆ, ಹೆಸರು ಮಾತ್ರ ದಂಡಕ.[೩] ಹರಿಹರ ತನಗೆ ಹಿಂದೆ ಇದ್ದ ಲಯಾತ್ಮಕ ಗದ್ಯವಾದ ಈ ದಂಡಕವನ್ನು ೨೦ ಮಾತ್ರೆಯ ಚರಣಗಳನ್ನಾಗಿ ತುಂಡರಿಸಿ, ಆದ್ಯಂತಪ್ರಾಸ, ಅಂತ್ಯಯತಿ, ಚರಣದ್ವಯ ಚೌಕಟ್ಟಿನಿಂದ ಬಂಧಿಸಿ, ಲಲಿತರಗಳೆಯನ್ನಾಗಿಸಿಕೊಂಡನು. ಆದರೆ ಇಂಗ್ಲೀಷ್ ಬ್ಲಾಂಕ್‌ವ್ಹರ್ಸನ್ನು ಕಾಣುತ್ತಲೇ ಹರಿಹರ ತೊಡಿಸಿದ್ದ ಆ ಬಂಧನಗಳನ್ನು ಹರಿದುಕೊಂಡು - ಆದರೆ ೨೦ ಮಾತ್ರೆಯ ಚರಣವ್ಯಾಪ್ತಿಯನ್ನು ಒಪ್ಪಿ - ಸರಳರಗಳೆಗಳ ಹೆಸರಿನಿಂದ ಮತ್ತೆ ಹೊರಬಂದಿತು, ದಂಡಕ. ಇದಲ್ಲದೆ ಐದು ಮಾತ್ರೆಯ ಲಗಣಗಳಿಗೆ ಹೆಚ್ಚಿನದಾಗಿ ∪s.∪s.∪∪; ∪∪.∪s.∪∪; ∪s. ∪∪.-; ∪s.∪∪.∪∪. ಎಂಬ ಮೂರು ಘಟಕದ ಈ ನಾಲ್ಕು ಹೊಸಗಣಗಳನ್ನು ಯೋಜಿಸಿಕೊಂಡು ತನ್ನ ಏಕತಾನತೆಯನ್ನು ಕಡಿಮೆಮಾಡಿಕೊಂಡಿತು. ಲಲಿತ ರಗಳೆಯಾಗಿದ್ದ ದಂಡಕ ಭಾವನಿರ್ಭರತೆಯ ಕುವೆಂಪು ಅವರಿಗೆ ಸರಳರಗಳೆಯಾಗಿ ಲಭಿಸಿದುದು ಒಂದು ವರವೇ ಸರಿ. ತಮ್ಮ ಮೊದಲಿನ ನಾಟಕಗಳಲ್ಲಿ ಗಣಗಳನ್ನು ಕ್ರಮವಾಗಿ ಜೋಡಿಸಿದ, ಆಮೇಲಿನ ನಾಟಕಗಳಲ್ಲಿ ಗಣಗಳನ್ನು ತುಂಡು ತುಂಡಾಗಿ ಕತ್ತರಿಸಿದ-ಹೊಂದಿಸಿದ ಚಟುವಟಿಕೆಗಳು ಸರಳರಗಳೆಯ ಅಪೂರ್ವಸಿದ್ಧಿಯಾಗಿರುವಂತೆ ಮಹಾಛಂದಸ್ಸಿನ ಪೂರ್ವಸಿದ್ಧತೆಯೂ ಆಗಿವೆ.

ಸರಳರಗಳೆಯ ಸರ್ವತೋಭದ್ರರೂಪ ಮಹಾಛಂದಸ್ಸು. ಇಲ್ಲಿ ಕುವೆಂಪು ಅವರು ಗಣವ್ಯಾಪ್ತಿ, ಗಣಸಂಯೋಜನೆ, ಯತಿಬಳಕೆ, ಖಂಡ (Para) ಯೋಜನೆಗಳಲ್ಲಿ ತುಂಬ ಮುಕ್ತವಾಗಿ ಸಮುದ್ರಸಾಹಸ ಮೆರೆಯುತ್ತಾರೆ. ಆದರೆ ಇಷ್ಟರಿಂದಲೇ ಇದನ್ನು ಸರಳರಗಳೆಯಿಂದ ಭಿನ್ನವಾಗಿಸಿ ಮಹಾಛಂದಸ್ಸು ಎಂದು ಕರೆಯಬಹುದೇ? ಎಂಬುದು ಪ್ರಶ್ನೆ. ಇದಕ್ಕೆ ವಿದ್ವಾಂಸರಿಂದ 'ಬಹುದು' 'ಬಾರದು' ಎಂಬ ಎರಡು ಉತ್ತರಗಳು ಈ ವರೆಗೆ ಬಂದಿವೆ. ನನಗೆ ಮಾತ್ರ ಇದು ಹೆಚ್ಚಿನದಾಗಿ ಮೂರು ಘಟಕದ ನಾಲ್ಕುಗಣ ಮತ್ತು ಮಹಾಶೈಲಿಗಳನ್ನು ಮೈಗೂಡಿಸಿಕೊಂಡು, ಚರಣಗಳಾಗಿ ನಿಂತ ಪ್ರಾಚೀನ ದಂಡಕವೇ ಆಗಿದೆಯೆನಿಸುತ್ತದೆ. ಆದುದರಿಂದ ಸರಳರಗಳೆ (Blank Verse) ಮತ್ತು ಮಹಾಶೈಲಿ(Grand Style)ಗಳ "ಅನಲಾನಿಲ ಸಂಯೋಗ"ದಂಥ ಪ್ರಬುದ್ಧಪ್ರಯೋಗವಾದ ಇದನ್ನು "ಸಂಕೀರ್ಣರಗಳೆ"ಯೆಂದು ಕರೆಯುವುದು ಲೇಸು. ಇಲ್ಲಿಯ "ಸಂಕೀರ್ಣ"

---

೩. ಶ್ರೀ ಕುಕ್ಕಿಲ ಕೃಷ್ಣಭಟ್ಟ-ಛಂದೋಂಬುಧಿ (೧೯೭೫) ಪೀಠಿಕೆ XXX ಮತ್ತು ಪು. ೫೮.

ಎಂಬ ಪದ ಅದರ ಸಂಶ್ಲಿಷ್ಟಗುಣವನ್ನು ತಿಳಿಸಿಕೊಟ್ಟರೆ, "ರಗಳೆ" ಎಂಬ ಪದ ಅದರ ಮೈ-ಮೂಲಗಳನ್ನು ತಿಳಿಸಿಕೊಡುತ್ತದೆ ಎಂಬುದನ್ನು ನೆನೆಯಬೇಕು. ಒಟ್ಟಿನಲ್ಲಿ ಕುವೆಂಪು ಛಂದಸ್ಸು ಪದ್ಯ-ಪದಗಳಲ್ಲಿ ಸಾಧನೆಯ, ಸರಳರಗಳೆಗಳಲ್ಲಿ ಸಿದ್ಧಿಯ, ಸಂಕೀರ್ಣರಗಳೆಯಲ್ಲಿ ಆತ್ಯಂತಿಕ ಸಿದ್ಧಿಯ ಹೆಜ್ಜೆ ಗುರುತುಗಳನ್ನು ಮೂಡಿಸುತ್ತ, ಛಂದಸ್ಸಿನ ತೊಡಕನ್ನು ಬಿಡಿಸಿಕೊಳ್ಳುತ್ತ ನಡೆದುಬಂದಿದೆ. ಹೀಗೆ ಛಂದಸ್ಸಿನ ಬಂಧವನ್ನು ಬಿಡಿಸಿಕೊಳ್ಳುತ್ತ ನಡೆದು ಕೊನೆಗೆ ಛಂದಸ್ಸನ್ನೂ ಮೀರಿ ಬೆಳೆಯುವುದು ಮಹಾಕವಿಯ ಲಕ್ಷಣ. ಹರಿಹರ ರಗಳೆಯಲ್ಲಿ ಮೀರಿ ಬೆಳೆದುದು ಹೀಗೆ, ಕುಮಾರವ್ಯಾಸ ಷಟ್ಪದಿಯಲ್ಲಿ ಮೀರಿ ಬೆಳೆದುದು ಹೀಗೆ, ಕುವೆಂಪು ಸಂಕೀರ್ಣರಗಳೆಯಲ್ಲಿ ಮೀರಿ ಬೆಳೆದುದು ಹೀಗೆ. ಆದುದರಿಂದ ಕುವೆಂಪುವಿನ ಕೈಯಲ್ಲಿ ಅದು ಸರಳರಗಳೆಯೆಂಬ "ಛಂದೋಪ್ರಕಾರ"ವಾಗಿ ಉಳಿಯದೇ, ಸಂಕೀರ್ಣರಗಳೆಯೆಂಬ "ಸಾಹಿತ್ಯಪ್ರಕಾರ"ವಾಗಿ ಬೆಳೆಯಿತು.

ಈ ರೀತಿ ಕುವೆಂಪು ಅವರು ಛಂದಸ್ಸನ್ನು ಅಲಕ್ಷಿಸಿದ ಕವಿಯಲ್ಲ. ಆಶ್ರಯಿಸಿನಿಂತ ಕವಿಯೂ ಅಲ್ಲ; ಅರಗಿಸಿಕೊಂಡು ಬೆಳೆದ ಕವಿಯಾಗಿ ತೋರುತ್ತಾರೆ.

"ವ್ಯಾಕರಣ ಛಂದಸ್ಸಲಂಕಾರ ಸೂತ್ರಂಗಳಿಂ
ಕಬ್ಬವೆಣ್ಣಂ ಕಟ್ಟುವೆಗ್ಗತನಮಂ ಬಿಟ್ಟು
ಹೃದಯದಾವೇಶಮನೆ ನೆಚ್ಚುವ ಮಹಾಕವಿ
ಮಾರ್ಗದಿಂ.........."

ಹೆಜ್ಜೆಹಾಕುವ ಕವಿಯಾಗಿ ಕಾಣುತ್ತಾರೆ.[೪]

■■

ಆಕರ : ಮಾರ್ಗ ಸಂಪುಟ–೨

೪. ಇಲ್ಲಿ ಕುವೆಂಪು ಪದ್ಯಪ್ರಪಂಚದ ಥಿಯಾರಟಿಕಲ್ ಛಂದಸ್ಸಿನ ವಿವೇಚನೆಯೇ ಪ್ರಧಾನವಾಗಿದೆ; ಅಪ್ಲಾಯಿಡ್ ಛಂದಸ್ಸಿನ ವಿವೇಚನೆ ಬೇರೊಂದು ಲೇಖನದ ವಿಷಯ. ಅವರ ಪದ್ಯಗಳಲ್ಲಿಯ ಪ್ರಾಸ ಯತಿಗಳ ವಿಷಯವನ್ನೂ ಇಲ್ಲಿ ವಿವೇಚಿಸಿಲ್ಲ.

೯೨

ವೆಂಕಣ್ಣಯ್ಯನವರ ವಿಮರ್ಶೆ-ಸಂಶೋಧನೆ-ಸಂಪಾದನೆ

ಸಾಹಿತ್ಯ ಕೃತಿನಿರ್ಮಾಣದೊಂದಿಗೆ ಸಾಹಿತ್ಯ ಪಥನಿರ್ಮಾಣ ಕಾರ್ಯವನ್ನು ಪೂರೈಸುವವರು ಮಾತ್ರ ನಿಜವಾದ ಸಾಹಿತಿಗಳು. ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ಬಾಳಿದವರಿಗಿಂತ ಅದರ ಆರಂಭದ ಕಾಲಘಟ್ಟದಲ್ಲಿ ಬಾಳಿದವರ ಮೇಲೆ ಈ ಪಥನಿರ್ಮಾಣದ ಬಹುದೊಡ್ಡ ಜವಾಬ್ದಾರಿ ಇರುತ್ತದೆ. ಮನಬಂದಂತೆ ತುಳಿಯುವುದರ ಮೂಲಕ ಪ್ರಾರಂಭದಲ್ಲಿಯೇ ಹಾದಿ ಹದಗೆಡದಂತೆ ಅವರು ನೋಡಿಕೊಳ್ಳಬೇಕಾಗುತ್ತದೆ. ಹೊಸಗನ್ನಡ ಸಾಹಿತ್ಯ ಪಥದ ಪ್ರಥಮ ಘಟ್ಟಕ್ಕೆ ಸೇರಿದ ವೆಂಕಣ್ಣಯ್ಯನವರು ತಮ್ಮ ಪರಿಮಿತಿಯಲ್ಲಿ ಈ ಜವಾಬ್ದಾರಿಯನ್ನು ನೂರಕ್ಕೆ ನೂರು ಪ್ರಾಮಾಣಿಕವಾಗಿ ನಿರ್ವಹಿಸಿದ್ದಾರೆ.

ಸಾಹಿತ್ಯವನ್ನು ಸೃಜನ ಮತ್ತು ಸೃಜನೇತರವೆಂದು ವರ್ಗೀಕರಿಸಿದಲ್ಲಿ, ಸಾಮಾನ್ಯವಾಗಿ ಅಧ್ಯಾಪಕೇತರ ವ್ಯಕ್ತಿಗಳಿಂದ ಸೃಜನ, ಅಧ್ಯಾಪಕರಿಂದ ಸೃಜನೇತರ ಸಾಹಿತ್ಯ ಹುಟ್ಟುತ್ತದೆ. ಈ ಮೇರೆಗೆ, ಅಧ್ಯಾಪಕರಾಗಿದ್ದ ವೆಂಕಣ್ಣಯ್ಯನವರದು ಸೃಜನೇತರ ಸಾಹಿತ್ಯ ಕೃಷಿಯಾಗಿದ್ದು, ಪ್ರಾರಂಭದ ಘಟ್ಟಕ್ಕೆ ಸೇರಿದ ಇವರು ವಿಶ್ವವಿದ್ಯಾಲಯದ ಅಭ್ಯಾಸಕ್ರಮಕ್ಕೆ ಯೋಗ್ಯ ಅಸ್ತಿಭಾರ ಹಾಕಿದಂತೆ, ವಿಶ್ವವಿದ್ಯಾಲಯದಲ್ಲಿ ಬೆಳೆದು ಬರಬೇಕಾದ ಸಂಶೋಧನೆ, ಸಂಪಾದನೆ, ವಿಮರ್ಶೆ ಮತ್ತು ಅನುವಾದ ಪ್ರಕಾರಗಳಿಗೂ ಸರಿಯಾದ ಅಸ್ತಿಭಾರ ಹಾಕಿದರು.

ವೆಂಕಣ್ಣಯ್ಯನವರು ವಿಮರ್ಶಕರೇ? ಸಂಶೋಧಕರೇ? ಸಂಪಾದಕರೇ? ಅನುವಾದಕರೇ? ಎಂದು ಕೇಳಿದರೆ ತಟ್ಟನೆ ಉತ್ತರಿಸುವುದು ಕಷ್ಟವಾಗುತ್ತದೆ; ಇವರು ಇವುಗಳ ಸಂಚಯವೆಂದು ಒಪ್ಪಬೇಕಾಗುತ್ತದೆ. ಇಂದು ಕನ್ನಡದಲ್ಲಿ ದುಡಿಯುವವರ ಸಂಖ್ಯೆ ಅಧಿಕವಾಗಿದ್ದು, ಒಬ್ಬೊಬ್ಬರು ಒಂದೊಂದು ವಿಷಯದಲ್ಲಿ ಪರಿಣತರಾಗಿ (Specialised) ಬೆಳೆಯುತ್ತಿದ್ದಾರೆ. ದುಡಿಯುವ ಜನರೇ ಇಲ್ಲದ ಅಂದಿನ ಕಾಲದಲ್ಲಿ ಈ ಎಲ್ಲ ಕೆಲಸಗಳನ್ನು ಒಬ್ಬರೇ ಮಾಡಬೇಕಾಗುತ್ತಿತ್ತು. ಅದರಲ್ಲಿಯೂ ಕನ್ನಡ ಸ್ನಾತಕೋತ್ತರ ಶಿಕ್ಷಣದ ಪ್ರಥಮಪ್ರಾಧ್ಯಾಪಕರಾಗಿದ್ದ ಕಾರಣ 'ಮನೆಯ ಹಿರಿಯ ಮಗ'ನಂತೆ ಅಂಥ ಎಲ್ಲ ಕಾರ್ಯಗಳನ್ನು ವೆಂಕಣ್ಣಯ್ಯನವರೇ ಮಾಡಬೇಕಾಗಿ ಬಂತು. ಹೀಗಾಗಿ ೧೯೨೭ರಿಂದ ೧೯೩೯ರ ವರೆಗಿನ ೧೨ ವರ್ಷಗಳ ಒಂದು ಘಟ್ಟದ ಅವಧಿಯಲ್ಲಿ ಬೋಧನ-ಬರವಣಿಗೆಗಳನ್ನು, ಬರವಣಿಗೆಯಲ್ಲಿ ಭಾಷಾಶುದ್ಧಿ ಮೊದಲುಮಾಡಿ ಸೃಜನೇತರ ಸಾಹಿತ್ಯದ ಹಲವು ಪ್ರಕಾರಗಳ ಕೃಷಿಯನ್ನು ಇವರು ಪೂರೈಸಿದರು.

ದುರ್ದೈವದ ಸಂಗತಿಯೆಂದರೆ 'ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಇತರ ಲೇಖನಗಳು' ಗ್ರಂಥದ ಒಂಬತ್ತು ಲೇಖನಗಳನ್ನು ಮಾತ್ರ ವೆಂಕಣ್ಣಯ್ಯನವರು ಬರೆದಿರುವರೆಂಬುದು ಸಾಮಾನ್ಯ ನಂಬಿಕೆ. ಆದರೆ ಈ ಸಂಖ್ಯೆ ೪೦ನ್ನು ಮುಟ್ಟುವ ಸಾಧ್ಯತೆಯಿದೆ. ಇದಕ್ಕೆ ಹೆಚ್ಚಿನದಾಗಿ ಪರಿಷತ್ತಿನ ಪಂಪಭಾರತ, ಓರಿಯಂಟಲ್ ಲೈಬ್ರರಿಯ ಕುಮಾರವ್ಯಾಸ ಭಾರತಗಳ ಸಂಪಾದನ ಕಾರ್ಯದಲ್ಲಿಯೂ ಇವರು ನೆರವು ನೀಡಿದ್ದಾರೆ. ಇವೆಲ್ಲವನ್ನು ಗಮನಿಸಿದಾಗ ಮಾತ್ರ ವೆಂಕಣ್ಣಯ್ಯನವರ ಅಧ್ಯಯನಕ್ಕೆ ಸಮಗ್ರತೆ ಪ್ರಾಪ್ತವಾಗುತ್ತದೆ.

ಬಾಯೊಳಗಿನ ಮಾತಿನಂತೆ ಕೈಯೊಳಗಿನ ಲೆಕ್ಕಣಿಯನ್ನೂ ಪವಿತ್ರವಾಗಿ ಬಳಸಿದವರು ವೆಂಕಣ್ಣಯ್ಯನವರು. ಯಾವುದೇ ವಿಷಯವನ್ನು ಎಲ್ಲ ನಿಟ್ಟಿನಿಂದ ನೋಡುವುದು, ಅದರ ಗುಣದೋಷಗಳನ್ನು ಸರಿಯಾಗಿ ತೂಗುವುದು, ಪೂರ್ಣಪ್ರಮಾಣದಲ್ಲಿ ಅದು ಸಂವಹನಗೊಳ್ಳುವಂತೆ ಅಭಿವ್ಯಕ್ತಿಸುವುದು ವೆಂಕಣ್ಣಯ್ಯನವರ ಬರವಣಿಗೆಯ ಮುಖ್ಯಲಕ್ಷಣವಾಗಿದೆ. ಇದಲ್ಲದೆ ಇವರಿಗೆ ಇದ್ದ ಕನ್ನಡ, ಸಂಸ್ಕೃತ, ಬಂಗಾಲಿ, ತೆಲುಗು, ಇಂಗ್ಲಿಷ್, ತಮಿಳು ಈ ಬಹುಭಾಷಾ ಪರಿಚಯ ಮತ್ತು ಪಾಂಡಿತ್ಯಗಳಿಂದಾಗಿ ಇವರ ಬರೆಹಗಳಿಗೆ ವ್ಯಾಪಕತೆ-ಆಧುನಿಕತೆ ಪ್ರಾಪ್ತವಾಗಿದೆ. ಹೀಗಾಗಿ ಅವರ ಲೇಖನಗಳು ಇಂದಿಗೂ ಆಕರ್ಷಣೆಯನ್ನು ಉಳಿಸಿಕೊಂಡಿವೆ. ನಾವು ಇತ್ತೀಚೆ ಹೇಳುತ್ತಿರುವ, ಇನ್ನೂ ಹೇಳಬೇಕೆಂದಿರುವ ಅನೇಕ ಅಂಶಗಳನ್ನು ವೆಂಕಣ್ಣಯ್ಯನವರು ತಮ್ಮ ಲೇಖನಗಳಲ್ಲಿ ಅಂದೇ ಹೇಳಿದುದು ಆಶ್ಚರ್ಯ ಹುಟ್ಟಿಸುತ್ತದೆ.

೧

ಶುದ್ಧವಿಮರ್ಶೆಯೆನ್ನುವುದು ಹೊಸಗನ್ನಡ ಕೃತಿಗಳಿಗೆ ಅನ್ವಯಿಸುತ್ತದೆ. ಸಂದರ್ಭದಿಂದ ಕಳಚಿಕೊಂಡು ನಮ್ಮ ಕೈಗೆ ದೂರ ಸಾಗಿಬಂದಿರುವ ಹಳಗನ್ನಡ ಕೃತಿಗಳ ವಿಮರ್ಶೆಯಲ್ಲಿ ಸಂಶೋಧನೆಯೂ ಸೇರಿಕೊಳ್ಳುತ್ತದೆ. ಆದುದರಿಂದ ವೆಂಕಣ್ಣಯ್ಯನವರ ವಿಮರ್ಶಾಲೇಖನಗಳನ್ನು ಶುದ್ಧವಿಮರ್ಶೆ, ಸಂಶೋಧನವಿಮರ್ಶೆಯೆಂದು ವರ್ಗೀಕರಿಸಬೇಕಾಗುತ್ತದೆ.

ಪ್ರಬುದ್ಧ ಕರ್ನಾಟಕದ 'ಕಾವ್ಯಾವಲೋಕನ' ವಿಭಾಗಕ್ಕೆ, ಪರಿಷತ್ ಪತ್ರಿಕೆಯ 'ವಿಮರ್ಶಾ' ವಿಭಾಗಕ್ಕೆ ಇವರು ಬರೆದ ಲೇಖನಗಳು ಶುದ್ಧವಿಮರ್ಶೆಯೆನಿಸುತ್ತವೆ. ಆದರೆ ಆ ಕಾಲದ ವಿಮರ್ಶಾಪದ್ಧತಿಯು ಪರಿಚಯ ಇಲ್ಲವೆ ಪ್ರಶಂಸೆಯ ರೂಪದ್ದಾಗಿದ್ದಿತು. ಈ ಪತ್ರಿಕೆಗಳ ಉದ್ದೇಶವೂ ಇದೇ ಆಗಿದ್ದಿತು. ಈ ಕಾರಣಗಳಿಂದಾಗಿ ವೆಂಕಣ್ಣಯ್ಯನವರು ಅವುಗಳಿಗೆ ಬರೆದ ಬಹಳಷ್ಟು ಲೇಖನಗಳು ಪರಿಚಯಗಳಾಗಿ ಉಳಿದಿವೆ. ಮಿಕ್ಕವು ಪ್ರಶಂಸೆಗಳಾಗದಂತೆ ಇವರು ನೋಡಿಕೊಂಡಿದ್ದಾರೆ. ಇಂಥ ಸಂದರ್ಭಗಳಲ್ಲಿ ಬಿ. ಎಂ. ಶ್ರೀ. ಅವರು ಪ್ರಶಂಸೆಯ ಮಾತುಗಳನ್ನು ಬರೆಯುತ್ತಿದ್ದರೆಂಬುದನ್ನು ನೆನೆದರೆ ವೆಂಕಣ್ಣಯ್ಯನವರ ಬರವಣಿಗೆ ಇನ್ನೂ ಮೌಲಿಕವೆನಿಸುತ್ತದೆ. ಇದಕ್ಕೆ ಮಾಸ್ತಿಯವರ 'ಸಾವಿತ್ರಿ' ನಾಟಕದ ವಿಮರ್ಶೆ ಉದಾಹರಣೆ. ಈ ಕೃತಿಯನ್ನು ವಿಮರ್ಶಿಸುತ್ತ "ಗ್ರಂಥದ ಆಕಾರವು ಸಣ್ಣದಾದರೂ ಕಾವ್ಯದ ಯೋಗ್ಯತೆ ಸಣ್ಣದಲ್ಲ" ಎಂದು ಒಂದು ಮಾತಿನಲ್ಲಿ ಅದರ ಮಹತ್ವವನ್ನು ಎತ್ತಿ ಹೇಳುವರಾದರೂ ಇಲ್ಲಿಯ "ಪದ್ಯಗಳ ವಿಷಯದಲ್ಲಿ ಮಾತ್ರ ನಾವು ಸಂತುಷ್ಟಿಯನ್ನು ವ್ಯಕ್ತಪಡಿಸಲಾರದವರಾಗಿದ್ದೇವೆ" ಎಂಬ ಪಿಸುಮಾತು ಮಾಸ್ತಿಯವರ ಒಟ್ಟು ಕವನ ಪ್ರಪಂಚಕ್ಕೆ ಬರೆದ ವಿಮರ್ಶೆಯಾಗಿದೆ. ತೂಗಿ ಹೇಳಿದ ಇಂಥ ಮಾತುಗಳು ಇವರ ಬೇರೆ ಲೇಖನಗಳಲ್ಲಿಯೂ ಕಂಡುಬರುತ್ತವೆ. 'ಸ್ವಪ್ನವಾಸವದತ್ತ ನಾಟಕದ ಸ್ವಪ್ನಾಂಕ' ಮನೋವಿಶ್ಲೇಷಣಾತ್ಮಕ ವಿಮರ್ಶೆಗೆ, 'ಪಂಪನ ಎರಡು ಪದ್ಯಗಳು' ಪ್ರಾಯೋಗಿಕ ವಿಮರ್ಶೆಗೆ ನಿದರ್ಶನವೆನಿಸಿದ್ದು, ಅಷ್ಟು ಹಿಂದೆಯೇ ಬರೆದ ಇವು ಆಧುನಿಕ ದೃಷ್ಟಿಕೋನದ

ಬೆಲೆಯುಳ್ಳ ಬರಹಗಳಾಗಿವೆ. ಅದೇನೇ ಇದ್ದರೂ ವೆಂಕಣ್ಣಯ್ಯನವರ ಕ್ಷೇತ್ರ ಆಧುನಿಕ ಸಾಹಿತ್ಯ ಪರಿಶೀಲನೆಯಲ್ಲ, ಪ್ರಾಚೀನಸಾಹಿತ್ಯ ಪರಿಶೀಲನೆ.

ಮೇಲೆ ಹೇಳಿದ ಪರಿಚಯ ಮತ್ತು ಶುದ್ಧವಿಮರ್ಶೆಗಳನ್ನು ಬಿಟ್ಟರೆ ಇವರು ಪ್ರಾಚೀನ ಕೃತಿಗಳಿಗೆ ಬರೆದ ಸಂಶೋಧನವಿಮರ್ಶೆ ಗಂಭೀರಸ್ವರೂಪದ್ದಾಗಿದೆ. ಈ ವಲಯಕ್ಕೆ ಸೇರುವ ಇವರ ರಚನೆಗಳನ್ನು ಸಾಹಿತ್ಯಕೃತಿಯ ವಿಮರ್ಶೆ ಮತ್ತು ಸಾಹಿತ್ಯಚರಿತ್ರೆಯ ವಿಮರ್ಶೆ ಎಂದು ವರ್ಗೀಕರಿಸಬಹುದು. ಕೃತಿವಿಮರ್ಶಾ ಲೇಖನಗಳಲ್ಲಿ ಪಂಪಭಾರತ, ಕಾದಂಬರಿ, ಬಸವರಾಜದೇವರ ರಗಳೆಗಳನ್ನು ಕುರಿತುವು ಇಂದಿಗೂ ಗಣ್ಯ ಬರಹಗಳಾಗಿವೆ. ಸಾಮಾನ್ಯವಾಗಿ ಪ್ರಾಚೀನಗ್ರಂಥಗಳು ಕಥಾರೂಪದವು. ಕವಿಯಾದವನು 'ಕಥೆ'ಯನ್ನು 'ಕೃತಿ'ಯನ್ನಾಗಿಸುವಲ್ಲಿ ಪಡೆದ ಸಿದ್ಧಿ-ಸೋಲುಗಳನ್ನು ವಿವೇಚಿಸುವುದೇ ಇಲ್ಲಿಯ ಮುಖ್ಯ ಉದ್ದೇಶ. ಆಗ ಕವಿಯ ಮನಸ್ಥಿತಿ, ಯುಗದ ಪರಿಸ್ಥಿತಿಗಳ ವಿಶ್ಲೇಷಣೆಗೂ ಅವಕಾಶವಿರುತ್ತದೆ. ಈ ಎಲ್ಲ ದೃಷ್ಟಿಗಳಿಂದ ಮಾಡಿದ ವಿಮರ್ಶೆಗೆ "ಪಂಪಭಾರತ" ಹೆಸರಿನ ಲೇಖನ ಒಂದು ಮಾದರಿಯಾಗಿದೆ. "ವರ್ಣಕಂ ಕತೆಯೊಳೊಡಂಬಡಂ ಪಡೆಯೆ ಪೇೞ್ವೆ" ಅಂದರೆ ಅರಿಕೇಸರಿಯ ಕಥೆಯನ್ನು ಅರ್ಜುನನ ಕಥೆಯೊಂದಿಗೆ ಸಮನ್ವಯಗೊಳಿಸಿದ ಪಂಪನ "ಪ್ರಯೋಗ"ಕ್ಕೆ ವೆಂಕಣ್ಣಯ್ಯನವರು ವ್ಯಕ್ತಪಡಿಸುವ ಪ್ರತಿಕ್ರಿಯೆ ಹೀಗಿದೆ: "ವ್ಯಾಸಭಾರತವು ಒಬ್ಬ ವೀರಪುರುಷನ ಚರಿತ್ರೆಯಲ್ಲ, ಅದು ಒಂದು ಮನೆತನದ ಇತಿಹಾಸ. ಅದರಲ್ಲಿ ವರ್ಣಿತವಾಗಿರುವ ಪಾಂಡವ ಕೌರವರ ಕಥೆಯಲ್ಲಿ ಒಂದೊಂದು ಸಂದರ್ಭದಲ್ಲಿ ಒಬ್ಬೊಬ್ಬನು ಒಂದೊಂದು ಪ್ರಮುಖಪಾತ್ರವನ್ನು ವಹಿಸುತ್ತಾನೆ. ಪಂಪನು ಈ ಭಾರತ ಕಥೆಯನ್ನು ವಿಕ್ರಮಾರ್ಜುನ ವಿಜಯವನ್ನಾಗಿ ಅಳವಡಿಸಬೇಕಾಯಿತು. ಎಂದರೆ ಕಥೆಯ ಉದ್ದಕ್ಕೂ ಅರ್ಜುನನ ಚರಿತ್ರೆ ಪ್ರಧಾನವಾಗಿ ಕಾಣುವಂತೆ ಮಾಡಬೇಕಾಯಿತು........ ಅದಕ್ಕಾಗಿ ಅವನು ಮಾಡಿದ ಉಪಾಯಗಳಿವು. (೧) ಕಾವ್ಯವನ್ನು ಅರ್ಜುನನ ಜನನ ವರ್ಣನೆಯಿಂದ ಆರಂಭಿಸಿ ಅರ್ಜುನನ ರಾಜ್ಯಾಭಿಷೇಕ ವರ್ಣನೆಯಲ್ಲಿ ಮುಗಿಸಿದ್ದಾನೆ. (೨) ಕಾವ್ಯವನ್ನು ಆಶ್ವಾಸಗಳಾಗಿ ವಿಂಗಡಿಸುವಾಗ ವ್ಯಾಸಭಾರತದ ಪರ್ವ ವಿಭಾಗಗಳನ್ನು ಅನುಸರಿಸದೆ ಅರ್ಜುನನ ಚರಿತ್ರೆಗೆ ಸಂಬಂಧಿಸಿದ ಮುಖ್ಯ ಸಂಗತಿಗಳನ್ನು ಗಮನದಲ್ಲಿಟ್ಟು ಆಶ್ವಾಸರಚನೆ ಮಾಡಿರುವನು........(೩) ಅರ್ಜುನನಿಗೆ ಸಂಬಂಧಿಸಿದ ಕಥಾಭಾಗವನ್ನು ಮಿಕ್ಕ ಕಥಾಭಾಗಗಳಿಗಿಂತಲೂ ಹೆಚ್ಚಾಗಿ ಬೆಳೆಸುತ್ತಾನೆ......" ಇತ್ಯಾದಿಯಾಗಿ ಹೇಳಿದ ಒಂದೊಂದು ಮಾತೂ ಅವರ ಕಾವ್ಯಪರಿಶೀಲನಪ್ರಜ್ಞೆಗೆ ನಿದರ್ಶನವೆನಿಸಿದೆ. ಇಷ್ಟೆಲ್ಲ ಹೇಳಿ ಕೊನೆಗೆ "ಒಟ್ಟಿನಲ್ಲಿ ಪಂಪನು ತನ್ನ ಕಾವ್ಯಕ್ಕೆ ಅರ್ಜುನನನ್ನು ಕಥಾನಾಯಕನನ್ನಾಗಿ ಮಾಡಿದ್ದರ ಫಲವಾಗಿ ಆತನು ಕಥೆಯಲ್ಲಿ ಮಾಡಿರುವ ವ್ಯತ್ಯಾಸಗಳೂ ಹೆಚ್ಚು ಕಡಿಮೆಗಳೂ ಕಾವ್ಯದೃಷ್ಟಿಯಿಂದ ಪಂಪಭಾರತದ ಗೌರವವನ್ನು, ಅದರ ಬೆಲೆಯನ್ನು ಹೆಚ್ಚಿಸತಕ್ಕುವಲ್ಲ, ಅವು ಕಾವ್ಯದ ಹೊರಮೈಗೆ ಸೇರಿವೆ. ಮೂಲಕಥೆಯ ಬಾಹ್ಯಸ್ವರೂಪವನ್ನು...... ಬದಲಾಯಿಸಿವೆ" ಎಂದು ತಮ್ಮ ವಿಮರ್ಶೆ ಬರೆಯುತ್ತಾರೆ. ವೆಂಕಣ್ಣಯ್ಯನವರ ಪರಿಶೀಲನದೃಷ್ಟಿ ಮತ್ತು ವಿಮರ್ಶಾದೃಷ್ಟಿಗಳಿಗೆ ನಿದರ್ಶನವೆನಿಸಿವೆ, ಈ ಎರಡು ಗದ್ಯಖಂಡಗಳು.

ಕಥಾನಾಯಕ ಐತಿಹಾಸಿಕವಾಗಿ, ಭೌಗೋಲಿಕವಾಗಿ ದೂರವಿದ್ದಷ್ಟೂ ಅವನ ಚರಿತ್ರೆ ಪುರಾಣವಾಗುತ್ತ ಹೋಗುತ್ತದೆ. ಹರಿಹರ ಬಸವಣ್ಣನವರಿಗೆ ಎಲ್ಲರಿಗಿಂತ, ಐತಿಹಾಸಿಕವಾಗಿ ಭೌಗೋಲಿಕವಾಗಿ ಸಮೀಪದವ. ಹೀಗಾಗಿ ಅವನು ಎಷ್ಟೇ ಪವಾಡಗಳನ್ನು ಹೇಳಿದ್ದರೂ ಬಸವಣ್ಣನವರ ವ್ಯಕ್ತಿತ್ವ ಮರೆಯಾಗದೆ ಉಳಿದಿದೆ. ಈ ಅಂಶವನ್ನು ವೆಂಕಣ್ಣಯ್ಯನವರು "ಬಸವಣ್ಣನ ಅಲೌಕಿಕ ಕಾರ್ಯಗಳನ್ನೂ ಅದ್ಭುತಗಳನ್ನೂ ಮಹಿಮೆಗಳನ್ನೂ ಹರಿಹರನು ಮೇಲಿಂದ ಮೇಲೆ ಉದ್ಘೋಷಿಸಿದ್ದರೂ, ಆತನ ಸರಳವಾದ ಮಾನವಹೃದಯವನ್ನು ಮಾತ್ರ ಎಲ್ಲಿಯೂ

ಮರೆಮಾಚಿಲ್ಲ"ವೆಂಬ ಮಾತಿನ ಮೂಲಕ ಸರಿಯಾಗಿಯೇ ಗುರುತಿಸಿದ್ದಾರೆ. ಬಸವಣ್ಣನವರು ಹಳೆಯದನ್ನು ಕೆಡಹುವ, ಹೊಸದನ್ನು ಕಟ್ಟುವ ಜೋಡು ಜವಾಬ್ದಾರಿಗಳನ್ನು ನಿರ್ವಹಿಸಿದರೆಂದು ಇಲ್ಲಿ ಬಿಡಿಸಿ ಹೇಳಿದುದು ವಿಶೇಷ ಅಂಶವೇ ಸರಿ. 'ಕರ್ಣಾಟಕ ಕಾದಂಬರಿ'ಯನ್ನು ವಿಮರ್ಶಿಸುತ್ತ ಅನುವಾದ ಕಾರ್ಯದ ಕೆಲವು ರಹಸ್ಯಗಳನ್ನು ತಿಳಿಸುತ್ತ, ವಿಸ್ತೃತ ಮತ್ತು ಸಂಗ್ರಹಾನುವಾದಗಳ ಗುಣದೋಷದ ಹಿನ್ನೆಲೆಯಲ್ಲಿ ನಾಗವರ್ಮನ ಭಾಷಾಂತರ ಪ್ರಯತ್ನವನ್ನು ಹಿಂಜಿ ನೋಡಿದ್ದಾರೆ.

ವಸ್ತುವಿನಂತೆ ಶೈಲಿಯ ವಿಷಯವಾಗಿಯೂ ವೆಂಕಣ್ಣಯ್ಯನವರು ಕೆಲವು ಮೌಲಿಕ ಮಾತುಗಳನ್ನಾಡಿದ್ದಾರೆ. ಬಸವರಾಜದೇವರ ರಗಳೆಯ ಬಗ್ಗೆ ಬರೆಯುತ್ತ "ಕಥೆ ಚಿಕ್ಕದಿದ್ದಾಗ ರಗಳೆ ಸರಿಹೋಗುತ್ತದೆ. ದೊಡ್ಡದಾದಾಗ ಸರಿಹೋಗುವುದಿಲ್ಲ." ಅದಕ್ಕಾಗಿಯೇ ದೊಡ್ಡ ಕೃತಿಗಳಲ್ಲಿ ಹರಿಹರ ಗದ್ಯವನ್ನು ಸೇರಿಸಬೇಕಾಯಿತು. ಇಂಥಲ್ಲಿ "ಗದ್ಯವು ರಗಳೆಗೆ ಹೊಂದಿಕೆಯಾಗುವಂತೆ ಇರಬೇಕಾಗುತ್ತದೆ. ಆದ ಕಾರಣವೇ ಈ ಗದ್ಯದ ಶೈಲಿಯಲ್ಲಿ ಅನೇಕ ವೇಳೆ ರಗಳೆಯ ಧಾಟಿ ಅಥವಾ ಗತಿ ಇರುತ್ತದೆ." "ಭಾಷಾ ವಿಷಯದಲ್ಲಿಯೇ ಆಗಲೀ, ವರ್ಣನೆ ಅಲಂಕಾರ ಮೊದಲಾದವುಗಳ ವಿಷಯದಲ್ಲಿಯೇ ಆಗಲಿ ಹರಿಹರನು ತನ್ನ ಪಾಂಡಿತ್ಯವನ್ನು ತೋರಿಸುವುದಕ್ಕೆ ಪ್ರಯತ್ನಪಟ್ಟ ಹಾಗೆ ಕಾಣುವುದಿಲ್ಲ" ಎಂದು ತೀರ್ಪುನೀಡುತ್ತಾರೆ. "ಸಂಸ್ಕೃತ ಶಬ್ದಗಳನ್ನು ಹೆಚ್ಚಾಗಿ ಉಪಯೋಗಿಸಿರುವ ಆದಿಪುರಾಣವು ಶ್ರಾವ್ಯವಾಗಿರುವುದೂ, ಕನ್ನಡ ಶಬ್ದಗಳನ್ನು ಹೆಚ್ಚಾಗಿ ಉಪಯೋಗಿಸಿರುವ ಭಾರತವು ಹಾಗಿಲ್ಲದಿರುವುದೂ ತಿಳಿದ ಅಂಶವಾಗಿದೆ." ಇವು ಪಂಪನ ಕೃತಿಗಳ ಶ್ರವ್ಯಾಶ್ರವ್ಯತೆಗಳನ್ನು ಕಿವಿಯಾರೆ ಕೇಳಿದಂತೆ ಆಡಿದ ಮಾತುಗಳು. ಬಾಣನ ಕಾದಂಬರಿಯು ಗದ್ಯದಿಂದ ಚಂಪೂಶಿಲ್ಪಕ್ಕೆ ಅವತರಿಸಿದ ಬಗೆಗೆ ವೆಂಕಣ್ಣಯ್ಯನವರ ಪ್ರತಿಕ್ರಿಯೆ ಹೀಗಿದೆ: "ಗದ್ಯದಲ್ಲಿದ್ದುದನ್ನು ಗದ್ಯಪದ್ಯಗಳಲ್ಲಿ ಬರೆದರೆ ಕಂಡ ಹಾಗೆ ವೈವಿಧ್ಯವುಂಟಾಗುತ್ತದೆ......... ಓದುವವನ ದೃಷ್ಟಿಯಿಂದ ಇದು ಒಂದು ಸೌಕರ್ಯವೇ." ಹೀಗೆ ಶೈಲಿಯನ್ನು ಕುರಿತು ಆಡಿದ ಈ ಮಾತುಗಳು ವೆಂಕಣ್ಣಯ್ಯನವರ ಸೂಕ್ಷ್ಮ ಒಳನೋಟವನ್ನು ಪರಿಚಯಿಸುತ್ತವೆ.

ಪ್ರಾಚೀನ ಕೃತಿಗಳನ್ನು ಕುರಿತು ಈ ಬಿಡಿಯಾದ ಸಂಶೋಧನಾತ್ಮಕ ವಿಮರ್ಶೆಯನ್ನಲ್ಲದೆ ವೆಂಕಣ್ಣಯ್ಯನವರು "ಸಾಹಿತ್ಯ ಚರಿತ್ರಾತ್ಮಕ ವಿಮರ್ಶೆ"ಯನ್ನೂ ಬರೆದಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆ: ಪ್ರಾಚೀನ ಕಾಲ, ಹತ್ತನೆಯ ಶತಮಾನದ ಕರ್ನಾಟಕ ಸಾಹಿತ್ಯ ಚರಿತ್ರೆ, ಹನ್ನೆರಡು ಹದಿಮೂರನೆಯ ಶತಮಾನಗಳ ಕನ್ನಡ ಸಾಹಿತ್ಯ - ಈ ಮೂರು ಲೇಖನಗಳನ್ನು ನಮ್ಮ ಸಾಹಿತ್ಯ ಚರಿತ್ರೆಗೆ ಅವರಿಂದ ಸಂದ ಈ ಕಾಲದ ಬೆಲೆಯುಳ್ಳ ಬರಹಗಳಾಗಿವೆ. ಈ ಮೂರನ್ನೂ ಪುಸ್ತಕ ರೂಪದಲ್ಲಿ ಸಂಕಲಿಸಿದರೆ ನಿಸ್ಸಂದೇಹವಾಗಿಯೂ ಅದು ಬಿ.ಎಂ.ಶ್ರೀ. ಅವರ 'ಕನ್ನಡ ಸಾಹಿತ್ಯಚರಿತ್ರೆ'ಗಿಂತ ಉತ್ತಮಕೃತಿಯಾಗುತ್ತದೆ. "ಇತಾಹಿಸವನ್ನು ತಿಳಿಯಲು ಸಾಹಿತ್ಯವೂ, ಸಾಹಿತ್ಯವನ್ನು ತಿಳಿಯಲು ಇತಿಹಾಸವೂ ಸಾಧಕಗಳಾಗಿವೆ" ಎಂಬ ಎಳೆ ಹಿಡಿದು ಈ ಮೂರು ಲೇಖನಗಳನ್ನು ಅಂದಿನ ಸಾಮಾಜಿಕ ಪರಿಸರದ ಹಿನ್ನೆಲೆಯಲ್ಲಿ ವೆಂಕಣ್ಣಯ್ಯನವರು ರೂಪಿಸಿದ್ದಾರೆ. ನವೋದಯಕಾಲದ ರಮ್ಯಪರಿಸರದವರಾದರೂ ರಸದೃಷ್ಟಿಯಿಂದ ದೂರ ಸರಿದು, ಇತಿಹಾಸ ಮತ್ತು ಜನಜೀವನ ದೃಷ್ಟಿಯಿಂದ ನಡೆಸಿದ ಇವರ ವಿಮರ್ಶಾಪ್ರಯತ್ನ ಆಧುನಿಕಕವೆಂದೇ ಹೇಳಬೇಕು.

ಜೈನರು "ಕನ್ನಡದಲ್ಲಿಯೂ ತಮಿಳಿನಲ್ಲಿಯೂ ವಿಶೇಷವಾಗಿ ಗ್ರಂಥರಚನೆ ಮಾಡಿದಂತೆಯೇ ಆಂಧ್ರಭಾಷೆಯಲ್ಲಿಯೂ ಗ್ರಂಥರಚನೆ ಮಾಡದೆ ಹೋಗಿರಲಾರರು. ಆದರೂ ಆಂಧ್ರಸಾಹಿತ್ಯದಲ್ಲಿ ಹುಡುಕಿದರೂ ಒಂದು (ಜೈನ) ಗ್ರಂಥವೂ ದೊರೆಯುವುದಿಲ್ಲ. ಜೈನ ಬೌದ್ಧಮತದ ವಿರೋಧಿಯಾದ ಕುಮಾರಿಭಟ್ಟನು

ಆಂಧ್ರದವನೆಂಬ ಹೇಳಿಕೆಯು ಈ ಸಂದರ್ಭದಲ್ಲಿ ಬೇಕಾದ ವಿವರವನ್ನು ಸೂಚಿಸುತ್ತದೆ. ಆಂಧ್ರ ಜೈನಗ್ರಂಥಗಳಿಗೆ ಬಂದಿರಬಹುದಾದ ಅವಸ್ಥೆಯೇ ಕನ್ನಡ ಬೌದ್ಧಗ್ರಂಥಗಳಿಗೂ ಬಂದಿತೆಂದು ಏಕೆ ನಂಬಬಾರದು?" ಎಂಬ ವಾದಸರಣಿ ತರ್ಕಸಮ್ಮತವೆಂಬುದನ್ನು ಬಿಡಿಸಿ ಹೇಳಬೇಕಿಲ್ಲ. "ಹನ್ನೆರಡನೆಯ ಶತಮಾನದಲ್ಲಿ ಹುಟ್ಟಿದ ನಯಸೇನನ ಧರ್ಮಾಮೃತ, ಬ್ರಹ್ಮಶಿವನ ಸಮಯಪರೀಕ್ಷೆ, ವೃತ್ತವಿಲಾಸನ ಧರ್ಮಪರೀಕ್ಷೆ ಈ ಗ್ರಂಥಗಳನ್ನು ಓದಿದರೆ ಆ ಕಾಲದಲ್ಲಿ ಜೈನರ ಮನಸ್ಥಿತಿಯು ಹೇಗಿದ್ದಿತೆಂದು ಗೊತ್ತಾಗುತ್ತದೆ....... ಆ ಕಾಲದಲ್ಲಿ ಜೈನರಿಗಿದ್ದ ಹೊಟ್ಟೆಯುರಿಯು ಆ ಗ್ರಂಥಗಳಲ್ಲಿ ಪ್ರತಿಫಲಿತವಾಗಿವೆ. ಹತ್ತನೆಯ ಶತಮಾನದಲ್ಲಿ ಹುಟ್ಟಿದ ಜೈನಕಾವ್ಯಗಳನ್ನು ನೋಡಿರಿ. ಆ ಕವಿಗಳ ಸಹಾನುಭೂತಿಯು ಎಷ್ಟು ಆಶ್ಚರ್ಯಕರವಾದುದು.... ಪ್ರಾಬಲ್ಯಸ್ಥಿತಿಯಲ್ಲಿರುವವರು ಇತರರನ್ನು ನೋಡಿ ಏತಕ್ಕೆ ಹೊಟ್ಟೆಕಿಚ್ಚುಪಡುತ್ತಾರೆ?" ಎಂದು ಹೇಳುವುದರ ಮೂಲಕ ಜೈನ ಸಮಾಜದ ಎರಡು ಘಟ್ಟಗಳ ಮನೋಧರ್ಮವನ್ನು ಬಿಚ್ಚುತ್ತಾರೆ. ಕೇವಲ ಕಾವ್ಯಗಳನ್ನಲ್ಲ ಕವಿಗಳನ್ನು, ಆ ಮೂಲಕ ಸಮಾಜದ ಮನಸ್ಸನ್ನು ಓದಿ ಬರೆಯುವ ದೃಷ್ಟಿ ವಿಶೇಷವುಳ್ಳವರು ವೆಂಕಣ್ಣಯ್ಯನವರೆಂದು ಇದರಿಂದ ಸಾಬೀತಾಗುತ್ತದೆ. 'ವೀರಶೈವ ಕವಿಗಳು ಜೈನಕವಿಗಳನ್ನಾಗಲೀ ಜೈನಕವಿಗಳು ವೀರಶೈವಕವಿಗಳನ್ನಾಗಲೀ ತಮ್ಮ ತಮ್ಮ ಗ್ರಂಥಗಳ ಆದಿಯಲ್ಲಿ ಸ್ಮರಿಸಿರುವಂತೆ ಕಂಡುಬರುವುದಿಲ್ಲ. ಆದರೆ ಬ್ರಾಹ್ಮಣಕವಿಗಳು ತಮ್ಮ ಗ್ರಂಥಗಳ ಆದಿಯಲ್ಲಿ ಸ್ಮರಿಸುವ ಪೂರ್ವಕವಿಗಳ ಗೋಷ್ಠಿಯಲ್ಲಿ ಜೈನಕವಿಗಳನ್ನು ಸೇರಿಸುತ್ತಾರೆ." "ವೀರಶೈವಕವಿಗಳು ಜೈನಮತವನ್ನೂ ಬ್ರಾಹ್ಮಣಮತವನ್ನೂ, ಜೈನ ಕವಿಗಳು ವೀರಶೈವ ವೈಷ್ಣವಮತಗಳನ್ನೂ ನಿಂದಿಸಿರುವ ಗ್ರಂಥಗಳೂ ಇವೆ. ಆದರೆ ನಮಗೆ ತಿಳಿದಿರುವುದರಲ್ಲಿ ಬ್ರಾಹ್ಮಣಕವಿ ಯಾವನೂ ವೀರಶೈವ ಮತವನ್ನಾಗಲಿ ಜೈನಮತವನ್ನಾಗಲಿ ತನ್ನ ಕಾವ್ಯದಲ್ಲಿ ನಿಂದಿಸಿದಂತೆ ಕಂಡುಬರುವುದಿಲ್ಲ. ಇದಕ್ಕೆ ಕಾರಣವೇನಿರಬಹುದೋ ನಿರ್ಧರಿಸಲಾಗುವುದಿಲ್ಲ" - ಈ ಬೆಂಕಿಯಂಥ ಸತ್ಯಗಳು ವಿಮರ್ಶೆಗಳಾಗಿ ನಿಂತುಬಿಡದೆ, ವಿಮರ್ಶೆಯನ್ನು ಮುಂದುವರೆಸಲು ನಮಗೆ ಪ್ರಚೋದನೆ ನೀಡುತ್ತವೆ.

ಈ ಪ್ರಸಂಗದಲ್ಲಿ ವೀರಶೈವವನ್ನು ಕುರಿತು ಹೇಳಿದ ಒಂದು ಮಾತು ಮನನೀಯವಾಗಿದೆ. "ವೀರಶೈವಮತದಲ್ಲಿ ಏನೋ ಒಂದು ದೇಶೀಯ ವಿಶೇಷತೆಯಿದೆಯೆಂದು ಭಾಸವಾಗುತ್ತದೆ. ಜೈನಮತವು ಹೊರಗಿನಿಂದ ನಮ್ಮ ದೇಶಕ್ಕೆ ಬಂದದ್ದು.... ವೀರಶೈವಮತವು ನಮ್ಮ ದೇಶದಲ್ಲಿಯೇ ಅವಿರ್ಭಾವವಾದದ್ದಾಗಿರಬಹುದೇ?" ಎಂಬಂಥ ಮಾತುಗಳು ವೆಂಕಣ್ಣಯ್ಯನವರು ಎಲ್ಲರಿಗಿಂತ ಬೇರೆ ದೃಷ್ಟಿಯಿಂದ ಆಲೋಚಿಸುವರೆಂಬುದನ್ನು ಸ್ಪಷ್ಟಪಡಿಸುತ್ತವೆ. ಇಂಥ ವಿವರಣೆಗಳು ಏಕಕಾಲಕ್ಕೆ ಸಂಶೋಧನೆಯೂ ಹೌದು, ವಿಮರ್ಶೆಯೂ ಹೌದು. ಇಷ್ಟೆಲ್ಲ ಸತ್ಯಗಳನ್ನಾಡಿದ ಇವರು "ಹನ್ನೆರಡನೆಯ ಹದಿಮೂರನೆಯ ಶತಮಾನಗಳಲ್ಲಿ. . . . ಯೋಗ್ಯತೆಯಲ್ಲಿಯೂ ಸಂಖ್ಯೆಯಲ್ಲಿಯೂ ಹೆಚ್ಚಾದ ಜೈನರು ಗ್ರಂಥರಚನೆ ಮಾಡಿದ ಕಾಲವನ್ನು ವೀರಶೈವಕಾಲವೆಂದು ಕರೆಯುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ....", "ಮತಗಳನ್ನವಲಂಬಿಸಿ ಕಾಲ ವಿಭಾಗ ಮಾಡುವುದಾದರೆ ಜೈನಕವಿಗಳ ಪ್ರಾಬಲ್ಯಕಾಲವನ್ನು ಹತ್ತನೆಯ ಶತಮಾನದಿಂದ ಹದಿನಾಲ್ಕನೆಯ ಶತಮಾನದ ವರೆಗೂ ಎಂದು ಹೇಳಬೇಕಾಗುತ್ತದೆ" ಎಂಬ, ವಚನ ಸಾಹಿತ್ಯವನ್ನು ಕುರಿತು ಹೇಳಿದ "ಈ ಜಾತಿಯ ಗ್ರಂಥಗಳಲ್ಲಿ ಲಾಲಿತ್ಯಪದ ಮೈತ್ರಿಯೂ, ಅರ್ಥಸ್ವಾರಸ್ಯವೂ ಕಂಡುಬರುವುದಾದರೂ ಇವು ಕೇವಲ ಮತತತ್ವ ಬೋಧನೆಗಾಗಿಯೇ ಹುಟ್ಟಿದುವಾದುದರಿಂದ ಅವು ಸಾಹಿತ್ಯಪ್ರಪಂಚದಲ್ಲಿ ಅತಿ ಮುಖ್ಯವಾದುವೆಂದು ಹೇಳಲಾಗುವುದಿಲ್ಲ" ಎಂಬ ಅಭಿಪ್ರಾಯಗಳನ್ನು ಮಾತ್ರ ಇಂದು ಯಾರೂ ಒಪ್ಪಲಾರರು. ಇವರು ಇಂಥ ಮಾತುಗಳನ್ನು ಏಕೆ ಹೇಳಿದರೋ ಗೊತ್ತಾಗುವುದಿಲ್ಲ. ಒಟ್ಟಿನಲ್ಲಿ ವೆಂಕಣ್ಣನವರ ವಿಮರ್ಶೆಯನ್ನು ಪರಿಚಯ, ಶುದ್ಧ ವಿಮರ್ಶೆ, ಸಂಶೋಧನವಿಮರ್ಶೆ, ಸಾಹಿತ್ಯಚರಿತ್ರಾತ್ಮಕ ವಿಮರ್ಶೆ ಎಂದು ಬಿಡಿಸಿ ಹೇಳಬಹುದಾಗಿದೆ.

ವಿಶ್ವವಿದ್ಯಾನಿಲಯಗಳಲ್ಲಿ ಪ್ರಾರಂಭದ ಬರವಣಿಗೆ ಸಂಶೋಧನಾತ್ಮಕವೇ ಆಗಿದ್ದಿತು. ಕವಿಯ ಕಾಲ-ದೇಶ ನಿರ್ಣಯ, ಕೃತಿಕರ್ತೃ ನಿರ್ಣಯ, ಕೃತಿಸಂಖ್ಯಾ ನಿರ್ಣಯ, ಆಕರಶೋಧ, ಪ್ರಭಾವಶೋಧ- ಹೀಗೆ ಅನೇಕ ಮುಖಗಳಲ್ಲಿ ಸಂಶೋಧನ ಕಾರ್ಯ ನಡೆಸುವುದು ಅಂದಿನ ಸ್ನಾತಕೋತ್ತರ ಕನ್ನಡ ಪ್ರಾಧ್ಯಾಪಕರ ನೇರ ಹೊಣೆಯಾಗಿದ್ದುದರಿಂದ ವೆಂಕಣ್ಣಯ್ಯನವರು ಸಂಶೋಧನಪರ ಲೇಖನಗಳನ್ನೂ ಬರೆದರು. ಕನ್ನಡದಲ್ಲಿ ಬೌದ್ಧರೂ ಗ್ರಂಥಗಳನ್ನು ಬರೆದಿರುವರೇ? ಕವಿರಾಜಮಾರ್ಗದ ಕರ್ತೃ ಯಾರು? ಬಿಜ್ಜಳನು ಜೈನನೇ? ಲಕ್ಷ್ಮೀಶ, ಶಿವತತ್ವಸಾರ- ಈ ಸ್ವತಂತ್ರ ಲೇಖನಗಳೂ ಕಾದಂಬರಿ, ಬಸವರಾಜದೇವರ ರಗಳೆಗಳಿಗೆ ಬರೆದ ಪ್ರಸ್ತಾವನಾ ಭಾಗಗಳೂ ಈ ವರ್ಗಕ್ಕೆ ಸೇರುತ್ತವೆ.

ಈ ಲೇಖನಗಳಲ್ಲಿಯ ಕೆಲವು ಅಂಶಗಳನ್ನು ನಾವು ಇಂದು ಒಪ್ಪದಿದ್ದರೂ ಅಂದಿನ ಪರಿಸ್ಥಿತಿಯಲ್ಲಿ ವೆಂಕಣ್ಣಯ್ಯನವರು ನೂರಕ್ಕೆ ನೂರು ಪ್ರಾಮಾಣಿಕವಾಗಿ ಬರೆದ ಇವುಗಳನ್ನು ಓದುವಾಗಲೆಲ್ಲ "ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ" ಎಂಬ ಸೂಕ್ತಿ ಪದೇ ಪದೇ ನೆನಪಾಗುತ್ತದೆ. ಸಂಶೋಧನೆಯಲ್ಲಿ ಊಹೆಗೂ ಒಂದು ಸ್ಥಾನವಿದೆ. ಕನ್ನಡದಲ್ಲಿ ಬೌದ್ಧರೂ ಗ್ರಂಥಗಳನ್ನು ಬರೆದಿದ್ದಾರೆಯೇ? ಎಂಬ ಅವರ ಊಹೆ ಇಂದಿಗೂ ತಳ್ಳಿಹಾಕಲೂ ಆಗದ, ಸ್ವೀಕರಿಸಲೂ ಆಗದ ನಿಜವಾದ ಊಹೆಯಾಗಿ ಉಳಿದಿದೆ. ಕವಿರಾಜಮಾರ್ಗದ ಕರ್ತೃ, ಕಾದಂಬರಿಯ ನಾಗವರ್ಮ ಮತ್ತು ಆತನ ಆಶ್ರಯದಾತರನ್ನು ಕುರಿತ ಲೇಖನಗಳು ಸಾಮಗ್ರಿಮುಖಿ ಸಂಶೋಧನೆಗೆ ಉದಾಹರಣೆಯೆನಿಸಿವೆ. ಲಭ್ಯಸಾಮಗ್ರಿ, ವಿದ್ವಾಂಸರ ಅಭಿಪ್ರಾಯಗಳನ್ನು ಸಮಗ್ರವಾಗಿ ಕ್ರೋಡೀಕರಿಸಿ ತಮ್ಮ ನಿರ್ಣಯವನ್ನು ನೀಡುವ ಈ "ಸಾಮಗ್ರಿಮುಖಿ ಸಂಶೋಧನಪದ್ಧತಿ"ಯನ್ನು ಕನ್ನಡದಲ್ಲಿ ರೂಢಿಸಿದವರಲ್ಲಿ ವೆಂಕಣ್ಣಯ್ಯನವರೂ ಒಬ್ಬರು. ಹೀಗೆ ಸಾಮಗ್ರಿಮುಖಿ ಸಂಶೋಧನಪದ್ಧತಿ ಪ್ರಧಾನವಾಗಿದ್ದ ಅಂದಿನಕಾಲದಲ್ಲಿಯೂ 'ವ್ಯಾಖ್ಯಾನಮುಖಿ' ಸಂಶೋಧನೆಯ ಹೆಜ್ಜೆಗುರುತುಗಳೂ ವೆಂಕಣ್ಣಯ್ಯನವರ ಬರವಣಿಗೆಯಲ್ಲಿ ಕೆಲವೊಮ್ಮೆ ತೋರಿಬರುವುದು ಅವರ ಸಂಶೋಧನೆಯ ಆಧುನಿಕತೆಗೆ ಸಾಕ್ಷಿಯಾಗಿದೆ. ಲಕ್ಷ್ಮೀಶನನ್ನು ಕುರಿತ ಇವರ ಲೇಖನ ಇದಕ್ಕೆ ಉದಾಹರಣೆಯಾಗಿದ್ದು, ಇದೇ ವಿಷಯವನ್ನು ಕುರಿತ ಗೋವಿಂದ ಪೈ ಅವರ ಲೇಖನ 'ಸಾಮಗ್ರಿಮುಖಿ ಸಂಶೋಧನೆ'ಯಾಗಿರುವುದು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ಬಸವರಾಜದೇವರ ರಗಳೆಯ ಪ್ರಸ್ತಾವನೆ, ಕಾದಂಬರಿಯ ಪ್ರಸ್ತಾವನೆ, ಶಿವತತ್ವಸಾರ ಹೆಸರಿನ ಲೇಖನಗಳನ್ನು ವೀರಶೈವ ಪುರಾಣಗಳೊಂದಿಗೆ, ಸಂಸ್ಕೃತ-ತೆಲುಗು ಕೃತಿಗಳೊಂದಿಗೆ ನಡೆಸಿದ "ತುಲನಾತ್ಮಕ ಸಂಶೋಧನ"ಗಳೆನಿಸಿವೆ.

ಸಂಶೋಧಕನಿಗೆ ಇರಬೇಕಾದ ಮುಖ್ಯಗುಣ ಪ್ರಾಮಾಣಿಕತೆ. ಬಿಜ್ಜಳನು ಜೈನನಲ್ಲವೆಂದು ತಾವು ಅನೇಕ ಹೊಸ ಆಕರ-ಆಧಾರಗಳಿಂದ ಪ್ರತಿಪಾದಿಸಿದ್ದರೂ ತಮಗಿಂತ ಮೊದಲು ತೆಲುಗು ವಿದ್ವಾಂಸ ವೇಟೂರು ಪ್ರಭಾಕರಶಾಸ್ತ್ರಿ, ಕನ್ನಡ ವಿದ್ವಾಂಸ ಡಾ. ಎ. ವೆಂಕಟಸುಬ್ಬಯ್ಯನವರು ಈ ಅಂಶ ಗುರುತಿಸಿದುದನ್ನು ಪ್ರಾಮಾಣಿಕವಾಗಿ ಎತ್ತಿ ಹೇಳಿದ್ದಾರೆ. ಇಂಥ ಪ್ರಾಂಜಲ ಮನಸ್ಸು ಇವರ ಎಲ್ಲ ಲೇಖನಗಳಲ್ಲಿಯೂ ಕಂಡುಬರುತ್ತದೆ.

ಬಿ.ಎಂ.ಶ್ರೀ. ಅವರೊಂದಿಗೆ ಸೇರಿ ಕನ್ನಡ ಕೈಪಿಡಿಯಲ್ಲಿ 'ಕನ್ನಡ ಭಾಷೆಯ ಚರಿತ್ರೆ' ಎಂಬ ಭಾಗವನ್ನು ವೆಂಕಣ್ಣನವರು ಬರೆದಿದ್ದಾರೆ. ಇದರಲ್ಲಿ ಯಾರ ಪಾಲು ಎಷ್ಟು? ಹೇಳುವುದು ಕಷ್ಟ. ಬರವಣಿಗೆಯ ಸಂಯಮ-ಸರಳತೆಗಳನ್ನು ನೋಡಿದರೆ ಈ ಭಾಗದಲ್ಲಿ ವೆಂಕಣ್ಣಯ್ಯನವರ ಪಾಲು ಬಹಳ ಇರಬಹುದೆನಿಸುತ್ತದೆ.

ವ್ಯಾಕರಣದಿಂದ ಭಾಷಾಶಾಸ್ತ್ರ ಭಿನ್ನವಾದುದೆಂದೂ, ಕನ್ನಡಭಾಷೆಗೆ ಚರಿತ್ರೆ ಬರೆಯಬಹುದೆಂದೂ ಇಲ್ಲಿ ತೋರಿಸಿಕೊಟ್ಟಿದ್ದಾರೆ. ಇಲ್ಲಿ ಬಳಸಿದ ಅವಸ್ಥಾಭೇದ-ಪ್ರಾಂತಭೇದ, ವ್ಯಾವಹಾರಿಕ ಭಾಷೆ-ಗ್ರಾಂಥಿಕಭಾಷೆ ಇತ್ಯಾದಿ ಪಾರಿಭಾಷಿಕ ಪದ ಮತ್ತು ವಿವೇಚನೆಗಳು ನಮ್ಮ ಭಾಷಾಚರಿತ್ರೆ ಬರವಣಿಗೆಗೆ ಹೊಸದಾರಿಯನ್ನು ತೆರೆದುಕೊಟ್ಟಿವೆ. ಇಲ್ಲಿ ಎತ್ತಲಾದ ಸಮಸ್ಯೆಗಳು, ನೀಡಲಾದ ಸಮಾಧಾನಗಳು ಇಂದಿಗೂ ಗಮನಾರ್ಹವಾಗಿವೆ. ಕನ್ನಡ ಭಾಷಾಚರಿತ್ರೆಗೆ ಸಂಬಂಧಪಟ್ಟಂತೆ ಇತ್ತೀಚೆ ನಡೆದಿರುವ ಪ್ರೌಢ ಅಧ್ಯಯನದಿಂದಾಗಿ ಇಲ್ಲಿಯ ಕೆಲವು ವಿಚಾರಗಳು ಬಿದ್ದುಹೋಗಿದ್ದರೂ ಒಟ್ಟು ವಿವೇಚನೆ ಇನ್ನೂ ಗಟ್ಟಿ ಬರವಣಿಗೆಯೆಂದೇ ಹೇಳಬೇಕು. ಸಾಮಾನ್ಯವಾಗಿ ಪ್ರತಿಯೊಂದು ಪುಟದ ಅಡಿಯಲ್ಲಿ ಕೊಟ್ಟಿರುವ ಟಿಪ್ಪಣಿಗಳು ಈ ಭಾಗದ ನಿಖರತೆಗಾಗಿ ಲೇಖಕರು ವಹಿಸಿದ ಎಚ್ಚರವನ್ನು ವ್ಯಕ್ತಪಡಿಸುತ್ತವೆ.

೩

ಪ್ರಾಚೀನ ಗ್ರಂಥಪ್ರಕಟನ ಕಾರ್ಯವನ್ನು ಪಶ್ಚಿಮಪಂಡಿತರು ಪ್ರಾರಂಭಿಸಿದರೂ ಕನ್ನಡದಲ್ಲಿ ಅದನ್ನು ಒಂದು ಶಾಸ್ತ್ರಶಿಸ್ತಿಗೆ ಒಳಪಡಿಸಿ, ಗ್ರಂಥಸಂಪಾದನಯುಗದ ನಿರ್ಮಾಪಕರಾದವರು ವೆಂಕಣ್ಣಯ್ಯ ಮತ್ತು ಕೃಷ್ಣಶಾಸ್ತ್ರಿಗಳು. ಈ ಮೊದಲು ಪಾಠಾಂತರ ನಿರ್ಣಯದಲ್ಲಿ ಚಚ್ಚರವಿರಲಿಲ್ಲ; ಪ್ರಸ್ತಾವನೆ-ಅನುಬಂಧಗಳು ಮಹತ್ವದ ಭಾಗಗಳಾಗಿ ಬೆಳೆದಿರಲಿಲ್ಲ. ಇವುಗಳನ್ನೊಳಗೊಂಡು ಉನ್ನತವಿಮರ್ಶೆಗೆ ನಿದರ್ಶನವೆನಿಸಿವಂತೆ, ಗ್ರಂಥಸಂಪಾದನೆಗೆ ಮಾದರಿಯೆನಿಸುವಂತೆ ಪ್ರಾಚೀನ ಕೃತಿಗಳನ್ನು ಪ್ರಕಟಿಸಿದ ಪ್ರಥಮಕೀರ್ತಿ ವೆಂಕಣ್ಣಯ್ಯನವರಿಗೆ ಸಲ್ಲುತ್ತದೆ. ಬಸವರಾಜದೇವರ ರಗಳೆ (೧೯೩೮), ಕರ್ನಾಟಕ ಕಾದಂಬರೀ ಸಂಗ್ರಹ (೧೯೩೧) - ಇವು ವೆಂಕಣ್ಣಯ್ಯನವರು ಸಂಪಾದಿಸಿದ ಕೃತಿಗಳು. ಇವುಗಳಲ್ಲಿ ಬಸವರಾಜದೇವರ ರಗಳೆ, ಕಾದಂಬರಿಗಳಿಗೆ ಮಾತ್ರ ಇವರ ಪ್ರಸ್ತಾವನೆ ಇದೆ. ಸಿದ್ಧರಾಮಚರಿತ್ರೆಗೆ ಜೊತೆ ಸಂಪಾದಕ ಡಿ.ಎಲ್.ಎನ್. ಅವರು, ಹರಿಶ್ಚಂದ್ರ ಕಾವ್ಯಸಂಗ್ರಹಕ್ಕೆ ಜೊತೆ ಸಂಪಾದಕ ಎ.ಆರ್. ಕೃ. ಅವರು ಪ್ರಸ್ತಾವನೆ ಬರೆದಿದ್ದಾರೆ. ಕರ್ನಾಟಕ ಕಾದಂಬರಿಯನ್ನು ಸಂಗ್ರಹಿಸುವಲ್ಲಿ ತಾವು ಅನುಸರಿಸಿದ ವಿಧಾನದ ಬಗ್ಗೆ ಬರೆಯುತ್ತ "ಅಲ್ಲಲ್ಲಿ ಪದ್ಯಗಳಲ್ಲಿರುವ ಕೆಲವು ಪದಗಳನ್ನು ಮಾತ್ರ ಆರಿಸಿ ಜೋಡಿಸಿ ಗದ್ಯವಾಗಿ ಬರೆದಿದೆ" ಎಂದು ಹೇಳಿದ್ದು, ಈ ವಿಧಾನ ಸರಿಯಲ್ಲ. ಬಸವರಾಜದೇವರ ರಗಳೆಯಲ್ಲಿ ಅವರು ಸ್ವೀಕರಿಸಿದ 'ಕಂಬಳಿಯ ನಾಗದೇವ' ಎಂಬುದರ ನಿಜಪಾಠ 'ಸಂಬೋಳಿಯ ನಾಗದೇವ' ಎಂದು ಇತ್ತೀಚೆ ವಿದ್ವಾಂಸರು ನಿರ್ಣಯಿಸಿದ್ದಾರೆ. ಬಸವರಾಜದೇವರ ರಗಳೆಯ ಪಾಠಪರಿಷ್ಕರಣಕ್ಕೆ ಇನ್ನೂ ಅವಕಾಶವಿದೆ. ಸಿದ್ಧರಾಮಚರಿತೆಯ ಸಂಧಿ ವಿಷಯವಾಗಿ ಕಂಡುಬರುವ ಸಂದೇಹವನ್ನು ಇವರು ಗಮನಿಸಿದಂತಿಲ್ಲ. ಈ ಸಣ್ಣಪುಟ್ಟದೋಷಗಳನ್ನು ಬದಿಗಿಟ್ಟು ನಾವು ವೆಂಕಣ್ಣಯ್ಯನವರ ಸಂಪಾದನ ಕ್ರಮವನ್ನು ಮೆಚ್ಚಲೇಬೇಕು.

ಒಂದು ವ್ಯಸನದ ಸಂಗತಿಯೆಂದರೆ ವೆಂಕಣ್ಣಯ್ಯನವರ ಪರೋಕ್ಷದಲ್ಲಿ ಮತ್ತೆ ಮತ್ತೆ ಮುದ್ರಣಗೊಂಡ ಬಸವರಾಜದೇವರ ರಗಳೆ ತನ್ನ ಪರಿಷ್ಕರಣ ಗುಣಮಟ್ಟವನ್ನು ಕಳೆದುಕೊಳ್ಳುತ್ತ ನಡೆದಿದೆ. ಸಂಪಾದಕ ವೆಂಕಣ್ಣಯ್ಯನವರಿಗಿದ್ದ ವಿದ್ವತ್ತಿನ ಕಳಕಳಿ ಅದರ ಮರುಮುದ್ರಣದ ಪ್ರಕಾಶಕರಿಗಿಲ್ಲದುದೇ ಇದಕ್ಕೆ ಕಾರಣವೆಂದು ಬೇರೆ ಹೇಳಬೇಕಿಲ್ಲ.

ಒಟ್ಟಿನಲ್ಲಿ ವಿಮರ್ಶೆಯೇ ಇರಲಿ, ಸಂಶೋಧನೆಯೇ ಇರಲಿ. ವೆಂಕಣ್ಣಯ್ಯನವರ ಲೇಖನದ ವಿಷಯ ಪರಿಪೂರ್ಣ, ಭಾಷೆ ಅತ್ತ ಸಾಲಂಕೃತವೂ ಅಲ್ಲ; ಇತ್ತ ಶುಷ್ಕವೂ ಅಲ್ಲ, ಸರಳ. ಓದುತ್ತಲೇ ಆಶಯವನ್ನು ಬಿಚ್ಚಿತೋರಿಸುತ್ತ ಹೋಗುವ ನಿರೂಪಣೆ ಅವರದು. ಹೀಗಾಗಿ ಅವರ ಬರವಣಿಗೆಯನ್ನು ಒಮ್ಮೆ ಭಾಷೆಗಾಗಿ,

ಇನ್ನೊಮ್ಮೆ ವಿಷಯಕ್ಕಾಗಿ ಓದಬೇಕಾಗಿಲ್ಲ. ವಿಷಯ ಸ್ಪಷ್ಟತೆಗಾಗಿ ಅಲಂಕಾರ ಬಳಸಿದರೂ ಅದು ಅಲಂಕಾರವೆನಿಸುವುದಿಲ್ಲ. "ಕವಿಗೆ ಮುಖ್ಯನಾದವನು ಅರ್ಜುನ, ಕರ್ಣನು ಹತ್ತರಲ್ಲಿ ಹನ್ನೊಂದು. ಆದರೆ ಕಥೆ ಬೆಳೆಯುತ್ತಾ ಹೋದಹಾಗೆಲ್ಲ ಆಕಾಶದ ಯಾವುದೋ ಒಂದು ಮೂಲೆಯಲ್ಲಿದ್ದ ಅಂಗೈ ಅಗಲದ ಮೋಡವು ಕಾಲಕ್ರಮದಲ್ಲಿ ಆಕಾಶವನ್ನೆಲ್ಲ ತಾನೇ ತಾನಾಗಿ ವ್ಯಾಪಿಸಿ ಬಿಡುವಂತೆ ಕರ್ಣನ ಪಾತ್ರವು ಕವಿಯ ಮನಸ್ಸನ್ನೆಲ್ಲ ವ್ಯಾಪಿಸಿ ಬಿಡುತ್ತದೆ." ಅಲಂಕಾರ ಅಭಿವ್ಯಕ್ತಿಯಲ್ಲಿ ಕರಗಿ ಪಾಕವಾದುದಕ್ಕೆ ಉದಾಹರಣೆಯಿದು.

ವೆಂಕಣ್ಣಯ್ಯನವರು ಬದುಕಿದುದು ನವೋದಯಕಾಲದ ರಮ್ಯಪರಿಸರದಲ್ಲಿ. ಭಾಷೆಯನ್ನು ಶೃಂಗರಿಸುವ, ವಿಷಯವನ್ನು ವೈಭವೀಕರಿಸುವ ಈ ಕಾಲದಲ್ಲಿ ಇವರ ಬರವಣಿಗೆ ಇವೆರಡರಿಂದ ಮುಕ್ತವಾದುದು ಒಂದು ವೈಶಿಷ್ಟ್ಯ. ಆದುದರಿಂದ ಸಂಶೋಧಕರಾದರೂ ಗೋವಿಂದ ಪೈಗಳಂತೆ ಭಾಷೆ ಜಟಿಲವಾದುದಲ್ಲ; ವಿಮರ್ಶಕರಾದರೂ ಬಿ.ಎಂ.ಶ್ರೀ. ಅವರಂತೆ ವಿಷಯ ವೈಭವೀಕರಣದ್ದಲ್ಲ, ಸಂಪಾದಕರಾದರೂ ರಾಮಾನುಜೈಯಂಗಾರರಂತೆ ಪ್ರಕಾಶನ ಆತುರವಿಲ್ಲ. ಹೀಗಾಗಿ ಇವರ ಬದುಕಿನಂತೆ ಬರವಣಿಗೆಯೂ ಭಾವಾವೇಶದ್ದಲ್ಲ; ಒಂದರ್ಥದಲ್ಲಿ ಭಾವ ಹದಗೊಂಡ ರಸಾವೇಶದ್ದು.

■■

ಆಕರ : ಮಾರ್ಗ ಸಂಪುಟ-೧

೯೩

ತೀ. ನಂ. ಶ್ರೀ. ಛಂದೋವಿಚಾರ : ಪರಿಶೀಲನೆ

ತೀ.ನಂ. ಶ್ರೀ ಬದುಕಿದ್ದು ಹೊಸಗನ್ನಡ ಅನಾವರಣಗೊಂಡು, ಹೊಸ ಹೊಸ ಪ್ರಯೋಗಗಳು ಆಕಾರ ಪಡೆಯುತ್ತಲಿದ್ದ ಕಾಲದಲ್ಲಿ. ಈ ಸಂದರ್ಭದ ವ್ಯಕ್ತಿಗಳಿಗೆ ಅನೇಕ ಅವಕಾಶಗಳಿರುತ್ತವೆ. ಆಹ್ವಾನಗಳೂ ಇರುತ್ತವೆ. ಈ ಎರಡೂ ಆಯಾಮಗಳಿಗೆ ಸರಿಯಾಗಿ ಸ್ಪಂದಿಸಿದವರು, ತೀ. ನಂ. ಶ್ರೀ.

ಕನ್ನಡದಲ್ಲಿ ತೀ. ನಂ. ಶ್ರೀ. ಮಾಡಿದ ಕೆಲಸ ಎರಡು ಬರೆಯಾಗಿದೆ: ಹಳೆ ವಿಷಯವನ್ನು ಹೊಸ ದೃಷ್ಟಿಯಿಂದ ಪರಾಮರ್ಶಿಸಿದುದು; ಹೊಸ ವಿಷಯವನ್ನು ವಿದ್ವತ್ ಲೋಕಕ್ಕೆ ಪರಿಚಯಿಸಿದುದು. ಛಂದಸ್ಸಿಗೆ ಸಂಬಂಧಪಟ್ಟಂತೆ ಇವರು ಮಾಡಿದ್ದು, ಹಳೆಯ ಶಾಸ್ತ್ರವನ್ನು ಹೊಸ ರೀತಿಯಲ್ಲಿ ಪರಾಮರ್ಶಿಸಿದ್ದು.

ವಿದ್ವಾಂಸ ತೀ. ನಂ. ಶ್ರೀ. ಅವರಂತೆ ವ್ಯಕ್ತಿ ತೀ. ನಂ. ಶ್ರೀ. ಅವರೂ ಅಷ್ಟೇ ದೊಡ್ಡವರು. ಹೀಗಾಗಿ ತಮ್ಮ ವಿದ್ವತ್ತಿನಿಂದಾಗಿ ನಮ್ಮ ವಿಚಾರದ ಒಂದು ಭಾಗವಾಗಿ ಬೆಳೆದ ಅವರು, ತಮ್ಮ ವ್ಯಕ್ತಿತ್ವದಿಂದಾಗಿ ನಮ್ಮ ಭಾವನೆಯ ಭಾಗವಾಗಿಯೂ ಉಳಿದಿದ್ದಾರೆ. ತೀ. ನಂ. ಶ್ರೀ. ಅವರು ಪ್ರತಿಪಾದಿಸಿರುವ ಛಂದಸ್ಸಿನ ವಿಷಯವಾಗಿ ವಿಮರ್ಶೆ ಮಾಡುವಾಗ ಈ ಭಾವನಾತ್ಮಕ ಸಂಬಂಧ ಒಮ್ಮೊಮ್ಮೆ ಅಡ್ಡ ಬರುತ್ತದೆ. ಒಂದು ಮಾತು ನಿಜ, ಅವರ ಕೆಲವು ನಿಲುವುಗಳನ್ನು ನಾವು ಒಪ್ಪಲಿಕ್ಕಿಲ್ಲ. ಆದರೆ ಅವರು ನಮಗೆ ಛಂದಸ್ಸಿನ ವಿಷಯದಲ್ಲಿ ಹೊಸ ದಾರಿ ತೋರಿದ್ದು ಸುಳ್ಳಲ್ಲ.

ಭಾರತೀಯ ಕಾವ್ಯಮೀಮಾಂಸೆಗೆ ಸಂಬಂಧಿಸಿದಂತೆ ತೀ. ನಂ. ಶ್ರೀ. ದೊಡ್ಡ ಕೆಲಸ ಮಾಡಿದ್ದಾರೆ. ಇದರೊಂದಿಗೆ ಹೋಲಿಸಿದರೆ ಅವರು ಮಾಡಿದ ಛಂದಸ್ಸಿನ ಕೆಲಸ ಪ್ರಮಾಣದಲ್ಲಿ ಸಣ್ಣದಾದರೂ ಗುಣಾತ್ಮಕವಾಗಿ ಗಮನಾರ್ಹವಾಗಿದೆ. ಬಿ. ಎಂ. ಶ್ರೀ. ಅವರ 'ಇಂಗ್ಲಿಷ್ ಗೀತೆಗಳು' ಕೃತಿಯ ಮುನ್ನುಡಿ (೧೯೫೩), 'ಸಮಾಲೋಕನ'ದಲ್ಲಿ ಸಂಕಲಿತವಾದ 'ಕನ್ನಡದಲ್ಲಿ ಹೊಸ ಮಟ್ಟುಗಳಿಗಿರುವ ಅವಶ್ಯಕತೆ',[೧] 'ಹೊಸ ಛಂದಸ್ಸಿನ ಲಯಗಳು',[೨] 'ಮಾತ್ರೆ ಮುಡಿ ಪದ್ಮಗಣ',[೩] 'ಅಪೂರ್ವ ಷಟ್ಪದಿಯ ಲಕ್ಷಣ',[೪] ಪುಸ್ತಕ ಪ್ರಪಂಚದಲ್ಲಿ (೧-೪) ಪ್ರಕಟವಾದ 'ಶ್ರೀಯವರ ಕೃತಿಗಳು' - ಈ ಆರು ಲೇಖನಗಳು ಛಂದಸ್ಸಿಗೆ ತೀ. ನಂ. ಶ್ರೀ. ನೀಡಿದ ಕೊಡುಗೆಗಳಾಗಿವೆ.

ಇಂದು ಸಾಹಿತ್ಯಕ್ಕೆ ಸಂಬಂಧಪಟ್ಟ ಶಾಸ್ತ್ರಗಳಲ್ಲಿ ವ್ಯಾಕರಣವು ಭಾಷಾಶಾಸ್ತ್ರವಾಗಿ ಬೆಳೆದಿದೆ; ಕಾವ್ಯಮೀಮಾಂಸೆಯು ವಿಮರ್ಶಾಶಾಸ್ತ್ರದ ಹೊಳಪಿನಿಂದ ಝಳಪಿಸುತ್ತಲಿದೆ; ನಿಘಂಟುಶಾಸ್ತ್ರವು ನಿಘಂಟಿಮವಾಗಿ ಬೆಳೆಯತೊಡಗಿದೆ. ಛಂದಸ್ಸಿನ ಅಧ್ಯಯನ ಮಾತ್ರ ನವೀಕರಣಗೊಳ್ಳದೆ ಹಳೆಯ ದಾರಿಯಲ್ಲಿಯೇ ತೆವಳುತ್ತ ನಡೆದಿದೆ. ಹೀಗಿದ್ದೂ ೧೯೩೧ರಷ್ಟು ಪೂರ್ವದಲ್ಲಿ, ಅಂದರೆ ಇಂದಿಗೆ ೬೦ ವರ್ಷಗಳಷ್ಟು ಹಿಂದೆಯೇ ತೀ. ನಂ. ಶ್ರೀ. ಕನ್ನಡ ಛಂದಸ್ಸಿನ ಬಗ್ಗೆ ಹೊಸ ವಿಚಾರ ಹೇಳಲು ಮನಸ್ಸು ಮಾಡಿದುದು, ಅವರ ಅನ್ವೇಷಣದೃಷ್ಟಿಗೆ ನಿದರ್ಶನವೆನಿಸಿದೆ.

'ಇಂಗ್ಲಿಷ್ ಗೀತೆಗಳು' ಲೇಖನದ ಎರಡನೆಯ ಭಾಗವು, ಬಿ.ಎಂ.ಶ್ರೀ.ಪೂರ್ವದಲ್ಲಿ ಎಸ್. ಜಿ. ನರಸಿಂಹಾಚಾರ್, ಪಂಜೆ, ಪೈ, ಹಟ್ಟಿಯಂಗಡಿ ನಾರಾಯಣರಾಯರಿಂದ ನಡೆದ ಹೊಸಗನ್ನಡ ಛಂದೋಪ್ರಯೋಗಗಳ ಪರಿಶೀಲನೆಯನ್ನೊಳಗೊಂಡಿದೆ. ಮೂರನೆಯ ಭಾಗದಲ್ಲಿ ಬಿ. ಎಂ.ಶ್ರೀ. ಅನುವಾದಗಳ ಆನ್ವಯಿಕ ಛಂದೋವಿವೇಚನೆಯಿದೆ. 'ಕನ್ನಡದಲ್ಲಿ ಹೊಸಮಟ್ಟುಗಳಿಗಿರುವ ಅವಶ್ಯಕತೆ' ಲೇಖನ ನಮ್ಮ ಪ್ರಾಚೀನ ಛಂದೋಚರಿತ್ರೆಯನ್ನೂ, ಅದು ಆಧುನಿಕವಾಗಿ ಬಿಚ್ಚಿಕೊಂಡ ರೀತಿಯನ್ನೂ ತಿಳಿಸುತ್ತದೆ. ಇದರ ಮುಂದುವರಿಕೆಯೆಂಬಂತೆ 'ಹೊಸ ಛಂದಸ್ಸಿನ ಲಯಗಳು' ಎಂಬ ಲೇಖನವಿದ್ದು, ಹೆಸರೇ ಸೂಚಿಸುವಂತೆ ಇದು ಆಧುನಿಕ ಕವನಗಳಲ್ಲಿ ಬಳಕೆಯಾದ ಲಯಗಳ ಶೋಧ, ವಿನ್ಯಾಸಗಳ ವಿವೇಚನೆಯನ್ನೊಳಗೊಂಡಿದೆ. ಈ ಲೇಖನಕ್ಕೆ ಅನುಬಂಧ ರೂಪದಲ್ಲಿರುವ 'ಮಾತ್ರೆ, ಮುಡಿ, ಪದ್ಮಗಣ' ಎಂಬ ಲೇಖನ ಲಯಗಳಿಗೆ ಪೂರಕವೆನಿಸುವ ವಿಚಾರಗಳನ್ನು ತಿಳಿಸುತ್ತದೆ. ಹೀಗಾಗಿ ಕೊನೆಯ ಮೂರು ಲೇಖನಗಳನ್ನು ಅಖಂಡವೆಂದು ಭಾವಿಸಬೇಕಾಗುತ್ತದೆ. 'ಇಂಗ್ಲಿಷ್ ಗೀತೆಗಳು' ಲೇಖನದಂತೆ 'ಶ್ರೀಯವರ ಕೃತಿಗಳು', 'ಅಪೂರ್ವ ಷಟ್ಪದಿಯ ಲಕ್ಷಣ' ಎಂಬಿವು ಪ್ರತ್ಯೇಕ ಲೇಖನಗಳಾಗಿ ನಿಲ್ಲುತ್ತವೆ.

ತೀ. ನಂ. ಶ್ರೀ. ಅವರ ಈ ಒಟ್ಟು ವಿಚಾರಗಳನ್ನು ಛಂದಸ್ಸಿಗೆ, ಪ್ರಾಚೀನ ಛಂದಸ್ಸಿಗೆ ಮತ್ತು ಹೊಸಗನ್ನಡ ಛಂದಸ್ಸಿಗೆ ಸಂಬಂಧಪಟ್ಟವು-ಎಂದು ಮೂರು ವಿಧದಲ್ಲಿ ವರ್ಗೀಕರಿಸಿ ಹೀಗೆ ಪರಿಶೀಲಿಸಬಹುದು :

೧. "ಕವಿ ತನ್ನ ಭಾವನೆಗಳಿಗೆಲ್ಲ ಮೊದಲು ಮಾತಿನ ರೂಪ ಕೊಟ್ಟು, ಬಳಿಕ ಆ ಪಾಕವನ್ನು . . . ಕೆಲವು ವೃತ್ತ (Stanza)ಗಳಲ್ಲಿ ತುಂಬಿಬಿಡುವುದಿಲ್ಲ. ಕವಚಧಾರಿಯಾಗಿ ಕರ್ಣ ಜನಿಸಿದಂತೆ, ಭಾವಗಳು ಕವಿಯ ಹೃದಯದಿಂದ ಛಂದೋಬದ್ಧವಾಗಿಯೇ ರೂಪುದಳೆದು ಹೊರಬೀಳುತ್ತವೆ. ಒಂದು ಪದ್ಯಬಂಧಕ್ಕೂ ಅದರಲ್ಲಿ ವ್ಯಕ್ತವಾಗುವ ಭಾವಗಳಿಗೂ ಬಲು ಹತ್ತಿರದ ಸಂಬಂಧವಿದೆ. ಪದ್ಯದ ಓಟ ತಡೆ ತಿರುವುಗಳನ್ನೇ ಭಾವದ ಓಟ ತಡೆ ತಿರುವುಗಳು ಅನುಸರಿಸುತ್ತವೆ" (೧೭೫). "ಚರಣ ರಚನೆಯಲ್ಲಿ ಗಮನಿಸಬೇಕಾದದ್ದು ಗಣವೇ ಹೊರತು ಮಾತ್ರೆಯಲ್ಲ" (೧೮೭)- ಎಂಬ ತೀ. ನಂ. ಶ್ರೀ. ಮಾತುಗಳು ಛಂದಸ್ಸಿನ ಮೂಲಸತ್ಯಗಳಾಗಿವೆ. ಇಂಥ ಅನೇಕ ಛಂದೋ ಮೂಲಸತ್ಯಗಳನ್ನು ಅವರು ತಮ್ಮ ಲೇಖನಗಳಲ್ಲಿ ಮಂಡಿಸಿದ್ದಾರೆ.

೨. "ದ್ರಾವಿಡ ಛಂದಸ್ಸು ಮರೆಗೊಂಡದ್ದು ಆರ್ಯ ಛಂದಸ್ಸಿನ ಪ್ರಾಬಲ್ಯದಿಂದ" (೧೭೧). "ನಮ್ಮ ಪ್ರಾಚೀನರು ಮೊದಮೊದಲು ಶ್ಲೋಕ (ಅನುಷ್ಟುಭ್), ಇಂದ್ರವಜ್ರ ಮೊದಲಾದ ವಿಧವಿಧದ ವೃತ್ತಗಳನ್ನೆಲ್ಲ ಕನ್ನಡಕ್ಕೆ ಒದಗಿಸಲು ಪ್ರಯತ್ನಪಟ್ಟು. . . . ಸರಿಹೋಗದೆ ಕೈಬಿಟ್ಟರು" (೧೭೫). "ಇದು ವರೆಗೆ ಗೊತ್ತಾಗಿರುವ ಮಟ್ಟಿಗೆ ಇವು (ಷಟ್ಪದಿ) ಹೆರವರಿಂದ ಸ್ವೀಕರಿಸಿದ ದತ್ತುಪುತ್ರರಲ್ಲ, ಕನ್ನಡಕ್ಕೆ ಮನೆಯ

ಮಕ್ಕಳು. ಷಟ್ಪದಿಗಳ ತಳಹದಿ ಕನ್ನಡ ಭಾಷೆಯ ಸಹಜಗತಿಯ ಅಡಿಗಲ್ಲಿನ ಮೇಲೆ ಭದ್ರವಾಗಿ ಕುಳಿತಿದೆ" (೧೭೨). "ಕನ್ನಡ ಛಂದಸ್ಸು ವಿಸ್ತರಿಸಿದಂತೆಲ್ಲ, ಮಾರ್ಪಾಡು ಹೊಂದಿದಂತೆಲ್ಲ ಛಂದೋಂಬುಧಿಯ ಪಾಠವೂ ಬಗೆಬಗೆಯಾಗಿ ರೂಪತಳೆಯಿತು. ಛಂದೋಂಬುಧಿಯ ಪಾಠಭೇದಗಳ ಚರಿತ್ರೆ ಕನ್ನಡ ಛಂದಸ್ಸಿನ ಚರಿತ್ರೆಗೆ ಒಂದು ರೀತಿಯ ಪ್ರತೀಕವಾಗಿದೆ" (೨೨೩).

ಈ ಹೇಳಿಕೆಗಳು ಪ್ರಾಚೀನ ಕನ್ನಡ ಛಂದಸ್ಸಿನ ಚರಿತ್ರೆಯ ಸ್ಥಿತಿ-ಗತಿಗಳನ್ನು ತಿಳಿಸಿಕೊಡುವ ಸೂತ್ರವಾಕ್ಯಗಳಾಗಿವೆ. ಇವುಗಳನ್ನೇ ತಳಹದಿಯಾಗಿಟ್ಟುಕೊಂಡು ಒಂದೊಂದು ಸ್ವತಂತ್ರ ಲೇಖನವನ್ನೇ ಬರೆಯಬಹುದು. ಇಲ್ಲೆಲ್ಲ ತೀ.ನಂ.ಶ್ರೀ. ಅವರ ಚಾರಿತ್ರಿಕ ಪ್ರಜ್ಞೆ, ಛಂದೋಪರಿಜ್ಞಾನ ಸ್ಫುಟವಾಗಿ ವ್ಯಕ್ತಗೊಂಡಿದೆ.

೩. ಇವುಗಳಿಗಿಂತ ಹೊಸಗನ್ನಡ ಛಂದಸ್ಸಿಗೆ ಸಂಬಂಧಪಟ್ಟ ಅವರ ಶೋಧಗಳಿಗೆ ಹೆಚ್ಚಿನ ಬೆಲೆಯಿದೆ. ಪ್ರಾಚೀನ ಕಾಲದಲ್ಲಿಯೇ ಕೀರ್ತನೆ, ಹಾಡು, ಯಕ್ಷಗಾನಗಳಲ್ಲಿ "ಛಂದಶ್ಶಾಸ್ತ್ರದ ಅತಿನಿಯಮದ ಕಟ್ಟುಗಳನ್ನು ಕಳಚಿ ಹೊಸ ಹೊಸ ಸಿದ್ಧಿಗಳನ್ನು ಪಡೆಯುವ ಪ್ರಯತ್ನ" (೧೭೮) ಕಂಡುಬಂದರೂ, ಅಕ್ಷರವೃತ್ತ, ಕಂದಪ್ರಿಯರಾದ ವಿದ್ವತ್ ಕವಿಗಳಿಂದ ಇಂಥ ಪ್ರಯತ್ನಗಳು ತಿರಸ್ಕೃತವಾಗಿದ್ದವು. "ಹೀಗೆ ಬಹಿಷ್ಕೃತರನ್ನು ಉದ್ಧರಿಸುವ ಕಾರ್ಯವು ನಮ್ಮ ಛಂದಸ್ಸಿನಲ್ಲಿ ಈಗ ನಡೆಯುತ್ತಿದೆ." (೧೭೮) ಎಂದೂ, ಇದಕ್ಕೆ ಪ್ರಚೋದನೆ ನೀಡಿದುದು ಇಂಗ್ಲಿಷ್ ಪದ್ಯಸಾಹಿತ್ಯವೆಂದೂ 'ಕನ್ನಡದಲ್ಲಿ ಹೊಸ ಮಟ್ಟುಗಳಿಗಿರುವ ಅವಶ್ಯಕತೆ' ಎಂಬ ಲೇಖನದಲ್ಲಿ ಸರಿಯಾಗಿಯೇ ಗುರುತಿಸಿದ್ದಾರೆ.

'ಹೊಸ ಛಂದಸ್ಸಿನ ಲಯಗಳು', 'ಮಾತ್ರೆ ಮುಡಿ ಪದ್ಮಗಣ' ಲೇಖನಗಳಲ್ಲಿಯದು ತೀರ ಹೊಸ ವಿಚಾರವಾಗಿದ್ದು, ಆ ಕಾರಣದಿಂದಾಗಿಯೇ ಅದು ಪರಿಶೀಲನಯೋಗ್ಯವಾಗಿದೆ. ಮಾತ್ರಾಛಂದಸ್ಸು ಕಿವಿಗೂ ಕಣ್ಣಿಗೂ ಒಂದೇ ರೀತಿಯಲ್ಲಿ ವ್ಯವಹರಿಸುತ್ತಿದ್ದರೆ, ಅಂಶಛಂದಸ್ಸು ಕಿವಿಗೆ ಒಂದು ರೀತಿ, ಕಣ್ಣಿಗೆ ಇನ್ನೊಂದು ರೀತಿಯಲ್ಲಿ ವ್ಯವಹಿಸುತ್ತದೆ. ಹೀಗಾಗಿ ತೀ. ನಂ. ಶ್ರೀ. ಅವರು ಇಲ್ಲಿ ಕಿವಿಯ ಛಂದಸ್ಸನ್ನು ಕುರಿತು ಚರ್ಚಿಸುತ್ತಾರೋ ಕಣ್ಣಿನ ಛಂದಸ್ಸನ್ನು ಕುರಿತು ಚರ್ಚಿಸುತ್ತಾರೋ, ಕಿವಿಯ ಛಂದಸ್ಸನ್ನು ಕಣ್ಣಿನ ಛಂದಸ್ಸಿನ ಪಾತಳಿಗಳಿಗೆ ತಂದು ಚರ್ಚಿಸುತ್ತಾರೋ, ಒಮ್ಮೊಮ್ಮೆ ಇದನ್ನು ಮೀರಿ ಹಾಡಿನ ಗತಿ-ಗತ್ತುಗಳನ್ನು ಚರ್ಚಿಸುತ್ತಾರೋ ಎಂಬ ಸಂದೇಹಗಳು ಈ ಎರಡು ಲೇಖನಗಳಲ್ಲಿ ಉಳಿದುಕೊಂಡಿವೆ. ವಿದ್ಯಾರ್ಥಿಗಳಿಗೆ ಸರಿಯಾಗಿ ತಿಳಿಯಲೆಂಬ ಕಳಕಳಿಯಿಂದ, ಹೇಳಿದ್ದನ್ನೇ ಹೇಳುವ ಪ್ರಾಧ್ಯಾಪಕನಂತೆ ಈ ಲೇಖನಗಳಲ್ಲಿಯ ಪುನರುಕ್ತತೆ ಕೆಲವೊಮ್ಮೆ ಗೊಂದಲ ಹುಟ್ಟಿಸುತ್ತದೆ. ವಿಷಯದ ಗಹನತೆಯಿಂದಾಗಿ ಆ ಗೊಂದಲ ಇನ್ನೂ ವರ್ಧಿಸುತ್ತದೆ. ಆದುದರಿಂದ ಈ ಎರಡೂ ಲೇಖನಗಳನ್ನು ಕೆಳಗಿನಂತೆ ಮರುಪರಿಶೀಲಿಸಬಹುದು.

(ಅ) "ಹೊಸ ಛಂದಸ್ಸಿನಲ್ಲಿ ಅನಾಯಕತೆ ತಾಂಡವಾಡುತ್ತಿರುವಂತೆ ಭಾಸವಾಗಬಹುದು. ಆದರೆ ಒಳಹೊಕ್ಕು ಪರಿಶೀಲಿಸಿದರೆ ಇಲ್ಲಿರುವುದು ವೈವಿಧ್ಯವೇ ಹೊರತು ಸ್ವಚ್ಛಂದತೆಯಲ್ಲವೆಂದು ಸ್ಪಷ್ಟವಾಗುತ್ತದೆ." (೧೮೦) ಎನ್ನುತ್ತ, ಆಧುನಿಕ ಕವಿಗಳು ೩ ಮಾತ್ರೆ, ೪ ಮಾತ್ರೆ, ೫ ಮಾತ್ರೆ, ೬ ಮಾತ್ರೆ, ೩+೪ ಮಾತ್ರೆ, ೩+೫ ಮಾತ್ರೆಯ ಗಣಗಳನ್ನು ರೂಪಿಸಿಕೊಂಡಿದ್ದಾರೆ-ಎಂಬ ವಿಚಾರವನ್ನು ತೀ. ನಂ. ಶ್ರೀ. ನಮ್ಮ ಮುಂದಿಡುತ್ತಾರೆ. ಮುಂದುವರಿದು ೩+೪ರದು ೭ ಮಾತ್ರೆಯ ಗಣ, ೩+೫ರದು ೮ ಮಾತ್ರೆಯ ಗಣ ಎನ್ನುತ್ತ, ಆ ಕಡೆ ೨ ಮಾತ್ರೆ ಗಣ, ಈ ಕಡೆ ೯ ಮಾತ್ರೆಯ ಗಣಗಳೂ ಸಾಧ್ಯವೆಂದು

ಹೇಳುತ್ತಾರೆ. ನಮ್ಮ ಪ್ರಾಚೀನರು ಹೇಳಿರುವ ೩ ಅಂಶಗಳ ವಿಷ್ಣುಗಣ ಅಂದರೆ ೬ ಮಾತ್ರೆಯ ಗಣ, ೪ ಅಂಶಗಳ ರುದ್ರಗಣ ಅಂದರೆ ೮ ಮಾತ್ರೆಯ ಗಣಗಳ ಅಸ್ತಿತ್ವವೇ ನಮಗೆ ಸಂದೇಹ ಹುಟ್ಟಿಸುತ್ತಿರುವಾಗ ೯ ಮಾತ್ರೆಗಳ ಗಣ ಬಗೆಗಿನ[೫] ತೀ. ನಂ. ಶ್ರೀ. ವಿಚಾರ ಇನ್ನೂ ಸಂದೇಹ ಹುಟ್ಟಿಸುತ್ತದೆ.

(ಆ) ಒಂದು ಲಘುವಿನ ಮುಂದೆ ಒಂದು ಗುರು ಬರುವಿಕೆಯಿಂದ ಆರಂಭವಾಗುವುದು 'ವಿಷಮ ಗಣ'. ಇಂಥ ಗಣ ಶ್ರಾವ್ಯವಲ್ಲವೆಂದು ತೀ. ನಂ. ಶ್ರೀ. ಹೇಳುವರಾದರೂ ಇದು ಅವರ ಹೊಸ ವಿಚಾರವಲ್ಲ. ನಮ್ಮ ಪ್ರಾಚೀನರು ತ್ಯಾಜ್ಯವೆನ್ನುವ 'ಜಗಣ'ವನ್ನೇ ಇವರು 'ವಿಷಮಗಣ' ಎಂದು ಕರೆದಿದ್ದಾರೆ. ಆದರೆ ಈ ಗಣ ಕೆಲವೊಮ್ಮೆ ಬಳಕೆಯಾದುದಕ್ಕೆ ಪ್ರಾಚೀನ ಮತ್ತು ಆಧುನಿಕ ಕಾವ್ಯಗಳಿಂದ ಉದಾಹರಣೆ ಕೊಟ್ಟಿದ್ದಾರೆ. ಇಂಥಲ್ಲಿ ಮೊದಲ ಲಘುವನ್ನು ಪ್ರತ್ಯೇಕಿಸಿ "ಕು+ಮಾರವ್ಯಾಸನು ಹಾಡಿದನೆಂದರೆ" ಎಂಬಂತೆ ಓದಿ ಶ್ರಾವ್ಯತೆಯನ್ನು ಉಳಿಸಿಕೊಳ್ಳಬಹುದೆಂಬುದು ಹೊಸ ವಿಚಾರವಾಗಿದೆ.

(ಇ) ಒಂದು ಚರಣದ ಗಣವಿಭಜನೆಯನ್ನು ಬೇರೆ ಬೇರೆಯಾಗಿ ಮಾಡಬಹುದಾದಲ್ಲಿ ಅದನ್ನು 'ಗಣ ಪರಿವೃತ್ತಿ' ಎಂದು ಕರೆದಿದ್ದಾರೆ. ಇದಕ್ಕೆ ಉದಾಹರಣೆಯಾಗಿ ೪+೪ ಇಲ್ಲವೆ ೩+೫ ಇಲ್ಲವೆ ೩+೩+೨ ಮಾತ್ರೆಗಳಂತೆ, ೩ + ೩ ಇಲ್ಲವೆ ೨ +೪ ಇಲ್ಲವೆ ೪+೨ ಮಾತ್ರೆಗಳಂತೆ, ೫+೫ ಇಲ್ಲವೆ ೩+೪+೩ ಇಲ್ಲವೆ ೪+೩+೩ ಮಾತ್ರೆಗಳಂತೆ ಗಣವಿಭಜಿಸಲು ಬರುವ ಪದ್ಯಗಳನ್ನು ಉದಾಹರಣೆಯಾಗಿ ಕೊಟ್ಟಿರುವರು. ಮಾತ್ರಾ ಛಂದಸ್ಸಿನಲ್ಲಿ ಕಣ್ಣು ಚರಣಗಳನ್ನು ಅನೇಕ ಬಗೆಗಳಲ್ಲಿ ಗಣಗಳಾಗಿ ವಿಭಜಿಸಬಹುದು. ಇದಕ್ಕೆ ಕಿವಿ ಒಪ್ಪುತ್ತದೆಯೇ? ಎಂಬುದು ಮುಖ್ಯ. ಮೇಲಿನ ಕೆಲವು ಉದಾಹರಣೆಗಳನ್ನು ಕಿವಿ ಒಪ್ಪಲಾರದೆಂದೇ ನನ್ನ ಅನಿಸಿಕೆ. ಇದಲ್ಲದೆ ಇಲ್ಲಿ ಗಣಪರಿವೃತ್ತಿಗೆ ಪ್ರಭುದೇವರ ರಗಳೆ ಮತ್ತು ಜೈಮಿನಿ ಭಾರತಗಳಿಂದ ಕೊಟ್ಟ ಪ್ರಾಚೀನ ಉದಾಹರಣೆಗಳೂ (೨೦೩ ಅ. ಟಿ.) ಸೂಕ್ತವೆನಿಸುವುದಿಲ್ಲ. ಪಂಪನ "ಅಲ್ಲಿ ಸೊ । ಗಯಿಸುವ । ಕೃತಕಗಿ । ರಿಗಳಿಂ" ಎಂಬುದನ್ನು "ಅಲ್ಲಿ । ಸೊಗಯಿಸುವ । ಕೃತಕ । ಗಿರಿಗಳಿಂ" ಎಂಬಂತೆಯೂ ವಿಭಜಿಸಬಹುದಾಗಿದ್ದು, ಈ ಉದಾಹರಣೆ ಕೊಟ್ಟಿದ್ದರೆ ಸೂಕ್ತವೆನಿಸುತ್ತಿತ್ತು. ರಾಘವಾಂಕನ 'ವೀರೇಶ ಚರಿತೆ'ಯ ಎಲ್ಲ ಪದ್ಯಗಳನ್ನು ೪ । ೪ । ೪ ಮಾತ್ರೆಯಂತೆ ಇಲ್ಲವೆ ೪ । ೬। ೪ । ೬ ಮಾತ್ರೆಯಂತೆ ಗಣವಿಭಜನೆ ಮಾಡಬಹುದಾಗಿದೆ. ಹೀಗಾಗಿ ನನ್ನ ದೃಷ್ಟಿಯಲ್ಲಿ ವೀರೇಶಚರಿತೆ ಇಡಿಯಾಗಿ 'ಗಣಪರಿವೃತ್ತಿ' ತತ್ವಕ್ಕೆ ಕೊಡಬಹುದಾದ ಅಪರೂಪದ ಉದಾಹರಣೆಯಾಗಿದೆ. ಆದರೆ ಇಲ್ಲಿ ೬ ಮಾತ್ರೆಯ ಗಣ ಸಾಧ್ಯವೆ? ಎಂಬುದು ಸಂದೇಹ.

(ಈ) ಮಾತ್ರೆಗಳ ಬಗ್ಗೆ ಹೇಳುತ್ತ ತೀ. ನಂ. ಶ್ರೀ. ಪ್ಲುತ, ಕಂಪಿತಗಳನ್ನು ಪ್ರಸ್ತಾಪಿಸುತ್ತಾರೆ.

ಹಡೆದ । ಕೂಸು ।

ಬಾಳ್ವು । ದೆಂತು

೩ ೩ ೩

ಎನುತ । ತಽ। ಲ್ಲಣಿಸು । ತ

ಎಂಬಲ್ಲಿ 'ತಽ' ಎಂಬುದು ದೀರ್ಘವನ್ನೂ ಮೀರಿ ೩ ಮಾತ್ರೆಯ ವ್ಯಾಪ್ತಿ ಪಡೆಯುವುದರಿಂದ, ಇದು 'ಪ್ಲುತ'ವೆನ್ನುತ್ತಾರೆ. ಆದರೆ ಈ ಪದ್ಯದಲ್ಲಿ ಎಲ್ಲವೂ ೩ ಮಾತ್ರೆಯ ಗಣಗಳೇ ಇರುವುದರಿಂದ 'ತಽ' ಎಂಬುದೂ ೩ ಮಾತ್ರೆಗೆ ಹಿಗ್ಗಿದೆ - ಎಂದು ಹೇಳುವುದೆ ಸರಿಯಾದ ಕ್ರಮ. ಒಂದು ವೇಳೆ ಇಲ್ಲಿ ೪

ಮಾತ್ರೆಯ ಗಣಗಳಿದ್ದ ಪಕ್ಷದಲ್ಲಿ 'ತs' ಎಂಬುದು ೪ ಮಾತ್ರೆಗಳಿಗೆ ಹಿಗ್ಗುತ್ತಿತ್ತು. ಇದು ಅಂಶಗಣದಲ್ಲಿ ಸಹಜ. ಇಷ್ಟೇ ಏಕೆ, ಇದನ್ನು "ಹಡೆದ । ಕೂಸು । ಬಾಳ್ವು । ದೆಂತು । ಎನುತ । ತಲ್ಲ । ಣಿಸುತ ।" ಎಂದು ೩ । ೩ । ಮಾತ್ರೆಯ ಗಣದಂತೆ ಓದಲೂ ಬರುತ್ತದೆ. ಆದುದರಿಂದ ಇಲ್ಲಿಯ ಪ್ಲುತವಿಚಾರ ಅಷ್ಟಾಗಿ ಸಮಂಜಸವೆನಿಸುವುದಿಲ್ಲ. ಇನ್ನು

ನಿನ್ನ । ಬೆಳ್ಳಿಯ । ಕೂದ । ಲಂದ

ನನ್ನ । ಕಣ್ಣಿಗ । ದೇನು । ಚಂದ

ಮೂಡ । ಬೆಳ್ಳಿಯ । ಥಳಕು । ಮಂದ

೩ ೪

ನನ್ನ । ಮೇs । ರಿ

ಇಲ್ಲಿ 'ಮೇs' ಎಂಬುದಕ್ಕೆ ೩ಕ್ಕಿಂತಲೂ ಹೆಚ್ಚು ಮಾತ್ರೆಯ ಬೆಲೆಯಿದೆಯೆಂದೂ, ಇದನ್ನು 'ಕಂಪಿತ'ವೆಂದು ಕರೆಯಬೇಕೆಂದೂ ತೀ.ನಂ.ಶ್ರೀ. ಹೇಳುತ್ತಾರೆ. ಆದರೆ ಈ ಪದ್ಯದಲ್ಲಿ ೩ । ೪ ಮಾತ್ರೆಗಳ ಗಣ ನಡಿಗೆಯಿದೆ. 'ನನ್ನ ಮೇರಿ' ಎಂಬಲ್ಲಿ 'ನನ್ನ' ಎಂಬುದು ೩ ಮಾತ್ರೆಯ ಗಣಸ್ಥಾನ, ಇದರ ಮುಂದಿನದು ೪ ಮಾತ್ರೆಯ ಗಣಸ್ಥಾನ. ಈ ೪ ಮಾತ್ರೆಯ ಗಣಸ್ಥಾನದಲ್ಲಿ ಬಂದಿರುವ 'ಮೇ' ಸಹಜನಾಗಿಯೇ ೪ ಮಾತ್ರೆಗೆ ಹಿಗ್ಗಿದೆಯೆಂದು ಹೇಳುವುದೇ ಸರಿಯಾದ ಕ್ರಮ. ಒಂದು ವೇಳೆ ಇಲ್ಲಿ ೫ ಮಾತ್ರೆಯ ಗಣವಿದ್ದ ಪಕ್ಷದಲ್ಲಿ 'ಮೇ' ಎಂಬುದು ೫ ಮಾತ್ರೆಗಳಿಗೆ ಹಿಗ್ಗುತ್ತಿತ್ತು. ಇದು ಅಂಶಗಣದಲ್ಲಿ ಸಹಜ. ಇಷ್ಟೇ ಏಕೆ, ಇದನ್ನು ನನ್ನ । ಮೇರಿs । ಎಂದೂ ಓದಬಹುದಾಗಿದೆ. ಆದುದರಿಂದ ಇದನ್ನು 'ಕಂಪಿತ'ವೆಂದು ಕರೆಯುವಲ್ಲಿ ಅಂಥ ವಿಶೇಷತೆ ಕಂಡುಬರುವುದಿಲ್ಲ.

(ಉ) ಸ್ವರ ಎಳೆದು ಪ್ಲುತ, ಕಂಪಿತ ಮಾಡಿಕೊಳ್ಳುತ್ತಿದ್ದರೆ ಸರಿ. ಹಾಗೆ ಮಾಡಿಕೊಳ್ಳದೆ ತಟ್ಟನೆ ಅಷ್ಟುಕಾಲ ನಿಂತು ಮುಂದಿನ ಗಣಕ್ಕೆ ಸಾಗಲೂ ಬರುತ್ತದೆ. ಹಾಗೆ ನಿಂತ ನೆಲೆಯೇ ಮೌನ ಎನ್ನುತ್ತಾರೆ, ತೀ. ನಂ. ಶ್ರೀ. ಇಂಥ ಪದ್ಯ ಶಿಷ್ಟಪದ, ಜನಪದಗಳಲ್ಲಿಯೂ ಇವೆ. ಈ ಮೌನವನ್ನು ಶೋಧಿಸಿ ಹೇಳಿದುದು ಹೊಸ ವಿಚಾರವಾಗಿದೆ.

(ಊ) ತೀ.ನಂ. ಶ್ರೀ. ಮಂಡಿಸುವ ಇನ್ನೆರಡು ವಿಚಾರಗಳೆಂದರೆ ಮುಡಿ ಮತ್ತು ಪದ್ಮಗಣ. ಚರಣದಲ್ಲಿ ಕೊನೆಯ ಗಣದ ಆಚೆಗೆ ನಿಲ್ಲುವ ಅಕ್ಷರವೇ ಮುಡಿ. ಉದಾ:

ಸಾಯ್ವರು । ಶಾಪದ । ಲಿ

ಇಲ್ಲಿ 'ಲಿ' ಎಂಬುದು ಮುಡಿ. ಮುಡಿಯೇ ಆಗಿದ್ದರೂ ಅಕ್ಷರ ಪ್ರಮಾಣದಲ್ಲಿ ಅದಕ್ಕಿಂತ ಉದ್ದವಾಗಿ, ಮುಕ್ತಾಯದ ಭಾವವನ್ನು ಸಾವಕಾಶವಾಗಿ ತರುವುದೇ ಪದ್ಮಗಣ. ಉದಾ:

ಸಿರಿಗೌರಿ । ಯಂತೆ ಬಂ । ದರು ತಾಯಿ । ಹಸೆಮಣೆ । ಗೆ

ಸೆರಗಿನಲಿ । ಕಣ್ಣೀರ । ನೊರಸಿ

ಇಲ್ಲಿ ನೊರಸಿ ಎಂಬುದು ಪದ್ಮಗಣ. ತೀ. ನಂ. ಶ್ರೀ. ಇಷ್ಟು ಹೇಳುವರೇ ಹೊರತು ಇವು ಹುಟ್ಟಿಕೊಳ್ಳಲು ಏನು ಕಾರಣ? ತಿಳಿಸುವುದಿಲ್ಲ. ಇದಕ್ಕೆ ಸಮಾಧಾನ ಹೀಗಿರಬಹುದು. ಇಲ್ಲಿ ಮುಡಿಯಾಗಲೀ

ಪದ್ಮಗಣವಾಗಲೀ ಪಾದದ ಕೊನೆಗೇ ಬಂದಿವೆ. ಪಾದದ ಕೊನೆಯನ್ನು ಸೂಚಿಸುವುದಕ್ಕಾಗಿ ಅಂತ್ಯಗಣದ ಮೇಲೊಂದು ಅಕ್ಷರ ಬರಬೇಕು. ಅಥವಾ ಅಂತ್ಯಗಣದ ಒಂದು ಅಕ್ಷರವನ್ನಾದರೂ ಕಡಿಮೆ ಮಾಡಬೇಕು. ಲಯಬದ್ಧವಾಗಿ ಉಚ್ಚರಿಸುವಾಗ ಮೇಲೆ ಬಂದ ಅಕ್ಷರವೂ ತನ್ನ ಗಣವ್ಯಾಪ್ತಿಗೆ ಹಿಗ್ಗುತ್ತದೆ. ಅಕ್ಷರದ ಕೊರತೆಯಿಂದ ಕೂಡಿದ ಗಣವೂ ತನ್ನ ಗಣದ ವ್ಯಾಪ್ತಿಗೆ ಹಿಗ್ಗುತ್ತದೆ. ಇವುಗಳಲ್ಲಿ ಮೇಲೆ ಬಂದ ಅಕ್ಷರ 'ಮುಡಿ', ಅಕ್ಷರ ಕೊರತೆಯಿಂದ ಕೂಡಿದ ಗಣ 'ಪದ್ಮಗಣ'- ಎಂದು ವ್ಯಾಖ್ಯಾನಿಸುವುದೇ ವೈಜ್ಞಾನಿಕವೆನಿಸುತ್ತದೆ: ತೀ. ನಂ. ಶ್ರೀ. ವ್ಯಾಖ್ಯಾನಿಸುವ ರೀತಿ ಸರಿಯೆನಿಸುವುದಿಲ್ಲ.

ಮುಡಿಗಿಂತ ಪದ್ಮಗಣ ದೊಡ್ಡದು ಎಂದು ತೀ. ನಂ. ಶ್ರೀ. ತಿಳಿಸುತ್ತಾರೆ. ಆದರೆ ಇದಕ್ಕೆ ಕಾರಣ ಹೇಳುವುದಿಲ್ಲ. ಗಣದ ಆಚೆಗೆ ನಿಲ್ಲುವ ಒಂದು ಅಕ್ಷರವ್ಯಾಪ್ತಿಯ ಮುಡಿಗಿಂತ, ಒಂದು ಅಕ್ಷರ ಕೊರತೆಯ ಪದ್ಮಗಣ ಸ್ವಾಭಾವಿಕವಾಗಿಯೇ ನೋಡಲು ದೊಡ್ಡದು ಕಾಣುತ್ತದೆ. ಆದರೆ ಉಚ್ಚಾರ ಸಂದರ್ಭದಲ್ಲಿ ಅವು ತಮ್ಮ ಗಣಸ್ಥಾನದಷ್ಟು ಹಿಗ್ಗಿಕೊಳ್ಳುವುದರಿಂದ ಒಂದು ದೊಡ್ಡದು, ಒಂದು ಸಣ್ಣದು ಎಂದು ಹೇಳುವುದೂ ತಪ್ಪಾಗುತ್ತದೆ. ಏಕೆಂದರೆ ಮೂರು ಮಾತ್ರಾವ್ಯಾಪ್ತಿಗೆ ಹಿಗ್ಗುವ ಪದ್ಮಗಣವಿರಬಹುದು, ನಾಲ್ಕು ಮಾತ್ರಾ ವ್ಯಾಪ್ತಿಗೆ ಹಿಗ್ಗುವ ಮುಡಿ ಇರಬಹುದು. ಹೀಗಾಗಿ ಇಲ್ಲಿಯೂ ತೀ.ನಂ.ಶ್ರೀ. ವಾದ ಸೋತುಹೋಗುತ್ತದೆ.

ಇಲ್ಲಿ ತೀ. ನಂ. ಶ್ರೀ. ಇನ್ನೂ ಎರಡು ತಪ್ಪುಗಳನ್ನು ಮಂಡಿಸಿದಂತಿದೆ. ಮುಡಿಯಾಗಲೀ ಪದ್ಮಗಣವಾಗಲೀ ತಮ್ಮ ಹಿಂದಿನ ಗಣವ್ಯಾಪ್ತಿಯಷ್ಟು ಹಿಗ್ಗುತ್ತವೆ ಎನ್ನುತ್ತಾರೆ. ಹಿಂದಿನ ಗಣ ಮತ್ತು ಮುಂದಿನ ಮುಡಿ/ಪದ್ಮಗಣಗಳು ಒಂದೇ ಪ್ರಮಾಣದವಾಗಿದ್ದರೆ ತೀ. ನಂ. ಶ್ರೀ. ಹೇಳುವಂತೆ ಅವು ಹಿಂದಿನ ಗಣವ್ಯಾಪ್ತಿಯಷ್ಟು ಹಿಗ್ಗುತ್ತವೆ ಎನ್ನಬಹುದು. ಹಿಂದಿನ ಗಣಪ್ರಮಾಣ, ಮುಂದಿನ ಮುಡಿ/ಪದ್ಮಗಣ ಪ್ರಮಾಣ ಭಿನ್ನವಾಗಿದ್ದರೆ ಮುಡಿ ಮತ್ತು ಪದ್ಮಗಣಗಳು ತಮ್ಮ ಹಿಂದಿನ ಗಣವ್ಯಾಪ್ತಿಯಷ್ಟು ಹಿಗ್ಗದೆ, ತಮ್ಮ ಗಣವ್ಯಾಪ್ತಿಯಷ್ಟು ಮಾತ್ರ ಹಿಗ್ಗುತ್ತವೆ. ಎರಡು ಉದಾಹರಣೆಗಳಿಂದ ಈ ಅಭಿಪ್ರಾಯವನ್ನು ಸ್ಪಷ್ಟಪಡಿಸಿಕೊಳ್ಳಬಹುದು.

೪ ೪ ೪ ೪

ನಿನ್ನಾ। ಮೋಹದ । ನಡುವನು । ಬಳಸುವ

೪ ೪ ೪ ೪

ಚಿನ್ನದ । ಕಟ್ಟಾ । ಗಲು ಬಯ । ಕೆ

ಇಲ್ಲಿ ನಾಲ್ಕು ಮಾತ್ರೆಯ ಗಣಗಳೇ ಇರುವುದರಿಂದ 'ಕೆ' ಎಂಬ ಮುಡಿಯು ನಾಲ್ಕು ಮಾತ್ರೆಗಳಷ್ಟು (ಅಂದರೆ ತನ್ನ ಸ್ಥಾನದಷ್ಟು) ಹಿಗ್ಗುತ್ತದೆ. ಆದರೆ

೩ ೪

ಹರುಷ । ವೆನ್ನೊಳು ।

೩ ೪ ೩ ೪

ತೊರೆದೆ । ಹೋಯಿತೊ । ಹೋಯಿ । ತೋ

ಇಲ್ಲಿ ೩/೪ ಮಾತ್ರೆಗಳ ಗಣಯೋಜನೆಯಿರುವುದರಿಂದ 'ತೋ' ಎಂಬ ಮುಡಿ ತೀ.ನಂ. ಶ್ರೀ. ಹೇಳುವಂತೆ ಹಿಂದಿನ ಗಣ 'ಹೋಯಿ'ಯಷ್ಟು ೩ ಮಾತ್ರೆಗೆ ಹಿಗ್ಗುವುದಿಲ್ಲ, ತನ್ನ ಗಣ ವ್ಯಾಪ್ತಿಗೆ ತಕ್ಕಂತೆ ೪ ಮಾತ್ರೆಗೆ ಹಿಗ್ಗುತ್ತದೆ. ಆದುದರಿಂದ ತೀ. ನಂ.ಶ್ರೀ. ಇವರ ಈ ವಾದ ಸಮ್ಮತವೆನಿಸುವುದಿಲ್ಲ.

ಚರಣದ ಕೊನೆಯಲ್ಲಿ 'ಮುಡಿ', 'ಪದ್ಮಗಣ' ಬರುತ್ತವೆ ಎನ್ನುತ್ತಾರೆ, ತೀ. ನಂ. ಶ್ರೀ. ಇದು ಇವರೇ ಹೇಳಿದ ಹೊಸ ವಿಚಾರವೇನಲ್ಲ. ಅಕ್ಷರವೃತ್ತದ ಚರಣಗಳ ಕೊನೆಯಲ್ಲಿ ಕೆಲವೊಮ್ಮೆ ಒಂದು ಗುರುವಿರುವುದನ್ನು, ಷಟ್ಪದಿಯ ಮೂರು-ಆರನೆಯ ಪಾದಗಳ ಕೊನೆಗೆ ಒಂದು ಗುರು ಬರುವುದನ್ನು ನಮ್ಮ ಪ್ರಾಚೀನ ಛಾಂದಸಿಗರು ಹೇಳಿಯೇ ಇದ್ದಾರೆ. ಇದಕ್ಕೆ ತೀ.ನಂ. ಶ್ರೀ. 'ಮುಡಿ' ಎಂಬ ಹೆಸರನ್ನು ಕೊಟ್ಟಿದ್ದಾರೆ, ಅಷ್ಟೇ.

ಚರಣದ ಕೊನೆಗೆ ಬರಬೇಕಾದ ಮುಡಿ, ಪದ್ಮಗಣಗಳು ಚರಣ ಮಧ್ಯದಲ್ಲಿಯೂ ಬರಬಹುದೆನ್ನುತ್ತಾರೆ, ತೀ.ನಂ.ಶ್ರೀ. ಇವುಗಳನ್ನು ಚರಣಮಧ್ಯದಲ್ಲಿಟ್ಟು ಮುದ್ರಿಸಿದುದನ್ನು ನೋಡಿ ಈ ಲಕ್ಷಣ ಹೇಳಿದ್ದಾರೆಯೇ ಹೊರತು, ವಾಸ್ತವವಾಗಿ ಇವು ಚರಣದ ಕೊನೆಗೇ ಬರುತ್ತವೆ. ಉದಾ:

ನಮ್ಮೂರು ಚೆಂದವೋ ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇ । ಕೆ । ಎನ್ನರಸ
ಸುಮ್ಮನಿರಿ ಎಂದಳಾ । ಕೆ

ಇಲ್ಲಿ ಮೊದಲಿನ 'ಕೆ' ಮುಡಿ. ನಿಜವಾಗಿ ಇಲ್ಲಿಗೇ ಚರಣ ಮುಕ್ತಾಯವಾಗಿದೆ. 'ಎನ್ನರಸ' ಎಂಬುದನ್ನು ಕೆಳಗೆ ಮುದ್ರಿಸಿದ್ದರೆ ತೀ. ನಂ. ಶ್ರೀ. ಈ ನಿಯಮ ಕಟ್ಟುತ್ತಿರಲಿಲ್ಲವೇನೋ. ಈ ಮಾತನ್ನು ಪದ್ಮಗಣಕ್ಕೂ ಹೇಳಬಹುದು. ಒಟ್ಟಾರೆ, ಕೆಲವೊಮ್ಮೆ ಅಂಶವೃತ್ತಗಳ ಚರಣಮಧ್ಯದಲ್ಲಿ ಅಕ್ಷರ ಕೊರತೆಯ ಗಣ ಬರಬಹುದು. ನೋಡಲು ಅಕ್ಷರ ಕೊರತೆ ಕಂಡುಬಂದರೂ ಉಚ್ಚಾರದಲ್ಲಿ ಅದು ತನ್ನ ಗಣವ್ಯಾಪ್ತಿಗೆ ಹಿಗ್ಗುತ್ತದೆ. ನಿರಂತರತೆಯ ಭಾಗವೆಂಬಂತೆ ಚರಣಮಧ್ಯದಲ್ಲಿ ಬಂದ ಇಂಥವುಗಳನ್ನು ಮುಡಿ, ಪದ್ಮಗಣವೆಂದು ಕರೆಯಬಾರದು, ಬೇರೆ ಹೆಸರಿನಿಂದ ಕರೆಯಬಹುದು. ಅಂದರೆ ಚರಣ ಮುಕ್ತಾಯದ ಸೂಚನೆಯೆಂಬಂತೆ ಬಂದವುಗಳನ್ನು ಮಾತ್ರ ಮುಡಿ, ಪದ್ಮಗಣಗಳೆಂದು ಕರೆಯಬೇಕು. ಈ ಹಿನ್ನೆಲೆಯಲ್ಲಿ ಮುಕ್ತಾಯವನ್ನು ಸೂಚಿಸುವ ಮೇಲಿನ ಪದ್ಯದ ಮೊದಲ 'ಕೆ' ಎಂಬುದನ್ನು 'ಚರಣ ಮಧ್ಯದ ಮುಡಿ'ಯೆನ್ನುವುದು ತಪ್ಪಾಗುತ್ತದೆ.

ಒಟ್ಟಿನಲ್ಲಿ ಪ್ಲುತ-ಕಂಪಿತ, ಮುಡಿ-ಪದ್ಮಗಣಗಳ ಅರ್ಥ, ಇವುಗಳ ಮಾತ್ರಾಮೌಲ್ಯ ಮತ್ತು ಚರಣದಲ್ಲಿ ಇವು ಬರಬೇಕಾದ ಸ್ಥಾನಗಳ ಬಗ್ಗೆ ತೀ.ನಂ. ಶ್ರೀ. ನೀಡಿದ ನಿರ್ಣಯ ವೈಜ್ಞಾನಿಕವೆನಿಸುವುದಿಲ್ಲ. ಕಿವಿಯಿಂದ ಕೇಳಿ ಗಣಮೌಲ್ಯವನ್ನು ನಿರ್ಧರಿಸಬೇಕಾದ ತರಂಗಯುಕ್ತ ಬ್ರಹ್ಮಗಣ, ವಿಷ್ಣುಗಣಗಳನ್ನು ಕಣ್ಣಿನಿಂದ ನೋಡಿದ ಕಾರಣವಾಗಿ ಈ ದೋಷ ಘಟಿಸಿದೆ.

ತೀ. ನಂ. ಶ್ರೀ. ನಮ್ಮ ಮುಂದೆ ಬಿಚ್ಚಿ ಇಟ್ಟಿರುವ ಛಂದೋವಿಚಾರಗಳು ಹೀಗೆ ಪರಿಷ್ಕರಣಕ್ಕೆ ಗುರಿಯಾಗುತ್ತಿದ್ದರೂ, ಅವುಗಳಲ್ಲಿ ಕೆಲವಾದರೂ ನಮಗಿದ್ದ ಹಳಗನ್ನಡ, ಹೊಸಗನ್ನಡ ಛಂದಸ್ಸಿನ ತಿಳುವಳಿಕೆಯನ್ನು ಹೆಚ್ಚಿಸಿವೆಯೆಂಬುದನ್ನು ಮರೆಯಲಾಗದು. ಈ ಸಂದರ್ಭದಲ್ಲಿ ತೀ. ನಂ. ಶ್ರೀ. ಬಳಸಿದ ಪ್ಲುತ, ಕಂಪಿತ, ಮೌನ, ಮುಡಿ, ಪದ್ಮಗಣ, ವಿಷಮಗಣ, ಗಣಪರಿವೃತ್ತಿಯೆಂಬ ಹೊಸ

ಪಾರಿಭಾಷಿಕ ಪದಗಳು ನಮ್ಮ ಛಂದೋಭಂಡಾರಕ್ಕೆ ಸೇರಿದ ಹೊಸ ನಾಣ್ಯಗಳಾಗಿವೆ. ಈ ಎಲ್ಲ ವಿಚಾರಗಳ ಕಡೆಗೆ ತೀ.ನಂ.ಶ್ರೀ. ಗಮನ ಸೆಳೆದಿರದಿದ್ದರೆ ನಮ್ಮ ಹೊಸಗನ್ನಡ ಪದ್ಯಪ್ರವೇಶದ ದಾರಿ ಎಷ್ಟು ದುರ್ಗಮವಾಗುತ್ತಿತ್ತು ! ಎಂಬ ಅಂಶ ನಮಗೆ ಭಯಹುಟ್ಟಿಸುತ್ತದೆ; ಆಮೇಲೆ ನಾವು ಏನು ಮಾಡಿದ್ದೇವೆ? ಎಂಬ ಅಂಶ ನಾಚಿಕೆ ಹುಟ್ಟಿಸುತ್ತದೆ.

"ತಾವು ಬಹಳ ಬರೆಯಲಿಲ್ಲ" ಎಂದು ತೀ. ನಂ. ಶ್ರೀ. ಪದೇ ಪದೇ ಹೇಳಿಕೊಳ್ಳುತ್ತಾರೆ. ಆದರೆ ಅವರು ಬರೆದದ್ದೆಲ್ಲ ಸೂತ್ರವಾಗಿದ್ದು, ಅದಕ್ಕೆ ನಾವು ಬರೆಯಬೇಕಾದ ವ್ಯಾಖ್ಯಾನ ಬಹಳಷ್ಟಿದೆ.

■■

ಆಕರ : ಮಾರ್ಗ ಸಂಪುಟ-೩

೯೪

ಪು.ತಿ.ನ. ಅವರ ಕಾವ್ಯಭಾಷೆ

ಅಸ್ಪಷ್ಟವಾದ, ಅಹಿತಕರವಾದ ಹೆಜ್ಜೆಹಾಕಿ ಒಂದು ಕಾವ್ಯಮಾರ್ಗವನ್ನು ಅಂದಗೆಡಿಸುವವರು ಹೇರಳ; ಸ್ಪಷ್ಟವಾದ, ಹಿತಕರವಾದ ಹೆಜ್ಜೆಹಾಕಿ ಅಂದಗೊಳಿಸುವವರು ವಿರಳ. ಇಂಥ ವಿರಳಸಾಹಿತಿಗಳಿಂದ ಒಂದು ಸಾಹಿತ್ಯಪ್ರಕಾರ ಅರ್ಥ ಪಡೆಯುತ್ತದೆ; ಆಕಾರ ಪಡೆಯುತ್ತದೆ. ಹೀಗಾಗಿ ಇವರಲ್ಲಿ ಯಾವುದೇ ಒಬ್ಬನ ಸಾಹಿತ್ಯದ ಉದ್ದೇಶ, ವಸ್ತು, ತಂತ್ರ, ಭಾಷಾಪ್ರಯೋಗ ಮೊದಲಾದವುಗಳ ಅಭ್ಯಾಸ, ಈ ಇಡೀ ಸಾಹಿತ್ಯ ಪ್ರಕಾರದ ಅಭ್ಯಾಸದ ಒಂದು ಅಂಗವೆನಿಸುತ್ತದೆ. ಈ ಅರ್ಥದಲ್ಲಿ ಪು.ತಿ.ನ. ಅವರ ಭಾಷೆ ನಮ್ಮ ನವೋದಯ ಸಾಹಿತ್ಯಭಾಷೆಯ ಅನೇಕ ಪದರುಗಳಲ್ಲಿ ಒಂದು.

ಅನುಭೂತಿ, ಅಭಿವ್ಯಕ್ತಿ- ಇವು ಕವಿಯಾದವನು ಕಾವ್ಯನಿರ್ಮಿತಿಯಲ್ಲಿ ನಿರ್ವಹಿಸಬೇಕಾದ ಮಹಾಸಿದ್ಧಿಗಳು. ಇವುಗಳಲ್ಲಿ ಅನುಭೂತಿವಲಯವು ಅಧ್ಯಯನ, ಅಲೋಕನ, ಚಿಂತನ, ದರ್ಶನ ಇತ್ಯಾದಿಗಳ ಸಮಷ್ಟಿಯಾಗಿದ್ದರೆ, ಅಭಿವ್ಯಕ್ತಿವಲಯವು ತಂತ್ರ, ನಿರೂಪಣೆ, ಶೈಲಿ, ಭಾಷಾಪ್ರಯೋಗ ಇತ್ಯಾದಿಗಳ ಸೃಷ್ಟಿಯಾಗಿರುತ್ತದೆ. ಸಾಹಿತ್ಯದ ಸಾರ್ಥಕತೆಯಿರುವುದು, ಕವಿಯಾದವನು ಈ ಎರಡನ್ನೂ ಸಮಪ್ರಮಾಣದಿಂದ ತೂಗಿಸಿಕೊಂಡು ಹೋಗುವಲ್ಲಿ.

ಕವಿಯ ಸರ್ವಾನುಭೂತಿಗಳು ಸಾಕ್ಷಾತ್ಕಾರ ಪಡೆಯುವಲ್ಲಿ ಭಾಷೆಯೇ ಮಾಧ್ಯಮವಾಗಿ ಬರುವುದರಿಂದ, ಅದನ್ನು ಸರ್ವಸಮರ್ಪಕವಾಗಿ ಬಳಸಿದಷ್ಟೂ ಅವನ ಕೃತಿಗೆ ಕಾಂತಿ ಬರುತ್ತದೆ. ಯಾವುದೇ ಕಾಲದ ಭಾಷೆ, ಜಾನಪದ, ಶಿಷ್ಟಪದ ಮತ್ತು ಗ್ರಂಥಸ್ಥ ಎಂದು ಮೂರು ತೆರನಾಗಿರುತ್ತಿದ್ದು, ಗ್ರಂಥಸ್ಥವು ಮೊದಲಿನ ಎರಡರ ಸಾರವನ್ನು ಹೀರಿ ಬೆಳೆದಿರುತ್ತದೆ. ಸಮರ್ಥರಾದ ಸಾಹಿತಿಗಳು ಈ ಗ್ರಂಥಸ್ಥ ಭಾಷೆಯಲ್ಲಿಯೂ ತಮ್ಮ ವೈಯಕ್ತಿಕತೆಯನ್ನು ಸಾಧಿಸಿ 'ವ್ಯಕ್ತಿಭಾಷೆ'ಯಿಂದ ಕಂಗೊಳಿಸುತ್ತಾರೆ. ಪು.ತಿ.ನ. ಅವರು ಕನ್ನಡದ ಒಬ್ಬ ಅಗ್ರಮಾನ್ಯ ಕವಿಯಾದುದರಿಂದ ಅವರ ಭಾಷೆಯನ್ನು ಈ ದೃಷ್ಟಿಯಿಂದ ನೋಡುವ ಅಪೇಕ್ಷೆಯುಂಟಾಗುತ್ತದೆ.

ನವೋದಯದೊಂದಿಗೆ ಹುಟ್ಟಿ, ನಿರಂತರವಾಗಿ ಸಾಹಿತ್ಯೋದ್ಯೋಗದಲ್ಲಿ ತೊಡಗಿದವರು ಪು.ತಿ.ನ. ಸಾಹಿತ್ಯಭಾಷೆ, ಹದವಾಗಿರದ ಕಾಲವದು. ಕರ್ನಾಟಕದ ದಕ್ಷಿಣದಲ್ಲಿ ಗ್ರಂಥಸ್ಥಶೈಲಿ, ಉತ್ತರದಲ್ಲಿ ಕಂಠಸ್ಥಶೈಲಿಗಳು ರೂಹುದಳೆಯುತ್ತಲಿದ್ದ ಆ ಸಮಯದಲ್ಲಿ ಸರ್ವಮಾನ್ಯವೆನಿಸುವ ಆಧುನಿಕ ಸಾಹಿತ್ಯಭಾಷೆಯನ್ನು ಹದಗೊಳಿಸಿ

ಅದನ್ನು ಗದ್ಯ, ಪದ್ಯ, ನಾಟಕಗಳಿಗೆ ಪ್ರಯೋಗಿಸುವ ಹೊಣೆ ಆ ಕಾಲದ ಲೇಖಕರ ಮೇಲಿದ್ದಿತು. ಪರಸ್ಪರ ತಿಳುವಳಿಕೆಯ ಕೃಷಿಯಿಂದಾಗಿ ಇವರು ಭಾಷೆಯನ್ನು ಕಾಲಧರ್ಮಕ್ಕೆ ತಕ್ಕಂತೆ ಮಣಿಸಿದರು; ಕಾವ್ಯಧರ್ಮಕ್ಕೆ ತಕ್ಕಂತೆ ದುಡಿಸಿದರು. ಅಂದರೆ ಅಲಂಕಾರದ ಸೊಬಗು, ಆಲೋಚನೆಯ ಹೊಳಪು, ವ್ಯಂಜಕತೆಯ ಚೈತನ್ಯ ಇತ್ಯಾದಿಗಳನ್ನು ತುಂಬಿ ಭಾಷೆಯ ಶಕ್ತಿಕೋಶಗಳನ್ನು ಬಲಪಡಿಸಿದರು. ಇವರಲ್ಲಿ ಪು.ತಿ.ನ. ಅವರೂ ಒಬ್ಬರು.

ಪು.ತಿ.ನ. ಅವರು ನಿರ್ಮಿಸಿದ ಸಾಹಿತ್ಯವು ಕಾವ್ಯ, ಪ್ರಬಂಧ ನಾಟಕ - ಹೀಗೆ ಗದ್ಯ, ಪದ್ಯ, ದೃಶ್ಯರೂಪಗಳಲ್ಲಿ ಮೈವೆತ್ತಿದೆ. ಈ ರೂಪತ್ರಯದ ಒಡಲಲ್ಲಿ 'ಚಿಂತನ ಶೀಲತೆ' ಪ್ರಾಣವಾಗಿ ಪ್ರವಹಿಸಿದೆಯೆಂಬುದು ಪ್ರಶ್ನಾತೀತವಾದುದು. ಅವರು ಕಲೆ, ಸೃಷ್ಟಿ, ಜೀವನ ಇತ್ಯಾದಿಗಳನ್ನು ತತ್ವಾನ್ವೇಷಕರಾಗಿ ಚಿಂತಿಸುತ್ತಿರುವುದನ್ನು

ಎನ್ನದು ತತ್ವಾನ್ವೇಷಣಕಾರ್ಯ
ಏನೇತಕೆ ಎಂಬುದೆ ಹವ್ಯಾಸ
ಇದನುಳಿದಾಗದು ಪದವಿನ್ಯಾಸ

ಎಂಬ ಮಾತಿನಲ್ಲಿ ಸ್ಪಷ್ಟಪಡಿಸಿದ್ದಾರೆ. ಈ ಅನ್ವೇಷಿತ ಸಂಪತ್ತನ್ನು ಅಭಿವ್ಯಕ್ತಗೊಳಿಸುವಲ್ಲಿ ಅವರು ಬಳಸುವ 'ಭಾಷಾದ್ರವ್ಯ' ಎರಡು ತೆರನಾಗಿದೆಯೆಂದು ಅವರ ಸಮಗ್ರಕೃತಿಗಳ ಪರಿಶೀಲನೆಯಿಂದ ಸುವ್ಯಕ್ತವಾಗುತ್ತದೆ. ಒಂದು : ಗೀತ, ಗೀತನಾಟಕ ಮತ್ತು ಲೇಖನಗಳಿಗೆ ಬಳಸಿದ ಜಟಿಲಭಾಷೆ; ಇನ್ನೊಂದು : ಗೀತ ಮತ್ತು ಲೇಖನಗಳಿಗೆ ಬಳಸಿದ ಸರಳಭಾಷೆ. ಒಬ್ಬ ಸಾಹಿತಿ ಹೀಗೆ ಎರಡು ತೆರನಾದ ಭಾಷೆಯನ್ನು ಬಳಸುತ್ತಿದ್ದರೆ, ಅವುಗಳಲ್ಲಿ ಒಂದು ಕೃತಕಜಟಿಲವಾದರೂ ಆಗಿರಬೇಕಾಗುತ್ತದೆ ಇಲ್ಲವೆ ಕೃತಕಸರಳವಾದರೂ ಆಗಿರಬೇಕಾಗುತ್ತದೆ. ಪು. ತಿ. ನ. ಅವರ ಸಾಹಿತ್ಯದಲ್ಲಿ ಜಟಿಲ ಭಾಷೆಯ ಪ್ರಮಾಣ ಅಧಿಕವಾಗಿದ್ದರೂ ಅವರ ಭಾಷಾಸಿದ್ಧಿ ಇರುವುದು ಸರಳತೆಯಲ್ಲಿಯೇ ಎನ್ನಬೇಕು.

ಗದ್ಯದಿಂದ ಪದ್ಯವನ್ನು ಪ್ರತ್ಯೇಕಿಸುವ ಪ್ರಧಾನ ಅಂಶ ಛಂದಸ್ಸು. ಇಲ್ಲಿ ಆಶಯಕ್ಕೆ ಊನ ಬರದಂತೆ ಭಾಷೆಯನ್ನು ಛಂದೋಬದ್ಧವಾಗಿ ಮುನ್ನಡೆಸಬೇಕಾಗುತ್ತದೆ. ಈಗ ಕೆಲವರ ಕೈಯಲ್ಲಿ ಭಾಷೆಯಾದರೂ ಮುಗ್ಗರಿಸುತ್ತದೆ, ಛಂದಸ್ಸಾದರೂ ಮುಗ್ಗರಿಸುತ್ತದೆ. ಪು.ತಿ.ನ. ಅವರಿಗೆ ಲಯದ ಮೇಲಿನ ಪ್ರಭುತ್ವ ಛಂದಸ್ಸನ್ನೂ ಮೀರಿ ಸಂಗೀತದಲ್ಲಿ ನೆಲೆಯೂರಿದುದರಿಂದ, ಅವರ ಛಂದೋಭಾಷೆ ಕವಾಯತು ಮಾಡುವ ಯೋಧನಂತೆ ನಿರಾಯಾಸವಾಗಿ, ನಿರ್ದಿಷ್ಟವಾಗಿ ಸಾಗುತ್ತದೆ. ಈ ಮಾತಿಗೆ ಅವರ ಗೀತನಾಟಕ ಮತ್ತು ಗೀತಗಳು ವಿಪುಲಸಾಕ್ಷಿ ನೀಡುತ್ತವೆ.

ಬಾನು ತೆರೆದಿರೆ ತಿರೆಯ ತೊಯ್ದಿರೆ ಸೂರ್ಯ ತನ್ನನುರಾಗದಿ
ದೃಷ್ಟಿ ಹೊಂದಿರೆ ರಸೆಗೆ ಹಸುಳೆಯ ಸ್ತನ್ಯಪಾನದ ಭಾವದಿ
ಕನಸು ಮುಂದಿರೆ ನಾಡಿನಳ್ಕರೆ ಹೃದಯದೊಳು ಮಡುವಾಗಿರೆ
ನಮ್ಮ ನಾಡನು ಕುರಿತು ನಾನಿಂದಾವ ತೆರೆದೊಳು ಹಾಡಲಿ

(ನಾಡಿನಳ್ಕರೆ)

ಜನಪದದಂತರ್ಯಾಮಿಯ ಯೋಗಸ
ಮಾಧಿಯ ಕಲಕಿದೆ ಸಮ್ಮಾನ

ಕಣಿವೆಯ ತಳದಾಚಿನೊಳೊಯ್ಯೊಯ್ಯನೆ
ಎಚ್ಚರುತಿದೆ ಮಾಗಿಯ ಮೌನ

(ಯದುಗಿರಿಯ ಮೌನವಿಕಾಸ)

ಈ ಪದ್ಯಗಳಲ್ಲಿಯ ಭಾಷೆ-ಛಂದಸ್ಸುಗಳ ಮೈತ್ರಿ ಅನನ್ಯವಾಗಿದೆ. ನಿರರ್ಗಳವಾದ ಛಂದೋಜಲದಲ್ಲಿ ಸ್ವಚ್ಛವಾದ ಭಾಷಾಮೀನು ಗರಿತೆಗೆದು ಆಡುತ್ತಿರುವ ರೀತಿ ಇಲ್ಲಿಯದು. ಲಯಪ್ರಸ್ತಾರದೊಡನೆ ಪ್ರಕಟಿಸಿದ 'ಹರಿಣಾಭಿಸರಣ' ನಾಟಕ ಮತ್ತು "ಈ ಹಾಡುಗಳನ್ನು ಹಾಡಿಕೊಂಡೇ ಬರೆದೆ" ಎಂಬ 'ಗೋಕುಲ ನಿರ್ಗಮನ'ದ ಮುನ್ನುಡಿಯ ಮಾತುಗಳು, ಸಂಗೀತದಲ್ಲಿ ಭಾಷೆಯನ್ನು ಸೆರೆಹಿಡಿಯುವ ಪು.ತಿ.ನ. ಅವರ ಪರಿಣತಿಯನ್ನು ಸಾರುತ್ತವೆ.

ಮೇಲಿನ ಪದ್ಯಗಳಿಗಿಂತಲೂ ಸರಳವಾದ, ಮುಕ್ತವಾದ ಭಾಷೆಯನ್ನು ಅವರ ಕೆಲವು ಕವನಗಳಲ್ಲಿ ಕಾಣಬಹುದು.

ಮೇ|ಲೊಂದು | ಗರುಡ| ಹಾರು |ತಿಹುದ
ಕೆಳ|ಗದರ| ನೆರಳು|ಓಡು|ತಿಹುದು
ಅದಕೊ ಅದ|ರಿಚ್ಚೆ ಹಾದಿ
ಇದಕು ಹರಿ|ದತ್ತ ಬೀದಿ

ಇದು ಗಾಂಧೀಜಿಯವರನ್ನು ಕುರಿತ ಒಂದು ಅತ್ಯುತ್ತಮ ಪದ್ಯ. ಕೆಳಗಿನ ೨ ಸಾಲುಗಳ ಛಂದಸ್ಸು ಬೇರೆ, ಮೇಲಿನ ೨ ಸಾಲುಗಳ ಛಂದಸ್ಸು ಬೇರೆ. ಮೇಲಿನ ೨ ಸಾಲುಗಳ ಆದಿವರ್ಣಗಳ ಮೇಲಿನ ತಾಳವೂ ಅಪೂರ್ವವಾದುದು. ಹೀಗೆ ಪದ್ಯಗಳನ್ನು ಬಿಟ್ಟರೆ ಕೆಲವು ಪ್ರಬಂಧಗಳಲ್ಲಿ ಬಳಕೆಯಾದ ಭಾಷೆ ಇನ್ನೂ ಸರಳ, ಸುಲಲಿತ. 'ರಾಮಾಚಾರಿಯ ನೆನಪು' ವಿಶೇಷತೆಯಿಲ್ಲದ ಘಟನೆಯಿಂದ ಕೂಡಿದ್ದರೂ ಅದನ್ನು ಭಾಷೆಯಲ್ಲಿ ಎಳೆಎಳೆಯಾಗಿ ಕಟ್ಟಿ ಬೆಳೆಸಿಕೊಂಡು ಹೋದ ಬಗೆ ಮತ್ತು ಅವರೇ ಹೇಳುವಂತೆ ಆಲೋಚನಾ ಪ್ರಚೋದನೆಯಿಂದ ಕೂಡಿದ 'ಭೀತಿ ಮೀಮಾಂಸೆ' ಯ ನಿರೂಪಣಾರೀತಿ ಮನೋಜ್ಞವೆನಿಸಿದೆ.

"ಆ ಇರುಳು ಕಳೆಯಿತು. ಉಷೆಯು ಬಾನಿನ ಜಾರುಗುಪ್ಪೆಯಿಂದ ಜಾರಿ ಹೋಗಿದ್ದಾಳೆ. ಸೂರ್ಯೋದಯವಾಗಿದೆ. ಆದರೆ ಬಿಂಬವಿನ್ನೂ ಯದುಗಿರಿಗೆ ಕಾಣಿಸಿಕೊಂಡಿಲ್ಲ. ಊರಿನಲ್ಲಿ ಜಾತ್ರೆ ನೆರೆಯುತ್ತದೆ. . . . " ಎಂಬ 'ಸ್ವಭಾವೋಕ್ತಿ' ನಿಷ್ಠ ಬರವಣಿಗೆ, "ಐಶ್ವರ್ಯವಂತರಿಂದ ಬಡವರಿಗೆ ತೊಂದರೆಯೋ, ಬಡವರಿಂದ ಐಶ್ವರ್ಯವಂತರಿಗೆ ತೊಂದರೆಯೋ? ಇದನ್ನು ಆಲೋಚಿಸಿ ನಾನು ಬಡವರಿಂದಲೇ ಬಡವರಿಗೆ ತೊಂದರೆ ಎಂಬ ನಿರ್ಧಾರಕ್ಕೆ ಬಂದೆ. ಈ ವಾದಸರಣಿ ಕ್ರಾಂತಿಕಾರಕವಾದುದರಿಂದ ನಾನು ಇಲ್ಲಿ ಈಗ ಬರೆಯುವುದಕ್ಕೆ ಅಂಜುತ್ತೇನೆ. ಅಂಜಿಕೆಯ ಮಾತು ಬಂದಿತಲ್ಲಾ. ಜಗತ್ತು ಯಾರಿಂದ ನಡೆಯುತ್ತದೆ ಎಂಬ ಪ್ರಶ್ನೆಗೆ ಅಂಜಿ ನಡೆಯುವವರಿಂದಲೇ ಎಂಬ ಉತ್ತರ ಸದುತ್ತರವಲ್ಲವೇ?" ಎಂದು ವೈಚಾರಿಕತೆಯನ್ನು ಭಾಷೆಯಲ್ಲಿ ನಿರಿನಿರಿಯಾಗಿ ಮುನ್ನಡೆಸುವ ರೀತಿ ಅನುಕರಣೀಯವೂ ಅನನುಕರಣಿಯವೂ ಆಗಿದೆ. ಭಾವ, ಭಾಷೆಯಲ್ಲಿ ಹೆಪ್ಪುಗಟ್ಟುವ ರೀತಿಯಿದು. ವೈಚಾರಿಕ ನೀಲನಕ್ಷೆ, ಭಾಷಾಕಟ್ಟಡದ ಮೂಲಕ ತುಂಬ ಸುಂದರವಾಗಿ ಮೇಲೇಳುತ್ತಿರುವ ಸೊಬಗು ಇಲ್ಲಿದೆ. ಆದರೆ ಈ ಸರಳತೆ ಪು.ತಿ.ನ. ಭಾಷೆಯ ಮುಖ್ಯ ಲಕ್ಷಣವಾಗಿಲ್ಲದಿರುವುದು ದುರ್ದೈವದ ಸಂಗತಿಯಾಗಿದೆ. ಅಂದರೆ ಕ್ಲಿಷ್ಟರಚನೆಯೇ ಅವರಲ್ಲಿ ಪ್ರಧಾನವಾಗಿ ಅವರ ಬರವಣಿಗೆಯ ಮುಕ್ಕಾಲು ಪಾಲನ್ನು ವ್ಯಾಪಿಸಿದೆ. ಈ ಅಂಶವನ್ನು "ಸರಳತೆಯ ಒಂದು ತುದಿಯಿಂದ, ಸಂಸ್ಕೃತ ಭೂಯಿಷ್ಠತೆ ಮತ್ತು ಕ್ಲಿಷ್ಟತೆಗಳ ಮತ್ತೊಂದು ತುದಿಯನ್ನು

ಶ್ರೀ. ಪು.ತಿ.ನ. ಅವರ ಶೈಲಿ ಮುಟ್ಟಬಲ್ಲದು" ಎಂದು ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ. ಇದಕ್ಕೆ ಮಾದರಿ:

ಮರುಗುವೆಯ ನೀ ಗೆಳೆಯ ನಮ್ಮ ನಾಡಿನ ಪರಿಗೆ
ಜನವಿಧಭಿಮಾನ ಕೃಪಣಮಸೂಯಾಭೂಯಿಷ್ಠ
ಮನುಕರಣಪಟುನಟಶೀಲ ಮನಸ್ಥಿತಂ
ಸಿರಿಯೋ ತಂದ್ರೋಪಹತಮುಚ್ಛಿಷ್ಟಭೋಗಿಮನಂ
ಅಸುರಲೋಭೋತ್ಸೃಷ್ಟಿ ವಿಜ್ಞಾನಯಂತ್ರಮದ
ವಾರಣಾವಿಷ್ಟನಾಗರಿಕ ನಿಸ್ವಾದು ನಿ
ಸ್ಸಾರ ಜೀವನಂ ಅಲ್ಪಾರ್ಥಂ ಸ್ವಲ್ಪಕಾಮಂ
ವಿಸರ್ಜಿತಶಿವಮಹೋ ವಿಗಳಿತಾತ್ಮವಿದೆಂದು?

ದೇಶದ ಸಂಸ್ಕೃತಿ ಅವನತಿಹೊಂದಿದೆಯೆಂಬುದನ್ನು ಹೇಳಲು ಬಳಸಿದ ಗಚ್ಚು ಸಿಮೆಂಟಿನ ಗಾರೆಯಂತಹ ಈ ಭಾಷಾರಚನೆಯನ್ನು ಬಿಚ್ಚಲು ಕಬ್ಬಿಣದ ಉಳಿ-ಚಾಣಗಳೇ ಬೇಕು.

ಬೆಳು ಬೆಳಗಾಯಿತು, ಎಳ ಬೆಳಕಾಡಿತು
ದೇವನ ಹಳ್ಳಿಯ ನೆಲ ನಲಿದಿತ್ತು
ಆತ್ಮೋಲ್ಲಾಸದ ಮಧುರಾಲಾಪದ
ತೊಟ್ಟಿಲ ಮಗುವೊಲು ಜಗವುಲಿದಿತ್ತು

ಎಂಬುದನ್ನು ಬರೆದ ಕೈ "ತಂದ್ರೋಪಹತಮುಚ್ಛಿಷ್ಟಭೋಗಿಮನಮಸುರಲೋಭೋತ್ಸೃಷ್ಟಿ ವಿಜ್ಞಾನಯಂತ್ರ ಮದವಾರಣಾವಿಷ್ಟನಾಗರಿಕನಿಸ್ವಾದು ನಿಸ್ಸಾರ ಜೀವನಂ" ಎಂಬುದನ್ನು ಬರೆಯಿತೆಂದು ನಂಬುವುದು ಕಷ್ಟ. ಕುವೆಂಪು ಅವರು ಸಂಸ್ಕೃತವನ್ನು ನಿಬಿಡವಾಗಿ ಬಳಸುತ್ತಿದ್ದರೂ "ಸ್ವರ್ಣಸಲಿಲ ಸಮಶೀತಲದೀಧಿತಿ ಶೋಭಿಸೆ ಪ್ರಾಚ್ಯ ದಿಗಂತದಲಿ I ಕುಣಿ ಓ ಮೋಹಿನಿ ಕವನಕಲಾಪಿನಿ ಮಾನಸಮಾಯಾ ಮಂದಿರದಿ" ಎಂದು ನೃತ್ಯೋಚಿತವಾಗಿ ಬಳಸುತ್ತಾರೆ. ಆದರೆ ಪು.ತಿ.ನ. ಅವರಲ್ಲಿ ಸಂಸ್ಕೃತ ಬಿಡಿಬಿಡಿಯಾಗಿ ಬರದೆ ಅಖಂಡವಾಗಿ ಪ್ರವಹಿಸಿ, ಓದು ಒಜ್ಜೆಹೋಗುತ್ತದೆ. ಹೀಗೆ ಸಂಸ್ಕೃತದ ವಿಪುಲ ಬಳಕೆಗೆ ಕಾರಣಗಳೂ ಇಲ್ಲದಿಲ್ಲ. ಶ್ರೀಯುತರದು ಸಂಸ್ಕೃತವನ್ನು ಜೀರ್ಣಿಸಿಕೊಂಡ ಜೀವ. ಸಂಪ್ರದಾಯಸ್ಥ ಬ್ರಾಹ್ಮಣಕುಟುಂಬದಲ್ಲಿ ಹುಟ್ಟಿ, ಬಾಲ್ಯದಿಂದ ಸಂಸ್ಕೃತವನ್ನು ಬದುಕಿದ ಅವರಿಗೆ ಅಭಿವ್ಯಕ್ತಿಪ್ರಸಂಗದಲ್ಲಿ ಸಂಸ್ಕೃತಶಬ್ದಗಳಷ್ಟು ತಟ್ಟನೆ ಕನ್ನಡ ಶಬ್ದಗಳು ನೆನಪಾಗುವುದಿಲ್ಲ. ಮೇಲಾಗಿ ಚಿಂತನ ಶೀಲತೆಯಿಂದ ಸಾಕ್ಷಾತ್ಕಾರವಾಗುವ ಭಾರವಾದ ವಿಚಾರಗಳನ್ನು ಎತ್ತಿತರಲು ಗಟ್ಟಿಮುಟ್ಟಾದ, ಮೊನಚಾದ ಸಂಸ್ಕೃತಪದಪಾತಾಳಗರಡಿಗಳನ್ನು ಬಳಸುವುದು ಅವರಿಗೆ ಅನಿವಾರ್ಯವೆನಿಸಿ ಭಾಷೆ ಪೆಡಸಾಗುತ್ತದೆ. ಕೆಲವೊಮ್ಮೆ

ವಾರಣಾ I ವಿಷ್ಟನಾ।ಗರಿಕ ನಿ।ಸ್ವಾದು ನಿ।
ಸ್ಸಾರ ಜೀ।ವನಂ ಅ।ಲ್ಪಾರ್ಥಂ ಸ್ವ।ಲ್ಪಕಾಮಂ

ಎಂಬಂತೆ ಬರುವ ಗಣಗಳು ಪದಗಳನ್ನು ತುಂಡುಗೊಳಿಸುತ್ತವೆ. ಐದು ಮಾತ್ರೆಯ ಗಣಯೋಜನೆಯ ಮಧ್ಯೆ 'ವನಂ ಅ', 'ಲ್ಪಾರ್ಥಂ ಸ್ವ' ಎಂಬ ೫, ೬ ಮಾತ್ರೆಯ ಗಣಬರುವುದು ಹಿತವಾದ ಗಣ್ಯವೈವಿಧ್ಯವಲ್ಲ, ಅಹಿತವಾದ ಗಣದೋಷ. ಸಂಸ್ಕೃತ ಸೇರಿ ಕೊಂಡಲ್ಲೆಲ್ಲ ಈ ದೋಷ ಸ್ವಲ್ಪ ಹೆಚ್ಚು. ಇದರಿಂದ ಪದಶಯ್ಯೆಯ ಸಮತಲ

ಕೆಟ್ಟು ಹೋಗುತ್ತದೆ. ಇದಲ್ಲದೆ ಮೇಲಿನ ಪದ್ಯದ ಮೊದಲ ಸಾಲು ತೀರ ಸರಳ, ಮಿಕ್ಕ ಏಳು ಸಾಲು ತೀರ ಜಟಿಲ. ಹೀಗೆ ಒಂದೇ ಪದ್ಯದಲ್ಲಿಯೇ ಭಾಷೆಯ ವಿಷಮಪ್ರಯೋಗವೂ ಅನೇಕ ಸಲ ಇಣಿಕಿದೆ. ಹೀಗಾಗಿ ಪು.ತಿ.ನ. ಅವರಿಗೆ ಸಂಸ್ಕೃತ ವರವೂ ಹೌದು, ಶಾಪವೂ ಹೌದು. ಈ ಅಂಶವನ್ನು ಸಹೃದಯರಂತೆ ಸ್ವತಃ ಅವರೇ ಅರಿತಿದ್ದಾರೆ. "ಭಾಷಾಕ್ಲೇಶಗಳು ಇವುಗಳಲ್ಲಿ (ಕವನಗಳಲ್ಲಿ) ನನಗೇ ತೋರಿಬಂದಿವೆಯೆಂದ ಮೇಲೆ ಕಾವ್ಯರಸಜ್ಞರ ರುಚಿಗೆ ಅವು ತಪ್ಪಿಸಿಕೊಳ್ಳುವವೇ? ಈ ಕ್ಲಿಷ್ಟತೆ ನನ್ನ ಸ್ವಭಾವಕ್ಕೆ ಸೇರಿದುದೇನೋ" (ಗಣೇಶದರ್ಶನ-ಮುನ್ನುಡಿ) - "ಸಂಸ್ಕೃತಶಬ್ದಗಳ ಪ್ರಾಚುರ್ಯ ಮತ್ತೊಂದು ಕುಂದು" (ಗಣೇಶದರ್ಶನ -ಮುನ್ನುಡಿ) -ಎಂದು ಅವರೇ ಒಪ್ಪಿಕೊಳ್ಳುವಷ್ಟರ ಮಟ್ಟಿಗೆ ಸಂಸ್ಕೃತ ಮತ್ತೆ ಮತ್ತೆ ದಾಳಿರೂಪದಲ್ಲಿ ನುಗ್ಗಿ ಬರುತ್ತಲಿದೆ. ಒಮ್ಮೊಮ್ಮೆ ಅನುಭವವನ್ನು ಅವತರಣಗೊಳಿಸುವಲ್ಲಿ ಭಾಷೆಯೊಂದಿಗೆ ಒಂದು ರೀತಿಯ ದೊಡ್ಡ ಗುದಮುರಿಗೆಯನ್ನೇ ಹಾಕುವಂತೆ ಭಾಸವಾಗುತ್ತದೆ. ಇದಕ್ಕೆ ಚಿಂತನಪರ ಪ್ರಬಂಧಗಳಲ್ಲಿಯ ಕೆಲವು ವಾಕ್ಯಗಳನ್ನು ನೋಡಬಹುದು : "ಆದುದರಿಂದ ರಸಸ್ಥಿತರು ಆತ್ಮನ್ಯೇವಾತ್ಮನಾ ತುಷ್ಟರು, ತಮಗೆ ತಾವು ಮಾಡತಕ್ಕ ಕಾರ್ಯವಾವುದೂ ಇಲ್ಲದಿದ್ದರೂ ರಜೋಗುಣ ಸಮೂದ್ಭೂತವಾದ ಕರ್ಮಪ್ರವೃತ್ತಿ ತಮ್ಮಲ್ಲಿ ಉಂಟಾದಾಗ, ಪ್ರಾಪ್ತಕರ್ಮಗಳನ್ನು, ಸಕ್ತರೋಪಾದಿಯಲ್ಲಿ, ನಿರಾಸಕ್ತಿಯಿಂದ ಆಚರಿಸಿ ತದ್ಗುಣ ಬಂಧನದಿಂದ ಮುಕ್ತರಾಗವುದಲ್ಲದೆ, 'ನ ನಿವೃತ್ತಾನಿ ಕಾಂಕ್ಷತಿ' ಎಂಬಂತೆ ತತ್ತತ್ಕರ್ಮದಲ್ಲೇ ಸಕ್ತರಾಗುವುದಿಲ್ಲ; ತತ್ತತ್ಕರ್ಮಫಲದಲ್ಲೂ ಅವರು ಉದಾಸೀನರೇ" (ಕಾವ್ಯಕುತೂಹಲ-೩೬). ಪಾರಿಭಾಷಿಕ ಪದಗಳಿಂದ ಇಡಿಕಿರಿದು, ಈ ಗದ್ಯವೆಲ್ಲಾ ಗಂಟು ಗಂಟಾಗಿ, ಮುಂದುವರಿಯದೆ ತೊಳಲುತ್ತದೆ; ಓದುಗನು "ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದ" ಯಾತನೆಯನ್ನು ಅನುಭವಿಸುತ್ತಾನೆ. ಹೀಗೆ ಅವರ ಚಿಂತನಶೀಲ ತಿಳಿನೀರನ್ನು ಭಾಷಾಕ್ಲಿಷ್ಟತೆಯ ಶೈವಾಲ ಮುಚ್ಚಿಬಿಡುತ್ತದೆ.

ನವೋದಯ ಸಾಹಿತ್ಯದ ಒಂದು ಲಕ್ಷಣ ಪ್ರಾಸಪ್ರಿಯತೆ. ಇದು ಒಮ್ಮೊಮ್ಮೆ ಕಾವ್ಯಭಾಷೆಯನ್ನು ಕೃತಕಗೊಳಿಸುತ್ತದೆ. ಪು. ತಿ. ನ. ಅವರ ಭಾಷೆ

ಒಲುಮೆ ಬೇಹಿಗಾ ಮೇಘಮರಾಳ
ಮುನಿಯ ತೋಹಿಗಮರಾಂಗನೆ ಮೇಳ
ಸುರರೆಡೆಯೊಳ ಕಲಿಪುರುಷ ಕರಾಳ
ಆರರಿವರು ನಿನ್ನೈಂದ್ರಜಾಲ?

ಹೀಗೆ ಆಗಾಗ ಪ್ರಾಸಪಾಶಕ್ಕೆ ಕೊರಲು ಒಡ್ಡುತ್ತದೆ. ಇಂಥ ಪ್ರಸಂಗದಲ್ಲಿ ಕವಿಮನಸ್ಸು ಪ್ರಾಸಕ್ಕೆ ತವಕಿಸಿ, ಕಾವ್ಯವನ್ನು ಕಡೆಗಣಿಸುವ ಅಪಾಯವಿದೆ.

ಇದರ ಭಾಷೆಯ ಇನ್ನೊಂದು ದೋಷವೆಂದರೆ ಕನ್ನಡ -ಕನ್ನಡ, ಕನ್ನಡ-ಸಂಸ್ಕೃತಗಳ ಸಾಂದ್ರವಾದ ಸಂಧಿ ಮತ್ತು ಸಮಾಸಗಳನ್ನು ಬೆಸೆಯುವುದು. ಉದಾ: "ಬಯಸುವಗಾಸರೆಯಿದಾರ್ತರಿಗಾಸರೆ ಯಿದವವಗಾಸರೆಯಿದು", "ದಿವಮರೆತಪ್ಸರೆ ಎಚ್ಚರೆ", "ವಿಸ್ಮೃತಿಗೆಯ್ದಿರುವಾತ್ಮನನುಜ್ಜೀವಿಪ ತೆರದಿ", "ಗಾನವನ್ನೀ ಭುವಿಯನಾವರಿಪುದಾಗ" ಇತ್ಯಾದಿ. ಇಂಥವೇ ಇನ್ನೊಂದು ದೋಷವೆಂದರೆ ಲಯಕ್ಕೆ ಕಟ್ಟುಬಿದ್ದು ಪದಗಳನ್ನು ವಿರೂಪಗೊಳಿಸುವುದು. ಉದಾ: ಹೇರಾಳ (ಹೇರಳ), ಮಾತೊಳೆ (ಮಾತಿನೊಳೆ), ಪರಿಗೆ (ರೀತಿಗೆ), ಕುರಿತಿಂದು (ಕುರಿತು+ಇಂದು), ಗುಳಿಗೆ (ತಗ್ಗಿನೊಳಗೆ) ಇತ್ಯಾದಿ. ಇಂಥ ಪ್ರಸಂಗಗಳಲ್ಲಿ ಕಲ್ಲು ಬಂಡೆಗಳ ಸೆರೆಬಿಡಿಸಿಕೊಂಡು ಪ್ರಯತ್ನಪೂರ್ವಕ ಹರಿವ ಹೊಳೆಯಂತೆ ಇವರ ಬರವಣಿಗೆ ತೊಳಲುತ್ತ ತಡೆತಡೆದು ಮುಂದುವರಿಯುತ್ತದೆ.

ಹೀಗಾಗಿ ಪು.ತಿ.ನ. ಅವರ ಅನುಭೂತಿಯಲ್ಲಿ ಆಲೋಚನಾ ಪರತೆ, ಅಧಿಕ, ಅಭಿವ್ಯಕ್ತಿಯಲ್ಲಿ ಚೈತನ್ಯಶೀಲತೆ ಕಡಿಮೆಯೆಂದು ಹೇಳಬೇಕಾಗುತ್ತದೆ.

ಒಟ್ಟಿನಲ್ಲಿ, ಪು.ತಿ.ನ. ಅವರು ಸಮುದ್ರವನ್ನು ಕುರಿತು ಬರೆದ ಕೆಳಗಿನ ಕವನ ಅವರ ಸಾಹಿತ್ಯಶಯ್ಯೆಗೆ ಮಾದರಿಯಾಗಿಯೂ ನಿಲ್ಲುತ್ತದೆ; ಅವರ ಸಾಹಿತ್ಯಕರ್ಮದ ಸ್ವರೂಪವನ್ನೂ ಧ್ವನಿಸುತ್ತದೆ:

ಗುಳಿಗೆ ಬಿದ್ದಾರುತಿಹ ಭೂತದಂತೊರಲುತಿದೆ
ನಿಡುಸುಯ್ಯುತೀ ಕಡಲು ತನ್ನ ಬಂಧಿಸುವರೆಯ
ದಡವನಲೆವ ಪಂಜದಿಂ ಪರಚಿ -ಮೇಲೇರಿ ಬರ
ಲೆಳಸಿ ನಿಮಿನಿಮಿರಿ ಬಿದ್ದೆದ್ದುರುಳಿ ಕೊನೆಗೆ ಈ
ಕರೆಗೆಯೇ ಕೈಚಾಚುತಿದೆ ನೆರವ ಕೋರುತ್ತ.
ದಿಟ ಮಹದ್ವ್ಯಕ್ತಿ ಈ ನೀರನಿಧಿ; ಚಿರವಿದರ
ತಟದೆಲ್ಲೆಯಪಮಾನದಾರ್ತ ನಿರ್ಘೋಷ. ಇದ
ಸೆರೆಯೊಳಿಟ್ಟಾಳ್ವರಾರ್?

ಈ ಕವನ ಅತ್ಯಪೂರ್ವವಾದರೂ ಸಂಸ್ಕೃತ, ಕನ್ನಡ, ಹಳಗನ್ನಡ, ಹೊಸಗನ್ನಡಗಳ ಮಿಶ್ರಣ ಮತ್ತು ಬೆಸುಗೆಗಳಿಂದ ಹದಗೊಳ್ಳದ ಶಯ್ಯೆ ಕಾರಣವಾಗಿ ಓದುವಾಗ ಆಗಬೇಕಾದಷ್ಟು ಪರಿಣಾಮ ಆಗುವುದಿಲ್ಲ. ಎಷ್ಟೇ ಗುದಮುರಗೆ ಹಾಕಿದರೂ ಇಲ್ಲಿ ಸಮುದ್ರಾನುಭೂತಿಯನ್ನು ಭಾಷೆ ಸಮರ್ಪಕವಾಗಿ ಗ್ರಹಿಸಿಲ್ಲವೆಂದೇ ಹೇಳಬೇಕು. ಈ ಪದ್ಯದಲ್ಲಿ ಸಮುದ್ರವು "ಗುಳಿಗೆ ಬಿದ್ದು ಕೂಗಿಕೊಳ್ಳುತ್ತಿರುವ ಭೂತದಂತೆ ನಿಟ್ಟುಸಿರು ಬಿಡುತ್ತ, ತನ್ನನ್ನು ಬಂಧಿಸಿರುವ ಬಂಡೆಗಳ ದಡವನ್ನು ಅಲೆಯ ಪಂಜದಿಂದ ಪರಚುತ್ತ, ಮೇಲೇರಿ ಬರಲು ಪ್ರಯತ್ನಿಸಿ, ಮತ್ತೆ ಮತ್ತೆ ಕೆಳಗೆ ಬಿದ್ದು, ಕೊನೆಗೆ ನಿಸ್ಸಹಾಯಕವಾಗಿ ದಡದ ಕಡೆಗೆ ಕೈಚಾಚುತ್ತದೆ." ಇದೇ ರೀತಿ ಪು.ತಿ.ನ. ಅವರ "ದಿಟಮಹತ್ವ್ಯಕ್ತಿತ್ವ"ದ ಸ್ಥಿತಿಯೂ ಭಾಷಾಮಾಧ್ಯಮದ "ಗುಳಿಗೆ ಬಿದ್ದಾರುತಿಹ" ಸಮುದ್ರದಂತಾಗಿದೆ.

■■

ಆಕರ : ಮಾರ್ಗ ಸಂಪುಟ–೧

೯೫

ಕರ್ನಾಟಕ ದೇಶದ ಕಥೆ

ದ್ರಾವಿಡ ಭೂಮಿಯ ಒಂದು ಭಾಗ ಕರ್ನಾಟಕ. ವಿಶಾಲವಾದ ನಾಡು ಎಂಬುದೇ ಇದರ ಸರಿಯಾದ ಅರ್ಥವೆಂದು ತೋರುತ್ತದೆ. ಇದರ ವೈಶಾಲ್ಯದ ಬಗ್ಗೆ ಸಂಶೋಧಕರು ಆಗಾಗ ಚಿಂತನೆ ನಡೆಸಿ ಉತ್ತರದ ಮೇರೆ ನರ್ಮದೆ, ದಕ್ಷಿಣದ ಮೇರೆ ಕಾವೇರಿ ಎಂಬ ಸತ್ಯವನ್ನು ಸ್ಥಾಪಿಸಿದ್ದಾರೆ. ಆದರೆ ದಕ್ಷಿಣದಲ್ಲಿ ಉಳಿಸಿಕೊಂಡಂತೆ ಅದು ಉತ್ತರದಲ್ಲಿ ತನ್ನ ಮೇರೆಯನ್ನು ಉಳಿಸಿಕೊಳ್ಳಲಿಲ್ಲ. ಇದು ಕ್ರಮೇಣ ನರ್ಮದೆಯಿಂದ ಗೋದಾವರಿ, ಗೋದಾವರಿಯಿಂದ ಭೀಮೆಗೆ ಸರಿಯಿತು. ಬಳಿಕ ಇಬ್ಭಾಗವಾಗಿ ಬಿರಿದು, ಹಲವು ಭಾಗವಾಗಿ ಹರಿದು, ಕೊನೆಗೆ ಎಡ–ಬಲದವರು ಹಂಚಿಕೊಂಡು ಬಿಟ್ಟ ಸ್ಥಿತಿಗೆ ಇಳಿಯಿತು. ಇದರ ಇತಿಹಾಸ ಹೀಗಿದೆ.

ಕಾವೇರಿಯಿಂದಮಾ ನರ್ಮದಾನದಿವರಂ

ಇತಿಹಾಸದಲ್ಲಿ ಭಾರತವನ್ನು ಉತ್ತರಪಥ–ದಕ್ಷಿಣಪಥವೆಂದು ವಿಭಜಿಸಿ ಕರೆಯಲಾಗಿದೆ. ಇವುಗಳನ್ನು ಬೇರ್ಪಡಿಸಿದ ಮೇರೆ ನರ್ಮದೆಯಾಗಿದ್ದಿತು. "ವಿಕ್ರಮಾದಿತ್ಯನಿಗೂ ಶಾಲಿವಾಹನರಿಗೂ ಉಭಯತರರಿಗೂ ಯುದ್ಧವಾಗಿ, ನರ್ಮದಾ ನದಿ ಪರ್ಯಂತ್ರಕ್ಕೂ ಉಭಯತರು ಕೂಡಿ, ಯುದ್ಧ ಮಾಡುತ್ತ ಹೋಗಿ, ಶಾಲಿವಾಹನ ನದಿ ದಾಟದೇ ಈಚೆಗೆ ನಿಂತುದರಿಂದ, ಈಚೆಗೆ ಶಾಲಿವಾಹನಶಕವಾಯಿತು, ವಿಕ್ರಮನು ಆಚೆಗೆ ದಾಟಿದ್ದರಿಂದ ವಿಕ್ರಮಶಕೆಯಾಯಿತು." ಎಂಬ ಹೇಳಿಕೆ ದಕ್ಷಿಣಾಪಥದ ಉತ್ತರ ಗಡಿರೇಖೆಯನ್ನು ಸೂಚಿಸುತ್ತಿದ್ದರೂ ಇದು ವಿಶಾಲ ಕರ್ನಾಟಕದ ಉತ್ತರ ಗಡಿರೇಖೆಯೇ ಆಗಿದೆ. ಕರ್ನಾಟಕದ ಪುಲಿಕೇಶಿ ಮತ್ತು ಕನೋಜದ ಹರ್ಷವರ್ಧನರು ಇದೇ ನರ್ಮದೆಯ ತೀರದಲ್ಲಿ ಯುದ್ಧ ಕೈಕೊಂಡು ಅವನು ಈ ಕಡೆಗೆ ಬರಬಾರದು, ಇವನು ಆ ಕಡೆಗೆ ಹೋಗಬಾರದು–ಎಂಬ ನಿರ್ಣಯ ಕೈಕೊಂಡುದು ಮೇಲಿನ ಹೇಳಿಕೆಗೆ ಪೋಷಕವಾಗಿದೆ. ಶಂಬಾ ಅವರ 'ಕಣ್ಮರೆಯಾದ ಕನ್ನಡ' ಕೃತಿ ಈ ವಿಷಯವನ್ನು ಇನ್ನೂ ವಿವರವಾಗಿ ಪ್ರತಿಪಾದಿಸುತ್ತದೆ.

ಕಾವೇರಿಯಿಂದಮಾ ಗೋದಾವರಿ ವರಂ

ಶಾತವಾಹನ(ಕ್ರಿ.ಶ.೨೨೫), ಬಾದಾಮಿ ಚಾಲುಕ್ಯ(ಕ್ರಿ.ಶ. ೬೫೦) ರ ಕಾಲದಲ್ಲಿ ನರ್ಮದೆಯವರೆಗಿದ್ದ ಕರ್ನಾಟಕದ ಸೀಮೆ ರಾಷ್ಟ್ರಕೂಟ ನೃಪತುಂಗನ ಕಾಲಕ್ಕೆ (ಕ್ರಿ.ಶ. ೯೫೦) ಅಂದರೆ ೩೦೦ ವರ್ಷಗಳ ಅಂತರದಲ್ಲಿ ಗೋದಾವರಿಯಷ್ಟು ಹಿಂದೆ ಸರಿದಿದ್ದಿತು. "ಕಾವೇರಿಯಿಂದಮಾ ಗೋದಾವರಿ ವರಮಿರ್ದ ನಾಡದಾ ಕನ್ನಡದೊಳ್" ಎಂದು ನೃಪತುಂಗ ಇದನ್ನು ವ್ಯಕ್ತವಾಗಿಯೇ ಹೇಳಿದ್ದಾನೆ. ಇಂದಿಗೂ ಗೋದಾವರಿಯಿಂದ ಸ್ವಲ್ಪ ಕೆಳಗಿರುವ ಪಂಪನ ಆಶ್ರಯದಾತ ಅರಿಕೇಸರಿಯ ರಾಜಧಾನಿ ಬೋಧನ (ನಿಜಾಮಾಬಾದ್ ಜಿಲ್ಲೆ)ದಲ್ಲಿರುವ ದೇಶಮುಖ ಮನೆತನದವರ ಮಾತೃಭಾಷೆ ಕನ್ನಡ. ಗೋದಾವರಿ ತೀರದ ಹಳ್ಳಿಗಳಲ್ಲಿ ಕನ್ನಡ ಮಾತನಾಡುವವರು ಇನ್ನೂ ಇರುವರೆಂದು ತಿಳಿದುಬರುತ್ತದೆ. ಮೇಲೆ ಹೇಳಿದ ರಾಜಧಾನಿ ಬೋಧನದಲ್ಲಿ ೪ ಕನ್ನಡ ಶಾಸನಗಳಿವೆ. ಕರೀಂ ನಗರ ಜಿಲ್ಲೆಯ ಕುರ್ಕಿಯಾಲದ ಬೊಮ್ಮಲಗುಡ್ಡ ಹೆಸರಿನ ಗುಡ್ಡದಲ್ಲಿ ಪಂಪನಿಗೆ ಸಂಬಂಧಪಟ್ಟ ಅಪೂರ್ವ ಶಾಸನ ಲಭ್ಯವಾಗಿದೆ. ಆಂಧ್ರಪ್ರದೇಶದ ಅದಿತಾಬಾದ್ ಜಿಲ್ಲೆಯ ಮುಧೋಳ್ ಮತ್ತು ಚೆನ್ನೂರ್ ತಾಲೂಕುಗಳಲ್ಲಿ ಕನ್ನಡ ಶಾಸನಗಳಿವೆ.

ಬಿರುಕುಬಿಟ್ಟ ಕರ್ನಾಟಕ

ರಾಷ್ಟ್ರಕೂಟರ ಬಳಿಕ ಕರ್ನಾಟಕವನ್ನು ಆಳಿದವರು ಕಲ್ಯಾಣ ಚಾಲುಕ್ಯರು. ಈ ಮನೆತನ ಪತನವಾಗುತ್ತಲೇ ಸೋದರರ ಕಲಹದ ಪರಿಣಾಮದಂತೆ ತುಂಗಭದ್ರೆಯ ಉತ್ತರ ಭಾಗವನ್ನು ದೇವಗಿರಿಯ ಯಾದವರು, ದಕ್ಷಿಣ ಭಾಗವನ್ನು ದ್ವಾರಸಮುದ್ರದ ಹೊಯ್ಸಳರು ಆಳಿದರು. ಈವರೆಗೆ ನರ್ಮದೆಯಿಂದ ಗೋದಾವರಿವರೆಗೆ ಕರಗುತ್ತ ಬಂದಿದ್ದರೂ ಕಾವೇರಿಯಿಂದ ಗೋದಾವರಿ ವರೆಗೆ ಅಖಂಡ ಆಡಳಿತಕ್ಕೆ ಒಳಗಾಗಿದ್ದ ಅದು ಈಗ ಬಿರುಕು ಬಿಟ್ಟಿತು. ಅಂದರೆ ಈವರೆಗೆ ಕರಗುವಿಕೆಯ ಉಪಕ್ರಮದಲ್ಲಿದ್ದ ಈ ನಾಡು, ಈಗ ಬಿರುಕು ಬಿಡುವ ಉಪಕ್ರಮವನ್ನು ಆರಂಭಿಸಿತು. ಆಂತರಿಕ ಕಲಹದಿಂದುಂಟಾದ ಈ ಬಿರುಕಿನಿಂದಾಗಿ ಈ ಮೊದಲು ಸಣ್ಣದಾಗಿದ್ದ ಕರ್ನಾಟಕ ಈಗ ಬಿರಿದು ದುರ್ಬಲವಾಯಿತು.

ಹೋಳಾದ ಕರ್ನಾಟಕ

ಕರ್ನಾಟಕ ಬಿರುಕುಬಿಟ್ಟ ಪರಿಸ್ಥಿತಿ ಮುಂದುವರಿಯುತ್ತಿದ್ದಂತೆ ಯಾದವ ಹೊಯ್ಸಳ ಮನೆತನಗಳು ಉತ್ತರ ಭಾರತದ ಮುಸಲ್ಮಾನರಿಂದ ಹಾಳಾಗಿ, ಉತ್ತರ ಕರ್ನಾಟಕವನ್ನು ಬಹುಮನಿಯವರು ಆಳಿದರು. ದಕ್ಷಿಣ ಕರ್ನಾಟಕವನ್ನು ವಿಜಯನಗರದವರು ಆಳಿದರು. ಬಳಿಕ ಉತ್ತರಕರ್ನಾಟಕವನ್ನು ೪ ಜನ ಶಾಹಿಗಳು ಹಂಚಿಕೊಂಡರು. ದಕ್ಷಿಣ ಕರ್ನಾಟಕವನ್ನು ಮೈಸೂರು –ಕೆಳದಿಯವರು ಹಂಚಿಕೊಂಡರು. ಈ ಸಂದರ್ಭದ ಮುಖ್ಯ ಲಕ್ಷಣವೆಂದರೆ ಕರ್ನಾಟಕದಲ್ಲಿ ಅನ್ಯರಾದ ಮುಸಲ್ಮಾನರು ಆಳಿದುದು ಮತ್ತು ಕರ್ನಾಟಕದ ಹೊರಗಿನ ಗೋವಳಕೊಂಡ, ಅಹಮದ್‌ನಗರಗಳಂಥಹ ಹೊರಗಿನ ರಾಜಧಾನಿಗಳು ಕರ್ನಾಟಕದ ಕೆಲವು ಭಾಗಗಳನ್ನು ಆಳಿದುವು.

ಹಂಚಿಹೋದ ಕರ್ನಾಟಕ

ಎಷ್ಟೇ ಹೋಳಾದರೂ ಈ ನಾಡನ್ನು ಒಳಗಿನಿಂದ ಆಳುವ ಪ್ರಕ್ರಿಯೆಗೆ ಬದಲು ಹೊರಗಿನಿಂದ ಆಳುವ ಅಂದರೆ ಹಂಚಿಕೊಂಡು ಆಳುವ ಪ್ರಕ್ರಿಯೆ ಇಲ್ಲಿ ಆರಂಭವಾಯಿತು. ಮೇಲೆ ಹೇಳಿದ ಶಾಹಿಗಳಲ್ಲಿ ನಿಜಾಮಶಾಹಿ ಹೊರಗಿನ ಅಹಮದ್‌ನಗರ ರಾಜಧಾನಿಯಿಂದ ಕುತುಬ್‌ಶಾಹಿ ಹೊರಗಿನ ಗೋವಳಕೊಂಡದಿಂದ ಆಳುವುದರ ಮೂಲಕ ಈ ಪ್ರಕ್ರಿಯೆ ಆರಂಭವಾಯಿತು. ಬಳಿಕ ಆದಿಲ್ ಶಾಹಿಗಳ ಕೆಲವು ಭಾಗವನ್ನು ಮರಾಠರು ಕಸಿದುಕೊಂಡು ಹೊರಗಿನ ಪುಣೆಯಿಂದ ಆಳಿದರು. ಇಂಗ್ಲಿಷರು ಪ್ರವೇಶಿಸಿದ ಸಂದರ್ಭದಲ್ಲಿ ಮುಂಬೈ ಕರ್ನಾಟಕ ಭಾಗವು ಮುಂಬಯಿ ಕೇಂದ್ರದಿಂದ, ಮದ್ರಾಸ್ ಸರ್ಕಾರದ ಭಾಗವು ಮದ್ರಾಸ್‌ದಿಂದ–ಹೀಗೆ ಹೊರಗಿನಿಂದ ಆಳುವ ಸಂಖ್ಯೆ ವರ್ಧಿಸಿತು. ಈಗ ಮುಸಲ್ಮಾನರ ಪ್ರಾಬಲ್ಯ ಕಾರಣವಾಗಿ ಸವಣೂರು, ಶಿರಾದಂಥ ಮುಸಲ್ಮಾನ ಸಂಸ್ಥಾನಗಳೂ, ಮರಾಠರ ಪ್ರಾಬಲ್ಯ ಕಾರಣವಾಗಿ ರಾಮದುರ್ಗ, ಜಮಖಂಡಿಗಳಂಥ ಮರಾಠಾ ಸಂಸ್ಥೆಗಳು ಅಲ್ಲಲ್ಲಿ ದ್ವೀಪದಂತೆ ತಲೆ ಎತ್ತಿದವು. ಇವರೆಲ್ಲ ಹಂಚಿಕೊಂಡು ಉಳಿದ ಭಾಗ ಮೈಸೂರು ಕರ್ನಾಟಕ, ಕೊಡಗು ಕರ್ನಾಟಕವಾಗಿ ಉಳಿದವು. ಹೀಗೆ ಈ ಹೊತ್ತಿಗೆ ಇವೆಲ್ಲ ಸೇರಿ ಕರ್ನಾಟಕ ೧೯ ಭಾಗಗಳಲ್ಲಿ ಹೋಳಾಯಿತು, ಹಂಚಿಹೋಯಿತು.

ಹೀಗೆ ಕರ್ನಾಟಕವು ಯಾದವ–ಹೊಯ್ಸಳರ ಕಾಲದಲ್ಲಿ ಬಿರುಕುಬಿಟ್ಟು ಬಳಿಕ ಹಲವು ಹೋಳಾಗಿ ಒಳಗಿನ ರಾಜಧಾನಿಯಿಂದ ಆಳಲ್ಪಟ್ಟು ಆ ಮೇಲೆ ಹೊರಗಿನ ರಾಜಧಾನಿಯಿಂದ ಆಳುವ ಅವರಿವರಿಗೆ ಹಂಚಿಹೋಯಿತು. ಒಟ್ಟಾರೆ ೧೯೫೬ರ ಪೂರ್ವದಲ್ಲಿ ಭಾರತದ ಭೂಪಟದಲ್ಲಿ ಕರ್ನಾಟಕದ ನಕ್ಷೆಯೇ ಇರಲಿಲ್ಲವೆಂಬ ಪರಿಸ್ಥಿತಿ ನಿರ್ಮಾಣವಾಯಿತು. ಹೀಗಾಗಲು ಕಾರಣ ಯಾವ ಕಾಲಕ್ಕೂ ನಮ್ಮಲ್ಲಿ ಸ್ವಾಭಿಮಾನ ಸಾಮೂಹಿಕ ಸಂಸ್ಕೃತಿಯಾಗಿ ಅಸ್ತಿತ್ವಕ್ಕೆ ಬರಲಿಲ್ಲ. ಮಯೂರವರ್ಮ, ಕಿತ್ತೂರು ಚೆನ್ನಮ್ಮ ಮೊದಲಾದ ವೈಯಕ್ತಿಕ ಉದಾಹರಣೆಗಳನ್ನು ಸಾಮಾನ್ಯೀಕರಿಸಿ ಮಾತನಾಡುವ ಭ್ರಮೆಯಲ್ಲಿ ನಾವು ಬದುಕುತ್ತ ಬಂದಿದ್ದೇವೆ. ನಾಡನ್ನು ಕಳೆದುಕೊಳ್ಳುತ್ತ ಬಂದ 'ಹೇಡಿತನ' ಆಳಿಸಿಕೊಳ್ಳುತ್ತ ಬಂದ 'ಗುಲಾಮಗಿರಿತನ' ಗಳಿಗೆ ಕಾರಣವೆಂದರೆ ನಾವು ಸ್ವಾರ್ಥಕೇಂದ್ರೀತ ಮನೋಧರ್ಮ ಬೆಳೆಸಿಕೊಳ್ಳುತ್ತ ಸಮೂಹಕೇಂದ್ರೀತ ಮನೋಧರ್ಮ ನಾಶಮಾಡಿಕೊಳ್ಳುತ್ತ ಬಂದುದೇ ಆಗಿದೆ.

ಕರ್ನಾಟಕ ಏಕೀಕರಣ

ಕೇವಲ ಎರಡು ಭಾಗವಾದರೆ 'ವಂಗಭಂಗ' ಹೆಸರಿನ ರಾಷ್ಟ್ರಮಟ್ಟದ ಚಳುವಳಿಯನ್ನು ಬಂಗಾಲಿಗಳು ಮಾಡಿದರು. ೧೯ ಭಾಗವಾದರೂ ತೆಪ್ಪಗಿದ್ದ ಕನ್ನಡಿಗರು, ಆಂಧ್ರದವರು ಕೈಗೆತ್ತಿಕೊಂಡ ಏಕೀಕರಣ ಚಳುವಳಿಯಿಂದ ಸ್ಫೂರ್ತಿ ಪಡೆದು ಕರ್ನಾಟಕ ಏಕೀಕರಣದ ಬಗ್ಗೆ ಆಲೋಚನೆ ಮಾಡಿ ಚಳುವಳಿಯನ್ನು ಆರಂಭಿಸಿದರು. ಹಲವು ವರ್ಷಗಳ ಹಲವು ಬಗೆಯ ಹೋರಾಟದ ಫಲವಾಗಿ ಮಹಾರಾಷ್ಟ್ರ–ಆಂಧ್ರಪ್ರದೇಶಗಳಲ್ಲಿ ಬಹಳಷ್ಟು ಭಾಗ, ತಮಿಳು–ಕೇರಳಗಳಲ್ಲಿ ಒಂದಿಷ್ಟು ಭಾಗ ಕರಗಿ ಹೋಗಿ ಭಾಷಾವಾರು ಪ್ರಾಂತ ರಚನೆ ೨೦ ಜಿಲ್ಲೆಗಳ ಕರ್ನಾಟಕ ಏಕೀಕರಣ ೧೯೫೬ ರಲ್ಲಿ ಕೈಗೂಡಿತು.

ಕನ್ನಡ ಭಾಷೀಕರಣ

"ಭಾಷಾಂತರ ಪ್ರಾಂತರಚನೆ" ತತ್ತ್ವವನ್ನಾಧರಿಸಿ ಕರ್ನಾಟಕ ಏಕೀಕರಣವನ್ನು ಪೂರೈಸಿಕೊಂಡಿತು. ಕರ್ನಾಟಕದಲ್ಲಿ ಆಡಳಿತ ಶಿಕ್ಷಣ ಇತ್ಯಾದಿಗಳೆಲ್ಲ ಕನ್ನಡ ಮಾಧ್ಯಮಗಳಲ್ಲಿಯೇ ನಡೆಯಬೇಕೆಂದು ಇದರ ಅರ್ಥ. ಆದರೆ "ಪ್ರತಿಯೊಬ್ಬನಿಗೂ ತನ್ನ ಮಾತೃ ಭಾಷೆಯಲ್ಲಿಯೇ ಶಿಕ್ಷಣ ಪಡೆಯುವ ಅಧಿಕಾರವಿದೆ" ಎಂಬ ಅರ್ಥದ ಸಂವಿಧಾನವನ್ನೂ ಕೇಂದ್ರ ಸರ್ಕಾರ ರೂಪಿಸಿದೆ. ಇಲ್ಲಿ ದ್ವಂದ್ವ ತಲೆದೋರುತ್ತಿದೆ. ಇದರಿಂದಾಗಿ ಅವಕಾಶಕ್ಕೆ ತಕ್ಕಂತೆ ಒಮ್ಮೆ ರಾಜ್ಯಭಾಷಾಪರ, ಇನ್ನೊಮ್ಮೆ ಅಲ್ಪಸಂಖ್ಯಾತರ ಮಾತೃಭಾಷೆಯ ಪರ ನಡೆದುಕೊಳ್ಳಲು ರಾಜಕಾರಣಿಗಳಿಗೆ ಅವಕಾಶ ಪ್ರಾಪ್ತವಾಯಿತು. ಹೀಗಾಗಿ ಚುನಾವಣೆಯಲ್ಲಿ ಗೆದೆಯುವ ಸಲುವಾಗಿ ರಾಜ್ಯಭಾಷೆಯನ್ನು ಬಲಿಕೊಟ್ಟಾದರೂ ಭಾಷಿಕ ಅಲ್ಪಸಂಖ್ಯಾತರಿಗೆ ತೃಪ್ತಿಪಡಿಸುವುದು ಆರಂಭವಾಯಿತು. ಇದರಿಂದ ಕರ್ನಾಟಕದಲ್ಲಿ ಕನ್ನಡೇತರ ಭಾಷೆಗಳಿಗೆ ಅಗತ್ಯಕ್ಕಿಂತ ಹೆಚ್ಚು ಮಹತ್ವ ಕೊಡಲಾಯಿತು. ಕನ್ನಡ ಮಾಧ್ಯಮವಾಗಿರಬೇಕು, ಇತರ ಮಾತೃಭಾಷೆಗಳನ್ನು ಒಂದು ಭಾಷೆಯಾಗಿ ಕಲಿಯಬೇಕೆಂಬ ನ್ಯಾಯದ ರೇಖೆ ಮೀರಿ ಕನ್ನಡ ಮಾಧ್ಯಮದಂತೆ ಇತರ ಭಾಷಾ ಮಾಧ್ಯಮಗಳೂ ಅಸ್ತಿತ್ವಕ್ಕೆ ಬರತೊಡಗಿದವು. ಕನ್ನಡ ಭಾಷೆಯನ್ನಾಧರಿಸಿ ರಾಜ್ಯ ರಚಿಸಿದುದು, ಕನ್ನಡೇತರ ಭಾಷೆಗಳಿಗೂ ಕನ್ನಡದಷ್ಟೇ ಅಧಿಕಾರವಿದೆಯೆಂಬಂತೆ ವರ್ತಿಸುವುದು ನಿರ್ಮಾಣವಾಯಿತು. ಭಾಷಾವಾರು ಪ್ರಾಂತರಚನೆಯಾಗಿಯೂ ವಾಸ್ತವದಲ್ಲಿ ಪ್ರಾಂತಭಾಷೆಗಳಿಗೆ ತಮ್ಮ ಪ್ರಾಂತಗಳಲ್ಲಿ ಉಸಿರುಗಟ್ಟಿದ ವಾತಾವರಣ ನಿರ್ಮಾಣವಾಗಿ ಎಲ್ಲ ಪ್ರಾಂತಗಳಲ್ಲಿ ಭಾಷೆಗಳು ಕಾರಣವಾಗಿ ಅತೃಪ್ತಿ, ಅಶಾಂತಿ ನಿರ್ಮಾಣವಾಗಹತ್ತಿದೆ. ಇದು ಮುಂದುವರೆಯುತ್ತಲೂ ಇದೆ. ಭಾರತ ಒಕ್ಕೂಟಕ್ಕೆ ಧಕ್ಕೆ ತರಲಿರುವ ಈ ಗೊಂದಲಕ್ಕೆ ಪೂರ್ಣವಿರಾಮ ಬೀಳಬೇಕಾದರೆ ಸಂವಿಧಾನ ಬದಲಿಸಬೇಕು.ಇಲ್ಲವೇ ಭಾಷಾವಾರು ಪ್ರಾಂತ ರಚನಾ ತತ್ವವನ್ನು ಮರುವ್ಯಾಖ್ಯಾನಿಸಿ (ರಿ ಡಿಫೈನ್)ಮಾಡಿ ರಾಜ್ಯದಲ್ಲಿ ರಾಜ್ಯ ಭಾಷೆಯ ಸ್ಥಾನವೇನು? ಅಲ್ಪಸಂಖ್ಯಾತರ ಮಾತೃಭಾಷೆಗಳ ಸ್ಥಾನವೇನು? ನಿರ್ದಿಷ್ಟಗೊಳಿಸಬೇಕು. ೧. ಸಂವಿಧಾನ ಬದಲಿಸುವುದು ಅಷ್ಟು ಸುಲಭವಲ್ಲವಾದರೂ ಈವರೆಗೆ ಅದರ ಕಲಂಗಳನ್ನು ಬದಲಿಸಿದಂತೆ ಭಾಷೆಗೆ ಸಂಬಂಧಿಸಿದಂತೆ ಈಗ ಒಂದಿಷ್ಟು ಬದಲಾವಣೆ ಮಾಡಬಹುದು. ೨. ರಾಜ್ಯದಲ್ಲಿ ರಾಜ್ಯ ಭಾಷೆಯೇ ಆಡಳಿತ, ಶಿಕ್ಷಣ ಇತ್ಯಾದಿ ಎಲ್ಲ ನೆಲೆಗಳಲ್ಲಿ ಮಾಧ್ಯಮವಾಗಬೇಕು. ೩. ರಾಜ್ಯ ಭಾಷೆಯೇ ರಾಜ್ಯದ ಎಲ್ಲ ಮಾತೃಭಾಷೆಯೆಂದು ಸಾರಿರುವುದರಿಂದ ಅದನ್ನು ಮಾಧ್ಯಮವಾಗಿ ಓದುವುದರೊಂದಿಗೆ ಎಲ್ಲರೂ ಒಂದು ಪತ್ರಿಕೆಯಾಗಿ ರಾಜ್ಯಭಾಷೆಯನ್ನು ಕಡ್ಡಾಯವೆಂದು ಓದಬೇಕು. ೪. ಎಲ್ಲರೂ ಮೇಲೆ ೩ ರಲ್ಲಿ ಹೇಳಿದಂತೆ ಎಲ್ಲರೂ ರಾಜ್ಯಭಾಷೆಯೊಂದಿಗೆ ಐಚ್ಛಿಕವಾಗಿ ಬೇರೆ ಎರಡು ಭಾಷೆಗಳನ್ನು ಎರಡು ಪತ್ರಿಕೆಯಾಗಿ ಓದಬೇಕು. ಈ ಅರ್ಥದಲ್ಲಿ ಸಂವಿಧಾನವನ್ನು ಬದಲಿಸಬೇಕು. ಸಾರಾಂಶ : ರಾಜ್ಯಭಾಷಾ ಮಾಧ್ಯಮದಲ್ಲಿ ಓದುತ್ತ, ಜೊತೆಗೆ ಮೂರು ಭಾಷೆಗಳನ್ನು (ಕನ್ನಡ ಕಡ್ಡಾಯ, ಉಳಿದ ಎರಡು ಐಚ್ಛಿಕ) ಸಂವಿಧಾನ ದೊಡ್ಡದು, ಸಂವಿಧಾನಕ್ಕಿಂತ ಸಮಾಜ ದೊಡ್ಡದು, ಸಾಮಾಜಿಕ ಶಾಂತಿ ಒಕ್ಕೂಟ, ಭಾರತದ ಭಾವೈಕ್ಯತೆ ಇತ್ಯಾದಿ ದೃಷ್ಟಿಯಿಂದ ಈ ಬದಲಾವಣೆಯತ್ತ ತೀವ್ರ ಗಮನಕೊಡಬೇಕಾಗಿದೆ. ೫. ಒಂದು ವೇಳೆ ಸಂವಿಧಾನ ಬದಲಾವಣೆ ಸಾಧ್ಯವಾಗದಿದ್ದರೆ ಅಲಿಖಿತ ಸಂವಿಧಾನದಂತೆ ರಾಜ್ಯಭಾಷಿಕರು, ರಾಜ್ಯದಲ್ಲಿಯೇ ಇತರ ಭಾಷಿಕರು ಹೇಳಿದ ತಿಳುವಳಿಕೆಗೆ ಒಳಗಾಗಬೇಕು. ಅಂದರೆ ಭಾಷಾವಾರು

ಪ್ರಾಂತ ರಚನೆಯ ಅಂದಿನ ಆಶಯ (ಸ್ಪಿರಿಟ್)ಅರ್ಥ ಮಾಡಿಕೊಂಡು ಸಹಕರಿಸಬೇಕು. ಭಾರತೀಯ ಅವಿಭಕ್ತತೆಂಯುತ್ತ ಗಮನಕೊಡಬೇಕೆ ಹೊರತು ಭಾಷಾ ಹಟವಾರಿತನವನ್ನು ಬೆಳೆಸಿಕೊಳ್ಳಬಾರದು.'ಮಾತೃಭಾಷೆ'ಯ ನಿಜವಾದ ಅರ್ಥ ಬದಲಾದ ಪರಿಸ್ಥಿತಿಯಲ್ಲಿ ಅದರ ಪ್ರಯೋಜನೆಯ ಮಿತಿ ಇತ್ಯಾದಿ ತಿಳಿದುಕೊಂಡು ವಾಸ್ತವ ಪ್ರಜ್ಞೆಯ ಭಾರತೀಯನಾಗಿ ವ್ಯವಹರಿಸಬೇಕು.

ಪ್ರಾಚೀನ ಕಾಲದ್ದು ಸ್ಥಿರ ಸಮಾಜ. ಒಂದು ಊರಿನಲ್ಲಿ ಒಕ್ಕಲುತನ ಮಾಡುತ್ತ ಸ್ಥಿರವಾಗಿ ವಾಸಿಸುತ್ತಿದ್ದ ಅವರಿಗೆ ಸಾಮಾನ್ಯವಾಗಿ ಮನೆಯ ಒಳಗಿನ ಮಾತೃಭಾಷೆ, ಮನೆಯ ಹೊರಗಿನ ರಾಜ್ಯಭಾಷೆ ಒಂದೇ ಆಗಿರುತ್ತಿತ್ತು. ಅಲ್ಪ ಸಂಖ್ಯಾತರೂ ಹೀಗೆ ನಡೆದುಕೊಳ್ಳುತ್ತಿದ್ದರೂ ಕ್ವಚಿತ್ತಾಗಿ ತಮ್ಮ ಮಾತೃಭಾಷೆಯನ್ನು ಮನೆಯ ಒಳಗೆ ಬಳಸುತ್ತಿದ್ದರು. ಅವರು ತಮ್ಮ ಮಾತೃಭಾಷೆ ತಮ್ಮ ರಾಜ್ಯದಲ್ಲಿ ಮಾಧ್ಯಮವಾಗಿ ಬೆಳೆಯಬೇಕು. ವಲಸೆ ಬಂದ ರಾಜ್ಯದಲ್ಲಿ ಮನೆಯಲ್ಲಿ ಬದುಕಬೇಕೆಂದು ಸರಿಯಾಗಿಯೇ ಭಾವಿಸಿ ಮುಖ್ಯ ಭಾಷಾ ಪ್ರವಾಹದೊಂದಿಗೆ ಈಸುತ್ತಿದ್ದರು.

ಈಗ ಸ್ಥಿರ ಸಮಾಜದ ಬದಲು ಚರ ಸಮಾಜ ನಿರ್ಮಾಣವಾಗಿದೆ, ಆಗುತ್ತಲಿದೆ. ನೌಕರಿ, ವಾಣಿಜ್ಯ ಕೂಲಿಗಳಿಗಾಗಿ ಬೇರೆ ರಾಜ್ಯಗಳಿಗೆ ವಲಸೆ ಹೋಗುವವನು ಅಲ್ಪಸಂಖ್ಯಾತನೆನಿಸಿ, ಅಲ್ಲಿಯ 'ರಾಜ್ಯಭಾಷೆ'ಗೆ ಸಂಬಂಧವಿಲ್ಲದಂತೆ ದ್ವೀಪವಾಗುತ್ತಲಿರುವವನ ಮನೆ ಒಳಗಿನ 'ಮಾತೃಭಾಷೆ'ಗೆ ಹೆಚ್ಚಿನದಾಗಿ ಇಂಗ್ಲಿಷ್ ದಿನಪತ್ರಿಕೆ-ಮ್ಯಾಗಝಿನ್, ಇಂಗ್ಲಿಷ್ ಪತ್ರ ವ್ಯವಹಾರ, ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮದ ಶಿಕ್ಷಣ ಇತ್ಯಾದಿಗಳಿಂದಾಗಿ ಅಲ್ಲಿ ಮಾತೃಭಾಷೆ ಮತ್ತು ಇಂಗ್ಲಿಷ್ ರೂಪಿಕೆ ಸಿದ್ಧವಾಗುತ್ತಲಿದೆ. ಮುಂದಿನ ತಲೆಮಾರಿಗೆ ಇಂಗ್ಲಿಷ್ ಮಾಧ್ಯಮದ ಮಕ್ಕಳು ಕಾರಣವಾಗಿ ಮನೆಯಲ್ಲಿ ಅವನ ಮಾತೃ ಭಾಷೆ ಸಂಪೂರ್ಣ ನಾಶವಾಗಿ ಕೇವಲ "ಇಂಗ್ಲಿಷ್ ರೂಪಿಕೆ" ಸಿದ್ಧವಾಗುತ್ತದೆ. ಇದರಿಂದ ರಾಜ್ಯಭಾಷೆ ಕಲಿಯಲಿಲ್ಲ, ಮಾತೃಭಾಷೆ ಉಳಿಯಲಿಲ್ಲವೆಂಬ ದುಃಸ್ಥಿತಿಗೆ ಇಳಿಯಬೇಕಾಗುತ್ತದೆ. ಇದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ತಾನು ನೆಲೆಸಿರುವ ರಾಜ್ಯ ಭಾಷೆಯೇ ತನ್ನ ಮಾತೃಭಾಷೆಯೆಂದು ಒಪ್ಪಿಕೊಳ್ಳಬೇಕು. ಆಗ "ರಾಜ್ಯಭಾಷೆ ಇಂಗ್ಲಿಷ್ ಭಾಷೆ ರೂಪಿಕೆ" ಸಿದ್ಧವಾಗಿ ಅದು ಅವನನ್ನು ಮನೆಯಲ್ಲಿ, ರಾಜ್ಯದಲ್ಲಿ, ಅಂತಾರಾಷ್ಟ್ರೀಯ ನೆಲೆಯಲ್ಲಿ ಬದುಕಿಸುತ್ತದೆ, ಬೆಳೆಸುತ್ತದೆ. ಒಂದು ಪತ್ರಿಕೆಯಾಗಿ ಕಲಿತರೆ ತನ್ನ ಮಾತೃಭಾಷೆಯನ್ನೂ ಬದುಕಿಸದಂತಾಗುತ್ತದೆ.

ಈ ಭಾವನೆಯನ್ನು ಭಾರತದ ಎಲ್ಲ ಪ್ರಾಂತದವರೂ ಒಪ್ಪಿಕೊಳ್ಳಬೇಕು. ಇದರಿಂದ ಆರೋಗ್ಯಕರ ಬೆಳವಣಿಗೆ ಸಾಧ್ಯವಾಗುತ್ತದೆ. ಕರ್ನಾಟಕದಲ್ಲಿರುವ ತೆಲುಗರು ಕನ್ನಡವೇ ನನ್ನ ಮಾತೃಭಾಷೆಯೆಂದು ಒಪ್ಪಿಕೊಳ್ಳಬೇಕು, ತೆಲುಗು ನಾಡಿನಲ್ಲಿರುವ ಕನ್ನಡಿಗರು ತೆಲುಗೇ ನನ್ನ ಮಾತೃಭಾಷೆಯೆಂದು ಒಪ್ಪಿಕೊಳ್ಳಬೇಕು. ಇಲ್ಲಿ ತೆಲುಗರು ಕಳೆದುಕೊಂಡದ್ದನ್ನು ಅಲ್ಲಿ ಕನ್ನಡಿಗರು ತುಂಬಿಕೊಡುತ್ತಾರೆ. ಅಲ್ಲಿ ಕನ್ನಡಗರು ಕಳೆದುಕೊಂಡದ್ದನ್ನು ಇಲ್ಲಿ ತೆಲುಗರು ತುಂಬಿಕೊಡುತ್ತಾರೆ. ಇದರಿಂದ ಎರಡೂ ಪ್ರಾಂತಗಳಿಗೂ ಹಾನಿಯಾಗುವುದಿಲ್ಲ. ಇನ್ನೂ ಗಟ್ಟಿಯಾಗಿ ಹೇಳುವುದೆಂದರೆ ನಿಜವಾಗಿ ತೆಲುಗು ಬೆಳೆಯುವುದು ತೆಲುಗು ನಾಡಿನಲ್ಲಿಯೇ ಹೊರತು ಕನ್ನಡನಾಡಿನಲ್ಲಿ ಅಲ್ಲ. ಅದೇ ರೀತಿ ನಿಜವಾಗಿ ಕನ್ನಡ ಬೆಳೆಯುವುದು ಕನ್ನಡನಾಡಿನಲ್ಲಿಯೇ ಹೊರತು ತೆಲುಗು ನಾಡಿನಲ್ಲಿ ಅಲ್ಲ. ಈ ಪರಮ ಸತ್ಯವನ್ನು ಅರ್ಥಮಾಡಿಕೊಂಡು ಎಲ್ಲ ಪ್ರಾಂತದವರು ಇಂಥ ವಿಶಾಲ ಭಾವ ತಾಳಿದರೆ ಎಲ್ಲ ಪ್ರಾಂತಗಳ ಭಾಷಿಕ ಘರ್ಷಣೆ ಇಲ್ಲದೇ ಬೆಳೆಯುತ್ತವೆ. ಅಲ್ಲಿ ಇದ್ದು ಇಲ್ಲಿಯ ಭಾಷೆ ಇಟ್ಟುಕೊಂಡರೆ

ಒಳಗಿನ ರಾಜ್ಯದವರಿಗೂ ಸುಖವಿಲ್ಲ, ಹೊರಗಿನಿಂದ ಬಂದ ಅಲ್ಪಸಂಖ್ಯಾತ ಭಾಷಿಕರಿಗೂ ಸುಖವಿಲ್ಲ. ಈ ಅಸುಖಿ ರಾಜ್ಯದಿಂದಾಗಿ ಒಟ್ಟು ಪರಿಣಾಮದಲ್ಲಿ ಭಾರತಕ್ಕೂ ಸುಖವಿಲ್ಲದ ಪರಿಸ್ಥಿತಿ ನಿರ್ಮಾಣವಾಗುತ್ತದೆ; ಮುಂದುವರೆಯುತ್ತದೆ.

ಈ ಸಂದರ್ಭದಲ್ಲಿ ಭಾಷಾ ಅಲ್ಪಸಂಖ್ಯಾತರು ತಮ್ಮ ಮಾತೃಭಾಷೆಯಲ್ಲದ ರಾಜ್ಯಭಾಷೆಯಲ್ಲಿ ಓದುವುದು ತಮ್ಮ ಮಕ್ಕಳಿಗೆ ತೊಂದರೆಯೆನ್ನುತ್ತಾರೆ. ಆದರೆ ತಮ್ಮ ಮಾತೃಭಾಷೆಯಲ್ಲದ ತಮ್ಮ ರಾಜ್ಯಭಾಷೆಯೂ ಅಲ್ಲದ ಪರಿಸರದಿಂದ ದೂರವಾದ ಇಂಗ್ಲಿಷ್ ಭಾಷೆಯಲ್ಲಿ ಓದಿಸುವುದರಿಂದ ಅವರಿಗೆ ಇನ್ನೂ ಹೆಚ್ಚಿನ ತೊಂದರೆಯಾಗುವುದಿಲ್ಲವೇ ಎಂಬ ಪ್ರಶ್ನೆಗೆ ಏನು ಉತ್ತರ ಕೊಡುತ್ತಾರೆ.

ಇದರರ್ಥ, ಮಗುವಿಗೆ ಯಾವುದೇ ಭಾಷೆಯನ್ನು ಕಲಿಯುವ, ಯಾವುದೇ ಭಾಷಾ ಮಾಧ್ಯಮದಲ್ಲಿ ಜ್ಞಾನ ಸಂಪಾದಿಸುವ ಶಕ್ತಿ ಇರುತ್ತದೆ. ಇಂಗ್ಲಿಷ್ ಮಾಧ್ಯಮವನ್ನು ನಿರ್ವಹಿಸಬಲ್ಲ ಮಗುವಿಗೆ ರಾಜ್ಯದ ಕನ್ನಡ ಮಾಧ್ಯಮ ಇನ್ನೂ ಸುಲಭವೆನಿಸುವುದರಿಂದ ಹಾಗೆ ಹೇಳುವುದು ಒಂದು ನೆವವೆನಿಸುತ್ತದೆ.

ಒಟ್ಟಾರೆ ಅಲ್ಪಸಂಖ್ಯಾತರ ಮಕ್ಕಳಿಗೆ ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣ ನೀಡುವುದು ವಾತಾವರಣದ ಒಂದು ಮಿತಿ ಕಾರಣವಾಗಿ ಅಶೈಕ್ಷಣಿಕವೆನಿಸುತ್ತದೆ. ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ನೀಡುವುದು ಪರಕೀಯ ವಾತಾವಾರಣದ ಮಿತಿ ಕಾರಣವಾಗಿ ಅಶೈಕ್ಷಣಿಕವಾಗುತ್ತದೆ. ಪರಿಸರ ಭಾಷೆ ಎಂದರೆ ರಾಜ್ಯಭಾಷೆಯೇ ಅದರ ಶೈಕ್ಷಣಿಕ ಆರೋಗ್ಯಕರ ಬೆಳವಣಿಗೆಗೆ ಸೂಕ್ತ ಮಾಧ್ಯಮವೆಂದು ಹೇಳಬಹುದಾಗಿದೆ.

ಈ ತಿಳುವಳಿಕೆಯಿಂದ ಕರ್ನಾಟಕದಲ್ಲಿರುವವರು ನಡೆದುಕೊಂಡರೆ ಕನ್ನಡ ದೇಶದ ಏಕೀಕರಣವು ಭಾಷೆಯ ಏಕೀಕರಣವನ್ನು ಹೊಂದಿ ಅಂದರೆ ಏಕೀಕರಣವು ಕನ್ನಡೀಕರಣವಾಗಿ ಬೆಳೆದು ಈ ರಾಜ್ಯಕ್ಕೆ 'ಭಾವೈಕ್ಯತೆ' ಪ್ರಾಪ್ತವಾಗುತ್ತದೆ. ಮೌಲ್ಯವರ್ಧಿತ ಅಭಿವೃದ್ಧಿ ಕರ್ನಾಟಕಕ್ಕೆ ಪ್ರಾಪ್ತವಾಗುತ್ತದೆ.

■■

ಆಕರ : ಮಾರ್ಗ ಸಂಪುಟ–೭

೯೬

ಕನ್ನಡ ಸಾಹಿತ್ಯ ಮತ್ತು ಓದುಗ

೧. ಓದುವವರ ಸಂಖ್ಯೆ ವರ್ಧಿಸುವುದಕ್ಕೂ, ಕ್ಷೀಣಿಸುವುದಕ್ಕೂ ಹೆಚ್ಚು ಹೊಣೆ ಸಾಹಿತ್ಯಕ್ಕಿಂತ ವ್ಯಕ್ತಿಯದಾಗಿದೆ. ಓದುವ ಸಾಮಗ್ರಿಯನ್ನು ಸೃಷ್ಟಿಸುವವನೂ, ಸೃಷ್ಟಿಸಿದ ಸಾಮಗ್ರಿಯನ್ನು ಓದುವವನೂ ಇವನೇ ಆಗಿರುವುದರಿಂದ ಮಿಕ್ಕ ಕಾರಣಗಳು ಏನೇ ಇದ್ದರೂ ಗೌಣ ಎನಿಸುತ್ತವೆ.

ಇಂದು ಕನ್ನಡದಲ್ಲಿ ಸುದ್ದಿ ಸಾಹಿತ್ಯ ಜನಪ್ರಿಯ ಸಾಹಿತ್ಯ ಓದುವವರ ಸಂಖ್ಯೆ ವರ್ಧಿಸುತ್ತಲಿದೆ, ಗಂಭೀರವಾಗಿ ಓದುವವರು, ಗಂಭೀರ ಸಾಹಿತ್ಯ ಓದುವವರ ಸಂಖ್ಯೆ ಕ್ಷೀಣಿಸುತ್ತಲಿದೆ. ಹೀಗಾಗಲು ಕಾರಣ ಇದಕ್ಕೆ ಅವಶ್ಯವಿರುವ ವಿಶಿಷ್ಟ ಮನೋಧರ್ಮವನ್ನು ರೂಪಿಸುವ ವಾತಾವರಣ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಇಲ್ಲದಿರುವುದು. ವಿಜ್ಞಾನ ವಿಷಯಗಳಂತೆ ಭಾಷಾ ಸಾಹಿತ್ಯವನ್ನು ಶಿಕ್ಷಕರು ಪ್ರಯೋಗಾತ್ಮಕವಾಗಿ ಬೋಧಿಸುವ, ವಿದ್ಯಾರ್ಥಿಗಳು ಕ್ರಿಯಾತ್ಮಕವಾಗಿ ಕಲಿಯುವ ಹೊಸ ಪದ್ಧತಿ ನಮ್ಮಲ್ಲಿ ಅಸ್ತಿತ್ವಕ್ಕೆ ಬರಬೇಕಾಗಿದೆ. ಆಗ ವಿದ್ಯಾರ್ಥಿಗಳು ತಾವು ಓದುತ್ತಿರುವುದು ಏನು? ಅದು ವೈಯಕ್ತಿವಾಗಿ, ಸಾಮಾಜಿಕವಾಗಿ ಎಷ್ಟು ಮಹತ್ವ? ತಾವೂ ಆ ವಿಷಯದಲ್ಲಿ ಭಾಗಿಯಾಗುವ ಸಾಧ್ಯತೆಗಳೇನು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರವಾಗಿ ಬೆಳೆಯುತ್ತಾರೆ. ಇದು ಅವರನ್ನು ನಿರಂತರ ಓದುವ ಮನುಷ್ಯರನ್ನಾಗಿ ಮಾಡುತ್ತದೆ. ಅಂತವರು ವಿದ್ಯಾರ್ಥಿ ಜೀವನದಲ್ಲಿಯೂ ಓದುತ್ತಾರೆ, ವೃತ್ತಿ ಜೀವನದಲ್ಲಯೂ ಓದುತ್ತಾರೆ, ನಿವೃತ್ತಿ ಜೀವನದಲ್ಲಿಯೂ ಮುಂದುವರಿಸುತ್ತಾರೆ.

೨. ಓದುಗರ ಸಂಖ್ಯೆ ಕ್ಷೀಣಿಸಲು, ವರ್ಧಿಸಲು ಸಾಹಿತ್ಯದ ಗುಣಮಟ್ಟ, ಕನ್ನಡ ಪುಸ್ತಕಗಳ ಬೆಲೆ, ಕನ್ನಡ ಸಾಹಿತ್ಯದ ಶಿಕ್ಷಕರು, ಸರಕಾರದ ಕನ್ನಡ ನೀತಿ–ಇವು ಕಾರಣವಾಗುತ್ತವೆ.

ಹಳೆಯ ತಲೆಮಾರಿನ ವಿದ್ಯಾರ್ಥಿಗಳಲ್ಲಿ ಕನ್ನಡವಲ್ಲದೇ ಸಂಸ್ಕೃತ, ಇಂಗ್ಲಿಷ್ ಭಾಷೆಗಳ ಜ್ಞಾನ ಪ್ರೌಢವಾಗಿರುತ್ತಿದ್ದಿತು. ಅವರು ಅನೇಕ ಭಾಷೆಗಳನ್ನು ಅವಶ್ಯವೆನಿಸಿದರೆ, ಅನೇಕ ವಿಷಯಗಳನ್ನು ಬೋಧಿಸಿಕೊಂಡು ಹೋಗುತ್ತಿದ್ದರು. ಇಂದು ಕನ್ನಡ ವಿದ್ಯಾರ್ಥಿಗಳಿಗೆ ಕನ್ನಡವನ್ನು ಬಿಟ್ಟರೆ ಅನ್ಯ ಭಾಷೆಗಳ ಗಂಧ ಎಷ್ಟು ಇಲ್ಲ. ಇದರಿಂದಾಗಿ ವಾಚನಾಭಿರುಚಿಯ ಹೊಸ ಹೊಸ ಬಾಗಿಲುಗಳನ್ನು ತೆರೆದುಕೊಳ್ಳುವ ಶಕ್ತಿ ಅವನಿಗೆ ಇಲ್ಲವಾಗಿದೆ. ಇಂಥವರ ಬರವಣಿಗೆ ಸಹಜವಾಗಿಯೇ ಕ್ಷೀಣಿಸುತ್ತದೆ. ಇದರಿಂದ ಓದುವವರ ಹಸಿವಿಗೂ ಮಿತಿ ಪ್ರಾಪ್ತವಾಗುತ್ತದೆ.

ಕನ್ನಡ ಪುಸ್ತಕಗಳ ಬೆಲೆ ಕೆಲವು ಅಪವಾದಗಳನ್ನು ಬಿಟ್ಟರೆ ಸಾಮಾನ್ಯವಾಗಿ ಅಷ್ಟೇನು ದುಬಾರಿಯಾಗಿರುವುದಿಲ್ಲ. ಓದುವ ಹವ್ಯಾಸ ಬೆಳೆಯದ ಸಮಾಜದಲ್ಲಿ ಪುಕ್ಕಟೆ ಕೊಟ್ಟರೂ ಓದುವುದಿಲ್ಲ. ಬಸವಜಯಂತಿಯ ಅದ್ದೂರಿ ಕಾರ್ಯಕ್ರಮವೊಂದರಲ್ಲಿ ಸರಕಾರ ಪ್ರಕಟಿಸಿದ ೨ ರೂಪಾಯಿ ಬೆಲೆಯ 'ಬಸವಣ್ಣನವರ ವಚನಗಳು' (ಬಸವನಾಳ ಆವೃತ್ತಿ)ಕೃತಿಯ ಒಂದೂ ಪುಸ್ತಕವೂ ಮಾರಾಟವಾಗಲಿಲ್ಲ. ಪುರುಷರು ಹೋಗಲಿ, ಎರಡುಸಾವಿರ ಬೆಲೆ ಬಾಳುವ ಸೀರೆಯುಟ್ಟು ಕಾರಿನಲ್ಲಿ ಬಂದಿದ್ದ ಸುಶಿಕ್ಷಿತ ಮಹಿಳೆಯರೂ ಒಂದು ಪುಸ್ತಕ ಖರೀದಿಸಲಿಲ್ಲ. ಇವರು ಬಸವಣ್ಣನವರ ಪರಮ ಭಕ್ತರೆಂದೇ ಪ್ರಸಿದ್ಧರೆಂಬುದು ಬೇರೆ ಮಾತು.

ಕನ್ನಡ ಸಾಹಿತ್ಯದ ಶಿಕ್ಷಕರಾದ ನಮಗೆ ಮುಖ್ಯವಾದುದು ಸಾಹಿತ್ಯಿಕ ಕೆಲಸವಲ್ಲ. ಸಾಹಿತ್ಯೇತರ ಕೆಲಸ. ಒಂದಿಷ್ಟು ಸಮಯ ವಿಭಾಗದ ಒಳಗಿದ್ದರೂ ಮನಸ್ಸೆಲ್ಲ ಹೊರಗೇ ಇರುತ್ತದೆ. ಕುಂದಣಗಾರ, ವೆಂಕಣ್ಣಯ್ಯ ಅವರಂಥ ಸಮರ್ಪಣಾಭಾವದವರಾಗಲೀ, ದೇ. ಜವರೇಗೌಡ, ಆರ್.ಸಿ.ಹಿರೇಮಠ, ಹಾ.ಮಾ.ನಾಯಕ, ಜಿ. ಎಸ್. ಶಿವರುದ್ರಪ್ಪ ಅವರಂಥ ಸಾಹಿತ್ಯಿಕ ವಾತಾವರಣ ನಿರ್ಮಾಣ ಮಾಡುವವರಾಗಲೀ ಎಷ್ಟು ಜನರಿದ್ದೇವೆ? ಬೋಧನೆ ಹೋಗಲಿ, ಸಾಹಿತ್ಯಿಕ ವಾತಾವರಣ ನಿರ್ಮಿಸಲು ರೂಪಿಸಿಕೊಂಡಿರುವ ವಿಚಾರ ಸಂಕಿರಣ ಸಮ್ಮೇಲನಗಳನ್ನು ಉದ್ಯೋಗ ಮಾಡಿಕೊಂಡಿರುವ ಸಾಹಿತ್ಯದ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಓದುವ ಆಸಕ್ತಿ ಬಳಸಿಯಾರು ಎಂದು ನನಗೆ ಅನಿಸುವುದಿಲ್ಲ. ಓದದೇ ಬರೆಯುವುದು, ಬರೆದದ್ದನ್ನೆಲ್ಲ ಉತ್ತಮವೆಂದು ಕಲೆಯನ್ನಾಗಿಸಿಕೊಂಡಿರುವ ನಮಗೆ ಓದುವುದು ಅವಶ್ಯವೆನಿಸುವುದಿಲ್ಲ. ಹೀಗೆ ನಾವೇ ಓದದಿರುವಾಗ ಓದಿನ ಮಹತ್ವ ನಮಗೆ ತಿಳಿಯದಿರುವಾಗ ಓದುವ ವಾತಾವರಣವನ್ನು ನಿರ್ಮಿಸಲು ನಮ್ಮಿಂದ ಹೇಗೆ ಸಾಧ್ಯ?

■■

ಆಕರ : ಮಾರ್ಗ ಸಂಪುಟ–೭

೯೭

ಕನ್ನಡ ಪಠ್ಯಕ್ರಮ : ಸಂಕ್ರಮಣ ಸಂದರ್ಭದಲ್ಲಿ

ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳಾದವರು ಮಿಕ್ಕ ವಿಭಾಗಗಳಿಗಿಂತ ಭಿನ್ನ ರೀತಿಯಲ್ಲಿ ಕನ್ನಡ ವಿಭಾಗವನ್ನು ಪೋಷಿಸಬೇಕಾಗುತ್ತದೆ ; ಹಾಗೆಯೇ ಕನ್ನಡ ಅಧ್ಯಾಪಕರಾದವರು ಮಿಕ್ಕ ಅಧ್ಯಾಪಕರಿಗಿಂತ ಭಿನ್ನರೀತಿಯಲ್ಲಿ ತಮ್ಮ ವಿಭಾಗಕ್ಕಾಗಿ ದುಡಿಯಬೇಕಾಗುತ್ತದೆ. ಏಕೆಂದರೆ ಮಿಕ್ಕ ವಿಭಾಗಗಳು ಕರ್ನಾಟಕವನ್ನು ಬಿಟ್ಟರೆ ಬೇರೆ ರಾಜ್ಯಗಳಲ್ಲಿ, ಬೇರೆ ರಾಷ್ಟ್ರಗಳಲ್ಲಿ ಬೆಳೆಯಬಹುದು. ಕನ್ನಡ ವಿಭಾಗಕ್ಕೆ ಕರ್ನಾಟಕವೇ ಗತಿ, ಇಲ್ಲಿಯ ಕನ್ನಡ ಅಧ್ಯಾಪಕರೇ ಗತಿ. ಆದುದರಿಂದ ಕನ್ನಡವನ್ನು ಸಮಗ್ರವಾಗಿ, ಸಮಕಾಲೀನವಾಗಿ ಬೆಳೆಸುವುದು ಇಲ್ಲಿಯ ಅಧಿಕಾರಿಗಳ, ಅಧ್ಯಾಪಕರ ಸಂಯುಕ್ತ ಹೊಣೆಯಾಗಿದೆ, ಕರ್ತವ್ಯವೂ ಆಗಿದೆ. ಈ ಕರ್ತವ್ಯ-ಹೊಣೆಗಳ ನೇರ ಸಂಬಂಧಿಗಳಾದ ಕನ್ನಡ ಅಧ್ಯಾಪಕರು ಪಠ್ಯಬೋಧನೆ, ಪಠ್ಯಪುಸ್ತಕ, ಇವುಗಳಿಗೆ ತಳಪಾಯವಾದ ಪಠ್ಯಕ್ರಮಗಳ ವಿಷಯವಾಗಿ ತಮ್ಮ ಸಮಗ್ರ ಶಕ್ತಿಯನ್ನು ಕೇಂದ್ರೀಕರಿಸುವುದು ಅನಿವಾರ್ಯವಾಗಿದೆ.

ದೇಶಕ್ಕೆ ಸಂವಿಧಾನವಿದ್ದಂತೆ ವಿಶ್ವವಿದ್ಯಾಲಯಕ್ಕೆ ಪಠ್ಯಕ್ರಮ. ದೇಶದ ಜೀವನಕ್ರಮವನ್ನೂ ಜೀವನಮೌಲ್ಯವನ್ನೂ ನಿರ್ಧರಿಸುವುದು, ನಿಯಂತ್ರಿಸುವುದು ಸಂವಿಧಾನ. ಅದೇ ರೀತಿ ವಿಶ್ವವಿದ್ಯಾಲಯದ ಶಿಕ್ಷಣಕ್ರಮವನ್ನೂ ಶಿಕ್ಷಣಮೌಲ್ಯವನ್ನೂ ನಿರ್ಧರಿಸುವುದು, ನಿಯಂತ್ರಿಸುವುದು ಪಠ್ಯಕ್ರಮ. ಆದುದರಿಂದ, "ನೋ ಕಾನ್ಸ್ಟಿಟ್ಯೂಶನ್ ನೋ ನೇಶನ್ " ಎಂಬಂತೆ "ನೋ ಸಿಲೇಬಸ್ ನೋ ಯುನಿವರ್ಸಿಟಿ" ಎಂದು ಹೇಳುವಷ್ಟು ಸಿಲೆಬಸ್ ವಿಶ್ವವಿದ್ಯಾಲಯಕ್ಕೆ ನೆಲೆಯಾಗಿದೆ, ನೆಲವಾಗಿದೆ.

ಶಿಕ್ಷಣವೆನ್ನುವುದು ಒಂದು ಸಜೀವಕ್ರಿಯೆ, ಚಲನಶೀಲ ಪ್ರಕ್ರಿಯೆ. ಯಾವುದು ಚಲನಶೀಲವೋ ಅದು ಬದಲಾಗುತ್ತದೆ. ಹೀಗಾಗಿ ಬದಲಾಗುತ್ತಿರುವ ಶಿಕ್ಷಣಕ್ಕೆ ಅನುಗುಣವಾಗಿ ಸಿಲೆಬಸ್ ಬದಲಾಗುತ್ತ ಹೋಗಬೇಕಾಗುತ್ತದೆ. ಇದು ಕೇವಲ ಪಠ್ಯಪುಸ್ತಕಗಳ ಬದಲಾವಣೆಯ ಕೆಲಸವಲ್ಲ, ಪಠ್ಯಕ್ರಮದ ತೇಪೆಯ ಕೆಲಸವಲ್ಲ. ಒಂದು ವೇಳೆ ತೇಪೆಯ ಕೆಲಸ ಮಾಡುತ್ತ ಹೋದರೆ, ಬದಲಾಗುತ್ತಿರುವ ಶಿಕ್ಷಣಕ್ಕನುಗುಣವಾಗಿ ಬದಲಾಗದ ಸಿಲೆಬಸ್, ಕಾಲಕ್ಕೆ ಅಪ್ರಸ್ತುತವೆನಿಸುತ್ತದೆ. ಸಿಲೆಬಸ್ ಅಪ್ರಸ್ತುತವೆಂದರೆ ಓದಿಸುವ ಶಿಕ್ಷಕ ಅಪ್ರಸ್ತುತ, ಓದುವ ವಿದ್ಯಾರ್ಥಿ ಅಪ್ರಸ್ತುತ. ಕೊನೆಗೆ ಪಡೆದ ಪದವಿ, ಅದನ್ನು ನೀಡುವ ವಿಶ್ವವಿದ್ಯಾಲಯಗಳು ಅಪ್ರಸ್ತುತವಾಗಿಬಿಡುತ್ತವೆ.

ಕನ್ನಡ ಸಿಲೆಬಸ್‌ಗೆ ಹಲವು ದಶಕಗಳ ಇತಿಹಾಸವಿದೆ. ಪ್ರಾರಂಭದಲ್ಲಿ ಅದನ್ನು ರೂಪಿಸಿದವರು ದಕ್ಷಿಣದಲ್ಲಿ ಪ್ರೊ. ಟಿ. ಎಸ್. ವೆಂಕಣ್ಣಯ್ಯ, ಉತ್ತರದಲ್ಲಿ ಪ್ರೊ. ಕೆ. ಜಿ. ಕುಂದಣಗಾರ. ಅದು ಸಾಹಿತ್ಯಪಠ್ಯ, ಶಾಸ್ತ್ರ ಪಠ್ಯ–ಹೀಗೆ ಪಠ್ಯಪುಸ್ತಕ ಪ್ರಧಾನವಾಗಿದ್ದಿತು. ಯಾವುದೇ ವ್ಯವಸ್ಥೆಗೆ ಒಂದು ಆಯುಷ್ಯ ಪ್ರಮಾಣವಿರುತ್ತದೆ. ಕಾಲಕ್ರಮೇಣ ದೀಪಕ್ಕೆ ಕುಡಿ ಬರುವಂತೆ ಅದಕ್ಕೆ ಕ್ಷೀಣದೆಸೆ ಪ್ರಾಪ್ತವಾಗುತ್ತದೆ. ಆಗ ಪ್ರಾಧ್ಯಾಪಕರಾದವರು ಧೈರ್ಯದಿಂದ ಮುಂದೆ ಬಂದು ಕಂಟಕಗಳನ್ನು ದೂರಮಾಡಿ, ಕೊರತೆಗಳನ್ನು ತುಂಬಿ, ಅದನ್ನು ಆಮೂಲಾಗ್ರವಾಗಿ ಮುರಿದು ಕಟ್ಟಬೇಕಾಗುತ್ತದೆ. ಈ ಮೇರೆಗೆ, ಆ ಕಾಲದ ಕೆಲವು ತೊಡಕುಗಳನ್ನು ದೂರಮಾಡಿ, ೨೫ ವರ್ಷಗಳಿಂದ ನಡೆದು ಬಂದ ಕನ್ನಡ ಪಠ್ಯಕ್ರಮವನ್ನು ೧೯೬೬–೬೭ ರ ಸುಮಾರಿಗೆ ದಕ್ಷಿಣದಲ್ಲಿ ದೇಜಗೌ, ಉತ್ತರದಲ್ಲಿ ಆರ್. ಸಿ. ಹಿರೇಮಠ ಅವರು ಪುನರ್‌ರಚಿಸಿದರು. ಈವರೆಗೆ "ಪಠ್ಯಪುಸ್ತಕಪ್ರಧಾನ" ವಾಗಿದ್ದ ಕನ್ನಡ ಪಠ್ಯಕ್ರಮ, ಈಗ ಭಾಷಾಶಾಸ್ತ್ರ, ಜಾನಪದ, ಶಾಸನ, ಗ್ರಂಥಸಂಪಾದನೆ, ತೌಲನಿಕ ಸಾಹಿತ್ಯ, ಆನ್ವಯಿಕ ವಿಮರ್ಶೆ ಮೊದಲಾದವುಗಳನ್ನು ಒಳಗುಮಾಡಿಕೊಂಡು "ವಿಷಯ ಪ್ರಧಾನ"ವಾಗಿ ವಿಸ್ತಾರಗೊಂಡಿತು. ಈವರೆಗೆ ಅಸ್ತಿತ್ವದಲ್ಲಿದ್ದ 'ಕ್ಲೋಸ್ ಸಿಲೆಬಸ್' ಈಗ 'ಓಪನ್ ಸಿಲೆಬಸ್' ಆಗಿ ಮಾರ್ಪಟ್ಟಿತು. ಅದಕ್ಕನುಗುಣವಾಗಿ ಕನ್ನಡ ವಿಭಾಗಗಳು ಕನ್ನಡ ಅಧ್ಯಯನ ಸಂಸ್ಥೆಗಳಾಗಿ ಹಿಗ್ಗಿದವು. ಆಗಾಗ ಕನ್ನಡದ ಜೊತೆಗೆ ಜನಪದ, ಭಾಷಾಶಾಸ್ತ್ರ ಇತ್ಯಾದಿ ಹೊಸ ಹೊಸ ಹುದ್ದೆಗಳು ಹುಟ್ಟಿ, ತುಂಬಲ್ಪಟ್ಟವು. ಕನ್ನಡ ಅಧ್ಯಾಪಕರಿಗೆ ಪ್ರಾಚೀನ ಕಾವ್ಯ–ಶಾಸ್ತ್ರ ಜಟಿಲ, ಇಂಗ್ಲಿಷ್ ಸಾಹಿತ್ಯ ಚಹರೆಯ ಆಧುನಿಕ ಸಾಹಿತ್ಯ ಅಪರಿಚಿತವೆಂಬಂತಹ ಪರಿಸ್ಥಿತಿ ನಿರ್ಮಾಣವಾಗಿದ್ದ ಸಂದರ್ಭದಲ್ಲಿ ಒಳಗೆ ಬಂದ ಪಾಠ ಶುಷ್ಕವೆನಿಸುವ ಭಾಷಾಶಾಸ್ತ್ರ ಆಕರ್ಷಿಸಲಿಲ್ಲ. ಸುಲಭ(?)ವೆನಿಸಿದ ಅಥವಾ ಸುಲಭಮಾಡಿಕೊಂಡ ಜನಪದ ಇಂಥವರಿಗೆ ಒಂದು ವರವಾಗಿ ಪರಿಣಮಿಸಿತು. ತಕ್ಷಣ ಬಹುಜನ ಕನ್ನಡ ಅಧ್ಯಾಪಕರು ಜಾನಪದವನ್ನು ಆರಾಧಿಸತೊಡಗಿ ಕನ್ನಡ ಸಾಹಿತ್ಯ–ಶಾಸ್ತ–ಸಂಶೋಧನೆ–ವಿಮರ್ಶೆಗಳನ್ನು ಮೂಲೆಗೆ ತಳ್ಳಿದರು. ಕನ್ನಡ ವಿಭಾಗದಲ್ಲಿಯೇ ಕನ್ನಡ ಭಾಷೆ ಸಾಹಿತ್ಯಗಳು ಉಪೇಕ್ಷೆಗೆ ಗುರಿಯಾಗತೊಡಗಿದವು.

ಎರಡನೆಯದಾಗಿ, ಕನ್ನಡ ಪಠ್ಯಕ್ರಮದ ಭಾಗವೆಂಬಂತೆ ಐಚ್ಛಿಕ ವಿಷಯವಾಗಿರುವವರೆಗೆ ಸಂಗಾತಿಯಂತೆ ನಡೆದುಕೊಂಡ ಭಾಷಾಶಾಸ್ತ್ರ, ಜನಪದಶಾಸ್ತ್ರ ಇತ್ಯಾದಿಗಳು ಸ್ವತಂತ್ರ ಎಂ. ಎ. ಕೋರ್ಸ್ ಆಗುತ್ತಲೇ, ಅವುಗಳ ಪಠ್ಯಕ್ರಮಗಳು ಒಂದೊಂದು ವಿಶ್ವವಿದ್ಯಾಲಯದಲ್ಲಿ ಒಂದೊಂದು ಬಗೆಯಿಂದ ಕನ್ನಡ ಪಠ್ಯಕ್ರಮಕ್ಕೆ ಕಾಲ್ತೊಡಕಾಗತೊಡಗಿದವು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ೨೦೦ ಅಂಕಗಳ ಕನ್ನಡವನ್ನೊಳಗೊಂಡ ಜಾನಪದ ಎಂ. ಎ. ಪರೀಕ್ಷೆಯು ೮೦೦ ಅಂಕಗಳ ಕನ್ನಡವನ್ನೊಳಗೊಂಡ ಕನ್ನಡ ಎಂ.ಎ. ಪರೀಕ್ಷೆಗೆ 'ಸಮಾನ' ವೆಂಬ, ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ೫೦೦ ಅಂಕಗಳ ಕನ್ನಡವನ್ನೊಳಗೊಂಡ ಜಾನಪದ ಎಂ. ಎ. ಪರೀಕ್ಷೆಯು, ೧೦೦೦ ಅಂಕಗಳ ಕನ್ನಡವನ್ನೊಳಗೊಂಡ ಕನ್ನಡ ಎಂ.ಎ. ಪರೀಕ್ಷೆಗೆ 'ಸಮಾನ'ವೆಂಬ ಅವೈಜ್ಞಾನಿಕ ಪಠ್ಯ– ಕ್ರಮಗಳು ಅಸ್ತಿತ್ವಕ್ಕೆ ಬಂದು, ಅನೇಕ ಹಂತಗಳಲ್ಲಿ ಕನ್ನಡ ಶಿಕ್ಷಣಕ್ಕೆ ಧಕ್ಕೆಯನ್ನುಂಟುಮಾಡಿದವು. ಇದಕ್ಕಿಂತ ಬಿ.ಎ.ದಲ್ಲಿ ಕನ್ನಡ ಓದದವರು, ಬಿ.ಎ.ದಲ್ಲಿ ಕನ್ನಡ ಓದಿದ್ದರೂ ಕಡಿಮೆ ಅಂಕ ಕಾರಣವಾಗಿ ಕನ್ನಡ ಎಂ.ಎ.ವರ್ಗಕ್ಕೆ ಪ್ರವೇಶ ದೊರಕಿಸಿಕೊಳ್ಳುವಲ್ಲಿ ವಿಫಲರಾದವರು ಮೇಲೆ ಹೇಳಿದ ರೀತಿಯ

ಜನಪದ ಎಂ.ಎ.ವರ್ಗಕ್ಕೆ ಪ್ರವೇಶ ಪಡೆದು, ಉತ್ತೀರ್ಣಗೊಂಡು ಕನ್ನಡ ಎಂ.ಎ.ಗೆ ತಾವು ಸಮಾನವೆಂದು ವಿಜೃಂಭಿಸತೊಡಗಿದುದು. ಇದರಿಂದ ಕನ್ನಡ ಎಂ. ಎ. ವಿದ್ಯಾರ್ಥಿಗಳಿಗೆ ಮೀಸಲಾಗಿರುವ ಕನ್ನಡ ಲೆಕ್ಚರರ ಹುದ್ದೆಯನ್ನು ಜನಪದ ಎಂ. ಎ. ವಿದ್ಯಾರ್ಥಿಗಳು ದೊರಕಿಸಿಕೊಳ್ಳುವುದು ಆರಂಭವಾಯಿತು. ಅಂದರೆ ಕನ್ನಡ ಎಂ. ಎ. ವಿದ್ಯಾರ್ಥಿಗಳು ತಮ್ಮ ನ್ಯಾಯವಾದ ಹುದ್ದೆಗೆ ತಾವೇ ಎರವಾದರು. ಯಾವ ಹಂತದಲ್ಲಿಯೂ ಕನ್ನಡವನ್ನು ಶೈಕ್ಷಣಿಕವಾಗಿ ಓದದವರ ಬೋಧನೆಯಿಂದಾಗಿ ಕನ್ನಡ ವಿಷಯ ಕುಸಿಯತೊಡಗಿತು. ಹೀಗೆ ಕನ್ನಡ ವಿಷಯ, ಕನ್ನಡ ವಿದ್ಯಾರ್ಥಿಗಳು ಅನ್ಯಾಯಕ್ಕೆ ಬಲಿಯಾಗುವುದು ಕನ್ನಡ ಅಧ್ಯಯನ ಸಂಸ್ಥೆಗಳಲ್ಲಿ ಸಲೀಸಾಗಿ ನಡೆದುಬಂದಿತು, ನಡೆದುಬರುತ್ತಲಿದೆ. ಇಷ್ಟೇ ಅಲ್ಲ, ಜಾನಪದ ಮತ್ತು ಭಾಷಾಶಾಸ್ತ್ರ ಶಾಖೆಗಳಿಗೆ ಅಧ್ಯಾಪಕರೆಂದು ನಿಯಮಿಸಲ್ಪಟ್ಟ ಜಾನಪದ ಎಂ. ಎ. ಮತ್ತು ಭಾಷಾಶಾಸ್ತ್ರ ಎಂ. ಎ. ಪದವೀಧರರೂ ಕಾಲೇಜಿನ ಕನ್ನಡ ವಿಭಾಗ, ವಿಶ್ವವಿದ್ಯಾಲಯದ ಅಧ್ಯಯನ ಸಂಸ್ಥೆಗಳಿಗೆ ಮುಖ್ಯಸ್ಥರಾದರು; ಕನ್ನಡ ಪಠ್ಯಸಮಿತಿಯ ಸದಸ್ಯರಾದರು; ಕನ್ನಡ ಪರೀಕ್ಷಕರಾದರು; ಕನ್ನಡ ಅಧ್ಯಾಪಕರ ಆಯ್ಕೆ ಸಮಿತಿಯ ಸದಸ್ಯರಾದರು. ಜಗತ್ತಿನ ಇತಿಹಾಸದಲ್ಲಿಯೇ ಒಂದು ವಿಷಯದ ಅಧ್ಯಾಪಕರು ಇನ್ನೊಂದು ವಿಷಯದ ವಿಭಾಗಕ್ಕೆ ಮುಖ್ಯಸ್ಥರಾಗುವ, ಒಬ್ಬರ ಅವಕಾಶಗಳನ್ನು ಇನ್ನೊಬ್ಬರು ಕಸಿದುಕೊಳ್ಳುವ ಅವೈಜ್ಞಾನಿಕ ಶಿಕ್ಷಣ ಉಪಕ್ರಮ ಕರ್ನಾಟಕದ ಕನ್ನಡ ಅಧ್ಯಯನ ಸಂಸ್ಥೆಗಳಲ್ಲಿ ಮಾತ್ರ ಅಸ್ತಿತ್ವಕ್ಕೆ ಬಂದಿತ್ತು. ಆಗ ಸಹಜವಾಗಿಯೇ ಅಂತರಶಿಸ್ತೀಯತೆ ಹೆಸರಿನಲ್ಲಿ ಅಂತರ್‌ಶಿಸ್ತೀಯತೆ ಬೆಳೆಯತೊಡಗಿತು. ಜನಪದ, ಭಾಷಾಶಾಸ್ತ್ರ ಅಧ್ಯಾಪಕರಿಗೆ ಹೀಗೆ ಕನ್ನಡದಿಂದ ಸಿಗುವ ಲಾಭ ಮುಖ್ಯವಾಗಿ, ತಮ್ಮ ಶಾಖೆ ಬೆಳೆಸುವುದು ಅಮುಖ್ಯವಾಯಿತು. ಇದರಿಂದಾಗಿ ಕನ್ನಡ ಶಾಖೆ ಹಾಳಾಯಿತು. ಜನಪದ-ಭಾಷಾಶಾಸ್ತ್ರ ಶಾಖೆಗಳು ಬೆಳೆಯಲಿಲ್ಲ, ಈ ಬಗೆಯ ಕನ್ನಡ ಶಿಕ್ಷಣದ ಇಳಿಮುಖ, ಕನ್ನಡ ಆಡಳಿತದ ಅಸ್ತವ್ಯಸ್ತಗಳನ್ನು ತಪ್ಪಿಸುವುದಕ್ಕಾಗಿ ಮತ್ತು ಪರಾವಲಂಬಿ ಪ್ರವೃತ್ತಿ ಬಿಟ್ಟು ಸ್ವತಂತ್ರವಾಗಿ, ಸರಿಯಾಗಿ ಜನಪದ, ಭಾಷಾಶಾಸ್ತ್ರ ಶಾಖೆಗಳು ಬೆಳೆಯುವುದಕ್ಕಾಗಿ ಈ ಎರಡೂ ಶಾಖೆಗಳನ್ನು ಅಧ್ಯಯನ ಸಂಸ್ಥೆಯಿಂದ ಪ್ರತ್ಯೇಕಿಸಿದರೆ ಮಾತ್ರ ಕನ್ನಡ ತಾನೇ ತಾನಾಗಿ, ತನ್ನ ಅಂತರ್‌ಶಿಸ್ತೀಯತೆಗೆ ಬೇಕಾದ ವಿಷಯಗಳನ್ನು ಐಚ್ಛಿಕವಾಗಿ ಅಂತರ್ಗತಗೊಳಿಸಿಕೊಳ್ಳುತ್ತ ಬೆಳೆಯುತ್ತದೆ. ಇದು ಇಂದಿನ ತುರ್ತು ಕೆಲಸವಾಗಿದೆ. ಅಂದರೆ ಕನ್ನಡವನ್ನು ಕನ್ನಡೇತರ ಆಕ್ರಮಣಗಳಿಂದ ಸೆರೆಬಿಡಿಸಬೇಕಾಗಿದೆ. ಮೇಲಿನ ತಪ್ಪುಗಳಿಗಾಗಿ ಯಾರನ್ನೂ ದೂಷಿಸುವಂತಿಲ್ಲ. ಏಕೆಂದರೆ ಯಾವುದೇ ಹೊಸ ವ್ಯವಸ್ಥೆಯ ಬೆಳವಣಿಗೆಯ ಒಂದು ಘಟ್ಟದಲ್ಲಿ ಇಂಥ ದೋಷಗಳು ಸೇರಿಕೊಳ್ಳುವುದು ಸಹಜ. ಆದರೆ, ಅವು ಢಾಳವಾಗಿ ಕಾಣಿಸಿಕೊಂಡಾಗ, ಅವುಗಳಿಂದ ದೊಡ್ಡ ಅನ್ಯಾಯ ಜರುಗತೊಡಗಿದಾಗ, ಸಂಬಂಧಪಟ್ಟ ನಾವು ಕುರುಡರಂತೆ ನಡೆದುಕೊಳ್ಳುವುದು ಶೈಕ್ಷಣಿಕ ಬೇಜವಾಬ್ದಾರಿಯೆನಿಸುತ್ತದೆ. ಆದುದರಿಂದ ಕನ್ನಡ ಬದುಕುವುದಕ್ಕಾಗಿ, ಅದರ ಸಿಲೆಬಸ್ ವಿಫಲವಾಗುತ್ತಲಿರುವುದನ್ನು ತಪ್ಪಿಸುವುದಕ್ಕಾಗಿ, ನಾವು ಈ ಕಾಲ್ತೊಡಕುಗಳನ್ನು ತಕ್ಷಣ ನಿವಾರಿಸಬೇಕಾಗಿದೆ.

ಹೀಗೆ ನಿವಾರಣೆ ಮಾಡಿಕೊಳ್ಳುತ್ತಲೇ ಕನ್ನಡ ಪಠ್ಯಕ್ರಮವು ತನ್ನ ಬಾಗಿಲಿಗೆ ಬಂದು ನಿಂತಿರುವ ಹೊರಜಗತ್ತಿನ ಹೊಸ ವಿಷಯಗಳನ್ನು, ಹೊಸ ಹೊಸ ಶಿಕ್ಷಣನೀತಿಗಳನ್ನು ಒಳಗೆ ಬರಮಾಡಿಕೊಳ್ಳುವುದೂ ಇಂದು ಅಷ್ಟೇ ಅವಶ್ಯವಾಗಿದೆ. ಇದೆಲ್ಲವನ್ನೂ ನೋಡಿದರೆ, ೨೫ ವರ್ಷ

ತುಂಬುವಲ್ಲಿ ಈಗ ಅಸ್ತಿತ್ವದಲ್ಲಿರುವ ಜವರೇಗೌಡ–ಹಿರೇಮಠರ ಪಠ್ಯಕ್ರಮದ ಪುಣ್ಯ ತೀರಿದೆಯೆಂದೂ, ಅದನ್ನು ಆಮೂಲಾಗ್ರ ಪುನಾರಚಿಸುವುದು ಅನಿವಾರ್ಯವಾಗಿದೆಯೆಂದೂ ಸ್ಪಷ್ಟವಾಗುತ್ತದೆ. ಇಂಥ ಸಂದರ್ಭದಲ್ಲಿ ಕರ್ನಾಟಕ ಸರಕಾರ ಏಕರೂಪದ ಪಠ್ಯಕ್ರಮವನ್ನು ಅಸ್ತಿತ್ವಕ್ಕೆ ತಂದಿರುವುದು, ಕನ್ನಡ ಸಿಲೆಬಸ್ ನವೀಕರಣ ಮಟ್ಟಿಗಂತೂ ಒಂದು ಸಮಯೋಚಿತ ಅವಕಾಶವಾಗಿದ್ದು, ಸಿಲೆಬಸ್‌ನ್ನು ಸಮಗ್ರವಾಗಿ ಪರಿಷ್ಕರಿಸಿ ಸ್ವೀಕರಿಸಬಹುದಾಗಿದೆ; ಮತ್ತು ಇದರ ಮುಂದುವರಿಕೆಯೆಂಬಂತೆ ಸ್ನಾತಕೋತ್ತರ ಪಠ್ಯಕ್ರಮವನ್ನೂ ರೂಪಿಸಬೇಕಾಗಿದೆ.

ಮೇಲೆ ಹೇಳಿದಂತೆ ಕನ್ನಡ ಪಠ್ಯಕ್ರಮಕ್ಕೆ ಒದಗಿಬಂದಿರುವ ಕಾಲ್ತೊಡಕುಗಳನ್ನು ಮೊದಲು ಬಿಡಿಸಿಕೊಂಡು, ಕೊರತೆಗಳನ್ನು ತುಂಬಿಕೊಳ್ಳುವ ರೀತಿಯಲ್ಲಿ ಅದನ್ನು ಮೂರು ನೆಲೆಗಳಲ್ಲಿ ಹೀಗೆ ರೂಪಿಸಬೇಕಾಗಿದೆ; ೧. ಕರ್ನಾಟಕಮುಖಿ ಅಧ್ಯಯನ, ೨. ವಿಶ್ವಮುಖಿ ಅಧ್ಯಯನ, ೩. ಚರ್ಚಾ ಕೇಂದ್ರಿತ ಓರಿಯಂಟೆಡ್ ಅಧ್ಯಾಪನ.

ಮೊದಲಿನಿಂದಲೂ ಕನ್ನಡ ಪಠ್ಯಕ್ರಮ ಭಾಷೆ–ಸಾಹಿತ್ಯ–ಶಾಸ್ತ್ರಗಳ ಮೇಲೆಯೇ ಹೆಚ್ಚು ಒತ್ತು ಕೊಟ್ಟು, ಕನ್ನಡದ ಸಾಂಸ್ಕೃತಿಕ ಪರಂಪರೆ–ಪರಿಸರಗಳನ್ನು ಉಪೇಕ್ಷಿಸುತ್ತ ಬಂದಿದೆ. ವಿದ್ಯಾರ್ಥಿ “ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡ” ಎಂಬ ಪದ್ಯವನ್ನು ಕಂಠಪಾಠ ಮಾಡುತ್ತಾನೆ. ಕಾವೇರಿ ಎಲ್ಲಿದೆ? ಗೋದಾವರಿ ಎಲ್ಲಿದೆ? ಗೊತ್ತಿರುವುದಿಲ್ಲ. “ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು” ಬರೆದವರು ಯಾರು? ಗೊತ್ತಿರುವುದಿಲ್ಲ. ಇತ್ತೀಚೆ ಸರಕಾರ ಜಾರಿಗೊಳಿಸಿದ ಭಾಷಾಸೂತ್ರ ಯಾವುದು? ಅದರ ಪರಿಣಾಮಗಳೇನು? ಭಾಷಾ ಅಧ್ಯಾಪಕರಿಗೇ ಗೊತ್ತಿರುವುದಿಲ್ಲ. ಹೀಗೆ ಕರ್ನಾಟಕದ ಪರಂಪರೆ–ಪರಿಸರಗಳ ಬಗೆಗಿನ ಜ್ಞಾನವನ್ನು, ಕೊನೆಯಪಕ್ಷ ಸಾಮಾನ್ಯ ಜ್ಞಾನವನ್ನು ದೂರವಿಟ್ಟು, ಕರ್ನಾಟಕದ ವಿದ್ಯಾರ್ಥಿಗಳಿಗೆ ನೀಡುವ ಕನ್ನಡ ವಿಷಯಜ್ಞಾನ ಅಪೂರ್ಣವೇ ಸರಿ. ಏಕೆಂದರೆ ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು; ವಾಸ್ತವವನ್ನು ಅರಿಯದವರು ವರ್ತಮಾನದಲ್ಲಿ ಬೆಳೆಯಲಾರರು. ಆದುದರಿಂದ ಕರ್ನಾಟಕದ ಪ್ರಾಕೃತಿಕ ಸಂಪತ್ತು, ಇತಿಹಾಸ ಸಂಪತ್ತು, ಸಾಹಿತ್ಯ–ಕಲಾ ಸಂಪತ್ತು, ಶಿಕ್ಷಣ ಸಂಪತ್ತು, ಕೈಗಾರಿಕೆ–ವಾಣಿಜ್ಯ ಸಂಪತ್ತು ಇತ್ಯಾದಿಗಳ ಸ್ವರೂಪ–ಸಮಸ್ಯೆಗಳನ್ನು ಕುರಿತ ಒಂದು ಕರ್ನಾಟಕ ಕೈಪಿಡಿಯನ್ನು ಸಿದ್ಧಪಡಿಸಿ ಆ ಪ್ರಬಂಧ ಸಂಕಲನವನ್ನು ಯಾವುದೇ ವಿಷಯ ಓದುವ ಸ್ನಾತಕ ವಿದ್ಯಾರ್ಥಿಗೆ ಕಡ್ಡಾಯ ಪಠ್ಯವನ್ನಾಗಿಸಬೇಕು. “ಏನಾದರೂ ಆಗು, ಮೊದಲು ಕನ್ನಡವಾಗು” ಎಂಬ ನಿಟ್ಟಿನಲ್ಲಿ ಅವನನ್ನು ಬೆಳೆಸಬೇಕು. ಓದುತ್ತ ಹೋದಂತೆ ವಿದ್ಯಾರ್ಥಿಯನ್ನು ಕ್ರಮೇಣ ಕರ್ನಾಟಕತ್ವದಿಂದ ಪ್ರತ್ಯೇಕವಾಗಿಸುತ್ತ ಹೋಗುವ ಇಂದಿನ ಶಿಕ್ಷಣನೀತಿಗೆ ಮಂಗಳ ಹಾಡಿ, ಕನ್ನಡಿಗನಾಗುತ್ತಲೇ ವಿಶ್ವಕನ್ನಡಿಗನಾಗುವ ಶಿಕ್ಷಣಕ್ರಮವನ್ನು ಅಸ್ತಿತ್ವಕ್ಕೆ ತರಬೇಕು. ಕನ್ನಡವನ್ನು ಪ್ರಧಾನವಾಗಿ ಓದುವ ವಿದ್ಯಾರ್ಥಿಗಳಂತೂ ಇಂಥ ಅಧ್ಯಯನದಿಂದ ಹದಗೊಂಡು, ಮುಂದೆ ಸ್ನಾತಕೋತ್ತರ ಸಂದರ್ಭದಲ್ಲಿ ಜಾಗತಿಕ ಜ್ಞಾನತಂತುಗಳನ್ನು ಬೆಸೆದುಕೊಂಡಿದ್ದಾದರೆ, ಅವರು ಏಕಕಾಲಕ್ಕೆ ನಿಜವಾದ ಕನ್ನಡಿಗರಾಗಿ, ನಿಜವಾದ ಜಾಗತಿಕರಾಗಿ ಬೆಳೆಯುತ್ತಾರೆ. ಅವರು ಹೀಗೆ ಬೆಳೆಯುವುದಕ್ಕಾಗಿ ಕೇವಲ ಭಾಷೆ–ಸಾಹಿತ್ಯಗಳ ಅಧ್ಯಯನವನ್ನು ಧ್ವನಿಸುವ ಇಂದಿನ “ಇನ್‌ಸ್ಟಿಟ್ಯೂಟ್ ಆಫ್ ಕನ್ನಡ ಸ್ಟಡೀಸ್ ” ಎಂಬ ಹೆಸರನ್ನು ಬಿಟ್ಟು, ಪರಂಪರೆ–ಪರಿಸರಗಳನ್ನು ಧ್ವನಿಸುವ “ಇನ್‌ಸ್ಟಿಟ್ಯೂಟ್ ಆಫ್ ಕರ್ನಾಟಕ

ಸ್ಟಡೀಸ್ " ಎಂಬ ಹೆಸರನ್ನೋ, ಓರಿಯಂಟಾಲಜಿ, ಇಂಡಾಲಜಿಗಳಂತೆ, 'ಕರ್ನಾಟಕಾಲಜಿ' ಎಂಬ ಶಬ್ದವನ್ನು ಸೃಷ್ಟಿಸಿಕೊಂಡು, "ಇನ್‌ಸ್ಟಿಟ್ಯೂಟ್ ಆಫ್ ಕರ್ನಾಟಕಾಲಜಿ" ಎಂಬ ಹೆಸರನ್ನೂ ನಮ್ಮ ಸಂಸ್ಥೆಗಳಿಗೆ ಬಳಸಬೇಕಾಗಿದೆ, ಮತ್ತು ನಮ್ಮ ಸಿಲೆಬಸ್‌ನ್ನು, ನಮ್ಮ ಸಂಸ್ಥೆಗಳನ್ನು, ಆ ರೀತಿಯಲ್ಲಿ ಪುನಾರಚಿಸಬೇಕಾಗಿದೆ.

ಹೀಗೆ ಮುಂದುವರಿಯಬೇಕಾದ ಸ್ನಾತಕೋತ್ತರ ಹಂತದ ಪಠ್ಯಕ್ರಮದಲ್ಲಿ ಸ್ನಾತಕಹಂತದ ವಿಷಯಗಳು ಪುನರುಕ್ತವಾಗದಂತೆ ನೋಡಿಕೊಳ್ಳಬೇಕು. ಇದರಿಂದ ಸ್ನಾತಕೋತ್ತರ ಹಂತದಲ್ಲಿ ಹೊಸ ವಿಷಯಗಳನ್ನು ಅಳವಡಿಸಲು ಸ್ಥಳಾವಕಾಶ ಸಿಗುತ್ತದೆ. ಆಗ (೧) ಹಳೆಯ ವಿಷಯಗಳನ್ನು ನವೀಕರಿಸಬೇಕು. ಉದಾ: ಛಂದಸ್ಸನ್ನು ಛಂದೋವಿಜ್ಞಾನವನ್ನಾಗಿ ಪರಿವರ್ತಿಸುವುದು ಇತ್ಯಾದಿ. (೨) ಹೊಸ ಹೊಸ ವಿಷಯಗಳನ್ನು ಸೇರಿಸಿಕೊಳ್ಳಬೇಕು. ಉದಾ; ನಿಘಂಟು ವಿಜ್ಞಾನ, ನಾಮವಿಜ್ಞಾನ, ಪ್ರಾಚ್ಯಲೇಖ ವಿಜ್ಞಾನ, ಶೈಲಿವಿಜ್ಞಾನ, ಇತ್ಯಾದಿ (೩) ಕನ್ನಡ ಸಂದರ್ಭದ ಮಹತ್ವದ ಅಂಶಗಳನ್ನು ಶೋಧಿಸಿ ಸೇರಿಸಿಕೊಳ್ಳಬೇಕು. ಉದಾ: ೧೯ನೆಯ ಶತಮಾನದವರೆಗೂ ಶ್ರವಣ ಮತ್ತು ವಾಚನ ಮಾಧ್ಯಮಗಳಿಗಾಗಿ ಹುಟ್ಟಿ ಬಂದ ನಮ್ಮ ಸಾಹಿತ್ಯವನ್ನು ಇಂದು ಕೇವಲ ವಾಚನ ಮಾಧ್ಯಮದಲ್ಲಿಟ್ಟು ಆಸ್ವಾದಿಸುವುದರಿಂದಾದ ಪರಿಣಾಮಗಳ ಅಧ್ಯಯನ ಮತ್ತು ವಾಚನಸಾಹಿತ್ಯದ ವಿಮರ್ಶಾಮಾನದಂಡಗಳನ್ನು ಶ್ರವಣಸಾಹಿತ್ಯಕ್ಕೆ ಅನ್ವಯಿಸುವಲ್ಲಿ ಉದ್ಭವಿಸುವ ಸಮಸ್ಯೆಗಳು ಇತ್ಯಾದಿ. ಹೀಗೆ ಹೊಸ ಹೊಸ ವಿಷಯಗಳನ್ನು ಅಳವಡಿಸಿಕೊಂಡು, ಈ ಮೊದಲಿನ ಜಾನಪದ–ಭಾಷಾಶಾಸ್ತ್ರಗಳನ್ನು ಅವಶ್ಯವಿರುವಷ್ಟು ಮಾತ್ರ ಏಕೀಕರಿಸಿಕೊಂಡು, ಏಕಕಾಲಕ್ಕೆ ಕರ್ನಾಟಕಮುಖಿಯೂ ವಿಶ್ವಮುಖಿಯೂ ಆಗಿರುವ ಸರ್ವಸಮಗ್ರ ಕನ್ನಡ ಪಠ್ಯಕ್ರಮವೊಂದು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಸ್ತಿತ್ವಕ್ಕೆ ಬರಬೇಕಾಗಿದೆ.

ಈವರೆಗೆ ಸ್ಥಳೀಯ ವಿಷಯಗಳೊಂದಿಗೆ ಹೊರ ಜಗತ್ತಿನ ವಿಷಯಗಳನ್ನೂ ಒಳಗೆ ತುಂಬಿಕೊಳ್ಳುವ ಮೂಲಕ ನಮ್ಮ ಸಿಲೆಬಸ್‌ನ್ನು ಒಂದಿಷ್ಟು ವಿಸ್ತರಿಸಿದೆ ಹೊರತು, ಇದರಿಂದಾಗಿ ನಮ್ಮಲ್ಲಿ ನಿರ್ಮಾಣಗೊಂಡ ಕನ್ನಡ ಜ್ಞಾನವನ್ನು ಹೊರಗೆ ಸಂವಹನಗೊಳಿಸುವ ವ್ಯವಸ್ಥೆಯನ್ನು ಅದರಲ್ಲಿ ಕಲ್ಪಿಸಲಿಲ್ಲ. ಹೀಗಾಗಿ ಅದು ಕೇವಲ ಆಯಾತ ಪಠ್ಯಕ್ರಮ (ಇಂಪೋರ್ಟಿಂಗ್ ಸಿಲೆಬಸ್) ಆಗಿ ಉಳಿಯಿತೇ ಹೊರತು, ನಿರ್ಯಾತ ಪಠ್ಯಕ್ರಮ (ಎಕ್ಸಪೋರ್ಟಿಂಗ್ ಸಿಲೆಬಸ್) ಆಗಿ ಬೆಳೆಯಲಿಲ್ಲ. ಇದರಿಂದಾಗಿ ಕನ್ನಡ ಕಾವ್ಯ, ವಿಮರ್ಶೆ, ಸಂಶೋಧನ ಕ್ಷೇತ್ರಗಳ ಉಜ್ವಲ ಪ್ರತಿಭಾವಂತ ಕನ್ನಡ ಅಧ್ಯಾಪಕರು ಬಡವರ ಮಕ್ಕಳಂತೆ ಮನೆಯಲ್ಲಿಯೇ ಬೆಳಗಿದರು. ಇದನ್ನು ತಪ್ಪಿಸುವುದಕ್ಕಾಗಿ ಈ ಮೊದಲು ಕ್ಲೋಸ್ ಸಿಲೆಬಸ್‌ನ್ನು ಓಪನ್ ಸಿಲೆಬಸ್ ಮಾಡಿದ ನಾವು, ಈಗ ನಮ್ಮ ಆಯಾತ ಸಿಲೆಬಸ್‌ಗೆ ಒಂದಿಷ್ಟು ನಿರ್ಯಾತ ಸಿಲೆಬಸ್‌ನ್ನು ಅವಶ್ಯ ಜೋಡಿಸಬೇಕಾಗಿದೆ. ಈ ೨೫ ವರ್ಷಗಳಲ್ಲಿ ನಾವು ಮಾಡಿದ ದೊಡ್ಡ ತಪ್ಪೆಂದರೆ, "ಇಂದು ನಾವು ಬಹುಭಾಷಾ ಸಂದರ್ಭದಲ್ಲಿ ಬಾಳುತ್ತಲಿದ್ದೇವೆ" ಎಂಬುದನ್ನು ಮರೆತುದು. ವಿಶ್ವವಿದ್ಯಾಲಯದಂಥ ಉನ್ನತ ಶಿಕ್ಷಣಸಂಸ್ಥೆಯಲ್ಲಿ ಏಕಭಾಷಾಜ್ಞಾನದಿಂದ ನೌಕರಿ ನಡೆಸಬಹುದೆಂಬ ಕೆಟ್ಟ ಸವಲತ್ತು ಇರುವ ಕಾರಣವಾಗಿ, ಕನ್ನಡ ಅಧ್ಯಯನ ಸಂಸ್ಥೆಗಳು "ಅನೇಕ ವಿಷಯಗಳ ಏಕಭಾಷಾದ್ವೀಪ"ಗಳಾಗಿ ಉಳಿದವು. (ಈ ಅನೇಕ ವಿಷಯಜ್ಞಾನವೂ ತಿಳಿದುಕೊಂಡುದಲ್ಲ, ಓದಿಕೊಂಡುದು. ಬೇರೊಬ್ಬರು ಭಾಷಾಂತರ ಮಾಡಿಕೊಟ್ಟುದನ್ನು

ಓದಿಕೊಂಡುದು.) ಕನ್ನಡ ಸಿಲೆಬಸ್ ಈ ಏಕಭಾಷಾಮಿತಿಯನ್ನು ಮೀರುವ ಪ್ರಯತ್ನವನ್ನು ಉದ್ದಕ್ಕೂ ಮಾಡಲಿಲ್ಲವಾಗಿ ಇದನ್ನು ಓದಿಸುವ ಅಧ್ಯಾಪಕ, ಓದುವ ವಿದ್ಯಾರ್ಥಿಗಳು ಕಣ್ಣಿದ್ದೂ ಕಾಲಿಲ್ಲದ ಹೆಳವನಂತೆ ಕರ್ನಾಟಕದಲ್ಲಿ ಮಾತ್ರ ತೊಳಲುತ್ತಲಿದ್ದಾರೆ. ಅನೇಕ ವಿಷಯ ಮತ್ತು ಅನೇಕ ಭಾಷಾ ಪಠ್ಯಕ್ರಮ ಬೇಕು.

"ಪಠ್ಯಪುಸ್ತಕಪ್ರಧಾನ" ಸಿಲೆಬಸ್‌ನಿಂದ "ವಿಷಯಪ್ರಧಾನ" ಸಿಲೆಬಸ್‌ಗೆ ಬಂದ ನಾವು, ಈಗ "ಸಂವಹನಮುಖಾಮುಖಿಪ್ರಧಾನ" ಸಿಲೆಬಸ್‌ನತ್ತ ಹೆಜ್ಜೆ ಹಾಕಿ, ಈಗಿನ ಏಕಭಾಷಾ ದುರಂತದಿಂದ ತಕ್ಷಣ ಪಾರಾಗಬೇಕಾಗಿದೆ. ಹೀಗೆ ಪಾರಾಗಬೇಕಾದರೆ ಕನ್ನಡ ವಿದ್ಯಾರ್ಥಿಯು ಇನ್ನೊಂದು ಭಾಷೆ ಕಲಿಯುವುದನ್ನು ಸ್ನಾತಕ ಸಿಲೆಬಸ್‌ನಲ್ಲಿ 'ಕಡ್ಡಾಯ' ಮಾಡಬೇಕು; ಸ್ನಾತಕೋತ್ತರ ಸಿಲೆಬಸ್‌ನಲ್ಲಿ ಐಚ್ಛಿಕ ಮಾಡಬೇಕು. ಆಗ ಎಂ. ಎ. ಓದಿದ ಕೆಲವು ವಿದ್ಯಾರ್ಥಿಗಳಾದರೂ ಕನ್ನಡದ ಜೊತೆ ಇನ್ನೊಂದು ಭಾಷಾಪರಿಣತಿ ಪಡೆದು, ಕನ್ನಡದ ಹೆಳವತನವನ್ನು ಅಷ್ಟರಮಟ್ಟಿಗೆ ತಪ್ಪಿಸಬಲ್ಲರು. ರಾಷ್ಟ್ರಮಟ್ಟದಲ್ಲಿ, ಅಂತರ್ ರಾಷ್ಟ್ರಮಟ್ಟದಲ್ಲಿ ಕನ್ನಡವನ್ನು ಪ್ರತಿನಿಧಿಸಬಲ್ಲರು. ಆ ಮಟ್ಟದ ವಿದ್ವಾಂಸರಿಗೆ ವಿದ್ಯೆಗೆ ಮುಖಾಮುಖಿಯಾಗಬಲ್ಲರು. ಇಲ್ಲದಿದ್ದರೆ ರಾಜ್ಯಮಟ್ಟದಲ್ಲಿಯೇ ಸುತ್ತುತ್ತ ಗುಲ್ಬರ್ಗಾ ಗಾಣಕ್ಕೋ, ಧಾರವಾಡ ಗಾಣಕ್ಕೋ ಕಟ್ಟಿದ ಎತ್ತಿನಂತಾಗುತ್ತಾರೆ; ನಮ್ಮ ಸಿಲೆಬಸ್ ಸಹ ಕೆಲವೇ ದಿನಗಳಲ್ಲಿ "ಹಾಡಿದ್ದೇ ಹಾಡೋ...." ಎಂದು ನಗೆಪಾಟಲಿಗೆ ಗುರಿಯಾಗುತ್ತದೆ. ಒಟ್ಟಿನಲ್ಲಿ ಕನ್ನಡ ಅಧ್ಯಾಪಕರು ದೊಡ್ಡವರಾಗದೆ ಕನ್ನಡ ಸಿಲೆಬಸ್ ದೊಡ್ಡದಾಗುವುದಿಲ್ಲ, ಕನ್ನಡ ಸಿಲೆಬಸ್ ದೊಡ್ಡದಾಗದೆ ಕನ್ನಡ ವಿದ್ಯೆ ದೊಡ್ಡದಾಗುವುದಿಲ್ಲ.

ನಮ್ಮ ಪಠ್ಯಕ್ರಮ ನವನವೀನವಾಗದಿರುವುದಕ್ಕೆ ಇನ್ನೊಂದು ಮುಖ್ಯ ಕಾರಣವಿದೆ; ಅದು: ಸಾಮಾನ್ಯವಾಗಿ ಆಯಾ ವಿಶ್ವವಿದ್ಯಾಲಯಗಳಲ್ಲಿ ಓದಿದ ವಿದ್ಯಾರ್ಥಿಗಳು, ಅವರ ವಿದ್ಯಾರ್ಥಿಗಳು, ಅವರ ವಿದ್ಯಾರ್ಥಿಗಳು ಅಲ್ಲಲ್ಲಿಯೇ ಅಧ್ಯಾಪಕರಾಗುತ್ತಲಿರುವುದು, ಮತ್ತು ಒಂದು ವಿದ್ಯಾಸಂಸ್ಥೆಯಲ್ಲಿ ನಿಯಮಿಸಲ್ಪಟ್ಟ ಅಧ್ಯಾಪಕ ಕನಿಷ್ಠ ಮೂರು ದಶಕಗಳನ್ನು ಅಲ್ಲಿಯೇ ಕಳೆಯುವುದು. ಕೆಲವೊಮ್ಮೆ ನಿವೃತ್ತನಾಗುವವರೆಗೂ ಒಂದೇ ವಿಷಯವನ್ನು ಬೋಧಿಸುವುದು. ಇಂಥವರು ಸಿಲೆಬಸ್‌ನ್ನು ಎಷ್ಟೇ ಸುಧಾರಣೆ ಮಾಡಿದರೂ ಅದು ಏಕತಾನತೆಯಿಂದ ಹೊರಬರುವುದೇ ಇಲ್ಲ. ಈ ಇನ್‌ಬ್ರೀಡ್ ದುಸ್ಥಿತಿಯಿಂದ ಬಿಡುಗಡೆ ಹೊಂದಿದರೆ ಮಾತ್ರ ಅದು ಹೊಸ ಹೊಸ ರಕ್ತ-ಮಾಂಸ ತುಂಬಿಕೊಂಡು ಬೆಳೆಯುತ್ತದೆ. ಇದಕ್ಕಾಗಿ ಕನ್ನಡ ಅಧ್ಯಯನ ಸಂಸ್ಥೆಗಳಲ್ಲಿ ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯಗಳ ಪದವೀಧರರನ್ನು, ರಾಷ್ಟ್ರ-ಅಂತರ್‌ರಾಷ್ಟ್ರಗಳಿಗೆ ಸಂಬಂಧಿಸಿದ ಒಬ್ಬಿಬ್ಬರನ್ನು ಅಧ್ಯಾಪಕರನ್ನಾಗಿ ನೇಮಿಸಬೇಕು. ಇಲ್ಲದಿದ್ದರೆ ವಿದ್ವಾಂಸರಾಗಬೇಕಾದ ನಾವು ಮಾಸ್ತರರಾಗಿ, ಬಹಳೆಂದರೆ ಗುಲ್ಬರ್ಗಾ, ಸೊಂಡೂರು, ರಾಯಚೂರು ತುದಿಗಳವರೆಗೆ ಚಲಿಸುವವರಾಗುತ್ತೇವೆ.

ಹೀಗೆ ಕೇವಲ ಪಠ್ಯಕ್ರಮವನ್ನು ನವೀಕರಿಸಿದರೆ ಸಾಲದು, ಇದಕ್ಕೆ ಜೊತೆಯಾಗಿ ಪಠ್ಯಪುಸ್ತಕ ಮೊದಲಾದ ಬೋಧನಾಸಾಮಗ್ರಿಯನ್ನು ಇದಕ್ಕಿಂತ ಮುಖ್ಯವಾಗಿ ಬೋಧನ ಕ್ರಮವನ್ನು ನವೀಕರಿಸಬೇಕು. ಆಗ ಮಾತ್ರ ಪಠ್ಯಕ್ರಮಕ್ಕೆ ಅರ್ಥ ಬರುತ್ತದೆ. ವಿದ್ಯಾರ್ಥಿಗಳು ಕೇಳಿಸಿಕೊಳ್ಳಲಿ-ಬಿಡಲಿ, ಅವರಿಗೆ ತಿಳಿಯಲಿ-ಬಿಡಲಿ, ಒಂದು ಗಂಟೆ ವರ್ಗಕೋಣೆಯಲ್ಲಿ ನೀಡುವ ಏಕಮುಖಿ ಬೋಧನಪದ್ಧತಿಯಿಂದ ಪ್ರಯೋಜನ ಕಡಿಮೆ. ಈ ವ್ಯವಸ್ಥೆಯಿಂದ ವಿದ್ಯಾರ್ಥಿಗಳು ಪರೀಕ್ಷಾನಿಷ್ಠರಾಗಿ

ಬೆಳೆಯುತ್ತಾರೆಯೇ ಹೊರತು ಜ್ಞಾನನಿಷ್ಠರಾಗಿ ಬೆಳೆಯುವುದಿಲ್ಲ. ಬಹಳೆಂದರೆ ಪಠ್ಯಪುಸ್ತಕ ಓದಿ, ಪಠ್ಯಪುಸ್ತಕ ಓದಿಸುವವರಾಗುತ್ತಾರೆ. ಈ ದೋಷ ನಿವಾರಣೆಗಾಗಿ ಅಧ್ಯಾಪಕರ ಮಟ್ಟದಲ್ಲಿ "ಅನ್ವಯಿಕ ಬೋಧನಪದ್ಧತಿ", ವಿದ್ಯಾರ್ಥಿಮಟ್ಟದಲ್ಲಿ "ಕ್ರಿಯಾತ್ಮಕ ವ್ಯಾಸಂಗಪದ್ಧತಿ"ಗಳನ್ನು ಅಸ್ತಿತ್ವಕ್ಕೆ ತರಬೇಕಾಗಿದೆ. ಸ್ನಾತಕ ಹಂತಕ್ಕಿಂತ, ಕೆಲವೇ ವಿದ್ಯಾರ್ಥಿಗಳನ್ನೊಳಗೊಂಡ ಸ್ನಾತಕೋತ್ತರ ಹಂತದಲ್ಲಿ ಇದು ಖಂಡಿತ ಸಾಧ್ಯವಿದೆ. ಆದರೆ ಈ ಉಪಕ್ರಮ ಶಿಕ್ಷಕರ ಶ್ರದ್ಧೆ–ಶ್ರಮ–ಸಮಯಗಳನ್ನು ಅಪೇಕ್ಷಿಸುತ್ತದೆ. ವಿದೇಶಗಳಲ್ಲಿ ಕವನ ಕಟ್ಟುವುದು ಹೇಗೆ? ವಿಮರ್ಶೆ ಬರೆಯುವುದು ಹೇಗೆ? ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅವರವರ ಆಸಕ್ತಿಗನುಗುಣವಾಗಿ ಸ್ನಾತಕ, ಸ್ನಾತಕೋತ್ತರ ಪದವಿ ಕೋರ್ಸ ನಡೆಸುವ ಮೂಲಕ ವಿದ್ಯಾರ್ಥಿಗಳನ್ನು ಗುಣಾತ್ಮಕವಾಗಿಯೂ ಕ್ರಿಯಾತ್ಮಕವಾಗಿಯೂ ಬೆಳೆಸುತ್ತಾರೆ. ಇಂಥ ಪದ್ಧತಿಯನ್ನು ನಮ್ಮ ಸಿಲೆಬಸ್‌ನಲ್ಲಿ ಅಳವಡಿಸಿದರೆ ನಮ್ಮ ವಿದ್ಯಾರ್ಥಿಗಳು ಕಾವ್ಯ ಓದಿ ಕವಿಯಾಗದಿರುವುದು ತಪ್ಪಿ, ನಾಟಕ ಓದಿ ನಾಟಕಕಾರರಾಗದಿರುವುದು ತಪ್ಪಿ, ಖಂಡಿತ ಕೆಲವರಾದರೂ ಕವಿಯಾಗುತ್ತಾರೆ, ನಾಟಕಕಾರರಾಗುತ್ತಾರೆ, ವಿಮರ್ಶಕರಾಗುತ್ತಾರೆ, ಸಂಶೋಧಕರಾಗುತ್ತಾರೆ, ಕೊನೆಯಪಕ್ಷ ಉತ್ತಮ ಉಪನ್ಯಾಸಕರಾಗುತ್ತಾರೆ.

ವಿದ್ಯಾರ್ಥಿಗಳು ಹೀಗಾಗಬೇಕಾದರೆ, ಪ್ರತಿಯೊಬ್ಬ ಶಿಕ್ಷಕನಿಗೂ ವಾರಕ್ಕೆ ಒಂದು ಆನ್ವಯಿಕ ಪಿರಿಯಡ್ ಕಡ್ಡಾಯ ಮಾಡಬೇಕು. ೮೦ ಅಂಕಗಳನ್ನು ತಾತ್ವಿಕಕ್ಕೆ, ೨೦ ಅಂಕಗಳನ್ನು ಆನ್ವಯಿಕಕ್ಕೆ ಅಂದರೆ ವಿದ್ಯಾರ್ಥಿಗಳ ವಾಚನ, ಭಾಷಣ, ಚರ್ಚೆ, ಲೇಖನ ತರಬೇತಿಗಳಿಗೆ ಮೀಸಲಿಡಬೇಕು. ಇದರಿಂದ ಪ್ರಾಧ್ಯಾಪಕನಿಗೂ ವಿದ್ಯಾರ್ಥಿಗೂ ಮುಕ್ತಸಂವಹನ ಸಾಧ್ಯವಾಗಿ ವಿದ್ಯಾರ್ಥಿಯ ಭಾವನೆ ಸೃಜನಶೀಲವಾಗಿ ಬದುಕು ಕ್ರಿಯಾಶೀಲವಾಗಿ ಬೆಳೆಯುತ್ತವೆ. ಆಗ ಕನ್ನಡವೂ ಬೆಳೆಯುತ್ತದೆ. ಈ ಬಗೆಯ ಬೆಳವಣಿಗೆಗಳ ನೆಲೆ–ನೆಲೆಗಟ್ಟು ಪಠ್ಯಕ್ರಮ. ಅದು ಈ ದಾರಿಗಳಲ್ಲಿ ನವೀಕರಣಗೊಂಡರೆ ಮಾತ್ರ ಪರಿಸರಕ್ಕೆ ಪ್ರಸ್ತುತವಾಗುತ್ತದೆ. ಇಷ್ಟು ಹೇಳಿದ ಬಳಿಕವೂ ಒಂದು ಮಾತು : ನಮ್ಮ ಶಿಕ್ಷಕರು ತಮ್ಮ ಶೈಕ್ಷಣಿಕ ಶಕ್ತಿ–ಸಾಮರ್ಥ್ಯವನ್ನು ವಿದ್ಯಾರ್ಥಿಗಳಿಗೆ ಧಾರೆ ಎರೆಯಲು ಆರಂಭದ ಹಂತದಲ್ಲಿ ವರ್ಗಕೋಣೆಗೆ ಸೀಮಿತವಾಗಿ ದುಡಿಯುತ್ತಿದ್ದರು. ಕ್ರಮೇಣ ವಿಚಾರ ಸಂಕಿರಣದ ನೆವದಲ್ಲಿ ವೇದಿಕೆಗೆ ಬಂದರು, ಇತ್ತೀಚೆ ಜಾನಪದ ಹೆಸರಿನಲ್ಲಿ ಹಲಗೆ–ಡೊಳ್ಳು ವಾದ್ಯಗಳ ನಡುವೆ ಬೀದಿಗೆ ಇಳಿದಿದ್ದಾರೆ. ಇವರೆಲ್ಲ ಮತ್ತೆ ವರ್ಗಕೋಣೆಗೆ ಸೀಮಿತವಾಗಬೇಕು. ಮತ್ತು ಕೇವಲ ಬೋಧಿಸುವ ಪಠ್ಯಕ್ರಮ ಬದಲಾದರೆ ಶಿಕ್ಷಣ ಬದಲಾಗುವುದಿಲ್ಲ. ಬೋಧಿಸುವ ಶಿಕ್ಷಕನೂ ಬದಲಾದರೆ ಶಿಕ್ಷಣ ಬದಲಾಗುತ್ತದೆ. ಅಂಥ ಬದಲಾವಣೆ ಸಂದರ್ಭ ಬೇಗ ಒದಗಿಬರಲೆಂದು ಹಾರೈಸುತ್ತೇನೆ.

■■

ಆಕರ : ಮಾರ್ಗ ಸಂಪುಟ–೭

೯೮

ಸ್ನಾತಕೋತ್ತರ ಕನ್ನಡ ಪಠ್ಯಕ್ರಮ : ನವೀಕರಣ

ಸ್ನಾತಕೋತ್ತರ ಕನ್ನಡ ಪಠ್ಯಕ್ರಮ ಇಂದು ನವೀಕರಣದ ಅಗತ್ಯವನ್ನು ಎದುರು ನೋಡುತ್ತಲಿದೆ. ಈವರೆಗೆ ಪ್ರಸ್ತುತ ಪಠ್ಯಕ್ರಮದ ಇತಿಹಾಸದಲ್ಲಿ ಎರಡು ಪ್ರಯೋಗಗಳು ಜರುಗಿವೆ:

೧. ಪ್ರೊ. ಟಿ. ಎಸ್. ವೆಂಕಣ್ಣಯ್ಯ–ಪ್ರೊ. ಕೆ. ಜಿ. ಕುಂದಣಗಾರ ಅವಧಿ ೧೯೨೭

೨. ಪ್ರೊ. ದೇ. ಜವರೇಗೌಡ–ಪ್ರೊ. ಆರ್. ಸಿ. ಹಿರೇಮಠ ಅವಧಿ–೧೯೬೮

ಇವುಗಳಲ್ಲಿ ಎರಡನೆಯ ಪ್ರಯೋಗ ಜರುಗಿ ೨೦ ವರ್ಷ ಗತಿಸಿದರೂ, ಮೂರನೆಯ ಅಮೂಲಾಗ್ರ ಬದಲಾವಣೆಗೆ ಅದನ್ನು ಗುರಿಪಡಿಸದೆ ಆಗಾಗ ತೇಪೆ ಹಚ್ಚುತ್ತ ಮಾತ್ರ ಬರಲಾಗಿದೆ. ಇದರಿಂದಾಗಿ ಇಂದಿನ ಪಠ್ಯಕ್ರಮ ಬಹುಮಟ್ಟಿಗೆ ಪ್ರತಿಭಾವಂತರನ್ನು ಸೃಷ್ಟಿಸದೆ, ಪದವೀಧರರನ್ನು ಮಾತ್ರ ಸೃಷ್ಟಿಸುತ್ತ ನಡೆದು, ಅಪ್ರಸ್ತುತವೆನಿಸತೊಡಗಿದೆ.

ಮೇಲೆ ಸೂಚಿಸಿದವುಗಳಲ್ಲಿ ಮೊದಲನೆಯ ಪ್ರಯೋಗ ಬಹುಭಾಷಿಕ, ಏಕವಿಷಯಕವಾಗಿದ್ದರೆ, ಎರಡನೆಯದು ಏಕಭಾಷಿಕ, ಬಹುವಿಷಯಕವಾಗಿದೆ. ಈಗ ಮೂರನೆಯ ಪ್ರಯೋಗವು

೧. ಬಹುವಿಷಯಕ ಅಧ್ಯಯನ

೨. ಬಹುಭಾಷಿಕ ಅಧ್ಯಯನ

೩. ಆನ್ವಯಿಕ ಅಧ್ಯಯನ

ಹೀಗೆ ಮೂರು ನೆಲೆಗಳಲ್ಲಿ ಹೊಸ ಜೀವ ಪಡೆಯಬೇಕಾಗಿದ್ದು, ಆ ವಿವರ ಹೀಗಿದೆ :

೧. ಬಹುವಿಷಯಕ ಅಧ್ಯಯನ :

ಇಂದು ಕನ್ನಡ ಎಂ. ಎ. ಬೋಧನೆ ಭಾಷೆ, ಸಾಹಿತ್ಯ, ಸಂಸ್ಕೃತಿ, ಭಾಷಾಶಾಸ್ತ್ರ, ಜಾನಪದ ಭಾಷಾಂತರ, ಗ್ರಂಥಸಂಪಾದನೆ, ಇತ್ಯಾದಿಯಾಗಿ ಬಹು ವಿಷಯಗಳನ್ನೊಳಗೊಂಡಿದ್ದರೂ ಕೆಲವು ಸಂಸ್ಥೆಗಳಲ್ಲಿ ಕನ್ನಡ ಎಂ. ಎ. ಜೊತೆ ಬೇರೆ ಎಂ. ಎ. ಕೋರ್ಸಗಳೂ ಇದ್ದು, ಅವುಗಳಿಂದ ಕನ್ನಡದ ಮೇಲೆ ನೇರ ಇಲ್ಲವೆ ಪರೋಕ್ಷವಾಗಿ ಅತಿಕ್ರಮಣ ನಡೆದಿದೆ. ಆಶ್ರಯ ಕೊಟ್ಟ ಕನ್ನಡ ಅವುಗಳ ಮರ್ಜಿ ಹಿಡಿದು ಬದುಕುವ ಸ್ಥಿತಿಗಿಳಿದು, ತಾನು ಬದುಕಿದರೆ ಸಾಕು–ಎಂದು ಚಿಂತಿಸುತ್ತಿದೆಯೇ ಹೊರತು, ಬೆಳೆಯುವುದರತ್ತ ಅದಕ್ಕೆ ಗಮನ ಕೊಡಲು ಸಾಧ್ಯವಾಗುತ್ತಿಲ್ಲ.

ಅಂತರಶಿಸ್ತೀಯ ಹೆಸರಿನಲ್ಲಿ ತಾವೂ ಬೆಳೆಯದೆ, ಕನ್ನಡವನ್ನೂ ಬೆಳೆಯಗೊಡದೆ ಪರಾವಲಂಬನ ಪ್ರವೃತ್ತಿ ಬೆಳೆಸಿಕೊಂಡು ಜೀವ ಹಿಡಿದಿರುವ ಅನ್ಯ ಎಂ. ಎ. ಕೋರ್ಸುಗಳನ್ನು ಈಗ ಕನ್ನಡದಿಂದ ಪ್ರತ್ಯೇಕಗೊಳಿಸಬೇಕು. ಹೀಗೆ ಮಾಡುವುದರಿಂದ, ಈಗಾಗಲೇ ೨೦ ವರ್ಷಗಳಿಂದ ರೋಗಗ್ರಸ್ತವಾಗಿರುವ ಅನ್ಯ ಎಂ. ಎ. ಶಾಖೆಗಳು, ಬಂಧನದಲ್ಲಿ ಸಿಲುಕಿರುವ ಕನ್ನಡ ಶಾಖೆಯೂ ಬೆಳೆಯಲು ಸಾಧ್ಯವಾಗುತ್ತದೆ. ಆದುದರಿಂದ ಕನ್ನಡ ಎಂ. ಎ. ಕೋರ್ಸ ಒಂದನ್ನೇ ಕನ್ನಡ ವಿಭಾಗದಲ್ಲಿ ಇಟ್ಟು, ಅದು ಅನ್ಯ ವಿಷಯಗಳ ಐಚ್ಛಿಕತೆಯೊಂದಿಗೆ ಸಂಕೀರ್ಣವಾಗಿ ಬೆಳೆಯುವಂತೆ ಪಠ್ಯಕ್ರಮ ರೂಪಿಸಬೇಕು. ಅಂದರೆ ಬಹು ಶಾಖೀಯವನ್ನು ತಪ್ಪಿಸಿ, ಬಹು ವಿಷಯಕವನ್ನು ಇಲ್ಲಿ ಇನ್ನಷ್ಟು ಹದಗೊಳಿಸಬೇಕು.

ಎರಡನೆಯದಾಗಿ ಮುಖ್ಯಸ್ಥರ ಆವರ್ತನ ಪದ್ಧತಿಯ ಹೊಸ ನಿಯಮದ ಜಾರಿಯಿಂದಾಗಿ, ವಿಭಾಗದ ಮುಖ್ಯ ವಿಷಯವಾಗಿರುವ ಕನ್ನಡದ ಮೇಲೆ ಕನ್ನಡೇತರ ಪ್ರಾಧ್ಯಾಪಕರು ವರಿಷ್ಠರಾಗಿ ಬಂದು, ಅದಕ್ಕೆ ಅಪಾರ ಹಾನಿಯಾಗತೊಡಗಿದೆ. ಆದುದರಿಂದ ಕನ್ನಡ ವಿಭಾಗದ ಪಠ್ಯಕ್ರಮವನ್ನು ರೂಪಿಸುವ ಮೊದಲು ಅದರ ಸಂರಚನೆಯನ್ನು ಮೊದಲು ಮರುರಚಿಸಬೇಕು. ಬಳಿಕ ಇತ್ತೀಚೆ ಬೆಳೆದು ನಿಂತಿರುವ ಪೂರಕ ವಿಷಯಗಳನ್ನು ಐಚ್ಛಿಕವಾಗಿ ಜೋಡಿಸಿಕೊಂಡು ಬಹು ವಿಷಯ ಕನ್ನಡ ಬೋಧನಕ್ರಮ ಅಸ್ತಿತ್ವಕ್ಕೆ ಬರಬೇಕು.

ಬಹುಭಾಷಿಕ ಅಧ್ಯಯನ

ಇಂದು ಕನ್ನಡಿಗ ಏಕಭಾಷಾ ದ್ವೀಪವಾಸಿಯಲ್ಲ; ಅವನು ಬಹುಭಾಷಾ ಸಂದರ್ಭದಲ್ಲಿ ಬದುಕುತ್ತಲಿದ್ದಾನೆ. ಹೀಗಾಗಿ ಅವನಿಗೆ ಕನ್ನಡದ ಜೊತೆ ಗೌಣವಾಗಿಯಾದರೂ ಇನ್ನೊಂದು ಭಾಷೆಯ ತಿಳುವಳಿಕೆ ಇಂದು ಅವಶ್ಯವಿದೆ. ಇದನ್ನು ಅರ್ಥ ಮಾಡಿಕೊಳ್ಳದ ಕಾರಣ ಅವನೂ, ಅವನ ಕನ್ನಡವೂ ಕೇವಲ ರಾಜ್ಯ ಸೀಮಿತ ಕೂಪಮಂಡೂಕವಾಗಿ ಬಿಟ್ಟಿದೆ. ಅವನು ವಿಷಯ ತಿಳಿದುಕೊಂಡಿದ್ದರೂ ಇನ್ನೊಂದು ಭಾಷೆಯ ಕೊರತೆಯಿಂದಾಗಿ ತನ್ನ ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ರಾಷ್ಟ್ರಮಟ್ಟದಲ್ಲಿ, ಜಾಗತಿಕ ಮಟ್ಟದಲ್ಲಿ ಪ್ರತಿನಿಧಿಸಲು ಅಸಮರ್ಥನಾಗಿದ್ದಾನೆ. ಹೀಗಾಗಿ ಕನ್ನಡ ವಿದ್ಯಾರ್ಥಿಗೆ ಕನ್ನಡದೊಂದಿಗೆ ಇನ್ನೊಂದು ಭಾಷೆಯನ್ನು ಕಲಿಯಲು ಪಠ್ಯಕ್ರಮದಲ್ಲಿ ಅವಕಾಶ ಮಾಡಿಕೊಡಬೇಕಾಗಿದೆ.

ಇದಕ್ಕಾಗಿ ಬಿ. ಎ. ೧,೨,೩ ವರ್ಗಗಳಲ್ಲಿಯೇ ಕನ್ನಡದ ಜೊತೆ ಇನ್ನೊಂದು ಭಾಷೆ ಓದಿದವರಿಗೆ ಮಾತ್ರ ಎಂ. ಎ. ಕನ್ನಡಕ್ಕೆ ಪ್ರವೇಶವಿದೆ ಎಂಬ, ಇಲ್ಲವೆ ಅಂಥವರಿಗೆ ಕೆಲವೊಂದು ಕೃಪಾಂಕಗಳ ಅವಕಾಶವಿದೆಯೆಂಬ ನಿಯಮವನ್ನು ಕಡ್ಡಾಯಗೊಳಿಸಬೇಕು. ಹೀಗೆ ಪದವಿ ಮಟ್ಟದಲ್ಲಿ ವಿದ್ಯಾರ್ಥಿ ಐಚ್ಛಿಕವಾಗಿ ಓದಿದ ಭಾಷೆಯನ್ನು ಸ್ನಾತಕೋತ್ತರ ಮಟ್ಟದಲ್ಲಿಯೂ ಮುಂದುವರಿಸುವದನ್ನು ಕಡ್ಡಾಯಗೊಳಿಸಬೇಕು. ಇದರಿಂದ ಕನ್ನಡ ವಿದ್ಯಾರ್ಥಿಗೆ ದ್ವಿಗುಣ ವ್ಯಕ್ತಿತ್ವ ಪ್ರಾಪ್ತವಾಗುತ್ತದೆ.

ಆನ್ವಯಿಕ ಅಧ್ಯಯನ

ಈವರೆಗಿನ ಬೋಧನಾಕ್ರಮದಿಂದ ಉತ್ತರ ಪತ್ರಿಕೆ ಬರೆಯುವವರನ್ನು ಸಿದ್ಧಪಡಿಸುತ್ತಿರುವೆವೇ ಹೊರತು ಸಾಹಿತ್ಯ ಕುರಿತು ಚಿಂತಿಸುವವರನ್ನು ಸೃಷ್ಟಿಸಲಿಲ್ಲ. ಇದಕ್ಕೆ ನಿದರ್ಶನವೆಂದರೆ ಈವರೆಗೆ

ಕಾವ್ಯ ಕಲಿಸಿದೆವು, ಕವಿ ಹುಟ್ಟಲಿಲ್ಲ; ವಿಮರ್ಶೆ ಕಲಿಸಿದೆವು, ವಿಮರ್ಶಕ ಹುಟ್ಟಲಿಲ್ಲ; ಸಂಶೋಧನೆ ಕಲಿಸಿದೆವು, ಸಂಶೋಧಕ ಹುಟ್ಟಲಿಲ್ಲ ಇತ್ಯಾದಿ.

ಈ ಬಗೆಯ ಅನುತ್ಪಾದಕ ಬೋಧನ ಕ್ರಮವನ್ನು ಕೈಬಿಟ್ಟು, ಆನ್ವಯಿಕ (ಅಪ್ಲಾಯಿಡ್) ಬೋಧನ ಕ್ರಮಕ್ಕೆ ಒಂದಿಷ್ಟು ಅವಕಾಶ ಮಾಡಿಕೊಡಬೇಕು. ಆಗ ಕಾವ್ಯ ಓದಿ ಕವಿ ಹುಟ್ಟುತ್ತಾನೆ.... ಇತ್ಯಾದಿ. ಆದುದರಿಂದ ೧೦೦೦ ಅಂಕಗಳ ನಮ್ಮ ಸಿಲೆಬಸ್ ಹೀಗಿರಬೇಕು :

ಪ್ರಥಮ ವರ್ಷದ ಪತ್ರಿಕೆಗಳು	ದ್ವಿತೀಯ ವರ್ಷದ ಪತ್ರಿಕೆಗಳು
೧. ಕಡ್ಡಾಯ (ಹ–ಗ, ನ–ಗ)	೬. ಕಡ್ಡಾಯ (ಹೊ–ಗ)
೨. ಕಡ್ಡಾಯ (ಸಾಹಿತ್ಯ–ಶಾಸ್ತ್ರ)	೭ ಕಡ್ಡಾಯ (ಸಂಸ್ಕೃತಿ : ಗತ ಮತ್ತು ವರ್ತಮಾನ)
೩. ಐಚ್ಛಿಕ ವಿಷಯ	೮ ಐಚ್ಛಿಕ ವಿಷಯ
೪. ಬಿ.ಎ. ದಲ್ಲಿ ಓದಿದ ಐಚ್ಛಿಕ–ಭಾಷೆ	೯ ಕಡ್ಡಾಯ–ಆನ್ವಯಿಕ
೫. ಕಡ್ಡಾಯ–ಆನ್ವಯಿಕ	೧೦ ಬಿ.ಎ.ದಲ್ಲಿ ಓದಿದ ಐಚ್ಛಿಕ–ಭಾಷೆ

ಸ್ನಾತಕೋತ್ತರ ಕನ್ನಡ ವಿಭಾಗಗಳಲ್ಲಿ ಸಾಮಾನ್ಯವಾಗಿ ಒಬ್ಬ ಅಧ್ಯಾಪಕರಿಗೆ ಇಬ್ಬರು ಮೂವರನ್ನು ದತ್ತು ತೆಗೆದುಕೊಳ್ಳಲು ಬರುವಷ್ಟು ವಿದ್ಯಾರ್ಥಿಗಳು ಮಾತ್ರ ಇರುವುದರಿಂದ, ಎರಡು ಪತ್ರಿಕೆಗಳನ್ನಾದರೂ ಆನ್ವಯಿಕ ಬೋಧನೆ ಮಾಡಲು ಸಾಧ್ಯವಾಗುತ್ತದೆ. ಇದು ಖಂಡಿತವಾಗಿಯೂ ವಿದ್ಯಾರ್ಥಿಗಳನ್ನು ಸೃಜನಶೀಲರನ್ನಾಗಿ ಬೆಳೆಸುತ್ತದೆ.

ನಮ್ಮ ನಾಡಿನ ವಿಶ್ವವಿದ್ಯಾಲಯಗಳಲ್ಲಿ ಮಿಕ್ಕ ವಿಷಯಗಳಿಗಿಂತ ಕನ್ನಡವನ್ನು ಒಂದಿಷ್ಟು ಬೇರೆ ದೃಷ್ಟಿಯಿಂದ ನೋಡಬೇಕಾಗುತ್ತದೆ. ಏಕೆಂದರೆ ಮಿಕ್ಕ ವಿಷಯಗಳು ಇಲ್ಲಿ ಬೆಳೆಯದಿದ್ದರೆ, ಬೇರೆಲ್ಲಿಯಾದರೂ ಬೆಳೆಯುತ್ತವೆ. ಕನ್ನಡ ವಿಷಯ ಇಲ್ಲಿ ಬೆಳೆಯದಿದ್ದರೆ ಬೇರೆಲ್ಲಿಯೂ ಬೆಳೆಯಲಾರದು. ಈ ಸತ್ಯವನ್ನು ಅರ್ಥ ಮಾಡಿಕೊಂಡು, ಮೇಲೆ ಸೂಚಿಸಿದ ವಿಭಾಗ ಮರುರಚನೆ ಮತ್ತು ಪಠ್ಯಕ್ರಮ ಸುಧಾರಣೆ ಮಾಡುವುದು ಇಂದಿನ ತುರ್ತು ಅಗತ್ಯವಾಗಿದೆ.

■■

ಆಕರ : ಮಾರ್ಗ ಸಂಪುಟ–೭

೯೯

ನನ್ನ ಕರ್ನಾಟಕ

ಕಾಣುವ ಕರ್ನಾಟಕದಷ್ಟೇ ಕಾಣದಿರುವ ಕರ್ನಾಟಕದ ಅಭ್ಯಾಸ ಮಹತ್ವಪೂರ್ಣವೆನಿಸಿದೆ. ಇದರ ಭೂಗೋಲ ದೊಡ್ಡದು. ಇತಿಹಾಸ ಇನ್ನೂ ದೊಡ್ಡದು. ಕಾವೇರಿಯಿಂದ ಗೋದಾವರಿಯವರೆಗೆ ವ್ಯಾಪ್ತವಾಗಿದ್ದ ಈ ನಾಡಿನ ಸಂಸ್ಕೃತಿಯ ಅವಶೇಷಗಳು ಅದರಾಚೆಗೂ ಗೋಚರಿಸುತ್ತವೆ. ಅಶೋಕನ ಶಾಸನಗಳ ಕಾಲದಷ್ಟು ಪ್ರಾಚೀನವಾಗಿರುವ ಇದರ ಇತಿಹಾಸ ಇನ್ನೂ ಹಿಂದೆ ಮೈಚಾಚಿದೆ.

ಈ ಕಾಲ-ದೇಶಗಳ ವಿಸ್ತಾರದಂತೆ ಈ ನಾಡಿನ ಸಂಸ್ಕೃತಿಯೂ ವಿಸ್ತಾರವಾಗಿದೆ. ವೈವಿಧ್ಯಪೂರ್ಣವಾಗಿದೆ. ಉತ್ತರ ಮತ್ತು ದಕ್ಷಿಣ ಭಾರತಗಳ ದ್ವಾರವಾಗಿರುವ ಕಾರಣ ಈ ನಾಡಿನ ದ್ರಾವಿಡ ಸಂಸ್ಕೃತಿಯ ಮೇಲೆ ಆರ್ಯ ಸಂಸ್ಕೃತಿ ಆವರಿಸಿದೆ. ಆಮೇಲೆ ಇಸ್ಲಾಂ ಸಂಸ್ಕೃತಿಯು ಪ್ರವೇಶಿಸಿದೆ. ಇತ್ತೀಚೆ ಆಂಗ್ಲ ಸಂಸ್ಕೃತಿ ಸೇರಿಕೊಳ್ಳುತ್ತಲಿದೆ. ನೂರಾರು ಬಗೆಯ ಜನಾಂಗಗಳು, ಇವರ ವೃತ್ತಿ-ಚಿತ್ತ ವೃತ್ತಿಗಳು, ಈ ಚಿತ್ತವೃತ್ತಿಗಳನ್ನಾಳುತ್ತ ಬಂದ ಬೌದ್ಧ, ಜೈನ, ವೀರಶೈವ ಬ್ರಾಹ್ಮಣ ಮುಸಲ್ಮಾನ ಕ್ರೈಸ್ತದಂಥ ಪ್ರಮುಖ ಧರ್ಮಗಳು; ಕಾಪಾಲಿಕ, ಕೌಲನಾಥ, ಆರೂಢದಂಥ ಸಣ್ಣ-ಪುಟ್ಟ ಪಂಥಗಳು; ಮೈಲಾರ ಜೋಕುಮಾರ ಎಲ್ಲಮ್ಮ, ಉಡಚವ್ವ ಬೀರಪ್ಪ ಜುಂಜಪ್ಪರಂಥ ಗ್ರಾಮೀಣದೇವತೆಗಳು; ಭೂತಾರಾಧನೆ ಪುರವಂತ ಸಂಪ್ರದಾಯ; ಕೆಂಡದಸೇವೆ ಬಿಂದಗಿ ಪೂಜೆ ಕೌದಿ ಪೂಜೆ ಕಡಬಿನ ಕಾಳಗ ಸಿಡಿ ಆಟ, ಮಂತ್ರ ಮಾಟಗಳಂಥ ಆಚರಣೆಗಳು ನಮ್ಮ ಜನಪದ ಸಂಸ್ಕೃತಿಯ ವಾಹಕಗಳಾಗಿ ಇನ್ನೂ ಮುಂದುವರಿಯುತ್ತಲಿವೆ.

ಊರೂರಿಗೆ ದೇವಾಲಯ ದೇವತೆಗಳು ಮಠ-ಸ್ಮಾರಕಗಳು ಕೆರೆ ಕೋಟೆಗಳು ಶಾಸನ ಶಿಲ್ಪಗಳು ವೀರಗಲ್ಲು-ಮಾಸ್ತಿಕಲ್ಲುಗಳು ನಿಬಿಡವಾಗಿ ನಿಂತುಕೊಂಡಿವೆ. ಇವುಗಳ ಬಗ್ಗೆ ಕೇಳಿ ಬರುವ ವದಂತಿಗಳೂ ಅಸ್ತಿತ್ವದಲ್ಲಿರುವ ಅಂಧಶ್ರದ್ಧೆಗಳೂ, ಇವುಗಳ ಹಿಂದಿರುವ ಸತ್ಯಗಳೂ ನಮ್ಮ ಬದುಕಿನ ಭಾಗವಾಗಿ ಸಾಗಿ ಬಂದಿವೆ.

ಹಳಗನ್ನಡ ನಡುಗನ್ನಡ ಹೊಸಗನ್ನಡವೆಂಬ ಭಾಷಾ ಅವಸ್ಥೆಗಳಿಂದ ಧಾರವಾಡ ಕನ್ನಡ, ಮೈಸೂರುಕನ್ನಡ, ಕರಾವಳಿ ಕನ್ನಡವೆಂಬ ಭಾಷಾ ಸೀಮೆಗಳಿಂದ ಚಂಪೂ, ಷಟ್ಪದಿ, ವಚನ ಕೀರ್ತನೆಗಳೆಂಬ ಪ್ರೌಢ ಸಾಹಿತ್ಯ ಪ್ರಕಾರಗಳಿಂದ ಗಾದೆ, ಒಗಟು, ಆಟ ಬಯಲಾಟಗಳಂಥ

ಜನಪದ ಸಾಹಿತ್ಯ ಪ್ರಕಾರಗಳಿಂದ ಪ್ರಾಚೀನ ಕರ್ನಾಟಕದ ಸಂಸ್ಕೃತಿ ಶರೀರ ಶ್ರೀಮಂತವಾಗಿದೆ.

ಆದರೆ ಇವುಗಳಿಗೆ ಸಂಬಂಧಪಟ್ಟ ವಿಷಯ ಯಾವ ಊರುಗಳಲ್ಲಿ, ಯಾವ ಕೇರಿಗಳಲ್ಲಿ ಬಿದ್ದುಕೊಂಡಿದೆ? ಯಾರ ಮಾತಿನಲ್ಲಿ ಯಾವ ಕೃತಿಯಲ್ಲಿ ಮುಖ ಮುಚ್ಚಿಕೊಂಡು ಕುಳಿತಿದೆ? ಇದೆಲ್ಲವನ್ನು ಶೋಧಿಸುವ, ಅರ್ಥೈಸುವ ಕೆಲಸ ಇಂದು ಅಗತ್ಯ ನಡೆಯಬೇಕಾಗಿದೆ. ಇದು ಕಳೆದು ಹೋದ ಕರ್ನಾಟಕತ್ವವನ್ನು ಕಾಣಿಸುವ ಕೆಲಸ. ಇಂದು ಕನ್ನಡಿಗನಿಗೆ ತನ್ನ ಭೂಮಿಯ ಬಗ್ಗೆ ನಿರಭಿಮಾನ ದೇಶದ ಬಗ್ಗೆ ನಿರಭಿಮಾನ, ಸಂಸ್ಕೃತಿಯ ಬಗ್ಗೆ ನಿರಭಿಮಾನ ಅವನಿಗೆ ತನ್ನ ಸಂಸ್ಕೃತಿಯ ಕೆಲವು ಸತ್ಯಗಳಾದರೂ ತಿಳಿದು ಬರಲಿ. ಸಂಶೋಧನೆಯಂಥ ಗಂಭೀರ ವಿಷಯ ಕೇವಲ ವಿದ್ವಜ್ಜನತೆಯಲ್ಲಿ ಮಡುಗಟ್ಟಿದೆ, ಜನತೆಯ ಮಧ್ಯದಲ್ಲಿಯೂ ಪ್ರವಹಿಸಲಿ, ಸಾಧ್ಯವಾದರೆ ಈ ಸಂವಾದದಲ್ಲಿ ಅವರೂ ಪಾಲುಗೊಂಡು ಸಂಶೋಧನ ಕ್ಷೇತ್ರಕ್ಕೆ ಮುಕ್ತ ಸ್ವರೂಪ ಬರಲಿ ಎಂಬ ಉದ್ದೇಶ ನಮ್ಮದಾಗಿದೆ. ಆದುದರಿಂದ ಪ್ರತಿ ರವಿವಾರ ನಿಮ್ಮ ಊರ ಬಗ್ಗೆ ನಿಮ್ಮ ಊರಿನ ಅವಶೇಷಗಳ ಬಗ್ಗೆ ನಿಮ್ಮ ಹೆಸರಿನ ಬಗ್ಗೆ ನಮ್ಮ ಬಗ್ಗೆ ಅಂದರೆ ನಮ್ಮ ಕರ್ನಾಟಕದ ಬಗ್ಗೆ ಶೋಧರೂಪದ ಅಂಕಣ ಬರಹವನ್ನು ಪ್ರಾರಂಭಿಸುತ್ತಿದ್ದೇವೆ. ಇದು ಜನತೆಯಲ್ಲಿ ಇತಿಹಾಸ ಪ್ರಜ್ಞೆಯನ್ನು ಬೆಳೆಸುವುದೆಂದು ನಾವು ನಂಬಿದ್ದೇವೆ.

ಸಂಶೋಧನೆಯೆನ್ನುವುದು ಅಲ್ಪವಿರಾಮ, ಅರ್ಧವಿರಾಮಗಳಿಂದ ಪೂರ್ಣವಿರಾಮಕ್ಕೆ ಸಾಗುವ ಒಂದು ಕ್ರಿಯೆಯಾಗಿದೆ. ಹೀಗಾಗಿ ಟಿಪ್ಪಣಿ ರೂಪದ ಈ ಬರಹ ಮುಚ್ಚಿದ ಬಾಗಿಲವನ್ನು ತೆರೆಯುವ ಕೀಲಿಕೈ ರೂಪದ್ದಿರುತ್ತದೆ. ಇಲ್ಲವೆ ತೆರೆದ ಬಾಗಿಲನ್ನು ಜನತೆಗೆ ಪರಿಚಯಿಸುವ ಪ್ರಯತ್ನದ್ದಾಗಿರುತ್ತದೆ.

ನಾವು ದೊಡ್ಡವರಿರಬಹುದು. ನಮಗಿಂತ ನಮ್ಮ ನಾಡು ದೊಡ್ಡದು. ಇವೆಲ್ಲವುಗಳಿಗಿಂತ ಸತ್ಯ ದೊಡ್ಡದು.

■■

ಆಕರ : ಮಾರ್ಗ ಸಂಪುಟ–೮

೧೦೦

ಎಲ್ಲಾದರು ಇರು–ಎಂತಾದರು ಇರು

"ನಿನ್ನ ಹತ್ತಿರ ಆರು ಕಾಸು ಇದ್ದರೆ
ಮೂರು ಕಾಸು ಕೊಟ್ಟು ರೊಟ್ಟಿ ಖರೀದಿಸು
ಮೂರು ಕಾಸು ಕೊಟ್ಟು ಹೂವು ಖರೀದಿಸು"

ಇದು ಪೂರ್ಣ ಬದುಕನ್ನು ಕುರಿತು ಹೇಳಿದ ಮಾತು. ಇದನ್ನು ಹೇಳಿದವ ಅರಬದೇಶದ ಪ್ರವಾದಿ ಪೈಗಂಬರ. ಇಂದು ಜಗತ್ತು ಈ ಮಾತಿಗೆ ಕಿವಿಗೊಡುತ್ತಿಲ್ಲ. ಆರೂ ಕಾಸು ಕೊಟ್ಟು ರೊಟ್ಟಿ ಖರೀದಿಸುವ ಭೌತಿಕ ಉಪಜೀವನದತ್ತ ಧಾವಿಸುತ್ತಲಿದೆ. ಭೌತಿಕವಾಗಿ ಬದುಕುವುದು 'ಉಪ-ಜೀವನ.' ಸಾಂಸ್ಕೃತಿಕವಾಗಿ ಬದುಕುವುದು 'ಜೀವನ'; ಇಂದು ನಾವು ಸಾಂಸ್ಕೃತಿಕ 'ಜೀವನ' ಪಾತಳಿಯಿಂದ ಭೌತಿಕ ಉಪ ಜೀವನ ಪಾತಳಿಗೆ ಇಳಿದಿದ್ದೇವೆ. ಇಂಥ ಸಂದರ್ಭದಲ್ಲಿ, 'ಭೋಗಭೂಮಿ' ಖ್ಯಾತಿಯ ಅರಬ ರಾಷ್ಟ್ರದಲ್ಲಿರುವ ಕನ್ನಡಿಗರು ನಿಮ್ಮ ಗಳಿಕೆಯ ಆರು ಕಾಸುಗಳಲ್ಲಿ ಮೂರು ಕಾಸುಗಳನ್ನು ಹೂವು ಖರೀದಿಸಲು ವಿನಿಯೋಗಿಸುತ್ತಿರುವಿರಿ. ಇದಕ್ಕೆ ಪ್ರತಿವರ್ಷ ಜರುಗಿಸುತ್ತಿರುವ ಸಾಹಿತ್ಯ ಸಮ್ಮೇಲನ ಸಾಕ್ಷಿಯಾಗಿದೆ. ಈ ವರ್ಷದ ಸಮ್ಮೇಲನಕ್ಕೆ ಅಧ್ಯಕ್ಷನೆಂದು ನನ್ನನ್ನು ಆಮಂತ್ರಿಸಿದ ನಿಮಗೆಲ್ಲ ಕೃತಜ್ಞನಾಗಿದ್ದೇನೆ.

ನಮ್ಮ ನಾಡಿನ ಹೆಸರು ಕರ್ನಾಟಕ. ಇದರ ಹಳೆಯ ಹೆಸರು ದ್ರಾವಿಡ ಭಾಷಾ ಪದ್ಧತಿಯಂತೆ ಬರೆಹದಲ್ಲಿ ಕರ್ನಾಟ, ಉಚ್ಚಾರದಲ್ಲಿ ಕರ್ನಾಡ. ಇವುಗಳಿಂದ ಕರ್ನಾಟಕ, ಕನ್ನಡಿಗ ಇತ್ಯಾದಿ ರೂಪಗಳು ಬೆಳೆದು ನಿಂತಿವೆ.

ನಾವು ಕನ್ನಡಿಗರು, ನಮ್ಮದು ದ್ರಾವಿಡ ಕುಟುಂಬ. ದಕ್ಷಿಣ ಭಾರತದ ಎಲ್ಲ ರಾಜ್ಯಗಳು ನಮ್ಮ ಸೋದರ ಸಂಬಂಧಿ. ಇವುಗಳಲ್ಲಿ ತಮಿಳುನಾಡಿನದು ತಮಿಳು ಭಾಷೆ. ಈ ರೀತಿಯ ನಾಡು-ನುಡಿಯ ಸಾಮರಸ್ಯ ಮಿಕ್ಕವುಗಳಲ್ಲಿ ಇಲ್ಲ. ಅಂದರೆ ಅವುಗಳಲ್ಲಿ ನಾಡಿನ ಹೆಸರು ಆಂಧ್ರಪ್ರದೇಶ-ನುಡಿಯ ಹೆಸರು ತೆಲುಗು, ನಾಡಿನ ಹೆಸರು ಕೇರಳ ರಾಜ್ಯ-ನುಡಿಯ ಹೆಸರು ಮಲೆಯಾಳಂ, ನಾಡಿನ ಹೆಸರು ಕರ್ನಾಟಕ ನುಡಿಯ ಹೆಸರು ಕನ್ನಡ. ಇದು ಅಪರಿಚಿತರಿಗೆ ಗೊಂದಲವನ್ನುಂಟು ಮಾಡುವುದರಿಂದ ನಾಡ ಹೆಸರನ್ನು ಹೇಳುತ್ತಲೇ ನುಡಿಯ ಹೆಸರು, ನುಡಿಯ ಹೆಸರನ್ನು ಹೇಳುತ್ತಲೇ

ನಾಡ ಹೆಸರು ನೆನಪಾಗುವಂತೆ ತೆಲಗುನಾಡು-ತೆಲುಗು ಭಾಷೆ, ಮಲೆಯಾಳಂ ನಾಡು-ಮಲೆಯಾಳಂ ಭಾಷೆ, ಕನ್ನಡ ನಾಡು-ಕನ್ನಡ ಭಾಷೆಯೆಂಬ ಜೋಡಿ ಎದ್ದು ಕಾಣುವ ಸಲುವಾಗಿ ಈ ದ್ರಾವಿಡ ರಾಜ್ಯಗಳಿಗೆ 'ಕನ್ನಡ ನಾಡು' 'ತೆಲಗು ನಾಡು' 'ಮಲೆಯಾಳಂ ನಾಡು' ಎಂದು ಮರುನಾಮಕರಣ ಮಾಡುವುದು ಯೋಗ್ಯವೆನಿಸುತ್ತದೆ. ಹೀಗೆ ಮಾಡಿದರೆ ದ್ರಾವಿಡ ಮೂಲದ 'ನಾಡು' ಪದಾಂತ್ಯದಿಂದಾಗಿ ಇವು ಒಂದೇ ಕುಟುಂಬದ ಸೋದರ ಸಂಬಂಧಿ ರಾಜ್ಯಗಳೆಂಬ ಕಲ್ಪನೆ ಮೂಡುತ್ತದೆ. ರಾಜ್ಯ ರಾಜ್ಯಗಳಲ್ಲಿ ಪರಸ್ಪರ ಏಕಭಾವ, ಬಾಂಧವ್ಯ ಬೆಳೆಯುತ್ತದೆ. ನಾಲ್ಕು ರಾಜ್ಯಗಳು ಸೇರಿ ಈ ಬಗ್ಗೆ ವಿಚಾರಿಸುವುದು ಅವಶ್ಯವೆನಿಸುತ್ತದೆ.

ಕರ್ನಾಟಕವೆಂದರೆ ದೊಡ್ಡ ದೇಶವೆಂದು ಅರ್ಥ. ಹೆಸರಿಗೆ ತಕ್ಕಂತೆ ಇದು ಮೂಲತಃ ದೊಡ್ಡ ಭೂಪ್ರದೇಶವಾಗಿದ್ದಿತು. ಮೊದಲು ಕಾವೇರಿಯಿಂದ ನರ್ಮದೆಯವರೆಗೆ, ಬಳಿಕ ಕಾವೇರಿಯಿಂದ ಗೋದಾವರಿ ವರೆಗೆ ದೊಡ್ಡದಾಗಿದ್ದುದೇ ಕಾರಣವಾಗಿ ಇಂದು ೧೩ ರಷ್ಟು ಜಿಲ್ಲೆ ಕಳೆದುಕೊಂಡು ೨೮ ಜಿಲ್ಲೆಗಳ ಸಣ್ಣ ರಾಜ್ಯವಾಯಿತು. ಆ ದೊಡ್ಡ ವಿಸ್ತಾರ ಕಾರಣವಾಗಿ ಯಾವು ಯಾವುದೋ ಜನಸಮುದಾಯದವರು ವಲಸೆ ಬಂದು ಸೇರಿದರು. ಆಗ ವೈವಿಧ್ಯಪೂರ್ಣ ಜನಸಮುದಾಯ ವಿಸ್ತೃತ ಪ್ರದೇಶಗಳನ್ನು ಆಳುವದು ಅಸಾಧ್ಯವಾದಾಗ ದೂರದ ಹೊರ ಸೀಮೆ ಕೈಬಿಟ್ಟು ರಾಜ್ಯ ಸಣ್ಣದಾಗುತ್ತ ನಡೆಯಿತು. ಒಳ ನಾಡಿನ ವಲಸೆಗಾರರ ವಿಪುಲ ಜನಸಂಖ್ಯೆ ಮತ್ತು ಅವರು ಹಿಡಿದುಕೊಂಡ ಅಧಿಕಾರ ಕಾರಣವಾಗಿ ಕನ್ನಡಿಗರು ತಮ್ಮ ಮನೆಯಲ್ಲಿ ತಾವೇ ಪರಾಧೀನರಾಗುವ ಪರಿಸ್ಥಿತಿ ನಿರ್ಮಾಣವಾಯಿತು. ೧೯-೨೦ ನೆಯ ಶತಮಾನದ ನವೋದಯ ಹೊತ್ತಿಗೆ ಆಳುವವರು (Rular) ಬ್ರಿಟಿಶರಾದರೂ ಆಡಳಿತಗಾರರು (Adminisrators) ದಕ್ಷಿಣದಲ್ಲಿ ತಮಿಳರು, ಪಶ್ಚಿಮದಲ್ಲಿ ಮರಾಠರು, ಪೂರ್ವದಲ್ಲಿ ತೆಲುಗರಾಗಿ ಆಡಳಿತವೆ ಎಲ್ಲ ಕ್ಷೇತ್ರಗಳನ್ನು ನಿಯಂತ್ರಿಸುವ ಪ್ರಮುಖ ಶಕ್ತಿಯಾಗಿರುವುದರಿಂದ ಈ ಅನ್ಯಭಾಷಾ ಆಡಳಿತಗಾರರಿಂದಾಗಿ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಅನ್ಯಭಾಷಿಕರೆ ಪ್ರಮುಖರೆನಿಸಿದರು. ಸಾಹಿತ್ಯಕ್ಷೇತ್ರವನ್ನು ಗಮನಿಸಿ ಹೇಳುವುದಾದರೆ ಉತ್ತರಕರ್ನಾಟಕದಲ್ಲಿ ಮರಾಠಿ ಮಾತೃಭಾಷೆಯ ಬೇಂದ್ರೆ, ಶಂಬಾಜೋಶಿ, ದಕ್ಷಿಣ ಕರ್ನಾಟಕದಲ್ಲಿ ತಮಿಳು ಮಾತೃಭಾಷೆಯ ಕೈಲಾಸಂ, ಮಾಸ್ತಿ, ಬಿ. ಎಂ. ಶ್ರೀ, ಡಿ.ವಿ.ಜಿ, ತೆಲುಗು ಮಾತೃಭಾಷೆಯ ಟಿ. ಎಸ್. ವೆಂಕಣ್ಣಯ್ಯ, ದೇವುಡು ಹೀಗೆ ಅನ್ಯ ಭಾಷಾ ಬ್ರಾಹ್ಮಣರೇ ಪ್ರಮುಖರಾಗಿದ್ದುದರಿಂದ ಆ ಹೊತ್ತಿಗೆ ಸಾವಿರ ವರ್ಷದ ಶ್ರೀಮಂತ ಸಾಹಿತ್ಯ ಪರಂಪರೆಯ ಕನ್ನಡಿಗರಲ್ಲಿ ಪ್ರತಿಭೆಯೇ ನಾಶವಾಗಿದ್ದಿತೆನಿಸುತ್ತದೆ. ಬಳಿಕ ಕನ್ನಡ ಮಾತೃಭಾಷಾ ಮೂಲದ ಮೇಲುವರ್ಗದ ಬ್ರಾಹ್ಮಣರು, ಆಮೇಲೆ ಮಧ್ಯಮ ವರ್ಗದ ಲಿಂಗಾಯತ, ಗೌಡ, ಮೊದಲಾದವರು, ಇತ್ತೀಚೆ ದಲಿತವರ್ಗದವರು, ಇನ್ನೂ ಇತ್ತೀಚೆ ಮಹಿಳೆಯರು ಒಂದೊಂದು ಸಾಹಿತ್ಯ ವಾಹಿನಿಯಾಗಿ ಸೇರಿಕೊಳ್ಳುತ್ತ ಬಂದುದು ಸಾಹಿತ್ಯಿಕ ಪ್ರಗತಿಯ ಇತಿಹಾಸವೂ ಹೌದು, ಸಾಮಾಜಿಕ ಪ್ರಗತಿಯ ಇತಿಹಾಸವೂ ಹೌದು. ಸಾರ್ವಜನಿಕ ಶಿಕ್ಷಣ, ಸರಕಾರಿ ಉದ್ಯೋಗ, ಅಸ್ಪೃಶ್ಯತೆಯ ನಿರಾಕರಣೆ ಇತ್ಯಾದಿಗಳ ಮೂಲಕ ಇಂಥ ಪ್ರವೇಶಕ್ಕೆ ಬಾಗಿಲು ತೆರೆದ ಬ್ರಿಟಿಶರಿಗೆ ನಾವೆಲ್ಲ ಕೃತಜ್ಞರಾಗಿರಬೇಕು. ಆದುದರಿಂದ ೨೦೦ ವರ್ಷಗಳ ಭೌತಿಕ ಗುಲಾಮಗಿರಿಯಿಂದ ನಮ್ಮನ್ನು ಗಾಂಧೀಜಿಯವರು ಮುಕ್ತಗೊಳಿಸಿದರಾದರೂ ೨೦೦೦ ವರ್ಷಗಳ ಸಾಂಸ್ಕೃತಿಕ ಗುಲಾಮಗಿರಿಯಿಂದ ನಮ್ಮನ್ನು ಬ್ರಿಟಿಷರು ಮುಕ್ತ ಮಾಡಿದುದೇ

ನಿಜವಾದ ಸ್ವಾತಂತ್ರ್ಯವೆಂದು ನಾನು ಭಾವಿಸುತ್ತೇನೆ. ಅವರ ಪ್ರೇರಣೆ–ಅವಕಾಶ ಕಾರಣವಾಗಿ ಎಲ್ಲ ವರ್ಗದವರು ಇಂದು ಪ್ರಗತಿ ಸಾಧಿಸಿದ್ದರೂ ಎಲ್ಲರಿಗೂ ಎಲ್ಲ ಕ್ಷೇತ್ರಗಳಲ್ಲಿ ಸಮಾನ ಸ್ವಾಮಿತ್ವ ಇನ್ನೂ ಪ್ರಾಪ್ತವಾಗಿಲ್ಲವೆಂದೇ ಹೇಳಬೇಕು.

ಹೀಗಿದ್ದೂ, ಮತ್ತೆ ಸಾಹಿತ್ಯವನ್ನೇ ಕುರಿತು ಹೇಳುವುದಾದರೆ ಅಲ್ಲಿಂದ ಇಲ್ಲಿಯವರೆಗಿನ ಒಂದು ಶತಮಾನದಲ್ಲಿ ಕನ್ನಡ ಸಾಹಿತ್ಯ ಬಹುಮುಖಿಯಾಗಿ ಬೆಳೆದು ಬಂದಿದೆ. ರಾಷ್ಟ್ರ ಖ್ಯಾತಿ ಗಳಿಸಿದೆ. ಹೀಗೆ ಸಾಹಿತ್ಯಿಕವಾಗಿ ಸುದೈವಿಯಾಗಿದ್ದರೂ ಕನ್ನಡ ಭಾಷಿಕವಾಗಿ ದುರ್ದೈವಿಯೆಂದೇ ಹೇಳಬೇಕು. ಈ ವಿರೋಧಾಭಾಸಕ್ಕೆ ಕಾರಣ, ಇಲ್ಲಿಯ ಅನ್ಯಭಾಷಿಕರ ಮಾತೃಭಾಷಾ ಮೋಹ, ಎಲ್ಲ ಭಾಷಿಕರ ಇಂಗ್ಲಿಷ್ ವ್ಯಾಮೋಹ. ಇಂಗ್ಲಿಷ್ ವ್ಯಾಮೋಹ ಭಾರತದ ಎಲ್ಲ ರಾಜ್ಯಗಳನ್ನು ಕಾಡುತ್ತಲಿದೆ. ಹೀಗಾಗಿ ಎಲ್ಲ ರಾಜ್ಯಗಳು ಪರಸ್ಪರ ಭಾಷಾ ವೈರತ್ವ ಮರೆತು ಒಗ್ಗಟ್ಟಿನಿಂದ "ಇಂಗ್ಲಿಷ್ ಬೆಳಕಾಗಿ ಬರಲಿ, ಬೆಂಕಿಯಾಗಿ ಬೇಡ'ವೆಂದು ಹೋರಾಟದಲ್ಲಿ ನಿರತವಾಗಬೇಕು. ಮಾತೃಭಾಷಾ ವೈರತ್ವ ಸಮಸ್ಯೆಯನ್ನು ಸೂಕ್ತ ರೀತಿಯಲ್ಲಿ ಬಗೆಹರಿಸಿಕೊಳ್ಳುವುದೆಂದರೆ, 'ಮಾತೃಭಾಷೆ' ಹಾಗೆಂದರೇನು? ಎಂಬುದಕ್ಕೆ ಅವು ಕೆಳಗಿನಂತೆ ಹೊಸ ಅರ್ಥ ಒಪ್ಪಿಕೊಳ್ಳಬೇಕು.

ಮನೆಯಲ್ಲಿ ಪರಂಪರಾಗತವಾಗಿ ಬಳಸುತ್ತ ಬಂದ ಭಾಷೆಯೇ ಮಾತೃಭಾಷೆ ಅಥವಾ ಕುಟುಂಬ ಭಾಷೆ. ಇಂಥ ಭಾಷಾ ಮಾಧ್ಯಮದ ಮೂಲಕ ಮಗುವಿಗೆ ಶಿಕ್ಷಣ ನೀಡಬೇಕೆಂದು ಮನೋವಿಜ್ಞಾನಿಗಳು, ಶಿಕ್ಷಣ ತಜ್ಞರು ಇಂದಿಗೂ ವಾದಿಸುತ್ತಲಿದ್ದಾರೆ. ಇದು ನ್ಯಾಯಸಮ್ಮತವಾದುದು. ಆದರೆ ಇವರು ಮಾತೃಭಾಷೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂದೇ ಹೇಳಬೇಕು. ಹಿಂದಿನ ಕಾಲದಲ್ಲಿ ಸ್ಥಿರಸಮಾಜ ಕಾರಣವಾಗಿ ಮನೆಯ ಹೊರಗಿನ ಸಮಾಜದವರು ಅವರು ತಾವು ಬಳಸುತ್ತಿದ್ದುದನ್ನು 'ಮಾತೃಭಾಷೆ'ಯೆಂದು ಕರೆಯುತ್ತಿದ್ದರೂ ಅದು ನಿಜ ಅರ್ಥದಲ್ಲಿ ಪರಿಸರ ಭಾಷೆಯೇ ಆಗಿದ್ದಿತು. ಆದುದರಿಂದ ಇಂದಿನ ಶಿಕ್ಷಣ ತಜ್ಞರು 'ಮಾತೃಭಾಷೆ' ಎಂದು ಕರೆಯುತ್ತಿರುವುದು ಪರ್ಯಾಯವಾಗಿ ಪರಿಸರ ಭಾಷೆಯೇ ಆಗಿದೆ. ಈಗ ಕಾಲ ಬದಲಾಗಿದೆ. ಇಂದು ಸ್ಥಿರಸಮಾಜ ಕ್ರಮೇಣ ಚರ ಸಮಾಜವಾಗುತ್ತಲಿದೆ. ಮಗು ಯಾವ ಭಾಷಿಕರೊಂದಿಗೆ ಹೆಚ್ಚು ಸಮಯ ಕಾಲ ಕಳೆಯುತ್ತಿದೆ, ಮಗುವಿಗೆ ಯಾವ ಭಾಷೆಯ ಜನ ಹೆಚ್ಚು ಸಂಪರ್ಕದಲ್ಲಿದ್ದಾರೆ, ಆ ಭಾಷೆ ಮಗುವಿಗೆ ಆತ್ಮೀಯವಾಗುತ್ತದೆ. ಈ ಮಾನದಂಡದಿಂದ ನೋಡಿದರೆ ಮಗು ಮನೆಗಿಂತ ಸಮಾಜದಲ್ಲಿಯೇ ಭಾಷಿಕವಾಗಿ ಹೆಚ್ಚು ವ್ಯವಹರಿಸುತ್ತದೆ. ಮನೆಯ ಸದಸ್ಯರ ಸಂಖ್ಯೆಗಿಂತ ಸಮಾಜಸದಸ್ಯರ ಸಂಖ್ಯೆ ವಿಪುಲವಾಗಿರುತ್ತದೆ. ಹೀಗಾಗಿ ಸಮಾಜಭಾಷೆಯೇ ಮಗುವಿನ ಮಾತೃಭಾಷೆಯಾಗಿರುತ್ತದೆ. ಈ ವ್ಯವಸ್ಥೆ ಕಾರಣವಾಗಿ ವಲಸೆ ಬಂದ ಕುಟುಂಬಗಳು ಮನೆಯ ಒಳಗೆ ತನ್ನ ಮಾತೃಭಾಷೆ, ಹೊರಗೆ ಪರಿಸರ ಭಾಷೆಯೆಂಬ ಈ ಮೊದಲು ಇಲ್ಲದ ಭಿನ್ನ ಭಾಷಾ ಸಮಸ್ಯೆಯನ್ನು ಎದುರಿಸುತ್ತಲಿವೆ. ಈಗಲೂ ಹೆಚ್ಚು ಭಾಷಾ ವ್ಯವಹಾರ ನಡೆಸುವುದು ಮನೆಯಲ್ಲಿ ಅಲ್ಲ, ಸಮಾಜದಲ್ಲಿ. ಕಡಿಮೆ ವಿಪುಲ ಜನಸಂಖ್ಯೆಯ ಸಮಾಜದಲ್ಲಿ ಈಗ ಅದಕ್ಕೆ ಮಾತೃ ಭಾಷೆಗಿಂತ ಸಮಾಜ ಹೆಚ್ಚು ಪರಿಚಿತವಾಗುವ ಕಾರಣ 'ಪರಿಸರ ಭಾಷೆಯೇ ಮಗುವಿನ ಮಾತೃಭಾಷೆ'ಯೆಂದು ಮಾತೃಭಾಷೆಯ ಮರುವ್ಯಾಖ್ಯಾನ ಮಾಡುವುದು, ಸರಕಾರವೂ ಇದಕ್ಕೆ ಸಂವಿಧಾನಾತ್ಮಕ ಸಮ್ಮತಿ ನೀಡುವುದು ಇಂದಿನ ಅಗತ್ಯವಾಗಿದೆ. ಇದು ಅನುಷ್ಠಾನಗೊಂಡರೆ ಭಾರತದ ಭಾಷಾ ಸಮಸ್ಯೆ ತಾನಾಗಿಯೇ ಪರಿಹಾರವಾಗಿ ಇದಕ್ಕೆ

ಹೊಂದಿಕೊಂಡ ಅನೇಕ ಸಮಸ್ಯೆಗಳೂ ದೂರವಾಗುತ್ತವೆ. ಇದರ ಅರ್ಥ ಕರ್ನಾಟಕದಲ್ಲಿರುವ ಎಲ್ಲರ ಮಾತೃಭಾಷೆ ಕನ್ನಡ, ಮಹಾರಾಷ್ಟ್ರದಲ್ಲಿರುವ ಎಲ್ಲರ ಮಾತೃಭಾಷೆ ಮರಾಠಿ. ಇದೇ ರೀತಿ ಆಯಾ ರಾಜ್ಯ ಭಾಷೆಯೇ ಆಯಾ ರಾಜ್ಯದಲ್ಲಿರುವವರ ಮಾತೃಭಾಷೆ. ಇದರಿಂದ ರಾಜ್ಯಗಳ ಭಾಷೆಯನ್ನು ಅವಲಂಬಿಸಿ 'ಭಾಷಾವಾರ ಪ್ರಾಂತ' ರಚನೆ ಮಾಡಿದುದಕ್ಕೂ ನ್ಯಾಯ ಸಿಗುತ್ತದೆ. ಈ ರಾಜ್ಯದ ಭಾಷೆಯೆಂಬ ಮಾತೃಭಾಷೆಯನ್ನು ಒಂದು ಭಾಷೆಯಾಗಿ ಕಲಿಯುವುದು ನ್ಯಾಯ ಸಮ್ಮತವಾಗಿದೆ.

ಹೆಚ್ಚಿನದಾಗಿ ಇಂದಿನ ಜಾಗತೀಕರಣ ಸಂದರ್ಭದಲ್ಲಿ ಇಂಗ್ಲಿಷ್‌ಯೆಂಬ ಸಂಪರ್ಕ ಭಾಷೆ ಅನಿವಾರ್ಯವೆನಿಸಿದೆ. ಅದನ್ನು ಪ್ರಾಥಮಿಕ ಶಿಕ್ಷಣದ ೫ನೆಯ ವರ್ಗದಿಂದ ದ್ವಿತೀಯ ಭಾಷೆಯಾಗಿ ಕಲಿಯುವುದು ಸೂಕ್ತ. ಇದರಿಂದ ಕನ್ನಡಿಗ ಏಕಕಾಲಕ್ಕೆ ಸ್ಥಾನಿಕವೂ ಜಾಗತಿಕವೂ ಆಗಿ ಬೆಳೆಯಲು ಅನುಕೂಲವಾಗುತ್ತದೆ.

ಹೀಗೆ ರಾಜ್ಯ ಭಾಷೆಯೆಂಬ ಮಾತೃಭಾಷೆ, ಸಂಪರ್ಕ ಭಾಷೆಯೆಂಬ ಇಂಗ್ಲಿಷ್ ಭಾಷೆಗಳೊಂದಿಗೆ ಪೂರಕ ಭಾಷೆಯಾಗಿ ತನ್ನ ಕುಟುಂಬ ಭಾಷೆ, ಹಿಂದಿಯೆಂಬ ರಾಷ್ಟ್ರ ಭಾಷೆ, ಸಂಸ್ಕೃತವೆಂಬ ಪ್ರಾಚ್ಯ ಭಾಷೆ ಇವುಗಳಲ್ಲಿ ಒಂದನ್ನು ೮ನೆಯ ವರ್ಗದಿಂದ ಐಚ್ಛಿಕ ಭಾಷೆಯಾಗಿ ಆಯ್ದುಕೊಳ್ಳಬಹುದು.

ಇನ್ನು ಮಾಧ್ಯಮದ ವಿಷಯ: ತಾನು ಬದುಕುತ್ತಲಿರುವ ಮಾತೃಭಾಷೆಯೆಂಬ ರಾಜ್ಯ ಭಾಷೆಯನ್ನು ಮಾಧ್ಯಮ ಮಾಡಿಕೊಂಡು ಜ್ಞಾನಗಳಿಸಿಕೊಳ್ಳುತ್ತ, ತಾನು ಬೆಳೆಯಬೇಕಾದ ಸಂಪರ್ಕ ಭಾಷೆಯಾದ ಇಂಗ್ಲಿಷನ್ನು ಗಟ್ಟಿಗೊಳಿಸುತ್ತ ೮ನೆಯ ವರ್ಗದ ವರೆಗೆ ವಿದ್ಯಾರ್ಥಿ ಓದಬೇಕು. ಬಳಿಕ ಅಗತ್ಯವೆನಿಸಿದರೆ ೫ನೆಯ ವರ್ಗದಿಂದ ಇಂಗ್ಲಿಷ್ ಮಾಧ್ಯಮಕ್ಕೆ ಹೊರಳಬೇಕು. ಈ ಬಗೆಯ ಭಾಷೆಯ ಅಭ್ಯಾಸ, ಭಾಷಾಮಾಧ್ಯಮ ವಿದ್ಯಾರ್ಥಿಗೂ ರಾಜ್ಯಕ್ಕೂ ಹಿತವಾದ ಮಾರ್ಗವೆನಿಸಿದೆ.

***

ಕರ್ನಾಟಕ ಅನೇಕ ಆಯಾಮಗಳನ್ನೊಳಗೊಂಡಿದೆ. ನೈಸರ್ಗಿಕ, ಸಾಮುದಾಯಿಕ, ರಾಜಕೀಯ, ಔದ್ಯೋಗಿಕ, ಭಾಷಿಕ ಇತ್ಯಾದಿಯಾಗಿ ಇದನ್ನು ಬಿಡಿಸಿ ವರ್ಗೀಸಬಹುದು.

ಭಾಷಿಕವಾಗಿ ಉತ್ತರಕರ್ನಾಟಕ, ದಕ್ಷಿಣ ಕರ್ನಾಟಕವೆಂದು ಬಿಡಿಸಿ ಹೇಳಲಾಗುತ್ತಿದ್ದರೂ, ಇನ್ನೂ ಭಾಷಿಕ ಒಳ ಪ್ರಭೇದಗಳಿವೆ. ನೈಸರ್ಗಿಕವಾಗಿ ಕರಾವಳಿ, ಮಲೆನಾಡು, ಬಯಲು ಪ್ರದೇಶ ವಿಶಿಷ್ಟವಾಗಿದೆ. ರಾಜಕೀಯವಾಗಿ ಕದಂಬರ, ಗಂಗರ, ಚಾಲುಕ್ಯರ, ರಾಷ್ಟ್ರಕೂಟರ, ಕಲ್ಯಾಣ ಚಾಲುಕ್ಯರ, ಯಾದವರ, ಹೊಯ್ಸಳರ ಆಳ್ವಿಕೆಗೆ ಒಳಪಟ್ಟ ಇದು ಬಳಿಕ ಬಹಮನಿಗಳ, ವಿಜಯನಗರವೆಂದು, ಆಮೇಲೆ ನಿಜಾಮ, ಮರಾಠಾ, ಕೆಳದಿ, ಮೈಸೂರು ಹೀಗೆ ವಿಭಾಗಗೊಳ್ಳುತ್ತ ಬೆಳೆದಿದೆ. ಬ್ರಿಟಿಶ ಆಡಳಿತದ ಬಳಿಕ ಕನ್ನಡಿಗರೇ ಆಳುತ್ತಲಿರುವ ಕರ್ನಾಟಕ ಇಂದು ೨೮ ಜಿಲ್ಲೆಗಳಿಗೆ ಸೀಮಿತವಾಗಿದೆ.

■■

ಆಕರ : ಮಾರ್ಗ ಸಂಪುಟ–೮

೧೦೧

ವಿದೇಶಗಳಲ್ಲಿ ಕನ್ನಡ ಪುಸ್ತಕ ಸಂಸ್ಕೃತಿಯ ಸಂವರ್ಧನೆ

"ಪುಸ್ತಕ"ವು ಸಮಾಜದ ಎಲ್ಲ ಆಯಾಮಗಳನ್ನು ಪ್ರತಿನಿಧಿಸುತ್ತ ಇತಿಹಾಸದ ಉದ್ದಕ್ಕೂ ಸಂವಹನ ಮಾಧ್ಯಮವಾಗಿದೆ. ಇತಿಹಾಸದ ಉದ್ದಕ್ಕೂ ಬೆಳೆದು ಬಂದ ಶಿಲೆ, ಲೋಹ, ಪರ್ಣ, ಕಾಗದ-ಹೀಗೆ ಹಲವು ಹಂತಗಳನ್ನು ದಾಟಿ, ಕಾಗದ ರಹಿತ ಮಾಧ್ಯಮ (ಕಂಪ್ಯೂಟರ್ ಇತ್ಯಾದಿ)ವನ್ನು ತಲುಪಿದ ಅದು, ಇಂದು 'ಕಾಗದ ಪುಸ್ತಕ' ಮತ್ತು ಕಾಗದ ರಹಿತ ಪುಸ್ತಕವೆಂಬ ಎರಡು ರೂಪಗಳಲ್ಲಿ ವ್ಯವಹರಿಸುತ್ತಲಿದೆ. ವಿದೇಶದ ಕನ್ನಡಿಗರು ಇಂದು ಈ ಎರಡೂ ರೀತಿಯ ಪುಸ್ತಕ ಸಂಸ್ಕೃತಿಯನ್ನು ಸಂವರ್ಧನೆಗೊಳಿಸಿಕೊಳ್ಳುತ್ತಲಿರುವ ಬಗೆಗಳನ್ನು ಕುರಿತು ಇಲ್ಲಿ ಚರ್ಚಿಸಬಹುದು.

ಅವಿಭಕ್ತದಿಂದ ವಿಭಕ್ತ ಪದ್ಧತಿಗೆ ಬಂದ ಕುಟುಂಬಗಳು ಇಂದು ಸಂಚಾರಿ ಪದ್ಧತಿಯನ್ನು ಅಳವಡಿಸಿಕೊಳ್ಳುತ್ತಲಿವೆ. ಇದರಿಂದಾಗಿ ಯಾವುದೇ ವ್ಯಕ್ತಿ ಹುಟ್ಟಿದ್ದು ಒಂದು ಭಾಷೆಯ ಪರಿಸರದಲ್ಲಿ, ಬದುಕುತ್ತಲಿರುವುದು ಇನ್ನೊಂದು ಭಾಷೆಯ ಪರಿಸರದಲ್ಲಿ ಎಂಬಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇಂಥವರು ವಿದೇಶದಲ್ಲಿ ತಮ್ಮ ಮಾತೃಭಾಷಿಕರ ಒಡನಾಟದಂತೆ ತಮ್ಮ ಮಾತೃಭಾಷೆಯ ಪುಸ್ತಕಗಳ ಒಡನಾಟದ ತೀವ್ರ ಹಂಬಲವನ್ನು ಅನುಭವಿಸುತ್ತಲಿದ್ದಾರೆ. ಈ ಹಂಬಲದ ಈಡೇರಿಕೆಗಾಗಿ ಅವರು ತಮ್ಮ ಮಾತೃಭಾಷೆಯ ಪುಸ್ತಕಗಳನ್ನು ಸಂಗ್ರಹಿಸುವ, ಅವುಗಳನ್ನು ವಾಚನ ವ್ಯವಸ್ಥೆಗೆ ಗುರಿಪಡಿಸುವ ವಿಷಯದಲ್ಲಿ ಅನುಸರಿಸುತ್ತಿರುವ, ಅನುಸರಿಸಬೇಕಾದ ವಿಧಾನಗಳು ಚಿಂತನೀಯವೆನಿಸಿವೆ.

ಜ್ಞಾನಾರ್ಜನೆಗೆ, ಕಾಲಕ್ಷೇಪಕ್ಕೆ ಬೇಕಾಗುವ ಎಲ್ಲ ಪುಸ್ತಕಗಳನ್ನು ಒಬ್ಬ ವ್ಯಕ್ತಿ ಸಂಗ್ರಹಿಸುವುದು ಅಸಾಧ್ಯದ ಮಾತು. ಹೀಗಾಗಿ ತಮ್ಮೆಲ್ಲರ ಅನುಕೂಲಕ್ಕಾಗಿ ಒಂದು ಸಾರ್ವಜನಿಕ ಗ್ರಂಥಾಲಯ ರೂಪಿಸಿಕೊಳ್ಳುವುದು ಅನಿವಾರ್ಯ. ವಿದೇಶದ ಇಂಥ ಗ್ರಂಥಾಲಯುಗಳನ್ನು ಹೀಗೆ ರೂಪಿಸಿಕೊಳ್ಳಬಹುದಾಗಿದೆ.

ಗ್ರಂಥಾಲಯಗಳು :

ವಿದೇಶದಲ್ಲಿ ಮೂರು ಬಗೆಯ ಗ್ರಂಥಾಲಯಗಳನ್ನು ಬೆಳೆಸಬಹುದು. (೧) ಸ್ವತಂತ್ರ ಕಟ್ಟಡದಲ್ಲಿ ಕನ್ನಡ ಪುಸ್ತಕಗಳನ್ನು ಸಂಗ್ರಹಿಸುವುದು. ಹೀಗೆ ಕಟ್ಟಡ ನಿರ್ಮಿಸುವುದು, ಅಥವಾ ಬಾಡಿಗೆಯಿಂದ

ವಶಪಡಿಸಿಕೊಳ್ಳುವುದು ವಿದೇಶದ ಕನ್ನಡಿಗರಿಗೆ ತುಂಬ ಕಠಿಣ ಕಾರ್ಯವೇ ಸರಿ. ಹೀಗಿದ್ದೂ ಕನ್ನಡಿಗರು ದಟ್ಟವಾಗಿ ನೆಲಸಿರುವ ನಗರಗಳಲ್ಲಿ ಇಂಥ ಸಾಹಸ ಮಾಡಬಹುದು. ನ್ಯೂಝಿಲ್ಯಾಂಡಿನ ಆಕ್ಲಂಡ್ ಕನ್ನಡಿಗರು ಇಂಥ ಪ್ರಯತ್ನ ಮಾಡಿ ಸ್ಥಳೀಯ ಇಂಡಿಯನ್ ಅಸೋಸಿಯೇಶನ್ ಕಟ್ಟಡದಲ್ಲಿ ಸ್ವತಂತ್ರ ಗ್ರಂಥಾಲಯ ಸ್ಥಾಪಿಸಿ, ಅಲ್ಲಿ ಸುಮಾರು ಐದು ಸಾವಿರ ಕನ್ನಡ ಪುಸ್ತಕ ಒಂದು ಸಾವಿರ ಕನ್ನಡ ಆಡಿಯೋ ವಿಡಿಯೋ ಕೆಸೆಟ್ ಸಂಗ್ರಹಿಸಿದ್ದಾರೆ. ಬಹುಶಃ ಜಗತ್ತಿನಲ್ಲಿಯೇ ವಿದೇಶಿ ಕನ್ನಡಿಗರು ಸ್ಥಾಪಿಸಿರುವ ಏಕೈಕ ಸ್ವತಂತ್ರ ಗ್ರಂಥಾಲಯವಿದಾಗಿದೆ. ಈ ಮಾದರಿಯಲ್ಲಿ ವಿದೇಶಿ ಕನ್ನಡಿಗರು ಗ್ರಂಥಾಲಯ ಸ್ಥಾಪಿಸಬಹುದಾಗಿದೆ. (೨) ಇಂದು ಗ್ರಂಥಾಲಯ ಸ್ಥಾಪನೆ ಒಂದು ಚಳುವಳಿಯಾಗಿ ಜಗತ್ತನ್ನು ವ್ಯಾಪಿಸಿದೆ. ಹೀಗಾಗಿ ಎಲ್ಲ ರಾಷ್ಟ್ರಗಳಲ್ಲಿ ಸ್ಥಳೀಯ ಭಾಷೆಯ ಸುಸಜ್ಜಿತ, ಸುಪ್ರಸಿದ್ಧ ಗ್ರಂಥಾಲಯಗಳು ಅಸ್ತಿತ್ವಕ್ಕೆ ಬಂದಿವೆ. ಅಲ್ಲಲ್ಲಿಯ ಕನ್ನಡಿಗರು ಇಂಥ ಗ್ರಂಥಾಲಯಗಳ ಭಾಗವಾಗಿ ಕನ್ನಡ ಗ್ರಂಥಾಲಯ ಬೆಳೆಸಬಹುದು. ಇಲ್ಲಿ ಸಿಬ್ಬಂದಿ, ಪೀಠೋಪಕರಣ ಇತ್ಯಾದಿ ವೆಚ್ಚವನ್ನು ಮುಖ್ಯ ಗ್ರಂಥಾಲಯವೇ ವಹಿಸಿಕೊಳ್ಳುವುದರಿಂದ ಆರ್ಥಿಕ ಭಾರವಿಲ್ಲದೆ ಕನ್ನಡ ಗ್ರಂಥಾಲಯ ಬೆಳೆಯುತ್ತದೆ. (೩) 'ನ್ಯೂಝಿಲ್ಯಾಂಡ್ ಕನ್ನಡ ಕೂಟ'ದ ದಶಮಾನೋತ್ಸವ ಸಮಾರಂಭಕ್ಕೆ ಅತಿಥಿಯಾಗಿ ಆಗಮಿಸಿದ್ದ ಡಾ. ಎಂ. ಎಂ. ಕಲಬುರ್ಗಿಯವರು ವಿದೇಶದಲ್ಲಿ ಕನ್ನಡ ಪ್ರಸಾರದ ವಿಷಯವಾಗಿ ನೀಡಿದ ಅನೇಕ ಸಲಹೆಗಳಲ್ಲಿ 'ಕನ್ನಡ ಮನ' ಪರಿಕಲ್ಪನೆಯೂ ಒಂದು. ಈ ಪರಿಕಲ್ಪನೆಯ ಅಂಗವಾಗಿ ಪ್ರತಿಯೊಂದು ಮನೆಯಲ್ಲಿ ಸಣ್ಣ ಹೋಮ್ ಲೈಬ್ರರಿ ಅಸ್ತಿತ್ವಕ್ಕೆ ತರುವುದರತ್ತ ಗಮನ ಹರಿಸಬಹುದಾಗಿದೆ. ಗೃಹ ಸರಸ್ವತಿಯೆನಿಸುವ ಇಂಥ ಗ್ರಂಥಾಲಯಗಳ ಪ್ರಯೋಜನವನ್ನು ಆಯಾ ಓಣಿಯ ಕನ್ನಡಿಗರು ಪರಸ್ಪರ ಪಡೆಯಲು ಅನುಕೂಲವಾಗುತ್ತದೆ.

ಗ್ರಂಥ ಸಂಗ್ರಹ :

ಮೇಲೆ ಹೇಳಿದ ಮೂರು ಬಗೆಯ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಪಡೆಯುವ ಅಥವಾ ಖರೀದಿಸುವ ವಿಧಾನ ಗೊತ್ತಿರುವುದೂ ಅವಶ್ಯ. ವಿದೇಶೀ ಕನ್ನಡಿಗರು ಕರ್ನಾಟಕದಲ್ಲಿಯ ಪ್ರಕಾಶಕ, ಮಾರಾಟಗಾರರ ಸಂಪರ್ಕ ಇಟ್ಟುಕೊಳ್ಳುವುದು ವಿಹಿತ. ವಿದೇಶದಲ್ಲಿಯೇ ಈ ಕೆಲಸ ಮಾಡುವ ಕೇಂದ್ರಗಳೂ ಇರಬಹುದು. ಉದಾ: ಆಕ್ಲಂಡ್‌ದಲ್ಲಿರುವ ಲಿಂಕ್ ಎಜ್ಯೂಕೇಶನ್ ಇಂಟರ ಏಜನ್ಸಿಯು ದೇಶ–ವಿದೇಶಗಳ ಯಾವುದೇ ಪುಸ್ತಕವನ್ನು ತರಿಸಿಕೊಡುವ ಸೇವೆಯಲ್ಲಿ ನಿರತವಾಗಿದೆ.

ಇದಲ್ಲದೆ ಸ್ವದೇಶಕ್ಕೆ ಬಂದ ಸಂದರ್ಭದಲ್ಲಿ ಇತ್ತೀಚೆ ಪ್ರಕಟವಾದ ಉತ್ತಮ ಪುಸ್ತಕಗಳ ಮಾಹಿತಿ ಸಂಗ್ರಹಿಸುವ, ನೂರಾರು ಮಳಿಗೆಗಳಿಗೆ ಭೆಟ್ಟಿ ನೀಡುವ ಮೂಲಕ ಪುಸ್ತಕಗಳನ್ನು ಖರೀದಿಸಬಹುದು.

ಇದಕ್ಕಿಂತ ಯೋಗ್ಯ ಸಲಹೆಯೆಂದರೆ ಕರ್ನಾಟಕದ ಅನೇಕ ಸಾಹಿತಿಗಳ ಮನೆಯಲ್ಲಿ ಓದಿ ಮುಗಿಸಿರುವ, ಅವರಿಗೆ ಬೇಡವಾಗಿರುವ ನೂರಾರು ಪುಸ್ತಕಗಳಿರುತ್ತವೆ. ಅವುಗಳನ್ನು ವಿದೇಶೀ ಕನ್ನಡ ಗ್ರಂಥಾಲಯಕ್ಕೆ ಕಾಣಿಕೆಯಾಗಿ ಪಡೆಯಬಹುದು. ನಾನು ಧಾರವಾಡದ ಪ್ರಸಿದ್ಧ ಸಾಹಿತಿಗಳಿಂದ ಸಾವಿರಾರು ಪುಸ್ತಕಗಳನ್ನು ಆಕ್ಲಂಡ್ ಕನ್ನಡ ಸಂಘಕ್ಕೆ ಕಾಣಿಕೆಯಾಗಿ ಪಡೆದುದನ್ನು ಎತ್ತಿ ಹೇಳಬಯಸುತ್ತೇನೆ.

ಇದಲ್ಲದೆ ಕರ್ನಾಟಕದ ವಿಶ್ವವಿದ್ಯಾಲಯಗಳು, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಪುಸ್ತಕ ಪ್ರಾಧಿಕಾರ ಮೊದಲಾದ ಸಂಸ್ಥೆಗಳೂ ತಮ್ಮ ಪ್ರಕಟನೆಗಳನ್ನು

ವಿದೇಶೀ ಕನ್ನಡ ಗ್ರಂಥಾಲಯಗಳಿಗೆ ಕಾಣಿಕೆಯಾಗಿ ಕೊಡಬಹುದಾಗಿದೆ. ಹೀಗೆ ಕಾಣಿಕೆಯಾಗಿ ಪಡೆದ ಗ್ರಂಥಗಳ ದೊಡ್ಡ ಮೊತ್ತವನ್ನು ಹಡಗು ಮೂಲಕ ರವಾನಿಸುವುದು ಸೂಕ್ತ.

ಈ ವಿಧಾನಗಳಲ್ಲದೆ ವಿದೇಶಕ್ಕೆ ಆಗಮಿಸಿದ ಅಧಿಕಾರಿ ಮತ್ತು ಸಚಿವರ ಮುಂದೆ ಗ್ರಂಥ ಬೇಡಿಕೆ ಇಟ್ಟರೆ, ಅವರು ತಮ್ಮ ಅಧಿಕಾರದ ಬಲದಿಂದ ಕೆಲವು ಪುಸ್ತಕ ಕಳಿಸಬಹುದು. ಮಾನ್ಯ ಸಚಿವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ, ಶ್ರೀ ಮಹಾದೇವ ಪ್ರಸಾದ ಅವರು ಆಕ್ಲಂಡ್, ಸಿಡ್ನಿ ಮೆಲ್ಬೋರ್ನ ಅಡಿಲೇಡ್ ಮೊದಲಾದ ಗ್ರಂಥಾಲಯಗಳಿಗೆ ಗ್ರಂಥ ಕಳಿಸಿದುದನ್ನು ಇಲ್ಲಿ ಸ್ಮರಿಸಬಹುದು.

ಇದಕ್ಕಿಂತಲೂ ಮುಖ್ಯ ವಿಷಯವೆಂದರೆ, ಕರ್ನಾಟಕ ಸರಕಾರ ರಾಜ್ಯವ್ಯಾಪ್ತಿಯ ೨೫೦೦೦ ಗ್ರಂಥಾಲಯಗಳಿಗೆ ಒಂದಿಷ್ಟು ಗ್ರಂಥಗಳನ್ನು ಉಚಿತವಾಗಿ ಸರಬರಾಜು ಮಾಡುತ್ತದೆ. ಈ ಸರಬರಾಜು ನೀತಿಯನ್ನು ಸರಕಾರ ವಿದೇಶೀ ಕನ್ನಡ ಗ್ರಂಥಾಲಯಕ್ಕೆ ವಿಸ್ತಿರುಸುವುದು ನ್ಯಾಯ ಸಮ್ಮತವಾಗಿದೆ. ಏಕೆಂದರೆ ಈ ಹಿಂದೆ ಕೆಲವು ಜಿಲ್ಲೆಗಳಿಗೆ ಸೀಮಿತವಾಗಿದ್ದ ಕರ್ನಾಟಕ ಕನ್ನಡಿಗರ ವಲಸೆಯಿಂದಾಗಿ ಭಾರತ ವ್ಯಾಪ್ತಿಗೆ, ಜಾಗತಿಕ ವ್ಯಾಪ್ತಿಗೆ ಹಿಗ್ಗಿದೆ. ಅಂದರೆ ಒಂದು ಕರ್ನಾಟಕಕ್ಕೆ ಬದಲು ಅಲ್ಲಲ್ಲಿ ಅನೇಕ ಕರ್ನಾಟಕಗಳು ಅಸ್ತಿತ್ವಕ್ಕೆ ಬಂದಿವೆ. ಇವರೂ ಕರ್ನಾಟಕ ಸರಕಾರದ ಪ್ರಜೆಗಳೇ ಆದುದರಿಂದ ಉಚಿತ ಪುಸ್ತಕ ಸರಬರಾಜು ನೀತಿಯನ್ನು ವಿದೇಶೀ ಕನ್ನಡಿಗರಿಗೂ ಅನ್ವಯಿಸಲು ಸರಕಾರಕ್ಕೆ ನಾವು ಒತ್ತಾಯಿಸಬೇಕಾಗಿದೆ.

ಗ್ರಂಥ ಪರಿಚಲನ :

ಗ್ರಂಥಾಲಯದ ಮುಖ್ಯ ಕೆಲಸ ವಾಚಕರಿಗೆ ಗ್ರಂಥಗಳನ್ನು ಪರಿಚಲನಗೊಳಿಸುವುದು. ಸ್ಥಳೀಯ ಭಾಷಾಗ್ರಂಥಾಲಯಗಳಲ್ಲಿ ನಿಯುಕ್ತ ಸಿಬ್ಬಂದಿಯಿರುವುದರಿಂದ ಅವರು ತಮ್ಮ ಭಾಷಾ ಪುಸ್ತಕಗಳೊಂದಿಗೆ ಕನ್ನಡ ಪುಸ್ತಕ ಪರಿಚಲನ ಕಾರ್ಯವನ್ನು ಪೂರೈಸುತ್ತಾರೆ. ಆದರೆ ಸಮಸ್ಯೆಯಿರುವುದು ಸ್ವತಂತ್ರ ಗ್ರಂಥಾಲಯಗಳು ಇದ್ದಲ್ಲಿ ಪ್ರತಿದಿನವೂ ಗ್ರಂಥಭಾಂಡಾರ ತೆರೆಯುವ ಅವಶ್ಯವಿಲ್ಲ. ಏಕೆಂದರೆ ದಿನವಿಡೀ ಕಾರ್ಯ ಪ್ರವೃತ್ತರಾಗಿರುವ ವಿದೇಶೀ ಕನ್ನಡಿಗರಿಗೆ ದಿನವೂ ಗ್ರಂಥಾಲಯಕ್ಕೆ ಬರಲು ಸಾಧ್ಯವಾಗುವುದಿಲ್ಲ. ಆದುದರಿಂದ ಬಿಡುವಿನ ರವಿವಾರ ಮಾತ್ರ ಗ್ರಂಥಾಲಯ ಕಾರ್ಯೋನ್ಮುಖಿಯಾಗಬಹುದು. ಆಕ್ಲಂಡ್ ನಗರದ ಸ್ವತಂತ್ರ ಕನ್ನಡ ಗ್ರಂಥ ಭಾಂಡಾರ ಇಂಥ ಉಪಕ್ರಮವನ್ನು ಯಶಸ್ವಿಯಾಗಿ ಮುನ್ನಡೆಸುತ್ತ ಬಂದಿದೆ. ಕನ್ನಡಿಗರೊಬ್ಬರು ಇಡೀ ದಿನ ಗ್ರಂಥಾಲಯದಲ್ಲಿದ್ದು ವಾಚಕರಿಗೆ ಗ್ರಂಥ ಆಡಿಯೋ ವಿಡಿಯೋ ಕೆಸೆಟ್ ಸರಬರಾಜು ಮಾಡುತ್ತಾರೆ. ಇವುಗಳನ್ನು ಒಯ್ದವರು, ಉಪಯೋಗಿಸಿದ ಬಳಿಕ ಯಾವುದೇ ರವಿವಾರ ಮರಳಿಸುತ್ತ ಇಂಥ ಸಂದರ್ಭದಲ್ಲಿ ರವಿವಾರ ಸಿಬ್ಬಂದಿಗೆ ಒಂದಿಷ್ಟು ಪಗಾರ ನೀಡುವ ವಾಚಕರಿಂದ ಒಂದಿಷ್ಟು ಫೀ ಆಕರಿಸುವ ಉಪಕ್ರಮವಿಟ್ಟುಕೊಳ್ಳುವುದು ವಿಹಿತ.

ಸಂಚಾರಿ ಗ್ರಂಥಾಲಯ ವ್ಯವಸ್ಥೆ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಅಸ್ತಿತ್ವದಲ್ಲಿದೆ. ವಿದೇಶಿ ಕನ್ನಡಿಗರಿಗೆ ಇದು ಕಷ್ಟದ ಕೆಲಸ. ಹೀಗಿದ್ದೂ ಆಕ್ಲಂಡ್‌ದಲ್ಲಿರುವ ಲಿಂಗಾಯತರು "ಸಂಚಾರಿ ವಚನ ವಾಚನಾಲಯ ರೂಪಿಸಿದ್ದಾರೆ. ಇವರು ಪ್ರತಿ ತಿಂಗಳು ಹಮ್ಮಿಕೊಳ್ಳುವ ಮನೆಯಲ್ಲಿ

ಮಹಾಮನೆ ಕಾರ್ಯಕ್ರಮಗಳು ೨೫-೩೦ ಕುಟುಂಬಗಳು ಸೇರಿ, ವಚನ ಪ್ರಾರ್ಥನೆ, ಇಷ್ಟಲಿಂಗ ಯೋಗ ಇತ್ಯಾದಿಗಳನ್ನು ನೆರವೇರಿಸಿದ ಬಳಿಕ ಪೆಟ್ಟಿಗೆಯಲ್ಲಿ ಹೊತ್ತು ತಂದ ವಚನ ವಾಚನಾಲಯದಿಂದ ತಮಗೆ ಇಷ್ಟವಾದ ಪುಸ್ತಕಪಡೆದು, ಮುಂದಿನ ತಿಂಗಳಿನ ಕಾರ್ಯಕ್ರಮದಲ್ಲಿ ಅದನ್ನು ಮರಳಿಸುತ್ತಾರೆ. ಪ್ರತಿವರ್ಷ ಒಬ್ಬರು ಈ ಪೆಟ್ಟಿಗೆ ವಾಚನಾಲಯದ ವ್ಯವಸ್ಥೆಯ ಜವಾಬ್ದಾರಿ ಹೊರುತ್ತಾರೆ. ಈ ಉಪಕ್ರಮದಿಂದಾಗಿ ಅವರಲ್ಲಿ ವಾಚನಾಭಿರುಚಿ ವರ್ಧಿಸುತ್ತಲಿದೆ.

ಗ್ರಂಥ ಪ್ರದರ್ಶನ ಮತ್ತು ಸಂಚಾರಣ :

ಇಂದು ಗ್ರಂಥಾಲಯ ಕೇವಲ ಪುಸ್ತಕಕ್ಕೆ ಸೀಮಿತವಾಗಿದೆ. ವೆಬ್‌ಸೈಟ್, ಇಂಟರ್‌ನೆಟ್, ಆಡಿಯೋ-ವಿಡಿಯೋ ಕೆಸೆಟ್, ಸ್ಲೈಡ್, ಚಲನಚಿತ್ರ ಮೊದಲಾದವುಗಳನ್ನೊಳಗೊಂಡಿದೆ.

ಸ್ವತಂತ್ರ ಗ್ರಂಥಾಲಯವಿದ್ದರೆ, ಅದರ ಒಂದು ಭಾಗದಲ್ಲಿ ಹೊಸ ಹೊಸ ಪುಸ್ತಕಗಳ ಒಂದು ಶಾಶ್ವತ ಪ್ರದರ್ಶನ ಏರ್ಪಡಿಸಬೇಕು. ಇದಲ್ಲದೆ ವಿದೇಶೀ ಕನ್ನಡಿಗರು ತಾವು ಆಗಾಗ ಹಮ್ಮಿಕೊಳ್ಳುವ ಸಾಂಸ್ಕೃತಿಕ ಕಾರ್ಯಕ್ರಮ, ವಾರ್ಷಿಕೋತ್ಸವ, ಸಮ್ಮೇಳನ, ಸಂದರ್ಭದಲ್ಲಿ ಮೇಲೆ ಹೇಳಿದ ಸಲಕರಣೆಗಳ ಪ್ರದರ್ಶನ, ಮಾರಾಟ ವ್ಯವಸ್ಥೆ ಮಾಡಬಹುದು. ಇದಲ್ಲದೆ ಪ್ರತಿ ತಿಂಗಳು ಕನ್ನಡ ಚಲನಚಿತ್ರ ಪ್ರದರ್ಶಿಸುವ, ಕನ್ನಡ ಗೀತಗಳನ್ನು ಕೇಳಿಸುವ ಯೋಜನೆ ರೂಪಿಸುವುದು ಸೂಕ್ತ. ಕರ್ನಾಟಕದಲ್ಲಿ ಇತ್ತೀಚೆ ಬಿಡುಗಡೆಯಾಗಿ, ಸುದ್ದಿಯಲ್ಲಿರುವ ಚಲನಚಿತ್ರ ಪ್ರದರ್ಶನ ಯಶಸ್ವಿಯಾಗುವಲ್ಲಿ ಸಂದೇಹವೇ ಇಲ್ಲ.

ಆಕ್ಲಂಡ್ ಕನ್ನಡ ಕೂಟವು ಪ್ರತಿ ಗುರುವಾರ ಸಾಯಂಕಾಲ ೭-೫ ರಿಂದ ೭-೩೫ ರ ವರೆಗೆ ೧೦೪೬ ಎಫ್. ಎಂ. ಮೂಲಕ ಕನ್ನಡ ಚಿತ್ರಗೀತ, ಜಾನಪದಗೀತ, ವಾರ್ತೆ, ಪುಸ್ತಕ ವಿಮರ್ಶೆ, ಹರಟೆ, ಚರ್ಚೆ ಇತ್ಯಾದಿಗಳನ್ನು ಪ್ರಸಾರ ಮಾಡುತ್ತಲಿದೆ. ಇದೇ ರೀತಿ ಆಸ್ಟ್ರೇಲಿಯಾದ ರೇಡಿಯೋ ಮೂಲಕ ಕನ್ನಡ ಸಂಸ್ಕೃತಿ ಪ್ರಸಾರ ಮಾಡುತ್ತಲಿವೆ. ಇದಕ್ಕೂ ಹೆಚ್ಚಿನದಾಗಿ ದೂರದರ್ಶನಗಳನ್ನೂ ಕನ್ನಡ ಪುಸ್ತಕ ಪರಿಚಯಗಳಿಗೆ ವಿದೇಶೀ ಕನ್ನಡಿಗರು ಬಳಸಿಕೊಳ್ಳಬಹುದು.

ಪಠ್ಯಪುಸ್ತಕಗಳು :

ತಮ್ಮ ಸಂತಾನ ಕನ್ನಡಿಗರಾಗಿಯೇ ಮುಂದುವರಿಯಬೇಕೆಂಬ ಕಳಕಳಿ ಕಾರಣವಾಗಿ ವಿದೇಶೀ ಕನ್ನಡಿಗರು ಅಲ್ಲಲ್ಲಿ ಕನ್ನಡ ಶಾಲೆಗಳನ್ನು ಆರಂಭ ಮಾಡಿದ್ದಾರೆ. ವಾರದಲ್ಲಿ ಒಂದು ಇಲ್ಲವೆ ಎರಡು ದಿನ ಕನ್ನಡ ಮಕ್ಕಳಿಗೆ ಕನ್ನಡ ಭಾಷೆ-ಸಾಹಿತ್ಯಗಳನ್ನು ಬೋಧಿಸುತ್ತಿದ್ದಾರೆ. ಆಕ್ಲಂಡ್‌ದಲ್ಲಿ ಕುವೆಂಪು ಜನ್ಮ ಶತಮಾನೋತ್ಸವ ಸ್ಮರಣೆಯಾಗಿ ಆರಂಭಿಸಿದ ಕುವೆಂಪು ಕನ್ನಡ ಶಾಲೆಯನ್ನು ಮೆಲ್ ಬೋರ್ನ್, ಬಸವ ಸಮಿತಿಯ ಪರವಾಗಿ ಶ್ರೀ ರವಿ ನಂದಿ ಅವರು ಕನ್ನಡ ಶಾಲೆಯನ್ನು ಅಸ್ತಿತ್ವಕ್ಕೆ ತಂದಂತೆ ವಿದೇಶಗಳಲ್ಲಿ ಇಂಥ ಶಾಲೆಗಳು ಹುಟ್ಟಿಕೊಂಡಿವೆ. ಇಲ್ಲಿ ಉಪಯೋಗಿಸಲು ಕನ್ನಡ ಪಠ್ಯಪುಸ್ತಕಗಳು ಅವಶ್ಯವೆಂದು ಬೇರೆ ಹೇಳಬೇಕಿಲ್ಲ. ಈ ಉದ್ದೇಶದಿಂದ ಪ್ರತಿವರ್ಷ ಕರ್ನಾಟಕದಿಂದ ವಿದೇಶಿ ಕನ್ನಡಿಗರು ಕನ್ನಡ ಪಠ್ಯಪುಸ್ತಕಗಳನ್ನು ಆಮದು ಮಾಡಿಕೊಳ್ಳುತ್ತಲಿದ್ದಾರೆ. ಕರ್ನಾಟಕ ಸರಕಾರ ಇಂಥ ಶಾಲೆಗಳನ್ನು ಗುರುತಿಸಿ ಅವುಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಪಠ್ಯಪುಸ್ತಕ ಮೊದಲಾದ ಶಾಲೋಪಯೋಗಿ ಉಪಕರಣಗಳನ್ನು ಪೂರೈಸುವುದು ಅವಶ್ಯವಿದೆ.

ಇಂಟರ್ ನೆಟ್ ಗ್ರಂಥಾಲಯ

ಅಂತರ್ಜಾಲ (ಇಂಟರ್‌ನೆಟ್) ಇತ್ಯಾದಿ :

ಇಂದು ಕಾಗದ ರಹಿತ ಗ್ರಂಥಗಳ ಉತ್ಪಾದನೆ ಮತ್ತು ಪರಿಚಲನೆ ಅಸ್ತಿತ್ವಕ್ಕೆ ಬರುತ್ತಲಿದೆ, ಬಂದಿದೆ. ಇದರಿಂದ ಗ್ರಂಥಾಲಯ ಪರಿಕಲ್ಪನೆಯು ಮಾಹಿತಿ ವಿಜ್ಞಾನ ಸೀಮೆಗೆ ವಿಸ್ತರಿಸಿಕೊಂಡಿದೆ. ಕನ್ನಡಿಗರು ಪುಸ್ತಕ, ಮಾಹಿತಿಗಳನ್ನು ಇದರಲ್ಲಿ ತುಂಬುವ; ಹೀಗೆ ತುಂಬಿದ್ದುದನ್ನು ವಿತರಣೆ ಮಾಡಿಕೊಳ್ಳುವ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಕರ್ನಾಟಕ ಗ್ರಂಥಾಲಯ ಇಲಾಖೆ ಏಕೀಕರಣ ಸುವರ್ಣ ಸಂದರ್ಭದಲ್ಲಿ ಎಲ್ಲ ಸಾಹಿತಿಗಳ ಎಲ್ಲ ಗ್ರಂಥಗಳನ್ನು ಅಂತರ್ಜಾಲಕ್ಕೆ ಅಳವಡಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಇದರಿಂದಾಗಿ ಮನೆಯಲ್ಲಿಯೇ ಕುಳಿತು ಪರದೆಯ ಮೇಲೆ ಪುಸ್ತಕ ಓದುವ, ಚರ್ಚಿಸುವ, ಪ್ರತಿಕ್ರಿಯಿಸುವ ಅನುಕೂಲತೆ ಒದಗಿ ಬಂದಿದೆ. ಮುಂದಿನ ದಿನಗಳಲ್ಲಿ ಇನ್ನು ಬೆಳೆಯಲಿರುವ ಈ ಬಗೆಯ ಗ್ರಂಥಾಲಯ ವಿದೇಶೀ ಕನ್ನಡಿಗರಿಗೆ ಒಂದು ವರವೆಂದೇ ಹೇಳಬೇಕು. ಈ ದಿಸೆಯಲ್ಲಿ ಅವರು ಗಮನಹರಿಸುವುದು ಅವಶ್ಯವಿದೆ.

ಇದೇ ಸಂದರ್ಭದಲ್ಲಿ ಹೇಳಬೇಕಾದ ಇನ್ನೊಂದು ವಿಷಯವೆಂದರೆ ವಿದೇಶಗಳಲ್ಲಿರುವ ಆಕಾಶವಾಣಿ, ದೂರದರ್ಶನಗಳನ್ನು ಸದುಪಯೋಗಗೊಳಿಸಿಕೊಳ್ಳುವುದು.

***

ವಿದೇಶೀ ಕನ್ನಡಿಗರು ಅನ್ಯರು ರಚಿಸಿದ ಪುಸ್ತಕ–ಪತ್ರಿಕೆ ಬಳಸಿಕೊಳ್ಳುವುದರ ಜೊತೆಗೆ, ತಾವೂ ಇವುಗಳ ರಚನೆಯ ಕಡೆಗೆ ಗಮನಕೊಡಬೇಕು.

■■

ಆಕರ : ಮಾರ್ಗ ಸಂಪುಟ–೮

೧೦೨

ಹಿಂದಿ ಹಾವಳಿ


ಬೀದರ ಸಮ್ಮೇಳನದಲ್ಲಿ ಹಿಂದಿ ಭಾಷೆಯನ್ನು ಕುರಿತು ಡಾ. ಹಾಮಾನಾ ಅವರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಹುಬ್ಬಳ್ಳಿಯ 'ಕರ್ನಾಟಕ ರಾಜ್ಯ ಸ್ವೈಚ್ಛಿಕ ಹಿಂದಿ ವಿದ್ಯಾಲಯಗಳ ಸಂಘ' ಖಂಡಿಸಿದ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಕುವೆಂಪು ಮೊದಲಾದ ಶಿಕ್ಷಣ ತಜ್ಞರು ಹೇಳುತ್ತಾ ಬಂದ ದ್ವಿಭಾಷಾ ಸೂತ್ರವನ್ನು ಡಾ. ಹಾಮಾನಾ ಅವರು, ಉತ್ತರ ಭಾರತದ ರಾಜಕಾರಣಿಗಳು ಹೇಳುತ್ತ ಬಂದ ತ್ರಿಭಾಷಾ ಸೂತ್ರವನ್ನು ಈ ಸಂಘದವರು ಇಲ್ಲಿ ಪ್ರತಿಪಾದಿಸಿದ್ದಾರೆ.

ಯಾವುದೇ ವ್ಯಕ್ತಿ ತನ್ನ ರಾಜ್ಯ ಪರಿಸರದಲ್ಲಿ ಒಂದು ಭಾಷೆಯನ್ನು, ತನ್ನ ರಾಜ್ಯ ಪರಿಸರವನ್ನು ಮೀರಿ ವ್ಯವಹರಿಸುವಾಗ ಇನ್ನೊಂದು ಭಾಷೆಯನ್ನು ಬಳಸಬೇಕಾಗುತ್ತದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಈ ರಾಜ್ಯ ಪರಿಸರದಲ್ಲಿ ಉಪಯೋಗ ಬೀಳುವ ಭಾಷೆ ಇಂಗ್ಲಿಷ್ ಹೀಗಿರುವಾಗ ಹಿಂದಿ ಎಂಬ 'ಭೂತ' ಭಾರತದ ಎಲ್ಲ ರಾಜ್ಯಗಳಲ್ಲಿ ತಲೆ ಹಾಕುವುದು ಅಧಿಕ ಪ್ರಸಂಗವೆನಿಸುತ್ತದೆ. ಈ ಸತ್ಯವನ್ನು ಅರ್ಥಮಾಡಿಕೊಳ್ಳದೆ 'ರಾಷ್ಟ್ರಭಾಷೆ' ಎಂಬ ಭಾವನಾತ್ಮಕ ಮಾತುಗಳನ್ನಾಡುವುದು ತೀರ ಅವೈಜ್ಞಾನಿಕವೇ ಸರಿ. ಆದುದರಿಂದ ಹಿಂದಿ ಪ್ರೇಮಿಗಳು ಭಾವನಾತ್ಮಕ ಪಾತಳಿಯಿಂದ ವ್ಯಾವಹಾರಿಕ ಪಾತಳಿಗೆ ಇಳಿದು ಬಂದು ಆಲೋಚಿಸಬೇಕು, ಭಾರತದ ಯಾವುದೇ ರಾಜ್ಯದಲ್ಲಿ ಆಯಾ ರಾಜ್ಯದ ಭಾಷೆ ಪ್ರಥಮ ಕಡ್ಡಾಯ, ಇಂಗ್ಲಿಷ್ ದ್ವಿತೀಯ ಕಡ್ಡಾಯ, ಮಿಕ್ಕ ಯಾವುದೇ ಭಾಷೆ(ಸಂಸ್ಕೃತ, ಉರ್ದು, ಹಿಂದಿ ಒಳಗೊಂಡಂತೆ ಅನ್ಯರಾಜ್ಯ ಭಾಷೆ) ಐಚ್ಛಿಕವಾಗಬೇಕು. ಇದರಿಂದ ಮಾಧ್ಯಮಿಕ ಶಾಲೆ ಮತ್ತು ಕಾಲೇಜುಗಳಲ್ಲಿ ಭಾಷೆಗಳ ಹೊರೆ ಕಡಿಮೆಯಾಗುತ್ತದೆ. ರಾಷ್ಟ್ರಭಾಷೆಯೆಂಬ ಭ್ರಮೆಯಲ್ಲಿ ರಾಜ್ಯಭಾಷೆ ಕೊಚ್ಚಿ ಹೋಗದೇ ಉಳಿಯುತ್ತದೆ, ಬೆಳೆಯುತ್ತದೆ.

ಈ ದ್ವಿಭಾಷಾ ಸೂತ್ರದಿಂದ ಯಾವುದೇ ರಾಜ್ಯದ ಪ್ರಜೆಗೆ ತನ್ನ ರಾಜ್ಯದಲ್ಲಿ ಸಾಂಸ್ಕೃತಿಕವಾಗಿ ಜೀವಿಸಲು, ಜಗತ್ತಿನಲ್ಲಿ ವ್ಯಾವಹಾರಿಕವಾಗಿ ಉಪಜೀವಿಸಲು ಸಾಧ್ಯವಾಗುತ್ತದೆ.

ಆಕರ : ನವನಾಡು : ಏಪ್ರಿಲ್ ೨೮, ೧೯೮೫

■■



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಮಾಜಿ ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ: 97390 67359